ದಿವಾನರನ್ನೂ ಪರೀಕ್ಷಿಸಬೇಕು.

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ಚಂದಾ { ವರ್ಷಕ್ಕೆ ...
ಆರುತಿಂಗಳಿಗೆ ೧೦-೦-೦

ಸಂಪುಟ ೧] ಬುಧವಾರ ೨೬ ನೇ ಸೆಪ್ಟಂಬರ್, ೧೯೨೮ [ಸಂಚಿಕೆ ೩

ತಾಯಿನಾಡು

26—9—1928

ದಿವಾನರನ್ನೂ ಪರೀಕ್ಷಿಸಬೇಕು.

ಬೆಂಗಳೂರಿನಲ್ಲಿ ನಡೆದ ಗಲಭೆಯ ವಿಷಯವಾಗಿ ದಿವಾನರವರನ್ನೂ ವಿಚಾರಣೆಯ ಕಮಿಟಿಯ ಮುಂದೆ ಪರೀಕ್ಷಿಸಬೇಕೆಂದು ಅಭಿಪ್ರಾಯವು ಪ್ರಬಲವಾಗಿರುವುದು. ಅಬ್ಬಾಸ್‌ಖಾನರ ಮತ್ತು ಇತರ ಮುಹಮ್ಮದೀಯರ ಅಪೇಕ್ಷೆಯಂತೆ ದಿವಾನರು ಸಿದ್ದಿ ಬಾ ಸದ ಪೈರಕ್ಸರವರಿಗೆ ಗಣಪತಿಯನ್ನು ಪುನಃಸ್ಥಾಪನೆ ಮಾಡಕೂಡದೆಂದು ಡಿ. ಒ. ವನ್ನು ಬರೆದಿದ್ದು ನಿಜವೆ? ಈ ವಿಷಯವಾಗಿ ವಿಶ್ವಕರ್ನಾಟಕದ ಸಂಪಾ[illegible] ವಿಚಾರಣೆಯ ಕಮಿಟಿಯ ಮುಂದೆ ತಮಗಿರುವ ಸಂದೇಹವನ್ನು ತಿಳಿಸಿ[illegible].

ಜುಲೈ [illegible] ನೇ ತಾರೀಖಿನ ರಾತ್ರಿ ಅಬ್ಬಾಸ್‌ಖಾನರು ಒಂದು ಗೋಪ್ಯದ ಮೋಟಾರ್ [illegible]ನಲ್ಲಿ ದಿವಾನರ ಮನೆಗೆ ಹೋದರೆಂದೂ ಜನಜನಿತವಾಗಿದೆ. ಇದು ನಿಜವೇ? ಜುಲೈ 31 ನೇ ತಾರೀಖಿನ ಪ್ರಾತಃಕಾಲ ಅಬ್ಬಾಸ್ ಖಾನರಿಗೂ, ಕಲಾಮಿಯವರಿಗೂ ದಿವಾನರು ಭೇಟಿಯನ್ನು ಕೊಟ್ಟು ಅವರ ಮಾತಿನಂತೆ ಖಾಸಗಿ ಜನರು ಯಾರೂ ಗುಂಡು ಹೊಡೆಯಲಿಲ್ಲವೆಂದು ಪ್ರಕಟಣೆಯನ್ನು ಹೊರಡಿಸುವುದಕ್ಕೆ ಆಜ್ಞಾಪಿಸಿದ್ದು ನಿಜವೇ?

ಹಿಂದೂಗಳಿಗೆ, ಅದರಲ್ಲಿಯೂ ಬ್ರಾಹ್ಮಣರಿಗೆ ಇವರು ದಿವಾನರವರಾಗಿರುವುದರಿಂದ ಹೊಟ್ಟೇಕಿಚ್ಚು ಬಂದು ಅವರನ್ನು ದಿವಾನಗಿರಿಯಿಂದ ಕಿತ್ತುಹಾಕಬೇಕೆಂದು ಮುಹಮ್ಮದೀಯರನೇಕರು ಹೇಳಿದರಲ್ಲಾ! ಈ ಮಾತನ್ನು ಮಿ|| ಮಿರ್ಜಾರವರು ನಂಬುವರೇ? ಸತ್ಯಾಗ್ರಹವನ್ನು ಮಾಡಿದ ವಿದ್ಯಾರ್ಥಿಗಳ ಗುಂಪು ಮೆರವಣಿಗೆ ಮುಂತಾದ್ದು ನಡೆಸಿದ್ದು ದಿವಾನರನ್ನು ಕಿತ್ತುಹಾಕುವುದಕ್ಕಾಗಿ ಎಂದು ಅಬ್ಬಾಸ್‌ಖಾನರು ಬಹಿರಂಗ ಕೋರ್ಟಿನಲ್ಲಿ ಹೇಳಿದರಲ್ಲಾ! ಇದನ್ನು ದಿವಾನರು ನಂಬುವರೇ? ಆಗಸ್ಟ್ 3 ನೇ ತಾರೀಖಿನ ದಿವಸ ನಡೆದ ಪರದೆ ಸಭೆಯಲ್ಲಿ ಅಬ್ಬಾಸ್‌ಖಾನರು ಕೆಲವು ಬ್ರಾಹ್ಮಣರ ಮೇಲೆ ಸರ್ಕಾರವನ್ನು ತಲೆಕೆಳಗು ಮಾಡುವ ಮತ್ತು ದಿವಾನರನ್ನು ಕಿತ್ತುಹಾಕುವ ಪಿತೂರಿಯ ಆಪಾದನೆಯನ್ನು ಮಾಡಿದರಲ್ಲಾ! ಆಗ ಅಧ್ಯಕ್ಷತೆಯನ್ನು ವಹಿಸಿದ್ದ ಮಿ|| ಮಿರ್ಜಾರವರು ಮೌನಮುದ್ರೆಯನ್ನು ವಹಿಸಿದುದರ ಭಾವಾರ್ಥವೇನು?

ಅಬ್ಬಾಸ್‌ಖಾನರು ಹೇಳುವುದೆಲ್ಲಾ ಸತ್ಯವೆಂದು ತಿಳಿದು ಇವರು ಸುಮ್ಮನಿದ್ದರೋ? ತಲೆಯನ್ನು ಕೂಡ ಅಲ್ಲಾಡಿಸಲಿಲ್ಲ. ಇಲ್ಲದಿದ್ದರೆ ತಟಕ್ಕನೆ ಇಂತಹ ಮಾತುಗಳನ್ನು ಆಡಬೇಡಿ ಎಂದು ಅಬ್ಬಾಸ್‌ಖಾನರನ್ನು ಏತಕ್ಕೆ ತಡೆಯಲಿಲ್ಲ? ಪತ್ರಿಕೆಗಳ ಬಾಯಿಗೆ ಬೀಗ ಹಾಕಿದ್ದ ಸಂದರ್ಭದಲ್ಲಿ ತಮ್ಮನ್ನು ಹೊಗಳುತ್ತಿದ್ದ ಕೆಲವು ಪತ್ರಿಕೆಗಳನ್ನು ಸ್ವತಂತ್ರವಾಗಿ ಬಿಟ್ಟಿದ್ದಕ್ಕೆ ಕಾರಣವೇನು? ಬೀಗ ಮುದ್ರೆಯನ್ನು ಎಲ್ಲಕ್ಕಿಂತಲೂ ಮೊದಲು ಉರ್ದು ಪತ್ರಿಕೆಯಾದ ಅಲ್‌ಕಲಾಮಿಗೆ ತೆಗೆದಿದ್ದಕ್ಕೆ ಕಾರಣವೇನು? ಇದೇ ರೀತಿಯಾದ ಇನ್ನೂ ಅನೇಕ ಪ್ರಶ್ನೆಗಳಿರುವುವು. ಇವುಗಳಿಗೆಲ್ಲಾ ಮಿರ್ಜಾರವರು ಸಮರ್ಪಕವಾಗಿ ಕಮಿಟಿಯ ಮುಂದೆ ಉತ್ತರವನ್ನು ಕೊಡುವರೆಂದು ನಂಬುತ್ತೇವೆ.

ಅಶ್ವತ್ಥಕಟ್ಟೆಯನ್ನು ಕದಲಿಸುವುದು.

ಈಗ ಎರಡು ದಿವಸಗಳ ಹಿಂದೆ ಬೆಂಗಳೂರಿನ ವಾಣೀವಿಲಾಸ ಇನ್‌ಸ್ಟಿಟ್ಯೂಟಿನ ಹಿಂದುಗಡೆ ಇರುವ ಅಶ್ವತ್ಥಕಟ್ಟೆಯನ್ನು ಕದಲಿಸಿ ನಾಗರ ಕಲ್ಲುಗಳನ್ನು ಮ್ಯುನಿಸಿಪಾಲಿಟಿಯವರು ಕಿತ್ತುಹಾಕುತ್ತಿದ್ದರು. ಸುತ್ತು ಮುತ್ತಲಿನ ಹಿಂದೂಗಳೆಲ್ಲರೂ ಬಂದು ಸರ್ವಥಾ ಆಗಕೂಡದೆಂದು ಅಡ್ಡಿಪಡಿಸಲು ಕೆಲಸವು ಅಷ್ಟಕ್ಕೇ ನಿಂತಿತು.

ಮನೆಯ ಮೇಲೆ ಕಲ್ಲುಗಳು

ಮೊನ್ನೆ ಬೆಂಗಳೂರು ಬಸವನಗುಡಿಯ ದೇವಸ್ಥಾನದ ಪಕ್ಕದಲ್ಲಿ ಒಂದು ಮನೆಯಲ್ಲಿ ಗಣಪತಿಯ ಮಂಗಳಾರತಿಯಾಗುತ್ತಿದ್ದಾಗ ಯಾರೋ ದುಷ್ಟರು ಮನೆಯ ಮೇಲೆ ಕಲ್ಲು ಎಸೆದರು. ಮನೆಯವರು ಹೊರಗೆ ಬಂದು ನೋಡುವಷ್ಟರಲ್ಲಿ ಅವರು ಪರಾರಿಯಾಗಿದ್ದರು.

40 ಹಿಂದೂಗಳಿಗೆ ಏಟು

ದಾವಣಗೆರೆಯ ಮಾರಾಮಾರಿಯ ಪ್ರಕರಣದಲ್ಲಿ 40 ಹಿಂದೂಗಳಿಗೆ ಗಾಯವಾಯಿತು. ಮುಹಮ್ಮದೀಯರ ಅಂಗಡಿ ಮೊದಲಾದುವುಗಳು ಸುಡಲ್ಪಟ್ಟವು. 10,000 ರೂಪಾಯಿಗಳು ನಷ್ಟವಾದವು. 12 ಜನ ದಸ್ತಗಿರಿ ಮಾಡಲ್ಪಟ್ಟರು.

ಸುಲ್ತಾನ್‌ಪೇಟೆಯ ಮಸೀದಿಯ ಬಡಾವಣೆ

ಸುಲ್ತಾನ್‌ಪೇಟೆ ಸ್ಕೂಲನ್ನು ಬೇರೆಕಡೆಗೆ ಹಾಕುವಹಾಗೂ ಆ ಸ್ಕೂಲಿನ ಕಟ್ಟಡದಲ್ಲಿ ಉರ್ದುಸ್ಕೂಲ್ ಇಡುವುದಾಗಿಯೂ ಅಬ್ಬಾಸ್‌ಖಾನರ ಮನೆಯ ಹಿಂದೆ ಇರುವ ಮಸೀದಿಗೆ ಸುಲ್ತಾನ್‌ಪೇಟೆಯ ಸ್ಕೂಲಿನ ಹಿಂಭಾಗದಲ್ಲಿ ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿಯ ಕಡೆಯಿಂದ ಬಾಗಿಲು ಇಡಲ್ಪಡುವ ಹಾಗೂ ಅಬ್ಬಾಸ್‌ಖಾನರು ತಮ್ಮ ಮನೆಯನ್ನು ಮಸೀದಿಯ ಧರ್ಮದರ್ಶಿಗಳಿಗೆ ಮಾರಿರುವ ಹಾಗೂ, ಆಗಲೇ ಸ್ವಲ್ಪ ಅಡ್ವಾನ್ಸನ್ನು ಸ್ವೀಕರಿಸಿರುವ ಹಾಗೂ ಸಮಾಚಾರವಿರುವುದು. ಇದರ ನಿಜಾಂಶವನ್ನು ಪರೀಕ್ಷಿಸಬೇಕು.

ಬ್ರಾಹ್ಮಣರನ್ನು ಗುಂಡಿನಿಂದ ಸುಡಬೇಕು.

ಮ|| ಸುಬ್ರಹ್ಮಣ್ಯಂ ಪ್ರಭೃತಿಗಳನ್ನು ಜೈಲಿಗೆ ಕರೆತಂದಾಗ ಬ್ರಾಹ್ಮಣರನ್ನು ಗುಂಡಿನಿಂದ ಹೊಡೆದು ಸಾಯಿಸಬೇಕು ಎಂದು ನೀವು ಹೇಳಿದಿರಾ ಎಂದು ವಿಶ್ವೇಶ್ವರಯ್ಯ ಕಮಿಟಿಯವರು ಬೆಂಗಳೂರು ಸೆಂಟ್ರಲ ಜೈಲ್ ಸೂಪರಿಂಟೆಂಡೆಂಟರನ್ನು ಕೇಳಿದರು. ಅದಕ್ಕವರು “ಶಾಂತಂ ಪಾಪಂ !! ಅಂತಹ ಮಾತನ್ನು ನಾನು ಎಂದಿಗೂ ಆಡಿಲ್ಲ” ಎಂದು ಉತ್ತರವಿತ್ತರು.

ಇಬ್ಬರು ಹಿಂದೂಗಳಿಗೆ ಭಯಪ್ರದರ್ಶನ

ಕೋಲಾರದ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಗಿರಿಮಾಜಿರಾಯರಿಗೂ, ಮ|| ರಾಜಪ್ಪ ಎಂಬವರಿಗೂ ಕೆಲವು ಹೆಸರಿಲ್ಲದ ಪತ್ರಿಕೆಗಳು ಬಂದಿವೆ. ಅವುಗಳಲ್ಲಿ ಅವರ ಪ್ರಾಣವು ತೆಗೆದುಕೊಳ್ಳಲ್ಪಡುವುದೆಂದೂ, ಅವರ ಸ್ತ್ರೀಯರ ಮೇಲೆ ಅತ್ಯಾಚಾರವು ನಡೆಸಲ್ಪಡುವುದೆಂದೂ ಭಯಪ್ರದರ್ಶನವು ಮಾಡಲ್ಪಟ್ಟಿರುವುದು.

ಸರಕಾರಕ್ಕೂ ಪತ್ರಿಕಾಕರ್ತರಿಗೂ ಸಹಕಾರ!

ಬೊಂಬಾಯಿನ ಇಂಡಿಯನ್ ಡೇಲೀಮೇಲ್ ಪತ್ರಿಕೆಯ ಬೆಂಗಳೂರು ಬಾತ್ಮೀದಾರರಾದ ಮ|| ಪಿ. ಎಸ್. ನಾರಾಯಣರಾಯರು ಶಾಂತಿಭಂಗವಾದ ಕಡೆ ಹೋಗಿ ನಿಜ ಸಂಗತಿಯನ್ನು ತಿಳಿದು ಪತ್ರಿಕೆಗಳಿಗೆ ಬರೆಯುವುದಕ್ಕಾಗಿ ಸರಕಾರಕ್ಕೆ ರೈಲ್ವೆಪಾಸಿಗಾಗಿ ಬರೆದರು. ಕೊಡಲಾಗುವುದಿಲ್ಲ ಎಂಬ ಉತ್ತರವು ಬಂದಿತು. ಇದೀಗ ಸರಕಾರದ ಸಹಕಾರ!!

ನಾನಾಸ್ವಾಮಿಯವರ ಮೋಹ

ರಿಟೈರ್ಡ್ ಡಿ. ಕ. ನಾನಾಸ್ವಾಮಿಯವರು ಬೊಂಬಾಯಿನ ಇಂಡಿಯನ್ ಡೇಲೀಮೇಲ್ ಪತ್ರಿಕೆಗೆ ಬರೆದ ಒಂದು ಪತ್ರದಲ್ಲಿ ಮಿರ್ಜಾಸಾಹೇಬರನ್ನು ಹೊಗಳಿ ಅಂತರಿಕ್ಷಕ್ಕೆ ತೆಗೆದುಕೊಂಡು ಹೋಗಿರುವರು. ಈ ರಾಯರು ತಮ್ಮ ಕೃತಜ್ಞತೆಯನ್ನು ಅಂತರಂಗವಾಗಿ ಪ್ರದರ್ಶಿಸಬಾರದೇ?

ಬ್ರಾಹ್ಮಣರಿಗೂ ಮುಹಮ್ಮದೀಯರಿಗೂ ಸಹಪಂಕ್ತಿ ಭೋಜನ

ಕೋಲಾರದ ಹೈಸ್ಕೂಲ್ ಹೆಡ್ಮಾಸ್ಟರವರು ಬ್ರಾಹ್ಮಣ ವಿದ್ಯಾರ್ಥಿಗಳ ಹಾಸ್ಟಲಿಗೆ ಹೋಗಿ ಹಿಂದೂಗಳಿಗೂ ಮುಹಮ್ಮದೀಯರಿಗೂ ಒಂದೇ ಕಡೆ, ಸ್ನಾನ ಊಟಗಳಿಗೆ ಏರ್ಪಾಡು ಮಾಡಬೇಕೆಂದು ಪ್ರಯತ್ನಪಡುತ್ತಿರುವರೆಂದು ವದಂತಿ. ಹೆಡ್ಮಾಸ್ಟರು ಧನ್ಯರು. ಹಿಂದೂ ಮುಹಮ್ಮದೀಯ ಐಕಮತ್ಯಕ್ಕೆ ಧ್ವಜಸ್ತಂಭರು!

ಹುಚ್ಚರ ಆಸ್ಪತ್ರೆಗೆ ಕಳುಹಿಸಬೇಕು.

ಮೈಸೂರಿಗೆ ಯೂರೋಪಿಯನ್ ದಿವಾನರು ಬೇಕು ಎಂಬುವರನ್ನು ಹುಚ್ಚರ ಆಸ್ಪತ್ರೆಗೆ ಕಳುಹಿಸಬೇಕೆಂದು ತುಮಕೂರಿನ ಮ|| ಕೆ. ರಂಗ ಅಯ್ಯಂಗಾರ್ಯರು ಹಿಂದೂ ಪತ್ರಿಕೆಗೆ ಒಂದು ಲೇಖನವನ್ನು ಬರೆದಿರುವರು.

ಪರದೆಯ ಹಿಂದೆ ಹೇಳತಕ್ಕದ್ದೇನೂ ಇಲ್ಲ.

ಪರದೆಯ ಹಿಂದೆ ಅಂತರಂಗವಾಗಿ ಹೇಳತಕ್ಕದ್ದೇನೂ ಇಲ್ಲ ಎಂದು ವಿಶ್ವಕರ್ನಾಟಕ ಸಂಪಾದಕರವರು ವಿಶ್ವೇಶ್ವರಯ್ಯ ಕಮಿಟಿಗೆ ತಿಳಿಸಿದರು.

ಕುಣಿಗಲ್ ತಾಲ್ಲೂಕು ಅಮಲ್ದಾರ್ ಮಿ|| ಅಬ್ದುಲ್ ಖಾದರವರೂ, ಇನ್‌ಸ್ಪೆಕ್ಟರ್ ಅನ್ವರ್ ಅಲಿ ಮೆಕ್ರಿಯವರೂ, ಪೋಸ್ಟ್‌ಮಾಸ್ಟರ್ ಮತ್ತು ಸೊಸೈಟಿ ಇನ್‌ಸ್ಪೆಕ್ಟರ ಮೇಲೆ ತಮ್ಮ ಅಧಿಕಾರದ ದರ್ಪವನ್ನು ತೋರಿಸಲಿಕ್ಕೆ ಬಂದರೆಂದೂ, ಅಮಲ್ದಾರ್ ಮತ್ತು ಇನ್‌ಸ್ಪೆಕ್ಟರವರಿಗೆ ಸರಿಯಾಗಿ ಬುದ್ಧಿ ಕಲಿಸಲ್ಪಟ್ಟಿತೆಂದೂ ನಾರದ ಎಂಬುವರು ವಿಶ್ವಕರ್ನಾಟಕಕ್ಕೆ ಬರೆದಿರುತ್ತಾರೆ.

ಡಿ. ಸಿ. ಮತ್ತು ಎ. ಎ. ಸ್. ಪಿ. ರ ಮುಂದೆಯೇ ಬೆಂಕಿ ಹಚ್ಚಿದರು.

ದಾವಣಗೆರೆಯಲ್ಲಿ ಮುಹಮ್ಮದೀಯ ಪುಂಡರು ಗಣಪತಿಯ ಪಲ್ಲಕ್ಕಿಗೆ ಡೆಪ್ಯುಟಿ ಕಮಿಷನರವರ ಮತ್ತು ಪೋಲೀಸ್ ಸೂಪರಿಂಟೆಂಡೆಂಟರ ಮುಂದೆಯೇ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿದರು.

Printed and Published by P. R. Ramaiya at Sri Rama Press, D. Subbiah Road, Mysore.

ದಿವಾನರ ಖಂಡನೆ || ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಚಂದಾ { ವರ್ಷಕ್ಕೆ ೫-೦-೦ / ಷಣ್ಮಾಸಕ್ಕೆ ೧೦ ೦-೦

ಸಂಪುಟ ೧] ಗುರುವಾರ ೨೭ ನೇ ಸೆಪ್ಟಂಬರ್, ೧೯೨೮ [ಸಂಚಿಕೆ ೪

ತಾಯಿನಾಡು

27—9—1928

ದಿವಾನರ ಖಂಡನೆ.

ಈಗಿನ ದಿವಾನರಾದ ಮಿ॥ ಮಿರ್ಜಾರವರನ್ನು ಖಂಡಿಸುವವರು ಬ್ರಾಹ್ಮಣರೇ ಎಂದೂ ಇತರರೆಲ್ಲರೂ ಅವರಲ್ಲಿ ಬಹಳ ವಿಶ್ವಾಸವಿಟ್ಟುಕೊಂಡಿರುವರೆಂದೂ ಭಾವನೆಯು ಉಂಟುಮಾಡಲ್ಪಡುತ್ತಲಿದೆ. ಇದು ಶುದ್ಧ ತಪ್ಪು. ದಿವಾನರನ್ನು ಖಂಡಿಸಿದವರು ಅಥವಾ ಖಂಡಿಸುವವರು ಬ್ರಾಹ್ಮಣರೇ ಅಲ್ಲ. ಅಸೆಂಬ್ಲಿಯ ಸಭಾ ಪರಿತ್ಯಾಗವಾಗುವ ಕಾಲದಲ್ಲಿ ಇತರರೂ ಕೂಡ ಮಿರ್ಜಾರವರನ್ನು ನಿರ್ದಯವಾಗಿ ಖಂಡಿಸುತ್ತಿದ್ದರು. ಆಗಸ್ಟ್ 4 ನೇ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಅಗ್ರಲೇಖನವು ಸರ್ಕಾರವನ್ನು ಅತ್ಯುಗ್ರರೂಪದಿಂದ ಖಂಡಿಸಿದೆ. ಕುರುಬರ ಪತ್ರಿಕೆಯೂ ಕೂಡ ಇದೇ ಮನೋಭಾವವನ್ನು ಹೊಂದಿತ್ತು. ಆದರೆ ಪೇಟ್ರಿಯಟ್ ಮತ್ತು ಸಂಪದಭ್ಯುದಯ ಪತ್ರಿಕೆಗಳು ಮಿ॥ ಮಿರ್ಜಾರವರು ದಿವಾನಗಿರಿಗೆ ಬಂದಾರಭ್ಯದಿಂದಲೂ ಅವರನ್ನ ಒಂದೇ ರೀತಿಯಾಗಿ ಸಮರ್ಥನೆಮಾಡುತ್ತಿದ್ದವು. ನಮ್ಮ ಪತ್ರಿಕೆಯಲ್ಲಿ ಆರಂಭವಾದಾಗಿನಿಂದ ದಿವಾನರ ತಪ್ಪುಗಳನ್ನು ನಾವು ನಿರ್ವಂಚನೆಯಾಗಿ ತೋರಿಸುತ್ತಲೇ ಇದ್ದೇವೆ.

ದಿವಾನರವರು ಪತ್ರಿಕೆಗಳಲ್ಲಿ ಬರೆಯುವ ಖಂಡನೆಗಳ ವಿಷಯವಾಗಿ ಅಸಹನೆಯನ್ನು ತೋರಿಸಿ ಅನೇಕ ಸಾರಿ ಕೋಪಮಾಡಿಕೊಂಡಿರುವರು. ಹಾಗಲ್ಲದೆ ಪತ್ರಿಕೆಗಳಲ್ಲಿ ಬರೆಯುವ ವಿಷಯಗಳ ಯುಕ್ತತೆಯನ್ನು ಗ್ರಹಣಮಾಡಿ ತಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳುವುದು ಮೇಲಲ್ಲವೆ? ಮಿರ್ಜಾರವರನ್ನು ಮಾತ್ರ ಖಂಡಿಸುತ್ತಿರುವರು, ಇತರರನ್ನು ಖಂಡಿಸುವುದಿಲ್ಲ ಎಂದು ಬ್ರಾಹ್ಮಣರ ಮೇಲೆ ಅನ್ಯಾಯವಾಗಿ ತಪ್ಪನ್ನ ಹೊರಿಸುವುದು ಕುತ್ಸಿತ ಬುದ್ಧಿ. ನಮ್ಮ ಮೈಸೂರಿನ 50 ವರ್ಷದ ಇತಿಹಾಸವನ್ನು ಪರಿಶೀಲಿಸಿದರೆ ಜಾತಿ ಕುಲಗೋತ್ರಗಳನ್ನು ನಿರ್ಲಕ್ಷಿಸಿ ಸತ್ಯಕ್ಕಾಗಿ ಹೋರಾಡಿದವರು ಬ್ರಾಹ್ಮಣರೂ ಎಂಬುದು ವ್ಯಕ್ತವಾಗುತ್ತದೆ. ಶೇಷಾದ್ರಿ ಅಯ್ಯರ್‌ರವರಿಗೆ ಪ್ರಬಲರಾದ ಪ್ರತಿ ಕಕ್ಷಿಗಳಾಗಿದ್ದವರು ಶ್ರೀನಿವಾಸರಾವ್ ವೆಂಕಟರಾಮಯ್ಯ, ವೆಂಕಟಕೃಷ್ಣಯ್ಯ ಮೊದಲಾದ ಬ್ರಾಹ್ಮಣರಲ್ಲವೆ? ಶೇಷಾದ್ರಿ ಅಯ್ಯರವರು ಬ್ರಾಹ್ಮಣರಲ್ಲಾ ಎಂದು ಅವರ ಖಂಡನೆಯನ್ನು ಮಾಡುವುದುಬಿಟ್ಟರೇ? ಶೇಷಾದ್ರಿಅಯ್ಯರವರ ಸ್ವೇಛ್ಛಾಪ್ರವರ್ತನೆಯನ್ನು ಖಂಡಿಸಿ ತಮ್ಮ ಪ್ರೆಸ್ಸನ್ನೂ ಪತ್ರಿಕೆಯನ್ನೂ ಮುಟ್ಟುಕೋಲು ಹಾಕಿಸಿಕೊಂಡವರು ದೇಶಾಭಿಮಾನಿ ಎಂಬ ಪತ್ರಿಕಾಕರ್ತರಲ್ಲವೇ? ಇವರು ಬ್ರಾಹ್ಮಣರಲ್ಲವೇ? ವಿ. ಪಿ. ಮಾಧವರಾಯರ ಕಾಲದಲ್ಲಿ ಅವರನ್ನು ಖಂಡಿಸಿ ಪತ್ರಿಕೆ ಮೊದಲಾದುವುಗಳು ನಿಲ್ಲಿಸಲ್ಪಟ್ಟು ಕಷ್ಟಕ್ಕೆ ಗುರಿಯಾದವರು ಬ್ರಾಹ್ಮಣರಲ್ಲವೆ? ವಿಶ್ವೇಶ್ವರಯ್ಯನವರ ಕಾಲದಲ್ಲೂ ದಿವಾನರನ್ನು ಖಂಡಿಸುವುದು ಬಿಟ್ಟಿದ್ದರೇ? ಬ್ಯಾನರ್ಜಿಯವರ ಕಾಲದಲ್ಲಿ ಅವರಿಗೆ ಖಂಡನೆಗಳು ತಪ್ಪಿತೆ? ಹೀಗಿದ್ದಾಗ್ಯೂ ಮಿರ್ಜಾರವರನ್ನು ಮಾತ್ರ ಬ್ರಾಹ್ಮಣರು ಖಂಡಿಸುತ್ತಿರುವರೆಂದು ಹೇಳುವುದು ಶುದ್ಧ ಸುಳ್ಳು. ಮಿರ್ಜಾರವರು ಕೂಡ ಇದನ್ನು ನಂಬುವುದಿಲ್ಲ. ಜಾತಿದ್ವೇಷದಿಂದ ಪೀಡಿತರಾದವರು ತಾವು ಹೇಳುವ ಮಾತುಗಳ ಸತ್ಯಾಸತ್ಯವನ್ನು ಪರೀಕ್ಷಿಸುವುದೇ ಇಲ್ಲ.

ಮೈನರ್ ಹುಡುಗಿಯ ಅಪಹಾರ.

ರಾಜಧಾನಿಯ ಅ॥ ಸೆ॥ ಕೋರ್ಟಿನಲ್ಲಿ ಮಾಕಿ ಎಂಬ ಮೈನರ್ ಕುರುಬರ ಹುಡುಗಿಯನ್ನು ಅಪಹರಿಸಿ ವ್ಯಭಿಚಾರಕ್ಕೆ ಉಪಯೋಗಿಸಿದ್ದಕ್ಕಾಗಿ ಚಿಕ್ಕಯ್ಯ ರಾಮಜಿ, ರುಕ್ಮಿಣಿ ಎಂಬುವರಿಗೆ ಶಿಕ್ಷೆಯಾಯಿತು. ಚಿಕ್ಕಯ್ಯನಿಗೆ 2 ವರ್ಷ ಕಠಿಣಶಿಕ್ಷೆ, ರಾಮಜೀಗೆ 4 ವರ್ಷ, ರುಕ್ಮಿಣಿಗೆ 15 ವರ್ಷ—ಹೋದ ವರ್ಧಂತಿಯ ಕಾಲದಲ್ಲಿ ಗಂಡನ ಮನೆಯಲ್ಲಿದ್ದ ಮಾಕಿಯನ್ನು ವರ್ತನೆಗೆ ಹಾಲು ಕೊಡುವುದಕ್ಕೆ ಹೋದಾಗ ಚಿಕ್ಕಯ್ಯನು ಅವಳಿಗೆ ಮೋಸಮಾಡಿ ರಾಂಜಿಯ ಮನೆಗೆ ಕರೆದುಕೊಂಡು ಹೋಗಿ ಅವಳಿಗೆ ತಿಂಡಿ ಕೊಡಿಸಿ ಮತ್ತು ಮಾಡಿಸಿ, ಒಂದು ಕೊಠಡಿಯಲ್ಲಿ ಕೂಡಿ ಬೀಗ ಹಾಕಿದನು. ಸಾಯಂಕಾಲ 6 ಘಂಟೆಗೆ ಅವಳಿಗೆ ಎಚ್ಚರವಾಗಿ ಕಿರುಚಿಕೊಂಡಳ. ಹೆದರಿಸುತ್ತಲು ಸುಮ್ಮನಾದಳು. ರಾಂಜಿಯು ಇವಳನ್ನು ಕಮಲಿ ಎಂಬ ವೇಶ್ಯೆಯ ಮನೆಗೆ ಬಿಟ್ಟನು. ಕಮಲಿಯು ಇವಳನ್ನು ಕೊಳ್ಳೇಗಾಲಕ್ಕೆ ರುಕ್ಮಿಣಿ ಎಂಬ ವೇಶ್ಯೆಯೊಡನೆ ಕಳುಹಿಸಿದಳು. ಅಲ್ಲಿ ಮಾಕಿಯು ಕಲ್ಯಾಣಸುಂದರಿ ಎಂಬ ವೇಶ್ಯೆಯ ಮನೆಯಲ್ಲಿ ಇಡಲ್ಪಟ್ಟಳು. ಇಬ್ಬರು ಮುಹಮ್ಮದೀಯರು ಇವಳನ್ನು [illegible] ಅಪಹರಿಸಿದರು. ಗುಟ್ಟು ಬಯಲಾಗಿ ಮಾಕಿಯು ಪೋಲೀಸಿನವರಿಂದ ಮೈಸೂರಿಗೆ ತರಲ್ಪಟ್ಟಳು.

ಪರದೆ ಒಳಗಿನ ಸಭೆ

ಮೈಸೂರು ಸರ್ಕಾರದವರು ಏರ್ಪಡಿಸಿರುವ ವಿದ್ಯಾರ್ಥಿಗಳ ವಿಚಾರಣೆ ಕಮಿಟಿಯು ಪರದೆ ಒಳಗೆ ಕೆಲಸವನ್ನು ನಡೆಸುವುದು.

ಬೀಡಿ ಅಂಗಡಿಗಳು ಭಸ್ಮವಾದವು.

ಶುಕ್ರವಾರದ ಅನಾಹುತದಲ್ಲಿ ದಾವಣಗೆರೆಯಲ್ಲಿ ಅನೇಕ ಬೀಡಿ ಅಂಗಡಿಗಳು ಭಸ್ಮವಾದವು. ಯುಜ್ಞೇಶ್ವರನು ಧೂಮಪಾನ ಮಾಡಿದನೆಂದು ಭಾವಿಸೋಣ!

ಹಿಂದೂಗಳ ಮೇಲೆ ತಪ್ಪು

ದಾವಣಗೆರೆಯಲ್ಲಿ ನಡೆದ ಅತ್ಯಾಚಾರಗಳಿಗೆ ಅಲ್ಲಿನ ಕೆಲವು ಮಹಮ್ಮದೀಯರು ಹಿಂದೂಗಳ ಮೇಲೆ ತಪ್ಪನ್ನು ಹಾಕುತ್ತಿದ್ದಾರೆ.

ಇಂಡಿಯಾ ಸರ್ಕಾರದವರ ಕ್ಷಮಾಪಣೆ.

ಇಂಡಿಯಾ ಸರ್ಕಾರದವರು ಲೆಜಿಸ್ಲೇಟಿವ್ ಅಸೆಂಬ್ಲಿಯ ಅಧ್ಯಕ್ಷರಾದ ಪಟೇಲ್‌ರನ್ನು ಪಕ್ಷಪಾತಿಗಳೆಂದು ಹೇಳಿದ್ದಕ್ಕಾಗಿ ಕ್ಷಮಾಪಣೆಯನ್ನು ಕೇಳಿಕೊಂಡರು.

ರಾಜೀ

ದಾವಣಗೆರೆಯಲ್ಲಿ ಹಿಂದೂ ಮುಹಮ್ಮದೀಯರಿಗೆ ರಾಜಿಯಾಗಿ, ಮುಹಮ್ಮದೀಯರು ಮೆರವಣಿಗೆಯಲ್ಲಿ ಹೊರಟ ಶ್ರೀಮನ್ಮಹಾರಾಜರವರ ಪಠಕ್ಕೂ, ಗಣಪತಿಗೂ ಹಾರಾ ತುರಾಯಿಗಳನ್ನು ಅರ್ಪಿಸಿದರೆಂದು ತಿಳಿದು ಬರುತ್ತದೆ.

ಒಬ್ಬ ಇನ್ಸ್‌ಪೆಕ್ಟರ್‌ಗೆ ಸಸ್ಪೆಂಟ್

ದಾವಣಗೆರೆ ಸಬ್ ಇನ್ಸ್‌ಪೆಕ್ಟರ್ ಸುಬ್‌ಸಿಂಗ್ ಎಂಬುವರನ್ನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಪ್ಪಣೆಯಂತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಸಸ್ಪೆಂಟ್ ಮಾಡಿರುತ್ತಾರೆ.

ಮುಹಮ್ಮದೀಯರ ಪೂರ್ವ ಸಿದ್ಧತೆ

ದಾವಣಗೆರೆಯ ಅತ್ಯಾಚಾರಕ್ಕೆ ಮುಹಮ್ಮದೀಯರು ಪೂರ್ವದಿಂದಲೂ ಸಿದ್ಧಪಡಿಸಿಕೊಳ್ಳುತ್ತಿದ್ದರೆಂದೂ, ಮುಹಮ್ಮದೀಯರು ಹೊರಗಿನಿಂದಲೂ ಜಮಾಯಿಸಿದ್ದರೆಂದೂ ತಿಳಿದು ಬಂದಿದೆ.

ಅಂಬಾರಿಯ ಮೇಲೆ ಕೂರಿಸಿದ್ದು

ಹೋದವರ್ಷ ಬೆಂಗಳೂರಿನಲ್ಲಿ ನಡೆದ ಸಿಲ್ವರ್ ಜ್ಯೂಬಿಲಿ ಮೆರವಣಿಗೆಯಲ್ಲಿ ಮಿ॥ ಮಿರ್ಜಾರವರನ್ನ ಅಂಬಾರಿಯ ಮೇಲೆ ಕೂರಿಸಿದ್ದು ಮಹಾ ಜನಗಳನೇಕರಿಗೆ ಒಪ್ಪಲಿಲ್ಲವೆಂದು ವಾಜಪೇಯಂ ವೆಂಕಟೇಶಯ್ಯನವರು ಕಮಿಟಿಯ ಮುಂದೆ ಕೈಫಿಯತ್ತು ಕೊಟ್ಟರು.

ಕೊಲೆಪಾತಕನೇ ಕೂತುಕೋ?

ಲಂಡನ್ನಿನ ಒಂದು ಚರ್ಚಿನಲ್ಲಿ ಪಂಜಾಬಿನ ಮಾಜೀ-ಗವರ್ನರ್‌ರಾದ ಓಡ್ವೈರ್‌ರವರು ಭಾಷಣ ಮಾಡುವುದಕ್ಕೆ ಎದ್ದುನಿಂತಾಗ ಸಭೆಯಲ್ಲಿದ್ದ ಯಾರೋ ಒಬ್ಬರು "ಕೊಲೆಪಾತಕನೇ ಕೂತುಕೋ, ನಿನ್ನ ಮಾತು ಯಾರಿಗೆ ಬೇಕು?" ಎಂದು ಕೂಗಿಕೊಂಡರು. ಓಡ್ವೈರರು ವಿಧಿಯಿಲ್ಲದೆ ಕೂತುಕೊಳ್ಳಬೇಕಾಯಿತು.

ಎದುರು ಬೀಳಿರಿ

ಕಲ್ಕತ್ತಾದಲ್ಲಿ ನಡೆದ ಅಖಿಲ ವಿದ್ಯಾರ್ಥಿಗಳ ಸಮ್ಮೇಳನದಲ್ಲಿ ಪಂಡಿತ್ ಜವಾಹಿರಿಲಾಲ್ ನೆಹರೂ ರವರು ಕೊಟ್ಟ ಉಪದೇಶವೇನೆಂದರೆ:— 'ತಟಸ್ಥರಾಗಬೇಡಿರಿ; ಮುಂದುವರಿಯಿರಿ. ಈಗಿನ ಪರಿಸ್ಥಿತಿಗೆ ವಿರೋಧವಾಗಿ ಎದುರುಬೀಳಿರಿ. ಹುರಿದುಂಬಿಸಿಕೊಂಡು ಕೆಲಸ ಮಾಡದೆ ಹೋದರೆ ಭಾರತೀಯರೆಲ್ಲರೂ ಅಳಿದು ಹೋಗಬೇಕಾಗುವುದು."

ಅರ್ಧಚಂದ್ರ ಪ್ರಯೋಗ

ಜುಲೈ 30 ನೇ ತಾ॥ ರಾತ್ರಿ ಇನ್ಸ್‌ಪೆಕ್ಟರ್ ಶೇಷಾದ್ರಿ ಅಯ್ಯರ್‌ರವರಿಗೆ ಅಬ್ಬಾಸ್‌ಖಾನರ ಮನೆಯಿಂದ ಅರ್ಧಚಂದ್ರ ಪ್ರಯೋಗವಾಯಿತೆಂದೂ, ಅವರು ಚರಂಡಿಯಲ್ಲಿ ಬಿದ್ದರೆಂದೂ ಸುಬ್ಬರಾಮ ಶೆಟ್ಟರವರು ಕಮಿಟಿಯ ಮುಂದೆ ಕೈಫಿಯತ್ತನ್ನು ಕೊಟ್ಟರು.

ನನಗೆ ಸಾವಿನ ಹೆದರಿಕೆಯಿಲ್ಲ

ನಿಮ್ಮನ್ನು ಹೊಡೆದ ಮುಹಮ್ಮದೀಯರ ಹೆಸರನ್ನು ಚೀಟಿಯಲ್ಲಿ ಬರೆದು ಕೊಡುವಿರಾ ಎಂದು ಕೇಳಿದಾಗ ಸುಬ್ಬರಾಮ ಶೆಟ್ಟರವರು, "ನನಗೇನೂ ಸಾವಿನ ಹೆದರಿಕೆಯಿಲ್ಲ. ಒಂದು ದಿವಸವಲ್ಲ ಒಂದು ದಿನ ಸಾಯಲೇ ಬೇಕು" ಎಂದರು.

Printed and Published by P. R. Ramaiya at Sri Rama Press,
D. Subbiah Road, Mysore.

ತಾಯಿನಾಡು.

ಪ್ರತಿದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { [illegible] / [illegible] }

ಸಂಪುಟ ೧] ಶುಕ್ರವಾರ ೨೮ ನೇ ಸೆಪ್ಟಂಬರ, ೧೯೨೮ [ಸಂಚಿಕೆ [illegible]

ತಾಯಿನಾಡು

28—9—1928

ಪತ್ರಿಕೆಗಳ ಮೇಲೆ ದೂರು.

ಜುಲೈ 30 ನೇ ತಾರೀಖಿನ ಗಲಭೆಯು ಆದಾಗಿನಿಂದ ಸರ್ಕಾರದ ಅಧಿಕಾರಿಗಳೂ ಕೆಲವು ಅನಧಿಕಾರಿಗಳೂ ಗಲಾಟೆಗಳಿಗೆಲ್ಲಾ ಪತ್ರಿಕೆಗಳೇ ಕಾರಣವೆಂದು ದೂರುತ್ತಿದ್ದಾರೆ. ದಿವಾನರು ಕೂಡಾ ಆಗಸ್ಟು 20 ನೇ ತಾ|| ನ ಮೀಟಿಂಗಿನಲ್ಲಿ ಪತ್ರಿಕೆಗಳನ್ನು ಜರಿದರು. ವಿಚಾರಣೆಯ ಕಮಿಟಿಯ ಮುಂದೆಯೂ ಪತ್ರಿಕೆಗಳ ದೂಷಣೆಯ ಪ್ರಸಂಗವು ನಡೆಯುತ್ತಿರುವುದು. ಕೆಲವು ಸಾಕ್ಷಿಗಳು ಪತ್ರಿಕೆಗಳು ನಿರ್ದೋಷಿಗಳೆಂದು ಪ್ರತಿಪಾದಿಸಿದರು. ಅವರಿಗೆ ನಮ್ಮ ಧನ್ಯವಾದಗಳು.

ನಿಜಾಂಶವನ್ನು ಪರೀಕ್ಷಿಸೋಣ. ಪತ್ರಿಕೆಗಳೇನೋ ಜನಗಳಲ್ಲಿ ಬಹಳವಾಗಿ ಪ್ರಚಾರವಾಗುತ್ತಿರುವುವು. ಪತ್ರಿಕೆಗಳು ಜನಗಳಲ್ಲಿ ಅಭಿಪ್ರಾಯವನ್ನು ಹರಡುವುವು. ಆದರೆ ಯಾವ ಪತ್ರಿಕೆಯೇ ಆಗಲಿ ಜಾತಿದ್ವೇಷದ ಪ್ರಚಾರವನ್ನು ಮಾಡಿರುವುದೇ ? ಪತ್ರಿಕೆಗಳನ್ನು ದೂಷಿಸುವವರು ತಮ್ಮ ಎದೆಯಮೇಲೆ ಕೈಯ್ಯಿಟ್ಟು ಕೊಂಡು ಉದಾಹರಣೆಗಳನ್ನು ಕೊಡಲಿ. ಜೂಲೈ 30 ನೇ ತಾ|| ಗಿಂತಲೂ ಹಿಂದೆ ಯಾವ ಪತ್ರಿಕೆಯಲ್ಲಿ ಯಾದರೂ ಆಗಲೀ ಹಿಂದೂ ಮಹಮ್ಮದೀಯರಿಗೆ ಮನಸ್ತಾಪ ಬರುವ ವಿಷಯಗಳಿದ್ದವೇ ? ಬೇಕಾದವರು ಮುಂದೆ ಬಂದು ರುಜುವಾತು ಕೊಡಲಿ. ಗಣಪತಿಯನ್ನು ಪುನಃ ಸ್ಥಾಪನೆ ಮಾಡಬೇಕೆಂದು ಚಳವಳಿ ಮಾಡಿದರೆ ಯಾರಿಗೇನು ನಷ್ಟ ? ಅದು ಹಿಂದೂ ಮಹಮ್ಮದೀಯ ವೈಮನಸ್ಯವನ್ನು ಏತಕ್ಕೆ ವರ್ಧಿಸಬೇಕು ? ಅಬ್ಬಾಸ್‌ಖಾನರು ಗಣಪತಿಯ ಸ್ವಸ್ಥಾಪನೆಗೆ ಅಡ್ಡಿಪಡಿಸಿದರೆಂದರೆ ಅದು ಮಹಮ್ಮದೀಯ ಜನಾಂಗವನ್ನೇ ದೂಷಿಸಿದ ಹಾಗಾಯಿತೋ? ಮಿರ್ಜಾರವರು ತಮ್ಮ ದಿವಾನಗಿರಿಯಲ್ಲಿ ಕೆಲವು ತಪ್ಪುಗಳನ್ನು ಮಾಡಿದರೆಂದು ಹೇಳಿದರೆ ಅದು ಮಹಮ್ಮದೀಯ ಜನಾಂಗವನ್ನೆ ದೂಷಿಸಿದ ಹಾಗಾಯಿತೋ ? ಎಷ್ಟೋ ಜನನ್ನು ಮಾತ್ರ. ಕೆಲವು ಮಹಮ್ಮದೀಯ ಪುಂಡರು ಜೂಲೈ 30ನೇ ತಾ|| ನ ರಾತ್ರಿ ಶಸ್ತ್ರಸನ್ನದ್ಧರಾಗಿ ನಿರಾಯುಧರಾದ ಹಿಂದೂಗಳನ್ನು ಹೊಡೆದಿರುವರು. ಅವರ ಮೇಲೆ ಗುಂಡನ್ನು ಹಾರಿಸಿರುವರು. ಹೊಡೆದವರು ಮಹಮ್ಮದೀಯರು, ಏಟು ತಿಂದವರು ಹಿಂದುಗಳು. ಹೀಗಿರುವಲ್ಲಿ ಹಿಂದೂ ಪತ್ರಿಕೆಗಳಲ್ಲಿ ಕೆಲವು ಹಿಂದೂ ಮಹಮ್ಮದೀಯ ವಿದ್ವೇಷವನ್ನು ಹೆಚ್ಚಿಸಿದವು ಎಂದು ಹೇಳುವ ಮಾತಿಗೆ ಅರ್ಥವಿಲ್ಲ. ಹಾಗೆ ನಿಜವಾಗಿಯೂ ಹಿಂದೂ ಪತ್ರಿಕೆಗಳು ವಿದ್ವೇಷವನ್ನು ಹೆಚ್ಚಿಸಿದ್ದರೆ ಹಿಂದೂಗಳನ್ನು ನೀವು ಸನ್ನದ್ಧರಾಗಿರಿ ಎಂದು ಹೇಳುತ್ತಿದ್ದವು. ವಾಸ್ತವವಾಗಿ ಹಿಂದೂ ಪತ್ರಿಕೆಗಳು ಆ ತಂಟೆಗೇ ಹೋಗಲಿಲ್ಲ. ಆದರೂ ಮಹಾಪರಾಧಿಗಳಾದ ಕೆಲವರು ಕೆಲವು ಪುಂಡರನ್ನೂ ಪೋಕರಿಗಳನ್ನೂ ಸೇರಿಸಿಕೊಂಡು ಹಿಂದೂಗಳನ್ನು ಹೊಡೆದ ಪಾತಕವನ್ನು ಆಚ್ಛಾದನೆ ಮಾಡಿಕೊಳ್ಳುವುದಕೋಸ್ಕರ ಪತ್ರಿಕೆಗಳಿಗೆ ವಿರೋಧವಾಗಿ ಕೂಗಿಸುತ್ತಿರುವರು. ಈ ಕೂಗಿನ ಗುಟ್ಟನ್ನು ಅರಿಯದೆ ಸರ್ಕಾರದ ಅಧಿಕಾರಿಗಳೂ ಕೆಲವು ಖಾಸಗೀ ದೊಡ್ಡ ಮನುಷ್ಯರೂ ಅದೇ ಕೂಗನ್ನೇ ಪ್ರತಿಧ್ವನಿ ಮಾಡುತ್ತಿರುವರು. ಈ ಕೂಗಿನಿಂದೇನೂ ಪ್ರಯೋಜನವಿಲ್ಲ. ಪತ್ರಿಕೆಗಳು ಯಾವ ತಪ್ಪನ್ನೂ ಮಾಡಿಲ್ಲ. ಪತ್ರಿಕೆಗಳು ಹಿಂದೂಗಳನ್ನೂ ಮಹಮ್ಮದೀಯರನ್ನೂ ಹೊಡೆದಾಡಿ ಎಂದು ಹೇಳಿಲ್ಲ. ಅವು ಯಾವಾಗಲೂ ಶಾಂತಿಯನ್ನೇ ಬೋಧಿಸುತ್ತಿರುವುವು. ಹೀಗಿದ್ದರೂ ಪತ್ರಿಕೆಗಳು ಜಾತಿ ದ್ವೇಷವನ್ನು ಹರಡುತ್ತಿವೆಯೆಂದು ಸುಮ್ಮನೆ ಹೊಡೆದುಕೊಳ್ಳುವುದು ಏನು ಮಾಡುವುದಕ್ಕಾಗುತ್ತದೆ ? ಸರ್ಕಾರದ ಬಾಗಿಲು ತಪ್ಪಿ ಪುಂಡರು ಪ್ರಬಲಿಸಿದ್ದರಿಂದ ಎಲ್ಲೆಲ್ಲಿಯೂ ನೀಚಕೃತ್ಯಗಳೂ ಘಾತಕಗಳೂ ತಲೆಯೆತ್ತಿರುವವು. ಪತ್ರಿಕೆಗಳನ್ನು ಬೇಕಾದರೆ ಎಲ್ಲವನ್ನೂ ನಿಲ್ಲಿಸಬಹುದು. ಆದ ಮಾತ್ರಕ್ಕೆ ಆ ನೀಚಕೃತ್ಯಗಳನ್ನು ನಿಲ್ಲಿಸುವದಕ್ಕಾದೀತೆ ? ಪತ್ರಿಕೆಗಳು ಪ್ರಜೆಗಳ ಬಾಯಿಗಳು. ಪತ್ರಿಕೆಗಳ ಮುಖಾಂತರ ಪ್ರಜೆಗಳು ತಮ್ಮ ಕುಂದು ಕೊರತೆಗಳನ್ನೂ ದೂರುಗಳನ್ನೂ ಹೇಳಿಕೊಳ್ಳುವರು. ತನ್ನ ಗಂಡನು ಮನೆಗೆ ಬಂದರೆ ತನ್ನ ಸವತಿಯ ಮಕ್ಕಳು ತನ್ನ ಲೋಪ ದೋಷಗಳನ್ನೆಲ್ಲಾ ಗಂಡನಿಗೆಲ್ಲಿ ಹೇಳುವರೋ ಎಂಬ ಭೀತಿಯಿಂದ ಹೆಂಗಸೊಬ್ಬಳು ತನ್ನ ಸವತಿ ಮಕ್ಕಳನ್ನು ಕೊಲೆ ಮಾಡಿದಂತೆ ಸರ್ಕಾರದವರು ಪತ್ರಿಕೆಗಳ ಮೇಲೆ ಸವತಿತಾಯಿಯ ವಾತ್ಸಲ್ಯವನ್ನು ತೋರಿಸುತ್ತಿರುವರು. ಈರೀತಿಯಾದ ನೀತಿಯು ಖಂಡಿತವಾಗಿಯೂ ನಮ್ಮ ರಾಜ್ಯಕ್ಕೆ ಆಚಂದ್ರಾರ್ಕವಾದ ಕಂಟಕವನ್ನು ತರುವುದು.

ಲೈಸೆನ್ಸ್ ದೊರೆಯಲಿಲ್ಲ

ಬೆಂಗಳೂರು ಸಿಟಿಯ ಪೇಟೆಯ ಪಟ್ಟೇಗಾರರು ಅತಿಶಯವಾಗಿ ಗಣಪತಿಯ ಉತ್ಸವವನ್ನು ಮಾಡಬೇಕೆಂದಿದ್ದರು. ಅವರಿಗೆ ಲೈಸೆನ್ಸ್ ದೊರೆಯಲಿಲ್ಲ.

ಮಹಮ್ಮದೀಯರ ಫಂಡು

ಅಬ್ಬಾಸ್‌ಖಾನರೇ ಮೊದಲಾದವರು ಮಹಮ್ಮದೀಯರ ಸಂರಕ್ಷಣೆಗಾಗಿ ಸಂಸ್ಥಾನಾದ್ಯಂತ ಫಂಡನ್ನು ಕೂಡಿಸುತ್ತಿರುವರು.

ಗಲಾಟೆಯ ಹೊಗೆ

ಚಾಮರಾಜನಗರದಲ್ಲಿ ಗಲಾಟೆಯು ಹೊಗೆಯಾಡುತ್ತಿರುವುದೆಂದು ಅಲ್ಲಿ ಹೋಗಿ ಬಂದವರು ಹೇಳುತ್ತಾರೆ.

ಎಚ್. ಎಸ್. ಸುಬ್ಬರಾಯರವರು

ಇವತ್ತು ವಿಚಾರಣೆಯ ಕಮಿಟಿಯ ಮುಂದೆ ವಿದ್ಯಾಭ್ಯಾಸದ ಡೈರೆಕ್ಟರ್ ಎಚ್. ಎಸ್. ಸುಬ್ಬರಾಯರು ಕೈಫಿಯತ್ತನ್ನು ಕೊಡುವರು.

ನ್ಯಾಯ ಸಂರಕ್ಷಣಾ ಸಭೆ.

ಪಾಬತಿ ವೆಂಕಟರಮಣಯ್ಯಶೆಟ್ಟರು ಅಧ್ಯಕ್ಷರಾಗಿಯೂ, ಚೆನದತ್ತಪ್ಪ, ಸೋಮಶೇಖರರಾಯರು ಸೆಕ್ರೆಟರಿಗಳಾಗಿಯೂ, ಬೆಂಗಳೂರಿನಲ್ಲಿ ನ್ಯಾಯಸಂರಕ್ಷಣೆ ಸಭೆಯೊಂದನ್ನು ಸ್ಥಾಪಿಸಿರುವರು.

ಸಿದ್ಧಿಕ್ ಚನ್ನಬಸವೇಶ್ವರ

ದೀರ್ಘದಾರ ಪತ್ರಿಕೆಯೂ, ಸಿದ್ಧಿಕ ಚನ್ನಬಸವೇಶ್ವರನೂ ಈಗಿನ ಹಿಂದೂ ಮಹಮ್ಮದೀಯ ಗಲಾಟೆಗಳಿಗೆಲ್ಲ ಕಾರಣವೆಂಬ ಅಭಿಪ್ರಾಯವು ಪ್ರಬಲವಾಗಿರುವುದು.

ನಾನಾ ಸಾಮಿಯವರ ಪ್ರೆಷರ್

ದೇಶಿಯ ಪತ್ರಿಕೆಗಳನ್ನು ತಂಟೇಕೋರ ಪತ್ರಿಕೆಗಳು ಎಂದು ನಿಷ್ಕಾರಣವಾಗಿ ದೂಷಣೆ ಮಾಡಿದ್ದಕೋಸ್ಕರ ಅವರ ಪ್ರೆಷರ್‌ನನ್ನು ವಜಾ ಮಾಡಬೇಕೆಂದು ಮೈಸೂರ್ ಪೇಟ್ರಿಯಟ್ ಪತ್ರಿಕೆಯಲ್ಲಿ “ Truth ” ಎಂಬುವರು ಬರೆಯುತ್ತಾರೆ.

ಸುಳ್ಳು ಹೇಳುವುದಕ್ಕೆ ಯಾತಕ್ಕೆ ಬಂದೆ ?

ವಿಚಾರಣೆಯ ಕಮಿಟಿಯ ಮುಂದೆ ಕೇವಲ ಅಸಂಬದ್ಧವಾದ ಸಾಕ್ಷ್ಯವನ್ನು ಕೊಟ್ಟ ಸಾರ್ಜಂಟ್ ರಾಜ ಅಹಮ್ಮದ್ದನಿಗೆ ಅಧ್ಯಕ್ಷರಾದ ವಿಶ್ವೇಶ್ವರಯ್ಯನವರು, “ ಸುಳ್ಳು ಹೇಳುವುದಕ್ಕೆ ನೀನು ಏತಕ್ಕೆ ಬಂದೆ ” ಎಂದು ಕೇಳಿದರು.

ನೆಲದಮೇಲೆ ಬಿದ್ದ ರಕ್ತವನ್ನು ತೊಳೆಯುತ್ತಿದ್ದರು.

ಚಿನ್ನಸಾಮಿಯು ಬಸಪ್ಪನವರ ಪ್ರಶ್ನೆಗಳಿಗೆ ಮಹಮ್ಮದೀಯನು ಹಿಡಿದುಕೊಂಡಿದ್ದ ಕತ್ತಿಯು ರಕ್ತಮಯವಾಗಿತ್ತೆಂದೂ, ಅದನ್ನು ತೊಳೆಯುತ್ತಿದ್ದರೆಂದೂ ಉತ್ತರ ಕೊಟ್ಟನು.

ವಿಶ್ವಕರ್ಣಾಟಕದ ಮೇಲೆ ಮುಕದ್ದಮೆ

ದಾವಣಗೆರೆಯ ವೃತ್ತಾಂತದಲ್ಲಿ ಮಹಮ್ಮದೀಯ ಬದ್ಮಾಷಿಗಳು ಎಂದು ಬರೆದಿದ್ದಕ್ಕೋಸ್ಕರ ಪೀರಾಂ ಬೇಗ್ಲಿ ಎಂಬುವರು ಮೇಲಿನ ಪತ್ರಿಕೆಯ ಮೇಲೆ ಮಾನನಷ್ಟಕ್ಕಾಗಿ ದಾವಾ ಹಾಕಿರುತ್ತಾರೆ.

ದಿವಾನರಿಗೆ ರಜಾ ಕೊಡಬೇಕು.

ಈ ತಿಂಗಳು 28 ನೇ ತಾ|| ಮೈಸೂರು ಪೇಟ್ರಿಯಟ್ಟಿನಲ್ಲಿ ಜಸ್ಟಿಸ್ ಎಂಬ ಬಾತ್ಮೀದಾರರು ಮಿರ್ಜಾರವರಿಗೆ ಒಂದು ವರ್ಷ ರಜಾ ಕೊಡಬೇಕೆಂತಲೂ, ಅವರು ಪಾಶ್ಚಾತ್ಯ ದೇಶಗಳಲ್ಲಿ ಸಂಚಾರ ಮಾಡಿ ಪ್ರಪಂಚದ ಹೆಚ್ಚು ಅನುಭವವನ್ನೂ ರಾಜ್ಯಾಡಳಿತದ ದಕ್ಷತೆಯನ್ನೂ ಪಡೆದನಂತರ ಪುನಃ ಕೆಲಸಕ್ಕೆ ಬರಲೆಂದೂ ಬರೆದಿರುತ್ತಾರೆ.

ನಾಲಿಕ್ಕಾಯಿತು. ಇವನು ಐದನೆಯವನು

ಮೊದಲು ಅಬ್ಬಾಸ್‌ಖಾನರ ಡ್ರೈವರಾಗಿದ್ದ ಈಗ ಕಂಟ್ರೋಲರ್ ಮ|| ಶಾಮಣ್ಣನವರ ಡ್ರೈವರ್ ಚಿನ್ನಸಾಮಿಯು ಕಮಿಟಿಯ ಮುಂದೆ ಕೊಟ್ಟ ಕೈಫಿಯತ್ತಿನಲ್ಲಿ ತನಗೆ ಏಟು ಬಿದ್ದ ಮೇಲೆ, ಅಬ್ಬಾಸ್‌ಖಾನರ ಮನೆಯ ಮಹಡಿಯ ಮೇಲೆ ಕರೆದುಕೊಂಡು ಹೋದರೆಂದೂ, ಅಲ್ಲಿ ನಾಲ್ಕು ಹುಡುಗರು ಮುಖವನ್ನು ನೆಲದಮೇಲಿಟ್ಟುಕೊಂಡು ಮಲಗಿದ್ದರೆಂದೂ, ಒಬ್ಬ ಮುಸಲ್ಮಾನನು ಮಾಂಸ ಕತ್ತರಿಸುವ ಕತ್ತಿಯೊಂದನ್ನು ಹಿಡಿದುಕೊಂಡು ಬರುತ್ತಿದ್ದ, ಅವನು “ ನಾಲಿಕ್ಕಾಯಿತು. ಇವನು ಐದನೆಯವನು ” ಎಂದು ಹೇಳಿದನೆಂದೂ, ಆ ಹುಡುಗರೆಲ್ಲರೂ ಹಿಂದೂಗಳೆಂದೂ, ಅವರು ಸಣ್ಣಸಣ್ಣ ವಯಸ್ಸಿನವರೆಂದೂ, ಅವರಿಗೇನಾಯಿತೋ ತನಗೆ ಗೊತ್ತಿಲ್ಲವೆಂದೂ ಹೇಳಿದರು.

Printed and Published by P. R. Ramaiya at Sri Rma Press,
D. Subbiah Road, Mysore.

ಗಾಂಧಿನ ಗೋದಲ

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ

ಪಿ. ಆರ್. ರಾಮಯ್ಯ

ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |

ಚಂದಾ { ವರ್ಷಕ್ಕೆ

ಸಂಪುಟ ೪ | ಸೋಮವಾರ ೧ ನೇ ಅಕ್ಟೋಬರ್, ೧೯೨೮

(d) The ... will be between ... cost ... ment.

2. ... conditions:

(i) At least ... paid ... and th... ts in ordinary cases and ... exceptional circumstances, ... money ...

(ii) Failure to ... value of the house wi...

(iii) ... dents of the ... of their own, preference being ... dishoused by the acquisition of ... for City Improvement and other ... poses.

(iv) Not more than one house, will, as a ...

(v) In disposing of the houses to the poor, ... allotment.

ತಾಯಿನಾಡು

1 10 1928

ಗುಂಡಿನ ಗೊಂದಲ.

[illegible] ಪ್ರಕಟನೆಗಳ ಆರ್. ಎಸ್. ಪಿ. ಗಳಾದ ಎಂ. ಕೆ. ನರಸಿಂ[illegible] ಕಮಿಟಿಯ ಮುಂದೆ ಸಾಕ್ಷಿಯನ್ನು ನುಡಿದಾಗ, ಕೆಲವು ಪ್ರಶ್ನೋತ್ತರಗಳು ನಡೆದುವು. ಮ॥ ರಾ॥ ಡಿ. ಕೆ. ರಾಮರಾಯರು—ಚಂದ್ರರಾಜನ ಮುಬದ್ದಮೆಯನ್ನು ಪತ್ತೆ ಮಾಡುವುದಕ್ಕಾಗಿ ಕಂಟೋನ್ಮೆಂಟ್ ಪೋಲೀಸಿನವರು ಸಿಟಿ ಪೋಲೀಸಿನವರಿಗೆ ಒಪ್ಪಿಸಿರುವರೇ ಎಂದು ಕೇಳಲು ನನಗೆ ಗೊತ್ತಿಲ್ಲ ಎಂದು ಎ. ಎಸ್. ಪಿ. ಯವರು ಉತ್ತರಕೊಟ್ಟರು. ರಾಲ್ ಫ್ನೈರವರ ಪರವಾಗಿ ಪುನಃ ರಾಮರಾಯರೇ ಎ. ಎಸ್. ಪಿ. ರವರನ್ನು—ಸರ್ಕಾರದ ಒಂದು ಪತ್ರ ಪ್ರಕಟನೆಗಳಲ್ಲಿ ಗುಂಡು ಹೊಡೆದಿದ್ದಿಲ್ಲವೆಂದು ತಿಳಿಸಲ್ಪಟ್ಟಿತ್ತಷ್ಟೆ. ನೀವು ಗುಂಡು ಹೊಡೆದದ್ದನ್ನು ಕೇಳಿ ಎಫ್. ಐ. ಆರ್. ನಲ್ಲಿಯೂ ಕೂಡ ಅದರ ವಿಷಯವು ನಮೂದಾಗಿತ್ತು. ಈ ಸಂದರ್ಭಗಳಲ್ಲಿ ಪೋಲೀಸ್ ಆಫೀಸರಾಗಿಯೂ ನಾಗರೀಕರಾಗಿಯೂ ಇರುವ ನೀವು ಮೇಲಿನ ಅಧಿಕಾರಿಗಳಿಗೂ, ಸರ್ಕಾರಕ್ಕೂ ಗುಂಡು ಹೊಡೆದುದು ಟಿಂದೂ ಅದನ್ನು ನೀವು ಕೇಳಿದರೆಂದೂ ಸರ್ಕಾರದ ಪ್ರಕಟನೆಯು ಸರಿಯಲ್ಲವೆಂದೂ ತಿಳಿಸುವದು ನಿಮ್ಮ ಕರ್ತವ್ಯವಲ್ಲವೆ? ಉತ್ತರ:—ಮೇಲಿನ ಅಧಿಕಾರಿಗಳಿಗೂ ಅದು ಗೊತ್ತಿತ್ತು. ಪ್ರಕಟಣೆಯಲ್ಲಿರುವ ವಿಷಯವನ್ನು ವಿರೋಧಿಸಲು ಸಾಕಾದಷ್ಟು ರುಜುವಾತು ನನ್ನಲ್ಲಿ ಇಲ್ಲದ್ದರಿಂದ ನಾನು ಸುಮ್ಮನೆ ಇದೆನು. ಪ್ರಶ್ನೆ:—ನಿಮಗೆ ಬೇಕಾದ ರುಜುವಾತು ಯಾವುದು? ಉತ್ತರ, ಗುಂಡಿನ ಗಾಯ. ಪ್ರಶ್ನೆ:—ಗುಂಡಿನ ಗಾಯವಿಲ್ಲದೆ ಗುಂಡು ಹೊಡೆದುದ್ದು ನಿಜವೆಂದು ನೀವು ನಂಬುವುದಿಲ್ಲವೋ? ಉತ್ತರ:—ಒಂದು ಮುಕದ್ದಮೆಯನ್ನು ಮಾಡಬೇಕಾದರೆ ಆ ತರಹದ ರುಜುವಾತು ಬೇಕು. ಮಾಣಿಕ್ಯ[illegible]—[illegible] ಐ ಆರ್. ನಲ್ಲಿ ಗುಂಡು ಹಾರಿಸಿದ ನ[illegible] [illegible] ಗುಂಡು ಹೊಡೆಯಲ್ಪಟ್ಟಿತ್ತೆಂದೂ, [illegible] ಬರೆದಿದ್ದೀರಿ. ನೀವೇನಾದರೂ ಕಾ[illegible]ವನ್ನು ನಡೆಸಿದಿರೋ? ಉತ್ತರ:—ನಾನು. ಏನು ಕಾರ್ಯಭಾಗವನ್ನು ನಡೆಸಲಿ? ಪ್ರಶ್ನೆ:—ಜನಗಳ ಮೇಲೆ ಗುಂಡು ಹೊಡೆದವರು ಯಾರು ಎಂಬುದನ್ನು [illegible] ಪ್ರಯತ್ನ ಪಟ್ಟಿರಾ? ಉತ್ತರ—ಅದು ಜನಗಳ ಮೇಲೆ [illegible] ನನಗೆ ಗೊತ್ತಿರಲಿಲ್ಲ. ಪ್ರಶ್ನೆ:—ನಿಮಗೆ [illegible] ಉತ್ತರ:—[illegible] 10 ನೇ ತಾರೀಖಿನ [illegible] ಪ್ರಶ್ನೆ:—[illegible] ಆಸ್ಪತ್ರೆಗೆ ತೆಗೆದು [illegible] ಇಲ್ಲವೋ? ಉತ್ತರ:—ಇಲ್ಲ. ಪ್ರಶ್ನೆ—ಸರ್ಕಾರದವರು [illegible] ಏನಾದರೂ ಸಮಾ[illegible] ಕೊಟ್ಟಿರೋ? ಉತ್ತರ:—ಇಲ್ಲ. ಪ್ರಶ್ನೆ:—[illegible] ಮೇಲಿನ ಅಧಿಕಾರಿಗಳಾದರೂ ನಿಮ್ಮನ್ನು [illegible] ಉತ್ತರ:—ಇಲ್ಲ. ಪ್ರಶ್ನೆ:—ಅವರೇನಾದರೂ ಸಮಾಚಾರಗಳನ್ನು ಕಳುಹಿಸಿದರೋ? ಉತ್ತರ—ನಾನು ನನ್ನ ವಿಷಯವನ್ನು ಹೇಳಬಲ್ಲೆ. ಮೇಲಿನ ಅಧಿಕಾರಿಗಳ ವಿಷಯವಾಗಿ ನನಗೆ ಸಮಾಚಾರವು ಗೊತ್ತಿಲ್ಲ. ಪ್ರಶ್ನೆ—ನಿಮ್ಮ ಸ್ವಂತ ಅವಗಾಹನೆಗಾದರೂ ಗುಂಡು ಹೊಡೆದವರು ಯಾರು ಎಂಬುದು ಗೊತ್ತಿದೆಯೇ? ಉತ್ತರ—ಹೌದು. ಅಜೀಜ್ ಎಂಬುವನು ಹೊಡೆದನೆಂದೂ ಅದು ಯಾವ ರಿವಾಲ್ವರು, ಅದರ ಅಗಲ ಎಷ್ಟು ಎಂಬುದನ್ನು ಪತ್ತೆ ಮಾಡಿದ್ದೇನೆ. ಪ್ರಶ್ನೆ—ಅಬ್ಬಾಸ್ ಖಾನರ ಮನೆಯಿಂದ ಗುಂಡು ಹೊಡೆಯಲ್ಪಟ್ಟಿತೆಂಬುದನ್ನು ಕೇಳಿದಿರಾ? ಉತ್ತರ—ಇಲ್ಲ. ಪ್ರಶ್ನೆ—ಗುಂಡು ಹೊಡೆಯಲ್ಪಟ್ಟಿತ್ತೆಂದು ಕೇಳಿದಾಗ ಅಬ್ಬಾಸ್ ಖಾನರ ಮನೆಯ ಸುತ್ತಲೂ ಸೈಕಲ್ ಪಾಹಿಸ ಸುತ್ತಲೂ, ಪೋಲೀಸನ್ನು ಹಾಕಿದಿರಾ? ಉತ್ತರ—ಸಾಕಾದಷ್ಟು [illegible] ಪ್ರಶ್ನೆ—[illegible]ಗಳೇ ಅಂಗಡಿಯನ್ನಾಗಲೀ ಹುಡುಕಿದಿರಾ? ಉತ್ತರ—ಹುಡುಕುವುದಕ್ಕೆ ಸಾಕಾದಷ್ಟು ಕಾರಣವಿರಲಿಲ್ಲ. ನಂಬುವಂಥಾ ರುಜುವಾತು ನನಗೆ ಬರಲಿಲ್ಲ. ಪ್ರಶ್ನೆ—ನಿಮ್ಮ ಮನುಷ್ಯರೇ ಗುಂಡು ಹೊ[illegible] ಉತ್ತರ—[illegible] ಗುಂಡನ್ನು ಹೊಡೆದರೆ ತಪ್ಪಲ್ಲ. ಪ್ರಶ್ನೆ [illegible] ಹೊಡೆದರೆ ತಪ್ಪಲ್ಲವೇ? ಉತ್ತರ—ಆ ಮನುಷ್ಯನ ಹತ್ತಿರ ಲೈ[illegible] ಪ್ರಶ್ನೆ—[illegible] ಜನಗಳನ್ನು ಹೊಡೆಯುವುದಕ್ಕೆ ಲೈಸೆನ್ಸ್ [illegible] ಉತ್ತರ—[illegible] ಮೇಲೆ ಹೊಡೆದರೆ ಅದು ತಪ್ಪು. ಆದರೆ ಅವನು ಜನಗಳನ್ನು ಚದರಿಸುವುದಕ್ಕಾಗಿ ಹೊಡೆದಿರಬಹುದು. ನಾಗಪ್ಪನವರು ನೀವು ಅನೇಕ ವಿಷಯಗಳನ್ನು ಊಹಿಸುತ್ತೀರಿ. ಪ್ರಶ್ನೆ—ಅಜೀಜನು ಸೈಕಲ್ ಷಾಪಿನಿಂದ ಗುಂಡನ್ನು ಹೊಡೆದಮೇಲೆ ಅದನ್ನು ಹುಡುಕಿದರೋ? ಉತ್ತರ—ಇಲ್ಲ. ನಾನು ಆ ರಿವಾಲ್ವರನ್ನು ಕಿತ್ತುಕೊಂಡಿದ್ದೇನೆ. ಪ್ರಶ್ನೆ—ಯಾವತ್ತು ಇಲ್ಲಿನ ವಿಚಾರಣೆಗಳು ಆರಂಭವಾದ ಮೇಲೆಯೋ? ಉತ್ತರ—ನೆನ್ನೆಯೋ ಮೊನ್ನೆಯೋ, ಮ್ಯಾಜಿಸ್ಟ್ರೇಟರ ಅಪ್ಪಣೆಯ ಮೇಲೆ ರಿವಾಲ್ವರು ಕಿತ್ತುಕೊಳ್ಳಲ್ಪಟ್ಟಿತು. ಪ್ರಶ್ನೆ—ಏನೇ ಆಗಲಿ ಯಾರನ್ನೂ ದಸ್ತಗಿರಿ ಮಾಡಕೂಡದೆಂದು ಪೋಲೀಸ್ ಆಫೀಸರುಗಳು ತಮ್ಮ ತಮ್ಮೊಳಗೆ ಏನಾದರೂ ತೀರ್ಮಾನ ಮಾಡಿಕೊಂಡಿದ್ದರೋ? ಉತ್ತರ—ಅಂಥಹ ತೀರ್ಮಾನಗಳೇನೂ ಇಲ್ಲ.

ಆಲ್ ಕಲಾಂ

ಆಲ್‌ಕಲಾಂ ಪತ್ರಿಕೆಯ ಕನ್ನಡ ಇಂಗ್ಲೀಷು ಪತ್ರಿಕೆಯೊಂದನ್ನು ನೋಡಿದೆವು ನೋಡಿ ಬಹಳ ಸಂತೋಷವಾಯಿತು. ಆಲ್‌ಕಲಾಂ ಪತ್ರಿಕೆಯು ಉರ್ದೂನಲ್ಲಿ ಬರೆಯುತ್ತಿದ್ದುದರಿಂದ ಹಿಂದೂಗಳಿಗೆ ಓದುವುದಕ್ಕೂ ಆಗುತ್ತಿರಲಿಲ್ಲ. ಅವರಿಗೆ ಅರ್ಥವೂ ತಿಳಿಯುತ್ತಿರಲಿಲ್ಲ. ಈಗ ಆ ಕೊರತೆಯು ನಿವಾರಿಸಲ್ಪಟ್ಟಿರುವುದು. ಮಹಮ್ಮದೀಯರ ಅಭಿಪ್ರಾಯಗಳು ಹಿಂದೂಗಳಿಗೆ ತಿಳಿಯುವಂತೆ ಆಲ್‌ಕಲಾಂ ಪತ್ರಿಕೆಯನ್ನು ಕನ್ನಡದಲ್ಲಿ ಹೇಗೆ ಛಾಪಿಸುತ್ತಿರುವರೋ ಹಾಗೆಯೇ ಹಿಂದೂಗಳು ತಮ್ಮ ಅಭಿಪ್ರಾಯವು ನಮ್ಮ ಸಂಸ್ಥಾನದ ಮಹಮ್ಮದೀಯರಿಗೆ ತಿಳಿಯುವಂತೆ ಒಂದು ಉರ್ದೂ ಪತ್ರಿಕೆಯನ್ನು ಹೊರಡಿಸುವುದು ಮೇಲು. ಹಿಂದೂಗಳ ಅಭಿಪ್ರಾಯಗಳೂ ಆಶೋತ್ತರಗಳು ಮಹಮ್ಮದೀಯರಿಗೂ ಮಹಮ್ಮದೀಯರ ಅಭಿಪ್ರಾಯಗಳು ಆಕಾಂಕ್ಷೆಗಳು ಹಿಂದೂಗಳಿಗೂ ತಿಳಿಯುತ್ತಾ ಬಂದರೆ ಹಿಂದೂ ಮಹಮ್ಮದೀಯ ಸೌಹಾರ್ದವು ಪುಷ್ಟಿಕರವಾಗುವುದು.

ಪುಂಡರನ್ನೇಕೆ ದಸ್ತಗಿರಿ ಮಾಡಲಿಲ್ಲ?

ಜುಲೈ 30 ನೇ ತಾ॥ ನ ರಾತ್ರಿ ಹಿಂದೂಗಳನ್ನು ದೊಣ್ಣೆ ಮೊದಲಾದುವುಗಳಿಂದ ಹೊಡೆದ ಪುಂಡರನ್ನು ಏತಕ್ಕೆ ದಸ್ತಗಿರಿ ಮಾಡಲಿಲ್ಲ ಎಂದು ವಿಶ್ವೇಶ್ವರಯ್ಯ ಕಮಿಟಿಯವರು ಡಿ. ಸೂಪರಿಂಡೆಂಟರಾದ ಮಿ॥ ಸಿರಾಜುದೀನರನ್ನು ಪ್ರಶ್ನೆ ಮಾಡಿದಾಗ ನಾನು ಮಹಮ್ಮದೀಯರನ್ನು ಹೊರಟುಹೋಗಿ ಎಂದು ಹೇಳಿದೆ. ಅವರು ಹೊರಟುಹೋದರು. ಅದಕ್ಕೋಸ್ಕರ ನಾನು ಅವರನ್ನು ದಸ್ತಗಿರಿ ಮಾಡಲಿಲ್ಲ ಎಂದು ಹೇಳಿದರು. ಅಬ್ಬಾಸ್ ಖಾನರ ಮನೆಯಿಂದ ಗುಂಡುಗಳು ಬಿದ್ದವೆಂದು ಕೇಳಿದಿರಲ್ಲ ಏತಕ್ಕೆ ನೀವು ಕೂಡಲೇ ಒಳಗೆ ಹೋಗಿ ತಲಾಸ್ ಮಾಡಿ ದಸ್ತಗಿರಿ ಮಾಡಲಿಲ್ಲ ಎಂದು ಕೇಳಿದರೆ ನಮಗೆ ಕಂಪ್ಲೈಂಟು ಕೊಡಲಿಲ್ಲ ಎಂದು ಹೇಳಿದರು. ಸರ್. ವಿಶ್ವೇಶ್ವರಯ್ಯನವರು ಸತ್ತವರು ಕಂಪ್ಲೈಂಟು ಕೊಡಬೇಕೇ ಎಂದು ಕೇಳಿದರು. ನಿಮ್ಮನ್ನು ಅರೆಸ್ಟ್ ಮಾಡಬೇಡವೆಂದು ಯಾರಾದರೂ ಹೇಳಿದ್ದರೋ ಎಂದು ಕೇಳಿದಕ್ಕೆ ಆರೆಸ್ಟ್ ಮಾಡು ಎಂತಲೂ, ಹೇಳಲಿಲ್ಲ ಮಾಡಬೇಡವೆಂತಲೂ ಹೇಳಲಿಲ್ಲ ಎಂದು ಉತ್ತರವಿತ್ತರು. ವಿಶ್ವೇಶ್ವರಯ್ಯನವರು ನಿಮ್ಮ ಅಸಾವಧಾನತೆಯಿಂದ ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತಂದಿರಲ್ಲ ಎಂದು ಹೇಳಿದರು. ಅಸಿಸ್ಟೆಂಟ್ ಸೂಪರಿಂಡೆಂಟರವರು ಕೊಟ್ಟ ಕೈಫಿಯತ್ತಿನಲ್ಲಿ ತನ್ನ ಹತ್ತಿರ ಸಾಕಾದಷ್ಟು ಸಿಬ್ಬಂದಿ ಇರಲಿಲ್ಲ. ನವಾರರು ಬಂದಮೇಲೂ ಸಿಬ್ಬಂದಿಯು ಸಾಲಲಿಲ್ಲ. ಅದಕ್ಕೋಸ್ಕರ ನಾನು ಯಾರನ್ನೂ ದಸ್ತಗಿರಿ ಮಾಡಲಿಲ್ಲ ಎಂದು ಹೇದರು. ಸ್ಪೆಷಲ್ ಮ್ಯಾಜಿಸ್ಟ್ರೇಟರು ನೇಮಿಸಲ್ಪಟ್ಟಿದ್ದರಿಂದ ನಾನು ಮುಂದೆ ವಿಚಾರಣೆಯನ್ನು ನಡೆಸುವುದನ್ನು ಬಿಟ್ಟೆ ಎಂದು ಅಸಿಸ್ಟೆಂಟ ಸೂಪರಿಂಡೆಂಟರವರು ಹೇಳಿದರು.

ದಿ ವಾ ನ ರಿಂ ದ ಡಿ. ಓ.

ಗಣಪತಿಯನ್ನು ಹೊರಗೆ ತರಕೂಡದೆಂಬ ಬಗ್ಗೆ ದಿವಾನರಿಂದ ನಿಮಗೇನಾದರೂ ಒಂದು ಡಿ. ಓ. ಬಂದಿತೆ ಎಂದು ಕೇಳಿದಾಗ್ಗೆ ಎಸ್. ಎಸ್. ಸುಬ್ಬರಾಯರವರು ಈ ವಿಷಯವನ್ನು ಗೋಪ್ಯವಾಗಿ ಆಗಲೇ ಹೇಳಲ್ಪಟ್ಟಿದೆ ಎಂದರು.

ವಿ ದ್ಯಾ ರ್ಥಿ ಗ ಳೂ, ರಾ ಜ ಕಾ ರ ಣ ವೂ.

ಕಮಿಟಿಯ ಅಧ್ಯಕ್ಷರಾದ ವಿಶ್ವೇಶ್ವರಯ್ಯನವರು, ಪಾಶ್ಚಿಮಾತ್ಯ ದೇಶಗಳಲ್ಲಿ ವಿದ್ಯಾರ್ಥಿಗಳು ರಾಜಕಾರಣದಲ್ಲಿ ಭಾಗವನ್ನು ತೆಗೆದುಕೊಳ್ಳುತ್ತಾರೆ. ನಾನು ರೋಂ ಪಟ್ಟಣದಲ್ಲಿ ಆಸ್ಟ್ರೇಲಿಯಾ ರಾಯಭಾರಿಯನ್ನು ಮುತ್ತಿದುದನ್ನು ಕಣ್ಣಾರೆ ಕಂಡಿದ್ದೇನೆ ಎಂದು ಹೇಳಿದರು.

Printed and Published by P. R.Ramaiya at Sri Rma Press,
D. Subbiah Road, Mysore.

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ |

ಚಂದಾ { ವರ್ಷಕ್ಕೆ ೫-೦-೦ / ತಿಂಗಳಿಗೆ ೦-೮-೦

ಸಂಪುಟ ೧] ಶನಿವಾರ ೨೯ ನೇ ಸೆಪ್ಟಂಬರ್, ೧೯೨೮]ಸಂಚಿಕೆ ೬

ತಾಯಿನಾಡು

29—9—1928

ಗುಂಡು ಹೊಡೆದ ವಿಚಾರ.

ಜುಲೈ 30ನೇ ತಾರೀಖಿನ ದಿವಸ ಖಾಸಗೀ ಮನುಷ್ಯರು ಯಾರೂ ಗುಂಡು ಹೊಡೆಯಲಿಲ್ಲ ಎಂದು ಸರ್ಕಾರದವರು ಪ್ರಕಟಣೆಗಳಲ್ಲಿ ಸುಳ್ಳನ್ನೇ ಸಾಧಿಸುತ್ತಾ ಬಂದರು. ಕಡೆಗೆ ಚಂದ್ರರಾಜನು ಕಂಟೋನ್ಮೆಂಟಿನ ಬೌರಿಂಗ್ ಆಸ್ಪತ್ರೆಯಲ್ಲಿ [illegible] ಚಿಕಿತ್ಸೆ ಹೊಂದುತ್ತಿರುವುದು ತಿಳಿದುಬಂದು ಅವನ ಎಕ್ಸರೇ ಫೋಟೋಗ್ರಾಫು ಪ್ರಕಟವಾದ ಮೇಲೆ ಸರ್ಕಾರದವರು ಗುಂಡಿನ ಹಾಗಿರುವ ಏನೋ [illegible] ಚಂದ್ರರಾಜನ ಕಾಲುಗಳಲ್ಲಿದೇ ಎಂದು ಒಪ್ಪಿಕೊಂಡರೇ ಹೊರತು ಆವತ್ತಿನ ರಾತ್ರಿ ಗುಂಡು ಹೊಡೆದಿದ್ದು ನಿಜ ಎಂದು ಒಪ್ಪಿಕೊಳ್ಳಲಿಲ್ಲ. ಜುಲೈ 31ನೇ ತಾರೀಖಿನ ದಿವಸ ಮ|| ಅಬ್ಬಾಸ್‌ಖಾನ್‌ರವರೂ ಕಲಾಮಿಯವರೂ ದಿವಾನರ ಹೇಳಿಕೆಯನ್ನು ತಿದ್ದುಕೊಂಡು ಖಾಸಗೀ ಮನುಷ್ಯರು ಗುಂಡು ಹೊಡೆಯಲಿಲ್ಲ ಎಂದು ಪ್ರಕಟಣೆಯನ್ನು ಹೊರಡಿಸುವಂತೆ ಮಾಡಿದರು. ಸರ್ಕಾರದವರು ಅಬ್ಬಾಸ್‌ಖಾನರಲ್ಲಿ [illegible] ಇತರರಲ್ಲಿ ಇಲ್ಲ. ಈಚೆಗೆ ವಿಶ್ವೇಶ್ವರಯ್ಯನವರ ಕಮಿಟಿಯ ಮುಂದೆ ಗುಂಡುಹೊಡೆದ ವಿಷಯವಾಗಿ ಪ್ರಶ್ನೋತ್ತರಗಳು ನಡೆಯುತ್ತಿರುವುವು. ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರವರು ಆ ರಾತ್ರಿ ಆ ಸ್ಥಳದಲ್ಲಿ ಇದ್ದಹಾಗೆ ಹೇಳುತ್ತಾರೆ. ಗುಂಡು ಹೊಡೆದ ವಿಷಯವಾಗಿ ಅವರು ನಿಶ್ಚಯವಾಗಿ ಏನನ್ನೂ ಹೇಳುವುದಿಲ್ಲ. ಗುಂಡುಗಳು ಹೊಡೆಯಲ್ಪಟ್ಟವೆಂದು ಯಾರೂ ತಮಗೆ ಹೇಳಲಿಲ್ಲವೆಂದೂ ವಿಚಾರಣೆಯನ್ನು ನಡೆಸಲಿಲ್ಲವೆಂದೂ ಹೇಳುತ್ತಾರೆ. ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರು ಕೊಟ್ಟಿರತಕ್ಕ ಕೈಫಿಯತ್ತಿನಲ್ಲಿ ಗುಂಡುಹೊಡೆದ ವಿಷಯದಲ್ಲಿ ಇತರರು ತಮಗೆ ಹಾಗೆ ಹೇಳಿದುದನ್ನು ಹೇಳುತ್ತಾರೆಯೇ ಹೊರತು ತಾವೇ ನೋಡಿದ್ದನ್ನು ಹೇಳುವುದಿಲ್ಲ. ತಾವಾಗಿ ಏನೂ ನೋಡಲಿಲ್ಲವೆಂದು ಹೇಳುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವಿಚಾರಿಸಲಾಗಿ ಅಲ್ಲಿ ಯಾರೂ ಗುಂಡಿನ [illegible] ನೋಡಲಿಲ್ಲವೆಂದು ಹೇಳಿದರೆಂದು ತಿಳಿಸುತ್ತಾರೆ. ವಿಶ್ವೇಶ್ವರಯ್ಯ ಕಮಿಟಿಯವರು ಚಂದ್ರರಾಜನನ್ನು ವಿಚಾರಿಸಿದರು. ಅವನು ತಾನು [illegible] ಗಣೇಶನ ಮೇಲೆ ಗಣಪತಿಯ ಮಂಗಳಾರತಿ ನೋಡುತ್ತ [illegible] ಗುಂಡು ತನಗೆ ಬಿದ್ದ ಸಂಗತಿಯನ್ನು ಹೇಳಿದನು.' ಕಮಿಟಿಯವರು ಅವನ ತೊಡೆಯನ್ನು ಮುಟ್ಟಿನೋಡಿದರು. ಅಲ್ಲೇನೋ ಗಟ್ಟಿಯಾಗಿತ್ತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪುನಃ ಎಕ್ಸರೇ ಫೋಟೋವನ್ನು ತೆಗೆಸಿರುತ್ತಾರೆ. ಸಬ್ ಇನ್ಸ್ಪೆಕ್ಟರ್ [illegible] ಅಯ್ಯರ್‌ರವರು ತಮ್ಮ ಕೈಫಿಯತ್ತಿನಲ್ಲಿ ತಾವು [illegible] ಗುಂಡು ಹೊಡೆದದ್ದನ್ನು ನೋಡಿದುದಾಗಿ ಹೇಳಿರುತ್ತಾರೆ. ಕಂಟೋನ್ಮೆಂಟ್ ಆಸ್ಪತ್ರೆಯಲ್ಲಿ ಗುಂಡನ್ನು ತೆಗೆದರೋ ಇಲ್ಲವೋ ಆ ವಿಷಯವು ಗೊತ್ತಿಲ್ಲ. [illegible] ಏತಕ್ಕೆ ಸಮಾಚಾರವನ್ನು ಕೊಡುವುದಿಲ್ಲವೋ ಅದಕ್ಕೆ ಕಾರಣವು ತಿಳಿಯದು. ಕೈಫಿಯತ್ತು ಕೊಟ್ಟವರನೇಕರು ಗುಂಡುಹೊಡೆದ ವಿಷಯವನ್ನು ಪ್ರಮಾಣ [illegible].

ದಿವಾನರ ಮೇಲೆ ಅಸೂಯೆ

ಮಿ|| ಎಂ. ಅಬ್ದುಲ್ ಲತೀಫ್ ಎಂಬ ಹೆಸರಿನ ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯ ಮೆಂಬರೊಬ್ಬರು ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಈ ಕೆಳಗಿನ ಆಶ್ಚರ್ಯಕರವಾದ ಸಾಕ್ಷ್ಯವನ್ನು ಕೊಟ್ಟಿದ್ದಾರೆ. ಅವರು ಹೇಳುವುದೇನೆಂದರೆ ಮಿರ್ಜಾರವರು ದಿವಾನರಾದಾಗಿನಿಂದ ಬ್ರಾಹ್ಮಣರಿಗೆ ಅವರ ಮೇಲೆ ಹೊಟ್ಟೇಕಿಚ್ಚು. ಜಗತ್ತಿಗೆಲ್ಲಾ ಇದು ಗೊತ್ತು. ಬ್ರಾಹ್ಮಣೇತರರಿಗೆ ಈ ಹೊಟ್ಟೇಕಿಚ್ಚು ಇಲ್ಲ. ಮಹಾರಾಜರವರ ಮೆರವಣಿಗೆಯಾದಾಗ ಅಂಬಾರಿಯಲ್ಲಿ ದಿವಾನರು ಕೂತದ್ದು ಹಿಂದೂಗಳಿಗೆ ಸಹನೆ ಇಲ್ಲ. ಹೆಂಗಸರು ಇದೇ ಮಾತನ್ನೇ ಆಡುತ್ತಿದ್ದರು. ಮಿರ್ಜಾರವರ ಕಾಲದಲ್ಲಿ ಪೂಗದಿಯಲ್ಲಿ ಹತ್ತುವರೆ ಲಕ್ಷ ರೂಪಾಯಿ ಕಡಿಮೆಯಾದದ್ದು ಈ ಅಸೂಯೆಗೆ ಕಾರಣ. ದಿವಾನರು ವಯಸ್ಸಿನಲ್ಲಿ ಚಿಕ್ಕವರು. ಅವರು [illegible] ಇನ್ನೂ ಬಹಳ ವರ್ಷಗಳಾಗುವುದೆಂಬ ಹೊಟ್ಟೆ ಉರಿಯು ಹಿಂದೂಗಳಿಗೆ ಬಹಳವಾಗಿರುವುದು.

ಹಿಂದೂಗಳಿಗೆ ಲೇಖನದ ಬಲ, ಮುಹಮ್ಮದೀಯರಿಗೆ ದೊಣ್ಣೆಯ ಬಲ.

ವಿಚಾರಣೆಯು ಕಮಿಟಿಯ ಮುಂದೆ ಮ|| ಸಿದ್ದರಾಮಪ್ಪನವರ ಕೈಫಿಯತ್ತು ನಡೆಯುತ್ತಿದ್ದಾಗ, ಅಧ್ಯಕ್ಷರಾದ ಸರ್. ಎಂ. ವಿಶ್ವೇಶ್ವರಯ್ಯನವರು ಹಾಸ್ಯ [illegible] ಕಾಲದಲ್ಲಿ ಹಿಂದೂಗಳು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯು [illegible] ದೊಣ್ಣೆಗಳನ್ನು ಹಿಡಿದುಕೊಂಡು [illegible] [illegible] ಹೇಳಿದರು.

ಇನ್ನೂರು ಮುನ್ನೂರು ಹಿಂದೂಗಳು ಲಾಠಿ ಹಿಡಿದ್ದರು ?

ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸಾಕ್ಷ್ಯವನ್ನು ಕೊಟ್ಟವರಲ್ಲಿ ಬಹಳ ಜನರು, ಜುಲೈ 30 ನೇ ತಾರೀಖಿನ ರಾತ್ರಿ, ಹಿಂದೂಗಳು ನಿರಾಯುಧರಾಗಿದ್ದರೆಂದು ಹೇಳುತ್ತಾರೆ. ಆದರೆ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಅಬ್ದುಲ್ ಸದಾರ್ ಖಾನ್‌ರವರು ಇನ್ನೂರು ಮುನ್ನೂರು ಹಿಂದೂಗಳು ಲಾಠಿ ಹಿಡಿದಿದ್ದರೆಂದು ಹೇಳುತ್ತಾರೆ. ಈ ಮಹಾಶಯರೇ ಸಾಕ್ಷಿ ಹೇಳುವಾಗ ಆ ರಾತ್ರಿ ನಾನು ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರನ್ನು ನೋಡಲಿಲ್ಲ ಎಂದರು. ನಿಮ್ಮ ಡೈರಿಯನ್ನು ಓದಿಯೆಂದು ಹೇಳಿದಾಗ ಅದರಲ್ಲಿ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರನ್ನು ನೋಡಿದೆ ಎಂದು ಬರೆದಿದ್ದನ್ನು ಓದಿದರು. ಇದರಲ್ಲಿ ಯಾವುದು ನಿಜ ಎಂದು ಕೇಳಿದಮೇಲೆ ನಾನು ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರನ್ನು ನೋಡಿದೆ ಎಂದು ಹೇಳಿದರು.

ನಾನೇ ಗಣೇಶ; ನನ್ನನ್ನೇ ಪೂಜಿಮಾಡಿರಿ.

ವಿಶ್ವನಾಥ ಎಂಬ ಹುಡುಗನು ಕಮಿಟಿಯ ಮುಂದೆ ಸಾಕ್ಷಿಕೊಡುತ್ತಾ ಹೇಳಿದ ಮಾತುಗಳು, "ನಾವುಗಳೆಲ್ಲರೂ ದಿವಾನರ ಬಂಗಲೆಯ ಬಳಿಗೆ ಹೋದೆವು ಅಲ್ಲಿ ಒಬ್ಬ ಆಫೀಸರಿದ್ದರು. ಅವರನ್ನು ಕಂಡು ನಮ್ಮ ಗಣೇಶನನ್ನು ಬಿಡಿಸಿಕೊಡಿ ಎಂದು ಕೇಳಿದೆವು. ಅದಕ್ಕೆ ಅವರು "ನಾನೇ ಗಣೇಶ ನನ್ನು ಪೂಜಿಮಾಡಿರಿ, ಅನುಗ್ರಹ ಮಾಡುತ್ತೇನೆ" ಎಂದರು. ಮತ್ತೆ ಕೆಲವರು, ಹುಡುಗರು ನೊಂದಲೆಲ್ಲಿ ಸಾರ್ ಎಂದರು. ಮತ್ತೆ ಕೆಲವರು ಕಾಂಪಾಂಡಿನಲ್ಲಿದ್ದ ಹೂವ್ವುಗಳನ್ನೂ ಪತ್ರೆಗಳನ್ನೂ ಕಿತ್ತುಕೊಂಡು ಬಂದು ಆಫೀಸರಿಗೆ ಹಾಕಿ, ಈಗ ಪೂಜೆ ಮಾಡಿದ್ದೇವೆ. ಅನುಗ್ರಹಮಾಡಿ ಗಣೇಶನನ್ನು ಬಿಡಿಸಿರಿ, ಲೀಡರ್ಸ್‌ಗಳನ್ನು ಬಿಡಿಸಿಕೊಡಿರಿ" ಎಂದು ಹೇಳಿದರು.

ಅಕ್ಕಿ ಮತ್ತು ಅಕ್ಕಿಯಲ್ಲಿನ ಕಲ್ಲುಗಳು.

ಮ|| ಎಚ್. ವಿ. ಸುಬ್ರಹ್ಮಣ್ಯಂರವರು ಬೆಂಗಳೂರು ಸಿಟಿ ಮಾರ್ಕೆಟ್ಟಿನ ಮುಂದುಗಡೆ ಕೊಟ್ಟ ಒಂದು ಭಾಷಣದಲ್ಲಿ ನಮ್ಮ ಸಂಸ್ಥಾನದಲ್ಲಿನ ಹಿಂದೂಗಳನ್ನು ಒಂದು ಚೀಲದ ಅಕ್ಕಿಗೂ ಮಹಮದ್ದೀಯರನ್ನು ಅಕ್ಕಿಯಲ್ಲಿರುವ ಕಲ್ಲುಗಳಿಗೂ ಹೋಲಿಸಿದ ಹಾಗೆ ಕೋರ್ಟಿನಲ್ಲಿ ಕೈಫಿಯತ್ತು ಕೊಡಲ್ಪಟ್ಟಿದೆ. ಸಭೆಯಲ್ಲಿದ್ದ ಕೆಲವು ಮಹಮ್ಮದೀಯರು ಒಂದು ಚೀಲ ಅಕ್ಕಿಯನ್ನೆಲ್ಲಾ ಒಂದು ಮಣ ಸೌದೆಯಲ್ಲಿ ಬೇಯಿಸಿಬಿಡಬಹುದೆಂದೂ ಆದರೆ ಕಲ್ಲನ್ನು ಬೇಯಿಸುವುದು ಮಾತ್ರ ಕಷ್ಟವೆಂದು ಹೇಳಿದರೆಂದು ತಿಳಿಸಲ್ಪಟ್ಟಿದೆ.

ಗಣಪತಿಯ ತಂಟೆಗೆ ಹೋಗುತ್ತಿರಲಿಲ್ಲ.

ನಾನು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದರೆ ಗಣಪತಿಯ ತಂಟೆಗೆ ಹೋಗುತ್ತಿರಲಿಲ್ಲ ಎಂದು ಗೌ|| ಅ|| ಶಂಕರನಾರಾಯಣರಾಯರು ಸಾಕ್ಷ್ಯವನ್ನು ಹೇಳಿದರು.

ಮಸೀದಿಯ ಮುಂದೆ ವಾದ್ಯ

ಟಿ. ನರಸೀಪುರದ ತಾಲ್ಲೂಕು ಸೋಸಲೆ ವ್ಯಾಸರಾಯ ಮಠದಲ್ಲಿ ಮಾಮೂಲಿನಂತೆ ಗೌರೀಗಣೇಶನನ್ನು ಬಿಡುವುದಕ್ಕಾಗಿ ಕಾವೇರಿಗೆ ಮೆರವಣಿಗೆ ವಾದ್ಯಗಳೊಡನೆ ಹೋಗುತ್ತಿರುವಾಗ್ಯೆ, ಕೆಲವುಜನ ಮಹಮ್ಮದೀಯರು ಮಸೀದಿಯ ಮುಂದೆ ವಾದ್ಯವಾಗಕೂಡದೆಂದು ತಡೆದರೆಂದೂ ವಾದ್ಯವು ನಿಲ್ಲಿಸಲ್ಪಟ್ಟಿತೆಂದೂ ಶ್ರೀನಿವಾಸಾಚಾರ್ಯರು ತಿಳಿಸುತ್ತಾರೆ.

ಗುಂಡು ಹೊಡೆದವನು

ಅಜೀಜ್ ಎಂಬವನು ಅಬ್ಬಾಸ್‌ಖಾನರ ಮನೆಯಿಂದ ಗುಂಡು ಹೊಡೆದನೆಂದು ಎ. ಎಸ್. ಪಿ. ಯವರು ಕಮಿಟಿಯ ಮುಂದೆ ಸಾಕ್ಷ್ಯವನ್ನು ನುಡಿದರು.

ರಿವಾಲ್ವರನ್ನು ದಸ್ತಗಿರಿ ಮಾಡಿದೆ

ಗುಂಡು ಹೊಡೆದ ಅಜೀಜ್‌ನ ರಿವಾಲ್ವರನ್ನು ದಸ್ತಗಿರಿ ಮಾಡಿದೆ ಯೆಂದು ಯೆ. ಯಸ್. ಪಿ. ಯವರು ಸಾಕ್ಷಿ ಹೇಳಿದರು.

ನಾನು ಪಶ್ಚಾತ್ತಾಪ ಪಡುತ್ತೇನೆ.

ನಾನು ಗಣೇಶನನ್ನು ವಾಪಸು ತರಕೂಡದೆಂದು ಮಾಡಿದ ಹುಕುಮಿನ ತಪ್ಪಿನಿಂದಲೇ ಸುಲ್ತಾನ್‌ಪೇಟೆಯ ಯುದ್ಧವಾಯಿತು. ನಾನು 'ಪಶ್ಚಾತ್ತಾಪ ಪಟ್ಟಿದ್ದೇನೆ, ಪಡುತ್ತಲೂ ಇದ್ದೇನೆ. ನಾನು ಹುಕುಂ ಮಾಡುವಾಗ ಇಷ್ಟು ಗಲಭೆಗಳಾಗುತ್ತವೆಂದು ಯೋಚಿಸಿಯೇ ಇರಲಿಲ್ಲ. ಯೆಂದು ಎಚ್. ಯಸ್. ಸುಬ್ಬರಾಯರು ಕಮಿಟಿಯ ಮುಂದೆ ಹೇಳಿದರು.

Printed and Published by P. R. Ramaiya at Sri Rama Press,
D. Subbiah Road, Mysore.

ಕರ್ನಾಟಕ ಸ್ವೈರಸಿಯಲ್ಲ ಕನಸಿನ ಪಿಶಾಚಿ

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { ವರ್ಷಕ್ಕೆ [illegible] / [illegible]

ಸಂಪುಟ ೧] ಮಂಗಳವಾರ ೯ ನೇ ಅಕ್ಟೋಬರ್, ೧೯೨೮ [[illegible]

City Improvement Trust Board, Mysore
27 th September 1928

NOTIFICATION

[illegible] bed her-eunder are available for sale at Na[illegible] Mohalla

DESCRIPTION

(a) House sites 1 to 6 and measure 7 [illegible]
[illegible]

(b) Each house [illegible]
One [illegible]
One [illegible]
One [illegible] and living room
One [illegible]
One privy

(c) The materials used [illegible] are of superior quality.

(d) The approximate cost [illegible] will be between Rs [illegible] cost will be intimated at the time of allotment.

2. The sale is subject to the following conditions—

(i) At least one half [illegible] paid within [illegible] and the balance [illegible] 24 [illegible] in ordinary cases and [illegible] exceptional [illegible] per cent per annum [illegible] money outstanding at the end of each [illegible]

(ii) Failure to pay the [illegible] value of the house [illegible] and execute the required [illegible] balance amount will render the house liable to be disposed of otherwise,

(iii) The house will be sold only to residents of the City who do not possess houses of their own, preference being given to [illegible] dishoused by the acquisition of [illegible] for City Improvement and other public purposes.

(iv) Not more than one house, will, as a [illegible] living together.

(v) In disposing of the houses to the poor, preference will be given to those who pay the full value of the house in a lump, soon after allotment.

Intending purchasers are requested to apply to the undersigned before the 10th October 1928.

T. G. RAMA IYER,
[illegible]

ತಾಯಿನಾಡು

2 10 – 1928

ಕಾರ್ಪೊರೇಷನಿನಲ್ಲಿ ಕನಸಿನ ಪಿಶಾಚಿ.

ದಾವಣಗೆರೆಯಲ್ಲಿ ಆದ ಗಲಾಟೆಯು ಎರಡು ದಿನಗಳಲ್ಲಿಯೇ ಶಮನವಾಗುವುದಕ್ಕೂ ಬೆಂಗಳೂರಿನಲ್ಲಿ ಆದ ಗಲಾಟೆಯು ಇಲಿಯಾಗಿದ್ದುದು ಹುಲಿಯಾಗುವುದಕ್ಕೂ ಕಾರಣವೇನು? ಹಾಗೆ ನೋಡಿದರೆ ದಾವಣಗೆರೆಯಲ್ಲಿ ಆದ ಅನಾಹುತವು ಅತಿ ಭಯಂಕರವಾದುದು. ಆದರೂ ಎರಡು ದಿನಗಳಲ್ಲಿ ಎಲ್ಲವೂ ಅಡಗಿತು. ಈ ವಿಷಯವೂ ಕೂಡ ವಿಶ್ವೇಶ್ವರಯ್ಯ ಕಮಿಟಿಯವರ ಮುಂದೆ ವಿಚಾರಣೆಗೆ ಬರಬೇಕು. ಬೆಂಗಳೂರಿನಲ್ಲಿ ದಿವಾನರಿಂದ ಮೊದಲ್ಗೊಂಡು ಇಡೀ ಸರಕಾರಕ್ಕೆ ಸರಕಾರವೇ ಹಾಜರಿರುವುದು. ಸಾಲದ್ದಕ್ಕೆ ಕಂಟೋನ್ಮೆಂಟಿನ ಮಿಲಿಟರೀ ಸಹಾಯವು [illegible] ಪರಿಸ್ಥಿತಿಯನ್ನು ಹತೋಟಿಯಲ್ಲಿ ತರುವುದು ಅಸಾ[illegible]. [illegible] ಜವಾಬ್ದಾರಿಗಳಾದವರೂ ಗೊತ್ತುಗಾರರಾದವರೂ ಇದ್ದರು. [illegible] ಕೂಡಲೇ ತಕ್ಕ ಬಂದೋಬಸ್ತನ್ನು ಮಾಡಿ [illegible] ದಸ್ತಗಿರಿ ಮಾಡಿದರು. ಅವ್ಯಾವರ್ತಕರಾದವರ [illegible] ಭಯಂಕರತೆಯನ್ನು ಮಹಾ ಜನಗಳಿಗೆ [illegible]

ಆದರೆ ಬೆಂಗಳೂರು ಅನಾಯಕವಾಗಿತ್ತು. ಯಾವ ಅಧಿಕಾರಿಗೂ ತಮ್ಮ ಜವಾಬ್ದಾರಿ ಗೊತ್ತಿಲ್ಲ. ಪೋಲೀಸಿನವರು ಮಾಡುತ್ತಾನೆ ಎಂದು ಕೇಳಿಸಿದವರೂ, ಕೆಳ[illegible] ಎಂದು [illegible], ಬಬ್ಬರಿಗೊಬ್ಬರು ಕೈ ತೋರಿಸಿ ಬೆಂಗಳೂರಿನ [illegible]. ಬೆಂಗಳೂರಿನ ಅಧಿಕಾರಿಗಳೆಲ್ಲರೂ ತಟಸ್ಥರಾಗಿ [illegible]. ಸಾಲದ್ದಕ್ಕೆ [illegible] ತಮ್ಮ ತಪ್ಪನ್ನು ಮುಚ್ಚಿ[illegible] ಎಂಬ ಕನಸಿನ ಪಿಶಾಚವನ್ನು ಮಂತ್ರಿಸಿದರು. ಈ [illegible] ಜನಗಳಿಗೆ ಮಂಕನ್ನುಂಟು ಮಾಡಿತು. ಸುದೈವದಿಂದ ಈ ಕನಸಿನ ಪಿಶಾಚಿಯ ಉಚ್ಚಾಟನವು ನಡೆಯುತ್ತಿದೆ. ಈ ಕನಸಿನ ಪಿಶಾಚಿಯೇ ಬೆಂಗಳೂರಿನ ಅನಾಯಕತ್ವಕ್ಕೆ ಮುಖ್ಯ ಕಾರಣ.

ಬ್ರಾಹ್ಮಣ ಮಹಾಸಭೆ.

ಬೆಂಗಳೂರಿನಲ್ಲಿ 30-9-1928 ನೇ ಭಾನುವಾರ ಪ್ರಾತಃಕಾಲ 9 ಘಂಟೆಗೆ ಶಂಕರ ಮಠದಲ್ಲಿ ಬ್ರಾಹ್ಮಣರ ಭಾರೀ ಸಭೆಯು ಸೇರಿತ್ತು. ಸಭೆಯಲ್ಲಿ 3000 ಜನಕ್ಕಿಂತಲೂ ಹೆಚ್ಚಿದ್ದರು. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಪ್ರಥಮತಃ ದೇವತಾಪ್ರಾರ್ಥನೆ ಮಾಡಿದರು. ಎಸ್. ಎಸ್. ಸೆಟ್ಲೂರವರೂ, ಎಸ್. ವಿ. ಮಾಧವ ಅಯ್ಯಂಗಾರ್ರವರೂ ರಾವ್ ಬಹದೂರ್ ಎಂ. ಶಾಮರಾಯರನ್ನು ಅಧ್ಯಕ್ಷರಾಗ [illegible]. ಶಾಮರಾಯರವರ ಉಪಕ್ರಮ ಭಾಷಣವಾದ ನಂತರ [illegible] ನಿರ್ಣಯಗಳು ಸಭಿಕರೆಲ್ಲರಿಂದಲೂ ಪಾಸು ಮಾಡಲ್ಪಟ್ಟಿತು. [illegible] (1) ನಮ್ಮನ್ನಾಳುವ ಮಹಾಸ್ವಾಮಿಯವರ ಮಹಾ ಸನ್ನಿಧಾನದಲ್ಲಿ ಅವರ [illegible] ಸರ್ಕಾರದಲ್ಲಿಯೂ, ಬ್ರಾಹ್ಮಣರಲ್ಲಿ ಆರ್ಷೇಯವಾಗಿ ಬಂದಿರುವ ರಾಜಭಕ್ತಿಯೂ ನಿಶ್ಚಲವಾದ ರಾಜಸೇವಾತತ್ಪರತೆಯೂ ಮನಃಪೂರ್ವಕವಾದ ರಾಜಪ್ರೀತಿಯೂ ಎಂದಿಗೂ ಅಚ್ಚಳಿಯದಂತೆ ಏಕರೀತಿಯಾಗಿ ರುವುದೆಂದು ಈ ಸಭೆಯು ಮರಳಿ ಒತ್ತಿ ಹೇಳುತ್ತದೆ. ಈ ಸಭೆಯಲ್ಲಿ ಅಂಗೀಕೃತವಾದ ಎರಡನೇ ಠರಾವು ಯಾವುದೆಂದರೆ (2) ನಮ್ಮಲ್ಲಿ ದೇಶಸೇವಕರೆಂದು ಓಡಾಡುತ್ತಿರುವ ಕೆಲವರೂ ಮತ್ತು ಬ್ರಾಹ್ಮಣರ ಔದ್ಧತ್ಯ ಎಂಬ ಶಿರೋನಾಮೆಯುಳ್ಳ ಇಂಗ್ಲೀಷ್ ಲೇಖನವನ್ನೊಳಗೊಂಡಿರುವ ಈದೇ ಸೆಪ್ಟಂಬರ್ ಮೊದಲನೇ ತಾರೀಖಿನಲ್ಲಿ ಪ್ರಕಟವಾದ [illegible] ಎಂಬ ಸಮಾಚಾರ ಪತ್ರಿಕೆಯೇ ಮೊದಲಾದುವುಗಳೂ ಮದರಾಸಿನ ಜಸ್ಟಿಸ್ ಎಂಬ ಪತ್ರಿಕೆಯೂ ಮೈಸೂರು ಬ್ರಾಹ್ಮಣ ಸಮಾಜದ [illegible] ರಾಜದ್ರೋಹ ಮಹಾಪಾತಕ ಎಂಬ [illegible]ಗಳು ಶುದ್ಧ ಸುಳ್ಳೆಂದು ಈ ದಿನ ಬೆಂಗಳೂರು ಶಂಕರ ಮಠದಲ್ಲಿ ಸಭೆ ಸೇರಿರುವ ಬ್ರಾಹ್ಮಣ ಸಮಾಜವು ಅತ್ಯಂತ ಉದ್ವೇಗದಿಂದ ವ್ಯಕ್ತಪಡಿಸುತ್ತದೆ. (3) [illegible] ಈ ಸಂಸ್ಥಾನದ ಬ್ರಾಹ್ಮಣ ಸಮಾಜದ [illegible] ಮಾಡುತ್ತಿರುವುದೆಂದು ಸ್ಪಷ್ಟ[illegible] ಈ ಸಭೆಯು ಅತ್ಯರ್ಥವಿಂದಲೂ

ಮತ್ತು ಅತ್ಯಂತ [illegible] ದೃಷ್ಟಿಸುತ್ತದೆ. (4) ನಮ್ಮ ಶಿವಮೊಗ್ಗ [illegible] ನಮ್ಮನ್ನಾಳುವ ಮಹಾಸ್ವಾಮಿಯವರ ಇತರ ಪ್ರಜೆಗಳಾದ ನಾನಾ ಜಾತಿಗಳು ಮತ್ತು ಕೋಮುಗಳವರೊಡನೆ ಬ್ರಾಹ್ಮಣರು ಎಂದಿನಂತೆಯೇ ಕುಂದಿಲ್ಲದೆ ಸೌಹಾರ್ದದಿಂದಲೂ ಸಹಾನುಭೂತಿಯಿಂದಲೂ ಭ್ರಾತೃ ಭಾವದಿಂದಲೂ ವರ್ತಿಸುತ್ತಿರುವರೆಂಬ ದೃಢಪ್ರತಿಜ್ಞೆಯನ್ನು ಈ ಸಭೆಯು ಈಗಲೂ ದೃಢೀಕರಿಸುತ್ತದೆ. (5) ನೆಯ [illegible] ಬ್ರಾಹ್ಮಣ ಸಮಾಜದ ಮೇಲೆ ಈ ರೀತಿಯಾಗಿ ಮಾಡಿರುವ ಮಿಥ್ಯಾರೋಪಣೆಗಳನ್ನು ಖಂಡಿಸುವ ಮತ್ತು ಈ ವಿಚಾರದಲ್ಲಿ ಮುಂದಣ ಎಲ್ಲಾ ಕಾರ್ಯಗಳ ಕ್ರಮವನ್ನು ನಡೆಯಿಸುವ ಆಲೋಚನೆಮಾಡುವುದಕ್ಕೂ ಈ ಕಾರ್ಯಕ್ಕೆ ಬೇಕಾಗುವ ದ್ರವ್ಯವನ್ನು ಶೇಖರಿಸುವುದಕ್ಕೂ, ಒಂದು ಸಮಿತಿಯನ್ನು ಈ ಸಭೆಯು ನಿಯಮಿಸಬೇಕು. ಮ|| ಗಳಾದ ಎಚ್. ಕೃಷ್ಣಪ್ಪನವರು, ಎಸ್. ಎಸ್. ಸೆಟ್ಲೂರವರು, ಎಂ. ಪಿ. ಸೋಮಶೇಖರರಾಯರವರು, ಎಸ್. ವಿ. ನರಸಿಂಹಅಯ್ಯಂಗಾರ್ರವರು ಜಿ. ಸುಬ್ಬಣ್ಣನವರು, ಎ. ಆರ್. ನಾಗೇಶ್ವರ ಅಯ್ಯರ್ರವರು ಈ ಸಮಿತಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು. ಸಭೆಯು 3 ಗಂಟೆಗಳವರಿವಿಗೂ ನಡೆಯಿತು. ಸುಮಾರು 12 ಗಂಟೆಯ ವೇಳೆಗೆ ರಾಜಾಶೀರ್ವಾದವಾದನಂತರ ಸಭೆಯು ಬರಖಾಸ್ತಾಯಿತು. ಈ ಸಭೆಯಲ್ಲಿ ಬಹಳ ಸ್ವಾರಸ್ಯವಾದ ಭಾಷಣಗಳು ಮಾಡಲ್ಪಟ್ಟವು. ಅವುಗಳಲ್ಲಿ ಮುಖ್ಯವಾದುವುಗಳನ್ನು ಕ್ರಮವಾಗಿ ಕೊಡುವೆವು.

ಎಚ್. ಎಸ್. ಸುಬ್ಬರಾಯರ ಕೈಫಿಯತ್ತು, ಪರದೆ ಒಳಗಿನ ಉತ್ತರಗಳು.

ವಿಚಾರಣೆ[illegible] ಕಮಿಟಿಯ ಮುಂದೆ ಎಚ್. ಎಸ್. ಸುಬ್ಬರಾಯರವರು ಕೊಟ್ಟ ಕೈಫಿಯತ್ತು ವಿಚಿತ್ರವಾಗಿರುವುದು. ಕೇಳಿದ ಅನೇಕ ಪ್ರಶ್ನೆಗಳಿಗೆ ನಾನು ಕ್ಯಾಮರಾದಲ್ಲಿ ಎಂದರೆ ಪರದೆಯೊಳಗೆ ಉತ್ತರವನ್ನು ಕೊಟ್ಟೆ. ಅದಕ್ಕೆ ಈಗ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಎಲ್ಲಕ್ಕಿಂತಲೂ ಮುಖ್ಯವಾದುದು ದಿವಾನರಿಂದ ಬಂದ ಡಿ. ಓ. ವಿಷಯ. ಗಣಪತಿಯ ವಿಷಯವಾಗಿ ದಿವಾನರಿಂದ ಏನಾದರೂ ಡಿ. ಓ. ಬಂದಿತೇ ಎಂದು ಕೇಳಿದರೆ ಅದಕ್ಕೆ ನಾನು ಇಲ್ಲಿ ಉತ್ತರವನ್ನು ಹೇಳುವುದಿಲ್ಲ ಪರದೆಯೊಳಗೆ ಉತ್ತರ ಕೊಟ್ಟಿದ್ದೇನೆ ಎಂದು ಹೇಳಿದರು. ಬಹಿರಂಗವಾಗಿ ಉತ್ತರಕೊಟ್ಟರೆ ಮುಳುಗಿ ಹೋದದ್ದೇನು? ಜನಗಳ ಮನಸ್ಸಿನಲ್ಲಿರುವ ಸಂಶಯವು ವಿಚ್ಛೇದವಾಗುವುದು. ಜನಗಳನ್ನು ಇನ್ನೂ ಸಂದೇಹದಲ್ಲಿ ಇಟ್ಟರೆ ಇಲ್ಲದ ಸಲ್ಲದ ಊಹಾಪೋಹಗಳಿಗೆ ಅವಕಾಶವಾಗುವುದಿಲ್ಲವೇ? ಈ ಉತ್ತರವನ್ನು ನೋಡಿ ಈಗಾಗಲೇ ಅನೇಕರು ದಿವಾನರಿಂದ ಡಿ. ಓ. ಬಾರದೇ ಇರಬೇಕೆಂದು ಸಿದ್ಧಾಂತ ಮಾಡಿರುತ್ತಾರೆ. ಮ|| ಲಕ್ಷ್ಮೀನಾರಣಪ್ಪನವರು ಕೇಳಿದ ಅನೇಕ ಪ್ರಶ್ನೆಗಳಿಗೆ ಪರದೆ ಒಳಗೆ ಉತ್ತರಕೊಟ್ಟಿದ್ದೇನೆ ಎಂದು ಹೇಳಿಬಿಟ್ಟರು. ಅವರು ಹಾಕಿದ ಪ್ರಶ್ನೆಗಳು ಯಾವುದೆಂದರೆ—ನಿಮ್ಮ ಕೆಳಗಿನ ಅಧಿಕಾರಿಗಳ ಸಲಹೆಯನ್ನು ತೆಗೆದುಕೊಳ್ಳದೆ ಗಣಪತಿಯ ಪುನಸ್ಥಾಪನೆಯನ್ನು ಮಾಡಕೂಡದೆಂದು ಏತಕ್ಕೆ ಅಷ್ಟು ಅವಸರವಾಗಿ ಹುಕುಂ ಮಾಡಿದಿರಿ ಉ—ನಾನು ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಇಲ್ಲಿ ತಯಾರಾಗಿಲ್ಲ. ಪರದೆಯಲ್ಲಿಯೇ ಉತ್ತರವನ್ನು ಕೊಟ್ಟಿದ್ದೇನೆ. ಪ್ರಶ್ನೆ—ಜೂನ್ 15 ನೇ ತಾರೀಖಿನ ದಿವಸ ಆ ಸ್ಕೂಲಿಗೆ ಹೋಗಬೇಕೆಂದು ನಿಮ್ಮ ಪ್ರೋಗ್ರಾಮಿನಲ್ಲಿತ್ತೋ? ಅಥವಾ ಅದು ಅವಸರದ ಭೇಟಿಯೋ? ಅವಸರದ ಭೇಟಿಯಾಗಲು ಕಾರಣವೇನು. ಉ—ಇದಕ್ಕೆ ಪರದೆಯಲ್ಲಿ ನಾನು ಆಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅದೊಂದು ಅವಸರದ ಭೇಟಿಯೇ. ಅದಕ್ಕೆ ಕಾರಣವನ್ನು ಕಮಿಟಿಯವರಿಗೆ ತಿಳಿಸಿದ್ದೇನೆ. ಪ್ರಶ್ನೆ—ಕೌನ್ಸಿಲಿನ ಮೆಂಬರುಗಳಿಂದ ಗಣಪತಿಯನ್ನು ಕದಲಿಸಿದ ವಿಷಯವಾಗಿ ಏನಾದರೂ ಕಾಗದವು ಬಂದಿತೇ. ಉ—ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ನಾನು ಇಲ್ಲಿ ತಯಾರಾಗಿಲ್ಲ. ಈ [illegible]ಗಳೆಲ್ಲಾ ರಟ್ಟಾಗುವ ಕಾಲವು ಬಂದೇ ಬರುವುದು.

ತಾಯಿನಾಡು

ದಿನವಾರ ಪತ್ರಿಕೆಯು ಶೀಘ್ರದಲ್ಲಿಯೇ 4 ಪುಟಗಳಾಗುವುದು. ವಾರ್ಷಿಕ ಚಂದಾ, ಸ್ಥಳಕ್ಕೆ 5—0—0 ಪರಸ್ಥಳಕ್ಕೆ ಏಜೆಂಟರ ಮುಖಾಂತರ 7—0—0 ಟಪಾಲು ಮೂಲಕ 10—0—0 ತಿಂಗಳಿಗೆ ಸ್ಥಳಕ್ಕೆ 0—8—0 ಏಜೆಂಟರ ಮೂಲಕ ಪರಸ್ಥಳಕ್ಕೆ 0—10—0 ಟಪಾಲು ಮೂಲಕ 0—14—0

ವಾರ ಪತ್ರಿಕೆ ಸ್ಥಳಕ್ಕೆ ಪರಸ್ಥಳಕ್ಕೆ ವಾರ್ಷಿಕ ಚಂದಾ, 3—0—0

ಪಿ. ಆರ್. ರಾಮಯ್ಯ
ಎಡಿಟರ್.

12 Printed and Published by P. R. Ramaiya at Sri Rama Press, D. Subbiah Road, Mysore.

|| ವಂದೇ ಮಾತರಂ ||

ಶುದ್ಧ ಹಲ್ಕ !!

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಚಂದಾ { ವರ್ಷಕ್ಕೆ [illegible]
ಚಂದಾ { [illegible]

ಸಂಪುಟ ೧] ಬುಧವಾರ ೩ ನೇ ಅಕ್ಟೋಬರ್, ೧೯೨೮ [ಸಂಚಿಕೆ ೬

Office of the Chairman,
City Improvement Trust Board, Mysore
27 th September 28.

NOTIFICATION

Sixteen model houses for the poor as described here under are available for sale in Narasimharaja Mohalla

DESCRIPTION

(a House sites 1 to 6 and 16 measure 75x[illegible] each including the portion built upon
House sites Nos 7, 8, 9 63 x69 each
House sites Nos 10, 11 & 12 60x62/2 x 69 each
Do. 13 & 14 67½ x 69 [illegible]
Do. 15 90x60/2 x 69

(b) Each house consists of
One small hall measuring [illegible]
One room Do 10½ x 7¼
One kitchen and dining room [illegible]
One bath [illegible]
One privy

(c) The materials used for the [illegible] are of superior quality.

(d) The approximate cost of each house will be between Rs 850 and 900 The exact cost will be intimated at the [illegible] ment.

2. The sale is subject to the following conditions—

(i) At least one half of the price [illegible] paid within 15 days from [illegible] and the balance in 24 equal monthly [illegible] ts in Ordinary cases and 72 inst[illegible] exceptional circumstances, with [illegible] per cent per annum on the [illegible] money outstanding at the end of each [illegible]

(ii) Failure to pay the 50 per cent of the value of the house within the stipulated [illegible] and execute the required document [illegible] balance amount will render the house [illegible] be disposed of otherwise.

(iii) The houses will be sold only to [illegible] dents of the City who do not posses houses of their own, preference being given to people dishoused by the acquisition of their pro[illegible] for City Improvement and other public purposes.

(iv) Not more than one house will as a rule be given to members of the same family living together.

(v) In disposing of the houses to the poor preference will be given to those who pay the full value of the house in a lump, soon after allotment.

Intending purchasers are requested to apply to the undersigned before the 10th October 1928

P. G. RAMA IYER.
Chairman.
City Improvement Trust Board, Mysore

ತಾಯಿನಾಡು

3—10—1928

ಶುದ್ಧ ಹಲ್ಕ !!

ಡಾ|| ಬ್ರಜೇಂದ್ರನಾಥ್ ಸೀಲ್‌ರವರು ರಜಾದಿಂದ ಹಿಂತಿರುಗಿ ಬಂದು ಈ ತಿಂಗಳು 9 ನೇ ತಾ|| ನಲ್ಲಿ ತಮ್ಮ ಉದ್ಯೋಗವನ್ನು ವಹಿಸಿದರಷ್ಟೆ. ಈ ವಿಷಯವಾಗಿ ಒಂದು ಪತ್ರಿಕೆಯು ಈ ಕೆಳಗಿನ ಹಲ್ಕಾ ಮಾತುಗಳನ್ನು ಬರೆದಿರುವುದು.

'ಶರೀರದ ದೌರ್ಬಲ್ಯಾಧಿಕ್ಯದಿಂದ' ಅಸ್ವಸ್ಥರಾಗಿ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ ರಜಾದಲ್ಲಿ ಸ್ವಸ್ಥಳಕ್ಕೆ ಹೋಗಿದ್ದ ನಮ್ಮ ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಡಾ|| ಬ್ರಜೇಂದ್ರನಾಥ ಶೀಲರವರು ಕಳೆದ ತಾ|| 9 ರಲ್ಲಿ ಹಿಂದಿರುಗಿ ಬಂದು, ಬದಲು ನೋಡುತ್ತಿದ್ದ ರಾಜಸಭಾಭೂಷಣ ಮ|| ಕೆ. ಚೆಂಗಲರಾಯರವರಿಂದ ತಮ್ಮುದ್ಯೋಗವನ್ನು ವಹಿಸಿಕೊಂಡರು. ಮ|| ಶೀಲರವರು ಇನ್ನೂ ಅಸ್ವಸ್ಥರಾಗಿದ್ದಾರೆಂದು ಕೇಳುತ್ತೇವೆ. ಹೀಗಿದ್ದರೂ ಇವರು ತ್ವರಿತವಾಗಿ ಉದ್ಯೋಗದ ಮೇಲೆ ಬಂದುದನ್ನು ನೋಡಿದರೆ ಕೈ|| ಬಿ. ರಾಮರಾಯರು ಕಣ್ಣು ಬಾಧೆಯಿಂದ ನರಳುತ್ತಿದ್ದಾಗ್ಯೂ ಬಂದನೆಯ ಕೌನ್ಸಿಲರು ಬೇರೆ ಸ್ವತಂತ್ರರಾಗಿದ್ದುದರಿಂದ ತಮ್ಮ ದಿವಾನಗಿರಿಯನ್ನು ಅನಿತ್ಯವಾಗಿಯೂ ಬಿಟ್ಟುಕೊಡಲು ಮನಸ್ಸಿಲ್ಲದೆ ತಮ್ಮ ಕೈಯನ್ನು ಹಿಡಿಸಿಕೊಂಡು ಕಾಗದ ಪತ್ರಗಳಿಗೆ ಹಸ್ತಾಕ್ಷರವನ್ನು ಹಾಕುತ್ತಿದ್ದ ಸಂದರ್ಭವು ಮ|| ಶೀಲ್‌ರವರ ವರ್ತನೆಯಿಂದ ನಮ್ಮ ಸ್ಮೃತಿಪಥಕ್ಕೆ ಬರುತ್ತದೆ. ಸಂಸ್ಕೃತಿಯ ಅವತಾರವೆನಿಸಿಕೊಂಡಿರುವವರನ್ನು ನಮ್ಮ ಸ್ವಾರ್ಥಸಿದ್ಧಿಯು ಬಿಡುವುದಿಲ್ಲವಲ್ಲ!'

ಮ|| ಚೆಂಗಲರಾಯರಿಗೆ ಎಕ್ಸ್‌ಟೆನ್ಷನ್ನು ದೊರೆಯಲಿಲ್ಲವಲ್ಲ ಎಂಬ ಹೊಟ್ಟೆಯುರಿಗೋಸ್ಕರ ಅತ್ಯಂತ ಕೀಳುತರವಾದ ಈ ಬರವಣಿಗೆಯನ್ನು ಬರೆಯಬಹುದೆ?

ಅವರ ಜವಾಬ್ದಾರಿಯೇ ಅವರಿಗೆ ಗೊತ್ತಿಲ್ಲ!

ಜುಲೈ 30 ನೇ ತಾ|| ನ ಗಲಾಟೆಯ ವೇಳೆ ನೀವು ದಂಗೆಕಾರರನ್ನು ಏಕೆ ದಸ್ತಗಿರಿ ಮಾಡಲಿಲ್ಲ. ನಂತರ ಮುಸ್ಲಿಂರ ಮನೆಗಳನ್ನು ಯಾತಕ್ಕೆ ಮಹಜರ್ ಮಾಡಲಿಲ್ಲ. ನೀವು ಮುಂದಕ್ಕೆ ಪೋಲೀಸ್ ತನಿಖೆಯನ್ನು ಯಾತಕ್ಕೆ ಮುಂದುವರಿಸಲಿಲ್ಲ? ಎಂಬ ಪ್ರಶ್ನೆಯು ಡೆಪ್ಯುಟಿ ಕಮಿಷನರಿಗೆ ಹಾಕಲ್ಪಟ್ಟಿತು. ಅವರು ಐ. ಜಿ. ಪಿ. ಯವರು ಸ್ಥಳದಲ್ಲಿದ್ದರು. ಅಡಿಷನಲ್ ಮ್ಯಾಜಿಸ್ಟ್ರೇಟರು ನೀವು ಇದ್ದಿರಿ. ಇವರು ಪೋಲೀಸ್ ತನಿಖೆಯನ್ನು ನಡೆಸುವರೆಂದೂ, ದಸ್ತಗಿರಿ, ಮಹಜರ್ ಮೊದಲಾದುವುಗಳನ್ನು ಮಾಡಿಸುವರೆಂದೂ, ಸಾಕ್ಷ್ಯಗಳನ್ನು ತೆಗೆದುಕೊಳ್ಳುವರೆಂದೂ ನಾನು ಸುಮ್ಮನಾದೆ ಎಂದರು. ಮತ್ತು ಐ. ಜಿ. ಪಿ ಯವರು ಸ್ಥಳದಲ್ಲಿದ್ದಾಗ್ಗೆ, ಪೋಲೀಸ್ ಸಮಸ್ತ ಜಾಬಿಗೂ ಅವರೇ ಜವಾಬ್ದಾರರು. ನನಗೆ ಪೋಲೀಸಿನಲ್ಲಿ ಅಧಿಕಾರವೇ ಇಲ್ಲ ಎಂದರು. ಡಿ. ಕೆ. ರಾಮರಾಯರು ವಾದಿಸಿ ಡಿ|| ಮ್ಯಾ|| ರವರ ಮಾತನ್ನು ಐ. ಜಿ. ಪಿ. ಯವರೂ ಕೇಳಬೇಕು. ಶಾಂತಿ ಸಂರಕ್ಷಣೆಯ ಭಾರವು ಇತ್ತು. ಅಡಿಷನಲ್ ಮ್ಯಾ|| ರವರೂ ನಿಮ್ಮ ಕೈಕೆಳಗೆ. ನೀವು ದಸ್ತಗಿರಿ, ಮಹಜರ್ ಮೊದಲಾದುವುಗಳನ್ನು ಮಾಡದೇ ಹೋದುದರಿಂದ, ದೊರಕಬಹುದಾದ ಸಾಕ್ಷ್ಯಗಳೆಲ್ಲವೂ ಮಾಯವಾದವು ಎಂದು ತಿಳಿಸಿದರು.

ನೀವು ತಪ್ಪುಬದ್ದಿಗಿದ್ದೀರಿ! ನೀವು ತಪ್ಪುಬದ್ದಿಗಿದ್ದೀರಿ!

ವಿಚಾರಣೆಯ ಕಮಿಟಿಯ ಮುಂದೆ ಬೆಂಗಳೂರು ಡೆಪ್ಯುಟೀಕಮಿಷನರ್ ಹೇಳಿಕೆಯನ್ನು ಕೊಡುವಾಗ ಶ್ರೀ. ನಾಗಪ್ಪನವರು ಪ್ರಶ್ನೆ ಹಾಕುವುದರಲ್ಲಿ ಸ್ವಲ್ಪ ತಪ್ಪಿದ್ದರಿಂದ ಡೆ|| ಕ|| ರವರು ನೀವು ವಿಷಯಗಳನ್ನು ಒಂದರೊಂದಿಗೆ ಒಂದನ್ನು ಮಿಶ್ರಮಾಡುತ್ತೀರಿ ಎಂದರು. ನಾಗಪ್ಪನವರು ಸಿಟ್ಟಿಗೆದ್ದು, ನಾನು ತಪ್ಪಾಗಲಿಲ್ಲ! ನೀವು ತಪ್ಪುಬದ್ದರೆ ನಾನೇನುಮಾಡಲಿ ಎಂದರು. ಪ್ರಕೋಪವು ಉಗ್ರವಾಗುವುದೆಂದು ತಿಳಿದು, ಅಧ್ಯಕ್ಷರು ನಾಗಪ್ಪನವರಿಗೆ 'ಸಾಕ್ಷಿಗಳಿಗೆ ಪ್ರಶ್ನೆಗಳನ್ನು ಮರ್ಯಾದೆಯಾಗಿ ಹಾಕಿ ಅವರು ಹೇಳುವ ಉತ್ತರಗಳನ್ನು ಕೇಳಿರಿ' ಎಂದು ಹೇಳಿದರು.

ದಿವಾನರು ಏನನ್ನೂ ಹೇಳಲಿಲ್ಲ; ತಲೆಯಲ್ಲಾಡಿಸಿದರು.

ಜುಲೈ 30 ನೇ ತಾ|| ಮಧ್ಯಾಹ್ನ ದಿವಾನರ ಮನೆಯಲ್ಲಿ ಹುಡುಗರು ಗಲಾಟೆ ಮಾಡುತ್ತಿದ್ದಾಗ ಸವಾರರನ್ನು ಕರೆಸುತ್ತೇನೆ ಎಂದು ಹೇಳಿದೆ ಅದಕ್ಕೆ ದಿವಾನರು ತಲೆಯಲ್ಲಾಡಿಸಿದರು. ಏನನ್ನೂ ಹೇಳಲಿಲ್ಲ ಎಂದು ಹೆಬ್ಲೀಕರ್‌ರವರು ಕೈಫಿಯತ್ತು ಕೊಟ್ಟರು.

ಮೈಸೂರು ಸ್ಟಾರಿನ ಸ್ವರೂಪ ಬದಲಾವಣೆ

ಸ್ವಾಮಿ,

ಮೈಸೂರು ಸ್ಟಾರ್ ಇನ್ನು ಮುಂದೆ ಪ್ರತಿದಿನವೂ ಹೊರಬೀಳಲು ಮೊದಲು ಮಾಡುವುದಂತೆ. ದೇಶದ್ರೋಹಿಗಳನ್ನು ದಗ್ಗಬಡಿದು ಪ್ರಭುಪ್ರಜಾ ಸೇವೆಯನ್ನು ಮಾಡುವುದೇ ಇದರ ಉಚ್ಚ ಧ್ಯೇಯವಂತೆ! ಈ ವರವಿಗೆ ಇದರ ಜನಸೇವೆಯನ್ನು ಲೆಕ್ಕಿಸಲು ಬಾರದ, ಇದರ ಪ್ರವರ ಪ್ರತಾಪಗಳನ್ನೆಲ್ಲಾ ಮ|| ಎಂ. ಎಲ್. ನಾಗಣ್ಣನವರು ಹಸ್ತಪುಸ್ತಕ ರೂಪವಾಗಿ ಪ್ರಕಾಶಪಡಿಸಿರುವರು. ಇದು ತನ್ನ ಸಮಾಜದಲ್ಲಿ ಏಕಪಕ್ಷ ಸಾಧನೆಯನ್ನು ಮಾಡುತ್ತಾ ವಿಪುಲ ಅನರ್ಥಗಳನ್ನುಂಟು ಮಾಡಿತು. ತನ್ನ ಪತಿ ಉದ್ಯೋಗಿಯಾದ "ಪ್ರಭಾ' ಆವಿರ್ಭವಿಸಿದ ಮೇಲೆ ಈದ ಹುಲಿಯಂತೆ ರೇಗಲು ಮೊದಲುಮಾಡಿತು. ತಾರಾದೇವಿಯು ಉಭಯ ಕಪಿವೀರರ ಧರ್ಮಪತ್ನಿಯಷ್ಟೆ! ದೇಶಸೇವೆಯೆಂದೂ ಈಶಸೇವೆಯೆಂದೂ ಕಾರ್ಯ ಮಾಡುತ್ತಿರುವ ಅನ್ವರ್ಥನಾಮಧಾರಿಗಳಾದ 'ವೀರರ ಮುಂದೆ ಹೆಣ್ಣುಹೆಂಗಸು ಧೈರ್ಯದಿಂದ ಹೋರಾಡಲಾರದೆ ಈಗ ತನ್ನ ರೂಪವನ್ನು ಬದಲಾಯಿಸುವಳು. ಹಾಗೆಯೇ ಸ್ವಭಾವ ಬದಲಾವಣೆಯೂ ಮುಖ್ಯ. ನಮ್ಮ ಕರ್ನಾಟಕದ ಎಲ್ಲಾ ವೃತ್ತ ಪತ್ರಿಕೆಗಳೂ ಸ್ವಭಾಷಾಭಿಮಾನಕ್ಕಾಗಿ ಹೋರಾಡುತ್ತಿರುವಾಗ ಈ "ಮೈಸೂರು ಸ್ಟಾರ್ ಆದರೂ ಮಾಡಿರುವುದೇನು? "ಸ್ಟಾರ್" ಎಂಬ ಶಬ್ದವೇ ಇದರ ಭಾಷಾಭಿಮಾನದ ಆಳವನ್ನು ತೋರಿಸುತ್ತದೆ. ಕೇವಲ ನಿಮ್ನ ಕುಲೋದ್ಧಾರಕ್ಕಾಗಿಯೇ ಹೋರಾಡುತ್ತಿರುವ ಶ್ರೀ|| ರಾಮಚಂದ್ರರಾಯರಿಗೆ ಪ್ರಭುತ್ವದವರು ಕಣಿಯುರ ಪತ್ರಿಕಾ ಸಂಪಾದಕತ್ವಕ್ಕೆ ಎಡೆಗೊಡದೆ ಹೋಗಿ, ಒಂದು ಸಮಾಜವನ್ನೇ ಕಲುಷಿತವಾಗಿ ಮಾಡುತ್ತಿರುವ "ದೀನ್‌ದಾರ್" ಪತ್ರಿಕೆಗೆ ಅವಕಾಶ ಕೊಟ್ಟಿರುವುದರಿಂದ ಎಲ್ಲಾ ವೃತ್ತಪತ್ರಿಕೆಗಳೂ ಧೈರ್ಯದಿಂದ ಎದೆ ತಟ್ಟಿ ಪ್ರಭುತ್ವದವರ ವರ್ತನೆಯನ್ನು ಖಂಡನೆ ಮಾಡುತ್ತಿರುವಾಗ ಸ್ವಜಾತಿ—ಪತ್ರಿಕಾಭಿಮಾನದಿಂದಲಾದರೂ ಒಂದು ನುಡಿಯಾದರೂ ಆಡದೆಹೋದ ಮಹಾ ತಾಯಿ ತಾರಾಮತಿ. (ಸ್ಟಾರ್) ಬೆಂಗಳೂರಿನ ಗಲಭೆಯ ವಿಚಾರಣೆ ಸಮಿತಿಯ ವಿದ್ಯಮಾನಗಳನ್ನು ಎಲ್ಲಾ ವೃತ್ತಪತ್ರಗಳೂ ಪ್ರಕಟಿಸುತ್ತಿರುವಾಗ, ತಾರೆಯು ಒಂದುವೇಳೆಯಾದರೂ ತನ್ನ ಗ್ರಾಹಕರಿಗೆ ಒಂದು ಮಾತನ್ನಾದರೂ ನುಡಿದಿರುವಳೇ? ತಾನು ತಿನ್ನುತ್ತಿರುವ ಉಪ್ಪಿಗಾದರೂ 'ಪ್ರತಿ ಕ್ರಿಯೆಯು ಇದೇತಾನೆ! ಯಾವುದೋ ಒಂದು ವ್ಯಕ್ತಿಯ ಆರಾಧನೆಯು ಹೆಚ್ಚಾಯಿತೇ! ನಾನಾ ಕಡೆಗಳಲ್ಲಿ ಶಿವಲಿಂಗ ಭೇದನಗಳಾಗುತ್ತಿದ್ದರೂ ಅವನ್ನೆಲ್ಲಾ ಮುಚ್ಚುತ್ತಿರುವುದು ಅತಿ ಪಾಪಹೇತವಾದುದು. ತಾನು ಹುಟ್ಟಿರುವ ಸಮಾಜದ ಸಲುವಾಗಿ ಒಂದು ತೊಟ್ಟು ಕಣ್ಣೀರನ್ನಾದರೂ ಇಟ್ಟಿರುವಳೆ! ಬ್ರಾಹ್ಮಣ ಬ್ರಾಹ್ಮಣೇತರ ಭೇದಭಾವವನ್ನು ಪೋಷಿಸುತ್ತಿದ್ದ ಮಹಾತಾಯಿಯು ಈಗ ಮುಸಲ್ಮಾನ-ವೀರಶೈವ ಸಂಯೋಗವನ್ನು ಮಾಡುತ್ತಿರುವಳು. ಇದು ಯಾವೊಬ್ಬ ಅಭಿಮಾನೀ ವೀರಶೈವನ ಒಪ್ಪಿಗೆಯಲ್ಲ. ಕನ್ನಡ ವೃತ್ತ ಪತ್ರಿಕಾ ಪ್ರಪಂಚವೇ ಅಪರಾಧಿಗಳನ್ನು ಹುಡುಕಿ ಶಿಕ್ಷಿಸಬೇಕೆಂದು ಹೇಳುತ್ತಿರುವಾಗ ನಾಲ್ವತ್ತು ವರ್ಷದ ಮುಗ್ಧೆಯಾದ ತಾನು ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುವುದು ತರವಲ್ಲ. ಸಮಾಜದ ಹಾಗೂ ನಾಡಿನ ಏಕಮತ್ಯದ ನಾಶದಲ್ಲಿ ಸಂತುಷ್ಟಳಾಗುವುದು ಸರ್ವಥಾ ಯೋಗ್ಯವಲ್ಲ. ಈಗಲಾದರೂ ತನ್ನ ಸ್ವರೂಪ ಬದಲಾವಣೆಯೊಂದಿಗೆ ಸ್ವಭಾವ ಬದಲಾವಣೆಯೂ ಆಗಲಿ.

22-9-28 "ಓರ್ವ ವೀರಶೈವ"

ನಾವೆಲ್ಲಾ ಅಳಿಸಿ ಹೋಗಿಬಿಡುತ್ತಿದ್ದೆವು.

ಜುಲೈ 30 ನೇ ತಾರೀಖಿನ ರಾತ್ರಿ ಪುಂಡರನ್ನು ಏತಕ್ಕೆ ದಸ್ತಗಿರಿ ಮಾಡಲಿಲ್ಲ ಎಂದು ಕೇಳಿದಕ್ಕೆ ಹೆಬ್ಲೀಕರ್‌ರವರು ನಮ್ಮಲ್ಲಿ ಸಾಕಾದಷ್ಟು ಸಿಬ್ಬಂದಿ ಇರಲಿಲ್ಲ. ನಾವು ದಸ್ತಗಿರಿ ಮಾಡಿದ್ದರೆ ನಾವೆಲ್ಲಾ ಅಳಿಸಿ ಹೋಗಿಬಿಡುತ್ತಿದ್ದೆವು ಎಂದು ಉತ್ತರ ಕೊಟ್ಟರು. "We would have been wiped out."

ಹೆಬ್ಲೀಕರ್‌ರವರ ಕೈಫಿಯತ್ತಾಗುತ್ತಿದ್ದಾಗ ಅಧ್ಯಕ್ಷರು 'ಡಿ|| ಮ್ಯಾ|| ರಾದ ನೀವು ನಿಮ್ಮ ಜವಾಬ್ದಾರಿಯಲ್ಲಿ ಸಂಶಯಗ್ರಸ್ತರಾಗಿದ್ದೀರಿ. ಡಿ|| ಸೂ|| ರವರು ಆತಂಕವಿಲ್ಲದ ದೊಡ್ಡಮನುಷ್ಯರಂತೆ ವರ್ತಿಸಿದರು. ಎ. ಎಸ್. ಪಿ. ರವರು ಭಯಗ್ರಸ್ತರಾದವರಂತೆ ವರ್ತಿಸಿದರು. ಈ ಮಧ್ಯೆ ಗಲಾಟೆಗಳ ಪರಂಪರೆಗಳು ನಡೆದವು. ರುಜುವಾತುಗಳೆಲ್ಲವೂ ಮಾಯವಾದವು' ಎಂದರು.

ಫೋನು ಯಾರು ಕೊಟ್ಟರೋ ಗೊತ್ತಿಲ್ಲ.

ಸೆಕ್ರೆಟರಿಯೇಟಿನಿಂದ ಸವಾರರು ಬರಬೇಕೆಂದು ಕರ್ನಲ್ ಲೇಂಡರ್‌ರವರಿಗೆ ಯಾರು ಫೋನು ಕೊಟ್ಟರೊ ನನಗೆ ತಿಳಿಯದು ಎಂದು ಹೆಬ್ಲೀಕರರವರು ಹೇಳಿದರು.

Printed and Published by P. R. Ramaiya, at Sri Rama Press, D. Subbiah Road, Mysore.

ದಿವಾನರಿಗೂ ಜನರಿಗೂ ಸಂಬಂಧ. ‖ ವಂದೇ ಮಾತರಂ ‖ [illegible]

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ಚಂದಾ { [illegible] / [illegible] }

ಸಂಪುಟ ೧] ಗುರುವಾರ ೪ ನೇ ಅಕ್ಟೋಬರ್, ೧೯೨೮ [ಸಂಚಿಕೆ [illegible]

Office of the Chairman
City Improvement Trust Board, Mysore
27 th September 28.

NOTIFICATION

Sixteen model houses for the poor as described [illegible] Narasimharaja Mohalla [illegible]

[illegible]

(a House sites [illegible]
[illegible]
House sites [illegible]
House sites N[illegible] & 1[illegible]

Do. [illegible]
Do. 15 [illegible]

(b) Each [illegible]
One small hall measuring 10½ x 7[illegible]
One room Do 12 x[illegible]
One kitchen and dining room 6 x[illegible]
One bath
One [illegible]

(c) The materials used for the building are of superior [illegible]

(d) The approximate [illegible] will be between Rs 850 a[illegible] cost will be intimated [illegible] ment.

2. The sale is subject [illegible] conditions—

(i) At least one [illegible] paid within 15 days from the date of allotment and the balance in 24 [illegible] ts in ordinary cases [illegible] exceptional circumstances [illegible] per cent per annum on the ba[illegible] money outstanding at the en[illegible]

(ii) Failure to pay the [illegible] value of the house within the [illegible] and execute the required doc[illegible] balance amount will [illegible] be disposed of otherwise.

(iii) The houses will be sold only to residents of the City [illegible] of their own [illegible] dishoused by the acquisition of their properties for City Improvement and other public purposes.

(iv) Not more than one [illegible] male [illegible] living together.

(v) In disposing of the houses to the poo[r] preference will be given to those who pay the full value of the house in a lump, soon [after] allotment.

Intending purchasers are requested to apply [illegible] October 19[illegible]

[illegible]
Chairman.

ತಾಯಿನಾಡು

4 10 1928

ದಿವಾನರಿಗೂ ಅಬ್ಬಾಸ್ ಖಾನರಿಗೂ ಸಂಬಂಧ.

ಅಬ್ಬಾಸ್‌ಖಾನರೂ ದಿವಾನರೂ ಒಂದೇ ಪಂಗಡದವರು. ಬೆಂಗಳೂರು ನಗರದ ಸೌಂದರ್ಯ ರಚನೆಯಲ್ಲಿ ಇಬ್ಬರೂ ಭಾಗಿಗಳು. ಒಬ್ಬರೊನ್ನೊಬ್ಬರು ಮೆಚ್ಚುವರು. ಮಿ॥ ಮಿರ್ಜಾರವರ ದಿವಾನಗಿರಿಗೆ ಮುಂಚೆ ಅಬ್ಬಾಸ್‌ಖಾನರು ಸರಕಾರಕ್ಕೆ ಬಲವಾದ ಪ್ರತಿಪಕ್ಷಿಗಳಾಗಿದ್ದರು. ಮಿ॥ ಮಿರ್ಜಾರವರು ದಿವಾನಗಿರಿಗೆ ಬಂದಮೇಲೆ ಅಬ್ಬಾಸ್‌ಖಾನರು ಸರಕಾರಕ್ಕೆ ದೊಡ್ಡ ಸ್ನೇಹಿತರಾದರು. ಅವರಿಗೆ ಖಾನ್ ಬಹದ್ದೂರ್ ಪದವಿಯು ದೊರೆಯಿತು. ಹೋದ ಅಸೆಂಬ್ಲಿಯ ಅಧಿವೇಶನದಲ್ಲಿ ಅಬ್ಬಾಸ್‌ಖಾನರು ತಮ್ಮನ್ನು ಯಾವಾಗಲೂ ಅನುವರ್ತಿಸುತ್ತಿದ್ದ ಮ॥ ಡಿ. ಎಸ್. ಮಲ್ಲಪ್ಪ ಮೊದಲಾದವರನ್ನು ಬೋರ್ಡ್‌ಲ್ಲಿ ಹಾಕಿ ಮಿ॥ ಮಿರ್ಜಾರವರ ಮನಸ್ಸನ್ನು ಸಂತೋಷಪಡಿಸಿದರು. ಅದೂ ಅಲ್ಲದೆ ಬೆಂಗಳೂರು ಸಿಟಿ ಮುನಿಸಿಪಾಲಿಟಿಯಲ್ಲಿ ತಾವು ಆಡುವ ಪ್ರತಿಯೊಂದು ಮಾತಿಗೂ ತಮ್ಮ ಹಿಂದೆ ದಿವಾನರಿರುವರೆಂದು ತೋರ್ಪಡಿಸಿದರು. ಧರ್ಮಕರ್ಮ ಸಂಯೋಗದಿಂದ ಅಶ್ವತ್ಥಕಟ್ಟೆಗಳಿಗೂ ಗುಡಿಗಳಿಗೂ ವಿನಾಶಕಾಲವು ಬಂದಿತು. ಅಬ್ಬಾಸ್‌ಖಾನರು ಸ್ಯಾಸರ್ಜಿಯವರ ಕಾಲದಲ್ಲೂ ಸಿಟಿ ಮುನಿಸಿಪಾಲಿಟಿಗೆ ಅಧ್ಯಕ್ಷರಾಗಿದ್ದರು. ಆದರೆ [illegible] ಅಶ್ವತ್ಥಕಟ್ಟೆಗಳ ತಂಟೆಗೂ ಗುಡಿಗಳ ತಂಟೆಗೂ ಹೋದಹಾಗೆ ಕಾಣು [illegible]ರು ದಿವಾನರಾದಮೇಲೆಯೇ ಅವುಗಳಿಗೆ ಕೈಹಾಕಿದರು. ಮೈಸೂರು ನಗರದ ಸೌಂದರ್ಯ ರಚನೆಯಲ್ಲಿ ಮಿ॥ ಮಿರ್ಜಾರವರ ಭಾಗವು ದೊಡ್ಡದು. ಇವರ ಪ್ರೇರಣೆಯಿಂದಲೇ ಅನೇಕ ಗುಡಿಗಳೂ ಅಶ್ವತ್ಥಕಟ್ಟೆಗಳೂ ಕದಲಿ [illegible]ಟ್ಟವೆಂದು ಹೇಳುತ್ತಾರೆ. ಬೆಂಗಳೂರಿನಲ್ಲೂ ಇಂತಹ ಘಟನೆಗಳಿಗೆಲ್ಲಾ ಮಿ॥ [illegible] ಜವಾಬ್ದಾರರೆಂದು ಏತಕ್ಕೆ ಹೇಳಬಾರದು? ಅಬ್ಬಾಸ್ ಖಾನರು ಮಿ॥ ಮಿರ್ಜಾರವರಿಗೆ ನಗರ ಶೃಂಗಾರ ಕೆಲಸದಲ್ಲಿ ಬಲಭುಜವಾಗಿದ್ದರೆಂದು ಹೇಳಬಹುದು. ಸುಲ್ತಾನ್‌ಪೇಟೆಯ ಸ್ಕೂಲಿನ ಪ್ರಕರಣದಲ್ಲಿಯೂ ಇಬ್ಬರ ಜವಾಬ್ದಾರಿಯೂ ಇದ್ದರೂ ಇರಬಹುದು. ಹಾಗಿಲ್ಲದೆ ಹೋದರೆ ಅಬ್ಬಾಸ್ ಖಾನರವರಿಗೆ ತಮ್ಮ ಹೆಸರಿನೊಂದಿಗೆ ದಿವಾನರ ಹೆಸರನ್ನು ಸೇರಿಸಿಕೊಳ್ಳುವುದಕ್ಕೆ ಧೈರ್ಯವು [illegible] ಈ [illegible] ಕಮಿಟಿಯವರು ಇತ್ಯರ್ಥಮಾಡ [illegible].

ಕಮಿಟಿಯ ಮುಂದೆ ಸಾಕ್ಷ್ಯಗಳು.

—o—

ಕೈಬರಹದ ರಿಪೋರ್ಟುಗಳಿಲ್ಲ.

ಸರಕಾರಕ್ಕೆ ಬಾಯಿಮಾತಿನಲ್ಲೇ ವಿಷಯಗಳನ್ನು ತಿಳಿಸುತ್ತಿದ್ದೆವು. ಬರಹದ ರಿಪೋರ್ಟುಗಳ ಮೂಲಕ ಅಲ್ಲ ಎಂದು ಹೆಬ್ಲೀಕರವರು ಹೇಳಿದರು.

ರೂಲ್ಸಿಗೆ ವಿರೋಧವಾಗಿ ಬಿಡುಗಡೆ ಮಾಡಿದರು.

[illegible] ರೂಲ್ಸಿಗೆ ವಿರೋಧವಾಗಿ ಬಿಡುಗಡೆ ಮಾಡಿದರು. ಹಾಗೆ [illegible] ಎಂದು ಹೆಬ್ಲೀಕರವರು ಹೇಳಿದರು.

[illegible] ಅಬ್ಬಾಸ್ ಖಾನರ ಕೂಡ ಮಾತನಾಡಲಿಲ್ಲ.

ಜೂಲೈ 30 ನೇ ರಾತ್ರಿ ನಾನೂ ಐ. ಜಿ. ಪಿ. ಯವರೂ ಅಬ್ಬಾಸ್‌ಖಾನರ [illegible]ದೆವು. ಐ. ಜಿ. ಪಿ. ಯವರು ಅವರ ಕೂಡ ಮಾತನಾಡಿದರು. ನಾ[illegible], ಎಂದು ಹೆಬ್ಲೀಕರವರು ಹೇಳಿದರು.

ಮಹಮ್ಮದೀಯರನ್ನು ಯಾರೋ ಎತ್ತಿ ಕಟ್ಟಿದರು!

ಗಣಪತಿಯ ಪುನಸ್ಥಾಪನೆಯಾದ ಮೇಲೆ ಕಂಟೋನ್ಮೆಂಟಿನ ಮಹಮ್ಮದೀ[illegible] ಎತ್ತಿ ಕಟ್ಟಿದರೆಂಬುದು ನನ್ನ ಭಾವನೆ ಎಂದು ಹೆಬ್ಲೀಕರವರು ಹೇಳಿದರು.

ಪುಂಡರನ್ನು ಬಿಡುಗಡೆ ಮಾಡಿದ್ದು ನನಗೆ ತಿಳಿಯಲೇ ಇಲ್ಲ.

ಪುಂಡರು ಬಿಡುಗಡೆಯಾದ ಮೇಲೆ ಅವರು ಬಿಡುಗಡೆ ಮಾಡಲ್ಪಟ್ಟರೆಂದು ತಿಳಿಯಿತೇ ಹೊರತು ಅದಕ್ಕೆ ಮುಂಚೆ ಇಲ್ಲ ಎಂದು ಹೆಬ್ಲೀಕರವರು ಹೇಳಿದರು.

ಆ॥ ಮ್ಯಾ॥ ರನ್ನು ನೇಮಿಸಿದುದು ನನಗೆ ಗೊತ್ತಿಲ್ಲ.

ಸರಕಾರದವರು ವಿಚಾರಣೆಗೆ ಅ॥ ಮ್ಯಾ॥ ರವರನ್ನು ನೇಮಿಸಿದುದು ನನಗೆ ಮೊದಲು ಗೊತ್ತಾಗಲಿಲ್ಲ. ಸರಕಾರದ ಪ್ರಕಟಣೆಯು ಬಂದ ಮೇಲೆಯೇ ತಿಳಿಯಿತು ಎಂದು ಹೆಬ್ಲೀಕರ್‌ರವರು ಹೇಳಿದರು.

ನಮಗೆ ಅನುಭವವಿರಲಿಲ್ಲ.

ಈ ತರಹದ ಗಲಭೆಗಳ ಅನುಭವವು ನಮಗೆ ಇರಲಿಲ್ಲ. ಏಕದಂ ನಮಗೆ ತಿಳಿಯದೇನೇ ಈ ಘಟನೆಗಳು ನಡೆದವು, ಎಂದು ಹೆಬ್ಲೀಕರ್‌ರವರು ಹೇಳಿದರು. ಅದಕ್ಕೆ ಅಧ್ಯಕ್ಷರು ನಿಮಗೆ ಹಾಲು ಹಳ್ಳಿಯಲ್ಲಿ ಹಾಲು ಕುಡಿಸಲ್ಪಟ್ಟಿತು! ಎಂದರು. ಎಲ್ಲರೂ ನಕ್ಕರು.

ಸರಕಾರದ ಪ್ರಕಟಣೆಗಳಿಗೆ ನಾನು ಜವಾಬ್ದಾರನಲ್ಲ.

“ಸರಕಾರದ ಪ್ರಕಟಣೆಗಳು ಹೊರಡಿಸಲ್ಪಟ್ಟ ಮೇಲೆಯೇ ನನಗೆ ತಿಳಿಯಿತು. ಅವುಗಳಲ್ಲಿ ಕೆಲವು ಅಂಶಗಳು ಸಂದೇಹವಾಗಿದ್ದರೂ ನನಗಿಂತಲೂ ಸರಕಾರದವರಿಗೆ ಹೆಚ್ಚಿನ ಸಮಾಚಾರಗಳು ಗೊತ್ತಿದ್ದವೇನೋ ಎಂದು ನಾನು ಸುಮ್ಮನಿದ್ದೆ. ಪ್ರಕಟನೆಗಳು ನಾನಾಗಲೀ ಪೋಲೀಸಿನವರಾಗಲೀ ಕೊಟ್ಟ ರಿಪೋರ್ಟುಗಳ ಮೇಲೆ ಅವಲಂಬಿಸಿಲ್ಲ” ಎಂದು ಹೆಬ್ಲೀಕರವರು ಹೇಳಿದರು.

ಒಂದು ಮಾಯವಾದ ಕಾಗದ.

ಎಚ್. ಎಸ್. ಸುಬ್ಬರಾಯರವರು ಕಮಿಟಿಯ ಮುಂದೆ ಸಾಕ್ಷಿಯನ್ನು ಕೊಟ್ಟಾಗ ತಮ್ಮ ಆಫೀಸಿಗೆ ರುಜುವಿಲ್ಲದ ಒಂದು ಕಾಗದ ಬಂದಿತ್ತೆಂದೂ ಅದನ್ನು ಅವರು ಭದ್ರವಾಗಿಟ್ಟಿದ್ದರೆಂದೂ ಆದರೂ ಅದು ಹೇಗೋ ಮಾಯವಾಗಿದೆಯೆಂದೂ ತಿಳಿಸಿದರು.

ನೀವು ವೀರಕೇಸರಿ ಸಂಪಾದಕರಿಗೆ, “ದೇವಸ್ಥಾನ ಕಟ್ಟಿದರೂ ಆಕ್ಷೇಪಣೆಯಿಲ್ಲ” ಎಂದು ಹೇಳಲಿಲ್ಲವೇ? ಎಂದು ಕೇಳಿದ್ದಕ್ಕೆ ಇಲ್ಲ ಎಂದು ಖಾನರು ಹೇಳಿದರು.

ನಾನು ಎಲ್ಲಿಯೂ ಸಂಚಾರ ಮಾಡಲಿಲ್ಲ.

ನೀವು ಈಚೆಗೆ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಫಂಡಿಗಾಗಿ ಸಂಚಾರ ಮಾಡುತ್ತಿರುವರಂತಲ್ಲಾ ಎಂಬ ಪ್ರಶ್ನೆ ಅಬ್ಬಾಸ್‌ಖಾನರಿಗೆ ಕೇಳಲ್ಪಟ್ಟಿತು. ಅದಕ್ಕೆ ಅವರು ಅದೆಲ್ಲಾ ಶುದ್ಧ ಸುಳ್ಳು, ಎಂದರು.

ಅವರೆಲ್ಲಾ ನನಗೆ ವಿರೋಧಿಗಳು.

ತಮಗೆಲ್ಲಾ ವಿರೋಧವಾಗಿ ಯಾರು ಯಾರು ಸಾಕ್ಷಿಯನ್ನು ಹೇಳಿದ್ದರೋ ಅವರನ್ನೆಲ್ಲಾ ಒಂದು ಕಾರಣದಿಂದಲ್ಲ ಒಂದು ಕಾರಣದಿಂದ ತಮಗೆ ವಿರೋಧಿಗಳು ಎಂದು ಅಬ್ಬಾಸ್‌ಖಾನರು ಸಾಕ್ಷಿ ಹೇಳಿದರು. ಕಂಟ್ರೋಲರ್ ಶಾಮಣ್ಣನವರು, ಕಂಟ್ರಾಕ್ಟರ್ ಸಂಜೀವಪ್ಪನವರು, ಸುಬ್ಬರಾಮಶೆಟ್ಟರು, ವೆಂಕಟೇಶಯ್ಯನವರು ಇವರೆಲ್ಲಾ ಇದೇ ಗುಂಪಿನವರು.

ನನಗೆ ದೇವಸ್ಥಾನದ ಹೆದರಿಕೆ.

ನನಗೆ ಗಣಪತಿಯ ಪುನಸ್ಥಾಪನೆಯಲ್ಲಾಗಲೀ, ಅದು ಅಲ್ಲಿ ಇರುವದರಲ್ಲಾಗಲೀ, ಆಕ್ಷೇಪಣೆ ಇರಲಿಲ್ಲ. ಅಲ್ಲಿ ಗುಡಿ ಕಟ್ಟಿ ಪೂಜೆ ಮಾಡಿದರೆ ಗಲಾಟೆಗೆ ಅವಕಾಶವಾಗುವದೆಂಬ ಹೆದರಿಕೆಯು ನನಗಿತ್ತು. ಅದನ್ನು ನಾನು ದಿವಾನರಿಗೂ ಇತರ ಅಧಿಕಾರಿಗಳಿಗೂ ಹೇಳಿದೆನು ಎಂದು ಅಬ್ಬಾಸ್‌ಖಾನರು ಕಮಿಟಿಯ ಮುಂದೆ ಸಾಕ್ಷಿ ಹೇಳಿದರು.

ಎಲ್ಲಾ ಸುಳ್ಳು; ಕಟ್ಟು ಕಥೆಗಳು.

ನಮ್ಮ ಮನೆಯಲ್ಲಿ ಪುಂಡರು ಸೇರಿದ್ದು ಸುಳ್ಳು, ಗುಂಡು ಹಾರಿಸಿದ್ದು ಸುಳ್ಳು ನಾನೂ ನನ್ನ ಕುಟುಂಬವೂ ಪ್ರಾಣಭಯದಿಂದ ರಾತ್ರಿ ಮನೆ ಬಿಟ್ಟು ಹೋದೆವು. ಈ ಕಟ್ಟು ಕಥೆಗಳೆಲ್ಲಾ ಗುಪ್ತ ಸಂಘದವರ ಕೆಲಸ. ಅವರು ಸರಕಾರವನ್ನು ತಲೆ ಕೆಳಕು ಮಾಡುವುದಕ್ಕೂ ದಿವಾನರನ್ನು ಕಿತ್ತು ಹಾಕುವುದಕ್ಕೂ ನನಗೆ ಕೆಟ್ಟ ಹೆಸರನ್ನುಂಟುಮಾಡುವುದಕ್ಕೂ ಈ ಕೆಲಸಗಳನ್ನೆಲ್ಲಾ ಮಾಡಿದ್ದಾರೆ, ಹೀಗೆಂದು ಅಬ್ಬಾಸ್ ಖಾನರು ಹೇಳಿದರು.

ನನಗೆ ಏಟು ಬಿದ್ದದ್ದು ನಿಜ.

ಜೂಲೈ 30 ನೇ ತಾ॥ ರಾತ್ರಿ ಅಬ್ಬಾಸ್‌ಖಾನರ ಮನೆಯಿಂದ ಹೊರಗೆ ಬರುವಾಗ ತಮಗೆ ಏಟು ಬಿದ್ದದ್ದು ನಿಜವೆಂದೂ, ಯಾರೋ ಒಬ್ಬ ಬ್ರಾಹ್ಮಣರು ತಮಗೆ ಸಹಾಯಮಾಡಿ ಮೋಟಾರಿನಲ್ಲಿ ಕೂಡ್ರಿಸಿ ಕಳುಹಿಸಿದರೆಂದೂ ಐ. ಜಿ. ಪಿ. ಯವರು ಹೇಳಿದರು.

ಏತಕ್ಕೆ ದಸ್ತಗಿರಿ ಮಾಡಲಿಲ್ಲ.

ಆ ರಾತ್ರಿ ಪುಂಡರನ್ನು ಏತಕ್ಕೆ ದಸ್ತಗಿರಿಮಾಡಲಿಲ್ಲವೆಂಬ ಪ್ರಶ್ನೆಗೆ ದಸ್ತಗಿರಿ ಮಾಡುವುದು ಆ ಸಮಯದಲ್ಲಿ ಹುಚ್ಚುತನ, ದಸ್ತಗಿರಿ ಮಾಡಿದ್ದರೆ ಇನ್ನೂ ಹೆಚ್ಚು ದ್ವೇಷವು ಹಬ್ಬಿ ಪ್ರಳಯಗಳಾಗುತ್ತಿದ್ದವು. ಇಂಡಿಯಾದೇಶದ ಇತರ ಕಡೆಗಳಲ್ಲಿನ ಉದಾಹರಣೆಗಳನ್ನು ಕೊಟ್ಟರು.

Printed and Published by P. R. Ramaiya, at Sri Rama Press,
D. Subbiah Road, Mysore.

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಆಫೀಸ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ (ಗೀತಾ)

[illegible]

ಸಂಪುಟ ೧] ಶುಕ್ರವಾರ ೫ ನೇ ಅಕ್ಟೋಬರ್, ೧೯೨೮ [ಸಂಚಿಕೆ [illegible]

[illegible]

NOTIFICATION.

[illegible] Led [illegible] Narasimharaja [illegible]

[illegible]

(a) House [illegible] ein in [illegible] House sites [illegible] House sites Nos [illegible]

Do. [illegible]
Do. [illegible]

(b) Each house [illegible]
One [illegible]
One [illegible]
One [illegible]
One [illegible]
One [illegible]

(c) The [illegible] are of superior [illegible]

(d) The [illegible] will be between Rs. [illegible] cost will be [illegible] ment.

2. The sale is subject to the following conditions:—

(i) At least [illegible] paid within 15 days [illegible] and the balance [illegible] is in [illegible] except [illegible] per cent [illegible] money [illegible]

(ii) Failure to pay the [illegible] value [illegible] and [illegible] balance [illegible] be [illegible]

(iii) The houses will be allotted [illegible] dents of the City who [illegible] of their own, [illegible] dishoused by the acquisition of [illegible] for City Improvement [illegible] poses.

(iv) Not more than one house, will, as a rule be given to members of the same family living [illegible]

(v) In disposing of the houses to the p[illegible] [illegible] allotment.

[illegible]

[illegible]

City Improvement Trust Board, Mysore.

ತಾಯಿನಾಡು

5 10 1928

ಪೋಲೀಸ್ ಐ. ಜಿ. ಯವರ ಹೇಳಿಕೆ.

ನಮಗೆ ಪೋಲೀಸ್ ಶಕ್ತಿಯು ಸಾಲದು.

ಬೆಂಗಳೂರು ಸಿಟಿಯ ಶಾಂತಿಸ್ಥಾಪನೆಗೆ ಈಗಿರುವ ಪೋಲೀಸ್ ಶಕ್ತಿಯು ಸಾಲದು. ಈ ವಿಷಯವನ್ನು ನಾನು ಅನೇಕಾವರ್ತಿ ಸರಕಾರಕ್ಕೆ ತಿಳಿಸಿರುತ್ತೇನೆ.

ಹುಡುಗರನ್ನು ಉಪಯೋಗಿಸದಂತೆ ನೋಡಿಕೊಳ್ಳಬೇಕು.

ಇನ್ನು ಮೇಲೆ ರಾಜಕೀಯ ಚಳುವಳಿಗೆ ಹುಡುಗರನ್ನು ಉಪಯೋಗಿಸ ದಂತೆ ನೋಡಿಕೊಳ್ಳಬೇಕು ಎಂದರು.

ಕುಡಿದವರು ಕೆಲವರಿದ್ದರು.

ಜೂಲೈ 30 ನೇ ತಾ|| ರಾತ್ರಿ ಅಬ್ಬಾಸ್ ಖಾನರ ಮನೆಯ ಹೊರಗಡೆ ಕುಡುಕರು ಕೆಲವರು ಲಾಠಿ ಮೊದಲಾದವುಗಳನ್ನು ಹಿಡಿದುಕೊಂಡು ನಿಂತಿದ್ದರೆಂದು ಹೇಳಿದರು.

ದಸ್ತಗಿರಿಗಿಂತಲೂ ಶಾಂತಿಸಂರಕ್ಷಣೆಯು ಮುಖ್ಯ.

ಆ ಸಮಯದಲ್ಲಿ ಪುಂಡರನ್ನು ದಸ್ತಗಿರಿಮಾಡುವುದಕ್ಕಿಂತಲೂ ಗಲಾಟೆಯು [illegible] ಶಾಂತಿಸಂರಕ್ಷಣೆಯ ಭರವು ಹೆಚ್ಚಾಗಿತ್ತು. ಆದುದರಿಂದ ಶಾಂತಿಯ ಸಂರಕ್ಷಣೆಯ ಕಾರ್ಯವನ್ನು ಕೈಕೊಂಡೆವು.

ಡಿ. ಎಸ್. ಪಿ. ಯವರಿಗೂ ಜವಾಬ್ದಾರಿಯಿದೆ.

ಸಾಮಾನ್ಯವಾಗಿ ಬೆಂಗಳೂರು ಸಿಟಿಗೆ ಎ. ಎಸ್. ಪಿ ಯವರೇ ಜವಾಬ್ದಾರರಾದರೂ ಡಿ. ಎಸ್. ಪಿ ಯವರೇ ಎ. ಎಸ್. ಪಿ. ಯವರಿಗಿಂತ ಹೆಚ್ಚಿನ ಜವಾಬ್ದಾರರು.

ದಸ್ತಗಿರಿ ಮಾಡಬೇಡಿ ಎಂದು ದಿವಾನರು ಹೇಳಿದರು.

[illegible] ಜೂಲೈ 30 ನೇ ತಾ|| ಪ್ರಾತಃಕಾಲ ಗಲಾಟೆ ಮಾ[illegible] ದಸ್ತಗಿರಿ [illegible]. ದಿವಾನರು ನನ್ನ [illegible] ದಸ್ತಗಿರಿ [illegible] ಹೇಳಿದರು ಎಂದು ಐ. ಜಿ. ಪಿ. ಯವ[illegible].

ನಾನಾಗಿದ್ದರೆ ಮುಖಂಡರನ್ನು ಬಿಡುಗಡೆ ಮಾಡುತ್ತಿರಲಿಲ್ಲ.

ನಾನಾಗಿದ್ದರೆ ಮುಖಂಡರನ್ನು ಜಾಮೀನಿಲ್ಲದೆ ಬಿಡುಗಡೆ ಮಾಡುತ್ತಿರಲಿಲ್ಲ. [illegible] ನಮಗೆ ತಿಳಿಸದೆಯೇ ಬಿಡುಗಡೆ ಮಾಡಿ [illegible]. ಜನಗಳ [illegible] ಕೆರೆಯ ಮೈದಾನಕ್ಕೆ ಹೋಗುವವಾಗಿ ಸ[illegible]. ಅದರ ನಮ್ಮ ನಿರೀಕ್ಷಣೆಗೆ ವಿರೋಧವಾಗಿ [illegible] ಹೋಯಿತು.

[illegible]?

[illegible] ಐ. ಜಿ. ಪಿ. ಯವರೆಂದು ನಿಮ್ಮ [illegible] ನಿಮ್ಮನ್ನು ಹೊಡೆಯುತ್ತಿರಲಿಲ್ಲ [illegible]. ಅದಕ್ಕೆ ಉತ್ತರವಾಗಿ ಐ. ಜಿ. ಪಿ. ಯವರು [illegible] ಹೊತ್ತಿರಲಿಲ್ಲ. ಯೂನಿಫಾರ್ಮಿದ್ದ [illegible] ಅದಕ್ಕೆ ಮರ್ಯಾದೆಯನ್ನು ಕೊಡುತ್ತಿದ್ದರೆಂದು ಹೇಳುವದಕ್ಕಾಗು [illegible] ಯೂನಿಫಾರ್ಮಿದ್ದರೂ ನನ್ನ (ಸಬಾರ್ಡಿನೇಟುಗಳಿಗೆ) ಕೆಳಗಿನವರಿಗೆ ಕಲ್ಲು ಮೊದಲಾದವರಿಗೆ ಏಟು ಬಿತ್ತು ಎಂದರು.

ಮುಷ್ಕರ ಮಾಡಿದ ಹುಡುಗರನ್ನು ಏಕೆ ದಸ್ತಗಿರಿ ಮಾಡಲಿಲ್ಲ.

ಮುಷ್ಕರ ಮಾಡಿದ ಹುಡುಗರನ್ನೇಕೆ ದಸ್ತಗಿರಿ ಮಾಡಲಿಲ್ಲ ಎಂಬ ಪ್ರಶ್ನೆಗೆ ಅವರು ಬಹಳ ಸಣ್ಣ ವಯಸ್ಸಿನವರಾಗಿದ್ದರು, ಅವರನ್ನು ದಸ್ತಗಿರಿ ಮಾಡಿದ್ದರೆ ಜನಗಳಿಗೆ ಉದ್ರೇಕವಾಗುತ್ತಿತ್ತು. ಹುಡುಗರೆಲ್ಲರೂ ವೀರರೆಂದು ಭಾವಿಸಲ್ಪಡುತ್ತಿದ್ದರು. ಅಷ್ಟು ಗಲಾಟೆಗೆ ಅವಕಾಶವಿಲ್ಲದಂತೆ ಮುಖಂಡರನ್ನು ದಸ್ತಗಿರಿ ಮಾಡಲಾಯಿತು. ಅಲ್ಲದೆ ಮೈಸೂರಲ್ಲಿ 1921 ರಲ್ಲಿ ತಿಲಕರ ಪುಣ್ಯದಿನದಲ್ಲಿ ಪೋಲೀಸ್ ಸೂಪರಿಂಟೆಂಡೆಂಟರಾದ ಅಬ್ದುಲ್ ಗನಿಯವರು ಹುಡುಗರನ್ನು ದಸ್ತಗಿರಿ ಮೊದಲಾದ್ದನ್ನು ಮಾಡಿದ್ದಕ್ಕೂ ಸರಕಾರದವರು ಹುಡುಗರೊಡನೆ ದಯೆಯಿಂದ ವರ್ತಿಸಿರಿ ಎಂದು ಹೇಳಿದ್ದರು. ಆಗಿನ ಉದಾಹರಣೆಯನ್ನು ಮುಂದಿಟ್ಟುಕೊಂಡು ಹುಡು[illegible] ಎಂದರು.

Muslim Scuffle

at Bangalore.

TWO DEAD & ONE INJURED.

FOUR ARRESTS EFFECTED.

The Chief Court ordered that the copy of Mr. Abbas Khan's statement before the Additional Magistrate's Court should be given to accused Bhimarao and others.

Serious Scuffle ensued this morning between two Muslim parties, in Mysore Road within the limits of Kengeri Police Station, resulting in two deaths, one being severely injured. Four arrests have been effected.

Great sensation prevails. (By wire)

ಬೆಂಗಳೂರಿನಲ್ಲಿ

ಮುಸಲ್ಮಾನರ ಹೊಡೆದಾಟ.

ಇಬ್ಬರ ಮರಣ— ಒಬ್ಬನಿಗೆ ಗಾಯ— ನಾಲ್ಕು ಜನರ ದಸ್ತಗಿರಿ.

(ತಂತೀ ಸಮಾಚಾರ)

ಈ ದಿನ ಬೆಳಿಗ್ಗೆ ಬೆಂಗಳೂರು ಕೆಂಗೇರಿ ಗೇಟ್ ಪೋಲೀಸ್ ಸ್ಟೇಷನ್ನಿನ ಸರಹದ್ದಿನಲ್ಲಿ ಮೈಸೂರು ರೋಡಿನಲ್ಲಿ ಎರಡು ಮುಸಲ್ಮಾನ ಪಂಗಡದವರಿಗೆ ದೊಡ್ಡ ಹೊಡೆದಾಟವಾಗಿ ಇಬ್ಬರು ಸತ್ತರು; ಒಬ್ಬನಿಗೆ ಬಹಳ ಗಾಯವಾಯಿತು. ನಾಲ್ಕು ಜನರನ್ನು ದಸ್ತಗಿರಿ ಮಾಡಿರುತ್ತೆ.

ಮಿ|| ಅಬ್ಬಾಸ್ ಖಾನರವರು ಅಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟಿದ್ದ ಹೇಳಿಕೆಯನ್ನು ತಿಮ್ಮೂರ್ತಿಗಳಾದ ಜಿ ಭೀಮರಾವ್, ರಾಮುಲಾಲ್ ತಿವಾರಿ, ಸುಬ್ರಹ್ಮಣ್ಯಂ—ಇವರುಗಳ ಅವಗಾಹನೆಗೆ ಕೊಡಬೇಕೆಂದು ಚೀಫ್ ಕೋರ್ಟಿನವರು ಹುಕುಂ ಮಾಡಿರುತ್ತಾರೆ.

ನಮಗೇನೂ ಹೆದರಿಕೆ ಇರಲಿಲ್ಲ.

ನಾವು ಹೆದರಿಕೆಯಿಂದ ದಸ್ತಗಿರಿ ಮಾಡಲಿಲ್ಲವೆಂಬುವದು ನಿಜವಲ್ಲ. ದಸ್ತಗಿರಿ ಮಾಡಿದರೆ ಅನರ್ಥವಾಗುವದೆಂದು ದಸ್ತಗಿರಿ ಮಾಡಲಿಲ್ಲ.

ಪತ್ರಿಕೆಗಳ ಭಾಗ.

ಜುಲೈ 30 ನೇ ತಾ|| ವರೆಗೂ ವೀರಕೇಸರಿ, ಪ್ರಜಾಮಿತ್ರ, ಮತ್ತು ಈವ್ನಿಂಗ್ ಮೇಲ್ ಪತ್ರಿಕೆಗಳಲ್ಲಿ ಗಣಪತಿಯ ವಿಷಯವಾಗಿ ಲೇಖನಗಳು ಬರುತ್ತಿದ್ದವು. ಈಚೆಗೆ ಪತ್ರಿಕೆಗಳಲ್ಲಿ ಉಗ್ರವಾದ ಲೇಖನಗಳು ಬರುತ್ತಿವೆ. ಅವೂ ಕಾರಣ.

ಮ್ಯುನಿಸಿಪಾಲಟಿಯ ಪಾರ್ಟಿಗಳೇ ಕಾರಣ.

ಅಬ್ಬಾಸ್ ಖಾನರಿಗೆ ವಿರೋಧವಾಗಿ ಮ್ಯುನಿಸಿಪಾಲಿಟಿಯಲ್ಲಿ ಪಾರ್ಟಿಯಿತ್ತು, ಆ ಪಾರ್ಟಿಯವರು ಗಣಪತಿಯ ಪ್ರಶ್ನೆಯನ್ನು ದುರುಪಯೋಗಪಡಿಸಿ ಹುಡುಗರನ್ನು ಎತ್ತಿಕಟ್ಟಿದರೆಂದು ನನ್ನ ಭಾವನೆ.

ರ್‍ಯಾಲ್ಫ್ ನೈ ರವರು there was no shooting whatever ಎಂದು ('ಯಾವ ಪ್ರಕಾರವಾಗಿಯೂ' ಗುಂಡು ಹಾರಿಸಲ್ಪಡಲಿಲ್ಲ) ಇದೆಯಲ್ಲಾ ಆ 'ವಾಟೆವರ್' ಎನ್ನುವುದಕ್ಕೆ ಅರ್ಥವೇನೆಂದು ಕೇಳಿದರು. ಅದಕ್ಕೆ ಐ. ಜಿ. ಪಿ. ರವರು ಪ್ರಕಟಣೆಯನ್ನು ರಚಿಸಿದವರು ತಾವಲ್ಲವೆಂದೂ ಅವರ ಭಾವನೆಯಲ್ಲಿ ಜನಗಳ ಮೇಲೆ ಗುಂಡು ಹೊಡೆಯಲಿಲ್ಲವೆಂಬ ಅರ್ಥದಮೇಲೆ ಸರ್ಕಾರದ ಪ್ರಕಟಣೆಯು ಅಬದ್ಧವಲ್ಲವೆಂದೂ ತಿಳಿಸಿದರು. (ಸಭಿಕರು ಆಶ್ಚರ್ಯಪಟ್ಟರು.)

ಗುಂಡು ಹೊಡೆಯಿತೆಂದು ನಾನು ಕೇಳಿದೆ.

ಪ್ರಕಟಣೆಯನ್ನು ಏಕೆ ತಿದ್ದಲಿಲ್ಲ?

ಪ್ರಕಟಣೆಯಲ್ಲಿ "ನೊ ಷೂಟಿಂಗ್" ಎಂದು ಇದೆ. ಷೂಟಿಂಗ್ ಅಂದರೆ ಜನಗಳ ಮೇಲೆ ಗುಂಡು ಹಾರಿಸುವುದೆಂದು ಅರ್ಥ. ಆದರಂತೆ ಸರಕಾರದ ಪ್ರಕಟಣೆಯು ಸುಳ್ಳಲ್ಲ. ಅದನ್ನು ತಿದ್ದುವದು ಅನವಶ್ಯಕವೆಂದು ನಾನು ಭಾವಿಸಿದೆ. ಅದಲ್ಲದೆ ಆಗಸ್ಟ್ 11ನೇ ತಾರೀಖಿನ ವರೆಗೂ, ಚಂದ್ರರಾಜನ ಗುಂಡಿನೇಟಿನ ವಿಷಯ ಹೊರಕ್ಕೆ ಬರುವವರೆಗೂ ನನಗೆ ಅದೇ ಅಭಿಪ್ರಾಯವಿತ್ತು.

Printed and Published by P. R. Ramaiya, at Sri Rama Press, D. Subbiah Road, Mysore.

...ರ ಹೊಸ ಸಾಕ್ಷ್ಯಗಳು.   ವಂದೇ ಮಾತರಂ

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧]   ಶನಿವಾರ ೬ ನೇ ಅಕ್ಟೋಬರ, ೧೯೨೮   [ಸಂಚಿಕೆ [illegible]

City Improvement Trust Board, Mysore
27 th September [illegible]

NOTIFICATION

Sixteen model houses for the poor as described here-under are available for sale in Narasimharaja M[illegible]

[illegible]

[illegible] 16 measure [illegible]

[illegible]

and the balance in 24 [illegible] exceptional circumstances, [illegible] per cent per annum on the [illegible] money outstanding at the end of each month.

(ii) Failure to pay the [illegible] per cent [illegible] value of the ho[illegible] and execute the [illegible] balance amount will [illegible] be disposed of otherw[illegible]

(iii) The hou[illegible] dents of the City who d[illegible] of their own, [illegible] dishoused by the acquisition of [illegible] for City Improvement and other public purposes.

(iv) Not more than one house, will, as a rule be given to members of the same family [illegible]

(v) In disposing of the houses to the poor [illegible] full value of the house in a lump, soon after allotment.

Intending purchasers are requested to [illegible] October 1928

T. G. RAMA IYER,
Chairman.

ಬ್ರಾಹ್ಮಣರ ಸಭೆ.

ಮೈಸೂರು ಸ್ಟಾರ್ ಪತ್ರಿಕೆಯು ಬ್ರಾಹ್ಮಣ ಜನಾಂಗವನ್ನು ವಾಚಾಮಗೋಚರವಾಗಿ ನಿಂದಿಸುತ್ತಿರುವ ವಿಷಯವನ್ನು ಖಂಡಿಸಿ ಬ್ರಾಹ್ಮಣರಿಗಿರುವ ನಿಷ್ಕಲ್ಮಷವಾದ ದೇಶಭಕ್ತಿ ರಾಜಭಕ್ತಿಗಳನ್ನು ಪ್ರದರ್ಶಿಸಲು ನಾಳೆಯ ದಿನ ಬೆಳಗ್ಗೆ 9 ಘಂಟೆಗೆ ಅಭಿನವ ಶಂಕರಾಲಯದಲ್ಲಿ ಸಭೆ ನಡೆಯುವುದು. ಮಹಾಜನರೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ತಾಯಿನಾಡು

6—10—1928

ಪೋಲೀಸ್ ಐ. ಜಿ. ಯವರ ಹೇಳಿಕೆ.

ನಾಲ್ಕು ದಿವಸಗಳ ತಡ.

ಅಬ್ಬಾಸ್ ಖಾನರ ಮನೆಯನ್ನು ಹುಡುಕುವುದಕ್ಕೆ ನಾಲ್ಕು ದಿವಸಗಳು ಏತಕ್ಕೆ ತಡವಾಯಿತು? ಎಂದು ಕೇಳಿದ್ದಕ್ಕೆ ಪೋಲೀಸಿನವರು ಅಡಿಷನಲ್ ಮ್ಯಾಜಿಸ್ಟ್ರೇಟರ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಸಾವಕಾಶವು ಅಪರಿಹಾರ್ಯವಾದುದು ಎಂದರು.

ದಿವಾನರಿಗೂ ಇದಕ್ಕೂ ಸಂಬಂಧವಿಲ್ಲ.

ದಿವಾನರಿಗೂ ಅಬ್ಬಾಸ್ ಖಾನರಿಗೂ ಬಹಳ ಸ್ನೇಹವಾಗಿದ್ದರಿಂದ ನೀವು ಜೂಲೈ 30 ನೇ ತಾ॥ ನ ರಾತ್ರಿ ಪುಂಡರನ್ನು ದಸ್ತಗಿರಿ ಮಾಡಿದ್ದರೆ, ದಿವಾನರಿಗೂ, ಸರಕಾರಕ್ಕೂ ಎಲ್ಲಿ ಅಪ್ರಿಯವಾಗುವುದೋ ಎಂದು ನೀವು ದಸ್ತಗಿರಿ ಮಾಡಲಿಲ್ಲ ಎಂದು ಜನಾಭಿಪ್ರಾಯವಿದೆ. ಅದಕ್ಕೆ ನಿಮ್ಮ ಸಮಾಧಾನವೇನು? ಎಂದು ಕೇಳಿದ್ದಕ್ಕೆ ಈ ಅಪವಾದನೆಗಳೆಲ್ಲಾ ಶುದ್ಧ ಸುಳ್ಳು. ಈ ರೀತಿಯಾದ ಅಪವಾದನೆಗಳು ದಿವಾನರಿಗೂ, ಪ್ರಾಮಾಣಿಕತೆಯಿಂದಲೂ, ದಕ್ಷತೆಯಿಂದಲೂ ಕೆಲಸ ಮಾಡುತ್ತಿರುವ ನೌಕರರಿಗೂ ಅವಮಾನಕರ. ಇದನ್ನು ನಾನು ವಿರೋಧಿಸುತ್ತೇನೆ ಎಂದರು.

ಸರಕಾರದ ಮೂಗಿನ ಕೆಳಗೆ ನಡೆಯಿತು.

ಜುಲೈ 30 ನೇ ತಾರೀಖಿನ ಘಟನೆಗಳೆಲ್ಲಾ ಸರಕಾರದ ಮೂಗಿನ ಕೆಳಗೇ ನಡೆದಾಗ ಸರಕಾರಕ್ಕೆ ಹೊಸದಾಗಿ ರಿಪೋರ್ಟು ಮಾಡುವುದೇನಿದೆ ಎಂದು ಐ. ಜಿ. ಪಿ. ಯವರು ಹೇಳಿದರು.

ಬರ್ದೋಲಿಯ ಅನುಕರಣೆ.

ಬೆಂಗಳೂರು ಬಾಲಕರು ಬರ್ದೋಲಿಯ ಅನುಕರಣವನ್ನು ಮಾಡಿದರೆ ಎಂಬ ಪ್ರಶ್ನೆಗೆ ಇಲ್ಲ, ಸತ್ಯಾಗ್ರಹದ ಭಾವನೆಯು ಈಗ ಬಹಳ ಪ್ರಚಾರವಾಗಿದೆ ಎಂದರು.

ದಿವಾನರ ಬಂಗಲೆಯ ಘಟನೆಯೇ ಕಾರಣ.

ಮಹಮ್ಮದೀಯರಿಗೆ ಪ್ರಕೋಪವಾಗುವದಕ್ಕೆ ಬಾಲಕನು ದಿವಾನರ ಮನೆಗೆ ಹೋಗಿ ಗಲಾಟೆ ಮಾಡಿದುದೇ ಕಾರಣವೆಂದು ನನಗೆ ತೋರುತ್ತದೆ.

ಸರಕಾರದ ಮೇಲೆ ಅಪನಂಬಿಕೆ

ಸರ್ಕಾರಕ್ಕೆ ವಿರೋಧವಾದದು ಯಾವುದಾದರೂ ಜನಗಳಿಗೆ ಅದರಲ್ಲಿ ಸಹಾನುಭೂತಿ ಇದೆ ಎಂದು ಐ ಜಿ ಪಿ. ಯವರು ಹೇಳಿದರು.

ಪೋನಿನಿಂದ ಬೇಡವೆಂಬ ಅಪ್ಪಣೆ ಬರಲಿಲ್ಲ.

ಅಬ್ಬಾಸ್ ಖಾನರ ಮನೆಯಲ್ಲಿ ಗಲಾಟೆ ಮಾಡಿದವರನ್ನು ದಸ್ತಗಿರಿ ಮಾಡಬೇಡಿ ಎಂದು ಮೇಲಿನಿಂದ ಫೋನು ಬಂದಿತೆಂದು ಜನಗಳಿಗೆ ಅನುಮಾನವಿರುವುದು ಅದು ನಿಜವೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರವಿತ್ತರು.

ಪೋಲೀಸಿನವರು ಕಂಪ್ಲೇಂಟು ತೆಗೆದುಕೊಳ್ಳುತ್ತಿದ್ದರು.

ಜೂಲೈ 31ನೇ ತಾ॥ ಆದ ಮೇಲೆ ಪೋಲೀಸಿನವರು ಕಂಪ್ಲೇಂಟು ತೆಗೆದುಕೊಳ್ಳಲಿಲ್ಲ. ಎಂಬ ಮಾತ ಸುಳ್ಳು ಎಂದರು.

70000 ರೂಪಾಯಿ ಖರ್ಚು.

ಇದುವರಿಗೂ ಜೂಲೈ 31ರಿಂದ ಪೋಲಿಸ್ ಇಲಾಖೆಗೆ ಬೆಂಗಳೂರಿನಲ್ಲಿ ಬಸ್ಸು ಮತ್ತು ಕಾರಿನ ಖರ್ಚು 7000 ಆಗಿದೆ ಎಂದರು.

ಡಿ॥ ಕ॥ ಹೆಬ್ಬೀಕರವರಿಗೆ ಮಂಗಳಾರತಿ.

4—10—28ರಲ್ಲಿ 4 ಗಂಟೆಗಳಿಗೆ ಹೆಚ್ಚಾಗಿ ಬೆಂಗಳೂರು ಡಿ॥ಮ್ಯಾ॥ ಹೆಬ್ಬೀಕರವರ ಕೈಫಿಯತ್ತು ಮುಗಿದಾಗ್ಗೆ ಇವರಿಗೆ ಚೆನ್ನಾಗಿ ಮಂಗಳಾರತಿಯಾಯಿತು. ಅಧ್ಯಕ್ಷರು ಹೇಳಿದ್ದೇನೆಂದರೆ,

"ನೀವು ನಿಮ್ಮ ಕೈಫಿಯತ್ತನ್ನು ಸ್ಪಷ್ಟವಾಗಿ ಕೊಡಲಿಲ್ಲ. ನಿಮ್ಮ ಕೆಳಗಿನ ನೌಕರರೂ ಹಾಗೆಯೇ ಮಾಡಿದರು. ಏನು ನಡಿಯಿತೆಂಬುದರ ಸ್ಪಷ್ಟವಾದ ತಿಳುವಳಿಕೆಯು ನಿಮಗೆ ಇರಬೇಕು. ನಿಮಗೆ ಆ ತಿಳುವಳಿಕೆ ಇರುವುದೆಂಬ ಭಾವನೆಯನ್ನು ನೀವು ನಮಗೆ ಉಂಟುಮಾಡಿಲ್ಲ. ನೀವು ನಡೆದ ಸಂಘಟನೆಗಳನ್ನು ಒಂದಕ್ಕೊಂದು ಸಂಬಂಧಿಸಿ ಕೊಟ್ಟಿಲ್ಲ. ಸುತ್ತಿ ಸುತ್ತಿ ಏನನ್ನೋ ಹೇಳಿರುವಿರಿ ಕಾನೂನಿನ ದೃಷ್ಟಿಯಿಂದ ನೀವು ಸರಿಯಿರಬಹುದು. ಆದರೆ ಈ ಕಮಿಟಿಯವರು ಸಾಮಾನ್ಯ ಲೌಕಿಕ ವ್ಯವಹಾರಜ್ಞರು. ನಿಮಗೆ ವಂದನೆಗಳು! ನಿಮಗೆ ಈವತ್ತು ಬಹಳ ಆಯಾಸವಾಯಿತು!" ಮತ್ತು ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದೇನೆಂದರೆ "ಈ ದುರ್ಘಟನೆಗಳ ವಿಷಯವಾಗಿ ನಿಮಗಿಂತಲೂ ಮಹಾಜನಗಳಿಗೆ ಬೇಗಲೂ ಹೆಚ್ಚಾಗಿಯೂ ಸಮಾಚಾರಗಳು ತಿಳಿದ ಹಾಗೆ ಕಂಡು ಬರುತ್ತದೆ. ಅವರು ವಿಷಯಗಳೆಲ್ಲವನ್ನೂ ಪ್ರಪಂಚಕ್ಕೆ ತಂತಿಯ ಮೂಲಕ ತಿಳಿಸಿರುವರು. ಅನೇಕ ಪ್ರಶ್ನೆಗಳಿಗೆ ನನಗೆ ಗೊತ್ತಿಲ್ಲ, ನಾನು ಅಲ್ಲಿರಲಿಲ್ಲ, ಅವರು ಹಾಗೆ ಹೇಳಿದರು. ಇವರು ಹೀಗೆ ಹೇಳಿದರು. ಎಂದು ಹೇಳುತ್ತೀರಿ ನಿಮ್ಮ ತೀರ್ಮಾನವೇನೆಂದು ಊಹಿಸಿದಿರಿ ಎಂಬುದನ್ನು ಹೇಳಲಿಲ್ಲ. ಅಧ್ಯಕ್ಷರ ಈ ಮಾತುಗಳಿಗೆ ಹೆಬ್ಬೀಕರವರು ಸಮಾಧಾನವನ್ನು ಕೊಡಲು ಪ್ರಯತ್ನಮಾಡಿದರು. ಆದರೆ ಅವರ ಪ್ರಯತ್ನಗಳು ಸಫಲವಾಗಲಿಲ್ಲ.

PRAJAMITRA GAGGED.

SECURITY PROCEEDINGS CASE

Withdrawal Contemplated?

(From Our Correspondent)

Bangalore 6th Oct.

The Government of Mysore have yesterday passed proceedings withdrawing permission under section III of the Newspaper Regulation of 1908 granted to Mr. G. R. S. Rao B. A., to edit, print and publish *Prajamitra* Kannada daily paper.

The Editor was not given an opportunity to explain himself. The offending article seems to be the Editor's assertion that the Dewan inv ted the Raja of Panagal to preside over the Non-Bramhin Conference, which is proposed to be held during the Dasara season.

It is reported that Government contemplate withdrawing the Security proce dings against Messers Bhimarao, Tiwari and Subrahmanyam.

His Highness the Maharaja arrived in Bangalore yesterday by Special Train.

Sir Charles and Lady Tod Hunter arrived in Bombay yesterday per *S S. Rawalpindi*. (By wire.)

ಬೆಂಗಳೂರು ಸಮಾಚಾರ

ಪ್ರಜಾಮಿತ್ರನಿಗೆ ಗದಾಪ್ರಹಾರ

ತ್ರಿಮೂರ್ತಿಗಳ ಮೊಕದ್ದಮೆಯು ವಾಪಸು ತೆಗೆದುಕೊಳ್ಳಲ್ಪಡುವುದೋ?

(ತಂತೀವರ್ತಮಾನ)

ಬೆಂಗಳೂರಿನ ಪ್ರಜಾಮಿತ್ರ ಪತ್ರಿಕೆಯ ಸಂಪಾದಕರಾದ ಮ॥ ಜಿ ಆರ್. ಎಸ್. ರಾಯರವರು ಸದರಿ ಪತ್ರಿಕೆಯನ್ನು ನಡೆಸಲು ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನಿನ ಪ್ರಕಾರ ಕೊಡಲ್ಪಟ್ಟಿದ್ದ ಅಪ್ಪಣೆಯನ್ನು ಸರ್ಕಾರದವರು ನಿನ್ನೆಯದಿನ ರದ್ದುಪಡಿಸಿ ಹುಕುಂ ಮಾಡಿರುತ್ತಾರೆ. ಸಂಪಾದಕರು ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೂ ಅವಕಾಶವು ಕೊಡಲ್ಪಡಲಿಲ್ಲ. ನವರಾತ್ರಿ ಕಾಲದಲ್ಲಿ ನಡೆಯಬೇಕೆಂದಿರುವ ಬ್ರಾಹ್ಮಣೇತರರ ಸಭೆಗೆ ಮದರಾಸಿನ ಬ್ರಾಹ್ಮಣೇತರರ ಮುಖಂಡರಾದ ಪಾನಗಲ್ ರಾಜರನ್ನು ಅಧ್ಯಕ್ಷರಾಗಬೇಕೆಂದು ದಿವಾನರವರು ಕರೆದರೆಂಬದಾಗಿ ಆ ಪತ್ರಿಕೆಯಲ್ಲಿ ಬರೆಯಲ್ಪಡುತ್ತಿದ್ದುದೇ ಈ ಗದಾ ಪ್ರಹಾರಕ್ಕೆ ಕಾರಣವಾಗಿರಬಹುದೆಂದು ಕಾಣುತ್ತದೆ.

ತ್ರಿಮೂರ್ತಿಗಳ ಮೇಲೆ ಸರ್ಕಾರದವರು ನಡೆಸುತ್ತಿರುವ ಜಾಮೀನಿನ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪರ್ಯಾಲೋಚಿಸುತ್ತಿರುವುದಾಗಿ ತಿಳಿಯ ಬರುತ್ತದೆ.

ಶ್ರೀಮನ್ಮಹಾರಾಜರವರು ನಿನ್ನೆಯ ದಿನ ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರಿಗೆ ದಯಮಾಡಿಸಿದರು.

ಸರ್ ಚಾರಲ್ಸ್ ಟಾಡ್‌ಹಂಟರ್ ರವರು ನಿನ್ನೆಯ ದಿನ ಪತ್ನೀ ಸಮೇತರಾಗಿ ಬೊಂಬಾಯಿನಲ್ಲಿ ಬಂದಿಳಿದರು.

Printed and Published by P. R. Ramaiya, at Sri Rama Press, D. Subbiah Road, Mysore.

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರ ಕರ್ತವ್ಯ.

॥ ವಂದೇ ಮಾತರಂ

Regd. No. [illegible]

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ,
ವಂದೇಮಾತರಂ ರೋಡ್ಡು, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { ವರ್ಷಕ್ಕೆ [illegible] / ವರ್ಷಕ್ಕೆ [illegible] }

ಸಂಪುಟ ೧] ಮಂಗಳವಾರ ೯ ನೇ ಅಕ್ಟೋಬರ, ೧೯೨೮ [ಸಂಚಿಕೆ ೧೪

ತಾಯಿನಾಡು

9—10—1928

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರ ಕರ್ತವ್ಯ.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಸಿರಾಜು ದ್ದೀನರವರು ತಾವು ಮಾಡಬೇಕಾಗಿದ್ದ ಕರ್ತವ್ಯದ ವಿಷಯದಲ್ಲಿ ಸಂದೇಹವನ್ನು ಪ್ರದರ್ಶಿಸಿದರು. ಹಿಂದೆ ಡಿ. ಎಸ್. ಪಿ. ಯವರಾಗಿದ್ದು ಈಗ ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾಗಿರುವ ಸಿದ್ದರಾಮಪ್ಪನವರು ಈ ವಿಷಯವಾಗಿ ಕಮಿಟಿಯ ಮುಂದೆ ಕೊಟ್ಟ ಕೈಫಿಯತ್ತು ಬೋಧಪ್ರದವಾಗಿರುವದು. ಈ [illegible] ಪ್ರ—ನೀವು ಜೈಲು ಡಿಪಾರ್ಟುಮೆಂಟಿಗೆ [illegible] ಡಿ. ಎಸ್. ಪಿ ಯವರಾಗಿದ್ದಿರಾ? ಉ—ಹೌದು. ಪ್ರ—ನೀವು ಹೆಡ್‌ಕ್ವಾರ್ಟರ್ಸಿನಲ್ಲಿ ಡಿ. ಸಿ. ಯವರೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಇದ್ದಾಗ್ಗೆ ಅವಸರವಾದ ಪ್ರಸಂಗಗಳಲ್ಲಿ ಡಿ. ಎಸ್. ಪಿ ಗಳಾಗಿ ನಿಮ್ಮ ಅಧಿಕಾರವನ್ನು [illegible]ಯಿಸುವದಕ್ಕೆ ಅಭ್ಯಂತರವೇನಾದರೂ ಇತ್ತೇ? ಉ—ಇಲ್ಲ ಅರ್ಜೆಂಟಾಗಿದ್ದಾಗ ವಿಷಯವನ್ನು ಡಿ. ಸಿ. ಯವರಿಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೂ ತಿಳಿಸಿ ನಾನು ಆ ಸ್ಥಳಕ್ಕೆ ಹೋಗುತ್ತಿದ್ದೆ. ಅರ್ಜೆಂಟಾಗಿಲ್ಲದೇ ಹೋದರೆ ಮುಂಚಿತವಾಗಿ ರಿಪೋರ್ಟು ಮಾಡುವುದಿಲ್ಲ. ಪ್ರ—ಅನುಸರಿಸಬೇಕಾದ ನೀತಿ [illegible]? ಉ—ಅನುಸರಿಸಬೇಕಾದ ನೀತಿಯೂ ಅದೇ. ಅ[illegible]ಡುತ್ತಿರುವದೂ ಹಾಗೆಯೆ. ಬೇರೆ ಇನ್ನೇನಾದರೂ ಉಂಟೋ ಬುದು [illegible] ಅವರ ಅಪ್ಪಣೆಗಳನ್ನು ತೆಗೆ[illegible]. [illegible] ಅಧ್ಯಕ್ಷರು —[illegible] ಸಲಹೆಗಳನ್ನು ಕೊಡಬೇಕಾದುದಿಲ್ಲವೋ? ಉ—ಹೌದು. ನಾವು ಕೊಡಬೇಕು. ನಾವು ಎಲ್ಲ ವಿಷಯಗಳನ್ನೂ ಅವರ ಗಮನಕ್ಕೆ ತರಬೇಕು. ಎಲ್ಲಾದರೂ ಕೊಲೆ ನಡೆದರೆ ಮೇಲಿನ ಅಧಿಕಾರಿಯು ಅಲ್ಲಿದ್ದರೂ [illegible] ತನ್ನ ಅಧಿಕಾರವನ್ನು ಚಲಾಯಿಸಬೇಕು. ಇಲ್ಲ[illegible] ಕೈಮೀರಿಹೋಗುವುದು.

[illegible]ಸ್ಟ್ರೇಟರ ನಿಯಾಮಕ.

[illegible] ವಿಚಾರಿಸುವದಕ್ಕೆ ಅಡಿಷನಲ್ [illegible] ಬಹಳ ಅವಾಯಕ್ಕೆ ಇಟ್ಟುಕೊಂಡಿತು. ಇವರನ್ನು [illegible]ದರೆಂದು ಪೋಲೀಸಿನವರೂ, ಡಿ|| ಮ್ಯಾಜಿಸ್ಟ್ರೇಟರೂ ತಾವು [illegible] ರುಜುವಾತುಗಳೆಲ್ಲವೂ [illegible]. ವಿಚಾರಣೆ ಕಮಿಟಿಯ[illegible] ಸೇಮಿಸಿದ್ದರಿಂದ ಎಷ್ಟು ಅನರ್ಥ[illegible]. ಇವರನ್ನು ನೇಮಿಸುವದಕ್ಕೆ ಏನು ಕಾರಣ [illegible]ಸ್ಟ್ರೇಟರೂ ಐ. ಜಿ. ಪಿ. ಯವರೂ [illegible]. ಪ್ರಜಾಭಿಪ್ರಾಯದಂತೆ ಅಡಿ[illegible]ಸ್ಟ್ರೇಟರು ನೇಮಿಸಲ್ಪಟ್ಟರೆಂದು ಹೇಳುತ್ತಾರೆ. ಇವರನ್ನು ನೇಮಿಸಬೇಕೆಂದು ತೀರ್ಮಾನವಾದದ್ದು ಜುಲೈ 31ನೇ ಪ್ರಾತಃಕಾಲ. ಸರ್ಕಾರದವರಿಗೆ ಅಷ್ಟು ಬೇಗನೆ ಪ್ರಜಾಭಿಪ್ರಾಯವು ಹೇಗೆ ಗೊತ್ತಾಯಿತು? 30ನೇ ತಾ|| ರಾತ್ರಿ ಅಷ್ಟು ಘೋರಕೃತ್ಯಗಳು ನಡೆದ ಮೇಲೆ 31ನೇ ತಾ|| ಪ್ರಾತಃಕಾಲವೇ ಅಡಿಷನಲ್ ಮ್ಯಾಜಿಸ್ಟ್ರೇಟರು ಬೇಕೆಂದು ಪ್ರಜೆಗಳು ಮೀಟಿಂಗುಗಳನ್ನು ನಡೆಸಿ ಸರಕಾರಕ್ಕೆ ಠರಾವುಗಳನ್ನು ಕಳುಹಿಸಿದರೇ? ಪತ್ರಿಕೆಗಳಲ್ಲಿ ಅಡಿಷನಲ್ ಮ್ಯಾಜಿಸ್ಟ್ರೇಟರನ್ನು ನೇಮಿಸಬೇಕೆಂದು ಸಲಹೆಗಳೇನಾದರೂ ಬಂದವೆ? ಯಾವುದೂ ಇಲ್ಲದೆ ಸರಕಾರದವರು ಅಡಿಷನಲ್ ಮ್ಯಾಜಿಸ್ಟ್ರೇಟರನ್ನು ಏತಕ್ಕೆ ನೇಮಿಸಿದರು? ಡಿ|| ಮ್ಯಾಜಿಸ್ಟ್ರೇಟರೂ ಐ. ಜಿ. ಪಿ. ಯವರೂ ಕೇಳಿಕೊಂಡರೊ! ಇಲ್ಲ; ಆದರೂ ಅವರು ನೇಮಿಸಲ್ಪಟ್ಟರು. ಡಿ|| ಮ್ಯಾಜಿಸ್ಟ್ರೇಟರು ಹೇಳಿದ ಒಂದು ಕಾರಣವೇನೆಂದರೆ, ಪ್ರಜೆಗಳಿಗೆ ಪೋಲೀಸಿನಲ್ಲಿ ವಿಶ್ವಾಸವಿರಲಿಲ್ಲ ಆಫೀಸರುಗಳೆಲ್ಲರೂ ಹಿಂದುಗಳಾಗಿದ್ದರು. ಅದಕ್ಕೋಸ್ಕರ ಅಡಿಷನಲ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದರು. ಇದು ದೊಡ್ಡ ಅಪವಾದನೆ. ಜುಲೈ 31ನೇ ತಾ ಪ್ರಾತಃಕಾಲ ದಿವಾನರ ಮನೆಯಲ್ಲಿ ಅಬ್ಬಾಸ್ ಖಾನರೂ ಕಲಾಮಿಯವರೂ ಐ. ಜಿ. ಪಿ. ಯವರೂ ಡಿ|| ಮ್ಯಾಜಿಸ್ಟ್ರೇಟರೂ ಇನ್ನೂ ಇತರರೂ ಇದ್ದರು. ಅಲ್ಲಿದ್ದವರ ಪೈಕಿ ಪ್ರಜೆಗಳ ಸಲಹೆ ಎಂದರೆ ಕಲಾಮಿಯವರ ಮತ್ತು ಅಬ್ಬಾಸ್ ಖಾನರ ಸಲಹೆ. ಅಬ್ಬಾಸ್ ಖಾನರು ಮಹಾ ಪರಾಧಿಗಳು; ಕಲಾಮಿಯವರು ಅವರ ಹಿತೈಷಿಗಳು. ಇವರ ಸಲಹೆಯೇ ಪ್ರಜಾಭಿಪ್ರಾಯವೆಂದು ದಿವಾನರವರೂ ಸರ್ಕಾರದವರೂ ತಿಳಿದುಕೊಂಡರೇನೊ? ಹೇಗಾದರೂ ಆಗಲಿ, ಈ ವಿಷಯವು ಕಮಿಟಿಯವರಿಂದ ಇತ್ಯರ್ಥವಾಗಬೇಕು.

ಮ|| ಸಿದ್ಧರಾಮಪ್ಪನವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದರೆ?

ನೀವು ಡಿ|| ಮ್ಯಾಜಿಸ್ಟ್ರೇಟರಾಗಿದ್ದರೆ ಜುಲೈ 30ನೇ ತಾರೀಖಿನದಿನ ಏನೇನು ಮಾಡುತ್ತಿದ್ದಿರಿ ಎಂದು ವಿಶ್ವೇಶ್ವರಯ್ಯ ಕಮಿಟಿಯವರು ಬೆಂಗಳೂರು ಜೈಲಿನ ಸೂಪರಿಂಟೆಂಡೆಂಟರಾದ ಮಿ|| ಸಿದ್ದರಾಮಪ್ಪನವರನ್ನು ಕೇಳಿದರು. ಅದಕ್ಕೆ ಅವರು ಸ್ವಾಮಿ! ನಾನೆಂದರೇನು? ಡಿ|| ಮ್ಯಾಜಿಸ್ಟ್ರೇಟ್ ಅಂದರೇನು? ನನಗೂ ಅದಕ್ಕೂ ಬಹಳ ದೂರ. "ಹಾಗಲ್ಲಪ್ಪ" 'ನಿಮ್ಮ ಅಭಿಪ್ರಾಯವನ್ನು ಕೇಳುವುದು. ನೀವು ಏನು ಮಾಡುತ್ತಿದ್ದಿರಿ' ಎಂದು ಕೇಳಿದರು. ಅದಕ್ಕೆ ಅವರು ಪೂರ್ವಭಾವಿಯಾಗಿಯೇ ನಾನು ಗಲಾಟೆಯಾಗದಂತೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೆ. ಜೈಲಿನಲ್ಲಿಯೂ, ದಿವಾನರ ಬಂಗಲೆಯಲ್ಲಿಯೂ ಯಾವಾಗ ಅಷ್ಟು ಗಲಾಟೆಯಾಯಿತೋ ಆಗ ಶಾಂತಿಭಂಗವಾಗದಂತೆ ನೋಡಿಕೊಳ್ಳುವುದು ಡಿ|| ಮ್ಯಾಜಿಸ್ಟ್ರೇಟರ ಕರ್ತವ್ಯ. ಕಾನೂನಿಗೆ ಹಿಂದೂಗಳೂ ಮುಸಲ್ಮಾನರೂ ಒಂದೇ. ಶಾಂತಿ ಭಂಗವಮಾಡಿದರೆ ಮುಸಲ್ಮಾನರಾದರೆ ಬಿಟ್ಟುಬಿಡುವುದಕ್ಕಾದೀತೇ? ನಾನು ಮೈಸೂರಿನಲ್ಲಿ ಸೂಪರಿಂಟೆಂಡೆಂಟಾಗಿ ಇದ್ದಾಗ ಒಂದು ಫುಟ್‌ಬಾಲ್ ಮ್ಯಾಚಿನಲ್ಲಿ ಮಹಮ್ಮದೀಯರು ಹಿಂದೂ ಹುಡುಗರ ಮೇಲೆ ಬಿದ್ದಾಗ ಅವರಿಗೆ ತಕ್ಕ ಬಂದೋಬಸ್ತನ್ನು ಮಾಡಿದೆನು. ಪತ್ರಿಕೆಗಳು ಸುಳ್ಳು ಸುದ್ದಿಯನ್ನು ಪ್ರಕಟಿಸಿದರೆ ಅವುಗಳನ್ನೆಲ್ಲಾ ನಾನು ಪ್ರಾಸಿಕ್ಯೂಟ್ ಮಾಡುತ್ತಿದ್ದೆ ಎಂದು ಹೇಳಿದರು. ಈ ಮಾತನ್ನು ಕೇಳಿ ಅಧ್ಯಕ್ಷರು ಆಶ್ಚರ್ಯಗೊಂಡು ಸುಳ್ಳುಸುದ್ದಿಯನ್ನು ಪ್ರಕಟಮಾಡಿದ್ದಕ್ಕೋಸ್ಕರವಾಗಿಯೇ ಪತ್ರಿಕೆಯನ್ನು ದಂಡಿಸುವದಕ್ಕೆ ಕಾನೂನು ಇರುವಹಾಗೆ ಕಾಣುವುದಿಲ್ಲ ಎಂದರು.

ವೀರಕೇಸರಿ ಎಡಿಟರವರ ಕೈಫಿಯತ್ತು.

8-10-28ರಲ್ಲಿ ಮ|| ಸೀತಾರಾಮಶಾಸ್ತ್ರಿಗಳ ಕೈಫಿಯತ್ತು ನಡೆಯಿತು. 5-15 ರ ವರೆಗೆ ಇವರ ಕಥೆಯೇ ಆಯಿತು. ಅನಂತರ ಅಬ್ಬಾಸ್ ಖಾನ್ ಸೇವಕರ (ಏಟು ಬಿದ್ದವರ) ಕೈಫಿಯತ್ತು ನಡೆಯಿತು. ಶಾಸ್ತ್ರಿಗಳ ಕೈಫಿಯತ್ತು ಪ್ರಶ್ನೆಗಳು ಕನ್ನಡದಲ್ಲಿಯೇ ಆದವು. ಬಹಳ ಸ್ವಾರಸ್ಯವಾಗಿತ್ತು. ನಗೆಗಡಲು ಉಕ್ಕುತ್ತಿತ್ತು. ಗವರ್ನಮೆಂಟ್ ಅಡ್ವೋಕೇಟರಾದ ಶಂಕರನಾರಾಯಣರಾಯರು ಸರ್ಕಾರದ ಪರವಾಗಿ ಪ್ರಶ್ನೆಗಳನ್ನು ಹಾಕಿದರು. ಸತ್ಯಾಗ್ರಹವನ್ನು ಪ್ರತಿಯೊಬ್ಬ ಮಾನವನೂ ಆಚರಿಸಬಹುದೆಂದೂ, ಜೂನ್ 15 ರ ಹಿಂದೆ ವೀರಕೇಸರಿಯ ಪ್ರಚಾರವು 1500 ಇತ್ತೆಂದೂ ಈಗ 7000 ಇರುವುದೆಂದೂ ಗುಂಡು ಹಾರಿಸಿದ್ದು ನಿಜವೆಂದೂ. ಪೋಲೀಸಿನವರು ತಮ್ಮ ಕರ್ತವ್ಯವನ್ನು ಮಾಡದೇ ಇದ್ದದ್ದೇ ಗಲಾಟೆಗೆ ಕಾರಣವೆಂದೂ, ಇದು ಹಿಂದೂ ಮಹಮ್ಮದೀಯ ಗಲಾಟೆಯಲ್ಲವೆಂದೂ, ಸೀಕ್ರೆಟ್ ಸೊಸೈಟಿಯು ಶುದ್ಧ ಸುಳ್ಳೆಂದೂ ಅದಕ್ಕೆ ಆವಶ್ಯಕತೆಯಿಲ್ಲವೆಂದೂ ಅದು ಅಬ್ಬಾಸ್ ಖಾನರ ಕನಸಿನ ಪಿಶಾಚಿಯು ಮಾತ್ರವೇ ಎಂದೂ ಹೇಳಿದರು. ತಪ್ಪಿತಸ್ಥರನ್ನೆಲ್ಲಾ ಶಿಕ್ಷೆಗೆ ಗುರಿಮಾಡಿದರೇನೇ ಶಾಂತಿಯು ಸ್ಥಾಪನೆಯಾಗುವುದೆಂದೂ ತಿಳಿಸಿದರು.

ಅಬ್ಬಾಸ್ ಖಾನರ

ಕನಸಿನ ಪಿಶಾಚಿ.

ಗುಪ್ತಸಂಸ್ಥೆಯ ಮೆಂಬರುಗಳು.

ಅಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ಗೋಪ್ಯವಾಗಿ ಕೊಟ್ಟಿದ್ದ ಕೈಫಿಯತ್ತು.

ಮ|| ಗಳಾದ ಟಿ. ಪರಮಶಿವಯ್ಯರ್, ರಾಜು, ಶಾಮರಾವ್, ಪ್ರಜಾಮಿತ್ರ, ವೀರಕೇಸರಿ, ಹೆಚ್. ವಿ. ಸುಬ್ರಹ್ಮಣ್ಯಂ, ರಾಮಲಾಲ್ ತಿವಾರಿ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಬಿ. ಕೆ. ಗರುಡಾಚಾರ್, ರಾಮಚಂದ್ರರಾವ್ ಸಿಂಧೆ ಸರ್ಕಾರವನ್ನು ತಲೆಕೆಳಕು ಮಾಡುವದು ದಿವಾನರನ್ನು ಕಿತ್ತುಹಾಕುವುದೇ ಇವರ ಉದ್ದೇಶ.

ಬಟ್ಲರ್ ಕಮಿಟಿಯು ಬೆಂಗಳೂರಿಗೆ ಬಂದಾರಭ್ಯದಿಂದ ಈ ಕೂಟವು ಶುರುವಾಯಿತು. ಜುಲೈ ಮೊದಲನೇ ತಾರೀಖಿನಲ್ಲಿ ಇವರು ಉದ್ದೇಶವನ್ನು ಬಹಿರಂಗಪಡಿಸಿದರು. ಗಣಪತಿಯ ಚಳುವಳಿಯನ್ನು ತಮ್ಮ ಉದ್ದೇಶಕ್ಕಾಗಿ ತಿರುಗಿಸಿಕೊಂಡರು. ರಾಜುರವರ ಮನೆಯ ಮಹಡಿ ಮೇಲೆ ಇವರುಗಳು ಸಭೆಯನ್ನು ನಡೆಸುತ್ತಿದ್ದರು.

Printed and published by P. R. Ramaiya, at Sri Rama Press, D. Subbiah Road, Mysore.

ನೀರಕೇಸರಿಯವರ ಹೇಳಿಕೆ.

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್ ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |

ಸಂಪುಟ ೧] ಬುಧವಾರ ೧೦ ನೇ ಅಕ್ಟೋಬರ್, ೧೯೨೮ [ಸಂಚಿಕೆ ೧೫

ತಾಯಿನಾಡು
10 - 10 - 1928

ಅಬ್ಬಾಸ್ ಖಾನರ
ಕನಸಿನ ಪಿಶಾಚಿ.

ಅಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟ ಕೈಫಿಯತ್ತು.

ಅಬ್ಬಾಸ್ ಖಾನರು ಆಗಸ್ಟ್ 15ರಲ್ಲಿ ಅಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟ ಕೈಫಿಯತ್ತು ಪ್ರಕಟವಾಗಿರುವುದು. ಅವರು ಹೇಳುವುದೇನೆಂದರೆ—ಬಟ್ಲರ್ ಕಮಿಟಿಯವರು ಬೆಂಗಳೂರಿಗೆ ಬಂದಾಗ್ಗೆ ಮ॥ ರಾಜು, ಶಾಮರಾವ್, ಪರಮಶಿವಯ್ಯರ್ ಮತ್ತು ಭೀಮರಾವ್ ಇವರುಗಳು ಒಂದು ಕ್ಲಿಕ್ (ಕೂಟ) ಮಾಡಿಕೊಂಡು ಸರ್ಕಾರವನ್ನೂ ಮತ್ತು ಅದರ ಕಾರ್ಯಕಲಾಗಗಳನ್ನೂ ಖಂಡಿಸಲು ಆರಂಭಿಸಿದರು. ದಿವಾನರನ್ನು ಕಿತ್ತುಹಾಕುವದು ಮತ್ತು ಸರಕಾರವನ್ನು ತಲೆಕೆಳಕು ಮಾಡುವುದೇ ಅವರ ಉದ್ದೇಶಗಳು. ರಾಜು ಮತ್ತು ಶಾಮರಾಯರು ಮುನಿಸಿಪಲ್ ಕೌನ್ಸಿಲ್ಲಿಗೆ ಬಂದು ಬಟ್ಲರ್ ಕಮಿಟಿಯೊಡನೆ ಅಸಹಕಾರ ಮಾಡುವಂತೆ ಮೆಂಬರುಗಳಿಗೆ ಬೋಧಿಸಿದರು. ನ್ಯಾಯವಿಧಾಯಕ ಸಭೆಯಲ್ಲೂ ಪ್ರತಿನಿಧಿ ಸಭೆಯಲ್ಲೂ ನಾನು ಬ್ರಾಹ್ಮಣೇತರ ಪಕ್ಷವನ್ನು ಸಮರ್ಥನೆ ಮಾಡಕೂಡದೆಂದು ನನಗೆ ಬೋಧಿಸಿದರು. ನಾನು ಅವರ ಬೋಧನೆಗೆ ಕಿವಿಗೊಡಲಿಲ್ಲ. ನನಗೂ ಅವರಿಗೂ ಮನಸ್ತಾಪಕ್ಕೆ ಶುರುವಾಯಿತು. ಪ್ರಜಾಮಿತ್ರ ಪತ್ರಿಕೆಯಲ್ಲಿ ಸರ್ಕಾರವನ್ನು ಮನಸೋಇಚ್ಛೆ ಖಂಡಿಸಿ ಲೇಖನಗಳನ್ನು ಬರೆದರು. ಕಳೆದ ಪ್ರತಿನಿಧಿಸಭೆಯ ಅಧಿವೇಶನದ ಸಭಾಪರಿತ್ಯಾಗದ ಸಮಯದಲ್ಲಿ ನಾನು ಭಾಗವನ್ನು ತೆಗೆದುಕೊಳ್ಳಲಿಲ್ಲವೆಂದು ಖಂಡಿಸಿದರು. ಜೂನ್ 27ನೇ ತಾರೀಖಿನ ಪತ್ರಿಕೆಯಲ್ಲಿ ನನ್ನನ್ನು ವಿಗ್ರಹಘೇದಕನೆಂದೂ ಸ್ವಾರ್ಥಪರನೆಂದೂ ಕರೆದರು. ಜುಲೈ ಮೊದಲನೇ ತಾರೀಖಿನ ಸಮಾರಿನಲ್ಲಿ ರಾಜು, ಶಾಮರಾವ್, ಭೀಮರಾವ್ ಇವರುಗಳು ಸರ್ಕಾರವನ್ನು ತಲೆಕೆಳಕು ಮಾಡುವುದಾಗಿ ಬಹಿರಂಗವಾಗಿ ಉದ್ಘೋಷಿಸಿದರು. ಪ್ರಜಾಮಿತ್ರ ಪ್ರೆಸ್ ಕಿತ್ತುಕೊಳ್ಳಲ್ಪಟ್ಟಾಗ ಅದಕ್ಕೆ ನಾನೇ ಕಾರಣನೆಂದು ಹೇಳಿದರು. ಈ ಸಮಾರಿನಲ್ಲಿಯೇ ವೀರಕೇಸರಿಯೂ ಈಗುಂಪನ್ನು ಸೇರಿತು, ಗಣಪತಿಯ ಸಂದರ್ಭವನ್ನು ಉಪಯೋಗಿಸಿ ನನ್ನ ಮೇಲೆಯೂ ಸರ್ಕಾರದವರ ಮೇಲೆಯೂ ಚಳುವಳಿಯನ್ನು ಆರಂಭಿಸಿದರು. ಹೆಚ್. ವಿ. ಸುಬ್ರಹ್ಮಣ್ಯಂ, ರಾಮುಲಾಲ್ ತಿವಾರಿ, ಬೇಲೂರು ಶ್ರೀನಿವಾಸ ಅಯ್ಯಂಗಾರ್ ಇವರುಗಳು ಹೇಳಿದಹಾಗೆ ಕೇಳುವುದಕ್ಕೆ ಸಿದ್ಧರಾದರು. ರಾಜುರವರ ಮನೆಯ ಮಹಡಿಯಮೇಲೆ ಇವರುಗಳ ಸಭೆಯು ನಡೆದು ನನ್ನ ಮನೆಯನ್ನೂ ದಿವಾನರನ್ನೂ ಅಠಾರ ಕಚೇರಿಯನ್ನೂ ಮುತ್ತಿಗೆ ಹಾಕಬೇಕೆಂದೂ ನಿಶ್ಚಯವಾಯಿತು. ಜುಲೈ 30ನೇ ತಾರೀಖಿನ ಹೊತ್ತಿಗೆ ಬಿ. ಕೆ. ಗರುಡಾಚಾರ್ಯರೂ ರಾಮಚಂದ್ರರಾವ್ ಸಿಂಧೆಯವರೂ ಈ ಕೂಟವನ್ನು ಸೇರಿದರು. ಜುಲೈ 30ರಲ್ಲಿ ಗರಡಿಯ ಗುಂಡಾಗಳಿಗೆ ಬೇಕಾದಷ್ಟು ದುಡ್ಡುಕೊಟ್ಟು ನನ್ನ ಮನೆಗೆ ಮುತ್ತಿಗೆ ಹಾಕುವಂತೆ ದುರ್ಬೋಧನೆ ಮಾಡಿದರು. ಜುಲೈ 28ರಲ್ಲಿ ಆರು ಮೋಟಾರ್ ಕಾರುಗಳನ್ನು ಬಾಡಿಗೆಗೆ ತೆಗೆದುಕೊಂಡು ನ್ಯಾಷನಲ್ ಹೈಸ್ಕೂಲಿನಿಂದಲೂ ಇತರ ಜಾಗದಿಂದಲೂ ಲಾಠಿಗಳನ್ನು ಜಮಾಯಿಸಿದರು.

ಅಬ್ಬಾಸ್ ಖಾನರು ಹೇಳಿದ ಉಳಿದ ವಿಷಯಗಳೆಲ್ಲವೂ ಗೊತ್ತೇ ಇರುವದು

ನಾನು ದಿವಾನರ ಮನೆಗೆ ಟೆಲಿಫೋನು ಮಾಡಿದೆ.

ಜುಲೈ 30ನೇ ತಾರೀಖಿನ ರಾತ್ರಿ ನಾನು ದಿವಾನರ ಬಂಗಲೆಗೆ ಫೋನ್ ಮಾಡಿದ್ದೇನೆಂದರೆ—ನನ್ನ ಮನೆಯು ಸೂರೆ ಮಾಡಲ್ಪಡುತ್ತಿದೆ; ನನಗೂ ನನ್ನ ಮನೆಯಲ್ಲಿರುವವರಿಗೂ ಪ್ರಾಣಾಪಾಯಭಯವಿದೆ. ನನಗೆ ರಕ್ಷಣೆಯು ಬೇಕು ಎಂದು ಅಬ್ಬಾಸ್ ಖಾನರು ಹೇಳಿದರು.

ನನ್ನ ಮನೆಯನ್ನು ತಲಾಷ್‌ಮಾಡಿರೆಂದು ನಾನೇ ಹೇಳಿದೆ.

ನನ್ನ ಮನೆಯನ್ನು ತಲಾಷ್‌ಮಾಡಿರೆಂದು ನಾನೇ ಎ. ಎಸ್. ಪಿ. ರವರಿಗೆ ಅನೇಕಸಾರಿ ಹೇಳಿದೆ. ಕಡೆಗೆ ಆಗಸ್ಟ್ 8ರಲ್ಲಿ ಅಡಿಷನಲ್ ಮ್ಯಾಜಿಸ್ಟ್ರೇಟರು ತಲಾಷ್‌ಮಾಡಿ ಮಹಜರ್ ಮಾಡಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರ ಆಗಮನ

ಸರ್ ಎಂ. ವಿಶ್ವೇಶ್ವರಯ್ಯನವರು ಈದಿನ ಬೆಂಗಳೂರು ಮೇಲಿನಲ್ಲಿ ಬ್ಯಾಡರಹಳ್ಳಿ ವರೆಗೆ ಬಂದರು. ಹುಳಿಕೆರೆ ಟನಲ್ಲನ್ನು ನೋಡುವುದಕ್ಕೆ ಹೋದರೋ ಅಥವಾ ರಾಜಧಾನಿಗೆ ಬಂದರೋ ತಿಳಿಯದು.

ವೀರಕೇಸರಿ ಪತ್ರಿಕಾಕರ್ತರ ಹೇಳಿಕೆ

ಗಂಡಹೆಂಡಿರ ಅಸಮಾಧಾನಕ್ಕೂ ಸತ್ಯಾಗ್ರಹವೇ

ಮ॥ ರಾ॥ ಬಸಪ್ಪನವರ ಪ್ರಶ್ನೆ—ಸತ್ಯಾಗ್ರಹವನ್ನು ಯಾವ ಯಾವ ವೇಳೆಗಳಲ್ಲಿ ಅನುಸರಿಸಬಹುದು? ಉ—ಸ್ವಾಮಿ ಚಿಕ್ಕ ಸತ್ಯ, ದೊಡ್ಡ ಸತ್ಯ, ಮಹಾಸತ್ಯ ಎಲ್ಲವೂ ಸತ್ಯವೇ. ಹೆಂಡತಿ ಗಂಡನ ಅಸಮಾಧಾನಕ್ಕೆ ಸಹ ಸತ್ಯಾಗ್ರಹವನ್ನು ಅನುಸರಿಸಬಹುದು. ಅಲ್ಲದೆ ತಮಗೂ ನಮಗೂ ಸತ್ಯಾಗ್ರಹವಾಗಬಹುದು ಸ್ವಾಮಿ.

ಗೋಪ್ಯ ಸಮ್ಮೇಳನ

ಪ್ರ—ಗೋಪ್ಯಸಮ್ಮೇಳನವು ಗೊತ್ತೇ? ಉ—ಇಲ್ಲ ಸ್ವಾಮಿ. ಅದು ಬಹಳ ಭಯಂಕರವಾದದ್ದು. ಈ ಸಮ್ಮೇಳನವಿದೆ ಎಂಬುದನ್ನು ಕೇಳಿ ಎಲ್ಲವೂ ಶಾಂತವಾದಮೇಲೆ ಅದನ್ನು ಹುಟ್ಟಿಸಿದವರ ಕೈಯಿಂದ ತಿಳಿದುಕೊಳ್ಳಬೇಕೆಂದಿದ್ದೇನೆ.

ವೀರಕೇಸರಿಯು ಸೀತಾರಾಮಶಾಸ್ತ್ರಿಗಳವರ ಕಾಗದವಲ್ಲ.

ಮ॥ ರಾ॥ ನಾಗಪ್ಪನವರ ಪ್ರಶ್ನೆ—ಜೂಲೈ 31 ನೇ ತಾರೀಖಿನ ದಿವಸ ಮ॥ ರಾ॥ ಅಬ್ಬಾಸ್‌ಖಾನರ ಮನೆಯಿಂದ ಗುಂಡುಗಳು ಬಂದ ವಿಚಾರವನ್ನು ನಿಮ್ಮ ಪತ್ರಿಕೆಯಲ್ಲಿ ಏತಕ್ಕೋಸ್ಕರವಾಗಿ ಪ್ರಕಟಿಸಲಿಲ್ಲ? ಉ—ಸ್ವಾಮಿ, ನೀವು ಎಲ್ಲರಿಗೂ ಶಾಂತಿಮಾಡಬೇಕೆಂದು ಹೇಳುತ್ತೀರಿ. ನಾನು ಆ ವಿಚಾರವನ್ನು ಪ್ರಕಟಿಸಿದ್ದಲ್ಲಿ ಭೀತಿಯು ಇನ್ನೂ ಹೆಚ್ಚುತ್ತಿತ್ತು. ಅಲ್ಲದೆ ಈ ಪತ್ರಿಕೆಯು ಸೀತಾರಾಮಶಾಸ್ತ್ರಿಯ ಕಾಗದವಲ್ಲ ಸ್ವಾಮಿ.

ಸರ್ಕಾರದಿಂದ ನಷ್ಟವೇ ಹೊರತು ಆದಾಯವಿಲ್ಲ.

ಮ॥ ರಾ॥ ಸೀತಾರಾಮಶಾಸ್ತ್ರಿಗಳವರು ಗ್ರಾಮಜೀವನವೆಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಕಾರಣಾಂತರದಿಂದ ಅದು ನಿಂತುಹೋಯಿತು; ತರುವಾಯ ವೀರಕೇಸರಿ ಎಂಬ ಪತ್ರಿಕೆಯನ್ನು ಹೊರಡಿಸುತ್ತಿರುವುದು ಸರಿಯಷ್ಟೆ. ಈ ಸಂದರ್ಭದಲ್ಲಿ ಮ॥ ರಾ॥ ನಾಗಪ್ಪನವರು ಹೀಗೆ ಪ್ರಶ್ನಿಸಿದರು. ಪ್ರ—ನಿಮಗೆ ಸರ್ಕಾರದ ಸಹಾಯವು ನಿಂತುಹೋದುದಕ್ಕಾಗಿ ಗ್ರಾಮಜೀವನವನ್ನು ನಿಲ್ಲಿಸಿ ವೀರಕೇಸರಿಯನ್ನು ಹೊರಡಿಸಿದಿರಾ? ಉ—ಇಲ್ಲ ಸ್ವಾಮಿ ಸರ್ಕಾರದಿಂದ ನಮಗೆ ಯಾವಾಗಲೂ ನಷ್ಟವೇ ಹೊರತು ಆದಾಯವಿಲ್ಲ. ಒಳ್ಳೆಯ ಸಂದರ್ಭಗಳಲ್ಲಿ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತಾರೆ. ಇನ್ನೂ ಅನೇಕ ವಿಧಗಳಲ್ಲಿ ನಮಗೆ ನಷ್ಟವೇ ಹೊರತು ಆದಾಯವಿಲ್ಲ.

ನಾವು ಬರೆಯುವುದೇ ಬೇರೆ ನೀವು ತಿಳಿದುಕೊಳ್ಳುವುದೇ ಬೇರೆ.

ಮ॥ ರಾ॥ ನಾಗಪ್ಪನವರ ಪ್ರ—ಈಗ ಅನೇಕ ಪತ್ರಿಕೆಗಳಲ್ಲಿ ಸರ್ಕಾರವನ್ನು ಮತ್ತು ಸರ್ಕಾರದ ದೊಡ್ಡಪದವಿಯಲ್ಲಿರತಕ್ಕ ನೌಕರರುಗಳನ್ನು ದೂಷಿಸುವುದು ನ್ಯಾಯವೇ? ಉ—ಸ್ವಾಮಿ ಯಾರೂ ಯಾವ ವಿಧವಾಗಿಯೂ ಸರ್ಕಾರವನ್ನಾಗಲೀ ಸರ್ಕಾರದ ನೌಕರರುಗಳನ್ನಾಗಲೀ ದೂಷಿಸಿಲ್ಲ. ಎಲ್ಲಾ ಪತ್ರಿಕೆಗಳಲ್ಲಿಯೂ ಆಯಾ ನೌಕರರು ಅವರವರ ಕರ್ತವ್ಯಗಳನ್ನು ಸರಿಯಾಗಿ ನಡಿಸಿಲ್ಲವೆಂದೂ ಮತ್ತು ಅವರುಗಳು ಅಜಾಗರೂಕರಾಗಿದ್ದವೇಳೆಯಲ್ಲಿ ಸರ್ಕಾರದವರೂ ಕೂಡ ಕಣ್ಣುಮುಚ್ಚಿಕೊಂಡಿದ್ದರೆಂದೂ ವಿವರಿಸಲ್ಪಟ್ಟಿದೆಯೇ ಹೊರತು ಮತ್ಯಾವ ದೂಷಣೆಯೂ ಇಲ್ಲ. ಅಲ್ಲದೆ ನಾವು ಬರೆಯುವುದೇ ಬೇರೆ, ನೀವು ತಿಳಿದುಕೊಳ್ಳುವುದೇ ಬೇರೆ ಸ್ವಾಮಿ. ಶಾಸ್ತ್ರಿಗಳು ಆ ದಿನ ರಾತ್ರಿ, ಗಲಾಟೆಯಲ್ಲಿ ವೇಷವನ್ನು ಬದಲಾಯಿಸಿಕೊಂಡು ತಪ್ಪಿಸಿಕೊಂಡೆನೆಂದು ಹೇಳಲು, ನಾಗಪ್ಪನವರು ಪ್ರ—ನೀವು ವೇಷವನ್ನು ಬದಲಾಯಿಸುವ ಪದ್ಧತಿ ಇದೆಯೋ? ಎಂದು ಕೇಳಿದರು. ಉ—ಧೋತ್ರವನ್ನು ಉಟ್ಟಿದ್ದನ್ನು ತೆಗೆದು ದಟ್ಟಿಸುತ್ತಿದರೆ ಆಯಿತು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮಗೆ ಅರಿಕೆಮಾಡುತ್ತೇನೆ. ಹಿಂದೆ ನಾನು ದೆಹಲಿಯಲ್ಲಿ ಶೌಕತ್ ಅಲಿಯವರ ಜೊತೆಯಲ್ಲಿದ್ದಾಗ, ಕೆಲವು ಗಲಾಟೆಗಳಾದವು. ಆ ವೇಳೆಯಲ್ಲಿ, ಬೇರೆ ತರಹ ಉಡುಪನ್ನು ಹಾಕಲು ಒಂದು ಸಾಬರಟೋಪಿಯನ್ನು ಸಹ ಕೊಟ್ಟಿದ್ದರು. ಅದನ್ನು ಈಗಲೂ ಇಟ್ಟಿರುತ್ತೇನೆ. (ನಗು)

ಪ್ರಜಾಮಿತ್ರನ ಮೇಲೆ ದಬ್ಬಾಳಿಕೆ.

ಈ ವಿಷಯವಾಗಿ ಮದ್ರಾಸಿನ ಸ್ವರಾಜ್ಯ ಪತ್ರಿಕೆಯ ಅಭಿಪ್ರಾಯ:—

ಸಂಪಾದಕರಿಗೆ ತಮ್ಮ ಪಕ್ಷವನ್ನು ವಾದಿಸುವದಕ್ಕೆ ಅವಕಾಶವು ದೊರೆಯಲಿಲ್ಲ. ವಿಚಾರಣೆಯಿಲ್ಲದೆ ಶಿಕ್ಷೆಯಾಯಿತು. ಸರ್ಕಾರಕ್ಕೆ ನಿಷ್ಪಕ್ಷಪಾತವಾದ ವಿಚಾರಣೆಯನ್ನು ಮಾಡುವುದಕ್ಕೆ ಧೈರ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಬೇಜವಾಬ್ದಾರಿ ಮತ್ತು ಅಭಿವೃದ್ಧಿಘಾತಕ ಶಾಸಕರ ಕೈಯ್ಯಲ್ಲಿ ಪತ್ರಿಕಾ ಕಾನೂನು ಎಂತಹ ದುಷ್ಪರಿಣಾಮಗಳಿಗೆ ಕಾರಣವಾಗುವದೆಂಬುದು ವ್ಯಕ್ತವಾಗುತ್ತದೆ.

Printed and Published by P. R. Ramaiya, at Sri Rama Press,
D. Subbiah Road, Mysore

ಮೈಸೂರಿನ ಉತ್ತರಕುಮಾರರು.

‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕ[illegible]

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ !
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ [illegible]

[illegible] { ವರ್ಷಕ್ಕೆ [illegible] / ಸಂಚಿಕೆಗೆ [illegible] }

ಸಂಪುಟ ೧] ಗುರುವಾರ ೧೧ ನೇ ಅಕ್ಟೋಬರ್, [illegible] [ಸಂಚಿಕೆ [illegible]

ತಾಯಿನಾಡು

11 10 1928

ಮ|| ಗಳಾದ ನಾಗಪ್ಪ ಮತ್ತು ಕಲಾಮಿಯವರ ಜವಾಬ್ದಾರಿ.

ಬೆಂಗಳೂರು ಗಲಭೆಯ ಕೆಲವು ಪ್ರಕರಣಗಳಲ್ಲಿ ವಿಚಾರಣೆಯ ಕಮಿಟಿ ಮೆಂಬರುಗಳಾದ ಮ|| ಬಿ. ನಾಗಪ್ಪ ಮತ್ತು ಕಲಾಮಿಯವರ ಭಾಗವೂ ಇರುವುದು. ಅವರ ಜವಾಬ್ದಾರಿಯೂ ಇರುವುದು. ಇದು ಕಮಿಟಿಯಲ್ಲಿ ಕೊಡಲ್ಪಟ್ಟ ಕೈಫಿಯತ್ತುಗಳಿಂದ ವಿದಿತವಾಗುವುದು. ಮ|| ನಾಗಪ್ಪನವರ ಜವಾಬ್ದಾರಿ,— ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೇಮಿಸುವುದಕ್ಕೂ, ಇವರು ನೇಮಿಸಲ್ಪಟ್ಟ ನಂತರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರೂ, ಪೋಲೀಸಿನವರೂ, ಪತ್ತೇ ತಂದೂದುಗಳನ್ನು ನಡಸದೆಯೂ, ತಪ್ಪಿತಸ್ಥರನ್ನು ದಸ್ತಗಿರಿ ಮಾಡದೆಯೂ, ಇದ್ದುದಕ್ಕೆ ಮ|| ನಾಗಪ್ಪನವರ ಸಲಹೆಯೇ ಕಾರಣವೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಕೈಫಿಯತ್ತು ಕೊಟ್ಟರು. ಈ ಭಾಗದಲ್ಲಿ ಕಮಿಟಿಯ ಮುಂದೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೂ, ಮ|| ನಾಗಪ್ಪನವರಿಗೂ ವಾಗ್ವಾದವಾಯಿತು. ಮ|| ನಾಗಪ್ಪನವರು ಸರ್ಕಾರದ ಕಾನೂನಿನ ಕಾರ್ಯದರ್ಶಿಗಳಾಗಿ ಈ ಸಂದರ್ಭವಾಗಿ ಏನು ಸಲಹೆಯನ್ನು ಕೊಟ್ಟರೆಂಬುದನ್ನು ಪರೀಕ್ಷಿಸಬೇಕು. ಆದುದರಿಂದ ಮ|| ನಾಗಪ್ಪನವರ ಪರೀಕ್ಷೆಯೂ ನಡೆಯಬೇಕು. ಇನ್ನು ಮ|| ಕಲಾಮಿಯವರ ಮಾತು. ಕಲಾಮಿಯವರು ಒಬ್ಬ ಮಹಮ್ಮದೀಯ ಪ್ರಸಿದ್ಧ ಮುಖಂಡರು. ಇವರು ಅಬ್ಬಾಸ್ ಖಾನರ ಹಿತೈಷಿಗಳಲ್ಲಿ ಅಗ್ರಗಣ್ಯರಾದವರು. ಮ|| ಬಿ. ಕೆ. ಗರುಡಾಚಾರ್ಯರು ಪರೀಕ್ಷಿಸಲ್ಪಟ್ಟಂತೆಯೇ ಇವರೂ ಪರೀಕ್ಷಿಸಲ್ಪಡಬೇಕು. ಜುಲೈ 31 ನೇ ತಾರೀಕಿನ ದಿವಸದ ಸಭೆಯಲ್ಲಿ ಇವರು ಇದ್ದರೆಂದೂ, ಇವರ ಸಮ್ಮುಖವಾಗಿಯೇ ಸರ್ಕಾರದ ಹೊರಡಿಸಿದ ಪ್ರಕಟಣೆಯು ರಚಿಸಲ್ಪಟ್ಟಿತೆಂದೂ ಅಡಿಷನಲ್ ಮ್ಯಾಜಿಸ್ಟ್ರೇಟರನ್ನು ನೇಮಿಸುವುದಕ್ಕೆ ಇವರ ಸಲಹೆಯೂ ಕಾರಣವಾಯಿತೆಂದೂ, ಗುಂಡು ಹೊಡೆಯಲಿಲ್ಲವೆಂದು ದಿವಾನರಿಗೆ ಹೇಳಿದವರ ಪೈಕಿ ಇವರೂ ಒಬ್ಬರೆಂದೂ, ಇವರ ಹೇಳಿಕೆಗೆ ಅನುಸಾರವಾಗಿಯೇ ಖಾಸಗೀ ಮನುಷ್ಯರು ಯಾರೂ ಗುಂಡು ಹೊಡೆಯಲಿಲ್ಲವೆಂದೂ, ಸರ್ಕಾರದ ಪ್ರಕಟಣೆಯು ಹೊರಟಿತೆಂದೂ, ಗೊತ್ತಾಗುತ್ತದೆ. ಇಷ್ಟೆಲ್ಲಾ ಸಂಬಂಧವೂ, ಜವಾಬ್ದಾರಿಯೂ, ಇರುವ ಮ|| ಕಲಾಮಿಯವರು ಕಮಿಟಿಯವರಿಂದ ಪರೀಕ್ಷಿಸಲ್ಪಡಬೇಕೆಂದು ಅಭಿಪ್ರಾಯವಿರುವುದು ನ್ಯಾಯವಾದುದು. ಆದರೆ ಈ ಮಹನೀಯರುಗಳೇ ಕಮಿಟಿಯ ಮೆಂಬರುಗಳಾಗಿದ್ದಾರೆ. ಇದು ಸಮಂಜಸವೇ ನ್ಯಾಯವೇ ಎಂಬ ಪ್ರಶ್ನೆಯು ಉದ್ಭವಿಸಿರುವುದು. ಇದಕ್ಕೆ ಸರಿಯಾದ ಸಮಾಧಾನವನ್ನು ನಾವು ಹೇಳಲಾರೆವು. ನಮ್ಮ ಅಭಿಪ್ರಾಯದಲ್ಲಿ ಇವರುಗಳು ಈಗಲೂ ರಾಜೀನಾಮೆಯನ್ನು ಕೊಡುವುದು ನ್ಯಾಯವೆಂದು ತೋರುತ್ತದೆ.

ಪ್ರಜಾಮಿತ್ರನ ಮೇಲೆ ದಬ್ಬಾಳಿಕೆ

ಈವನಿಂಗ್ ಮೇಲ್ ಪತ್ರಿಕೆಯ ಅಭಿಪ್ರಾಯ:— ವೃತ್ತಪತ್ರಿಕಾ ಕಾನೂನಿನ ಪ್ರಕಾರ ಅಪ್ಪಣೆಯನ್ನು ಕಿತ್ತುಕೊಳ್ಳುವ ಮೊದಲು ಈ ವಿಷಯವು ಯಗ್ಸಿಕ್ಯುಟೀವ್ ಕೌನ್ಸಿಲ್ಲಿನ ಎಲ್ಲಾ ಮೆಂಬರುಗಳೂ ಇದ್ದ ಸಭೆಯ ಅನುಮತಿಯನ್ನು ಪಡೆಯಬೇಕು, ಮತ್ತು ಅದನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿ ಅವರ ಆರ್ಡರನ್ನು ಪಡೆಯಬೇಕು. ಪ್ರಜಾಮಿತ್ರನ ವಿಷಯದಲ್ಲಿ ಈ ರೀತಿಯಾದ ಕಾರ್ಯಕ್ರಮವು ನಡೆಸಲ್ಪಟ್ಟಿಲ್ಲ. ಅಲ್ಲದೆ ಅಪ್ಪಣೆಯನ್ನು ಕಿತ್ತುಕೊಳ್ಳುವ ಮೊದಲು ಚೀಫ್ ಕೋರ್ಟಿನ ನ್ಯಾಯಾಧಿಪತಿಗಳ ಮುಂದೆ ಕ್ವಾಸಿ ಜ್ಯುಡಿಷಿಯಲ್ ವಿಚಾರಣೆ ನಡೆಯಬೇಕು. ಇದರಲ್ಲಿ ಸಂಪಾದಕರಿಗೆ ತಮ್ಮ ಪಕ್ಷವನ್ನು ವಾದಿಸುವ ಅವಕಾಶವಿರಬೇಕು. ಪ್ರಜಾಮಿತ್ರನ ವಿಷಯದಲ್ಲಿ ಈ ವಿಚಾರಣೆಯೂ ನಡೆಯಲಿಲ್ಲ. ಯಾವುದೂ ಇಲ್ಲದೆ ಏನೋ ಕೆಲವು ಅಧಿಕಾರಿಗಳು ತಮ್ಮ ಮನಸ್ಸಿಗೆ ತೋಚಿದಂತೆ ಕಾನೂನನ್ನು ನಿರ್ಲಕ್ಷ್ಯಿಸಿ ನವಾಬ್‌ಗಿರಿಯಿಂದ ಪ್ರಜಾಮಿತ್ರನನ್ನು ಕೊನೆಗಾಣಿಸಿರುವರು.

ದಿವಾನರ ಆಗಮನ.

ದಿವಾನರು ನಾಳೆ ದಿವಸ ರಾಜಧಾನಿಗೆ ನವರಾತ್ರಿ ಉತ್ಸವಕ್ಕಾಗಿ ದಯಮಾಡಿಸುವರು.

ಮಿ|| ಪಿಯರ್ಸ್ ರವರ ಆಗಮನ.

ರಜಾದಮೇಲೆ ಶೀಮೆಗೆ ಹೋಗಿದ್ದ ಬ್ರಿಟಿಷ್ ರೆಸಿಡೆಂಟರಾದ ಆನರಬಲ್ ಮಿ|| ಪಿಯರ್ಸ್ ರವರು ಬೆಂಗಳೂರಿಗೆ ೬ ನೇ ತಾರೀಖಿನ ದಿನ ದಯಮಾಡಿಸಿದರು.

ಅಭಿನವ ಉತ್ತರಕುಮಾರರು!

ಸ್ವರಾಜ್ಯ ಪತ್ರಿಕೆಯ ಬೆಂಗಳೂರು ವಾರ್ತಾದಾರರು ಕಮಿಟಿಯ ಮುಂದೆ ಐ. ಜಿ. ಪಿ. ಯವರು ಕೊಟ್ಟ ಕೈಫಿಯತ್ತನ್ನು ವಿಮರ್ಶಿಸಿ ಇವರು ಕರ್ಮವೀರರಲ್ಲದಿದ್ದರೂ ವಾಕ್ಶೂರರೆಂದೂ ಇವರನ್ನು ಉತ್ತರಕುಮಾರನಿಗೆ ಹೋಲಿಸಬಹುದೆಂದೂ ಬರೆದಿರುವರು. ಅವರು ಹೇಳುವುದೇನೆಂದರೆ ವಾಕ್‌ಶೂರತ್ವಕ್ಕೂ ಔದ್ಧತ್ಯಕ್ಕೂ ಮ|| ಹಿರಣ್ಣಯ್ಯನವರನ್ನು ಜಬ್ಬರೆ ಬೇರೆಯವರು ದೊರೆಯುವುದಿಲ್ಲ. ಸಾಕ್ಷ್ಯ ಕೊಡುವ ದಿವಸ ಖಾಕೀ ಯೂನಿಫಾರಂಮಿನಲ್ಲಿಯೂ ನೀಲೀ ರುಮಾಲಿನಲ್ಲಿಯೂ ಬಂದರು. ಸಾಲದ್ದಕ್ಕೆ ಒಂದು ಚಮಕವೂ ಅವರ ಕೈಯ್ಯಲ್ಲಿ ಇತ್ತು. ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳಿಗೆ ವಾಕ್‌ಚಾತುರ್ಯವೇ ಆವಶ್ಯಕವಾದ ಗುಣವಾಗಿದ್ದ ಪಕ್ಷದಲ್ಲಿ ನಿಸ್ಸಂದೇಹವಾಗಿ ಹಿರಣ್ಣಯ್ಯನವರಿಗೆ ಸಮಾನರಾದವರು ಯಾರೂ ದೊರೆಯುವುದಿಲ್ಲ. ಆದರೆ ಕಾಲಕ್ಕೆ ಸರಿಯಾದ ಕಾರ್ಯದಕ್ಷತೆಯೇ ಅವಶ್ಯಕವಾದ ಗುಣವಾಗಿದ್ದ ಪಕ್ಷದಲ್ಲಿ ಹಿರಿಯಣ್ಣಯ್ಯನವರು ಶುದ್ಧ ಅನರ್ಹರು. ಇವರು ಕುರ್ಚಿಯನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ನಾಟಕದಲ್ಲಿ ತೋರಿಸಲ್ಪಡುವ ಧೀರ ಭಾವನೆಯಿಂದ ಕೂಡಿದವರಂತೆ ಪ್ರಶ್ನೆಗಳಿಗೆ ಧಾರಾಳವಾಗಿ ನೀರು ಕುಡಿದಂತೆ ಉತ್ತರವನ್ನು ಕೊಡುತ್ತಾ ಬಂದರು. ಮಾತಿನ ವೈಖರಿಯಿಂದ ಕಮಿಟಿಯ ಮೆಂಬರುಗಳನ್ನು ಬೆರಗುಮಾಡಿದರು. ಅಧ್ಯಕ್ಷರು ಎಲ್ಲೋ ಕ್ವಚಿತ್ ತಲೆಯನ್ನು ಎತ್ತುತ್ತಿದ್ದರು. ಆಗ ಹಿರಿಯಣ್ಣಯ್ಯನವರು ಅಪದ್ಧಕ್ಕೆ ಸಾಕ್ಷಿಯೇನೆಂದರೆ ಬಾಯಿಗೆ ಬಂದದ್ದೇ ಎಂಬಂತೆ ಉತ್ತರಗಳನ್ನು ಕೊಡುತ್ತಿದ್ದರು. ಜಸ್ಟಿಸ್ ಡಿ. ಕೆ. ರಾಮರಾಯರ ಕಾನೂನಿನ ಕುಶಲತೆಯೂ ಕೂಡಾ ಇವರಲ್ಲಿ ಫಲಿಸಲಿಲ್ಲ. ನಾಗಪ್ಪನವರ ಮುಷ್ಟಿ ಚಾತುರ್ಯವು ಇವರ ವಾಙ್ಮುಷ್ಟಿಗಳ ಮುಂದೆ ಬೇಯಲಿಲ್ಲ. ಒಂದು ರೀತಿಯಿಂದ ಐ. ಜಿ. ಪಿ. ಯವರು ಕಮಿಟಿಯ ಮೆಂಬರುಗಳನ್ನೂ ಪ್ರೇಕ್ಷಕ ಸಮುದಾಯವನ್ನೂ ಥಂಗು ಮಾಡಿದರು. ಇವರು ಅನೇಕಾವರ್ತಿ ನಮಗೆ ಯಾವ ಹೆದರಿಕೆಯೂ ಇರಲಿಲ್ಲ ಎಂದು ಹೇಳಿದ್ದನ್ನೂ ಜುಲೈ 30 ನೇ ತಾರೀಖಿನ ರಾತ್ರಿ ಮತ್ತು ಈಚೆಗೆ ಪೋಲೀಸಿನವರು ತೋರಿಸಿದ ಕರ್ತವ್ಯ ಪರಾಙ್ಮುಖತೆಯನ್ನೂ ನೋಡಿದರೆ ಹಿರಿಯಣ್ಣಯ್ಯನವರು, ಉತ್ತರನ ಪೌರುಷ ಒಲೆ ಮುಂದೆ ಎಂಬ ನಾಣ್ಣುಡಿಯನ್ನು ತಾರ್ಕಣೆಗೆ ತಂದು ಇತರರು ಯಾರಿಗೂ ಸಲ್ಲದ ಅಭಿನವ ಉತ್ತರ ಕುಮಾರರೆಂಬ ಖ್ಯಾತಿಯನ್ನು ಪಡೆದರು.

ಬಕ್ ಷಾಟೂ ಅಲ್ಲ ರೈಫಲ್ ಷಾಟೂ ಅಲ್ಲ.

ಕರ್ನಲ್ ಲ್ಯಾಂಪರ್ಡರವರ ಸಾಕ್ಷ್ಯವು 9ನೇ ತಾರೀಖಿನ ದಿವಸ ನಡೆಯಿತು. ಕಲಾಮಿಯವರು ಚಂದ್ರರಾಜನ X ರೇ ಫೋಟೋವನ್ನು ಕೊಟ್ಟರು. ಅದನ್ನು ನೋಡಿ ಆ ಗುಂಡು ಬಕ್ ಷಾಟಿಗಿಂತ ದೊಡ್ಡದೆಂದೂ ರೈಫಲ್ ಷಾಟಿಗಿಂತ ಚಿಕ್ಕದೆಂದೂ ತಿಳಿಸಿದರು.

ವೀರಶೈವ ಸನ್ಯಾಸಿಯ ಮೇಲೆ ಅತ್ಯಾಚಾರ.

ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ಓದುತ್ತಿದ್ದ ಒಬ್ಬ ವೀರಶೈವ ಬಾಲಸನ್ಯಾಸಿಯನ್ನು ದಾರಿಯಲ್ಲಿ ಒಬ್ಬ ಮಹಮ್ಮದೀಯನು ಜುಲುಮ್ಮಿನಿಂದ ಹೊಡೆದು ಕರಡಿಗೆಯನ್ನು ಕಿತ್ತು ಬಿಸುಟು ಅಪಮಾನಪಡಿಸಿದನೆಂದೂ ಆ ಸನ್ಯಾಸಿಯು ರಾಜಧಾನಿಗೆ ಬಂದು ಪುನೀತರಾಗುವ ವಿಚಾರವಾಗಿ ಪರ್ಯಾಲೋಚನೆ ನಡೆಸುತ್ತಿರುವುದಾಗಿಯೂ ತಿಳಿಯಬರುತ್ತದೆ.

ಅಬ್ಬಾಸ್ ಖಾನರ ರಕ್ಷಣೆಗೆ ಸವಾರರು

ಕ್ಯಾಪ್ಟನ್ ಥುರಾಯಿ ಬೀನ್‌ರವರು ಜುಲೈ 30 ನೇ ತಾರೀಖಿನ ಸಾಯಂಕಾಲ ಅಬ್ಬಾಸ್ ಖಾನರ ರಕ್ಷಣೆಗಾಗಿ ದಿವಾನ್ ಆಫೀಸ್ ಸೂ|| ಪಳ್ನಿಸಾಮಿಯವರ ಹೇಳಿಕೆಯಂತೆ ಲೆಫ್ಟಿನೆಂಟ್ ಬಸವರಾಜೇ ಅರಸಿನವರ ಕೈಕೆಳಗೆ ಕುದುರೆ ಸವಾರರ ಸೈನ್ಯವನ್ನು ಕಳುಹಿಸಿದುದಾಗಿ ಹೇಳಿದರು.

ಅಬ್ಬಾಸ್‌ಖಾನರ ಪರೀಕ್ಷೆ

ಬೆಂಗಳೂರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ 8 ನೇ ತಾರೀಖಿನ ದಿವಸ ರಾಜುರವರು ಅಬ್ಬಾಸ್ ಖಾನರವರಿಗೆ ಅಡ್ಡ ಸವಾಲುಗಳನ್ನು ಹಾಕಿದರು. ಸರ್ಕಾರಕ್ಕೆ ವಿರೋಧವಾಗಿಯೂ ನಿಮಗೆ ವಿರೋಧವಾಗಿಯೂ ನಡೆಯುತ್ತಿರುವ ಮುಸಲರ್ಮಾಗಳ ವಿಷಯದಲ್ಲಿ ಕಾಗದಪತ್ರಗಳನ್ನು ಪ್ರದರ್ಶಿಸುವದಾಗಿ ಹೇಳಿರುವಿರಿ ಅವುಗಳನ್ನು ಪ್ರದರ್ಶಿಸುವಿರಾ ಎಂದು ಕೇಳಿದರು. ಪಬ್ಲಿಕ್ ಪ್ರಾಸಿಕ್ಯೂಟರವರು ಆ ಪ್ರಶ್ನೆಯನ್ನು ಹಾಕಕೂಡದೆಂದು ವಾದಿಸಿದರು.

Printed and Published by P. R. Ramaiya, at Sri Rama Press,
D. Subbiah Road, Mysore

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಶುಕ್ರವಾರ ೧೨ ನೇ ಅಕ್ಟೋಬರ್,

ತಾಯಿನಾಡು
12 10 1928

ವಿಚಾರಣೆ ಕಮಿಟಿಯ ಅಧ್ಯಕ್ಷರು.

—o—

ಈ ಕಮಿಟಿಯು ಸೆಪ್ಟೆಂಬರ್ 12ನೇ ತಾರೀಖಿನಿಂದಲೂ ವಾರಕ್ಕೆ ನಾಲ್ಕು ದಿನಗಳಂತೆ ಕೆಲಸಮಾಡುತ್ತಲಿದೆ. ಈಗಾಗಲೇ ಅನೇಕ ಮುಖ್ಯ ಸಾಕ್ಷಿಗಳು ಕೈಫಿಯತ್ತುಗಳನ್ನು ಕೊಟ್ಟರು. ಅವುಗಳೆಲ್ಲವೂ ಪ್ರಜೆಗಳ ಅವಗಾಹನೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವುವು. ಕಮಿಟಿಯವರ ತೀರ್ಮಾನವು ಏನೇ ಆಗಲಿ ಅಧ್ಯಕ್ಷರು ತಮ್ಮ ನ್ಯಾಯಬುದ್ಧಿಯಿಂದಲೂ, ನಿಷ್ಪಕ್ಷಪಾತದಿಂದಲೂ, ನಿರ್ದಾಕ್ಷಿಣ್ಯದಿಂದಲೂ ಸರ್ವಸಮದೃಷ್ಟಿಯಿಂದಲೂ ಎಲ್ಲರ ಗೌರವಕ್ಕೂ ಆದರಕ್ಕೂ ಪಾತ್ರರಾಗಿರುವರು. ಕಮಿಟಿಗೆ ಸರ್. ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಿರುವುದೇ ಒಂದು ಭೂಷಣ. ಒಂದು ಪ್ರಶಸ್ತಿ. ನಿರ್ಮಲವಾದ ಅಕಲಂಕಿತವಾದ ಅವರ ಹೆಸರೇ ಈ ಕಮಿಟಿಗೆ ಪ್ರಾಧಾನ್ಯತೆಯನ್ನೂ ಆಕರ್ಷಣಾಶಕ್ತಿಯನ್ನೂ ಕೊಟ್ಟಿರುವುದು. ಇವರು ಕಮಿಟಿಯ ಕಾರ್ಯಕಲಾಪಗಳನ್ನು ತಮ್ಮ ಕೀರ್ತಿಗೆ ಲೋಪಬರದಂತೆ ನಡೆಸುತ್ತಿರುವರೆಂದು ಧಾರಾಳವಾಗಿ ಹೇಳುವೆವು.

ಕರ್ನಲ್ ಲ್ಯಾಂಡರ್ಸ್ ರವರ ಕೈಫಿಯತ್ತು.

———

ಪ್ರ—ಪೋಲೀಸಿನ ಸಮಾಚಾರವು ನಿಮಗೆ ಯಾರಿಂದ ಬಂತು?

ಉ—ನಾನು ಹೇಳಲಾರೆ.

ಆದಷ್ಟು ಕಡಿಮೆ ಜುಲುಂ.

ಜನಗಳನ್ನು ಚದರಿಸುವುದಕ್ಕೆ ಆದಷ್ಟು ಕಡಿಮೆ ಜುಲುಮನ್ನು ಉಪಯೋಗಿ [illegible] ತಿಳಿಸಲಾಗಿದೆ.

ಪ್ರ—ಸೆಕ್ರೆಟರಿಯವರೂ ಡಿ|| ಮ್ಯಾಜಿಸ್ಟ್ರೇಟರವರೂ ಸವಾರರಿಗೆ ಏನು ಅಪ್ಪಣೆಯನ್ನು ಕೊಟ್ಟರು ತಿಳಿದುಕೊಂಡಿರೋ? ಉ—ನನಗೆ ತಿಳಿದಮಟ್ಟಿಗೆ ಐ.ಜಿ.ಪಿ. ಯವರು ಮತ್ತು ಇತರ ಅಧಿಕಾರಿಗಳು ಅವರಿಗೆ ಅಪ್ಪಣೆಯನ್ನು ಕೊಟ್ಟರು. [illegible] ಭರ್ಜಿಯನ್ನು ಉಪಯೋಗಿಸಕೂಡದೆಂದು [illegible] ಕೊಟ್ಟರೋ? ಉ—ನನಗೆ ಜ್ಞಾಪಕವಿದ್ದಮಟ್ಟಿಗೆ ಭರ್ಜಿಯನ್ನು [illegible] ಜನಗಳನ್ನು ಶಾಂತವಾಗಿ ಚದರಿಸಬೇಕೆಂದೂ ಅಪ್ಪಣೆ [illegible] ಸವಾರರು ಮಹಮ್ಮದೀಯರಿಗೂ ದಯೆಯನ್ನು ತೋರಿಸಿದರೆಂದು ಹೇಳುತ್ತಾರೆ. ಅದೇನಾದರೂ ನಿಮಗೆ ಗೊತ್ತೆ? ಉ—ನಾನು ಕೇಳಿಲ್ಲ. ಪ್ರ—ಸವಾರರು ಜನಗಳಿಗೆ ಅನವಶ್ಯಕವಾಗಿ ಗಾಯಪಡಿಸಿದರೆಂದು ಆಪಾದನೆ ಇರುವುದು. ಅದಕ್ಕೆ [illegible] ಇದಕ್ಕೆ ಉತ್ತರವು ಬರಲಿಲ್ಲ. ಪ್ರ—ಸವಾರರನ್ನು [illegible] ಅವರಿಗೆ ಅಧಿಕಾರವಿ [illegible] ಉ—ಹೌದು. ಪ್ರ—ತರಬೇತಿ ಕುದುರೆಗಳು ಉಪಯೋಗಿಸಲ್ಪಟ್ಟ [illegible] ಕುದುರೆಗಳ [illegible] ಪ್ರ—[illegible] ಗುಂಡು [illegible] ತೋರಿಸು ವಿರಾ? ಉ—ಆಗಲಿ ತೋರಿಸುವೆನು, ಪ್ರ—ಆ ತಾರೀಖಿನಲ್ಲಿ ನಿಮ್ಮ ಆಫೀಸಿನಿಂದ ಯಾರಿಗಾದರೂ ಗುಂಡುಗಳನ್ನು ಕೊಟ್ಟಿರುವಿರಾ? ಉ—ಹೌದು ಗುಂಡು ಕೊಟ್ಟ ಲೆಖ್ಖವಿದೆ. ಪ್ರ—ಯಾವ ಆಫೀಸರಿಗೆ ಕೊಟ್ಟದ್ದು ಎಷ್ಟು ಗುಂಡುಗಳು ಅವು ಏನಾದವು ತಿಳಿಸುವಿರಾ? ಉ—ಅವೆಲ್ಲಾ ನನ್ನ ಹತ್ತಿರವಿದೆ.

ಪ್ರ—ಜುಲೈ [illegible]ನೇ ತಾರೀಖಿನಲ್ಲಿ ಜಫರ್ ಖಾನ್ ಎಂಬ ನಿಮ್ಮ ಆಫೀಸರು ಡ್ಯೂಟಿಯಿಂದ ಹೊರಗಿದ್ದರೆ? ಉ—ಇಲ್ಲ. ಅವರು ಡ್ಯೂಟಿಯಲ್ಲಿದ್ದ [illegible] ತಮ್ಮ ಸರ್ಕಾರಿ ಮನೆಗೆ ಅಪ್ಪಣೆಯನ್ನು ತೆಗೆದುಕೊಳ್ಳದೆ ಹೊರ [illegible] ನಿಮಗೆ ಗೊತ್ತಿದೆಯೊ? ಉ—ಇಲ್ಲ. ಪ್ರ—ಸರ್ಕಾರದವರು ಬಿಟಿಷ್ ಗುಂಡಿನ ಗಾಯವನ್ನು ತರಿಸುವದಕ್ಕೆ ಮುಂಚೆ ನಿಮ್ಮ ಸಲಹೆಯನ್ನು ಕೇಳಿದರೋ? ಉ—ಅದಕ್ಕೆ ನಾನು ಪರದೆಯಲ್ಲಿ ಉತ್ತರ ಹೇಳುವೆನು. ಪ್ರ—ಭರ್ಜಿಯಿಲ್ಲದೆ ಕುದುರೆಯನ್ನು ಕಳುಹಿಸುವುದು ನಿಮಗೆ ಸಾಧ್ಯವಿತ್ತೋ? ಉ— [illegible]

ಮುಂದಿನ ಕಾಲಂ [illegible] ಸಂಪೂರ್ಣವಾಗಿ [illegible]

ಖಾದರ್ ಶರೀಫರ ಕೈಫಿಯತ್ತು.

ಪ್ರ—ನೀವು ಅಬ್ಬಾಸ್ ಖಾನರ ಮನೆಯ ಹತ್ತಿರ ಗುಂಡಿನ ಶಬ್ದವನ್ನು ಕೇಳಲಿಲ್ಲವೊ? ಉ—ಕಲ್ಲಿನ ಶಬ್ದಗಳು ಬಹಳ ಭಯಂಕರವಾಗಿದ್ದವು. ಗುಂಡಿನ ಶಬ್ದಗಳನ್ನು ಕೇಳಲಿಲ್ಲ. ಅಧ್ಯಕ್ಷರು—ಕಲ್ಲುಗಳ ಶಬ್ದಕ್ಕಿಂತಲೂ ಗುಂಡಿನ ಶಬ್ದವು ಎಷ್ಟೋ ಭಯಂಕರವಾಗಿರುವುದು.

ಅಬ್ಬಾಸ್ ಖಾನರ ಕಸಿನ ಪಿಶಾಚಿ.

ಈ ವಿಷಯವಾಗಿ ಎಲ್. ಎಸ್. ರಾಜೂರವರು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅಬ್ಬಾಸ್ ಖಾನರ ಹತ್ತಿರವಿದ್ದ ದಾಖಲೆ ಮೊದಲಾದುವುಗಳನ್ನು ಕೊಡಬೇಕೆಂದು ಕೇಳಿದರು. ಪಬ್ಲಿಕ್ ಪ್ರಾಸಿಕ್ಯೂಟರವರು ಇದು ಕೂಡದೆಂದು ಆಕ್ಷೇಪಣೆಮಾಡಿದರು. ಕಡೆಗೆ ವಾಗ್ವಾದವಾಗಿ ಸ್ಪೆಷಲ್ ಮ್ಯಾಜಿಸ್ಟ್ರೇಟರವರು ರಾಜೂರವರ ವಾದವೇ ಸರಿಯೆಂದು ಸಮರ್ಥನೆ ಮಾಡಿದರು. ಈ ಮುಕದ್ದಮೆಯು ಇನ್ನೂ ಹೆಚ್ಚು ಆಶ್ಚರ್ಯರೂಪವನ್ನು ತಾಳುವ ಹಾಗೆ ಕಾಣುತ್ತದೆ.

ಎರಡು ಲಕ್ಷ ಮನುಷ್ಯರ ಕೊಲೆ.

ನ್ಯೂಯಾರ್ಕಿನಲ್ಲಿರುವ ಚೈನಾ ಕಮ್ಯುನಿಸ್ಟ್ ಕಾಂಗ್ರೆಸ್‌ನಿಂದ ಕಮಿಟಿಯು ಸುಫುಕ್ಕೆ ಚೈನಾದಲ್ಲಿರುವ ಕಾನ್ಸು ಪ್ರಾಂತ್ಯದಲ್ಲಿ ಮಹಮ್ಮದೀಯರು ಎರಡು ಲಕ್ಷ ಜನಗಳನ್ನು ಕೊಲೆಮಾಡಿದರೆಂದು ತಂತಿ ಮೂಲಕ ಸಮಾಚಾರವು ಬಂದಿರುವುದು.

ಅಬ್ಬಾಸ್ ಖಾನರಿಗೆ ಭೇಟಿಯನ್ನು ಕೊಡಬೇಡಿ

ಮಿ|| ಎಂ. ಎಸ್. ಲಿಂಗೇಗೌಡರು ಜುಲೈ 31ನೇ ಪ್ರಾತಃಕಾಲ ದಿವಾನರ ಭೇಟಿಯನ್ನು ಮಾಡಿದ್ದಾಗಿಯೂ ಅಬ್ಬಾಸ್ ಖಾನರಿಗೂ ಕಲಾಮಿಯವರಿಗೂ ಭೇಟಿಯನ್ನು ಕೊಡಬೇಡಿ ಎಂದು ಪ್ರಾರ್ಥಿಸಿದಾಗ್ಯೂ ದಿವಾನರು ನಾನೇನು ಜಡ್ಜಿಯಲ್ಲ. ಅವರನ್ನು ವಿಚಾರಣೆ ಮಾಡುವುದಕ್ಕೆ ಕೋರ್ಟುಗಳಿವೆ ಎಂಬ ಉತ್ತರವನ್ನು ಹೇಳಿದರೆಂದು ತಿಳಿಸಿದರು.

ಎನ್. ಎಸ್. ಸುಬ್ಬರಾಯರ ಮನೆಮುಂದೆ ಸತ್ಯಾಗ್ರಹ ಮಾಡಬೇಕಾಗಿತ್ತು

ಅಬ್ದುಲ್ ರಹಿಮಾನರವರು ತಮ್ಮ ಕೈಫಿಯತ್ತಿನಲ್ಲಿ ವಿದ್ಯಾರ್ಥಿಗಳು ಅಬ್ಬಾಸ್ ಖಾನರ ಮನೆಯ ಮುಂದೆ ಸತ್ಯಾಗ್ರಹ ಮಾಡುವುದಕ್ಕಿಂತ ಎನ್. ಎಸ್. ಸುಬ್ಬರಾಯರ ಮನೆಯ ಮುಂದೆ ಸತ್ಯಾಗ್ರಹ ಮಾಡಬೇಕಾಗಿತ್ತೆಂದು ತಿಳಿಸಿದರು.

ವಿಚಾರಣೆ ಕಮಿಟಿಯು ಈ ತಿಂಗಳು 17ನೇ ತಾರೀಖಿನ ವರೆಗೆ ಕೆಲಸವನ್ನು ನಡೆಸುವದೆಂದೂ ಅನಂತರ ನವರಾತ್ರಿಯ ರಜಾದಿನಗಳು ಆದಮೇಲೆ ಪುನಃ ಕೆಲಸಕ್ಕೆ ಆರಂಭಿಸುವದೆಂದೂ ತಿಳಿಯಬರುತ್ತದೆ. ಈಗಾಗಲೇ 50 ಸಾಕ್ಷಿಗಳು ಕೈಫಿಯತ್ತು ಕೊಟ್ಟಿರುವರು. ಇನ್ನೂ 30 ಸಾಕ್ಷಿಗಳು ಕೈಫಿಯತ್ತು ಕೊಡಬೇಕಾಗಿರುವದು.

ವೀರಕೇಸರಿ ಶಾಸ್ತ್ರಿಗಳು ಜುಲೈ 28 ರಲ್ಲಿ ದಿವಾನರಿಗೆ ಚನ್ನಪಟ್ಟಣಕ್ಕೆ ಹೋಗಕೂಡದೆಂದೂ ಬೆಂಗಳೂರಿನಲ್ಲಿ ಗಲಾಟೆಯಾಗುವ ಸಂಭವವಿದೆಯೆಂದೂ ಬರೆದುದಾಗಿ ಕೈಫಿಯತ್ತು ಕೊಟ್ಟರು,

ದೊಂಬಿಯವರನ್ನು ಗುರ್ತು ಹಿಡಿಯುವುದು.

ಈ ತಿಂಗಳು 10ನೇ ತಾರೀಖಿನಲ್ಲಿ ಬೆಂಗಳೂರು ಹಳೇ ಸವಾರ್ ಲೈನಿನಲ್ಲಿ ಡಿ|| ಮ್ಯಾಜಿಸ್ಟ್ರೇಟರು ಐಡೆಂಟಿಫಿಕೇಷನ್ ಪೆರೇಡನ್ನು ನಡೆಸಿದರು. ಸುಮಾರು 150 ಜನ ಮಹಮ್ಮದೀಯರೂ 100 ಹಿಂದೂಗಳೂ ಹಾಜರಿದ್ದರು. ತಪ್ಪಿತಸ್ಥರೆಂದು ಗುಮಾನಿಯಿರುವವರು ಜೇಡೈಸ್ ಪೋಲೀಸಿನವರೊಡನೆಯೂ, ಇತರ ಖಾಸಗೀ ಜನರೊಡನೆಯೂ ಸೇರಿ ಕೂರಿಸಲ್ಪಟ್ಟರು. ಕೈಫಿಯತ್ತು ಕೊಟ್ಟ ಸಾಕ್ಷಿಗಳು ಅಪರಾಧಿಗಳನ್ನು ಗುರ್ತುಹಿಡಿಯಬೇಕೆಂದು ಕೇಳಲ್ಪಟ್ಟರು. ಕೆಲವು ಹಿಂದೂಗಳು ಅದರಲ್ಲೂ ಸುಸಂಸ್ಕೃತರಾದವರು, ಎದುರೆದುರಿಗೇ ಈ ರೀತಿಯಾಗಿ ಗುರ್ತು ಹಿಡಿಯುವುದು ಅಪಾಯಕರವೆಂದು ತಿಳಿಸಿದರು. ತಮ್ಮ ಪರವಾಗಿ ಇತರರು ಗುರ್ತು ಹಿಡಿಯುವರೆಂದು ಹೇಳಿದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇದಕ್ಕೆ ಒಪ್ಪಲಿಲ್ಲ. ಆದರೆ ಕೆಲವು ತರುಣರು ಮುಂದೆ ನುಗ್ಗಿ ಅಪರಾಧಿಗಳನ್ನು ಗುರ್ತುಹಿಡಿಯಲು ಪ್ರಾರಂಭಿಸಿದರು. ಇದರಿಂದ ಇತರರಿಗೆ ಧೈರ್ಯ ಬಂದಿತು. ಲಾಠಿಗಳನ್ನು ತೆಗೆದುಕೊಳ್ಳಬೇಕೆಂದು ಜತೆಯಾಗಿ ಮಾಡಿದರೆಂದು ಇಬ್ಬರು ಹಿಂದೂಗಳೂ, ಜುಲೈ 30ನೇ ತಾರೀಖಿನ ರಾತ್ರಿಯಲ್ಲಿ ದೊಂಬಿ ಮಾಡಿದರೆಂದು 30 ಮಹಮ್ಮದೀಯರೂ ಗುರ್ತು ಹಿಡಿಯಲ್ಪಟ್ಟರು. ಗುರ್ತು ಹಿಡಿಯಲ್ಪಟ್ಟವರು ತಮ್ಮ ಸ್ವಂತ ಭರವಸೆಯ ಮೇಲೆ ಹೇಳಿಕಳುಹಿಸಿದಾಗ ಕೋರ್ಟಿಗೆ ಬರುವುದಾಗ್ಯ ಮನೆಗೆ ಹೋದರು. ಜನಗಳನ್ನು ಕಳ್ಳಿರಿಸಿದ್ದ ಬಗ್ಗೆ ಬಹಳ ಅಪವಾದವಿರುವುದು.

Printed and published by P. R. Ramaiya, at Sri Rama Press, D. Subbiah Road, Mysore.

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ಸಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಶನಿವಾರ ೧೩ ನೇ ಅಕ್ಟೋಬರ್, ೧೯೨೮

ತಾಯಿನಾಡು
13 10-1928

ಹಿಂದೂ ಮಹಾಸಭೆ.

ಶಿಥಿಲವಾಗಿರುವ ಹಿಂದೂ ಸಮಾಜವನ್ನು ಸುದೃಢಪಡಿಸುವದಕ್ಕೋಸ್ಕರ ಹಿಂದೂ ಮಹಾ ಸಭೆಯೊಂದನ್ನು ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನವು ನಡೆಯುತ್ತಲಿರುವುದು. ಈ ಪ್ರಯತ್ನವು ಸಾಧುವಾದುದು. ಹಿಂದೂ ನಾಗರೀಕತೆಯು ಅನಾದಿಯಾದುದು. ಅಪಾಂಷೇಯವಾದುದು. ಈ ನಾಗರೀಕತೆ [illegible] ಸಂಸ್ಕೃತಿಯನ್ನೂ ಕಾಪಾಡುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯ. ಇತರ ಧರ್ಮೀಯರು ತಮ್ಮ ಸಮಾಜವನ್ನು ಅಚ್ಚುಕಟ್ಟು ಮಾಡುತ್ತಿರುವರು. ಮ[illegible]ಸ್ತರೂ ತಮ್ಮ ಸಮಾಜಗಳನ್ನು ಹುರಿದುಂಬಿಸುತ್ತಲಿರುವರು. [illegible] ತಮ್ಮ ಶಕ್ತಿಯು ದಿನದಿನಕ್ಕೆ ಕಡಮೆಯಾಗುತ್ತಿದ್ದರೂ ಅಲ [illegible] ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮಹಾಸಭೆಯು ಸ್ಥಾಪ[illegible]ಟ್ಟಿಗೆ ಹಿಂದುಗಳಲ್ಲಿ ಲವಲವಿಕೆಯನ್ನು ಉಂಟುಮಾಡಿದೆ. ಪಂ[illegible]ಲವಿಯರವರೂ, ಡಾ|| ಮೂಂಜೆಯವರೂ ಲಾಲಾ ಲಜಪತ್ ರಾಯರೂ ಇನ್ನೂ ಇತರರೂ ಹಿಂದೂ ಮಹಾ ಸಭೆಗೆ ಧ್ವಜಸ್ತಂಭದಂತೆ ಒತ್ತಾಸೆಯಾಗಿ ಕೆಲಸ ಮಾಡುತ್ತಿರುವರು. ಅವರುಗಳು ಹಾಕಿರುವ ಮೇಲ್ಪಂಕ್ತಿಯನ್ನು ಮೈಸೂರಿನಲ್ಲಿ ನಾವೂ ಅನುಸರಿಸಬೇಕು. ಹಿಂದೂ ಸಮಾಜದಲ್ಲಿ ನೆಲಸಿರುವ ಅನೇಕ ವೈಷಮ್ಯಗಳು ತೊಲಗುವುದಕ್ಕೆ ಹಿಂದೂ ಮಹಾ ಸಭೆಯ ಚಳವಳಿಯೆ ಮುಖ್ಯವಾದ ಸಾಧಕವಾಗುವುದು. ಈ ವಿಷಯವಾಗಿ ನಮ್ಮ ಸಂಸ್ಥಾನದ ಹಿಂದೂ [illegible] ಕೆಲಸವನ್ನು ನಡೆಸುವರೆಂದು ನಂಬುತ್ತೇವೆ.

ಜಾತಿದ್ವೇಷ.

ನಮ್ಮ ಸಂಸ್ಥಾನದ ಕೆಲವು ಪತ್ರಿಕೆಗಳು ಒಂದು ಬ್ರಾಹ್ಮಣ ಸಮಾಜವನ್ನು ವಾಚಾಮಗೋಚರವಾಗಿ ಮನಸ್ಸಿಗೆ ತೋರಿದಂತೆ ಲಂಗು ಲಗಾಮುಗಳಿಲ್ಲದೆ [illegible] ಈ [illegible] ನೀತಿಯಾಗಲೀ ರೀತಿಯಾಗಲೀ ಇಲ್ಲ. [illegible] ಕೆಲವು ವ್ಯಕ್ತಿಗಳಲ್ಲಿ ಕಂಟಕಗಳಿರಬಹುದು. ಯಾವ [illegible] ಬ್ರಾಹ್ಮಣರು [illegible] ಮನೆಗಳಲ್ಲಿ ಇರುತ್ತಾರೆ. [illegible] ಅನುಭವಿಸುತ್ತಿದಾರೆ, ಎಂಬುದಾಗಿ ಬರೆಯುವುದು ಬಹಳ ಅಲ್ಪತನ. ವಾಸ್ತವ್ಯವಾಗಿ ಬ್ರಾಹ್ಮಣರು ಇತರ ಎಲ್ಲಾ ಸಮಾಜದ ಅವಲಂಬನದಿಂದಲೂ ಜೀವಿಸುತ್ತಿರುವರು. ಇವರಲ್ಲಿ ಬಡತನವೇ ಜಾಸ್ತಿ, [illegible] ಸಂಖ್ಯೆಯಲ್ಲಿ ಬ್ರಾಹ್ಮಣರು ಇಲ್ಲ. [illegible] ಎಲ್ಲರೂ ಅಧಿಕವಾಗಿ [illegible]ಲ್ಲಿ ಇರುವರು. ಬ್ರಾಹ್ಮಣರ ಪಾಲಿಗೆ ಲೇಖಣಿಯನ್ನು ಓಡಿ[illegible]ನಿಕೆಯೊಂದು ಇತ್ತು. ಈಗ ಅದೂ ಅವರ ಕೈಯಿಂದ ಹೋಗುತ್ತಿರುವುದು. ಇಂಥಾದ್ದರಲ್ಲಿ ಬ್ರಾಹ್ಮಣರ ಮೇಲೆ ಕರುಬಿದರೆ ಏನು ಪ್ರಯೋಜನ? [illegible] ಬ್ರಾಹ್ಮಣೇತರರೂ ಬಾಳಲಿ. [illegible] ಇಲ್ಲ. ಆದರೆ ಈ ಹೊಟ್ಟೇಕಿಚ್ಚಿನ ಜಗಳ [illegible] ಸೂರೆಗೊಂಡು ದೇವಲೋಕದ [illegible] ಈ ಲೋಕದಲ್ಲಿಯೇ ಅನುಭವಿಸುತ್ತಿದಾರೆ. ಒಂದು ಲಕ್ಷ ಅಂ[illegible] ವೈಭವವು ಹಿಂದೂಗಳಿಗೆ ಯಾರಲ್ಲಿಯೂ ಇಲ್ಲ. [illegible] ಮೇಲೆ ಕರುಬುವವರು ಆಲೋಚಿಸುವುದು ಮೇಲು. [illegible] ಪ್ರಲಾಪಗಳಿಂದ ಉದ್ರೇಕವಾಗುವುದೇ ಹೊರತು [illegible] ಸರ್ಕಾರದವರು ಈ ಉದ್ರೇಕದ ಬರವಣಿಗೆಗಳಿಗೆ ಅವಕಾಶವನ್ನು ಕೊಟ್ಟು ಪ್ರೋತ್ಸಾಹ ರೂಪವಾಗಿ ಆ ಪತ್ರಿಕೆಗಳಿಗೆ ಬೇಕಾದ ಒತ್ತಾಸೆಯನ್ನು ಮಾಡುತ್ತಿರುವುದು ಆಶ್ಚರ್ಯ. ಬ್ರಾಹ್ಮಣ ಪತ್ರಿಕೆಗಳ ಮೇಲೆ ದಬ್ಬಾಳಿಕೆಯನ್ನು ಮಾಡಿ ಮನಸ್ವೀ ಬ್ರಾಹ್ಮಣರನ್ನು ಬಯ್ಯುವ ಪತ್ರಿಕೆಗಳಿಗೆ ಪ್ರೋತ್ಸಾಹಗಳನ್ನು ಕೊಡುತ್ತಿರುವುದನ್ನು ನೋಡಿದರೆ ಸರ್ಕಾರದವರ ನೀತಿಯೂ ಆ [illegible] ನೀತಿಯೂ ಒಂದೇ ಆಗಿರುವಹಾಗೆ ಕಾಣುತ್ತದೆ. ಬ್ರಾಹ್ಮಣರು ತ[illegible] ಕಳೆದುಕೊಳ್ಳದೆ ಸ್ಥಿತಪ್ರಜ್ಞರಾಗಿ ಎಂಥಿನಿಂದಲೂ ಅವರ [illegible] ಯಲ್ಲಿ ನಿರತರಾಗಿಯೇ ಇರುವರೆಂದು [illegible]

ಅಬ್ದುಲ್ ರಹಿಮಾನ್‌ರವರ ಕೈಫಿಯತ್ತು.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಅಬ್ದುಲ್ ರಹಮಾನರವರ ಕೈಫಿಯತ್ತು ಮನೋರಂಜಕವಾಗಿರುವುದು. ಈಗಿನ ಗಲಾಟೆಯೆಲ್ಲಾ ಒಂದು ಗುಪ್ತಸಂಘದ ಚಳವಳಿಗೆ ಸೇರಿದುದು ಎಂದೂ, ಆ ಗುಪ್ತಸಂಘವು 1881 ರಿಂದ ಕೆಲಸಮಾಡಲು ಆರಂಭಿಸಿತೆಂದೂ ಕಾಲಾನುಗುಣ್ಯವಾಗಿ ಹೊಸಹೊಸ ಜನಗಳೂ ಹೊಸಹೊಸ ಕಾರ್ಯಕ್ರಮಗಳೂ ಏರ್ಪಟ್ಟವೆಂದೂ ಮೊದಲು ಮದ್ರಾಸಿ, ಮೈಸೂರಿಯನ್ ಚಳುವಳಿಯಾಗಿದ್ದು ಕ್ರಮೇಣ ಬ್ರಾಹ್ಮಣ ಬ್ರಾಹ್ಮಣೇತರ ಚಳವಳಿಗೆ ತಿರುಗಿತೆಂದೂ ಈಗಿನ ದಿವಾನರಾದ ಮಿರ್ಜಾರವರ ಉತ್ಕರ್ಷೆಯನ್ನು ಸಹಿಸಲಾರದೆ ಅನೇಕರು ಅವರಿಗೂ ಸರ್ಕಾರಕ್ಕೂ ಕೆಟ್ಟಹೆಸರನ್ನು ತರುತ್ತಿರುವರೆಂದೂ ಹೇಳಿದರು.

ಈ ಸಂದರ್ಭದಲ್ಲಿ ಮಿಲ್ಲರ್ ಕಮಿಟಿಯ ಪ್ರಸ್ತಾಪವು ಬಂದು ಅಧ್ಯಕ್ಷರು ಹೇಳಿದ್ದೇನೆಂದರೆ ಮಿಲ್ಲರ್ ಕಮಿಟಿಗೆ ನಾನು ಜವಾಬ್ದಾರನಲ್ಲ. ಕಮಿಟಿಯನ್ನು ನೇಮಿಸುವ ಆರ್ಡರು ನನ್ನ ಕಾಲದಲ್ಲಿ ಮಾಡಿದ್ದಾದರೂ ಆ ಕಮಿಟಿಯ ರಿಪೋರ್ಟಿನ ಮೇಲಿನ ಆರ್ಡರಿಗೆ ನಾನು ಜವಾಬ್ದಾರನಲ್ಲ. ಅಬ್ದುಲ್ ರೈಹಿಮಾನರು ಮಹಮದೀಯರಿಗೂ ಈಗಿನ ಗಲಾಟೆಗೂ ಯಾವ ಸಂಬಂಧವೂ ಇಲ್ಲವೆಂದೂ ಮಹಮ್ಮದೀಯರು ಬಹಳ ಸಾಧುಗಳೆಂದೂ ಅಭಿಪ್ರಾಯ ಕೊಟ್ಟರು.

ಸರ್ಕಾರದಲ್ಲಿ ಅಸಹಕಾರ.

ಒಂದು ಪತ್ರಿಕೆಯು ಸರ್ಕಾರದೊಳಗೆ ಅಸಹಕಾರವು ವ್ಯಾಪಿಸಿರುವುದೆಂದೂ ಕೆಲವು ಅಧಿಕಾರಿಗಳು ದಿವಾನರೊಂದಿಗೆ ಸಹಕಾರ ಮಾಡುತ್ತಿಲ್ಲವೆಂದೂ ಅವರಿಗೆ ಸರಿಯಾದ ಸಲಹೆಗಳನ್ನು ಕೊಡದೆ ಅವರಿಂದ ಅವಸರವಾದ ಮತ್ತು ಅವಿವೇಕದ ಕೆಲಸಗಳನ್ನು ಮಾಡಿಸಿ ಅವರಿಗೆ ಕೆಟ್ಟ ಹೆಸರನ್ನು ತರುತ್ತಿರುವರೆಂದೂ ಬರೆದಿರುವುದು. ಇದರ [illegible] ಪರೀಕ್ಷಿಸಬೇಕು. ಇದೊಂದು ದೊಡ್ಡ ಅಪಾದನೆ ಸರ್ಕಾರದವರು ಇದನ್ನು ನಿರ್ಲಕ್ಷಿಸಬಾರದು. ಅಸಹಕಾರವು ಯಾವ ಸಮಯದಲ್ಲಿ ಮಾಡಲ್ಪಟ್ಟಿತು? ಯಾವ ಅಧಿಕಾರಿಗಳಿಂದ? ಎಂಬ ಅಂಶಗಳು ಹೊರಬೀಳಬೇಕು. ದಿವಾನರನ್ನು [illegible] ಮಾಡುವುದಕ್ಕಾಗಿ ಈ ರೀತಿಯಾಗಿ ಬರೆದಿದೆಯೋ ಎಂಬ ಈ ಅಂಶಗಳು ಹೊರಬೀಳಬೇಕು. ಆ ಪತ್ರಿಕೆಯಲ್ಲಿ ಬರೆದಿರುವುದು ಸುಳ್ಳಾದರೆ ಅದಕ್ಕೆ ತಕ್ಕ ಬಂದೋಬಸ್ತನ್ನು ಮಾಡಬೇಕು.

ವೀರಕೇಸರಿಯ ಅಭಿಪ್ರಾಯ.

ಪತ್ರಿಕೆಗಳ ಕಾನೂನು ಇರುವುದರಿಂದಲ್ಲವೇ ಸರ್ಕಾರದವರು ಇಷ್ಟೊಂದು ಸುಲಭವಾಗಿ ಪತ್ರಿಕೆಯ ಪರವಾನಗಿಯನ್ನು ರದ್ದುಪಡಿಸುವದಕ್ಕೆ ಅವಕಾಶವಾಯಿತು? ಇನ್ನು ಯಾವ ಪತ್ರಿಕೆಗಳ ಮೇಲೆ ಈ ಬಾಣಪ್ರಯೋಗವಾಗುವದೋ ಎಂಬ ಭಯವು ದೇಶದಲ್ಲೆಲ್ಲಾ ವ್ಯಾಪಿಸಿದೆ.

ಹಿಂದೂ ಮತಕ್ಕೆ ವಾಪಸು.

ಯವತಮಾಳದಲ್ಲಿ ಕಳೆದ ತಾ|| 25 ಕ್ಕೆ 6 ಜನ ಮುಸಲ್ಮಾನರನ್ನು ಸಮಾರಂಭಪೂರ್ವಕವಾಗಿ ಶುದ್ಧಗೊಳಿಸಲಾಯಿತು.

ಸಾಂಗಲಿ ಸಂಸ್ಥಾನದ ಶಿಂಗಾಂವ ಎಂಬಲ್ಲಿ ತಾ|| 2 ನೇ ದಿನ 28 ಕ್ರಿಸ್ಚಿ ಮಾದಿಗರನ್ನು ಮೈಸೂರ ಬ್ರಹ್ಮಚರ್ಯಾಶ್ರಮದವರು ಶುದ್ಧಗೊಳಿಸಿದರು. ಈ ಜಾತಿಯ ಶುದ್ಧಿಕೃತರ ಅಲ್ಲಿಯ ಸಂಖ್ಯೆಯು 125 ಕ್ಕೆ ಏರಿದೆ.

ನಗರ ಜಿಲ್ಲೆಯ ಸಂಗಮನೇರದ ಒಬ್ಬ 16 ವರ್ಷದ ಬ್ರಾಹ್ಮಣ ವಿದ್ಯಾರ್ಥಿಯನ್ನು ಮುಸಲ್ಮಾನರು ಹಿಡಿದು ಧರ್ಮಾಂತರಗೊಳಿಸಿದ್ದರು. ಅವನನ್ನು ಅಲ್ಲಿಂದ ಧೈರ್ಯದಿಂದ ಪಾರುಮಾಡಿ ಪುನಃ ಪ್ರಾಯಶ್ಚಿತ್ತಪೂರ್ವಕವಾಗಿ ಹಿಂದೂ ಧರ್ಮದಲ್ಲಿ ತೆಗೆದುಕೊಳ್ಳಲಾಯಿತು.

ಸಾಂಗಲಿ ಸಂಸ್ಥಾನದ ನಾದ್ರೆ ಎಂಬಲ್ಲಿ 35 ಕ್ರಿಸ್ತರನ್ನು ಶುದ್ಧಗೊಳಿಸಲಾಯಿತು.

ಆಕೋಲೆಯಲ್ಲಿ ಶುದ್ಧಿಕಾರ್ಯಮಂಡಲವು ಸ್ಥಾಪನೆಹೊಂದಿ ಒಬ್ಬ ಪತಿತಸ್ತ್ರೀಯನ್ನು ಶುದ್ಧಗೊಳಿಸಲಾಯಿತು.

ಮಂಗಳೂರಲ್ಲಿ 150 ಪ್ರಧಾನೆ ಗೋಂಡರನ್ನು ಪ್ರಾಯಶ್ಚಿತ್ತ ಪೂರ್ವಕ ಶುದ್ಧಗೊಳಿಸಲಾಯಿತು.

ಭುಸಾವಳ ಆರ್ಯಸಮಾಜದವರು ಕಳೆದ ತಾ|| 31 ಕ್ಕೆ ಹಸನ ಹೈದರ ನರಬ ಮುಸಲ್ಮಾನನನ್ನು ಶುದ್ಧಗೊಳಿಸಿಕೊಂಡರು.

Printed and Published by P. R. Ramaiya, at Sri Rama Press,
D. Subbiah Road, Mysore.

ತಾಯಿನಾಡು.

ಅಮೃತಾಂಜನಡಿಪೋ



ಆತಂಕನಿಗ್ರಹ ಮಾತ್ರೆಗಳನ್ನೇ

Latest Arrivals!

Co.

ತಾಯಿನಾಡು

15 10 -1928

ದಿವಾನರ ಭರವಸೆ.

ದಿವಾನರವರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಖಾಸಗೀ ಬಾತ್ಮೀದಾರರಿಗೆ ಒಂದು ಭೇಟಿಯನ್ನು ಕೊಟ್ಟರು. ಇಬ್ಬರಿಗೂ ಕೆಲವು ಸಂಭಾಷಣೆಗಳು ನಡೆದವು. ದಿವಾನರ ಭಾಷಣದ ಮುಖ್ಯ ಸಾರಾಂಶವೇನೆಂದರೆ—ಬೆಂಗಳೂರಿನಲ್ಲಿ ನಡೆದ ಗಲಭೆಗಳಿಂದ ನಮ್ಮ ಸಂಸ್ಥಾನದಲ್ಲಿ ಜಾತಿದ್ವೇಷದ ಕಲಹಗಳು ಬಹಳ ಪ್ರಬಲವಾಗಿವೆ ಎಂಬ ಭಾವನೆಯು ಉಂಟುಮಾಡಲ್ಪಟ್ಟಿದೆ. ಇದಕ್ಕಾಗಿ ನಾನು ಬಹಳ ವ್ಯಸನಪಡುತ್ತೇನೆ. ಬೆಂಗಳೂರು ಗಲಭೆಗಳನ್ನು ಹಿಂದೂ ಮಹಮ್ಮದೀಯ ಕಲಹಗಳೆಂದು ಕರೆಯುವುದು ಶುದ್ಧ ತಪ್ಪು. ಮೈಸೂರಿನಲ್ಲಿ ಮಹಮ್ಮದೀಯರ ಸಂಖ್ಯೆಯು ಬಹಳ ಕಡಿಮೆ. ಅವರು ಬಹಳ ಅಲ್ಪಸಂಖ್ಯೆಯಲ್ಲಿರುತ್ತಾರೆ. ತಾವು ಹಿಂದೂ ಮಹಾರಾಜರ ಪ್ರಜೆಗಳೆಂಬುದು ಅವರಿಗೆ ಗೊತ್ತುಂಟು. ಅವರು ಹಿಂದುಳಿದಿರುವುದರಿಂದ ಮುಂದರಿಯಲೆಂದು ಶ್ರೀಮನ್ಮಹಾರಾಜರವರು ಅವರಿಗೆ ಒದಗಿಸಿರುವ ಕೆಲವು ವಿಶೇಷ ಸೌಲಭ್ಯಗಳಿಗಾಗಿ ಅವರು ಕೃತಜ್ಞರಾಗಿದ್ದಾರೆ. ಜುಲೈ 30 ನೇ ತಾರೀಖಿನಲ್ಲಿ ಆದ ಗಲಾಟೆಯು ಯಾರೋ ಕೆಲವು ವ್ಯಕ್ತಿಗಳಿಗೆ ಸಂಬಂಧಪಟ್ಟುದು. ನಾನು ಮಹಮ್ಮದೀಯನೆಂದೂ, ವ್ಯಕ್ತಿಶಃ ಅನೇಕರಿಗೆ ನನ್ನಲ್ಲಿ ದ್ವೇಷವಿದೆಯೆಂದೂ, ಹೇಳುವುದು ಶುದ್ಧ ಸುಳ್ಳು. ನನ್ನ ಮೇಲೆ ಬ್ರಾಹ್ಮಣರು ಪಿತೂರಿ ಮಾಡುತ್ತಾರೆಂದು ನಾನು ನಂಬುವುದಿಲ್ಲ. ವಾಸ್ತವ್ಯವಾಗಿ ಇತರ ಜಾತಿಯವರಿ[illegible] ನನಗೆ ಬ್ರಾಹ್ಮಣರಲ್ಲಿಯೇ ಹೆಚ್ಚು ಸ್ನೇಹಿತರಿರುತ್ತಾರೆ. ನನ್ನ ಆಡಳಿತ, ನನ್ನ [illegible] ನೀತಿಗಳು [illegible] ನಾನೇ ಮೈಸೂರು ಸರ್ಕಾರವಲ್ಲ [illegible] ತಿಳಿಸುತ್ತೇನೆ. ಶ್ರೀಮನ್ಮಹಾರಾಜರೇ ಖುದ್ದಾಗಿ ಅನೇಕ ವಿಷಯಗಳಿಗೆ ತಮ್ಮ ಗಮನವನ್ನು ಕೊಡುತ್ತಾರೆ. ಎಕ್ಸಿಕ್ಯುಟೀವ್ ಕೌನ್ಸಿಲರ್‌ಗಳಿದ್ದಾರೆ. ದೊಡ್ಡದೊಡ್ಡ ಅಧಿಕಾರಿಗಳಿದ್ದಾರೆ. ಇವರಲ್ಲಿ ಅನೇಕರು ಬ್ರಾಹ್ಮಣರು. ಅವರ [illegible] ಸಾಮರ್ಥ್ಯವೂ ಎಲ್ಲರಿಗೂ ತಿಳಿದ ವಿಷಯ. ಬ್ರಾಹ್ಮಣರು ಬ್ರಾಹ್ಮಣ ಅಧಿಕಾರಿಗಳ ಮೇಲೆ ಇಟ್ಟಿರುವ ವಿಶ್ವಾಸಕ್ಕಿಂತ ಹೆಚ್ಚಾಗಿ ನನ್ನ ಮೇಲೆ [illegible] ವಿಶ್ವಾಸವನ್ನಿಟ್ಟಿದ್ದಾರೆ. ನಾನು ಪ್ರೈವೇಟ್ ಸೆಕ್ರಿಟರಿಯಾಗಿ [illegible] ಇದೇ ಸ್ಥಿತಿಗತಿಯು ಇತ್ತು. ನಾನು ದಿವಾನನಾಗಿರುವಾಗಲೂ ಇದೇ ಸ್ಥಿತಿ[illegible]ವುದು. ಪ್ರಶ್ನೆ—ಸರ್ಕಾರದವರು ತಪ್ಪು ಮಾಡಿದವರನ್ನು ಇ[illegible] ಶಿಕ್ಷೆಯೇ ಇಲ್ಲ ಎಂಬ ಅಪವಾದನೆ ಇರುವುದು. ಅದಕ್ಕೆ ನಿಮ್ಮ ಉತ್ತರವೇನು. ಉತ್ತರ— ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ವರದಿಯನ್ನು ಸರ್ಕಾರದವರು [illegible] ಅದು ಬಂದಕೂಡಲೆ ಮುಂದಿನ ಕ್ರಮವನ್ನು [illegible]. ಪ್ರಶ್ನೆ—ಸರ್ಕಾರದವರು ಹೊರಡಿಸಿರುವ ಪ್ರಕಟಣೆಗಳು [illegible] ಉತ್ತರ—ಯಾವ ಒಂದು ಅಧಿಕಾರಿಯೂ [illegible]. ಸರ್ಕಾರದ ಕೆಲವಧಿಕಾರಿಗಳೂ, ಕೆಲವು ಖಾಸಗೀ [illegible] ಮನುಷ್ಯರುಗಳೂ, ಸೇರಿ ತಹಲ್‌ವರೆಗೆ ಗೊತ್ತಿದ್ದ ಸಮಾಚಾರಗಳನ್ನು ತಿಳಿಸಿದರು. ಉದ್ದೇಶಪೂರ್ವಕವಾಗಿ ಯಾರೂ ಸುಳ್ಳನ್ನು ಹೇಳುವುದಕ್ಕೆ ಹೋಗಲಿಲ್ಲ.

ಪತ್ರಿಕಾ ಕರ್ತರೂ ಕುದುರೆ ಜೂಜೂ.

ಬೊಂಬಾಯಿನ ಇಂಡಿಯನ್ ಡೇಲಿ ಮೇಲ್ ಪತ್ರಿಕೆಯ ಸಂಪಾದಕರು ಪುಣೆಯಲ್ಲಿ ನಡೆದ ಕುದುರೆ ಜೂಜಿನಲ್ಲಿ ಒಂದು ಕುದುರೆಯು ಓಡಲು ಸರಿಯಾದ ತರ[illegible] ಹೊಂದಿಲ್ಲವೆಂದು ಬರೆದುದಕ್ಕಾಗಿ, ಅದನ್ನು ತರಬೇತುಮಾಡುತ್ತಿದ್ದ ಮುಸಾ[illegible] ಸಂಪಾದಕರ ಮೇಲೆ 10000 ರೂಪಾಯಿಗಳಿಗೆ [illegible]ಕ್ಕಾಗಿ ವ್ಯಾಜ್ಯ ದಾಖಲು ಮಾಡಿರುತ್ತಾನೆ.

[illegible]ಜಪತ್‌ರಾಯರು ಬರೆದಿರುವ ಅನ್ ಹ್ಯಾಪಿ ಇಂಡಿಯಾ ಎಂಬ ಪುಸ್ತಕದಲ್ಲಿ ಒಂದು ಕಡೆ ಹೀಗೆ ಬರೆದಿರುವರು. ಫ್ರಾನ್ಸಿನ ಲಾಯನ್ ಪಟ್ಟಣದಲ್ಲಿ 550000 ಜನಸಂಖ್ಯೆಯಿದೆ. ಇಲ್ಲಿ ಪ್ರತಿವರ್ಷವೂ 10 ಸಾವಿರ ಗರ್ಭಗಳು ತೆಗೆಯಲ್ಪಡುತ್ತಲಿವೆ. ಹುಟ್ಟುವ ಕೂಸುಗಳ ಸಂಖ್ಯೆ 8—9 ಸಾವಿರ! ಫ್ರಾನ್ಸ್ ದೇಶದಲ್ಲಿ 275000 ಗರ್ಭಗಳು ತೆಗೆಯಲ್ಪಡುವುವಂತೆ! ಅಲ್ಲಿ ಜನನಕ್ಕಿಂತ ಗರ್ಭಪಾತವೇ ಹೆಚ್ಚಾಗುತ್ತಿರುವುದೆಂದು ಡಾ|| ಪಾಲ್ ರವರ ಹೇಳಿಕೆ. ಕೃತ್ರಿಮ ಸಂತತಿ ನಿಯಮದ ಮೃತ್ಯುವು ಎಷ್ಟು ಮಕ್ಕಳ ಜೀವವನ್ನು ನುಂಗುತ್ತಿದೆ ನೋಡಿ [illegible] ನಾಗರಿಕತೆ!

ವೆಂಕಟಪತಯ್ಯನವರ ಸಾಕ್ಷ್ಯ

ಬೆಂಗಳೂರು ಸಿಟಿ ಹಿಂದೂ ಮಾಡರ್ನ್ ಹೋಟೇಲ್‌ನಲ್ಲಿ ದುರ್ಮಸಲತ್ತು ನಡೆಸಿದವನು ನಾನೊಬ್ಬನೇ. ಇತರರು ಯಾರೂ ಇಲ್ಲ. ಅನ್ಯಾಯದಿಂದ ಪೀಡಿತರಾಗಿದ್ದವರಿಗೆ ನ್ಯಾಯವನ್ನು ದೊರಕಿಸುವಂತೆ ಪ್ರಯತ್ನಮಾಡಿದುದೇ ನನ್ನ ದುರ್ಮಸಲತ್ತು.

ಖಾಸಗೀ ಕಾರಣಗಳು.

ಅಬ್ಬಾಸ್‌ಖಾನರ ಮನೆಯ ಹಿಂದೆ ಇರುವ ಮಸೀತಿಯನ್ನು ಪೂರ್ವ ದಿಕ್ಕಿನಲ್ಲಿ ಆರ್ಕಾಟ್ ಶ್ರೀನಿವಾಸಚಾರ್ಯರ ಬೀದಿಗೆ ಸೇರಿಸಬೇಕೆಂಬುದು ಅಬ್ಬಾಸ್‌ಖಾನರ ಇಚ್ಛೆ. ಅದಕ್ಕಾಗಿ ಅವರ ಮೋಟಾರ್ ಗ್ಯಾರೇಜಿನ ಗೋಡೆಯನ್ನು ಒಡೆಯುವುದೊಂದು ಪ್ಲ್ಯಾನು. ಮಸೀತಿಗೆ ಎದುರಾಗಿಯೇ ಗಣಪತಿಯ ವಿಗ್ರಹವಿರುವುದು. ಆ ವಿಗ್ರಹವನ್ನು ತೆಗೆದುಹಾಕುವುದಕ್ಕಾಗಿ ಒಂದು ಕುಯುಕ್ತಿಯು ಹೂಡಲ್ಪಟ್ಟಿತು. ಮಂಟಪವನ್ನು ಕಟ್ಟುವುದಕ್ಕಾಗಿ ಗಣಪತಿಯನ್ನು ಕದಲಿಸಿದಾಗಲೇ ಸಮಯವು ಸಿಕ್ಕಿತು. 15-6-28 ರಲ್ಲಿ ವಿದ್ಯಾಭ್ಯಾಸದ ಡೈರಕ್ಟರವರು ಸ್ಕೂಲಿಗೆ ಬಂದು ಅವಸರದ ಭೇಟಿಯನ್ನು ಕೊಟ್ಟು ಗಣಪತಿಯನ್ನು ಮಂಟಪದಲ್ಲಿ ಇಡಿಸಕೂಡದೆಂದು ಅಪ್ಪಣೆ ಮಾಡಿದರು. ಹಿಂದೂ ಹುಡುಗರ ಧರ್ಮ ಸ್ವಾತಂತ್ರ್ಯದಲ್ಲಿ ಸರ್ಕಾರದವರು ಕೈ ಹಾಕಿದಂತಾಯಿತು. ಪುನಃ ಜುಲೈ 29 ರಲ್ಲಿ ಗಣಪತಿಯು ಪುನಸ್ಥಾಪನೆಯಾದಮೇಲೆ ಕೆಲವು ಮಹಮ್ಮದೀಯರಿಗೆ ಉದ್ರೇಕವಾಯಿತು. ಕಾನೂನನ್ನು ಅವರು ತಮ್ಮ ಕೈಗೇ ತೆಗೆದುಕೊಂಡರು. ಜುಲೈ 29 ನೇ ತಾರೀಖಿನ ರಾತ್ರಿ ಗಣಪತಿಯು ವಿಗ್ರಹವನ್ನು ಅಪಹರಿಸುವ ಪ್ರಯತ್ನ ಮಾಡಲ್ಪಟ್ಟಿತು. ಆದರೆ ಸತ್ಯಾಗ್ರಹಿಗಳು ರಾತ್ರಿಯೆಲ್ಲಾ ಅಲ್ಲೇ ಇದ್ದುದ್ದರಿಂದ ಅಪಹರಿಸಬೇಕೆಂದಿದ್ದವರ ಪ್ರಯತ್ನವು ನಡೆಯಲಿಲ್ಲ. ಜುಲೈ 30 ನೇ ತಾರೀಖಿನ ರಾತ್ರಿ ಗಣಪತಿಯನ್ನು ಅಪಹರಿಸಬೇಕೆಂದು ಉರ್ದು ಹಸ್ತ ಪತ್ರಿಕೆಗಳು ಹಂಚಲ್ಪಟ್ಟವು. ಮೂವರು ಮುಖಂಡರನ್ನು ಬಿಡುಗಡೆ ಮಾಡಿದ್ದು ಅನಿರೀಕ್ಷಿತವಾದದ್ದು. ಮಹಮ್ಮದೀಯರ ಉದ್ರೇಕವು ಉಕ್ಕೇರಿತು. ಗಣಪತಿಯ ಮಂಗಳಾರತಿಯಾಗಿ ಹೆಚ್ಚು ಜನಗಳು ಹೊರಟುಹೋದ ಮೇಲೆ ಗಲಾಟೆಗೆ ಆರಂಭವಾಯಿತು.

ದೀನ್‌ದಾರನ ಚಳವಳಿ.

ದೀನ್‌ದಾರ್‌ಸಿದ್ದಿಕ್ ಚನ್ನಬಸವೇಶ್ವರನು ಹಿಂದೂ ಮತವನ್ನು ಹಿಯ್ಯಾಳಿಸಿ ಕರ್ನಾಟಕದಲ್ಲೆಲ್ಲಾ ಚಳವಳಿಯನ್ನು ನಡೆಸುತ್ತಿದ್ದಾನೆ. ಬ್ರಿಟಿಷ್ ಕರ್ನಾಟಕದಿಂದ ಅವನಿಗೆ ಉಚ್ಚಾಟನೆಯಾಯಿತು, ತುಮಕೂರಿನಲ್ಲಿ ಅವನು ಭಾಷಣಮಾಡಕೂಡದೆಂದು ಅಪ್ಪಣೆಯು ಕೊಡಲ್ಪಟ್ಟಿತು. ಅವನ ಚಳವಳಿಯಿಂದ ಮಹಮ್ಮದೀಯರಿಗೆ ಹಿಂದೂಗಳ ಮೇಲೆ ಉದ್ರೇಕವಾಗಿರುವುದು.

ಆಗಸ್ಟ್ 3 ನೇ ತಾರೀಖಿನ ಸಮ್ಮೇಳನ.

ಆಗಸ್ಟ್ 3 ನೇ ತಾರೀಖಿನ ಶಾಂತಿಸಮ್ಮೇಳನವು ಫಲಕಾರಿಯಾಗಲಿಲ್ಲ. ಅಬ್ಬಾಸ್‌ಖಾನರವರು ಬ್ರಾಹ್ಮಣರನ್ನೂ ಬ್ರಾಹ್ಮಣ ಅಧಿಕಾರಿಗಳನ್ನೂ ಮನಸ್ಸಿಗೆ ಬಯ್ಯುತ್ತಿದ್ದರೂ ಅಧ್ಯಕ್ಷರಾದ ದಿವಾನರವರು ಅವರನ್ನು ತಡೆಯದೇ ಇದ್ದುದೇ ಶಾಂತಿಸ್ಥಾಪನೆಗೆ ಅಡಚಣೆಯಾಯಿತು.

ಪರದೆಯಲ್ಲಿನ ಸಾಕ್ಷಿಗಳು.

ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಅಬ್ಬಾಸ್‌ಖಾನರ ಕಡೆ ಸಾಕ್ಷಿಗಳೆಲ್ಲರೂ ಪರದೆಯಲ್ಲೇ ಕೈಫಿಯತ್ತನ್ನು ಕೊಟ್ಟರು. ಕ್ಯಾಪ್ಟನ್ ವೈ. ವಿ. ಅಯ್ಯ ಮೊದಲಾದವರು ಈ ಸಾಕ್ಷಿಗಳನ್ನು ತಂದರು.

7-8-28 ರಲ್ಲಿ ಅಬ್ಬಾಸ್‌ಖಾನರು ತಮ್ಮ ಪರವಾಗಿ ಆಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಕೈಫಿಯತ್ತು ಕೊಡುವದಕ್ಕೆ ಇನ್ನೂರು ಸಾಕ್ಷಿಗಳನ್ನು ಕರೆತರಬೇಕೆಂದಿದ್ದರು. ಆದರೆ ಅವತ್ತಿನ ದಿವಸ ಅವರ ಮನೆ ಮಹಜರಾಯಿತು

ಅಬ್ಬಾಸ್‌ಖಾನರ ಕಡೆ ಸಾಕ್ಷಿಗಳು.

ಅನೇಕ ಹಿಂದುಗಳು ಅಬ್ಬಾಸ್‌ಖಾನರ ಕಡೆ ಸಾಕ್ಷಿ ಕೊಟ್ಟರು. ಇವರಿಗೆಲ್ಲಾ ಮಾರ್ಕೆಟ್ಟಿನ ಮಹಡಿಮೇಲೆ ಸವಿಸ್ತಾರವಾಗಿ ಫಲಾಹಾರ, ಕಾಫಿ ನೊದಲಾದವುಗಳು ಕೊಡಲ್ಪಟ್ಟವು. ಇವರುಗಳ ಫೋಟೋಗಳು ತೆಗೆದುಕೊಳ್ಳಲ್ಪಟ್ಟವೆ.

ನನಗೆ ಪ್ರಾಣಭಯ.

ಆಗಸ್ಟ್ 30 ನೇ ತಾ|| ನ ದಿವಸ ನಾನು ಶಾಂತಿಸಮ್ಮೇಳನಕ್ಕೆ ಹೋಗುತ್ತಿದ್ದಾಗ ನನಗೆ ಒಂದು ಅನಾಮಧೇಯಕಾಗದವು ಬಂದಿತು. ಸ್ವಾಮಿ ಶ್ರದ್ಧಾನಂದರಿಗೆ ಆದ ಗತಿಯು ನನಗೂ ಆಗುವುದೆಂದು ಬರೆಯಲ್ಪಟ್ಟಿತ್ತು.

Printed and published by P. R. Ramaiya, at Sri Rama Press, D. Subbiah Road, Mysore.

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುತ್ತದೆ.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { ವರ್ಷಕ್ಕೆ ೫-೦-೦ / ವಿದೇಶಗಳಿಗೆ ರೂ ೧೧

ಸಂಪುಟ ೧] ಮಂಗಳವಾರ ೧೬ ಅಕ್ಟೋಬರ್, ೧೯೨೮ [ಸಂಚಿಕೆ ೨೦

ತಾಯಿನಾಡು

16—10—1928

ನವರಾತ್ರಿ ಉತ್ಸವ

ಈ ವರ್ಷದ ನವರಾತ್ರಿ ಉತ್ಸವವು ಸುಮುಖವಾಗಿ ಆರಂಭವಾಗಿರುವುದು. ಬಹಳ ದಿವಸಗಳಿಂದಲೂ ಮಳೆ ಇಲ್ಲದ್ದು ಮಳೆಯು ಬಂದು ದಾರುಣವು ಕಡಿಮೆಯಾಯಿತು. ಎಲ್ಲೆಲ್ಲಿಯೂ ತಂಪು ಉಂಟಾಯಿತು. ದೊಡ್ಡಕೆರೆಯೆಲ್ಲವೂ ಬರಿದಾಗಿ ಹಾಳಾಗಿದ್ದುದು ಮಳೆಯ ನೀರಿನಿಂದ ತುಂಬಿಕೊಂಡಿತು. ಇದರಿಂದ ಪಟ್ಟಣದವ[illegible] ಉಪಕಾರವಾಯಿತು. ಇನ್ನೊಂದು ದೊಡ್ಡ ಕೊರತೆ ಇರುವುದು ನವರಾತ್ರಿ ಉತ್ಸವಕ್ಕಾಗಿ ನಮ್ಮ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ರೈತರು ಬರುವರು. ಅವರು ನಿಲ್ಲುವುದಕ್ಕೆ ನೆಲೆ ಇಲ್ಲದೆ ಬಿಸಿಲಿನಲ್ಲಿಯೂ ಮಳೆಯಲ್ಲಿಯೂ [illegible]. ಅವರುಗಳಿಗೆಲ್ಲಾ ನೆಲೆಯಾಗಿರುವಂತೆ ಏನಾದರೂ ಒಂದು [illegible] ನಮಗೆ ತೋರುತ್ತದೆ. ಸರ್ಕಾರದವ[illegible] ಮ್ಯುನಿಸಿಪಾಲಿಟಿಯವರೂ ಈ ವಿಷಯಕ್ಕೆ ಗಮನ ಕೊಡುವರೆಂದು ನಂಬುತ್ತೇವೆ.

ವೆಂಕಟಪತಯ್ಯನವರ ಸಾಕ್ಷ್ಯ

([illegible])

[illegible] ಗಲಭೆ ಸಂಗತಿಗಳನ್ನೆಲ್ಲಾ ವಿಚಾರಣೆಮಾಡುವುದಕ್ಕಾಗಿ [illegible] ಜನಗಳದೇ ಒಂದು ಕಮಿಟಿಯಾಗಬೇಕೆಂದು ನನ್ನ ಕೋರಿಕೆಯಾಗಿತ್ತು. [illegible] ಆ ಕಮಿಟಿಯಲ್ಲಿ ಇರಬೇಕೆಂದು ನನ್ನ ಅಭಿಪ್ರಾಯವಿತ್ತು.

[illegible] ಲೈಸೆನ್ಸು

[illegible] ತಾರೀಖಿನಲ್ಲಿ ನನ್ನ ಆತ್ಮಸಂರಕ್ಷಣೆಗಾಗಿ [illegible] ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿಹಾಕಿಕೊಂಡೆ [illegible] ಲೈಸೆನ್ಸು ಕೊಡುವುದಕ್ಕಾಗುವುದಿಲ್ಲವೆಂದ [illegible].

[illegible] ಮಾರ್ಗಗಳು:—

[illegible] ಕೊಟ್ಟ ಸಲಹೆಗಳು ಯಾವು [illegible] ಮಾಡಬೇಕು. (2) ದೀರ್ಘ [illegible] ಮಾಡಬೇಕು. ಅವನ ಬರವಣಿಗೆಗಳ [illegible] ಸರ್ಕಾರದವರು [illegible] ಬೇಕು. (3) ಜಾತಿ ಪ್ರಾ[illegible] ಸಂಘಗಳು [illegible] ಬೇಕು. [illegible] ಬೇರೆ [illegible] ಬಿಡಬೇಕು. [illegible] ವೀರರ ಮತ್ತು ಮಹಾತ್ಮರ ಕಥೆಗ[illegible] ಪುಸ್ತಕದಲ್ಲಿ [illegible] ವೀರರ ಮತ್ತು ಮಹಾತ್ಮರ [illegible] ಬೇಕು.

[illegible] ವ್ಯಭಿಚಾರ

[illegible] ಯವರು ವೆಂಕಟಪತಯ್ಯನವರಿಗೆ ಹಾಕಿದ ಪ್ರಶ್ನೆ.—

ಪ್ರಶ್ನೆ—[illegible] ವ್ಯಭಿಚಾರ ನಡೆದಿದೆಯೆಂದು ನೀವು ಹೇಳಿದಂತಾ[illegible] ಉತ್ತರ—[illegible] 31 ನೇ ಪ್ರಾತಃಕಾಲ ದೊಂಬಿ ನಡೆಸಿದವರನ್ನೆ [illegible] ಮಾಡಬೇಕಾಗಿತ್ತು.

ಅಪಾಯ[illegible] ಮನುಷ್ಯ

[illegible] ಮಂಟಪದ ವಿಷಯದಲ್ಲಿ ಪ್ರಸ್ತಾಪವು ಬಂದು ಆ ಮಂಟಪ[illegible] ಮಹಮ್ಮದೀಯರಿಗೆ ಉದ್ರೇಕವಾಯಿತು. ಇಷ್ಟಕ್ಕೆಲ್ಲಾ [illegible] ಅವನು ಬಹಳ ಅಪಾಯಕರನಾದ ಮನುಷ್ಯ ಎಂದು ಅಧ್ಯಕ್ಷರು ಹೇಳಿದರು. (ಸಭಿಕರ ನಗು)

ವಿದ್ಯಾರ್ಥಿಗಳಿಗೆ ಶಿಕ್ಷೆ

ಶ್ರೀಮನ್ಮಹಾರಾಜರವರಿಗೆ ಕಳುಹಿಸಿದ ವಿಜ್ಞಾಪನಾ ಪತ್ರಿಕೆಗೆ ರುಜು ಹಾಕಿದ್ದ ಕ್ಷ್ಣೀಶ್ವರ ವಿದ್ಯಾಭ್ಯಾಸದ ಡೆಪ್ಯುಟಿ ಡೈರಕ್ಟರಾದ ಡಾ॥ ಪಾಲ್ ಚಿನ್ನ[illegible] ಬೆಂಗಳೂರು ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನ ಆರು ವಿದ್ಯಾರ್ಥಿಗಳನ್ನು [illegible]ಮಿಸ್ ಮಾಡುತ್ತೇವೆಂಬುದಾಗಿ ಹೆದರಿಸಿರುವರು. ಶ್ರೀಮನ್ಮಹಾರಾಜರವರು ಈ ಅನ್ಯಾಯವನ್ನು ತಪ್ಪಿಸಬೇಕೆಂದು ಈವಿನಿಂಗ್ ಮೇಲ್ ಪತ್ರಿಕೆಯು ಪ್ರಾರ್ಥಿಸುತ್ತದೆ.

ಮಿ॥ ನಾಗಪ್ಪನವರಿಗೆ ಹುಷಾರ್!

ಪುಟ್ಟಣ್ಣ ಶೆಟ್ಟರವರ ಕೈಫಿಯತ್ತು ನಡೆಯುತ್ತಿದ್ದಾಗ ಈ ಕೆಳಗಿನ ಪ್ರಶ್ನೋತ್ತರಗಳು ನಡೆದವು. ಪ್ರಶ್ನೆ—ವಿದ್ಯಾರ್ಥಿಗಳು ದಯೆಯಿಂದ ವರ್ತಿಸಲ್ಪಟ್ಟರೆಂದು ನೀವು ಹೇಳುವಿರಾ? ಉತ್ತರ—ಹೌದು ಬಹಳ ದಯೆಯಿಂದ, ಹುಡುಗರೊಡನೆ ಬಹಳ ದಯೆಯಿಂದ ವರ್ತಿಸಬೇಕೆಂದು ಒಂದು ಆರ್ಡರ್ ಕೂಡ ಕೊಡಲ್ಪಟ್ಟಿತ್ತೆಂದು ನಾನು ಕೇಳುತ್ತೇನೆ. ಅಧ್ಯಕ್ಷರು—ಬಾಯಿಮಾತಿನ ಆರ್ಡರು. ನಾಗಪ್ಪನವರು—ಇಲ್ಲ. ಬಾಯಿಮಾತಿನ ಆರ್ಡರೂ ಇಲ್ಲ. ಆರ್ಡರ್‌ಗಳೇ ಕೊಡಲ್ಪಡಲಿಲ್ಲ. ಅಧ್ಯಕ್ಷರು—ನಿಮಗೆ ಸರಿಯಾದ ವಿಷಯವು ಗೊತ್ತಿಲ್ಲದಕ್ಕಾಗಿ ನಾನು ವಿಷಾದಿಸುತ್ತೇನೆ. ಪುಟ್ಟಣ್ಣಶೆಟ್ಟರು—ಆ ರೀತಿಯಾದ ಅಪ್ಪಣೆ ಕೊಡಲ್ಪಟ್ಟಿತ್ತೆಂದು ದೊಡ್ಡ ಮನುಷ್ಯರೊಬ್ಬರು ಹೇಳಿರುತ್ತಾರೆ. ನಾಗಪ್ಪನವರು—ಪೋಲೀಸ್ ಅಧಿಕಾರಿಗಳು ಹಾಗೆ ಹೇಳಲಿಲ್ಲ. ದಿವಾನರ ಮನೆಯಲ್ಲಿ ಮಾತ್ರ ಅರೆಸ್ಟ್ ಮಾಡಕೂಡದೆಂದು ಅಪ್ಪಣೆಯಾಗಿತ್ತು. ಪುಟ್ಟಣ್ಣ ಶೆಟ್ಟರು—ಐ. ಜಿ. ಪಿ. ಯವರೆ ನನಗೆ ಈ ಸಮಾಚಾರವನ್ನು ಹೇಳಿರುವರು. ನಾಗಪ್ಪನವರು—ಇಲ್ಲ. ಅಧ್ಯಕ್ಷರು—ಅವರು ಹಾಗೆ ಹೇಳಿದಾರೆ. ದಿವಾನರ ಬಂಗಲೆಯಲ್ಲಿ ಅರೆಸ್ಟ್ ಮಾಡಕೂಡದೆಂಬುದೇನೋ ದಿವಾನರಿಗೆ ಸಲ್ಲತಕ್ಕದ್ದು. ನಾಗಪ್ಪನವರು—ಐ. ಜಿ. ಪಿ. ಯವರು ಹಾಗೆ ಹೇಳಲ್ಲ. ಅಧ್ಯಕ್ಷರು—ನೀವು ಹೇಳುವ ಮಾತಿನ ನಿಜಾಂಶವನ್ನು ತಿಳಿದುಕೊಳ್ಳುವುದಕ್ಕಿಂತ ಮೊದಲು ಸುಮ್ಮನೆ ವಿರೋಧಿಸಬೇಡಿ.

ಗುಂಡಪ್ಪನವರ ಹೇಳಿಕೆ.

ಪ್ರಶ್ನೆ—ವೃತ್ತಪತ್ರಕಾರರಲ್ಲಿ ಅನೇಕರು ಲಂಚ ತೆಗೆದುಕೊಳ್ಳುವುದಿಲ್ಲವೆ? ಉತ್ತರ—ಹೌದು. ಸರ್ಕಾರದ ನೌಕರರಲ್ಲಿ ಅನೇಕರು ತೆಗೆದುಕೊಳ್ಳುವಂತೆಯೇ. ಪ್ರಶ್ನೆ—ನಿಮ್ಮ ಪತ್ರಿಕೆಯನ್ನು ನೀವೇತಕ್ಕೆ ಹೊರಡಿಸುತ್ತಲಿಲ್ಲ. ಉತ್ತರ—ಈಗಿನ ಸರ್ಕಾರದಲ್ಲಿ ಸಹನೆಯು ಇಲ್ಲ, ಸಹಾನುಭೂತಿಯು ಹಾಗಿರಲಿ. ಪತ್ರಿಕಾ ಕರ್ತರುಗಳಿಗೆ ಚಿತ್ರವಿಚಿತ್ರವಾಗಿ ಕಿರುಕುಳಗಳನ್ನು ಕೊಡುತ್ತಾರೆ.

ಪ್ರಶ್ನೆ—ಹುಡುಗರು ಈಚೀಚೆಗೆ ಅವಿಧೇಯರಾಗುವುದಕ್ಕೆ ಕಾರಣವೇನು? ಉತ್ತರ—ನಾನು ಅದನ್ನು ಅವಿಧೇಯತೆ ಎನ್ನುವುದಿಲ್ಲ. ಈಚೀಚೆಗೆ ಹುಡುಗರಲ್ಲಿ ಒಂದು ಹೊಸ ಹುರುಪು ಬಂದಿದೆ. ನಮ್ಮ ಜೀವನದಲ್ಲಿ ಧರ್ಮ ಭಾವನೆಗಳು ಹೆಚ್ಚಾಗಿ ಹರಡುತ್ತಲಿವೆ. ವಿದ್ಯಾರ್ಥಿಗಳು ಧರ್ಮ ಭಾವದಿಂದ ವರ್ತಿಸಿದರೆ ಅದಕ್ಕೆ ದಂಡಿಸಬಾರದು. ಗುಂಡಪ್ಪನವರು ಇನ್ನೂ ಹೇಳಿದ್ದೇನೆಂದರೆ—ನಮ್ಮ ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಯೂ ಪ್ರತಿನಿಧಿ ಸಭೆಯೂ ಹೇಗೆ ಕೆಲಸ ಮಾಡುತ್ತವೆ ಎಂಬುದು ನಮಗೆ ಗೊತ್ತಾಗುತ್ತದೆ. ಆದರೆ ಎಕ್ಸಿಕ್ಯೂಟಿವ್ ಕೌನ್ಸಿಲ್ ಹೇಗೆ ಕೆಲಸ ಮಾಡುತ್ತಲಿದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ನೇಮಿಸಲ್ಪಟ್ಟ ಕೂಡಲೆ ಪೋಲೀಸಿನವರು ತಮ್ಮ ಪತ್ತೇದಾರದೂದಿನ ಕೆಲಸಗಳನ್ನು ನಿಲ್ಲಿಸಿಬಿಟ್ಟರೆಂದು ಐ. ಜಿ. ಪಿ. ಯವರು ಹೇಳಿದರು. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದಾಗ ಯಾರುಯಾರು ಏನೇನು ಮಾಡಬೇಕೆಂಬುವ ವಿಷಯವಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಐ. ಜಿ. ಪಿ ಯವರ ಮತ್ತು ಲಾ ಸೆಕ್ರೆಟರಿಯವರ ಸಲಹೆಗಳೂ ತೆಗೆದುಕೊಳ್ಳಲ್ಪಟ್ಟವೋ ಗೊತ್ತಿಲ್ಲ. ವೃತ್ತಪತ್ರಿಕೆಗಳು ಸಂಪೂರ್ಣವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕೆಂಬುದು ನನ್ನ ಅಭಿಪ್ರಾಯ.

ಯೂರೋಪಿನ ನಾಗರೀಕತೆ

ಈ ವಿಷಯವಾಗಿ ಲಾಲಾ ಲಜಪುತರಾಯರು ಬರೆದಿರುವ ಅನ್‌ಹ್ಯಾಪಿ ಇಂಡಿಯಾ ಎಂಬ ಪುಸ್ತಕದಲ್ಲಿ ಬರೆದಿರುವ ಕೆಲವು ವಿಷಯಗಳನ್ನು ಕರ್ನಾಟಕ ದುರೀಣ ಪತ್ರಿಕೆಯು ಎತ್ತಿ ಬರೆದಿರುವುದು. ಅದು ಹೇಳುವುದೇನೆಂದರೆ—ಲಂಡನ್ ಪಟ್ಟಣದಲ್ಲಿ ಪ್ರತಿವರ್ಷ ೧೨೨೫೦ ಜನರಿಗೆ ಹೊಸದಾಗಿ ಮೋಹವು ಹಿಡಿಯುತ್ತಿದೆ. ಇಂಗ್ಲಂಡದಲ್ಲಿ ಅವರ ಸಂಖ್ಯೆ ೮ ಲಕ್ಷ. ಇವರಲ್ಲಿ ಫರಂಗಿ ಹಿಡಿದವರು ೧೧೪೦೦೦ ಇದರ ಮೇಲಿಂದ ಇಂಗ್ಲಂಡದಲ್ಲಿ ೩೦ ಲಕ್ಷ ಜನರು ಫರಂಗಿ ಹಿಡಿದವರಿರಬೇಕೆಂದು ವ್ಯಕ್ತವಾಗುತ್ತಿದೆ. ಒಟ್ಟಿಗೆ ನೂರರಲ್ಲಿ ೨೫ ಜನರು ಮೋಹದ ಬಲೆಯಲ್ಲಿ ಸಿಕ್ಕವರೇ ಇರುತ್ತಾರೆ ಎಂದು ಡಾಕ್ಟರರು ಅಭಿಪ್ರಾಯ ಪಡುತ್ತಿರುವರು. ಇದು ಇಂಗ್ಲಂಡದ ಜನರ ನೀತಿಯ ಪ್ರದರ್ಶನ!!

Printed and published by P. R. Ramaiya, at Sri Rama Press, D. Subbiah Road, Mysore.

ವಂದೇ ಮಾತರಂ

ತಾಯಿನಾಡು.

ಪ್ರತಿದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ |

ಸಂಪಾದಕ-
ಪಿ. ಆರ್ ರಾಮಯ್ಯ,
ವಂದೇಮಾತರಂ ಲಾಡ್ಜು, ಮೈಸೂರು.

ಸಂಪುಟ ೧] ಬುಧವಾರ ೧೭ ಅಕ್ಟೋಬರ್, ೧೯೨೮

ತಾಯಿನಾಡು

17 10—1928

ಸವಿಮಾತಿಗೆ ಕಲ್ಲು ಕರಗುವದಿಲ್ಲ.

ದಿವಾನರು ಟೈಂಸ್ ಆಫ್ ಇಂಡಿಯಾ ಪತ್ರಿಕೆಯ ಖಾಸಗೀ ಬಾತ್ಮೀದಾರರಿಗೆ ಕೊಟ್ಟ ಭೇಟಿಯ ಸಾರಾಂಶವನ್ನು ನಾವು ಹಿಂದೆಯೇ ಪ್ರಕಟಿಸಿರುವೆವು. ದಿವಾನರವರು ತಮಗೆ ವಿರೋಧವಾಗಿ ಬ್ರಾಹ್ಮಣ ಪಿತೂರಿ ಇಲ್ಲವೆಂದು ನಂಬಿರುವೆನೆಂದು ಹೇಳುವುದು ಸಂತೋಷಕರವು. ಆದರೆ ಆ ಪಿತೂರಿಯ ಪಿಶಾಚಿಯು ಇಡೀ ದೇಶವನ್ನೆಲ್ಲಾ ಆವರಿಸಿ ತನ್ನ ಕೈಲಾದಷ್ಟು ಘಾತವನ್ನು ಮಾಡಿದಮೇಲೆ ಈಗ 2 ತಿಂಗಳು ಆದ ಮೇಲೆ ಬ್ರಾಹ್ಮಣ ಪಿತೂರಿ ಇಲ್ಲ ಎಂದು ದಿವಾನರು ಹೇಳುವುದು ಬಹಳ ತಾಮಸವೆಂದು ನಾವು ಹೇಳಬೇಕಾಗುತ್ತದೆ. ಇವರು ಹೇಳುವ ಮಾತು ನಿಜವಾಗಿದ್ದ ಪಕ್ಷದಲ್ಲಿ ಆಗಸ್ಟ 3 ನೇ ತಾರೀಖಿನ ದಿವಸ ಅಬ್ಬಾಸ್ ಖಾನರು [illegible] ಬ್ರಾಹ್ಮಣರ ಮೇಲೆ ಅಪವಾದನೆಗಳನ್ನು ಮಾಡಿದಾಗ ಇವರು ಏಕೆ ಸುಮ್ಮನಿದ್ದರು? ಪುನಃ ಆಗಸ್ಟ 20 ನೇ ತಾರೀಖಿನ ದಿವಸ [illegible] ನೆರೆದಾಗ ಈಗ ಹೇಳಿದ ಮಾತನ್ನೇ ಆಗ ಏಕೆ ಹೇಳಲಿಲ್ಲ? ಕೆಲವು ಪತ್ರಿಕೆಗಳು ಬೇಕುಬೇಕೆಂದು ಬ್ರಾಹ್ಮಣರ ಮೇಲೆ ಪ್ರತಿ ನಿತ್ಯದಲ್ಲೂ ವಿಷವನ್ನು ಕಾರುತ್ತಿದ್ದಾಗ ಆ ಪತ್ರಿಕೆಗಳಿಗೆ ಏತಕ್ಕೆ ಸರ್ಕಾರದವರು ವಿಶೇಷವಾಗಿ ಪ್ರೋತ್ಸಾಹವನ್ನು ಕೊಡುತ್ತಲಿರುವರು? ಇದು ಸಮಂಜಸವೇ? ದಿವಾನರನ್ನು ಕಿತ್ತು ಹಾಕಬೇಕೆಂದು ಬ್ರಾಹ್ಮಣರೂ ಬ್ರಾಹ್ಮಣ ಪತ್ರಿಕೆಗಳೂ ಬರೆಯುತ್ತಲಿವೆ ಎಂದು ಇಲ್ಲದ ಸಲ್ಲದ ಅಪವಾದನೆಗಳು ಮಾಡಲ್ಪಟ್ಟಾಗ ದಿವಾನರು ತಾಟಸ್ಥ್ಯಭಾವವನ್ನು ಏತಕ್ಕೆ ವಹಿಸಿದ್ದರು? ನಾನೇ ಸರ್ಕಾರವಲ್ಲವೆಂದು ದಿವಾನರು ಹೇಳಿರುತ್ತಾರೆ. ದಿವಾನರಿಗೂ ಸರ್ಕಾರದ ಇತರ ಮೆಂಬರರಿಗೂ ವ್ಯತ್ಯಾಸವಿಲ್ಲವೆ? ಶ್ರೀಮನ್ಮಹಾರಾಜರವರಿಗೆ ಇವರೇ ಪ್ರಧಾನರಲ್ಲವ? ಸರ್ಕಾರದ ಮುಖ್ಯ ಸೂತ್ರಗಳು ಇರುವುದು ಇವರ ಕೈಯಲ್ಲಿಯಲ್ಲವೇ? ಈಗಿನ ಸರ್ಕಾರದ ತಪ್ಪುಗಳಿಗೆ ಇತರರ ಜವಾಬ್ದಾರಿಗಿಂತಲೂ ಇವರದು ಹೆಚ್ಚಿಲ್ಲವೇ? ಸರ್ಕಾರದ ತಪ್ಪುಗಳಿಗೆ ಮಹಾರಾಜರು ಎಂದಿಗಾದರೂ ಜವಾಬ್ದಾರರಾಗುವರೇ? ವಿಶಿಷ್ಟ ಆಡಳಿತವನ್ನೂ ಶ್ರೀಮನ್ಮಹಾರಾಜರವರು ಸರ್ಕಾರದವರ ಕೈಗೆ ಕೊಟ್ಟಿಲ್ಲವೇ? ಹಾಗಿದ್ದರೂ ದಿವಾನರವರು ಸರ್ಕಾರದ ಆಡಳಿತದಲ್ಲಿ ಶ್ರೀಮನ್ಮಹಾರಾಜರ ಹೆಸರನ್ನು ಏತಕ್ಕೆ ಎಳೆಯಬೇಕು? ಈಗಿನ ಸರ್ಕಾರದ ಸಂಪೂರ್ಣ ಜವಾಬ್ದಾರಿಯು ಮಿರ್ಜಾರವರ ಕೈಯಲ್ಲಿರುವುದು. ಇದರ ತಪ್ಪುನೆಪ್ಪುಗಳಿಗೆಲ್ಲಾ ಮಿರ್ಜಾರವರದೇ ಪ್ರಧಾನ ಜವಾಬ್ದಾರಿಯು. ಈಗಿನ ಸರ್ಕಾರಕ್ಕೆ ಮಿರ್ಜಾರವರು ಶಿರಪ್ರಾಯರು. ಸರ್ಕಾರಕ್ಕೆ ಇತರ ಅಂಗಗಳು ಇರುವುದನ್ನು ನಾವು ಒಲ್ಲೆವು. ಇತರ ಅಂಗಗಳೆಲ್ಲವೂ ತಲೆಯು ಹೇಳುವಂತೆ ಕೇಳುವುವೇ ಹೊರತು ಬೇರೆ ಇಲ್ಲ. ಆದುದರಿಂದ ಮಿರ್ಜಾರವರು ತಮ್ಮ ಜವಾಬ್ದಾರಿಯನ್ನು ಇತರರ ಮೇಲೆ ಹಾಕುವುದಕ್ಕಾಗುವುದಿಲ್ಲ. ಬೆಂಗಳೂರಿನ ಗಲಭೆಯ ಪ್ರಕರಣಕ್ಕೆಲ್ಲ ಮಿರ್ಜಾರವರ ಜವಾಬ್ದಾರಿಯೇ ಸಂಪೂರ್ಣವಾದುದು. ಈಗಿನ ಆಡಳಿತದಲ್ಲಿ ನ್ಯೂನತೆಯೂ ಅವ್ಯವಸ್ಥೆಯೂ ಇದ್ದರೆ ಅದಕ್ಕೆ ಮಿರ್ಜಾರವರೇ ಜವಾಬ್ದಾರರು. ಈಗ [illegible] ವರ್ಷಗಳಿಂದಲೂ ಇಲ್ಲದ ಅವ್ಯವಸ್ಥೆಯು ಇವತ್ತಿನ ದಿವಸ ಅಂಕುರಿಸುವುದಕ್ಕೆ ಶ್ರೀಮನ್ಮಹಾರಾಜರವರು ಜವಾಬ್ದಾರರಲ್ಲ. ಸರ್ಕಾರದ ಇತರ ಅಂಗಗಳೂ ಅಧಿಕಾರಿಗಳೂ ಜವಾಬ್ದಾರರಲ್ಲ. ಮಿರ್ಜಾರವರೇ ಜವಾಬ್ದಾರರು. ಈ ತತ್ವವನ್ನು ಮಿರ್ಜಾರವರು ಅರಿಯದೇ ಇದ್ದರೆ ಅರಿಯುವುದು ಮೇಲು. ಸವಿಯಾದ ಮಾತುಗಳಿಂದ ಕಲ್ಲು ಕರಗುವುದಿಲ್ಲ.

ಸರ್ ಪುಟ್ಟಣ್ಣಶೆಟ್ಟರ ಸಾಕ್ಷ್ಯ.

ಪ್ರ.—ಸರ್ಕಾರವನ್ನು ತಲೆಕೆಳಗು ಮಾಡುವುದಕ್ಕೋಸ್ಕರ ಬೆಂಗಳೂರಿನಲ್ಲಿ ಗುಪ್ತ ಸಂಘ ಒಂದು ಏರ್ಪಾಡಾಗಿದೆಯೆ? ಉ—ಕೆಲವರು ಕೆಲವರಿಗೆ ವಿರೋಧಿಗಳೆಂಬುದು ನನಗೆ ಗೊತ್ತು. ಆದರೆ ಗುಪ್ತಸಂಘವಿದೆ ಎಂಬುದು ನನಗೆ ಗೊತ್ತಿಲ್ಲ. ಪ್ರ—ಸಿಂಹಾಸನಕ್ಕೆ ದ್ರೋಹಿಗಳಾಗಿರುವವರು ಯಾರಾದರೂ ಇದ್ದಾರೆಯೋ? ಉ—ಯಾವಾಗಲೂ ಕೆಲವರು ಇದ್ದೇ ಇರುವರು. ದೇವರೇ ಭೂಮಿಯಲ್ಲಿ ಬಂದು ರಾಜ್ಯಭಾರ ಮಾಡಿದರೂ ಅಂತಹವರಿಗೆ ಸಮಾಧಾನವಿಲ್ಲ. ಅಧ್ಯಕ್ಷರು—ಬೆಂಗಳೂರಿನಲ್ಲಿ ಗುಪ್ತಸಂಘವಿದೆಯೆಂದು ಹೇಳುತ್ತಾರಲ್ಲಾ ಅದು ಇದೆಯೋ? ಉ—ಅಂತಹುದು ಇದೆ ಎಂಬುದು ನಾನು ಕೇಳಿಲ್ಲ. ಬೆಂಗಳೂರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಅಂತಹುದು ಇದೆ ಎಂದು ನನಗೆ ನಂಬಿಕೆಯಿಲ್ಲ. ನಾಗಪ್ಪನವರು—ಒಳಗೊಳಗೆ ಮಸಲತ್ತು ಮಾಡುವವರು ನಿಮ್ಮಂತಹ ಪ್ರತಿಷ್ಠಿತ ಮನುಷ್ಯರನ್ನು ತಮ್ಮ ಅಂತರಂಗಕ್ಕೆ ತೆಗೆದುಕೊಳ್ಳುವರೇ? ಉ—ಅವರು ತೆಗೆದುಕೊಳ್ಳಬೇಕಾಗಿಲ್ಲ. ನನಗೆ ಎಲ್ಲ ರಹಸ್ಯಗಳೂ ಗೊತ್ತಾಗುತ್ತವೆ. ಪ್ರ—ಮೈಸೂರಿನಲ್ಲಿ ಪರಕೀಯರು ಅನೇಕರಿದ್ದುಕೊಂಡು ಮೈಸೂರಿನವರು ಯಾರಾದರೂ ಉಚ್ಚಪ್ರಾಯಸ್ಥಿತಿಗೆ ಬಂದರೆ ಸರ್ಕಾರವನ್ನು ಖಂಡಿಸುತ್ತಿಲ್ಲವೇ? ಉ—ಕೆಲವು ವ್ಯಕ್ತಿಗಳು ಯಾವಾಗಲೂ ಖಂಡಿಸುವರು. ಮೈಸೂರಿನವರು ಕೂಡ ಖಂಡಿಸುವರು. ಮದರಾಸಿನವರಿದ್ದಾಗಲೂ ಖಂಡಿಸುತ್ತಿದ್ದರು. ಈಗಲೂ ಖಂಡಿಸುವರು. ಪ್ರ—ಕೆಲವು ಪತ್ರಿಕೆಗಳು ಸರಕಾರದ ನೌಕರಿಗಳ ವಿಷಯವಾಗಿ ಯಾವಾಗಲೂ ವಾಗ್ವಾದವನ್ನು ನಡೆಸುತ್ತಿಲ್ಲವೆ? ಉ—ಮೈಸೂರಿನಲ್ಲಿ ಸರಕಾರಿ ನೌಕರಿಯನ್ನು ಬಿಟ್ಟರೆ ಬೇರೆ ರಾಜಕೀಯ ವಿಷಯವೇ ಇಲ್ಲ. ಪ್ರ—ಕಳೆದ ಸಭಾಪರಿತ್ಯಾಗವಾದಮೇಲೆ ದಿವಾನರ ಮೇಲೆ ಬೇಕಾದಷ್ಟು ಖಂಡನೆಗಳು ಬರುತ್ತಿಲ್ಲವೇ? ಉ—ನಾನು ಎಲ್ಲಾ ಪೇಪರುಗಳನ್ನು ಓದುವುದಿಲ್ಲ. ಆದರೆ ಕೆಲವು ಪತ್ರಿಕೆಗಳು ದಿವಾನರನ್ನು ಸ್ತೋತ್ರ ಮಾಡಿರುವುದನ್ನೂ ನಾನು ನೋಡಿದ್ದೇನೆ.

ಮಹಾರಾಜರುಗಳ ಪ್ರತಿಭಟನೆ.

ಬ್ರಿಟಿಷ್ ಇಂಡಿಯಾದ ರಾಜಕೀಯ ಮುಖಂಡರೆಲ್ಲರೂ ಸೇರಿ ಮಾಡಿರುವ ಸ್ವರಾಜ್ಯ ರಚನೆಯನ್ನು ಅನೇಕ ಮಹಾರಾಜರುಗಳು ಪ್ರತಿಭಟಿಸಿ ಅದಕ್ಕೆ ವಿರೋಧವಾಗಿ ಇಂಗ್ಲೆಂಡಿನಲ್ಲಿ ಚಳವಳಿ ಮಾಡುತ್ತಿರುವುದು ಅತ್ಯಂತ ಹೇಯಕರವು. ಬ್ರಿಟಿಷ್ ಇಂಡಿಯಾ ಮಹಾಜನಗಳ ಅಭ್ಯುದಯದಲ್ಲಿ ಈ ಮಹಾರಾಜರು ಇಷ್ಟು ಅಸಹನೆಯನ್ನು ಪ್ರದರ್ಶಿಸುವುದು ಅತ್ಯಂತ ಜಘನ್ಯವಾದುದು. ಈಗ ಬ್ರಿಟಿಷ್ ಇಂಡಿಯಾ ಸರ್ಕಾರದವರು ಅನುಭವಿಸುತ್ತಲಿರುವ ಅಧಿಕಾರಗಳನ್ನೆಲ್ಲಾ ಬ್ರಿಟಿಷ್ ಇಂಡಿಯಾದ ಭಾರತೀಯರಿಗೆ ಕೊಡಕೂಡದೆಂದೂ, ಹಾಗೆ ಕೊಟ್ಟರೆ ತಾವು ಆ ಸರ್ಕಾರದ ಅಧೀನದಲ್ಲಿ ಇರುವುದಿಲ್ಲವೆಂದೂ ತಾವು ಇಂಗ್ಲೆಂಡ್ ರಾಜರೊಬ್ಬರ ಅಧೀನವೇ ಹೊರತು ಇನ್ನು ಯಾರ ಅಧೀನವಲ್ಲವೆಂದೂ, ಈ ರಾಜರುಗಳು ಕೂಗುತ್ತಿರುವರು. ತಮ್ಮ ಮಾತಿನಂತೆಯೇ ನಡೆಯಬೇಕೆಂದು ಭಾರಿಭಾರಿ ಲಾಯರುಗಳನ್ನು ಇಟ್ಟು ಬಟ್ಲರ್ ಕಮಿಟಿಯ ಮುಂದೆ ತಮ್ಮ ಪಕ್ಷವನ್ನು ವಾದಿಸಿರುವರು. ಬಟ್ಲರ್ ಕಮಿಟಿಯವರು ಏನು ತೀರ್ಮಾನಕ್ಕೆ ಬರುವರೋ ನಮಗೆ ತಿಳಿಯದು. ಆ ತೀರ್ಮಾನವು ಏನೇ ಆಗಲೀ, ಈ ರಾಜರುಗಳು ತಮ್ಮ ದೇಶೀಯರಿಗೆ ವಿರೋಧವಾಗಿ ನಿಂತು ದ್ರೋಹವನ್ನು ಆಚರಿಸುತ್ತಿರುವರು. ಇವರ ಪದವಿಯು ಎಷ್ಟೇ ದೊಡ್ಡದಾಗಿದ್ದರೂ ಇವರ ಭಾವನೆಯು ಎಷ್ಟು ಕೀಳೆಂಬುದು ವ್ಯಕ್ತವಾಗುತ್ತದೆ. ಈಗ ಇಂಡಿಯಾ ಸರ್ಕಾರದವರ ಅಧೀನದಲ್ಲಿ ಈ ಮಹಾರಾಜರುಗಳಿಲ್ಲವೇ? ಲಾರ್ಡ್ ರೀಡಿಂಗ್‌ರವರು ನೈಜಾಮರಿಗೆ ಅವರು ಇಂಡಿಯಾ ಸರ್ಕಾರಕ್ಕೆ ಅಧೀನವೆಂದು ಮುಟ್ಟಿಕೊಳ್ಳುವಂತೆ ತೋರಿಸಲಿಲ್ಲವೇ? ಇಂಡೋರ್ ಮಹಾರಾಜರಿಗೂ ಭರತಪುರದ ಮಹಾರಾಜರಿಗೂ ಇಂಡಿಯಾ ಸರಕಾರದವರು ಕಲಿಸಿದ ಪಾಠವು ಸಾಲದೇ? ಪ್ರತಿಯೊಂದು ದೊಡ್ಡ ಮತ್ತು ಸಣ್ಣ ಬಾಬಿನಲ್ಲಿಯೂ ಇವರು ಇಂಡಿಯಾ ಸರ್ಕಾರಕ್ಕೆ ಅಧೀನರಾಗಿರುವರು. ಸ್ವರಾಜ್ಯವು ಬಂದಮೇಲೆ ಭಾರತೀಯ ಸರ್ಕಾರಕ್ಕೆ ಇವರು ಅಧೀನವಾಗುವುದಿಲ್ಲವೆಂದು ಹೇಳುವುದಕ್ಕೆ ಕಾರಣವೇನು? ತಮ್ಮ ದೇಶೀಯರಲ್ಲಿಯೇ ಇವರಿಗೆ ಮರ್ಯಾದೆಯು ಕಡಿಮೆಯೊ? ಆಂಗ್ಲೇಯರ ಪಾದ ಧೂಳಿಗಳು ಮಾತ್ರ ಇವರ ಕಿರೀಟಗಳಲ್ಲಿ ವಿರಾಜಿಸಬಹುದೇನು? ಈ ಮಹಾರಾಜರುಗಳ ದೇಶದ್ರೋಹದ ಸಲಹೆಗಳಿಗೆ ಅವರ ಪ್ರಜೆಗಳು ಎಂದಿಗೂ ಒಡಂಬಡುವುದಿಲ್ಲ. ತಮ್ಮ ದೇಶಗಳಲ್ಲಿ ಸುಲ್ತಾನರಂತೆಯೂ ನವಾಬರಂತೆಯೂ ಆಳುತ್ತಾ ಪ್ರಜೆಗಳ ರಾಜಕೀಯ ಆಕಾಂಕ್ಷೆಗಳನ್ನೆಲ್ಲಾ ಮುರಿದು ವಿದೇಶೀಯರಾದ ಆಂಗ್ಲೇಯರ ಕಾಲಿನ ಕೆಳಗೆ ಯಾವಾಗಲೂ ಇರುವೆವೆಂದು ಹೇಳುವ ಈ ಮಹಾರಾಜರುಗಳ ಮನೋವೃತ್ತಿಯು ಎಷ್ಟು ನೀಚವಾದುದು? ಈ ನೀಚತನವನ್ನು ನೋಡಿಯಲ್ಲವೇ ಭಾರತೀಯರಲ್ಲನೇಕರು ಈ ಮಹಾರಾಜರುಗಳನ್ನು ಸಿಂಹಾಸನಚ್ಯುತರನ್ನಾಗಿಯೂ ಕಿರೀಟವಿಹೀನರನ್ನಾಗಿಯೂ ಮಾಡಿ ಅವರ ಸಿಂಹಾಸನಗಳನ್ನೂ ಕಿರೀಟಗಳನ್ನೂ ಅಕಸಾಲಿಗನ ಮಡಕೆಗೆ ಕಳುಹಿಸಬೇಕೆಂದು ಹೇಳುತ್ತಿರುವರು? ಆಧುನಿಕಕಾಲದ ಪ್ರಜಾಪ್ರಭುತ್ವದ ಧರ್ಮದ ಮರ್ಮವನ್ನು ಅರಿತು ಈ ರಾಜರುಗಳು ಇಂಡಿಯಾ ದೇಶದ ಸ್ವರಾಜ್ಯಕ್ಕೆ ನೆರವಾಗುವರೋ? ಅಥವಾ ಮೊಗಲ್ ಚಕ್ರವರ್ತಿ, ಅಯೋಧ್ಯಾದ ನವಾಬ, ನಾಗಪೂರದ ಭೋನ್ಸ್ಲೆ ಮೊದಲಾದವರ ಗತಿಯು ಇವರಿಗೂ ಆಗಬೇಕೋ?

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

ಪ್ರತಿದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸಂಪುಟ ೧] ಗುರುವಾರ ೧೮ ಅಕ್ಟೋಬರ, ೧೯೨೮ [ಸಂಚಿಕೆ

ತಾಯಿನಾಡು
18-10-1928

ಕೊಂಡೀಜೀಯ ಪಾರುಪತ್ಯ

ಬೆಂಗಳೂರು ಡಿ|| ನಾರ್ಮಲ್ ಸ್ಕೂಲಿನ ಆರು ಬಡ ಉಪಾಧ್ಯಾಯರು ರಾಜಭಕ್ತಿಯಿಂದಲೂ ದೇಶಭಕ್ತಿಯಿಂದಲೂ ಪ್ರೇರಿತರಾಗಿ ಶ್ರೀಮನ್ಮಹಾರಾಜರವರಿಗೆ ಬೆಂಗಳೂರು ಗಲಾಟೆಯ ವಿಷಯವಾಗಿ ಮಹಾಜನರು ಅರ್ಪಿಸಿದ ವಿಜ್ಞಾಪನಾಪತ್ರಿಕೆಗೆ ರುಜುವನ್ನು ಹಾಕಿದುದು ಮಹಾಪರಾಧವಾಗಿ ಪರಿಗಣಿಸಲ್ಪಟ್ಟು ಅವರುಗಳಿಗೆ ಬರ್ತರ್ಫ್ ಮಾಡಲ್ಪಟ್ಟಿರುವದನ್ನು ಕೇಳಿ ನಮಗೆ ಏಕಕಾಲದಲ್ಲಿ ಕೋಪವೂ [illegible] ಶ್ರೀಮನ್ಮಹಾರಾಜರವರಿಗೆ ದೂರು ಹೇಳಿಕೊಳ್ಳುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಅಧಿಕಾರವಿದೆ. "ದೊರೆಯ ತನಕ ದೂರು" ಎಂಬ ಹೇಳಿಕೆಯು ಇದನ್ನು ಸ್ಪಷ್ಟಪಡಿಸುತ್ತದೆ. ಅದೂ ಅಲ್ಲದೆ ಆ ವಿಜ್ಞಾಪನಾಪತ್ರಿಕೆಯಲ್ಲಿ ಉಪಾಧ್ಯಾಯರುಗಳ ಮೇಲಿನ ಅಧಿಕಾರಿಗಳ ಮೇಲೆ ಯಾವ ದೂರೂ ಇರುವುದಿಲ್ಲ. ಆ ಪತ್ರಿಕೆಯಲ್ಲಿ ಹೇಳಲ್ಪಟ್ಟಿರುವ ವಿಷಯಗಳೆಲ್ಲಾ ನಿಜವಾದವುಗಳು. ಆದರೂ ಕೊಂಡೀಜೀಯ ಪಾರುಪತ್ಯ ಮಾಡುವ ವಿದ್ಯಾಭ್ಯಾಸದ ಇಲಾಖೆಯ ಕೆಲವು ಅಧಿಕಾರಿಗಳು ನಿರಪರಾಧಿಗಳನ್ನು ಕುಟುಕುವುದೇ ತಮ್ಮ ಅಧಿಕಾರದ ಉಪಯೋಗವೆಂದು ತಿಳಿದಿರುತ್ತಾರೆ. ಇಂತಹ ಅಧಿಕಾರಿಗಳು ಸರ್ಕಾರಕ್ಕೂ ನಮ್ಮ ಸಂಸ್ಥಾನಕ್ಕೂ ಕೆಟ್ಟ ಹೆಸರನ್ನು ತರುತ್ತಿರುವರು. ಈ ಕೊಂಡೀ ಪಾರುಪತ್ತೇಗಾರರನ್ನೇ ಕೆಲಸದಿಂದ ವಜಾ ಮಾಡಿದ ಹೊರತು ನಮ್ಮ ಸಂಸ್ಥಾನಕ್ಕೆ ಉಳಿಗಾಲವಿಲ್ಲ. ವಿಶ್ವೇಶ್ವರಯ್ಯ ಕಮಿಟಿಯವರು ಸಮಸ್ತ ಬಾಬುಗಳನ್ನೂ ಅಮೂಲಾಗ್ರವಾಗಿ ಪರಿಶೀಲಿಸಿ ನ್ಯಾಯ ಮಾಡಬೇಕೆಂದು ಪ್ರಯತ್ನಿಸುತ್ತಿರುವಾಗ ಈ ಅದೂರದೃಷ್ಟಿಯ ಕೊಂಡೀ ಪಾರುಪತ್ತೇಗಾರರು ಇಲ್ಲದ ಸಲ್ಲದ ಕೋಲಾಹಲವನ್ನುಂಟುಮಾಡುತ್ತಿರುವರು. ಸರಕಾರದವರೂ ವಿದ್ಯಾಭ್ಯಾಸದ ಡೈರೆಕ್ಟರವರೂ ಈ ವಿಷಯಕ್ಕೆ ಗಮನವನ್ನು ಕೊಟ್ಟು ಬಡ ಉಪಾಧ್ಯಾಯರುಗಳ ವಿಷಯವಾಗಿ ಸಹಾನುಭೂತಿಯಿಂದ ವರ್ತಿಸುವರೆಂದು ಕೋರುತ್ತೇವೆ.

ಸಹಕಾರ ಸಮ್ಮೇಳನ.

ಅಖಿಲ ಸಂಸ್ಥಾನದ ಸಹಕಾರ ಸಮ್ಮೇಳನವು 18-10 28ನೇ ಪ್ರಾತಃಕಾಲ ಗಂಟೆಗೆ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಆರಂಭವಾಯಿತು. ಆಸ್ಥಾನ ಸಂಗೀತ ವಿದ್ವಾನ್ ಚಿಕ್ಕರಾಮರಾಯರು ಮಧುರವಾಗಿ ದೇವತಾಸ್ತುತಿ ಮಾಡಿದಮೇಲೆ ಅಪೆಕ್ಸ್ ಬ್ಯಾಂಕಿನ ಪ್ರೆಸಿಡೆಂಟರಾದ ರಾ|| ಬ|| ಜಸ್ಟಿಸ್ ಎಸ್ ವೆಂಕಟಕೃಷ್ಣಯ್ಯನವರು ದಿವಾನರವರಿಗೆ ಸುಸ್ವಾಗತದ ಮಾನಪತ್ರವನ್ನು ಓದಿದರು. ದಿವಾನರು ಸಮ್ಮೇಳನವನ್ನು ತೆರೆದನಂತರ ಮ|| ಸಾಲಿಗ್ರಾಮ ನಾರಾಯಣರಾಯರು ಮಿ|| ಮ್ಯಾಥ್ಯೂರವರಿಗೆ ಸ್ವಾಗತವನ್ನು ಬಯಸಿ ಅಧ್ಯಕ್ಷತೆ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಭಾಷಣವಾದಮೇಲೆ ದಿವಾನರ ಹಸ್ತದಿಂದ ಇನಾಮುಗಳನ್ನು ಪಡೆದ ಕೋಆಪರೇಟಿವ್ ಸೊಸೈಟಿಗಳಿಗೆ ಪದಕಗಳೂ ಗುರಾಣಿಗಳೂ ಕೊಡಲ್ಪಟ್ಟವು. ಪುಷ್ಪಗಳ ವಿನಿಯೋಗವೂ, ವಂದನೆಗಳೂ [illegible] ಸಭೆಯು ಮುಕ್ತಾಯವಾಯಿತು. ದಿವಾನರವರ ಮತ್ತು ಮ್ಯಾಥ್ಯೂ ರವರ ಭಾಷಣಗಳ ವಿಮರ್ಶೆಯು ಯಥಾ ಪ್ರಕಾ[illegible]

[illegible]

ಬೆಂಗಳೂರು ಸಿಟಿ ಮುನಿಸಿಪಲ್ ಕೌನ್ಸಿಲರ್ ಮ|| ಹುಚ್ಚಪ್ಪನವರು ಅಬ್ಬಾಸ್ ಖಾನರ ಪೇದ ಯಂತ್ರದಿಂದ ಹೊರಗಾದ ಜಗೆಯನ್ನು ಈ ತಿಂಗಳು 16 ನೇ ತಾರೀಖಿನ ದಿವಸ ಕಮಿಟಿಯ ಮುಂದೆ ವಿವರಿಸಿದರು. ಆಗಸ್ಟ್ 13ರಲ್ಲಿ ಅಬ್ಬಾಸ್ [illegible] ಬರಮಾಡಿಕೊಂಡರೆಂದೂ, ತಮಗೆ ಕಷ್ಟವಾಗಿದೆ ಸಹಾಯ ಮಾಡಬೇಕು ಎಂದು ಕೇಳಿಕೊಂಡರೆಂದೂ ಅಡಿಷನಲ್ ಡಿ|| ಮ್ಯಾಜಿಸ್ಟ್ರೇಟರ ಮುಂದೆ ಅತ್ತ ಸಂರಕ್ಷಣೆಗೋಸ್ಕರ ಒಂದೆರಡು ಗುಂಡನ್ನು ಹೊಡದೆ ಎಂದು ಹೇಳಬೇಕೆಂದು ಪ್ರಾರ್ಥಿಸಿದ ಹಾಗೂ ತಾವು ಅದಕ್ಕೆ ಒಪ್ಪಲಿಲ್ಲವೆಂದೂ ಕೈಫಿಯತ್ತನ್ನು ಕೊಟ್ಟರು. ಹುಚ್ಚಪ್ಪನವರು ಕೊಟ್ಟ ಕೈಫಿಯತ್ತು ಬಹಳ ಕೋಲಾಹಲವನ್ನುಂಟುಮಾಡಿದೆ.

ಬೇಲೂರು ಶ್ರೀನಿವಾಸಯ್ಯಂಗಾರ್ಯರು.

15-10-28ರಲ್ಲಿ ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸಾಕ್ಷಿಕೊಟ್ಟಾಗ ಜಗ[illegible]ವನ್ನು ಮಾಡಿದರೆಂದು ತಮ್ಮ ಮೇಲೆ ಬಂದಿರುವ ಆಪಾದನೆಯು

Withdrawn
PERMISSION for DEENDAR

Mr. K. Chandy nominated M.L.C.
IN PLACE OF LATE HAMZA HUSSEIN.

ವಿದ್ಯಾರ್ಥಿಗಳೆಲ್ಲಾ ಸಾಧುಗಳೋ?

ವಿದ್ಯಾರ್ಥಿಗಳ ಪರವಾಗಿ ಮ|| ಕೆ. ಶಾಮಣ್ಣನವರು ಕಮಿಟಿಯ ಮುಂದೆ ಕೈಫಿಯತ್ತು ಕೊಡುತ್ತಿದ್ದಾಗ ಅಧ್ಯಕ್ಷರ ಪ್ರಶ್ನೆ—ವಿದ್ಯಾರ್ಥಿಗಳೆಲ್ಲಾ ಬಹಳ ಸಾಧು ಸಂತರಾಗಿದ್ದಂತೆ ತಿಳಿಸಲು ನೀವು ಪ್ರಯತ್ನ ಮಾಡುತ್ತಿದ್ದೀರಿ. ಉ—ನನಗೆ ತಿಳಿದಿದ್ದನ್ನು ನಾನು ಹೇಳಿದೆ.

ಮನೆಯನ್ನು ಬಿಡುವ ಅವಶ್ಯಕವಿತ್ತೇ?

ಲೆಫ್ಟಿನೆಂಟ್ ಪಿ. ಬಸವರಾಜೇ ಅರಸಿನವರ ಕೈಫಿಯತ್ತು ನಡೆಯುತ್ತಿದ್ದಾಗ ಪ್ರ—ಅಬ್ಬಾಸ್ ಖಾನರು ಮನೆಯನ್ನು ಬಿಡಲು ಅವಶ್ಯಕವಿತ್ತೇ? ಉ—ಇಲ್ಲ. ಮಿಲಿಟರಿ ಇರುವವರೆಗೆ ಅವರು ಮನೆಯನ್ನು ಬಿಡಲು ಅವಶ್ಯಕತೆ ಇರಲಿಲ್ಲ.

ಈವನಿಂಗ್ ಮೇಲ್ ಸಂಪಾದಕರ ಮೇಲೆ ಗುಮಾನಿ.

ಈ ತಿಂಗಳು 15ನೇ ತಾರೀಖಿನಲ್ಲಿ ನಡೆದ ಐಡೆಂಟಿಫಿಕೇಷನ್ ಪೆರೇಡಿನಲ್ಲಿ ದೊಂಬಿ ಮಾಡಿದರೆಂದು 10—15 ವಿದ್ಯಾರ್ಥಿಗಳೂ, ಈವನಿಂಗ್ ಮೇಲ್ ಸಂಪಾದಕರಾದ ಕೆ. ನಾರಾಯಣಯ್ಯಂಗಾರ್ಯರೂ ಗುಮಾನಿಮೇಲೆ ಗುರ್ತಿಸಲ್ಪಟ್ಟರು.

ಇಂಡಿಯಾದ [illegible] ಲಾರ್ಡ್ [illegible] ರವರು ರಾಜೀನಾಮೆಯನ್ನು ಕೊಟ್ಟರು. ಅವರ ಜಾಗದಲ್ಲಿ ಅರ್ಲ್ [illegible] ರವರು [illegible] ವಹಿಸಿದರು.

ಪೂನಾದಲ್ಲಿ ಸೈಮನ್ ಕಮಿಷನ್‌ರವರು [illegible] ಕೂಡಲೆ [illegible] ರದ ಕಾರ್ಯ [illegible] ಪ್ರಾರಂಭಿಸಿತು.

ಮುಂದಿನ ವೈಸ್‌ರಾಯರು

ಈಗಿನ ವೈಸ್‌ರಾಯರಾದ ಲಾರ್ಡ್ ಅರ್ವಿನ್‌ರವರು ಮುಂದಿನ ಬೇಸಿಗೆಯಲ್ಲಿ ಸೀಮೆಗೆ ಹೋಗುತ್ತಾರಾಗಿ ಮದರಾಸಿನ ಗವರ್ನರರಾದ ಲಾರ್ಡ್ ಗೋಷನ್‌ರವರು ವೈಸ್‌ರಾಯ ಪದವಿಯನ್ನು ಅಲಂಕರಿಸುವರು.

ಶಂಕರನ್ ನಾಯರಿಗೂ ತಿರಸ್ಕಾರ.

ಸರ್ ಶಂಕರನ್‌ನಾಯರ್ ರವರು ಪೂನಾದಲ್ಲಿ ಸೈಮನ್ ಕಮಿಷನ್ನಿಗೆ ಸ್ವಾಗತ [illegible] ಸ್ಟೇಷನ್ನಿಗೆ ಹೋದರು. ಸ್ಟೇಷನ್ನಿನ ಒಳಗೆ ಮೋಟರನ್ನು [illegible] ಆತಂಕಪಡಿಸಿದ್ದರಿಂದ ಶಂಕರನ್ ನಾಯರ್‌ರವರು ಹಾಗೆಯೇ ವಾಪಸು ಮನೆಗೆ [illegible]

ಕೊಚ್ಚಿನ್ ನ್ಯಾಯವಿಧಾಯಕ ಸಭೆಯಲ್ಲಿ ಸರಕಾರಿ ಅಧಿಕಾರಿಗಳ ಸಂಬಳವನ್ನು ಕಡಿಮೆ ಮಾಡಬೇಕೆಂದು ಠರಾವು ಚರ್ಚೆಯಾಯಿತು. ಇಲಾಖೆ ಮೊಖ್ತೆಸರ ಸಂಬಳವು 400ರಿಂದ 600 ರೂ ಒಳಗೆ ಇರಬೇಕೆಂದು ಸಭಿಕರು ಅಭಿಪ್ರಾಯಪಟ್ಟರು. ತಿಂಗಳಿಗೆ 1400 ರೂ ಸಂಬಳವನ್ನು ತಿನ್ನುವ ನಮ್ಮ ಸಂಸ್ಥಾನದ ಇಲಾಖೆಗಳ ಮೊಖ್ತೇಸರರು ಇದಕ್ಕೆ ಏನೆನ್ನುವರೋ ನೋಡಬೇಕು.

ಎಂಟುವರ್ಷಗಳಿಂದ ಒಬ್ಬ ವೇಶ್ಯೆಯೊಡನೆ ಸುಖವನ್ನನುಭವಿಸಿ ಕೊನೆಗೆ ಅವಳಲ್ಲಿ ದೋಷ ಕಂಡರೆ ಅವಳ ಮನೆಗೆ ಬೆಂಕಿಹಚ್ಚಿದ ಬೊಮ್ಮನಾಯಕ ಎಂಬುವನನ್ನು ತಿರುಚನಾಪಳ್ಳಿ ಜಡ್ಜರು ನಾಲ್ಕುವರ್ಷಗಳ ಕಠಿಣ ಕೈದಿಗೆ ಒಪ್ಪಿಸಿರುವರು.

ಲಾಲಾಜಿಯವರು ಮಿಸ್ ಮೇಯೋಳಿಗೆ ಉತ್ತರವಾಗಿ ಬರೆದ 'ಅನ್‌ಹ್ಯಾಪಿ ಇಂಡಿಯಾ' ಎಂಬ ಪುಸ್ತಕದಲ್ಲಿ ಫರಂಗಿ ರೋಗವನ್ನು ಕುರಿತು ಬರೆದಿರುವದೇನೆಂದರೆ—೧೪೯೩—೯೪ ರಲ್ಲಿ ಕೊಲಂಬಸನ ಖಲಾಶಿಗಳು ಈ ರೋಗವನ್ನು ಅಮೆರಿಕೆಯಿಂದ ಸ್ಪೇನಕ್ಕೆ ತಂದರು. ಅಲ್ಲಿಂದಲನೇ ಚಾರ್ಲಸನ ಸೈನಿಕರು ಇಟಲಿಗೆ ಒಯ್ದರು. ಅವರ ದ್ವಾರಾ ಈ ರೋಗವು ಯುರೋಪಿನ ಎಲ್ಲಭಾಗಗಳಿಗೂ ಹರಡಿತು. ಪೋರ್ಚುಗೀಸರು ಇದನ್ನು ಹಿಂದುಸ್ಥಾನ, ಚೀನ, ಜಪಾನಗಳಿಗೆ ತಂದರು. ೧೯ನೇ ಶತಮಾನದಲ್ಲಿ ಈ ಮಾರಿಯು ಯುರೋಪಿನ ಧನಿಕರನ್ನು ಚೆನ್ನಾಗಿ ಕೊಂಡಿತು.

Printed and published by P. R. Ramaiya, at the Rama Press, D. Subbiah Road, Mysore.

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || [illegible]

ಚಂದಾ { [illegible]

ಸಂಪುಟ ೧]

ಶುಕ್ರವಾರ ೧೯ ಅಕ್ಟೋಬರ, ೧೯೨೮

[[illegible]

ತಾಯಿನಾಡು

19 10 1928

ಪತ್ರಿಕೆಗಳ ಸಂಹಾರ.

ಈ ತಿಂಗಳು 5 ನೇ. ತಾ|| ನಲ್ಲಿ ಪ್ರಜಾಮಿತ್ರ ಪತ್ರಿಕೆಯು ಪರಂಧಾಮವನ್ನು ಹೊಂದಿತು. ಈ ತಿಂಗಳು 17 ರಲ್ಲಿ ದೀನದಾರ್ ಪತ್ರಿಕೆಯು ದಿವಂಗತವಾಯಿತು. ಇನ್ನು ಯಾವ ಯಾವ ಪತ್ರಿಕೆಗಳಿಗೆ ಸ್ವರ್ಗಪ್ರಾಪ್ತಿಯು ಸಮೀಪಿಸಿರುವುದೋ ಈಗಲೇ ಹೇಳುವ ಹಾಗಿಲ್ಲ. ಪತ್ರಿಕೆಗಳು ತಾವಾಗಿಯೇ ಪ್ರಜಾಬೆಂಬಲವಿಲ್ಲದೆ ಅರ್ಥಕೋಪಪತ್ತಿಯು ಸಾಲದೆ ಕಾಲವಾಶವಾಗುತ್ತಿದ್ದವು. ಈಗ ಸರ್ಕಾರದವರೇ ತಮ್ಮ ವಿಶೇಷ ಅಧಿಕಾರಗಳನ್ನು ಉಪಯೋಗಿಸಿ ಪತ್ರಿಕೆಗಳನ್ನು ಮುಕ್ತಾಯಪಡಿಸುತ್ತಲಿರುವರು. ಈವತ್ತು ದೀನದಾರಸಿಗೆ ಅದ ಗತಿಯು ನಾಳೆ ನಮ್ಮರಿಗೂ ಆಗಬಹುದು, ನಾಳಿದ್ದು ಒಕ್ಕಲಿಗರ, ಕುರುಬರ ಪತ್ರಿಕೆಗಳಿಗೂ ಆಗಬಹುದು. ಈಗ ನಮ್ಮ ಸಂಸ್ಥಾನದಲ್ಲಿ ಪತ್ರಿಕೆಗಳು ಮೃತ್ಯುವಿನ ಛಾಯೆಯಲ್ಲಿದ್ದಂತೆ ವರ್ತಿಸುತ್ತಿರುವುವು. ಇದಕ್ಕೆ ಸ್ವಚ್ಛಂದವಾದ ಪತ್ರಿಕಾ ಕಾನೂನೇ ಮುಖ್ಯಕಾರಣ. ಅದು ಕಾನೂನಿನ ಕಡತದಲ್ಲಿದ್ದರೂ ಅದನ್ನು ಉಪಯೋಗಿಸಿಲ್ಲವೆಂದು ನಮ್ಮ ಸರ್ಕಾರದವರು ಹೆಮ್ಮೆಗೊಳ್ಳುತ್ತಿದ್ದರು. "ಅಳಿಯನ ಕುರುಡು ಬೆಳಗಾದಾಗ" ಎಂಬಂತೆ ಪರೀಕ್ಷೆಯ ಕಾಲದಲ್ಲಿ ಸರಕಾರದವರು ಗೆಜ್ಜಲು ಹಿಡಿದ ಆ ಹಳೆಯ ಕಡತವನ್ನೇ ಹೊರಕ್ಕೆ ತೆಗೆದು ಆ ತುಕ್ಕು ಹಿಡಿದ ಹಳೆಯ ಕತ್ತಿಯನ್ನೇ ತೆಗೆದು ಝಳಪಿಸಿ ನಿಸ್ಸಹಾಯರಾದ ಪತ್ರಿಕಾಕರ್ತರುಗಳ ಮೇಲೆ ಬಹಳ ಪ್ರತಾಪದಿಂದ ಉಪಯೋಗಿಸುತ್ತಿರುವರು. ಮಾದರೀ ಸಂಸ್ಥಾನವೆಂದೂ ರಾಮರಾಜ್ಯವೆಂದೂ [illegible] ಮೈಸೂರಿನಲ್ಲಿ ಅನಾಗರಿಕ ಕಾಲದ ಕ್ರೂರಪದ್ಧತಿಗಳನ್ನು ಉಪಯೋಗಿಸುವುದು ಲಾಂಛನಾಸ್ಪದವು. ವಿಚಾರಣೆಯಿಲ್ಲದೆ [illegible] ಗೆ ಕಟ್ಟುವುದು ದಬ್ಬಾಳಿಕೆಯ ಪರಾಕಾಷ್ಠತೆಯು. ನಮ್ಮ ಸಂಸ್ಥಾನದಲ್ಲಿ ನಿಷ್ಪಕ್ಷಪಾತವುಳ್ಳ ಕೋರ್ಟುಗಳೂ ನ್ಯಾಯಾಧಿಪತಿಗಳೂ ಇರುವರು. ಅಪರಾಧ ಮಾಡಿದ ಪತ್ರಿಕೆಗಳನ್ನು ಇಂಡಿಯನ್ ಪೀನಲ್ ಕೋಡಿನ ಪ್ರಕಾರ ವಿಚಾರಣೆಗೆ ಗುರಿಮಾಡಿ ಪತ್ರಿಕಾ ಕರ್ತರಿಗೆ ತಮ್ಮ ಪಕ್ಷವನ್ನು ಸಮರ್ಥಿಸ [illegible] ವುದಕ್ಕೆ ಅವಕಾಶಕೊಟ್ಟು ಎಲ್ಲಾ ಆದಮೇಲೆ ತಪ್ಪಿತಸ್ಥರೆಂದು ನಿಸ್ಸಂದೇಹವಾಗಿ ರುಜುವಾತಾದ ಮೇಲೆ ಅತ್ಯಂತ ಕಠಿಣತರಹದ ಶಿಕ್ಷೆಯನ್ನು ವಿಧಿಸಬಹುದು. ಪರಕೀಯ ಬ್ರಿಟಿಷ್ ಸರ್ಕಾರವೂ ಕೂಡ ಈ ಕ್ರಮವನ್ನು ಅನುಸರಿಸುತ್ತಿರುವಾಗ್ಯೆ ನಮ್ಮ ಸರ್ಕಾರವು ಪತ್ರಿಕೆಗಳನ್ನು ಕೋರ್ಟಿನ ವಿಚಾರಣೆಗೆ ಗುರಿಮಾಡುವದಕ್ಕೆ ಏತಕ್ಕೆ ಹಿಂತೆಗೆಯಬೇಕು? ಸರಕಾರದವರು ಪ್ರಜಾಮಿತ್ರನನ್ನೂ ದೀನದಾರನನ್ನೂ ಕೋರ್ಟಿನ ವಿಚಾರಣೆಗೆ ಗುರಿಮಾಡಿ ಅವರು [illegible] ತಪ್ಪಿತಸ್ಥರೆಂದು ತಿಳಿದುಬಂದರೆ ಅತಿ ಕಠಿಣತರವಾದ ಶಿಕ್ಷೆಯನ್ನು ವಿಧಿಸಿದರೂ [illegible] ಆಕ್ಷೇಪಣೆ ಮಾಡುವುದಿಲ್ಲ.

ಮಾಯವಾದ ಹುಡುಗ.

ವ್ಯವಸಾಯದ ಇಲಾಖೆ ವೆಂಕಟಸುಬ್ಬಯ್ಯನವರು ಕಮಿಟಿಯ ಮುಂದೆ ಸಾಕ್ಷಿಕೊಡುತ್ತಾ ಹೇಳಿದ್ದೇನೆಂದರೆ ನನ್ನ ದರ್ಜಿಯ ಇಬ್ಬರು ಹುಡುಗರು ಮಾ [illegible] ಅವರಲ್ಲಿ ಒಬ್ಬನು ತಿರಿಗಿಬಂದನೆಂದೂ ಇನ್ನೊಬ್ಬನು ಪತ್ತೆ ಇಲ್ಲ [illegible] ಕೇಳಿದರೆ [illegible] ಬಂದಿರುವನೆಂದು ಹೇಳುವನೆಂದೂ ಆದರೆ ಹುಡುಗನು ಮಾತ್ರ ಕಾಣಿಸುವುದಿಲ್ಲವೆಂದೂ ಇದೊಂದು ದೊಡ್ಡ [illegible] ತೋರುತ್ತದೆ.

ಅಬ್ಬಾಸ್ ಖಾನರು ಸಮನ್ಸ್‌ನ್ನು ತಿರಸ್ಕರಿಸಿದ್ದು.

15-10-28 ರಲ್ಲಿ ಕೋರ್ಟಿನಲ್ಲಿ ಹಾಜರಾಗಿ ಪಿತೂರಿಯ ಡಾಕ್ಯುಮೆಂಟುಗಳನ್ನು ತರಬೇಕೆಂದು ಅಬ್ಬಾಸ್ ಖಾನರಿಗೆ ಸಮನ್ಸ್ ಕಳುಹಿಸಿತ್ತು. ಸಮನ್ಸ್ ಜವಾನನು ಅವರ ಮನೆಗೆ 2 ಸಾರಿ ಹೋಗಿದ್ದನು. ಮೊದಲನೆಯ ಸಾರಿ ಇನ್ನು ಸ್ವಲ್ಪ ಹೊತ್ತು ಬಿಟ್ಟುಕೊಂಡು ಬಾ ಎಂದು ಹೇಳಿದರಂತೆ ಆ ಮೇಲೆ ಹೋದಾಗ ನಾನು ಯಾವುದೋ ಒಂದು ಮದುವೆಗೆ ಹೋಗಬೇಕೆಂದು ಹೇಳಿದರೆಂದು ಸಮನ್ಸ್ ತೆಗೆದುಕೊಳ್ಳುವುದಿಲ್ಲವೆಂದು ತಿರಸ್ಕಾರಮಾಡಿದ ಹಾಗೂ ಜವಾನನು ಹೇಳಿ [illegible] ಸಮನ್ಸ್ ನೋಟೀಸನ್ನು ಅಬ್ಬಾಸ್ ಖಾನರ ಮನೆಗೆ ಅಂಟಿಸಿ [illegible] ಈ ಮೊಕದ್ದಮೆಯು 6-11-28 ಕ್ಕೆ ಅಡ್ಜರ್ನ್ ಮಾಡಿಸಲ್ಪಟ್ಟಿದೆ.

ಅಬ್ಬಾಸ್ ಖಾನರ ಖಂಡನೆ.

ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳ ಅಸಹನೆಯಿಂದ ನಾನು ಅಧ್ಯಕ್ಷ ಪದವಿಗೆ ರಾಜೀನಾಮೆಯನ್ನು ಕೊಡಬೇಕಾಯಿತು ಎಂದು ಅಬ್ಬಾಸ್ ಖಾನರು ಚೀಫ್ ಸೆಕ್ರೆಟರಿಯವರಿಗೆ ಬರೆದ ಕಾಗದವು ಅಪದ್ಧ ಕಂತೆ, ಅಸೂಯೆಯ ಮುದ್ದೆ ಅವಿವೇಕದ ಪರಮಾವಧಿ ಎಂಬುದು ಕಳೆದವಾರ ಬೆಂಗಳೂರು ಸಿಟಿ ಮುನಿಸಿಪಾಲಿಟಿಯಲ್ಲಿ ನಡೆದ ಕಾರ್ಯಕಲಾಪಗಳಿಂದ ವ್ಯಕ್ತವಾಗುತ್ತದೆ. ಅಬ್ಬಾಸ್ ಖಾನರು ಏನೇ ಮಾಡಲಿ ಅದು ಮಹಾ ಪ್ರಸಾದವೆಂದು ಭಾವಿಸುವ ಕೆಲವು ಕೌನ್ಸಿಲ್ಲರುಗಳು ಹೊರತಾಗಿ 'ಇತರರೆಲ್ಲರೂ' ಅಬ್ಬಾಸ್ ಖಾನರ ಈ ಅಸಭ್ಯ ನಡವಳಿಕೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಚೀಫ್ ಸೆಕ್ರೆಟರಿಯವರಿಗೆ ಬರೆದ ಕಾಗದದ ಒಂದು ನಕಲನ್ನೂ ಮುನಿಸಿಪಾಲಿಟಿಗೆ ಕಳುಹಿಸದೆ ಚೀಫ್ ಸೆಕ್ರೆಟರಿಯವರಿಗೆ ಮಾತ್ರ ಕಳುಹಿಸಿರುವುದನ್ನು ನೋಡಿದರೆ ಅಬ್ಬಾಸ್ ಖಾನರಿಗೆ ಬುದ್ಧಿಭ್ರಮಣೆಯು ಎಷ್ಟು ಹೆಚ್ಚಿದೆ ಎಂಬುದು ವ್ಯಕ್ತವಾಗುತ್ತದೆ. ಅಬ್ಬಾಸ್ ಖಾನರು ರಾಜೀನಾಮೆಯನ್ನು ಕೊಡುವುದಕ್ಕೆ ನಿಜವಾದ ಕಾರಣವೇನು ಎಂಬುದು ನಮ್ಮ ಸಂಸ್ಥಾನದಲ್ಲಿ ಪ್ರತಿಯೊಬ್ಬರಿಗೂ ತಿಳಿದ ವಿಷಯ. ಹೀಗಿದ್ದರೂ ನಿಜವಾದ ಕಾರಣವನ್ನು ಮರೆಮಾಚಿ ಇತರರ ದೂಷಣೆಯನ್ನು ಮಾಡುವ ಪತ್ರವನ್ನು ಸರಕಾರಕ್ಕೆ ಕಳುಹಿಸಿರುವುದು ಅಬ್ಬಾಸ್ ಖಾನರ ಹೃದಯದ ಮಾಲಿನ್ಯವನ್ನು ತೋರಿಸುತ್ತದೆ. ಈ ಪತ್ರವನ್ನೇ ಸ್ವೀಕರಿಸಿ ಸರ್ಕಾರದವರು ಅಬ್ಬಾಸ್ ಖಾನರನ್ನು ತಾರೀಪ್ ಮಾಡಿರುವುದು ಸರಕಾರವನ್ನೂ ಅಬ್ಬಾಸ್ ಖಾನರನ್ನು ಒಂದೇ ಪಂಗ್ತಿಯಲ್ಲಿಡುತ್ತದೆ. ಅದು ಹೇಗಾದರೂ ಆಗಲಿ. ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಕೌನ್ಸಿಲರ್‌ಗಳು ತಮ್ಮ ಮರ್ಯಾದೆಯನ್ನು ಉಳಿಸಿಕೊಂಡು ತಮಗೆಷ್ಟು ಸಾಧ್ಯವೋ ಅಷ್ಟು ಅಬ್ಬಾಸ್ ಖಾನರ ವರ್ತನವನ್ನು ಖಂಡಿಸಿದರು.

ರಕ್ತವನ್ನು ತೊಳೆದುದ್ದು.

ಮೈಸೂರು ಸ್ಟಾಂಡರ್ಡ್ ಮ್ಯಾಚ್ ಕಂಪನಿಯ ಪ್ರೊಪ್ರೈಟರಾದ ಎಂ. ಸಿ. ಮಲ್ಲಪ್ಪನವರ ಸಾಕ್ಷಿ—ಜುಲೈ 30 ನೇ ತಾರೀಖಿನ ರಾತ್ರಿ 11 ಘಂಟೆ ಹೊತ್ತಿನಲ್ಲಿ ನಾನು ಅಬ್ಬಾಸ್ ಖಾನರ ಮನೆಗೆ ಹೋದೆ. ಅಲ್ಲಿ ಹತ್ತು ಹದಿನೈದು ಮಹಮದೀಯರಿದ್ದರು. ಅಬ್ಬಾಸ್ ಖಾನರು ಅವರ ಕೂಡ ಚರ್ಚೆಮಾಡುತ್ತಿದ್ದರು. ಅವರೆಲ್ಲಾ ಕ್ಷುಬ್ಧರಾಗಿದ್ದರು. ನನಗೂ ಅಬ್ಬಾಸ್ ಖಾನರಿಗೂ ಆದ ಮಾತನ್ನು ಅಂತರಂಗದಲ್ಲಿಯೇ ಹೇಳುತ್ತೇನೆ. ನೆಲವನ್ನು ಆಗ ತಾನೆ ತೊಳೆದಿದ್ದರು. ರಕ್ತವನ್ನು ತೊಳೆದಿರಬೇಕೆಂದು ಸಂಶಯಬಂದಿತು. ಅಲ್ಲಿರುವುದು ಸರಿಯಲ್ಲವೆಂದು ಕೂಡಲೇ ಹೊರಟುಹೋದೆ. ನಾನು ನೋಡಿದ್ದನ್ನೆಲ್ಲಾ ಎ. ಎಸ್. ಪಿ. ಯವರಿಗೆ ತಿಳಿಸಿದೆ. ಅವರು ನಗುತ್ತಾ ಹೊರಟುಹೋದರು.

ಪತ್ತೆ ಇಲ್ಲದ ಹುಡುಗ.

ಚಾಮರಾಜಪೇಟೆ ಒಂದನೇ ರಸ್ತೆಯಲ್ಲಿರುವ ಗೊಲ್ಲರ ಜಾತಿ ಹನುಮಯ್ಯ ಎಂಬವನ ಮಗ 13 ವರ್ಷದ ಸಂಜೀವ ಎಂಬುವನು ಬೆಂಗಳೂರು ಗಲಭೆಯಾದ 10-15 ದಿನಗಳ ಮೇಲೆ ಮನೆಬಿಟ್ಟವನು ಇನ್ನೂ ಪತ್ತೆಯಾಗಿಲ್ಲವೆಂದು ವೀರಕೇಸರಿ ಪತ್ರಿಕೆಯು ತಿಳಿಸುತ್ತದೆ.

ನನ್ನ ಗಾಯದಿಂದ ಗುಂಡು ತೆಗೆದರು.

ಗ್ಯಾಸ್‌ಲೈಟ್ ಹೊತ್ತುಕೊಂಡು ಹೋಗಿದ್ದ ಹನುಮಂತಪ್ಪನು ತನಗೆ ಗುಂಡಿನ ಏಟು ಬಿತ್ತೆಂತಲೂ, ಅದನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೆಗೆದರೆಂತಲೂ ಸಾಕ್ಷಿ ಹೇಳಿದನು. ಅಬ್ಬಾಸ್ ಖಾನರ ಮನೆಯ ಮೇಲು ಮಹಡಿಯಿಂದ ಕರಿ ಲಾಂಗು ಕೋಟು ಹಾಕಿಕೊಂಡಿದ್ದ ಒಬ್ಬನು ಗುಂಡು ಹಾರಿಸುತ್ತಿದ್ದನೆಂದೂ ಹೇಳಿದನು.

ಮೋಟಾರಿಗೆ ಅಡ್ಡಲಾಗಿ ಮಲಗಿದ್ದ ಮುದುಕಿ.

ಲಾಹೋರ್‌ನಲ್ಲಿ ಪಂಜಾಬ್ ಗೌರ್ನರ್‌ರವರು ರಭಸದಿಂದ ಮೋಟಾರು ಬಿಟ್ಟುಕೊಂಡು ಹೋಗುತ್ತಿದ್ದಾಗ ಐವತ್ತು ವಯಸ್ಸಿನ ಮುದುಕಿಯೊಬ್ಬಳು ಮೋಟಾರಿಗೆ ಅಡ್ಡಲಾಗಿ ಮಲಗಿಕೊಂಡಳು. ಡ್ರೈವರನು ಯುಕ್ತಿಯಿಂದ ಅವಳಿಗೆ ಪ್ರಾಣಾಪಾಯವಿಲ್ಲದಂತೆ ಮೋಟಾರನ್ನು ತಿರಗಿಸಿಕೊಂಡು ಹೋದನು. ಮರಣದ ದಂಡನೆಯನ್ನು ವಿಧಿಸಿದ್ದ ತನ್ನ ಮಗನಿಗೆ ಕ್ಷಮಾಪಣೆಯನ್ನು ಕೇಳಿಕೊಳ್ಳುವುದಕ್ಕಾಗಿ ಈ ಮುದುಕಿಯು ಗೌರ್ನರ್ ಕೂಡ ಮಾತಾಡಬೇಕೆಂದಿದ್ದಳು.

Printed and published by P. R. Ramaiya, at Sri Rama Press, D. Subbiah Road, M[illegible]

ತಾಯಿನಾಡು.

ಪ್ರತಿದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು..

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |

ಸಂಪುಟ ೧]   ಶನಿವಾರ ೨೦ ಅಕ್ಟೋಬರ್, ೧೯೨೮

ನರ್ಮ ವಿಲಾಸ —

ಈ ಅದ್ಭುತಾಷಧಿಯನ್ನು ಸೇವಿಸಿದರೆ ... ವದಿಲ್ಲ. ಅದ ಸೇವನೆಯ ಮತ್ತು ಅನುಪಾನ ...

ಕ್ರಯ ...

ವಿಳಾಸ:—

ನಂ. ೯೫ ...

ದ್ ಷಧಿಯು. ಮಲಬದ್ದ, ಅಗ್ನಿಮಾಂದ್ಯ ... ಬಲು ರಕ್ತಮೂಲ ಕ್ಷಯಮೂಲ ಮತ್ತು ... ಬೆಲೆ ಆಣೆ ೦—೮—೦

ಅಶ್ವಗಂಧ ಚೂರ್ಣ—ಧಾತುನಷ್ಟಕ್ಕೆ ... ಬೆಲೆ ೦—೬—೦

ಚ್ಯವನಪ್ರಾಶ—ಕೆಮ್ಮು, ಉಬ್ಬಸ, ಕ್ಷಯ ... ಗಳನ್ನು ಪರಿಹರಿಸುವುದು, ಬಲ, ಕಾಂತಿ, ಪುಷ್ಟಿ ...

ತಾಯಿನಾಡು

[illegible] 10—1928

ದಿವಾನರ ಅಪರಾಧಗಳು ?

(1) ಅಂಬಾರಿಯ ಮೇಲೆ ಕೂತಿದ್ದು.

(2) ದರ್ಬಾರಿಗೆ ಟೋಪಿ ಹಾಕಿಕೊಂಡು ಹೋದದ್ದು.

ಮಂಜರಾಬಾದ್ ತಾಲ್ಲೂಕು ಕಾಫಿ ಪ್ಲಾಂಟರ್ ಮಿ॥ ಎಂ. ಸಿ. ಮಲ್ಲಪ್ಪನವರು ಕಮಿಟಿಯ ಮುಂದೆ ಹೇಳಿದ್ದೇನಂದರೆ:—ಮಿರ್ಜಾರವರು ಬೆಂಗಳೂರು ಜ್ಯೂಬಿಲೀ ಮೆರವಣಿಗೆಯಲ್ಲಿಯೂ, ಮೈಸೂರು ಜಂಬೂ ಸವಾರಿ ಮೆರವಣಿಗೆಯಲ್ಲಿಯೂ ಶ್ರೀಮನ್ ಮಹಾರಾಜರೊನೆ ಕೂತು ಹೋದದ್ದು ಅನೇಕ ಹಿಂದೂಗಳ ಮನಸ್ಸಿಗೆ ನೋವನ್ನುಂಟುಮಾಡಿದೆ. ಹಿಂದೂಗಳ ಭಾವನೆಯಂತೆ ಅಂಬಾರಿಯ ಮೇಲೆ ಕೂಡುವುದು ಧರ್ಮಸಂಬಂಧವಾದುದೆಂದೂ, ಅದಕ್ಕೆ ಮಹಾರಾಜರಿಗೆ ಹಕ್ಕಿದೆಯೇ ಹೊರ್ತು ಇತರರಿಗೆ ಹಕ್ಕಿಲ್ಲವೆಂದೂ ರೂಢಮೂಲವಾಗಿದೆ. ಇದರಿಂದ ಮಿರ್ಜಾರವರಿಗೆ ಅನವಶ್ಯಕವಾಗಿ ದೂರು ಬಂದಿತು. ಮತ್ತು ದಿವಾನರು ದರ್ಬಾರಿಗೆ ರು[illegible] ಹಾಕಿಕೊಳ್ಳದೆ [illegible]ಯಲ್ಲಿ ಬರುವುದು ಅನೇಕರಿಗೆ ಬಹಳ ಅಸಮಾಧಾನ [illegible] ಇಂಡಿಯಾದಲ್ಲಿ ಹುಟ್ಟಿಬೆಳೆದ ಸರ್. ಬ್ಯಾನರ್ಜಿಯವರೂ ಕೂ[illegible] ಸೇರಿದವರಾದಾಗ್ಯೂ ದರ್ಬಾರಿಗೆ ರುಮಾಲು ಹಾಕಿಕೊಂಡು [illegible] ಮಹಮ್ಮದೀಯರೂ ಕೂಡ ದರ್ಬಾರಿಗೆ ರುಮಾಲನ್ನು [illegible].

ಅಬ್ಬಾಸ್ ಖಾನರನ್ನು ಅಧ್ಯಕ್ಷರಾಗಿ ಕೂರಿಸಿದ್ದು.

ಎಂ. ಸಿ. ಮಲ್ಲಪ್ಪನವರು ಅಬ್ಬಾಸ್ ಖಾನರ ಅಧ್ಯಕ್ಷತೆ ವಿಷಯದಲ್ಲಿಯೂ ಅಸಮಾಧಾನವನ್ನು ಸೂಚಿಸಿದರು. ಅಬ್ಬಾಸ್ ಖಾನರಿಗೆ ಬೆಂಬಲ ಕೊಡತಕ್ಕವರನ್ನೇ ಮುನಿಸಿಪಾಲಿಟಿಗೆ ನಾಮಿನೇಟ್ ಮಾಡಿದ್ದು ಬಹಳ ಅನ್ಯಾಯವೆಂದು ತಿಳಿಸಿದರು.

ಮಹಮ್ಮದೀಯರ ಪೂರ್ವಸಿದ್ಧತೆ.

ಜುಲೈ 30 ನೇ ತಾ॥ ರಾತ್ರಿ ಮಹಮ್ಮದೀಯರು ಮಾಡಿಕೊಂಡಿದ್ದ ಪೂರ್ವ ಸಿದ್ಧತೆಯ ವಿಷಯವಾಗಿ ಎಂ. ಸಿ. ಮಲ್ಲಪ್ಪನವರು ಕಮಿಟಿಯ ಮುಂದೆ ಈ ರೀತಿಯಾಗಿ ಹೇಳಿದರು.

ಪ್ರಶ್ನೆ:—ಮಹಮ್ಮದೀಯರ ಪೂರ್ವಸಿದ್ಧತೆಯು ನಿಮಗೆ ಹೇಗೆ ಗೊತ್ತು? ಉತ್ತರ:—[illegible] ಹಂಚಿದ್ದರು. ಪ್ರ:—ಹೊಡೆದಾಟಕ್ಕೋ? ಉ:—[illegible] ಪ್ರ:—ಅದು ನಿಮಗೆ ಹೇಗೆ ಗೊತ್ತಾಯಿತು? ಉ:—ಅದು ಪ್ರತಿಯೊ[illegible] ಅದೇ ಮಾತಾಡುತ್ತಿದ್ದರು. ಪ್ರ:—ಇತರರು [illegible] ಮಾತನಾಡಲಿಲ್ಲ. ಉ:—ಬಹುಶಃ ಅವರಿಗೆ ಸರ್ಕಾರದ ಹೆದರಿಕೆ ಇದ್ದಿರಬಹುದು. ನನಗೂ ಅಬ್ಬಾಸ್ ಖಾನರಿಗೂ ನಡೆದ ಮಾತುಗಳನ್ನು ಅಂತರಂಗದಲ್ಲಿ ಹೇಳುವೆನು. ಪ್ರ:—ಅಬ್ಬಾಸ್ ಖಾನರ ಮನೆಯಲ್ಲಿ ರಕ್ತವನ್ನು ತೊಳೆದಿದ್ದರೆಂದು ಧರ್ಮಪ್ರಕಾಶ ಚಂದ್ರೇಗೌಡರಿಗೆ ತಿಳಿಸಿದಿರೆಂದು ಹೇಳುತ್ತೀರಿ. ಅವರು ಇಲ್ಲ ಎಂದು ಹೇಳುತ್ತಾರೆ. ಉ. ಆ ರೀತಿ ಹೇಳುವುದು ಧರ್ಮಪ್ರಕಾಶರಿಗೆ ಯೋಗ್ಯವಲ್ಲ. ಅಧ್ಯಕ್ಷರು:—ನೀವು ತೊಂದರೆಗೆ ಸಿಕ್ಕುತ್ತೀರಿ. ಉ:—ಸ್ವಾಮಿ ತಾವು ದಯವಿಟ್ಟು ಚಂದ್ರೇಗೌಡರ ಮೋಟಾರ್ ಡ್ರೈವರನ್ನೂ ಅವರ ಇಬ್ಬರ ವೃಕ್ಷರನ್ನೂ ಪರೀಕ್ಷೆ ಮಾಡಿ ಅವರಿಬ್ಬರೂ ನಿಜವಾದ ಕೈಫಿಯತ್ತನ್ನು ಕೊಡದೇ ಹೋದರೆ ದೇವರು ಅವರಿಗೆ ತಕ್ಕ ಶಿಕ್ಷೆಯನ್ನು ಕೊಡುತ್ತಾನೆ. ನನಗೂ ಅಬ್ಬಾಸ್ ಖಾನರಿಗೂ ಎಂಟು ವರ್ಷಗಳಿಂದ ಸ್ನೇಹವಿದೆ. ನಾನು ಒಬ್ಬ ಕಟ್ಟರ್ ಲಿಂಗಾ[illegible]

ಅಪ್ರಸಕ್ತವಾದ ಪ್ರಶ್ನೆ.

[illegible] ಎಂ. ಸಿ. ಮಲ್ಲಪ್ಪನವರಿಗೆ ಹಾಕಿದ ಪ್ರಶ್ನೆ—ಚಂದ್ರೇಗೌಡರು ನಿಮ್ಮ ವಿಷಯವಾಗಿ ನಿಮ್ಮ ಮಾವನವರ ಕೂಡ ಏನಾದರೂ ವ್ಯವಹಾರ ನಡೆಸಿದ್ದರೋ? ಉ:—ಹೌದು ವ್ಯವಹಾರ ನಡೆಸಿದರು. ಅಧ್ಯಕ್ಷರು:—ಹೌದು ವ್ಯವಹಾರ ನಡೆಸಿದರು. ಅಧ್ಯ:—ಈ ಪ್ರಶ್ನೆಗೆ ಪ್ರಸಕ್ತವೇನು? ನಾಗಪ್ಪನವರು:—ಮಲ್ಲಪ್ಪನವರು ಚಂದ್ರೇಗೌಡರನ್ನು ಸುಳ್ಳು ಹೇಳಿದರೆಂದು ಹೇಳಿದರು. ಅದಕ್ಕೋಸ್ಕರ ಕೇ[illegible] ಎಂದು ಹೇಳಿದರು.

ಮಲ್ಲಪ್ಪನವರು:—[illegible] ಅವರು ಹೇಳಿದ್ದು ನಿಜವೆಂದು ಹೇಗೆ ಆಗು[illegible]

ಅಂಬಾರಿಯ ಮೇಲೆ ದಿವಾನರು.

ಶ್ರೀ॥ ತಗಡೂರು ರಾಮಚಂದ್ರರಾಯರು ಶ್ರೀಮನ್ಮಹಾರಾಜರವರಿಗೆ ಬರೆದುಕೊಂಡಿರುವ ಒಂದು ಅರ್ಜಿಯಲ್ಲಿ ಈ ಕೆಳಗೆಕಂಡ ಅಂಶಗಳನ್ನು ಸೂಚಿಸಿರುವರು.

ಮಹಾಸ್ವಾಮಿಯವರ ಸಿಲ್ವರ್ ಜ್ಯೂಬಿಲೀ ಮಹೋತ್ಸವವು ಬೆಂಗಳೂರಿನಲ್ಲಿ ನಡೆದಾಗಲೂ ಹೋದಸಾರಿ ನವರಾತ್ರಿ ಕಾಲದಲ್ಲಿ ಮಹಾಸ್ವಾಮಿಯವರು ಜಂಬೂ ಸವಾರಿಗೆ ಚಿತ್ತೈಸಿದಾಗಲೂ ಈಗಿನ ದಿವಾನರವರು ಅಂಬಾರಿಯ ಮೇಲೆ ಕುಳಿತ್ತಿದ್ದುದು ಮಹಾಜನಗಳ ಮನಸ್ಸಿನಲ್ಲಿ ಅತ್ಯಂತ ವ್ಯಸನವನ್ನು ಉಂಟುಮಾಡಿದೆ. ಅಂಬಾರಿಯಮೇಲೆ ಯಾವ ಅಧಿಕಾರಿಯೇ ಆಗಲಿ ಕೂತುಕೊಳ್ಳುವ ವಾಡಿಕೆಯು ಇರುವುದಿಲ್ಲ. ರಾಜಮನೆತನಕ್ಕೆ ಅತ್ಯಂತ ಸಮೀಪ ಬಂಧುಗಳಾಗಿ ದಿವಾನಗಿರಿಯನ್ನು ಮಾಡುತ್ತಿದ್ದ ಸರ್ ಎಂ. ಕಾಂತರಾಜೇ ಅರಸಿನವರಿಗೂ ಕೂಡ ಈ ಸ್ಥಾನವು ದೊರೆಯಲಿಲ್ಲ. ಹೀಗಿರುವಲ್ಲಿ ಈಗಿನ ದಿವಾನರಿಗೆ ಮಾತ್ರ ಅವಕಾಶವಾದುದಕ್ಕಾಗಿ ಪ್ರಜೆಗಳು ಬಹಳ ಅಸಮಾಧಾನದಿಂದಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುವುದರಲ್ಲಿ ಈಗಿನ ದಿವಾನರವರು ಮುಸಲ್ಮಾನರಾದ್ದರಿಂದ ಭಿನ್ನಾಭಿಪ್ರಾಯ ಉಂಟಾಗಬಹುದೆಂದು ಅನುಮಾನಪಡುವುದಕ್ಕೆ ಅವಕಾಶವಾಗುತ್ತದಲ್ಲಾ ಎಂದು ಅನೇಕ ದೊಡ್ಡ ಮನುಷ್ಯರುಗಳು ಮನನೊಂದುಕೊಳ್ಳುತ್ತಿದಾರೆ. ದಿವಾನರುಗಳು ಯಾರೇ ಆಗಲೀ ಅಂಬಾರಿಯಮೇಲೆ ಕೂರುವುದು ಸರಿಯಲ್ಲವೆಂದೂ ನಮ್ಮನ್ನಾಳುವ ಮಹಾ ಪ್ರಭುಗಳೊಬ್ಬರಿಗೇ ಆ ಪದವಿಯೆಂದೂ ಪ್ರಜೆಗಳು ತಿಳಿದುಕೊಂಡಿರುತ್ತಾರೆ. ರಾಜಬಂಧುವರ್ಗದವರೂ ಸಹಾ ಬಹಳ ವಿಷಾದಪಡುತ್ತಿದಾರೆ. ಎಲ್ಲೆಲ್ಲಿ ನೋಡಿದರೂ ಈ ಮಾತೇ ತುಂಬಿ ತುಳುಕಾಡುತ್ತಿದೆ. ಮೂರುಮನೆ ಹಳ್ಳಿಯಲ್ಲೂ ಕೂಡಾ ಇದೇ ಮಾತಾಗಿದೆ. ನವರಾತ್ರೆ ಉತ್ಸವವು ಸಮೀಪಿಸುತ್ತಿರುವುದರಿಂದ ಈ ಅಸಮಾಧಾನವು ಮತ್ತಷ್ಟು ಪ್ರಬಲವಾಗುತ್ತಿದೆ. ಮಹಾಜನಗಳ ಅಭಿಪ್ರಾಯವನ್ನು ಚಿತ್ತಕ್ಕೆ ತಂದುಕೊಂಡು ನ್ಯಾಯಾನ್ಯಾಯಗಳನ್ನು ಪರಿಶೀಲಿಸಿ ಸೂಕ್ತ ತೋರಿದಂತೆ ಮಹಾಜನಗಳ ಮನಸ್ಸನ್ನು ಸಂತೋಷಪಡಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತೇನೆ.

ಕಣಿಯರ ಪತ್ರಿಕೆ.

ಈ ದಿನ ಶ್ರೀ॥ ತಗಡೂರು ರಾಮಚಂದ್ರರಾಯರು ಸತ್ಯಾಗ್ರಹ ಪ್ರೆಸ್ಸಿನಲ್ಲಿ ಕಣಿಯರ ಪತ್ರಿಕೆಯನ್ನು ಮುದ್ರಿಸಿ ಪ್ರಕಟಿಸಿದರು. ಯಾವ ಅಡ್ಡಿಯೂ ಇರಲಿಲ್ಲ. ಪೋಲೀಸಿನವರೂ ಮಹಾಜನರೂ ಪತ್ರಿಕೆಯನ್ನು ಕೊಂಡು ಕೊಂಡರು

ಚಂದ್ರರಾಜನ ಗುಂಡು.

ಡಾ॥ ಎಸ್. ಸುಬ್ರಾಯರವರು ಕಮಿಟಿಯ ಮುಂದೆ ಸಾಕ್ಷಿ ಕೊಡುವಾಗ ಚಂದ್ರರಾಜನ ಗುಂಡನ್ನು 10-15 ನಿಮಿಷದಲ್ಲಿ ತೆಗೆಯುವದಾಗಿಯೂ ಕಮಿಟಿಯ ಮೆಂಬರುಗಳು ಬೇಕಾದರೆ ಸಮಕ್ಷಮ ಇರಬಹುದೆಂದೂ ಹೇಳಿದರು. ಗುಂಡು ಬಕ್‌ಷಾಟಿನದಲ್ಲ ಬುಲೆಟ್‌ನದೆ ಇರಬಹುದೆಂದು ಹೇಳಿದರು,

ವಿಚಾರಣೆಯ ಕಮಿಟಿ.

ವಿಚಾರಣೆಯ ಕಮಿಟಿಯು 20 ನೇ ತಾ॥ ಶನಿವಾರದ ವರೆಗೂ ಕೂಡುತ್ತದೆ. 30 ನೇ ತಾ॥ ನ ವರೆಗೂ ಕಮಿಟಿಯು ಕೆಲಸವನ್ನು ನಡೆಸುವುದಿಲ್ಲ.

ಹಿಂದಿಲ್ಲ ಮುಂದೆ.

ಮ॥ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರು ಕೊಟ್ಟ ಕೈಫಿಯತ್ತಿನಲ್ಲಿ ವಿದ್ಯಾರ್ಥಿಗಳ ಚಳುವಳಿಯ ಹಿಂದೆ ಯಾರೂ ಇರಲಿಲ್ಲ, ಆ ಚಳುವಳಿಯ ಮುಂದೆ ಇದ್ದರು. ಮುಖಂಡರಾಗಿದ್ದವರು ಮ॥ ಗಳಾದ ಭೀಮರಾಯರು, ಸುಬ್ರಹ್ಮಣ್ಯಂ ಮತ್ತು ರಾಮಲಾಲ್ ತಿವಾರಿಯವರು. ಎಂದು ಹೇಳಿದರು.

ಸರ್ಕಾರವೆಂದರೆ ದಿವಾನರು.

ನೀಲಗಿರಿ ಸಂಜೀವಯ್ಯನವರು ಕೊಟ್ಟ ಕೈಫಿಯತ್ತಿನಲ್ಲಿ ಬ್ರಾಹ್ಮಣರು [illegible]ಕೂರಿಯನ್ನು ಮಾಡುತ್ತಿರುವರೆಂದೂ ಸರ್ಕಾರವನ್ನು ಕಿತ್ತುಹಾಕುವುದೆಂದರೆ ದಿವಾನರನ್ನು ಕಿತ್ತುಹಾಕುವುದೆಂದೂ ಅಭಿಪ್ರಾಯಪಟ್ಟಿರುವರು.

ಮೈಸೂರಿನಲ್ಲಿ ಜವಾಬ್ದಾರಿ ಸರಕಾರವಿಲ್ಲ.

ಕೆ. ಟಿ. ಭಾಷ್ಯಂರವರು ಕೊಟ್ಟ ಕೈಫಿಯತ್ತಿನಲ್ಲಿ ಮೈಸೂರಿನಲ್ಲಿ ಪ್ರಜೆಗಳಿಗೆ ಯಾವ ಜವಾಬ್ದಾರೀ ಸರಕಾರಪದ್ಧತಿಯೂ ಇಲ್ಲವೆಂದು ಹೇಳಿದರು.

Printed and published by P. R. Ramaiya, at Sri Rama Press, D. Subbiah Road, Mysore.

||ವಂದೇ ಮಾತರಂ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಆಫೀಸ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಚಂದಾ [illegible]

ಸಂಪುಟ ೧] ಸೋಮವಾರ ೨೨ ಅಕ್ಟೋಬರ, ೧೯೨೮ [ಸಂಚಿಕೆ [illegible]

[illegible] ತಾಯಿನಾಡು ಹೊರಡುವುದಿಲ್ಲ.

ತಾಯಿನಾಡು

22—10—1928

ಸಂಜೀವರಾಯರ ಹೇಳಿಕೆ.

ಮ|| ವಿ. ಎಸ್. ಸಂಜೀವರಾಯರು ಬಹಳ ಧೈರ್ಯವಾಗಿಯೂ, ನಿದಾಕ್ಷಿಣ್ಯವಾಗಿಯೂ ಸಾಕ್ಷಿಯನ್ನು ಕೊಟ್ಟರು. ಅಧ್ಯಕ್ಷರು ಇವರ ಧೈರ್ಯವನ್ನೂ ಸಾಹಸವನ್ನೂ ಮೆಚ್ಚಿದರು. ಇತರ ಮೆಂಬರುಗಳು ಪ್ರಶ್ನೆಗಳನ್ನು ಹಾಕಲು ಹಿಂತೆಗೆದರು. ಸಂಜೀವರಾಯರು ಹೀಗೆ ಹೇಳಿದರು.

ನಾನು ಅಣೆ ಮಾಡಬೇಕೆಂದಿದ್ದೇನೆ. ಇಲ್ಲಿ ಒಬ್ಬರು ಛೀಫ್ ಕೋರ್ಟಿನ [illegible]. ಕೆಲವರು ಸುಳ್ಳು ಹೇಳಿರುವರು. ನಾನು ನಿಂತುಕೊಂಡೇ [illegible].

ಅಧ್ಯಕ್ಷರು—ಇದು ವಿಲಕ್ಷಣವಾಗುವುದು. ಇದು ಕೋರ್ಟಲ್ಲ. ಮೊದಲಿನಿಂದಲೂ ನೀವು ಬಹಳ [illegible] ಧೈರ್ಯವನ್ನೂ ತೋರಿಸಿದ್ದೀರಿ.

ಸಂ—ಕಮಿಟಿಗೆ ಮರ್ಯಾದೆಯನ್ನು ತೋರಿಸುವದಕ್ಕೋಸ್ಕರಲೂ ನಾನು ಹೇಳುವುದೆಲ್ಲ ಸತ್ಯವೆಂದು ನಿಮಗೆ ಮನವರಿಕೆಯಾಗುವುದಕ್ಕೂ ನಾನು ಪ್ರಮಾಣ ಮಾಡಿ ನಿಂತುಕೊಂಡೇ ಹೇಳುತ್ತೇನೆ.

ಅಧ್ಯ—ನೀವು ನಮ್ಮ ನಿಯಮಗಳನ್ನು ಅನುಸರಿಸಿ ನಡೆಯಬೇಕು.

ಸಂ—ನಿಮ್ಮ ನಿಯಮಗಳಿಗೆಲ್ಲಾ ಕಾರಣಗಳು ಬೇಕು.

ಅಧ್ಯ—ಅವುಗಳನ್ನೆಲ್ಲಾ ನಮಗೆ ಬಿಡಿ.

[illegible] ಸಿ. ಪಿ. ರಾಮಸ್ವಾಮಿ ಅಯ್ಯರ್ ರವರು ತಮಗೆ ಬರೆದಿರುವ ಪತ್ರವೊಂದನ್ನು ಓದಿದರು. ಅದರಲ್ಲಿ ಅವರು ಮೈಸೂರು ದಿವಾನಗಿರಿಗೆ ಆಶೆಪಡುವುದಾಗಲೀ ಅಥವಾ ದಿವಾನಗಿರಿಗೆ ಬರುವುದಾಗಲೀ ಹುಚ್ಚು ಕಲ್ಪನವೆಂದೂ, ತಮಗೆ ವಕೀಲೀ ವೃತ್ತಿಯಿಂದ ಬರುವ ಆದಾಯವು ತಮಗೆ ಸಾಕೆಂದೂ ಅಜ್ಬಿಸ್ ಖಾನರು ಯಾರೋ ಅವರಿಗೆ ತಿಳಿಯದೆಂದೂ ಅವರು ಏನೇ ಆಗಿದ್ದರೂ ತಮಗೆ ಚಿಂತೆಯಿಲ್ಲವೆಂದೂ, ತಾವು ಮಿ|| ಮಿರ್ಜಾರವರಿಗೆ ಮಿತ್ರರೆಂದೂ ಮಹಾರಾಜರವರ ವಿಷಯದಲ್ಲಿ ಅವರಿಗೆ ಬಹಳ ಗೌರವವಿದೆಯೆಂದೂ ಮೈಸೂರಿನವರು ತಮ್ಮ ವಿಷಯವಾಗಿ ಸುಳ್ಳು ಸಂಗತಿಗಳನ್ನು ಹುಟ್ಟಿಸಿದರೆ ಅವರು ಮೈಸೂರಿಗೆ ಬರುವುದನ್ನೇ ಬಿಟ್ಟುಬಿಡುವರೆಂದೂ ಅಯ್ಯರ್‌ರವರು ಬರೆದಿದ್ದರು.

ಅಧ್ಯ—ಈ ಪತ್ರವನ್ನು ನೀವು ಪ್ರಕಟಿಸಬೇಡಿ.

ಸಂ—ಅದು ನನಗೂ ಸಿ. ಪಿ. ರಾಮಸ್ವಾಮಿ ಅಯ್ಯರ್ ರವರಿಗೂ ಸಂಬಂಧಪಟ್ಟ ವಿಷಯ. ಅಧ್ಯ—ಸುಮ್ಮ ಸುಮ್ಮನೆ ಅವರ ಹೆಸರನ್ನು ಎಳೆದುದಕ್ಕಾಗಿ [illegible]. ಸಂ—ಹೀಗೆಂದು ನಾನು ಅವರಿಗೆ ಬರೆಯಲೇ? [illegible] ಇದ್ದೇನಲ್ಲಾ. ಮೈಸೂರಿನ ಹೆಸರು ಕುಲ[illegible]. ಅಧ್ಯ—ಅದು ನಿಮ್ಮ ಅಭಿಪ್ರಾಯವೇನೋ? ಉ—ನನ್ನ ಅಭಿಪ್ರಾಯ ಮಾತ್ರವೇ ಅಲ್ಲ. ಇಡೀ ಇಂಡಿಯಾದೇಶದ ಅಭಿಪ್ರಾಯ. ಪ್ರ—ಕಮಿಟಿಯಲ್ಲಿ ಕೊರತೆಯಿದೆ ಎಂದಿರಲ್ಲಾ? ಉ—[illegible]; ಕಮಿಟಿಯಲ್ಲಿ ಹೆಂಗಸರು ಯಾರೂ ಇಲ್ಲ. ಇಬ್ಬರು ಹೆಂಗಸರ ಮೇಲೆ ಅತ್ಯಾಚಾರ ನಡೆಸಲ್ಪಟ್ಟಿದೆ. ಒಬ್ಬ ಹೆಂಗಸನ್ನು ವಿಚಾರಣೆ ಮಾಡಲಿಕ್ಕೆ ಯಾರನ್ನಾದರೂ ಕಳುಹಿಸಿ ಎಂದಾಗ ಒಬ್ಬ ಗಂಡಸನ್ನು ಕಳುಹಿಸಿದರು. ಗಂಡಸು ಹೆಂಗಸನ್ನು ವಿಚಾರಣೆ ಮಾಡುವುದಕ್ಕಾಗುವುದಿಲ್ಲ. ಪೋಲೀಸಿನವರು ಸಾಯಬೇಕು; ಇಲ್ಲ ಸಾಯಿಸಬೇಕು. ಹಾಗೆ ಮಾಡದೆ ಓಡಿಹೋದರು!

ಸರ ಗಂಕ್ಕರತಲೂ ಮುಖಂಡರಲ್ಲಿ ಹೆಚ್ಚು ಭರವಸೆ.

ಕೆ. ಟಿ. ಭಾಷ್ಯಂರವರು ನಾಗಪ್ಪನವರಿಗೆ ಉತ್ತರ ಹೇಳುತ್ತಾ ಹುಡುಗರಿಗೆ [illegible]

ಗುಂಡಿನೇಟಲ್ಲ; ಮೇಹಜಾಡ್ಯ!

[illegible] ಹನುಮಂತಪ್ಪನು ತನಗೆ ತೊಡೆಯ ಮೇಲೆ ಗುಂಡಿನೇಟು [illegible] ವನ್ನು ಪ್ರದರ್ಶಿಸಿದನಂತರ ಯಾರೋ ಆಸ್ಪತ್ರೆಗೆ ತೆಗೆದುಕೊಂಡು ಹೋದರೆಂದೂ, ಅಲ್ಲಿ ಡಾಕ್ಟರು ಅದನ್ನು ಮೇಹಜಾಡ್ಯವೆಂದು ಹೇಳಿದರೆಂದೂ ಅಜ್ಬಿಸ್ ಖಾನರ ಮನೆಯಿಂದ ಗುಂಡನ್ನು ಹಾರಿಸಿದವರನ್ನೂ ಅವರ ಗಡ್ಡವನ್ನೂ [illegible]

ಅಂಬಾರಿಯ ರಹಸ್ಯ.

(ಲೇ:—ಕವಿಭೂಷಣ ಬೆಟಗೇರಿ ಕೃಷ್ಣಶರ್ಮ.)

ವೈದಿಕಧರ್ಮೀಯರ ಎಲ್ಲ ಹಬ್ಬಗಳಲ್ಲಿ ನವರಾತ್ರಿ ಹಬ್ಬವೊಂದು ವಿಶಿಷ್ಟರೀತಿಯದು. ಚಾತುರ್ವರ್ಣ್ಣದವರೆಲ್ಲರಿಗೂ ಉಚಿತವಾದ ಪೂಜಾ ವ್ರತಗಳನ್ನು ಈ ಸಮಯದಲ್ಲಿ ಹೇಳಲಾಗಿದೆ. ಕ್ಷತ್ರಿಯರಾಜರಂತೂ ಅನಾದಿಕಾಲದಿಂದಲೂ ಈ ಹಬ್ಬವನ್ನು ರಾಷ್ಟ್ರೀಯಉತ್ಸವವೆಂಬುದಾಗಿ ನೆರವೇರಿಸುತ್ತ ಬಂದಿರುವರು. ನಮ್ಮ ಕನ್ನಡಕವಿಸಮ್ರಾಟನಾದ ರತ್ನಾಕರ ವರ್ಣಿಯು ತನ್ನ 'ಭರತೇಶ ವೈಭವ' ವೆಂಬ ಕಾವ್ಯದ ನವರಾತ್ರಿ ಸಂಧಿ ಎಂಬ ಭಾಗದಲ್ಲಿ ಈ ಹಬ್ಬದ ರೀತಿನಡತೆಗಳನ್ನು ನಮ್ಮ ಆರ್ಯ ಸಂಸ್ಕೃತಿಗೆ ಅನುಗುಣವಾಗಿ ಒಳ್ಳೇ ಸೊಗಸಾಗಿ ವರ್ಣಿಸಿರುವನು. ವಿಜಯನಗರದ ದೊರೆಗಳು ಮಾಡುತ್ತಿದ್ದ ಈ ನಾಡಹಬ್ಬದ ವರ್ಣನೆಯ ಕಥೆಗಳನ್ನು ಇತಿಹಾಸವನ್ನರಿತ ಕನ್ನಡಿಗರು ತಿಳಿದೇ ಇರುವರು. ಮೈಸೂರು ಒಡೆಯರು ಸನಾತನಸಂಸ್ಕೃತಿಯ ದರ್ಶಕವಾದ ಈ ಹಬ್ಬವನ್ನು ಪರಂಪರೆಗನುಸಾರವಾಗಿ ಇದುವರೆಗೂ ನಡೆಯಿಸುತ್ತ ಬಂದುದು ಅಖಿಲ ಕರ್ನಾಟಕದ ಜನರೆಲ್ಲರಿಗೂ ಅಭಿಮಾನದ ಸಂಗತಿಯು

ಇದು ಸಂಸ್ಕೃತಿ ಸಂರಕ್ಷಕವಾದ ಹಬ್ಬವಾದುದರಿಂದ ಪರಂಪರೆಯಿಂದ ನಡೆದುಕೊಂಡುಬಂದಿರುವ ಸಾಂಸ್ಕೃತಿಕ ನಿರ್ಬಂಧಗಳಲ್ಲಿ ಕುಂದುಕೊರತೆಗಳುಂಟಾಗದಂತೆ ಯತ್ನಿಸುವುದು ಮಹಾರಾಜರ ಮತ್ತು ಅಖಿಲಕರ್ನಾಟಕದ ಮಹಾಜನರ ಕರ್ತವ್ಯವೆಂದು ನನ್ನ ಭಾವನೆ. ದಸರೆಯ ದಿನ ಶಮೀ ಎಂಬ ಹೆಸರಿನಿಂದಿರುವ ಶಕ್ತಿ ಪೂಜೆಯನ್ನು ಮಾಡಿ ದಿಗ್ವಿಜಯಕ್ಕಾಗಿ ಸೀಮೋಲ್ಲಂಘನಮಾಡುವುದು ಮೊದಲಿನಿಂದಲೂ ನಡೆದುಬಂದ ರೀತಿ. ಈ ರೀತಿಗನುಸಾರವಾಗಿಯೇ ಜಂಬೂಸವಾರಿಯು ಹೊರಡುತ್ತಿರುವುದು. ನವರಾತ್ರಿಯ ಒಂಬತ್ತು ದಿನಗಳಲ್ಲಿಯೂ ರಾಷ್ಟ್ರದ ಧಾರಣೆ ಪೋಷಣೆಗೆ ಆವಶ್ಯಕವಾಗಿರುವ ಶಕ್ತಿಸಂಚಯವನ್ನು ಮಾಡುವುದಕ್ಕಾಗಿ ರಾಜಾಧಿರಾಜರುಗಳು ಅಸಿಧಾರಾವ್ರತದಿಂದಿದ್ದುಕೊಂಡು ಶಕ್ತಿದೇವತೆಯನ್ನು ಉಪಾಸಿಸುವುದು ಮೊದಲಿನಿಂದಲೂ ನಡೆದುಬಂದ ರೀತಿ. ಇದೀಗ ಇಲ್ಲಿಯೂ ಅನುಸರಿಸಲ್ಪಡುತ್ತಿರುವುದು, ಸಹಜ: ಎಲ್ಲವೂ ಆಯಿತು. ಮಹಾರಾಜರೊಡನೆಯೇ ಅಂಬಾರಿಯಲ್ಲಿ ದಿವಾನರೂ ಕುಳಿತು ಜಯಮಾಡಿಸುವುದು ಇದೆಲ್ಲಿಯ ರೀತಿಯೋ ಕಾಣೆ. ನಮ್ಮ ಸಂಸ್ಕೃತಿಗೆ ವಿರೋಧವಾದುದಿದು.

ರಾಜರೊಡನೆ ಅಂಬಾರಿಯಲ್ಲಿ ಯಾರು ಯಾರು ಕುಳಿತುಕೊಳ್ಳಬಹುದೆಂಬುದು ನಮ್ಮ ಸ್ಮೃತಿಗ್ರಂಥಗಳಲ್ಲಿ ಸರಿಯಾಗಿ ವಿವರಿಸಲ್ಪಟ್ಟಿದೆ. ಅಂಬಾರಿಯಲ್ಲಿ ಕುಳಿತುಕೊಳ್ಳುವುದಕ್ಕೆ ಇರುವ ಅಧಿಕಾರ ಅನಧಿಕಾರಗಳ ನಿರ್ಣಯವನ್ನು ನಾವು ಅದರಲ್ಲಿ ಕಂಡುಕೊಳ್ಳಬಹುದು. "ನಾವಿಷ್ಣುಃ ಪೃಥ್ವೀಪತಿಃ" ಎಂದು ನಂಬುವವರು ಆರ್ಯರು. ಆದುದರಿಂದಲೇ ಆತನೊಡನೆ ಒಂದೇ ಆಸನದಲ್ಲಿ ಕುಳಿತುಕೊಂಡಿರುವುದಕ್ಕೆ ಇನ್ನಾರಿಗೂ ಅಧಿಕಾರವಿಲ್ಲ. ಓಲಗದಲ್ಲಿ ಎಂತಹ ದೊಡ್ಡ ಮನುಷ್ಯರು ಬಂದರೂ ಅವರಿಗಾಗಿ ಒಂದು ಭದ್ರಾಸನವು ಬೇರೆಯಾಗಿ ಸಿದ್ಧವಾಗಿರುತ್ತಿದ್ದಿತು. ಅದಕ್ಕಾಗಿಯೇ 'ಮಹಾರಾಜರೊಡನೆ ಅಂಬಾರಿಯಲ್ಲಿ ದಿವಾನರು' ಕುಳಿತುದಕ್ಕೆ ಆರ್ಯಸಂಸ್ಕೃತಿಯ ಅಭಿಮಾನಿಗಳು ಕೊಂಚ ನೊಂದುಕೊಳ್ಳುವುದು ಸ್ವಾಭಾವಿಕ

ಅಲ್ಲದೆ ವ್ರತಧಾರಿಗಳಾಗಿದ್ದಾಗ ವೇದವನ್ನು ನಂಬದವರ (ಮ್ಲೇಚ್ಛರ) ನ್ನು ಸ್ಪರ್ಶಿಸುವುದೂ ಧರ್ಮದೃಷ್ಟಿಯಿಂದ ಉಚಿತವಾದುದಲ್ಲ. ಪ್ರತಿಯೊಬ್ಬರಿಗೂ ಸ್ವಧರ್ಮವನ್ನು ಅನುಷ್ಠಿಸುವ ಅಧಿಕಾರವುಂಟು. ಮಹಮ್ಮದೀಯರು ನಮಾಜು ಮಾಡುತ್ತಿರುವಾಗ ಹಿಂದುಗಳ (ಕಾಫರರ) ನೆಳಲನಾದರೂ ಸಹಿಸಿಕೊಂಡಿರುವರೋ? ರಾಜಕೀಯ ಪ್ರಪಂಚದಲ್ಲಿ ದಿವಾನರವರು ಮಹಾರಾಜರ ಪ್ರೀತಿಗೆ ಎಷ್ಟು ಪಾತ್ರರಾಗಿದ್ದರೂ ಧಾರ್ಮಿಕ ಸಂದರ್ಭಗಳಲ್ಲಿ ನಮ್ಮ ಧರ್ಮನಿಯಮಗಳನ್ನು ರಕ್ಷಿಸುವದಕ್ಕಾಗಿಯಾದರೂ ಪರಸ್ಪರರು ದೂರವಾಗಿರುವುದು ಕರ್ತವ್ಯ. ಇದು ಧರ್ಮಸೂಕ್ಷ್ಮವು. ಇದನ್ನು ಮಹಾರಾಜರ ದೃಷ್ಟಿಪಥದಲ್ಲಿ ತಂದಿರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ತೋರುವುದು. ಆದರೆ ಇದನ್ನು ಮಾಡುವವರು ಯಾರು? ಲೌಕಿಕರಿಗೆ ತಮ್ಮ ಸಂಸ್ಕೃತಿ ತಿಳಿಯದು. ವೈದಿಕರಿಗೆ ನಿದಾರ್ಕ್ಷಿಣ್ಯವಾಗಿ ಹೇಳಲು ಧೈರ್ಯವಿಲ್ಲ. ಹೀಗಾಗುವುದರಿಂದ ನಮ್ಮ ಪೂರ್ವ ಸಂಸ್ಕೃತಿಗಳು ದಿನದಿನಕ್ಕೂ ಪಾಳುಗುಡಿಗಳಂತೆ ಖಿಲವಾಗುತ್ತಿರುವುದು ದುಃಖದ ಸಂಗತಿ.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

ಪ್ರತಿ ದಿನ ಸಾಯಂಕಾಲ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ,
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { [illegible]
{ [illegible]

ಸಂಪುಟ ೧] ಗುರುವಾರ [illegible] ಅಕ್ಟೋಬರ್, ೧೯೨೮ [ಸಂಚಿಕೆ [illegible]

ತಾಯಿನಾಡು
25 10 – 1928

ದಿವಾನರಿಗೆ ಅಪನಂಬಿಕೆ.

ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಖಾಸಗೀ ಬಾತ್ಮೀದಾರರು ಆ ಪತ್ರಿಕೆಯಲ್ಲಿ ಪ್ರಕಟಿಸಿದ್ದ ದಿವಾನರ ಭೇಟಿಯ ಸಾರಾಂಶವನ್ನು ಖಂಡಿಸಿ ಮದರಾಸು ಜಸ್ಟಿಸ್ ಪತ್ರಿಕೆಯ ಬಾತ್ಮೀದಾರರು ಆ ಪತ್ರಿಕೆಗೆ ಒಂದು ತಂತಿಯ ಸಮಾಚಾರವನ್ನು ಕಳುಹಿಸಿರುವರು. ಅವರು ಹೇಳುವುದೇನೆಂದರೆ, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ದಿವಾನರಿಗೆ ವಿರೋಧವಾಗಿ ಕೆಲಸಮಾಡುತ್ತಿರುವ ಬ್ರಾಹ್ಮಣ ಪಿತೂರಿಯು ಇಲ್ಲ ಎಂದು ನಾನು ನಂಬುತ್ತೇನೆ—ಎಂದು ದಿವಾನರು ಹೇಳಿದ ಹಾಗೆ ಅಭಿಪ್ರಾಯವಾಗುತ್ತಿತ್ತು. ನಾನು ಈ ವಿಷಯವನ್ನು ಶೋಧಿಸಿದೆನು. ನನಗೆ ತಿಳಿದುಬಂದುದೇನೆಂದರೆ, ದಿವಾನರು ಸಂಸ್ಥಾನದಲ್ಲಿನ ಬ್ರಾಹ್ಮಣಸಮುದಾಯವೇ ತಮಗೆ ವಿರೋಧವಾಗಿ ಪಿತೂರಿಯನ್ನು ನಡೆಯಿಸುತ್ತಿರುವರೆಂದು ನಂಬುವುದಿಲ್ಲ. ಆದುದರಿಂದ ಸಂಸ್ಥಾನದ ಕೆಲವು ಪ್ರಮುಖ ಜನರು ಕಮಿಟಿಯ ಮುಂದೆಯೂ, ಸ್ಪೆಷಲ್ ಕೋರ್ಟಿನ ಮುಂದೆಯೂ, ಒಂದು ಕೂಟವಿದೆ—ಆ ಕೂಟದಲ್ಲಿ ಹೆಚ್ಚು ಬ್ರಾಹ್ಮಣರಿದ್ದಾರೆ. ಅವರೆಲ್ಲರೂ ಈಗಿನ ಆಡಳಿತಕ್ಕೂ ಬ್ರಾಹ್ಮಣೇತರರ ಮುಖಂಡರಿಗೂ ವಿರೋಧವಾಗಿ ಚಳುವಳಿಯನ್ನು ನಡೆಯಿಸುತ್ತಿದ್ದಾರೆಂಬುದನ್ನು ದಿವಾನರು ವಿರೋಧಿಸಿಲ್ಲ. ಸರ್ಕಾರದವರು ಈ ವಿಷಯವಾಗಿ ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಅವರು ವಿಶ್ವೇಶ್ವರಯ್ಯ ಕಮಿಟಿಯವರ ಮತ್ತು ಮ್ಯಾಜಿಸ್ಟ್ರೇಟರ ವಿಚಾರಣೆಯ ತೀರ್ಮಾನಗಳ ಫಲಿತಾಂಶವನ್ನು ನಿರೀಕ್ಷಣೆ ಮಾಡುತ್ತಿದ್ದಾರೆ.

ಪಿತೂರಿ ಉಂಟು ಎಂಬ ನಂಬಿಕೆಯು ದಿವಾನರಿಗೂ ಇದೆ ಎಂಬುದು ಸ್ಪಷ್ಟವಾಗುವುದು. ಕಮಿಟಿಯಲ್ಲಿಯೂ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿಯೂ ಈ ಪಿತೂರಿಯ ಪಿಶಾಚಿಯ ಉಚ್ಚಾಟನೆಯು ನಡೆಯುತ್ತಿದ್ದರೂ ದಿವಾನರಿಗೆ ಇನ್ನೂ ಅಪನಂಬಿಕೆ ಇರುವುದು ಆಶ್ಚರ್ಯ. ಇದಕ್ಕೆಲ್ಲಾ ಅವರವರ ಭಾವನೆಯೇ ಮುಖ್ಯ ಕಾರಣ. ಈ ವಿಷಯವಾಗಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಖಾಸಗೀ ಬಾತ್ಮೀದಾರರು ಪುನಃ ದಿವಾನರ ಭೇಟಿಯನ್ನು ತೆಗೆದುಕೊಂಡು ಜಸ್ಟಿಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ತಂತೀ ಸಮಾಚಾರದ ನಿಜಾಂಶವನ್ನು ಪ್ರಕಟಿಸುವರೆಂದು ನಂಬುತ್ತೇವೆ.

ಸಿ. ಆರ್. ರಿ ಸಂಜೀವಯ್ಯನವರ ಕೈಫಿಯತ್ತು.

ಪ್ರಶ್ನೆ—ಬೆಂಗಳೂರು ಗಲಭೆಗೆ ಮುಖ್ಯ ಕಾರಣವೇನು? ಉತ್ತರ:—[illegible] ಸರ್ಕಾರದವರು ಪ್ರೋತ್ಸಾಹ ಮಾಡುತ್ತಿರುವುದನ್ನು ಬ್ರಾಹ್ಮಣರು ಪ್ರತಿಭಟಿಸುತ್ತಿರುವರು. ಇದೇ ಮುಖ್ಯಕಾರಣ. ಮ್ಯುನಿಸಿಪಾಲಿಟಿಗೂ ಇ[illegible] ಸಂಬಂಧವಿಲ್ಲ. ಒಂದು ಕೂಟವಿದೆ. ರಿಟೈರ್ಡ್ ಆಫೀಸರುಗಳೂ ಖಾಸಗೀ ಜನಗಳೂ ಸೇರಿ ನೂರು ಜನಗಳಿರುವರು. ಅವರು ಧನವನ್ನು ಶೇಖರಿಸುತ್ತಿರುವರು. ಮದರಾಸು ಬ್ರಾಹ್ಮಣರೂ ಮೈಸೂರು ಬ್ರಾಹ್ಮಣರೂ ಒಟ್ಟು ಸೇರಿರುವರು. ಗೋಪಾಲಸ್ವಾಮಿ ಅಯ್ಯರ್‌ರವರು ತಮಗೆ ತೋರಿದ ಹಾಗೆ ಬರೆಯುವುದೇ ಇದಕ್ಕೆ ನಿದರ್ಶನ. ಮಿರ್ಜಾರವರು ಮಿಲ್ಲರ್ ಕಮಿಟಿಯ ಆರ್ಡರನ್ನು ರದ್ದುಮಾಡುವರೆಂದು ಬ್ರಾಹ್ಮಣರು ತಿಳಿದಿದ್ದರು. ಆದರೆ ಅವರು ಅದನ್ನು ರದ್ದು ಮಾಡಲಿಲ್ಲ. ಈ ಕಾರಣದಿಂದಲೇ ಬ್ರಾಹ್ಮಣರು ಅವರನ್ನು ಪ್ರತಿಭಟಿಸಿದರು. ಯೂರೋಪಿಯನ್ ದಿವಾನರೂ ಕೂಡ ಬೇಕೆಂದು ಹೇಳಿದರು. ವಿದ್ಯಾರ್ಥಿಗಳು ನಾನು ಅವರ ಸುಸ್ಕಂದ ಚಳುವಳಿಯನ್ನು ಸಮರ್ಥನ ಮಾಡುತ್ತೇನೆಂದು ತಿಳಿದು ನನ್ನನ್ನು [illegible] ಸಭೆಗೆ ಅಧ್ಯಕ್ಷನನ್ನಾಗಿ ಮಾಡಿದರು. ನಾನು ಅಸೆಂಬ್ಲಿಯ ಸಭಾಪರಿತ್ಯಾಗ [illegible] ತೆಗೆದುಕೊಂಡಿದ್ದೇ ಅವರಿಗೆ ಈ ತಿಳಿವಳಿಕೆಯನ್ನು ಉಂಟು[illegible]. ಅವರು ನನ್ನ ವಿಷಯದಲ್ಲಿ ತಪ್ಪುತಿಳುವಳಿಕೆ ಮಾಡಿಕೊಂಡರು.

ನಾಗಪ್ಪನವರಮೇಲೆ ಆಪಾದನೆ

[illegible]. ಎಸ್. ರಾಜೂರವರು ಕಮಿಟಿಯ ಮುಂದೆ ಕೊಟ್ಟ ಕೈಫಿಯತ್ತಿನಲ್ಲಿ [illegible] ಅಬ್ಬಾಸ್ ಖಾನರಿಗೆ ಜುಲೈ 30ನೇ ತಾರೀಖಿನಿಂದ ಆಪ್ತರಾಗಿದ್ದು [illegible]ವನ್ನು ನಡೆಯಿಸುತ್ತಿದ್ದಾರೆ ಎಂದು ತಿಳಿಸಿದರು ಮತ್ತು 15-8-28ನೇ ಬು[illegible] 17-8-28ನೇ ಶುಕ್ರವಾರ 20—8—28ನೇ ಸೋಮವಾರ ಬೆಳಿಗ್ಗೆ [illegible] ನಾಗಪ್ಪನವರು ಅಬ್ಬಾಸ್ ಖಾನರೊಂದಿಗೆ ಇದ್ದರೆಂದೂ ಕೆ. [illegible] ರಾಮಯ್ಯನವರು ಕೆ. ನಾರಾಯಣಸ್ವಾಮಿ ಅಯ್ಯರ್‌ರವರು, ಮರಿಯಪ್ಪನ[illegible] ಇವರುಗಳೆಲ್ಲಾ ಒಳಗೊಳಗೆ ಮಸಲತ್ತು ನಡಯಿಸುತ್ತಿದ್ದರೆಂದೂ ರಾಜೂರ[illegible]

THE BRAHMIN CLIQUE.

DEWAN INTERVIEWED

Times of India Contradicted

The following appears in the Justice of Madras:—

Our special correspondent at Bangalore wires

Apropos of the interview which the Dewan of Mysore granted to the Times of India representative stating that he did not believe in the existence of a Brahmin Conspiracy, working against him in the State I now understand that the Dewan only meant that the Brahmins in the State as a class were not conspiring against him.

This has, therefore, no relation to the statements made by prominent citizens in the state regarding the existence of a clique, composed mainly of Brahmins which has been carrying on propaganda to discredit the present administration with its non-Brahmin head and other prominent non-Brahmin leaders.

The Government do not seem as yet to have come to any definite conclusion on the point.

They naturally await the Vishweswariya Committee report and the result of the magisterial investigations.

ಮಹಾತ್ಮಗಾಂಧಿಯವರ ಮೂರ್ತಿ ಸ್ಥಾಪನೆ

ಶ್ರೀಯುತ ತಗಡೂರು ರಾಮಚಂದ್ರರಾಯರು ಸ್ಥಾಪನೆ ಮಾಡಿರುವ ಸತ್ಯಾಗ್ರಹಾಶ್ರಮದ ಆರಂಭೋತ್ಸವವೂ ಮಹಾತ್ಮಾ ಗಾಂಧಿಯವರ ಮೂರ್ತಿಯ ಸ್ಥಾಪನೆಯೂ ಈ ದಿನ ಬೆಳಿಗ್ಗೆ ನಡೆಯಿತು. ನಗರದ ಪ್ರಸಿದ್ಧ ಮಹಾಜನಗಳೂ ಪರಸ್ಥಳದ ಕೆಲವು ದೊಡ್ಡಮನುಷ್ಯರೂ ಹಾಜರಿದ್ದರು. ರಾಮಚಂದ್ರರಾಯರು ಆಶ್ರಮದ ಮತ್ತು ಮೂರ್ತಿಯ ಪೂರ್ವೋತ್ತರಗಳನ್ನು ತಿಳಿಸಿದನಂತರ ವೀರಕೇಸರಿಯ ಸಂಪಾದಕರಾದ ಸೀತಾರಾಮಶಾಸ್ತ್ರಿಗಳವರು ಆಶ್ರಮದ ಪ್ರಾರಂಭೋತ್ಸವವನ್ನು ಮಾಡಿದರು. ರಾಷ್ಟ್ರೀಯ ಧ್ವಜಾರೋಹಣವನ್ನು ಶ್ರೀ|| ಹೊಸಕೊಪ್ಪ ಕೃಷ್ಣರಾಯರವರೂ ಶ್ರೀ|| ವೆಂಕಟಕೃಷ್ಣಯ್ಯನವರು ಮೂರ್ತಿಸ್ಥಾಪನೆಯನ್ನೂ ನೆರವೇರಿಸಿದರು. ದಿವ್ಯವಾದ ಭಾಷಣಗಳಾದವು. ವಿಗ್ರಹಕ್ಕೆ ಮಂಗಳಾರತಿಯಾದನಂತರ ಜಯಘೋಷಗಳೊಡನೆ ಸಭೆಯು ಬರಖಾಸ್ತಾಯಿತು.

ವಿಜಯ ದಶಮೀ ಜಂಬೂ ಸವಾರಿ ಉತ್ಸವವು ವಾಪಸ್ ಬರುವಾಗ್ಗೆ ರಾ|| ದಿವಾನರವರು ಶ್ರೀಮನ್ಮಹಾರಾಜರ ಹಿಂಭಾಗದಲ್ಲಿ ಅಂಬಾರಿಯ ಮೇಲೆ ಕೂ[illegible]ತಿದ್ದರು. ಅನೇಕರು ಅಸಮಾಧಾನವನ್ನು ವ್ಯಕ್ತಪಡಿಸಿದರೆಂದು ಕೇಳುತ್ತೇವೆ;

ಅಡಿಷನಲ್ ಮ್ಯಾಜಿಸ್ಟ್ರೇಟರ ಮೇಲೆ ಆಪಾದನೆ.

ಕಮಿಟಿಯ ಮುಂದೆ ಮಲ್ಲಪ್ಪಶೆಟ್ಟರವರ ಕೈಫಿಯತ್ತಿನಲ್ಲಿ ಈ ಕೆಳಗಿನ ಮಾತುಗಳು ನಡೆದವು.

ಎಂ|| ನಾಗಪ್ಪನವರ ಪ್ರಶ್ನೆ—ನೀವು ಮಾಚಯ್ಯನವರ ಕೋರ್ಟಿನಲ್ಲಿ ಹ[illegible]ನುಮಂತನಿಗೆ ಒಬ್ಬ ಮಹಮ್ಮದೀಯರ ಷಾಪಿನಲ್ಲಿ ಔಷಧವನ್ನು ಹಾಕಿಸಿದ್ದೆ ಎಂದು ತಿಳಿಸಿದ್ದೀರಿ. ಅದು ನಿಜವೋ? ಎಂದು ಕೇಳಿದಾಗ ಶೆಟ್ಟರವರು ನಾನು ಹಾಗೆ ಹೇಳಿಲ್ಲ. ಮಧ್ವಾಚಾರ್ಯರ ಬಳಿ ಔಷಧ ಕೊಡಿಸುತ್ತಿದೇನೆ ಎಂದು ಹೇಳಿದೆನು. ಹೇಳಿದಾಗ ಶ್ರೀ ವಿಜಯದೇವರವರು ಇದ್ದರು. ನನ್ನ ಸ್ಟೇಟ್‌ಮೆಂಟ್ ಬದಲಾಯಿಸಿರುವ ಹಾಗೆ ಕಾಣುತ್ತದೆ. ಅವರು ನನ್ನ ರುಜು ತೆಗೆದುಕೊಂಡಾಗ ಈ ವಿಷಯವೇ ಇರಲಿಲ್ಲ ಎಂದು ಹೇಳಿದರು.

ಹೆಂಗಸಿನ ಜಾಡ್ಯ.

ಗ್ಯಾಸ್ ಲೈಟ್ ಹನುಮಂತಪ್ಪನು ಕೈಫಿಯತ್ತು ಕೊಡುವಾಗ ನಾಗಪ್ಪನವರ ಪ್ರಶ್ನೆ—ನಿನಗೆ ಹೆಂಗಸಿನ ಜಾಡ್ಯಗಳು ಹೇಗೆ ಬಂದವು? ಉ—ನನಗೆ ತಿನ್ನುವುದಕ್ಕೆ ಅನ್ನವಿಲ್ಲ. ನಾನು ಹೆಂಗಸಿನ ಹತ್ತಿರಕ್ಕೆ ಹೇಗೆ ಹೋಗಲಿ?

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { [illegible]

ಸಂಪುಟ ೧] ಶುಕ್ರವಾರ ೨೬ ಅಕ್ಟೋಬರ್, ೧೯೨೮ [ಸಂಚಿಕೆ ೨೬

ತಾಯಿನಾಡು

26—10—1928

ಪ್ರತಿನಿಧಿಸಭೆಯ ಪ್ರಾರಂಭ.

ಸಾಮಾನ್ಯವಾದ ಪರಿಣಾಮ.

(ಸ್ವಂತ ಪ್ರತಿನಿಧಿಗಳಿಂದ)

ಈ ದಿನ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ದಿವಾನರ ಅಧ್ಯಕ್ಷತೆಯಲ್ಲಿ ಪ್ರಜಾಪ್ರತಿನಿಧಿಸಭೆಯು ಆರಂಭವಾಯಿತು. ದಿವಾನರು ಆಸನವನ್ನು ಸ್ವೀಕರಿಸುವಾಗ ಕೆಲವು ಸಭಿಕರು ಚಪ್ಪಾಳೆಯನ್ನು ತಟ್ಟಿದರು. ವೇದಿಕೆಯಮೇಲೆ ಮೂರು ಮಂತ್ರಿಗಳೂ ಅಲ್ಲದೆ ಸರ್ ಛಾರ್ಲ್ಸ್ ಟಾಡ್ ಹಂಟರವರೂ ಛೀಫ್ ಜಸ್ಟಿಸ್ ದೊರೆಸ್ವಾಮಿ ಅಯ್ಯರ್‌ರವರೂ, ಹುಜೂರು ಸೆಕ್ರಿಟರೀ ತಂಬೂ ಶೆಟ್ಟರವರೂ ರಿಟೈರ್ಡ್ ಕೌನ್ಸಿಲರುಗಳಾದ ಚಾಂಡಿಯವರೂ, ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರೂ ಪಿ. ರಾಘವೇಂದ್ರರಾಯರೂ, ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರೂ, ರಿಟೈರ್ಡ್ ಛೀಫ್ ಜಸ್ಟಿಸ್ ಕೆ. ಎಸ್. ಚಂದ್ರಶೇಖರಯ್ಯರ್‌ರವರೂ ಇನ್ನೂ ಇತರ ಅತಿಥಿಗಳೂ ಆಸನಗಳನ್ನು ಸ್ವೀಕರಿಸಿದ್ದರು. ಪ್ರತಿನಿಧಿಗಳು ತುಂಬಿದ್ದರು. ಸುಮಾರು 30 ಪತ್ರಿಕಾ ಪ್ರತಿನಿಧಿಗಳಿದ್ದರು. ಪ್ರೇಕ್ಷಕರ ಮಹಡಿಯು ಕಿಕ್ಕಿರಿಯುತ್ತಿತ್ತು.

ದಿವಾನರ ಭಾಷಣವನ್ನು ಬಹಳ ಧ್ಯಾನವಾಗಿ ಕೇಳಿದರು. ದಿವಾನರು ಹಿಂದಿನ ವರ್ಷದ ಆಡಳಿತದ ವರದಿಯನ್ನು ಸಂಕ್ಷೇಪವಾಗಿ ತಿಳಿಸಿದರು. ಆರ್ಥಿಕ ಬಾಬುಗಳು ಆಶಾಜನಕವಾಗಿವೆ ಎಂದು ಕೇಳಿ ಅನೇಕರು ಸಂತೋಷಪಟ್ಟರು. ಎಲ್ಲರಿಗೂ ಕುತೂಹಲವಾಗಿದ್ದುದು ಬೆಂಗಳೂರು ಗಲಭೆಗಳ ಪ್ರಕರಣ. ಈ ವಿಷಯವನ್ನು ದಿವಾನರು ಕಡೆಗೆ ಇಟ್ಟುಕೊಂಡರು. ಪರಿಸಮಾಪ್ತಿಭಾಗವು ಬಂದಾಗ ದಿವಾನರು ತಮ್ಮ ಧ್ವನಿಯನ್ನು ಎತ್ತರಿಸಿ ಅತ್ಯುತ್ತೇಜನದಿಂದ ಭಾಷಣ ಮಾಡಿದರು. ಇದರಲ್ಲಿ ಆಶಾಜನಕವಾದ ಅಥವಾ ನಿರಾಶೆಯನ್ನುಂಟುಮಾಡುವ ಮಾತುಗಳಾವುವೂ ಇರಲಿಲ್ಲ. ಯಾರಿಗೂ ಕೋಪಬರುವಹಾಗೂ ಇರಲಿಲ್ಲ. ಸಭಿಕರಮೇಲೆ ಸಾಮಾನ್ಯವಾದ ಪರಿಣಾಮವುಂಟಾಯಿತು. ಉದಾತ್ತವಾದ ಕೆಲವು ವಾಕ್ಯಗಳು ಉಚ್ಚರಿಸಲ್ಪಟ್ಟಾಗ ಸಭಿಕರು ಕರತಾಡನದಿಂದ ತಮ್ಮ ಮೆಚ್ಚಿಕೆಯನ್ನು ಪ್ರದರ್ಶಿಸಿದರು.

ದಿವಾನರ ಭಾಷಣವಾದಮೇಲೆ ಸಭಿಕರ ಪರವಾಗಿ ಮ|| ಗಳಾದ ಬಿ. ಪುಟ್ಟಸ್ವಾಮಿಯವರೂ, ಹೆಚ್. ಸಿ. ದಾಸಪ್ಪನವರೂ ದೊಡ್ಡಯ್ಯನವರೂ

ಮ|| ಸಿ. ಎಸ್. [illegible] ಅಯ್ಯರ್‌ರವರಿಗೆ ರಾಜಮಂತ್ರಪ್ರವೀಣ

ಮ|| ಮ್ಯಾಥ್ಯೂರವರಿಗೆ ರಾಜಮಂತ್ರಪ್ರವೀಣ

ಮ|| ಸಿ. ಎಸ್. ದೊರೆಸ್ವಾಮಿ ಅಯ್ಯರ್‌ರವರಿಗೆ ರಾಜಧರ್ಮಪ್ರವೀಣ

ಮ|| ಟಿ. ತಂಬೂಶೆಟ್ಟರವರಿಗೆ ರಾಜಸಭಾಭೂಷಣ

ಎಂಬ ಬಿರುದುಗಳು ದೊರೆತದ್ದಕ್ಕಾಗಿ ಸಂತೋಷವನ್ನು ಪ್ರಕಟಿಸಿದರು.

ಮ|| ಕೆ. ಹೆಚ್. ರಾಮಯ್ಯನವರು ದಿವಾನರ ಭಾಷಣವನ್ನು ಕನ್ನಡದಲ್ಲಿ ಓದಿದಮೇಲೆ ಮುಂದಿನ ಕಾರ್ಯಕ್ರಮವು ನಡೆಯಿತು.

ಅಬ್ಬಾಸ್‌ಖಾನರ ಮಾತು ಸುಳ್ಳೇ?

ಹೆಡ್ ಕಾನ್‌ಸ್ಟೇಬಲ್ ಲಕ್ಷ್ಮಣನಾಯಡುರವರು ಇನ್ಸ್‌ಪೆಕ್ಟರ್. ಶೇಷಾದ್ರಿಯವರು ಜುಲೈ ೩೦ ನೇ ತಾರೀಖಿನಂದು ಅಬ್ಬಾಸ್‌ಖಾನರಮನೆಯಿಂದ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದರೆಂದು ಹೇಳಿದರು. ಅಬ್ಬಾಸ್ ಖಾನರು ಇದು ಸುಳ್ಳು ಎಂದು ಹೇಳಿದ್ದರು. ಅಧ್ಯಕ್ಷರು ಶೇಷಾದ್ರಿಯವರು ಹೇಳಿದ್ದು ಲಕ್ಷ್ಮಣನಾಯಡು ಹೇಳಿದ್ದು ಒಂದಕ್ಕೊಂದು ತಾಳಿಕೆ ಬಂದಿದೆ ಎಂದು ಹೇಳಿದರು.

ದಿವಾನರ ಭಾಷಣ.

(ಪರಿಸಮಾಪ್ತಿ.)

ಈಗ್ಗೆ ಎರಡು ತಿಂಗಳುಗಳಿಗಿಂತಲೂ ಹಿಂದೆ ಬೆಂಗಳೂರು ನಗರದಲ್ಲಿ ವಿಷಾದಕರವಾದ ಘಟನೆಗಳು ನಡೆದುಹೋದುದು ಸರಿಯಷ್ಟೆ. ಅಲ್ಲಿನ ಗಲಭೆಯ ವಿಷಯವನ್ನು ವಿಚಾರಣೆಮಾಡಲು ನೇಮಕವಾಗಿರತಕ್ಕ ಸಮಿತಿಯವರು ಇನ್ನೂ ವರದಿಯನ್ನು ಕಳುಹಿಸಿಲ್ಲ. ಆದಕಾರಣ ಬೆಂಗಳೂರಿನ ಗಲಭೆಯ ಸಂಬಂಧದಲ್ಲಿ ಕೇವಲ ಪ್ರಾಸಂಗಿಕವಾಗಿ ನಾನು ಒಂದೆರಡು ಅಂಶಗಳನ್ನು ಮಾತ್ರ ಸೂಚಿಸುವೆನು.

ಕೇವಲ ಅಲ್ಪವೆನಿಸುವ ಅತಿಸಾಮಾನ್ಯ ವಿದ್ಯಮಾನಗಳಿಂದ ಆರಂಭವಾದುದು ಉದ್ರೇಕದಿಂದಲೂ ಹಿಂಸೆಯಿಂದಲೂ ಕೊನೆಗೊಂಡಿತು. ದ್ವೇಷಾಕ್ರೋಶಗಳಿಂದ ತುಂಬಿದ ವಿಷಮಸ್ಥಿತಿಯೇ ಒದಗಿದ್ದಂತೆ ಯೋಚಿಸಿ ಅನೇಕರು ತಮ್ಮ ಮನಸ್ಸಿನಲ್ಲಿ ಕೇವಲ ಕಾಲ್ಪನಿಕಭಾವನೆಗಳಿಗೆ ಅವಕಾಶಕೊಟ್ಟರು. ವಾಸ್ತವಿಕ ವಿದ್ಯಮಾನವೇ ಒಂದಾದರೆ ಅವರ ಮನಸ್ಸಿನಲ್ಲಿ ಮೂಡಿದ್ದುದೆ ಒಂದಾಯಿತು. ನಿಜದನೆಲೆಗೂ ಅದಕ್ಕೂ ಬಲುದೂರವೆನಿಸಿತು. ಮೈಸೂರು ಸಂಸ್ಥಾನವೆಂದರೆ ನಾನಾ ಪಂಗಡಗಳವರಲ್ಲಿಯೂ ಪರಸ್ಪರಸಹಿಷ್ಣುತೆಯೂ ಅನ್ಯೋನ್ಯಭಾವವೂ ಅನೇಕ ತಲೆಮಾರಾಂತರಗಳಿಂದ ರೂಢಮೂಲವಾಗಿ ನೆಲೆಗೊಂಡು ನಡೆದುಬಂದಿರುವ ದೇಶ. ಭರತಖಂಡದ ಮತ್ತಾವ ದೇಶವೂ ಈ ಭಾಗದಲ್ಲಿ ನಮ್ಮದೇಶವನ್ನು ಮೀರಿಸಿಲ್ಲವೆಂಬುದು ನನ್ನ ಭಾವನೆ. ಇದರಮೇಲೋ ಈಗಿನ ಸಮಯವಾದರೂ ಎಂತಹುದು? ನವಜೀವನದ ಚೈತನ್ಯದಿಂದ ಕಳಕಳಿಸುವ ನೂತನ ಭರತಖಂಡವು ಈಗ ರೂಪುಗೊಳ್ಳುವುದರಲ್ಲಿದೆ. ಅದರಲ್ಲಿ ಮೈಸೂರು ಸಂಸ್ಥಾನಕ್ಕೂ ಕೇವಲ ಪ್ರಾಮುಖ್ಯ ಸ್ಥಾನವು ದೊರೆಯುತ್ತದೆ. ಈ ವಿಧದ ನೂತನ ಸ್ಥಾನವನ್ನಲಂಕರಿಸಿ ಪುರೋಭಿವೃದ್ಧಿಯನ್ನು ಸಾಧಿಸಬೇಕಾದರೆ ಯಾವುದೊಂದು ಸಂಸ್ಥಾನದಲ್ಲಿಯೇ ಆಗಲಿ ಅಥವಾ ಒಟ್ಟು ಭರತಖಂಡದಲ್ಲಿಯೇ ಆಗಲಿ ಸಾರ್ವತ್ರಿಕವಾದ ಸಾಮರಸ್ಯವು ಇದ್ದೇತೀರಬೇಕು. ಅದಕ್ಕೆ ಅಭಾವವುಂಟಾದರೆ ಯಾವುದೊಂದೂ ಸಾಗುವಂತಿಲ್ಲ. ಈ ಬಗೆಯ ಸಾಮರಸ್ಯ ಭಾವವು ನಮ್ಮಲ್ಲಿಯೂ ಎಂದಿನಂತೆ ನೆಲೆಗೊಳ್ಳಬೇಕೆಂಬ ಅಂಶವನ್ನು ಎಲ್ಲ ಪಂಗಡಗಳವರೂ ಅವರ ಮುಖಂಡರುಗಳೂ ಮತ್ತಷ್ಟು ಖಚಿತಪಡಿಸಿ ಅದನ್ನು ರೂಢಮೂಲವಾಗಿ ನಿಲ್ಲಿಸುವ ವಿಷಯದಲ್ಲಿ ಈಗ ತೀವ್ರಾಭಿಲಾಷೆಯುಳ್ಳವರಾಗಿದ್ದಾರೆಂದು ನಾನು ದೃಢವಾಗಿ ನಂಬಿದ್ದೇನೆ. ಈ ಘನವಾದ ಉದ್ದೇಶವು ಈಡೇರಬೇಕಾದರೆ ಯಾವುದೊಂದು ಭಾಗದಲ್ಲಿಯೂ ಹದ್ದುಮೀರದಂತೆ ವಿವೇಕದಿಂದ ಕಾರ್ಯಕ್ರಮದ ನಿಯಮವನ್ನು ಅಳವಡಿಸಿಕೊಳ್ಳಬೇಕು; ಮಾತನಾಡುವದರಲ್ಲಿ ಔಚಿತ್ಯದ ಎಲ್ಲೆಯನ್ನು ಮೀರದಂತೆ ವಿವೇಕದಿಂದ ವರ್ತಿಸಬೇಕು; ಅಲ್ಲದೆ ಪರಸ್ಪರವಾಗಿ ಒಬ್ಬರ ಮನೋವೃತ್ತಿಯನ್ನೂ ಆಶಯಗಳನ್ನೂ ಮತ್ತೊಬ್ಬರು ಸಂಪೂರ್ಣವಾಗಿ ಮುಂದಟ್ಟುಮಾಡಿಕೊಳ್ಳಲು ಸ್ಥಿರನಿಶ್ಚಯದಿಂದ ದೃಢಪ್ರಯತ್ನವನ್ನು ಮಾಡಬೇಕು. ಸಾರ್ವತ್ರಿಕವಾಗಿ ಸಾಮರಸ್ಯವನ್ನು ನೆಲೆಗೊಳಿಸುವ ನಮ್ಮ ಘನವಾದ ಉದ್ದೇಶವು ಇದರಿಂದಮಾತ್ರವೇ ಈಡೇರಬೇಕೆಂಬುದು ನಮ್ಮೆಲ್ಲರಿಗೂ ಚೆನ್ನಾಗಿಮನದಟ್ಟಾಗಿಯೇ ಇದೆ. ಸ್ವಾರ್ಥರಹಿತರಾಗಿ ಸ್ವದೇಶಾಭಿಮಾನದಿಂದ ತುಂಬಿರತಕ್ಕವರು ಪ್ರತಿಯೊಂದು ಪಂಗಡದಲ್ಲಿಯೂ ಅನೇಕ ಮಂದಿಗಳು ಇದ್ದೇ ಇರುತ್ತಾರೆ. ನಾವು ಇದನ್ನು ಪರಿಗಣಿಸಬೇಕು. ಸ್ವಾರ್ಥಪರತೆಯಿಂದ ತುಂಬಿ ವಿಚಾರಶೂನ್ಯರಾಗಿರತಕ್ಕವರೆಂಬುದಾಗಿ ದುರಾಕ್ಷೇಪಣೆಗಳನ್ನು ಹೊರಿಸುವ ಪ್ರಯತ್ನಗಳನ್ನು ನಾವು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಈವಿಧದ ದುರಾಕ್ಷೇಪಣೆಗಳಿಗೆ ಸಿಕ್ಕಿದವರು ತಮ್ಮಮೇಲೆ ಹೊತ್ತಿರುವ ದೂರು ಅನ್ಯಾಯವಾದುದೆಂದು ಭಾವಿಸುವರು. ಆ ಅಂಶವು ಅವರ ಮನಸ್ಸಿನಲ್ಲಿ ನಾಟಿಕೊಳ್ಳುವುದು. ಇದರಿಂದ ಅವರ ಮನಸ್ಸು ಕ್ಷೋಭೆಹೊಂದಿ ವಿರಸವಾಗುವುದು. ಮುಂದೆ ಹೇಳತಕ್ಕದ್ದೇನು? ದ್ವೇಷವೇ ಅದರ ದಾರುಣವಾದ ಪರಿಣಾಮಫಲ. ವಾಸ್ತವವಾಗಿ ಆಲೋಚನೆಮಾಡಿ ನೋಡಿದರೆ ಜಾತಿಕುಲಭೇದವಿಲ್ಲದೆ ನಮ್ಮಲ್ಲಿ ಸಮಸ್ತರೂ ಸಾಧಿಸಬೇಕೆಂದು ತವಕಪಡುತ್ತಿರುವ—ಸರ್ವರಿಗೂ ಸಮನಾಗಿ ಆದರವಿರುವ—ಉಪ್ಸಿತಾರ್ಥಗಳು ಎಷ್ಟೋ ಇವೆ. ಶ್ರೇಯೋಭಿವೃದ್ಧಿಗೆ ಸಾಧಕವಾಗಿ ಸಾರಭೂತವಾದವುಗಳೆಂದು ಪರಿಗಣಿಸಬಹುದಾಗಿರುವ ಸಮಸ್ತ ಕಾರ್ಯಗಳನ್ನು ನೆರವೇರಿಸುವುದರಲ್ಲಿಯೂ ನಮ್ಮಲ್ಲಿ ಲೇಶವೂ ಭಿನ್ನಭಾವಕ್ಕೆ ಅವಕಾಶವೇ ಇಲ್ಲ. ನಾವೆಲ್ಲರೂ ಆದರಬದ್ಧರಾಗಿ ಕಾರ್ಯಕ್ಷೇತ್ರದಲ್ಲಿ ಒಟ್ಟುಗೂಡಿ ಕೆಲಸಮಾಡಲೇಬೇಕು. ಈ ವಿಧದ ಘನವಾದ ಆಶಯಗಳಿಂದ ಕೂಡಿ ಸಮಸ್ತರೂ ಐಕಮತ್ಯದಿಂದ ಕೆಲಸಮಾಡುವುದಾದರೆ ಅಲ್ಲಿಗೆ ಸೌಹಾರ್ದಭಾವವನ್ನು ರೂಢಮೂಲವಾಗಿಯೂ ಸ್ಥಿರವಾಗಿಯೂ ಮತ್ತೆ ನೆಲೆಗೊಳಿಸಿ ನಾವು ಚರಿತಾರ್ಥರಾಗುವುದು ಸ್ವತಸ್ಸಿದ್ಧವಾಗಿಯೇ ಇದೆ. ಇದಕ್ಕಿಂತಲೂ ಹೆಚ್ಚಿನ ಭಾಗ್ಯವಾದರೂ ಉಂಟೆ?

|| ವಂದೇ ಮಾತರಂ || Regd. No. M. [illegible]

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಚಂದಾ { ವರ್ಷಕ್ಕೆ [illegible] / ತಿಂಗಳಿಗೆ [illegible] / ಬಿಡಿಪ್ರತಿ ೧ ಪೈ.

ಸಂಪುಟ ೧] ಶನಿವಾರ ೨೭ ಅಕ್ಟೋಬರ, ೧೯೨೮ [ಸಂಚಿಕೆ ೨೮

ತಾಯಿನಾಡು

[illegible] 1928

ಸಂದಿಗ್ಧವಾದ ಭಾಷಣ

ದಿವಾನರು ಪ್ರತಿನಿಧಿಸಭೆಯಲ್ಲಿ ಮಾಡಿದ ಭಾಷಣವು ಸಂದಿಗ್ಧವಾಗಿರುವುದು. ಬೆಂಗಳೂರು ಗಲಭೆಗಳ ವಿಷಯದಲ್ಲಿ ಅವರು ಏನನ್ನೂ ಹೇಳದೆ ಮೌನವನ್ನು ಅವಲಂಬಿಸಿದ್ದರೆ ಸ್ವಲ್ಪ ಆಕ್ಷೇಪಣೆಗೆ ಅವಕಾಶವಿರಲಿಲ್ಲ. ಪ್ರತಿನಿಧಿಸಭೆಯಲ್ಲಿಯೇ ಈ ವಿಷಯವು ಚರ್ಚೆಗೆ ಬರಕೂಡದೆಂದು ಕಟ್ಟುಮಾಡಿದಮೇಲೆ ಅಧ್ಯ[illegible]ನ್ನು ಅವಲಂಬಿಸುವುದು ನ್ಯಾಯವಾದುದು. ಬೆಂಗಳೂರು [illegible] ಸರ್ಕಾರದವರ ಜವಾಬ್ದಾರಿಯೂ [illegible]ಭಾಗವೂ ನಡವಳಿಕೆಗಳೂ ಮಾತುಕಥೆಗಳೂ ಏನು ಎಂಬುದು ಈಗ ಹೊಸದಾಗಿ [illegible]. ದಿವಾನರೂ ಸರ್ಕಾರವೂ ಸರ್ಕಾರದ [illegible] ಬುದ್ಧಿ ಇಲ್ಲದೆ ಅಜಾಗರೂಕತೆಯಿಂದಲೂ ಅಸಾವಧಾನತೆ[illegible] ಬೆಂಗಳೂರು ಗಲಭೆಗಳು ಹೆಚ್ಚುವಂತೆ ಮಾಡಿದರೆಂದು [illegible] ಇನ್ನೂ ಇರುವುದು. ಆದುದರಿಂದ ದಿವಾನರಾಗಲೀ ಸರ್ಕಾರದವರಾಗಲೀ [illegible]ಗಳಂತೆ ತಮಗೂ ಬೆಂಗಳೂರು ಗಲಭೆಗಳಿಗೂ ಏನೂ ಸಂಬಂಧವಿಲ್ಲ. ಅವೆಲ್ಲಾ ಇತರರಿಂದಲೇ ಆಯಿತು, ಎಂದು ಮಠಾಧಿಪತಿಗಳಂತೆಯೂ ಉಪದೇಶಿಗಳಂತೆಯೂ [illegible] ಸಂದೇಶವನ್ನು ಮಾಡುವುದು ಅಷ್ಟು ಸಮಂಜಸ[illegible]ವು ಅಸೆಂಬ್ಲಿಯ ಅನೇಕ ಮೆಂಬರುಗಳಲ್ಲಿ ಈ ಭಾಷಣ [illegible]ದಾಗೂ, ಅವರುಗಳು ಅದರ ವಿಷಯವಾಗಿ ತೃಪ್ತಿಯನ್ನು [illegible] ಈ ಸಮಯದಲ್ಲಿ ಮೌನವಾಗಿದ್ದಿದ್ದರೆ ಲೇಸೆಂದು ಅವರಭಿ[illegible]. ಅಲ್ಲದೆ ಇದರಲ್ಲಿ ಇನ್ನೊಂದು ಅಂಶವು ವಿಚಾರಣೀಯವಾದುದು. ದಿವಾನರು ಎಷ್ಟೋ ಜಾಗರೂಕತೆಯಿಂದ ಪದಗಳನ್ನು ಜೋಡಿಸಿ ಭಾಷೆಯನ್ನು ರಚಿಸಿದರಲ್ಲಿ ಕೆಲವು ನಿಷ್ಕರ್ಷೆಯಾದ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಈ ರೀತಿಯಾಗಿ ಅಭಿಪ್ರಾಯವನ್ನು ಕೊಡುವುದು ಈಗಿನ ಸ್ಥಿತಿಯಲ್ಲಿ ಸರಿಯಲ್ಲ. ವಿಶ್ವೇ[illegible] ಕಮಿಟಿಯವರು ವಿಚಾರಣೆಯನ್ನು ನಡೆಸುತ್ತಿರುವಾಗ ಅವರ ವಿಚಾರಣೆಯು [illegible] ದಿವಾನರು ಅಸೆಂಬ್ಲಿಯ ಮುಂದೆ [illegible] ಕೆಲಸವನ್ನು [illegible] ಬೆಂಗಳೂರು ಗಲಭೆಗಳು ಕೇವಲ [illegible] ಸಂಭವವಾಯಿತೆಂದು ದಿವಾ[illegible] ಈ ಗಲಭೆಗಳ ಕಾರಣವನ್ನು [illegible]. ದಿವಾನರು ಅಸೆಂಬ್ಲಿಯಲ್ಲಿ [illegible] ಮುಂದೆ ಈ ಅಭಿಪ್ರಾಯವನ್ನು ಕೊಟ್ಟಿದ್ದರೆ ಆಕ್ಷೇಪಣೆ ಇರಲಿಲ್ಲ. ಅಸೆಂಬ್ಲಿ ಪ್ರತಿನಿಧಿಗಳ ಮುಂದೆ ಈ ಅಭಿಪ್ರಾಯವನ್ನು ಕೊಡುವುದು ಕಮಿಟಿಗೆ ಕಡ[illegible] ಮಾಡಿದಂತಾಗುವುದು. ಮತ್ತು ಕೆಲವರು ಈ ಅಲ್ಪವಾದ ಕಾರಣಾಗ[illegible] ಕಲ್ಪನೆಯ ಕೆಲವು ಭೂತಗಳನ್ನು ಸೃಷ್ಟಿ ಮಾಡಿಕೊಂಡಿರುವರೆಂದು ಹೇಳುವರು. ದಿವಾನರು ಹೇಳುವ ಮಾತುಗಳು ಯಾರಿಗೆ ಅನ್ವಯಿಸತಕ್ಕವೋ ಗೊತ್ತಿಲ್ಲ ಬಹಳ ಸಂದಿಗ್ಧವಾಗಿರುವುವು. ಜುಲೈ ೩೦ ನೇ ಪ್ರಕಟವಾಗಿದ್ದ ಅಬ್ಬಾಸ್ ಖಾನರೂ ಅವರ ಮನೆಯಲ್ಲಿ ನೆರೆದಿದ್ದ ಅನೇಕ ಪುಂಡರೂ ಕಾರ[illegible] ಗಲಭೆಗಳೆಂದಲೂ [illegible] ಹೇಳುತ್ತಾರೆ. [illegible] ಅವರ ಪತ್ರಿಕೆಗಳಲ್ಲಿನೇಕರೂ ಬೆಂಗಳೂರು ಗಲಭೆಗಳಿಗೆಲ್ಲಾ [illegible] ನಡೆಸುತ್ತಿರುವ ಒಂದು ಗುಪ್ತಸಂಘವೇ ಕಾರಣವೆಂದು ಹೇ[illegible]ದವರಲ್ಲಿ ಪ್ರತ್ಯಕ್ಷವಾಗಿ ಏಟು ತಿಂದವರೂ ಏಟನ್ನು ಹೊಡೆದವರೂ [illegible] ಅಪರಾಧಿಗಳು ಇಂಥವರೇ ಎಂದು ಹೇಳುವುದು ಅಷ್ಟು ಕಷ್ಟ[illegible]. ಮತ್ತು ಕೆಲವು ತಪ್ಪಿತಸ್ಥರು ದಿವಾನರನ್ನೂ ಸರ್ಕಾರವನ್ನೂ ತಮ್ಮ ಜೊತೆ[illegible] ತಮಗೆ ಸರ್ಕಾರದ ಬೆಂಬಲವಿರುವುದೆಂದು ರೂಢಮೂಲಮಾಡಿ[illegible] ಅನುಮಾನಕ್ಕೆ ಸಾಕಾದಷ್ಟು ರುಜುವಾತುಗಳೂ ದೊರೆತಿವೆ. ಅವು[illegible] ವಿವರಿಸಲು ಅಪೇಕ್ಷಿಸುವುದಿಲ್ಲ. ಆದರೂ ಈಗಿನ ಸರ್ಕಾರವು [illegible] ಮಾಡಿದ ಕೆಲವು ತಪ್ಪಿತಸ್ಥರನ್ನು ಸಂರಕ್ಷಣೆ ಮಾಡುವುದಕ್ಕೆ [illegible]ದೆ ಎಂಬ ಭಾವನೆಯು ಅನೇಕರಲ್ಲಿ ಬೇರೂರಿದೆ. ಶಾಂತಿ ಸ್ಥಾಪಕರಿಗೆ ದು[illegible] ಶಕ್ತಿಯು ಇರಬೇಕು. ದುಷ್ಟನಿಗ್ರಹದ ಭಂಡತನವು ಇಲ್ಲದೆ ಶಾಂತಿ[illegible] ಎಂದು ಹೇಳಿದರೆ ಶಾಂತಿ ಉಂಟಾಗಲಾರದು. ದಿವಾನರು ತಮ್ಮ ಭಾಷ[illegible]ದಲ್ಲಿ [illegible] ತಾಳ್ಮೆಯನ್ನೂ ಸಹಿಷ್ಣುತೆಯನ್ನೂ [illegible] ಬೋಧಿಸಿರುವರು. ಇವೆಲ್ಲಾ ಉದಾತ್ತ ಭಾವನೆಗಳೇ ಸರಿ. ಮಿರ್ಜಾರವರು [illegible] ಒಬ್ಬ ಸಾಮಾನ್ಯ ವ್ಯಕ್ತಿಗಳಂತೆ ಈ ಸಂದೇಶವನ್ನು ಸಾರಿದ್ದರೆ ಎಲ್ಲರಿಗೂ [illegible]ವಾಗುತ್ತಿತ್ತು. ಮಿರ್ಜಾರವರು ಈಗ ಮಾತನಾಡುವುದು ಸಾಮಾನ್ಯ ವ್ಯಕ್ತಿಯಂತಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನದ ಭಾರವನ್ನು ವಹಿಸಿರುವ [illegible] ಮಹಾರಾಜರವರ ಸರ್ಕಾರದ ಮುಖ್ಯಪ್ರಧಾನಿಯಂತೆ. ಆದುದರಿಂದ ಮಿರ್ಜಾರವರು ನಿಷ್ಪಕ್ಷಪಾತವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ತಪ್ಪಿತಸ್ಥರು ಯಾರೇ ಆಗಲಿ ಅವರನ್ನು ಪುನಃ ತಲೆಯೆತ್ತದಂತೆ ತಿಕ್ಕಿಸಿದರೇನೇ ಪ್ರಜೆಗಳ ಮನಸ್ಸಿಗೆ ನೆಮ್ಮದಿಯುಂಟಾಗುವುದು. ಏಟುತಿಂದವರನ್ನೂ ಗುಂಡಿನಿಂದ ಹೊಡೆಯಿಸಿಕೊಂಡವರನ್ನೂ ಬರಿಯ ಬಾಯಿಮಾತಿನಿಂದ ಶಾಂತರಾಗಿ, ಎಂದು ಹೇಳಿದರೆ ಆ ಉಪದೇಶವು ಫಲಕಾರಿ [illegible]. [illegible] ನಾವು ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇವೆ. [illegible] ನಡವಳಿಕೆಯಲ್ಲಿ [illegible] ನಡೆಯಬೇಕೆಂದು ಬೋಧೆಮಾಡಿರುವರು. ದಿವಾನರು ತಮ್ಮ ಎದೆಯಮೇಲೆ ಕೈಯಿಟ್ಟುಕೊಂಡು ತಮ್ಮ ಆತ್ಮವನ್ನು ಪರೀಕ್ಷಿಸಲಿ. ಜುಲೈ ೩೦ ನೇ ತಾರೀಖಿನಿಂದ ಆದಿಯಾಗಿ ಇದುವರೆಗೂ ಅವರಾಗಲೀ ಅವರ ಅಧಿಕಾರಿಗಳಾಗಲೀ [illegible] ನಡವಳಿಕೆಗಳಲ್ಲಿಯೂ ಈ ವಿವೇಕವು [illegible] ಕೋಟಿಯೂ ಕಂಡುಬರುವುದೇ? ಕೆಲವು ಪತ್ರಿಕೆಗಳನ್ನೂ ಕೆಲವು ಪತ್ರಿಕಾಕಾರರನ್ನು ಅಂತರಂಗವಾಗಿಯೂ ಬಹಿರಂಗವಾಗಿಯೂ ಜರಿಯುವುದಲ್ಲದೆ ಅ[illegible] ಕೊಡುತ್ತಿರುವುದು ಇವರಿಗೆ ಯೋಗ್ಯವೇ [illegible] ಅನೇಕ [illegible]ಗಳನ್ನು ಕೊಟ್ಟು ಅಸತ್ಯದಿಂದ ಇ[illegible] ಮುಂದೆ ಸವಿಮಾತುಗಳನ್ನಾಡಿ ಜಾತಿ ದ್ವೇಷಾನಲವನ್ನು ಹರಡುತ್ತಿರುವ ಕೆಲವ[illegible] ಇವರ ಸರ್ಕಾರವು ವಿಶೇಷವಾದ ಪ್ರೋತ್ಸಾಹವನ್ನು ಕೊಡುತ್ತಿಲ್ಲವೇ? ಆದ[illegible] ಚಿಂತೆಯಿಲ್ಲ. ದಿವಾನ್‌ರವರು ಮಾಡಿರುವ ಉಪದೇಶವನ್ನು ತಾವೂ ತಮ್ಮ ಸರ್ಕಾರದವರೂ ಇಂದಿನಿಂದಲೇ ಆಚರಿಸಿದರೂ ಸಾಕು. ಮುಖ್ಯವಾಗಿ ಕೋಟಿ ಮಾತುಗಳಿಗಿಂತಲೂ ಒಂದು ಒಳ್ಳೆಯ ಆಚರಣೆಯು ಹೆಚ್ಚು ಬೆಲೆಯುಳ್ಳದು.

ದಿವಾನರವರು ತಮ್ಮ ಉಪದೇಶವು ತಮ್ಮಲ್ಲಿಯೂ ತಮ್ಮ ಸರ್ಕಾರದಲ್ಲಿಯೂ ತಮ್ಮ ಅಧಿಕಾರಿಗಳಲ್ಲಿಯೂ ವ್ಯಾಪಿಸುವಂತೆಮಾಡಿ ನಮ್ಮ ಸಂಸ್ಥಾನದ ಕೀರ್ತಿ[illegible] ನಿಗ್ರಹಿಸಿ ಶಿಷ್ಟರನ್ನು ಸಂರಕ್ಷಿಸುವ[illegible] ಸಂಸ್ಥಾನದ [illegible] ಶೋಭಿಸುವಂತೆ ಮಾಡಬೇಕೆಂದು [illegible].

ಪ್ರತಿನಿಧಿ ಸಭೆ.

ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಅವಕಾಶ ದೊರೆಯಲಿಲ್ಲ.

ಎರಡನೆಯ ದಿವಸ ಫಲಾಹಾರಾನಂತರ ಮ|| ಜಿ. ಎಲ್. [illegible] [illegible]ದಕ್ಕೆ [illegible]. ಬೆಂಗಳೂರು ಸಿಟಿ [illegible] ಅಧಿಕಾರವನ್ನು ಸರ್ಕಾರದ[illegible] ಈಗ ಚರ್ಚೆ ಮಾಡುವುದು ಪ್ರಜಾಹಿತವಲ್ಲವೆಂದೂ ಪರವಾನಗಿಯನ್ನು ಕೊಡಲಾಗುವುದಿಲ್ಲವೆಂದೂ ಹೇಳಿದರು.

[illegible]

ನಾಭಾ ಮಹಾರಾಜರಿಗೆ ಕೊಡೈಕೇನಾಲಿಗೆ ಹೋದಾಗಿನಿಂದ ತಿಂಗಳಿಗೆ [illegible] ೫೪೦೦ ಕ್ಕೆ ಇಳಿಸಲ್ಪಟ್ಟಿದೆ. ಮೊದಲು ಇವರಿಗೆ ಸಿಂಹಾಸನಚ್ಯುತರಾದಾಗ ರೂ. ೨೫೦೦೦ ಇತ್ತು. ಅನಂತರ [illegible] ಇಳಿಸಲ್ಪಟ್ಟಿತು. ಈಗ ೫೪೦೦ ಕ್ಕೆ ಇಳಿಸಲ್ಪಟ್ಟಿದೆ.

Printed and Published by P. R. Ramaiya at Sri Rama Press, D. Subbiah Road, Mysore.

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಶತ್ರೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಸೋಮವಾರ ೨೯ ಅಕ್ಟೋಬರ್, ೧೯೨೮ [ಸಂಚಿಕೆ

ತಾಯಿನಾಡು 29-10-1928

ತಾಯಿನಾಡು

29 10 1928

ಹಿಂದೂ ಮಹಾಸಭೆ.

[illegible] —ನೆಯ ಈ ಭಾನುವಾರವು ನಮ್ಮ ಸಂಸ್ಥಾನದ ಇತಿಹಾಸದಲ್ಲಿ [illegible] ಬಂಗಾರದ ಅಕ್ಷರಗಳಿಂದ ಬರೆಯಲ್ಪಡಲು ಯೋಗ್ಯವಾದ ದಿನ. ನಮ್ಮ ಸಂಸ್ಥಾನದ ಹಿಂದೂ ಜನತೆಯಲ್ಲಿ ವ್ಯಾಪಿಸಿದ್ದ ತೀವ್ರಾಸಕ್ತ [illegible], ಅಸಮಾಧಾನಗಳೂ ತೊಲಗಿ ಶಾಶ್ವತವಾದ ಮತ್ತು ಸು[illegible] ಸ್ಥಾಪನೆಯಾಗುವುದಕ್ಕೆ ಬಲವಾದ ಅಡಿಪಾಯವು ಹಾಕಲ್ಪಟ್ಟಿತು. ಈ [illegible] ದಿನದಲ್ಲಿ ಹಿಂದೂ ಜನತೆಯ ಎಲ್ಲಾ ಕೋಮಿನವರೂ, [illegible] ಪೂರ್ವಕವಾಗಿ ಶುದ್ಧಾಂತಃಕರಣರಾಗಿ ನಿರ್ಭಯವನ್ನು [illegible] ಹಿಂದೂ ಮಹಾಸಭೆಯು ಇತೋಪ್ಯತಿಶಯವಾದ ಬೆಳವಣಿಗೆಯನ್ನು [illegible] ತೊಳಿಗೆ ತೋಳನ್ನು ಸೇರಿಸಿ ಹಿಂದೂ ಸಮಾಜದ ಪ್ರಗತಿಯ [illegible] ಮುಂದಕ್ಕೆ ಎಳೆಯಲು ಸಿದ್ಧರಾದುದು ಶುಭ ಚಿಹ್ನೆಯು.

ಹಿಂದೆಯೇ ಪ್ರಕಟವಾದ ಹಸ್ತಪತ್ರದಂತೆ ಟರ್ಫ ಹಾಲಿನಲ್ಲಿ ಬೆಳಿಗ್ಗೆ ೮ ಗಂಟೆಗೆ ಸರಿಯಾಗಿ ಸಭೆಯು ಸೇರಿತು. ಮ|| ನೀಲಗಿರಿ ಸಂಜೀವಯ್ಯನವರು ಅಧ್ಯಕ್ಷತೆಯನ್ನು ಸ್ವೀಕರಿಸಬೇಕೆಂದು ಪ್ರಕಟಿಸಲ್ಪಟ್ಟಿತು. ಮ|| ಬಿ. ಎಸ್. ರಾಜಗೋಪಾಲರಾಯರೂ, ಎಚ್. ಸಿ. ದಾಸಪ್ಪನವರೂ, ಎಂ ಎಸ್. ಲಿಂಗೇಗೌಡರೂ ಇನ್ನೂ ಕೆಲವರೂ ಸಭೆಯ ಉದ್ದೇಶವೂ, ಸಭೆಯು ನಡೆಯುವುದೆಂಬ ವಿಷಯವೂ ಇನ್ನೂ ಚೆನ್ನಾಗಿ ಪ್ರಚಾರವಾಗಿಲ್ಲವಾದುದರಿಂದ ಈಗ ಸಭೆಯನ್ನು ಮಾಡಕೂಡದೆಂದೂ, ಅದನ್ನು ಮುಂದಕ್ಕೆ ಹಾಕಬೇಕೆಂದೂ, ಇಡೀ ಪ್ರಾಂತ್ಯದಲ್ಲೂ, ಡಿಸ್ಟ್ರಿಕ್ಟುಗಳಲ್ಲೂ ಚೆನ್ನಾಗಿ ಪ್ರಚಾರಮಾಡಿ ಅನಂತರ ಸಭೆಯನ್ನು ನಡೆಸಬೇಕೆಂದು ಸೂಚಿಸಿದರು.

ಮ|| ಗಳಾದ ಎಂ. ಪಿ. ಬೋರೆಗಯ್ಯನವರೂ, ನಾರಾಯಣಮೂರ್ತಿಯವರೂ, [illegible] ನವರೂ, ಪಿ. ವೆಂಕಟಪ್ಪನವರೂ, ಎಂ. ಸೀತಾರಾಮಶಾಸ್ತ್ರಿ [illegible] ಇತರರೂ ಸಭೆಯನ್ನು ಮುಂದೆ ಹಾಕುವುದು ಅವಶ್ಯವಿಲ್ಲ [illegible] ಬೇಕೆಂದೂ, ಈ ಸಭೆಯು ನಡೆಯುವುದರಿಂದ ಎಲ್ಲರಿಗೂ [illegible] ಎಂದು [illegible] ಭಾಗಗಳಿಂದಲೂ ರಾಜಧಾನಿಗೆ ಬಂದಿರು[illegible] ಕುಂಗಿನವರ ಆಘಾತಗಳಿಂದಲೂ [illegible] ಪೆಟ್ಟುಗಳಿಂದಲೂ ಹಿಂದೂ ಸಮಾಜವು ಬಹಳ ಜೀರ್ಣಿಸುತ್ತಿದೆಯೆಂ[illegible] ಇತರ ಮತಾವಲಂಬಿಗಳಿಗೆ ಯಾವ [illegible] ಇತರ ಮತಾವಲಂಬಿಗಳು ಇವರನ್ನು ಗೌರವಿಸಿ ಇವರ ಸ್ನೇಹಕ್ಕೆ ಬೆಲೆ ಕಟ್ಟುವರೆಂದೂ ಹಿಂದೂ [illegible] ಭೇದಭಾವಗಳನ್ನೆಲ್ಲ [illegible] ಅಸಮಾಧಾನವನ್ನು [illegible] ಮಾಡುವುದಕ್ಕೆ ಹಿಂದೂಸಭೆಯು ಬೇಕೆಂದೂ ಯಾವಕಾಲದಲ್ಲಿಯೂ ಎಲ್ಲರೂ [illegible] ಅನುಚಿತವೆಂದೂ ಈಗ ಹಿಂದೂ ಮಹಾಸಭೆಯ ವಿಷಯವಾಗಿ ಆಗಿರುವ ಪ್ರಚಾರವೇ ಸಾ[illegible] ಬುದ್ಧಿಶಾಲಿಗಳಾದವರು ಈ ಸಭೆಯ ಉದ್ದೇಶಗಳನ್ನೂ [illegible] ಅಭಿಪ್ರಾಯ [illegible]

[illegible] ಹಸ್ತಪತ್ರಿಕೆಗೆ [illegible] ಗೋಪಾಲಸ್ವಾಮಯ್ಯ[illegible] ಹಸ್ತಪತ್ರಿಕೆಗೆ ರುಜುಹಾಕುವುದಕ್ಕೆ ಒಪ್ಪಿದರೆಂದೂ ಸಭೆಯೂ [illegible] ಮ|| ದೊಡ್ಡಯ್ಯನವರು ತಾವು ಒಪ್ಪಿಕೊಂಡಿದ್ದ ಉಂಟೆಂದು ಹೇಳಿದರು.

ಇಷ್ಟು ಹೊತ್ತಿಗೆ ಬಹಳ ವೇಳೆಯಾಗಿ ಹೋಗಿದ್ದರಿಂದ ಮ|| ಗಳಾದ ಪಿ. ಎಸ್. ಸಂಜೀವರಾಯರವರೂ ಎ. ಕೃಷ್ಣರಾಯರೂ ಈ ವಿಷಯವಾಗಿ ಚರ್ಚೆ [illegible] ಸಭೆಯು ನಡೆಯಬೇಕೋ ಬೇಡವೋ ಎಂಬ ವಿಷಯವಾಗಿ ಸಭಿಕರ ಓಟುಗಳನ್ನು ತೆಗೆದುಕೊಳ್ಳ[illegible] ವಿಷಯವು ಓಟಿಗೆ ಹಾಕಲ್ಪಟ್ಟಾಗ ಬಹುಮತವು ಸಭೆಯಾಗಬೇಕೆಂದು ಅಭಿಪ್ರಾಯವನ್ನು ಕೊಟ್ಟಿತು.

ವೀರಕೇಸರಿ ಸಂಪಾದಕರಾದ ಮ|| ಎಂ. ಸೀತಾರಾಮಶಾಸ್ತ್ರಿಗಳು ಯಂ

TEACHERS VICTIMISED

Dismissed from Service

Memo dated 21st Oct 1928. No. 248—2[illegible]
From D. Sivaramiah Headmaster, Dt. Normal Scho[ol]
Bangalore City.

In reply to petition dated 18-10-28 he is direct[ed] to return to duty and attend the Dt. Normal Scho[ol] Bangalore on the morning of the 27th instant.

No. 44 2171 of 28—29. Department of Pub[lic]
28th Oct 1928. Instruction, Bangalore

Memo.

Orders thereon:-

(1) R. Rangiah, (2) M Ramakrishniya, (3) K. G[o]vindayya, (4) A. Chinnappa, (5) K. L Narsimhaiya, [re]ferred to above are dismissed from Government servic[e] with effect from the 13th October 1928 for having acte[d] contrary to the provisions of rule 29 of Rules for th[e] conduct of Public Servants in affixing their signatures t[o] the memorial, which among other things imputes bia[s] and improper motives to Government.

Separate orders will issue in the case of R. Lakshma[n]iya, who is in service under the City Municipality, Ba[n]galore, but he is dismissed from the District Norma[l] School, Bangalore.

(Sd.) N. S. Subba Rao
Director.

Memo dated 21-10-28 was served on the teachers o[n] 27-10-28, ie. the re-opening of the school after Dasara.

Memo dated 28 October (Sunday) was served on the teachers at about 6 p. m. in the office of the D.D.P.I. in the presence of theD.P.I.

ಶೈವಾಃ ಸಮುಪಾಸತೆ ಎಂಬ ಶ್ಲೋಕವನ್ನು ಹೇಳಿ ದೇವರ ಪ್ರಾರ್ಥನೆಯನ್ನು ಮಾಡಿದರು.

ಸ್ವಾಮಿ ಧರ್ಮಾನಂದ ಸರಸ್ವತಿಯವರು ಹಿಂದೂ ಮಹಾಸಭೆಯ ಅವಶ್ಯಕತೆಯನ್ನು ಕುರಿತು ಬೋಧಿಸಿದ ಮೇಲೆ ಮ|| ಎಸ್. ವೆಂಕಟಪತಯ್ಯನವರು ೧೯೨೫ ರಲ್ಲಿ ಬೆಂಗಳೂರು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾದ ಹಿಂದೂ ಮಹಾಸಭೆಯ ಉದ್ದೇಶಗಳನ್ನೂ ಕಾರ್ಯಕಲಾಪಗಳನ್ನೂ ತಿಳಿಸಿದರು. ಮ|| ಎಚ್. ಸಿ. ದಾಸಪ್ಪನವರು ಮೇಲಿನ ಉದ್ದೇಶಗಳಿಗೆ ಇನ್ನೂ ಕೆಲವು ಹೊಸ ಉದ್ದೇಶಗಳನ್ನೂ ಸೇರಿಸಬೇಕೆಂದರು. ಆ ಉದ್ದೇಶಗಳು ಯಾವುವೆಂದರೆ (1) ಸಂಸ್ಕೃತ ಪಾಠಶಾಲೆಗಳಲ್ಲಿಯೂ ವೇದಪಾಠಶಾಲೆಗಳಲ್ಲಿಯೂ ಸರ್ವ ಹಿಂದುಗಳಿಗೂ ಅಧ್ಯಯನಕ್ಕೆ ಅವಕಾಶವಿರಬೇಕು. (2) ಕಾಶಿಯಲ್ಲಿಯೂ ಉತ್ತರದೇಶದಲ್ಲಿಯೂ ಇರುವಂತೆ ದೇವಸ್ಥಾನಗಳಿಗೆ ಯಾವ ಕೋಮಿನವರಿಗೂ ಪ್ರವೇಶಕ್ಕೆ ಅಡ್ಡಿಯಿರಕೂಡದೆಂದು ಎಲ್ಲರಿಗೂ ವಿಶ್ವನಾಥನನ್ನು ಮುಟ್ಟಿ ಆರಾಧನೆ ಮಾಡುವಂತೆ ಅವಕಾಶವು ದೊರೆಯಬೇಕು. ಈ ಸಲಹೆಗೆ ಎಲ್ಲರೂ ಬೆಂಬಲವನ್ನು ಕೊಟ್ಟರು. ಒಬ್ಬರೂ ವಿರೋಧವಾಗಿ ಕೈ ಎತ್ತಲಿಲ್ಲ.

ಅನಂತರ ಮ|| ಪಿ. ವೆಂಕಟಪ್ಪನವರು ಕನ್ವೀನರಾಗಿ ಒಂದು ದೊಡ್ಡ ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಗೆ ಹಿಂದೂ ಜನತೆಯ ಎಲ್ಲಾ ಪಂಗಡದವರನ್ನೂ ಸೇರಿಸಲಾಯಿತು.

ಮ|| ತಗಡೂರು ರಾಮಚಂದ್ರರಾಯರು ಪಂಚಮರನ್ನು ಉದ್ಧಾರ ಮಾಡುವದಕ್ಕೆ ಎಲ್ಲರೂ ನೆರವಾಗಬೇಕೆಂದೂ ಮಂಡ್ಯದ ಹತ್ತಿರ ಕೊಮ್ಮೇರ್ ಹಳ್ಳಿಯಲ್ಲಿ ಪಂಚಮರಿಗೆ ಕೆರೆಯ ನೀರನ್ನು ತೆಗೆದುಕೊಳ್ಳುವಂತೆ ಸಹಾಯ ಮಾಡಬೇಕೆಂದೂ ಕೇಳಿಕೊಂಡರು.

ಅಧ್ಯಕ್ಷರಾದ ಮ|| ನೀಲಗಿರಿ ಸಂಜೀವಯ್ಯನವರ ಉಪಸಂಹಾರ ಭಾಷಣವಾದಮೇಲೆ ಮ|| ಸಂಜನಗೂಡು ಸಂಜಪ್ಪಶೆಟ್ಟರವರು ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿದರು

ಶ್ರೀಮನ್ಮಹಾರಾಜರವರಿಗೂ ಹಿಂದೂಮಹಾಸಭೆಗೂ ಮಂಗಳವಾಗಲೆಂದು ಜಯಜಯ ಕಾರದೊಡನೆ ಸಭೆಯು ಮುಕ್ತಾಯವಾಯಿತು.

ಮ|| ಸಂಜೀವಯ್ಯನವರು ಬಹಳ ತಾಳ್ಮೆಯಿಂದಲೂ ದಕ್ಷತೆಯಿಂದಲೂ ಸಾಮರ್ಥ್ಯದಿಂದಲೂ ಸಭಾಕಾರ್ಯವನ್ನು ನಡೆಸಿದರು.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

ಸಂಪಾದಕ-
ಪಿ. ಆರ್. ರಾಮಯ್ಯ.
ವಂದೇಮಾತರಂ ಲಾಡ್ಜ್, ಮೈಸೂರು.

ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಮಂಗಳವಾರ ೩೦ ಅಕ್ಟೋಬರ್, ೧೯೨೮

ನೋಟೀಸು.

ತಾ 11.3.28 ರಲ್ಲಿ ... ಲಿಂಗಾಗಲವಾಡಿಯಲ್ಲಿ ನಡೆದ ... ಖರ್ಚು ತಿಳಿಯಬೇಕೆಂತ ವೃತ್ತಾಂತ ಪತ್ರಿಕೆ ಮೂಲ್ಯ ... ಭಕ್ತರ ... ಶುದ್ಧ ... ಅದ್ದರಿಂದ ...

ನಂಜಪ್ಪನವರು ...

ತಾಯಿನಾಡು
30 10 1928

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ

ಬೆಂಗಳೂರು ಗಲಭೆಯ ವಿಷಯವಾಗಿ ಶ್ರೀಮನ್ ಮಹಾರಾಜರವರಿಗೆ ವಿನಯಪೂರ್ವಕವಾಗಿಯೂ ರಾಜಭಕ್ತಿ ಪೂರ್ಣವಾಗಿಯೂ ಬರೆದ ಅರ್ಜಿಗೆ 5000 ನಾಗರಿಕರೊಡನೆ [illegible] ತಮ್ಮ ರುಜುವನ್ನು ಹಾಕಿದ್ದಕ್ಕಾಗಿ ಬೆಂಗಳೂರು ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನ 5 ಬಡ ಉಪಾಧ್ಯಾಯರಿಗೆ ಅವರು ಮಾಡಿದ ಕೆಲಸವು ಮಹಾ ಅಪರಾಧವೆಂದು ಪರಿಗಣಿಸಲ್ಪಟ್ಟು ಕೆಲಸದಿಂದ ವಜಾ ಆಗಿಯೇ ಹೋಯಿತು. ಈಗ ಕೆಲವು ದಿವಸಗಳಿಂದಲೂ ಅವರನ್ನು ಬರ್ಖಾಸ್ತ್ ಮಾಡಿರುವುದಾಗಿಯೂ ಪುನಃ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿಯೂ ಸಮಾಚಾರವು ಹೊರಟಿತ್ತು. ಆದರೆ ಅದೆಲ್ಲಾ ಬರೀ ಭ್ರಾಂತಿಯಾಗಿ ಪರಿಣಮಿಸಿತು. ಈ ತಿಂಗಳು 28 ನೇ ತಾರೀಖು ಭಾನುವಾರ ಸಂಧ್ಯಾಕಾಲ 6 ಗಂಟೆ ಹೊತ್ತಿನಲ್ಲಿ ಡೈರೆಕ್ಟರವರ ಸಮಕ್ಷಮ ಡೆಪ್ಯುಟಿ ಡೈರೆಕ್ಟರವರು ವಜಾದ ಆರ್ಡರನ್ನು ಸದರಿ ಉಪಾಧ್ಯಾಯರ ಮೇಲೆ ಜಾರಿಮಾಡಿದರು.

ಹೀಗೆ ವಜಾ ಆದ ಬಡ ಉಪಾಧ್ಯಾಯರ ಕಷ್ಟವಂತೂ ವಿವರಿಸಲಸಾಧ್ಯವಾದುದು. ಅವರು ತಾವು ಮಾಡಿದುದು ತಪ್ಪೆಂದು ಅವರಿಗೆ ಇನ್ನೂ ಅನ್ನಿಸಿಲ್ಲ. ಹೇಗೆ ಅನ್ನಿಸೀತು? ಅರ್ಜಿ ಬರೆದಿರುವುದು ಶ್ರೀಮನ್ ಮಹಾರಾಜರಿಗೆ. ವಿಷಯ ಹಿಂದೂಧರ್ಮ ಮತ್ತು ಜನಾಂಗ. ಸರ್ಕಾರದವರು ಅಜಾಗರೂಕರಾಗಿ ಕೆಲವು ಅಧಿಕಾರಿಗಳ ಅಸಾಮರ್ಥ್ಯದಿಂದ ಬೆಂಗಳೂರು ಗಲಭೆಗಳೆಲ್ಲಾ ನಡೆದುದು ನಿಜವಾದುದು. ನಿಜವಾದ ವಿಷಯಕ್ಕೆ ಅವರು ರುಜುಹಾಕಿದರು. ಈಗ ನಮ್ಮ ಮೈಸೂರು ಸರ್ಕಾರದಲ್ಲಿ ಶ್ರೀಮನ್ ಮಹಾರಾಜರವರಿಗೆ ಅರ್ಜಿಹಾಕುವುದೂ ಸತ್ಯವನ್ನು ಪ್ರತಿಪಾದಿಸುವುದೂ ಮಹಾ ಅಪರಾಧವಾಗಿ ಪರಿಣಮಿಸುವುದೆಂದು ಅಕೃತ್ರಿಮರಾದ ಆ ಬಡ ಉಪಾಧ್ಯಾಯರಿಗೆ ಗೊತ್ತಿರಲಿಲ್ಲ. ಆದರೂ ಚಿಂತೆಯಿಲ್ಲ ಕೆಲಸದಿಂದ ವಜಾ ಆದ ಬಡ ಉಪಾಧ್ಯಾಯರು ಸತ್ಯಕ್ಕೂ ರಾಜಭಕ್ತಿಗೂ ವೀರತ್ವವನ್ನು ಪಡೆದರು. ನಮಗೆ ಸಂತೋಷವಿದೆ. ಅಸತ್ಯದಿಂದಲೂ, ಅಂಜುಬುರುಕತನದಿಂದಲೂ ಆತ್ಮಸಾಕ್ಷಿಗೆ ವಿರೋಧವಾಗಿಯೂ ನಡೆಯುತ್ತಿರುವ ಸಾವಿರಾರು ರೂಪಾಯಿಗಳನ್ನು ತಿನ್ನುವ ಕೆಲವು ದೊಡ್ಡ ಅಧಿಕಾರಿಗಳಿಗಿಂತಲೂ ಈ ಬಡ ಉಪಾಧ್ಯಾಯರು ಮೇಲು. ದೇವರೂ ಸತ್ಯವಂತರೂ ಈ ಬಡ ಉಪಾಧ್ಯಾಯರ ನಡತೆಯನ್ನು ಮೆಚ್ಚುವರು. ಇಲಾಖೆಯಲ್ಲಿ ಅವರಿಗೆ ದೊರೆಯುತ್ತಿದ್ದ ಅಲ್ಪವೇತನಕ್ಕಿಂತ ಹೆಚ್ಚಾಗಿಯೇ [illegible] ಅವರಿಗೆ ವೇತನವು ದೊರೆತೇ ದೊರೆಯುವುದು. ಖಂಡಿತವಾಗಿಯೂ ಅವರು ಸಾಯುವುದಿಲ್ಲ.

ಈ ಉಪಾಧ್ಯಾಯರುಗಳ ಮಾತು ಹಾಗಿರಲಿ. ಅಧಿಕಾರದಲ್ಲಿರತಕ್ಕವರು ತಾವು ಮಾಡುವುದು ಸತ್ಯವೆಂದೂ ಅದರ ಪರಿಣಾಮವು ಒಳ್ಳೆಯದೆಂದೂ ಭಾವಿಸಿ [illegible] ಗಣಪತಿಯನ್ನು ಸ್ವಸ್ಥಾನದಲ್ಲಿಡಿಸದೆ ಹೋದುದರಿಂದ ಬಂದ [illegible] ತಪ್ಪಿಸಿಕೊಳ್ಳುವುದಕ್ಕೆ ಆಗದೆ ಇರುವಾಗ್ಗೆ ಈಗ [illegible] ಮಾಡುವುದು ವಿವೇಕವೆ? ಅಧಿಕಾರಿಗಳು ತಮ್ಮ [illegible] ಸಿಳಿಕೊಳ್ಳುವುದಕ್ಕಾಗಿ ಹೀಗೆ ಮಾಡಿದ್ದರೆ ಈಗ ಅದು ಸರಿಯಾದ [illegible] 30 ನೇ ತಾರೀಖಿನಿಂದಲೂ ಮಹಾಮಹಾಪರಾಧ ಮಾಡಿ ಮೈಸೂರು [illegible] ಕೀರ್ತಿಗೆ ಕಳಂಕವನ್ನು ತಂದೊಡ್ಡಿದ ದುಷ್ಟರೂ ಕೈಲಾಗದಅಧಿಕಾರಿಗಳು ಇನ್ನೂ ಸ್ವಚ್ಛಂದರಾಗಿರುವುದು ಸರಕಾರದ ದರ್ಪಕ್ಕೆ ಘಾತಕವಲ್ಲವೊ? ಸರಕಾರದ ಕೆಲವು ಅಧಿಕಾರಿಗಳ ಮೇಲೆಯೇ ದುಷ್ಟರೊಡನೆ ಕಲೆತು ಮಸಲತ್ತು ನಡೆಯುತ್ತಿರುವದೆಂಬ ಅಪವಾದನೆಯು ಸರ್ಕಾರದ ದರ್ಪಕ್ಕೆ ಕುಂದಲ್ಲವೆ? ಈ ಐದುಜನ ಬಡ ಉಪಾಧ್ಯಾಯರನ್ನು ವಜಾ ಮಾಡಿದ ಮಾತ್ರಕ್ಕೆ ಸರ್ಕಾರವು ತನ್ನ ದರ್ಪವನ್ನು ರಕ್ಷಣೆಮಾಡಿದ ಹಾಗೆ ಆಗಲಿಲ್ಲ.

ಇದರಲ್ಲಿ ಇನ್ನೊಂದು ವಿಷಯ. ಈ ಉಪಾಧ್ಯಾಯರುಗಳು ಮಾಡಿದುದು ಅಪರಾಧವೇ ಅಲ್ಲವೆಂದು ಅನೇಕರು ದೃಢವಾಗಿ ನಂಬಿದ್ದಾರೆ. ಸರಕಾರದ ನೌಕರಿ [illegible], ಅದರ ಹೊರಗಿರಲಿ, ಪ್ರತಿಯೊಬ್ಬ ಪ್ರಜೆಗೂ ಶ್ರೀಮನ್ ಮಹಾರಾಜರಿಗೆ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಅಧಿಕಾರವಿರುವುದು. ಸರಕಾರದ ನೌಕರರ ರೂಲ್ಸಿನಲ್ಲಿ ಶ್ರೀಮನ್ ಮಹಾರಾಜರವರಿಗೆ ಅರ್ಜಿ ಹಾಕಕೂಡದೆಂದು ನಿಬಂಧನೆಯೇ ಇಲ್ಲ. ವಜಾದ ಆರ್ಡರಿನಲ್ಲಿ ತೋರಿಸಿರುವ ೨೯ ನೇ ನಿಬಂಧನೆಯು ಇದಕ್ಕೆ ಅನ್ವಯಿಸುವುದೇ ಇಲ್ಲ.

ಆ ನಿಬಂಧನೆಯು ಸರಕಾರಕ್ಕೆ ಹಾಕಿಕೊಳ್ಳಲ್ಪಡುವ ಅರ್ಜಿಗಳಿಗೆ ಅನ್ವಯಿಸುವುದೇ ಹೊರತು ಶ್ರೀಮನ್ ಮಹಾರಾಜರಿಗೆ ಹಾಕುವ ಅರ್ಜಿಗಳಿಗೆ ಅನ್ವಯಿಸುವುದಿಲ್ಲ. ಆದುದರಿಂದ ಉಪಾಧ್ಯಾಯರನ್ನು ವಜಾಮಾಡಿರುವ ಆರ್ಡರು ಕಾನೂನಿಗೆ ವಿರೋಧವಾದುದೆಂದೂ ಬಹಳ ಜನರ [illegible]

ಎರಡನೆಯದು. ಇದು ಅಪರಾಧವೋ, ಅಪರಾಧವಲ್ಲವೋ ಎಂಬುದು ನಿಷ್ಕರ್ಷಿಸಲ್ಪಡಬೇಕು. ಮ|| ಡಿ. ವಿ. ಗುಂಡಪ್ಪನವರು ಸ್ವರಾಜ್ಯಪತ್ರಿಕೆಗೆ ಬರೆದಿರತಕ್ಕ ಒಂದು ಲೇಖನದಲ್ಲಿ ಇದು ಅಪರಾಧವಲ್ಲವೆಂದು ಪ್ರಮಾಣಗಳೊಡನೆ ಪ್ರತಿಪಾದಿಸಿರುವರು. ಸರ್. ಎಂ ವಿಶ್ವೇಶ್ವರಯ್ಯನವರು ಕೂಡ ವಿಚಾರಣೆಯ ಕಮಿಟಿಯಲ್ಲಿ ಇದೇ ಅಂಶವನ್ನೇ ಸ್ಪಷ್ಟವಾಗಿ ತಿಳಿಸಿರುವರು.

ಒಂದುವೇಳೆ ಹಾಗೆ ಅಪರಾಧವೆಂದು ತೀರ್ಮಾನಮಾಡಿದರೆ ಅರ್ಜಿಗೆ ರುಜು ಹಾಕಿದವರಲ್ಲಿ ಇನ್ನೂ ಎಷ್ಟೋ ಜನರು ಸರಕಾರದ ನೌಕರರಾಗಿರುವರು. ಎಷ್ಟೋ ಜನರು ಪೆನ್ಷನ್ ಗಳನ್ನು ತೆಗೆದುಕೊಳ್ಳುತ್ತಿರುವರು. ಅವರೂ ಕೂಡ ಅಪರಾಧಿಗಳೇ ಆಗುವರು. ಆದುದರಿಂದ ಅವರೆಲ್ಲರನ್ನು ಶಿಕ್ಷಿಸುವಾಗಲೇ ಅಥವಾ ಅವರನ್ನು ಶಿಕ್ಷಿಸಿದಮೇಲೆ ಈ ಬಡ ಉಪಾಧ್ಯಾಯರನ್ನು ಶಿಕ್ಷಿಸಿದ್ದರೆ ಮೇಲಾಗಿತ್ತು.

ಒಂದು ವೇಳೆ ಹಾಗೆ ಶಿಕ್ಷೆಯನ್ನು ಮಾಡಬೇಕಾದರೂ ಕೆಲಸದಿಂದಲೇ ವಜಾಮಾಡುವ ಕಠಿಣತರವಾದ ಶಿಕ್ಷೆಯನ್ನು ವಿಧಿಸಬೇಕೆ? ನೀವು ಮಾಡಿರುವುದು ತಪ್ಪೆಂದು ಅವರಿಗೆ ಹುಷಾರನ್ನು ಕೊಟ್ಟಿದ್ದರೆ ಸಾಲದಾಗಿತ್ತೆ? ಹಾಗಲ್ಲದೆ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆಂಬಂತೆ ಈ ಉಪಾಧ್ಯಾಯರನ್ನು ಕೆಲಸದಿಂದಲೇ ವಜಾ ಮಾಡಿರುವುದು ಅತ್ಯಂತ ಶೋಚನೀಯವು. ಮ|| ಗುಂಡಪ್ಪನವರು ತಮ್ಮ ಲೇಖನದಲ್ಲಿ ತಿಳಿಸಿರುವಂತೆ ಇದು ಸರ್ಕಾರದ ದರ್ಪವನ್ನು ತೋರಿಸುವುದಿಲ್ಲ. ಸರ್ಕಾರವು ಸ್ವಾತಂತ್ರ್ಯವನ್ನೂ ಸತ್ಯವನ್ನೂ ಸಹನೆ ಮಾಡುವುದಿಲ್ಲವೆಂಬುದನ್ನು ತೋರಿಸುತ್ತದೆ. ಅತ್ತೆಯ ಮೇಲಿನ ಕೋಪವನ್ನು ಕೊತ್ತಿಯಮೇಲೆ ತೋರಿಸಿದಂತೆ ಯಾರ ಯಾರ ಮೇಲಿಯೋ ಇರುವ ಕೋಪವನ್ನು ಬಡ ಉಪಾಧ್ಯಾಯರ ಮೇಲೆ ತೋರಿಸಿರುವರು. ಇದರಿಂದ ಸರಕಾರದ ಆತ್ಮಗೌರವಕ್ಕೆ ಬಹಳ ಕುಂದಕ. ಇದು ದರ್ಪವಲ್ಲ. ಮ|| ಗುಂಡಪ್ಪನವರು ಹೇಳಿರುವಂತೆ ಅಲ್ಪವಾದ ದ್ವೇಷಸಾಧನೆ, ಪರಿಸಮಾಪ್ತಿಯಲ್ಲಿ ನ್ಯಾಯಪಕ್ಷಪಾತಿಗಳಾದ ಪ್ರಜೆಗಳಿಗೆ ನಮ್ಮದೊಂದು ಅರಿಕೆ. ಅಧಿಕಾರಿಗಳು ಒಂದರ ಮೇಲೊಂದು ತಪ್ಪನ್ನು ಮಾಡುತ್ತಾ ನಮ್ಮ ಸಂಸ್ಥಾನಕ್ಕೆ ಕಳಂಕವನ್ನು ತರುತ್ತಿರುವರು. ದೂರಾಲೋಚನೆಯಿಲ್ಲದೆ ನಮ್ಮ ಸಂಸ್ಥಾನವನ್ನು ಅನೇಕ ತೊಡಕುಗಳಿಗೆ ಗುರಿಮಾಡುತ್ತಿರುವರು. ಈ ಸಂದರ್ಭದಲ್ಲಿ ಧೈರ್ಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಸರಕಾರದ ಅನ್ಯಾಯದ ಪ್ರವರ್ತನವನ್ನು ಪ್ರತಿಭಟಿಸುವುದು ಎಲ್ಲ ರಾಜಭಕ್ತರ, ದೇಶಭಕ್ತರ ಕರ್ತವ್ಯವು.

ಮೋಟಾರು ಅನಾಹುತ.

ಕಳೆದ ಸೋಮವಾರ ಸಾಯಂಕಾಲ ಮೈಸೂರಿನಿಂದ ಡಾ|| ಪುಟ್ಟಣ್ಣನವರು ತಮ್ಮ ಹೊಸ ಮೋಟಾರಿನಲ್ಲಿ ಬೆಂಗಳೂರಿಗೆ ಬರುತ್ತಿದ್ದರು ಬಿಡದಿಯ ಸಮೀಪದಲ್ಲಿ ರಸ್ತೆಯಲ್ಲಿ ಬುರುದೆಯು ಜಾಸ್ತಿಯಾಗಿದ್ದುದರಿಂದ ಮೋಟಾರು ತಲೆಕೆಳಗಾಯಿತು. ಮೋಟಾರಿನಲ್ಲಿದ್ದ ಮೂರು ಜನರಿಗೂ ಡಾ|| ಪುಟ್ಟಣ್ಣನವರಿಗೂ ಸಹ ಜಖಂಗಳಾಗಿರುವುವು ಮೋಟಾರಿನ ಮೇಲ್ಭಾಗವು ಪುಡಿಪುಡಿಯಾಯಿತು ಅದೇ ಸಂದರ್ಭದಲ್ಲಿ ಮೈಸೂರು ಕಡೆಯಿಂದಲೇ ಬರುತ್ತಿದ್ದ ಜಮೀನ್ದಾರರಾದ ಮ|| ವೆಂಕಟರಮಣಯ್ಯನವರು ಮೇಲ್ಕಂಡವರನ್ನು ತಮ್ಮ ಮೋಟಾರಿನಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಿಟ್ಟರು.

ಉಪಾಧ್ಯಾಯರುಗಳ ಗೋಳು.

ಬೆಂಗಳೂರು ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನ ಉಪಾಧ್ಯಾಯರನ್ನು ಸಸ್ಪೆಂಡ್ ಮಾಡಿದ್ದ ವಿಚಾರವಾಗಿ 27 ನೇ ತಾರೀಖಿನ ದಿವಸ ಅವರುಗಳೆಲ್ಲರೂ ಸ್ಟ್ರೈಕ್ ಮಾಡಿದಂತೆಯೂ ಆ ವಿಚಾರವಾಗಿ ಏನೋ ಒಂದು ಟೆಲಿಗ್ರಾಂ ಬಂದದ್ದರಿಂದ ಡೈರೆಕ್ಟರವರನ್ನು ಕೂಡ್ಲೆ ಬೆಂಗಳೂರಿಗೆ ಹೋಗುವಂತೆ ದಿವಾನ್ ಸಾಹೇಬರು ಹೇಳಿದಂತೆಯೂ ಅದಕಾಂತೆ ಪ್ರಜಾಪ್ರತಿನಿಧಿ ಸಭೆಯು ನಡೆಯುತ್ತಿದ್ದಾಗಲೇ ಡೈರೆಕ್ಟರವರು ಎದ್ದು ಹೊರಟು ಹೋದರೆಂದೂ ಅವರ ಆಫೀಸೂ ಕೂಡ ಬೆಂಗಳೂರಿಗೆ ಹೊರಟು ಹೋಗಿರುವುದಾಗಿಯೂ ವರ್ತಮಾನವು ಬಂದಿರುತ್ತದೆ.

ಮದರಾಸಿನ To day ಪತ್ರಿಕೆಯಲ್ಲಿ ಜಂಬೂ ಸವಾರಿಯು ಅರಮನೆಗೆ ವಾಪ್ಸು ಬರುತ್ತಿದ್ದಾಗ ದೊಡ್ಡ ಗಡಿಯಾರದ ಹತ್ತಿರ ಕೆಲವರು Shame. ಎಂದು ಕೂಗಿಕೊಂಡರೆಂದು ಬರೆದಿತ್ತು. ಅದು ಶ್ರೀಮನ್ ಮಹಾರಾಜರಿಗೂ. ನಮ್ಮ ಸಂಸ್ಥಾನಕ್ಕೂ ಅಪಮಾನಕರವೆಂದು ಪ್ರತಿನಿಧಿಗಳು ಅಭಿಪ್ರಾಯ ಪಟ್ಟರು.

Printed and published by P. R. Ramaiya, at Sri Rama Press, D. Subbiah Road, Mysore.

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್ ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ [illegible] / ಪರಸ್ಥಳಕ್ಕೆ [illegible]

ಸಂಪುಟ ೧] ಬುಧವಾರ ೩೧ ಅಕ್ಟೋಬರ್, ೧೯೨೭ [ಸಂಚಿಕೆ [illegible]

ತಾಯಿನಾಡು

31 10 1928

ಸ್ವಾತಂತ್ರ್ಯ ಕಂಟಕರು

[illegible] ಪ್ರತಿನಿಧಿಸಭೆಯಲ್ಲಿ 12 ರಿಂದ 2ರ ವರೆಗೂ ನಡೆದ ಕಾರ್ಯಕಲಾಪವು ಅನವಶ್ಯಕವೂ, ಅಧಿಕ ಪ್ರಸಂಗವೂ ಆಗಿತ್ತು. ಈ ಪ್ರಸಂಗದಿಂದ ಪ್ರತಿನಿಧಿಗಳಸಭೆಯು ತನ್ನ ಗೌರವವನ್ನೂ, ಸಂಸ್ಥಾನದ ಗೌರವವನ್ನೂ ಹೆಚ್ಚಿಸಲಿಲ್ಲ. ಮದರಾಸಿನ Today ಎಂಬ ಸಣ್ಣ ಪತ್ರಿಕೆಯಲ್ಲಿ ಬಿದ್ದ ಒಂದು ಸಣ್ಣ ಸಮಾಚಾರವನ್ನು ಪರ್ವತವನ್ನಾಗಿ ಮಾಡಿ ಅದರಮೇಲೆ ಒಂದು ಮಹಾಭಾರತವನ್ನೇ ಬೆಳೆಸಿ ಸಂಸ್ಥಾನದ ಅನೇಕ ಪತ್ರಿಕೆಗಳನ್ನು ಸಭಿಕರು ಜರಿದುದು ಬಹಳ ಶೋಚನೀಯವು. ನಮ್ಮ ಅಭಿಪ್ರಾಯದಲ್ಲಿ ಅಧ್ಯಕ್ಷರವರು ಈ ಸಂಗ್ರಪವನ್ನು ಅಷ್ಟು ಬೆಳೆಸುವುದಕ್ಕೆ ಅವಕಾಶ ಕೊಟ್ಟಿದ್ದೇ ತಪ್ಪು.

ಎರಡು ಗಂಟೆಗಳಕಾಲ [illegible] Today [illegible] Shame [illegible]

[illegible]

ವಿಷಯಕ್ಕಾಗಿ ಎರಡು ಘಂಟೆಗಳಕಾಲ ಅಮೂಲ್ಯವಾದ ಸಮಯವನ್ನು ದುರ್ವ್ಯಯ ಮಾಡಿದರೆಂಬ ಆಕ್ಷೇಪಣೆಗೆ ಆ ಸಭಿಕರು ಜವಾಬ್ದಾರರಾಗುವರು.

ಇನ್ನೊಂದು ವಿಷಯ. ಈ Today ಪತ್ರಿಕೆ ಸಮಾಚಾರದೊಂದಿಗೆ ಇತರ ಕೆಲವು ದೇಶೀಯ ಪತ್ರಿಕೆಗಳ ಅವಹೇಳನವನ್ನು ಈ ಸಭಿಕರು ಮಾಡಿದರು. ಈ ಪತ್ರಿಕೆಗಳು ರಾಷ್ಟ್ರೀಯ ಧರ್ಮವನ್ನು ನಮ್ಮ ದೇಶದಲ್ಲಿ ಹರಡಿ ಎಲ್ಲಾ ಕೋಮುಗಳಲ್ಲಿ, ಐಕಮತ್ಯವನ್ನು ಸ್ಥಾಪಿಸಿದರೆ ಈ ಜಗಳಗಳಿಂದಲೇ ಮೇಲಕ್ಕೆ ಬಂದಿರುವ ತಮಗೆ ಪ್ರಾಶಸ್ತ್ಯವು ಕಡಿಮೆಯಾಗುವುದೆಂಬ ಹೊಟ್ಟೆಉರಿಯೇ ಈ ಪತ್ರಿಕೆಗಳನ್ನು ಬಂಡಿಸುವುದಕ್ಕೆ ಕಾರಣ. [illegible]

[illegible]

ಈ ಸಭಿಕರು ಪತ್ರಿಕೆಗಳನ್ನು [illegible] ಭ್ರಾಂತರಾಗುವರೆಂದು ಹೇಳುವರು. [illegible] ಪತ್ರಿಕೆಗಳಿಲ್ಲವೇ, ಕುರುಬರ ಪತ್ರಿಕೆ, [illegible] ಪತ್ರಿಕೆ, ಸ್ಟಾರ್, ಆಲ್‌ಕಲಾಂಗಳು, [illegible] ಪತ್ರಿಕೆಗಳು ಬರೆಯುವುದನ್ನೆಲ್ಲಾ [illegible]

ಯಾವುದು [illegible] ಪತ್ರಿಕೆಗಳು [illegible] ಸ್ವಚ್ಛಂದವಾಗಿಡಬೇಕು.

ಇದೇ ಈ ಸಭಿಕರಲ್ಲಿ ಕೆಲವರ ನೀತಿ. ಸತ್ಯವನ್ನೂ ನ್ಯಾಯವನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಪ್ರಜೆಗಳು ಈ ಸ್ವಯಂ [illegible] ಗಳನ್ನು ಮನ್ನಿಸುವುದಿಲ್ಲ! ಸಂಸ್ಥಾನದವರು ಪತ್ರಿಕಾ ಕಾನೂನನ್ನೇ ಕಿತ್ತು ಹಾಕಬೇಕೆಂದು ನ್ಯಾಯ ವಿಧಾಯಕ ಸಭೆಯಲ್ಲಿ [illegible] ಧೀರರೇ ಈ ಪ್ರತಿನಿಧಿ ಸಭೆಯಲ್ಲಿ ಈ ಗಿರುವ ಪತ್ರಿಕಾ ಕಾನೂನು [illegible] ಅದನ್ನು [illegible] ಬೇಕೆಂದು ಹೇಳಿದರು. ಇವರೇ ವೀರರ! [illegible]!

ಪ್ರತಿನಿಧಿ ಸಭೆ.

ನೀಲಗಿರಿ ಸಂಜೀವಯ್ಯನವರು ಅಲ್ಪಸಂಖ್ಯಾತ ಕೋಮುಗಳ ರಕ್ಷಣೆಗಾಗಿ ಮೈಸೂರು [illegible], ತಾಯಿನಾಡು, [illegible] ಪತ್ರಿಕೆಗಳನ್ನು [illegible] ಸಬೇಕೆಂದು ಸರಕಾರಕ್ಕೆ ಸಲಹೆಯನ್ನು ಕೊಡಬೇಕೆಂದಿರುವರು.

[illegible] ತಂದಳಿಸಿದ [illegible] ಘರ್ಷಣೆ [illegible]

ವಿದ್ಯಾರ್ಥಿಗಳ ದಸ್ತಗಿರಿ

ಈ [illegible] 7 ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರೆಂದೂ, [illegible] ಜೆ. [illegible] ಸರಕಾರವನ್ನು ವಿಚಾರಿಸಲು [illegible] ವೆಂದು ತಿಳಿಸಿದರು.

ಧರ್ಮಪ್ರಕಾಶಕರ ಮಾತು ಬದಲಾಯಿಸಿದ್ದು.

ನಾಗಪ್ಪನವರ ಪ್ರಶ್ನೆ— ಮಹಾರಾಜರಿಗೂ ದಿವಾನರಿಗೂ ಕೆಟ್ಟ ಹೆಸರನ್ನು ತರುವುದು ಬ್ರಾಹ್ಮಣ ದಿವಾನರನ್ನು ತರುವುದು ನಿಷ್ಪಕ್ಷಪಾತವಾದ ಆಡಳಿತಕ್ಕೆ ಅಡ್ಡಿ ಮಾಡುವುದು ಬ್ರಾಹ್ಮಣೇತರರನ್ನು ಕೆಳ ದರ್ಜೆಗೆ ತಳ್ಳುವುದು. ಇವೆ ಈ ತಂಡೇಕೋರರ ಆಶೆ ಎಂದು ನೀವು ಮಾಚಯ್ಯನವರು ಕೋರ್ಟಿನಲ್ಲಿ ಹೇಳಿದ್ದಿರಲ್ಲಾ.

ಚಂದ್ರೆ ಗೌಡರ ಉತ್ತರ, ಅಲ್ಲಿ ಹೀಗೆ ಹೇಳಿದ್ದುಂಟು, ಈಗ ಆ ಅಭಿಪ್ರಾಯವಿಲ್ಲ.

Printed and published by
P. R. Ramaiya at Sri Rama Press
D. Subbiya Road, Mysore.

|| ವಂದೇಮಾತರಂ || Regd. No. M 2322

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ,
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { ಸ್ಥಳಕ್ಕೆ [illegible]
ಚಂದಾ { ಪರಸ್ಥಳಕ್ಕೆ [illegible]

ಸಂಪುಟ ೧] ಗುರುವಾರ ೧ ನವಂಬರ್, ೧೯೨೮ [ಸಂಚಿಕೆ [illegible]

ತಾಯಿನಾಡು
1 11—1928

ಹಿಂದುಳಿದ ಪಂಗಡದ ಮುಖಂಡರು

ಹಿಂದುಳಿದ ಪಂಗಡಗಳಿಗೆ ಮುಖಂಡರಾಗಿರುವವರು ಬಹಳ ಜವಾಬ್ದಾರಿಯನ್ನು ಹೊತ್ತಿರುವರು. ಈ ಪಂಗಡಗಳವರು ಅವರಲ್ಲಿ ಭಕ್ತಿವಿಶ್ವಾಸಗಳನ್ನಿಟ್ಟು ಅವರುಗಳನ್ನು ಮುಖಂಡರನ್ನಾಗಿಮಾಡಿಕೊಂಡಿರುವರು. ಈ [illegible] ಸ್ವಾರ್ಥಪರರಾಗಲೀ, ದ್ವೇಷಪರರಾಗಲೀ, ಅವಲೇಕ ಇರಬಾರದು. ಇವರಲ್ಲಿ ಅನೇಕರು ವಿದ್ಯಾ ಪ್ರಾವೀಣ್ಯತೆಯನ್ನು ಪಡೆದು ಪದವೀಧರರಾಗಿರುವರು. ಇಂತಹವರಿಗೂ ವಿದ್ಯೆಯಿಲ್ಲದವರಿಗೂ ಬಹಳ ವ್ಯತ್ಯಾಸ [illegible]. ವಿದ್ಯೆಯಿಲ್ಲದವರಂತೆಯೇ ಇವರು ಪ್ರವ[illegible] ಅಜ್ಞಾನದಲ್ಲಿಡುವುದಾ[illegible] ಮಾರ್ಗಗಳಿಗೆ ಎಳೆಯುವುದಾಗಲೀ [illegible] ವಿದ್ಯೆಯಿಲ್ಲದ [illegible] [illegible] ಸ್ವಾತಂತ್ರ್ಯ ಪತ್ರಿಕೆಗ[illegible] ಪತ್ರಿಕೆಯಲ್ಲಿ [illegible] ಹಿಂದುಳಿದ ಪಂ[illegible] ವಿದ್ಯಾವಂತರಂತೆಯೇ [illegible] ವಿದ್ಯಾವಂತ[illegible]ರಾದವರಿಗೆ ಜ್ಞಾನದಜೊತೆಗೆ ವಿನಯ, ಸೌಜನ್ಯ, ಸ[illegible] [illegible]ರಬೇಕು. ತನ್ನ ಜಾತಿಗಿಂತಲೂ ದೇಶ[illegible] [illegible] ಬಾಂಧವ[illegible] ನೋಡಿದಂತೆಯೇ ವಿದ್ಯಾವಂತರೂ ಪ್ರವರ್ತಿಸಿದರೆ ಇವರ [illegible] ಸಾರ್ಥಕವಿಲ್ಲದಂತಾಗುವುದು. ಆದುದರಿಂದ ಹಿಂದುಳಿದ ಪಂಗಡದವರಲ್ಲಿ ವಿದ್ಯಾವಂತರಾದವರು ತಮ್ಮ [illegible]ಗೆ ಒಳೆಯ [illegible] ಹಾಕುವ [illegible].

ಪ್ರತಿನಿಧಿ ಸಭೆ.

[illegible]

[illegible] ಕುಂದಕವಾಗುವುದಲ್ಲದೆ ಅನೇಕ ಮುಖ್ಯ[illegible]ವಾದ ವಿಷಯಗಳನ್ನು ಚರ್ಚಿಸುವುದಕ್ಕೆ ಪ್ರಥಮಾ ಸವೇ ಇಲ್ಲದೆ ಹೋಗುವುದು. ಅರಿಕೆಗಳನ್ನು ತರುವವರಲ್ಲಿ ಅನೇಕ ಅರಿಕೆಗಳು ಬಹಳ ಸಣ್ಣ ವಿಷಯಗಳಾಗಿರುವುವು. ಅವುಗಳನ್ನು ಮೆಂಬರುಗಳು ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದರೆ ಅದರಿಂದ ಹೆಚ್ಚು ಪರಿಣಾಮವಾಗುವುದು. ಎಷ್ಟೋ ಅರಿಕೆಗಳಿಗೆ ಬಹಳ ಚರ್ಚೆಯಾದನಂತರ ಸರ್ಕಾರದವರು ನೋಡೋಣ, ಆಲೋಚನೆ ಮಾಡುತ್ತೇವೆ, ಎಂಬ ಸಂಧಿಗ್ಧವಾದ ಉತ್ತರಗಳನ್ನು ಹೇಳುವರು. ಇದಕ್ಕಿಂತಲೂ ಸರ್ಕಾರದವರು ಆ ಅರಿಕೆಗಳನ್ನೆಲ್ಲಾ ಮೊದಲೇ ಪರಾಂಬರಿಸಿ ಅರಿಕೆಗಳ ಪುಸ್ತಕದಲ್ಲಿ ಹೆಚ್ಚಾಗಿ ಖಾಸಗೀ ಠರಾವುಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಈಗಿರುವ ಪ್ರತಿನಿಧಿಸಭೆಯು ಅನೇಕ ಬಾಬುಗಳಲ್ಲಿ ಸುಧಾರಣೆಯನ್ನು ಹೊಂದಬೇಕು. ಇಲ್ಲವಾದರೆ ಅದರಿಂದ ಪ್ರಜೆಗಳಿಗೂ ಉಪಯೋಗವಿಲ್ಲ. ಸಂಕಾರಕ್ಕೂ ಉಪಯೋಗವಿಲ್ಲ.

ಮ ಹಾ ಲಿಂ ಗೋ ದ್ಭ ವ ಚಿ ತ್ರ.

ಪಂಡಿತ ಭೂಷಣ ಬ್ರಹ್ಮಾಂಡ ಕೃಷ್ಣಮೂರ್ತಿ ಆಚಾರ್ಯರವರಿಂದ ಪ್ರಕಟಿಸಲ್ಪಟ್ಟಿರುವ ಶೈವಾಗಮದ 64 ಅವತಾರಗಳ ಚಿತ್ರಗಳನ್ನೊಳಗೊಂಡ ಶ್ರೀ ಮಹಾಲಿಂಗೋದ್ಭವ ಚಿತ್ರದ ಪ್ರತಿ ಒಂದನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಇದು ಈ ಊರಿನ ವೀವರ್ಸ್ ಲೈನಿನಲ್ಲಿರುವ ಮ|| ಟಿ. ಎ. ಕೃಷ್ಣಮೂರ್ತಿ ಆಚಾರ್ಯರಲ್ಲಿ ಪ್ರತಿ ಒಂದಕ್ಕೆ ನಾಲ್ಕಾಣೆಯಂತೆ ದೊರೆಯುವುದು.

ಪ್ರ ತಿ ನಿ ಧಿ ಸ ಭೆ.

ಮೈಸೂರು ಡಿಸ್ಟ್ರಿಕ್ಟ್ ಕಮಿಷನರವರು ಪ್ರಿಲಿಮಿನರೀ ಮೀಟಿಂಗಿನಲ್ಲಿ ಪಾಸಾದ ವಿಷಯಗಳನ್ನು ಬಿಟ್ಟುಬಿಟ್ಟಿರುವುದರಿಂದಲೂ ಪಾಸಾಗದೆ ಇದ್ದ ವಿಷಯಗಳನ್ನು ಸೇರಿಸಿ ಪ್ರಜಾಪ್ರತಿನಿಧಿಸಭೆಯ ಕಾರ್ಯದರ್ಶಿಗಳಿಗೆ ಕಳುಹಿಸಿದರಿಂದಲೂ ಈ ವಿಷಯವನ್ನು ಚರ್ಚಿಸುವುದಕ್ಕಾಗಿ ನಾಳಿದು ಅವಕಾಶವು ಕೊಡಲ್ಪಟ್ಟಿರುವುದು.

ವ ಸ್ತು ಪ್ರ ದ ರ್ಶ ನ.

31-10-28 ನೇ ಸಾಯಂಕಾಲ ದಿವಾನರವರು ವಸ್ತುಪ್ರದರ್ಶನದಲ್ಲಿ ಬಹುಮಾನಗಳನ್ನು ಹಂಚಿದರು. ಸರ್ಕಾರದ ದೊಡ್ಡ ಅಧಿಕಾರಿಗಳೂ ಮಹಾಜನಗಳೂ ಹಾಜರಾಗಿದ್ದರು. ಪ್ರದರ್ಶನದ ಕಮಿಟಿಯ ಅಧ್ಯಕ್ಷರಾದ ಮಿ|| ಕ್ರಂಬೀಗಲ್‌ರವರು ಸ್ವಾಗತವನ್ನು ಬಯಸಿದನಂತರ ದಿವಾನರವರು ಭಾಷಣವನ್ನು ಮಾಡಿ ಇನಾಮುಗಳನ್ನು ಹಂಚಿದರು. ಆಟಪಾಟಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದ ಕಾಲದಲ್ಲಿ ಸಭಿಕರೆಲ್ಲರೂ ಬಹಳ ಉತ್ಸಾಹದಿಂದ ಚಪ್ಪಾಳೆಯನ್ನು ತಟ್ಟಿದರು. ದಿವಾನರವರಿಗೆ ಧನ್ಯವಾದಗಳನ್ನರ್ಪಿಸಿದನಂತರ ಜಯಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಸೋಷಲ್ ಕಮಿಟಿಯ ಅಧ್ಯಕ್ಷರಾದ ಮ|| ಬಿ. ಸೀತಾರಾಮಾಚಾರ್ಯರವರು ಅತಿಥಿಗಳಿಗೆ ಒಂದು ಟೀಪಾರ್ಟಿಯನ್ನು ಕೊಟ್ಟರು. ಶ್ರೀಮನ್ಮಹಾರಾಜರವರಿಗೂ ದಿವಾನರವರಿಗೂ ಜಯವಾಗಲಿ ಎಂಬ ಧ್ವನಿಯೊಡನೆ ಕೂಟವು ಚದರಿತು.

ಕೋ ರ್ಟು ಗ ಳ ತಿ ರ ಸ್ಕಾ ರ ದ ಮ ಸೂ ದೆ.

ನಮ್ಮ ಸಂಸ್ಥಾನದ ಕೋರ್ಟುಗಳಲ್ಲಿ ನಡೆಯುವ ವಿಚಾರಣೆಗಳ ವಿಷಯವಾಗಿ ತಿರಸ್ಕಾರ ರೂಪವಾಗಿ ಯಾರು ಏನು ಹೇಳಿದರೂ, ಯಾರು ಏನುಬರೆದರೂ, ಅವರಿಗೆ ಶಿಕ್ಷೆಗೆ ಅವಕಾಶವಿಲ್ಲ. ಇದಕ್ಕಾಗಿ ಪ್ರತಿನಿಧಿಸಭೆಯಲ್ಲಿ ಸರ್ಕಾರದವರು ಒಂದು ಮಸೂದೆಯನ್ನು ತಂದರು. ಸರ್ಕಾರದವರು ತಂದ ಮಸೂದೆಯು ಅನೇಕ ಕೊರತೆಗಳಿಂದ ಕೂಡಿತ್ತು. ಆ ಕೊರತೆಗಳನ್ನೆಲ್ಲಾ ಮ|| B. ನರಸಿಂಗರಾಯರು ಮತ್ತು ಇತರರು ವ್ಯಾಖ್ಯಾನಿಸಿದರು. ನಮ್ಮ ಸಂಸ್ಥಾನದಲ್ಲಿ ಬೆಂಚುಕೋರ್ಟಿನಿಂದ ಚೀಫ್‌ಕೋರ್ಟಿನವರೆಗೂ ಅನೇಕ ದರ್ಜೆಯ ಕೋರ್ಟುಗಳಿರುವುವು. ಯಾವುದಾದರೂ, ಮೊಕದ್ದಮೆಯು ನಡೆಯುತ್ತಿರುವಾಗ ಆ ಮುಖದ್ದಮೆಯ ವಿಷಯವಾಗಿ ಟೀಕೆಯನ್ನು ಮಾಡುವುದು ತಪ್ಪು. ಆದರೆ ಮುಖದ್ದಮೆಯು ಪೂರ್ತಿಯಾದಮೇಲೆ ನ್ಯಾಯಾಧಿಪತಿಗಳು ಕೊಟ್ಟ ತೀರ್ಪನ್ನೂ, ಟೀಕೆಮಾಡಕೂಡದೆಂದು ಹೇಳುವುದು ಅನುಚಿತ. ಏತಕ್ಕೆಂದರೆ ತೀರ್ಪುಗಳಲ್ಲಿ ಅನೇಕ ನ್ಯೂನತೆಗಳಿರಬಹುದು. ಅವುಗಳನ್ನೆಲ್ಲಾ ತೋರಿಸುವುದು ನ್ಯಾಯವಾದಿಗಳ ಕರ್ತವ್ಯ.

ಚೀಫ್‌ಕೋರ್ಟಿನ ತೀರ್ಪನ್ನು ಖಂಡಿಸಕೂಡದೆಂದು ಬೇಕಾದರೆ ಕಾನೂನು ಮಾಡಬಹುದು. ಆದರೆ ಇತರ ಕೋರ್ಟುಗಳ ತೀರ್ಪನ್ನು ಖಂಡಿಸುವುದಕ್ಕೆ ಅವಕಾಶವಿರಬೇಕು. ಎಂಬುದಾಗಿ ಸಭಿಕರು ಅಭಿಪ್ರಾಯಪಟ್ಟರು.

ಶ್ರೀರಾಮಕೃಷ್ಣಾಶ್ರಮ.

ಮೇಲ್ಕಂಡ ಆಶ್ರಮದ ಕಟ್ಟಡದ ಫಂಡಿಗಾಗಿ ಶ್ರೀರಾಮಕೃಷ್ಣ ಭಕ್ತ ಮಂಡಲಿಯವರು ದಿವಾನ್ ಮಿರ್ಜಾ ಸಾಹೇಬರ ಅಧ್ಯಕ್ಷತೆಯಲ್ಲಿ ಶ್ರೀಮತೀ ಪರಿಣಯವೆಂಬ ನಾಟಕವನ್ನು ನಾಳೆ ರಾತ್ರಿ ಲಕ್ಷ್ಮೀಥಿಯೇಟರ್ನಲ್ಲಿ ಅಭಿನಯಿಸುತ್ತಾರಾಗಿ ಮಹಾಜನರು ಪ್ರೋತ್ಸಾಹಿಸ ಬೇಕಾಗಿ ಕೋರಲ್ಪಟ್ಟಿದೆ.

ಅಬ್ಬಾಸ್‌ಖಾನರ ಮಾತಿಗೆ ಬೆಲೆಯಿಲ್ಲ.

ಸಿ. ಎನ್. ನರಸಿಂಗರಾಯರ ಕೈಫಿಯತ್ತು.

ನಾಗಪ್ಪನವರ ಪ್ರಶ್ನೆ — ಅಬ್ಬಾಸ್ ಖಾನರು ಬ್ರಾಹ್ಮಣಸಮುದಾಯವನ್ನೇ ಬೈದ ವಿಷಯ. ಯಾರೇ ಆಗಲಿ ಒಟ್ಟು ಒಂದು ಸಮುದಾಯವನ್ನೇ ದೂಷಿಸಿದರೆ ಅವನು ಹುಚ್ಚನಲ್ಲವೇ?

ಉ—ಅವನು ಹುಚ್ಚನಿಗಿಂತ ಕಡೆ.

ಪ್ರ—ಹಾಗಾದರೆ ಅವನ ಮಾತಿಗೆ ಏಕೆ ಅಷ್ಟು ಮಹತ್ವ ಕೊಡುವಿರಿ.

ಉ—ನೀವೇ ಪ್ರತಿಭಟಿಸಿರಿ ಎಂದು ನಮಗೆ ಹೇಳಿದಿರಿ. ಅಬ್ಬಾಸ್‌ಖಾನರು ಬ್ರಾಹ್ಮಣೇತರರ ಮುಂಖಂಡರು, ಮುನಿಸಿಪಾಲಿಟಿಯ ಅಧ್ಯಕ್ಷರು ಸರಕಾರದವರು ಅವರ ಮಾತಿಗೆ ಬೆಲೆ ಕೊಟ್ಟಿದ್ದಾರೆ.

ನಾಗಪ್ಪನವರು:—ಸರಕಾರದವರು ಅವರ ಮಾತಿಗೆ ಬೆಲೆಕೊಡುವುದಿಲ್ಲ.

ನರಸಿಂಗರಾಯರು:—ಬಹಳ ಸಂತೋಷ.

Printed and published by
P. R. Ramaiya at Sri Rama Press,
D. Subbiya Road, Mysore.

"ವಂದೇಮಾತರಂ" [illegible] Regd No. M. 2322

ತಾಯಿನಾಡು.

ಪ್ರತಿ ದಿನ ಸಾಯಂಕಾಲವು ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್ ರಾಮಯ್ಯ, ವಂದೇಮಾತರಂ ಆಫೀಸ್, ಮೈಸೂರು.

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ [illegible] / ಪರಸ್ಥಳಕ್ಕೆ [illegible]

ಪುಸ್ತಕ ೧] ಶುಕ್ರವಾರ ೨ ನವಂಬರ, ೧೯೨೮ [ಸಂಚಿಕೆ [illegible]

ತಾಯಿನಾಡು

2 11-1928

ಸ್ವಾತಂತ್ರರಕ್ಷಕರೇ?

ಅಕ್ಟೋಬರ್ ೩೧ ನೇ ತಾ॥ ನಲ್ಲಿ ನಮ್ಮ ಪತ್ರಿಕೆ [illegible] ಪ್ರತಿನಿಧಿಗಳನ್ನು ಸ್ವಾತಂತ್ರ್ಯ ಕಂಟಕರು ಎಂದು ನಾವು ಬರೆದಿದ್ದಕ್ಕಾಗಿ ನಮ್ಮ ಮೇಲೆ ಆಕ್ಷೇಪಣೆ ಮಾಡಿ ಸರ್ಕಾರದ ಗಮನಕ್ಕೆ ನಮ್ಮ ಪತ್ರಿಕೆಯನ್ನು ಮ॥ ನೀಲಗಿರಿ ಸಂಜೀವಯ್ಯನವರೂ, ಅವರ ಮಿತ್ರರೂ ತಂದರು. ಆ ಲೇಖನದ ವಿಷಯವಾಗಿ ಸರ್ಕಾರದವರ ಅಭಿಪ್ರಾಯವೇನೆಂಬುದು ಗೊತ್ತಿಲ್ಲ. [illegible]

[illegible]

[illegible]

[illegible] ಬ್ರಾಹ್ಮಣರಲ್ಲಿ ಅ [illegible] ಪಡ ಶಾಸನವು ಬೇಕೆಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳ ದಸ್ತಗಿರಿ

ಅಕ್ಟೋಬರ್ ೩೧ ನೇ ತಾ॥ ಬವಸ ಬೆಂಗಳೂರಿನಲ್ಲಿ ಐಡೆಂಟಿಫಿಕೇಷನ್ ಪರೇಡ್ ನಡೆದು ೧೪ ಜನರು ಗುರ್ತಿಸಲ್ಪಟ್ಟರು. ಇವರಲ್ಲಿ ವೀರಕೇಸರಿ ಸಂಪಾದಕರಾದ ಮ॥ ಸೀತಾರಾಮಶಾಸ್ತ್ರಿಗಳೂ ಒಬ್ಬರು. ಗುರ್ತಿಸಲ್ಪಟ್ಟವರಲ್ಲಿ ೧೦ ಜನರು ವಿದ್ಯಾರ್ಥಿಗಳು. ೬ ಜನ ವಿದ್ಯಾರ್ಥಿಗಳು ಮುಚ್ಚಳಿಕೆಯನ್ನು ಕೊಡಲು ಒಪ್ಪಲಿಲ್ಲ. ಇವರಲ್ಲಿ ಮ॥ ಜೆ. ಭೀಮರಾಯರ ಮಗ ಒಬ್ಬ. ಇವರನ್ನು ಚಾಮರಾಜಪೇಟೆ ಲಾಕಪ್ಪಿಗೆ ತೆಗೆದುಕೊಂಡು ಹೋದರು. ಮಧ್ಯಾಹ್ನ 1 ಗಂಟೆವರೆಗೂ ಇವರು ಊಟಮಾಡಲಿಲ್ಲ. ಪೋಲೀಸಿನವರೇ ಹೋಟಲಿನಿಂದ ಅನ್ನ ತರಿಸಿ ಊಟಮಾಡಿಸಿದರು. Fort—A.V ಸ್ಕೂಲ್ ಹತ್ತಿರ ಗಲಾಟೆಗೆ ಆರಂಭವಾಯಿತು. ಸ್ಪೆಷಲ್ ಮ್ಯಾಜಿಸ್ಟ್ರೇಟರು ಈ ಹುಡುಗರನ್ನು ಒಂದು ಮೋಟಾರ್ ಬಸ್ಸಿನಲ್ಲಿ ಕೂರಿಸಿ ರಿಸರ್ವ್ ಪೋಲೀಸಿನೊಡನೆ ಸೆಂಟ್ರಲ್ ಜೈಲಿಗೆ ಕಳುಹಿಸಿದರು. ಬೆಂಗಳೂರಿನಲ್ಲೆಲ್ಲಾ ಬಹಳ ಕೋಲಾಹಲವಾಗಿರುವುದು.

ಡಿಸ್‌ಮಿಸ್ ಆದ ಉಪಾಧ್ಯಾಯರುಗಳು

ಶ್ರೀಮನ್ಮಹಾರಾಜರವರಿಗೆ ಬರೆದ ಅರ್ಜಿಗೆ ರುಜುಹಾಕಿದ 5 ಉಪಾಧ್ಯಾಯರಿಗೆ ಡಿಸ್‌ಮಿಸ್ ಆದ ವಿಷಯವನ್ನು ಚರ್ಚಿಸುವುದಕ್ಕಾಗಿ ತಂದ ಅವಸರದ ಠರಾವು ನೆನ್ನೆ ಸಂಧ್ಯಾಕಾಲ ೪॥ ಯಿಂದ ೬॥ ಯುವರೆಗೆ ಚರ್ಚಿಸಲ್ಪಟ್ಟಿತು. ಚರ್ಚೆಯು ಪೂರ್ತಿಯಾಗುವುದಕ್ಕೆ ಮುಂಚೆಯೇ ೬॥ ಘಂಟೆಯಾಗಿ ಹೋದದ್ದರಿಂದ ವಿಷಯವನ್ನು ಓಟಿಗೆ ಹಾಕಲು ಅವಕಾಶವಾಗಲಿಲ್ಲ. ಮ॥V. ವೆಂಕಟಪ್ಪನವರು ಬಹಳ ಸಾಮಾರ್ಥ್ಯದಿಂದ ಠರಾವನ್ನು ಸೂಚಿಸಿದರು. ಮ॥ ಸತ್ಯನಾರಾಯಣ ಶೆಟ್ಟರು ಇದನ್ನು ಅನುಮೋದಿಸಿದರು. ಮ॥ N.G. ಸಂಜೀವಯ್ಯನವರೂ: D.S, ಮಲ್ಲಪ್ಪನವರೂ ರಾಜೋಜೀರಾಯರವರೂ. S.C ಮಲ್ಲಯ್ಯನವರೂ, ದೇವೇಗೌಡರವರೂ, ದೊಡ್ಡಯ್ಯನವರೂ, ಪುಟ್ಟಸ್ವಾಮಿಯವರೂ H.C.ದಾಸಪ್ಪನವರೂ, ಇನ್ನೂ ಇತರರೂ ಇದನ್ನು ವಿರೋಧಿಸಿದರು. ಡೈರೆಕ್ಟರಾದ ಮ॥ N.S ಸುಬ್ಬರಾಯರವರು ಬಂದು ಪುಟ್ಟ ಭಾಷಣ ಮಾಡಿ ಡಿಸ್‌ಮಿಸ್ ಮಾಡಿದ್ದು ಸರಿಯೆಂದು ಪ್ರತಿಪಾದಿಸಿದರು. ಮ॥ ಗಳಾದ S, ವೆಂಕಟೇಶಯ್ಯನವರೂ, B.L. ಕೃಷ್ಣಯ್ಯನವರೂ, ಹೊಸಕೊಪ್ಪ ಕೃಷ್ಣರಾಯರವರೂ, ತಿಪ್ಪೂರ್ ಸುಬ್ಬರಾಯರವರೂ, ಟಿ. ಸುಬ್ಬರಾಮಶೆಟ್ಟರವರೂ, ಎಂ. ಪಿ. ಸೋಮಶೇಖರರಾಯರವರೂ, ಮಿರ್ಲೆ ಲಕ್ಷ್ಮೀನಾರಾಣಪ್ಪನವರೂ, ಕೆ.ಟಿ. ಭಾಷ್ಯಂರವರೂ, ಅವಸರದ ಠರಾವನ್ನು ಅನುಮೋದಿಸಿದರು. ಎರಡು ಪಕ್ಷದವರೂ ಬಹಳ ಚೆನ್ನಾಗಿ ವಾದಿಸಿದರು ಠರಾವನ್ನು ಓಟಿಗೆ ಹಾಕಿದ್ದಿದ್ದರೆ ಬಹುಮತವು ವಿಧ್ಯಾಭ್ಯಾಸದ ಇಲಾಕೆಯು ಅರ್ಡರಿಗೆ ದೊರೆಯುತ್ತಿತ್ತೆಂದು ಕಾಣಬರುತ್ತದೆ. ಭಾಷಣಗಳ ಸಾರಾಂಶವನ್ನು ಮುಂದೆ ಕೊಡಲಾಗುತ್ತದೆ.

ಪ್ರತಿನಿಧಿ ಸಭೆ.

ಹುಲಿ ಮತ್ತು ಮೇಕೆಗಳು

೨೦-೧೦-೨೮ ರಲ್ಲಿ ಪ್ರತಿನಿಧಿ ಸಭೆಯಲ್ಲಿ ಹುಲಿಗಳ ವಿಷಯವಾಗಿಯೂ, ಮೇಕೆಗಳ ವಿಷಯವಾಗಿಯೂ, ಬಹಳ ಚರ್ಚೆಯು ನಡೆಯಿತು. ಮೇಕೆಗಳನ್ನು ಕಾಡಿನಲ್ಲಿ ಮೇಯಿಸಕೂಡದೆಂದು ಕಟ್ಟುಮಾಡಿರುವರು. ಇವನ್ನು ಕಾಡಿಗೆಬಿಟ್ಟರೆ ಸಣ್ಣ ಸಣ್ಣ ಗಿಡಗಳನ್ನೂ, ಸಸಿಗಳನ್ನೂ ನಿರ್ಮೂಲಮಾಡಿಬಿಡುವುದೆಂಬುದೇ ದೊಡ್ಡ ತೊಂದರೆ. ಈ ವಿಷಯವು ಏಕಪ್ರಕಾರವಾಗಿ ಪ್ರತಿವರ್ಷವೂ ಚರ್ಚೆಗೆ ಬರುತ್ತಿರುವುದು. ಈ ಕಟ್ಟನ್ನು ತೆಗೆದುಹಾಕಬೇಕೆಂದು ಕೆಲವರೂ, ಈ ಕಟ್ಟು ಇರಬೇಕೆಂದು ಕೆಲವರೂ, ಪ್ರತಿಪಾದಿಸುತ್ತಿರುವರು. 'ಆದರೂ' ಸರ್ಕಾರದವರು ಮಾತ್ರ ತಮ್ಮ ನಿಯಮಗಳನ್ನು ಕದಲಿಸಿಲ್ಲ.

ಇನ್ನು ಹುಲಿಗಳ ವಿಷಯ, ಹುಲಿಗಳ ಸಂಖ್ಯೆಯು ಕಾಡುಗಳಲ್ಲಿ ಕಡಿಮೆಯಾಗುತ್ತಿರುವುದೆಂದೂ ಅವುಗಳನ್ನೂ ಮನಸೋ ಇಚ್ಛೆ ಕೊಲ್ಲದಂತೆ ಕಟ್ಟುಮಾಡಬೇಕೆಂದೂ ಸರ್ಕಾರದವರು ಒಂದು ಮಸೂದೆಯನ್ನು ತಂದರು. ಇದೇ ಮಸೂದೆಯು ಹೋದ ವರ್ಷವೂ ಚರ್ಚೆಯಾಯಿತು. ಕಟ್ಟುಗಳಿರಬೇಕೆಂದು ಕೆಲವರೂ, ಕಟ್ಟುಗಳಿರಕೂಡದೆಂದು ಕೆಲವರೂ ವಾದಿಸಿದರು.

ಒಬ್ಬ ಸಭಿಕರು, ಏನು ಸ್ವಾಮಿ, ಗೋವನ್ನು ಕೊಲ್ಲದಂತೆ ನಮ್ಮ ಸಂಸ್ಥಾನದಲ್ಲಿ ಕಾನೂನನ್ನು ಮಾಡಿ, ಎಂದರೆ ಏನೇನೋ ಅಡಚಣೆಗಳನ್ನು ತಂದೊಡ್ಡುತ್ತೀರಿ. ಆದರೆ, ಹುಲಿಗಳ ವಿಷಯದಲ್ಲಿ ಮಾತ್ರ ನೀವು ಬಹಳ ದಯೆಯನ್ನು ತೋರಿಸುತ್ತಿರಿ, ಎಂದರು.

ಮಿಲಿಟರೀ ಶಿಕ್ಷಣ.

ನಮ್ಮ ಸಂಸ್ಥಾನದ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಿದ್ಯಾರ್ಥಿಗಳಿಗೆ ಮಿಲ್ಟ್ರೀ ಶಿಕ್ಷಣವನ್ನು ಕೊಡಿಸಬೇಕೆಂದು ಮ॥ ಕೆ.ಟಿ. ಭಾಷ್ಯಮಯ್ಯಂಗಾರ್ಯರವರು ಪ್ರತಿನಿಧಿಸಭೆಯಲ್ಲಿ ಒಂದು ಸಲಹೆಯನ್ನು ತಂದರು. ಮ॥ ವಿ. ವೆಂಕಟಪ್ಪನವರು ಮತ್ತು ಇತರರೂ ಇದನ್ನು ಅನುಮೋದಿಸಿದರು. ಸರ್ಕಾರದವರು ಕೊಟ್ಟ ಉತ್ತರ. ವಿಶ್ವವಿದ್ಯಾಲಯದಲ್ಲಿ ಕಾಲೇಜುವಿದ್ಯಾರ್ಥಿಗಳಿಗೆ ಮಿಲ್ಟ್ರೀ ಶಿಕ್ಷಣವನ್ನು ಕೊಡಿಸುವ ವಿಷಯವನ್ನು ಯೋಚನೆಮಾಡುತ್ತೇವೆ ಎಂದು ಹೇಳಿದರು. ಸ್ಕೂಲುಗಳಲ್ಲಿ ಟ್ರಿಲ್ಲೇ ಸಾಕೆಂಬುದು ಅವರ ಅಭಿಪ್ರಾಯ. ಇಂಡಿಯಾ ದೇಶದಲ್ಲೆಲ್ಲಾ ಮಿಲ್ಟ್ರೀ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಕೊಡಲ್ಪಡಬೇಕೆಂದು ಚಳವಳಿಯು ನಡೆಯುತ್ತಿರುವುದು. ಮೈಸೂರಿನಲ್ಲಿಯೂ, ಈ ರೀತಿಯಾಗಿ ಮಿಲ್ಟ್ರೀ ಶಿಕ್ಷಣವನ್ನು ಕೊಡುವುದಕ್ಕೆ ತಕ್ಕ ಏರ್ಪಾಡನ್ನು ಮಾಡುತ್ತೇವೆಂದು ಸರ್ಕಾರದವರು ಭರವಸೆಕೊಟ್ಟಿರುವುದು ಸಂತೋಷಕರವು.

Printed and published by
P. R. Ramaiya at Sri Rama Press
D. Subbiya Road, Mysore.

|| ವಂದೇಮಾತರಂ ||

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ.
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ [illegible] / ಪರಸ್ಥಳಕ್ಕೆ [illegible]

ಸಂಪುಟ ೧] ಶನಿವಾರ ೩ ನವಂಬರ್ ೧೯೨೮ [ಸಂಚಿಕೆ [illegible]

ತಾಯಿನಾಡು

3 11—1928

[illegible]ಸೂರು ಡೆಪ್ಯುಟೀ [illegible]ಮಿಷನರವರು.

[illegible] ದಿವಸ ಸಾಯಂಕಾಲ ಅಸೆಂಬ್ಲಿಯಲ್ಲಿ ಒಂದು [illegible] ವಿಷಾದಕರವಾದ ಸಂಗತಿಯು ನಡೆಯಿತು. ಕಳೆದ ಸೆಪ್ಟೆಂಬರಿನಲ್ಲಿ ನಡೆದ ಪ್ರಿಲಿಮಿನರಿ ಮೀಟಿಂಗಿನಲ್ಲಿ ಪಾಸಾದ ಕೆಲವು ಅರಿಕೆಗಳನ್ನು ಬಿಟ್ಟು ಪಾಸಾಗದ ಕೆಲವು ಅರಿಕೆಗಳನ್ನು ಸೇರಿಸಿ ಮೈಸೂರು ಡೆಪ್ಯುಟಿ ಕಮಿಷನರವರು ಮೇಲಕ್ಕೆ ರಿಪೋರ್ಟು ಕಳುಹಿಸಿದರೆಂದು ಆಪಾದನೆಯು [illegible]ಟ್ಟಿತು. ಇದಕ್ಕಾಗಿ ಮ|| ರಾ|| ನೀಲಗಿರಿ ಸಂಜೀವಯ್ಯನವರು ಒಂದು ಅವಸರದ ಠರಾವನ್ನು ತಂದರು. ಮ|| ರಾ|| ಬಸಪ್ಪನವರು ಇದನ್ನು ಅನುಮೋದಿಸಿದರು. ಮ|| ರಾ|| ಬಿ. ನರಸಿಂಗರಾಯರವರೂ, ಪಿ. ಸೀತಾರಾಮಯ್ಯನವರೂ, ಇದನ್ನು ವಿರೋಧಿಸಿದರು. ಇದರ ಚರ್ಚೆಯ ಕಾಲದಲ್ಲಿ ರೋಷಾವೇಶದಿಂದ ಕೂಡಿದ ಮಾತು ಕಥೆಗಳು ನಡೆದವು. ಡೆಪ್ಯು[illegible] ಉದ್ದೇಶದಿಂದ [illegible] ಮಾಡಿರುವರೆಂದು ಮ|| ರಾ|| ಬಸ[illegible] [illegible] ವಿಷಯಗಳು ಅವುಗಳ [illegible] ಮೇಲೆ ತೀರ್ಮಾನವಾಗುವುದಿಲ್ಲ. ಜಾತಿಯಮೇಲೆ ತೀರ್ಮಾನವಾಗುವುವು. ಬ್ರಾಹ್ಮಣರು [illegible] ದೂ ತಾವು ನಡೆದ ಸಂಗತಿಯನ್ನೇ ಹೇಳಿರುವರೆಂದೂ ವಾಸ್ತವವಾಗಿ ಮೈಸೂರು ಡಿಸ್ಟ್ರಿಕ್ಟಿನ ಮೀಟಿಂಗಿನ [illegible] ಹೇಳಿದರು. ಮ|| ದಾಸಪ್ಪನವರು ಮತ್ತು ಇತರರು ಮ|| ರಾ|| ನರಸಿಂಗರಾಯರಿಗೆ ತಮ್ಮ ಮಾತುಗಳನ್ನು ವಾಪ್ಸು ತೆಗೆದುಕೊಳ್ಳಬೇಕೆಂದು ಹೇಳಿದರು. ಮ|| ನರಸಿಂಗರಾಯರು ತಾವು ಅಧ್ಯಕ್ಷರ ಮತವನ್ನು ಕೇಳುವುದಾ[illegible] ಡು ಹೇಳಿದರೆ ಕಡಿತುಕೊಳ್ಳುವುದಾಗಿಯೂ ಹೇಳಿದರು. [illegible] ಡೆಪ್ಯುಟಿಕಮಿಷ್ನರವರ ರಿಕಾ[illegible] ಅದರಲ್ಲಿ ಯಾವ ವಿಷಯವ [illegible] ಸಾಯಿತು ಎಂದು ಹೇಳಿದ್ದರೋ ಅದು ವಾಪ್ಸು ತೆಗೆದುಕೊಳ್ಳಲ್ಪಟ್ಟಿದೆ ಎಂದು ಒಪ್ಪದೆ, ಎಂದುತಿಳಿಸಿದರು. ಯಾವ ವಿಷಯವು ಪಾಸಾಗದಿದ್ದರೂ ಸೇರಿಸಲ್ಪಟ್ಟಿದೆ ಎಂದು ಸಭಿಕರು ಹೇಳಿದರೋ ಆ ವಿಷಯವೂ ಪಾಸಾದ ಇನ್ನೊಂದು ವಿಷಯವೂ ಒಂದೇ ಸಂಗತಿಗೆ ಸಂಬಂಧಪಟ್ಟದ್ದಾದುದರಿಂದ ಒಟ್ಟಿಗೆ ಎ. ಬಿ. ಯಾಗಿ ಸೇರಿಸಲ್ಪಟ್ಟಿತು ಎಂದು ಹೇಳಿದರು.

ಮ|| ರಾ|| ಮಹಮದ್ ಸೇಟ್‌ರವರು ಆವತ್ತಿನ ಮೀಟಿಂಗಿನಲ್ಲಿ ನಡೆದ ವಿದ್ಯಮಾನಗಳನ್ನು ತಿಳಿಸುವಾಗ್ಗೆ ತಾವು ಈಗ ಹೊಸದಾಗಿ ಸೇರಿಸಿರುವ ವಿಷಯವನ್ನು ಓಟಿಗೆ ಹಾಕಬೇಕೆಂದು ಕೇಳಿದ ಹಾಗೂ, ಡೆಪ್ಯುಟೀ ಕಮಿಷ್ನರವರು ಅದನ್ನು ಓಟಿಗೆ ಹಾಕಬೇಕಾಗಿಲ್ಲ, ಒಂದೇ ವಿಷಯಕ್ಕೆ ಸಂಬಂಧಪಟ್ಟವುಗಳನ್ನು ಒಟ್ಟಿಗೆ ಸೇರಿಸುತ್ತೇನೆ ಎಂದು ಹೇಳಿದ ಹಾಗೂ ಸೇಟರವರು ಹಾಗೆ ಕೂಡದು, ಓಟಿಗೆ ಹಾಕಬೇಕು, ಎಂದು ಹೇಳಿದ ಹಾಗೂ ಡೆಪ್ಯುಟೀ ಕಮಿಷ್ನರವರು ಹಾಗೆ ಮಾಡುವುದಿಲ್ಲ ಒಟ್ಟಗೇ ಸೇರಿಸಬಹುದು ಅದು ಬರೀ ಆಫೀಸರೊಟೀನ್ ಎಂದು ಹೇಳಿದ ಹಾಗೂ, ಇದರ ಮೇಲೆ ಸೇಟರವರು ಸಭಾ ಪರಿತ್ಯಾಗಮಾಡಿ ಹೊರಗೆ ಬಂದ ಹಾಗೂ ತಿಳಿಸಿದರು. ಮ|| ರಾ|| ರಾಜಗೋಪಾಲ್ ಮೊದಲಿಯಾರ್‌ರವರು ಈ ವಿಷಯವಾಗಿ ಪ್ರತಿಯೊಬ್ಬರ ಆಣೆಯನ್ನು ತೆಗೆದುಕೊಂಡು ಆ ಸಭೆಯಲ್ಲಿ ನಡೆದುದನ್ನು ನಿಶ್ಚಯಿಸಬೇಕೆ ಹೊರತು ಸುಮ್ಮನೆ ಒಬ್ಬೊಬ್ಬರ ಹೇಳಿಕೆಯ ಮೇಲೆ ನಿಷ್ಕರ್ಷೆ ಮಾಡಲಾಗುವುದಿಲ್ಲ ಎಂದು ಹೇಳಿದರು. ಮ|| ಸೀತಾರಾಮಯ್ಯನವರು ಈಗ ಹಾಲಿ ಇರುವ ರೂಲುಗಳು ಸ್ಪಷ್ಟವಾಗಿಲ್ಲವೆಂದೂ ಒಂದೇ ವಿಷಯಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಅಸೆಂಬ್ಲಿಯಲ್ಲಿಯೂ ಜೋಡಿಸುತ್ತಿರುವರೆಂದೂ, ಹಾಗೆ ಜೋಡಿಸಕೂಡದು ಎಂಬುದಕ್ಕೆ ಡೆಪ್ಯುಟಿಕಮಿಷ್ನರವರಿಗೆ ಯಾವ ನಿಬಂಧನೆಯೂ ಇಲ್ಲವೆಂದೂ, ತಿಳಿಸಿದರು. ಕಡೆಗೆ ದಿವಾನರವರು ಡೆಪ್ಯುಟಿ ಕಮಿಷ್ನರವರ ಕಾರ್ಯಭಾಗವನ್ನೂ ಯಾರೂಸಮರ್ಥನೆ ಮಾಡಬೇಕಾಗಿಲ್ಲವೆಂದೂ ಸರ್ಕಾರದವ ಆ ವಿಷಯವನ್ನು ಪರ್ಯಾಲೋಚಿಸುವರೆಂದೂ ಆದರೆ ಈ ಸಂದರ್ಭದಲ್ಲಿ ಡೆಪ್ಯುಟಿ ಕಮಿಷ್ನರವರು ಅವಸರದ ಠರಾವಿನಲ್ಲಿ ಸೂಚಿಸಿರುವಂತೆ ಮಾಡಿಲ್ಲವೆಂದೂ ಪಾಸಾದ ವಿಷಯಗಳನ್ನು ಬಿಟ್ಟಿಲ್ಲವೆಂದೂ ಪಾಸಾಗದೇ ಇದ್ದ ಹೊಸ ವಿಷಯಗಳನ್ನು ಸೇರಿಸಿಲ್ಲವೆಂದೂ ತಿಳಿಸಿ ಸಂಜೀವಯ್ಯನವರು ಠರಾವನ್ನು ವಾಪ್ಸು ತೆಗೆದುಕೊಳ್ಳಬೇಕೆಂದು ಹೇಳಿದರು. ಠರಾವು ವಾಪ್ಸು ತೆಗೆದುಕೊಳ್ಳಲ್ಪಟ್ಟಿತು. ಈ ವಿಷಯವನ್ನಾಲೋಚನೆ ಮಾಡಿದ್ದರಲ್ಲಿ ನಮಗೆ ತಿಳಿದು ಬಂದುದೇನೆಂದರೆ ಡೆಪ್ಯುಟಿ ಕಮಿಷ್ನರವರದು ಸರ್ವಥಾ ತಪ್ಪಿಲ್ಲ. ಈ ವಿಷಯವನ್ನು ಅವಸರ ಠರಾವಿನಂತೆ ಚರ್ಚಿಸುವುದಕ್ಕೆ ದಿವಾನರು ಅವಕಾಶವನ್ನು ಕೊಡಬಾರದಾಗಿತ್ತು. ಡೆಪ್ಯುಟಿ ಕಮಿಷ್ನರವರನ್ನೇ ಎಲ್ಲವನ್ನೂ ತಾವೇ ವಿಚಾರಿಸಿ ಅಸೆಂಬ್ಲಿಗೆ ತಿಳಿಸಿ ಠರಾವಿಗೆ ಅವಕಾಶವಿಲ್ಲವೆಂದು ಹೇಳಬಹುದಾಗಿತ್ತು. ಈ ಠರಾವಿನ ಚರ್ಚೆಯಿಂದ ಬಹಳ ಹಾನಿಯಾಯಿತೇ ಹೊರತು ಲಾಭವಾಗಲಿಲ್ಲ. ಇಂಗ್ಲೀಷ್‌ನಲ್ಲಿ ಹೇಳುವಂತೆ ಬ್ಯಾಡ್ ಬ್ಲಡ್, ಕೆಟ್ಟರಕ್ತವು ಉತ್ಪನ್ನವಾಯಿತು. ವೃಥಾ ಡೆಪ್ಯುಟಿ ಕಮಿಷನರವರ ತೇಜೋವಧೆಯಾಯಿತು ಪ್ರಿಲಿಮಿನರಿ ಮೀಟಿಂಗಿನಲ್ಲಿ ನಡೆದ ಕಾರ್ಯಕಲಾಪಗಳ ವಿವರಣೆಯಲ್ಲಿ ಏನಾದರೂ ತಪ್ಪು ಇದ್ದಿದ್ದರೆ ಆ ತಪ್ಪನ್ನು ತಿದ್ದುವುದಕ್ಕೆ ಅವಕಾಶವೇ ಇಲ್ಲ. ಸಾಮಾನ್ಯವಾಗಿ ಒಂದು ಮೀಟಿಂಗ್ ನಡೆದರೆ ಆ ಮೀಟಿಂಗಿನ ಮಿನಿಟ್ಸ್‌ನಲ್ಲಿ ಇನ್ನೊಂದು ದಿವಸ ಎಲ್ಲಾದರೂ ತಪ್ಪಿದ್ದರೆ ತಿದ್ದಲ್ಪಡುವುದು. ಈ ರೀತಿಯಾದ ಅವಕಾಶವು ಮೇಲಿನ ಪ್ರಿಲಿಮಿನರಿ ಮೀಟಿಂಗಿಗೆ ಇರಲಿಲ್ಲ. ಮತ್ತು ಸರಿಯಾದ ನಿಬಂಧನೆಗಳೂ ಇಲ್ಲ. ಮ|| ಗಳಾದ ಸೀತಾರಾಮಯ್ಯನವರೂ, ನರಸಿಂಗರಾಯರವರೂ ಹೇಳಿದಂತೆ ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಒಟ್ಟಿಗೆ ಸೇರಿಸುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಇಷ್ಟೆಲ್ಲಾ ಸಂದಿಗ್ಧವಾಗಿರುವಾಗ್ಗೆ ಅದನ್ನು ಅವಸರದ ಠರಾವಾಗಿ ಚರ್ಚೆಗೆ ಅವಕಾಶ ಕೊಡುವುದು ಸರಿಯಲ್ಲ ಎಂಬುದು ನಮ್ಮ ಭಾವನೆ. ಮೈಸೂರು ಡಿಸ್ಟ್ರಿಕ್ಟ್‌ನ ಪ್ರಿಲಿಮಿನರಿ ಮೀಟಿಂಗ್‌ನಲ್ಲಿ ನಡೆಯುವ ವಿದ್ಯಮಾನಗಳೆಲ್ಲಾ ಮೆಜಾರಟಿಯಿಂದಲೇ ನಡೆಯುವುವು. ಇಂತಹುದರಲ್ಲಿ ಡೆಪ್ಯುಟಿ ಕಮಿಷ್ನರವರಿಗೆ ಯಾವ ವಿಷಯವನ್ನೂ ಹೊಸದಾಗಿ ಸೇರಿಸುವುದರಲ್ಲಿಯಾಗಲಿ ಅಥವಾ ಪಾಸಾದ ವಿಷಯಗಳನ್ನು ಬಿಟ್ಟು ಬಿಡುವುದರಲ್ಲೇ ಆಗಲಿ ಯಾವ ಉದ್ದೇಶವೂ ಇಲ್ಲ. ಮುಖ್ಯವಾಗಿ ಅಸೆಂಬ್ಲಿಯಲ್ಲಿ ಇಂತಹ ವಿಷಯಗಳನ್ನು ಚರ್ಚೆ ಮಾಡುವುದೇ ಒಂದು ರೀತಿಯಿಂದ ಸರಿಯಾದುದಲ್ಲವೆಂಬುದೇ ನಮ್ಮ ಅಭಿಪ್ರಾಯ.

ವಿದ್ಯಾರ್ಥಿಗಳ ಖುಲಾಸೆ

ಲಾಯರುಗಳ ಸಲಹೆಯಂತೆ ಜೈಲಿನಲ್ಲಿದ್ದ ವಿದ್ಯಾರ್ಥಿಗಳು ಮುಚ್ಚಳಿಕೆಯನ್ನು ಕೊಟ್ಟು ಹೊರಗೆ ಬಂದರೆಂದು ವರ್ತಮಾನಬಿಡೆ. ಮಲ್ಲೇಶ್ವರದ ಸ್ಕೂಲಿನ 50 ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದರು. ಮುಷ್ಕರವು ಬೆಳೆಯುವದರಲ್ಲಿತ್ತು. ಅಷ್ಟರಲ್ಲೇ ವಿದ್ಯಾರ್ಥಿಗಳು ಬಿಡುಗಡೆಯಾದರೆಂದು ತಿಳಿದು ಎಲ್ಲರಿಗೂ ಸಮಾಧಾನವಾಯಿತು.

ಪ್ರತಿನಿಧಿ ಸಭೆಯ ಮುಕ್ತಾಯ.

ಪ್ರತಿನಿಧಿ ಸಭೆಯು ಇಂದು ಬೆಳಿಗ್ಗೆ ೧೧ ಘಂಟೆಗೆ ಮುಕ್ತಾಯವಾಯಿತು. ದಿವಾನರವರು ಉಪಸಂಹಾರ ಭಾಷಣದಲ್ಲಿ ತಮ್ಮ ರಾಜ್ಯಾಡಳತದ ನೀತಿಯನ್ನು ಸಮರ್ಥಿಸಿ, ಹೊರಗಿನ ಆಕ್ಷೇಪಕರಿಗೆ ಉತ್ತರವನ್ನು ಕೊಟ್ಟು ಸಂಸ್ಥಾನದ ಏಳಿಗೆಗಾಗಿ ಎಲ್ಲರೂ ಸಹಕರಿಸಬೇಕೆಂದು ಪ್ರಾರ್ಥಿಸಿದರು.

Printed and Published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ, ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ / ಪರಸ್ಥಳಕ್ಕೆ ೧೦-೦

ಸಂಪುಟ ೧] ಸೋಮವಾರ ೫ ನವಂಬರ್ ೧೯೨೮. [ಸಂಚಿಕೆ ೩೬

ತಾಯಿನಾಡು

5 11 1928

ಅಸೆಂಬ್ಲಿ ಅಧಿವೇಶನ

ಈ ಬಾರಿಯ ಅಧಿವೇಶನವು [illegible] ತು. ಇತರ ಅಧಿವೇಶನಗಳಿಗಿಂತಲೂ ಕೆಲವು ಭಾಗದಲ್ಲಿ ಈ ಅಧಿವೇಶನವು ಮುಖ್ಯವಾದುದು. ಎಷ್ಟೋ ವಿಷಯಗಳ ಲ್ಲಿ [illegible] ಬಿಕ ಮನಸ್ಸಿನಿಂದ ಸಹಕ [illegible] ಲ್ಲಿಯೇ ಲಕ್ಷ್ಯ [illegible], ಭಿಕ್ಷಾ ಟನವನ್ನು ತಪ್ಪಿಸುವುದಕ್ಕಾಗಿ ಕಾನೂನನ್ನು ಮಾಡಬೇಕು ಎಂಬುದರಲ್ಲಿಯೂ, ಹಿಂದೂ ಕಾನೂನನ್ನು ಸುಧಾ ರಣೆ ಮಾಡಬೇಕು ಎಂಬುವ ವಿಷಯದಲ್ಲಿಯೂ, ಏಕಮ ತ್ಯವನ್ನು ತೋರಿಸಿರುವರು. ಸಾಮಾನ್ಯವಾಗಿ ಪರಸ್ಪರ [illegible] ವಿರೋಧ ಉಂಟಾದ [illegible] ಗಳಲ್ಲಿ. ಅದರಲ್ಲಿ [illegible] ಸಂಬಂಧಪಟ್ಟ ವಿಷಯಗಳ ಲ್ಲಿ, ಇಂತಹ ಪ್ರಶ್ನೆಗಳು ಒಂದಾಗ್ಯೆ ಬ್ರಾಹ್ಮಣ ಮೆಂ ಬರುಗಳು [illegible] ಮಾಡುತ್ತಿರಲಿಲ್ಲ. ಸಾಮಾ ನ್ಯವಾಗಿ ನೋಡಿದರೆ ಎಲ್ಲಾ ಕೋಮಿನವರಿಗೂ ಸರ್ಕಾ ರ [illegible] ವರೆಗೂ, [illegible] ಆದರೆ [illegible] ಪೈಪೋಟಿ [illegible] ಗಾಗಿ ಆದ ಚರ್ಚೆಯು [illegible] ಸಮಂಜಸವಾದ ಭಾಷಣ [illegible] ವಾಗಿ [illegible] ನಡೆದ ಠರಾವು ಬಹಳ ಚನ್ನಾಗಿ ಚರ್ಚಿಸಲ್ಪಟ್ಟಿತು. ಈ ಚರ್ಚೆಯಲ್ಲಿ ಶಾನುಭೋಗರುಗಳು ಬಹಳ ಬಿಂಡ ನಿಗೆ ಗುರಿಯಾದರು. ಅನೇಕರ ಭಾವನೆಯಲ್ಲಿ ಶಾನು ಭೋಗರುಗಳ ಬಹು ಜನರು ಬ್ರಾಹ್ಮಣರಾಗಿರುವು ದರಿಂದ ಅವರ ಹಕ್ಕನ್ನು ಕಿತ್ತುಹಾಕಬೇಕೆಂದು ಬ್ರಾ ಹ್ಮಣೇತರರು ಪ್ರಯತ್ನ ಪಡುತ್ತಿರುವರು, ಎಂಬುದಾಗಿ [illegible]

ಈ ಸಭೆಯಲ್ಲಿ [illegible] ಅಲ್ಪಸಂಖ್ಯಾತರಾದವರು [illegible] ಬಹುಸಂಖ್ಯಾತರು [illegible] ವರ್ತಿಸುತ್ತಿರುವರು. ಪ್ರತಿಯೊಂದು ಕೋಮಿನವರೂ ತಮ್ಮ ತಮ್ಮ ಅಭಿವೃ ದ್ಧಿಗೆ ಸಾಧಕವಾದ ವಿಷಯಗಳನ್ನು ಚರ್ಚೆಗೆ ತಂದಾಗ ಎಲ್ಲರೂ ಅದಕ್ಕೆ ಬೆಂಬಲವನ್ನು ಕೊಡಬೇಕು. ಸಾಧ್ಯ ವಾದಷ್ಟು ಚರ್ಚೆಗಳು ಬ್ರಾಹ್ಮಣ ಬ್ರಾಹ್ಮಣೇ ತರ ಭೇದದ ರೂಪವನ್ನು ತಾಳುವಂತೆ ಮಾಡಕೂಡದು. ಬಹುಸಂಖ್ಯಾಕರು ಅಲ್ಪ ಸಂಖ್ಯಾಕರಾದ ತಮ್ಮನ್ನು ಅ ದಮುತ್ತಿರುವರೆಂಬ ಭಾವನೆಯು ಯಾರಿಗೂ ಉಂಟಾಗ ಕೂಡದು. ಬ್ರಾಹ್ಮಣರೂ ಕೂಡ ಯಾವಾಗಲೂ ರಾ ಷ್ಟ್ರೀಯ ಭಾವನೆಗಳನ್ನು ಹರಡುವುದರಲ್ಲಿಯೇ ತೊಡಗ ಬೇಕು. ಚರ್ಚೆಗಳ ವಿಷಯವಾಗಿ ನಮಗೆ ತೋರುವುದೇ ನೆಂದರೆ, ಕಾಲವನ್ನು ಲಕ್ಷಿಸದೆ ವಿಷಯವನ್ನು ಬಿಟ್ಟು ಅ ನೇಕರು ಚರ್ಚಿಸುವರು. ಅಧ್ಯಕ್ಷರು ಯಾರಿಗೂ ಮನ ಸ್ಸನ್ನು ನೋಯಿಸದಂತೆ ವರ್ತಿಸುವುದರಲ್ಲಿ ಸಭೆಯ ಹ [illegible] ಕೆಳದ್ದರೂ, ಒಟ್ಟಿನಮೇಲೆ ಸಭೆಯಲ್ಲಿ ಭಾಷಣಗಳೂ, ಚ ರ್ಚೆಗಳೂ, ವರ್ಷ ವರ್ಷಕ್ಕೂ ಹೆಚ್ಚು ಸಮಂಜಸವಾಗಿ ಆಗುತ್ತಿರುವುವು. ಯುವಕರಾದ ಅನೇಕ ಮೆಂಬರುಗಳು ಧೈರ್ಯವನ್ನೂ, ಸಾಹಸವನ್ನೂ, ಚಟುವಟಿಕೆಯನ್ನೂ ತೋರಿಸುತ್ತಿರುವರು.

ದಿವಾನರವರ ಮುಕ್ತಾಯ ಭಾಷಣ.

ಆ ದಿವಸ ಸಭೆಯು ಮೊನ್ನೆ ಬೆಳಿಗ್ಗೆ 11 ಗಂಟೆಗೆ ಮುಕ್ತಾಯವಾಯಿತು. ದಿವಾನರು ಸಭೆಯನ್ನು ಭರ ಕಾಸ್ತು ಮಾಡುವುದಕ್ಕೆ ಪೂರ್ವವಾಗಿ ಮುಕ್ತಾಯ ಭಾಷಣವನ್ನು ಮಾಡಿದರು. ಅದರ ಮುಖ್ಯ ಸಾರಾಂ ಶವೇನೆಂದರೆ,—ಈ ಸಲದ ಅಧಿವೇಶನವು ಬಹಳ ಯ ಶಸ್ವಿಯಾಗಿಯೂ, ಸ್ವಾರಸ್ಯವಾಗಿಯೂ ಇತ್ತು. ಸಭಿ ಕರು ವಿಷಯಗಳನ್ನು ಬಹಳ ಚನ್ನಾಗಿ ಚರ್ಚೆಮಾಡಿ ದರು. ಬಹಳ ಸೊಗಸಾದ ಭಾಷಣಗಳು ಆದವು. ಮತ್ತು ಸಭಿಕರು ಈಗ ಸರ್ಕಾರದವರ ಮೇಲೆ ಇರುವ ಭಕ್ತಿವಿಶ್ವಾಸವನ್ನು ಸ್ಪಷ್ಟಪಡಿಸಿದರು. ನಿಜವಾಗಿ ಯೂ ಪ್ರಜೆಗಳಲ್ಲಿಯೂ ಕೂಡ ಈ ಭಕ್ತಿವಿಶ್ವಾಸದ ಭಾವನೆಯೇ ಇರುವುದು. ಆದರೆ ಲಾರ್ಡ್ ಕರ್ಜನ್ ರವರು ಹೇಳಿರುವಂತೆ, ಸಪ್ತುಪಾರಿಯಲ್ಲಿ ಹೋಗುವವ ರೆಲ್ಲರೂ ಸರ್ಕಾರದ ಒಳಗೇ ಇರುವರು. ತಿಳಿವಳಿಕಸ್ಥರೆ ಲ್ಲರೂ ಸರ್ಕಾರದ ಹೊರಗೆ ಇರುವರು, ಎಂದು ಕೆಲ ವರು ಊಹಿಸಿಕೊಂಡಿರುವರು. ಈ ಸಭೆಯಲ್ಲಿ ಸರ್ಕಾರ ದ ರೀತಿನೀತಿಗಳ ವಿಷಯವಾಗಿ ಸರಿಯಾದ ತಿಳಿವಳಿ ಕೆಯು ಇರುವುದಕ್ಕಾಗಿ ನಾನು ಸಂತೋಷಪಡು ತ್ತೇನೆ. ಆದರೆ ಈ ಸಭೆಯಿಂದ ಹೊರಗೆ ವಿಷಯಗಳ ನ್ನು ತಿಳಿಯದ ಕೆಲವರು ಲಾರ್ಡ್‌ಕರ್ಜನ್‌ರವರು ಹೇಳಿದ ಭಾವನೆಯನ್ನು ಹೊಂದಿರುವರು. ಆದುದರಿಂದ ನಾನು ಈ ದಿವಸ ಅಲ್ಪಸಂಖ್ಯಾಕರಾದ ಹೊರಗಿನ ಕೆಲವರು ಮಾಡುವ ಆಕ್ಷೇಪಣೆಗಳಿಗೆ ಉತ್ತರವನ್ನು ಕೊಡುತ್ತೇ ನೆ. ಹೀಗೆಂದು ಹೇಳಿ ದಿವಾನರು ಸರ್ಕಾರದವರು ಅ ನುಸರಿಸುತ್ತಿರುವ ಆರ್ಥಿಕ ನೀತಿಯನ್ನೂ, ಅರ್ಬ್ರಿಟ್ ನಾಲೆಯ ಕಾರ್ಯಕ್ರಮವನ್ನೂ, ಮೈಸೂರು, ಬೆಂಗಳೂರು ಪಟ್ಟಣಗಳ ಅಭಿವೃದ್ಧಿಗಾಗಿ ಮಾಡುತ್ತಿರುವ [illegible] ನ್ನೂ ಸಮರ್ಥನೆಮಾಡಿದರು. ವಿದ್ಯಾವಂತರಾದ ತರುಣರು ಅರ್ಬ್ರಿಟ್ ನಾಲೆಯಿಂದ ಉಂಟಾಗುವ ಜಮೀ ನುಗಳನ್ನು ವ್ಯವಸಾಯಮಾಡಬಹುದೆಂದೂ, ಅರ್ಬ್ರಿಟ್ ನಾಲೆಯ ಕೆಲಸದಲ್ಲಿ ಕಂಟ್ರಾಕ್ಟನ್ನು ತೆಗೆದುಕೊ ಬಹುದೆಂದೂ ದಿನದಿನಕ್ಕೂ ಹೆಚ್ಚು ಹೆಚ್ಚಾಗಿ ಚಲಾ ವಣೆಯಾಗುತ್ತಿರುವ ಗ್ರಾಮಾಭಿವೃದ್ಧಿಯ ಮತ್ತು ವಿದ್ಯುಚ್ಛಕ್ತಿಯ ಚಲಾವಣೆಯ ಕೆಲಸಗಳಲ್ಲಿ ಭಾಗಗಳ ನ್ನು ತೆಗೆದುಕೊಳ್ಳಬಹುದೆಂದೂ ಸೂಚಿಸಿದರು. ಸರ್ಕಾ ರದವರು ಗ್ರಾಮಾಭಿವೃದ್ಧಿಯ ಕಡೆಗೂ ತಕ್ಕಷ್ಟು ಗ ಮನವನ್ನು ಕೊಡುತ್ತಿರುವರೆಂದೂ ತಿಳಿಸಿದರು. ಎಲ್ಲಾ ಆದಮೇಲೆ, ಕಡೆಯಲ್ಲಿ ಜನಗಳು ಬರೀ ದುರಾಕ್ಷೇಪಣೆ ಯಲ್ಲೇ ತೊಡಗದೆ ಸರ್ಕಾರದವರೊಡನೆ [illegible] ದ್ಧಿಯ ಕೆಲಸ ಕಾರ್ಯಗಳಲ್ಲಿ ಸಹಕಾರ ಮಾಡಬೇಕೆಂದು ಬಿನ್ನೈಸಿಕೊಂಡರು.

ದಿವಾನರ ಭಾಷಣವಾದ ನಂತರ ಮ|| ಎಂ. ಸಿ. ಲಿಂ ಗೇಗೌಡರವರು ಸಭಿಕರ ಪರವಾಗಿ ದಿವಾನರಿಗೆ ಧನ್ಯ ವಾದಗಳನ್ನರ್ಪಿಸಿ ಶಾಂತಿ ಸ್ಥಾಪನೆಗಾಗಿಯೂ, ಸರ್ಕಾ ರದ ದರ್ಪವನ್ನಿಳಿಸಿಕೊಳ್ಳುವದಕ್ಕಾಗಿಯೂ, ಮಾ ಡುವ ಎಲ್ಲಾ ಕೆಲಸಗಳಿಗೂ ಸಭಿಕರ ಸಹಕಾರವಿರು ವುದೆಂದು ತಿಳಿಸಿದರು. ಇದಾದನಂತರ ಶ್ರೀಮನ್ ಮಹಾರಾಜರಿಗೂ, ದಿವಾನರಿಗೂ ಮಂಗಳವಾಗಲೆಂದು ಜಯ ಜಯ ಘೋಷದೊಡನೆ ಸಭೆಯು ಮುಕ್ತಾಯ ವಾಯಿತು.

ಗೋವಧೆಯ ನಿರೋಧದ ಕಾನೂನು.

ಈ ಕಾನೂನನ್ನು ನಮ್ಮ ಸಂಸ್ಥಾನದಲ್ಲಿ ಮಾಡ ಬೇಕೆ ಬೇಡವೆ ಎಂಬ ವಿಷಯವಾಗಿ ಸರ್ಕಾರಕ್ಕೆ ಸಲಹೆ ಯನ್ನು ಕೊಡುವುದಕ್ಕಾಗಿ ನೇಮಿಸಿದ್ದ ಕಮಿಟಿಯು ಸರಕಾರಕ್ಕೆ ತಮ್ಮ ಸಲಹೆಯನ್ನು ಕೊಟ್ಟಿರುವರು. ಗೋವಧಾ ನಿರೋಧದ ಕಾನೂನು ಆಗಬೇಕೆಂದು ಶಿ ಫಾರ್ಸು ಮಾಡಿರುವುದೆಂದು ಕೇಳಿ ಸಂತೋಷಪಡುತ್ತೇ ವೆ.

ಅರ್ಜಿ ಹಾಕಿದವರ ಪಾಡು

ಶ್ರೀಮನ್ಮಹಾರಾಜರವರಿಗೆ ಬರೆದ ಅರ್ಜಿಗೆ ಸಾ ವಿರದ ಆರನೂರು ಜನಕ್ಕಿಂತಲೂ ಹೆಚ್ಚಾಗಿ ಸರ್ಕಾರಿ ನೌಕರರು ರುಜುಮಾಡಿರುವರೆಂದು ತಿಳಿದು ಬಂದಿದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ೫ ಬಡ ಉಪಾಧ್ಯಾ ಯರಿಗೆ ಆದ ಪಾಡೇ ಇವರಿಗೂ ಎಲ್ಲಿ ಆಗುವುದೋ ಎಂದು ಭೀತಿ ಉಂಟಾಗಿದೆ.

Printed and published by P. R. Ramaiya at Sri Rama Press, D Subbiya Road, Mysore

|| ವಂದೇ ಮಾತರಂ || Regd. No. M 2322

ತಾಯಿನಾಡು.

ಪ್ರತಿ ದಿನ ಸಾಯಂಕಾಲವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ
ವಂದೇಮಾತರಂ ಲಾಡ್ಜ್, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಮಂಗಳವಾರ ೬ ನವಂಬರ್ ೧೯೨೮ [ಸಂಚಿಕೆ

Printed and published ... Sri Rama Press, ... Mysore.

[illegible]

[illegible] ತಾಯಿನಾಡು [illegible]

[illegible]

[illegible]

ಮ್ಯಾನೇಜರ್.

ತಾಯಿನಾಡು

6—11—1928

ಕನ್ನಡ ಭಾಷೆ

೧-೧೧-೨೮ರಲ್ಲಿ ಮ|| ಎ. ವೆಂಕಟಪ್ಪನವರು, ನಮ್ಮ ಸಂಸ್ಥಾನದ ಎಲ್ಲಾ ಸೆಕೆಂಡರೀ ಸ್ಕೂಲುಗಳಲ್ಲಿಯೂ, ಕನ್ನಡಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡು [illegible] ಏರ್ಪಾಡುಗಳನ್ನು ಮಾಡಬೇಕೆಂದು ಸರ್ಕಾರದವರಿಗೆ ಸೂಚಿಸಿದರು. ಈ ಠರಾವು ಬಹಳ ದೇಶಾಭಿಮಾನದಿಂದ ಎಲ್ಲರಿಂದಲೂ ಅನುಮೋದಿಸಲ್ಪಟ್ಟಿತು. [illegible] ಈ ಅಭಿಪ್ರಾಯವನ್ನು ಮಾಡಿಕೊಂಡರು. ಸಭೆಯಲ್ಲಿಯೇ ಈ ಅಭಿಪ್ರಾಯವು ತಪ್ಪೆಂದು ನಿರ್ಧಾರ ಮಾಡಲ್ಪಟ್ಟಿತು. ಈ ಠರಾವಿನ ಮುಖ್ಯೋದ್ದೇಶವು [illegible] ಸಮಾನವಾದುದು ಕನ್ನಡಭಾಷೆ, ಇದು ರಾಜಭಾಷೆ ಮತ್ತು ದೇಶಭಾಷೆ, ಇದನ್ನು ಎಲ್ಲರೂ ಸುಲಭವಾಗಿ ತಿಳಿಯಬಹುದು. ಮಾತೃಭಾಷೆಯು ಕನ್ನಡವಲ್ಲದವರು ಕೂಡ [illegible] ಕನ್ನಡವನ್ನು ಚೆನ್ನಾಗಿ ತಿಳಿಯಬಹುದು. ನಾವು ಯಾರನ್ನೂ ತಮ್ಮ ಮಾ[illegible] [illegible] ಕನ್ನಡದಲ್ಲಿ ಶಿಕ್ಷಣವನ್ನು ಕೊಡುವುದರಲ್ಲಿ ಯಾರಿಗೂ ಯಾವ ಬಾಧೆಯೂ ಇಲ್ಲ. ನಮ್ಮ ಸಂಸ್ಥಾನದಲ್ಲಿ, ತಮಿಳರು, ತೆಲುಗರು, ಮಹಾರಾಷ್ಟ್ರರು, ಮಲೆಯಾಳಿಯವರು ಇದ್ದೇ ಇರುವರು. ಇವರನ್ನೆಲ್ಲಾ ಅವರವರ ಭಾಷೆಯನ್ನೆಲ್ಲಾ ಬಿಟ್ಟುಬಿಡಿ ಎಂದು ಹೇಳುವುದಿಲ್ಲ. ಆದರೆ ನಮ್ಮ ಸಂಸ್ಥಾನದ ಸ್ಕೂಲುಗಳಲ್ಲಿ ಮೇಲಿನ ಪ್ರತಿಯೊಂದು ಭಾಷೆಯಲ್ಲಿಯೂ ಶಿಕ್ಷಣವನ್ನು ಕೊಡುವುದು ಅಸಾಧ್ಯ. ಉರ್ದುಭಾಷೆಯು ಮಹ [illegible] ಭಾಷೆಯಲ್ಲಿ ಇರತಕ್ಕ ಹಿಂದೂಗಳಿಗೂ ಕೂಡ ಉರ್ದು [illegible]

ಯರ ಧರ್ಮಭಾಷೆಯಲ್ಲ ಮಹಮ್ಮದೀಯರ ಧರ್ಮಭಾಷೆಯು ಅರಬ್ಬಿ. ಮಹಮ್ಮದೀಯ ಬಾಲಕರೂ ಕೂಡ ಇತರ ಬಾಲಕರಂತೆ ಕನ್ನಡವನ್ನು ಕಲಿತು ಅದರ ಮುಖಾಂತರ ಶಿಕ್ಷಣವನ್ನು ಪಡೆದರೆ ತಾವೇ ಬೇರೆ, ಹಿಂದೂಗಳೇ ಬೇರೆ, ಎಂಬ ಭಾವನೆಯು ಕಡಿಮೆಯಾಗುವುದಕ್ಕೆ ಅವಕಾಶವಾಗುವುದು. ಆದುದರಿಂದ ಮಹಮ್ಮದೀಯ ಸಹೋದರರು ಮೆಜಾರ್ಟಿಯಲ್ಲಿರುವ ಹಿಂದುಗಳು, ತಮ್ಮನ್ನು ನಿರಾಕರಿಸುವುದಕ್ಕೋಸ್ಕರ ಈ ಪ್ರಯತ್ನವನ್ನು ಮಾಡುವರೆಂದು ಹೇಳುವುದು ಸರಿಯಲ್ಲ. ಇವತ್ತೇ ಮಹಮ್ಮದೀಯ ವಿದ್ಯಾರ್ಥಿಗಳೆಲ್ಲರಿಗೂ ಕನ್ನಡದಲ್ಲಿಯೇ ಶಿಕ್ಷಣವನ್ನು ಕೊಡಬೇಕೆಂದು ಯಾರೂ ಹೇಳುವುದಿಲ್ಲ. ಇದು ಕ್ರಮ ಕ್ರಮವಾಗಿ ಅನುಸರಿಸತಕ್ಕ ಪದ್ಧತಿ. ಮ|| ಕೆ. ಟಿ. ಭಾಷ್ಯಮಯ್ಯಂಗಾರ್ಯರು ತಂದ ಸಲಹೆಯು ಇದನ್ನು ಸ್ಪಷ್ಟಪಡಿಸುತ್ತದೆ. ನಮ್ಮ ಸಂಸ್ಥಾನದಲ್ಲಿರತಕ್ಕ ಎಲ್ಲಾ ಪ್ರಾಥಮಿಕ ತರಗತಿಗಳಲ್ಲೂ, ಉರ್ದು ತರಗತಿಗಳಲ್ಲಿಯೂ ಕೂಡ ಕನ್ನಡ ಭಾಷೆಯು ಆವಶ್ಯಕ ವಿಷಯವಾಗುವಂತೆ ಏರ್ಪಾಡು ಮಾಡಿದರೆ ಸೆಕೆಂಡರೀ ಸ್ಕೂಲುಗಳಲ್ಲಿ ಉರ್ದು ವಿದ್ಯಾರ್ಥಿಗಳುಕೂಡ ಕನ್ನಡದಲ್ಲಿಯೇ ಶಿಕ್ಷಣವನ್ನು ಹೊಂದಲು ಅವಕಾಶವಾಗುವುದು. ಈ ಸಂದರ್ಭದಲ್ಲಿ ನಮ್ಮ [illegible] ಭಾಷ್ಯಂರವರ [illegible] ನಾಥ್ [illegible] ಈ ಸಲಹೆಗೆ [illegible] ಕೊಟ್ಟಿರುವರೆಂದು ಕೇಳಿ ಸಂತೋಷಪಡುತ್ತೇವೆ. ಕೆಲವು ಸಭಿಕರು ಈ ವಿಷಯವನ್ನೆಲ್ಲಾ ಆಲೋಚನೆ ಮಾಡುವುದಕ್ಕಾಗಿ ಒಂದು ಕಮಿಟಿಯು ಆಗಬೇಕೆಂದು ಹೇಳಿದರು. ಮಾತು ಮಾತಿಗೂ ಒಂದು ಕಮಿಟಿಯನ್ನು ನೇಮಿಸುವುದು ಸರಿಯಲ್ಲ. ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಕೆಲಸವನ್ನು ಮುಂದಕ್ಕೆ ನಡಿಸಬೇಕೆ ಹೊರತು ಕಮಿಟಿಗಳನ್ನು ಏರ್ಪಡಿಸುವುದರಲ್ಲಿ ಪ್ರಯೋಜನವಿಲ್ಲ. ಇದಕ್ಕಾಗಿ ಪಠ್ಯ ಪುಸ್ತಕಗಳು ಮೊದಲಾದುವುಗಳು ಬೇಕೆಂದು [illegible] ರು ಅದಕ್ಕೆ ಹತ್ತುಸಾವಿರ ರೂ. ಗಳು ಬೇಕೆಂದೂ ಹೇಳಿದರು. ದುಡ್ಡಿಲ್ಲದೇ ಯಾವಕೆಲಸವೂ ಆಗುವುದಿಲ್ಲ. ಸಾಧನಗಳು ಪೂರ್ತಿಯಾಗುವವರೆಗೂ ಸುಮ್ಮನೆ ಇರುವದಕ್ಕಿಂತ ಎಷ್ಟೆಷ್ಟು ಸಾಧ್ಯವೋ ಅಷ್ಟು ಮುಂದಕ್ಕೆ ಹೋಗುವುದು ಒಳ್ಳೆಯದು. ಈ ಠರಾವಿನ ಚರ್ಚೆಯಲ್ಲಿ ಮ|| ವೆಂಕಟಪ್ಪನವರು ಅಮೂಲ್ಯವಾದ ಭಾಷಣವನ್ನು ಮಾಡಿದರು. ಮಹಾತ್ಮ ಗಾಂಧಿಯವರ, ಲೋಕಮಾನ್ಯ ತಿಲಕರ, ಮೊದಲಾದ ರಾಷ್ಟ್ರೀಯ ಮುಖಂಡರ ಅಭಿಪ್ರಾಯಗಳನ್ನೆಲ್ಲಾ ಕೊಟ್ಟರು. ಮ|| ಸಂಜೀವಯ್ಯನವರೂ ಮತ್ತು ಇತರರೂ ಬಹಳ ಚನ್ನಾಗಿ ವಿಷಯಗಳನ್ನು ಪ್ರತಿಪಾದಿಸಿದರು.

ಪುದುಕೋಟೆಯ ಸಿಂಹಾಸನ

ಪುದುಕೋಟೆಯ ಸಿಂಹಾಸನವು ಸಿದ್ಧಿ ಮಾರ್ತಾಂಡನಿಗೆ ಸಲ್ಲುವದಿಲ್ಲವೆಂದು ಇಂಡಿಯಾ ಸರ್ಕಾರದವರು ತೀರ್ಮಾನ ಮಾಡಿರುವರು.

ಭಿಕ್ಷಾಟನವನ್ನು ತಪ್ಪಿಸುವ ಮಸೋದ.

ತಾ|| ೧-೧೧-೨೮ ರಲ್ಲಿ ಅಸಂಬ್ಲಿಯಲ್ಲಿ ಭಿಕ್ಷಾಟನೆಯನ್ನು ತಪ್ಪಿಸುವುದಕ್ಕಾಗಿ ಒಂದು ಕಾನೂನನ್ನು ಮಾಡಬೇಕೆಂದು ಮ|| ಬಿ. ಎಲ್. ಬ್ಯಯ್ಯಣ್ಣನವರು ಒಂದು ಠರಾವನ್ನು ಸೂಚಿಸಿದರು. ನಮ್ಮ ಸಂಸ್ಥಾನದಲ್ಲಿ ಭಿಕ್ಷಾಟನೆಯು ಬಹಳವಾಗಿ ಹೆಚ್ಚುತ್ತಲಿದೆ. ದೃಢಕಾಯರಾದವರು ಭಿಕ್ಷಾಟನೆ ಮಾಡಿದರೆ ಅವರನ್ನು ಶಿಕ್ಷೆಗೆ ಒಳಪಡಿಸುವಂತೆ ತಕ್ಕ ಏರ್ಪಾಡನ್ನು ಮಾಡಬೇಕು. ಅಶಕ್ತರಿಗೂ ಮತ್ತು ಅಂಗಹೀನರಿಗೂ ವರ್ಕ್‌ಹೌಸುಗಳನ್ನೂ, ಅಶಕ್ತ ಪೋಷಣಾಲಯಗಳನ್ನೂ ಏರ್ಪಡಿಸಬೇಕು. ಭಿಕ್ಷಾಟನವೇ ವೃತ್ತಿಯಾಗಿರುವ ಸಾಧುಗಳಿಗೆ ಭಿಕ್ಷಾಟನೆ ಮಾಡುವುದಕ್ಕೆ ಲೈಸೆನ್ಸ್ ಕೊಡಬೇಕು. ಇವುಗಳನ್ನೆಲ್ಲಾ ಕ್ರೋಢೀಕರಿಸಿ ಒಂದು ಕಾನೂನನ್ನು ಮಾಡಬೇಕೆಂಬುದೇ ಮ|| ಬಯ್ಯಣ್ಣನವರ ಠರಾವಿನ ತಾತ್ಪರ್ಯ. ಮ|| ಎಂ. ಸಿ. ಲಿಂಗೇಗೌಡರು ಮತ್ತು ಎಚ್. ಸಿ. ದಾಸಪ್ಪನವರೂ ದೃಢಕಾಯರಾದವರೆಲ್ಲಾ ಭಿಕ್ಷಾಟನೆಯನ್ನು ಮಾಡದಂತೆ ಒಂದು ಕಾನೂನು ಮಾಡಬೇಕೆಂದು ಅಭಿಪ್ರಾಯಪಟ್ಟರು. ಈ ಠರಾವಿನ ವಿಷಯವಾಗಿ ಬಹಳ ಮನೋರಂಜಕವಾದ ಚರ್ಚೆಯು ನಡೆಯಿತು. ಭಿಕ್ಷಾಟನೆಯನ್ನು ಕೆಲವರು ಆಗಾಗ್ಯೆ ಪಿತಾಚಾರಂಗಳಿಗೋಸ್ಕರ ಇಟ್ಟುಕೊಂಡಿರುವರೆಂದೂ, ಬಡವಿದ್ಯಾರ್ಥಿಗಳು ಭಿಕ್ಷಾನ್ನ ಮೊದಲಾದುವುಗಳನ್ನು ಮಾಡಿಕೊಂಡು ವಿದ್ಯವನ್ನು ಸಂಪಾದಿಸುತ್ತಿರುವರೆಂದೂ, ಶ್ರಾವಣ ಶನಿವಾರ ಮೊದಲಾದ ದಿವಸಗಳಲ್ಲಿ ಕೆಲವರು ವ್ರತಕ್ಕೋಸ್ಕರವಾಗಿ ಭಿಕ್ಷೆಯನ್ನು ಮಾಡುವರೆಂದೂ, ಭಿಕ್ಷೆಯನ್ನು ಅಪ್ಪಿ ಪಡಿಸುವದಕ್ಕೆ ಮೊದಲು ಭಿಕ್ಷಕರಿಗೆ ಜೀವನಕ್ಕೆ ಅವಕಾಶವನ್ನುಂಟುಮಾಡ್ಬ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿಯೂ ವರ್ಕ್ ಹೌಸುಗಳನ್ನು ಸ್ಥಾಪಿಸಬೇಕೆಂದೂ, ಕೆಲವು ಸಭಿಕರು ಸೂಚಿಸಿದರು. ಒಟ್ಟಿನಲ್ಲಿ ಬಹುಮತವು ಮೇಲಿನ ಅಭಿಪ್ರಾಯದ ಕಾನೂನು ಇರಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಲಾಲಾ ಲಜಪತರಾಯರಿಗೆ ಲಾಠಿಯ ಏಟು.

ಅಕ್ಟೋಬರ್ ೩೦ ನೇ ತಾ|| ದಿವಸ ಸೈಮನ್ ಕಮೀಷನ್‌ನವರು ಲಾಹೋರಿಗೆ ಕಾಲಿಟ್ಟರು. ಬಹಿಷ್ಕಾರಕ್ಕೆ ಮುಂದಾಳುಗಳಾದ ಲಾಲಾ ಲಜಪತ್ ರಾಯ್ ಲಾಲಾ ಹಂಸರಾಜ್, ಡಾಕ್ಟರ್ ಗೋಪಿಚಂದ್, ಡಾಕ್ಟರ್ ಸತ್ಯಪಾಲ್ ಮೊದಲಾದ ಮುಖಂಡರು ಬಹಿಷ್ಕಾರದ ಮೆರವಣಿಗೆಯೊಡನೆ ಬಂದರು. ಪೋಲೀಸಿನವರು ಈ ಮುಖಂಡರನ್ನೆಲ್ಲಾ ಲಾಠಿಗಳಿಂದ ಹೊಡೆದರು. ಇವರಿಗೆಲ್ಲಾ ಗಾಯವಾಯಿತು. ೨೫ ಜನರು ಮಾತ್ರ ಸೈಮನ್ ಕಮೀಷನ್ನಿಗೆ ಸ್ವಾಗತವನ್ನು ಕೊಟ್ಟರು.

Regd. No. M. 2322 || ವಂದೇಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ / ಪರಸ್ಥಳಕ್ಕೆ ೧೦-[illegible]

ಪುಟ ೧] ಗುರುವಾರ ೮ ನವಂಬರ್ ೧೯೨೮ [ಸಂಚಿಕೆ [illegible]

ಸಿಟಿ ಕೋಆಪರೇಟಿವ್ ಬ್ಯಾಂಕ್

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಏಡ್ಜರ್ನಡ್ ಜನರಲ್ ಮೀಟಿಂಗು ಈ ಮಾಹೆ 11 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಮೈಸೂರು ಲ್ಯಾನ್ಸ್‌ಡೌನ್ ಬಜಾರ್ ಮೇಲ್ಭಾಗದಲ್ಲಿರುವ ಶಾರದಾವಿಲಾಸ ಹೈಸ್ಕೂಲಿನಲ್ಲಿ ನಡೆಯುತ್ತದೆ ಯಾದ್ದರಿಂದ ಮೆಂಬರುಗಳೆಲ್ಲರೂ ಕಾಲಕ್ಕೆ ಸರಿಯಾಗಿ ಸದರಿ ಸ್ಕೂಲಿಗೆ ದಯಮಾಡಿಸಬೇಕಾಗಿ ಕೋರಿಕೆ.

Y. Chandrasekhara Sastry
Honorary Secretary,
C. C. Bank Ltd.
Mysore

ತಾಯಿನಾಡು
8-11-1928

ವಿಚಾರಣೆಯ ಕಮಿಟಿ.

ವಿಚಾರಣೆಯ ಕಮಿಟಿಯು ಇನ್ನು ಒಂದು ವಾರ [illegible] ಮುಗಿಸುವುದು. ಈ [illegible] ಸಾಕ್ಷಿಗಳ ಸಾಕ್ಷ್ಯವನ್ನು [illegible] ಸರ್. ಎಂ. ವಿಶ್ವೇಶ್ವರಯ್ಯನವರು ಈ ಗ ಕೊಟ್ಟಿರುವ ಸಾಕ್ಷ್ಯಗಳಿಂದಲೇ ತಮಗೆ ತೀರ್ಮಾನ [illegible] ಈಗಾಗಲೇ ಕಮಿಟಿಯವರು [illegible] [illegible] ಅಥವಾ [illegible] ಈಗಲೇ ನಿಷ್ಕರ್ಷೆಯಾಗಿ [illegible] ಕಮಿಟಿಯನ್ನು ನೇಮಿಸಿದಾಗ [illegible] ಕಮಿಟಿಯ ಮೇಲೆ ಈ [illegible] ಸರ್. ಎಂ. ವಿಶ್ವೇಶ್ವರಯ್ಯನವರ [illegible] ಸರ್. ಎಂ. ವಿಶ್ವೇಶ್ವರ [illegible] [illegible] ಮೈಸೂರಿನವರು ಮಾತ್ರವೇ ಅಲ್ಲದೆ ಅಪ [illegible] ಕಮಿಟಿಯ ತೀರ್ಮಾನವನ್ನು ಒ [illegible] ನಿರೀಕ್ಷಿಸುತ್ತಿರುವರು. ಕಮಿಟಿ [illegible] ಅವರಮಟ್ಟಿಗೆ ದಕ್ಷತೆಯಿಂದಲೇ ಕೆಲಸಮಾಡಿರುವರು. ಸ್ವಭಾವಸಿದ್ಧವಾದ ಕೆಲವು ಕುಂದಕಗಳಿಂದ ಅವರು ಕೆಲವು ಸಾಕ್ಷಿಗಳನ್ನು ಗದ್ದರಿಸಿಕೊಂಡಹಾಗೆ ಕಂಡ [illegible] ಸೂಚನೆಯು ಒದಕೂಡಲೇ ಶಾಂತ [illegible] ಕಮಿಟಿಯವರು ಮಹಮ್ಮದೀಯರ [illegible] ಸಾಕ್ಷಿಯನ್ನು [illegible] [illegible] ಆಗಾಗ್ಗೆ [illegible]

ಸಂಸ್ಥಾನದ ಶಾಂತಿಯು ಯಾವುದೂ ಇರುವುದಿಲ್ಲ. ಅವರ [illegible] ಅವರ ಮಾತು ಕತೆಗಳಾಗಲೀ [illegible] ಮನೆಯನ್ನು ಊರುವಂತಹುವುಗಳ [illegible].

ಈಗಾಗಲೇ ಕಮಿಟಿಯ ಮುಂದೆ ಆಗಿರುವ ಸಾಕ್ಷಿಯಿಂದ ವಿಚಾರ ಶೀಲರಾದವರು ತಮ್ಮ ತೀರ್ಮಾನಗಳನ್ನು ಮಾಡಿಕೊಳ್ಳಬಹುದು, ತಮ್ಮ ತೀರ್ಮಾನಕ್ಕೂ ಕಮಿಟಿಯವರ ತೀರ್ಮಾನಕ್ಕೂ ಇರುವ ವ್ಯತ್ಯಾಸವನ್ನು ಅನಂತರ ಪರೀಕ್ಷಿಸಬಹುದು.

ಅನೇಕರಿಗೆ ಈ ಕಮಿಟಿಯ ತೀರ್ಮಾನದಿಂದ ಏನಾದರೂ ಪ್ರಯೋಜನವಾಗುವುದೋ ಇಲ್ಲವೋ ಎಂಬುದು ಸಂದೇಹವಾಗಿರುವುದು, ಕಮಿಟಿಯವರ ತೀರ್ಮಾನವು, ಸರಕಾರವನ್ನು ಬಂಧಿಸುವುದಿಲ್ಲ. ಕಮಿಟಿಯವರ ಸಲಹೆಯಂತೆಯೇ ಸರಕಾರವು ನಡೆಯಬೇಕಾಗಿಲ್ಲ. ಅಸೆಂಬ್ಲಿಯಲ್ಲಿ ದಿವಾನರು ಇದನ್ನು ಸ್ಪಷ್ಟಪಡಿಸಿದರು. ಶ್ರೀಮನ್ಮಹಾರಾಜರವರಿಗೆ ಬರೆಯುವ ಅರ್ಜಿಗೆ ರುಜು ಹಾಕುವುದಕ್ಕೆ ಪ್ರತಿಯೊಬ್ಬನಿಗೂ ಅಧಿಕಾರವಿದೆಯೆಂದು ವಿಚಾರಣೆಯ ಕಮಿಟಿಯ ಅಧ್ಯಕ್ಷರಾದ ಸರ್. ಎಂ. ವಿಶ್ವೇಶ್ವರಯ್ಯನವರು ಹೇಳಿದ್ದರೂ ಅದರಂತೆಯೇ ನಾವು ನಡೆಯಬೇಕಾಗಿಲ್ಲ ಎಂದು ದಿವಾನರು ಹೇಳಿದರು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಕಮಿಟಿಯನ್ನು ನೇಮಿಸಿರುವವರು ಸರ್ಕಾರದವರು. ತಮಗೆ ಅನುಕೂಲವಾಗಿದ್ದರೆ ಕಮಿಟಿಯ ತೀರ್ಮಾನವನ್ನು ಸ್ವೀಕರಿಸಬಹುದು, ಇಲ್ಲವಿದ್ದರೆ [illegible]. ಬ್ರಿಟಿಷ್ ಇಂಡಿಯಾ ಸರ್ಕಾರದವರು ಕೂಡಾ ಹೀಗೆ ಅನೇಕಾವರ್ತಿ ಮಾಡಿರುವರು. ಬ್ರಿಟಿಷ್ ಸರ್ಕಾರದವರೇ ಹೀಗೆ ಮಾಡುವಾಗ್ಗೆ ಇನ್ನು ಮೈಸೂರು ಸರ್ಕಾರದ್ದೇನು ? ಆದರೆ ಒಂದು ಪ್ರಶ್ನೆ. ತಮಗೆ ತೋರಿದಹಾಗೆ ಮಾಡುವುದಾಗಿದ್ದರೆ ಕಮಿಟಿಯನ್ನು ಏತಕ್ಕೆ ನೇಮಿಸಬೇಕಾಗಿತ್ತು ? ಇರಲಿ, ಈಗಲೇ ಆ ಪ್ರಶ್ನೆಯು ಬೇಡ. ಕಮಿಟಿಯವರೂ ವರದಿ ಕಳುಹಿಸಲಿ. ಆ ವರದಿಯು ಏನು ಎಂಬುದನ್ನು ನೋಡಿ ಸರ್ಕಾರದವರು ಅನುಸರಿಸುವ ನೀತಿಯು ಏನು ಎಂಬುದನ್ನು ಅನಂತರ ವಿಮರ್ಶಿಸೋಣ.

ಎಲ್. ವೈ ಪಿನ್ನೆರವರ ಹೇಳಿಕೆ.

[illegible] ಪಿನ್ನೆರವರು ಮ|| ರಾ|| ಬಿ. ರಾಣೋಜಿರಾಯರ [illegible]. ಇವರು ಹಿಂದೆ ಪ್ರತಿನಿಧಿಸಭೆಯ ಸಭಿಕರಾಗಿದ್ದರು. ಇವರು [illegible] ಜಾತಿಯಲ್ಲಿ ದರ್ಜಿಯವರು. ಗುಂಡು ಹಾರಿಸಿಕೊಂಡ ಚಂದ್ರರಾಜನ ಜಾತಿಗೆ ಸೇರಿದವರು. ಇವರು ನಿರ್ಭಯವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ ಸತ್ಯವನ್ನು ಕಮಿಟಿಯ ಮುಂದೆ ಹೇಳಿದರು. ಅಬ್ಬಾಸ್‌ಖಾನರು ತಮ್ಮನ್ನು ಅವರ ಗುಂಪಿಗೆ ಸೇರಿಸಿಕೊಳ್ಳುವುದಕ್ಕೆ ಯಾವಯಾವ ಪ್ರಯತ್ನಗಳನ್ನು ಮಾಡಿದರೆಂಬುದನ್ನು ತಿಳಿಸಿದರು. ಪಿನ್ನೆಯವರ ಹೇಳಿಕೆ ಏನೆಂದರೆ, ಆಗಸ್ಟ್ ೪ ಅಥವಾ ೫ ನೇ ತಾರೀಖಿನಲ್ಲಿ ಅಬ್ಬಾಸ್ ಖಾನರು, . ಪೋಲಿ ಅಬ್ದುಲ್‌ಗಫೂರ್‌ರವರು ಕ್ಯಾಪ್ಟನ್ ವೈ. ವಿ. ಅಯ್ಯರವರ ಆಫೀಸಿನಲ್ಲಿ ಕುಳಿತಿದ್ದರು. ಅಬ್ಬಾಸ್ ಖಾನರು ನನ್ನನ್ನು ಒಳಕ್ಕೆ ಕರೆದರು. ತಮ್ಮನ್ನು ಉಳಿಸಬೇಕೆಂದು ಕೇಳಿಕೊಂಡರು. ಹಿಂದೂಸ್ತಾನಿಯಲ್ಲಿ "ಕ್ಯಾಪವೆದುನಿಯಾವೆ ರಹನಾಕ್ಯಾಭಾಗಜಾನಾ" ಎಂದು ಹೇಳಿದರು. ನಿಮಗೆ ಯಾವ ವಿಧವಾದ ಸಹಾಯಮಾಡಲಿ ಎಂದು ಕೇಳಿದೆನು. ಅವರು ಹೇಳಿದ್ದೇನೆಂದರೆ, ನಾನು ಹೇಳುವರೀತಿ ನೀನು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಸಾಕ್ಷಿಯನ್ನು ಕೊಡಿ. ಹೇಗೆಂದರೆ ನಾನು ಎಲ್. ಎಸ್. ರಾಜುರವರ ಮನೆಗೆ ಹೋಗಿದ್ದೆ ಅಲ್ಲಿ ರಾಜುರವರು, ಡಿ. ಶಾಮರಾಯರು, ಜೆ. ಭೀಮರಾಯರು, ಸುಬ್ರಹ್ಮಣ್ಯಂರವರು ತಿವಾರಿ, ವೀರಕೇಸರಿ ಸಂಪಾದಕರು ಮತ್ತು ಪ್ರಜಾಮಿತ್ರ ಸಂಪಾದಕರು ಇನ್ನೂ ಇತರರು ಒಟ್ಟಿಗೆ ಸೇರಿ ನನ್ನನ್ನು ಖಾನರನ್ನು ಹಾಳುಮಾಡುವುದಕ್ಕೂ ದಿವಾನರನ್ನು ಕಿತ್ತುಹಾಕುವುದಕ್ಕೂ ದುರ್ಮಸಲತ್ತನ್ನು ನಡೆಸುತ್ತಿದ್ದರು. "

ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಸಂಪಾದಕರು ಏನುಮಾಡಿದರು ಎಂದು ನಾನು ಅಬ್ಬಾಸ್‌ಖಾನರನ್ನು ಕೇಳಿದೆನು ಅವರು ಹೇಳಿದ್ದೇನೆಂದರೆ" ಸಂಪಾದಕರು ಮುಖ್ಯವಲ್ಲ. ರಾಜು ಮತ್ತು ಶಾಮರಾಯರು ಇಬ್ಬರನ್ನು ಅಡಗಿಸಬೇಕು. ಅವರು ನನಗೆ ಅತ್ಯಂತ ವಿರೋಧವಾದ ಶತ್ರುಗಳು. "

ಪಿನ್ನೆಯವರು ಮುಂದೆಹೇಳಿದ್ದೇನೆಂದರೆ ನಾನು ಏನೋ ಕಾರಣವನ್ನು ಹೇಳಿ ಅಲ್ಲಿಂದ ತಪ್ಪಿಸಿಕೊಂಡು ಹೋದೆನು. ಕ್ಯಾಪ್ಟನ್ ಅಯ್ಯನವರೂ ಅಬ್ಬಾಸ್‌ಖಾನರ ಪರವಾಗಿ ಸಾಕ್ಷ್ಯವನ್ನು ಹೇಳು ಎಂದು ನನಗೆ ಬಿ ಸವೂ ತಗಾದೆ ಮಾಡುತ್ತಿದ್ದರು. ನಾನು ಸಾಲದೆ ನನ್ನ ಕೋಮಿನವರೆಲ್ಲರೂ ಅಬ್ಬಾಸ್‌ಖಾನರ ಬೆಂಬಲವಾಗಿ ನಿಲ್ಲಬೇಕೆಂದು ಹೇಳಿದರು. ಚಂದ್ರರಾಜನ ತಂದೆಯಾದ ರೇವಣ್ಣನೂ ಕೂಡ ಅಬ್ಬಾಸ್‌ಖಾನರಿಗೆ ಅನುಕೂಲವಾಗಿ ಸಾಕ್ಷಿಯನ್ನು ಹೇಳಬೇಕೆಂದೂ ತನ್ನ ಮಗನು ಜುಲೈ ೩೦ ನೇ ತಾರೀಖಿನ ರಾತ್ರಿ ಊರಲ್ಲೇ ಇರಲಿಲ್ಲವೆಂದು ಹೇಳಬೇಕೆಂದೂ ತಿಳಿಸಿದರು. ನಾನು ಆಗಾಗ್ಗೆ ಚಂದ್ರೇಗೌಡರನ್ನೂ ಚಿಕ್ಕ ನಂಜಪ್ಪಶೆಟ್ಟರನ್ನೂ ನೋಡುತ್ತಲೇ ಇದ್ದೆ. ಜೆ. ಪರಮಶಿವಯ್ಯನವರನ್ನೂ ಕೂಡ ಅಯ್ಯನವರ ಆಫಿಸಲ್ಲಿ ನೋಡಿದ್ದೆ. ಅವರೆಲ್ಲರೂ ಅಬ್ಬಾಸ್‌ಖಾನರನ್ನು ಉಳಿಸಬೇಕೆಂದೂ ಬ್ರಾಹ್ಮಣರನ್ನು ಪಾತಕ್ಕೆ ತಳ್ಳಬೇಕೆಂದೂ ಪ್ರಯತ್ನಗಳನ್ನು ನಡೆಸುತ್ತಿದ್ದರು. ಅವರೆಲ್ಲರೂ ಬ್ರಾಹ್ಮಣರನ್ನು ನಿರ್ಮೂಲ ಮಾಡುವುದಕ್ಕೆ ಇದೇಕಾಲ. ಇದನ್ನು ಬಿಟ್ಟರೆ ಇನ್ನು ಸಿಕ್ಕುವುದಿಲ್ಲ ಎಂದು ಹೇಳುತ್ತಿದ್ದರು. ದುರ್ಮಸಲತ್ತು ನಡೆಸುತ್ತಿರುವರ ಪೈಕಿ ಸಂಜೀವರಾಯರು, ನಾರಾಯಣಯ್ಯಂಗಾರ್‌ರವರು, ಎ. ಕೆ. ಗರುಡಾಚಾರ್ಯರು ವಿ. ನರಸಿಂಹಯ್ಯಂಗಾರ್ಯರು ಇವರೆಲ್ಲರ ಹೆಸರನ್ನು [illegible] ಹೇಳಿದರು. ಇದನ್ನು ನೋಡಿ ನನಗೆ [illegible]. ಇವರೆಲ್ಲಾ ಸತ್ಯವನ್ನು ಮುಚ್ಚಿ

ರಾಕ್ಷಸ ಕೃತ್ಯಗಳು

ಬೆಂಗಳೂರಿನಲ್ಲಿ ಯಾರೋ ದುರಾತ್ಮರು ಈಚೀಚೆಗೆ ರಾಕ್ಷಸಕೃತ್ಯವನ್ನು ನಡೆಸುತ್ತಿರುವರು. ಕೆಲವು ದಿವಸಗಳ ಹಿಂದೆ ಜೆ. ಭೀಮರಾಯರ ಅಂಗಡಿ ಮುಂದೆ ಒಂದು ಮಕರಿ ಅಮೇಧ್ಯವನ್ನು ಸುರಿದಿದ್ದರು. ಮುನಿಸಿಪಾಲಿಟಿಯವರು ಬಂದು ಪಾಕೀಜಮಾಡಿದರು. ವಿ. ಎಸ್. ಸಂಜೀವರಾಯರ ಮನೆ ಕಾಂಪೋಡಿನಲ್ಲಿಯೂ ಹೀಗೆಯೇ ಅಮೇಧ್ಯವನ್ನು ಸುರಿದಿದ್ದರು. ಈ ತಿಂಗಳು ೪.ನೇ ತಾರೀಖಿನಲ್ಲಿ ಜೆ. ಭೀಮರಾಯರ ಮನೆಯ ಮತ್ತು ಅಂಗಡಿಯ ಬಾಗಲಿನ ಮುಂದೆಯೂ ಕುರಿಯ ರಕ್ತವೂ ಕರಳೂ ಕಟ್ಟಲ್ಪಟ್ಟಿದ್ದವು. ಪೋಲೀಸ್ ಸಬಾಇನ್‌ಸ್ಪೆಕ್ಟರೂ ಎ. ಎಸ್. ಪಿ. ಯವರೂ ಸ್ಥಳವನ್ನು ಅಜಮಾಯಿಷಿ ಮಾಡಿಕೊಂಡು ಹೋದರು. ಮುನಿಸಿಪಲ್ ನೌಕರರು ಬಂದು ಸ್ಥಳವನ್ನೆಲ್ಲಾ ಶುದ್ಧಿ ಪಡಿಸಿದರು. ಶ್ರೀರಾಮಾವತಾರ ಕಾಲದಲ್ಲಿ ವಿಶ್ವಾಮಿತ್ರನೇ ಮೊದಲಾದ ಋಷಿಗಳು ಆಶ್ರಮದಲ್ಲಿಯೂ ಯಜ್ಞ ಕುಂಡಗಳಲ್ಲಿ ಮಾರೀಚನೇ ಮೊದಲಾದ ರಾಕ್ಷಸರು ಈ ರೀತಿಯಾದ ದುಷ್ಕೃತ್ಯಗಳನ್ನು ನಡೆಸುತ್ತಿದ್ದರು. ಅಭಿನವ ರಾಮರಾಜ್ಯವಾದ ಮೈಸೂರಿನಲ್ಲಿಯೂ ಕೂಡ ಈ ರಾಕ್ಷಸಕೃತ್ಯಗಳು ಪ್ರಬಲವಾಗಿರುವುವು.

ಲಿರುವರು ಎಂದು ತಿಳಿಯಿತು. ನಾನು ಅವರು ಹೇಳಿದಂತೆ ಕೇಳುವುದಕ್ಕಾಗುವುದಿಲ್ಲವೆಂದು ಹೇಳಿದೆನು. ಇವರು ನಮ್ಮ ಮಾವನವರಾದ ರಾಣೋಜಿರಾಯರನ್ನು ಹಿಡಿದರು. ಇನ್ನೂ ನನ್ನ ಮನಸ್ಸಿಗೆ ವ್ಯಸನಕರವಾದ ಸಂಗತಿ ಯಾವುದೆಂದರೆ ಮಾಚಯ್ಯನವರ ಕೋರ್ಟಿನ ಮುಂದೆ ಪರದೆ ಒಳಗೆ ಕೊಟ್ಟ ಹೇಳಿಕೆಗಳೆಲ್ಲಾ ತಮಗೆ ತಿಳಿಯುತ್ತದೆ ಎಂದು ಚಂದ್ರೇಗೌಡರು ಹೇಳುತ್ತಿದ್ದರು. ನಮ್ಮ ಮನೆಯಲ್ಲಿರುವ ಅಂಬೋಜಿರಾವ್ ಎಂಬ ಹುಡುಗನನ್ನು ಅಬ್ಬಾಸ್‌ಖಾನ್ ಪಾರ್ಟಿಯವರು ಅವರ ಮನೆಗೆ ಕರೆದುಕೊಂಡು ಹೋಗಿ ತಿಂಡಿಯನ್ನು ಕೊಟ್ಟು ಮಾಚಯ್ಯನವರ ಕೋರ್ಟಿನಲ್ಲಿ ಅಬ್ಬಾಸ್‌ಖಾನರ ಪರವಾಗಿ ಸಾಕ್ಷಿ ಕೊಟ್ಟರೆ ೪೦ ರೂ ಲಂಚವನ್ನು ಕೊಡುವುದಾಗಿ ವಾಗ್ದಾನಮಾಡಿದರು, ನಿಜಾಂಶವನ್ನೆಲ್ಲಾ ಶ್ರೀಮನ್ ಮಹಾರಾಜರಿಗೆ ತಿಳಿಸಬೇಕೆಂದು ಒಂದು ಭೇಟಿಗಾಗಿ ಪ್ರಾರ್ಥಿಸಿದೆನು. ಕೊಡಲಾಗುವುದಿಲ್ಲ ಎಂದು ಉತ್ತರವು ಬಂದಿತು. ಈಗ ನಮ್ಮ ಸರ್ಕಾರದ ಎಗ್ಜಿಕ್ಯೂಟಿವ್ ಕೌನ್ಸಿಲ್‌ರವರುಗಳು ಪರದೆ ಒಳಗೆ ಏನೇನೋ ಕೆಲಸಗಳನ್ನು ನಡೆಸುತ್ತಾರೆ. ಪ್ರಜಾಭಿಪ್ರಾಯಕ್ಕೆ ಜವಾಬ್ದಾರರಾಗಿಲ್ಲ. ಆದುದರಿಂದ ಪ್ರಜೆಗಳ ಅಭಿಪ್ರಾಯವು ಶ್ರೀಮನ್ಮಹಾರಾಜರವರಿಗೆ ತಿಳಿಯುವುದಕ್ಕೋಸ್ಕರ ಶ್ರೀಮನ್ ಮಹಾರಾಜರು ಮಹಾಜನಗಳಿಗೆ ಸುಲಭರಾಗಿರಬೇಕು. ಪ್ರಜೆಗಳಲ್ಲಿ ಯಾರು ಬೇಕಾದರೂ ಹೋಗಿ ಅವರೊಡನೆ ವಿಷಯಗಳನ್ನು ಅರಿಕೆ ಮಾಡಿಕೊಳ್ಳುವಂತೆ ಇರಬೇಕು. ಸರ್ಕಾರದವರಿಗೆ ಮಾತ್ರವೇ ಅವಕಾಶವಿದ್ದು ಇತರರಿಗೆ ಶ್ರೀಮನ್ ಮಹಾರಾಜರ ಭೇಟಿಯ ಅವಕಾಶವು ದೊರೆಯದೆ ಹೋದರೆ ನಮ್ಮ ಸಂಸ್ಥಾನದ ನಿಜಸ್ಥಿತಿಯು ಶ್ರೀಮನ್ ಮಹಾರಾಜರಿಗೆ ತಿಳಿಯಲು ಆಗುವುದಿಲ್ಲ.

ವರ್ತಮಾನ ಸಂಗ್ರಹ

ಇಂಗ್ಲೆಂಡಿನ ಎಲ್ಸಿಫೆಮಿಂಗ್ ಎಂಬ ಯುವತಿಗೆ ಪ್ರಪಂಚದಲ್ಲೆಲ್ಲಾ ಉದ್ದವಾದ ಕೇಶರಾಶಿ ಇರುವುದು. ಅದರ ಉದ್ದ 5|| ಅಡಿ!

ನಲವತ್ತೈದು ವರ್ಷ ದಾಟಿದ ಮೇಲೆ ಯಾವ ಅವಿವಾಹಿತನೂ ಮದುವೆಯಾಗಬಾರದೆಂದು ಅಮೇರಿಕದಲ್ಲಿ ಒಬ್ಬ ನ್ಯಾಯಾಧೀಶರು ತೀರ್ಮಾನಿಸಿದರು.

ಜಪಾನ ಚಕ್ರವರ್ತಿಯವರಿಗೆ ನವಂಬರದಲ್ಲಿ ಪಟ್ಟಾಭಿಷೇಕವು. ಬ್ರಿಟಿಷ ಸಾರ್ವಭೌಮರು ಅವರಿಗೊಂದು ಜೂಜಿನ ಕುದುರೆಯ ಚಿತ್ರವನ್ನು ಬಹುಮಾನವಾಗಿ ಕೊಡುವರು.

ಡೆಲ್ಲಿಯ ಪ್ರಾಂತಿಕ ಪರಿಷತ್ತು ಶ್ರೀ ಜವಾಹಿರ್‌ಲಾಲರ ಅಧ್ಯಕ್ಷತೆಯಲ್ಲಿ ಜರುಗಿ ಇನ್ನು ಮುಂದೆ ಬ್ರಿಟಿಷರು ಕೈಕೊಳ್ಳಬಹುದಾದ ಯುದ್ಧದಲ್ಲಿ, ಹಿಂದೀಯರು ಸಹಭಾಗಿಗಳಾಗಬಾರದೆಂದು ನಿರ್ಧರಿಸಿತು.

ಲಾಹೋರಿನಲ್ಲಿ ಕಳೆದ ತಿಂಗಳು 23 ನೇ ತಾ|| ದಿವಸ ದಸರಾ ಮೆರವಣಿಗೆಯಾಗುವಾಗ ಗುಂಪಿನ ಮಧ್ಯದಲ್ಲಿ ಸಿಡಿಮದ್ದು ಬಿದ್ದಿತು. ಸುಮಾರು 60 ಜನರಿಗೆ ಗಾಯಗಳಾಗಿವೆ. 6 ಜನರು ಸತ್ತರು—ಎಂದು ವರ್ತಮಾನ.

ಹೈದರಾಬಾದು ಸಂಸ್ಥಾನದ ಹಿಂದಿನ ದಿವಾನರೂ ದೊಡ್ಡ ಜಹಗೀರುದಾರರೂ ಹಿಂದೂಮತೀಯರೂ ಆದ ಮಹಾರಾಜಾ ಕಿಶನ್‌ಪ್ರಸಾದರವರು ತಮ್ಮ ಮಗಳನ್ನು ಪಾಯಗಾ ಇಲಾಖೆಯ ಒಬ್ಬ ನವಾಬನಿಗೆ ಮದುವೆಮಾಡಿಕೊಟ್ಟರು.

ಮೋಟಾರು ಗಾಡಿಗಳನ್ನಿಟ್ಟಿರುವವರಲ್ಲಿ ಪತ್ತಕ್ಕೆ ಒಬ್ಬರಂತಾದರೂ ಅನುಕೂಲಸ್ಥರಲ್ಲವೆಂತಲೂ, ಆ ಗಾಡಿಗಳನ್ನಿಡುವವರಿಗೆ ನಾನಾ ಬಗೆಯ ದುರ್ವ್ಯಯಗಳೂ ದುರ್ಗುಣಗಳೂ ಉಂಟಾಗುವವೆಂದೂ ಇಂಗ್ಲೆಂಡಿನ ಎಡ್ಮಾಂಟನ್ ಎಂಬಲ್ಲಿ ಒಬ್ಬ ನ್ಯಾಯಾಧೀಶರು ಬರೆದಿರುತ್ತಾರೆ.

ಬೊಂಬಾಯಿ ಮುನಿಸಿಪಾಲಿಟಿ ಶಾಲೆಗಳಲ್ಲಿ ಮಕ್ಕಳು ಕುಡಿಯುವ ಸಲುವಾಗಿ ನೀರನ್ನು ಪಾತ್ರೆಗಳಲ್ಲಿ ತುಂಬಿಸಿ ಇಡಬೇಕೆಂತಲೂ, ಅಲ್ಲಿ ಜಾತಿಭೇಧವನ್ನು ಪರಿಗಣಿಸಬಾರದೆಂತಲೂ ಮುನಿಸಿಪಾಲಿಟಿಯವರ ನಿರ್ಣಯವಾಗಿತ್ತು. ಆದರೆ ಮತಾಭಿಮಾನಿಗಳಾದ ಕೆಲ ಹಿಂದೂಗಳಿಗೆ ಇದು ಸರಿಬೀಳಲಿಲ್ಲ. ಅವರು ಮಾಧವಭಾಗ ಎಂಬಲ್ಲಿ ಒಟ್ಟುಗೂಡಿ ಮುನಿಸಿಪಾಲಿಟಿಯವರು ಹೀಗೆ ಮಾಡುವುದು ಹಿಂದೂ ವರ್ಣಾಶ್ರಮ ಧರ್ಮಕ್ಕೆ ವಿರುದ್ಧವೆಂದೂ, ತಮ್ಮ ಸೂಚನೆಗೆ ಕಿವಿಗೊಡದೆ ಮತ್ತೂ ಮುನಿಸಿಪಾಲಿಟಿಯವರು ಮುಂದುವರೆದುದಾದರೆ ಅವರ ಮೇಲೆ ವ್ಯವಹರಿಸಲು ಹಣ ಕೊಡಿಸಬೇಕೆಂದೂ ನಿಶ್ಚಯಿಸಿದರು.

ಒಂದು ಸಲಹೆ.

೬-೧೧-೨೮ ರಲ್ಲಿ ಧರ್ಮಾಧಿಕಾರಿಗಳೂ ವಿದ್ವಾಂಸರೂ ಸಂಸ್ಕೃತಮಹಾ ಪಾಠಶಾಲೆಯ ಪಂಡಿತರು, ಹುಜೂರ್ ಸೆಕ್ರೆಟರಿಗಳಾದ ಮ|| ರಾ|| ಟಿ. ತಂಬೂಶೆಟ್ಟಿ ಬಿ. ಎ. ರವರಿಗೆ ರಾಜ ಸಭಾಭೂಷಣ ಎಂಬ ಬಿರುದು ಬಂದುದಕ್ಕಾಗಿ ಅಭಿನಂದನವನ್ನು ಅರ್ಪಿಸಿದರು. [illegible] ಅಭಿನಂದನ ಪತ್ರಿಕೆಗೆ ಉತ್ತರವಾಗಿ ಕೊಟ್ಟ ಭಾಷಣದಲ್ಲಿ ಟಿ. ತಂಬೂಶೆಟ್ಟರವರು ಹೇಳಿದ್ದೇನೆಂದರೆ:- ನಮ್ಮಲ್ಲಿ ವಿಶೇಷ ಪಾಂಡಿತ್ಯವುಳ್ಳ ಅನೇಕ ವಿದ್ವಾಂಸರಿರುವರು. ಅವರಿಗೆ ಇಂಗ್ಲೀಷು ಭಾಷೆಯ ಪರಿಚಯವಿದ್ದದ್ದರೆ ಪಾಶ್ಚಾತ್ಯರು ಬರೆದಿರುವ ಗ್ರಂಥಗಳನ್ನು ನೋಡಿ ಅವರ ಸಿದ್ಧಾಂತಗಳನ್ನು ತಾವೇ ತಿಳಿಯಬಹುದಾಗಿತ್ತು. ಪಾಶ್ಚಾತ್ಯರು ನಮ್ಮ ಸಿದ್ಧಾಂತಗಳನ್ನು ಓದಿ ವಿಶೇಷಾರ್ಥಗಳನ್ನೂ ಪೂರ್ವಪಕ್ಷಗಳನ್ನೂ ಬರೆದಿರುವರು. ನಮ್ಮ ಪಂಡಿತರು ಇವುಗಳನ್ನು ತಿಳಿದುಕೊಂಡು ಪಾಶ್ಚಾತ್ಯರೊಡನೆ ಚರ್ಚಿಸಿ ಇಂಡಿಯಾ ದೇಶದ ಜ್ಞಾನದ ಬೆಳಕನ್ನು ಪ್ರಪಂಚದಲ್ಲೆಲ್ಲಾ ಹರಡಬೇಕಾದರೆ ಆಂಗ್ಲೇಯ ಭಾಷೆಯ ಸಹಾಯವು ಬೇಕು. ಆಂಗ್ಲೇಯ ಭಾಷೆಯ ಸಹಾಯವಿದ್ದಿದ್ದರೆ ನಮ್ಮ ಪಂಡಿತರಲ್ಲಿ ಅನೇಕರು ಪ್ರಪಂಚದಲ್ಲೆಲ್ಲಾ ಪ್ರಸಿದ್ಧರಾಗುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಈಗ ಓದುತ್ತಿರುವ ವಿದ್ಯಾರ್ಥಿಗಳು ಸಾಕಾದಷ್ಟು ಆಂಗ್ಲೇಯ ಭಾಷೆಯನ್ನು ಕಲಿಯಬೇಕೆಂದು ಸೂಚಿಸುತ್ತೇನೆ. ಇದರಿಂದ ಮುಂದೆ ಅವರಿಗೆ ಬಹಳ ಸಹಾಯವಾಗುವುದು.

ಮ|| ರಾ|| ತಂಬೂಶೆಟ್ಟರವರು ಕೊಟ್ಟಿರುವ ಸಲಹೆಯು ಪಂಡಿತರ ಗಮನಕ್ಕೆ ಬರುವುದೆಂದು ನಂಬಿದ್ದೇವೆ.

ಇದೇ ವಿಭವನಾಮ ಸಂವತ್ಸರದ ಆಶ್ವಯುಜ ಬಹುಳ ದ್ವಾದಶೀ ಶುಕ್ರವಾರ (ಶುಕ್ರವಾರ 9-11-28) ಸಾಯಂಕಾಲ 6 ಗಂಟೆಗೆ ಸರಿಯಾಗಿ ಮೈಸೂರು [illegible] ಅಗ್ರಹಾರದಲ್ಲಿರುವ ಗೌರ್ನಮೆಂಟ್ ಆಯುರ್ವೇದಿಕ್ ಕಾಲೇಜಿನಲ್ಲಿ "ಶ್ರೀಧನ್ವಂತರೀ ಜಯಂತೀ ಮಹೋತ್ಸವವು" ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟ್ [illegible] ರವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುತ್ತೆ.

ಬ್ರಾಹ್ಮಣ ನಿಂದೆ

[illegible] ಟೆಂಡೆಂಟ್ ಎಚ್. ಹರ್ಡೀಕರರವರು ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸಾಕ್ಷಿ ಹೇಳುವಾಗ ಬ್ರಾಹ್ಮಣನಿಂದೆ ಮಾಡಿರುವರೆಂದು ತೋರುವುದು. ವಿಶ್ವೇಶ್ವರಯ್ಯ ಕಮಿಟಿಯು ಇನ್ನು ೩ ೪ ದಿನಗಳು ಮಾತ್ರ ಕೂಡುವುದು.

TAI NADU (Daily Edition.)

The Leading Nationalist Daily of Mysore.

Our Agents

Copies of Tai Nadu, Daily and Weekly are available for sale [illegible]

1. [illegible] & Co. [illegible] Institute, Balepet, Bangalore City.
2. Koppada Ramakrishniah, Agent, Hassan.
3. Siddiah, Sri Nanjundeswara Bank Ltd Nanjangud.
4. M. N. [illegible] Sons, Lansdowne Buildings. Mysore,
5. B V Pundit & Co, Lakshmivilas Road, Mysore.
6. [illegible]
7. Sweet Mart, Lansdowne Buildings, Mysore.

Printed and published by P. R. Ramaiya at Sri Rama Press, D. Subbiah Road, Mysore.

Regd. No. M. 2322 ‖ ವಂದೇಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ಸ್ವದೇಶಕ್ಕೆ [illegible] / ಪರದೇಶಕ್ಕೆ [illegible]

ಸಂಪುಟ ೧] [illegible] ವಾರ ೯ ನವಂಬರ್ ೧೯೨೮ [ಸಂಚಿಕೆ [illegible]

ಸಿಟಿ ಕೋಆಪರೇಟಿವ್ ಬ್ಯಾಂಕ್

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಆರ್ಡಿನರಿ ಜನರಲ್ ಮೀಟಿಂಗು ಈ ವಾರದ 11 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಮೈಸೂರು ಲ್ಯಾನ್ಸ್‌ಡೌನ್ ಬಜಾರ್ ಮೇಲ್ಭಾಗದಲ್ಲಿರುವ ಶಾರದಾವಿಲಾಸ ಹೈಸ್ಕೂಲಿನಲ್ಲಿ ನಡೆಯುತ್ತದೆ ಯಾದ್ದರಿಂದ ಮೆಂಬರುಗಳೆಲ್ಲರೂ ಕಾಲಕ್ಕೆ ಸರಿಯಾಗಿ ಸದರಿ ಸ್ಕೂಲಿಗೆ ದಯಮಾಡಿಸಬೇಕಾಗಿ ಕೋರಿದೆ.

Y. Chandrasekhara Sastry,
Honorary Secretary,
C. C. Bank Ltd.
Mysore

TAI NADU.

9—1[illegible] 1928

ಪತ್ರಿಕೆಗಳ ಪ್ರಶಂಸೆ.

ಸರ್. ಎಂ. ವಿಶ್ವೇಶ್ವರಯ್ಯನವರು ವಿಚಾರಣೆಯ ಕಮಿಟಿಯ ಕಾರ್ಯ ಕಲಾಪವನ್ನು ಮುಗಿಸುವುದಕ್ಕೆ ಮುಂಚೆ ಈ ಕೆಳಗಿನ ರೀತಿಯಲ್ಲಿ ಪತ್ರಿಕೆಗಳ ಪ್ರಶಂಸೆಯನ್ನು ಮಾಡಿರುವರು. "ವಿಚಾರಣೆಯ ಸಮಯದಲ್ಲಿ ಪತ್ರಿಕೆಗಳು ಶಾಂತಿ ಸಮಾಧಾನವನ್ನು ತಾಳಿರುವದು ನಮಗೆ ಬಹಳ ಸಂತೋಷವನ್ನುಂಟು ಮಾಡಿದೆ. ಎಲ್ಲೋ ಒಂದೆರಡು ಪತ್ರಿಕೆಗಳು ಸರಿಯಾದ ಸಮಾಚಾರಗಳು ಗೊತ್ತಾಗದೆ ಕೆಲವು ಟೀಕೆಗಳನ್ನು ಮಾಡಿರಬಹುದು. ಆದರೆ ಒಟ್ಟಿನಮೇಲೆ ಪತ್ರಿಕೆಗಳು ಈ ಕಮಿಟಿಯ ವಿಷಯದಲ್ಲಿ [illegible] ವರ್ತಿಸಿರುವವು. ಕಮಿಟಿ [illegible] ವಿಶ್ವಾಸದಿಂದ [illegible] ಕೃತಜ್ಞರು. [illegible] ಕಮಿಟಿಯ [illegible] ಕಮಿಟಿಯ [illegible] ಕಾರ್ಯವನ್ನು [illegible] ಕಮಿಟಿಯ [illegible] ಕಮಿಟಿಯ ಮೊದಲನೇ [illegible] ನನ್ನ ಸಹೋದ್ಯೋಗಿಗಳಿಗೆ ನಾನು ಹೇಳಿದ್ದೇನೆಂದರೆ, ಅವರು ನನ್ನನ್ನು ಹಿಂಬಾಲಿಸುವುದಾದರೆ ಅವರ ಮುಂದುಗಡೆ ನಾನು ಇರುವುದಾಗಿಯೂ ಅವರೇ ನನ್ನನ್ನು ಮುಂದಕ್ಕೆ ಕರೆದು ಕೊಂಡು ಹೋಗುವುದಾದರೆ ನಾನು ಅವರ ಹಿಂದೆ ಇರುವುದಾಗಿಯೂ ಹೇಳಿದೆನು. ಈ ವಿಚಾರಣೆಯ ಆದ್ಯಂತವೂ ಇದೇ ಸಹಕಾರವೇ ನಡೆದುಕೊಂಡು ಬಂದಿರುವದೆಂದು ತಿಳಿಸಲು ಸಂತೋಷ ಪಡುತ್ತೇನೆ."

ದೊಡ್ಡವರ ಬಾಯಿಂದ ದೊಡ್ಡಮಾತುಗಳೇ ಬರುವವು. ಪತ್ರಿಕೆಗಳ ವಿಷಯವಾಗಿ ಸರ್ ಎಂ. ವಿಶ್ವೇಶ್ವರಯ್ಯನವರು ಆಡಿರುವ ಮಾತಿಗೂ ಇತರರು ಆಡುತ್ತಿರುವ ಮಾತಿಗೂ ಆನೆಗೂ ಆಡಿಗೂ ಇರುವಷ್ಟು ವ್ಯತ್ಯಾಸವಿರುವುದು. ಈ ಚಿತ್ರವನ್ನೂ ನೋಡಿ ಆ ಚಿತ್ರವನ್ನೂ ನೋಡಿ.

[illegible] ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಅಧಿವೇಶನವು ಈ ತಿಂಗಳು ೧೭ ನೇ ತಾರೀಖು ಶನಿವಾರ ಮಂಗಳೂರಿನಲ್ಲಿ ನಡೆಯುವುದು. ಬೆಂಗಳೂರಿನ ಗಲಭೆಗಳ ವಿಷಯಗಳು ಚರ್ಚಿಸಲ್ಪಡುವುವು.

ಶ್ರೀ ಪರ್ಣ ಯು ವ ರಾ ಜ ರು.

[illegible] ಮೈಸೂರಿಗೆ ಈ ತಿಂಗಳು ೧೭ ಅಥವ ೧೮ನೇ ತಾರೀಖಿನಲ್ಲಿ ದಯಮಾಡಿಸುವರೆಂದೂ ವರ್ತ[illegible]

ವಿವಿಧ ವಿಷಯ.

[illegible] ಸಭೆ ಜರುಗಿತು. [illegible] ಮಾತಾಡಿದಾಗ—ನೀನು ಧರ್ಮ ದ್ರೋಹಿ! ಆತ್ಮವನ್ನು ಮಾರಿರುವಿ!—ಎಂದು ಮೊದಲಾಗಿ ಸ್ವಧರ್ಮ ಭ್ರಾಂತರು ಬೊಬ್ಬೆಯೆಬ್ಬಿಸಲು ಉಪಕ್ರಮಿಸಿದರು. ಆ ಮಧ್ಯದಲ್ಲಿ "ಹಿಂದುಸ್ಥಾನ ಟೈಮ್ಸ್" ಎಂಬ ಪತ್ರಿಕೆಯ ಪ್ರತಿನಿಧಿ (ಹಿಂದು) ಯು ಆ ಮುಸಲ್ಮಾನರ ದೃಷ್ಟಿ ಪಥಕ್ಕೆ ಬಿದ್ದುದೇ ತಡ. ಅವನಮೇಲೆ ಕೆಲವು ಪುಂಡರು ಹಾರಿಬಿದ್ದರು. ಅವನ ಪ್ರಾಣರಕ್ಷಣೆ ಮಾಡುವುದು ಉಳಿದವರಿಗೆ ಕಷ್ಟವಾಯಿತು. ಡಾ|| ಅನ್ಸಾರಿ, ಅಸಫ್ ಆಲಿ, ಮೊದಲಾದ ಮುಖಂಡರು ಸುತ್ತುಗಟ್ಟಿ ನಿಂತು ಹೇಗೂ ಅವನನ್ನು ಉಳಿಸಿದರು. ಕೊನೆಗೆ ಈ ವ್ಯಾಜ್ಯವು ಈಗ ನ್ಯಾಯಸ್ಥಾನವನ್ನು ಮುಟ್ಟಿರುತ್ತದೆ.

ನಮ್ಮ ಶಾಲೆಗಳೊಳಗೆ ರಾಜಕೀಯ ವಿಷಯವೆಂದರೆ ವಿಲಕ್ಷಣವಾದ ಅರ್ಥಕೊಡುತ್ತದೆ. ರಾಜಕೀಯ ವಿಷಯಗಳಲ್ಲಿ ವಿದ್ಯಾರ್ಥಿಗಳು ಬಾಯಿ ಹಾಕಬಾರದೆಂದು ಸರಕಾರದ ಸೂತ್ರ "ಇಂದಿನ ಸ್ಥಿತಿಗತಿಗಳ ಮಧ್ಯದಲ್ಲಿ ರಾಜಕೀಯ ವಿಷಯಗಳನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಅವಶ್ಯವಾಗಿ ಸೇರಿಸಬೇಕು. ಸಮಯ ಬಂದರೆ ಪುಸ್ತಕಗಳನ್ನು ಮೂಲೆಗೊತ್ತಿ ಸೇವಾರ್ಥ[illegible] ಹೋಗಬೇಕು." ಎಂದು ಡಾ|| ಷಾಹಿದುಲ್ಲಾ ಎಂಬುವರು ಬಂಗಾಳದ ಮುಸಲ್ಮಾನ ತರುಣ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಡಂಗುರ ಹೊಡೆದು ಸಾರಿದರು. ಕಳೆದ ಮಹಾ ಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಯೂನಿವರ್ಸಿಟಿಗಳೂ, ಶಾಲಾ ಕಾಲೇಜುಗಳೂ ಅನೇಕ ತರುಣರನ್ನು ಸಮರ ದೇವಿಗೆ ಬಲಿಕೊಟ್ಟವು. ಇಂಗ್ಲೆಂಡಿನಲ್ಲಿದ್ದು ನಿಷಿದ್ಧವಲ್ಲದೆ ಮೇಲೆ ನಮ್ಮ ವಿದ್ಯಾರ್ಥಿಗಳ ಮೇಲೆ [illegible]?

ಸೆನೆಟ್ ಮಿಾಟಿಂಗು

ಮ|| ರಾ|| ಸಿ. ಲಕ್ಷ್ಮಣೇಗೌಡರು-ಪ್ರೊಫೆಸರ್‌ಗಳು ನೋಟ್ಸನ್ನು ಬರೆಸುವ ವಾಡಿಕೆಯನ್ನು ತಪ್ಪಿಸಬೇಕೆಂದೂ ವಿದ್ಯಾರ್ಥಿಗಳಿಗೆ ೩ ತಿಂಗಳು ಬೇಸಿಗೆ ರಜಕೊಡುವುದು ಅನವಶ್ಯಕವೆಂದೂ ಠರಾವನ್ನು ತಂದಿರುವರು. ಮ|| ರಾ|| ಮಿರ್ಲೆ ಎಸ್. ಲಕ್ಷ್ಮೀನಾರಣಪ್ಪನವರು ತಂದಿರುವ ಠರಾವುಗಳು—ಕಾಲೇಜು ವಿದ್ಯಾರ್ಥಿಗಳಿಗೆ ಬಲಾತ್ಕಾರವಾದ ಮಿಲಿಟರಿ ಶಿಕ್ಷಣವನ್ನು ಕೊಡುವುದು. ಬೇಸಿಗೆ ರಜವನ್ನು ಕಡಿಮೆ ಮಾಡುವುದು. ಕ್ರಿಸ್‌ಮಿಸ್ ರಜಾವನ್ನು ಹೆಚ್ಚಿಸುವುದು, ಯೂನಿವರ್ಸಿಟಿ ವಾರ್ಷಿಕ ಪರೀಕ್ಷೆಯನ್ನು ಬೇಸಿಗೆಯಲ್ಲಿ ತಪ್ಪಿಸಿ ಕ್ರಿಸ್‌ಮಸ್ ರಜಾಕ್ಕೆ ಮುಂಚೆ ಇಡುವುದು. ಹಿಂದಿಯನ್ನು ಒಂದು ಐಚ್ಛಿಕ ಭಾಷೆಯಾಗಿ ಇಡುವುದು. ಕ್ಲಾಸುಗಳನ್ನು ಬೆಳಗ್ಗೆ ಮಾಡುವುದು. (ಬೇಕಾದರೆ ಮಧ್ಯಾಹ್ನವೂ ಕೂಡ) ಇಂಟರ್ ಕಲೀಜಿಯೇಟ್ ಡಿಬೇಟುಗಳನ್ನು ಕಾಲೇಜುಗಳಿರುವ ಸಾಲ್ಕು ಊರುಗಳಲ್ಲಿಯೂ ನಡೆಸುವುದು. ವರ್ಷಕ್ಕೊಂದಾವರ್ತಿ ಯೂನಿವರ್ಸಿಟಿವಾರವೊಂದನ್ನು ನಡಿಸಿ ಯೂನಿವರ್ಸಿಟಿಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಒಟ್ಟಿಗೆ ಕಲೆಯುವಂತೆ ಏರ್ಪಾಡು ಮಾಡುವುದು.

ಅಬ್ಬಾಸ್ ಖಾನರ ಪಾಟಿಸವಾಲು

ಬ್ರಾಹ್ಮಣ ಪಿತೂರಿ ವಿಷವಾಗಿ ಅಬ್ಬಾಸ್‌ಖಾನರಿಗೆ ಪಾಟೀಸವಾಲು ಹಾಕ ಕೂಡದೆಂದು ಛೀಫ್ ಕೋರ್ಟಿನಲ್ಲಿ ತೀರ್ಮಾನವಾಯಿತು.

ಅಬ್ಬಾಸ್ ಖಾನರ ಮೇಲೆ ಮಾನನಷ್ಟ.

[illegible]ಕೇಸರಿ ಸಂಪಾದಕರಾದ ಸೀತಾರಾಮಶಾಸ್ತ್ರಿಗಳು ಅಬ್ಬಾಸ್‌ಖಾನರಮೇಲೆ ಮಾನ ನಷ್ಟಕ್ಕಾಗಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹಾಕಿರುವರು. ಖಾನರು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಬ್ರಾಹ್ಮಣ ಸಮುದಾಯದ ಮೇಲೆಯೂ ತಮ್ಮ ಮೇಲೆಯೂ ಮಾನನಷ್ಟಕರವಾದ ಅಪಾದನೆಗಳನ್ನು ಮಾಡಿರುವರೆಂಬುದೇ ಕಾರಣ. ನ ಮಾರು ೧೫ ಸಾಕ್ಷಿಗಳನ್ನು ಕರೆಯುವದಾಗಿ ತಿಳಿದು ಬಂದಿದೆ.

ಮಹಮದೀಯರ ಶಿಕ್ಷಣ.

ಸರ್ ಗುಲಾಮ ಹುಸೇನ ಹಿದಾಯಿ ತುಲ್ಲಾರು ಪೂನಯಲ್ಲಿ ಸೇರಿದ ಶಿಕ್ಷಣ ಪರಿಷತ್ತಿನಲ್ಲಿ ಮುಸಲ್ಮಾನರನ್ನುದ್ದೇಶಿಸಿ ನುಡಿದುದೇನೆಂದರೆ—"ಮುಸಲ್ಮಾನರು ತಮ್ಮ ಮಾತೃಭಾಷೆಯನ್ನು ಕಲಿತರೂ ಆಯಾ ಜಿಲ್ಲೆಯ ಭಾಷೆಯನ್ನು ಚನ್ನಾಗಿ ಅರಿತುಕೊಳ್ಳಬೇಕು. ಮುಸಲ್ಮಾನರಿಗೆ ಪ್ರತ್ಯೇಕ ಶಾಲೆಗಳ ಅವಶ್ಯಕತೆಯಿಲ್ಲ. ಹಿಂದು ಮುಸಲ್ಮಾನರಿಬ್ಬರಿಗೂ ಸಾಮಾನ್ಯ ಶಾಲೆಗಳಿರುವದರಿಂದ ಹಿಂದೂ ಮುಸಲ್ಮಾನರಲ್ಲಿ ಐಕ್ಯವು ಬೆಳೆದು ಪರಸ್ಪರ ಸಹಾನುಭೂತಿ ವಿಶ್ವಾಸಗಳು ಬೆಳೆಯುತ್ತವೆ [illegible] ಅಪವ್ಯಯವೂ ಆಗುವದಿಲ್ಲ. ಮುಸಲ್ಮಾನ ಬಾಂಧವರು ಈ ಹಿತೋಪದೇಶವನ್ನು ಮನನ ಮಾಡುವುದು ಉಚಿತವಿದೆ' ಅಸೆಂಬ್ಲಿಯ ಅಧಿವೇಶನದಲ್ಲಿ ವೆಂಕಟಪ್ಪನವರ ಠರಾವನ್ನು ವಿರೋಧಿಸಿದ ಮಹಮದೀಯರು ಮೇಲಿನ ಮಾತುಗಳನ್ನು ಗಮನಕ್ಕೆ ತಂದುಕೊಳ್ಳುವರೆಂದು ನಂಬುತ್ತೇವೆ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮಿಾಟಿಂಗು ಈ ತಿಂಗಳು ಮೂರನೆ ತಾರೀಖಿನ ದಿವಸ ಡಿಲ್ಲಿಯಲ್ಲಿ ನಡೆಯಿತು. ನೆಹರೂ ಕಮಿಟಿಯವರ ವರದಿಗೆ ಒಪ್ಪಿಗೆಯು ದೊರೆಯಿತು. ಕಾಂಗ್ರೆಸ್ಸಿನ ಧ್ಯೇಯವು ಇಂಗ್ಲೇಡಿನಿಂದ ಹೊರಗಾದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದೇ ಆದರೂ ನೆಹರೂ ಕಮಿಟಿಯ ತೀರ್ಮಾನವು ನಮ್ಮ ದೇಶದ ರಾಜಕೀಯ ಪ್ರಗತಿ ಸಾಧಕವಾದುದೆಂದು ಠರಾವು ಮಾಡಲ್ಪಟ್ಟಿತು.

ಅಬ್ದುಲ್ ಅಜೀಜರ ಸಾಕ್ಷ್ಯ.

ಸುಲ್ತಾನ್‌ಪೇಟೆ ಸ್ಕೂಲಿನ ಮುಂದೆ ಇರುವ ಸೈಕಲ್ ಷಾಪಿನ ಪ್ರೊಪ್ರೈಟರಾದ ಅಬ್ದುಲ್ ಅಜೀಜ್‌ರವರು ತಾವು ಜುಲೈ 30 ನೇ ತಾರೀಖಿನ ದಿವಸ ಮೈಸೂರಿಗೆ ಬಂದಿದ್ದರೆಂದೂ ಗಲಾಟೆಯಾದಾಗ ತಾವು ಬೆಂಗಳೂರಿನಲ್ಲಿ ಇರಲಿಲ್ಲವೆಂದೂ ತಮಗೆ ರಿವಾಲ್ವರ್ ಲೈಸೆನ್ಸು ಇದೆಯೆಂದೂ ತಮ್ಮ ರಿವಾಲ್ವರನ್ನು ಅಂಗಡಿಯಲ್ಲಿಯೇ ಪೆಟ್ಟಿಗೆಯಲ್ಲಿ ಬೀಗಹಾಕಿ ಇಟ್ಟಿದ್ದರೆಂದೂ ಗಲಾಟೆಯಾದ ಮೇಲೆ 8, 10 ದಿವಸ ಅಂಗಡಿಯನ್ನೆ ತೆಗೆಯಲಿಲ್ಲವೆಂದೂ ತಮಗೂ ಅಬ್ಬಾಸ್‌ಖಾನರಿಗೂ ವಿಶೇಷ ಸ್ನೇಹವಿಲ್ಲವೆಂದೂ ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸಾಕ್ಷಿಯನ್ನು ಹೇಳಿದರು.

ತಾಯಿನಾಡು

9—11—1928

ಪತ್ರಿಕೆಗಳ ಬಹಿಷ್ಕಾರ

ಒಂದು ಸಂವಾದ

(ಒಂದು ಸ್ಕೂಲಿನಲ್ಲಿ ನಡದುದು.)

ವಿದ್ಯಾರ್ಥಿ; ಸಾರ್ ನಮ್ಮ ಸ್ಕೂಲಿಗೆ 'ತಾಯಿನಾಡು, ವಿಶ್ವಕರ್ಣಾಟಕ, ವೀರಕೇಸರಿ ಸಂಪದಭ್ಯುದಯ ಪತ್ರಿಕೆಗಳನ್ನು ತರಿಸಕೂಡದೆಂದು ಸರ್ಕಾರದವರು ಅಪ್ಪಣೆ ಮಾಡಿದಾರೆಯೆ? ಹಾಗೆಂದು ನಾನು ವೀರಕೇಸರಿಯಲ್ಲಿ ಓದಿದೆ. ನಿಜವೇ ಸಾರ್?

ಉಪಾಧ್ಯಾಯರು:— ಅದೆಲ್ಲ ನಿನಗ್ಯಾಕಯ್ಯ?

ವಿ:— ಏನ್ ಸಾರ್ ರೀಡಿಂಗ್ ರೂಮಿಗೆ ನಮ್ಮ ಕೈಲಿ ನೀವು ದುಡ್ಡು ವಸೂಲ್ ಮಾಡುವುದಿಲ್ಲವೇ?

ಉ:—(ಸ್ವಗತ) ಏನಪ್ಪಾ ಮಾಡುವುದು ಇದಕ್ಕೆ, ಈ ಪೀಕಲಾಟಕ್ಕೆ? ಇಲಾಖೆಯವರ ಸರ್ಕ್ಯುಲರ್ ಅನ್ನ ರಹಸ್ಯವಾಗಿ, ಎಂದು ಕಳುಹಿಸುವರು ಆದರೆ ಅದೆಲ್ಲಾ ಬಹಿರಂಗವೇ ಆಗಿಹೋಯಿತಲ್ಲಾ.

ವಿ:— ಏನ್ ಸಾರ್ ಸುಮ್ಮನೆ ಇದ್ದೀರಿ ಫೀಸ್ ಮಾತ್ರ ನಾವು ಕೊಡಬೇಕು. ಪೇಪರನ್ನ ಏತಕ್ಕೆ ತರಿಸಕೂಡದು ಎಂದು ನಾವು ಕೇಳೋದಿಕ್ಕಿಲ್ಲವೊ, ಇದು ಒಳ್ಳೆ ನ್ಯಾಯ ಸಾರ್?

ಉ:—ನಾನೇನಪ್ಪ ಮಾಡಲಿ ನಾನು ಸರ್ಕಾರಿ ನೌಕರ ಸರ್ಕಾರದವರು ಹೇಳಿದಹಾಗೆ ಕೇಳಬೇಕು, ನೀನು ಹೇಳಿದ್ದು ನಿಜ. ಇಲಾಖೆಯವರು ಆ ಪೇಪರುಗಳನ್ನು ತರಿಸಕೂಡದೆಂದು ಬರೆದಿದ್ದಾರೆ.

ವಿ;— ಕಾರಣವೇನ್ ಸಾರ್?

ಉ:— ಆ ಪತ್ರಿಕೆಗಳನ್ನು ಓದಿದರೆ ಹುಡುಗರ ಮನಸ್ಸು ಕೆಟ್ಟು ಹೋಗುತ್ತದೆಯಂತೆ.

ವಿ;— ಮನಸ್ಸು ಕೆಡುವುದೆಂದರೇನ್ ಸಾರ್.

ಉ;— ವಿದ್ಯಾರ್ಥಿಗಳು ದಂಗೇ ಕೋರರಾಗುವರೆಂದು ಅವರ ಅಭಿಪ್ರಾಯವಿರುವ ಹಾಗೆ ಕಾಣುತ್ತೆ.

ವಿ;— ಏನ್ ಸಾರ್ ನೀವು ಸ್ಕೂಲಿಗೆ ತರಿಸದೇ ಹೋದರೆ ನಾವು ಪಬ್ಲಿಕ್ ರೀಡಿಂಗ್ ರೂಮಿನಲ್ಲಿ ಓದಿಕೊಳ್ಳುತ್ತೇವೆ. ನಮ್ಮ ಮನೆಗೆ ತರಿಸಿಕೊಳ್ಳುತ್ತೇವೆ. ಅದಿರಲಿ ಸಾರ್. ನಮ್ಮ ದುಡ್ಡು ಈಸ್‌ಕೊಂಡು ನಮಗೆ ಬೇಕಾದ ಪತ್ರಿಕೆ ತರಿಸದೇ ಹೋದರೆ ನಾವು ನಿಮಗೆ ರೀಡಿಂಗ್ ರೂಮ್ ಫೀಸ್ ಯಾತಕ್ಕೆ ಕೊಡಬೇಕು.

ಉ;— ಮೇಲಕ್ಕೂ ಕೆಳಕ್ಕೂ ನೋಡುತ್ತಾರೆ.

ವಿ.— ನಾವು ವಿದ್ಯಾರ್ಥಿಗಳೆಲ್ಲಾ ಒಂದು ಮೀಟಿಂಗ್ ಮಾಡಿ ತೀರ್ಮಾನ ಮಾಡಿಕೊಳ್ಳುತ್ತೇವೆ. ನಿಮಗೆ ರೀಡಿಂಗ್ ರೂಮ್ ಫೀಸ್ ಕೊಡಬೇಕೊ ಬೇಡವೊ ಅನ್ನೋದನ.

ಉ:—(ಸ್ವಗತ) ಏನೋ ಮಾಡೋದು. ಹೋಗಿ ಎಸೋ ಮಾಡಿದ ಹಾಗಾಯಿತು. ನಮಗೇನು? ಮಾಡಿದವರು ಅನುಭವಿಸಲಿ.

ವಿ:— ಇದು ಪಕ್ಷಪಾತವಲ್ಲವೆ ಸಾರ್. ಸ್ಟಾರ್ ಆಫ್ ಇಸ್ಲಾಂ, ಕುರುಬರ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಇವುಗಳನ್ನೆಲ್ಲಾ ತರಿಸಬಹುದೋ ಆ ಪತ್ರಿಕೆಗಳೇನು ಸರ್ಕಾರದ ಮೊಮ್ಮಕ್ಕಳೇನು.

ಉ:— (ನಗುವನ್ನು ತಡೆಯುವರು),

ವಿ:— ಏನ್ ಸರ್ ನೀವು ಸುಮ್ಮನೆ ಇದ್ದೀರಿ.

ಉ:— (ಸ್ವಗತ) ಸಾಕಪ್ಪ ಈ ಸ್ಕೂಲು ಮೇಸ್ಟರ ಕೆಲಸ, ಈ ಗುಲಾಮ ಚಾಕರಿ.

ಬೆಂಗಳೂರಿನಲ್ಲಿ ನಾರ್ಮಲ್ ಸ್ಕೂಲಿನಿಂದ ಡಿಸ್ಮಿಸ್ ಆದ ಉಪಾಧ್ಯಾಯರೇ ಧನ್ಯರು, ಅವರು ಧನ್ಯರು. ಅವರು ಸ್ವತಂತ್ರರಾದರು.

ವಿ:—(ಸ್ವಗತ) ಈ ಮೇಷ್ಟ್ರು ಏನೂ ಹೇಳೊದಿಲ್ಲ. ಅವರಿಗೆ ಡಿಸ್ಮಿಸ್ ಆಗುತ್ತದೆ ಎಂದು ಭಯವೇನೊ, (ಮೇಷ್ಟ್ರಿಗೆ, ಕೈಮುಗಿದು ಹೋಗಿಬರುತ್ತೇನೆ ಸಾರ್' ಈ ವಿಷಯವನ್ನು ನನ್ನ ಕ್ಲಾಸ್ ಹುಡುಗರ ಕೂಡ ಚರ್ಚೆ ಮಾಡುತ್ತೇನೆ.

ಉ:— ಒಳ್ಳೇದು ಹೋಗಿಬಾಪ್ಪ.

ವರ್ತಮಾನ ಸಂಗ್ರಹ

ಅಬ್ಬಾಸ್ ಖಾನರ ಮೊಖದ್ದಮೆ

ಚೀಫ್‌ಕೋರ್ಟಿನಲ್ಲಿ ಅಬ್ಬಾಸ್‌ಖಾನರನ್ನು ವಿಚಾರಿಸಕೂಡದೆಂದು ತೀರ್ಮಾನವಾಯಿತಷ್ಟೆ, ಆದರೆ ಪುನಃ ಎಲ್. ಎಸ್. ರಾಜುರವರು ಫುಲ್ ಬೆಂಚಿಗೆ ಅಪೀಲ್ ಮಾಡಿರುವರೆಂದು ಕೇಳುತ್ತೇವೆ.

ವಿಶ್ವೇಶ್ವರಯ್ಯ ಕಮಿಟಿ

ವಿಶ್ವೇಶ್ವರಯ್ಯ ಕಮಿಟಿಯವರು ತಾ|| ೬-೧೧-೨೮ ರಲ್ಲಿ ತಮ್ಮ ವಿಚಾರಣೆಯನ್ನು ಮುಕ್ತಾಯಮಾಡಿದರು. ಅವತ್ತಿನ ದಿವಸ ಸಾಕ್ಷಿ ಕೊಟ್ಟವರು ಮ|| ಗಳಾದ ಎಸ್. ಎಸ್. ಸೆಟ್ಲೂರಾರವರು ಮತ್ತು ಸಿ. ಹಯವದನರಾಯರವರು. ಮ|| ಹಯವದನರಾಯರು ವರ್ತಮಾನಪತ್ರಿಕೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಪ್ರತಿಪಾದಿಸಿದರು.

ಕಲ್ಕತ್ತೆಯ ಕಾಂಗ್ರೆಸ್ಸು ಸರ್ವ ವಿಷಯಗಳಲ್ಲಿಯೂ ಮಹತ್ವವುಳ್ಳದ್ದಾಗಲು ಅಡ್ಡಿಯಿಲ್ಲ. ಈ ಸಲ ಹಿಂದೂ ದೇಶದ ಹೊರಗಿರುವ, ನಮ್ಮ ದೇಶಿಯರ ಆಕಾಂಕ್ಷೆಗಳಲ್ಲಿ ಸಹಾನು ಭೂತಿಯುಳ್ಳ ಪರದೇಶೀಯರಿಗೆ ಅಂದರೆ ಆಂಗ್ಲ ಪಾರ್ಲಿಮೆಂಟಿನ ಕೆಲವು ಸದಸ್ಯರಿಗೆ ಮಾತ್ರವಲ್ಲ. ಚೈನ, ಐಗುಪ್ತ, ಅರೇಬಿಯ, ಮೊದಲಾದ ಪ್ರದೇಶಗಳಲ್ಲಿಯ ಪ್ರಜಾಪಕ್ಷೀಯರಿಗೆ ಆಮಂತ್ರಣ ಹೋಗಿದೆ. ಇದು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಅಭೂತಪೂರ್ವವಾದುದೇ ಸರಿ.

ದಾಸಪ್ಪನವರು ಛತ್ರ ಸ್ಟಾರ್ ಪತ್ರಿಕೆ

ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಜಸ್ಟಿಸ್ ಬಿ. ಕೆ. ರಾಮಣ್ಣಾಯರು ಎಚ್. ಸಿ. ದಾಸಪ್ಪನವರನ್ನು ಸ್ಟಾರ್‌ಪತ್ರಿಕೆಯ ವಿಷಯವಾಗಿ ಪ್ರಶ್ನೆ ಮಾಡಿದರು.

ಪ್ರಶ್ನೆ:— ಪತ್ರಿಕೆಗಳ ವಿಷಯಪತ್ರಿಕೆಯಾಗ ನೀವು ಸ್ಟಾರನ್ನು ಏತಕ್ಕೆ ಬಿಟ್ಟುಬಿಟ್ಟಿರಿ. ನೀವು ನಿಷ್ಪಕ್ಷಪಾತವಾಗಿರಬೇಕು.

ಉತ್ತರ:— ನಾನು ಸ್ಟಾರನ್ನು ಓದುವುದೇ ಇಲ್ಲ. ನನಗೂ ಅದಕ್ಕೂ ಸಂಬಂಧವೇ ಇಲ್ಲ.

ಹಣವನ್ನು ಸೋಡಿದ್ದು

ಅಡ್ವೋಕೇಟುಗಳಾದ ಮ|| ರಾ|| ಎ. ಶ್ರೀನಿವಾಸರಾಯರೂ ಡಿ. ಶೇಷಾದ್ರಿ ಅಯ್ಯಂಗಾರ್ಯರವರೂ ಜುಲೈ ೩೧ ನೇ ಪ್ರಾತಃಕಾಲ ಸುಲ್ತಾನ್‌ಪೇಟೆ ಸ್ಕೂಲು ಮುಂಭಾಗದಲ್ಲಿ ಒಂದು ಹಿಂದೂ ಹಣವನ್ನು ನೋಡಿದವಾಗಿಯೂ ಆ ವಿಷಯವನ್ನು ಪೋಲೀಸಿನವರಿಗೆ ರಿಪೋರ್ಟು ಮಾಡಿದ್ದಾಗಿಯೂ ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸಾಕ್ಷ್ಯವನ್ನು ಹೇಳಿದರು.

ಎಲ್ಲಾ ಸುಳ್ಳು

ಮ|| ಬಿ. ನಾಗಪ್ಪನವರು ಎಲ್. ಎಸ್. ರಾಜುರವರ ಹೇಳಿಕೆಗೆ ಉತ್ತರವಾಗಿ ರಾಜುರವರು ಹೇಳಿದ್ದೆಲ್ಲಾ ಸುಳ್ಳು. ತಮಗೂ ಅಬ್ಬಾಸ್‌ಖಾನರಿಗೂ ಭೇಟಿಯೇ ಇಲ್ಲ. ಮಸಲತ್ತಿನ ಮಾತೇ ಇಲ್ಲ. ಕೆ. ಎಚ್. ರಾಮಯ್ಯನವರ ಮನೆಗೆ ಅವರ ಮನೆಯಲ್ಲಿ ಯಾರೋ ಖಾಯಿಲೆಯಾಗಿದ್ದುದರಿಂದ ಅವರ ದೇಹಸ್ಥಿತಿಯನ್ನು ವಿಚಾರಿಸುವುದಕ್ಕೆ ಹೋದೆ ಎಂಬುದಾಗಿ ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಸ್ಟೇಟ್‌ಮೆಂಟನ್ನು ಓದಿದರು. ಮ|| ರಾ|| ಗಳಾದ ಅಬ್ಬಾಸ್‌ಖಾನರು, ಕೆ. ನಾರಾಯಣಸ್ವಾಮಿ ಅಯ್ಯರ್‌ವರು ರಾಜುರವರು ಹೇಳಿದ್ದೆಲ್ಲಾ ಸುಳ್ಳು ಎಂದು ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಕಾಗದವನ್ನು ಬರೆದಿರುವರು. ಎಲ್. ಎಸ್. ರಾಜುರವರು ಬಿ. ನಾಗಪ್ಪನವರಿಗೆ ಉತ್ತರವಾಗಿ ನನ್ನನ್ನು ನಾಗಪ್ಪನವರೇ ಪಾಟಿ ಸವಾಲು ಮಾಡಿದ್ದರೆ ಎಲ್ಲವೂ ಹೊರಬೀಳುತ್ತಿದ್ದವು. ಹಾಗೆ ಮಾಡದೆ ನನ್ನ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟಿರುವುದು ವಿಷಾದಕರವಾಗಿದೆ ಎಂದು ಹೇಳಿದರು.

ಉಪನ್ಯಾಸ

ವೇದಮೂರ್ತಿ ಹೊಳವನಹಳ್ಳಿ ಶೇಷಾಚಾರ್ಯರವರು ಈ ತಿಂಗಳು ೮ ನೇ ತಾ|| ಲಾಗಾಯ್ತು ಸಂಸ್ಕೃತ ಪಾಠಶಾಲೆಯಲ್ಲಿ ಭಗವದ್ಗೀತೆ ವಿಚಾರವಾಗಿ ನಾಲ್ಕು ಉಪನ್ಯಾಸಗಳನ್ನು ಮಾಡುವರು.

ಮೈಸೂರಿನ ಸೆನೇಟ್ ಮೀಟಿಂಗ್

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೀಟಿಂಗ್ ಈ ತಿಂಗಳು ೨೨ ನೇ ಪ್ರಾತಃಕಾಲ ೮|| ಗಂಟೆಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನಡೆಯುವುದು

TAI NADU (Daily Edition.)

The Leading Nationalist Daily of Mysore.

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co
   Excelsior Type-writing Institute, Balepet, Bangalore City
2. Koppada Ramakrishniah, Agent, Hassan.
3. Siddiah, Sri Nanjandeswara Bank Ltd Nanjangud.
4. M. N. S & Sons, Lansdowne Buildings, Mysore.
5. B V Pundit & Co, Lakshmivilas Road, Mysore.
6. Friends' Union, Mysore.
7. Sweet Mart, Lansdowne Buildings, Mysore.

Printed and published by P. R. Ramaiya at Sri Rama Press, D. Subbiah Road, Mysore.

Regd. No. M. 2322 || ವಂದೇಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ: ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಶನಿವಾರ ೧೦ ನವಂಬರ್ ೧೯೨೮ [ಸಂಚಿಕೆ ೬೯

ಸಿಟಿ ಕೋಆಪರೇಟಿವ್ ಬ್ಯಾಂಕ್

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಆರ್ಡಿನರಿ ಜನರಲ್ ಮೀಟಿಂಗು ಈ ಮಾಹೆ 11 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಮೈಸೂರು ಲ್ಯಾನ್ಸ್‌ಡೌನ್ ಬಜಾರ್ ವೇಲ್ಲಾಗದಲ್ಲಿರುವ ಶಾರದಾವಿಲಾಸ ಹೈಸ್ಕೂಲಿನಲ್ಲಿ ನಡೆಯುತ್ತದೆ ಯಾದ್ದರಿಂದ ಮೆಂಬರುಗಳೆಲ್ಲರೂ ಕಾಲಕ್ಕೆ ಸರಿಯಾಗಿ ಸಭಾಸ್ಥಲಿಗೆ ದಯಮಾಡಿಸಬೇಕಾಗಿ ಕೋರಿಧೆ.

Y. Chandrasekhara Sastry
Honorary Secretary,
C. C. Bank Ltd.
Mysore.

TAI NADU
10—11—1928

ಪಾದ್ರೀ ಪತ್ರಿಕೆಯ ಕುಚೇಷ್ಟೆ.

ಈ ತಿಂಗಳು ೮ ನೇ ತಾರೀಖಿನ ವೃತ್ತಾಂತ ಪತ್ರಿಕೆಯ ೨ ನೇ ಪುಟದಲ್ಲಿ ಈಜಿಪ್ಟ್ ದೇಶದ ವರ್ತಮಾನ ಪತ್ರಿಕೆಗಳ ವಿಷಯವಾಗಿ ಒಂದು ಲೇಖನವು ಇರುವುದು. ಆ ಲೇಖನಕ್ಕೆ ಈಗ ಕಾರಣವೇನಿರುವುದೋ ನಮಗೆ ಗೊತ್ತಿಲ್ಲ. ಈಜಿಪ್ಟ್ ಸರ್ಕಾರದವರು ಆ ದೇಶದ ಕೆಲವು ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ವರ್ತಿಸಿರುವಂತೆಯೇ ನಮ್ಮ ಮೈಸೂರು ಸರ್ಕಾರದವರೂ ಇಲ್ಲಿನ ಪತ್ರಿಕೆಗಳೊಡನೆ ವರ್ತಿಸಬೇಕೆಂಬುದು ಈ ಪಾದ್ರೀ ಪತ್ರಿಕೆಯ ಉದ್ದೇಶವೋ ಏನೋ ಗೊತ್ತಿಲ್ಲ. ಈಜಿಪ್ಟ್ ದೇಶದ [illegible] ವೃತ್ತಾಂತ [illegible] ಪತ್ರಿಕೆಗಳು [illegible] ನಮ್ಮ ಮೈಸೂರಿನಲ್ಲಿರುವುದು [illegible] ಸರ್ಕಾರವಲ್ಲ. ಶ್ರೀಮನ್ಮಹಾರಾಜರ [illegible] ಈಜಿಪ್ಟ್ ಸರ್ಕಾರದ ಕ್ರಮವನ್ನು ಮೈಸೂರಿನಲ್ಲಿ ಅನುಸರಿಸುವುದು ಅನುಚಿತ. ಬ್ರಿಟಿಷ್ [illegible] ಸರ್ಕಾರದವರು ಕೂಡಾ ಪತ್ರಿಕೆಗಳು [illegible] ವಿರೋಧವಾಗಿ ಬರೆದರೂ, ಪತ್ರಿಕಾ ಕಾನೂನಿನಿಂದ ಅವುಗಳನ್ನು ನಿಲ್ಲಿಸುವುದಿಲ್ಲ. ಕೋರ್ಟಿನಲ್ಲಿ ವಿಚಾರಣೆ ನಡಿಸಿ ತಪ್ಪಿತಸ್ಥರೆಂದು ಕಂಡುಬಂದ ಮೇಲೆ ಪತ್ರಿಕೆಗಳನ್ನು ಶಿಕ್ಷಿಸುತ್ತಾರೆ. ಪಾದ್ರೀ ಪತ್ರಿಕೆಯು ಬರೆಯುವುದನ್ನು ನೋಡಿ!

“ವರ್ತಮಾನ ಪತ್ರಿಕೆಗಳಿಗೆ ಸಂಬಂಧಪಟ್ಟ ಒಂದು ಕಾನೂನು ಈಜಿಪ್ಟಿನಲ್ಲಿ ಜಾರಿಗೆ ಬಂದಿರುತ್ತದೆ. ವಿರೋಧಪಕ್ಷದ ನಾಯಕರೂ ಕೂಡ ಹಿಂದೆ ಇದಕ್ಕೆ ಒಪ್ಪಿರುತ್ತಾರೆ. ಈ ಕಾನೂನಿನ ಮೇರೆಗೆ ಗೌರ್ನಮೆಂಟಿನವರು ನೆಮ್ಮದಿಗೆ ಭಂಗವನ್ನುಂಟುಮಾಡುವ ವರ್ತಮಾನ ಪತ್ರಿಕೆಗಳ ಮೇಲೆ ಕೋರ್ಟಿನಲ್ಲಿ [illegible] ಅಧಿಕಾರದಿಂದ ಅಂಥ ವರ್ತಮಾನ ಪತ್ರಿಕೆಗಳನ್ನು ನಿಲ್ಲಿಸಬಹುದು. [illegible] ಗೌರ್ನಮೆಂಟಿನವರಿಗೆ [illegible] ವಾಗಿ [illegible] ಪಕ್ಷದವರು [illegible] ಅಂಥ ವಿಚಾರಣೆ [illegible] ಪತ್ರಿಕೆಯ [illegible] ಅವು [illegible] ಕೋರ್ಟಿನಲ್ಲಿ [illegible] ಕಾನೂನಿನಂತೆ [illegible]

ವಲ್ಲಿ ಗೌರ್ನಮೆಂಟಿಗೆ ವಿರೋಧವಾಗಿ ದೀರ್ಘವಾದ ಭಾಷಣಗಳನ್ನು ಮಾಡುತ್ತಾ ಬರುವರು. ಇಂಥ ಭಾಷಣಗಳು ಎಲ್ಲಾ ವರ್ತಮಾನ ಪತ್ರಿಕೆಗಳಲ್ಲೂ ಪ್ರಕಟಿಸಲ್ಪಡುವುವು ಕಡೆಗೆ ಇದರ ಪರಿಣಾಮವು ಮೊದಲಿಗಿಂತ ಕೇಡೇ ಆಗುವುದು. ಈ ಕಾರಣದಿಂದ ಈಜಿಪ್ಟ್ ಗೌರ್ನಮೆಂಟಿನವರು ತಮ್ಮ ಅಧಿಕಾರವನ್ನು ಚಲಾಯಿಸಿ ನೆಮ್ಮದಿಗೆ ಭಂಗವನ್ನುಂಟುಮಾಡುವ ವರ್ತಮಾನ ಪತ್ರಿಕೆಗಳನ್ನು ನಿಲ್ಲಿಸಿಬಿಡುವುದೇ ವಿವೇಕವೆಂದು ಮುಂದಟ್ಟು ಮಾಡಿಕೊಂಡು ಅದರಂತೆ ಅಪ್ಪಣೆಮಾಡಿರ ತ್ತಾರೆ.

ಬ್ರಿಟಿಷ್ ಜನಗಳ ಪ್ರಜಾ ಸ್ವಾತಂತ್ರ್ಯ ಧರ್ಮಗಳನ್ನು ಬೋಧೆ ಮಾಡುವುದಕ್ಕೆ ಬದಲಾಗಿ ಪ್ರಜಾಸ್ವಾತಂತ್ರ್ಯಕ್ಕೆ ಕುಠಾರ ಪ್ರಾಯವಾದ ವರ್ತಮಾನ ಪತ್ರಿಕೆಗಳ ಕಾನೂನನ್ನು ಸಮರ್ಥಿಸುವ ಸಲಹೆಯನ್ನು ಕೊಡುವುದು ಪಾದ್ರಿಗಳ ಕುಲಕ್ಕೆ ಅವಮಾನಕರವು. ಪಾದ್ರೀ ಪತ್ರಿಕೆಯು ಪುರುಳಿಲ್ಲದ ಈ ಪ್ರಲೋಭದ ಮಾತುಗಳನ್ನು ಏತಕ್ಕೆ ಪ್ರಲಾಪಿಸುವುದೋ ನಮಗೆ ಗೊತ್ತಿಲ್ಲ.

ಲಿಖಿತ ವಾಙ್ಮೂಲಗಳು.

ಸರ್. ಎಂ. ವಿಶ್ವೇಶ್ವರಯ್ಯನವರು ಕಮಿಟಿಯ ಕಾರ್ಯ ಕಲಾಪಗಳನ್ನು ಮುಗಿಸುವುದಕ್ಕೆ ಪೂರ್ವಭಾವಿಯಾಗಿ ಕೊಟ್ಟ ಭಾಷಣದಲ್ಲಿ, ಬರೆದು ಓದಿದ ವಾಙ್ಮೂಲಗಳಿಗೆ ಅಷ್ಟು ಬೆಲೆಯನ್ನು ಕೊಡುವುದಿಲ್ಲವೆಂದೂ, [illegible]ವಾಗಿ ಪ್ರಶ್ನೆಮಾಡಿ ಬಂದ ಉತ್ತರಗಳಿಗೆ ಹೆಚ್ಚು ಬೆಲೆಯನ್ನು ಕೊಡುವುದಾಗಿಯೂ ಹೇಳಿದರು. ಬರೆದ ವಾಙ್ಮೂಲಗಳಲ್ಲಿ ಇದ್ದ ನ್ಯೂನತೆಗಳು ಯಾವುವು ಎಂಬುದು ಗೊತ್ತಿಲ್ಲ. ಅವುಗಳನ್ನು ಪೂರ್ತಿಯಾಗಿ ನಿರಾಕರಣೆ ಮಾಡುವುದು ಉಚಿತವೆಂದು ಹೇಳುವುದಕ್ಕಾಗುವುದಿಲ್ಲ. ಲಿಖಿತ ವಾಙ್ಮೂಲಗಳು ಬಹಳ ಯೋಚನೆ ಮಾಡಿ ಸಮಂಜಸವಾಗಿ ಬರೆಯಲ್ಪಟ್ಟಿರುವುವು. ಅವುಗಳಲ್ಲಿ ಬಹಳ ಬೆಲೆಯಾದ ವಿಷಯಗಳಿರುವುವು. ರುಜುವಾತಿಗೆ ಬರದ, ಸಮಂಜಸವಾಗದ ಭಾಗಗಳನ್ನು ನಿರಾಕರಿಸುವುದರಲ್ಲಿ ಆಕ್ಷೇಪಣೆಯಿಲ್ಲ. ತಾವು ಕೇಳಿದ ಪ್ರಶ್ನೆಗಳಿಗೇ ಬಂದ ಉತ್ತರಗಳಿಗೆ ಪ್ರಾಧಾನ್ಯ ಕೊಡುವೆವೆಂದು ಕಮಿಟಿಯವರು ಮೊದಲೇ ಹೇಳಿದ್ದರೆ ಸಾಕ್ಷಿಗಳು ಅದಕ್ಕೇ ಸಿದ್ಧವಾಗಿ ಬರುತ್ತಿದ್ದರು. ಸಾಕ್ಷಿಗಳೆಲ್ಲಾ ಮುಗಿದ ಮೇಲೆ ಈಗ ಲಿಖಿತ ವಾಙ್ಮೂಲಗಳಿಗೆ ತಾವು ಪ್ರಾಧಾನ್ಯವನ್ನು ಕೊಡುವುದಿಲ್ಲವೆಂದು ಹೇಳುವುದು ನ್ಯಾಯವಲ್ಲ. ಕಮಿಟಿಯವರು ಪುನಃ ಆಲೋಚನೆಮಾಡಿ ಲಿಖಿತ ವಾಙ್ಮೂಲಗಳಿಗೆ ಅವುಗಳಿಗೆ ಸಲ್ಲುವ ಬೆಲೆಯನ್ನು ಕೊಡುವರೆಂದು ನಂಬುತ್ತೇವೆ.

ದೇಶೀಯ ಸಂಸ್ಥಾನಗಳ ಪರಿಷತ್ತು

ದಕ್ಷಿಣ ದೇಶೀಯ ಸಂಸ್ಥಾನಗಳ ಪ್ರಜೆಗಳ ಒಂದು ಮಹಾಸಭೆಯು ನವಂಬರ್ ೧೧ ಮತ್ತು ೧೨ನೆಯ ತಾರೀಖುಗಳಲ್ಲಿ ತಿರುವಾಂಕೂರಿನಲ್ಲಿ ತಿರುವನಂತಪುರದಲ್ಲಿ ನಡೆಯಲಿರುವುದು. ದಕ್ಷಿಣದೇಶದ ಎಲ್ಲಾ ದೇಶೀಯ ಸಂಸ್ಥಾನಗಳ ಪ್ರಜಾಮುಖಂಡರೂ ಮಹಾಸಭೆಯಲ್ಲಿ ಭಾಗಿಗಳಾಗುವ ಸಂಭವವಿರುವುದು. ನೆಹರೂ ಕಮಿಟಿಯ ವರದಿ, ಬಟ್ಲರ್ ಕಮಿಟಿಯವರ ಮತ್ತು ಸೈಮನ್ ಕಮಿಷನ್ ಇವುಗಳ ಪರಿಣಾಮವಾಗಿ ಭರತಖಂಡದ ರಾಜ್ಯಾಡಳಿತದಲ್ಲಿ ಕೆಲವು ಮಾರ್ಪಾಡುಗಳಾಗುವವಷ್ಟೆ; ಆಗ

ಕೈಗೆ ಬಂದದ್ದು ಬಾಯಿಗೆ ಇಲ್ಲ.

ಸೈಮನ್ ಕಮಿಟಿಯವರನು ಪೂನಾಪಟ್ಟಣದಲ್ಲಿದ್ದಾಗ ಅವರನ್ನು ಉಪಾಹಾರಾದಿಗಳಿಂದ ಸತ್ಕರಿಸುವದಕ್ಕೋಸ್ಕರ ಖಾನ್ ಬಹದ್ದೂರ್ ಮ|| ಜಾನ್ ಮಹಮದ್ ಎಂಬ ಮಹಮ್ಮದೀಯ ಪ್ರಮುಖರು ಪೂನಾಪಟ್ಟಣದ ಎಂಪ್ರೆಸ್ ಗಾರ್ಡನ್ ಎಂಬ ಉದ್ಯಾನವನದಲ್ಲಿ ಒಂದು ದೊಡ್ಡ ಮಂಟಪವನ್ನು ಕಟ್ಟಿಸಿ ಸುಮಾರು ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಾನಾ ವಿಧವಾದ ಭಕ್ಷ್ಯಭೋಜ್ಯಗಳನ್ನೂ ಆಸನಗಳನ್ನೂ ಏರ್ಪಡಿಸಿದ್ದರು. ಸಕಲವಾದ್ಯ ವೈಭವದೊಡನೆ ಅತಿಥಿಗಳು ಮಂಟಪವನ್ನು ಪ್ರವೇಶಿಸಿದಕೂಡಲೆ ಗುಡುಗು ಮಿಂಚು ಬಿರುಗಾಳಿಗಳಿಂದೊಡಗೂಡಿದ ಪ್ರಚಂಡ ಮಳೆಯು ಸುರಿದು ಅತಿಥಿಗಳನ್ನೆಲ್ಲಾ ಸ್ನಾನಮಾಡಿಸಿಬಿಟ್ಟಿತು. ಕೂಡಲೆ ಅತಿಥಿಗಳು ದಿಕ್ಕುದಿಕ್ಕಿಗೆ ಓಡಲಾರಂಭಿಸಿದರು. ಸ್ವಲ್ಪಹೊತ್ತಿನಲ್ಲಿ ಮಂಟಪವು ಮುರಿದು ಬಿದ್ದು 3-4 ಜನರು ಅಪಾಯಕ್ಕೆ ಗುರಿಯಾದರು.

ಭರತಪುರದ ರಾಜರು

ಭರತಪುರದ ಮಹಾರಾಜರನ್ನು ಅವರ ಅಧಿಕಾರದಿಂದ ತಪ್ಪಿಸಿರುವ ಬಳಿಕ, ಸರಕಾರವು ಅವರಿಗೆ ಪೆನ್ಶನನ್ನು ಕೊಡಲು ಶಿಫಾರಸು ಮಾಡಿರುವುದು. ‘ಪ್ರಜೆಗಳು ದುಃಖದಿಂದ ಕಂಗೆಟ್ಟು ನರಳುವಾಗ, ಅವರ ಸುಖವೃದ್ಧಿಗಾಗಿ ಸೇರುವ ಕಂದಾಯದಿಂದ ನನಗೇನೂ ಪೆನ್ಶನು ಬೇಕಾಗಿಲ್ಲ. ನಾನೇ ದುಡಿದು ಜೀವಿಸುವೆನು. ನನ್ನ ಪ್ರಜೆಗಳೇ ಸೇರಿ, ಸ್ವೇಚ್ಛೆಯಿಂದ ನನಗೆ ಹಣಕೊಡಲೊಪ್ಪಿದರೆ ಮಾತ್ರ ಸ್ವೀಕರಿಸುವೆನು.’ ಎಂದು ಮಹಾರಾಜರೆನ್ನುವರು. ಮಹಾರಾಜರು ಪದಚ್ಯುತರಾದರೂ ಪೆನ್ಶನು ಅಂಗೀಕರಿಸುವುದಕೊಪ್ಪಿ ಗೌರವಚ್ಯುತರಾಗಿಲ್ಲ. ಅವರ ರಾಜ್ಯದಲ್ಲಿ ಊಟಕ್ಕಿಲ್ಲದೆ, ಬಟ್ಟೆಗಿಲ್ಲದೆ ಸಾವಿರಾರು ಜನರು ನರಳುವಾಗ, ಸ್ವಕಷ್ಟದಿಂದಲಾದರೂ ಜೀವಿಸಿ ಗೌರವವನ್ನು ಕಾಪಾಡಿಕೊಳ್ಳುವೆನೆಂದು ಅವರು ಹೇಳಿ, ವಿಲಾಯತೀ ಭ್ರಮಣದಿಂದ ಬಡ ಪ್ರಜೆಗಳ ಹಣವನ್ನು ಧ್ವಂಸಮಾಡುವ ಇತರ ಜಮೀನ್ದಾರರಿಗೆ ಮಾರ್ಗದರ್ಶಕರಾಗಿರುವರು. ಇತ್ತ ಸಭಾ ಮಹಾರಾಜರ ಪೆನ್ಶನನ್ನು ಸರಕಾರವು ೨೦ ೦೦೦ ದಿಂದ ೫೪೦೦ ಕ್ಕೆ ಇಳಿಸಿರುವುದೆಂದೂ ತಿಳಿದುಬರುತ್ತದೆ. ಇವರೂ ಅದನ್ನು ತಿರಸ್ಕರಿಸಿದ್ದರೆ ಲೇಸಾಗುತ್ತಿದ್ದಿತು. ಯಾವನೊಬ್ಬ ಬ್ರಾಹ್ಮಣನ ಪೂಜಾ ಧೇನುವಾದ ದನವನ್ನೊಬ್ಬನು ಅಪಹರಿಸಿ. ಅದನ್ನು ಕೊಂದು, ಅದರ ಚರ್ಮದಿಂದ ಪಾಪೋಸನ್ನು ತಯಾರಿಸಿ ಅದನ್ನೇ ಬ್ರಾಹ್ಮಣನಿಗೆ ದಾನವನ್ನು ಕೊಡಲು ಮುಂದೆ ಬಂದಿದ್ದ ಹಿಂದಣಕಥೆಯು ನೆನಪಾಗುತ್ತದೆ. —ಶಂಠೀರವ

ಬ್ರಿಟೀಷ್ ಇಂಡಿಯಾಕ್ಕೂ ದೇಶೀಯ ಸಂಸ್ಥಾನಗಳಿಗೂ ಇರಬೇಕಾದ ಸಂಬಂಧವನ್ನು ಕುರಿತು ಚರ್ಚಿಸುವುದೇ ಮಹಾಸಭೆಯ ಉದ್ದೇಶ. ತಿರುವಾಂಕೂರ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾದ ಮ|| ಪಿ. ಕೆ. ನಾರಾಯಣಪಿಳ್ಳೆಯವರು ಸ್ವಾಗತಸಮಿತಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಸಭೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಲು ಸಮ್ಮತಿಸಿರುತ್ತಾರೆಂದು ವರ್ತಮಾನ.

ತಾಯಿನಾಡು
10—11—1928

ಅಸೆಂಬ್ಲಿ

ಒಂದು ಸಂವಾದ.

(ಸ್ಥಳರಾಜಧಾನಿಯ ನಿಷಾತ್‌ಜಾಗು)

ಚಂದ್ರಶೇಖರಯ್ಯ:— ಏನ್ರಿ ಕಾಮಣ್ಣೋರೇ ಈ ಸಲ ಅಸೆಂಬ್ಲಿ ಹೇಗಿತ್ತು?

ಕಾಮಣ್ಣೋರು:—ತಮ್ಮ ಸರಿಗೆ ರುಮಾಲನ್ನು ಕೆಳಗೆ ತೆಗೆದಿಟ್ಟು ಬೆವರನ್ನು ಒರಸಿಕ್ಕೊಂಡು ಸಶ್ಯವನ್ನು ಏರಿಸಿ ಅಂದರು.

ಚಂ:—ಅಸೆಂಬ್ಲಿ ಹೇಗಿತ್ರೀ?

ಕಾ:—ಹೇಗಿತ್ತೇನು? ನಿಮಗೆ ಗೊತ್ತಿಲ್ಲವೋ!

ಚಂ:—ನನಗೆ ಗೊತ್ತಿರೋದಿರಲ್ಲಿ, ನೀವು ಮೆಂಬರಾಗಿ ಹೋಗಿದ್ದವರು ಏನು ಹೇಳುತ್ತೀರೋ ಅಂತ ಕೇಳಿದೆ.

ಕಾ:—ಸುಮ್ಮನೆ ನಮಗೆ ಅವಮಾನ ಮಾಡೋಕೆ ನನ್ನ ಕೇಳ್ತೀರ ಅಂತ ಕಾಣುತ್ತೆ.

ಚಂ:—ಅವಮಾನ ಅಂತ ಈವತ್ತು ಗೊತ್ತಾಯ್ತೋ ನೋ. ಪತ್ರಿಕೆಗಳನ್ನೆಲ್ಲಾ ಒಯ್ಸಿ ತಾವೂ ಒಯ್ಸಿಕ್ಕೊಂಡು ಅಲ್ಲಿ ಮೊಟ ಹೊತ್ತುಕೊಂಡು ಹೇಗೆ ಕೂತಿದರೋ. ಮೆಂಬರು ಅಂದರೆ ಭೂಪ ಹಾಗಿರಬೇಕು, ನರಸಿಂಗರಾಯರಂತೆ. ಅನ್ಯೋವನ್ನೆಲ್ಲಾ ಅನ್ನಿಸಿಕೊಂಡು ಅಲ್ಲಿ ಕೂತಿರೋದೆ. ಯಾಕೆ ರಾಜಿನಾಮೆ ಕೊಟ್ಟು ಬಾರಾದು?

ಕಾ:—ನೀವೆಲ್ಲಾ ಈಗಿನ ಕಾಲದ ಹುಡುಗರಪ್ಪ ನಾನಿಪ್ಪತ್ತು ಮೂವತ್ತು ವರ್ಷದಿಂದ ಮೆಂಬರಾಗಿದ್ದೆ. ಆದರೆ ಈಸಲದಷ್ಟು ಯಾವಾಗಲೂ ನಾಚಿಕೆಗೆಟ್ಟಿರಲಿಲ್ಲ. ನಾವೇನು ಮಾಡೋದು ಕಾಲ ಕೆಟ್ಟುಹೋಯ್ತು.

ಚಂ:—ಕಾಲಾ ಯಾತಕ್ಕೆ ಕೆಟ್ಟಿತು? ಜನಗಳಿಗೆ ಗಂಡಸ್ತನಯಿಲ್ಲಾ. ಅನ್ಯಾಯಮಾಡಿದವರನ್ನ ಅನ್ಯಾಯ ಮಾಡಿದಿರಿ ಅಂತ ಹೇಳೋ ಧೈರ್ಯ ಇಲ್ಲಾ. ತಾವು ಅವರು ಹೇಳೋ ಹಾಗೆ ಕಪಾಲಕ್ಕೊಡದೆ ಅವರೋದಕ್ಕೂ ನಿಮಗೆ ಧೈರ್ಯವಿಲ್ಲಾ. ನಿಮ್ಮಂತಹವರು ಮೆಂಬರಾಗಿಹೋಗಿ ಅಲ್ಲಿ ಮಾಡೋದೇನು? ಪತ್ರಿಕೆಗಳನ್ನೆಲ್ಲಾ ಅಸೆಂಬ್ಲಿಲಿ ವಾಚಮಗೋಚರವಾಗಿ ಅನ್ಯಾಯವಾಗಿ ಬಯ್ತಾಯಿದ್ರೆ ನೀವೆಲ್ಲಾ ಬಳೆ ತೊಟ್ಟುಕೊಂಡವರ ಹಾಗೆ ನೋಡುತ್ತಾ ಕೂತಿರೋದೇನ್ರಯ್ಯಾ? ಯಾವನಾದರೂ ಒಬ್ಬನಾದರೂ ಎದ್ದು ಪತ್ರಿಕೆಗಳನ್ನು ಬಯ್ಯೋದು ಶುದ್ಧ ಅನ್ಯಾಯ. ಸರ್ಕಾರದವರು ಮಾಡಿರೋದರಲ್ಲಿ ಬಹಳ ತಪ್ಪಿದೆ. ಎಂದು ಒಬ್ಬ ನಾದರೂ ಒದ್ದು ಹೇಳಬಾರದಾಗಿತ್ತೆ? ನೀವೆಲ್ಲಾ ಹೀಗಿ ರೋದರಿಂದಲೇ ನಮ್ಮ ದೇಶದ ಸ್ಥಿತಿ ಹೀಗಾಯ್ತು.

ವಿವಿಧ ವಿಷಯ.

ಅಫಘಾನಸ್ಥಾನದ ನವಸುಧಾರಣೆಗಳು.

ಅಫಘಾನದ ಅಮೀರರಾದ ಅಮನುಲ್ಲಾ ರವರು ಕಳೆದ ತಿಂಗಳು ಆದಿಯಲ್ಲಿ ಅಫೀಸರರ ಸಭೆ ಕೂಡಿಸಿ, ತನ್ನ ರಾಜ್ಯದ ಸುಧಾರಣೆಯ ಸಲುವಾಗಿ ಮಾಡಬೇಕಾದ ವಿಷಯಗಳನ್ನು ನಿರ್ಣಯಿಸಿರುವರು. ಸೈನ್ಯಕ್ಕೆ ಒಂದು ಪ್ರತ್ಯೇಕ ಕೋಶಗೃಹ, ವಿದ್ಯಾರ್ಥಿಗಳು ತಮ್ಮ ವಿದ್ಯಾಶಿಕ್ಷಣೆಯನ್ನು ಮುಗಿಸಿದ ತರುವಾಯ ಒಂದು ವರುಷ ಮಿಲಿಟರಿ ಶಿಕ್ಷಣೆಯನ್ನು ಹೊಂದಬೇಕು. ಯುದ್ಧದ ಸಮಯದಲ್ಲಿ ಅವರು ಎದುರಿಗೆ ಬರಬೇಕಾಗುವುದು. ಸ್ವದೇಶಿ ಮತ್ತು ವಿದೇಶಿ ಸೈನಿಕರಿಗೆ ಏಕ ರೀತಿ ಸಂಬಳವಿರಬೇಕು. ಎಣ್ಣೆ ಗಣಿಯ ಕೆಲಸ ಕಲಿಯುವದಕ್ಕಾಗಿ ೧೫೦ ಹುಡುಗರನ್ನು ಬಾಕು ಎಂಬಲ್ಲಿಗೂ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸಲುವಾಗಿ ಕೆಲವು ಸಾವಿರ ಯುವಕರನ್ನು ಇಂಗ್ಲಾಂಡಿಗೂ ಕಳುಹಿಸಿಕೊಡಬೇಕು. ವಿದೇಶಗಳೊಂದಿಗೆ ಟೆಲಿಗ್ರಾಫ್ ಪ್ರಾರಂಭಿಸಬೇಕು. ಟೆಲಿಗ್ರಾಫಿಗಾಗಿ ಮಂದ ಕಂಬಗಳನ್ನು ಉಪಯೋಗಿಸಬೇಕು. ಹೆಟ್ಟಣಿಗರು ಶಾರೀರಕ ಶಿಕ್ಷಣೆಯನ್ನು ಕೈಕೊಳ್ಳಲೇಬೇಕು. ಔದ್ಯೋಗಿಕ ಶಾಲೆಗಳನ್ನೂ, ವೈದ್ಯಶಾಲೆಗಳನ್ನೂ ಸ್ಥಾಪಿಸಿ, ಅಲ್ಲಿ ತುರ್ಕಿ ಭಾಷೆಯನ್ನು ಮುಖ್ಯ ಭಾಷೆಯನ್ನಾಗಿ ಮಾಡಬೇಕು. ಇಲ್ಲಿ ಪ್ರಥಮ ಚಿಕಿತ್ಸೆಯ ಪಾಠಗಳನ್ನು ಕಲಿಸಬೇಕು. ರಾಜಕೀಯ ವಿಷಯಗಳನ್ನು ಕಲಿಸುವ ಶಾಲೆಯನ್ನು ತೆಗೆಯಬೇಕು. ಈಗಿನ ಪೋಲೀ ಕೆಂಪು ಉಡಿಗೆಯನ್ನು ತೆಗೆದುಹಾಕಿ ಹೊಸರೀತಿಯ ಉಡಿಗೆಯನ್ನು ಅವರಿಗೆ ಒದಗಿಸಬೇಕು. ಮುನಿಸಿಪಾಲಿಟಿಗಳಲ್ಲಿಯ ಅಶಿಕ್ಷಿತ ಹುದ್ದೇದಾರರನ್ನು ತಾನು ಸ್ವತಹ ವಿಚಾರಿಸಿ, ಅವರನ್ನು ಕೆಲಸದಿಂದ ನಿವೃತ್ತಪಡಿಸುವ ಕೆಲಸವನ್ನು ಅಮೀರರು ಸ್ವತಹ ವಹಿಸಿಕೊಂಡಿರುವರು.

ತೋಳದಂತೆ ಗೂಡಿನಲ್ಲಿ ಸಾಕಬೇಕಾದ ಒಂದು ಪಶುಲಕ್ಷಣದ ಕ್ರೂರ ಬಾಲಿಕೆಯೊಬ್ಬಳು ಲಂಡನ ಬಳಿ ವಿಲೆಸಡನ್ನಿನಲ್ಲಿರುವಳು.

ಕಾ:—ಏನಪ್ಪಾ ನಿಮಗೆ ಹೇಳೋದು ಈಸಾರಿ ಪಸೋ ಆಗಿಹೋಯ್ತು. ಇನ್ನು ಮುಂದೆ ನಾನು ಸಭೆಗೆ ನಿಲ್ಲೋದಿಲ್ಲಾ. ನಿಮ್ಮಂತಹ ಬಿಸಿ ರಕ್ತವುಳ್ಳ ತರುಣರಾದರೂ ಹೋದರೆ ಸ್ವಲ್ಪ ವಾಸಿ. ಆ ಸೋಮಶೇಖರ ರಾಯರು, ಲಕ್ಷ್ಮಿನಾರಣಪ್ಪನೋರು, ಸತ್ಯನಾರಾಯಣಶೆಟ್ರು, ಹೊಸಕೊಪ್ಪ ಕೃಷ್ಣರಾಯರು, ಬಯ್ಯಣ್ಣನೋರು, ವೆಂಕಪ್ಪನೋರು ಅವರನ್ನೆಲ್ಲಾ ನೋಡಿ ನನಗೆ ಬಹಳ ಸಂತೋಷವಾಯ್ತು. ಸುಮ್ಮನೆ ಸಭೆಯೊಳಗೆ 270 ಜನ ಇದ್ದು ಪ್ರಯೋಜನವೇನು? ಇಂತಹವರು ಹತ್ತು ಜನ ಇದ್ದರೂ ಸಾಕು.

(ಇಷ್ಟು ಹೊತ್ತಿಗೆ ರಾತ್ರಿ 9 ಗಂಟೆ ಆದ್ದರಿಂದ ಇಬ್ಬರೂ ಮಾತನ್ನು ನಿಲ್ಲಿಸಿ ಹೊರಟರು.)

ಅಮೇರಿಕದ ನ್ಯೂಯೋರ್ಕಿನ ಒಂದು ಮೂರಂತಸ್ತಿನ ಮಹಡಿಯ ಮೇಲೆ ವಾಸಿಸುವ ಹೆಂಗಸೊಬ್ಬಳು, ತನ್ನದೊಂದು ಮಗುವನ್ನು ಪೋರ್ಟಿಕೋವಿನ ಗೋಡೆಯ ಮೇಲೆ ಕುಳ್ಳಿರಿಸಿದಳು; ಒಳಿಮಸ್ಸದ ಮತ್ತೊಂದು ಮಗುವು ತಾನೂ ಆ ಗೋಡೆಯ ಮೇಲೇರಿ ಕುಳ್ಳಿಲು ತಾಯನ್ನು ಪೀಡಿಸುವಾಗ, ತಾಯಿ ಅದನ್ನೆತ್ತಿ ಮೇಲೆ ಕುಳ್ಳಿರಿಸುವಾಗ, ಎರಡೂ ಮಕ್ಕಳು ಕೆಳಗೆ ಜಾರಿಬಿದ್ದು ಕೂಡಲೆ ಮಡಿದವು. ತಾಯಿ ಅಲ್ಲೇ ಮೂರ್ಛೆಹೊಂದಿದಳು.

ಇಂಗ್ಲೆಂಡಿನ ಡೈಲಿ ಹೆರಲ್ಡ್ ಪತ್ರಿಕೆಯು ಸಾಮ್ರಾಜ್ಯವಾದಿಗಳಿಗೆ ವಿರುದ್ಧವಾದುದೆಂದು, ಅದರ ಸಹಾಯಕ್ಕಾಗಿ ಮೌಲಾನ ಮಹಮ್ಮದ ಅಲಿಯವರು ೧೫೦೦ ರೂಪಾಯಿಗಳನ್ನು ಖಿಲಾಫತ್ ಫಂಡಿನಿಂದ ಸಹಾಯ ಮಾಡಿದರೂ, ಸೈಮನ ಸಪ್ತಕರಲ್ಲೊಬ್ಬರಾದ ಕೂಲೀಪಕ್ಷದ ಮೇಜರ್ ಎಟ್‌ಲೀಯವರ ವರ್ತನವನ್ನು ನಿಷೇಧಿಸಲು ಒಂದು ಸಭೆಗೂಡುವುದೆಂಬ ನೋಟೀಸನ್ನು ಸಹ ಆ ಪತ್ರವು ಪ್ರಕಟಿಸಲಿಲ್ಲದರಿಂದ ಈಗ ೧೫೦೦ ರೂಪಾಯಿಗಳನ್ನು ಪುನಃ ಕೊಡಬೇಕೆಂದು ಮೌಲಾನರು ಕೇಳಿರುವರು.

ಸೋಸಲೆಯಲ್ಲಿ ಮುಸಲ್ಮಾನರ ಹಾವಳಿ

ಸ್ವಾಮಿ:—

ಸೋಸಲೆ ಗ್ರಾಮದಲ್ಲಿ ಬಹಳ ಕಾಲದಿಂದಲೂ, ಗಾಣಿಗಶೆಟ್ಟಿಗಳಿಗೂ ಮುಸಲ್ಮಾನರಿಗೂ ಕಾರಣಾಂತರದಿಂದ ಸ್ವಲ್ಪ ಮನಸ್ತಾಪವಿದ್ದು ಈಚೆಗೆ ಸುಮಾರು 2-3 ತಿಂಗಳಿಂದಲೂ ಆ ದ್ವೇಷವು ಪ್ರಬಲಿಸಿತು. ತಾಲ್ಲೋಕ್ ಅಧಿಕಾರಿಗಳು ಸೌಜನ್ಯವನ್ನುಂಟುಮಾಡಬೇಕೆಂದು ಬಹಳ ಪ್ರಯತ್ನಗಳನ್ನು ನಡೆಸುತ್ತಿದ್ದರು. ಹೀಗಿರುವಲ್ಲಿ ನೆನ್ನೆ ಅಕ್ಟೋಬರ್ 31 ನೇ ತಾರೀಖಿನ ದಿವಸ ಮೈಸೂರಿಗೆ ಬಿಟ್ಟಿದ ಜಾತ್ರೆಗಾಗಿ ಹೋಗಿದ್ದ ಕೆಲವು ಗಾಣಿಗರು ವಾಪಸ್ ಊರಿಗೆ ಹೋಗುತ್ತಾ ಗಾಡಿಗಳನ್ನು ಹೊಳೆ ಕರೆಯಲ್ಲಿ ಬಿಟ್ಟು [illegible] ಊರಿಗೆ ಸಾಗಿಸಿಕೊಂಡು ಹೋಗಿರಲು ರಾತ್ರಿ ಕೆಲವು ಮುಸಲ್ಮಾನರು 5, 6 ಗಾಡಿಗಳನ್ನು ಗನಗಸದಿಂದ ಕೊಯ್ದು ಬೆಂಕಿಹಾಕಿ ಸುಟ್ಟು ಕಬ್ಬಿಣದ ಸಾಮಾನುಗಳನ್ನು ಹೊಳೆಯಲ್ಲಿ ಹಾಕಿದ್ದರು. ಈ ವಿಚಾರವು [illegible] ಲೀಕರಿಂದ ರಿಪೋರ್ಟು ಮಾಡಲ್ಪಟ್ಟು ಪೋಲೀಸಿನವರ ತನಿಖೆ ನಡೆಯುತ್ತಿತ್ತು. ಈಗ ಕೃತ್ಯವನ್ನು [illegible] ಪತ್ತೆಯಾಗಿರುವುದಾಗಿಯೂ ಪೋಲೀಸಿನವರು ಈ ಕೇಸನ್ನು ಮ್ಯಾಜಿಸ್ಟ್ರೇಟ್ ಕೋರ್ಟಿಗೆ [illegible] ವುದಾಗಿಯೂ ಕೇಳುತ್ತೇನೆ. ಘನತೊಂದಿದ ಸರ್ಕಾರದವರು ಕೃತ್ಯವನ್ನು ನಡಿಸಿದವರಿಗೆ ಬಂದೋಬಸ್ತು ಮಾಡಿ, ಇನ್ನು ಮುಂದಾದರೂ ಈ ಗ್ರಾಮದಲ್ಲಿ ಇಂತಹ ದ್ವೇಷಗಳಿಗೆ ಆಸ್ಪದ [illegible] ಮಾಡಿ ನೆಮ್ಮದಿಯನ್ನು ಏರ್ಪಡಿಸಿರುತ್ತಾರೆಂದು ನಂಬಿದ್ದೇನೆ.

[illegible]

ತಾಯಿನಾಡು

TAI NADU (Daily Edition.)

The Leading Nationalist Daily of Mysore.

Our Agents

Copies of Tai Nadu, Daily and Weekly are available for sale [illegible] the following places:—

1. N. P. Venkatappa & Co
   Excelsior Type-writing Institute, Balepet, Bangalore City.
2. Koppada Ramakrishniah, Agent, Hassan.
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings, Mysore.
5. B V Pundit & Co, Lakshmivilas Road, Mysore.
6. Friends' Union, Mysore.
7. S Mt eweart, Lansdowne Buildings, Mysore.

Printed and published by P. R. Ramaiya at Sri Rama Press, D. Subbiah Road, Mysore.

Regd. No. M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ } ಸ್ಥಳಕ್ಕೆ ೫-೦-೦
ಚಂದಾ } ಪರಸ್ಥಳಕ್ಕೆ ೬-೦-೦

ಸಂಪುಟ ೧] ಸೋಮವಾರ ೧೨ ನವಂಬರ್ ೧೯೨೮ [ಸಂಚಿಕೆ ೪೮

TAI NADU

12—11—1928

ದಿವಾನರನ್ನು ಏತಕ್ಕೆ ಪರೀಕ್ಷಿಸಲಿಲ್ಲ?

[illegible] ಕಮಿಟಿಯವರು ತಮ್ಮ ಕೆಲಸವನ್ನು [illegible] ಮಾಡಿದವಾಗೆ ಕಾಣುತ್ತದೆ. [illegible] ಪರೀಕ್ಷಿಸಲ್ಪಡತಕ್ಕವರು ಅನೇಕರಿದ್ದರು. ಬೆಂಗಳೂರಿನ [illegible] ದಿವಾನರು ಹಾಗೆ ಹೇಳಿದರು, ಹೀಗೆ ಹೇಳಿದರು, ಎಂದು ಅನೇಕ ಜವಾಬ್ದಾರೀ ಸಾಕ್ಷಿಗಳು ಹೇಳಿಕೆಯನ್ನು ಕೊಟ್ಟರು. ಗುಂಡು ಹೊಡೆದುದ್ದು ಸುಳ್ಳೆಂದು ಪ್ರಕಟನೆಗಳನ್ನು ಹೊರಡಿಸಿದ ವಿಷಯದಲ್ಲಿ ಸರ್ಕಾರದ ಜವಾಬ್ದಾರಿಯು ಹೆಚ್ಚಾಗಿರುವುದು. ಈ ವಿಷಯವಾಗಿ ಛೀಫ್ ಸೆಕ್ರೆಟರಿಗಳನ್ನೂ ಪಬ್ಲಿಸಿಟಿ ಆಫೀಸರನ್ನೂ ಪರೀಕ್ಷಿಸಬೇಕಾಗಿತ್ತು. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದ ವಿಷಯವಾಗಿಯೂ ಸರ್ಕಾರವನ್ನು [illegible] ದಿವಾನರು [illegible] ಬಂದು ತಮ್ಮ ಮೇಲಿರುವ ಆಪಾದನೆಗೆ ಉತ್ತರವಾಗಿ ಒಂದು ವಾಂಗ್ಮೂಲವನ್ನು ಕೊಟ್ಟಿದ್ದರೆ ಎಷ್ಟು ಶೋಭಿ[illegible]? ಕಮಿಟಿಯು [illegible] ನರೆ ತಿಂಗಳು ಕೂತೂ, ಪ್ರಧಾನರಾದವರನ್ನು ಪರೀಕ್ಷಿಸಲಿಲ್ಲ. ಕಮಿಟಿಯವರಿಗೆ ಏನೇನು ಕಷ್ಟಗಳಿದ್ದವೋ! ಯಾರಿಗೇನುಗೊತ್ತು? ಬೆಂಗಳೂರು ಗಲಭೆಗೆ ಏನೂ ಸಂಬಂಧವಿಲ್ಲದ ಲಕ್ಷ ಮೈಲಿ ದೂರದಲ್ಲಿದ್ದ ಮಹಮದ [illegible] ದಾಸಪ್ಪನವರೂ ಹರ್ಡೇಕರರೂ [illegible] ಸಾಕ್ಷಿ ಕೊಡಬೇಕಂತೆ! ಪ್ರತ್ಯಕ್ಷವಾಗಿ ಸಂಬಂಧವಿದ್ದ ದಿವಾನರೂ ಎಗ್ಸಿಕ್ಯೂಟಿವ್ ಕೌನ್ಸಿಲ್ [illegible] ಸಾಕ್ಷಿ ಕೊಡುವ ಅವಶ್ಯ[illegible] [illegible] ಸಂಸ್ಥಾನದಿಂದ ಹೊರ[illegible]

[illegible]

ಯುನಾನಿ ಕಾಲೇಜು, ಮೈಸೂರು.

೧೯೨೮ ನೇ ನವೆಂಬರ್ ತಾ|| ೧೮ ನೇ ಭಾನುವಾರ [illegible] ನಲ್ಲಿ "ಕಾಲೇಜ್‌ಡೇ" ಮಹೋತ್ಸವವು ನಡೆಸಲ್ಪಡುತ್ತದೆ. ಆ ಕಾಲದಲ್ಲಿ ಮೈಸೂರು ಗೌರ್ನಮೆಂಟ್ ಮುಜ[illegible] ಜೆ. ಡಿಸೌಸಾ ಸಾ[illegible] [illegible] ಯುನಾನಿ ಅಭಿವೃದ್ಧಿಯ ವಿಚಾರವಾಗಿ [illegible]

ಷೌಕತ್‌ಅಲಿಯವರ ರೋಷಾವೇಶ ಭಾಷಣ

ಷೌಕತ್‌ಅಲಿಯವರು ಸಂಯುಕ್ತ ಪ್ರಾಂತ್ಯದ [illegible] ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣವು ಬಹಳ ಕೋಪತಾಪಗಳಿಂದ ಕೂಡಿರುವುದು. 1920-21 ರಲ್ಲಿ ಮಹಾತ್ಮಾ ಗಾಂಧಿಯವರಿಗೆ ಬಲಭುಜವಾಗಿದ್ದುಕೊಂಡು ಇವರು ಮಾಡಿದ ದೇಶಸೇವೆಯು ಚಿರಸ್ಮರಣೀಯವಾದುದು. ಹಿಂದೂಗಳು ಮಹಮದೀಯರು ಎಂಬ ಭೇದವಿಲ್ಲದೆ ಭಾರತೀಯರೆಲ್ಲರೂ ಇವರನ್ನು ದೊಡ್ಡಣ್ಣ ಎಂಬುದಾಗಿ ಕರೆಯಲಾರಂಭಿಸಿದರು. ಇಂಥವರಿಗೂ ಕೂಡ ಈಚೀಚೆಗೆ ಮನೋವಿಕಲ್ಪವುಂಟಾಗಿ ಹಿಂದೂಗಳಿಗೂ ಮಹಮದೀಯರಿಗೂ ದ್ವೇಷಾಸೂಯೆಯನ್ನು ಹೆಚ್ಚಿಸುವ ಭಾಷಣವನ್ನು ಮಾಡುತ್ತಿರುವುದನ್ನು ನೋಡಿದರೆ ನಮಗೆ ಬಹಳ ವಿಷಾದವಾಗುತ್ತದೆ. ಷೌಕತ್‌ಅಲಿಯವರು ಹೇಳಿರುವುದೇನೆಂದರೆ;« 1920-21 ರಲ್ಲಿ ಮಹಮದೀಯರು ಅದ್ಭುತವಾದ ಸ್ವಾರ್ಥತ್ಯಾಗವನ್ನು ಮಾಡಿದರು. ನೆಲಕ್ಕೆ [illegible] ತೆವಳುತ್ತಿದ್ದ ರಾಷ್ಟ್ರೀಯ ಸಭೆಯು [illegible]ವನ್ನು ಮುಟ್ಟುವಂತೆ ಮಾಡಿದರು. ರಾಷ್ಟ್ರೀಯ ನಿಧಿಗೆ 60 ಲಕ್ಷ ರೂಪಾಯಿ ಚಂದಾವನ್ನು ಕೊಟ್ಟರು. ಸಂಖ್ಯೆ ಇಲ್ಲದೆ ಮಹಮದೀಯರು ಜೈಲನ್ನು ಹೊಕ್ಕರು. ಇಂಡಿಪೆಂಡೆಂಟ್ ಮೊದಲಾದ ರಾಷ್ಟ್ರೀಯ ಪತ್ರಿಕೆಗಳು ಮಹಮದೀಯರ ಚಂದಾಹಣದಿಂದಲೆ ನಡೆದವು. ಮಹಾತ್ಮಾ ಗಾಂಧಿಯವರು ಮಹಮದೀಯರ ದ್ರವ್ಯ ಸಹಾಯದಿಂದಲೇ ಇಂಡಿಯಾ ದೇಶವನ್ನೆಲ್ಲಾ ಸುತ್ತಿ ಪ್ರಚಾರ ಮಾಡಿದರು. ಆ ಸ್ಥಿತಿಯೆಲ್ಲಾ ಈಗ ಬದಲಾಗಿ ಹೋಯಿತು. ಹಿಂದೂಗಳಿಗೂ ಮಹಮದೀಯರಿಗೂ ವೈಮನಸ್ಯವು [illegible].

ಮಹಮದೀಯರು ಇಂಡಿಯಾ ದೇಶದ ಪ್ರಭುಗಳಾಗಿ ಅಪ್ರತಿಹತವಾದ ಶಕ್ತಿಯು ಅವರಲ್ಲಿ ಇದ್ದಾಗ್ಯೆ ಹಿಂದೂ ಜನಾಂಗವನ್ನೆಲ್ಲಾ ಅಳಿಸಿ ಬಿಡಬಹುದಾಗಿತ್ತು. ನಿರ್ಬಲರನ್ನು ಹಿಂಸೆಮಾಡಕೂಡದೆಂಬುದೇ ಮಹಮದೀಯರ ಸಿದ್ಧಾಂತ. ಹಿಂದೂಗಳು ಒಂದು ಮಾತನ್ನು ನೆನಪಿನಲ್ಲಿಡಲಿ. ಏನೇ ಆಗಲಿ, ಮಹಮದೀಯರನ್ನು ಬಗ್ಗಿಸುವುದಕ್ಕಾಗುವುದಿಲ್ಲ. ಸ್ವಭಾವವಾಗಿ ಮಹಮದೀಯರು ಧೈರ್ಯಶಾಲಿಗಳು. ಇನ್ನೊಬ್ಬರಿಗೆ ಬಗ್ಗತಕ್ಕವರಲ್ಲ. ಹಿಂದೂಗಳಿಗೆ ಗುಲಾಮಗಿರಿಯ ಅಭ್ಯಾಸವು ಚೆನ್ನಾಗಿ ಇದೆ. ಇನ್ನು ಎಷ್ಟು ದಿವಸ ಬೇಕಾದರೂ ಹಿಂದೂಗಳು ಗುಲಾಮಗಿರಿಯಲ್ಲಿ ಇರುವರು. ಆದರೆ ಮಹಮದೀಯರು ಸ್ವಾತಂತ್ರ್ಯಪ್ರಿಯರು. ಅವರು ಹಿಂದೂ ಪ್ರಭುತ್ವಕ್ಕಾಗಲೀ ಪರಂಗಿಯವರ ಪ್ರಭುತ್ವಕ್ಕಾಗಲೀ ತಲೆಯನ್ನು ಬಾಗುವುದಿಲ್ಲ. ಹಿಂದೂಗಳು ಹೇಳಲಿ. ಅವರಿಗೆ ಶಾಂತಿಯು ಬೇಕೋ? ಯುದ್ಧವು ಬೇಕೋ? ಯುದ್ಧವು ಬೇಕಾದರೆ ಸಿದ್ಧವಾಗಲಿ. ಹಿಂದೂಗಳ ಮಹಾವೀರದಳಗಳಾಗಲೀ, ಅಖಾಡಗಳಾಗಲೀ ಮಹಮದೀಯರ ಮುಂದೆ ಬೇಯುವುದಿಲ್ಲ. ಮಹಮದೀಯರು ಆಗರ್ಭಕ್ಷತ್ರಿಯರು. ಅವರು ಯಾವಾಗಲೂ ಜಯಶೀಲರಾಗುವರು. ಶಾಂತಿಯು ಬೇಕಾದರೆ ದಾರಿಯು ಬೇರೆ. ನೆಹರು ಕಮಿಟಿಯ ವರದಿಯಲ್ಲಿ ಮಹಮದೀಯರಿಗೆ ಜಾತಿವಾರುಪ್ರಾತಿನಿಧ್ಯವು ದೊರೆಯುವ ಏರ್ಪಾಡುಮಾಡಲ್ಪಡಲಿ. ಇಲ್ಲವಾದರೆ ಮಹಮದೀಯರು ತಮ್ಮ ಪ್ರಯತ್ನವನ್ನು ಸ್ವಲ್ಪವೂ ಶಿಥಿಲ ಮಾ[illegible]

ವಿವಿಧ ವಿಷಯಗಳು.

ಬಳ್ಳೇಪೇಟೆ ಬೋರ್ಡ್

ಮ|| ಜಿ. [illegible]ರಾಯರ ಬಳ್ಳೇಪೇಟೆ ಪ್ರಾಪಗ್ಯಾಂಡ ಬೋರ್ಡಿಗೆ ಪೋಲೀಸಿನವರು ಆತಂಕವನ್ನುಂಟುಮಾಡುತ್ತಿದ್ದಾರೆಂದು ನಮ್ಮ ಬರ[illegible]

ವೀರಕೇಸರಿ

ವೀರಕೇಸರಿ ಪತ್ರಿಕೆಯು ಈಗ ಪುನಃ ಹೊರಡಲಾರಂಭವಾಗಿದೆ. ಪ್ರತ್ಯೇಕವಾದೊಂದು ಮುದ್ರಣಾಲಯವನ್ನು ಏರ್ಪಡಿಸಿ, ಈ ತಿಂಗಳು ೧೯ ನೇ ತಾರೀಖು [illegible]ದಿಂದ ಆ ಮುದ್ರಣಾಲಯದಲ್ಲಿ ವೀರಕೇಸರಿಯು ಪ್ರಕಟಿಸಲ್ಪಡುತ್ತದೆ. ವೀರಕೇಸರಿಯಲ್ಲಿ ದೇಶ ವಿದೇಶಗಳ ತಂತೀ ಸಮಾಚಾರಗಳನ್ನು ಪ್ರಕಟಿಸಲು ಸಂಕಲ್ಪಮಾಡಲ್ಪಟ್ಟಿದೆ. ಮಹಾಜನರ ಪ್ರೋತ್ಸಾಹದಮೇರೆಗೆ ೧-೧೨-೨೮ ರಿಂದ ತಂತೀ ಸಮಾಚಾರಗಳು ಪ್ರಕಟಿಸಲ್ಪಡುತ್ತವೆ. ವೀರಕೇಸರಿಯ ವಾರ ಪತ್ರಿಕೆಯು [illegible] ೧೯ ನೇ ತಾರೀಖು [illegible] ಪ್ರಕಟಿಸಲ್ಪಡುವುದು, ಎಂದು ಈ ತಿಂಗಳು ೮ ನೇ ತಾರೀಖಿನ ವೀರಕೇಸರಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದು.

ಸರ್ಕಾರಿ ನೌಕರಿ ಮತ್ತು ಕೋಮುವಾರು ಪ್ರಾತಿನಿಧ್ಯ.

ಸ್ಟ್ಯಾಫ್ ಕಮೀಷನ್ನರ [illegible] ಸರ್, ಎಂ. [illegible]ಯವರು ಈ ವಿಷಯವಾಗಿ ಒಂದು ಅಭಿಪ್ರಾಯವನ್ನು ಕೊಟ್ಟರು. ಅದೇನೆಂದರೆ—ಮೇಲಿನ ಸರ್ಕಾರಿ ನೌಕರಿಗಳಲ್ಲಿ ಮೂರನೆ ಎರಡುಭಾಗವನ್ನು ಉಮೇದ್ವಾರರ ಯೋಗ್ಯತೆಯಮೇಲೂ ಮೂರನೆ ಒಂದು ಭಾಗವನ್ನು ಪ್ರಾತಿನಿಧ್ಯವು ದೊರಕದೆ ಇರುವ ಕೋಮಿನ ಉಮೇದ್ವಾರರಿಗೂ ಕೊಡಬೇಕೆಂದು. ಇಂಡಿಯಾ ಸರ್ಕಾರದಲ್ಲಿ ವಿಧಾಯಕವಾಗಿದೆ. ಈ ನೀತಿಗೆ ನಾನೇ ಜವಾಬ್ದಾರನು." ಮೈಸೂರಿನಲ್ಲಿ ಸ್ಥಿತಿಗತಿಗಳು ಇದಕ್ಕೆ ವಿಪರೀತವಾಗಿವೆ. ಸರ್ಕಾರದ ನೌಕರಿಯಲ್ಲಿ ನಾಲ್ಕನೆ ಮೂರು ಭಾಗವು ಜಾತಿಯ ಮೇಲೆಯೂ ನಾಲ್ಕನೆ ಒಂದು ಭಾಗವು ಯೋಗ್ಯತೆಯ ಮೇಲೆಯೂ ನಿರ್ಧರಿಸಲ್ಪಡುವುದು. ಮೈಸೂರು ಸರ್ಕಾರದವರೂ ಇಂಡಿಯ ಸರ್ಕಾರದವರ ರೀತಿಯನ್ನು ಏತಕ್ಕೆ ಅವಲಂಬಿಸಕೂಡದೆಂಬುದು ನಮ್ಮ ಪ್ರಶ್ನೆ.

ಶಾರದೆ ಎಂಬ ಕನ್ನಡ, ಹುಡುಗಿಯು ತನ್ನ ಗಂಡನ ಮನೆಯಿಂದ ಒಬ್ಬ ಸಾಧು ಜತೆಯಲ್ಲಿ ಹೊರಟಳೆಂದೂ ಈ ಸಾಧುವು ಕ್ರೈಸ್ತ ಮಿಶ್ಯನ್ನಿನವರಲ್ಲಿದ್ದನೆಂದೂ ಹುಡುಗಿಯು ಮಂಗಳಸೂತ್ರವನ್ನು ಕಿತ್ತಿರುವಳೆಂದೂ ಅವಳನ್ನು ಮಿಶ್ಯನರಿಗಳು ಕ್ರೈಸ್ತಮತಕ್ಕೆ ಸೇರಿಸುವರೆಂದೂ ಸತಾರಾ ಅಪ್ಪುರಾವ್ ಎಂಬುವರು ಅಠಾವಲೆ (ಬೊಂಬಾಯಿ) ಕೋರ್ಟಿನಲ್ಲಿ ಫಿರ್ಯಾದು ಮಾಡಿರುವರು. [illegible]ದಲ್ಲಿರುವ ಚರ್ಚಮಿಶನ್ನಿನವರಲ್ಲಿ ಈಕೆ ಇರುವಳು. ಗಣಪತಿರಾವ ನುರಿಬವಾ ಎಂಬಾತನೆ ಇವಳನ್ನು ಪುಸಲಾಯಿಸಿದ ಸಾಧುವಂತೆ.

[illegible] ತನ್ನ ೧[illegible]ನೇ ವಯಸ್ಸಿನಲ್ಲಿ ಮಡಿದಳು. ಅವಳ ಮಗನ ವಯಸ್ಸು ೧೦೦ ನ್ನು ಮೀರಿದೆ.

ತಾಯಿ ನಾಡು.

12—11—1928

ಎಲ್. ಎಸ್. ರಾಜುರವರ ಪತ್ರ.

ಎಲ್. ಎಸ್. ರಾಜೂರವರು ಬಿ. ನಾಗಪ್ಪನವರಿಗೆ ಉತ್ತರವಾಗಿ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಒಂದು ಪತ್ರವನ್ನು ಬರೆದಿಧಾರೆ. ಅದರಲ್ಲಿ ಅವರು ಹೇಳುವುದೇನೆಂದರೆ, (ನವಂಬರ್ ೩ ನೇ ತಾರೀಖಿನಲ್ಲಿ ನಾಗಪ್ಪನವರು ಡ್ಯಾಲೀ ಮೆಮೋರಿಯಲ್ ಹಾಲಿನಲ್ಲಿ ಕೊಟ್ಟ ಹೇಳಿಕೆಯನ್ನು ಓದಿಧೇನೆ. ನನ್ನ ಹೇಳಿಕೆಗಳು ನಿರಾಧಾರವಾದವುಗಳು ಮತ್ತು ತಪ್ಪಿನಿಂದ ಕೂಡಿದವುಗಳು ಎಂದು ನಾಗಪ್ಪನವರು ಹೇಳುವುದು ಆಶ್ಚರ್ಯವನ್ನು ಉಂಟುಮಾಡುವುದಿಲ್ಲ. ನನಗೆ ಪಾರ್ಟೀ ಸವಾಲುಗಳನ್ನು ಹಾಕಿ ನನ್ನ ಹೇಳಿಕೆಗಳಲ್ಲಿರುವ ಸುಳ್ಳುಗಳನ್ನು ತೋರಿಸಬೇಕೆಂದು ನಾನು ಒತ್ತಿ ಹೇಳಿದ್ದಾಗ್ಯೂ ನಾಗಪ್ಪನವರು ಹಾಗೆ ಮಾಡದೆ, ನನಗೆ ಪಾರ್ಟೀಸವಾಲುಗಳನ್ನು ಹಾಕಿ ಕಮಿಟಿಯ ಅಮೂಲ್ಯವಾದ ಸಮಯವನ್ನು ಹಾಳುಮಾಡುವುದು ತಮಗೆ ಯುಕ್ತವಲ್ಲವೆಂದು ಅವರು ಹೇಳಿದರು. ತಮ್ಮ ಆತ್ಮಸಂರಕ್ಷಣೆಗಾಗಿ ನಾಗಪ್ಪನವರು ಬೇಕಾದದ್ದನ್ನು ಹೇಳಿಕೊಳ್ಳಲಿ. ಆದರೆ ನನಗೆ ಪಾರ್ಟೀಸವಾಲುಗಳನ್ನು ಹಾಕದೆ ನನ್ನ ಹೇಳಿಕೆಗಳೆಲ್ಲಾ ಸುಳ್ಳು ಮತ್ತು ನಿರಾಧಾರವಾದವುಗಳೆಂದು ಹೇಳುವುದಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲ. ನಾನು ಈಗಲೂ ನನ್ನ ಹೇಳಿಕೆಗಳನ್ನು ಸಮರ್ಥನೆ ಮಾಡಲು ಸಿದ್ಧನಾಗಿಧೇನೆ. ನಾಗಪ್ಪನವರು ಅನೇಕ ಸತ್ಯಗಳನ್ನು ಮರೆಮಾಚಿಧಾರೆ. ಅಸತ್ಯಗಳನ್ನು ಸತ್ಯದಂತೆ ತೋರ್ಪಡಿಸಿಧಾರೆ. ಅನೇಕ ದೊಡ್ಡಮನುಷ್ಯರ ಹೆಸರುಗಳನ್ನು ಕೆಡಿಸಲು ಪ್ರಯತ್ನ ಮಾಡಿಧಾರೆ ಎಂಬುದು ನನ್ನ ಭಾವನೆ. ಅಕ್ಟೋಬರ್ ೨೦ ನೇ ತಾರೀಖಿನ ದಿವಸ ಕಮಿಟಿಯವರು ನನ್ನನ್ನು ಪರೀಕ್ಷೆ ಮಾಡಿದಾಗ ನಾಗಪ್ಪನವರು ಕಮಿಟಿಯಲ್ಲಿರಲಿಲ್ಲ. ಆದುದರಿಂದ ನಾನು ಕೆಲವು ಮಾತುಗಳನ್ನು ಹೇಳುವುದಕ್ಕಾಗಲಿಲ್ಲ. ನನ್ನನ್ನು ಪುನಃ ಕರೆಸಿ ಪಾರ್ಟೀಸವಾಲು ಮಾಡುತ್ತಾರೆಂದು ತಿಳಿದಿದ್ದೆ. ಆದರೆ ಹಾಗೆ ಮಾಡಲಿಲ್ಲ. ಅಬ್ಬಾಸಾಖಾನರು ಅಡೀಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಕೊಟ್ಟ ವಾಜ್ಮೂಲದ ಕರ್ತರು ಯಾರು, ಇವೇ ಮೊದಲಾದ ಕೆಲವು ಸಂಗತಿಗಳ ವಿಷಯವಾಗಿ ಹೇಳಬೇಕಾಗಿತ್ತು. ಕ್ಯಾಪ್ಟನ್ ವೈ. ವಿ. ಅಯ್ಯರವರ ಸ್ಟೇಟ್‌ಮೆಂಟನ್ನು ಬರೆದವರು ಯಾರು ಎಂಬುದು ನನಗೆ ಗೊತ್ತಿದೆ ಎಂ. ಎಸ್. ಲಿಂಗೆಗೌಡರು ಕಮಿಟಿ ಮುಂದೆ ಕೊಟ್ಟ ವಾಜ್ಮೂಲದ ಪ್ರೇರೇಪಕರು ಯಾರು ಎಂಬುದು ನನಗೆ ಗೊತ್ತಿದೆ, ಅಕ್ಟೋಬರ್ ೯ ನೇ ತಾರೀಖಿನ ದಿವಸ ಕಮಿಟಿಯ ಮುಂದೆ ಎಂ. ಎಸ್. ಲಿಂಗೇಗೌಡರು ಹೇಳಿದ ಪಿತೂರೀ ಕಥೆಯನ್ನೂ ನಾನು ಬಲ್ಲೆನು. ಲಿಂಗೇಗೌಡರು ಚೀಫ್‌ಕೋರ್ಟಿನ ಈಗಿನ ಮತ್ತು ಹಿಂದಿನ ಜಡ್ಜಿಗಳಮೇಲೆ ಇಲ್ಲದ ಸಲ್ಲದ ಅಪವಾದಗಳನ್ನು ಮಾಡಿರುವರು. ನಾನು ನಾಗಪ್ಪನವರನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅವರು ಸತ್ಯವಾಗಿ ಉತ್ತರವನ್ನು ಹೇಳಲಿ. ಅಕ್ಟೋಬರ್ 10 ನೇ ತಾರೀಖಿನ ದಿನ ಕಮಿಟಿಯವರು ಎಂ. [illegible] ಲಿಂಗೇಗೌಡರನ್ನು ಫರದೇ ಒಳಗೆ ಪರೀಕ್ಷೆ ಮಾಡುತ್ತಿದ್ದಾಗ ನಾಗಪ್ಪನವರು ನನ್ನ ವಿಷಯವಾಗಿ ತಂದೆಯು ಮರಣೋನ್ಮುಖನಾಗಿದ್ದರೂ ಇವನು ಅವನನ್ನು ನೋಡುವುದಕ್ಕೆ ಕೂಡಾ ಹೋಗುವುದಿಲ್ಲ, ಎಂದು. [illegible] ಮಾತುಗಳನ್ನು ಹೇಳಬಹುದೆ? ನಾನು ಪಿತೃದ್ರೋಹಿಯೆಂದು ನಾಗಪ್ಪನವರು ಹೇಳಬಹುದೇ ಕಮಿಟಿಯ ಮೆಂಬರುಗಳು ನಾಗಪ್ಪನವರು ಹೀಗೆ ಹೇಳಲಿಲ್ಲ ಎಂದು ಹೇಳಲಿ ನಾನು ನಾಗಪ್ಪನವರನ್ನು ಸುಮ್ಮನೆ ಬಿಟ್ಟು ಬಿಡುತ್ತೇನೆ. ಇಲ್ಲದೆ ಹೋದರೆ ಅವರನ್ನು ಜೋಕೆ ನಾನು ಸುಮ್ಮನೆ ಬಿಡುವುದಿಲ್ಲ ನಾಗಪ್ಪನವರನ್ನೂ, ಲಿಂಗೇಗೌಡರನ್ನೂ ಸೇರಿಸಿ ಮಾನ ನಷ್ಟಕ್ಕಾಗಿ ಕೋರ್ಟಿನಲ್ಲಿ ದಾವಾಮಾಡುತ್ತೇನೆ.

ಎನ್ ಎಸ್. ಸೆಟ್ಲೂರ್‌ರವರ ಹೇಳಿಕೆ.

ಎಸ್. ಎಸ್. ಸೆಟ್ಲೂರ್‌ರವರ ಹೇಳಿಕೆಯು ಅನೇಕ ವಿಷಯಗಳಲ್ಲಿ ಪ್ರಾಧಾನ್ಯವಾಗಿರುವುದು. ಪ್ರಶ್ನೆ:—ಬ್ರಾಹ್ಮಣ ಪಿತೂರಿಯಲ್ಲಿ ನಿಮಗೆ ವಿಶ್ವಾಸವುಂಟೋ? ಉತ್ತರ:—ಬ್ರಾಹ್ಮಣ ಪಿತೂರಿಯೇ? ಅದು ಹಾಸ್ಯಾಸ್ಪದವು.

ಪ್ರಶ್ನೆ:—ನೀವು ಬ್ರಾಹ್ಮಣರೋ? ಉತ್ತರ.ದುರ್ದೈವದಿಂದ (ನಗು) ಪ್ರಶ್ನೆ:— ನಿಮಗೆ ಅಪನಂಬಿಕೆ ಇಲ್ಲವೋ? ನೀವು ಅದನ್ನು ಖಂಡಿಸಲಿಲ್ಲವೋ? ಉತ್ತರ. ಖಂಡಿಸುವ ಅವಶ್ಯಕತೆಯೇ ಇಲ್ಲ. ಮೈಸೂರಿನ ಬ್ರಾಹ್ಮಣರು ಮೈಸೂರಿನ ರಾಜ ಮನೆತನಕ್ಕೆ ಎಷ್ಟೋ ಕೃತಜ್ಞರಾಗಿರುವಾಗ್ಗೆ ಬ್ರಾಹ್ಮಣರು ಪಿತೂರಿಮಾಡುತ್ತಾರೆಂದು ಊಹಿಸಲೂ ಅಸಾಧ್ಯವಾಗಿರುವುದು. ಪ್ರಶ್ನೆ-ಹಾಗಾದರೆ ಒಂದು ಮೀಟಿಂಗನ್ನು ಮಾಡಿ ಠರಾವುಗಳನ್ನೇಕೆ ಮಾಡಿದಿರಿ. ಉತ್ತರ-ನಮ್ಮ ಮೇಲೆ ಇಲ್ಲದ ಸಲ್ಲದ ಆರೋಪಣೆಗಳು ಮಾಡಲ್ಪಟ್ಟಾಗ ನಾವು ಅವುಗಳನ್ನು ಖಂಡಿಸಬೇಕು. ಪ್ರಶ್ನೆ-ಪತ್ರಿಕೆಗಳ ವಿಷಯದಲ್ಲಿ ನಿಮ್ಮ ಸಲಹೆಯು ಏನಾದರೂ ಇದೆಯೋ! ಸಂಪೂರ್ಣಸ್ವಾತಂತ್ರ್ಯ. ಇನ್ನೇನಾದರೂ ಉಂಟೋ! ಉತ್ತರ-ನಾನು ಕನಬುದಾರನಾದ ಪತ್ರಿಕಾಕರ್ತನಲ್ಲ. ಪತ್ರಿಕೆಗಳೇನೂ ಇನ್ನೂ ಅಷ್ಟು ಉತ್ತಮ ಸ್ಥಿತಿಗೆ ಬಂದಿಲ್ಲವೆಂಬುದನ್ನು ನಾನು ಬಲ್ಲೆ. ಪತ್ರಿಕೆಗಳ ಮೇಲೆ ಹೊರಗಿನವರ ಅಧಿಕಾರವು ಯಾವುದೂ ಇರಬಾರದು. ಪತ್ರಿಕಾಕರ್ತರು ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ಮಹಾಜನರು ಪತ್ರಿಕೆಗಳಿಗೆ ಶಿಕ್ಷೆಯನ್ನು ಕಲಿಸಬೇಕು. ಅಧ್ಯಕ್ಷರು-ಮಹಾಜನರು ಹಾಗೆಮಾಡುವರೇ! ಉತ್ತರ-ಉಚ್ಚ ಆದರ್ಶವಿಲ್ಲದ ಯಾವ ಪತ್ರಿಕೆಯೂ ಬಹಳ ದಿವಸ ಬದಕುವುದಿಲ್ಲ. ಇತರ ಪತ್ರಿಕೆಗಳಿಂದ ಅಷ್ಟು ಅಪಾಯವೂ ಆಗುವುದಿಲ್ಲ.

ಪ್ರಶ್ನೆ:—ಎಲ್ಲಾ ಅಭಿಪ್ರಾಯಗಳ ಪತ್ರಿಕಾ ಕರ್ತರುಗಳೂ ಒಂದು ಸಂಘವನ್ನು ಮಾಡಿಕೊಂಡು ಅದರ ಮುಖಾಂತರ ಪತ್ರಿಕೆಗಳನ್ನು ಹತೋಟಿಗೆ ತಂದರೋ?

ಉತ್ತರ:— ನಾನೂ ಅದನ್ನೇ ಹೇಳಬೇಕೆಂದಿದ್ದೆ ಪತ್ರಿಕಾ ಸ್ವಾತಂತ್ರ್ಯವನ್ನುಳಿಸಿ ಸರಿಯಾದ ಯೋಗ್ಯತೆಗಳಿಂದ ಕೂಡಿ ಆ ಕೆಲಸವನ್ನು ಮಾಡಿದರೆ ಆಗಬಹುದು. ಮಾಣಿಕ್ಯವೇಲು ಮೊದಲಿಯಾರ್-ಜುಲೈ 30 ನೇ ತಾರೀಖು ಆದಮೇಲೆ ಹೊರಗಿನ ಪತ್ರಿಕಾ ಪ್ರತಿನಿಧಿಗಳು ಇಷ್ಟುಮಂದಿ ಮೈಸೂರಿಗೆಬಂದು ವರದಿಯನ್ನು ಕಳುಹಿಸಬೇಕು.

ಉತ್ತರ:—ಸ್ಥಳೀಯ ಪತ್ರಿಕೆಗಳ ಬಾಯಿ ಬೀಗಹಾದ್ದರಿಂದಲೇ. ಇಲ್ಲಿನ ಗಾಳಿಯನ್ನೆಲ್ಲಾ ನಿಲ್ಲಿಸಿದರೆ ಹೊರಕಿನಿಂದ ಗಾಳಿಯು ನುಗ್ಗೇ ನುಗ್ಗುವುದು.

ಸೆಟ್ಲೂರರವರು ಹೇಳಿದ್ದೇನೆಂದರೆ:—ಸರ್ಕಾರೀ ನೌಕರಿಯ ಕೊಟ್ಟಿಯ [illegible] ಬ್ರಾಹ್ಮಣರಲ್ಲಿ ಕೆಲವರೂ ಬ್ರಾಹ್ಮಣೇತರರಲ್ಲಿ ಕೆಲವರೂ ಪ್ರಯತ್ನ ಪಡುತ್ತಲೇ ಇದ್ದಾರೆ. ಮೈಸೂರಿನ ರಾಜಕೀಯ ಪ್ರಪಂಚವೆಲ್ಲಾ ಸರ್ಕಾರೀ ನೌಕರಿಯಲ್ಲೇ ಅಡಕವಾಗಿರುವುದು, ಸರ್ಕಾರೀ ನೌಕರಿಯನ್ನು ಪಡೆಯತಕ್ಕೊಳ್ಳುವ ಸ್ವಾರ್ಥಕ್ಕೋಸ್ಕರ [illegible] ಜಗಳ ನಮ್ಮಲ್ಲಿ ಉಂಟಾಗಿರುವುದು.

ಪ್ರಶ್ನೆ:—ಪತ್ರಿಕಾ ಕರ್ತರ ಯೋಗ್ಯತೆಯನ್ನು ವಿಮರ್ಶಿಸುವುದಕ್ಕಾಗಿಯೂ ಅವರಿಗೆ ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಲೈಸೆನ್ಸು ಕೊಡುವುದಕ್ಕಾಗಿಯೂ ಪತ್ರಿಕಾ ಕರ್ತರ ಸಂಘವೊಂದು ಇರಬೇಕೆಂದು ಒಪ್ಪುವಿರೋ?

ಉತ್ತರ:—[illegible] ಹಾಗೆಯೇ ಉಚಿತ.

ಪ್ರಶ್ನೆ:—ಪತ್ರಿಕೆಳ ಹತೋಟಿಗಾಗಿ ಜವಾಬ್. ಆ ಮೇಲೆ ಈಗ, ಇಂಗ್ಲೆಂಡಿನಲ್ಲಿ [illegible] ನುಗಳಿವೆಯೋ?

ಉತ್ತರ:—ಪತ್ರಿಕೆಗಳ ಹತೋಟಿಗಾಗಿ ಕಾನೂನುಗಳೇನೋ ಇದೆ. ಆದರೆ ಅದು ಯಾವತರದ ಕಾನೂನು ಎಂಬುದು ಮುಖ್ಯ ಪ್ರಶ್ನೆ. ಆಗಸ್ಟ್ 30 ನೇ ತಾರೀಖಿನ ಅನಂತರ ಎಲ್ಲೆಲ್ಲೂ ಕೋಲಾಹಲವೇ ಇದ್ದದ್ದರಿಂದ ಪತ್ರಿಗಳಲ್ಲಿಯೂ ಕೋಲಾಹಲದ ಸಮಾಚಾರಗಳು ಬರುತ್ತಿದ್ದುವು.

ವರ್ತಮಾನ ಸಂಗ್ರಹ

ದಿವಾನರವರು ಇದೇ ತಿಂಗಳು ೧೩ನೇ ತಾರೀಖಿನಿಂದ ಮೈಸೂರು, ಚಿಕ್ಕಮಗಳೂರು [illegible] ವೈಸೂರು, ಹೊಳಲ್ಕೆರೆ, ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಸಂಚಾರಮಾಡುವರು.

ಬೆಂಗಳೂರಿನಲ್ಲಿ ಕರ್ಪೂರವನ್ನು ತಯಾರ್‌ಮಾಡತಕ್ಕವರು ಕೆಲವು ದಿನಗಳಿಂದೀಚೆಗೆ ಹೆಚ್ಚಿಗೆ ಸಂಪಾದಿಸಬೇಕೆಂಬ ಇಚ್ಛೆಯಿಂದ ಕರ್ಪೂರಕ್ಕೆ ಸಕ್ಕರೆಯನ್ನು ಬೆರಸಿ ತಯಾರುಮಾಡುತ್ತಾರೆ. ಸಕ್ಕರೆಯನ್ನು ಬೆರಸಿ ಕರ್ಪೂರವನ್ನು [illegible] ಕರ್ಪೂರದ [illegible] ಉರಿಯುವುದಿಲ್ಲ. [illegible] ಪೂಜೆಗೆ ಅರ್ಹವಲ್ಲ.

ಬೆಳಗಾಂವಿನಲ್ಲಿ [illegible] ಆಗಿದ್ದವರ ವಿಚಾರಣೆಯು ತೀರಿ ಮಿ|| ಸೆಷನ್ ಜಡ್ಜ್ ವಿ|| ಪಟವರ್ಧನರವರ [illegible] ಸೂಪರಿಂಟೆಂಡೆಂಟ ಇರಿವಿಂಗ್‌ರವರಿಗೂ, ಪೋಲೀಸ್ ಇನ್‌ಸ್ಪೆಕ್ಟರು ಡಬ್ಲ್ಯು ಬಿ ಮೋಫೆಯವರಿಗೂ ೨ ವರ್ಷ ಕಠಿನ ಶಿಕ್ಷೆಯನ್ನೂ, ೨೦೦೦ ರೂ. ಜುಲ್ಮಾನೆಯನ್ನೂ ತಪ್ಪಿದರೆ ೬ ತಿಂಗಳ ಕಠಿಣ ಶಿಕ್ಷೆಯನ್ನೂ ಇನ್‌ಸ್ಪೆಕ್ಟರ್ ಎಚ್. ಪಿ. ಟರ್ನರ್‌ರವರಿಗೂ ಪಂಗೌಡ ಸಿದ್ದಗೌಡ ಪಟೇಲ್ ಇವರಿಗೂ ೧ ವರ್ಷ ಕಠಿಣ ಶಿಕ್ಷೆಯೂ ೧೦೦೦ ರೂ ಜುಲ್ಮಾನೆಯನ್ನೂ ತಪ್ಪಿದರೆ ಮತ್ತೆ ೨ ಮತ್ತು ೬ ತಿಂಗಳ ಕಠಿಣ ಶಿಕ್ಷೆಯನ್ನೂ, ನರಸಿಂಗ ರಾವ ನಾಮಿಂಟ ಅಪ್ಪಲಾಲ್, ಇಮಾಮ್ ನಗರ, [illegible] ಕೋರಿ ಮೋತಿ ಚಂದ ಕೃಷ್ಣಚಂದ ಗುಜರ ಇವರುಗಳಿಗೆ ತಲಾ ೬ ತಿಂಗಳ ಶಿಕ್ಷೆಯನ್ನೂ ಪ್ರಧಾನಪ್ಪ ಬೆಳ್ವಂಕಿ ಇವರಿಗೆ ೧ ತಿಂಗಳ ಕಠಿಣ ಶಿಕ್ಷೆಯನ್ನೂ ವಿಧಿಸಿದರು.

TAI NADU (Daily Edition.)

The Leading Nationalist Daily of Mysore.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.
2 Koppada Ramakrishniah, Agent, Hassan.
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings, Mysore.
5 B V Pundit & Co, Lakshmivilas Road, Mysore.
6 Friends' Union, Mysore.
7 Sweet Mart, Lansdowne Buildings, Mysore.

Printed and published by P. R. Ramaiya at SriRama Press, D. Subbiah Road, Mysore

Regd. No. M. 2322

‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ಸಂಪುಟ ೧] ಮಂಗಳವಾರ ೧೩ ನವಂಬರ್ ೧೯೨೮ [ಸಂಚಿಕೆ ೪೮

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುದು

ತಲೆನೋವು	ಕೆಮ್ಮು
ವಾತಶೂಲೆ	ನೆಗಡಿ
ಬೆನ್ನು ನೋವು	ಸುಟ್ಟ ಘಾಯ
ಕಟಿಶೂಲೆ	ಹುಣ್ಣುಗಳು
ಪಾರ್ಶ್ವ ವಾಯು	ಉಳುಕಿದ ನೋವು



ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಹಹ ! ಹಾ ! ಸುಖವೇ ಸುಖ !!!

ನಿಮಗೆ ಟಾನಿಕ್ ಬೇಕಾಗಿದೆಯೋ ? ಹಾಗಾದರೆ ಲೋಕಪ್ರಸಿದ್ಧವಾಗಿರುವ

ಆತಂಕನಿಗ್ರಹ ಮಾತ್ರೆಗಳನ್ನೇ

ಉಪಯೋಗಿಸಿರಿ

ಏತಕ್ಕೆಂದರೆ ಇವೇ ಈಗಿನ ಟಾನಿಕ್‌ಗಳಲ್ಲೆಲ್ಲಾ ಉತ್ತಮವಾದವು. ಕ್ರಯ ಡಬ್ಬಿ 1 ಕ್ಕೆ 1-0-0

ಈ ಏಜನ್ಸಿಗಳಲ್ಲಿ ನಮ್ಮ ಔಷಧಗಳು ದೊರೆಯುತ್ತವೆ: ಆತಂಕ ನಿಗ್ರಹ ಔಷಧಾಲಯ

ಸೂಟೆ, ತುಂಕೂರು, ದಾವಣಗೆರೆ, ಶಿವಮೊಗ್ಗ, ಹಾಸನ, ಚಿತ್ರದುರ್ಗ. ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸಮೀಪದಲ್ಲಿರಿಸಿಕೊಂಡಿರಿ.

ಸಿದ್ಧ ವೈದ್ಯನೋವಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ:—ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ, ಅಜೀರ್ಣ ವಾಯುಗಳನ್ನೂ ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ತ್ರೀಕರ ಕಸ್ತೂರಿಮಾತ್ರೆ:—ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ಹವಾಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ಶೀತವಾಯು, ಪ್ಲೇಗು ಇನ್‌ಫ್ಲುಯನ್ಜ, ಕಾಲಾ ಮು ತಾದ್ದನು ಖಾತರಿ ಗುಣಪಡಿಸುತ್ತದೆ ಪ್ರತಿಮನೆಗಳಲ್ಲೂ ಅತ್ಯವಶ್ಯಕ ಇಂಬೇಕಾದದ್ದು. ಬೆಲೆ ಸೀಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ಶೈಲ ಪಾನಕಗಳು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ. ವಿ. ಪಂಡಿತರು,

ಸದ್ವೈದ್ಯಶಾಲಾ, ನಂಜನಗೂಡು.

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.

2 Koppada Ramakrishniah, Agent, Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Buildings. Mysore.

5 B V Pundit & Co, Lakshmivilas Road Mysore.

6 Friends' Union, Mysore.

7 Sweet Mart, Lansdowne Buildings, Mysore.

TAI NADU

13—11—1928

On Men and Things.

(By Shama)

The air is thick with rumours of prosecutions and deportations. People incessantly ask me if it is true that all the papers which dared to speak the truth are going to be stopped. They also pelt me with questions if it is true that Messrs............................are going to be deported. I only reply, "It is all for good." The Bureaucracy can do anything. Its autocratic powers are immense. When enraged, it behaves like a bear. Therefore, it is no use complaining. The people who stand for truth and justice must be prepared for all persecutions. In British India, to-day Lalaji recieved lathi blows at the hands of the Police. And Lalaji is acclaimed all over India. In Mysore, Mr, Sanjiva Rao was assaulted by a Police Inspector. Mr. Sanjiva Rao deserves congratulations. Simliarly, all those who are persecuted by Government to-day in Mysore are erecting imperishable monuments, to themselves in the Temple of Truth and Justice. The more the persecution, the merrier it is. Bravo! Bureaucracy, Go on. Ride rough shod. Trample truth and justice under your heels. You will also be remembered eternally. But in a different way!

The Visweswaraya Committee concluded its labours on Wednesday, the 7th inst. It is not known how long it will take for the report to come out. Whether the Committee's report will find acceptance with the Government or not the impartial public has enough material to judge what is rotten in this model state. What transpired in the camera, the public are not in a position to know. But all the same, enough dirty linen has been washed and public have been awakened to a correct knowledge as to men and things in Mysore. In my opinion, whether there will be divided verdict or not, enough evidence has come to light and the public opinion has been roused to-day as never before. This in itself, is a supreme benefit conferred upon the people by the Committee.

ಆತ್ಮಹತ್ಯ

ಕಳೆದಬುಧವಾರ ರಾತ್ರಿ ಮೈಸೂರು ಚಾಮರಾಜಪುರು ರೈಲ್ವೆ ಸ್ಟೇಷನ್ನಿನಿಂದ ಒಂದೆರಡು ಫರ್ಲಾಂಗು ಗಳಷ್ಟು ದಕ್ಷಿಣಭಾಗದಲ್ಲಿ ರೈಲು ಬರುವ ಸಮಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನ ಗುಮಾಸ್ತೆಯಾದ ಹಮೀದಾಖಾನ್ ಎಂಬಾತನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಂಬಿಯಮೇಲೆ ಮಲಗಿದ್ದನೆಂದೂ ರೈಲಿಗೆ ಸಿಕ್ಕಿ ಮೃತನಾದನೆಂದೂ ತಿಳಿಯ ಬರುತ್ತದೆ. ಮಾರನೆಯ ದಿನ ಪೋಲೀಸಿನವರು ಆ ಸ್ಥಳಕ್ಕೆ ಹೋಗಿ ತನಿಖೆ ಮಾಡಿದ್ದರಲ್ಲಿ ಆತನ ಅಂಗಿಯ ಜೇಬಿನಲ್ಲಿ ಎರಡು ಕಾಗದಗಳಿದ್ದವೆಂದೂ ಅವುಗಳಿಂದ ಆತನು, ಗೃಹಕೃತ್ಯದ ಮನಸ್ತಾಪಗಳಿಗಾಗಿ ಆತ್ಮಹತ್ಯ ಮಾಡಿಕೊಂಡನೆಂದೂ ತಿಳಿದುಬರುತ್ತದೆ.

ವಿದ್ಯಾರ್ಥಿಗಳ ಕಮಿಟಿಯ ಸ್ಥಾಪನೆ.

ಬೆಂಗಳೂರು ಗಣಪತಿಯ ವಿಚಾರದಲ್ಲಿ ಗಲಾಟೆಯಾದಾಗ ಮೈಸೂರಿನಲ್ಲಿ ಕಾಲೇಜು ವಿದ್ಯಾರ್ಥಿಗಳು ಸ್ಟ್ರೈಕ್ ಮಾಡಿದ ವಿಷಯವು ಸರ್ವವಿದಿತವಾಗಿದೆ. ಇಂಥಾ ಸ್ಟ್ರೈಕುಗಳು ಇನ್ನು ಮುಂದೆ ಸಂಭವಿಸದಂತೆ ಕಾಲೇಜ್ ಪ್ರಿನ್ಸಿಪಾಲ್ ಜೆ. ಸಿ ರೋಲೊರವರು ವಿದ್ಯಾರ್ಥಿಗಳ ಕಮಿಟಿಯನ್ನು ಏರ್ಪಡಿಸಿದ್ದಾರೆ. ಈ ಕಮಿಟಿಗೆ ಎಲ್ಲಾ ತರಗತಿಗಳಿಂದಲೂ ಇಬ್ಬಿಬ್ಬರು ವಿದ್ಯಾರ್ಥಿಗಳನ್ನು ಪ್ರತಿನಿಧಿಗಳಾಗಿ ವಿದ್ಯಾರ್ಥಿಗಳೇ ಚುನಾವಣೆ ಮಾಡಿದ್ದಾರೆ. ಇಲ್ಲಿಗೆ ಯೂನಿಯನ್ ವೈಸ್ ಪ್ರೆಸಿಡೆಂಟರೂ ಮತ್ತು ಸೆಕ್ರೆಟರಿಗಳೂ ಮೆಂಬರುಗಳಾಗಿ ಸೇರಿಸಲ್ಪಟ್ಟಿದ್ದಾರೆ. ಕಮಿಟಿಯ ಮೆಂಬರುಗಳ ಪೈಕಿ ಒಬ್ಬರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. ವಿದ್ಯಾರ್ಥಿಗಳ ಕಷ್ಟಸುಖಗಳನ್ನು ಪ್ರಿನ್ಸಿಪಾಲರವರಿಗೆ ತಿಳಿಸಿ ಎಲ್ಲವನ್ನೂ ಸೌಖ್ಯವಾಗಿ ನಡೆಯಿಸುವುದೇ ಈ ಕಮಿಟಿಯ ಮುಖ್ಯ ಕಾರ್ಯವಾಗಿದೆ.

ಬೆಂಗಳೂರಿನ ಗಲಭೆಯ ಮೊಕದ್ದಮೆಗಳು.

ಅಡಿಷನಲ್ ಮ್ಯಾಜಿಸ್ಟ್ರೇಟರವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ಸ್ ಕೋರ್ಟಿನಲ್ಲಿ ಈ ಕೇಸಿನ ಏಳು ಮುಖ್ಯ ಮೊಕದ್ದಮೆಗಳನ್ನು ದಾಖಲು ಮಾಡುವವರಾಗಿರುವರೆಂದು ಈವಿನಿಂಗ್ ಮೇಲ್ ಪತ್ರಿಕೆಯು ತಿಳಿಸುತ್ತದೆ.

1) 14 ಮಂದಿ ಮುಸಲ್ಮಾನರಮೇಲೆ ದೊಂಬಿ ನಡಿಸಿದುದಕ್ಕಾಗಿ.

2) ಜಿ. ಭೀಮರಾವ್,. ತಿವಾರಿ, ಸುಬ್ರಹ್ಮಣ್ಯಂ ಮತ್ತು ಕೆಲವು ವಿದ್ಯಾರ್ಥಿಗಳಮೇಲೆ ದೊಂಬಿಗಾಗಿ.

3) ಸರ್ವಭಟ್ಟರು, ಸೀತಾರಾಮಶಾಸ್ತ್ರಿಗಳು ಕೆಲವರು ವಿದ್ಯಾರ್ಥಿಗಳಮೇಲೆ ದೊಂಬಿಗಾಗಿ

4) ಸುಬ್ರಹ್ಮಣ್ಯಂರವರಮೇಲೆ 153 A. ಸೆಕ್ಷನ್ ಪ್ರಕಾರ ರಾಜದ್ರೋಹಕ್ಕಾಗಿ.

5) ತಿಮ್ಮರಾಜಪ್ಪ ಮತ್ತು ಇತರರಮೇಲೆ ದೊಂಬಿಗಾಗಿ.

6) ಚಿಕ್ಕ ರಂಗಪ್ಪನಮೇಲೆ ಗಾಯಪಡಿಸಿದ್ದಕ್ಕಾಗಿ

7) ಮುನಿಸ್ವಾಮಪ್ಪಮತ್ತು ಇತರರಮೇಲೆ ಗಾಯಪಡಿಸಿದ್ದಕ್ಕಾಗಿ.

ಅಬ್ಬಾಸ್ ಖಾನರಮೇಲೆ ಯಾವ ಮೊಕದ್ದಮೆಯೂ ಇಲ್ಲ

ದಿವಾನರಲ್ಲೂ ಸರ್ಕಾರದಲ್ಲೂ ನಂಬಿ...

ಮ|| ರಾ|| ಹೊಸಕೊಪ್ಪ ಕೃಷ್ಣರಾಯರವರು ಮ...ದ್ರಾಸಿನ ಸ್ವರಾಜ್ಯ ಪತ್ರಿಕೆಗೆ ಬರೆದಿರುವುದೇನೆಂದರೆ:-

ಅಸೆಂಬ್ಲಿಯಲ್ಲಿ ಅಕ್ಟೋಬರ್ ೩೦ ನೇ ತಾ|| ನ... ವಸ ಪತ್ರಿಕೆಗಳ ವಿಷಯವಾಗಿ ನಡೆದ ಚರ್ಚೆಯ... ಮ|| ರಾ|| ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರ... ರೊಡನೆ ನಾನು ಸಹಮತನಾಗಿದ್ದನೆಂಬ ಅಭಿಪ್ರಾಯ... ವು ಬರುವಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾ... ಇದು ಸರಿಯಲ್ಲ. ಇದರಿಂದ ವಾಚಕರಲ್ಲಿ ತಪ್ಪು ಅಭಿಪ್ರಾಯ ಉಂಟಾಗಬಹುದು. ಶ್ರೀಮನ್ಮಹಾರಾಜ... ವರಿಗೆ ರಾಜಭಕ್ತಿಯನ್ನು ಅರ್ಪಿಸುವ ವಿಷಯದಲ್ಲಿಯೂ... ಟುಡೆ ಪತ್ರಿಕೆಯ ವರದಿಯನ್ನು ಖಂಡಿಸುವದರಲ್ಲಿಯೂ... ನಾನು ಅವರೊಡನೆ ಸಹಮತನಾಗಿದ್ದೆ. ದಿವಾನರಲ್ಲಿ ...ಶ್ವಾಸವನ್ನು ಸೂಚಿಸುವ ಸಲಹೆಗೆ ನಾನು ಸಹಮ... ನಾಗಿರಲಿಲ್ಲ. ನನ್ನ ಅಭಿಪ್ರಾಯದಲ್ಲಿ ವಿಶ್ವೇಶ್ವರಯ್ಯ... ಕಮಿಟಿಯವರ ವರದಿಯು ಪ್ರಕಟವಾಗುವವರೆಗೂ ಸ... ಕಾರದ, ಅಧಿಕಾರಿಗಳ ಮತ್ತು ಪತ್ರಿಕೆಗಳ ವಿಷಯವಾಗಿ ಅಭಿಪ್ರಾಯವನ್ನು ಕೊಡುವುದಕ್ಕಾಗುವುದಿಲ್ಲ. ಅ... ಸೆಂಬ್ಲಿಯಲ್ಲಿ ಬೆಂಗಳೂರು ಗಲಭೆಗಳ ವಿಷಯವಾಗಿ ... ರ್ಕಾರದಧಿಕಾರಿಗಳ ಕರ್ತವ್ಯಾ ಕರ್ತವ್ಯಗಳನ್ನು ವಿಮರ್ಶಿಸುವ ಠರಾವೇ ಚರ್ಚೆಗೆ ತರಕೂಡದೆಂದು ಅಡ್ಡಿಪಡಿ... ದಾಗ್ಗ್ಯೆ ಸರ್ಕಾರದ ವಿಷಯವಾಗಿಯೂ; ದಿವಾನರ ವಿ... ಯವಾಗಿಯೂ ಏನು ಅಭಿಪ್ರಾಯವನ್ನು ಕೊಡುವು... ಕ್ಕೆ ಸಾಧ್ಯ? ಅಸೆಂಬ್ಲಿಯಲ್ಲಿ ಆಗ ನಡೆದಿದ್ದುದು ... ದು ಠರಾವಿನ ಚರ್ಚೆಯಲ್ಲ. ಚರ್ಚೆಯ...ದ ವಿಷಯ... ಕಾರ್ಯಕ್ರಮದಲ್ಲಿರಲಿಲ್ಲ. ಮೆಂಬರುಗಳು ಅಸೆಂಬ್ಲಿ... ಹದ್ದು ಬಸ್ತನ್ನು ಮೀರಿ ಚರ್ಚೆಯನ್ನು ನಡೆಸಿದ... ಮ|| ರಾ|| ಭಾಷ್ಯಂ ಅಯ್ಯಂಗಾರ್ಯರವರೇ ಈ ... ರ್ಚೆಯು ನಿಬಂಧನೆಗಳಿಗೆ ವಿರೋಧವೆಂದು ಸೂಚಿಸಿ... ರು. ಅಧ್ಯಕ್ಷರವರು ದಾರಿಬಿಟ್ಟು ದಾರಿಗೆಹೋಗಿ... ಘಂಟೆಗಳ ಕಾಲ ಅಸೆಂಬ್ಲಿಯು ಅಡ್ಡಹಾದಿಯ ಚರ್ಚೆಯನ್ನು ನಡೆಸುವಂತೆ ಅವಕಾಶಕೊಟ್ಟರು. ನಾನು ... ತ್ತೊಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಪತ್ರಿಕೆಗಳನ್ನು ನಿರ್ಬಂಧಪಡಿಸಬೇಕೆಂದಾಗಲಿ, ಅವುಗಳ ... ಕ್ರಮವನ್ನು ನಡೆಸಬೇಕೆಂದಾಗಲಿ ಅಸೆಂಬ್ಲಿಯು ... ಮತದಿಂದ ಅಭಿಪ್ರಾಯವನ್ನು ಕೊಡಲಿಲ್ಲ. ಆ ವಿಷಯ... ದ ತೀರ್ಮಾನವೇ ಅಸೆಂಬ್ಲಿಯ ಮುಂದೆ ಬಂದಿರಲಿಲ್ಲ.

ಮ|| ರಾ|| ಕೃಷ್ಣರಾಯರು ಸಕಾಲದಲ್ಲಿ ತಮ್ಮ ... ಪ್ರಾಯವನ್ನು ವ್ಯಕ್ತಪಡಿಸಿರುವರು. ಶ್ರೀಮನ್ಮಹಾರಾಜರವರ ಮೇಲೆ ಇರುವ ವಿಶ್ವಾಸಕ್ಕೂ ಸರ್ಕಾರದ ... ರ ಮೇಲೆ ಇರುವ ವಿಶ್ವಾಸಕ್ಕೂ ವ್ಯತ್ಯಾಸವಿರುವ... ಸರ್ಕಾರದವರಮೇಲೆ ವಿಶ್ವಾಸವಿಲ್ಲವೆಂದು ಹೇಳಿದ... ದು ರಾಜದ್ರೋಹವಲ್ಲ. ಪತ್ರಿಕೆಗಳ ವಿಷಯವಾ... ಮ|| ರಾ|| ನೀಲಗಿರಿ ಸಂಜೀವಯ್ಯನವರು ಹೊರತು ಇತರರು ಯಾರೂ ಅವುಗಳನ್ನು ನಿಲ್ಲಿಸಬೇಕೆಂದು ... ಲಿಲ್ಲ.

ಸೂಚನೆ.

ದೀಪಾವಳಿಯ ಹಬ್ಬದ ಪ್ರಯುಕ್ತ ನಾಳೆ ದಿವಸ ಪತ್ರಿಕೆಯು ಹೊರಡುವುದಿಲ್ಲ.

ಮ್ಯಾನೇಜರ್


TAYINADU (Daily Edition.)

The Leading Nationalist Daily of Mysore.

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಎಂ. ಎಸ್. ಶಿದ್ದಪ್ಪ ಬ್ರದರ್ಸ್‌ರವರು ಉತ್ತಮವಾದ ಹಾರ್ಮೋನಿಯಂಗಳನ್ನು ನಗದು ಖರೀದಿಗೂ ತಿಂಗಳು ಗಟ್ಟೀ ಕಂತಿಗೂ ಸಹಾ ಯಾರಯಾರಿಗೆ ಬೇಕಾದರೂ ಸಪ್ಲೈ ಮಾಡುತ್ತಿರುವ [illegible] ದ ಬೆಲೆಯ ಔಷಧವನ್ನು ಸರ್ವರ ಅನುಕೂಲಕ್ಕಾಗಿ ಪೆಟ್ಟಿ 1 ಕ್ಕೆ 0—8—0 ಮೇರೆ ಬೆಲೆಗೆ ಇಟ್ಟಿದ್ದಾರೆ. ನಿಮ್ಮ ಹೆಸರು ವಿಲಾಸಗಳ ರಬ್ಬರ್ ಮೊಹರು [illegible] ಎಲ್ಲ ಪದಾರ್ಥಗಳ ಕ್ಯಾಟಲಾಗಿಗೆ ಬರೆಯುವ ವಿಳಾಸ— ಎಂ. ಎಸ್. ಶಿದ್ದಪ್ಪ ಬ್ರದರ್ಸ್. ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.



For High Class Jewellery, Silver Ware and other presentation novelties, please consult and buy from

Sri Lakshmi Venkateswara & Co
Manufacturing Jewellers, Nagarthpet,
Bangalore City.

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ ಪೇಚಾಡುವದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾವು ಯತರ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧—೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡಕನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಸೀತವಾತ ಜ್ವರ, ಹಲ್ಲುತ್ತುವ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ, ಪ್ಲೇಗು ಜ್ವರ, ಇನ್‌ಫ್ಲುಯಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮು, [illegible] ಉರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂಧುಗಳುಹಿಡಿತ ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ ಇವೇ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1—0—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—[illegible]—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ,
ಶ್ರೀ ಸೀತಾರಾಘವವೈದ್ಯಶಾಲಾ.
ಹೆಡ್ಡಾಫೀಸು ಮೈಸೂರು.

WANTED.

Wanted Candidates for Telegraph and Stati[on] Master's Classes. Full particulars and Railway Fa[re] Certificate on 2 annas stamp.

Apply to:—
Imperial Telegraph College,
Nai Sarak, Del[hi]

TO LET

Printed and published by P. R. Ramaiya
at Sri Rama Press, D. Subbiah Road, Mysore.

Regd No. M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ:
ಪಿ. ಆರ. ರಾಮಯ್ಯ

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಗುರುವಾರ ೧೫ ನವೆಂಬರ್ ೧೯೨೮ [ಸಂಚಿಕೆ

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ರಾಷ್ಟ್ರ ... ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co Excelsior Type-writing Institute, Balepet, Bangalore City.
2. Koppada Ramakrishniah, Agent, Hassan
3. Siddiah, Sri Nanjundeswara Bank Ltd Nanjangud
4. M. N. S & Sons, Lansdowne Buildings Mysore.
5. B V Pundit & Co, Lakshmivilas Road Mysore.
6. Friends' Union, Mysore.
7. Sweet Mart, Lansdowne Buildings, Mysore.

TAI NADU

15-11-1928.

ಜನರ ಕಳವಳ

[illegible] ಬೆಂಗಳೂರು ಗಲಭೆ [illegible] ವಿಷಯವಾಗಿ ಈವಿನಿಂಗ್ ಮೇಲ್ ಪತ್ರಿಕೆಯು ತಿಳಿಸಿದ ವಿಷಯವನ್ನು ಪ್ರಕಟಿಸಿದೆವು. ಅಬ್ಬಾಸ್ ಖಾನರ ಮೇಲೆ ಯಾವ ವಿಧವಾದ ಕ್ರಮವೂ ನಡೆಸಲ್ಪಡುವುದಿಲ್ಲವೆಂದು ಕೇಳಿ ಜನಗಳಿಗೆ ಕಳವಳವುಂಟಾಗಿರುವುದು. ಇದು ಸ್ವಾಭಾವಿಕ. ಬೆಂಗಳೂರು ಗಲಭೆಯ ವಿಷಾದಾಂತಕ ನಾಟಕದಲ್ಲಿ ಅಬ್ಬಾಸ್ ಖಾನರು ಪ್ರಧಾನ ನಾಯಕರು ಎಂಬುದಕ್ಕೆ ಸಂದೇಹವಿಲ್ಲ. ಅನೇಕರಿಗೆ ಅವರ ಮೇಲೆ ಪ್ರಬಲವಾದ ಸಂದೇಹಗಳಿವೆ. ಜುಲೈ 30 ನೇ ತಾರೀಖಿನ ರಾತ್ರಿ ಮಹಮ್ಮದೀಯರು ಅವರ ಮನೆಯಲ್ಲಿ ಲಾಠಿ ಮೊದಲಾದವುಗಳನ್ನು [illegible] ಹೊಡೆಯುವುದಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದರೆಂಬುದು ಅನೇಕ ವಿಧವಾಗಿ ರುಜುವಾತಾಗಿರುವುದು. ಅವರ ಮನೆಯಿಂದಲೇ ಗುಂಡುಗಳು ಬಂದವೆಂದೂ ಅನೇಕರು ರುಜುವಾತು ಕೊಟ್ಟಿರುವರು. ಅಬ್ಬಾಸ್ ಖಾನರು ಈ [illegible] ಅವರ [illegible]ಲ್ಲದೆ ಅವರ ಮನೆಯಲ್ಲಿಯೇ ಇಷ್ಟು ಘಾತಕವಾದ ಕೆಲಸಗಳು ನಡೆಯಿತೆಂದು ನಂಬುವುದು ಮನುಷ್ಯಮಾತ್ರರಿಗೆ ಅಸಾಧ್ಯ. ಈಗಲೇ ನಾವು ಏನನ್ನೂ ಹೇಳುವುದಿಲ್ಲ. ಮುಚ್ಚಿದ್ದ ಮೊಗಲು ದಾಟಿದ ಮೇಲೆ ಅಬ್ಬಾಸ್ ಖಾನರ ಮೇಲೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಯಾವ ಮೊಕದ್ದಮೆಯನ್ನೂ ಹಾಕಲಿಲ್ಲವೆಂಬು[illegible] ನಾವು [illegible]. ಅದು [illegible] ಸಮಾಧಾನವನ್ನು ವಹಿಸುವೆವು. ಆದರೆ [illegible] ಅಬ್ಬಾಸ್ ಖಾನರನ್ನು [illegible]

ಪತ್ರಿಕೆಗಳ ಮೇಲೆ ಪತ್ರೋಟಿ

[illegible] ಯಾವ ವಿಧವಾದ ಪತ್ರೋಟಿ [illegible] ಕಪಟಿ [illegible] ಸರ್ಕಾರದವರು ಪತ್ರಿಕೆಗಳ ಮೇಲೆ [illegible] ಪತ್ರಿಕೆಗಳ [illegible] ಸರ್ಕಾರದವರು [illegible] ಎಸ್. ಎಸ್. [illegible] ತಿಳಿಸಿದರು. ಪತ್ರಿಕಾಕರ್ತರ ಸಂಘ [illegible] ಮೊದಲ ಮುದ್ರಿತ ಪತ್ರಿಕೆಗಳನ್ನು ಪತ್ರೋಟಿಗೆ [illegible]ದೆಂದು ಕಪಟಿಯ ಕೆಲವು ಮಿಂಚುಗಳ [illegible]ಜಿಸಿರುವ ಹಾಗೆ ಕಾಣುತ್ತದೆ. ಕೆಲವು ಮಿಂಚ[illegible] ಸಂಪಾದಕರ ವಿದ್ಯೆ, ಪದವಿ ಮೊದಲಾದವುಗ[illegible] ಕೇಳಿದರು. ಪತ್ರಿಕೆಗಳಿಗೆ ಯಾವ ವಿಧವಾದ ಪ್ರತಿಬಂಧಕಗಳನ್ನು [illegible] ದೇಶದ ಏಳಿಗೆಗೆ ಸರಿಯಲ್ಲ. ಸರ್ಕಾರದವರು [illegible] ಮೊದಲನೇ ತಾರೀಖಿನಿಂದ ಪದಿನೈದನೇ ತಾರೀಖಿನವರೆಗೆ ಸ್ಥಳೀಯ ಪತ್ರಿಕೆಗಳನ್ನು ಬಂಧಿಸಿದ್ದರಿಂದಲೇ ಹೊರಗಿನ ಪತ್ರಿಕೆಗಳವರೆಲ್ಲಾ ನಮ್ಮ ಮೈಸೂರಿಗೆ ಬಂದು ಬೆಂಗಳೂರು ಗಲಭೆಯ ವಿಷಯವನ್ನು ಪರ್ವತದಂತೆ ಬೆಳೆಸಿದರು. ಹೊರಗಿನ ಪತ್ರಿಕೆಗಳು ಹಾಗೆ ಮಾಡುವುದನ್ನು ನೋಡಿ ಸ್ಥಳೀಯ ಪತ್ರಿಕೆಗಳು ಬಂಧ ವಿಮೋಚನೆಯಾದ ಮೇಲೆ ಬೆಂಗಳೂರು ಗಲಭೆಗಳ ವಿಷಯವನ್ನೇ ಎತ್ತಿ ಬರೆಯಲಾರಂಭಿಸಿದರು. ಸರ್ಕಾರದವರೂ ಶಾಂತರಾಗಿ ಕೆಲಸ ಮಾಡಿದ್ದರೆ ಇಷ್ಟೆಲ್ಲಾ ಕೋಲಾಹಲವಾಗುತ್ತಿರಲಿಲ್ಲ. ಹೊರಗಿನ ಪತ್ರಿಕೆಗಳ ಮೇಲೆ ನಮ್ಮ ಸರ್ಕಾರಕ್ಕೆ ಯಾವ ವಿಧವಾದ ಹತೋಟಿಯೂ ಇಲ್ಲ. ಆದರೆ ಸ್ಥಳೀಯ ಪತ್ರಿಕೆಗಳ ಮೇಲೆ ತಮ್ಮ ದರ್ಪವನ್ನು ಚಲಾಯಿಸುವುದು ಅಷ್ಟೇನು ಧೀರತನವಲ್ಲ. ಈಗಲೂ ಪ್ರೆಸ್ ಕಾನೂನನ್ನು ಕಿತ್ತುಹಾಕಿ ಇಂಡಿಯನ್ ಪೀನಲ್ ಕೋಡಿನ ಕಲಮ್‌ಗಳನ್ನೇ ಆಶ್ರಯಿಸಿದರೆ ಸಾಕು. ಪ್ರಜಾಭಿಪ್ರಾಯವು ಶಿಕ್ಷಿತವಾದಂತೆಲ್ಲಾ ಪತ್ರಿಕೆಗಳು ಚೆನ್ನಾಗುವುವು. ಇಲ್ಲದ ಸಲ್ಲದ ಬಂಧನೆಗಳಿಂದ ಸತ್ಯಕ್ಕೂ ಧರ್ಮಕ್ಕೂ ಚ್ಯುತಿಯುಂ ಬರುವುದು.

ವಿಶ್ವಕರ್ನಾಟಕದ ಮೇಲೆ ಮೊಕದ್ದಮೆ.

ವಿಶ್ವಕರ್ನಾಟಕದಲ್ಲಿ ಕುಣಿಗಲ್ ತಾಲ್ಲೋಕ್ ಅಮಲ್ದಾರರಮೇಲೆ ದೋಷಾರೋಪಣೆಗಳು ಪ್ರಕಟವಾಗಿರುವುದರಿಂದ ಅಲ್ಲಿಯ ಅಮಲ್ದಾರರು ಸಂಪಾದಕರಮೇಲೆ ಪೀನಲ್‌ಕೋಡ್ 500 ನೇ ಸೆಕ್ಷನ್ ಪ್ರಕಾರ ಮೊಕದ್ದಮೆ ನಡೆಸುತ್ತಾರೆ.

ಮಾನನಷ್ಟದ ದಾವೆ.

ಮ. ರಾ॥ ತಗಡೂರು ರಾಮಚಂದ್ರರಾಯರು ವೃತ್ತಾಂತಪತ್ರಿಕಾ ಸಂಪಾದಕರಾದ ಮಿ॥ ಥಾಮಸ್ ಗಾರ್ಡ್ನರವರಮೇಲೆ ದಾಖಲ್ಮಾಡಿದ್ದ ಮೊಕದ್ದಮೆಯು ಕಳೆದ ಶನಿವಾರ ಜಸ್ಟಿಸ್ ಆಫ್ ದಿ ಪೀಸ್ ರವರಾದ ಮಿ॥ ಡೋಲೋರವರಿಂದ ವಿಚಾರಿಸಲ್ಪಟ್ಟು ಡಿಸಂಬರ್ 1 ನೇ ತಾರೀಖಿಗೆ ಅಡ್ಜರ್ನ್ ಆಗಿರುತ್ತೆ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ದೇವಾಲಯ.

ಸ್ವಾಮಿ,

ಮ॥ ವಿ. ರಂಗಣ್ಣನವರು 13—10—28 ರಲ್ಲಿ ನನಗೊಂದು ಪತ್ರವನ್ನು ಬರೆದು ಪ್ರಸಿದ್ಧಪಡಿಸಿರುತ್ತಾರೆ. ಅವರ ಮತ್ತು ಮಹಾಜನಗಳ ಸಮಾಧಾನಕ್ಕಾಗಿ ಎರಡು ಮಾತುಗಳನ್ನು ಬರೆಯುತ್ತೇನೆ.

ಹಿಂದೂಗಳಲ್ಲಿ ಯಾವ ರಾಜ್ಯದಲ್ಲಿ ಯಾವ ವಿಷಯಕವಾದ ತರ್ಜೆ ಬಂದಾಗ್ಯೂ ಸಮಾಜದವರೂ ಸರ್ಕಾರದವರೂ ಶ್ರೀ ಶ್ರೀಜಗದ್ಗುರು ಮಹಾಸ್ವಾಮಿಗಳಲ್ಲಿ ವಿಜ್ಞಾಪಿಸಿಕೊಂಡು ಅವರು ಹೇಳಿದಂತೆ ನಡೆದುಕೊಳ್ಳುವುದು ಎಲ್ಲರಿಗೂ ವಿದಿತವಾಗಿಯೇ ಇದೆ. ನಮ್ಮ ಮೈಸೂರು ಸೀಮೆಯಲ್ಲಂತೂ ನಮ್ಮ ಮಹಾರಾಜರವರಿಂದ ಪರಮಪೂಜ್ಯತೆಯನ್ನು ಪಡೆದಿರುವ ಶ್ರೀ ಜಗದ್ಗುರುಗಳವರ ಆಜ್ಞೆಗಳ ವಿಷಯದಲ್ಲಿ ಈ ರಂಗಣ್ಣನವರು ಬರೆದಿರುವ ಬರವಣಿಗೆಗಳು ಲೋಕನಿಂದಿತವಾದವುಗಳು. ಮೈಸೂರು ಸೀಮೆಯಲ್ಲಿ ಸಾಮಾಜಿಕ ಮತ್ತು ಮತಸಂಬಂಧವಾದ ವಿಷಯಗಳಲ್ಲಿ ಸರ್ಕಾರದವರು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆಜ್ಞೆಯನ್ನೇ ಅನುಸರಿಸಿ ತೀರ್ಮಾನದಂತೆ ಭಾವಿಸಿ ನಡೆದುಕೊಂಡಿರುವ ಅನೇಕ ನಿದರ್ಶನಗಳು ಸಿದ್ಧವಾಗಿವೆ.

ನಂಜನಗೂಡಿನ ಮ॥ ಎನ್. ಸುಬ್ರಹ್ಮಣ್ಯಯ್ಯನವರು ವೀರಕೇಸರಿಯಲ್ಲಿ ಬರೆದದ್ದು ಒಪ್ಪತಕ್ಕದ್ದೆಂದು ನಾನು ಭಾವಿಸುತ್ತೇನೆ. ನಾನು ನಂಜನಗೂಡಿನಲ್ಲಿ ಅನೇಕ ಜನ ಬ್ರಾಹ್ಮಣರನ್ನು ನೋಡಿದ್ದೇನು. ಅವರು ಇದಕ್ಕೆ ಸಹಾನುಭೂತಿಯುಳ್ಳವರಾಗಿಯೇ ಇದ್ದಾರೆ. ಈ ರೀತಿಯಾಗಿ ತಡೆಯುವುದು ಶುದ್ಧ ತಪ್ಪೆಂದು ಅನೇಕರು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀ ಶೃಂಗೇರಿ ಮಠದಿಂದ ದಯಪಾಲಿಸಲ್ಪಟ್ಟಿರುವ ಶ್ರೀಮುಖಗಳನ್ನು ಆ ಮಠದ ಶಿಷ್ಯರೆಲ್ಲರೂ ಒಪ್ಪುತ್ತಾರೆ. ಮತ್ತು ಅದರಂತೆ ನಡೆಯುತ್ತಾರೆ. ಎಂದು ನಾನು ತಿಳಿದುಕೊಂಡಿರುತ್ತೇನೆ. "ಕಪ್ಪಕಾಣಿಕೆಗಳ ತೃಪ್ತ್ಯರ್ಥವಾಗಿ ಶ್ರೀಮಠದ ಅಧಿಕಾರಸ್ಥಾನದಿಂದ ಹುಟ್ಟಿರಬಹುದೆಂದು ಹೇಳುವುದು ಶುದ್ಧ ಸುಳ್ಳು. ಮತ್ತು ಇದು ಸರಿಯಲ್ಲ. ಇಂಥಾ ಕಾಗದಗಳು ಫಲಕಾರಿಯಾದದ್ದಲ್ಲ." ಎಂದು ಶ್ರೀಮುಖವನ್ನು ತಿರಸ್ಕರಿಸಿ ಬರೆಯುವುದು ಯುಕ್ತವಲ್ಲ. ಮತ್ತು ನೀತಿಯಲ್ಲ.

1806 ರಲ್ಲಿ ಮೈಸೂರು ಸರ್ಕಾರದವರು ಮಾಡಿದ ಆರ್ಡರು ಕೇವಲ ನಿರಂಕುಶ ಪ್ರವರ್ತನೆಯದ್ದೆಂದೂ ಒಂದು ಪಕ್ಷವನ್ನೇ ವಹಿಸಿ ದಬ್ಬಾಳಿಕೆಯನ್ನು ಮಾಡಿದ್ದೆಂದೂ ನಾನು ಭಾವಿಸುತ್ತೇನೆ. ಆ ದಬ್ಬಾಳಿಕೆಯಿಂದ ನಮ್ಮ ಜನರಿಗೆ ಉಂಟಾಗಿದ್ದ ಕಿರುಕುಳಗಳನ್ನೂ ಇತರ ಬ್ರಾಹ್ಮಣರು ನಮ್ಮ ಜನಾಂಗದ ಏಳಿಗೆಗೆ ಕುಂದುಕವನ್ನುಂಟುಮಾಡುತ್ತಿದ್ದುದನ್ನೂ ಶ್ರೀ ಶೃಂಗೇರಿ ಜಗದ್ಗುರುಗಳಲ್ಲಿ ಅರಿಕೆಮಾಡಿಕೊಳ್ಳಲು ಶ್ರೀ ಶ್ರೀಗಳವರು 10—1—1867 ರಲ್ಲಿ ಈ ವಿಷಯವನ್ನು ಪರಿಶೀಲಿಸಿ ಇತರರು ಕೊಡುತ್ತಿದ್ದ ಹಿಂಸೆಯು ತಪ್ಪೆಂದೂ ಇನ್ನು ಮೇಲೆ ಇವರುಗಳಿಗೆ ಆ ರೀತಿಮಾಡಬಾರದೆಂದೂ ಶಿಷ್ಯವರ್ಗದವರಿಗೆಲ್ಲಾ ಆಜ್ಞೆ ಮಾಡಿರುತ್ತಾರೆ. ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಯವರಾಗಿದ್ದ ಮ॥ ವಿಜಯೇಂದ್ರರಾಯರವರು ಶ್ರೀ ಶ್ರೀಗಳವರಿಂದಲೇ ಬಹಿಷ್ಕಾರವನ್ನು ಹಾಕಿದ್ದವರನ್ನು ಮಾತ್ರ ಸರ್ಕಾರೀ ದೇವಾಲಯ ಮತ್ತು ಅನ್ನಸತ್ರಗಳಿಗೆ ಸೇರಿಸಕೂಡದೆಂದು 1887 ರಲ್ಲಿ ಅಪ್ಪಣೆಯನ್ನು ಮಾಡಿದ್ದಾರೆ. ಹೀಗಿರುವಲ್ಲಿ ಹಳೇನಾಡು ಕರ್ನಾಟಕ ಬ್ರಾಹ್ಮಣರಿಗೆ ಬಹಿಷ್ಕಾರ ಹಾಕಿದವರಾರು? ಯಾವ ಕಾರಣದಿಂದ ತಡೆಯುತ್ತಾರೆ? ಅಲ್ಲದೆ ಶ್ರೀ ಶ್ರೀಗಳವರು ಶೃಂಗೇರಿಗೆ ದಯಮಾಡಿದ ಮೇಲೆ ಈಗಿನ ಕಾಲಸ್ಥಿತಿ, ಲೋಕಾನುಭವ, ಗ್ರಾಮಾಂತರಗಳ ವಿಚಾರಣೆ, ಶಾಸ್ತ್ರಪರಿಶೀಲನೆ ಇವುಗಳೆಲ್ಲವನ್ನೂ ಮಾಡಿ ನಮ್ಮ ಜನಗಳಿಗೆ 12—10—1906 ರಲ್ಲೇ ಶ್ರೀಮುಖವನ್ನು ದಯಪಾಲಿಸಿರುತ್ತಾರೆ. ಹೀಗಿರುವಲ್ಲಿ ಮ॥ ರಂಗಣ್ಣನವರು ಪುರಾತನ ದ್ವೇಷಾಸೂಯೆಯ ಮತ್ತು ಪಕ್ಷಪಾತದ ಉದಾಹರಣೆಯನ್ನು ಕೊಟ್ಟು ಬರೆದಿರುವುದು ನಿಷ್ಪ್ರಯೋಜನವಾದದ್ದೆಂದು ನಾನು ತಿಳಿಯುತ್ತೇನೆ. ಇಲ್ಲದ ಸಲ್ಲದ ಕುಂಟುಕಾರಣಗಳನ್ನು ಎತ್ತಿ ಒಂದು ಜನಾಂಗಕ್ಕೆ ತೊಂದರೆಯನ್ನುಂಟುಮಾಡುವುದು ಸರಿಯಲ್ಲ. ಈ ವಿಷಯದಲ್ಲಿ ಸರ್ಕಾರದವರು ಸರಿಯಾಗಿ ವಿಚಾರಣೆ ಮಾಡಿ ಇನ್ನೂ ತಮ್ಮ ಕೊನೆಯ ಅಪ್ಪಣೆಯನ್ನು ಕೊಟ್ಟಿಲ್ಲ. ಅವರು ಸರಿಯಾಗಿ ವಿಚಾರಣೆ ಮಾಡಿ ನ್ಯಾಯಾನ್ಯಾಯಗಳನ್ನು ಪರಿಶೀಲಿಸುವರೆಂದು ನಂಬುತ್ತೇನೆ.

ತಗಡೂರು ರಾಮಚಂದ್ರರಾವ್.

ತಾಯಿ ನಾಡು.

15—11—1928

ವರ್ತಮಾನ ಸಂಗ್ರಹ

ನಾಗಪ್ಪನವರಮೇಲೆ ಸವಾಲು.

ಬೆಂಗಳೂರು ಅಡ್ವೋಕೇಟರಾದ ಮ|| ಡಿ. ಶಾಮರಾಯರು ಮ|| ಬಿ. ನಾಗಪ್ಪನವರ ಮೇಲೆ ಒಂದು ಸವಾಲನ್ನು ಹಾಕಿರುವರು. ಅದೇನೆಂದರೆ, ನಿಜವನ್ನು ಮರೆಮಾಚಲು ಮ|| ನಾಗಪ್ಪನವರು ಕೆಲವು ಅಪರಾಧಿಗಳಿಗೆ ಬೆಂಬಲವಾಗಿ ನಿಂತು ಬಹಳ ಸಹಾಯಮಾಡಿದ್ದಾರೆ. ಈ ವಿಷಯವು ಮ|| ರಾಜುರವರಿಗೆ ಗೊತ್ತಿರುವುದಕ್ಕಿಂತ ನನಗೆ ಹೆಚ್ಚಾಗಿ ಗೊತ್ತಿದೆ. ಅನೇಕ ರುಜುವಾತಾದ ಕಾಗದಪತ್ರಗಳು ನನ್ನಲ್ಲಿವೆ. ಸಮಿತಿಯವರು ನನ್ನನ್ನು ಕರೆಸಿ ವಿಚಾರಣೆಮಾಡಿದರೆ ಅವುಗಳೆಲ್ಲವನ್ನೂ ಹಾಜರ್ಮಾಡುತ್ತೇನೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರು.

ಇವರನ್ನು ಚುನಾಯಿಸುವ ಅಧಿಕಾರವನ್ನು ಕೌನ್ಸಿಲ್ಲಿಗೆ ಕೊಡಬೇಕೆಂದು ಕಳೆದ ಶನಿವಾರ ಮಧ್ಯಾಹ್ನ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಸಭೆ ಮಾಡಿ ಠರಾವು ಮಾಡಿದರು. ಮ|| ಅಪ್ಪಯ್ಯನವರು ಈ ಠರಾವನ್ನು ತಂದರು. ಮ|| ಕೆ. ಶ್ರೀಕಂಠಯ್ಯನವರು ಇದನ್ನು ಅನುಮೋದಿಸಿದರು. ಮ|| ಗಳಾದ ಹನುಮಂತಪ್ಪ, ರಾಮಲಾಲ್ ತಿವಾರಿ, ನರಸಿಂಗರಾವ್, ವೆಂಕಟೇಶಯ್ಯ, ಗೋವಿಂದರಾವ್ ಇವರುಗಳು ಇದನ್ನು ಪುಷ್ಟೀಕರಿಸಿದರು. ಕ್ಯಾಪ್ಟನ್ ವೈ. ವಿ. ಅಯ್ಯ, ಸಿದ್ದೀರಪ್ಪ, ಅಬ್ದುಲ್ ಖಾದರ್, ವಿ. ವೆಂಕಟರಮಣಪ್ಪ ಇವರುಗಳು ಇದನ್ನು ವಿರೋಧಿಸಿದರು. 12 ಜನ ಅನುಕೂಲವಾಗಿಯೂ 4 ಜನ ಪ್ರತಿಕೂಲವಾಗಿಯೂ ಓಟುಮಾಡಿದರು.

ಪಟಾಸಿನಿಂದ ಅನಾಹುತ.

ಬೆಂಗಳೂರು ಬಸವನಗುಡಿಯಲ್ಲಿ ಕೆಲವು ಹುಡುಗರು ಪಟಾಸನ್ನು ಕೊಳ್ಳುವುದಕ್ಕಾಗಿ ಒಂದು ಅಂಗಡಿಗೆ ಹೋಗಿ ತೆಗೆದುಕೊಂಡು ವಾಪಸ್ ಬರುವಾಗ್ಗೆ ಪಟಾಸಿನ ಪೊಟ್ಟಣವನ್ನು ಕಾಣದೆ ಅಮುಕಿದರೆಂದೂ ಅದು ಸಿಡಿದು ಆ ಇಬ್ಬರು ಹುಡುಗರೂ ಕೂಡಲೆ ಮೃತಪಟ್ಟರೆಂದೂ ತಿಳಿದುಬಂದಿದೆ.

ಪಬ್ಲಿಕ್ ಪ್ರಾಸಿಕ್ಯೂಟರ್.

ಸರ್ಕಾರದವರು ಬಿ. ಎನ್. ವಿಜಯದೇವ ಎಂ. ಎ. ಬಾರ್‌ಅಟ್‌ಲಾ ರವರನ್ನು ಅಕ್ಟೋಬರ್ 15 ತಾ|| ನಿಂದ ಮೂರುವರ್ಷಗಳವರೆಗೆ ಪಬ್ಲಿಕ್ ಪ್ರಾಸಿಕ್ಯೂಟರನ್ನಾಗಿ ನಿಯಮಿಸಿರುತ್ತಾರೆ.

ಬೆಂಗಳೂರು ನಿಷೇಧ ಸಭೆ.

ಕಳೆದ ಶನಿವಾರ ಬೆಂಗಳೂರು ಗಾಂಧಿಮೈದಾನದಲ್ಲಿ ಮಹಮದ್ ಹನೀಫರ ಅಧ್ಯಕ್ಷತೆಯಲ್ಲಿ ಒಂದು ಪ್ರಚಂಡ ಸಭೆಯು ನಡೆಯಿತು. ಅಧ್ಯಕ್ಷರು ಬೆಂಗಳೂರು ನಾಗರೀಕರ ಪರವಾಗಿ ಲಾಲಾಲಜಪತಿರಾಯ ಮೊದಲಾದವರಮೇಲೆ ಲಾಹೋರ್ ಪೋಲೀಸಿನವರು ನಡೆಸಿದ ಅತ್ಯಾಚಾರಕ್ಕಾಗಿ ಖಂಡನೆಯನ್ನು ವ್ಯಕ್ತಪಡಿಸಿದರು.

ಕಾಫಿಪ್ಲಾಂಟರ್ ಎಂ. ಸಿ. ಮಲ್ಲಪ್ಪನವರು ಡಿಸ್‌ಮಿಸ್‌ಆದ ಉಪಾಧ್ಯಾಯರುಗಳಬಗ್ಗೆ ಸರ್ಕಾರದ ವರ್ತನವನ್ನು ಖಂಡಿಸಿ ಠರಾವನ್ನು ತಂದರು, ಮ|| ರಾ|| ಮಿ|| ಲಕ್ಷ್ಮೀನಾರಾಯಣಪ್ಪನವರೂ ಮ|| ರಾ|| ತಾತಾಚಾರ್ಯಶರ್ಮರವರೂ ಆ ಠರಾವನ್ನು ಪುಷ್ಟೀಕರಿಸಿದರು. ಅದು ಸರ್ವಾನುಮತದಿಂದ ಪಾಸಾಯಿತು.

ಮ|| ರಾ|| ಎಲ್. ಎಸ್. ರಾಜುರವರು ಅಧ್ಯಕ್ಷರವರಿಗೆ ವಂದನೆಯನ್ನರ್ಪಿಸಿದರು. ಸಭೆಯು ಮುಕ್ತಾಯವಾಯಿತು.

ಪ್ಲೇಗು.

ಈಗ ಕೆಲವು ದಿವಸಗಳ ಹಿಂದೆ ಕಾಲೇಜು ಹಾಸ್ಟಲಿನಲ್ಲಿ ಇಲಿಗಳು ಬಿದ್ದದ್ದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ಸರ್ಕಾರದವರು ಶೇಷಾದ್ರೀ ಹೌಸಿನಲ್ಲಿ ವಾಸಿಸುವುದಕ್ಕೆ ಸ್ಥಳವಸತಿಯನ್ನು ಕೊಟ್ಟಿದ್ದಾರೆ. ಮತ್ತು ಕಾಲೇಜ್ ಪ್ರಿನ್ಸಿಪಾಲರವರು ಪರಸ್ಥಳದ ವಿದ್ಯಾರ್ಥಿಗಳಿಗೆ ಊರುಗಳಿಗೆ ಹೋಗುವುದಕ್ಕೆ ಅಪ್ಪಣೆಯನ್ನು ಕೊಟ್ಟಿದ್ದಾರೆ. ಅದರಂತೆ ಕೆಲವು ವಿದ್ಯಾರ್ಥಿಗಳು ತಮ್ಮತಮ್ಮ ಸ್ಥಳಗಳಿಗೆ ಪ್ರಯಾಣಮಾಡಿರುವರು.

ನಿಷೇಧ ಸಭೆ.

ಬೆಂಗಳೂರು ಲಾ ಅಸೋಸಿಯೇಷನ್‌ನವರು ಕಳೆದ ಬುಧವಾರ ಒಂದು ವಿಶೇಷ ಸಭೆಯನ್ನು ಕೂಡಿಸಿ ಕೆಲವು ಠರಾವುಗಳನ್ನು ಪ್ಯಾಸು ಮಾಡಿದರು. ಸರ್ಕಾರದವರು ಕೋರ್ಟಿನ ವಿಚಾರಣೆ ಇಲ್ಲದೆ ತಮಗೆ ತೋಚಿದಂತೆ ಪತ್ರಿಕೆಗಳನ್ನು ನಿಲ್ಲಿಸಿದ್ದನ್ನೂ ಐದು ಬಡ ಉಪಾಧ್ಯಾಯರನ್ನು ಶ್ರೀಮನ್ಮಹಾರಾಜರ ಅರ್ಜಿಗೆ ರುಜು ಹಾಕಿದ್ದಾಕ್ಕಾಗಿ ಡಿಸ್‌ಮಿಸ್ ಮಾಡಿದನ್ನೂ ಈ ಸಭೆಯವರು ಖಂಡಿಸಿದರು.

ಗ್ರಹಣ ಮತ್ತು ಕಾವೇರಿ ಸ್ನಾನ.

ಸೂರ್ಯಗ್ರಹಣದ ದಿವಸ ಶ್ರೀಮನ್ಮಹಾರಾಜರವರು ಸ್ನಾನಕ್ಕೆ ಪಶ್ಚಿಮವಾಹಿನಿಗೆಹೋಗಿದ್ದರೆಂದೂ, ಕಾವೇರಿಯಲ್ಲಿ ನೀರು ಸಾಕಾದಷ್ಟು ಇಲ್ಲದ್ದರಿಂದ ಕನ್ನಂಬಾಡಿ ಕಟ್ಟೆಯ ಕೆಲವು ಬಿಡುಗಂಡಿಯನ್ನು ತೆರೆದರೆಂದೂ, ಸುಮಾರು ಎರಡುಅಡಿ ವರಿವಿಗೆ ಹೊಳೆಯಲ್ಲಿ ನೀರು ಹೆಚ್ಚಾಯಿತೆಂದೂ, ಆಕಸ್ಮಿಕವಾಗಿ ನೀರು ಹೆಚ್ಚಾಗಿ ಸೆಳೆತ ಜಾಸ್ತಿಯಾಯಿತೆಂದೂ ತಿಳಿಯಬರುತ್ತೆ. ಆದರೆ ಸ್ನಾನಕ್ಕೆ ಹೆಚ್ಚಾಗಿ ಅನುಕೂಲವಾಗುವಂತೆ ನೀರು ಬಿಟ್ಟದ್ದು ಸಂತೋಷಕರ.

ಉಪನ್ಯಾಸ.

ಬಲಿಪಾಡ್ಯಮಿ ಸಾಯಂಕಾಲ ಮಹಾವಿದ್ವಾನ್ ಹೊಸಹಳ್ಳಿ ಕೇಶವಾಚಾರ್ಯರವರು ವಾಮನಾವತಾರದ ವಿಷಯವಾಗಿಯೂ ಬಲಿಚಕ್ರವರ್ತಿಯ ದಾನದ ವಿಷಯವಾಗಿಯೂ ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಒಂದು ಉಪನ್ಯಾಸವನ್ನು ಕೊಟ್ಟರು.

ವಿಷಯ ಪ್ರತಿಪಾದನೆಯು [illegible] ಬಹಳ ಸ್ವಾರಸ್ಯವಾಗಿದ್ದವು. ಬಂದಿದ್ದವರೆಲ್ಲರೂ ಆಚಾರ್ಯರವರ ವಾಕ್ಶಕ್ತಿಯನ್ನೂ ಶಾಸ್ತ್ರಪ್ರವೀಣ್ಯತೆಯನ್ನೂ ಮೆಚ್ಚಿದರು. ಆಚಾರ್ಯರು ಗೀತೆಯಮೇಲೆ ಉಪನ್ಯಾಸಗಳನ್ನು ಪ್ರತಿಸಂಧ್ಯಾಕಾಲವೂ ಪಾಠಶಾಲೆಯಲ್ಲಿ [illegible] ಸುತ್ತಿರುವರು. ಪಾಠಶಾಲಾಧಿಕಾರಿಗಳು ಮಹಾಜನಗಳ ಉಪಯೋಗಕ್ಕಾಗಿ ಇಂತಹ ಪ್ರವಚನಗಳನ್ನು ಆಗಾಗ್ಗೆ ಏರ್ಪಡಿಸುತ್ತಲಿರುವುದು ಬಹಳ ಪ್ರಶಂಸನೀಯವು. ಈ ರಾಜಧಾನಿಯ ಮಹಾಜನಗಳೆಲ್ಲರೂ ಇಂತಹ ಪ್ರವಚನಗಳ ಉಪಯೋಗವನ್ನು ಹೆಚ್ಚು ಹೆಚ್ಚಾಗಿ ಪಡೆಯುವರೆಂದು ನಂಬುತ್ತೇವೆ.

ವಿಶ್ವೇಶ್ವರಯ್ಯನವರ ಕಮಿಟಿಯ ವರದಿ.

ವಿಶ್ವೇಶ್ವರಯ್ಯ ಕಮಿಟಿಯವರು ತಮ್ಮ ವರದಿಯನ್ನು ಡಿಸೆಂಬರ್ 10 ನೇ ತಾರೀಖಿನೊಳಗಾಗಿ ಪ್ರಕಟಿಸುವರೆಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ತಿಳಿಸುತ್ತದೆ.

ಹೊಸದಾಗಿ ನೇಮಿಸಲ್ಪಟ್ಟ ಒಂದು ಸಾಧನದ ಮೂಲಕ ಕಿವುಡರು ತಲ್ಲುಗಳ ಮೂಲಕ ವೈರ್‌ಲೆಸ್ಸಿನಿಂದ ಬರುವ ಸಂಗೀತ ಮೊದಲಾದವುಗಳನ್ನು ಕೇಳಬಲ್ಲರು.

ಹಿಂದೂದೇಶದ ಸಂಸ್ಥಾನಿಕ ಪ್ರಜೆಗಳ ಪರವಾಗಿ ಬಟ್ಲರ್ ಸಮಿತಿಯ ಮುಂದೆ ವಾದಮಾಡುವುದಕ್ಕೆ ಶ್ರೀ ಅಭ್ಯಂಕರ ಮೊದಲಾದವರು ಇಂಗ್ಲೆಂಡಿಗೆ ತೆರಳಿದರು. ನಿಮ್ಮ ಸಾಕ್ಷಿಗಳನ್ನು ಕೇಳುವುದಿಲ್ಲ; ಬೇಕಾದರೆ ಹೇಳಿಕೆಗಳನ್ನು ಬರೆದು ಕಳುಹಿಸಬಹುದು. ಎಂದು ಉತ್ತರ ದೊರೆಯಿತು.

ಬೆಂಗಳೂರು ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್.

ಮೇಲಿನ ಬ್ಯಾಂಕಿನವರು [illegible] ಲೆಕ್ಕವನ್ನು [illegible] ಜಾಹೀರಾತಾಗಿ ಪ್ರಕಟಿಸುತ್ತೇವೆ. ಇನ್ನು ಮುಂದೆ ಬ್ಯಾಂಕಿನ ಲೇವಾದೇವಿಯನ್ನು ಪರಿಸ್ಥಿತಿ [illegible] ನಡೆಸುವುದಕ್ಕಾಗಿ [illegible] ಚ್ಚಾಗಿ ಮೆಂಬರುಗಳಲ್ಲಿಯೇ ನಡೆಸಬೇಕೆಂದು ತೀರ್ಮಾನವಾಗಿದೆ. ಠೇವಣಿದಾರರು ಗಮನಿಸಬೇಕಾದ ಹಲವು ಅಂಶಗಳೂ ಪ್ರಕಟವಾಗಿವೆ. ಅವನ್ನು ವಾಚಕರು ಪರಿಶೀಲಿಸುವರೆಂದು ನಂಬುತ್ತೇವೆ.

TAI NADU (Daily Edition.)

The Leading Nationalist Daily of Mysore.

Printed and published by P. R. Ramaiya at Sri Rama Press, D. Subbiah Road, Mysore.

Regd No. M. 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ / ಪರಸ್ಥಳಕ್ಕೆ

ಸಂಪುಟ ೧] ಶುಕ್ರವಾರ ೧೬ ನವಂಬರ್ ೧೯೨೮ [ಸಂಚಿಕೆ ೪೩

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P Venkatappa & Co Excelsior Type-writing Institute, Balepet, Bangalore City.
2. Koppada Ramakrishniah, Agent, Hassan
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings Mysore.
5. B V Pundit & Co, Lakshmivilas Road Mysore.
6. Friends' Union, Mysore.
7. Sweet Mart, Lansdowne Buildings, Mysore.

TAI NADU

16—11—1928.

ವೇದನೆಯಾದರೇಕೆ?

"ಅನೇಕರನ್ನು ಗಡೀಪಾರುಮಾಡುವುದು, ಪತ್ರಿಕೆಗಳನ್ನು ನಿಲ್ಲಿಸುವುದು ದಬ್ಬಾಳಿಕೆಯನ್ನು ಬಲು ಭರಾಟೆಯಿಂದ [illegible] ಎಂದು ಜನಗಳು ಆಡಿಕೊಳ್ಳುತ್ತಿ[illegible] [illegible] ನಾವು ಪಕ್ಷ [illegible] ಕ್ಕೆ ಸುತ್ತ [illegible] ಸತ್ಯವನ್ನು [illegible] ವುದಿಲ್ಲ. ವಿಶ್ವಾಮಿತ್ರನು ಎಷ್ಟೇ ಕಷ್ಟವನ್ನು ಕೊಟ್ಟರೂ [illegible] ತಿಲಕರೂ ಮಹಾತ್ಮರಾದ ಗಾಂಧಿಯವರೂ ಬ್ರಿಟಿಷ್ ಸರ್ಕಾರದವರು ಎಷ್ಟೇ ಕಷ್ಟವನ್ನು ಕೊಟ್ಟರೂ ಸತ್ಯವನ್ನು ಬಿಡಲಿಲ್ಲ. ಸತ್ಯವನ್ನು ಸ್ಥಾಪನೆಮಾಡುವುದು ಸಾಮಾನ್ಯವ[illegible] [illegible] ಕಷ್ಟಗಳನ್ನು ಅನು[illegible] [illegible] ಸ್ವಾತ[illegible] [illegible] ಪ್ರಕಾಶವಾಗು[illegible] [illegible] ಅನುಭವಿಸಿದ [illegible] ಬ್ರಿಟಿಷ್ ಇಂಡಿಯಾದಲ್ಲಿ ಇಂದು ಸ್ವಾತಂತ್ರ್ಯ [illegible] ಪ್ರಾರಂಭವಾಗಿರುವುದು. ನಮ್ಮ ಮೈಸೂರಿನಲ್ಲಿಯೂ ಸರ್ಕಾರದವರು [illegible] ದಬ್ಬಾಳಿಕೆಯನ್ನು ಆರಂಭಿಸಿದರೆ ಅದರಿಂದ ಪರಿಣಾಮ [illegible] ಆಗುವುದು. ಸತ್ಯವನ್ನು [illegible] ಪ್ರಸಂಗದಲ್ಲಿ [illegible] ಉಪಯೋಗಿಸುವ [illegible] ದಬ್ಬಾಳಿಕೆಯನ್ನು ಮಾಡಿದವರೇ ಭ್ರಷ್ಟರಾಗಿ [illegible] ಇದಕ್ಕೆ ಬ್ರಿಟಿಷ್ [illegible] ಇತಿಹಾಸವೇ [illegible] ಬ್ರಿಟಿಷ್ ಇಂಡಿ[illegible] ದಬ್ಬಾಳಿಕೆಯನ್ನು [illegible] ಪ್ರಜಾಸ್ವಾತಂತ್ರ್ಯವು [illegible] ಮೈಸೂರಿನಲ್ಲಿಯೂ [illegible] [illegible] ಅವರ ಧನ [illegible] ಯಾರ [illegible] ಪ್ರಾಣಗಳು ಸ್ವಾಮಿಕಕ್ಕೋಸ್ಕರವಾ[illegible] [illegible] ತ್ಯಾಗಮಾಡಲ್ಪ[illegible] [illegible] ಕೀರ್ತಿ [illegible] ಇತಿಹಾಸದಲ್ಲಿ ಉಜ್ವಲವಾಗಿ ಬೆಳಗುವುದು. ಆದುದರಿಂದ ನಮ್ಮ ಪ್ರಾರ್ಥನೆಯೇನೆಂದರೆ ಸರ್ಕಾರದವರು ದಬ್ಬಾಳಿಕೆಯನ್ನು ನಡೆಸಿದರೆ ನಡೆಸಲಿ. ಕುರು ಕ್ಷೇತ್ರದಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದ ಮಾತುಗಳನ್ನು ನೆನಪಿನಲ್ಲಿಡೋಣ. ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ಹತೋವಾಪ್ರಾಪ್ಸ್ಯಸಿಸ್ವರ್ಗಂ ಜಿತ್ವಾವಾ ಭೋಕ್ಷ್ಯಸೇ ಮಹೀಂ ಎಂದರೆ ಎಲೈ ಅರ್ಜುನನೇ ಕ್ಷುದ್ರವಾದ ಹೃದಯದೌರ್ಬಲ್ಯವನ್ನು ಬಿಟ್ಟು ಏಳು. ಸತ್ತರೆ ಸ್ವರ್ಗಕ್ಕೆ ಹೋಗುತ್ತೀ. ಜಯಿಸಿದರೆ ಐಹಿಕಸುಖವನ್ನು ಅನುಭವಿಸುತ್ತೀ."

ಸಂಸ್ಕೃತ ವಾರ್ಷಿಕ ಪರೀಕ್ಷೆ

ಶ್ರೀಮನ್ಮಹಾರಾಜವರ ಸಂಸ್ಕೃತ ಕಾಲೇಜಿನಲ್ಲಿ ಅನೇಕ ಪರೀಕ್ಷೆಗಳಿಗಾಗಿ ಕಳುಹಿಸಲ್ಪಟ್ಟಿದ್ದ ೫೦ ಜನ ವಿದ್ಯಾರ್ಥಿಗಳಪೈಕಿ ೪೧ ಜನರು ತೇರ್ಗಡೆಯನ್ನು ಹೊಂದಿದರು. ಇದರಲ್ಲಿ ೧೩ ಜನರು ಮೊದಲನೆಯ ತರಗತಿಯಲ್ಲೂ ೨೮ ಜನರು ಎರಡನೆಯ ತರಗತಿಯಲ್ಲೂ ಉತ್ತೀರ್ಣರಾಗಿರುವರು. ಅವರವರ ಬುದ್ಧಿಶಕ್ತಿಗನುಗುಣವಾಗಿ ಕೆಲವರಿಗೆ ನಮ್ಮ ಪ್ರಭುವಂದರವರಿಂದ ಬಹುಮಾನಗಳು ದೊರೆತವು. ವೇದಾಂತದಲ್ಲಿ ಮ|| ರಾ|| ಎಸ್. ನಾರಾಯಣಶಾಸ್ತ್ರಿಗಳೆಂಬುವರು ಏಳು ಬಹುಮಾನಗಳನ್ನು ಪಡೆದರು.

ಮೋಟಾರು ಡ್ರೈವರಿಗಾದ ಮೋಕ್ಷ

ಮೊನ್ನೆಯ ದಿನ (12-11-28 ರಲ್ಲಿ) ರಾತ್ರಿ ಕನ್ನಡ ತಿಳಿಯದ ಒಬ್ಬ ಮೋಟಾರ್ ಡ್ರೈವರು ಮೈಸೂರು ಸಂತೇಪೇಟೆಯ ಒಂದು ಹೋಟೆಲ್ ಬಳಿ ಇರುವ ಒಂದು ವೇಶ್ಯೆಯಮನೆಗೆ ಹೋದನು. ರಾತ್ರಿ ಕರ್ಮಖುಷಿ ದಿಲ್‌ಖುಷಿ ಆದಮೇಲೆ ಬೆಳಿಗ್ಗೆ ಎದ್ದು ತನ್ನ ಅಂಗಿಯನ್ನು ಶೋಧಿಸಿದಾಗ ಅದರಲ್ಲಿ 44 ರೂಗಳೂ ಇವನ ಲೈಸನ್ಸ್ ಮಾಯವಾಗಿದ್ದವು. ಆ ಮನೆಯವರು ತಮಗೇನೂ ಗೊತ್ತಿಲ್ಲವೆಂದು ಹೇಳಿದರು. ಡ್ರೈವರನು ಪೋಲೀಸಿಗೆ ಕಂಪ್ಲೇಂಟು ಕೊಟ್ಟನು. ಆ ಮನೆಯ ಇಬ್ಬರು ಹೆಂಗಸರನ್ನೂ ಪೋಲೀಸಿನವರು ದಸ್ತಗಿರಮಾಡಿದರೆಂದು ತಿಳಿಯಬರುತ್ತೆ.

ಛಾತ್ರಿ ಹವನ ಸಮ್ಮೇಳನ

ಮೈಸೂರು ಕೃಷ್ಣಾಗರದ ತೋಟದಲ್ಲಿ ಆಯುರಾರೋಗ್ಯ, ಸಂಚಿತ್ತರಕೃತ ಪ್ರಾಯಶ್ಚಿತ್ತ, ಗ್ರಾಮಶಾಂತಿಯೇ ಮೊದಲಾದೈಶ್ವರ್ಯ ಫಲಪ್ರದಾಯಕವಾದ ಈ [illegible] ಯನ್ನು ಭಗವಚ್ಛ್ರೀ [illegible] ೧೩ ತ್ರಯೋದಶೀ ಭಾನುವಾರ ತಾ|| [illegible] ೨೫ ನೇ ತೇದಿ ದಿನ [illegible] ಮಹಾಸಂತರ್ಪಣೆ ಸಂಸ್ಥಾನದ ನಿವಾಸಿಗಳ ತನು, ಮನ, ಧನ ಇವುಗಳ ಸಹಾಯಗಳಿಂದ ನಿರ್ವಾಹವಾಗಬೇಕೆಂದು ವೇ|| ಸ. ಶಿವರಾಮ ಭಟ್ಟರವರು ಪ್ರಾರ್ಥಿಸುತ್ತಾರೆ.

ದಿವಾನರವರ ಸಂಚಾರ.

ನಮ್ಮ ದಿವಾನ್ ಸಾಹೇಬರು ೧೯-೧೧-೨೮ ನೇ ಸೋಮವಾರ ಬೆಂಗಳೂರಿನಿಂದ ೮ ಘಂಟೆಗೆ ಹೊರಟು ೧ ಘಂಟೆಗೆ ಮದ್ದೂರು ಮಾರ್ಗವಾಗಿ ಮಳವಳ್ಳಿಯನ್ನು ತಲಪುವರು. ದಾರಿಯಲ್ಲಿ ರಸ್ತೆಯ ಪುತ್ತು ಮದ್ದೂರು ಟೌನ್ ಇನ್ಸ್‌ಪೆಕ್ಷನ್ ಮಾಡುವರು.

ಮಧ್ಯಾಹ್ನಾನಂತರ ಮಳವಳ್ಳಿ ಟೌನ್ ಮತ್ತು ಆಸ್ಪತ್ರೆವಗೈರೆ ಪಬ್ಲಿಕ್ ಇನ್‌ಸ್ಟಿಟ್ಯೂಷನ್‌ಗಳ ಇನ್ಸ್‌ಪೆಕ್ಷನ್ ಮತ್ತು ಜನಗಳ ಅಹವಾಲುಗಳನ್ನು ಕೇಳುವರು.

೨೦-೧೧-೨೮ ನೇ ಮಂಗಳವಾರ, ಬೆಳಕವಾಡಿ, ಮುಡುಕತೊರೆ, ತಲಕಾಡು, ಸೋಸಲೆ ಮತ್ತು ಬನ್ನೂರು ಮಾರ್ಗವಾಗಿ ಹೊರಟು ಅಲ್ಲಲ್ಲೇ ಇನ್ಸ್‌ಪೆಕ್ಷನ್ ಮತ್ತು ಜನಗಳ ಅಹವಾಲುಗನ್ನು ಸ್ವೀಕರಿಸಿ ಮೈಸೂರನ್ನು ತಲಪುವರು.

೨೧-೧೧-೨೮ ನೇ ಬುಧವಾರ ಮೈಸೂರಿನಿಂದ ಯಡತೊರೆ ಮತ್ತು ಸಾಲಿಗ್ರಾಮಗಳಿಗೆ ದಯಮಾಡಿಸಿ ಟೌನ್‌ಗಳ ಇನ್ಸ್‌ಪೆಕ್ಷನ್ ಮತ್ತು ಜನಗಳ ಅಹವಾಲನ್ನು ಪರಾಂಬರಿಸುವರು. ಸಾಯಂಕಾಲ ಯಡತೊರೆಯಿಂದ ಹುಣಸೂರಿಗೆ ದಯಮಾಡಿಸಿ, ರಾತ್ರಿಯೇ ಅಲ್ಲಿ ತಂಗುವರು.

೨೨-೧೧-೨೮ ನೇ ಗುರುವಾರ ಹುಣಸೂರಿನಿಂದ ಬೆಟ್ಟದಪುರ, ಪೆರಿಯಾ ಪಟ್ಟಣ ಮತ್ತು ಕೊಪ್ಪ ಇವುಗಳಿಗೆ ದಯಮಾಡಿಸಿ ಜನಗಳ ಅಹವಾಲನ್ನು ಕೇಳುವರು.

೨೩-೧೧-೨೮ ನೇ ಶುಕ್ರವಾರ ಹುಣಸೂರಿನಲ್ಲಿಯೇ ತಂಗುವರು. ಆನೆ ಚೌಕ ಮತ್ತು ಹೇಂಗೆ ಕೆರೆಯನ್ನು ನೋಡುವರು.

[illegible] ನೇ [illegible] ಹುಣಸೂರಿನಿಂದ ಹೆಗ್ಗಡದೇವನ ಕೋಟೆ, ಸರಗೂರು ಅಂತರಸಂತೆ, ಸಿಪ್ಪ ಮತ್ತು ಕಾರಾಪುರ ಮುತಾದ ಸ್ಥಳಗಳಿಗೆ ದಯಮಾಡಿಸಿ ಜನಗಳ ಅಹವಾಲುಗಳನ್ನು ಕೇಳುವರು.

೨೫-೧೧-೨೮ ನೇ ಭಾನುವಾರ ಬೆಳಿಗ್ಗೆ ಕಾರಾಪುರದಿಂದ ಬೈರನ ಕುಪ್ಪೆ ಮತ್ತು ಬಾವಲಿಗೆ ದಯಮಾಡಿಸುವರು ಕಾಕನ ಕೋಟೆ ಕಾಡನ್ನು ನೋಡುವರು.

ಸಾಯಂಕಾಲ ಮೈಸೂರಿಗೆ ವಾಪಸು ದಯಮಾಡಿಸುವರು.

೨೬-೧೧-೨೮ ನೇ ಸೋಮವಾರ ಮೈಸೂರಿನಿಂದ ಬೆಳಿಗ್ಗೆ ೧೦ ಘಂಟೆಗೆ ಹೊರಟು ರೈಲು ಪ್ರಯಾಣದ ಮೂಲಕ ಬೆಂಗಳೂರನ್ನು ತಲಪುವರು.

ತಾಯಿ ನಾಡು.

16—11—1928

ರಾಜಮರ್ಯಾದೆಗಳು

ನಮ್ಮ ಶ್ರೀಮನ್ ಮಹಾರಾಜರವರು ಈ ಸಲದ ದ [illegible] ಜನೋಪಕಾರವಾದ ಕಾರ್ಯಗಳನ್ನು ಮಾಡಿದ್ದಕ್ಕಾಗಿ ಪಬ್ಲಿಕ್ ಸರ್ವಿಸ್ ಮೆಡಲುಗಳನ್ನು ದಯಪಾಲಿಸಿರುತ್ತಾರೆ.

(1) ಶ್ರೀಮತಿ ಪುಟ್ಟಮ್ಮನವರು,—ಶಿರಾದಲ್ಲಿ 20 ಸಾವಿರ ರೂಪಾಯಿಗಳ ಖರ್ಚಿನಿಂದ ಒಂದು ಛತ್ರವನ್ನು ಕಟ್ಟಿಸಿದ್ದಕ್ಕಾಗಿ. (-) ಸಾಗರದಲ್ಲಿರುವ [illegible] ರತ್ನಹಳ್ಳಿ [illegible] ನವರು.—ಸುಮಾರು ಹನ್ನೆರಡು ಸಾವಿರ ರೂಪಾಯಿ ಬಾಳತಕ್ಕ ಕಟ್ಟಡವನ್ನು ಸಾಗರದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಮ್ಯುನಿಸಿಪಲ್ ಹೈಸ್ಕೂಲಿಗೆ ಕೊಟ್ಟದ್ದಕ್ಕಾಗಿ. (3) ದೊಡ್ಡ ಕಾಫೀ ಪ್ಲಾಂಟರೂ ರಿ|| ಅ|| ಮೆಂಬರೂ ಆದ ಮ|| ಐಗೂರು ಪುಟ್ಟೇಗೌಡರು,—ಆಸ್ಪತ್ರೆಯ ಮತ್ತು ಅಲ್ಲಿನ ನೌಕರ ಮಾನೇಜರುಗಳಿಗೆ ಸುಮಾರು 10,000 ರೂ. ಬೆಲೆ ಬಾಳುವ ಕಟ್ಟಡಗಳನ್ನು ಒದಗಿಸಿಕೊಟ್ಟದ್ದಕ್ಕಾಗಿ, (4) ಸಕಲೇಶಪುರದ ಕಾಫೀಪ್ಲಾಂಟರು ಮ|| ಸಿದ್ದೇಗೌಡರು—ಬಾಲಿಕಾಶಾಲೆಗಾಗಿ ಹತ್ತು ಸಾವಿರ ರೂಪಾಯಿನ ಒಂದು ಕಟ್ಟಡವನ್ನು ಕಟ್ಟಿಸಿದ್ದಕ್ಕಾಗಿ. (5) ಯಳಂದೂರು ತಾ|| ಮ|| ಮಾದಪ್ಪನವರು,—12 ಸಾವಿರ ರೂ. ಸುಟ್ಟಿಸಿ ಒಂದು ದೇವಸ್ಥಾನ, ಒಂದು ಛತ್ರ ಮತ್ತು ಒಂದು ಪಾಠಶಾಲೆ ಇವನ್ನು ಕಟ್ಟಿಸಿದ್ದಕ್ಕಾಗಿ.

(6) ಬೆಂಗಳೂರಿನ ರಿ|| ಅ|| ಕ|| ಮ|| ರಾ|| ಎಸ್. ನಾರಾಯಣರಾಯರು. ಎಪೆಕ್ಸ್ ಬ್ಯಾಂಕಿನ ಸೆಕ್ರಿಟರಿಗಳಾಗಿದ್ದುಕೊಂಡು ಅದರ ಅಭಿವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡಿಕೊಟ್ಟದ್ದಕ್ಕಾಗಿ ಮ|| ರಾ| ಎಂ. ಟಿ. ಮೆಲಾಕ್ಸಿಸ್. ವ್ಯವಸಾಯದ ಪ್ರೋತ್ಸಾಹಕ್ಕಾಗಿ.

(8) ದೇವನ ಹಳ್ಳಿಯ ಮ|| ರಾ|| ಎಲೆ ಕೃಷ್ಣಪ್ಪನವರು:—ಲೋಕಲ್ ಫಂಡ್ ಆಸ್ಪತ್ರೆಗಾಗಿ ಒಂದು ಕಟ್ಟಡವನ್ನೂ ಪಶು ವೈದ್ಯಶಾಲೆಗಾಗಿ ಬೇರೊಂದು ಕಟ್ಟಡವನ್ನೂ ಕೊಟ್ಟಿರುವರು. ಇವೆರಡರ ಖರ್ಚು ಸುಮಾರು 16 ಸಾವಿರ ರೂಪಾಯಿಗಳಾಗಿವೆ.

(9) ಬೆಂಗಳೂರಿನ ಮ|| ರಾ|| ಎಸ್. ಪಿ. ಜಿನದತ್ತಪ್ಪನವರು :—20, ಸಾವಿರ ರೂಪಾಯಿನ ಜೈನ ಧರ್ಮಶಾಲೆಯನ್ನೂ ಮತ್ತು 5 ಸಾವಿರ ರೂಪಾಯಿನ ಒಂದು ಬಾಲಿಕಾ ಶಾಲೆಯ ಕಟ್ಟಡವನ್ನೂ ಕಟ್ಟಿಸಿದರು.

10 ತರೀಕೆರೆಯ ಮ|| ರಾ|| ಬಾಬಾಸಾಹೇಬರವರು:—ಕಳೆದ 30 ವರುಷಗಳಿಂದ ಜನೋಪಕಾರವಾದ ಕೆಲಸಗಳನ್ನು ಮಾಡಿದರು.

(11) [illegible] ಪಟೇಲ್ ಶಂಭುಗೌಡರು :— 5 ಸಾವಿರ ರೂಪಾಯಿನಲ್ಲಿ ಒಂದು ಸ್ಕೂಲಿನ ಕಟ್ಟಡವನ್ನು ಕಟ್ಟಿಸಿ ಕೊಟ್ಟಿದ್ದಕ್ಕಾಗಿ.

12 ಮ|| ರಾ|| ಪುಟ್ಟವೀರಭದ್ರಪ್ಪನವರು :—ಜನೋಪಕಾರ ಕೆಲಸಗಳಿಗಾಗಿ.

13 ಚಿತ್ರದುರ್ಗ ತಾ|| ಮ|| ರಾ|| ಸಾಹುಕಾರ್ ನಂಜಪ್ಪನವರು :— ವ್ಯವಸಾಯ ಪಾಠಶಾಲೆಗಾಗಿ 7 ಸಾವಿರ ರೂಪಾಯಿನ ಒಂದು ಕಟ್ಟಡವನ್ನೂ ಮತ್ತು 32 ಎಕರೆಗಳಷ್ಟು ಖುಷ್ಕಿ ಭೂಮಿಯನ್ನು ವ್ಯವಸಾಯಕ್ಕಾಗಿಯೂ ಕೊಟ್ಟಿರುತ್ತಾರೆ.

14 ಶಿವಮೊಗ್ಗೆಯ ಪಬ್ಲಿಕ್ ಪ್ರಾಸಿಕ್ಯೂಟರಾದ ಮ|| ರಾ|| ಎನ್ ಶೇಷಶಾಸ್ತ್ರಿಗಳು :— ಜನರಲ್ಲಿ ಪರಸ್ಪರ ಸಹಾಯ ಸಂಘಗಳ ಪ್ರಚಾರಮಾಡಿದ್ದಕ್ಕಾಗಿ.

15 ಹಾಸನದ ಮ|| ರಾ|| ಕೆನಿ ಮಹದೇವಪ್ಪನವರು ಪ್ರಜೋಪಕಾರ ಕೆಲಸಗಳನ್ನು ಮಾಡಿರುವರು,

16 ಮ|| ರಾ|| ಕೃಷ್ಣಯ್ಯನವರು :— ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಸೌಲಭ್ಯಗಳನ್ನು ಹೆಚ್ಚಿಸುವ ಸಲುವಾಗಿ 10, ಸಾವಿರ ರೂಪಾಯನ್ನು ಕೊಟ್ಟಿರುವರು.

17 ಬೆಂಗಳೂರಿನ ಸ|| ಅ|| ಸರ್ಜನರವರಾದ ಮ|| ರಾ|| ಎಸ್ ಅಂಬು ಪಿಳ್ಳೆಯವರು :— ಕಳೆದ ಜುಲೈ 21 ನೇ ತಾ|| ನಲ್ಲಿ ಎಸ್. ಐ. ಆರ್. ಬೋಟ ಮೆಯಿಲನಲ್ಲಿ ನಡೆದ ಅನಾಹುತಕ್ಕೆ ಸಿಕ್ಕಿದ್ದವರಿಗೆಲ್ಲಾ ವೈದ್ಯ ಚಿಕಿತ್ಸೆಯನ್ನು ಮಾಡಿದರು.

ಆತಂಕನಿಗ್ರಹ ಔಷಧಾಲಯ.

ಆತಂಕ ನಿಗ್ರಹ ಮಾತ್ರೆಗಳ ಹೆಸರನ್ನು ಕೇಳದವರೇ ಇಲ್ಲ. ಆತಂಕ ನಿಗ್ರಹ ಔಷಧಾಲಯದವರು 1928 ನೇ ಇಸವಿಯ ತಮ್ಮ ಅಲ್‌ಬಮ್‌ನ್ನು ಕಳುಹಿಸಿರುತ್ತಾರೆ. ಅದರಲ್ಲಿ ವೈದ್ಯಶಾಲಾಸ್ಥಾಪಕರಾದ ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜಿಯವರ, ಆ ವೈದ್ಯಶಾಲೆಯಲ್ಲಿ ಕೆಲ್ಸಮಾಡುವ ಕೆಲ್ಸಗಾರರ ಮತ್ತು ಆ ವೈದ್ಯಶಾಲೆಯ ಏಜಂಟರುಗಳ ಅಂದವಾದ ಚಿತ್ರಪಟಗಳೂ ಇವೆ. ಮುದ್ರಣವೂ ಪ್ರಕಟಿಸಿಂತಕ್ಕ ವಿಷಯಗಳೂ ಬಹಳ ಮುದ್ದಾಗಿವೆ. ಈ ವೈದ್ಯಶಾಲೆಯು ಇತೋಪ್ಯತಿಶಯವಾದ ಕೀರ್ತಿಯನ್ನು ಹೊಂದಿ ಇನ್ನೂ ಅಭಿವೃದ್ಧಿಗೆ ಬರಲೆಂಬುದೇ ನಮ್ಮ ಹಾರೈಕೆ.

ಬಹಿಷ್ಕಾರ.

ಕರಾಚಿಯಲ್ಲಿ ಸೈಮನ್ ಸಮಿತಿಯ ಕಾರ್ಯಕಲಾಪಗಳಿಗೆ ಬರಕೂಡದೆಂದು, ಫ್ರೀ ಪ್ರೆಸ್ ಪ್ರತಿನಿಧಿಗೆ ಸೈಮನ್ ಸಮಿತಿಯವರು ಬಹಿಷ್ಕಾರ ಹಾಕಿದರು. ಅಂತರಂಗ ಪ್ರಚಾರದ ವಿಷಯವನ್ನು ಬಹಿರಂಗವಾಗಿ ಪ್ರಚಾರಮಾಡಿದುದೇ ಇದರ ತಪ್ಪಂತೆ! ಟೈಮ್ಸ್ ಆಫ್ ಇಂಡಿಯಾ, ಬೊಂಬೆ ಕ್ರಾನಿಕಲ್ ಮೊದಲಾದ ಪತ್ರಿಕೆಗಳು ಈ ಬಹಿಷ್ಕಾರವನ್ನು ಖಂಡಿಸಿರುವುವು.

[illegible] ವಾಗ್ವಾದ

ಎನ್ ವೈ. ಪಿಳ್ಳೆಯವರು ವಿಶೇಷಜ್ಞರಯ. ಕಮಿಟಿಯ ಮುಂದೆ ಹೇಳಿಕೆಯನ್ನು ಕೊಟ್ಟಾಗ ಬಿ. ಎಸ್. ರಾಣೋಜಿರಾಯರನ್ನು [illegible] ಎಂಬದಾಗಿ ಹೇಳಿದ್ದರು. ಬಿ. ಎಸ್. ರಾಣೋಜಿರಾಯರು [illegible] ಪತ್ರಿಕೆಯಲ್ಲಿ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ ರಾಯರು ಹೇಳುವುದೇನೆಂದರೆ, [illegible] ವರ ಮಾವನಲ್ಲ. ಪಿಳ್ಳೆಯವರ ಮೊದಲನೆಯ ಹೆಂಡತಿಯು ನನ್ನ ಮಗಳು. ಅವಳು ಸತ್ತು ಕೆಲವು ವರ್ಷಗಳಾಯಿತು. ಪಿಳ್ಳೆಯವರು ಈಗ ಇನ್ನೊಬ್ಬ [illegible] ಮದುವೆಯಾಗಿರುವರು. ಅವರಿಗೂ ನನಗೂ [illegible] ಕಾರಣಗಳಿಂದ ಕೆಲವು ವರ್ಷಗಳಿಂದಲೂ [illegible] ಚೆನ್ನಾಗಿಲ್ಲ. ಪಿಳ್ಳೆಯವರಿಗೆ ನನ್ನ ಮೇಲೆ [illegible] ಯೆಂದು ತೋರಿಸುವುದಕ್ಕೆ ನನ್ನ ಹತ್ತಿರ [illegible] ಜುವಾಬುಗಳಿವೆ. ಅವರನ್ನು ನಾನು [illegible] ಎಣಿಸುವುದಿಲ್ಲ. ಅವರು ನನ್ನ ಮೇಲೆ [illegible] ದೋಷಾರೋಪಣೆಗಳನ್ನು ಮಾಡಿರುವರು.

ಸುಂಟರಗಾಳಿ.

ಕಾರ್ನಟಿಕ ಪ್ರಾಂತ್ಯದಲ್ಲಿ ನಡೆದ ಸುಂಟರುಗಾಳಿಯ ಅನಾಹುತದಿಂದ 15 ಜನರು ಮೃತಪಟ್ಟಿರು [illegible] ಗೆ ಘಾಯಗಳಾಯಿತು. 30 ಕಟ್ಟಡಗಳು ಸಂಪೂರ್ಣವಾಗಿ ನಾಶಪಡಿಸಲ್ಪಟ್ಟವು.

ಧನ್ವಂತರಿ ಜಯಂತಿ.

ರಾಜಧಾನಿಯ ಆಯುರ್ವೇದಿಕ್ ಕಾಲೇಜಿನಲ್ಲಿ ಕಳೆದ ಶುಕ್ರವಾರ "ಧನ್ವಂತರಿ ಜಯಂತಿ"ಯು ಮುನಿಸಿಪಲ್ ಪ್ರೆಸಿಡೆಂಟರಾದ ಮ| ಟಿ. ಫಿ. ರಾಮಯ್ಯ [illegible] ಜಿ. ಎ ಇವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಅನೇಕ ವೈದ್ಯಮಹಾಶಯರುಗಳೂ, ಪುರಪ್ರಮುಖರುಗಳೂ ಆಹ್ವಾನಿಸಲ್ಪಟ್ಟಿದ್ದರು. ಅನೇಕ ಉಪನ್ಯಾಸಗಳು ನಡೆದುವು. ಅಧ್ಯಕ್ಷರು ವೈದ್ಯಶಾಸ್ತ್ರದ ಮೇಲೆ ಭಾಷಣ ಮಾಡಿದ ನಂತರ ಸಭೆಯು ಬರಖಾಸ್ತಾಯಿತು.

ದೀಪಾವಳಿ ಅನಾಹುತಗಳು.

ಎಲ್ಲೆಲ್ಲಿಯೂ ದೀಪಾವಳಿಯ ಬಾಣಬಿರುಸುಗಳಿಂದ ಅನಾಹುತಗಳು ನಡೆಯುತ್ತಿರುವವು. ಕಲ್ಕತ್ತ ಒಂದರಲ್ಲಿಯೇ ಇಂತಹ 14 ಅನಾಹುತಗಳಾದವು. ಬೆಂಕಿಯನ್ನು ಆರಿಸಲಿಕ್ಕೆ ಹೋದ ಇಂಜನ್ನೇ ತಲೆಕೆಳಕಾಗಿ ಕೆಲಸಕ್ಕೆ ಬಾರದೆ ಹೋಯಿತು. ಕೋಲಾರದಲ್ಲಿಯೂ ಈ ರೀತಿಯಾದ ಅನಾಹುತಗಳು ನಡೆದುವು.

ಲಾಠಿಯ ಏಟು.

ಲಾಲಾ ಲಜಪತರಾಯರ [illegible] ಲಾಹೋರ್ ಪೋಲೀಸಿನವರು ಲಾಠಿಯಿಂದ ಹೊಡೆದ ವಿಷಯವನ್ನು ವಿಚಾರಣೆ ಮಾಡುವುದಕ್ಕಾಗಿ [illegible] ಕಾರ್‌ರದವರು ಮಿ|| ಬಾಯ್ಡ್ ಎಂಬುವರನ್ನು [illegible] ಮಿಸಿದರು. 2 ಘಂಟೆಗಳು ಕಾದರೂ ಲಜಪತರಾಯ್ ಮೊದಲಾದವರು ಇವರ ಮುಂದೆ ಸಾಕ್ಷಿ ಕೊಡಲು ಹೋಗಲಿಲ್ಲ. ಲಜಪತರಾಯರು ಈ ವಿಚಾರಣೆಯಲ್ಲಿ ನನಗೆ ವಿಶ್ವಾಸವಿಲ್ಲ. ಅದಕ್ಕೆ ನಾನು ಒಪ್ಪುವುದಿಲ್ಲ ಎಂದು ಹೇಳಿದರು.

TAI NADU (Daily Edition.)

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿ ನಾಡು.

17—11—1928

ವಿವಿಧ ವಿಷಯಗಳು

ಸ್ತ್ರೀವಿದ್ಯಾ ಸಮ್ಮೇಳನ.

ತಿನ್ನವೆಲ್ಲಿಯಲ್ಲಿ ಈ ತಿಂಗಳು 20 ನೇ ತಾರೀಖಿನಲ್ಲಿ ಅಖಿಲ ಸ್ತ್ರೀವಿದ್ಯಾ ಸಮ್ಮೇಳನವು ನಡೆಯುವುದು.

ಕಾಗದದ ಹಾಲು.

ಡೆನ್ಮಾರ್ಕಿನಲ್ಲಿ ಒಬ್ಬ ರಸಾಯನ ಶಾಸ್ತ್ರಜ್ಞನು ಹಸುವಿನ ಹಾಲನ್ನು ಒಣಗಿಸಿ ಕಾಗದದ ರೂಪ ಮಾಡಲು ಪ್ರಯತ್ನ ಮಾಡುತ್ತಿರುವನು.

ಜಗದ್ಗುರುಗಳ ಇಸ್ತಿಹಾರ್.

ಕಾಶಿಯಲ್ಲಿ ನಡೆದ ಅಖಿಲ ಭಾರತ ಸನಾತನ ಧರ್ಮ ಸಮ್ಮೇಳನದಲ್ಲಿ ಗೋವರ್ಧನ ಮಠದ ಜಗದ್ಗುರು ಶಂಕರಾಚಾರ್ಯರವರು, ನಿಜವಾಗಿ ವಿಶ್ವಾಸದಿಂದ ಇತರರು ಹಿಂದೂ ಮತಕ್ಕೆ ಬರಬೇಕೆಂದರೆ ಅವರನ್ನು ಅವಶ್ಯವಾಗಿ ಹಿಂದೂ ಮತಕ್ಕೆ ಸೇರಿಸಿಕೊಳ್ಳಬಹುದೆಂದು ಇಸ್ತಿಹಾರ್ ಕೊಟ್ಟಿರುವರು.

ನೀರಿನ ಸೌದೆ.

ಡಾಕ್ಟರ್ ವಾನ್‌ಹೊಹಿನಾನ್ ಎಂಬ ಬ್ರೆಸಿಲ್ ದೇಶದ ವಿಜ್ಞಾನಶಾಸ್ತ್ರಜ್ಞನು ನೀರನ್ನು ಸೌದೆಯಾಗಿ ಉಪಯೋಗಿಸುವ ವಿಧಾನವನ್ನು ಕಂಡುಹಿಡಿಯುತ್ತಿರುವನು. ಇದು ಕಷ್ಟವಲ್ಲ. ನೀರು ಹೈಡ್ರೋಜನ್, ಆಕ್ಸಿಜನ್ ಎಂಬ ಎರಡು ವಾಯುಗಳಿಂದಾಗಿರುವುದು. ಇದರಲ್ಲಿ ಹೈಡ್ರೋಜನ್ ಎಂಬ ವಾಯುವು ಉರಿಯುವ ಸ್ವಭಾವವುಳ್ಳದ್ದು. ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಒಡೆದರೆ ಹೈಡ್ರೋಜನ್ ಉರಿಗೆ ಉಪಯೋಗವಾಗುವುದು.

ಹುಣಸೂರಿನ ಪುಣ್ಯೋದಯ.

ಬೆಂಗಳೂರು ಚಾಮರಾಜ ಪೇಟೆ ಡಿಸ್‌ಪೆನ್ಸರಿಯ ಡಾಕ್ಟರ್ ಮ|| ರಾ|| ಸದಾಶಿವ ಮೊದಲಿಯಾರ್ರವರು ಹುಣಸೂರಿಗೆ ವರ್ಗಾಯಿಸಲ್ಪಟ್ಟಿರುವುದು ಹುಣಸೂರಿನವರ ಪುಣ್ಯೋದಯ. ಬೆಂಗಳೂರಿನಲ್ಲಿ ಇವರನ್ನು ಅರಿಯದವರಿಲ್ಲ. ರೋಗಿಗಳೆಲ್ಲರಿಗೂ ಇವರು ಧನ್ವಂತರಿಯಾಗಿರುವರು. ವೈದ್ಯದಲ್ಲಿ ಅಲ್ಲದೆ ಖಾದಿಯ! ಪ್ರಚಾರದಲ್ಲಿ ಇವರು ತೆಗೆದುಕೊಂಡಿರುವ ಭಾಗವು ಅತಿ ಪ್ರಶಂಸನೀಯವಾದುದು. ಬೆಂಗಳೂರಿನ ಖಾದಿಪ್ರಚಾರಕ್ಕೆಲ್ಲಾ ಇವರೊಬ್ಬರು ಸ್ಥಂಭ ಪ್ರಾಯರಾಗಿದ್ದರು. ಹುಣಸೂರಿನಲ್ಲಿಯೂ ಮ|| ರಾ|| ಮೊದಲಿಯಾರ್‌ರವರು ಮಹಾತ್ಮ ಗಾಂಧಿಯವರ ಪವಿತ್ರವಾದ ಖಾದಿಯ ಸಂದೇಶವನ್ನು ಹರಡುವರೆಂದು ನಂಬುತ್ತೇವೆ.

ಗ್ರಹಣ ಸ್ನಾನ.

ಸೂರ್ಯಗ್ರಹಣದ ಪ್ರಯುಕ್ತ ಕಾಶಿಯಲ್ಲಿ ಗಂಗಾ ಸ್ನಾನ ಮಾಡಲು ಒಂದು ಲಕ್ಷಕ್ಕಿಂತಲೂ ಜಾಸ್ತಿಯಾಗಿ ಯಾತ್ರಿಕರು ಹೋಗಿದ್ದರು. ಸ್ನಾನ ಘಟ್ಟಗಳು ರೈಲ್ವೆಸ್ಟೇಷನ್ ವಿಶ್ವನಾಥನ ದೇವಾಲಯ ಮೊದಲಾದ ಸ್ಥಳಗಳಲ್ಲಿ ಬೇಕಾದಷ್ಟು ಪೋಲೀಸ್, ಆಸ್ಪತ್ರೆ ಮೊದಲಾದ ಸೌಲಭ್ಯಗಳು ಕಲ್ಪಿಸಲ್ಪಟ್ಟಿದ್ದುವು. ಹೀಗಿದ್ದರೂ ಅನೇಕರಿಗೆ ಘಾಯಗಳಾಗಿವೆ. ಮತ್ತು ಕೆಲವರಿಗೆ ತುಂಬಾ ಜಖಂ ಆಗಿವೆ.

ಹಾವು ಕಚ್ಚಿದ್ದು.

ಕುರುಕ್ಷೇತ್ರದಲ್ಲಿ ಗ್ರಹಣಸ್ನಾನಕ್ಕೆ ಹೋದ ಒಬ್ಬ ಸ್ತ್ರೀಯರನ್ನು ಒಂದು ಹಾವು ಕಚ್ಚಿತು. ಆ ಹಾವನ್ನು ಗುಂಡಿನಿಂದ ಹೊಡೆಯಬೇಕೆಂದು ಕೆಲವರು ಪ್ರಯತ್ನಿಸಿದರು. ಸನಾತನ ಧರ್ಮಿಗಳು ಅದನ್ನು ಹೊಡೆಯಕೂಡದೆಂದು ಅಡ್ಡಿ ಮಾಡಿದರು ದೊಡ್ಡ ಜಗಳವಾಯಿತು ಮೂವರಿಗೆ ಗಾಯವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಶ್ರೀಮನ್ ಯುವರಾಜರವರು

ಶ್ರೀಮನ್ ಯುವರಾಜರವರು ಈ ತಿಂಗಳು 17 ಕ್ಕೆ ಬೊಂಬಾಯಿಗೆ ಹಯಮಾಡಿಸುವರೆಂದೂ 23 ಕ್ಕೆ ಮೈಸೂರಿಗೆ ಬರುವುದಾಗಿಯೂ ಸಮಾಚಾರವಿರುವುದು.

ಬ್ರಾಹ್ಮಣ ಸಮ್ಮೇಳನ

ಈ ತಿಂಗಳು 10 ನೇ ತಾ|| ನಲ್ಲಿ ಕಾಶಿಯಲ್ಲಿ ನಡೆದ ಅಖಿಲ ಭಾರತ ಬ್ರಾಹ್ಮಣ ಸಮ್ಮೇಳನಕ್ಕೆ ದರ್ಭಾಂಗದ ಮಹಾರಾಜರವರು ಅಧ್ಯಕ್ಷರಾಗಿದ್ದರು. ಇಂಡಿಯಾದ ಎಲ್ಲಾ ಭಾಗದಿಂದಲೂ ಬ್ರಾಹ್ಮಣರು ಬಂದಿದ್ದರು. ಸಭೆಯು 6—7 ದಿವಸಗಳು ನಡೆಯಿತು. ಅಧ್ಯಕ್ಷರು ಮಾಡಿದ ಭಾಷಣದಲ್ಲಿ ಈಗಿನ ಬ್ರಾಹ್ಮಣರು ತಾವು ವಸಿಷ್ಠ, ದ್ರೋಣ, ಪರುಶುರಾಮರ ವಂಶಜರೆಂಬುದನ್ನು ಜ್ಞಾಪಕದಲ್ಲಿಡಬೇಕೆಂದೂ ಇತರರು ಎಷ್ಟೇ ಅವರನ್ನು ಅದುಮುವುದಕ್ಕೆ ಪ್ರಯತ್ನಮಾಡಿದರೂ ತಾವು ಧೈರ್ಯವನ್ನು ಬಿಡಕೂಡದೆಂದೂ ಬ್ರಾಹ್ಮಣ ಧರ್ಮವನ್ನು ಚೆನ್ನಾಗಿ ಕಾಪಾಡಬೇಕೆಂದೂ ತಿಳಿಸಿದರು. ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸಂಸ್ಕೃತ ವಿಶ್ವವಿದ್ಯಾಲಯ ಒಂದನ್ನು ಸ್ಥಾಪನೆ ಮಾಡಬೇಕೆಂದೂ ಎಲ್ಲೆಲ್ಲಿಯೂ ಬ್ರಾಹ್ಮಣ ಸಭೆಗಳನ್ನು ಮಾಡಬೇಕೆಂದೂ ಠರಾವುಗಳು ಮಾಡಲ್ಪಟ್ಟುವು.

ವಿದ್ಯಾರ್ಥಿಗಳಿಗೆ ಶಿಕ್ಷೆ.

ಅಕ್ಟೋಬರ್ 12 ನೇ ದಿವಸ ಸೈಮನ್ ಕಮಿಷನ್ನವರು ಇಂಡಿಯಾಕ್ಕೆ ಪುನಃ ಕಾಲಿಟ್ಟ ದಿವಸ ಭಾರತೀಯರ ಅಸಮಾಧಾನವನ್ನು ಸೂಚಿಸುವುದಕ್ಕಾಗಿ ಅಹಮದಾಬಾದಿನ ಗುಜರಾತ್ ಗೌರ್ನ್ಮೆಂಟ್ ಕಾಲೇಜಿನ ಎಫ್. ಎ. ತರಗತಿಯ 160 ವಿದ್ಯಾರ್ಥಿಗಳು ಗಣಿತ ಪರೀಕ್ಷೆಗೆ ಹಾಜರಾಗಲಿಲ್ಲ. ಪ್ರಿನ್ಸಿಪಾಲರಾದ ಸಿ. ಫಿಡ್ಲೆ ಪಿರಾಸ್‌ರವರು ವಿದ್ಯಾರ್ಥಿಗಳ ಪೋಷಕರಿಗೆ ಅವರು ಗೈರುಹಾಜರಾದ ಕಾರಣವನ್ನು ಕೇಳಿದರು. ಮತ್ತು ಈ ತಿಂಗಳು 21 ನೇ ತಾ|| ನ ದಿವಸ ಪುನಃ ಪರೀಕ್ಷೆಯಾಗುವುದಾಗಿಯೂ, ಗೈರುಹಾಜರಾದ ವಿದ್ಯಾರ್ಥಿಗಳಿಗೆ ತಲಾ 3 ರೂ. ನಂತೆ ಜುಲ್ಮಾನೆ ವಿಧಿಸಿರುವುದಾಗಿಯೂ ತಿಳಿಸಿದರು. ಯುವಕರ ಸಂಘದ ಅಧ್ಯಕ್ಷರಾದ ಡಾ|| ಹರಪ್ರಸಾದ್ ದೇಸಾಯ್‌ರವರು ವಿದ್ಯಾರ್ಥಿಗಳ ಜುಲ್ಮಾನೆಯನ್ನು ತೆಗೆದುಹಾಕಬೇಕೆಂದು ಪ್ರಾರ್ಥಿಸಿದರು. ಪ್ರಿನ್ಸಿಪಾಲರವರು ವಿದ್ಯಾರ್ಥಿಗಳ ವಿಧೇಯತೆಯನ್ನು ಕಾಪಾಡಬೇಕು. ಜುಲ್ಮಾನೆಯನ್ನು ತೆಗೆಯುವುದಕ್ಕಾಗುವುದಿಲ್ಲವೆಂದರು. ವಿದ್ಯಾರ್ಥಿಗಳ ಮತ್ತು ಅವರ ಪೋಷಕರ ಸಭೆಯು ಈ ತಿಂಗಳು 12 ರಲ್ಲಿ ನಡೆಯಿತು. ಜುಲ್ಮಾನೆಯನ್ನು ತೆಗೆದುಹಾಕಬೇಕೆಂದು ಪ್ರಾರ್ಥಿಸಲ್ಪಟ್ಟಿತು. ಜುಲ್ಮಾನೆಯನ್ನು ತೆಗೆಯದೆ ಹೋದರೆ [illegible] ಮಾಡಬೇಕೆಂಬ ವಿಷಯವು ಮುಂದೆ [illegible] ಲ್ಪಡುವುದು.

[illegible]

[illegible] ದೇಶದಲ್ಲಿ [illegible] (ಸಿನಿಮಾಗಳನ್ನು) [illegible] ಎಂಬುವರು [illegible] [illegible] ಗನ್ನದು.

ನ್ಯಾಯಾಧೀಶರ ಕದನ.

ಅಮೇರಿಕದ ಪ್ರಜಾಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆಯುತ್ತ. ಥೋಮಸ್ ಎಂಬ ನ್ಯಾಯಾಧೀಶರಿಗೂ ಮೂಂಡೆ ಎಂಬ ಹೆಸರಿನ ಶೆರೀಫರಿಗೂ ಆ ವಿಷಯವಾಗಿ ಚರ್ಚೆ ನಡೆದು ಮಾತಿನ ಕೆಲಸಕ್ಕೆಗೆ ದೊರೆಯಿತು. ನ್ಯಾಯಾಧೀಶರು ಕತ್ತಿ ಹಿಡಿದು ಯುದ್ಧಕ್ಕೆ ಆನುವಾದರು. ಥೋಮಸರು ಗುಂಡುಹೊಡೆದು ಕೊಂದರು.

ಅಂಧ ಪ್ರೇಮ

ವಿಯನ್ನದಲ್ಲಿ ಒಂದು ಸಂಗೀತ ಸಭೆಯು ಜರುಗುತ್ತಿದ್ದಾಗ ಮಧ್ಯದಲ್ಲೊಂದು ಗಡಿಬಿಡಿ. ಒಂದೆ ಸಮನೆ ಮೂರು ಗುಂಡುಗಳ ಶಬ್ದ. ಜನರು ಆ ಸ್ಥಳಕ್ಕೆ ಹೋಗಿ ನೋಡಿದಾಗ ರಕ್ತ ಧಾರೆಯನ್ನು ಸುರಿಸುತ್ತಾ ಸ್ತ್ರೀಯೊಬ್ಬಳು ನೆಲದಮೇಲೆ ಬಿದ್ದಿದ್ದಳು. ಇದರ ಗುಟ್ಟು ಮತ್ತೆ ತಿಳಿಯಿತು. ಟರ್ಕಿ ದೇಶದ ರಾಜಕುಮಾರಿಯೊಬ್ಬಳ ಮೇಲೆ 54 ವರ್ಷ ಪ್ರಾಯದ ಕರ್ನಲ್ ಪೋರ್ಕ್ಸ್ ಎಂಬಾತನಿಗೆ ವ್ಯಾಮೋಹವಿದ್ದಿತು. ಅವಳನ್ನು ಮದುವೆಯಾಗಬೇಕೆಂದು ಬೇಡಿದನು. ಅವಳು ಒಪ್ಪಲಿಲ್ಲ. [illegible] [illegible] ಅವಳು [illegible] [illegible] ರಿಪನ್ನು [illegible] ಕೊಂದನು.

[illegible]

[illegible] ದಂಪತಿಗಳಿಗೆ ಒದಗಿಸುತ್ತಿರುವರು. ಅವುಗಳಲ್ಲಿ ವಿವಾಹವು ನಡೆದ ಸಮಯ, [illegible] ವಂತ್ರದ ಮುಖ್ಯಾಂಶಗಳು ಮುಂತಾದವು ಇರುವವು. ಇದರ ಎರಡು ಪ್ರತಿಗಳನ್ನು ಮಾಡಿಸಿ ಒಂದನ್ನು ಗಂಡನಿಗೂ ಇನ್ನೊಂದನ್ನು ಹೆಂಡತಿಗೂ ಕೊಡುವರು. ಅವುಗಳನ್ನವರು ಸದಾ ಜೇಬಿನಲ್ಲಿಯೋ ಕೈ ಚೀಲದಲ್ಲಿಯೋ ಇಟ್ಟುಕೊಳ್ಳಲು ಸಂಘದವರು ಉಪದೇಶಿಸುತ್ತಿರುವರು.

ಅಮೇರಿಕೆಯ ಅಧ್ಯಕ್ಷರ ಚುನಾವಣೆ.

ಈ ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಿಂತಿದ್ದವರಲ್ಲಿ ಹೂವರಿಗೆ 1, 70 [illegible] ಸ್ಮಿತ್ ರವರಿಗೆ 1, 25, 00. 000 ಓಟುಗಳೂ ಬಂದು ಹೂವರು ಜಯಶೀಲರಾದರು. ಇವರ ವಿಜಯಕ್ಕೆ [illegible] [illegible] ನಿಸಿದರು.

TAI NADU
17—11—1928.

ಆಡಳಿತದ ಖಂಡನೆ.

ಕೆಲವು ಆಡಳಿತಗಾರರು ರಾಜ್ಯಾಡಳಿತದ ಖಂಡನೆಯನ್ನು ಮಾಡುವುದು ಪತ್ರಿಕೆಗಳಿಗೆ ಅನುಚಿತವೆಂಬ ಅಭಿಪ್ರಾಯವನ್ನು ಕೊಡುತ್ತಿರುವರು. ಈ ಅಭಿಪ್ರಾಯವು ಲೋಕವ್ಯವಹಾರಕ್ಕೆ ವಿರುದ್ಧವಾದುದು. ಆಡಳಿತವೆಂದರೆ, ಅದರಲ್ಲಿಯೂ ಸರ್ಕಾರದ ಆಡಳಿತವೆಂದರೆ ಎಲ್ಲರಿಗೂ ಸಂಬಂಧಪಟ್ಟದ್ದು. ಸರ್ಕಾರವೆಂದರೆ ನಾವು, ನಾವು ಎಂದರೆ ಸರ್ಕಾರ. ಮೈಸೂರಿನಲ್ಲಿ ಸರ್ಕಾರದ ಧ್ಯೇಯವೂ ಪ್ರಜೆಗಳ ಧ್ಯೇಯವೂ ಒಂದೇ ಆಗಿರುವುದು. ಸರ್ಕಾರದವರ ಲೋಪದೋಷಗಳನ್ನು ಪ್ರಜೆಗಳು ತೋರಿಸುವುದು ಅವರ ಧರ್ಮ. ಹಾಗೆ ತೋರಿಸದೆ ಹೋದರೆ ಪ್ರಜೆಗಳು ತಮ್ಮ ಕರ್ತವ್ಯವನ್ನು ಮಾಡದ ದೋಷಕ್ಕೆ ಗುರಿಯಾಗಿ ಅನೇಕ ಅನರ್ಥಗಳಿಗೂ ತುತ್ತಾಗುವರು. ನಾವು ಹೇಗೋ ನಮ್ಮ ಸರ್ಕಾರವೂ ಹಾಗೇ ಇರುವದು. ನಾವು ಉದಾಸೀನತೆಯಿಂದ ವರ್ತಿಸಿದರೆ ನಮ್ಮ ಸರ್ಕಾರವೂ ಉದಾಸೀನತೆಯಿಂದ ವರ್ತಿಸುವುದು. ಸರ್ಕಾರಕ್ಕೆ ಪ್ರಜೆಗಳೇ ಬಲ. ಪ್ರಜೆಗಳಿಲ್ಲದೆ ಸರ್ಕಾರವಿರಲಾರದು. ಪ್ರಜೆಗಳು ಕಂದಾಯ ಕೊಟ್ಟರೆ ಸರ್ಕಾರಕ್ಕೆ ಹಣ ಉಂಟು. ವಾಸ್ತವ್ಯವಾಗಿ ಆಲೋಚನೆ ಮಾಡಿದರೆ, ಪ್ರಜೆಗಳು ಯಜಮಾನರು. ಸರಕಾರವು ಕೆಲಸಗಾರ. ನಮ್ಮ ಮನೆಯ ಆಡಳಿತವನ್ನು ಚೆನ್ನಾಗಿ ನೋಡಿಕೊಳ್ಳುವದಕ್ಕಾಗಿ ನಾವು ಹೇಗೆ ಒಬ್ಬ ವ್ಯವಸ್ಥಾಪಕನನ್ನು ಸಂಬಳ ಕೊಟ್ಟು ಇಡುತ್ತೇವೆಯೋ ಹಾಗೆಯೇ ನಮ್ಮ ದೇಶದ ಆಡಳಿತವನ್ನು ನೋಡಿಕೊಳ್ಳುವುದಕ್ಕೂ ನಾವು ಸರ್ಕಾರದ ಯಂತ್ರವನ್ನು ಸಂಬಳ ಕೊಟ್ಟು ಇಟ್ಟಿದ್ದೇವೆ. ನಾವು ಕಂದಾಯದ ರೂಪವಾಗಿ ಕೊಡುವ ಪುಡಿಪುಡಿ ಕಾಸುಗಳೇ ನಾವು ಸರ್ಕಾರಕ್ಕೆ ಕೊಡುವ ಸಂಬಳ. ಆದುದರಿಂದ ಕೆಲಸಗಾರನಾದವನು ಚೆನ್ನಾಗಿ ಕೆಲಸಮಾಡದೆ ಹೋದರೆ ಖಂಡಿಸುವುದಕ್ಕೆ ಹೇಗೆ ಯಜಮಾನನಿಗೆ ಅಧಿಕಾರವಿರುವುದೋ ಹಾಗೆಯೇ ಸರ್ಕಾರದವರು ತಪ್ಪು ಮಾಡಿದರೆ ಅದನ್ನು ಖಂಡಿಸುವುದಕ್ಕೆ ಪ್ರಜೆಗಳಿಗೆ ಅಧಿಕಾರವಿರುವುದು. ಯಾವ ದೇಶದ ಪ್ರಜೆಗಳು ಜಾಗರೂಕತರಾಗಿ ಸರ್ಕಾರವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುವರೋ ಆ ದೇಶದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯು ಇರುವುದು. ಇದಕ್ಕೆ ಇಂಗ್ಲೆಂಡ್ ಅಮೇರಿಕಾ ಮೊದಲಾದ ಪಾಶ್ಚಾತ್ಯ ದೇಶಗಳೇ ಉದಾಹರಣೆ. ಯಾವ ಸರ್ಕಾರಕ್ಕೆ ಪ್ರಜೆಗಳ ಹತೋಟಿಯಿಲ್ಲವೋ ಆ ದೇಶದಲ್ಲಿ ಅಭಿವೃದ್ಧಿಯು ಬಹಳ ಕುಂಠಿತವಾಗಿರುವುದು. ಇದಕ್ಕೆ ಇಂಡಿಯಾ ದೇಶವೇ ಉದಾಹರಣೆ. ನಮ್ಮ ಮೈಸೂರಿನಲ್ಲಿ ಶ್ರೀಮನ್ ಮಹಾರಾಜರವರೇ ಪ್ರಜೆಗಳಿಗೆ ರಾಜ್ಯಾಡಳಿ[illegible] ಕೊಟ್ಟಿದ್ದಾರೆ. ಆ ಮಹೋದ್ದೇಶವನ್ನು ಸಾರ್ಥಕಪಡಿಸುವುದು ಆಡಳಿತಗಾರರ ಪರಮಕರ್ತವ್ಯ. ಅದನ್ನು ಬಿಟ್ಟು ತಾವು ಉಚ್ಛೃಂಖಲರಾಗಿ ಪ್ರವರ್ತಿಸಿ ಪತ್ರಿಕೆಗಳಿಗೆ ರಾಜ್ಯಾಡಳಿತವನ್ನು ಖಂಡಿಸಬೇಡಿ ಎಂದು ಬೋಧಿಸುವುದು ದೇಶದ್ರೋಹವು ಮಾತ್ರವೇ ಅಲ್ಲ, ರಾಜದ್ರೋಹ. ಈಚೀಚೆಗೆ ನಮ್ಮ ಸಂಸ್ಥಾನದಲ್ಲಿ ಜನಗಳು ಕಣ್ಣು ತೆರೆಯುತ್ತಿದಾರೆ. ರಾಜ್ಯಾಡಳಿತದ ವಿಷಯವಾಗಿ ಆಸಕ್ತಿಯನ್ನು ತೋರಿಸುತ್ತಿದಾರೆ. ಇಂತಹಸಂದರ್ಭದಲ್ಲಿ ಸಹಾನುಭೂತಿಯಿಂದ ಪ್ರಜೆಗಳನ್ನು ಮೇಲೆತ್ತುವುದಕ್ಕೆ ಬದಲಾಗಿ ರಾಜ್ಯಾಡಳಿತವನ್ನು ಖಂಡನೆ ಮಾಡುವವರೆಲ್ಲಾ ದುರಾಕ್ಷೇಪಕರು. ಅವರೆಲ್ಲೋ ಕೆಲವು ಅಲ್ಪಸಂಖ್ಯಾಕರು. ಅದರ ಮಾತಿಗೆ ಬೆಲೆಯಿಲ್ಲ ಎಂಬದಾಗಿ ತುಚ್ಛೀಕರಿಸುವುದು ಯಾರಿಗೂ ತರವಲ್ಲ, ಪ್ರಜಾಸ್ವಾತಂತ್ರ್ಯದ ಪ್ರವಾಹವನ್ನು ಯಾರೂ ತಡೆಯಲಾರರು. ಈ ಆಡಳಿತಗಾರರಿಂದ ಅದು ಸಾಧ್ಯವೇ? ಎಂದಿಗೂ ಸಾಧ್ಯವಿಲ್ಲ. ಇವರು ಪತ್ರಿಕೆಗಳ ಮೇಲೆ ಆಕ್ಷೇಪಣೆ ಮಾಡಿದಂತೆಲ್ಲಾ ಪ್ರಜೆಗಳ ವಿಶ್ವಾಸವು ಪತ್ರಿಕೆಗಳ ಮೇಲೆ ಹೆಚ್ಚು ಹೆಚ್ಚಾಗಿ ಕೂಡುವುದು. ಈ ವಿಷಯವನ್ನು ಆಡಳಿತಗಾರರು ನೆನಪಿನಲ್ಲಿಡಲಿ.

ವಿಶ್ವೇಶ್ವರಯ್ಯ ಕಮಿಟಿ ವರದಿ.

ಸ್ವಾಮಿ,—

ವಿಶ್ವೇಶ್ವರಯ್ಯ ಕಮಿಟಿಯವರು ಮುಂದಿನ ತಿಂಗಳು ಹತ್ತನೆ ತಾ|| ನೊಳಗಾಗಿ ವರದಿಯನ್ನು ಪ್ರಕಟಮಾಡುವರೆಂದು ತಿಳಿಸಿರುವರಷ್ಟೆ. ವರದಿಯ ವಿಷಯವಾಗಿ ಅದು ಬರುವುದಕ್ಕೆ ಮುಂಚೆಯೇ ಅನೇಕರಿಗೆ ಸಂದೇಹವು ತಲೆದೋರಿರುವುದು. ಇದಕ್ಕೆ ಪ್ರಬಲವಾದ ಕಾರಣವಿರುವುದು. ಡಿಸ್‌ಮಿಸ್ ಆದ ಉಪಾಧ್ಯಾಯರುಗಳ ಪ್ರಕರಣವು ಅಸೆಂಬ್ಲಿಯಲ್ಲಿ ಚರ್ಚೆಯಾದಾಗ ಶ್ರೀಮನ್ಮಹಾರಾಜರವರ ಅರ್ಜಿಗೆ ರುಜುಹಾಕುವುದಕ್ಕೆ ಪ್ರತಿಯೊಬ್ಬ ಪ್ರಜೆಗೂ ಹಕ್ಕಿದೆಯೆಂದು ಸರ್. ಎಂ. ವಿಶ್ವೇಶ್ವರಯ್ಯನವರು ವಿಚಾರಣೆ ಕಮಿಟಿಯಲ್ಲಿ ಹೇಳಿದ್ದಾರೆಂದು ಒಬ್ಬ ಮೆಂಬರು ಹೇಳಿದಾಗ ದಿವಾನರವರು ಥಟಕ್ಕನೆ 'ಅವರ ಅಭಿಪ್ರಾಯಕ್ಕೆ ನಾವು ಬದ್ಧರಾಗಿಲ್ಲ' ಎಂದು ಹೇಳಿದರು. ದಿವಾನರ ಈ ಹೇಳಿಕೆಯೇ ಸಂದೇಹಕ್ಕೆ ಕಾರಣವಾಗಿರುವುದು. ಸರ್. ಎಂ. ವಿಶ್ವೇಶ್ವರಯ್ಯನವರು ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ಕಮಿಟಿಯ ಅಧ್ಯಕ್ಷತೆಯನ್ನು ಸ್ವೀಕರಿಸಿದರು. ಅವರಿವರ ದಾಕ್ಷಿಣ್ಯಕಾಗಿ ಅವರು ಆ ಪದವಿಯನ್ನು ಸ್ವೀಕರಿಸಲಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ದಿವಾನರು 'ನಾನು ಬದ್ಧನಾಗಿಲ್ಲ' ಎಂದುಹೇಳುವಾಗ ಚೆನ್ನಾಗಿ ಯೋಚನೆ ಮಾಡಬೇಕಾಗಿತ್ತು. ದಿವಾನರು ಹಾಗೆ ಯೋಚನೆಯನ್ನು ಮಾಡಿದಂತೆ ಕಾಣುವುದಿಲ್ಲ. ಅಧ್ಯಕ್ಷರನ್ನು ನೇಮಿಸಿರುವವರು ಶ್ರೀಮನ್ಮಹಾರಾಜರವರು ಇದರಲ್ಲಿ ಯಾವ ಸಂದೇಹವೂ ಇಲ್ಲ. ಅಧ್ಯಕ್ಷರಲ್ಲಿ ಅಭಿಪ್ರಾಯಗಳು ಶ್ರೀಮನ್ ಮಹಾರಾಜರವರ ಅವಗಾಹನೆಗೆ ಹೋಗುವುವು. ಸರ್ಕಾರದವರು ಏನುಮಾಡಬೇಕೆಂಬುದನ್ನು ಶ್ರೀಮನ್ಮಹಾರಾಜರವರು ಹೇಳುವರು. ಆ ಅಧಿಕಾರವು ದಿವಾನರಿಗಾಗಲಿ ಸರ್ಕಾರಕ್ಕಾಗಲಿ ಇಲ್ಲ. ಈ ಕಮಿಟಿಯ ರಚನೆಯು ಪ್ರಾರಂಭದಲ್ಲಿಯೇ ನ್ಯಾಯವಿಶಾರದರಾದ ಕೆಲವು ಮಹನೀಯರು ಈ ಕಮಿಟಿಯನ್ನು ಶ್ರೀಮನ್ಮಹಾರಾಜರೇ ನೇಮಿಸಬೇಕು, ಸರ್ಕಾರದವರು ನೇಮಿಸಕೂಡದೆಂದು ಹೇಳಿದರು. ಸರ್ಕಾರದವರು ಅಪರಾಧಿಸ್ಥಾನದಲ್ಲಿರುವುದೇ ಇದಕ್ಕೆ ಕಾರಣ. ಆದರೆ ದಿವಾನರು ಈ ಆಕ್ಷೇಪಣೆಗೆ ಉತ್ತರವಾಗಿ ಶ್ರೀಮನ್ಮಹಾರಾಜರೂ ಸರ್ಕಾರವೂ ಒಂದೇ. ಶ್ರೀಮನ್ಮಹಾರಾಜರವರು ಯಾವ ಕೆಲಸಮಾಡಬೇಕಾದಲೀ ಸರ್ಕಾರದ ಮುಖಾಂತರವೇ ಮಾಡುತ್ತಾರೆ. ಶ್ರೀಮನ್ಮಹಾರಾಜರವರಿಗೆ ಈಗಿನ ಸರ್ಕಾರದಲ್ಲಿ ಸಂಪೂರ್ಣ ವಿಶ್ವಾಸವಿದೆಯೆಂದು ಹೇಳಿದರು. ಆದರೆ ಈ ಸಮಾಧಾನವು ಯಾರಿಗೂ ತೃಪ್ತಿಕರವಾಗಿರಲಿಲ್ಲ. ಕಮಿಟಿಯನ್ನು ನೇಮಿಸಿದಮೇಲೆಯೂ, ಶ್ರೀಮನ್ಮಹಾರಾಜರೇ ಆ ಕಮಿಟಿಯನ್ನು ನೇಮಿಸಬೇಕಾಗಿತ್ತೆಂದು ಪ್ರಜಾಭಿಪ್ರಾಯವು ಪ್ರಬಲವಾಗಿತ್ತು. ಶ್ರೀಮನ್ಮಹಾರಾಜರವರೇ ಕಮಿಟಿಯನ್ನು ನಿಯಮಿಸಿ ವರದಿಯು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಿದ್ದರೆ ದಿವಾನರಾಗಲಿ ಸರ್ಕಾರವಾಗಲಿ ನಾವು ಕಮಿಟಿಯ ತೀರ್ಮಾನಕ್ಕೆ ಬದ್ಧರಲ್ಲವೆಂದು ಹೇಳುವುದಕ್ಕಾಗುತ್ತಿರಲಿಲ್ಲ. ಈಗ ಕಮಿಟಿಯನ್ನು ನೇಮಿಸಿದವರು ಸರ್ಕಾರದವರು. ತಮಗೆ ಬೇಕಾದರೆ ಆ ಕಮಿಟಿಯ ತೀರ್ಮಾನದಂತೆ ನಡೆಯಬಹುದು ಇಲ್ಲವಾದರೆ ಬಿಡಬಹುದು. ಕಮಿಟಿಯವರು ಏನು ತೀರ್ಮಾನಮಾಡುವರೋ ನಮಗೆ ಗೊತ್ತಿಲ್ಲ. ಆದರೂ ಶ್ರೀಮನ್ಮಹಾರಾಜರ ಅರ್ಜಿಗೆ ರುಜುಹಾಕುವ ವಿಷಯದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರೇ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಈ ಅಭಿಪ್ರಾಯವು ಸರ್ಕಾರಕ್ಕೆ ಮಾನ್ಯವಾಗಿಲ್ಲ. ಇದರಂತೆಯೇ ಸರ್. ವಿಶ್ವೇಶ್ವರಯ್ಯನವರ ಇತರ ಅಭಿಪ್ರಾಯಗಳೂ ಅಮಾನ್ಯವಾದರೆ ಅದರಿಂದ ಬರುವ ಫಾಯಿದೆಯನ್ನು ಸರ್ಕಾರದವರೇ ಅನುಭವಿಸಬೇಕಾಗುವುದು. ವಿಶ್ವೇಶ್ವರಯ್ಯನವರು ಅತ್ಯಂತ ಉಜ್ವಲವಾದ ದೇಶಾಭಿಮಾನದಿಂದ ಮೈಸೂರಿನ ಕೀರ್ತಿಗಾಗಿ ಶ್ರಮಿಸಬೇಕೆಂದು ಅಧ್ಯಕ್ಷತೆಯನ್ನು ವಹಿಸಿದರು. ಅವರು ನಿಷ್ಪಕ್ಷಪಾತವಾಗಿಯೂ ನಿರ್ದಾಕ್ಷಿಣ್ಯನಾಗಿಯೂ ತಮ್ಮ ಕರ್ತವ್ಯವನ್ನು ಮಾಡಿಯೇ ಮಾಡುವರು. ಅವರ ಮಾತಿಗೆ ಮನ್ನಣೆಯನ್ನೀಯದೆ ದುರ್ಲಕ್ಷ್ಯ ಮಾಡುವುದಾದರೆ ಪುನಃ ಇನ್ನೊಂದುಸಾರಿ ಯಾರ ಮಾತನ್ನು ತೆಗೆದುಹಾಕಲು ದಿವಾನರಿಗೂ ಸರ್ಕಾರಕ್ಕೂ ಧೈರ್ಯಸಾಹಸಗಳಿರುವುದಿಲ್ಲವೋ ಅಂತಹವರಿಂದ ವಿಚಾರಣೆಯು ನಡೆಯಲೇಬೇಕು [illegible] ಸ್ಥಾಪನೆಯು ಆದ ಹೊರತು ಸರ್ಕಾರಕ್ಕಾಗಲೀ ಪ್ರಜೆಗಳಿಗಾಗಲಿ ಶಾಂತಿಯು ದೊರೆಯಲಾರದು. ಈ ವಿಷಯವನ್ನು ಸರ್ಕಾರದವರು ಮನಸ್ಸಿಗೆ ತಂದುಕೊಳ್ಳುವರೆಂದು ನಂಬುತ್ತೇನೆ.

ವಿಷ್ಣುಶರ್ಮ

ಶ್ರೀ ರಾಮ ಸಿನೀಮ.

ರಾಜಧಾನಿಯ ಲಕ್ಷ್ಮೀಥಿಯೇಟರಿನಲ್ಲಿ ಮೋಲ್ಕಂ ಸಿನೀಮಾದ ಪ್ರಾರಂಭೋತ್ಸವವು ತಾ|| 17-11-28 ನೆ ಶನಿವಾರ ಜರುಗಿಸಲ್ಪಡುವುದು. ಈ ದಿನ ಶಾರದಾ ಕಂಪೆನಿಯ "ಮಧುರ ಮೋಹಿನಿ" ಎಂಬ ನಾಟಕವು ಪ್ರದರ್ಶಿಸಲ್ಪಡುವುದು. ಈ ಹೊಸಕಂಪನಿಯು ಚಿರಾಯುವಾಗಿರಲೆಂದು ನಾವು ಕೋರುತ್ತೇವೆ.

Regd No M. 2322 || ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಸೋಮವಾರ ೧೯ ನವಂಬರ್ ೧೯೨೮ [ಸಂಚಿಕೆ

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co
Excelsior Type-writing Institute, Balepet, Bangalore City
2. Koppada Ramakrishniah, Agent, Hassan
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings Mysore.
5. B V Pundit & Co, Lakshmivilas Road, Mysore.
6. Friends' Union, Mysore.
7. Sweet Mart, Lansdowne Buildings, Mysore.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

19—11—1928

ವಿವಿಧ ವಿಷಯಗಳು

ಸೀಮೆಗೆ ಪ್ರವಾಸ

ಮ|| ಹೆಚ್. ಸಿ ದಾಸಪ್ಪನವರು ಇಂಗ್ಲೆಂಡಿಗೆ ಹೋಗಿ ಬಾರ್ ಅಟ್ ಲಾ ಪರೀಕ್ಷೆಯನ್ನು ಪ್ಯಾಸ್ ಮಾಡಿಕೊಂಡು ಬರುವುದಾಗಿಯೂ, ಮೈಸೂರಿಗೆ ವಾಪಸ್ ಬಂದನಂತರ ನಮ್ಮ ಸ್ಥಾನದ ನ್ಯಾಯಸ್ಥಾನಗಳಲ್ಲಿ ದೊಡ್ಡ ಹುದ್ದೆಯೊಂದು ಅವರಿಗೆ ಕಾದಿದೆ ಎಂಬುದಾಗಿಯೂ ಮೈಸೂರು ಪೇಟ್ರಿಯೆಟ್ಟಿನಲ್ಲಿ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ಮೈಸೂರು ಕಬ್ಬಿಣಕ್ಕೆ ಸಂರಕ್ಷಣೆ

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಮ್ಯಾನೇಜರ್ ಆದ ಮ||ವೆಂಕಟನಾರಣಪ್ಪನವರು ಇಂಡಿಯನ್ ಟ್ಯಾರಿಫ್ ಬೋರ್ಡಿನ ಮುಂದೆ ಮೈಸೂರು ಕಬ್ಬಿಣವನ್ನು ಸಂರಕ್ಷಣೆ ಮಾಡಬೇಕೆಂಬುದಾಗಿಯೂ, ಇದಕ್ಕಾಗಿ ಇಂಡಿಯಾದ ಕಬ್ಬಿಣದ ಮೇಲಿರುವ ಸುಂಕವನ್ನು ತೆಗೆಯಬೇಕೆಂಬುದಾಗಿಯೂ, ಹೊರಗಿನ ಕಬ್ಬಿಣದ ಮೇಲೆ ಸುಂಕವನ್ನು ಹಾಕಬೇಕೆಂಬುದಾಗಿಯೂ ಸಾಕ್ಷಿ ಕೊಟ್ಟಿರುವರು.

ಲಂಡನ್ನಿನಲ್ಲಿ ದೀಪಾವಳಿ

ಲಂಡನ್ನಿನಲ್ಲಿರುವ ಹಿಂದೂಗಳು ದೀಪಾವಳಿ ಉತ್ಸವವನ್ನು ಆಚರಿಸಿದರು.

ಜಿ. ಪಿ. ಜಿ.

ಜಿ. ಭೀಮರಾಯರು ಬಳೇಪೇಟೆ ಪ್ರಾಪಗಾಂಡ ಬೋರ್ಡಿನ ಮೇಲೆ ಬರೆಯುತ್ತಿರುವ ಸಮಾಚಾರಗಳ ಸ್ಲೈಡ್ಸು ಹುಡಿಸ್ಸೈದು ದಿವಸಕ್ಕೆ ಒಂದಾವರ್ತಿ ಅಚ್ಚು ಹಾಕಿಸುವುದಕ್ಕೋಸ್ಕರ ಸರ್ಕಾರದ ಅನುಮತಿಯನ್ನು ಕೇಳಿದ್ದಾರೆ.

ಕಳ್ಳರ ಪತ್ತೆ

ಚಿಕ್ಕಗೂಬ್ಬಿನ ಪೋಲೀಸಿನವರು ಕೆಲವು ಕಳ್ಳರಿಂದ ಕೂಡಿದ ಒಂದು ಗುಂಪನ್ನು ಹಿಡಿದಿರುವರೆಂದೂ ಇವರಲ್ಲಿ 800 ರೂ ಬೆಲೆಬಾಳತಕ್ಕ ರೇಷ್ಮೆ ಶೀರೆ ವಗೈರೆಗಳು ಪತ್ತೆಯಾಗಿರುವುದಾಗಿಯೂ ಈ ಗುಂಪನ್ನು ಹಿಡಿದಿದ್ದರಿಂದ ಕೆಲವು ತಿಂಗಳುಗಳ ಹಿಂದೆ ನಾಗಮಂಗಲ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಕುಣಿಗಲು ಮೊದಲಾದ ಸ್ಥಳಗಳಲ್ಲಿ ಕಳುವಾಗಿದ್ದ ಕೆಲವು ಪದಾರ್ಥಗಳು ಪತ್ತೆಯಾಗಿರುವುದಾಗಿಯೂ ತಿಳಿದುಬರುತ್ತದೆ.

ಪ್ಲೇಗು

[illegible]ಯಲ್ಲಿ ಅಲ್ಲಲ್ಲಿ ಪ್ಲೇಗು ತಲೆದೋರಿರುವುದರಿಂದ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ಇನಾಕ್ಯುಲೇ[illegible]

ಹಿಂದುಳಿದ ವಿದ್ಯಾರ್ಥಿಗಳಿಗೆ ವೇತನ

ನಮ್ಮ ಸರ್ಕಾರದವರು, ಕಾಲೇಜಿನಲ್ಲಿಯೂ ಹೈಸ್ಕೂಲಿನಲ್ಲಿಯೂ ಉದ್ಯೋಗಶಾಲೆಗಳಲ್ಲಿಯೂ ಓದುವ ಹಿಂದುಳಿದ ಪಂಗಡದ ವಿದ್ಯಾರ್ಥಿಗಳ ವೇತನಕ್ಕಾಗಿ ಈಗಿರುವುದಕ್ಕಿಂತಲೂ ಹೆಚ್ಚಾಗಿ 50, ರೂಪಾಯಿಗಳನ್ನು ಸಾಲಿಯಾನ ಮುಂಜೂರುಮಾಡಿರುತ್ತಾರೆ. ಈ ಹಿಂದುಳಿದ ಪಂಗಡದಲ್ಲಿ ಮಹಮದೀಯರು, ಆದಿಕರ್ನಾಟಕರು ಸೇರಿರುತ್ತಾರೆ ಎಲ್ಲಾ ಒಟ್ಟು 1 ಲಕ್ಷ 60 ಸಾವಿರ ರೂಪಾಯಿಗಳು ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ವೇತನವಾಗಿ ಸಲ್ಲುತ್ತದೆ.

ಸರ್ಕಾರಿ

ವಿದ್ಯಾಭ್ಯಾಸದ ಇಲಾಖೆಯ ಡೈರಕ್ಟರವರ ಪರ್ಸನಲ್ ಅಸಿಸ್ಟೆಂಟರಾದ ಮ|| ಸುದರ್ಶನಂ ಅಯ್ಯಂಗಾರರವರು ಡೆಪ್ಯುಟಿ ಡೈರೆಕ್ಟರ್ ಸುಲ್ತಾನ್ ಮೊಹಿಯುದ್ದೀನರವರ ಸ್ಥಾನದಲ್ಲಿ ಅವರು ರಜಾದಿಂದ ಹಿಂತಿರಿಗೆ ಕೆಲಸದ ಮೇಲೆ ಬರುವವರಿಗೂ ಬದಲಿ ನೋಡುವಂತೆ ಸರ್ಕಾರದವರ ಅಪ್ಪಣೆಯಾಗಿರುತ್ತೆ.

ಸ್ತ್ರೀಯರು ಮತ್ತು ಧೂಮಪಾನ

ಜಾರ್ಜ್ ಚಕ್ರವರ್ತಿಯವರ ಮಗಳಾದ ಮೇರಿಯವರು ಒಂದು ಸ್ತ್ರೀಸಮೂಹದಲ್ಲಿ ಆಟವಾಡುತ್ತಿರುವಾಗ್ಯೆ ಚುಟ್ಟಾಗಳನ್ನು ಹಂಚಿದರೆಂದೂ ಅದನ್ನು ಅವರು ಸ್ವೀಕರಿಸಲಿಲ್ಲವೆಂದೂ ಇದರಿಂದ ಇತರ ಸ್ತ್ರೀಯರಿಗೂ ಧೂಮಪಾನವನ್ನು ಮಾಡಕೂಡದೆಂಬ ಬುದ್ಧಿಯು ಬಂದಿತೆಂದೂ ವರ್ತಮಾನ ಪತ್ರಿಕೆಗಳಲ್ಲಿ ಬರೆಯಲ್ಪಟ್ಟಿದೆ.

ನಷ್ಟ

ಎಟ್ನಾದಲ್ಲಿ ನಡೆದ ಭೂಕಂಪದ ದೆಸೆಯಿಂದ ಕೆನಡಿಯಾದಲ್ಲಿ ಅನೇಕ ಭೂಮಿಗಳೂ, ಭಾರಿಭಾರಿ ಕಟ್ಟಡಗಳೂ, ಬೆಳೆಗಳೂ, ರಸ್ತೆಗಳೂ, ಸೇತುವೆಗಳೂ ನಾಶವಾಡಲ್ಪಟ್ಟವು. ಇವುಗಳಿಂದ ಒಟ್ಟು ೧೬೦ ಲಕ್ಷ ಲಯರ್‌ಗಳ ನಷ್ಟವಾಗಿರುತ್ತೆ.

ಬಟ್ಲರ್ ಕಮಿಟಿ

ಈ ತಿಂಗಳು ೧೨ ನೇ ತಾ|| ನ ದಿವಸ ಕಮಿಟಿಯು ಪಾಟಿಯಾಲ ಸಂಸ್ಥಾನದ ವಿಚಾರಣೆಯನ್ನು ಆರಂಭಿಸಿತು.

ಭೂಕಂಪದ ಅವಾಂತರ

ಎಟ್ನಾದ ಭೂಕಂಪದಿಂದ ೭೦೦ ಮನೆಗಳು ರೋಮ್‌ನಲ್ಲಿ ನಾಶವಾದುವು ೫೦೦೦ ಜನರು ಮನೆಗಳಿಲ್ಲದೆ ನಿರ್ಗತಿಕರಂತೆ ಅಲೆದಾಡುತ್ತಿರುವರು. ೧೨೦೦ ಎಕರೆಗಳಷ್ಟು ಕಿತ್ತಳೆಹಣ್ಣಿನ ತೋಟಗಳೂ ೨೫೦೦ ಎಕರೆಯಷ್ಟು ಗದ್ದೆಯೂ ನೀರಿನಲ್ಲಿ ಮುಳುಗಿಹೋದುವು. ಜನರ ಸಹಾಯಕ್ಕಾಗಿ ಸರ್ಕಾರದವರು ಲಕ್ಷಾಂತರ ದ್ರವ್ಯವನ್ನು ಸ್ಯಾಂಕ್ಷನ್ ಮಾಡಿರುವರು.

ವಿವಾಹ ವಯಸ್ಸಿನ ಕಮಿಟಿ

ಕಮಿಟಿಯವರು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವ ಮುಖ್ಯ ಮುಖ್ಯ ಸ್ಥಳಗಳನ್ನು ಪರಾಂಬರಿಸಿ ನೀಲಗಿರಿಗೆ ದಯಮಾಡಿಸಿದರು. ಇವರು ಶ್ರೀಸರ್ಕಾರು ಹಾರಾಜರವರ ಅತಿಥಿಗಳಾಗಿದ್ದರು. ಬಿವಾನರು ಇವರಿಗೊಂದು ಔತಣವನ್ನು ಏರ್ಪಡಿಸಿದ್ದರು. ಇವರು ೧೦ ನೆ ತಾ|| ಸಾಯಂಕಾಲ ಪ್ರಥಮಪಟ್ಟಣವನ್ನು [illegible]

[illegible]

ಆಂಧ್ರ [illegible]
[illegible]ಯು ಪತ್ರಿಕೆಗಳಿಗೆ [illegible]
[illegible]ರಿಗೂ [illegible]
[illegible]
[illegible]
[illegible]ರಿಗೂ [illegible]
ಕ್ಕೆ ನಮ್ಮ ಸರ್ಕಾರದವರು [illegible]
ಸಂಚುತ್ತೇವೆ.

ಪ್ರವಾಹದ ಅನಾಹುತಗಳು

ಪೂರ್ವಸಮುದ್ರತೀರದಲ್ಲಿರುವ ಗೋದಾವರಿ ಡಿಸ್ಟ್ರಿಕ್ಟಿನಲ್ಲಿ ಭಾರೀಮಳೆಯಾಗಿ ತುಂಬಾ ಪ್ರವಾಹಕ್ಕಾರಂಭವಾಯಿತು. ಇದರಿಂದ ಕೊಯಿಗೆ ಬಂದಿದ್ದ ಬೆಳೆಗಳೆಲ್ಲಾ ನಿರ್ಮೂಲವಾದುವು. ಪೆದ್ದಾಪುರಂ ಮತ್ತು ಕೋಕನಾಡ ತಾ|| ನ ಅನೇಕ ಹಳ್ಳಿಗಳಲ್ಲಿ ಎಲ್ಲೆಲ್ಲಿಯೂ ನೀರುತುಂಬಿಕೊಂಡಿದೆ. ಇದರಿಂದ ಜನರ ಪ್ರಾಣಗಳು ಉಳಿಯುವುದೇ ದುಸ್ತರವಾಗಿಹೋಗಿದೆ. ಅನೇಕ ಕೆರೆ, ಕಟ್ಟೆಗಳು ಒಡೆದುಹೋಗಿವೆ. [illegible] ರಸ್ತೆಗಳಲ್ಲಿ ಪ್ರವಹಿಸುವುದಕ್ಕಾರಂಭಿಸಿರುವುದರಿಂದ ರೈಲು ರಸ್ತೆಗಳೆಲ್ಲ ಕೆಟ್ಟುಹೋಗಿವೆ. ಟೆಲಿಗ್ರಾಫ್ ಕಂಭಗಳೆಲ್ಲಾ ಬಿದ್ದು ಒಳಗಣ ಸಮಾಚಾರವೇ ತಿಳಿಯದಂತಾಗಿರುತ್ತೆ. ಅನೇಕಮನೆಗಳು ನೀರಿನಲ್ಲಿ ಮುಳುಗಿ ಹೋಗಿವೆ. ಸಾಲದುದಕ್ಕೆ ಜ್ವರ, ಆಮಶಂಕೆ, ಕಾಲರ ಮೊದಲಾದ ಅಂಟುಜಾಡ್ಯಗಳ ಹುರುಬು.

ವೀರಶೈವ ಪ್ರಾಂತಿಕ ಸಭೆ

ಸ್ವಾಮಿ!

ಸದರಿ ಸಭಾ ಕಾರ್ಯದರ್ಶಿಗಳಾದ ಮ|| ರಾ|| ಕೆ. ಎಸ್. ಪುಟ್ಟಣ್ಣನವರು ಈ ಪ್ರಶ್ನೆಗಳಿಗೆ [illegible] ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

(೧) ರಿಪೋರ್ಟಿನಲ್ಲಿ ಕಂಡ [illegible] ಸತ್ಕಾರರಸಂಘ ಯಾವಾಗ ಏರ್ಪಾಡಾಯಿತು [illegible] ಈಸಂಘದ ಮೆಂಬರುಗಳು ಯಾರು?

(೨) ಈ ಸಭಾ ಚಂದಾವಸೂಲಿ ಮತ್ತು [illegible] ತಾರೀಖು ತಿಳಿಸಬೇಕು?

(೩) ರಿಪೋರ್ಟಿನಲ್ಲಿ ಕಂಡ ಧನ ನಿಧಿಗೆ ಸಹಾಯ ಮಾಡಿರುವ ಮೊಬಲಗು (ರೂ ೧೫೦೦-೦-೦) ಯಾರದ್ದಿರುತ್ತೆ?

(೪) ರಿಪೋರ್ಟು ೮ ನೇ ಕಾಲಂನಲ್ಲಿ ಕಂಡ ಇತರ ಸಾಮಾನುಗಳು ಎಂಬ ಬಾಬಿನಲ್ಲಿ ರೂ ೧೫೭-೧೧-೦ ಎಂತ ನಮೂದಿಸಿರುತ್ತೆ. ಇವುಗಳ ವಿಲೆವಾರಿ ಯಾವ ರೀತಿಯಾಗಿರುತ್ತೆ?

(೫) ಸಭಾ ರಿಪೋರ್ಟಿನಲ್ಲಿ ಕಂಡ [illegible] ಸ್ಥಾನದ ಬಾಬುಗಳು ಮತ್ತು ಈ [illegible] ಳು ಸ್ವಾಗತ ಕಮಿಟಿಯ ಅಧಿಕಾರಕ್ಕೆ ಒಳಪಟ್ಟಿತ್ತೇ?

(೬) ರಿಪೋರ್ಟಿನಲ್ಲಿ ನಮೂದಿಸಿರುವ [illegible] ರೆ ಖರ್ಚಿಗಾಗಿ ಅಂಗಡಿಯಿಂದ [illegible] ಳ ಪೈಕಿ ಕೆಲವು ಸಾಮಾನುಗಳನ್ನು [illegible] ರುವುದುಂಟೇ?

(೭) ರಿಪೋರ್ಟಿನಲ್ಲಿ [illegible] ೧೦೦ ರೂ ನಮೂದಿಸಿರುತ್ತೆ. [illegible] ಪ್ರಕಟಿಸಿರುವ [illegible] ಪಟ್ಟಿಯಲ್ಲಿ [illegible] ರೂ [illegible] ಎಂತ ನಮೂದಿಸಿರುತ್ತೆ. [illegible] [illegible]ವೇನು?

TAI NADU

[illegible]

ಬೆಂಗಳೂರಿನ ಗಲಭೆಯ ಮೊಕದ್ದಮೆಗಳು

[illegible] ಈ ಕೆಳಗೆ ಕಂಡ ಜನಗಳ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ [illegible] ಮಾಣಯ್ಯನವರು ಕೇಸನ್ನು ದಾಖಲ್ ಮಾಡಿರುತ್ತಾರೆ.

ಹಿಂದುಗಳು—೧. ಎಚ್. ವಿ. ಸುಬ್ರಹ್ಮಣ್ಯಂ. ೨. [illegible] ತಿವಾರಿಯವರು. ೩. [illegible]. ೪. ಜೆ. ಬಿ. ನಾರಾಯಣರಾವ್. ೫. ಕೆ. ಎಲ್. ನಂಜಪ್ಪ. ೬. ಸಂಕಣ್ಣ. ೭. ವಿಶ್ವನಾಥ. ೮. ಅನಂತರಾವ್.

[illegible] ಮೇಲೆ ಇಂಡಿಯನ್ [illegible] ಪ್ರಕಾರ [illegible] ಸಾಕ್ಷಿಗಳಿರು [illegible]

೧. ಸರ್ವಾಭಟ್ಟ, ೨. ರಾಮಲಿಂಗಪ್ಪ, ೩. ಸಿದ್ದಲಿಂ[illegible] ೪. ಜೆ. ಬಿ. ನಾರಾಯಣರಾವ್, ೫. ಎಮ್. ಕೆ. [illegible]. ೬. ಸಂಕಣ್ಣ, ೭. ಕೆ. ಎಲ್. ನಂಜಪ್ಪ, ೮. ಮುನಿಯಪ್ಪ, ೯. ವಿಶ್ವನಾಥ, ೧೦. ಸೀತಾರಾಮ [illegible] ೧೧. ಜಿ. ಆರ್. ಶ್ರೀನಿವಾಸರಾವ್. ೧೨, ರಂಗಪ್ಪ ೧೩. ನಾರಾಯಣ [illegible] ೧೪. ಲಕ್ಷ್ಮೀನಾರಾಯಣರಾವ್.

ಇವರುಗಳ ಮೇಲೆ ಇಂಡಿಯನ್ ಪೀನಲ್ ಕೋ[illegible] ೧೦೯ ಇವುಗಳ ಪ್ರಕಾರ [illegible] ಮಾಡುವುದು. ೮೫ ಸಾಕ್ಷಿಗಳಿರುವರು. ೧. ಪ್ರೊಫೆಸರ್ ಕೆ. ವಿ. ಅಯ್ಯರ್ ಮತ್ತು ಆರ್. ಶ್ರೀನಿವಾಸರಾವ್ ಇವರುಗಳು ಅಬ್ಬಾಸ್‌ಖಾನರ ಜವಾನನ್ನು ಹೊಡೆ[illegible] ಪ್ರಯೋಗ [illegible] ಇಡಲ್ಪವುದು ೧೦ ಸಾಕ್ಷಿಗಳಿರುವರು.

[illegible] ಗಫೂರ್ [illegible] ೨ ಅಬ್ದುಲ್ ಅಜೀಜ್, ೩ ಘುರಾಲ್, ೪ ಷೇರ್ ಅಬ್ದುಲ್ ಗಫೂರ, ೫ ಮಹಮದ್ ಇಬ್ರಾಹಿಮ್ [illegible] ೯ ಷೇಕ್ ಇಸ್ಮಾಯಿಲ್, ೧೦ ಸತ್ತಾರ್ [illegible] ಮೇಲೆ ೧೪೭ ೧೪೫, ೩೨೪ [illegible] ೩೦೭ರ ಪ್ರಯೋಗ. ೧೧೧ ಸಾಕ್ಷಿಗಳಿರುವರು

[illegible] ಮೇಲೆ [illegible] ೩೦೭ರ ಪ್ರಯೋಗ. [illegible] ಜನ ಸಾಕ್ಷಿ.

[illegible], ನಾರಾಯಣ, ತಿಮ್ಮರಾಯಿ ಮತ್ತು [illegible]ರಂಗ ಇವರುಗಳ ಮೇಲೆ ೧೪೮ ಮತ್ತು ೩೨೪. [illegible] ಜನ ಸಾಕ್ಷಿ.

[illegible] ಸಿಬ್ಬಂದಿ ಸುಬ್ರಹ್ಮಣ್ಯಂ ಮೇಲೆ [illegible] ಸರ್ಕಾರದ ಅನುಮತಿ ತೆಗೆದುಕೊಂಡು ಕೇಸು [illegible]

[illegible] ೫ ಜನ [illegible] ಜನ ಮುಸಲ್ಮಾನರು. ೨೪ ಹಿಂದುಗಳು. ವಿದ್ಯಾರ್ಥಿಗಳು ೭ ಜನ ಇರುವರು. ಒಟ್ಟು ಸಾಕ್ಷಿಗಳು ೨೬೫

ಒಟ್ಟು 22 ಜನ ಹಿಂದೂಗಳ ಮೇಲೂ 14 ಜನ ಮುಸಲ್ಮಾನರ ಮೇಲೂ ಮೊಕದ್ದಮೆಗಳನ್ನು ಮಾಡಿರುತ್ತಾರೆ.

ಇದರಲ್ಲಿ ಅಬ್ಬಾಸ್‌ಖಾನರ ಹೆಸರೇ ಇಲ್ಲ. ಎಂದರೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಬ್ಬಾಸ್‌ಖಾನರು ಏನೂ ಅಪರಾಧ ಮಾಡಿಲ್ಲವೆಂಬ ಭಾವನೆಯೇ? ಇನ್ನು ಮುಂದಕ್ಕೆ ಪರಿಸ್ಥಿತಿಯು ಏನೇನು ರೂಪವನು ತಾಳುವುದೋ ನೋಡೋಣ. ಅಪರಾಧ ಮಾಡಿದವರನ್ನು [illegible] ಉಳಿಸಿಕೊಳ್ಳಲಾರರು. ನಮ್ಮ ಶ್ರೀಮನ್ ಮಹಾರಾಜರವರು ಸತ್ಯಮೇವೋದ್ಧ[illegible] ಪ್ರತಿಜ್ಞೆಯನ್ನು ಕೊಟ್ಟಿರುವರು. [illegible] ಅಬ್ಬಾಸ್‌ಖಾನರು [illegible] ಎಂದಿಗೂ [illegible] ಕೊಳ್ಳಲಾರರು.

ವರ್ತಮಾನಗಳು

ಸೈಮನ್ ಕಮೀಷನ್

ಕೊಡಗಿನ ನ್ಯಾಯವಿಧಾಯಕ ಸಭೆಯವರು, ಸೈಮನ್ ಸಮಿತಿಗೆ ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿರುವರು.

ಕುದುರೆಗಳ ಬೇಟೆ

ಭರತಪುರದ ಸರ್ಕಾರದವರು ಕುದುರೆಗಳನ್ನು ಸಾಕುವುದಕ್ಕೆ ಹುಲ್ಲಿಗಾಗಲಿ ಅಥವಾ ಮತ್ಯಾವ ತಿಂಡಿಪದಾರ್ಥಗಳಿಗಾಗಲಿ [illegible] ಮಾಡಿಲ್ಲ. [illegible] ಅವುಗಳ ಜೀವನಕ್ಕೆ [illegible] ದು ಭಾವಿಸಿದ್ದರು. ವರ್ಷಂಪ್ರತಿ ಜಾನುವಾರಿನ ಸಂಖ್ಯೆಯು ಹೆಚ್ಚುತ್ತಿತ್ತು. ಅಲ್ಲದೆ ಸರ್ಕಾರಕ್ಕೆ ೨೦೦೦ ರೂಗಳ ಆದಾಯವೂ ಬರುತ್ತಿತ್ತು. ಅಲ್ಲಿನ [illegible] ಕುದುರೆಗಳ [illegible] ನ್ನಿತ್ತರು. ಇದರಿಂದ ಗರ್ಭಿಣಿಯಾಗಿದ್ದ ೨೦ ಕುದುರೆಗಳು ಸತ್ತವು. ಹಪ್ಪೊಂದು ಕುದುರೆಗಳು [illegible] ತುತ್ತಾದುವು; ಬಾಕಿಯವು ಕೈಸೆರೆಯಾದುವು.

ದಾರಿದ್ರ್ಯದಿಂದ ಆತ್ಮಹತ್ಯ

[illegible] ಎಂಬೊಬ್ಬ ಬ್ರಾಹ್ಮಣನ ಪತ್ನಿಯು ವಿಷಮಿಶ್ರಿತವಾದ [illegible] ತಿಂದು ಆತ್ಮಹತ್ಯ ಮಾಡಿಕೊಂಡಳು. ಆಕೆಯ [illegible] ಮಕ್ಕಳನ್ನೂ [illegible] ಯಜಮಾನರು ನೆಲ್ಲೂರಿನಲ್ಲಿಬಿಟ್ಟು ತಮ್ಮ ಕೆಲಸದ ಮೇಲೆ ಹೊರಟು ಹೋಗಿದ್ದರು. ಅಲ್ಲಲ್ಲಿ ಹತ್ತಿರದ [illegible] ಗಡಿಗಳಲ್ಲಿ ಭಿಕ್ಷಾಟನವನ್ನು ಮಾಡಿ [illegible] ಕಷ್ಟದೆಸೆಯಲ್ಲಿ ತಾನುಉಪವಾಸ ಮಾಡುವುದನ್ನು ಕೂಡ ಲೆಕ್ಕಿಸದೆ ಆ ಸಣ್ಣ ಸಣ್ಣ ಮಕ್ಕಳ ಪೋಷಣೆ ಯಲ್ಲಿ ನಿರತಳಾಗಿರುತಿದ್ದಳು. ಈ ರೀತಿಯಲ್ಲಿಯೂ ಸಂಸಾರ ನಡೆಸಲು ಸಾಧ್ಯವಾಗದೆ ಮನಸ್ಸು ತುಂಬಾ ಕ್ಲೇಶವನ್ನು ಹೊಂದಿತ್ತು. ಕಡೆಗೆ ಮೇಲೆ ಹೇಳಿದಂತೆ ವಿಷಫಲವನ್ನು ಭುಂಜಿಸಿ ವಿಧಿವಶಳಾದಳು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್

ಮೈಸೂರಿನ ಸುಪ್ರಸಿದ್ಧ ವ್ಯಾಪಾರಿಗಳಾದ ರಾ|| ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು ಕಳಿಸಿರುವ ಅಂದವಾದ ಚಿತ್ರದ ಕ್ಯಾಲೆಂಡರನ್ನೂ [illegible]ಲ್ ಕ್ಯಾಲೆಂಡರನ್ನೂ ಪಾಕೆಟ್ ಕ್ಯಾಲೆಂಡರುಗಳನ್ನೂ ಸ್ವೀಕರಿಸಿರುತ್ತೇವೆ. ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು ಎಂಬ ವಿಳಾಸಕ್ಕೆ 5 ಆಣೆ [illegible] ನಿಸಿದವರಿಗೆ ಮೇಲ್ಕಂಡ ಮೂರು ನಮೂನೆ ಕ್ಯಾಲೆಂಡರುಗಳನ್ನು ಮಾದರಿಗಾಗಿ ಪೋಸ್ಟ್ ಪಾರ್ಸಲ್ ದ್ವಾರ ರವಾನಿಸುತ್ತಾರೆ.

ಅಬ್ಬಾಸ್ ಖಾನರ ಮೇಲೆ ಮೊಕದ್ದಮೆ.

ಅಡ್ವೋಕೇಟ್ ಡಿ ಶಾಮರಾಯರು ಐ. ಪಿ. [illegible] 500 ನೇ ಕಲಂ ಮೇರೆಗೆ ಅಬ್ಬಾಸ್ ಖಾನರ ಮೇಲೆ ಮಾನನಷ್ಟದ ದಾವಾ ಹೂಡಿರುವರು. ವಿಶ್ವೇಶ್ವರಯ್ಯನವರ ಕಮಿಟಿಯಲ್ಲಿ ಅಬ್ಬಾಸ್‌ಖಾನರು ಕೊಟ್ಟ ಹೇಳಿಕೆಗೆ ಸಮನ್ [illegible] ವಿಚಾರಣೆಯು 28-11-28 [illegible] ಇದೆ.

ಸರ್ ವಿಶ್ವೇಶ್ವರಯ್ಯನವರ ವರ್ಧಂತಿ.

ಸರ್ ಎಂ. ವಿಶ್ವೇಶ್ವರಯ್ಯನವರ 67 ನೇ ವರ್ಷದ ವರ್ಧಂತಿಯನ್ನು ಬೆಂಗಳೂರು ಕಲಾಮಂದಿರದವರು 9-11-28 ನೇ ಪ್ರಾತಃಕಾಲ ಮೆಜೆಸ್ಟಿಕ್ ಥಿಯೇಟರಿನಲ್ಲಿ ನಡೆಸುವರೆಂದೂ ಸರ್ ಹಾಜಿ ಇಸ್ಮೇಲ್‌ಸೇಟರ ಅಗ್ರಾಸನವನ್ನು ವಹಿಸುವರೆಂದೂ ಬೆಂಗಳೂರಿನಿಂದ ಸಮಾಚಾರ ಬಂದಿದೆ.

ನ್ಯಾಯವಿಧಾಯಕ ಸಭೆ.

ಡಿಸೆಂಬರ್ 17 ನೇ ತಾರೀಖು ಸೋಮವಾರ ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನವು ಬೆಂಗಳೂರು ಅಠಾರಾಕಚೇರಿಯಲ್ಲಿ ನಡೆಯುವುದು.

ಕೆಂಪು ಹಸುಗಳು

ಕೆನಡಾದೇಶದ ಬೇಟೆಗಾರರು ಜಿಂಕೆಗಳೆಂಬ ಭ್ರಾಂತಿಯಿಂದ ಹಸುಗಳನ್ನು ಬೇಟೆಯಾಡುತ್ತಿದ್ದರು. [illegible] ತಪ್ಪಿಸುವ ಸಲುವಾಗಿ ಅಲ್ಲಿನ ರೈತರು [illegible] ಹಸುಗಳಿಗೆಲ್ಲಾ ಕೆಂಪು ಬಣ್ಣವನ್ನು [illegible]

[illegible]

ಅಮೇರಿಕಾದಲ್ಲಿ ರಸ್ತೆಗಳಲ್ಲಿರತಕ್ಕ ಕಲ್ಲಿನ [illegible] ತೆಗೆಯತಕ್ಕ [illegible] ಗಿಟ್ಟಿದ್ದಾರೆ.

ಶ್ರೀ ರಾಮಕೃಷ್ಣಾಶ್ರಮ.

ಈ ದಿವಸ ಪ್ರಾತಃಕಾಲ 9 ರಿಂದ 10-30 ರವರೆಗೆ ಸ್ವಾಮಿ [illegible]ನಂದರು [illegible] ರೈಲ್ವೆ ಕ್ವಾರ್ಟರ್ಸ [illegible] ಶ್ರೀ ರಾಮಕೃಷ್ಣಾಶ್ರಮದ ಕಟ್ಟಡದ ಅಸ್ತಿಭಾರವನ್ನು ಹಾಕುವರು.

ಕಾಂಬೋಡಿಯದಲ್ಲಿ ಭಾರತೀಯ ಸಂಸ್ಕೃತಿ

ಕಾಂಬೋಡಿಯಾ ದೇಶದ ರಾಜನಿಗೆ ಕೆಲವು ದಿನಗಳ ಹಿಂದೆ ಪಟ್ಟಾಭಿಷೇಕ ಮಹೋತ್ಸವವು ನಡೆಯಿತು. ಅಷ್ಟದಿಕ್ಕುಗಳನ್ನು ಸೂಚಿಸಲು ಎಂಟು ಜನ ಬೌದ್ಧ ಸನ್ಯಾಸಿಗಳು ಸಿಂಹಾಸನದ ಸುತ್ತಲೂ ನಿಂತು ಆಶೀರ್ವಚನಗಳನ್ನುಚ್ಚರಿಸಿದರು. ರಾಜರು ಬೌದ್ಧಮತಾನುಯಾಯಿಗಳಾದರೂ ಕಾಂಬೋಡಿಯದ ರಕ್ಷಕರಾದ ಶಿವ ಮತ್ತು ವಿಷ್ಣುವಿನ ಪ್ರತಿಮೆಗಳನ್ನು ಕೈಯಲ್ಲಿ ಧರಿಸಿದ್ದರು. ಭಾರತೀಯ ಸಂಸ್ಕೃತಿಯು ಪ್ರಾಚೀನಕಾಲದಿಂದ ಅಲ್ಲಿ ನೆಲಸಿತ್ತೆಂಬುದಕ್ಕೆ ಇದು ನಿದರ್ಶನವಾ[illegible]

Regd No M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಮಂಗಳವಾರ ೨೦ ನವಂಬರ್ ೧೯೨೮ [ಸಂಚಿಕೆ

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)
ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co Excelsior Type-writing Institute, Balepet, Bangalore City.
2. Koppada Ramakrishniah, Agent, Hassan.
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings Mysore.
5. B V Pundit & Co, Lakshmivilas Road, Mysore.
6. Friends' Union, Mysore.
7. Sweet Mart, Lansdowne Buildings, Mysore.

Printed and published by P. R. Ramaiya,
at Sri Rama Press, D. Subbiah Road, Mysore.

ತಾಯಿನಾಡು

20—11—1928

ವಿವಿಧ ವಿಷಯಗಳು

ವೇಗದ ಅಂಚೆ.

ಅಮೇರಿಕಾದಿಂದ ಜರ್ಮನಿಗೆ ಅಂಚೆಯು 68½ ಘಂಟೆಗಳ ಕಾಲದೊಳಗೆ ವಿಮಾನದಲ್ಲಿ ಸಾಗಿಸಲ್ಪಟ್ಟಿತು.

ರಜ.

ಸ್ವರ್ಗಸ್ಥರಾದ ದೇಶಭಕ್ತ ಲಾಲಾ ಲಜಪತರಾಯರವರ ಸ್ಮರಣಾರ್ಥವಾಗಿನಿನ್ನೆದಿನ ಮೈಸೂರು ಮಹಾರಾಜ ಕಾಲೇಜಿಗೂ ಹೈಸ್ಕೂಲುಗಳಿಗೂ ರಜವು ಕೊಡಲ್ಪಟ್ಟಿತ್ತು.

ಕ್ಷಾಮ

ಚೀನಾದಲ್ಲಿ ಕ್ಷಾಮವು ಕಾಲೂರುತ್ತಿದೆ. ಮಳೆಗಳೇ ಬಾರದೆ ಪೈರುಪಚ್ಚೆಗಳೆಲ್ಲಾ ಹಾಳಾಗುತ್ತಿವೆ. ಸುಮಾರು ೨೦ ಕೋಟಿ ಜನರು ಅನ್ನಾಹಾರಗಳಿಲ್ಲದೆ ತುಂಬಾ ರಿಕ್ತಸ್ಥಿತಿಯಲ್ಲಿರುವರು.

ದುಃಖಪ್ರದರ್ಶನ ಸಭೆ.

ಕೀರ್ತಿಶೇಷರಾದ ಲಾಲಾ ಲಜಪತರಾಯರವರ ಸ್ಮರಣಾರ್ಥವಾಗಿ ಈದಿನ ಸಾಯಂಕಾಲ ೬ ಘಂಟೆಗೆ ಟೌನ್‌ಹಾಲಿನಲ್ಲಿ ಸಭೆ ನಡೆಯುವುದು. ಮಹಾಜನರೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ವಿಮಾನ ಪ್ರಯಾಣ.

ಕೋರಶೆಡ್ ಇಸ್ಪಾಂಡಿಯರ್ ಇರಾಣಿ ಎಂಬ ಮಹಿಳೆಯು ಬುಷ್ಯೆರಿನಿಂದ ಟೆಹಿರಾನಿಗೆ ಇರತಕ್ಕ 750 ಮೈಲಿಗಳ ದೂರವನ್ನು ಏಳು ಘಂಟೆಗಳ ಕಾಲದಲ್ಲಿ ವಿಮಾನದ ಮೇಲೆ ಪ್ರಯಾಣಮಾಡಿರುವಳು.

ಆಜೀವ ಕಾರಾವಾಸ.

ಕಾಶಿಯಲ್ಲಿ ಒಬ್ಬನು ತನ್ನ ೩ ವರುಷದ ಮಗನನ್ನು ಕಲ್ಲಿನಿಂದ ಹೊಡೆದನು. ಅದರಿಂದ ಮಗುವು ಮೃತಿ ಹೊಂದಿತು. ಈ ಕಾರಣದ ಮೇಲೆ ತಂದೆಗೆ ಜೀವಾವಧಿ ಕಾರಾವಾಸ ಪ್ರಾಪ್ತವಾಗಿರುವುದು.

ದಾನ.

ಕಾಶಿಯಲ್ಲಿ ಡಾಕ್ಟರಾಗಿದ್ದ ಶ್ರೀಮತಿ ಭಾಗೀರಥಮ್ಮನವರು ತಮ್ಮ ಅವಸಾನ ಕಾಲದಲ್ಲಿ 45000 ರೂಪಾಯಿಗಳನ್ನು ಬೆನಾರಿಸ್ ಸೇವಾ ಸಮಿತಿಗೆ ದಾನಮಾಡಿರುತ್ತಾರೆ.

ನೂತನ ಶಾಲಾರಂಭ

ಮಳವಳ್ಳಿ ತಾ|| ಕಲ್ಕುಣಿ ಗ್ರಾಮದ ಮುಸಲ್ಮಾನರು ಅಲ್ಲಿ ಒಂದು ಉರ್ದು ಬಾಲಕ ಪಾಠಶಾಲೆಯನ್ನು ಕಲ್ಪಿಸಿರುವರು. ಇದರ ಆರಂಭೋತ್ಸವವು ಈ ತಾ|| ೧೯ ನೇ ಸೋಮವಾರ ಮಧ್ಯಾಹ್ನ ದಿವಾನರವರಿಂದ ನೆರವೇರಿಸಲ್ಪಟ್ಟಿತು.

ಶೋಧನೆ.

ಕಳೆದ ಘೋರಯುದ್ಧದ ಸಮಾರಂಭದಲ್ಲಿ ಮುಳುಗಿಹೋಗಿದ್ದ ಒಂದು ಜಹಜು ಇಟಲಿಯವರಿಂದ ಮೇಲಕ್ಕೆ ತರಲ್ಪಟ್ಟಿತು. ಅದರಲ್ಲಿ 50 ಮಿಲಿಯನ್ ಫ್ರಾಂಕು ಈ ಬೆಲೆಬಾಳುವ ವಜ್ರಗಳೂ 1500 ಫ್ರಾಂಕುಗಳ ನೋಟುಗಳೂ ದೊರೆತಿವೆ. ಇನ್ನೂ ಶೋಧನೆಯು ಆಗುವುದರಲ್ಲಿದೆ.

ಬೈಸಿಕಲ್ ಅಲೋಯನ್ಸ್

ಸಂಸ್ಥಾನಾಮಳಿ ಎಲ್ಲಾ ಹೆಡ್‌ಕ್ವಾರ್ಟರುಗಳಲ್ಲೂ, ಪಟ್ಟಣಗಳಲ್ಲೂ ತಮ್ಮ ತಮ್ಮ ಆಫೀಸುಗಳಿಂದ ದೂರ ಫಾಸಲೆಗಳಲ್ಲಿ ೧ ಮೈಲಿದೂರ ವಾಸಮಾಡತಕ್ಕ ಖಾಯಂ ನೌಕರರುಗಳಿಗೆ ಬೈಸಿಕಲ್ಲು ಕೊಂಡುಕೊಳ್ಳುವುದಕ್ಕಾಗಿ ಅಡ್ವಾನ್ಸ್‌ಕೊಡತಕ್ಕದ್ದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ. (ಈ ರಿಯಾಯತಿಯು ಕಡಿಮೆ ದರ್ಜೆಯವರಿಗನ್ವಯಿಸುವುದಿಲ್ಲ.)

ಅಬ್ಬಾಸ್‌ಖಾನರಮೇಲೆ ಮಾನನಷ್ಟದ ದಾವಾ.

ಬೆಂಗಳೂರು ಅಡ್ವೋಕೇಟ್ ಡಿ. ಶಾಮರಾಯರವರು ೧ ನೆ ಕ್ಲಾಸ್ ಬೆಂಚ್ ಮ್ಯಾಜಿಸ್ಟ್ರೇಟ್‌ಕೋರ್ಟಿನಲ್ಲಿ ಅಬ್ಬಾಸ್‌ಖಾನರ ಮೇಲೆ ಮಾನನಷ್ಟಕ್ಕೆ ದಾವಾಹಾಕಿರುವರು. ಅಬ್ಬಾಸ್‌ಖಾನರು ಮಾಣಯ್ಯನವರ ಕೋರ್ಟಿನಲ್ಲಿ ಕೊಟ್ಟ ವಾಜ್ಮೂಲದಲ್ಲಿ ಶಾಮರಾಯರ ಮೇಲೆ ಅನೇಕ ಅಪಮಾನಕರವಾದ ಅಪಾದನೆಗಳನ್ನು ಮಾಡಿರುವರೆಂಬುದೇ ಈ ದಾವಾಕ್ಕೆ ಮುಖ್ಯಕಾರಣ.

ಕದಳೀ ಫಲ ಮಹಿಮೆ

ಮನುಷ್ಯನ ಸಕಲ ರೋಗಗಳಿಗೂ ಅಜೀರ್ಣವೇ ಮೂಲಾಧಾರವಾದದ್ದು. ಈ ಅಜೀರ್ಣವು ಬಾಲ್ಯದಿಂದಲೂ ಅನೇಕ ಕಾರಣಗಳಿಂದ ಉತ್ಪತ್ತಿಯಾಗಿರುತ್ತದೆ. ಸರ್ವೇಸಾಮಾನ್ಯವಾಗಿ ೧೦೦ ಕ್ಕೆ ೯೫ ರಂತೆ ಅಜೀರ್ಣ ಎಂಬ ರೋಗಕ್ಕೆ ದಾರಿಕೊಡದಿರತಕ್ಕವರೇ ಅಪೂರ್ವ ಇಂಥ ಅಜೀರ್ಣವನ್ನು ಹಾಳುಮಾಡಿ ಕೆಟ್ಟಿರುವ ಜೀರ್ಣಕೋಶವನ್ನು ಸರಿಯಾದ ಸ್ಥಿತಿಗೆ ತರಲು ಬಾಳೆಯಹಣ್ಣಿನ ಆಹಾರವೇ ಬಹು ಮುಖ್ಯವೆಂದೂ ಅದರಿಂದ ಅನೇಕರಿಗೆ ಗುಣತೋರಿರುವುದೆಂದೂ ಡಾ|| ಅಲ್ಪೋರ್ಡ್ ನಿಕೋಲಿನ್‌ರವರು ಹೇಳಿದ್ದಾರೆ. ಇದೇ ಅಭಿಪ್ರಾಯವು ನಮ್ಮ ದೇಶೀಯ ವೈದ್ಯರಿಂದಲೂ ಕೊಡಲ್ಪಟಿದೆ.

ಮೂರು ಪ್ರಾಣಿಗಳ ಅನ್ಯೋನ್ಯ.

ಅಮೇರಿಕಾದ ಒಂದಾನೊಂದು ದೇವಸ್ಥಾನದ ಗೋಪುರದ ಮೇಲೆ ಎರಡು (ದಂಪತಿ) ಕೊಕ್ಕರೆಗಳು ವಾಸಿಸುತ್ತಿದ್ದವು. ಆದರಪೈಕಿ ಒಂದು ಆಹಾರಕ್ಕಾಗಿ ಹಾರಾಡುವ ಸಂಭ್ರಮದಲ್ಲಿ ಯಾವುದೋ ಕಾರ್ಖಾನೆಯ ಒಲೆಯೊಳಕ್ಕೆ ಜಾರಿಬಿದ್ದು ಪ್ರಾಣ ಬಿಟ್ಟಿತು. ಕೆಲವು ದಿನಗಳ ತರುವಾಯ ಮತ್ತೊಂದು ಕೊಕ್ಕರೆ ಕೂಡ ಇದೇ ಹಂಬಲಿನಲ್ಲಿ ಕೊರಗಿ ಪ್ರಾಣ ಬಿಟ್ಟಿತು. ಮೂರು ಪ್ರಾಣಿಗಳಲ್ಲೂ ಈ ರೀತಿಯಾದ ಅನ್ಯೋನ್ಯವಿರುವುದು ಆಶ್ಚರ್ಯವೇ ಸರಿ.

ಹಿಂದೂ ಶಿಷ್ಟಾಚಾರ

ಕಾಶೀ ಕ್ಷೇತ್ರದಲ್ಲಿ ಧರ್ಭಾಂಗಮಹಾರಾಜರ ಅಧ್ಯಕ್ಷತೆಯಲ್ಲಿ ಮೇಲ್ಕಂಡಸಭೆಯು ಜರುಗಿತು. ಹಿಂದೂ ದೇಶದ ನಾನಾ ಕಡೆಗಳಿಂದ ಸುಮಾರು ೧೦೦೦ ಕ್ಕೆ ಮೇಲ್ಪಟ್ಟು ಪ್ರತಿನಿಧಿಗಳು ದಯಮಾಡಿಸಿದ್ದರು. ಎಲ್ಲಾ ಪೀಠಗಳ ಪ್ರತಿನಿಧಿಗಳೂ ಬಂದಿದ್ದರು. (೧) ಪ್ರತಿಹಿಂದೂವು ಗೋಸಂರಕ್ಷಣೆಯ ವಿಷಯದಲ್ಲಿ ಶ್ರದ್ಧೆಯನ್ನು ವಹಿಸಬೇಕು. (೨) ಶಾರದಾಯವರು ಉಪಪಾದಿಸಿರುವ ವಿವಾಹ ವಯೋನಿರ್ಣಯ ಶಾಸನವನ್ನು ಖಂಡಿಸುವುದು (೩) ಹಿಂದೂಮತಕ್ಕೆ ವಿರೋಧವಾದ ಯಾವ ಕಾನೂನನ್ನೂ ಆಚರಣೆಗೆ ತರಕೂಡದೆಂದು ಗೌರ್ನರ್‌ಜನರಲ್‌ರವರನ್ನು ಪ್ರಾರ್ಥಿಸಿಕೊಳ್ಳುವುದೇ ಮೊದಲಾದುವುಗಳು ಸರ್ವಾನುಮತದಿಂದ ಪಾಸ್‌ಮಾಡಲ್ಪಟ್ಟುವು.

ನಾಗಪ್ಪನವರ ಮೇಲೆ ದಾವ

ಮ|| ರಾ|| ಎಲ್. ಎಸ್. ರಾಜುರವರು ಮ|| ರಾ|| ಬಿ. ನಾಗಪ್ಪನವರಿಗೆ ಒಂದು ನೋಟೀಸನ್ನು ಕೊಟ್ಟಿದ್ದಾರೆ. ೧೦-೧೦-೨೮ ರಲ್ಲಿ [illegible] ಮುಂದೆ ಮ|| ರಾ|| ಯು. ಎಸ್. ಲಿಂಗೇಗೌಡರ ಪರೀಕ್ಷೆಕಾಲದಲ್ಲಿ ನಾಗಪ್ಪನವರು ತಮ್ಮ ಮೇಲೆ ಮಾನನಷ್ಟವಾದ ಕೆಲವು ಅಪಾದನೆಗಳನ್ನು ಮಾಡಿದರೆಂದೂ ಇದಕ್ಕೆ ಪರಿಹಾರವಾಗಿ ನಾಗಪ್ಪನವರು [illegible] ದಿವಸಗಳೊಳಗೆ ಒಂದು ಲಿಖಿತ ಕ್ಷಮಾಪಣೆಯನ್ನು [illegible] ಕೆಂದೂ ೧೦. ಸಾವಿರ ರೂಗಳ ದಂಡವನ್ನು [illegible] ಕೆಂದೂ ಈ ನೋಟೀಸಿನಲ್ಲಿ [illegible]

ಬಾಂಬಿನ ಸಾಹಸ.

ಬಾಬುಹಸನ್ ಜಾವಾರ್ ಎಂಬುವನು ತನ್ನ ಹೆಂಡತಿಯೊಡನೆ ಜಗಳವಾಡಿದ ಕ್ರೋಧದಿಂದ ಕೆಲವು ಬಾಂಬುಗಳನ್ನು ತಯಾರಿಸಿದನು. 1 ನೇ ಬಾಂಬಿಗೆ ತನ್ನ ಭಾವ ಮೈದನು ತುತ್ತಾದನು. 2 ನೇ ಬಾಂಬಿಗೆ ತನ್ನ ಹೆಂಡತಿ ಮಗ ಇವರಿಬ್ಬರೂ ಸಿಕ್ಕದಿದ್ದುದರಿಂದ ಪ್ರಾಣಾಪಾಯವಾದ ಘಾಯಗಳಾಯಿತು. ಅಲ್ಲಿಂದ ಎಲ್ಲಿಗೂ ಹೋಗದೆ ಮನೆಯಲ್ಲಿಯೇ ಅಡಗಿಕೊಂಡಿದ್ದನು. ಪೋಲೀಸಿನವರು ಮನೆಯನ್ನು ಮುತ್ತಿದರು. ಒಂದು ಕೈಯಲ್ಲಿ ಕತ್ತಿಯನ್ನೂ ಮತ್ತೊಂದು ಕೈಯಲ್ಲಿ ಒಂದು ಬಾಂಬನ್ನೂ ಧರಿಸಿ ಪೋಲೀಸಿನವರನ್ನು ಎದುರಿಸಿದನು. ಹತ್ತಿರವಿದ್ದವರೆಲ್ಲರೂ ದೂರಸರಿದರು. ಪೋಲೀಸಿನವರ ಮೇಲೆ ಮತ್ತೊಂದು ಬಾಂಬು ಎಸೆಯಲ್ಪಟ್ಟಿತು. ಅಧಿಕಾರಿಗಳು ಗುಂಡಿನೇಟಿಗೆ ಗುರಿಮಾಡಬೇಕೆಂದು ಪೋಲೀಸ್ ಅಧಿಕಾರಿಗಳು ಬಾಜು ಮನೆಗಳ ಮಹಡಿಯ ಮೇಲೇರಿ ಇವನ ಕಾಲಿಗೆ ಗುಂಡನ್ನು ಹೊಡೆದರು. ಈ ಮನುಷ್ಯ ಇನ್ನೆರಡು ಬಾಂಬುಗಳನ್ನು ರಸ್ತೆಗೆ ಹಾಕಿದನು. ದೈವವಶಾತ್ ಯಾರಿಗೂ ಘಾತವಾಗಲಿಲ್ಲ. ಅವನನ್ನು ಐದು ಬಾಂಬು ಮತ್ತು ೩ ಕತ್ತಿಗಳ ಸಮೇತ ದಸ್ತಗಿರಿ ಮಾಡಿರುವರು. ಅವನ ಮನೆಯ ತುಂಬ ಇದಕ್ಕೆ ಸಂಬಂಧಪಟ್ಟ ಪದಾರ್ಥಗಳೇ ದೊರೆತಿವೆ.

ಅಮೇರಿಕದ ಹೆಂಗಸರ ವೈಚಿತ್ರ್ಯ.

ಅಮೇರಿಕದ ಕೆಲವು ಕಡೆಗಳಲ್ಲಿ ಸುಂದರರಾದ ಮಕ್ಕಳು ಹುಟ್ಟಬೇಕೆಂದು ಆಸೆಪಡುವ ಹೆಂಗಸರನೇಕರು ಸುಂದರರಾಗಿರುವ ಪುರುಷರೊಡನೆ ಅವರು ತಮ್ಮ ಗಂಡಂದಿರಲ್ಲದಿದ್ದರೂ ಸಂಸಾರ ಮಾಡುವರಂತೆ. ನ್ಯೂಯಾರ್ಕಿನ ವಿಧವೆಯೊಬ್ಬಳು ಬಹು ಸುಂದರವಾದ ಮಗುವೊಂದನ್ನು ಹೆತ್ತಳು. ಆ ಮಗುವಿನ ತಂದೆಯಾರೆಂದು ಕೇಳಲಾಗಿ ಅವಳು ಹೇಳದೆ ಸುಂದರವಾದ ಮಕ್ಕಳನ್ನು ಉತ್ಪಾದಿಸಲು ನಿಪುಣನಾದೊಬ್ಬನಿಂದ ಈ ಮಗುವಿಗೆ ಜನನವಾಯಿತೆಂದು ಒಪ್ಪಿಗೆ ಕೊಟ್ಟಳು. ಕೆಲವು ದಿನಗಳನಂತರ ಮಾರ್ಕ್ ಮೆಡ್ವೆಡೆಫ್ ಎಂಬ ಬಲಶಾಲಿಯೂ ಸುಂದರನೂ ಆದವೊಬ್ಬನೇ ಈ ಮಗುವಿನ ತಂದೆಯೆಂದು [illegible] ಮಾಡಲ್ಪಟ್ಟನು. ಅಲ್ಲಿಗಳಿಗೆ ಅವನ ದೇಹವು ಲಕ್ಷ್ಯವಾಗಿತ್ತು, ಇದರಿಂದ [illegible] ಆಗ ಅವನು ಅವಸ್ಥೆಯಲ್ಲಿ [illegible] ವಿಚ್ಛೇದನಕ್ಕಾಗಿ ಅವನ ಹೆಂಡತಿ ವ್ಯಾಜ್ಯಮಾಡಿರುತ್ತಾಳೆ.

TAI NADU

20—11—1928.

ಕೀರ್ತಿಶೇಷರಾದ ಲಾಲಾಜಿಯವರು

ಪಂಜಾಬ್ ಕೇಸರಿಗಳೂ ಭಾರತಲಲಾಮರೂ ಆದ ಲಾಲಾ ಲಜಪತರಾಯರವರು ಈ ತಿಂಗಳು 17 ನೇ ತಾ|| ಪ್ರಾತಃಕಾಲ ಕೀರ್ತಿಶೇಷರಾದರೆಂದು ತಿಳಿಸಲು ಬಹಳ ವಿಷಾದಿಸುತ್ತೇವೆ. ಇವರ ಮರಣದಿಂದ ಆಸೇತು ಹಿಮಾಚಲ ಪರ್ಯಂತರವಾಗಿ ಭಾರತೀಯರೆಲ್ಲರಿಗೂ ಅಲ್ಲದೆ ಇಂಗ್ಲೆಂಡಿನಲ್ಲಿಯೂ ಅಮೇರಿಕದಲ್ಲಿಯೂ ಇರುವ ಅಸಂಖ್ಯಾತ ಭಾರತಪ್ರೇಮಿಗಳಿಗೂ ಬಹಳ ವ್ಯಸನವುಂಟಾಗಿರುವುದು. ನಮ್ಮ ದೇಶದ ಈಗಿನ ಸ್ಥಿತಿಯಲ್ಲಿ ಅತ್ಯಂತ ಶೋಚನೀಯವಾದ ಇವರ ಮರಣದಿಂದ ಒಂದು ಜೀವಜ್ಯೋತಿಯೇ ಕಳಚಿ ಬಿದ್ದಂತಾಯಿತು. ಲಾಲಾಜಿಯವರು ದುರ್ಭಾಗ್ಯವಾದ ನಮ್ಮ ದೇಶಕ್ಕೆ ಮಾಡಿರುವ ಸೇವೆಯು ಅಪಾರವಾದುದು. ಇವರ ಅರವತ್ತು ಮೂರು ವರ್ಷಗಳ ಜೀವಿತ ಕಾಲದಲ್ಲಿ ಇವರು ಮಾಡಿರುವ ಪ್ರತಿಯೊಂದು ಸಣ್ಣ ಮತ್ತು ದೊಡ್ಡ ಕೆಲಸವೂ ನಮ್ಮ ದೇಶದ ಹಿತಕ್ಕಾಗಿಯೇ ಮಾಡಲ್ಪಟ್ಟಿರುವುದು. ಸೇವೆ ಮತ್ತು ಸ್ವಾರ್ಥತ್ಯಾಗ ಇವೆರಡೂ ಇವರ ಜೀವನ ಮಂತ್ರಗಳು. ಇವರ ಅಸಾಧಾರಣವಾದ ಧೈರ್ಯವೂ ಇವರ ಅಸಮಾನವಾದ ಪ್ರತಿಭೆಯೂ ಅಪ್ರತಿಹತವಾದ ಇವರ ವಾಕ್ಚಾತುರ್ಯವೂ ಇವರ ವಿರೋಧಿಗಳಿಗೆ ಭಯವನ್ನುಂಟುಮಾಡುತ್ತಿದ್ದುವು. ಬ್ರಿಟಿಷ್ ಇಂಡಿಯಾ ಸರ್ಕಾರಕ್ಕೆ ಇವರು ನಿಜವಾಗಿಯೂ ಸಿಂಹಪ್ರಾಯರಾಗಿದ್ದರು. ಎಂದೂ ಅವರಿಗೆ ರಕ್ಷಣೆಯನ್ನು ಕೊಡಲಿಲ್ಲ. ಅವರ ರಕ್ಷಣೆಯನ್ನು ಬೇಡಲೂ ಇಲ್ಲ.

ಕೆಲವು ದಿವಸಗಳ ಹಿಂದೆ ಸೈಮನ್ ಕಮಿಷನ್‌ನವರು ಲಾಹೋರಿಗೆ ಕಾಲಿಟ್ಟ ದಿವಸ ಪೋಲೀಸಿನವರು ಲಾಲಾಜಿ ಮತ್ತು ಇತರರ ಮೇಲೆ ಲಾಠಿ ಪ್ರಯೋಗ ಮಾಡಿದ ಕಾಲದಲ್ಲಿ ಪೋಲೀಸಿನವರ ಮೇಲೆ ನ್ಯಾಯಕ್ಕಾಗಿ ಇವರು ಸರ್ಕಾರವನ್ನು ಕೇಳಿಕೊಳ್ಳಲಿಲ್ಲ. ಜಾಯ್ಡ್ ಎಂಬುವರನ್ನು ನೇಮಿಸಿ ಪಂಜಾಬ್ ಸರ್ಕಾರದವರು ಲಾಠಿ ಚಾರ್ಜಿನ ವಿಚಾರಣೆಯನ್ನು ಪ್ರಕ್ರಮಿಸಿದಾಗ ಲಾಲಾಜಿಯವರು "ನಿಮ್ಮ ನ್ಯಾಯವು ನಮಗೆ ಬೇಡವೆಂದು" ಆ ಕಮಿಟಿಗೆ ಬಹಿಷ್ಕಾರ ಹಾಕಿದರು. ನಿಜವಾಗಿಯೂ, ಪೋಲೀಸಿನವರ ಆ ಲಾಠಿ ಏಟುಗಳೇ ಲಾಲಾಜಿಯವರು ಶೀಘ್ರವಾಗಿ ಮರಣಹೊಂದಲು ಕಾರಣವಾದುವು. ಇಂತಹ ಸಂದರ್ಭದಲ್ಲಿಯೂ ಕೂಡ ಪರಕೀಯ ಸರ್ಕಾರದ ಸಹಾಯವನ್ನು ಕೇಳಲಿಲ್ಲ. ಈ ರೀತಿಯಾದ ಅಪ್ರತಿಹತವಾದ ಮನೋನಿಶ್ಚಯವನ್ನೇ ಲಾಲಾಜಿಯವರು ತಮ್ಮ ಜೀವಮಾನದಲ್ಲಿ ತೋರಿಸಿರುವರು. ಮಿತ್ರರಾದರೂ ಶತ್ರುಗಳಾದರೂ ಯಾವಾಗಲೂ ತಮ್ಮ ಮನೋನಿಶ್ಚಯದಂತೆಯೇ ವರ್ತಿಸಿರುವರು. ಬ್ರಿಟಿಷ್ ಸರ್ಕಾರದವರು ಇವರಿಗೆ ಗಡೀಪಾರು ಜೈಲು ಮೊದಲಾದ ಅನೇಕ ದುಸ್ಸಹವಾದ ಕಷ್ಟಗಳನ್ನು ಕೊಟ್ಟರು. ಆದರೂ ಇವರು ಎದೆಗುಂದದೆ ಸಿಂಹದಂತೆಯೇ ಮುಂದುವರಿಯುತ್ತಿದ್ದರು. ಲಾಲಾಜಿಯವರು ಮೊದಲಿನಿಂದಲೂ ಇಂಡಿಯಾ ದೇಶದ ಎಲ್ಲಾ ರಾಜಕೀಯ ಪಂಗಡಗಳಿಗೂ ಮಾನ್ಯರಾಗಿದ್ದರು. ಮವಾಳರು ಕೂಡ ಇವರಲ್ಲಿ ಅತಿಶಯವಾದ ಗೌರವವನ್ನಿಟ್ಟಿದ್ದರು. ಉಗ್ರವಾದಿಗಳಂತೂ ಇವರನ್ನು ತಮ್ಮ ಮುಖಂಡರೆಂದೇ ಭಾವಿಸಿದ್ದರು. 1907 ನೇ ಇಸವಿಯಲ್ಲೇ ಸೂರತ್ತಿನಲ್ಲಿ ಇವರನ್ನು ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಲೋಕಮಾನ್ಯ ತಿಲಕರು ಸೂಚಿಸಿದರು. 1920 ರಲ್ಲಿ ಅಸಹಕಾರ ಸಂಗ್ರಾಮವನ್ನು ಹೂಡಿದ ಕಲ್ಕತ್ತಾದ ಸ್ಪೆಷಲ್ ಕಾಂಗ್ರೆಸ್ಸಿಗೆ ಇವರು ಅಧ್ಯಕ್ಷರಾಗಿದ್ದರು. ಅಸಹಕಾರ ಸಂಗ್ರಾಮದಲ್ಲಿ ಇವರು ಅತಿಪ್ರಧಾನ ಸ್ಥಾನವನ್ನು ಪಡೆದಿದ್ದರು. ಪಂಜಾಬಿನಲ್ಲಿ ಇವರ ಪ್ರತಿಭೆಯಿಂದಲೇ ಪ್ರಜೆಗಳಲ್ಲಿ ಐಕಮತ್ಯವೂ ಧೈರ್ಯಸಾಹಸಗಳೂ ಹುಟ್ಟಿಕೊಂಡಿದ್ದವು. ಇಂಡಿಯಾ ದೇಶದಲ್ಲಿ ಮಾಡಿರುವ ಸೇವೆಯು ಮಾತ್ರವೇ ಅಲ್ಲದೆ ಅಮೇರಿಕಾ, ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಪ್ರಮಾಣವಾದ ಇಂಡಿಯಾ ದೇಶದ ನಿಜವಾದ ಜ್ಞಾನವನ್ನು ಆ ದೇಶೀಯರೆಲ್ಲರಿಗೂ ಉಂಟುಮಾಡಿದರು. ರಾಜಕೀಯ ವಿಷಯಗಳಲ್ಲಿ ಮಾತ್ರವೇ ಅಲ್ಲದೆ ಸಾಮಾಜಿಕ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿಯೂ ಇವರು ಅಪಾರವಾದ ಸೇವೆಯನ್ನು ಮಾಡಿರುವರು. ಆರ್ಯಸಮಾಜ, ಹಿಂದೂ ಮಹಾಸಭೆ, ಸ್ಪೃಶ್ಯೋದ್ಧಾರ, ದೇಶೀಯ ವಿದ್ಯಾಭ್ಯಾಸ ಈ ಚಳವಳಿಗಳಲ್ಲಿ ಇವರು ಅಗ್ರಸ್ಥಾನವನ್ನು ಪಡೆದಿದ್ದರು. ವೃತ್ತಪತ್ರವ್ಯವಸಾಯದಲ್ಲಿಯೂ ಇವರ ಸ್ಥಾನವು ಅಗ್ರಗಣ್ಯವಾದುದು. ವಂದೇ ಮಾತರಂ, ಪೀಪಲ್, ಮೊದಲಾದ ಪತ್ರಿಕೆಗಳನ್ನು ನಡೆಯಿಸುತ್ತಿದ್ದರು. ಲಾಹೋರಿನ ಅನೇಕ ಕಾಲೇಜು ಮತ್ತು ಸ್ಕೂಲುಗಳ ಸ್ಥಾಪನೆಗಳಲ್ಲಿಯೂ ಅವುಗಳನ್ನು ನಡೆಸುವುದರಲ್ಲಿಯೂ ಇವರ ಭಾಗವು ಮುಖ್ಯವಾದುದು. ದೇಶಸೇವೆಗೆ ತರುಣರಿಗೆ ಶಿಕ್ಷಣೆಯನ್ನು ಕೊಡುವುದಕ್ಕೋಸ್ಕರ ಪ್ರಜಾಸೇವಕರ ಸಂಘವೊಂದನ್ನೂ, ತಿಲಕ್ ಸ್ಕೂಲ್ ಆಫ್ ಪಾಲಿಟಿಕ್ಸ್ ಎಂಬ ರಾಜಕೀಯ ಶಿಕ್ಷಣಶಾಲೆಯೊಂದನ್ನೂ ಇವರು ಸ್ಥಾಪಿಸಿರುವರು. ಎಲ್ಲಕ್ಕಿಂತಲೂ ಹೆಚ್ಚಾಗಿ ಇವರು ತಮ್ಮ ಸ್ವಂತ ಆಚಾರದಿಂದಲೂ ಉದಾಹರಣೆಯಿಂದಲೂ ನಮ್ಮ ದೇಶದ ಯುವಕರಿಗೆ ಗುರುಗಳಾಗಿಯೂ ಮಾರ್ಗದರ್ಶಿಗಳಾಗಿಯೂ ಇದ್ದರು. ಲಾಲಾಜಿಯವರ ಗುಣಕೀರ್ತನವನ್ನು ಮಾಡುವುದಕ್ಕೆ ಹೋದರೆ ಮಹಾಭಾರತದಂತಹ ಗ್ರಂಥವನ್ನೇ ಬರೆಯಬೇಕಾಗುವುದು. ಇಂತಹ ಮಹಾಪುರುಷರ ಮರಣದಿಂದ ಭಾರತೀಯರು ಧೈರ್ಯಗುಂದದೆ ಅವರ ಶರೀರವು ನಷ್ಟವಾದರೂ ಅವರ ಆತ್ಮವು ನಮ್ಮ ಜೊತೆಯಲ್ಲೇ ಇದೆ ಎಂಬುದನ್ನು ಅರಿತು ಲಾಲಾಜಿಯವರು ಮಾಡುತ್ತಿದ್ದ ದೇಶಸೇವೆಯನ್ನೇ ಮುಂದುವರಿಸಿದರೆ ನಿಜವಾಗಿಯೂ ಅವರ ಆತ್ಮಕ್ಕೆ ಶಾಂತಿಯಾಗುವುದು. ಪರಮಾತ್ಮನು ಲಾಲಾಜಿಯವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಹೃದಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಚಂದ್ರವಳ್ಳಿ ಭೂಶೋಧನೆ

ಚಿತ್ರದುರ್ಗದ ಸಮೀಪದಲ್ಲಿರುವ ಹುಲೇಗೊಂದಿ ಎಂಬ ಕಣಿವೆಯಲ್ಲಿ "ಚಂದ್ರವಳ್ಳಿ" ಎಂಬ ಪುರಾತನ ಪಟ್ಟಣವೊಂದು ಹೂತುಹೋಗಿರುವುದೆಂದು ಕೇಳಿ ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳು ಮಹಾರಾಜರವರ ಕಾಲೇಜ್ ಪ್ರೊಫೆಸರಾಗಿಯೂ, ಈಗ ಶಾಸನದ ಇಲಾಖೆಯ ಅಧ್ಯಕ್ಷರಾಗಿಯೂ ಇರುವ ಡಾ|| ಎಂ. ಎಚ್. ಕೃಷ್ಣಯ್ಯಂಗಾರ್ರನ್ನು ಆ ಸ್ಥಳಕ್ಕೆ ಹೋಗಿ ಅಗೆದು ಭೂಶೋಧನೆ ಮಾಡುವಂತೆ ನೇಮಿಸಿದರು. ಇವರು ಕಳೆದ ಬೇಸಿಗೆಯ ರಜದಲ್ಲಿ ಅಲ್ಲಿ ಶೋಧನೆ ಮಾಡುವಲ್ಲಿ ಕೆಲವು ವಿಚಿತ್ರವಾದ ಹೊಸ ವಿಷಯಗಳು ಕಾಣಬಂದುವು. ಸುತ್ತುಮುತ್ತಲಿನ ಬಂಡೆಗಳ ಮೇಲೆ ಕೆಲವು ಶಾಸನಗಳು ಸಿಕ್ಕಿದವು. ಅವುಗಳಲ್ಲಿ ಒಂದು ಈಗ್ಗೆ ಸುಮಾರು 1,600 ವರುಷಗಳ ಕೆಳಗೆ 'ಕದಂಬ' ರಾಜರ ಸಂತತಿಯನ್ನು ಸ್ಥಾಪಿಸಿದ ಮಯೂರಶರ್ಮನ ಹೆಸರನ್ನೂ, ಅವನಿಗೆ ಸಂಬಂಧಪಟ್ಟ ಒಂದು ಕೆರೆಯನ್ನೂ, ಆಗ್ಗೆ ಸಮಕಾಲೀನವಾದ ರಾಜ್ಯಗಳ ಹೆಸರುಗಳನ್ನೂ ಹೇಳುತ್ತದೆ. ಇದು ಕನ್ನಡ ವರ್ಣಮಾಲೆಗೆ ತಾಯಿಯಾಗಿ ಪೂರ್ವದಲ್ಲಿ ಈ ದೇಶದಲ್ಲಿ ಉಪಯೋಗದಲ್ಲಿದ್ದ ಬ್ರಹ್ಮೀ ಲಿಪಿಯಲ್ಲಿ ಬರೆದಿದೆ.

ಇದರ ಸಮೀಪದ ಬಯಲಿನಲ್ಲಿ ಅಗೆದು ನೋಡಲು, ದೊಡ್ಡ ದೊಡ್ಡ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ಮನೆಗೋಡೆಗಳುಳ್ಳ ಒಂದು ಊರು ಸಿಕ್ಕಿತು. ಆ ಗೋಡೆಗಳ ನೆರೆಹೊರೆಯಲ್ಲಿ ಆ ಕಾಲದ ಜನರು ಬಿಸುಟು ಅಥವಾ ಮರೆತು ಹೋಗಿದ್ದ ಚಿತ್ರಿತವಾದ ಕುಡಿಕೆ ಮಡಿಕೆಗಳು, [illegible], ಮಣಿ, ಚಿನ್ನ, ಸೀಸ ಮೊದಲಾದ ಲೋಹಗಳಿಂದ ಮಾಡಿದ ಆಭರಣಗಳೂ, ಕಬ್ಬಿಣದ ಅಂಬು ಮೊನೆ ಮುಂತಾದ ಆಯುಧಗಳೂ, ಕಲ್ಲು ಮಣ್ಣಿನ ಪ್ರತಿಮೆಗಳೂ, ಬಗೆಬಗೆಯ ಮಣಿಗಳೂ, ಅನೇಕ ವಿಧವಾದ ನಾಣ್ಯಗಳೂ ದೊರೆತುವು. ಈ ನಾಣ್ಯಗಳನ್ನು ಪರಿಶೋಧಿಸುವಲ್ಲಿ ಕೆಲವು [illegible], ರೋಮ್ ಮುಂತಾದ ಪರದೇಶಗಳಿಂದ ವರ್ತಕರು ತಂದುವೆಂದೂ, ಮತ್ತೆ ಕೆಲವು ಈಗ್ಗೆ ಸುಮಾರು 1,800 ವರುಷಗಳ ಕೆಳಗೆ ದಕ್ಷಿಣದೇಶವನ್ನು ಆಳುತ್ತಿದ್ದ '[illegible]ತವಾಹನ' ಅಥವಾ 'ಶಾಲಿವಾಹನ' ವಂಶದ ಚಕ್ರವರ್ತಿಗಳೂ, ಅವರ ಅಧಿಕಾರಿಗಳೂ, ಸಾಮಂತರೂ ಛಾಪಿಸಿದ ಸೀಸ ಮತ್ತು ತಾಮ್ರದ ನಾಣ್ಯಗಳೆಂದೂ ತಿಳಿಯಬಂದವು.

ಈ ಪಟ್ಟಣದ ಕೆಳಭಾಗದಲ್ಲಿಯೂ, ಗುಡ್ಡಗಳ ಮಧ್ಯದಲ್ಲಿಯೂ, ಅದಕ್ಕೂ ಬಹಳ ಪ್ರಾಚೀನವಾದ ಶಿಲಾಯುಗದ ಕಲ್ಲಿನ ಆಯುಧಗಳೂ ದೊರೆತುವು. ಲೋಹಗಳ ಉಪಯೋಗವನ್ನು ಕಂಡುಹಿಡಿಯುವುದಕ್ಕೆ ಹಿಂದೆ ಮನುಷ್ಯರು ಈ ಕಲ್ಲಿನ ಆಯುಧಗಳನ್ನು ಉಪಯೋಗಿಸುತ್ತಿದ್ದರಂತೆ.

(ಪು.)

Regd No M. 2322 || ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಮಂಗಳವಾರ ೨೭ ನವಂಬರ್ ೧೯೨೮ [ಸಂಚಿಕೆ ೪೭

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ರೋಡ್, ಮೈಸೂರು

Our Agents

Copies of Tai Nadu, Daily and Weekly are available for sale at the following places —

1 N. P. Venkatappa & Co
Excelsior Type-writing Institute, Balepet, Bangalore City.
2 Koppada Ramakrishniah, Agent, Hassan.
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 B V Pundit & Co, Lakshmivilas Road, Mysore.
6 Friends' Union, Mysore.
7 Sweet Mart, Lansdowne Buildings, Mysore.

TAI NADU

21-11-1928

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್

[illegible]

ಕಣಿಯರ ಪತ್ರಿಕೆಯ ಸತ್ಯಾಗ್ರಹ.

20—11—28 ನೇ ಮಂಗಳವಾರದ ದಿವಸ ಎಂದಿನಂತೆ ಕಣಿಯರ ಪತ್ರಿಕೆಯ ಒಂಭತ್ತನೆಯ ಸತ್ಯಾಗ್ರಹ ಸಂಚಿಕೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು. ಎಂಟು ಸಾರಿ ಮುಟ್ಟುಗೋಲು ಹಾಕಿಕೊಂಡರು. ಮೂರುಸಾರಿಯಿಂದಲೂ ಪೋಲೀಸಿನವರು ಉಸ್ತುವಾರಿ ನೋಡಿಕೊಳ್ಳುತ್ತಿರುವರು. ಈಸಾರಿ ಪೋಲೀಸಿನವರು ಅತಿಗಾಬರಿಯಿಂದ ಓಡಿಬಂದು ಪತ್ರಿಕೆಯನ್ನು ಕೊಂಡು ಕೊಂಡರು. ಏಕೆ ಸ್ವಾಮಿ ಇಷ್ಟು ಗಾಬರಿ, ಮುಟ್ಟು ಕೋಲಿನ ಅನಾಂತರ ಕಳೆದು ಹೋಯಿತಲ್ಲಾ ಎಂದು ಕೇಳಲು ವರ್ತಮಾನಗಳನ್ನು ಒಡೆದು ಮುದ್ರಿಸಿ ಪ್ರಕಟಿಸಿದರೆ ಮುಟ್ಟುಗೋಲು ಹಾಕಿಕೊಳ್ಳಿರೆಂದು ಅಪ್ಪಣೆಯಾಗಿದೆ. ಅದಕ್ಕಾಗಿ ಕೇಳಿದೆವು ಎಂದರು, ಪತ್ರಿಕೆಯನ್ನು ನೋಡಿ, ಕೊಂಡುಕೊಂಡು ಹೊರಟುಹೋದರು. ನಾನು ಪಟ್ಟಣದಲ್ಲೆಲ್ಲಾ ಪತ್ರಿಕೆಯನ್ನು ಮಾರಿದೆನು. ಸರ್ಕಾರದವರು ಇದುವರೆಗೆ ನಾನು ಮಾಡುತ್ತಿರುವುದು ಸರಿಯೆಂದೂ ತಾವು ಮಾಡುತ್ತಿದ್ದುದು ತಪ್ಪೆಂದೂ ತಿಳಿದು ಕೊಳ್ಳುವುದಕ್ಕೆ ಇಷ್ಟು ದಿವಸವಾಯಿತು.

ತಗಡೂರು ರಾಮಚಂದ್ರರಾವ್.

ವರ್ತಮಾನಗಳು

ಆತ್ಮಹತ್ಯೆ.

ರಾಜಧಾನಿಯ ಬಾರ್ ಅಸೋಸಿಯೇಷನ್ನಿನ ಆಫೀಸಿನ ಜವಾನ, ಬಾಬೂರಾಂ ಪ್ರಸಾದ್ ಎಂಬುವನು ಕಳೆದ ಬುಧವಾರ ರಾತ್ರಿ ಆತ್ಮಹತ್ಯ ಮಾಡಿಕೊಂಡನೆಂದು ತಿಳಿದುಬಂದಿದೆ. ಅವನಿಗೆ 35 ವರ್ಷ ವಯಸ್ಸಾಗಿತ್ತೆಂದೂ, ಅವನು 20 ವರ್ಷದಿಂದಲೂ ಬಾರ್ ಅಸೋಸಿಯೇಷನ್ನಿನ ಸೇವೆಯಲ್ಲಿದ್ದನೆಂದೂ, ದುಸ್ಸಹವಾದ ಬಾಧೆಯಿಂದ ಅವನು ಆತ್ಮಹತ್ಯ ಮಾಡಿಕೊಂಡನೆಂದೂ ಸಮಾಚಾರ ಬಂದಿರುವುದು.

ಮೂಕಿ ಪ್ರದರ್ಶನ.

ರಾಜಧಾನಿಯ ನಾಂದಿನೋಡಬ್ಲ್ಯಾಪಲ್ಲಿರುವ ಶ್ರೀರಾಮಕೃಷ್ಣ ಸೇವಾ ಸಂಘದ ವಿದ್ಯಾರ್ಥಿಗಳು ಕಳೆದ ಸೋಮವಾರ ಸಾಯಂಕಾಲ ಬಿಬ್ಬೂಗೂಡಿ ಲಾಲಾ ಲಜಪತರಾಯರ ಮರಣದ ವಿಷಯವಾಗಿ ಮೂಕಿಯನ್ನು ಪ್ರದರ್ಶಿಸಿದರು. ಲಾಲಾಜಿಯವರ ಜೀವನ ಚರಿತ್ರೆಯ ವಿಷಯವಾಗಿ ಭಾಷಣಗಳಾದವು.

ಗೀತಾ ವ್ಯಾಖ್ಯಾನಮಾಲೆ.

ಮಹಾ ವಿದ್ವಾನ್ ಮೊಸಳೆಹಳ್ಳಿ ಶೇಷಾಚಾರ್ಯರವರು ಮಹಾ ಪಾಠಶಾಲೆಯಲ್ಲಿ ಗೀತೆಯ ಮೇಲೆ ಕೊಡುತ್ತಿದ್ದ ವ್ಯಾಖ್ಯಾನ ಮಾಲೆಯು ಸೋಮವಾರ ಮುಕ್ತಾಯವಾಯಿತು. ಆಚಾರ್ಯರವರು ಕನ್ನಡದಲ್ಲಿ ಗೀತೆಯ ಮೇಲೆ ವ್ಯಾಖ್ಯಾನ ರೂಪವಾಗಿ ಬರೆದಿರತಕ್ಕ ಗ್ರಂಥವನ್ನು ಅನೇಕರು ಕೊಂಡು ಕೊಂಡರು. ಬೆಲೆ ಗ್ರಂಥ ಒಂದಕ್ಕೆ 2 ರೂಪಾಯಿಗಳು ಮಾತ್ರ.

ವೃದ್ಧ ಸ್ತ್ರೀಯ ಮರಣ.

ಸಿಲ್ಹೆಟ್ಟಿನಲ್ಲಿ ಬಿಬ್ಬಿ ಹಿಂದೂ ವಿಧವೆಯು ತನ್ನ 120 ನೇ ವಯಸ್ಸಿನಲ್ಲಿ ಮೃತಪಟ್ಟಳು. ಆಕೆಗೆ 100 ... ವಯಸ್ಸಿನ ಮಗನಿರುವನು.

ಜೂಜುಕೋರನ ಮರಣ.

ಅಮೇರಿಕಾದಲ್ಲಿ ಆರ್ನಾಲ್ಡ್ ರೋಥ್ಸ್ಟೈನನೆಂಬುವನು ಪ್ರಸಿದ್ಧ ಜೂಜುಕೋರನು. ಅತನು 2 ದಿವಸಗಳ ಹಿಂದೆ ಆರು ಜನರೊಡನೆ ಆಟವಾಡಿ ಘಂಟೆಗೆ 2 ಸಾವಿರ ಪವನುಗಳಂತೆ ಸೋಲುತ್ತಾ ಬಂದು ಒಟ್ಟಿನಲ್ಲಿ 60,000 ಪವನುಗಳ ನಷ್ಟಹೊಂದಿದನು. ಕೂಡಲೆ ಎದ್ದುನಿಂತು ಎದುರು ಪಾರ್ಟಿಯವರು ಮೋಸದ ಆಟವನ್ನು ಆಡಿದ್ದರಿಂದ ಹಣಕೊಡಲಾರನೆಂದು ಖಂಡಿತವಾಗಿ ಹೇಳಿಬಿಟ್ಟನು. ಈ ಕಾರಣದಿಂದ ಎದುರು ಕಕ್ಷಿಯವರು ಅವನನ್ನು ಗುಂಡುಹೊಡೆದು ಕೊಂದರು. ಅವನು ಒಂದಾನೊಂದು ದಿನ 175.000 ಪವನುಗಳನ್ನು ಗೆದ್ದಿದ್ದನಂತೆ.

ಸರ್ಕಾರೀ ಸಾಲ

ಬೆಂಗಳೂರು; ಮೈಸೂರು ಮತ್ತು ಯಡತೊರೆಗಳಲ್ಲಿ ಮಾಹೆ ಯಾನ 250 ರೂಪಾಯಿ ತಲಬುಳ್ಳ ಸರ್ಕಾರಿ ಉದ್ಯೋಗಸ್ಥರಿಗೆ ಮನೆಕಟ್ಟಿಕೊಳ್ಳುವುದಕ್ಕಾಗಿ 18 ತಿಂಗಳ ಸಂಬಳವನ್ನು ಶೇಕಡ 5 ರ ಬಡ್ಡಿಗೆ ಸಾಲವಾಗಿ ಕೊಡಬಹುದೆಂದು ಸರ್ಕಾರಿ ಹುಕ್ಕುಂ ಆಗಿರುತ್ತೆ. ಈ ಸಾಲವು 10 ಸಾವಿರಕ್ಕೆ ಮೀರಿರಕೂಡದು ಸಾಲವು 6 ವರುಷಗಳೊಳಗೆ ತೀರಿಸಲ್ಪಡಬೇಕು.

ಉಮೇದುವಾರಿ ನಿಯಮ

ನೌಕರಿಗೆ ಉಮೇದು ವಾರರನ್ನು ತೆಗೆದುಕೊಳ್ಳುವುದರಲ್ಲಿನ ನಿಯಮಗಳು ತಿದ್ದುಪಡಿಯಾಗಿವೆ.

25 ರೂಪಾಯಿನ ಕೆಲಸಕ್ಕೆ ಲೊ! ಸೆ|| ಅಥವಾ ಐದನೆ ಫಾರಂ 25 ರಿಂದ 40 ರೂಪಾಯಿನ ವರೆಗೆ ಎಸ್. ಎಸ್. ಎಲ್. ಸಿ. ಅದರ ಮೇಲೆ ಇಂಟರ್‌ಮೀಡಿಯೇಟ್ ಪರೀಕ್ಷೆ 40 ರಿಂದ 50 ರೂಪಾಯಿನ ವರೆಗೆ ಇಂಟರ್‌ಮೀಡಿಯಟ್ ಅಥವಾ ಬಿ. ಎ. ಮೊದಲನೇ ವರ್ಷ ಪರೀಕ್ಷೆ. 50 ರೂಪಾಯಿನ ಮೇಲ್ಪಟ್ಟದ್ದಾದರೆ ಬಿ. ಎ. ಪರೀಕ್ಷೆಗಳೂ ಆಗಿರಬೇಕು.

ಕೂಲಿಯಾಳುಗಳ ಮುಸ್ಕರ

ಕಳೆದ ಗುರುವಾರ ಪ್ರಾತಃಕಾಲ ಬೊಂಬಾಯಿ ಪಟ್ಟಣದ ಸ್ಟ್ಯಾಂಡರ್ಡ್ ಮಿಲ್ಲಿನ ನೇಯ್ಗೆಯವರು ತಮಗೆ ಕೊಡತಕ್ಕ ಕೂಲಿಯಲ್ಲಿ ಕಡಿಮೆಮಾಡಿದರೆಂಬ ಕಾರಣದ ಮೇಲೆ ಒಂದು ದೊಡ್ಡ ಗಲಭೆಯನ್ನು ನಡೆಸಿದರು. ಸುಮಾರು 800 ಜನ ನೇಯ್ಗೆಯವರು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಮ್ಯಾನೇಜರ ಆಫೀಸಿನ ಮೇಲೆ ಕಲ್ಲುಗಳ ಮಳೆಯನ್ನು ಸುರಿಸಿದರು. ಬಾಗಿಲುಗಳನ್ನೂ ಕಿಟಿಕಿಗಳನ್ನೂ ಒಡೆದು ಟೆಲಿಫೋನ್ ಕ್ಯಾಬಿನ್ ನೊಳಗಿನ ... ಬಿಟ್ಟರು. ಬೈಸಿಕಲ್‌ಗಳೆಲ್ಲಾ ಕೆರೆಗೆ ಬಿಸಾಡಲ್ಪಟ್ಟವು. ಪೋಲೀಸಿನವರು ಬರುವುದರೊಳಗಾಗಿ ಅನೇಕರು ಜಾರಿ ಹೋಗಿದ್ದರು. ಜಖಂ ಆಯಿತು. ಇದರಿಂದ 9 ಜನ ಅಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು ಇದು ಯಾರನ್ನೂ ಇದುವರೆಗೆ ಯಾರನ್ನೂ ದಸ್ತಗಿರಿ ಮಾಡಿಲ್ಲ. ಪೋಲೀಸಿನವರು ವಿಚಾರಣೆ ನಡಿಸುತ್ತಿದಾರೆ.

ಸಿ. ಐ. ಡಿಗಳ ದೃಷ್ಟಿ.

ಪಂಜಾಬಿನ ಮೊದಲನೇ ಗವರ್ನರರೂ ಈಗಿನ ಸಂಯುಕ್ತ ಪ್ರಾಂತಗಳ ಗವರ್ನರರೂ ಆದ ಸರ್ ಮಾಲಕಂಹೇಲಿಯವರೂ, ಅವರ ಮಿತ್ರರೂ. ಸಹೋದ್ಯೋಗಿಯೂ ಆದ ಸರ್ ಟಿ.ಪಿ. ಸಪ್ರುರವರೂ ಪರಸ್ಪರ ಮಾತನಾಡುತ್ತಿದ್ದರು. ಸಂಯುಕ್ತ ... ಸರ್ಕಾರದ ಫೈಲುಗಳಲ್ಲಿ ಸಿ. ಐ. ಡಿಗಳ ... ಪಿಸಲ್ಪಟ್ಟ ರಾಜದ್ರೋಹಿಗಳ ... ಟಿ. ಬಿ ಸಪ್ರೂಗಳ ಹೆಸ...

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್

(ನಮ್ಮ ಬಾತ್ಮೀದಾರರಿಂದ.)

ಈ ಮಿಲ್ಲಿನ ಷೇರ್ ಹೋಲ್ಡರುಗಳ ಏಳನೇ ವಾರ್ಷಿಕ ಸಾಮಾನ್ಯ ಸಭೆಯು ಈ ತಿಂಗಳು 17 ನೇ ತಾರೀಖು ಶನಿವಾರ ಮಧ್ಯಾಹ್ನ ಮೂರೂವರೆ ಘಂಟೆಯಿಂದ ರಾತ್ರಿ 8 ಘಂಟೆಯವರಿಗೂ ನಡೆಯಿತು. ಬೋರ್ಡ್ ಆಫ್‌ಡೈರೆಕ್ಟರ್ಸ್‌ಗೆ ಚೇರ್‌ಮನ್‌ರಾದ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸುಮಾರು 200 ಜನ ಷೇರ್ ಹೋಲ್ಡರುಗಳು ಹಾಜರಿದ್ದರು. (ಈ ಮಿಲ್ಲಿಗೆ ಇರತಕ್ಕ ಒಟ್ಟು ಷೇರ್ ಹೋಲ್ಡರುಗಳ ಸಂಖ್ಯೆ 3500) ಡೈರೆಕ್ಟರುಗಳ ಪೈಕಿ ಮ|| ರಾ|| ಮಂಡಿ ಹರಿಯಣ್ಣನವರು ಹೊರತಾಗಿ ಎಲ್ಲರೂ ಹಾಜರಾಗಿದ್ದರು. ಮ|| ರಾ|| ಬಿ. ಸೀತಾರಾಮಾಚಾರ್ಯರವರು ಮೀಟಿಂಗಿನ ನೋಟೀಸನ್ನು ಓದಿದಮೇಲೆ ಅಧ್ಯಕ್ಷರಾದ ಪುಟ್ಟಣ್ಣಶೆಟ್ಟರವರು ತಮ್ಮ ಭಾಷಣವನ್ನು ಓದಿದರು. ಆ ಭಾಷಣದಲ್ಲಿ 31—12—27 ಕ್ಕೆ ಆಖೈರಾಗುವ ವರ್ಷದ ಆಡಳಿತದ ವರದಿಯು ನಮೂದಿಸಲ ಪಟ್ಟಿತು. ಡಿಪ್ರೀಸಿಯೇಷನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೆ ನಷ್ಟವು 1 03660 ರೂಪಾಯಿ 13 ಆಣೆ 4 ಪೈ. ಇವುಗಳ ಪೈಕಿ 54000 ರೂಪಾಯಿಗಳು ಹಳೇ ಹೊಸ್ಸೈರಿ ಬಾಬ್ತು. 15 ಸಾವಿರ ರೂಪಾಯಿಗಳು 1925 ರಿಂದ ಅಮಾನತ್ತಿನಲ್ಲಿ ಇಡಲ್ಪಟ್ಟು ಮಿ|| ಪಿ. ಟಾಮ್ಸಿ ಅವರಿಗೆ ಕೊಟ್ಟ ಮೊಬಲಗಿನ ಬಾಬ್ತು. 1925 ರಿಂದಲೂ ನಡೆದು ಬಂದಿರುವ ಈ ಎರಡು ನಷ್ಟದ ಬಾಬುಗಳನ್ನು ಕಳೆದರೆ ನಿವ್ವಳ ನಷ್ಟವು ಇನ್ನೂ ಕಡಿಮೆಯಾಗುತ್ತಿತ್ತು. ವಾಸ್ತವ್ಯವಾಗಿ ಹಿಂದಿನ ವರ್ಷದ ಜಮಾ ಖರ್ಚನ್ನು ಪರಿಶೀಲಿಸಿದರೆ ಬಡ್ಡಿಗಾಗಿ ಕೊಡಲ್ಪಟ್ಟಿರುವ 1 ಲಕ್ಷದ 53 ಸಾವಿರ ರೂ. ಗಳನ್ನು ತೆಗೆದು ಹಾಕಿದರೆ ನಷ್ಟವು 34 ಸಾವಿರದ 660 ರೂಪಾಯಿಗಳು ಮಾತ್ರ ಆಗುವುದು. ಈ ಒಟ್ಟು 1 ಲಕ್ಷ 53 ಸಾವಿರ ರೂಪಾಯಿಗಳ ಬಡ್ಡಿಯಲ್ಲಿ ಸುಮಾರು ಅರ್ಧ 1925 ರ ವರಿಗೆ ಆದ ನಷ್ಟಗಳ ಮೇಲಿನ ಬಡ್ಡಿ ಬಾಬ್ತು. ಈ ವಿಷಯವನ್ನು ಮನಸ್ಸಿಗೆ ತಂದುಕೊಂಡರೆ, 1926 ರಿಂದ ಮಿಲ್ಲಿನ ಆರ್ಥಿಕ ಸ್ಥಿತಿಯು ಸುಧಾರಣೆಯಾಗುತ್ತಾ ಬಂದಿದೆ ಎಂಬುದು ವೇದ್ಯವಾಗುವುದು. ಆದರೆ ಇದರಿಂದಲೇ ಯಾರಿಗೂ ಮನಶ್ಶಾಂತಿಯಾಗುವ ಹಾಗಿಲ್ಲ. ಮಿಲ್ಲಿಗೆ ಬಹಳ ತೊಂದರೆಗಳು ಸಂಭವಿಸಿವೆ. ಐದಾರು ವರುಷಗಳಿಂದಲೂ ಹತ್ತಿಯ ಮತ್ತು ನೂಲು ಬಟ್ಟೆಗಳ ಕೈಗಾರಿಕೆಯು ದಿನ ದಿನಕ್ಕೆ ಕುಗ್ಗುತ್ತ ಬಂದಿದೆ. ಇಂಗ್ಲೆಂಡಿನಲ್ಲಿ ಸರ್ಕಾರದವರು ಈ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸುವದಕ್ಕಾಗಿ ಒಂದು ಸ್ಪೆಷಲ್ ಕಮಿಟಿಯನ್ನು ನೇಮಿಸಿದರು. ಜಪಾನ್, ಯುನೈಟೆಡ್ ಸ್ಟೇಟ್ಸ್ ಮೊದಲಾದ ಮುಂದುವರಿದ ದೇಶಗಳಲ್ಲಿಯೂ ಇದೇ ದುಸ್ಥಿತಿಯು ಇರುವುದು. ಬೊಂಬಾಯಿನಲ್ಲಿ ಕೂಡ ಇದೇ ಶೋಚನೀಯವಾದ ಸ್ಥಿತಿಯು ಆವರಿಸಿರುವುದು. ನಿಷ್ಣಾತರಾದವರು ಇದಕ್ಕೆ ಕಾರಣಗಳೇನೆಂಬುದನ್ನು ಶೋಧನಮಾಡಿ ಹೇಳಿರುವುದೇನೆಂದರೆ, (1) ಯುದ್ಧದ ಅಂತ್ಯದಲ್ಲಿ ವಿಪರೀತವಾದ ಮೂಲಧನವನ್ನು ಹಾಕಿ ಗಿರಣಿಯನ್ನು ಸ್ಥಾಪನೆಮಾಡಿದುದು. ಇದರಿಂದ ಚಾಲ್ತಿ ನಷ್ಟವುಂಟಾಗುವುದಕ್ಕೆ ಕಾರಣವಿಲ್ಲ. (2) ಬಟ್ಟೆ ಬೆಲೆಯು ಇಳಿದುಹೋದುದು. (3) ಪ್ರತಿಯೊಬ್ಬನ ಜೀವಿತದ ಖರ್ಚು ಹೆಚ್ಚಿ ಕೆಲಸಗಾರರು ಹೆಚ್ಚು ಕೂಲಿಯನ್ನು ಅಪೇಕ್ಷಿಸುತ್ತಿರುವುದು. ಈ ಎಲ್ಲಾ ಕಾರಣಗಳಿಂದಲೂ ಹತ್ತಿಯ ಮತ್ತು ಬಟ್ಟೆಯ ಕೈಗಾರಿಕೆಯು ಬಹಳ ನಷ್ಟವನ್ನು ಹೊಂದುತ್ತಿರುವುದು.

ದಕ್ಷಿಣ ಇಂಡಿಯಾದಲ್ಲಿಯೂ ನಮ್ಮ ಮೈಸೂರಿನಲ್ಲಿಯೂ ಮಿಲ್ಲುಗಳ ಸ್ಥಿತಿಯು ಅಷ್ಟು ಕೆಟ್ಟಿಲ್ಲ, ಕೃಷ್ಣರಾಜೇಂದ್ರ ಮಿಲ್ಲಿನ ಜೊತೆಯಲ್ಲಿಯೇ ಸ್ಥಾಪನೆಯಾದ ಇನ್ನೊಂದು ಮಿಲ್ಲು ಹೆಚ್ಚು ಸಮರ್ಪಕವಾಗಿಯೂ ಮಿತವ್ಯಯದಿಂದಲೂ ನಡಿಸಲ್ಪಡುತ್ತಿರುವುದು. ಇದಕ್ಕೆ ಕಾರಣವನ್ನು ಪರಿಶೀಲಿಸಿದರೆ, ಆ ಮಿಲ್ಲಿನವರು ಹತ್ತಿಯ ವ್ಯಾಪಾರದಿಂದ ಲಾಭವನ್ನು ಪಡೆಯುತ್ತಿರುವರು. ನೂಲಿನ ಕೈಗಾರಿಕೆಯಿಂದಲ್ಲ. ಹತ್ತಿಯ ವ್ಯಾಪಾರದಿಂದ ಯಾವಾಗಲೂ ಲಾಭವು ಬರುವುದಿಲ್ಲ. ಆದುದರಿಂದ ಕೃಷ್ಣರಾಜೇಂದ್ರ ಮಿಲ್ಲಿನವರು ಹತ್ತಿಯ ವ್ಯಾಪಾರಕ್ಕೆ ಕೈಹಾಕಲಿಲ್ಲ.

ಈ ಎಲ್ಲಾ ವಿಷಯಗಳನ್ನೂ ಪರಿಶೀಲಿಸಿ ಮಿಲ್ಲನ್ನು ಯಾವ ರೀತಿ ಉತ್ತಮ ಸ್ಥಿತಿಗೆ ತರಬೇಕೆಂಬುದನ್ನು ಡೈರೆಕ್ಟರುಗಳು ಆಲೋಚನೆ ಮಾಡುತ್ತಿರುವರು. ಹತ್ತಿ ಮತ್ತು ನೂಲಿನ ಕೈಗಾರಿಕೆಯು ಇಷ್ಟು ಶೋಚನೀಯವಾದ ಸ್ಥಿತಿಯಲ್ಲಿದ್ದರೂ, ಈ ಮಿಲ್ಲಿನ ಜಮಾ ಖರ್ಚುಗಳು ಸಮತೂಕವಾಗಿ ಅಲ್ಪ ಸ್ವಲ್ಪ ಲಾಭವು ದೊರೆಯುವುದು. ಆದರೆ ಈ ಲಾಭವನ್ನೆಲ್ಲಾ ಬಡ್ಡಿಯು ತಿಂದು ಹಾಕಿಬಿಡುತ್ತಿರುವುದು. ಈ ವಿಷಮ ಸ್ಥಿತಿ ಇಂದ ಬಿಡುಗಡೆಮಾಡಿಕೊಳ್ಳುವದಕ್ಕಾಗಿ ನಾವು ಸರ್ಕಾರದವರ ಸಲಹೆಯಂತೆ ಬೊಂಬಾಯಿನಿಂದ ಒಬ್ಬ ನಿಷ್ಣಾತರನ್ನ ಕರೆಯಿಸಿದೆವು. ಅವರು ನಮ್ಮ ಮಿಲ್ಲನ್ನೆಲ್ಲಾ ಪರಿಶೀಲಿಸಿ ಕೆಲವು ಶಿಫಾರಸುಗಳನ್ನು ಮಾಡಿದರು. ಅವು ಯಾವುವೆಂದರೆ (1) ಬರೀ ನೂಲನ್ನೇ ತಯಾರುಮಾಡದೆ ಬಟ್ಟೆಯನ್ನು ತಯಾರುಮಾಡಬೇಕು. (2) ಇದಕ್ಕಾಗಿ ಒಂದು ಲೂಮ್ ಷೆಡ್ಡನ್ನು ಸ್ಥಾಪಿಸಬೇಕು. (3) ಈ ಎಲ್ಲಾ ಚಾಲ್ತಿ ಖರ್ಚಿಗಾಗಿ ಮೂಲಧನವನ್ನು ಇನ್ನೂ ಹೆಚ್ಚಾಗಿ ಒದಗಿಸಿಕೊಳ್ಳಬೇಕು. (4) ನೆಯಿಗೆಯಲ್ಲಿ ಗಟ್ಟಿಗರಾದ ಒಬ್ಬ ಮ್ಯಾನೇಜರನ್ನು ಒಳಗಿನ ಆಡಳಿತಕ್ಕಾಗಿ ನೇಮಿಸಬೇಕು.

ಈ ಶಿಫಾರಸುಗಳನ್ನ ನುಸರಿಸಿ ನಾವು ಕೆಲಸಮಾಡಬೇಕಾಗಿದೆ. ಈಗ ಕೊಡುತ್ತಿರುವ ಹೆಚ್ಚು ದರದ ಬಡ್ಡಿಯನ್ನು ಕಡಿಮೆ ಮಾಡಿಕೊಂಡು ಸರ್ಕಾರದ ಸಹಾಯದಿಂದ ಕಡಿಮೆ ಬಡ್ಡಿ ದರಕ್ಕಾಗಿ ಸಾಲವನ್ನು ಮಾಡಬೇಕು. ಸರ್ಕಾರದವರಿಗೆ ಈ ಮಿಲ್ಲಿನ ಸ್ಥಿತಿಗಳನ್ನೆಲ್ಲಾ ವಿವರಿಸಿ ತಿಳಿಸಿರುತ್ತೇವೆ. ಅವರ ಸಹಾಯದಿಂದ ಮಿಲ್ಲು ಉತ್ತಮಸ್ಥಿತಿಗೆ ಬರಬೇಕಾಗಿದೆ.

1923 ರಲ್ಲಿ ಮಿಲ್ಲು ಕೆಲಸಕ್ಕೆ ಆರಂಭಿಸಿದಂದಿನಿಂದ ಒಟ್ಟು 9 ಲಕ್ಷದ 77 ಸಾವಿರ ರೂ. ನಷ್ಟವಾಗಿದೆ. 1928 ರಲ್ಲಿ ಕೂಡ ಸೆಪ್ಟಂಬರ್ ಆಖೈರುವರಿಗೆ 1 ಲಕ್ಷದ 20 ಸಾವಿರದ 469 ರೂ. ನಷ್ಟವಾಗಿ ದಿವಸ 1 ಕ್ಕೆ 503 ರೂ. ನಷ್ಟವಾದಂತಾಯಿತು.

ಈ ರೀತಿಯಾಗಿ ನಾವು ಇನ್ನು ಹೆಚ್ಚು ದಿವಸ ತಾಳಲಾರೆವು. ಇದ್ದ ಸಂಗತಿಗಳನ್ನೆಲ್ಲಾ ಷೇರ್ ಹೋಲ್ಡರುಗಳಿಗೆ ತಿಳಿಸಿರುತ್ತೇವೆ. ಷೇರ್‌ಹೋಲ್ಡರುಗಳೆಲ್ಲರೂ ಈ ವಿಷಯವನ್ನು ಆಲೋಚನೆಮಾಡಿ ತಕ್ಕ ಸಲಹೆಗಳನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು.

ವಿವಿಧ ವಿಷಯಗಳು

ನೂತನ ಪತ್ರಿಕೆ.

ಡೆಲ್ಲಿಯಲ್ಲಿ ಡಿಸೆಂಬರ್ [illegible] ವ್ಯವಸಾಯಾಭಿವೃದ್ಧಿಯನ್ನೇ ಮುಖ್ಯೋದ್ದೇಶವಾಗುಳ್ಳ "ಕೃಷಿಕಾಸ್ಟಿಕರ್" ಎಂಬ ಪತ್ರಿಕೆ [illegible]

ಹೊಸ ನೋಟುಗಳು

ಇಂಗ್ಲೆಂಡಿನ ಬ್ಯಾಂಕಿನಲ್ಲಿ ಹೊಸ ತರಹದ ಕರೆನ್ಸಿ ನೋಟು ಹೊರಡಿಸಲ್ಪಡುವುದು. ಹಾಲಿ ಇರುವ ನೋಟುಗಳೆಲ್ಲವೂ ಬೆಂಕಿಗೆ ಹಾಕಲ್ಪಡಬೇಕೆಂದು ಮೂರು ತಿಂಗಳು ಪೂರ್ವಭಾವಿಯಾಗಿ ಪ್ರಕಟಿಸಲ್ಪಡುವುದು. ಮೂರು ತಿಂಗಳ ನಂತರ ಹೊಸ ನೋಟುಗಳೇ ಚಲಾವಣೆಯಲ್ಲಿ ಬರುವುವು.

ಪಂಜಾಬಿನ ವಸ್ತುಪ್ರದರ್ಶನ

ಪಂಜಾಬಿನಲ್ಲಿ ಬಿರಾಯಿತ ಕಸಬಿನವರ ಪ್ರದರ್ಶನವು ಡಿಸೆಂಬರ್ ತಾ|| 10 ರಿಂದ 15 ರ ವರೆಗೆ ನಡೆಯುವುದು. ಕೃಷಿಗೆ ಬೇಕಾಗುವಂತಹ ಉಪಕರಣಗಳನ್ನು ಪ್ರದರ್ಶಿಸುವುದೇ ಈ ಪ್ರದರ್ಶನದ [illegible] ಮುಖ್ಯ ಉದ್ದೇಶ. ಇದಕ್ಕೆ ಸಂಬಂಧಪಟ್ಟ ಭಾಷಣಗಳೂ ನಡೆಯುವುವು.

ಅತಿ ಮೂತ್ರ ಚಿಕಿತ್ಸೆ

ಹೆಚ್ಚಾಗಿ ಅತಿಮೂತ್ರದಿಂದ ನರಳುತ್ತಿರುವವರು ಮೂತ್ರದಲ್ಲಿ ಸಕ್ಕರೆಯು [illegible] ದೇಹಪ್ರಕೃತಿಗನುಸಾರ ಕ್ರಮಕ್ರಮವಾಗಿ ಉಪವಾಸ ಮಾಡುವುದು ಒಳ್ಳೆಯದು. ಈ ಉಪವಾಸವು [illegible] ದಿನ, ೧೦ ದಿನಗಳವರೆಗೆ ಮಾಡಬಹುದು. [illegible] ರೋಗ್ಯದಿಂದರತಕ್ಕವರೂ ಕೂಡ ಪ್ರತಿ ಏಕಾದಶಿಯೂ ನಿರಾಹಾರವನ್ನು ಮಾಡತಕ್ಕ ನಿಯಮವನ್ನು [illegible] ಸುವುದು ಬಹಳ ಉತ್ತಮ.

ಬುಧ ಗ್ರಹವನ್ನು ಸಂದರ್ಶಿಸಿದ ಮನುಷ್ಯನು.

ಬುಧನನ್ನು ಲಂಡನ್ನಿನ ಲಾಯರೊಬ್ಬನು ಸಂದರ್ಶಿಸಿ ಬಂದಿರುವನೆಂದು ಹೇಳುವನು. [illegible] ಆತನು ರಗ್ಬಿ ವೈರ್‌ಲೆಸ್ ಸ್ಟೇಷನ್‌ನಿಂದ ವರ್ತಮಾನವನ್ನು ಕಳುಹುತಲಿರುವನು. ಉತ್ತರ [illegible] ಬುಧನಲ್ಲಿ ವಾಸಿಸುವ [illegible] ಆತನು ಸ್ನೇಹದಿಂದಿದ್ದು ಅವಳ ಸಹಾಯದಿಂದ [illegible] ಹೋದನೆಂದೂ. ಬುಧಗ್ರಹದ [illegible] ಪತ್ತಾದ ವೈರ್‌ಲೆಸ್ ಟೆಲಿಗ್ರಾಫಿಯನ್ನು ಉಪಯೋಗಿಸುವರೆಂದೂ ತಿಳಿಸಿದನು. ಆತನ ಹೇಳಿಕೆ, ನಾನು [illegible] ಲ್ಲಿಂದ ಜೆಕಿಸಂತೆ ನಾಲ್ಕು ನಿಮಿಷಗಳೊಳಗೆ [illegible] ಮೈಲಿಯಷ್ಟು ದೂರ ಚಲಿಸಿ ಬುಧನನ್ನು [illegible] ನು. ಅಲ್ಲಿಂದ ಇಳಿದೊಡನೆಯೇ ಕೆಂಪು [illegible] ಣಬಂತು. ನಾನು [illegible] ಮುಂದರಿದೆನು. ಅಲ್ಲಿಯ ಮನುಷ್ಯರು 7½ ಅಡಿ ಉದ್ದ [illegible] ಹೆಂಗಸರು [illegible] ವನು. ಆತನ ಕೂಡ ಆತನ ಪ್ರಿಯೆಯ ಚಿತ್ರವಿದೆ. ಚಿತ್ರದ ಮೂಲಕ ಅವರ ಆಕಾರವನ್ನು ಕಂಡು ಹಿಡಿಯಬಹುದು. ಉರುಟಾದ ಮುಖ, ಉದ್ದವಾದ ಕೂದಲುಗಳು, ಮುಗುಳ್ನಗೆ, ದೊಡ್ಡ ಕಿವಿಗಳು, ಚಿತ್ರದಲ್ಲಿ ಕಾಣುವುವು. ಬುಧಗ್ರಹದ [illegible] ನೋಟಗಳು, ರೈಲ್ವೆ, [illegible] ಕೂಲಿಗಳಿವೆ. [illegible] ಕಿ ವಿದ್ಯುಚ್ಛಕ್ತಿಯನ್ನು [illegible] ಯೋಗಿಸಿಕೊಳ್ಳುವರು. [illegible] ಹೇಳಿದ

Printed and published by P. R. Ramaiya,
at Sri Rama Press, D. Subbiah Road, Mysore

Regd No. M. 2322 || ವಂದೇ ಮಾತರಂ || ಬಿಡಿ ಪ್ರತಿ ೦-೦-೬

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ೫-೦-೦ ; ಪರಸ್ಥಳಕ್ಕೆ ೧೦-೦-೦

೧ಸಂಪುಟ] ಗುರುವಾರ ೨೨ ನವಂಬರ್ [ಸಂಚಿಕೆ ೪೮

TAI NADU

22-11-1928.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್

ವಾರ್ಷಿಕ ಸಭೆ

(ನಮ್ಮ ಸ್ವಂತ ಬಾತ್ಮೀದಾರರಿಂದ)

೨ ನೇ ಭಾಗ

ಅಧ್ಯಕ್ಷರ ಭಾಷಣವಾದಮೇಲೆ,

ಮ॥ ರಾ॥ ಬಿ. ನರಸಿಂಗರಾಯರು :— ಆ ನಿಪುಣರ ವರದಿಯನ್ನು ದಯವಿಟ್ಟು ನಮಗೆ ಕೊಡಿ.

ಅಧ್ಯಕ್ಷರು :— ಹಾಗೆ ಕೊಡಲು ಆಗುವುದಿಲ್ಲ. ಆ ನಿಪುಣರೇ ಹಾಗೆ ಕೊಡಕೂಡದೆಂದು ಕಟ್ಟುಮಾಡಿದ್ದಾರೆ.

ಬಿ. ನರಸಿಂಗರಾಯರು :— ಮಿ. ಟಾಮ್ಲಿಯವರಿಗೆ ಕೊಟ್ಟ ಹಣವು ಮೂರು ವರ್ಷಗಳಿಂದಲೂ ಸಸ್ಪೆನ್ಸ್‌ನಲ್ಲಿ ಇರುವುದೇಕೆ? ಇದು ಡೈರೆಕ್ಟರುಗಳ ಅನುಮತಿಯಿಂದ ನಡೆದಿದೆಯೆ?

ಮ॥ ರಾ॥ ಧನಕೋಟಿಶೆಟ್ಟರು :— ಈ ವಿಷಯವಾಗಿ ಡೈರೆಕ್ಟರುಗಳು ಅಭಿಪ್ರಾಯವನ್ನು ಕೊಟ್ಟಮೇಲೆ ನಾನು ಕೆಲವು ಮಾತುಗಳನ್ನು ಹೇಳುವೆನು.

ಮ॥ ರಾ॥ [illegible] :— ನಾನು ಒಂದು ವರ್ಷದಿಂದ ಡೈರೆಕ್ಟರಾಗಿದ್ದೇನೆ. ನನಗೆ ಬಹಳ ಅನುಭವವಿಲ್ಲ. ಟಾಮ್ಲಿಯವರಿಗೆ ಹಣ ಕೊಟ್ಟ ವಿಷಯದಲ್ಲಿ ಡೈರೆಕ್ಟರುಗಳ ಅನುಮತಿಯನ್ನು ತೆಗೆದುಕೊಳ್ಳಲಿಲ್ಲ. ಡೈರೆಕ್ಟರುಗಳ ಅನುಮತಿಯಿಲ್ಲದೆ ಕಟ್ಟಡಕ್ಕಾಗಿ [illegible] ರೂಪಾಯಿಗಳನ್ನೂ, ಯಂತ್ರಗಳಿಗಾಗಿ [illegible] ರೂಪಾಯಿಗಳನ್ನೂ ಮ್ಯಾನೇಜಿಂಗ್ ಏಜೆಂಟರುಗಳು ಖರ್ಚುಮಾಡಿದ್ದಾರೆ. ನಷ್ಟವಾಗುತ್ತಿದ್ದಾಗ [illegible] ಅವಶ್ಯಕತೆ [illegible] ನನಗೆ [illegible].

ಮ॥ ರಾ॥ ಪಿ. ಸೀತಾರಾಮಯ್ಯನವರು :— [illegible] ಬೋರ್ಡ್ ಆಫ್ ಡೈರೆಕ್ಟರ್ಸ್‌ರವರು [illegible]?

ಮ॥ ರಾ॥ ಸಾಹುಕಾರ್ ಬಿ. ಬಸಮಯ್ಯನವರು :— ಡೈರೆಕ್ಟರುಗಳನ್ನು ಕೇಳದೆಯೇ, ಎಷ್ಟೋ ಖರ್ಚುಗಳನ್ನು ಮಾಡಿದ್ದಾರೆ ಸ್ವಾಮಿ.

ಮ॥ ರಾ॥ ಧನಕೋಟಿಶೆಟ್ಟರು :— ಇವರು ಅನೇಕ ತಪ್ಪುಗಳನ್ನು ತೋರಿಸಿ ಕೆಲವು ಬಾಬುಗಳೆಲ್ಲಾ ಅನವಶ್ಯಕ ಎಂದು ಹೇಳಿದರು. ಪಿಸ್ತ್ರಿಗೆ ೨೦೦ ರೂಪಾಯಿ, ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ಸಿಗೆ ೨೦೦ ರೂಪಾಯಿ, [illegible] ರೂಪಾಯಿ, ಪೋಸ್ಟೇಜ್ ಟೆಲಿಗ್ರಾಫ್ ಇವಕ್ಕೆ [illegible] ರೂಪಾಯಿ ಹೀಗೆಯೇ ಇನ್ನೂ ಅನೇಕ ತಪ್ಪುಗಳನ್ನು ತೋರಿಸಿ ಆ ಖರ್ಚುಗಳೆಲ್ಲಾ ಅವಶ್ಯಕ ಎಂದು ಹೇಳಿದರು.

ಮ॥ ರಾ॥ ರಾಮಚಂದ್ರರಾವ್, ಸಿಂಧೆಯವರು:— [illegible] ಷೇರ್ ಹೋಲ್ಡರಿಗೆ ಏನೂ [illegible] ಮುಂದಕ್ಕೆ ಏನು ಮಾಡಬೇಕು [illegible] ಮಾಡುವುದಕ್ಕಾಗಿ ಒಂದು [illegible] ನೇಮಿಸಬೇಕು.

ಮ॥ ಸದಾಶಿವ ಶಾಸ್ತ್ರಿಗಳು-ಏನು ಸ್ವಾಮಿ, ಒಬ್ಬ ಹೊಸನು ಮಿಲ್ಲನ್ನು ಎಷ್ಟು ಚೆನ್ನಾಗಿ ನಡೆಸುತ್ತಿದ್ದಾಳೆ. ನೀವೆಲ್ಲಾ ವಿದ್ಯಾವಂತರು, ವ್ಯವಹಾರವನ್ನೆಲ್ಲಾ ಚೆನ್ನಾಗಿ ತಿಳಿದವರು. ಬಡವರು ಎಷ್ಟೋಜನಗಳು ಮಿಲ್ಲಿನ ಸ್ಥಾಪನೆಗೆದುಡ್ಡನ್ನು ಕೊಟ್ಟು ಕಣ್ಣೀರನ್ನು ಸುರಿಸುತ್ತಿದಾರೆ.

ಮ॥ ರಾ॥ ರಾಮಚಂದ್ರರಾವ್-ಸಿಂಧೆಯವರು, ಯಾರಿಂದ ಇಷ್ಟು ನಷ್ಟವಾಯಿತು ಎಂಬ ಜವಾಬ್ದಾರಿಯನ್ನು ಗೊತ್ತುಮಾಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಬೇಕು.

ಮ॥ ಸಿ. ನರಸಿಂಹಯ್ಯನವರು:—

ಡೈರೆಕ್ಟರುಗಳು ತಮ್ಮ ಅಭಿಪ್ರಾಯವನ್ನು ಕೊಡಬೇಕು. ಅವರ ಅಭಿಪ್ರಾಯ ತಿಳಿಯದೆ ನಾವು ಯಾರ ಮೇಲೆಯೂ ದೋಷವನ್ನು ಹಾಕುವುದಕ್ಕಾಗುವುದಿಲ್ಲ.

ಒಬ್ಬ ಮೆಂಬರು;—ಡೈರೆಕ್ಟರುಗಳ ಅಪ್ಪಣೆ ಇಲ್ಲದೆ ಖರ್ಚು ನಡೆದಿದ್ದರೆ ಅವರು ಬ್ಯಾಲೆನ್ಸ್‌ಷೀಟಿಗೆ ರುಜುವನ್ನು ಹೇಗೆ ಹಾಕಿದರು.

ಮ॥ ರಾ॥ ಪಿ. ಸೀತಾರಾಮಯ್ಯನವರು;—ಪೂರ್ತಿಯಾಗಿ ಸಮಾಧಾನವು ದೊರೆತಹೊರತು ನಾವು ಬ್ಯಾಲೆನ್ಸ್‌ಷೀಟಿಗೆ ಹೇಗೆ ಒಪ್ಪಿಗೆಯನ್ನು ಕೊಡುವುದಕ್ಕಾಗುತ್ತದೆ?

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು:—ಬ್ಯಾಲೆನ್ಸ್‌ಷೀಟನ್ನು ತಯಾರ್ ಮಾಡಿದವರು ಮ್ಯಾನೇಜಿಂಗ್ ಏಜೆಂಟರುಗಳು, ಅದನ್ನು ಪರೀಕ್ಷಿಸಿ ಸರಿಯೆಂದು ಹೇಳಿದವರು ಆಡಿಟರು, ನಾವು ಸುಮ್ಮನೆ ತಾತ್ಸಾರಮಾಡಿ ಏನುಪ್ರಯೋಜನ.

ಮ॥ ರಾ॥ ಬಿ. ಸೀತಾರಾಮಾಚಾರ್ಯರು'—ಬ್ಯಾಲೆನ್ಸ್‌ಷೀಟ್ ಈಸ್ ಎ ಸ್ಟೇಟ್‌ಮೆಂಟ್ ಆಫ್ ಫ್ಯಾಕ್ಟ್ಸ ಎಂದು ಇಂಗ್ಲೀಷಿನಲ್ಲಿ ಆರಂಭಿಸಿದರು. ಸಭಿಕರು ಕನ್ನಡದಲ್ಲಿ ಆಗಬೇಕೆಂದು ಕೂಗಿಕೊಂಡರು, ಅವರು ಅಷ್ಟಕ್ಕೇ ಕೂತುಕೊಂಡರು.

ಮ॥ ರಾ॥ ಎ. ಕೃಷ್ಣರಾಯರು ಉಪಕ್ರಮ ಮಾಡಿದರು:—ನಾನು ಎರಡು ವರ್ಷಗಳಿಂದಲೂ ಡೈರೆಕ್ಟರಾಗಿದ್ದೇನೆ. ಈಗ ಹಾಜರ್ ಮಾಡಲ್ಪಟ್ಟಿರುವ ಬ್ಯಾಲೆನ್ಸ್‌ಷೀಟನ್ನು ಸರಿಯಿಲ್ಲವೆಂತ ಯಾರೂ ಹೇಳುವಹಾಗಿಲ್ಲ, ಈಗ ಕೆಲವರು ಆಕ್ಷೇಪಣೆ ಮಾಡುತ್ತಿರುವುದು ಮ್ಯಾನೇಜಿಂಗ್ ಏಜೆಂಟರವರು ಡೈರೆಕ್ಟರುಗಳ ಅಪ್ಪಣೆಇಲ್ಲದೆ ಕೆಲವು ಖರ್ಚನ್ನು ಮಾಡಿರುವ ವಿಷಯ. ಲೆಕ್ಕಪತ್ರಗಳನ್ನು ಆಡಿಟ್ ಮಾಡಿದ ಆಡಿಟರುಗಳು ಅದು ಸರಿಯಾಗಿದೆ ಎಂದು ಯೋಗ್ಯತಾಪತ್ರವನ್ನು ಕೊಟ್ಟಿದ್ದಾರೆ. ಅವರು ನಿಬಂಧನೆಗಳನ್ನು ತಿಳಿದೇ ಆಡಿಟ್ ಮಾಡಿರುತ್ತಾರೆ. ನಿಬಂಧನೆಗಳಿಗೆ ಎಲ್ಲಿ ವಿರೋಧವಾಗಿದೆಯೋ ಅಲ್ಲಿ ತಮ್ಮ ಆಕ್ಷೇಪಣೆಗಳನ್ನು ಸ್ಪಷ್ಟಪಡಿಸಿದ್ದಾರೆ. ಮಿ॥ ಟಾಮ್ಲಿಯವರಿಗೆ ಕೊಟ್ಟ ಬೋನಸ್ಸಿನ ವಿಷಯದಲ್ಲಿ ಆಕ್ಷೇಪಣೆ ಮಾಡಿದ್ದಾರೆ. ಕಟ್ಟಡಕ್ಕಾಗಿಯೂ ಯಂತ್ರಗಳಿಗಾಗಿಯೂ ಮಾಡಿರುವ ಖರ್ಚಿಗೆ ಆಕ್ಷೇಪಣೆಯನ್ನು ಮಾಡಿಲ್ಲ. ನಿಬಂಧನೆಗೆ ವಿರೋಧವಾಗಿದ್ದರೆ ಆಕ್ಷೇಪಣೆ ಮಾಡುತ್ತಿದ್ದರು. ಇದರಿಂದ ಡೈರೆಕ್ಟರುಗಳ ಅಪ್ಪಣೆ ಇಲ್ಲದೆ ಕೆಲವು ಬಾಬುಗಳಲ್ಲಿ ಖರ್ಚುಮಾಡುವುದಕ್ಕೆ ಮ್ಯಾನೇಜಿಂಗ್ ಏಜೆಂಟರುಗಳಿಗೆ ಅಧಿಕಾರವಿದೆ ಎಂಬುದು ಸ್ಪಷ್ಟವಾಗುತ್ತದೆ. ಅಸೋಸಿಯೇಷನ್ನಿನ ನಿಬಂಧನೆಗಳಲ್ಲಿ ಬೋರ್ಡಿನ ಕಂಟ್ರೋಲ್ ಎಂದರೆ ಪಕ್ಕೋಟಿಗೆ ಅಧೀನವಾಗಿರಬೇಕೆಂಬುದೇ ಹೊರತು ಬೋರ್ಡಿನ ಸ್ಯಾಂಕ್ಷನ್ನಿನಂತೆ ಎಂದರೆ ಒಪ್ಪಿಕೆಯಂತೆ ಎಂದು ಅಲ್ಲ. ಎಷ್ಟೋ ಬಾಬುಗಳಲ್ಲಿ ಬೋರ್ಡಿನ ಅಪ್ಪಣೆಇಲ್ಲದೆಯೇ ಮ್ಯಾನೇಜಿಂಗ್ ಏಜೆಂಟರು ಕೆಲಸವನ್ನು ಮಾಡಬೇಕಾಗುತ್ತದೆ. ಯಂತ್ರಗಳು ಕಟ್ಟಡ ಮೊದಲಾದವುಗಳ ವಿಷಯದಲ್ಲಿ ಬೋರ್ಡಿನವರ ಅಪ್ಪಣೆ ಇಲ್ಲದೆ ಏಜೆಂಟರುಗಳು ಖರ್ಚುಮಾಡಬಹುದೆಂದು ನಿಬಂಧನೆಯಲ್ಲಿದೆ.

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು :— ಆ ಖರ್ಚು ಸರಿಯೇ ತಪ್ಪೇ ಎಂದು ನೀವು ಕೇಳಬಹುದು. ಅಧಿಕಾರದ ವಿಷಯವು ಬರುವುದಿಲ್ಲ.

ಮ॥ ರಾ॥ ಬಿ. ನರಸಿಂಗರಾಯರು-ಈ ಸಂದರ್ಭದಲ್ಲಿ ಡೈರೆಕ್ಟರುಗಳು ಏನೂ ಮಾಡುವುದಕ್ಕಾಗುವುದಿಲ್ಲ. ನಿಬಂಧನೆಗಳು ಬಹಳ ಸಡಿಲವಾಗಿವೆ.

ಸರ್. ಪುಟ್ಟಣ್ಣಶೆಟ್ಟರು :—ಬೊಂಬಾಯಿ ಮತ್ತು ಇತರ ಕಡೆಗಳಲ್ಲಿ ಇರುವ ಮಿಲ್ಲುಗಳ ನಿಬಂಧನೆಗಳನ್ನೇ ಈ ಮಿಲ್ಲಿಗೂ ಜೋಡಿಸಿದೆ.

ಮ॥ ರಾ॥ ಇ. ರಾಮಸ್ವಾಮಯ್ಯರವರು:—ಖರ್ಚುಗಳನ್ನು ಇನ್ನೂ ಕಡಿಮೆ ಮಾಡಬಹುದಾಗಿತ್ತು ಸ್ವಾಮೀ.

ಮ॥ ರಾ॥ ರಾಮಚಂದ್ರರಾವ್ ಸಿಂಧೆಯವರು:—ಮಿಲ್ಲಿನ ಮ್ಯಾನೇಜ್‌ಮೆಂಟನ್ನು ಬದಲಾಯಿಸಬೇಕು ಸ್ವಾಮಿ. ಈ ಎಲ್ಲಾ ವಿಷಯಗಳನ್ನೂ ಆಲೋಚಿಸೋಣ. 2 ವಾರ ಮುಂದಕ್ಕೆ ಹಾಕಿ. ಒಂದು ಕಮಿಟಿಯನ್ನು ನೇಮಿಸಿ.

ಸರ್. ಪುಟ್ಟಣ್ಣಶೆಟ್ಟರು :—2 ವಾರವಲ್ಲ ಎರಡು ತಿಂಗಳೂ ಏನೂ ಆಗುವುದಿಲ್ಲ.

ಮ॥ ರಾ॥ ಹೆಚ್. ನಂಜುಂಡರಾಜೇ ಅರಸಿನವರು ಮ್ಯಾನೇಜಿಂಗ್ ಏಜೆಂಟರವರು ಈ ಕೆಲಸದಲ್ಲಿ ನಿಪುಣರಲ್ಲ ಎಂದು ಹೇಳುತ್ತೀರಿ ಹಾಗಾದರೆ ಹೆಚ್ಚು ಖರ್ಚನ್ನು ಏತಕ್ಕೆ ಮಾಡಬೇಕಾಗಿತ್ತು ಸ್ವಾಮಿ.

ಮ॥ ರಾ॥ ಪಿ. ಮಹದೇವಯ್ಯನವರು :—ಸ್ವಾಮಿ, ಷೇರ್ ಹೋಲ್ಡರ್‌ಗಳಿಗೆ ಬಹಳ ಅಸಮಾಧಾನವಾಗಿದೆ. ಮ್ಯಾನೇಜ್‌ಮೆಂಟು ಸರಿಯಾಗಿಲ್ಲ. ಇತರ ಕಡೆಗಳಲ್ಲಿ ಷೇರ್ ಹೋಲ್ಡರ್‌ಗಳು ಲಾಭವನ್ನು ಸಂಪಾದಿಸುತ್ತಿದ್ದಾರೆ. ನಿಬಂಧನೆಗಳಲ್ಲಿ ಏನಾದರೂ ತಪ್ಪಿದ್ದರೆ ಅವುಗಳನ್ನು ಬದಲಾಯಿಸಿ. ಹೇಗಾದರೂ ಮಾಡಿ ಷೇರ್ ಹೋಲ್ಡರ್‌ಗಳಿಗೆ ಲಾಭಬರುವಂತೆ ಮಾಡಿ.

ಮ॥ ರಾ॥ ಪಿ. ಸೀತಾರಾಮಯ್ಯನವರು. ಮಿಲ್ಲನ್ನು ಹೇಗಾದರೂ ಮಾಡಿ ಒಳ್ಳೆ ಸ್ಥಿತಿಗೆ ತರಬೇಕು. 5000 ಜನಗಳಿಗೆ ಜೀವನ ನಡೆಯುತ್ತಿದೆ. ಕಡಿಮೆ ಬಡ್ಡಿಗೆ 30 ಲಕ್ಷ ರೂಪಾಯಿ ಸಾಲವನ್ನು ತೆಗೆದುಕೊಂಡು ಕೆಲಸವನ್ನು ಮಾಡಿಸಬೇಕು. ಒಬ್ಬ ಪಾರ್ಸಿ ಮೆಂಬರು :—ಸ್ವಾಮಿ ನಾನು ಎಲ್ಲಾ ಮಿಲ್ಲುಗಳನ್ನು ಹೋಲಿಸಿದ್ದೇನೆ. ಈ ಮಿಲ್ಲಿನಲ್ಲಿ ವಸ್ತುಗಳನ್ನು ತಯಾರುಮಾಡುವುದಕ್ಕೆ ಅಷ್ಟೇನೂ ಖರ್ಚಾಗುವುದಿಲ್ಲ. ನೀವು ಬಡ್ಡಿಯನ್ನು ವಿಪರೀತವಾಗಿ ತೆರುತ್ತಿದ್ದೀರಿ. ಅದನ್ನು ಹೇಗಾದರೂ ಕಡಿಮೆ ಮಾಡಬೇಕು. ಸಾಹುಕಾರ್ ಬಸಮಯ್ಯನವರು ;—ನೀವು ಏನು ಮಾಡಿದರೂ ಸರಿ ಹೋಗುವುದಿಲ್ಲ. ಸರ್ಕಾರದ ಸಹಾಯವನ್ನು ಕೇಳಿ.

ಒಬ್ಬ ಮೆಂಬರು :—ನೀವು ಸರ್ಕಾರದ ಸಹಾಯವನ್ನು ಹೊಂದಿ ಸಾಲವನ್ನು ತೆಗೆದುಕೊಳ್ಳುವುದಕ್ಕಿಂತ ಈ ಮಿಲ್ಲಿನ ಆಡಳಿತವನ್ನೇ ಅವರಿಗೊಪ್ಪಿಸುವುದು ಮೇಲು. ಇಷ್ಟೆಲ್ಲಾ ಚರ್ಚೆಯು ಮುಗಿದ ಮೇಲೆ ಬಹುಮತದಿಂದ ಈ ಕೆಳಗಿನ ಠರಾವುಗಳು ಪಾಸಾದವು.

ವಿವಿಧ ವಿಷಯಗಳು

ಆ ಗ ಮ ನ.

ನಮ್ಮ ಶ್ರೀಮದ್ಯುವರಾಜರವರು ಮೊನ್ನೆಯ ದಿನ ರಾಜಧಾನಿಗೆ ದಯಮಾಡಿಸಿದರು.

ವಿಮಾನದ ಮರಣ.

ರಸ್ಸಿಯಲ್ಲಿ ಒಂದು ವಿಮಾನವು ಒಂದು ಸಾವಿರ ಅಡಿ ಎತ್ತರದಲ್ಲಿ ಸಂಚರಿಸುತ್ತಿದ್ದಾಗ ಒಳಗಿದ್ದ ಒಬ್ಬನು ಒಬ್ಬನು ಕೆಳಗೆ ಬಿದ್ದು ಮೃತನಾದನು.

ಹೆಂಗಸರ ಪರಿಷತ್ತು.

ಪರದಾ ಹೆಂಗಸರ ಪರಿಷತ್ತು ಲಾಹೋರಿನಲ್ಲಿ ನಡೆಯಿತು. ಬಾಲ್ಯವಿವಾಹವನ್ನು ತೆಗೆದು ಹಾಕಲೇಬೇಕೆಂಬ ಠರಾವು ಮಂಜೂರಾಯಿತು.

ದೇಹದಾರ್ಢ್ಯ

ಲೋಡರ್‌ಡೇಲ್ ಎಂಬ ಆಂಗ್ಲೇಯನು ಪ್ರತಿ ಆರು ತಿಂಗಳಿಗೂ ಅಮೇರಿಕಾಕ್ಕೆ ಹೋಗಿ ಹಿಂತಿರುಗುತ್ತಿರುವನು. ಈಗ ಆತನಿಗೆ 77 ವರುಷ ವಯಸ್ಸಾಗಿದೆ. ಮೊನ್ನೆ ತಾನೆ ಆತನು ನ್ಯೂಯಾರ್ಕ್‌ನಿಂದ ಇಂಗ್ಲೆಂಡಿಗೆ ಬಂದನು. ಇದುವರಿಗೆ ಆತನು ಅಟ್ಲಾಂಟಿಕ್ ಸಾಗರವನ್ನು 140 ಬಾರಿ ದಾಟಿರುವನು. ಯುದ್ಧದ ವೇಳೆಯಲ್ಲಿ ಮಾತ್ರ ಆತನು ಪ್ರಯಾಣಮಾಡಲಿಲ್ಲ.

ಮ್ಯಾನೇಜಿಂಗ್ ಏಜೆಂಟ್‌ರವರು ಬೋರ್ಡಿನವರ ಅನುಮತಿ ಇಲ್ಲದೆ ಕೆಲವು ಖರ್ಚುಗಳನ್ನು ಮಾಡಿರುವದರಿಂದಲೂ ಹೀಗೆ ಮುಂದಕ್ಕೂ ಖರ್ಚನ್ನು ಮಾಡುತ್ತಾ ಹೋದರೆ ಮಿಲ್ಲಿನ ಏಳಿಗೆಯು ಆಗುವುದಕ್ಕೆ ಕುಂದಕವಾಗುವುದರಿಂದಲೂ ಇತಃಪರ ಡೈರೆಕ್ಟರುಗಳೂ ಈ ಸಭೆಯಿಂದ ಚುನಾಯಿಸಲ್ಪಟ್ಟ ಐದು ಷೇರ್ ಹೋಲ್ಡರಗಳೂ ಸೇರಿ ಮಾಡಿದ ನಿಬಂಧನೆಗಳಂತೆ ಮ್ಯಾನೇಜಿಂಗ್ ಏಜೆಂಟರು ಬೋರ್ಡಿನ ಅಪ್ಪಣೆಯನ್ನು ಪಡೆದು ಖರ್ಚನ್ನು ಮಾಡಬೇಕು.

(2) ಈ ವರ್ಷದ ಬ್ಯಾಲೆನ್ಸ್ ಷೀಟನ್ನು ಈ ಕೆಳಗಿನ ಖರ್ಚುಗಳ ಹೊರತಾಗಿ ಪಾಸ್ ಮಾಡತಕ್ಕದ್ದು. ಆ ಖರ್ಚುಗಳ ವಿಷಯವಾಗಿ ಡೈರೆಕ್ಟರುಗಳು ಮ್ಯಾನೇಜಿಂಗ್ ಏಜೆಂಟರ ಸಮಜಾಯಿಷಿಯನ್ನು ತೆಗೆದುಕೊಂಡ ಮೇಲೆ ಪಾಸ್ ಮಾಡತಕ್ಕದ್ದು.

(1) ಮಿ|| ಟಾಮ್ಲಿನ್ಸುವರಿಗೆ ಕೊಟ್ಟ 15000 ರೂಪಾಯಿಗಳು.

(2) ಹೊಸ ಕಟ್ಟಡಗಳಿಗಾಗಿ ಖರ್ಚು ಮಾಡಿದ 39726 ರೂಪಾಯಿ 9 ಆಣೆ 9 ಪೈಗಳು.

(3) ಹೊಸ ಯಂತ್ರಗಳಿಗಾಗಿ ಖರ್ಚುಮಾಡಿದ 18, 328 ರೂಪಾಯಿಗಳು (4) ಮ|| ರಾ|| ಧನಕೋಟಿ ಶೆಟ್ಟರವರಿಂದ ತೋರಿಸಲ್ಪಟ್ಟ ಇತರ ಬಾಬುಗಳು III ಡೈರೆಕ್ಟರುಗಳು ಮ|| ರಾ|| ರಾಮಚಂದ್ರರಾವ್, ಸಿಂಧೆಯವರ ಮತ್ತು ಧನಕೋಟಿ ಶೆಟ್ಟರವರೊಡನೆ ಕಲೆತು ಮಿಲ್ಲಿನ ಆಡಳಿತವನ್ನು ಸರಿಪಡಿಸತಕ್ಕದ್ದು.

IV. ಮಿಲ್ಲಿನ ಆರ್ಥಿಕ ಸ್ಥಿತಿಯನ್ನು ಸುಧಾರಣೆಮಾಡಿ ಅದರ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯವುದಕ್ಕೋಸ್ಕರ ಸರ್ಕಾರದವರ ಗ್ಯಾರಂಟಿಯ ಮೇಲೆ 25 ಲಕ್ಷ ರೂಪಾಯಿಗಳ ಡಿಬೆಂಚರ ಸಾಲವನ್ನು ತೆಗೆಯತಕ್ಕದ್ದು. ಸಭೆಯ ಕಾರ್ಯವು ಸಮಾಪ್ತವಾದಮೇಲೆ ಶ್ರೀಮನ್ಮಹಾರಾಜರಿಗೆ ಜಯವಾಗಲಿ ಎಂದು ಎಲ್ಲರೂ ಸೇರಿ ಹಾರೈಸಿದರು.

ಉದ್ದವಾದ ಮೀಸೆ

ಅಮೇರಿಕದ ಸಾನ್ ಫ್ರಾನ್ಸಿಸ್ಕೊ ಎಂಬಲ್ಲಿ ಒಬ್ಬನ ಮೀಸೆಯು 11 ಅಡಿ ಉದ್ದವೂ ಇನ್ನೊಬ್ಬನ ಮೀಸೆಯು 17 ಅಡಿ ಉದ್ದವೂ ಇದೆಯಂತೆ.

ನಿರುದ್ಯೋಗಸ್ಥರ ಸಂಖ್ಯೆ

ಬ್ರಿಟನ್ನಿನಲ್ಲಿ ನಿರುದ್ಯೋಗದ ಸಂಖ್ಯೆಯು 1, 374, 700 ರಿಂದ 30, 513 ರಷ್ಟು ಹೆಚ್ಚಿರುವುದಾಗಿ ಅಲ್ಲಿನ ವಾರಗೆಜೆಟಿನಿಂದ ತಿಳಿಯ ಬರುತ್ತೆ.

ಪಟ್ಟಾಭಿಷೇಕ.

ಈ ಮಾಹೆ 10 ನೇ ತಾ|| ನಲ್ಲಿ ಜಪಾನಿನ ಚಕ್ರವರ್ತಿಗಳಿಗೆ ಕಯೋಟೋ ಪಟ್ಟಣದಲ್ಲಿ ಪಟ್ಟಾಭಿಷೇಕವು ಬಹು ಸಂಭ್ರಮದಿಂದ ಜರುಗಿತು,

ಪಬ್ಲಿಕ್ ಲೈಬ್ರರಿ.

ಪಬ್ಲಿಕ್ ಲೈಬ್ರೆರಿಯಲ್ಲಿ ವರ್ಷದ ಸ್ಟಾಕನ್ನು ತನಿಖೆ ಮಾಡುವ ಪ್ರಯುಕ್ತ ಮುಂದಿನ ಡಿಸೆಂಬರ್ 2ನೇ ತಾ|| ನಿಂದ 10 ನೇ ತಾ|| ವರೆಗೆ ಲೈಬ್ರರಿಯು ಮುಚ್ಚಲ್ಪಡುವುದು.

ಹಿಂದೀ ಮಿಯಾ ಪರಿಷತ್ತು.

ಅಖಿಲ ಹಿಂದೀಮಿಯಾ ಪರಿಷತ್ತು ಮುಂದಿನ ಡಿಸೆಂಬರ್ ಮಾಹೆ 28 ಮತ್ತು 29 ನೇ ತಾ|| ಗಳಲ್ಲಿ ನಡೆಯುವುದು. ಈ ಪರಿಷತ್ತಿನ 21 ನೇ ಅಧಿವೇಶನದಲ್ಲಿ ಬಗ್ಗಾಪಳ್ಳಿಯ ನವಾಬ್ ಸಾಹೇಬರು ಅಧ್ಯಕ್ಷ ಪದವಿಗೆ ಒಪ್ಪಿರುವರು.

ಪ್ರದರ್ಶನ

ಬ್ಯೂನೋಸ್‌ಏರಿಸ್ ಎಂಬಲ್ಲಿ ಒಂದು ದೊಡ್ಡ ವಸ್ತುಪ್ರದರ್ಶನವು ಜರುಗುವುದು. ಈ ಪ್ರದರ್ಶನದಲ್ಲಿ ಔದ್ಯೋಗಿಕ ವಿಷಯಕ್ಕೆ ಸಂಬಂಧವಾದ ಸಾಮಾನುಗಳೆಲ್ಲವನ್ನೂ ಸಂಗ್ರಹಿಸುವರು. ಇದು 1929 ನೇ ನವಂಬರ್ ಮಾಹೆಯಲ್ಲಿ ಪ್ರಾರಂಭವಾಗಿ ಆರು ತಿಂಗಳವರೆಗೂ ನಡೆಯುವುದು.

ಶ್ರೀಮದ್ಯುವರಾಜರವರು.

ಈ ತಿಂಗಳು 16 ನೇ ತಾ|| ಬಂಗಾಳಾ ಗೌರ್ನರ್‌ರವರ ಪತ್ನಿಯರೂ, ಕಪೂರ್ಥಲಾ ಮಹಾರಾಜರವರೂ, ಮತ್ತು ನಮ್ಮ ಶ್ರೀಮದ್ಯುವರಾಜರವರೂ, ಭೂಪಾಲದ ಬೇಗಂರವರೂ ಸಹ ಬೊಂಬಾಯಿ ನಗರವನ್ನು ತಲುಪಿದರು. ಇವರ ಜೊತೆಯಲ್ಲಿ ಇನ್ನೂ ಅನೇಕ ಐರೋಪ್ಯರೂ ಬಂದರು.

ಬಹಿಷ್ಕಾರ.

ಮುಂದಿನ ತಿಂಗಳು ಕಲ್ಕತ್ತೆಯಲ್ಲಿ ನಡೆಯುವ ರಾಷ್ಟ್ರೀಯ ಮಹಾಸಭೆಯ ಪ್ರದರ್ಶನದಲ್ಲಿ ಆಂಗ್ಲೇಯರಿಂದ ತಯಾರಾದ ವಸ್ತುಗಳನ್ನು ಪ್ರದರ್ಶಿಸುವುದಕ್ಕೂ ಪತ್ರಿಕೆಗಳನ್ನು ಹಂಚುವುದಕ್ಕೂ ಅವಕಾಶ ಕೊಡಕೂಡದೆಂದು ಮಹಾಸಭೆಯ ಸ್ವಾಗತ ಸಮಿತಿಯವರು ನಿರ್ಧರಿಸಿರುತ್ತಾರೆ.

ಪ್ರಾಣದಾನ

ನೈಲ್‌ನದಿಯ ಮಧ್ಯದಲ್ಲಿ ಹೂವುಗಳನ್ನು ತರಬೇಕೆಂದು ಸಣ್ಣ ಹಡಗಿನಲ್ಲಿ ಕೆಲವು ಬಾಲಕಿಯರು ಹೋಗಿದ್ದರು. ಹಡಗು ಪ್ರವಾಹದ ಸೆಳತಕ್ಕೆ ಸಿಕ್ಕಿ ಮುಳುಗಿಹೋಯಿತು. ಅದರಲ್ಲಿದ್ದ ಸುಮಾರು 28 ಜನರಲ್ಲಿ 9 ಜನರನ್ನು ಒಬ್ಬ ನೇಟೀವ್ ಸಾಹುಕಾರನು ಬಹು ಪ್ರಯಾಸದಿಂದ ಬದುಕಿಸಿದನು. ಆದರೆ ಹಿಂಜವಾಗ ಆಯಾಸ ಹೆಚ್ಚಾಗಿ ಆತನೂ ಮೃತನಾದನೆಂದು ತಿಳಿದು ಬರುತ್ತೆ. ಇದಲ್ಲವೆ ಪ್ರಾಣದಾನ ಮಾಡಿದ ವೀರನಾತನು.

ಪ್ಲೇಗಿನ ಚಿಕಿತ್ಸೆ.

ರಾಜಧಾನಿಯ ಹೊರವು ಭಾಗಗಳಲ್ಲಿ ಅನೇಕ ಇಲಿಗಳೂ, ಅಳಿಲುಗಳೂ ಪ್ಲೇಗಿನಿಂದ ಸಾಯುತ್ತಿರುವುದಾಗಿ ತಿಳಿದು ಬಂದುದರಿಂದ ಅಂಥ ಸತ್ತ [illegible] ಪರೀಕ್ಷೆಗಾಗಿ ಕಳುಹಿಸಿದಲ್ಲಿ ಅಂಟು ಜಾಡ್ಯವು ಹರಡದಂತೆ ಮನೆ ಮನೆಗೂ [illegible] ಮಾಡಿಸಲು [illegible] ಹೆಲ್ತ್ ಡಿಪಾರ್ಟ್‌ಮೆಂಟಿನಿಂದ [illegible] ಗಿ ತಿಳಿಯಬರುತ್ತೆ.

[illegible]

ಮೈಸೂರು [illegible]
11 ನೇ ವಾರ್ಷಿಕ ಸಮ್ಮೇಳನ ಸಮಾರಂಭದಲ್ಲಿ ಈ ಮಾಹೆ 23 ನೇ ಶುಕ್ರವಾರ ಬೆಳಿಗ್ಗೆ 9 ಘಂಟೆಗೆ ಹೆಬ್ಬಾಳ್ ಪರೀಕ್ಷಾ ಕ್ಷೇತ್ರದಲ್ಲಿ ದನಗಳ ಪರಿಷೆ ಸೇರುವುದು. ಉತ್ತಮ ದನಗಳಿಗೆ ಬಹುಮಾನ ದೊರೆಯುವುದು. [illegible]ಗೆ ಬರತಕ್ಕ ಜಾನುವಾರುಗಳಿಗೆ ಯಾವ [illegible] ಯೂ ಇಲ್ಲ.

ಬೆಂಗಳೂರು ಮಾನನಷ್ಟದ ಮೊಕದ್ದಮೆಗಳು

ಬೊಂಬಾಯಿ ಮತ್ತು ಮದರಾಸ ಪತ್ರಿಕೆಗಳಲ್ಲಿ ಮಾನನಷ್ಟಕರವಾದ ಅಬ್ಕಾರಿ ಇಲಾಖೆ ಹೇಳಿಕೆಗಳು ಪ್ರಕಟವಾದುವೆಂದು ಅವುಗಳ ಮುಖಾಂತರ ಮಿ|| ವಾಸರಮೇಲೆ ಬೊಂಬಾಯಿ ಮತ್ತು ಮದರಾಸ್ ಕೋರ್ಟುಗಳಲ್ಲಿ ಮಾನನಷ್ಟದ ಮೊಕದ್ದಮೆಯನ್ನು ಕೆಲವರು ಹೂಡಿರುವರೆಂದು ವೀರಕೇಸರಿ ಪತ್ರಿಕೆಯು ತಿಳಿಸುತ್ತದೆ.

ತರುಣಿಯರ ಮಾರಾಟ

ಉತ್ತರ ಇಂಡಿಯಾದ ಸಂಯುಕ್ತ ಪ್ರಾಂತ್ಯಗಳಲ್ಲಿ ಸುಂದರಿಯರನ್ನು ಮೋಸ ಬಲತ್ಕಾರಾದಿಗಳಿಂದ ವಶಪಡಿಸಿಕೊಂಡು, ಹಣವುಳ್ಳ ಶ್ರೀಮಂತರಿಗೆ ಮಾರುವ ಒಂದು ಗುಂಪನ್ನು ಪೋಲೀಸಿನವರು ಪತ್ತೆ ಮಾಡಿದ್ದಾರೆ. ಈ ಜೋರರು ಹೆಚ್ಚಾಗಿ ನೇಪಾಳದ ಹುಡುಗಿಯರನ್ನು ಬ್ರಿಟಿಷ್ ಇಂಡಿಯಾಕ್ಕೆ ತರುತ್ತಿರುವರು. ಮಿರ್ಜಾಪೂರ್, ಬೆನಾರಿಸ್, ಆಗ್ರಾ, ಅಲಹಾಬಾದ ಡಿಲ್ಲಿ, ಪೆಷಾವರ್ ಲಾಹೋರ ಮುಂತಾದ ಕಡೆಗಳಲ್ಲಿ ಸಭ್ಯ ಗೃಹಸ್ಥರಂತೆ ವಾಸಮಾಡುತ್ತಾ ಒಂದು ವಿಚಿತ್ರಭಾಷೆಯಲ್ಲಿ ತಮ್ಮ ವ್ಯಾಪಾರ ವ್ಯವಹಾರವನ್ನು ನಡೆಯಿಸುತ್ತಿರುವರು. ಪೋಲೀಸಿನವರು ಇಂಥ ಒಂದೆರಡು ಗುಂಪನ್ನು ಬಂಧಿಸಿ, ಕೆಲವು ಹುಡುಗಿಯರನ್ನು ಇವರ ಬಳಿಯಿಂದ ಬಿಡಿಸಿರುವರು.

ಸಂ ತಾ ಪ ಸೂ ಚ ಕ ಸ ಭೆ

ಈ ತಿಂಗಳು ೧೮ ನೇ ತಾ|| ಭಾನುವಾರ ಬೆಂಗಳೂರು ಮಜೆಸ್ಟಿಕ್ ಥಿಯೇಟರಿನಲ್ಲಿ ಕಲಾಮಂದಿರದವರು ಸರ್. ಎಂ. ವಿಶ್ವೇಶ್ವರಯನವರ ವರ್ಧಂತಿಯನ್ನು ಆಚರಿಸಬೇಕೆಂದಿದ್ದರು. ಆದರೆ ಸರ್. ಎಂ. ವಿಶ್ವೇಶ್ವರಯ್ಯನವರೇ ಈ ವರ್ಷ ಈ ಉತ್ಸವವನ್ನು ನಿಲ್ಲಿಸಬೇಕೆಂದು ಹೇಳಿದನಂತರ ಅದು ನಿಲ್ಲಿಸಲ್ಪಟ್ಟಿತು. ಇಷ್ಟುಹೊತ್ತಿಗೆ ಲಾಲಾಜಿಯವರ ಮರಣದ ಸಮಾಚಾರವು ಎಲ್ಲೆಲ್ಲೂ ಹರಡಿದುದರಿಂದ ಅದೇ ಸಭೆಯಲ್ಲಿ ಲಾಲಾಜಿಯವರ ಮರಣದ ದುಃಖಸೂಚಕವಾದ ಭಾಷಣಗಳಾಗಿ ಠರಾವು ಮಾಡಲ್ಪಟ್ಟವು. ಶ್ರೀ ರಾಜಗೋಪಾಲಾಚಾರ್ಯರು ಅಧ್ಯಕ್ಷತೆಯನ್ನು ವಹಿಸಿದ್ದರು ಡಾಕ್ಟರ್ ಸಿ. ಬಿ. ರಾಮರಾಯರು ಮ|| ರಾ|| ಗಳಾದ ಬಿ. ಪಿ. [illegible] ವೆಂಕಟಪ್ಪನವರು, ಡಿ. ವಿ. ಗುಂಡಪ್ಪನವರು, [illegible] ವರೂ, ಎಸ್. ಎಸ್. [illegible] ಕೆ. ಟಿ. [illegible] ಅಯ್ಯಂಗಾರ್ಯರವರೂ [illegible] ಗುಣಕಥನರೂಪವಾದ [illegible] ಶೋಕಸೂಚಕ [illegible] ಠರಾವು [illegible]

T A I N A D U.

Daily Edition.

The Leading Nationalist Daily of Mysore.

Printed and published by P. R. Ramaiya.
at Sri Rama Press, D. Subbiah Road, Mysore

Regd No. M. 2322 ॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ...

ಸಂಪುಟ ೧] ಶುಕ್ರವಾರ ೨೩ ನವಂಬರ್ [ಸಂಚಿಕೆ ೪೯

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City.
2 Koppada Ramakrishniah, Agent, Hassan.
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 B V Pundit & Co, Lakshmivilas Road, Mysore.
6 Friends' Union, Mysore.
7 Sweet Mart, Lansdowne Buildings, Mysore.

TAI NADU

23-11-1928.

ಮೈಸೂರಿನ ಗುರಿ

ನಮ್ಮ ಸಂಸ್ಥಾನದ ಧ್ಯೇಯವೇನು? ಆ ಧ್ಯೇಯ ವನ್ನು ನಮಗೆ ತೋರಿಸಿದವರು ಯಾರು? ಆ ಧ್ಯೇಯದ ಸಾಧನೆಗೆ ಸರ್ಕಾರದವರು ಎಷ್ಟು ಪ್ರಯತ್ನ ಮಾಡುತ್ತಿದ್ದಾರೆ? ಪ್ರಜೆಗಳು ಎಷ್ಟು ಪ್ರಯತ್ನ ಮಾಡುತ್ತಿದ್ದಾರೆ? ಆ ಧ್ಯೇಯಕ್ಕೆ ಭಂಗ ತರತಕ್ಕವರು ಯಾರು? ಆ ಭಂಗವನ್ನು ಯಾವ ರೀತಿಯಾಗಿ ತರುತ್ತಿದ್ದಾರೆ? ಎಂಬ ಅಂಶಗಳನ್ನು ನಾವು ಈಗ ಆಲೋಚಿಸ ಬೇಕಾಗಿದೆ. ಈ ಧ್ಯೇಯದ ದೃಷ್ಟಿಯಿಂದ ನಮ್ಮ ಸಂಸ್ಥಾನದಲ್ಲಿ ಈಗ ನಡೆಯುತ್ತಿರುವುದನ್ನು [illegible]

ಶ್ರೀಮನ್ ಮಹಾರಾಜರವರು ತಾವು ಕೊಟ್ಟಿರುವ [illegible] ಭಾಷಣಗಳಲ್ಲಿ ನಮ್ಮ ಸಂಸ್ಥಾನದ ಧ್ಯೇಯವ [illegible]

[illegible]

ಕೊಡು ಶ್ರೀಮನ್ ಮಹಾರಾಜರವರು ಅನೇಕಾವರ್ತಿ ಬೋಧೆ ಮಾಡಿರುವರು. ನಮ್ಮ ಸಂಸ್ಥಾನವು ಸರ್ವತೋಮುಖವಾದ ಅಭಿವೃದ್ಧಿಯನ್ನು ಪಡೆಯಬೇಕೆಂಬುದೇ ಶ್ರೀಮನ್ ಮಹಾರಾಜರವರ ಮಹತ್ವಾಕಾಂಕ್ಷೆ. ವ್ಯವಸಾಯ, ವ್ಯಪಾರ, ಕೈಗಾರಿಕೆ ಮೊದಲಾದವುಗಳಲ್ಲಿ ನಮ್ಮ ದೇಶೀಯರು ಮುಂದುವರಿಯಬೇಕೆಂದು ಎಷ್ಟೋ ಸಾಧನೆಗಳನ್ನು ಕಲ್ಪಿಸಿರುವರು. ವಿದ್ಯಾಭ್ಯಾಸ ಪ್ರಚಾರದ ವಿಷಯದಲ್ಲಿ ಶಾರದಾ ಪೀಠವಾದ ಮೈಸೂರು ಸಂಸ್ಕೃತಿಯ ಉನ್ನತಿಯನ್ನು ಪಡೆಯಬೇಕೆಂಬುವುದೇ ಶ್ರೀಮನ್ ಮಹಾರಾಜರವರ ಕೋರಿಕೆ. ಇಷ್ಟೇ ಅಲ್ಲದೆ ಪ್ರಜೆಗಳು ಮುಂದುವರಿದು ರಾಜ್ಯಾಡಳಿತದ ಭಾರವನ್ನು ವಹಿಸಿ ತಮ್ಮ ಹೊರೆಯನ್ನು ಕಡಿಮೆ ಮಾಡಬೇಕೆಂಬುದೇ ಪ್ರಭುಗಳವರ ಉತ್ಕಟೇಛ್ಛೆ. ಪ್ರಜೆಗಳು ಮುಂದುವರಿದು ಇದು ನಮಗೆ ಬೇಕು, ಅದು ನಮಗೆ ಬೇಕು, ಎಂದು ಹೇಳಿದಕೂಡಲೆ, ಆಗಲಿ, ಎಂದು ಸಂತೋಷದಿಂದ ಕೊಡುವ ಧಣಿಗಳು ಇವರು. ಆದರೆ ಇಷ್ಟೆಲ್ಲಾ ಇದ್ದರೂ ಈಗ ಏತಕ್ಕೆ ನಮ್ಮ ಸಂಸ್ಥಾನದಲ್ಲಿ ಜಾತಿದ್ವೇಷಾನಲವು ಹತ್ತಿಕೊಂಡು ಉರಿಯುತ್ತದೆ? ಪಿತೂರಿಯ ಭೂತವು ನಗ್ನ ನರ್ತನವನ್ನು ಮಾಡುತ್ತಿದೆ? ಶ್ರೀಮನ್ ಮಹಾರಾಜರೂ ಪ್ರಜೆಗಳೂ ಒಬ್ಬರಿಗೊಬ್ಬರು ನೋಡದಂತೆ ಅವರನ್ನು ಪ್ರತ್ಯೇಕಿಸಿಟ್ಟಿರುವ ನೌಕರರ ಚಕ್ರ ಬಂದಿದೆ. ಇದೊಂದು ವ್ಯೂಹ. ಇದೇ ಸರ್ಕಾರ. ಈ ಸರ್ಕಾರವು ಶ್ರೀಮನ್ ಮಹಾರಾಜರವರ ಮನೋಗತವನ್ನು ಪ್ರಜೆಗಳಿಗೆ ತಿಳಿಸಿ, ಪ್ರಜೆಗಳ ಮನೋಗತವನ್ನು ಶ್ರೀಮನ್ ಮಹಾರಾಜರವರಿಗೂ ತಿಳಿಯಿಸಬೇಕು. ಈಗ ನಮ್ಮಲ್ಲಿ ಈ ಕೆಲಸವು ಸರಿಯಾಗಿ ನಡೆಯುತ್ತಿಲ್ಲ. ಪ್ರಜೆಗಳ ನಿಜವಾದ ಅಭಿಪ್ರಾಯವು ಶ್ರೀಮನ್ ಮಹಾರಾಜರಿಗೆ ತಿಳಿಯುವ ಅವಕಾಶವೇ ಇಲ್ಲ. ಎಷ್ಟೇ ಆಗಲಿ, ಈ ನೌಕರ ಚಕ್ರವು ಮನುಷ್ಯರಿಂದ ಕೂಡಿದುದು. ಆದಕ್ಕೆ ದಂಭ, ದರ್ಪ, ದುರಭಿಮಾನ, ಕ್ರೋಧ, ಮಾತ್ಸರ್ಯ ಮೊದಲಾದ ಮನುಷ್ಯರಿಗೆ ಸಹಜವಾದ ದುರ್ಗುಣಗಳಿವೆ. ಆದುದರಿಂದಲೇ ನೌಕರ ಚಕ್ರವು ಎಲ್ಲೆಲ್ಲಿ ಪ್ರಭುತ್ವವನ್ನು ಮಾಡುವುದೋ ಅಲ್ಲೆಲ್ಲಾ ಪ್ರಜೆಗಳಲ್ಲಿ ಅನ್ಯೋನ್ಯತೆಯು ತಪ್ಪುವುದು. ಬ್ರಿಟಿಷ್ ಇಂಡಿಯಾದಲ್ಲಿಯೂ ಈ ನೌಕರ ಚಕ್ರವೇ ಪ್ರಬಲಿಸಿರುವುದರಿಂದ ಅಲ್ಲಿನ ಪ್ರಜೆಗಳಿಗೂ ಶಾಂತಿಯಿಲ್ಲ. ಆದುದರಿಂದ ಶ್ರೀಮನ್ ಮಹಾರಾಜರವರ ಧ್ಯೇಯವು ಸಂಪೂರ್ಣವಾಗಿ ಸಿದ್ಧಿಸಿ ಪ್ರಜೆಗಳಲ್ಲಿಯೂ ಅನ್ಯೋನ್ಯತೆಯೂ ಶಾಂತಿಯೂ ಪ್ರಾಪ್ತಿಸಬೇಕಾದರೆ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿರುವಂತೆ ಪ್ರಜಾಪ್ರಭುತ್ವವು ಏರ್ಪಡಬೇಕು. ಪ್ರಜಾಪ್ರತಿನಿಧಿಗಳಿಂದ ಚುನಾಯಿಸಲ್ಪಟ್ಟ ಮಂತ್ರಿಗಳು ಪ್ರಭುಗಳೊಡನೆ ಕಲೆತು ರಾಜ್ಯಾಡಳಿತವನ್ನು ನಡೆಸಬೇಕು. ದಿವಾನರನ್ನು, ಮಂತ್ರಿಗಳನ್ನು ಪ್ರತಿನಿಧಿಗಳು ಚುನಾಯಿಸಿ, ಅವರು ಶ್ರೀಮನ್ ಮಹಾರಾಜರವರೊಡನೆ ಕಲೆತು ಪ್ರಜೆಗಳ ಇಂಗಿತವನ್ನು ತಿಳಿಸಿ ರಾಜ್ಯಾಡಳಿತವನ್ನು ನಡೆಸಿದರೆ ನಮ್ಮ ಮೈಸೂರು ಸಂಸ್ಥಾನದ ಕೀರ್ತಿಯು ಇತ್ತೋಪ್ಯತಿಶಯವಾಗಿ ಬೆಳಗುವುದು. ಪ್ರಜೆಗಳು ಏಕೆಕಂಠರಾಗಿ [illegible] ದಿಂದ ಪತ್ರಿಸುವರು.

ಸ್ಟಾರ್ ಪತ್ರಿಕೆಗೆ ಲಾಯರ್ ನೋಟೀಸ್

---

16 ನೇ ನವಂಬರ್ 1928.

ಬೆಂಗಳೂರು ಸಿಟಿ.

ಅಡ್ವೊಕೇಟ್ S.K. ವೆಂಕಟರಂಗಯ್ಯಂಗಾರ್ ಬಿ. ಎ. ಬಿ. ಎಲ್. ರವರಿಂದ ಮೈಸೂರು "ಸ್ಟಾರ್" ಪತ್ರಿಕೆಯ ಪಬ್ಲಿಷರ್ ರವರಾದ ಮ|| ರಾ|| ಫಿರೂಜಾಕ್ಷಯ್ಯನವರಿಗೆ—

ನಿಮ್ಮ 1928 ನೇ ನವಂಬರ್ ಮಾಹೆ 12 ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ನಮ್ಮ ಕಕ್ಷಿಗಾರರೂ ಬೆಂಗಳೂರಿನ ದಳ್ಳಾಳಿ ವ್ಯಾಪಾರಿಗಳೂ, ಆನರೇರಿ ಸ್ಪೆಷಲ್ ಮ್ಯಾಜಿಸ್ಟ್ರೇಟರೂ ಆದ ಮ|| ರಾ|| ಎನ್. ವೈ. ಪಿಸ್ಸೆಯವರ ಮೇಲೆ ನಂಬಲು ಅನರ್ಹವೂ ನಿರಾಧಾರವೂ ಆದ ಪ್ರಕಟನೆಯನ್ನು ಮಾಡಿರುತ್ತೀರಿ. ಇದರಿಂದ ನಿಮ್ಮ ವಾಚಕರಲ್ಲಿ ನಮ್ಮ ಕಕ್ಷಿಗಾರರು ನಂಬಿಕೆಗನರ್ಹರು ಎಂಬ ಭಾವನೆಯು ಉಂಟಾಗುತ್ತದೆ. ಮೇಲ್ಕಂಡ ಪ್ರಕಟನೆಯು ನಮ್ಮ ಕಕ್ಷಿಗಾರರನ್ನು ನಿರಾಧಾರವಾಗಿ ಅಲ್ಲಗಳೆಯಬೇಕೆಂಬ ಉದ್ದೇಶದಿಂದ ಪ್ರಕಟಿತವಾದದ್ದಾಗಿದೆ.

ಇದರಿಂದ ನಮ್ಮ ಕಕ್ಷಿಗಾರರಿಗೆ ಆಗಿರುವ ನಷ್ಟಕ್ಕಾಗಿ ನೀವು ಈ ನೋಟಿಸ್ ತಲುಪಿದ 24 ಘಂಟೆಗಳೊಳಗಾಗಿ ಸಂಪೂರ್ಣವಾದ ಕ್ಷಮಾಪಣೆಯನ್ನು ಕೇಳಿ ಕೊಳ್ಳಬೇಕು. ಇದಕ್ಕೆ ತಪ್ಪಿದಲ್ಲಿ ಸಿವಿಲ್, ಆಗಲಿ ಕ್ರಿಮಿನಲ್ ಆಗಲಿ ಅಥವಾ ಎರಡು ವಿಧವಾಗಿಯಾಗಲಿ ಸೂಕ್ತ ತೋರಿದಂತೆ ನಿಮ್ಮ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಯಾವ ಎಚ್ಚರಿಕೆಯನ್ನೂ ಕೊಡದೆ ಕ್ರಮವು ನಡಿಸಲಾಗುವದೆಂದು ತಿಳಿಯುವುದು.

S. K. ವೆಂಕಟರಂಗಯ್ಯಂಗಾರ್

ಅಡ್ವೋಕೇಟ್.

ಡಿಸ್‌ಮಿಸ್ ಆದ ಉಪಾಧ್ಯಾಯರಿಗೆ ರಕ್ಷಣೆ.

ಬೆಂಗಳೂರು ಸಿಟಿ ಟೌನ್ ಮೆಜೆಂಟರಾದ ಮ|| ರಾ|| ವಾಜಪೇಯಂ ವೆಂಕಟಸುಬ್ಬಯ್ಯನವರು ತಮಗೆ ಒಬ್ಬ ಗುಮಾಸ್ತೆ ಬೇಕೆಂದೂ, ಆ ಕೆಲಸಕ್ಕೆ ಬೆಂಗಳೂರು ಗಲಭೆಗಳ ವಿಷಯವಾಗಿ ಶ್ರೀಮನ್ ಮಹಾರಾಜರಿಗೆ ಹಾಕಿದ ಮೆಮೋರಿಯಲ್‌ಗೆ ರುಜು ಮಾಡಿ ಡಿಸ್‌ಮಿಸ್ ಮಾಡಲ್ಪಟ್ಟಿರುವ ಉಪ್ಯಾಧ್ಯಾಯರುಗಳಿಗೆ ಹೆಚ್ಚು ರಿಯಾಯಿತಿಯು ಕೊಡಲ್ಪಡುವುದಾಗಿಯೂ ತಿಳಿಸಿರುತ್ತಾರೆ. ಸರ್ಕಾರದವರಿಂದ ದೂರೀಕರಿಸಲ್ಪಟ್ಟಾಗ್ಯೂ ಈ ಬಡ ಉಪಾಧ್ಯಾಯರುಗಳಿಗೆ ಬೆಂಗಳೂರಿನಲ್ಲಿ ರಕ್ಷಣೆಯು ದೊರೆತಿದ್ದು ಸ್ತುತ್ಯವಾದದ್ದೇ ಸರಿ.

ವಿಮಾನದ ದರೋಡೆಕೋರರು.

ನ್ಯೂಯಾರ್ಕಿನ ಒಬ್ಬ ರತ್ನ ವ್ಯಾಪರಿಯು ತನ್ನ ಗಿರಾಕಿಯೊಬ್ಬನಿಗೆ ಮೇಲಂತಸ್ತಿನಲ್ಲಿ ಅಮೂಲ್ಯ ರತ್ನಗಳನ್ನು ತೋರಿಸುತ್ತಿರಲು ವೇಷಧಾರಿಗಳಾದ ನಾಲ್ಕು ಜನ ದರೋಡೆಗಾರರು ಆಕಾಶಯಾನದಿಂದ ಆಯುಧಪಾಣಿಗಳಾಗಿ ಇಳಿದು ವ್ಯಾಪಾರಿಯನ್ನು ಬಂಧಿಸಿ ಕೂಗಿಕೊಳ್ಳಲು ಆಸ್ಪದ ಕೊಡದೆ ಸುಮಾರು 80, ಸಾವಿರ ಬೆಲೆ ಬಾಳುವ ವಜ್ರ, ರತ್ನ ದೊಡಲಾದುವನ್ನು ಕೊಂಡು ಹೋಗಿರುವರು.

Regd No. M, 2322

॥ ವಂದೇಮಾತರಂ ॥

ಬಿಡಿ ಪ್ರತಿ ೬ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ { ೫—೦—೦
ಚಂದಾ { ಪರಸ್ಥಳಕ್ಕೆ ...

ಸಂಪುಟ ೧] ಶನಿವಾರ ೨೪ ನವಂಬರ್ [ಸಂಚಿಕೆ ೫೦

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್ಸ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet,
Bangalore City.

2 Koppada Ramakrishniah, Agent, Hassan.

3. Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Buildings
Mysore.

5 B V Pundit & Co, Lakshmivilas Road,
Mysore.

6 Friends' Union, Mysore.

7 Sweet Mart, Lansdowne Buildings,
Mysore.

TAINADU.

Daily Edition.

The Leading Nationalist Daily of Mysore.

TO LET

Printed and published by P. R. Ramaiya, at Sri Rama Press, D. Subbiah Road Mysore.

TAI NADU
24—11—1928.

ಮೈಸೂರು ವಿಶ್ವ ವಿದ್ಯಾಲಯ.

ಡಾ|| ಬ್ರಜೇಂದ್ರನಾಥ ಸೀಲ್‌ರವರ ಅಸ್ವಸ್ಥತೆಯ ಕಾರಣ ನಾಲ್ಕೂವರೆ ತಿಂಗಳು ರಜ ತೆಗೆದು ಕೊಂಡು ಕಲ್ಕತ್ತಾಕ್ಕೆ ತೆರಳಿದರು. ಅವರ ಸ್ಥಾನದಲ್ಲಿ ರಾಜ ಸಭಾ ಭೂಷಣ ಕೆ. ಚಾಂಡಿಯವರು ವೈಸ್ ಚಾನ್ಸಿಲರ್‌ರಾಗಿ ನೇಮಿಸಲ್ಪಟ್ಟಿರುವರು. ಇದುವರಿಗೂ ಅನೇಕ ಸಾರಿ ಹೀಗೆ ಡಾ|| ಸೀಲ್‌ರವರು ರಜಾ ತೆಗೆದುಕೊಂಡು ಹೋಗಿದ್ದಾಗ್ಗೆ ಯಾರನ್ನೂ ಬದಲಿ ನೇಮಿಸಿರಲಿಲ್ಲ. ರಿಜಿಸ್ಟ್ರಾರರವರೇ ಮಾಮೂಲ್ ರುಟೀನ್ ಕೆಲಸವನ್ನು ನಡೆಸುತ್ತಿದ್ದರು. ಆದರೆ ಈಗ ಎರಡು ಸಾರಿಯಿಂದಲೂ ಡಾ|| ಸೀಲ್‌ರು ರಜಾ ತೆಗೆದುಕೊಂಡು ಹೋದಾಗಲೆಲ್ಲಾ ಮಿ|| ಚಾಂಡಿಯವರನ್ನು ನೇಮಿಸಲಾಗಿದೆ. ಮಿ|| ಚಾಂಡಿಯವರಿಗೂ ಅವರ ಪೆನ್ಷನಾದ 500 ರೂಪಾಯಿ ತೆಗೆದು 1500 ರೂಪಾಯಿಗಳನ್ನು ವೈಸ್‌ಛಾನ್ಸ್‌ಲರ್ ಸಂಬಳಕ್ಕಾಗಿ ಕೊಡಬೇಕು, ಡಾ|| ಸೀಲ್‌ರವರಿಗೂ ಅವರ ರಜಾದ ಸಂಬಳವನ್ನು ಕೊಡಲೇ ಬೇಕು. ಹೀಗೆ ಎರಡು ಕಡೆಯೂ ಖರ್ಚು ಆದರೆ ಅದರಿಂದ ಆಗುವ ಲಾಭಮಾತ್ರ ಕಡಿಮೆ.

ಮಿ|| ಚಾಂಡಿಯವರು ಈಗಲೂ ಸ್ವತಂತ್ರ ಬುದ್ಧಿಯನ್ನು ಉಪಯೋಗಿಸಿ ಕೆಲಸಕಾರ್ಯಗಳನ್ನು ಮಾಡುವ ಹಾಗಿಲ್ಲ. ಡಾ|| ಸೀಲ್‌ರವರು ಹಾಕಿ ಕೊಟ್ಟಿರುವ ದಾರಿಯಲ್ಲಿಯೇ ನಡೆಯಬೇಕು. ಎಂದಮೇಲೆ ಅಪ್ರಕೃತವಾಗಿ ದುಬಾರಿಯಾಗಿ ಮಿ|| ಚಾಂಡಿಯವರನ್ನು ಬದಲಿಯಾಗಿ ವೈಸ್ ಛಾನ್ಸಲರ್‌ರಾಗಿ ನೇಮಿಸಲು ಕಾರಣ ವೇನಿತ್ತು? ಅವರಿಗೇನಾದರೂ ಒಂದು ಅವಕಾಶವನ್ನು ಕೊಡೋಣ ಎಂಬ ಮನೋಭಾವವೇ ಇದಕ್ಕೆ ಕಾರಣ. ಬಡ ರೈತನು ಈ ಅಪ್ರಕೃತವಾದ ಹೊರೆಯನ್ನೆಲ್ಲಾ ಹೊತ್ತುಕೊಂಡಿರುವುದಕ್ಕೆ ಸಿದ್ಧನಾಗಿರುವಾಗ, ಬೇಕಾದದ್ದೆಲ್ಲಾ ಆಗಬಹುದು.

ಲಾಲಾಜಿಯವರೂ, ಮತ್ತು ಮೈಸೂರು.

ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ಮತ್ತು ನಮ್ಮ ಸಂಸ್ಥಾನದ ಇತರ ಭಾಗಗಳಲ್ಲಿಯೂ ಲಾಲಾ ಲಜಪತರಾಯರವರ ಮರಣದ ವಿಷಯವಾಗಿ ಸಂತಾಪವು ಸೂಚಿಸಲ್ಪಟ್ಟಿತು. ಅವರ ಗುಣಕೀರ್ತನವು ಮಾಡಲ್ಪಟ್ಟಿತು. ಅವರ ಧೈರ್ಯ, ಸಾಹಸ, ದೇಶಾಭಿಮಾನ, ಭಾಷಾಭಿಮಾನ, ಮೊದಲಾದವುಗಳು ಕೊಂಡಾಡಲ್ಪಟ್ಟವು. ಅವರು ಹಿಂದೂ ಜನಾಂಗದ ಉನ್ನತಿಗಾಗಿ ಮಾಡುತ್ತಿದ್ದ ಸೇವೆಯು ವರ್ಣಿಸಲ್ಪಟ್ಟಿತು.

ಲಾಲಾಜಿಯವರ ಗುಣಕೀರ್ತನದಿಂದಲೇ ಅವರ ಆತ್ಮಕ್ಕೆ ಶಾಂತಿಯುಂಟಾಗುವುದಿಲ್ಲ, ಅವರು ಯಾವ ಮಹೋದ್ದೇಶಕ್ಕಾಗಿ ತಮ್ಮ ತನುಮನಧನಗಳನ್ನು ಧಾರೆಯೆರೆದರೋ ಆ ಮಹೋದ್ದೇಶದ ಸಾಧನೆಗಾಗಿ ನಾವೆಲ್ಲರೂ ಪ್ರಯತ್ನ ಪಡಬೇಕು. ಅದೀಗ ನಿಜವಾದ ಕೃತಜ್ಞತೆ, ಪ್ರಾಮಾಣಿಕವಾದ ಪ್ರೀತಿ. ನಮ್ಮ ಮೈಸೂರಿನಲ್ಲಿ ನಾವೆಲ್ಲರೂ ಆ ಮಹೋದ್ದೇಶವನ್ನು ಸಾಧಿಸಲು ಪ್ರಯತ್ನ ಮಾಡಬೇಕು. ಶಿಥಿಲವಾಗಿರುವ ಹಿಂದೂ ಜನಾಂಗವು ಸುದೃಢವಾಗಿ ಅಚ್ಚುಕಟ್ಟಾಗಬೇಕೆಂದು ಅವರು ಅಹರ್ನಿಶವೂ ಪ್ರಯತ್ನಿಸುತ್ತಿದ್ದರು. ಹಿಂದೂ ಮಹಾಸಭೆಯ ತತ್ವಗಳು ಜನಗಳಲ್ಲಿ ಹರಡಿ ಹಿಂದೂ ಜನಾಂಗದಲ್ಲಿ ಐಕಮತ್ಯವು ಬೇರೂರಬೇಕೆಂಬುದೇ ಅವರ ಮಹತ್ವಾಕಾಂಕ್ಷೆಯಾಗಿತ್ತು. ನಮ್ಮ ಮೈಸೂರಿನಲ್ಲಿಯೂ ಕೆಲವು ದಿವಸಗಳ ಕೆಳಗೆ ನಾವೆಲ್ಲರೂ ಸೇರಿ ಹಿಂದೂ ಮಹಾಸಭೆಯನ್ನು ಜೀರ್ಣೋದ್ಧಾರ ಮಾಡಿದೆವು. ಹಿಂದೂ ಜನಾಂಗದಲ್ಲಿ ನೆಲೆಸಿರುವ ಅನೇಕ ಭೇದಗಳು ತೊಲಗಿ ಸರ್ವ ಪುಷ್ಟವಾಗಿಯೂ ಸರ್ವ ಸುಂದರವಾಗಿಯೂ ಆಗಬೇಕೆಂದು ನಾವೆಲ್ಲರೂ ಸಂಕಲ್ಪ ಮಾಡಿದೆವು. ಮುಖ್ಯವಾಗಿ ಹಿಂದೂ ಜನಾಂಗದ ಬ್ರಾಹ್ಮಣರಲ್ಲಿಯೂ ಬ್ರಾಹ್ಮಣೇತರರಲ್ಲಿಯೂ ವ್ಯಾಪಿಸಿರುವ ವೈಮನಸ್ಯವು ತೊಲಗಬೇಕೆಂಬ ಕೆಲವು ಠರಾವುಗಳನ್ನು ಮಾಡಿದೆವು. ಹಿಂದೂ ಜನಾಂಗದಲ್ಲಿ ಎಲ್ಲರಿಗೂ ಸಮಾನವಾದ ಸಾಮಾಜಿಕ ಹಕ್ಕುಗಳು ಇರಬೇಕೆಂದು ಠರಾವು ಮಾಡಿದೆವು. ಲಾಲಾಜಿಯವರ ಆತ್ಮವು ನಿಜವಾಗಿ ಶಾಂತಿಯನ್ನು ಹೊಂದಬೇಕಾದರೆ ಈ ಠರಾವಿನ ಸಾಧನೆಯಿಂದಲೇ ಆಗುವುದು. ಇದೇ ಲಾಲಾಜಿಯವರಿಗೆ ಸರಿಯಾದ ಕೃತಜ್ಞತೆ. ಹಿಂದೂ ಮಹಾಜನಗಳೆಲ್ಲರೂ ಈ ವಿಷಯವನ್ನು ಮನಸ್ಸಿಗೆ ತಂದುಕೊಳ್ಳುವರೆಂದು ನಂಬುತ್ತೇವೆ.

ಇದರ ಉದ್ದೇಶವೇನು ?

ಸ್ವಾಮಿ,—

"ವ|| ಮಿ. ರಂಗಣ್ಣ" ಎಂದು ರುಜುಮಾಡಿ ಮ|| ರಾ|| ತಗಡೂರು ರಾಮಚಂದ್ರರಾಯರವರ ಸ|| ಕ್ಕೆ ಎಂದು ಶಿರೋನಾಮೆಯುಳ್ಳ ಪತ್ರಿಕೆಯೊಂದು ಉಚಿತವಾಗಿ ಅಲ್ಲಲ್ಲಿ ಪ್ರಕಟಿಸಲ್ಪಡುತ್ತಿದೆ. ಪ್ರಕಟನೆಯ ಸ್ವಾತಂತ್ರ್ಯವನ್ನು ವಾದಿಸುವ ನಾವು ಇದನ್ನೆಂದಿಗೂ ವಿರೋಧಿಸಲಾರೆವು. ಅದುಹಾಗಿರಲಿ.

ಹಿಂದೂ ಸಮಾಜದ ಭಿನ್ನ ಭಿನ್ನ ಅವಯುವಗಳೊಳಗಿನ ಹೋರಾಟಗಳಲ್ಲಿ ನಾವು ಸಹಕರಿಸುವುದಿಲ್ಲವೆಂದು ಬರೆದ ನಮ್ಮ ಬರವಣಿಗೆಯು ಯಾರಿಗೆ ಅವಮಾನ? ಜಗಳವನ್ನು ಗಂಟಿಕ್ಕಿ ಸ್ವಪ್ರತಿಷ್ಠೆಗಾಗಿ ಹಾತೊರೆಯುತ್ತಿರುವವರೊಡನೆ ನಮಗೆಂತಹ ವಾದ!! ಹಿಂದೂ ಜನಾಂಗದ ಮತ್ತು ಬ್ರಾಹ್ಮಣರ ಶೋಚನೀಯಸ್ಥಿತಿಯನ್ನು ಮಾತ್ರ ಹಿಬ್ಬರು ರಂಗಣ್ಣನೆಂಬುವರಿಗೆ ನಾನು ವಿವರಿಸಿ ಹೇಳಿದೆನು.

ಮ|| ರಾ|| ತಗಡೂರು ರಾಮಚಂದ್ರರಾಯರಿಗೆ ಇವರು ಬರೆದ ಪತ್ರವನ್ನು ಮುದ್ರಿಸಿ, ಎಲ್ಲರಿಗೂ ಹಂಚಿರುವುದರ ಉದ್ದೇಶವೇನು? ಸಮಾಜಗಳ ನಡುವೆ ಕಲಹಗಳನ್ನು ಗಂಟಿಕ್ಕುವುದೇ ಅಲ್ಲವೆ?

ಶ್ರೀ ಶೃಂಗೇರಿ ಮಠದ ಶ್ರೀಮುಖಗಳನ್ನು ಕುರಿತು ಶ್ರೀ ಮಠದವರೇ ಮೌನವಾಗಿರುವಾಗ ಈ ಒಂದು ವ್ಯಕ್ತಿಯು ಸಂಶಯ ಪಡುವುದೆಂದರೇನು? ತಕ್ಕವರಿಂದ ಇಂತಹ ಮಾತುಗಳು ಹೊರಬಿದ್ದಲ್ಲಿ ಮ|| ಕೃಷ್ಣಸ್ವಾಮಿರಾಯರಾಗಲೀ ಶ್ರೀ ಮಠದವರಾಗಲೀ ಆವಶ್ಯಕವಾದ ನಡವಳಿಕೆಯನ್ನು ನಡೆಸಬಹುದು.

ಸರ್ಕಾರಕ್ಕೊಂದು ಮಾತು:—ಇಂತಹ ಪ್ರಕಟಣೆಗಳಿಂದಲೂ ದಾರಿಯಲ್ಲಿ ಹೋಗುತ್ತಿರುವ ನಿರುದ್ಯೋಗಿಗಳನ್ನು ಕರೆದು ಕೂರಿಸಿಕೊಂಡು ಬೋಧಿಸುವುದರಿಂದಲೂ ಒಂದು ಜನಾಂಗವನ್ನು ಎತ್ತಿ ಕಟ್ಟುತ್ತಿರುವವರ ವಿಚಾರದಲ್ಲಿ ಉದಾಸೀನ ಮಾಡುವುದೂ ಸುತರಾಂ ಸರಿಯಿಲ್ಲ. ಇಂತಹ ಅಜ್ಞಾನಿಗಳೂ ಧರ್ಮಾಂಧರೂ ಕೆ

[illegible]

ಬೆಂಗಳೂರು ಗಲಭೆಗಳ ಸಂಬಂಧದಲ್ಲಿ ಶ್ರೀಮನ್ಮಹಾರಾಜರವರಿಗೆ ಹಾಕಿದ ಅರ್ಜಿಗೆ ರುಜು ಹಾಕಿದ್ದಕ್ಕಾಗಿ ವಜಾ ಮಾಡಲ್ಪಟ್ಟಿರುವ ಬಡ ಉಪಾಧ್ಯಾಯರುಗಳನ್ನು ಕೂಡಲೇ ವಾಪಸು ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆಮಾಡಿರುವುದಾಗಿ ಸ್ವರಾಜ್ಯ ಪತ್ರಿಕೆಯ ಬಾತ್ಮೀದಾರರು ಬರೆದಿರುತ್ತಾರೆ. ಇದು ನಿಜವಾದರೆ ಬಹಳ ಸಂತೋಷಕರವೇ ಸರಿ.

ಭವಿಷ್ಯ.

ಸುಪ್ರಸಿದ್ಧ ವಿದ್ಯಜ್ಞಾನಸಂಪನ್ನರಾದ [illegible]ರವರನ್ನು ಆಂಧ್ರದೇಶದ ಮುಖಂಡರಾದ ಶ್ರೀಯುತ ಕಾಶೀಶ್ವರರಾವ್ ಎಂಬುವರು ಪ್ರಶ್ನೆ ಮಾಡಿದಾಗ 1932 ನೇ ಇಸವಿಯೊಳಗಾಗಿ ಭರತ ಖಂಡಕ್ಕೆ ಡೊಮಿನಿಯನ್ ಸ್ಟೇಟಸ್ ಸ್ವರಾಜ್ಯ ಬರುವುದಾಗಿಯೂ ಈಗ ಇಂಗ್ಲೆಂಡಿನಲ್ಲಿ ಆಳುತ್ತಿರುವ ಕನ್‌ಸರ್‌ವೆಟೀವ್ [illegible] ಮುಂದಿನ ಚುನಾವಣೆಗಳಲ್ಲಿ ವಿಮುಖರಾಗುವರೆಂದೂ ಹೇಳಿದರು.

ಲವರಿರುವರೆಂದು ಜನ ಜನಿತವಾಗಿದೆ. ದೇಶಬಂಧುಗಳಿಗೊಂದು ವಿನಯೋಕ್ತಿ:—ಇಂದು ಬ್ರಾಹ್ಮಣ ಸಾಮಾನ್ಯವನ್ನು ಕಂಡರೆ ಮಹಮದೀಯರಿಗೆ ಆದರವಿಲ್ಲ ವೀರಶೈವರಾದರೂ ಅಷ್ಟಷ್ಟೆ. ಒಕ್ಕಲಿಗರೂ ನಮಗೆ ವಿಮುಖರಾಗುವುದರಲ್ಲಿದ್ದಾರೆ. ಸ್ವಂತ ಸಮಾಜದಲ್ಲಿಯೂ ದರೂ ವೈಷ್ಣವರು ಸ್ಮಾರ್ತರನ್ನು ಪ್ರಚ್ಛನ್ನ ಬೌದ್ಧರೆನ್ನುತ್ತಿರುವರು. ಸ್ಮಾರ್ತರು ವೈಷ್ಣವರನ್ನು ಬ್ರಾಹ್ಮಣರೇ ಅಲ್ಲವೆನ್ನುವರು. ಶ್ರೀ ವೈಷ್ಣವರ ಪ್ರವರ್ತನೆಯು ಮೊದಲಿನಿಂದಲೂ ತಿಳಿದ ಮಾತಷ್ಟೆ. ಹೀಗಿರುವಾಗ ಹಳೇ ನಾಡು ಕರ್ಣಾಟಕರೆಂಬ ಮತ್ತೊಂದು ಬಗೆಯ ಶತ್ರುಗಳನ್ನು ಮೇಲಕ್ಕೆಬ್ಬಿಸುವಂತಹ ತಿಳಿಗೇಡಿತನಕ್ಕೆ ಏನಿಸಬೇಕು? ಮತ್ತೊಂದು ಮಾತು. ನಾವು ನಮ್ಮ ಹಿರಿಯರ ಕಾಲಗಳಿಂದ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಬೇರೆ ಬೇರೆ ಸಮಾಜಗಳೊಡನೆ ಸೋದರಭಾವದಿಂದ ನಡೆಯುವುದನ್ನು ಬಿಟ್ಟು ಧರ್ಮಾಂಧತೆಯನ್ನು ಮುಂದುಮಾಡಿ ದೇಶದಲ್ಲೆಲ್ಲಾ ಹಗೆತನವನ್ನು ಸಂಪಾದಿಸಿಕೊಂಡು ಪೆಟ್ಟು ತಿಂದಾಗ ಸರ್ಕಾರವನ್ನು ನಿಂದಿಸುವುದರಲ್ಲಿ ಅರ್ಥವೇನು?

ಈ ಎ. ರಂಗಣ್ಣನೆಂಬುವರೇ ಶ್ರೀ ಕಾಮಕೋಟಿ ಪೀಠಾಧಿಪತಿಗಳ ಕಡೆಯ ಏಜಂಟೆಂದು ಮಾತ್ರ ಹೇಳಿಕೊಳ್ಳುತ್ತಿರುವರಂತೆ. ಇವರೇ ಏಜಂಟರು ಆಗಿದ್ದಲ್ಲಿ ಆ ಪೀಠಾಧಿಪತಿಗಳು ನಮ್ಮ ದೇಶಕ್ಕೆ ಬರುವ ವಿಚಾರದಲ್ಲಿ ಕೊಂಚ ಯೋಚಿಸಿ ಜನಾಭಿಪ್ರಾಯವನ್ನು ಪಡೆದು ಸರ್ಕಾರವು ಅವಕಾಶ ಕೊಡುವುದು ಮೇಲು. ಈಗಿರುವುದರಿಂದಾಗಿಯೇ ಸಾಕು. ಶ್ರೀ ಕಾಮಕೋಟಿ ಪೀಠಾಧಿಪತಿಗಳು ಈತನ ಮತ್ತು ತಮ್ಮ ಮಠದ ಸಂಬಂಧವು ಎಷ್ಟು ಮಟ್ಟಿನದೆಂಬ ಬಗ್ಗೆ ಒಂದು ಪ್ರಕಟಣೆಯನ್ನು ಹೊರಡಿಸುವುದು ಈ ಸಂದರ್ಭದಲ್ಲಿ ಅವಶ್ಯಕವೆಂದು ತೋರುವುದು.

ಒಟ್ಟಾಗಿ ನಾವು ಹೇಳುವುದಿಷ್ಟೆ. ಈಗಿನ ಸಂದರ್ಭದಲ್ಲಿ ಇಂತಹ ಸಮಾಜಸಮಾಜಗಳ ಕಲಹದಲ್ಲಿ ಯಾವ ಭಾಗವನ್ನು ವಹಿಸುವುದೂ ಸರಿಯಲ್ಲ. ಮೌನವೇ ಮೇಲು.

ಸಂಜನಗೂಡು ಎನ್. ಸುಬ್ರಹ್ಮಣ್ಯಂ.

ತಾಯಿನಾಡು

ವರ್ತಮಾನ ಸಂಗ್ರಹ.

ಅತ್ಯಾಚಾರ.

[illegible] ನಡೆಯುತ್ತವೆ. ಮಧುರೆ ಬಳಿ ಯಲ್ಲಿ ಒಂದು ಘೋರವಾದ ಅತ್ಯಾಚಾರವು ನಡೆಯಿತು. ಅದೇನೆಂದರೆ — ಪಟ್ಟಣದ ಬಳಿಯಲ್ಲಿ ಇಬ್ಬರು ಸಹೋದರರು [illegible] ತಮ್ಮ [illegible] ರಿಕ್ತ ಸ್ಥಿತಿಗೆ [illegible]

[illegible]

ರಾಜಪುಟಾನ ಪ್ರಾಂತಿಕ ಸಭೆ.

ಈ ತಿಂಗಳು 23-24 ನೇ ತಾರೀಖುಗಳಲ್ಲಿ ರಾಜಪುಟಾನ ಪ್ರಾಂತಿಕ ಸಭೆಯು ಅಜ್ಮೀರದಲ್ಲಿ ನಡೆಯುವುದು. [illegible] ಪತ್ರಿಕಾ ಸಂಪಾದಕರಾದ ಮ॥ ರಾ॥ [illegible] ಅಧ್ಯಕ್ಷತೆಯನ್ನು ವಹಿಸುವರು. ಈ ಸಮ್ಮೇಳನಕ್ಕೆ ಮಹಾತ್ಮಾಗಾಂಧಿಯವರು, ಪಂಡಿತ ಮೋತೀಲಾಲ್ ನೆಹರೂರವರೇ ಮೊದಲಾದವರು ಆಹ್ವಾನಿಸಲ್ಪಟ್ಟಿರುವರು.

ಲಕ್ನೋ ವಿಶ್ವವಿದ್ಯಾಲಯ.

ಲಕ್ನೋ ವಿಶ್ವವಿದ್ಯಾಲಯದ ಕಾನ್ವೊಕೇಷನ್ ಮುಂದಿನ ತಿಂಗಳು 1 ನೇ ತಾರೀಖು ನಡೆಯುವುದು. [illegible] ನಡೆಯುವುದರಿಂದ ವಿಶ್ವವಿದ್ಯಾಲಯದ ವರು ಸರ್ ಜಾನ್ ಸೈಮನ್ ಸಮಿತಿಯವರನ್ನು ಕಾನ್ವೊಕೇಷನ್ನಿಗಾಗಿ ಆಹ್ವಾನಿಸಿರುವಂತೆ ತಿಳಿಯಬರುತ್ತೆ.

ವಿದ್ಯಾರ್ಥಿಗಳ ಸತ್ಯಾಗ್ರಹ.

ದಿವಂಗತರಾದ ಹಕೀಂ ಅಜ್ಮಲ್ ಖಾನರವರಿಂದ ದಿಲ್ಲಿಯಲ್ಲಿ ಟಿಬ್ಬಿಯಾ ಕಾಲೇಜೊಂದು ಸ್ಥಾಪಿತವಾಗಿರುವುದು. ಅಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳೆಲ್ಲರೂ ಮಹಮದೀಯರಂತೆ ಹಸುರು ಬಣ್ಣದ ಉಡುಪನ್ನು ಧರಿಸುವಂತೆ ಕಾಲೇಜಿನ ಅಧಿಕಾರಿಗಳು ನಿರ್ಬಂಧ ಮಾಡಿದರು. ಈ ಕಾರಣಕ್ಕಾಗಿ 80 ಜನ ಹಿಂದೂ ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟಿರುವುದಾಗಿ ತಿಳಿಯಬರುತ್ತದೆ.

ಲಕ್ಷ್ಮೀಬಾಯಿ ಝಾನ್ಸಿ.

ಆಕೆಯ ಸ್ಮರಣೆಯು ಈ ತಿಂಗಳು ೧೬ ನೇ ತಾ॥ ರಾಜಮಂಡ್ರಿಯಲ್ಲಿ ಅತಿವೈಭವದಿಂದ ನಡೆಸಲ್ಪಟ್ಟಿತು. ಮ॥ ರಾ॥ ಅನ್ನಪೂರ್ಣಯ್ಯನವರು ಆಕೆಯ ಚರಿತ್ರೆಯ ವಿಷಯವಾಗಿ ಉಪನ್ಯಾಸಮಾಡುವಾಗ

"I shall not give up my Jhansi, "surrender" is not in my dictionary Fight and die on the altar of independence" ನಾನು (ನನ್ನ ಝಾನ್ಸಿಯನ್ನು ಬಿಟ್ಟುಕೊಡುವುದಿಲ್ಲ. "ಶರಣಾಗು" ಎಂಬ ಶಬ್ದವೇ ನನ್ನ ನಿಘಂಟಿನಲ್ಲಿಲ್ಲ. ಸ್ವಾತಂತ್ರ್ಯಕ್ಕಾಗಿ ಕಾದಾಡಿ ಮಡಿಯಬೇಕು) ಎಂದು ಆಕೆಯು ಹೇಳುತ್ತಿದ್ದ ವಿಷಯದ ಮೇಲೆ ಸ್ವಾರಸ್ಯವಾದ ಉಪನ್ಯಾಸಮಾಡಿದರು. ಅನಂತರ ಪ್ರೆಸಿಡೆಂಟರಾಗಿದ್ದ ಮ॥ ಬಿ. ಸಾಂಬಮೂರ್ತಿಯವರು ಝಾನ್ಸಿರಾಣಿಯು ೧೮೫೭ ನೇ ಇಸವಿಯಲ್ಲಿ ಹಿಂದೂದೇಶದ ಸ್ವಾತಂತ್ರ್ಯಸಂಪಾದನೆಗಾಗಿ ನಡೆದ ಯುದ್ಧ [illegible] ಯಾವರೀತಿಯಲ್ಲಿ ಸ್ವಾರ್ಥ [illegible] ಸ್ವಾತಂತ್ರ್ಯ [illegible] ಮೊದಲಾದವುಗಳನ್ನು ಹೇಗೆ ಹುರಿದುಂಬಿಸಿದಳೋ ಎಂಬಿವೇ ಮೊದಲಾದವುಗಳನ್ನು ತಿಳಿಸಿ ಉಪಸಂಹರಿಸಿದರು.

ಪವಿತ್ರ ಸ್ಮರಣೆ

ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಡಾ॥ ಅನ್ಸಾರಿಯವರೂ ಮೌಲಾನ ಅಬ್ದುಲ್‌ಕಲಂ ಆಜಾದ್‌ರವರೂ ಈ ತಿಂಗಳು ೨೯ ನೇ ತಾರೀಖಿನ ದಿವಸ ಲಾಲಾಜಿಯವರ ಸ್ಮರಣೆಗಾಗಿ ಇಂಡಿಯಾದೇಶದ ಎಲ್ಲಾ ಭಾಗಗಳಲ್ಲಿ [illegible] ಭಾರತೀಯರು ತಮ್ಮ ದುಃಖ [illegible] ಪ್ರದರ್ಶಿಸಬೇಕೆಂದು ಇಸ್ತಿಹಾರನ್ನು ಕೊ

ನೂತನ ರಾಮಕೃಷ್ಣಾಶ್ರಮ.

ಈ ತಿಂಗಳು ೧೪ ನೇ ತಾ॥ ಬುಧವಾರ ಸೇಲಂನಲ್ಲಿ ಒಂದು ರಾಮಕೃಷ್ಣಾಶ್ರಮವು ಸ್ಥಾಪಿಸಲ್ಪಟ್ಟಿತು. ಈ ಸ್ಥಾಪನಾಕಾರ್ಯವು ಬೆಂಗಳೂರು ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ನಿರ್ಮಲಾನಂದಜೀಯವರಿಂದ ಜರುಗಿಸಲ್ಪಟ್ಟಿತು. ಇವರ ಸಹಾಯಕ್ಕಾಗಿ ಮಲಯಪೂರ್, ಮದ್ರಾಸ್, ಪೊನ್ನಂಪೇಟೆ, ನೀಲಗಿರಿಯೇ ಮೊದಲಾದ ಎಲ್ಲಾ ಆಶ್ರಮಗಳ ಅಧ್ಯಕ್ಷರೂ ದಯಮಾಡಿಸಿದ್ದರು. ಆ ದಿವಸ ಬೀಕಾರಿಜನರಿಗೆ ಅನ್ನದಾನವೂ, ಭಜನೆಗಳೂ, ಉಪನ್ಯಾಸಗಳೂ ನಡೆದುವು.

ಆಂಧ್ರ ಗಾಯನ ಪರಿಷತ್ತು

ಕಳೆದ ಭಾನುವಾರ ಪ್ರಾತಃಕಾಲ ಆಂಧ್ರಗಾಯನ ಪರಿಷತ್ತು ಮದರಾಸಿನ ಮ॥ ರಾ॥ ಸಿ. ಆರ್. ಶ್ರೀನಿವಾಸಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ನಡೆಸಲ್ಪಟ್ಟಿತು. ಗಾಯನಕ್ಕೆ ಸಂಬಂಧಿಸಿದ ಶೃತಿ, ಸ್ವರ, ಮತ್ತು ವೀಣೆ, ಇವುಗಳ ವಿಷಯವಾಗಿ ಚರ್ಚೆ ನಡೆದು ಕೋಟಿನಾದದ ಮ॥ ರಾ॥ ವಿ. ವರದಾಚಾರ್ಯರು ತಂದ ಕೆಲವು ಠರಾವುಗಳು ಪಾಸಾದವು.

ಅಖಿಲ ಭಾರತ ಗಾಯನ ಸಮ್ಮೇಳನ

ಅಖಿಲ ಭಾರತ ಗಾಯನ ಸಮ್ಮೇಳನದ ಆರನೇ ಅಧಿವೇಶನವು ಮುಂದಿನ ತಿಂಗಳು ೮ ನೇ ತಾ॥ ನಿಂದ ೧೧ ನೇ ತಾ॥ ನ ವರೆಗೆ ಅಲ್ವಾರ್‌ನಲ್ಲಿ ಜರುಗುವುದು. ಈ ಅಧಿವೇಶನದ [illegible] ಶ್ರೀಮಾನ್ ಅಲ್ವಾರ್ ಮಹಾರಾಜರವರಿಂದ ಕೊಡಲ್ಪಟ್ಟಿದೆ.

ಬೆಂಗಳೂರು ಗಲಭೆಗಳು

ಮಂಗಳೂರಿನಲ್ಲಿ ನಡೆದ ಕರ್ಣಾಟಕ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಮೀಟಿಂಗ್‌ನಲ್ಲಿ ಬೆಂಗಳೂರು ಗಲಭೆಗಳ ವಿಷಯವಾಗಿ ಒಂದು ಠರಾವು ಮಾಡಲ್ಪಟ್ಟಿತು. ಆ ಠರಾವು ಏನೆಂದರೆ— ಈ ಸಭೆಯು ಜುಲೈ ೩೦ ನೇ ತಾರೀಖಿನ ದಿವಸ ಬೆಂಗಳೂರಿನಲ್ಲಿ ನಡೆದ ಗಲಭೆಗೆ ಕಾರಣವಾದ ಅಧಿಕಾರಿಗಳ ಅಜಾಗರೂಕತೆಯ [illegible] ನ್ಯಾಯಕ್ಕಾಗಿ ಮುಂದುವರಿದು ನಿಂತಿದ್ದ ಬಾಲಕರಿಗೂ ದೊಡ್ಡವರಿಗೂ ಅನ್ಯಾಯವಾದ ಶಿಕ್ಷೆಯಾದದ್ದಕ್ಕಾಗಿ ವ್ಯಸನವನ್ನು ವ್ಯಕ್ತಪಡಿಸುತ್ತದೆ. ಮೈಸೂರಿನ ಕೆಲವು ಬಾಂಧವರಮೇಲೆ ಸುಳ್ಳಾರೋಪವನ್ನು ಹೊರಿಸಿ ಶಿಕ್ಷೆ ಮಾಡುವ ರೀತಿಯ ಆಪಾದನೆಯನ್ನು ಕೆಲವು ದುರಾತ್ಮರು ಹಾಕುತ್ತಿರುವುದನ್ನು ನೋಡಿ ಅವನ್ನು ಖಂಡಿಸುತ್ತದೆ. ಮೈಸೂರು ಸರ್ಕಾರದವರು ಪತ್ರಿಕೆಗಳ ವಿಷಯವಾಗಿ ಅವಲಂಬಿಸಿರುವ ದುರ್ನೀತಿಯನ್ನು ಖಂಡನೆಮಾಡಿ ಶ್ರೀಮತ್ ಮಹಾರಾಜರವರು ಮೈಸೂರಿನ ಕೀರ್ತಿಗೆ ಬಂದಿರುವ ಕಲಂಕವನ್ನು ತಪ್ಪಿಸಿ ಸತ್ಯಮೇವ ಜಯತೇ [illegible] ಎಂಬ ತಮ್ಮ ಬಿರುದನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಈ ಸಭೆಯು ನಮ್ರತೆಯಿಂದ ಸೂಚಿಸುತ್ತದೆ.

Reg d No. M. 2322 ‖ ವಂದೇ ಮಾತರಂ ‖ ಬಿಡಿಪ್ರತಿ ೩ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೫—೦—೦ ಪಕ್ಷಕ್ಕೆ

ಸಂಪುಟ ೧ [ಸೋಮವಾರ ೨೬ ನವಂಬರ್ [ಸಂಚಿಕೆ ೫೧

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್, ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet
Bangalore City.

2 Koppada Ramakrishniah, Agent, Hassan

3 Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Buildings
Mysore.

5 B V Pundit & Co, Lakshmivilas ...
Mysore.

6 Friends' Union, Mysore.

7 Sweet Mart, Lansdowne Buildings,
Mysore.

TAINADU.

Daily Edition.

The Leading Nationalist Daily of Mysore.

TO LET

Printed and published by P. R. Ramaiya, at Sri Rama Press, D. Subbiah Road Mysore.

ತಾಯಿನಾಡು

26—11—1928

ಮುನಿಸಿಪಲ್ ಮೀಟಿಂಗು

—

ರಾಜಧಾನಿಯ ಮುನಸಿಪಲ್ ಮೀಟಿಂಗು ಈ ಮಾಹೆ 24 ನೇ ಶನಿವಾರ ಪ್ರಾತಃಕಾಲ 8 ಘಂಟೆಗೆ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸುಮಾರು 21 ಜನ ಮೆಂಬರುಗಳೂ ಹೆಲ್ತಾಫೀಸರವರೂ ಮುನಿಸಿಪಲ್ ಇಂಜನಿಯರ್‌ರವರೂ ರೆ|| ಆಫೀಸರರೂ ವೈಸ್ ಪ್ರೆಸಿಡೆಂಟರವರೂ ಮತ್ತು ಅರಮನೆಯ ಕಂಟ್ರೋಲರ್‌ರವರಾದ ಮ|| ಎಂ. ರಾಮರಾಯರವರೂ ಸಹ ದಯಮಾಡಿಸಿದ್ದರು. ಕೆಳಗೆ ಕಂಡ ವಿಷಯಗಳು ಸ್ಯಾಂಕ್ಷನ್ ಮಾಡಲ್ಪಟ್ಟವು—

(1) ಕ್ಷಯರೋಗದ ಆಸ್ಪತ್ರೆಯಲ್ಲಿ ಕೇವಲ ಬಡವರಾದ 20 ಜನ ರೋಗಿಗಳಿಗೆ ದಿನ 1 ಕ್ಕೆ ಅರ್ಧ ಸೇರು ಹಾಲು, 1 ಮೊಟ್ಟೆಯಂತೆ ಸಪ್ಲೆ ಮಾಡುವುದಕ್ಕೆ ಸಾಲಿಯಾನ 1200 ರೂ ಗಳು.

(2) ರವೈಜ್ ಸ್ಕೇಲಿನಂತೆ ಡ್ರಾಫ್ಟ್ಸ್‌ಮನ್ ಕೆ. ವೆಂಕಟೇಶಯ್ಯನವರಿಗೆ 30-5-50 ರೂ ಗಳ ಪ್ರಮೋಷನ್.

3 ಸ್ಯಾನಿಟರಿ ಓವರ್‌ಸೀರಾದ ಎಸ್. ಆರ್. ಸುಬ್ಬರಾಯನ್‌ರವರನ್ನು 1-7-26 ರಿಂದ ಖಾಯಂ ಮಾಡಿ ಆ ಲಾಗಾಯಿತು ಇಂಕ್ರಿಮೆಂಟ್ ಕೊಡುವುದು.

4 ಸ್ಯಾನಿಟರಿ ಇನ್‌ಸ್ಪೆಕ್ಟರ್‌ರವರ ಬಡ್ತಿಯನ್ನು ಸಾಲಿಯಾನ 2 ರೂ ನಿಂದ 5 ರೂ ಗೆ ಹೆಚ್ಚಿಸುವುದು.

5: ಮೋಟಾರ್ ಲಾರಿಗಳ ಕ್ಲೀನರ್‌ಗಳ ಸಂಬಳವನ್ನು 12 ರೂ ನಿಂದ 15 ಕ್ಕೆ ಹೆಚ್ಚಿಸುವುದು.

6 ಮ್ಯಾಜಿಕ್ ಲ್ಯಾಂಟ್ರನ್ ಆಟ ತೋರಿಸತಕ್ಕವರಿಗೆ ಮಾಹೆಯಾನ 5 ರೂ ಗಳ ಅಲೋಯನ್ಸ್ ಕೊಡುವುದು.

7 ಲಷ್ಕರ್ ಮತ್ತು ಮಂಡಿ ಮೊಹಲ್ಲಾಗಳಿಗೆ ಹೆಚ್ಚಾಗಿ ಮೂರು ಗೊಬ್ಬರದ ಗಾಡಿಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದು.

8 ಆರ್. ಕೃಷ್ಣರಾಯರು ತಮಗೆ ಪೂರ್ತಾ ಪೆನ್‌ಷನ್ ದೊರೆಯಲು ತಮ್ಮ ಸರ್ವಿಸ್‌ನ್ನು ಸುಪಿರಿಯರಿಗೆ ವರ್ಗಾಯಿಸಿ ಕೊಡಬೇಕೆಂದು ಕೊಟ್ಟಿದ್ದ ಅರ್ಜಿ

9 ಚೀಫ್ ಸ್ಯಾನಿಟರಿ ಇನ್‌ಸ್ಪೆಕ್ಟರ್‌ರವರಾದ ಮ|| ಎಂ. ಬಸವಲಿಂಗಶೆಟ್ಟರವರ ಸಂಬಳವನ್ನು 100-10-150 ಕ್ಕೆ ಬಡ್ತಿಮಾಡುವುದು.

10 ಟ್ರಸ್ಟ್ ಬೋರ್ಡಿನ ಮ|| ರಾ|| ಸಿ. ಆರ ಕೃಷ್ಣರಾಯರವರಿಗೆ 1928 ನೇ ಜುಲೈ ಲಾಗಾಯಿತು ಮುನಿಸಿಪಲ್ ಕೌನ್ಸಿಲ್ ಮತ್ತು ಟ್ರಸ್ಟ್ ಬೋರ್ಡು ಎರಡರಿಂದ ಒಟ್ಟು ಮಾಹೆಯಾನ 10 ರೂಪಾಯಿಗಳ ಅಲೋಯನ್ಸ್ ಕೊಡುವುದು.

11 ದಸರಾಕ್ಕಾಗಿ ದೇವರಾಜ ಮಾರ್ಕೆಟ್ಟಿನ ಪಾಕಿಟ್ ಮೇಸ್ತ್ರಿ ಹಂಗಾಮಿಯಾಗಿಟ್ಟಿದ್ದ ಶಿಬ್ಬಂದಿಯ

12 2 ನೇ ದರ್ಜೆಯ ಗುಮಾಸ್ತೆಯರ ಸಂಬಳವನ್ನು 30-2-40 ರಿಂದ ರೂ 30-3-45 ಕ್ಕೇರಿಸುವುದು.

13 ಕಾಳಮ್ಮನ ಗುಡಿ ಬೀದಿಗೆ ಸೇರಿದ ಹಾಗಿರುವ ಸವಾಯಿ ಚೌಕದಿಂದ ಜೈಲಿನ ಹಿಂಭಾಗದಲ್ಲಿ ಗೋಡೆಯವರೆಗಿರುವ ರಸ್ತೆಯನ್ನು ರಿಪೇರಿಮಾಡಲು 1060 ರೂ ಗಳು.

13 ದೇವರಾಜ ಮಾರ್ಕೆಟ್ ಮುತ್ಸದ್ದಿಯಾದ ಗುಲಾಮ ಹುಸೇನ್ ಎಂಬುವರು ತಮ್ಮ 1-8-1796 ರಿಂದ 1900 ನೆ ಡಿಸೆಂಬರ್‌ವರೆಗಿನ ಸರ್ವಿಸ್ಸನ್ನು, ಪೂರಾ ಪೆನ್‌ಷನ್ ಪಡೆಯುವ ಸಲುವಾಗಿ ಸುಪೀರಿಯರಾಗಿ ಗಣಿಸಬೇಕಾದ ಅರ್ಜಿ.

14 ಮುನಿಸಿಪಲ್ ಕಪ್ ಎಂಬದಾಗಿ ಒಂದು ಟ್ರೋಫಿಯನ್ನು 200 ರೂಪಾಯಿಗಳ ಬೆಲೆಯಲ್ಲಿ ಏರ್ಪಡಿಸಬೇಕಾಗಿ ಫುಟ್‌ಬಾಲ್ ಅಸೋಸಿಯೇಷನ್ನಿನ ಸೆಕ್ರಟರಿಯವರು ಬರೆದಿದ್ದ ಲೆಟರ್. ಆದಾಯವಾಗಿರುವ ಛತ್ರದ ಫಂಡಿನಿಂದ 1000 ರೂ ಗಳನ್ನು 28-29 ನೇ ಸಾಲ್ ಲಾಗಾಯಿತು 3 ವರ್ಷಗಳ ಕಾಲ ಮೈಸೂರು ವೃದ್ಧಾಶ್ರಮಕ್ಕೆ ಕೊಡತಕ್ಕ ವಿಷಯವಿನ್ನೂ ಮಂಜೂರಾಗಿಲ್ಲ.

—

ವಿವಿಧ ವಿಷಯಗಳು

—

4 ನೇ ಹಿಂದೂ ಫಿಲಸಾಫಿಕಲ್ ಕಾಂಗ್ರೆಸ್.

ಹಿಂದೂ ಫಿಲಸಾಫಿಕಲ್ (ವೇದಾಂತದ) ಕಾಂಗ್ರೆಸ್ಸಿನ ನಾಲ್ಕನೆಯ ಅಧಿವೇಶನವು ಮುಂದಿನ ತಿಂಗಳು 19 ರಿಂದ 21 ರ ವರೆಗೆ ಮೂರು ದಿವಸಗಳು ಮದ್ರಾಸ್ ಟ್ರಿಪ್ಲಿಕೇನಿನಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಜರುಗುವುದು. ಕೊಚಿನ್ ಮಹಾರಾಜರವರಾಗಿದ್ದ ಸರ್. ರಾಮವರ್ಮರವರು ಪ್ರಾರಂಭೋತ್ಸವಕ್ಕೂ, ಬೆನಾರಿಸ್‌ನ ಮಿ|| ಎ. ಬಿ. ಧೃವ ಎಂಬುವರು ಅಧ್ಯಕ್ಷತೆಗೂ ಆಹ್ವಾನಿಸಲ್ಪಟ್ಟಿರುವರು.

ವ್ಯವಸಾಯ ಪ್ರದರ್ಶನ.

ಈ ತಿಂಗಳು 17 ನೇ ತಾ|| ನ ದಿವಸ ಬೊಂಬಾಯಿ ಆಧಿಪತ್ಯದ ದ್ವಿತೀಯ ವ್ಯವಸಾಯ ಪ್ರದರ್ಶನವು ಗೌವರ್‍ನರ್‌ರವರಾದ ಸರ್. ಲೆಸ್ಲಿ ವಿಲ್ ಸನ್‌ರವರಿಂದ ಅಹಮದಾಬಾದಿನಲ್ಲಿ ಪ್ರಾರಂಭಿಸಲ್ಪಟ್ಟಿತು. ವ್ಯವಸಾಯಕ್ಕೆ ಸಂಬಂಧಪಟ್ಟವಸ್ತುಗಳೆಲ್ಲವೂ ಬಹಳ ಚೆನ್ನಾಗಿ ಪ್ರದರ್ಶಿಸಲ್ಪಟ್ಟಿದ್ದುವು.

ನೂತನ ರೈಲ್ವೆ ಪ್ರಾರಂಭೋತ್ಸವ

ಈ ಮಾಹೆ 19 ಮತ್ತು 20 ನೇ ತಾ|| ಗಳಲ್ಲಿ ಮಧುರೆಯಿಂದ ಬೋದಿನಾಯ್ಕನೂರ್ ಮತ್ತು ದಿಂಡಿಗಲ್‌ನಿಂದ ಪೊಲ್ಲಾಚಿ ಈ ಎರಡು ರೈಲ್ವೆ ಲೈನುಗಳ ಪ್ರಾರಂಭೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿದುವು.

ವೈಸ್ [illegible]

ನಮ್ಮ [illegible] ವೈಸ್ [illegible] ರಾದ [illegible] 15 ನೇ ತಾ|| ನಿಂದ 4 ತಿಂಗಳು [illegible] ವನ್ನು ಸರ್ಕಾರದವರು ಮಂಜೂರ್ಮಾಡಿ ಆ ಸ್ಥಳಕ್ಕೆ ರಾಜ ಸಭಾಭೂಷಣ ಕೆ. ಚಾಂಡಿಯವರನ್ನು ನೇಮಿಸಿರುತ್ತಾರೆ. ಇವರು ಈ ತಿಂಗಳು 10 ನೇ ತಾ|| [illegible] ವಹಿಸಿಕೊಂಡರು.

ತತ್ವಜ್ಞಾನ ವಾರ್ಷಿಕೋತ್ಸವ

ಬೆಂಗಳೂರು ತತ್ವಜ್ಞಾನ ಸಂಘದ 53 ನೆಯ ವಾರ್ಷಿಕೋತ್ಸವವು ಕಳೆದ ಶನಿವಾರ ಜರುಗಿತು. ಮಧ್ಯಾಹ್ನ ಸಂಗೀತವೂ ಮ|| ರಾ|| ಗಳಾದ ಆರ್ ಶಂಕರನಾರಾಯಣರಾಯರ ಮತ್ತು ಮೈಸೂರಿನ [illegible] ನವರ ಸ್ವಾರಸ್ಯವಾದ ಉಪನ್ಯಾಸಗಳೂ [illegible] ನಂತರ ಸಭೆಯು ಭಂಗವಾಯಿತು.

ರೈಲ್ವೆಯಾನುಕೂಲ

ಪೂರ್ವ ತೀರದಲ್ಲಿ ಉಂಟಾದ ಪ್ರವಾಹಗಳ ದೆಸೆಯಿಂದ ಕೆಟ್ಟುಹೋಗಿದ್ದ ಮೇಟುಪಾಳ್ಯಂಕೂನೂರು ರೈಲ್ವೆ ಲೈನು ಪುನಃ ಸರಿಪಡಿಸಲ್ಪಟ್ಟಿರುವುದರಿಂದ, ಈ ತಿಂಗಳು 17 ನೇ ತಾ|| ನಿಂದ ರೈಲುಗಳ ಓಡಾಟವು ಆರಂಭವಾಗಿರುತ್ತದೆ.

ನಮ್ಮ ಶ್ರೀಮನ್ಮಹಾರಾಜರವರು ಪಾಶ್ಚಾತ್ಯ ಸಂಚಾರವನ್ನು ಮುಗಿಸಿಕೊಂಡು ರಾಜಧಾನಿಯನ್ನು ತಲುಪಿದ್ದಕ್ಕೆ ಮ|| ರಾ| ವಿ. ಎಸ. ಸಂಜೀವರಾಯರು ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಂತಿಯ ಮುಖೇನ ಕಳುಹಿಸಿಕೊಟ್ಟಿರುವರು.

ಇದೇ ರೀತಿ ಪುದುಕೋಟೆಯ ರಾಜರಾದ ಶ್ರೀಮಾನ್ ರಾಜಗೋಪಾಲ್ ತೊಂಡಮಾನರವರಿಗೂ ಸಹ ಅವರ ರಾಜ್ಯಾಭಿಷೇಕದ ದಿನ ತಮ್ಮ ವಂದನೆಗಳನ್ನು ಕಳುಹಿಸಿರುವರು.

ಚುನಾವಣೆ.

ಬೆನಾರಿಸ್ ಮುನಿಸಿಪಲ್ ಬೋರ್ಡಿನಲ್ಲಿ ನಡೆಯಬೇಕಾಗಿರುವ ಚುನಾವಣೆಗೆ, ಅಲ್ಲಿನ ಟೌನ್ ಕಾಂಗ್ರೆಸ್ [illegible] ಕೂಡದೆಂದು ತೀರ್ಮಾನವಾಗಿರುತ್ತದೆ.

ಮಿ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು.

ಮಿ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಮುಂದಿನ ತಿಂಗಳು ಆಖೈರು ಒಳಗಾಗಿಯಾಗಲಿ ಅಥವಾ ಜನವರಿ ಮೊದಲನೆ ವಾರದಲ್ಲಾಗಲಿ ಇಂಡಿಯಾಕ್ಕೆ ಹಿಂತಿರುಗಿ ಬರುತ್ತಾರೆಂದು ತಿಳಿಯಬರುತ್ತೆ.

ವಿದ್ಯಾರ್ಥಿಗಳ ಬಿಡುಗಡೆ

ಬೆಂಗಳೂರು ಗಲಭೆಗಳ ಸಂಬಂಧದಲ್ಲಿ ಸರ್ಕಾರ[illegible] ಕೆಲವು ವಿದ್ಯಾರ್ಥಿಗಳ ಮೇಲೆ ಮೊಕದ್ದಮೆಯನ್ನು ಹೂಡಿದ್ದದ್ದು ಸರಿಯಷ್ಟೆ. ಆ ಮೊಕದ್ದಮೆಗಳನ್ನೆಲ್ಲಾ ವಾಪಸು ತೆಗೆದುಕೊ[illegible] [illegible] ಸಲ್ಲಿ ಅಪ್ಪಣೆಮಾಡಿದ್ದಾರೆ.

TAI NADU
[illegible]

ಮೈಸೂರಿನ ದೇಶಾಭಿಮಾನ.

[illegible] ಮೈಸೂರಿನಲ್ಲಿ [illegible] ಸಂಸ್ಥಾನದ [illegible] ಪ್ರಜೆಗಳಿಗೆ ಅಸಮಾಧಾನ. ಪ್ರಜೆಗಳ [illegible] ಸ್ವಾತಂತ್ರ್ಯವಾಗಿ ಅಸಮಾಧಾನ. ಪ್ರಜೆಗಳ [illegible] ಇನ್ನೊಂದು [illegible] ಅಸಮಾಧಾನ. ಈ ರೀತಿಯಾಗಿ [illegible] ಈ ಅಸಮಾಧಾನವನ್ನೇ ದುರುಪಯೋಗಪಡಿಸಿಕೊಂಡು ಸಂಸ್ಥಾನದ [illegible] ಸ್ವಾರ್ಥಿಗಳು, ಪ್ರಜೆಗಳ [illegible] ಕೆಲವು ಸ್ವಾರ್ಥ [illegible] ದೇಶದಲ್ಲಿ [illegible] ಗುಲ್ಲೆಬ್ಬಿಸಿ, ನಿರ್ಲಕ್ಷ್ಯದಿಂದ [illegible]

[illegible]

ವರ್ತಮಾನ ಸಂಗ್ರಹ.

[illegible]

ಬೆಂಗಳೂರು [illegible] ಭೀಮರಾಯರು ತಮ್ಮ ಅಂಗಡಿಯ ಮುಂದೆ ಒಂದು ಬೋರ್ಡು ಇಟ್ಟು ಅದರಲ್ಲಿ [illegible] ವಿಷಯಗಳನ್ನು ಪ್ರಕಟಿಸುತ್ತಿದ್ದರು. ಈ [illegible] ಗಲಭೆಯ [illegible] ಇತರ ಪತ್ರಿಕೆಗಳಂತೆ ನಿಲ್ಲಿಸಲ್ಪಟ್ಟಿತು. ಪ್ರಕೃತ ಆ ಬೋರ್ಡಿನಿಂದ ಜನರ ಶಾಂತಿಗೆ ಭಂಗವಾಗುತ್ತೆಂದು ಬೆಂಗಳೂರು ತಾ|| ಮತ್ತು ಡಿಸ್ಟ್ರಿಕ್ಟ್ ಪೋಲೀಸ್ [illegible] ತಿಳಿಸಲ್ಪಟ್ಟಿತು. ಇದಕ್ಕಾಗಿ ಈ ನವೆಂಬರ್ 30 ನೇ ತಾ. [illegible] 2 30 ಗಂಟೆಗೆ [illegible] ಹಾಜರಾಗಿ [illegible] (ಪೋ|| [illegible] ಪ್ರಕಾರ [illegible]) [illegible] ಕೆಂದು [illegible] ರಿಂದ [illegible]

[illegible]

ರಾಜಧಾನಿಯ [illegible] ಈ ನವೆಂಬರ್ [illegible] ನೇ ತಾ [illegible]

[illegible]

ಈ ತಿಂಗಳು [illegible] ನೇ ತಾ| [illegible] ಬೆಂಗಳೂರು [illegible]

[illegible]

ಧರ್ಮಕಾರ್ಯ [illegible]

[illegible] ಗ್ರಾಮದಲ್ಲಿ [illegible] ಕಂಪಿಸುವ [illegible] ವಸತಿಗೋಸ್ಕರ [illegible] ಆ ಗ್ರಾಮದ ಮ|| ರಾ| [illegible] ಪ್ಪನವರು ಸಿದ್ದೇಗೌಡನ ಕಟ್ಟೆಯ ದುರಸ್ತಿಗೆ 300 ರೂ ಗಳನ್ನೂ ಸಿಹಿನೀರಿನ ಭಾವಿಗೆ 400 ರೂಪಾಯಿಗಳನ್ನೂ ಮ|| ರಾ|| ಮೆಂಬರು ಬಸಪ್ಪಯ್ಯನವರು [illegible] ಭಾವಿಯ [illegible] 500 ರೂಗಳನ್ನೂ [illegible] ರಾ|| ದೊಡ್ಡಲಿಂಗಪ್ಪನವರು [illegible] ದುರಸ್ತಿಗೆ 500 ರೂಗಳನ್ನೂ ಶ್ರೀಮತಿ [illegible] ಸ್ವಂತ [illegible] ದೇವಸ್ಥಾನ [illegible] 150 ರೂಗಳನ್ನೂ ಸಹಾಯ ಮಾಡಿರುತ್ತಾರೆ.

ಲಾಲಾಜಿಯವರ ಸ್ಮಾರಕ ದಿನ

ಇದೇ ತಿಂಗಳು ೨೭ ನೇ ತಾ|| ದಿನ ವನ್ನ ದಿವಂಗತರಾದ ಲಾಲಾ ಲಜಪತಿರಾಯರವರ ಸ್ಮರಣ ದಿನವಾಗಿ ಆಚರಿಸಬೇಕು. ಆದಿನ ಇಡೀ ಹಿಂದೂದೇಶದಲ್ಲೆಲ್ಲಾ ಅವರ ಜ್ಞಾಪಕವಾಗಿ ಉಪನ್ಯಾಸಗಳು ನಡೆಯಬೇಕು [illegible] (ಜ್ಞಾಪಕಾರ್ಥವಾಗಿ) ಎಲ್ಲಾ ಕಡೆಯಲ್ಲೂ ಚಂದಾ ವಸೂಲಾಗಬೇಕು. ಈ ಕಾರ್ಯಗಳಿಗಾಗಿ ದೇಶಾಭಿಮಾನಿಗಳೆಲ್ಲರೂ ಸವ [illegible] ಎಂದು [illegible] ಪಂಡಿತ [illegible] ಪ್ರಚಾರಕ್ಕೆ [illegible]

ಸೈಮನ್ ಕಮಿಷನ್

ಈ ತಿಂಗಳು 21 ನೇ ತಾರೀಖಿನಲ್ಲಿ ಸೈಮನ್ ಕಮಿಷನವರು [illegible] ಅಗ [illegible]

[illegible]

[illegible] ಬ್ಯಾಗ [illegible] ರೈಲು [illegible] ದೂರ [illegible] ಕಳ್ಳನು [illegible] ಕೈಗೆ ಸಿಕ್ಕಿಬಿದ್ದನು. ಬ್ಯಾಗು [illegible] 379 [illegible]

Regd No. M. 2322 ‖ ವಂದೇಮಾತರಂ ‖ ಬಿಡಿ ಪ್ರತಿ ೩ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೯—೦—೦

ಸಂಪುಟ ೩ [ಮಂಗಳವಾರ ೨೭ ನವಂಬರ್ [ಸಂಚಿಕೆ ೬೩

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ).

ವಂದೇಮಾತರಂ ಆಫೀಸು ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City

2 Koppada Ramakrishnaiah, Agent, Hassan.

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Buildings Mysore.

5 B V Pundit & Co, Lakshmivilas Road Mysore.

6 Friends' Union, Mysore.

7 Sweet Mart, Lansdowne Buildings, Mysore.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya.
to Sri Rama Press, D. Subbiah Road, Mysore

ತಾಯಿನಾಡು

27—11—1928

ಸಂತೋಷದ ಸಂಗತಿ

ವಿದ್ಯಾರ್ಥಿಗಳಮೇಲೆ ಇದ್ದ ಮೊಕದ್ದಮೆಯನ್ನು ಸರ್ಕಾರದವರು ವಾಪ್ಸು ತೆಗೆದುಕೊಂಡತಕ್ಕ ವಿಷಯವು ಸಂತೋಷಕರವಾದುದು. ಅದರಲ್ಲಿ ಏನೂ ಸಂಶಯವಿಲ್ಲ. ಇದರ ಜೊತೆಗೆ ಇನ್ನೊಂದು ಸಮಾಚಾರವೂ ಹೊರಟಿರುವುದು. ಡಿಸ್‌ಮಿಸ್ ಆದ 6 ಬಡ ಉಪಾಧ್ಯಾಯರನ್ನೂ ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಸರ್ಕಾರದವರು ಮಾಡುವರೆಂಬ ಸಮಾಚಾರವು ಜನಜನಿತವಾಗಿರುವುದು. ಇದು ನಿಜವಾದ ಪಕ್ಷದಲ್ಲಿ ಸರ್ಕಾರದವರು ನಮ್ಮೆಲ್ಲರ ಕೃತಜ್ಞತೆಗೂ ಪಾತ್ರರು. ಆದರೆ ಮತ್ತೊಂದು ಸಂಗತಿಯನ್ನು ಸ್ಪಷ್ಟಪಡಿಸಬೇಕಾಗುವುದು. ಮಿಸ್ಟರ್ ಪ್ರಪ ದಂಡವು ಮಿಸ್ಟರನ್ನು ನಿಗ್ರಹಿಸಲೇ ಬೇಕು. ಇದಕ್ಕೆ ಅಪ್ಪೋಷವು ಬಂದಲ್ಲಿ ನ್ಯಾಯ ದೇವತೆಯು ಸುಪ್ರೀತಳಾಗ ವುದಿಲ್ಲ. ಮ|| ರಾ| ನಾರಾಯಣರು ದಾಖಲ್ಮಾಡಿರುವ ಕೇಸುಗಳಲ್ಲಿ ಮುಖ್ಯ ಸೂತ್ರಧಾರಿಗಳವರನ್ನು ಸೇರಿಸಿಯೇ ಇಲ್ಲ. ಇದನ್ನು ನೋಡಿ ಜನಗಳ ಮನಸ್ಸಿಗೆ ಬಹಳ ಅಸಮಾಧಾನವಾಗಿರುವುದು. ಆ ಸೂತ್ರಧಾರರು ಯಾರು, ಏನು, ಎಂಬುದನ್ನು ಈಗ ನಾವು ಒಡೆದು ಹೇಳಬೇಕಾಗಿಲ್ಲ ಅವು ಎಲ್ಲರಿಗೂ ಗೊತ್ತಿರುವ ಸಂಗತಿಗಳೇ ಆಗಿವೆ. ಇಲ್ಲದಸಲ್ಲದ ವ್ಯಾಜ್ಯಗಳಿಂದ ತಪ್ಪಿತಸ್ಥರನ್ನು ನ್ಯಾಯಪಾಶಕ್ಕೆ ಕಟ್ಟುವ ಕರ್ತವ್ಯವನ್ನು ಮಾಡದೆ ಹೋದರೆ ಈಗಿನ ಸರ್ಕಾರದವರಿಗೆ ಸೂರ್ಯಚಂದ್ರರಿರುವವರೆಗೂ ಕೆಟ್ಟ ಹೆಸರು ತಪ್ಪುವುದಿಲ್ಲ. ಕೆಟ್ಟ ಹೆಸರೇ ಅಲ್ಲ. ದುಷ್ಟರು ಸ್ವೇಚ್ಛೆಯಾಗಿ ಹಾವಳಿಗೆ ಉಪಕ್ರಮಿಸುವರು. ರಾಜ್ಯದ ಬಿಗಿಯು ತಪ್ಪುವುದು. ಅನಾಯಕತ್ವವು ತಲೆದೋರುವುದು. ಆದುದರಿಂದ ನಮ್ಮ ಪ್ರಾರ್ಥನೆಯೇನೆಂದರೆ ಧರ್ಮಸಂಸ್ಥಾಪನೆಯ ಭಾರವನ್ನು ಹೊತ್ತಿರುವ ಸರ್ಕಾರದವರು ದುಷ್ಟನಿಗ್ರಹಕಾರ್ಯದಲ್ಲಿ ಅತ್ಯಂತ ತೀವ್ರರಾದ ಹೊರತು ತಮ್ಮ ಧರ್ಮವನ್ನು ಉಳಿಸಿಕೊಳ್ಳಲಾರರು. ಶಾಂತಿಯನ್ನೂ ಸ್ಥಾಪಿಸಲಾರರು. ಈ ವಿಷಯವನ್ನು ನಮ್ಮ ಸರ್ಕಾರದವರು ಚೆನ್ನಾಗಿ ನೆನಪಿನಲ್ಲಿ ಇಡಲಿ.

ವಿಮಾನ ಪ್ರಯಾಣ.

ಪೂನಾಪಟ್ಟಣದ ಮಿಸ್. ಬೋರ್ಷೆಡ್ ಅಸ್ಪೆಂಡಿಯಾರ್ ಇರಾನಿ ಎಂಬ ಸ್ತ್ರೀಯು ಆಕಾಶಯಾನದಲ್ಲಿ ಕುಳಿತು ಪರ್ಷಿಯಾ ದೇಶಕ್ಕೆ ಹೋಗಿ ಟೆಹರಾನ್, ಬುಷೈ ಮಾರ್ಗವಾಗಿ ಇಂಡಿಯಾದೇಶಕ್ಕೆ ಹಿಂದಿರುಗಿ ಬಂದಿರುತ್ತಾಳೆ. ವಿಮಾನದಲ್ಲಿ ಕುಳಿತು ಸಂಚರಿಸಿದ ಭಾರತ ಸ್ತ್ರೀಯರಲ್ಲಿ ಈಕೆಯೇ ಮೊದಲನೆಯವಳು.

ತಾಲ್ಲೋಕು ವರ್ತಮಾನ

ನಂಜನಗೂಡು

(ನಮ್ಮ ಬಾತ್ಮೀದಾರರಿಂದ)

ನಂಜನಗೂಡಿನಲ್ಲಿ ವಿದ್ಯುಚ್ಛಕ್ತಿಯು ಹರಿಯಲಾರಂಭಿಸುವುದು. ವಿದ್ಯುದ್ದೀಪಮಾಲೆಗಳು ರಾಜಿಸುತ್ತಿರುತ್ತವೆ. ದೇವಸ್ಥಾನದ ಗೋಪುರಕ್ಕೂ, ದೇವಸ್ಥಾನದ ಒಳಗೂ, ದೀಪವು ಹಾಕಲ್ಪಡುವುದು. ಶ್ರೀಕಂಠಪುರಿಯಲ್ಲಿಯೂ, ಕೆಲಸವು ನಡೆಯುತ್ತಿರುವುದು.

ಈ ತಿಂಗಳು 25 ನೇ ತಾರೀಖು ಪ್ರಾತಃಕಾಲ ಮುನಿಸಿಪಾಲಿಟಿ ಮೀಟಿಂಗ್ ನಡೆಯಿತು. ಲಾಲಾ ಲಜಪತರಾಯರವರ ಅಕಾಲ ಮರಣದ ವಿಷಯವಾಗಿ ಸಂತಾಪವು ಸೂಚಿಸಲ್ಪಟ್ಟಿತು. ಇಲ್ಲಿಂದ ಬೆಂಗಳೂರಿಗೆ ವರ್ಗವಾದ ಡಾಕ್ಟರ್ ಬಿಳಿಗಿರಿ ರಂಗೈಯ್ಯಂಗಾರ್ಯರು ನಂಜನಗೂಡಿನ ಪ್ರಜೆಗಳಿಗೆ ಮಾಡಿದ ಸೇವೆಗಾಗಿ ಕೃತಜ್ಞತೆಯು ಅರ್ಪಿಸಲ್ಪಟ್ಟಿತು. ಆ ದಿನ ಮಧ್ಯಾಹ್ನ ನಂಜನಗೂಡು ಟೆನ್ನಿಸ್ ಕ್ಲಬ್ಬಿನವರು ಮ|| ಬಿ. ವಿ. ಪಂಡಿತರ ಸದ್ವೈದ್ಯಶಾಲೆಯಲ್ಲಿ ಡಾ|| ಬಿಳಿಗಿರಿ ರಂಗಯ್ಯಂಗಾರಿಗೆ ಭೋಜನಾತಿಥ್ಯವನ್ನು ಮಾಡಿದರು. ಅದೇ ಸಾಯಂಕಾಲ ಮಿಡಲ್ ಸ್ಕೂಲ್ ಹಾಲಿನಲ್ಲಿ ಪುರಜನಗಳೆಲ್ಲರೂ ಸೇರಿ ಸಂಗೀತ ಭಾಷಣ ಮೊದಲಾದುವುಗಳೊಡನೆ ಮ|| ಐಯ್ಯಂಗಾರ್ಯರವರನ್ನು ಗೌರವಿಸಿದರು. ಮ|| ಸಬ್‌ಡಿವಿಜನ್ ಆಫೀಸರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯು ಮುಗಿದಮೇಲೆ ವಾದ್ಯದೊಡನೆ ಮೆರವಣಿಗೆ ಮಾಡಿಕೊಂಡು ಪಟ್ಟಣಿಗರೆಲ್ಲರೂ ಮ|| ಐಯ್ಯಂಗಾರ್ಯರವರನ್ನು ಅವರ ಮನೆಗೆ ಕರೆದುಕೊಂಡು ಹೋಗಿಬಿಟ್ಟರು.

ಚಾಮರಾಜನಗರ

(ನಮ್ಮ ಬಾತ್ಮೀದಾರರಿಂದ.)

ಈ ತಿಂಗಳು 24 ನೇ ತಾರೀಖು ಶನಿವಾರ ಮುನಿಸಿಪಲ್ ಚುನಾವಣೆಯು ನಡೆಯಿತು. ಮಧ್ಯಾಹ್ನ 11 ರಿಂದ 5 ರ ವರೆಗೆ ಓಟುಗಳು ನಡೆದವು. ಒಟ್ಟು ಸುಮಾರು 480 ಓಟರುಗಳ ಪೈಕಿ ಸುಮಾರು 380 ಜನರು ಓಟನ್ನು ಮಾಡಿದರು. 8 ಜಾಗಗಳಿಗೆ 11 ಜನರು ನಿಂತಿದ್ದರು. ಇವುಗಳಲ್ಲಿ ಜಯಶೀಲರಾದವರ ಹೆಸರುಗಳು.

1 ಮ|| ರಾ|| ವೆಂಕಟನಾಗಪ್ಪಶೆಟ್ಟರು. 2 ಚೌಡಯ್ಯಶೆಟ್ಟರು. 3 [illegible] 4 C. D. ನಾರಾಯಣರಾಯರು. 5 ಉಮರ್ ಸಾಹೇಬರು. 6 ದೊರೆಸ್ವಾಮೈಯ್ಯಂಗಾರ್ಯರು. 7 ಗುಲಾಂ ದಸ್ತಗಿರಿ ಸಾಹೇಬರು. 8 ವೆಂಕಟಸುಬ್ಬಶೆಟ್ಟರು. ಮ|| ರಾ|| ವೆಂಕಟನಾಗಪ್ಪಶೆಟ್ಟರು ಪ್ರಥಮಸ್ಥಾನವನ್ನು ಹೊಂದಿದರು. ಚುನಾವಣೆಯು ಶಾಂತವಾಗಿ ನಡೆಯಿತು.

ಬೆಂಗಳೂರು ಮ್ಯುನಿಸಿಪಾಲಿಟಿ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಮಿ|| [illegible] ಯ್ಯನವರನ್ನೇ ಅಧ್ಯಕ್ಷರಾಗಿರುವಂತೆ ಸರ್ಕಾರದವರು ನೇಮಿಸಿರುತ್ತಾರೆ. ಇದರಿಂದ ಬೆಂಗಳೂರು ಮ್ಯುನಿಸಿಪಾಲಿಟಿಗೆ ತನ್ನ ಸ್ವಂತ ಅಧ್ಯಕ್ಷರನ್ನು [illegible] ಹಕ್ಕು ಹೋಗಿಬಿಟ್ಟಿದೆ.

[illegible]

50 ವರ್ಷ ವಯಸ್ಸಾದವರು ಇನ್ನು ಹಿಂದೀ ರಾಜಕೀಯ ವಿಚಾರಗಳಲ್ಲಿ ಮುಂದಾಗದೇ ಯುವಕರೇ ಮುಂದಾಳುಗಳಾಗಬೇಕೆಂದು ಶ್ರೀ ಶ್ರೀನಿವಾಸಯ್ಯಂಗಾರ್ಯರು ಬೊಂಬಾಯಿ [illegible] ದರೆಂದು ತಿಳಿದು ಬರುತ್ತದೆ.

ಪೋಲೀಸ್ [illegible]

ನಮ್ಮ ಸಂಸ್ಥಾನದ ಪೋಲೀಸ್ [illegible] ಪುನರ್ವ್ಯವಸ್ಥಾಪಿಸುವ [illegible] ರರ ಕಾರ್ಯದಕ್ಷತೆ [illegible] ದು ಮಸೂದೆಯನ್ನೇರ್ಪಡಿಸಿ ಪೋಲೀಸ್ [illegible] ಮರಾದ ಮ|| [illegible] ಗೌರ್ನಮೆಂಟಿಗೆ [illegible] ಕೇಳುತ್ತೇವೆ.

ಉಪನ್ಯಾಸ

ಮೈಸೂರು ಮಹಾರಾಜರವರ ಕಾಲೇಜಿನ [illegible] ಸರರೂ ಮತ್ತು ಶಾಸನಸಭೆ [illegible] ರೂ ಆದ ಡಾಕ್ಟರ್ [illegible] ವರು ಈ ತಿಂಗಳು 29, 30 ನೇ [illegible] ಬಿನಲ್ಲಿ "ಚಂದ್ರಪಕ್ಷಿಯ [illegible]" ವಿಷಯವಾಗಿ ಚಿತ್ರಗಳ ಸಮೇತ ಉಪನ್ಯಾಸ [illegible]

ಕನ್ಯಾಪಹಾರ [illegible]

ಮೈಸೂರು ಡಿ|| ಕೃಷ್ಣರಾಜಪೇಟೆ ತಾಲ್ಲೂಕು [illegible] ಸಾರಂಗಿ ಎಂಬ ಗ್ರಾಮದಲ್ಲಿರುವ [illegible] ಗೌಡ ಎಂಬುವನಿಗೆ ಐ. ಪಿ. ಸಿ. 36ರ ನೇ ಪ್ರಕರಣದಂತೆ [illegible] ಜಡ್ಜರವರು ಈ ತಿಂಗಳು 17 ನೇ [illegible] ವರ್ಷ ಕಠಿಣ ಸಜವನ್ನು ವಿಧಿಸಿದರು. ಅಪರಾಧಿಯು ತನ್ನ ಅಕ್ಕನ ಮಗಳಾದ ದೇವಿ ಎಂಬ 10 ವಯಸ್ಸಿನ [illegible] ಅಪಹರಿಸಿಕೊಂಡು ಹೋಗಿ ಮದುವೆಮಾಡಿಕೊಂಡ ಪ್ರಯತ್ನಕ್ಕಿದ್ದೇ ಶಿಕ್ಷೆ ಹೊಂದಲು ಕಾರಣವಾಯಿತು.

ಪ್ರಪಂಚದ [illegible]

ಮುಂದಿನ ಗುರುವಾರ ಪ್ರಪಂಚದಲ್ಲೆಲ್ಲಾ ಅತ್ಯಂತ ಸುಂದರವಾದ [illegible] ಮತ್ತು [illegible] ಮಾರ್ಕೆಟ್ಟು [illegible] ಗ್ಲಂಡಿನ [illegible] ರಂಭಿಸಲ್ಪಡುವುದು. [illegible] ಗಳ [illegible] ಹೆಟ್ಟಿನ ಅಂಗಡಿಗಳವರ ವಾಸಕ್ಕಾಗಿ ಹತ್ತುಮರೆ ಎಕರೆಯಷ್ಟು ಭೂಮಿಯಲ್ಲಿ ಹೊಸದಾಗಿ ಮನೆಗಳು ಕಟ್ಟಲ್ಪಟ್ಟಿವೆ [illegible] ಗಿದೆ.

TAI NADU
27-11-1928.

ದುರದೃಷ್ಟವಾದ ಮೈಸೂರು

[illegible] ಮೈಸೂರು ಸಂಸ್ಥಾನವು ಮಾದರೀ ಸಂಸ್ಥಾನವೆಂದೂ ರಾಮರಾಜ್ಯವೆಂದೂ ಮೊದಲು ಎಷ್ಟು ಖ್ಯಾತಿ ಯನ್ನು ಪಡೆದಿತ್ತೊ ಈಗ ಅಷ್ಟು ಕೆಟ್ಟ ಹೆಸರನ್ನು ಪಡೆದಿದೆ [illegible] ಲಾರ್ಡ್ ಇರ್ವಿನ್ ಲಾರ್ಡ್ ಲಿಟನ್ [illegible] ರಾಷ್ಟ್ರ ಮುಖಂಡರುಗಳಾದ ಮಹಾತ್ಮಾ ಗಾಂಧಿಯವರೂ ಪಂಡಿತ ಮದನಮೋಹನ ಮಾಳವೀಯರವರೂ ಪಂಡಿತ ಮೋತೀಲಾಲ್ ನೆಹರೂರವರೂ ಸಹ ಸಂಸ್ಥಾನವನ್ನು [illegible] ಹೊಗಳಿದ್ದಾರೆ [illegible] 1921 ರಿಂದ [illegible] ಕೀರ್ತಿ [illegible] ರಾಜ್ಯವಾಗಿ [illegible] ಸರ್ಕಾರವು [illegible] ಆದರೆ ಈಗ [illegible] ಸರ್ಕಾರದಿಂದ [illegible] ನಮ್ಮ ಸಂಸ್ಥಾನದ [illegible] ಕಾರಣವೇನು? [illegible] ನೇ ಇಸವಿಯಲ್ಲಿ [illegible] ಸಂಸ್ಥಾನವು [illegible] [illegible] 1928 ನೇ ಇಸವಿ [illegible]

[illegible] ಕಳೆದ ಎರಡು ವರ್ಷಗಳಿಂದ ಹಲವು [illegible] ಬಾಲಕರು [illegible] ರಾಗಿ ಸವಕ್ತ್ರಿಯಿಂದ ಗಣೇಶನನ್ನು [illegible]

[illegible] 30 ನೇ ತಾ|| ರಾತ್ರಿ ದುರ್ಘಟನೆಯು ನಡೆದು ದನ್ನು [illegible] ಇದೇ ರಾಜ್ಯದಲ್ಲಿ [illegible]

[illegible] ಈ ಮಹಾಘೂತವೇ [illegible] ಮೈಸೂರಿನ [illegible] ಚಿತ್ರಲ್ಲಿ [illegible] ನಮ್ಮ ರಾಜ್ಯದಲ್ಲಿ ಇದನ್ನು [illegible] ಈ ಮಹಾಘೂತವನ್ನು [illegible] ಸರ್ಕಾರ [illegible] ಒಂದು ಸಂಗತಿ [illegible] ಸಂಗತಿಯನ್ನೇ [illegible] ದೇಶ [illegible] ಎಂಬುವೇ

[illegible] ಬೆಳೆದ ಪೈರುಗಳ ನಾಶವನ್ನೇ ಉಪಯೋಗಿಸುತ್ತಿರುವರು. ಇವರನ್ನು [illegible] ನಾಲಿದೆ ಮನು [illegible] ಶಾಸ್ತ್ರವನ್ನೇ [illegible] ತಿರಸ್ಕರಿಸಿ [illegible] ರು. ಈ ಅಲ್ಪಸಂಖ್ಯಾತ ಪಂಗಡದವರನೇಕರು ಸರ್ಕಾರ ನೌಕರಿಯಲ್ಲಿದ್ದುಕೊಂಡು ದೇಶಭಕ್ತಿ, ರಾಜ ಭಕ್ತಿ ವಿಶ್ವಾಸಗಳಿಂದ ಕೆಲಸ ಮಾಡುತ್ತಿದ್ದರೂ ಅವರಿಗೆ ನಿ [illegible] ತಪ್ಪಿಲ್ಲ. ಈ ರೀತಿಯಾದ ಅಸೂಯೆಯೂ ತಿರಸ್ಕಾರವೂ ಎಷ್ಟು ದಿವಸ ನಡೆಯುವುದೋ ನೋಡಬೇಕು. ಆಡಳಿತ ಸೂತ್ರವನ್ನು ಕೈಯಲ್ಲಿ ಹಿಡಿದಿರುವ ಸರ್ಕಾರ್ದದವರು ಏತಕ್ಕೆ ಇದೆಲ್ಲವನ್ನೂ ನೋಡುತ್ತ ಸುಮ್ಮನಿರುವರು? ಆಡಳಿತ ಸೂತ್ರದಾರರಿಗೆ ಈ ನಿಂದೆಯು ಒಪ್ಪಿಗೆಯೋ? ಅವರ ಪ್ರೇರಣೆಯಿಂದಲೇ ಇದು ನಡೆಯುತ್ತಿದೆಯೋ? ಅವರ ಬೆಂಬಲವು ಇದಕ್ಕಿದೆಯೋ? ಈ ಪ್ರಶ್ನೆಗಳು ಸಹಜವಾಗಿ ಉತ್ಪನ್ನವಾಗುವವು. ಆ [illegible] ಶಾಂತಿಯನ್ನುಂಟುಮಾಡುವದಕ್ಕಾಗಿ ಈ [illegible] ನಡೆಯುತ್ತಿದೆ [illegible] ಇದರಿಂದ ರಾಜ್ಯಕ್ಕೆ [illegible] ಕೆಲವು ಪತ್ರಿಕೆಗಳು ಸರ್ಕಾರದ ಆಡಳಿತವನ್ನೂ ಆಡಳಿತಗಾರರನ್ನೂ [illegible] ಅದೇ ಮಹಾ ಪಾಪ [illegible] ಒಂದು ಜಾತಿಗೆ ಜಾತಿಯನ್ನೇ ತುಚ್ಛವಾಗಿ [illegible] ಪ್ರಚಾರವನ್ನು ನಡೆಸಿದರೆ ಅದು ಸಹ್ಯವೇನು? [illegible] ರಾಜ್ಯದಲ್ಲಿಯೂ [illegible] ದೇಶದಲ್ಲಿಯೂ [illegible] ಜಾತಿನಿಂದೆಯು ನಡೆಯುತ್ತಿಲ್ಲ. ಆದರೆ ನಮ್ಮ ಮೈಸೂರಿನಲ್ಲಿ ಮಾತ್ರ ಇದಕ್ಕೆ ಅಡ್ಡಿಯೇ ಇಲ್ಲ.

ಈ ಜಾತಿದ್ವೇಷದ ಪ್ರಚಾರಕರಿಗೆ ಎಲ್ಲೂ ಸಲ್ಲದ ಪ್ರೋತ್ಸಾಹಗಳು ಮತ್ತು ಸಂಭಾವನೆಗಳು. ಇದೇ ಈಗಿನ ಆಡಳಿತದ ನೀತಿಯ ರೀತಿ. ಯಾವ ಆಡಳಿತದಲ್ಲಿ [illegible] ಅನ್ಯೋನ್ಯತೆಯು [illegible] ಪ್ರತಿಬಂಧಕಗಳು [illegible] ಆ ಆಡಳಿತದಿಂದ ಸಂಸ್ಥಾನದ ಕೀರ್ತಿಗೆ ಭಂಗಬರದೆ [illegible] ನಮ್ಮ ಸರ್ಕಾರದವರು ಈ ಜಾತಿದ್ವೇಷಾನಲವನ್ನು ಒಂದೇಸಾರಿ ಆರಿಸಿದಹೊಂತು ನಮ್ಮ ದೇಶದಲ್ಲಿ ಶಾಂತಿಯು [illegible] ಈಗಿನ ವೈಸರಾಯರವರಾದ ಲಾರ್ಡ್ ಅರ್ವಿನ್‌ರವರು ತಾವು ರಾಜ್ಯಾಡಳಿತವನ್ನು [illegible] ಶಾಂತಿಯೋ [illegible] ಜಾತಿದ್ವೇಷವನ್ನು ಸ್ವಲ್ಪಸ್ವಲ್ಪವಾಗಿ [illegible] ನಮ್ಮ ಮೈಸೂರಿನಲ್ಲಿಯೂ ಈಗಿನ ಸರ್ಕಾರದ [illegible] ರೀತಿಯನ್ನೇ ಅನುಸರಿಸಿದರೆ ನಮ್ಮ [illegible] ಶಾಂತಿಯು [illegible] ಆದ [illegible] ನಮ್ಮ ಸಂಸ್ಥಾನದಲ್ಲಿ [illegible] ತಮ್ಮ ಜೀವನದ [illegible] ಅಲ್ಪಸಂಖ್ಯಾತರಾದ ಒಂದು ಪಂಗಡದವರನ್ನು [illegible] ಪ್ರಯತ್ನವನ್ನು [illegible] ಅಲ್ಪಸಂಖ್ಯಾತರಿಗೆ ನಮ್ಮ ಬೋಧೆ [illegible] ಇವರು ತಮ್ಮ ಸತ್ವವನ್ನು [illegible] ವಸಿಷ್ಠರಂತೆ ಸ್ಥಿರಚಿತ್ತರಾಗಿ ಆತ್ಮಶಕ್ತಿಯಿಂದ ಪಶು ಶಕ್ತಿಯನ್ನು ಎದುರಿಸಲಿ.

ಇರುವೆಗಳ ಸಂಗೀತ.

ಬರ್ಲಿನ್‌ನಲ್ಲಿ ಇರುವೆಗಳು ವೀಣೆಯನ್ನು ಬಾರಿಸಿಕೊಂಡು ಸಂಗೀತವನ್ನು ಹಾಡುತ್ತವೆಂದೂ ಇದನ್ನು ಡಾ|| ರಾಬರ್ಟ್ ಸ್ಪೇಗರ್‌ರವರು ಕಂಡುಹಿಡಿದಿರುವರೆಂದೂ ಸಂಡೇ ಕ್ರಾನಿಕಲ್ ಪತ್ರಿಕೆಯು ತಿಳಿಸುತ್ತದೆ.

ವರ್ತಮಾನ ಸಂಗ್ರಹ.

ತಿಪಟೂರ್ ಹೈಸ್ಕೂಲ್ ಡೆ

ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್‌ರವರಾದ ಎನ್. ಎಸ್. ಸುಬ್ಬರಾವ್ ಎಂ. ಎ. ಬಾರ್ ಅಟ್‌ಲಾ ರವರ ಅಧ್ಯಕ್ಷತೆಯಲ್ಲಿ ತಿಪಟೂರು ಹೈಸ್ಕೂಲಿನ [illegible] ಯ ವಾರ್ಷಿಕೋತ್ಸವವು ಮುಂದಿನ ಡಿಸೆಂಬರ್ ಮಾಹೆ 13 ನೇ ತಾ|| ಗುರುವಾರದ ದಿವಸ ನಡೆಯುವುದು.

ಸ್ಕೂಲಿನಲ್ಲಿ ಹಿಂದೆ ವ್ಯಾಸಂಗಮಾಡುತ್ತಿದ್ದ ವಿದ್ಯಾರ್ಥಿಗಳೂ ಆಶ್ರಯದಾತರೂ ಈ ಕೆಲಸಕ್ಕೆ [illegible] ಉದಾರವಾದ ಚಂದಾವನ್ನು ಖಜಾಂಚಿಯವರಾದ ಮ|| ರಾ|| ಜಿ. ವಿ. ಸೂರ್ಯನಾರಾಯಣ ಬಿ. ಎಸ್. ಸಿ. ಬಿ. ಟಿ. ಎಂಬುವರಿಗೆ ಸಕಾಲದಲ್ಲಿ ತಲಪುವಂತೆ ಕಳುಹಿ ಕೊಡಬೇಕಾಗಿ ಅಲ್ಲಿನ ಕಾರ್ಯದರ್ಶಿಯವರು ಕೋರಿರುತ್ತಾರೆ.

ವೈಸರಾಯ್‌ರವರು

ರಂಗೂನಿನಿಂದ ವೈಸರಾಯ್‌ರವರು ದಿವಂಗತರಾದ ಲಾಲಾಜಿಯವರ ವಿಷಯದಲ್ಲಿ ಅವರ ಮಕ್ಕಳಾದ ಅಮೃತರಾಯಿರವರಿಗೆ ದುಃಖಸೂಚಕದ ವರ್ತಮಾನವನ್ನು ಕಳುಹಿಸಿರುತ್ತಾರೆ.

ಪ್ರಕಟಣೆಗಳು.

ದಿವಂಗತರಾದ ಲಾಲಾ ಲಜಪತಿರಾಯರವರ ವಿಷಯವಾಗಿ ನೋಟೀಸುಗಳೂ, ಭಾವಚಿತ್ರಗಳೂ, [illegible] ನ್ನಿನ ಎಲ್ಲಾ ಪತ್ರಿಕೆಗಳಲ್ಲಿಯೂ ಪ್ರಾಮುಖ್ಯತೆಯನ್ನು ಪಡೆದಿರುತ್ತವೆ.

ಬೆಂಕಿಯ ಅನಾಹುತ.

ಈ ತಿಂಗಳು 17 ನೇ ತಾ|| ಅಹಮದಾಬಾದಿನಲ್ಲಿ ವ್ಯವಸಾಯ ವಸ್ತು ಪ್ರದರ್ಶನ ಒಂದು ನಡೆಯಿತು. ಅದಕ್ಕೆ ಬೊಂಬಾಯಿ ಗೌರ್ನರ್‌ರವರೂ ಆಹ್ವಾನಿಸಲ್ಪಟ್ಟಿದ್ದರು. ಗೌರ್ನರ್‌ರವರು ದಯಮಾಡಿಸುವಷ್ಟರಲ್ಲೇ ಪ್ರದರ್ಶನದ ಒಂದು ಭಾಗವಾದ ಪೆಂಡಾಲಿಗೆ ಬೆಂಕಿಯು ತಗುಲಿ ತಾತ್ಕಾಲಿಕವಾಗಿ ಹಾಕಿದ್ದ ಕಟ್ಟಡವೆಲ್ಲಾ ಸುಟ್ಟು ಬೂದಿಯಾಯಿತು. ಕೂಡಲೆ ಫೈರ್ ಇಂಜಿನ್ ಮೂಲಕ ಬೆಂಕಿಯು ಆರಿಸಲ್ಪಟ್ಟಿತು. ಯಾರಿಗೂ ಘಾಯವಾಗಲಿಲ್ಲ. ಕಾರ್ಯಕ್ರಮದಲ್ಲಿದ್ದಂಥಾ ಯಾವುದೋ ಒಂದು ಎಕ್ಸ್‌ಪೆರಿಮೆಂಟನ್ನು [illegible] ಅನಾಹುತಕ್ಕೆ ಕಾರಣವಾಯಿತು.

ಪೋಸ್ಟ್ ಬ್ಯಾಗುಗಳ ಕಳ್ಳತನ.

ಕಳೆದ ಭಾನುವಾರ ರಾತ್ರಿ ಕ್ವೆಟ್ಟಾದಿಂದ ಕರಾಚಿಗೆ ಬಂದ ಪೋಲೀಸಿಲ್ಲ ರಿಜಿಸ್ಟರುಗಳು ಇದ್ದಂಥ ಎರಡು ಚೀಲಗಳ ಸೀಲು ಸರಿಯಾಗಿರಲಿಲ್ಲ. ಅವುಗಳಲ್ಲಿದ್ದಂಥಾ 8000 ಸಾವಿರ ರೂಪಾಯಿಗಳ ರಿಜಿಸ್ಟರ್ ಕಾಗದಗಳನ್ನು ತೆಗೆದುಕೊಂಡು ಅವುಗಳಿಗೆ ಬದಲಾಗಿ ಅಂಚೆಯ ಇಲಾಖೆಯ ಗೈಡ್ ಲಿಸ್ಟಿನ ಪುಸ್ತಕಗಳನ್ನು ಹಾಕಿ ಚೀಲಗಳ ತೂಕವನ್ನು ಸರಿಪಡಿಸಿದ್ದರು.

ಸಿಂಧೂದೇಶದ ಸಿ. ಐ. ಡಿ. ಯವರು ಹೆಡ್ ಪೋಸ್ಟ್ ಆಫೀಸಿನ ಗುಮಾಸ್ತೆಯಾದ ನರಸಿಂಗದಾಸ್ [illegible] ದಾಸ್ ಎಂಬುವನನ್ನು ಗುಮಾನಿಯ ಮೇಲೆ ಹಿಡಿದಿರುತ್ತಾರೆ. ಕಳುವಾಗಿರುವ ಚೀಲಗಳ ಪತ್ತೆಯ ವಿಷಯದಲ್ಲಿ ಸರಿಯಾದ ವರ್ತಮಾನವನ್ನು ಕೊಡತಕ್ಕವರು ಬಹುಮಾನಕ್ಕೆ ಅರ್ಹರಾಗಿಯೂ ತಿಳಿಸಲ್ಪಟ್ಟಿ

RegdNo. M. 2322 || ವಂದೇ ಮಾತರಂ || ಬಿಡಿ ಪ್ರತಿಂ ೯

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯಾ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ೯—೦—೦ ; ಪರಸ್ಥಳಕ್ಕೆ ೧೦-೦-೦

ಸಂಪುಟ ೧ [ಬುಧವಾರ ೨೮ ನವಂಬರ್ [ಸಂಚಿಕೆ ೫೩

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್ — ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co Excelsior Type-writing Institute, Balepet, Bangalore City.
2. Koppada Ramakrishniah, Agent, Hassan.
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings Mysore.
5. B V Pundit & Co, Lakshmivilas Road, Mysore.
6. Friends' Union, Mysore.
7. Sweet Mart, Lansdowne Buildings, Mysore.

TAINADU.

Daily Edition.

The Leading Nationalist Daily of Mysore.

Printed and published by P. R Ramaiya. taSri Rama Press, D. Subbiah Road. Mysore

ತಾಯಿನಾಡು

28--11--1928

ಮುಂದಿನ ಯುದ್ಧ

ಶಾಸ್ತ್ರಜ್ಞರು ಮೊನ್ನೆ ಬಂದಿದ್ದ ಸೂರ್ಯಗ್ರಹಣ [illegible] ಈಗ ಸುಮಾರು [illegible] ಸೂರ್ಯಗ್ರಹಣದಲ್ಲಿ ಕೆಲವು [illegible] ಕೆಳಗೆ ಕಂಡಿರುವಂತೆ [illegible] ಬರೆದಿರುತ್ತಾರೆ:—

[illegible] ಸೂರ್ಯ [illegible] ಯುದ್ಧ [illegible] ಅದರಂತೆಯೇ [illegible] ಮುಂದಿನ [illegible] ಕಾರಣಗಳೂ [illegible] ಕೆಲವು ಶಾಸ್ತ್ರಜ್ಞರು [illegible] ಯುದ್ಧವಾಗುವ [illegible] ತಿಳಿಸಿರುವರು. ಅದರಂತೆ 1857, 1874, [illegible] 1914 ಮತ್ತು 19[illegible] ಈ ವರ್ಷಗಳಲ್ಲಿ ಯುದ್ಧ [illegible] ಸಿದ್ಧಾಂತವಾಗಿರುವುದು.

1857 ರಲ್ಲಿ ಸಿಪಾಯಿ ದಂಗೆ ಅಥವಾ [illegible] ಸ್ವಾತಂತ್ರ್ಯ [illegible] 1878 ರಲ್ಲಿ ಆಫಘಾನ್ ಯುದ್ಧವಾ[illegible] 1914 ರಲ್ಲಿ [illegible] ಯುದ್ಧವಾಯಿತು. ಈ ಕಾರಣದಿಂದ 1920 [illegible] ಯುದ್ಧವು [illegible] ಅಭಿಪ್ರಾಯ [illegible]

—

ಶ್ರೀ [illegible]

ಬೆಂಗಳೂರಿನಲ್ಲಿರುವ [illegible] ಕೆಳಗೆ ಕಂಡಂತೆ ತಿಳಿಯಬರುತ್ತದೆ:—

ಈ ನವೆಂಬರ್ 19 ನೇ ತಾ [illegible] 18 ನೇ ತಾ [illegible] ಶ್ರೀ [illegible] ಈಗ [illegible] ಡಾಕ್ಟರ್ [illegible]

ವರ್ತಮಾನಗಳು.

—

ಮಿಸ್ | ಮಿಲ್ಲರ್

ಇಂದೋರಿನ ಮಹಾರಾಜರಾದ ತುಕೋಜಿ ರಾವ್ ಹೋಲ್ಕರ್ ರವರು ಹೋದ ವರುಷ ಮಿಸ್ | ಮಿಲ್ಲರ್ ಎಂಬ ಅಮೇರಿಕದ ಸ್ತ್ರೀ ಒಬ್ಬಳನ್ನು ಹಿಂದೂ ಮತಕ್ಕೆ ಸೇರಿಸಿಕೊಂಡು ಶರ್ಮಿಷ್ಠಾದೇವಿ ಎಂಬ ನಾಮಕರಣವನ್ನು ಮಾಡಿ ವಿವಾಹವಾದದ್ದು ಸರಿಯಷ್ಟೆ. ಈಗ ಆಕೆಯು ಗರ್ಭಧಾರಣ ಮಾಡಿರುವಳು.

ಬೆಂಗಳೂರು ಮುನಿಸಿಪಾಲಿಟಿ

ಈ ವಾರದ 24 ನೇ ತಾ|| ಶನಿವಾರ ಮಧ್ಯಾಹ್ನ ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಕೌನ್ಸಿಲ್ ಮೀಟಿಂಗು ಸೇರಿತ್ತು. ಲಾಲಾ ಲಜಪತರಾಯರ ಸ್ಮರಣಾರ್ಥವಾಗಿ ಆ ದಿವಸ ಮೀಟಿಂಗನ್ನು ಮತ್ತು ಮುನ್ಸಿಪಲ್ ಆಫೀಸನ್ನೂ ಸಹ ಮುಚ್ಚಬೇಕೆಂದು ತೀರ್ಮಾನಿಸಲ್ಪಟ್ಟಿತು.

ಹಿಂದೂ ಸ್ಟೂಡೆಂಟ್ಸ್ ಯೂನಿಯನ್

ಈ ವಾರದ 25 ಮತ್ತು 26 ನೇ ತಾರೀಖುಗಳಲ್ಲಿ ಬೆಂಗಳೂರು ನ್ಯಾಷನಲ್ ಹೈಸ್ಕೂಲಿನಲ್ಲಿ ಮೇಲ್ಕಂಡ ಯೂನಿಯನ್ನಿನ ತೃತೀಯ ವಾರ್ಷಿಕೋತ್ಸವವು ನಡೆಸಲ್ಪಟ್ಟಿತು. ಮ|| ರಾ|| ಮಹಮದ್ ಹನೀಫ್ ಬಿ. ಎ. ಬಿ. ಎಲ್ ರವರು ಅಧ್ಯಕ್ಷರಾಗಿದ್ದರು.

ದೊಡ್ಡಬಳ್ಳಾಪುರದ ಹೈಸ್ಕೂಲ್

ಬೆಂಗಳೂರು ಡಿ|| ಬೋರ್ಡಿನವರು ದೊಡ್ಡಬಳ್ಳಾಪುರದ ಹೈಸ್ಕೂಲಿಗೆ ವಾರ್ಷಿಕ 100 ರೂಪಾಯಿಗಳ ಗ್ರಾಂಟನ್ನು ಸ್ಯಾಂಕ್ಷನ್ ಮಾಡಿರುವರು.

ಫುಟ್‌ಬಾಲ್

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಕಾಲೇಜು ಮತ್ತು ಛಾಂಪಿಯನ್ ಸಂಘಗಳಿಗೆ ಫುಟ್‌ಬಾಲ್ ಮ್ಯಾಚ್ ನಡೆದು, ಛಾಂಪಿಯನ್ಸರು ಒಂದು ಗೋಲನ್ನು ಹೊಡೆದು ಗೆದ್ದರು.

ಲೋಕಹಿತೈಷಿಗೆ ಸರ್ಕಾರದ ಸಹಾಯ

ಬೆಂಗಳೂರು ನಗರದಲ್ಲಿ ಪ್ರಕಟವಾಗುತ್ತಿರುವ ಲೋಕಹಿತೈಷಿ ಎಂಬ ದೈನಂದಿನ ಪತ್ರಿಕೆಯು ಒಂದು ನೂರು ಪತ್ರಿಕೆಗಳು ಸರ್ಕಾರದವರಿಂದ ಕೊಳ್ಳಲ್ಪಡುತ್ತಿದೆ. ಹಾಗಾದರೆ ಆ ಪತ್ರಿಕೆಯು ಒಂದು ವರ್ಷ 15 [illegible] ಸರ್ಕಾರದವರ ಇಂಥಾ ಸಹಾಯ [illegible] ಕಾರಣವೇನು? ಎಂದು [illegible] ಪತ್ರಿಕೆಯು ಕೇಳುತ್ತದೆ.

[illegible]

[illegible] ಮಹಾರಾಜರವರು ಮೈಸೂರು [illegible] ಸರ್ಕಾರ [illegible] "[illegible]" ಎಂಬ [illegible]

ಪ್ರಜಾಮಿತ್ರ

—

[illegible]

[illegible]

ಪ್ರಕಾಶಕ.

TAI NADU

28—11—1928.

[illegible]

ಕೋಲಾರದಲ್ಲಿ [illegible] ಸೇವೆ [illegible] ಸಾವು [illegible] ಪಟ್ಟು [illegible] ಆ ಕೆಲಸವನ್ನು ಬಿಟ್ಟು ಬೇರೆ ಕೆಲಸವನ್ನು [illegible] ಕೌನ್ಸಿಲ್ [illegible] ಬೇರೆ [illegible] ಆನೇಕ [illegible] ಸಹೋದರರು ಉತ್ಸಾಹದಿಂದ ಮುಂದೆ ಬಂದು [illegible] ಆಕಾಂಕ್ಷೆಯನ್ನು [illegible] ತಾಯಿನಾಡನ್ನು [illegible] ಮುಂದೆ [illegible] ಅಭಿಲಾಷೆ [illegible] ಆ ಅಭಿಲಾಷೆಯನ್ನು ನಾವೆಲ್ಲ [illegible]

OBSERVE HARTAL

To-morrow !

IN SACRED MEMORY OF

THE LATE

LALA LAJPAT RAI

Tr.E LION OF PUNJAB.

ಹರತಾಳ

ದಿವಂಗತರಾದ ದೇಶಭಕ್ತ ಲಾಲಾ ಲಜಪತರಾಯ್ ರವರ ಸ್ಮರಣಾರ್ಥವಾಗಿ ನಾಳೆಯ ದಿನ ಆಸೇತು ಹಿಮಾಚಲಪರ್ಯಂತವೂ ಹರತಾಳವು ಆಚರಿಸಲ್ಪಡುವುದು. ಎಲ್ಲಾ ಸಾರ್ವಜನಿಕ ಕೆಲಸಕಾರ್ಯಗಳೂ ನಿಲ್ಲಿಸಲ್ಪಡುವುವು. ಅದರಂತೆ ನಮ್ಮ ಮೈಸೂರಿನ ಬಾಂಧವರೂ ಆಚರಿಸಬೇಕಾಗಿ ವಿನಂತಿ.

ದನಗಳ ಪ್ರದರ್ಶನ

ದನಗಳ ವಾರ್ಷಿಕ ಪ್ರದರ್ಶನವು ಈ ಮಾಹೆ 28 ನೇ ತಾ|| ಬುಧವಾರ ಮಂಜರಾಬಾದ್ ತಾಲ್ಲೋಕಿಗೆ ಸೇರಿದ ಉಚ್ಚಂಗಿರೋಡ್ ಜಂಕ್ಷನ್ನಲ್ಲಿ ನಡೆಯುವುದು. ಹಾಸನ ಡಿ|| ಡಿ|| ಕ|| ರವರಾದ ಎಸ್. ಅಬ್ದುಲ್ ವಾಜದ್ ಬಿ. ಎ. ಬಿ. ಎಲ್. ರವರು ಅಧ್ಯಕ್ಷತೆಯನ್ನು ವಹಿಸುವರು.

ದೀಪದಿಂದ ಮೈ ಸುಟ್ಟುಕೊಂಡದ್ದು.

ಈ ತಿಂಗಳು 26 ನೇ ಸೋಮವಾರ ಸಾಯಂಕಾಲ ರಾಜಧಾನಿಯ ಅಭಿನವ ಶಂಕರಾಲಯದ ಬಳಿ ಇರುವ ಅಕ್ಕಸಾಲಿಗರ ರಾಮಯ್ಯನೆಂಬಾತನ 7 ವರ್ಷದ ಹೆಣ್ಣುಮಗುವು ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಒಲೆ ಹತ್ತಿಸುವುದಕ್ಕೆ ಪ್ರಯತ್ನಿಸಿತು. ಆಗ ಹತ್ತಿರ ಇದ್ದ ಸೀಮೆಎಣ್ಣೆ ಬುಡ್ಡಿಯೂ ಕೆಲವು ಬಟ್ಟೆಗಳೂ ಹತ್ತಿಕೊಂಡವು. ಹುಡುಗಿಯ ಮೈ ಕೂಡಲೆ ಎಲ್ಲಾ ಸುಟ್ಟು ಹೋಯಿತು. ಅನಂತರ ಮಗುವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು.

ಬೆಂಗಳೂರು ಹಿಂದೂ ಮಹಾಸಭೆ.

ಈ ಸಭೆಯು ಈ ತಿಂಗಳು 25 ನೇ ತಾ|| ಭಾನುವಾರ ಪ್ರಾತಃಕಾಲ ಬೆಂಗಳೂರು ಸಿಟಿಯ ಮಜೆಸ್ಟಿಕ್ ಥಿಯೇಟರಿನಲ್ಲಿ ನಡೆಯಿತು. ಸಾವಿರಾರು ಜನರು ನೆರೆದಿದ್ದರು. ರಿಟೈರ್ಡ್ ಡೆಪ್ಯುಟಿ ಕಮೀಷನರ್ ಜಂಗಯ್ಯ [illegible] ಅಧ್ಯಕ್ಷತೆಯನ್ನು ವಹಿಸಿದ್ದರು. [illegible] ಕಾರ್ಯಕಾರಿ [illegible] ಚುನಾಯಿಸಲ್ಪಟ್ಟಿತು. ಮ|| [illegible] ಅಧ್ಯಕ್ಷರಾಗಿಯೂ, ಮ|| ಎಸ್. [illegible] ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು. ಸಭೆಯ ಕೋಶಕ್ಕೆ 3000 ರೂಪಾಯಿಗಳ ವರ್ಗಣಿಯು ದೊರೆಯಿತು. ಮ|| ನೀಲಗಿರಿ ಸಂಜೀವಯ್ಯನವರು 501 ರೂಪಾಯಿಗಳ ವರ್ಗಣಿಯನ್ನು ದಾಖಲ್ ಮಾಡಿದರು.

[illegible] ಸಂಭಾವನೆ.

ಬೆಂಗಳೂರು ಪಬ್ಲಿಕ್ ಪ್ರಾಸಿಕ್ಯೂಟರ್ ಮ|| ಬಿ. [illegible] ರವರು, ರಾಜ್ಯ ಸರಕಾರದ ಪರವಾಗಿ ಕಳೆದ ತಿಂಗಳು ವಾದಿಸಿದ್ದಕ್ಕಾಗಿ 2000 ರೂಪಾಯಿಗಳ ಲಾಯರ ಫೀಜನ್ನು ಬಿಲ್ ಮಾಡಿರುವರೆಂದು ವೀರಕೇಸರಿಯು ತಿಳಿಸುತ್ತದೆ.

ಮ|| ವಿಜಯದೇವರು ಬೇಡ.

ಬೆಂಗಳೂರು ಗಲಭೆಗಳಲ್ಲಿ ಪೆಟ್ಟು ತಿಂದಂಥ ಶ್ರೀಯುತ ಸುಬ್ರಹ್ಮಣ್ಯ ಶೆಟ್ಟರವರು, ಚಂದ್ರರಾಜ, [illegible] ಮಾಧವಾಚರ್, ಮೂರ್ತಪ್ಪ, ರಾಮಯ್ಯ, ಇವರುಗಳು ತಮಗೆ ಮ|| ವಿಜಯದೇವರು ಪಬ್ಲಿಕ್ ಪ್ರಾಸಿಕ್ಯೂಟರಾಗಿರಕೂಡದೆಂದೂ, ಇವರು ಮುಸಲ್ಮಾನರ ಪಕ್ಷವೆಂದೂ, ತಮ್ಮ ಪರವಾಗಿ ವಾದಿಸುವುದಕ್ಕೆ ಮ|| ಸಿ. ಲಕ್ಷ್ಮಣೇ ಗೌಡರನ್ನು ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಬೇಕೆಂದೂ ಕೇಳಿರುವುದಾಗಿ ಸಮಾಚಾರವು ಬಂದಿದೆ.

ನಾಯಿಮರಿಯ ಹತ್ಯ.

ಬೆಂಗಳೂರಿನ ಬಳೇಪೇಟೆ ಬೋರ್ಡಿನ ಮ|| ಜಿ. ಭೀಮರಾಯರವರ ಒಂದು ಸುಂದರವಾದ ನಾಯಿಮರಿಯನ್ನು ಯಾರೋ ದುರಾತ್ಮರು ಕಡಿದುಹಾಕಿರುವರಂತೆ.

ಗೊಲ್ಲಹಳ್ಳಿ ಪ್ಲಾಂಟೇಷನ್.

ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೋಕು ಕಸಬಾ ಹೋಬಳಿ ಚೊಕ್ಕನಹಳ್ಳಿಗೆ ಸೇರಿದ 360 ಎಕರೆ ಕಾಡು ಮೇಲ್ಕಂಡ ಹೆಸರಿನ ಸ್ಟೇಟ್ ಫಾರೆಸ್ಟ್ ಆಗಿ ಮಾಡಲ್ಪಡುವುದು. ದೊಡ್ಡ ಬಳ್ಳಾಪುರದ ಸಬ್ ಡಿವಿಷನ್ ಆಫೀಸರನ್ನೇ ಇಲ್ಲಿಯ ಫಾರೆಸ್ಟ್ ಸೆಟ್ಲಮೆಂಟ್ ಆಫೀಸರಾಗಿ ನೇಮಕಮಾಡಿದ್ದಾರೆ. ಈ ಕಾಡಿನ ಜಮೀನುಗಳಲ್ಲಿ ಯಾರಿಗಾದರೂ ಹಕ್ಕು ಬಾಧ್ಯತೆಗಳಿದ್ದಲ್ಲಿ ಅಂತಹವರು ಮೇಲ್ಕಂಡ ಆಫೀಸರಲ್ಲಿ ತಿಳಿಸಬೇಕಾಗಿದೆ.

ಮೈಸೂರು ಸ್ಟಾರ್.

ಮೈಸೂರ್ ಸ್ಟಾರ್ ಪತ್ರಿಕೆಯು ಜನವರಿ ಒಂದನೆಯ ತಾರೀಖಿನಿಂದ ಬೆಂಗಳೂರಿನಲ್ಲಿ ಪ್ರಚುರವಾಗುವುದಾಗಿಯೂ, ಧರ್ಮಪ್ರಕಾಶ ಚಂದ್ರೇಗೌಡರವರು ಇದಕ್ಕೆ ಆರ್ಥಿಕ [illegible] ತಿಳಿದುಬಂದಿದೆ.

ವಸ್ತು ಪ್ರದರ್ಶನ.

ಅಖಿಲ ಭಾರತ ಸ್ಪಿನ್ನರ್ಸ್ ಅಸೋಸಿಯೇಷನ್ನಿನ ಶಾಖೆಯಾದ [illegible] ವಸ್ತ್ರಗಳ ಪ್ರದರ್ಶನವು 16 ನೇ ತಾರೀಖಿನಿಂದ ಬಿಜಾಪುರದಲ್ಲಿ ನಡೆಯುವುದು. ಪ್ರೇಕ್ಷಕರ ಅನುಕೂಲಕ್ಕಾಗಿ [illegible] ಬಟ್ಟೆಗಳೂ, ಧೋತಿಗಳೂ [illegible] ಕಮ್ಮಿ ಬೆಲೆಯಲ್ಲಿ ಮಾರಟವಾಗುವುವು. ಡಾಕ್ಟರ್ [illegible] ರವರು ಅಧ್ಯಕ್ಷತೆಯನ್ನು ವಹಿಸುವರು.

ಸಂಪದಭ್ಯುದಯ ಸಭೆ.

ನಮ್ಮ ಸಂಸ್ಥಾನದಲ್ಲಿ ಮುಂದಿನ ತಿಂಗಳಲ್ಲಿ ನಡೆಯುವ ಸಂಪದಭ್ಯುದಯ ಮಹಾಸಭೆಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ಫರ್ಗೂಸನ್ ಕಾಲೇಜಿನ ಪ್ರೊಫೆಸರರೂ ಆದ ಶ್ರೀಯುತ ವಾಮನ ಗೋವಿಂದ ಕಾಳೆ [illegible] ರವರು ಅಧ್ಯಕ್ಷರಾಗಲು ಒಪ್ಪಿರುವುದಾಗಿ ತಿಳಿಯುತ್ತದೆ.

RegdNo. M. 2322 ‖ ವಂದೇ ಮಾತರಂ ‖ ಏಕ ಪ್ರತಿ ಕಾಸು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೫—೦—೦ ; ಪರಸ್ಥಳಕ್ಕೆ [illegible]

ಸಂಪುಟ ೧] ಶುಕ್ರವಾರ ೩೦ ನವಂಬರ್ [ಸಂಚಿಕೆ ೬೪

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ,)

ವಂದೇಮಾತರಂ ರೋಡ್ಡು ಮೈಸೂರು

Our Agents

Copies of Tai Nadu, Daily and Weekly are available for sale at the following places:

1 N. P. Venkatappa & Co
Excelsior Type-writing Institute, Balepet,
Bangalore City.

2 Sweet Mart, Lansdowne Buildings,
Mysore

3 Siddiah, Sri Nanjundeswara [illegible]
Nanjangud.

4 M. N. S. & Sons, [illegible]
Mysore.

5 Sukha Purdit & Co, Lakshmivilas [illegible]
Mysore.

6 Friends' Union, Mysore

TAINADU.

Daily Edition.

The Leading Nationalist Daily of Mysore.

TO LET

Printed and published by P. R. Ramaiya,
taSri Rama Press, D. Subbiah Road, Mysore

ತಾಯಿನಾಡು.

30—11—1928

ಸರ್ವಾಭಟ್ಟರ ಹೇಳಿಕೆ

ಕಳೆದ ಮಂಗಳವಾರ ಸಿಟಿ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಶ್ರೀ ಸರ್ವಾಭಟ್ಟರು ಶ್ರೀ ಸೀತಾರಾಮಶಾಸ್ತ್ರಿಗಳು ವಗೈರೇಡುಗಳ ಮೇಲೆ ಹೂಡಿರುವ ಕೇಸು ಪ್ರಾರಂಭವಾಯಿತು. ಮೊದಲು ಶ್ರೀ ಸರ್ವಾಭಟ್ಟರು ತಾವು ಪ್ರತಿವಾದ ಮಾಡುವುದಿಲ್ಲವೆಂದು ಹೇಳಿ ಈ ಕೆಳಗೆ ಕಂಡ ಬರಹದ ಹೇಳಿಕೆಯನ್ನು ಕೊಟ್ಟರು.

ನ್ಯಾಯಾಧೀಶರೇ,

ನಮ್ಮ ಮೇಲೆ ಈ ವ್ಯವಹಾರವನ್ನು ತಂದಿರುವ ಫಿರ್ಯಾದಿಗೆ ನಾವು ಸಂಪೂರ್ಣ ನಿರ್ದೋಷಿಗಳೆಂಬುದು ಗೊತ್ತುಂಟು. ಹಾಗೆ ತಿಳಿದೂ ತಿಳಿದೂ ನೀಚಾಶಯಗಳಿಂದ ಪ್ರೇರಿತರಾಗಿ ಈ ಕಾರ್ಯಕ್ಕೆ ಕೈ ಹಾಕಿದ್ದಾರೆ. ಇವರು ಹೀಗೆ ಮಾಡುವುದರಲ್ಲಿ ದೈವದ್ರೋಹ, ಪ್ರಜಾದ್ರೋಹಗಳ ಮಾತು ಹಾಗಿರಲಿ, ಆತ್ಮ ದ್ರೋಹವನ್ನು ಮಾಡಿಕೊಂಡಿರುತ್ತಾರೆ.

ಫಿರ್ಯಾದಿಯು ನಮ್ಮಂತೆ ಒಬ್ಬ ವ್ಯಕ್ತಿ ಮಾತ್ರವಾಗಿದ್ದರೆ, ಆಗ ನನ್ನ ವರ್ತನೆಯೇ ಬೇರೆಯಾಗುತ್ತಿತ್ತು. ಅರವತ್ತು ಲಕ್ಷ ಪ್ರಜೆಗಳ ಪ್ರಾಣ ಮಾನ ಧನಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯುಳ್ಳವರಿವರು; ಹಾಗೂ "ಸತ್ಯಮೇವೋದ್ಧರಾಮ್ಯಹಂ" ಎಂಬ ಅಡಿಗಲ್ಲಿನ ಮೇಲೆ ಸುಪ್ರತಿಷ್ಠಿತವಾದ ಪ್ರಭುಪೀಠದ ದಿವ್ಯಗೌರವವನ್ನೂ ಕಾಪಾಡಬೇಕಾದವರಿವರು. ಇಂತಹವರು ಸತ್ಯಧರ್ಮಗಳನ್ನು ತೊರೆದು ಅಕ್ರಮಕ್ಕಿಳಿದಾಗ ತಿರಸ್ಕಾರ ಸೂಚಕವಾದ ಮೌನವನ್ನವಲಂಬಿಸುವುದೊಂದೇ ಕರ್ತವ್ಯ. ಅವರು ಹಿಡಿದ ಆಯುಧವನ್ನೇ ಪ್ರತಿಯಾಗಿ ಹಿಡಿಯುವುದು ಪ್ರಜೆಯ ಧರ್ಮವಲ್ಲ ಹಾಗೂ ಅಂತಹ ಪ್ರತಿವಾದದಿಂದ ಅವರ ತಲೆಗೆ ಹತ್ತಿರುವ ವಿಷವು ಇಳಿಯುವುದೂ ಇಲ್ಲ.

ಇನ್ನು ಅವರ ಉದ್ದೇಶದ ಪರಿಣಾಮ. ಫಿರ್ಯಾದಿಯು ಆಶಯಗಳಿಗೆ ಲೋಕದ ಸಹಾನುಭೂತಿ ಇರುವವರೆಗೂ ಅವರು ಯಾರೊಬ್ಬರ ಮೇಲಾದರೂ ಹೊರಿಸುವ ಶಿಕ್ಷೆಗೆ ಬೆಲೆಯುಂಟು. ಆದರೆ ಯಾವಾಗ ಫಿರ್ಯಾದಿಯು ತಮ್ಮ ಪಶು ಬಲವನ್ನೇ ದೊಡ್ಡದಾಗಿ ಎಣಿಸಿಕೊಂಡು ಹೆಜ್ಜೆ ಹೆಜ್ಜೆಗೂ ಸತ್ಯಧರ್ಮಗಳನ್ನು ತುಳಿಯುತ್ತಾ, ತಮ್ಮ ನೈತಿಕಶಕ್ತಿಯನ್ನು ಕಳೆದುಕೊಂಡರೋ ಆಗ ಅವರು ಹೊರಿಸುವ ಶಿಕ್ಷೆಯಿಂದ ಅವರು ತಮ್ಮ ಅಪಮಾನದ ಹೊರೆಯನ್ನು ಹೆಚ್ಚಿಸಿಕೊಳ್ಳುವರೇ ಹೊರತು ಶಿಕ್ಷಿತರಿಗೇನೂ ಗೌರವ ಹಾನಿ ಇಲ್ಲ. ನಿಜವಾಗಿಯೂ ಫಿರ್ಯಾದಿಯು ತಮ್ಮ ರಾಜಕೀಯ ಹಾಗೂ ಆರ್ಥಿಕ ಪ್ರಪಂಚದಲ್ಲಿ ಎಷ್ಟೇ ದೊಡ್ಡವರಾಗಿರಲಿ, ನೈತಿಕ ಪ್ರಪಂಚದಲ್ಲಿ ಇಂದು ಅವರು ತಮ್ಮ ಸ್ಥಾನವನ್ನು ಕಳೆದುಕೊಂಡು ಕೀರ್ತಿಗಿಂತಲೂ ಕಡೆಯಾಗಿ ಪರಿಣಮಿಸಿರುವುದು ಯಾವ ಪ್ರಜೆಗೆ ತಾನೆ ದುಃಖವನ್ನುಂಟುಮಾಡಿಲ್ಲ?

ಆದಕಾರಣ ನ್ಯಾಯಾಧೀಶರೇ, ನಮಗೂ ಫಿರ್ಯಾದಿಗೂ ಇರುವ ರಕ್ಷ್ಯ ರಕ್ಷಕ ಸಂಬಂಧವನ್ನು ನೆನೆಸಿಕೊಂಡು ಕಾನೂನು ಪ್ರಕಾರ ಪ್ರತಿವಾದ ಮಾಡುವ ಹಕ್ಕನ್ನು ಬಿಟ್ಟುಕೊಟ್ಟು ಮೌನವನ್ನವಲಂಬಿಸಿರುತ್ತೇನೆ. ನನ್ನನ್ನು ಹೆತ್ತು ಹೊತ್ತಾಡಿಸಿ ಸಲಹಿದ ನನ್ನ ದೇಶಮಾತೆಯ ಭಾವಿ ಸೌಭಾಗ್ಯದ ಸಾಧನಗಳನ್ನು ಕೈಯ್ಯಲ್ಲಿ ಹಿಡಿದಿರುವ ಫಿರ್ಯಾದಿಯ ಚಿತ್ತವೃತ್ತಿಯು ಕೊಂಚವಾದರೂ ತನ್ನ ನೈತಿಕದ ಕರ್ತವ್ಯದ ಕಡೆಗೆ ತಿರುಗಿ ತನ್ಮೂಲಕ ನನ್ನ ದೇಶಮಾತೆಯ ಸುಖಕ್ಕೆ ಕಾರಣವಾಗಬಹುದೆಂಬ ಚಾಪಲ್ಯವೇ ಈ ನನ್ನ ನಡತೆಯ ಮೂಲ.

ಇನ್ನು ಕಡೆಯಮಾತೆಂದರೆ, ಸುಳ್ಳು ಕಲ್ಪನೆಯಲ್ಲಿ ತಾರತಮ್ಯವೇನಾದರೂ ಇರುವುದಾದರೆ ಫಿರ್ಯಾದಿಯು ನಮ್ಮ ಮೇಲೆ ತಂದಿರುವ ಅಪಾದನೆಗಳಿಗಿಂತಲೂ ಹೀನವಾದ ಸುಳ್ಳು ಮತ್ತೊಂದು ಇರಲಾರದೆಂದು ನಾನು ಖಂಡಿತವಾಗಿಯೂ ಹೇಳಿ ಮುಗಿಸುತ್ತೇನೆ. (ವೀ. ಕೇ.)

ಲಾಲಾಜೀಯವರ ಜ್ಞಾಪಕ

ಕೀರ್ತಿಶೇಷರಾದ ಲಾಲಾ ಲಜಪತರಾಯರವರ ಜ್ಞಾಪಕಾರ್ಥವಾಗಿ ಭಾರತೀಯರೆಲ್ಲರೂ 5 ಲಕ್ಷ ರೂಪಾಯಿಗಳನ್ನು ಚಂದಾ ಎತ್ತಬೇಕೆಂದೂ, ಈ ಚಂದಾಹಣವು ಲಾಲಾಜಿಯವರಿಂದ ಸ್ಥಾಪಿತವಾಗಿರುವ ಲಾಹೋರಿನ ಪ್ರಜಾಸೇವಕ ಸಂಘಕ್ಕೂ, ತಿಲಕ್ ಸ್ಕೂಲ್ ಆಫ್ ಪಾಲಿಟಿಕ್ಸ್ ತಿಲಕರ ರಾಜನೀತಿಶಾಲೆಗೂ ಉಪಯೋಗಿಸಲ್ಪಡಬೇಕೆಂದೂ ಮಹಾತ್ಮ ಗಾಂಧಿಯವರು ಪ್ರಾರ್ಥನೆಯನ್ನು ಕಳುಹಿಸಿರುವರು- ನಮ್ಮ ಮೈಸೂರು ದೇಶೀಯರೂ ಯಥಾಶಕ್ತಿ ಲಾಲಾಜಿಯವರ ಸ್ಮಾರಕಕ್ಕೆ ಉದಾರವಾದ ಸಹಾಯವನ್ನು ಮಾಡಬೇಕೆಂದು ವಿಜ್ಞಾಪಿಸಿಕೊಳ್ಳುವೆವು.

ಆರ್ಯ ಸಂಗೀತ ಸಮಾಜ, ಮೈಸೂರು

ಈ ವರ್ಷದ ದಸರಾಮಹೋತ್ಸವದಲ್ಲಿ ವಾಗ್ವೈಖರಿಯಿಂದಲೂ, ನವರಸ ಭರಿತವಾದ ಸಂಗೀತದಿಂದಲೂ ಕೂಡಿದ ಹರಿಕಥೆಯನ್ನು ಮಾಡಿ ಮಹಾಸ್ವಾಮಿಗಳವರಿಂದ ಸನ್ಮಾನವನ್ನು ಪಡೆದಿರುವ ಕೊಯಮತ್ತೂರು ಶ್ರೀಮತಿ ವೆಂಕಟಲಕ್ಷ್ಮಿ ಅಮ್ಮಾಳ್‌ರವರು ಪಬ್ಲಿಕ್ಕಿನಲ್ಲಿ ತಮ್ಮ ಕಥೆಗಳನ್ನು ಮಾಡಿ ಮಹಾ ಜನರ ಮನಸ್ಸನ್ನು ಸಂತೋಷಪಡಿಸಿರುತ್ತಾರೆ. ಇವರ ಶ್ಲಾಘನೀಯವಾದ ಕಥೆಯನ್ನು ಅನೇಕ ಮಹನೀಯರು ಪುನಃ ಕೇಳಬೇಕೆಂದು ಇಷ್ಟಪಟ್ಟಿರುವುದರಿಂದ ಭಾನುವಾರ (ತಾರೀಖು 2-12-28) 4-30 ಘಂಟೆಗೆ ಸರಿಯಾಗಿ ಸದ್ವಿದ್ಯಾಶಾಲೆಯಲ್ಲಿ "ನಂದನಾರ್ ಚರಿತ್ರೆ" ಎಂಬ ಕಥೆಯನ್ನು ಏರ್ಪಡಿಸಿರುತ್ತೆ. ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ಸಮಾಜದವರು ಕೋರುತ್ತಾರೆ.

ವಿದ್ಯಾಶಾಲೆಗಳಿಗೆ ರಜಾ.

ಲಾಲಾ ಲಜಪತ ರಾಯರವರ ಸ್ಮರಣಾರ್ಥವಾಗಿ ಹಿಂದೂಸ್ಥಾನದಲ್ಲೆಲ್ಲಾ ಆಚರಿಸಲ್ಪಡುವ ಹರತಾಳದ ಪ್ರಯುಕ್ತ ನಮ್ಮ ವಿದ್ಯಾ ಇಲಾಖೆಯವರೂ ಸಂಸ್ಥಾನದ ಎಲ್ಲಾ ಶಾಲೆಗಳಿಗೂ ರಜಾ ಕೊಟ್ಟಿದ್ದುದು ಸ್ತೋತ್ರಾರ್ಹವಾಗಿದೆ.

ಯೋಧನ ನಿಧನ

(ಕಡುಧೀರನೆ ಕೂಕನೆ) ಎಂಬಂತೆ.

ಪ್ರಿಯ ಲಾಲಜಪತ ಕಣ್ಮರೆಯಾದನೆ! ಪೋದನೆ! ದೀನಪಾಲ। ॥ ಪ ॥ ಘನಗುಣಮಣಿಯು। ವಿಬುಧಾಗ್ರಣಿಯು।
ಭಾರತ ಸೌಭಾಗ್ಯಾಂಬರಮಣಿಯು।
[illegible]
[illegible]
ಭಾರತಹಿತಕರ ಕಾರ್ಯಧುರಂಧರನು।
ಸ್ವಾತಂತ್ರ್ಯದ ರಣಕಣದೊಳು ಮಡಿದನೆ। ಕರ್ಮವೀರ॥
ಪತಿತರಗತಿಯನಾಸತರೋನ್ನತಿಯ। ॥ ೧ ॥
ಪರಿಶೀಲಿಸಿ ಪರಿತಪಿಸುತ ಸದಯ।
ತನುಮನಧನಜನಸೇವೆಗೆ ತೊರೆದ। ದಾನವೀರ ॥ ೨ ॥
ವೈರಿಗಳೆದೆಯಂ ತಲ್ಲಣಗೈದಾ।
ಪಂಜಾಬಿನ ಘನಸಿಂಹನಿನಾದ।
ಇಂದೆಲ್ಲಿದೆ? ಕೈಲಾಸಕೆ ನಡೆದನೆ। ರಾಷ್ಟ್ರವೀರ ॥ ೩ ॥
ಭಾರತ ಕೇಸರಿಯುಂತಿರೆ ಮೊರೆದು।
ಭಾರತ ರಣರಂಗದೆ ನೆರೆಮೆರೆದು
ವೀರಸ್ವರ್ಗವನು ಪಡೆದನೇ। ಲೋಕವೀರ ॥ ೪ ॥
ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

ಚ ರ ಮ ಗೀ ತ

ಪೋದೆಯಾ! ಸ್ವರಾಜ್ಯವೀರ - ನರಲಲಾಮ ಲಾಲನೇ।
ಪೋದೆಯಾ! ಸ್ವದೇಶ ಭಕ್ತ। ॥ ಪಲ್ಲ ॥
ವಿಬುಧವಿನುತ ಶೀಲನೇ! ॥ ಅ ಪ.
ಭಾರತಾರ್ಯ ಧರ್ಮವೀರ। ಪತಿತಜನಸಮುದ್ಧಾರಕ।
ಧೀರವರ್ಯ ಕರ್ಮವೀರ। ವೈರಿಜನ ಭಯಂಕರಾ!
ದೇಶಸೇವೆಗಾಗಿ ವಿವಿಧ। ಕ್ಲೇಶಗಳನು ಸಹಿಸಿದ
ದೇಶಬಂಧು ಲೋಕಮಾನ್ಯ। ತಿಲಕಸಖ। ಸುಖಾಸ್ಪದಾ
ದೇಶದೇಶದಲಿ ತೊಳಲಿ। ಲೋಕಮತವ ಪಡೆಯುತ
ಆ ಸ್ವರಾಜ್ಯಯಜ್ಞ ಬಲಿಗೆ। ತನುವನಿತ್ತ ಧೀಮಂತಾ।
ಭಾರತಕೆ ಸ್ವರಾಜ್ಯವಿಭವ। ಪದವ ಪಡೆವ ಪಂಥವ
ತೋರಿದಾ ಮಹಾನುಭಾವ। ಪಡೆದೆಯಾ ಸಾಯುಜ್ಯವ
ಭಾರತೀ ಸ್ವತಂತ್ರ ಸಮರ। ಚದುರ ವಿಜಯವೈಸಿರಿ
ವೀರಸ್ವರ್ಗಸಾಧಿಸಿದೆಯಾ। ರಾಷ್ಟ್ರವೀರ ಕೇಸರಿ
॥ ೪ ॥
ಪುಂಡೂರು ಲಕ್ಷ್ಮೀನಾರಾಯಣ
ಮಂಗಳೂರು ಪುಣಿಂಚತ್ತಾಯ.

ಲಾಲಾಜಿಯವರ ಗುಣಕಥನಗಳು.

ಬೆಂಗಳೂರ್ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಡಾ॥ ಮೆಟ್‌ಕಾಫ್‌ರ ಅಧ್ಯಕ್ಷತೆಯಲ್ಲಿ ಸಭೆಸೇರಿ ಲಾಲಾಜಿಯವರ ಗುಣಕಥನ ಮಾಡಿ ಅನುತಾಪವನ್ನು ಪ್ರದರ್ಶಿಸಿದರು.

ವಿಶ್ವವಿದ್ಯಾನಿಲಯದ ಅಧಿವೇಶನವು ಬೆಂಗಳೂರಲ್ಲಿ ಆರಂಭವಾಯಿತಷ್ಟೆ, ಅಲ್ಲಿ ಮಿ॥ ಡಿ ವಿ ಗುಂಡಪ್ಪನವರು ಲಾಲಾಜಿಯವರು ಭಾರತೀಯರ [illegible] ಮಾಡಿದ ಕೆಲಸ ಅವರ [illegible] ಗಳು ವಿಚಾರ ಮಾತನಾಡಿ ಅನುತಾಪವನ್ನು ಸೂಚಿಸಿದರು.

ಬೆಂಗಳೂರು [illegible] ಮಿ॥ ಲಿಂಡ್ಸೆಯವರ ಅಧ್ಯಕ್ಷತೆಯಲ್ಲಿ 21 ನೇ ತಾ॥ ಸಭೆನಡಿಸಿ ಲಾಲಾಜಿಯವರ ಗುಣಕಥನ ಮಾಡಿ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದರು.

TAI NADU
30—11—1928

ಬ್ರಾಹ್ಮಣ ಬ್ರಾಹ್ಮಣೇತರರ ಐಕಮತ್ಯ

ನಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ [illegible] ವೈಮನಸ್ಯವು [illegible] ಇರುವುದೆಂದು [illegible] ಅವರ [illegible] ಬರ [illegible] ಉದಾಹರಣೆಗಳನ್ನು [illegible] ಅವ [illegible] ಪ್ರಜಾನುರಾಗಿಯೂ ಲೋಕಸೇವಕನೂ, ಯಾವ ಜಾತಿಯವನೇ ಆಗಲಿ ಅವನನ್ನು ಬ್ರಾಹ್ಮಣರೂ ಬ್ರಾಹ್ಮಣೇತರರೂ ಎಲ್ಲರೂ ಮರ್ಯಾದಿಸುವರು. ಗುಣಕ್ಕೆ ಮತ್ಸರವಿಲ್ಲ ಎಂಬ ನಾಣ್ಣುಡಿಯು ಈ ಎರಡು ಉದಾಹರಣೆಗಳಲ್ಲಿ ನಿದರ್ಶನಕ್ಕೆ ಒದಗಿರುವುದು.

ಈ ತಿಂಗಳ 25 ನೇ ತಾರೀಖಿನಲ್ಲಿ ನಂಜನಗೂಡಿನ [illegible] ಮ|| ರಾ|| ಬಿಳಿಗಿರಿ ರಂಗೈಯ್ಯಂಗಾರ್ಯರಿಗೆ ಮಾಡಿದ ಸನ್ಮಾನವನ್ನು ನೋಡಿದರೆ ಪರಮೋತ್ಸಾಹವಾಗುವುದು. ಮ|| ಐಯ್ಯಂಗಾರ್ಯರವರು ನಂಜನಗೂಡಿನಲ್ಲಿ ನಾಲ್ಕು [illegible] ಸೇವೆಯನ್ನು ಮಾಡಿ ಅತ್ಯಂತ ಪ್ರಜಾನುರಾಗಿಗಳಾಗಿರುವರು. ಇವರಿಗೆ ಈಗ ಹುಬ್ಬಳ್ಳಿಗೆ ವರ್ಗವಾಗಿರುವುದು. ಈ ಸಂದರ್ಭದಲ್ಲಿ ನಂಜನಗೂಡಿನ ಪಟ್ಟಣಿಗರೆಲ್ಲರೂ ಸೇರಿ ಭೋಜನ, ಆತಿಥ್ಯ, ಸಂಗೀತ ಭಾಷಣ ವಾದ್ಯದೊಡನೆ ಕೂಡಿದ ಮೆರವಣಿಗೆ ಮೊದಲಾದವುಗಳಿಂದ ಡಾಕ್ಟರ್ [illegible] ರವರಿಗೆ ತಮ್ಮ ಹೃದಯಪೂರ್ವಕವಾದ ಕೃತಜ್ಞತೆಯನ್ನು ತೋರಿಸಿದರು. ವಾಸ್ತವ್ಯವಾಗಿ ಡೆಪ್ಯುಟಿ ಕಮಿಷನರಗಳಿಗೂ [illegible] ಇದಕ್ಕೆ ಕಾರಣವೇನು? [illegible] ಬ್ರಾಹ್ಮಣರು [illegible] ಪ್ರಜಾ [illegible] ಸದ್ಗುಣಗಳು ಯಾವನಿಗಿವೆಯೋ ಅವನನ್ನು ಮನುಷ್ಯ, ಜಾತಿ, ಕುಲ, ಗೋತ್ರ ಒಂದನ್ನೂ ನೋಡದೆ ಎಲ್ಲರೂ ಮರ್ಯಾದಿಸುವರು.

ಇನ್ನೊಂದು ಉದಾಹರಣೆ—ಬೆಂಗಳೂರಿನ ಚಾಮರಾಜಪೇಟೆ ಡಾಕ್ಟರ್ ಮ|| ಸದಾಶಿವ ಮೊದಲಿಯಾರ್ [illegible] ಬ್ರಾಹ್ಮಣೇತರರಾದ [illegible] ಗೌರವ ವಿಶ್ವಾಸಗಳನ್ನಿಟ್ಟಿರುವರು. ಇದಕ್ಕೆ ಕಾರಣವೇನು? ಮ|| ಐಯ್ಯಂಗಾರ್ಯರಂತೆಯೇ ಇವರ ಪ್ರಜಾ

ಮ || ಸರ್ವಾಭಟ್ಟರು.

ಇವರು ನಮ್ಮ ಸಂಸ್ಥಾನದ ಉಜ್ವಲವ್ಯಕ್ತಿಗಳಲ್ಲೊಬ್ಬರು. ನಮ್ಮ ಮೈಸೂರಿಗೆ ಇವರನ್ನು ಸತ್ಯಾಗ್ರಹದ ಆಚಾರ್ಯರೆಂಬುದಾಗಿ ಕರೆಯಬಹುದು. ಇವರು ಸತ್ಯಾಗ್ರಹ ಧರ್ಮದ ಮರ್ಮವನ್ನು ಒಳಹೊಕ್ಕಿರುವರು. ಇವರ ನುಡಿಯುಂತೆಯೇ ನಡೆಯೂ ಅತ್ಯಂತ ಪರಿಶುದ್ಧವಾದುದು. ಬೆಂಗಳೂರು ಗಲಭೆಗಳ ವಿಷಯವಾಗಿ ಇವರ ಮೇಲೆ ಒಂದು ಮೊಕದ್ದಮೆಯಿರುವುದು. ಈ ಮೊಕದ್ದಮೆಯಲ್ಲಿ ಇವರು ತಮ್ಮ ಪ್ರತಿವಾದವನ್ನು ಎಂದರೆ ಡಿಫೆನ್ಸನ್ನು ಕೊಡುವುದಿಲ್ಲವೆಂಬುದಾಗಿ ಪ್ರತಿಜ್ಞೆ ಮಾಡಿರುವರು. ಇವರು ಈ ರೀತಿಯಾಗಿ ಪ್ರತಿಜ್ಞೆ ಮಾಡಿರುವುದು ಸರಿಯೇ ಎಂಬ ವಿಷಯವಾಗಿ ಜಿಜ್ಞಾಸೆಯು ನಡೆಯುತ್ತಿರುವುದು. ಇವರು 1925 ನೇ ಇಸವಿಯಲ್ಲಿ ಪ್ರಸಿದ್ಧವಾದ ವಡೇರ ಮಂಚನಹಳ್ಳಿಯ ಮೊಕದ್ದಮೆಯಲ್ಲಿ ಈಗಿನ ಕೋರ್ಟುಗಳ ಸ್ವಂತ ಅನುಭವನ್ನು ಪಡೆದಿರುವರು.

ಈ ಅನುಭವದಿಂದಲೇ ಪೊಲೀಸಿನವರಿಗೂ, ಪ್ರಜೆಗಳಿಗೂ ತಕರಾರು ಬಿದ್ದ ಕಾಲದಲ್ಲಿ ಬಹ್ವಂಶವಾಗಿ ಪೋಲೀಸರದೇ ನ್ಯಾಯವೆಂದು ನಮ್ಮ ಕೋರ್ಟುಗಳಲ್ಲಿ ತೀರ್ಮಾನವಾಗುವ ಸಂಭವವಿರುವುದರಿಂದ, ಮ|| ಸರ್ವಾಭಟ್ಟರು ಸ್ವಂತ ಅನುಭವದಿಂದ ಸಂರಕ್ಷಣೆಯನ್ನು ಮಾಡಿಕೊಳ್ಳುವದಿಲ್ಲ ಎಂದು ನಿಶ್ಚಯಮಾಡಿದ್ದು? ಈಗ ಅವರ ಮೇಲೆ ಹಾಕಲ್ಪಟ್ಟಿರುವ ಮೊಕದ್ದಮೆಯಲ್ಲಿ ಸರ್ವಾಭಟ್ಟರು ತಪ್ಪಿತಸ್ಥರೇ ಅಲ್ಲವೇ ಎಂಬ ವಿಷಯವು ನಿಷ್ಪಕ್ಷಪಾತಿಗಳೆಲ್ಲರಿಗೂ ಗೊತ್ತಿರುವ ವಿಷಯವು. ಮ|| ಸರ್ವಾಭಟ್ಟರವರು ಮಾಡಿರುವ ನಿಶ್ಚಯವು ಸ್ವಾತ್ಮಸಾಧುವು. ತರರೂ ಅವರಂತೆಯೇ ಅನುಭವವನ್ನು ಹೊಂದಿದರೆ ಇದೇ ನಿಶ್ಚಯಕ್ಕೆ ಬರುವರು.

ಸುರಾಗ, ದೇಶಾಭಿಮಾನ ಸ್ವಾರ್ಥತ್ಯಾಗ, ಸೇವಾತತ್ಪರತೆ ಈ ಗುಣಾತಿಶಯಗಳೇ ಇವರನ್ನು ಎಲ್ಲರ ಮನ್ನಣೆಗೂ ಪಾತ್ರರನ್ನಾಗಿ ಮಾಡಿರುವವು.

ಇಷ್ಟು ಜಾತಿ ವೈಷಮ್ಯವಿದ್ದರೂ ನಮ್ಮ ಮೈಸೂರಿನಲ್ಲಿ ಗುಣೈಕಪಕ್ಷಪಾತವೂ ಇನ್ನೂ ಅಳಿದಿರುವುದಿಲ್ಲ. ತನಗೆ ಉಪಕಾರ ಮಾಡಿದವರನ್ನು ಎಂದಿಗೂ ಮರೆಯದಿರುವುದು. ಮೈಸೂರು ದೇಶೀಯರ ಹುಟ್ಟುಗುಣವು. ಆದುದರಿಂದ ಪ್ರಜಾಸೇವಕರೆಲ್ಲರೂ ಜಾತಿಯುವಾದದ ಗೊಂದಲಕ್ಕೆ ಬೀಳದೆ ಎಲ್ಲರ ಸೇವೆಯನ್ನೂ ಮಾಡುವುದಕ್ಕೆ ಸಿದ್ಧವಾದರೆ ಅಂತಹವರೇ ಬ್ರಾಹ್ಮಣ ಬ್ರಾಹ್ಮಣೇತರರ ಐಕಮತ್ಯಕ್ಕೆ ಆಧಾರಸ್ಥಂಭರಾಗುವರು. ಮ|| ರಾ|| ಬಿಳಿಗಿರಿ ರಂಗೈಯ್ಯಂಗಾರ್ ಮತ್ತು ಮ|| ಸದಾಶಿವ ಮೊದಲಿಯಾರ್ ಇಂತಹವರ ಸಂಖ್ಯೆಯು ನಮ್ಮ ದೇಶದಲ್ಲಿ ಜಾಸ್ತಿಯಾಗಿ ಜಾತಿ ವೈಷಮ್ಯವು ತೊಲಗಲೆಂದು ನಾವು ಪ್ರಾರ್ಥಿಸುತ್ತೇವೆ

ಪ್ರಜಾಮಿತ್ರ

ಪ್ರಜಾಮಿತ್ರ ಪತ್ರಿಕೆಯ ಸಂಪಾದಕರಾದ ಮ|| ರಾ|| ಜಿ. ಆರ್. ಎಸ್. ರಾವ್‌ಯವರು ಮದ್ರಾಸಿನ ದ ಡಿಸೆಂಬರ್ ಮೊದಲನೆ ವಾರದಲ್ಲಿ ತಮ್ಮ ಪತ್ರಿಕೆಯನ್ನು ಹೊರಡಿಸುವುದಾಗಿ ಕೇಳಿ ಸಂತೋಷಪಡುತ್ತೇವೆ.

ಇಷ್ಟು ಉತ್ಸಾಹದಿಂದ ಕೂಡಿದ ಇಂತಹ ತರುಣರಿಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಸೇವೆಮಾಡುವುದಕ್ಕೆ ಅವಕಾಶವು ದೊರೆಯದೆ ಇರುವುದು ಮೈಸೂರಿನ ದುರದೃಷ್ಟವನ್ನು ತೋರಿಸುತ್ತದೆ. ಹೇಗಾದರೂ ಆಗಲಿ, ಮೈಸೂರಿನ ಹೊರಗಿದ್ದರೂ ಕೂಡ ಮ|| ರಾಯರವರು ಮೈಸೂರನ್ನು, ನನ್ನ ಮೈಸೂರು, [illegible] ಸೇವೆಯನ್ನು ನಾನು ಬಿಡುವುದಿಲ್ಲ ಎಂದು [illegible] ದಿಂದ ಮೈಸೂರಿನ ಸೇವೆಯನ್ನು ಮಾಡುವುದು ಪ್ರಶಂಸನೀಯವು. ಇವರ ಪ್ರಯತ್ನಗಳು ಸಫಲವಾಗಲಿ ಎಂದು ನಾವು ಹಾರೈಸುವೆವು.

"ಪುತ್ರಕಾಮೇಷ್ಟಿ" ಯಾಗ

ರಾಜಧಾನಿಯ ಉತ್ತರಾದಿ ಮಠದ ಮಗ್ಗುಲಲ್ಲಿ ಮ|| ರಾ|| ವಾಜಪೇಯಂ ರಾಘವೇಂದ್ರಾಚಾರ್ಯರವರು ಇದೇ ಕಾರ್ತಿಕ ಬಹುಳದಲ್ಲಿ ಪುತ್ರಕಾಮೇಷ್ಟಿ ಯಾಗವನ್ನು ಮಾಡುವದಾಗಿ ತಿಳಿಯಬರುತ್ತದೆ.

ಚಿಕ್ಕಬಳ್ಳಾಪುರದ ಹೈಸ್ಕೂಲ್ ಡೆ.

ಮೇಲ್ಕಂಡ ಹೈಸ್ಕೂಲಿನ ವಾರ್ಷಿಕೋತ್ಸವವು 1928 ನೇ ಡಿಸೆಂಬರ್ ಮಾಹೆಯಲ್ಲಿ ನಡೆಯುವುದು. ಸರ್. ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷತೆಯನ್ನು ವಹಿಸುವರು. ಸ್ಕೂಲಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳೆಲ್ಲರೂ ಈ ಸಂತೋಷಕೂಟಕ್ಕೆ ಉದಾರವಾಗಿ ಚಂದಾ ಹಾಯ ಮಾಡಬೇಕೆಂದು ಅಲ್ಲಿನ ಕಾರ್ಯದರ್ಶಿಯವರು ಕೋರಿರುತ್ತಾರೆ.

ದೇಶಭಕ್ತರ ಸಂಸ್ಕಾರೋತ್ಸವ

ದಿವಂಗತರಾದ ಲಾಲಾಜಿಯವರ ಶವವನ್ನು ಲಕ್ಷಾಂತರ ದೇಶಾಭಿಮಾನಿಗಳು ರುದ್ರಭೂಮಿಗೆ ಮೆರವಣಿಗೆ ಮಾಡಿಸಿಕೊಂಡು ಹೋದದ್ದು ಸರಿಯಷ್ಟೆ. ಸಿನಿಮಾ ಕಂಪನಿಯವರು ಮೆರವಣಿಗೆಯ ಫೋಟೋವನ್ನು ದಾರಿಯುದ್ದಕ್ಕೂ ಫಿಲಂ ಮಷೀನ ತೆಗೆದುಕೊಂಡು ಪ್ರದರ್ಶನಕ್ಕೆ ತಕ್ಕಂತೆ ಏರ್ಪಡಿಸಿರುವುದಾಗಿ ತಿಳಿಯಬರುತ್ತೆ.

ವಿಶ್ವೇಶ್ವರಯ್ಯ ಕಮಿಟಿ ವರದಿ.

ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಮುಂದಿನ ತಿಂಗಳಿನ 15 ನೇ ತಾರೀಖಿನೊಳಗಾಗಿ ತಯಾರಾಗುವದೆಂಧು ಸಮಾಚಾರವು ಬಂದಿರುವುದು.

Regd No. M. 2322

॥ ವಂದೇ ಮಾತರಂ ॥

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯಾ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ
ಚಂದಾ [illegible]

ಸಂಪುಟ ೧]　　ಶನಿವಾರ ೧ ಡಿಸೆಂಬರ್　　[ಸಂಚಿಕೆ [illegible]

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ,)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Week[illegible] are available for sale at the following places:—

1 N. P. Venkatappa & Co
Excelsior Type-writing Institute, Balepet
Bangalore City

2 Sweet Mart, Lansdowne Buildings,
Mysore

3 Siddiah, Sri Nanjundeswara Bank L[illegible]
Nanjangud

4 M. N. S & Sons, Lansdowne B[illegible]
Mysore.

5 Subba Pundit & Co, Lakshmivilas [illegible]
Mysore.

6 Friends' Union, Mysore.

TAI NADU.

Daily Edition.

The Leading Nationalist Daily of Mysore.

Printed and published by P. R. Ramaiya.
Sri Rama Press, D. Subdiah Road Mysore.

ತಾಯಿನಾಡು.

1—12—1928

ವಿವಿಧ ವಿಷಯಗಳು

ಕಾನಕಾನಹಳ್ಳಿ.

ಕಾನಕಾನಹಳ್ಳಿಯ ಮುನಿಸಿಪಾಲಿಟಿಯವರು ದಿವಂಗತರಾದ ದೇಶಭಕ್ತ ಲಾಲಾಜಿಯವರ ಸ್ಮರಣಾರ್ಥವಾಗಿ ಈ ಮಾಹೆ 21 ನೇ ತಾ|| ಮೀಟಿಂಗಿನಲ್ಲಿ ದುಃಖಸೂಚಕವಾದ ಠರಾವನ್ನು ಪಾಸ್‌ಮಾಡಿದರು.

ಬೈಸಿಕಲ್ ಪ್ರಯಾಣ.

ದುರ್ಗಾದಾಸ್‌ಭಟ್ಟಾಚಾರ್ಯ, ಶಿವಚಂದ ಭಟ್ಟಾಚಾರ್ಯ ಮತ್ತು ವಿಶ್ವನಾಥಪಾಂಡ್ಯರೆಂಬ ಮೂವರು ಬೈಸಿಕಲ್ಲಿನ ಮೇಲೆಯೇ ಹಿಂದೂ ದೇಶವನ್ನೆಲ್ಲಾ ಸುತ್ತಿಕೊಂಡು ಬರಬೇಕೆಂಬ ಉದ್ದೇಶದಿಂದ ಮುಂದಿನ ಡಿಸೆಂಬರ್ ಮಾಹೆ ಮೊದಲನೆ ತಾ|| ನ ದಿನ ಕಾಶಿಯಿಂದ ಹೊರಡುತ್ತಾರೆ.

ಬಡತನದ ಮದ್ದು

ನಮ್ಮ ಹಿಂದೂದೇಶದ ದಾರಿದ್ರ್ಯವು ಇಂಗಬೇಕಾದರೆ ಜನರೆಲ್ಲರೂ ವಾಗಾಡಂಬರವನ್ನು ಬಿಡಬೇಕು. ಕೈಗಾರಿಕೆಗಳಿಗಾರಂಭಿಸಬೇಕು. ಜಿರಾಯಿತಕಸಬೇ, ಭಾರತೀಯರ ಮುಖ್ಯಾವಲಂಬನವಾಗಿದ್ದರೂ, ವಿರಾಮಕಾಲಗಳಲ್ಲಿ ಉಪವೃತ್ತಿಗಳು ಹೆಚ್ಚಬೇಕು. ಈ ಕಾರ್ಯಗಳಿಗಾಗಿ ಸರ್ಕಾರದವರು ಉಚಿತವಾದ ಮನೆ ಕೈಗಾರಿಕೆಗಳನ್ನು ನಿರ್ಮಿಸಿ ಆಚರಣೆಗೆ ತರಬೇಕು, ಎಂದು ಮದ್ರಾಸಿನ ಪನಗಲ್ ರಾಜರವರು ಹೇಳಿರುತ್ತಾರೆ.

ಕಾಲರಾ

ಈ ಕೆಳಗೆ ನಮೂದಿಸಿರುವ ಗ್ರಾಮಗಳಲ್ಲಿ ಕಾಲರಾ (ವಾಂತಿಭೇದಿ) ರೋಗವು ತಲೆದೋರಿರುತ್ತದೆ. ಈ ಅಂಟುರೋಗವು ಮುಖ್ಯವಾಗಿ ನೀರಿನಿಂದಲೇ ಉತ್ಪನ್ನವಾಗುವುದರಿಂದ, ಈ ಗ್ರಾಮಗಳಿಂದ ಬರತಕ್ಕವರನ್ನು ಮೈಸೂರು ಸಿಟಿಯಲ್ಲಿರತಕ್ಕವರು ಸೇರಿಸಬಾರದು. ಅವರು ತರತಕ್ಕ ಹಾಲು ಮೊಸರು ವಗೈರೆ ಸಾಮಾನುಗಳನ್ನು ಕಾಸದೆ ಉಪಯೋಗಿಸಬಾರದು. ಆ ಗ್ರಾಮಗಳಿಗೆ ಸಿಟಿಯಿಂದ ಯಾರೂ ಖಂಡಿತವಾಗಿಯೂ ಯಾವ ಕಾರಣದಿಂದಲೂ ಹೋಗಬಾರದು. ಒಂದುವೇಳೆ ನಿರ್ವಾಹವಿಲ್ಲದೆ ಹೋಗಬೇಕಾದಲ್ಲಿ ಭಾವಿ, ಕೆರೆ, ಕುಂಟೆಗಳ ನೀರನ್ನಾಗಲಿ, ಎಣ್ಣೆ ಹೊಳೆಯ ನೀರನ್ನಾಗಲಿ ಕುದಿಸದಲ್ಲದೆ ಉಪಯೋಗಿಸಲೇ ಬಾರದು. ಎಣ್ಣೆ ಹೊಳೆಯು ಕಪಿನೀ ನದಿಗೆ ಹೋಗಿಸೇರುವುದರಿಂದ ಆ ನೀರನ್ನೂ ಕುದಿಸದೆ ಉಪಯೋಗಿಸ ಬಾರದೆಂದು ಹೆಲ್ತಾಫೀಸರವರು ಜನರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ. ಊರುಗಳು (1) ಸಿಂಘುವಳ್ಳಿ (2) ಸಾಲಾಹುಂಡಿ (3) ದಡದಳ್ಳಿ (4) ಕೋಟೋಹುಂಡಿ (5) ಪಡವಲಹುಂಡಿ (6) ಚಂದಹಳ್ಳಿ (7) ಕಡಕೋಳ (8) ಬಂಡೀಪಾಳ್ಯ.

ದಿವಾನರವರು.

ದಿವಾನರವರು ಕಳೆದ ತಿಂಗಳು 28 ನೇ ತಾ|| ನ ದಿವಸ ಬೆಂಗಳೂರಿಂದ ಹೈದರಾಬಾದಿಗೆ ಪ್ರಯಾಣಮಾಡಿ ಅಲ್ಲಿಯ ರೆಸಿಡೆಂಟರಾದ ಮಿ|| ಬಾರ್ಟರವರ ಅತಿಥಿಗಳಾಗಿ [illegible] ದಿನಗಳವರೆಗೆ ಇದ್ದು ವಾಪಸ್ ಬರು[illegible]ವವರಾಗಿರುತ್ತಾರೆಂತ ತಿಳಿಯಬರುತ್ತೆ.

ಘೋಷಾ ಸ್ತ್ರೀಯರ ಪ್ರತಿಜ್ಞೆ.

ಕಾನ್‌ಪುರದಲ್ಲಿ ಸಂಯುಕ್ತ ಪ್ರಾಂತ್ಯ ಮುಸಲ್ಮಾನರ ಸರ್ವಪಕ್ಷೀಯ ಪರಿಷತ್ತು ಸೇರಿತ್ತು. ಮೌ|| ಅಬ್ದುಸೋಭಾನಿಯವರು ಸಂಪೂರ್ಣ ಸ್ವಾತಂತ್ರ್ಯದ ಠರಾವು ತಂದರು. ಅದನ್ನು ಕೆಲವರು ವಿರೋಧಿಸಿದರು. ಆಗ ಘೋಷಾಸ್ತ್ರೀಯರು ಮುಸಲ್ಮಾನ ಪುರುಷರಿಗೆಲ್ಲಾ ಸಂಪೂರ್ಣ ಸ್ವಾತಂತ್ರ್ಯದ ಉದ್ದೇಶ್ಯವಿಲ್ಲದಿದ್ದರೆ ನಾವು ಪರದೆಯನ್ನು ತೆಗೆದು ಬಿಸಾಟು ಸ್ವಾತಂತ್ರ್ಯಕ್ಕೆ ಹೋರಡಲು ಅನುವಾಗಿದ್ದೇವೆ ಎಂದು ಬರಹ ಮೂಲಕ ತಿಳಿಸಿದರು. ಸಂಪೂರ್ಣ ಸ್ವಾತಂತ್ರ್ಯದ ಠರಾವು ಪಾಸಾಗಿ ಹೋಯಿತು.

ಸ್ಕೌಟ್ ಮತ್ತು ವಾಲಂಟೀಯರ್ ಚಳವಳಿಗಳು

ಈ ತಿಂಗಳು 25 ನೇ ತಾ|| ನ ವಿಶ್ವಕರ್ಣಾಟಕದಲ್ಲಿ ಸಾಮ್ರಾಜ್ಯ ಸಂಕೋಲೆ ಎಂಬ ಅಗ್ರಲೇಖನದಲ್ಲಿ ಬಾಯ್ಸ್ ಸ್ಕೌಟ್ ಮತ್ತು ವಾಲಂಟಿಯರ್ ಚಳವಳಿಗಳಿಗೆ ಇರುವ ವ್ಯತ್ಯಾಸವು ತೋರಿಸಲ್ಪಟ್ಟಿರುವುದು. ಆ ಲೇಖನವು ಸಮಸ್ತರ ಅವಲೋಕನೆಗೂ ಅರ್ಹವಾದುದು. ಬಾಯ್ಸ್ ಸ್ಕೌಟ್ ಚಳವಳಿಯು ದೇಶೀಯ ರೂಪಕ್ಕೆ ತಿರುಗಿಸಲ್ಪಡಬೇಕು, ಎಂಬುದನ್ನು ಸ್ಕೌಟು ಚಳುವಳಿಯ ಮುಖಂಡರುಗಳೇ ಒಪ್ಪುತ್ತಾರೆ. ವಾಲಂಟಿಯರ್ ಚಳುವಳಿಯು ರಾಷ್ಟ್ರೀಯ ಮಹಾ ಸಭೆಯ ಕೂಸು. ರಾಷ್ಟ್ರೀಯ ಮಹಾ ಸಭೆಯ ಸ್ಫೂರ್ತಿಯೂ, ದೇಶಾಭಿಮಾನವೂ ಸ್ವಾರ್ಥತ್ಯಾಗವೂ ವಾಲಂಟಿಯರ ಚಳುವಳಿಯಲ್ಲಿ ಮೂರ್ತೀಭವಿಸಿರುವವು. ಸ್ಕೌಟು ಚಳುವಳಿಯು ಬ್ರಿಟಿಷರ ರಾಜ್ಯಾಡಳಿತದ ಅಂಗದಲ್ಲಿ ಬಂದಾದುದು. ಬ್ರಿಟಿಷರೇ ಭಾರತೀಯರಿಗಿಂತಲೂ ಎಷ್ಟೋ ರೀತಿಯಲ್ಲಿ ಉತ್ತಮರು, ಭಾರತೀಯರು ಅಧಮರು ಎಂಬ ಭಾವನೆಯು ಬಾಲಕರಲ್ಲಿ ಬೇರೂರಲವಕಾಶವಾಗುವುದು. ಆದುದರಿಂದ ವಾಲಂಟಿಯರ್ ಚಳವಳಿಯೇ ನಮ್ಮ ದೇಶದ ಬಾಲಕರ ಅಭ್ಯುದಯಕ್ಕೆ ಸಾಧಕವಾದುದು. ಸ್ಕೌಟ್ ಚಳವಳಿಯು ಅದರಲ್ಲಿರುವ ಪರಕೀಯ ಅಂಶಗಳನ್ನು ತೊರೆದು ದೇಶೀಯ ಅಂಗಗಳನ್ನು ಜೋಡಿಸಿಕೊಂಡರೆ ಇವೆರಡಕ್ಕೂ ಏನೂ ಭೇದವಿಲ್ಲದೆ ಎರಡೂ ಏಕರೀತಿಯಲ್ಲಿ ಬಾಲಕರ ಅಭ್ಯುದಯಕ್ಕೆ ಸಾಧಕವಾಗುವವು.

ರೇಟ್ ಪೇಯರುಗಳ ಸಂಘ.

ಮೆಲ್ಕಂಡ ಸಭೆಯ (ರಿಜಿಸ್ಟ್ರ ಆದನಂತರ್ ಮೊದಲನೆಯ ಮೀಟಿಂಗು ರಾಜಧಾನಿಯ ಟರ್ವಹಾಲಿನಲ್ಲಿ ನಾಳೆ ಸಾಯಂಕಾಲ (2-12 1928) 5-30 ಘಂಟೆಗೆ ನಡೆಯುವುದು,

ರಜಾ

ಮೈಸೂರು [illegible] ಎ. ವಿ. ರಾಮನಾಥ್ ಬಿ. ಎ. ಯವರಿಗೆ 1929 ನೇ ಜನವರಿ 2 ನೇ ತಾ|| ರಿಂದ ಕ್ರಿಸ್ಮಸ್ ರಜದ ಜೊತೆಗೆ 15 ದಿವಸಗಳ ರಜವನ್ನು ಸರ್ಕಾರದವರು ಮಂಜೂರ್ಮಾಡಿರುವರು.

ಚುನಾವಣೆ

ಚನ್ನಪಟ್ಟಣದ ಮುನಿಸಿಪಲ್ ಕೌನ್ಸಿಲಿಗೆ ಮ. ರಾ|| ಡಿ. ವಿ ರಾಮಸಂಜೀವ ಶೆಟ್ಟಿಯವರನ್ನು ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಿರುತ್ತಾರೆ.

ರೇಷ್ಮೆ ಉತ್ಪತ್ತಿ

ನಮ್ಮ ಸರ್ಕಾರದವರಿಂದ ನಡೆಸಲ್ಪಡುತ್ತಿರುವ ರೇಷ್ಮೆ ಕೈಗಳಲ್ಲಿ 1928 ನೇ ಇಸ್ವಿ ಸಪ್ಟೆಂಬರ್ ಆಖೈರಿಗೆ 64800 ರೂಪಾಯಿಗಳು ಉತ್ಪತ್ತಿಯಾಗಿವೆ. ಹೋದ ವರುಷ ಇದೇ ವಾರಕ್ಕಿಂತಲೂ ಈಸಾರಿ 3619 ರೂಪಾಯಿ ಹೆಚ್ಚಾಗಿ ಉತ್ಪತ್ತಿಯಾಗಿರುತ್ತೆ.

ರಜಾ

ಅಮಲ್ದಾರ್ ಮ|| ರಾ|| ಎ. ಮಾಕಳಪ್ಪ ಬಿ. ಎ ಯವರಿಗೆ ಕೊಟ್ಟಿರುವ ರಜದ ಜೊತೆಗೆ ಅರ್ಧಸಂಬಳದ ಒಂದು ವರ್ಷದ ಫರ್ಲೋ ರಜವನ್ನು ಮಂಜೂರ್ಮಾಡಿರುವರು,

ಮದ್ಯಪಾನದಿಂದ ಪ್ರಾಣಹತ್ಯ.

ಠಾಣಾ ಜಿಲ್ಲೆಯಲ್ಲಿ ಸಂಬಾಸಾ ಎಂಬುವನು ಮಿತಿಮೀರಿದ ಮದ್ಯಪಾಯಿಯಾಗಿದ್ದನು. ಇವನಿಗೆ ಇಬ್ಬರು ಹೆಂಡಿರಿದ್ದರು. ಒಂದು ದಿನ ವಿಶೇಷವಾಗಿ ಮದ್ಯಪಾನ ಮಾಡಿದ್ದ ವೇಳೆಯಲ್ಲಿ ತನ್ನ ಇಬ್ಬರು ಹೆಂಡಿರ ಪೈಕಿ ಒಬ್ಬಳನ್ನು ಹಿಡಿದು ತುಂಬಾ ಅಪಾಯಕ್ಕೆ ಗುರಿಮಾಡಿದನು. ಅಲ್ಲದೆ ಅಳುತ್ತಿದ್ದ ಇವನ ಮಗುವೂ ಕೂಡ ಇವನಿಂದಲೇ ಕೊಲ್ಲಲ್ಪಟ್ಟಿತು. ಈ ಕಾರಣದಿಂದ ಅಲ್ಲಿನ ಸೆಷನ್ಸ್ ಜಡ್ಜಿಯವರು ಹತ್ತು ವರ್ಷ ಕಠಿಣ ಸಜವನ್ನು ಅವನಿಗೆ ವಿಧಿಸಿದರು.

ಫ್ರೆಂಚ್ ಆಫೀಸರ ಕೊಲೆ.

ಮೊರಾಕೋವಿನಲ್ಲಿ ಒಬ್ಬ ಫ್ರೆಂಚ್ ಆಫೀಸರು ಜನರು ಪವಿತ್ರ ಸ್ಥಾನವೆಂದು ಗಣಿಸಿದ್ದ ಸ್ಥಳದಲ್ಲಿ ಅನಾಚಾರ ನಡಿಸಿದನು. ಇದಕ್ಕಾಗಿ ಅಲ್ಲಿನ ಮುಸಲ್ಮಾನರು ಆಫೀಸರನ್ನು ಕೊಲ್ಲಿಸಿದರು.

ವಿದ್ಯಾರ್ಥಿಗಳ ಜುಲ್ಮಾನೆಯ ರದ್ದು.

ಗುಜರಾತಿನ ಗೌ|| ಕಾಲೇಜಿನ [illegible] ಯೇಟ್ ತರಗತಿಯ 160 ವಿದ್ಯಾರ್ಥಿಗಳು ಅಕ್ಟೋಬರ್ 12 ನೇ ತಾ|| ನ ದಿವಸ ಸೈಮನ್ ಸಮಿತಿಯವರು ಬೊಂಬಾಯಿಗೆ ಬಂದ ದಿನ ಕಾಲೇಜಿಗೆ [illegible] ಇದ್ದುದಕ್ಕಾಗಿ ತಲಾ 3 ರೂ ಗಳಂತೆ ಜುಲ್ಮಾನೆಯು ವಿಧಿಸಲ್ಪಟ್ಟಿತು. ವಿದ್ಯಾರ್ಥಿಗಳು ಜುಲ್ಮಾನೆಯನ್ನು ಕೊಡದಿರಲು ಈಗ ಪ್ರಿನ್ಸಿಪಾಲರು ರಾಜಿಗೆ ಬಂದು ಫೈನನ್ನು ಮಾಫಿಮಾಡಿರುವರು. ಅಲ್ಲದೆ ಈ ಹುಡುಗರಿಗೆ ಪ್ರತ್ಯೇಕ ಪರೀಕ್ಷೆಯನ್ನು ನಡಿಸುವದಕ್ಕೆ ಏರ್ಪಡಿಸಿರುವರು.

TAI NADU

[illegible]

ಆತ್ಮ ಮರ್ಯಾದೆ

[illegible]

[illegible]

ಅಪ್ಪಟ ಟಾನವನ್ನು ನಟ್ಟರೆ ಇಗ ಇರುವ ಕೌನ್ಸಿಲ[illegible] ಗಳಲ್ಲಿ [illegible] ಅಧಿಕಾರವನ್ನು ವಹಿಸಲು [illegible]

[illegible] ಕಾರದವರು ಪರೀಕ್ಷೆ ಮಾಡಿ ಕಂಡು ಹಿಡಿದರೋ! [illegible] ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಕಾರಣ [illegible]? ಅಥವಾ ಯಾವುದೂ ಇಲ್ಲದಿದ್ದರೆ, ಈಗ ಹಾಲಿ ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಕೌನ್ಸಿಲ್ಲಿನಲ್ಲಿ ಇರುವ [illegible] ಸರಕಾರಕ್ಕೆ ವಿಶ್ವಾಸವಿಲ್ಲವೋ? ಈ [illegible] ಸರಕಾರದವರಿಗೆ ದಿನ ದಿನಕ್ಕೂ [illegible] [illegible]

[illegible] ಈ [illegible] ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಕೌನ್ಸಿಲ [illegible] ಸರಕಾರದವರು [illegible] ತೋರಿಸಿರುವ ಅಪ [illegible] ಮಾನಕ್ಕೆ ಸರಿಯಾದ ಉತ್ತರವನ್ನು [illegible] ನಿಜ ವಾಗಿಯೂ ಅವರಿಗೆ ಆತ್ಮ ಮರ್ಯಾದೆಯಿದ್ದರೆ ಅವರು ಒಂದು [illegible] ಕೌನ್ಸಿಲಿನಲ್ಲಿರಬಾರದು. [illegible] ರಾಜೀನಾಮೆಯನ್ನು ಕೊಡಬೇಕು, [illegible] ಸರ್ವವನ್ನೂ [illegible] ಸರಕಾರದವರು [illegible] ತೋರಿಸುವುದಕ್ಕಾಗಿ [illegible] ಬೇಕು. [illegible] ನಿಜವಾದ ಅಭಿಪ್ರಾಯವು ಏನು ಎಂಬುದು ಆಗಲೀಗ ಸರಕಾರಕ್ಕೆ ಚೆನ್ನಾಗಿ ಗೊತ್ತಾಗುವುದು. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಕೌನ್ಸಿಲರುಗಳು [illegible] ಉಳಿಸಿ ಕೊಳ್ಳುವರೇ? ಬೆಂ ಗಳೂರು ಸಿಟಿ [illegible] ಆತ್ಮ ಮರ್ಯಾದಿತರಾದ ಕೌನ್ಸಿಲರುಗಳಿಗೆ ತಮ್ಮ ಬೆಂಬಲವನ್ನು ಕೊಡು [illegible] ಆತ್ಮ ಮರ್ಯಾದೆಯನ್ನು ಸಂರಕ್ಷಿಸುವ ಕಾಲವು ಒದಗಿರುವುದು. [illegible]

ಮೈಸೂರು ಸಿಪಾಯಿಗಳು ನಿಷ್ಪ್ರಯೋಜಕರಾಗುವರೇ?

[illegible] ಸ್ಕೀಮರ್ ಕಮಿಷನ್ನಿನ ಅಧ್ಯಕ್ಷರಾದ [illegible] ಗಿರುವುದೆಂದು [illegible] ಇಂಡಿಯಾ ಸರಕಾರದ ಕಾನೂನಿನ [illegible] ಸಂಗತಿ. ಮೈಸೂರು [illegible] ರಾಮಸ್ವಾಮಿ [illegible] ಇದನ್ನು [illegible] ಸರಕಾರದ ಕಾನೂನಿನ ಮಂತ್ರಿಗಳನ್ನು [illegible] ದರಬಾರ್ ಗವರ್ನರ್ [illegible] ಮೈಸೂರು [illegible] ಮೇಲೆ ಮೈಸೂರಿನ [illegible] ಈ ಬೊಂಬಾಯಿಯ ಸ್ವರಾಜ್ಯ ಪಂಗಡದ ಮುಖಂಡರಾದ ಬ್ಯಾರಿಸ್ಟರ್ ಜಯಕರ್‌ರವರನ್ನು ನೇಮಿಸಲು ಯೋಚನೆ ಮಾಡಿದಂತೆಯೂ, ಇದು ಸ್ಕೈಮರ್ ಕಮಿಷನ್ನಿನ ಅಧ್ಯಕ್ಷರಾದ ಸರ್ ಜಾರ್ಜ್ ಸ್ಕೈಮರ್‌ರವರಿಗೆ ತಿಳಿದು ಇವರು, ಜಯಕರ್‌ರವರನ್ನು ಸರ್ವಥಾ ನೇಮಿಸಕೂಡದು, ಏಕೆಂದರೆ ಈ ಬ್ಯಾರಿಸ್ಟರ್ ರವರು ಸ್ಕೈಮರ್ ಕಮಿಷನ್ನಿನ ಬಹಿಷ್ಕಾರದಲ್ಲಿ ಬಹಳ ಪ್ರಾಮುಖ್ಯವಾದ ಭಾಗವನ್ನು ತೆಗೆದುಕೊಂಡಿರುವರೆಂದೂ, ಸ್ಕೈಮರ್‌ರವರು ಇಂಗ್ಲೆಂಡಿನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟರಿಗೆ ಬರೆದಂತೆಯೂ, ಸರ್ [illegible] ಗೌರ್ ಎಂಬವರನ್ನು ಶಿಫಾರಸು ಮಾ[illegible] ಡಿರುವಂತೆಯೂ, ಜಯಕರವರನ್ನು ನೇಮಿಸಿದರೆ, ಜ್ಞಾರ್ಜ್ ಸ್ಕೈಮನ್ನರು ರಾಜೀನಾಮೆ ಕೊಡುವರೆಂದೂ, [illegible] ರರವರನ್ನು ನೇಮಿಸಿದರೆ, ವೈಸ್‌ರಾಯರವರು ರಾಜೀನಾಮೆಯನ್ನು ಕೊಡುವರೆಂದೂ, ಫ್ರೀಪ್ರೆಸ್ ಆಫ್ [illegible] ಯಾ ಪ್ರಕಟನ ಶಾಖೆಯು ತಿಳಿಸುತ್ತದೆ.

ಪತ್ರಿಕಾ ವಾರ್ತಾ ಸಂಗ್ರಹ

4 ನೇ ವರ್ಷದ ಕಣಿಯರ ಮಹಾಸಭೆ

(ಡಿಶಂಬರ್ 9, 10, 11, 1928 ಸಂತೇಮರಹಳ್ಳಿ)

ಚಾಮರಾಜನಗರದ ತಾಲ್ಲೋಕು ಸಂತೇಮರಹಳ್ಳಿಯಲ್ಲಿ 4 ನೇ ವರ್ಷದ ಕಣಿಯರ ಮಹಾಸಭೆಯು, ಶ್ರೀ ಅಖಿಲ ಕರ್ಣಾಟಕದ ಹಿಂದೂಸ್ಥಾನೀ ಸೇವಾ ದಳದ ಸೇನಾಪತಿಗಳಾದ ಶ್ರೀಯುತ ಹೊಸಕೊಪ್ಪ [illegible] ರಾಯರವರ ಅಧ್ಯಕ್ಷತೆಯಲ್ಲಿ ನಡೆಯಲ್ಲಿ ನಡೆಯಿತು. ಆ ಕಾಲದಲ್ಲಿ ಶ್ರೀಮಾನ್ ಗೋವಿಂದಾಚಾರ್ಯರು [illegible] ಗಳವರೂ ಶ್ರೀಯುತರುಗಳಾದ [illegible] ಕೇಸರಿ ಪತ್ರಿಕೆಯ ಸಂಪಾದಕರಾದ ಸೀತಾರಾಮಶಾಸ್ತ್ರಿಗಳವರೂ, [illegible] ಕರ್ನಾಟಕ ಪತ್ರಿಕೆಯ ಸಂಪಾದಕರಾದ ಟಿ. ಟಿ. [illegible] ರವರೂ, ಆನೇಕಲ್ಲು ಸರ್ವಾಭಟ್ಟರವರೂ ಶ್ರೀರಂ [illegible] ದ ಸಿದ್ದಲಿಂಗದೇವರುರವರೂ, [illegible] ಮಯ್ಯನವರೂ ತಾಯಿನಾಡು ಪತ್ರಿಕೆಯ ಸಂಪಾದಕರಾದ ಪಿ. ಆರ್. ರಾಮಯ್ಯನವರೂ ಇವರೇ ಮೊದಲಾದವರು [illegible] ಕಣಿಯರ ಸಂಘದ ಜನರಲ್ ಸೆಕ್ರೆಟರಿಯವರಾದ [illegible] ರಂಗಸ್ವಾಮಿಯವರು, ಅಧ್ಯಕ್ಷರಾದ [illegible] ಕಣಿಯರ ಸಂಘದ ವರದಿಯನ್ನೂ [illegible] ನಡೆಯನ್ನೂ [illegible] ಮತ್ತು ಅನೇಕ [illegible] ಕರಾವುಗಳನ್ನು ತರುವರು.

ತಗಡೂರು ರಾಮಚಂದ್ರರಾ[illegible]

ಹಂಪೆಯ [illegible]

[illegible] ಬಳ್ಳಾರಿ [illegible] ಸಂಚಾರದ [illegible] ಕೆಲವು ಮುಖ್ಯ ವಿಷಯಗಳು ಆಡಕವಾಗಿವೆ:—

[illegible] ದಕ್ಷಿಣ ಇಂಡಿಯಾದಲ್ಲೆಲ್ಲಾ [illegible] ಇಲ್ಲಿ [illegible] ಮುಸಲ್ಮಾನ್ [illegible] ಮರಾಟಾ ಜನರು [illegible] ಭಾಗದಲ್ಲಿ [illegible] ಇಲ್ಲ. ಆದುದರಿಂದ ಈ ಟವನ್ ಯಾವಾಗಲೂ [illegible] ರಿಕೆಯು ಜನರಿಂದ ನಿಬಿಡೀಕೃತವಾಗಿರುತ್ತಿತ್ತು. [illegible] ಟರಿ ಸ್ಟೇಷನ್ ಇಲ್ಲಿಂದ ವರ್ಗಾಯಿಸಲ್ಪಟ್ಟ ಮೇಲೆ [illegible] ಟವನ್ ಕ್ಷೀಣದೆಸೆಗಾರಂಭವಾಯಿತು.

Regd No. M. 2322

॥ ವಂದೇ ಮಾತರಂ ॥

ಬಿಡಿ ಪ್ರತಿಗೆ ೧ ಕ್ಕೆ

ತಾಯಿನಾಡು.

ಪ್ರತಿ ಸೋಮವಾರವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ { ೩—೦—೦
ಚಂದಾ { ಷಣ್ಮಾಸಕ್ಕೆ ೧—೦—೦

ಸಂಪುಟ ೧] ಸೋಮವಾರ ೩ ಡಿಸೆಂಬರ್ [ಸಂಚಿಕೆ ೫೭

TAINADU.

Daily Edition.

The Leading Nationalist Daily of Mysore.

TO LET

Printed and published by P. R. Ramaiya, at Sri Rama Press, D. Subbiah Road Mysore.

ತಾಯಿನಾಡು.

3—12—1928

ಸುಬ್ರಹ್ಮಣ್ಯಂರವರ ಹೇಳಿಕೆ

(ಶ್ರೀ ಸುಬ್ರಹ್ಮಣ್ಯಂರವರು ತಾವು ಸವಾಲ್ ಮಾಡುವುದಿಲ್ಲವೆಂದು ಹೇಳಿ, ಕೊಟ್ಟ ಬರಹದ ಹೇಳಿಕೆ)

ಮೈಸೂರು ಸರ್ಕಾರದವರು ೧೫೩ (ಎ) ಸೆಕ್ಷನ್ ಅನುಸರಿಸಿ ನನ್ನ ಮೇಲೆ ಮಾಡಿರುವ ಮೊಕದ್ದಮೆಯು ಸಂಪೂರ್ಣವಾಗಿಯೂ ಮತಸಂಬಂಧವಾದುದು. ಗಣಪತಿಯ ಸತ್ಯಾಗ್ರಹ ವಿಚಾರದಲ್ಲಿ ಸರಕಾರದವರು ಸ್ವತಂತ್ರಿಸಿ ಕೈ ಹಾಕಿದುದು ಯುಕ್ತವಲ್ಲ, ಮತವಿಚಾರದಲ್ಲಿ ಅವರು ಪ್ರವೇಶಿಸಲಾಗದು

ಒಂದು ಕೇಸಿನ ಮೇಲೆ ಮತ್ತೊಂದರಂತೆನನ್ನ ಮೇಲೆ ಸರಕಾರದವರು ಹೊರಿಸುತ್ತಿರುವುದು, ನನಗೆ ತೊಂದರೆ ಕೊಟ್ಟು ಸಾಧ್ಯವಾದಲ್ಲಿ ಶಿಕ್ಷೆಯನ್ನೂ ವಿಧಿಸಬೇಕೆಂದು ಅವರು ಜಿದ್ದಿನಿಂದ ಮಾಡುತ್ತಿರುವದು ವ್ಯಕ್ತವಾಗುತ್ತದೆ

ಅನೇಕ ಮಂದಿ ಹಿಂದುಗಳ ಮೇಲೆ ಸರ್ಕಾರದ ರು ಮೊಕದ್ದಮೆಯನ್ನು ಹೂಡಿ, ನಿಜಾಂಶವನ್ನು ಮರೆಮಾಚಿಸಲು ಪ್ರಯತ್ನಿಸುತ್ತಿಸುವುದೂ ಮತ್ತು ಸಾಧ್ಯವಾದಲ್ಲಿ ಅಬ್ಬಾಸ್ ಖಾನರ ಮೇಲಿರುವ ಅಪಾದನೆಗಳನ್ನು ಮುಚಿಡಲು ಸರ್ಕಾರದವರು ಪ್ರಯತ್ನಿಸುತ್ತಿರುವುದು, ಇದರಿಂದ ನನಗೆ ಖಚಿತವಾಗುತ್ತದೆ. ಅನೇಕ ಬಲವತ್ತರವಾದ ಅಪಾದನೆಗಳನ್ನು ಮಿ|| ಅಬ್ಬಾಸ್ ಖಾನರ ಮೇಲೆ ಗಣ್ಯರಾದ ಅನೇಕಮಂದಿ ಹಿಂದುಗಳು ಮಾಡಿದ್ದರೂ, ಅವರ ಗೋಜಿಗೆ ಹೋಗದೆಯೇ ಸರ್ಕಾರವಿರುವುದು, ಸರ್ಕಾರವು ಪಕ್ಷಪಾತ ಮಾಡುತ್ತಿದೆ ಎಂಬುದು ವ್ಯಕ್ತವಾಗುತ್ತೆ. ಸ್ವಗೌರವವನ್ನು ರಕ್ಷಣೆ ಮಾಡಿಕೊಳ್ಳಬೇಕೆಂಬ ಒಂದು ಕಲ್ಪಿತ ದೊಡ್ಡಸ್ತಿಕೆಯಿಂದ ಸರ್ಕಾರವು ಅಗಾಧವಾದ ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡುತ್ತಿದೆ.

ಮೈಸೂರಿನಲ್ಲಿ ಸದ್ಯಃ ನೆಲಸಿರುವ ಸ್ಥಿತಿಯಲ್ಲಿ, ಅಷ್ಟೇಕೆ ಇಡೀ ಹಿಂದೂಸ್ಥಾನದಲ್ಲಿ ಸಾರ್ಕಾರಕ್ಕೂ ನ್ಯಾಯ ಸಂರಕ್ಷಣೆಗೂ ಅಷ್ಟು ಭೇದಭಾವವನ್ನು ಮಾಡುವುದಿಲ್ಲ; ಅದರಲ್ಲೂ ರಾಜಕೀಯ ವ್ಯಾಪಾರಗಳಲ್ಲಿ ಈ ಭೇದಭಾವವನ್ನು ಮಾವುದು ಅಸಕ್ಯ, ಈ ಕಾರಣಗಳಿಂದ ಅಸಹಕಾರದ ಚಳವಳಿಯತತ್ವಗಳನ್ನನುಸರಿಸಿ ನಾನು ಸತ್ಯಾಗ್ರಹವನ್ನು ಆಚರಿಸುತ್ತೇನೆ. ಸವಾಲ್ ನಡೆಸುವುದಿಲ್ಲ. ಜಾಮೀನ್ ಕೇಳಿದರೆ ಅದನ್ನೂ ಕೊಡುವುದಿಲ್ಲ.

ಸೂರ್ಯನಿಗೂ ಗ್ರಹಚಾರವೇ ?

ಪ್ರಪಂಚದಲ್ಲಿ ನಡೆಯುವ ಯುದ್ಧಗಳು, ಆತ್ಮಹತ್ಯಗಳು, ಪ್ಲೇಗ್ ಮೊದಲಾದ ಅಂಟು ಜಾಡ್ಯಗಳು, ಅಪಸ್ಮಾರ, ದುರ್ಭಿಕ್ಷ ಇವೆಲ್ಲಕ್ಕೂ ಸೂರ್ಯನೇ ಕಾರಣ. ಅವನಲ್ಲಿರುವ ಕಪ್ಪು ಕಲೆಗಳ ಛಾಯೆಯು ವಾತಾವರ [illegible] ಅದರಿಂದ ಮನುಷ್ಯನ ಮೇಲೆಯೂ [illegible]

[illegible]

ವಿವಿಧ ವಿಷಯಗಳು

ಶ್ರೀಯುತ ಎಲ್. ಎಸ್. ರಾಜೂರವರು ಮಿ|| ಬಿ. ನಾಗಪ್ಪನವರ ಮೇಲೆ ಮಾನ ನಷ್ಟದ ಮೊಕದ್ದಮೆ.

ಸರ್ ವಿಶ್ವೇಶ್ವರಯ್ಯನವರ ಸಮಿತಿಯ ಮುಂದೆ ಮಿ|| ಎಂ. ಎಸ್. ಲಿಂಗೇಗೌಡರ ಸಾಕ್ಷಿಯಾಗುವಾಗ ಮಿ|| ಬಿ. ನಾಗಪ್ಪನವರು ಶ್ರೀಯುತ ರಾಜೂರವರ ವಿಷಯದಲ್ಲಿ ಅಪಮಾನಕರವಾದ ಮಾತುಗಳನ್ನಾಡಿದರೆಂದು ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದಾಖಲ್ ಮಾಡಿರ ತಾರೆ.

ಸರ್. ಎಂ. ವಿಶ್ವೇಶ್ವರಯ್ಯನವರೇ ಮುಂತಾದ ಸಮಿತಿಯ ಎಲ್ಲಾ ಸಭಿಕರನ್ನೂ ದಿವಾನ್ ಮಿರ್ಜಾ ಸಾಹೇಬರವರನ್ನೂ ಸಾಕ್ಷಿಯಾಗಿ ಕೋರಿಧಾರೆ.

ಅಸಂಬದ್ಧವಾದ ಸಾಕ್ಷಿ.

ಸುಬ್ರಹ್ಮಣ್ಯಂರವರ ಮೊಖದ್ದಮೆಯಲ್ಲಿ ಪೋಲೀಸ್ ಸಬ್ ಇನಸ್ಪೆಕ್ಟರ್ ಮ|| ರಾ|| ಜಿ. ಎನ್. ಕೃಷ್ಣನ್ ರವರ ಹೇಳಿಕೆಯನ್ನು ಕೇಳಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಹೇಳಿದ್ದೇನೆಂದರೆ ಮತದ್ವೇಷಕರವಾದ ವಿಚಾರವೇ ಭಾಷಣದಲ್ಲಿಲ್ಲ. ಇದು ಅಸಂಬದ್ಧವಾದ ಸಾಕ್ಷಿ.

ಸ್ವಾತಂತ್ರ್ಯ ಪ್ರದರ್ಶನ

ಕಳೆದ ತಿಂಗಳು 29 ನೇ ತಾರೀಖಿನ ದಿವಸ ಮ|| ಎಚ್. ವಿ. ಸುಬ್ರಹ್ಮಣ್ಯಂರವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸು ನಡಿಯಬೇಕಾಗಿತ್ತು. ಅವತ್ತಿನ ದಿವಸ ಲಾಲಾಲಜಪತರಾಯರವರ ಪವಿತ್ರ ಸ್ಮರಣೆಗಾಗಿ ಹರತಾಳವಿದ್ದದ್ದರಿಂದ ಕೋರ್ಟಿಗೆ ಬರುವುದಕ್ಕಾಗುವುದಿಲ್ಲವೆಂದು ಹೇಳಿ ಕಳುಹಿಸಿದರು. ಅದರ ಮೇಲೆ ಮ್ಯಾಜಿಸ್ಟ್ರೇಟರು ಕೇಸನ್ನು ಮೂರು ದಿವಸಕ್ಕೆ ಹಾಕಿದರು.

ಧರ್ಮಪ್ರಕಾಶ ಚಂದ್ರೇಗೌಡರಿಗೆ ನೋಟೀಸ್.

ಮಿ|| ಎಂ. ಸಿ. ಮಲ್ಲಪ್ಪನವರ ಬಗ್ಗೆ ಧರ್ಮಪ್ರಕಾಶ ಚಂದ್ರೇಗೌಡರು ವಿಶ್ವೇಶ್ವರಯ್ಯನವರ ಸಮಿತಿಯ ಮುಂದೆ ಗೃಹಕೃತ್ಯ ಸಂಬಂಧವಾದೊಂದು ಕಾಗದವನ್ನು ಬರೆದು ಓದಿಸಿದ್ದರಿಂದ ಸದರಿ ಮಿ|| ಮಲ್ಲಪ್ಪನವರು ಚಂದ್ರೇಗೌಡರ ಮೇಲೆ ಇಷ್ಟರಲ್ಲೇ ಮಾನನಷ್ಟ ಮೊಖದ್ದಮೆಯನ್ನು ಹೂಡುವವರಾಗಿದ್ದಾರೆ.

ಮಾನ ನಷ್ಟದ ಮೊಖದ್ದಮೆ

ಮ|| ತಗಡೂರು ರಾಮಚಂದ್ರರಾಯರವರು ಫ್ರೆಂಡ್ಸ್ ಪತ್ರಿಕೆಯ ಸಂಪಾದಕರಾದ ಮಿ|| ಥಾಮಸ್ ಗೂರ್ಡ್ರವರ ಮೇಲೆ ಮಾಡಿದ್ದ ಮೊಖದ್ದಮೆಯು 1-12-28 ನೇ ಶನಿವಾರ ಜಸ್ಟಿಸ್ ಆಫ್ ದಿ ಪೀಸ್ ರವರಾದ ರೋಲೋರವರ ಕೋರ್ಟಿನಲ್ಲಿ ವಿಚಾರಣೆ ನಡೆದು ಕೇಸನ್ನು ಡಿಸ್ಚಾರ್ಜ್ ಮಾಡಿದರು. ಆದುದರಿಂದ ಮ|| ತಗಡೂರು ರಾಮಚಂದ್ರರಾಯರವರು ಚೀಫ್ ಕೋರ್ಟಿಗೆ ಅಪೀಲು ಮಾಡುವವರಾಗಿದ್ದಾರೆ.

[illegible]

ಈ ತಿಂಗಳು 26 ನೇ ತಾರೀಖಿನ ಮನಿಲಾ [illegible]ದ ಸಮಾಚಾರವು ತಿಳಿಸುವುದೇನೆಂದರೆ:

ಬಿರುಗಾಳಿಯ ಅನಾಹುತದಿಂದ ಫಿಲಿಪೈನ್ ದ್ವೀಪಗಳು ಹಾಳಾದವು. ಲೇಟನ್ ಎಂಬ ಒಂದು ದ್ವೀಪದಲ್ಲಿಯೇ 200 ಜನರು ಸತ್ತಿರುವರು. 10000 [illegible] ಮನೆಮಠಗಳಿಲ್ಲದಂತೆ ಆಗಿದೆ. ತೆಂಗಿನ ಮತ್ತು [illegible] ಬೆಳೆಯು ಸಂಪೂರ್ಣ ನಾಶವಾಗಿ ಹೋಗಿದೆ.

ಅಬ್ಬಾಸ ಖಾನರ ಮೇಲೆ ಘಾತುಕತನದ [illegible]

ಕಳೆದ ಗುರುವಾರ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ, ಅಡ್ವೋಕೇಟ್ ಮಿ|| ವೆಂಕಟಪತಯ್ಯನವರ ಪರ ತಂದ ಚಂದ್ರರಾಜ್, [illegible] ರಾಮಯ್ಯ, [illegible] ಟಿ. ರಾಮಯ್ಯ, ಸೀತಾರಾಮಾಚಾರ್ [illegible] ಪರವಾಗಿ ಅಬ್ಬಾಸ್ ಖಾನರ ಮೇಲೆ ಈ ಕೇಸ [illegible] ಇಂಡಿಯನ್ ಪೀನಲ್ ಕೋಡಿನ ಸೆಕ್ಷನ್ ಗಳ [illegible] ಫಿರ್ಯಾದು ಮಾಡಿರುವರು. ಸೆಕ್ಷನ್ ೧೦[illegible], [illegible], ೧೧೪, ೧೪೩, ೧೪೪, ೧೪೮, [illegible], [illegible], ೧೫೩ ೩೨೪ ೩೨೬ ೫೦೩ [illegible]

ವಿಮಾನಗಳ ಹಾರಾಟ.

ಇಂಗ್ಲೆಂಡಿನಿಂದ ಇಂಡಿಯಾಕ್ಕೆ ವಿಮಾನ ಪ್ರಯಾಣವು ಕ್ಷಿಪ್ರದಲ್ಲಿಯೇ ಪ್ರಾರಂಭಸುವುದು. ಇದಕ್ಕೆ ಸಂಬಂಧಪಟ್ಟ ಒಪ್ಪಂದಗಳೆಲ್ಲಾ ನಡೆದಿವೆ.

ಜವಹರಿಲಾಲ್ ನೆಹರುರವರ ಮೇಲೆ ಅತ್ಯಾಚಾರ

ಲಕ್ನೋವಿಗೆ ಸೈಮನ್ ಸಮಿತಿಯು ಕಾಲಿಟ್ಟುದಕ್ಕೆ ಪೂರ್ಣ ಬಹಿಷ್ಕಾರದ ಜನರು [illegible] ಅತ್ಯಾಚಾರವನ್ನು ಅನುಭವಿಸಬೇಕಾಯಿತು. [illegible] ನಾಬಾದ್ ಪಾರ್ಕ್ ಎಂಬ ಸ್ಥಳದಲ್ಲಿ ಒಂದು ಬಹಿರಂಗ ಸಭೆಯು ನಡೆಯುವುದೆಂದು ಗೊತ್ತಾಗಿದ್ದು [illegible] ಪಂಡಿತ ಜವಹರಲಾಲ ನೆಹರು ಮತ್ತು ಪಂಡಿತ ಗೋವಿಂದ ವಲ್ಲಭ ಪಂತ್ ಸ್ವರಾಜ್ಯ ಪಂಗಡದ ಮುಖಂಡರು ಇವರುಗಳು ಒಂದು ದೊಡ್ಡ ಮೆರವಣಿಗೆಯ ಸಹಿತ ಮೇಲ್ಕಂಡ ಪಾರ್ಕಿಗೆ ಹೋಗುತ್ತಿದ್ದರು. ಮಧ್ಯೆ ಪೋಲೀಸಿನವರು ತಡೆದು ಮೆರವಣಿಗೆ ಹೋಗುವುದಕ್ಕೆ ಲೈಸೆನ್ಸ್ ಇದೆಯೇ ಎಂದು ಪ್ರಶ್ನಿಸಿದರು. [illegible] ವರು ಏನೂ ಜವಾಬನ್ನು ಕೊಡದೆ ಮುಂದೆ ಸಾಗಿದರು. ಪೋಲೀಸಿನವರು ತಡೆದರು ಅಲ್ಲಿ [illegible] ಪೋಲೀಸ್ ಅಧಿಕಾರಿಯೊಬ್ಬನು ಕುದುರೆ ಸವಾರರನ್ನು ಕರೆಸಿ ಜನರನ್ನು ಚದರಿಸುವಂತೆ ಹುಕುಂ ಮಾಡಿದನು. ಇದರಿಂದ ಅನೇಕರಿಗೆ [illegible] ಗಾಯಗಳಾದವು. [illegible] ವರ ಪೈಕಿ ಪಂಡಿತ ಜವಹರಲಾಲ ನೆಹರುರವರಿಗೂ ಮತ್ತು ಪಂಡಿತ ಗೋವಿಂದ ವಲ್ಲಭ ಪಂತರಿಗೂ [illegible] ಬಿದ್ದವು.

ಹಿಂದೂ ಮಹಾಸಭಾ

ಹಿಂದೂ ಮಹಾಸಭಾಧ್ಯಕ್ಷರಾದ ಮಿ|| ಕೇಳ್ಕರ್ ಯ್ಯಶೆಟ್ಟರಿಗೆ ಜಗದ್ಗುರು ಶ್ರೀ|| ಮುರುಘಾ ರಾಜೇಂದ್ರ ಸ್ವಾಮಿಗಳು ಸಭೆಯ ಉದ್ದೇಶಗಳು ಜಯವಾಗಲಿ ಎಂದು ಆಶೀರ್ವದಿಸಿ ಒಂದು ತಂತಿಯನ್ನು ಕಳುಹಿಸಿರುವರು.

ತಾಯಿನಾಡು.

3—12—1928

ದಿವಾನರ ಸಂಚಾರ

ದಿವಾನರವರು ಈಗ ಒಂದು ವಾರದಹಿಂದೆ ಮೈ ಸೂರು [illegible] ತಾಲ್ಲೋಕುಗಳಲ್ಲಿ ಸಂ ಚಾರವನ್ನು [illegible]. ಪ್ರಜೆಗಳೆಲ್ಲರೂ ಇದನ್ನು ಬಹಳ ವೈಭವದಿಂದ [illegible] ಸ ಸ್ವಾಗತ ಮಾಡಿದರೆಂದೂ ದಿವಾನರವರು ಅವರುಗಳ ಅಹು ವಾಲ ಗಳಿಗೆಲ್ಲಾ ಸಮಯೋಚಿತವಾದ ಉತ್ತರಗಳನ್ನಿತ್ತ ರೆಂದೂ ಕೇಳುತ್ತೇವೆ. ನಾವು ಈ ಕೆಲವು ತಾಲ್ಲೋ ಕುಗಳಲ್ಲಿ ಸಂಚಾರ ಮಾಡಿದೆವು. ದಿವಾನರವರ ಸಂ ಚಾರದ ವಿಷಯವಾಗಿ ಜನಗಳ ಅಭಿಪ್ರಾಯವೇನೆಂದು ತಿಳಿಯುವ ಅವಕಾಶವು ನಮಗೆ ದೊರೆಯಿತು. ನಾವು ಕಂಡು ಕೇಳಿದನ್ನು [illegible] ಹೇಳ ಬೇಕಾಗುವುದು. [illegible] ತಾಲ್ಲೋಕಿನಲ್ಲಿ ದಿ ವಾನರು ಇದ್ದದ್ದು ಬೆಳಗ್ಗೆ 9 ಘಂಟೆಯಿಂದ ರಾತ್ರಿ 12 ಘಂಟೆಯವರೆಗೆ. [illegible] ಟದಂತೆ ನಡೆಯಿತು. [illegible] ಮೋಟಾ ರನ್ನು ನಡೆಯಿಸುತ್ತಿದ್ದವರು [illegible] [illegible] [illegible] [illegible] ಈ ವೇಗವನ್ನು [illegible] ಹೋಗುವ ದಾರಿಯಲ್ಲಿ ಮೋಟಾರಿಗೆ ಸಿಕ್ಕಿ ಒಂದು [illegible] ತಿಳಿಯ ಬಂದಿದೆ. ಈ [illegible] ದಿವಾನರು [illegible] ದ್ದ 13 ಘಂಟೆಗಳ ಕಾಲದಲ್ಲಿ ಆ ತಾಲ್ಲೋಕಿನ ರೈ ತರು [illegible] ಕಡೆಯ ಪಕ್ಷ ನಾಲ್ಕೈದು ಸಾ ವಿರ ರೂಪಾಯಿಗಳಿಗೆ ಕಡಿಮೆ ಇಲ್ಲದೆ ಖರ್ಚು ಮಾಡಿ [illegible] ಇದೆಲ್ಲಾ [illegible] ತಳಿರು ತೋರಣಗಳಿಗೆ [illegible] ಗಳಿಗೆ [illegible] ಗಳಿಗೆ ಗಾರ್ಡನ್ ಪಾರ್ಟಿಗಳಿಗೆ ಅಡ್ರೆಸ್ಸುಗಳಿಗೆ ಮತ್ತು ಡಿನ್ನರುಗಳಿಗೆ. ಇಷ್ಟೆಲ್ಲಾ [illegible] [illegible] ರೈತರು ನಮಗೆ ಬೆಳೆಯಾ [illegible] ಕಂದಾಯವನ್ನು ಮಾಫಿ ಮಾಡಿ ನಾವು [illegible] ಎಂದು ಹೇಳಿಕೊಂಡರೆ ಯಾರಾದ ರೂ ಸಂಬಳ [illegible]? ದಿವಾನರಿಗಾದರೂ ಸಂಜಿಕೆ [illegible]? ಇಲ್ಲ. ಇಲ್ಲ. ಹೊಟ್ಟೆಗೆ ಬಟ್ಟೆಗೆ ಸರಿ [illegible] ಈ ದುಬಾರಿ [illegible] [illegible] [illegible]

ಪ್ರೇರಣೆಯಿಂದ ಜೋತುಕ್ಕುಂಗಳೂ ಜೇಹುಜೂರುಗ ಳೂ ಕಟ್ಟುವ ಆಟವೇ ಇದು; ಬ್ರಿಟೀಷ್ ಇಂಡಿಯಾ ದಲ್ಲಿಯೂ, ವೈಸರಾಯರುಗಳು ಬಂದಾಗಲೂ ಗೌ ರ್ನರುಗಳು ಬಂದಾಗಲೂ ಇದೇ ರೀತಿಯಾದ ಬಹಿರಾ ಡಂಬರಗಳು ನಡೆಯುತ್ತವೆ ಬ್ರಿಟೀಷ್ ಇಂಡಿಯಾದ ನಕಲೇ ಮೈಸೂರು, ಮೈಸೂರಿನಲ್ಲಿಯೂ, ಬ್ರಿಟೀಷ್ ಇಂಡಿಯಾದ ಗುಲಾಮಗಿರಿಯಾಟವು ನಡೆಯುತ್ತಿದೆ. ಇ ವೆಲ್ಲಾ ಅಡಂಬರದಿಂದ ನಡೆಯುವ ಸಂಚಾರಗಳಿಂದಾ ಗುವ ಪ್ರತಿಫಲವೇನು? ಪೂರ್ವದಲ್ಲೇನೋ ದಿವಾನ ರ ಮಾತೇ ಕಾನೂನಾಗಿತ್ತು. ಅವರು ಹುಂ ಎಂದದ್ದು ಏಕಕ್ಷಣದಲ್ಲಿ ನಡೆದು ಹೋಗುತ್ತಿತ್ತು. ಈಗ ಹಾಗಿಲ್ಲ. ಪ್ರತಿಯೊಂದಕ್ಕೂ ಒಂದು ಕ್ರಮವಿದೆ. ಒಂದೂರಿಗೆ ಒಂದು ಸ್ಕೂಲಾಗಲಿ ಒಂದು ಆಸ್ಪತ್ರೆಯಾಗಲಿ ಆಗ ಬೇಕಾದರೆ ಆಯಾಯ ಇಲಾಖೆಗಳ ಮುಖಾಂತರವೇ ಆಗಬೇಕು. ಡಿಸ್ಟ್ರಿಕ್ಟ ಬೋರ್ಡು ಮತ್ತು ಪಂಚಾ ಯಿತಿಗಳು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಬೇಕು. ಯಾವುದನ್ನೂ ದಿವಾನರೇ ಸ್ವಂತವಾಗಿ ಮಾಡುವ ಹಾಗಿಲ್ಲ. ಎಂದ ಮೇಲೆ ಈ ಆಡಂಬರಗಳೂ ಈ ಆಟಾ ಟೋಪಗಳೂ ಈ 1928 ನೇ ಇಸವಿಯಲ್ಲಿ ಏತಕ್ಕೆ? ನಾ ವು ಸಂಚಾರಗಳು ಕೂಡದೆಂದು ಹೇಳುವುದಿಲ್ಲ. ಸ್ವಾವ ಧಾನ ಇದ್ದಾಗಲೆಲ್ಲಾ ದಿವಾನರು ಅಗತ್ಯವಾಗಿ ಸಂ ಚಾರಕ್ಕೆ ಹೊರಡಲಿ. ಶ್ರೀಮಾನ್ ಮಹಾರಾಜರವರು ಮಾಮೂಲಂತೆ ಪೂರ್ವದ ದಿವಾನರುಗಳು ಮಾಡುತ್ತಿದ್ದಂ ತೆ ಆಕಸ್ಮಿಕವಾದ ಭೇಟಿಗಳನ್ನು ಕೊಡಲಿ ಆಗಲೀಗ ಅನಾವಶ್ಯಕ ಸಂಪೋಗುವುದು. ಎಲ್ಲರಿಗೂ ಭೀತಿಯೂ ಹೆದರಿಕೆಯೂ ಉಂಟಾಗುವುದು. ಬ್ರಿಟೀಷ್ ಇಂಡಿಯಾ ಸರ್ಕಾರದವರು ಸ್ವಾರ್ಥತೆಗೋಸ್ಕರವಾಗಿ ಈ ಆಡಂಬ ರಗಳನ್ನು ಇನ್ನೂ ಬಾಕಿಯಲ್ಲಿಟ್ಟಿರುತ್ತಾರೆ. ನಮ್ಮ ಮೈಸೂರಿನ ದಿವಾನರೂ ಸರ್ಕಾರವೂ ಇದನ್ನು ಏತಕ್ಕೆ ಅನುಸರಿಸ ಬೇಕು? ಈ ಆಡಂಬರಗಳಿಲ್ಲದೇನೆ ನಮ್ಮ ಪ್ರಜೆಗಳು ತಮ್ಮ ವಿಶ್ವಾಸವನ್ನು ತೋರಿಸಬಲ್ಲರು. ರೈತರಿಗೆ ಭಾರವನ್ನು ಹೊರಿಸದೆ ವಿಶ್ವಾಸ ಪ್ರದರ್ಶನವ ನ್ನು ಉಂಟುಮಾಡಿಕೊಳ್ಳುವ ಸರಳಪದ್ಧತಿಗಳನ್ನು ನ ಮ್ಮ ಸರ್ಕಾರದವರು ಇನ್ನು ಮುಂದೆ ಅನುಸರಿಸುವ ರೆಂದು ನಂಬುತ್ತೇವೆ.

ಬ್ರಿಟಿಷರ ಧೂರ್ತತನ.

ಸ್ವರಾಜ್ಯವು ಕೆನಡಾ ದೇಶದವರಿಗೆ ದೊರೆಯುವುದ ಕ್ಕೆ ಮೊದಲು ಯಾವಾಗಲೂ ಹೊಡೆದಾಟಗಳೂ ದಂಗೆ ಗಳೂ ವಿಪರೀತವಾಗಿ ನಡೆಯುತ್ತಿದ್ದವು. ಗಲಭೆಗಳಿಲ್ಲದ ದಿನವೇ ಅಪೂರ್ವವಾಗಿತ್ತು, ಎಂದು ಲಾರ್ಡ್ ಡ ರ್ಹಾಂರವರು ಬರವಿಟ್ಟಿರುತ್ತಾರೆ. ಸ್ವರಾಜ್ಯವು ದೊರೆ ತಮೇಲೆಯೇ ಅಲ್ಲಿ ಶಾಂತಿಯು ನೆಲಗೊಂಡಿತು. ಆಂ ಗ್ಲೇಯರು ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯಾಧಿಕಾರ ವನ್ನು ಕೊಡಲಾರದೆ ಹಿಂದೂ ಮುಸಲ್ಮಾನರ ಕಲಹವ ನ್ನು ತಂದೊಡ್ಡಿರುವರು. ಇದರಿಂದಲೇ ಇವರ ಧೂರ್ತ ತನವು ವ್ಯಕ್ತವಾಗುವುದು.

ಅಧಿಕಾರಿಗಳ ಬದಲಾವಣೆ

ಮಿ|| ಮಿರ್ಜಾರವರು ಒಂದು ವಾರದ ಕ್ಯಾಷು ಯಲ್ ರಜಾವನ್ನು ತೆಗೆದುಕೊಂಡು ಹೈದರಾಬಾದಿಗೆ ನಮ್ಮ ಸಂಸ್ಥಾನದ ಮಾಜಿ ರೆಸಿಡೆಂಟರವರಾದ ಸರ್ ಬಾರ್ಟನ್‌ರವರ ಅತಿಥಿಗಳಾಗಿ ಹೋಗಿರುವುದರೆಂದೂ, ಪ್ರಥಮ ಸಚಿವರಾದ ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರವರು ಹಂಗಾಮಿಯಾಗಿ ದಿವಾನ್ ಪದವಿ ಯನ್ನು ಅಲಂಕರಿಸುವರೆಂದೂ ಥೇಟಾದ ಸಮಾಚಾರ ವು ಬಂದಿರುವುದು. ಏತನ್ಮಧ್ಯೆ ಕುಂಟುಕಾಲಿನ ಕೆಲವು ಸಮಾಚಾರಗಳು ಬೇರೆ ಹೊರಟಿರುವುವು. ಛೀಫ್ ಸೆಕ್ರೆ ಟೆರಿಯಾಗಿರುವ ಮ|| ರಾ|| ಎನ್. ಮಾಧವರಾಯರವರು ದೀರ್ಘಕಾಲ ರಜಾ ತೆಗೆದುಕೊಂಡು ಹೋಗುವರೆಂದೂ ಅವರ ಸ್ಥಾನದಲ್ಲಿ ಎಕ್ಸಟೆನ್‌ಷನ್ನು ಪಡೆದು ಈಗ ಲಾ ಸೆಕ್ರೆಟರಿಗಳಾಗಿರುವ ಮ|| ರಾ|| ಬಿ. ನಾಗಪ್ಪನವರು ಛೀಫ್ ಸೆಕ್ರೆಟರಿಗಳಾಗುವರೆಂದೂ. ಈಗ ಮೈಸೂರು ಡಿಸ್ಟ್ರಿಕ್ಟ ಮತ್ತು ಸೆಷನ್ಸ್ ಜಡ್ಜರಾಗಿರುವ ಮ|| ರಾ|| ಪಿ. ಮಹದೇವಯ್ಯನವರು ಲಾ ಸೆಕ್ರೆಟರಿಗಳಾಗುವ ರೆಂದೂ, ನ್ಯೂ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ ಸರ್ಕಾರದವರು ಈ ಸಮಾಚಾರಗಳು ಸುಳ್ಳೆಂದು ಇದು ವರೆಗೂ ಪ್ರಕಟಿಸಿರುವುದಿಲ್ಲ. ಇದೆಲ್ಲಾ ನಿಜವಾದರೆ ಮ|| ರಾ|| ಎನ್. ಮಾಧವರಾಯರವರು ದೀರ್ಘವಾಗಿ ರಜಾ ತೆಗೆದುಕೊಳ್ಳುವ ವಿಷಯದಲ್ಲಿ ಎಲ್ಲರೂ ವಿಷಾದ ಪಡಬೇಕಾಗಿರುವುದು. ಮ|| ರಾ|| ಮಾಧವರಾಯರು ಬಹಳ ಸಮರ್ಥರಾದ ಅಧಿಕಾರಿಗಳು. ಕಾರ್ಯದಕ್ಷರು ಮತ್ತೆ ನೀತಿ ನಿಪುಣರು. ಇಂತಹ ಅಧಿಕಾರಿಗಳು ದೀ ರ್ಘವಾಗಿ ರಜಾ ತೆಗೆದುಕೊಳ್ಳಬೇಕಾದರೆ ಏನೋ ಪ್ರ ಬಲವಾದ ಕಾರಣಗಳಿರಬೇಕು. ನಮ್ಮ ಊಹೆಗಳನ್ನೆ ಲ್ಲಾ ಇಲ್ಲಿ ಬರೆಯುವುದು ಸರಿಯಲ್ಲ. ಮ|| ರಾ|| ನಾಗ ಪ್ಪನವರಿಗೆ ಎಕ್ಸಟೆನ್‌ಷನ್ ದೊರೆತ ವಿಷಯದಲ್ಲಿ ಅವ ರನ್ನು ಅಭಿನಂದಿಸಬೇಕಾದುದೇ ಸರಿ. ಹೀಗೆ ಎಕ್ಸಟೆನ್ ಷನ್ ಕೊಡುವುದಕ್ಕೆ ಜವಾಬ್ದಾರರಾದವರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸಲಾರೆವು. ಈಗ ಸರ್ಕಾ ರದವರು ಕಾನೂನಿನ ಇಲಾಖೆಯಿಂದ ನಡೆಯಿಸುತ್ತಿರು ವ ನಡವಳಿಕೆ ಸರ್ಕಾರವನ್ನು ಬಿಕ್ಕಟ್ಟಿನ ಸ್ಥಿತಿಯಲ್ಲಿ ತಂದಿಟ್ಟಿವೆ. ಇದಕ್ಕೆ ಲಾ ಸೆಕ್ರೆಟರಿಗಳೇ ಜವಾಬ್ದಾ ರರಲ್ಲವೆ? ಈವನಿಂಗ್ ಮೇಲ್ ಪತ್ರಿಕೆಯಲ್ಲಿ ಮ|| ರಾ|| ನಾಗಪ್ಪನವರಿಗೆ ಎಕ್ಸಟೆನ್‌ಷನ್ ದೊರೆಯುವ ಅಥವಾ ದೊರೆತ ವಿಷಯದಲ್ಲಿ ಕೊಡಲ್ಪಟ್ಟಿರುವ ಅಭಿಪ್ರಾಯ ಗಳು ಅನೇಕರಿಗೆ ಸರಿಯೆಂದು ಕಾಣುತ್ತದೆ. ಈ ವಿಷ ಯವಾಗಿ ಈಗಲೇ ನಾವು ಹೆಚ್ಚಾಗಿ ಏನನ್ನೂ ಹೇಳ ಬಯಸುವುದಿಲ್ಲ.

ಇಂಗ್ಲೆಂಡಿನ ನಾಟಿಂಗ್ಯಾಮಿನಲ್ಲಿರುವ ಕನ್ನಡಿಯ ಕಾರ್ಖಾನೆಯಲ್ಲಿ ಏನುಮಾಡಿದರೂ ಒಡೆಯದೆ ಇರತಕ್ಕ ಕನ್ನಡಿಯು ಸದ್ಯದಲ್ಲೇ ತಯಾರಾಗುವುದು, ಇದನ್ನು ಕಿಟಕಿಗಳಿಗೆ ಉಪಯೋಗಿಸಿದರೆ ಕಲ್ಲುಬೀರಿದರೂ ಒಡೆ ಯುವ ಭಯವಿಲ್ಲವಂತೆ.

Regd No. M. 2322 ‖ ಶ್ರೀ ಗುರುಭ್ಯೋನಮಃ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ [illegible]
ಚಂದಾ [illegible]

ಸಂಪುಟ] ಮಂಗಳವಾರ ೪ ಡಿಸೆಂಬರ್ [ಸಂಚಿಕೆ [illegible]

T A I N A D U.

Daily Edition.

The Leading Nationalist Daily of Mysore.

Printed and published by P. R. Ramaiya.
at Sri Rama Press, D. Subbiah Road Mysore.

ತಾಯಿನಾಡು.

4—12—1928

ಪೋಲೀಸಿನವರ ವರ್ತನೆ

ನಾಟಕ ಶಾಲೆಗಳು ಬಯಾಸ್ಕೋಪ್ ಕುಸ್ತಿ ಇವೇ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿಗೆ ಪೋಲೀಸ್ ಸಹಾಯವು ಕಳುಹಿಸಲ್ಪಡುವ ಉದ್ದಿಶ್ಯವಾದರೂ ಏನು? 1 ಗಲಭೆಯನ್ನು ಕಡಿಮೆ ಮಾಡುವುದು 2 ಆಯಾ ಶರಗತಿಗಳಲ್ಲಿ ಜನರು ಬೀಡಿ, ಸಿಗರೇಟು ಮೊದಲಾದ್ದವನ್ನು ಸೇದದೆ ಗಲಾಟೆಗೆ ಅವಕಾಶ ವಿಲ್ಲದಂತೆ ಕೂರುವ ಹಾಗೆ ಮಾಡುವುದು 3 ನಾಟಕ, ಬಯಾಸ್ಕೋಪ್ ಮೊದಲಾದವು ಮುಗಿದನಂತರ ಜನರು ಯಾವ ಅಪಾಯಕ್ಕೂ ಸಿಲುಕದ ಹಾಗೆ ಆ ಸ್ಥಳ ಬಿಡುವುದನ್ನು ಗಮನಿಸ ಬೇಕು. ಮುಖ್ಯವಾಗಿ ಮೇಲ್ಕಂಡ ಉದ್ದೇಶ್ಯಗಳಿಗೋಸ್ಕರ ಪೋಲೀಸ್ ಸಹಾಯಕ್ಕಾಗಿ ಸರ್ಕಾರದವರು ನಿಯಾಮಕವಾದ ಫೀಸನ್ನು ಸಹ ವಸೂಲ್ಮಾಡುತ್ತಾರೆ. ಆದರೆ ಈ ನಿಯಮಗಳಿಗನುಸಾರವಾಗಿ ನಡೆಯುತ್ತಲೇ ಇಲ್ಲ. ಈ ಸ್ಥಳಗಳಿಗೆ ನಿಯಮಿತವಾದ ಕೆಲವರು ಡ್ಯೂಟಿಗೆ ನೇಮಿಸಲ್ಪಟ್ಟಿದ್ದರೆ ಅನಿರೀಕ್ಷಿತವಾಗಿಯೂ ಸಹ ಅನೇಕರು ಬರುವವಾಡಿಕೆಯಾಗಿ ಹೋಗಿದೆ. ಸಾಮಾನ್ಯವಾಗಿ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಿಗೂ ಒಬ್ಬ ಇನ್‌ಸ್ಪೆಕ್ಟರ್‌ರವರೂ ಒಬ್ಬಿಬ್ಬರು ಸಾರ್ಜಂಟರೂ ಕೆಲವು ಜನ ಕಾನ್‌ಸ್ಟೇಬಲ್‌ಗಳೂ ಸಹ ಹಾಜರಿರುತ್ತಾರೆ. ಇವರಲ್ಲದೆ ಸಿ. ಐ. ಡಿ. ಗಳ ಸಂಕೆಯಂತೂ ಅಪರಿಮಿತವೇ ಸರಿ.

ನಾಟಕದ ಡ್ಯೂಟಿ ಎಂದರೆ ಕಾನ್‌ಸ್ಟೇಬಲ್ಲಿಂದ ಹಿಡಿದು ಇನ್‌ಸ್ಪೆಕ್ಟರ್‌ರವರ ವರಿಗೂ ಅವರವರ ದರ್ಜೆಗನುಸಾರ ವಾದ ಸೀಟುಗಳಲ್ಲಿ ಪ್ರೇಕ್ಷಕರಂತೆ ಸುಖಾಸನಗಳಲ್ಲಿ ಕೂತಿದ್ದು ಹೊರಟು ಹೋಗುವುದು. ನಿಷೇಧಿಸಲ್ಪಟ್ಟಿರುವ ಧೂಮ ಪಾನವೂ, ಗಲಭೆಗಳೂ ಎದುರಿಗೆ ನಡೆಯುತ್ತಿದ್ದರೂ ಮೌನವನ್ನು ಅವಲಂಬಿಸಿರುವುದು ಇಷ್ಟು ಮಾತ್ರವಾಗಿ ಹೋಗಿದೆ.

ಇದಲ್ಲದೆ ಇನ್ನೂ ಕೆಲವು ಉದಾಹರಣೆಗಳು ಇವೆ. 1 ಎಡಕ್ಕೆ ಗಾಡಿ ಹೊಡೆಯುವುದು. 2 ಆಕಸ್ಮಾತ್ತಾಗಿ ಫುಟ್ ಪಾತನ್ನು ಬಿಟ್ಟು ದೊಡ್ಡ ರಸ್ತೆಗೆ ಬರತಕ್ಕವರನ್ನು ಕಾನ್‌ಸ್ಟೇಬಲುಗಳು ಹೀನಾಮಾನವಾಗಿ ದೂಷಿಸ್ಸುವುದು. 3 ಲಾಂದ್ರಗಳ ವಿಷಯವಾಗಿ ಹಳ್ಳಿಯವರಿಗೆ ಕೊಡುವ ತೊಂದರೆ, ಇವೇ ಮೊದಲಾದ ಅಸಂಖ್ಯಾತವಾದ ಉದಾಹರಣೆಗಳು ಪ್ರತಿನಿತ್ಯ ಸಿಗುತ್ತಲೇ ಇವೆ. ಪೋಲೀಸಿನವರು ಬಡವರು ಶ್ರೀಮಂತರೆನ್ನುವ ಭೇದವನ್ನಿಡದೆ ಸಮ ಸಮದೃಷ್ಟಿಯಿಂದ ನಡೆದುಕೊಳ್ಳುವಂತೆ ಮೇಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾಗಿ ಕೋರುತ್ತೇವೆ.

ಕಾಂಗ್ರೆಸ್.

ಸರ್ವ ಪಕ್ಷೀಯರ ಪರಿಷತ್ತು, ಕಲ್ಕತ್ತಾ ನಗರದಲ್ಲಿ ಡಿಸೆಂಬರ್ ತಾ|| 22 ರಿಂದ 28 ರವರೆಗೂ ನಡೆಯುವುದು.

ವರ್ತಮಾನ ಸಂಗ್ರಹ

ಭೀಕರ ಪ್ರಾಣಿ ಹತ್ಯೆ.

ಬೊಂಬಾಯಿಯು ಹಾಲಿಗಿಂತ ವಿಲಾಯತಿಯಲ್ಲಿ ಹಾಲು ಶೇಕಡ ೭೫ ರಷ್ಟು ಅಗ್ಗವಾಗಿದೆಯೆಂದು ಇತ್ತೀಚೆಗಿನ ವರದಿಗಳಿಂದ ತಿಳಿದು ಬರುತ್ತದೆ. ಬೊಂಬಾಯಿಯ ಮತ್ತು ವಿಲಾಯತಿಯಲ್ಲಿನ ಜನರ ಸಂಪಾದನೆಯನ್ನು ಹೋಲಿಸಿದುದಾದರೆ ಇದು ಬಹಳ ನಷ್ಟಕರವಾಗಿದೆಯೆಂದು ಹೇಳಬಹುದು. ದನಕರುಗಳು ಬಹಳವಾಗಿರುವ ನಮ್ಮ ದೇಶದಲ್ಲಿ ಹಾಲು ಅಷ್ಟು ಪ್ರಿಯವಾಗಲು ಕಾರಣವೇನು? ಇದಕ್ಕೆ ಮುಂಬಾಯಿಯಲ್ಲಿ ನಡೆಯುವ ಪಶುವಧೆಯೇ ಮುಖ್ಯ ಕಾರಣವು. ೧೯೨೮ ಕ್ಕೆ ಅಂತ್ಯವಾಗುವ ವರುಷದಲ್ಲಿ ಒಟ್ಟು ೨೦೫೨೨ ಪಶುಗಳು ವಧಿಸಲ್ಪಟ್ಟವು. ೧೯,೨೭೦ ಕರುಗಳು ತಮ್ಮ ತಾಯಂದಿರು ವಧಿಸಲ್ಪಟ್ಟ ಕಾರಣ ಹಾಲಿಲ್ಲದೆ ಒಡವಾಗಿ ಸತ್ತುಹೋದುವು. ಕಳೆದ ೮ ವರುಷಗಳಿಂದ ವಧಿಸಲ್ಪಟ್ಟ ಬಡ ಪಶುಗಳ ಸರಾಸರಿ ಸಂಖ್ಯೆಯನ್ನು ನೋಡಿದುದಾದರೆ ಇದಕ್ಕಿಂತ ಕಡಿಮೆಯಾಗಿಲ್ಲ. ಮುಂಬಾಯಿಗೆ ಇತರ ದೇಶಗಳಿಂದ ಪಶುಗಳನ್ನು ತರಿಸಿ ವರ್ಷಕ್ಕೆ ಸರಾಸರಿ ೨೦೦೦೦ ಪಶುಗಳನ್ನು ಕೊಲ್ಲುವರು. ಹಾಲು ಕೊಡುವ ಸ್ಥಿತಿಯಲ್ಲಿರುವ ಪಶುಗಳನ್ನು ಅಂಜದೆ ಕೊಲ್ಲುವರು. ಅಂದಬಳಿಕ ಹಾಲು ಸಿಕ್ಕುವ ಬಗೆ ಎಂತು? ಒಮ್ಮೆಗೆ ಹಾಲು ನಿಂತೊಡನೆ ಮುಂದೆ ಕರುಹಾಕುವದಿದ್ದರೂ, ಅದರೊಡನೆ ಕನಿಕರಪಡದೆ, ಅದರ ಹಾಲನ್ನೂ ಕುಡಿದು ಉಂಡು ಮನೆಗೆರಡು ಬಗೆದು ಕಟುಕರ ಸ್ವಾಧೀನಪಡಿಸುವರು. ಶೋಚನೀಯ! ಆದರೆ ಇಂಗ್ಲಾಂಡ್ ಮತ್ತು ಅಮೇರಿಕೆಗಳಲ್ಲಿ ಹಾಗಲ್ಲ. ಕರುವನ್ನು ಹೆರಲು ಸಾಮರ್ಥ್ಯವಿಲ್ಲದ ಮೇಲೆಯೇ ಪಶುಗಳನ್ನು ವಧಿಸುವರು. ಹಿಂದುಸ್ಥಾನದಲ್ಲಿಯೂ ಇದೇ ರೀತಿ ಮಾಡಿ ಅಪರಿಮಿತವಾಗಿ ನಡೆಯುತ್ತಿರುವ ಈಗಣ ಪಶುವಧೆಯನ್ನು ನಿಲ್ಲಿಸಿದರೆ ರಾಷ್ಟ್ರವು ಉನ್ನತಿಯನ್ನು ಹೊಂದುವುದರಲ್ಲ ಸಂದೇಹವಿಲ್ಲ.

ಸ್ವದೇಶಾಭಿಮಾನಿ.

ಕುಂಭಕೋಣದಲ್ಲಿ ಜಡಿಮಳೆ.

ಕುಂಭಕೋಣದಲ್ಲಿ ಹಲವು ದಿನಗಳವರೆಗೆ ಜಡೀ ಮಳೆಯು ಬಂತು. ಇದರ ಫಲವಾಗಿ ಕುಂಭೇಶ್ವರ ಸ್ವಾಮಿ ದೇವಾಲಯದ ಒಂದು ಭಾಗವು ಮುರಿದು ಬಿದ್ದುಹೋಯಿತು,

ಪೋಲೀಸಿನವರಿಗೆ ಜುಲ್ಮಾನೆ.

ಕೊಯಿಮತ್ತೂರಿನಲ್ಲಿ ಇಬ್ಬರು ಪೋಲೀಸಿನವರು ಕಳ್ಳನನ್ನು ಬಿಟ್ಟುಕೊಟ್ಟದ್ದಕ್ಕಾಗಿ ಮೇಜಿಸ್ಟ್ರೇಟರು ಇಬ್ಬರು ಪೋಲೀಸಿನವರಿಗೆ ತಲಾ 51 ರೂ ಗಳ ಜುಲ್ಮಾನೆಯನ್ನು ವಿಧಿಸಿದರು.

ಹಾಲಿನ ಬಿಲ್ಲೆ.

ಹಾಲನ್ನು ಗಟ್ಟಿಯಾದ ಬಿಲ್ಲೆಗಳಾಗಿ ಮಾಡುವ ಕ್ರಮವನ್ನು ಒಬ್ಬ ವಿಜ್ಞಾನಶಾಸ್ತ್ರಜ್ಞನು ಕಂಡುಹಿಡಿದ್ದಾನೆ. ಈ ಕ್ರಮದಿಂದ ಹಾಲು ಕೆಡುವುದಿಲ್ಲ. ಲಕೋಟೆಗಳಲ್ಲಿ ಹಾಕಿ ಮಾರಾಟ ಮಾಡಬಹುದು. ಒಂದು ಬಿಲ್ಲೆ ತೆಗೆದು ನೀರಿಗೆ ಹಾಕಿದರೆ ಅಗತ್ಯಾನೆ ಕಲಿದ ಸೇರಿ ಹಾಲು ಸಿದ್ಧವಾಗುವುದು.

ಭಾರಿ ಮಳೆ.

ತಂಜಾ ಊರಿನಲ್ಲಿ ಕಳೆದ ನಾಲ್ಕೈದು ದಿನಗಳಿಂದ ವಿಶೇಷವಾಗಿ ಮಳೆ ಬಂದು ಕೆಲವು ಮಾರ್ಗಗಳಲ್ಲೆಲ್ಲಾ ನೀರು ತುಂಬಿ ಹೊಳೆಯ ಹಾಗಾಗಿತ್ತು, ಒಂದೆರಡು ಬೀದಿಗಳಲ್ಲಿ ಮನೆಗಳು ಕುಸಿದುಹೋದುವು. ಪ್ರಾಣಾಪಾಯಗಳೇನೂ ಜಗಲಿಲ್ಲ.

ಐದು ಲಕ್ಷ ರೂಪಾಯಿನ ಮಕುಟ

ಅಹಮ್ಮದಾಬಾದಿನ ಜೈನ ವ್ಯಾಪಾರಿಗಳು ಪಾಲಿಟಾನದ ಠಾಕೋರರಿಗೆ ಒಂದು ಸತ್ಕಾರವನ್ನಿತ್ತರು. ಆ ಸಮಾರಂಭದಲ್ಲಿ ಪಾಲಿಟಾನದ ಆದೀಶ್ವರ ಭಗವಾನ್ ಎಂಬ ದೇವತೆಗೆ 5 ಲಕ್ಷ ರೂ ಬೆಲೆ ಬಾಳುವ ಮನೋಹರವಾದ ರತ್ನ ಮಕುಟವು ಧರಿಸಲ್ಪಟ್ಟಿತ್ತು.

ಅರ್ಟೀಸಿಯನ್ ಬುಗ್ಗೆ.

ಚಿದಂಬರದಲ್ಲಿರುವ ಕವನೂರಿನಲ್ಲಿ, ಒಂದು ಕಡೆ ಭೂಮಿಯನ್ನು ಅಗೆಯುತ್ತಿದ್ದರು. ಆಗ ಭೂಮಿಯ ಯಾವುದೋ ಒಂದು ಭಾಗದಲ್ಲಿ ನೀರಿನ ಬುಗ್ಗೆಯು ಆರಂಭವಾಯಿತು.. ಭೂಮಿಯಿಂದ ಆರು ಅಡಿ ಎತ್ತರಕ್ಕೆ ನೀರು ಉಕ್ಕುತ್ತಿದೆ. ಈ ಬುಗ್ಗೆಯನ್ನು ಅನೇಕರು ಬಂದು ನೋಡಿಕೊಂಡು ಹೋಗುತ್ತಿದ್ದಾರೆ. ಇದರ ಫೋಟೋವೂ ಸಹ ಅನೇಕರಿಂದ ತೆಗೆಯಲ್ಪಡುತ್ತಿದೆ.

ವೇದಪಾಠಶಾಲೆ.

ಇಂಗ್ಲೆಂಡಿನಲ್ಲಿ ವೇದಾಧ್ಯಯನವನ್ನೂ ಪ್ರಾಕ್ತನ ವಿಮರ್ಶೆಯನ್ನೂ ಹೆಚ್ಚಿಸುವ ಧ್ಯೇಯದಿಂದ ಲಂಡನ್ನಿನಲ್ಲಿ ಒಂದು ವೇದಶಾಲೆಯು ಆರಂಭವಾಗಿದೆ. ಇದಕ್ಕೆ ಲಾರ್ಡ್ ರಾನಲ್ಡ್‌ಶೆಯವರೇ ಅಧ್ಯಕ್ಷರು. ಬರ್ದವಾನದ ಮಹಾರಾಜರೂ ಉಪಾಧ್ಯಕ್ಷರಲ್ಲೊಬ್ಬರು.

ಸ್ತ್ರೀ ಸನಾತನ ಧರ್ಮ ಸಭೆ.

ಗುಂಟೂರಿನಲ್ಲಿರುವ ಸ್ತ್ರೀ ಸನಾತನ ಧರ್ಮಮಂಡಲಿಯ 23 ನೆಯ ವಾರ್ಷಿಕೋತ್ಸವವು ಕಳೆದ ತಿಂಗಳು 21 ತಾರೀಖು ಶ್ರೀಮತಿ ಪದ್ಮಾಸನಮ್ಮ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು. ಸುಮಾರು 5 ಸಾವಿರ ಮಹಿಳೆಯರು ಸೇರಿದ್ದರು.

ಮೃತನಾದ ಗಂಡನೊಡನೆ ಸಂಭಾಷಣೆ.

ಕರ್ನಲ್ ಹಿಂಚ್‌ಕ್ಲಿಫ್ ಎಂಬ ವೈಮಾನಿಕನು ಅಟ್ಲಾಂಟಿಕ್ ಸಾಗರದ ಮೇಲೆ ವಿಮಾನದಲ್ಲಿ ಹಾರಾಡುತ್ತಿದ್ದಾಗ ಮಾಯವಾದನು. ಅವನ ಅಂತಾತ್ಮನೊಡನೆ ಸಂಭಾಷಣೆ ನಡೆಸುತ್ತಿರುವೆನೆಂದು ಅವನ ಪತ್ನಿಯು ಹೇಳುತ್ತಾಳೆ.

TAI NADU

ಭಾರತಮಾತೆಯ ಜವಾಹಿರಿ.

[illegible]

... [illegible] ... ಸ್ವಾತಂತ್ರ್ಯಸಂಗ್ರಾಮದಲ್ಲಿ ಬಿದ್ದರು. ಇವರಿಗೆ ಇನ್ನೂ ಚಿಕ್ಕವಯಸ್ಸು. 30-34 ವಯಸ್ಸಿರಬಹುದು. ಇವರು ತಮ್ಮ ಜೀವವನ್ನೆಲ್ಲಾ ದೇಶಸೇವೆಗಾಗಿಯೇ ಧಾರೆ ಎರೆದಿರುವರು. ಯಾವಾಗಲೋ ಒಂದುಸಲ ಮೋತಿಲಾಲ ನೆಹರೂರವರು ಮಗನ ಪಡುತ್ತಿರುವ ಕಷ್ಟಗಳನ್ನು ಸಹಿಸಲಾರದೆ ಗಾಂಧಿಯವರಿಗೆ ಮಹಾತ್ಮರೇ! ನಮ್ಮ ಹುಡುಗನು ಕಷ್ಟಕ್ಕೆ ಸಿಕ್ಕಿ ದಣಿದನಲ್ಲಾ ಎಂದರು. ಮಹಾತ್ಮರು ನಕ್ಕು, ಚೆನ್ನಾಯಿತು; ನೀವೂ ಮರುಕಪಡುವುದೇ? ನಿಮ್ಮ ಮಗನೂ ನಿಮ್ಮ ಹಾಗೆಯೇ. ಸಿಂಹದ ಹೊಟ್ಟೆಯಲ್ಲಿ ಸಿಂಹವಲ್ಲದೆ ಕುರಿಯು ಹುಟ್ಟೀತೆ? ವ್ಯಸನಪಡಬೇಡಿ. ನಿಮ್ಮ ಮಗನು ಶೂರನು. ದೇವರು ಅವನನ್ನು ಚೆನ್ನಾಗಿ ಕಾಪಾಡುತ್ತಾನೆ, ಎಂದರು. ನಿಜವಾಗಿಯೂ ಜವಾಹಿರ್‌ಲಾಲರು ಶೂರರು, ವೀರರು. ದೇಶಭಕ್ತಾಗ್ರೇಸರರು. ಸ್ವಾರ್ಥತ್ಯಾಗ ಚಕ್ರವರ್ತಿಗಳು. ಈಪತ್ತಿನ ದಿವಸ ಇಂಡಿಯಾ ದೇಶದ ರಾಜಕೀಯ ಪ್ರಪಂಚದಲ್ಲಿ ವಿರಾಜಮಾನರಾಗಿರುವ ಭಾಸ್ಕರಮಣಿಗಳಿವರು. ನಮ್ಮ ದೇಶದಲ್ಲಿ ಜನಗಳೆಲ್ಲರೂ ಹೇಡಿಗಳಾಗಿ ಅಂಜುಬುರುಕರಂತೆ ವರ್ತಿಸುತ್ತಿರುವಾಗ ಭಾರತಮಾತೆಗೆ ಸಂಪೂರ್ಣ ಸ್ವಾತಂತ್ರ್ಯವು ಬೇಕು ಎಂದು ಸ್ವರಾಜ್ಯದ ಧ್ವಜವನ್ನು ಎತ್ತಿ ಹಿಡಿದಿರುವ ಭಾರತ ಮಣಿಗಳಿವರು. ಇಂತಹವರಿಗೆ ಬಿದ್ದ ಪೆಟ್ಟು ಭಾರತೀಯರೆಲ್ಲರಿಗೂ ಬಿದ್ದ ಪೆಟ್ಟಾಗಿರುವುದು. ಆದರೆ ಇಂತಹ ಪೆಟ್ಟುಗಳಿಗೆ ಸ್ವಲ್ಪವೂ ಸಾವಿಗೂ ಅಂಜದೆ ದೇಶಸೇವೆಯನ್ನು ಮಾಡುವ ಶಕ್ತಿಸಾಹಸಗಳು ಈ ಭಾರತಮಾತೆಯ ಪುತ್ರರತ್ನರಲ್ಲಿ ಇರುವುವು. ಇವರ ಅದ್ಭುತ ತ್ಯಾಗ [illegible]... ಭಾರತೀಯರೆಲ್ಲರನ್ನೂ ಜಾಗ್ರತೆಗೊಳಿಸಲೆಂದು ಕೋರುತ್ತೇವೆ.

ವಿವಿಧ ವಿಷಯಗಳು

150 ವರ್ಷಗಳ ಬ್ರಿಟಿಷ್ ಆಳ್ವಿಕೆಯ ಪರಿಣಾಮ.

ಬ್ರಿಟಿಷರ 150 ವರ್ಷದ ಆಳ್ವಿಕೆಯ ನಂತರದ ಹಿಂದೂಸ್ಥಾನವನ್ನು ಪೂರ್ವದ ಹಿಂದೂಸ್ಥಾನದೊಂದಿಗೆ ಸರಿಹೋಲಿಸಿ ನೋಡಿದರೆ ಕಣ್ಣೀರು [illegible]. ಹಿಂದೀಯರ ಬಡತನವು ಅತ್ಯಂತ ಶೋಚನೀಯವಾಗಿದೆ. ಶೇಕಡಾ 18 ಅಂಶ ಜನರು ಬಡತನ ಮತ್ತು ಅಜ್ಞಾನದಿಂದ ನರಳುತ್ತಿರುವರು. ಸಾವಿರದಲ್ಲಿ 500 ಶಿಶುಗಳು ಜನಿಸಿ 1ವರ್ಷದ ಮೊದಲೇ ಮೃತವಾಗುವುವು. ಪಟ್ಟಣಗಳಲ್ಲಿ ಸಾವಿರಕ್ಕೆ 600 ರಂತೆ ಸಾಯುವವು. ಹಳ್ಳಿಗಳಲ್ಲಿನ ಬಡ ಒಕ್ಕಲಿಗರು ಏಳಕ್ಕಿಂದ. ಸರಿಯಾದ ಊಟವೂ ಇಲ್ಲದ ಕಾಲಹರಣ ಮಾಡುತ್ತಿರುವರು. ಅವರಿಗೆ ಮರಣವೆಂದರೆ ಸಂತೋಷ [illegible]... ಹಳ್ಳಿಗರು ಈ [illegible] ಬ್ರಿಟಿಷ್ ನೌಕರರು ಅಪಾರ ಸಂಬಳ ಭತ್ಯ [illegible] ಪೇಟಾರ್‌ಗಳಿಂದ ರಾಜರಂತೆ ಮೆರೆಯುತ್ತಿದ್ದಾರೆ.

ಬ್ರಹ್ಮಲೀಲೆ.

[illegible] ಬಳಿ ಇರುವ ಜೇಡಿ ಕಹಳ [illegible] ಊರಿನಲ್ಲಿ ಒಂದು ವಿಚಿತ್ರವಾದ ಎಮ್ಮೆಯ ಕರು ಹುಟ್ಟಿತ್ತು. ಅದಕ್ಕೆ ಎರಡು ತಲೆ ಎರಡು ಬಾಲ ಏಳು ಕಾಲುಗಳೂ ಒಂದು ನಾಭಿಯೂ ಇದ್ದುವು. ಆ ಕರುವು ಹುಟ್ಟಿದ ಸ್ವಲ್ಪ ಹೊತ್ತಿನೊಳಗಾಗಿಯೇ ಮೃತಪಟ್ಟಿತು.

ಹಿಂದೀಯರು ಬ್ರಿಟಿಷರಿಗಿಂತ ಉತ್ಕೃಷ್ಟ ಜನಾಂಗ

ಹಿಂದೀಯರು ಇನ್ನೂ ಸ್ವರಾಜ್ಯಕ್ಕೆ ಅನರ್ಹರೆಂಬ ಮಾತು ಬ್ರಿಟಿಷರ ಆಳ್ವಿಕೆಯನ್ನು [illegible] ಮಾತ್ರ. 'ನನ್ನ ಹಿಂದೂದೇಶದ ಅನುಭವದಿಂದ ಬ್ರಿಟಿಷ್ ನೌಕರರು ಬುದ್ಧಿಶಕ್ತಿಯಲ್ಲಿ ಹಿಂದೀಯರಿಗಿಂತ ಹೀನರೆಂಬುದನ್ನು ಕಂಡುಕೊಂಡಿರುವೆನು. ಆಡಳಿತ ಯೋಗ್ಯತೆ, ಮುತ್ಸದ್ದಿತನ, ಪ್ರತಿಭೆ, ಬುದ್ಧಿವಿಶಾಲತೆಯಲ್ಲೆಲ್ಲಾ ಹಿಂದಿಯರಿಗಿಂತ ಬ್ರಿಟಿಷರು ಅತಿ ಕೀಳತೆಯವರಿರುವರು. ಆಡಳಿತಾನುಭವವು ಹಿಂದೀಯರಿಗೇನೂ ಬೇಕಾಗಿಲ್ಲ. ಆಂಗ್ಲೇಯ ನೌಕರರು ಹಿಂದೂದೇಶದಲ್ಲಿ ನೀರಹೊಯಿಗೆ ವಿಹರಿಸುತ್ತಿರುವವರು' ಎಂದು ಡಾಕ್ಟರ್ ವಿ. ಎಚ್. ರುದರ್‌ಫೋರ್ಡ್ ಎಂಬ ವಿಚಕ್ಷಣ ಬ್ರಿಟಿಷ್ ಮುತ್ಸದ್ದಿಯು ಹೇಳಿರುವರು. ಬ್ರಿಟಿಷರು ಬರ್ಬರರಾಗಿ ಕಾಡು ಮನುಷ್ಯರಂತಿರುವಾಗ ಹಿಂದೂದೇಶವು ನಾಗರೀಕತೆ, ಉಚ್ಚ ಸಂಸ್ಕೃತಿ, ಸಾಹಿತ್ಯ ಸಂಪತ್ತಿನಿಂದ ವೈಭವಶಾಲಿಯಾಗಿದ್ದಿತ್ತು.

ಕಾಂಗ್ರೆಸ್ಸಿನ ಸಿದ್ಧತೆ.

ಅಖಿಲ ಭಾರತರಾಷ್ಟ್ರೀಯ ಮಹಾಸಭೆಯು ಈ ಮಾಹೆಯ ಅಖೈರಿನಲ್ಲಿ ಕಲ್ಕತ್ತಾ ನಗರದಲ್ಲಿ ನಡೆಯುವುದಷ್ಟೆ. ಅದರ ಸಿದ್ಧತೆಗಾಗಿ 400 ಜನ ಸ್ವಾಗತ ಸಮಿತಿ ಸದಸ್ಯರನ್ನೂ 2000 ಜನ ಸ್ವಯಂಸೇವಕರನ್ನೂ ಸೇರಿಸ ಬೇಕೆಂದು ನಿರ್ಧರಿಸಿರುವರು. ಆಯಾ ಪ್ರಾಂತ್ಯಗಳವರಿಗೆ ಬೇರೆ ಬೇರೆ ಪಾಕಶಾಲೆಗಳಿರುವುವು. ಕಾಂಗ್ರೆಸ್ ಪ್ರದರ್ಶನಾಲಯವು ಒಂದು ತಿಂಗಳವರೆಗೆ ತೆರೆದಿರುವುದು.

ಸರ್ಕಾರೀ ಸುದ್ದಿ.

ರಜದಲ್ಲಿದ್ದ ಅ|| ಕಮೀಷನರ್‌ರವರಾದ ಮ|| ಶಾ ತಮ್ಮಾಜಿರಾವ್ ಬಿ. ಎ. ಎಲ್. ಎಲ್ ಬಿ. ಯವರನ್ನು ಬೆಂಗಳೂರಿನ ಡಿಸ್ಟ್ರಿಕ್ಟಿನ ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿರುತ್ತಾರೆ.

ಚಿತ್ರದುರ್ಗದ ೫ ನೇ ನೇ ದರ್ಜೆಯ ಮ್ಯಾಜಿಸ್ಟ್ರೇಟರವರ ಕೆಲಸವನ್ನು ನೋಡುತ್ತಿರುವ ಮುನಸೀಫರಾದ ಮ|| ರಾ|| ಎಸ್. ಶ್ರೀನಿವಾಸನ್ ಬಿ. ಎ. ಬಿ. ಎಲ್. ರವರಿಗೆ ಕೊಟ್ಟಿದ್ದ ರಜವನ್ನು ಇನ್ನೂ [illegible] ದಿನಗಳು ಹೆಚ್ಚಿಸಿರುವರು. ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯೆಟ್ಟಿನ ಸೂಪರಿಂಟೆಂಡೆಂಟರವರಾದ ಮ|| ರಾ|| ಎಂ. ಅನಂತರಾಮಯ್ಯಂಗಾರ್ಯರಿಗೆ 1-1-1929 ರ ಲಾಗಾಯ್ತು ಎರಡು ತಿಂಗಳು ಪ್ರವಿಲೇಜ್ ರಜವನ್ನು ಅವರ ರಿಟೈರ್‌ಮೆಂಟಿಗೆ ಪೂರ್ವಭಾವಿಯಾಗಿ ಮಂಜೂರ್ಮಾಡಿರುವರು.

ಕಾಫಿ ತೋಟಗಳಿಗಿರುವಂತೆಯೇ ಯಾಲಕ್ಕಿ ತೋಟಗಳಿಗೂ ಎಕರೆ ಒಂದಕ್ಕೆ ರೂ 1-4-0 ರಂತೆ 1929-30 ನೇ ಸಾಲಿನಿಂದ ದಾಖಲ್ಮಾಡುವ ಕಂದಾಯದ ದರವ ಸರ್ಕಾರದವರು ನಿಗದೀ ಮಾಡಿರುತ್ತಾರೆ.

ಮ್ಯುನಿಸಿಪಾಲಿಟಿ.

ಹಾಸನ ಡಿ|| ಸಕಲೇಶಪುರದ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಮ|| ರಾ|| ಗಳಾದ ಸಿದ್ದೇಗೌಡರನ್ನೂ ಮತ್ತು ಮೀರ್ ಅಮಾನುದ್ದೀನ್ ಉರುಫ್ ಸಬಜಾನ್ ಎಂಬವರನ್ನು ಮ|| ರಾ|| ಗಳಾದ ತಿಮ್ಮಪ್ಪಯ್ಯ ಮತ್ತು ಬಹಾದೂರ್ ಸಾಹೇಬ್ ಇವರುಗಳಿಂದ ಖಾಲಿಯಾದ ಸ್ಥಾನಕ್ಕೆ ಮೆಂಬರುಗಳಾಗಿ ನೇಮಿಸಿರುತ್ತೆ.

Regd No. M. 2322 ‖ ವಂದೇಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ... ಪದಸ್ಥಳ ...

ಸಂಪುಟ] ಬುಧವಾರ ೫ ಡಿಸೆಂಬರ್ ೧೯೨೮ [ಸಂಚಿಕೆ ...

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co Excelsior Type-writing Institute, Balepet. Bangalore City.
2. Koppada Ramakrishniah Agent Hassan
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildings Mysore,
5. Subba Pundit & Co, Lakshmivilas
6. Friends' Union, Mysore.
7. Sweet Mart, Lansdowne Buildings, Mysore
8. H Subba Rao C/o B Gowda & Sons Sakaleshpur
9. H Naganniah News Agent Chikmagalur
10. V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R Ramaiya.
at Sri Rama Press, D. Subbiah Road, Mysore.

ತಾ ಯಿ ನಾ ಡು.

5—12—1928

ವಿವಿಧ ವಿಷಯಗಳು

ಚಿಕ್ಕ ಮಗಳೂರಿನ ನಿಷೇಧ ಸಭೆ

ಕಳೆದ ತಿಂಗಳು 30 ನೇ ತಾ|| ಚಿಕ್ಕಮಗಳೂರು ಟವರ್ ಹಾಲಿನಲ್ಲಿ ಒಂದು ಪ್ರಚಂಡ ಸಭೆಯು ಸೇರಿತ್ತು. ಆಗ ಬೆಂಗಳೂರು ಗಲಭೆಗಳ ಸಂದರ್ಭದಲ್ಲಿ 6 ಜನ ಉಪಾಧ್ಯಾಯರನ್ನು ಸರ್ಕಾರದವರು ಡಿಸ್‌ಮಿಸ್ ಮಾಡಿರುವುದನ್ನು ಖಂಡಿಸಿ, ಬಿನ್ನವತ್ತಳೆಯನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸತಕ್ಕದ್ದು ಆಜನ್ಮಸಿದ್ಧ ಹಕ್ಕೆಂದು ಠರಾವು ಮಾಡಿದರು. ಅಧ್ಯಕ್ಷರಾಗಿದ್ದ ಶ್ರೀ|| ಸಿ. ವಾಸುದೇವರಾಯರವರು ಮೇಲ್ಕಂಡ ಠರಾವನ್ನು ನಮ್ಮ ದಿವಾನರವರ ಪ್ರೈವೇಟ್ ಸೆಕ್ರೆಟರಿಯವರಿಗೆ ಕಳುಹಿಸಿ ಕೊಡಬೇಕೆಂದೂ ತೀರ್ಮಾನಿಸಲ್ಪಟ್ಟಿತು.

ವಾರ್ಷಿಕ ಸಭೆ

ಈ ಮಾಹೆ 5 ನೇ ತಾ|| ನಾಗಪುರದಲ್ಲಿ ಇಂಡಿಯಾ ದೇಶದ ಐತಿಹಾಸಿಕ ವಸ್ತು ಸಂಗ್ರಹಾಲಯದ 11 ನೇ ವಾರ್ಷಿಕೋತ್ಸವವು ನಡೆಯುವುದು. ಆ ಸಮಾರಂಭದಲ್ಲಿ ಅನೇಕ ಪ್ರಾಚೀನ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳು ಪ್ರಾಜ್ಞರಿಂದ ಓದಲ್ಪಡುವುವು.

"ಗೀತಾ ಜಯಂತಿ"

ಬೆಂಗಳೂರು ನ್ಯಾಷನಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಈ ಮಾಹೆ 22-23-24 ನೇ ತಾ|| ಗಳಲ್ಲಿ ನಡೆಯುವುದು. ಆ ಸಂದರ್ಭದಲ್ಲಿ ಕಳೆದ 2 ವರುಷಗಳಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಆ ಸ್ಕೂಲಿನ ವಿದ್ಯಾರ್ಥಿಗಳಿಗೆ ಈ ತಿಂಗಳು 23 ನೇ ತಾ|| ಭಗವದ್ಗೀತೆಯು ಬಹುಮಾನಿಸಲ್ಪಡುವುದಾಗಿ ತಿಳಿಯುಬರುತ್ತೆ.

ಲಿಂಗ ಧಾರಣೆ

ಕಳೆದ ವಾರ ಬಿಜಾಪುರದಲ್ಲಿರುವ ಮೋಚಿಗಾರ ಮೊದಲಾದ ಜಾತಿಯವರಿಗೆ ಚಾಡದಾಳ ಪುರದ ವಿರೂಪಾಕ್ಷ ಒಡೆಯರವರು ಲಿಂಗಧಾರಣೆ ಮಾಡಿಸಿದರು.

ಶೃಂಗೇರಿ.

ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳವರ ದೇಹಸ್ಥಿತಿಯು ಒಂದೇ ಸಮನಾಗಿರುತ್ತೆ. ದಿವಾನ್ ಬಹದ್ದೂರ್ ಶ್ರೀಕಂಠೇಶ್ವರಯ್ಯರ್‌ರವರೂ ಯುನಿವರ್ಸಿಟಿಯ ರಿಜಿಸ್ಟ್ರಾರ್‌ರವರಾಗಿದ್ದ ವಿ. ಸುಬ್ರಹ್ಮಣ್ಯಯ್ಯರ್ ರವರೂ ಶ್ರೀಗಳವರ ದರ್ಶನ, ಮತ್ತು ಸಂಭಾಷಣೆಗಳನ್ನು ಮಾಡಿ ಕೊಂಡು ಕಳೆದ ವಾರ ಹಿಂತಿರುಗಿದರು. ಘುರ್ಧೂಯ ರಿ|| ಸಬ್ ಜಡ್ಜರವರಾದ ಶ್ರೀಯುತ ಸಾಂಬಮೂರ್ತಯ್ಯರ್‌ರವರು ಶ್ರೀಗಳವರ ಬಳಿಯಲ್ಲಿಯೇ ಇರುವರು.

ದಾನ

ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳು 110 ರೂಪಾಯಿಗಳನ್ನು ದಾವಣಗೆರೆಯಲ್ಲಿರುವ ಪ್ರಾಣಿದಯಾ ಸಂಘಕ್ಕೆ ದಯಪಾಲಿಸಿರುತ್ತಾರೆ.

ವರ್ತಮಾನ ಸಂಗಹ

ಇಂಡಿಯಾ ದೇಶದ ಜ್ಞಾನ

ನಮ್ಮ ಮೈಸೂರು ಮಹಾರಾಜರು ಮತ್ತು ಮಂಡೀಯ ರೆಂದು ಮ್ಯಾಂಚಸ್ಟರ್ ಗಾರ್ಡಿಯನ್ ಎಂಬ ಆಂಗ್ಲ ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟವಾಗಿದೆ ಇಷ್ಟರ ಮಟ್ಟಿನ ಹಿಂದೂ ದೇಶದ ಜ್ಞಾನವು ನಮ್ಮ ಬ್ರಿಟಿಷ್‌ರಿಗಿರುತ್ತದೆ.

(ಕ. ವೀರ.)

ಬ್ರಾಹ್ಮಣ ಧರ್ಮ ಸಹಾಯ ಸಭೆ

ಮೇಲ್ಕಂಡ ಸಭೆಯ 10 ನೇಯ ವಾರ್ಷಿಕೋತ್ಸವವು ಇದೇ ವಿಭವ ನಾಮಸಂವತ್ಸರದ ಕಾರ್ತಿಕ ಕೃಷ್ಣ ತ್ರಯೋದಶಿ ಭಾನುವಾರ (9-12-28) ಸಾಯಂಕಾಲ 5 ಘಂಟೆಗೆ ರಾಜಧಾನಿಯ ಅಭಿನವ ಶಂಕರಾಲಯದಲ್ಲಿ ರಾಜಶಿಲ್ಪವಿಶಾರದ ರಾವ್ ಬಹದ್ದೂರ್ ಡಿ. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪಟ್ಟಾಭಿಷೇಕ

ರಾಜಧಾನಿಯ ಅಭಿನವ ಶಂಕರಾಲಯದಲ್ಲಿ ಮಹಾಮಹೋಪಾಧ್ಯಾಯ ವಿದ್ಯಾನಿಧಿ ವಿರೂಪಾಕ್ಷ ಶಾಸ್ತ್ರಿಗಳ ತಮ್ಮಂದಿರಿಂದ ವೇ|| ಬ್ರಂ|| ಗಣೇಶ ಶಾಸ್ತ್ರಿಗಳವರು ಈಗ ಸುಮಾರು 4 ತಿಂಗಳಿಂದಲೂ ಶ್ರೀಮದ್ರಾಮಾಯಣವನ್ನು ಪುರಾಣ ರೂಪವಾಗಿ ಹೇಳುತ್ತಿದ್ದರು. ಅದರ ಪ್ರಯುಕ್ತ ಕಳೆದ (1-12-28) ನೇ ಶನಿವಾರ ಪಟ್ಟಾಭಿಷೇಕೋತ್ಸವವು ನಡಿಸಲ್ಪಟ್ಟಿತು.

ಶಿವಮೊಗ್ಗ ಹೈಸ್ಕೂಲ್ ಡೆ.

ಈ ಮಾಹೆ 21 ಮತ್ತು 22 ನೇ ತಾರೀಖುಗಳಲ್ಲಿ ಶಿವಮೊಗ್ಗಾ ಗೌವರ್ನಮೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವವು ನಡೆಯುವುದು.

ಕಾನ್‌ಸ್ಟೇಬಲ್ಲಿಗೆ ಜುಲ್ಮಾನೆ

ಬೊಂಬಾಯಿ ಪಟ್ಟಣಕ್ಕೆ ಸೈಮನ್ ಕಮೀಷನ್‌ರವರು ಬಂದ ದಿವಸ ಒಬ್ಬ ಪೋಲೀಸಿನವನು ಮೆರವಣಿಗೆಯಲ್ಲಿದ್ದ ವೈ. ಬಿ. ಮೆಹಲ್ ಆಲಿಯವರು ಮತ್ತು ಅವರ ಜೊತೆಯಲ್ಲಿದ್ದ ನಾಲ್ವರು ವಿದ್ಯಾರ್ಥಿಗಳ ಮೇಲೆ ಕೈ ಮಾಡಿದ್ದನು. ಈ ತಪ್ಪಿತಕ್ಕಾಗಿ ಅಲ್ಲಿನ ಮ್ಯಾಜಿಸ್ಟ್ರೇಟರು ಆ ಪೋಲೀಸ್ ಕಾನ್‌ಸ್ಟೇಬಲ್ಲಿಗೆ ನೂರು ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು. ವಿದ್ಯಾರ್ಥಿಗಳ ಪರ ಶ್ರೀ|| ಕೆ. ಎಫ್ ನಾರಿಮನ್‌ರವರು ವಕೀಲಿಯನ್ನು ಪಡೆದಿದ್ದರು.

ಒಬ್ಬ ಕುಬೇರನ ಮರಣ

ಅಮೇರಿಕದಲ್ಲಿ ಮಿ|| ಥಾಮಸ್ ಫಾರ್‌ಚೂನ್ ರಾಯನ್ ಎಂಬ ಶ್ರೀಮಂತನೊಬ್ಬನಿದ್ದನು. ಅವನ ಐಶ್ವರ್ಯವು ಆರು ಕೋಟಿ ಪೌಂಡಿನ ಬೆಲೆಬಾಳತಕ್ಕಾಗಿದೆ. ಈತನ ಲೇವಾದೇವಿಯ ಕೌಶಲ್ಯವೂ ಉದ್ಯೋಗದ ಸಾಧನೆಯೂ ಇವನು 90 ಕೋಟಿ ರೂಪಾಯಿಗಳ ಸಂಪತ್ತನ್ನು ಗಳಿಸುವಂತೆ ಮಾಡಿದವು ಇಂತಹ ಕುಬೇರನು ಕಳೆದ ತಿಂಗಳು 23 ನೇ ತಾರೀಖಿನಲ್ಲಿ ಮೃ[illegible]

PRESS COMMUNIQUE.

The statement made in the "Tai Nadu" of the 15th October 192[illegible] and the 'Veera Kesari' of [illegible] idem, alleging that a young Veerasaiva Sanyasin Stuying in the Bangalore Sanskrit College was assaulted by a Mahomedan and robbed of his 'Karadige' etc, is without foundation. From enquiries made, it is ascertained that this young Swami of about 13 or 14 years of age had been sent away for misconduct from more than one charitable institution where he was being fed in Bangalore, that he was roming about and trying to get money by disposing of his articles of clothing and that the loss of the 'Karadige' and 'Linga' from his person was noticed even while he was a boarder in one of the chari table institutions and could not be satisfactorily accounted for by him. It does not appear that he lodged any complaint in regard to the alleged missing of articles. The story of assault and robbery are therefore obviously false.

With reference to another article under the heading ಸೋಸಲೆಯಲ್ಲಿ ಮುಸಲ್ಮಾನರ ಹಾವಳಿ published in the 'Tai Nadu' of 10th November 1928, regarding the damage caused to certain carts that had been left near the fording place at Sosale on the 31st October 1928, it is ascertained that the mischief was due to longstanding ill-feeling between two factions and not to recent communal friction.

R. RANGA RAO.
Publicity Officer to the
Govt. of Mysore.

ಬ್ಯಾಂಕ್ ನೌಕರನ ವಂಚನೆ

ರಣಜಿತ್ ಎಂಬುವನು ಬೊಂಬಾಯಿನ ಒಂದು ಬ್ಯಾಂಕಿನಲ್ಲಿ ಅಕೌಂಟೆಂಟಾಗಿದ್ದು 16,80,000 ರೂ. ಗಳನ್ನು ದುರುಪಯೋಗಪಡಿಸಿ ಪರಾರಿಯಾಗಿದ್ದನು. ಈಗ ಅಲ್ಲಿನ ಸಿ. ಐ. ಡಿ. ಗಳು ಅವನನ್ನು ಹಿಡಿದಿರುತ್ತಾರೆ. ಹಣವನ್ನು ತಾನು ಕದ್ದು ಇನ್ನೊಬ್ಬನ ಹತ್ತಿರ ಕೊಟ್ಟಿರುವುದಾಗಿ ಖೈದಿಯು ಹೇಳಿರುತ್ತಾನೆ.

ಶುದ್ಧಿ

ಕಳೆದ ಸೆಪ್ಟಂಬರ್ 4 ನೇ ತಾರೀಖಿನ ದಿನ ಢಕ್ಕಾದಲ್ಲಿರುವ ಸುಪ್ರಸಿದ್ಧ ಮೌಲ್ವಿಗಳಾದ ತಯ್ಯ ಬುದ್ದೀನರು ತಮ್ಮ ಸಂಪೂರ್ಣವಾದ ಇಚ್ಛೆಯಿಂದ ಹಿಂದೂಗಳಾದರು. ಇದೇ ರೀತಿಯಾಗಿ ಕಳೆದ [illegible] ತಿಂಗಳಿಂದ[illegible] ಗೋವಾ ಕೊಲ್ಲಾಪುರ, ಮಧುರಾದಲ್ಲಿ ಮೊದಲಾದ [illegible]

TAI NADU
5—12—1928.

ತಗಡೂರು ರಾಮಚಂದ್ರರಾಯರ ಮೊಕದ್ದಮೆ.

—

[illegible]

[illegible]

[illegible]

...ಕೇವಲವಾಗಲೇ ನ್ಯಾಯವಾಗುವುದಿಲ್ಲ. ಪಕ್ಷಪಾತವೆಂಬುದು ಸ್ಪಷ್ಟವಾಗುತ್ತದೆ. ನಡಿಯುವ ವ್ಯವಹಾರಗಳಲ್ಲಿ ಬಿಳಿಯ ನ್ಯಾಯಾಧಿಪತಿಗಳು ಬಿಳಿಯವರ ಕಡೆಗೇ ಪಕ್ಷಪಾತವನ್ನು ತೋರಿಸುವುದು ಸಹಜ. ವ್ಯವಹಾರ ನಡೆಸುವವರು ಇಬ್ಬರೂ ಬಿಳಿಯುವವರಾದರೆ ಆ ಕಥೆಯೇ ಬೇರೆ. ಅಲ್ಲಿ ಜಾತಿಯ ಪ್ರಶ್ನೆಯೇ ಇಲ್ಲ. ನಮ್ಮ ನ್ಯಾಯ ಪದ್ಧತಿಯಲ್ಲಿ ಇದೊಂದು ದೊಡ್ಡ ನ್ಯೂನತೆ. ಬ್ರಿಟಿಷ್ ಇಂಡಿಯಾದಲ್ಲಿ ದೇಶೀಯ ಮಹಾ ಜನರು ಈ ನ್ಯೂನತೆಯನ್ನು ಹೋಗಲಾಡಿಸುವುದಕ್ಕಾಗಿ ಬಹಳ ಪ್ರಯಾಸಪಡುತ್ತಿರುವರು. ಮೈಸೂರಿನಲ್ಲಿ ಸ್ವರಾಜ್ಯವಿದೆಯೆಂದು ಹೇಳಿಕೊಳ್ಳುತ್ತೇವೆ. ಬಿಳಿಯವನು ಯಾವನಾದರೂ ಅಪರಾಧವನ್ನು ಮಾಡಿದರೆ ಅವನನ್ನು ವಿಚಾರಣೆಮಾಡುವುದಕ್ಕಾಗಲೀ ಅವನಿಗೆ ಶಿಕ್ಷೆಯನ್ನು ಕೊಡುವುದಕ್ಕಾಗಲಿ ನಮ್ಮ ದೇಶೀಯ ನ್ಯಾಯಾಧಿಪತಿಗಳಿಗೆ ಅಧಿಕಾರವಿಲ್ಲ. ಈ ಪರಿಸ್ಥಿತಿಯಲ್ಲಿ ನಮ್ಮದು ಸ್ವರಾಜ್ಯವೆಂದರೆ ಯಾರೂ ಒಪ್ಪುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ದೇಶೀಯರು ದಾಸ್ಯತ್ವದಿಂದ ಹೇಗೆ ತೊಳಲಾಡುತ್ತಿರುವರೋ ಹಾಗೆಯೇ ಮೈಸೂರಿನಲ್ಲಿ ನಾವೂ ತೊಳಲಾಡುತ್ತಿರುವೆವು. ಆದುದರಿಂದ ನಿಜವಾದ ಆತ್ಮಾಭಿಮಾನವುಳ್ಳ ಮೈಸೂರಿನವರು ಭಾರತೀಯರೊಂದಿಗೆ ಸಂಪೂರ್ಣ ಸಹಕಾರವನ್ನು ಪಡೆದು ಪರಕೀಯ ದಾಸತ್ವವನ್ನು ಕಿತ್ತೊಗೆಯಬೇಕು. ಬ್ರಿಟಿಷ್ ಇಂಡಿಯಾವಾದರೇನು ದೇಶಿಯ ಸಂಸ್ಥಾನವಾದರೇನ? ಇಡೀ ಭಾರತವನ್ನು ಪರಕೀಯ ರಾಜ್ಯವೆಂಬ ಹಾವಿನ ಸುತ್ತಿನಂತೆ ಸುತ್ತಿ ಹಿಡಿದಿದೆ. ಇದನ್ನು ನಮ್ಮ ಮೈಸೂರಿನವರೆಲ್ಲರೂ ನೆನಪಿನಲ್ಲಿಡಬೇಕು.

—

ಲಂಡನ್ ಪೋಲೀಸಿನವರ ಲಂಚ

ಲಂಡನ್ನಿನ ಪೋಲೀಸಿನವರು ಧಾರಾಳವಾಗಿ ಲಂಚವನ್ನೆಡು. ರಾತ್ರಿಕಾಲದಲ್ಲಿ ಹೋಟಲುಗಳಲ್ಲೆಲ್ಲ ಅನಾಚಾರಗಳು ನಡೆಯುವುದಕ್ಕೆ ಅವಕಾಶಕೊಟ್ಟಿರುವರೆಂದು ಆಂಗ್ಲೇಯ ಹೋಂ ಸಕ್ರಟರಿಯವರು ಹೇಳುತ್ತಾರೆ.

ಮೋಟಾರಿನ ಗಡಿಬಿಡಿ

ಕಳೆದ ಶನಿವಾರ ರಾತ್ರಿ ರಾಜಧಾನಿಯ ಲಕ್ಷ್ಮಿ ಥಿಯೇಟರಿನಲ್ಲಿ ನಾಟಕವಾದ ಮೇಲೆ ಜನ ಸಂದಣಿಯು ಕಮ್ಮಿಯಾಗುವುದಕ್ಕೆ ಮುಂಚಿತವಾಗಿಯೇ ಒಬ್ಬ ದೊಡ್ಡ ಮನುಷ್ಯರು ತಮ್ಮ ಮೋಟಾರನ್ನು ಜನ ಸಮೂಹದಲ್ಲಿ ಬಿಡಿಸಿಕೊಂಡು ಹೋಗಲು ಪ್ರಯತ್ನಿಸಿದರು. ಆದರೆ ಡ್ರೈವರಿನ ಅಜಾಗರೂಕತೆಯೋ ಅಥವಾ ಅವಸರದ ಸಲುವಾಗಿ ಮೋಟಾರಿನ ದೋಷವೋ ಮೋಟಾರ್ ಕಾರು ಗೇಟಿನಲ್ಲಿ ನೇರವಾಗಿ ಹೋಗುವುದಕ್ಕೆ ಬದಲಾಗಿ ಟಿಕೇಟು ರೂಮಿನಬಳಿಗೆ ಬಂದು ಡಿಕ್ಕಿ ಹೊಡೆಯಿತು. ಆ ಸಮಯಕ್ಕೆ ಸರಿಯಾಗಿ ದೊಂಬಿಯಲ್ಲಿ ಮನೆಗಾಗಿ ಹಿಂತಿರುಗುತ್ತಿದ್ದವರ ಪೈಕಿ ಕೆಲವರು ಡೋಲಾಯಿಸಿಕೊಂಡು ಟಿಕೇಟು ರೂಮಿನ ಕಡೆಯಿಂದ ಗೇಟಿಗೆ ಬರುತ್ತಿದ್ದರು. ಅವರು ಆ ಸಮಯಕ್ಕೆ ಸರಿಯಾಗಿ ಪ್ರಾಣಾಪಾಯದಿಂದ ಸಂರಕ್ಷಿತರಾದರು.

ವರ್ತಮಾನಗಳು

—

ಸಿನೀಮಾ ನಟಿಯ ವಿಮೆ.

ಮೇಬಲ್ ಪಾಲ್ಬನ್ ಎಂಬ ಸಿನಿಮಾ [illegible] ನಟಿಯು ತನ್ನ ನೇತ್ರಗಳನ್ನು 30,000 ಪೌಂಡುಗಳಿಗೂ [illegible] ಲೋವಾ ಎಂಬ ಮತ್ತೊಬ್ಬ ನಟಿಯು ತನ್ನ [illegible] ಳನ್ನು 36,000 ಪೌಂಡುಗಳಿಗೂ ವಿಮೆ ಮಾಡಿ[illegible] ದುತಿಳಿಯಬರುತ್ತದೆ.

ವಿಲಾಸಿನಿಯ ಭಾಗ್ಯ

ಚಿಕಾಗೋ ನಗರದಲ್ಲಿ ಸುಂದರೀಮಣಿಯೊ[illegible] ರುವಳು. ಈ ವಿಲಾಸಿನಿಯು ತನ್ನ ಯೌವನದಲ್ಲಿ [illegible] ಶ್ರೀಮಂತರ, ಪ್ರಭುಗಳ, ರಾಜರ, ಚಕ್ರವರ್ತಿಗ[illegible] ಮಕ್ಕೆ ಪಾತ್ರಳಾಗಿದ್ದಳು. ಈಗ ತನ್ನ [illegible] ಒಪ್ಪೊತ್ತಿನ ಕೂಳಿಗೂ ಮಾರ್ಗವಿಲ್ಲದೆ [illegible] ಳು. ಇವಳ ವಿಪ್ರ ಮಗಳು ಗಂಡನ ಆತ್ಮಹತ್ಯ[illegible] ಮಾಡಿಸಿದವು.

ಮಾರ್ಜಾಲಾಚಾರ್ಯರು.

ಮೇಜರ್ ಟೈಲರ್ ಎಂಬುವರು ಇಂಗ್ಲೆಂಡಿನ [illegible] ರ್ತ ಶಾಸ್ತ್ರದ ವಿದ್ವಾಂಸರು. ಇವರಲ್ಲಿ ಪರ್ಷಿಯಾ[illegible] ಅತ್ಯಂತ್ಯ ಸುಂದರವಾದ ಒಂದು ಮಾರ್ಜಾಲವಿ[illegible] ಅದು ತನ್ನ ನರ್ತನದಿಂದ ವಿದ್ವಾಂಸರನ್ನು ಅಚ್ಚರ[illegible] ಮಾಡಿಕೊಂಡಿತ್ತು. ಈ ಮೊಪಟ್ಟೊಳಗಾದ ವಿದ್ವಾ[illegible] ರು ತಮ್ಮ ಶಿಷ್ಯರಿಗೂ ಸಹ ಆ ಮಾರ್ಜಾಲದ ನರ್ತನ[illegible] ನ್ನೇ ಕಲಿಸಲಾರಂಭಿರುವರು.

ಸ್ತ್ರೀ ವಾಚನಾಲಯ

ಬೆಳಗಾಂನಲ್ಲಿ ಸ್ತ್ರೀಯರಿಗೋಸ್ಕರವಾಗಿಯೇ [illegible] ದ ವಾಚನಾಲಯವು ತೆರೆಯಲ್ಪಟ್ಟಿದೆ.

ಹೊಸ ಗೌರ್ನರರ ಆಗಮನ.

ಈ ಮಾಹೆ 8 ನೇ ತಾರೀಖು ಶನಿವಾರ ಬೊಂ[illegible] ಯಿನ ಈಗಿನ ಗೌರ್ನರರಾದ ಸರ್. ಲೆಸ್ಲಿ ವಿಲ್ಸನ[illegible] ತಮ್ಮ ಪತ್ನಿಯರೊಡನೆ ವಿಲಾಯತಿಗೆ ಪ್ರಯಾ[illegible] ಮಾಡುವರು. ಆ ಸ್ಥಾನಕ್ಕೆ ಸರ್. ಫ್ರೆಡ್ರಿಕ್ ಸಾಯಿಕ್ರ ರು ಈ ಮಾಹೆ 7 ನೇ ತಾ|| ಬೊಂಬಾಯಿಗೆ ಬರುವ ದಾಗಿ ತಿಳಿಯಬರುತ್ತದೆ.

ಸರ್ಕಾರೀ ಸುದ್ದಿಗಳು.

ಫ್ರೆಂಚ್‌ರಾಕ್ಸ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸನೋಡುತ್ತಿರುವ ಅಸಿಸ್ಟೆಂಟ್ ಕಮಿಷನರ್‌ರವರಾದ ಮ|| ರಾ|| ಕೆ. ಸುಬ್ಬರಾವ್ ಬಿ. ಎ.ಯವರಿಗೆ ಕ್ರಿಸ್‌ಮಿಸ್ ರಜದ ಜೊತೆಗ 18 ದಿನಗಳ ರಜಾ ಮಂಜೂರಾಗಿದೆ. ಫ್ರೆಂಚ್‌ರಾಕ್ಸ್ ಸಬ್‌ಡಿವಿಷನ್ [illegible] ರ್ಜನಲ್ಲಿರುವ ಅ|| ಕಮೀಷನ್‌ರವರೇ ಆ ಕೆಲಸವನ್ನು ನೋಡಿಕೊಳ್ಳುವರು.

ಕಂಟ್ರೋಲರಾದ ಮ|| ರಾ|| ಎಸ್. ಶ್ರೀನಿವಾಸಯ್ಯಂಗಾರ್ [illegible] ಬಿ. ಎ. ರವರಿಗೆ ಕ್ರಿಸ್‌ಮಸ್ ರಜದ ಜೊತೆಗೆ 192[illegible] ನೇ ಜನವರಿ 2 ನೇ ತಾ|| ಲಾಗಾಯ್ತು 15 ದಿನಗಳ ಪ್ರಿವಿಲೇಜ್ ರಜಾ ಮುಂಜೂರಾಗಿದೆ. ಅವರ ಸ್ಥಾನದಲ್ಲಿ ಡೆಪ್ಯುಟಿಕಂಟ್ರೋಲರ್‌ರಾಗಿರುವ ಮ|| [illegible] ಷ್ಣಯ್ಯಂಗಾರ್ ಎಂ. ಎ. ಬಿ. ಎಲ್. ರವರು ನೇಮಕ ಮಾಡಲ್ಪಟ್ಟಿರುವರು.

Regd No. M. 2322 ‖ ವಂದೇಮಾತರಂ ‖ ಬಿಡಿ ಪ್ರತಿ ೬ ಪೈ

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೫—೦—೦ ; ಪತ್ರಿಕೆಗೆ ೦-೦-೬

ಸಂಪುಟ ೧] ಗುರುವಾರ ೭ ಡಿಸೆಂಬರ್ ೧೯೨೮ [ಸಂಚಿಕೆ ೫೯

ತಾಯಿನಾಡು.

(ಪ್ರಜಾಪಕ್ಷದ ಪ್ರತಿಪಾದಕ ಪತ್ರಿಕೆ.)


ವಂದೇಮಾತರಂ ಲಾಡ್ಜ ಮೈಸೂರು


Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons. Lansdowne Buildings Mysore
5 Subba Pundit & Co, Lakshmivilas
6 Friends' Union, Mysore.
7 Sweet Mart, Lansdowne Buildings, Mysore
8 H Subba Rao C o B Gowda & Sons Sakaleshpur
9 H Naganniah News Agent Chikmagalur
10 V Krishniah Gandhi Bhavan Closepet







Printed and published by P. R. Ramaiya, at Sri Rama Press, D. Subbiah Road, Mysore

ವಿವಿಧ ವಿಷಯಗಳು

ಅಖಿಲಭಾರತರಾಷ್ಟ್ರೀಯ ಮಹಾಸಭೆ.

ತಿಂಗಳು ನಡೆಯಬೇಕಾಗಿರುವ ಅಖಿಲಭಾರತ ರಾಷ್ಟ್ರೀಯಮಹಾಸಭೆಗೆ ಅಧ್ಯಕ್ಷರನ್ನು 28 ಕುದುರೆಗಳಿಂದ ಎಳೆಸಲ್ಪಡುವ ರಥದಮೇಲೆ ಎರಡು ಸಾವಿರ ಜನ ಸ್ವಯಂಸೇವಕರು ಬಹಳ ಉತ್ಸಾಹದಿಂದಲೂ ಅತಿ ವೈಭವದಿಂದಲೂ ಕರೆದುಕೊಂಡು ಹೋಗುವರು.

ಜನರಿಗೆ ಕಾಂಗ್ರೆಸ್ಸಿನಲ್ಲಿ ಹೆಚ್ಚಿನ ಅಭಿರುಚಿಯನ್ನು ಉಂಟುಮಾಡುವುದಕ್ಕೋಸ್ಕರ ಪ್ರತಿದಿನವೂ ಮೀಟಿಂಗುಗಳನ್ನೂ ಮತ್ತು ಲ್ಯಾಂಟ್ರನ್ ಉಪನ್ಯಾಸಗಳನ್ನೂ ಸ್ವಾಗತ ಮಂಡಳಿಯವರು ಏರ್ಪಡಿಸಿರುವರು.

ಕೋಲಾರದ ಬ್ರಾಹ್ಮಣ ಸಭೆ.

ಕಳೆದ ತಿಂಗಳು 28 ನೇ ತಾ|| ಕೋಲಾರದ ಮ|| ಕಿಷ್ಟಯ್ಯಶೆಟ್ಟರವರ ಛತ್ರದಲ್ಲಿ ಬ್ರಾಹ್ಮಣ ಸಭೆಯೊಂದು ಏರ್ಪಾಡಾಯಿತು. ಪ್ಲೀಡರ್ ಮ|| ಎಂ. ಎಸ್. ರಾಮಾಚಾರ್ರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು, ಉಪಾಧ್ಯಕ್ಷರ, ಕಾರ್ಯದರ್ಶಿಯವರುಗಳುಳ್ಳ ಕಾರ್ಯನಿರ್ವಾಹಕ ಸಮಿತಿಯೊಂದು ಏರ್ಪಾಡಾಯಿತು.

ವರನ ಮರಣ.

ಅಮೇರಿಕಾದಿಂದ ಬರುತ್ತಿದ್ದ ಒಂದು ಹಡಗಿನಲ್ಲಿ ಟೆಲಿಗ್ರಾಫ್ ಗುಮಾಸ್ತೆಯೊಬ್ಬಳಿಗೆ ಮದುವೆಯು ನಿಶ್ಚಯವಾಯಿತೆಂದು ಸಮಾಚಾರವು ತಿಳಿಯಿತು. ಅವನ ಸ್ನೇಹಿತನೊಬ್ಬನು ತನ್ನ ಸಂತೋಷವನ್ನು ಪ್ರದರ್ಶಿಸುವುದಕ್ಕಾಗಿ ಶಭಾಷ್ ಎಂದು ಬೆನ್ನು ತಟ್ಟಿದನು. ಹಾಗೆ ತಟ್ಟಿದ ಏಟು ಬಲವಾಗಿ ಬಿದ್ದುದರಿಂದ ವರನು ಸಮುದ್ರದಲ್ಲಿ ಬಿದ್ದುಹೋದನು.

ಚಕ್ರವರ್ತಿಯವರ ಆಲಸ್ಯ.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಕಳೆದ ತಿಂಗಳು 22 ರಿಂದ ಶ್ವಾಸಕೋಶಗಳ ಸಂಬಂಧವಾದ ಬಾಧ್ಯದಿಂದ ನರಳುತ್ತಿದ್ದಾರೆ. ಕಳೆದ ನವಂಬರ್ 11 ನೇ ತಾ|| ನಲ್ಲಿ ಮಹಾ ಯುದ್ಧದಲ್ಲಿ ಆತ್ಮಬಲಿಯನ್ನಿತ್ತ ವೀರರ ಸ್ಮಾರಕದ ಬಳಿ ಇವರು ಮಳೆ ಸುರಿಯುತ್ತಿದ್ದಾಗ ಬರೀ ತಲೆಯಲ್ಲಿ ನಿಂತು ನಮಸ್ಕರಿಸಿದುದರಿಂದ ಈ ಬಾಧೆಗೆ ಆರಂಭವಾಗಿದೆ. ಕ್ರಮೇಣ ಆರೋಗ್ಯವಾಗುತ್ತಿದೆ.

ಬೆಸ್ತರ ಯುಕ್ತಿ.

ಫ್ರೆಂಚ್ ಬೆಸ್ತರು ಮೀನು ಹಿಡಿಯುವುದಕ್ಕೆ ಒಂದು ನವೀನ ಯುಕ್ತಿಯನ್ನು ಕಂಡುಹಿಡಿದಿರುವರು. ಅದೇನೆಂದರೆ, ಟೆಲಿಫೋನ್ ಯಂತ್ರವನ್ನು ತಲೆಯಲ್ಲಿ ಹಿಡಿದುಕೊಂಡು ಒಬ್ಬನು ಸಮುದ್ರದಲ್ಲಿ ಮುಳುಗಿರುವನು. ಮೀನಸಾಲು ಮೇಲೆ ಬಂದ ಕೂಡಲೆ ವರ್ತಮಾನ ಕಳುಹಿಸುವನು. ಅದನ್ನು ಕೇಳಿ ಹಳ್ಳಿಯವರು ಕೂಡಲೆ ತಮ್ಮ ಬಲೆಯನ್ನು ಬೀಸಿ ರಾಶಿರಾಶಿಯಾಗಿ ಮೀನನ್ನು [illegible]

ಲಂಡನ್ ಪೋಲೀಸಿನವರ ಲಂಚ.

ಲಂಡನ್ನಿನ ಪೋಲೀಸಿನವರು ಧಾರಾಳವಾಗಿ ಲಂಚ ಪಡೆದು ರಾತ್ರಿ ಕಾಲದಲ್ಲಿ ಹೋಟಲುಗಳಲ್ಲೆಲ್ಲ ಅನಾಚಾರಗಳು ನಡೆಯುವುದಕ್ಕೆ ಅವಕಾಶ ಕೊಟ್ಟಿರುವರೆಂದು ಆಂಗ್ಲೇಯ ಹೋಮ್ ಸೆಕ್ರೆಟರಿಯವರು ತಿಳಿಸಿದರು.

ಸೈರ್ವಕ್ ಸಮಿತಿಗೆ ಹಿಂದೂ ಮೆಂಬರ ಚುನಾವಣೆ.

ಸೈರ್ವಕ್ ರು ಪಾರ್ಲಿಮೆಂಟ್ ಮೆಂಬರರಷ್ಟೆ. ಅವರ ಸ್ಥಾನದಲ್ಲಿ ಪುನಃ ಚುನಾವಣೆಗಾಗಿ ಭಾರತೀಯರೊಬ್ಬರನ್ನು ನಿಲ್ಲಿಸಬೇಕೆಂದೂ ಅದರಂತೆ ಮೇಜರ್ ಎಟ್ಲೀ ಎಂಬ ಮತ್ತೊಬ್ಬ ಕಮೀಷನರ್ ಮೆಂಬರರ ಸ್ಥಾನದಲ್ಲಿ ಮತ್ತೊಬ್ಬ ಭಾರತೀಯನನ್ನು ಚುನಾವಣೆಗೆ ನಿಲ್ಲಿಸಬೇಕೆಂದೂ ಸೂಚಿಸುವ ಸಭೆಯು ಲಂಡನ್ನಿನಲ್ಲಿ ಸೇರಿತ್ತು.

ಗೋವಿನ ಪ್ರತಿಮೆ.

ಅಮೇರಿಕದ ವಾಷಿಂಗ್‌ಟನ್ ಎಂಬೂರಿನಲ್ಲಿ ಒಂದು ಹಸುವಿತ್ತು. ಅದರಷ್ಟು ಹಾಲು ಕೊಟ್ಟ ದನವು ಮತ್ತಾವುದೂ ಪೃಥ್ವಿಯಲ್ಲೇ ಇಲ್ಲವಂತೆ. ಒಳ್ಳೆಯ ಮತ್ತು ದನಗಳು ಕೊಡುವಷ್ಟು ಹಾಲನ್ನು ಇದೊಂದೇ ಕೊಡುತ್ತಿತ್ತು. ಎರಡು ವರ್ಷಗಳಲ್ಲಿ 33,922 ಸೇರು ಹಾಲನ್ನು ಕೊಟ್ಟಿತ್ತು, ಅದರಿಂದ 3865 ರಾತಲು ಬೆಣ್ಣೆ ಬಂತು. ಆ ಹಸು ಸತ್ತಮೇಲೆ ಅದರ ಪ್ರತಿಮೆಯೊಂದನ್ನು ಹುಲ್ಲುಗಾವಲಿನಲ್ಲಿ ಇತರ ಹಸುಗಳಿಗೆ ಆದರ್ಶಪ್ರಾಯವಾಗಿರುವಂತೆ ಇಟ್ಟಿರುವರು.

ಗಾಂಧಿ ಆಶ್ರಮ.

ಪೋರ್ಟನೋವೊ ಎಂಬ ರೈಲ್ವೆಸ್ಟೇಷನಿಗೆ ಒಂದು ಮೈಲಿಯ ದೂರದಲ್ಲಿ ಗಾಂಧಿ ಆಶ್ರಮ ಎಂಬುದೊಂದು ಪಾಠಶಾಲೆಯು ಇದೆ. ಈ ಆಶ್ರಮದಲ್ಲಿ ಎಲ್ಲಾ ಪಂಗಡಗಳಿಂದಲೂ ಒಟ್ಟು 20 ಜನ ಬಾಲಕಿಯರು ವ್ಯಾಸಂಗಮಾಡುತ್ತಾರೆ. ಇವರಿಗೆ ಹಿಂದೂ ಚರಿತ್ರೆ ಹಿಂದೂ ಗಾಯನವೇ ಮೊದಲಾದುವುಗಳ ಜೊತೆಗೆ, ನೂಲುವುದು, ನೆಯ್ಯುವುದು ಇವೂ ಸಹ ಕಲಿಸಲ್ಪಡುವುವು. ಈ ಆಶ್ರಮದ ಅಸ್ತಿಭಾರವನ್ನು ಮಹಾತ್ಮಾಗಾಂಧಿಯವರು 1921 ನೇ ಇಸವಿಯಲ್ಲಿ ಹಾಕಿದರು. ಒಂದಾನೊಂದು ಕಾಲದಲ್ಲಿ ಬೆಂಗಾಡಾಗಿದ್ದ ಈ ಸ್ಥಳವು ಈಗ ಸುಂದರವಾದ ಉದ್ಯಾನವನವಾಗಿ ಪರಿಣಮಿಸಿರುತ್ತೆ. ಆಶ್ರಮದ ಸರ್ವಾಧಿಕಾರವು ಮಹಾತ್ಮಾಜಿಯವರ ಶಿಷ್ಯನಾದ ಒಬ್ಬ ಪಾಶ್ಚಾತ್ಯ ಸ್ತ್ರೀಯ ಕೈಯಲ್ಲಿರುತ್ತದೆ.

ದ್ವೀಪಾಂತರ ಶಿಕ್ಷೆ.

ಒಬ್ಬ ಸ್ತ್ರೀಯು ದಾರಿದ್ರ್ಯವನ್ನು ತಡೆಯಲಾರದೆ ತನ್ನ ಮಗುವನ್ನು ಭಾವಿಯಲ್ಲಿ ನೂಕಿದಳು. ಕೂಡಲೇ ಮಗುವು ಮೃತಿಯನ್ನು ಹೊಂದಿತು. ಅನಂತರ ತಾನೂ ಸಹ ಆತ್ಮಹತ್ಯಕ್ಕೆ ಪ್ರಯತ್ನಿಸುತ್ತಿದ್ದಳು ಅಷ್ಟರಲ್ಲಿ ಯಾರೋ ಕೆಲವರಿಂದ ತಡೆಯಲ್ಪಟ್ಟಳು. ಅದರೂ [illegible] ಹತ್ಯಾದೋಷಕ್ಕಾಗಿ ಆಕೆಗೆ [illegible] ದ್ವೀಪಾಂತರ ಶಿಕ್ಷೆಯನ್ನು [illegible]

ಭಾರತಾಚಿಯವರ [illegible]

ತಿರುಮಕೂಡ್ಲು ನರಸೀಪುರದ ಸ್ವಾಮಿರಾವ್ [illegible] ಮತ್ತು ವಿದ್ಯಾರ್ಥಿ ಮಂಡಳಿಯವರು ಕಳೆದ [illegible] 29 ನೇ ತಾರೀಖಿನ ದಿವಸ [illegible] ದಲ್ಲಿ [illegible] ಸಭೆಯನ್ನು [illegible] ಜನಗಳಲ್ಲಿ [illegible] ಟ್ಟಿದರು. [illegible] ರಿತ್ತು. ವಿದ್ಯಾರ್ಥಿಗಳು [illegible] ವಾದನಂತರ [illegible] ಗೆ ಮಾಡಿರುವ [illegible] ಗಳಾದ ವೆಂಕಟೇಶ[illegible] ರೂ ಜೆ. ಚಂದ್ರಶೇಖರ ಶಾಸ್ತ್ರಿಗಳ [illegible] ಯ್ಯನವರ ಸಹ ಭಾಷಣಗಳು [illegible] ಲಾಚಿಯವರ ಚಿತ್ರಕ್ಕೆ [illegible] ತೆ ಎಲ್ಲರೂ ಪ್ರಾರ್ಥನೆ ಮಾಡಿದನಂತರ ಸಭೆಯು [illegible] ಕಾಸ್ತುಯಿತೆಂದು ಅಲ್ಲಿನ ಗೌ [illegible] ಸಿರುತ್ತಾರೆ.

ವೆಸ್ಲಿಯನ್ ಹಾಂಗ್ರೆಸ್ ಸಂಘ

ಬೆಂಗಳೂರು ವೆಸ್ಲಿಯನ್ ಹೈಸ್ಕೂಲಿನಲ್ಲಿ [illegible] ಗಿ ಸ್ಥಾಪಿತವಾಗಿರುವ ವೆಸ್ಲಿಯನ್ [illegible] ಸಂಘ ದವರುಗಳೆಲ್ಲರೂ ಕಳೆದ ತಿಂಗಳು 21 ನೇ ತಾರೀಖು ಬುಧವಾರ ಸದರೀ ಸ್ಕೂಲಿನ ಹಾಲಿನಲ್ಲಿ ಸೇರಿ [illegible] ದುಃಖವನ್ನು ಪ್ರದರ್ಶಿಸಿದರು. ಸದರೀ ಸ್ಕೂಲಿನ [illegible] ಪಾಲರಾದ [illegible] ಟಿ. ಪಿ. [illegible] ಎಂ. [illegible] ದಲುಗೊಂಡು 34 ಜನ ಉಪಾಧ್ಯಾಯರು [illegible] ಪಣ ಮಾಡಿದನಂತರ [illegible] ಕಾರವನ್ನು ಮಾಡಿದನಂತರ ಸಭೆಯು [illegible]

[illegible]

ಬೆಂಗಳೂರು ವೆಸ್ಲಿಯನ್ [illegible] ಸಂಘದ ಸದಸ್ಯರುಗಳೆಲ್ಲರೂ ಸೇರಿದ್ದ ಈ ಸಭೆಯು [illegible] ಮರಣಕ್ಕೆ ತುತ್ತಾದ [illegible] ಈ ಮೂಲಕ ಸೂಚಿ [illegible] ಸಂತಾಪವನ್ನು ತಿಳಿಸುತ್ತದೆ.

ಸ್ವರಾಜ್ಯ ಫಂಡ್.

ಪಂಜಾಬ್ ಕಾಂಗ್ರೆಸ್ ಕಮಿಟಿಯವರು [illegible] ಸ್ವರಾಜ್ಯ ಫಂಡ್ [illegible] ಯನ್ನು [illegible] ಕಾರ್ಯ [illegible]

[illegible]

ಬೆಂಗಳೂರು ವಿ|| [illegible]

[illegible]

TAI NADU
6—1— 1928.

ದೇಶೀಯ ಸಂಸ್ಥಾನದ ಪ್ರಜೆಗಳ ಸಭೆ.

—

ದಕ್ಷಿಣ ಭಾರತದ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಭೆಯು ಜನವರಿ 14-15 ನೇ ತಾರೀಖುಗಳಲ್ಲಿ ಅನಂತಶಯನದಲ್ಲಿ ನಡೆಯುವುದು. ಸರ್ ಎಂ. ವಿಶ್ವೇಶ್ವರಯ್ಯನವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸುವರು. ನಮ್ಮ ಮೈಸೂರಿನವರನೇಕರು ಈ ಸಭೆಗೆ ಹೋಗುವುದಾಗಿ ತಿಳಿಯ ಬರುತ್ತದೆ. ಈಗಿನ ಸನ್ನಿವೇಶದಲ್ಲಿ ಈ ಸಭೆಯು ನಡೆಯುವುದು ಅತ್ಯಂತ ಆವಶ್ಯಕವು. ಇಂಡಿಯಾ ದೇಶದ ಮುಂದಿನ ರಾಜಕೀಯ ಬದಲಾವಣೆಗಳಲ್ಲಿ ದೇಶೀಯ ಸಂಸ್ಥಾನದ ಮಹಾರಾಜರುಗಳ ಸ್ಥಾನ ವಾವುದೆಂಬುದನ್ನು ಧೃಢಪಡಿಸುವುದಕ್ಕಾಗಿ ಬಟ್ಲರ್ ಕಮಿಟಿಯು ನಮ್ಮ ಸಂಸ್ಥಾನದ ಪ್ರಸಿದ್ಧ ಪಟ್ಟಣಗಳಾದ ಬೆಂಗಳೂರಿಗೂ ಮೈಸೂರಿಗೂ ಬಂದಿತ್ತು. ಈ ಕಮಿಟಿಯವರ ಮೇಲೆ ದೇಶೀಯ ಸಂಸ್ಥಾನದ ಪ್ರಜೆಗಳೆಲ್ಲರಿಗೂ ಅಸಮಾಧಾನವಾಗಿರುವುದು. ಈ ಕಮಿಟಿಯ ಮುಂದೆ ರಾಜರುಗಳೇನೋ ತಮ್ಮ ಮೂಗಿನ ನೇರಕ್ಕೆ ಸರಿಯಾಗಿ ಹೇಳಿಕೆಗಳನ್ನು ಕೊಟ್ಟಿರುವರು. ಪ್ರಜೆಗಳಿಗೆ ಈ ಕಮಿಟಿಯ ಮುಂದೆ ತಮ್ಮ ಹೇಳಿಕೆಗಳನ್ನು ಕೊಡಲು ಅವಕಾಶವೇ ಇಲ್ಲ. ದೇಶೀಯ ಸಂಸ್ಥಾನದ ಪ್ರಜೆಗಳಿಗೆ ಇದೊಂದು ದೊಡ್ಡ ಅವಮಾನ. ದೇಶೀಯ ಸಂಸ್ಥಾನದ ಪ್ರಜೆಗಳು ಬರೀ ಗಾಣದ ಎತ್ತುಗಳೇ [illegible] ರಾಜಕೀಯ [illegible] ಈ ಕಮಿಟಿಯವರು [illegible]. ದೇಶೀಯ ಸಂಸ್ಥಾನದ ಪ್ರಜೆಗಳ ಪ್ರತಿನಿಧಿಯಾಗಿ [illegible] ಎಂ. ರಾಮಚಂದ ರಾವ್ ಎಂಬ ಆಂಧ್ರದೇಶದ ಪ್ರಸಿದ್ಧ ಮುಖಂಡರು ಇಂಗ್ಲೆಂಡಿಗೆ ಹೋದರು. ಬಟ್ಲರ್ ಕಮಿಟಿಯ ಮುಂದೆ ದೇಶೀಯ ಸಂಸ್ಥಾನಗಳ ಪ್ರಜೆಗಳ ಪಕ್ಷವನ್ನು ವಾದಿಸಬೇಕೆಂದು ಪ್ರಯತ್ನ ಮಾಡಿದರು. ಆದರೆ ಸದರಿ ಕಮಿಟಿಯವರು ಇವರ ವಾದಕ್ಕೆ ಅವಕಾಶವನ್ನೇ ಕೊಡಲಿಲ್ಲ, ಇದು ಬಹಳ ಅನ್ಯಾಯವೆಂದು ಭಾರತೀಯ ಪ್ರಜೆಗಳೆಲ್ಲರೂ ಉಚಿತವಾಗಿ ಹೇಳಿರುವರು. ಮತ್ತು ನಿಷ್ಪಕ್ಷಪಾತಿಗಳಾದ ಅನೇಕ ಆಂಗ್ಲೇಯ ಪ್ರಮುಖರೂ ಇದೇ ಅಭಿಪ್ರಾಯವನ್ನೇ ಕೊಟ್ಟಿರುವರು. ದೇಶೀಯ ಸಂಸ್ಥಾನದ ಭವಿಷ್ಯವನ್ನು ಆ ಸಂಸ್ಥಾನಗಳ ಪ್ರಜೆಗಳ ಅನುಮತಿಯಿಲ್ಲದೇ, ಸಲಹೆಯಿಲ್ಲದೆಯೇ ನಿಶ್ಚಯಿಸಿದರೆ, ಆ ನಿರ್ಣಯಗಳಿಗೆ, ಪ್ರಜೆಗಳು ಜವಾಬ್ದಾರರಾಗುವುದಿಲ್ಲ. [illegible] ಪ್ರಜೆಗಳಿಗೆ ಸ್ವಲ್ಪವೂ ಅವಕಾಶ ಕೊಡದಿದ್ದಲ್ಲಿ ದೇಶೀಯ ಸಂಸ್ಥಾನಗಳಲ್ಲಿ [illegible] ಪ್ರಜಾ ಪ್ರಭುತ್ವದ ಧರ್ಮಗಳನ್ನು [illegible] ಮಾಡಿ, ಅದರಂತೆ ನಡೆದ [illegible] ಪ್ರಜೆಗಳ ಸ್ವರಾಜ್ಯ ಸಾಧನೆಯ ಪ್ರಯತ್ನಗಳ [illegible] ಸಾಧ್ಯವಾಗಿ ಬರುವುದಿಲ್ಲ [illegible] ರಾಜರುಗಳು ಸ್ಥಾಪಿಸಿದ ಬೋರ್ಡುಗಳು [illegible] ಅಭಿವೃದ್ಧಿಗೆ ಅವಕಾಶವೇ ಇಲ್ಲ. ನಾವೇ ಬೇರೆ, ಬ್ರಿಟಿಷ್ ಇಂಡಿಯಾದ ಪ್ರಜೆಗಳೇ ಬೇರೆ ಎಂಬುದಾಗಿ ರಾಜರುಗಳು ವರ್ತಿಸಲಾರಂಭ ಮಾಡಿದರೆ, ರಾಜರುಗಳ ಅಭಿವೃದ್ಧಿಗೂ ಕಲ್ಲು ಬ್ರಿಟೀಷ್ ಪ್ರಜೆಗಳ ಅಭಿವೃದ್ಧಿಗೂ ಕಲ್ಲು. ಈ ವಿಷಯವನ್ನು ನಮ್ಮ ರಾಷ್ಟ್ರದ ಮುಖಂಡರುಗಳು ತಮ್ಮ ಭಾಷಣಗಳಲ್ಲಿಯೂ, ಬರವಣಿಗೆಗಳಲ್ಲಿಯೂ ಸ್ಪಷ್ಟ ಪಡಿಸಿರುವರು. ರಾಜರುಗಳು ಈಗಿನ ಯುಗದ ಪ್ರಜಾ ಪ್ರಭುತ್ವ ಧರ್ಮವನ್ನು ಅರಿತು, ತಮ್ಮ ಪ್ರಜೆಗಳೊಡನೆ ಸಹಾನುಭೂತಿಯಿಂದ ವರ್ತಿಸಿ ದೇಶದ ಹಿತಕ್ಕೆ ಅನುಕೂಲರಾಗುವರೆಂದು ನಂಬುತ್ತೇವೆ. ಈ ವಿಷಯಗಳೆಲ್ಲವೂ ಅನಂತಶಯನದಲ್ಲಿ ನಡೆಯುವ ದೇಶೀಯ ಸಂಸ್ಥಾನದ ಪ್ರಜೆಗಳ ಸಮ್ಮೇಳನದಲ್ಲಿ ಸ್ಪಷ್ಟಪಡಿಸಲ್ಪಡ ಬೇಕು.

—

ಸ್ಕೌಟುಗಳೂ ಮತ್ತು ಲಾಲಾಜಿಯ ವರೂ

ಕಳೆದ ತಿಂಗಳು 20ನೇ ತಾರೀಖಿನಿಂದ 29 ನೇ ತಾ|| ವರೆಗೆ ಮೈಸೂರು ಬಾಯ್ಸ್ ಸ್ಕೌಟ್ಸುಗಳ ಕ್ಯಾಂಪು ನಂದಿಯಲ್ಲಿ ಸೇರಿತು. ದೇಶಭಕ್ತರಾದ ಲಾಲಾ ಲಜಪತರಾಯರವರ ಸ್ಮಾರಕಳ ದಿನವು ಕ್ಯಾಂಪಿನಲ್ಲಿ ಆಚರಿಸಲ್ಪಟ್ಟಿತು. ಆ ದಿನ ಪ್ರಾತಃಕಾಲ ಸ್ಕೌಟ್‌ಕಮೀಷನರ್‌ವರಿಂದ ಮ|| ರಾ|| ಎಲ್ ಸುಬ್ಬರಾಯರವರು ಲಾಲಾಜಿಯವರ ಗುಣ ಕಥನವನ್ನು ಮಾಡಿದರು. ದೊಡ್ಡ ಬಳ್ಳಾಪುರದ ಮ|| ರಾ|| ಟಿ. ಅಬ್ದುಲ್ ಖುದ್ದೂಸರವರು ಅಲ್ಲಿ ಸೇರಿದ್ದ ಮಹಮದೀಯರ ಪರವಾಗಿಯೂ, ಕೋಲಾರದ ಮ|| ರಾ|| ಜಿ. ಆರ್. ರಂಗಸ್ವಾಮಿಯವರು ಹಿಂದುಗಳ ಪರವಾಗಿಯೂ ಭಾಷಣಗಳನ್ನು ಮಾಡಿದರು.

ಆಗಿನ ಕಾರ್ಯಕ್ರಮವನ್ನು ಅರ್ಧಘಂಟೆಯ ಮುಂದಕ್ಕೆ ಹಾಕಿ ಬಂದು ಕ್ಷಣಕಾಲದ ಸ್ತಬ್ಧತೆಯಿಂದ ತಮ್ಮ ಅನುತಾಪವನ್ನು ಸೂಚಿಸಿದರು.

ವಾರ್ಷಿಕೋತ್ಸವಗಳು.

ಚನ್ನಪಟ್ಟಣದ ಗೌ|| ಹೈಸ್ಕೂಲಿನ ವಾರ್ಷಿಕೋತ್ಸವವು ಈ ಮಾಹೆ 21, 22 ನೇ ತಾರೀಖುಗಳಲ್ಲಿ ನಡೆಯುತ್ತದೆ. ಈ ಸ್ಕೂಲಿನಲ್ಲಿ ಹಿಂದೆ ವ್ಯಾಸಂಗ ಮಾಡುತ್ತಿದ್ದವರೂ ವಿದ್ಯಾಭಿತಚಿಂತಕರೂ ಸೇರಿ ಈ ಕಾರ್ಯವನ್ನು ಅಗಮಾಡಿಸಬೇಕೆಂದೂ, ಈ ಕಾರ್ಯಕ್ಕೆ ಚಂದಾ ಸಹಾಯ ಮಾಡತಕ್ಕವರು ಸೆಕ್ರೆಟರಿ ಹೈಸ್ಕೂಲ್ ಡೆ ಕಮಿಟಿ ಎಂಬ ವಿಳಾಸಕ್ಕೆ ಕಳುಹಿಸಿ ಕೊಡಬೇಕೆಂದೂ ಅಲ್ಲಿನ ಗೌ|| ಕಾರ್ಯದರ್ಶಿಗಳು ಕೋರಿರುತ್ತಾರೆ.

ಶ್ರೀ ರಾಮ ಸಿನಿಮಾ ಮೈಸೂರು.

ಈಗ ಹೊಸವಾಗಿ ರಾಜಧಾನಿಯ ಲಕ್ಷ್ಮಿ ಥಿಯೇಟರಿನಲ್ಲಿ ಪ್ರಾರಂಭವಾಗಿರುವ ಶ್ರೀರಾಮ ಸಿನಿಮಾದಲ್ಲಿ ಈ ದಿನ ಪತಿವ್ರತಾ ಧರ್ಮವನ್ನು ಬೋಧಿಸತಕ್ಕ ಸತಿ ಮೀನಾದೇವಿ ಎಂಬ ನಾಟಕವು ಪ್ರದರ್ಶಿಸಲ್ಪಡುವುದು. ಇದರ ಜೊತೆಗೆ ಬೊಂಬಾಯಿಂದ ಬಂದಿರುವ ಇಬ್ಬರು [illegible] ಹೊಸ ತರಹದ ನರ್ತನವೂ ಇಂಪಾದ ಗಾನವೂ ಸಹ ನಡಸಲ್ಪಡುವುದಾಗಿ ತಿಳಿಯ ಬರುತ್ತೆ.

ಬೆಂಗಳೂರು ಸಮಾಚಾರ

—

(ಶಾಂತೀ ಮುಖಾಂತರ)
ನಮ್ಮ ಸ್ವಂತ ಬಾತ್ಮೀದಾರರಿಂದ.
ತಾ|| 5-12- 28.

ಜಾಮೀನು ಮೊಖದ್ದಮೆ.

ಬೆಂಗಳೂರು ಜಾಮೀನು ಮೊಖದ್ದಮೆಯ ಸಂಬಂಧದಲ್ಲಿ ಸಾಕ್ಷಿಗಳಾದ ಮ|| ಅಬ್ಬಾಸ್ ಖಾನರ ಪಾಟಿ ಸವಾಲು ಮಾಡುವ ವಿಷಯವಾಗಿ ಚೀಫ್ ಕೋರ್ಟಿಗೆ ದಾಖಲಾಗಿದ್ದ ಅರ್ಜಿಯನ್ನು ಚೀಫ್ ಕೋರ್ಟಿನ ಮೂವರು ಜಡ್ಜಿಗಳು ಪರಿಶೀಲಿಸಿ ಪಾಟಿಸವಾಲು ಮಾಡುವುದಕ್ಕೆ ಎಲ್ಲಾ ವಿಧದಲ್ಲಿಯೂ ಪ್ರತಿವಾದಿಗಳಿಗೆ ಸಂಪೂರ್ಣವಾದ ಹಕ್ಕಿರುವುದೆಂದು ತೀರ್ಮಾನಿಸಿದರು. ಅದರಂತೆ ಈ ದಿನ ವಿಚಾರಣೆಯು ತೆಗೆದು ಕೊಳ್ಳಲ್ಪಟ್ಟಿತು. ಮ|| ಅಬ್ಬಾಸ್ ಖಾನರು ದೇಹದಲ್ಲಿ ಅಲಸ್ಯವಾಗಿದೆ ಎಂಬ ಕಾರಣದ ಮೇಲೆ ಕೋರ್ಟಿಗೆ ಬರಲಾಗುವುದಿಲ್ಲ ವೆಂದು ಸಮನ್ಸಿನ ಮೇಲೆ ಬರೆದು ಕಳುಹಿಸಿದರು. ಮೊಖದ್ದಮೆಯು ನಾಳೆಯ ದಿವಸಕ್ಕೆ ಹಾಕಲ್ಪಟ್ಟಿತು. ಪಬ್ಲಿಕ್ ಪ್ರಾಸಿಕ್ಯೂಟರವರು ನಾಳೆಯ ದಿನ ಮಹಮ್ಮದೀಯರ ಮೇಲೆ ಮಾಡಲ್ಪಟ್ಟಿರುವ ಮೊಖದ್ದಮೆಯನ್ನು ನಡೆಸಬೇಕಾಗಿರುವುದರಿಂದ ಈ ವಿಚಾರಣೆಯನ್ನು ಸೋಮವಾರಕ್ಕೆ ಇಟ್ಟುಕೊಳ್ಳಬೇಕೆಂಬದಾಗಿ ಪ್ರಾರ್ಥಿಸಿದರು. ಆದರೆ ಚೀಫ್ ಕೋರ್ಟಿನವರು ಈ ಮೊಖದ್ದಮೆಯನ್ನು ಜಾಗ್ರತೆ ಮುಗಿಸಬೇಕೆಂದು ಹೇಳಿರುವುದರಿಂದ ಸೋಮವಾರಕ್ಕೆ ಇಟ್ಟು ಕೊಳ್ಳಲಾಗುವುದಿಲ್ಲವೆಂದು ಮ್ಯಾಜಿಸ್ಟ್ರೇಟರು ತಿರಸ್ಕರಿಸಿದರು. ಮ|| ಅಬ್ಬಾಸ್ ಖಾನರು ಖಾಯಿಲೆಯಾಗಿರುವ ವಿಷಯವನ್ನು ರುಜುವಾತು ಮಾಡಲು ವೈದ್ಯರ ಶಿಫಾರಸನ್ನು ಲಗತ್ತು ಮಾಡಿಲ್ಲವೆಂದು ಮ|| ಎಲ್. [illegible] ರಾಜುಯವರು ಆಕ್ಷೇಪಣೆ ಮಾಡಿದರು. ಮೊಖದ್ದಮೆಯನ್ನು ಮುಂದಕ್ಕೆ ಇಟ್ಟುಕೊಳ್ಳುವ ವಿಷಯವಾಗಿ ಮ್ಯಾಜಿಸ್ಟ್ರೇಟರಿಗೂ ಪಬ್ಲಿಕ್ ಪ್ರಾಸಿಕ್ಯೂಟರಿಗೂ ಬಹಳ ಚರ್ಚೆ ನಡೆಯಿತು.

ವಿಶ್ವೇಶ್ವರಯ್ಯನವರ ಸಮಿತಿಯ ವರದಿಯು ಮಹಾಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಲ್ಪಡುವುದಿಲ್ಲವೆಂದು ಸರ್ಕಾರದವರು ಅದರ ಮೇಲೆ ಬರಿ ಬಂದು ಟಿಪ್ಪಣಿಯನ್ನು ಮಾತ್ರ ಪ್ರಕಟಿಸುವರೆಂದೂ ಸ್ವರಾಜ್ಯ ಪತ್ರಿಕೆಯಲ್ಲಿ ಮುದ್ರಿಸಿದ್ದ ವಿಷಯವು ನಿರಾಧಾರವಾದುದೆಂದು ತಿಳಿಯ ಬರುತ್ತದೆ.

ಮ|| ತಮ್ಮಾಜಿರಾಯರವರ ಕೋರ್ಟಿನಲ್ಲಿ ನಡೆಯುತ್ತಿರುವ ಮ|| ರಾ|| ವಿ. ಎಸ್. ಸಂಜೀವರಾಯರ ಮೊಖದ್ದಮೆಯು ೪ನೇ ತಾರೀಖಿಗೆ ಇಡಲ್ಪಟ್ಟಿದೆ.

Regd No. M. 2322 ॥ ವಂದೇ ಮಾತರಂ ॥ ಬಿಡಿ ಪ್ರತಿ ಒಂದು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ

ಸಂಪುಟ ೧] ಶುಕ್ರವಾರ ೭ ಡಿಸೆಂಬರ್ ೧೯೨೮ [ಸಂಚಿಕೆ ೭೦

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet
Bangalore City

2 Koppada Ramakrishniah Agent Hassan

3 Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Buildings
Mysore.

5 Subba Pundit & Co, Lakshmivilas

6 Friends' Union, Mysore.

7 Sweet Mart, Lansdowne Buildings.
Mysore.

8 H Subba Rao C/o B Gowda & Sons

9 H Nagannaiah News Agent
Chikmagalur

10 V Krishniah Gandhi Bhavan Closepet

Printed and published by P. R. Ramaiya. at Sri Rama Press, D. Subbiah Road, Mysore

ತಾಯಿನಾಡು.

7—12—1928

ವರ್ತಮಾನ ಸಂಗ್ರಹ

ಆರ್ಯ ಸಮಾಜ ಬೆಂಗಳೂರು

ಕಳೆದ ತಿಂಗಳು 25 ನೇ ತಾ|| ಸ್ವಾಮಿ ಧರ್ಮಾನಂದಜೆಯವರ ಅಧ್ಯಕ್ಷತೆಯಲ್ಲಿ ಮೆಲ್ಕಂಡ ಸಮಾಜದವರು ದೇಶಭಕ್ತ ಲಾಲಾಜಿಯವರ ಜ್ಞಾಪಕಾರ್ಥವಾಗಿ ಒಂದು ದುಃಖ ಸೂಚಕ ಸಭೆಯನ್ನು ನಡೆಸಿದರು.

ಬೆಂಗಳೂರು ಪ್ರೆಸಿಡೆನ್ಸಿ ಹೈಸ್ಕೂಲು

ಈ ಮಾಹೆ 21 ನೇ ತಾ|| ನ ದಿವಸ ಮೇಲ್ಕಂಡ ಸ್ಕೂಲಿನ ವಾರ್ಷಿಕೋತ್ಸವವು ನಡೆಯುವದು.

ಬೆಂಗಳೂರು ಮ್ಯುನಿಸಿಪಲ್ ಮೀಟಿಂಗು.

ಈ ತಿಂಗಳು 8 ನೇ ತಾ|| ಶನಿವಾರ ಮಧ್ಯಾಹ್ನ 12 ಘಂಟೆಗೆ ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಜನರಲ್ ಮೀಟಿಂಗು ನಡೆಯುವುದು.

ಬೆಂಗಳೂರು ಡಿ|| ಬೋರ್ಡು ಮೀಟಿಂಗು.

ಈ ತಿಂಗಳು 1 ನೇ ತಾ|| ಮಧ್ಯಾಹ್ನ ಬೆಂಗಳೂರು ಡಿ|| ಬೋರ್ಡಿನ ಮೀಟಿಂಗು ಮಿ|| ಅಬ್ದುಲ್ ರಹಿಮಾನ್ ಬಿ. ಎ. ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೈಗಾರಿಕೆ, ವ್ಯವಸಾಯಗಳ ಉತ್ತೇಜನ.

ಈ ಸಲದ ಬೆಂಗಳೂರು ಡಿ|| ಬೋರ್ಡಿನ ಮೀಟಿಂಗಿನಲ್ಲಿ ಕೆಳಗೆ ಕಂಡಿರುವ ಕೈಗಾರಿಗೆ ಮತ್ತು ವ್ಯವಸಾಯದ ಉತ್ತೇಜನಗಳು ದೊರೆತವು.

ಚರಕಕ್ಕೆ ಉತ್ತೇಜನ.

ಬೆಂಗಳೂರು ಡಿ|| ಬೋರ್ಡಿನವರು ಆನೆಕಲ್ ತಾ|| ಸರ್ಜಾಪುರದಲ್ಲಿ ನೂಲುವುದನ್ನು ಏರ್ಪಡಿಸುವದಕ್ಕೆ 500 ರೂ. ಗಳ ಗ್ರಾಂಟು ಕೊಡಬೇಕೆಂದು ನಿಶ್ಚಯಿಸಿರುವರು. ಆನೆಕಲ್ ಕಸಬಾದಲ್ಲಿ ಲಾಕಿ ಬಣ್ಣದ ಕೈಗಾರಿಕೆಯನ್ನು ಬೋಧಿಸುವುದಕ್ಕಾಗಿ ಸಾಲಿಯಾನಾ 275-8-0 ರೂ. ಮಂಜೂರಾಯಿತು.

ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ಹಣ್ಣುಗಳ ವ್ಯವಸಾಯಾಭಿವೃದ್ಧಿಗೋಸ್ಕರ ಸೇಬು, ಕಿತ್ತಲೆ ಗಿಡಗಳನ್ನು ತರಿಸಿ ಮುಫತ್ತಾಗಿ ರೈತರಿಗೆ ಹಂಚುವುದಕ್ಕೆ 120-8-0 ಗಳು ಮಂಜೂರಾಯಿತು.

ಉಪಾಧ್ಯಾಯರಿಗೆ ಡಿಸ್‌ಮಿಸ್ಸಿನ ಹುಚ್ಚು.

ಬೆಂಗಳೂರು ಗಲಭೆಗಳ ಸಂದರ್ಭದಲ್ಲಿ ಡಿ|| ನಾ| ಸ್ಕೂಲಿನಿಂದ ಡಿಸ್‌ಮಿಸ್ ಮಾಡಲ್ಪಟ್ಟಿರುವ 6 ಜನ ಉಪಾಧ್ಯಾಯರ ಪೈಕಿ ಒಬ್ಬರಾದ ಟಿ. ವೆಂಕಟಾಚಲಯ್ಯನೆಂಬುವರಿಗೆ ಬುದ್ಧಿಭ್ರಮಣೆಯುಂಟಾಗಿದೆಯೆಂದೂ ಅವರ ತಂದೆತಾಯಿಗಳು ಅವರನ್ನು ತಮ್ಮೂರಿಗೆ ಕರೆದೊಯ್ದಿರುವರೆಂದೂ ತಿಳಿಯಬರುತ್ತೆ.

ಬ್ರಿಟಿಷ್ ಪತ್ರಿಕೆಗಳ ಕುತಂತ್ರ

ಮೈಸೂರು ಮಹಾರಾಜರು ಮುಸಲ್ಮಾನರೆಂದು ಇಂಗ್ಲೆಂಡದಲ್ಲಿ ಹೊರಡುವ "ಮ್ಯಾಂಚೆಸ್ಟರ ಗಾರ್ಡಿಯನ್" ಎಂಬ ಪತ್ರಿಕೆಯು ಹೇಳುತ್ತದೆ! ಹಿಂದೀಯರ ಬಗ್ಯೆ ಎಂಥ ದಿವ್ಯವಾದ ಜ್ಞಾನವು ಇಂಗ್ಲೆಂಡದಲ್ಲಿಯ ಮಹತ್ವದ ಪತ್ರಿಕೆಗಳಿಗೆ ಇರುತ್ತದೆಂಬದು ಇದರಿಂದ ಸಿದ್ಧವಾಗುತ್ತದೆ. ಇಂಥ ಜ್ಞಾನ ಪಂಡಿತರು ನಮ್ಮನ್ನಾಳಬೇಕು! ನಾವು ಮಾತ್ರ ಆಳಬೇಕು! ಸಂಪೂರ್ಣ ಸ್ವಾತಂತ್ರ್ಯವೊಂದೇ ಈ ಅಳಿದಕ್ಕೀ ಹೋಗಲು ಕಾರಣವಾಗ್ಬಹುದು. ಅದಿರಲಿ; ಮೈಸೂರು ಸರಕಾರಕ್ಕೆ ಇಂಗ್ಲೀಷ ಪತ್ರಿಕೆಗಳಲ್ಲಿಯೇ ಹೆಚ್ಚು ವಿಶ್ವಾಸ. ಆದ್ದರಿಂದಲೇ ಬೆಂಗಳೂರ ಗಲಭೆಯ ಸಮಾಚಾರವು ಸರಕಾರದಿಂದ ತಂತಿ ಮೂಲಕವಾಗಿ ಇಂಗ್ಲೆಂಡಕ್ಕೆ. ಹಿಂದುಸ್ಥಾನದ ಪತ್ರಿಕೆಗಳಿಗಿಲ್ಲದಿದ್ದರೂ ಚಿಂತೆಯಿಲ್ಲ ಕಂಡಿರೋ! ಕೂಡಲೇ ಕಳಿಸಲ್ಪಟ್ಟಿತು! ಆದರೆ ಮ್ಯಾಂಚೆಸ್ಟರ ಗಾರ್ಡಿಯನ್ನ" ಪತ್ರಿಕೆಯು ಮಹಾರಾಜರ ಚಂಡಿಕೆ ಜನಿವಾರ, ಹಣೆಯ ತಿಲಿಕಗಳನ್ನು ಕಿತ್ತೊಗೆದು, ಅವರಿಗೆ ಗಡ್ಡವನ್ನು ಹಚ್ಚಿತು! ಸಂಧ್ಯಾವಂದನೆಯ ಬದಲು ನಮಾಜ ಮಾಡಲು ಹಚ್ಚಿದೆ!

(ಕನ್ನಡಿಗ)

ಅಲ್ವಾರದ ಮಹಾರಾಜರು ಸಿಂಹಾಸನ ಚ್ಯುತರಾಗಬೇಕು! ಪ್ರಜೆಗಳ ನಿರ್ಧಾರ!

ಅಲ್ವಾರದ ಮಹಾರಾಜರು ಪಟ್ಟವನ್ನೇರಿ ಇಪ್ಪತ್ತು ವರ್ಷಗಳಾದವು. ಈ ಅವಧಿಯಲ್ಲಿ ಪ್ರಜೆಗಳಿಗೆ ಕಿಂಚಿತ್ತಾದರೂ ಸುಖವಾಗಿಲ್ಲ ಅಚ್ಚುಕಟ್ಟಾದ ಆಡಳಿತೆಯಿಲ್ಲ. ದಬ್ಬಾಳಿಕೆಗೆ ಮಿತಿಯೇ ಇಲ್ಲ. ರಾಜನ ಸುಖಕ್ಕಾಗಿ ಪ್ರಜೆಗಳ ಹಣದ ದುಂದುಗಾರಿಕೆಯು ಅವ್ಯಾಹತವಾಗಿ ಸಾಗಿದೆ! ಪ್ರಜೆಗಳಿಗೆ ಭಾಷಣ ಲೇಖನಗಳ ಸ್ವಾತಂತ್ರ್ಯವಿಲ್ಲ. ಪ್ರಜೆಗಳ ಸ್ವಕೀಯ ಸಂಪತ್ತು, ಅದೇಕೆ? ದೇಹಕೆ ಕೂಡ ದಾಳಿ! ರಾಜರ ಕಣ್ಣು ಯಾವಾಗಲೂ ಇವುಗಳ ಮೇಲಿರುತ್ತದೆ. ಇವನ್ನೆಲ್ಲ ವಿಚಾರಿಸುವದಕ್ಕಾಗಿ ಅಜಮೀರದಲ್ಲಿ ರಜಪುತಸ್ಥಾನದ ಪ್ರಜಾಪರಿಷತ್ತು ಕೂಡಿದ್ದಿತು. ಪ್ರಜೆಗಳ ಅಧಿಕಾರಕ್ಕೊಳಗಾದ ಪ್ರಜಾಪ್ರತಿನಿಧಿ ಸಭೆಗಳನ್ನು ಸ್ಥಾಪಿಸಬೇಕಾಗಿಯೂ, ಮಹಾರಾಜರು ರಾಜ್ಯವನ್ನು ಬಿಟ್ಟು ಕೊಡಬೇಕಾಗಿಯೂ ಠರಾವುಗಳಾದವು! ಹಿಂದೀ ರಾಜರು ಎಚ್ಚತ್ತು, ಈಗಲಾದರೂ ತಮ್ಮ ರಾಜ್ಯವ್ಯವಸ್ಥೆಯನ್ನು ಸರಿಪಡಿಸದೇ, ಪ್ರಜೆಗಳ ಹಕ್ಕು ಬಾಧ್ಯತೆಗಳಿಗೆ ಎರವಾದರೆ, ಅವರೆಲ್ಲರಿಗೂ ಇದೇ ಪ್ರಸಂಗವು ಒದಗುವುದು ಖಂಡಿತ!

(ಕನ್ನಡಿಗ)

[illegible]

[illegible] ಕಾರದಿಂದ 1200 ರೂ. ಗಳನ್ನು [illegible] ... 13 ಸಾವಿರ ರೂಪಾಯಿಗಳನ್ನು [illegible] ... ತಿಪ್ಪೂರು ಸುಬ್ರರಾಯರು [illegible] ... ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳಲಾಯಿತು. ಅದನ್ನು ಪರ್ಯಾಲೋಚಿಸುವುದಾಗಿ [illegible] ಸಿದರು.

ಕಳ್ಳರನ್ನು ಪತ್ತೆ ಮಾಡುವ ನವೀನ ಯಂತ್ರ

ಈಗ ಎಲ್ಲೆಲ್ಲಿಯೂ ಕನ್ನಗಳ್ಳರ ಪ್ರತಾಪವೇ [illegible] ತ್ತಿದೆ. ಇದರ ನಿವಾರಣಾರ್ಥವಾಗಿ ಒಂದು ಹೊಸ ಯುಕ್ತಿಯು ಕಲ್ಪಿತವಾಗಿದೆ. ಅದೇನೆಂದರೆ—ಒಂದು ತರದ ಯಂತ್ರದ ಬೆಳಕು ಅತಿ ಸೂಕ್ಷ್ಮ [illegible] ಆಕರ್ಷಿಸುವ ಕೋಣೆಯ ಒಂದು ಭಾಗದಲ್ಲಿ [illegible] ವಾಗಿಟ್ಟಿರುವ ದೀಪದಿಂದ ಹೊರಡುವ [illegible] ಯ ಸಹಾಯದಿಂದ ನಡೆಸಲ್ಪಡುತ್ತದೆ. [illegible] ಯಂತ್ರವನ್ನು ಮುಟ್ಟಿದ ಮಾತ್ರದಿಂದಲೇ [illegible] ವಿದ್ಯುಚ್ಛಕ್ತಿಯ ಯಂತ್ರವು ಘಂಟೆಯನ್ನು [illegible] ಲಾರಂಭಿಸಿ ಎಚ್ಚರ ಕೊಡುತ್ತದೆ. [illegible] ಪತ್ತೆ ತರುವುದಕ್ಕೆ ಅವಕಾಶವಾಗುತ್ತದೆ.

ಪೂನಾದಲ್ಲಿನ ಗಡಿಯಾರದ ಕಾರ್ಖಾನೆ

ಪೂನಾದಲ್ಲಿ ಶೀಘ್ರದಲ್ಲಿಯೇ ಒಂದು ಗಡಿಯಾರದ ಕಾರ್ಖಾನೆಯು ಪ್ರಾರಂಭವಾಗುವುದು. [illegible] ಸಾವಿರಾರು ರೂಪಾಯಿಗಳ [illegible] ದಿರುವ ಮಿ| ಆಗಾಸೆ [illegible] ಮಾಲೀಕರು.

ಸರ್. ಮಹಮದ್ [illegible]

ಇಂಡಿಯಾ ಗವರ್ನಮೆಂಟಿನ [illegible] ರಾದ ಸರ್. [illegible] ಬೆಂಗಳೂರಿಗೆ ದಯಮಾಡಿಸುವರು

TAI NADU

7—12—1928.

ಇದಕ್ಕೆ ಪರಿಹಾರವೇನು

ನಮ್ಮ ಸಂಸ್ಥಾನದಲ್ಲಿ ಯಾವ ಮೂಲೆಯಿಂದ ಯಾವ ಮೂಲೆಗೆ ಹೋದರೂ, ಒಂದೇ ಕೂಗು ಕೇಳಬರುವುದು "ನಮ್ಮ ಸಂಸ್ಥಾನದ ಕೆಸರು ಕೆಟ್ಟುಹೋಯಿತು. ಅಯ್ಯೋ ಕೆಟ್ಟು ಹೋಯಿತಲ್ಲಾ"! ಎಂದು ಎಲ್ಲರೂ [illegible] ನಾವೇನು [illegible] ಸಂಸ್ಥಾನದಲ್ಲಿ ಕವಿಸಲಸಾಧ್ಯವಾದ ಕೋಲಾಹಲವನ್ನುಂಟು ಮಾಡಿದರು. ಈಗಲೂ ಸರಕಾರಕ್ಕೆ ಬುದ್ಧಿ ಬಂದಿಲ್ಲ. ಯಾವ ದುಷ್ಟರನ್ನು ಶಿಕ್ಷಿಸಿದರೆ ಎಲ್ಲರಿಗೂ ಸಮಾಧಾನವಾಗುವುದೋ ಅಂತಹ [illegible] ಶಿಕ್ಷಿಸಿದರೇನೇ ಶಾಂತಿ [illegible] ಇಲ್ಲದೆ ಹೋದರೆ ಇಲ್ಲ [illegible] ಶ್ರೇ[illegible]ಗಳ್ಲಿ ಶಾಂತಿ [illegible] ಕಂಡರನ್ನು ಕೌರ [illegible] ಶಾಂತಿ [illegible] ಈ ಕಾಲದಲ್ಲಿ ಭಸ್ಮಾಸುರ ಸಂತತಿಯವರು ಎಲ್ಲೆಲ್ಲಿಯೂ ಪ್ರಬಲಿಸಿರುವರು. ತನಗೆ ವರ ಕೊಟ್ಟ ಈಶ್ವರನನ್ನೇ ಭಸ್ಮಾಸುರನು ದಹಿಸಲು [illegible] ಭಸ್ಮಾಸುರರುಗಳು ಹಾವಳಿಯನ್ನು ಮಾಡುತ್ತಿರುವರು. ಇವರ ಸ್ವಭಾವವೇನೆಂದರೆ ಮ|| ಸರ್ವಾಭಟ್ಟರು ಹೇಳಿ [illegible] ಗೇ ಅಡಗಿಸಿ ಕೊಂಡು, ಮೇಲೆ ಬೇಕಾದ ಸುಗುಣ ಸಂಪತ್ತಿಯಿಂದ ಮೆರೆಯುತ್ತ, ಯಾರು ಶಕ್ತಿ ಸಾಮರ್ಥ್ಯ [illegible] ರ, ಕಸ್ತ್ರ ಇದಿಗೆ ಬಲಿಸಿಕೊಳ್ಳುವದಕ್ಕೂ ಅವರಿಗೆ ಬರುತ್ತದೆ. [illegible] ಬಲಿಸಿಕೊಂಡ ಮೇಲೆ, ಅದರಿಂದ [illegible] ಬೇಕಾದಂತಹ [illegible] ಪಡೆದು ತೃಪ್ತಿ ಹೊಂದ ಬಾರದೇ? ಎಂದರೆ ಅಷ್ಟಕ್ಕೆ [illegible] ಭಸ್ಮವಾಗಬೇಕು. ಆಗ ಅವಕ್ಕೆ ಆನಂದ! ಊಂ, ಅ [illegible] ತನ್ನ ನಿಕ್ಷೇಪಗಳ ಮೇಲೆ ತನ್ನ ತಿಂಡಿಯನ್ನು [illegible] ಆಶ್ಚರ್ಯಗಾಡಯೂ ಸುಖವಾಗಬಾರದೇ? [illegible] ಅದೂ ಆಗುವದಿಲ್ಲ. ಯಾವ ಸಹಾಯದಿಂದ [illegible] ದೊಡ್ಡವರಾಯಿತೋ ಯಾವ [illegible] ತನಗೆ ಆ [illegible] ಶಕ್ತಿಯು ಪ್ರಾಪ್ತವಾಯಿತೋ ಅವರನ್ನೇ ಸುಟ್ಟು ಆನಂದ ಪಡಬೇಕು! ಇದೇ ಭಸ್ಮಾಸುರನ ಘೋರಸ್ವಭಾವ!

ಈ ವಿಚಾರವನ್ನು ಅಕ್ಷರಶಃ ಕೆಲವರಿಗೆ ತೋರಿಸಬಹುದು. ಅಂತಹವರೇ ನಮ್ಮ ಬೆಂಗಳೂರಿನ ಗಲಭೆಗ [illegible]

ಬೆಂಗಳೂರು ವೃತ್ತಾಂತ

(ತಂತೀಮುಖಾಂತರ)

ನಮ್ಮ ಸಂತ ಬಾತ್ಮೀದಾರರಿಂದ

ಪಬ್ಲಿಕ್ ಪ್ರಾಸಿಕ್ಯೂಟರಿಗೂ ಮ್ಯಾಜಿಸ್ಟ್ರೇಟರಿಗೂ

ವಾಗ್ವಾದ.

ಪ್ರಾಸಿಕ್ಯೂಟರವರ ಕ್ಷಮಾಪಣೆ.

ನೆನ್ನೆಯ ದಿವಸ ಬೆಂಗಳೂರು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯಬೇಕಾಗಿದ್ದ ಜಾಮೀನು ಪ್ರೊಸೀಡಿಂಗಿಗೆ ಮಿ|| ಅಬ್ಬಾಸ್ ಖಾನರು ಬಂದಿಲ್ಲ. ಅವರಿಗೆ ಕಳುಹಿಸಿದ ಸಮನ್ಸಿನ ಮೇಲೆ ಅವರ ಮಕ್ಕಳು ಅಬ್ಬಾಸಖಾನರು ಜರೂರು ಕೆಲಸದ ಮೇಲೆ ಮದ್ರಾಸಿಗೆ ಪ್ರಯಾಣ ಮಾಡಿದರೆಂಬದಾಗಿ ಬರೆದು ಕಳುಹಿಸಿದ್ದರು. ಮ|| ರಾ|| ಎಲ್. ಎಸ್. ರಾಜುರವರು ಅಬ್ಬಾಸ್ ಖಾನರಿಗೆ ಜಾಮೀನಿಲ್ಲದ ವಾರಂಟನ್ನು ಕೊಡುವಂತೆ ಮ್ಯಾಜಿಸ್ಟ್ರೇಟರನ್ನು ಪ್ರಾರ್ಥಿಸಿದರು. ಇದಕ್ಕೇನಾದರೂ ಆಧಾರವುಂಟೆ ಎಂಬದಾಗಿ ಮ್ಯಾಜಿಸ್ಟ್ರೇಟರು ಪಬ್ಲಿಕ್ ಪ್ರಾಸಿಕ್ಯೂಟರನ್ನು ಕೇಳಿದರು. ಪ್ರಾಸಿಕ್ಯೂಟರು ಸಾಕ್ಷೀದಾರರನ್ನು ಹಾಜರು ಪಡಿಸುವುದು ತಮ್ಮ ಕರ್ತವ್ಯವಲ್ಲವೆಂದು ಹೇಳಿದರು. ಪೋಲೀಸಿನವರ ಸಹಾಯದಿಂದ ಸಾಕ್ಷೀದಾರರನ್ನು ಹಾಜರುಪಡಿಸಿ ಮೊಕದ್ದಮೆಯಲ್ಲಿ ಕೋರ್ಟಿಗೆ ಸಹಾಯ ಮಾಡುವುದು ಪ್ರಾಸಿಕ್ಯೂಟರ ಕರ್ತವ್ಯವೆಂದು ಮ್ಯಾಜಿಸ್ಟ್ರೇಟರು ಒತ್ತಿ ಹೇಳಿದರು. ಪ್ರಾಸಿಕ್ಯೂಟರವರು ಕೋರ್ಟಿನವರು ನನ್ನನ್ನು ಸರಿಯಾದ ಮರ್ಯಾದೆಯಿಂದ ಕಾಣುವುದಿಲ್ಲ ಎಂದು ಆಕ್ಷೇಪಣೆ ಮಾಡಿದರು. ಅದಕ್ಕೆ ಮ್ಯಾಜಿಸ್ಟ್ರೇಟರು ನೀವು ಎಂತಹ ಮರ್ಯಾದೆಗೆ ಅರ್ಹರೋ ಅಂತಹ ಮರ್ಯಾದೆಯು ಕೊಡಲ್ಪಡುವುದು ಎಂದುಹೇಳಿದರು. ಅದರ ಮೇಲೆ ಪ್ರಾಸಿಕ್ಯೂಟರು ಕೋಪಾವೇಶಯುಕ್ತರಾಗಿ ಕೋರ್ಟನ್ನು ಬಿಟ್ಟು ಈ ಮೊಕದ್ದಮೆಯಿಂದ ನಾನು ನಿವೃತ್ತನಾಗುತ್ತೇನೆಂದು ಹೇಳಿ ಹೊರಟು ಹೋದರು. ಮ್ಯಾಜಿಸ್ಟ್ರೇಟರು ಅವರನ್ನು ಹಿಂದಕ್ಕೆ ಕರೆತರಿಸಿ ಅಪ್ಪಣೆಯಿಲ್ಲದೆ ಕೋರ್ಟನ್ನು ಬಿಟ್ಟು ಹೋದುದಕ್ಕಾಗಿ ಕೋರ್ಟಿನ ತಿರಸ್ಕಾರದ ಮೇಲಿನ ಕಾರ್ಯಕ್ರಮವನ್ನು ನಡಸಲುದ್ಯುಕ್ತರಾದರು. ಪಬ್ಲಿಕ್ ಪ್ರಾಸಿಕ್ಯೂಟರವರು ಕ್ಷಮಾಪಣೆ ಕೇಳಿಕೊಂಡುದ್ದರ ಮೇಲೆ ಅವರ ಅಪರಾಧವನ್ನು ಮನ್ನಿಸಿ ಮೊಕದ್ದಮೆಯನ್ನು ಮುಂದಿನ ಸೋಮವಾರಕ್ಕೆ ಇಟ್ಟರು.

ಪರೆದು ಬಂದಿಲ್ಲ. ಅವರನ್ನು ಬಿಟ್ಟು ಇತರ ಚಿಲ್ಲರೆ ಜನಗಳನ್ನು ಶಿಕ್ಷೆಗೆ ಗುರಿಮಾಡಲು ಹೊರಟಿಧಾರೆ ಇದರಿಂದ ಶಾಂತಿ ಸ್ಥಾಪನೆ ಯಾಗುವುದಿಲ್ಲ. ಭಸ್ಮಾಸುರನನ್ನೇ ಹಿಡಿದು ಶಿಕ್ಷೆ ಗುರಿಮಾಡಬೇಕು. [illegible] ನಾವು ಬರೆದು ಹೇಳುವುದಿಲ್ಲ. ನಡುಚೌಕದಲ್ಲಿಯೂ, ಆ ಬಜಾರುಗಳಲ್ಲಿಯೂ ಭಸ್ಮಾಸುರನು ಯಾರು ಎಂದು ಕೇಳಿದರೆ ಒಂದು ಸಣ್ಣ ಮಗುವೂ ಹೇಳುವುದು. ನಮ್ಮ ಸರಕಾರದವರು ಮೊದಲು ಆ ಭಸ್ಮಾಸುರನನ್ನು ಸಿಗ್ರಹಿಸಲಿ ಆಗಲೀಗ ಎಲ್ಲವೂ ಸರಿಹೋಗುವುದು. ಸರಕಾರದವರು ಇನ್ನು ಹೆಚ್ಚು ಅನರ್ಥಗಳು ಸಂಭವಿಸುವುದಕ್ಕೆ ಮುಂಚೆ ಈಗಲೇ [illegible] ಭಗವಂತನು ಅವರಿಗೆ ಧೈರ್ಯ

ಸ್ತ್ರೀಯರು ಮತ್ತು ಧರ್ಮ ಶಿಕ್ಷಣ

ಮದರಾಸಿನಲ್ಲಿ ನಡೆದ ಸ್ತ್ರೀಯರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ರಾಧಾಬಾಯಿ ಸುಬ್ಬರಾಯರವರು (ಮದರಾಸಿನ ಮುಖ್ಯಮಂತ್ರಿಗಳ ಪತ್ನಿಯವರು) ಮೇಲಿನ ವಿಷಯದಾಗಿ ಬಹಳ [illegible] ಯುಳ್ಳ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು [illegible] ವುದೇನಂದರೆ,—

"ಗಂಡಸರಿಗಿಂತಲೂ ಚಿಕ್ಕ ಮಕ್ಕಳಿಗೆ ವಿದ್ಯೆಯನ್ನು ಕಲಿಸಲು ಹೆಂಗಸರೇ ಹೆಚ್ಚು ಯೋಗ್ಯರು. ಮಕ್ಕಳನ್ನು ಲಾಲನೆ ಮಾಡುವುದಕ್ಕೂ, ಪಾಲನೆ ಮಾಡುವುದಕ್ಕೂ ಇವರಿಗೆ ಒಳ್ಳೆಯ ಅನುಭವವಿರುವುದು. ಈಚೀಚೆಗೆ ನಮ್ಮ ಸ್ಕೂಲುಗಳಲ್ಲಿ ಧರ್ಮಶಿಕ್ಷಣವೇ ಇಲ್ಲ. ಧರ್ಮಶಿಕ್ಷಣದಿಂದ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಗಳ ಆದರ್ಶಗಳು ಉನ್ನತವಾಗಿ ಅವರ ಜೀವನಗಳು ಪವಿತ್ರವಾಗುವುವು ಅವರು ಕೆಟ್ಟ ದಾರಿಗೆ ಹೋಗುವುದಕ್ಕೆ ಅವಕಾಶವಿರುವುದಿಲ್ಲ. ಧರ್ಮಶಿಕ್ಷಣದ ಅಭಾವದಿಂದ ವಿದ್ಯಾರ್ಥಿಗಳು ಕೆಟ್ಟುಹೋಗುತ್ತಿರುವರು. ಎಲ್ಲಾ ಧರ್ಮದವರೂ ಸ್ಕೂಲುಗಳಲ್ಲಿ ಇರುತ್ತಾರೆಂದು ಧರ್ಮಶಿಕ್ಷಣವು ಉದಾಸೀನ ಮಾಡಲ್ಪಟ್ಟಿದೆ. ಈ ಉದಾಸೀನವು ಹಿಂದೂಗಳನ್ನೇ ಹೆಚ್ಚಾಗಿ ಬಾಧಿಸುತ್ತಾ ಇದೆ. ಏಕೆಂದರೆ, ಮಹಮ್ಮದೀಯರೂ, ಕ್ರಿಸ್ತರೂ ತಮ್ಮ ನಮ್ಮ ಸ್ಕೂಲುಗಳಲ್ಲಿ ತಮ್ಮ ಧರ್ಮದ ವಿಷಯವನ್ನು ಕಲಿಯುತ್ತಾರೆ. ಹಿಂದೂಗಳು ಮಾತ್ರ ಇಹಭ್ರಷ್ಟರೂ ಪರಭ್ರಷ್ಟರಾಗಿರುತ್ತಾರೆ. ಸ್ಕೂಲಿನಲ್ಲಿ ಧರ್ಮಶಿಕ್ಷಣವಿಲ್ಲ. ಮನೆಯಲ್ಲಿ ತಂದೆತಾಯಿಗಳು ಈ ವಿಷಯಕ್ಕೆ ಗಮನವನ್ನೇ ಕೊಡುವುದಿಲ್ಲ. ಹಿಂದೂ ಬಾಲಕ ಬಾಲೆಯರಿಗೆ ಧರ್ಮವೆಂದರೆ ಮನೆಯಲ್ಲಿ ಆಚರಿಸಲ್ಪಡುವ ಕೆಲವು ವ್ರತ, ಹೋಮ ಮತ್ತು ಪೂಜೆಗಳು ಇವುಗಳನ್ನೂ ಬಲವಂತವಾಗಿ ಅಶ್ರದ್ಧೆಯಿಂದ ಮಾಡುತ್ತಾರೆ. ನಮ್ಮ ಪೂರ್ವಿಕರು ಹೀಗಿರಲಿಲ್ಲ. ಗಂಡಸರಿಗಿಂತಲೂ ಹೆಂಗಸರು ಮನೆಯಲ್ಲಿ ಮಕ್ಕಳ ಧರ್ಮಶಿಕ್ಷಣದ ಕಡೆಗೆ ಗಮನ ಕೊಡುತ್ತಿದ್ದರು. ತಾಯಂದಿರು ಹುಡುಗರಿಗೆ ದೇವರ ನಾಮವನ್ನು ಹೇಳಿಕೊಡುವುದು, ಅವರ ಕೈಲಿ ಹೇಳಿಸುವುದು, ದೇವರ ಪೂಜೆ ಮಾಡಿಸುವುದು ಇದೆಲ್ಲಾ ಮಾಡುತ್ತಿದ್ದರು. ಈಗ ಅದೆಲ್ಲಾ ಹೋಯಿತು.

ಈಗಲೂ ತಾಯಿಯಂದಿರು ತಮ್ಮ ಮಕ್ಕಳಿಗೆ ಮನೆಯಲ್ಲಿ ಧರ್ಮಶಿಕ್ಷಣವನ್ನು ಕೊಡಲು ಆರಂಭಿಸಬೇಕು. ದೇವರ ಅವತಾರದ ಕಥೆಗಳನ್ನೂ, ದೇವರ ಕೀರ್ತನೆಗಳನ್ನೂ ಹೇಳಿಕೊಡಬೇಕು. ಮಕ್ಕಳಿಗೆ ಸ್ವಧರ್ಮದಲ್ಲಿಯೂ, ಸ್ವದೇಶದಲ್ಲಿಯೂ ಅಭಿಮಾನ ಉಂಟಾಗುವಂತೆ ಮಾಡಬೇಕು. ಇದು ಸ್ತ್ರೀಯರ ಕರ್ತವ್ಯ."

ಶ್ರೀ|| ರಾಧಾಬಾಯಿಯವರ ಈ ಉಪದೇಶವನ್ನು ನಮ್ಮ ಸ್ವಸಂಸ್ಥಾನದ ತಾಯಂದಿರು, ಸಹೋದರಿಯರು ಮನನ ಮಾಡಿ ಆಚರಿಸುವರೆಂದು ನಂಬುತ್ತೇವೆ

Regd No. M. 2322 ‖ ವಂದೇ ಮಾತರಂ ‖ ಬಿಡಿ ಪ್ರತಿಗೆ

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೧—೦—೦ ; ಪ್ರತಿಸಂಚಿಕೆಗೆ ...

ಸಂಪುಟ ೧] ಶನಿವಾರ ೮ ಡಿಸೆಂಬರ್ ೧೯೨೮ [ಸಂಚಿಕೆ ೬೧

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಛಾಪ್ಖಾನೆ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet Bangalore City
2 Koppada Ramakrishniah Agent Has...
3 Siddiah, Sri Nanjundeswara Bank Ltd Nanjangud.
4 M. N. S & Sons. Lansdowne Building Mysore.
5 Subba Pundit & Co, Lakshmivilas
6 Friends' Union, Mysore.
7 Sweet Mart, Lansdowne dBuilings Mysore
8 H Subba Rao C/o B Gowda & Sons Sakalespur
9 H Naganniah News Agent Chikmagalur
10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. [illegible] at Sri Rama Press, D. Subbiah Road, Mysore

TAI NADU
8—12—1928.

ಹುಲಿಕೆರೆ ಸುರಂಗ

ಅರ್ವಿನ್ ನಾಲೆಯು ಹಿರೋಡೆಯಿಂದ ಮಂಡ್ಯಕ್ಕೆ ಹೋಗುವ ದಾರಿಯಲ್ಲಿ ಎರಡು ಮೈಲಿಗಳ ದೂರ ಸುರಂಗದಲ್ಲಿ ಹೋಗಬೇಕಾಗುತ್ತದೆ. ಸುರಂಗದ ಆಳವು 70 ಅಡಿಗಳಿಂದ 140 ಅಡಿಗಳ ವರೆಗೂ ಹೋಗುತ್ತದೆ. ಬ್ಯಾಡರಹಳ್ಳಿಗೆ 5 ಮೈಲಿಗಳ ದೂರದಲ್ಲಿ ಹುಲಿಕೆರೆಯಲ್ಲಿ ಈ ಸುರಂಗದ ಕೆಲಸವು ನಡೆಯುತ್ತಲಿದೆ. ಈಗಾಗಲೇ 2 ಫರ್ಲಾಂಗುಗಳಷ್ಟು ಸುರಂಗವನ್ನು ಕೊರೆದಿದ್ದಾರೆ. ಸುರಂಗವನ್ನು ಕೊರೆಯುವುದು ಸಾಮಾನ್ಯವಲ್ಲ. ಇದಕ್ಕೆ ಅದ್ಭುತವಾದ ಬುದ್ಧಿಶಕ್ತಿಯು ಇರಬೇಕು. ಸಂತೋಷದ ಸಂಗತಿಯೇನಂದರೆ,—ಈ ಸುರಂಗದ ಕೆಲಸವು ಆದ್ಯಂತವಾಗಿ ನಮ್ಮ ಮೈಸೂರು ದೇಶೀಯರಿಂದಲೇ ನಡೆಸಲ್ಪಡುತ್ತಿದೆ. ಈ ಕೆಲಸದ ಯೋಜನೆಯು ಸರ್. ಎಂ. ವಿಶ್ವೇಶ್ವರಯ್ಯನವರ ಬುದ್ಧಿಯಿಂದ ನಡೆಯಿತು. ಅದರ ಕೆಲಸವು ಎಕ್ಸಿಕ್ಯೂಟಿವ್ ಇಂಜನಿಯರಾದ ಮ|| ಬಿ. ಕೃಷ್ಣಸ್ವಾಮಯ್ಯಂಗಾರ್ಯರಿಂದಲೂ ಅವರ ಸಹೋದ್ಯೋಗಿಗಳಿಂದಲೂ ನಡೆಸಲ್ಪಡುತ್ತದೆ. ಈ ಸುರಂಗದ ಕೆಲಸವು ನಮ್ಮ ಸಂಸ್ಥಾನದ ಚಿರಸ್ಥಾಯಿಗಳಾದ ಕೆಲಸಗಳಲ್ಲಿ ಅತಿ ಮುಖ್ಯವಾದುದು. ಇದರ ಕೆಲಸದಲ್ಲಿ ತೊಡಗಿರುವವರೆಲ್ಲರೂ ಬಹಳ ಮಮತೆಯಿಂದ ಕೆಲಸ ಮಾಡುತ್ತಿರುವರು. ದಿನ ಒಂದಕ್ಕೆ ಹನ್ನೆರಡು ಅಡಿಗಳಂತೆ ಸುರಂಗವು ಕೊರೆಯಲ್ಪಡುತ್ತಲಿರುವುದು. ವಿದ್ಯುಚ್ಛಕ್ತಿಯ ಸಹಾಯದಿಂದಲೂ, ಅದುಮಿದ ವಾಯುವಿನಿಂದಲೂ, ಡೈನಾಮೆಂಟಿನಿಂದಲೂ, ಬಂಡೆಗಳು ಭೇದಿಸಲ್ಪಡುತ್ತಲಿವೆ. ಅಲ್ಲಿ ನಡೆಯುತ್ತಿರುವ ಕೆಲಸವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅದನ್ನು ಶಬ್ದಗಳಿಂದ ವರ್ಣಿಸುವುದು ಸುಲಭವಲ್ಲ. ಎಲ್ಲರೂ ತಾವೇ ಸ್ವಂತವಾಗಿ ಹೋಗಿ ಸುರಂಗದ ಕೆಲಸವನ್ನು ಕಣ್ಣಾರೆ ನೋಡಿದರೆ ಗೊತ್ತಾಗುವುದು.

ಮೈಸೂರು ಸ್ಕೌಟ್ ರ್‍ಯಾಲಿ

ಈ ತಿಂಗಳು 14ನೇ ತಾ|| ಲಾಗಾಯಿತು 3 ದಿನಗಳು ರಾಜಧಾನಿಯ ಅಠಾರಾ ಕಚೇರಿಯ ಬಳಿ ಮೈಸೂರು ಸಿಟಿಯ ಸ್ಕೌಟ್ಸ್ ಮತ್ತು ಕಬ್ಬುಗಳ ರ್‍ಯಾಲಿಯು ಶ್ರೀಮದ್ಯುವರಾಜರ ಅಧ್ಯಕ್ಷತೆಯಲ್ಲಿ ನಡೆಯುದಾಗಿ ತಿಳಿಯಬರುತ್ತೆ.

ನಾಟಕ

ರಾಜಧಾನಿಯ ಜಗನ್ಮೋಹನ ಬಂಗ್ಲೆಯಲ್ಲಿ ಈ ಮಾಹೆ 9 ನೇ ತಾ|| ಭಾನುವಾರ ಸಾಯಂಕಾಲ ಚಾಮುಂಡೇಶ್ವರಿ ಕಂಪೆನಿಯವರಿಂದ ದಾನಶೂರಕರ್ಣ ಎಂಬ ನಾಟಕವು ಅಭಿನಯಿಸಲ್ಪಡುವುದಾಗಿ ತಿಳಿದು

ಸತ್ಯಾಗ್ರಹ ಅಥವಾ ನ್ಯಾಯದೇವತೆಯ ಅವತಾರ.

ಇದೊಂದು ಸಣ್ಣ ಗ್ರಂಥ. ಇದು 28 ಪುಟಗಳಿಂದ ಕೂಡಿರುವುದು. ಇದರ ಕರ್ತರು ಸುಪ್ರಸಿದ್ಧರಾದ ಸರ್ವಾಭಟ್ಟರು. ಇದರ ಪ್ರಕಾಶಕರು ಬೆಂಗಳೂರು ಸಿಟಿಯ ಕೃಷ್ಣಾ ಕಂಪೆನಿಯವರು. ಇದರ ಕ್ರಯ 3 ಆಣೆ ಮಾತ್ರ.

ಈ ಗ್ರಂಥದ ವಿಮರ್ಶೆಯನ್ನು ಮಾಡುವುದು ಸುಲಭವಲ್ಲ. ಮ|| ಸರ್ವಾಭಟ್ಟರವರು ತಮ್ಮ ಆಧ್ಯಾತ್ಮಿಕ ಸಂಸ್ಕೃತಿಯನ್ನೆಲ್ಲಾ ಈ ಸಣ್ಣ ಗ್ರಂಥದಲ್ಲಿ ಪಾಕ ಮಾಡಿರುವರು. ಪುಸ್ತಕದ ಮೊದಲಿನಲ್ಲಿಯೇ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಗ್ರಂಥಕರ್ತರು ಕೆಲವು ಸೂತ್ರಗಳನ್ನು ಬರೆದಿರುವರು. ಅವುಗಳ್ಯಾವುವೆಂದರೆ,—"ಸತ್ಯಾಗ್ರಹವೇ ಬ್ರಹ್ಮಾಸ್ತ್ರವು," 'ದೈವನಿರ್ಭರತೆ ಮತ್ತು ಅಹಿಂಸೆ-ಇವೇ ಸತ್ಯಾಗ್ರಹದ ಮುಖ್ಯ ಅಂಶಗಳು.' 'ಭಗವದ್ಧ್ಯಾನಕ್ಕೆ ಮೌನವು ಅವಶ್ಯಕ; ಇದೇ ತಪಸ್ಸು' 'ದಾನವರ ದಾರಿಯೇ ಬೇರೆ; ದೇವತೆಗಳ ಹಾದಿಯೇ ಬೇರೆ,' ಈ ಸೂತ್ರಗಳ ವಿವರವೇ ಈ ಗ್ರಂಥದಲ್ಲಿ ಅಡಗಿರುವುದು. ಗ್ರಂಥಕರ್ತರೇ ಅದರ ಉದ್ದೇಶವನ್ನು ಈ ಕೆಳಗೆ ಕಂಡಂತೆ ತಿಳಿಸಿರುವರು.

(ನಾಡಿನ ಚಿತ್ತವು ಕಾರಣಾಂತರಗಳಿಂದ ಕವಲಗೊಂಡಾಗ ಅದಕ್ಕೊಂದು ಸರಿಯಾದ ಗುರಿಯನ್ನು ತೋರದಿದ್ದರೆ ದಾರಿ ತಪ್ಪಿ ನಡೆಯುವುದುಂಟು. ಆದುದರಿಂದ ಇಹಪರಗಳೆರಡಕ್ಕೂ ಸಾಧಕವಾದ ಸತ್ಯಾಗ್ರಹದ ಅಂತಃಸ್ವರೂಪವನ್ನೂ ಹಾಗೂ ಅದರ ಸಾಧನಾಮಾರ್ಗವನ್ನೂ, ನನಗೆ ತೋರಿದ ಮಟ್ಟಿಗೆ ಮಂಗಿಯ ಮುಂದೆ ಇಟ್ಟಿರುತ್ತೇನೆ. ಅದರ ಸಂಪೂರ್ಣ ಸ್ವರೂಪವನ್ನು ನಾನು ಗ್ರಹಿಸಿರುವೆನೆಂದು ಎಂದಿಗೂ ಹೇಳಲಾರೆ. ನನಗಿಂತಲೂ ಶಕ್ತರಾದವರು ಮುಂದೆ ಬರಲೆಂಬುದೇ ನನ್ನ ಆಶಯ. ನಾಡಿನ ಹಿತದ ದೃಷ್ಟಿಯಿಂದ ಇದು ಎಂದಾದರೂ ಕಾರ್ಯದಲ್ಲಿ ರೂಪುಗೊಳ್ಳಬೇಕಾದರೆ ನಾವು ಇಂದಿನಿಂದಲೇ ಇದರ ವಿಚಾರಕ್ಕೆ ಕೈ ಹಾಕಿರುವುದು ಉತ್ತಮ. ಆದುದರಿಂದ ಈ ನನ್ನ ನಾಲ್ಕು ಮಾತುಗಳನ್ನು ಸಿದ್ಧಾಂತವೆಂದೆಣಿಸದೆ ವಿಚಾರ ಬೀಜವನ್ನಾಗಿ ಗ್ರಹಿಸಿ ಇಂದಿನಿಂದಲೇ ಇದಕ್ಕಷ್ಟು ನೀರೆರೆಯಬೇಕೆಂದು ಬೇಡುತ್ತೇನೆ.)

ಇದಕ್ಕಿಂತಲೂ ಹೆಚ್ಚಾಗಿ ನಾವು ಏನನ್ನು ಹೇಳುವುದೂ ಅನವಶ್ಯಕ. ಮತ್ತು ಅಪ್ರಸ್ತುತ. ನಮ್ಮ ವಾಚಕರೆಲ್ಲರೂ ಆ ಗ್ರಂಥವನ್ನು ತರಿಸಿಕೊಂಡು ಓದಿನೋಡಿದರೆ ಅದರ ನಿಜವಾದ ಬೆಲೆಯು ಆಗ ಗೊತ್ತಾಗುವುದು. ಈ ಗ್ರಂಥದ ಕೆಲವು ಪ್ರಕರಣಗಳನ್ನು ಯಥಾವಕಾಶವಾಗಿ ಪ್ರಕಟಿಸುವೆವು.

ದಾರಿಕಾರರು ಎಲೆಗಳಿಗೆ ಬರ್ಜಿಗಳನ್ನು ಒಗೆದು ನೀರು ಸುರಿಯಹತ್ತಿದೊಡನೆ ಕೆಳಗೆ ನಿಂತು ಪಾತ್ರೆಗಳಲ್ಲಿ ತುಂಬಿಕೊಂಡು, ಕಲ್ಲವೆ ಬೊಗಸೆಯೊಡ್ಡಿ ಮನಸಾರೆ ಕುಡಿದು

ವನಸ್ಪತಿಗಳ ವೈಚಿತ್ರ್ಯ

ಅರಬ್ಬೀಜನರು "ಸೊಪರ" ಎಂದರೆ ಕೊಳಲು ಎಂದು ಕರೆಯುತ್ತಿದ್ದ ಒಂದು ತರದ ವನಸ್ಪತಿಯನ್ನು ಈಗ ಪ್ಯಾರಿಸಿನಲ್ಲಿ ಬೆಳೆಸ ಕೊಡಿಗಿದ್ದಾರೆ. ಅದಕ್ಕೆ ಅವರು 'ಸಿಳ್ಳಿನ ಗಿಡ'ವೆಂದು ಹೇಳುವರು. ಜಗತ್ತಿನಲ್ಲಿರುವ ವನಸ್ಪತಿಗಳಲ್ಲಿ [illegible] ಒಂದು ತರದ [illegible] ಗಳ ಎಲೆಗಳಲ್ಲಿ [illegible] ತೂತುಗಳಿರುವ [illegible] ವಾಗ ಕೊಳಲಿನಂತೆ [illegible] ಕೇಳುವವು [illegible] ವದ. [illegible] ಗಿಡಗಳು ವಿಪುಲವಾಗಿವೆ.

ಕೆಲಿಫೋರ್ನಿಯಾದಲ್ಲಿ ಬೆಳೆಯುವ [illegible] ಇನ್ನೊಂದು ಚಮತ್ಕಾರಿಕ ವನಸ್ಪತಿಯಿದೆ. ಇದು 10-20 ಅಡಿಗಳ ಎತ್ತರವಾಗಿ ಬೆಳೆಯುವದು. [illegible] ಯಿಂದ ಈ ಗಿಡಕ್ಕೆ ತಿಂದರೆ [illegible] ಇದು ಬಹಳ ಕೋಪಗೊಂಡು ಎಲೆಗಳನ್ನು [illegible] ಬಡಿದು ಮುದುರಿಕೊಂಡು [illegible] ಅತ್ಯುಗ್ರವಾದ ಒಂದು ಬಗೆಯ ವಾಸನೆಯಿಂದ [illegible] ಬಿಡುವದು.

ಜಪಾನ್ ದೇಶದಲ್ಲಿ '[illegible] ಗಿಡ' ಎಂಬ [illegible] ತರದ ಗಿಡಗಳೂ ಬೆಳೆಯುವವು. [illegible] ಕಾಲವಾಗಿ ಸೂರ್ಯಾಸ್ತವಾಗ [illegible] ಈ ಗಿಡಗಳು ತಮ್ಮ [illegible] ಗಳಿಂದ [illegible] ಗವನ್ನು [illegible]. ಈ ದ್ರವ್ಯವು [illegible] ದುದಾಗಿರುವ [illegible] ಅದರಿಂದ ಹೊರ ಬೀಳುವದು. ಈ ಗಿಡಗಳು ಸಂಪೂರ್ಣ ಬೆಳವಣಿಗೆಯನ್ನು ಹೊಂದಿದಾಗ [illegible] ಟು ಎತ್ತರವಾಗುವವು. ಸಾಯಂಕಾಲ [illegible] ರ ವೇಳೆಗೆ ಇವು ಶಾಂತವಾಗಿರುವವು.

ಮೆಕ್ಸಿಕೋ ದೇಶದಲ್ಲಿ [illegible] ಒಂದು ತರದ ವನಸ್ಪತಿಯಿದೆ. ಇದರ ಎಲೆಯ [illegible] ಗಳ ತುದಿಯಲ್ಲಿ ಅಚ್ಚ ಹಸರು ಬಣ್ಣದ ಎಲೆಗಳ [illegible] ಸೂಜಿಯಂತಿರುವ ಮುಳ್ಳುಗಳಿರುವವು. ಈ ಮುಳ್ಳುಗಳನ್ನು ಕಿತ್ತ ಕೂಡಲೆ ಅವುಗಳ [illegible] ನಾಕಷ್ಟು [illegible] ವಾದ ಎಳೆಯು [illegible] ಹೊಂಡುವದು. ಅಲ್ಲಿಯ ಜನರು ಇವನ್ನು [illegible] ಗಳಂತೆ ಉಪಯೋಗಿಸಿಕೊಳ್ಳುವರು.

ಮೆಡಗಾಸ್ಕರ ದ್ವೀಪದಲ್ಲಿ ಆರವಟ್ಟಿಗೆಯ ಗಿಡಗಳೆಂಬ ಒಂದು ವಿಧದ ಗಿಡಗಳಿವೆ. ಇವು ತಮ್ಮ ಎಲೆಗಳಲ್ಲಿ ನೀರನ್ನು ಸಂಗ್ರಹಿಸಿಡುವವು ಒಂದೊಂದು ಎಲೆಗಳಲ್ಲಿ ಸುಮಾರು ಒಂದು ಕ್ವಾರ್ಟ (2 ಸೇ) ತಣ್ಣಗಿನ ನೀರು [illegible]

ತಾಯಿನಾಡು.

8—12—1928

ಪ್ರಶಂಸನೀಯವಾದ ನಡವಳಿಕೆ.

[illegible]ಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾದ ಮ|| ಟಿ. ಶ್ರೀನಿವಾಸಾಚಾರ್ಯರವರು ಕೋಲಾರದ [illegible] ಪರವಾಗಿ ಅವರು ಮುನಿಸಿಪಾಲಿಟಿಗೆ ನಿಲ್ಲದ್ದಕ್ಕೆ ಕಾರಣವನ್ನು ತೋರಿಸಿ ಹೊರಡಿಸಿರುವ ಪ್ರಕಟ[illegible] ದ್ವೇಷದಿಂದಾಗಲೀ [illegible] ಅಸಹ[illegible], ತಾವು ಚುನಾವಣೆಯಿಂದ [illegible] ಪ್ರೇರಣೆಯಿಂದಲೇ, [illegible] ಉದ್ದೇಶದಿಂದ [illegible] ತಾವು [illegible] ತಿಳಿಸಿರು[illegible]

[illegible]

ಬೆಂಗಳೂರು ವೃತ್ತಾಂತ

(ತಂತೀಮುಖಾಂತರ)

ನಮ್ಮ ಸ್ವಂತ ಬಾತ್ಮೀದಾರರಿಂದ

ಅಬ್ಬಾಸ್ ಖಾನರ ಗೈರ್ಹಾಜರಿ ಬಗ್ಗೆ ಪತ್ತೆ ವಿಚಾರಣೆ ನಡೆಸಬೇಕು

ಮ್ಯು|| ಕೌನ್ಸಿಲರುಗಳು ರಾಜೀನಾಮೆ ಕೊಡುವರೊ?

ಬೆಂಗಳೂರು ಜಾಮೀನು ಮೊಕದ್ದಮೆಯ ಪರವಾಗಿ ಮ|| ಎಲ್. ಎಸ್. ರಾಜೂ ರವರು ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ನಂಜುಂಡಯ್ಯನವರಲ್ಲಿ ಅರ್ಜಿಯನ್ನು ಕೊಟ್ಟಿರುವರು. 1 ಅಬ್ಬಾಸ್ ಖಾನರಿಗೆ ಕಾಯಿಲೆಯಾಗಿರುವ ವಿಷಯವೂ ಮಾರನೆಯ ದಿನ ಅವರು ಮದರಾಸಿಗೆ ಹೋದರೆಂಬ ವಿಷಯವೂ ನಂಬಲನರ್ಹವಾದುದರಿಂದ ಅವರ ಗೈರ್ಹಾಜರಿಗೆ ವಾಸ್ತವವಾದ ಕಾರಣವನ್ನು ಕಂಡುಹಿಡಿಯುವುದಕ್ಕಾಗಿ ಪತ್ತೆ ವಿಚಾರಣೆ ಕ್ರಮ ನಡೆಸಬೇಕು. 2 ಅಧಿಕಾರಸ್ಥಾನದ ಗೌರವವನ್ನು ತಿರಸ್ಕರಿಸಿದ್ದಕ್ಕಾಗಿ ಅವರ ಮೇಲೆ ಸರಿಯಾದ ಕ್ರಮವನ್ನು ನಡೆಸಬೇಕು. 3 ಅಬ್ಬಾಸ್ ಖಾನರನ್ನು ಮುಂದಕ್ಕೆ ಪಾಟಿಸವಾಲು ಮಾಡದಂತೆ ಪಬ್ಲಿಕ್ ಪ್ರಾಸಿಕ್ಯೂಟರವರು ಮುರಗಡ್ಡಿ ಮಾಡಿದರು. 4 ಪ್ರಾಸಿಕ್ಯೂಟರವರು ಹಿಂದಿನ ದಿನ ಮೊಕದ್ದಮೆಯಿಂದ ತಾವು ನಿವೃತ್ತರಾಗುವುದಾಗಿ ಹೇಳಿದ ವಿಷಯವು ರಾಜೀನಾಮೆಯನ್ನು ಕೊಟ್ಟಂತೆಯೇ ಆಗುವುದರಿಂದ ಆ ವಿಷಯವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು— ಎಂಬಿವೇ ಮುಂತಾದ ವಿಷಯಗಳನ್ನು ಅರಿಕೆಮಾಡಿರುವರು.

ಬೆಂಗಳೂರು ಮ್ಯುನಿಸಿಪಾಲಿಟಿಯ ಸದಸ್ಯರುಗಳು ರಾಜೀನಾಮೆ ಕೊಡುವರೆಂದು ಪ್ರಬಲವಾದ ವದಂತಿ ಇರುವುದು.

ದರಿಂದ ಇತರ ಜಾತಿಯವರಿಗೆ ಮನಸ್ಸಿಗೆ ನೋವಾದರೆ ದ್ವೇಷದ ಐಕ್ಯದ ನಲುವಾಗಿಯೂ ಬ್ರಾಹ್ಮಣ ಸಮುದಾಯದ ಹಿತದ ನಲುವಾಗಿಯೂ, ಸಂತೋಷ ಚಿತ್ತದಿಂದ ಹಿಂದಕ್ಕೆ ಸರಿದು ಇತರ ಜಾತಿಯವರಿಗೆ ದಾರಿಯನ್ನು ಕೊಡಬೇಕು. ಬ್ರಾಹ್ಮಣರು, ತನಗೆ ಇತರರಿಂದ ಉದ್ದೇಶಪೂರ್ವಕವಾಗಿ ತೊಂದರೆಯಾಗುವುದೆಂಬ ಹೆದರಿಕೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ. ಬ್ರಾಹ್ಮಣರಿಗೆ ಸಲ್ಲಬೇಕಾದ ನ್ಯಾಯವಾದ ಸಂರಕ್ಷಣೆಯನ್ನು ಇತರರು ಖಂಡಿತವಾಗಿಯೂ ಕೊಡುವರು. ಈ ವಿಶ್ವಾಸವು ನಮಗೆ ಸಂಪೂರ್ಣವಾಗಿರುವುದು ಈ ಭಾವನೆಯಿಂದಲೇ ನಾವು ಈಸಾರಿ ಮುನಿಸಿಪಲ್ ಚುನಾವಣೆಗೆ ನಿಲ್ಲಲಿಲ್ಲ. ಮುಂದೆಯೂ ಅವಕಾಶ ಬಿದ್ದಹಾಗೆಲ್ಲಾ ಇದೇ ರೀತಿಯಾದ ನಡವಳಿಕೆಯನ್ನು ನಡೆಸುವೆವು. ನಮ್ಮ ಸಂಸ್ಥಾನದ ಇತರ ಭಾಗಗಳಲ್ಲಿರುವ ಬ್ರಾಹ್ಮಣ ಸಹೋದರರಿಗೂ ನಮ್ಮ ಪ್ರೇಮ ಪುರಸ್ಸರವಾದ ಪ್ರಾರ್ಥನೆಯೇನೆಂದರೆ, ಸಾರ್ವಜನಿಕ ಸ್ಥಾನಗಳಿಗೆ ಬ್ರಾಹ್ಮಣರು ನಿಲ್ಲುವುದರಿಂದ ಇತರ ಜಾತಿಯವರ ಮನಸ್ಸಿಗೆ ನೋವುಂಟಾಗುವ ಹಾಗಿದ್ದರೆ ಅವರು ಹಿಂದೆ ಸರಿಯಲಿ. ಇತರರಿಗೆ ದಾರಿಯನ್ನು ಕೊಡಲಿ ನಾವು ಈಗ ಕೈಕೊಂಡಿರುವ ನಡವಳಿಕೆಯು ದ್ವೇಷದಿಂದಾಗಲಿ ಕೋಪದಿಂದಾಗಲಿ ಆದದ್ದಲ್ಲ. ಎಲ್ಲರೂ ನಮ್ಮ ಮನೋ[illegible]

ವರ್ತಮಾನ ಸಂಗ್ರಹ

ಮಹಾರಾಜ ಪೇಟೆ

ದಾವಣಗೆರೆ ಟವನ್ ಗೌಳಿಗರ ಪೇಟೆಗೆ ಮಹಾರಾಜಪೇಟೆ ಎಂದು ನಾಮಕರಣವಾಯಿತು.

ಸಮ್ಮೇಳನ.

ಈ ತಿಂಗಳು 5 ನೇ ತಾರೀಖಿನ ಸಾಯಂಕಾಲ [illegible]ಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಪ್ರಸಂ[illegible] ಕ್ರೈಸ್ತ ವಿದ್ಯಾರ್ಥಿಗಳ ಸಮ್ಮೇಳನದ ಪ್ರಾರಂಭೋ[illegible]ವು ನಡೆಯಿತು. ನಮ್ಮ ಶ್ರೀಮನ್ ಮಹಾರಾಜ[illegible] ಅಧ್ಯಕ್ಷತೆಯನ್ನು ವಹಿಸಿದ್ದರು.

[illegible]ವೈಚಿತ್ರ್ಯ

ಪಶ್ಚಿಮ ದೇಶಗಳಲ್ಲಿ ಬೆಳೆಯುವ ಒಂದು ತರ[illegible]ಡದ ಎಲೆಗಳು ದಿಕ್‌ಚಕ್ರದ ಮುಳ್ಳುಗಳಂತೆ ನೇರವಾ[illegible] ದಕ್ಷಿಣೋತ್ತರವಾಗಿ ನಿಂತಿರುವವು. ಎಲ್ಲಾ ಎಲೆ[illegible]ಯಾವಾಗಲೂ ಇದೇ ರೀತಿಯಿಂದ ನಿಶ್ಚಿತ ದಿಕ್ಕನ್ನು [illegible]ರಿಸುತ್ತಿರುವುದರಿಂದ ಇದಕ್ಕೆ ಅವರು ದಿಕ್ಕು ತೋ[illegible]ವ ಗಿಡವೆನ್ನುವರು.

ನಮ್ಮ ದೇಶದ ಅಡವಿಗಳಲ್ಲಿರುವ ಒಂದು ಪ್ರಕಾ[illegible] ಗಿಡಗಳ ಎಲೆಯ ಟೊಂಗೆಗಳ ಹಾಗು ಎಲೆಗಳ [illegible] ಕಾಯಿದ್ದು ಕೆಂಪಗಾದ ಸೂಜಿಯಂತೆ ಜ್ವಲಿಸುವ ಮು[illegible]ಗಳಿದ್ದು ಅವುಗಳನ್ನು ಸೋಂಕಿದೊಡನೆ ಮೈಯೊ[illegible] ಅಸ್ಥಿಯೆಲ್ಲ ಉರಿಯಹತ್ತಿದಂತೆ ತೋರುವದು.

ಕೋಪರೇಟಿವ್ ಪ್ರೆಸ್.

ನಾಳೆಯ ದಿನ ಬೆಳಿಗ್ಗೆ 9 ಗಂಟೆಗೆ ಶಾರದಾ ವಿಲಾ[illegible] ಹೈಸ್ಕೂಲ್ ಹಾಲಿನಲ್ಲಿ ಮೇಲ್ಕಂಡ ಪ್ರೆಸ್ಸನ್ನು [illegible]ಸುವ ವಿಷಯದಲ್ಲಿ ಮೀಟಿಂಗು ನಡೆಯುತ್ತದೆ. [illegible] ಜನರು ದಯಮಾಡಿಸಬೇಕಾಗಿ ವ್ಯವಸ್ಥಾಪಕರು [illegible]ರುತ್ತಾರೆ.

ಚೀಫ್ ಕೋರ್ಟು ಜಡ್ಜಿಗಳ ಆರ್ಡರುಗಳ ಸಮನ್ವಯ

ಮ|| ರಾ|| ಸುಬ್ರಹ್ಮಣ್ಯಂ ಮೊದಲಾದ [illegible] ಮುಖಂಡರುಗಳ ಮೇಲೆ ನೇಕಚಾಲಿಗಾಗಿ ಹಾ[illegible]ವ ಮೊಖದ್ದಮೆಯಲ್ಲಿ ಮ|| ರಾ|| ಅಬ್ಬಾಸ್ ಖಾ[illegible]ನ್ನು ಪಿತೂರಿ ವಿಷಯವಾಗಿ ಪ್ರಶ್ನೆ ಹಾಕಬಹುದೇ [illegible]ವೇ ಎಂಬ ವಿಷಯದಲ್ಲಿ ಜಸ್ಟಿಸ್ ಶ್ರೀನಿವಾಸ[illegible]ವರ ಆರ್ಡರಿಗೂ ಜಸ್ಟಿಸ್ ರಾಮಚಂದ್ರರಾಯ[illegible] ಆರ್ಡರಿಗೂ ಸಮನ್ವಯವು ಸರಿಯಾಗದೆ ಒಂದಕ್[illegible]ದು ಭಿನ್ನವಾಗಿದೆ ಎಂದೂ ಅದಕ್ಕಾಗಿ ಚೀಫ್ [illegible]ರ್ಟಿನ ಫುಲ್ ಬೆಂಚಿನವರು ನಿಷ್ಕರ್ಷೆಯಾದ ತೀರ್ಮಾ[illegible]ವನ್ನು ಕೊಡಬೇಕೆಂದು ಹಾಕಿದ್ದ ಮೊಖದ್ದ[illegible] ಈ ತಿಂಗಳು 3 ನೇ ತಾರೀಖಿನ ಸೋಮವಾರ [illegible]ರ್ಥವಾಯಿತು. ಚೀಫ್ ಜಸ್ಟಿಸ್‌ರಾದ ಮ|| ಎಸ್. [illegible]ರೆಸಾಮಯ್ಯರವರೂ ಜಸ್ಟಿಸ್ ಜಿ. ಶ್ರೀನಿವಾಸ[illegible]ವರೂ ಜಸ್ಟಿಸ್ ಎಂ. ರಾಮಚಂದ್ರರಾಯರೂ [illegible] ಕೊಟ್ಟ ತೀರ್ಪಿನಲ್ಲಿ ಎರಡು ಆರ್ಡರುಗಳೂ [illegible]ಕ್ಕೊಂದಕ್ಕೆ ಭಿನ್ನವಿಲ್ಲವೆಂದೂ ಮ|| ಅಬ್ಬಾಸ್ [illegible]ರನ್ನು ಪಿತೂರಿಯ ವಿಷಯವಾಗಿ ಕ್ರಾಸ್ ಎಕ್[illegible]ಸೇಷನ್ನನ್ನು ಮಾಡಬಹುದೆಂದೂ ತೀರ್ಮಾನ[illegible]

Regd No. M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { [illegible] ಸಂಚಿಕೆಗೆ [illegible]

ಸಂಪುಟ ೧] ಸೋಮವಾರ ೧೦ ಡಿಸೆಂಬರ್ ೧೯೨೮ [ಸಂಚಿಕೆ [illegible]

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್, ಮೈಸೂರು.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co. Excelsior Type-writing Institute, Balepet, Bangalore City
2 Koppada Ramakrishniah Agent Hassan
3 Siddiah, Sri Nanjundeswara Bank Ltd. Nanjangud.
4 M. N. S. & Sons, Lansdowne Building, Mysore.
5 Subba Pundit & Co. [illegible]
6 Friends' Union, Mysore.
7 Sweet Mart, Lansdowne Buildings, Mysore.
8 H. Subba Rao C/o B. Gowda & Sons [illegible]
9 H. Nagan[illegible] News Agent, Chikmagalur
10 V. Krishniah Gandhi Bhavan Closepet

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ದ್ರವ್ಯ [illegible] ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬೇರಿಗೆ ಸಿದ್ಧವಾಗಿರುವುದಲ್ಲದೆ ಷೀಟ್ ಕ್ಯಾಲೆಂಡರ್, [illegible] ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರಚಿತವಾಗ[illegible] [illegible] ಒಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡ[illegible] [illegible] ದ್ವಾರಾ ರವಾನಿಸಲಾಗುತ್ತೆ. ವಿಳಾಸ,— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ!



ತಕ್ಷಣ ಗುಣಪಡಿಸುವ **ಈ ರತ್ನ ಮಿಶ್ರಿ ಹಲ್ವ** ವನ್ನು ಸೇವಿ[illegible]

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಗೆ ಸ್ವಪ್ನಸ್ಖಲನವಾಗುವಿಕೆ, [illegible] ಸ್ವೇಚ್ಛೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, [illegible] ಪ್ರಾರಂಭ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶ್ಶಕ್ತ[illegible] [illegible]ಾಗುವಿಕೆ, ಮೇಹಪರೆ, ಶರೀರವು ನಶಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿ[illegible] ಧಾತುಪುಷ್ಟಿಯನ್ನುಂಟುಮಾಡಿ ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಸ್ತ್ರೀಯರು ಸೇವಿಸಿದಲ್ಲಿ ಗರ್ಭಕೋಶ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರ ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತ್ನ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂ[illegible]

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ ಹೋಗಲಾಡಿಸುವುದಕ್ಕಿಂತ ರೋಗವು ಬಾರದಂತೆ [illegible] ಸರ್ವೋತ್ತಮವಾದ ಉಪಾಯವು ಲೋಕಾಮ[illegible] [illegible] ಗಳು ಬಹು ನಿಮ್ಮ ನೆನಪಿನಲ್ಲಿರಲಿ.

[illegible] ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ [illegible] ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು [illegible]ರುಗಳ ಕೆಡಕನ್ನು [illegible]ಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಶೀತವಾತ ಜ್ವರ, ಚಳಿಜ್ವರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ [illegible] ಪೇಗು [illegible] ಇನ್‌ಫ್ಲೂಯೆಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲ [illegible], ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗ[illegible]ಿಂದ ಸಂದುಗಳು ಹಿಡಿತ ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

[illegible] ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ [illegible] [illegible]ಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋ[illegible]


250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 0—4—0 ಮೇರೆ [illegible] ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ [illegible] 1—8—0 ರೂಪಾಯಿ. 12 ಕ್ಕೆ 2—13—0 25 ಕ್ಕೆ [illegible]

ಭಿಷಗ್ರತ್ನ

ಪಾಳ್ಯದ ವೆಂಕಟಾಚಲಪಂಡಿತರ

ಶ್ರೀ ಸೀತಾರಾಘವ ವೈದ್ಯಶಾಲಾ

ಹೆಡ್ ಆಫೀಸು ಮೈಸೂರು



For High Class Jew[illegible] Silver Ware and presentation novelties consult and buy from

Sri Lakshmi Venkateswara & Co
Manufacturing Jewellers, Nagarthpe[illegible]
Bangalore C[illegible]

TAINADU

Daily Edition.

The Leading Nationalist Daily of Mysore.

Printed and published by P. R. Ramaiya, Sri Rama Press, D. Subbiah Road, M[illegible]

TAI NADU
10—12—1928.

ನಾಡಿನ ಪರಿಸ್ಥಿತಿ

(ಲೇ: ಆ|| ಸರ್ವಾಭಟ್ಟರು)

ದೇಶಬಾಂಧವರೇ !

ಇನ್ನೂ ನೆನ್ನೆ ಶ್ರೀ ಮಹಾತ್ಮಾ ಗಾಂಧಿಯ ವರಂತಹ ಸತ್ಯಪ್ರಿಯರಿಂದ ರಾಮರಾಜ್ಯವೆಂದು ಕರೆಯಲ್ಪಟ್ಟ ನವಿನ್ನಾ ರಾಷ್ಟ್ರದಲ್ಲಿ ಇಷ್ಟುಬೇಗನೆ ಸತ್ಯಧರ್ಮಗಳು ಲುಪ್ತವಾಗಿ ಹೋಗಲು ಕಾರಣವೇನು? ಮಾದರಿಯ ಸಂಸ್ಥಾನವೆಂದು ದಿಗಂತ ವ್ಯಾಪಿಯಾದ ಕೀರ್ತಿಯನ್ನು ಪಡೆದಿದ್ದ ನಮ್ಮ ದೇಶದಲ್ಲಿ ಇದ್ದಕಿದ್ದಹಾಗೆ ಶಾಂತಿ ಸಮಾಧಾನಗಳು ಅಳಿದು ಹೋದುದೇಕೆ? ಪ್ರಜಾನಾಂ ....ಸಪಿತಾ, ಪಿತರಸ್ತಾಸಾಂ ಕೇವಲಂ ಜನ್ಮ ಹೇತವಃ—ಎಂಬ ಕಾಳಿದಾಸೋಕ್ತಿಯಂತೆ ಪ್ರಜೆಗಳಿಗೆ ನಿಜವಾದ ತಾಯಿತಂದೆಯು ಈತನೇ; ಸ್ವಂತ ತಾಯಿ ತಂದೆಗಳು ಕೇವಲ ಜನ್ಮಕ್ಕೆ ಮಾತ್ರ ಕಾರಣಭೂತರು:—ಎಂದು ಪ್ರಜೆಗಳಿಂದಲೂ ಹೊರಗಿನವರಿಂದಲೂ ಏಕಪ್ರಕಾರವಾಗಿ ಹೊಗಳಿಸಿಕೊಂಡು, ಇನ್ನೂ ಹಲವು ತಿಂಗಳ ಕೆಳಗೆ ರಜತಮಹೋತ್ಸವದ ರತ್ನ ಮಂಟಪದಲ್ಲಿ ರಾರಾಜಿಸಿದ ನಮ್ಮ ರಾಜಮಣಿಯ ರಾಜ್ಯದಲ್ಲಿ ಇದ್ದಕ್ಕಿದ್ದಂತೆ ಆಕಸ್ಮಿಕವಾಗಿ ಭೀತಿಸಂಶಯಗಳು ತಲೆದೋರಿ ಮಂದಿಯ ಹೃದಯವು ಡವಡವನೆ ಒಡೆದುಕೊಳ್ಳುವಂತಾದುದೇಕೆ? ಇದೇನು ವಿಪರ್ಯಾಸ? ವಿಸ್ಮಯವಲ್ಲಾಗಲಿ, ರಾಜ್ಯ ನಿಷ್ಠ ಹುಣದಲ್ಲಾಗಲಿ, ಯಾವದೇಶದ, ಹಾಗೂ, ಯಾವ ಜನಾಂಗದ ನೌಕರಶಾಹಿಗೂ ಕಡಿಮೆ ಇಲ್ಲವೆಂಬ ಪ್ರಸಿದ್ಧಿಯನ್ನು ಪಡೆದಿದ್ದ ನಮ್ಮ ಅಧಿಕಾರಿ ವರ್ಗವು ಇಂದು ಒಮ್ಮೆಲೇ ಹೀಗೆ ನೀತಿ ನಿಯಮಗಳನ್ನು ಬದಿಗೊತ್ತಿ ಪಾಪಿ ರಾವಣನಂತೆ, ಜಗನ್ಮಾತೆಯನಾದ ನ್ಯಾಯದೇವತೆಯನ್ನು ಭಂಗಪಡಿಸಲು ಪ್ರಯತ್ನಿಸುತ್ತಿರುವುದರ ಅರ್ಥವಾದರೂ ಏನು? ಯಾವ ಈ ಸೊಬಗಿನ ನಾಡನ್ನು, ಚಿನ್ನದ ಬೀಡನ್ನು, ದುಷ್ಟರ ಆಕ್ರಮಣದಿಂದ ಉದ್ಧರಿಸಲು ರಣಧೀರ ಕಂಠೀರವರಂತಹ ರಾಜಶ್ರೇಷ್ಠರೂ, ಮಹಾರಾಣಿ ಲಕ್ಷ್ಮಮ್ಮಣ್ಣಿಯವರಂತಹ ಸಾಧ್ವೀಮಣಿಯರೂ, ತಿರುಮಲರಾಯರಂತಹ ಮಂತ್ರಿವರ್ಯರೂ, ತಮ್ಮ ದೇಹಗಳನ್ನೇ ಧಾರೆಯೆರೆದರೋ, ಹಾಗೂ ಯಾವ ನಾಡುಶ್ರೀಕೃಷ್ಣಪರಮಾತ್ಮನ ಆ ಸ್ವಂಶದ ಏಕ ಮಾತ್ರ ನೆಲೆಯಾಗಿ ಇಂದು ಭರತಖಂಡದಲ್ಲಿ ನಿಂತಿರುವುದೋ,—ಹೆಚ್ಚೇಕೆ!—ಯಾವ ಪುಣ್ಯಭೂಮಿಯಲ್ಲಿ ಪ್ರಾಚೀನ ಅರ್ವಾಚೀನ ನಾಗರಿಕತೆಗಳೆರಡೂ ಅಪೂರ್ವ ಕಲಾಸಂವಿಧಾನದಿಂದ ಸಮನ್ವಯಗೊಂಡು ಪ್ರಪಂಚವನ್ನೇ ಮುಗ್ಧಗೊಳಿಸುತ್ತಿರುವುವೋ; ಅಂತಹ ಮಂಗಳ ಮಂಡಲದ, ಶ್ರೀ ಸುಂದರೇಶ್ವರನ ಪಟ್ಟಮಹಿಷಿಯ ಧನ್ಯ ಮಂದಿರದ,—"ಸತ್ಯಮೇವ ಜಯತೇ [illegible]"—ಎಂಬ ಆಧಾರಸ್ತಂಭದ ಮೇಲೆ ಇಂದು ಆಘಾತವಾಗುತ್ತಿರುವುದೆಲ್ಲಿಂದ? ಈ ಬಗೆಯ ತರ್ಕ ವಿತರ್ಕಗಳು ನಾಡಿನ ಮೂಲೆಯಿಂದ ಮೂಲೆಗೆ ಪ್ರತಿಯೊಬ್ಬನ ಹೃದಯದಲ್ಲಿಯೂ ಯಾವುದಾದರೊಂದು ಬಗೆಯಲ್ಲಿ ತಲೆದೋರುತ್ತಲೇ ಇವೆ. ಪ್ರತಿಯೊಬ್ಬರೂ ತಮಗೆ ತೋರಿದ ಕಾರಣಗಳನ್ನೂ, ನಿವಾರಣೋಪಾಯಗಳನ್ನೂ ತಮ್ಮ ತಮ್ಮಲ್ಲಿಯೇ ಹೇಳಿಕೊಳ್ಳುತ್ತಾ, ಹೇಗೂ ತಮ್ಮ ಅಂತರಾತ್ಮವನ್ನು ಸಮಾಧಾನ ಮಾಡಿಕೊಳ್ಳಲಾರದೆ ತಳಮಳಗೊಳ್ಳುತ್ತಿದ್ದಾರೆ. ಇನ್ನೊಂದು ಕಡೆ, ಏನೀಗ?—ಮಹಾಪ್ರಮಾದ ನಡೆದಿರುವುದು?—ಎಂದು ದೀರ್ಘವಾಗಿ ರಾಗ ತೆಗೆದು ಇತರರನ್ನು ಹೀಯಾಳಿಸುತ್ತಾ, ಇತರರು ಅಲ್ಲಗಳೆದ ಪದಾರ್ಥಗಳನ್ನು ತಿಂದು ತೇಗಿ ನಲಿವವರೂ ಹಲವರಿದ್ದಾರೆ. ಇವರಂತೂ ಪುಣ್ಯಾತ್ಮರು! ಕಾಗೆಯ ಮನೆಯ ಕೋಕಿಲೆಗಳು! ಪಾಪ! ಈ ಭಾಗ್ಯವು ಎಲ್ಲರಿಗೂ ಬರುವುದೆ? ಯಾರ ಆತ್ಮವು ನಾಡಿನ ಆತ್ಮದೊಂಗೆ ಬೆರೆತು ಹೋಗಿದೆಯೋ, ನಾಡಿನ ಸುಖಸಂತೋಷಗಳಿಂದ ಭಿನ್ನವಾದ ಸುಖಸಂತೋಷಗಳನ್ನು ಯಾರು ಸ್ವಪ್ನದಲ್ಲಿಯೂ ಊಹಿಸಲಾರರೋ, ಯಾರ ಪಾರತ್ರಿಕ ಯಾತ್ರೆಯೂ ಕೂಡ ನಾಡಿನ ಧರ್ಮಕರ್ಮಗಳನ್ನು ಅನುವರ್ತಿಸಿಕೊಂಡಿರುವುದೋ, ಅಂತಹ ನಾಡಿನ ಮಂದಿಯು ತನ್ನ ದುರದೃಷ್ಟದಿಂದ ಒದಗಿ ಬಂದ ಇಂದಿನ ಪರಿಸ್ಥಿತಿಯನ್ನು ನೋಡಿ, ಅತ್ತು ಕರೆದು ಗೋಳಿಡದೆ ಸುಮ್ಮನಿರುವುದು ಹೇಗೆ ಸಾಧ್ಯ? ನಾಡಿನ ಸೌಭಾಗ್ಯ ಲಕ್ಷ್ಮಿಯ ಸಾಕ್ಷಾತ್ಕಾರವನ್ನು ಹೊಂದಿ ಆಕೆಯ ಚರಣ ತಲದಲ್ಲಿ ನಲಿನಲಿಯುತಲಿದ್ದ ನವಯುವಕ ಭೃಂಗವು ಇಂದು ಒಮ್ಮೆಲೇ ಆಕೆಯ ಮುಖದಲ್ಲಿ ತೋರಿ ಬರುವ ವಿಕಾರವನ್ನು ಕಂಡು ಸಹಿಸಿಕೊಂಡಿರುವುದಾದರೂ ಸಂಭವವೇ? ನಿಜವಾಗಿಯೂ ಯಾವನೊಬ್ಬನೇ ಆಗಲಿ, ತನ್ನ ಆಯುಷ್ಯದಲ್ಲಿ ಒಂದುಗಳಿಗೆಯ ಹೊತ್ತು, ತನ್ನ ಅಹಂಕಾರವನ್ನು ಬದಿಗೊತ್ತಿ, ದೇಶಮಾತೆಯ ಮಡಿಲಲ್ಲಿ ತನ್ನನ್ನು ಸಮರ್ಪಿಸಿ, ಆಕೆಯ ಕೃಪಾಕಟಾಕ್ಷದಲ್ಲಿ ಮಿಂದು, ಆ ದಿವ್ಯಸುಂದರ ವದನದಿಂದ ಆಕೆಯು ಪಾಡಿದ ಜೋಗುಳದ ಇನಿದನಿಯನ್ನು ಕೇಳಿ ಮೈ ಮರೆತಿದ್ದರೆ, ಆ ಮುಖದಲ್ಲಿಂದು ಕೂದಲೊಂದು ಕೊಂಕಿದರೂ ನೋಡಿ ಸಹಿಸಲಾರನು. ಆದರೂ ಇವನಲ್ಲಿ ಬರುವ ದೋಷವೆಂದರೆ; ವಿಪತ್ತನ್ನು ಇರುವುದಕ್ಕಿಂತಲೂ ಹೆಚ್ಚಾಗಿ ಭಾವಿಸುವುದು. ಮಹಾಕವಿಯು ಹೇಳುವಂತೆ, "ನಮಗೆ ಅತ್ಯಂತ ಪ್ರಿಯವಾದ ವಸ್ತುಗಳ ವಿಷಯವಾಗಿ ಯಾವಾಗಲೂ ಏನಾದರೊಂದು ಅಪತ್ತನ್ನೇ ಚಿಂತಿಸುವುದು ಮನಸ್ಸಿನ ಲಕ್ಷಣ!"

ಒಬ್ಬರು ಹೇಳುವಂತೆ ಸ್ವಲ್ಪ ಹೆಚ್ಚಾಗಿಯೋ, ಮತ್ತೊಬ್ಬರು ಹೇಳುವಂತೆ ಸ್ವಲ್ಪ ಕಡಿಮೆಯಾಗಿಯೋ, ಅಂತೂ ನಮ್ಮ ನಾಡಿಂದು ವಿಪತ್ತಿಗೆ ಸಿಲುಕಿದೆ ಎಂಬುದು ನಿರ್ವಿವಾದ ವಿಷಯ.

[ಆ|| ಸರ್ವಾಭಟ್ಟರು ಬರೆದಿರುವ ಗ್ರಂಥದಿಂದ ತೆಗೆದುಕೊಂಡದು.]

ವರ್ತಮಾನ ಸಂಗ್ರಹ

ದೇಶಾಂತರದವರ [illegible]

ನಾಳೆಯ ದಿನ [illegible] ಹಾಲಿನಲ್ಲಿ ಶ್ರೀಮದ್ ಮಹಾರಾಜರ [illegible] ಚೀನಾದೇಶದ ಮಿ|| ಟಿ. ಎಚ್. ಕಿನ್‌ರವರೂ ದಕ್ಷಿಣ ಆಫ್ರಿಕಾದೇಶದ [illegible] ಅಂತರ ರಾಷ್ಟ್ರೀಯ [illegible] ಗಿಯೂ, ರೆ|| ಟಿ. ಎ. ಕಾಕಿನ್ ಮತ್ತು ಮಿ|| ಎಂ. ಕೀಲರ್ ರವರೂ "ವಿಶ್ವವಿದ್ಯಾಲಯದ [illegible]" [illegible] ವಿಷಯದಲ್ಲಿಯೂ [illegible] ದಾರೆಂದು ತಿಳಿಯ ಬರುತ್ತದೆ.

ಲೆಫ್ಟಿನೆಂಟ್ ಕರ್ನಲ್‌ರವರಿಗೆ ಜುಲ್ಮಾನೆ

ಮೈಸೂರಿನಿಂದ ಬೆಂಗಳೂರಿಗೆ ಕಳೆದ [illegible] 12 ನೇ ತಾರೀಖಿನಲ್ಲಿ ಲೈಸನ್ಸ್ ಇಲ್ಲದೆ ಮೋಟಾರನ್ನು ನಡೆಸಿಕೊಂಡು ಹೋಗುತ್ತಾ, ಮಂಡ್ಯದ ಬಳಿ ಒಬ್ಬ ಬಾಲಕನಿಗೆ ಗಾಯಪಡಿಸಿದ ಬೆಂಗಳೂರು ದಂಡಿನಲ್ಲಿರುವ ಲೆಫ್ಟಿನೆಂಟ್ ಕರ್ನಲ್ ಆರ್. ಎ. ಪಿ. [illegible] ರ್ಡ್ ಎಂಬುವರ ಮೇಲೆ ಪೋಲೀಸಿನವರು [illegible] ಯಾದನ್ನು ಫ್ರಿನ್ಸಿಪಾಲ್ ಮಿ|| ಜೆ. ಸಿ. [illegible] ವರು ವಿಚಾರಣೆ ಮಾಡಿ ಆಪಾದಿಯ ತಪ್ಪನ್ನು [illegible] ಕೊಂಡಿದ್ದರ ಮೇಲೆ ಎರಡು ರೂಪಾಯಿ ಜುಲ್ಮಾನೆ ವಿಧಿಸಿದರು.

ಭದ್ರಾವತಿ ಕಬ್ಬಿಣದ ಶ್ರೇಷ್ಠತೆ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ [illegible] ವೈದ್ಯರಾದ ಡಾ|| ಸುಬ್ಬರಾಯರವರು ಮಾದರಿಗಾಗಿ ಭದ್ರಾವತಿ ಕಾರ್ಖಾನೆಯಲ್ಲಿ ಶಸ್ತ್ರ ಚಿಕಿತ್ಸೆಗೆ [illegible] ಯೋಗವಾಗುವಂಥ ಒಂದು [illegible] ತಯಾರು ಮಾಡಿಸಿ ಅದರ ಮೂಲಕ ಚಿಕಿತ್ಸೆಯನ್ನು [illegible] ನಡೆಸಿದ್ದರಲ್ಲಿ ಅದು ಬಹಳ ಉತ್ತಮ [illegible] ಗಿ ತಿಳಿಯ ಬಂದಿತು. ಆ ಚಾಕುವನ್ನು ಬಹಳ ಹೊತ್ತು [illegible] ರನಲ್ಲಿಟ್ಟಿದ್ದರೂ ತುಕ್ಕು ಹಿಡಿಯಲಿಲ್ಲವಂತೆ. ಇದರಿಂದ ಭದ್ರಾವತಿ ಕಾರ್ಖಾನೆಯಲ್ಲಿ ತಯಾರಾಗುವ [illegible] ಣವು ಎಷ್ಟು ಅಮೋಘವಾದುದೆಂದು ಗೊತ್ತಾಗುತ್ತದೆ.

ಮಾಪ್ಲಾ ಖೈದಿಗಳ ಬಿಡುಗಡೆ

[illegible] ಬಂದಿಖಾನೆಯಿಂದ 150 [illegible] ಖೈದಿಗಳು ಕೆಲವು ದಿನಗಳ ಹಿಂದೆ [illegible] ಬೆಂಗಳೂರಿಗೆ ಬಂದಿದ್ದ [illegible] ದರು.

[illegible]

[illegible] ಲಾರ್ಡ್ ಇರ್ವಿನ್ ಎಂಬುವರು [illegible] ಬೀಗ್ಗೆ ತನ್ನ ಎಪ್ಪತ್ತಾರನೆಯ ವಯಸ್ಸಿನಲ್ಲಿ ಮೃ[illegible] ದನು.

ತಾಯಿನಾಡು.
10-12-1928

ಮೈಸೂರು ಸ್ಟಾರ್ ಮತ್ತು ಕರ್ನಾಟಕ ಏಕೀಕರಣ

ಈ ತಿಂಗಳು 6 ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯ ಅಗ್ರಲೇಖನದಲ್ಲಿ ಕರ್ನಾಟಕ ಏಕೀಕರಣದ ವಿಷಯವು ವಿಶದವಾಗಿ ಚರ್ಚಿಸಲ್ಪಟ್ಟಿರುವುದು ಕರ್ನಾಟಕದ ಅಭ್ಯುದಯದಲ್ಲಿ ಕಣ್ಣಿಟ್ಟಿರುವ ಪ್ರತಿಯೊಬ್ಬರೂ ಆ ಲೇಖನವನ್ನು ಓದಬೇಕೆಂದು ನಮ್ಮ ಪ್ರಾರ್ಥನೆ. ಸ್ಟಾರ್ ಪತ್ರಿಕೆಗೆ ಇಂತಹ ಉದಾತ್ತವಾದ ವಿಷಯಗಳ ಮೇಲೆ ಲೇಖನವನ್ನು ಬರೆಯಲು ಅವಕಾಶ ದೊರೆತದ್ದು ಬಹಳ ಸಂತೋಷದ ಸಂಗತಿ. ಯತ್ಕಿಂಚಿತ್ ಆದರೂ ಈ ವಿಷಯವನ್ನು ಚರ್ಚೆ ಮಾಡಿದ್ದಕ್ಕಾಗಿ ನಾವು ನಮ್ಮ ಸಹೋದ್ಯೋಗಿಯನ್ನು ಅಭಿನಂದಿಸುತ್ತೇವೆ.

ಆ ಲೇಖನದಲ್ಲಿ ಕೆಲವು ತಪ್ಪು ಅಭಿಪ್ರಾಯಗಳಿರುವುವು. ಅವುಗಳನ್ನು ತಿದ್ದುವುದು ಅತ್ಯಗತ್ಯವಾಗಿದೆ. ಕರ್ನಾಟಕ ಏಕೀಕರಣವು ಸರ್ವಸ್ಪಷ್ಟವಾಗಿ ಆಗಬೇಕಾದರೆ ಸಂಯುಕ್ತ ಕರ್ನಾಟಕ ಪ್ರಾಂತ್ಯವು ರಚಿಸಲ್ಪಡಬೇಕೆಂದೂ ಅದರಲ್ಲಿ ಮೈಸೂರೂ ಸಮಾವೇಶವಾಗಬೇಕೆಂದೂ ಹೇಳುವ ಮಾತು ಒಪ್ಪತಕ್ಕದ್ದೇ. ಸರಿ ಈ ರೀತಿಯಿಂದ ಸಂಯುಕ್ತ ಪ್ರಾಂತ್ಯಕ್ಕೆ ಶ್ರೀಮನ್ಮಹಾರಾಜರವರು ಒಡೆಯರಾಗಬೇಕೆಂಬುದು ನಿರ್ವಿವಾದವಾದ ಮಾತು. ಈ ಸಮಾವೇಶಕ್ಕೆ ಬ್ರಿಟಿಷ್ ಕರ್ನಾಟಕ ಪ್ರಾಂತ್ಯದ ಪ್ರಮುಖರೂ ಪ್ರಜೆಗಳೂ ಒಪ್ಪುವುದಿಲ್ಲವೆಂದು ಸ್ಟಾರ್ ಪತ್ರಿಕೆಯು ಹೇಳುವ ಮಾತು ಸರಿಯಲ್ಲ. ಕರ್ನಾಟಕ [illegible] ಇದುವರೆಗೂ ಬರೆದಿರತಕ್ಕ ಲೇಖನಗಳಲ್ಲಿಯೂ ಕೊಟ್ಟಿರತಕ್ಕ ಉಪನ್ಯಾಸಗಳಲ್ಲಿಯೂ ತಾವು ಶ್ರೀಮನ್ ಮಹಾರಾಜರವರ ಆಧಿಪತ್ಯದಲ್ಲಿ ಇರಲು ಒಪ್ಪುವುದಿಲ್ಲವೆಂದು [illegible] ಯಾವಾಗಲೂ ಹೇಳಿಲ್ಲ. ಅದಕ್ಕೆ ಪ್ರತಿಯಾಗಿ ಕರ್ನಾಟಕದ ಅನೇಕ ಮುಖಂಡರು ಶ್ರೀಮನ್ ಮಹಾರಾಜರವರ ಆಧಿಪತ್ಯದಲ್ಲಿ ಇರಲು ಒಪ್ಪಿರುವೆವೆಂಬುದನ್ನು [illegible] ಸಾರಿರುವರು.

ಸ್ಟಾರ್ ಪತ್ರಿಕೆಯು ಹೇಳತಕ್ಕ ಒಂದು ಮಾತು [illegible] ಕರ್ನಾಟಕಕ್ಕೆ [illegible] ಪ್ರಜಾ ಸ್ವಾತಂತ್ರ್ಯವಿರುವುದು. ಆದರೆ ನಮ್ಮ ಸಂಸ್ಥಾನದಲ್ಲಿಯೂ ಪ್ರಜಾ ಸ್ವಾತಂತ್ರ್ಯದ [illegible] "[illegible] ಮಹಾರಾಜರವರ ಕರುಣೆ" [illegible] ಎಂದು ನಿರ್ಬಂಧವೂ ಇಲ್ಲ. ಮೈಸೂರಿನ ರಾಜಕೀಯ ಇತಿಹಾಸವನ್ನು ನೋಡಿದರೆ ಪ್ರಜಾ ಸ್ವಾತಂತ್ರ್ಯಕ್ಕೆ ಕಂಟಕರಾಗಿರುವವರು ಶ್ರೀಮನ್ಮಹಾರಾಜರಲ್ಲ ಪ್ರಜೆಗಳಲ್ಲೇ ಕೆಲವರು ಎಂಬುದು ಸ್ಪಷ್ಟವಾಗುವುದು. ಯಾವಾಗಲೂ ಜಾತಿದ್ವೇಷವನ್ನೇ ಬೆಳೆಸಿ ಅದರಲ್ಲೇ ಮಹಾನಂದವನ್ನು ಹೊಂದುತ್ತಿರುವ ಕೆಲವು ದೇಶದ್ರೋಹಿಗಳು ಪ್ರಜಾ ಸ್ವಾತಂತ್ರ್ಯಕ್ಕೆ ಕಂಟಕರು. ಪತ್ರಿಕೆಗಳನ್ನು ನಿಲ್ಲಿಸಬಿಡಬೇಕು, ವಾಗ್ಬಂಧನವ [illegible] ಮೊದಲಾದ ಹುಚ್ಚು [illegible] ಪ್ರಜಾ ಸ್ವಾತಂತ್ರ್ಯಕ್ಕೆ ವಿರೋಧಿಗಳು ನಮ್ಮ ದೇಶದ ಎಲ್ಲಾ ಕೋಮಿನವರೂ ಬದುಕಲಿ ನಾವೂ ಬದುಕೋಣ ಎಂಬ ಒಳ್ಳೆ ಪ್ರೇರಣೆ ಇರುವವರಿಗೆ ಈಗ ನಮ್ಮ ಸಂಸ್ಥಾನದಲ್ಲಿ ಉಳಿಗಾಲವಿಲ್ಲವಾಗಿದೆ. ಸ್ಟಾರ್ ಪತ್ರಿಕೆಯು ಜಾತಿ ದ್ವೇಷದಲ್ಲಿ ತೊಡಗಿರುವವರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾ ಪ್ರಜಾಸ್ವಾತಂತ್ರ್ಯಕ್ಕೆ ತಳಹದಿಯನ್ನು ಹಾಕಲು ಆರಂಭ ಮಾಡಿದರೆ ಎಲ್ಲವೂ ಸರಿಹೋಗುವುದು ಆಗಲೀಗ ಮೈಸೂರೆಂದರೆ ಯಾರಿಗೂ ಜಿಗುಪ್ಸೆಯಾಗುವುದಿಲ್ಲ. ಅದುವರೆಗೂ ಮೈಸೂರು ಅಧಃಪಾತಾಳದಲ್ಲಿಯೇ ಬಿದ್ದಿರುವುದು.

ಬೆಂಗಳೂರು ವೃತ್ತಾಂತ

(ತಂತೀ ಸಮಾಚಾರ)
ನಮ್ಮ ಸ್ವಂತ ಜಾತ್ಮೀದಾರರಿಂದ

ವಿಶ್ವೇಶ್ವರಯ್ಯ ವರದಿಯಲ್ಲಿ ಏಕಮತ್ಯವಿಲ್ಲ.

ಬೆಂಗಳೂರು ತಾ|| 8 ಡಿಸೆಂಬರ್— ವಿಶ್ವೇಶ್ವರಯ್ಯ ಸಮಿತಿ ವರದಿಯು 70 ಪುಟಗಳನ್ನೊಳಗೊಂಡಿರುವುದೆಂದೂ ಐದು ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿದೆ ಎಂದೂ ಸರ್ ಎಂ. ವಿಶ್ವೇಶ್ವರಯ್ಯನವರು ಮ|| ರಾ|| ಡಿ. ಕೆ. ರಾಮರಾಯರು ಮಾಣಿಕ್ಯವೇಲು ಮೊದಲಿಯರ್‌ರವರೂ ಒಂದೇ ವಿಧವಾದ ಅಭಿಪ್ರಾಯವುಳ್ಳವರಾಗಿರುವರೆಂದೂ ಎ|| ರಾಲ್ಫ ಸ್ಟೈರವರೂ ಮ|| ರಾ|| ಬಸಪ್ಪನವರೂ ಹೀಗೂ ಹಾಗೂ ಎರಡು ಕಡೆಯೂ ಓಲೆದಾಡುತ್ತಿರುವರೆಂದೂ ಮ|| ರಾ|| ಗಳಾದ ಕಲಾಮಿ ಮತ್ತು ನಾಗಪ್ಪನವರು ವಿರೋಧವಾಗಿರುವರೆಂದೂ, ಬೆಂಗಳೂರು ಬಳೇಪೇಟೆ ಬೋರ್ಡು ತಿಳಿಸುತ್ತದೆ.

ಈ ದಿವಸದ ಮುನಿಸಿಪಲ್ ಮೀಟಿಂಗಿನಲ್ಲಿ ಮ|| ಅಬ್ಬಾಸ್ ಖಾನರವರು ಹಾಜರಾಗಿದ್ದರು ಬೆಂಗಳೂರು ಮುನಿಸಿಪಾಲಿಟಿಗೆ ಸ್ವಂತ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕಿನ ವಿಷಯದಲ್ಲಿ ದಿವಾನರವರಲ್ಲಿ ಅರಿಕೆ ಮಾಡಿಕೊಳ್ಳಲು ಒಂದು ಸಮಿತಿಯನ್ನು ಏರ್ಪಡಿಸಬೇಕೆಂಬ ವಿಷಯದ ಠರಾವು ಪಾಸಾಯಿತು ಇದಕ್ಕೆ 16 ಜನರು ಸಮ್ಮತಿಸಿದರು 13 ಜನರು ಒಪ್ಪಲಿಲ್ಲ. ಖಾನರು ಮಾತ್ರ ಎರಡು ಕಡೆಯೂ ಅಭಿಪ್ರಾಯ ಕೊಡದೆ ತಟಸ್ಥರಾಗಿದ್ದರು. ಮೇಲ್ಕಂಡ ವಿಷಯವಾಗಿ ದಿವಾನರಲ್ಲಿ ಅರಿಕೆ ಮಾಡಿಕೊಳ್ಳುವ ವರೆಗೆ ಮುನಿಸಿಪಲ್ ಮೀಟಿಂಗನ್ನು ಮುಂದಿನ ಶನಿವಾರಕ್ಕೆ ವರ್ಗಾಯಿಸಬೇಕೆಂದು ತೀರ್ಮಾನವಾಯಿತು.

ವಿವಿಧ ವಿಷಯಗಳು

ಪಶುವೈದ್ಯಶಾಲೆಗಳು

ಶಿವನಸಮುದ್ರದಲ್ಲಿ ಜ್ಯೂಬಿಲಿ ಮಹೋತ್ಸವದ ಜ್ಞಾಪಕಾರ್ಥವಾಗಿ ಒಂದು ಪಶುವೈದ್ಯಶಾಲೆಯನ್ನು ಏರ್ಪಡಿಸುವಂತೆ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ ಮತ್ತು ಹೆಗ್ಗಡದೇವನಕೋಟೆಯಲ್ಲಿ ಮತ್ತೊಂದು ಪಶುವೈದ್ಯಶಾಲೆಯು ಏರ್ಪಾಡಾಗುವಂತೆ ಅಪ್ಪಣೆ ಮಾಡಿರುತ್ತಾರೆ. ಇದರ ವೆಚ್ಚವು ಮುನಿಸಿಪಾಲಿಟಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸರ್ಕಾರ ಇವು ಮೂರಕ್ಕೂ ಹಂಚಲ್ಪಡುವುದು.

ವಿಶ್ವವಿದ್ಯಾಲಯ

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಯೂನಿವರ್ಸಿಟಿಯ ಸೆನೆಟ್ ಮೀಟಿಂಗಿನಲ್ಲಿ (1) ಕಾಲೇಜುಗಳಿಗೆ ಕೊಡುವ ಬೇಸಿಗೆಯ ರಜದಲ್ಲಿ ಮೂರು ವಾರಗಳನ್ನು ಕಮ್ಮಿ ಮಾಡಿ ಅದನ್ನು ಕ್ರಿಸ್ ಮಿಸ್ ರಜದ [illegible] ಸೇರಿಸುವುದು. (2) ದೇಹದಾರ್ಢ್ಯದಲ್ಲಿ ತಕ್ಕ ಯೋಗ್ಯತೆಯುಳ್ಳ ಎಲ್ಲಾ ವಿದ್ಯಾರ್ಥಿಗಳಿಗೂ [illegible] ನಿಯರಿಗೂ ನಿರ್ಬಂಧ ಪಡಿಸಿ ಮಿಲಿಟರೀ ಶಿಕ್ಷಣ[illegible] ಕೊಡಿಸಬೇಕು, ಎಂಬ ಎರಡು ಠರಾವುಗಳು [illegible] ರ್ಲೆ ಲಕ್ಷ್ಮೀನಾರಾಣಪ್ಪನವರಿಂದ ತರಲ್ಪಟ್ಟ ಸಭೆ[illegible] ಮಂಜೂರಾಯಿತು.

ತಿಪಟೂರು

ದಿಂವಗತರಾದ ಲಾಲಾ ಲಜಪತರಾಯರವರ [illegible] ಕೋತ್ಸವವು ಶ್ರೀ ವೀರಶೈವಾನಂದಾಶ್ರಮದಲ್ಲಿ [illegible] ರಾ|| ಡಿ. ಎಸ್ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನ[illegible] ಈ ದೇಶ ಭಕ್ತರ ಮರಣದಿಂದ ಎಲ್ಲರಿಗೂ ಉಂಟಾ[illegible] ಸಂತಾಪವನ್ನು ಸೂಚಿಸುವ ಒಂದು ಠರಾವು ಮಾ[illegible]ಲ್ಪಟ್ಟಿತು.

ಕಾನಕಾನಹಳ್ಳಿ

ಮುನಿಸಿಪಲ್ ಪ್ರೆಸಿಡೆಂಟರಾದ ಮ|| ರಾ|| [illegible] ಸ್ವಾಮಿ ಪಿಳ್ಳೆಯವರಿಗೂ ಪ್ರಜೆಗಳಿಗೂ ಭಿನ್ನಾಭಿ[illegible]ಯ ಉಂಟಾಗಿ ಮೇಲ್ಪಟ್ಟ ಅಧಿಕಾರಿಗಳಿಗೆ ತಂತಿ[illegible]ನ್ನು ಕೊಟ್ಟಿರುತ್ತಾರೆ ಸಬ್ ಡಿವಿಜನ್ ಆಫೀಸರ[illegible] ಮ||ರಾ|| ಅಪ್ಪಾಜಿ ಗೌಡರು ಇಲ್ಲಿಗೆ ಬಂದು ವಿಚಾ[illegible] ನಡೆಸಿದರು.

"ಲೇಡೀ ಸೈಮನ್‌ರವರ ನಿಟ್ಟುಸಿರು"

ಈ ಮಾಹೆ 1 ನೇ ತಾರೀಖಿನ ದಿವಸ, ಸೈಮನ್ [illegible]ಮಿತಿಯವರು ಲಕ್ನೋಪಟ್ಟಣದಲ್ಲಿ ಸಂಚರಿಸುತ್ತಿ[illegible] ಆ ಊರಿನ ಪ್ರತಿಯೊಂದು ಅಂಗಡಿಯ[illegible] "Simon go back" ಸೈಮನ್ನೇ ಹಿಂತಿರುಗು [illegible] ಬದಾಗಿ ಬೋರ್ಡು ಹಾಕಿತ್ತು. ಲೇಡೀ ಸೈಮನ್ನರು [illegible] ಕ್ನೋಪಟ್ಟಣಕ್ಕೆ ಬರುವಾಗ ಕನ್ನಡಕವನ್ನು [illegible] ಮಾಡಿಸುವುದಕ್ಕೋಸ್ಕರ ಪ್ರತಿಯೊಂದು ಅಂಗಡಿ[illegible]ದಲೂ ಬಹಿಷ್ಕೃತರಾದರು. ಅಷ್ಟೊಂದು ಅಂಗಡಿ[illegible] ಪೈಕಿ ಲಾರೆನ್ಸ್ ಅಂಡ್ ಮೆಯೋ ಎಂಬ ಷಾಪಿನಲ್ಲಿ ಬೋ[illegible]ರ್ಡು ಹಾಕಿತ್ತಿಲ್ಲ. ಅದನ್ನು ನೋಡಿ ಲೇಡೀ ಸೈಮನ್[illegible]ರು ಕಟ್ಟ ಕಡೆಗೆ ಇಲ್ಲಾದರೂ ಸ್ಥಳವಸತಿಸಿಕ್ಕಿತಲ್ಲಾ ಎಂದು ದೀರ್ಘವಾದ ಉಸಿರನ್ನು ಬಿಟ್ಟರಂತೆ.

ತಂದೆಯನ್ನು ಕೊಂದುದಕ್ಕಾಗಿ ಆಮರಣಾಂತ ಶಿಕ್ಷೆ

ಮಳವಳ್ಳಿ ತಾ|| ಕ್ಯಾತನಹಳ್ಳಿಯಲ್ಲಿ ಜವರ [illegible] ಪ್ರಾಯಸ್ಥನು ಕರಿಗಿ ಎಂಬ ಹುಡುಗಿಯನ್ನು ರಮಿ[illegible] ಮಾಡಿಕೊಂಡಿದ್ದನು. ಈ ವಿಷಯದಲ್ಲಿ, ಜವರ[illegible] ಅವನ ತಂದೆಗೂ ಮನಸ್ತಾಪವುಂಟಾಯಿತು. ಇದರಿ[illegible] ಒಂದು ದಿನ ಅರ್ಧ ರಾತ್ರಿಯಲ್ಲಿ ತಂದೆಯನ್ನು ಕೊಂ[illegible] ಬಿಟ್ಟನು. ಇದು ಮೊಖದ್ದಮೆ ಆಯಿತು. ಮೈಸೂರು ಸೆಷನ್ ಜಡ್ಜ್‌ರವರು ಮೊಕದ್ದಮೆಯನ್ನು ಆಮೂಲಾ[illegible]ವಾಗಿ ಪರಿಶೀಲಿಸಿ ಅಪರಾಧಿಗೆ ಆಮರಣಾಂತ [illegible] ಶಿಕ್ಷೆಯನ್ನು ವಿಧಿಸಿದರು.

Regd No. M. 2322 ‖ ವಂದೇಮಾತರಂ ‖ ಬಿಡಿ ಪ್ರತಿ ೧ ಕ್ಕೆ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ಸಂಪುಟ ೧] ಮಂಗಳವಾರ ೧೧ ಡಿಸೆಂಬರ್ ೧೯೨೮ [ಸಂಚಿಕೆ ೬

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರಾಡ್ಜ ಮೈಸೂರು

Our Agents

Copies of Tai Nadu, Daily and Weekly areavailable for sale at the following place s:—

1 N. P. Venkatappa & Co
Excelsior Type-writing Institute, Balepet, Bangalore City.

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Building Mysore.

5 Subba Pundit & Co, Lakshmivilas

6 Friends' Union, Mysore.

7 Sweet Mart, Lansdowne dBuilings, Mysore.

8 H Subba Rao C/o B Gowda & Sons Sakaleshpur

9 H Naganniah News Agent Chikmagalur

10 V Krishniah Gandhi Bhavan Closepet

TAI NADU.

Daily Edition.

The Leading Nationalist Daily of Mysore.

Printed and published by F. R. Ramaiya, at Sri Rama Press, D. Subbiah Road, Mysore

ತಾಯಿನಾಡು.
11—1—1928.

ಕೆರೆ ನೀರಿನ ಪ್ರಭಾವ

(ಶ್ರೀ ತಗಡೂರು ರಾಮಚಂದ್ರರಾಯರಿಂದ)

ಚಾಮರಾಜನಗರದ ತಾಲ್ಲೂಕಿನ ಇರಸವಾಡಿ ಗ್ರಾಮದಲ್ಲಿ ದೀನನ ಕಟ್ಟೆ ಎಂಬ ಹೆಸರಿನ ಒಂದು ಕೆರೆಯುಂಟು ಆ ಕೆರೆಯಲ್ಲಿ ಆ ಗ್ರಾಮದ ಆದಿಕರ್ನಾಟಕರು ಆರಂಭ ಮಾಡುವಾಗಲೂ ಮನೆಗೂ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು ಈಚೆಗೆ ಮದುವೆ ಕಾಲದಲ್ಲಿಯೂ ದೇವರ ಉತ್ಸವಗಳ ಕಾಲದಲ್ಲಿಯೂ ಈ ಕೆರೆಯಿಂದ ದೇವರನ್ನು ತರಲು ಪ್ರಯತ್ನ ಪಟ್ಟರು ಅದಕ್ಕೆ ಕೆಲವರು ಅಡ್ಡಿ ಪಡಿಸಿದರು ಗ್ರಾಮದ ಮುಖಂಡರೆಲ್ಲರೂ ಸೇರಿ ಆ ಕೆರೆಯಿಂದ ಆದಿಕರ್ನಾಟಕರು ನೀರನ್ನು ತೆಗೆದು ಕೊಳ್ಳುವವನ್ನು ಕೂಡ ನಿಲ್ಲಿಸಬೇಕೆಂದು ಮಾತನಾಡಿಕೊಂಡು ಅಲ್ಲಿಗೆ ಆವರು ಒಂದಂತೆ ಕಾವಲಿಟ್ಟರು. ಆ ಕಾವಲಿನಿಂದ ಬಾಧಕವಾಗಲಿಲ್ಲ. ಪ್ರತಿನಿತ್ಯವೂ ನೀರನ್ನು ತೆಗೆದುಕೊಳ್ಳುತ್ತಲೇ ಇರುತ್ತಾರೆ. ಇದರಿಂದ ಅನೇಕ ಮನಸ್ತಾಪಗಳುಂಟಾಗಿ ವ್ಯಾಜ್ಯಕ್ಕೆ ಪ್ರಾರಂಭವಾಗಿದೆ. ಗ್ರಾಮದ ಮುಖಂಡರು ಕೆರೆಯ ನೀರಿಗೆ ಈ ರೀತಿ ಅಡ್ಡಿ ಪಡಿಸುವುದು ನ್ಯಾಯವಲ್ಲ ಇಂಥಾ ಸಣ್ಣ ಸಣ್ಣ ವಿಷಯಗಳನ್ನು ದೊಡ್ಡದಾಗಿ ಮಾಡಿ ಗ್ರಾಮಗಳಲ್ಲಿ ಕಲಹವನ್ನು ತಂದೊಡ್ಡಬಾರದು ಇಂಥಾ ವಿಷಯಗಳಲ್ಲಿ ಮಹಾ ಜನರೂ ಅಧಿಕಾರಿಗಳೂ ಮುತುವರ್ಜಿ ವಹಿಸಿ ನ್ಯಾಯವನ್ನು ಒದಗಿಸಬೇಕು. ಮಾತು ಮಾತಿಗೆ ಕೋರ್ಟಿಗೆ ಹೋಗಿ ಜನರಿಗೆ ಕಿರುಕುಳವನ್ನು ಕೊಡುತ್ತಿರುವುದು ಯುಕ್ತವಲ್ಲ.

ಸಂಪಾದಕರ ದಸ್ತಗಿರಿ

ಲಾಲಾ ಲಜಪತರಾಯರ ಮತ್ತು ಇನ್ನು ಇತರ ಮುಖಂಡರ ಮೇಲೆ ಲಾಹೋರಿನ ಪೋಲೀಸಿನವರು ಅತ್ಯಾಚಾರ ನಡೆಸಿದ್ದಕ್ಕೂ, ಮತ್ತು ಲಾಲಾಜಿಯವರ ಮರಣದ ಬಗ್ಗೆಯೂ ಟೀಕೆ ಮಾಡಿ ಅನೇಕ ಲೇಖನಗಳನ್ನು ಬರೆದಿದ್ದಕ್ಕೂ ಕಲ್ಕತ್ತಾದ ಫಾರ್‌ವರ್ಡ್ ಪತ್ರಿಕೆಯ ಕಚೇರಿಯನ್ನು ಅಲ್ಲಿಯ ಪೋಲೀಸಿನವರು ಜಫ್ತಿ ಮಾಡಿ ತಮಗೆ ಬೇಕಾದ ಕಾಗದಪತ್ರಗಳನ್ನೂ, ಕೆಲವು ಪತ್ರಿಕೆಗಳನ್ನೂ ಕೊಂಡೊಯ್ದರು. ಪತ್ರಿಕಾ ಸಂಪಾದಕರೂ ಮತ್ತು ಮುದ್ರಿಸುವವರೂ ಆದ ಶ್ರೀ|| ಸತ್ಯರಂಜನ ಭಕ್ಷಿ ಮತ್ತು ಶ್ರೀ ಪುಳಿನ್ ಬಿಹಾರಿಧಾರ್ ಎಂಬುವರು ರಾಜದ್ರೋಹದ ಆಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟು, ಸ್ವಂತ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

25 ಮಕ್ಕಳ ತಾಯಿ

ಪಾಸ್ಕುಯಲ್ ಫರ್ನಾಂಡಿಸ್ ಎಂಬುವನ ಹೆಂಡತಿಯಾದ ತಿಯೋಡುಲ ಎಂಬಾಕೆಯು 25 ಮಕ್ಕಳನ್ನು ಪಡೆದಿರುವಳು ಅವರೆಲ್ಲರೂ ಸುಖವಾಗಿದ್ದಾರೆ. ಈಗ ಆಕೆಯ ವಯಸ್ಸು 45 ವರುಷಗಳು ಮಾತ್ರ.

ವರ್ತಮಾನ ಸಂಗ್ರಹ

ನರಮಾಂಸ ಭಕ್ಷಕರು

ಕ್ರೊಕೊಡೈಲ್ ದ್ವೀಪಗಳಲ್ಲೊಂದಾದ ವಿಲಿಗಿಂಬಿ ಎಂಬೂರಿನಲ್ಲಿ ದಿಗಂಬರರಾಗಿರುವ ಬಾಲವುಳ್ಳ ಜನರು ವಾಸಿಸುವರು.

ಆ ಜನರಿಗೆ ಮಾನವ ರಕ್ತಾಪೇಕ್ಷೆಯೇ ಹೆಚ್ಚು. ಯುವಕರು ಹಸುಮಕ್ಕಳ ಮಾಂಸವನ್ನು ತಿನ್ನಬಹುದು. ತರುಣಿಯರ ಮಾಂಸವು ಮುದುಕರಿಗೂ ಮುದುಕಿಯರಿಗೆ ತರುಣರ ಮಾಂಸವೂ ನಿಷಿದ್ಧ. ಯುವಕ ಗಂಡಸರ ಮತ್ತು ಹೆಂಗಸರ ಮಾಂಸವು ಎಲ್ಲರಿಂದಲೂ ಭಕ್ಷಿಸಲ್ಪಡಬಹುದು, ಎಂಬಿವೇ ಅವರ ನಿಯಮವೆಂದು ಸರ್ ಹ್ಯೂಬರ್ಟ್ ಎಂಬುವನು ಅಲ್ಲಿ ಹೊಸದಾಗಿ ನೆಲಸಿರುವ ಓರ್ವ ವಾದ್ರಿಯ ಸಹಾಯದಿಂದ ಅರಿತಿರುವನಂತೆ.



ಮೈಸೂರು ದೇಶದ ವೀರ ಸತ್ಯಾಗ್ರಹಿಗಳಾದ
ಶ್ರೀ|| ಆನೆಕಲ್ಲು ಸರ್ವಭಟ್ಟರವರು.

ಪೆಷಾವರ್ ಮಂಗಳೂರು ರೈಲು

ಪಶ್ಚಿಮ ವಾಯುವ್ಯ ಪ್ರಾಂತ್ಯದ ರೈಲ್ವೆಯ ವಿಭಾಗದ ಒಂದರಲ್ಲಿ ಏಜಂಟರು ಪೆಷಾವರಿಂದ ಮಂಗಳೂರಿಗೆ ಬಂದು ಪ್ರತ್ಯೇಕ ರೈಲು ಹಾಕುವ ಏರ್ಪಾಡು ನಡೆಯುತ್ತಿದೆಯೆಂದೂ, ಇದು ಇಂಡಿಯಾದಲ್ಲೇ ಹೆಚ್ಚೇಕೆ ಪ್ರಪಂಚದಲ್ಲೇ ಒಂದು ದೊಡ್ಡ ಮಾರ್ಗವೆಂದೂ ಹೇಳಿದರು. ಈ ರೈಲು ಪೆಷಾವರಿನಿಂದ, ಮಂಗಳೂರಿಗೆ ಮದರಾಸ್, ಬೆಜವಾಡ, ನಾಗಪುರ, ಇಟಾರ್ಸಿ, ಡೆಲ್ಲಿ ಮಾರ್ಗವಾಗಿ ಹೋಗುವುದು.

ನೀರಿನ ಸರಬರಾಜನ್ನು ತಡೆದರು

ಜಲಾಲಾಬಾದಿಗೆ ಸರಬರಾಜಾಗುತ್ತಿದ್ದ ನೀರನ್ನು ದಂಗೆಕೋರರು ತಡೆದಿರುವರು. ಜಲಾಲಾಬಾದಿನ ಜನರು ದಂಗೆ ಕೋರರನ್ನು ಪ್ರಾರ್ಥಿಸಿದರು. ಅದಕ್ಕೆ ಅವರು ನಮ್ಮ ಜಗಳವು ಸರಕಾರದೊಡನೆ ಇರುವುದು. ನೀವು ನಮಗೋಸ್ಕರ ಹೆದರಬೇಕಾದ್ದಿಲ್ಲ ಎಂದು ಉತ್ತರ ಕೊಟ್ಟರು.

ಪಟ್ಟಣಗಳ ರಕ್ಷಣೆ

ಅಂತರಿಕ್ಷದಿಂದ ವಿಮಾನಗಳ ಮುಖಾಂತರ ಬಾಂಬುಗಳನ್ನು ಪಟ್ಟಣಗಳ ಮೇಲೆ ಎಸೆಯುವ ಸಾಧ್ಯತೆಯು ಇತ್ತೀಚೆಗೆ ಬಹಳ ಜಾಸ್ತಿಯಾಗಿರುತ್ತದೆ. ಬಾಂಬುಗಳನ್ನು ಎಸೆಯುವಿಕೆಯಿಂದ ಪಟ್ಟಣಗಳನ್ನು ರಕ್ಷಿಸುವ [illegible] ಒಬ್ಬ ಫ್ರೆಂಚ್ ವಿಜ್ಞಾನಿಯು [illegible] ಕ್ರಿಯೆಯನ್ನು ಕಂಡು ಹಿಡಿದಿರುವರು. ಅದೇನೆಂದರೆ ಒಂದು ಯಂತ್ರದ ಸ್ವಿಚ್ಚನ್ನು ಹಾಕಿದರೆ ಕೆಲವು ಸೆಕೆಂಡುಗಳಲ್ಲಿ ಪಟ್ಟಣವೆಲ್ಲವೂ ಕಣ್ಣಿಗೆ ಗೋಚರವಾಗದಂತೆ ಮಾಯವಾಗಿ ಬಿಡುತ್ತದೆ. ಫ್ರೆಂಚ್ ಡಾಕ್ಟರ್ ರೆಡ್‌ಮನ್ ಎಂಬ ವೈಜ್ಞಾನಿಕನು ಕಂಡು ಹಿಡಿದಿರುವನು.

ಉದಾಹರಣೆ:— 24 ಗ್ಯಾಲನ್‌ಗಳ ರಸಾಯನ ದ್ರಾವಣವುಳ್ಳ 10 ಪಾತ್ರೆಗಳು ಒಂದು ಪಟ್ಟಣದ ಸುತ್ತಲೂ 70 ಗಜಗಳ ಅಂತರಕ್ಕೆ ಇಡಲ್ಪಟ್ಟವು. ಅಂತರಿಕ್ಷದಲ್ಲಿ ಯುದ್ಧ ವಿಮಾನವೊಂದು ಈ ಪಟ್ಟಣದ ಹತ್ತಿರಕ್ಕೆ ಬಂದ ಕೂಡಲೆ ಡಾ|| ರೆಡ್‌ಮನ್‌ರವರು ಎಲೆಕ್ಟ್ರಿಕ್ ಸ್ವಿಚ್ಚನ್ನು ಹಾಕಿದರು ಅದರಿಂದ ಅರ್ಧ ಸೆಕೆಂಡಿನಲ್ಲಿ [illegible] ಗಜದ ವಿಸ್ತೀರ್ಣದಲ್ಲಿ 300 ಅಡಿ ಎತ್ತರಕ್ಕೆ ವಾತಾವರಣವನ್ನೆಲ್ಲಾ ಮುಚ್ಚಿಬಿಟ್ಟಿತು. ಈ ಯುಕ್ತಿಯು [illegible] ವರ್ಸಿಯಲ್ಲಿ ಕಂಡು ಹಿಡಿಯಲ್ಪಟ್ಟಿತು.

ಅಫಘಾನಿಸ್ಥಾನದ ದಂಗೆ

ವಾಯವ್ಯ ಪ್ರಾಂತ್ಯದಿಂದ ಬರುವ ಸಮಾಚಾರದಲ್ಲಿ, ಈ ತಿಂಗಳು ೪ ಮತ್ತು ೫ ನೇ ತಾರೀಖಿನಲ್ಲಿ ಜಲಾಲಾಬಾದಿನ ಸುತ್ತಮುತ್ತಲೂ ಹೋರಾಟಗಳು ನಡೆಯಿತೆಂದೂ, ಅಫಘನ್ ಏರೋಪ್ಲೇನುಗಳು ಶಿನ್‌ವಾರಿ ಹಳ್ಳಿಯ ಮೇಲೆ ಬಾಂಬುಗಳನ್ನು ಹಾಕಿದವೆಂದೂ, ಅದರಿಂದ ಕಾಟ್‌ಡರಾ ಎಂಬ ಸ್ಥಳದಲ್ಲಿ ೧೫೫ ಜನರು ಸತ್ತರೆಂದೂ ತಿಳಿಸುತ್ತದೆ. ಕಾಮ ಎಂಬ ಸ್ಥಳದಲ್ಲಿ ಅಫಘನ್ ಮಂತ್ರಿಗಳಿರುವರು. ಮಹಮ್ಮಂಡಿ ಜನರ ವರ್ತನವು ಹೇಗಾಗುವುದೋ ತಿಳಿಯುವಹಾಗಿಲ್ಲ. ಚಾಕನೂರ್ ಮುಲ್ಲಾರವರೂ, ಅಫಘನ್ ಸರಕಾರದವರೊಡನೆ ಇದ್ದಾರೆ. ಜಲಾಲಾಬಾದಿನ ರಕ್ಷೆಯು ಬಲಪಡಿಸಲ್ಪಟ್ಟಿದೆ. ಶಿನ್‌ವಾರಿ ದಂಗೆ ಕೋರರು ಜಲಾಲಾಬಾದಿನ ಗೋಡೆಗಳನ್ನು ಹಾಳು ಮಾಡಲು ಪ್ರಯತ್ನಿಸಿದರು. ಆದರೆ ಅವರುಗಳು ಮೀರ್ ಜಮಾನ್ ಖಾನರಿಂದ ಎದುರಿಸಲ್ಪಟ್ಟರು. ಈ ಗಲಭೆಯಲ್ಲಿ ಮೀರ್ ಜಮಾನ್ ಖಾನರ ಮಗನು ಹಿಡಿಯಲ್ಪಟ್ಟು ಕೊಲ್ಲಲ್ಪಟ್ಟನು. ಶಿನ್‌ವಾರಿ ಜನರು ಗಂಡಮಾಕ್‌ಬಳಿ ಕಾಬೂಲಿನ ರಸ್ತೆಯನ್ನು ಬಂದು ಮಾಡಿ, ಸೈನ್ಯದವರು ಹೋಗದಂತೆ ಅಡ್ಡಿ ಪಡಿಸಿದ್ದಾರೆ.

TAI NADU

11—12—1928

ಬೆಂಗಳೂರು ಗಲಭೆಗಳ ಮುಖದ್ದಮೆಗಳು

ಜುಲೈ 30 ನೇ ತಾರೀಖಿನಲ್ಲಿ ವಾಸ್ತವ್ಯವಾಗಿ ನಡೆದ ಗಲಭೆಗಳಿಗಿಂತಲೂ ಈಗ ಬೆಂಗಳೂರಿನಲ್ಲಿ ನಡೆಯುತ್ತಿರುವ ಮುಕದ್ದಮೆಗಳು ಹೆಚ್ಚು ಕೋಲಾಹಲವನ್ನುಂಟುಮಾಡಿರುವವು. ಮೊಕದ್ದಮೆಗಳು ಒಂದಲ್ಲ ಎರಡಲ್ಲ ಅನೇಕ. ಎಲ್ಲಕ್ಕಿಂತಲೂ ಮೊದಲನೆಯದು ಮ|| ಸುಬ್ರಹ್ಮಣ್ಯಂ, ತಿವಾರಿ, ಭೀಮರಾವ್ ಇವರುಗಳ ಮೇಲೆ ಹಾಕಿರುವ ಜಾಮೀನಿನ ಮುಕದ್ದಮೆ. ಮ್ಯಾಜಿಸ್ಟ್ರೇಟರು ಈ ಮುಖಂಡರನ್ನು ಕೇಳಿದ್ದ ನಾಲ್ಕು ತಿಂಗಳ ಜಾಮೀನು. ಈಗ ನಾಲ್ಕುತಿಂಗಳ ಮೇಲಾಯಿತು. ಇನ್ನೂ ಮೊಕದ್ದಮೆಯು ಪೂರ್ತಿಯಾಗುವ ಚಿಹ್ನೆಗಳೇ ಕಾಣುವುದಿಲ್ಲ. ಪ್ರಾಸಿಕ್ಯೂಷನ್ ಕಡೆಯ ಸಾಕ್ಷಿಗಳಾದ ಅಬ್ಬಾಸ್ ಖಾನ್ ರವರು ಹೇಳಿದ ಪಿತೂರಿ ಕಥೆ ಜೇನು ಇನ್ನೂ ಮುಗಿದಿಲ್ಲ. ಇವರನ್ನು ಪಾಟಿ ಸವಾಲು ಮಾಡಲು ಅವಕಾಶ ಕೊಡಲಿಲ್ಲವೆಂದು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಮುಕದ್ದಮೆಯು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ವರ್ಗಾಯಿಸಲ್ಪಟ್ಟಿತು. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಹತ್ತಿರ ಇವರು ಹೇಳಿದ್ದ ಹೇಳಿಕೆಯನ್ನು ತರಿಸುವುದಕ್ಕೆ ಚೀಫ್ ಕೋರ್ಟನ್ನು ಹತ್ತಬೇಕಾಯಿತು. ಆ ಹೇಳಿಕೆಯು ಬಂದಮೇಲೆ ಪಿತೂರಿ ಸಂಬಂಧವಾಗಿ ಪಾಟೀ ಸವಾಲನ್ನು ಮಾಡಬಹುದೋ ಇಲ್ಲವೋ ಎಂಬುದನ್ನು ನಿರ್ಧರಪಡಿಸುವುದಕ್ಕೆ ಎರಡನೆಸಾರಿ ಚೀಫ್ ಕೋರ್ಟನ್ನು ಹತ್ತಿ, ಫುಲ್‌ಬೆಂಚಿನಿಂದ ಆಗಬಹುದು ಎಂಬ ಜವಾಬನ್ನು ತರಬೇಕಾಯಿತು. ಈಗಲಾದರೂ, ಮುಕದ್ದಮೆಯು ಕೊನೆಗಾಣಲಿ ಎಂದರೆ, ಸಾಕ್ಷಿ ಜೇನು ಹಾಜರಿಲ್ಲ. ಒಂದು ದಿವಸ ಕೊಟ್ಟೀಸೋಣ, ಮತ್ತೊಂದು ದಿವಸ, ತುರ್ತಿನ ಕೆಲಸದಮೇಲೆ ಮದರಾಸಿಗೆ ಪ್ರಯಾಣ, ಈ ರೀತಿಯಾಗಿ ಈ ಮೊಕದ್ದಮೆಯು ಇನ್ನು ಎಷ್ಟು ದಿವಸ ಎಳೆಯುವುದೋ ಗೊತ್ತಿಲ್ಲ. ಅಥವಾ ಈ ಮಧ್ಯೆಯೆ, ಸರಕಾರದವರು ಈ ಕೇಸನ್ನು ವಾಪ್ಸು ತೆಗೆದುಕೊಳ್ಳುವರೋ ಏನೋ ! ಅಪರಾಧಿಗಳನ್ನು ಇಷ್ಟು ದಿವಸ ಕಾಡಿಸಿ, ಈಗ ಮುಕದ್ದಮೆಯನ್ನು ವಾಪ್ಸು ತೆಗೆದುಕೊಳ್ಳುವದೆಂದರೆ ಅದಕ್ಕಿಂತಲೂ ಅನ್ಯಾಯ ವಾದುದು ಯಾವುದೂ ಇಲ್ಲ. ಮಿ|| ಎಲ್. ಎಸ್. ರಾಜೂರವರು ಕೋರ್ಟಿನಲ್ಲಿ ವಾದಿಸಿದಾಗಲೇ ಹೇಳಿದಂತೆ, The accused want an honourbale discharge! ಅಂದರೆ ಅಪರಾಧಿಗಳಿಗೆ ಮರ್ಯಾದೆಯಿಂದ ಖುಲಾಸೆಯಾಗಬೇಕು. ನೋಡೋಣ ಈ ಮುಕದ್ದಮೆಯು ಹೇಗೆ ಕೊನೆಗಾಣುತ್ತದೆಯೋ !

ಇನ್ನು ಎರಡು ದೊಡ್ಡ ಮೊಕದ್ದಮೆಗಳು ಜುಲೈ 30 ನೇ ತಾ|| ನ ದಿವಸ ದೊಂಬಿ ನಡೆಸಿದ್ದಕ್ಕಾಗಿ, 22 ಮುಸಲ್ಮಾನರ ಮೇಲೆಯೂ, 14 ಹಿಂದುಗಳ ಮೇಲೆಯೂ ನಡೆಯುತ್ತಿರುವ ಮೊಕದ್ದಮೆಗಳು. ಇದಲ್ಲದೆ, ಮ|| ಸೀತಾರಾಮಶಾಸ್ತ್ರಿಗಳು, ಸರ್ವಾಭಟ್ಟರು, ಕದ್ದಮೆಗಳು. ಸರಕಾರದವರು ಹಾಕಿರುವ ಈ ಮೊಕದ್ದಮೆಗಳಲ್ಲದೆ, ಖಾಸಗಿ ಜನಗಳು ಮಾನನಷ್ಟಕ್ಕಾಗಿ ಹಾಕಿರುವ ಮುಕದ್ದಮೆಗಳು ಬೇರೆ. ಮ|| ಗಳಾದ ಡಿ. ರಾಮರಾಯರೂ, ವೀರಕೇಸರಿ ಸಂಪಾದಕರಾದ ಸೀತಾರಾಮ ಶಾಸ್ತ್ರಿಗಳವರೂ, ಬೇರೆ ಬೇರೆಯಾಗಿ ಅಬ್ಬಾಸ್ ಖಾನರ ಮೇಲೆ ಹಾಕಿರುವ ಮಾನನಷ್ಟದ ಮುಕದ್ದಮೆಗಳು. ಮಿ|| ಎಲ್ ಎಸ್ ರಾಜೂರವರು, ಮ|| ಬಿ. ನಾಗಪ್ಪನವರ ಮೇಲೆ ಮಾನನಷ್ಟಕ್ಕಾಗಿ ಹಾಕಿರುವ ಮೊಕದ್ದಮೆ. ಮ|| ಎಚ್. ವೈ. ಪಿಳ್ಳೆಯವರು ಸ್ಟಾರ್ ಪತ್ರಿಕೆಯ ಮೇಲೆ ಹಾಕಿರುವ ಮಾನನಷ್ಟದ ಮುಕದ್ದಮೆ ಅಲ್ಲದೆ, ಬಳೇ ಪೇಟೆ ಪ್ರಚಾರದ ಬೋರ್ಡಿನ ಸಂಬಂಧವಾಗಿ ಜಿ. ಭೀಮರಾಯರಮೇಲೂ, ಪೋಲೀಸ್ ಇನ್‌ಸ್ಪೆಕ್ಟರು ಮರಿಯಪ್ಪನವರನ್ನು ಸರಕಾರೀ ಕೆಲಸದಲ್ಲಿ ಅಡ್ಡಿ ಪಡಿಸಿದರೆಂದು ಎ. ಎಸ್. ಸಂಜೀವರಾಯರ ಮೇಲೆಯೂ ಹಾಕಿರುವ ಮುಕದ್ದಮೆಗಳು ಬೇರೆ ಇವೆ.

ಅನೇಕರು ಏಕ ಕಾಲದಲ್ಲಿ ಇಷ್ಟು ಮುಕದ್ದಮೆಗಳನ್ನು ನೋಡಿ ಬಹಳ ಬೇಜಾರಾಗಿ ಈ ಮುಕದ್ದಮೆಗಳನ್ನು ವಾಪಸು ತೆಗೆದು ಕೊಳ್ಳಬೇಕೆಂದು ಹೇಳಲಾರಂಭಿಸಿದ್ದಾರೆ. ಹೀಗೆ ಹೇಳುವುದು ಸರಿಯಿಲ್ಲ. ಯಾರೂ ಹೆದರಬೇಕಾಗಿಲ್ಲ. ನಮಗೆ ಇರುವ ಬಲವೆಲ್ಲವೂ ಕಾನೂನಿನ ಮೇಲೆಯೇ. ನ್ಯಾಯಾಸ್ಥಾನಗಳಲ್ಲಿರುವ ನ್ಯಾಯಾಧಿಪತಿಗಳು ನ್ಯಾಯವನ್ನೇ ಮಾಡುವರೆಂಬ ಭರವಸೆಯು ಅನೇಕರಿಗೆ ಇರುವುದು. ಅಲ್ಲದೆ ನಮ್ಮ ಲಾಯರುಗಳು ಬಹು ದೇಶಾಭಿಮಾನದಿಂದಲೂ, ಸ್ವಾರ್ಥತ್ಯಾಗದಿಂದಲೂ ನ್ಯಾಯಸಂರಕ್ಷಣೆಯಲ್ಲಿ ತೊಡಗಿರುವರು. ಅನ್ಯಾಯವಾದವರಿಗೆ ನ್ಯಾಯವು ದೊರೆಯುವಂತೆ ನಾವೆಲ್ಲರೂ ಪ್ರಯತ್ನ ಮಾಡಬೇಕು. ಈಗ ನ್ಯಾಯ ಪಾಶಕ್ಕೆ ಶಿಕ್ಕದೇ ಇದ್ದವರನ್ನೂ ನ್ಯಾಯಪಾಶಕ್ಕೆ ಗುರಿಮಾಡಬೇಕು. ಬೇಜಾರನ್ನು ಪಡಬಾರದು. ಯಾರಿಗೂ ಯಾರ ದಯೆಯೂ ಬೇಕಾಗಿಲ್ಲ. ಅಪರಾಧಿಗಳಿಗೆ ಅವರ ಅಪರಾಧಕ್ಕೆ ಅನುಗುಣವಾಗಿ ಶಿಕ್ಷೆಯಾಗಲೇಬೇಕು. ನಿರಪರಾಧಿಗಳಾದವರಿಗೆ ನಿರ್ದೋಷಿಗಳೆಂದು ಬಿಡುಗಡೆಯಾಗಬೇಕು. ಈ ಮಧ್ಯೆ ಆಗುತ್ತಿರುವ ವಿಚಾರಣೆಗೆ ಅಡ್ಡಿ ಬರುವವರು ನ್ಯಾಯಕ್ಕೆ ವಿಘಾತ ಮಾಡಿದಂತಾಗುತ್ತದೆ.

ಈ ಮುಕದ್ದಮೆಗಳಿಂದ ಹಿಂದುಗಳಲ್ಲೂ ಮಹಮದೀಯರಲ್ಲೂ ವೈಮನಸ್ಯವು ಹೆಚ್ಚುವುದೆಂದು ಅನೇಕರು ಹೇಳತೊಡಗಿರುವರು. ಈ ರೀತಿಯಾಗಿ ಹೇಳುವುದು ಬರಿಯ ಭ್ರಾಂತಿ. ಇದು ಹಿಂದೂ ಮಹಮದೀಯ ಜಗಳವೆಂದು ನಾವು ಭಾವಿಸಬಾರದು. ಪೋಕರಿಗಳು ಪುಂಡರೂ ಯಾರೇ ಆಗಲಿ ಅವರಿಗೆ ಶಿಕ್ಷೆಯಾಗಬೇಕು. ಕಾನೂನಿನ ಮುಂದೆ ಜಾತಿಯ ಪ್ರಶ್ನೆಯನ್ನು ತರಬಾರದು. ಪುಂಡರಿಗೆ ಹೆದರಿ ಕಾನೂನನ್ನು ಜಾರಿಗೆ ತರದಿದ್ದರೆ ನಮ್ಮ ಸಂಸ್ಥಾನಕ್ಕೆ ಬಹಳ ಅಪಯಶಸ್ಸು ಬರುವುದು. ಈಗಲೇ ಕೆಲವರನ್ನು. ಜವಾಬ್ದಾರರನ್ನು ವಿಚಾರಣೆಗೆ ಗುರಿಮಾಡಲಿಲ್ಲವೆಂದು ಜನಗಳಿಗೆ ಸರಕಾರದಲ್ಲಿ ವಿಶ್ವಾಸವು ಕಡಿಮೆಯಾಗಿರುವುದು ಇನ್ನೂ ಮುಕದ್ದಮೆಗಳನ್ನೆಲ್ಲಾ ವಾಪಸು ತೆಗೆದುಕೊಂಡರೆ ಯಾರೋ ಕೆಲವರನ್ನು ಉಳಿಸುವುದಕ್ಕಾಗಿ ನ್ಯಾಯ ವ್ಯಭಿಚಾರವನ್ನು ಮಾಡಿದರೆಂದು ಸರಕಾರಕ್ಕೆ ಎಲ್ಲಾ ಕಾಲಕ್ಕೂ ಅಪಯಶಸ್ಸು ಬರುವುದು. ಈ ವ್ಯಭಿಚಾರಕ್ಕೆ ಪ್ರೋ

ಬೆಂಗಳೂರು ಸುದ್ದಿ

(ತಂತೀ ಮುಖಾಂತರ)

ಜಾಮೀನಿನ ಮುಕದ್ದಮೆ ವಾಪಸು ತೆಗೆದು ಕೊಳ್ಳುವರು

ಪಿತೂರಿ ಸಂಬಂಧದ ಕಾಗದ ಪತ್ರಗಳ ಪತ್ತೆಯಿಲ್ಲವೆಂದು ಖಾನರು ಹೇಳಿದರು.

ಬೆಂಗಳೂರು ತಾ|| 10— ಈ ದಿನ ಬೆಂಗಳೂರು ಜಾಮೀನು ಮುಕದ್ದಮೆಯು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತೆಗೆದುಕೊಳ್ಳಲ್ಪಟ್ಟಿತು. ಕೋರ್ಟಿನ ತುಂಬಾ ಪ್ರೇಕ್ಷಕರು ತಂಬಿದ್ದರು. ಅಬ್ಬಾಸ್ ಖಾನರು ಹಾಜರಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರಾದ ಮಿ|| ವಿಜಯದೇವರವರು 249 ನೇ ಸೆಕ್ಷನ್ನಿನ ಪ್ರಕಾರ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳುವುದಾಗಿ ಅರ್ಜಿಯನ್ನು ದಾಖಲ್ ಮಾಡಿದರು. 249 ನೇ ಸೆಕ್ಷನ್ ಈ ವಿಷಯಕ್ಕೆ ಅನ್ವಯಿಸುವುದಿಲ್ಲವೆಂದೂ ಈ ಅರ್ಜಿಯು ದುರುದ್ದೇಶದಿಂದ ಕೂಡಿರುವ ಅಬ್ಬಾಸ್ ಖಾನರ ತಲೆಯನ್ನು ಉಳಿಸುವುದಕ್ಕಾಗಿ ಹಾಕಲ್ಪಟ್ಟಿರುವುದೆಂದೂ ಆದ್ದರಿಂದ ಅಬ್ಬಾಸ್ ಖಾನರನ್ನು ಪಾಟೀ ಸವಾಲ್ ಮಾಡುವ ತನಕ ಮುಕದ್ದಮೆಯನ್ನು ವಜಾ ಮಾಡಕೂಡದೆಂದೂ ಮಿ|| ಎಲ್ ಎಸ್ ರಾಜೂರವರು ವಾದಿಸಿದರು. ಯಾವುದಾದರೂ ಸೆಕ್ಷನ್ನಿನ ಪ್ರಕಾರ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ವಜಾ ಮಾಡಬಹುದೆಂದು ಪಬ್ಲಿಕ್ ಪ್ರಾಸಿಕ್ಯೂಟರವರು ಆಕ್ಷೇಪಿಸಿದರು. ಮ್ಯಾಜಿಸ್ಟ್ರೇಟರು 17 ನೇ ತಾರೀಖು ತೀರ್ಮಾನ ಹೇಳುವುದಾಗಿ ತಿಳಿಸಿರುತ್ತಾರೆ.

ಪಿತೂರಿಗೆ ಸಂಬಂಧವಾದ ಕಾಗದಪತ್ರಗಳೆಲ್ಲವನ್ನೂ ಹಾಜರು ಪಡಿಸಬೇಕೆಂದು ಅಬ್ಬಾಸ್ ಖಾನರಿಗೆ ಕೋರ್ಟಿನವರು ಹೇಳಲು, ಆ ಕಾಗದಪತ್ರಗಳೆಲ್ಲವೂ ಎಲ್ಲಿಯೋ ಕೈತಪ್ಪಿಹೋಗಿರುವುದಾಗಿಯೂ ಅದನ್ನು ಹುಡುಕಿ ನೋಡುವದಾಗಿಯೂ ಖಾನರು ತಿಳಿಸಿದರು.

ಸ್ಟಾರ್ ಪತ್ರಿಕೆಗೆ ಬಹಿಷ್ಕಾರ

ರಾಜಧಾನಿಯ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಸ್ಟಾರ್ ಪತ್ರಿಕೆಯು ವರ್ಣವೈಷಮ್ಯವನ್ನೂ ಮತದ್ವೇಷವನ್ನೂ ಹೆಚ್ಚಿಸುವ ಬರವಣಿಗೆಯಲ್ಲಿ ಆಸಕ್ತಿಯನ್ನು ತೋರಿಸುತ್ತಿರುವುದೆಂದೂ ಇದು ಮುಂದಿನ ಜನಾಂಗವಾದ ವಿದ್ಯಾರ್ಥಿಗಳ ಅಭಿವೃದ್ಧಿಗೆ ಬಹಳ ಬಾ ಹಾಸಿಕರವಾದುದೆಂದೂ, ಆದ್ದರಿಂದ ಯೂನಿಯನ್ನಿಗೆ ಇನ್ನು ಮೇಲೆ ಸ್ಟಾರ್ ಪತ್ರಿಕೆಯನ್ನು ತರಿಸಬೇಕಾದ ಅವಶ್ಯಕತೆಯಿಲ್ಲವೆಂದೂ ಹೇಳಿ ಆ ಪತ್ರಿಕೆಗೆ ಚಂದಾ ಕೊಡುವುದನ್ನು ನಿಲ್ಲಿಸಿ ಬಿಟ್ಟಿರುವುದಾಗಿ ತಿಳಿದುಬರುತ್ತೇ.ವೆ

ದಿವಾನರ ಕ್ಷಮಾಪಣೆ.

ಕಳೆದ ಪ್ರತಿನಿಧಿ ಸಭೆಯಲ್ಲಿ ದಿವಾನರರು. ಸರ್ ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ನಾವು ಒಪ್ಪುವುದಿಲ್ಲ ಎಂಬುದಾಗಿ ಹೇಳಿದ ವಿಷಯದಲ್ಲಿ ತಮ್ಮ ಸಂತಾಪವನ್ನು ಸೂಚಿಸಿ ಸರ್ ವಿಶ್ವೇಶ್ವರಯ್ಯನವರಿಗೆ ಕ್ಷಮಾಪಣಾಪತ್ರವನ್ನು ಬರೆದಿರುವುದಾಗಿ ತಿಳಿದುಬಂದಿದೆ.

Regd No. M. 2322 ‖ ವಂದೇಮಾತರಂ ‖ [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { [illegible] / ಪರಸ್ಥಳಕ್ಕೆ [illegible]

ಸಂಪುಟ [೧ ಬುಧವಾರ ೧೨ ಡಿಸೆಂಬರ್ ೧೯೨೮ [ಸಂಚಿಕೆ ೬೪

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1. N. P. Venkatappa & Co. Excelsior Type-writing Institute, Balepet, Bangalore City.
2. Koppada Ramakrishniah Agent Hassan
3. Siddiah, Sri Nanjundeswara Bank Ltd Nanjangud.
4. M. N. S & Sons, Lansdowne Buildin Mysore.
5. Subba Pundit & Co, Lakshmivilas
6. Friends' Union, Mysore.
7. Sweet Mart, Lansdowne dBuilings, Mysore.
8. H Subba Rao C/o B Gowda & Sons Sakaleshpur
9. H Naganniah News Agent Chikmagalur
10. V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R Ramaiya. at Sri Rama Press, D. Subbiah Road, Mysore.

ಬೆಂಗಳೂರು ಸುದ್ದಿ

(ತಂತೀ ಮುಖಾಂತರ)

ಮಹಾಜನರ ಅಸಮಾಧಾನ.

ನೀಲಗಿರಿ ಸಂಜೀವಯ್ಯನವರ ಮೇಲೆಯೂ ಮೊಕದ್ದಮೆ

ಬೆಂಗಳೂರು—ತಾ|| 11—ಬೆಂಗಳೂರು ಜಾಮೀನು ಮೊಖದ್ದಮೆಯನ್ನು ವಾಪಸು ತೆಗೆದುಕೊಳ್ಳುವ ವಿಷಯದಲ್ಲಿ ಮಹಾಜನರಿಗೆ ಬಹಳ ಅಸಮಾಧಾನ ವುಂಟಾಗಿದೆ. ಅದು ಬರೀ ಅಬ್ಬಾಸ್ ಖಾನರನ್ನು ರಕ್ಷಿಸುವುದಕ್ಕೆ ಮಾತ್ರ ಹೂಡಿದ ಏರ್ಪಾಡೆಂದು ಜನರು ಭಾವಿಸಿರುತ್ತಾರೆ. ಇದರಿಂದ ಸರ್ಕಾರದ ಗೌರವಕ್ಕೆ ಬಹಳ ಚ್ಯುತಿಯುಂಟಾಗಿದೆ.

ಮ|| ಎಲ್. ಎಸ್. ರಾಜುರವರು ಅಬ್ಬಾಸ್‌ಖಾನರ ಮೇಲೆ ಮಾಡಿರುವ ಮಾನನಷ್ಟದ ಮೊಕದ್ದಮೆಯನ್ನು ಜನವರಿ ಐದನೇ, ತಾರೀಖಿಗೆ ಹಾಕಲ್ಪಟ್ಟಿದೆ.

ವಿಶ್ವೇಶ್ವರಯ್ಯನವರ ಸಮಿತಿಯಲ್ಲಿ ಪರದೆಯೊಳಗೆ ಕೊಟ್ಟ ಹೇಳಿಕೆಗಳನ್ನು ಮಹಾಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವುದಿಲ್ಲವೆಂದು ಸರ್ಕಾರದವರು ತಿಳಿಯಪಡಿಸಿರುತ್ತಾರೆ.

ಮ|| ಎಂ. ಪಿ ಸೋಮ ಶೇಖರರಾಯರವರು ಮ|| ನೀಲಗಿರಿ ಸಂಜೀವಯ್ಯನವರ ಮೇಲೊಂದು ಮಾನನಷ್ಟದ ಮೊಕದ್ದಮೆ ಮಾಡಿರುತ್ತಾರೆ. ಮ|| ಸಂಜೀವಯ್ಯನವರು ರಾಯರ ವಿಚಾರದದ ಅವರು ಸರ್ಕಾರಕ್ಕೆ ವಿರುದ್ಧವಾಗಿ ಪಿತೂರಿ ನಡೆಸುತ್ತಿರುವರೆಂದೂ, ಮೈಸೂರು ರಾಜ್ಯ ಭಾರದ ವಿಷಯದಲ್ಲಿ ವೈಸರಾಯರಿಗೆ ತಂತೀ ಕೊಟ್ಟರೆಂದೂ ಹೇಳಿದ್ದೇ ಇದಕ್ಕೆ ಕಾರಣ.

ವಿಶ್ವೇಶ್ವರಯ್ಯ ಸಮಿತಿಯ ವರದಿ ವಿಷಯದಲ್ಲಿ ನಾನಾವಿಧವಾಗಿ ಅಭಿಪ್ರಾಯಗಳು ಹೊರಡುತ್ತಿವೆ. ವರದಿಯನ್ನು ಸಂಪೂರ್ಣವಾಗಿ ಪ್ರಕಟಿಸ ಬೇಕೆಂದು ಎಲ್ಲರೂ ಅಪೇಕ್ಷಿಸುತ್ತಿದ್ದಾರೆ.

ಇಂಜನಿಯರಿಂಗ್ ವಿದ್ಯಾರ್ಥಿಗಳು.

ಮದರಾಸ್ ಗೌರ್ನಮೆಂಟಿನವರು ಬೆಂಗಳೂರು ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ತಮ್ಮ ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನಲ್ಲಿ ತಯಾರಾದ ವಿದ್ಯಾರ್ಥಿಗಳಿಗೆ ಸಮಾನರೆಂದು ಅಂಗೀಕರಿಸಿರುತ್ತಾರೆ. ಇದಲ್ಲದೆ ಬೆಂಗಳೂರು ಇಂಜನೀಯರಿಂಗ್ ಸ್ಕೂಲಿನಲ್ಲಿ ವಿದ್ಯುಚ್ಛಕ್ತಿಯ ಡಿಪ್ಲೋಮಾ ಹೊಂದಿದವರನ್ನು ಬೊಂಬಾಯಿ ಸಂಸ್ಥಾನದ ವಿ. ಜೆ. ಟಿ. ಇನ್‌ಸ್ಟಿಟ್ಯೂಟಿನ ಎಲ್. ಇ. ಇ. ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸಮಾನರಾದವರೆಂದು ಒಪ್ಪಿಕೊಂಡಿರುತ್ತಾರೆ.

ಈಗಿನ ಕರ್ತವ್ಯವೇನು?

(ಲೇ: ಮ|| ಸರ್ವಾರ್ಥಭಟ್ಟರು.)

ಹಾಗಾದರೆ ಅದುವರೆಗೂ ನಾವು ಮಾಡಬೇಕಾದ ಕರ್ತವ್ಯವೇನೂ ಇಲ್ಲವೇ?—ಎಂಬುದು ಅನಂತರದ ಪ್ರಶ್ನೆ. ಹಾಗೆ ಏನೂ ಇಲ್ಲವೆಂದು ಧೈರ್ಯವಾಗಿ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ವಿಷಯವು ಮಹತ್ತರವಾದದು. ಯಾವನೋ ಒಬ್ಬ ವ್ಯಕ್ತಿಗೆ ಮಾತ್ರ ಉಂಟಾಗಬಹುದಾದ ಯಾವದೋ ಒಂದು ಸಣ್ಣ ದುಃಖದ ವಿಷಯವಾಗಿದ್ದರೆ ಕಾದು ನೋಡುವುದೇ ಮೇಲಾಗಿದ್ದಿತು. ಆದರೆ ಇದು ಅಂತಹುದಲ್ಲ. ಅರವತ್ತು ಲಕ್ಷ ಮಾನವ ಜೀವಿಗಳ ಪ್ರಾಣ, ಮಾನ, ಧನಗಳಿಗೆ ಸಂಬಂಧ ಪಟ್ಟದು. ಇಡೀ ಭರತಖಂಡದ ಪ್ರಜಾಕೋಟಿಯ ಜೀವನದ ಮೇಲೂ ಪರ್ಯವಸಾನವಾಗತಕ್ಕದ್ದು. ಹಾಗೂ ರೋಗವು ಸಾಮಾನ್ಯವಾದುದಾಗಿಯೂ ಕಾಣುವುದಿಲ್ಲ. ರಾಜ್ಯಾಂಗದ ಅತಿ ಮುಖ್ಯಭಾಗಗಳಲ್ಲಿಯೇ ಅವ್ಯವಸ್ಥೆಯು ತಲೆದೋರಿ ಶ್ರೀ ವಾಲ್ಮೀಕಿ ಮಹರ್ಷಿಗಳು ವರ್ಣಿಸಿರುವಂತೆ,

ಶ್ಲೋಕ|| ಅಹೋತಮ ಇವೇದಂಸ್ಯಾತ್ ನಪ್ರಜ್ಞಾಯೇತ ಕಿಂಚನ| ರಾಜಾಚೇತ್ ನಭವೇಲ್ಲೋಕೆ ವಿಭಜ್ ಸಾಧ್ವಸಾಧುನಿ||

—ಇದು ಸಾಧು, ಇದು ಅಸಧು; ಇದು ನ್ಯಾಯ್ಯ, ಇದು ಅನ್ಯಾಯ—ಎಂಬ ವಿಭಾಗವೇ, ಇಲ್ಲದೆ, ಎಲ್ಲೆಲ್ಲೂ ಕಗ್ಗತ್ತಲೆ ಕವಿದು, ಯಾರಿಗೂ ಏನೂ ತೋರದಂತೆ ಆಗಿಬಿಟ್ಟಿದೆ. ಯಾವ ಸಮಯಕ್ಕೆ ಏನೋ ಎಂದು ಪ್ರತಿಯೊಬ್ಬ ಪ್ರಜೆಯೂ ಒಂದೊಂದು ದಿನವನ್ನೂ ಒಂದೊಂದು ವರ್ಷವಾಗಿ ಕಳೆಯುತ್ತಿದ್ದಾನೆ. ಇಂತಹ ಸಮಯದಲ್ಲಿ ದೇಶದ ಪ್ರಜೆಗಳಿಗೆ ಕರ್ತವ್ಯವೇನೂ ಇಲ್ಲವೆಂದು ಹೇಳುವುದು ಸಾಹಸದ ಕೆಲಸ.

ಇನ್ನು ಅಂತಹ ಕರ್ತವ್ಯವಾವುದೆಂಬುದನ್ನು ನೋಡೋಣ. ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯವಾದ ಯಾವುದೇ ದೋಷವನ್ನಾಗಲೀ ನಿವಾರಣೆ ಮಾಡಿಕೊಳ್ಳಲು ಲೋಕದಲ್ಲಿ ಸತ್ಯಾಗ್ರಹಕ್ಕಿಂತಲೂ ಉತ್ತಮವಾದ ಔಷಧವು ಮತ್ತೊಂದು ಇರಲಾರದು. ಸತ್ಯಾಗ್ರಹದ ಸಾಧನೆಗೆ ಬೇಕಾದ ಅತ್ಯಾವಶ್ಯಕ ಸಾಮಗ್ರಿ ಯೆಂದರೆ ದೈವನಿರ್ಭರತೆ ಹಾಗೂ ಅಹಿಂಸಾವೃತ್ತಿ ಇವೆರಡೂ ಒಂದಕೊಂದು ಭಿನ್ನವಲ್ಲ. ಒಂದು ಕಾರಣ; ಮತ್ತೊಂದು ಕಾರ್ಯ. ಯಾರು ತಮ್ಮ ಯೋಗಕ್ಷೇಮವನ್ನು ಭಗವಂತನ ಕೈಯಲ್ಲಿ ಸಂಪೂರ್ಣವಾಗಿ ಸಮರ್ಪಿಸಲಾರರೋ, ಅಂತಹವರಿಗೆ ಅಹಿಂಸಾತತ್ವದ ಸ್ವರೂಪವು ಎಂದಿಗೂ ಸರಿಯಾಗಿ ಗೋಚರವಾಗುವುದಿಲ್ಲ. ಆದರೂ ಅದುವರೆಗೆ ಸಾಧನೆಯನ್ನು ಮಾತ್ರ ಬಿಡಬಾರದು. ಏಕೆಂದರೆ, ನಾವು ಕಾರ್ಯದಿಂದ ಕಾರಣವನ್ನು ಮುಟ್ಟಬೇಕಾಗಿದೆಯೇ ಹೊರತು, ನೇರವಾಗಿ ಕಾರಣವನ್ನೇ ಸೇರಿಬಿಡಲಾಗುವುದಿಲ್ಲ. ಆದುದರಿಂದ ಒಂದು ವೇಳೆ ಮನಸ್ಸಿನಿಂದ ಸಾಧ್ಯವಿಲ್ಲದಿದ್ದರೂ ವಾಕ್, ಕಾಯಗಳಿಂದಲಾದರೂ ನಾವು ಖಂಡಿತವಾಗಿ ಅಹಿಂಸಾವೃತ್ತಿಯನ್ನು ಅನುಸರಿಸಲೇ ಬೇಕು. ಇಷ್ಟು ಮಾತ್ರವೂ ಸಾಧ್ಯವಿಲ್ಲದಿದ್ದರೆ, ಸತ್ಯಾಗ್ರಹದ ತಂಟೆಗೆ ಯಾರೂ ಹೋಗಲೇಬಾರದು.

ಇನ್ನು ಸತ್ಯಾಗ್ರಹದ ಕ್ರಿಯಾ ಸ್ವರೂಪವೆಂದರೆ ಸತ್ವಪ್ರಚೋದನೆ. ಇದಕ್ಕೆ ಧ್ಯಾನವು ಅವಶ್ಯಕ. ಧ್ಯಾನಕ್ಕೆ ಪವಿತ್ರವಾದ ಧ್ಯೇಯವೂ, ಮೌನವೂ ಆಗತ್ಯವಾಗಿ ಬೇಕು. ಹಿಂದೆ ಹೇಳಿದಂತೆ ಅಹಿಂಸಾ ವೃತ್ತಿಯಿಂದ ತಮೋಗುಣವನ್ನೂ, ದೈವನಿರ್ಭರತೆಯಿಂದ ರಜೋಗುಣವನ್ನೂ ಹಿಂದಕ್ಕೆ ಮೆಟ್ಟಿ ಹಾಕಿದುದರಿಂದ ಚಿತ್ತವಿಕ್ಷೇಪವನ್ನು ತಡೆದ, ಸತ್ವಾಶ್ರಿತವಾದ ಮನಸ್ಸನ್ನು ಧ್ಯೇಯಾಕಾರವಾಗಿ ಪರಿಣಾಮಗೊಳಿಸಿದಾಗ ಆ ಧ್ಯೇಯವಾದ ವಸ್ತುವು ಯಾವುದೇ ಆಗಿರಲಿ, ಅದು ಯಾರ ಸ್ವಾಧೀನದಲ್ಲೇ ಇದ್ದಿರಲಿ, ಆ ವಸ್ತುವು ಆಕರ್ಷಣೆಗೆ ಒಳಪಟ್ಟು, ತನಗೆ ಆಶ್ರಯವಾಗಿರುವವರನ್ನು ಎಳೆದುಕೊಂಡು, ಮುಂದೆ ಬಂದು ನಿಲ್ಲುತ್ತದೆ. ಸೂರ್ಯನಿಗೆ ಸ್ವಯಂಪ್ರಕಾಶತ್ವ ಹಾಗೂ ಅಸ್ಯಪ್ರಾಣಿಗಳನ್ನು ಪ್ರಚೋದನಗೊಳಿಸುವುದೂ ಹೇಗೆ ಸ್ವಾಭಾವಿಕವೋ ಹಾಗೆಯೇ ಈ ಎರಡೂ ಕ್ರಿಯೆಗಳು ಸತ್ವಗುಣಕೂ ಸ್ವಾಭಾವಿಕವು. ಒಬ್ಬನಲ್ಲಿ ಸತ್ವಗುಣವು ವೃದ್ಧಿಯಾದಂತೆಲ್ಲಾ ಪ್ರಪಂಚವು ಅವನ ಚೋದನೆಗೆ ಒಳಪಟ್ಟು ಅವನ ಆಜ್ಞೆಗೆ ಬದ್ಧವಾಗುತ್ತದೆ. ಲೋಕದಲ್ಲಿ ಮಹತ್ಕಾರ್ಯಗಳನ್ನು ನೆರವೇರಿಸಿದ ಮಹನೀಯರೆಗುಟ್ಟಾದರೂ ಇದೇ. ಆದರೆ ಯಾರು ಸಂಪೂರ್ಣ ವಿರಕ್ತರೋ ಯಾರಿಗೆ ಮುಕ್ತಿಯೊಂದು ವಿನಾ ಮತ್ತೇನೂ ಬೇಕಾಗಿಲ್ಲವೋ ಅಂತಹವರು ತಮ್ಮಲ್ಲಿ ಬೆಳೆದು ನಿಬಂಧ ತವನ್ನು ಪ್ರಾಪಂಚಿಕವಾದ ಯಾವ ಧ್ಯೇಯದ ಕಡೆಗೂ ಬಿಡದೆ, ಅದರ ಯತ್ಕಿಂಚಿತ್ ಪ್ರಕಾಶವಾದರೂ ಹೊರಗೆ ಕಾಣದಂತೆ ಒಳಗೇ ಬಂಧಿಸಿ, ಭಗವಂತನ ಸಾಕ್ಷಾತ್ಕಾರಕ್ಕಾಗಿ ವಿನಿಯೋಗಿಸುತ್ತಿದ್ದರು. ನಮ್ಮ ಭರತಖಂಡದಲ್ಲಿ ಇಂತಹವರೇ ಹೆಚ್ಚು. ಸಾತ್ವಿಕ ತೇಜಸ್ಸನ್ನು ಪ್ರಾಪಂಚಿಕ ಧ್ಯೇಯಕ್ಕಾಗಿ ಉಪಯೋಗಿಸಬಾರದೆಂಬ ಒಂದು ಸಾಮಾನ್ಯವಾದ ನಿಯಮವೂ ಕೂಡ ಇತ್ತು; ಏಕೆಂದರೆ ಹಾಗೆ ಮಾಡುವುದು ಒಂದು ಅಲ್ಪವಸ್ತುವಿಗೆ ಹೆಚ್ಚು ಬೆಲೆಯನ್ನು ಕೊಟ್ಟಂತೆ ಎಂದು ತಿಳಿದಿದ್ದರು.

ಆದರೆ ಕಾಲವೇ ಬೇರೆ ಮನುಷ್ಯನ ನಿತ್ಯ ಜೀವನವು ಈಗಿನಷ್ಟು ಕಠಿಣವಾಗಿರಲಿಲ್ಲ. ಅಧಿಕಾರ ಸೂತ್ರಗಳು ಈಗಿನಂತೆ ಶುದ್ಧ ತಾಮಸಿಕರ ಕೈಯಲ್ಲಿ ಬಿದ್ದಿರಲಿಲ್ಲ. ಪ್ರಜೆಯೂ ಈಗಿನಷ್ಟು ಭೋಗಪರರಾಗಿರಲಿಲ್ಲ. ಎಲ್ಲರಲ್ಲಿಯೂ ಅಷ್ಟೋ ಇಷ್ಟೋ ಸತ್ವಗುಣದ ಪ್ರಕಾಶವು ಇದ್ದು ಒಬ್ಬರ ವಿಷಯದಲ್ಲೊಬ್ಬರು ನ್ಯಾಯ ಧರ್ಮಗಳನ್ನು ಮೀರದೆ ನಡೆಯುತ್ತಿದ್ದರು. ಹಾಗೂ ತಮ್ಮಲ್ಲಿರುವ ಸಾತ್ವಿಕ ತೇಜಸ್ಸನ್ನು ವೃದ್ಧಿಪಡಿಸಿಕೊಂಡು ತನ್ಮೂಲಕ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು [illegible]. ಮೇಲಾಗಿ [illegible] ಮಂತ್ರ [illegible] ಕ್ರಿಯೆಯ [illegible]. ಈ ಮೂಲಕ ತಮ್ಮ ಪ್ರಾಪಂಚಿಕ ಕಾರ್ಯಗಳನ್ನು ಸುಲಭವಾಗಿ ನೆರವೇರಿಸಿಕೊಳ್ಳುತ್ತಿದ್ದರು. ಆದುದರಿಂದ ಆ ಕಾಲದ ಜನರಿಗೆ ಇತರ ಸಾಧನೆಯೇ ಬೇರೆ, ಪರದ ಸಾಧನೆಯೇ ಬೇರೆ ಎಂಬುದು ಒಪ್ಪುತ್ತಿತ್ತು. ಅದರ ಇಹದ ಪರದ ಮೆಟ್ಟಲಾಗಿತ್ತೇ ಹೊರತು ಸ್ವತಂತ್ರವಾಗಿರಲಿಲ್ಲ.

TAI NADU

12—12—1928

ಬರಿಯ ಚಪಲ

ಬೆಂಗಳೂರು ಮುನ್ಸಿಪಾಲಿಟಿಯ ಮೀಟಿಂಗು 7 ನೇ ಶನಿವಾರ ಮಧ್ಯಾಹ್ನ ನಡೆಯಿತು. ಸರಕಾರಿ ಅಧ್ಯಕ್ಷರಾದ ಮ|| ಮಾಡಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಸುಮಾರು 25 ಸದಸ್ಯರು ಹಾಜರಿದ್ದರು. ಪ್ರಖ್ಯಾತರಾದ ಅಬ್ಬಾಸ್ ಖಾನರೂ ಬಂದಿದ್ದರು. ನಡೆದ ಚರ್ಚೆಯಲ್ಲಿ ಬಹಳ ಪ್ರಾಮುಖ್ಯವಾದ ಭಾಗವನ್ನು ತೆಗೆದುಕೊಂಡರು. ಸ್ವಂತ ಅಧ್ಯಕ್ಷನನ್ನು ಚುನಾಯಿಸುವ ಹಕ್ಕನ್ನು ಕಿತ್ತುಕೊಂಡು ಸರಕಾರದವರು ತಮ್ಮ ಅಧ್ಯಕ್ಷರನ್ನು ನೇಮಿಸಿದ್ದು ತಮಗೆ ಬಹಳ ಅಗೌರವವನ್ನುಂಟುಮಾಡಿದೆಯೆಂದೂ ಆ ಹಕ್ಕನ್ನು ಪುನಃ ತಮಗೆ ವಾಪ್ಸು ಕೊಡಬೇಕೆಂದೂ ಪ್ರಾರ್ಥಿಸುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲರುಗಳ ರಾಯಭಾರವು ದಿವಾನರ ಭೇಟಿಯನ್ನು ತೆಗೆದುಕೊಳ್ಳಬೇಕೆಂದು ಬಹುಮತದಿಂದ ತೀರ್ಮಾನವಾಯಿತು. ಈ ರಾಯಭಾರದ ವಿಷಯದಲ್ಲಿ ಅಬ್ಬಾಸ್ ಖಾನರು ತಟಸ್ಥರಾಗಿದ್ದರು. ಇನ್ನೊಂದು ಠರಾವೇನೆಂದರೆ ಈ ರಾಯಭಾರಕ್ಕೆ ಏನು ಜವಾಬು ಬರುವುದೆಂದು ತಿಳಿಯುವವರೆಗೂ ಮುಂದಿನ ಶನಿವಾರದವರೆಗೂ ಕೌನ್ಸಿಲ್ಲು ಮುಂದೆ ಹಾಕಲ್ಪಡಬೇಕೆಂದೂ ಬಹುಮತದಿಂದ ತೀರ್ಮಾನವಾಯಿತು. ಅಬ್ಬಾಸ್ ಖಾನರು ಇದನ್ನು ವಿರೋಧಿಸಿದರು. ರಾಯಭಾರಕ್ಕೆ ಉತ್ತರ ಬರುವವರೆಗೂ ಮುನ್ಸಿಪಲ್ ಕೌನ್ಸಿಲ್ಲಿನ ಕೆಲಸವನ್ನು ನಿಲ್ಲಿಸುವುದು ಸರಿಯಿಲ್ಲವೆಂದೂ ಇದು ಅಸಹಕಾರವಾಗುತ್ತದೆಂದೂ ಮುನ್ಸಿಪಾಲಿಟಿಯ ಕೆಲಸಗಳು ನಡೆಯದೆ ನಗರದ ನೈರ್ಮಲ್ಯವೂ ಆರೋಗ್ಯವೂ ಕೆಡುತ್ತದೆಂದೂ ಹೇಳಿದರು ಇದಕ್ಕೆ ಡಾ|| ಸಿ. ಬಿ. ರಾಮರಾಯರು ಬಹಳ ಪರಿಣಾಮಕಾರಿಯಾದ ಉತ್ತರವನ್ನು ಕೊಟ್ಟರು ಅವರು ಹೇಳಿದ್ದೇನೆಂದರೆ ಬೀದಿ ಮೊದಲಾದವುಗಳನ್ನು ಗುಡಿಸಿ ನಗರ ನೈರ್ಮಲ್ಯದ ಕೆಲಸವನ್ನು ಮಾಡುವವರು ಇಲ್ಲಿ ಬಂದು ವಿಚಾರ ಮಾಡಿ ಮಾತನಾಡುವವರಲ್ಲ. ಆ ಕೆಲಸವನ್ನು ಮಾಡುವವರು ಮುನ್ಸಿಪಲ್ ನೌಕರ ಮಾನೆಯರು. ಅವರು ತಮ್ಮ ಕೆಲಸವನ್ನು ಮಾಡಿಯೇ ಮಾಡುವರು. ಮುನ್ಸಿಪಲ್ ಕೌನ್ಸಿಲ್ಲಿನ ನಡವಳಿಕೆಗಳಿಗೂ ಅದಕ್ಕೂ ಸಂಬಂಧವಿಲ್ಲ. ಮುನ್ಸಿಪಲ್ ಆಡಳಿತದಲ್ಲಿ ಅಸಹಕಾರ ಉಂಟಾದರೆ ಅದಕ್ಕೆ ಸರಕಾರದವರೇ ಜವಾಬ್ದಾರರು. [illegible] ಕೆಲವು ಕಾಲ ಹಂಗಾಮಿಯಾಗಿ ಬೆಂಗಳೂರಿನಲ್ಲಿ [illegible] ಮುನ್ಸಿಪಲ್ ಕೌನ್ಸಿಲ್ಲಿನ ಹಕ್ಕನ್ನು ಕಳೆಯುವುದು ಎಲ್ಲಿಯ ನ್ಯಾಯ, ಇನ್ನು ಕೆಲವು ಕಾಲ ಕಮೀಷನರೇ ಇದ್ದಿದ್ದರೆ ಏನು ಮುಳುಗಿಹೋಗುತ್ತಿತ್ತು? ಮುನ್ಸಿಪಲ್ ಕೌನ್ಸಿಲರುಗಳು ರೇಟ್ ಪೇಯರುಗಳಿಗೆ ಜವಾಬ್ದಾರರು. ಕೌನ್ಸಿಲರುಗಳು ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಬೇಕು ಸರಕಾರೀ ಅಧ್ಯಕ್ಷರನ್ನು ನಮ್ಮ ಮೇಲೆ ಹಾಕಿರುವುದು ಶುದ್ಧ ಅವಮಾನ ಇದನ್ನು ಸಹಿಸಿ ನಾವು ಕೆಲಸ ಮಾಡಲು ಸಾಧ್ಯವಿಲ್ಲ. ದಿವಾನರು ಏನು ಜವಾಬನ್ನು ಕೊಡುವರೊ ನೋಡಿ ಅನಂತರ ನಾವು ಏನನ್ನು ಮಾಡಬೇಕೋ ಆಲೋಚಿಸುವೆವು.

ಡಾ|| ಸಿ. ಬಿ. ರಾಮರಾಯರು ಆತ್ಮ ಮರ್ಯಾದೆಯುಳ್ಳ ಕೌನ್ಸಿಲರುಗಳ ಅಭಿಪ್ರಾಯವನ್ನು ಚೆನ್ನಾಗಿ ಸ್ಪಷ್ಟಪಡಿಸಿರುವರು. ಇದರೊಳಗೊಂದು ಮಾತು. ಇವರುಗಳಿಗೆ ಸುಮ್ಮನೆ ಚಪಲ. ಈ ಹಕ್ಕನ್ನು ಕಿತ್ತುಕೊಂಡಿರುವುದು ದಿವಾನರಿಗೆ ಗೊತ್ತಿಲ್ಲವೆ? ಈ ಪೋರ್ಟ್ ಪೋಲಿಯೋವು ಅವರ ಹತ್ತಿರವೇ ಇಲ್ಲವೆ ಆದರೂ ಈ ರಾಯಭಾರದ ಚಪಲವು ಏಕೋ? ಆಗಲಿ ಅದೊಂದು ಮನಸ್ಸಿನ ದಾಕ್ಷ್ಯ. ಆ ಚಪಲವು ತೀರಲಿ. ಜವಾಬು ಏನು ಎಂಬುದನ್ನು ನಾವು ಈಗಲೇ ದಪ್ಪ ಅಕ್ಷರದಲ್ಲಿ ಬರೆಯಬಲ್ಲೆವು. ಇರಲಿ ಈಗ ಬೇಡ. ಒಂದು ವಾರ ತಾಸೆ, ಆಗಲಿ.

ವರ್ತಮಾನ ಸಂಗ್ರಹ

ಮಾಂಸ ತಿನ್ನುವ ಮರ.

ಪ್ರಾಣಿಗಳು ಸಸ್ಯಗಳನ್ನು ತಿಂದು ಬದುಕುತ್ತವಷ್ಟೆ ಮರಗಳು ಪ್ರಾಣಿಗಳನ್ನು ತಿನ್ನುತ್ತವೆಂದು ತಿಳಿದು ಬಂದಿದೆ. ದಕ್ಷಿಣಅಮೇರಿಕದ ಬ್ರಜೀಲ್ ದೇಶದಲ್ಲಿ ಒಂದು ಜಾತಿಯ ಮರವಿದೆ. ಅದು ಮೂರು ಅಡಿ ದಪ್ಪವಾಗಿ ೨೦ ಅಡಿ ಎತ್ತರವಾಗಿದೆ. ಅದರ ಬುಡದಲ್ಲಿ ಉದ್ದವಾದ ದೊಡ್ಡ ದೊಡ್ಡ ಎಲೆಗಳು ಒಂದಕ್ಕೊಂದು ಹೆಣೆದಂತೆ ಇರುತ್ತವೆ. ಈ ಮರದಿಂದ ಒಂದು ತೀಕ್ಷ್ಣ ಸುಗಂಧವು ಸೂಸುತ್ತಿರುತ್ತದೆ ಮುಂಗಗಳು ಇದಕ್ಕೆ ಮೋಹಿಸಿ ಬಂದು ಮರಕ್ಕೆ ಹತ್ತಿದ ಕೂಡಲೆ ಎಲೆಗಳೆಲ್ಲ ಬಂದು ಮುತ್ತಿ ಬಿಗಿದು ಹಿಡಿಯುತ್ತವೆ ಮೂರು ದಿನಗಳನಂತರ ಸಡಿಲು ಬಿಡುತ್ತವೆ. ಆಗ ಮುಂಗನ ಮೂಳೆಯು ಸ್ವಚ್ಛವಾಗಿ ತೊಳದಂತೆ ಅದರಲ್ಲಿ ಹೊಳೆಯುತ್ತಿರುತ್ತದೆ ಉಳಿದುದೆಲ್ಲ ಸ್ವಾಹಾ!

ದಿವಾನರ ಯೂರೋಪ್ ಸಂಚಾರ.

ಪ್ರಾಪಂಚಿಕ ವಿದ್ಯಮಾನಗಳಲ್ಲಿ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ನಮ್ಮ ದಿವಾನ್ ಸಾಹೇಬರವರು ಯೂರೋಪ್, ಅಮೇರಿಕಾ, ಜಪಾನ್ ಮೊದಲಾದ ದೇಶಗಳಲ್ಲಿ ಸಂಚಾರ ಮಾಡಿಕೊಂಡು ಬರುವ ಏರ್ಪಾಡು ಮಾಡುತ್ತಿರುವರೆಂದೂ ಇದು ನಿಶ್ಚಯವಾದ ಪಕ್ಷದಲ್ಲಿ ಮೊದಲನೇ ಕೌನ್ಸಿಲ್ ಮೆಂಬರಾದ ಮ|| ಎಂ. ಎನ್. ಕೃಷ್ಣರಾಯರವರು ಆಕ್ಟಿಂಗ್ ದಿವಾನ್‌ರಾಗುವರೆಂಬುದಾಗಿಯೂ ಫೆಡರೇಟೆಡ್ ಇಂಡಿಯಾ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುತ್ತದೆ.

ನಿವೃತ್ತಿ.

ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಹೆಡ್ ಪರಾಫರಾದ ಮ|| ಕೃಷ್ಣಾಚಾರ್‌ರವರು ರಿಟೈರ್ ಮಾಡಲ್ಪಟ್ಟಿರುವರು. ಮೈಸೂರು ತಾಲ್ಲೂಕು ಟ್ರೆಜರಿ ಮುಕದ್ದಮೆಯಲ್ಲಿ ಜಾಗರೂಕರಾಗಿರಲಿಲ್ಲವೆಂಬುದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ.

ಸನ್ಮಾನ

ಮೊನ್ನೆಯ ದಿವಸ ಸಾಯಂಕಾಲ ರಾಜಧಾನಿಯ ಮಹಾರಾಜಾ ಕಾಲೇಜಿನ ಹಾಸ್ಟೆಲ್ ವಿದ್ಯಾರ್ಥಿಗಳು ಆಸ್ಥಾನ ಸಂಗೀತ ವಿದ್ವಾಂಸರಾದ ವೇದಮೂರ್ತಿ ವಾಸುದೇವಾಚಾರ್ಯರವರನ್ನು ಬರಮಾಡಿಕೊಂಡು ಅವರಿಂದ ಕಛೇರಿ ನಡಿಸಿದ ನಂತರ ಅವರಿಗೆ 160 ರೂ ಪಾಯಿಗಳನ್ನು ಬಹುಮಾನವಾಗಿ ಕೊಟ್ಟು ಗೌರವಿಸಿದರೆಂದು ತಿಳಿಸಲು ಸಂತೋಷಿಸುತ್ತೇವೆ.

ಎನ್. ಎಸ್. ಸುಬ್ರಾಯರಿಗೆ ಸನ್ಮಾನ

ಮೈಸೂರು ಮಹಾರಾಜರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ಅನೇಕ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಕಾರಣಭೂತರಾದ ಮ|| ಎನ್. ಎಸ್. ಸುಬ್ಬರಾಯರವರ ಅವರ ಹಳೆಯ ವಿದ್ಯಾರ್ಥಿಗಳೆಲ್ಲರೂ ಸೇರಿ ಮುಂದಿನ ತಿಂಗಳಲ್ಲಿ ಒಂದು ಸನ್ಮಾನವನ್ನು ಮಾಡಬೇಕೆಂದು ಏರ್ಪಡಿಸಿರುವರು. ಅದಕ್ಕೆ ಮುನ್ಸಿಫರಾದ ಮ|| ಕೆ. ಬಸವರಾಜೆಅರಸಿನವರು ಮುಂದಾಳುಗಳಾಗಿಯೂ, ಇತರ ಅನೇಕ ಮಹನೀಯರುಗಳು ಸಹಾಯಕರಾಗಿಯೂ ಸೇರಿರುವರು. ಈ ಕಾರ್ಯಕ್ಕೆ ಸಹಾಯ ಮಾಡುವವರು ಮ|| ಬಸವರಾಜೆ ಅರಸಿನವರ ವಶಕ್ಕೆ ತಮ್ಮ ಚಂದಾ ಮೊಬಲಗನ್ನು ಪಾವತಿ ಮಾಡಬಹುದು,

ದಿವಾನರ ಕ್ಷಮಾಪಣೆ

ಹಿಂದಿನ ವಾರದ ಫೆಡರೇಟೆಡ್ ಇಂಡಿಯಾ ಎಂಬ ಮದರಾಸಿನ ವಾರಪತ್ರಿಕೆಯಲ್ಲಿ ಈ ರೀತಿಯಾದ ಲೇಖನವು ಪ್ರಕಟವಾಗಿರುವುದು.

ಕಳೆದ ಪ್ರ. ಪ್ರ. ಸಭೆಯಲ್ಲಿ ಶ್ರೀಮನ್ ಮಹಾರಾಜರವರಿಗೆ ಅರ್ಪಿಸಿದ ವಿಜ್ಞಾಪನ ಪತ್ರಿಕೆಗೆ ರುಜುಮಾಡಿ ಬರ್ತರಫ್ ಆದ ಉಪಾಧ್ಯಾಯರುಗಳ ವಿಷಯವಾಗಿ ಚರ್ಚೆನಡೆದಾಗ ದಿವಾನ್‌ರವರು ಬಾಯಿತಪ್ಪಿ (slip) ಸರ್. ಎಂ. ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ತಾವು ಬದ್ಧರಲ್ಲವೆಂದು ಹೇಳಿದರಷ್ಟೆ. ಶ್ರೀ ಮಹಾರಾಜರವರಿಂದಲೂ, ಸರಕಾರದಿಂದಲೂ ಪ್ರಾರ್ಥಿಸಲ್ಪಟ್ಟ ವಿಚಾರಣೆಯ ಕಮಿಟಿಗೆ ಅಧ್ಯಕ್ಷರಾದ ಸರ್. ಎಂ. ವಿಶ್ವೇಶ್ವರಯ್ಯನವರ ವಿಷಯವಾಗಿ ದಿವಾನರು ಈ ಮನೋಭಾವವನ್ನು ತೋರಿಸಿದ್ದಕ್ಕೆ ಅನೇಕರು ಆಶ್ಚರ್ಯಪಟ್ಟರು ಪ್ರ. ಪ್ರ. ಸಭೆಯಾದಕೂಡಲೆ ದಿವಾನರು ಸರ್. ಎಂ. ವಿಶ್ವೇಶ್ವರಯ್ಯನವರಿಗೆ ವಾಚಾ ಕ್ಷಮಾಪಣೆಯನ್ನು ಬೇಡಿದರೆಂದೂ, ವಿಶ್ವೇಶ್ವರಯ್ಯನವರು ಕ್ಷಮಾಪಣೆಯು ವಾಚಾ ಸಾಲದು. ಲಿಖಿತ ಮೂಲಕ ಬೇಕು ಎಂದು ಕೇಳಿದಮೇಲೆ ದಿವಾನರು ಹಾಗೆಯೇ ಬರೆದು ಕೊಟ್ಟರೆಂದೂ ಸಮಾಚಾರವು ಇರುವುದು.

Regd No. M. 2322 ‖ ವಂದೇಮಾತರಂ ‖ ಬಿಡಿ ಪ್ರತಿಗೆ ೬ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು‖

ಸಂಪಾದಕ: ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೫—೦—೦ ; ಪರಸ್ಥಳಕ್ಕೆ ೬-೦-೦

ಸಂಪುಟ [೧ ಗುರುವಾರ ೧೩ ಡಿಸೆಂಬರ್ ೧೯೨೮ [ಸಂಚಿಕೆ ೬೫

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ರಾಡ್ಜ್ ಮೈಸೂರು

Our Agents

Copies of Tai Nadu, Daily and Weekly areavailable for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.
2 Koppada Ramakrisbniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buil din Mysore.
5 Subba Pundit & Co, Lakshmivilas
6 Friends' Union, Mysore.
7 Sweet Mart, Lansdowne dBuilings, Mysore.
8 H Subba Rao C/o B Gowda & Sons Sakaleshpur
9 H Nagannıah News Agent Chikmagalur
10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore

TAI NADU
13—12—1928

ಗುರಿಯು ಅಳಿಯಿತು

(ಲೇ|| ಮ|| ಆನೇಕಲ್ ಸರ್ವಾಬಟ್ಟರು)

ಈಗಲೋ ಎಂದರೆ ವೇದ ಸುದ್ದಿಯೇ ಮರೆತು ಹೋಗಿರುವ ಕಾಲವಿದು. ಇನ್ನು ಅದರ ಸಾಧನವಾದ ಸಾತ್ವಿಕ ಭಾವದ ನೆನವು ಹೇಗೆ ಉಳಿಯಬೇಕು? ಇನ್ನು ತಾನೇ ತಾನಾಗಿ ಸ್ವತಂತ್ರವಾದುದರಿಂದ, ಹಿಂದೆ ಪರರಕ್ಕೆ ಅಧೀನವಾಗಿದ್ದಾಗ ಬೇಡವೆಂದರೂ ಸ್ನೇಹದಿಂದ ಜೀವಿಸುತ್ತಲಿದ್ದ ಸಾತ್ವಿಕ ತೇಜಸ್ಸಿನ ಪವಿತ್ರ ಪರಿಣಾಮದಿಂದ ಸಂಪೂರ್ಣ ದೂರವಾಗಿ ಹೋಗಿ, ಇಂದು ಇದ ಜೀವನವೆಂದರೆ ಕತ್ತಲೆಯ ಸುಗ್ಗಿಯಾಗಿದೆ. ಭಿನ್ನ ಭಿನ್ನ ಗುಣ ಕರ್ಮ ಸ್ವಭಾವಗಳ ಸಮನ್ವಯವೇ ಆಧಾರವಾದ ಜೀವನದ ಪವಿತ್ರ ಆದರ್ಶವೆಂಬುದು ಮರೆತು ಹೋಗಿ ಸ್ಪರ್ಧೆಯು ಅದರ ಸ್ಥಾನವನ್ನು ಆಕ್ರಮಿಸಿದೆ. ರಾಜಕೀಯ ಜೀವನದಲ್ಲಿ ಸತ್ಯ ಧರ್ಮಗಳಿದ್ದ ಸ್ಥಾನವನ್ನು ತಪ್ಪಿಹೋಗಿ ಅರ್ಥ, ಶಸ್ತ್ರಗಳು ಸ್ಥಾನಕ್ಕೆ ಬಂದಿವೆ. ಇನ್ನು ಧಾರ್ಮಿಕ ಜೀವನವೆಂಬ ಭಗವಂತನನ್ನು ಕಾಣುವ ಮಾರ್ಗವಲ್ಲ; ಸಂಖ್ಯಾಬಲವನ್ನು ಸೂಚಿಸುವ ಕುರುಹು! ಹೀಗೆ ಮಾನವ ಜೀವನದ ಬುಡಕಟ್ಟು ಕದಲಿ ಹೋದಮೇಲೆ ಸುಖ ಶಾಂತಿಗಳು ಎಲ್ಲಿಂದ ಬರಬೇಕು? ಯಾವಕಡೆಗೆ ನೋಡಿದರೂ ಭೋಗದ ಅಮಲು ತಲೆಗೇರಿ ಸತ್ಯಾಸತ್ಯ ವಿಚಾರವು ಮಾಯವಾಗಿಹೋಗಿದೆ. ಅಸಮಾಧಾನ ಅಶಾಂತಿಗಳಿಂದ ಪ್ರತಿಯೊಬ್ಬನೂ ಹಿಂಸೆಯಲ್ಲಿ ಪ್ರವೃತ್ತನಾಗುತ್ತಿದ್ದಾನೆ. ಒಟ್ಟಿಗೆ ನೋಡಿದರೆ ಇಡೀ ಪ್ರಪಂಚವೇ ಶ್ರೀ ವಾಲ್ಮೀಕಿ ಮಹರ್ಷಿಗಳು ವರ್ಣಿಸಿರುವ ಅರಾಜಕತ್ವದ ಹಾಗೆ ನಡೆಯುತ್ತಿದೆ.

ಶ್ಲೋಕ, ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ಮತ್ಸ್ಯಾ ಇವ ನರಾ ನಿತ್ಯಂ ಭಕ್ಷಯನ್ತಿ ಪರಸ್ಪರಮ್,

—ಯಾವುದನ್ನೂ ತನ್ನದೆಂದು ಹೇಳಿಕೊಳ್ಳುವಹಾಗಿಲ್ಲ. ಮತ್ಸ್ಯಗಳು ಒಂದನ್ನೊಂದು ನುಂಗಿ ಜೀವಿಸುವಂತೆ ಮನುಷ್ಯರು ಒಬ್ಬರನ್ನೊಬ್ಬರು ನಾಶಮಾಡುವುದೇ ಜನಪದ ಜೀವನದ ಲಕ್ಷಣವಾಗಿ ಪರಿಣಮಿಸುತ್ತಿದೆ!

ಹೀಗೆ ಪ್ರಪಂಚವು ವಿನಾಶದ ಮಾರ್ಗವನ್ನು ಹಿಡಿಯುವಾಗ ಭೌತಿಕ ವಿಜ್ಞಾನದಿಂದ,-ಬಗೆಬಗೆಯ ಪ್ರಾಣಹಾರಕ ಸಾಮಗ್ರಿಯನ್ನು ಸಿದ್ಧಗೊಳಿಸಿಕೊಂಡು ಮಾನವ ಜಾತಿಯು ತನಗೆ ತಾನೇ ಮೃತ್ಯುವಾಗಿ ಸ್ವನಾಶ ಮಾಡಿಕೊಳ್ಳುವುದಕ್ಕೆ ಅನುವಾಗಿರುವಾಗ ಸತ್ಯ ಧರ್ಮಗಳ ತಿರುಳನ್ನೂ ಮಾನವ ಜೀವನದ ಗುರಿಯನ್ನೂ ಸುಖ ಸಂತೋಷಗಳ ನೆಲೆಯನ್ನೂ ತಿಳಿಯಲಾರದೆ ಇಡೀ ಭೂಮಂಡಲವು ಅಂಧಕಾರ ಕೂಪದಲ್ಲಿ ಬಿದ್ದು ತೊಳಲುತ್ತಿರುವಾಗ,—"ಇಗೋ! ಎಲ್ಲ ಶಕ್ತಿಗೂ ಮಿಗಿಲಾದ ಶಕ್ತಿಯೊಂದಿದೆ; ಎಲ್ಲ ಆಯುಧಗಳಿಗೂ ಶ್ರೇಷ್ಠವಾದ ಆಯುಧವೊಂದಿದೆ; ಒಳಗೂ ಹೊರಗೂ ಸಕಲಕಾಲದಲ್ಲಿ ಬೇಕು ಬೆಳಗುವ ಜ್ಯೋತಿಯೊಂದಿದೆ, ಎಂದು ಸಾರಿ ಅಸಾತ್ವಿಕ ತೇಜಸ್ಸಿನ ದಿವ್ಯ ಪ್ರಭಾವವನ್ನು ಬೀರಿ ಪ್ರಪಂಚವನ್ನು ಮೃತ್ಯು ಮುಖದಿಂದ ಉದ್ಧಾರ ಮಾಡುವ ... ಮಹಾತ್ಮ ಗಾಂಧಿಯವರು ಮಾಡಿದ ಉಪಕಾ

ವಿಶ್ವೇಶ್ವರಯ್ಯಾ ಕಮಿಟಿ ವರದಿ.

ವಿಚಾರಣೆಯ ಕಮಿಟಿಯು ವರದಿಯ ವಿಷಯವಾಗಿ ಈಗಾಗಲೇ ಊಹಾಪೋಹಗಳು ಹೊರಡಲಾರಂಭವಾಗಿವೆ. ಮದರಾಸಿನ ಹಿಂದೂ ಪತ್ರಿಕೆಯ ಬಾತ್ಮೀದಾರರು ಬಹಳ ಧೈರ್ಯದಿಂದ ಕೆಲವು ಊಹೆಗಳನ್ನು ಮಾಡಿರುವರು. ಕಮಿಟಿಯವರ ಚರ್ಚೆಯು ಇನ್ನೂ ಪೂರ್ತಿಯಾಗಿಲ್ಲವೆಂದೂ, ಅನೇಕ ವಿಷಯಗಳಲ್ಲಿ ಅಧ್ಯಕ್ಷರಿಗೂ ಇತರ ಮೆಂಬರುಗಳಿಗೂ ಭಿನ್ನಾಭಿಪ್ರಾಯವಿರುವದೆಂದೂ ಭಿನ್ನಾಭಿಪ್ರಾಯಕ್ಕೆ ಆಧಾರದಿಂದ ಕಾರಣಗಳು ಇರಬೇಕೆಂದು ಅಧ್ಯಕ್ಷರು ಕೋರುತ್ತಿರುವರೆಂದೂ. ಅಬ್ಬಾಸ್‌ಖಾನರ ಮನೆಯಿಂದಲೂ ಸೈಕಲ್‌ಷಾಪಿನಿಂದಲೂ ಗುಂಡು ಬಂದ ವಿಷಯವಾಗಿ ಇನ್ನೂ ಭಿನ್ನಾಭಿಪ್ರಾಯವಿರುವದೆಂದೂ ಕಮಿಟಿಯು ಮಾಡಿರುವ ತೀರ್ಮಾನದಂತೆ ನಡೆದರೆ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲ್ಲಿನಲ್ಲಿಯೇ ಬದಲಾವಣೆಯು ಆಗ ಬೇಕಾಗುವುದೆಂದೂ, ವಿಶ್ವೇಶ್ವರಯ್ಯನವರು ಕಮಿಟಿಯ ವರದಿಯನ್ನೂ ಪ್ರಕಟಿಸಬೇಕೆಂದೂ ಅದನ್ನು ಕಡಿಮೆ ಬೆಲೆಗೆ ಮಾರಬೇಕೆಂದು ಅಭಿಪ್ರಾಯಪಡುವರೆಂದೂ ಮೈಸೂರಿನ ರಾಜಕೀಯ ಸುಧಾರಣೆಗಳ ವಿಷಯವಾಗಿ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳು ಬಹಳ ಅಮೂಲ್ಯವಾದವುಗಳೆಂದೂ ಹಿಂದೂ ಪತ್ರಿಕೆಯ ಬಾತ್ಮೀದಾರರು ಆ ಪತ್ರಿಕೆಗೆ ಬರೆಯುತ್ತಾರೆ.

ಕೋದಂಡರಾಮ ಪ್ರೆಸ್ ಕ್ಯಾಲೆಂಡರ್

ರಾಜಧಾನಿಯ ಕೋದಂಡ ರಾಮ ಪ್ರೆಸ್ಸಿನವರು 1929 ನೇ ಇಸವಿಯ ಕ್ಯಾಲೆಂಡರನ್ನು, ತಿಥಿ, ವಾರ ನಕ್ಷತ್ರ ಮುಂತಾದ ಎಲ್ಲಾ ತಪಸೀಲುಗಳೊಡನೆ ಪುಸ್ತಕ ರೂಪದಲ್ಲಿ ಪ್ರಕಟಿಸಿರುವರು. ಇದರ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಒಂದು ಪ್ರತಿಗೆ ಎರಡಾಣೆಯಂತೆಯೂ ಒಂದು ಡಜನ್ನಿಗೆ ರೂ 1-2-0 ರಂತೆಯೂ ಪ್ರಕಾಶಕರಲ್ಲಿ ದೊರೆಯುತ್ತದೆ.

ರವು. ಆದುದರಿಂದಲೇ ಅವರನ್ನು ಅವತಾರೀಕರೆಂದು ಸಹ ಹಲವರು ಕರೆಯುತ್ತಾರೆ. ಅವರಿಗಿಂತಲೂ ಹೆಚ್ಚಿಗೆ ಸಾತ್ವಿಕ ತೇಜಸ್ಸುಳ್ಳ ಮಹಾ ಪುರುಷರು ಇಂದು ಭರತಖಂಡದಲ್ಲಿ ಇಲ್ಲವೆಂದಲ್ಲ. ಅನೇಕರು ಇದ್ದಾರೆ. ಆದರೆ ಅವರು ಈ ಗೊಂದಲದ ಪ್ರಪಂಚಕ್ಕೆ ಇಳಿದು ಬರುವ ಹಾಗಿಲ್ಲ. ಅವರ ಕರ್ತವ್ಯ ಕ್ಷೇತ್ರವೇ ಬೇರೆ. ಯಾರು ಸಾಮಾನ್ಯ ಜನ ಜೀವನದ ಕಡೆಗೆ ತಿರುಗಿ, ಸಮಷ್ಟಿ ಜೀವನದ ವ್ಯಾಧಿ ತತ್ವವನ್ನು ಕಂಡುಹಿಡಿದು ರೋಗ ನಿವಾರಣಾ ಪೂರ್ವಕ ಭವಿಷ್ಯಜ್ಜೀವನಕ್ಕೆ ಬೇಕಾದ ನವ ಚೈತನ್ಯವನ್ನೂ ಹಾಗೂ ಪುನಶ್ಚ ವ್ಯಾಧಿಗ್ರಸ್ತರಾಗದಂತೆ ಕ್ರಿಯಾ ವಿಧಾನವನ್ನೂ ಪ್ರಸಾದಿಸಬಲ್ಲರೋ ಅಂತಹವರನ್ನು ಅವತಾರೀಕರೆಂದು ಕರೆಯುವ ವಾಡಿಕೆ. ಈ ಲಕ್ಷಣವು ಗಾಂಧಿಯವರಿಗೆ ಅನ್ವಯಿಸಲಿ ಅನ್ವಯಿಸದೆ ಇರಲಿ, ಅಂತೂ ಇಹ ಜೀವನದ ಮಾರ್ಗದಲ್ಲಿ, ಅದರಲ್ಲೂ ರಾಜಕೀಯ ಪಥದಲ್ಲಿ, ಸಂಪೂರ್ಣ ನಂದಿಹೋಗಿದ್ದ ಸಾತ್ವಿಕ ಜ್ಯೋತಿಯನ್ನು ಪುನಃ ಪಜ್ವಲಗೊಳಿಸಿ, ಕಾಳ ಸರ್ಪಗಳಿಗೆ ಆವಾಸಸ್ಥಾನವಾಗಿದ್ದ ಆ ದಾರಿಯನ್ನು ಕೊಂಚವಾದರೂ ಸುಗಮ ಮಾಡಿದರೆಂದರೆ ಅತಿಶಯೋಕ್ತಿಯೆನಿಸೂ ಅಲ್ಲ. ಇಂತಹ ಸಾತ್ವಿಕ ಜ್ಯೋತಿಯ ಪ್ರಕಾಶಕ್ಕೆ ಸಾಧಕವಾದ ಎಣ್ಣೆ ಬತ್ತಿಗಳ ಸಂಗ್ರಹನೇ ಸತ್ಯಾಗ್ರಹವು!

ನ್ಯಾಷನಲ್ ಕಾಂಗ್ರೆಸ್ ಸಭೆ (?)

(ನಮ್ಮ ಬಾತ್ಮೀದಾರರಿಂದ)

... ... ಲೋಕಸಂಕ್ಷೇಮರಕ್ಷಣೆಯಲ್ಲಿ ಮೇಲ್ಕಂಡ ಸಮ್ಮೇಳನವು ... ... ತಾತಾಚಾರ್ಯಶರ್ಮರವರ ಅಧ್ಯಕ್ಷತೆಯಲ್ಲಿ ಅತಿ ವೈಭವದಿಂದ ಜರುಗಿತು. ಶ್ರೀರಂಗಪಟ್ಟಣದ ಮ|| ರಾ|| ಶಿದಲಿಂಗದೇವರುರವರೂ ಶ್ರೀಯುತ ತಗಡೂರು ರಾಮಚಂದ್ರರಾಯರೂ ಭಾಷಣಗಳನ್ನು ಮಾಡಿದರು.

ಅಧ್ಯಕ್ಷರು ಅಪ್ಪಣೆಕೊಡಿಸಿದ್ದೇನೆಂದರೆ— ಎಲ್ಲಿಲ್ಲಿಯೂ ಹಿಂದುಳಿದವರೇ ಹೆಚ್ಚು. ಮುಂದುವರಿದವರೆಂಬದಾಗಿ ಹೇಳಲ್ಪಡತಕ್ಕವರೇ ಕಮ್ಮಿ. ಹಿಮ್ಮೆಟ್ಟಿಗೂ ತೊಂದರೆ ಇರುವುದು ಸಹಜ. ರೋಗೋತ್ಪತ್ತಿಯಾದ ನಂತರ ಸಾವಧಾನವಾಗಿಯೇ ಆರೋಗ್ಯವಾಗಬೇಕು. ನಾವು ಯಾರಿಗೂ ಅಜನ್ಮವಧಿಗ ಲಾಮರಾಗಿರಬೇಕಾಗುವ ಸಂಭವವಿಲ್ಲ. ಮಹಾತ್ಮಾ ಗಾಂಧಿಯವರಿಗೇನೆ ದಕ್ಷಿಣ ಅಫ್ರಿಕದಲ್ಲಿ ಬೇಕಾದ ಹಾಗೆ ಕಿರುಕುಳಗಳುಂಟಾದುವು. ಆದುದರಿಂದ ನೀವು ಅಶ್ರದ್ಧಾಸ್ಪದವನ್ನು ತ್ಯಜಿಸಿ ಸದಾಚಾರಸಂಪನ್ನತೆಯಿಂದ ಕುಶಿಯ ಜಾಡನ್ನು ಹಿಡಿಯದೆ, ತಿನ್ನಬಾರದ್ದನ್ನು ತಿನ್ನದೆ. ಒಂದು ವೇಳೆ ಹಾಗೇನಾದರೂ ನಡೆದರೆ ಅದಕ್ಕೆ ತಕ್ಕ ಪರಿಹಾರವನ್ನು ಮಾಡಿಸಿ ಕೊಳ್ಳಬೇಕು. ಈಶ್ವರ ಭಕ್ತಿಯಿಂದ ಸಾವಧಾನವಾಗಿ ವರ್ತಿಸಿದರೆ ನಿಮ್ಮ ತೊಂದರೆಗಳೆಲ್ಲವೂ ಜಾಗ್ರತೆಯಾಗಿ ಪರಿಹರವಾಗುವುವು."

ಕೆಳಗಿನ ಠರಾವುಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಮೊದಲನೆ ಮೂರು ಮೈಸೂರು ಸರ್ಕಾರಕ್ಕೂ ನಾಲ್ಕನೆಯದು ಮದರಾಸ್ ಸರ್ಕಾರಕ್ಕೂ ಕಳುಹಿಸಲ್ಪಟ್ಟವು. ಠರಾವುಗಳು

(1) ಕಣಿಯರ ಪತ್ರಿಕೆಯ ಪ್ರಚಾರ (2) ಸಂಸ್ಥಾನದ ಎಲ್ಲಾ ದೇವಸ್ಥಾನಗಳ ಪ್ರವೇಶವು (3) ಡಿಸ್ಟ್ರಿಕ್ಟ್ ಬೋರ್ಡು ಮುನಿಸಿಪಾಲಿಟಿ ಸಂಪದನ್ನುಳ್ಳದ ಯ ಸಮಾಜಗಳಿಗೆ ಕಣಿಯರ ಪ್ರತಿನಿಧಿಗಳನ್ನು ಕಳುಹಿಸುವುದು. (4) ಮದರಾಸ್ ನ್ಯಾಯಶಾಸ್ತ್ರಕ ಸಭೆಗೆ ಕಣಿಯರ ಪ್ರತಿನಿಧಿಯನ್ನು ಕಳುಹಿಸುವುದು.

ವಿಶ್ವ ವಿದ್ಯಾಲಯದ ವೈದ್ಯಶಾಲೆ

ನಮ್ಮ ವಿಶ್ವವಿದ್ಯಾಲಯದವರು ವೈದ್ಯಶಾಲೆಯ ದ್ರವ್ಯನಿಧಿಯೆಂಬ ಹೆಸರಿನಿಂದ ಒಂದು ಹೊಸ ಏರ್ಪಾಡನ್ನು ಮಾಡಿರುತ್ತಾರೆ. ಈ ನಿಧಿಗೆ ಮಹಾಜನರ ಸಹಾಯದಿಂದ 30,000 ... ... ರಿಂದ ಬರತಕ್ಕ ಮೂರು ಸಾವಿರ ರೂಪಾಯಿನ ಬಡ್ಡಿಯಿಂದ ಮೂರು ವೇತನಗಳನ್ನು ಕಲ್ಪಿಸಿ ವೈದ್ಯಶಾಸ್ತ್ರದ ವಿಚಾರ ಪ್ರಚಾರಗಳಿಗೆ ಸಹಾಯ ಮಾಡಬೇಕೆಂದಿರುವರು. ಇದಕ್ಕೆ ಶ್ರೀಮದ್ಯುವರಾಜರವರು 3000 ರೂಪಾಯಿಯನ್ನು, ದಾನ ಕೊಟ್ಟಿರುವರು. ಇಂತಹ ಮಹದೀಯರುಗಳ ಉದಾರ ಪ್ರೋತ್ಸಾಹವೂ ಕೋರಲ್ಪಟ್ಟಿದೆ.

ತಾಯಿನಾಡು.
13—12—1928.

"ತಾಯಿನಾಡಿನ ದುರಾಗ್ರಹ"

ಈ ಅಭ್ಯಾಸದಿಂದ ಈ ತಿಂಗಳ 10 ನೇ ತಾರೀ ಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ "ಸಿಂಹ" ಎಂಬ ಒಬ್ಬ ಲೇಖಕರು ಒಂದು ಲೇಖನವನ್ನು ಬರೆದಿ [illegible] ದುರಾಗ್ರಹವಿಲ್ಲ. [illegible] ಕಾರಣವೂ ಇಲ್ಲ. ಈಗಿನ ದಿವಾನರ [illegible] ನೀತಿಯನ್ನೂ ಪದ್ಧತಿಯನ್ನೂ ನಾವು ಎಡೆಬಿಡದೆ ಖಂಡಿಸುತ್ತಿರುವುದು ವಾಸ್ತವ್ಯ. ಆದರೆ ಅವರ ವಯ್ಯಕ್ತಿಕ ವಿಷಯವಾಗಿ ಇದುವರೆಗೂ ನಾವು ಒಂದು ದುರ್ಭಾಷೆಯನ್ನೂ ಹೇಳಿಲ್ಲ. ಹಾಗೆ ಹೇಳುವುದು ನಮ್ಮ ಸ್ವಭಾವವೂ ಅಲ್ಲ. ನಮಗೆ ದಿವಾನರಮೇಲೆ ವೈಯುಕ್ತಿಕವಾದ ದುರಾಗ್ರಹವಿರುವುದೆಂದು ಹೇಳುವವರು ದುರಾಗ್ರಹಿಗಳೇ ಹೊರತು ನಾವು ದುರಾಗ್ರಹಿಗಳಲ್ಲ.

ದುರಾಗ್ರಹದ ಮಾತು ಹಾಗಿರಲಿ. "ಸಿಂಹ" ಎಂಬ ಲೇಖಕರು 3-12-28 ನೇ ತಾರೀಖಿನ ತಾಯಿನಾಡು ಪತ್ರಿಕೆಯ ದಿವಾನರ ಸಂಚಾರ ಎಂಬ ಅಗ್ರಲೇಖನವನ್ನು ಪುನಃ ಓದಲಿ. ಅದರಲ್ಲಿ ನಾವು ಬರೆದಿರುವ ಪ್ರತಿಯೊಂದು ಅಕ್ಷರವೂ ಸಾಧಾರವಾದುದು. ಹೌದು ಅವರು ನಡೆಸುತ್ತಿರುವ ಸಂಚಾರಗಳಲ್ಲಿ ಪ್ರಜೆಗಳಿಗಿರುವ [illegible] ತೋರಿಸುತ್ತೇವೆ. [illegible] ಜನ ವರ. ಬರೀ ಆಡಂಬರಗಳಿಗೆ ಖರ್ಚು ಮಾಡುವುದಕ್ಕೆ ಅವರಲ್ಲಿ ಹಣವಿಲ್ಲ. ಸ್ಥಳೀಯ ಅಧಿಕಾರಿಗಳ ಪ್ರೇರಣೆಯಿಂದಲೇ ಅವರು ಇಂತಹ ದುಬಾರಿ ಖರ್ಚುಗಳನ್ನು ಕೈಕೊಳ್ಳುವರು. ದಿವಾನರು ತಮ್ಮ ಅಧಿಕಾರದ ವೇಷವನ್ನು [illegible] ಜನರಿಗೆ ತಿಳಿಯದಂತೆ ಅವ [illegible] ಆಗ ಅವರಿಗೆ ಪ್ರಜೆಗಳ ನಿಜವಾದ ಮ [illegible] ಸಲ್ಲಿ ಅವರು ಇದ್ದ 13 ಗಂಟೆಗಳ ಹೊತ್ತಿನಲ್ಲಿ 3 ಸಾವಿ ರ 4 ಸಾವಿರ ರೂಪಾಯಿಗಳು ಖರ್ಚಾದದ್ದು ಸುಳ್ಳಲ್ಲ. ಈ ರೂಪಾಯಿಗಳನ್ನು ಬರೀ ತಿಂಡಿತೀರ್ಥಗಳಿಗೆ ವಿನಿಯೋಗಿಸುವದಕ್ಕಿಂತ ಯಾವುದಾದರೂ ಶಾಶ್ವತವಾದ ಕೆಲಸಗಳಿಗೆ ವಿನಿಯೋಗಿಸಿದ್ದರೆ ಚೆನ್ನಾಗಿರಲಿಲ್ಲವೇ? ಈ [illegible] ದಿವಾನರಿಗೆ [illegible] ತೋರಿಸುವುದು ಸಾಧ್ಯವಿಲ್ಲವೆ? ಅತಿಥಿಗಳಿಗೆ [illegible] ಗೂ. ಆದರೆ ದಿವಾನರು, ತನ್ನ ಸರಕಾರಿ ಉಡಿಗೆ ಗಳ ಸಹಿತ ಆ ಗ್ರಾಮಗಳಲ್ಲಿ ಸಂಚಾರ ಮಾಡಿದ ರೆ ಹೊರತು, ಅತಿಥಿಗಳಾಗಿ ಬರಲಿಲ್ಲ. ಆತಿಥ್ಯದ ಸಾಧ್ಯವನ್ನು ಇಲ್ಲಿ ತರುವುದು ಸರಿಯಲ್ಲ. ದಿವಾನರಿಗೆ ಅವರ ದರ್ಜೆಗೆ ಅನುಗುಣವಾಗಿ ಆತಿಥ್ಯವನ್ನುಗಳು ದೊರೆತೇ ದೊರೆಯುತ್ತವೆ. ಏನಿಲ್ಲವೆಂದರೂ ದಿನಕ್ಕೆ 50 (೮೦) ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಅವರಿಗೆ ಅಲೋಯನ್ಸು ದೊರೆಯುತ್ತದೆ. ಒಂದು ವೇಳೆ ಆತಿಥ್ಯ ಮಾಡಬೇಕೆಂದು ಒಪ್ಪಿಕೊಂಡರೂ, ಕೃಷ್ಣನು ಕುಚೇಲನಿಂದ ಸ್ವೀಕರಿಸಿದಂತೆ ರೈತರು ಪ್ರತ್ಯಕ್ಷ ಸ್ಥಿತಿಯಲ್ಲಿಯೂ ಯಾವ ರೀತಿಯಾಗಿರುತ್ತಾರೋ, ಅದಕ್ಕೆ ಅನುಗುಣವಾಗಿ ಆತಿಥ್ಯವಿರಬೇಕು. ದೊಡ್ಡ ಮನುಷ್ಯರು ತಮ್ಮ ದರ್ಜೆಗೆ ಅನುಗುಣವಾಗಿ ಬೇಕಾದಷ್ಟು ಸತ್ಕಾರಗಳನ್ನು ಮಾಡಲಿ. ಆದರೆ ಬಡರೈತರಿಂದ ಚಂದಾ ಏತಕ್ಕೆ ಎತ್ತಬೇಕು? ಅವರುಗಳ ಕೈಯಿಂದ ಬಿಟ್ಟಿ ಕೆಲಸವನ್ನು ಏತಕ್ಕೆ ತೆಗೆದುಕೊಳ್ಳಬೇಕು? ಇದೆಲ್ಲಾ ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ದಿವಾನರಿಗೆ ಆತಿಥ್ಯವನ್ನು ಮಾಡಿದರೆ ನಮಗೆ ಅಸಹನೆ ಎಂದು ಹೇಳುವುದು ಕೇವಲ ಹುಡುಗತನ. ಇಲ್ಲಿ ಅಸಹನೆಯು ಮಾತೆ ಇಲ್ಲ. ಬಡ ರೈತರಿಂದ ಇಷ್ಟು ದುಬಾರಿ ಖರ್ಚನ್ನು ಮಾಡಿಸುವುದೇ ಅನ್ಯಾಯವೆಂಬುದು ನಮ್ಮ ನಿಷ್ಕರ್ಷೆಯಾದ ಅಭಿಪ್ರಾಯ.

ಇನ್ನು ಮೋಟಾರಿನ ರಭಸದ ವಿಷಯ. ಬೆಳಕವಾಡಿಯಲ್ಲಿ ನಡೆದ ದುರ್ಘಟನೆಯನ್ನು ನಾವು ಪ್ರತ್ಯಕ್ಷವಾಗಿ ನೋಡಿದವರಿಂದ ತಿಳಿದು ಬರೆದಿದ್ದೇವೆ. ದಿವಾನರು ದಾರಿಯುದ್ದಕ್ಕೂ ಅಹವಾಲುಗಳನ್ನು ಕೇಳಿದರೆಂದು ಹೇಳುವುದು ಅವ್ಯವಹಾರ್ಯ. ದಾರಿಯ ಉದ್ದಕ್ಕೂ ಪ್ರೇಕ್ಷಕರು ನಿಂತಿರಬಹುದು. ಅವರೆಲ್ಲರೂ ದಿವಾನರಿಗೆ ಕೈಮುಗಿದಿರಬಹುದು. ಆದರೆ ಅಹವಾಲುಗಳನ್ನು ಕೇಳುವದಕ್ಕೆಲ್ಲಾ ಒಂದು ಗೊತ್ತಾದ ಜಾಗ, ಮತ್ತು ಸಮಯವು ಏರ್ಪಡಿಸಿತ್ತು. ಅಲ್ಲಿ ಕೇಳುತ್ತಿದ್ದರು. ದಾರಿಯುದ್ದಕ್ಕೂ ಅಹವಾಲುಗಳನ್ನು ಕೇಳುತ್ತಿದ್ದರೆಂದು ಹೇಳುವುದೇನೋ ಸರಿಯಿಲ್ಲ.

ಅಹವಾಲನ್ನು ಕೇಳಿಕೊಂಡಿದ್ದರ ಫಲಿತಾಂಶ "ಸಿಂಹ" ಎಂಬ ಲೇಖಕರು ಈ ಭಾಗದಲ್ಲಿ ನಮ್ಮ ಲೇಖನವನ್ನು ಪುನಃ ಓದಲಿ. ಈಗಿನ ಕಾಲದ ಆಡಳಿತದ ವ್ಯವಸ್ಥೆಯಲ್ಲಿ ಪೂರ್ವದ ದಿವಾನರುಗಳಂತೆ ನೋಡಿದ ಕ್ಷಣವೇ, ಕೇಳಿದ ಕ್ಷಣವೇ, ಪ್ರಜೆಗಳ ಕೋರಿಕೆಗಳನ್ನು ಈಡೇರಿಸುವುದಕ್ಕಾಗುವದಿಲ್ಲ. ಗಿಂಡಿಯಲ್ಲಿ ಬಂದರೇ ತೀರ್ಥವೆಂಬಂತೆ ಕೆಳಗಿನ ಮೆಟ್ಟಲುಗಳನ್ನೆಲ್ಲಾ ದಾಟಿಬಂದರೇನೇ ದಿವಾನರು ಏನನ್ನಾದರೂ ಮಾಡುವುದು ಸಾಧ್ಯ. ಆಯಾಯಾ ಇಲಾಖೆಗಳ ಮತ್ತು ಸಂಸ್ಥೆಗಳ ಮುಖಾಂತರವೇ ಕೆಲಸವು ನಡೆಯಬೇಕು.

ದಿವಾನರ ಸಂಚಾರವು ಅಗತ್ಯವಲ್ಲವೆಂದು ನಾವು ಎಂದೂ ಬರೆದಿಲ್ಲ. ಆಗ ಬರೆದಿದ್ದನ್ನು ಪುನಃ ಬರೆಯುವೆವು. "ಈ ಆಡಂಬರಗಳೂ ಆರ್ಭಟೋಪಗಳೂ ಈ 1928 ನೇ ಇಸವಿಯಲ್ಲಿ ಏತಕ್ಕೆ? ನಾವು ಸಂಚಾರಗಳು ಕೂಡದೆಂದು ಹೇಳುವುದಿಲ್ಲ ವ್ಯವಧಾನ ಇದ್ದಾಗಲೆಲ್ಲಾ ದಿವಾನರು ಅಗತ್ಯವಾಗಿ ಸಂಚಾರಕ್ಕೆ ಹೊರಡಲಿ. ಶ್ರೀಮನ್ಮಹಾರಾಜರವರು ಮಾಡುವಂತೆ, ಪೂರ್ವದ ವಜೀರರುಗಳು ಮಾಡುತ್ತಿದ್ದಂತೆ ಆಕಸ್ಮಿಕವಾದ ಭೇಟಿಗಳನ್ನು ಕೊಡಲಿ. ಆಗಲೀಗ ಆಡಳಿತವು ಸಂತೋಷವಾಗುವುದು."

ಈ ವಿಷಯವಾಗಿ ನಾವು ಇನ್ನು ಹೆಚ್ಚು ಹೇಳಲು ಬಯಸುವುದಿಲ್ಲ.

ಸಿಂಹರು ಅನ್ಯಾಯವಾಗಿ ನಮ್ಮ ಮೇಲೆ ಹಾಕಿರುವ ದುರಾಗ್ರಹದ ಆಪಾದನೆಯನ್ನು ವಾಪಸು ತೆಗೆದುಕೊಳ್ಳುವರೆಂದು ನಂಬುತ್ತೇವೆ.

ದಿವಾನರ ಕ್ಷಮಾಪ[illegible]

ದಿವಾನರು ಅಸೆಂಬ್ಲಿಯಲ್ಲಿ ಬಾಯ್ತಪ್ಪಿ [illegible] ವಾ ಉದ್ದೇಶಪೂರ್ವಕವಾಗಿಯೋ ತಾವು [illegible] ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ಬದ್ಧ [illegible] ಹೇಳಿದರು. ತಾವು ಹೇಳಿದುದು ತಪ್ಪೆಂದೂ, [illegible] ಬಾಯಿ ಮಾತಿನಿಂದಲೂ, ಬರವಣಿಗೆಯಿಂದಲೂ [illegible] ಶ್ವರಯ್ಯನವರಿಗೆ ಕ್ಷಮಾಪಣೆ ಕೇಳಿದರೆಂದೂ [illegible] ಸಿನ 'ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. [illegible] ಪಣೆ ಕೊಟ್ಟಿದ್ದು ಸುಳ್ಳೆಂದ. ಸ್ಥಳೀಯ ಪತ್ರಿಕೆ [illegible] ತಿಳಿಸಿರುವುದು. ಕ್ಷಮಾಪಣೆಯ ಮಾತು [illegible] ದಿವಾನರು ಹಾಗೆ ಹೇಳಿದುದು ತಪ್ಪೇ ಎಂಬ [illegible] ರ್ಧರಿಸಬೇಕು. ತಪ್ಪಾಗಿದ್ದರೆ, ಕ್ಷಮಾಪಣೆಯ [illegible] ಟ್ಟಿದ್ದರೆ, ಸರಿ. ಕೊಡದಿದ್ದರೆ ಕೊಡಬೇಕು.

ಈಗ ದಿವಾನರು ಹೇಳಿದ್ದು ತಪ್ಪೋ ಅಲ್ಲವೋ [illegible] ಬುದು ಮುಖ್ಯವಾದ ವಿಷಯ. ದಿವಾನರು [illegible] ಗಳನ್ನು ಹೇಳಿದ ಸಂದರ್ಭ, ಅವುಗಳ ಪರಿಣಾಮ [illegible] ಗಳನ್ನು ವಿಮರ್ಶಿಸಬೇಕು. ಡಿಸ್‌ಮಿಸ್ ಆಗಿರು [illegible] ಪಾಧ್ಯಾಯರುಗಳು ಮಹಾರಾಜರಿಗೆ ಬರೆದಿದ್ದ ಅರ್ಜಿ [illegible] ರುಜು ಹಾಕಿದ್ದು ಸರಿಯೇ ಎಂಬ ವಿಷಯ ಅ [illegible] ಯಲ್ಲಿ ಚರ್ಚೆಯಾಗುತ್ತಿತ್ತು. ಒಬ್ಬ ಮೆಂಬರರು [illegible] ಶ್ವರಯ್ಯನವರು ಹೇಳಿದ ಮಾತುಗಳನ್ನು ತೋರಿಸಿ [illegible] ತಿಯೊಬ್ಬ ಪ್ರಜೆಗೂ ಶ್ರೀಮನ್ ಮಹಾರಾಜ [illegible] ಅರ್ಜಿ ಹಾಕುವದಕ್ಕೆ ಅಧಿಕಾರವಿದೆ, ಎಂದು ಹೇಳಿ [illegible] ದಿವಾನರು ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ನಾ [illegible] ಬದ್ಧರಲ್ಲ, ಎಂದು ಹೇಳಿದರ. ಈ ಮಾತುಗಳೇ [illegible] ಅಪಾಯಕರವಲ್ಲ. ಎಲ್ಲಾ ವಿಷಯಗಳಲ್ಲೂ ದಿವಾ [illegible] ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ಬದ್ಧರಾಗಬೇ [illegible] ಆದರೆ ವಿಶ್ವೇಶ್ವರಯ್ಯ ಕಮಿಟಿಯವರ ವಿಚಾರಣೆ [illegible] ಇನ್ನೂ ನಡೆಯುತ್ತಿದ್ದಾಗಲೇ, ಸಾಕ್ಷಿಗಳು [illegible] ಪೂರ್ತಿಯಾಗುವುದಕ್ಕೆ ಮುಂಚೆಯೇ, ಕಮಿಟಿಯ [illegible] ಕ್ಷರಾಗಿ ವಿಶ್ವೇಶ್ವರಯ್ಯನವರು ಕಮಿಟಿಯ ಕಾ [illegible] ಕಲಾಪಗಳು ನಡೆದಾಗಲೇ ಹೇಳುವ ಮಾತುಗಳ [illegible] ದಿವಾನರು ಅಷ್ಟು ಲಾಘವ ಮಾಡಿದರೆ, ಕಮಿಟಿ [illegible] ಕಾರ್ಯ ಕಲಾಪಗಳಿಗೆ ಬೆಲೆಯು ಬರುವುದೇ? [illegible] ದ ಪ್ರಜೆಗಳಿಗೆ ಕಮಿಟಿಯ ಕಾರ್ಯದಲ್ಲಿ ಅಶ್ರದ್ಧೆ [illegible] ಟಾಗುವುದಕ್ಕೆ ಅವಕಾಶವಾಗುವುದಿಲ್ಲವೇ? ದಿವಾ [illegible] ಹೇಳಿದ್ದು ತಮ್ಮ ಸ್ವಂತವಾಗಿ. ಸರಕಾರದ [illegible] ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಈ ವಿಷಯವು ಚರ್ಚೆಯಾ [illegible] ಗಿ ಬಹುಮತದಿಂದ ಕೊಟ್ಟ ಅಭಿಪ್ರಾಯವಲ್ಲ [illegible] ವೇಳೆ ದಿವಾನರು ಅಜಾಗರೂಕತೆಯಿಂದ ಆಡಿದ [illegible] ತುಗಳು ಅವು. ಇವುಗಳಿಂದ ಬಹಳ ಪೆಟ್ಟಾಗಿ ಕಮಿಟಿ [illegible] ಕೆಲಸಗಳಿಗೆ ಕುಂದಕವಾಗಿಯೇ ಇರಬೇಕು. ಇದು [illegible] ವ್ಯಕ್ತಿಯ ಪ್ರಶ್ನೆಯೇ ಇಲ್ಲ. ವಿಶ್ವೇಶ್ವರಯ್ಯನವ [illegible] ದೊಡ್ಡವರೇ, ಮಿರ್ಜಾರವರು ದೊಡ್ಡವರೇ ಎಂಬ [illegible] ಶ್ನೆಯೇ ಅಲ್ಲ. ಇಬ್ಬರೂ, ದೊಡ್ಡವರೇ. ಆದರೆ [illegible] ಮಾಡಿದರೂ ಅಲೌಕಿಕವಾದ ಮಾತುಗಳನ್ನಾಡಿದರೆ [illegible] ತಪ್ಪೇ ಆಗುವುದು. ಆದುದರಿಂದ ದಿವಾನರು ದೊ [illegible] ಮಾದರೂ ಅವರು ಆಡಿದ ಮಾತುಗಳು [illegible] ಆದುದರಿಂದ ತಾವು ಮಾಡಿದ ತಪ್ಪಿಗೆ ಕ್ಷಮಾಪಣೆ [illegible] ಡಿದ್ದರೆ ಅದಕ್ಕಾಗಿ ವ್ಯಸನಪಡಬೇಕಾಗಿಲ್ಲ. [illegible] ಮಾಪಣೆಯನ್ನು ಕೇಳಿದ್ದರಿಂದ ದಿವಾನರ ಘನತೆ [illegible] ನೂ ಕಡಿಮೆಯಾಗಲಿಲ್ಲ. ಇನ್ನೂ ಹೆಚ್ಚಾಯಿತು.

Regd No. M. 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ

ಸಂಪುಟ ೧ [ಶುಕ್ರವಾರ ೧೪ ಡಿಸೆಂಬರ್ ೧೯೨೮ [ಸಂಖ್ಯೆ

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್, ಮೈಸೂರು.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N S & Sons, Lansdowne Buildin Mysore.
5 Subba Pundit & Co, Lakshmivilas
6 Friends' Union, Mysore.
7 Sweet Mart, Lansdowne dBuilings, Mysore.
8 H Subba Rao C/o B Gowda & Sons Sakaleshpur
9 H Nagänniah News Agent Chikmagalur
10 VKrishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore

ತಾಯಿನಾಡು.

14—12—1928.

ಒಳದೇಶ ವೃತ್ತಾಂತ

ಹರಿಕಥೆ.

ಮುಂದಿನ ಭಾನುವಾರ ಸಾಯಂಕಾಲ 5 ಗಂಟೆಗೆ ಮೈಸೂರು ವೈಸ್ರಾಯಿರೋಡಿನಲ್ಲಿರುವ ರಿಟೈರ್ಡ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸ್ವಾಮಿ ಗೋವಿಂದಾಚಾರ್ಯರ "ವೇದಗೃಹದಲ್ಲಿ" ಧಾರ್‍ವಾಡದ "ಕವಿಭೂಷಣ ಮತ್ತು ಹರಿಕಥಾರತ್ನಾಕರ ಪಂಡಿತ ಶಾರದಾ ಪ್ರೋತ್ಸರವರು "ಧ್ರುವಚರಿತ್ರೆ" ಎಂಬ (ತಮ್ಮಿಂದಲೆ ರಚಿಸಲ್ಪಟ್ಟ) ಹರಿಕಥೆಯನ್ನು ಮಾಡುತ್ತಾರಾದ್ದರಿಂದ ಆಸ್ತಿಕಮಹಾಶಯರು ದಯಮಾಡಿಸಬೇಕಾಗಿ ಕೋರಲ್ಪಟ್ಟಿದೆ.

ದಿವಾನರ ಸಂಚಾರ.

ದಿವಾನರು ಮುಂದಿನ ತಿಂಗಳು ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಸಂಚಾರ ಮಾಡುವರೆಂದು ತಿಳಿಯ ಬಂದಿದೆ.

ಮಿ|| ಡಿಸೌಜಾರವರು

ಮಹಾರಾಜಾ ಕಾಲೇಜಿನ ಅರ್ಥಶಾಸ್ತ್ರದ ಅಧ್ಯಾಪಕರಾದ ಮಿ|| ವಿ. ಎಲ್. ಡಿಸೌಜಾರವರು ನಮ್ಮ ವಿಶ್ವವಿದ್ಯಾನಿಲಯದ ಫೆಲೋಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಸಾಲು ಮರಗಳು.

ಸಾಲು ಮರಗಳನ್ನು ಕಡಿಯುವುದು ಮತ್ತು ಉದ್ದೇಶ ಪೂರ್ವಕವಾಗಿ ಅವುಗಳನ್ನು ನಾಶಪಡಿಸುವುದು, ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಾಚಾರವನ್ನು ಕೊಡತಕ್ಕ ಕುಳವಾಡಿಗಳು ಅಥವಾ ಇತರ ಜನಗಳಿಗೆ ಪ್ರತಿ ಸಂದರ್ಭಕ್ಕೂ 8 ಆಣೆಗಳಿಗೆ ವಿಸಾರದಂತೆ ಲ್ಯಾಂಡ್ ರೆವೆನ್ಯೂ ಕೋಡಿನ ಪ್ರಕಾರ ಬರುವ ಅಪರಾಧಗಳಿಗಾಗಿ ವಸೂಲಾಗತಕ್ಕ ಜುಲ್ಮಾನೆ ಮೊಬಲಗುಗಳಿಂದ ಬಹುಮಾನವನ್ನು ಕೊಡುವುದಕ್ಕೆ ಅವುಲ್ದಾರರುಗಳಿಗೆ ಸರ್ಕಾರದವರು ಅಧಿಕಾರವನ್ನು ಮಂಜೂರ್ಮಾಡಿವಾರೆ.

ವಿದ್ಯಾರ್ಥಿ ಕವಿಗಳು

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕವಿಗಳ ಒಂದು ಸಮ್ಮೇಳನವು ಈ ತಿಂಗಳು 15 ನೇ ತಾರೀಖು 5 ಘಂಟೆಗೆ ಸರಿಯಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರದ ಹಾಲಿನಲ್ಲಿ ನಡೆಯುವುದು. ಈ ಸಮ್ಮೇಳನಕ್ಕೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಾದ ಮ|| ಕೆ. ವಿ. ಪುಟ್ಟಪ್ಪ ಬಿ. ಎ. ಎಂಬ ಕನ್ನಡದಲ್ಲಿ ಪ್ರಸಿದ್ಧ ವಿದ್ಯಾರ್ಥಿಗಳವರು ಅಗ್ರಾಸನವನ್ನು ವಹಿಸುತ್ತಾರೆ. ಈ ಸಮ್ಮೇಳನವು ಕರ್ನಾಟಕ ಸಂಘದವರ ಪರವಾಗಿ ಏರ್ಪಡಿಸಲ್ಪಟ್ಟಿರುವುದು. ಈ ಸಮ್ಮೇಳನದವರ ಪ್ರಯತ್ನಗಳಿಂದ ಕನ್ನಡ ಭಾಷಾ ಮಾತೆಯ ಗೌರವವು ಅಧಿಕವಾಗಲೆಂದು ಹಾರೈಸುತ್ತೇವೆ.

ವ್ಯವಸಾಯ ಪಾಠಶಾಲೆ.

ಹಾಸನದ ಡಿಸ್ಟ್ರಿಕ್ಟು ಬೋರ್ಡು ಆಡಳಿತಕ್ಕೆ ಒಳಪಟ್ಟು ಹಾಸನದಲ್ಲಿ 1929 ನೇ ಜನವರಿ ಮೊದಲನೇ ವಾರದಲ್ಲಿ ಸ್ಥಾಪಿಸಬೇಕೆಂದಿರುವ ಕನ್ನಡ ವ್ಯವಸಾಯ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಲಪೇಕ್ಷಿಸುವ ವಿದ್ಯಾರ್ಥಿಗಳು ಡಿಸೆಂಬರ್ ತಾ|| 23 ನೇ ಶನಿವಾರದೊಳಗೆ ದರಖಾಸ್ತುಗಳನ್ನು ಕಳುಹಿಸಬಹುದಾಗಿದೆ.

ಚಿತ್ರಗುಪ್ತ.

ರಾಜಧಾನಿಯಲ್ಲಿ ಸ್ವಾರ್ ಪತ್ರಿಕೆಯು ಹೇಗೆ ಬ್ರಾಹ್ಮಣೇತರರ ಚಳುವಳಿಯನ್ನು ನಡೆಸುತ್ತಿರುವುದೋ ಹಾಗೆ ಬೆಂಗಳೂರು ಸಿಟಿಯಲ್ಲೂ ಚಳುವಳಿಯನ್ನು ನಡೆಸುವ ಉದ್ದಿಶ್ಯವಾಗಿ ಚಿತ್ರಗುಪ್ತ ಎಂಬ ದಿನಚರಿ ಪತ್ರಿಕೆಯು ಹೊರಡಿಸಲ್ಪಡುವುದೆಂದು ವರ್ತಮಾನ ಕೇಳುತ್ತೇವೆ.

ಡಿಸ್ಟ್ರಿಕ್ಟ್ ಜಡ್ಜರು

ಚೀಫ್ ಕೋರ್ಟಿನ ನ್ಯಾಯಾಧೀಶರಾಗಿದ್ದು ರಿಟೈರಾದ ಮ|| ಸತ್ಯಾಜಿರಾಯರ ಸ್ಥಾನವು ಖಾಲಿಯಾದದ್ದರಿಂದ ಮ|| ಗಳಾದ ಪಿ. ಮಹದೇವಯ್ಯನವರೂ, ಎ. ಶ್ರೀನಿವಾಸರಾಘವಾಚಾರ್ಯರವರೂ ಎರಡು ಮತ್ತು ಮೂರನೇ ತರಗತಿಗಳಲ್ಲಿ ಕ್ರಮವಾಗಿ ಡಿಸ್ಟ್ರಿಕ್ಟ್ ಜಡ್ಜರುಗಳಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಪ್ರೊಫೆಸರ್ ರಾಧಾಕೃಷ್ಣರವರು.

ಪ್ರೊಫೆಸರ್ ರಾಧಾಕೃಷ್ಣರವರು ಮಂಗಳವಾರ ರಾಜಧಾನಿಯಿಂದ ವಾಪಸ್ ಹೊರಟು ಹೋದರು. ಅವರನ್ನು ಹಿಂದೆ ಅವರಲ್ಲಿ ವಿದ್ಯಾರ್ಥಿಗಳಾಗಿದ್ದವರು ವಿಶೇಷ ಉತ್ಸಾಹದೊಡನೆ ಕಳುಹಿಸಿ ಕೊಟ್ಟರು. ತಮಗೆ ವ್ಯವಧಾನವಿಲ್ಲದೆ ಇದ್ದುದ್ದರಿಂದ ಕಾಲೇಜ್ ಯೂನಿಯನ್ನಿನವರ ಸತ್ಕಾರ ಕೂಟಕ್ಕೆ ಬರಲು ಅವಕಾಶವಿಲ್ಲವೆಂದು ಅವರು ತಿಳಿಸಿದರು.

ಬ್ರಾಹ್ಮಣೇತರ ಚಳುವಳಿ

ಮೈಸೂರ ಬ್ರಾಹ್ಮಣೇತರರ ಚಳುವಳಿಯನ್ನು ಹೆಚ್ಚಿಸುವದಕ್ಕಾಗಿ ಮದರಾಸಿನ ಕೆಲವು ಬ್ರಾಹ್ಮಣೇತರರು ಮ|| ಇ. ವಿ. ರಾಮಸ್ವಾಮಿ ನಾಯಕರ್‌ರವರ ಮುಂದಾಳುತ್ವದಲ್ಲಿ ನಮ್ಮ ಸಂಸ್ಥಾನದ ನಾನಾಭಾಗಗಳಲ್ಲಿ ಸಂಚಾರ ಮಾಡುವವರಾಗಿರುತ್ತಾರಂತೆ ಇದಕ್ಕಾಗಿ ತೀವ್ರವಾದ ಏರ್ಪಾಡುಗಳೂ ಸಹ ನಡೆಯುತ್ತಾ ಇರುವುದಂತೆ. ನಮ್ಮ ಸಂಸ್ಥಾನದಲ್ಲಿ ಈ ಚಳುವಳಿಯಿಂದ ಈಗ ಆಗುತ್ತಿರುವ ಅನರ್ಥವು ಸಾಲದೆಂದೋ ಹೊರಗಿನವರನ್ನು ಕರೆಯಿಸುವುದು?

ಕ್ಷಮಾಪಣೆಯು ನಿಜವಲ್ಲ.

ಸರ್. ಎಂ. ವಿಶ್ವೇಶ್ವರಯ್ಯನವರಿಗೆ ದಿವಾನರು ಕ್ಷಮಾಪಣೆಯನ್ನು ಕೇಳಿಕೊಳ್ಳಲಿಲ್ಲವೆಂದೂ, ಹಾಗೆ ಕ್ಷಮಾಪಣೆಯನ್ನು ಕೇಳುವ ಮಾತುಗಳನ್ನು ಆಡಲಿಲ್ಲವೆಂದೂ ಸರ್. ಎಂ. ವಿಶ್ವೇಶ್ವರಯ್ಯನವರೇ ಪ್ರಕಟನೆಯನ್ನು ಕಳುಹಿಸಿರುವರು.

ಶ್ರೀ ಲಾಲಾ ಲಜಪತರಾಯರವರ ಸ್ಮಾರಕ ಸಭೆ

ಶ್ರೀ ಲಾಲಾಜಿಯವರ ಸ್ಮಾರಕ ಸಭೆಯು ತಾ|| 2 ರಲ್ಲಿ ಭದ್ರಾವತಿಯಲ್ಲಿ ನಡೆಯಿತು. 500 ಜನಗಳವರೆಗೂ ಕೂಡಿದ್ದರು. ಬಹಿರಂಗ ಸಭೆಗಳ ಸ್ಥೈಕಿ ಇದೇ ಮೊದಲನೆಯದಾಗಿದ್ದರೂ ಕಾರ್ಯದರ್ಶಿಗಳಾದ ಮ|| ಗಳಾದ ವಿ. ವಿ. ಅಯ್ಯಂಗಾರರು, ದೇವರಾಜ [illegible] ಮತ್ತು ಪುಟ್ಟಸ್ವಾಮಿ ಅಯ್ಯಂಗಾರರು, ಆಲ್ದೂರ ಸತ್ಕಾರ ಸಾಹೇಬರು ಜಿ. ಶಿವಲಿಂಗಪ್ಪನವರುಗಳ ಮುತುವರ್ಜಿಯಿಂದ ಜಯಪ್ರದವಾಗಿ ನೆರವೇರಿತು. ಲಾಲಾಜಿಯವರ ಮನೆತನದವರಿಗೆ ಶ್ರೀಯುತರ ಸ್ಮಾರಕ ವಿಷಯದಲ್ಲಾದ ಠರಾವನ್ನು ಕಳುಹಿಸಬೇಕೆಂಬುದಾಗಿಯೂ ಅವರ ಜ್ಞಾಪಕಾರ್ಥವಾಗಿ ಒಂದು ಮೆಮೋರಿಯಲ್ಲನ್ನು ಸ್ಥಾಪಿಸಬೇಕೆಂಬುದಾಗಿಯೂ ತೀರ್ಮಾನವಾಯಿತು.

ಮಹಿಳೆಯರ ಸಭೆ.

ಕಳೆದ ವಾರ ಬೆಂಗಳೂರು ವಾಣಿವಿಲಾಸ ಕ್ಲಬ್ ಮಂದಿರದಲ್ಲಿ ನಮ್ಮ ದಿವಾನರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಮಹಿಳೆಯರ ಸಭೆಯು ನಡೆಯಿತು. ಅಧ್ಯಕ್ಷರು ಸ್ತ್ರೀಯರಿಗೆ ವೋಟುಕೊಡುವ ಮತ್ತು ವೋಟು ಪಡೆಯುವ ಹಕ್ಕು ದೊರೆಯುವ ವಿಚಾರ ಸ್ತ್ರೀಯರ ಆಸ್ತಿ ಮತ್ತು ದಾಯಭಾಗ, ಹೆಣ್ಣು ಮಕ್ಕಳಿಗೆ ವಿವಾಹಮಾಡುವ ವಯಸ್ಸನ್ನು ಹೆಚ್ಚು ಮಾಡುವುದು, ಹೆಣ್ಣು ಮಕ್ಕಳ ವಿದ್ಯಾ ಶಿಕ್ಷಣಕ್ರಮಗಳನ್ನು ಕ್ರಮಪಡಿಸುವುದು, ಇತ್ಯಾದಿ ವಿಷಯಗಳನ್ನು ಕುರಿತು ಪ್ರಸ್ತಾಪ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ವಿವಾಹದ ವಯಸ್ಸನ್ನು ಹೆಚ್ಚು ಮಾಡಬೇಕೆಂದು ಸುಮಾರು ೩೦೦೦ ಸ್ತ್ರೀ ಪ್ರಜೆಗಳು ಸರ್ಕಾರಕ್ಕೆ ಒಂದು ಮಹಜರ್ ಅರ್ಜಿ ಕೊಟ್ಟಿರುತ್ತಾರೆಂದು ಕಾರ್ಯದರ್ಶಿಗಳು ಹೇಳಿದರು.

ರಾಷ್ಟ್ರೀಯ ಮಹಾಸಭೆ

ಈ ತಿಂಗಳು ತಾ|| 29 ರಲ್ಲಿ ಹಿಂದೂಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರಕೂಟವು ಕಲ್ಕತಾ ಪಟ್ಟಣದಲ್ಲಿ ಪ್ರಾರಂಭವಾಗಿ 3 ದಿನ ಜರುಗುತ್ತದೆ. ಪಾರ್ಕ್‌ಸರ್ಕಸ್ ಎಂಬ ಮೈದಾನದಲ್ಲಿ ಅಗಾಧವಾದ ಚಪ್ಪರವನ್ನು ಹಾಕಿ ಈ ಮಹಾಸಭೆಗಾಗಿ ಅಲಂಕರಿಸಿದ್ದಾರೆ ಕ್ಯಾಂಪ್ ರಚನೆಯು ಪೂರೈಸಿದ ಮೇಲೆ ಆ ಪ್ರದೇಶವೇ ಒಂದು ಪ್ರತ್ಯೇಕ ನಗರವಾಗಿ ಪರಿಣಮಿಸುತ್ತದೆ. ಅಲ್ಲಿ ಸಕಲ ವಿಧವಾದ ಸೌಕರ್ಯಗಳೂ ಒದಗಿಸಲ್ಪಡುತ್ತವೆ ಸಭೆ ನಡೆಯುವ ಚಪ್ಪರವು ಸುಮಾರು 30, 000 ಜನರು ಸೇರುವಷ್ಟು ವಿಸ್ತಾರವಾಗಿದೆ. ಹೀಗಿದ್ದಾಗ್ಯೂ ಎಲ್ಲಿ ನಿಂತು ಸ್ವಲ್ಪವೂ ತಪ್ಪದೆ ಸಭಿಕರಿಗೆಲ್ಲಾ ಚೆನ್ನಾಗಿ ಕೇಳಿಸುವಂತೆ ಲೌಡ್ ಸ್ಪೀಕರ್ ಎಂಬ ಯಂತ್ರಸಾಧನಗಳನ್ನು ಈ ಸಲದ ಸಭೆಯಲ್ಲಿ ಉಪಯೋಗಿಸುವ ಏರ್ಪಾಡಾಗಿದೆ.

ದಿವಾನರು.

ನಮ್ಮ ದಿವಾನರವರಾದ ಮಿ|| ಇಸ್ಮಾಯಿಲ್‌ರವರು ಸಧ್ಯದಲ್ಲಿ ರಾಜಧಾನಿಗೆ ದಯಮಾಡಿಸುವವರಾಗಿರುತ್ತಾರೆಂದು ವರ್ತಮಾನ ಕೇಳುತ್ತೇವೆ.

TAI NADU

14—12—1928

ಇದು ಯಾವ ನೀತಿ?

ಮ|| ಬಿ. ಭೀಮರಾವ್ ಮೊದಲಾದ ಮೂವರು ಮುಖಂಡರ ಮೇಲೆ ಇದ್ದ ಚಾರ್ಜ್ ಮುಕದ್ದಮೆಯನ್ನು ಈಗ ವಾಪಸು ತೆಗೆದು ಕೊಳ್ಳುವದೆಂದರೆ ಯಾವ ನೀತಿ ಎಂದು ಜನಗಳು ಕೇಳಲಾರಂಭಿಸಿರುವರು. ಹಾಗೆ ವಾಪಸು ತೆಗೆದುಕೊಳ್ಳಲು ಕಾನೂನು ಅವಕಾಶವನ್ನು ಕೊಡುತ್ತದೆಯೋ ಇಲ್ಲವೋ ಎಂಬುದನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರವರು ತೀರ್ಮಾನ ಮಾಡುತ್ತಾರೆ. ಆ ಚರ್ಚೆಯ ಗೊಡವೆಗೆ ಈಗ ನಾವು ಹೋಗುವುದಿಲ್ಲ. ಸರಕಾರದವರ ಮನಸ್ಥಿತಿಯನ್ನು ವಿಮರ್ಶಿಸುವುದೇ ಈಗ ನಮ್ಮ ಉದ್ದೇಶ. ಮುಕದ್ದಮೆಯು ತನ್ನಷ್ಟಕ್ಕೆ ತಾನೇ ಮುಂದುವರೆದಿದ್ದರೆ ಸರಕಾರಕ್ಕೆ ಆಗುತ್ತಿದ್ದ ನಷ್ಟವೇನು ಅಪರಾಧಿಗಳೇನಾದರೂ ಮುಕದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿದರೆ? ಅಥವಾ ಪ್ರಜಾ ಮುಖಂಡರಲ್ಲಿ ಯಾರಾದರೂ ಕೇಳಿಕೊಂಡರೆ? ಏನೂ ಇಲ್ಲದೆ ಈಗ ಏತಕ್ಕೆ ಮುಕದ್ದಮೆಯನ್ನು ವಾಪಸು ತೆಗೆದುಕೊಂಡರು? ಆಗಸ್ಟ್ 20 ನೇ ತಾರೀಖಿನ ದಿನ್ನ ದಿವಾನರು ಅಠಾರಾ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಮ|| ಎಸ್. ವೆಂಕಟಪತಯ್ಯನವರು ಇದೇ ಮುಕದ್ದಮೆಯನ್ನು ವಾಪಸು ತೆಗೆದು ಕೊಳ್ಳಬೇಕೆಂದು ಸಲಹೆಯನ್ನು ಕೊಟ್ಟಾಗ ದಿವಾನರು ಏನು ಹೇಳಿದರು? ಈಗ ಆ ಉತ್ತರ ಎಲ್ಲಿ ಹೋಯಿತು? ಅಪರಾಧಿಗಳು ಚೀಫ್ ಕೋರ್ಟ್ ಮೊದಲಾದುವುಗಳಿಗೆ ಹೋಗಿ ಪ್ರಾಸಿಕ್ಯೂಷನ್ ಸಾಕ್ಷಿಯಾದ ಮ|| ಅಬ್ಬಾಸ್ ಖಾನರನ್ನು ಪಿತೂರಿಯ ವಿಷಯವಾಗಿ ಸವಾಲ್ ಜವಾಬನ್ನು ಮಾಡುವ ಹಕ್ಕನ್ನು ದೊರಕಿಸಿಕೊಂಡು ಅವರು ಹೇಳಿದ ಪಿತೂರಿಯ ಕತೆಯಲ್ಲಿ ಹುರುಳಿಲ್ಲ ಎಂಬುದನ್ನು ರುಜುವಾತ್ ಮಾಡಿಕೊಡಲು ಹೊರಟಿದ್ದಾಗ್ಯೆ ಅಬ್ಬಾಸ್ ಖಾನರು ಈ ಸವಾಲ್ ಜವಾಬನ್ನು ತಪ್ಪಿಸಿಕೊಳ್ಳಲು ಅನೇಕ ಸಬೂಬುಗಳನ್ನು ಮುಂದು ಮಾಡುತ್ತಿದ್ದಾಗ ತೂಕಡಿಸ ವವನಿಗೆ ಹಾಸಿಗೆ ಹಾಸಿಕೊಟ್ಟಂತೆ ಸರಕಾರದವರು ಮುಕದ್ದಮೆಯನ್ನು ವಾಪಸು ತೆಗೆದುಕೊಳ್ಳ ಹೊರಟಿರುವದನ್ನು ನೋಡಿದರೆ ಜುಗುಪ್ಸೆಯುಂಟಾಗುತ್ತದೆ. ವಾಪಸು ತೆಗೆದು ಕೊಳ್ಳಬೇಕಾದರೆ ಹಿಂದೆ ಎಷ್ಟು ಅವಕಾಶವಿತ್ತು? ಅಕ್ಟೋಬರ್ 6 ನೇ ತಾರೀಖಿನಲ್ಲಿ ಚೀಫ್ ಕೋರ್ಟಿನ ಜಡ್ಜರಾದ ಮ|| ಶ್ರೀಪಾದ [illegible] ಮ|| ಅಬ್ಬಾಸ್ ಖಾನರು ಆಪಾದ [illegible] ಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಕೊಟ್ಟ ವಾಜ್ಮೂಲವನ್ನು ಅಪರಾಧಿಗಳಿಗೆ ಕೊಡಬಹುದೆಂದು ತೀರ್ಪನ್ನು ಕೊಟ್ಟಾಗಲೇ ಈ ಮುಕದ್ದಮೆಯನ್ನು ಸರಕಾರದವರು ವಾಪಸ್ ತೆಗೆದುಕೊಳ್ಳುತ್ತಾರೆಂಬ ಪ್ರಬಲವಾದ ವದಂತಿಯು ಹೊರಟಿತ್ತು. ಆದರೆ ಆಗ ವಾಪಸು ತೆಗೆದುಕೊಳ್ಳಲಿಲ್ಲ. ಈಗ ಇಷ್ಟೆಲ್ಲಾ ಅವಾಂತರವಾದ ಮೇಲೆ ಮುಕದ್ದಮೆಯನ್ನು ವಾಪಸು ತೆಗೆದುಕೊಳ್ಳಲು ಹೊರಟಿರುವದು ಸರಕಾರದ ಘನತೆಯನ್ನು ಕಡಿಮೆ ಮಾಡುತ್ತದೆ. ಅಬ್ಬಾಸ್ ಖಾನರ ತಲೆಯನ್ನು ಉಳಿಸುವುದಕ್ಕಾಗಿಯೇ ಸರಕಾರದವರು ಹೀಗೆ ಹಿಂದಲೇಟನ್ನು ಹಾಕಿದರೆಂದು ಜನಗಳು ಆಡಿಕೊಳ್ಳುವುದಕ್ಕೆ ಅವಕಾಶವಾಗಿದೆ. ಸರಕಾರದವರು ಈ ಪ್ರಸಂಗದಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸಿದಾರೆಂದು ಹೇಳಲು ಸಾಧ್ಯವಿಲ್ಲ. ಅಂತೂ ಇಂತೂ ಸರಕಾರದವರು ಈಚೀಚೆಗೆ ತಪ್ಪು ಹೆಜ್ಜೆಗಳನ್ನು ಹಾಕುತ್ತಿದಾರೆ.

ವೃತ್ತಾಂತ ಸಂಗ್ರಹ

ಸಮ್ಮೇಳನ.

ಜನವರಿ 3 ನೇ ತಾರೀಖಿನಲ್ಲಿ ರಾಜಧಾನಿಯಲ್ಲಿ ನಡೆಯುವ ಅಖಿಲ ಭಾರತ ಸಂಪದಭ್ಯುದಯ ಸಮ್ಮೇಳನವನ್ನು ಶ್ರೀಮದ್ಯುವರಾಜರವರು ಆರಂಭಿಸುವರೆಂದು ತಿಳಿಯಬರುತ್ತದೆ.

ಸ್ಟಾರ್ ಪತ್ರಿಕೆಯ ಮೇಲೆ ಮೊಖದ್ದಮೆ.

ಮ|| ಎಚ್. ವೈ. ಪಿಸ್ಸೇರವರು ಸ್ಟಾರ್ ಪತ್ರಿಕೆಯ ಮೇಲೆ ಹಾಕಿರುವ ಮೊಕದ್ದಮೆಯು ಈ ತಿಂಗಳು 19 ನೇ ತಾರೀಖಿಗೆ ತೆಗೆದುಕೊಳ್ಳಲ್ಪಡುತ್ತದೆ.

ಬೆಂಗಳೂರು ಬ್ರಾಹ್ಮಣ ಮಹಾಸಭೆಯವರು ಸ್ಟಾರ್ ಪತ್ರಿಕೆಯ ಮೇಲೆ ಬ್ರಾಹ್ಮಣ ಸಮುದಾಯವನ್ನು ದೂಷಿಸಿದ್ದಕ್ಕಾಗಿ ಕ್ರಮವನ್ನು ಜರುಗಿಸುವರೆಂದು ತಿಳಿಯಬಂದಿದೆ.

ಹೊಸ ಛೀಫ್ ಸೆಕ್ರಟರಿಗಳು.

11 ನೇ ತಾರೀಖು ಸಾಯಂಕಾಲ ಮ|| ಬಿ. ನಾಗಪ್ಪನವರು ಚೀಫ್ ಸೆಕ್ರಟರಿ ಕೆಲಸದ ಚಾರ್ಜನ್ನು ವಹಿಸಿದರೆಂದೂ ಎನ್. ಮಾಧವರಾಯರಿಗೆ ಮೂರು ತಿಂಗಳು ರಜಾ ಕೊಡಲಾಗಿದೆಯೆಂದೂ ಲೋಕಹಿತೈಷಿಯು ತಿಳಿಸುತ್ತದೆ.

ಅಬ್ಬಾಸ್ ಖಾನರು

ಅಬ್ಬಾಸ್ ಖಾನರು ತಮ್ಮ ಮೇಲೆ ಮಾಡಲ್ಪಟ್ಟಿರುವ ಮೊಕದ್ದಮೆಗಳನ್ನು ವರ್ಗಾಯಿಸಬೇಕೆಂತಲೂ, ಫಸ್ಟ್‌ಕ್ಲಾಸ್ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನವರು ತನಗೆ ಪಕ್ಷಪಾತರಹಿತ ವಿಚಾರಣೆಯ ಪ್ರಯೋಜನಗಳಿಗೆ ಅವಕಾಶವನ್ನು ಕೊಡುತ್ತಿಲ್ಲವೆಂತಲೂ ತಮ್ಮ ಮೇಲೆ ಅವರು ದ್ವೇಷ ಮಾಡುತ್ತಿರುವರೆಂತಲೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅರ್ಜಿ ಹಾಕಿಕೊಂಡಿರುವರು.

ಭಾರತ ಮಣಿಗಳು

ಅಧ್ಯಾತ್ಮಿಕ ಕ್ಷೇತ್ರದಲ್ಲಿ ಗಾಂಧಿಯವರೂ, ಸಾಹಿತ್ಯಕ್ಷೇತ್ರದಲ್ಲಿ ಡಾ|| ರವೀಂದ್ರನಾಥರೂ ವಿಜ್ಞಾನ ಶಾಸ್ತ್ರದಲ್ಲಿ ಸರ್ ಜಗದೀಶಚಂದ್ರಬೋಸರೂ ಇಡೀ ಜಗತ್ತಿನಲ್ಲೇ ಖ್ಯಾತಿಯನ್ನು ಪಡೆದಿದ್ದಾರೆ. ಎಂದು ಸಂಯುಕ್ತಪ್ರಾಂತದ ಗವರ್ನರರು ಅಲಾಹಾಬಾದ ವಿಶ್ವವಿದ್ಯಾಲಯದಲ್ಲಿ ಮಾಡಿದ ಪ್ರಾಸ್ತಾವಿಕ ಭಾಷಣದಲ್ಲಿ ನುಡಿದಿದ್ದಾರೆ.

ಕಳೆದ ಯುದ್ಧದಲ್ಲಿ ಮಡಿದವರು

ಕಳೆದ ಯುದ್ಧದಲ್ಲಿ ಒಂದು ಕೋಟಿ ತರುಣರು ಬಿದ್ದರು. ೧೫ ಲಕ್ಷ ತರುಣರು ಕುರುಡ ಕುಂಟರಾದರು. ೩ ಲಕ್ಷ ಬ್ರಿಟಿಷ ಮಕ್ಕಳು ಪಿತೃಹೀನರಾದರು. ಎಂದು ಇಂಗ್ಲೆಂಡದ ಮಹಿಳೆಯರು ವಿಲಾಪ ಮಾಡತೊಡಗಿದ್ದಾರೆ. ಆದರೆ ಸಾಮ್ರಾಜ್ಯಾದಿ ಸತ್ತಾಲೋಲುಪರಾಗಿ ರಣದೇವತೆಯನ್ನು ಆಮಂತ್ರಿಸುತ್ತಿರುವ ಮುತ್ಸದ್ದಿಗಳ ಕಠೋರ ಕಿವಿಯಮೇಲೆ ಈ ವಿಲಾಪದ ಪರಿಣಾಮವು ಆಗಬಹುದೆ?

ಶ್ರೀಯುತ ಸುಭಾಸ ಬೋಸರು

ಶ್ರೀಯುತ ಸುಭಾಷಚಂದ್ರ ಬೋಸರನ್ನು ಕಲಕತ್ತಾ ಮುನಿಸಿಪಾಲಿಟಿಯ ಕಮೀಶನರರಾಗಿ ನೇಮಿಸಿಕೊಳ್ಳುವ ಉದ್ಯೋಗ ನಡೆದಿದೆ.

ಉಪಜಾತಿಗಳಿಗೆ ಉಚ್ಚಾಟನೆ.

ಕಳೆದ ಬುಧವಾರ ದಿವಸ ಆರ್ಯ ಸಮಾಜದವರ ವಾರ್ಷಿಕೋತ್ಸವವಾಯಿತು. ಆಗ ಕೂಡಿದ ಸಭೆಯಲ್ಲಿ ಕೆಳಗಿನ ಠರಾವುಗಳನ್ನು ಪಾಸುಮಾಡಿದ್ದಾರೆ.

೧ ಬರುವ ಮನುಷ್ಯ ಗಣತಿಯಲ್ಲಿ ಹಿಂದೂ ಜನರು ತಮ್ಮ ಕುಲ ಹಿಂದೂ ಎಂದಿಷ್ಟೇ ಹೇಳಬೇಕಲ್ಲದೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಅವುಗಳ ಉಪಜಾತಿಯನ್ನು ಹೇಳಲಾಗದು.

೨ ಯಾವನೊಬ್ಬನು ಜಾತಿಯ ವಿಚಾರಕ್ಕೆ ಸಹಾಯಕನಾಗಿ ಆರ್ಯಸಮಾಜದವರಲ್ಲಿ ಕೆಲಸಗಾರನಾದ್ದರೆ ಆತನನ್ನು ಕೆಲಸದಿಂದ ದೂರ ಮಾಡಬೇಕು.

೩ ಜಾತಿ, ಒಳಜಾತಿಗಳ ಮೇಲೆ ಆರ್ಯಸಮಾಜದವರ ಸಂಬಂಧವೆಷ್ಟೂ ಇರುವದಿಲ್ಲ. ಅವು ಬೇಕಾಗಿಲ್ಲ.

೪ ಹುಡುಗರು ಮತ್ತು ಹುಡಿಗಿಯರು ಈಗಿನ [illegible] ತಮ್ಮ ಜಾತಿಯ ಹೊರಗಿನ ವಧುವರರ ಕೂಡ [illegible]ವೆಮಾಡುವಂತೆ ತಂದೆತಾಯಿಗಳನ್ನು ಒತ್ತಾಯ ಪಡಿಸಬೇಕು.

ಸರ್ಕಾರಿ ಸುದ್ದಿ.

ಗವರ್ನಮೆಂಟ್ ಕಂಟ್ರೋಲರ್ ಮಿ|| ಎಸ್. ಮಣ್ಣನವರಿಗೆ ಕ್ರಿಸ್ಮಸ್ ರಜಾ ಜೊತೆಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಕೆ. ಆರ್. [illegible]ಷ್ಣಸ್ವಾಮಯ್ಯಂಗಾರ್ರು ಕಂಟ್ರೋಲರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಯೂನಿವರ್ಸಿಟಿ ರಿಜಿಸ್ಟ್ರಾರ್ ಮಿ|| ಬಿ. ಎಂ. [illegible]ಂತಯ್ಯನವರಿಗೆ ಡಿಸೆಂಬರ್ ತಾ 3 ರಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದು. ಯೂನಿವರ್ಸಿಟಿ ಲೈಬ್ರೇರಿಯನ್ ಮಿ|| ಎನ್. ನರಸಿಂಹ[illegible]ಯವರು ರಿಜಿಸ್ಟ್ರಾರ್ ಕೆಲಸದ ಛಾರ್ಜನ್ನು [illegible]ಕ್ಕದ್ದು.

Regd. No. M. 2322

॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ

ಸಂಪುಟ ೧] • ಶನಿವಾರ ೧೫ ಡಿಸೆಂಬರ್ ೧೯೨೮

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್ಡು ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City.
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 Subba Pundit & Co, Lakshmivilas
6 Friends' Union, Mysore.
7 Sweet Mart, Lansdowne dBuilings, Mysore.
8 H Subba Rao C/o B Gowda & Sons Sakaleshpur
9 H Naganniah News Agent Chikmagalur
10 VKrishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore

ತಾಯಿನಾಡು.
15—12—1928.

ಪರಮೇಶ್ವರನೂ ಸತ್ಯಾಗ್ರಹಿಯೇ.

(ಲೇಖಕರು:- ಶ್ರೀ|| ಆನೇಕಲ್ ಸರ್ವಾಭಟ್ಟರು.)

ಈಸ್ಸು ಸತ್ಯಾಗ್ರಹವು ನಮ್ಮಗಳ ಇಂದಿನ ಪರಿಸ್ಥಿತಿಗೆ ಸರಿಹೋಗುವುದೇ ?—ಎಂಬುದನ್ನು ಪ್ರತ್ಯೇಕವಾಗಿ ನೋಡೋಣ. ಹಿಂದೆ ವಿಚಾರಮಾಡಿದಂತೆ ಈಗಿನ ಪರಿಸ್ಥಿತಿಯು ದೈವಿಕವಾದ್ದಿರಲಿ, ಪೌರುಷೇಯವಾದ್ದಿರಲಿ, ಎರಡಕ್ಕೂ ಹೊಂದಿಕೊಳ್ಳುವ ಕ್ರಿಯೆಯೆಂದರೆ ಸತ್ಯಾಗ್ರಹವೇ. ಹೇಗೆಂದರೆ, ದೈವಿಕ ಪರಿಸ್ಥಿತಿಯಲ್ಲಿ ಬೇಕಾದ ದೈವನಿರ್ಭರತೆಯೂ, ಪೌರುಷೇಯ ಪ್ರತಿಕ್ರಿಯೆಗೆ ಬೇಕಾದ ಸತ್ವಪ್ರಚೋದನೆಯೂ, ಈ ಎರಡೂ ಸತ್ಯಾಗ್ರಹದಲ್ಲಿ ಅಡಗಿವೆ. ಹಾಗೂ ಈ ಎರಡಕ್ಕೂ ಇಲ್ಲಿ ಸಾಮರಸ್ಯವಿದೆಯೇ ಹೊರತು ದ್ವೈವಿಧ್ಯವಿಲ್ಲ. ಆದುದರಿಂದ ಪೌರುಷೇಯವಾಗಲಿ, ದೈವಿಕವಾಗಲಿ ಯಾವ ಸಂದರ್ಭದಲ್ಲಾದರೂ ಸತ್ಯಾಗ್ರಹವನ್ನು ನಿರ್ಭಯವಾಗಿ ಆಚರಿಸಬಹುದು. ಆದರೆ ಪಾತ್ರಸಿದ್ಧತೆಯು ಮಾತ್ರ ಇರಲೇಬೇಕು. ಬಹು ಮುಖ್ಯವಾದ ಪತ್ತು ಅತ್ಯಾವಶ್ಯಕವಾದ ಸಿದ್ಧತೆಯೆಂದರೆ, ಈ ಮೊದಲೇ ಹೇಳಿರುವಂತೆ, ವಾಕ್ಕಾಯಗಳಲ್ಲಾದರೂ ಅಹಿಂಸಾವೃತ್ತಿಯನ್ನು ಆಚರಿಸುವ ಯೋಗ್ಯತೆ. ಇದು ಭಾರತಖಂಡದವರಿಗೆ ಸ್ವಭಾವ ಜನ್ಯವಾದುದು. ಆದರೂ ಪರಕೀಯರ ಸಹವಾಸದಿಂದ ಈ ಯೋಗ್ಯತೆಯನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿರುತ್ತೇವೆ. ಆದುದರಿಂದ ಪಾತ್ರಸಿದ್ಧತೆಯನ್ನು ಪರೀಕ್ಷಿಸಿಯೇ ಸತ್ಯಾಗ್ರಹವನ್ನು ಪ್ರಾರಂಭಿಸಬೇಕು.

ಆದರೆ ಇಲ್ಲೊಂದು ಪ್ರಶ್ನೆ. ನೈಸರ್ಗಿಕ ಅಹಿಂಸಾ ಸ್ವಭಾವವನ್ನುಳ್ಳ ಸತ್ಯಾಗ್ರಹವು ಅಧಿಕಾರಪ್ರವಾಹದ ಆಸುರೀ ಪ್ರವೃತ್ತಿಯನ್ನು ನಿವಾರಣೆ ಮಾಡುವುದರಲ್ಲಿ ಹೇಗೆ ಪರಿಣಾಮಗೊಳ್ಳುವುದು ? ಈ ವಿಷಯವನ್ನು ಸ್ಪಷ್ಟ ಸ್ಪಷ್ಟವಾಗಿ ಹೇಳುವುದೇ ಉತ್ತಮ ಏಕೆಂದರೆ ಕೇವಲ ಪೌರುಷದ ಕಡೆಗೇ ನಂಬಿಕೆಯಿರತಕ್ಕವರು ಅಹಿಂಸಾತ್ಮಕವಾದ ಸತ್ಯಾಗ್ರಹದಲ್ಲಿ ನಿರಾಶರಾಗುತ್ತಾರೆ. ಈ ನಿರಾಶೆಯೇ ಕೋಪಕ್ಕೆ ಮೂಲವಾಗಿ ಅಲ್ಲಿಂದಾಚೆಗೆ ಹಿಂಸಾವೃತ್ತಿಗೂ ಕಾರಣವಾಗುತ್ತದೆ. ಆದುದರಿಂದ ಸತ್ಯಾಗ್ರಹದ ಪರಿಣಾಮದ ವಿಷಯದಲ್ಲಿ ನಾವು ಸಂಪೂರ್ಣ ನಂಬಿಕೆಯುಳ್ಳವರಾಗಿರಬೇಕು ಸತ್ಯಾಗ್ರಹದ ಮೂಲಕ ಕೇಂದ್ರೀಕರಿಸಲ್ಪಟ್ಟ ಸಾತ್ವಿಕ ಶಕ್ತಿಯು ಪರ್ವತಗಳನ್ನು ಪುಡಿಮಾಡಬಲ್ಲುದು ; ಸಮುದ್ರಗಳನ್ನು ಶೋಷಿಸಬಲ್ಲುದು ; ಎಂಬುದನ್ನು ನಾವು ಮನವರಿಕೆಗೊಳ್ಳಬೇಕು.

ಅಷ್ಟೇಕೆ ? ಶ್ರೀ ಪರಮೇಶ್ವರನೂ ಕೂಡ ಭಸ್ಮಾಸುರನನ್ನು ನಿಗ್ರಹಿಸಲು ಸತ್ಯಾಗ್ರಹವನ್ನೇ [illegible]. ತನ್ನಿಂದಲೇ ಹುಟ್ಟಿ ಬೆಳೆದು, ತನ್ನ ಅನುಗ್ರಹದಿಂದಲೇ ನಿಗ್ರಹಶಕ್ತಿಯನ್ನು ಪಡೆದು, ತನ್ನ ಮೇಲೆಯೇ ಪ್ರಯೋಗಿಸಲು ಬಂದ ಭಸ್ಮಾಸುರನನ್ನು ನೋಡಿ ಶ್ರೀಪರಮೇಶ್ವರನು ಕೋಪ ತಾಳಲಿಲ್ಲ. ಹಾಗೂ ತಾನೇ ಅವನ ನಿಗ್ರಹಕ್ಕಾಗಿ ಪ್ರಯತ್ನ ಮಾಡಲೂ ಇಲ್ಲ. ತಾನಿತ್ತ ನಿಗ್ರಹಶಕ್ತಿಯ ಮುಂದೆ ಸೋಲನ್ನು ಒಪ್ಪಿಕೊಂಡ ಓಡಿಹೋದನು. ಅಲ್ಲಿಗೂ ರಾಕ್ಷಸನು ಬಿಡಲಿಲ್ಲ. ಆಗ ಪರಮೇಶ್ವರನು ಪ್ರತಿಯಾಗಿ ಮತ್ತೇನನ್ನೂ ಮಾಡಲಿಲ್ಲ ; ಕೇವಲ ತನ್ನಲ್ಲಿರುವ ಸಾತ್ವಿಕ ಶಕ್ತಿಯನ್ನು ಪ್ರಚೋದನಗೊಳಿಸಿದನು. ಆಗ ಆ ಸಾತ್ವಿಕ ಶಕ್ತಿಯ ಬಾಹ್ಯಸ್ವರೂಪನಾಗಿ ಸ್ಥಿತಿಯ ಒಡೆತನವನ್ನು ವಹಿಸಿರುವ ಶ್ರೀಮಹಾವಿಷ್ಣುವು ತನ್ನ ಕರ್ತವ್ಯವನ್ನು ಅರಿತು, ಭುವನಮೋಹನವಾದ ಮೋಹಿನೀರೂಪವನ್ನು ಧರಿಸಿ, ರಾಕ್ಷಸನ ಮುಂದೆ ನಿಂತನು. ಒಡನೆಯೇ ರಾಕ್ಷಸನು ಆ ಕಡೆಗೆ ತಿರುಗಿ, ಆ ದಿವ್ಯಸ್ವರೂಪದ ಪ್ರಭಾವವನ್ನು ಅರಿಯಲಾರದೆ ಅದನ್ನೂ ತನ್ನ ನೀಚ ಆಶಯದ ಸಲುವಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಪಟ್ಟನು. "ಆಗಲಿ, ನೀನು ನನ್ನಂತೆ ನಾಟ್ಯವಾಡಬಲ್ಲೆಯಾದರೆ ನಿನ್ನನ್ನು ವರಿಸುತ್ತೇನೆ"ಎಂದು ಆ ದಿವ್ಯಸ್ವರೂಪವು ಹೇಳಿತು. ದುರುಳನು ಮುಗ್ಧನಾಗಿ ನಾಟ್ಯಕ್ಕೆ ಉಪಕ್ರಮಿಸಿದನು. ನಾಟ್ಯದ ವಿಜೃಂಭಣೆಯಲ್ಲಿ ಆ ಪರದೇವತಾ ಸ್ವರೂಪನ್ನು ಅನುಕರಿಸುತ್ತಾ ಆಕೆಯು ತೋರಿಸಿದಂತೆ ತನ್ನ ತಲೆಯ ಮೇಲೆಯೇ ತನ್ನ ಕೈಯನ್ನು ಇಟ್ಟುಕೊಂಡನು. ಅಲ್ಲಿಗೆ ಆವನ ವರವು ಫಲಿಸಿತು. ಭಸ್ಮಾಸುರನು ತನ್ನಿಂದ ತಾನೇ ಭಸ್ಮವಾದನು?

ಧರ್ಮಕರ್ತರಿಗೆ ಪ್ರೋತ್ಸಾಹ.

ಯಳಂದೂರು ತಾಲ್ಲೂಕು ಬೂದಿತಿಟ್ಟು ಗ್ರಾಮದ ಶ್ಯಾನುಭೋಗರಾದ ಮ|| ರಾ|| ಮಾದಪ್ಪನವರು ಶ್ರೀ ದುರ್ಗೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಒಂದು ಸ್ಕೂಲ್ ಕಟ್ಟಡದ ಕಾರ್ಯವನ್ನೂ ನೆರವೇರಿಸಿರುವುದರಿಂದ ಶ್ರೀಮನ್ ಮಹಾರಾಜರವರು ಭಂಗಾರದ ಮೆಡಲನ್ನೂ ಮತ್ತು ಸರ್ಟಿಫಿಕೇಟನ್ನೂ ಸನು ಕಳೆದ ದಸರಾ ಮಹೋತ್ಸವದಲ್ಲಿ ದಯಪಾಲಿಸಿದರು. ಇದಕ್ಕಾಗಿ ಈ ಮಾಹೆ 10 ನೇ ತಾ|| ಇಲ್ಲಿನ ಜಹಗೀರ್ದಾರ್ ಬಂಗ್ಲೆಯಲ್ಲಿ ಸತ್ಕಾರ ಸಭೆಯೊಂದು ನೆರವೇರಿತು. ಮೈಸೂರು ಡಿ|| ಡೆ|| ಕಮಿಷನರ್‌ರವರಾದ ಶ್ರೀಯುತ ಎ. ವಿ. ರಾಮನಾಥನ್ ಬಿ. ಎ. ಯವರು ಅಧ್ಯಕ್ಷರಾಗಿದ್ದರು. ತಾಲ್ಲೋಕು ಅಮಲ್ದಾರ್‌ರವರೂ ಅಧ್ಯಕ್ಷರೂ ಪ್ರತಿನಿಧಿ ಸಭೆಯ ಮೆಂಬರೂ, ಮುನಿಸಿಪಲ್ ಕೌನ್ಸಿಲರೂ ಆದ ಮ|| ರಾ|| ವೈ. ಶ್ರೀನಿವಾಸಯ್ಯಂಗಾರರೂ ಸಹ ಯುಕ್ತಿಯುಕ್ತವಾದ ಭಾಷಣಗಳನ್ನಿತ್ತರು. ಇದಾದ ಮೇಲೆ ನೆರದಿದ್ದ ಸಭಿಕರೆಲ್ಲರಿಗೂ ಫಲ ಪುಷ್ಪ ತಾಂಬೂಲಗಳ ವಿನಿಯೋಗವಾದನಂತರ ಜಯಘೋಷದೊಡನೆ ಸಭೆಯು ಭರಖಾಸ್ತಾಯಿತು. —ಎಂದು ಒಬ್ಬ ವರ್ತಮಾನದಾತರು ಬರೆಯುತ್ತಾರೆ.

ವಿವಿಧ ವಿಷಯಗಳು.

[illegible]

ಈ ವರ್ಷದ ಡಿಪಾಜಿಟ್ ಹಣವು [illegible] ಗಳಿಂದ ೭೧೯೪೯೯ ರೂ. ಗಳಿಗೆ ಏರಿದೆ. ೧೯೨೮ ನೇ ಜೂನ್ ತಿಂಗಳಿನ ಕಡೆದಿನ ಒಟ್ಟು ಡಿಪಾಜಿಟ್ ಹಣವು ೧೭೪೧೯೮೪೭ ರೂ. ಗಳು. ಎಲ್ಲಾ ಸೇವಿಂಗ್ಸ್ ಬ್ಯಾಂಕುಗಳಲ್ಲಿಯೂ ಇತ್ತು. ಮೈಸೂರು ಮತ್ತು ಬೆಂಗಳೂರು ನಗರಗಳ ಕಲೆಕ್ಟಿಂಗ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಕೆಲಸಗಳು ತೃಪ್ತಿಕರವಾಗಿ ನಡೆದಿರುತ್ತೆ. ಶಿವಮೊಗ್ಗ, ತುಮಕೂರು, ಮತ್ತು ದಾವಣಗೆರೆ. ಈ ಮೂರು ಸ್ಥಳಗಳಲ್ಲಿಯೂ ಮೇಲ್ಕಂಡ ಬ್ಯಾಂಕುಗಳು ಸ್ಥಾಪಿಸಲ್ಪಡುವುವು. ಈ ವರ್ಷ ಜಾರಿಗೆ ತರಲ್ಪಟ್ಟ ಶೇಕಡ ೫ ರೂ. ಗಳ ಡಿಪಾಜಿಟ್ ಹಣವು ೩೦-೬-೧೯೨೮ ನೇ ತಾ|| ನಲ್ಲಿ ಒಟ್ಟು ೯೮೮೬೦೦ ರೂ. ಗಳು ಡಿಪಾಜಿಟ್ ಇಡಲ್ಪಟ್ಟಿತು. ಎಂದು ನಮ್ಮ ಸರ್ಕಾರದವರು ಪ್ರಕಟಿಸಿರುತ್ತಾರೆ.

ಈ ವರ್ಷ ಶಿವಮೊಗ್ಗ ಮುನಿಸಿಪಾಲಿಟಿಗೆ ಸರ್ಕಾರದವರು ೮೫೦೦ ರೂ. ಗಳ ಗ್ರಾಂಟು ಕೊಟ್ಟಿರುತ್ತಾರೆ.

ಛೀಫ್ ಜಡ್ಜರ ಸಂಚಾರ.

ನಮ್ಮ ಛೀಫ್ ಜಡ್ಜ್ ಸಾಹೇಬರು ಈ ತಿಂಗಳು ೧೭ ನೇ ತಾ|| ಶಿವಮೊಗ್ಗಗೆ ದಯಮಾಡಿಸಿ, ಅಲ್ಲಿನ ಕೋರ್ಟುಗಳನ್ನು ಮತ್ತು ಸಾಗರದ ಕೋರ್ಟನ್ನೂ ಪರೀಕ್ಷಿಸಿಕೊಂಡು. ಅನಂತರ ೨೦ ನೇ ತಾರೀಖು ಅಲ್ಲಿಂದ ಹೊರಟು ಬೆಂಗಳೂರಿಗೆ ವಾಪಸ್ಸು ದಯಮಾಡಿಸುವರು

ಸಾಕಪ್ಪಾ, ಸಾಕು !! ಈ ಮೋಟಾರು ಬಸ್ಸುಗಳ ಸುಖ !!!

(ಬರೆದು ಬಂದಿದ್ದು.)

ಯಾರನ್ನು ಕೇಳಿದರೂ ಈಗಿನ ಕಾಲದಲ್ಲಿ ಪ್ರಯಾಣಕ್ಕೆ ಮೋಟಾರು ಬಸ್ಸುಗಳ ಸೌಕರ್ಯವಿಯಯೆಂದು ಕೊಚ್ಚಿಕೊಳ್ಳುವ ಜಂಬವು ದಿಗಂತ ವಿಶ್ರಾಂತವಾಗಿ ಹೋಗಿದೆ. ಈ ಸುಖವು ತಾತ್ಕಾಲಿಕವಾದದ್ದೇ ವಿನಹಾ ನಿತ್ಯವಲ್ಲ. ಇದರ ಕಷ್ಟನಷ್ಟಗಳನ್ನು ಕೂಲಂಕಷವಾಗಿ ವಿಚಾರಮಾಡಿ ಪರಿಹಾರಾಲೋಚನೆ ಮಾಡದೆ ಇರುವುದು ಸಖೇದಾಶ್ಚರ್ಯವವೇ ಸರಿ. ಇದರ ಪೈಕಿ ಸ್ವಲ್ಪಮಟ್ಟಿಗೆ ವಿಚಾರಮಾಡೋಣ

(1) ಮೋಟಾರು ಬಸ್ಸಿನಲ್ಲಿ ನಿಯಾಮಕವಾದ ಪ್ರಯಾಣಿಕರಿಗಿಂತಲೂ ಹೆಚ್ಚು ಹೆಚ್ಚಾಗಿ ಗರುಡವಾಹನದಂತಿರುವುದು. (2) ಜನನವ ಊಹದಿಂದ ಪ್ರಯಾಣಿಕರು ಹೆಚ್ಚಿದರೆ ಟಿಕೇಟಿನ ದರವನ್ನು ಹೆಚ್ಚಿಸುವುದು. ಕಡಿಮೆಯಿದ್ದು 2—3 ಸವಾರಿಸು ಇದ್ದಲ್ಲಿ ದರವನ್ನು ಸರ್ರನೆ ಇಳಿಸುವುದು. (3) ಗಲಾಟೆಗಳ ಕಾಲದಲ್ಲಿ ಪೈಪೋಟಿಯ ವೇಲೆ ಕೆರೆ, ಏರಿ, ಸೇತುವೆ, ನದಿ, ಇಂಥ ಕವರಿಯ ಅಕ್ಕಪಕ್ಕಗಳು ಇವೇ ಮೊದಲಾದ ಸ್ಥಳಗಳಲ್ಲಿ ಬಸ್ಸಿಗೂ ಪ್ರಯಾಣಿಕರಿಗೂ ಘಾತಕಗಳನ್ನುಂಟು ಮಾಡುವದು. (4) ಅನೇಕ ಬಸ್ಸುಗಳಲ್ಲಿ ಎಂಜಿನ್‌ಗಳು ಸರಿಯಾಗಿರುವುದೇ ಇಲ್ಲ. ಟಾಪೇ ಸರಿಯಾಗಿಲ್ಲದೆ ಪ್ರಯಾಣಿಕರ ಮೇಲೆ ಎಲ್ಲಿ ಬೀಳುತ್ತೋ ಎನ್ನುವ ಸ್ಥಿತಿಯಲ್ಲಿರುತ್ತದೆ. (5) ಲೈಸೆನ್ಸ್ ಇರುವುದೇ ಒಂದು ಗಾಡಿಗೆ ಲೈನ್ ಮೇಲೆ ಹೋಗುವುದೇ ಒಂದು ಗಾಡಿ.

[illegible] ಎಷ್ಟೋ ಇರುತ್ತವೆ. ಒಟ್ಟಿನಲ್ಲಿ ಮೋಟಾರ್ ಬಸ್ಸಿನಲ್ಲಿ [illegible] ನಗೂ ಸುಖವಾಗಿ ಊರುಸೇರುವ ಬಾಬಾಗೇ ಇ[illegible]

TAI NADU
15-12-1928

ಅಭಯದಾನ.

ಮಿ॥ ಅಬ್ಬಾಸ್ ಖಾಸರನ್ನು ಉಳಿಸುವ ಪ್ರಯತ್ನವು ಮೊದಲಿನಿಂದಲೂ ನಡೆಯುತ್ತಿರುವದೆಂಬುದು ವ್ಯಕ್ತವಾಗಿರುವದು. ಜುಲೈ 30ನೇ ತಾರೀಖಿನ ರಾತ್ರಿ ಗಲಾಟೆಯಾದಮೇಲೆ ಮಾರನೆಯ ದಿವಸ ಇವರೂ ಮಿ॥ ಕಲಾಮಿಯವರೂ ಎಲ್ಲರಿಗಿಂತಲೂ ಮುಂಚಿತವಾಗಿ ದಿವಾನರ ಮನೆಗೆ ಹೋಗುತ್ತಿದ್ದದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಅಲ್ಲಿ ಏನೇನು ಮಾತುಕಥೆಗಳು ನಡೆದವೋ ಗೊತ್ತಿಲ್ಲ. ಅಂತೂ ಆದಿವಸಲ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ನೇಮಿಸಲ್ಪಟ್ಟರು. ಇದರ ಫಲಿತಾಂಶವಾಗಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ, ಪೋಲೀಸಿನವರೂ ತಮ್ಮ ಕರ್ತವ್ಯವನ್ನು ಮಾಡುವುದು ಸಾಧ್ಯವಾಗಲಿಲ್ಲ. ಜುಲೈ 30 ನೇ ತಾ॥ ರಾತ್ರಿಯೇ ಪೋಲೀಸಿನವರು ಏತಕ್ಕೆ ಸುಮ್ಮನಿದ್ದರು? ಲೂಟೀ ಮೊದಲಾದುವುಗಳಂದ ನಿರಾಯುಧರನ್ನು ಹಿಂಸಿಸುತ್ತಿದ್ದವರನ್ನು ದಸ್ತಗಿರಿ ಮಾಡಲಿಲ್ಲವೆಂಬುದಕ್ಕೆ ಕೊಟ್ಟಿರುವ ಸಮಾಧಾನವು ತೃಪ್ತಿಕರವಾಗಿಲ್ಲ. ಮಾರನೆಯ ದಿನ ಬೆಳಿಗ್ಗೆಯಾದರೂ, ಅಬ್ಬಾಸ್ ಖಾಸರನ್ನು ಅವರ ಮನೆಯಲ್ಲಿ ಗಲಾಟೆ ಮಾಡಿದವರನ್ನೂ ದಸ್ತಗಿರಿ ಮಾಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ. ಸ್ಮೈಕಲ್ ಷಾಪಿನಿಂದಲೂ ಅಬ್ಬಾಸ್ ಖಾಸರ ಮನೆಯಿಂದಲೂ ಗುಂಡು ಬಂದಿತೆಂದು ಎಲ್ಲರೂ ಹೇಳುತ್ತಿದ್ದರೂ, ಸರಕಾರದವರು ಯಾರೂ ಗುಂಡನ್ನು ಹೊಡೆಯಲಿಲ್ಲವೆಂದ ಪ್ರಕಟನೆಯನ್ನು ಹೊರಡಿಸಿದರು. ಕಂಡ್ರ ರಾಜನ ಸನ್ಮಾನಾರ್ಥ ಒಂದೂರಿಗೆ ಬಿದ್ದಮೇಲೆ ಸರಕಾರದವರ ಸ್ವರೂಪ ಮತ್ತು ಸಂಕೋಚವು ವ್ಯಕ್ತವಾಯಿತು. ಆಗಸ್ಟ್ 3 ನೇ ತಾರೀಖಿನ ದಿವಸ ದಿವಾನರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಿ॥ ಅಬ್ಬಾಸ್ ಖಾನರು ತಮ್ಮ ಅಪರಾಧವನ್ನು ಮುಚ್ಚುವುದಕ್ಕಾಗಿ ಬ್ರಾಹ್ಮಣರ ಮೇಲೆ ...ತನ್ನ ತಪ್ಪನ್ನು ಹಿಂದಿನ ಸರಕಾರವನ್ನೂ ಒಂದೇ ಸಂಗ್ರಹಿಸಲ್ಪಟ್ಟ ... ಮೊದಲಾದವರ ಮೊಕದ್ದಮೆಯಲ್ಲಿ ಇವರನ್ನು ಸಾಕ್ಷಿಯಾಗಿ ಕರೆಸಲು ... ಅಪ್ಪಣೆ ಕೊಟ್ಟಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಬಲವಂತದಮೇಲೆ ಕರಿಸಬೇಕಾಯಿತು. ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲೂ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲೂ ಇವರ ಸಾಕ್ಷೀ ಸವಾಲನ್ನು ತಪ್ಪಿಸಲು ಎಷ್ಟು ಅಡಚಣೆಗಳು ತರಲ್ಪಟ್ಟವೆಂಬುದನ್ನು ಈಗ ನಾವು ಪುನಃ ವಿವರಿಸಬೇಕಾಗಿಲ್ಲ. ಈಗಲೂ, ಅವರನ್ನು ಉಳಿಸುವುದಕ್ಕಾಗಿಯೇ ... ಕೈಲಾದ ಪ್ರಯತ್ನ ನಡೆಯುತ್ತಿರುವುದೆಂಬುದನ್ನು ಎಲ್ಲರೂ ... ಅಬ್ಬಾಸ್ ... ಸಂಕಟದಿಂದ ಬಿಡಿಸಲು ಯಾವ ಮುಖದ ನ್ಯಾಯವನ್ನು ಹಾಕಲೇ ಇಲ್ಲ. ಅಬ್ಬಾಸ್ ಖಾಸರ ಜಾಗದಲ್ಲಿ, ಅಬ್ಬಾಸ್ ಖಾಸರೇ ಅಲ್ಲದೆ ಇತರರು ಯಾರಾದರೂ ಇದ್ದಿದ್ದರೆ ಅವರಮೇಲೆ ಮೊಕದ್ದಮೆಯನ್ನು ಹೂಡದೆ ಇರುತ್ತಿದ್ದರೆ? ಇದನ್ನೆಲ್ಲಾ ನೋಡಿದರೆ ಏನು ಕಾಣುತ್ತದೆ? ಯಾರೋ ಬಹಳ ಸಮರ್ಥರಾದವರು ಅಬ್ಬಾಸ್ ಖಾನಿಗೆ ಅಭಯ ಕೊಟ್ಟಿರಬೇಕು. ಈ ಅಭಯದಾನವಿಲ್ಲದೆ ಸರಕಾರಕ್ಕೆ ಸರಕಾರವೇ ಪೋಲೀಸಿಗೆ ಪೋಲೀಸೇ ಇವರನ್ನು ವಿಚಾರಣೆಗೆ ಸಿಲುಕಿಸದೇ ಇರುವುದು ಸಾಧ್ಯವಲ್ಲ. ಆಗಸ್ಟ 20 ನೇ ತಾರೀಖಿನ ಸಭೆಯಲ್ಲಿ ದಿವಾನರು ಯಾವ ಅಪರಾಧಿಯನ್ನೂ ಉಳಿಸುವುದಿಲ್ಲವೆಂದೂ, ಕಾನೂನಿನ ಚಲಾವಣೆಗೆ ಅಡ್ಡಿಬರುವುದಿಲ್ಲವೆಂದೂ ಹೇಳಿದರು. ಈ ವಾಗ್ದಾನವನ್ನು ಮಿ॥ ಖಾಸರ ವಿಷಯದಲ್ಲಿ ನೆರವೇರಿಸಿದಂತೆ ಕಾಣುವುದಿಲ್ಲ. ಅಬ್ಬಾಸ್ ಖಾಸರ ವಿಷಯವಾಗಿ ಸರಕಾರಕ್ಕೆ ಏತಕ್ಕೆ ಇಷ್ಟು ಮಮತೆ ಎಂಬುದು ಸಾಮಾನ್ಯರಿಗೆ ತಿಳಿಯದಂತವಾಗಿದೆ. ಅವರು ತಪ್ಪಿತಸ್ಥರೋ ತಪ್ಪಿತಸ್ಥರಲ್ಲವೋ ಎಂಬ ಅಂಶವನ್ನು ನ್ಯಾಯಸ್ಥಾನಗಳು ತೀರ್ಮಾನಿಸುವಂತೆ ಯೇತಕ್ಕೆ ಬಿಡಬಾರದು? ಸರಕಾರದವರು ಈ ಭಾಗದಲ್ಲಿ ಅನುಸರಿಸುತ್ತಿರುವ ನೀತಿಯು ಸಂದೇಹಾಸ್ಪದವಾಗಿರುವುದು. ಸರಕಾರದವರು ನ್ಯಾಯ ಪಕ್ಷಪಾತಿಗಳಲ್ಲವೆಂಬ ಅಪನಂಬಿಕೆಯು ಜನರಲ್ಲಿ ಅಂಕುರಿಸಲು ಆರಂಭವಾಗುವುದು. ಒಂದಾವರ್ತಿ ಪ್ರಜೆಗಳಿಗೆ ಸರಕಾರದ ವಿಷಯವಾಗಿ ಅಪನಂಬಿಕೆಯು ಬೇರೂರಿದರೆ, ಅದರಿಂದ ಇಡೀ ಸಂಸ್ಥಾನಕ್ಕೆ ಬಹಳ ಹಾನಿಯುಂಟಾಗುವುದು. ಬ್ರಿಟಿಷ್ ಇಂಡಿಯಾದಲ್ಲಿ ಸರ್ಕಾರದವರ ಜನರಲ್ ಡಯರ್ ಮೊದಲಾದ ಪಾಪಿಗಳಿಗೆ ಸರಿಯಾದ ಶಿಕ್ಷೆಯನ್ನು ಕೊಡಲಿಲ್ಲವೆಂದು ಮಹಾತ್ಮ ಗಾಂಧಿಯವರು ಅಸಹಕಾರಸಂಗ್ರಾಮವನ್ನು ಆರಂಭಿಸಿದರು. ಈಗ ಬ್ರಿಟಿಷ್ ಇಂಡಿಯಾದಲ್ಲಿ ಪ್ರಜೆಗಳಿಗೂ, ಸರಕಾರಕ್ಕೂ ಸಹಕಾರಕ್ಕಿಂತಲೂ ಅಸಹಕಾರವೇ ಹೆಚ್ಚಾಗಿ ಪ್ರಚಾರದಲ್ಲಿದೆ. ಈ ಶೋಚನೀಯ ಪರಿಸ್ಥಿತಿಯು ಮೈಸೂರಿಗೆ ಬರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡಲೇ ಬೇಕು. ಹಾಗಿಲ್ಲದೆ ಅವರಿಗೆ ಅಭಯದಾನ ಮಾಡಿ ಅವರನ್ನು ಸಂರಕ್ಷಿಸಿದರೆ, ಬೆಂಕಿಯನ್ನು ಹತ್ತಿಯ ರಾಶಿಯಲ್ಲಿ ಸಂರಕ್ಷಣೆ ಮಾಡಿದಂತೆಯೇ ಆಗುವದು. ಇಬ್ಬರಿಗೂ ಅನಾಯವುಂಟಾಗುವುದು. ಈಗಲೂ ಸರಕಾರದವರು ಅಬ್ಬಾಸ್ ಖಾಸರನ್ನು ವಿಚಾರಣೆಗೆ ಗುರಿಮಾಡಲಿ. ಕೋರ್ಟಿನಲ್ಲಿ ಅವರು ತಪ್ಪಿತಸ್ಥರಲ್ಲವೆಂದು ತೀರ್ಮಾನವಾದರೆ ಸಂತೋಷ. ಇಲ್ಲವಾದರೆ ಅವರ ಅಪರಾಧಗಳಿಗೆ ಅನುಗುಣವಾದ ಶಿಕ್ಷೆಯನ್ನು ಪಡೆಯಲಿ.

ಮೈಸೂರು ಹಳೇ ಅಗ್ರಹಾರದ ಸುಪ್ರಸಿದ್ಧ ವ್ಯಾಪಾರಿಗಳಾದ ಮ॥ ... ವೆದ್ದಪ್ಪನವರು ಕಳುಹಿಸಿರುವ ಸುಂದರವಾದ ವಾಲ್ ಕ್ಯಾಲೆಂಡರನ್ನು ಆನಂದದಿಂದ ಸ್ವೀಕರಿಸಿದ್ದೇವೆ.

ವೃತ್ತಾಂತ ಸಂಗ್ರಹ

ಕುಂಚಿಟಿಗರ ವಿದ್ಯಾರ್ಥಿಗಳು.

ಒಂದನೆಯ ವರ್ಗದವರ ವಿದ್ಯಾರ್ಥಿ ವೇತನಗಳನ್ನು ಪಡೆಯುತ್ತಿರುವ ಕುಂಚಿಟಿಗರ ವಿದ್ಯಾರ್ಥಿಗಳ ಹೆಸರನ್ನು ಒಕ್ಕಲಿಗರ ವಿದ್ಯಾರ್ಥಿಗಳೊಂದಿಗೆ ಸೇರಿಸಲ್ಪಡದೆ ಪ್ರತ್ಯೇಕವಾಗಿ ಬರೆಯಲ್ಪಡಬೇಕೆಂದು ಸರಕಾರದ ಹುಕುಂ ಆಗಿರುತ್ತೆ.

ಅಖಿಲಭಾರತ ಮಹಿಳೆಯರ ಸಮ್ಮೇಳನ.

ಮುಂದಿನ ಜನವರಿಯಲ್ಲಿ ಪಾಟ್ನಾದಲ್ಲಿ ನಡೆಯುವ ಅಖಿಲಭಾರತ ಮಹಿಳೆಯರ ಸಮ್ಮೇಳನಕ್ಕೆ ಮೈಸೂರಿನಿಂದ ಮಿಸ್. ಲಾಜರಸ್‌ರವರೂ, ಶ್ರೀಮತಿ ಶ್ರೀರಂಗಮ್ಮನವರೂ, ಶ್ರೀ ಕನಕಲಕ್ಷ್ಮಮ್ಮನವರೂ, ಮಿಸೆಸ್ ಅಭಯಂಬಾಳ್‌ರವರೂ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ.

ಆರ್ಯಸಂಗೀತ ಸಮಾಜ, ಮೈಸೂರು.

ನಾಳೆಯ ದಿನ ಸಾಯಂಕಾಲ ಐದುವರೆ ಗಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು ಮತ್ತು ಹಾಡುಗಾರಿಕೆಯ ಕಛೇರಿಯು ವಿದ್ವಾನ್ ಮುತ್ತುಸ್ವಾಮಿ ದೇವವರ ಮೃದಂಗ ವಾದ್ಯದೊಡನೆ ನಡೆಯುವದು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರಲ್ಪಟ್ಟಿದೆ.

ಕನ್ನಡ ಭಾಷೆ

ಸಂಸ್ಥಾನದ ಎಲ್ಲಾ ಮಹಮ್ಮದೀಯರ ಉರ್ದು ಸ್ಕೂಲುಗಳಲ್ಲಿಯೂ ಕನ್ನಡ ಭಾಷೆಯನ್ನು ಬೋಧಿಸುವದರಮೂಲಕ ಎಲ್ಲಾ ಜನಗಳಲ್ಲಿಯೂ ಪರಸ್ಪರ ಪ್ರೇಮಾನುರಾಗಗಳನ್ನು ಹೆಚ್ಚಿಸಬೇಕೆಂದು ಬೆಂಗಳೂರಲ್ಲಿ ನಡೆದ ಸ್ತ್ರೀಯರ ಸಮ್ಮೇಳನದಲ್ಲಿ ಮಿಸೆಸ್ ಮೆಕ್ಕೆಯವರಿಂದ ಒಂದು ಠರಾವು ಸೂಚಿಸಲ್ಪಟ್ಟು ಸಭೆಯವರಿಂದ ಅಂಗೀಕೃತವಾಯಿತು.

ಹೆಂಗಸರ ಆಸ್ಪತ್ರೆ:- ಶಿವಮೊಗ್ಗಾ ಡಿಸ್ಟ್ರಿಕ್ಟಿನ ಜನಗಳು ನಮ್ಮ ಖಾವಂದರವರ ಸಿಲ್ವರ್ ಜೂಬಿಲೀ ಜ್ಞಾಪಕಾರ್ಥವಾದ ಕೆಲಸಗಳಿಗಾಗಿ 54 ಸಾವಿರ ರೂಪಾಯಿಗಳನ್ನು ಶೇಖರಿಸಿದರು. ಈ ಮೊಬಲಿಗಿನಲ್ಲಿ 18 ಸಾವಿರ ರೂಪಾಯಿಗಳು ಶಿವಮೊಗ್ಗೆಯಲ್ಲಿರತಕ್ಕ ಆಸ್ಪತ್ರೆಯಲ್ಲಿ ಬಾಣಂತಿಯರ ಸಲುವಾಗಿ ಒಂದು ಶಾಖೆಯನ್ನೇರ್ಪಡಿಸುವುದಕ್ಕಾಗಿ ವಿನಿಯೋಗಿಸಲ್ಪಡುತ್ತದೆಂದು ತಿಳಿಯಬರುತ್ತದೆ.

ಜಾತ್ರೆ.

ಕೃಷ್ಣರಾಜಪೇಟೆ ತಾಲ್ಲೋಕು ಸಂತೇಬಾಚಹಳ್ಳಿ ಹೋಬಳಿ ಜಾಗಿನಕೆರೆ ಗ್ರಾಮದಲ್ಲಿ ಮಾಮೂಲಿನಂತೆ ಈ ತಿಂಗಳು 17ನೇ ತಾ॥ ಲಾಗಾಯಿತು 20 ನೇ ತಾ॥ ವರೆಗೆ ಶ್ರೀ ಮಹದೇಶ್ವರಸ್ವಾಮಿಯ ಜಾತ್ರೆಯು ನಡೆಯುತ್ತದೆ. ಮತ್ತು ದನಗಳ ಪರಿಷೆಯು ಸಹ ಸೇರುತ್ತದೆ. ಉತ್ತಮವಾದ ಹೋರಿಗಳನ್ನೂ ಎತ್ತುಗಳನ್ನೂ ಪ್ರದರ್ಶಿಸಿದವರಿಗೆ ಬಹುಮಾನವು ಕೊಡಲ್ಪಡುತ್ತದೆಂದು ತಿಳಿಸಲ್ಪಟ್ಟಿದೆ.

Regd No. M. 2322 || ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { [illegible]

ಸಂಪುಟ ೧] ಸೋಮವಾರ ೧೭ ಡಿಸೆಂಬರ್ ೧೯೨೮ [ಸಂಚಿಕೆ [illegible]

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರಾಷ್ಟ್ರ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Building Mysore.

5 Subba Pundit & Co, Lakshmivilas

6 Friends' Union, Mysore.

7 Sweet Mart, Lansdowne dBuilings, Mysore.

8 H Subba Rao C/o B Gowda & Sons Sakaleshpur

9 H Naganniah News Agent Chikmagalur

10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore

TAI NADU

17—12—1928

ಅಖಿಲ ಪ್ರಪಂಚದ ಕ್ರೈಸ್ತವಿದ್ಯಾರ್ಥಿಗಳ ಸಭೆ

ಈ ಸಭೆಯು ರಾಜಧಾನಿಯಲ್ಲಿ ನಡೆಯಿತು. ಶ್ರೀಮನ್ ಮಹಾರಾಜರವರು ಇದರ ಆರಂಭೋತ್ಸವವನ್ನು ಮಾಡಿದರು. ಪ್ರಖ್ಯಾತರಾದ ವಿದ್ವಾಂಸರು ಭಾಷಣಗಳನ್ನು ಕೊಟ್ಟರು. ಈ ಸಭೆಯ ಮುಖ್ಯ ಉದ್ದೇಶವು ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸುವುದೇ ಆಗಿರುವುದು. ಈಗಿನ ಕಾಲದಲ್ಲಿ ಎಲ್ಲೆಲ್ಲಿಯೂ, ಸ್ವರಾಷ್ಟ್ರ ಪ್ರೇಮವೇ ಜಾಸ್ತಿಯಾಗಿ, ಒಂದು ರಾಷ್ಟ್ರಕ್ಕೂ ಇನ್ನೊಂದು ರಾಷ್ಟ್ರಕ್ಕೂ ಜಗಳಗಳೂ ಕದನಗಳೂ ಆರಂಭವಾಗುವುದಕ್ಕೆ ಅವಕಾಶವಾಗಿರುವುದೆಂದೂ ಆದುದರಿಂದ ಸ್ವರಾಷ್ಟ್ರ ಪ್ರೇಮಕ್ಕಿಂತಲೂ ಹೆಚ್ಚಾದ ಅಖಿಲರಾಷ್ಟ್ರ ಪ್ರೇಮವನ್ನು ಬಲಪಡಿಸಬೇಕೆಂದೂ ಈ ಸಭೆಯವರು ಬೋಧೆಮಾಡುತ್ತಿರುವರು. ವಾಸ್ತವ್ಯವಾಗಿ ಈಗ ನಮ್ಮ ದೇಶಕ್ಕೆ ಹೆಚ್ಚಾಗಿ ಬೇಕಾಗಿರುವುದು ಸ್ವರಾಷ್ಟ್ರ ಪ್ರೇಮ. ನಮ್ಮಲ್ಲಿ ಸ್ವರಾಷ್ಟ್ರ ಪ್ರೇಮವು ಜಾಸ್ತಿಯಾಗಿ ನಾವು ಸ್ವತಂತ್ರ ರಾಷ್ಟ್ರವಾದರೆ ಅನಂತರ ಅಖಿಲ ರಾಷ್ಟ್ರಗಳ ಕಡೆ ತಿರುಗಬಹುದು. ಈ ಸಭೆಯವರು ನಮ್ಮಲ್ಲಿ ಬುದ್ಧಿ ಭೇದವನ್ನು ಉಂಟುಮಾಡುವದಕ್ಕೆ ಬಂದಿರುವರು. ನಮ್ಮ ದೇಶದಲ್ಲಿ ರಾಷ್ಟ್ರಾಭಿಮಾನವು ದಿನ ದಿನಕ್ಕೆ ಬಲಿಯುವಾಗಿ, ನಮಗೆಲ್ಲರಿಗೂ ಸ್ವಾತಂತ್ರ್ಯವು ಬೇಕೆಂಬ ಅಭಿಲಾಷೆಯು ಹುಟ್ಟಿರುವುದು. ಈ ಸಮಯದಲ್ಲಿ ನಮ್ಮ ರಾಷ್ಟ್ರಾಭಿಮಾನದ ಉತ್ಸಾಹವನ್ನು ತಗ್ಗಿಸಬೇಕೆಂಬುದೇ ಈ ಸಭೆಯವರ ಉದ್ದೇಶ. ಇವರದು ಮತ್ತೊಂದು ಉದ್ದೇಶ. ಪ್ರಪಂಚವೆಲ್ಲವೂ ಕ್ರೈಸ್ತಮಯವಾಗಬೇಕೆಂಬುದು ಇವರ ಉತ್ಕಟಾಕಾಂಕ್ಷೆ. ಈ ಉದ್ದೇಶವನ್ನು ಸಫಲಗೊಳಿಸಿಕೊಳ್ಳುವುದಕ್ಕೋಸ್ಕರ ಅನೇಕಾನೇಕ ವೇಷಗಳನ್ನು ಹಾಕಿಕೊಂಡು ಬರುವರು. ಈ ವಿಷಯವು ಹಾಗಿರಲಿ ನಮ್ಮ ಮೈಸೂರಿನಲ್ಲಿ ಸ್ವರಾಷ್ಟ್ರಾಭಿಮಾನವೂ ಇಲ್ಲ. ಅಖಿಲ ರಾಷ್ಟ್ರಾಭಿಮಾನವೂ ಇಲ್ಲ. ದುರಭಿಮಾನವು ಹೆಚ್ಚಾಗಿರುವುದು. ಕೆಲವು ಸ್ವಾರ್ಥಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಕೋಮುವಾದವನ್ನು ಹೂಡಿ ಬಹಳ ಅನರ್ಥವನ್ನುಂಟು ಮಾಡಿರುವರು. ಇಂತಹವರಿಗೆ ಯಾವ ಉದಾತ್ತಭಾವನೆಗಳೂ ಬೇಕಿಲ್ಲ. ನೋಡೋಣ. ಈ ಸಭೆಯವರು ಮೈಸೂರಿನಲ್ಲಿ ತಮ್ಮ ಕಾರ್ಯಕಲಾಪಗಳನ್ನು ನಡೆಸಿದ್ದರಿಂದ ಮೈಸೂರಿನವರಿಗೆ ಎಷ್ಟರಮಟ್ಟಿಗೆ ಲಾಭವುಂಟಾಗುವುದು.

ಬಳೇಪೇಟೆ ಬೋರ್ಡಿನ ಮೊಕದ್ದಮೆ

ಈ ತಿಂಗಳು 12 ನೇ ತಾರೀಖಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಬಳೇ ಪೇಟೆ ಬೋರ್ಡಿನ ಮೊಕದ್ದಮೆಯ ವಿಚಾರಣೆಯು ಬಂದಿತ್ತು. ಮ॥ ಎಲ್. ಎಸ್. ರಾಜುರವರು ಪೋಲೀಸ್ ಇನ್ಸ್ಪೆಕ್ಟರ್ ರಂಗನಾಥಯ್ಯಂಗಾರ್ರವರನ್ನು ಪಾಟಿಸವಾಲು ಮಾಡಿದರು. ಪ್ರಶ್ನೆ—ಬೋರ್ಡನ್ನು ಎಷ್ಟುದಿವಸದಿಂದ ನೋಡುತ್ತಿದ್ದೀರಿ—ಉತ್ತರ—ಒಂದು ವರ್ಷದಿಂದ—ಪ್ರಶ್ನೆ ಭೀಮರಾಯರ ಅಂಗಡಿ ಮುಂದೆ ಜನಗಳ ಗುಂಪು ಕೂಡಿ ಬೋರ್ಡನ್ನು ಓದುವುದರಿಂದ ಏನಾದರೂ ದುರ್ಘಟನೆಗಳು ನಡೆದವೋ—ಉತ್ತರ—ಇಲ್ಲ. ಪ್ರಶ್ನೆ ಫಿರ್ಯಾದಿಗಳ ಹೆಸರು ಅವರು ಹೇಳಿದ ಮಾತುಗಳು ಅವುಗಳನ್ನೆಲ್ಲಾ ನಿಮ್ಮ ಸ್ಟೇಶನ್ ಡೈರಿಯಲ್ಲಿ ಬರೆದಿದ್ದೀರೋ—ಉತ್ತರ—ಇಲ್ಲ. ಪ್ರಶ್ನೆ—ಹಾಗಾದರೆ ನಮ್ಮನ್ನೆ ನೀವು ಆ ರೋಡಿನಲ್ಲಿ ಹಾದು ಹೋಗುತ್ತಿದ್ದಿರೋ ಉತ್ತರ—ಹೌದು. ಪ್ರಶ್ನೆ—ತಳ್ಳಿದವರು ಯಾರು—ತಳ್ಳಿಸಿಕೊಂಡವರು ಯಾರು ಅದನ್ನಾದರೂ ಹೇಳಬಲ್ಲಿರಾ ಉತ್ತರ ಇಲ್ಲ.—ಪ್ರಶ್ನೆ ಕೆಲವು ಮಹಮ್ಮದೀಯ ಜಟ್ಕಾದವರು ನಿಮಗೆ ಕಂಪ್ಲೈಂಟನ್ನು ಕೊಟ್ಟರೆಂದು ಹೇಳಿದಿರಲ್ಲಾ ಅವರು ಯಾರು ಬರವಣಿಗೆಯಲ್ಲಿ ಏನು ಕಂಪ್ಲೈಂಟು ಕೊಟ್ಟರು ಹೇಳಬಲ್ಲಿರಾ—ಉತ್ತರ ನನಗೆ ಅವರು ಯಾರು ಎಂಬುದು ಗೊತ್ತಿಲ್ಲ. ಅವರು ಏನನ್ನೂ ಬರೆದು ಕೊಟ್ಟೂ ಇಲ್ಲ. ಪ್ರಶ್ನೆ—ಅವರು ಅಬ್ಬಾಸ್ ಖಾನರ ಪಾರ್ಟಿಗೆ ಸೇರಿದವರೋ—ಉತ್ತರ ನಾನು ಹೇಳಲಾರೆ. ಪ್ರಶ್ನೆ—ಭೀಮರಾಯರು ಈಗ ಬೋರ್ಡುಗಳನ್ನು ಅವರ ಅಂಗಡಿಯ ಜಗಲಿಯ ಮೇಲೆ ಇಡುವುದು ಗೊತ್ತಿದೆಯೋ ಉತ್ತರ—ಹೌದು—ಪ್ರಶ್ನೆ—ಜಗಲಿಯು ಪಬ್ಲಿಕ್ ರಸ್ತೆಯ ಭಾಗವಲ್ಲ ಎಂಬುದು ಗೊತ್ತೋ? ಉತ್ತರ ಆ ಜಗಲಿಯ ಅಗಲ ಎಷ್ಟು ಎಂಬುದು ನಾನು ಹೇಳಲಾರೆ.

ಹಾಡುವ ಇಲಿಗಳು.

"ಇಲಿಗಳು ಒಮ್ಮೊಮ್ಮೆ ಹಾಡುತ್ತವೆ" ಎಂದು ನ್ಯೂಯೋರ್ಕ್ ನಗರದ ಪ್ರಾಣಿಸಂಗ್ರಹಾಲಯದ ಅಧಿಕಾರಿಯು ಹೇಳುತ್ತಾನೆ. ಆದರೆ ಅವು ಹಾಡುವುದು ಬೇಕೆಂದಲ್ಲ; ಯಾವಾಗಾದರೊಮ್ಮೆ ಅವುಗಳ ಕಂಠದಿಂದ ಸಂಗೀತ ಹೊರಡುತ್ತದೆ. ಅವು ಸಂತೋಷವಾಗಿರುವಾಗ ಅಲ್ಲ; ಒಂದು ತರದ ಉಬ್ಬಸದಿಂದ ನರಳುವಾಗ! ಆದರೂ ಆ ಧ್ವನಿಯು ಬಹಳ ಮಧುರವೆಂದು ಅವನು ಹೇಳುತ್ತಾನೆ. ಬೆಕ್ಕಿಗೆ—ಬಿಲ್ಲ; ಅವನಿಗೆ—ಆಟ; ಇಲಿಗೆ ಪ್ರಾಣಸಂಕಟ!

ಕೋಪ ಕೊಂದೀತು!

ನಮಗೆ ಕೋಪಬರುವುದರಿಂದ, ನಮ್ಮ ಮನೆಯ ಸಾಮಾನುಗಳು, ಇದಿರಿಗೆ ಸಿಕ್ಕಿದವರ ಕಣ್ಣು ಮೋರೆಗಳು ಮಾತ್ರ ಅದಕ್ಕೆ ಬಲಿಯಾಗುವುದಲ್ಲ; ದೇಹದ ನರನಾಡಿಗಳು ನುಚ್ಚುನೂರಾಗಿ ಪ್ರಾಣವೇ ಹೋಗಿಬಿಡುವುದುಂಟೆಂದು ಡಾಕ್ಟರ್ ಚಾರ್ಲ್ಸ್ ಎ. ಥಾಂಪಸ್—ಎಂಬುವರು ಹೇಳುತ್ತಾರೆ. ಜಾಗ್ರತೆ!

ಮೈಲುದ್ದದ ರೈಲುಬಂಡಿ.

ಕನಾಡಾ ದೇಶದಲ್ಲಿ ಧಾನ್ಯಗಳನ್ನು ತುಂಬಿಸಿಕೊಂಡು ಹೋಗುವ ಒಂದು ಹೊಗೆಬಂಡಿಗೆ ೧೩೫ ಗಾಡಿಗಳನ್ನು ಕಟ್ಟುತ್ತಾರೆ. ಒಟ್ಟು ಉದ್ದ ಒಂದು ಮೈಲಿನ ಮೇಲಾಗುತ್ತದೆ ಇಷ್ಟುದ್ದಕ್ಕೆ, ಈವರೆಗೆ ಎಲ್ಲಿಯೂ ಯಾವ ಕಷ್ಟವಿಲ್ಲ.

ವಿವಿಧ ವಿಷಯಗಳು.

[illegible]

ಸೈಮನ್ ಕಮೀಷನ್ನಿನ ಸಂಗತಿಗಳನ್ನು ರಾಷ್ಟ್ರೀಯ ವೃತ್ತಪತ್ರಗಳು ಪ್ರಕಟಿಸಬಾರದೆಂದು ಪಂಡಿತ ಮೋತೀಲಾಲ ನೆಹರು [illegible] ಲಾಹೋರಿನ ಡೆಲಿ ರ್ಲೀಡರ್ ಹಾಗೂ [illegible] ಪತ್ರದ ಸಂಪಾದಕರಾದ [illegible] ನಾಳೆಯಿಂದ ತಮ್ಮ ಪತ್ರಗಳಲ್ಲಿ ಸಂಗತಿಗಳನ್ನು ಮುದ್ರಿಸುವದಿಲ್ಲವೆಂದು ಪ್ರಸಿದ್ಧಿಸಿದ್ದಾರೆ. ಸೈಮನ್ ಕಮಿಷನ್ನಿನ ಸತ್ಕಾರವನ್ನು ಮಾಡುವವರು ಅಥವಾ ಅವರ ಸ್ವಾಗತಕ್ಕಾಗಿ ಜನರನ್ನು ಹಿಂಸೆ ನಡಿಸುವ ಪರದೇಶೀಯರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಬೇಕು

ಗ್ರಹಣ ನೋಡಿ ಕಣ್ಣು ಹೋಯಿತು.

ಒಬ್ಬ ಬಂಗಾಳಿ ಯುವಕನು ತನ್ನ [illegible] ಮರಣದಿಂದ ಸಂತಪ್ತನಾಗಿ ಅತ್ತು, ಅತ್ತು, ದುರ್ಬಲದೃಷ್ಟಿಯವನಾಗಿದ್ದನು. ಹೋದ ಗ್ರಹಣ ಕಾಲದಲ್ಲಿ ಅವನು ಸ್ನಾನಕ್ಕೆ ಹೋದಾಗ ನಾಲ್ಕಾರು ಸಾರಿ ಬರಿಗಣ್ಣಿನಿಂದ ಸೂರ್ಯನನ್ನು ನೋಡಿದನು ಒಂದೆರಡು ಮಿನಿಟ್ಟುಗಳಲ್ಲಿ ಅವನ ದೃಷ್ಟಿ ಸಂಪೂರ್ಣ ನಾಶವಾಯಿತು. ಆದರೆ ಒಬ್ಬ ಹಕೀಮನ ಔಷಧದ ಬಲದಿಂದ ಈಗ ತಕ್ಕಮಟ್ಟಿಗೆ ಕಣ್ಣು ಕಾಣುತ್ತಿದೆ,

ಲಂಡನಿನಲ್ಲಿ ಮಸೀದಿ.

ಲಂಡನ್ ನಗರದಲ್ಲಿ ಮಸೀದಿಯೊಂದನ್ನು ಕಟ್ಟುವುದಕ್ಕಾಗಿ ಬ್ರಿಟಿಷ್ ಇಸ್ಲಾಮಿಕ್ ಸೊಸೈಟಿಯವರು ೭೦,೦೦೦ ಪವನುಗಳನ್ನು ಸಂಗ್ರಹಿಸಿರುವರು.

ಅಖಿಲ ಕರ್ನಾಟಕ ಯುವಕ ಪರಿಷತ್ತು.

ಅಖಿಲ ಕರ್ನಾಟಕ ಯುವಕ ಪರಿಷತ್ತನ್ನು ಕೂಡಿಸುವದನ್ನು ಕುರಿತು ವಿಚಾರಮಾಡಲು ತಾ. ೧೬ಕ್ಕೆ ವಿಜಾಪುರದಲ್ಲಿ ಕೂಡುವ ಸರ್ವಪಕ್ಷೀಯ ಪರಿಷತ್ತಿನ ಕಾಲಕ್ಕೆ ಒಂದು ಆಲೋಚನಾ ಸಭೆಯು ಕರೆಯಲ್ಪಟ್ಟಿದೆ. ಕಾರಣ ಕರ್ನಾಟಕದೊಳಗಿನ ಸಕಲ ಯುವಕ ಸಂಘಗಳು ಒಬ್ಬೊಬ್ಬ ಪ್ರತಿನಿಧಿಯನ್ನು ವಿಜಾಪುರಕ್ಕೆ ಕಳುಹಿಸಬೇಕೆಂದು, ಇಲ್ಲವೆ ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಬೇಕೆಂದು ವಿನಂತಿಸಿದೆ

ವೀರ ಕೇಸರಿ

13 ನೇ ತಾರೀಖಿನಿಂದ ವೀರಕೇಸರಿಯು ಕಾರಣಾಂತರಗಳಿಂದ ನಿಲ್ಲಿಸಲ್ಪಟ್ಟಿದೆಯೆಂದು ಲೋಕಮಿತ್ರಪತ್ರಿಕೆಯಲ್ಲಿ ಪ್ರಕಟವಾದ ಸಮಾಚಾರವು ತಪ್ಪು ಎಂದು [illegible] ಗೆ ತಂತಿಯು ಬಂದಿದೆ.

ಮುಗಿಲು ಮುಟ್ಟುವ ಕಟ್ಟಡ

ಬಾರ್ಸೆಲೋನ ಎಂಬಲ್ಲಿ ೧೩೦೦ ಅಡಿ ಎತ್ತರದ ಒಂದು ಕಟ್ಟಡವನ್ನು [illegible] ಕಟ್ಟುವರು [illegible] ಹೊಟೇಲುಗಳೂ, ವಸ್ತು ಸಂಗ್ರಹಾಲಯ ವಾಚನಾಲಯಗಳೂ, ಆಲೆ ನುಂಚೆ ನು (ತಂತಿಯಿಲ್ಲದ ಟೆಲಿಗ್ರಾಫ್ ಸ್ಟೇಶನೂ ಸ್ಥಾಪಿತವಾಗುವವು.

ನೂರು ಮೈಲು ನಡೆದ ಬೆಕ್ಕು.

ಸ್ಕೋಟ್‌ಲೆಂಡಿನಲ್ಲಿ ಒಂದು ಮನೆಯವರು ನೂರು ಮೈಲು ದೂರದ ಇನ್ನೊಂದು ಸ್ಥಳಕ್ಕೆ ಒಕ್ಕಲು ಹೋಗುವಾಗ ತಮ್ಮ ಬೆಕ್ಕನ್ನೂ ಕೊಂಡೊಯ್ದರು. ಅಲ್ಲಿಗೆ ಮುಟ್ಟಿದ ಮರುದಿನ ಆ ಬೆಕ್ಕು ಅಲ್ಲಿಂದ ತಪ್ಪಿಸಿಕೊಂಡು ಹೋಯಿತು. ಹನ್ನೊಂದು ದಿವಸಗಳಲ್ಲಿ ಹಳೆಮನೆಯಲ್ಲಿ 'ಹಾಜರ್'!

ತಾಯಿನಾಡು.

17-12-19[illegible]

ವಿದ್ಯಾರ್ಥಿಗಳ ಜಾಗೃತಿ

ಪ್ರಪಂಚದಲ್ಲೆಲ್ಲಾ ಯುವಕರು ಜಾಗ್ರತರಾಗಿ ಮುಂದೆ ಮುಂದೆ ಬರುತ್ತಿದ್ದಾರೆ. ದೇಶದ ಏಳಿಗೆಯ ಕಾರ್ಯಗಳಲ್ಲಿ ಭಾಗವನ್ನು ತೆಗೆದುಕೊಳ್ಳಬೇಕೆಂದು ಉತ್ಸಾಹದಿಂದ ಮುಂದೆ ನುಗ್ಗುತ್ತಿದ್ದಾರೆ. ಪಾರತಂತ್ರ್ಯದೇ[illegible] ಸ್ವಾತಂತ್ರ್ಯ ಸಾಧನೆಯಲ್ಲಿ ತೊಡಗಿ[illegible] ಚೈನಾ, ಐರ್ಲೆಂಡ್, ಈಜಿಪ್ಟ್ ಮೊದಲಾದ ದೇಶಗಳಲ್ಲಿ [illegible] ಸ್ವಾತಂತ್ರ್ಯದ ಸಾಹಸಗಳು ಅಸಾಧಾರಣ[illegible]. ನಮ್ಮ ಇಂಡಿಯಾದಲ್ಲಿ ಮಾತ್ರ [illegible] ಮುಂದೆ ಬಂದರೆ ನೀವು [illegible] ವಿದ್ಯಾಭ್ಯಾಸಂಗದಲ್ಲಿಯೇ [illegible] ಕೆಲವು ಹಿರಿಯರು ಹೇಳ[illegible]. ಆ ವಿದ್ಯಾಭ್ಯಾಸವು ಅದೊಂದು ವಿ[illegible]. ವಿದ್ಯಾಭ್ಯಾಸ ಮುಗಿದಮೇಲೆ ಆ[illegible] ನೆಕ್ಕಬೇಕೇ ಹೊರತು ಅದ[illegible] ಪ್ರಯೋಜನವೂ [illegible] ವಿದ್ಯಾಭ್ಯಾಸ [illegible] ಸಂಬಂಧ [illegible] ಅಂತರವಿ[illegible] ವಿದ್ಯಾಭ್ಯಾಸ [illegible] ಬದಲಾಯಿಸ [illegible] ವಿದ್ಯಾಭ್ಯಾಸ [illegible] ಅಸಮಾಧಾನವು [illegible] ಉಪಾಧ್ಯಾಯರುಗಳು ಮತ್ತು [illegible] ತಾವು [illegible] ವಿದ್ಯಾರ್ಥಿಗಳು ಇಂಥ [illegible] ಸಂದರ್ಭದಲ್ಲಿ [illegible] ವಿದ್ಯಾರ್ಥಿಗಳ [illegible] ಆಲೋಚಿಸುವರೆಂದು ನಂಬಿದ್ದೇವೆ.

ಪತ್ರಿಕೆಗಳ ಆತ್ಮಮರ್ಯಾದೆ

ಬ್ರಿಟಿಷ್ ಇಂಡಿಯಾದಲ್ಲಿ ಫ್ರೀಪ್ರೆಸ್ ಆಫ್ ಇಂಡಿಯಾ ಎಂಬ ವಾರ್ತಾಪ್ರಚಾರಿಣೀ ಸಮಿತಿಯನ್ನು ಸೈಮನ್ ಸಮಿತಿಯ ಅಧ್ಯಕ್ಷರಾದ ಸರ್. ಜಾನ್ ಸೈಮನ್‌ರವರು ತಿರಸ್ಕಾರ ಮಾಡಿದ್ದರ ಮೇಲೆ, ಮೇಲಿನ ಸಮಿತಿಯವರು ಸೈಮನ್ ಕಮಿಷನ್ನಿನ ಕಾರ್ಯಕಲಾಪಗಳನ್ನು ಪ್ರಕಟಿಸವದನ್ನೆ ಬಿಟ್ಟರು, ಅನಂತರ ಪಂಡಿತ ಮೋತೀಲಾಲ ನೇಹರೂರವರು ಸೈಮನ್ ಕಮಿಷನ್ನಿನ ಸಾಕ್ಷ್ಯದ ವಿಷಯವಾಗಿ ದೇಶೀಯ ಪತ್ರಿಕೆಗಳು ಏನನ್ನೂ ಪ್ರಕಟಿಸ ಕೂಡದೆಂದು ವಿಜ್ಞಾಪನೆಯನ್ನು ಕಳುಹಿಸಿದರು. ಅದರಂತೆ ದೇಶೀಯ ಪತ್ರಿಕೆಗಳು ಸೈಮನ್ ಕಮಿಷನ್ನಿನ ವಿಷಯವಾಗಿ ಬಹಿಷ್ಕಾರದ ಸದ್ದಿಯೊಂದನ್ನು ಬಿಟ್ಟು ಇನ್ನು ಏನನ್ನೂ ಪ್ರಕಟಿಸುತ್ತಿಲ್ಲ. ಆತ್ಮ ಮರ್ಯಾದೆಯೆಂದರೆ ಹೀಗಿರಬೇಕು. ನಮ್ಮ ಮೈಸೂರಿನಲ್ಲಿಯೂ ಪತ್ರಿಕೆಗಳು ಆತ್ಮಮರ್ಯಾದೆಯಿಂದ ವರ್ತಿಸಬೇಕೆಂಬುದು ನಮ್ಮ ಪ್ರಾರ್ಥನೆ.

ಬೆಂಗಳೂರು ಡಿಸ್ಟ್ರಿಕ್ಟ ನಾರ್ಮಲ್ ಸ್ಕೂಲ್

ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಬಿನ್ನವತ್ತಳೆಗೆ ರುಜು ಮಾಡುವದರಲ್ಲಿ ತಾವೂ ಸಹ ಸೇರಿರುವುದಾಗಿ ಹೇಳಿಕೊಂಡು 24 ಜನ ಉಪಾಧ್ಯಾಯರುಗಳು ಮುಂದೆ ಬಂದಿದ್ದರಷ್ಟೆ ? ಈಗ ಅವರುಗಳು ಪರೀಕ್ಷೆಗೆ ಹಣ ಕಟ್ಟಬೇಕಾಗಿರುವುದರಿಂದ ಆರು ಜನ ಉಪಾಧ್ಯಾಯರುಗಳಿಗಾದಂತೆ ತಮಗೂ ಡಿಸ್ಮಿಸ್ ಆಗುವ ಪಕ್ಷದಲ್ಲಿ ತಮಗೆ ಪರೀಕ್ಷೆಯ ಹಣವು ಲುಕ್ಸಾನಾಗುತ್ತದೆಂತಲೂ ಈ ಕ್ಷಾಮಗಾಲದಲ್ಲಿ ತಾವು ಅಂಥ ಲುಕ್ಸಾನನ್ನು ಅನುಭವಿಸಲು ಶಕ್ತರಾಗಿಲ್ಲವೆಂತಲೂ ತಮಗೆ ಯಾವುದಾದರೂ ಒಂದು ಕಡ್ಡಾಯವಾದ ಜವಾಬನ್ನು ಕೊಡಬೇಕೆಂತಲೂ ಡೈರೆಕ್ಟರವರಿಗೆ ಬರೆದು ಕೊಂಡಿರುವರಂತೆ.

ಅಖಿಲ ರಾಜಕೀಯ ಪರಿಷತ್ತು.

ಮ|| ಡಿ. ವಿ. ಗುಂಡಪ್ಪನವರೇ ಮೊದಲಾದ ಮಹಾಜನಗಳು ಈ ತಿಂಗಳು 22 ನೇ ತಾರೀಖಿನಲ್ಲಿ ಕಲ್ಕತ್ತಾದಲ್ಲಿ ನಡೆಯುವ ಅಖಿಲ ಭಾರತ ರಾಜಕೀಯ ಸಮ್ಮೇಳನಕ್ಕೆ ಒಂದು ವಿಜ್ಞಾಪನೆಯನ್ನು ಕಳುಹಿಸಿರುವರು. ಅದರಲ್ಲಿ ಕೇಳಿ ಕೊಂಡಿರುವುದೇನಂದರೆ, ಬ್ರಿಟಿಷ್ ಇಂಡಿಯಾದಲ್ಲಿ ಹೇಗೆ ಹಾಗೆ ಪ್ರಜಾ ಪ್ರಭುತ್ವದ ಮತ್ತು ಸಾಂಕುಶಧರ್ಮದ ರಾಜ್ಯ ಪದ್ಧತಿಯು ಏರ್ಪಡಿಸಲ್ಪಡುತ್ತದೆಯೋ ಹಾಗೆಯೇ ದೇಶೀಯ ಸಂಸ್ಥಾನಗಳಲ್ಲಿಯೂ ಏರ್ಪಡಿಸಲ್ಪಡಬೇಕು. ಮುಂದೆ ತಯಾರಾಗುವ ಅಖಿಲ ಭಾರತ ರಾಜಕೀಯ ರಚನೆಯಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳಿಗೂ ಸ್ಥಾನವೂ ಅಧಿಕಾರವೂ ದೊರೆತು ಅಖಿಲ ಭಾರತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅವರ ಅಭಿಪ್ರಾಯಕ್ಕೂ ಮನ್ನಣೆಯು ದೊರೆಯುವಂತೆ ಏರ್ಪಾಡನ್ನು ಮಾಡಬೇಕು.

ಇದು ನಿಜವೇ ?

ಈ ತಿಂಗಳು 12 ನೇ ತಾರೀಖಿನ ಈವ್ನಿಂಗ್ ಮೇಲ್ ಪತ್ರಿಕೆಯಲ್ಲಿ ಹೀಗೆ ಬರೆದಿದೆ— ಕಳೆದ ಭಾನುವಾರ ವಿಚಾರಣೆಯ ಕಮಿಟಿಯಲ್ಲಿ ಅಧ್ಯಕ್ಷರಿಗೂ, ಮ|| ನಾಗಪ್ಪನವರಿಗೂ ಜೋರುಜೋರಾದ ಮಾತು ಕಥೆಗಳಾಗಿ ನಾಗಪ್ಪನವರು ರೋಷಾವೇಶದಿಂದ ಹೊರಗೆ ಬಂದರೆಂದೂ ತಮ್ಮ ಮೋಟಾರು ಡ್ರೈವರನ್ನು ಕರೆದು ಮೋಟಾರಿನಲ್ಲಿ ಕುಳಿತು ಹೊರಟು ಹೋದರೆಂದೂ ಬರೆದಿದೆ. ಇದು ನಿಜವೇ ?

[illegible]ಗ ವಿದ್ಯಾರ್ಥಿಗಳ ಸಭೆ.

ನಮ್ಮ ಸಂಸ್ಥಾನದ ಅಖಿಲ ಒಕ್ಕಲಿಗ ವಿದ್ಯಾರ್ಥಿಗಳ ನಾಲ್ಕನೆಯ ಸಮ್ಮೇಳನವು ಚನ್ನಪಟ್ಟಣದಲ್ಲಿ ತಿಂಗಳಿನ 8-9 ನೇ ತಾರೀಖುಗಳಲ್ಲಿ ನಡೆಯಿತು. [illegible]ಭ್ಯಾಸದ ಇಲಾಖೆಯ ಡೈರೆಕ್ಟರಾದ ಮ|| ಎಸ್. [illegible] ಸುಬ್ಬರಾಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. [illegible]ಗಳಾದ ಮಹಮದ್ ಹನೀಫರೂ, H. C. ದಾಸ[illegible]ರೂ, K T. ಭಾಷ್ಯಂ ಅಯ್ಯಂಗಾರ್ಯರೂ, [illegible]ಟಪ್ಪನವರೂ, ಶ್ರೀಮತಿ ಆರ್. ಕಲ್ಯಾಣಮ್ಮ[illegible] ವಿದ್ಯಾರ್ಥಿಗಳಿಗೆ ಉಪದೇಶವನ್ನು ಮಾಡಿದರು. [illegible]ಟಗಳೂ ಪಂದ್ಯಗಳೂ ನಡೆದವು.

ನಮ್ಮ ಸಂಸ್ಥಾನದ ಜನಸಂಖ್ಯೆಯಲ್ಲಿ ಶೇಕಡ[illegible]ಕ್ಕಿಂತಲೂ ಹೆಚ್ಚಾಗಿ ಒಕ್ಕಲಿಗರೇ ಇರುವರು. [illegible] ಅಭಿವೃದ್ಧಿಗೆ ಬಂದರೆ ನಮ್ಮ ಸಂಸ್ಥಾನವೇ ಮುಂದೆ[illegible]ದಂತಾಗುವುದು ಇವರಲ್ಲಿ ಸಂಘ ಶಕ್ತಿಯೂ [illegible]ಭಿರುಚಿಯೂ ಹೆಚ್ಚುತ್ತಿರುವುದು ಎಲ್ಲರಿಗೂ ಸಂತೋಷಕರವು. ಅವರು ತಮಗೆ ಅನುಚಿತವಾಗಿ [illegible] ವ್ಯವಸಾಯ ಮತ್ತು ಉದ್ಯೋಗದ ಕಸಬನ್ನು [illegible] ಈಗಿನ ನವ ನಾಗರೀಕತೆಯಲ್ಲಿ ಉತ್ತಮವಾಗಿ[illegible]ದನ್ನು [illegible]ರಿಸಿಕೊಳ್ಳುವರೆಂದು ನಂಬುತ್ತೇವೆ.

ಮಂತ್ರಿಗಳ ನೇಮಕ.

ಈ ತಿಂಗಳು 12 ನೇ ತಾರೀಖಿನ ಈವ್ನಿಂಗ್ [illegible]ಲ್ ಪತ್ರಿಕೆಯು ಮೇಲಿನ ವಿಷಯವಾಗಿ ಒಂದು [illegible] ಲೇಖನವನ್ನು ಪ್ರಕಟಿಸಿರುವುದು, ರಾಜ ಪ್ರಭುತ್ವ[illegible] ಪ್ರತಿಯೊಂದು ರಾಜ್ಯದಲ್ಲಿಯೂ ಮಂತ್ರಿಗಳನ್ನು [illegible] ಜಾಗರೂಕತೆಯಿಂದ ನೇಮಿಸಬೇಕೆಂದೂ, ಸಮರ್ಥ[illegible]ದನರನ್ನು ನೇಮಿಸದೆ ಹೋದರೆ ರಾಜ್ಯಾಡಳಿತವು [illegible] ಪ್ರಜೆಗಳಲ್ಲಿ ಅಸಮಾಧಾನವು ಹರಡಲು ಅವಕಾಶವಾ[illegible]ವುದೆಂದೂ, ಬರೆದಿರುವರು, ಪ್ರಜಾಪ್ರಭುತ್ವವುಳ್ಳ ರಾಜ್ಯಗಳಲ್ಲಿ ಮಂತ್ರಿಗಳು ಪ್ರಜೆಗಳಿಂದಲೇ ಚುನಾಯಿಸಲ್ಪಡುವುದರಿಂದ ಆ ಮಂತ್ರಿಗಳು ಅಯೋಗ್ಯರೆಂದೂ, [illegible]ಸಮರ್ಥರೆಂದೂ, ಗೊತ್ತಾದರೆ ಪ್ರಜೆಗಳೇ ಅವರ[illegible] ಕಿತ್ತುಹಾಕಿ ಬೇರೊಬ್ಬರನ್ನು ಚುನಾಯಿಸುವರು. [illegible] ರಾಜಪ್ರಭುತ್ವವುಳ್ಳ ರಾಜ್ಯಗಳಲ್ಲಿ ಈ ರೀತಿಯ[illegible] ಅಧಿಕಾರವು ಇರುವುದಿಲ್ಲ. ಆದುದರಿಂದ ರಾಜರು[illegible] ಬಹಳ ಜಾಗರೂಕತೆಯಿಂದ ಮಂತ್ರಿಗಳ ವಿಷಯವಾಗಿ ನಡೆದುಕೊಳ್ಳಬೇಕು. ನಮ್ಮ ಪ್ರಾಚೀನ ಹಿಂದೂ ರಾಜ್ಯಾಂಗಗಳಲ್ಲಿ ಮಂತ್ರಿಯ ಸ್ಥಾನವು ಬಹಳ [illegible]ಪ್ರಮುಖವಾಗಿತ್ತು. ರಾಜನಿಗಿರುವ ಮೂರು ಮುಖ್ಯ ಶಕ್ತಿಗಳಲ್ಲಿ ಮಂತ್ರಿ ಶಕ್ತಿಯು ಹಿರಿದಾದುದು. ರಾಜನಿಗಿರುವ ಸಪ್ತವ್ಯಸನಗಳಲ್ಲಿ, ವ್ಯಸನವೆಂದರೆ ವಿಪತ್ತು, ದುರ್ಮಂತ್ರಿಯೂ ಕೂಡಾ ಒಂದು ದೊಡ್ಡ ವಿಪತ್ತು. ಆದುದರಿಂದ ಈಗಿನ ರಾಜ್ಯಪದ್ಧತಿಯನ್ನಾಗಲೀ ಪುರಾತನ ರಾಜ್ಯಪದ್ಧತಿಯನ್ನಾಗಲೀ ಚೆನ್ನಾಗಿ ಪರಿಶೀಲಿಸಿದರೆ ಮಂತ್ರಿ[illegible] ನೇಮಕವು ಬಹಳ ಪ್ರಾಮುಖ್ಯ ಭಾಗವೆಂಬುದು [illegible]ಗುವುದು.

ಈ ತತ್ವನ್ನು ನಮ್ಮ ಮೈಸೂರಿಗೆ ಅನ್ವಯಿಸಿ [illegible]ವ್ನಿಂಗ್ ಮೇಲ್ ಪತ್ರಿಕೆಯು ಕೊಡುವ ಅಭಿಪ್ರಾಯ[illegible]ವೇನಂದರೆ, ಬೆಂಗಳೂರು ಗಲಭೆಗಳ ಅನಂತರ ಪ್ರಜೆ[illegible]ಳಿಗೆ ಈಗಿನ ಮಂತ್ರಿಮಂಡಲದ ಸಾಮರ್ಥ್ಯದಲ್ಲಿಯೂ ಕರ್ತವ್ಯ ತತ್ಪರತೆಯಲ್ಲಿಯೂ ಸಂದೇಹ ಉಂಟಾಗಿದೆ. ಆದುದರಿಂದ ಶ್ರೀಮನ್ ಮಹಾರಾಜರವರು ಈ ಭಾಗವನ್ನು ಚೆನ್ನಾಗಿ ಆಲೋಚಿಸಿ ಮಂತ್ರಿಮಂಡಲವನ್ನು ಬದಲಾಯಿಸಬೇಕೆಂದು ಈವ್ನಿಂಗ್ ಮೇಲ್ ಪತ್ರಿಕೆಯು ಪ್ರಾರ್ಥಿಸುತ್ತದೆ.

Regd·No. M. 2322

॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು]

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ...

ಸಂಪುಟ ೧]   ಮಂಗಳವಾರ ೧೮ ಡಿಸೆಂಬರ್ ೧೯೨೮   [ಸಂಚಿಕೆ ...

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ರಾಡ್ಸ್ ಮೈಸೂರು.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet,
Bangalore City.

2 Koppada Ramakrishniah Agent Hassan

3 Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Building
Mysore.

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings,
Mysore.

8 H Subba Rao C/o B Same Gowda & Sons
Sakaleshpur

9 H Naganniah News Agent
Chikmagalur

10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri RamaPress, D. Subbiah Road Mysore

ತಾಯಿನಾಡು.

18—12—1928.

ಜಾಮೀನು ಮೊಕದ್ದಮೆ ವಾಪಸು ತೆಗೆದುಕೊಳ್ಳಲ್ಪಟ್ಟಿತು.

ಅಬ್ಬಾಸ್ ಖಾನರ ಪಿತೂರಿಕತೆ ಶುದ್ಧ ಸುಳ್ಳು.

(ತಂತೀ ಮುಖಾಂತರ)

ಬೆಂಗಳೂರು ತ್ರಿಮೂರ್ತಿಗಳ ಮೇಲೆ ಮಾಡಿದ್ದ ಜಾಮಿನು ಮೊಕದ್ದಮೆಯು ನಿನ್ನೆ ದಿನ ಸರ್ಕಾರದವರಿಂದ ವಾಪಸು ತೆಗೆದುಕೊಳ್ಳಲ್ಪಟ್ಟಿತು. ಸರ್ಕಾರವನ್ನು ತಲೆಕೆಳಗು ಮಾಡುವ ಉದ್ದೇಶವುಳ್ಳ ಗುಪ್ತಸಂಘವಿರುವುದೆಂಬ ಕಟ್ಟು ಕಥೆಯನ್ನು ಸರ್ಕಾರದವರು ನಂಬುವುದಿಲ್ಲವೆಂದು ಸರ್ಕಾರದ ಕಡೆಯ ಲಾಯರು ತಿಳಿಸಿದರು ಮತ್ತು ಅಪರಾಧಿಗಳ ತಪ್ಪನ್ನು ರುಜುವಾತು ಮಾಡುವುದಕ್ಕಾಗುವುದಿಲ್ಲವೆಂದು ಒಪ್ಪಿಕೊಂಡರು. ಆದುದರಿಂದ ಅಪರಾಧಿಗಳನ್ನು ಗೌರವದಿಂದ ಖುಲಾಸೆ ಮಾಡಬೇಕೆಂದು ಪ್ರಾರ್ಥಿಸಿದರು. ಇದಕ್ಕೆ ಅಪರಾಧಿಗಳು ಒಪ್ಪಿಕೊಂಡಿದ್ದರಮೇಲೆ, ನ್ಯಾಯಾಧೀಶರು ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆ ಕೊಟ್ಟರು. ಮೊಕದ್ದಮೆ ವಾಪಸು ತೆಗೆದುಕೊಳ್ಳಲ್ಪಟ್ಟಿತು. ಊರಲ್ಲೆಲ್ಲಾ ಬಹಳ ಕೋಲಾಹಲವುಂಟಾಗಿದೆ.

ದೇಶಬಂಧು ನಗರ.

ಪಾರ್ಕ್ ಸರ್ಕಸಿನ ಬಳಿ ಇರುವ ವಿಶಾಲವಾದ ಮೈದಾನದಲ್ಲಿ ದೇಶಬಂಧು ನಗರವು ಹೊಸದಾಗಿ ನಿರ್ಮಿಸಲ್ಪಟ್ಟಿದೆ. ಈ ಸಭಾಮಂಟಪವು ಹಿಂದಿನ ಸಭೆಗಳ ಮಂಟಪಗಳಿಗಿಂತ ಅತ್ಯಂತ ವಿಶಾಲವಾಗಿದೆ. ಉಪನ್ಯಾಸಕರ ಭಾಷಣಗಳನ್ನು ಎಲ್ಲರೂ ಕೇಳುವಂತೆ ಲೌಡ್ ಸ್ಪೀಕರ್ಸ್ (Loud speakers) ಎಂಬ ಯಂತ್ರಗಳು ಸ್ಥಾಪಿಸಲ್ಪಟ್ಟಿವೆ. ಸ್ತ್ರೀಯರಿಗೂ, ಪ್ರೇಕ್ಷಕರಿಗೂ, ಮತ್ತು ಪ್ರತಿನಿಧಿಗಳಿಗೂ, ಮಂಟಪದ ಹೊರಗೆ ಬಿಡಾರಗಳು ಮಾಡಲ್ಪಟ್ಟಿವೆ. ಅಲ್ಲಿ ಉದ್ಯಾನ ವನಗಳೂ, ಫಲಾಹಾರ ಮಂದಿರಗಳೂ ಮತ್ತು ವಿಶ್ರಾಂತಿ ಸ್ಥಳಗಳೂ ಏರ್ಪಟ್ಟಿವೆ. ಈ ದೊಡ್ಡ ಕಾಂಗ್ರೆಸ್ ಮಂಟಪವಲ್ಲದೆ ಕಾರ್ಯಕಾರಿ ಸಂಸ್ಥೆ ಮತ್ತು ಇತರ ಸಂಸ್ಥೆಗಳ ಮೀಟಿಂಗುಗಳನ್ನು ನಡೆಸುವುದಕ್ಕೆ ಸುಂದರವಾದ ಕೆಲವು ಮಂಟಪಗಳು ನಿರ್ಮಿಸಲ್ಪಟ್ಟಿವೆ.

ವಿದೇಶೀಯರಿಗೆ ಜಮೀನು.

ವಿದೇಶೀಯರಿಗೆ ತಿರುವನಂತಪುರ ರಾಜ್ಯದಲ್ಲಿ ಇಷ್ಟಕ್ಕಿಂತ ಹೆಚ್ಚಿಗೆ ಸ್ಥಳವನ್ನು ಕೊಡಬಾರದೆಂದೂ, ಊರವರು ವಿದೇಶಿಯರಿಗೆ ಜಮೀನನ್ನು ಮಾರಲೇ ಬಾರದೆಂದೂ ಇದ್ದ ಸೂಚನೆಗಳು ಆ ರಾಜ್ಯದ ಕೌನ್ಸಿಲಿನಲ್ಲಿ ಬಹುಮತ ದೊರೆಯದೆ ಬಿದ್ದು ಹೋದವು.

ವಿಶ್ವೇಶ್ವರಯ್ಯ ಕಮಿಟಿ ವರದಿ

ಕಮಿಟಿಯವರು ತಮ್ಮ ವರದಿಯನ್ನು 14 ನೇ ತಾರೀಖಿನ ದಿನ ಸರ್ಕಾರಕ್ಕೆ ಕಳುಹಿಸಿಕೊಟ್ಟರೆಂದು ತಿಳಿಯ ಬರುತ್ತದೆ. ಅದನ್ನು ಪ್ರಕಟನೆ ಮಾಡುವರೋ ಇಲ್ಲವೋ ಗೊತ್ತಿಲ್ಲ. ಪ್ರಕಟನೆ ಮಾಡದೆ ಹೋದರೆ ಅದರಲ್ಲಿ ಸರ್ಕಾರದವರಮೇಲೆಯೂ ಅಧಿಕಾರಿಗಳ ಮೇಲೆಯೂ ಏನೋ ಬಹಳ ಅಪಾಯವಾದ ಸಂಗತಿಗಳು ಬರೆಯಲ್ಪಟ್ಟಿಯೆಂಬುದು ವ್ಯಕ್ತವಾಗುವುದು. ಆ ಅಪಾದನೆಗಳನ್ನು ಮುಚ್ಚಿಟ್ಟುಕೊಳ್ಳುವುದಕ್ಕಿಂತ ಸರ್ಕಾರದರು ಅವುಗಳನ್ನು ಹೊರಗೆ ಬಹಿರಂಗವಾಗಿ ತೊಳೆದು ಕೊಳ್ಳುವುದು ಮೇಲು. ಹುಣ್ಣನ್ನು ಒಳಗೆ ಅಡಗಿಸಿ ಬಚ್ಚಿಟ್ಟುಕೊಂಡರೆ ಅದರಿಂದ ಶರೀರವು ಕೊಳೆತು ನಾರುವುದು. ನಿಜವಾಗಿಯೂ ಸರ್ಕಾರದವರು ತಪ್ಪುಮಾಡಿದರೆಂದು ವರದಿಯಲ್ಲಿದ್ದರೆ ಅದನ್ನು ಪ್ರಕಟನೆಮಾಡುವುದರಿಂದ ಕಡಿಮೆ ಅಪಾಯ. ಸರ್ಕಾರದವರು ಬೆಂಗಳೂರು ಗಲಭೆಗಳ ವಿಷಯದಲ್ಲಿ ಮಾಡಿರುವ ಮಹಾ ಅಪರಾಧಗಳು ಅನೇಕವಾಗಿರುವುವು. ಅದಕ್ಕಾಗಿ ಅವರಿಗೆ ಬಹಿರಂಗವಾಗಿ ಪ್ರಾಯಶ್ಚಿತ್ತವಾಗಬೇಕು. ಪ್ರಾಯಶ್ಚಿತ್ತದಿಂದ ಸರ್ಕಾರವು ಪುನೀತವಾಗುವುದು.

ಈಗಾಗಲೇ ಏನೇನೋ ಸಮಾಚಾರಗಳು ಹೊರಟುಬಿಟ್ಟಿವೆ. ಯಾವುದನ್ನು ನಂಬಬೇಕೋ ಗೊತ್ತಿಲ್ಲ. ಸ್ವರಾಜ್ಯಪತ್ರಿಕೆಯಲ್ಲಿ ಕಮಿಟಿಯ ವರದಿಯ ವಿಷಯವಾಗಿ ಏನೇನೋ ಹೇಳಲ್ಪಟ್ಟಿವೆ. ಅದರಲ್ಲಿ ಹೇಳುವುದೇನೆಂದರೆ— ಕಮಿಟಿಯ ವರದಿಯು ಐಕಮತ್ಯವಾದ ಅಭಿಪ್ರಾಯದಿಂದ ಕೂಡಿದೆ ಜುಲೈ 30 ನೇ ತಾರೀಖಿನ ರಾತ್ರಿ ಹಿಂದುಗಳು ರೇಗಿಸಿದ್ದರಮೇಲೆಯೇ ಮಹಮ್ಮದೀಯರು ಪ್ರತೀಕಾರ ಮಾಡಿದರು. ಗುಂಡೇಟೂ ಎರಡು ಕಡೆಗಳಿಂದಲೂ ಬಂದಿತು. ಅಬ್ಬಾಸ್ ಖಾನರ ಮನೆಯ ಮಹಡಿಯಿಂದ ಬಂದಿತೋ ಇಲ್ಲವೋ ನಿರ್ಧಾರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಕರ್ತವ್ಯ ಲೋಪವನ್ನು ಮಾಡಿದರು ಜುಲೈ 30 ನೇ ತಾರೀಖಿನ ಅನಂತರ ಸರ್ಕಾರದವರು ಮುಂದಾಲೋಚನೆಯು ಇಲ್ಲದೆ ನಡೆಸಿದ ಕೆಲವು ನಡೆವಳಿಕೆಗಳಿಂದ ಚಳುವಳಿಯು ಪ್ರಬಲಿಸಿತು.' ಪತ್ರಿಕೆಗಳೂ ಕೂಡ ಸ್ವಲ್ಪಮಟ್ಟಿಗೆ ಚಳುವಳಿಗೆ ಕಾರಣಕರ್ತವಾಗಿವೆಯೆಂದು ವಿಶ್ವಕರ್ಣಾಟಕಕ್ಕೆ ಸಮಾಚಾರವು ಬಂದಿದೆ ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳಾಗಬೇಕೆಂದೂ ಕಮಿಟಿಯವರು ಸಮರ್ಥಿಸಿರುವ ಹಾಗೆ ಕಂಡುಬಂದಿದೆ.

ಸುಬ್ರಹ್ಮಣ್ಯಂರವರಮೇಲೆ ಮೊಖದ್ದಮೆ.

ಇ. ಪಿ. ಕೋಡಿನ 153 ಎ ಕಲಮ್ಮನ್ನು ಅನುಸರಿಸಿ ಜಾತಿದ್ವೇಷವನ್ನು ಹರಡಿದ ಅಪಾದನೆಗಾಗಿ ಹೆಚ್. ವಿ ಸುಬ್ರಹ್ಮಣ್ಯಂರವರಮೇಲೆ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಚಾರ್ಜುಹಾಕಲ್ಪಟ್ಟಿದೆ. ಸುಬ್ರಹ್ಮಣ್ಯಂರವರು ಡಿಫೆನ್ಸನ್ನು ಮಾಡಿಕೊಳ್ಳದೆ ಒಂದು ವಾಙ್ಮೂಲವನ್ನು ಮಾತ್ರ ಕೊಡುವರು.

ವರ್ತಮಾನ ಸಂಗ್ರಹ

ಬಿಲ್ಕಾನೀರ ಮಹಾರಾಜರ ಮದುವೆ [illegible]

ಮದುವೆ ಯಾರಿಗೆ ಬೇಡ? ರಾಜರಿಗೂ ಬೇಕು. [illegible]ಲ್ಕಾನೀರಿನ ಮಹಾರಾಜರಿಗೂ ಬೇಕು. ಮೊದಲು [illegible] ಮದುವೆಯಾದರೆ ಇನ್ನು ಮದುವೆ ಬೇಡವೆಂಬ ಅರ್ಥವಲ್ಲ. 'ಸರ್ವೀಸು' ದಾರರಿಗೆ ಹಕ್ಕು ಹೆಚ್ಚು. ಅವರಿಗೆ ಮದುವೆಯಾಗಲ. ಪ್ರಾಯವೂ ಬಂದಿದೆ, ವರ್ಷ 47 ಆಗಿದೆ! ಏನದ್ದಿ ?

ಹುಡುಗಿ ಸಣ್ಣವಳಾದರೆ ಏನು ದೋಷ ಆಯುಸ್ಸೂ ಬಲಗಳೂ ವರ್ಧಿಸಬೇಕಾದರೆ 'ಬಾಲೆ' ಯೇ ಆಗಬೇಕು. ಮಹಾರಾಜರಿಗೆ ಪ್ರಾಯ ಮುಗಿಯುತ್ತಾ ಬಂದದೆ! ಇನ್ನೂ ತಡಮಾಡಿದರೆ ಮತ್ತೆ ಯಾಕೆ ? ಆಕ್ಷೇಪದಲ್ಲಿ ಅರ್ಥವಿಲ್ಲ!

ಹುಡುಗಿಯನ್ನು ಹುಡುಕುವವರು ಒಬ್ಬ ರಜಪೂತನ ಮನೆಗೆ ಬಂದರು. ಆವನ ಮಗಳನ್ನು ಕಂಡರು; ಸುಂದರಿ! ಪ್ರಾಯ! 13 ಭೇಷ್! ಮಹಾರಾಜರಿಗೆ ಅನುರೂಪ ವಧು . 47+13=60! ಸರಿ ಆಗುತ್ತೆ!!

ಮದುವೆ ನಿಶ್ಚಯವಾಯಿತು. ಮಹಾರಾಜರ ಮೀಸೆ ದಿನ ದಿನಕ್ಕೆ ಕಪ್ಪಾಯಿತು. ಆದರೆ? ರಾಗ ಬರುವಾಗ ತಂತಿಯು ತುಂಡು!

ಮಹಾರಾಜರ ಮಾವನಾಗುವವನು ಹೇಳುತ್ತಾನೆ— ಮುದುಕನಿಗೆ ಹುಡುಗಿ ಕೊಡುವುದು ನಮ್ಮ ಜಾತಿಯಲ್ಲಿಲ್ಲ. ಆದರೂ ರಾಜರ ಮಟ್ಟಿಗೆ ವಿಚಾರವೇಕೆಂದು ಮಾಡಿದ್ದೆ. ಈಗ ಜಾತಿಯವರು ಬಿಡುವುದಿಲ್ಲ. ಅಲ್ಲದೆ,....ಅಲ್ಲದೆ....ಹುಡುಗಿ ಕೇಳುವುದಿಲ್ಲ. 'ಮುದಿ ಗಂಡ ಬೇಡಾ' ಎಂದು ಕೂಗುತ್ತಾಳೆ!

ಕೊಡದಿದ್ದರೆ ಬೇಡ! ನಿನ್ನ ಹುಡುಗಿ ಹಾಳು!! ರಾಜರಿಗೊಬ್ಬ ಮಾವನನ್ನು ಹಿಡಿದೊಪ್ಪಿಸದೆ ಬಿಡೆವು ಎಂದು ಹುಡುಕುವವರು ಬೇರೆ ರಾಜ್ಯಕ್ಕೆ ಕುದುರೆ ಬಿಟ್ಟಿದ್ದಾರೆ

—ಸ್ವೈರ.

ಕಾಲ್ನಡೆಗಳ ಉತ್ಪತ್ತಿ.

ಅಜ್ಜಂಪುರದ ಬಳಿ ಇರುವ ಪರ್ವತರಾಯನ ಕೆರೆಯಲ್ಲಿರುವ ಅಮೃತಮಹಲು ಕಾವಲಿನಲ್ಲಿ ಕಾಲ್ನಡೆಗಳ ಉತ್ಪತ್ತಿಗಾಗಿ ಸರ್ಕಾರದವರು ೬೦೦೦ ರೂ ಗಳನ್ನು ಮಂಜೂರ್ಮಾಡಿದ್ದಾರೆ.

ಭೂಕಂಪ.

ಚಿಲಿ (ದಕ್ಷಿಣ ಅಮೇರಿಕ) ರಾಜ್ಯದಲ್ಲಿ ಒಂದು ವಿಜನರ ತನಕ ಭೂಕಂಪವಾಯಿತು. ಎರಡು ಪಟ್ಟಣಗಳೂ ಒನಿಡು ಬಂದರುಗಳಲ್ಲಿ ಹಾನಿಗೊಂಡವೆ. ಸುಮಾರು 55೦ ಜನರು ಹತಾಹತರಾಗಿರಬೇಕೆಂದು ಊಹೆ. ಟಾಲ್ಕಾ ಎಂಬ ಊರೇ ಇಲ್ಲವಾಯಿತು

ಸೈನಿಕ ಶಿಕ್ಷೆ.

ಸೈನಿಕ ಡ್ರಿಲ್ ತರಬೇತುಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ೧೬—೨೦ [illegible] ವಯಸ್ಸುಗಳಲ್ಲಿ ಕಡ್ಡಾಯವಾಗಿ ಕೊಡಿಸಬೇಕಾಗಿ ಅಸೆಂಬ್ಲಿಯಲ್ಲಿ ಸೂಚನೆಗಳುಂಟು.

ಫ್ರೆಂಚ್ ಸೈನಾಧ್ಯಕ್ಷರು.

ಫ್ರೆಂಚ ಸೈನ್ಯಾಧ್ಯಕ್ಷರು ವೈಸ್ರಾಯರ [illegible] ಈ ದೇಶಕ್ಕೆ ಸಂದರ್ಶನಾರ್ಥವಾಗಿ ಈ [illegible] ಬರುವರು.

TAI NADU
18-12-28

ಮಹಾರಾಜರುಗಳ ಸ್ಥಾನ

[illegible] ರಾಜಕೀಯ ರಚನೆಯ [illegible] ಮಹಾರಾಜರುಗಳ ಸ್ಥಾನವು ತಪ್ಪದೆಂ [illegible] ಬಹಳ ಚರ್ಚೆಯು ನಡೆಯುತ್ತಿರುವುದು. ರಾಜರುಗಳು ತಾವು ಇಂಡಿಯಾ [illegible] ಅಧೀನವಲ್ಲವೆಂದೂ ಚಕ್ರವರ್ತಿಗಳಿಗೆ ಮಾತ್ರ ಅಧೀನರೆಂದೂ, [illegible] ಚಕ್ರವರ್ತಿಗಳ ಒಡನೆ ಇವೆಯೇ ಹೊರತು ಯಾವ ಸರ್ಕಾರದೊಂದಿ [illegible] ಇಲ್ಲವೆಂದೂ ಹೇಳುತ್ತಿರುವರು. ಆದರೆ ಹೊರ ಜಿಂದಗೆ ಕಾಗದದ ಮೇಲೆ ಇವರು ಚಕ್ರವರ್ತಿಗಳಿಗೆ ಮಾತ್ರ ಅಧೀನವೆಂದು ಇದ್ದರೂ, ವಾಸ್ತವ್ಯವಾಗಿ [illegible] ಇಂಡಿಯಾ ಸರ್ಕಾರಕ್ಕೆ ಅಧೀನರು. ನೈಜಾಮರ ವಿಷಯದಲ್ಲೂ, ಹೋಳ್ಕರ್‌ರವರ ವಿಷಯದಲ್ಲೂ ನಾಭಾಮಹಾರಾಜರ ವಿಷಯದಲ್ಲೂ ಭರತಪುರ್ [illegible] ಸರ್ಕಾರದ [illegible] ಅಧೀನರಾಗಿರುವರೆಂಬ [illegible] ಚಕ್ರವರ್ತಿಗಳಿಗೆ [illegible] ಕಾರಣವೇನು? [illegible] ಇಂಡಿಯಾ ಸರ್ಕಾರದವರು ಪ್ರವೇಶಿಸಬಾರದೆಂಬ ಹೆದರಿಕೆಯು ರಾಜರಿಗೆ ಇರುವುದು.

ಈಗ ಬ್ರಿಟಿಷ್ ಇಂಡಿಯಾದ ಮಹಾಜನಗಳು ಸ್ವ[illegible] ಇಂಡಿಯಾ [illegible] ಇರುವ [illegible] ಇಂಡಿ[illegible] ಈ ಘಂ[illegible] ಭರ[illegible] ಕಲೆತು ಕೆಲಸಮಾಡಲು ಅವಕಾಶವಾಗುವುದು. ಇಂಡಿಯಾ ದೇಶವು ಅಖಂಡವಾಗಿ ಸ್ವತಂತ್ರವಾದ ಒಂದು ರಾಷ್ಟ್ರವಾಗುವುದು. ಹಾಗಲ್ಲದೆ ರಾಜರ [illegible] ಒಂದು ಪಾರ್ಟಿಯೆಂದು ಇಂಡಿಯಾ ದೇಶದ ರಾಷ್ಟ್ರದ ಅಖಂಡತ್ವಕ್ಕೆ ಭಂಗವನ್ನು ತರಲು ಪ್ರಯತ್ನಿಸಿ [illegible] ಅವರಿಗೆ ಜಯವು ದೊರೆಯಲಾರದು. ರಾಜರುಗಳು ತಾವು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ತಮ್ಮ ಪ್ರಜೆಗಳನ್ನು ಮುಂದೆ ತೆಗೆದುಕೊಂಡು ಬ್ರಿಟಿಷ್ ಇಂಡಿಯಾದ ಪ್ರಜೆಗಳೊಡನೆಯೂ ಸಹಕರಿಸಿ ನಡೆದರೆ ಅವರಿಗೂ ಮೇಲು ಎಲ್ಲರಿಗೂ ಮೇಲು ಈ ವಿಷಯವಾಗಿ ಸುಪ್ರಸಿದ್ಧರಾದ ಭಾರತೀಯರು ರಾಜರುಗಳಿಗೆ ಬುದ್ಧಿವಾದವನ್ನು ಹೇಳುತ್ತಿದ್ದಾರೆ. ಇದು ಫಲಿಸಲೆಂದು ನಾವು ಹಾರೈಸುತ್ತೇವೆ.

ಮೈಸೂರು ಸಂಸ್ಥಾನದ ಮುಜರಾಯಿ ಕಮಿಷನರ್

ರವರ ಸಮಕ್ಷಕ್ಕೆ

ಸ್ವಾಮಿ—

ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದ ಹೊರನಾಲ್ಕು ಅಂಕಣದ ಪ್ರವೇಶವನ್ನು ವಾಗ ಅಲ್ಲಿನ ಪಾರುಪತ್ತೇಗಾರ್ರವರೂ ಮತ್ತು ಪೇಷ್ಕಾರ್ರವರೂ ಸರ್ಕಾರೀ ಪರವಾಗಿ ತಡೆದ ಸಂಗತಿಯು ಇಡೀ ಹಳೇನಾಡು ಕರ್ಣಾಟಕ ಬ್ರಾಹ್ಮಣರ ಸಂಗಡಕ್ಕೇ ಅವಮಾನವನ್ನುಂಟುಮಾಡಿದೆ. ಈ ವಿಷಯವಾಗಿ ನಾನು ಮತ್ತು ನಮ್ಮ ಜನಾಂಗದವರು ಲಿಖಿತ ಮೂಲಕವಾಗಿಯೂ, ಪ್ರತ್ಯಕ್ಷವಾಗಿಯೂ ಮತ್ತು ಡೆಪ್ಯುಟೇಷನ್ ಮೂಲಕವಾಗಿಯೂ ಪ್ರಾರ್ಥಿಸಿಕೊಂಡೆವು ನಮ್ಮಗಳಿಗೆ ಯಾವ ಉತ್ತರವೂ ದೊರೆಯಲಿಲ್ಲ. ನಮ್ಮ ಜನಾಂಗದಲ್ಲಿ ಹಾಹಾಕಾರವು ಪ್ರಾಪ್ತವಾಗಿದೆ. ಆಶೆಯು ನಿರಾಶೆಯಾಗಿದೆ. ಮಹಾಜನಗಳು ಸತ್ಯಾಗ್ರಹ ಮಾಡಬೇಕೆಂದು ನಿರ್ಧರಿಸಿ ಕೊಂಡಿರುತ್ತಾರೆ.

ನಾವು ಮಾಡಬೇಕೆಂದಿರುವ ಸತ್ಯಾಗ್ರಹವು ಇನ್ನು ಕೆಲವು ಕಾಲನೋಡಿ ನಮಗೆ ಸರಿಯಾಗಿ ನ್ಯಾಯವು ದೊರೆಯದಿದ್ದರೆ ಅಥವಾ ಬರೀ ಕಾಲಹರಣವಾಗುತ್ತಿದ್ದರೆ ನಾವುಗಳು ಸರ್ಕಾರಕ್ಕೂ ಮಹಾಜನಕ್ಕೂ ತಿಳಿಸಿ ಅನಂತರ ಗೊತ್ತು ಮಾಡಲ್ಪಟ್ಟ ದಿವಸ ಶ್ರೀಕಂಠೇಶ್ವರದೇವಸ್ಥಾನದ ಮುಂಭಾಗದಲ್ಲಿ ಸತ್ಯಾಗ್ರಹ ಮಾಡುತ್ತೇವೆ. ಆ ಕಾಲದಲ್ಲಿ ಸರ್ಕಾರದವರಾಗಲೀ ಮಹಾಜನಗಳಾಗಲೀ ಎಲ್ಲಿ ತಡೆದರೆ ಅಲ್ಲಿ ನಿಲ್ಲುತ್ತೇವೆ ನಮ್ಮ ಕಾರ್ಯಸಾಧನೆಯಾಗುವ ಪರ್ಯಂತರವೂ ಮತ್ತು ಪ್ರಾಣವಾಯುವು ಹಾರಿ ಹೋಗುವವರೆಗೂ ಸತ್ಯಾಗ್ರಹವನ್ನು ಆಚರಿಸುತ್ತೇವೆ. ಈ ವಿಷಯದಲ್ಲಿ ನಾವುಗಳು ಸರ್ಕಾರೀ ಆಜ್ಞೆಯನ್ನು ಉಲ್ಲಂಘಿಸುವವರಲ್ಲ. ಮಹಾಜನಗಳ ಮಾತನ್ನು ತಿರಸ್ಕರಿಸುವವರಲ್ಲ. ದೇವಾಲಯದ ನೌಕರರ ಮೇಲೆ ಕೋಪಿಸುವವರಲ್ಲ ಎದುರಾಳುಗಳು ಕೊಡುವ ಹಿಂಸೆಯನ್ನು ಅನುಭವಿಸುವೆವು, ಅಧಿಕಾರಿಗಳಿಂದ ಉಂಟಾಗುವ ಕಷ್ಟಗಳನ್ನು ಅನುಭವಿಸುವೆವು. ಶರೀರದ [illegible] ಒಂದು ಸಾರಿಗೆ [illegible] ಅಥವಾ ನಾಲ್ಕು ಮಂದಿ ಮಾತ್ರ ದೇವಾಲಯದ ಮುಂಭಾಗದಲ್ಲಿ ನಿಲ್ಲುವೆವು. ಅವರಿಗೆ ಈ ಸತ್ಯಾಗ್ರಹ [illegible] ನಾಲ್ಕು ಜನಗಳು ಬಂದು ಆ ಸ್ಥಳದಲ್ಲಿ ನಿಲ್ಲುವರು. ಇದೇ ರೀತಿ ಅಭಿಮಾನ ಉಳ್ಳ ಜನಗಳಿರುವ ಪರ್ಯಂತರವೂ ಸತ್ಯಾಗ್ರಹವು ನಡೆಯುವುದು. ಇದ್ದ ಸಂಗತಿಯನ್ನು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡಿರುತ್ತೇನೆ. ಇಷ್ಟು ಅದೃಷ್ಟಪರೀಕ್ಷೆಗೆ ಅವಕಾಶ ಕೊಡದೆ ಅಪ್ಪಣೆಯನ್ನು ದಯಪಾಲಿಸಬೇಕಾಗಿ ಮತ್ತೊಮ್ಮೆ ಪ್ರಾರ್ಥಿಸುತ್ತೇನೆ. ಆಗದಿದ್ದರೆ ಈಶ್ವರನ ಇಷ್ಟವಿದ್ದಂತಾಗಲಿ.

ತಮ್ಮ ವಿಧೇಯ

ತಗಡೂರು ರಾಮಚಂದ್ರರಾವ್

ನಿಜಾಮರು.

ಮೈಸ್ರಾಜ್ಯದೊಡನೆ ರಾಜ್ಯಾಡಳಿತವನ್ನು ಕುರಿತಾಗಿ ವಿಶೇಷ ಚರ್ಚೆಗಳನ್ನು ಮುಗಿಸಿ ಮರಳಿದ ನಿಜಾಮರು, ನಾನಾ ಹೊಸ ತಿದ್ದುಪಾಟುಗಳನ್ನು ಪ್ರಜೆಗಳ ಹಿತಕ್ಕಾಗಿ ಬ್ಯಾಂಗೆ ತರುವರೆಂದು ಪ್ರಜೆಗಳು ಸಂತೋಷಗೊಂಡಿರುವರು.

ಸ್ಟಾರ್ ಪತ್ರಿಕೆಯ ಮೇಲೆ ಮೊಕದ್ದಮೆ

ಸ್ಟಾರ್ ಪತ್ರಿಕೆಯ ಮೇಲೆ ಮೊಕದ್ದಮೆ.

ಬೆಂಗಳೂರು ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದ ರಾವ್ ಬಹದ್ದೂರ್ ಯಂ. ಶಾಮರಾಯರವರು ಬ್ರಾಹ್ಮಣ ಸಭೆಯ ಪರವಾಗಿ ಸ್ಟಾರ್ ಪತ್ರಿಕೆಯಲ್ಲಿ ಬರೆದಿರುವ ಲೇಖನಗಳನ್ನು ಕುರಿತು ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ಈ ಕೆಳಗಿನ ಅಭಿಪ್ರಾಯದ ಕಾಗದವನ್ನು ಬರೆದಿರುವರು. ಈಗ ಕೆಲವು ಕಾಲದಿಂದಲೂ ಸ್ಟಾರ್ ಪತ್ರಿಕೆಯಲ್ಲಿ ಬ್ರಾಹ್ಮಣ ಸಮುದಾಯದ ಮೇಲೆ ಬಹಳ ತುಚ್ಛವಾದ ಲೇಖನಗಳನ್ನು ಬರೆದಿರುವರು. ಈ ಲೇಖನಗಳಿಂದ ಬ್ರಾಹ್ಮಣ ಸಮುದಾಯಕ್ಕೂ ಬ್ರಾಹ್ಮಣೇತರ ಸಮುದಾಯಕ್ಕೂ ದ್ವೇಷ ಉಂಟಾಗುವ ಸಂಭವವಿದೆ. ಈ ಕೆಳಗಿನ ಕೆಲವು ಲೇಖನಗಳನ್ನು ಸರ್ಕಾರದವರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ.

1—9—1928 The Brahmin Bluster Contirbuted Engli[sh]

do A method in Madness Leader English.

3—10—1928 ಹಿಂದೂ ಮುಸಲ್ಮಾನರ ವೈರವೋ? ಬ್ರಾಹ್ಮಣರ ಭೇದೋಪಾಯವೋ?

do ಬ್ರಾಹ್ಮಣರ ಚಳವಳಿಯ ಉದ್ದೇಶವು ಹೊರಬಿದ್ದಿತು.

5—10—1928 ರಾಜದ್ರೋಹಿಗಳು ಯಾರು

20—10—1928 ಹಿಂದೂಮತ ವೈರಿಗಳು ಕಂಟಕರು ಯಾರು?

do ಭೂಸುರರರೋ ಅಸುರರೋ?

22—10—1928 ಗುಪ್ತ ಸಂಘಗಳೂ, ಗುಪ್ತ ಸ್ನಾನವೂ ನಡೆಯುತ್ತಿರುವುದೋ ಇಲ್ಲವೋ?

do ನೂತನ ಬ್ರಾಹ್ಮಣ್ಯ.

ಈ ಮೇಲಿನ ಲೇಖನಗಳೂ ಮತ್ತು ಆ ಪತ್ರಿಕೆಯು ಆಗಾಗ ಬರುತ್ತಿರುವ ಇನ್ನೂ ಇತರ ಲೇಖನಗಳು ಬ್ರಾಹ್ಮಣರಿಗೆ ವಿರೋಧವಾಗಿ ದ್ವೇಷವನ್ನು ಹರಡುತ್ತವೆ. ಈ ರೀತಿಯಾದ ಪ್ರಚಾರದಿಂದ ದೇಶದಲ್ಲಿ ಶಾಂತಿಗೆ [illegible] ಕುಂದಕ ಉಂಟಾಗುತ್ತ [illegible] ಈ ಪ್ರಚಾರವನ್ನು ನಿಲ್ಲಿಸುವುದಕ್ಕೆ ತಕ್ಕ ಬಂದೂಬಸ್ತನ್ನು ಮಾಡದಿದ್ದರೆ ದೇಶದ ಏಳಿಗೆಗೆ ಬಹಳ ಆಘಾತವಾಗುವುದು. ಸರ್ಕಾರದವರು ಇಂಡಿಯನ್ ಪಿನಲ್ ಕೋಡಿನ 153 ಎ ಕಲಮನ್ನು ಅನುಸರಿಸಿ ಸ್ಟಾರ್ ಪತ್ರಿಕೆಯಮೇಲೆ ಕ್ರಮವನ್ನು ಜರುಗಿಸಬೇಕೆಂದು ಬ್ರಾಹ್ಮಣ ಸಂಘದ ಸಭಾ ಸದಸ್ಯರು [illegible] ತ್ತಾರೆ. ಈ ವಿಷಯವಾಗಿ ಸರ್ಕಾರದವರು [illegible] ಯೇ ಉತ್ತರವನ್ನು ದಯಪಾಲಿಸಬೇಕು. ಸರ್ಕಾರದ ಉತ್ತರವನ್ನು ನೋಡಿಕೊಂಡು ಖಾಸಗಿ ದೂರು ಮನುಷ್ಯರ ಮೊಕದ್ದಮೆಯನ್ನು ನಡೆಸುವ ವಿಷಯವನ್ನು ತೀರ್ಮಾನ ಮಾಡುತ್ತಾರೆ.

ದೇಶಭಾಷೆ.

ಕಾಲೇಜು ತರಗತಿಗಳಲ್ಲಿ ದೇಶಭಾಷೆಗಳ ಮೂಲಕವೇ ಶಿಕ್ಷಣವೆಂದು ನಾಗಪುರದ ವಿಶ್ವವಿದ್ಯಾಲಯ ನಿರ್ಧಾರವಾದರೂ ಬೊಂಬಾಯಿನಲ್ಲಿ ಮದ್ರಾ[ಸಿನಲ್ಲಿ] — ಈ ಪದ್ಧತಿಯನ್ನೂ ಮುಹೂರ್ತ ಬದಗಿಲ್ಲ.

Regd No. M. 2322

॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ... ಪರಸ್ಥಳಕ್ಕೆ ...

ಸಂಪುಟ ೧] ಬುಧವಾರ ೧೯ ಡಿಸೆಂಬರ್ ೧೯೨೮ [ಸಂಚಿಕೆ ೭೦

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರಾಡ್ಸ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Building Mysore.

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings, Mysore.

8 H Subba Rao C/o B Same Gowda & Sons Sakaleshpur

9 H Naganniah News Agent Chikmagalur

10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Msore

ತಾಯಿನಾಡು.

19—12—1928.

ಬೆಂಗಳೂರಿನ ಸುದ್ದಿ

(ಬಾತ್ಮೀದಾರರಿಂದ)

17-12-28

ಮುನ್ಸಿಪಲ್ ಡೆಪ್ಯುಟೇಷನ್

ಈ ದಿನ ಪ್ರಾತಃಕಾಲ ಹದಿನೇಳು ಜನ ಮುನ್ಸಿಪಲ್ ಕೌನ್ಸಿಲ್ಲರ್‌ಗಳು ದಿವಾನರ ಭೇಟಿಯನ್ನು ತಗೆದು ಕೊಂಡು ಸ್ವಂತ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರವನ್ನು ವಾಪಸು ಕೊಡಬೇಕೆಂದು ಕೇಳಿಕೊಂಡರು. ದಿವಾನರು ಸಹಾನು ಭೂತಿಯನ್ನು ವ್ಯಕ್ತಪಡಿಸಿಗರು ಬೆಂಗಳೂರಿನ ಗಲಾಟೆಗಳಿಗೆಲ್ಲಾ ಮುನಿಸಿಪಲ್ ಜಗಳಗಳೇ ಕಾರಣವೆಂದು ಆಪಾದನೆ ಮಾಡಲ್ಪಟ್ಟಿದ್ದರಿಂದ ಆ ಹಕ್ಕನ್ನು ಕಿತ್ತುಕೊಳ್ಳಬೇಕಾಯಿತೆಂದು ದಿವಾನರು ಹೇಳಿದರು. ಪುನಃ ವಿಮರ್ಶೆ ಮಾಡಿ ಹಕ್ಕನ್ನು ಕೊಡುವುದಾಗಿ ಹೇಳಿದರು. ಕ್ಯಾಪ್ಟನ್ ಐಯ್ಯನವರು. ಹಕ್ಕು ನಮಗೆ ಬ್ಯಾಡಾ ಎಂದು ವಿರೋಧಿಸಿದರು.

ನ್ಯಾಯವಿಧಾಯಕ ಸಭೆ

ಇದು ಈ ದಿವಸ 12 ಕ್ಕೆ ಆರಂಭವಾಯಿತು. 20 ನೇ ತಾರೀಖಿನ ವಳಿಗೆ ಮುಗಿಯಬಹುದು. ಹತ್ತು ಸರ್ಕಾರೀ ಮಸೂದೆಗಳೂ 77 ಖಾಸಗೀ ಠರಾವುಗಳೂ 96 ಪ್ರಶ್ನೆಗಳೂ ಇವೆ.

ವಿಶ್ವೇಶ್ವರಯ್ಯ ಕಮಿಟಿ

ವಿಶ್ವೇಶ್ವರಯ್ಯ ಕಮಿಟಿಯ ಖರ್ಚಿಗಾಗಿ 15,000 ಸಾವಿರ ರೂಪಾಯಿಗಳು ಬೇಕೆಂದು ಸರ್ಕಾರದವರು ಮಂಜೂರಾತಿಯನ್ನು ಕೇಳಿದರು ಮ|| ಡಿ. ಎಸ್ ಮಲ್ಲಪ್ಪನವರೂ ಮ|| ಡಿ. ವಿ. ಗುಂಡಪ್ಪನವರೂ ಮತ್ತು ಇತರರು ಈ ಕಮಿಟಿಯ ವರದಿಯನ್ನು ಪ್ರಕಟಿಸ ಬೇಕೆಂದೂ ಅಸೆಂಬ್ಲಿ ಮತ್ತು ಕೌನ್ಸಿಲಿನಲ್ಲಿ ಚರ್ಚಿಗಿಡ ಬೇಕೆಂದೂ ಕೇಳಿಕೊಂಡರು. ಚೀಫ್ ಸೆಕ್ರೆಟರಿಗಳಾದ ಎನ್. ಮಾಧವರಾಯರವರು ವರದಿಯು ಹಸ್ತಗತವಾಗಿಲ್ಲವೆಂದೂ ಅದನ್ನು ಪ್ರಕಟಿಸುವ ಮತ್ತು ಚರ್ಚೆಗೆ ಇಡುವ ವಿಷಯವನ್ನು ಕ್ರಮೇಣ ತಿಳಿಸುವೆವೆಂದೂ ಹೇಳಿದರು.

ಪ್ರೆಸ್ ಕಾನೂನು.

ಮ|| ಡಿ. ಎಚ್. ಚಂದ್ರಶೇಖರಯ್ಯನವರ ಪ್ರಶ್ನೆ :—

ಏನು ಸ್ವಾಮಿ ಪ್ರೆಸ್ ಆಕ್ಟನ್ನು ಕಿತ್ತುಹಾಕುತ್ತೇವೆಂತ ಮಾತು ಕೊಟ್ಟು ಎಷ್ಟು ದಿವಸವಾಯಿತು ಇನ್ನು ಏಕೆ ಸುಮ್ಮನಿದ್ದೀರಿ? ಎಂದು ಕೇಳಿದರು. ಮ|| ಮಾಧವರು ಈಗನ ಕಾನೂನಿಗೆ ಬದಲಾಗಿ ಇನ್ನೊಂದು ಕಾನೂನನ್ನು ತಯಾರುಮಾಡುತ್ತಿದ್ದೇವೆಂದು ಹೇಳಿದರು.

ಸರ್. ಎಂ. ವಿಶ್ವೇಶ್ವರಯ್ಯನವರು

ತಿರುವಾಂಕೂರಿನಲ್ಲಿ ಮುಂದಿನ ತಿಂಗಳು 14, 15 ನೇ ತಾರೀಖುಗಳಲ್ಲಿ ನಡೆಯುವ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿ ಹೋಗುವರಷ್ಟೆ, ತಾವು ತಿರುವಾಂಕೂರಿನಲ್ಲಿ ಮೂರು ದಿವಸಗಳು ಇರುವುದಾಗಿ ಸ್ವಾಗತ ಸಮಿತಿಯವರಿಗೆ ಬರೆದಿರುವರು.

ವಿವಿಧ ವಿಷಯಗಳು

ಮೈಸೂರಿನಲ್ಲಿ ಖಾದೀ ಪ್ರಚಾರ.

ಮೈಸೂರಿನಲ್ಲಿ ಸರ್ಕಾರದವರ ಪೋಷಣೆಯಲ್ಲಿ ನಡೆಯುತ್ತಿರುವ ಖಾದಿ ಕೈಗಾರಿಕೆಯ ವಿಷಯವಾಗಿ ಮಹಾತ್ಮ ಗಾಂಧಿಯವರು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವರು. ಅದರಲ್ಲಿ ಮೈಸೂರು ಸರ್ಕಾರದವರು ಖಾದಿ ವಿಷಯದಲ್ಲಿ ತೋರಿಸುತ್ತಿರುವ ಆದರಣೆಯನ್ನು ಪ್ರಶಂಸೆ ಮಾಡಿ ಹೇಳುವುದೇನೆಂದರೆ ಮೈಸೂರಿನಲ್ಲಿ ಖಾದಿಯು ಸ್ಥಿರವಾಗಿ ನಿಲ್ಲಬೇಕಾದರೆ ಅನುಕೂಲಸ್ಥರು, ಸರ್ಕಾರೀ ನೌಕರರು ಖಾದಿಯನ್ನು ಧರಿಸುವುದಕ್ಕಾರಂಭ ಮಾಡಬೇಕು. ಎಷ್ಟು ನಯವಾದ ಖಾದಿಯು ಬೇಕೆಂದರೆ ಅಷ್ಟು ನಯವಾಗಿ ಈಗ ದೊರೆಯುತ್ತದೆ. ಬಾಯಲ್ಲಿ ಖಾದಿಯ ಪ್ರಶಂಸೆಯನ್ನು ಮಾಡಿ ತಾವೇ ಖಾದಿಯನ್ನು ಧರಿಸದೆ ಹೋದರೆ ಹಳ್ಳಿಗಾಡಿನವರಿಗೆ ಈ ಅಭಿಮಾನವು ಅಂಟುವುದಿಲ್ಲ. ಈ ದೊಡ್ಡ ಮನುಷ್ಯರ ಮಾತಿಗೆ ಬೆಲೆಯೇ ಇಲ್ಲದೆ ಹೋಗುವುದು. ದೊಡ್ಡವರು ಒಳ್ಳೆ ಉದಾಹರಣೆಗಳನ್ನು ತೋರಿಸಿದರೆ ಸಾಮಾನ್ಯ ಜನರೂ ಅದನ್ನು ಅನುಸರಿಸುವರು.

ಪಾನಗಲ್ ರಾಜರ ಮರಣ.

ಮದರಾಸಿನ ಸುಪ್ರಸಿದ್ಧ ಬ್ರಾಹ್ಮಣೇತರ ಮುಖಂಡರಾಗಿದ್ದ ಪಾನಗಲ್ ರಾಜರವರು ಭಾನುವಾರ ಬೆಳಿಗ್ಗೆ ಸ್ವರ್ಗಸ್ಥರಾದರು.

ವಿಜ್ಞಾನ

ಅಮೇರಿಕೆಯ ರಸಾಯನ ಶಾಸ್ತ್ರಜ್ಞರ ಪರಿಷತ್ತು ಈಗ ಕೆಲದಿನಗಳ ಹಿಂದೆ ಡಿಟ್ರೋಯಿಟದಲ್ಲಿ ಕೂಡಿದಾಗ್ಗೆ ಅವರು ಹೈಡ್ರೋಜನ್ ಹಾಗೂ ಓಕ್ಸಿಜನಗಳು ಹಿಂದುಸ್ತಾನದ ಪ್ರಾಚೀನ ಋಷಿಮುನಿಗಳಿಗೆ ಗೊತ್ತಿದ್ದುವೆಂದೂ, ಕ್ಯಾವೆಂಡಿಶ್ ಹಾಗೂ ಪ್ರೀಸ್ಟಲೆಯವರು ಅವುಗಳ ಸಂಶೋಧಕರಲ್ಲವೆಂದೂ, ರಸಾಯನ ಶಾಸ್ತ್ರಕ್ಕೆ ಆರ್ಯರೇ ಜನಕರೆಂದೂ ಆಧಾರಸಹಿತವಾಗಿಸಿದ್ದ ಮಾಡಿ ತೋರಿಸಿದರು. ನೆರೆದ ಶಾಸ್ತ್ರಜ್ಞರೆಲ್ಲರೂ ಈ ಅಭಿಪ್ರಾಯಗಳನ್ನು ಒಪ್ಪಿ ಡಾಕ್ಟರ ಕೊಕಟನೂರಿಗೆ ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಏಕೀಕರಣ.

ಕಡಪಾ ರಾಘವೇಂದ್ರರಾಯರ ನಿಧನ ದಿನವಾದ ೧೫—೨—೨೯ ನೇ ದಿನವನ್ನು ಅಖಿಲ ಕರ್ನಾಟಕದಲ್ಲಿ 'ಏಕೀಕರಣ ದಿನ' ವೆಂದು ಆಚರಿಸುವ ವ್ಯವಸ್ಥೆಯಾಗಬೇಕೆಂದೂ ಅದಕ್ಕಾಗಿ ಅಲ್ಲಲ್ಲಿಯ ಜನರು ಸೂಚನೆಗಳನ್ನು ಕಳಿಸಬೇಕೆಂದೂ ಕ. ಏ. ಸಭೆಯ ಕಾರ್ಯದರ್ಶಿಗಳಾದ ಡಾ. ಕಮಲಾಪೂರ ಹಾಗೂ ಕ. ಏ. ಉಪಮಂಡಲದ ಕಾರ್ಯದರ್ಶಿಗಳಾದ ದಿವಾಕರ ಇವರ ಅಂಕಿತದಿಂದ ಒಂದು ಪ್ರಕಟನೆಯು ಪ್ರಕಟವಾಗಿದೆ.

ಆಲ್ ಕಲಾಂ ಮತ್ತು ಲೋಕಹಿತೈಷಿ

ಒಬ್ಬ ಮೆಂಬರ ಪ್ರಶ್ನೆಗೆ ಉತ್ತರವಾಗಿ ಆಲ್ ಕಲಾಮಿನ 60 ಪ್ರತಿಗಳನ್ನು ಲೋಕಹಿತೈಷಿಯ 6 ಪ್ರತಿಗಳನ್ನು ಸರ್ಕಾರದವರು ಕೊಳ್ಳುತ್ತಿರುವುದಾಗಿಯೂ ಬೆಂಗಳೂರು ಗೌರ್ನಮೆಂಟ್ ಬುಕ್‌ಡಿಪೋದಿಂದ ಮೈಸೂರು ಗೌರ್ನಮೆಂಟು ಪಬ್ಲೀಸಿನ ಮೇಲೆ ಆಲ್ ಕಲಾಮಿನ 50 ಪ್ರತಿಗಳನ್ನು ಉರ್ದುಸ್ಕೂಲುಗಳಿಗೆ ಕಳುಹಿಸುತ್ತಿರವುದಾಗಿ ಹೇಳಿದರು.

[illegible]

[illegible] ಈ ಸಭೆಗೆ ಕಂದಾಯ ಕೊಡುವುದಕ್ಕಾಗಿ [illegible] ಸವತು ಮೊದಲನೆಯ ಮೆಂಬರರನ್ನು [illegible] ಶ್ರೀಮನ್ಮಹಾರಾಜರಿಗೆ ಜವಾಬ್‌ದಾರರು ಎಂದು ಅರಿತ್ತಿರುತ್ತಾರೆ. ದಿವಾನರು ಅಸೆಂಬ್ಲಿಯಲ್ಲಿ ಹಾಜರಾಗದೇ ಇದ್ದ ಮಾತ್ರಕ್ಕೆ ನ್ಯಾಯವಿಧಾಯಕ ಸಭೆಯಲ್ಲಿ ಹಾಜರಿರಕೂಡದೆಂದು ನಿಯಮ ವಿಲ್ಲ ಎಂದು ಹೇಳಿದರು.

ಮಾರಾ ಮಾರಿ

ಅರಸೀಕೆರೆಯಿಂದ ೫ ಮೈಲಿ ದೂರ ಇರುವ ಹಾರ್ನಳ್ಳಿಯಲ್ಲಿ ಒಬ್ಬ ಕೊಂಕಣಿಗೂ, ಇನ್ನೊಬ್ಬನಿಗೂ ಜಗಳವಾಗಿ, ಒಬ್ಬನಿಗೆ ತಲೆಯೊಡೆದು, ಅವನಿಗೆ ಅರಸೀಕೆರೆಯ ಆಸ್ಪತ್ರೆಯಲ್ಲಿ ಇಲಾಜು ಆಯಿತು ಎಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.—ಲೋ

ಮಾಗಡಿ ಹೊಸ ಹೈಸ್ಕೂಲು.

ಮಾಗಡಿ ಕೋ-ಆಪರೇಟೀವ್ ಸೊಸೈಟಿಯ ಜನರಲ್ ಮೀಟಿಂಗಿನಲ್ಲಿ ಈ ತಿಂಗಳು ೭ನೆ ತಾ|| ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಮ|| ಎಚ್. ಎಸ್ ಪುಟ್ಟರಾಮಶೆಟ್ಟರ ಸೂಚನೆಯಂತೆ ಹೊಸ ಹೈಸ್ಕೂಲನ್ನು ಮಾಗಡಿಯಲ್ಲಿ ಸ್ಥಾಪಿಸಲು ೭೦೦೦ ರೂ. ಗಳು ಉಚಿತವಾಗಿ ಕೊಡಬೇಕೆಂದು ನಿರ್ಧರಿಸಲ್ಪಟ್ಟಿತು.

ಸ್ಕೂಲ್ ಹುಡುಗರ ವಾಸಕ್ಕಾಗಿ ಯೋಗ್ಯವಾದ ಒಂದು ಕಟ್ಟಡವನ್ನು ಉಚಿತವಾಗಿ ಕಟ್ಟಿಸಿಕೊಡಲು ಮ|| ಪುಟ್ಟರಾಮಶೆಟ್ಟರು ವಾಗ್ದಾನ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತೆ.

ಬೆಂಗಳೂರು ಸತ್ಯಾಗ್ರಹ.

ಬೆಂಗಳೂರಿನ ಸತ್ಯಾಗ್ರಹ ವಿದ್ಯಾರ್ಥಿಗಳ ಮುಖಂಡರಾದ ಶ್ರೀ ಭೀಮರಾವ, ಮತ್ತು ತಿವಾರಿ ಇವರ ಮೇಲೆ ನಡೆದ ಖಟ್ಲೆಯನ್ನು ಪೋಲೀಸರು ತಿರುಗಿ ತೆಗೆದುಕೊಳ್ಳಲಿಕ್ಕೆ ಅರ್ಜಿಯನ್ನು ಕೊಟ್ಟಿದ್ದಾರೆಂದು ಸುದ್ದಿಯು ಪ್ರಸಿದ್ಧವಾಗಿದೆ. ಈಗ ನಾಲ್ಕೂವರೆ ತಿಂಗಳು ಸತತ ತೊಂದರೆ ಕೊಟ್ಟು ಆರೋಪಿಗಳನ್ನು ದೋಷಮುಕ್ತ ಮಾಡದೇ ಖಟ್ಲೆ ತಿರುಗಿ ತಕ್ಕೊಳ್ಳಲಿಕ್ಕೆ ಪೋಲೀಸರಿಗೆ ಅನವು ಕೊಡಬಾರದೆಂದು ಆರೋಪಿಯವರು ಸ್ಪಷ್ಟವಾಗಿ ಕೋರ್ಟಿಗೆ ಹೇಳಿದ್ದಾರೆ. ಈ ಧೈರ್ಯದ ಕಾರ್ಯಕ್ಕಾಗಿ ನಾವು ಅವರನ್ನು ಅಭಿನಂದಿಸದೇ ಇರಲಾರೆವು ಅದೇ ಕಾಲಕ್ಕೆ ಪೋಲೀಸ ಕೃತಿಗಳು ಎಂತಹವಿರುತ್ತವೆಂಬುದನ್ನು ಈ ವಿಷಯದಲ್ಲಿ ಜನರು ನೋಡಿಕೊಳ್ಳಬೇಕೆಂದು ನಾವು ಹೇಳುತ್ತೇವೆ [illegible] ಮಾಡಿ ಸರ್ವ ಅನ[illegible] ದೆ ನಾವೇ ಕಾರಣರಾಗಿ [illegible] ಖಟ್ಲೆ ಹಾಕಿ ಅವರ ಮೇಲೆ ಕೆಲಸ ನಡೆಸಿ ಈಗ ಒಮ್ಮೆಲೇ ಖಟ್ಲೆ ತಿರುಗಿ ತೆಗೆದುಕೊಳ್ಳಲನುವಾಗುವದಲ್ಲಿ ಜನರನ್ನು ಕೇವಲ [illegible] ಚ್ಚಿಕೊಳ್ಳುವ ಅವರ ಪ್ರವೃತ್ತಿಯು ಕಂಡುಬರುತ್ತದೆ. ಶ್ರೀ ರಾಜು ಮುಂತಾದವರು ಇಷ್ಟಕ್ಕೆ ಬಿಡದೆ ತಮ್ಮನ್ನು ಗೇವರ ಪೀಡಿಸುವ ಸಲುವಾಗಿ ಈ ಖಟ್ಲೆಯು ಹಾಕಲ್ಪಟ್ಟಿತೆಂದು ತಿರುಗಿ ಪೋಲೀಸು ಅಧಿಕಾರಿಗಳ ಮೇಲೆಯೇ ಮೊಕದ್ದಮೆ ನಡೆಸಬೇಕೆಂದು ನಾವು ಸೂಚಿಸುತ್ತೇವೆ. —ಕರ್ಮವೀರ

TAI NADU
1[illegible]-12-1[illegible]

ಪಿತೂರಿಯ ಕಟ್ಟುಕಥೆ ಮುರಿಯಿತು

ಬೆಂಗಳೂರು ಜಾಮೀನಿನ ಮೊಕದ್ದಮೆಯಲ್ಲಿ ಅಪರಾಧಿಗಳು ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟ [illegible] ಅಬ್ಬಾಸ್ ಖಾನರು ಕಟ್ಟಿದ್ದ ಪಿತೂರಿಯ ಕಟ್ಟುಕಥೆ ಮುರಿಯಿತು. ಖಾನರು ತಮ್ಮ ಮೇಲೆ ತಪ್ಪನ್ನು [illegible] ಬ್ರಾಹ್ಮಣ ಪಿತೂರಿಯ ಕಥೆಯನ್ನು [illegible] ಜಗತ್ತಿಗೆ ಸಾರಿದರು. ತಮ್ಮ ಜೊತೆಯಲ್ಲಿ [illegible] ಸರಕಾರವನ್ನೂ [illegible]. [illegible] ಈ ಪಿತೂರಿಯ ಕಥೆಯನ್ನು [illegible] ಈ ಪಿತೂರಿಯ ಕಥೆಯನ್ನು [illegible] ಈ [illegible] ಆಕ್ಷೇಪ [illegible] ಕೋರ್ಟಿನಲ್ಲಿ ಅಬ್ಬಾಸ್ ಖಾನರ [illegible] ಶಕ್ತಿಕೊಂಡ [illegible] ಅನೇಕ ತರದ [illegible] ಮಾಡಿದರು. [illegible] ಅಬ್ಬಾಸ್ ಖಾನರನ್ನು [illegible] ಕೋರ್ಟಿ[illegible] ಖಾನರ [illegible] ಪಿತೂರಿಯ [illegible] ಅಬ್ಬಾಸ್ ಖಾನರ [illegible] ದೃಢಪಟ್ಟಿತು. [illegible] ಕಮಿಟಿಯ ಮುಂದೆ. ಈ ಪಿ[illegible] ಕಥೆಯೂ ಒಂದಿತ. ಮ|| ಬಿ. ನಾಗ[illegible] ಸರಕಾರದವರು ಈ ಪಿತೂರಿಯ ಕಥೆಯನ್ನು ನಂಬುವುದಿಲ್ಲವೆಂದು ಹೇಳಿದರು. ಮ|| ಕಲಾಮಿಯವರು [illegible] ಅಬ್ಬಾಸ್ ಖಾನರು ಬಹಳ [illegible]ದ್ದಾಗ ಹೇಳಿದರು ಎಂದರು. ದಸರಾ ಅಸಂ[illegible] ಮುಂಚೆ ದಿವಾನರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರತಿನಿಧಿಗೆ ಕೊಟ್ಟ ಭೇಟಿಯಲ್ಲಿ ಬ್ರಾಹ್ಮಣ ಪಿತೂರಿಯನ್ನು [illegible]. ಆದ[illegible] ಈ ಪಿತೂರಿಯ [illegible] ಬಹಳ [illegible] ಸಂಪೂರ್ಣವಾಗಿ [illegible]. ಮ|| [illegible] ಕೋರ್ಟಿ[illegible] ಕಾನೂನಿನ [illegible] ಪಿತೂರಿ ಸುಳ್ಳೆಂದು [illegible] ಅಬ್ಬಾಸ್ [illegible] ಸರಕಾರ [illegible] ಕಾನೂನಿನ ಪ್ರಕಾರ ಅಪರಾಧಿಗಳಲ್ಲವೆಂದು ಸರಕಾರದವರು ಹೇಳಿಕೊಂಡಿರುವಾಗ ಈ ಪಿತೂರಿಯ ಕಥೆಯನ್ನು ಹರಡಿದವರಿಗೆ ಸರಕಾರದವರು ಹೆದರಿ, ಅದರ ನಿಜಾಂಶವನ್ನು ನಿರೂಪಿಸಲಾರದೆ, ಆಡ್ವೊಕೇಟ್ ಜನರಲ್ ಬಾಯಿಂದಲೇ ಈ ಪಿತೂರಿಯು ನಿಜವಲ್ಲವೆಂದು ಸಾರಬೇಕಾಯಿತು. ಪಬ್ಲಿಕ್ ಪ್ರಾಸಿಕ್ಯೂಟರರಿಗೆ ಇದು ಯಾಕೋ ಸರಿಬೀಳಲಿಲ್ಲ ಎಂದು ತೋರಿತು. ಮೊಕದ್ದಮೆಯನ್ನೇ ವಾಪಸು ತೆಗೆದುಕೊಳ್ಳುತ್ತೇನೆ ಎಂದರು. ಕಾರಣವನ್ನು ತೋರಿಸಿ, ಅಪರಾಧಿಗಳು ನಿರ್ದೋಷಿಗಳೆಂದು ಹೇಳಿದ ಹೊರತೂ, ವಾಪಸು ತೆಗೆದುಕೊಳ್ಳಕೂಡದೆಂದು ಮ|| ರಾಜೂರವರು ವಾದಿಸಿದರು. ಕಡೆಗೆ ನೆನ್ನೆ, ಗವರ್ನಮೆಂಟ್ ಅಡ್ವೊಕೇಟರಾದ ಮ|| ಎಸ್. ಶಂಕರನಾರಾಯಣರಾಯರು ಸರಕಾರಕ್ಕೆ ಈ ಪಿತೂರಿಯ ಕಥೆಯಲ್ಲಿ ವಿಶ್ವಾಸವಿಲ್ಲ ಎಂದು ಘಂಟಾಘೋಷವಾಗಿ ಕೋರ್ಟಿನಲ್ಲಿ ಹೇಳಿದರು.

"It is no part of the case for the crown that any such clique or plot, or conspiracy as is suggested or implied by that evidence has existed anywhere in the Mysore State, nor do the Government believe in the theory of any such clique, plot, or conspiracy" ಇದರ ಮೇಲೆ ಕೇಸು ವಾಪಸ ತೆಗೆದುಕೊಳ್ಳಲ್ಪಟ್ಟಿತು.

ಸರಕಾರದವರು ಪಿತೂರಿಯ ಕತೆಯನ್ನು ಅಲ್ಲಗಳೆದಿರುವುದು ಸಂತೋಷ. ಆದರೆ, ಇಷ್ಟೆಲ್ಲಾ ಅನಾಹುತವಾದ ಮೇಲೆ, ಈಗ ಅಲ್ಲಗಳೆಯುವುದರಿಂದ ಲಾಭವೇನು? ಈ ಪಿತೂರಿಯ ಕಥೆಯನ್ನು ಸೃಷ್ಟಿಸಿ, ದೇಶದಲ್ಲೆಲ್ಲಾ ಕ್ರಾಂತಿಯನ್ನುಂಟುಮಾಡಿದವರನ್ನು ಸರಕಾರದವರು ಶಿಕ್ಷಿಸಲು ಸಿದ್ಧರಾಗಿರುವರೆ? ಈ ಪಿತೂರಿಯ ಕಥೆಗೆ ಬೆಂಬಲ ಕೊಟ್ಟು, ಅದನ್ನು ಪೋಷಿಸಿದವರಿಗೆ ಸರಕಾರದವರು ತಕ್ಕ ಬಂದೋಬಸ್ತು ಮಾಡುವರೇ? ಸರಕಾರದ ಒಳಗೇ ಈ ಪಿತೂರಿಯ ಕಥೆಗೆ ಬೆಂಬಲ ಕೊಟ್ಟವರನ್ನು ಸಜಾ ಮಾಡುವರೇ? ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಪಿತೂರಿಯ ಅಪವಾದನೆಯನ್ನು ಬಾಹಾರೋಷವಾಗಿ ಮಾಡಿದ ಅಬ್ಬಾಸ್ ಖಾನರನ್ನು ಸರಕಾರದವರು ಜಾತಿದ್ವೇಷದ, ಪಾತಕಕ್ಕೂ, ದೇಶದ್ರೋಹದ ಮತ್ತು ರಾಜದ್ರೋಹದ ಅಪರಾಧಗಳಿಗೂ ಕಾನೂನಿನ ಕ್ರಮಕ್ಕೆ ಗುರಿ ಮಾಡಿ ಅವರಿಗೆ ತಕ್ಕ ಶಿಕ್ಷೆಯನ್ನು ಕೊಡಿಸುವರೆ? ಬರೀ ಬಾಯಿ ಮಾತಿನ ಉಪಚಾರದಿಂದ ಪ್ರಯೋಜನವಿಲ್ಲ. ಸರಕಾರದವರು ಕಾರ್ಯತಃ ತಮ್ಮ ಆಚರಣೆಯನ್ನು ತೋರಿಸಬೇಕು.

ವಿಶ್ವವಿದ್ಯಾಲಯದ ರಿಪೋರ್ಟು

ನಮ್ಮ ಮೈಸೂರು ವಿಶ್ವವಿದ್ಯಾಲಯದ 1927-28 ನೇ ವರ್ಷದ ವರದಿಯನ್ನು ಆದರದಿಂದ ಸ್ವೀಕರಿಸಿರುತ್ತೇವೆ. ಅದರಲ್ಲಿರುವ ಮುಖ್ಯ ವಿಷಯಗಳನ್ನು ನಾವು ಆನಂತರ ತಿಳಿಸುವೆವು.

ಸತ್ಕಾರ

ಈ ತಿಂಗಳು 20 ನೇ ತಾರೀಖು ಗುರುವಾರ ಮ|| ರಾ|| ಪಿ. ಮಾಣಿಕ್ಯವೇಲು ಮೊದಲಿಯಾರ್‌ರವರು ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಸಿ. ಎಸ್. ಬಾಲಸುಂದರಂ ಅಯ್ಯರ್ ಬಿ. ಎ. ರವರಿಗೆ ಬೆಂಗಳೂರಿನಲ್ಲಿರುವ ತಮ್ಮ ಗೃಹದಲ್ಲಿ ಔತಣವನ್ನು ಕೊಡುವರು.

ವರ್ತಮಾನ ಸಂಗ್ರಹ

ಸ್ವೀಕಾರಗಳು

ಕಾಶಿಯ ಸುಪ್ರಸಿದ್ಧರೇಷ್ಮೆ ಪೀತಾಂಬರ ವ್ಯಾಪಾರಿಗಳಾದ ಎಸ್. ಯು. ಎನ್. ಕಂಪನಿಯವರೂ, ರಾಜಧಾನಿಯ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳೂ ಕಾಗದ ವ್ಯಾಪಾರಿಗಳೂ ಆದ ಮ|| ರಾ|| ಕೆ. ಪಿ. ರಂಗಶೆಟ್ಟರವರೂ ಸಹ ಕಳುಹಿಸಿರುವ ಕ್ಯಾಲೆಂಡರುಗಳನ್ನು, ರಾಜಧಾನಿಯ ಮ|| ರಾ|| ಜಿ ಆರ್. ಜೋಸ್ಯರ್‌ರವರು ಕಳುಹಿಸಿರುವ Brahmanophobia in Mysore ಅಥವಾ ಮೈಸೂರಿನಲ್ಲಿನ ಬ್ರಾಹ್ಮಣ ದ್ವೇಷವೆಂಬ ಪುಸ್ತಕವನ್ನೂ ಮತ್ತು ಬೆಂಗಳೂರು ಸುಬೋಧ ಗ್ರಂಥಾಲಯದ ವ್ಯವಸ್ಥಾಪಕರಾದ ಮ|| ರಾ|| ಯಂ. ರಾಮರಾಯರವರು ಕಳುಹಿಸಿರುವ ನವಂಬರ್ ತಿಂಗಳ ಸಚಿತ್ರ ಮಾಸ ಪತ್ರಿಕೆಯೊಂದನ್ನೂ ಆದರದಿಂದ ಸ್ವೀಕರಿಸಿರುವೆವು.

ಒಬ್ಬ ದಿವಾನರ ಅನುಭವ

ತಿರುವಾಂಕೂರು ದಿವಾನರಾದ ಮಿ|| ಎಂ. ಇ. ವಾಟ್ಸ್‌ರವರು ಕೆಲವು ದಿವಸಗಳ ಹಿಂದೆ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಒಂದು ಭಾಷಣವನ್ನು ಮಾಡಿದರು. ಅದರಲ್ಲಿ ತಮ್ಮ ದಿವಾನ್ ಗಿರಿಯ ಅನುಭವವನ್ನು ವಿವರಿಸಿರುವರು. ಅವರು ಹೇಳುವುದೇನೆಂದರೆ, ದಿವಾನ್‌ಗಿರಿಯು ಸಾಮಾನ್ಯವಲ್ಲ. ದಿವಾನನಾದವನು ವಸ್ತುಗಳನ್ನು ಬಹು ಹತ್ತಿರದಿಂದ ನೋಡಬಾರದು. ಸಿದ್ಧಾಂತಗಳನ್ನು ಮಾಡಬಾರದು. ಆಡಳಿತದಲ್ಲಿ ಸಿದ್ಧಾಂತ ಮಾಡುವುದರಿಂದ ಕಷ್ಟಗಳು ಹೆಚ್ಚಾಗುವುವು. ಸಿದ್ಧಾಂತಕ್ಕೆ ವಿಪರೀತವಾದ ಪರಿಣಾಮಗಳೇ ಆಗುವುವು. ಅವರಿವರ ಪ್ರೇರಣೆಯಿಂದ ಕೆಲಸಗಳನ್ನು ನಡೆಸ ಕೂಡದು. ತನ್ನ ಸ್ವಂತ ಪ್ರೇರಣೆಯಿಂದಲೇ ತನ್ನ ಸ್ವಂತಶಕ್ತಿಯಿಂದಲೇ ಅಂತರಾತ್ಮ ಶುದ್ಧವಾಗಿ ಕೆಲಸಗಳನ್ನು ಮಾಡಬೇಕು. ಪ್ರಪಂಚದಲ್ಲಿ ಎಲ್ಲೆಲ್ಲ ನೋಡಿದರೂ ಲೋಭ, ಮೋಹ, ಮದ ಮಾತ್ಸರ್ಯಾದಿ ಅರಿಷಡ್ವರ್ಗಗಳು ಕಂಡು ಬರುವುವು. ದಿವಾನನಾದವನು ಅರಿಷಡ್ವರ್ಗಗಳಿಗೆ ಒಳಗಾಗ ಕೂಡದು. ಜನಗಳು ಚೆನ್ನಾಗಿಯೂ ನ್ಯಾಯವಾಗಿಯೂ ಆಳಲ್ಪಡಬೇಕೆಂದು ಹಂಬಲಿಸುತ್ತಾರೆ. ಪ್ರಜೆಗಳು ಧೈರ್ಯವಾಗಿ ಖಂಡಿಸುತ್ತಾರೆ. ಆಳುವುದೆಂದರೆ ಸಾಮಾನ್ಯವಲ್ಲ. ಆಡಳಿತವು ಚೆನ್ನಾಗಿಲ್ಲದೆ ಹೋದರೆ ಅನೇಕ ಸಂಸ್ಥೆಗಳು ನಿರ್ದಾಕ್ಷಿಣ್ಯವಾಗಿ ಖಂಡನೆ ಮಾಡುವುವು. ದಿವಾನನಾದವನು ಇತರರು ಹೇಳುವುದನ್ನು ಚೆನ್ನಾಗಿ ಗ್ರಹಿಸಬೇಕು. ಪರಸ್ಪರ ದ್ವೇಷಾಸೂಯೆಗಳಿದ್ದ ಕಡೆ ಸ್ನೇಹವು ವ್ಯಾಪಿಸ ನಂತೆ ಮಾಡಬೇಕು. ಇಷ್ಟೆಲ್ಲಾ ಸುಗುಣಾತಿಶಯಗಳಿದ್ದರೆ ದಿವಾನ್‌ಗಿರಿಯನ್ನು ಮಾಡುವುದು ಕಷ್ಟವಲ್ಲ— ತಿರುವಾಂಕೂರು ದಿವಾನ್‌ಗಿರಿಗೆ ಹೇಳಿದ ವಿಷಯಗಳೆಲ್ಲಾ ಮೈಸೂರು ದಿವಾನ್‌ಗಿರಿಗೂ ಅಕ್ಷರಶಃ ಅನ್ವಯಿಸುವುವು.

Regd No. M. 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ॥

ವಾರ್ಷಿಕ ಚಂದಾ

ಸಂಪುಟ ೧] ಗುರುವಾರ ೨೦ ಡಿಸೆಂಬರ್ ೧೯೨೮ [ಸಂಚಿಕೆ ೭೧

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ಲಾಡ್ಜ. ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Building Mysore.

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings, Mysore.

8 H Subba Rao C/o B Same Gowda & Sons Sakaleshpur

9 H Naganniah News Agent Chikmagalur

10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Msore

IS IT SCREENING OR NOT?

On the historic meeting of the 20th August 1928, the Dewan in his opening speech said "As regards the measures to be taken it is superfluous, I hope for me to assure you of Government's impartiality. The good of the country must be safe-guarded and the prevention of such disturbances secured. It is uncandid to attribute to a Government such as ours the desire to screen or persecute. The truth is to be discovered and the guilty punished under law." These are very noble sentiments. But we fear the Government have not stuck to their words. The repeated effort made to screen Mr. Abbas Khan from cross-examination and the final attempt to withdraw the Security Proceedings, strengthen the suspicion that Government are not impartial in the matter. Law and Magistrates cannot be above common sense. It is difficult to believe that Mr. Abbas Khan is so thoroughly innocent as to occasion no charge at all by the Additional Dt Magistrate. We fear the Government have not recently enhanced their reputation for being impartial and completely above board.

THE ENQUIRY COMMITTEE REPORT,

There is a good deal of speculation as to whether the Vishweswarayya Committee report will be published or not. We do not think that there is any other alternative for Government than publishing the report. If they respect their own orders, they should do so. For, the G. O. appointing the committee says "There still appears to exist a feeling of uneasiness in the public mind and there is a widespread desire for an authoritative public enquiry to be conducted by an influential committee composed of Government officers and leading representatives of the non-official public."

It is evident that the committee was appointed to allay public apprehension and restore good will and harmony among the people. The enquiry was public excepting the evidences given in camera. And as such, the report also should be public. If the report is not published, the very object for which the committee was appointed is defeated

ವಿವಿಧ ವಿಷಯಗಳು

ಬೊಂಬಾಯಿ ಯುವಕರ ಸಮ್ಮೇಲನ

ಪೂನಾ ಪಟ್ಟಣದಲ್ಲಿ ಈಗ ಕೆಲವು ದಿವಸಗಳ ಹಿಂದೆ ನಡೆದ ಯುವಕರ ಸಮ್ಮೇಳನಕ್ಕೆ ಭಾರತ ಮಾತೆಯ ಜವಾಹಿರಿಗಳಾದ ಪಂಡಿತ್ ಜವಾಹಿರ್ ಲಾಲ್ ನೆಹರೂ ಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರ ಅಧ್ಯಕ್ಷತೆಯಲ್ಲಿ ಈ ಕೆಳಗಿನ ಅತ್ಯಂತ ಮುಖ್ಯವಾದ ಠರಾವುಗಳು ಪಾಸಾದುವು.

ಮೇ 10 ನೇ ತಾರೀಖಿನ ದಿವಸವು ನಮ್ಮ ದೇಶದ ಇತಿಹಾಸದಲ್ಲಿ ಸುಪ್ರಖ್ಯಾತವಾದ ದಿನವು. 1857 ನೇ ಮೇ 10 ನೇ ತಾರೀಖಿನ ದಿವಸ ಭಾರತೀಯರು ಸ್ವಾತಂತ್ರ್ಯ ಸಂಗ್ರಾಮವನ್ನಾರಂಭಿಸಿದರು. ಅವತ್ತಿನಿಂದಲೂ ಏಕರೀತಿಯಾಗಿ ಸಂಗ್ರಾಮವು ನಡೆಯುತ್ತಲಿದೆ. ಆದ ದರಿಂದ ಮೇ 10 ನೇ ತಾರೀಖಿನ ದಿವಸ ಪ್ರತಿ ವರ್ಷವೂ ನಾವು ರಾಷ್ಟ್ರೀಯ ಉತ್ಸವವನ್ನು ಆಚರಿಸಬೇಕು.

2 ಚೈನಾ, ಈಜಿಪ್ಟ್, ಟರ್ಕಿ ಮತ್ತು ಐರ್ಲೆಂಡ್ ದೇಶಗಳಲ್ಲಿ ಸ್ವಾತಂತ್ರಕ್ಕಾಗಿ ಹೊಡೆದಾಡುವ ಯುವಕರಿಗೆ ಭಾರತೀಯ ಯುವಕರು ತಮ್ಮ ಹಾರೈಕೆಗಳನ್ನು ಕಳುಹಿಸಬೇಕು.

3 ಭಾರತೀಯ ಯುವಕರು ಇಂಡಿಯಾ ದೇಶದ ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನೇ ಮುಂದಿಟ್ಟು ಕೊಳ್ಳಬೇಕು,

4 ಸೈಮನ್ ಕಮಿಷನ್‌ನ್ನೂ ಸೈಮನ್ ಕಮಿಷನ್‌ಗೆ ಸಹಕಾರ ಮಾಡುವವರನ್ನೂ ಭಾರತೀಯ ಯುವಕರು ಬಹಿಷ್ಕರಿಸಬೇಕು ಎಂಬಿವೇ ಮೊದಲಾದ ಮುಖ್ಯವಾದ ಠರಾವುಗಳು ಪಾಸಾದವು. ಜವಾಹಿರ್ ಲಾಲ್ ನೆಹರೂರವರು ವಿದ್ಯಾರ್ಥಿಗಳಿಗೆ ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯದ ಕ್ರಾಂತಿಯೇ ಅತಿ ತೀವ್ರವಾದ ಉಪಾಯವೆಂದೂ ಇದಿಲ್ಲದೆ ನಮ್ಮ ದೇಶಕ್ಕೆ ಶೀಘ್ರದಲ್ಲಿಯೇ ಸ್ವರಾಜ್ಯ ಬರ ತಕ್ಕದು ದುಸ್ತರವೆಂದೂ ಹೇಳಿದರು. ಯುವಕರ ಸಮ್ಮೇಳನವು ಬಹಳ ಉತ್ಸಾಹದಿಂದ ಕೊನೆಗೊಂಡಿತು.

ಅಬಲೆಯರೋ ಪ್ರಬಲೆಯರೋ.

ಈ ವಿಷಯವಾಗಿ ಬಿಕ್ಕಾನೀರ್ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಮೆಹೆತಾರವರ ಪತ್ನಿಯವರಾದ ಲೇಡಿ ಮೆಹೆತಾರವರು ಕೊಟ್ಟಿರುವ ಅಭಿಪ್ರಾಯಗಳು ಶ್ಲಾಘನೀಯವಾದುವುಗಳು ಅವರು ಹೇಳುವುದೇನೆಂದರೆ ಭಾರತೀಯ ಸ್ತ್ರೀಯರು ಸಾತ್ವಿಕರು. ಗೃಹಿಣಿಯರು ಪತಿವ್ರತೆಯರು. ಇವರಿಗೆ ಶಾಂತಿ ಸಮಾಧಾನಗಳ ಬೇಕು. ಗೃಹಸ್ಥೆಯರಾಗಿರುವುದೇ ಇವರ ಜೀವನದ ಪರಮಾವಧಿ, ಪಾಶ್ಚಿಮಾತ್ಯ ಸ್ತ್ರೀಯರ ಸ್ವಭಾವವು ಇದಕ್ಕೆ ವಿಪರೀತವಾದುದು. ಇವರಿಗೆ ಗೃಹಿಣಿಯರಾಗಿರುವುದರಲ್ಲಿ ತೃಪ್ತಿ ಇಲ್ಲ. ಶಾಂತಿ ಸಮಾಧಾನಗಳು ಇವರಿಗೆ ಬೇಕಿಲ್ಲ. ಇವರಲ್ಲಿ ರಜೋ ಗುಣವು ಜಾಸ್ತಿ. ಗಂಡಸರಂತೆಯೇ ಧೈರ್ಯ ಸಹಾಸಗಳು ಹೆಚ್ಚು. ಮುಂದಕ್ಕೆ ನುಗ್ಗಿ ವೀರೆಯರಂತೆ ನುಗ್ಗುವರು. ಆದುದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ಅಬಲೆಯರು ಪ್ರಬಲೆಯರಾಗಿರುವರು. ಸ್ತ್ರೀಯರ ಸ್ವಭಾವಗಳು ಆಯಾಯ ದೇಶದ ಹವಾಗುಣ ನಾಗರೀಕತೆ, ಜನ ಜೀವನಗಳನ್ನು ಅನುಸರಿಸುತ್ತವೆ.

ರಜಾ.

ಮೈಸೂರಿನ ವಾಣಿ ವಿಲಾಸ ಆಸ್ಪತ್ರೆಯ ಲೇಡಿ ಮೆಡಿಕಲ್ ಆಫೀಸರ್ ಮಿಸೆಸ್ ಎಂ. ಜೆ. ವೈನ್‌ರವರಿಗೆ [illegible] ರಜಾ ಕೊಡಲ್ಪಟ್ಟಿದೆ. ಅನಂತರ ಅವರು ಕೆಲಸದಿಂದ ನಿವೃತ್ತರಾಗುವರು.

ಆದರ್ಶಪ್ರಾಯವಾದ ಧ್ಯೇಯ!

[illegible] ಮೈಸೂರಲ್ಲಿ ಜರುಗಿತು. ಅದರ ಉಪಕ್ರಮ ಸಮಾರಂಭವು ಶ್ರೀಮನ್ಮಹಾರಾಜರವರ ಹಸ್ತದಿಂದ ಆಯಿತು. ಆಗ ಮಹಾರಾಜರವರು ಹೇಳಿದುದೇನೆಂದರೆ—

ಹಿಂದು ಧರ್ಮದ ಮೂವರು ಆಚಾರ್ಯರೂ ತಮ್ಮ ಜೀವಿತದ ಸ್ವಲ್ಪ ಕಾಲವನ್ನು ಈ ಮೈಸೂರು ದೇಶದಲ್ಲಿ ಕಳೆದರು. ಅದ್ವೈತಾಚಾರ್ಯರಾದ ಶ್ರೀ ಶಂಕರಾಚಾರ್ಯರು ಇಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಇಂದಿಗೂ ಅವರ ಕೀರ್ತಿಯು ಪ್ರಜ್ವಲಿಸುತ್ತಿರುವದು. ಚೋಳರಾಜರ ಕಿರಾತಕೃತ್ಯಗಳಿಂದ ಮನನೊಂದು ಓಡಿಬಂದ ರಾಮಾನುಜಾಚಾರ್ಯರು ಮೈಸೂರಿನಲ್ಲಿ ಕಾಲಿಟ್ಟರು. ಇಲ್ಲಿ ಅವರಿಗೂ ಆಶ್ರಯ ದೊರೆಯಿತು. ಅಷ್ಟು ಪೂರ್ವಕಾಲದಲ್ಲಿಯೂ ಕೂಡ ಈ ನಾಡಿನಲ್ಲಿ ಪರಮತ ಸಹಿಷ್ಣುತೆಯೂ, ವಾಕ್ ಸ್ವಾತಂತ್ರ್ಯವೂ ವ್ಯಕ್ತವಾಯಿತು, ನಮ್ಮ ಹಿರಿಯರು ಹಾಕಿಕೊಟ್ಟ ಆ ಮಾರ್ಗವನ್ನೇ ನಾವೂ ಅನುಸರಿಸಿ ಪರಮತ ಸಹಿಷ್ಣುತೆ, ವಾಕ್‌ಸ್ವಾತಂತ್ರ್ಯಗಳನ್ನು ನಮ್ಮ ಸರಕಾರದ ಆದರ್ಶಪ್ರಾಯವಾದ ಧ್ಯೇಯವಾಗಟ್ಟುಕೊಂಡಿರುತ್ತೇವೆ."

ಶ್ರೀಮನ್ಮಹಾರಾಜರವರು ಆದರ್ಶಪ್ರಾಯರಾದ ರಾಜರೇನೋ ನಿಜ. ಇವರ ಧ್ಯೇಯಗಳೂ ಆದರ್ಶಪ್ರಾಯವಾಗಿಯೇ ಇರುವುದು ಸ್ವಾಭಾವಿಕವು. ಆದರೆ ಅದರಂತೆ ರಾಜ್ಯಭಾರವು ನಡೆಯಬೇಕಾದರೆ, ಆದರ್ಶಪ್ರಾಯರಾದ ಅಧಿಕಾರಿಗಳು ಬೇಕು. ಇದೊಂದು ಮೈಸೂರಿಗೆ ದೊಡ್ಡ ಕಲಂಕವೇ ಆಗಿದೆ. ಶ್ರೀಮನ್ಮಹಾರಾಜರ ಕೀರ್ತಿಗೆ ಚ್ಯುತಿ ಬಾರದಂತೆ ಆಚರಿಸುವುದು ಮೈಸೂರು ಅಧಿಕಾರಿಗಳ ಆದ್ಯಕರ್ತವ್ಯವಾಗಿದೆ. ಇನ್ನಾದರೂ ಹಾಗೆ ನಡೆದು ರಾಜಪ್ರಜೆಗಳ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಲೆಂದು ನಾವು ಆಶಿಸುತ್ತೇವೆ

—ಲೋಕಮತ

TAI NADU

10—12—1928

ರಾಜಿಯ ಪ್ರಯತ್ನಗಳು

ಬೆಂಗಳೂರಲ್ಲಿ ರಾಜಿಯ ಪ್ರಯತ್ನಗಳು ನಡೆಯುತ್ತಿವೆಯೆಂದು ನಮ್ಮ ಕಿವಿಗೆ ಬಿದ್ದಿದೆ. ರಾಜಧಾನಿಯ ಬೀ [illegible] ... ಗಲಾಟೆಗಳನ್ನು ನಿಲ್ಲಿಸಬೇಕು. ವಿರೋಧವಾಗಿರು [illegible]

[illegible]

... ಪತ್ರಕ್ಕೆ ವಸ್ತಗಿರಿ ಮಾಡಬೇಕಾಗಿತ್ತು ... [illegible] ... ಗರು ಹಿಂದೂ ಮುಖಂಡರನ್ನು ಪತ್ರಕ್ಕೆ ಬಿಡುಗಡೆ ಮಾ[illegible]ವಾಗಿತ್ತು? ಜುಲೈ 20ನೇ ತಾ|| ನಿಶ್ಯಸ್ತ್ರರಾದ ಹಿಂದುಗಳನ್ನು ಲಾಠಿಗಳಿಂದ ಹೊಡೆದು ಗುಂಡು ಹೊಡ[illegible]ಗಳನ್ನು ಹಾರಿಸಿದ ಘಾತಕರನ್ನು ಅವರಿಗೆ [illegible] ... ವಸ್ತಗಿರಿ ಮಾಡದಂತೆ ಆತಂಕಪಡಿಸಿ ... ಜುಲೈ 30 ನೇ ತಾ|| ನ ರಾತ್ರಿ ... [illegible] ... ಯಾರು?

[illegible] ಮೇಲೆ ಅಪಾದನೆಗಳನ್ನು ಮಾಡಿ ಜಾತ್ರಿ[illegible]ಯನ್ನು ಕಲುಷಿಸಿದವರು ಯಾರು? ನ್ಯಾಯವಾಗಿ ನಿಷ್ಪಕ್ಷಪಾತವಾಗಿ ಸತ್ಯಸಮರ್ಥನೆಯನ್ನು ಮಾಡುತ್ತಿದ್ದ ಪತ್ರಿಕೆಗಳ ಬಾಯಿಗೆ ಬೀಗ ಹಾಕಿದವರು ಯಾರು? ಅಬ್ಬಾಸ್ ಖಾನರೂ ಮತ್ತು ಅವರ ಸಹೋದ್ಯೋಗಿಗಳೂ ಪಿತೂರಿಯ ಪಿಶಾಚಿಯನ್ನು ದೇಶದಲ್ಲೆಲ್ಲಾ ಹರಡುತ್ತಿದ್ದಾಗ್ಗೆ ಸುಮ್ಮನಿದ್ದು, ಇದಕ್ಕೆಲ್ಲಾ ಉತ್ತೇಜನವನ್ನು ಕೊಡುತ್ತಿರುವರೆಂಬ ಭಾವನೆಯನ್ನು ಉಂಟುಮಾಡಿದವರು ಯಾರು? ಆಗಸ್ಟ್ 20 ನೇ ತಾ|| ನ ಮೀಟಿಂಗಿನಲ್ಲಿ ಜಾಮೀನಿನ ಮುಖದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚಿಸಿದರೂ, ತೆಗೆದುಕೊಳ್ಳುವುದಿಲ್ಲ ಕಾನೂನಿಗೆ ಅಡ್ಡಿಯಾಗಿ ಬರುವುದಿಲ್ಲ ಎಂದು ಹೆಮ್ಮೆಯಿಂದ ಹಾರಾಡಿ ಈಗ ತಾವೇ ಮುಖದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಅಂಗಲಾಚಿ ಬೇಡಿದವರು ಯಾರು? ರಾಜಭಕ್ತಿಯಿಂದ ಶ್ರೀಮನ್ಮಹಾರಾಜರಿಗೆ ಅರ್ಜಿ ಬರೆದುಕೊಂಡರೆ, ಹಾಗೆ ರುಜು ಹಾಕಿದ ಬಡ ಉಪಾಧ್ಯಾಯರನ್ನು ಕೆಲಸದಿಂದ ವಜಾ ಮಾಡಿದವರು ಯಾರು? ಪುನಃ ನಿರಾಯುಧರಾದ, ನಿರ್ದೋಷಿಗಳಾದ ಹಿಂದುಗಳ ಮೇಲೆ ಮುಕದ್ದಮೆಯನ್ನು ಹಾಕಿರುವವರು ಯಾರು? ತಪ್ಪಿತಸ್ಥರೆಂದು ಜಗತ್ತಿಗೆಲ್ಲಾ ಗೊತ್ತಿದ್ದರೂ, ಅಬ್ಬಾಸ್ ಖಾನರನ್ನು ಶಿಕ್ಷೆಗೆ ಗುರಿಮಾಡದೆ ಇರುವವರು ಯಾರು? ಬ್ರಾಹ್ಮಣ ಪತ್ರಿಕೆಗಳಿಗೆಲ್ಲಾ ಇಲ್ಲದಸಲ್ಲದ ಕಿರುಕುಳಗಳನ್ನು ಕೊಡುತ್ತಿರುವವರು ಯಾರು? ಸ್ಕೂಲುಗಳಲ್ಲಿ ಅವುಗಳನ್ನು ತೆಗೆದುಕೊಳ್ಳಕೂಡದೆಂದೂ, ಅವುಗಳಿಗೆ ಸರಕಾರೀ ಜಾಹಿರಾತುಗಳನ್ನು ಕೊಡಕೂಡದೆಂದೂ ದ್ವೇಷ ಸಾಧನೆಯ ಆರ್ಡರನ್ನು ಕೊಟ್ಟವರು ಯಾರು? ಬ್ರಾಹ್ಮಣರ ಮೇಲೆ ವಿಷವನ್ನು ಕಾರುವ ಪತ್ರಿಕೆಗಳಿಗೆ ಇಲ್ಲದ ಸಲ್ಲದ ಪ್ರೋತ್ಸಾಹಗಳನ್ನು ಕೊಡುತ್ತಿರುವವರು ಯಾರು? ಇಷ್ಟೇ ಅಲ್ಲ. ಸರಕಾರದವರು ತೋರಿಸುವ ಪಕ್ಷಪಾತವು ಮಿತಿಯಿಲ್ಲದ್ದಾಗಿರುವುದು. ಸರಕಾರದವರು ನಿಷ್ಪಕ್ಷಪಾತವಾಗಿ ವರ್ತಿಸಿದರೆ ನಮ್ಮ ಸಂಸ್ಥಾನಕ್ಕೆ ಇಷ್ಟು ಕೆಟ್ಟ ಹೆಸರು ಬರುತ್ತಿರಲಿಲ್ಲ. ಸರಕಾರದವರ ಪಕ್ಷಪಾತವು ಒಂದು ಸಣ್ಣ ಮಗುವಿಗೂ ಕೂಡ ವ್ಯಕ್ತವಾಗುತ್ತದೆ. ಅನೇಕರಿಗೆ ಇದುವರೆಗೂ ತೋರುತ್ತಿದ್ದೇನೆಂದರೆ ಅಬ್ಬಾಸ್ ಖಾನರು ಪಿತೂರಿಯ ಕಥೆಯನ್ನು ಸೃಷ್ಟಿಮಾಡಿದ್ದಾರೆ ನೋಡೋಣ. ಇದರಿಂದ ನಮ್ಮ ತಲೆಯನ್ನು ತಪ್ಪಿಸಿಕೊಳ್ಳಬಹುದು ಎಂಬುದಾಗಿ ಸರಕಾರದ ಭಾವನೆಯಿದ್ದ ಹಾಗೆ ಕಾಣುತ್ತದೆ. ಅಬ್ಬಾಸ್ ಖಾನರು [illegible]ನ್ನು ತಮ್ಮ ಜೊತೆಗೆ ಸೇರಿಸಿದ್ದರಿಂದ ಈ ಪಿತೂರಿಯು ಇಷ್ಟು ವಿಷಮ ಹಾವಳಿ ಮಾಡಿತು.

[illegible]ವನ್ನು ವಿಮರ್ಶೆ ಮಾಡಿದರೆ ಇದು ಹಿಂದೂ ಮುಸಲ್ಮಾನರ ಜಗಳವೇ ಅಲ್ಲ. ಕೆಲವರು ದುರುಳರು ತಮ್ಮ ಸ್ವಾರ್ಥಸಾಧನೆಗಾಗಿ, ಗಣಪತಿಯ ನೆಪವನ್ನು [illegible] ತಾವು ಮಹಮ್ಮದೀಯ ಮುಖಂಡರೆಂದು ವಿಜೃಂಭಿಸಿ ಅನಾಹುತವನ್ನು ಮಾಡಿರುವರು. ಸರಕಾರದವರು ಇಂತಹ ಸಂದರ್ಭದಲ್ಲಿ ನಿಷ್ಪಕ್ಷಪಾತದಿಂದಿರದೆ ಆ ದುರುಳರಿಗೆ ಪ್ರೋತ್ಸಾಹಕೊಟ್ಟರು. ಅವರ ಪಕ್ಷವನ್ನು ವಹಿಸಿ ನಿರ್ದೋಷಿಗಳಿಗೆಲ್ಲಾ ತೊಂದರೆಯನ್ನು ಕೊಟ್ಟರು. ಈಗ ರಾಜಿಗೆ ಅಂತಹ ತಲೆ ಹೋಗುವ ಸನ್ನಿವೇಶವೇನೂ ಇಲ್ಲ. ಸರಕಾರದವರ ಕರ್ತವ್ಯ ಪರಾಙ್ಮುಖತೆಯಿಂದ ನಮ್ಮ ಸಂಸ್ಥಾನಕ್ಕೆ ಕೆಟ್ಟ ಹೆಸರು ಬಂದಿತು. ಈಗಲೂ ಸರಕಾರದವರು ಧೈರ್ಯವನ್ನು ವಹಿಸಿ ನಿರ್ದೋಷಿಗಳನ್ನು ಖುಲಾಸೆ ಮಾಡಿ, ನ್ಯಾಯಪಾಶಕ್ಕೆ ಶಿಕ್ಷಿಸಲ್ಪಡದರಾಗಿರುವ ದುರುಳರನ್ನು ಕಾನೂನಿಗೆ ಗುರಿಮಾಡಿ ಅವರ ಅಪರಾಧಕ್ಕೆ ಅನುಗುಣವಾದ ಶಿ[illegible] ವಿಧಿಸಲಿಲ್ಲ. ಹೆದರಬೇಕಾದ್ದಿಲ್ಲ. ದೊಡ್ಡ ಅನ್ಯಾಯ[illegible]ದ ಕಡೆ ಕೆಲವು ನಿರ್ದೋಷಿಗಳಿಗೂ ಶಿಕ್ಷೆಯಾಗಬಹು[illegible] ಅದು ಶಿಕ್ಷೆಯಲ್ಲ. ಅದು ತ್ಯಾಗ. ಕಾನೂನಿನ ಪ[illegible] ಯಾರೂ ಅಡ್ಡಿ ಬಂದಿರಲಿ! ಕಾನೂನನ್ನು ತುಳಿದು ನ್ಯಾಯಸ್ಥಾನಗಳನ್ನು ಹಳಿದು ರಾಜಿಯು ಬೇಡ. ಸರಕಾರದವರು ತಮ್ಮ ತಪ್ಪನ್ನು ತಿದ್ದುಕೊಳ್ಳುವುದೊಂದೇ ರಾಜಮಾರ್ಗವು ಉಳಿದಿರುವುದು.

ವರ್ತಮಾನ ಸಂಗ್ರಹ

ದೇಶೀಯ ಸಂಸ್ಥಾನಗಳ ಭವಿಷ್ಯ.

ದೇಶೀಯ ಸಂಸ್ಥಾನಗಳ ಭವಿಷ್ಯದ ವಿಷಯವಾಗಿ ಮ|| ಎಲ್. ಎಸ್. ರಾಜೂರವರ ಅಧ್ಯಕ್ಷತೆಯಲ್ಲಿ ಈ ತಿಂಗಳು 17 ನೇ ತಾ|| ನ ದಿವಸ ಬೆಂಗಳೂರಿನಲ್ಲಿ ಸಭೆಯು ನಡೆಯಿತು. ಮ|| ಗಳಾದ ಡಿ. ವಿ. ಗುಂಡಪ್ಪನವರು ಮತ್ತು ಹೊಸಕೊಪ್ಪ ಕೃಷ್ಣರಾಯರು ಭಾಷಣಗಳನ್ನು ಮಾಡಿದರು.

ರಾಜಕೀಯ ಸುಧಾರಣೆಗಳು.

ನ್ಯಾಯ ವಿಧಾಯಕ ಸಭೆಯಲ್ಲಿ ವೆ|| ಡಿ. ಎಸ್. ಮಲ್ಲಪ್ಪನವರು ನಮ್ಮ ಸಂಸ್ಥಾನದ ಪ್ರಜೆಗಳಿಗೆ ಇನ್ನು ಹೆಚ್ಚು ರಾಜಕೀಯ ಸುಧಾರಣೆಗಳನ್ನು ಕೊಡಬೇಕೆಂದೂ ಪ್ರಜಾಪಕ್ಷದ ಒಬ್ಬ ಎಗ್ಸಿಕ್ಯೂಟಿವ್ ಕೌನ್ಸಿಲರನ್ನು ನೇಮಿಸಬೇಕೆಂದೂ ಠರಾವುಗಳನ್ನು ತಂದರು.

ಕರ್ಣಾಟಕ ಮಹಾಜನಗಳ ಅಭಿನಂದನ.

ಬೆಂಗಳೂರು ಜಾಮೀನು ಮೊಕದ್ದಮೆಯಲ್ಲಿ ನಿರ್ದೋಷಿಗಳೆಂದು ಮರ್ಯಾದೆಯಿಂದ ಬಿಡುಗಡೆ ಹೊಂದಿದ ಸತ್ಯಾಗ್ರಹ ಮುಖಂಡರನ್ನು ಬಿಜಾಪುರದಲ್ಲಿ ನೆರೆದಿದ್ದ ಅಖಿಲ ಕರ್ನಾಟಕ ಮಹಾಜನಗಳು ಅಭಿನಂದನ ಮಾಡಿ ತಂತಿಯನ್ನು ಕಳುಹಿಸಿದ್ದಾರೆ. ಈ ಮೊಕದ್ದಮೆಯಲ್ಲಿ ಧೈರ್ಯವಾಗಿ ನಿಂತು ನಿರ್ಭಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ, ನಿಷ್ಪಕ್ಷಪಾತವಾಗಿಯೂ ವಾದಿಸಿದ ಮ|| ರಾ|| ಗಳಾದ ಎಲ್. ಎಸ್. ರಾಜು ಡಿ. ಶಾಮರಾವ್ ಟಿ. ಅಪ್ಪೂರಾವ್ ಪ್ರಭೃತಿಗಳನ್ನು ಅಭಿನಂದನಮಾಡಿ ತಂತಿಯು ಬಂದಿದೆ.

ವಿಜ್ಞಾನ ಚಕ್ರವರ್ತಿಗಳು

ಈಗ ಕೆಲವು ದಿವಸಗಳ ಹಿಂದೆ ಅಮೇರಿಕದ ಸುಪ್ರಸಿದ್ಧ ಆವಿಷ್ಕರ್ತರಾದ ಥಾಮಾಸ್ ಆಲ್ವಾ ಎಡಿಸನ್ ಎಂಬುವರ ಎಂಭತ್ತೊಂದನೆ ವರ್ಧಂತಿಯು ನಡೆಯಿತು. ಆವಿಷ್ಕರ್ತರೆಂದರೆ ಹೊಸ ಹೊಸ ವಸ್ತುಗಳನ್ನು ಕಂಡು ಹಿಡಿದಿರುವವರು. ಎಡಿಸನ್‌ರಷ್ಟು ಹೊಸ ಹೊಸ ವಸ್ತುಗಳನ್ನು ಕಂಡುಹಿಡಿದವರು ಯಾರೂ ಇಲ್ಲ. ಅವರು ಕಂಡು ಹಿಡಿದಿರುವ ವಸ್ತುಗಳ ಪಟ್ಟಿಯನ್ನು ಕೊಡುವುದು ಸಾಧ್ಯವಿಲ್ಲ. ಫೋನೋಗ್ರಾಫ್, ಮಿಮಿಯೋಗ್ರಾಫ್, ಆಲ್‌ಕಲೈನ್ ಸ್ಟೋರೇಜ್ ಬ್ಯಾಟರಿ, ಎಲೆಕ್ಟ್ರಿಕ್ ಲ್ಯಾಂಪ್, ಸಿನಿಮಾಕ್ಯಾಮರ ಮೊದಲಾದುವುಗಳನ್ನು ಕಂಡು ಹಿಡಿದವರು ಇವರೆ.

ಅಡ್ವೋಕೇಟ್ ಜನರಲ್.

ಮದ್ರಾಸಿನ ಸುಪ್ರಸಿದ್ಧ ವಕೀಲರಾದ ಅ[illegible] ಕೃಷ್ಣಸ್ವಾಮಿ ಅ[illegible]ರು ಮ[illegible] ಕೇಟ್ ಜನರಲ್‌ರವರಾಗಿ [illegible]ಪಿಸಲ್ಪಟ್ಟಿದ್ದಾರೆ.

Regd No. M. 2322 ॥ ವಂದೇಮಾತರಂ ॥ ಬಿಡಿ ಪ್ರತಿಗೆ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ... ಪರಸ್ಥಳಕ್ಕೆ ...

ಸಂಪುಟ ೧] ಶುಕ್ರವಾರ ೨೧ ಡಿಸೆಂಬರ್ ೧೯೨೮ [ಸಂಚಿಕೆ ೭೭

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Building Mysore.
5 Subba Pundit & Co, Lakshmivilas Road
6 Friends' Union, Mysore.
7 Sweet Mart, Lansdowne Buildings, Mysore.
8 H Subba Rao C/o B Same Gowda & Sons Sakaleshpur
9 H Naganniah News Agent Chikmagalur
10 V Krishniah Gandhi Bhavan Closepet

ಕಲಾ ಮಂದಿರ.

ಅತ್ಯುತ್ತಮವಾದ ಕುಶಲ ವಿದ್ಯೆಗಳು ಈ ಮಂದಿರದಲ್ಲಿ ನಡೆಯುತ್ತವೆ. ಶಿಕ್ಷಣ ದೊರೆಯುತ್ತದೆ. ಕಲೆ ಮತ್ತು ಕುಶಲ ವಿದ್ಯೆಗಳಿಗೆ ಕೈಪಿಡಿಯಂತಿರುವ "ಕಲಾ ನಿವೇದನ" ಎಂಬ ಪುಸ್ತಕವು ಜನವರಿ ತಿಂಗಳಲ್ಲಿ ಪ್ರಕಟವಾಗುವುದು. ನಿಮ್ಮ ಹೆಸರು ಮೊದಲೇ ರಿಜಿಸ್ಟರ್ ಮಾಡಿಕೊಳ್ಳಿ.

ಎ. ಎಸ್. ಸುಬ್ಬರಾವ್,
ಕಲಾ ಮಂದಿರ, ...

ಮೈಸೂರು ಸಿಟಿ ಕೋ-ಆಪರೇಟೀವ್ ಸೊಸೈಟಿ ಲಿಮಿಟೆಡ್

ನೋಟೀಸು

ತಾ|| 23-12-1928 ನೇ ಭಾನುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಮೈಸೂರು ಟೌನ್ ಹಾಲಿನಲ್ಲಿ ಮೇಲ್ಕಂಡ ಸೊಸೈಟಿಯ ಆರ್ಡಿನರಿ ಜನರಲ್ ಮೀಟಿಂಗ್ ನಡೆಯಲು ಏರ್ಪಡಿಸಿರುತ್ತೆ. ಆ ಕಾಲಕ್ಕೆ ಸದರಿ ಸೊಸೈಟಿ ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಿದೆ.

ಪಿ. ಸೀತಾರಾಮಯ್ಯ,
ಆನರರಿ ಸೆಕ್ರೆಟರಿ.

Printed and published by P. R. Ramaiya.
at Sri Rama Press, D. Subbiah Road, Mysore.

ವಿವಿಧ ವಿಷಯಗಳು

ಒಬ್ಬ ಯೂರೋಪಿಯನ್ನಿನ ಕೊಲೆ.

ಸೈಮನ್ ಸಮಿತಿಯವರು ಲಾಹೋರಿಗೆ ಬಂದಿದ್ದಾಗ್ಯೆ ಲಾಲಾಲಜಪತರಾಯರ ಮೇಲೆ ಲಾಠಿಪ್ರಯೋಗವನ್ನು ಮಾಡಿದ ಮಿ॥ ಸಾಂಡರ್ಸ್ ಎಂಬ ಹೆಸರಿನ ಪೋಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟರನ್ನು ಯಾರೋ ರಿವಾಲ್ವರಿಂದ ಹೊಡೆದು ಕೊಂದರು.

ಅರಮನೆ ಹುದ್ದೆಗಳು

ಏಡಿಕಾಂಗ್‌ರಾಗಿದ್ದ ಸಡೆಗ್ ಸಡ್ ಷಾರವರು ಶ್ರೀ ಮನ್ಮಹಾರಾಜರವರ ಸೆಕ್ರೆಟರಿಯವರಾಗಿಯೂ ಹಿಲ್ಲೆ ಕಚೇರಿ ಬಕ್ಷಿ ಮ॥ ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು ಲೆಫ್ಟಿನೆಂಟ್ ಕರ್ನಲ್‌ರವರಾಗಿಯೂ ಬಾಡಿಗಾರ್ಡ್ಸ್ ಕಮ್ಯಾಂಡೆಂಟ್ ಮ॥ ಎಸ್. ಗೋಪಾಲರಾಯರು ಮೇಜರವರಾಗಿಯೂ ಆನರರಿ ಏಡಿಕಾಂಗ್ ಮ॥ ಆಗ ಮಹಮ್ಮದ್ ನಬಿ ಖಾನರವರು ಕ್ಯಾಪ್ಟನ್‌ರವರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಅಸಂಬದ್ಧ ಪ್ರಲಾಪ

ಭಾರತ ಖಂಡದ ಮಹಾರಾಜರುಗಳಲ್ಲಿ ಪರಮ ಆಸ್ತಿಕರೂ, ವೈದಿಕ ಮತಪ್ರಚಾರದಲ್ಲಿ ಅತ್ಯಂತ ಶ್ರದ್ಧಾವಂತರೂ ಎಂದೆನ್ನಿಸಿಕೊಂಡಿರುವ ನಮ್ಮ ಪ್ರಭುವಂದರವರಿಗೆ ಮುಸಲ್ಮಾನ್ ಪಟ್ಟವನ್ನು ಕಟ್ಟಬೇಕೆಂದು ಇಂಗ್ಲೆಂಡಿನ ಪತ್ರಿಕೆಗಳು ಬಳಗೊಳಗೆ ಸಂಚುಮಾಡುತ್ತಿರುವಂತೆ ಕಾಣಬರುತ್ತದೆ. ಕೆಲವು ದಿನಗಳ ಹಿಂದೆ ಈ ಅಬದ್ಧವನ್ನು ಪ್ರಪಂಚಕ್ಕೆ ಹರಡುವ ಕೆಲಸದಲ್ಲಿ ಮ್ಯಾಂಚೆಸ್ಟರ್ ಗಾರ್ಡಿಯನ್ ಎಂಬ ಇಂಗ್ಲೀಷ ಪ್ರಾಮುಖ್ಯವಾದ ಪತ್ರಿಕೆಯು ಅಂಕುರಾರ್ಪಣಮಾಡಿತು. ಈಗ ಆಯ ಮಕ್ಕಳಿಗೆಲ್ಲಾ ವಿನೋದಕರವಾದ ವಿಷಯಗಳನ್ನು ವಾರವಾರಕ್ಕೂ ಹರಡುವುದರಲ್ಲಿ ಅಗಗಣ್ಯನೆಂದೆನ್ನಿಸಿಕೊಂಡಿರುವ ಚಿಲ್ಡ್ರನ್ಸ್ ನ್ಯೂಸ್‌ಪೇಪರ್ ಎಂಬ ಮತ್ತೊಂದು ಆಂಗ್ಲ ಪತ್ರಿಕೆಯು ಇದೇ ಮಾರ್ಗವನ್ನೇ ಅನುಸರಿಸಿ ಮೈಸೂರು ಮಹಾರಾಜರನ್ನು ಮಹಮ್ಮದೀಯರೆಂದು ಜಗತ್ತಿನ ಸಣ್ಣ ಮಕ್ಕಳಿಗೆ ಸಾರುತ್ತಿದೆ. ಅದು ಹೇಳುವುದೇನೆಂದರೆ "ಈ ತಿಂಗಳಲ್ಲಿ ಮೈಸೂರಿನಲ್ಲಿ ಅಮೇರಿಕಾ, ಯೂರೋಪ, ಚೀನಾ ಜಪಾನ್, ಆಫ್ರಿಕಾ ಮುಂತಾದ ಕಡೆಗಳ ಕ್ರಿಸ್ತ ವಿದ್ಯಾರ್ಥಿಗಳು ಹಿಂದೂಸ್ಥಾನದ ವಿದ್ಯಾರ್ಥಿಗಳೊಡನೆ ಕಲೆಯುವರು. ಅಖಿಲ ಪ್ರಪಂಚದ ಕ್ರೈಸ್ತ ವಿದ್ಯಾರ್ಥಿಗಳ ಪ್ರತಿನಿಧಿಗಳು ಇಂತಹ ನಿರತಿಶಯವಾದ ಸತ್ಕಾರ ಸೌಲಭ್ಯಗಳನ್ನು ಸ್ವತಃ ಮುಸಲ್ಮಾನರಾಗಿರುವ ಮೈಸೂರು ಮಹಾರಾಜರವರಿಂದ ಪಡೆಯುವುದು ಹಿಂದೂಸ್ಥಾನದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ವಿವಿಧ ಮತಗಳ ಪರಸ್ಪರ ಸೌಹಾರ್ದದ ಚಿಹ್ನೆಯಾಗಿದೆ."

ಸಾಮಾನ್ಯವಾಗಿ ಈ ಪತ್ರಿಕೆಗಳಲ್ಲಿ ಅಬದ್ಧಗಳು ಬರುವುದಿಲ್ಲ. ವಾಸ್ತವ್ಯವಾದ ಸಂಗತಿಗಳನ್ನೇ ಪ್ರಕಾಶಿಸಲು ಬೇಕಾದ ಏರ್ಪಾಡುಗಳನ್ನೆಲ್ಲಾ ಅವು ಮಾಡಿರುತ್ತವೆ. ಆದರೆ ಬೇಕುಬೇಕೆಂದು ಜನರ ಮನಸ್ಸಿನಲ್ಲಿ ದುರಭಿಪ್ರಾಯವನ್ನು ಹುಟ್ಟಿಸಿ ಸ್ವಕಾರ್ಯ ಸಾಧನೆ ಮಾಡಬೇಕಾದ ಪ್ರಸಂಗದಲ್ಲಿ ಮಾತ್ರ ಹೀಗೆ ಬರೆಯುತ್ತವೆ. ಇನ್ನೂ ಯಾವ ಯಾವ ಪತ್ರಿಕೆಗಳು ಹೀಗೆಯೆ ಬರೆಯುವವೋ ನೋಡೋಣ.

ವಿಚಾರಣೆ

ಬೆಂಗಳೂರು ಅಡ್ವೊಕೇಟ ಮ॥ ಎಲ್. ಎಸ್. ರಾಜುರವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಗೌರ್ನಮೆಂಟ್ ಲೀಗಲ್ ರಿಮೆಂಬರೆನ್ಸರಾದ ಬ್ಯಾರಿಸ್ಟರ್ ಮ॥ ಬಿ. ನಾಗಪ್ಪನವರ ಮೇಲೆ ಮಾಡಿರುವ ಮಾನನಷ್ಟದ ದಾವೆಯು ಕೋರ್ಟಿನವರಿಂದ ಹಿಡಿಯಲ್ಪಟ್ಟು ಬರುವ ಜನವರಿ ತಾ॥ ೫ ರಲ್ಲಿ ವಿಚಾರಣೆಗಿಡಲ್ಪಟ್ಟಿರುತ್ತದೆ.

ರಜತ ಮಹೋತ್ಸವ.

ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳ ರಜತ ಮಹೋತ್ಸವವನ್ನು ಬರುವ ಫೆಬ್ರವರಿ ತಾ॥ ೨೨ ಕ್ಕೆ ದಾವಣಗೆರೆಯಲ್ಲಿ ಮಾಡುವದೆಂದು ಗೊತ್ತಾಗಿದೆ.

ಪ್ರೆಸ್ ಕವ ನ್ಯೂಕ್

ಶ್ರೀಮನ್ ಮಹಾರಾಜಾ ಸರ್ಕಾರದವರು ರೇಷ್ಮೆ ಕೈಗಾರಿಕೆಯನ್ನು ಹೆಚ್ಚಾಗಿ ಜನರಲ್ಲಿ ಅಭಿವೃದ್ಧಿಯನ್ನು ಮಾಡುವ ಸಲುವಾಗಿ ಕೆಳಗೆ ಕಂಡ ರಿಯಾಯಿತಿಗಳನ್ನು ತೋರಿಸಿರುತ್ತಾರೆ.

1 ಕೈಗಾರಿಕೆಯ ಯಂತ್ರಸಾಮಗ್ರಿಗಳ ಮಾರಾಟದಂತೆಯೇ ಈ ರೇಷ್ಮೆ ಇಲಾಖೆಯಿಂದ ಕೊಪ್ಪರಿಗೆಯನ್ನೂ ಸಹ ಕಂತುಗಳಿಗೆ ಪಡೆಯ ಬಹುದು.

2 ಕೊಪ್ಪರಿಗೆ ಬೇಸಿನಾ ಒಂದಕ್ಕೆ 800 ರೂಪಾಯಿಗಳ ಖರೀದಿಯಾದರೂ ಕೊಳ್ಳುವವರಿಗೆ 600 ರೂಪಾಯಿಗಳು ಮಾತ್ರವೇ ತಗಲುತ್ತದೆ. ಈ ರಿಯಾಯತಿಯು ಒಂದು ವರ್ಷಕಾಲ ಮಾತ್ರ ತೋರಿಸಲ್ಪಡುತ್ತೆ.

3 ರೇಷ್ಮೆ ದಾರ ತೆಗೆಯುವವರಿಗೆ ಯಂತ್ರದ ಬೇರೆ ಬೇರೆ ಸಾಮಾನುಗಳೂ ಸಹ ರೇಷ್ಮೆ ಇಲಾಖೆಯಿಂದ ಒದಗಿಸಲ್ಪಡುವವು.

4 ಬೇಸಿನಾ ಕೊಪ್ಪರಿಗೆಗಳನ್ನು ಕೊಳ್ಳುವವರಿಗೆ ದಾರ ತೆಗೆಯುವುದರಲ್ಲಿ ಚೆನ್ನಾಗಿ ತರಪೇತಾಗಿರುವವರ ಸಹಾಯವು ಉಚಿತವಾಗಿ ಕೊಡಲ್ಪಡುವುದು.

5 ಟ್ರೈನಿಂಗ್ ತರಗತಿಗಳು ಕೊಳ್ಳೇಗಾಲ ಮತ್ತು ಸಿಡ್ಲಘಟ್ಟ ತಾಲ್ಲೋಕುಗಳಲ್ಲಿ ಇಡಲ್ಪಟ್ಟಿರುವುದಲ್ಲದೆ ಹೊಸದಾಗಿ ಇನ್ನು ಮೂರು ಕಡೆ ಪ್ರಸಕ್ತ ವರ್ಷದಲ್ಲಿ ಏರ್ಪಾಡುಗುತ್ತದೆ.

ಈ ರಿಯಾಯಿತಿಗಳಂತೆ ಬೇಸಿನ್‌ಗಳನ್ನು ಹೆಚ್ಚಿಗೆ ಜನರು ತೆಗೆದು ಕೊಂಡರೆ ಮಾತ್ರ ಹೊಸದಾದ ಮೂರು ಕಡೆ ಟ್ರೈನಿಂಗ್ ತರಗತಿಯು ಏರ್ಪಾಡಾಗುತ್ತೆ.

ಇದರಿಂದ ಬೇಸಿನ ಕೊಪ್ಪರಿಗೆಗಳನ್ನು ಕೊಳ್ಳಲು ಪೇಕ್ಷಿಸುವರು ತಾವೇ ಸ್ವಂತವಾಗಿ ದಾರ ತೆಗೆಯುವವರನ್ನು ತರಪೇತು ಮಾಡಿಸಲು ಅನುಕೂಲವಾಗುವುದು. ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಬೆಂಗಳೂರಿನಲ್ಲಿರುವ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ ಕಾಮರ್ಸ್‌ರವರಲ್ಲಿ ಬರೆದು ತಿಳಿಯಬಹುದು.

ಪ್ರೆಸ್ಸಿಗೆ ಮುಟ್ಟುಗೋಲು

[illegible] ಪತ್ರಿಕೆಯನ್ನು ೯ ನೇ ಸತ್ಯಾಗ್ರಹ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸುದು. [illegible] ವಕ ಮಾಸಗಳು ಮಾತ ಹೆಚ್ಚಾಗಿದ್ದವು ಆದುದರಿಂದ ಅದ [illegible] ಪತ್ರಿಕೆಯಾದುದರಿಂದ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಅಪ್ಪಣೆಯಾಗಿರುವುದರಿಂದ ಪೋಲಿಸ್ ಇನ್ಸ್‌ಪೆಕ್ಟರವರು ಪ್ರೆಸ್ಸನ್ನೂ ಪತ್ರಿಕೆಯನ್ನೂ ಮಟ್ಟುಗೋಲ [illegible] ಕಚೇರಿಯ ಪತ್ರಿಕೆಯ ವಿಷಯದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ರೀತಿಯು ವಿಚಿತ್ರವಾದುದು. ಒಂದು ಸಾರಿ ಮುಟ್ಟುಗೋಲ ಇಕ್ಕೊಂಡು ಸಾರಿ ಇಲ್ಲ. ಪುನಃ ಮುಟ್ಟುಗೋಲು. ಪುನಃ ಇಲ್ಲ. ಇದೇನಿದು ಆಶ್ಚರ್ಯ. ಒಟ್ಟಿಗೆ ಒಂದೇ ಸಾರಿ ಪತ್ರಿಕೆಯನ್ನು [illegible] ರಡಿಸುವದಕ್ಕೆ ಅಪ್ಪಣೆಯನ್ನು ಕೊಡಬೇಕು. ಅದು ಬಿಟ್ಟು ಅಸಂಬದ್ಧವಾದ ಈ ನಡೆವಳಿಕೆಯಿಂದ ಏನು ಪ್ರಯೋಜನ? ಇಂತಹ ಹಾಸ್ಯಾಸ್ಪದವಾದ ನಡವಳಿಕೆಗಳನ್ನು ನಡೆಸಿ ಪತ್ರಿಕೆಗಳು ಈ ನಡವಳಿಕೆಗಳನ್ನು [illegible] ದರೆ ಸರ್ಕಾರದಲ್ಲಿ ತಿರಸ್ಕಾರ ಉಂಟಾಗುವಂತೆ [illegible] ಗಳನ್ನು ಮಾಡುತ್ತಾರೆಂದು ದೂಷಿಸುವುದು ಯಾವ ನ್ಯಾಯವೋ ಗೊತ್ತಿಲ್ಲ. ಈಗಲಾದರೂ ಸರ್ಕಾರದವರು ಮ॥ ರಾಮಚಂದ್ರರಾಯರ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿ ನ್ಯಾಯದೃಷ್ಟಿಯಲ್ಲೂ ವರ್ತಿಸಿ ಅವರಿಗೆ ಪತ್ರಿಕೆಯನ್ನು ಪ್ರಕಟಿಸುವುದಕ್ಕೆ ಅವಕಾಶವನ್ನು ಕೊಡುವರೆಂದು ನಂಬುತ್ತೇವೆ.

ಬಾವುಟಗಳನ್ನು ಸಾಕುವ ಸ್ಥಳ.

ಮೈಸೂರು ಸರ್ಕಾರದವರು [illegible] ಗೆ ಸಾಧಕವಾದ ದನಕರುಗಳನ್ನು ಸಾಕ ಪ್ರದೇಶಕ್ಕಾಗಿ ಮಂಜೂರಿನ ಒಳಿ 6000 ರೂಪಾಯಿಗಳೊಳಗಿನ ಮಂಜೂರನ್ನು ಏರ್ಪಡಿಸಿರುವರು.

ಸತ್ಕಾರ.

ಮೈಸೂರು ವಿಶ್ವವಿದ್ಯಾಲಯದ ತರ್ಲಿಸಿಗಳು [illegible] ಕ್ರೈಸ್ತ ವಿದ್ಯಾರ್ಥಿಗಳ ಸಮ್ಮೇಳನದ ಸದಸ್ಯರವರಿಗೆ ಈ ಮಾಹೆ 14 ನೇ ರಾತ್ರಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಒಂದು ಸತ್ಕಾರವನ್ನು [illegible]

[illegible]

ಈ ಮಾಹೆ 1[illegible] ನೇ ತಾ| ನ ದಿನ [illegible] ನಲ್ಲಿ ಶ್ರೀ ಚಂದ್ರಮೌಳೀಶ್ವರ ಸ್ವಾಮಿ ಮಠ [illegible] [illegible] ಈ ಉತ್ಸವಕಾರ್ಯಕ್ಕೆ ಮ॥ ಅಬ್ಬಲ್ಲ ಸಾಹೇಬರೇ ಮೊದಲಾದ [illegible] ಮಹಾಜನರು [illegible] ಉತ್ಸಾಹದಿಂದ ಸಹಕರಿಸಿದರೆಂದು ತಿಳಿದು ಬರುತ್ತೆ.

TAI NADU
21—12—1948

ಮೋಹಿನಿಯ ರಾಗಕ್ಕೆ ಕಿವಿಗೊಡಬೇಡಿ.

ನಾವು ಬೆಂಗಳೂರಿನಲ್ಲಿ ನಡೆಯುತ್ತಿರುವ ಅಥವಾ ನಡೆಯುತ್ತಿರುವವೆಂದು ತಿಳಿದು ಬರುತ್ತಿರುವ ರಾಜಿಯ ಪ್ರಯತ್ನದ ವಿಷಯವಾಗಿ ಬರೆದೆವು. ಈಪತ್ತಿನ ದಿವಸ ಆ ಸಮಾಚಾರವು ಇನ್ನೂ ದೃಢಪಟ್ಟಿರುವುದು. ದೂರದಿಂದ ನಾವು ಬೆಂಗಳೂರಿನ ಸ್ಥಿತಿಗಳನ್ನು ನೋಡುತ್ತಿರುವೆವು. ನಮಗೆ ಬೆಂಗಳೂರಿನ ವಿಷಯದಲ್ಲಿ ಯಾವ ವಿಧವಾದ ಪಕ್ಷಪಾತವಾಗಲೀ ದಾಕ್ಷಿಣ್ಯವಾಗಲೀ ಇರುವುದಿಲ್ಲ. ವಾಸ್ತವ್ಯವಾಗಿ ಈಗ ನಾಲ್ಕೈದು ತಿಂಗಳಿಂದಲೂ ಬೆಂಗಳೂರಿನ ವಾತಾವರಣವು ಬಹು ಅಲ್ಲೋ[illegible] ... ಬೆಂಗಳೂರಿನಲ್ಲಿ ಅನೇಕ [illegible] ... ಕೈವಾಲುಗಳನ್ನು [illegible] ... ಬೆಂಗಳೂರಿನಲ್ಲಿ [illegible]

[illegible]

ನ್ಯಾಯಕ್ಕೂ ಅನ್ಯಾಯಕ್ಕೂ ಸತ್ಯಕ್ಕೂ ಅಸತ್ಯಕ್ಕೂ ಧರ್ಮಕ್ಕೂ ಅಧರ್ಮಕ್ಕೂ ಯಾವಾಗಲೂ ರಾಜಿಯಾ[illegible]. ಅನ್ಯಾಯವೂ ಅಸತ್ಯವೂ ಅಧರ್ಮವೂ ಸಂಪೂರ್ಣವಾಗಿ ನಾಶವಾಗಬೇಕು. ಬೆಂಗಳೂರಿನಲ್ಲಿ ಕೆಲವು ಸ್ವಾರ್ಥತ್ಯಾಗಿಗಳಾದ ದೇಶಭಕ್ತರು ನಿಸ್ಪೃಹತೆಯಿಂದ ನ್ಯಾಯಕ್ಕೂ, ಸತ್ಯಕ್ಕೂ, ಧರ್ಮಕ್ಕೂ, ಹೋರಾಡುತ್ತಿರುವರು. ಅವರುಗಳಿಗೆ ನಮ್ಮದೊಂದೇ ಒಂದು ವಿಜ್ಞಾಪನೆ. ಅವರು ಸತ್ಯದಲ್ಲಿ ವಿಶ್ವಾಸವಿಡಲಿ. ಸತ್ಯಕ್ಕೆ ಜಯವುಂಟು. ಸತ್ಯವನ್ನು ವಿಜಯವಾಗುವಂತೆ ಮಾಡುವ [illegible]. ಕುರುಕ್ಷೇತ್ರದಲ್ಲಿ ಶ್ರೀ ಕೃಷ್ಣ [illegible] ಅರ್ಜುನನಿಗೆ ಹೇಳಿದ ಮಾತನ್ನು ನಮ್ಮ [illegible] ನೆನಪಿನಲ್ಲಿಡಲಿ. ರಾಜಿ ಎಂಬುದು ಒಂದು ರೀತಿಯಾದ ದೌರ್ಬಲ್ಯ ಕ್ಲೈಬ್ಯ. "ಕ್ಲೈಬ್ಯಂ ಮಾಸ್ಮಗಮಃ ಪಾರ್ಥ" ಎಂಬ ಅಮೃತವಾಣಿಯನ್ನು ನೆನಪಿನಲ್ಲಿಡಲಿ. ರಾಜಿ ಎಂಬ ಮೋಹಿನಿಯ ರಾಗಕ್ಕೆ ಕಿವಿಗೊಡದಿರಲಿ.

ವರ್ತಮಾನ ಸಂಗ್ರಹ

ಕೈಸರನ ಮೀಸೆ!

ಮಾಜಿ ಕೈಸರನ ಒಂದು ಸಮಯದಲ್ಲಿ ಪ್ರಸಿದ್ಧಪಟ್ಟ ಮೀಸೆಗಳ ಕತೆಯು ಈಗ ಹೇಳಲ್ಪಡುತ್ತಿರುವುದು. ಒಂದು ದಿನ ಕೈಸರನು ಒಬ್ಬ ಯುವಕನ ಸೊಗಸಾದ ಮೀಸೆಗಳನ್ನು ಕಂಡು ಆ ಮೀಸೆಗಳನ್ನು ಆ ರೀತಿಯಲ್ಲಿ ಕಡಿದ ನಾಯಿಂದನಾರೆಂದು ವಿಚಾರಿಸಲು, ಹರ್ ಹೇದಿಯೆಂಬ ನಾವಾನ್ನ ನಾಯಿಂದನ ಹೆಸರು ಹೇಳಲ್ಪಟ್ಟಿತು. ಹೆರ್ ಹೇದಿಯ ಕರೆಯಲ್ಪಟ್ಟನು. ಆತನು ರಾತ್ರಿ ಹಗಲು ಆಲೋಚಿಸಿ, ಕೈಸರನ ಮೀಸೆಗಳ ತುದಿಯನ್ನು ತಿರುವಿ ಚೆನ್ನಾಗಿ ಮೇಲಕ್ಕೆ ನಿಲ್ಲುವ ಹಾಗೆ ಮಾಡಿದನು.

ಹೂವುಗಳ ಕಾರ್ಖಾನೆ!

ಕೆನಡಾದಲ್ಲಿ ಒಬ್ಬನು ಒಂದು ಗುಲಾಬಿ ಹೂವನ್ನು ಹುಟ್ಟಿಸಲು ಕಲಿತಿರುವನು. ಅಮೇರಿಕೆಯಲ್ಲಿ ಬೇರೆ ಯಾರೂ ಅಂತಹ ಹೂವು ಬಿಡುವ ಗಿಡಗಳನ್ನು ಸಾಕಬಾರದೆಂದು ಆತನು ಅಪೇಕ್ಷಿಸಿದಂತೆ ಸೆನೇಟಿನವರು ಆತನ ಅಭಿಪ್ರಾಯವನ್ನು ಸಮರ್ಥಿಸಿರುವರು.

ಸ್ಕೌಟ್ ರ್ಯಾಲಿ,

ಈದಿನ ಸಾಯಂಕಾಲ 5 ಗಂಟೆಗೆ ಅಠಾರಾ ಕಛೇರಿಯ ಬಳಿ ಸ್ಕೌಟ್ ರ್ಯಾಲಿಯು ನಡೆಯುವುದು ಶ್ರೀಮನ್ಮಹಾರಾಜರವರು ಅಧ್ಯಕ್ಷತೆಯನ್ನು ವಹಿಸುವರು. ಸ್ಕೌಟುಗಳಿಂದ ಅನೇಕ ಆಟಪಾಟಗಳೂ ಸಹ ನಡೆಯುವುವು.

ಡೆ|| ಕಮೀಷನರುಗಳ ವರ್ಗಾವರ್ಗಿ.

ಮ|| ರಾ|| ಎ. ವಿ ರಾಮನಾಥನ್ ಬಿ. ಎ. ಯವರು ಮೈಸೂರು ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೂ ಮ|| ರಾ|| ಕೆ. ವಿ. ಅನಂತರಾಮನ್ ಬಿ. ಎ. ಯವರು ತುಮಕೂರಿಂದ ಮೈಸೂರ್ ಡಿಸ್ಟ್ರಿಕ್ಟಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ. ಹಾಲಿ ಎಕ್ಸೈಜ್ ಕಮೀಷನರ್ ಆಗಿರುವ ಮ|| ರಾ|| ಎಸ್. ಸಿ. ರಾಜಗೋಪಾಲಾಚಾರಿ ಬಿ. ಎ. ಬಿ. ಎಲ್. ರವರಿಗೆ 2 ನೇ ಜನವರಿಯಿಂದ 2 ತಿಂಗಳು ಪ್ರಿವಿಲೇಜ್ ರಜಾವನ್ನು ಕ್ರಿಸ್ಮಸ್ ರಜದ ಜೊತೆಗೆ ಸ್ಯಾಂಕ್ಷನ್ ಮಾಡಿರುವರು.

ಅವರ ರಜದ ಕಾಲದಲ್ಲಿ ಮ|| ರಾ|| ಎಂ. ಕೆ. ಸ್ಟೈಯಿನ್ ಟ್ರಾಫ್ ಡೈರೆಕ್ಟರವರು ಎಕ್ಸೈಜ್ ಕಮೀಷನರ್, ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಕಮೀಷನರ್ ಆಫ್ ಸ್ಟ್ಯಾಂಪ್ಸ್ ಮತ್ತು ಸಂಘಗಳ ರಿಜಿಸ್ಟ್ರಾರ್ ಈ ಕೆಲಸಗಳೆಲ್ಲಾ ನೋಡಿಕೊಳ್ಳುವರು.

ದಿವಾನರವರ ಸರ್ಕೀಟು

ಚಿಕ್ಕಬಳ್ಳಾಪುರ ಶಿಡ್ಲಘಟ್ಟ, ಗೋರಿಬಿದನೂರು, ಬಾಗೇಪಲ್ಲಿ ಮತ್ತು ಗುಂಡಿಬಂಡೆ ತಾಲ್ಲೂಕುಗಳು.

ಜನವರಿ ತಾ|| 2 ನೇ ಬುಧವಾರ—ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನಿಂದ ಹೊರಟು 10 ಗಂಟೆಗೆ ಚಿಕ್ಕಬಳ್ಳಾಪುರವನ್ನು ತಲಪುವುದು, ಮಧ್ಯಾಹ್ನ [illegible] ಮ್ಯುನಿಸಿಪಲ್ ಕೌನ್ಸಿಲರುಗಳ ಅಡ್ರೆಸ. [illegible] ಮುಖ್ಯ ಸಂಸ್ಥೆಗಳ ಇನ್ಸ್‌ಪೆಕ್ಷನ್ ಸಾಯಂಕಾಲ [illegible]ರ ಅಹವಾಲು ವಿಚಾರಣೆ.

ತಾ|| 3 ನೇ ಗುರುವಾರ—ಟವರ್ ವಿದ್ಯಾಶಾಲೆಯನ್ನು ಪರಾಂಬರಿಸುವುದು. ಮಧ್ಯಾಹ್ನ [illegible] ಪ್ರಂಗಳಿಗೆ ಭೇಟಿ. ಸಾಯಂಕಾಲ ಪ್ರಜೆಗಳ [illegible] ಕೊರತೆಗಳ ವಿಚಾರಣೆ.

ತಾ|| 4 ನೇ ಶುಕ್ರವಾರ—ಬೆಳಿಗ್ಗೆ ಚಿಕ್ಕಬಳ್ಳಾಪುರದಿಂದ ಶಿಡ್ಲಘಟ್ಟಕ್ಕೆ ಹೊರಟು ದಾರಿಯಲ್ಲಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಸಾಯಂಕಾಲ ಚಿಕ್ಕಬಳ್ಳಾಪುರಕ್ಕೆ ವಾಪಸು.

ತಾ|| 5 ನೇ ಶನಿವಾರ—ಬೆಳಿಗ್ಗೆ ಚಿಕ್ಕಬಳ್ಳಾಪುರದಿಂದ ಗೋರಿಬಿದನೂರಿಗೆ ಹೊರಟು ದಾರಿಯಲ್ಲಿ ಇನ್ಸ್‌ಪೆಕ್ಷನ್. ಗೋರಿಬಿದನೂರು ಟವರ್ ಇನ್ಸ್‌ಪೆಕ್ಷನ್ ಮಾಡಿಕೊಂಡು ಗಾಂಜಾ ಪ್ಲಾಂಟೇಷನ್ ನೋಡಿಕೊಂಡು ವಿದುರಾಶ್ವತ್ಥಕ್ಕೆ ಹೋಗಿ ಸಾಯಂಕಾಲ ವಾಪಸು ಚಿಕ್ಕಬಳ್ಳಾಪುರಕ್ಕೆ.

ತಾ|| 6 ನೇ ಭಾನುವಾರ—ಬೆಳಿಗ್ಗೆ ಚಿಕ್ಕಬಳ್ಳಾಪುರದಿಂದ ಬಾಗೇಪಲ್ಲಿಗೆ ಹೊರಟು ದಾರಿ ಉದ್ದಕ್ಕೂ ಗ್ರಾಮಗಳ ಇನ್ಸ್‌ಪೆಕ್ಷನ್. ಮಧ್ಯಾಹ್ನ ಬಾಗೇಪಲ್ಲಿ ಟವರ್ ಇನ್ಸ್‌ಪೆಕ್ಷನ್. ಸಾಯಂಕಾಲ ಪ್ರಜೆಗಳ ಮತ್ತು ರೈತರ ಕುಂದುಕೊರತೆಗಳ ವಿಚಾರಣೆ.

ತಾ|| 7 ನೇ ಸೋಮವಾರ— ಬೆಳಿಗ್ಗೆ ಬಾಗೇಪಲ್ಲಿಯಿಂದ ಗುಡಿಬಂಡೆಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿ ಅಲ್ಲಿಂದ ವಾಪಸು ಬಾಗೇಪಲ್ಲಿಗೆ.

ತಾ|| 8 ನೇ ಮಂಗಳವಾರ—ಬೆಳಿಗ್ಗೆ ಬಾಗೇಪಲ್ಲಿಯಿಂದ ಹೊರಟು ದಾರಿಯಲ್ಲಿ ಇನ್ಸ್‌ಪೆಕ್ಷನ್ ಮಾಡಿಕೊಂಡು ವಾಪಸು ಬೆಂಗಳೂರು ತಲಪುವುದು.

ಚೀಫ್ ಕೋರ್ಟ್.

ಚೀಫ್ ಕೋರ್ಟಿನಲ್ಲಿ ಹಂಗಾಮಿ ಜಡ್ಜರಾಗಿ ಮ|| ರಾ|| ಎಂ. ರಾಮಚಂದ್ರರಾವ್ ಬಿ.ಎ. ಬಿ.ಎಲ್ ರವರನ್ನು ಹಾಲಿ ರಜದ ಮೇಲಿರುವ ಮ|| ರಾ|| ಬಿ. ರಾಮರಾಯರ ಸ್ಥಾನದಲ್ಲಿ ನಿಯಮಿಸಿರುತ್ತಾರೆ.

ಚೀಫ್ ಕೋರ್ಟ್.

[illegible] ಜಡ್ಜರಾದ ಮ|| ರಾ|| ಡಿ. [illegible]ರಾಮರಾವ್ ಬಿ.ಎ. ಬಿ.ಎಲ್. ಎಲ್. ಬಿ. ಯವರು ಜನವರಿ 2 ನೇ ತಾ|| ನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ವರೆ ತಿಂಗಳು ರಜಾ ಮಂಜೂರಾಗಿರುತ್ತದೆ.

ಬಡ್ತಿ.

ಸೀನಿಯರ್ ಅ|| ಕಮೀಷನರ್ ಆಗಿರುವ ಮ|| ರಾ|| ಎಂ. ಎನ್. ಬಾಳರಾಜ ಅರಸ್ ಬಿ. ಎ ಯವರು [illegible]ಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ ಪದವಿಗೆ ಬಡ್ತಿ [illegible]ಲ್ಪಟ್ಟಿರುತ್ತಾರೆ.

Regd No. M. 2322 ‖ ವಂದೇಮಾತರಂ ‖ ಬಿಡಿ ಪ್ರತಿ ೧ ಕಾಸು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ⎫ ೫—೦—೦
ಚಂದಾ ⎭ [illegible]

ಸಂಪುಟ ೧] ಶನಿವಾರ ೨೨ ಡಿಸೆಂಬರ್ ೧೯೨೮ [ಸಂಚಿಕೆ ೭೩

ಮೈಸೂರು ಸಿಟಿ ಕೋ-ಆಪರೇಟೀವ್ ಸೊಸೈಟಿ ಲಿಮಿಟೆಡ್

ನೋಟೀಸು

ತಾ|| 23-12-1928 ನೇ ಭಾನುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಮೈಸೂರು ಟೌನ್ ಹಾಲಿನಲ್ಲಿ ಮೇಲ್ಕಂಡ ಸೊಸೈಟಿಯ ಅಡ್ಜರ್ನ್ ಜನರಲ್ ಮೀಟಿಂಗ್ ನಡೆಯಲು ನಿರ್ಧರಿಸಿರುತ್ತೆ. ಆ ಕಾಲಕ್ಕೆ ಸರಿಯಾಗಿ ಸೊಸೈಟಿ ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಿದೆ.

ಸಿ. ನೀ[illegible]ನಾರಾಯಣಯ್ಯ,
ಆನರರಿ ಸೆಕ್ರೆಟರಿ.

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ರಾಡ್ಜ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P Venkatappa & Co
Excelsior Type-writing Institute, Balepet, Bangalore City
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 Subba Pundit & Co, Lakshmivilas Road
6 Friends' Union, Mysore.
7 Sweet Mart, Lansdowne Buildings, Mysore.
8 H Subba Rao C/o B Same Gowda & Son Sak[illegible]
9 H Naganniah News Agent Chikmagalur
10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D. Subbiah Road, Mysore

ತಾಯಿನಾಡು.

22—12—1928.

ಕನ್ನಡನಾಡಿನ ಮಹಿಮೆ

ಉತ್ತರ ಕರ್ನಾಟಕದ ಧನ್ವಂತರಿ ಗೋವಿಂದಾಚಾರ್ಯರವರು ಮಾಡಿದ ಉಪನ್ಯಾಸ

ತಾ|| 18-12-28 ನೆಯ ದಿವಸ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಮಾತೃಭೂಮಿಯ ಮಹಿಮೆಯ ವಿಚಾರವಾಗಿ, ಉಪನ್ಯಾಸವನ್ನು ಮಾಡಿದರು. ಮ|| ರಾ|| ರಾಜಗೋಪಾಲರಾಯರು ಅಧ್ಯಕ್ಷಪದವಿಯನ್ನು, ವಹಿಸಿದ್ದರು.

1 ಕನ್ನಡ ದೇಶದಲ್ಲಿ ಮತಸ್ಥಾಪಕರಾದ. ಶಂಕರಾಚಾರ್ಯರ, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಜನ್ಮವನ್ನು ತಾಳಿದರು. ಇವರುಗಳು ರಚಿಸಿದ ವೇದಾಂತಗ್ರಂಥಗಳು, ಪಾಶ್ಚಿಮಾತ್ಯ ರಾಷ್ಟ್ರದವರ ಹೃದಯಕಮಲಗಳನ್ನು ಕೂಡ ಅರಳಿಸವವು 2 ಸಾಧುಸತ್ಪುರುಷರು, ಭಗದ್ಭಕ್ತರು ಸುಜನ ಶಿರೋಮಣಿಗಳು ಕನ್ನಡ ನಾಡಿನಲ್ಲಿಯೇ, ಜನ್ಮವೆತ್ತಿದರು. ಪುರಂದರದಾಸರು ಕನಕದಾಸರು, ಜಗನ್ನಾಥರಾಯರು ಇವರೇ ಮೊದಲಾದವರು, ಭಗವಂತನ ಮಹಿಮೆಯನ್ನು ವಿಶೇಷವಾಗಿ, ಸ್ತುತಿಸಿ ಅಕ್ಷಯ ಕೀರ್ತಿಯನ್ನ ಪಡೆದರು. 3 ಜೈನ ಕವಿಗಳೂ, ಬ್ರಾಹ್ಮಣ ಕವಿಗಳೂ, ವೀರಶೈವ ಕವಿಗಳೂ ತಮ್ಮ ಸಾಹಿತ್ಯದ ಮಹಾತ್ಮೆಯಿಂದ ಸಮಸ್ತ ಜನರನ್ನು ಆನಂದ ಸಮುದ್ರದಲ್ಲಿ ಮುಳುಗಿಸುವಂತೆ ಮಾಡಿದರು. 4 ಕನ್ನಡ ದೇಶದಲ್ಲಿ ಜನಿಸಿದ ವೀರಬಂಧುಗಳು, ಸತ್ಯಸಮರ್ಥನಕ್ಕಾಗಿಯೂ, ಶ್ರೇಷ್ಠವಾದ ಕುಲವನ್ನು ಉದ್ಧಾರ ಮಾಡುವುದಕ್ಕಾಗಿಯೂ, ಜನತೆಯ ಕಷ್ಟವನ್ನು ಹೋಗಲಾಡಿಸುವುದಕ್ಕಾಗಿಯೂ, ತಮ್ಮ ರಕ್ತವನ್ನು ಮಾತೃಭೂಮಿಗೆ ಸೇಚಿಸಿಂತೆ ಅಭಿಷೇಕ ಮಾಡಿಸಿ, ಕಷ್ಟಕಾಲದಲ್ಲಿ ನಮ್ಮನ್ನು ಕಾಪಾಡಿದರು 5 ಪೃಥ್ವಿರಾಜ ಚಂದ್ರಗುಪ್ತಮೌರ್ಯ, ಅಶೋಕ ಶಿವಾಜಿ, ಉದಯಸಿಂಹ ಪ್ರತಾಪಸಿಂಹ ಮೊದಲಾದ ಶೂರಪುರುಷರಂತೆ, ಕರ್ನಾಟಕದಲ್ಲಿ ಆಳಿದ, ಪುಲಕೇಶಿ, ರಾಷ್ಟ್ರಕೂಟದ 3 ನೆಯ ಗೋವಿಂದ ಕಲ್ಯಾಣ ಚಾಲುಕ್ಯ ಅರಸನಾದ ಆಹವಮಲ್ಲ ವಿಷ್ಣುವರ್ಧನ ರಾಜಮಲ್ಲ (ಗಂಗರಲ್ಲಿ) ಹುಹುರ. ಶ್ರೀ ಕೃಷ್ಣರಾಜ (1509-1527) ರಾಜ ಒಡೆಯರು ರಣಧೀರ ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ಶೂರರೆನಿಸಿಕೊಂಡು. ತಮ್ಮ ಯಶೋ ದುಂದುಭಿಯನ್ನು ಸಮಸ್ತ ರಾಷ್ಟ್ರದವರಿಗೆ ಕೇಳಿಸುವಂತೆ ಮಾಡಿದರು ಮತ್ತು ಕನ್ನಡ ಸಾಹಿತ್ಯಕ್ಕೆ ವಿಶೇಷ ಉತ್ತೇಜನವನ್ನ ಕೊಟ್ಟು, ಮಾತೆಯ ಪವಿತ್ರ ಪ್ರೇಮವನ್ನು ಸಂಪಾದಿಸಿಕೊಂಡರು. 6 ಶಿಲ್ಪಶಾಸ್ತ್ರದಲ್ಲಿ ಅತ್ಯಂತ ಪ್ರಸಿದ್ಧರಾದ, ಜಕಣಾಚಾರ್ಯರು, ಡಂಕಣಾಚಾರ್ಯರು ಹಳೇಬೀಡು, ಬೇಲೂರು ಮಹಾರಾಷ್ಟ್ರದೇಶದಲ್ಲಿ ಕೆಲಕೆಲವು ಭಾಗಗಳಲ್ಲಿ ಕಟ್ಟಿದ ದೇವಾಲಯಗಳು ಪಾಶ್ಚಿಮಾತ್ಯ ರಾಷ್ಟ್ರದವರಿಗೂ ಕೂಡ ಆಶ್ಚರ್ಯವನ್ನುಂಟುಮಾಡುವವು. 7 ಚಿತ್ರದುರ್ಗ ಸೀಮೆಯಂತೆ, ಆನೆಗುಂದಿ ಕಂಪಿಲ (ಬಳ್ಳಾರಿ ಡಿಸ್ಟ್ರಿಕ್ಟ್). ಸಂಸ್ಥಾನಗಳಲ್ಲಿ ಸಾಧ್ವಿಮಣಿಗಳು ಮುಸಲ್ಮಾನರ ಸಂಗಡ ಯುದ್ಧ ಮಾಡಿ, ತಮ್ಮ ಧರ್ಮವನ್ನು ಕಾಪಾಡಿಕೊಂಡರು. ಮತ್ತು ಸತ್ಯಕ್ಕಾಗಿಯೂ ಮಾನವನ್ನು ಕಾಪಾಡಿ ಕೊಳ್ಳುವುದಕ್ಕಾಗಿಯೂ ಕರ್ನಾಟಕದ ಸ್ತ್ರೀಯರ ಮಹಿಮೆಯನ್ನು ಹೊರಗಣ ರಾಷ್ಟ್ರದವರಿಗೆ ತಿಳಿಸುವಂತೆ, ಜೋಹರ ಪದ್ಧತಿಯನ್ನು ಅನುಸರಿಸಿದರು.

ಈ ಸಾಧ್ವೀಮಣಿಗಳ ಭಸ್ಮದ ಬೂದಿಯ ವೀರ್ಯವತ್ತಾದ ಗಾಳಿಯು ಕರ್ನಾಟಕ ವೀರರ ಧೀರರ ವೀರಬಂಧುಗಳ ಹೃದಯಕಮಲಗಳಲ್ಲಿ ವ್ಯಾಪಿಸಿದ್ದರಿಂದಲೂ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಪರಿಶುದ್ಧವಾದ ಪ್ರೇಮದಿಂದಲೂ ಜಡಿಜಡಿಯಾದ ಕರ್ನಾಟಕ ದೇಶವು ಮಾತೃಭೂಮಿಯ ಒಂದು ರಾಷ್ಟ್ರವಾಗಿ, ಮಹತ್ವವನ್ನು ಹೊಂದಲಿಲ್ಲವೆ? ವಿಜಯನಗರದ ರಾಜ್ಯವು 230 ವರ್ಷ ತನ್ನ ಗೌರವವನ್ನು ಕಾಪಾಡಿ ಕೊಂಡು ವಿದ್ಯಾ ವೈಭವಗಳಿಂದಲೂ. ಧನಕನಕಸಂಪತ್ತಿನಿಂದಲೂ ಧರ್ಮದಿಂದಲೂ, ನೀತಿಯಿಂದಲೂ ಪ್ರಕಾಶಮಾನವಾಗಿ ಇಟಲಿ ಪೋರ್ಚುಗಲ್ ದೇಶದವರಿಗೂ ಕೂಡ ಒಂದು ವಿಧವಾದ ಸಂತೋಷವನ್ನೂ ಆಶ್ಚರ್ಯವನ್ನೂ ಉಂಟುಮಾಡಲಿಲ್ಲವೆ? 1565ರಲ್ಲಿ ರಾಮರಾಜನು ಮುಸಲ್ಮಾನರಿಂದ ಹತನಾದ ಕೂಡಲೇ ಕರ್ನಾಟಕ ದೇವಿಯ ಭಾಗ್ಯದ ಸೂತ್ರವು ಹರಿಯಿತು. ವಿದ್ಯಾಸಿದ್ಧಿಯು ಅಡಗಿ ಹೋಯಿತು. ಸಂಪತ್ತಿಯು ಸಮಾಧಿಯನ್ನು ಹೊಂದಿತು.

ಸಾರಾಂಶ:— ಕನ್ನಡ ದೇಶವು ಯಾವುದರಿಂದಲೂ ಅಲ್ಪತ್ವವನ್ನು ಹೊಂದಿರುವುದಿಲ್ಲವಾದ ಕಾರಣ ಪ್ರತಿಯೊಬ್ಬ ಕರ್ನಾಟಕಸ್ಥನು ಅದರಲ್ಲಿಯೂ ಇಂದಿನ ನವತರುಣ ವಿದ್ಯಾರ್ಥಿಗಳು ಮಾತೃಭೂಮಿಯ ಅಭಿಮಾನವನ್ನು ಸಂಪೂರ್ಣವಾಗಿ ವಹಿಸಿ ಸಾಧುಸತ್ಪುರುಷರ ಭಗವದ್ಭಕ್ತರ ವೀರರ ಸಾಧ್ವೀಮಣಿಗಳ ಚರಿತ್ರೆಗಳನ್ನು ಓದಿ ಮಾತೆಯ ಪವಿತ್ರ ಪ್ರೇಮವನ್ನು ಸಂಪಾದಿಸಬೇಕೆಂಬ ವಿಷಯಗಳನ್ನು ತಿಳಿಸಿ ತಮ್ಮ ಉಪನ್ಯಾಸವನ್ನು ಮುಗಿಸಿದರು.

ಆಮೇಲೇ ಸ್ಕೂಲ್ ಕನ್ನಡ ಪಂಡಿತರಾದ ಲಕ್ಷ್ಮೀಕಾಂತಯ್ಯನವರು ಉಪನ್ಯಾಸಕರು ಹೇಳಿದ ವಿಷಯಗಳಿಗೆ ವಿಶೇಷ ಮಹತ್ವವನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಕೆಲವು ಹಿತೋಕ್ತಿಗಳನ್ನು ಪ್ರೇಮಪೂರ್ವಕವಾಗಿ ಹೇಳಿದರು.

ಅಧ್ಯಕ್ಷಪದವಿಯನು ವಹಿಸಿದ್ದ ಪೆದ್ದಾಸ್ವಾಮಿ[illegible] ಮಾತೃ ಭಾಷೆಯ ಅಭಿಮಾನದಿಂದ ಕನ್ನಡದಲ್ಲಿಯೇ ಪ್ರೇಮ ಪೂರ್ವಕವಾಗಿ ಮಾತೆಯ ಮಹಿಮೆಯನ್ನು ಹೊಗಳಿ ವಿದ್ಯಾರ್ಥಿಗಳು ಕನ್ನಡಕ್ಕೆ ಹೆಚ್ಚು ಗಮನ ಕೊಡಬೇಕೆಂಬ ವಿಷಯಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

ಉಪನ್ಯಾಸಕರು ನೈಜಾಮ್ ಕರ್ನಾಟದಲ್ಲಿಯೂ ಮದ್ರಾಸ್ ಕರ್ನಾಟಕದಲ್ಲಿಯೂ ಸಂಚಾರ ಮಾಡಿ ಮಾತೆಯ ಸೇವೆಯನ್ನು ಮಾಡಿರುತ್ತಾರೆ. ಮತ್ತು ಮಹನೀಯರ ಅಂತಃಕರಣಕ್ಕೆ ಪಾತ್ರರಾಗಿರುತ್ತಾರೆ. ಇವರು ಡಿಶಂಬರ್ 27 ನೇ ತಾರೀಖಿಗೆ ಕರ್ನಾಟಕಕ್ಕೆ ಮಂಗಳ ಮಣಿಯಂತಿರುವ ಬೆಂಗಳೂರಿನಲ್ಲಿ ಉಪನ್ಯಾಸ ಮಾಡುವವರಾಗಿದ್ದಾರೆಂದು ತಿಳಿಯಬಂತ್ತದೆ.

ದ್ವಿತೀಯಸಚಿವರಾದ ರಾಜಮಂತ್ರ ಪ್ರವೀಣ ಮ|| ಸಿ ಎಸ್. ಬಾಲಸುಂದರಂ ಅಯ್ಯರ್ ಬಿ. ಎ. ರವರಿಗೆ ನವೆಂಬರ್ 14 ರಿಂದ 24 ರವರೆಗೆ ಪ್ರಿವಿಲೇಜ್ ರಜಾ ಮುಂಜೂರಾಗಿದೆ.

ಕಮಿಷನ್ [illegible]

[illegible]

[illegible] ಕೊಡಬೇಕಾದ ರಾಜಕೀಯ ಸುಧಾರಣೆಗಳನ್ನು ಪರ್ಯಾಲೋಚಿಸುತ್ತಿರುವರು. ಅವರ [illegible] ಮಾಡ ವರೋ ಅದನ್ನು [illegible] ಸಹಿಸುವೆವು ಎಂದು ಹೇಳಿದರು. ಅಬ್ಬಾ! ನಮ್ಮ ಮಂತ್ರಿಗಳ ದೃಷ್ಟಿಯು ಎಷ್ಟು ವಿಶಾಲವಾದದು! ಮತ್ತು ದೀರ್ಘವಾದುದು! [illegible] ಕಮಿಷನರವರು ಮಾಡುವ ಶಿಫಾರಸುಗಳನ್ನೆಲ್ಲಾ ನಮ್ಮ ಮೈಸೂರಿನಲ್ಲಿಯೂ ನಡೆಸಬೇಕಾದ [illegible] ಈಗಲೇ [illegible] ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ಈಗ ಇರುವಷ್ಟು ರಾಜಕೀಯ ಸ್ವಾತಂತ್ರ್ಯವನ್ನಾದರೂ ನಮಗೆ ಕೊಡಬಾರದೆ? [illegible] ಪ್ರೆಸ್ ಆಕ್ಟನ್ನು ರದ್ದು ಮಾಡುತ್ತೇವೆಂದು ಹೇಳಿದ್ದನ್ನು ನಡೆಸಿಕೊಡಬಾರದೆ?

ರೈಲ್ವೆ ಉತ್ಪತ್ತಿ.

ಮೈಸೂರು ರೈಲ್ವೆಯ ಉತ್ಪತ್ತಿಯು ಕಳೆದ ನವೆಂಬರ್ ತಿಂಗಳಿಗೆ ಒಟ್ಟು 63,30[illegible] ರೂ ಗಳು. ಹೋದ ವರ್ಷ ಇದೇ ಕಾಲದಲ್ಲಿ ಇದಕ್ಕಿಂತಲೂ 3[illegible] ರೂ ಗಳು ಹೆಚ್ಚಿತ್ತು. ಇದುವರಿವಿಗಿನ ಈ ವರ್ಷದ ಆದಾಯವು 1[illegible]77,000 ರೂ ಗಳಾಗಿವೆ.

ಗೀತಾ ಜಯಂತಿ

ಶ್ರೀಮದ್ಭಗವದ್ಗೀತೆಯನ್ನು [illegible] ಭಾರತ ಭೂಮಿಯ ಸಕಲ ಆಸ್ತಿಕ ಶಿರೋಮಣಿಗಳೂ ಗ್ರಹಿಸಿರುತ್ತಾರಷ್ಟೆ. ಈ ಭಗವದುಪದೇಶವಾದ ಗೀತೆಯು ಯಾವ ದಿವಸ ಉಪದೇಶಿಸಲ್ಪಟ್ಟಿತು [illegible] ಶಾಸ್ತ್ರಶೋಧಕರ [illegible] ಕೌರವರ [illegible] ಮಾರ್ಗಶಿರ [illegible] ಗೀತೆ ಪೂಜೆಯನ್ನು ನಡೆಸಿದರೆಂಬುದಕ್ಕೆ ಶಾಸನ ಪ್ರಮಾಣಗಳು ದೊರೆಕುತ್ತವೆ. ಅದರ ಮರುದಿವಸವೇ ಯುದ್ಧದ ಆರಂಭವಾಗಿ ಶ್ರೀ ಕೃಷ್ಣಭಗವಂತನಿಂದ ಅರ್ಜುನನಿಗೆ ಗೀತೋಪದೇಶವಾದ ಸಂಗತಿಯು ನಿರ್ಣಯಿಸಲ್ಪಟ್ಟು ಅದರ ಉತ್ಸವದ ಆಚರಣೆಗಳನ್ನು ಆಸೇತುಹಿಮಾಚಲದಲ್ಲಿಯೂ [illegible]

ನಮ್ಮ ಮೈಸೂರು ಸಂಸ್ಥಾನದಲ್ಲಿಯ ಪ್ರತಿಯೊಂದು ಊರುಗಳಲ್ಲಿಯೂ ಹಿಂದೂ ಮಹಾಜನರು ಈ ಉತ್ಸವದ ಆಚರಣೆಗಳನ್ನು ಮೇಲ್ಕಂಡ ದಿವಸದಲ್ಲಿ (ಈ ವರ್ಷ ನಾಳೆಯ ದಿನ 23-12-28) ನಡೆಸುವುದು ಶ್ರೇಯಸ್ಕರವಾದುದು.

ನಾರಿಗಾ [illegible]

TAI NADU
[illegible]-12-1928

ಮ॥ ರಾ॥ ಎ. ವಿ. ರಾಮನಾಥರ್‌ರವರು

ಮ॥ ರಾ॥ ಎ. ವಿ. ರಾಮನಾಥನ್‌ರವರು ಮೈಸೂರು ಡಿಸ್ಟ್ರಿಕ್ಟಿಗೆ ಡೆಪ್ಯುಟಿ ಕಮೀಷನರಾಗಿ 1928 ರಲ್ಲಿ ಬಂದರು. ಈಗ ಕೋಲಾರಕ್ಕೆ ವರ್ಗಾಯಿಸಲ್ಪಟ್ಟಿರುವರೆಂದು ಕೇಳುತ್ತೇವೆ. ಈ ಸಂದರ್ಭದಲ್ಲಿ ಮ॥ ರಾ॥ ರಾಮನಾಥನ್‌ರವರ ಅಧಿಕಾರ ನಿರ್ವಹಣೆಯನ್ನು ವಿಮರ್ಶಿಸುವುದು ಪ್ರಸ್ತುತವು. ಇವರು ಇಂತಹ ದೊಡ್ಡ ಡಿಸ್ಟ್ರಿಕ್ಟಿನ ಆಡಳಿತವನ್ನು ಬಹಳ ಸಾಮರ್ಥ್ಯದಿಂದಲೂ ದಕ್ಷತೆಯಿಂದಲೂ ನಿರ್ವಹಿಸಿದರೆಂಬುದು ನಿರ್ವಿವಾದವಾದುದು. ಯಾವುದನ್ನೇ ಆಗಲಿ ತಾವು ಸ್ವಂತವಾಗಿ ಪರಿಶೀಲಿಸಿದ ಹೊರತು ಕಾರ್ಯಕ್ರಮವನ್ನು ನಡೆಸುತ್ತಿರಲಿಲ್ಲ. ಇವರು ಡಿಸ್ಟ್ರಿಕ್ಟಿನ ಪ್ರತಿಯೊಂದು ಭಾಗದಲ್ಲಿಯೂ ದೊಡ್ಡ ಊರಾಗಲಿ ಸಣ್ಣ ಊರಾಗಲಿ ತಾವೇ ಸ್ವಂತವಾಗಿ [illegible] ವಿಷಯಗಳನ್ನು ವಿಚಾರಿಸುತ್ತಿದ್ದರು. ತನಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಜನರಿಗೆ ಅನುಕೂಲತೆಗಳನ್ನು ಕಲ್ಪಿಸುತ್ತಿದ್ದರು. ಇವರ ಕೆಲಸಗಳು [illegible] ಉಚಿತವಾಗಿ [illegible]. ಹೊರಗೆ [illegible] ಮುಖದಕ್ಕೆ ಇವರು [illegible] ಕಂಡರೂ ಇವರ [illegible] ಮೃದುವಾದುದೆಂದು ಇವರ ಕೈಕೆಳಗಿನ [illegible] ಹೇಳುತ್ತಾರೆ. ಇವರು [illegible] ಪಕ್ಷಪಾತಿಗಳೆಂದು [illegible] ಕೇಳುವುದು; ಪ್ರತಿಪಕ್ಷ ಸಭೆಯಲ್ಲಿ [illegible] ಅವನ್ನತ್ತಿ ಇವರು ಬ್ರಾಹ್ಮಣ ಪಕ್ಷಪಾತಿಗಳೆಂದು [illegible] ಬ್ರಾಹ್ಮಣ ಪಕ್ಷ [illegible] ಕಥೆಯು [illegible]. [illegible] ಸರ್ಕಾರಕ್ಕೆ ಕೂಡ ಮ[illegible] ಬೆಂಗಳೂರು ಗಲಭೆಗಳು ನಡೆದ ಮೇಲೆ ಮೈಸೂರು ಡಿಸ್ಟ್ರಿಕ್ಟಿನ ಮತ್ತು ಮೈಸೂರು ನಗರದ ಶಾಂತಿ ಸಂರಕ್ಷಣೆಯಲ್ಲಿ ಇವರು ಅಪ್ರತಿಮವಾದ ಸಾಮರ್ಥ್ಯವನ್ನು ತೋರಿಸಿದರು.

[illegible] ರಾಜ [illegible] ಸಂಕಾರದವರಿಗೆ [illegible]. ಮ॥ ರಾ॥ ರಾಮನಾಥ್‌ರವರು ಈ ಒಳ್ಳೆ ಅವಕಾಶವನ್ನು ಕಳಕೊಂಡದ್ದಕ್ಕಾಗಿ ನಾವು ವ್ಯಸನ ಪಡುತ್ತೇವೆ. [illegible] ಮ॥ ರಾ॥ ರಾಮನಾಥ್‌ರವರು [illegible] ಮೈಸೂರನ್ನು [illegible] ಜನರ ಮತ್ತು ಪ್ರಜೆಗಳ ಸೇವೆಯನ್ನು ಮಾಡುವಂತೆ ದೇವರು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಬೆಂಗಳೂರು ಸುದ್ದಿ

(ಪ್ರಾಕೀ ವರ್ತಮಾಂತರ)

ನಾಗಪ್ಪನವರಿಗೆ ರಿಟೈರ್

ವಿಶ್ವೇಶ್ವರಯ್ಯ ಸಮಿತಿ ವರದಿಯು ಸರ್ಕಾರಕ್ಕೆ ವಿರೋಧ

ಬೆಂಗಳೂರಿನ ವಾತಾವರಣವೆಲ್ಲಾ ಪರಸ್ಪರ ವೈಷಮ್ಯದಿಂದ ತುಂಬಿ ತುಳುಕುತ್ತಿದೆ ರಾಜಿಯ ಪ್ರಯತ್ನಗಳನ್ನು ಯಾರೂ ನಂಬುವುದಿಲ್ಲ. ಮಿ॥ ನಾಗಪ್ಪನವರಿಗೆ ರಿಟೈರಾಗಿರುವುದಾಗಿಯೂ ಮ॥ ಮಹದೇವಯ್ಯನವರನ್ನು ಲಾಸೆಕ್ರಿಟರಿಗಳಾಗಿ ನೇಮಿಸಿರುವುದಾಗಿಯೂ ಸರ್ಕಾರ ಪ್ರಕಟನೆಯೊಂದು ಹೇಳುತ್ತದೆ. ಮ॥ ಕೆ. ಶಂಕರನಾರಾಯಣರಾಯರು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ ಮ॥ ಎ ಆರ್ ನಾಗೇಶ್ವರಯ್ಯರವರನ್ನು ಗೌರ್ನಮೆಂಟ್ ಅಡ್ವೊಕೇಟರಾಗಿ ನೇಮಿಸುವ ಸಂಭವವಿದೆ. ರಾಜಿಯ ಪ್ರಯತ್ನದ ಫಲಿತಾಂಶವಾಗಿ ಮ॥ ನಾಗಪ್ಪನವರು ರಿಟೈರ್ ಮಾಡಲ್ಪಟ್ಟಿರುವರೆಂದು ನಂಬಲಾಗಿದೆ.

ವಿಶ್ವೇಶ್ವರಯ್ಯ ಸಮಿತಿಯ ವರದಿಯಲ್ಲಿ ಸರ್ಕಾರಕ್ಕೆ ವಿರುದ್ಧವಾದ ಅನೇಕ ಟೀಕೆಗಳಿವೆ.

ಇನ್ನು ಮೇಲೆ ಪತ್ರಿಕಾ ಪ್ರತಿನಿಧಿಗಳಿಗೆ ನವರಾತ್ರಿ ಮತ್ತು ವರ್ಧಂತಿ ಕಾಲಗಳಲ್ಲಿ ಭೋಜನ ಫಲಾಹಾರ ವಾಹನ ಮುಂತಾದ ಸೌಕರ್ಯಗಳನ್ನು ಕೊಡಕೂಡದೆಂದು ಸರ್ಕಾರದವರು ತೀರ್ಮಾನ ಮಾಡಿರುತ್ತಾರೆ.

ಶ್ರೀ ಗೀತಾ ಜಯಂತಿ ಮಹೋತ್ಸವ.

ಆಸೇತು ಹಿಮಾಚಲ ಪರ್ಯಂತವೂ ಮಾರ್ಗಶಿರ ಶುದ್ಧ ಏಕಾದಶೀ ದಿವಸ ಆಚರಿಸಲ್ಪಡುವ ಈ ಮಹೋತ್ಸವಕ್ಕೆ ಅಂಗವಾಗಿ ತಾ॥ ೨೩-೧೨-೨೮ ನೇ ಭಾನುವಾರ ಸಾಯಂಕಾಲ ೬ ಘಂಟೆಗೆ ಮೈಸೂರು ಟೌನ್‌ಹಾಲ್‌ನಲ್ಲಿ—ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು. ಆಸ್ತಿಕ ಮಹಾಶಯರು ದಯಮಾಡಿಸಬೇಕಾಗಿ ಪ್ರಾರ್ಥನೆ.

—ಕಾರ್ಯಕ್ರಮ :— 1. ದೇವತಾಪ್ರಾರ್ಥನೆ. 2. ಸಂಗೀತ. 3. ಉಪನ್ಯಾಸ—"ಗೀತಾರ್ಥರಹಸ್ಯ", ವೇ॥ ಬ್ರ॥ ಸಾಲಿಗ್ರಾಮದ ನಾರಾಯಣ ಶಾಸ್ತ್ರಿಗಳವರಿಂದ. 4. ಇತರ ಭಾಷಣಗಳು. 5. ಅಧ್ಯಕ್ಷರ ಭಾಷಣ.

ಅಸಿಸ್ಟೆಂಟ್ ಕಂಟ್ರೋಲರು.

ಕಂಟ್ರೋಲರ್ ಆಫೀಸಿನಲ್ಲಿ ಸೀನಿಯರ್ ಸೂಪರಿಂಟೆಂಡೆಂಟರಾದ ಮ॥ ರಾ॥ ಬಿ. ಸುಬ್ಬರಾವ್ ಬಿ. ಎ ಯವರನ್ನು ಮ॥ ರಾ॥ ಕೆ. ಆರ್. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಬಿ. ಎಲ್ ರವರ ಸ್ಥಾನದಲ್ಲಿ ಅಸಿಸ್ಟೆಂಟ್ ಕಂಟ್ರೋಲರಾಗಿ ನೇಮಕ ಮಾಡಿದೆ.

ಖಾಯಂ.

ಮ॥ ರಾ॥ ಎಸ್. ಅಬ್ದುಲ್ ವಾಜಿದ್ ಬಿ. ಎ. ರವರು ಮೂರನೆ ದರ್ಜೆಯ ಡೆಪ್ಯುಟಿ ಕಮಿಷನರ್ ಆಗಿ ಸೆಪ್ಟೆಂಬರ್ 18 ನೇ ತಾ॥ ಲಾಗಾಯಿತು (ಗೋವಿಂದರಾಯರು ರಿಟೈರಾದ ಪ್ರಯುಕ್ತ) ಖಾಯಂ ಮಾಡಲ್ಪಟ್ಟಿರುವರು.

ವರ್ತಮಾನ ಸಂಗ್ರಹ

ಸ್ವೀಕಾರ.

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ಆಯುರ್ವೇದೀಯ ವೈದ್ಯಶಾಲೆಯ ಪ್ರೋಪ್ರೈಟರುಗಳಾದ ಮೆಸರ್ಸ್ ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರು 1229 ನೇ ಇಸವಿಯ ಸುಂದರವಾದ (ಶ್ರೀ ಕೃಷ್ಣನ ಭಾವಚಿತ್ರದ) ಕ್ಯಾಲೆಂಡರ್ ಒಂದನ್ನು ಕಳುಹಿಸಿರುವರು. ಅದನ್ನು ನಾವು ಆದರದಿಂದ ಸ್ವೀಕರಿಸುತ್ತೇವೆ.

ಪತ್ರಿಕಾ ಮೊಕದ್ದಮೆ.

ಮೈಸೂರು ಸ್ಟಾರ್ ಪತ್ರಿಕೆಯ ಮೇಲಣ ಮೊಕದ್ದಮೆಯ ವಿಚಾರಣೆಯು ಈ ಮಾಹೆ 19 ಕ್ಕೆ ಇಡಲ್ಪಟ್ಟಿತ್ತು. ಅಪರಾಧಿಗಳಾದ ಪತ್ರಿಕಾಸಂಪಾದಕರು ಗೈರುಹಾಜರಾದುದರಿಂದ ವಿಚಾರಣೆಯು ನಡೆಯಲಿಲ್ಲ. ಲಿಖಿತ ಮೂಲಕವಾಗಿ ಏನಾದರೂ ಬರಬಹುದೆಂದು ಅಂಜಿಯುಕ್ತ ನಿರೀಕ್ಷಣೆಮಾಡಿ 21 ನೇ ತಾ॥ ಗೆ ವರ್ಗಾಯಿಸಿದರು.

ನಿಷೇಧಿಸಲ್ಪಟ್ಟ ಪ್ರಶ್ನೆಗಳು.

ಈ ತಿಂಗಳು ತಾ॥ 17 ರಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಮ॥ ಗುಂಡಪ್ಪನವರು ತಂದಿದ್ದ ಈ ಕೆಳಗಿನ ಎರಡು (ಅತಿ ಮುಖ್ಯವಾದ) ಪ್ರಶ್ನೆಗಳು ಅಧ್ಯಕ್ಷರಿಂದ ನಿರಾಕರಿಸಲ್ಪಟ್ಟವು.

೧. ಸರ್ಕಾರದವರಾಗಲಿ ಖಾಸಗಿಯವರಾಗಲಿ ಸರ್ಕಾರಕ್ಕೆ ಸೇರಲ್ಪಟ್ಟ ಪ್ರಭುಗಳಲ್ಲಿ ತಮ್ಮ ತನು ಧನ ಮಾನ ಸಂಬಂಧವಾದ ಕುಂದು ಕೊರತೆಗಳನ್ನು ಕುರಿತು ಮನವಿ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುವರೇ ಇಲ್ಲವೆ?

೨. ಸಂಕಾರದವರು ತಮ್ಮ ವಿಚಾರಣೆಯನ್ನು ಬಹಿರಂಗ ಪಡಿಸಿದ ಕಾಲದಲ್ಲಿ ಕೆಲವು ಮುಖ್ಯಾಂಶಗಳನ್ನು ತಮ್ಮ ಸ್ಫೂರ್ತಿಗೆ ತಂದಿದ್ದರೇ ಇಲ್ಲವೆ?

ರಜಾ.

ಕೈಗಾರಿಕೆ ಸೂಪರಿಂಟೆಂಡೆಂಟರಾದ ಮ॥ ರಾ॥ ಕೆ. ಟಿ. ಕಡಬಾರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು 2 ನೇ ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಆ ಕಾಲದಲ್ಲಿ ಆ ಇಲಾಖೆಯ ಮ॥ ರಾ॥ ಪಿ. ರಾಘವಾಚಾರ್ ಯವರನ್ನು ಸೂಪರಿಂಟೆಂಡೆಂಟರಾಗಿ ನೇಮಕ ಮಾಡಿದೆ.

ಎಕ್ಸಿಕ್ಯುಟೀವ್ ಇಂಜಿನಿಯರಾದ ಮ॥ ರಾ॥ ಹೆಚ್. ಪಿ. ಮಾರ್ಕರ್ ಎಲ್. ಸಿ. ಇ. ರವರಿಗೆ ಈ ಮಾಹೆ 3 ನೇ ತಾ॥ ಲಾಗಾಯಿತು 1 ತಿಂಗಳು ಒಂದು ದಿನಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಆ ಕಾಲದಲ್ಲಿ ವಾಟರ್ ಸಪ್ಲೈ ಡಿವಿಷನ್‌ನಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್ ಆಗಿರುವ ಮ॥ ರಾ॥ ಕೆ. ಗರುಡಾಚಾರ್ ಬಿ. ಎ. ಸಿ. ಇ. ರವರು ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನೂ ಸಹ ನೋಡಿಕೊಳ್ಳುವರು.

ಬಡ್ತಿ.

ಚೀಫ್‌ಕಮಾಂಡೆಂಟರವರಿಗೆ ಸ್ಟಾಫ್ ಆಫೀಸರಾಗಿರುವ ಮೇಜರ್ ಬಿ. ಪಿ. ಕೃಷ್ಣೇ ಅರಸ್ ಎಂ. ಸಿ. ಡಿ. ಎಸ್. ಎಂ. ರವರು 1928 ನೇ ನವಂಬರ್ ೧ ಲಾಗಾಯಿತು ಮತ್ತೊಂದು ವರ್ಷಕಾಲ ಅದೇ ಹುದ್ದೆಯಲ್ಲಿರತಕ್ಕದ್ದು.

Regd No. M. 2322

॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ: ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ [illegible]

ಸಂಪುಟ ೧] ಸೋಮವಾರ ೨೪ ಡಿಸೆಂಬರ್ ೧೯೨೮ [ಸಂಚಿಕೆ ೭೪

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರಾಡ್ಡು ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P Venkatappa & Co
Excelsior Type-writing Institute, Balepet
Bangalore City

2 Koppada Ramakrishniah Agent Hassan

3 Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Buildings
Mysore

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings,
Mysore

8 H Subba Rao C/o B Sanne Gowda & Son
Sakaleshpur

9 H Naganniah News Agent
Chikmagalur

10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore

ತಾಯಿನಾಡು.

1[illegible]—1[illegible]—192[illegible]

ವರ್ತಮಾನ ಸಂಗ್ರಹ

ಅಖಿಲ ಭಾರತ ಮಹಿಳೆಯರ ಸಮ್ಮೇಳನ

ಅಖಿಲ ಭಾರತ ಮಹಿಳೆಯರ ಸಮ್ಮೇಳನವು ಈ ತಿಂಗಳು 2[illegible] ರಿಂದ 2[illegible] ನೇ ತಾರೀಖಿನವರೆಗೆ ಕಲ್ಕತ್ತಾ ಪಟ್ಟಣದಲ್ಲಿ ಜರುಗುವುದು.

ಇಂಡಿಯನ್ ಸೈನ್ಸ್ ಕಾಂಗ್ರೆಸ್

ಮುಂದಿನ ತಿಂಗಳು 2 ನೇ ತಾರೀಖಿನಿಂದ 8 ನೇ ತಾರೀಖಿನವರೆಗೆ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ವಾರ್ಷಿಕ ಸಭೆಯು ಮದ್ರಾಸಿನಲ್ಲಿ [illegible] ಗೌರ್ನರ್ ರವರ ಉದ್ಘಾಟನೆಯಿಂದ ಸೇರುವುದು. ಆಗ ವಿಜ್ಞಾನ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಓದುವುದಕ್ಕೆ [illegible] ತಿಂಗಳ ಕೊನೆಗಾಗಿ [illegible]ಸಲ್ಪಟ್ಟಿವೆ. ಕಲ್ಕತ್ತಾ ವಿಶ್ವವಿದ್ಯಾಲಯದ ಭೌತಿಕ ಶಾಸ್ತ್ರ ಸಂಬಂಧದ ಪ್ರೊಫೆಸರ್ ಸಿ. ವಿ. ರಾಮನ್ ರವರು ಅಧ್ಯಕ್ಷರಾಗುವರು.

[illegible] ಗೌರೆಂಡರವರು.

[illegible] ಗೌರೆಂಡರವರು [illegible] ಸ್ಥಾನದಲ್ಲಿ [illegible] 28 ನೇ ತಾರೀಖಿಗೆ ಮುಂಬಾಯಿಗೆ ಬಂದು ತಲ್ಪುವರು. ಅವರು [illegible] ಅವರ [illegible] ಉತ್ತರ [illegible] ಸಂದರ್ಶಿಸಿ [illegible] ಕಲಕತ್ತೆಗೆ ಬರುವರು.

ಸೇಂದಿ ಅಂಗಡಿಗಳ ನಿಷೇಧ

[illegible] ಸೇಂದಿ ಮತ್ತು [illegible] ಅಂಗಡಿಗಳನ್ನು [illegible] ಒಂದು [illegible].

ಅಖಿಲ ಭಾರತ ಕ್ರಿಸ್ತೀಯರ ಪರಿಷತ್ತು

ಅಖಿಲ ಭಾರತ ಕ್ರಿಸ್ತೀಯರ ಪರಿಷತ್ತು [illegible] 28 ಮತ್ತು [illegible] ಅಧ್ಯಕ್ಷರಾಗಿ [illegible] ಚುನಾಯಿಸಲ್ಪಟ್ಟಿರುವರು.

ಥಿಯಾಸಫಿಕಲ್ [illegible]

ಥಿಯಾಸಫಿಕಲ್ [illegible] ಈ ತಿಂಗಳು 24 ರಿಂದ [illegible] ವರೆಗೆ [illegible] ಅಧ್ಯಕ್ಷತೆಯಲ್ಲಿ ನಡೆಯುವುದು.

[illegible]

[illegible] ಒಂದು [illegible] ಅದಕ್ಕೆ [illegible] ಮೂರು ವರ್ಷದಿಂದ [illegible] ಮಕ್ಕಳ [illegible] ಅವನ [illegible] ಆ [illegible] ಒಂದು [illegible] ಅಲ್ಲಿ ಗ್ರಾಮಸ್ಥರು [illegible] ಪೋಲೀಸರ ವಶವಾ ಹಿಸಿದರು.

ಲಾಹೋರ್ [illegible]

ಪ್ರೊ|| [illegible]ವರನ್ನು ಕೊಂದ ಕೊಲೆ ಪಾತಕರನ್ನು ಹುಡುಕಲು ಪೋಲೀಸಿನವರು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದಾರೆ ಈಗಾಗಲೇ ಹತ್ತು ಜನರನ್ನು ದಸ್ತಗಿರಿ ಮಾಡಿದ್ದಾರೆ. ಅಲ್ಲದೆ 'ವಂದೇ ಮಾತರಂ' ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದ, ರಾಮಚಂದ್ರ ಮತ್ತು [illegible] ಕಿಶೋರ್ ಮೆಹತ ಎಂಬುವರನ್ನೂ ದಸ್ತಗಿರಿ ಮಾಡಿ, ಅವರ ಮನೆಯನ್ನು ಹುಡುಕಿಸಿ, ಸಿಕ್ಕಿದ ಎರಡು ಮೂರು ಪತ್ರಗಳನ್ನು ಕೈವಶಮಾಡಿಕೊಂಡಿದ್ದಾರೆ ಲಾಹೋರ್ ಕೋರ್ಟಿನಲ್ಲಿ ಈ ಅಪರಾಧಿಗಳ ಜಾಮೀನು ಅರ್ಜಿಯನ್ನು ತಿರಸ್ಕಾರ ಮಾಡಿದ್ದಾರೆ.

ಚುನಾವಣೆ.

ಈ ತಿಂಗಳು 17 ನೇ ತಾ|| ನಡೆದ ಚುನಾವಣೆಯಲ್ಲಿ [illegible] ಮಹನೀಯರುಗಳು ನ್ಯಾಯ ವಿಧಾಯಕ ಸಭೆಯ ಪಬ್ಲಿಕ್ ಅಕೌಂಟ್ಸ ಕಮಿಟಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವರು.

ಶ್ರೀಯುತರುಗಳಾದ

ಸಿ. ಹೆಚ್. ಚಂದ್ರಶೇಖರಯ್ಯ ಬಿ. ಎ. ಎಲ್. ಎಲ್. ಬಿ. ರವರು

ಪಿ ಎಸ್ ಮಲ್ಲಪ್ಪನವರು

ಹೆಚ್. ಬಿ ಗುಂಡಪ್ಪ ಬಿ. ಎ. ಬಿ.ಎಲ್. ರವರು.

ಎಸ್. ಸಿ. ಮಲ್ಲಯ್ಯನವರು

ಸರ್ಟಿಫಿಕೇಟು.

ಮ|| ರಾ. ಆರ್. ಎಸ್. ರಾಮಕೃಷ್ಣಯ್ಯನವರು ಇಂಗ್ಲಿಷ್ ಕನ್ನಡ ಲೆಕ್ಕಗಳನ್ನು ಆಡಿಟ ಮಾಡುವುದಕ್ಕೆ ಮಂಗಳಾಪುರಾಗಿ ಸರಕಾರದವರ ಆಡಿಟ್ ರ್ ಸರ್ಟಿಫಿಕೇಟನ್ನು ಕೊಟ್ಟಿರುತ್ತಾರೆ.

ಟ್ರಾವಲರ್ಸ್ ಬಂಗ್ಲೊ

ದಿವಾನರು ಜನವರಿ ತಿಂಗಳು ಕೋಲಾರ ಡಿಸ್ಟ್ರಿಕ್ಟಿನ ಕೆಲ ಭಾಗಗಳಲ್ಲಿ ಸಂಚರಿಸುವರಷ್ಟೆ. ಆ ಸಂದರ್ಭದಲ್ಲಿ ಆಯಾ ಸ್ಥಳಗಳಲ್ಲಿರುವ ಟ್ರಾವಲರ್ಸ್ ಬಂಗ್ಲೋಗಳು ದಿವಾನರ ಉಪಯೋಗಕ್ಕಾಗಿ ರಿಜರ್ವ್ ಮಾಡಲ್ಪಟ್ಟಿವೆ

ಎಕ್ಸೈಜ್ ಲೈಸನ್ಸಿಂಗ್ ಬೋರ್ಡ್.

ಮೈಸೂರು ಸಿಟಿ . ಎಕ್ಸೈಜು ಲೈಸೆನ್ಸಿಂಗ್ ಬೋರ್ಡಿಗೆ ಕೆಳಗೆ ಕಂಡ ಮಹನೀಯರುಗಳು ನಾಮಿನೇಟೆಡ್ ಮೆಂಬರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

ಶ್ರೀಯುತರುಗಳಾದ

1 ಲೋಕಸೇವಾಸಕ್ತ ಹೆಚ್. ನಂಜುಂಡರಾಜೇ ಅರಸಿನವರು.

2 ಎಂ. ರಾಮಸ್ವಾಮಯ್ಯನವರು.

3 ಟಿ. ಪಿ. ತಾಂಪಿರಾನ್ ರವರು.

4 ಥಿಯೋಬಾಲ್ಡ್ ರವರು.

ಕಾಬೂಲ್ ಸುದ್ದಿ.

ಕಾಬೂಲಿನಲ್ಲಿ ಮಾರ್ಷಿಯಲ್ ಲಾ ಚಲಾವಣೆಗೆ ಬಂದಿದೆ. ಬಹಳ ಜನರನ್ನು ದಸ್ತಗಿರಿ ಮಾಡಿದಾರೆ. ಕೋನ್ಮಾರು ಅಂತಃಕಲಹಗಳು ಹೆಚ್ಚುತ್ತಿವೆ

ಚಾಮರಾಜನಗರಕ್ಕೆ

ಮ|| ರಾ|| ಗಳಾದ.

ಟಿ. ವೆಂಕಟರಾಮಯ್ಯನವರೂ ಸಿ. ಡಿ. ನಾರಾಯಣರಾಯರೂ ಚಾಮರಾಜನಗರದ ಎಕ್ಸೈಜ್ ಲೈಸನ್ಸಿಂಗ್ ಬೋರ್ಡಿಗೆ ಮತ್ತೆ ಮೂರು ವರ್ಷಕಾಲ ಮೆಂಬರುಗಳಾಗಿ ನಿಯಮಿಸಲ್ಪಟ್ಟಿದ್ದಾರೆ.

[illegible]

ಕಲ್ಕತ್ತಾದಲ್ಲಿ [illegible] ಮಹಾ ಸಭೆಯ ವಸ್ತು ಪ್ರದರ್ಶನಾಲಯವು [illegible] ಟಿಕೆಟುಗಳು ಈ ಪ್ರದರ್ಶನಾಲಯದ ಕಾರ್ಯಕರ್ತರ ಸಭೆಯವರು 3[illegible],000 [illegible]ಗಳನ್ನು ಈ ಮಾಹೆ 20 ನೇ ತಾ|| ನಲ್ಲಿ ಉಚಿತವಾಗಿ ಕೊಟ್ಟಿರುವರು.

ವಿಚಿತ್ರ ಇಟ್ಟಿಗೆ

ಜೊಂಬಾಯಿಯ ಸಮೀಪ ಭೂಗತವಾದ ಒಂದು ಹಳೆ ಪಟ್ಟಣವು ಶೋಧಿಸಲ್ಪಟ್ಟಿದೆ. ಒಬ್ಬ ಬೇಸಾಯಗಾರನಿಗೆ ವಿಚಿತ್ರ ರೀತಿಯ ಇಟ್ಟಿಗೆಯೊಂದು ದೊರೆಯಿತು. ಅದನ್ನು [illegible] ಅನೇಕ [illegible] ಒಂದು [illegible] ಸೂಚನೆಗಳು ದೊರೆತವು. ಆಗ ಆ [illegible] ಪರಿಶೋಧನೆಗಳನ್ನು ಮಾಡುತ್ತಿದ್ದಾರೆ.

ಬ್ರಿಟಿಷ್ ಕೈಗಾರಿಕೆಯ ಪ್ರದರ್ಶನ

ಬರುವ ಫೆಬ್ರುವರಿ ೧೮ ನೇ ತಾರೀಖಿನಿಂದ ಮಾರ್ಚಿ ೧ ನೇ ತಾರೀಖಿನವರೆಗೆ ಲಂಡನ್ ಮತ್ತು ಬರ್ಮಿಂಗ್ ಹೇಮುಗಳಲ್ಲಿ ಬ್ರಿಟಿಷರ ಕೈಗಾರಿಕೆ ಸಾಮಾನುಗಳ ಬಹಿರಂಗವಾದ ಪ್ರದರ್ಶನವು ಜರಗುವುದು. ಇದರ ತಯಾರಿಯು ಈಗಲೇ ನಡೆಯುತ್ತಲಿದೆ. [illegible] ರ ಅಡಿ ಸ್ಥಳದ ಬಗ್ಗೆ [illegible] ಬ್ರಿಟಿಷ್ [illegible]ರಿಂದ ಇದುವರೆಗೆ ಅರ್ಜಿಗಳು ಬಂದಿರುತ್ತವಂತೆ.

ವಿಮಾನದ ವೇಗ.

ರಷ್ಯಾಯ [illegible] ಎಂಬುವನು [illegible] ಕುಳಿತುಕೊಳ್ಳಬಹುದಾದ ಒಂದು ವಿಮಾನದಲ್ಲಿ ಕುಳಿತು ಇದುವರೆಗೆ ಯಾರೂ ಹಾರದಂತ ವೇಗದಿಂದ ಹಾರಿದನು. [illegible] ಗಂಟೆಗೆ ಆತನು [illegible] ಕಿಲೋಮೀಟರ್ [illegible] ವನ್ನು ಹಾರಿದನು.

ಅಮಲ್ದಾರರ ಬದಲಾವಣೆ

ಅಮಲ್ದಾರ್ ಮಿ|| ಟಿ ವಿ. ರಾಮಶಾಸ್ತ್ರಿಯವರನ್ನು ಮೊಳಕಾಲ್ಮುರುವಿಗೂ, ಅಮಲ್ದಾರ್ ಮಿ|| ಎಸ್. ರಾಮಣ್ಣನವರು ಮೊಳಕಾಲ್ಮುರುವಿನಿಂದ ಹೆಗ್ಗಡದೇವನ ಕೋಟೆಗೂ, ಅ|| ಅಮಲ್ದಾರ್ ಮಿ|| ಬಿ. ಶ್ರೀನಿವಾಸಮೂರ್ತಿಯವರನ್ನು ಹೆಗ್ಗಡದೇವನಕೋಟೆಯಿಂದ ರೆಕಾರ್ಡ್ ಆಫ್ ರೈಟ್ಸ್ ಕೆಲಸಕ್ಕೆ ಡೆಪ್ಯುಟಿ ಅಮಲ್ದಾರರಾಗಿ ಮಂಜರಾಬಾದು ತಾಲ್ಲೂಕಿಗೂ ವರ್ಗ ಮಾಡಿದೆ.

ಆತ್ಮಹತ್ಯೆಯ ವಿಚಿತ್ರಕಥೆ

ಟ್ರಿಚನಾಪಲ್ಲಿ? ಸಮೀಪದಲ್ಲಿರುವ ಅಂಬೇರಿಯಲ್ಲಿ ಒಬ್ಬ ನಾಯರ್ ಸ್ತ್ರೀಗೂ ಅವಳ ಗಂಡನಿಗೂ ಪರಸ್ಪರ ಮನಸ್ತಾಪವುಂಟಾಗಿ ಆ ಹೆಂಗಸು ಆತ್ಮಹತ್ಯ ಮಾಡಿಕೊಳ್ಳುವುದಕ್ಕಾಗಿ ಹಗ್ಗವನ್ನು ಕೈಯಲ್ಲಿ ಹಿಡಿದುಕೊಂಡು ಸಮೀಪದಲ್ಲಿರುವ ಮಾವಿನ ಮರದ ಬಳಿಗೆ ನಡೆದಳು. ಅವಳಿಗೆ ಕೊರಳಿಗೆ ಹಾಕಿಕೊಳ್ಳುವ ಉರುಳನ್ನು ತಯಾರಿಸಲು ತಿಳಿಯದೆ ಅಲ್ಲಿಯೇ ಹೋಗುತ್ತಿದ್ದ [illegible] ತಿಫಲವಾಗಿ ತನ್ನ ಆಭರಣಗಳನ್ನು ಅವನಿಗೆ ಕೊಡುವೆನೆಂದು ಭಾಷೆಕೊಡಲು ಆ ಕೃಪಣನು ಉರುಳನ್ನು ತಯಾರಿಸಿ, ತನ್ನ [illegible] ಅದರ [illegible] ಬಿಗಿದನು. ತಾನು ತಯಾರಿಸಿದ ಉರುಳು [illegible] ನೋಡಲು ಉರುಳನ್ನು ತನ್ನ ಕತ್ತಿಗೆ ಸಿಕ್ಕಿಸಿಕೊಳ್ಳಲು, ಕಾಲಿನ ಅಡಿಯಲ್ಲಿದ್ದ ಡೋಲು ಜಾರಿ, ಕುತ್ತಿಗೆಯ ಹಗ್ಗವು ಬಿಗಿದುಹೋಗಿ ಮೃತಪಟ್ಟನು. ಇದನ್ನೆಲ್ಲಾ ನೋಡಿ ಭಯಗ್ರಸ್ತಳಾದ ಹೆಂಗಸು ಎಲ್ಲಿಯೋ ಮಾಯವಾದಳು

TAI NADU
[illegible] 12 [illegible]

[illegible]ಗಳ [illegible] ಬೀಳಬೇಕು!

[illegible] ರಾ [illegible] ಈ ಅತಿ ಉದ್ಯೋಗದ [illegible] ಕೆಲಸ ಎಲ್ಲಿ [illegible] ಇವರು ತಲೆಯೇ. ಎಲ್ಲಾ ಬಾಬುಗಳಲ್ಲಿಯೂ ಇವರು ಮೂಗನ್ನು ಹಾಕಬೇಕು. ಇದೇ ಇವರ ಮನೋ[illegible] [illegible] ಸಂಘಾಸನ್ನ [illegible]. ಆದರೆ ಇದು [illegible] ಯುಗವ[illegible] ಪ್ರಜೆಗಳು ಈ ತಂತ್ರಗಳ ಕುಯುಕ್ತಿಗಳನ್ನು ಬಲ್ಲರು. [illegible] ರುಜುಮಾರ್ಗ, ಧೀರತೆ, ಸತ್ಯಸಂಧತೆ. ಈ ಸಂಘಾಸಗಳಿಂದ ಪ್ರಜೆಗಳಿಗೆ ನಷ್ಟವೇ ಹೊರತು ಲಾಭವಿಲ್ಲ. [illegible] ಪ್ರೋತ್ಸಾ[illegible] [illegible] ಮಾಡಬೇಕೆಂ[illegible] [illegible] ಈ ಸಂಘಾಸಗಳು [illegible] ವರಬಯ [illegible] ಬೀಳುವವರೆಗೂ ಸಮಾಧಾನವನ್ನು [illegible] ವಹಿಸಬಾರದು? [illegible] ನಗಳಲ್ಲಿ [illegible] ನಡೆಯುತ್ತಿವೆ. ಅನ್ಯಗಳ [illegible] [illegible] ಆ ದುಷ್ಟರು [illegible] ಅನೇಕ [illegible] ಹಾಕಿಕೊಂಡು [illegible] [illegible] ತಮ್ಮ ಸ್ವಾರ್ಥ [illegible] ಕಾಲಿ[illegible].

[illegible] ಈ [illegible] ಅವರ [illegible] ಪೋಷಿಸುವುದು. ಆದರೆ [illegible] [illegible] ಮಾಡುತ್ತಿರುವರೆಂದು ಭಾವಿ[illegible] [illegible] ಗಲಭೆಗೆ ಮೂಲ ಕರ್ತ[illegible] [illegible] ಶಿಕ್ಷೆಯನ್ನು ಅನುಭ[illegible] [illegible] ಶಾಂತಿಯೂ ಇಲ್ಲ. ಸಮಾಧಾನವೂ ಇಲ್ಲ. ನಾವೆಲ್ಲರೂ [illegible] [illegible] ಶ್ರೀಮನ್ ಮಹಾರಾಜರವರಲ್ಲಿ ಭಕ್ತಿಯನ್ನಿಡೋಣ. ನಮ್ಮ ಸಂಸ್ಥಾನದಲ್ಲಿ ನಡೆಯುತ್ತಿರುವ [illegible] ಇಲ್ಲ. ಅವರು [illegible] [illegible] ಪೋಷಿಸುತ್ತಿದ್ದಾರೆ. [illegible] ಬಂದಿದೆ.

ವಿವಿಧ ವಿಷಯಗಳು

ವಸ್ತ್ರಗಳು.

[illegible] ಯಲ್ಲಿ ಸಿನ್ಮೆಯ ದಿನ ಪ್ರೋ[illegible] [illegible] [illegible] ಪ್ರದೇಶಸ್ಥನು [illegible] [illegible] ಕ್ಕಿಲ್ಲದವನಂತೆ ಅಲೆದಾಡುತ್ತಿ[illegible] ಈ ಕೇಸು [illegible] ಜನವರಿ ೭ನೇ ತಾರೀಖಿಗೆ ಇಡಲಾಗಿದೆ. ಅಪರಾಧಿಯನ್ನು ೧೨೦೦೦ ರೂಪಾಯಿಯ ಜಾಮೀನುಮೇಲೆ ಬಿಟ್ಟಿರುತ್ತಾರೆ.

ವ್ಯಾಯಾಮ ಸಮ್ಮೇಳನ.

ಕಾಂಗ್ರೆಸ್ ವಾರದಲ್ಲಿ ಸೇರಿರುವ [illegible] ಸಮ್ಮೇಳನಕ್ಕೆ ಪ್ರೊಫೆಸರ್ ರಾಮಮೂರ್ತಿಯವರು ತಮ್ಮ ಶಿಷ್ಯರೊಂದಿಗೆ ಕಲ್ಕತ್ತೆಗೆ [illegible] ಪ್ರೊಫೆಸರ್ ರಾಮಮೂರ್ತಿರಾಯರು ಫ್ರೀ ಪ್ರೆಸ್ಸಿನ ಪ್ರತಿನಿಧಿಯೊಂದಿಗೆ ತಾವು ಇಂಡಿಯಾದೇಶದ ಮುಖ್ಯ ಪಟ್ಟಣಗಳಲ್ಲಿ ಶರೀರ ವ್ಯಾಯಾಮ [illegible] ಗಳನ್ನು ಸ್ಥಾಪಿಸ[illegible] ಪ್ರಯತ್ನಗಳನ್ನು ನಡೆಸುವುದಾಗಿ ತಿಳಿಸಿದರು.

[illegible] ಉಪಾಧ್ಯಾಯ.

ಈಕೆಯು [illegible] ನಗರದಲ್ಲಿ ಸೇರುವ ಜಗತ್ತಿನ ವಿದ್ಯಾಸಂಸ್ಥೆಗಳ [illegible] ಅಖಿಲಭಾರತ ಬೋಧಕರ ಸಂಸ್ಥೆಯಿಂದ ಪ್ರತಿನಿಧಿಯಾಗಿ [illegible] ಲ್ಪಟ್ಟಿರುತ್ತಾರೆ ಈಕೆಯು ಮುಂದಿನ ಮೇ ತಿಂಗಳಲ್ಲಿ ಯೂರೋಪಿಗೆ ಪ್ರಯಾಣಮಾಡಿ ಬರ್ಲಿನ್ ನಗರದಲ್ಲಿ ಸೇರುವ ಜನಾಂಗಗಳ ಸ್ತ್ರೀಯರ ಕಾಂಗ್ರೆಸ್ ಸಭೆಗೂ ದಯಮಾಡಿಸುವರು.

[illegible] ಮೋಸ.

[illegible] ಬ್ಯಾಂಕು [illegible] ರೂಪಾಯಿಗಳನ್ನು [illegible], ಮೋಸಪಡಿಸಿ[illegible] ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು [illegible] ಒಂದು ಲಕ್ಷ ರೂಪಾಯಿಗಳ ಜಾಮೀನು ಕೊಡಬೇಕೆಂದು ಕೇಳಿರುತ್ತಾರೆ. ಈ [illegible] ಈ ತಿಂಗಳು [illegible] ವಿಚಾರಣೆಗಾರಂಭವಾಗಿದೆ.

ಶಿನ್ವಾರಿ ದಂಗೆ.

[illegible] ಆಫ್ಘನ ಸರಕಾರ [illegible] ಯುದ್ಧವು [illegible] [illegible] ಆಫ್ಘನರಿಗೆ ಸೇರಿದ [illegible] ಆಫ್ಘನ್ ಸಹಾಯಕ್ಕೆ ಹೋಗುತ್ತಿದ್ದ ಸೈನಿಕರಿಗೂ ಮತ್ತು ಅಧಿಕಾರಿಗಳಿಗೂ ತುಂಬಾನಷ್ಟ ಉಂಟಾಗಿರುತ್ತೆ. ಮುಂದಿನ ವಿದ್ಯಮಾನಗಳು ತುಂಬಾ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿವೆ

ಮುಷ್ಕರ.

ಬೊಂಬಾಯಿನಲ್ಲಿ ೮ ಗಿರಣಿಗಳು ಇನ್ನೂ ಬಂದಾಗಿವೆ ೪ ಗಿರಣಿಗಳು ತೆರೆಯಲ್ಪಟ್ಟು, ಕೆಲವರು ಕೆಲಸಕ್ಕೆ [illegible] ಮುಷ್ಕರಕ್ಕೆ ಕಾರಣವು ಕೆಲಸಗಾರರ ವೇತನಗಳನ್ನ ತಗ್ಗಿಸಿರುವುದೇ ಎಂದು ತಿಳಿದು ಬಂದಿರುತ್ತೆ.

ಪಾತಾಳ ಭವನಗಳು.

ಪಾಶ್ಚಾತ್ಯದೇಶಗಳಲ್ಲಿ ಆಗಾಗ್ಗೆ ಭೂಕಂಪಗಳ[illegible]ಯಿಂದ ಅನೇಕ ಅನಾಹುತಗಳಾಗುತ್ತಿರುವುದು. [illegible] ಇದನ್ನು ತಪ್ಪಿಸುವುದಕ್ಕೆ ಜಪಾನಿನವರು [illegible] ಉಪಾಯವನ್ನು ಕಂಡುಹಿಡಿದಿರುವರು.

ಅವಿವಾಹಿತರಿಗೆ ತೆರಿಗೆ.

ಇಟಲಿಯಲ್ಲಿ ಅನೇಕ ಯುವಕರೂ ಯುವತಿಯ[illegible] ವಿವಾಹವಾಗದೆ ತಾವು ಶ್ರೀಮಂತರನ್ನೇ ವಿವಾಹ[illegible]ಗುವುದಾಗಿ ಹೇಳುತ್ತಿದ್ದರು. ಹೀಗೆ ಅನೇಕ ಕಡೆಗಳ[illegible]ಡೆದಿರುವುದನ್ನು ನೋಡಿ ಅಲ್ಲಿಯ ಅಧಿಪತಿಯಾದ [illegible]ಸ್ಸಲೋನಿಯು ಮದುವೆಯಾಗದ ಯುವಕ ಯುವ[illegible]ಯರು ತಲಾ ಹತ್ತು ರೂಪಾಯಿ ನಂತೆ ಸರಕಾರಕ್ಕೆ [illegible]ಡ ತೆರಬೇಕೆಂದೂ ಅವರ ಆದಾಯದಮೇಲೆ ಗೃಹಸ್ಥ[illegible]ಗಿಂತ ಹೆಚ್ಚಿನ ತೆರಿಗೆ ವಿಧಿಸಲ್ಪಡುವುದೆಂದೂ ಒಂದು ಕಾನೂನನ್ನು ಮಾಡಿದ್ದಾರೆ.

ಭೂಮಿಯೊಳಗೆ ೧೦೦೦ ಅಡಿ ಆಳದ ವರೆಗೂ [illegible] ತೋಡಿ, ಸುತ್ತಲೂ ಉಕ್ಕಿನ ಚೌಕಟ್ಟಿನಿಂದ [illegible]ಲಂ ಅಂತಸ್ತಿನ ಮನೆಗಳನ್ನು ಕಟ್ಟುತ್ತಿರುವರು. [illegible] ಇಳಿಯುವದಕೂ, ಮೇಲೆ ಹತ್ತುವದಕ್ಕೂ, ವಾಯು ಸಂಚಾರಕ್ಕೂ, ದೀಪಗಳಿಗೂ ವಿದ್ಯುಚ್ಛಕ್ತಿಯ ಸಹಾಯವಿರುವುದು. ಇಂತಹ ಕಟ್ಟಡವೊಂದಕ್ಕೆ ೩೦ ಕೋಟಿ ರೂಪಾಯಿ[illegible] ಖರ್ಚಾಗುವದಂತೆ. ಅಂದರೆ ನ[illegible] ಸಂಸ್ಥಾನದ ೧೦ ವರ್ಷದ ಒಟ್ಟು ಆದಾಯವನ್ನು [illegible]ರಿಸಿದರೆ ಒಂದು ಪಾತಾಳಭವನವನ್ನು ಕಟ್ಟಿಸಬಹುದು.

ವಿಚಿತ್ರ ಗಡಿಯಾರ.

ಅಮೇರಿಕದ ಕಾಡುಪ್ರದೇಶದ ಒಂದು ಗ್ರಾಮದ[illegible] ನೀರಿನ ತ್ರಾಣದಿಂದ ನಡೆಯುವ ವಿಚಿತ್ರವಾದ ಗ[illegible]ಯಾರವು ನಿರ್ಮಿಸಲ್ಪಟ್ಟಿರುವುದು. ಗಡಿಯಾರದಲ್ಲಿ ಗ[illegible]ಯ ಮುಳ್ಳುಗಳೂ ಗಂಟೆಯನ್ನು ತೋರಿಸುವ ಅಂಕೆಗಳೂ ಒಂದು ತಗಡಿನ ಪಟ್ಟಿಯ ಮಾತ್ರ ಇರುವುವು. [illegible]ದು ಬೆಟ್ಟದಿಂದ ಬರುವ ನೀರು ೩೦ ಸೆಕೆಂಡುಗಳಿಗೊಂದಾವರ್ತಿ ಸರಿಯಾಗಿ ಬಂದು ಈ ಪಟ್ಟಿ [illegible] ತಗಲಿ ಗಡಿಯಾರವು ಸರಿಯಾದ ಕಾಲವನ್ನು ತೋರಿಸುವದಂತೆ.

ಕೃತಕ ಮನುಷ್ಯ.

ಪಾಶ್ಚಾತ್ಯರು ತಮ್ಮ ಬುದ್ಧಿಕುಶಲತೆಯಿಂದ [illegible]ದು ಕೃತಕ ಮನುಷ್ಯನನ್ನೇರ್ಪಡಿಸಿರುವರು. ಆ ಮನುಷ್ಯನನ್ನು ಪಾಠಶಾಲೆಗಳಲ್ಲಿ ಪಾಠಹೇಳುವದಕ್ಕೂ [illegible] ದೇವಾಲಯಗಳಲ್ಲಿ ಧರ್ಮಬೋಧೆ ಮಾಡುವುದಕ್ಕೂ [illegible]ದ ಕೆಲಸಗಳನ್ನು ಮಾಡುವದಕ್ಕೂ ಉಪಯೋಗಿಸು[illegible]ರು. ಇದು ಹೇಗೆ ಸಾಧ್ಯವೆಂಬುದನ್ನು ಸಾಮಾನ್ಯ ಜನ[illegible] ತಿಳಿದುಕೊಂಡು ನಂಬುವದು ಸುಲಭವಲ್ಲ. ಸುಮ್ಮನೆ [illegible]ರ್ಣನೆ ಮಾಡಿದರೆ [illegible] ಆಗುವುದಿಲ್ಲ. [illegible]ಕ ಮನುಷ್ಯನ ಕಾರ್ಯಕಲಾಪಗಳನ್ನು ಸಕಲರೂ [illegible]ಡಿ ಪರಿಚಯಮಾಡಿಕೊಳ್ಳುವ ಕಾಲವು ಬರುವುದು. [illegible] ಮನುಷ್ಯನು ಕೇವಲ ವಿದ್ಯುಚ್ಛಕ್ತಿಯ ಚೈತನ್ಯದಿಂದ [illegible]ಲಸ ಮಾಡುವನು. "ಎದ್ದು ನಿಲ್ಲು" ಎಂದೊಡನೆಯೆ ಮಾತಿನ ಶಬ್ದದ ಅಲೆಯು ಅವನಿಗೆ ಸೋಕಿ ಅವನು ಎದ್ದು ನಿಲ್ಲುವನು. "ಕುರ್ಚಿಯ ಮೇಲೆ ಕುಳಿತಿಕೊ" [illegible]ಡನೆಯೇ ಬೇರೆ ಮಾತಿಲ್ಲದೆ ಕುಳಿತುಕೊಳ್ಳುವನು. ಇಷ್ಟು ಮಾತ್ರವೇ ಅಲ್ಲ ಕಾದಂಬರಿಗಳನ್ನು ಬರೆಯುವ[illegible] ಅತಿ ರಮ್ಯವಾದ ವಿಷಯಗಳನ್ನೂ, ಅದಕ್ಕೆ ಬೇಕಾ[illegible] ಸಂದರ್ಭ ಸೂಚನೆಗಳನ್ನೂ ಅತಿ ಯುಕ್ತಿಯಿಂದ [illegible] ಹಿಡಿದು ಸೂಚಿಸುವುದು.

Regd No. M. 2322 ‖ ವಂದೇಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { [illegible]

ಸಂಪುಟ ೧] ಮಂಗಳವಾರ ೨೫ ಡಿಸೆಂಬರ್ ೧೯೨೮ [ಸಂಚಿಕೆ ೭೫

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)
ವಂದೇಮಾತರಂ ಆಫೀಸು, ಮೈಸೂರು.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Palepet, Bangalore City
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 Subba Pundit & Co, Lakshmivilas Road
6 Friends' Union, Mysore.
7 Sweet Mart, Lansdowne Buildings, Mysore
8 H Subba Rao C/o B Sanne Gowda & Sons [illegible]
9 H Naganniah News Agent Chikmagalur
10 V Krishniah Gandhi Bhavan Closepet

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಪಾರ್ಚೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಪೌಡರ್ ಪಾಕೆಟ್ ಪೈಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ [illegible] ದರ್ಶನ ಪ್ರದಾನ ಮಾಡುವ ರಾಜೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ [illegible] ಸಿದ್ಧವಾಗಿವೆ. [illegible] ಬಂದು ನೋಡಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳ [illegible] ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಪುಕೆ ಗುಪ್ತವ್ಯಾಧಿಗಳಿಂದ ನರಳುವರು

[illegible] ಈ ರತ್ನ ಮಿಶ್ರಿ ಹಲ್ವಾ ವನ್ನು ಸೇವಿಸಿ

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, ಸ್ವೇಚ್ಛೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ ಶೀಘ್ರಸ್ಖಲನೆಯಾಗುವಿಕೆ, [illegible] ವ್ರಣ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶಕ್ತಿ [illegible], ಮೇಹಪಡಿ, ಶರೀರವು ಸಳಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, [illegible] ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತ್ನ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ.

"ಭಿಷಗ್ರತ್ನ"

ವೈದ್ಯ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಿಗಳು.



[illegible]

ಭಿಷಗ್ರತ್ನ

[illegible] ವೆಂಕಟಾಚಲ ಪಂಡಿತರು

[illegible] ವೈದ್ಯಶಾಲಾ

ಚಿಕ್ಕಪೇಟೆ, ಬೆಂಗಳೂರು ಸಿಟಿ. ಹೆಡ್ಡಾಫೀಸು, ಮೈಸೂರು.



ಭಂಗಾರದ ಕೈಬಳೆಗಳೂ, ಜೈನುಗಳು ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿ ಸಾಮಾನುಗಳೂ ನಮ್ಮಲ್ಲಿ ಖಾತರಿಯಾ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿ.

ಯಸ್. ನರಸಿಂಹ ಅಯ್ಯರ್ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಂಪೆನಿ

ಕೆ. ನಾರಾಯಣಪ್ಪ ನಗರ್ತಪೇಟೆ, ಬೆಂಗಳೂರು ಸಿಟಿ.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

25—12—1928.

ಅತ್ಯದ್ಭುತವಾದ ಸ್ವಾಗತ

ಕಲ್ಕತ್ತೆಗೆ ಮೋತೀಲಾಲರ ಆಗಮನ

ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆಯ 43 ನೆಯ ಅಧಿವೇಶನದ ಅಧ್ಯಕ್ಷರಾದ ಪಂಡಿತ ಮೋತೀಲಾಲ್ ನೆಹರೂರವರು ಈ ತಿಂಗಳು 21 ನೇ ತಾ॥ ದಿವಸ ಕಲಕತ್ತಾ ನಗರದ ಹೌರಾ ಸ್ಟೇಷನ್‌ನಿಂದ [illegible] ಅನಂತರವಾಗಿ ತಯಾರಿಸಲ್ಪಟ್ಟ, 34 [illegible] ಗಳಿಂದ ಎಳೆಯಲ್ಪಟ್ಟ ಮಹಾ ರಥದ ಮೇಲೆ ಸ್ವಾಗತ ಮೆರವಣಿಗೆಯವರು ಕರೆದೊಯ್ದರು. ಉತ್ಸವವು ಸುಮಾರು ಒಂದು ಮೈಲಿಗಿಂತಲೂ [illegible]. ರಥದೊಳಗೆ ಪುಷ್ಪದ [illegible] ಅಧ್ಯಕ್ಷರಿಗೆ ಆಸನವಾಗಿ ಮಾಡಲ್ಪಟ್ಟಿತ್ತು. [illegible] ಗಳ ಮೇಲೆ, ಮಂಗಳ ವಾದ್ಯಗಳು ಘೋರ್ಗರೆಯುತ್ತಿದ್ದವು. ಕಲ್ಕತ್ತಾ ನಗರದಲ್ಲೆಲ್ಲಾ ಈ ಉತ್ಸವದ ಕೋಲಾಹಲವೇ ಕೋಲಾಹಲ! [illegible] ಯಾರಿಗೂ ಸಲ್ಲದ ಇಂತಹ ರಾಜ [illegible] ವೈಭವವು ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡಲಾರವು?

ಕಲ್ಕತ್ತೆಯ ಹೌರಾ ಸೇತುವೆಯಿಂದ ಐದು ಮೈಲಿಗಳ ವರೆಗೆ ಮೆರವಣಿಗೆಯು ನಡೆಯಿತು. ದೊಡ್ಡ ರಸ್ತೆಗಳೆಲ್ಲವೂ ಸುಂದರವಾಗಿ ಶೃಂಗರಿಸಲ್ಪಟ್ಟಿದ್ದುವು. ದಾರಿಯುದ್ದಕ್ಕೂ ಉಪ್ಪರಿಗೆಗಳ ಮೇಲೂ ಜಗಲಿಗಳ ಮೇಲೂ [illegible] ಕಿಕ್ಕಿರಿಯುವಂತಿದ್ದರು. ಪಂಡಿತ ಮಾಳವೀಯವರೂ ಅಧ್ಯಕ್ಷರೂ ಸ್ಪೆಷಲ್ ರೈಲಿನಲ್ಲಿ ಹೌರಾ ಸ್ಟೇಷನ್ನಿಗೆ ಬಂದು ಸೇರಿದರು. ಅಲ್ಲಿಂದ ಇವರು ವರೆಗೆ [illegible] ರಾಜಮರ್ಯಾದೆಯಿಂದ ಕಾಂಗ್ರೆಸ್ ಸಭಾಂಗಣಕ್ಕೆ ಕರೆದೊಯ್ದರು.

ದಿವ್ಯರಥ.

ಪಂಡಿತ ಮೋತೀಲಾಲ ನೆಹರೂರವರಿಗಾಗಿ ರಥವನ್ನು [illegible] ದಿಂದಲೇ ಅತ್ಯಂತ ಸುಂದರವಾಗಿ ಶೃಂಗಾರಮಾಡಲ್ಪಟ್ಟಿತ್ತು. ರಥಕ್ಕೆ 34 ದಿವ್ಯವಾದ [illegible] ಹೂಡಲ್ಪಟ್ಟಿದ್ದವು. ಅವುಗಳನ್ನು ಶ್ವೇತವಸನಾಲಂಕೃತರಾದ 17 ಜನ ರಥಿಕರು ನಡೆಯಿಸುತ್ತಿದ್ದರು. ಮೆರವಣಿಗೆಯೆಲ್ಲಾ ಸಾಂಗವಾಗಿ ನೆರವೇರುವದಕ್ಕೆ ಪೋಲೀಸ್ ಏರ್ಪಾಡು ಚೆನ್ನಾಗಿತ್ತು. ಸುಮಾರು 1-30 ಗಂಟೆಯ ಕಾಲ ರಸ್ತೆಗಳಲ್ಲಿಯೂ ಇತರ ವಾಹನಗಳು ಸಂಚರಿಸದಂತೆ ಬಂದಾಗಿದ್ದವು. ಈ ಅಭೂತಪೂರ್ವವಾದ ಉತ್ಸವದಲ್ಲಿ ಅನೇಕ ಆಂಗ್ಲ ದೊಡ್ಡಮನುಷ್ಯರೂ, ಮಹಿಳೆಯರೂ ಭಾಗಿಗಳಾಗಿದ್ದರು. ದಾರಿಯುದ್ದಕ್ಕೂ ವಂದೇಮಾತರಂ ಮಹಾತ್ಮ ಗಾಂಧೀಕೀ ಜೈ, ಪಂಡಿತ ಮೋತೀಲಾಲ ನೆಹರೂ ಕೀಜೈ ಎಂಬ ಜಯಜಯಕಾರ ಧ್ವನಿಯು ಆಕಾಶದಲ್ಲಿ ಘೋರ್ಗರೆಯುತ್ತಿತ್ತು.

ಸ್ವಾಗತಗಳು.

21 ನೇ ತಾ॥ ನ ಪ್ರಾತಃಕಾಲ 7-45 ಘಂಟೆಗೆ ಸರಿಯಾಗಿ ಸ್ಪೆಷಲ್ ರೈಲು ಹೌರಾ ಸ್ಟೇಷನ್ನಿಗೆ ಬಂತು. ಆಗ ಶ್ರೀಯುತರುಗಳಾದ ಸೇನ್ ಗುಪ್ತರೂ ಸ್ವಾಗತ ಮಂಡಲಿಯ ಅಧ್ಯಕ್ಷರೂ, ಸುಭಾಸ ಚಂದ್ರಬೋಸರೂ ಡಾ॥ ಬಿಧನ ಚಂದ್ರರಾಯರೂ ಡಾ॥ ಕಿರನಶಂಕರ ರಾಯರೂ ಮುನಿಸಿಪಾಲಿಟಿಯ ಉಪಾಧ್ಯಕ್ಷರಾದ ಮ॥ ರಾ॥ ಭಟ್ಟಾಚಾರ್ಜಿಯವರೇ ಮೊದಲಾದ ಅನೇಕ ರಾಜಕೀಯ ಧುರೀಣರೂ ಸುಮಾರು 200 ಕ್ಕೆ ಮೇಲ್ಪಟ್ಟಷ್ಟು ಜನರು ತಳಿರುತೋರಣಗಳಿಂದಲೂ ಸ್ವರಾಜ್ಯ ಧ್ವಜಪತಾಕೆಗಳಿಂದಲೂ ಅಲಂಕೃತವಾಗಿದ್ದ ಮಂಟಪದ ಮೇಲೆ ಅಧ್ಯಕ್ಷರಿಗೆ ಸ್ವಾಗತವಿತ್ತರು. ಪೌರಸಭೆಯ ಉಪಾಧ್ಯಕ್ಷರಾದ ಶ್ರೀಯುತ ಸೇನ್‌ಗುಪ್ತರೂ ಬುರಾಬಜಾರು ಕಾಂಗ್ರೆಸ್ ಕಮಿಟಿಯ ಶ್ರೀಯುತ ಪುರುಷೋತ್ತಮದಾಸ ರಾಯರವರೂ ಅಧ್ಯಕ್ಷರಿಗೆ ಹಾರಗಳನ್ನು ಅರ್ಪಿಸಿದರು. ಕೂಡಲೇ ಅಲ್ಲಿ ನೆರೆದಿದ್ದವರೆಲ್ಲರೂ ವಂದೇಮಾತರಂ ಎಂಬ ಜಯಘೋಷಮಾಡಿದರು. ರೈಲ್ವೆ ಅಧಿಕಾರಿಗಳು ಬೇಕಾದ ಏರ್ಪಾಡುಗಳನ್ನು ಮಾಡಿದ್ದರೂ, ವಿಪರೀತವಾದ ಕೋಲಾಹಲವಾಗುವಷ್ಟು ಮಟ್ಟಿನ ಜನ ಸಂದಣಿಯು ಸೇರಿತ್ತು.

ಉತ್ಸವ.

ಉತ್ಸವವು ಸುಮಾರು ಒಂದು ಮೈಲಿಯುದ್ದವಿದ್ದಿತು. ಇಕ್ಕೆಲಗಳಲ್ಲಿಯೂ ಮೋಟಾರ್ ಬೈಸಿಕಲ್ಲುಗಳ ಮೇಲೆ ಮಂಗಳವಾದ್ಯಗಳು ಆಗುತ್ತಿದ್ದವು. ಅದರ ಮಗ್ಗುಲಲ್ಲೇ ಪದಾತಿಗಳೂ ಸಂಕೀರ್ತನ ಸಭೆಗಳೂ ಇದ್ದುವು. ಮೊಟ್ಟಮೊದಲು ಶ್ರೀಯುತ ಸುಭಾಸ ಚಂದ್ರಬೋಸರವರು ಮಿಲಿಟರಿಯ ಕಾಕಿ ಉಡುಪನ್ನು ಧರಿಸಿ ಉತ್ಸವದ ವಿತರಣೆಯನ್ನು ಜನರಲ್ ಕಮ್ಯಾಂಡರಂತೆ ಪರೀಕ್ಷಿಸುತ್ತಿದ್ದರು. ದಾರಿಯುದ್ದಕ್ಕೂ ಜನಸಂದಣಿಯು ಪುಷ್ಪಗಳ ಮಳೆಯನ್ನು ಶ್ರೀಸುಭಾಸಚಂದ್ರರ ಮೇಲೆ ಕರೆಯುತ್ತಿತ್ತು. ಕಾಕಿಯುಡುಪಿನ ಪದಾತಿ ಸೈನ್ಯವೇ ಒಂದು ಫರ್ಲಾಂಗ್ ದೂರದವರೆಗೂ ನೆರೆದಿತ್ತು. ದಿವ್ಯರಥದಲ್ಲಿ ಹೂವಿನ ಹಾಸಿಗೆಯಮೇಲೆ ಪಂಡಿತ ಮೋತೀಲಾಲ ನೆಹರೂ ರವರು ಶ್ರೀಯುತ ಸೇನಗುಪ್ತರನ್ನು ಕುಳ್ಳಿರಿಸಿಕೊಂಡು ಬರುತ್ತಿದ್ದರು. ಭಾರತೀಯ ಪದ್ಧತಿಯಂತೆ ಸುಖಾಗಮನವೂ ಶ್ರೇಯಃ ಪ್ರಾರ್ಥನೆಗಳೂ ಆಗುತ್ತಿದ್ದುವು. ಹ್ಯಾರಿಸನ್ ರೋಡಿಗೆ ಉತ್ಸವವು ಬಂದ ಕೂಡಲೇ ಮಾರವಾಡಿಗಳೆಲ್ಲರೂ ಮಾಲವೀಯಕೀ ಜೈ ಎಂಬ ಜಯ ಜಯಕಾರ ಮಾಡಿ ರಥದ ಮೇಲೆ ಪುಷ್ಪಗಳ ಮಳೆಯನ್ನು ಕರೆದರು. ಅದುವರಿಗೂ ಮಾಲವೀಯರವರು ಬಂದಿರುವ ಸಂಗತಿಯೇ ಯಾರಿಗೂ ತಿಳಿದಿರಲ್ಲ.

ದಾರಿಯುದ್ದಕ್ಕೂ ಸ್ವಾಗತ ಮಂಟಪಗಳು ಹಾಕಲ್ಪಟ್ಟಿದ್ದುವು. ಉತ್ಸವವು ಹೌರಾ ಸ್ಟೇಷನ್ನಿಂದ ಕಾಲೇಜ್ ಸ್ಟ್ರೀಟ್ ವೆಲ್ಲಿಂಗ್‌ಟನ್ ಸ್ಟ್ರೀಟ್ ಲೋವರ್ ಸರ್ಕ್ಯುಲರ್ ರೋಡ್ ಮೊದಲಾದವನ್ನು ಹಾದು ಮಧ್ಯಾಹ್ನದ ಹೊತ್ತಿಗೆ ದೇಶಬಂಧು ನಗರವನ್ನು ತಲುಪಿತು. ಸಭಾಂಗಣ ಪ್ರವೇಶ ಮಾಡುವಾಗ ಶ್ರಿಯುತ ಸೇನ ಗುಪ್ತರು ಕಾಂಗ್ರೆಸ್ಸಿನ ಅಧಿಕಾರಿಗಳನ್ನು ಪಂಡಿತ ಮೋತೀಲಾಲ್‌ರವರಿಗೆ ಭೇಟಿ ಮಾಡಿಸಿದರು. ನಂತರ ಅವರು ಥಿಯೇಟರ್ ರೋಡಿನಲ್ಲಿರುವ ತಮ್ಮ ಗೃಹಾಭಿಮುಖರಾದರು.

ವರ್ಕಿಂಗ್ ಕಮಿಟಿ.

ಆ ದಿನ ಮಧ್ಯಾಹ್ನ ಕಾಂಗ್ರೆಸ್ಸಿನ ಕಾರ್ಯಾರಂಭವಾಯಿತು. ಆಗ ಮೊಟ್ಟಮೊದಲು ಈ ವರ್ಷ ಇಹಲೋಕವ್ಯಾಪಾರವನ್ನು ತ್ಯಜಿಸಿದ ದೇಶಬಂಧುಗಳಾದ ಶ್ರೀಯುತರುಗಳಾದ ಲಾರ್ಡ ಸಿಂಹ, ಮಗನಲಾಲ್ ಗಾಂಧಿ, ಲಾಲಾ ಲಜಪತರಾಯ್ ಹಕೀಮ್ ಅಜಮ [illegible]

ಗೀತಾ ಜಯಂತಿ

ಕಳೆದ [illegible] ಕಾಂಗ್ರೆಸ್ ಕಮಿಟಿಯವರಿಂದ [illegible] ಶ್ರೀ [illegible] ವೆಂಕಟಕೃಷ್ಣ [illegible] ಗೀತಾ ಜಯಂತಿ ಮಹೋತ್ಸವದ [illegible] ಗೀತಾರ್ಥ ರಹಸ್ಯದ [illegible] ಭಾಷಣ ಮಾಡಿದರು.

[illegible] ಟಿ. ಕೃಷ್ಣರಾಯರು [illegible] ನಂದವಾಗುವಂತೆ ಓದಿದರು.

ಹರಿಕಥಾ ವಿದ್ವಾಂಸರಾದ ಶ್ರೀಯುತ ಕೃಷ್ಣಸ್ವಾಮಿಯವರು ಸುಧನ್ವ ಚರಿತ್ರೆ ಎಂಬ ಹರಿಕಥೆಯನ್ನು ಮಾಡಿ ಮಹಾಜನರ ಹೃದಯಂಗಮ ವಾಗುವಂತೆ ಮಾಡಿದರು. ಅಧ್ಯಕ್ಷರು ಉಪಸಂಹಾರ ಭಾಷಣದಲ್ಲಿ ಶ್ರೀಮದ್ಭಗವದ್ಗೀತೆಯು [illegible] ತಮ್ಮ ತಮ್ಮ ಕರ್ತವ್ಯವನ್ನು ತಪ್ಪದೆ ಮಾಡಬೇಕೆಂಬುದನ್ನು ಹೇಗೆ ಬೋಧಿಸುತ್ತದೆಯೋ ಅದನ್ನು [illegible] ಸಿದರು. ಸಕಲರಿಗೂ ವಂದನೆಗಳನ್ನರ್ಪಿಸಿದ [illegible] ಯ ಜಯ ಧ್ವನಿಯೊಡನೆ ಸಭೆಯು ಮುಕ್ತಾಯವಾಯಿತು.

ದುಂದುಗಾರಿಕೆಯ ಉಳಿತಾಯ

ಮುಂದಿನ 6 ತಿಂಗಳು [illegible] ಡಿಲ್ಲಿಯ ರಚನೆಗ 16 ಕೋಟಿ ರೂಪಾಯಿ [illegible] ದು ಸಾಲದುದಕ್ಕೆ 2 ಕೋಟಿ ರೂಪಾಯಿ [illegible] ಡಿಲ್ಲಿಗೊಂದು ಶೃಂಗಾರವಾದ ರೈಲ್ವೇ ಸ್ಟೇಷನ್ನು [illegible] ಸುವ ಯೋಜನೆ ನಡೆದಿದ್ದಿತು. ಇದು [illegible] ವೈಸರಾಯ [illegible] ಈ ಯೋಜನೆಯು ಕೇವಲ [illegible] ಉಳಿಯಿತು. ಸಂತೋಷ.

[illegible] ತು.

ಸರ್ಕಾರಿ [illegible]

ಈ ಉತ್ಸವ ಕಾರ್ಯಕ್ಕೆ ಪೋಲೀಸ್ [illegible] ಮಿ॥ ಎ. ಇ. ಸುಲಿವನ್‌ರವರೂ ಡೆ. ಪೋ. [illegible] ಡೆ॥ ರವರೂ ಸಹ ಪೋಷಕರಾಗಿದರು.

[illegible]

ಹಿಂದಿನ ಕಾಂಗ್ರೆಸ್ [illegible] ನಮ್ಮ ಹಿಂದೆ [illegible] ಮೋತೀ ಲಾಲಾರವರ ಅಧ್ಯಕ್ಷತೆಯಲ್ಲಿ ಅಮೃತಸರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವೇ ಮೊದಲಾದುವ [illegible] ಇದ್ದಿತ್ತು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಮಾಡಲ್, ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರು [illegible] ಪ್ರದರ್ಶನ [illegible] ಸಪ್ತೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮ [illegible] ಬಂದ. [illegible] ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರು [illegible] ದ್ವಾರಾ ರವಾನಿಸಲಾಗುತ್ತೆ. [illegible] — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



[illegible] ಗುಪ್ತವ್ಯಾಧಿಗಳಿಂದ [illegible]

[illegible] ಈ ರತ್ನ ಮಿಶ್ರಿ ಹಲ್ವಾ [illegible]

[illegible] ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, [illegible] ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, [illegible] ಚರ್ಮಗತವ್ಯಾಧಿ, ಕೈಕಾಲುನೋವು, [illegible] ಕಾಂತಿ [illegible] ವ್ಯಾಧಿಗಳನ್ನೆಲ್ಲ ಹೋಗಲಾಡಿಸಿ, [illegible] ಕಲ್ಪಿಸುವುದು.

ಹೆಂಗಸರ ಸೇವಿಸಿದಲ್ಲಿ ಗರ್ಭಕೋಶ ಸಂಬಂಧವಾದ ವ್ಯಾಧಿಗಳೆಲ್ಲವೂ ವಾಸಿಯಾಗಿ ದೃಢಕಾಯರಾಗುವರು.

ಕ್ರಯ—1 [illegible] ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

[illegible] ಮತ್ತು ಜನರಲ್ ಏಜೆಂಟ್ಸ್, [illegible] ಬಿಲ್ಡಿಂಗ್ಸ್, ಮೈಸೂರು.

ರತ್ನ ಮಿಶ್ರಿ ಡಿಪೋ, [illegible]ಶ್ವರಿ ಗುಡಿ ಬೀದಿ, ಬೆಂಗಳೂರು.

"[illegible]"

[illegible] ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



[illegible] ರೋಗವು ಬಾರದಂತೆ [illegible] ಲೋಕವು [illegible] ಸೇವಿಸಲ್ಪಡಲಿ.

[illegible] ಶಕ್ತಿಯನ್ನು [illegible] ಗಾಳಿ ಮತ್ತು [illegible] ಕಾಪಾಡುತ್ತದೆ.

[illegible] ನೆಗಡಿ, ಕೆಮ್ಮಲು, [illegible] ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ [illegible] ರಕ್ತಹೀನತೆ [illegible] ಕೆಮ್ಮಲ [illegible] ನೆಗಡಿ, ಅಜೀರ್ಣದ [illegible] ಹಸಿವು, [illegible] ಪಡಿಸುತ್ತದೆ.

[illegible] ಸಂಜೀವನ [illegible] ಆರೋ[illegible]


[illegible] 1 ಕ್ಕೆ 0—4—0 ಮೇರೆ [illegible] 1 ಸೀಸೆಗೆ [illegible] 2—13—0 25 ಕ್ಕೆ [illegible]

[illegible]

[illegible] ವೆಂಕಟಾಚಲ ಪಂಡಿತರು.

[illegible] ವೈದ್ಯಶಾಲಾ, [illegible] ವೈದ್ಯಶಾಲಾ

[illegible] [illegible]



ಭಂಗಾರದ ಕೈಬಳೆಗಳೂ [illegible] ವಗೈರೆ ಆಭರಣಗಳೂ ಚೊಕ್ಕ [illegible] ಸಾಮಾನುಗಳೂ ನಮ್ಮಲ್ಲಿ [illegible] ಸಿಗುತ್ತವೆ.

ಮಜೂರಿ ಇತರ ಕಡೆಗಳಿ[illegible] ಸುಲಭ. ಕೆಲಸ ಇತರ ಕಡೆಗಳ[illegible] ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು [illegible]

ಯಸ್ ನರಸಿಂಹ ಅಯ್ಯರ್ — ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆ[illegible]

ಕೆ. ನಾರಾಯಣಪ್ಪ — ನಗರ್ತಪೇಟೆ, ಬೆಂಗಳೂರು.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya. [illegible] Sri Rama Press, D. Subbiah Road, Mysore

Regd No. M. 2322

ತಾಯಿನಾಡು.

[illegible] ಪ್ರಕಟವಾಗುವುದು.

ಸಂಪಾದಕ: ಪಿ ಆರ್. [illegible]

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { [illegible]

ಸಂಪುಟ ೧] [illegible] ವಾರ [illegible] ಡಿಸೆಂಬರ್ ೧೯[illegible] [ಸಂಚಿಕೆ [illegible]

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ಲಿಮಿಟೆಡ್, ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P Venkatappa & Co
Excelsior Type-writing Institute, Balepet,
Bangalore City

2 Koppada Ramakrishniah Agent Hassan

3 Siddiah, Sri Nanjundeswara Bank Ltd
Nanjangud.

4 M. N. S & Sons, Lansdowne Buildings
Mysore

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings,
Mysore.

8 H Subba Rao C/o B Sanne Gowda & Sons
Sakaleshpur

9 H Naganniah News Agent
Chikmagalur

10 V Krishniah Gandhi Bhavan Closepet

TAI NADU

26—12—1928

ರಾಷ್ಟ್ರೀಯ ಮಹಾಸಭೆ

[illegible]

... ಮಾಡುತ್ತಿದ್ದರು. ಚಕ್ರವರ್ತಿಗಳಿಗೂ ಲಭಿಸದ ಸನ್ಮಾನವು ಮೋತೀಲಾಲ [illegible]

[illegible] ... ರಾಷ್ಟ್ರೀಯ ಸಭೆಯು ... ದೇಶದ ಸ್ವಾತಂತ್ರ್ಯ ಸಂಗ್ರಾಮವನ್ನು ... 1930 ರ ಒಳಗಾಗಿ ನಮ್ಮ ದೇಶಕ್ಕೆ ಸ್ವರಾಜ್ಯ ಸ್ವಾತಂತ್ರ್ಯಗಳು ಲಭಿಸಲೆಂದು ಪ್ರಾರ್ಥಿಸುತ್ತೇವೆ.

ಸಂಪಾದಕರಿಗೆ ಭೂದಾನ

[illegible]

[illegible]

[illegible]

ವಿವಿಧ ವಿಷಯಗಳು

[illegible]

[illegible] ಹದಿನೇಳು ... ಸೇನಾಫೈಸ್ಸ್‌ನಿಂದ ... [illegible]

ಛಾಯಾಚಿತ್ರ.

ಒಂದು ತರಹದ ನೀರ ದೀಪಗಳ ಉಪಯೋಗದ ... ಛಾಯಾಚಿತ್ರ ... ಉಪಾಯವನ್ನು ... [illegible]

ಬಣ್ಣದ ದೀಪ.

[illegible] ... (ಸ್ವತಕ್ಷ ಬಣಕ) ಯಂತ್ರಗಳು ... [illegible]

ಮರಗಳಿಗೆ ಬಣ್ಣ

[illegible] ಮರಗಳಿಗೆ ಬೇರೆ ಬಣ್ಣವನ್ನು ಬಳಿಯುವರು. ... ಮಾರ್ಗವು ಅಡ್ಡ ತಿರುಗಿರುತ್ತ ... [illegible]

ದೀಪಸ್ತಂಭಗಳು

[illegible] ದೀಪಸ್ತಂಭಗಳು ಸಮುದ್ರದಲ್ಲಿ ... [illegible]

ಗೋಮಯ ವ್ಯಾಪಾರ

[illegible]

ತಾಯಿನಾಡು.

26—12—1928.

ವರ್ತಮಾನ ಸಂಗ್ರಹ

ಕಾನ್‌ಫರೆನ್ಸ್

ಈ ವಾರ 29 ನೇ ತಾರೀಖಿನಲ್ಲಿ ಮಂಡ್ಯಂ ಶ್ರೀವೈಷ್ಣವರ ಐದನೆಯ ಸಮ್ಮೇಳನವು ರಾಜಧಾನಿಯಲ್ಲಿ ನಡೆಯುವುದು. ಗಣಿತ ಶಾಸ್ತ್ರದ ಪ್ರೊಫೆಸರಾದ ಶ್ರೀಯುತ ಎಂ ಟಿ. ನಾರಣಯ್ಯಂಗಾರ್ ಎಂ. ಎರವರು ಅಗ್ರಾಸನವನ್ನು ವಹಿಸುವರು.

ಆಗಮನ

ಇಂಡಿಯಾ ದೇಶದ ರೈಲ್ವೆಗಳ ಚೀಫ್ ಕಮಿಷನ್‌ರವರು ಶೀಘ್ರದಲ್ಲಿಯೇ ಮೈಸೂರಿಗೆ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ಬರುವರು. ಆ ಸಂದರ್ಭದಲ್ಲಿ ನಮ್ಮ ರೈಲ್ವೆ ಅಧಿಕಾರಿಗಳು ರೈಲ್ವೆಗೆ ಸಂಬಂಧಪಟ್ಟ ಕೆಲ ವಿಷಯಗಳನ್ನು ಅವರೊಡನೆ ಆಲೋಚಿಸುವರೆಂದು ತಿಳಿಯಬರುತ್ತೆ.

ಅಖಿಲ ಭಾರತ ಪತ್ರಿಕಾ ಸಮ್ಮೇಳನ

1929 ನೇ ಜನವರಿ 1 ನೇ ತಾರೀಖಿನ ದಿವಸ ಅಖಿಲ ಭಾರತ ಪತ್ರಿಕಾ ಸಮ್ಮೇಳನವು ಇಂಡಿಯನ್ ಡೈಲಿ ಮೇಲಿನ ಅಧ್ಯಕ್ಷರಾದ ಶ್ರೀಯುತ ಕೆ. ನಾಟರಾಜನ್ ರವರ ಅಧ್ಯಕ್ಷತೆಯಲ್ಲಿ ಜರುಗುವುದು.

ಸೂಳೆಯ ತಪ್ಪಿಗಾಗಿ ಸನ್ಯಾಸಿಗೆ ಶಿಕ್ಷೆ.

ಬೆಂಗಳೂರ ಮ್ಯುನಿಸಿಪಾಲಿಟಿಯಲ್ಲಿ ಬ್ರಾಹ್ಮಣೇತರರ ಬಲದಿಂದ ಅಧ್ಯಕ್ಷರಾಗಿದ್ದ ಖಾನ ಬಹಾದ್ದೂರ ಅಬ್ಬಾಸಖಾನರು ಅಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟ ಸಂಗತಿಯು ಎಲ್ಲರಿಗೂ ತಿಳಿದುಹೋಗಿದೆ. ಖಾನಬಹಾದ್ದೂರರ ತರುವಾಯ ಮೆಂಬರರು ಬೇರೊಬ್ಬರನ್ನು ಅಧ್ಯಕ್ಷರಾಗಿ ಆರಿಸತಕ್ಕದ್ದು. ಆದರೆ ಸರಕಾರದವರು ಗಂಟಲನೋವಾಗಿದೆಂದು ಅದನ್ನು ಪೂರಾ ಕೊಯ್ದು ಹಾಕುವಂಥ ಕೃಪೆಮಾಡಿ, ನಗೆಗೇಡು ಮಾಡಿಕೊಂಡಿದ್ದಾರೆ. ಅಧ್ಯಕ್ಷರನ್ನು ಆರಿಸುವ ಅಧಿಕಾರ ಕಸಕೊಂಡು ಸರಕಾರೀ ಕಾಮದಾರರನ್ನು ಅಧ್ಯಕ್ಷರಾಗಿ ನೇಮಿಸಿದರು. ಮೆಂಬರರು ಈ ಅಧ್ಯಕ್ಷರ ಎದುರಿಗೇ ಸರಕಾರದ ಕೃತ್ಯವನ್ನು ನಿಷೇಧಿಸಿ, ಆದಿನ ಕೆಲಸವನ್ನು ತಹಕೂಬಮಾಡಿದರು. ಮೆಂಬರರೂ ನಗರವಾಸಿಗಳೂ ಬೆಂಗಳೂರ ದಂಗೆಯ ಬಗ್ಗೆ ಸರಕಾರದ ವರ್ತನವನ್ನು ನಾನಾ ಬಗೆಯಾಗಿ ನಿಷೇಧಿಸುತ್ತಲೂ ದೂಷಿಸಲೂ ಇದ್ದಾರೆ. ಸರಕಾರದ ಕೃತ ವೆಲ್ಲ ಸೂಳೆಯ ಪಾಪಕ್ಕಾಗಿ ಸನ್ಯಾಸಿಯನ್ನು ಗಲ್ಲಿಗೆ ಹಾಕುವಂತಾಗಿರುತ್ತದೆ. (ವಿಜಯ)

ಅಡಿಷನಲ್ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರ ಸಂಬಳ, ಸಿಬ್ಬಂದಿ, ಸಾದಿಲ್ವಾರು ವಗ್ಯೆರೆ	—೬೦೦೦
ಸಿಟಿ ಪೋಲೀಸ್ ಸೂಪರಿಂಟೆಂಡೆಂಟರ ಸಂಬಳ ಸಿಬ್ಬಂದಿ ವಗ್ಯೆರೆ	—೫೪೦೦
ಮೋಟಾರು ಬಸ್ಸುಗಳ ಬಾಡಿಗೆ	—೭೩೨೨
ಅ॥ ಸೂಪರಿಂಟೆಂಡೆಂಟರ ಸಂಬಳ ಸಿಬ್ಬಂದಿ ವಗ್ಯೆರೆ	—೭೪೩೬
ಒಟ್ಟು	೨೧೬೫೮

ರೈಲ್ವೆ ಉತ್ಪತ್ತಿ

ಮೈಸೂರು ಸರ್ಕಾರದ ರೈಲ್ವೆಗಳ ಆದಾಯವು ಈ ಮಾಹೆ 8 ನೇ ತಾರೀಖಿನ ಆಖೈರಿಗೆ ಒಟ್ಟು 64,800 ರೂಪಾಯಿಗಳು. ಹೋದ ವರುಷ ಇದೇ ವಾರದಲ್ಲಿ 2375 ರೂಪಾಯಿ ಹೆಚ್ಚಾಗಿ ಉತ್ಪತ್ತಿಯಾಗಿತ್ತು.

ಅತಿಥಿ ಸತ್ಕಾರ

ಮಹಿಳಾ ಸಮಾಜದವರು ಮಹಾರಾಣಿಯವರ ಅಧ್ಯಕ್ಷತೆಯಲ್ಲಿ ಪ್ರಪಂಚದ ಅಖಿಲ ಕ್ರೈಸ್ತ ವಿದ್ಯಾರ್ಥಿ ಸಮ್ಮೇಳನದ ಮಹಿಳೆಯರಿಗೆ ಅತಿಥಿ ಸತ್ಕಾರವನ್ನು ಮಾಡಿದರು.

ಅಬ್ಬಾಸ್ ಖಾನರ ಮೇಲೆ ಮೊಕದ್ದಮೆ.

ಮ॥ ರಾ॥ ರಾಮಚಂದ್ರರಾವ್ ಸಿಂಧ್ಯೆಯವರು ಮಿ॥ ಅಬ್ಬಾಸ್ ಖಾನರ ಮೇಲೆ ಮಾನ ನಷ್ಟದ ಮೊಕದ್ದಮೆಯನ್ನು ಈ ತಿಂಗಳು 22 ನೇ ತಾರೀಖಿನ ದಿನ ಹೂಡಿರುವರೆಂದು ಈವನಿಂಗ' ಮೇಲೆ ಪತ್ರಿಕೆಯು ತಿಳಿಸುತ್ತದೆ.

ಮೈಸೂರು ಸ್ಟೇಟ್ ರ್‍ಯಾಲಿ

ಈ ತಿಂಗಳು ಅಂತ್ಯದಲ್ಲಿ ತುಮಕೂರಿನಲ್ಲಿ ಮೈಸೂರು ಸ್ಟೇಟ್ ರ್‍ಯಾಲಿ ಆಲ್ ಇಂಡಿಯ ಫಸ್ಟ್ ಎಯಿಡ್ ಟ್ರೋಫಿಯ ಸ್ಪರ್ಧೆಗಳು ನಡೆಯುವಂತೆ ಏರ್ಪಡಿಸಲ್ಪಟ್ಟಿತ್ತಷ್ಟೆ. ಈಗ ತುಮಕೂರಿನಲ್ಲಿ ಪ್ಲೇಗಿನ ಗಲಾಟೆ ಜಾಸ್ತಿಯಾಗಿರುವುದರಿಂದ ಕಾರ್ಯಕಾರಿಣಿ ಸಮಿತಿಯವರು ಈಗ ನಿಲ್ಲಿಸಿ ಮುಂದಿನ ಏಪ್ರೈಲ್ ತಿಂಗಳಿನ ಎರಡನೇ ವಾರದಲ್ಲಿ ನಡಿಯುವಂತೆ ಏರ್ಪಾಡು ಮಾಡಿರುತ್ತಾರೆ.

ಬಾಲವಿರುವ ಶಿಶು.

ಜಾಲ್ಟಿಮೋರಿನಲ್ಲಿ 4 ಇಂಚು ಉದ್ದದ ಬಾಲವುಳ್ಳ ಒಂದು ಹೆಣ್ಣು ಶಿಶುವು ಹುಟ್ಟಿರುವುದು. ಪ್ರೆಂಚ್ ಇಂಡೋ ಚೈನಾದಲ್ಲಿ 12 ವರ್ಷದ ಹುಡುಗನೊಬ್ಬನಿಗೆ 9 ಇಂಚು ಉದ್ದದ ಬಾಲವಿದ್ದಿತು. ಹೀಗೆ ಬಾಲಸಹಿತ ಹುಟ್ಟಿದ ಸುಮಾರು 25 ನಿಜವಾದ ಉದಾಹರಣೆಗಳು ಇಷ್ಟರ ತನಕ ತಿಳಿದುಬಂದಿರುತ್ತದೆ. ಜನನವಾಗುವ ಮೊದಲು ಶಿಶುವು ಗರ್ಭಾವಸ್ಥೆಯಲ್ಲಿರುವಾಗ ಇಡೀ ದೇಹದ 6 ನೇ ಒಂದಂಶದಷ್ಟು ಉದ್ದದ ಬಾಲವಿರುತ್ತದೆ. ಈ ಬಾಲವು ಜನನವಾದೊಡನೆಯೇ ಸರ್ವಸಾಧಾರಣವಾಗಿ ಮಾಯವಾಗುತ್ತದೆ. ಆದರೆ ಇದರ ಚಿನ್ಹೆಯು ಗುದಭಾಗದಲ್ಲಿರುತ್ತದೆ. ಒಮ್ಮೊಮ್ಮೆ ಈ ಬಾಲವು ಅಳಿದ ಹಾಗೆಯೇ ಉಳಿದುಬಿಡುತ್ತದೆ. ಇದರಲ್ಲಿ ಯಾವ ಎಲುಬೂ ಇರದೆ ನರ, ರಕ್ತಗ್ರಂಥಿ, ಸ್ನಾಯುಗಳಿಂದ ರಚಿತವಾಗಿರುತ್ತದೆ.

ದಾಂಪತ್ಯದ ಕಾಲ ನಿಯಮ

ಲೋಕದಲ್ಲಿ ಅತಿ ಕಡಿಮೆ ಸಮಯ ಬಾಳಿದ ದಾಂಪತ್ಯದ ದಾಖಲೆಯು 40 ಮಿನಿಟು. ಈಗ ಈ ದಾಖಲೆಯನ್ನು ರಷ್ಯದ ಲೆನಿನ್ ಗ್ರಾಡಿನ ಈರ್ವರು ದಂಪತಿಗಳು ಹಿಂದೆ ಹಾಕಿರುವರು. ಒಬ್ಬ ಬಡ ಕೂಲಿಯವನಾದ ನರನು ಓರ್ವ ವಧುವನ್ನು ಸೋವಿಯೇಟ್ ಕಾನೂನಿನ ಪ್ರಕಾರ ವಿವಾಹವಾದನು. ವಿವಾಹ ಮುಗಿದು ಹಿಂತಿರುಗುವಾಗಲೇ ಅವರಿಬ್ಬರೂ ಟ್ರೇಮಿನಲ್ಲಿ ಜಗಳಾಡಿದರು. ಕೂಡಲೆ ಹಿಂದೆ ಬಂದು ವಿವಾಹ ವಿಮೋಚನೆ ಕೇಳಿದರು. 40 ಮಿನಿಟಿಗಿಂತಲೂ ಕಡಿಮೆ ಸಮಯದಲ್ಲಿ ವಿವಾಹವೂ ಆಯಿತು. ವಿಮೋಚನೆಯೂ ಆಯಿತು. ಹಿಂದುಗಳ ಜನ್ಮಜನ್ಮಾಂತರ ಪವಿತ್ರ ಬಂಧವೆಲ್ಲಿ! ಈ ಸ್ವಾತಂತ್ರ್ಯವೆಲ್ಲಿ?

ಮೆಡಿಕಲ್ ಕಾನ್‌ಫರೆನ್ಸ್

ಈ ತಿಂಗಳು 22 ನೇ ತಾರೀಖಿನ ಶನಿವಾರ ಬೆಂಗಳೂರಿನಲ್ಲಿ ಮೆಡಿಕಲ್ ಕಾನ್‌ಫರೆನ್ಸಿನ ಪ್ರಾರಂಭೋತ್ಸವವು ದಿವಾನ್‌ರವರ ಅಧ್ಯಕ್ಷತೆಯಿಂದ ಜರುಗಿತು.

ಹೊಸ ಪತ್ರಿಕೆ.

[illegible] ಸಂಪಾದಕರು [illegible] ಬೆಂಗಳೂರು ಟೈಮ್ಸ್ ಎಂಬ ಹೊಸ ಇಂಗ್ಲೀಷ್ ಕನ್ನಡ ದೈನಿಕ ಪತ್ರಿಕೆಯನ್ನು ಹೊರಡಿಸಲು ಸರ್ಕಾರದವರು ಅಪ್ಪಣೆ ಕೊಟ್ಟಿರುವರು.

ಸ್ಮಾರಕ ಸಪ್ತಾಹ

ದಿವಂಗತರಾದ ಸ್ವಾಮಿ ಶ್ರದ್ಧಾನಂದರ ಸ್ಮಾರಕ ಸಪ್ತಾಹವು ಈ ತಿಂಗಳ 23ರಿಂದ 29ರ ವರೆಗೆ ಬೆಂಗಳೂರು [illegible] ದ ನಡೆಸಲಾಗುವುದು.

ಲಕ್ನೋ ಸ್ತ್ರೀ ಸಮ್ಮೇಳನ

[illegible] ರಾಣಿಯವರ ಅಧ್ಯಕ್ಷತೆಯಲ್ಲಿ [illegible] ಸ್ತ್ರೀಯರು [illegible] ಈ ತಿಂಗಳು [illegible] ಸ್ತ್ರೀಯರು ತಮ್ಮ ಅಹವಾಲುಗಳನ್ನು ಹೇಳಿ ಕೊಂಡುದಕ್ಕಾಗಿ [illegible] ತೀರ್ಮಾನ ಮಾಡಿರುತ್ತಾರೆ.

ಮೋಟಾರುಗಳ ಅತ್ಯಭಿವೃದ್ಧಿ ಕಾರಣ

ಅಮೇರಿಕದಲ್ಲಿ ಕಳೆದ ಜನವರಿ ತಿಂಗಳಿಂದ ಸೆಪ್ಟಂಬರ ತಿಂಗಳ ಅಂತ್ಯದ ವರೆವಿಗೆ 32,33,070 ಮೋಟಾರ್ ಕಾರುಗಳೂ 4,38,657 ಮೋಟಾರ್ ಟ್ರಕ್ಕುಗಳೂ ತಯಾರಿಸಲ್ಪಟ್ಟವು. ಕಳೆದ ವರ್ಷದಲ್ಲಿ ಈ ಒಂಭತ್ತು ತಿಂಗಳುಗಳಲ್ಲಿ 31,86,022 ಕಾರುಗಳೂ 4,87,422 ಟ್ರಕ್ಕುಗಳು ತಯಾರಿಸಲ್ಪಟ್ಟವು. ಆದರೆ ಈ ವರ್ಷದ 12 ತಿಂಗಳುಗಳಲ್ಲಿ [illegible] ಕಾರುಗಳೂ ಟ್ರಕ್ಕುಗಳೂ ತಯಾರಾಗುವವು. ಬ್ರಿಟಿಷ ಸಾಮ್ರಾಜ್ಯಾಧಿಪತ್ಯದಿಂದ ರಫ್ತಾಗುವ ರಬ್ಬರನ್ನು ಅಮೇರಿಕದ ಯುನೈಟೆಡ್ ಸ್ಟೇಟ್ಸಿನವರು ಕೊಂಡುಕೊಂಡು ಮೋಟಾರು ತಯಾರಿಗೆ ಉಪಯೋಗಿಸುತ್ತಿರುವರು. ಅಮೇರಿಕದವರಿಗೆ ಕೈಗಾರಿಕೆಯಲ್ಲಿರುವ ಆಸಕ್ತಿಯೇ ಮೋಟಾರಗಳ ಪ್ರಚಂಡ ಅಭಿವೃದ್ಧಿಗೆ ಕಾರಣ.

ಸಿನಿಮಾ ಪಾತ್ರವರ್ಗದವರ ಐಶ್ವರ್ಯ

ಅಮೆರಿಕಾ ದೇಶದಲ್ಲಿ ಸಿನೆಮಾ ಕಂಪನಿಗಳಲ್ಲಿ ಪಾತ್ರವನ್ನು ವಹಿಸತಕ್ಕ ನಟವರ್ಗದವರು ಅಪಾರಸಂಪತ್ತನ್ನು ಗಳಿಸಿ ಧನಾಢ್ಯರಾಗುತ್ತಿರುವರು. ಅಲ್ಲಿಯ ಪ್ರಸಿದ್ಧ ನಟಿಯಾದ ಮೇರಿ ಪಿಕ್ ಫೋರ್ಡ್ ಎಂಬವಳು ಪ್ರಥಮದಲ್ಲಿ ವರ್ಷಕ್ಕೆ 2[illegible] ಸಾವಿರ ಡೋಲರುಗಳಂತೆಯೂ ಅನಂತರ ಪ್ರತಿ ತಿಂಗಳಿಗೆ 12,000 ಡೋಲರುಗಳಂತೆಯೂ ಕಡೆಗೆ ಮಾಸವೊಂದಕ್ಕೆ 50,000 ರೂಪಾಯಿಗಳನ್ನು ಸಂಪಾದಿಸುತ್ತಿದ್ದಳು. ಇವಳು 1921 ನೇ ಇಸವಿಯಲ್ಲಿ ತಾನು ಅಭಿನಯಿಸುತ್ತಿದ್ದ ಕಂಪನಿಯ ಯಜಮಾನಿಯಾದಳಷ್ಟೆ ಆದಿನಿಂದ ಆಕೆಯ ಪ್ರತಿಯೊಂದು ಭಾವಚಿತ್ರವೂ 450000 ರೂಪಾಯಿಗಳಷ್ಟು ಬೆಲೆಬಾಳುತ್ತದೆ. ಇದೇ ಸಮಯದಲ್ಲಿ ಪ್ರಖ್ಯಾತವಿದೂಷಕ ನಟನಾದ ಚಾರ್ಲಿ ಚಾಪ್ಲಿನ್ ಎಂಬವನು ಪ್ರತಿವಾರದಲ್ಲೂ 10,000 ಡೋಲರುಗಳಷ್ಟು ದುಡಿಯುತ್ತಿದ್ದನು.

ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್.

ಪಾರ್ಕ್ಮನಿ ಯುಂ ವ್ಯಾಪಾರಿಗಳು, ಮೈಸೂರು.

[illegible] ಪಾಕೆಟ್ ಡೈರಿ [illegible] ಕ್ರಯಮಾಗಿ [illegible] ಸಿದ್ಧವಾಗಿರುವುದು. ಪೀಟ್ ಕ್ಯಾಲೆಂಡರ್ [illegible] ಪ್ರದರ್ಶನ ಪ್ರದಾನ ಮಾಡುವ [illegible] ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ [illegible] ಸಿದ್ಧವಾಗಿವೆ. [illegible] ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ [illegible] 3 ನಮೂನೆ ಕ್ಯಾಲೆಂಡರುಗಳನ್ನು [illegible] ಮೂಲಕ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿವಪ್ಪ ಅಂಡ್ ಬ್ರದರ್ಸ್, ಮೈಸೂರು.



ಪಕೆ ಗುಪ್ತ ವ್ಯಾಧಿಗಳಿಂದ [illegible]

ತಕ್ಷಣ [illegible] **ಈ ರತ್ನ ಮಿಶ್ರಿ ಹಲ್ವಾ** ವನ್ನು ಸೇವಿಸಿ

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, [illegible] ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, [illegible] ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶ್ಶಕ್ತಿ [illegible] ಮೋಹವು, ಶರೀರವು ಸಣಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, [illegible] ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ವಾಯುವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

ರತ್ನ ಮಿಶ್ರಿ ಡಿಪೋ, ಚಾಮೇಶ್ವರಿ ಗುಡಿ ಬೀದಿ, ಬೆಂಗಳೂರು.

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರು ಆಯುರ್ವೇದೀಯ ಸಿದ್ಧೌಷಧಿಗಳು.



[illegible] ಉಪಾಯವು ಲೋಕಾವು [illegible] ಸೇವಿಸಿನಲ್ಲಿರಲಿ.

[illegible] ಮತ್ತು [illegible] ಕಾಣುತ್ತದೆ.


[illegible] ಅಜೀರ್ಣದ [illegible] ಅಗ್ನಿಮಾಂದ್ಯ, ಹೊಟ್ಟೆಯುಬ್ಬರ [illegible] ರಕ್ತ [illegible] ಸೆಗಣಿ, ಅಜೀರ್ಣದ ಹೊಟ್ಟೆನೋವು, [illegible] ಮಲಬದ್ಧ [illegible] ಅನೇಕ ರೋಗಗಳನ್ನು [illegible].

[illegible] ಈ ಮಾತ್ರೆಗಳು ಸಂಜೀವನ [illegible] ಆರೋಗ್ಯ [illegible].

[illegible] 1 ಕ್ಕೆ 0—4—0 ಮೇರೆ [illegible] 1 [illegible] 1—8—0 [illegible] 12 ಕ್ಕೆ 2—13—0 25 ಕ್ಕೆ [illegible]

ಭಿಷಗ್ರತ್ನ
ಪಾಳ್ಯದ ವೆಂಕಟಾಚಲ ಪಂಡಿತರು
ಶ್ರೀ [illegible] ವೈದ್ಯಶಾಲಾ
[illegible] ಮೈಸೂರು.

ಬ್ರ್ಯಾಂಚಾಫೀಸು
[illegible]



[illegible] ಕೈಬಳೆಗಳೂ [illegible] ಆಭರಣಗಳೂ ಚೊಕ್ಕ [illegible] ಸಾಮಾನುಗಳೂ ನಮ್ಮಲ್ಲಿ [illegible] ಸಿಗುತ್ತವೆ.

[illegible] ಇತರ ಕಡೆಗಳ [illegible] ಇತರ ಕಡೆಗಳ [illegible]

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು [illegible]

ಯು. ನರಸಿಂಹ ಅಯ್ಯರ್   ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ
ಕೆ. ನಾರಾಯಣಪ್ಪ   ನಗರ್ತಪೇಟೆ, ಬೆಂಗಳೂರು.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

Regd No. M. 2322

|| ವಂದೇಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ೯—೦—೦ ; ಪತ್ರಕ್ಕೆ ೦-೦-೦

ಸಂಪುಟ ೧] ಗುರುವಾರ ೨೭ ಡಿಸೆಂಬರ್ ೧೯೨೮ [ಸಂಚಿಕೆ ೭೯

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಿಮಿಟೆಡ್ ಪ್ರೆಸ್ಸಿನಲ್ಲಿ

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City.

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Buildings Mysore.

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings, Mysore.

8 H Subba Rao C/o B Sanne Gowda & Son Sakaleshpur

9 H Naganniah News Agent Chikmagalur

10 V Krishniah Gandhi Bhavan Closepet

TAI NADU

ಪತ್ರಿಕಾಕರ್ತರಿಗೆ ಸೌಲಭ್ಯಗಳು.

ಸರಕಾರದವರು ಪತ್ರಿಕಾ ಪ್ರತಿನಿಧಿಗಳಿಗೆ ಕೊಡುತ್ತಿದ್ದ ಸೌಲಭ್ಯಗಳನ್ನು ನಿಲ್ಲಿಸಿದ ವಿಷಯದಲ್ಲಿ ಹೆಚ್ಚಾಗಿ ಬರೆಯಬೇಕಾದುದೇನೂ ಇಲ್ಲ ಆದರೂ ಈ ವಿಷಯದ ಔಚಿತ್ಯವನ್ನು ಸ್ವಲ್ಪ ಪರಿಶೀಲಿಸಬೇಕು. ಈ ಸೌಲಭ್ಯಗಳನ್ನು ಮೊದಲು ಕಲ್ಪಿಸಿದವರು ಯಾರು? ಅವರು ಯಾವ ಉದ್ದೇಶದಿಂದ ಕಲ್ಪಿಸಿದರು. ಇದನ್ನು ಆಲೋಚಿಸಬೇಕು. ಪುನಃ ಈಗ ಈ ಸೌಲಭ್ಯಗಳನ್ನು ಕಿತ್ತುಹಾಕಿದುದರ ಉದ್ದೇಶವೇನ ಎಂಬುದೂ ಆಲೋಚಿಸಬೇಕಾದುದು. ನಮಗೆ ತಿಳಿದ ಮಟ್ಟಿಗೆ ಸರ್. ಎಂ ವಿಶ್ವೇಶ್ವರಯ್ಯನವರ ವಿಚಾರಾಗಿಯಲ್ಲಿ ನಮ್ಮ ಸಂಸ್ಥಾನವು ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದುತ್ತಿದ್ದಾಗ ಪತ್ರಿಕಾ ವ್ಯವಸಾಯವೂ ನಮ್ಮ ಸಂಸ್ಥಾನದಲ್ಲಿ ಬೆಳೆಯಲಿ ಎಂಬ ಸದುದ್ದೇಶದಿಂದ ವೃತ್ತ ಪತ್ರಿಕಾ ಪ್ರತಿನಿಧಿಗಳಿಗೂ ಸೌಲಭ್ಯಗಳನ್ನು ಕಲ್ಪಿಸಿದರು. ಸರ್. ಎಂ. ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದಲೇ [illegible] ಪತ್ರಿಕೆಗಳು [illegible] ಕನ್ನಡ [illegible] ಸರ್. ಎಂ. ವಿಶ್ವೇಶ್ವ[illegible] ಸರಕಾರದ [illegible] ಪತ್ರಿಕೆಗಳ ವಿಷಯವಾಗಿ [illegible] ವಿಚಾರಕೆ ಬರಲಿ ಎಂಬ ಅಭಿಪ್ರಾಯದಿಂದ [illegible] ಪ್ರತಿನಿಧಿಗಳಿಗೆ [illegible] ಸರ್. ಎಂ. ವಿಶ್ವೇಶ್ವರಯ್ಯನವರಿಗೆ [illegible] ಅಧಿಕಾರದ ಮೇಲೆ [illegible] ಸರಕಾರದ [illegible] ಪತ್ರಿಕೆಗಳಿಗೆ [illegible] ಪ್ರೋತ್ಸಾಹ ಕೊಡುತ್ತಿದ್ದರು.

ಈಗ [illegible] ಸರಕಾರದ ಮನಸ್ಥಿತಿಯೇ ಬೇರೆಯಾಗಿರುವುದು. ಪತ್ರಿಕೆಗಳು ಒಳಿತರೆ ಸರಕಾರದ [illegible] ಹೊರಗೆ ಬಂದು ಸರಕಾರದವರ ಮರ್ಯಾದೆಯು ಕೆಡುವುದೆಂಬ ತಪ್ಪು ಅಭಿಪ್ರಾಯವೂ ಭೀತಿಯೂ ಉಂಟಾಗುವುದು. ಇದರಿಂದಲೇ ಸ್ವತಂತ್ರವಾದ ಪತ್ರಿಕೆಗಳನ್ನು ಕಂಡರೆ ಸರಕಾರದವರಿಗೆ ಅಸಹನೆ ಮತ್ತು ಅಸಮಾಧಾನ. ಪತ್ರಿಕೆಗಳ ಪ್ರಾಬಲ್ಯವನ್ನು ಕಡಿಮೆ ಮಾಡುವುದಕ್ಕಾಗಿ [illegible] ಅನೇಕ ಪ್ರಯತ್ನಗಳನ್ನು ಮಾಡುತ್ತಿರುವರು. ಅದರಲ್ಲಿ ಈ ಸೌಲಭ್ಯಗಳನ್ನು ನಿಲ್ಲಿಸಿರುವುದು ಒಂದು. ಇದರಿಂದ ಪತ್ರಿಕಾಕರ್ತರುಗಳಿಗೆ ಏನೂ ನಷ್ಟವಾಗಲಿಲ್ಲ. [illegible]

ಈಚೆಗೆ ಪತ್ರಿಕೆಗಳಿಗೂ ಸರಕಾರದವರಿಗೂ [illegible] ಮನಸ್ತಾಪ [illegible] ಸರಕಾರದವರು ಪತ್ರಿಕೆಗಳ ಮೇಲೆ [illegible]

ವಿವಿಧ ವಿಷಯಗಳು.

ಹಾಸ್ಯಯಂತ್ರ.

ಅಮೇರಿಕದಲ್ಲಿ ಒಂದು ಹೊಸ ಯಂತ್ರ. ಅದು ನಗೆಯನ್ನು ಅಳೆಯುವುದು. ಅದರ ಶಕ್ತಿ ಇಂತಿಷ್ಟೆಂದು, ಅದರ ಭೇದಗಳಿಷ್ಟೆಂದು, ಕ್ರಮಪ್ರಕಾರ ತೋರಿಸುವುದು ಇಂತಿಂತವರು ಇಷ್ಟಿಷ್ಟು ನಗಾಡಿರುವರೆಂದು ರಿಜಿಸ್ಟ್ರಿ ಮಾಡಿ ಇಡುವುದು.

ಮರೆವಿಲ್ಲದ ಯಂತ್ರ.

ಲಂಡನಿನಲ್ಲಿ ಮತ್ತೊಂದು ಯಂತ್ರ ಇದು ಒಬ್ಬರು ಮಾತಾಡಿದ ಹಾಗೆ, ಅದನ್ನು ನೆನಪಿಟ್ಟುಕೊಂಡು ಕೇಳಿದಾಗ ಹೇಳಿಬಿಡುವುದು. ಈ ಯಂತ್ರದ ಸಾಕ್ಷ್ಯದ ಮುಂದೆ— 'ನಾನು ಹಾಗೆ ಹೇಳಲಿಲ್ಲ: ಹೀಗೆ ಮಾತಾಡಿಲ್ಲ.' ಎಂದು ಯಾರಿಗೂ ಹೇಳಲು ಉಪಾಯವಿಲ್ಲ.

ದಾರಿತೋರಿಕೆಯ ಯಂತ್ರ.

ವಿಲಾಯತಿಯಲ್ಲಿ ಮಾರ್ಗಗಳ ಮಧ್ಯದಲ್ಲಿ ನಿಂತುಕೊಂಡು ಈ ಗಾಡಿ ಹೀಗೆ ಹೋಗಲಿ ಈ ಬಸ್ಸು ಈ ಕಡೆ ಹೋಗಲಿ ಎಂದು ನಿರ್ದೇಶಿಸುವ ಪೋಲೀಸಿನ ಬದಲಿಗೆ ಯಂತ್ರದ ಮೂಲಕ ಈ ಕೆಲಸಗಳನ್ನು ಮಾಡಿಸುವ ಏರ್ಪಾಡು ಆಗುತ್ತಲಿದೆ.

ಸುರಂಗದ ರೈಲು.

ನೆಲದಡಿಯಲ್ಲಿ ಸುರಂಗದಿಂದ ಹಾದು ಹೋಗುವ ಹೊಸ ರೈಲು ಲಂಡನ್ನಿನಲ್ಲಿ ತೆರೆಯಲಾಗಿದೆ. ಇದನ್ನು ನಿರ್ಮಿಸಲು ನಾಲ್ಕು ವರ್ಷ ಕಾಲ ಹಿಡಿಯಿತು. ಅರ್ಧ ಮಿಲ್ಲಿಯನವನು ಖರ್ಚಾಗಿದೆ. ಐವತ್ತು ಮಿಲ್ಲಿಯನ್ ಪ್ರಯಾಣಿಕರು ಪ್ರತಿ ವರ್ಷ ಈ ರೈಲುಗಾಡಿಗಳನ್ನು ಉಪಯೋಗಿಸುವರು.

ಮರುಳಾಟದ ಸುಂದರಿ

ಫ್ರಾನ್ಸಿನಲ್ಲಿ ಶ್ರೀಮತಿ ಡೇಸಿಯಲ್ ಬ್ರಿಗಿಸ್ ಎಂಬ ಸ್ತ್ರೀಯ ಸೌಂದರ್ಯವನ್ನು ಕಂಡು ಇಡೀ ಪಾರಿಸೇ ಮರುಳಾಗಿದೆ! ಸುಮಾರು ೫೦೦೦ ವರ್ಷಗಳೀಚೆಗೆ ಇಂತಹ ಸುಂದರಿಯೆ ಹುಟ್ಟಿರಲಿಲ್ಲವೆನ್ನುವರು.

ಸುರಂಗ ಮಾರ್ಗ

ಯುರೋಪಿನಿಂದ ಆಫ್ರಿಕಾ ಖಂಡಕ್ಕೆ ಸಮುದ್ರದ ಕೆಳಗಿನ ಸುರಂಗ ತೋಡುವ ಆಲೋಚನೆಯಿದೆ.

ಟಪಾಲಿನ ವೇಗ

ಇಂಗ್ಲೆಂಡಿನಿಂದ ಇಂಡಿಯಕ್ಕೆ ಇನ್ನು ಆರೇ ದಿನಗಳಲ್ಲಿ ಟಪಾಲು ಬರುವಂತೆ ವಿಮಾನ ಟಪಾಲಿನವರ ಸಿದ್ಧತೆ ನಡೆಯುತ್ತಿದೆ.

ಶ್ರೀ|| ಪಟೇಲರು.

ಎಲ್ಲ ಲೆಜಿಸ್ಲೆಟಿವ್ ಕೌನ್ಸಿಲುಗಳ ಪ್ರೆಸಿಡೆಂಟರು ಒಂದಾಗಿ ಶ್ರೀ ಪಟೇಲರ ಅಧ್ಯಕ್ಷತೆಯಲ್ಲಿ ಕೆಲ ಕೌನ್ಸಿಲು ವಿಷಯಗಳನ್ನು ಜನವರಿ ತಾ. ೫ ರಲ್ಲಿ ಆಲೋಚಿಸುವರು.

ಜನಗಳು ಭಾವಿಸುವುದಕ್ಕೆ ಅವಕಾಶವಾಯಿತು. ಇದರಿಂದ ಸರಕಾರದವರು ಏನನ್ನೂ ಸಾಧಿಸಿದಹಾಗೆ ಆಗಲಿಲ್ಲ ತಮ್ಮ ಪ್ರೀತಿಗೆ ಪಾತ್ರವಾದ ಪತ್ರಿಕೆಗಳಿಗೆ ಅನೇಕ ರೂಪವಾಗಿ ಅವರು ಸಹಾಯ ಮಾಡುತ್ತಿರುವುದು ಜಗತ್ತಿಗೇ ಗೊತ್ತಿದೆ. ಎಲ್ಲಾ ಪತ್ರಿಕೆಗಳಿಗೂ ಸಾಮಾನ್ಯವಾಗಿ ದೊರೆಯಬೇಕಾಗಿದ್ದ ಸೌಲಭ್ಯಗಳನ್ನೂ ಕಿತ್ತುಹಾಕಿ ಸರಕಾರದವರು ಇನ್ನೂ ಅಪವಾದಕ್ಕೆ ಗುರಿಯಾದರು.

ಸರ್ವಧರ್ಮ ಪರಿಷತ್ತು

ಕವೀಂದ್ರ ರವೀಂದ್ರನಾಥ ಠಾಕೂರರು ಒಂದು ಜನವರಿ ತಾ. ೨೫ ರಲ್ಲು ಕಲ್ಕತ್ತದಲ್ಲಿ ಸೇರುವ ಸರ್ವಧರ್ಮಗಳ ಪರಿಷತ್ತಿನ ಅಧ್ಯಕ್ಷರಾಗುವರು. ಧರ್ಮಕಡೆಗೆ ಜನರ ಆತ್ಮಗಳನ್ನು ಸೆಳೆವ ಬಗೆ ಹೇಗೆ ಮತ್ತು ಜಗತ್ತಿನಲ್ಲಿ ಶಾಂತಿ ಸೋದರತೆಗಳನ್ನು ಅಭಿವೃದ್ಧಿಪಡಿಸುವ ಉಪಾಯಗಳು ಆವುವು? ಎಂಬೀ ವಿಷಯವಾಗಿ ಚರ್ಚೆ ನಡೆವುದು.

ವಕೀಲರ ಮೇಲೆ ಮೊಖದ್ದಮೆ

ಅಲಹಾಬಾದಿನ ಹೈ ಕೋರ್ಟಿನಲ್ಲಿ ಒಂದು ವ್ಯಾಜ್ಯವು ತನಿಖೆಯಾಗುವ ಕಾಲದಲ್ಲಿ, ಪ್ರತಿವಾದಿಯ ಕಡೆಯ ವಕೀಲರು ಕೋರ್ಟಿನಲ್ಲಿ ವಾದಿಯ ಕಂಪೆನಿಯು ಅತಿ ವಿಶ್ವಾಸ ಯೋಗ್ಯವಲ್ಲದ ಕಂಪೆನಿಗಳಲ್ಲೊಂದು ಎಂದುದಕ್ಕೆ, ವಾದಿಯು ವಕೀಲರ ಮೇಲೆ ಮಾನನಷ್ಟದ ಮೊಖದ್ದಮೆ ಹೂಡಿದನು. ವಕೀಲರಿಗೆ ೨೦೦ ರೂ ಜ್ವಾ ಜುಲುಮಾನೆಯಾಗಿ ಅದನ್ನು ವಾದಿಗೆ ನಷ್ಟ ಪರಿಹಾರಕ್ಕಾಗಿ ಕೊಡಬೇಕೆಂದು ಜಡ್ಜರು ವಿಧಿಸಿದರು.

ಬಹಿಷ್ಕಾರ

ಪಾಟ್ನಾದಲ್ಲೂ ಸೈಮನ್ ಬಹಿಷ್ಕಾರವಾದಿಗಳ ಮೆರವಣಿಗೆ ನಡೆದು ಸೈಮನರು ೨೫೦೦೦ ಮಂದಿಯಿಂದ ಹಿಂತೆರಳಲು ಸೂಚನೆ ಹೊಂದಿದರು ಜನರೆಲ್ಲ ಶಾಂತರಾಗಿದ್ದರು.

ಮದ್ಯಪಾನ ನಿವಾರಣೆ

ಕೆಲವು ಲಕ್ಷ ರೂಪಾಯಿಗಳನ್ನು ಲೋಕಲ್ ಬೋರ್ಡುಗಳ ವಶದಲ್ಲಿರಿಸಿ, ಮದ್ಯಪಾನನಿವಾರಣೆಗೆ ಬೋಧನೆ ಕೊಡಿಸಬೇಕಾಗಿ, ಮದ್ರಾಸು ಕೌನ್ಸಿಲಿನಲ್ಲಿ ಸಮ್ಮತವಾದಂತೆ, ಸರಕಾರವು ನಿಶ್ಚಯಿಸಿರುವುದು.

ನಂಜನಗೂಡು ವೃತ್ತಾಂತ

21-12-28 ನೇ ಶುಕ್ರವಾರ ಸಾಯಂಕಾಲ ಉಡುಪಿ ಎಂಟು ಮಠಗಳಲ್ಲಿ ಮುಖ್ಯವಾದ ಸೋದೆ ಮಠದ ಶ್ರೀ ವಿಶ್ವೇಂದ್ರತೀರ್ಥ ಶ್ರೀ ಪಾದಂಗಳವರ ಸವಾರಿಯು ರಾಮ ಸೇತು ಯಾತ್ರೆಗಾಗಿ ದಿಗ್ವಿಜಯ ಮಾಡಿ ಸಂಕ್ರಮಣದಲ್ಲಿ ಸೇತು ಸ್ನಾನ ಮಾಡುವ ಔತ್ಸುಕದಿಂದ ಈ ಊರಿನ ಮೇಲೆ ದಯಮಾಡಿಸುತ್ತಿದ್ದಾಗ, ಇಲ್ಲಿನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ದಿವಾನ್ ಶ್ರೀಯುತ ಶ್ರೀನಿವಾಸಮೂರ್ತಾಚಾರ್ಯರವರು ಪ್ರಾರ್ಥನೆ ಮಾಡಿಕೊಂಡ್ಡದ್ದರ ಮೇಲೆ ಮಾರು ದಿವಸ ಅಂದರೆ 22-12-28 ನೇ ಶನಿವಾರ ನಿಲ್ಲಲು ಒಪ್ಪಿಕೊಂಡರು. ಆಗ ರಾಘವೇಂದ್ರಸ್ವಾಮಿಗಳ ಮಠದ ಸಮಸ್ತ ಮರ್ಯಾದೆ ಸಹಿತ ಶ್ರೀಯುತ ಆಚಾರ್ಯರು ವೈದಿಕ ಬ್ರಾಹ್ಮಣರು ಪಂಡಿತರು ಮತ್ತು ಅಧಿಕಾರಿಗಳ ಸಮೇತ ಸ್ವಾಮಿಗಳನ್ನು ಎದುರುಗೊಂಡು ದಿವ್ಯವಾದ ವಾದ್ಯಗಳಿಂದಲೂ ದೀಪಗಳಿಂದಲೂ ಬಹಳ ವಿಜೃಂಭಣೆಯಿಂದ ಪುರ ಪ್ರದಕ್ಷಿಣೆಯಾಗಿ ಉತ್ಸವ ಮಾಡಿಸಿ ತಮ್ಮ ಮನೆಗೆ ಸವಾರಿಯನ್ನು ಕರೆದುಕೊಂಡು ಬಂದರು. ಶನಿವಾರದ ದಿವಸ ಆಚಾರ್ಯರ ಮನೆಯಲ್ಲಿ ಪೂಜೆನಡೆದು ಶಿಷ್ಯರಿಗೆಲ್ಲಾ ಪ್ರಸಾದವನ್ನು ದಯಪಾಲಿಸಿದರು. ಬ್ರಾಹ್ಮಣ ಸಂತಾರಾಧನಾನಂತರ ಶಿಷ್ಯರಿಗೆಲ್ಲಾ ಅಮೂಲ್ಯವಾದ ವಿಚಾರಗಳನ್ನು ಬೋಧಿಸಿದರು. ನಂತರ ಶ್ರೀಕಂಠೇಶ್ವರ ಸ್ವಾಮಿಯವರ ದರ್ಶನ ಮಾಡಿ ಅಲ್ಲಿಂದ ಮಠಕ್ಕೆ ದಯಮಾಡಿ [illegible] ಯದೇವರ ಮತ್ತು [illegible] ಮಂಗಳಾರತಿಯ[illegible] ವನಾಡಿಸಿ ವಿದ್ವಾಂಸರಿಗೂ ಶಿಷ್ಯರಿಗೂ ಅನುಗ್ರಹ ಮೂಲಕವಾಗಿ ಫಲಮಂತ್ರಾಕ್ಷತೆಯನ್ನು ದಯಪಾಲಿಸಿ ಗುಂಡ್ಲಪೇಟೆ ಮುಖಾಂತರ ಪ್ರಯಾಣ ಬೆಳೆಸಿದರು.

ತಾಯಿನಾಡು.

27—12—1928.

ವೃತ್ತಾಂತ ಪತ್ರಿಕಾ ಮಾನನಷ್ಟದ ಮೊಕದ್ದಮೆ.

ಮೈಸೂರು ಸೆಷನ್ಸ್ ಜಡ್ಜ್‌ರವರ ಕೋರ್ಟಿನಲ್ಲಿ

ಸಿ. ಆರ್. ನಂಬರ್ 28-29.

ಅರ್ಜಿದಾರ— ತಗಡೂರು ರಾಮಚಂದ್ರರಾವ್ ಸತ್ಯನಾರಣಪ್ಪನವರ ಮಗ— ಸಂಪಾದಕ ಕಣಿಯುರ ಪತ್ರಿಕೆ, ವಾಸಸ್ಥಳ ಚಾಮುಂಡಿ ಬಡಾವಣೆ ಮೈಸೂರು

ಪ್ರತಿವಾದಿ— ||ಮಿ|| ಥಾಮಸ್ ಗೂಲ್ಡ್— ವೃತ್ತಾಂತಪತ್ರಿಕೆಯ ಮುದ್ರಕರು ಮತ್ತು ಪ್ರಕಾಶಕರು ಮೈಸೂರು.

ಕ್ರಿ. ಪ್ರೊ. ಕೋಡಿನ 435 ನೇ ಸೆಕ್ಷನ್ ಪ್ರಕಾರ.

ಜಸ್ಟಿಸ್ ಆಫ್ ದಿ ಪೀಸ್‌ರವರಾದ ಮಿ|| ಜೆ. ಸಿ. ರೋಲೋ ಎಂ. ಎ. ರವರ ಕೋರ್ಟಿನ ಫೈಲಿನಲ್ಲಿರತಕ್ಕ 28-29 ನೇ ಸಾಲಿನ ಸಿ. ಸಿ. 2ನೇ ನಂಬರಿನ ಮೊಕದ್ದಮೆಯ ರಿಕಾರ್ಡುಗಳನ್ನು ಈ ಕೋರ್ಟಿನವರು ದಯವಿಟ್ಟು ತರಿಸಿ ಅದರ ವಾಸ್ತವಾಂಶವನ್ನೂ ಮತ್ತು ಮೇಲ್ಕಂಡ ಮೊಕದ್ದಮೆಗೆ ಸಂಬಂಧಪಟ್ಟ ತಾ|| 1-12-28 ರ ಮುಕಾಸ್ತ್ರಿನ ನ್ಯಾಯಗಳನ್ನೂ ಅಜಮಾಯಿಷಿ ಮಾಡಬೇಕೆಂಬುದಾಗಿ ಅರ್ಜಿದಾರನು ಪ್ರಾರ್ಥಿಸುತ್ತಾನೆ. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟ ಈ ಕೆಳಗೆ ಕೊಟ್ಟಿರುವ ಅಂಶಗಳನ್ನೂ ಪರಿಶೀಲಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

2 ಪ್ರತಿವಾದಿಯಿಂದ ಪ್ರಕಟಿಸಲ್ಪಟ್ಟ ಲೇಖನವು ಮುಖ್ಯವಾಗಿ ಮಾನನಷ್ಟಕರವಾಗಿತ್ತೆಂಬುದನ್ನು ಗಮನಿಸದೆ ಅವರನ್ನು ಡಿಸ್‌ಛಾರ್ಜು ಮಾಡುವುದರಲ್ಲಿ ಮ್ಯಾಜಿಸ್ಟ್ರೇಟರು ತಪ್ಪು ಮಾಡಿರುತ್ತಾರೆ.

3 ಎವಿಡೆನ್ಸ್ ಆಕ್ಟಿನ 105 ನೇ ಸೆಕ್ಷನ್ನಿನ ಅಭಿಪ್ರಾಯವನ್ನು ಮ್ಯಾಜಿಸ್ಟ್ರೇಟರು ನಿರಾಕರಿಸಿರುತ್ತಾರೆ. ಆ ಸೆಕ್ಷನನ್ನು ಇ. ಪಿ. ಕೋಡಿನ 499 ನೇ ಸೆಕ್ಷನ್ನಿಗೆ ಇರುವ ಪರ್ಯಾಯಗಳನ್ನು ಛಾರ್ಜು ಮಾಡುವುದಕ್ಕೆ ಮೊದಲೆ ಇರುವಂತೆ ಭಾವಿಸಲು ಕಡ್ಡಾಯ ಪಡಿಸುತ್ತದೆ.

4 ಪ್ರತಿವಾದಿಯು ವಾಸ್ತವವಾಗಿಯೂ ಒಬ್ಬ ಯೂರೋಪಿಯನ್ ಬ್ರಿಟಿಷ್ ಪ್ರಜೆಯೆ ಅಲ್ಲವೆ ಎಂಬ ಬಗ್ಗೆ ಮೊದಲನೆಯ ತನಿಖೆಗಳನ್ನು ನಡೆಸದೆ ಮ್ಯಾಜಿಸ್ಟ್ರೇಟರವರು ತಪ್ಪು ಮಾಡಿರುತ್ತಾರೆ.

ಪೊ. 5 ಕ್ರಿ. ಪ್ರೊ. ರೆಗ್ಯುಲೇಷನ್ನಿನ ಒಂದನೇ ಸೆಕ್ಷನಿ 2 ಕೋರ್ಟಿಗೆ ಯೂರೋಪಿಯನ್ ಬ್ರಿಟಿಷ್ ಪ್ರಜೆಯ ಮೇಲೆ ಯಾವ ಅಧಿಕಾರವನ್ನೂ ಕೊಡುತ್ತಿಲ್ಲವಾದರೂ (ಈ ಸಂದರ್ಭದಲ್ಲಿ ಅಪರಾಧಿಯು ಯೂರೋಪಿಯನ್ ಬ್ರಿಟಿಷ್ ಪ್ರಜೆ ಎಂಬುದಕ್ಕೆ ಯಾವ ರುಜುವಾತೂ ಇಲ್ಲ) ತಾ|| 9-2-1904 ನೇ ಲೆಜಿ 1203 ನಂಬರ್ 124 34 ರ ಮೈಸೂರು ಶ್ರೀಮನ್ಮಹಾರಾಜರವರ ಪ್ರಕಟಣೆಯು ಈ ಕೋರ್ಟಿಗೆ ಪುನರ್ವಿಮರ್ಶೆ ಮಾಡತಕ್ಕ ಹಕ್ಕನ್ನು ಕೊಡುತ್ತದೆ ಆ ಪ್ರಕಟಣೆಯ ಪ್ರಕಾರ ಹೈ ಕೋರ್ಟಿಗೆ ಅಪೀಲಿಗೆ ಮಾತ್ರ ಹೋಗಬೇಕು. ಇತರ ಕಾರ್ಯಕ್ರಮಗಳು ಸಂಪೂರ್ಣವಾಗಿ ಈ ಕ್ರಿ. ಪ್ರೊ. ರೆಗ್ಯುಲೇಷನ್ನಿನ ಪ್ರಕಾರವೇ ನಡೆಸಲ್ಪಡುತ್ತವೆ.

6. ಇತರ ವಿಷಯಗಳಲ್ಲಿಯೂ ಕೆಳಗಿನ ಕೋರ್ಟಿನ ಅಪ್ಪಣೆಯು ಕಾನೂನಿಗೂ ವಾಸ್ತವಾಂಶಗಳಿಗೂ ಮತ್ತು ಮೊಕದ್ದಮೆಯ ಇತರ ಸಂದರ್ಭಗಳಿಗೂ ವಿರುದ್ಧವಾದುದಾಗಿರುತ್ತದೆ.

7. ಆದುದರಿಂದ ಮೇಲ್ಕಂಡ ಮೊಕದ್ದಮೆಯನ್ನು ಇನ್ನು ಮುಂದಕ್ಕೆ ಕೂಲಂಕಷವಾಗಿ ವಿಚಾರಣೆ ನಡೆಸಲ್ಪಡುವ ಬಗ್ಗೆ ಅಪ್ಪಣೆಯಾಗಬೇಕೆಂದು ಅರ್ಜಿದಾರನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತಾನೆ

ರ ಜು. ತಗಡೂರು ರಾಮಚಂದ್ರರಾವ್.

(ರು.ಜು.) ಟಿ. ರಂಗರಾವ್.

ಅರ್ಜಿದಾರರ ಪರ ಲಾಯರು.

ಹರಿಕಥಾ ಸಪ್ತಾಹ.

ರಾಜಧಾನಿಯ ಬೊಮ್ಮಯ್ಯನವರ ಛತ್ರದಲ್ಲಿ ಹ.ಬ್ಬಳ್ಳಿ ವೆಂಕಟರಮಣದಾಸರವರ. ಈ ತಿಂಗಳು 21 ನೇ ತಾ|| ನಿಂದ ಬ್ರಹ್ಮಚೈತನ್ಯರ ಆರಾಧನೆಗಾಗಿ ಹರಿಕಥಾ ಸಪ್ತಾಹವನ್ನು ನಡಿಸುತ್ತಿರುವರು. 2 ನೇ ತಾ|| ನಿಂದ 1929 ನೇ ಜನವರಿ 5 ನೇ ತಾ|| ವರೆಗೆ ರಾಮಭಜನಾ ಸಪ್ತಾಹವನ್ನೂ ಸಹ ನಡಿಸುವುದಾಗಿ ತಿಳಿಯಬಂದಿದೆ.

ಮಿಲಿಟರಿ ದಿಗ್ಭ್ರಮೆ.

ಶ್ರೀಯುತ ಸುಭಾಸ್‌ರವರು ಕಲ್ಕತ್ತಾ ರಾಷ್ಟ್ರೀಯ ಮಹಾ ಸಭೆಗೆ ಜನರಲ್ ಕಮ್ಯಾಂಡಿಗ್ ಆಫೀಸರಾಗಿ ನಿಯಮಿಸಲ್ಪಟ್ಟಿರುವವರಷ್ಟೆ. ಮೊನ್ನೆಯ ದಿವಸ ಜನರಲ್ ಕಮ್ಯಾಂಡೆಂಟರ ವಿಳಾಸಕ್ಕೆ ಬರೆಯಲ್ಪಟ್ಟಿದ್ದ ಒಂದು ಪತ್ರವು ಮಿಲಿಟರಿ ಕಮಾಂಡೆಂಟರ ಆಫೀಸಿಗೆ ಅಂಚೆಯವರು ತಲುಪಿಸಿದ್ದರು. ಅವರು ಆ ಪತ್ರವನ್ನು ನೋಡಿ ದಿಗ್ಭ್ರಾಂತರಾಗಿ ವಾಪಸುಮಾಡಿದರು. ಅಂಚೆಯವರು ತನಿಖೆ ನಡಿಸಿ ಹೊಸದಾಗಿ ಕಲ್ಕತ್ತೆಗೆ ಒಬ್ಬ ಜನರಲ್ ಕಮ್ಯಾಂಡೆಂಟರು ಇರುವುದಾಗಿ ಆಶ್ಚರ್ಯಪಟ್ಟು ಸುಭಾಸ್ ಚಂದ್ರಬೋಸರವರಿಗೆ ತಲುಪಿಸಿದರಂತೆ !!

ರಜಾ.

ಚಿತ್ರದುರ್ಗದ 1 ನೇ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಎ. ದ್ವಾರಕಾನಾಥರಿಗೆ ಜನವರಿ 2 ನೇ ತಾ|| ನಿಂದ ಮೂರು ವಾರಗಳು ರಜಾ ಕೊಡಲ್ಪಟ್ಟಿರುತ್ತೆ. ಚಿತ್ರದುರ್ಗ ಡಿ|| ಟ್ರೆಜರಿ ಆಫೀಸರವರೇ ಮೇಲ್ಕಂಡವರ ಗೈರ್‌ಹಾಜರಿ ಕಾಲದಲ್ಲಿ ತಮ್ಮ ಕೆಲಸದ ಜೊತೆಗೆ ಸ್ಪೆ|| ಮ್ಯಾ|| ರ ಕೆಲಸವನ್ನೂ ಬದಲಿ ನೋಡುವರು.

ರಾಜಿಯ ಪ್ರಯತ್ನ

(ಮ|| ರಾ|| ಮಿರ್ಲೆ ಲಕ್ಷ್ಮೀನಾರಣಪ್ಪನವರಿಂದ)

ನಾನು ಕಳೆದ ಭಾನುವಾರ ದಿವಾನರೊಡನೆ ಮಾಡಿದ ಸಂಭಾಷಣೆಯ ವಿಚಾರವಾಗಿ ಪತ್ರಿಕೆಗಳಲ್ಲಿಯೂ ಮಹಾಜನರಲ್ಲಿಯೂ ನಾನಾ ವಿಧವಾದ ವದಂತಿಗಳು ಹರಡಿವೆ. ಈ ವಿಷಯಕ್ಕೆ ಸಂಬಂಧ ಪಟ್ಟವರೆಲ್ಲರಿಗೂ ಇಂತಹ ವದಂತಿಗಳಿಂದ ಕೆಡಕುಂಟಾಗುವುದರಿಂದಲೂ ಉದ್ದೇಶ ಪೂರ್ವಕವಾಗಿ ಕೆಲವರು ನಮ್ಮಗಳಿಗೆ ಕೆಟ್ಟ ಹೆಸರು ತರಬೇಕೆಂದು ಈ ರೀತಿ ಇಲ್ಲದ ಸಲ್ಲದ ಅಭಿಪ್ರಾಯಗಳನ್ನು ಹರಡುತ್ತಿರುವುದರಿಂದಲೂ ಈ ಕೆಳಗೆ ಕಂಡ ಹೇಳಿಕೆಯನ್ನು ನಾನು ಪ್ರಕಟಿಸಿರುತ್ತೇನೆ. ಈ ವಿಷಯವು ಪ್ರಥವತಃ ಗೋಪ್ಯವಾದದ್ದೆಂದು ಭಾವಿಸಲ್ಪಟ್ಟಿದ್ದರಿಂದ ಇದರ ವಿಷಯವನ್ನು ಪ್ರಕಾಶಪಡಿಸಲು ದಿವಾನರವರ ಅಪ್ಪಣೆಯನ್ನು ತೆಗೆದುಕೊಳ್ಳ ಬೇಕಾದ್ದ ಇಷ್ಟು ಸಾವಕಾಶವಾಯಿತು.

ನಮಗೆಲ್ಲರಿಗೂ ಅತ್ಯಂತ ಪ್ರೀತಿಪಾತ್ರವಾದ ಮದರಾಸಿನ ಸ್ವರಾಜ್ಯ ಪತ್ರಿಕೆಯಲ್ಲಿ ಇಂದಿನವರೆಗೂ ಮುಖ್ಯವಾಗಿ ಕಳೆದ 13 ನೇ ತಾರೀಖಿನ ಸಂಚಿಕೆಯಲ್ಲಿಯೂ ಮೈಸೂರು ಸರ್ಕಾರದ ಕೆಲವು ಅಧಿಕಾರಿಗಳು ಅಪ್ರಾಪ್ ಖಾನರನ್ನು ನ್ಯಾಯಪಾಶದಿಂದ ತಪ್ಪಿಸುವುದಕ್ಕೆ ಪ್ರಯತ್ನಿಸುತ್ತಿರುವ ವಿಷಯವು ಪ್ರಕಟಿಸಲ್ಪಟ್ಟಿತು. ಅದೇ ನಮ್ಮ ಸಂಭಾಷಣೆಯ ಮುಖ್ಯ ವಿಷಯವು ಈ ವಿಷಯದಲ್ಲಿ ದಿವಾನರವರು ತುಂಬಾ ಸಂತಾಪವನ್ನು ಸೂಚಿಸಿದರು. ನನ್ನ ಅಭಿಪ್ರಾಯಗಳು ಸರಿಯಾದುದಲ್ಲವೆಂದೂ, ಸರ್ಕಾರದ ಆಡಳಿತದ ಪರಿಸ್ಥಿತಿಯು ನನಗೆ ಚೆನ್ನಾಗಿ ತಿಳಿದಿದ್ದರೆ ಹೀಗೆ ಬರೆಯುತ್ತಿರಲಿಲ್ಲವೆಂದೂ ದಿವಾನರು ಹೇಳಿದರು.

ನಾನು ಸಕಲರಿಗೂ ಒತ್ತಿ ಹೇಳುವುದೇನೆಂದರೆ ಸ್ವರಾಜ್ಯದಲ್ಲಿ ಬಂದ ಲೇಖನಗಳ ಅಭಿಪ್ರಾಯಕ್ಕೆಲ್ಲಾ ನಾನೇ ಸ್ವತಃ ಜವಾಬ್ದಾರನು. ನಾನು ಒಬ್ಬ ಮುಖಂಡನೆಂದು ಯಾವಾಗಲೂ ಹೇಳಿಕೊಂಡಿಲ್ಲ. ಇತರರ ಪರವಾಗಿ ಯಾವ ಜವಾಬ್ದಾರಿಯ ಭರವಸೆಯನ್ನೂ ಯಾರಿಗೂ ಕೊಟ್ಟಿಲ್ಲ. ನಾನು ಕೂಡ ಯಾವ ಮುಚ್ಚಳಿಕೆಯನ್ನೂ ಕೊಟ್ಟಿಲ್ಲ ನನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಅಥವಾ ಬೇರೆ ಸಮ್ಮತಿಯನ್ನು ಪಡೆಯುವ ಯಾವ ಕರಾರಿನಲ್ಲಿಯೂ ನಾವು ಯಾರೂ ಕೊಡುಗುವುದಿಲ್ಲವೆಂದು ಹೇಳಬೇಕಾಗಿಲ್ಲ.

ಸತ್ಕಾರ.

ಕಳೆದ ಶನಿವಾರ ಮ|| ರಾ|| ಬಿ. ನಾಗಪ್ಪನವರಿಗೆ ಸೆಕ್ರೆಟೇರಿಯಟ್ಟಿನ ಅಧಿಕಾರಿಗಳು ಟೀ ಪಾರ್ಟಿಯನ್ನು ಕೊಟ್ಟು ಸತ್ಕರಿಸಿದರು. ಈ ಕೂಟಕ್ಕೆ ದಿವಾನರು ಮೊದಲಾಗಿ ಎಲ್ಲ ಉದ್ಯೋಗಸ್ಥರೂ ಬಂದಿದ್ದರು.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

ತಾಯಿನಾಡು.

28—12—1928.

IN THE COURT OF THE DISTRICT MAGISTRATE, BANGALORE.

Criminal Case No. 5 of 1928-29.

CITY POLICE, ... Petitioner.

---VS---

J. BHIMA RAO, ... Opponent.

This is a petition preferred by the City Police praying that the opponent may be dirceted under Police Regulation not to exhibit in the street called Balepet Road a Black Board called the Balepet Propaganda Board containing items of news and comments on public events, as the same contains at times matter likely to incite people to commission of offence or to disturbance of the public peace.

2. The opponent's Black Board has been very much to the front during the disturbances which took place in the Bangalore City recently. In the written statement the opponent has produced some letters written to him by certain high-placed gentleman expressing appreciation of the work done by him through the Black Board. He has been also granted a ticket for the Press Room in the Secretariat by the General Secretary But the fact remains that the writings on the Board at times contain statements which can be differentiated from truth. For instance there is the statement made that the boys who were sent to the lock-up for declining to execute self-recognizance bonds required by the Additional District Magistrate were placed in a cell from which they could see the scaffold. Even the most casual visitor to the Jail must have observed, and the opponent cannot be unaware of the fact, that the scaffold is so walled off from the other parts of the Jail that nobody can see the gibbot unless he enters the walled enclosure. Then again there is the other statement made on the 2nd Novemer 1928 (Ex. P. 26) that " two more schools of Malleshwaram had gone on sympathetic strike with the normal school boys. A general strike of the schools

Not only did no school go on strike that or the previous day but no strike was apprehended at all then. I think that this was an attempt to incite the boys to go on strike.

The part played by the opponent's Black Board during the recent disturbances is well-known. I think that in the present state of the Bangalore City, it is expedient to stop the exhibition of the Board. In these circumstances I direct that the opponent J. Bhima Rao not to exhibit his Black Board in the Balepet or any other street of Bangalore City under section 39 of the Police Regulation.

In Open Court.

(Sd). G. B. Heblikar,

District Magistrate.

ವರ್ತಮಾನ ಸಂಗ್ರಹ

ಅಜ್ಜಮ್ಮನ ಪುಸ್ತಕ

ಲಂಡನಿನ ಒಂದು ಬೀದಿಯಲ್ಲಿ ಒಬ್ಬಳು ಮುದುಕಿಯ ಹತ್ತಿರ ೩೦೦ ವರ್ಷಗಳಿಗೆ ಮೊದಲಿನ ಹಳೆ ಪುಸ್ತಕವಿದೆ. ಅನೇಕ ರೋಗಗಳಿಗೆ ಸುಲಭ ಚಿಕಿತ್ಸೆಗಳು ಅದರಲ್ಲ ಬರೆಯಲ್ಪಟ್ಟಿವೆ. ಆ ಬೀದಿಯಲ್ಲಿ ಯಾರಿಗಾದರೂ ಅಸುಖವಾದರೆ. ಅವಳ ಬಳಿಗೆ ಹೋಗಿ ಹೇಳಿದ ಕೂಡಲೆ ಪುಸ್ತಕ ನೋಡಿ ಔಷಧ ಹೇಳುವಳು. ಅದರಂತೆ ನಾರುಬೇರುಗಳನ್ನು ತಂದು ಔಷಧಮಾಡಿದರೆ ರೋಗವು ವಾಸಿ. ಆ ಬೀದಿಯಲ್ಲಿ ಇತರ ಬೀದಿಗಳಲ್ಲಿದ್ದಂತೆ ಸಾಂಕ್ರಾಮಿಕ ರೋಗಗಳ ಹಾವಳಿ ಕಡಿಮೆ. ಆಸ್ಪತ್ರೆಯ ಗೊಂದಲವೇ ಇಲ್ಲ.

ನೂತನ ಲಿಪಿಪ್ರಚಾರ

ತುರ್ಕಿದೇಶದಲ್ಲಿ ರೋಮನ್ ಲಿಪಿಗಳ ಪ್ರಚಾರಕ್ಕಾಗಿ ೪.೦೦.೦೦೦ ಪವನುಗಳು ಈ ವರ್ಷದ ಸರಕಾರಿ ಆಯದಿಂದ ಪ್ರತ್ಯೇಕಿಸಲ್ಪಟ್ಟಿವೆ. ವರ್ತಮಾನ ಪತ್ರಗಳಿಗಾಗಿ ತರಿಸುವ ರೋಮನ್ ಲಿಪಿಗಳ ಮೇಲೆ ಮೊದಲಿದ್ದ ಸುಂಕವನ್ನು ತೆಗೆದುಹಾಕಿದ ನಷ್ಟದ ಭರ್ತಿಗಾಗಿ ೨೦.೦೦೦ ಪವನುಗಳೂ ತೆಗೆದಿಡಲ್ಪಟ್ಟಿವೆ. ಈಡೀ ದೇಶದಲ್ಲಿರುವ ಸರಕಾರಿ ಉದ್ಯೋಗಸ್ಥರೆಲ್ಲ ಉಪಾಧ್ಯಾಯರು. ಕೆಮಲ್ ಪಾಶನು ಮುಖ್ಯೋಪಾಧ್ಯಾಯ. ಇಸ್ಮದ್ ಪಾಶನು ಸಹಾಯ ಕೋಪಾಧ್ಯಾಯ. ಹೀಗೆ ನಾಲ್ಕಾರು ತಿಂಗಳು ಮಾಡಿದರೆ ಆ ಲಿಪಿ ಅಂಗ್ಯೆಸೆಲ್ಲಿ ಕಾಯಂಯಾಗುವುದೆಂದು ಊಹೆ.

ದಿವಾನರು ಹಾಗೂ ಕನ್ನಡ ಪತ್ರಿಕೆಗಳು

ಈ ತಿಂಗಳಿನ 24 ನೇ ತಾರೀಖಿನ ಚಿತ್ರಗುಪ್ತದಲ್ಲಿ ಈ [illegible]:—

ವೈದ್ಯ ಮತ್ತು ಆರೋಗ್ಯದ ಇಲಾಖೆಗಳಿಗಾಗಿ ಸುಮಾರು ಹದಿನೈದು ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿವೆಯೆಂದೂ, ಇದರ ಪೂರ್ಣ ಫಲವನ್ನು ಜನರು ಹೊಂದುವಂತೆ ಮಾಡುವ ಭಾರವು ಕನ್ನಡ ಪತ್ರಿಕೆಗಳಿಗೆ ಸೇರಬೇಕೆಂದೂ ದಿವಾನರು [illegible] ದು ನಿಜವಾದುದೆ. ಆದರೆ ಪತ್ರಿಕೆಗಳು ಯಾವ ಆತಂಕವೂ ಇಲ್ಲದೇ ಅಭಿವೃದ್ಧಿಗೆ ಬರುವಂತೆ ಸರ್ಕಾರದವರು ಏರ್ಪಡಿಸಿರುವ ಸೌಕರ್ಯಗಳಾವುವು? ಜನರಿಗೆ ಆರೋಗ್ಯದ ವಿಚಾರವನ್ನು ಬೋಧಿಸುವ ಕಾರ್ಯವನ್ನು ಮುಖ್ಯವಾಗಿ ಕನ್ನಡ ಪತ್ರಿಕೆಗಳು ಕೈಗೊಳ್ಳಬೇಕೆಂದು ಹೇಳಿರುವುದು, ಕನ್ನಡ ಪತ್ರಿಕೆಗಳ ಪ್ರಾಮುಖ್ಯತೆಯನ್ನು ದಿವಾನರವರು ಮನಗಂಡಿದ್ದಾರೆಂಬುದನ್ನು ವ್ಯಕ್ತಪಡಿಸುತ್ತದೆ. ಆದರೆ, ಸರ್ಕಾರದವರು ಈಗ ಹೊರಗಿನ ಇಂಗ್ಲಿಷ್ ಪತ್ರಿಕೆಗಳಿಗೆ ಹೆಚ್ಚಾದ ಪುರಸ್ಕಾರ, ಸೌಕರ್ಯ, ರಿಯಾಯಿತಿಗಳನ್ನು ತೋರಿಸುತ್ತಿರುವರೋ ನಮ್ಮ ಜನಸಾಮಾನ್ಯರಿಗೆ ಅನುಕೂಲವಾದ ಕನ್ನಡ ಪತ್ರಿಕೆಗಳಿಗೆ ತೋರಿಸುತ್ತಿರುವರೊ? ಈ ಪ್ರಶ್ನೆಗಳನ್ನು ಸರ್ಕಾರದವರು ತಾವೇ ಹಾಕಿಕೊಂಡು ಉತ್ತರಗಳನ್ನೂ ತಾವೇ ತಿಳಿದುಕೊಳ್ಳಲಿ.

ಜರ್ಮನಿಯಲ್ಲಿ ಹೊಸ ಕಾನೂನು

ಜರ್ಮನಿಯಲ್ಲಿ ವಾಸಿಸುತ್ತಿರುವ ಯಾವನೇ [illegible] ಪರದೇಶಿಯನೂ ಮಹಾಯುದ್ಧವನ್ನು ಜರ್ಮನಿಯು [illegible] ತಂದೆಂದು [illegible] ಹೇಳಿದರೆ, ಬರೆದರೆ, ಅವನಿಗೆ ಮೂರು ತಿಂಗಳ ಶಿಕ್ಷೆ ವಿಧಿಸಲ್ಪಡುವುದು; ಮತ್ತು ದೇಶದಿಂದ ಹೊರಗೆ ಹಾಕಲ್ಪಡುವನು. ಜರ್ಮನನೇ ಈ ತಪ್ಪನ್ನು ಮಾಡಿದರೆ. ಶಿಕ್ಷೆಯ ಅನಂತರ ಅವನ ನಾಗರಿಕ ಹಕ್ಕುಗಳು ನಾಶವಾಗುವವು: [illegible] ಹೊಸ ಕಾನೂನು ಮಾಡಬೇಕೆಂದು ಅಲ್ಲಿಯ ರಾಷ್ಟ್ರೀಯ ಪಕ್ಷದವರು ಯತ್ನಿಸುತ್ತಿದ್ದಾರೆ.

ಶುನಕ ವೈಭವ

ಲಂಡನ್ನಿನ ಸ್ಫಟಿಕ ಗೃಹದಲ್ಲಿ ಆಟದ ನಾಯಿಗಳು ಹಲವಿವೆ. ಅವುಗಳಿಗೆ ಮನುಷ್ಯ ಸಾಮಾನ್ಯರಿಗೆ ಅಲಭ್ಯವಾದ ಆದರೋಪಚಾರಗಳು ನಡೆಯುತ್ತವೆ. ಪಟ್ಟೆಯ ಹಾಸಿಗೆ ಮಲಗಲಿಕ್ಕೆ, ಆ ಹಾಸಿಗೆಯನ್ನಿಡಲಿಕ್ಕೆ ವಿವಿಧಾಲಂಕಾರಗಳಿಂದ ಶೋಭಿಸುವ [illegible]. [illegible] ವನ್ನು ಬಾಯಿಗೆ ತುರುಕಲು ಬೆಳ್ಳಿಯ ಸಾಮಾನುಗಳು. ಸೇವೆಗೆ ಸುಂದರಿಯರಾದ ಹುಡುಗಿಯರು. ಇವುಗಳಲ್ಲಿ [illegible] ಒಂದು ನಾಯಿಗೆ [illegible] ಮೇಲೆ ಕ್ರಯ [illegible].

ಪ್ರಾಣಿಪಾಲನ ಕ್ಷೇತ್ರ

ಇಂಗ್ಲೆಂಡಿನಲ್ಲಿ ಎಲ್ಲಾ ತರದ ಬ್ರಿಟಿಷ್ ಕಾಡುಮೃಗ—ಪಕ್ಷಿಗಳನ್ನು ರಕ್ಷಿಸುವುದಕ್ಕಾಗಿ ಅವುಗಳ [illegible] ೪೦೦ ಎಕ್ರೆಯ ಒಂದು ಕ್ಷೇತ್ರವು ತಯಾರಾಗಿದೆ. ೨.೦೦.೦೦೦ ಪವನು ಇದರ ಖರ್ಚು. ನಮ್ಮ ದೇಶದ [illegible] ತ್ತಿವೆ ಮುಖ್ಯವಾಗಿ. ಹಿಂಡುಗಳು ದಿನದಿನಕ್ಕೆ [illegible] ಯಾಗುತ್ತಿವೆ. ಇವುಗಳ ಗತಿ ಏನು? ಕಾಡ ಸುಖ [illegible] ಕೋಡ ನೀರು ಬದುಕಿದಷ್ಟು ದಿನ ಬದುಕ [illegible]

TAI NADU
28--12--1928

ಸಂಪೂರ್ಣ ಸ್ವಾತಂತ್ರ್ಯ ಮತ್ತು ದೇಶೀಯ ಸಂಸ್ಥಾನಗಳು.

[illegible] ಶ್ರೀ ನಿವಾಸಯ್ಯಂಗಾರ್ಯರೂ, [illegible] ನೆಹರೂರವರೂ, [illegible] ಸಂಪೂರ್ಣ ಸ್ವಾತಂತ್ರ್ಯ [illegible] ಸಂಪೂರ್ಣ ಸ್ವಾತಂತ್ರ್ಯವೆಂದರೆ [illegible]? [illegible] ಬ್ರಿಟಿಷರ [illegible] ಸ್ವತಂತ್ರರಾಗಿರುವ [illegible] ಆಸ್ಟ್ರೇಲಿಯಾ, ಕೆನಡಾ, ದಕ್ಷಿಣ [illegible] ಬ್ರಿಟಿಷ್ [illegible] ಸ್ವಾತಂತ್ರ್ಯ [illegible] ಸಂಪೂರ್ಣ ಸ್ವಾತಂತ್ರ್ಯ [illegible] ಜಪಾನ್, ಫ್ರಾನ್ಸ್, ಆಫ್ಘಾನಿಸ್ಥಾನ್, [illegible] ಸ್ವತಂತ್ರವಾಗಿವೆ [illegible] ಸಂಪೂರ್ಣ ಸ್ವಾತಂತ್ರ್ಯ [illegible] ಸಂಪೂರ್ಣ ಸ್ವಾತಂತ್ರ್ಯವು ಬೇಕೆನ್ನುವರು.

[illegible] ಸಂಪೂರ್ಣ ಸ್ವಾತಂತ್ರ್ಯ [illegible] ದೇಶೀಯ ಸಂಸ್ಥಾನಗಳ [illegible] ಬ್ರಿಟಿಷ್ [illegible] ದೇಶೀಯ ಸಂಸ್ಥಾನಗಳು [illegible] ಬ್ರಿಟಿಷರ [illegible] ಸಂಪೂರ್ಣ ಸ್ವಾತಂತ್ರ್ಯ [illegible] ದೇಶೀಯ ಸಂಸ್ಥಾನಗಳು [illegible] ಬ್ರಿಟಿಷರ [illegible] ಸಂಪೂರ್ಣ ಸ್ವಾತಂತ್ರ್ಯ [illegible] ಬ್ರಿಟಿಷ್ [illegible]

ಉ ಸಿದ್ದರಾಗುವರು. ರಾಜರುಗಳು ಮಾತ್ರ ತಮ್ಮ ದೇಶ ಒಂದು ದಾರಿಯೆಂದು ಇಂಗ್ಲೆಂಡಿಗೆ ಓಡಿ, ಲಾರ್ಡುಗಳಿಗೆ ದುಡ್ಡು ಕೆತ್ತು, ಪರಕೀಯರ ಬೊಜ್ಜನ್ನು ಬೆಳೆಸಿ ಭಾರತ ಮಾತೆಗೆ ದ್ರೋಹವನ್ನು ಎಸಗುವುದು ಉಚಿತವಲ್ಲ. ರಾಜರುಗಳು ಪ್ರಜೆಗಳ ದಾರಿಗೆ ಬರದೇ ಹೋದರೆ, ಮುಂದಿನ ಅನರ್ಥಗಳಿಗೆಲ್ಲಾ ಅವರೇ ಜವಾಬ್ದಾರರಾಗುವರು.

ವಿವಿಧ ವಿಷಯಗಳು.

ಸ್ಮಾರಕ ಸಭೆ

ಮಧುಗಿರಿ ತಾ॥ ಕಾಂಗ್ರೆಸ್ ಕಮಿಟಿಯವರು ಈ ಮಾಹೆ 13 ನೇ ತಾ॥ ಗುರುವಾರ ಲೋ॥ ತಿಲಕರ ಹಾಲಿನಲ್ಲಿ ದಿವಂಗತರಾದ ಲಾಲಾ ಲಜಪತರಾಯರ ಸ್ಮಾರಕ ಸಭೆಯನ್ನು ನಡೆಯಿಸಿದರು. ಆ ದಿನ ವರ್ತಕರು ವ್ಯಾಪಾರವನ್ನು ನಿಲ್ಲಿಸಿದ್ದರು. ವಿದ್ಯಾರ್ಥಿಗಳು ಲಾಯರುಗಳೇ ಮೊದಲಾದ ಪುರನಿವಾಸಿಗಳೆಲ್ಲರೂ ಆ ದಿನ ಸಂಪೂರ್ಣ ಹರತಾಳವನ್ನು ಆಚರಿಸಿದರು. ಆ ಸಾಯಂಕಾಲದ ಪ್ರಚಂಡ ಸಭೆಗೆ ಕಾಂಗ್ರೆಸ್ ಕ॥ ಪ್ರೆ ಶ್ರೀ॥ ಶಾಮ ಶಾಸ್ತ್ರಿಗಳು ಅಗ್ರಾಸನವನ್ನು ವಹಿಸಿದ್ದರು. ಲಾಲಾಜಿಯವರು ಮಾಡಿರುವ ರಾಷ್ಟ್ರ ಸೇವೆಯ ವಿಷಯವಾಗಿ ಶ್ರೀಯುತರುಗಳಾದ ಯಂ. ಟಿ. ವೆಂಕಟಸುಬ್ಬಯ್ಯನವರೂ ನಾ॥ ಎಸ್. ನಂಜಯ್ಯ ಶೆಟ್ಟರೂ ಇವರೇ ಮೊದಲಾದವರು ದಿವ್ಯವಾದ ಭಾಷಣಗಳನ್ನು ಮಾಡಿದರು. ನಂತರ ಸಭೆಯು ಬರಕಾಸ್ತಾಯಿತು.

ರಾಮನಾಥಪುರದ ಜಾತ್ರೆ.

ಹಾಸನ ಡಿಸ್ಟ್ರಿಕ್ಟಿನಲ್ಲಿ ರಾಮನಾಥಪುರವು ಪುರಾಣ ಪ್ರಸಿದ್ಧ ಯಾತ್ರಾಸ್ಥಳವಾಗಿದೆ ಮಾರ್ಗಶಿರ ಷಷ್ಠಿ ದಿವಸ ಸುಬ್ರಹ್ಮಣ್ಯ ದೇವರ ರಥೋತ್ಸವದ ದೊಡ್ಡ ಜಾತ್ರೆಯು ನಹ ನಡೆಯಿತು. ಇಲ್ಲಿಗೆ 1 ನದಿಯ ದಡದಲ್ಲಿನ ಪಾಕೀಜಿಗೆ ಸ್ಯಾನಿಟರಿ ಏರ್ಪಾಡೂ 2 ಈಗಿರುವುದಕ್ಕಿಂತಲೂ ಹೆಚ್ಚಿನ ಪೋಲೀಸ್ ಸಹಾಯವೂ 3 ಮೋಟಾರು ಬಸ್ಸುಗಳು ನಿಲ್ಲಲು ತಕ್ಕ ಸ್ಥಳಸವತಿಯನ್ನೂ ಸರ್ಕಾರದವರು ಕಲ್ಪಿಸಿ ಕೊಡಬೇಕು. ಎಲ್ಲಕ್ಕಿಂತಲೂ ಹೊಟ್ಟೆ ಹೊರಲು ಜಾತ್ರೆಗಾಗಿ ಬಂತಿಕ್ಕ ರಾಸುಗಳ ನದಿಯನ್ನು ದಾಟುವುದಕ್ಕೆ ವಿಪರೀತವಾಗಿ ತೊಂದರೆ ಪಡುತ್ತಿರುವುದರಿಂದ ಈಸಲದ ಬೇಸಿಗೆಯು ಕ್ಲೋ ಡಿ। ಬೋ॥ ನ್ಯ। ರವರು ಸೇತುವೆಯ ಕಾರ್ಯಾರಂಭ ಮಾಡಿಸಬೇಕೆಂದು ಬಹು ಜಾತ್ರೆಗಾರರು ಬಯಸುತ್ತಾರೆ.

ರಾಷ್ಟ್ರವಿದ್ಯಾ ಪರಿಷತ್ತು

ನಾಗಪುರದಲ್ಲಿ ರಾಷ್ಟ್ರೀಯ ವಿದ್ಯಾಭ್ಯಾಸ ಪರಿಷತ್ತು ಈ ತಿಂಗಳು 22 ನೇ ತಾ ನಡೆಯಿತು. ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರು ಅಗ್ರಾಸನವನ್ನು ವಹಿಸಿದ್ದರು. ಆಗ ಅವರು ಈಗಿನ ವಿದ್ಯಾಭ್ಯಾಸದ ಕ್ರಮವು ಜನಾಂಗದ ಸ್ವಾತಂತ್ರ್ಯಕ್ಕೆ ಏನೂ ಪ್ರಯೋಜನವಾಗದೆ ಗುಲಾಮಗಿರಿಯು ಹೆಚ್ಚಲು ಅವಕಾಶವಾಗುತ್ತಿದೆ. ಹಿಂದೂ ದೇಶದ ಈಗಿನ ಅತ್ಯಂತ್ಯಗತ್ಯವಾದ ಸ್ವಾತಂತ್ರ್ಯಾಪೇಕ್ಷೆಗೆ ಒಂದು ದೊಡ್ಡ ಕುಂದಕವಾಗಿದೆ. ಆದುದರಿಂದ ಸಕಲರೂ ರಾಷ್ಟ್ರೀಯ ವಿದ್ಯಾಭ್ಯಾಸದ ಕಡೆಗೆ ಗಮನಿಸಬೇಕು ಎಂಬದಾಗಿ ಭಾಷಣ ಮಾಡಿದರು.

ಶ್ರದ್ಧಾನಂದರ ಜಯಂತಿ.

ಈ ತಿಂಗಳು 23 ನೇ ತಾರೀಖಿನ ದಿನ ಡೆಲ್ಲಿಯಲ್ಲಿ ಶ್ರದ್ಧಾನಂದರ ಜಯಂತಿಯು ನಡೆಯಿತು. ರಾಜಬೀದಿಗಳಲ್ಲೆಲ್ಲಾ ಉತ್ಸವವನ್ನೂ ರಾಣಿಯವರ ತೋಟದಲ್ಲಿ ಮಹಾಸಭೆಯನ್ನೂ ಸಹ ನಡಿಸಿದರು. ಅಲ್ಲಿ ದಿವಂಗತರು ಅಸ್ಪೃಶ್ಯತೆ ಮತ್ತು ಸಮಾಜ ಸುಧಾರಣೆಗಳಿಗಾಗಿ ಮಾಡುತ್ತಿದ್ದ ಕೆಲಸಗಳ ವಿಷಯದಲ್ಲಿ ಅನೇಕರು ಉಪನ್ಯಾಸಗಳನ್ನು ಮಾಡಿ ತಮ್ಮ ಅನುತಾಪವನ್ನು ಸೂಚಿಸಿದರು.

ಅಫ್ಘಾನಿಸ್ಥಾನದ ಸುದ್ದಿ

ಕಾಬೂಲಿನ ಪೂರ್ವಭಾಗಗಳಲ್ಲೆಲ್ಲಾ ಸರ್ಕಾರದವರು ಈಗ ಬಂದೋಬಸ್ತಾಗಿರುವಂಥ ಸೈನ್ಯವನ್ನಿಟ್ಟಿದ್ದಾರೆ. ದಂಗೆ ಕೋರರೆಲ್ಲರೂ ಕಾಬೂಲಿಂದ 35 ಮೈಲಿಗಳಾಚೆಗೆ ಓಡಿಸಲ್ಪಟ್ಟರುತ್ತಾರೆ. ಆದುದರಿಂದ ಈಗ ನೂ ಗಲಭೆಗಳಿಲ್ಲದೆ ಪೂರ್ವಸ್ಥಿತಿಗೆ ಬಂದಿರುತ್ತೆ. ಕಾಬೂಲಿಗೂ ಬ್ರಿಟಿಷ್ ಸಂಸ್ಥೆಗೂ ಇದ್ದಂಥ ವಿಮಾನ ಸಂಚಾರವು ಪುನಃ ಆರಂಭವಾಗಿದೆ.

ತಾತನ ಕೊಲೆ

ಲಂಡನ್‌ನಲ್ಲಿ ವಿಲಿಯಂ ಜಾನ್ ಹಾಲಾಯಿವರ್ ಎಂಬುವನು 73 ವರುಷದ ತನ್ನ ತಾತನನ್ನು ಚೆನ್ನಾಕಾದಿದ್ದ ಒಂದು ಜೊತೆ ಕಬ್ಬಿಣದ ಬತಗೋಗಳಿಂದ ವೃದ್ಧನ ತಲೆಯ ಮೇಲೆ ಹೊಡೆದು ಕೊಂದನು. ಕಸು ಮೊಮ್ಮಗನ ದಂದಂಗಳತನವನ್ನು ಆಗಾಗ್ಗೆ ಜಡಿಸುತ್ತಿದ್ದುದೇ ಈ ಖೂನಿಗೆ ಮುಖ್ಯಕಾರಣವೆಂದು ಗೊತ್ತಾಗಿದೆ.

ಮದುವೆಯಿಂದ ದುರ್ಮರಣ

ಕಂಥ ಕೋಣದಲ್ಲಿ ವಿದ್ಯಾಪತಿಯ ಆತಿ ರೂಪವತಿಯೂ ಆಗಿದ್ದ ಸೀತಾ ಎಂಬ 15 ವರುಷದ ಹುಡುಗಿಯನ್ನು ಅವಳ ಇಷ್ಟಕ್ಕೆ ವಿರೋಧವಾಗಿ ಯಾರಿಗೋ ಒಬ್ಬನಿಗೆ ಮದುವೆ ಮಾಡಿದರು. ಇದರ ಫಲವಾಗಿ ಈ ಮಾಹೆ 21 ನೇ ತಾ ಪ್ರಾತಃಕಾಲ ಅವಳು ಭಾವಿಯಲ್ಲಿ ಬಿದ್ದು ದುರ್ಮರಣ ಮಾಡಿಕೊಂಡಳು.

ಲಾಹೋರ್ ವಿಶ್ವವಿದ್ಯಾಲಯ

ಈ ತಿಂಗಳು 22 ನೇ ತಾ॥ ಲಾಹೋರು ವಿಶ್ವವಿದ್ಯಾಲಯದ ಕಾನ್‌ವೊಕೇಷನ್ ಜರುಗಿತು ಒಟ್ಟು [illegible] ಡು ನಾಪಿರದಿನೂರು ಜನರು (ಮಹಿಳೆಯರು 9 ಜನ) ಡಿಗ್ರಿಗಳನ್ನು ಪಡೆದರು.

ಕಾಂದಹಾರ್

ಆಫಘನ ದೊರೆಗಳಾದ ಅಮೀನುಲ್ಲಾರವರು [illegible]ಟ್ಟಾದಿಂದ ಈಗ್ಗೆ 4-5 ದಿನಗಳಲ್ಲಿ ಕಾಂದಹಾರಿಗೆ ಪ್ರವಾಸದಲ್ಲಿ ಬಂದಿರುವರೆಂದು ಪ್ರಬಲವಾದ ವರ್ತಮಾನವಿದೆ.

ಕಾಂಗ್ರೆಸಿಗೆ ಹೊಸ ರೆಕ್ಕೆ

ಬಂಗಾಳದಲ್ಲಿ ಒಂದು ರಾಜಕೀಯ ಪಕ್ಷವು ಸ್ಥಾಪಿಸಲ್ಪಡುವುದು. ಎಲ್ಲ ಪಕ್ಷಗಳನ್ನು ಏಕೀಕರಿಸಿ ಕಾಂಗ್ರೆಸು ವಿಧಿಸುವ ಕಾರ್ಯಕ್ರಮವನ್ನು ಆಚರಣೆಗೆ ತರುವುದೇ ಇದರ ಧ್ಯೇಯ. ಇದರ ಸೂತ್ರಧಾರಿಗಳು ದ ಶ್ರೀ. ಜೆ. [illegible] ರು (ರೆವಿನ್ಯೂ ಬೋರ್ಡಿನ ನಿವೃತ್ತ ಮೆಂಬರರು) ಇದುದೊಂದು ಸಭೆಯಲ್ಲಿ ಮು ರ್ಷಿದಾಬಾದಿನ ನವಾಬರು ಹೀಗೆಂದರು ದೇಶದ ಉದ್ಧಾರಕ್ಕೆ ಹಿಂದೂ ಮುಸ್ಲಿಮ್ ಐಕ್ಯದ ಹೊರತು ನಿರ್ವಾಹವಿಲ್ಲ, ಆದರೆ ಅದನ್ನು ಯೋಚಿಸುತ್ತು ಕು ಕೊಳ್ಳದೆ, ವಿಧಾಯಕ ಕಾರ್ಯ ಕ್ರಮವನ್ನು ಕೊಂಡರೆ ಪರಸ್ಪರ ಕಲಹವು ತಾನಾಗಿ ಶಾಂತವಾಗುವುದು.

ತಾಯಿನಾಡು.

ಪ್ರತಿ ದಿನ ಸಾಯಂಕಾಲ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ: ಪಿ. ಆರ್. ರಾಮಯ್ಯ, ವಂದೇಮಾತರಂ ರಾಮ, ಮೈಸೂರು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ: ವರ್ಷಕ್ಕೆ ... / ಪತ್ರಿಕೆಗೆ ...

ಸಂಪುಟ ... | ಸೋಮವಾರ ೨೪ ನೇ ಸೆಪ್ಟಂಬರ್, ೧೯೨೮ | ಸಂಚಿಕೆ ...

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಪಾರ್ಕೋನಿಯಂ ವ್ಯಾಪಾರಿಗಳು, ಮೈಸೂರು.

[illegible] ಸ್ವರಗ 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ [illegible] ಕ್ಯಾಲೆಂಡರ [illegible] ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ [illegible] [illegible] ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗ[illegible] ಪೋಸ್ಟಲ್ ಪಾರ್ಸೆಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

[illegible] ಈ **ರತರ್ಕ ಮಿಶ್ರಿ ಹಲ್ವಾ** ವನ್ನು ಸೇವಿಸಿ

[illegible] ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, [illegible] ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, [illegible] ದ್ವಾರ [illegible] ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶ್ಶಕ್[illegible] [illegible], ಶರೀರವು ನಶಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, [illegible] [illegible] ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತರ್ಕ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು.



"ಭಿಷಗ್ರತ್ನ"

ವೈದ್ಯದ ವೆಂಕಟಾಚಲ ಪಂಡಿತರು
[illegible] ಸಿದ್ಧೌಷಧಿಗಳು

[illegible] ರೋಗವು ಬಾರದಂತೆ [illegible] ಉಪಾಯವು ಲೋಕಾಮು [illegible] ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧—೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು [illegible] ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಶೀತವಾತ ಜ್ವರ, [illegible] ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ [illegible] ಪ್ಲೇಗು ಜ್ವರ ಇನ್‌ಫ್ಲೂಯಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲು [illegible], ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ [illegible] ಹಸಿವಿಲ್ಲದಿರುವಿಕೆ, ಬಲಹೀನತೆ [illegible] ಅನೇಕ ರೋಗಗಳನ್ನು ಗುಣಪಡಿಸುತ್ತದೆ.

[illegible] ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ [illegible] ಗೋಪಾಸ್ತ್ರೀಯರಿಗೂ ಆರೋ[illegible]

[illegible] ಮಾತ್ರೆಗಳುಳ್ಳ ಸೀಸೆ 1 ಕ್ಕೆ 0—4—0 ಮೇರೆ [illegible] ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ [illegible] 6 ಕ್ಕೆ 1—3—[illegible] [illegible] 12 ಕ್ಕೆ 2—13—0 25 ಕ್ಕೆ [illegible]

ಭಿಷಗ್ರತ್ನ
ವೈದ್ಯದ ವೆಂಕಟಾಚಲ ಪಂಡಿತರು
[illegible] ವೈದ್ಯಶಾಲಾ
ಹೆಡ್ ಆಫೀಸು, ಮೈಸೂರು

[illegible] ಬೆಂಗಳೂರು ಸಿಟಿ



ಭಂಗಾರದ ಕೈಬಳೆಗಳೂ, ಚೈನು ವಗೈರೆ ಆಭರಣಗಳೂ ಚೊಕ್ಕ [illegible] ಸಾಮಾನುಗಳೂ ನಮ್ಮಲ್ಲಿ [illegible] ಸಿಗುತ್ತವೆ.

ಮಜೂರಿ ಇತರ ಕಡೆಗಳ[illegible] ಸುಲಭ. ಕೆಲಸ ಇತರ ಕಡೆಗಳ[illegible] ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು [illegible]

ಯಸ್ ನರಸಿಂಹ ಅಯ್ಯರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆ[illegible]
ನಗರ್ತಪೇಟೆ, ಬೆಂಗಳೂರು.

TAINADU.

Daily Edition.

The Leading Nationalist
Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ಬುಧವಾರವೂ ಶನಿವಾರವೂ (Bi-Weekly) ರಾಜಧಾನಿಯಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್ ರಾಮಯ್ಯ, ವಂದೇಮಾತರಂ ಆಫೀಸು, ಮೈಸೂರು.

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ { ವರ್ಷಕ್ಕೆ [illegible] / ಅರ್ಧವರ್ಷಕ್ಕೆ [illegible] } ಬಿಡಿ ಪತ್ರಿಕೆ 1ಕ್ಕೆ ೬ ಪೈ

ಸಂಪುಟ ೨] ಶನಿವಾರ ೧೫ ನೇ ಸೆಪ್ಟಂಬರ್, ೧೯೨೮ [ಸಂಚಿಕೆ ೨

ತಾಯಿನಾಡು
24 9 1928

[illegible]

[illegible] ಪತ್ರಿಕೆಯಾಗುವುದು. [illegible] ದೇಶಸೇವೆಯನ್ನು ಮಾಡಬೇಕೆಂಬ [illegible] ಸಾಕಾದ [illegible] ನಾವು [illegible] ಅಲ್ಪವಾದ [illegible] ಸಕ್ರಿಯ [illegible] ಜಗದೀಶ್ವರನ ಪ್ರತಿಷ್ಠೆ [illegible] ಅದೇ [illegible] ತಾಯಿನಾಡು ಪತ್ರಿಕೆಯನ್ನು ಸ್ವೀಕರಿಸುವನೆಂದು [illegible] ಪ್ರಜೆಗಳ [illegible] ತಾಯಿನಾಡು ಎರಡೇ ಪುಟಗಳಿಂದ ಕೂಡ [illegible] ಮಹಾ ಜನಗಳ [illegible] ಕೊಂಡುವುದು.

[illegible] ಕೊರತುವುದಿಲ್ಲ. [illegible] ಕೊಂಡುವುದು. [illegible] ಪುಸ್ತ [illegible] ತಾಯಿನಾಡಿಗೆ ತಕ್ಕ ಪ್ರೋತ್ಸಾಹವನ್ನೀಯ [illegible]

ದಿವಾನರವರ ಮೇಲೆ ವಿಶ್ವಾಸ

[illegible] ಬ್ರಾಹ್ಮಣ ಜನಾಂಗವನ್ನೇ ದೂಷಿಸಿ [illegible] ದಿವಾನರಮೇಲೆ ವಿಶ್ವಾಸವಿರುವವರು ಎಲ್ಲಾ [illegible] ಪಂಗಡದಲ್ಲಿಯೂ [illegible] ಅವರ ಮೇಲೆ ವಿಶ್ವಾಸವಿಲ್ಲವೆಂದು [illegible] ಈ ರೀತಿಯಾದ ಭೇದ ಭಾವ [illegible] ಕಷ್ಟವೇ ಹೊರತು ಸುಖವಿಲ್ಲ. ದಿವಾನರಿಗೆ [illegible] ಈ ರೀತಿಯಾದ ಭೇದದ ಬೀಜಗಳನ್ನು [illegible] ಮೇಲು.

[illegible]

[illegible] ಪಾರ್ವತಿದೇವಿಗೆ [illegible] ಎಂದೂ ಹೇಳಲಾಗುತ್ತದೆ [illegible] ಕೋಲಾರ ಜಿಲ್ಲೆಯಲ್ಲಿ ಆಗಸ್ಟ 1 ನೇ ತಾರೀ [illegible] ಪತ್ರಿಕೆಯು ತಿಳಿಸುತ್ತದೆ.

ಪಬ್ಲಿಕ್ ಪ್ರಾಸಿಕ್ಯೂಟರವರ ಸುಳ್ಳು.

[illegible] ಸ್ಪೆಷಲ್ ಕೋರ್ಟಿನಲ್ಲಿ ಮ॥ ರಾ॥ ಸುಬ್ರ [illegible] ನಡೆಯುತ್ತಿರುವಾಗ್ಗೆ, ಪಬ್ಲಿಕ್‌ಪ್ರಾಸಿಕ್ಯೂ [illegible] ರವರು ಮ॥ರಾ॥ ನೀಲಗಿರಿ ಸಂಜೀವಯ್ಯನವರಿಗೆ ಒಂದು ಸು [illegible] ಮಹಾತ್ಮಾ ಗಾಂಧಿಯವರಿಗೆ ಬೆಂಗಳೂ [illegible] ಸುಬ್ರ [illegible] ಎಂದು ಕೇಳಿದರು.

[illegible] ಟರವರು [illegible] ನೀವು ಹೇಳುವುದು [illegible] ಪರ ಊರಿನಿಂದ ಬೆಂಗಳೂರಿಗೆ ಬಂದಿದ್ದೆ. [illegible] ಹ್ಮಣ್ಯಂರವರನ್ನು ದಸ್ತಗಿರಿ ಮಾಡಿಲ್ಲ. [illegible] ಅವರನ್ನು ಬಲಾತ್ಕಾರವಾಗಿ ಸಭೆಯ ಕೊಂಗೆ ಕರೆದು [illegible] ಎಂದು ಹೇಳಿದರು. ಇದಕ್ಕಿಂತ ಬೇಕೆ ಬೇರೆ ಮಂಗಳಾರ [illegible]

ಕೊಲೆ

ಈ ತಿಂಗಳು 20 ನೇ ತಾರೀಖಿನ ದಿವಸ ಕ್ಲೋಸ್ [illegible] ಣಕ್ಕೆ ಬೈಸಿಕಲ್ ಸವಾರಿಮಾಡಿಕೊಂಡು ಹೋಗುತ್ತಿದ್ದ [illegible] ದ್ದ ಒಬ್ಬ ಹಿಂದೂ ಫಾರೆಸ್ಟ್ ರೇಂಜರನ್ನು ಯಾರೋ ಕೊ [illegible]

ಸಿಮ್ಲಾ ಪಟ್ಟಣಕ್ಕೆ ಶ್ರೀಮನ್ಮಹಾರಾಜರು

ಶ್ರೀಮನ್ಮಹಾರಾಜರವರು ಪೂನಾ ಮುಖಾಂತರವಾಗಿ ಸಿಮ್ಲಾಪಟ್ಟ [illegible] ಹೋಗುವುದಾಗಿಯೂ, ಬೆಂಗಳೂರು ಗಲಾಟೆಯ ವಿಷಯವಾಗಿ ವೈಸರಾಯರ [illegible] ಸಂಭಾಷಣೆಗಳನ್ನು ನಡೆಸುವುದಾಗಿಯೂ ತಿಳಿಯಬರುತ್ತದೆ.

ಇಬ್ಬರು ಹುಡುಗರು ಪತ್ತೆ ಇಲ್ಲ.

ಜುಲೈ 30ನೇ ತಾರೀಖಿನ ದಿವಸ ಗಲಾಟೆಯಾದಾಗಿನಿಂದ, ಸುಲ್ತಾನ [illegible] ಆ ಸ್ಕೂಲಿನಲ್ಲಿ ಓದುತ್ತಿದ್ದ 12 ವರ್ಷದ ಘುಸಿರಂಗ ಎಂಬ ಹುಡುಗನೂ 14 ವ [illegible] ಹನುಮಂತರಾವ್ ಎಂಬ ಹುಡುಗನು ಇನ್ನೂ ಪತ್ತೆಯಾಗಿಲ್ಲವೆಂದು ತಿಳಿದುಬರು [illegible]

ದಿವಾನರ ಮೇಲೆ ಸಂದೇಹ

ಮಿ॥ ಮಿರ್ಜಾರವರ ಕಾಲದಲ್ಲಿ ಕೆಲವು ಮುಸಲ್ಮಾನರು ಇಂತಹ [illegible] ಟವನ್ನು ಎಬ್ಬಿಸುವುದನ್ನು ಕಂಡು ಅವರ ವಿಷಯದಲ್ಲಿ ಜನಗಳಿಗೆ ಸಂದೇಹ [illegible] ಸ್ವಾಭಾವಿಕ. ದಿವಾನರು ಈ ಸಂಶಯಗಳನ್ನು ಹೋಗಲಾಡಿಸಿಕೊಳ್ಳುವುದು [illegible] ಗತ್ಯವೆಂದು ಕರ್ನಾಟಕ ಧುರೀಣ ಪತ್ರಿಕೆಯು ಸಲಹೆಯನ್ನು ಕೊಡುತ್ತದೆ.

ಸರ್ಕಾರದ ಅಧಿಕಪ್ರಸಂಗಿತನ

ಬೆಂಗಳೂರಿನ ಗಲಾಟೆಯ ವಿಷಯವನ್ನು ಮೈಸೂರು ಸರ್ಕಾರದವರು [illegible] ಡೇಲಿ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟಿಸಿರುವರಷ್ಟೆ, ಸತ್ಯಸಂಗತಿಯನ್ನು [illegible] ಸುಳ್ಳಿಗೆ ಕೈಕಾಲು ಕೂಡಿಸಿ ಒಂದೇ ಪಕ್ಷವನ್ನು ಎತ್ತಿ ಹಿಡಿದು ಶ್ರೀಮನ್ಮಹಾ [illegible] ರವರ ಸತ್ಯಮೇವೋದ್ಧರಾಮ್ಯಹಂ ಎಂಬ ಬಿರುದಿಗೆ ಕಲಂಕವನ್ನು [illegible] ಅಧಿಕಾರಿಗಳನ್ನು ಪದಚ್ಯುತರನ್ನಾಗಿ ಮಾಡಬೇಕೆಂದು ಕರ್ನಾ [illegible] ಪಾದ ಪತ್ರಿಕೆಗಳು ಹೇಳುತ್ತವೆ. ತಮ್ಮ ಎಲೆಯಲ್ಲಿ ಕತ್ತೆಯು [illegible] ಇತರರ ಎಲೆಯಲ್ಲಿ ನೊಣವು ಸತ್ತುಬಿದ್ದಿದೆಯೆಂಬ ಭಾವನೆಯಿ [illegible] ಸುಳ್ಳು ಸುದ್ದಿಗಳನ್ನು ಪ್ರಕಟ ಮಾಡುವರೆಂದು ದೂಷಾರೋ [illegible] ಈ ಸರ್ಕಾರದವರಿಗೆ ಅಧಿಕಪ್ರಸಂಗವಲ್ಲವೆ ?

ರಾಜಧಾನಿಯಲ್ಲಿ ಬ್ರಾಹ್ಮಣೇತ [illegible]

ಪಾನಗಲ್ಲ ರಾಜರು ಅಧ್ಯಕ್ಷ [illegible] ರಾಂಡಿಯವರು ಸ್ವಾಗತಾಧ್ಯ [illegible]

ಮುಂದಿನ ತಿಂಗಳು 24ರಲ್ಲಿ ಅಸೆಂಬ್ಲಿಯಲ್ಲಿ [illegible] ಮುಂಚೆ ರಾಜಧಾನಿಯಲ್ಲಿ ಸಂಸ್ಥಾನದ ಬ್ರಾಹ್ಮ [illegible] ಯುವುದೆಂದೂ, ಪಾನಗಲ್ಲ ರಾಜರು ಅಧ್ಯಕ್ಷರಾಗುವರೆಂ [illegible] ಗತಾಧ್ಯಕ್ಷರಾಗುವರೆಂದೂ ತಿಳಿದುಬಂದಿದೆ.

ದಾವಣಗೆರೆಯಲ್ಲಿ
ಹಿಂದೂ ಮಹಮ್ಮದೀಯ ಮಾರಾ [illegible]

ಗಣಪತಿ ಮತ್ತು ಮಹಾರಾಜರ ಪಟವನ್ನೊಳಗೊಂಡ [illegible] ಬೂದಿಯಾಯಿತು.

ಶುಕ್ರವಾರ ರಾತ್ರಿ ದಾವಣಗೆರೆಯಲ್ಲಿ ಶ್ರೀ ಗಣೇ [illegible] ಮಂಗಳವಾದ್ಯಗಳೊಂದಿಗೆ ಹೊರಟಿತು. ಮಸೀದಿಯ [illegible] ವಣಿಗೆಯ ಮೇಲೆ ಬಿದ್ದು, ದೊಣ್ಣೆ, ಚೋಡು, ಕಲ್ಲು [illegible] ಡೆದರು. ಸುಮಾರು ೪೦ ಮಂದಿ ಹಿಂದುಗಳಿಗೆ ಗಾಯ [illegible] ಹುಡುಗರು ಪತ್ತೆಯೇ ಇಲ್ಲ. ಪಲ್ಲಕ್ಕಿಯಲ್ಲಿ ಶ್ರೀ ಗಣೇ [illegible] ಮಹಾರಾಜರ ಚಿತ್ರಪಟವೂ ಇತ್ತು. ಮುಸಲ್ಮಾನರು [illegible] ಸುಟ್ಟು ಬೂದಿಮಾಡಿದರು. ಪೋಲಿಸ್ ರಕ್ಷಣೆಯು [illegible] ದಿ ರಸ್ತೆಗೆ ಎಡುರಾಗಿರಲಿಲ್ಲ. ಮುಸಲ್ಮಾನರು [illegible] ಹೇಳುತ್ತಾರೆ. ಪೋಲೀಸಿನವರು [illegible]

ಬೆಂಗಳೂರು ಸಮಾಚಾರಗಳು

(ಸ್ವಂತ ವಾರ್ತಾದಾರರಿಂದ)

ಮ॥ ಅಬ್ಬಾಸ್ [illegible]ರವರು ತಮ್ಮ ಮನೆಯಿಂದ ಎಲ್ಲಿಗೋ [illegible]ಗಳನ್ನು ಸಾಗಿಸುತ್ತಿರುವರೆಂದು ವೀರಕೇಸರಿಯು ತಿಳಿಸುತ್ತದೆ.

ಗುಂಡಿನ ಏಟಿಗಾಗಿ ಚಿಕಿತ್ಸೆಯನ್ನು ಹೊಂದುತ್ತಿರುವ ಚಂದ್ರರಾಜನು ಗುಣಮುಖನಾಗಿರುತ್ತಾನೆ. ಅವನ ತೂಕವು 10 ಪೌಂಡು ಜಾಸ್ತಿಯಾಗಿದೆ. ಶಸ್ತ್ರ ಚಿಕಿತ್ಸೆಯಾಗಿ ಗುಂಡನ್ನು ತೆಗೆದುಹಾಕುತ್ತಾರೆ.

ನಮ್ಮ ಸಂಸ್ಥಾನದ ಮಹಮ್ಮದೀಯರು ಮೈಸೂರಿನವ ಎಂಬ ಹೊಸ ಪತ್ರಿಕೆಯನ್ನು ದಂಡಿಸಿಂದ [illegible]ರವರೆಂದು ವದಂತಿ.

ಬೆಂಗಳೂರಿನಲ್ಲಿ [illegible] ಪೋಲೀಸ್ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕೆಂದು ಮಹಾಜನಗಳು ಪ್ರಾರ್ಥಿಸುತ್ತಿರುವರು.

ಸುಲ್ತಾನ್‌ಪೇಟೆ ಸ್ಕೂಲ್ ಗಣಪತಿಯನ್ನು ಪ್ರತಿಷ್ಠೆ ಮಾಡಕೂಡದೆಂದು ಮಹಮ್ಮದೀಯರು ವಿದ್ಯಾ ಇಲಾಖೆಯ ಡೈರೆಕ್ಟರವರಿಗೆ ಯಾವ ಕಾಗದವನ್ನೂ ಬರೆದಿಲ್ಲವೆಂದು ಡೈರೆಕ್ಟರವರೇ ಉತ್ತರ ಬರೆದಿರುವರು.

ಸುಲ್ತಾನ್‌ಪೇಟೆ ಸ್ಕೂಲಿನ ಗಣಪತಿಯ ಉತ್ಸವವು ಆ ಸ್ಕೂಲಿನ ಬಾಲಕರಿಂದಲೇ ಆಚರಿಸಲ್ಪಡುತ್ತದೆ. ಹೊರಗಿನವರು ಅದರಲ್ಲಿ ಪ್ರವೇಶಿಸುವುದಿಲ್ಲ. ಒಳ್ಳೇ ಪೋಲೀಸ್ ಸಿಬ್ಬಂದಿ [illegible] ಕೊಡಲ್ಪಡುವುದು.

ಮ॥ ಮಹಮ್ಮದೀಯರವರ ಕೋರ್ಟಿನಲ್ಲಿ ವಿಚಾರಣೆಯು ಈ ತಿಂಗಳು 20 ನೇ ತಾ॥ ನ ಒಳಗೆ ಪೂರೈಸುವುದಾಗಿಯೂ, ಗುಮಾನಿಯಿದ್ದವರ ಮೇಲೆಲ್ಲಾ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಚಾರ್ಜ್ ಷೀಟ್ ಹಾಕಲ್ಪಡುವುದಾಗಿಯೂ ತಿಳಿಯಬರುತ್ತದೆ.

ಕಳೆದ ಶನಿವಾರ ಮ॥ ವಾಜಪೇಯಂ ವೆಂಕಟೇಶಯ್ಯನವರ ಮನೆಯ ಹತ್ತಿರ ಕೆಲವು ಪುಂಡರು [illegible] ಮೊದಲಾದುವುಗಳನ್ನು ಹೊಡೆಯುತ್ತಿದ್ದುದರಿಂದ ಆತ್ಮಸಂರಕ್ಷಣೆಗಾಗಿ ಮ॥ ವೆಂಕಟೇಶಯ್ಯನವರು ಪೋಲೀಸಿನವರ ಸಹಾಯವನ್ನು ಕೇಳಿರುವುದಾಗಿ ಸಮಾಚಾರ.

ಮ॥ ಅಬ್ಬಾಸ್ [illegible]ರವರು ಮ॥ ಮಹಮ್ಮದೀಯರವರ [illegible] ಕೈಫಿಯತನ್ನು [illegible] ಮೂರ್ತಿಗಳನ್ನು ವಿಚಾರಣೆಮಾಡುತ್ತಿರುವ ಸ್ಪೆಷಲ್ [illegible]

ಈ ಎರಡು ಕುಟುಂಬಗಳ [illegible] ಮ॥ [illegible]ರಾಜಯ್ಯನವರು ಉತ್ತ[illegible] ವೈದ್ಯಶಾಲೆ [illegible] ಸಮಸ್ತ ಹೋಗಿರುವುದು.

ಬಾಲಸಂರಕ್ಷಣೆ — ಮಕ್ಕಳಿಗೆ ೧.೨ ವೇಳೆ ಸುಖವಾಗಿ [illegible] ತರ ಈ ಗಲಾಟೆಯೆಲ್ಲವೂ [illegible] ಸ್ವಂತ ಅಧ್ಯಕ್ಷರನ್ನು ಚು[illegible]

ಶ್ರೀಕರ ಕಸ್ತೂರಿ ಮಾತ್ರೆ: ಇದು ಮಿಥುವ [illegible]ರದವರೇ ಒಬ್ಬ ಪ್ರೆಸಿಡೆಂ[illegible] ಎಲ್ಲಾ ಪ್ರಾಂತಗಳಲ್ಲೂ ಎಲ್ಲಾ ದೇಶಗಳಲ್ಲೂ [illegible] ಜನಗಳ[illegible] ನೆಗಡಿ [illegible] ಕೆಮ್ಮು ಶೀತವಾಯು, ಪ್ಲೇಗು [illegible] ಮಕ್ಕಳುಗಳಲ್ಲೂ ಇರಬೇಕಾದದ್ದು ಅತ್ಯವಶ್ಯಕ.

[illegible] ರುವ ಮ॥ ಮುತ್ತ್ಯಾಲ [illegible] ಬಿಸಿಲುಕಾಲಕ್ಕೆ ಅನುಕೂಲವಾದ ತೈಲ [illegible] ತಾ॥ ನ ಬೆಳಿಗ್ಗೆ ಶಂಕ[illegible] ರು ಬಂದು ವಿದ್ಯಾರ್ಥಿ[illegible]

ಆಯುರ್ವೇದ ವಿದ್ವಾನ್ ಭಿಷಗ್ರತ್ನ [illegible] ಲೀಸಿನವರು ಬರಲು

[illegible] ಟಿಯು ಈ ತಿಂಗಳು

ಎಂ. ವಿಶ್ವೇಶ್ವರ

ಅದರಲ್ಲಿ ಸರಕಾ[illegible]

[illegible]

[illegible]ದೆಂದೂ, [illegible]

TO L [illegible]ಯಾಗುವವರಿಗೆ

[illegible]

ಈ ಅಪ್ಪಾಜಿ

[illegible]ದೆಂಟಂದ

[illegible]

[illegible]

[illegible] ಸ್ಟೇಷನ್ನಿನ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ [illegible]ರಾದ [illegible] ಮುಂದೆ ಜುಲೈ 30 ನೇ ತಾ॥ ನ ಬೆಂಗಳೂರು [illegible] ವಿಷಯವಾಗಿ ಈ ಕೆಳಗಿನ ರೀತಿಯಾದ ಹೇಳಿಕೆಯನ್ನು ಕೊಟ್ಟಿರುವರು. ಜುಲೈ 30 ನೇ ತಾ॥ ನ ಸಾಯಂಕಾಲದವರೆಗೆ ಎಲ್ಲಾ ಶಾಂತವಾಗಿತ್ತು. ಸುಲ್ತಾನ್‌ಪೇಟೆ ಸ್ಕೂಲಿನ ಗಣಪತಿಗೆ ಪೂಜೆಮಾಡ[illegible] ಮೇಲೆ ಕಲ್ಲುಗಳೂ ಮತ್ತು ಜೋಡುಗಳ ಮಳೆಯೂ ಬಿತ್ತೆಂದು [illegible] ಕೇಳಿಸಿತು. ಅಲ್ಲಿ ನೆರೆದಿದ್ದವರಿಗೆಲ್ಲಾ ಉದ್ರೇಕವಾಗಿ ಬಹಳ ಗಲಾಟೆಯಾಯಿತು. [illegible] ಪೋಲೀಸಿನವರಿಂದ [illegible] ಪೋಲೀಸ್ [illegible] ಸಹಾಯ ಬೇಕೆಂದು [illegible] ಕಾಲು ನಿಮಿಷದ ಆಗುತ್ತಿದ್ದಿತೆಂದು ನನಗೆ ತೋರಿತು. ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ಬರಮಾಡಿಕೊಳ್ಳುವುದಕ್ಕಾಗಿ [illegible] ಅಬ್ಬಾಸ್ ಖಾನರ ಮನೆಗೆ ನುಗ್ಗಿದೆನು. ಅಬ್ಬಾಸ್ ಖಾನರ ಮನೆಯ ಒಳಗೂ ಹೊರಗಿನ ಅಂಗಳದಲ್ಲೂ ಆಯುಧಗಳನ್ನು ಹಿಡಿದುಕೊಂಡಿದ್ದ ಮಹಮ್ಮದೀಯ ಯುವಕರು ತುಂಬಿದ್ದರು. ಅಬ್ಬಾಸ್ ಖಾನರು ಇದಾರೆಯೋ ಇಲ್ಲವೋ ಎಂಬುದನ್ನು ಪತ್ತೆ ಮಾಡುವುದಕ್ಕೆ ನನಗೆ ತುಸು ಸಮಯ ಹಿಡಿಯಿತು. ಅವರು ಮೇಲೆ ಇದ್ದಾರೆಂದು ತಿಳಿದು ಮೇಲಕ್ಕೆ ಹೋದೆನು. ಅಬ್ಬಾಸ್ ಖಾನರು ಕೆಳಗೆ ಬರುತ್ತಿದ್ದರು. ನಾನು ಬಂದಿರುವ ಉದ್ದೇಶವನ್ನು ತಿಳಿದು ಮೇಲಿನಿಂದಲೇ [illegible] ಮಾಡುವುದಕ್ಕೆ ಅವಕಾಶವನ್ನು ಕೊಟ್ಟರು. ಹೆಚ್ಚು ಸಿಬ್ಬಂದಿಯು ಬೇಕೆಂದು [illegible] ಮಾಡಿ ಹೊರಗೆ ಬಂದೆನು. ಹೊರಗೆ ಬಂದರೆ ಬಹಳ [illegible]ಗಳು [illegible]ಯುತ್ತಿದ್ದವು. ಸಾಯುಧರಾದ ಮಹಮ್ಮದೀಯರು ಅಬ್ಬಾಸ್ ಖಾನರ ಮನೆಯಿಂದ [illegible] ನುಗ್ಗಿ [illegible] ಮಹಮ್ಮದೀಯರು ಗಣೇಶ [illegible] ಅದನ್ನು ಉರುಳಿಸಿ ಜೋಡಿನಿಂದಲೂ [illegible]ಯಿಂದಲೂ ಹೊಡೆದರು. ಅಷ್ಟು ಹೊತ್ತಿಗೆ [illegible] ಕಲ್ಲುಗಳಿಂದ ನನ್ನ ತಲೆಗೆ [illegible]ದರು. ಇಷ್ಟು ಜನ ಮಹಮ್ಮದೀಯರ ಮೇಲೆ ನಾನು ಏನೂ ಮಾಡುವುದು ಸಾಧ್ಯವಿಲ್ಲವೆಂದು ತಿಳಿದು ಸಹಾಯಕ್ಕೋಸ್ಕರ ಹೊರಗೆ ಹೋದೆನು. ಸ್ಕೂಲಿನ ಎದುರು ಮನೆಯ ಮಹಡಿಯಿಂದ 5, 6, ಗುಂಡುಗಳನ್ನು ಹೊಡೆದಿದ್ದನ್ನು ನೋಡಿದೆನು. ಇದನ್ನು ನಾನು ಸ್ವಂತ ಕಣ್ಣಿನಿಂದ ನೋಡಿದೆನು ನಾನು ಹೊರಗೆ ಹೋಗುತ್ತಿದ್ದಾಗ್ಗೆ ಜೋಡಿನಿಂದ ಹೊಡೆಯಲ್ಪಟ್ಟವರು ಯಾರೋ ಕೂಗಿಕೊಂಡರು. ಕೂಗುಬರುವ ಕಡೆಗೆ ನುಗ್ಗಿದೆನು. ಮೊದಲಿನಿಂದ ಕಡೆಯ ವರೆಗೂ ನನಗೆ ಕಲ್ಲುಗಳಿಂದಲೂ ದೊಣ್ಣೆಗಳಿಂದಲೂ ಏಟುಗಳು ಬೀಳುತ್ತಲೇ ಇದ್ದುವು. ಆ ಕೂಗು ಬಂದ ಕಡೆಗೆ ಓಡಿದಾಗ ಒಬ್ಬ ಮಹಮ್ಮದೀಯನು ನನ್ನನ್ನು ದೊಣ್ಣೆಯಿಂದ ಬಲವಾಗಿ ಹೊಡೆದನು. ನಾನು ಕೆಳಗೆ ಜ್ಞಾನತಪ್ಪಿ ಬಿದ್ದೆನು. ಪೋಲೀಸಿನವರು ಯಾರೋ ಬಂದು ನನ್ನನ್ನು ಸಂರಕ್ಷಣೆ ಮಾಡಿದರು. (ಈ ಕೇಶವಾದ್ರಿಯವರು ವೃತಪಟ್ಟರೆಂದ ಜುಲೈ 30, 31 ನೇ [illegible] ದಿವಸಗಳಲ್ಲಿ [illegible] ಗಲಾಟೆಯಾಗಿ [illegible] ಹೀಗೆ [illegible] ಜನಗಳು ತಿಳಿದು [illegible] ಬಂಗೆ [illegible]ತ್ತದೆ.)

ವೃತ್ತಾಂತ ಸಂಗ್ರಹ

ಸಬ್ ರಿಜಿಸ್ಟ್ರಾರುಗಳ ಸಂಬಳದ ಗ್ರೇಡು 100 ರೂ. ಇದ್ದದ್ದು ಆಗಸ್ಟ್ [illegible] ತಾರೀಖಿನಿಂದ 150 ರೂ. ಗೆ [illegible].

ಬೊಂಬಾಯಿನಲ್ಲಿ ಡಾ॥ ಬಾರ್ಟ್ಲೆ ಎಂಬ ಕನ್ನಡಕದ ಅಂಗಡಿಯವನ ಕನ್ನಡಕವನ್ನು ಕೊಂಡುಕೊಳ್ಳುವುದಕ್ಕಾಗಿ ಹೋದ ಹುಡುಗಿಯ ಮೇಲೆ ಅತ್ಯಾಚಾರವನ್ನು ನಡೆಸಿದ್ದಕ್ಕಾಗಿ ಕೋರ್ಟಿನಲ್ಲಿ ಮುಕದ್ದಮೆಯು ನಡೆದು ಅಪರಾಧಿಗೆ ಆರು ತಿಂಗಳು ಸಾದಾ ಸಜಾವೂ 1000 ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಮ॥ ವಿ. ಎಸ್. ಸಂಜೀವರಾಯರವರು ವಿಚಾರಣೆಯ ಕಮಿಟಿಯ ಅಧ್ಯಕ್ಷರಿಗೆ ಬರೆದಿರುವ ಒಂದು ಪತ್ರದಲ್ಲಿ ಚೀಫ್ ಸೆಕ್ರೆಟರಿಯವರು ಲಂಡನ್ನಿನ ಡೇಲೀ ಮೇಲಿಗೂ, ಮದರಾಸಿನ ನ್ಯೂ ಇಂಡಿಯಾ ಪತ್ರಿಕೆಗೂ ಕೊಟ್ಟಿರುವ ತಂತೀ ವರ್ತಮಾನಗಳ ಬಗ್ಗೆ ಸಾಕ್ಷಿಗಾಗಿ [illegible] ಯ ಅಧ್ಯಕ್ಷರಿಗೆ ಸಮನ್ಸನ್ನು ಕೊಡಬೇಕೆಂದೂ, ಚೀಫ್ ಸೆಕ್ರೆಟರಿಯವರನ್ನೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ [illegible] ದಿವಾನರವರನ್ನೂ ಸಾಕ್ಷಿಗಾಗಿ ಕರೆಯಬೇಕೆಂದೂ ತಿಳಿಸಿರುವರು.

ಸೂಚನೆ.

[illegible] ಮರುದಿನ ಪತ್ರಿಕೆಯು ಹೊರಡುವುದಿಲ್ಲ.

ತಾಯಿನಾಡು

15-9-1928

ಮ|| ಅಬ್ಬಾಸ್‌ಖಾನರ ರಾಜೀನಾಮೆ.

ಮ|| ಅಬ್ಬಾಸ್‌ಖಾನರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ [illegible] ರಾಜೀನಾಮೆಯನ್ನು ಕೊಟ್ಟ ವಿಷಯವು ಅಲಕ್ಷ್ಯಮಾಡತಕ್ಕದ್ದಲ್ಲ. ಅಧ್ಯಕ್ಷ [illegible] ಹೊರಿಸಿಕೊಳ್ಳುವುದಕ್ಕಾಗಿ ಭೂಮ್ಯಾಕಾಶಗಳನ್ನು ಒಂದು ಮಾಡಿದ ಖಾನರವರು ತಮಗೆ ತಾವೇ ಏಕಾಏಕಿ ಅಧ್ಯಕ್ಷಸ್ಥಾನವನ್ನು ಬಿಡುವರ [illegible]. ಅವರು ಹಾಗೆ ಹೇಳಿದರೂ ನಂಬತಕ್ಕಮಾತಲ್ಲ.

ಇವರು ಮೇಲಕ್ಕೆ ಬಂದಿರುವುದು ಇಬ್ಬರ ಜಗಳ ಮೂರನೆಯವನ ಲಾಭ ಎಂಬಂತೆ, ಭೇದೋಪಾಯದಿಂದ ಇವರು ಬಹಳ ಚತುರರು. ತಮಗೆ ಯಾವ ಕಡೆ [illegible] ಆ ಕಡೆ ತಾವು ತಿರುಗುತ್ತಾರೆ. ಹಿಂದುಳಿದವರ ಆಶ್ರಯ [illegible] ಖಾನ್‌ಬಹದ್ದೂರ್ ಮೊದಲಾದ [illegible] ಪಡೆದ ಅನಂತರದಲ್ಲೇ ಮರ್‍ಯಾದೆಯನ್ನು ಹೊಂದಿ ಕಡೆಗೆ ಪರೀಕ್ಷೆ [illegible] ತ್ಯಜಿಸಿದರು. ಕಳೆದ ಪ್ರತಿನಿಧಿಸಭೆಯ ಅಧಿವೇಶನದಲ್ಲಿ [illegible] ಮೊದಲಾದವರು ಸಭಾ ಪರಿತ್ಯಾಗವ [illegible] ಮಾಡಿದ ಕಾಲದಲ್ಲಿ, [illegible] ಗುಣವನ್ನು ತೋರಿಸಿದರು. ಆಗಲೇ [illegible] ಆಯಿತು. ಪುನಃ ತಮ್ಮ ಮುಖಂಡತ್ವವನ್ನು ಪಡೆದುಕೊಳ್ಳಬೇಕೆಂದು [illegible] ಹಾಕಿದರು. ಅದು ಸಾಧ್ಯ ವಾಗದೆ ಹೊಸಹೊಸ ಯುಕ್ತಿಗಳನ್ನು ಮಾಡುತ್ತ [illegible] ತಾವು ಬ್ರಾಹ್ಮಣರಿಂ [illegible]. ಇವರು ಹಿಂದೆ [illegible] ಅಧ್ಯಕ್ಷ [illegible]. ಇವರಿಗೆ ಮುಸಲ್ಮಾನ [illegible]. ಈ ಸಾರಿ ಅಧ್ಯಕ್ಷರಾಗಿ ಚುನಾಯಿಸ [illegible] ಕೊಟ್ಟ ಭಾಷಣದಲ್ಲಿ ತಾವು ಬ್ರಾಹ್ಮಣರಿಗೆ ಬಹಳ [illegible] ಹೇಳಿದರು. ಆದರೆ ಆಗಸ್ಟ್ 3 ನೇ ತಾರೀಖಿನ ದಿವಸ [illegible] ಅಧ್ಯಕ್ಷತೆಯಲ್ಲಿ ನಡೆದ [illegible] ಇವರು ಮಾಡಿದ [illegible] ಸಂಪಾದಿಸಿದರು. ಇವರು ತಾವು ಹಿಂದುಳಿದ ಪಂಗಡದ [illegible] ಸರ್ಕಾರಿ [illegible] ಅವಹೇಳನ ಮಾಡಿರುವರು. ನನಗೇನು ನನಗೆ ಐವತ್ತಾರು ಲಕ್ಷ [illegible] ಜನಾಂಗದವರ ಬೆಂಬಲವಿದೆ. ನಾನೇ ಅವರಿಗೆ ನಾಯಕ ಎಂಬುದಾಗಿ [illegible]. ಕೆಲವು ಸರ್ಕಾರೀ ನೌಕರಿಗಳ ಬಣರೊಟ್ಟಿಯ ಚೂರುಗಳಿ [illegible] ನಮ್ಮ ದೇಶದಲ್ಲಿ ಜಾತಿ ದ್ವೇಷದ ವ್ಯಾಧಿಯನ್ನು ಹರಡಿ ತಾವು ಹಿಂದುಳಿದ ವರ್ಗದವರ ಮುಖಂಡರೆಂದು [illegible]. ಇವರಿಗೆ [illegible] ಪ್ರೆಸಿಡೆಂಟ್ ಪದವಿಯು ಸಿಕ್ಕಿದರೆ ಐವತ್ತಾರು ಲಕ್ಷ ಹಿಂದುಳಿದವರಿಗೆ [illegible] ಇದೆಲ್ಲಾ ಬರಿಯ ಢೋಂಗಿ. ಯಾವ ಜಾತಿಯಲ್ಲೋ ಯಾರಿ [illegible] ಐಶ್ವರ್ಯಬಂದರೆ, ಅಧಿಕಾರ ಬಂದರೆ, ಆ ಜಾತಿಯ ಉದ್ಧಾರವಾಯಿ [illegible] ಹೇಳುವ ಕಾಲವು ಇದಲ್ಲ.

ಅಬ್ಬಾಸ್‌ಖಾನರವರು ಎಂದೂ ಪ್ರಜಾ ವಿಶ್ವಾಸಕ್ಕೆ ಪಾತ್ರರಾಗಿರಲಿಲ್ಲ. ಒಂದು ಸಾರಿಯೂ ಇವರು ಪ್ರತಿನಿಧಿ ಸಭೆಗಾಗಲೀ ಬೆಂಗಳೂರು ಸಿಟಿ ಮುನಿಸಿ [illegible]ಗಾಗಲೀ ಓಟುಗಳಿಂದ ಚುನಾಯಿಸಲ್ಪಟ್ಟಿಲ್ಲ. ಸರಕಾರದವರ ನಾಮಿ [illegible] ಪಡೆದೇ ಇವರು ಈ ಸಂಸ್ಥೆಗಳಿಗೆ ಬಂದಿರುವರು. ಈಗಲೂ ಇವರು [illegible] ಪದವಿಗೆ ತಾವೇ ರಾಜೀನಾಮೆಯನ್ನು ಕೊಟ್ಟಿಲ್ಲ. ಈ ತಿಂಗಳು 6ನೇ [illegible] ದಿವಸ ಇವರಿಗೂ ದಿವಾನರಿಗೂ ಭೇಟಿಯಾಗಿ ದಿವಾನರವರೇ ಇವರಿಗೆ ರಾಜೀನಾಮೆಯನ್ನು ಕೊಡುವ ಹಾಗೆ ಹೇಳಿರುವಂತೆ ಕಾಣುತ್ತದೆ. ಇದೇ ಇವರ [illegible].

ಇದೊಂದು ಅಭಾವ ವಿರಕ್ತಿ. ಇವರು ಅಧ್ಯಕ್ಷರಾಗಿರುವುದರಲ್ಲಿ ಅನೇಕ [illegible] ಎಂದು ಹೇಳುತ್ತಾರೆ. ಈ ಅಪವಾದವು ಇವತ್ತಿನದಲ್ಲ. ಯಾವಾಗಿ [illegible] ಇದ್ದೇ ಇದೆ. ಇವತ್ತೇ ಏತಕ್ಕೆ ರಾಜೀನಾಮೆಯನ್ನು ಕೊಡಬೇಕಾ [illegible] ಕಾರಣವೇನು? [illegible] ಅದನ್ನು ಖಾನ್‌ಬಹದ್ದೂರರವರು ಹೇಳಿಲ್ಲ. ಆದರೂ ಅದು [illegible] ಇರುವುದು. ಜುಲೈ 30ನೇ ತಾರೀಖಿನ ರಾತ್ರಿ ನಡೆದ [illegible]

ಗಲಾಟೆಗೆ ಅಬ್ಬಾಸ್‌ಖಾನರ ಜವಾಬ್ದಾರಿಯು ಬಲವಾಗಿರುವುದು. [illegible] ರಣೆಯು ಈಗ ನಡೆಯಬೇಕಾಗಿರುವುದು. 'ಗುಮಾನಿ ಇರುವಂಥ [illegible] ಅಧ್ಯಕ್ಷರಾಗಿದ್ದರೆ ಮುನಿಸಿಪಾಲಿಟಿಯ ಕೆಲಸವು ನಡೆಯುವುದಿಲ್ಲ [illegible] ರಿಗೂ ಗೊತ್ತುಂಟು. ಆದುದರಿಂದಲೇ ಸರ್ಕಾರದವರೇ ಅಬ್ಬಾಸ್ [illegible] ರಾಜೀನಾಮೆಯನ್ನು ಕೊಡುವುದಕ್ಕೆ ಬಲಾತ್ಕಾರ ಪಡಿಸಿರುವುದ [illegible] ವುದು. [illegible] ಆಗಲೀ ಬೆಂಗಳೂರು ಸಿಟಿ ಮುನಿಸಿಪಾಲಿಟಿ [illegible] ಣವು ಸ್ವಲ್ಪಮಟ್ಟಿಗೆ ಶಮನವಾಯಿತೆಂದು ಹೇಳಬಹುದು.

ಸರಕಾರವನ್ನು ತಲೆಕೆಳಗು ಮಾಡುವುದು?

ಮ|| ಅಬ್ಬಾಸ್‌ಖಾನರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸವಾಲಿನ ಸಮಯದಲ್ಲಿ ಕೊಟ್ಟ ಹೇಳಿಕೆ ಏನೆಂದರೆ:—

ಈಗ ಕೆಲವು ವರ್ಷಗಳ ಹಿಂದೆ 'ಕಂಟೋನ್ಮೆಂಟಿನಲ್ಲಿ [illegible] ದೀಯರು ನೆರೆದಿದ್ದ ಸಭೆಗೆ ನಾನು ಹೋಗಿದ್ದೆ. ಮಹಮ್ಮದೀಯರು [illegible] ಷ್ ಸರಕಾರದವರು ಕೊಟ್ಟ ಬಿರುದುಗಳನ್ನು ತ್ಯಜಿಸಬೇಕೆಂದೂ, ಸರ [illegible] ಕರಿಗಳನ್ನು ಬಿಡಬೇಕೆಂದೂ ಸರ್ವಾನುಮತದಿಂದ ಒಂದು ಠರಾವು [illegible] ಯಾಕೆಂದರೆ ಬ್ರಿಟಿಷ್ ಸರಕಾರವು ಮಹಮ್ಮದೀಯರಿಗೆ ದ್ರೋಹವನ್ನು [illegible] ಹೀಗೆ ಬಿರುದುಗಳನ್ನೂ ನೌಕರಿಗಳನ್ನೂ ತ್ಯಾಗಮಾಡದ ಮಹಮ್ಮದೀಯರು [illegible] ಶದ್ರೋಹಿಗಳು ಎಂಬುದಾಗಿ ಠರಾವಾಯಿತು. ನಾನು ಆ ಸಭೆಯಲ್ಲಿ [illegible] ಕ್ಷಕನಾಗಿದ್ದೆನೊ ಇನ್ನೇನಾದರೂ ಆಗಿದ್ದೆನೊ ಹೇಳಲಾರೆ. ಆ ಠರಾವು [illegible] ಸರಕಾರವನ್ನು ತಲೆಕೆಳಗು ಮಾಡುವ ತಾತ್ಪರ್ಯದ [illegible] ಅಥವಾ [illegible] ದ ಬ್ರಿಟಿಷ್ ಸರಕಾರವು ತಲೆಕೆಳಗಾಗಬೇಕೆಂದಾಗಲೀ [illegible] ತಿಳಿದಿಲ್ಲ. [illegible] ಅಹಮ್ಮದ್ ಕಲಾಮಿಯವರು ಆ ಸಭೆಯಲ್ಲಿದ್ದರು. [illegible] ಅವರು ಬೆಂಗಳೂರು [illegible] ಟ್ರಲ್ ಮಹಮ್ಮದನ್ ಅಸೋಸಿಯೇಷನ್ನಿನ ಅಧ್ಯಕ್ಷರ [illegible] ಮರ್ಯಾದೆ [illegible] ಗಿನ ಸರ್ಕಾರದ ಅಧಿಕಾರಿಗಳನ್ನು ಬದಲಾಯಿಸಿ ಎಂದು [illegible] ಶ್ರೀಮನ್ಮಹಾ [illegible] ರನ್ನು ಪ್ರಾರ್ಥಿಸುವುದು ಸರ್ಕಾರವನ್ನು ತಲೆಕೆಳಗು ಮಾಡುವುದಲ್ಲ [illegible] ಲ್ಲಿ ಪ್ರಜೆಗಳಿಗೆ ಸರಕಾರದಲ್ಲಿ ಹೆಚ್ಚು ಅಧಿಕಾರವು ಬೇಕೆಂದು [illegible] ಕೇಳುವುದ [illegible] ವನ್ನು ತಲೆಕೆಳಗು ಮಾಡುವುದಲ್ಲ. ನಾನು ಸೀಲ್ [illegible] ಟಿಯ ಮೊಬಲಾ [illegible] ಸರಕಾರವನ್ನು ಬಂಡಿಸಿ ಭಾಷಣ ಕೊಟ್ಟೆನೋ [illegible] ಗೊತ್ತಿಲ್ಲ. [illegible] ಕಾರ್ಬಾನೆಯು ಬರಸಲ್ಪಡಬೇಕು ಎಂದು ಹೇಳಿ [illegible] ಇಲ್ಲವೋ [illegible] ಒಂದುವೇಳೆ ಹಾಗೆಲ್ಲಾ ನಾನು ಹೇಳಿದ್ದರೂ ಅದೆಲ್ಲ [illegible] ಕಾರವನ್ನು [illegible] ಮಾಡುವದಲ್ಲ. ಅಸೆಂಬ್ಲಿಯಲ್ಲಿ ಸಭಾ [illegible] ಸಭಾ ಪರಿತ್ಯಾಗವು [illegible]

ಸರಕಾರವನ್ನು [illegible] ಕ್ರಮವನ್ನು ಅನುಸರಿ [illegible] ಜುಲೈ 30 ನೇ ತಾರೀಖಿ [illegible] ವೊಂದು ಗೊತ್ತಾಯಿತು [illegible] ಮನೆಗೆ ನುಗ್ಗುವುದು [illegible] ಸೈನ್ಯವನ್ನು ಬದ [illegible] ನ್ನೂ ಆಯುಧಗಳೊಳ [illegible]

[illegible] ಕಂಟ್ರೋ [illegible] ಚಂದ್ರರಾಜ [illegible] ತ್ತಿಲ್ಲ. [illegible] ಕಾರದವರಿಗೆ ಗೊತ್ತಿಲ್ಲ [illegible] ಆದರೆ ಈ [illegible] ಬೇಕ [illegible] ಈಶ್ವರ್ [illegible] ವ ವಾಟಿ [illegible] ನಾನು [illegible] ಬಹಳ [illegible] ಬೆಂಕಿಹ [illegible] ಮಾಡುತ [illegible] ಅಯ್ಯಂ [illegible] ಇಲ್ಲ. [illegible] ನನ್ನ [illegible] ಜಿಸ್ಟ್ರೇಟ್ [illegible] ನನಗೆ [illegible] ಹಿಂದೂಗಳ [illegible] ಸೈಕ [illegible]

... ಯಲ್ಲಿ ಬ್ರಾಹ್ಮಣೇತರ ...

[illegible] ಪಾನಗಲ್ಲ ರಾಜರು ಅಧ್ಯಕ್ಷ [illegible] ಹಿಂಡಿಯವರು ಸ್ವಾಗತಾ [illegible] [illegible] 24ರಲ್ಲಿ ಅಸೆಂಬ್ಲಿಯಲ್ಲಿ [illegible] ಸಂಸ್ಥಾನಾವಳಿ ಬ್ರಾಹ್ಮ [illegible] ಪಾನಗಲ್ಲ ರಾಜರು ಅಧ್ಯಕ್ಷರಾಗುವರೆಂ [illegible] ಎಂದೂ ತಿಳಿದುಬಂದಿದೆ.

ದಾವಣಗೆರೆಯಲ್ಲಿ ... ಹಿಂದೂ ಮಹಮ್ಮದೀಯ ಮಾರಾ...

[illegible] ಮಹಾರಾಜರ ಪಟವನ್ನೊಳಗೊಂಡ [illegible] ಬೂದಿಯಾಯಿತು.

[illegible] ಜುಲೈ [illegible] ರಾತ್ರಿ ದಾವಣಗೆರೆಯಲ್ಲಿ ಶ್ರೀ ಗಣೇ [illegible] [illegible] ಹೊಂದಿಗೆ ಹೊರಟಿತು. ಮಸೀದಿಯ [illegible] [illegible] ಲೆ ಬಿದ್ದು, ದೊಣ್ಣೆ, ಜೋಡು, ಕಲ್ಲು [illegible] [illegible] ನೂರು ೪೦ ಮಂದಿ ಹಿಂದೂಗಳಿಗೆ ಗಾಯ [illegible] [illegible] ಪತ್ತೆಯೇ ಇಲ್ಲ. ಪಲ್ಲಕ್ಕಿಯಲ್ಲಿ ಶ್ರೀ ಗಣೇಶ [illegible] ರ ಚಿತ್ರಪಟವೂ ಇತ್ತು. ಮುಸಲ್ಮಾನರು [illegible] ದಿಮಾಡಿದರು. ಪೋಲಿಸ್ ರಕ್ಷಣೆಯು ಸಮ [illegible] ರ್ಪಕರಾಗಿರಲಿಲ್ಲ. ಮುಸಲ್ಮಾನರು ಗಿರಣಿಗ [illegible] ಪೋಲೀಸಿನವರು ದರ್ಬಾರ್ [illegible]

Regd No. M 2322 || ವಂದೇ ಮಾತರಂ || [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { [illegible]

ಸಂಪುಟ ೧] ಶನಿವಾರ ೨೯ ಡಿಸೆಂಬರ್ ೧೯೨೮ [ಸಂಚಿಕೆ [illegible]

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)
ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co Excelsior Type-writing Institute, Balepet, Bangalore City.
2 Koppada Ramakrishniah Agent Hassan
3 Siddiah, Sri Nanjundeswara Bank Ltd Nanjangud.
4 M. N. S & Sons, Lansdowne Buildings Mysore.
5 Subba Pundit & Co, Lakshmivilas Road
6 Friends' Union, Mysore.
7 Sweet Mart, Lansdowne Buildings, Mysore.
8 H Subba Rao C/o B Sanne Gowda & Son Sakaleshpur
9 H Nagenniah News Agent Chikmagalur
10 V Krishniah Gandhi Bhavan Closepet

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

Regd No. M 2322 ‖ ವಂದೇ ಮಾತರಂ ‖

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ... ಬಿಡಿ ಪ್ರತಿ ...

ಸಂಪುಟ ೧] ಸೋಮವಾರ ೩೧ ಡಿಸೆಂಬರ್ ೧೯೨೮ [ಸಂಚಿಕೆ ೮೨

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ.)

ವಂದೇಮಾತರಂ ರೋಡ್ಡು ಮೈಸೂರು

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City

2 Koppada Ramakrishniah Agent Hassan

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Buildings Mysore.

5 Subba Pundit & Co, Lakshmivilas Road

6 Friends' Union, Mysore.

7 Sweet Mart, Lansdowne Buildings, Mysore.

8 H Subba Rao C/o B Sanne Gowda & Son Sakaleshpur

9 H Nagänniah News Agent Chikmagalur

10 V Krishniah Gandhi Bhavan Closepet

TAI NADU
31—12—1928

ಸಂಪೂರ್ಣ ಸ್ವಾತಂತ್ರ್ಯ

ನಮ್ಮ ಇಂಡಿಯಾ ದೇಶದ ಸ್ವರಾಜ್ಯ ರಚನೆಯ ವಿಚಾರವಾಗಿ ಪಂಡಿತ ಮೋತಿಲಾಲ ನೆಹರೂರವರಿಗೂ [illegible] ಶ್ರೀನಿವಾಸ ಅಯ್ಯಂಗಾರ್ಯರಿಗೂ [illegible] ನಮ್ಮ ದೇಶದ [illegible] ಭಾರತೀಯರಲ್ಲಿ [illegible] ಭಾರತೀಯರಿಗೆ [illegible] ಪೆದ್ದೀ ಮೊದಲಾದ ಬಾಯಿಬಡುಕರು [illegible] ಭಾರತೀಯರ [illegible] ಸಂಪೂರ್ಣ ಸ್ವಾ[illegible]

ರೋಧವನ್ನು ಒಡ್ಡಬಾರದು ನೆಹರೂ ಕಮಿಟಿಯವರ [illegible] ಮಾಡಬೇಕು. ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಧ್ಯೇಯವು ನಮಗೆ ಲಭಿಸಲಿ. ಅನಂತರ ಅದರ ಮುಖೇನ ಸಂಪೂರ್ಣ ಸ್ವಾತಂತ್ರ್ಯದ [illegible] ಪಡೆಯೋಣ. ನಮಗೂ ಸಂಪೂರ್ಣಸ್ವಾತಂತ್ರ್ಯವೇ ಅಭೀಷ್ಟವು. ಕಾಂಗ್ರೆಸಿನ ಅಭೀಷ್ಟವೂ ಅದೇ ಆದರೆ ಸದ್ಯದಲ್ಲಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕೆ [illegible] ಕೆಲಸಮಾಡುವವರ ಪ್ರಯತ್ನಗಳಿಗೆ [illegible] ಅಡ್ಡಿ [illegible] ನಿಲ್ಲುವುದಿಲ್ಲ. ಈಗಿನ ಸ್ಥಿತಿಗಿಂತಲೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಮೇಲು. ನಮಗೆ ಕೆನಡಾ ಆಸ್ಟ್ರೇಲಿಯಾ ದಕ್ಷಿಣ ಆಫ್ರಿಕಾಗಳಷ್ಟು ಸ್ವಾತಂತ್ರ್ಯವಾದರೂ ಲಭಿಸುತ್ತದೆ. ಈಗ ಇಷ್ಟಕ್ಕೆ ನಾವು ಒಪ್ಪಿದರೂ ಭಾರತದ ಅಂತ್ಯದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೆಂಬುದನ್ನು ಯಾರೂ ಮರೆಯು ವಹಾಗಿಲ್ಲ.

ಕಾಲರಾ ರೋಗ

ಮೈಸೂರ ಪಟ್ಟಣದಲ್ಲಿ ಕಾಲರಾ ರೋಗೋಪದ್ರವವು ಪ್ರಾಪ್ತವಾಗಿರುವುದೆಂದು, ಆರೋಗ್ಯ ಇಲಾಖೆಯವರು ಕೆಲವು ಕಡೆ ಸದರೀ ರೋಗದ ವಿಷಯದಲ್ಲಿ ತೋರಿಸುತ್ತಿರುವ ಪ್ರದರ್ಶನಗಳಿಂದ ವ್ಯಕ್ತವಾಗುವುದು. ಇವರು ಈಗ ಮಾಡುತ್ತಿರುವ ಏರ್ಪಾಡುಗಳಿಂದ ಜನಸಾಮಾನ್ಯಕ್ಕೆ ಅಷ್ಟಾಗಿ ಏನೇನೂ ಪ್ರಯೋಜನವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಪ್ರದರ್ಶನಗಳು ಹೆಚ್ಚು ಜನರು ಸೇರುವೆಡೆಗಳಲ್ಲಿ ನಡೆಯಬೇಕು. ಆಗಲೀಗ ಪ್ರಜಾಸಮುದಾಯಕ್ಕೆ ಎಳ್ಳಷ್ಟಾದರೂ ಉಪಯೋಗವಾದೀತು. ಇಲ್ಲದಿದ್ದರೆ ಇವರು ಪಡುವ ಶ್ರಮವು ನಿರರ್ಥಕವೇ ಸರಿ. ಉದಾಹರಣೆ ಕಾಂಚೀವರಂ ಎಂಬ ಊರಿನ ಹೆಲ್ತಾಫೀಸರವರು ಹುಳುಗಳು ಮತ್ತು ಮಲೇರಿಯಾ ಎಂಬ ಎರಡು ವಿಷಯಗಳಿಗೆ ಸಂಬಂಧಪಟ್ಟ ಫಿಲಂಗಳನ್ನು ಅಲ್ಲಿನ ಸಿನೀಮಾ ಕಂಪನಿಯಲ್ಲಿ ಈ ಮಾಹೆ 24 ನೇ ತಾರೀಖಿನಿಂದ ತಮ್ಮ ಆಟದ ಜೊತೆಗೆ ಪ್ರದರ್ಶಿಸುವುದಕ್ಕೂ, ಆ ಸಮಯದಲ್ಲಿ ಆರೋಗ್ಯ ಇಲಾಖೆಯವರು ಸಂಬಂಧಪಟ್ಟ ವಿಷಯಗಳ ಪ್ರೇಕ್ಷಕರಿಗೆ ಬೋಧಿಸುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿದ್ದಾರೆ. ಈ ಏರ್ಪಾಡಿನಿಂದ ಜನಸಮುದಾಯಕ್ಕೆ ಅಪಾರವಾದ ಪ್ರಯೋಜನವಾಗುವುದು.

ನಮ್ಮ ರಾಜಧಾನಿಯಲ್ಲಿ ಸಿನೀಮಾಕಂಪನಿಗಳು ಯಾವುವೂ ಇಂಥ ಮಹೋಪಕಾರ ಪ್ರಜಾಸೇವೆಯನ್ನು ಮಾಡಲು ಹಿಂಜರಿಯಲಾರವೆಂದು ದೃಢವಾಗಿ ನಂಬಿರುತ್ತೇವೆ. ಆದುದರಿಂದ ಪೌರಸಭೆಯವರು ಮೇಲ್ಕಂಡ ಏರ್ಪಾಡನ್ನು ಈ ಊರಿನಲ್ಲೂ ಮಾಡಿಸಬೇಕಾಗಿ ಒಬ್ಬ ಯಾತ್ರೀಕನಾರರು ಬರೆದಿರುತ್ತಾರೆ.

ಮಹಾರಾಜರ ಸಂಚಾರ.

ನಮ್ಮ ಶ್ರೀಮನ್ಮಹಾರಾಜರವರು ಮುಂದಿನ ತಿಂಗಳಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸಂಚಾರ ಮಾಡುತ್ತಾರೆಂಬ ವರ್ತಮಾನ ಏರುತ್ತೇಂತ ಹೇಳಿ ಆ ಡಿಸ್ಟ್ರಿಕ್ಟಿನಲ್ಲಿ ಅಪವಿತ್ರಗೊಳಿಸಲ್ಪಟ್ಟ ಅನೇಕ ಹಿಂದೂ ದೇವ ಸ್ಥಾನಗಳ ವಿಷಯವನ್ನು ಸರ್ಕಾರೀ ಅಧಿಕಾರಿಗಳ ರಿಪೋರ್ಟುಗಳನ್ನು ನಂಬುವುದಕ್ಕೆ ಬದಲಾಗಿ ಖಾವಂದರು ಸ್ವತಃ ಪರೀಕ್ಷಿಸಿ ತಿಳಿದುಕೊಳ್ಳಬಹುದೆಂತ ಬೆಂಗಳೂರಿನ ಈ [illegible] ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವುದು.

ವಿವಿಧ ವಿಷಯಗಳು

ಧರ್ಮ ಸಹಾಯ.

ಕಾಶೀಪಟ್ಟಣದಲ್ಲಿರತಕ್ಕ ಶ್ರೀರಾಮಕೃಷ್ಣಾಶ್ರ[illegible] ನಮ್ಮ ಶ್ರೀಮನ್ಮಹಾರಾಜರವರು 500 ರೂಪಾ[illegible] ಚಂದಾ ದ್ರವ್ಯವನ್ನು ಸಹಾಯ ಮಾಡಿರುವುದಾ[illegible]ಗಿ ಸಂತೋಷಿಸುತ್ತೇವೆ.

ಸ್ಟಾರ್ ಪತ್ರಿಕೆಯ ಮೇಲೆ ಮೊಖದ್ದಮೆ.

ಬೆಂಗಳೂರಿನ ಮಿ|| [illegible] ಗೋಪಾಲಸ್ವಾಮಿಯ್ಯರವರು ಸ್ಟಾರ್ ಪ[illegible]ರ ಮೇಲೆ [illegible] ತಕ್ಕ ಮಾನನಷ್ಟದ ಮೊ[illegible]ಮಲ್ಲಿ ಮಿ|| [illegible] ಎಸ್ ವೆಂಕಟಪತಯ್ಯನವರೂ ಎಲ್. ಎಸ್. [illegible]ಯವರೂ ಡಿ ಶಾಮರಾಯರೂ ಮೊದಲಾದ [illegible]ನಗಳು ವಕೀಲಿಯನ್ನು ವಹಿಸಿರುತ್ತಾರೆ.

ಕ್ರಿಸ್‌ಮಸ್ ಹಬ್ಬದ ಆಹುತಿ

ಪ್ಯಾರಿಸ್ ಪಟ್ಟಣದ ಒಬ್ಬ ಅಂಚೆಯವನ [illegible]ತಿಯು ತನ್ನ ಐದು ವರ್ಷದ ಮಗಳನ್ನೂ ಇತರ[illegible]ರು ಮಕ್ಕಳನ್ನೂ ಸಹ ಮನೆಯಲ್ಲಿ ಬಿಟ್ಟು ತಾನು [illegible]ಸ್‌ಮಸ್ ಹಬ್ಬಕ್ಕೆ ಆಟದ ಸಾಮಾನುಗಳನ್ನು ತ[illegible] ಪೇಟೆಗೆ ಹೋಗಿದ್ದಳು. ಆಟವಾಡುತ್ತಿದ್ದ ಮಕ್ಕ[illegible] ತಮಾಷೆಗಾಗಿ ಸ್ಟೌವನ್ನು ಹಚ್ಚಿಸಿದರು [illegible] ಮರದಿಂದ ಮಾಡಲ್ಪಟ್ಟಿದ್ದ ಮನೆಯು ಹತ್ತಿಕೊ[illegible]ತು. ಅದರ ಜೊತೆಯಲ್ಲಿ ಮಕ್ಕಳೂ ಭಸ್ಮೀಭೂತರಾ[illegible]ದ್ದುದು ಪೇಟೆಯಿಂದ ಹಿಂತಿರುಗಿದ ಹೆಂಗಸಿಗೆ [illegible] ಚರವಾಯಿತು.

ಅಂಚೆಯ ಇಲಾಖೆ

1929 ನೇ ಜನವರಿ ಒಂದನೇ ತಾ|| ಲಾಗಾಯ[illegible] ಜಾರಿಗೆ ತರಬೇಕೆಂದಿದ್ದ ಅಂಚೆಯ ಚೀಲದ ಪದ್ಧ[illegible]ನ್ನು 1929 ನೇ ಏಪ್ರೆಲ್ ಮಾಹೆ ಒಂದರ ಲಾಗಾ[illegible]ತು ಜಾರಿಗೆ ತರಬೇಕೆಂದು, ಡೆಲ್ಲಿಯಲ್ಲಿರುವ ಪೋ[illegible] ಮತ್ತು ಟೆಲಿಗ್ರಾಫಿನ ಡೈರೆಕ್ಟರ್ ಜನರಲ್‌ರವರು [illegible] ಕಟಿಸಿರುತ್ತಾರೆ.

ಯಜ್ಞೇಶ್ವರನ ಪ್ರತಾಪ

ಎಲ್ಲೋರಿನ ಪೂರ್ವಭಾಗದಲ್ಲಿ ಕಳೆದ ಮೇ [illegible]ಳಲ್ಲಿ ಒಂದು ಬೆಂಕಿಯ ಅನಾಹುತವು ನಡೆದಿತ್ತು. [illegible]ಲೂ ಯಥಾ ಪ್ರಕಾರ ಅದೇ ಸ್ಥಳದಲ್ಲಿ (25-12-28 [illegible] ಸಾಯಂಕಾಲ 4 ಘಂಟೆಯಲ್ಲಿ ಅರ್ಧ ಘಂಟೆಯೊಳಗೆ [illegible] ನಾನೂರು ಗುಡಿಸಲುಗಳು ಸುಟ್ಟು ಭಸ್ಮವಾ[illegible] ಮೂರು ನಾಲ್ಕು ಲಕ್ಷ ರೂಪಾಯಿಗಳಿಗೆ ಮೇಲ್ಪ[illegible] ನರಿಗೆ ನಷ್ಟವಾಗಿರುತ್ತೆ.

ಇದನ್ನು ಓದಿ ನಗಬೇಡಿರಿ.

ಮನುಷ್ಯನ ನಗೆಯ ವಿಷಯವಾಗಿ ಅನೇಕ [illegible] ನೆಗಳನ್ನು ಮಾಡುತ್ತಿರುವ ಇಟಲಿದೇಶದ ತತ್ವ[illegible] ಬ್ಬನು ಹೀಗೆಂದು ಬರೆದಿರುವನು. ಬೇರೆ ಎಲ್ಲಾ [illegible]ರ್ಗಗಳಿಗಿಂತಲೂ ಮನುಷ್ಯರ ಗುಣಸ್ವಭಾವವನ್ನು [illegible]ರವರು ನಗುವ ರೀತಿಯಿಂದ ಬಹಳ ನಿರ್ಣಯವಾ[illegible]ಡುಕೊಳ್ಳಬಹುದು, 1 ನಾನಾತರದ ನಗೆಗಳಲ್ಲಿ [illegible] ಹ್ಹ!" ಎಂದು ನಗುವುದೇ ಉತ್ತಮಗುಣ[illegible] ಹಾಗೆ ನಗುವುದು ನಿಷ್ಕಪಟ ಸ್ವಭಾವವನ್ನು [illegible] ವುದು.

ತಾಯಿನಾಡು.

31—12—1928

ಸತ್ಯಾಗ್ರಹ

ಲೇ :— ಮ|| ಅನೆಕೆರೆ ಸರ್ವಾಭಟ್ಟರು

ಸ್ಥೂಲ ಪ್ರಪಂಚದೊಡನೆ ಸಮನ್ವಯ

—

ಭಸ್ಮಾಸುರನು ತನ್ನಿಂದ ತಾನೇ ಭಸ್ಮವಾದನು? ಇದೇ ಸತ್ಯಾಗ್ರಹದ ಪರಿಣಾಮದ ರೀತಿಯು. ಈ ಪರಿಣಾಮವು ಸ್ಥೂಲ ಪ್ರಪಂಚದಲ್ಲಿ ಹೇಗೆ ಆಗುವುದೆಂಬುದನ್ನು ತಿಳಿಯಬೇಕಾದರೆ ಶ್ರೀ ಪರಮೇಶ್ವರನನ್ನೇ ಪ್ರಜಾಸಮಷ್ಟಿಯೆಂದು ಭಾವಿಸೋಣ. ಅಧಿಕಾರ ವ್ಯೂಹವೇ ಭಸ್ಮಾಸುರನು. ಅದರಲ್ಲಿ ಸ್ವಕೀಯವಾದ ಯಾವ ಶಕ್ತಿಯೂ ಇರುವುದಿಲ್ಲ. (ಆದುದರಿಂದಲೇ ಭಸ್ಮಾಸುರ) ಪ್ರಜಾಸಮಷ್ಟಿಸ್ವರೂಪನಾದ ಪರಮೇಶ್ವರನನ್ನು ಆರಾಧಿಸುತ್ತಾ, ಶಕ್ತಿಸಂಚಯವನ್ನು ಪಡೆಯುತ್ತದೆ. ತನ್ನನ್ನು ಆರಾಧಿಸುವವರಿಗೆ ಕೋರಿದ ವರವನ್ನು ಕೊಡುವುದೇ ಪರಮೇಶ್ವರನ ಸ್ವಭಾವ. ಗುಣದೋಷ ವಿಮರ್ಶೆ ಮಾಡುವುದಿಲ್ಲ. ಹೀಗೆ ಪ್ರಜಾಸಮಷ್ಟಿಯ ಅನುಗ್ರಹದಿಂದ ಬೆಳೆಯುತ್ತಾ ಯಾರನ್ನು ಬೇಕಾದರೂ ನಿಗ್ರಹಿಸತಕ್ಕ ವರವನ್ನು ಭಸ್ಮಾಸುರನು ಪಡೆಯುತ್ತಾನೆ. ಹೀಗೆ ಪಡೆದ ಮೇಲೆ ಇವನ ತಲೆಯು ನಿಲ್ಲುವುದಿಲ್ಲ. ತನಗೆ ನಿಗ್ರಹ ಶಕ್ತಿಯನ್ನು ದಯಪಾಲಿಸಿದ ಪ್ರಜಾಸಮೂಹದ ತಲೆಯ ಮೇಲೆಯೇ ಕೈಯಿಟ್ಟು ಸುಟ್ಟುಬಿಡಲು ಹವಣಿಸುತ್ತಾನೆ. ಆಗ ಪ್ರಜಾಸಮೂಹವು ದೈನ್ಯದಿಂದ ಓಡುತ್ತದೆ. ಅಲ್ಲಿಗೂ ಭಸ್ಮಾಸುರನು ಬಿಡುವುದಿಲ್ಲ. ಆದರೂ ಪ್ರಜಾಸಮುದಾಯವು ಆಯುಧವನ್ನು ಮಾತ್ರ ಹಿಡಿಯಬಾರದು. ಸಾಕ್ಷಾತ್ತಾಗಿ ನಿಗ್ರಹಕ್ಕೂ ಪ್ರಯತ್ನಿಸಬಾರದು. ಪರಮೇಶ್ವರನು ಸಾಕ್ಷಾತ್ತಾಗಿ ನಿಗ್ರಹಕ್ಕೆ ಪ್ರಯತ್ನಿಸಿ ತನ್ನ ಫಾಲನೇತ್ರವನ್ನು ತೆರೆದಿದ್ದರೆ ಭಸ್ಮಾಸುರನ ವಿನಾಶದಲ್ಲಿ ಮಾತ್ರ ಕೊನೆಗೊಳ್ಳದೆ ಹೇಗೆ ಸೃಷ್ಟಿಯೇ ನಾಶವಾಗುತ್ತಿತ್ತೋ ಹಾಗೆಯೇ ಪ್ರಜಾಸಮೂಹವು ಆಯುಧವನ್ನು ಹಿಡಿದು ಸ್ವತಃ ನಿಗ್ರಹಕ್ಕೆ ಹೊರಟಾಗ ಅಧಿಕಾರವ್ಯೂಹದ ಭೇದನವು ಹೇಗಾದರೂ ಆಗಲಿ; ರಾಜ್ಯದಲ್ಲಿನ ಹೆಂಗಸರು, ಮಕ್ಕಳು, ವೃದ್ಧರೆನ್ನದೆ ಸಮಸ್ತರ ವಿನಾಶಕ್ಕೂ ಕಾರಣವಾಗುತ್ತದೆ. ಅಲ್ಲದೆ ನಮ್ಮ ಅನುಗ್ರಹದಿಂದ ಬೆಳೆದು ದೊಡ್ಡವರಾದವರನ್ನು ನಾವೇ ನಿಗ್ರಹಿಸಲು ಹೊರಡುವುದು ಎಂದಿಗೂ ಧರ್ಮವಾಗುವುದಿಲ್ಲ. ಎಲ್ಲಿ ಧರ್ಮವಿಲ್ಲವೋ ಅಲ್ಲಿ ಜಯವೂ ಅಸಂಭವ. ಅಧಿಕಾರ ವ್ಯೂಹದಲ್ಲಿರುವ ನಿಗ್ರಹ ಶಕ್ತಿಯಾದರೂ ನಮ್ಮದೇ. ಅದನ್ನು ನಾವು ನಾಶ ಮಾಡಬೇಕು. ಆದುದರಿಂದಲೇ ಪರಮೇಶ್ವರನೂ ರಾಕ್ಷಸನಿಗೆ ಕದಂ ಬೇಕಾಯಿತು ನಾನು ಕೊಟ್ಟ ವರವನ್ನು ತಾನು ನಾಶ್ಯವಾಡಬೇಕಾಯಿತು. ಅದರಂತೆ ಪ್ರಜಾ ಸಮುದಾಯಕ್ಕಾದರೂ ಇರುವ ಮಾರ್ಗವು ಒಂದೇ. ಶ್ರೀ ಪರಮೇಶ್ವರನ ರೀತಿಯಲ್ಲಿ ಕ್ರೋಧಕ್ಕೆ ಎಡೆಗೊಡದೆ, ಅಹಿಂಸಾ ಮಾರ್ಗವನ್ನು ಹಿಡಿದು, ತನ್ನಲ್ಲಿರುವ ಅಂತಸ್ಸತ್ವವನ್ನು ಪ್ರಚೋದನಗೊಳಿಸುವುದು. ಹೀಗೆ ಪ್ರಚೋದನೆಗೊಂಡು, ಐಕ್ಯತೆಯನ್ನು ಹೊಂದಿದ ನಾಡಿನ ಮಂದಿಯ ಸಾತ್ವಿಕ ತೇಜದ ದಿವ್ಯ ಪ್ರಕಾಶವು ನೇರವಾಗಿ ಹೊರಟು, ಆ ಅಂತಸ್ತೇಜದ ಬಾಹ್ಯ ಸ್ವರೂಪನೂ, ನಾಡಿನ ಸ್ಥಿತಿಕರ್ತನೂ, ಶ್ರೀ ಮಹಾವಿಷ್ಣುವಿನ ಅಂಶ ಸಂಭೂತನೂ ಆದ ಪ್ರಭುವನ್ನು ತನ್ನ ಕರ್ತವ್ಯದ ಕಡೆಗೆ ಪ್ರಚೋದಗೊಳಿಸುವುದು. ಹೀಗೆ ಪ್ರಜಾ ಸಮುದಾಯದಿಂದ ಉಪಾಸಿಸಲ್ಪಟ್ಟ ಪ್ರಭುವು "ಪ್ರಜಾನಿಚಯಕಂ ಪೊರೆವನೆ ದೈವಂ, ಜಗದೋಳಗರಸಿಂಗಂ ಪ್ರಜೆಯೇ ದೈವವೆಲೆ' ಎಂಬ ಕರ್ಣಾಟಕ ಕವಿಯ ದಿವ್ಯ ಸೂಕ್ತಿಯಂತೆ, ತನ್ನ ಕರ್ತವ್ಯವನ್ನೂ ಅರಿತು, ತನ್ನ ಉಪಾಸ್ಯಮಾನದೇವತೆಯೂ, ಶ್ರೀ ಪರಮೇಶ್ವರ ಸ್ವರೂಪವೂ ಆದ ಪ್ರಜಾಸಮೂಹದ ಉದ್ಧಾರಕ್ಕಾಗಿ ಹೊರಗೆ ಬರುತ್ತಾನೆ. ಯಾವರೂಪದಲ್ಲಿ? ಭುವನ ಮೋಹನಕರವಾದ ನ್ಯಾಯದೇವತಾ ಸ್ವರೂಪದಲ್ಲಿ! ಆಗ ಅಧಿಕಾರವ್ಯೂಹದ ಅಂತರ್ಗಾಮಿಯಾದ ಭಸ್ಮಾಸುರನೂ ಆ ದೇವತೆಯನ್ನು ತನ್ನ ಸಖಕ್ಕಾಗಿ ಒಲಿಸಿಕೊಳ್ಳಬೇಕೆಂದು ಪ್ರಯತ್ನಮಾಡುತ್ತಾನೆ. ತನ್ನನ್ನು ಅನುವರ್ತಿಸಿ ನಡೆದರೆ ಆಗಬಹುದೆಂದು ದೇವತೆಯ ಆಜ್ಞೆಯಾಗುತ್ತದೆ. ಭಸ್ಮಾಸುರನೂ ಹಾಗೆ ನಡೆಯಲು ಮೊದಲು ಮಾಡುತ್ತಾನೆ ಇನ್ನು ನ್ಯಾಯದೇವತೆಯ ಅಧೀನಕ್ಕೆ ಒಳಪಟ್ಟ, ಆಕೆಯನ್ನನುಕರಿಸಲು ಮೊದಲಿಟ್ಟ ಮೇಲೆ ಭಸ್ಮಾಸುರನ ಬಾಳುವೆಯಾದರೂ ಉಳಿವುದೆಂತ? ಕೊನೆಗೆ ತನ್ನ ನಿಗ್ರಹ ಹಸ್ತಗಳನ್ನು ತನ್ನ ತಲೆಯ ಮೇಲೆಯೇ ಇಟ್ಟುಕೊಳ್ಳುವಂತಾಗಿ ಭಸ್ಮಾಸುರನು ಭಸ್ಮವಾಗುತ್ತಾನೆ!!

ಇದೇ ಸತ್ಯಾಗ್ರಹದ ಪರಿಣಾಮವು. ಯಾವ ಸಮಯದಲ್ಲೇ ಆಗಲಿ ಪ್ರಜಾ ಸಮುದಾಯವು ನಿಜವಾದ ಸತ್ಯಾಗ್ರಹವನ್ನು ಕೈಗೊಂಡುದೇ ಆದರೆ, ಸ್ವಲ್ಪ ಜಾಗ, ತೆಯಲ್ಲೋ ಅಥವಾ ಸ್ವಲ್ಪ ವಿಳಂಬವಾಗಿಯೋ ಅಂತೂ ಈ ಪರಿಣಾಮವು ಆಗಲೇಬೇಕು. ಆದುದರಿಂದ ದೇಶಬಾಂಧವರೇ ನಿಜವಾಗಿಯೂ ಭಸ್ಮಾಸುರನು ನಿಮ್ಮ ಬೆನ್ನು ಹತ್ತಿರುವನೆಂದು ನೀವು ತಿಳಿದಿದ್ದರೆ ಹಾಗೂ ಜಗನ್ಮಾತೆಯಾದ ನ್ಯಾಯದೇವತೆಯು ನಿಮ್ಮ ರಾಷ್ಟ್ರದಲ್ಲಿ ಅವತರಿಸಿ ನಿಮ್ಮನ್ನು ಕಾಪಾಡಬೇಕೆಂಬ ಆಶೆಯು ನಿಮಗಿರುವುದಾದರೆ ಕೂಡಲೆ ಸತ್ಯಾಗ್ರಹಕ್ಕೆ ಸಿದ್ಧರಾಗಿ!! ಸತ್ಯ ಧರ್ಮ ಎಂಬ ಸೋದರಗಳಲ್ಲಿ ಅಹಿಂಸೆ ಹಾಗೂ ವೈಮನಸ್ಯರಹಿತತೆಗಳೆಂಬ ಎಣ್ಣೆ ಬತ್ತಿಗಳನ್ನು ಅಳವಡಿಸಿ ಅಂತಸ್ತೇಜದಿಂದ ಹಚ್ಚಿಸಿ ಪ್ರಜಾ ಹೃದಯದ ಸುವರ್ಣ ಸ್ತಬಕದಲ್ಲಿ ಪ್ರೇಮಮಯ ಆರತಿಯೊಡನೆ ಮಂಗಳದ ಹಾಡನ್ನು ಹಾಡುತ್ತಾ ಆ ಭುವನಮೋಹನ ಸೌಂದರ್ಯದ ಮುರಳೀವಿನೋದಿಯಾದ ಶ್ರೀ ಕೃಷ್ಣ ಪರಮಾತ್ಮನ ಲೀಲಾ ಸ್ವರೂಪವೆನಿಸಿದ ಲೋಕರಕ್ಷಣ ಧುರೀಣೆಯಾದ ಆ ನ್ಯಾಯದೇವತೆಯ ದಿವ್ಯ ದರ್ಶನವನ್ನು ಪಡೆದು ಆನಂದಿಸೋಣ!!

ಓಂ ತತ್ಸತ್

ರಜ.

ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರಾದ ಮ|| ಸಿ. ಕೆ. ವೆಂಕಟರಾಮಯ್ಯನವರಿಗೆ ಕ್ರಿಸ್‌ಮಿಸ್ ರಜದ ಜೊತೆಗೆ 2 ತಿಂಗಳು ಪ್ರಿವಿಲೇಜ್ ರಜಾ, ಜನವರಿ 2 ರಿಂದ ಮಂಜೂರಾಗಿದೆ. ಬದಲಿ ಏರ್ಪಾಡೇ ಜಾರಿಯಲ್ಲಿರುತ್ತೆ.

ಬೆಂಗಳೂರು ಡಿ|| ಡೆ|| ಕ|| ರವರಾದ ಮಿ|| ಜೆ ಬಿ ಹೆಬ್ಬಿಕರ್ ಯವರಿಗೆ ಜನವರಿ 2 ರಿಂದ 7 ದಿನಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಆಗ ಅ|| ಕ|| ರವರಾದ ಮ|| ರಾ|| ಟಿ. ಅಬ್ದುಲ್ ಖಾದರ್‌ರವರು ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನೂ ನೋಡುವರು.

ವರ್ತಮಾನ ಸಂಗ್ರಹ

—

ಪ್ರಬಲವಾದ ವದಂತಿ

ಬೆಂಗಳೂರು ಗಲಭೆಗಳ ಮೊಕದ್ದಮೆಗಳನ್ನು ನಡೆಸುತ್ತಿರುವ ಸುಪ್ರಸಿದ್ಧ ಅಡ್ವೋಕೇಟರಾದ ಶ್ರೀಯುತ ಕೆ ಎಲ್. ಎಸ್. ರಾಜಾರಾಮರವರನ್ನು ಶ್ರೀಮನ್ಮಹಾರಾಜರವರು ಮೈಸೂರಿನಲ್ಲಿ ಭೇಟಿಯನ್ನು ಕೊಟ್ಟರೆಂಬ ಪ್ರಬಲವಾದ ವದಂತಿಯು ರಾಜಧಾನಿಯಲ್ಲೆಲ್ಲಾ ಹರಡಿರುವುದು. ವಾಸ್ತವಾಂಶವನ್ನು ಶ್ರೀಯುತ ರಾಜಾರಾಮರವರೇ ಮಹಾಜನ [illegible] ತಿಳಿಸುವುದುತ್ತಮವಾಗಿದೆ.

ಛಾಯಾಚಿತ್ರ ಪ್ರದರ್ಶನ

ರಾಜಧಾನಿಯ [illegible] ಕರೋಹಟ್ಟಿ ಬೀದಿಯಲ್ಲಿರುವ ಕಾಂತರಾಜೇ ಅರಸಿನವರ [illegible] [illegible] ಬಿಯವರು ಈಗ ಎಲ್ಲಾ ಕಡೆಯೂ ಪ್ರಬಲಿಸ ತ್ತಿರುವ ಕಾಲರಾ ಅಥವಾ ವಾಂತಿಭೇದಿ ರೋಗವೆಂಬ ಮಾರಿಕೋಪದ್ರವದ ವಿಷಯವನ್ನು ರೋಗೋತ್ಪತ್ತಿ, ಅದರ ವಿಷಯದಲ್ಲಿರಬೇಕಾದ ಎಚ್ಚರಿಕೆ ಅನಾದರಿಸಿದರೆ ಪರಿಣಾಮಗಳನ್ನು ಛಾಯಾ ಕನ್ನಡಿಯ ಪ್ರದರ್ಶನದ ಮೂಲಕ ಜನರಿಗೆ ಬೋಧಿಸಿದರು.

ಸಬ್ ತಾಲ್ಲೋಕು

ಪಿರಿಯಾಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರತಕ್ಕ ಸಬ್ ತಾಲ್ಲೋಕ್ ಆಫೀಸ್ ಅಸ್ತಿತ್ವದಲ್ಲಿ [illegible] ಇಡಲ್ಪಟ್ಟು ಜನವರಿ 1 ನೇ ತಾ|| ಲಾಗಾಯಿತು ಕೆಲಸಕ್ಕೆ ಪ್ರಾರಂಭಿಸಲ್ಪಡುವುದು ಪಿರಿಯಾಪಟ್ಣ, ಬೆಟ್ಟದಹಾರ್ನಹಳ್ಳಿ ಈ ಮೂರು ತಾಲ್ಲೋಕುಗಳವರು ತಮ್ಮ ಅಹವಾಲುಗಳನ್ನೆಲ್ಲಾ ಜನವರಿ 1 ನೇ ತಾರೀಖು ಲಾಗಾಯಿತು ಈ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಿಗೆ ಕಳುಹಿಸತಕ್ಕದ್ದು.

ಸರಾಹುತಿ

ಕರಾಚಿಯ ಒಂದು ಚಿಲ್ಲರೆ ಎಣ್ಣೆ ಅಂಗಡಿಗೆ ಬೆಂಕಿ ಹಿಡಿದು ಗಂಡಸರು ಹೆಂಗಸರು ಮಕ್ಕಳು ಕೂಡಿ ೧೦ ಜನರು ಮೃತರಾದರು, ಕೆಲವರು ಮಳಿಗೆಯ ಕಿಟಕಿಗಳಿಂದ ಕೆಳಗೆ ಹಾರಿ ಬದುಕಿಕೊಂಡರು. ಒಬ್ಬಳು ಧೀರೆಯಾದ ಹಿಂದೂ ಹೆಂಗುಸು ತನ್ನ ಶಿಶುವನ್ನು [illegible] ದೆಗಪ್ಪಿಕೊಂಡು ಉಪ್ಪರಿಗೆಯಿಂದ ಬೀದಿಗೆ ಧೈರ್ಯ [illegible] ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ಲಾಹೋರಿನ ಸಭೆ

ಸ್ವಲ್ಪ ದಿನಗಳ ಹಿಂದೆ ನಡೆದ ಸ್ಯಾಂಡರ್ಸ್ ಕೊಲೆಯ ವಿಷಯದಲ್ಲಿ ಈ ತಿಂಗಳು 25 ನೇ ತಾ|| ಒಂದು ಗುರ್ತಿಸುವ ಪೆರೇಡನ್ನು ಏರ್ಪಡಿಸಿದ್ದರು. ಇದಕ್ಕೆ ಅ|| ಡಿ|| ಮ್ಯಾಜಿಸ್ಟ್ರೇಟರೂ ಅನೇಕ ಪೋಲೀಸ್ ಅಧಿಕಾರಿಗಳೂ ಸಹ ಸೇರಿದ್ದರು.

ಕೂಲಿಯಾಳುಗಳ ಮುಷ್ಕರ

ಡೆಲ್ಲಿಯ ಹತ್ತಿ ಕಾರ್ಖಾನೆಯ ನೌಕರರು ಯವರು ಈ ತಿಂಗಳು 26 ನೇ ತಾ|| ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು 8 ಘಂಟೆಗೆ ಬದಲಾಗಿ ಹನ್ನೊಂದು ಘಂಟೆಗಳ ಕಾಲ ಕೆಲಸ ಮಾಡಬೇಕೆಂಬುದೂ ಮತ್ತು ಅವರು ಹೆಚ್ಚಿಗೆ ಕಾಲ ಮಾಡುತ್ತಿದ್ದ ಕೆಲಸಕ್ಕಾಗಿ ಪ್ರತ್ಯೇಕವಾದ ಕೂಲಿಯು ದೊರೆಯುತ್ತಿಲ್ಲವೆಂಬುದೇ ಮುಷ್ಕರಕ್ಕೆ ಕಾರಣವಂತೆ.

ನಮ್ಮ ಏಜಂಟರು.

[illegible] ಕೆಳಗೆ ಕಂಡಂತೆ ನಮ್ಮ ದಿನಪತ್ರಿಕೆಗೆ ಏಜಂಟರುಗಳನ್ನು ನೇಮಿಸಿರುತ್ತೇವೆ:—

ಬೆಂಗಳೂರು ಸಿಟಿ ಮತ್ತು ಕಂಟೋನ್‌ಮೆಂಟ್:—

ಮ|| ಆರ್. ಕೆ. ಗಣೇಶ ಸಾಹುಕಾರ ಚಿಕ್ಕಪೇಟೆ, ಬೆಂಗಳೂರು (ಈ ತಾರೀಖು ಲಾಗಾಯಿತು ಇದುವರೆವಿಗೂ ಬೆಂಗಳೂರಿಗೆ ನಮ್ಮ ಏಜಂಟರಾಗಿದ್ದ ಮ|| ರಾ|| ಎನ್. ಪಿ. ವೆಂಕಟಪ್ಪನವರಿಗೆ ಏಜನ್ಸಿಯನ್ನು ನಿಲ್ಲಿಸಲಾಗಿದೆ)

ದಾವಣಗೆರೆ— ಮ|| ರಾ|| ಜಿ. ಕೆ. ಸೀತಾರಾಮರಾವ್ C/o ಮ|| ರಾ|| ಬಿ. ರಾಮಚಂದ್ರರಾವ್ ಪ್ಲೀಡರ್, ದಾವಣಗೆರೆ.

ಶಿವಮೊಗ್ಗ— ಮ|| ರಾ|| ಎಂ. ವಿ. ಕಾಮತ್ ಕಮಿಷನ್ ಏಜಂಟ್ ಶಿವಮೊಗ್ಗ.

ಚಿತ್ರದುರ್ಗ— ಮಿ|| ಎಸ್. ಆರ್. ಜೋಶಿ ಜನರಲ್ ಮರ್ಚೆಂಟ್ ಮತ್ತು ಕಮಿಷನ್ ಏಜೆಂಟ್.

ಚಿಕ್ಕಮಗಳೂರು— ಮ|| ರಾ|| ಎಚ್. ನಾಗಪ್ಪನವರು ಕಮಿಷನ್ ಏಜಂಟ್

ಈ ಏಜಂಟರುಗಳಿಗೆ ನಮ್ಮ ದಿನಪತ್ರಿಕೆಗೆ ಚಂದಾ ವಸೂಲ್ಮಾಡುವುದಕ್ಕೂ ಬಿಡಿಪತ್ರಿಕೆಗಳನ್ನು ಮಾರುವುದಕ್ಕೂ ಅಧಿಕಾರವನ್ನು ಕೊಟ್ಟಿದೆ.

ಮ್ಯಾನೇಜರ್

ತಾಯಿನಾಡು.

1—1—1929

ಮೈಸೂರು ರಾಜಕೀಯ ಸುಧಾರಣೆಗಳು

1924 ರಲ್ಲಿ ನಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು ಕೊಡಲ್ಪಟ್ಟವು. ಆ ಸುಧಾರಣೆಗಳೇ ಅಪರ್ಯಾಪ್ತ, ಅಸಮರ್ಪಕ ಮತ್ತು ಅಕಾರಹಿತವಾದುವೆಂದು [illegible] ಹೊಸಕೊಪ್ಪ ಕೃಷ್ಣರಾಯರೇ [illegible] ನಮ್ಮ ರಾಜಕೀಯ ಮುಖಂಡರು ಹೇಳಿ [illegible] ಕೃಷ್ಣರಾಯರು ಕೊಟ್ಟ ಅನೇಕ [illegible] ಅನೇಕ ಲೇಖನಗಳಲ್ಲಿಯೂ [illegible]

[illegible]

ರಾಷ್ಟ್ರೀಯಧ್ವಜಾರೋಹಣ

ಕಳೆದ ತಿಂಗಳು 28 ನೇ ತಾರೀಖಿನ ಪ್ರಾತಃಕಾಲ ಪಂಡಿತ ಮೋತಿಲಾಲ್ ನೆಹರೂರವರು ಅಖಿಲ ಭಾರತ ಮಹಾಸಭೆಯ ರಾಷ್ಟ್ರೀಯ ಧ್ವಜಾರೋಹಣ ಮಹೋತ್ಸವನ್ನು ನಡೆಸಿದರು. ಈ ಮಹೋತ್ಸವಕ್ಕೆ ಟಿಕೇಟುಗಳ ಮುಖಾಂತ್ರ ಪ್ರವೇಶವಿಟ್ಟಿದ್ದರೂ ಒಂದು ಘಂಟೆಯ ಕಾಲದೊಳಗಾಗಿ ಹತ್ತು ಸಾವಿರ ಜನಕ್ಕೆ ಮೇಲ್ಪಟ್ಟ ಪ್ರೇಕ್ಷಕರು ಸೇರಿ ಸಭಾಂಗಣವೆಲ್ಲವೂ ಕಿಕ್ಕಿರಿಯುವಂ

ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವನ್ನೇ ಇತರ ಮೆಂಬರುಗಳೂ ವಿರೋಧಿಸುತ್ತಿದ್ದರು. ಆದರೂ ಈಚೀಚೆಗೆ ಮೆಂಬರುಗಳಿಗೆ ಜ್ಞಾನೋದಯವಾಗುತ್ತಲಿದೆ. ಮ|| ಹೊಸಕೊಪ್ಪ ಕೃಷ್ಣರಾಯರು ಬಿತ್ತಿದ ಬೀಜವು ಈಗೀಗ ಮೊಳಕೆಯಾಗಲು ಉತ್ಪನ್ನವಾಗಿದೆ. ಹೋದ ವರ್ಷ ಮಾರ್ಚಿ ತಿಂಗಳಿನ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಮೆಂಬರುಗಳು ಒಗ್ಗಟ್ಟಿನಿಂದ ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವು ಬೇಕೆಂದು ಕೇಳಿದರು. ಕಳೆದ ಡಿಸೆಂಬರಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಅನೇಕ ಮೆಂಬರುಗಳು ಇನ್ನೂ ಹೆಚ್ಚಾದ ರಾಜಕೀಯ ಸುಧಾರಣೆಗಳು ಬೇಕೆಂದು ಕೇಳಿಕೊಂಡರು. ಇದು ಶುಭ ಸೂಚನೆ. ಸರಕಾರದವರು ಈ ಠರಾವನ್ನು ನಿರೋಧಿಸಿದರು. ಇದಕ್ಕೆ ಒಂದೇ ಅರ್ಥ. ಈಹೊತ್ತಿನ ದಿವಸ ನಮ್ಮ ಮೈಸೂರು ಸರಕಾರವು ಪ್ರಜೆಗಳಿಗಿಂತಲೂ ಬಹಳ ಹಿಂದೆ ಇರುವುದು. ಪ್ರಜೆಗಳ ಆಕಾಂಕ್ಷೆಗಳ ವಿಷಯವಾಗಿ ಸರಕಾರದವರಿಗೆ ಸ್ವಲ್ಪವೂ ಸಹಾನುಭೂತಿಯಿಲ್ಲ. ನಿರಂತರ ಚಾಪಲ್ಯವೇ ಜಾಸ್ತಿಯಾಗಿರುವುದೆಂದು ವ್ಯಕ್ತವಾಗುವುದು. ಸರಕಾರದವರ ಮನೋಭಾವನೆಯು ಹೇಗಾದರೂ ಇರಲಿ. ಪ್ರಜೆಗಳ ಆಕಾಂಕ್ಷೆಗಳನ್ನು ಸರಕಾರದವರು ಈಡೇರಿಸದೆ ಹೋದರೆ ಅವರಿಗಿಂತಲೂ ಮೇಲಿನವರಾದ ಶ್ರೀಮನ್ಮಹಾರಾಜರವರು ಈಡೇರಿಸುವರು.

ಈಗ ಮೆಂಬರುಗಳು ಅನಿರ್ದೇಶ್ಯವಾಗಿ ರಾಜಕೀಯ ಸುಧಾರಣೆಗಳು ಬೇಕು ಎಂದು ಕೇಳುವುದಕ್ಕಿಂತ ಜನಗಳಲ್ಲಿ ಪ್ರಬೋಧವನ್ನುಂಟುಮಾಡಿ ಬ್ರಿಟಿಷ್ ಇಂಡಿಯಾದಲ್ಲಿ ಪ್ರಜಾಮುಖಂಡರು ನೆಹರೂ ಕಮಿಟಿಯನ್ನು ನೇಮಿಸಿ ಸ್ವರಾಜ್ಯ ರಚನೆಯನ್ನು ಮಾಡುವಂತೆ ನಾವು ಮಾಡಬೇಕು. ಆಗಲೀಗ ಸರಕಾರದವರು ನಮ್ಮ ಕೋರಿಕೆಗಳನ್ನು ನಿರ್ಲಕ್ಷಿಸಲು ಹಿಂದುಮುಂದು ನೋಡುವರು. ಈಗಿನಂತೆ ಧೈರ್ಯವಾಗಿ ಬಾಯಿಬಡಿಯಲು ಸಮರ್ಥರಾಗುವುದಿಲ್ಲ. ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ರಾಜಕೀಯ ಸುಧಾರಣೆಯ ಠರಾವನ್ನು ತಂದ ಮ|| ಡಿ. ಎಸ್. ಮಲ್ಲಪ್ಪನವರೇ ಮುಂತಾದ ಮೆಂಬರುಗಳು ಒಂದು ಸಮ್ಮೇಳನವನ್ನು ನಡೆಸಿ ಅದರಲ್ಲಿ ಒಂದು ಕಮಿಟಿಯನ್ನು ನೇಮಿಸಿ ರಾಜಕೀಯ ಸುಧಾರಣೆಗಳ ರಚನೆಯನ್ನು ರಚಿಸುವರೆಂದು ನಂಬುತ್ತೇವೆ.

ಸ್ವೀಕಾರಗಳು.

ರಾಜಧಾನಿಯ ಲಕ್ಷ್ಮೀವಿಲಾಸ ರೋಡಿನಲ್ಲಿರುವ ಮಾಡರನ್ ಕಮರ್ಷಿಯಲ್ ಏಜನ್ಸಿಯವರೂ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ಶ್ರೀ ಕೃಷ್ಣಾ ಪ್ರೆಸ್ಸಿನವರೂ ಸಹ ಕಳುಹಿಸಿರುವ ಕ್ಯಾಲೆಂಡರುಗಳನ್ನು ಆದರದಿಂದ ಸ್ವೀಕರಿಸುತ್ತೇವೆ.

ತಾಗಿತ್ತು.

ಕಾಂಗ್ರೆಸ್ಸಿನ ಎಲ್ಲಾ ಕಾರ್ಯ ಕಲಾಪಗಳಿಗೂ ಕಲಶಾರ್ಪಣವಾದ ಈ ಧ್ವಜಾರೋಹಣ ಉತ್ಸವಕ್ಕೆ ಸ್ವಯಂ ಸೇವಕರ ಅಶ್ವದಳವೂ ಪದಾತಿ ಸೈನ್ಯವೂ ಮುಖ್ಯ ಸೇನಾಪತಿಗಳಾದ ಶ್ರೀ ಸುಭಾಸ್ ಚಂದ್ರ ಬೋಸ್‌ರವರ ಅಧ್ಯಕ್ಷತೆಯಲ್ಲಿದ್ದ ವಿಚಕ್ಷಣೆಯು ಕಣ್ಣುಗಳನ್ನು ಸೆಳೆಯುವಂತಿತ್ತು. ಒಂದು ಸಾವಿರಕ್ಕಿಂತಲೂ ಹೆಚ್ಚಾಗಿ ಮಹಿಳೆಯರು ಗ್ಯಾಲರಿಯಲ್ಲಿ ಕುಳಿತಿದ್ದರು. ಸ್ವಯಂ ಸೇವಕದಳವು ಬಹಳ ಮಟ್ಟಿಗೆ ಕಾರ್ಯ ನಿರ್ವಹಿಸಿದ್ದರೂ ಕೂಡ ಅನೇಕ ಕಡೆಗಳಲ್ಲಿ ರಾಷ್ಟ್ರೀಯರು ಬಂದು ಗಲಭೆಯನ್ನಡಗಿಸಲು ಬರುವಷ್ಟು ಮಟ್ಟಿಗೆ ಜನರು ಸೇರಿದ್ದರು. ಪ್ರೇಕ್ಷಕ ಸಮೂಹದ ಗಲಭೆಯು ನಿಂದ ಅಂದಿನ ಕಾರ್ಯಗಳು ನಿಯಮಿತವಾದ ಕಾಲಕ್ಕಿಂತಲೂ ಒಂದು ಘಂಟೆಹೊತ್ತು ವ್ಯವಧಾನವಾಗಿ ಆರಂಭವಾಯಿತು. ಸ್ವಯಂ ಸೇವಕದಳದ ಕವಾಯಿತು ನಡೆಯಿತು. 9½ ಘಂಟೆಗೆ ಪಂಡಿತ ಮೋತಿಲಾಲರು ರಾಷ್ಟ್ರಧ್ವಜದಂತೆ ಕಾವ್ಯಕ್ಕನುಗುಣವಾದ ಮೂರು ಬಣ್ಣದ ಮೋಟಾರಿನಲ್ಲಿ ದಯಮಾಡಿಸಿದರು. ಶ್ರೀ ಸುಭಾಸ್ ಚಂದ್ರಬೋಸ್‌ರವರು ಸ್ವಾಗತವನ್ನು ಒಯ್ದರು. ದನಂತರ ಪಂಡಿತ ಮೋತಿಲಾಲರು ರಾಷ್ಟ್ರಧ್ವಜದ ಬಳಿಗೆ ಬಂದು ಕೂಡಲೆ ಸಭೆಯಲ್ಲಿ ನೆರೆದಿದ್ದ ಪ್ರೇಕ್ಷಕ ಸಮುದಾಯಗಳಿಂದ "ವಂದೇ ಮಾತರಂ" ಜಯಘೋಷವೂ ಕರತಾಡನಗಳೂ ಬಂದವು. ರಾಷ್ಟ್ರಧ್ವಜದ ಬಳಿಯಲ್ಲಿದ್ದ ಅಧ್ಯಕ್ಷರಿಗೆ ವಂದಿಸಿ ಮುತ್ತಿಲ ಸ್ವಯಂ ಸೇವಾದಳವು ತನ್ನ ಮರ್ಯಾದೆಯನ್ನು ತೋರಿಸಿತು. ಆ ಸಮಯದಲ್ಲಿ ಸಭೆಯಿಂದ ಏರುತ್ತಿದ್ದ "ವಂದೇಮಾತರಂ" ಎಂಬ ಜಯಘೋಷವು ಆಕಾಶವನ್ನು ಘೋರ್ಗರೆಯುತಿದ್ದಿತು.

ಆ ಸಮಯದಲ್ಲಿ ಪಂ|| ನೆಹರೂರವರು ಮಾಡಿದ ಸಂದೇಶ:—

ಸ್ವರಾಜ್ಯ ಧ್ವಜಾರೋಹಣವಾಯಿತು. ನಿಮಗೆಲ್ಲರಿಗೂ ಈ ಸಮಯದಲ್ಲಿ ಒಂದು ವಿಷಯವನ್ನು ತಿಳಿಸಪೇಕ್ಷಿಸುತ್ತೇನೆ. ನೀವೆಲ್ಲರೂ ಈ ಧ್ವಜದ ಕೆಳಗೆ ನಿಂತು ದೇಶಸೇವೆಯ ದೀಕ್ಷೆಯ ಸಂಕಲ್ಪವನ್ನು ತೆಗೆದುಕೊಳ್ಳಬೇಕು. ನಮ್ಮ ದೇಶದ ಪರಿಸ್ಥಿತಿಗಳಲ್ಲಿ ಇದು ಬಂದು ಸಂದಿಗ್ಧ ಸಮಯವು ಈ ಸಂದರ್ಭದಲ್ಲಿ ನೀವೆಲ್ಲರೂ ನಿಮ್ಮ ಅತ್ಯಧಿಕ ಶಕ್ತಿ ಸಾಮರ್ಥ್ಯ ಧೈರ್ಯ ತ್ಯಾಗ ಸಾಹಸಗಳನ್ನು ತೋರ್ಪಡಿಸಿ ಪ್ರತಿಕಕ್ಷಿಗಳ ಬಲವನ್ನು ದಿನ ದಿನವೂ ಕುಗ್ಗಿಸಬೇಕು. ಈ ಸಮಯವೇ ನಮ್ಮ ಸರ್ವಸ್ವವನ್ನೂ ಮಾತೃಭೂಮಿಯ ಪಾದಗಳಿಗೆ ಅರ್ಪಿಸಲು ಸರಿಯಾದ ಕಾಲವು ಪ್ರಪಂಚದ ಚರಿತ್ರೆಯಲ್ಲಿ ಕಾಣಬರುವ ತ್ಯಾಗ ಮತ್ತು ಧನ ಇವುಗಳ ಕೀರ್ತಿಯನ್ನು ಮೀರಿಸುವಂತೆ ನೀವು ಈಗ ಸ್ವಾರ್ಥತ್ಯಾಗವನ್ನು ಮಾಡಬೇಕಾಗಿದೆ. ಸ್ವರಾಜ್ಯ ಸೈನಿಕರೇ ನಾನು ವೃದ್ಧನಾದರೂ ನನ್ನ ಧರ್ಮವನ್ನು ನೆರವೇರಿಸುವುದಕ್ಕೆ ನನ್ನ ಎಲ್ಲ ಕಾಲವನ್ನೂ ವಿನಿಯೋಗಿಸುವೆನು. ಸಂಗ್ರಾಮದಲ್ಲಿ ಶೌರ್ಯಕ್ಕಿಂತಲೂ ಶ್ರಮ ಶಿಕ್ಷಣವೇ ಪ್ರಧಾನವೆಂಬುದನ್ನು ನೀವು ಮರೆಯಬಾರದು. ಈ ಉತ್ಸವದಲ್ಲಿ ನೀವು ತೋರಿಸಿದಂತಕ್ಕ ಶಿಕ್ಷಣಗಳು ಬಹಳ ಕ್ರಮವಾಗಿದೆ ಎಂದು ನಿಮ್ಮ ಶ್ರದ್ಧೆ ತೋರ್ಪಡಿಸುತ್ತದೆ ಸ್ವರಾಜ್ಯ ಸಂಗ್ರಾಮದಲ್ಲಿ ಒಂದು ಪರ್ಯವಸಾನವು ಕಾಣುತ್ತದೆ ಅದು ಕೀರ್ತಿಯಾದ ವಿಜಯವು. ಧೈರ್ಯದಿಂದಲೂ ಸಾಹಸದಿಂದಲೂ ನೀವು ಕೆಲಸ ಮಾಡ ತೊಡಗಿದರೆ ಆ ಕೀರ್ತಿ ನಿಸ್ಸಂದೇಹವಾಗಿ ನಿಮ್ಮ ಕೈಸೇರುವುದು.

TAI NADU

1—1—1929.

ರಾಷ್ಟ್ರೀಯ ಮಹಾಸಭೆ

ಮ[illegible]

ಇತರ ಸಭೆಗಳು.

ಕಲ್ಕತ್ತೆಯ ದೇಶಬಂಧು ನಗರದಲ್ಲಿ ಈ ತಿಂಗಳು 22 ನೇ ತಾ|| ನ ಆರಂಭವಾಯಿತು ಸರ್ವಪಕ್ಷೀಯ, ಸಾಮಾಜಿಕ, ವ್ಯಾಯಾಮ, ಯುವಕ, ಖಿಲಾಪತ್, ಯಾದವ, ವೈಶ್ಯ, ಮುಸ್ಲೀಮ, ವೈದ್ಯ, ವಾಚನಾಲಯ ಮಹಿಳಾ ಇವೇ ಮೊದಲಾದ ಪರಿಷತ್ತುಗಳ್, ಶ್ರೀಯುತ ಡಾ|| ಅನ್ಸಾರಿ, [illegible] ಪಟವರ್ಧನ್, ನಾರಿಮನ್, ಮಹಮದ್ ಅಲಿ, [illegible]ಸಿಂಗ್, ರಾಜಾಸಾಹೇಬ, ದೇಶಮುಖ, ಆನಿಬೆಸೆಂಟ್, ರವೀಂದ್ರನಾಥ ಠಾಗೂರ್‌ವರೇ ಮೊದಲಾದ ದೇಶಭಕ್ತರುಗಳ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟವು. ಆಯಾ ಪರಿಷತ್ತುಗಳ ಮುಖ್ಯ ಮುಖ್ಯವಾದ ಅಭಿಪ್ರಾಯವು ಸಾವಧಾನವಾಗಿ ಕೊಡಲ್ಪಡುತ್ತಿವೆ.

29 ನೇ ತಾರೀಖಿನಿಂದ ರಾಷ್ಟ್ರೀಯ ಸಭೆ, ಪೋಸ್ಟಲ್ ಕಾನ್‌ಫರೆನ್ಸ್, ಸ್ವಯಂಸೇವಕರ ಸಭೆ, ರಾಷ್ಟ್ರಭಾಷಾ ಸಮ್ಮೇಳನ, ಪ್ರಜಾಪರಿಷತ್ತು ಇವೇ ಮೊದಲಾದುವುಗಳ ಅಧ್ಯಕ್ಷತೆಯನ್ನು ಶ್ರೀಯುತರಾದ ಪಂ. ಮೋತೀಲಾಲ ನೆಹರೂಯವರೂ ಮಹಾತ್ಮ ಗಾಂಧಿಯವರೂ ಮದನ ಮೋಹನ ಮಾಳವೀಯರವರೂ ಜವಾಹಿರ್ ಲಾಲ್ ನೆಹರೂರವರೂ ವಹಿಸುವರು. ಅನೇಕವಾದ ಭಾಷಣಗಳೂ ಚರ್ಚೆಗಳೂ ನಹ ನಡೆಯುವವು.

ಮುಖಂಡರ ಚರ್ಚೆಗಳು.

ನೆಹರೂವರದಿಯಲ್ಲಿ ಬರ್ಮಾ ದೇಶಕ್ಕೆ ಯಾವ ಸ್ಥಾನವು ಕೊಡಲ್ಪಡಬೇಕು. ಸಿಕ್ಕರ ಸ್ಥಾನವು ಹೇಗಿರಬೇಕೆಂಬಿವೇ ಮೊದಲಾದ ಮುಖ್ಯ ವಿಷಯಗಳ ಚರ್ಚೆಯು ಕೆಲಗ ಕಂಡಂತೆ ಮುಖಂಡರಲ್ಲಿ ನಡೆಯಿತು. ಕಾರ್ಯನಿರ್ವಾಹಕ ಮಂಡಲಿಯ ಮೀಟಿಂಗ್ ನಡೆದು ಅಲ್ಲಿ ನೆಹರೂ ಕಮಿಟಿಯ ವರದಿಯಲ್ಲಿ ಸೂಚಿತವಾಗಿರುವ ಕೋಮುವಾರು ಸಮಸ್ಯೆಯ ಪರಿಹಾರಗಳ ವಿಷಯವಾಗಿ ಚರ್ಚೆಯು ನಡೆಯಿತು. ಮು|| ಮಹಮದ್ ಅಲಿಯವರು ಜನರಲ್ ಎಲೆಕ್ಷನ್ನಲ್ಲಿ ಮುಸಲ್ಮಾನರಿಗೆ ಇರಬೇಕಾದ ರಿಯಾಯಿತಿಗಳ ವಿಷಯವಾಗಿ ಮಾತನಾಡಿದರು. ಈ ವಿಷಯದಲ್ಲಿ ಉತ್ತರ ಇಂಡಿಯಾದವರು ಸ್ಪಷ್ಟಪಡಿಸಿದರು. ದೇ ಶ ಭ ಕ್ತ ರಾ ದ ಡಾ|| ಅನ್ಸಾರಿಯವರೂ ಸರ್ ಅಲಿ ಇಮಾಂ ಪಂ|| ಮೋತೀಲಾಲ್‌ನೆಹರೂ, ಪಂ|| ಜವಾಹಿರ್ ಲಾಲ್ ನೆಹರೂರವರೂ ಮೌ|| ಅಬ್ದುಲ್ ಕಲಾಂ ಅಜಾದ್, ಡಾ|| ಅನಿಬೆಸೆಂಟ್ ಪಂ|| ಮಾಳವೀಯ ಮಂಗಳಸಿಂಗ್ ಸರ್ದಾರ್ ಸಿಂಗ್ ಗುರ್ದಿತ್ ಸಿಂಗ್ ಸಿ. ವಿಜಯ ರಾಘವಾಚಾರಿ ಮೌ|| ಜಾಫರಾಲಿ ಡಾ|| ಆಲಂ ಶ್ರೀನಿವಾಸಯ್ಯಂಗಾರ್ ಸೇನ್‌ಗುಪ್ತ ಮತ್ತು ಸತ್ಯಮೂರ್ತಿ ಇವರೇ ಮೊದಲಾದ ಮುಖಂಡರುಗಳೆಲ್ಲರೂ ಚರ್ಚೆಯಲ್ಲಿ ಭಾಗ ತೆಗೆದು ಕೊಂಡಿದ್ದರು. ಸಭಿಕರ ಗಮನವೆಲ್ಲಾ ನೆಹರೂ ಕಮಿಟಿಯ ವರದಿಯ ಮೇಲೆಯೇ ನಿಂತಿತು.

ಸರ್ವಪಕ್ಷೀಯ ಪರಿಷತ್ತು

ಸ್ವಾಗತಾಧ್ಯಕ್ಷರಾದ ಮಿ|| ಸೇನ್‌ಗುಪ್ತರು ನಮ್ಮಲ್ಲಿರುವ ಒಡಕನ್ನು ಮರೆತು ಸರ್ವರೂ ಏಕೀಭವಿಸಿ ಸ್ವರಾಜ್ಯದ ಯೋಚನೆ ಮಾಡಬೇಕು. ಅನ್ಯ ಸರಕಾರದ ಭೇದ ನೀತಿಯನ್ನು ವಿರೋಧಿಸಬೇಕೆಂದು ತಿಳಿಸಿದರು. ಅನ್‌ಸಾರಿಯವರು ನೆಹರೂ ವರದಿಯಲ್ಲಿರುವ ಸ್ವರಾಜ್ಯದ ಅಭಿಪ್ರಾಯಕ್ಕೆ ನಾನು ತುಂಬಾ ಬೆಂಬಲನಾಗಿದ್ದೇನೆ. ಸ್ವಾತಂತ್ರ್ಯಾಪೇಕ್ಷೆಯುಳ್ಳವರೆಲ್ಲರೂ ನನ್ನ ಬೆಂಬಲಕ್ಕೆ ಒತ್ತಾಯ ಕೊಡಬೇಕು ಎಂದು ತಿಳಿಸಿದರು.

ಪಂಡಿತ ನೆಹರೂರವರು ಸರ್ವರೂ ತಮ್ಮ ಕಮಿಟಿಯ ಮುಖ್ಯವರದಿಯನ್ನು ದೂರದೃಷ್ಟಿಯಿಂದ ವಿಚಾರ ಮಾಡಬೇಕೆಂದು ಹೇಳಿದರು. ಮರುದಿವಸ ಪುನಃ ಸಭೆಸೇರಿದಾಗ ಮ|| ಗಾಂಧಿಯವರೂ ಇನ್ನೂ ಇತರರೂ (ಹೊಸಬರು) ಸಭೆಯನ್ನು ಅಲಂಕರಿಸಿದ್ದರು. ಶ್ರೀ|| ಸೇನ ಗುಪ್ತರು ಎಲ್ಲರೂ ಒಟ್ಟಿಗೆ ಸೈಮನ್ ಸಮಿತಿಗೆ ಬಹಿಷ್ಕಾರ ಹಾಕಬೇಕು ಎಂದು ಸೂಚಿಸಿದರು. ಮ|| ಯಾಕೂಬ್ ಹಸನ್‌ರವರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಾವು ಶಸ್ತ್ರಾಸ್ತ್ರವಿಹೀನರಾಗಿದ್ದರೂ ಡೊಮಿನಿಯನ್ ಸ್ಟೇಟಸ್ಸನ್ನು ನ್ಯಾಯ ಮಾರ್ಗದಿಂದ ದೊರಕಿಸಿಕೊಳ್ಳುವ ಸಾಮರ್ಥ್ಯವು ನಮ್ಮಲ್ಲಿದೆ ಎಂದರು. ಸ್ವಾತಂತ್ರ್ಯ ವಾದಿಗಳ ಅಭಿಪ್ರಾಯವು ಮಿ|| ಶ್ರೀನಿವಾಸಯ್ಯಂಗಾರ್ಯರಿಂದ ಪುಷ್ಟೀಕರಿಸಲ್ಪಟ್ಟಿತು. ಮೌಲಾನ ಮಹಮದ್ ಆಲಿಯವರು ಮೇಲಿನ ಠರಾವಿಗೆ ವಿರೋಧವಾದರು. ಜನರಲ್ಲಿ ಗೊಂದಲಾರಂಭವಾಯಿತು. ಮಿ|| ಜಿತೇಂದ್ರಲಾಲ್ ಬ್ಯಾನರ್ಜಿಯವರು ಸಂಪೂರ್ಣ ಸ್ವಾತಂತ್ರ್ಯವೇ ತಮ್ಮ ಧ್ಯೇಯವಾಗಿರಬೇಕೆಂಬ ಸೂಚನೆ ತಂದರು. ಡಾ|| ಆನಿಬೆಸೆಂಟರವರು ಮೇಲಿನ ಸೂಚನೆಗೆ ಉತ್ತರ ಕೊಟ್ಟು ಡೊಮಿನಿಯನ್ ಸ್ಟೇಟಸ್ಸನ್ನು ಸಮರ್ಥಿಸಿ ಭಾಷಣಮಾಡಿದರು. ಶ್ರೀ|| ಚಂದ್ರಪಾಲ್, ಸರ್ ರಾಮಸ್ವಾಮಯ್ಯರ್, ಸರ್ ಅಲ್ಲಿ ಇಮಾಮ್ ಇವರೇ ಮೊದಲಾದವರು ಮೇಲಿನ ಠರಾವಿಗೆ ಬೆಂಬಲರಾದರು ಕೊನೆಯಲ್ಲಿ ಠರಾವು ಪಾಸಾಯಿತು. ಪಂಡಿತ ಜವಾಹಿರ್ ಲಾಲ್ ನೆಹರೂರವರೂ ಜಮ್ನಾದಾಸ್ ಮೆಹತಾರವರೂ ಈ ಸಭೆಯ ಕಾರ್ಯಗಳಲ್ಲಿ ಭಾಗಿಗಳಾಗಿರಲಿಲ್ಲ ಮಹಾತ್ಮಾ ಗಾಂಧೀಜಿಯವರೂ ಕೂಡ ಯಾವ ಭಾಗವನ್ನೂ ವಹಿಸಿರಲಿಲ್ಲ.

ಮೇಲ್ಕಂಡ ಪರಿಷತ್ತು ಪುನಃ ಡಾ|| ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಸೇರಿತು, ಇಂಡಿಯನ್ ಕಾನ್‌ಸ್ಟಿಟ್ಯೂಷನ್ನಿಗೆ ಡೋಮಿನಿಯನ್ ಸ್ಟೇಟ್ಸೇ ತಳಪಾಯವೆಂದು ಶ್ರೀಯುತ ಸೇನ ಗುಪ್ತರು ತಂದಿದ್ದ ಸೂಚನೆಯು ಅನುಮೋದಿಸಲ್ಪಟ್ಟಿತು

ಈ ಸಲಹೆಗೆ ತಕ್ಕಂತೆ ಸ್ವಾತಂತ್ರ್ಯ ಸಂಸ್ಥೆಗಳ ವಿಷಯವಾಗಿ ಒಂದು ವರದಿಯನ್ನು ಶ್ರೀಯುತ ಎಸ್. ಶ್ರೀನಿವಾಸಯ್ಯಂಗಾರ್ಯರು ಸಭೆಗೆ ಒಪ್ಪಿಸಿದರು.

ಜನರಲ್ ಕೌನ್‌ಸಿಲ್ ಮೀಟಿಂಗ್

ಹಿಂದೂ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬರಬೇಕೇ ಅಥವಾ ಬ್ರಿಟಿಷರ ಅಧೀನತೆಯಲ್ಲಿ ಸ್ವಾತಂತ್ರ್ಯವನ್ನನುಭವಿಸುವ ಡೋಮಿನಿಯನ್ ಸರಕಾರಬರಬೇಕೇ ಎಂಬೀ ವಿಚಾರಗಳು ಸ್ವಾತಂತ್ರ್ಯ ಸಂಸ್ಥೆಯ ಜನರಲ್ ಕೌನ್‌ಸಿಲ್ ಮೀಟಿಂಗಿನಲ್ಲಿ ನಡೆದುವು. ಚರ್ಚೆಯ ಪೈಕಿ ಯಾವುದೂ ತೀರ್ಮಾನವಾಗಿಲ್ಲ.

ಹಿಂದೂ ಮಹಾಸಭೆ

[illegible] ಹಿಂದೂ ಮಹಾಸಭೆಯ [illegible] ಗೆ ಡಾಕ್ಟರ್ ಮುಂಜೆಯವರ ಅಧ್ಯಕ್ಷತೆಯಲ್ಲಿ ಸಭೆ[illegible]ತು. ಸಭೆಯಲ್ಲಿ ನೆಹರೂ ವರದಿಗೆ ಸಂಪೂರ್ಣ ಸಮ್ಮತಿಯು ದೊರೆಯಿತು. ದೇಶಭಕ್ತರಾದ ಲಾಲಾ ಲಜಪತ್‌ರಾಯರ ವಿಷಾದಕರವಾದ ಮರಣದ ವಿಷಯದಲ್ಲಿ ಸಭೆಯು ತನ್ನ ಅನುತಾಪವನ್ನು ಸೂಚಿಸಿ ಲಾಹೋರ ಪೋಲೀಸಿನವರ ದೌರ್ಜನ್ಯವನ್ನು ಖಂಡಿಸಿತು. ಲಾಲಾಜಿಯವರ ಸ್ಮಾರಕಾರ್ಥವಾಗಿ ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುವಂಥ ಚಿರಸ್ಥಾಯಿಯಾದ ಕೆಲಸವನ್ನು ಮಾಡಬೇಕೆಂಬ ಸಲಹೆಯನ್ನು ಅಧ್ಯಕ್ಷರು ಸೂಚಿಸಿದರು. [illegible] ಅಂಗೀಕಾರವಾಯಿತು.

ಮುಸ್ಲೀಮರ ಸಭೆ

ಬಂಗಾಳದ ಅಖಿಲ ಪಂಗಡದ ಮುಸ್ಲೀಮರ ಸಭೆಯು ಕಲ್ಕತ್ತಾದಲ್ಲಿ ಈ ತಿಂಗಳು 24 ನೇ ತಾರೀಖಿನಲ್ಲಿ ನಡೆಯಿತು. ಸರ್. ಅಬ್ದುರ್ ರಹೀಮ ರವರು ಅಧ್ಯಕ್ಷರಾಗಿದ್ದರು. ಭಾವೀರಾಜ್ಯ ನೀತಿಯ ವಿಷಯವಾದ ಹಲವು ಠರಾವುಗಳನ್ನು ಸದಸ್ಯರು ಮಂಜೂರು ಮಾಡಿದರು. ಡೊಮಿನಿಯನ್ ಸ್ಟೇಟಸ್ ಸರ್ಕಾರವೇ ಬೇಕು. ಮಧ್ಯವರ್ತಿ ಸರ್ಕಾರವು ವಿದೇಶ ವಿಚಾರ ಮತ್ತು ಸಂರಕ್ಷಣೆಯ ವಿಷಯ ಕಾರ್ಯಭಾಗಗಳನ್ನು ನಡೆಸಬೇಕು. ಈಗಿನ ಚುನಾವಣೆ ಕ್ರಮವು ವಿಸ್ತರಿಸಲ್ಪಡಬೇಕು. ಎಲ್ಲಾ ಯುವಕರೂ ಸರ್ಕಾರವನ್ನು ನಡೆಸುವ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ಹೊಂದಬೇಕು. ಅಲ್ಪ ಪಕ್ಷದ ಕೋಮಿನವರಿಗೆ ಎಲ್ಲಾ ರಕ್ಷಣೆಗಳನ್ನು ಕೊಡಬೇಕು. ಎಲ್ಲಾ ಪಂಗಡಗಳಿಗೂ ಪರಸ್ಪರ ಮಮತೆ ಇರಬೇಕೆಂಬಿವೇ ಮೊದಲಾದ ಠರಾವುಗಳು ಮಂಜೂರಾದುವು.

ಕಾಂಗ್ರೆಸ್ ಸಿನಿಮಾ.

ಕಲ್ಕತ್ತಾಪಟ್ಟಣದ ದೇಶಬಂಧು ನಗರದಲ್ಲಿ ನಡೆಯುತ್ತಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಈಸಲ ಸೇರಿರುವಷ್ಟು ಸಭೆಗಳು ಯಾವ ವರ್ಷವೂ ಸೇರಿರಲಿಲ್ಲವಾದುದರಿಂದ ಈಸಲದ ರಾಷ್ಟ್ರಸಭೆಯ ಪ್ರೇಕ್ಷಕರಾಗಲು ಅವಕಾಶವಿಲ್ಲದಿರುವವರು ಸಿನಿಮಾದಲ್ಲಿ ಪ್ರತಿಯೊಂದು ಭಾಗವನ್ನಲ್ಲಿಯೂ ನೋಡಿ ಸಂತೋಷಪಟ್ಟುಕೊಳ್ಳುವುದಕ್ಕಾಗಿ ಪಂಜಾಬ್ ಸಿನಿಮಾ ಫಿಲಂ ಕಂಪನಿಯವರು ಏರ್ಪಡಿಸಿರುತ್ತಾರೆ.

ಪತ್ರಿಕೆಗಳಿಗೆ [illegible]

ಮೈಸೂರು ಸರ್ಕಾರದವರು ಪ್ರಜಾ ಪ್ರಭುತ್ವಕ್ಕೆ ಉಚಿತವಾದ ಹಲವು ಸೌಕರ್ಯಗಳನ್ನು ಪತ್ರಿಕಾಕರ್ತರಿಗೆ ಕಲ್ಪಿಸಿಕೊಟ್ಟಿದ್ದರು. ಇದ್ದಕ್ಕಿದ್ದ ಹಾಗೇ ಅವನ್ನೆಲ್ಲಾ ಈಗ ನಿಲ್ಲಿಸಿಬಿಟ್ಟರು. ಇದೆಲ್ಲ ಗಣೇಶನ ಪ್ರಸಾದವೇ ಇರಬೇಕು. ಏನಾದರೂ ಆಗಲಿ, ಸ್ವಾಮಿ ಇನ್ನು ಮೇಲಾದರೂ ವರ್ಷಕ್ಕೆರಡು ಸಾರಿ ರಾಜಧಾನಿಯ ಕಡೆ (ಪತ್ರಿಕಾ ವೃತ್ತಿಕಾರರು) ಹೊರಡುತ್ತಿದ್ದ ದಂಡಯಾತ್ರೆಯು [illegible] (ಕಡಿಮೆಯಾಗುತ್ತೋ ಹೆಚ್ಚಾಗುತ್ತೋ ಬಲ್ಲವರು ಯಾರು?) ರಾಜಧಾನಿಯಲ್ಲಿ ಬಟ್ಟೆ ಬಿಡಾರ ದಂಡ ಪಿಂಡ ಇದರ ಮೇಲೆ ವಧೋತ್ಸವ ಈ ಮಹಾನ ಭಾಗಾಗಿ. ಇಷ್ಟಾದರೂ ಕೃತಜ್ಞತೆಯುಂಟೆ? ರಾಮ! ರಾಮ! ಉಪ್ಪಿಟ್ಟವರಿಗೆರಡು ಬಗೆಯುವವರಿಗೆ [illegible]ಯ (ಉದಾರಾತ್ಮ್ಯಯ?) ವನ್ನು ಕೊಡುವರೆ?

[illegible]

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

[illegible]ಕ್ಕೈನಿಯಂ ವ್ಯಾಪಾರಿಗಳು, ಮೈಸೂರು.

[illegible] ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ವಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ [illegible] ಕ್ಯಾಲೆಂಡರ್ ಮತ್ತು ಶ್ರೀ ಮ.ಹಾಪಸ್ನ್ಲಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ [illegible] ಸಿದ್ಧವಾಗಿವೆ. [illegible] ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳ[illegible] ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

[illegible] **ಈ ರತನ್ ಮಿಶ್ರಿ ಹಲ್ವಾ** ವನ್ನು ಸೇವಿಸಿ

[illegible]— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಗೆ ಸ್ವಪ್ನಸ್ಖಲನವಾಗುವಿಕೆ, [illegible] ಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನವಾಗುವಿಕೆ, [illegible] ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, [illegible] ಶರೀರವು ನಶಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, [illegible] ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

[illegible] ಸೇವಿಸಿದಲ್ಲಿ ಗರ್ಭಕೋಶ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತನ್ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು.

"ಭಿಷಗ್ರತ್ನ"

[illegible] ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ ಹೇಚಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಮಾನ್ಯವಾದ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ [illegible] ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು [illegible] ಅಂಟುಗೊಡದೆ ಕಾಪಾಡುತ್ತದೆ.


ಮಕ್ಕಳ ಎಳವು, ನೆಗಡಿ, ಕೆಮ್ಮು, ಶೀತವಾತ ಜ್ವರ, ಚಳಿಜ್ವರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ ಪ್ಲೇಗು ಜ್ವರ ಇನ್‌ಫ್ಲುಯಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲ ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, [illegible] ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಪ್ರಾಣಾಂತಿಯತಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ [illegible] ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 0—4—0 ಮೇರೆ [illegible] ಸೀಸೆ 1 [illegible] 6 ಕ್ಕೆ 1—8—0 [illegible] 12 ಕ್ಕೆ 2—13—0 25 ಕ್ಕೆ [illegible]—3—0.

ಭಿಷಗ್ರತ್ನ

ಬ್ರಾಂಚಾಫೀಸು	ಪಾಳ್ಯದ ವೆಂಕಟಾಚಲ ಪಂಡಿತರು
ಶ್ರೀ [illegible] ವೈದ್ಯ [illegible],	ಶ್ರೀ [illegible] ವೈದ್ಯಶಾಲಾ
[illegible]	ಹೆಡ್ಡಾಫೀಸು, ಮೈಸೂರು



[illegible] ಕೈಬಳೆಗಳೂ [illegible] ಆಭರಣಗಳ [illegible] ಸಮ್ಮಲ್ಲಿ [illegible] ಸಿಗುತ್ತವೆ.

[illegible] ಇತರ ಕಡೆಗಳ [illegible] ಇತರ ಕಡೆಗಳ [illegible]

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿ.

ಯಸ್ ನರಸಿಂಹ ಅಯ್ಯರ್	ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ
ಕೆನಾರಾಯಣಪ್ಪ	ನಗರ್ತಪೇಟೆ, ಬೆಂಗಳೂರು

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore

Regd No. M 222

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ— ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ... ಸಾಸ್ರೆಕ್ಕೆ ...

ಸಂಪುಟ ೧] ಬುಧವಾರ ೨ ಜನವರಿ ೧೯೨೯ [ಸಂಚಿಕೆ ೮೯

TAI NADU

2-1-1929

ಹೊಸ ವರ್ಷ

ನಾವಿಂದಿ ಒಂದೈನೂರು [illegible] ಇಪ್ಪತ್ತೊಂಬತನೆಯ [illegible] ಸವಿ [illegible] ನಾಡಿನ ಒಂದ [illegible] ಇಪ್ಪತ್ತೊಂಭತ್ತು [illegible] ನವವರ್ಷ ನಿನ್ನೆ ಆರಂಭವಾಯಿತು. 1928 ನೆ [illegible] ನಮ್ಮ [illegible] ಅಶುಭವೆಂದು ಹೇಳಬಹುದು. ಒಂದಲ್ಲ ಒಂದು ತೊಂದರೆಗಳು ನಮ್ಮ ಸಂಸ್ಥಾನಕ್ಕೆ ಪ್ರಾಪ್ತವಾಗುತ್ತಲೇ ಬಂದವು. ಕಳೆದ ವರ್ಷದ ಜುಲೈತಿಂಗಳ ಅಂತ್ಯಭಾಗದಲ್ಲಿ ನಡೆದ ಘೋರ ಕೃತ್ಯಗಳು ಐವತ್ತು ವರ್ಷಗಳಿಂದಲೂ ನಮ್ಮ ಸಂಸ್ಥಾನವು ಸಂಪಾದಿಸಿದ ಕೀರ್ತಿಯನ್ನು ಹಾಳುಮಾಡಿದವು. ಸರ್ಕಾರದವರು [illegible] ಅಸಮರ್ಥರೆಂದು ಹೆಸರನ್ನು ತಂದುಕೊಂಡರು. ಪ್ರಜೆಗಳಿಗೆ ಸರ್ಕಾರದವರ ನಿಷ್ಪಕ್ಷಪಾತತೆಯಲ್ಲಿಯೂ ಅನುಮಾನವು ಹುಟ್ಟಿ [illegible] ಅಸಮಾಧಾನವನ್ನು ಹೋಗಲಾಡಿಸಿ ಶಾಂತಿಸ್ಥಾಪನೆಯ ಮಾರ್ಗವನ್ನು ಸೂಚಿಸುವುದಕ್ಕಾಗಿ ವಿಶ್ವೇಶ್ವರಯ್ಯ ಕಮಿಟಿಯು ಏರ್ಪಡಿಸಲ್ಪಟ್ಟಿತು. ಈ ಕಮಿಟಿಯವರೇನೋ ತಮ್ಮ ಕೆಲಸವನ್ನು ಪೂರ್ತಿ ಮಾಡಿ ಸರಕಾರಕ್ಕೆ ವರದಿಯನ್ನು ಒಪ್ಪಿಸಿದರು. ಆದರೆ ಸರ್ಕಾರದವರು ಮಾತ್ರ ಇದುವರೆಗೂ ಆ ವರದಿಯನ್ನು ಪ್ರಕಾಶಪಡಿಸಿಲ್ಲ. ಪ್ರಜೆಗಳೇನೋ ಕಮಿಟಿಯ ತೀರ್ಮಾನವನ್ನು ತಿಳಿದುಕೊಳ್ಳಲು ಬಹಳ ಕುತೂಹಲದಿಂದಿದ್ದಾರೆ. ಅದನ್ನು ಪ್ರಕಾಶಪಡಿಸದೆ ಇರುವುದರಿಂದ ಪ್ರಜೆಗಳ ಅಸಮಾಧಾನವು ಹೆಚ್ಚುವುದಕ್ಕೆ ಇನ್ನೂ ಅವಕಾಶವಾಯಿತು. ಬೇಕಾದವರು ಬೇಕಾದ ಹಾಗೆ [illegible] ತಿರುಗಲಾರಂಭಿಸಿದರು. ಸರ್ಕಾರದವರು ಮಾತ್ರ ಮೌನವನ್ನು ತಾಳಿದರು. ಈ [illegible] ರಾಜಿಯ ಮಾತುಗಳು ಬೇರೆ ಸಂದೇಹವನ್ನು [illegible] ಮಾಡುತ್ತಿರುವುವು. [illegible] ಅನುಮಾನವೇ ಸಾಮ್ರಾಜ್ಯವನ್ನು ಮಾಡುತ್ತಿರುವುದು. ಈ ಅನುಮಾನ ಸಾಮ್ರಾಜ್ಯಕ್ಕೆ ಸರಕಾರದವರ [illegible] ಮುಖ್ಯ ಕಾರಣ. ಜುಲೈ [illegible] ಗಲಭೆಗಳೆಲ್ಲಾ [illegible] ಸರ್ಕಾರದವರು ಶಿಕ್ಷೆ ನಡೆ [illegible] ಅವರನ್ನು ಶಿಕ್ಷಿಸದೆ ಘೋಷ್ಯಾಕಾಶಗಳೇನೂ ತಲೆದೋರಿಲ್ಲ [illegible] ಮಾಡುವುದೇ ಸರ್ಕಾರದವರ ಪ್ರಥಮ ಕರ್ತವ್ಯ. ಈ ಕರ್ತವ್ಯವನ್ನು ನಡೆಸಿದ್ದರೆ ಈ ಸಕಾರಣವು ಇದ್ದಿರಲಿಲ್ಲದಂತೆಯೇ ಸರಿ. ಸರ್ಕಾರದವರು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕಿಂತ ತಾವೂ ಮನುಷ್ಯರು, ತಾವೂ ತಿಳಿಯದೆ ತಪ್ಪು ಮಾಡುವುದುಂಟು ಎಂದು ಒಪ್ಪಿಕೊಂಡು ಸರ್ಕಾರದ ರಥವನ್ನು ಮುಂದಕ್ಕೆ ಸಾಗಗೊಡಿಸಬೇಕು. ಇದರಿಂದ ಸರ್ಕಾರದ ದರ್ಪಕ್ಕೇನೂ ಕುಂದಕ ಬರುವುದಿಲ್ಲ. ಸರ್ಕಾರದ ಅಧಿಕಾರದಲ್ಲಿರುವ ಕೆಲವು ವ್ಯಕ್ತಿಗಳಿಗೆ ಅವಮಾನವಾದಂತೆ ತೋರಬಹುದು. ವ್ಯಕ್ತಿಗಿಂತಲೂ ಸರ್ಕಾರವು ಹೆಚ್ಚು. ಸರ್ಕಾರವನ್ನು ಉಳಿಸುವುದಕ್ಕಾಗಿ ವ್ಯಕ್ತಿಗಳು ಸ್ವಾರ್ಥತ್ಯಾಗವನ್ನು ಮಾಡಬೇಕು. [illegible] ದಿವಾನರೂ ಎಕ್ಸಿಕ್ಯುಟೀವ್ ಕೌನ್ಸಿಲರುಗಳೂ ಅವ[illegible]ಪಡ್ಡರೆ ರಾಜೀನಾಮೆಯನ್ನು ಕೊಟ್ಟು ನಮ್ಮ ಸಂಸ್ಥಾನದ ಹೆಸರನ್ನು [illegible]ಬೇಕು. ಈ ಎರಡು ಮೂರು ವ್ಯಕ್ತಿಗಳ ದರ್ಪವು ಕಡಿಮೆಯಾದ ಮಾತ್ರಕ್ಕೇನೂ ಅಪೋಹ ಬರಲಿಲ್ಲ. ಯಾವ ವ್ಯಕ್ತಿಗಳ ಆಡಳಿತದಿಂದ ನಮ್ಮ ಸಂಸ್ಥಾನಕ್ಕೆ ಇಷ್ಟು ಕೆಟ್ಟ ಹೆಸರು ಬಂತೋ ಅವರು ತಾವೇ ರಾಜೀನಾಮೆಯನ್ನು ಕೊಟ್ಟು, ನಮ್ಮ ಅವಿವೇಕದಿಂದ ಸಂಸ್ಥಾನಕ್ಕೆ ಈ ಕೆಟ್ಟ ಹೆಸರು ಬಂದಿತು. ಈ ಅನರ್ಥಗಳಿಗೆಲ್ಲಾ ನಾವೇ ಜವಾಬ್ದಾರರು. ಅದಕ್ಕೆ ನಾವು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇವೆ ಎಂದು ಚಿತ್ತಶುದ್ಧಿಯಿಂದ ಪ್ರಪಂಚಕ್ಕೆ ಜಾಹೀರಾಮಾಡಿ ತಮ್ಮ ಅಧಿಕಾರದಿಂದ ನಿವೃತ್ತರಾದರೆ [illegible] ಸುಕರವಾಗುವುದು. ಹೊಸ ದಿವಾನರೂ ಎಕ್ಸಿಕ್ಯುಟೀವ್ ಕೌನ್ಸಿಲರುಗಳೂ ಬಂದು ದುಷ್ಟರನ್ನು ನಿಗ್ರಹಿಸಿ ನಮ್ಮ ಸಂಸ್ಥಾನದ ಕೀರ್ತಿಯನ್ನು ಪುನಃ ಸ್ಥಾಪಿಸುವುದಕ್ಕೆ ಅವಕಾಶವಾಗುವುದು. ಹಳೆ ಕೊಳೆಯೆಲ್ಲಾ ಹಳೇ ವರ್ಷದಲ್ಲೇ ತೊಲಗಿ ಹೊಸ ವರ್ಷದಲ್ಲಿ ಆಶೆಯೂ ಉತ್ಸಾಹವೂ ಚೈತನ್ಯವೂ ನಮ್ಮ ಸಂಸ್ಥಾನದಲ್ಲಿ ಆವಿರ್ಭವಿಸುವುದಕ್ಕೆ ಅವಕಾಶವಾಗಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಹಾಸನ ಡಿಸ್ಟ್ರಿಕ್ಟ್ ಕಾನ್‌ಫರೆನ್ಸ್

ಹಾಸನ ಡಿಸ್ಟ್ರಿಕ್ಟ್ ಕಾನ್‌ಫರೆನ್ಸಿನ ಹನ್ನೊಂದನೆಯ ಅಧಿವೇಶನವೂ ಮತ್ತು ಪ್ರದರ್ಶನವೂ ಸಹ ಈ ತಿಂಗಳು 3 ನೇ ತಾ|| ಗುರುವಾರದಿಂದ ಮೂರು ದಿನಗಳು ಹಾಸನದಲ್ಲಿ [illegible] ದನಗಳ ಪ್ರದರ್ಶನಮಂಟಪದಲ್ಲಿ ನಡೆಯುತ್ತವೆ. [illegible] ಸಿ. ಎಸ್. ಬಾಲಸುಂದರಂ ಅಯ್ಯರ್ [illegible] ರವರು ಕಾನ್‌ಫರೆನ್ಸನ್ನು ಪ್ರಕಾಶ[illegible] ರಾ|| ರಾ|| ರವರಾದ ಶ್ರೀಯುತ ಎಸ್. [illegible] ರವರು ಕಾನ್‌ಫರೆನ್ಸಿನ ಅಧ್ಯಕ್ಷತೆಯನ್ನು ವಹಿಸುವರು.

[illegible] ಸ್ಕೂಲು.

4 ನೇ ತಾ|| [illegible] ಯ ಇಲಾಖೆಯ [illegible] ಎಲ್. ಸಿ. ಕೋಲ್‌ಮನ್‌ರವರು [illegible] ಒಂದು ವ್ಯವಸಾಯ ಸ್ಕೂಲಿನ ಪ್ರಾರಂಭೋತ್ಸವನ್ನು [illegible].

ಸತ್ಕಾರ.

ಧರ್ಮಕಾರ್ಯ[illegible] ಅವರಿಗೆ 4 ನೇ ತಾ. ಮಧ್ಯಾಹ್ನ ದನಗಳ ಪ್ರದರ್ಶನ ಮಂಟಪದಲ್ಲಿ ಸತ್ಕಾರಸಭೆಯ ನಡೆಯುವುದು.

ಬೋರ್ಡಿಂಗ್ ಹೋಮ್.

ರಾಜಮಂತ್ರಪ್ರವೀಣ ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು 6 ನೆ ತಾ ಭಾನುವಾರ ಬೆಳಿಗ್ಗೆ ಆದಿಕರ್ಣಾಟಕ ಬೋರ್ಡಿಂಗ್ ಹೋಮ್ ಮತ್ತು 7 ನೇ ತಾ. ಬೆಳಿಗ್ಗೆ 9: ಘಂಟೆಗೆ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರದ ಹೊಸ ರಸ್ತೆಯ ಪ್ರಾರಂಭೋತ್ಸವಗಳನ್ನೂ ಸಹ ನೆರವೇರಿಸುವರು.

ಶ್ರೀ ರಾಮ ಸಿನೀಮಾ.

ರಾಜಧಾನಿಯ ಶ್ರೀ ರಾಮ ಸಿನಿಮಾ ಕಂಪನಿಯವರು ನಿನ್ನೆಯ ದಿನ 'ಒನ್ನಾರಿ ಬಾಲ ಅಥವಾ ವೇಣುಗಾನ ದೇವಿ' ಎಂಬ ವಿಚಿತ್ರ ನಾಟಕವನ್ನು ಪ್ರದರ್ಶಿಸಿ ಬಂದಿದ್ದ ಪ್ರೇಕ್ಷಕರುಗಳೆಲ್ಲಾ ತಮ್ಮ ಸಿನಿಮಾ ಕಂಪನಿಯ [illegible] ಶ್ರೀ ಕೋದಂಡ ರಾಮರ ಫೋಟೋ ಇರುವ ಕ್ಯಾಲೆಂಡರುಗಳ [illegible] ಹಂಚಿದರೆಂದು ತಿಳಿದುಬರುತ್ತೆ.

ವಿಶ್ವೇಶ್ವರಯ್ಯ ಸಮಿತಿ ವರದಿಯ ಸಾರಾಂಶ

೧. ಸೈಕಲ್ ಷಾಪ್ ಮಹಡಿಯಿಂದಲೂ [illegible] ಮನೆಯಿಂದಲೂ ಗುಂಡಿನೇಟುಗಳು ಬಂದವು. [illegible] ಮನೆಯಂಗಳದಿಂದ ಮುಸಲ್ಮಾನರು ಕಲ್ಲು ಬಿಸಾಡಿದರು. ೨. ಪೋಲೀಸಿನವರೂ, ಮ್ಯಾಜಿಸ್ಟ್ರೇಟರೂ ತಮ್ಮ ಕರ್ತವ್ಯವನ್ನು ನೆರವೇರಿಸಲಿಲ್ಲ. ಅವರ ವರ್ತನೆಗೆ ಕಾರಣ ಅವರಿಗೇ ಗೊತ್ತು. ೩. ಅಂದಿನ ಘಟನೆ [illegible] ರಿಪಾದರೂ ಪ್ರಭುತ್ವವು ಕೀಲು ತಪ್ಪಿ ಕುಸಿದು [illegible] ಖಾನ್ ಬಹದ್ದೂರರಿಗೂ, ದಿವಾನರಿಗೂ, ಶಿಕ್ಷಾಧಿಕಾರಿಗಳಿಗೂ ಮಧ್ಯೆ ನಡೆದ ಅಂತರ್ವ್ಯ[illegible] ರವನ್ನು [illegible] ಕೊಂಡುದೇ [illegible] ಭೀತಿ ಸಂದೇಹ[illegible] [illegible] ಗಳ. ಈ ವಿಷಯದಲ್ಲಿ [illegible] ಯಿಂದ ವರ್ತಿಸಲಿಲ್ಲ. [illegible] ಖಾನ್ ಬಹದ್ದೂರರದೇ ಈ ನಾಟಕದಲ್ಲಿ ಪ್ರಧಾನ ಪಾತ್ರ. ೬. ಹುಡುಗರ ಹಟವು ನ್ಯಾಯವಾದುದು; [illegible] ದೂ ಜನರ ಸಹಾನುಭೂತಿಯೂ ಸಹಜವಾದುದು. [illegible] ಲವು ಮುಸಲ್ಮಾನರು ಕೊಂಚಮಟ್ಟಿಗೆ ಸಿದ್ಧಪಡಿಸಿಕೊಂಡಿದ್ದರು; ಆ ರಾತ್ರಿ ಗಲಾಟೆಗೆ ಮೊದಲಿಟ್ಟವರು ಅವರೇ. ೭. ಸರ್ಕಾರದ ಪ್ರ[illegible] ಪತ್ರಿಕೆಗಳು ಸತ್ಯವನ್ನು ಮುಚ್ಚಿಟ್ಟವು. ವೃತ್ತಪತ್ರಿಕೆಗಳು ಸರಕಾರವನ್ನು ಆಗ್ರಹ[illegible] ದಿಂದ ಕಂಡವು. ೮. ವೃತ್ತಪತ್ರಿಕೆಗಳಿಗೆ ಬ್ರಿಟಿಷ್ ಹಿಂದೂಸ್ಥಾನದಲ್ಲಿರುವಷ್ಟೇ ಸ್ವಾತಂತ್ರ್ಯವನ್ನು ಕೊಡಬೇಕು. ಆದರೆ ಅವುಗಳ ಮೇಲ್ವಿಚಾರಣೆಗಾಗಿ ಜಾಹಿ[illegible]ನರ ಸಮಿತಿಯೊಂದು ನಿರ್ಮಾಣವಾಗಿ, ಆದರ ಅಧ್ಯಕ್ಷರು ಒಬ್ಬ ಅಧಿಕಾರಿಗಳೇ ಆಗಿರಬೇಕು. ೯. ಪ್ರಜಾಸತ್ತಾತ್ಮಕ ಪ್ರಭುತ್ವವು ಮೈಸೂರಲ್ಲಿ ಏರ್ಪಡಬೇಕು. ಕಕ್ಷಿಪ್ರತಿ ಕಕ್ಷಿ (ಪಾರ್ಟಿ ಸಿಸ್ಟಂ) ಗಳ ಮೂಲಕ ಸರ್ಕಾರ ನಡೆಸುವ ಪದ್ಧತಿಯನ್ನು ಪ್ರಾರಂಭಿಸಬೇಕು. [illegible] ದು ಸಂಪೂರ್ಣವಾಗಿ ಆಚರಣೆಗೆ ಬರುವ ವರೆಗೂ [illegible] ವಾನರೊಬ್ಬರು ಇರಬೇಕು. ಆದರೆ ಅವರ ಆಡಳಿತ ಕಾಲವು ನಿಯತವಾಗಿರಬೇಕು. ೧೦. ಕೈಗಾರಿಕೆಗಳ ಅಭಿವೃದ್ಧಿಗಾಗಿ ಒಂದು ಸಮಿತಿ ಏರ್ಪಡಾಗಿ, ಸುಮಾರು ೨೦ ಲಕ್ಷ ಹಣ ಅದಕ್ಕೆ ಒದಗಿಸಬೇಕು, ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. [illegible] ನಿರುದ್ಯೋಗ ಸಮಸ್ಯೆಯನ್ನು ಪೂರ್ಣ ಮಾಡಬೇಕು. ೧೧. ದೇಶದ ಸಾಂಪತ್ತಿಕ ಸ್ಥಿತಿಯನ್ನು ನಿಷ್ಕೃಷ್ಟವಾಗಿ ತಿಳಿಯಲಿಕ್ಕಾಗಿ ವರ್ಷೇ ವರ್ಷೇ ಖಾನೇಷುಮಾರಿಯನ್ನು ಪ್ರಕಟಿಸಲು ಏರ್ಪಾಡುಮಾಡಬೇಕು. ೧೨. ಈ ವರದಿಯನ್ನು ಪ್ರಸಿದ್ಧಪಡಿಸಿ, ಪ್ರತಿಯೊಂದಕ್ಕೆ ಒಂದು ರೂಪಾಯಿಗೆ ಮೀರದಂತೆ ಬೆಲೆ ಹಾಕಿ ಮಾರಬೇಕು.

ಸರ್ಕಾರಿ ಸುದ್ದಿ

ಸಬ್ ಟ್ರಾ|| ರಾದ ಮ|| ರಾ|| ರಾಮಕೃಷ್ಣಯ್ಯನವರನ್ನು ಮತ್ತು ಎಕ್ಸೈಜು ಇನ್‌ಸ್ಪೆಕ್ಟರಾದ ಮ|| ರಾ|| ಕೆ. ರಂಗಪ್ಪನವರನ್ನೂ ಮಂಜರಾಬಾದ್ ಮತ್ತು ಕೊಪ್ಪ ತಾಲ್ಲೋಕುಗಳ ರಕಾರ್ಡ್ ಆಫ್ ರೈಟ್ಸ್ ಕೆಲಸಕ್ಕಾಗಿ ಡೆ|| ಅಮಲ್ದಾರರಾಗಿ ನೇಮಿಸಿರುತ್ತೆ.

ಬಡ್ತಿ.

ಸಾಗರದ (11) ನೇ ದರ್ಜೆಯ ಮ್ಯಾ. ಮ|| ರಾ|| ಜಿ. ರುದ್ರಪ್ಪನವರು ಮೊದಲನೆಯ ದರ್ಜೆಯ ಮ್ಯಾಜಿಸ್ಟ್ರೇಟರ ಪದವಿಗೆ ಬಡ್ತಿ ಮಾಡಲಟ್ಟಿರುತ್ತಾರೆ.

ತಾಯಿನಾಡು.

2—1—1929.

ರಾಷ್ಟ್ರೀಯ ಮಹಾಸಭೆ

ಮತ್ತು

ಇತರ ಸಭೆಗಳು.

—

ಪರಕೀಯರ ಅಭಿನಂದನೆಗಳು.

ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರಾದ ಮಿ|| ತರಟ್ ಎಂಬುವರು 'ರಾಷ್ಟ್ರೀಯ ಮಹಾಸಭೆಗೆ ನನ್ನ ವಿಶ್ವಾಸ ಪೂರ್ವಕವಾದ ಅಭಿನಂದನೆಗಳು. ಆ ಕಾರ್ಯ ಕಲಾಪಗಳಿಂದ ಮಿತ್ರರಿಗೆ ಮತ್ತು ಹಿಂದೀಯರಿಗೆ ಸಂತೋಷವಾಗಲಿ. ಏಕಮತ್ಯವುಂಟಾಗಲಿ ಮನಸ್ತಾಪಗಳು ಮಾಯವಾಗಲಿ ದಬ್ಬಾಳಿಕೆಯ ಸಂಕಷ್ಟಗಳಿಗೆ ತುತ್ತಾಗಿರುವ ಪರಾಧೀನ ಜನಾಂಗವು ಅಂತಃಕಲಹಗಳಿಂದ ನರಳುವುದೇ ಆಳರಸರ ಬಲವು. ಆದ್ದರಿಂದ ಕಾಂಗ್ರೆಸ್ಸಿನ ಧ್ಯೇಯಗಳು ಏಕಮತ್ಯ ಮತ್ತು ಸ್ವಾತಂತ್ರ್ಯ ಎಂಬ ಪವಿತ್ರಶಬ್ದಗಳೇ ಆಗಿರಬೇಕು. ಏಕಮತ್ಯವಿದ್ದರೆ ಸ್ವಾತಂತ್ರ್ಯವು ಕೈಸೇರುವುದು. ಕಾಂಗ್ರೆಸ್ಸಿಗೆ ವಿಜಯವಾಗಲಿ' ಎಂಬ ಅಭಿನಂದನೆಗಳನ್ನು ಕಳುಹಿಸಿರುತ್ತಾರೆ.

ಆಂಗ್ಲಪಾರ್ಲಿಮೆಂಟ್ ಸದಸ್ಯರ ಸಂದೇಶ

ರಾಷ್ಟ್ರೀಯ ಮಹಾ ಸಭೆಗೆ ಆಂಗ್ಲ ಪಾರ್ಲಿಮೆಂಟ್ ಸಭಾಸದರಾದ ಶ್ರೀಯುತ ಸಕಲತ್‌ವಾಲಾರವರು ಬ್ರಿಟಿಷರಲ್ಲಿ ಕೂಲಿಕಾರರೇ ಮೊದಲಾದ ಎಲ್ಲಾ ಪಕ್ಷದವರೂ ಅತ್ಯಂತ ಸ್ವಾರ್ಥಿಗಳೂ ಸಾಮ್ರಾಜ್ಯವಾದಿಗಳೂ ಆಗಿರುತ್ತಾರೆ. ಆದ್ದರಿಂದ ಅವರಲ್ಲಿ ಹಿಂದೂ ದೇಶವು ನಂಬಿಗೆಯನ್ನಿಡುವುದು ಮೂರ್ಖತನವೇ ಸರಿ. ಡೊಮಿನಿಯನ್ ತರಗತಿಯನ್ನು ಬೇಡುವುದು ವಿಚಾರಹೀನತೆಯಾದುದು ಎಂದು ಬಹು ಕಡು ತರವಾದ ಭಾಷೆಯಲ್ಲಿ ಕ್ರಮವಾಗಿ ವಿವೇಚಿಸಿರುವರು. ಸ್ವತಃ ಗಳಿಸಿದ ಸ್ವಾತಂತ್ರ್ಯವೇ ಹಿಂದೂ ದೇಶಕ್ಕೆ ಒಂದು ತರಣೋಪಾಯವೆಂದು ಅವರ ಅಭಿಪ್ರಾಯ.

ಕಾರ್ಯನಿರ್ವಾಹಕ ಮಂಡಲಿ

ಕಾರ್ಯನಿರ್ವಾಹಕ ಮಂಡಲಿಯವರು ಅಮೇರಿಕ [illegible] ಮತ್ತು [illegible] ಈ ಸ್ಥಳಗಳ ಕಾಂಗ್ರೆಸ್ ಕಮಿಟಿಗಳನ್ನು ಹಿಂದೀ ರಾಷ್ಟ್ರೀಯ ಮಹಾಸಭೆಗೆ ಸೇರಿಸಿ ಕೊಂಡರು.

ಸ್ವಾತಂತ್ರ್ಯದ ಧ್ಯೇಯಕ್ಕೆ ಬಾಧಕ ತರದಂತೆ ಡೊಮಿನಿಯನ್ ತರಗತಿಯನ್ನು ಸ್ವೀಕರಿಸುವ ಠರಾವಿನಲ್ಲಿ ಸ್ವಲ್ಪ ಚರ್ಚೆ ನಡೆಯಿತು. ಡಿಲ್ಲಿಯ ಅ. ಭಾ. ಕಾ|| ಸಭೆಯಲ್ಲಿ ಪಾಸಾದ ನಿರ್ಣಯವನ್ನೇ ಮನ್ನಿಸಬೇಕೆಂದು ಶ್ರೀನಿವಾಸಯ್ಯಂಗಾರ್ಯರ ಹಠವು ನೈಜವಾದ ಸ್ವಾತಂತ್ರ್ಯವು ಸಾಮ್ರಾಜ್ಯದ ಸಂಬಂಧವನ್ನು ಕಡಿದು ಹಾಕುವುದರಲ್ಲಿಯೇ ಇರುವುದೆಂಬ ಶಬ್ದಗಳನ್ನು ತೆಗೆಯಬೇಕೆಂಬುದು ಪಂಡಿತ ಮೋತೀಲಾಲರ ಅಭಿಪ್ರಾಯವಾಗಿದೆ. ಈ ವಿವಾದವು ವಿಪರೀತವಾಗಿ ಕೊನೆಯಲ್ಲಿ ಶ್ರೀಯುತ ಅಯ್ಯಂಗಾರ್ಯರು ಸಭಾಪರಿತ್ಯಾಗ ಮಾಡಿದರು. ನಿರ್ಣಯವಾಗದ ಸಲುವಾಗಿ ರಾ|| ಸಭೆಯ ವಿಷಯ ನಿಯಾಮಕ ಸಮಿತಿಯು ಮರುದಿನಕ್ಕೆ ಹಾಕಲ್ಪಟ್ಟಿರುತ್ತೆ.

ಸೈಮನರಿಗೆ ತಿರಸ್ಕಾರ.

ರಾಷ್ಟ್ರೀಯ ಮಹಾಸಭಾಧ್ಯಕ್ಷರ ಬಂದನಂತರ ಸೈಮನರ ಸಮಿತಿಯು ಕಲ್ಕತ್ತಾ ನಗರಕ್ಕೆ ಬಂದಿತು. ಆದರೆ ಹೌರಾ ಸ್ಟೇಷನ್ನಿನಲ್ಲಿ ರಾಷ್ಟ್ರಾಧ್ಯಕ್ಷರಿಗಾಗಿ ಮಾಡಿದ್ದ ಅಲಂಕಾರಗಳೆಲ್ಲಾ ಜರುಗಿಸಲ್ಪಟ್ಟಿದ್ದು. ಸೈಮನರ ಆಗಮನಕ್ಕೆ ಅಲಂಕಾರವೂ ಇಲ್ಲ. ಆತಿಥ್ಯವೂ ಇಲ್ಲ. ಭಾರತೀಯರೆಲ್ಲರಿಗೂ ಬೇಡವಾದ ಸೈಮನ್ ಸಮಿತಿಗೆ ತಕ್ಕ ತಿರಸ್ಕಾರವೇ ಆಯಿತು. ಇದಕ್ಕೆ ಆ ಸಮಿತಿಯಿಂದ ಹಿಂದೂ ದೇಶಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲವೆಂಬುದೇ ಮುಖ್ಯವಾದ ಕಾರಣ.

ಮಹಾಸಭೆಯ ಪ್ರದರ್ಶನಾಲಯ.

ಕಾಂಗ್ರೆಸ್ ಪ್ರದರ್ಶನಾಲಯವು ಬಹಳ ಪ್ರಯತ್ನದಿಂದಲೂ ಸಾಹಸದಿಂದಲೂ ನಿರ್ಮಿಸಲ್ಪಟ್ಟಿದೆ. ಈ ಆಲಯದ ಕಾರ್ಯದರ್ಶಿತ್ವವನ್ನು ವಹಿಸಿದ್ದ ಶ್ರೀಯುತ ನಳಿನಾಂಜನ ಸರ್ಕಾರ್ ಎಂಬುವರು ತೋರಿಸಿದ ಸಾಹಸವು ವರ್ಣಿಸಲಸದಳವೇ ಸರಿ. ಪ್ರದರ್ಶನಾಲಯದ ಆನಾವರಣ ಸಮಾರಂಭೋತ್ಸವವು ಡಾ| ಅನ್ಸಾರಿಯವರಿಂದ ತಾ 20-12-28 ರಲ್ಲಿ ನೆರವೇರಿಸಲ್ಪಟ್ಟಿತು. ಈ ಉತ್ಸವದಲ್ಲಿ ಶ್ರೀಯುತರುಗಳಾದ ಪಂ|| ಜವಾಹಿರ್ ಲಾಲ್ ನೆಹರೂರವರೂ ಶ್ರೀ|| ಸತ್ಯಮೂರ್ತಿ ಶ್ರೀಮತಿ ಸರೋಜಾದೇವಿ ಮೌ|| ಅಬ್ದುಲ್ ಕಲಂ ಅಜಾದ್ ಮೊದಲಾದ ಮಹನೀಯರುಗಳು ಭಾಗಿಗಳಾಗಿದ್ದರು. ಪ್ರದರ್ಶನ ಸಭಾಮಂಟಪವು ಬಹಳ ವೈಭವದಿಂದ ಕೂಡಿತ್ತು, ಈ ಪ್ರದರ್ಶನಕ್ಕೆ ಹಿಂದು ಸ್ಥಾನ ವೆಂದು ಹೇಳಿ ಕೊಳ್ಳುತ್ತಿರುವ ಬ್ರಿಟಿಷ್ ಸರ್ಕಾರದ ಯಾವ ಸಹಾಯವೂ ಆಗಿಲ್ಲ ಕಲ್ಕತ್ತಾ ನಗರದ ಪೌರಕಾರ್ಯ ಸಭೆಯವರು ಮಾತ್ರ ಇದಕ್ಕಾಗಿ 25000 ರೂಪಾಯಿಗಳ ಸಹಾಯ ಮಾಡಿರುವರು. ಅವರ ಔದಾರ್ಯವನ್ನು ವ್ಯಕ್ತ ಪಡಿಸುತ್ತೆ. ಖಾದಿಯನ್ನಿಡುವುದು ಸ್ವಾತಂತ್ರ್ಯ ಧ್ಯೇಯಗದ ಚಿನ್ಹೆ ಯೆಂದೇ ಹೇಳಬೇಕೆಂದು ಅನ್ಸಾರಿಯವರು ಸೂಚಿಸಿದರು.

ಯುವಕ ಸಮ್ಮೇಳನ

ಅಖಿಲ ಭಾರತ ಯುವಕ ಸಮಾಜದ ಮೂರನೆಯ ಅಧಿವೇಶನವು ಡಿಸೆಂಬರ್ 25 ನೇ ತಾರೀಖಿನಲ್ಲಿ ನಡೆಯಿತು. ಸುಭಾಷ್ ಚಂದ್ರ ಬೋಸರವರು ಮ|| ಗಾಂಧಿಯವರ ತತ್ವವನ್ನೂ ಶ್ರೀಯುತ ಅರವಿಂದೋ ಗೋಸಾಯರ ತತ್ವಗಳನ್ನೂ ಪರಿಶೀಲಿಸಿ ಮಹಾತ್ಮಾಗಾಂಧಿಯವರ ತತ್ವವು ಪುರಾತನ ಎತ್ತಿನ ಬಂಡಿಗಳ ಕಾಲಕ್ಕೆ ನಮ್ಮನ್ನು ಸೆಳೆಯುತ್ತದೆಂದೂ ಪ್ರಾಕೃತಿಕ ಭಾವವನ್ನು ಹೊಡದಾಡದೇ ದೀರ್ಘಾಲೋಚನೆಯಲ್ಲಿ ಮಗ್ನರಾಗಿರಬೇಕೆಂಬ ಶ್ರೀಯುತ ಗೋಸಾಯರವರ ಉದ್ದೇಶ್ಯವು ಕಾರ್ಯಕಾರಿಯಲ್ಲವೆಂದೂ ಆಧುನಿಕ ಶತ್ರುಗಳನ್ನು ಆಧುನಿಕ ರೀತಿಯಿಂದ, ಆರ್ಥಿಕ ಮತ್ತು ರಾಜಕೀಯ ಮುಖೇನವೇ ಹೋಡೆದಾಡಬೇಕೆಂದೂ ತಿಳಿಸಿದರು. ವಿ|| ನರಿಮನ್ನರವರ ಅಖಿಲಭಾರತವನ್ನೂ ಬಾರ್ಡೋಲಿಯ ಸಮಾನಮಾಡಲು ರಾಷ್ಟ್ರೀಯ ಸ್ವಯಂಸೇವಕರನ್ನು ಸೇರಿಸಬೇಕು. ಈ ಸಮ್ಮೇಳನವನ್ನು ಚಟಾ ಸ್ಪರ್ಧೆಯ ಸಮಾಜವನ್ನಾಗಿ ಮಾಡಬಾರದು ಎಂದು ಹೇಳಿದರು.

ಖಿಲಾಫತ್ ಕಮಿಟಿ ಸಭೆ

ಈ ಸಭೆಯು ತಾ|| 22 ರಿಂದ 34 ದಿವಸಗಳು ನಡೆಯಿತು. ಮಧ್ಯವರ್ತಿ ಕಾರ್ಯಮಂಡಲಿಗೆ ಸದಸ್ಯರನ್ನು ಚುನಾಯಿಸುವಾಗ ವಿಪರೀತವಾದ ಚರ್ಚೆ ನಡೆಯಿತು. ಆಗ ಕೇವಲ ಮನಃಕ್ಲೇಶದಿಂದ ಒಬ್ಬ ಪಠಾಣನು ಕತ್ತಿಯನ್ನೆಳೆದು [illegible] ಈ ಕತ್ತಿಯಿಂದ [illegible] ಹೊಡೆದನು [illegible] ಘರ್ಜಿಸಿದನು. ಈ ಗಲಭೆಯಿಂದ ಕಾರ್ಯವು ಸಾಗಲಿಲ್ಲ. ಡಾ|| ಅನ್ಸಾರಿಯವರು [illegible] ಮೀಟಿಂಗನ್ನು ಬಿಟ್ಟರು. ಮೌ|| ಮಹಮ್ಮದ್ ಅಲಿಯವರು ಪಂಜಾಬಿನ [illegible] ಖಿಲಾಫತ್ ಮುಂದಾಳನ್ನು [illegible] ಕ್ಷಮಾಪಣೆಯನ್ನು ಕೇಳಿಕೊಂಡರು.

ಸಮಾಜೋದ್ಧಾರಕ ಸಭೆ

ಅ|| ಭಾ|| ಸಮಾಜೋದ್ಧಾರಕ ಸಭೆಯ 44 ನೆಯ ಅಧಿವೇಶನವು ಮ|| ರಾ|| ಯಂ ಆರ್. ಜಯಕರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು, ಸರ್ಕಾರವು ಸಾಮಾಜಿಕ ಭಿನ್ನಭೇದಗಳಲ್ಲಿ ಪ್ರವೇಶಿಸ ಬಾರದು. ಅದರಲ್ಲಿರುವ ಭಿನ್ನಭೇದಗಳನ್ನು ತೀಕ್ಷ್ಣ ಮಾಡಬಾರದು. ಪರ ಸರ್ಕಾರವು ತನ್ನ ಜನಾಂಗೋದ್ಧಾರವನ್ನೇ ಗಮನಿಸುವುದು. ಸ್ತ್ರೀಯರು ತಮ್ಮ ಪಿತ್ರಾರ್ಜಿತಸ್ವತ್ತನ್ನು ಅನುಭವಿಸಲು ಹಕ್ಕಿರಬೇಕೆಂದೂ ಸ್ತ್ರೀಯರ ಹಕ್ಕುಗಳ ವಿಷಯ ಕಾನೂನುಗಳ ರಿಯಾಯಿತಿಯು ಆದಷ್ಟು ಬೇಗ ಆಗಬೇಕು ಎಂದು ತಿಳಿಸಿದರು.

ಮುಸ್ಲಿಂ ಲೀಗ್

ಈ ಸಭೆಯು ಈ ತಿಂಗಳು 25 ನೇ ತಾರೀಖಿನಲ್ಲಿ ನಡೆಯಿತು. ಡಾ|| ಅನ್ಸಾರಿ ಮತ್ತು ಅನೇಕ ಮುಸಲ್ಮಾನ ಮುಖಂಡರುಗಳೂ ಸಹ ದಯಮಾಡಿಸಿದರು. ನೆಹರೂ ವರದಿಯ ಮೇಲೆ ಚರ್ಚೆ ನಡೆಸಲ್ಪಟ್ಟಿತು. 27 ನೇ ತಾರೀಖಿನ ಮೀಟಿಂಗಿನಲ್ಲಿ ತಮ್ಮ ಲೀಗಿನ ಪ್ರತಿನಿಧಿಗಳು ಹೇಗೆ ಚರ್ಚಿಸಬೇಕೆಂಬ ವಿಷಯವು ತೀರ್ಮಾನಿಸಲ್ಪಟ್ಟಿತು. ಅವರ ರೀತಿನೀತಿಗಳನ್ನು ನೋಡಿದರು. ಕೆಲವು ಜನರಿಗೆ ಡೊಮಿನಿಯನ್ ಸರಕಾರವೇ ಒಪ್ಪಿತವಾಗಿರುವಂತೆ ತೋರುತ್ತದೆ. ಮುಸಲ್ಮಾನರಿಗೆ ಅವರ ಸಂಖ್ಯಾನುಗುಣವಾಗಿ ಚುನಾವಣೆಯ ಹಕ್ಕು ಸಿಕ್ಕಬೇಕು ಮತ್ತು ಇಂಡಿಯಾ ಸರ್ಕಾರದ ಸೆಂಟ್ರಲ್ ಕಾನೂನು ಸಭೆಯಲ್ಲಿ ಅವರಿಗೆ ಮೂರನೇ ಒಂದು ಭಾಗವು ಸದಸ್ಯಸ್ಥಾನಗಳಲ್ಲಿ ದೊರೆಯ ಬೇಕು.

—

ಸ್ವೀಕಾರ.

ರಾಜಧಾನಿಯ ಕೃಷ್ಣರಾಜಮೊಹಲ್ಲಾದಲ್ಲಿರುವ ಹಾರ್ಮೋನಿಯಂ [illegible] ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್ ರವರು 1929 ನೆ ಇಸವಿಯ ಸುಂದರವಾದ ಷೀಟ್ ಕ್ಯಾಲೆಂಡರೊಂದನ್ನೂ, ವಾಲ್ ಕ್ಯಾಲೆಂಡರೊಂದನ್ನೂ ಸಹ ಕಳುಹಿಸಿಕೊಟ್ಟಿರುವರು. ಅವನ್ನು ನಾವು ಆದರಣಿಂದ ಸ್ವೀಕರಿಸಿರುತ್ತೇವೆ.

—

ಸಂಪದಭ್ಯುದಯ ಸಮ್ಮೇಳನ

ಅಖಿಲಭಾರತ ಸಂಪದಭ್ಯುದಯ ಸಮ್ಮೇಳನದ 12 ನೆಯ ಅಧಿವೇಶನವು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಈ ತಿಂಗಳು 3 ನೇ ತಾ|| ಗ ಬಿವಾಂದಲಾಗಾಯಿತು ಮೂರು ದಿವಸಗಳು ಶ್ರೀಮದ್ ವಾಸುದೇವರವರ ಅಧ್ಯಕ್ಷತೆಯಲ್ಲಿ ಜರುಗುತ್ತದೆ ಅನೇಕ [illegible] ಕ್ಷೇತ್ರಗಳಿಂದ [illegible] ಬರುವರು.



TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D, Subbiah Road, Mysore

Regd No. M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ಮರಾವಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ [illegible]
ಚಂದಾ [illegible]

ಸಂಪುಟ ೧] ಗುರುವಾರ ೩ ಜನವರಿ ೧೯೨೯ [ಸಂಚಿಕೆ [illegible]

ತಾಯಿನಾಡು.

3—1—1929.

ರಾಷ್ಟ್ರೀಯ ಮಹಾಸಭೆ

ಮತ್ತು

ಇತರ ಸಭೆಗಳು.

—

ಪ್ರಾರಂಭೋತ್ಸವ.

ದೇಶಬಂಧು ನಗರ, 29 ನೇ ಡಿಸೆಂಬರ್—ದೇಶ ಸೇವಕರ ಉತ್ಸಾಹವು ಮಿತಿಮೀರಿರುವ ದೇಶಬಂಧು ನಗರದಲ್ಲಿ ರಾಷ್ಟ್ರೀಯ ಮಹಾಸಭೆಯ 43 ನೆಯ ಸಮಾವೇಶವು ಈ ದಿನ ಮಧ್ಯಾಹ್ನ [illegible] ಗಂಟೆಗೆ ಸ [illegible] ಪ್ರಾರಂಭವಾಯಿತು. ನಿಯಮಿತ ಕಾಲಕ್ಕೆ [illegible] ಜನರ ನೂಕು ನುಗ್ಗಲು [illegible] ತಂಡೋಪತಂಡವಾಗಿ ಪ್ರೇಕ್ಷಕರು [illegible] ಪ್ರವೇಶಿಸುತ್ತಿದ್ದರು. [illegible] ಸಭಾಮಂಟಪವು [illegible] ಎಂಬ ಸಂದೇಹವೂ ಕಾಣುತ್ತಿತ್ತು.

[illegible] ಗಂಟೆಗೆ ಸರಿಯಾಗಿ ಕಾಂಗ್ರೆಸ್ [illegible] ಅಧ್ಯಕ್ಷರಾದ ಪಂಡಿತ ಮೋತೀಲಾಲ್ ನೆಹರೂರವರು ಸಭಾ ಪ್ರವೇಶ ಮಾಡಿದರು. ಸಭಾ [illegible] ಉತ್ಸಾಹವೂ [illegible] ಮುಖಂಡರಿ [illegible] ಶ್ರೀ|| [illegible] ಬಾಲಿಕೆಯರು [illegible] ಸಭಿಕ [illegible] ಅಧ್ಯಕ್ಷರನ್ನು [illegible] ರೀತಿಯಲ್ಲಿ [illegible] ಕಂಠಗಳಿಂದ "ವಂದೇ ಮಾತರಂ" [illegible] ಮಾಡಿದರು.

[illegible] ಶ್ರೀ [illegible] ಗುಪ್ತ [illegible] ಅಧ್ಯಕ್ಷೋಪನ್ಯಾಸವನ್ನು ಗಂಭೀರ [illegible] ಓದಿದರು. [illegible] ಕಲಕಲವು [illegible] ಸಭಿಕರು ಕರತಾಡನಗಳ ಮೂಲಕ ಸಂತೋಷವನ್ನು ಸೂಚಿಸಿದರು. ಲಾಲಾಜಿ ಯವರ ನಿಧನವನ್ನು ಕುರಿತು ಹೇಳುವಾಗಲೂ, ಲಾಹೋರು ಲಕ್ನೋಗಳ ದೌರ್ಜನ್ಯವನ್ನು ಖಂಡಿಸುವಾಗಲೂ, ಸಭಿಕರು ಬಹಳವಾದ ದುಃಖ ಕೋಪೋದ್ರೇಕಗ [illegible] ಮಹಾ [illegible] ಒಟ್ಟಿಗೆ ಎದ್ದು ನಿಂತು "ಮಹಾತ್ಮಾ [illegible] ಶ್ರೀ|| [illegible] ನೆಹರೂ [illegible] ಸಂಗ್ರ [illegible] ನಂತರ [illegible]

ಉಪನ್ಯಾಸವನ್ನು ಓದಿ ಮುಗಿಸಿದರು. ಸಾಯಂಕಾಲ 6 ಗಂಟೆಗೆ ಸಭೆಯು ಅಂದಿಗೆ ಬರಖಾಸ್ತಾಯಿತು.

ಈ ವರ್ಷದ ಕಾಂಗ್ರೆಸ್ ಮಹಾ ಸಭೆಗೆ ಸ್ತ್ರೀ ಪ್ರತಿನಿಧಿಗಳು ಎಂದಿಗಿಂತಲೂ ಹೆಚ್ಚಾಗಿ ಬಂದಿದ್ದರು. ಎಲ್ಲಾ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಅದರ ವಿವರವು ಕೆಳಗೆ ಕಂಡಂತೆ ಇದೆ.

ಕರ್ಣಾಟಕ 100, ಪಂಜಾಬ್ 500, ಸಂಯುಕ್ತ ಪ್ರಾಂತ್ಯ 400, ಡಿಲ್ಲೀ 100, ಬೊಂಬಾಯಿ 50, ಬೀರಾರು 100, ಮಹಾರಾಷ್ಟ್ರ 300, ಅಜ್ಮೀರ್ 400, ಅಸ್ಸಾಂ 150, ಉತ್ಕಳ್ 300, ಬೆಂಗಾಲ್ 1000, ತಮಿಳ್‌ದೇಶ 450, ಬರ್ಮ 150, ಗುಜರಾತ್ 60, ಸಿಂಧು 56, ಕೇರಳ 95, ಆಂಧ್ರ 450, ಸಿ. ಪಿ. ಮಹಾರಾಷ್ಟ್ರ 300 ಬೀಹಾರ್ 500.

ಈ ವರ್ಷದ ರಾಷ್ಟ್ರೀಯ ಮಹಾಸಭೆಗೆ ಬಹುಮಂದಿ ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು. ಇದ ವರೆಗೆ 251 ಜನರು ಬಂದಿರುವರು. ಭರತ ಖಂಡದವರೇ ಅಲ್ಲದೆ ಸಿಲೋನ್, ಕೈರೋ ಚಿಲ್ಲೀ [illegible] ಗಳಿಂದಲೂ ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು.

ನೆಹರು ವರದಿ.

ಪಂಡಿತ ಮೋತೀಲಾಲ್ ನೆಹರೂರವರ ಮತ್ತು ಶ್ರೀಯುತ ಶ್ರೀನಿವಾಸಯ್ಯಂಗಾರ್ಯರ ಭಿನ್ನ ಭೇದಗಳು ತೀಕ್ಷ್ಣವಾಗುತ್ತಲಿವೆ. ಡೊಮಿನಿಯನ್ ಸ್ಟೇಟಸ್ಸಿನ ಸಂಕಾರದ ತತ್ವವನ್ನು ವಿರೋಧಿಸಿ ಶ್ರೀಯುತ ಅಯ್ಯಂಗಾರ್ಯರು ಒಂದು ಠರಾವನ್ನು ಕಾಂಗ್ರೆಸ್ಸಿನಲ್ಲಿ ಸೂಚಿಸುವರು. ಪಂ|| ಮೋತಿಲಾಲ್‌ರವರು ಡೆಲ್ಲಿಯ ಒಪ್ಪಂದವನ್ನು ಪುಷ್ಟೀಕರಿಸಿ ಕಾಂಗ್ರೆಸ್ಸಿನಲ್ಲಿ ಯಾವ ಮನಃಕ್ಲೇಶವೂ ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿರುವರು.

ನೆಹರು ವರದಿಯ ಚರ್ಚೆ.

ಸರ್ವ ಪಕ್ಷೀಯ ಪರಿಷತ್ತಿನ ಸಭೆಯಲ್ಲಿ ನೆಹರೂ ವರದಿಯ ಮೇಲೆ ವಿಪರೀತ ಚರ್ಚೆ ನಡೆಯಿತು. ದೇಶೀಯ ಸಂಸ್ಥಾನದ ಪ್ರಜೆಗಳ ಪಕ್ಷದ ವಿಷಯವಾಗಿ ಚರ್ಚೆ [illegible] ಪ್ರಶ್ನೆಗಳನ್ನು ಕೇಳಿದರು. ವರದಿಯ ಮೇಲೆ ತುಂಬಾ ಚರ್ಚೆ ಯಾಯಿತು.

ಮುಸ್ಲೀಮ್ ಲೀಗ್

'ಕಳೆದ ಡಿಸೆಂಬರ್ 26 ನೇ ತಾರೀಖಿನಲ್ಲಿ ಅ|| ಭಾ|| ಮು|| ಲೀಗಿನ 20 ನೇ ಅಧಿವೇಶನವು ಆರಂಭವಾಯಿತು. ಸುಮಾರು 500 ಪ್ರತಿನಿಧಿಗಳು ಸೇರಿದ್ದರು. [illegible] ಮಹಾರಾಜರು ಅಧ್ಯಕ್ಷರಾಗಿದ್ದರು. ಅವರು ಡೊಮಿನಿಯನ್ ಸ್ಟೇಟಸ್ಸನ್ನು ಅಂಗೀಕರಿಸುವುದಕ್ಕೆ ನಾವೆಲ್ಲರೂ [illegible] ಉತ್ತಾಹಿಸಬೇಕೆಂದು ಹೇಳಿದರು. [illegible] ವರದಿ [illegible] ಎಲ್ಲಾ ವಿಷಯದಲ್ಲೂ ತೃಪ್ತಿಕರವೇ ಆಗಿರುವುದು. ಅದನ್ನು ತಿರಸ್ಕರಿಸುವುದರಿಂದ [illegible] ಕೋಮುವಾರು ಸಮಸ್ಯೆ

ಗಳನ್ನು ಪರಿಶೋಧಿಸಿ ಸಂಶಯಗಳನ್ನು ಹೋಗಲಾಡಿಸಿಕೊಳ್ಳಲು ಸಮ್ಮೇಳನಕ್ಕೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕು ನಮಗಿರುವುದರಿಂದ ಕೋಮುವಾರು ವಿಚಾರದಲ್ಲಿ ನಾವು ಸಂತೋಷಪಡುವ ಅವಶ್ಯಕವಿಲ್ಲ. ಎಲ್ಲರೂ ಅಂಗೀಕರಿಸುವ ವರದಿಗೆ ನಾವೂ ಒತ್ತಾಸೆ ಕೊಡಬೇಕು ಎಂದು ತಿಳಿಸಿದರು.

ಪೂರ್ಣಸ್ವಾತಂತ್ರ್ಯ.

ಅ|| ಭಾ|| ಸಭೆಯ ಕಾರ್ಯನಿರ್ವಾಹಕ ಮಂಡಳಿಯವರು 26 ನೇ ತಾರೀಖಿನಲ್ಲಿ ಕೇವಲ ಚರ್ಚಾಸ್ಪದವಾದ ಡೊಮಿನಿಯನ್ ಸ್ಟೇಟಸ್ಸಿನ ವಿಷಯವಾಗಿ ಆಲೋಚನೆ ಮಾಡಿದರು. ಮಹಾತ್ಮಾ ಗಾಂಧಿಯವರು 1930 ನೇ ವರ್ಷದ ಆಖೈರಿನಲ್ಲಿ ನೆಹರು ವರದಿಯನ್ನು ಬ್ರಿಟಿಷರು ಅಂಗೀಕರಿಸದೆ ಹೋದರೆ ಸಂಪೂರ್ಣ ಸ್ವಾತಂತ್ರ್ಯವನ್ನು ನಾವು ಪುಷ್ಟೀಕರಿಸುತ್ತೇವೆ. ಅಲ್ಲದೆ ಅಸಹಕಾರವನ್ನು ಕಂದಾಯವನ್ನು ಕೊಡದೆ ಇರತಕ್ಕಂಥದು (ಪುನಃ) ಹೂಡಲು ಸಿದ್ಧರಾಗುವೆವು ಎಂಬ ವಿಷಯವನ್ನು ಸಭೆಯ ಮುಂದಿಟ್ಟರು. ಆದರೂ ಶ್ರೀಯುತ ಶ್ರೀನಿವಾಸಯ್ಯಂಗಾರ್ಯರ ಮನಸ್ಸು ಬೇರೆ ಬದಲಾಗಲಿಲ್ಲ. ವರದಿಯಲ್ಲಿ ಸ್ವಲ್ಪ ಬದಲಾವಣೆಗಳಾದ ನಂತರ ಬಹುಜನರು ಅದನ್ನು ಅನುಮೋದಿಸಿದರು. (1) ನೆಹರು ವರದಿಯು ರಾಜಕೀಯ ಮತ್ತು ಪಂಕ್ತೀಯ ಸಮಸ್ಯೆಗಳನ್ನು ಪರಿಹಾರ ಮಾಡಲು ಬಲು ಉತ್ತಮವಾದುದು. (2) ಮದ್ರಾಸಿನ ಪೂರ್ಣಸ್ವಾತಂತ್ರ್ಯದ ಠರಾವಿಗೆ ಯಾವ ಕುಂದಕವೂ ಬಾರದಂತೆ ರಾಷ್ಟ್ರೀಯ ಸಭೆಯು ನೆಹರು ವರದಿಯನ್ನು ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ಮುಖ್ಯ ಸಾಧನವೆಂದೂ ಅಂಗೀಕರಿಸಬಹುದು ಎಂಬೆರಡು ಠರಾವುಗಳು ಮಂಜೂರಾದವು. ಇದಲ್ಲದೆ 1930 ನೇ ವರ್ಷಾಂತ್ಯದಲ್ಲಿ ಆಂಗ್ಲ ಸರಕಾರವು ನೆಹರು ವರದಿಯನ್ನು ಅಂಗೀಕರಿಸದಿದ್ದರೆ ಈ ವೇದಿಯಿಂದ ಬದ್ಧರಾಗದೆ ಅಸಹಕಾರವನ್ನು ಹೂಡುವ ಅವಕಾಶವನ್ನು ಕಮಿಟಿಯವರು ಕೊಡಬೇಕೆಂಬ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ತೀರ್ಮಾನಗಳು.

[illegible] ರಾಜ್ಯ ವಿಧಾನವನ್ನು ಈ ಕಾಂಗ್ರೆಸ್ ಸಭೆಯವರು ಚೆನ್ನಾಗಿ ಪರಿಶೀಲಿಸಿರುವರು. ಭರತಖಂಡದ ರಾಜಕೀಯ ಮತ ಸಾಂಘಿಕ ಸಮಸ್ಯೆಗಳನ್ನು ಪರಿಷ್ಕರಿಸುವುದಕ್ಕೆ ಇದು ಬಹಳ ಸಹಾಯಕಾರಿಯೆಂದು ಈ ಸಭೆಯವರು ಸಂತೋಷಿಸುತ್ತ ಅಖಿಲ ಪಕ್ಷ ಸಭೆಯವರು [illegible] ಮುಖ್ಯವಾಗಿ ಈ ಸೂಚನೆಗಳನ್ನು ಮಾಡಿದುದಕ್ಕಾಗಿ ಈ ಸಭೆಯವರು ಅವರನ್ನು ಅಭಿನಂದಿಸುವರು. [illegible] ಮದರಾಸಿನಲ್ಲಿ ನಡೆದ ಕಾಂಗ್ರೆಸಿನಲ್ಲಿ ಅನುಮೋದಿಸಿದ್ದ ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನವನ್ನು ಸಭೆಯವರು ಪುನಃ ದೃಢಪಡಿಸುತ್ತ ಅಖಿಲ ಪಕ್ಷದವರು ತಯಾರಿಸಿರುವ ವಿಧಾನವನ್ನು ರಾಜಕೀಯಾಭಿವೃದ್ಧಿಯಲ್ಲಿ ಒಂದು ವಿಶೇಷ ಮೆಟ್ಟಲನ್ನಾಗಿ ಅಂಗೀಕರಿಸುತ್ತಿರುವರು. ದೇಶದಲ್ಲಿರುವ ವಿವಿಧ ಪಕ್ಷದವರು ಹೀಗೆ ಅನುಮೋದಿಸಿರುವುದರಿಂದ ಇದು [illegible]

(ಮುಂದಿನ ಪುಟ ನೋಡಿ)

ವಿಶ್ವೇಶ್ವರಯ್ಯ ಸಮಿತಿ ವರದಿಯು ಪ್ರಕಟವಾಯಿತು

ಖಾನರೇ ಗಲಾಟೆಗೆ ಮೂಲಕಾರಣರು ಗುಂಡಿನೇಟು ನಿಜ

TAI NADU

3—1—1929

ಪುನಃ ಶಾಂತಿ ಸಂಧಾನ

ವಿಶ್ವ ಕರ್ಣಾಟಕದಲ್ಲಿ ಇನ್ನೊಂದು ಶಾಂತಿ ಸಭೆಯು ನಡೆಯುವುದೆಂದೂ ಶ್ರೀಮನ್ಮಹಾರಾಜರವರೇ ಅದಕ್ಕೆ ಅಧ್ಯಕ್ಷರಾಗಿ ಕಾರ್ಯಕಲಾಪಗಳನ್ನು ನಡೆಸುವರೆಂದೂ ತಿಳಿಸಲ್ಪಟ್ಟಿದೆ. ಮೈಸೂರು ಪೇಟ್ರಿಯಟ್ ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರವರು ಈರೀತಿಯಾದ ಸಭೆಗೆ ಅಧ್ಯಕ್ಷರಾಗುವದರಿಂದ ಆಗಬಹುದಾದ ಬಾಧಕಗಳು ತಿಳಿಸಲ್ಪಟ್ಟಿವೆ. ವಾಸ್ತವ್ಯವಾಗಿಯೂ ಮೈಸೂರು ಪೇಟ್ರಿಯಟ್ಟಿನ ಪತ್ರಿಕಾಕರ್ತರ ಅಭಿಪ್ರಾಯವು ನ್ಯಾಯವಾದುದು. ಶ್ರೀಮನ್ಮಹಾರಾಜರವರು ನಮ್ಮ ಸಂಸ್ಥಾನದ ಆಡಳಿತಕ್ಕೆಲ್ಲಾ ಮುಖ್ಯ ನೇತೃಪ್ರಾಯರಾಗಿದ್ದರೂ ಒಂದು ಕ್ರಮವನ್ನು ಅನುಸರಿಸಿ ದಿವಾನರಿಗೂ ಎಕ್ಸಿಕ್ಯೂಟೀವ್ ಕೌನ್ಸಿಲರುಗಳಿಗೂ ಸರ್ವಾಧಿಕಾರವನ್ನು ಕೊಟ್ಟಿರುತ್ತಾರೆ. ಆಡಳಿತದಲ್ಲಿ ನಡೆಯುವ ಅಥವಾ ನಡೆಯಬಹುದಾದ ಲೋಪದೋಷಗಳಿಗೆಲ್ಲಾ ದಿವಾನರೂ ಎಕ್ಸಿಕ್ಯೂಟೀವ್ ಕೌನ್ಸಿಲರುಗಳೂ ಜವಾಬ್ದಾರರೇ ಹೊರತು ಶ್ರೀಮನ್ಮಹಾರಾಜರವರಲ್ಲ. ಅತ್ಯಂತ ವಿಸ್ತೃತವಾಗಿ ತಾವರೆ ಎಲೆಯಮೇಲಿನ ನೀರಿನಂತೆ ರಾಜ್ಯಾಡಳಿತವನ್ನು ನಡಿಸುತ್ತಿರುವರು. ಪ್ರತ್ಯಕ್ಷವಾಗಿ ಯಾವ ರಾಜ್ಯಾಡಳಿತದ ತಕ್ಷೀಲಿನಲ್ಲಿಯೂ ಭಾಗವನ್ನು ತೆಗೆದುಕೊಳ್ಳುವುದಿಲ್ಲ. ಶ್ರೀಮನ್ಮಹಾರಾಜರವರು ಹಿಂದೆಯೂ ಬೆಂಗಳೂರು ಗಲಭೆಗಳ ವಿಷಯವಾಗಿ ನಡುವೆ ಕೈಹಾಕಲು ಬಯಸಿದ್ದರೆ ಅದಕ್ಕೆ ಕಾಲವು ಬಹಳ ಹಿಂದೆ ಇತ್ತು. ಜುಲೈ 30 ನೇ|| ತಾರೀಖಿನ ರಾತ್ರಿ ಆದ ಗಲಾಟೆಗಳನ್ನು ಪರಿಶೀಲಿಸಿ ಜುಲೈ 31 ನೇ ತಾರೀಖಿನ ದಿವಸ ನಾವು ಶ್ರೀಮನ್ಮಹಾರಾಜರವರಿಗೆ ಅತ್ಯಂತ ವಿನಯಪೂರ್ವಕವಾಗಿ ಈ ಕೆಳಗಿನ ತಂತಿಯನ್ನು ಕಳುಹಿಸಿದೆವು.

Due to official bungling and mismanagement an alarming situation has arisen in Bangalore resulting in fatal shooting None but your Highness's personal presence can save the situation and establish peace.

Loyally, Tai Nadu

ಅಧಿಕಾರಿಗಳ ಅಚಾತುರ್ಯವಾದ ನಡವಳಿಕೆಗಳಿಂದ ಬೆಂಗಳೂರಿನಲ್ಲಿ ಗುಂಡಿನ ಮಳೆಯು ಸುರಿದು ಅನೇಕರಿಗೆ ಅಪಾಯವಾಗಿರುವುದು. ಶ್ರೀಮನ್ಮಹಾರಾಜರವರೇ ಖುದ್ದಾಗಿ ಬೆಂಗಳೂರಿಗೆ ದಯಮಾಡಿಸದ ಹೊರತು ಶಾಂತಿಸ್ಥಾಪನೆಯಾಗುವುದು ಕಷ್ಟ.

31-7-28 ಮಧ್ಯಾಹ್ನ 3 ಗಂಟೆ ತಾಯಿನಾಡು.

ಆಗಲೇ ಶ್ರೀಮನ್ ಮಹಾರಾಜರವರು ಬೆಂಗಳೂರಿಗೆ ದಯಮಾಡಿಸಿದ್ದರೆ ಗಲಾಟೆಯೆಲ್ಲಾ ಅವತ್ತಿಗೇ ತೀರ್ಮಾನವಾಗುತ್ತಿತ್ತು. ಆದರೆ ಶ್ರೀಮನ್ ಮಹಾರಾಜರವರು ಹಾಗೆ ಮಾಡಲಿಲ್ಲ. ಅದಕ್ಕೆ ಪ್ರಬಲವಾದ

ವರದಿಯ ತೀರ್ಮಾನಗಳು.

ಸರ್ಕಾರದ ಯಂತ್ರವು ಕುಸಿದು ಬಿದ್ದಿತು.

ಪೊಲೀಸರ ಅಂತಸ್ತಿಗೆ ಹೆದರಿಯೋ ಏನೋ ಪೋಲೀಸರೂ ಮ್ಯಾಜಿಸ್ಟ್ರೇಟರೂ ಅವರವರ ಕಾರ್ಯಭಾಗ ಮಾಡಲಿಲ್ಲ. ಹಿಂದುಗಳಿಗೆ ನ್ಯಾಯವಾಗಿ ಅಸಮಾಧಾನವಾಗಿದೆ. ಸರ್ಕಾರದ ಪ್ರಕಟಣೆಗಳು ಸುಳ್ಳು.

ಕಾರಣಗಳಿರಬೇಕು. ಹಾಗೆಯೇ ಶ್ರೀಮನ್ ಮಹಾರಾಜರವರು ನಡುವೆ ಕೈಹಾಕಬೇಕೆಂದಿದ್ದರೆ ಬೆಂಗಳೂರಿನ 5000 ಸಾವಿರ ಜನಗಳು ಶ್ರೀಮನ್ ಮಹಾರಾಜರವರಿಗೆ ವಿಜ್ಞಾಪನೆಯನ್ನು ಕಳುಹಿಸಿದಾಗ್ಗೆ ತಾವೇ ಸ್ವತಃ ವಿಚಾರಣೆಯನ್ನು ನಡೆಯಿಸ ಬಹುದಾಗಿತ್ತು. ಆದರೆ ಹಾಗೆ ಮಾಡದೆ ಆ ವಿಜ್ಞಾಪನಾ ಪತ್ರಿಕೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಹೀಗೆಯೇ ನೋಡುತ್ತಾ ಹೋದರೆ ಶ್ರೀಮನ್ ಮಹಾರಾಜರವರು ಈ ಬೆಂಗಳೂರು ಗಲಾಟೆ ಪ್ರಸಂಗದಲ್ಲಿ ಒಂದು ಭಾಗದಲ್ಲಿಯೂ ಕೈ ಹಾಕಿಲ್ಲ. ವಿಶ್ವೇಶ್ವರಯ್ಯ ಕಮಿಟಿಯವರನ್ನೂ ತಾವೆ ಸ್ವಂತವಾಗಿ ನೇಮಿಸದೆ ಸರ್ಕಾರದವರೇ ನೇಮಿಸುವಂತೆ ಮಾಡಿದರು. ಇದೆಲ್ಲಾ ನೋಡಿದರೆ ಶ್ರೀಮನ್ ಮಹಾರಾಜರವರು ಅತ್ಯಂತ ದೂರದರ್ಶಿಗಳೆಂದು ತಿಳಿಯಬರುವುದು. ಒಬ್ಬರಿಗೆ ಒಂದು ಅಧಿಕಾರವನ್ನು ಕೊಟ್ಟರೆ ಅವರು ತೀರ ಅಸಮರ್ಥರೆಂದು ತಿಳಿಯುವವರೆಗೂ ನಡುವೆ ಕೈಹಾಕುವುದಿಲ್ಲ. ಈಗಲೂ ಬೆಂಗಳೂರಿನ ಗಲಾಟೆಯ ವಿಷಯವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವುದು ಅವರಿಗೆ ತಿಳಿಯದೆ ಇಲ್ಲ. ಜನರು ಹೇಳುವುದು, ಪತ್ರಿಕೆಗಳಲ್ಲಿ ಬರೆಯುತ್ತಿರುವುದು ಎಲ್ಲವೂ ಅವರಿಗೆ ಗೊತ್ತಿದೆ, ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಸರ್ಕಾರಕ್ಕೆ ತಲಪಿರುವುದೂ ಅವರಿಗೆ ಗೊತ್ತಿದೆ. ಜನಗಳು ಅದನ್ನು ಪ್ರಕಾಶಗೊಳಿಸಬೇಕೆಂದು ಒತ್ತಾಯಪಡಿಸುತ್ತಿರುವುದೂ ಅವರಿಗೆ ಗೊತ್ತಿದೆ. ಸರ್ಕಾರದವರು ಏನುಮಾಡುವರು ಎಂಬುದನ್ನು ಅವರು ಪರೀಕ್ಷಿಸುತ್ತಿರುವರು. ಈಗಿನ ದಿವಾನರೂ ಮತ್ತು ಎಕ್ಸಿಕ್ಯೂಟಿವ್ ಕೌನ್ಸಿಲರುಗಳ ಮೇಲೆ ಬಂದಿರುವ ಅಪವಾದಗಳೆಲ್ಲಾ ಶ್ರೀಮನ್ ಮಹಾರಾಜರವರಿಗೆ ತಿಳಿಯದೇ ಇಲ್ಲ. ಬೆಂಗಳೂರಿನಲ್ಲಿ ಕೋರ್ಟಿನಲ್ಲಿ ನಡೆಯುತ್ತಾ ಇರುವ ಮೊಕದ್ದಮೆಗಳು ಅವರಿಗೆ ಗೊತ್ತಿರುವುವು. ಈಗ ಹೊಸದಾಗಿ ನಡೆಯುತ್ತಿರುವ ರಾಜಿಯ ಪ್ರಸ್ತಾಪಗಳು ಕೂಡ ಅವರ ಕಿವಿಗೆ ಮುಟ್ಟಿರುವುವು. ಆದರೂ ಶ್ರೀಮನ್ ಮಹಾರಾಜರವರು ತಟಸ್ಥಭಾವವನ್ನು ವಹಿಸಿರುವರು. ತಾವಾಗಿ ನಡುವೆ ಕೈ ಹಾಕುವುದಕ್ಕಿಂತ ಈಗಿನ ದಿವಾನರೂ ಎಗ್ಜಿಕ್ಯುಟಿವ್ ಕೌನ್ಸಿಲರುಗಳು ವಿಶ್ವೇಶ್ವರಯ್ಯನವರ ಕಮಿಟಿಯ ವರದಿಯ ಮೇಲೆ ಏನು ಕಾರ್ಯಭಾಗವನ್ನು ನಡೆಯಿಸುವರು, ದೇಶದಲ್ಲಿ ಅದರ ಪರಿಣಾಮವೇನಾಗುವುದು ಎಂಬುದನ್ನು ನೋಡಿಕೊಂಡು ಮುಂದಿನ ಕೆಲಸವನ್ನು ನಡೆಯಿಸುವರು.

ಈಗಿನ ದಿವಾನರ ಮತ್ತು ಎಗ್ಜಿಕ್ಯುಟಿವ್ ಕೌನ್ಸಿಲರುಗಳ ಕಾಲದಲ್ಲಿ ನಮ್ಮ ಸಂಸ್ಥಾನಕ್ಕೆ ತೀರ ಕೆಟ್ಟ ಹೆಸರು ಬಂದಿತೆಂದು ಶ್ರೀಮನ್ ಮಹಾರಾಜರಿಗೆ ಗೊತ್ತಿದೆ. ಇವರುಗಳು ಶುದ್ಧ ಅಸಮರ್ಥರು ಇವರುಗಳನ್ನು ಕೆಲಸದಿಂದ ತೆಗೆದುಹಾಕಬೇಕು ಎಂದು ಅನೇಕರು ಹೇಳುತ್ತಿರುವುದೂ ಪತ್ರಿಕೆಗಳು ಬರೆಯುತ್ತಿರುವುದೂ

ಅವರಿಗೆ ಗೊತ್ತಾಯಿತು. ಆದರೆ ಶ್ರೀಮನ್ ಮಹಾರಾಜರವರು ನಡುವೆ [illegible] ತಿರುವರು. ದಿವಾನರನ್ನು ತಕ್ಷಣ [illegible] ಅವಧಿಯು ಇರುವುದು.

ಆ ಅವಧಿಯು ಮುಗಿಯುವವರೆಗೂ [illegible] ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಮೇಲೆ ಸರ್ಕಾರದವರು ಕಾರ್ಯಭಾಗವನ್ನು ನಡೆಸುವರೆಂದು [illegible] ರವರು ನಿರೀಕ್ಷಿಸುತ್ತಿರುವರು. [illegible] ಸ್ಪಷ್ಟವಾಗಿ ಈಗಿನ ಸರ್ಕಾರದವರು [illegible] ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಾರೆಂಬುದನ್ನು ಶ್ರೀಮನ್ ಮಹಾರಾಜರವರು ಕಾದುನೋಡುತ್ತಿರುವರು. ಸ್ವಂತವಾಗಿ ಸರ್ಕಾರದವರು ಯಾವ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳದೆ ಹೋದರೆ ಶ್ರೀಮನ್ ಮಹಾರಾಜರವರೇ ತಕ್ಕ ಪ್ರಾಯಶ್ಚಿತ್ತವನ್ನೇ ಮಾಡುವರು. ಇದಕ್ಕೆ ಯಾವ ಸಂಶಯವೂ ಇಲ್ಲ.

(ಹಿಂದಿನ ಪುಟದಿಂದ ಮುಂದುವರೆದುದು.)

ಷ್ಟು ಶ್ರೇಷ್ಠವಾದುದಾಗಿರುವುದು. ಆದರೆ 31-12-1929 ರೊಳಗಾಗಿ ಬ್ರಿಟಿಷ್ ಪಾರ್ಲಿಮೆಂಟಿನವರು ಇದನ್ನು ಅನುಮೋದಿಸದಿದ್ದರೆ ಕಾಂಗ್ರೆಸ್ಸಿನವರು ಈ ವಿಧಾನವನ್ನು ನಿರೀಕ್ಷಿಸುವುದಕ್ಕೆ ಬಾಧ್ಯರಾಗಲಾರರು. ಪಾರ್ಲಿಮೆಂಟಿನವರು ಆ ತಾರೀಖಿನೊಳಗಾಗಿ ಈ ಸ್ವರಾಜ್ಯ ವಿಧಾನವನ್ನು ಅನುಮೋದಿಸದಿದ್ದರೆ ಕಾಂಗ್ರೆಸ್ಸಿನವರು ದೌರ್ಜನ್ಯ ವಿರಹಿತವಾದ ಅಸಹಕಾರವನ್ನು ಪ್ರಾರಂಭಿಸುವರು. ಪ್ರಜೆಗಳು ಸರ್ಕಾರಕ್ಕೆ ಯಾವ ವಿಧವಾದ ಸಹಾಯವನ್ನೂ ಮಾಡಬಾರದೆಂದು ಬೋಧಿಸಲಾಗುವುದು. ಈ ತೀರ್ಮಾನವನ್ನು ಕುರಿತು ಅತ್ಯವಸರವಾದ ಚರ್ಚೆಯನ್ನು ಮಾಡಲು ವೈಸ್ರಾಯರಿಗೆ ತಿಳಿಸುವುದಕ್ಕೆ ಅಧ್ಯಕ್ಷರಿಗೆ ಅಧಿಕಾರವಿದೆ. ಈ ತೀರ್ಮಾನವನ್ನು ಪ್ರಜೆಗಳು ಅನುಮೋದಿಸುವುದಕ್ಕೆ ನಡೆಯುತ್ತಿರುವ ಪ್ರಚಾರಕ್ಕೆ ವಿರೋಧವು ಬರುವವರೆಗೂ ಕಾಂಗ್ರೆಸ್ಸಿನವರು ಸಂಪೂರ್ಣ ಸ್ವಾತಂತ್ರ್ಯವನ್ನು ಕುರಿತು ಪ್ರಚಾರಿಸುವುದಕ್ಕೆ ಈ ತೀರ್ಮಾನದಲ್ಲಿ ಯಾವ ವಿಧವಾದ ಅಭ್ಯಂತರವೂ ಇರದು.

(1) ಇಷ್ಟರಲ್ಲಿ ಕಾಂಗ್ರೆಸ್ಸಿನವರು [illegible] ಶಾಸನ ಸಭೆಗಳಲ್ಲೂ ದೇಶದಲ್ಲೂ [illegible] ಮೊದಲಾದ ಪಾರ್ಟಿಯವರನ್ನೂ ಇತರ [illegible] ರ್ಥಗಳನ್ನೂ ಪೂರ್ತಿಯಾಗಿ ಬಹಿಷ್ಕರಿಸುವಂತೆ [illegible] ಪ್ರಯತ್ನಗಳನ್ನೂ ಮಾಡಬೇಕು. (2) ದೇಶೀಯರೆಲ್ಲರೂ ಖದ್ದರ್ ಬಟ್ಟೆಗಳನ್ನೇ ಧರಿಸುತ್ತ ವಿದೇಶ [illegible] ವನ್ನು ಪೂರ್ತಿಯಾಗಿ ಬಹಿಷ್ಕರಿಸುವುದಕ್ಕೋಸ್ಕರ [illegible] ಸನ ಸಭೆಗಳಲ್ಲೂ ದೇಶದಲ್ಲೂ ಪ್ರಯತ್ನಗಳನ್ನು [illegible] ಬೇಕು. (3) [illegible] ತ್ಯಾಗವನ್ನು ನಿರ್ಮೂಲಿಸಲು [illegible] ದೊರಕಿದಾಗಲೆಲ್ಲಾ ಪ್ರಜೆಗಳು [illegible] [illegible] ಗ್ರಾಮಗಳಲ್ಲಿ ಈಗ ನಡೆಯುತ್ತಿರುವ [illegible] ಗಾಗಿ ಸಕಲ ಪ್ರಯತ್ನಗಳೂ [illegible]

Reserved for

M. S. SIDDAPPA & BROS.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ [illegible] ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ [illegible] ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ಲವಾಸ್ಸಿಸಿದಲ್ಲಿ [illegible] 3 ನಮೂನೆ ಕ್ಯಾಲೆಂಡರ್ [illegible] ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

ತಕ್ಷಣ ಗುಣಪಡಿಸುವ **ಈ ರತನ್ ಮಿಶ್ರಿ ಹಲ್ವಾ** [illegible]

ಗುಣ:— ವೀರ್ಯವು [illegible]ದಲ್ಲಿ ಹೋಗುವಿಕೆ ಮತ್ತು ನೀರಾಗುವಿಕೆ, ಅಗಾಗ್ಯೆ ಸ್ವಪ್ನ ಸ್ಖಲನ[illegible] ಸ್ವೇಚ್ಛೆಯಿಂದಲೂ, ಅನೇಕ [illegible]ಗಳಿಂದಲೂ, [illegible] ದುರ್ಬಲವಾಗಿ [illegible] ಶೀಘ್ರಸ್ಖಲನ[illegible] ದ್ವಾರ ವ್ರಣ ಮತ್ತು ಮೇಹವ್ಯಾಧಿ[illegible] ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಜಠರಗತವ್ಯಾಧಿ, ಕೈಕಾಲುನೋವು, [illegible] ಮೇಹಪರೆ, ಶರೀರದ [illegible] ಕಾಂತಿ ಹೀನವಾಗುವಿಕೆ ಇನ್ನೇ ಮುಂತಾದ ವ್ಯಾಧಿಗಳನ್ನೆಲ್ಲಾ [illegible] ಧಾತುವೃದ್ಧಿಯನ್ನುಂಟುಮಾಡಿ ಐಹಿಕ [illegible], ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ [illegible] ನಿವಾರಣೆಯಾಗುವವು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ ?—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, [illegible] ಬಿಲ್ಡಿಂಗ್ಸ್, ಮೈಸೂರು.

ರತನ್ ಮಿಶ್ರಿ ಡಿಪೋ, [illegible] ಬೀದಿ, ಬೆಂಗಳೂರು

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ [illegible] ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧—೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ [illegible] ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ [illegible], ನೆಗಡಿ, ಕೆಮ್ಮಲು, ಶೀತವಾತ ಜ್ವರ, ಚಳಿಜ್ವರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ ಪ್ಲೇಗು ಜ್ವರ ಇನ್‌ಫ್ಲೂಯಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲ ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತ[illegible] ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ [illegible] ಅನೇಕ ರೋಗಗಳನ್ನು ಗುಣಪಡಿಸುತ್ತದೆ.

[illegible]ಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ [illegible] ಅವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯವರ್ಧನವಾದ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ ಆಣೆ, 8 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 25 ಕ್ಕೆ 5—[illegible]

	ಭಿಷಗ್ರತ್ನ
ಬ್ರಾಂಚಾಫೀಸು	ಪಾಳ್ಯದ ವೆಂಕಟಾಚಲ ಪಂಡಿತರು
ಶ್ರೀ ಸೀತಾರಾಘವ ವೈದ್ಯಶಾಲಾ,	ಶ್ರೀ ಸೀತಾರಾಘವ ವೈದ್ಯಶಾಲಾ
[illegible]	ಹೆಡ್ಡಾಫೀಸು ಮೈಸೂರು



[illegible]

TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D, Subbiah Road, Mysore

Regd No. M 2322 ‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ

ಸಂಪುಟ ೧] ಶುಕ್ರವಾರ ೪ ಜನವರಿ ೧೯೨೯ [ಸಂಚಿಕೆ

ಅಧಿಕಾರವರ್ಗದವರೆಲ್ಲರಲ್ಲಿಯೂ ಕರ್ತವ್ಯಲೋಪವಾಯಿತು

ಹಿಂದೂ ಮುಖಂಡರ ಮೇಲಿನ ಕೇಸುಗಳು ವಾಪಸಾಗುವುವು

TAI NADU

4—1—1929

ಕಮಿಟಿಯ ವರದಿ.

ವಿಶ್ವೇಶ್ವರಯ್ಯ ಕಮಿಟಿಯವರು ಈ ಕೆಳಗೆ ಕಂಡ ನಿರ್ಧಾರಗಳನ್ನೂ ಶಿಫಾರಸುಗಳನ್ನೂ ಮಾಡಿರುವರು.

ಗಲಾಟೆಯ ಆರಂಭ

ಅಧಿಕಾರಿಗಳ ಅಪ್ಪಣೆ ಇಲ್ಲದೆ ಕಂಟ್ರಾಕ್ಟರ್ ಸಂ [illegible] ಗಣಪತಿ ಮಂಟಪ ಕಟ್ಟುವುದಕ್ಕೆ [illegible] ಗಣಪತಿಯನ್ನು ಪುನಃ ಸ್ಥಾಪನೆ ಮಾಡದೆ ಇದ್ದುದರಿಂದ ವಿದ್ಯಾರ್ಥಿಗಳಿಗೆ ಅಸಮಾಧಾನವಾಯಿತು. ಈ ಅಸಮಾಧಾನವು ಸ್ವಾಭಾವಿಕ [illegible]. ಸ್ಥಳೀಯ ಪತ್ರಿಕೆಗಳ ಮತ್ತು ಹಿಂದೂಗಳ ಉತ್ತೇಜನದಿಂದ ಅಸಮಾಧಾನವು ಪ್ರಬಲಿಸಿತು. ವಿದ್ಯಾಶಾಲೆಯ ಅಧಿಕಾರಿಗಳು ಪರಿಸ್ಥಿತಿಯ ಮಹತ್ವವ [illegible] ಭಯಂಕರವಾ [illegible] ಅಬ್ಬಾಸ್ ಖಾನರು [illegible]

[illegible]

ಗುಂಡು ಹೊಡೆದುದು [illegible]

[illegible] ಸರ್ಕಾರದ ಅಧಿಕಾರಿಗ [illegible] ಎಲ್ಲರೂ ಖಾಸಗಿ ಮನುಷ್ಯರೇ [illegible] ದೊಂಬದ ಈಗಿನ ಸ್ಥಿತಿಯಲ್ಲಿ ಪ್ರಜಾ [illegible]

ಸ್ವಾಭಾವಿಕ. ಗುಂಡು ಹೊಡೆದಿದ್ದು ನಿಜವೆಂಬುದು ಕಮಿಟಿಯವರಿಗೆ ಪೂರ್ತಿಯಾಗಿ ಮನವರಿಕೆಯಾಗಿದೆ. ಅಬ್ಬಾಸ್ ಖಾನರ ಮನೆಯಿಂದಲೂ ಸೈಕಲ್ ಷಾಪಿನಿಂದಲೂ ಎರಡು ಕಡೆಯಿಂದಲೂ ಗುಂಡು ಬಂದಿತೆಂದು ಹೆಚ್ಚು ಜನಗಳು ಹೇಳುತ್ತಾರೆ. ಅಬ್ಬಾಸ್ ಖಾನರ ಮನೆಯ ಕಾಂಪೌಂಡಿನಿಂದ ಅನೇಕ ಮಹಮದೀಯರು ದೊಣ್ಣೆಗಳೊಡನೆ ಬಂದು ನಿರಾಯುಧರಾದ ಹಿಂದುಗಳನ್ನ ಹೊಡೆದರೆಂಬುದನ್ನು ನಾವು ಸಂಪೂರ್ಣವಾಗಿ ನಂಬುತ್ತೇವೆ. ಈ ಮಹಮದೀಯರು ಗಣಪತಿಯನ್ನು ಉರುಳಿಸಿದರು. ಇದೇ ಕಾಲದಲ್ಲಿ ಸುತ್ತಮುತ್ತಲಿನ ಮನೆಗಳಿಂದಲೂ ಮಸೀತಿ ಇಂದಲೂ ಮಹಮದೀಯರು ನುಗ್ಗಿ ಬಂದರು ಅಬ್ಬಾಸ್ ಖಾನರ ಮನೆಯ ಒಳಕ್ಕೆ ಹುಡುಗರನ್ನು ಎಳೆದುಕೊಂಡು ಹೋಗಿ ಕೊಲೆ ಮಾಡಿದರೆಂಬ ಭಯಂಕರವಾದ ಅಪವಾದನೆಗೆ ಆಧಾರಗಳು ಇನ್ನೂ ನಮಗೆ ದೊರಕಿಲ್ಲ. ಯಾರೂ ಸಾಯಲಿಲ್ಲ. ಯಾರೂ ಮಾಯವಾಗಲಿಲ್ಲ ಎಂದು ನಮಗೆ ಇದುವರೆಗೂ ತಿಳಿದು ಬಂದಿರುವ ಸಂಗತಿ. ಪತ್ರೆ ತರದೂದು ಒಹಳ ನಿಧಾನವಾದ್ದರಿಂದ ರುಜುವಾತುಗಳೆಲ್ಲಾ ಮಾಯವಾಗಿರಬಹುದು. ಆದುದರಿಂದ ಈ ಹುಡುಗರ ವಿಷಯವಾಗಿ ಜನಗಳಲ್ಲಿ ನಟ್ಟಿರುವ ಸಂಶಯವನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೋಸ್ಕರ ಇನ್ನೊಂದು ವಿಶೇಷ ವಿಚಾರಣೆಯನ್ನು ನಡೆಸಬೇಕೆಂದು ನಾವು ಸೂಚಿಸುತ್ತೇವೆ.

ಸರ್ಕಾರದ ಅವಿಚಕ್ಷಣೆ.

ಜುಲೈ 30 ನೇ ತಾರೀಖಿನ ರಾತ್ರಿ, ಇಷ್ಟೆಲ್ಲಾ ಗಲಾಟೆ ಆದಾಗ ಪರಿಸ್ಥಿಯನ್ನು ಹತೋಟಿಗೆ ತರವುದಕ್ಕೋಸ್ಕರ ಪೋಲಿಸಿನವರೂ ಮ್ಯಾಜಿಸ್ಟ್ರೇಟರೂ ವಿಚಕ್ಷಣೆ ಇಂದ ಕೆಲಸ ಮಾಡಲಿಲ್ಲ ಗುಂಡುಗಳು ಹೊಡೆಯಲ್ಪಟ್ಟವು ಮಹಮದೀಯರು ನಿರಾಯುಧರಾದ ಹಿಂದೂಗಳನ್ನ ಲಾಠಿಗಳಿಂದ ಹೊಡೆದರು. 60 ಹಿಂದೂಗಳಿಗೂ 6 ಹಿಂದೂ ಪೋಲೀಸ್ ಆಫೀಸರುಗಳಿಗೂ ಗಾಯವಾಯಿತ. ಆದರೂ ಪೋಲೀಸ್ ವಿಚಾರಣೆಯು ನಡೆಯಲಿಲ್ಲ. ಮನೆಗಳನ್ನು ಹುಡಕಲಿಲ್ಲ ಯಾರನ್ನೂ ದಸ್ತಗಿರಿ ಮಾಡಲೂ ಇಲ್ಲ ಮಾರನೇ ದಿವಸ [illegible] ಯನ್ನು ಸರ್ಕಾರದವರು ಪೋಲೀಸ್ ಕೈಲಿತಪ್ಪಿಸಿದರು. ಪೋಲೀಸಿನವರಿಗೆ ಈ ಪತ್ತೆತರದೂದಿನಲ್ಲಿ ಇದ್ದ ಅಲ್ಪಸ್ವಲ್ಪ ಅಭಿರುಚಿಯು ಮಾಯವಾಯಿತು. ಹೊಸದಾಗಿ ನೇಮಿಸಲ್ಪಟ್ಟ ಮ್ಯಾಜಿಸ್ಟ್ರೇಟರಿಗೆ ಅವರ ಮಾಮೂಲು ಕೆಲಸ ಜೊತೆ ತಗಲಿಕೊಂಡಿತ್ತು. ಈ ಪತ್ತೆತರದೂದಿನ ಕೆಲಸಕ್ಕೆ ಸಾಕಾದಷ್ಟು ಪ್ರಾಧಾನ್ಯವೇ ಅವರಿಗೆ ದೊರೆಯಲಿಲ್ಲ. ನಾಲ್ಕು ದಿನಸವಾದ ಮೇಲೆ ಈ ಮ್ಯಾಜಿಸ್ಟ್ರೇಟರನ್ನು ತಪ್ಪಿಸಿ ಇನ್ನೊಬ್ಬ ಮ್ಯಾಜಿಸ್ಟ್ರೇಟರನ್ನು ನೇಮಿಸಿದರು.

(ಸಶೇಷ)

ಗೌ|| ಅಡ್ವೋಕೇಟರು.

ಮಿ|| ಎ. ಆರ್. ನಾಗೇಶ್ವರ ಅಯ್ಯರವರನ್ನು ಮ|| ರಾ|| ಕೆ. ಶಂಕರನಾರಾಯಣರಾಯರ ಸ್ಥಾನದಲ್ಲಿ ಈ ಮಾಹೆಯಿಂದ ಆರು ತಿಂಗಳ ಕಾಲ ಗೌರ‍್ನಮೆಂಟ್ [illegible]

ಹಿಂದೂಗಳ ಮೇಲಿನ ಮೊಕದ್ದಮೆಗಳು ವಾಪಸ್

ಜನವರಿ 2 ನೇ ತಾ|| ನ ದಿನದ ಬೆಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರವರು ಹಿಂದೂಗಳಮೇಲೆ ಹಾಕಲ್ಪಟ್ಟಿರುವ ಒಂಭತ್ತು ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಅರ್ಜಿ ಹಾಕಿದರು. ಅಡ್ವೊಕೇಟ್ ವೆಂಕಟಪತಯ್ಯನವರು ಇದನ್ನು ವಿರೋಧಿಸಿದರು.

ಅಖಿಲ ಭಾರತ ಸಂಪದಭ್ಯುದಯ ಸಮ್ಮೇಳನ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೇಲ್ಕಂಡ ಸಮ್ಮೇಳನವು ನಿನ್ನೆಯದಿನ ರಾಜಾಜಿಯ ಜಗನ್ಮೋಹನ ಬಂಗಲೆಯಲ್ಲಿ ನಡೆಯಿತು. ಸಭೆಗೆ ತುಂಬ ಅಧಿಕಾರ ವರ್ಗದವರೂ ಖಾಸಗೀ ದೊಡ್ಡ ಮನುಷ್ಯರೂ ನೆರದಿದ್ದರು. ವೇದಿಕೆಯ ಮಧ್ಯದಲ್ಲಿ ಶ್ರೀ ಯುವರಾಜರವರೂ ಸರ್. ಟಾಡ್ ಹಂಟರವರೂ ರಾ|| ಎನ್. ಎಸ್. ಸುಬ್ಬರಾಯರೂ ವಿಶ್ವವಿದ್ಯಾಧಿಕಾರಿಗಳೂ ಅಂದಿನ ಅಧ್ಯಕ್ಷರಾದ ಶ್ರೀ [illegible] ಕಾಳೆಯವರೂ ಸಭೆಯನ್ನು ಅಲಂಕರಿಸಿದ್ದರು.

ಪ್ರಾರಂಭದಲ್ಲಿ ಶ್ರೀಯುವರಾಜರ ಭಾಷಣವಾಯಿತು. ಮೈಸೂರಿನಲ್ಲಿ ನಡೆಯುತ್ತಿರುವ ಸಂಪದಭ್ಯುದ್ಧಿಯ ಕೆಲಸಕಾರ್ಯಗಳನ್ನು ವಿವರಿಸಿದರು. ಅನಂತರ ಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾದ ಕೆ. [illegible] ಯವರು ವಿಶ್ವವಿದ್ಯಾಲಯದ ಪರವಾಗಿ ಸಮ್ಮೇಳನಕ್ಕೆ ಸ್ವಾಗತವಿತ್ತರು.

ಖಾನರಮೇಲೆ ಮೊಖದ್ದಮೆ.

ಮಂದಿನ ಸೋಮವಾರ ಅಬ್ಬಾಸ್ ಖಾನರ ಮೇಲೆ ಇನ್ನೊಂದು ಮಾನನಷ್ಟದ ಮೊಕದ್ದಮೆಯು ದಾಖಲಾಗುವುದೆಂದು ಸುದ್ದಿ.

ಅಂಟುರೋಗ.

ಬೆಂಗಳೂರು ಡಿ|| ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಈ ಮಾಹೆ 10 ನೇ ತಾ ನಿಂದ 23 ನೇ ತಾರೀಖಿನವರೆಗೆ ನಡೆಯುವ ಘಾಟಿ ಜಾತ್ರೆಗೆ ಅಂಟುರೋಗಗಳಿರುವ ಸ್ಥಳಗಳಿಂದ ಯಾರೂ ಹೋಗಕೂಡದೆಂದು ಸರ್ಕಾರದವರು ನಿರ್ಬಂಧ ಪಡಿಸಿರುತ್ತಾರೆ.

ವ್ಯವಸಾಯಗಾರರಿಗೆ ಸಹಾಯ

1929 ನೇ ಜನವರಿ ಮೊದಲನೆಯ ತಾ ಲಾಗಾಯ್ತು ಸಾಗರ ಕೊಪ್ಪ ಮತ್ತು ಮಂಜರಾಬಾದ್ ತಾಲ್ಲೂಕುಗಳಲ್ಲಿ ರೈತರಿಗೆ ಅಗ್ರಿಕಲ್ಚರಿಸ್ಟ್ಸ್ ರಿಲೀಫ್ ರೆಗ್ಯುಲೇಷನ್ ಪ್ರಕಾರ ಸಹಾಯವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ.

ರಾಷ್ಟ್ರೀಯ ಮಹಾಸಭೆ

ಮಹಾಸಭೆಯ ಕಾರ್ಯಗಳನ್ನು ಕೊನೆ [illegible] ಸವುದಕ್ಕೆ ತಿಂಗಳೊಂದಕ್ಕೆ 100 ರೂಪಾಯಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಆದಾಯವಿರುವ ಪ್ರತಿಯೊಬ್ಬ ಕಾಂಗ್ರೆಸ್ ಸಭಿಕನೂ 100 ಕ್ಕೆ 5 ರೂಪಾಯಿ ನಂತೆ ಪ್ರತಿ ಮಾಸದಲ್ಲಿಯೂ ಕಾಂಗ್ರೆಸ್ [illegible] ಗೋಸ್ಕರ ಕೊಡಬೇಕು ಎಂಬ ತೀರ್ಮಾನವು ಈ ವರ್ಷ ಕಾಂಗ್ರೆಸ್ ಮಹಾಸಭೆಯಲ್ಲಿ ಸರ್ವಾನುಮತದಿಂದ [illegible]

ತಾಯಿನಾಡು.

4—1—1929.

ರಾಷ್ಟ್ರೀಯ ಮಹಾಸಭೆ

ಮಹಾತ್ಮಾಜೀಯವರ ಭಾಷಣ

ಮಹಾತ್ಮಾ ಗಾಂಧಿಯವರು ಸಂಪೂರ್ಣ ಸ್ವಾತಂತ್ರ್ಯವಾದಿಗಳಿಗೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವಾದಿಗಳಿಗೂ ರಾಜಿಯನ್ನು ಮಾಡುವದಕ್ಕೋಸ್ಕರವಾಗಿ ಇಬ್ಬರಿಗೂ ಸಮಾಧಾನವಾದ ಒಂದು ಠರಾವನ್ನು ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ತಂದರು. ಅವರು ತಂದ ಮೊದಲನೆಯ ಠರಾವು ಅನೇಕ ಆಕ್ಷೇಪಣೆಗಳಿಗೆ ಗುರಿಯಾದ್ದರಿಂದ ಇನ್ನೊಂದು ಠರಾವನ್ನು ತಂದರು. ಈ ಠರಾವನ್ನು ಸಂಪೂರ್ಣ ಸ್ವಾತಂತ್ರ್ಯವಾದಿಗಳಿಗೆ ಮುಖಂಡರಾದ ಮ|| ಎಸ್. ಶ್ರೀನಿವಾಸ ಅಯ್ಯಂಗಾರ್ಯರವರು ಅನುಮೋದಿಸಿದರು. ಆದರೂ ಸಂಪೂರ್ಣ ಸ್ವಾತಂತ್ರ್ಯವಾದಿ [illegible] ತರುಣಾಳುಗಳಾದ ಪಂಡಿತ ಜವಾಹಿರ್ ಲಾಲ್ ನೆಹರೂರವರೂ, ಸುಭಾಷ್‌ಚಂದ್ರಬೋಸರವರೂ ಇನ್ನೂ ಇತರರೂ ಇದನ್ನು ಒಪ್ಪಲಿಲ್ಲ. ಆದರೂ ಬಹುಮತದಿಂದ ಮಹಾತ್ಮ ಗಾಂಧಿಯವರ ತೀರ್ಮಾನವು ಒಪ್ಪಿಗೆಯನ್ನು ಪಡೆಯಿತು. ಮೊದಲನೆಯ ಠರಾವನ್ನು ತಂದ ಕಾಲದಲ್ಲಿ ಮಹಾತ್ಮ ಗಾಂಧಿಯವರ ಮಾಡಿದ ಭಾಷಣವೇ ನೆಂದರೆ.—

"ನಾನು ಈ ಕಾಂಗ್ರೆಸ್ಸಿಗೆ ಬರಬೇಕೆಂದೇ ಇರಲಿಲ್ಲ. ಇಲ್ಲಿ ಮಾತನಾಡಬೇಕೆಂದೂ ಇರಲಿಲ್ಲ. ಪಂಡಿತ ಮೋತೀಲಾಲ್ ನೆಹರೂರವರು ಒತ್ತಾಯಪಡಿಸಿದ್ದರಿಂದ ನಾನು ಈ ಕಾಂಗ್ರೆಸ್ಸಿಗೆ ಬಂದೆನು. ನಮ್ಮ ದೇಶದ ಋಣವನ್ನು ತೀರಿಸುವುದಕ್ಕಾಗಿ ನನ್ನ ಕರ್ತವ್ಯವನ್ನು ಪರಿಪಾಲನೆ ಮಾಡುವುದಕ್ಕಾಗಿ ಈ ಠರಾವನ್ನು ನಿಮ್ಮ ಮುಂದೆ ತರುವ ಭಾರವು ನನ್ನ ಮೇಲೆ ಬಿದ್ದಿರುವುದು.

ಈ ಠರಾವು ಕಾಂಗ್ರೆಸ್ಸಿನಲ್ಲಿರುವ ಎರಡು ಪಕ್ಷಗಳನ್ನೂ ತೃಪ್ತಿ ಪಡಿಸುವುದಕ್ಕಾಗಿ ತರಲ್ಪಟ್ಟಿರುವುದು. ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳಿರುವುದು ಒಂದು [illegible] ವಿಷ್ಟವಲ್ಲ. ಅದಕ್ಕೆ ಯಾರೂ ವ್ಯಸನಪಡಬೇಕಾದ್ದಿಲ್ಲ. ನೆಹರೂ ಕಮಿಟಿಯ ವರದಿಯನ್ನು ಅದು ಪ್ರಕಟವಾದ ಕಾಲದಲ್ಲಿ ಇಂಡಿಯಾ ದೇಶದವರೆಲ್ಲರೂ ಯಾವ ರೀತಿಯಾದ ಆದರಣೆಯಿಂದ ಕಂಡರೋ ಅದೇ ರೀತಿಯಾಗಿ ಪ್ರತಿಯೊಬ್ಬ ಕಾಂಗ್ರೆಸ್ ಮೆಂಬರೂ ಆ ವರದಿಯನ್ನು ಆದರಣೆಯಿಂದ ಕಾಣಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನೀವು ಎಷ್ಟು ವಿಶ್ವಾಸವನ್ನು ತೋರಿಸುವಿರೋ ಅಷ್ಟೇ ವಿಶ್ವಾಸವನ್ನು ಆ ವರದಿಗೂ ತೋರಿಸಬೇಕು. [illegible] ಪೂರ್ಣ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುವುದೇ ನಿಮ್ಮ ಉತ್ಕಟೇಚ್ಛೆಯಾಗಿದ್ದರೆ ಈಗ ನಾನು ಪ್ರಸ್ತಾಪ ಮಾಡುವ ಠರಾವಿನಲ್ಲಿಯೂ ಅದಕ್ಕೆ ಬೇಕಾದಷ್ಟು ಅವಕಾಶವಿರುವುದು.

"ನೆಹರೂ ಕಮಿಟಿಯ ವರದಿಯನ್ನು ನೀವು ಸಂಪೂರ್ಣವಾಗಿ ಸ್ವೀಕರಿಸಬೇಕು. ಇಲ್ಲ ಸಂಪೂರ್ಣವಾಗಿ ತಿರಸ್ಕರಿಸಬೇಕು. ಆ ವರದಿಯೇ ಒಂದು ಕೊನೆಯಲ್ಲ. ಒಂದು ಕೊನೆಗೆ ಮೊದಲು. ಆ ವರದಿಯ ಉದ್ದೇಶವು ನಮ್ಮ ದೇಶದ ಎಲ್ಲಾ ರಾಜಕೀಯ ಪಂಗಡಗಳನ್ನೂ ಒಟ್ಟುಗೂಡಿಸಿ ಅವರ ಉದ್ದೇಶ್ಯಗಳನ್ನು ಏಕತ್ರ ಮಾಡುವುದೇ ಆಗಿರುವುದು.

ಕಮಿಟಿಯವರು ಕೆಲಸಕ್ಕಾರಂಭಿಸಿದಾಗ ಎಲ್ಲೆಲ್ಲಿಯೂ ಕಗ್ಗತ್ತಲೆಯಾಗಿತ್ತು. ಎಲ್ಲೆಲ್ಲೂ ನಿರಾಶೆಯಾಗಿತ್ತು. ಡಾ|| ಅನ್ಸಾರಿಯವರೂ, ಪಂಡಿತ ಮೋತೀಲಾಲ್ ನೆಹರೂರವರೂ ಈ ಅಂಧಕಾರಾಸುರನೊಡನೆ ಹೋರಾಡಿ ಅವನನ್ನು ಸಂಹಾರ ಮಾಡಿದರು. ಅಖಿಲ ರಾಜಕೀಯ ಪಂಗಡಗಳ ಏಕಮತ್ಯವನ್ನು ಕೋರಿದವರು ಕಾಂಗ್ರೆಸ್ಸಿನವರಾದ ನೀವು. ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಯಾವ ರೀತಿಯಾಗಿ ನೀವು ಗೊತ್ತುಮಾಡಿಕೊಂಡಿರೋ ಅದೇ ರೀತಿಯಾಗಿ ನಮ್ಮ ದೇಶದ ಎಲ್ಲಾ ರಾಜಕೀಯ ಪಂಗಡಗಳೂ ಒಪ್ಪುವಂಥ ಒಂದು ಸ್ವರಾಜ್ಯರಚನೆಯನ್ನು ರಚಿಸಬೇಕೆಂದೂ ನೀವು ನಿಶ್ಚಯ ಮಾಡಿದಿರಿ. ಹೀಗಿರುವಾಗ್ಗೆ ನೆಹರೂ ಕಮಿಟಿಯ ವರದಿಯನ್ನು ತಿರಸ್ಕರಿಸುವುದಕ್ಕೆ ಕಾರಣಗಳು ಪ್ರಬಲವಾಗಿರಬೇಕು. ವರದಿಯನ್ನು ಕಂಡುತುಂಡಾಗಿ ಚೂರ ಚೂರು ಮಾಡಬೇಡಿ. ಅದನ್ನು ಅಖಂಡವಾಗಿ ಪರಿಶೀಲಿಸಬೇಕು. ಒಂದು ಭಾಗವನ್ನು ತುಂಡು ಮಾಡಿ ಇದು ನನಗೆ ಬೇಕು, ಅದು ನನಗೆ ಬೇಡ ಎಂದು ಹೇಳಬಾರದು. ಡಾ|| ಅನ್ಸಾರಿಯವರು ಹೇಳಿರುವಂತೆ ವರದಿಯ ಮಧ್ಯಭಾಗವನ್ನು ತೆಗೆದುಹಾಕಿದರೆ ನೀವು ಅದರ ಹೃದಯವನ್ನೇ ಕಳೆದ ಹಾಗಾಗುತ್ತದೆ. ವರದಿಯ ಮಧ್ಯಭಾಗವು ಸಾಮ್ರಾಜ್ಯಾಂತರ್ಗತ ಸ್ವರಾಜ್ಯ. ಸಂಪೂರ್ಣ ಸ್ವಾತಂತ್ರ್ಯವನ್ನೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೂ ಒಂದಕ್ಕೊಂದಕ್ಕೆ ಹೋಲಿಸಬೇಡಿ. ಈ ವರದಿಯ ಕರ್ತರು ನಿಮಗಿಂತಲೂ ಕಡಮೆ ದೇಶಭಕ್ತರೆಂದು ಭಾವಿಸಬೇಡಿ. ಅವರಿಗೆ ಪೂರ್ಣ ಸ್ವಾತಂತ್ರ್ಯವು ಬೇಡವೆಂದು ತಿಳಿಯಬೇಡಿ. ಈ ಶಬ್ದಕ್ಕೆ ಬಹಳ ತಪ್ಪು ಅಭಿಪ್ರಾಯ ನನ್ನುಂಟುಮಾಡಿದ್ದಾರೆ. ಆ ಶಬ್ದದ ಅರ್ಥವು [illegible] ಜನಾಂಗದ [illegible] ಕ್ತಿಯ ಮೇಲೂ ಕಾಲದ ಪರಿಸ್ಥಿತಿಯ ಮೇಲೂ ಅವಲಂಬಿಸುವುದು. ನೇಪಾಳದ ಸ್ವಾತಂತ್ರ್ಯವೂ, ಅಮೇರಿಕಾದ ಸ್ವಾತಂತ್ರ್ಯವೂ ಒಂದೇ ಅಲ್ಲ. ದೇಶೀಯ ಸಂಸ್ಥಾನಗಳು ತಾವು ಸ್ವತಂತ್ರರೆಂದು ಭಾವಿಸುತ್ತವೆ. ಕೆಲವು ದೇಶೀಯ ಸಂಸ್ಥಾನಗಳ ಸರ್ಕಾರದವರು ತಾವು ಪ್ರಜೆಗಳಿಗಿಂತಲೂ ಸ್ವತಂತ್ರರೆಂದು ಭಾವಿಸಿರುತ್ತಾರೆ. ಅದೂ ಒಂದು ರೀತಿಯ ಸ್ವಾತಂತ್ರ್ಯ. ಆದ್ದರಿಂದ ನಾವು ಆ ಶಬ್ದಕ್ಕೆ ಹೆಚ್ಚು ಬೆಲೆಯನ್ನು ಕೊಡಬೇಕಾದ್ದಿಲ್ಲ. ಡೊಮಿನಿಯನ್ ಸ್ಟೇಟಸ್ ಅಥವಾ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕೆ ಕಡಿಮೆ ಬೆಲೆಯನ್ನು ಕಟ್ಟಬೇಡಿ. ಸಾಮಾನ್ಯ ಜನರ ಮುಂದೆ ಈ ಎರಡು ಶಬ್ದಗಳ ಅರ್ಥವನ್ನೂ ವಿವೇಚನ ಮಾಡುವುದು ಸುಲಭವಲ್ಲ. ನನಗೆ ಇದು ಚೆನ್ನಾಗಿ ಗೊತ್ತಿದೆ.

ಸಂಪೂರ್ಣ ಸ್ವಾತಂತ್ರ್ಯವನ್ನೂ ಬಯಸುವ ಮನುಷ್ಯನಿಗೆ ಈ ಠರಾವಿನಲ್ಲಿ ಸಂಪೂರ್ಣ ಅವಕಾಶವಿರುವುದು ನಾನು ನಿಮಗೆ ಇನ್ನೊಂದು ಮಾತನ್ನು ಹೇಳುವೆನು. ಮದ್ರಾಸ್ ಕಾಂಗ್ರೆಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವು ಕಾಂಗ್ರೆಸಿನ ಧ್ಯೇಯವೆಂಬುದಾಗಿ ತೀರ್ಮಾನಿಸಲ್ಪಟ್ಟಿತು. ಅದೇ ಸಂಪೂರ್ಣ ಸ್ವಾತಂತ್ರ್ಯದ ಜಾಹಿರ್ ನಾಮೆಯಲ್ಲಿ ಆ ಠರಾವಿನಲ್ಲಿ ಕರ್ತರು ಯಾವರೀತಿಯಾದ ಸ್ವಾತಂತ್ರ್ಯಕ್ಕಾಗಿ ಠರಾವನ್ನು ತಂದರೋ ಆ ಸ್ವಾತಂತ್ರ್ಯಕ್ಕಾಗಿಯೇ ನೀವು ಕೆಲಸ ಮಾಡುತ್ತಿರುವಿರಿ. ಒಂದು ರೀತಿಯಾಗಿ ನಾವೆಲ್ಲರೂ ಂತಕಸ್ವಾತ್ರ್ಯಕ್ಕಾಗಿಯೇ ಪ್ರಯತ್ನಪಡುತ್ತಿರುವೆವು. ಕಾಂಗ್ರೆಸಿನ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯದ ತತ್ವವೇ ಆಗಿರುವುದು. ಅದು ಅಲ್ಲ ಎಂದು ಧೈರ್ಯವಾಗಿ ಯಾರಾದರೂ ಹೇಳಿ [illegible] ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಮ್ಮಲ್ಲಿ ಅನೇಕರು ಸಾಯಬೇಕಾದೀತು.

ನಮ್ಮ ದೇಶದ ಆತ್ಮ ಮರ್ಯಾದೆಯನ್ನು ಎತ್ತಿ ಹಿಡಿಯಬೇಕೆಂದು ಇರುವರ್ಯಾರಿಗೂ ನಾನು ಕಡಿಮೆ ಇಲ್ಲ. ನಮ್ಮ ದೇಶದ ಸ್ವಾತಂತ್ರ್ಯ [illegible] ನೋಡಿ ನಾನು ಬಹಳ ಸಂ[illegible]ಸುತ್ತಿರುವೆನು. ನಮ್ಮ ದೇಶದ ಸ್ವಾತಂತ್ರ್ಯ[illegible] ರುವುದು. ಪೂರ್ಣ[illegible] [illegible]ರುವೆನು. ಸ್ವಾತಂತ್ರ್ಯದ ಜ್ವಾಲೆಯು ನನ್ನ ಹೃದಯದಲ್ಲಿ ಉರಿಯುತ್ತಿರುವುದು. ನನ್ನ ದೇಶದ ಸೇವೆಗಾಗಿ ನನ್ನ ಅಲ್ಪ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸುತ್ತಿರುವೆನು. ಆದುದರಿಂದ ನನ್ನ ಧ್ಯೇಯವು ನಿಮ್ಮ ಧ್ಯೇಯಕ್ಕಿಂತಲೂ ಕಡಿಮೆ ಎಂದು ತಿಳಿಯಬೇಡಿ.

ಮದ್ರಾಸ್ ಕಾಂಗ್ರೆಸಿನ ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಜಾರಿಯಲ್ಲಿ ತರಲು ಈ ಠರಾವಿನಲ್ಲಿ ಬೇಕಾದಷ್ಟು ಅವಕಾಶವಿರುವುದು. ಈ ಠರಾವಿನಂತೆ ನಡೆದರೆ ದೇಶದಲ್ಲಿ ಏಕಮತ್ಯವೂ ಉಂಟಾಗುವುದು. ನೆಹರೂ ಕಮಿಟಿಯ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರೂ ರವರು ನೀವು ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಕಾಂಗ್ರೆಸಿನಲ್ಲಿ ಪಾಸ್ ಮಾಡಿದಾಗ ಯೂರೋಪಿನಿಂದ ನಿಮಗೆ ಅಭಿನಂದನೆಗಳನ್ನು ಕಳುಹಿಸಿದರು. ಆದುದರಿಂದ ನಾವು ಪ್ರಸ್ತಾಪಿಸಿರುವ ಠರಾವಿನಿಂದ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯಕ್ಕೆ ಬಾಧಕ ಒಗವುದೆಂದು ತಿಳಿಯಬೇಡಿ. ಈ ಠರಾವನ್ನು ಪ್ರಸ್ತಾಪ ಮಾಡಿದೆನೆಂದು ನನಗೆ ಯಾವ ವಿಧವಾದ ದಾಕ್ಷಿಣ್ಯವೂ ಬೇಡ. ಈ ಮುದುಕನನ್ನು ನೀವು ಮಾಡುವೆ ನೇ? ನಮ್ಮ ದೇಶವನ್ನು ಚೆನ್ನಾಗಿ ಸೇವೆ ಮಾಡಿದ್ದಾನೆ. ಅವನಿಗೆ ಇಲ್ಲವೆನ್ನುವುದು ಹೇಗೆ? ಅದಕ್ಕೋಸ್ಕರವಾಗಿ ಈ ಠರಾವಿಗೆ ಒಪ್ಪಿಕೊಳ್ಳೋಣ ಎಂದು ಆಲೋಚಿಸಬೇಡಿ. ನಾನೂ ನಿಮ್ಮ ಹಾಗೆ ಒಬ್ಬನು. [illegible] ನೀವು ಮುಂದಕ್ಕೆ ಹೋದರೆ ನನಗೆ ಬಹಳ ಸಂತೋಷ ನೀವು ಒಂದುವೇಳೆ ಹೀಗೆ ಹೇಳಿದರೂ ನನಗೆ ಸಂತೋಷ. [illegible] ಮವನ್ನು ವಿಧಿಸಿದ್ದಾರೆ. ನಿನಗೆ ಈಗ ವಿರಾಮವು ಅತ್ಯವಶ್ಯಕವಾಗಿರುವುದು. ನಾವಾದರೋ ಓಡಬೇಕಾಗಿದೆ ಮುದುಕನಾದ ನಿನ್ನ ಜೊತೆಯಲ್ಲಿ ಹೋದರೆ ನಾವು ತಡ [illegible] ಬೇಕಾಗುವುದು. ಅಮೃತಸರದ ಆ ಹಾಳುಗಳಲ್ಲಿಯೂ ಲ್ಲಿ ತಿವಳ ನಮಗೆ ಸಾಕಾಗಿದೆ. ಹೀಗೆ ಹೇಳಿದರೂ ನನಗೇನೂ ಅನ್ನಿಸುವುದಿಲ್ಲ. ಮುಂದಕ್ಕೆ ನುಗ್ಗಿ. ನಾನು ವಿಶ್ರಾಂತಿಯನ್ನು ತೆಗೆದುಕೊಳ್ಳುವೆನು. ಆದರೆ ದಾಕ್ಷಿಣ್ಯಕ್ಕಾಗಿಯಾಗಲಿ ಹೈನಾಸಿಗೋಸ್ಕರ ನಾನು ಈ ಠರಾವನ್ನು ನೀವು ಒಪ್ಪಬೇಕಾಗಿಲ್ಲ. ನಿಮ್ಮ ಅಧಿಕಾರದೂ ಇದೇ ಮಾತು. ಸ್ವಾತಂತ್ರ್ಯವನ್ನು ನೀವು ಪಡೆಯುವುದಕ್ಕಾಗುವುದಿಲ್ಲ. ಯಾರಿಗೂ ಸ್ವಾತಂತ್ರ್ಯವು ಕದ್ದು ಬಂದಿಲ್ಲ. ರಕ್ತವನ್ನು ಬಸಿದು ಸ್ವಾತಂತ್ರ್ಯವನ್ನು ಸಂಪಾದಿಸಬೇಕು. ಆ ವರದಿಯಲ್ಲಿ ಸಮೂದಿಸಿರುವ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಸಂಪಾದಿಸುವುದಕ್ಕೂ ನೀವು ರಕ್ತವನ್ನು ಬಸಿಯಬೇಕಾಗುವುದು.

ವೃದ್ಧ ಪಿತಾಮಹರ ಸಾಧ್ವಿ ಸಂಪದಭ್ಯುದಯ ಪೇಟ್ರಿಯಟ್ ಪತ್ರಿಕೆಗಳು ನಿಲ್ಲಿಸಲ್ಪಡಬೇಕು ಎಂದು ಸರ್ಕಾರದವರು ಹುಕುಂ ಮಾಡಿಧಾರೆ

TAI NADU

5—1—1929

THE LATEST.

The latest act of the Mysore Government is to suppress under the Mysore NewsPapers Regulaton, the G.O.M.'s papers, the Mysore Patriot, (both the Daily and the Weekly), the Sadhvi and the Sampadabhyudaya. For sometime past there was indeed a rumour abroad that the G. O. M's papers were receiving the special attention of the powers that be. We thought that those days were gone, the terrorist regime was past and we were living under constitutional times. But we were sadly mistaken. All talks of peace are shibboleths. The bureaucracy wants peace, the peace of the grave-yard. Taking advantage of its position of vantage and power, it wants to mow down its opponents with no consideration to truth and justice. It is realey an irony of fate that immediately after the revelation of the material portion of the Visweswaraya Committee Report which pleads for equal ity of liberty of the people and tho Press in Mysore with that of British India, that the Government should stop the G. O. M's papers. Perhaps the bureaucracy has carried out the behests of the Committee in quite an extraordinary manner. The G. O. M. is the father of journalism in Mysore. He has fought many a brave battle against the Bureaucracy. Even to-day, though he is 85 he has been fighting for the cause of Truth and Justice with undiminished vigour. Any blow that is hurled at him is hurled at the Press and the people. We cannot exactly describe what we feel at this act of Government. We can only say that it is sheer madness that has prompted the Government to stop

ಬೆಂಗಳೂರು ಸುದ್ದಿ

(ನಮ್ಮ ವಾತ್ತೀಹಾರರಿಂದ)

ಬೆಂಗಳೂರು 3-1-29

ಹಿಂದೂಗಳಮೇಲೆ ಮಾಡಿರುವ ಎಲ್ಲಾ ಕೇಸುಗಳೂ ವಾಪಸ್‌ತೆಗೆದು ಕೊಳ್ಳಲ್ಪಟ್ಟವು. ಮ್ಯಾಜಿಸ್ಟ್ರೇಟರು ಪಬ್ಲಿಕ್ ಪ್ರಾಸಿಕ್ಯೂಟರ ಮತ್ತು ಮಿ|| ವೆಂಕಟಪತಯ್ಯನವರ ಅರ್ಜಿಯನ್ನು ದೀರ್ಘವಾಗಿ ಪರ್ಯಾಲೋಚಿಸಿ ಅಪರಾಧಿಗಳನ್ನು ಮಿ|| ಸುಬ್ರಹ್ಮಣ್ಯಂ ಹೊರತು ಬಿಟ್ಟು ಬಿಡಬೇಕೆಂದು ಹುಕುಂಮಾಡಿದರು.

ಮಿ|| ವೆಂಕಟಪತಯ್ಯನವರು ತಮ್ಮ ಅರ್ಜಿಯ ಬಗೆ ವಾದಿಸುತ್ತಾ, ಅಪರಾಧಿಗಳಿಗೆ ಕೋರ್ಟಿನ ಹುಕುಂ ಅವಶ್ಯಕವೇ ಹೊರತು ಸರಕಾರದ ಕಾರುಣ್ಯವುಬೇಕಾಗಿಲ್ಲ ವೆಂದರು. ಮಿ|| ಸುಬ್ರಹ್ಮಣ್ಯಂರವರು ತಮ್ಮ ಮೇಲೆ 150 ನೇ ಸೆಕ್ಷನ್ ಪ್ರಕಾರ ಹೂಡಿರುವ ಕೇಸಿನಲ್ಲಿ, ತಾವು ಒಂದು ಹೇಳಿಕೆಯನ್ನು ಕೊಡಬೇಕೆಂದು, ಅದರಂತೆ ಬರೆದು ಕೊಂಡು ಬಂದಿದ್ದ ಹೇಳಿಕೆಯನ್ನು ಓದಬೇಕೆಂದೂ ಅವಕಾಶ ಕೇಳಿದರು. ಅದಕ್ಕೆ ಮ್ಯಾಜಿಸ್ಟ್ರೇಟರು ನಿಮ್ಮ ಬಿಡುಗಡೆಯಾಗುವ ಸಂದರ್ಭದಲ್ಲಿ ಅದು ಅವಶ್ಯಕವಲ್ಲ ವೆಂದರು. ಮಿ|| ಸುಬ್ರಹ್ಮಣ್ಯಂರವರು ಆ ಹೇಳಿಕೆಯನ್ನು ಕೋರ್ಟಿನಲ್ಲಿ ಫೈಲ್ ಮಾಡಬೇಕೆಂದು ಒತ್ತಾಯಪಡಿಸಿದರು. ಅರ್ಧ ಘಂಟೆಯಾದ ಮೇಲೆ ಅವರ ಹೇಳಿಕೆಯನ್ನು ಕೋರ್ಟಿನವರು ತೆಗೆದು ಕೊಂಡರು. ಮ್ಯಾಜಿಸ್ಟ್ರೇಟರು ಇದರ ಬಗ್ಗೆ ನಾಳೆಯ ದಿವಸ ಹುಕುಂ ಮಾಡುವರು.

ಹೊಸ ಕೇಸುಗಳು

ಶ್ರೀಮನ್ ಮಹಾರಾಜರಿಗೆ ಜನ್ಮವತ್ತಳಿಗೆ ರುಜು ಮಾಡಿ ಡಿಸ್‌ಮಿಸ್ ಮಾಡಲ್ಪಟ್ಟ ಆರುಜನ ಉಪಧ್ಯಾಯರುಗಳು ನಾಳೆದಿವಸ 'ಮೈಸೂರು ಸ್ಟಾರ್' ಪತ್ರಿಕೆಯ ಮೇಲೆಮಾನನಷ್ಟದ ದಾವಾ ಮಾಡುವರೆಂದು ತಿಳಿಯಬರುತ್ತದೆ.

ದೇವಾಲಯ ಮಹತ್ವ.

ಶಿವಾಜಿ ಪ್ರಾಳಿನ ಜೊಂಡಾ ಸ್ಟ್ರೀಟಿನಲ್ಲಿರುವ ವಿಲ್ಲೆಸ್‌ಲ್ ಎಂಬ ಸ್ತ್ರೀಯೊಬ್ಬಳು ತನ್ನ ಗಂಡನೊಡನೆ ಜಗಳವಾಡಿ ಅತನನ್ನೂ ತನ್ನ ಐದು ಮಕ್ಕಳನ್ನೂ ಕೊಲ್ಲಬೇಕೆಂದು ಹವಣಿಸುತ್ತಿದ್ದಳು. ಒಂದು ರಾತ್ರಿ ಅವಳ ಗಂಡನೂ 11 ವರ್ಷದಿಂದ ಕೆಳಗಿನ ಪ್ರಾಯದ ಎಳೆಮಕ್ಕಳೂ ನಿದ್ರಿಸುತ್ತಿರಲು, ಮಲಗಿದ್ದ ಕೋಣೆಯ ನಾಲ್ಕು ಗೇಸ್ ನಳಿಗೆಗಳನ್ನೂ ತೆಗೆದು ,ಆತ್ಮಹತ್ಯಮಾಡಿಕೊಳ್ಳುವುದಕ್ಕಾಗಿ ನದಿಯ ಕಡೆಗೆ ಹೋಗುತ್ತಿರಲು, ಇಗರ್ಜಿಯ ಕಿಟಿಕಿಯಲ್ಲಿ ಪ್ರಕಾಶಿಸುತ್ತಿದ್ದ ನಂದಾ ದೀಪದ ಬೆಳಕನ್ನು ಕಂಡು, ಅವಳಲ್ಲಿ ದೈವಭಕ್ತಿಯು ಹುಟ್ಟಿ, ತನ್ನ ಕ್ರೂರಕೃತ್ಯವನ್ನು ತಿಳಿದುಕೊಂಡು. ಅಲ್ಲಿಂದ ಪೋಲೀಸ್ ಠಾಣೆಗೆ ಹೋಗಿ ಪೋಲೀಸರೊಡನೆ ತನ್ನ ತಪ್ಪನ್ನು ಒಪ್ಪಿಕೊಂಡಳು. ಪೋಲೀಸರು ಅವಳ ಮನೆಗೆ ಓಡಿ ಮರಣೋನ್ಮುಕರಾದ ತಂದೆಮಕ್ಕಳನ್ನು ಆಸ್ಪತ್ರೆಗೆ ಒಯ್ದರು. ಫಿರಲಳು ವಿಚಾರಣೆಯಲ್ಲಿ ನಿರಾಪರಾಧಿಯೆಂ

ಬಡ್ತಿ.

ಸಬಾರ್ಡಿನೇಟ್ ಜಡ್ಜರ ಕೆಲಸವನ್ನು ಹಂಗಾಮಿಯಾಗಿ ನೋಡುತ್ತಿರುವ ಮ|| ರಾ|| ಟಿ. ಸಿಂಗಾರ ವೇಲು ಮುದಲಿಯಾರ್ರನ್ನು 1928 ನೇ ಜುಲೈ 13 ನೇ ತಾ ನಿಂದಲೂ, ಮ|| ರಾ|| ಜಿ. ಪರಮ ಶಿವಯ್ಯನವರು 1928 ನೇ ಅಕ್ಟೋಬರ್ 14 ನೇ ತಾ ನಿಂದಲೂ ಆಯಾ ಕೆಲಸದಲ್ಲಿ ಖಾಯಂಮಾಡಿರುತ್ತೆ.

ಪೋಲೀಸ್ ಇಲಾಖೆ.

1929ನೇ ಜನವರಿ 1 ನೇ ತಾ || ಲಾಗಾಯಿತು ಬೆಂಗಳೂರು ಸಿಟಿಯಲ್ಲಿ ಸ್ಪೆಷಲ್ ಡ್ಯೂಟಿಗೆ ಬಂದಿರತಕ್ಕ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಎಂ. ಮರಿಯಪ್ಪ ನವರನ್ನು ಬೆಂಗಳೂರು ಸಿಟಿಗೂ ಮತ್ತು ಬೆಂಗಳೂರು ಸಿಟಿಯ ಅ| ಪೋ| ಸೂ| ರವರಾದ ಎಂ. ಕೆ. ನರಸಿಂಹಯ್ಯಂಗಾರ್ಯರನ್ನು ರೈಲ್ವೆ ಮತ್ತು ಸಿ. ಐ. ಡಿ. ಗಳ ಇಲಾಖೆಗೂ ವರ್ಗಾಯಿಸಿರುತ್ತಾರೆ.

ವಾಯು ವಿಮಾನ.

ಜರ್ಮನಿಯವರು ಸಂಚಾಲಕನ ಸಹಾಯವಿಲ್ಲದೆ ವಾಯು ವಿಮಾನವನ್ನು ನಡಿಸುವ ಯೋಚನೆಯಲ್ಲಿ ಪ್ರಯತ್ನಶೀಲರಾಗಿರುವರು. ಈ ವಿಮಾನವು ತನ್ನಷ್ಟಕ್ಕೆ ತಾನು ಹೋಗಬೇಕಾದ ದಿಕ್ಕಿಗೆ ಹಾರುವುದು. ಸಂಚಾಲಕನು ಹೋಗಬೇಕಾದ ದಿಕ್ಕು ಎತ್ತರ ಮೊದಲಾದುವುಗಳ ಕಡೆಗೆ ಲಕ್ಷ್ಯಮಾಡಬೇಕೆಂಬ ಅವಶ್ಯವಿಲ್ಲ. ವೈಮಾನಿಕನು ಚುಕ್ಕಾಣಿಯನ್ನು ಕಾಲಿನಿಂದ ಬಿಗಿ ಹಿಡಿದು ಬೇರೆ ಕೆಲಸದಲ್ಲಿ ಮಗ್ನನಾಗಿದ್ದರೂ ಚಲನ ಯಂತ್ರವು ತನ್ನ ಗತಿಯನ್ನು ಬದಲಾಯಿಸದೆ ಸರಿಯಾಗಿ ಹಾರುವುದು.

ಭಾರೀ ಕಟ್ಟಡ.

ಚಿಕಾಗೋ ಪಟ್ಟಣದಲ್ಲಿ 42 ಅಂತಸ್ತುಗಳ ಭಾರೀ ದ ನಾಟಕ ಶಾಲೆಯೊಂದನ್ನು ಕಟ್ಟಲಾರಂಭಿಸಿರುವರು. ಇದರ ವೆಚ್ಚಕ್ಕೆ ಸುಮಾರು 6, 00, 00, 000 ರೂಪಾಯಿಗಳಾದರೂ ಬೇಕಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ. ಕಟ್ಟಡವು ಮಧ್ಯಭಾಗದಲ್ಲಿ 550 ಫೀಟು [illegible] ಅಗಾಧವಾದ ಕಟ್ಟಡವನ್ನು ರಚಿಸುತ್ತಿರುವರು. ಈ ಕೆಲಸವು ಸಮಾಪ್ತಿಯಾದನಂತರ ಇದರ ವಿಸ್ತೀರ್ಣ ಸಣ್ಣ ಪಟ್ಟಣದಷ್ಟಾಗಬಹುದಂತೆ. ಇದನ್ನು ಕಟ್ಟಲು ಸುಮಾರು 6, 30, 00, 000 ಗಳನ್ನು ಸ್ಯಾಂಕ್ಷನ್ ಮಾಡಿರುವರೆಂದು ತಿಳಿದು ಬರುತ್ತದೆ.

ಹಾವುಗಳ ಕೋಪ.

ಕೊಚ್ಚಿಯ ಆಶ್ರಿತ ಸಂಸ್ಥಾನಕ್ಕೆ ಸೇರಿದ ತ್ರಿ[illegible]ಪುರವೆಂಬ ಪಟ್ಟಣದ ಸಮೀಪವಿರುವ ಇರುಂಬ[illegible]ಬಲ್ಲಿ ಹಾವಿನ ಮೊಟ್ಟೆಗಳನ್ನು ಇಬ್ಬರು ಹುಡುಗರು [illegible]ಟಕ್ಕಾಗಿ ಒಡೆದು ಹಾಕಿದರು. ಆ ಸರ್ಪವು [illegible]ಟ್ಟಿಕೊಂಡು ಅವರಲೊಬ್ಬನನ್ನು ಕಚ್ಚಿ ಕೊಂದು[illegible] ಇನ್ನೊಬ್ಬನು ಆ ಸರ್ಪದ ಬಾಯಿಯಿಂದ ತಪ್ಪಿ[illegible]ಟು ಮನೆಯಿಂದ ಮನೆಯನ್ನು ಬದಲಾಯಿಸಿ[illegible] ವನನ್ನು ಬಿಡದೆ, ಸೇಡು ತೀರಿಸಲು ಹೊಂಚು ಹಾ[illegible]ತ್ತು. ಆದರೆ ಕೆಲವರು ಸಾಹಸದಿಂದ ಆ ಸರ್ಪ

ತಾಯಿನಾಡು.

5—1—1929.

ಕಮಿಟಿಯ ವರದಿ.

[ಮುಂದುವರಿದುದು]

ಈ ಎರಡನೇ ಮ್ಯಾಜಿಸ್ಟ್ರೇಟರು ಅಬ್ಬಾಸ್ ಖಾಸರ ಸಹೋದ್ಯೋಗಿಗಳು. ಇಬ್ಬರೂ ಮ್ಯುನಿಸಿಪಲ್ ಆಡಳಿತದಲ್ಲಿ ಒಟ್ಟಿಗೆ ಕೆಲಸಮಾಡಿದವರು.

ಈ ಬದಲಾವಣೆಗಳಿಂದಲೂ ಮಾಡಬೇಕಾದ್ದನ್ನು ಮಾಡದಿದ್ದರಿಂದಲೂ, ಮಾಡಬಾರದ್ದನ್ನು ಮಾಡಿದ್ದರಿಂದಲೂ, ಗಲಾಟೆಗೆ ಸಂಬಂಧಪಟ್ಟ ನಿಜವಾದ ರುಜುವಾತುಗಳೆಲ್ಲಾ ಮಾಯವಾದವು. ಸರ್ಕಾರದವರು ಹೊರಡಿಸಿದ ಪ್ರಕಟಣೆಗಳು ಏಷ್ಟೋ ಮುಖ್ಯವಾದ ಭಾಗಗಳಲ್ಲಿ ಅನಿರ್ದೇಶವಾಗಿಯೂ ಸುಳ್ಳಾಗಿಯೂ ಇದ್ದವು ಉದಾಹರಣೆ— ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರನು ಸ್ಕೂಲಿಗೆ ಆಗಾಗ್ಯೆ ಹೋಗುತ್ತಿದ್ದರೆಂದೂ ಮಂಟಪವನ್ನು ಆಕಸ್ಮಿಕವಾಗಿ ಕಂಡು ಹಿಡಿದರೆಂದೂ, ಗುಂಡು ಹೊಡೆಯಲಿಲ್ಲವೆಂದೂ ಹೇಳಿದ ಮಾತೆಲ್ಲಾ ಸುಳ್ಳು. ವಿದ್ಯಾಭ್ಯಾಸದ ಇಲಾಖೆ ಅಧಿಕಾರಿಗಳು ಪರಿಸ್ಥಿತಿಯ ಮಹತ್ವವನ್ನರಿತು ಜಾಗ್ರತೆಯಾಗಿ ಕೆಲಸ ಮಾಡಬೇಕಾಗಿತ್ತು. ಗುಂಪನ್ನು ತಹಬಂದಿಗೆ ತರುವದಕ್ಕೋಸ್ಕರ ತರಲ್ಪಟ್ಟಿದ್ದ ಮಿಲಿಟರಿ ಸೈನ್ಯದ ಆಧಿಪತ್ಯವನ್ನು ಕಾನೂನನ್ನು ಮತ್ತು ರೂಲ್ಸುಗಳನ್ನೂ ತಿಳಿಯದ ಸಣ್ಣ ಅಧಿಕಾರಿಗಳು ನಡೆಸಿದರು. ಲ್ಯಾನ್ಸರುಗಳು ಹುಡುಗರ ಮೇಲೆ ದುಂಡಾವರ್ತಿ ಮಾಡಿದರು. ಪ್ರತಿಯಾಗಿ ಹುಡುಗರೂ ದುಂಡಾವರ್ತಿ ಮಾಡಿದರು. ಜನಗಳ ಗುಂಪನ್ನು ಚದರಿಸುವುದಕ್ಕಾಗಿ ತರಲ್ಪಟ್ಟ ಮಿಲಿಟರಿಯ ಮಾರ್ಗದರ್ಶನವನ್ನು ಸಿವಿಲ್ ಅಧಿಕಾರಿಗಳು ಮಾಡಬೇಕಾಗಿತ್ತು. ಲ್ಯಾನ್ಸರುಗಳು ಬಹಳ ತಾಳ್ಮೆಯನ್ನು ತೋರಿಸಿದರು. ಮತ್ತು ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಮುಖ್ಯವಾದ ಜವಾಬ್ದಾರಿ.

ಜುಲೈ 30 ನೇ ತಾರೀಖಿನ ರಾತ್ರಿ ಪರಿಸ್ಥಿತಿಯು ಅಷ್ಟು ಬಿಗಡಾಯಿಸಿದ್ದಕ್ಕೆ ಪೋಲೀಸಿನವರದು ಮತ್ತು ಮ್ಯಾಜಿಸ್ಟ್ರೇಟರದು ಮುಖ್ಯಜವಾಬ್ದಾರಿ. ಕಾನೂನನ್ನು ಚಲಾಯಿಸಬೇಕಾದದ್ದು ಅವರ ಕೆಲಸ. ಶಾಂತಿ ಸಂರಕ್ಷಣೆಯ ಕೆಲಸವು ಅವರದೇ. ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಅವರು ಮಾಡಿದ ಏರ್ಪಾಡುಗಳು ಏನೂ ಸಾಲದು ಒಂದು ವ್ಯವಸ್ಥೆ ಇರಲಿಲ್ಲ. ಯಾವ ಕೆಲಸವಾದ ಮೇಲೆ ಯಾವುದು ಮಾಡಬೇಕೆಂಬ ಮುಂದಾಲೋಚನೆ ಇಲ್ಲ. ಒಬ್ಬರಿಗೊಬ್ಬರ ಸಹಾಯವಿಲ್ಲ. ಎಲ್ಲೆಲ್ಲಿ ಏನಾಯಿತು ಎಂಬುದನ್ನು ಒಬ್ಬರಿಗೊಬ್ಬರಿಗೆ ತಿಳಿಸುವುದಕ್ಕೆ ಸರಿಯಾದ ಏರ್ಪಾಡಿಲ್ಲ. ಒಬ್ಬರನ್ನೊಬ್ಬರು ನೋಡಿದಾಗ ಹೇಳಿದ ಮಾತೇ ಮಾತು. ಸಿಟಿಯಲ್ಲಿದ್ದ ನಜಾರ್ಡಿನೇಟ್ ಮ್ಯಾಜಿಸ್ಟ್ರೇಟರುಗಳಿಗೆ ಯಾರು ಯಾರು ಏನೇನು ಮಾಡಬೇಕೊ ಎಂಬುದನ್ನು ನಿರ್ಧರಿಸಿರಲಿಲ್ಲ. ಮಿಲಿಟರಿಗೆ ಮಾರ್ಗದರ್ಶನ ಮಾಡುವರ್ಯಾರೂ ಗುಂಪುಗಳನ್ನು ಹತೋಟಿಗೆ ತರುವದಕ್ಕೆ ಯಾವ ಏರ್ಪಾಡೂ ಇಲ್ಲ. ಈ ಮ್ಯಾಜಿಸ್ಟ್ರೇಟರುಗಳು ಗಲಾಟೆಯಾದ ತರುಣದಲ್ಲಿಯೇ ಅಪರಾಧಿಗಳನ್ನು ದಸ್ತಗಿರಿಮಾಡಿ ರುಜುವಾತುಗಳನ್ನು ಸೇರಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಆಸ್ಪತ್ರೆಗೆ 45 ಜನ ಪೆಟ್ಟು ಬಿದ್ದವರನ್ನು ಸೇರಿಸಿದ್ದಾಗ್ಯೂ ಅಪರಾಧಿಗಳೊಬ್ಬರನ್ನೂ ಇವರು ಗುರ್ತುಹಿಡಿಯಲಾರದೇ ಹೋದರು. ಅಬ್ಬಾಸ್ ಖಾನರ ಅಂತಸ್ತು ನೋಡಿಯೋ ಏನೋ ಅವರ ಮೇಲೆ ಅನುಮಾನ ಬರುವ ಯಾವ ಕಾರ್ಯಭಾರವನ್ನು ನಡೆಸುವುದಕ್ಕೂ ಪೋಲೀಸ್ ಅಧಿಕಾರಿಗಳು ಹಿಂಜರಿಯುವ ಹಾಗೆ ಕಾಣುತ್ತದೆ. ಅಬ್ಬಾಸ್ ಖಾನರ ಮನೆಯ ಹತ್ತಿರದಲ್ಲೇ ಇಷ್ಟೆಲ್ಲಾ ಗಲಾಟೆಯಾಗಿದ್ದರೂ ಪೋಲೀಸಿನವರು ಏನನ್ನೂ ಮಾಡದೇ ಇದ್ದುದೇ ಇದನ್ನು ಸ್ಪಷ್ಟಪಡಿಸುತ್ತದೆ. ಗಲಾಟೆಯಾದ ಕೂಡಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಐ. ಜಿ. ಪಿ. ಯವರು ಇನ್ನೂ ಇತರ ಅಧಿಕಾರಿಗಳೂ ಆ ಬಳಿಗೆ ಹೋದರು. ಎಲ್ಲವನ್ನೂ ಹೇಳಿದರು. ಆದರೂ ಏನನ್ನೂ ಮಾಡಲಿಲ್ಲ. ಇಂತಹ ಭಾರಿ ಮನುಷ್ಯರ ವಿಷಯವಾಗಿ ಕಾರ್ಯಭಾಗವನ್ನು ನಡೆಸುವದಕ್ಕೆ ಹೆದರಿದರೋ ಅಥವಾ ಇನ್ನೇನು ಕಾರಣವೋ ಅದನ್ನು ಅವರು ಸ್ಪಷ್ಟಪಡಿಸಿಲ್ಲ. ಆದರೆ ಸರ್ಕಾರದವರು ಹುಕುಂ ಕೊಟ್ಟು ಪೋಲೀಸಿನವರು ತಟಸ್ಥಭಾವವನ್ನು ವಹಿಸಿದರು ಎಂದು ಹೇಳುವುದಕ್ಕೆ ನಮಗೆ ರುಜುವಾತು ಸಿಕ್ಕಿಲ್ಲ. ಆದರೆ ಒಂದಕ್ಕೆ ಮಾತ್ರ ವಿಷಾದಪಡಬೇಕಾಗುವುದು. ನೀವು ಏತಕ್ಕೆ ಕಾರ್ಯಭಾಗವನ್ನು ನಡೆಸಲಿಲ್ಲ ಎಂದು ಇದುವರೆಗೂ ಸರ್ಕಾರದವರು ಪೋಲೀಸಿನವರನ್ನಾಗಲೀ, ಮ್ಯಾಜಿಸ್ಟ್ರೇಟರನ್ನಾಗಲೀ ಕೇಳಲಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಸಮಜಾಯಿಷಿಯನ್ನೂ ಕೇಳುವುದು ವಾಡಿಕೆ. ಗುಂಡು ಹೊಡೆದುದ್ದನ್ನು ನೂರಾರು ಜನರು ಕೇಳಿದ್ದರು. ಸರ್ಕಾರಕ್ಕೆ ಸಮಾಚಾರವನ್ನು ಕೊಟ್ಟವರು ಗುಂಡು ಹೊಡೆಯಲಿಲ್ಲ ಎಂದು ಹೇಳಿದರು. ಸರ್ಕಾರದವರು ಇದನ್ನು ನಂಬಿದರು. ಬಹಳ ಕಾಲದವರೆಗೆ ಮನೆಗಳನ್ನು ಹುಡುಕಲೂ ಇಲ್ಲ. ದಸ್ತಗಿರಿಯನ್ನು ಮಾಡಲೂ ಇಲ್ಲ. ಪೋಲೀಸಿನವರು ನಮಗ್ಯಾಕಪ್ಪಾ ಎಂದು ಅಲಕ್ಷ್ಯ ಮಾಡಿದರು. ಮುಂದುವರಿದು ಕೆಲಸಮಾಡಲು ಅವರು ಸಾಹಸಪಡಲಿಲ್ಲ. ಪೋಲೀಸ್ ಇಲಾಖೆಯಲ್ಲಿ ಮೇಲಿನಿಂದ ಕೆಳಗಿನವರೆಗೂ ಇದ್ದ ಈ ಉದಾಸೀನ, ಆಲಸ್ಯ ಇವುಗಳನ್ನು ನೋಡಿಯೇ ಪ್ರಜಾಸಾಮಾನ್ಯಕ್ಕೆ ಬಹಳ ಅಸಮಾಧಾನವಾಗಿರುವುದು. ಕೋಪವೂ ಬಂದಿರುವುದು. ಇದು ನ್ಯಾಯವಾದುದು. ಪೋಲೀಸಿನವರ ಕರ್ತವ್ಯಲೋಪ ಮುಖ್ಯರಾದ ಅಧಿಕಾರಿಗಳು ತಮ್ಮ ನ್ಯಾಯವಾದ ಕರ್ತವ್ಯವನ್ನು ಲೋಪಮಾಡಿದರೆಂಬುದು ನಿರ್ವಿವಾದವಾದುದು. ಈ ಕರ್ತವ್ಯಲೋಪಕ್ಕೆ ಕಾರಣವೇನು ಎಂಬುದನ್ನು ನಮಗೆ ಹೇಳಿಲ್ಲ. ಮೇಲಿನಿಂದ ಆರ್ಡರು ಬರುವವರೆಗೂ ಕಾರ್ಯಭಾಗವನ್ನು ನಡೆಸಲು ಡಿ. ಎಸ್. ಪಿ ಯವರೂ, ಎ. ಎಸ್. ಪಿ. ಯವರೂ ಹಿಂಜರಿದರು. ಐ. ಜಿ. ಪಿ. ಯವರು ಸ್ವಾಧೀನವಿಲ್ಲದೆ ಮುಸಲ್ಮಾನರ ಗುಂಪಿನಲ್ಲಿ ಸಿಕ್ಕಿ ಬಿದ್ದು ಹಿಂದೂ ಎಂಬದಾಗಿ ಕಂಡುಹಿಡಿಯಲ್ಪಟ್ಟು ಪುಂಡರಾದ ಮುಸಲ್ಮಾನರಿಂದ ಲಾಠಿ ಪೆಟ್ಟನ್ನು ತಿಂದರು. ಯೂನಿಫಾರಂವೂ ಇಲ್ಲದೆ ಅಂಗರಕ್ಷಕರೂ ಇಲ್ಲದೆ ಐ. ಜಿ. ಪಿ. ಯವರು ಇಂತಹ ಗುಂಪಿಗೆ ನುಗ್ಗಿದ್ದು ಆಶ್ಚರ್ಯ. ಪೋಲೀಸ್ ಸೈನ್ಯದಲ್ಲಿ ಮಹಮ್ಮದೀಯರೇ ಹೆಚ್ಚು ಸಂಖ್ಯೆಯಲ್ಲಿದ್ದ ಕಾರಣದಿಂದ ಅಧಿಕಾರಿಗಳು ಕಾರ್ಯಭಾಗವನ್ನು ನಡೆಸದೇ ಇದ್ದ ಹಾಗೆ ಕಾಣುತ್ತದೆ. ಐ ಜಿ ಪಿ ಯವರು ಹೆಚ್ಚು ಧೈರ್ಯ, ಸ್ಥೈರ್ಯಗಳನ್ನು ತೋರಿಸಬೇಕಾಗಿತ್ತು. ಅಧಿಕಾರವನ್ನು ಚಲಾಯಿಸುವುದಕ್ಕೆ ಜವಾಬ್ದಾರರಾದವರೆಲ್ಲರೂ ಸುಮ್ಮನಿದ್ದರು. ಅಂತೂ ಆ ರಾತ್ರಿ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಕರ್ತವ್ಯಲೋಪವನ್ನು ಮಾಡಿದರು. ಒಟ್ಟು ಪೋಲೀಸು ಸೈನ್ಯವೇ ಪಾರ್ಶ್ವವಾಯು ಹಿಡಿದಂತೆ ಆಚರಿಸಿತು. ಸರ್ಕಾರದವರು ಇದನ್ನು ಹೇಳಿಲ್ಲ. ಈ ರೀತಿಯಾಗಿ ಆಗಬೇಕಾದದ್ದು ಆಗದೇ ಇರುವುದು, ಆಗಬಾರದ್ದು ಆಗುತ್ತಿರುವುದು ಬಂಗಳೂರಿನಲ್ಲಿ ಶೇಕಡಾ 88 ಭಾಗವಾದ ಹಿಂದೂಗಳಿಗೆ ಉದ್ರೇಕವನ್ನುಂಟುಮಾಡಿರುವುದು. ಅಪರಾಧಿಗಳ ಮೇಲೆ ಸರ್ಕಾರದ ಅಧಿಕಾರಿಗಳು ಯಾವ ಕಾರ್ಯಭಾಗವನ್ನೂ ನಡೆಸಲು ಇಷ್ಟಪಡುವುದಿಲ್ಲ ಎಂದು ಹಿಂದೂಗಳು ಭಾವಿಸಿರುವರು. ಸಶೇಷ]

ಯೂರೋಪಿಯನ್ನರ ಮದಾಂಧತೆ.

ಮೊನ್ನೆ ದಿವಸ ಮೋಹನ ಮಾಳವೀಯರವರು ಕಾಶಿಯಿಂದ ಕಲ್ಕತ್ತಾದಲ್ಲಿ ನಡೆಯುವ ರಾಷ್ಟ್ರೀಯ ಸಭೆಗೆ ಹೋಗುವುದಕ್ಕಾಗಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬಕ್ಸಾರ್ ಎಂಬ ಸ್ಟೇಷನ್ನಿನಲ್ಲಿಳಿದರು. ಅದೇ ರೈಲಿನಲ್ಲಿ ಕಲ್ಕತ್ತಾಕ್ಕೆ ಪ್ರಯಾಣ ಮಾಡುತ್ತಿದ್ದ ಪಂಡಿತ ಮೋತಿಲಾಲ ನೆಹರೂರವರನ್ನು ನೋಡುವುದಕ್ಕಾಗಿ ಆ ರೈಲಿನ ಕಡೆಗೆ ಹೋದರು. ಆ ಸ್ಟೇಷನ್ನಿನಲ್ಲಿ ರೈಲು ಏಳು ನಿಮಿಷಗಳು ಮಾತ್ರ ನಿಲ್ಲುವ ನಿಯಮ. ಮಾಲವೀಯರು ಪ್ಲಾಟ್ ಫಾರಂನಲ್ಲಿ ನಡೆಯುತ್ತಿದ್ದ ಹಾಗೆ ಗಾರ್ಡು ವಿಸಲ್ ಮಾಡಿದನು ರೈಲು ಹೊರಡಲಾರಂಭಿಸಿತು. ಮಾಲವೀಯರು ರೈಲು ಹತ್ತುವುದಕ್ಕೋಸ್ಕರ ಒಂದು ಕಂಪಾರ್ಟಮೆಂಟಿನ ಬಾಗಿಲನ್ನು ತೆಗೆದು ಒಳಕ್ಕೆ ಹೋದರು. ಯೂರೋಪಿಯನ್ ನೊಬ್ಬನು ರೈಲಿನ ಬಾಗಿಲನ್ನು ಹಾಕಿಕೊಂಡು ಮಾಲವೀಯರವರನ್ನು ಹೊರಗೆ ತಳ್ಳಿದನು. ಇನ್ನೊಂದು ಕಂಪಾರ್ಟಮೆಂಟಿಗೆ ಹೋಗಲು ಪ್ರಯತ್ನಿಸಿದರು. ಅಲ್ಲಿಯೂ ಹೀಗೆಯೇ ಆಯಿತು. ನಾಲ್ಕು ಕಂಪಾರ್ಟಮೆಂಟಿನಲ್ಲಿಯೂ ಇದೇ ರೀತಿಯಾಗಿ ಆಯಿತು. ಕಡೆಗೆ ರೈಲಿನೊಳಗಿಂದ ನೋಡುತ್ತಿದ್ದ ಒಬ್ಬ ಹಿಂದುವು ರೈಲಿನ ಸರಪಣಿಯನ್ನೆಳೆದನು. ರೈಲು ನಿಂತಿತು. ಮಾಲವೀಯರು ತಮ್ಮ ಕಂಪಾರ್ಟಮೆಂಟನ್ನು ಹತ್ತಿದರು. ಸ್ಟೇಷನ್ ಮಾಸ್ಟರು ಬಂದು ರೈಲನ್ನು ನಿಲ್ಲಿಸಿದವರು ಯಾರೆಂದು ಕೇಳಿದರು. ಆ ಹಿಂದುವು ನಾನು ನಿಲ್ಲಿಸಿದೆನು. ನನ್ನ ಹೆಸರನ್ನು ತೆಗೆದುಕೊಳ್ಳಿ ರೈಲನ್ನು ನಿಲ್ಲಿಸಿದ ಅಪರಾಧಕ್ಕಾಗಿ ನಿಮ್ಮ [illegible] ಎಂದು ಹೇಳಿದನು. ಸ್ಟೇಷನ್ ಮಾಸ್ಟರು ಹೆಸರುಗಳನ್ನು ತೆಗೆದುಕೊಳ್ಳಲಿಲ್ಲ ರೈಲು ಮುಂದಕ್ಕೆ ಹೊರಟಿತು. ಪಂ|| ಮಾಲವೀಯರಂಥ ಭಾರತೀಯ ಮುಖಂಡರನ್ನೂ ಕೂಡ ಯೂರೋಪಿನವರು ಎಷ್ಟು ತುಚ್ಛವಾಗಿ ಕಾಣುತ್ತಾರೆಂಬುದು ಇದರಿಂದ ವ್ಯಕ್ತವಾಗುವದೆ.

ರಜಾ.

ಬೆಂಗಳೂರಿನಲ್ಲಿ 2 ನೇ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೆಲಸ ನೋಡುತ್ತಿರುವ ಮ|| ರಾ|| ಪಿ. ಕೃಷ್ಣನಾರಾಯಣ ಶೆಟ್ಟರವರಿಗೆ ಈ ತಿಂಗಳ 2 ನೇ ತಾರೀಖಿನಿಂದ 10 ದಿವಸ ಪ್ರಿವಿಲೇಜ್ ರಜವನ್ನು ಕ್ರಿಸ್‌ಮಿಸ್ ರಜದ ಜೊತೆಗೆ ಮುಂಜೂರು ಮಾಡಿದೆ. ಆ ಕಾಲದಲ್ಲಿ ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನೂ ನೋಡಿಕೊಳ್ಳುವರು.

Reserved for

M. S. SIDDAPPA & BROS.

19೩೨ ನೆ. ಇಸವಿಯ ಸಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು., ಷೀಟ್ ಕ್ಯಾಲೆಂಡರ್ ... ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿ... ನಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ-- ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಏಕೆ ಗುಪ್ತವ್ಯಾಧಿಗಳಿಂದ ನರಳುವಿರಿ?

ತಕ್ಷಣ ಗುಣಪಡಿಸುವ **ಈ ರತನ್ ಮಿಶ್ರಿ ಹಲ್ವಾ** ವನ್ನು ಸೇವಿಸಿ.

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಅಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, ಸ್ವೇಚ್ಛೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, ... ಪಸ್ಪಿರ ವ್ರಣ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶಕ್ತಿ... ಉಂಟಾಗುವಿಕೆ, ಮೇಹವಡೆ, ಶರೀರವು ನಶಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, ... ಧಾತುವೃದ್ಧಿಯನ್ನುಂಟುಮಾಡಿ ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತನ್ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು.

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ ಪೇಚಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧—೨ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡತನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಸೀತವಾತ ಜ್ವರ, ಚಳಿಜ್ವರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ... ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲ ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದುಗಳು ಹಿಡಿತ ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ ಇವು ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಪ್ರಾಣಾಂತಿಯತಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ ... ಪಾನವನ್ನು ಮಾಡಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯಪ್ರದ...

... ಮಾತ್ರೆಗಳುಳ್ಳ ಸೀಸೆ 1 ಕ್ಕೆ 0—4—0 ಮೇರೆ ... ಅಂಗಡಿಗಳಲ್ಲಿಯೂ ದೊರೆಯುತ್ತವೆ. ... ಸೇರಿ 1 ಸೀಸೆಗೆ ..., 8 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 25 ಕ್ಕೆ ...—3—...

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ ಶ್ರೀ ಸೀತಾರಾಘವ ವೈದ್ಯಶಾಲಾ ಹೆಡ್ಡಾಫೀಸು ಮೈಸೂರು

ಬ್ರಾಂಚಾಫೀಸು ಶ್ರೀ ಸೀತಾರಾಘವ ವೈದ್ಯಶಾಲಾ, ಚಿಕ್ಕಪೇಟೆ, ಬೆಂಗಳೂರು



ಬಂಗಾರದ ಕೈಬಳೆಗಳೂ, ಜೈನ... ವಗ್ಯೆರೆ ಆಭರಣಗಳೂ ಚೊಕ್ಕ ಬೆ... ಸಾಮಾನುಗಳೂ ನಮ್ಮಲ್ಲಿ ಖಾತರಿ... ಸಿಗುತ್ತವೆ.

ಮಜೂರಿ ಇತರ ಕಡೆಗಳಿ... ಸುಲಭ. ಕೆಲಸ ಇತರ ಕಡೆಗಳಿ... ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋ...

ಯಸ್ ನರಸಿಂಹ ಅಯ್ಯರ್ ಕೆ ನಾರಾಯಣಪ್ಪ

ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಂಪ... ನಗರ್ತಪೇಟೆ, ಬಂಗಳೂ...

TAINADU.

Daily Edition.

The Leading Nationalist Daily of Mysore.

Printed and published by T. R. Ramaiya, at Sri Rama Press, D. Subbiah Road, Mysore.

Regd No. M 2322 ‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ೫—೦—೦ / ಪಟ್ಟಣಕ್ಕೆ [illegible]

ಸಂಪುಟ ೧] ಸೋಮವಾರ ೭ ಜನವರಿ ೧೯೨೯ [ಸಂಚಿಕೆ [illegible]

TAI NADU
7—1—1929

ಪತ್ರಿಕೆಗಳ ಮೇಲೆ

ದಬ್ಬಾಳಿಕೆ.

ವೃದ್ಧಪಿತಾಮಹರ ಪತ್ರಿಕೆಗಳನ್ನು ನಿಲ್ಲಿಸಿದ ವಿಷಯವಾಗಿ ಪ್ರಜೆಗಳಲ್ಲಿ ಉತ್ಪನ್ನವಾದ ಅಸಮಾಧಾನವಾಗಿರುವುದು. ಈ ಅಸಮಾಧಾನವು ನಮ್ಮ ಇಡೀ ಸಂಸ್ಥಾನದಲ್ಲಿ ಮಾತ್ರವೇ ಅಲ್ಲದೆ, ಅಖಿಲ ಭಾರತದಲ್ಲಿಯೂ ವ್ಯಾಪಿಸಿರುವದು ಮ|| ವೆಂಕಟಕೃಷ್ಣಯ್ಯನವರು ಕೇವಲ [illegible] ಅಖಿಲ ಭಾರತದಲ್ಲಿ ಇವರ ಕೀರ್ತಿಯು ಹಬ್ಬಿರುವದು. ಪ್ರಜಾಸ್ವಾತಂತ್ರ್ಯದ ಹೋರಾಟದಲ್ಲಿ ವೃದ್ಧಪಿತಾಮಹರು ಅಗ್ರಗಣ್ಯರು. ಪತ್ರಿಕಾ ವ್ಯವಸಾಯ ಕಲೆಯಲ್ಲಿ ಇವರು ಮನುವಿಗೆ ಸಮಾನರು. ಬ್ರಿಟಿಷ್ ಇಂಡಿಯಾದಲ್ಲಿದ್ದಿದ್ದರೆ ಇವರು ಎಷ್ಟೋ ಆವರ್ತಿ ಅಖಿಲ ಭಾರತ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗುತ್ತಿದ್ದರು. ಇವರ ಮಹಿಮೆಯನ್ನು ಅಂತ [illegible] ರಾಮಲಿಂಗ ರೆಡ್ಡಿಯವರು ಇವರನ್ನು ಲೋಕಮಾನ್ಯ ತಿಲಕರಿಗೆ ಸಮಾನರೆಂದೂ, ಇವರ [illegible] ಸಮಾನರಾದವರೆಂದೂ ಹೇಳುವರು. ಇಂತಹ ಮಹಾವ್ಯಕ್ತಿಗಳ ಮೇಲೆ ಕಾರ್ಯಭಾಗವನ್ನು ನಡೆಸಿದ ಮೈಸೂರು ಸರಕಾರದವರ ಖ್ಯಾತಿಯು ಏನಂತವಾಗುವುದು.

ಮ|| ವೆಂಕಟಕೃಷ್ಣಯ್ಯನವರ ಪತ್ರಿಕೆಗಳಲ್ಲಿ ಅಪರಾಧವಾಗಿ ಪರಿಗಣಿಸಲ್ಪಟ್ಟ ಲೇಖನಗಳಾವುವು ಎಂಬುದನ್ನು ತೋರಿಸಿಲ್ಲ. ಅವರಿಗೆ ತಮ್ಮ ಪಕ್ಷವನ್ನು ವಾದಿಸಿ ತಾವು ನಿರಪರಾಧಿಗಳೆಂಬುದನ್ನು ಸ್ಥಾಪಿಸುವುದಕ್ಕೆ ಅವಕಾಶವನ್ನೂ ಕೊಡಲಿಲ್ಲ. ನ್ಯಾಯಸ್ಥಾನಗಳಲ್ಲಿ ಅವರ ಪತ್ರಿಕೆಗಳ ವಿಚಾರಣೆ ನಡೆಯಲಿಲ್ಲ. ಬರೀ ಇಲ್ಲದೆ ಯಾವುದೋ ಹಳೇ ಕಾಲದ ಪ್ರೆಸ್ ಆಕ್ಟನ್ನು ಉಪಯೋಗಿಸಿ, ಆ ಪತ್ರಿಕೆಗಳನ್ನು ಕೊನೆಗಾಣಿಸಿದುದು ಸರಕಾರದವರ ಅಧೀರತೆಯನ್ನು ತೋರಿಸುತ್ತದೆ. ಅವರಿಗೆ ಕೋರ್ಟಿನ ವಿಚಾರಣೆಗಿಂತಲೂ, ತಮ್ಮ ನಿರಂಕುಶ ಅಧಿಕಾರದಲ್ಲಿಯೇ ಹೆಚ್ಚು ವಿಶ್ವಾಸವಿರುವುದು. ಸರಕಾರದವರು ಬಂಗಳೂರು ಗಲಭೆಯಾದಾಗಿನಿಂದಲೂ, ತಪ್ಪು ಹೆಜ್ಜೆಗಳನ್ನಿಡುತ್ತ ಬಂದಿದ್ದಾರೆ. ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಪ್ರಕಟವಾದ ಮೇಲೆ ನಾದರೂ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವರೆಂಬ ಭರವಸೆಯಿತ್ತು. ಶಾಂತಿಸ್ಥಾಪನೆಯಲ್ಲಿ ತೊಡಗಿರುವರೆಂಬ [illegible] ಜನಗಳು ಹೇಳುತ್ತಿದ್ದರು. [illegible] ಇವೇ [illegible] ಮಾರ್ಗಗಳಿಂದ ಕಾಣುತ್ತದೆ.

ವಿಶ್ವೇಶ್ವರಯ್ಯ ಕಮಿಟಿಯ ವರದಿಯಲ್ಲಿ ಸರಕಾರದವರ ಮೇಲೆ ಅನೇಕ ಆಪಾದನೆಗಳಿವೆ. ಮೊದಲಿನಿಂದಲೂ, ಮ|| ವೆಂಕಟಕೃಷ್ಣಯ್ಯನವರ ಪತ್ರಿಕೆಗಳಲ್ಲಿ, ಈ ಆಪಾದನೆಗಳನ್ನು ಹಿಡಿಸುತ್ತಲೇ ಬಂದರು. ಈಗ ವರದಿಯು ಪ್ರಕಟವಾದ ಮೇಲೆ, ಆ ಪತ್ರಿಕೆಗಳಲ್ಲಿ ತಮ್ಮ ಮೇಲೆ ಪ್ರಹಾರವು ಎಲ್ಲಿ ಇನ್ನೂ ಜೋರಾಗುವುದೋ ಎಂಬ ಭೀತಿಯಿಂದ ಸರಕಾರದವರು ಆ ಪತ್ರಿಕೆಗಳನ್ನು ನಿಲ್ಲಿಸಿದರು. ಸರಕಾರದವರು ತಮ್ಮ ಶಕ್ತಿಯನ್ನು ಅರಿತು ಮಾಡಿದ ಕೆಲಸವಲ್ಲ ತಮ್ಮ ದೌರ್ಬಲ್ಯದಿಂದ ಮಾಡಿದ ಕೆಲಸವಿದು. ಮ|| ವೆಂಕಟಕೃಷ್ಣಯ್ಯನವರಿಗೆ ಅಂಜಿ, ಸರಕಾರದವರು ಆ ಪತ್ರಿಕೆಗಳನ್ನು ನಿಲ್ಲಿಸಿದರೆಂಬುದು ಸ್ಪಷ್ಟವಾಗಿದೆ. ಸರಕಾರದವರ ಹತ್ತಿರ ವಿಶೇಷ ಅಧಿಕಾರವಿದ್ದರೂ, ಇಂದೂ, ಆ ಸರಕಾರಕ್ಕಿಂತಲೂ, ವೃದ್ಧಪಿತಾಮಹರೇ ಹೆಚ್ಚು ಬಲಿಷ್ಠರು ಅವರ ಪತ್ರಿಕೆಗಳು ಈ ಸರಕಾರದ ಯಂತ್ರಕ್ಕಿಂತಲೂ ದೊಡ್ಡದು. ಆ ಪತ್ರಿಕೆಗಳನ್ನು ನಿಲ್ಲಿಸಿದ್ದರಿಂದ ಸರಕಾರದವರು ತಾವು ಕೃತಕೃತ್ಯರಾದರೆಂದು ಭಾವಿಸಕೂಡದು.

ವೃದ್ಧಪಿತಾಮಹರು ಮಾಡುತ್ತಿದ್ದುದು ಪ್ರಜಾಸೇವೆ, ಸತ್ಯಪ್ರಕಾಶ, ನ್ಯಾಯಸಮರ್ಥನೆ. ಸರಕಾರದವರು ದಬ್ಬಾಳಿಕೆಯ ಶಸ್ತ್ರಾಸ್ತ್ರಗಳನ್ನೆಲ್ಲ ಉಪಯೋಗಿಸಿದರೂ, ಸತ್ಯವನ್ನೂ, ನ್ಯಾಯವನ್ನೂ ಅದುಮಲಾರರು. ತಮ್ಮ ಅಲ್ಪವಾದ ದಬ್ಬಾಳಿಕೆಯಿಂದ ಸರಕಾರದವರು ನಮ್ಮ ಸಂಸ್ಥಾನಕ್ಕೆ ಇನ್ನೂ ಕೆಟ್ಟ ಹೆಸರು ತಂದರು. ನಮ್ಮ ಮಹಾರಾಜರ ಕೀರ್ತಿಗೆ ಇನ್ನೂ ಕಲಂಕವನ್ನು ತಂದರು. ಪ್ರಜೆಗಳಿಗೂ ಸರಕಾರಕ್ಕೂ ಇದ್ದ ಅನ್ಯೋನ್ಯತೆಗೆ ಭಂಗವನ್ನು ತಂದರು

ಸರಕಾರದವರ ಈ ವರ್ತನವು ಎಲ್ಲರಿಂದಲೂ ಖಂಡಿಸಲ್ಪಡುತ್ತಲಿದೆ. ಸರಕಾರಕ್ಕೆ ಈಗ ಹಿತೋಕ್ತಿಗಳು ಬೇಡ. ನ್ಯಾಯವಾದ ಯಾವ ಮಾತೂ ಅವರ ಕಿವಿಗೆ ಸರಿ ಬೀಳುವುದಿಲ್ಲ.

ಈ ಪರಿಸ್ಥಿತಿಯಲ್ಲಿ ಪ್ರಜಾ ಮುಖಂಡರು ಒಗ್ಗಟ್ಟಾಗಿ ಈ ದಬ್ಬಾಳಿಕೆಯನ್ನೂ, ನಿರಂಕುಶ ನಡವಳಿಕೆಯನ್ನೂ ಧೈರ್ಯವಾಗಿ ಪ್ರತಿಭಟಿಸಬೇಕು ಪಕ್ಷಪಾತವನ್ನು ಬಿಟ್ಟು ಸರಕಾರದ ವರ್ತನವನ್ನು ಖಂಡಿಸಿ, ಅದನ್ನು ಒಳ್ಳೆಯ ದಾರಿಗೆ ತರಬೇಕು

ಚುಂಚನಕಟ್ಟೆ ಜಾತ್ರೆ.

ಎಡತೊರೆ ತಾಲ್ಲೂಕ್ ಚುಂಚನ ಕಟ್ಟೆಯ ಅಕ್ಕಪಕ್ಕದ ಗ್ರಾಮಗಳಲ್ಲಿ ಕಾಲರಾ ಉಪದ್ರವವು ಇರುವಧರಿಂದ, ಸದರಿ ಚುಂಚನ ಕಟ್ಟೆಯಲ್ಲಿ ಇದೇ ಜನವರಿ 8 ನೇ ತಾರೀಖು ಲಾಗಾಯ್ತು 20 ನೇ ತಾರೀಖಿನ ವರೆಗೆ ನಡೆಯತಕ್ಕ ಜಾತ್ರೆಯಲ್ಲಿ ಕಾಲರಾ ಜಾಡ್ಯವು ಹರಡದಂತೆ ನಿರೋಧಿಸುವುದಕ್ಕಾಗಿ ಕಾಲರಾ ರೋಗ ಪೀಡಿತಕ್ಕ ಸ್ಥಳಗಳ ನಿವಾಸಿಗಳು, ಈ ಜಾತ್ರೆ ಕಾಲದಲ್ಲಿ ಸದರಿ ಸ್ಥಳದಲ್ಲಿ ಸೇರಕೂಡದೆಂದು ಮೈಸೂರು ಪೋಲೀಸು ರೆಗ್ಯುಲೇಷನ್ 42ನೇ ಸೆಕ್ಷನ್ ಪ್ರಕಾರ ಈ ಮೂಲಕ ನಿರೋಧಿಸಿರುತ್ತೆ. ಮತ್ತು ಮಾಮೂಲಿನಂತೆ ನಡೆಯತಕ್ಕ ದನಗಳ ಪ್ರದರ್ಶನವನ್ನು ಮೇಲ್ಕಂಡ ಸೆಕ್ಷನ್ ನಂತೆ ನಿಲ್ಲಿಸಿರುತ್ತೆಂದು ಡಿ|| ಕ|| ರವರು ತಿಳಿಸಿರುತ್ತಾರೆ.

ದೇಶೀಯ ಸಂಸ್ಥಾನಗಳ ಪರಿಷತ್ತು.

ದಕ್ಷಿಣ ಭಾರತ ದೇಶೀಯ ಸಂಸ್ಥಾನಗಳ (ಹೈದರಾಬಾದೂ ಸೇರಿ) ಪರಿಷತ್ತು ಈ ತಿಂಗಳು 14ನೇ ತಾ|| ತಿರುವಂದಿರಂನಲ್ಲಿ ನಡೆಯುವುದು. ಸರ್. ಎಂ. ವಿಶ್ವೇಶ್ವರಯ್ಯ ಕೆ. ಸಿ. ಐ. ಇ. ರವರು ಅಧ್ಯಕ್ಷತೆಯನ್ನು ವಹಿಸುವರು. ದೇಶೀಯ ಸಂಸ್ಥಾನಗಳ ಒಳ ಮತ್ತು ಹೊರಗಿನ ಆಡಳಿತಕ್ರಮದ ಬದಲಾವಣೆಗಳನ್ನು ಗೊತ್ತು ಪಡಿಸಬೇಕೆಂಬುದೇ ಈ ಪರಿಷತ್ತಿನ ಮುಖ್ಯ ಉದ್ದಿಶ್ಯವಾಗಿದೆ.

ಬದ್ಲಿ

ಮಧುಗಿರಿ ತಾ|| ಅಮಲ್ದಾರರಾದ ಮ|| ಎಂ. ಶಂಕರಪ್ಪನವರನ್ನು ಮ|| ಎಂ ಎ. ಚಾಳರಾಜೇ ಅರಸಿನವರ ಸ್ಥಾನದಲ್ಲಿ ಮಧುಗಿರಿ ಸ|| ಡಿವಿಷನ್ನಿಗೆ ಅ|| ಕಮಿಷನರಾಗಿ ಬದಲಿ ಮಾಡಿರುತ್ತಾರೆ.

ವರ್ತಮಾನ ಸಂಗ್ರಹ

ಸ್ವೀಕಾರಗಳು.

ರಾಜಧಾನಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಮೆ| ರ್ಸ್ ಎಂ. ಎಸ್. ಸಿದ್ದಪ್ಪನವರು ಕಳುಹಿಸಿರುವ ಪಾಕೆಟ್ ನ್ಯೂ ಡೈರಿ ಮತ್ತು ಶ್ರೀರಾಮ ಸಿನಿಮಾ ಕಂಪನಿ ಪ್ರೊಪ್ರೈಟರಾದ ಮ|| ರಾ|| ಕೆ. ಎಸ್. ರಾಮಶೆಟ್ಟಿ ಕಳುಹಿಸಿರುವ ಕ್ಯಾಲೆಂಡರನ್ನೂ ಸಹ ಆದರದಿಂದ ಸ್ವೀಕರಿಸಿರುತ್ತೇವೆ.

ಉಪನ್ಯಾಸ

ಈ ತಿಂಗಳು 7 ನೇ ತಾ ಸೋಮವಾರ ಸಾಯಂಕಾಲ 6 ಘಂಟೆಗೆ ಮೈಸೂರು ಮಹಾರಾಜ ಕಾಲೇಜ್ ಲಕ್ಚರ್ ಹಾಲಿನಲ್ಲಿ ಪೂನಾ ಫರ್ಗ್ಯುಸನ ಕಾಲೇಜಿನ ಅರ್ಥಶಾಸ್ತ್ರದ ಅಧ್ಯಾಪಕರಾದ ಮಿ|| ವಿ. ಜಿ. ಕಾಳೆ ಎಂ. ಎ ರವರು ಉಪನ್ಯಾಸ ಮಾಡುವರು.

ಬದ್ಲಿ

1929 ನೇ ಜನವರಿ 1 ನೇ ತಾ ಲಾಗಾಯಿತು ಕುಣಿಗಲ್ ತಾಲ್ಲೋಕಿನ ಡೆ| ಅಮಲ್ದಾರ್ ಮಿ|| ಎ. ಎಸ್. ವಸಿಸ್ವಾಮಿ ಬಿ. ಎ. ರವರು ಅಮಲ್ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಶತಮಾನಕ್ಕೊಂದು ಉದ್ಯೋಗ

ಭೂಲೋಕದ ಅತಿ ಮುದುಕರಲ್ಲೊಬ್ಬನಾದ ಎಲ್. ಜೆ. ರೋಬರ್ಟ ಎಂಬ ನೀಗ್ರೋ ವೃದ್ಧನೊಬ್ಬನು, ಮೆಸಂಜರನಾಗಿ ಇಂಡಿಯನ್ ಮೆಸೆಂಜರ್ ಸರ್ವಿಸ್ಸಿನಲ್ಲಿರುವನು. ಇವನ ಪ್ರಾಯವು 115 ವರುಷವಾದರೂ, ಆರೋಗ್ಯವಂತನೂ, ದೃಢಕಾಯನೂ ಆಗಿರುವನು. ದಿನವೊಂದಕ್ಕೆ ಅನೇಕ ಮೈಲಿಗಳಷ್ಟು ನಡೆಯುತ್ತಿರುವನು. ರೋಬರ್ಟನು ಉದ್ಯೋಗಕ್ಕೆ ಸೇರಿ ಒಂದು ಶತಮಾನವು ಕಳೆದು ಹೋಯಿತು. ಅವನ ಕುಟುಂಬದ 9 ಜನರಲ್ಲಿ ಸದ್ಯಕ್ಕೆ ಅವನೊಬ್ಬನೆ ಜೀವಂತನಾಗಿರುವನು. ಆತನು ಮೂರಾವರ್ತಿ ವಿವಾಹವಾಗಿ 27 ಮಕ್ಕಳನ್ನು ಪಡೆದಿರುವನು. ಅದರಲ್ಲಿ 9 ಮಕ್ಕಳು ಜೀವಂತರಾಗಿರುವರು. ಅವನ ಆರೋಗ್ಯಕ್ಕೂ ದೀರ್ಘಕಾಲ ಸರ್ವಿಸಿಗೂ ಅವನಿಗೆ ಮೂರಾವರ್ತಿ ಉದ್ಯೋಗಕಾಲವನ್ನು ಹೆಚ್ಚಿಸಿದರು.

ಬೆಂಕಿಯಲ್ಲಿ ಸುಟ್ಟು ಹೋಗದ ಕಾಗದ

ಜರ್ಮನಿಯ ಪ್ರಖ್ಯಾತ ಶೋಧಕರಲ್ಲೊಬ್ಬನಾದ ಪ್ರಾಂಜ್ ಪ್ರಾಂಕನೆಂಬುವನು ತಯಾರಿಸಿದ ಕಾಗದ ಎಷ್ಟು ಕಾಲದವರೆಗೆ ಬೆಂಕಿಯಲಿಟ್ಟರೂ ಸುಡುವುದಿಲ್ಲ. ಆತನು ಸಾಮಾನ್ಯ ಕಾಗದವನ್ನು ಫೈರ್ ಪ್ರೂಫ್ ಕಾಗದದಿಂದ ಸುತ್ತಿ ಬೆಂಕಿಯಲ್ಲಿಟ್ಟನು. ಗಾಜು ನೀರಾಗುವಷ್ಟು ಸಮಯ ಬೆಂಕಿಯಲ್ಲಿಟ್ಟರೂ ಕಾಗದದ ಬಣ್ಣ ಕೂಡ ಕದಲಲಿಲ್ಲ. ಈ ನವೀನ ಶೋಧನೆಯ ಕಾಗದದಿಂದ ಅಮೂಲ್ಯ ಪುಸ್ತಕಗಳನ್ನೂ ಕರೆನ್ಸಿ ನೋಟುಗಳನ್ನೂ ತಯಾರಿಸಿದರೆ ಪುಸ್ತಕಕ್ಕಾಗಲೀ ನೋಟುಗಳಿಗಾಗಲೀ ಬೆಂಕಿಯ ಭಯವಿಲ್ಲ.

ರೈಲ್ವೆ ಆದಾಯ

ಮೈಸೂರು ರೈಲ್ವೆಗಳ ಉತ್ಪತ್ತಿಯು ಕಳೆದ ಡಿಸೆಂಬರ್ ಮಾಹೆ 15 ನೇ ತಾ|| ಗೆ ಆಖೈರಾದ ವಾರದಲ್ಲಿ ಒಟ್ಟು 61,500 ರೂಗಳು. ಹೋದ ವರ್ಷ ಇದೇ ವಾರದ ಇದಕ್ಕಿಂತಲೂ 4,678 ರೂಗಳು ಹೆಚ್ಚು.

ತಾಯಿನಾಡು.

7—1—1929.

INHUMAN !

The suppression of the G.O.M's papers has created widespread resentment all over the State and abroad. The suppression is as unjustified as it is undignified. It is not known what article or articles were offensive. It was open to Government to hold a judicial enquiry, and if the courts decided that the G. O. M was wrong, he might have been punished. Evading the law courts and resorting to executive orders betrays the weakness of the Government. The Bureaucracy does not feel itself strong before open exposure. Making use of one of the most lawless acts, they have been suppressing the free expression of public opinion in Mysore.

Nobody who has a sense of the meritorious services that the G. O. M. has rendered to Mysore, its Sovereign, its Government and its people, cannot but feel disgusted at the high-handed act of Government. Any Government with claims to broadheartedness and far-sightedness could not have struck at an old man of 85 in such an inhuman manner. What of the G. O. M's position and his influence among the public! The present Govt. has without any consideration of the consequences of its actions has been rushing headlong and nobody knows where. Just at the moment, when the Visweshwaraya Committee report is coming out, and when they were withdrawing prosecutions against the Hindus, it is strange that the bureaucracy should suppress the oldest and the most historic papers of Mysore "We know that the Government is not at present in a mood to listen to reason or argument. We can only speak to the leaders of public opinion in Mysore. Here is a great outrage committed on the Press and the Public of Mysore. Just at present it is the duty of the public to agitate strongly and resort to all constitutional methods to mend or end this terroristic regime."

ಕಮಿಟಿಯ ವರದಿ

(ಮುಂದುವರಿದುದು)

ಈಗ ಮುಂದೆ ಮುಖ್ಯವಾಗಿ ಒಂದು ಕೆಲಸವನ್ನು ಮಾಡಬೇಕು. ಇದುವರೆಗೂ ಪತ್ತೆಯಾಗದಿರುವ ಕ್ರಿಮಿನಲ್ ಅಪರಾಧಿಗಳ ಪರವಾಗಿ ತನಿಖೆಯನ್ನು ನಡಿಸಬೇಕು. ಈ ತನಿಖೆಗಾಗಿ ಒಂದು ನಂಬಿಕೆಗೆ ಅರ್ಹವಾದ ಏಜನ್ಸಿಯನ್ನು ಏರ್ಪಡಿಸಬೇಕು. ಅಪರಾಧಿಗಳಿಗೆಲ್ಲಾ ಶಿಕ್ಷೆಯಾಗಬೇಕು. ಸ್ಪೆಷಲ್ ಕೋರ್ಟುಗಳಲ್ಲಿ ಈ ಕೆಲಸವನ್ನು ತೆಗೆದುಕೊಂಡು 2-3 ತಿಂಗಳೊಳಗಾಗಿ ಮುಗಿಸಬೇಕು. ಮಧ್ಯೆ ಮಧ್ಯೆ ನಡೆದಿರುವ ಅಕ್ರ[illegible]ಳೂ ಕರ್ತವ್ಯಲೋಪಗಳೂ ಇವುಗಳಿಂದ ಜನಗಳಿಗೆ ಬಹಳ ಅತೃಪ್ತಿಯುಂಟಾಗಿದೆ. ವರ್ತಮಾನ ಪತ್ರಿಕೆಗಳಲ್ಲೂ ವಿಶೇಷವಾಗಿ ಟೀಕೆಗಳು ಬರುತ್ತಲೇ ಇವೆ. ಒಟ್ಟಿನ ಮೇಲೆ ಗಲಾಟೆಗೆ ಸಂಬಂಧಪಟ್ಟ ಸಂಗತಿಗಳು ತಾರತಮ್ಯದಿಂದ ಬಹಳ ಅಲ್ಪವಾದರೂ ಸರ್ಕಾರದ ಯಂತ್ರವು ಕುಸಿದುಬಿದ್ದುದರಿಂದ ಜನಗಳಿಗೆ ಗಾಬರಿಯಾಗಿ ಹೆಚ್ಚಾಗಿ ಅಸಮಾಧಾನಕ್ಕವಕಾಶವಾಯಿತು. ಟೀಕೆಗಳು ಪ್ರಬಲವಾದವು. ಈ ಟೀಕೆಗಳು ನ್ಯಾಯವಾದವುಗಳು.

ಮುಖ್ಯ ಅಪರಾಧಿಗಳು

ಮುಖ್ಯ ಅಪರಾಧಿಗಳು ಯಾರೆಂದರೆ ಜನಗಳ ಗುಂಪಿನಮೇಲೆ ಗುಂಡು ಹೊಡೆದವರು. ಅಬ್ಬಾಸ್ ಖಾನರ ಮನೆಯಿಂದಲೂ ಸುತ್ತುಮುತ್ತಲಿನ ಮನೆಗಳಿಂದಲೂ ಹೊರಗೆ ಬಂದು ಹಿಂದೂಗಳನ್ನು ಹೊಡೆದವರು. ಅಬ್ಬಾಸ್ ಖಾನರ ಮನೆಯೊಳಕ್ಕೆ ಹುಡುಗನನ್ನು ಎಳೆದುಕೊಂಡು ಹೋದುದೂ ಇವರಲ್ಲಿ ನಾಲ್ಕು ಜನಗಳು ಅಪನಂಬಿಕೆಯನ್ನುಂಟುಮಾಡುವ ರೀತಿಯಲ್ಲಿ ತಲೆಕೆಳಗೆ ಮಾಡಿಕೊಂಡು ಮಲಗಿದ್ದುದೂ ಇವೇ ಮೊದಲಾದ ಸಂಗತಿಗಳನ್ನು ಇನ್ನೂ ತನಿಖೆಮಾಡಿ ವಿಚಾರಿಸಬೇಕು. ಜನಗಳಲ್ಲಿ ನಂಬಿಕೆಯನ್ನುಂಟುಮಾಡುವದಕ್ಕೋಸ್ಕರವಾಗಿ ಇದರ ತನಿಖೆಯನ್ನು ನಿಷ್ಪಕ್ಷಪಾತಿಗಳಾದವರ ಕೈಯಿಂದ ನಡೆಸಬೇಕು.

ಪೋಲೀಸ್ ಸುಧಾರಣೆ

ಪೋಲೀಸ್ ಸೈನ್ಯವನ್ನು ಹೆಚ್ಚಿಸಬೇಕು. ಸಂಬಳವನ್ನು ಹೆಚ್ಚು ಮಾಡಬೇಕು. ಸರ್ಕಾರದವರೇ ವಸತಿಗಳನ್ನು ಕಲ್ಪಿಸಿಕೊಡಬೇಕು. ಇನ್ನು ಚೆನ್ನಾಗಿ ತರಬೇತಾದ ಸಿ. ಐ. ಡಿ. ಗಳನ್ನು ನೇಮಿಸಬೇಕು. ಪೋಲೀಸ್ ಇಲಾಖೆಯಲ್ಲಿರುವವರೆಲ್ಲರಿಗೂ ಬಂದೂಕವನ್ನು ಪಯೋಗಿಸುವುದಕ್ಕೆ ಬರಬೇಕು. ಸಬ್ ಇನ್‌ಸ್ಪೆಕ್ಟರುಗಳಿಗೆಲ್ಲಾ ರಿವಾಲ್ವರುಗಳನ್ನು ಕೊಡಬೇಕು. ಪೋಲೀಸ್ ಸೈನ್ಯದಲ್ಲಿ ಎಲ್ಲಾ ಕೋಮಿನ ಪ್ರತಿನಿಧಿಗಳೂ ಇರಬೇಕು.

ಸರ್ಕಾರಿ ನೌಕರಿ.

ಎಲ್ಲಾ ಕೋಮಿನವರಿಗೂ ಪಂಗಡದವರಿಗೂ ಸರ್ಕಾರಿ ನೌಕರಿಯು ದೊರೆಯಬೇಕು. ಸರ್ಕಾರೀ ಕೆಲಸಕ್ಕೆ ಯೋಗ್ಯತೆ ಮತ್ತು ಕಾರ್‍ಯದಕ್ಷತೆ ಇವುಗಳೇ ನಿಜವಾದ ಪರೀಕ್ಷೆಯಾಗಬೇಕು.

ಜಾತಿ ವೈಷಮ್ಯ

ನಿಜವಾಗಿ ಜಾತಿ ವೈಷಮ್ಯವಿಲ್ಲದ್ದರಿಂದ ಜಾತಿಗಳಲ್ಲಿ ಐಕಮತ್ಯವನ್ನು ತರುವುದಕ್ಕಾಗಿ ವಿಶೇಷವಾಗಿ ಯಾವ ಏರ್ಪಾಟನ್ನು ಮಾಡಬೇಕಾಗಿಲ್ಲ.

ಪತ್ರಿಕೆಗಳ ಹತೋಟಿ

ವರ್ತಮಾನ ಪತ್ರಿಕೆಗಳ ಸಲುವಾಗಿ ಸಲಹೆಗಾರರನ್ನು ನೇಮಿಸಲ್ಪಡಬೇಕು. ಇದರಲ್ಲಿ ಐದು ಜನ [illegible]ರಬೇಕು. ಇದಕ್ಕೆ ಸರ್ಕಾರಿ ಕಾರ್‍ಯದರ್ಶಿಗಳೊಬ್ಬರು ಇರಬೇಕು. ವರ್ತಮಾನ ಪತ್ರಿಕೆಗಳು ತಮ್ಮ ಹದ್ದನ್ನು ಮೀರದಂತೆ ಈ ಸಮಿತಿಯವರು ಸಲಹೆಯನ್ನು ಕೊಡಬೇಕು. ಸರ್ಕಾರದವರು ಎರಡು ಒಳ್ಳೇ ದಿನಪತ್ರಿಕೆಗಳು ಹೊರಡುವುದಕ್ಕೆ ಸಹಾಯ ಕೊಡಬೇಕು.

ಪ್ರಜಾಸ್ವಾತಂತ್ರ್ಯ

ಈಗ [illegible]ನಲ್ಲಿ ಪತ್ರಿಕೆಗಳೂ ಪ್ರಜೆಗಳೂ ಅನುಭವಿಸುತ್ತಿರುವ ಸ್ವಾತಂತ್ರ್ಯವು ಬ್ರಿಟಿಷ್ ಇಂಡಿಯಾದಲ್ಲಿರುವುದಕ್ಕಿಂತ ಹೆಚ್ಚಾಗಿಲ್ಲ. ಈಗಿರುವ ಸ್ವಾತಂತ್ರ್ಯವನ್ನು ಕಡಿಮೆ ಮಾಡುವುದು ಲೌಕಿಕವಲ್ಲ. ಬ್ರಿಟಿಷ್ ಇಂಡಿಯಾದಲ್ಲಿರುವುದಕ್ಕಿಂತ ಇಲ್ಲಿ ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಇರುವ ಸಂಬಂಧವನ್ನು ಕಡಿಮೆ ಮಾಡುವುದು ವ್ಯವಹಾರವಲ್ಲ.

ವಿಷದಿಂದ ಅಮೃತ.

ಲಾರ್ಡ್ ಮೆಕಾಲೆಯವರು ತಮ್ಮ ಕಾಲದಲ್ಲಿ ಇಂಡಿಯಾ ದೇಶದ ಮುಂದಿನ ಸರ್ಕಾರದ ವ್ಯವಸ್ಥೆಗಳನ್ನು ಕುರಿತು ಹೇಳಿದ್ದೇನೆಂದರೆ ಯಾವ ಜನಾಂಗವು ತನ್ನನ್ನು ತಾನು ಚೆನ್ನಾಗಿ ಆಳಿಸಿಕೊಳ್ಳಲು ಸಮರ್ಥವಾಗಲಾರದೋ ಅದನ್ನು ಚೆನ್ನಾಗಿ ಆಳುವುದಕ್ಕೆ ಆಗುವುದಿಲ್ಲ. ಪ್ರಜೆಗಳಿಗೆ ಸ್ವಂತ ಅನುಭವವು ಬರುವಂತೆ ಅವಕಾಶಗಳನ್ನು ಕೊಡಬೇಕು. ತಮ್ಮನ್ನು ತಾವು ಆಳಿಕೊಳ್ಳುವುದಕ್ಕೆ ಅವರಿಗೆ ಸಂದರ್ಭಗಳನ್ನು ಕಲ್ಪಿಸಬೇಕು. ಈ ಕಮಿಟಿಯವರಾದ ನಾವು ಹೇಳಿರುವ ಸಲಹೆಗಳನ್ನೆಲ್ಲಾ ಜಾರಿಗೆ ತಂದರೂ ಮೈಸೂರು ಇಂಗ್ಲೆಂಡು [illegible] ವರ್ಷಗಳಿಗೆ ಮೊದಲು ಇದ್ದ ಸ್ಥಿತಿಗೆ ಬರುವುದು. ಜಪಾನು ಐವತ್ತು ವರ್ಷಗಳಿಗೆ ಹಿಂದೆ ಇದ್ದ ಸ್ಥಿತಿಗೆ ಬರುವುದು. ಅಫ್‌ಘಾನಿಸ್ಥಾನದಲ್ಲಿ ಜನಾಂಗವು ಬಹಳ ಮುಂದುವರಿಯುತ್ತಿದೆ. ಅಫ್‌ಘಾನಿಸ್ಥಾನವು ಮೈಸೂರಿಗಿಂತ ಮುಂದೆ ಹೋಗಬಹುದು.

ಸರ್ಕಾರದ ಪದ್ಧತಿ.

ಈಗಿನ ಸರ್ಕಾರದ ಪದ್ಧತಿಯನ್ನು ಬದಲಾಯಿಸಬೇಕು. ಇದರಿಂದ ಸರ್ಕಾರಕ್ಕೂ ಪ್ರಯೋಜನವಿಲ್ಲ ಪ್ರಜೆಗಳಿಗೂ ಪ್ರಯೋಜನವಿಲ್ಲ. ರಚನಾತ್ಮಕವಾದ ಕಾರ್‍ಯಗಳ ಜವಾಬ್ದಾರಿಯನ್ನು ಕೆಲವು ಭಾಗ ಪ್ರಜೆಗಳ ಮೇಲೆಯೇ ಹಾಕಬೇಕು. ಯಾವಾಗಲೂ ಹೆಚ್ಚಾಗಿ ಸರ್ಕಾರದ ಮೇಲೆಯೇ ಭಾರವನ್ನು ಹಾಕಿ ಪ್ರಜೆಗಳು ದುರ್ಬಲರಾಗಿರುವರು.

ಈ ದೌರ್ಬಲ್ಯವು ಕಡಿಮೆಯಾದ ಹೊರತು ನಮ್ಮ ಸಂಸ್ಥಾನದ ಪ್ರಜೆಗಳು ಇಲ್ಲಿನ ಸಂಪತ್ಸಮೃದ್ಧಿಯನ್ನು ಹೆಚ್ಚಿಸಿ ತಾವು ಸುಖಪಡಲಾರರು ಪ್ರಜೆಗಳಿಗೆ ಜವಾಬ್ದಾರಿಯ ಜ್ಞಾನವುಂಟಾದರೇನೇ ಅವರಲ್ಲಿ ಚಟುವಟಿಕೆಯುಂಟಾಗುವುದು. ಪ್ರಜೆಗಳ ಬೆಂಬಲವಿಲ್ಲದೆ ಸರ್ಕಾರದವರು ಮುಷ್ಕರಗಳನ್ನೂ ಗಲಾಟೆಗಳನ್ನೂ ಶಾಂತಿಭಂಗಗಳನ್ನೂ ದುಂಡಾವರ್ತಿಗಳನ್ನೂ ಅಡಗಿಸಲಾರರು. ಸರ್ಕಾರದ ಸಾಮಾನ್ಯ ಕೆಲಸವನ್ನು ನಡೆಸಲು ಕಷ್ಟವಾಗುವುದು. ಸರ್ಕಾರದವರು ಬೆಂಗಳೂರು ಗಲಭೆಗಳಿಂದ ಚೆನ್ನಾಗಿ ಪಾಠವನ್ನು ಕಲಿತು ನಾವು ಸೂಚಿಸಿರುವ ನಿವಾರಣೋಪಾಯಗಳನ್ನೆಲ್ಲಾ ಜಾರಿಗೆ ತಂದರೆ ಮೈಸೂರಿನಲ್ಲಿ ನವಚೈತನ್ಯವು ಉತ್ಪನ್ನವಾಗುವುದು ಈ ಪ್ರಕಾರವಾಗಿ ಅಶುಭದಿಂದ ಶುಭವೂ ವಿಷದಿಂದ ಅಮೃತವೂ [illegible].

TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D. Subbiah Road, Mysore.

Regd No. M 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ೯—೦—೦ / ಸಂಚಿಕೆಗೆ ೦—೦—೧

ಸಂಪುಟ ೧] ಮಂಗಳವಾರ ೮ ಜನವರಿ ೧೯೨೯ [ಸಂಚಿಕೆ ೨೯

ನಾಳೆ ಸಾಯಂಕಾಲ ಟೌನ್ ಹಾಲಿನಲ್ಲಿ ನಡೆವ ಮಹಾಜನರ ಸಭೆಗೆ ತಪ್ಪದೆ ಬಂದು ಪಿತಾಮಹರಲ್ಲಿ ನಿಮಗಿರುವ ಪೂಜ್ಯತೆಯನ್ನು ತೋರ್ರಿ!

TAI NADU

8—1—1929

ತಲೆ ತಗ್ಗಿಸಬೇಕಾಗಿದೆ.

[illegible] ವೆಂಕಟಕೃಷ್ಣಯ್ಯನವರು ಪತ್ರಿಕೆಗ[illegible] ವಿಷಯವನ್ನು ಆಲೋಚನೆಮಾಡುತ್ತ [illegible] ಅದು ಎಷ್ಟು ಅವಿವೇಕವಾದುದೆಂಬುದು ವ್ಯ[illegible] ಬ್ರಿಟಿಷ್ ಇಂಡಿಯಾದ ಪ್ರಜೆಗಳು [illegible] ಸರ್ಕಾರದ ಅಧೀನದಲ್ಲಿರುತ್ತಾರೆ. ಆದರೂ, [illegible] ಪತ್ರಿಕೆಗಳ ವಿಷಯದಲ್ಲಿ ಸರ್ಕಾರದ[illegible] ಮೈಸೂರಿನ ಸರ್ಕಾರದಂತೆ ದಬ್ಬಾಳಿಕೆಯ[illegible]ವಿಲ್ಲ. ಯಾವದೋ ವರ್ತಮಾನ ಪತ್ರಿಕೆ[illegible] ಬಂದರೆ ಅದನ್ನು [illegible] ಮಾಡುತ್ತಾರೆ. [illegible] ಆಪಾದಿತವಾದ [illegible] ಕೋರ್ಟಿನ ವಿಚಾರಣೆಯ[illegible] ಕೋರ್ಟಿನಲ್ಲಿ ತಪ್ಪಿತಸ್ಥರೆಂದು [illegible] ವಿಧಿಸುತ್ತಾರೆ. ಬ್ರಿಟಿಷ್ [illegible] ಪತ್ರಿಕೆಗಳು ಬ್ರಿಟಿಷ್ ಸರ್ಕಾರವನ್ನೇ [illegible] ಬ್ರಿಟಿಷ [illegible] ನಮಗೆ ಸಂಪೂರ್ಣ ಸ್ವಾತಂ[illegible] ಪತ್ರಿಕೆಗಳು [illegible] ಪತ್ರಿಕೆಯನ್ನಾದರೂ ಬ್ರಿಟಿಷ್ ಸರ್ಕಾರದವರು [illegible] ತಿಲಕರು [illegible] ಸಂಪೂರ್ಣವಾಗಿ ವಿಚಾರಣೆಯಾಗಿ [illegible] ಪತ್ರಿಕೆಯಲ್ಲಿ [illegible] ನಾಗರಿಕ ಸರ್ಕಾರವು [illegible] ತನ್ನ ಪಕ್ಷವನ್ನು [illegible] ಇದು ಸಾಂ[illegible] ಬ್ರಿಟಿಷ್ ಇಂಡಿಯದಲ್ಲಿ [illegible] ನಮ್ಮ ಮೈಸೂರಿನಲ್ಲಿ ಸರ್ಕಾರವನ್ನು [illegible]

[illegible] ಸರ್ಕಾರದವರು ತಮ್ಮ ಸ್ವೇಚ್ಛಾಪ್ರವರ್ತನೆಗಳನ್ನು ತಿದ್ದಿಕೊಳ್ಳುವುದಕ್ಕೆ ಬದಲಾಗಿ ದಬ್ಬಾಳಿಕೆಯನ್ನು ಉಪಯೋಗಿಸಿರುವುದು ಬಹಳ ಶೋಚನೀಯವು. ನಮ್ಮ ಸರ್ಕಾರವನ್ನು ನಾವು ಸರ್ಕಾರವೆಂದು ಹೇಳಿಕೊಳ್ಳುತ್ತೇವೆ, ರಾಮರಾಜ್ಯವೆಂದು ಅಭಿಮಾನಪಡುತ್ತೇವೆ. ಮುಂದುವರಿದ ಜನಾಂಗವೆಂದು ಹೆಮ್ಮೆಗೊಳ್ಳುತ್ತೇವೆ. ಆದರೆ ನಮ್ಮ ಸರ್ಕಾರದವರು ಮಾಡುತ್ತಿರುವ ಕೃತ್ಯಗಳನ್ನು ನೋಡಿದರೆ ತಲೆಯನ್ನು ತಗ್ಗಿಸಬೇಕಾಗಿರುವುದು. ಇದೇನು ಈ ಸರ್ಕಾರ? [illegible] ವರ್ಷ ಹಿಂದೆ ಹುಟ್ಟಿದ ಮುದಿಕಾನೂನಿನ ಮೇಲೆ ಇಂತಹ ದಬ್ಬಾಳಿಕೆಯನ್ನು ಉಪಯೋಗಿಸುತ್ತಲಿದೆ. ನಾಗರಿಕರಾದ ಜನರಿಂದ ಕೂಡಿದ ಸರ್ಕಾರವು ಇಂತಹ ಅನಾಗರಿಕ ಕೆಲಸವನ್ನು ಮಾಡಬಹುದೆ? ಆ ಕಾನೂನು ಎಂಬುದಕ್ಕೆ ಏ[illegible] ಇಲ್ಲವೆ? ತಮ್ಮ ಜೀವಮಾನವೆಲ್ಲಾ ದೇಶಕ್ಕೋಸ್ಕರವಾಗಿಯೇ ಧಾರೆಯೆರೆದ ವೃದ್ಧಪಿತಾಮಹರಂತಹವರ ಮೇಲೆ ಕೈಹಾಕುತ್ತಿರುವ ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿತಿರುವುದೆ? ವೃದ್ಧಪಿತಾಮಹರ ತಪ್ಪೇನು ಎಂಬುದನ್ನು ಸರ್ಕಾರವು ಜನತೆಗೆ ತಿಳಿಸುವುದೇ? ಹಾಗೇನಾದರೂ ಅವರು ತಪ್ಪಿದ್ದರೆ ಅವರನ್ನು ಏತಕ್ಕೆ ವಿಚಾರಣೆಗೆ ಗುರಿಮಾಡಲಿಲ್ಲ? ಗುರಿ ಮಾಡಿದರೆ ತಮ್ಮ ಹುಳುಕು ಸಂಪೂರ್ಣವಾಗಿ ಹೊರಗೆ ಬೀಳುವುದೆಂಬ ಅಂಜಿಕೆಯಿಂದ ಹಾಗೆ ಮಾಡಲಿಲ್ಲವೋ? [illegible] ಚೀಫ್ ಕೋರ್ಟಿನವರು ನಡೆಸಬೇಕೆಂದಿದ್ದ ಅಧಿಕಾರವನ್ನು ಸರ್ಕಾರದವರು ವಾಪಸ್ ತೆಗೆದುಕೊಂಡದ್ದು ನಿಜವೋ? ನಮ್ಮ ಸರ್ಕಾರದವರ ನೀತಿನೀತಿಗಳೇನಾದರೂ ಇವೆಯೋ?

ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಈಗಿನ ಪ್ರೆಸ್ಸ್ ಆಕ್ಟನ್ನು ವಾಪಸ್ ಮಾಡಲಾಗಿರುತ್ತದೆ, ಶ್ರೀಮನ್ ಮಹಾರಾಜರವರು ಸಮ್ಮತಿಯನ್ನು ಕೊಟ್ಟಿದ್ದಾರೆ ಎಂದು ಸಾರಲಿಲ್ಲವೆ? ಹಾಗಾದ್ದನ್ನು ಏನಾಯಿತು? ಶ್ರೀಮನ್ ಮಹಾರಾಜರವರ ಅನುಮತಿಗೆ ಏನು ಮನ್ನಣೆ ದೊರೆಯಿತು? ಇವತ್ತು ಮಾತು ನಾಳೆಗಿಲ್ಲ ಎಂಬುದೇ ಸರ್ಕಾರದ ನೀತಿಯೋ? ನಮ್ಮ ಸಂಸ್ಥಾನದ ಪ್ರಜಾಭಿಪ್ರಾಯವು ಏನೆಂಬುದು ಸರ್ಕಾರಕ್ಕೆ ಗೊತ್ತಿದೆಯೊ? ಸರ್ಕಾರವು ಈ ರೀತಿಯ ತಪ್ಪು ದಾರಿಯಲ್ಲಿಯೇ ಹೋಗುತ್ತಿದೆ. ಅದಕ್ಕೆ ಸರಿಯಾದ ಮಾರ್ಗದರ್ಶಕರಿಲ್ಲವೆಂದು ಕಾಣುತ್ತದೆ. ಸರ್ಕಾರ[illegible] ಕೋಪವಾಗಲೀ ತಾಪವಾಗಲೀ ಇರಬಾರದು. ನ್ಯಾಯವೇ ಅದರ ಕಣ್ಣಾಗಿರಬೇಕು. ನ್ಯಾಯವನ್ನು [illegible] ನಡೆದರೆ ಅಧರ್ಮವು ಪ್ರಬಲಿಸಿ ರಾಜ್ಯವು ಅನಾಯಕವಾಗುವುದು. ಈ ವಿಷಯವನ್ನು ಸರ್ಕಾರದವರು ಶಾಂತವಾಗಿ ಆಲೋಚಿಸಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬೇಕು.



ತಾತಯ್ಯನವರು.

ಐವತ್ತು ವರುಷಗಳಿಂದಲೂ ಅಹೋರಾತ್ರಿ ಅವಿಚ್ಛಿನ್ನವಾಗಿ ಪ್ರಜಾಸೇವೆಯನ್ನು ಮಾಡುತ್ತಿರುವರು.

ಮಹಾಜನರ ಸಭೆ.

ವೃದ್ಧಪಿತಾಮಹರ ಪತ್ರಿಕೆಗಳನ್ನು ಸರ್ಕಾರದವರು ನಿಲ್ಲಿಸಿರುವುದನ್ನು ಖಂಡಿಸಿ ಮಹಾಜನರಿಗೆ ಉಂಟಾಗಿರುವ ಸಂತಾಪವನ್ನೂ ವಿಷಾದವನ್ನೂ ಸೂಚಿಸಲು ತಾ|| ೯ ನೇ ಬುಧವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ಮಹಾಜನರ ಸಭೆ ನಡೆಯುವುದು. ಮೈಸೂರಿನ ಸಮಸ್ತ ಆಬಾಲವೃದ್ಧರೂ ದಯಮಾಡಿಸಬೇಕಾಗಿ ಕೋರಲ್ಪಟ್ಟಿದೆ.

ತಾಯಿನಾಡು.

8—1—1929.

ಕರ್ಣಾಟಕ ಏಕೀಕರಣ.

ಕರ್ಣಾಟಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಕೌಜಲಗಿ ಶ್ರೀನಿವಾಸರಾಯರೇ ಮೊದಲಾದ ರಾಷ್ಟ್ರೀಯ ಮುಖಂಡರುಗಳು ಈ ಕೆಳಗಿನಂತೆ ಮಹಾಜನರಲ್ಲಿ ವಿಜ್ಞಾಪಿಸಿಕೊಂಡಿರುತಾರೆ.

"ಕರ್ಣಾಟಕರಾಜ್ಯವು ಮೈಸೂರು, ಮತ್ತು ಹೈದರಾಬಾದು ಸಂಸ್ಥಾನಗಳಿಗೆ ಸೇರಿರುವುದಲ್ಲದೆ ಬ್ರಿಟಿಷ್ ಇಂಡಿಯಾದ ಮೂರು ಬೇರೆಬೇರೆ ಅಧಿಪತ್ಯಗಳಿಗೂ ಒಳಪಟ್ಟಿದೆ. ಭಿನ್ನಭಿನ್ನವಾಗಿರುವ ಈ ಕನ್ನಡ ಪ್ರಾಂತ್ಯಗಳನ್ನು ಒಟ್ಟುಗೂಡಿಸಬೇಕೆಂಬ ಪ್ರಯತ್ನಗಳನ್ನು 1913ನೆ ಸಾಲಿನಿಂದಲೂ ಮಾಡುತ್ತಿದೆ. ಮಾಂಟ್‌ಫೋರ್ಡ್ ರಿಪೋರ್ಟಿನ ಪ್ರಕಾರ ಭಾಷಾ ರೀತ್ಯ ಪ್ರಾಂತ್ಯಗಳನ್ನು ಏರ್ಪಡಿಸಬೇಕಾಗಿದ್ದರೂ ಆಳರಸರು ಆಸ್ಪದಕೊಡಲಿಲ್ಲ. ನಮ್ಮ ನೆರೆಯ ನಾಡಾದ ಆಂಧ್ರವು ನಮಗಿಂತಲೂ ಮೊದಲಿನಿಂದ ಈ ಚಳವಳವನ್ನು ನಡೆಸುತ್ತಿದೆ. ಒರಿಸ್ಸಾ ದೇಶವು ಸ್ವತಂತ್ರವಾಗಿ ಹೋರಾಡುತ್ತಾ ನಮಗೆ ಮಾರ್ಗದರ್ಶಕವಾಗಿದೆ. ಸಿಂಧೂ ದೇಶವೂ ಕೂಡ ಪ್ರತ್ಯೇಕವಾಗಲು ಹೋರಾಡುತ್ತಿದೆ. ರಾಷ್ಟ್ರೀಯ ಮಹಾಸಭೆಯೂ ಕೂಡ ಭರತಖಂಡವನ್ನು ಭಾಷಾರೀತ್ಯ ವಿಭಾಗಿಸಬೇಕೆಂದು 1920 ರಲ್ಲಿ ತೀರ್ಮಾನಿಸಿತು. ಅಂದಿನಿಂದಲೂ ಬ್ರಿಟಿಷ್ ಕರ್ಣಾಟಕವು ಸಾಮಾಜಿಕ, ನೈತಿಕ, ರಾಜಕೀಯ, ವಿದ್ಯಾವಿಷಯಕ ಚಳುವಳಿಗಳನ್ನು ಮಾಡತೊಡಗಿದೆ.

ಕಳೆದ ಜೂನ್ ತಿಂಗಳಲ್ಲಿ ನೆಹರು ಸಮಿತಿಯವರು ಕರ್ಣಾಟಕದ ವಿಷಯದಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. 'ಕರ್ಣಾಟಕ ಏಕೀಕರಣ ಸಂಘದ, ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರತಿನಿಧಿಗಳು ನಮ್ಮ ಮುಂದೆ ಅದರ ಐತಿಹಾಸಿಕ ಮುಂತಾದ ದೇಶದ ಸ್ಥಿತಿಗತಿ ಸಂಬಂಧವಾದ ಎಲ್ಲಾ ಅವಶ್ಯಕ ವಿಷಯಗಳನ್ನೂ ಇಟ್ಟಿರುತ್ತಾರೆ. ನಮ್ಮ ಪ್ರಶ್ನೆಗಳಿಗೆಲ್ಲಾ ಬಹಳ ದಕ್ಷತೆಯಿಂದ ತಕ್ಕ ಉತ್ತರಗಳನ್ನು ಕೊಟ್ಟಿರುತ್ತಾರೆ. ಆದಕಾರಣ ಭಿನ್ನಭಿನ್ನವಾಗಿರುವ ಕರ್ಣಾಟಕ ಪ್ರಾಂತ್ಯಗಳನ್ನು ಒಟ್ಟುಗೂಡಿಸತಕ್ಕ ಕಾರ್ಯವು ಮುಂದಿದೆ. ಬ್ರಿಟಿಷ್ ಕರ್ಣಾಟಕದಲ್ಲಿ ಸದ್ಯದ ಆಡಳಿತದಲ್ಲೂ ಬಹಳ ಹಣವು ಉಳಿಯುತ್ತಿದೆ. ಮೈಸೂರು ರಾಜ್ಯದ ಆಚೆ ಇರುವ ಸಣ್ಣಪುಟ್ಟ ಭಾಗಗಳನ್ನು ಬಿಟ್ಟು ಬೇರೆಬೇರೆ ಆಡಳಿತಕ್ಕೆ ಒಳಪಟ್ಟಿರುವ ಕರ್ಣಾಟಕವನ್ನು ಒಂದುಮಾಡಿ ಕರ್ಣಾಟಕವನ್ನೇ ಒಂದು ಪ್ರಾಂತ್ಯವಾಗಿ ಮಾಡಬೇಕು.

ಇಚೆಗೆ ಆಗಸ್ಟು ತಿಂಗಳಿನಲ್ಲಿ ಲಕ್ನೋದಲ್ಲಿ ಸೇರಿದ್ದ ಸರ್ವಪಕ್ಷೀಯರ ಸಮ್ಮೇಳನದಲ್ಲಿಯೂ ಈ ವಿಚಾರ ಚರ್ಚಿಸಿ ತಮ್ಮ ನಿರ್ಣಯಗಳು ಜಾರಿಗೆ ಬಂದಕೂಡಲೆ ಬ್ರಿಟಿಷ್ ಕರ್ಣಾಟಕವನ್ನೆಲ್ಲಾ ಒಂದು ಪ್ರಾಂತ್ಯವಾಗಿ ಮಾಡಬೇಕೆಂದು ತೀರ್ಮಾನಿಸಿದ್ದಾರೆ."

ಆದಕಾರಣ ಕರ್ಣಾಟಕ ಏಕೀಕರಣವು ಜಾಗ್ರತೆಯಾಗಿ ನಡೆಯಲು ಎಲ್ಲರೂ ಪ್ರಯತ್ನಪಟ್ಟು ಕನ್ನಡ ನಾಡೂ ಕೂಡ ಇತರರಂತೆ ಭಾರತವಾತೆಯ ಏಳಿಗೆಯಲ್ಲಿ ಹೋರಾಡಲು ಅನುಕೂಲವಾಗುವಂತೆ ಮಾಡಬೇಕಾಗಿದೆ.

ವರ್ತಮಾನ ಸಂಗ್ರಹ

ಸರ್ಕಾರಿ ಸುದ್ದಿ.

ಪ್ರಥಮ ಸಚಿವರಾದ ದಿವಾನ್ ಬಹದ್ದೂರ್ ಶ್ರೀ|| ಎಂ. ಎನ್ ಕೃಷ್ಣರಾಯರು ೨ ತಿಂಗಳ ರಜಾ ತೆಗೆದುಕೊಳ್ಳುವರೆಂದೂ ರೆವಿನ್ಯೂ ಕಮಿಷನರ್ ಮಿ|| ಪಿ. ಜಿ. ಡಿಸೋಜಾರವರು ಕೌನ್ಸಿಲರ್ ಪದವಿಗೆ ಬದಲಿ ಯಾಗಿ ಏರಿಸಲ್ಪಡುವರೆಂದೂ ಛೀಫ್ ಸೆಕ್ರೆಟರಿಯವರು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರಾಗಿ ನೇಮಿಸಲ್ಪಡುವರೆಂದೂ ಜನರಲ್ ಸೆಕ್ರೆಟರಿ ಮ|| ಆರ್. ರಂಗರಾಯರು ಛೀಫ್ ಸೆಕ್ರೆಟರಿ ಕೆಲಸಕ್ಕೆ ನೇಮಿಸಲ್ಪಡುವರೆಂದೂ ಮ|| ಹಿರಿಯಣ್ಣಯ್ಯನವರು ರೆವಿನ್ಯೂ ಕಮಿಷನರಾಗುವರೆಂದೂ ಬಲವಾದ ವದಂತಿ ಇದೆ.

ಬೆಂಗಳೂರು ಡಿ|| ಡೆಪ್ಯುಟಿ ಕಮಿಷನರ್ ಮ|| ಜಿ. ಬಿ. ಹೆಬ್ಲಿಕರ್‌ರವರು ರಜಾ ತೆಗೆದುಕೊಳ್ಳುವರೆಂದೂ, ಶಿವಮೊಗ್ಗ ಡಿ|| ಡೆಪ್ಯುಟಿ ಕಮಿಷನರ್ ಮ|| ಬಿ. ಟಿ. ಕೇಶವಯ್ಯಂಗಾರ್ಯು ಬೆಂಗಳೂರು ಡಿ|| ಡೆಪ್ಯುಟಿ ಕಮಿಷನರ್ ಕೆಲಸಕ್ಕೆ ವರ್ಗಾಯಿಸಲ್ಪಡುವರೆಂದೂ, ವದಂತಿ ಇದೆ.

ವಿದ್ಯಾಭ್ಯಾಸ ಸಮ್ಮೇಳನ

ಮೊನ್ನೆದಿನ ಪ್ರಾತಃಕಾಲ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಸೆಕಂಡರಿ ವಿದ್ಯಾಭ್ಯಾಸ ಸಮಿತಿಯ ಸಮ್ಮೇಳನವು ನಡೆಯಿತು. ಮಂಗಳಗಾನವಾದ ಮೇಲೆ ಶ್ರೀಮದ್ಯುವರಾಜರು ಪ್ರಾರಂಭ ಭಾಷಣವನ್ನು ಮಾಡಿದರು. ಪ್ರೊ|| ವಾಡಿಯಾರವರು ಸ್ವಾಗತ ಭಾಷಣವನ್ನು ಮಾಡಿದರು. ಮ|| ಎನ್. ಎಸ್ ಸುಬ್ಬರಾಯರು ಅಧ್ಯಕ್ಷ ಭಾಷಣವನ್ನು ಮಾಡಿದರು. ಶ್ರೀಮನ್ಮಹಾರಾಜರಿಗೂ ಶ್ರೀಮದ್ಯುವರಾಜರಿಗೂ ಜಯವಾಗಲೆಂದು ಹರಸಿ ಸಭೆಯು ಮುಕ್ತಾಯವಾಯಿತು.

ಗಂಡನ ಕೊಲೆ.

ತಿರುವಾಂಕೂರಿನ ಹತ್ತಿರ ಇರುವ ಒಂದು ಹಳ್ಳಿಯಲ್ಲಿ ಒಬ್ಬ ಹೆಂಗಸು ತನ್ನ ತಾಯಿಯೊಡನೆ ವಾಸವಾಗಿದ್ದಳು. ಆಕೆಯ ಗಂಡನು ಕೂಲಿಯ ಕೆಲಸಮಾಡುತ್ತಿದ್ದುದ್ದರಿಂದ ಕೆಲವು ಕಾಲದವರೆಗೆ ಮನೆಯಲ್ಲಿರುತ್ತಿರಲಿಲ್ಲ. ಸ್ವಲ್ಪದಿನಗಳಮೇಲೆ ಹಿಂತಿರುಗಿ ಬಂದವನು ಹೆಂಡತಿಯ ನಡತೆಯ ವಿಷಯವಾಗಿ ಸಂಶಯ ಹುಟ್ಟಿ ಅವಳನ್ನು ಶಿಕ್ಷಿಸಿದನು. ಹೆಂಡತಿಗೆ ಕೋಪಬಂದಿತು. ಆ ರಾತ್ರಿ ಗಂಡನು ಮಲಗಿದ್ದ ವೇಳೆಯಲ್ಲಿ ಅವನ ರುಂಡಮುಂಡಗಳನ್ನು ಕತ್ತರಿಸಿ ಗೋಪ್ಯವಾಗಿ ಹೂಳಿಟ್ಟು ಅವಳು ಮಾಮೂಲಿನಮೇರೆ ಕೆಲಸಕ್ಕೆ ಹೋಗಿರುವನೆಂಬ ಪ್ರತೀತಿಯನ್ನುಂಟುಮಾಡಿದಳು. ಕೆಲಕಾಲದಮೇಲೆ ಸದರಿ ರುಂಡವನ್ನು ಬೇರೊಂದೆಡೆಗೆ ಒಯ್ಯುತ್ತಿರುವಾಗ ಪೋಲೀಸಿನವರ ಕೈಗೆ ಸಿಕ್ಕಿಬಿದ್ದಳು.

ಗಣೇಶನ ವಿಗ್ರಹವನ್ನು [illegible]

ದ. [illegible]

ಕಳೆದ ಜುಲೈ [illegible] ಮಾಸಗಳಿಂದ ಸುಲ್ತಾನ್‌ಪೇಟೆ ಸ್ಕೂಲಿನ ಗಣೇಶ ವಿಗ್ರಹವು ಪ್ರತ್ಯಕ್ಷತೆಗೆ ಬಾರದು ಈ ವಿಗ್ರಹಕ್ಕೆ ಒಂದು ಸಣ್ಣ ಗುಡಿಯು ಕಟ್ಟಲ್ಪಟ್ಟಿತ್ತೆಂದು ವರದಿಯಲ್ಲಿ ನಮೂದಿಸಲ್ಪಟ್ಟಿದೆ. ವಿದ್ಯಾಭ್ಯಾಸದ ಡೈರೆಕ್ಟರ ಮಹಾಸೆಯು ಪಿಟಾರದಲ್ಲಿ ದಿವಾನರ ಪ್ರೈವೆಟ್ ಸೆಕ್ರೆಟರಿಯವರಿಂದ ಮ|| ಎನ್. ಎಸ್. ಸುಬ್ಬರಾಯರಿಗೆ (ಡಿ. ಪಿ. ಐ) [illegible] ಕಾಗದವು ೧೯೨೮ ನೇ ಇಸವಿ ಜೂನ್ ೧೨ ನೇ ತಾ|| ದಿನ ತಲಪಿರುತ್ತೆ.

"ಸುಲ್ತಾನ್‌ಪೇಟೆಯ ಸ್ಕೂಲು ಅಂಗಳದಲ್ಲಿ ಒಂದು ಸಣ್ಣ ಗುಡಿಯನ್ನು [illegible] ನ್ನು ಕ್ರಮೇಣ ಬಡಾಯಿಸುವ ಪ್ರಯತ್ನಗಳು ನಡೆಯುತ್ತಿರುವವೆಂದೂ ಆ ಸನ್ನಿವೇಶದಲ್ಲಿ ಒಂದು ಮಸೀದಿ ಇ [illegible] ಗೂ ಕಲಹಗಳ ಸಂಭವವು [illegible] ವಾನರಿಗೆ ತಿಳಿದುಬಂದಿರುತ್ತೆ. ಆದುದರಿಂದ ನೀವು ಪರೀಕ್ಷಿಸಿ ಗುಡಿಯನ್ನು ಕಟ್ಟದಂತೆ ತಡೆಯ [illegible] ನು ಮಾಡಬೇಕೆಂಬುವುದನ್ನು ಆಲೋಚಿಸಿರಿ."

(ಲೋ.)

ಇನ್‌ಫ್ಲುಯಂಜಾ.

ಕನಡಾದಲ್ಲೂ ಯೂನೈಟೆಡ್ ಸ್ಟೇಟ್ಸ್‌ನಲ್ಲೂ ಇನ್‌ಫ್ಲೂಯಂಜಾ ರೋಗಕ್ಕೆ ಅರ್ಧ ಮಿಲಿಯನ್‌ಗಿಂತಲೂ ಹೆಚ್ಚಾಗಿ ಜನರು ತುತ್ತಾಗಿರುವರೆಂದು ತಿಳಿಯಬರುತ್ತೆ.

ನೀಲಗಿರಿ ರೈಲ್ವೆ.

ಈ ತಿಂಗಳು 3 ನೇ ತಾ|| ಆಗಾಗಿದ್ದು ಮೆಟ್ಟುಪಾಳ್ಯಮಿನಿಂದ ಕುನೂರ್ ವರಿಗೆ ಕೆಟ್ಟು ಹೋಗಿದ್ದ ರೈಲು ಮಾರ್ಗವು ಸರಿಮಾಡಲ್ಪಟ್ಟು ಜನರ ಪ್ರಯಾಣ ಕ್ಕಾರಂಭವಾಗಿದೆ.

ಮಹಾತ್ಮಜೀಯವರ ಆಶೆ.

ಕಲ್ಕತ್ತ, ೩ ನೇ ತಾ|| ಜನವರಿ

ಪತ್ರಿಕಾ ಪ್ರತಿನಿಧಿಯೊಬ್ಬರೊಂದಿಗೆ ಮಹಾತ್ಮಾ ಗಾಂಧಿಯವರು ಹೀಗೆ ಹೇಳಿದರು.

"ಲೋಕಸ್ಥಿತಿ ಒಳ್ಳೆಯದೆಂದು ನಂಬತಕ್ಕವರಲ್ಲಿ ನಾನೂ ಒಬ್ಬನು. ಬ್ರಿಟೀಷರು [illegible] ವುದನ್ನು ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತ ೧೯೨೯ ನೇ ಡಿಸೆಂಬರು ೩೧ ನೇ ತಾರೀಖಿನ ನಡುರಾತ್ರಿಯ ವರೆಗೆ ಆಶೆಯನ್ನು ಇಟ್ಟುಕೊಂಡಿರುವೆನು. ನನ್ನ ಈ ಆಶೆಯು ನೆರವೇರದಿದ್ದರೆ ೧೯೩೦ ನೇ ಜನವರಿ ಮೊದಲನೆ ದಿನ ಎದ್ದು ನಾನು ಸ್ವತಂತ್ರ ವಾದ [illegible] ಡೆನ್ಸ್-ವಾಲಾ-ಆಗುವೆನು.

ಇಂಡಿಯವನ್ನು ಅದರ ಮಕ್ಕಳು ರಚಿಸಿದ ಕಾನೂನುಗಳ ಪ್ರಕಾರ ಆಳುವ ಸ್ವಾತಂತ್ರ್ಯವು ನಮಗೆ ಬೇಕು. ನೆಹರು ವರದಿಯು ಆ ಪ್ರಕಾರದ್ದಿದೆ. ಅದು ಅಂಗೀಕರಿಸಲ್ಪಟ್ಟರೆ, ಆಗ ನಾವೇ ನಮ್ಮ ರಾಜ್ಯರಚನೆ ಮಾಡಿಕೊಂಡಂತಾಗುತ್ತದೆ. ಬ್ರಿಟಿಷರ ಮುಂದಾಳುಗಳು ಈ ಒಂದು ವರುಷದೊಳಗೆ ಸಾವಧಾನವಾಗಿ ಯೋಚಿಸಿ ತೀರ್ಮಾನ ಕೊಡಲಿ ಇದೇ ಕಡೆಯ ಅವಕಾಶ. ಮುಂದೆ ಆಲೋಚಿಸಲು ಅವಕಾಶ [illegible]"

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

Regd No. M 2322 ॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸಂಪುಟ ೧]

ಸಂಪುಟ ೧] ಬುಧವಾರ ೯ ಜನವರಿ ೧೯೨೯ [ಸಂಚಿಕೆ

ATTEND MASS MEETING TODAY At the TOWN HALL 6 p.m.

ತಾಯಿನಾಡು.

9—1—1929.

ಮುದ್ರಕರ ಮೇಲೆ ದ[illegible]ಕೆ

ಅಭಿಪ್ರಾಯಗಳು

—

[illegible]

ದಿಲ್ಲ. ಇದಕ್ಕೆ ಮಹಾಮಂತ್ರ ಪ್ರಯೋಗವಾಗಬೇಕು. ಈಗಲೇ ಇದನ್ನು ಅಡಗಿಸದಿದ್ದರೆ ದೇಶಕ್ಕೆಲ್ಲಾ ಈ ವ್ಯಾಧಿಯು ಆಕ್ರಮಿಸಿ ರಾಜ್ಯವು ಅನಾಯಕವಾಗುವುದು.

ಪ್ರಜೆಗಳಿಂದಲೇ ಹುಟ್ಟಿ ಬೆಳೆದು ಬದುಕಿಬಾಳುತ್ತಿರುವ ಈ ಸರ್ಕಾರದ ಕಾನೂನು ಪ್ರಜೆಗಳಿಗೆ ವಿರುದ್ಧವಾಗಿರುವುದರಿಂದ ತಾತಯ್ಯನವರು ಅಪ್ಪಣೆಯನ್ನು ತಿರಸ್ಕರಿಸಿ, ಕಾನೂನನ್ನು ಮುರಿದು ಜನಶಕ್ತಿಯನ್ನು ಪ್ರತಿಷ್ಟಿಸಿ ಆತ್ಮಶಕ್ತಿಯನ್ನು ಉಪಯೋಗಿಸಿ ಸತ್ಯಾಗ್ರಹವನ್ನು ಹೂಡಿ ಲೇಖನ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಬ್ರಿಟಿಷ್ ಇಂಡಿಯದಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದಿರುವ ಮೈಸೂರು ಸಂಸ್ಥಾನದ ವೃದ್ಧಪಿತಾಮಹರಾದ ಶ್ರೀ|| ವೆಂಕಟಕೃಷ್ಣಯ್ಯನವರ ಮೇಲೆ ದಬ್ಬಾಳಿಕೆಯು ನಡೆಸಿತೆಂದರೆ ಇಡೀ ಮೈಸೂರು ಸಂಸ್ಥಾನದ ಪ್ರಜೆಗಳ ಮೇಲೆಲ್ಲಾ ದಬ್ಬಾಳಿಕೆಯನ್ನು ನಡೆಸಿದ ಮಹಾಪರಾಧವಾಯಿತು. ಈ ಅಪರಾಧವನ್ನು ಸರ್ಕಾರದವರು ತಕ್ಷಣವೇ ತಿದ್ದಿಕೊಳ್ಳುವುದು ಮೇಲು ಹಾಗೆ ಮಾಡದಿದ್ದರೆ ದೇಶದಲ್ಲಿ ಅಶಾಂತಿಯು ಹೆಚ್ಚಿ ಸರ್ಕಾರದ ಕೀರ್ತಿ[illegible]. ಬಂಧಿತ.

ತಗಡೂರು ರಾಮಚಂದ್ರರಾವ್.

—

ಚಿತ್ರಗುಪ್ತನ ಅಭಿಪ್ರಾಯ.

ಮಾತೆತ್ತಿದರೆ ಪತ್ರಿಕೆಗಳನ್ನು ನಿಲ್ಲಿಸುವುದು ಪ್ರಜಾಭಿಮತಕ್ಕನುಸಾರವಾಗಿ ಆಡಳಿತ ನಡಿಸಬೇಕೆಂಬಿರುವ ಯಾವ ಸರ್ಕಾರಕ್ಕೂ ಯೋಗ್ಯವಾದುದಲ್ಲ. ದೇಶಸೇವಕರೆಂದು ಖ್ಯಾತಿಪಡೆದು ಮೈಸೂರು ಸಂಸ್ಥಾನದಲ್ಲಿ ನಡೆದಿರುವ ಅನೇಕ ಅಭಿವೃದ್ಧಿಗಳಿಗೆ ಕಾರಣಭೂತವಾಗಿರುವ ಶ್ರೀ|| ಎಂ. ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ನಡೆದುಕೊಂಡು ಬರುತ್ತಿದ್ದ ಮೂರು ಪತ್ರಿಕೆಗಳನ್ನು ಸರ್ಕಾರದವರು ಯಾವ ಕಾರಣವನ್ನೂ ಕೊಡದೆ ನಿಲ್ಲಿಸಿದುದು ತುಂಬಾ ವಿಷಾದಕರವಾದುದು. ಇಂತಹ ತಪ್ಪಿತಸ್ಥರನ್ನು [illegible] ಶಿಕ್ಷಿಸಬೇಕು. ತಮ್ಮ ಅಭಿಪ್ರಾಯದಲ್ಲಿ ತಪ್ಪೆಂದು ತೋರಿಬಂದ ಮಾತ್ರಕ್ಕೆ ಯಾವ ಕಾರಣವನ್ನೂ ಕೊಡದೆ ಯಾವ ವಿಚಾರಣೆಯನ್ನೂ ಮಾಡದೆ ಶಿಕ್ಷೆ ವಿಧಿಸಿದರೆ ಅದು ನಿರಂಕುಶ ಪ್ರಭುತ್ವವೆನಿಸಿಕೊಳ್ಳುವುದೇ ಹೊರತು, ನಿರಂಕುಶ ಪ್ರಭುತ್ವವೆಂದಾಗಲಿ ಪ್ರಜಾಭಿಮತವಾದ ಸರ್ಕಾರವೆಂದಾಗಲೀ ಅನ್ನಿಸಿಕೊಳ್ಳಲಾರದು.

[illegible]ಅಭಿಪ್ರಾಯ.

ಸತ್ಯ[illegible] ಪ್ರಾಧಾನ್ಯವಾಗಿಟ್ಟುಕೊಂಡು [illegible] ಬರವಣಿಗೆಗಳನ್ನು ಬರೆಯುವ ಪತ್ರಿಕೆಗಳಿಗೆ ಪ್ರೋತ್ಸಾಹ. ನ್ಯಾಯದಿಂದಲೂ, ನಿರ್ಭಯದಿಂದಲೂ ಮುಚ್ಚುಮರೆಯಿಲ್ಲದೆ ಸರಕಾರದ ತಪ್ಪುಗಳನ್ನು ಉದ್ಘಾಟಿಸುವ ಪತ್ರಿಕೆಗಳಿಗೆ ಬಹಿಷ್ಕಾರ! ಇದೇ ನಮ್ಮ ಸರ್ಕಾರದ ಚಿತ್ತವೃತ್ತಿ! ಬಾಯಿಯಲ್ಲಿ ಬಂಡ! ಕೃತಿಯಲ್ಲಿ ಒಂದು! ಶಾಂತಿ ಸಂಧಾನವಂತೆ! ಎಲ್ಲಿಯ ಶಾಂತಿ! ಎಲ್ಲಿಯ ಸಂಧಾನ? ಇವೆಲ್ಲಾ [illegible]

ಮ|| ಡಿ. ವಿ. ಗುಂಡಪ್ಪನವರ ಅಭಿಪ್ರಾಯ.

ಮೈಸೂರು ಪೇಟ್ರಿಯಟ್ ಸಂಪಾದಕತ್ವದಯ ಪತ್ರಿಕೆಗಳು ವೀರ ಕ್ಷತ್ರಿಯರಂತೆ ಧರ್ಮಯುದ್ಧ ರಣಾಂಗಣದಲ್ಲಿ ಮಡಿದವು. ರೋಷಾವೇಶದಿಂದ ಕೂಡಿದ ಕೆಲವು ಘಾತಗಳು ತಾರತಮ್ಯಜ್ಞಾನವಿಲ್ಲದೆ ನಮ್ಮ ಸಂಸ್ಥಾನದಲ್ಲಿ [illegible] ತ್ತಿವೆ. ಈಗಿನ ಸಾರ್ವಜನಿಕ [illegible] ಇಂತಹ ಸ್ವಾರ್ಥತ್ಯಾಗಗಳು ಅಪರಿಹಾರ್ಯವಾದವು.

ತಾತಯ್ಯನವರ ಮಾತುಗಳು.

ತಾತಯ್ಯನವರು ಒಬ್ಬ ಪತ್ರಿಕಾ ಪ್ರತಿನಿಧಿಯೊಡನೆ ಈ ಕೆಳಗಿನ ಸಂಭಾಷಣೆಯನ್ನು ನಡೆಸಿದರು:—ಸರ್ಕಾರದವರ ಅಪ್ಪಣೆಯಂತೆ ಪತ್ರಿಕೆಗಳನ್ನು ನಿಲ್ಲಿಸಿದ್ದೇನೆ. ಸರ್ಕಾರದವರು ಮಾಡಿದ್ದು ಅನ್ಯಾಯವೆಂದು ಶ್ರೀಮನ್ಮಹಾರಾಜರವರಿಗೆ ವಿಜ್ಞಾಪಿಸಿದ್ದೇನೆ. ಅವರ ಉತ್ತರ ಬರುವ ವರೆಗೂ ನಾನು ಏನೂ ಮಾಡುವಹಾಗಿಲ್ಲ. ಪತ್ರಿಕೆಗಳಿದ್ದು ಪ್ರಜಾಸೇವೆಗಾಗಿ ಪ್ರಜೆಗಳು ಪತ್ರಿಕಾ ಸ್ವಾತಂತ್ರ್ಯದ ಹಕ್ಕಿಗೋಸ್ಕರವಾಗಿ ಹೋರಾಡುವುದು ಅವರ ಕರ್ತವ್ಯ. ನಾನೇನೋ ಮುದುಕ ನಾದೆ 85 ವರ್ಷ. ಇನ್ನೂ ಬದುಕಿರುವಷ್ಟು ದಿವಸ ಪ್ರಜಾಸೇವೆಯನ್ನು ಮಾಡಬೇಕೆಂದು ಇರುವೆನು. ನಾನು ಸುಮ್ಮನೇ ಕೂತಿರಲಾರೆ. ನನಗೆ ದಿನವೊಂದಕ್ಕೆ 18 ಗಂಟೆಕಾಲ ಕೆಲಸ ಮಾಡುವ ವಾಡಿಕೆ. ಕೆಲಸವಿಲ್ಲದೆ ಹೋದರೆ ನನ್ನ ಶರೀರಕ್ಕೆ ಅಪಾಯ ಬರಬಹುದು. ಆದುದರಿಂದ ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಅಪ್ಪಣೆಯನ್ನು ಕೊಡಬೇಕೆಂದು ಶ್ರೀಮನ್ಮಹಾರಾಜರವರಿಗೆ ಅರ್ಜಿಕಿಸ್ತೇನೆ. ದೇಶಸೇವೆಯ ಕೆಲಸವು ಯುವಕರ ಮೇಲೆ ಬಿದ್ದಿರುವುದು. ನಾನು ನನ್ನ ಐವತ್ತು ವರ್ಷದ ಪ್ರಜಾಸೇವೆಯಲ್ಲಿ ಎಷ್ಟೋ ದಿವಾನರುಗಳ ಕೂಡ ಹೋರಾಡಿದ್ದೇನೆ. ಆದರೆ ಈಗಿನ ಸರ್ಕಾರದವರು ಮಾಡಿದಷ್ಟು ಅನ್ಯಾಯವನ್ನು ಯಾರೂ ಮಾಡಲಿಲ್ಲ. ಎಲ್ಲರಿಗೂ ಗೊತ್ತಿದ್ದಂತೆ ನಾನು ಈಗಿನ ಸರ್ಕಾರವನ್ನು ಎಷ್ಟೋ ಆಪರ್ತಿ ಸಮರ್ಥನೆ ಮಾಡಿರುತ್ತೇನೆ. ಬೆಂಗಳೂರು ಗಲಭೆಯಾದಮೇಲೆ ಈಗಿನ ಸರ್ಕಾರಕ್ಕೂ ನನಗೂ ಮನಸ್ತಾಪವಾಯಿತು. ನನ್ನ ಪತ್ರಿಕೆಗಳಲ್ಲಿ ಟೀಕೆಗಳನ್ನು ಮಾಡಿದೆನು. ಇತರ ಪತ್ರಿಕೆಗಳ ಅಭಿಪ್ರಾಯಗಳನ್ನು ಎತ್ತಿ ಹಾಕಿದೆನು. ಇದು ಸರ್ಕಾರದವರಿಗೆ ಅಸಮಾಧಾನ. ಆದರೆ ನಾನು ಕರ್ತವ್ಯವನ್ನು ಮಾಡದೆ ಇರುವುದಕ್ಕಾದೀತೇ? ಚಿರತೆಯಿಲ್ಲ[illegible] ಕಾರದವರು ನನ್ನ ಮೇಲೆ ದಬ್ಬಾಳಿಕೆಯನ್ನು ಮಾಡಿದರು. ನಾನು ಏನೂ ತಪ್ಪನ್ನ ಮಾಡಿಲ್ಲ. ಒಂದು ವೇಳೆ ಹಾಗೆ ತಪ್ಪನ್ನು ಮಾಡಿರುವೆನೆಂದು ಹೇಳಿದರೆ ಕೋರ್ಟಿನಲ್ಲಿ ವಿಚಾರಣೆ ನಡೆಸಲಿ ಕೋರ್ಟಿನವರ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ. ಸರ್ಕಾರದವರು ಅನ್ಯಾಯಮಾಡಿದ್ದರೂ ಕಡೆಗೆ ಸತ್ಯವೂ ನ್ಯಾಯವೂ ಗೆಲ್ಲುವುವೆಂಬ ದೃಢವಾದ ನಂಬಿಗೆ ನನಗಿರುವುದು.

TAI NADU
9—1—1929

ಸ್ವರಾಜ್ಯ ಶತ್ರುಗಳು.

ಲೇಖಕರು:—ಲಾಲಾ ಲಜಪತರಾಯರು

(ಪಂಜಾಬು ಕೇಸರಿ ಲಾಲಾ ಲಜಪತರಾಯರವರು 1915 ರಲ್ಲಿ ಅಮೇರಿಕಾದಲ್ಲಿ ಯಂಗ್ ಇಂಡಿಯಾ ಎಂಬ ಪುಸ್ತಕವ[illegible]ಸಿದ್ಧ ಮಾಡಿದರು. ಅದರಲ್ಲಿನ ಮುಖ್ಯವಾ[illegible]ಗಗಳು ಈ ಕೆಳಗೆ ಕೊಡಲ್ಪಟ್ಟಿವೆ.)

[illegible]ಗಳಲ್ಲಿ ಇರುವಂತೆ ನಮ್ಮ ದೇಶದಲ್ಲಿಯೂ ಆಂತರ್ಯ ಶತ್ರುಗಳಿರುವರು. ಅವರಿಗೆ ಸ್ವರಾಜ್ಯವೂ ಬೇಕಿಲ್ಲ. ಸ್ವಾತಂತ್ರ್ಯವೂ ಬೇಕಿಲ್ಲ. ಇವರು ಐಶ್ವರ್ಯವಂತರಾಗಿದ್ದರೂ ರಾಜಾಧಿರಾಜರೆಂಬ ಬಿರುದನ್ನು ಹೊಂದಿದ್ದರೂ ತ[illegible]ದಿ ಮೊದಲಿಲ್ಲದ ವಂಶಾವಳಿಗಳನ್ನು ಪಡೆದಿದ್ದರೂ ಇವರಿಗೆ ನಾವು ಪರಕೀಯರಿಂದ ತುಳಿಯಲ್ಪಡುತ್ತಿರುವೆವು ಎಂಬ ಅವಮಾನವೇ ಇರುವುದಿಲ್ಲ. ಇವರಿಗೆ ಇತರರ ತೊಂದರೆಯು ಇಲ್ಲದಿದ್ದರೆ ಸಾಕು. ಇವರ ಭೋಗವಿಲಾಸಗಳಿಗೆ ಚ್ಯುತಿಯು ಬರದಿದ್ದರೆ ಆಯಿತು. ಸೋಮಾರಿಗಳಾಗಿ ಇತರರು ಸಂಪಾದಿಸಿದ ಹಣವನ್ನು ತಿಂದು ತೇಗಿ ದುರ್ಮಾರ್ಗರಂತೆ ಕಾಲಹರಣ ಮಾಡುತ್ತಿದ್ದರೂ ಚಿಂತೆಯಿಲ್ಲ. ಅದನ್ನೇ ಇವರು ಸ್ವರ್ಗದಂತೆ ಭಾವಿಸುವರು. ಈ ನರಾಧಮರಿಗೆ ಈಗಿರುವ ಸ್ಥಿತಿಗತಿಗಳಲ್ಲಿ ಸ್ವಲ್ಪವೂ ಬದಲಾವಣೆಯಾಗಕೂಡದು. ಇತರರು ಯಾರಾದರೂ ಈ ಬದಲಾವಣೆಯ ಪ್ರಯತ್ನವನ್ನು ಮಾಡಿದರೆ ಇವರಿಗೆ ಸಹನೆಯಿಲ್ಲ. ತಮಗೂ ತಮ್ಮ ವಂಶದವರಿಗೂ ಏನು ವಿಪತ್ತು ಸಂಭವಿಸುವುದೋ ಎಂಬ ಭೀತಿಯು ಇವರನ್ನು ಆವರಿಸಿರುವುದು. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಯುಂಟಾಗಿ ಸ್ವರಾಜ್ಯ ಪ್ರಾಪ್ತವಾದರೆ ತಾವು ಸೋಮಾರಿಗಳಾಗಿ ಈಗ ಅನುಭವಿಸುತ್ತಿರುವ ಭೋಗವಿಲಾಸಗಳಿಗೆ ಎಲ್ಲಿ ಲೋಪವು ಬರುವುದೋ ಎಂಬ ಮಹದ್ ಭೀತಿಯು ಇವರುಗಳಿಗೆ ತಗಲಿರುವುದು. ಬ್ರಿಟಿಷ್ ಸರ್ಕಾರದವರು ಇವರುಗಳ ಆಸ್ತಿಪಾಸ್ತಿಗಳನ್ನು ಜೋಪಾನವಾಗಿ ಕಾಪಾಡವೆವು ಎಂಬ ಭರವಸೆಯನ್ನು ಕೊಟ್ಟಿರುವರು. ಪ್ರಜೆಗಳು ಅಜ್ಞಾನಿಗಳಾಗಿರಲಿ, ಬಡವರಾಗಿರಲಿ,! ದಿನದಿನಕ್ಕೆ ಕ್ಷೀಣದಶೆಯನ್ನು ಹೊಂದುತ್ತಿರಲಿ [illegible] ಚಿಂತೆಯಿಲ್ಲ, ನಾವು ಚನ್ನಾಗಿದ್ದರೆ ಸಾಕು, ಎಂಬ ದುರ್ಭಾವನೆಯು ಇವರಲ್ಲಿ ತುಂಬಿರುವುದು. ಬ್ರಿಟಿಷ್ ಸರ್ಕಾರದವರು ತಮ್ಮ ನೆಲೆಯನ್ನು ಊರುವುದಕ್ಕೋಸ್ಕರ ಇಂತಹ ದೇಶದ್ರೋಹಿಗಳನ್ನೇ ತಮ್ಮವರನ್ನಾಗಿ ಮಾಡಿಕೊಂಡು ಸ್ವರಾಜ್ಯಕ್ಕೂ, ಸ್ವಾತಂತ್ರ್ಯಕ್ಕೂ ಅವರನ್ನು ವಿರೋಧವಾಗಿ ಎತ್ತಿ ಕಟ್ಟುವರು.

ಇಂಥಹ ದೇಶದ್ರೋಹಿಗಳ ಪೈಕಿ ಕೆಲವು ರಾಜರುಗಳು, ಮಹಾರಾಜರುಗಳು, ಜಮೀನುದಾರರುಗಳು, ಇನಾಂದಾರರುಗಳು, ಮತ್ತು ನವಾಬರುಗಳು ಅಗ್ರಗಣ್ಯರಾಗಿರುವರು. ಬ್ರಿಟಿಷರ ಶಸ್ತ್ರಾಸ್ತ್ರಗಳು ಇವರುಗಳ ಸಂರಕ್ಷಣೆಯನ್ನು ಮಾಡದೇ ಹೋದರೆ ಆವತ್ತಿನ ದಿವಸ ಇವರು ಬೀದಿಯಲ್ಲಿ ಒಡ್ಡರಂತೆ ಕಲ್ಲುಗಳನ್ನು ಒಡೆಯ ಬೇಕಾಗುವುದು. ಮಕ್ಕರಿಗಳಲ್ಲಿ ಮಣ್ಣನ್ನು ಹೊರಬೇಕಾಗುವುದು. ಗಡಿಗೆಗಳಲ್ಲಿ ನೀರನ್ನು ತರಬೇಕಾಗುವುದು. ಬ್ರಿಟಿಷರು ಇವರುಗಳ ಸಂರಕ್ಷಣೆಯನ್ನು ಮಾಡುವ ವಾಗ್ದಾನವನ್ನು ಮಾಡಿರುವುದರಿಂದಲೇ ಈ ಮದಾಂಧರು ನಿರ್ಲಜ್ಜರಾಗಿರುವರು. ಪತಿವ್ರತೆಯರಾದ ಅನೇಕ ಸ್ತ್ರೀಯರನ್ನು ತಮ್ಮ ರಾಣೀವಾಸಕ್ಕೆ ಸೇರಿಸಿಕೊಂಡು ಕೀಚಕನಂತೆ ವರ್ತಿಸುತ್ತಿರುವರು. ಅನೇಕ ರಾಜರುಗಳಿಗೆ ನಾಚಿಕೆ, ಹೇಸಿಕೆ ಎಂಬುವುದೇ ಇಲ್ಲ. ಇವರ ಉಗ್ರಾಣಗಳಲ್ಲಿ ಬ್ರಾಂದಿ, ವಿಸ್ಕಿ, ಸಾರಾಯಿ, ವೈನುಗಳ ಸೀಸೆಗಳೂ ಬುಡ್ಡಿಗಳೂ ಪಿಪಾಯಿಗಳೂ ತುಂಬಿರುವವು. ಇವರ ಲಾಯಗಳಲ್ಲಿ ಜೂಜಿನ ಕುದುರೆಗಳೂ ಜೂಲು ನಾಯಿಗಳೂ ಮಯವಾಗಿರುವುವು. ಇವರ ವಿಹಾರ ಗೃಹಗಳಲ್ಲಿ ಚಿನ್ನ ಬೆಳ್ಳಿ ರೇಷ್ಮೆ ಮಕಮಲ್ಲುಗಳಿಗೆ ಕೊನೆ ಮೊದಲೇ ಇಲ್ಲ. ಈ ರಾಜರುಗಳು ಪ್ರತಿದಿನದಲ್ಲಿಯೂ ತಿನ್ನುವ ಆಹಾರಗಳು ಪಾಶ್ಚಾತ್ಯರ ಪಾಕಶಾಲೆಗಳಿಂದಲೇ ಸಿದ್ಧವಾಗಿಬರುವುವು. ಇವರು ಪ್ರಯಾಣಕ್ಕೆ ಹೊಂಟರೆ ಇವರ ಪರಿವಾರಕ್ಕೆ ಕೊನೆಮೊದಲೇ ಇಲ್ಲ. ಸ್ಪೆಷಲ್ ರೈಲುಗಳಿಗೂ ಸೆಲೂನುಗಳಿಗೂ ಇವರು ಸುರಿಯುವ ದುಡ್ಡು ನದಿಯ ಪ್ರವಾಹದಂತೆ ಧಾರೆಯಾಗಿ ಹೋಗುವುದು. ದಿನ ಬೆಳಗಾದರೆ ಇವರ ಭೋಗವಿಲಾಸವು ಹೊಸಹೊಸ ರೂಪನ್ನು ತಾಳುವುದು. ಈವತ್ತು ಅನುಭವಿಸಿದ ಪದಾರ್ಥವು ನಾಳೆಗೆ ಕೂಡದು, ದಿನದಿನಕ್ಕೆ ಹೊಸಹೊಸ ಅಪ್ಸರ ಸ್ತ್ರೀಯರುಗಳು ಬೇಕು. ಇವರು ದಿನದಿನಕ್ಕೂ ಹೊಸಹೊಸ ಮದ್ಯವನ್ನು ಅಪೇಕ್ಷಿಸುವರು. ಈ ವಿಲಾಸವೆಲ್ಲಾ ಬ್ರಿಟಿಷರ ಆಳ್ವಿಕೆ ಇದ್ದರೇನೇ ನಡೆಯುವುದು. ಇದೇ ಅವರಿಗೆ ಸ್ವರ್ಗ. ಈ ರಾಜರುಗಳಿಗೆ ಮಾನವೆಂಬುದೇನೋ ಗೊತ್ತಿಲ್ಲ. ರಾಜಕೀಯ ಬದಲಾವಣೆಗಳು ಉಂಟಾದರೆ ತಮಗೆ ಪರಮ ಪ್ರಿಯವಾಗಿರುವ ವಸ್ತುಗಳೆಲ್ಲಾ ಎಲ್ಲಿ ಹೋಗುವುವೋ ಎಂಬ ಹೆದರಿಕೆಯು ಇವರುಗಳಿಗೆ ಬಲವಾಗಿರುವುದು. ಇಂತಹವರಿಗೆ ಸ್ವರಾಜ್ಯವೆಂದರೆ ಮರಣ. ಇವರಿಗೆ ಸ್ವರಾಜ್ಯವೂ ಬೇಡ. ಸ್ವಾತಂತ್ರ್ಯವೂ ಬೇಡ. ಇವರಿಗೆ ದೇಶಾಭಿಮಾನವೆಂಬುದು ದೊಡ್ಡ ವ್ಯಾಧಿಯಂತೆ ಕಾಣುವುದು. ಯಾವುದು ಎಲ್ಲಿಯಾದರೂ ಹೋಗಲೀ ತಮ್ಮ ಸುಖಕ್ಕೆ ಲೋಪ ಬರದಿದ್ದರೇ ಅಷ್ಟೇ ಸಾಕು ಎಂಬುದೇ ಇವರ ಪ್ರತಿ ದಿನದ ಪ್ರಾರ್ಥನೆ

ಆದರೆ ಎಲ್ಲಾ ನವಾಬರೂ, ಮಹಾರಾಜರುಗಳೂ ಹೀಗೆಯೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. (ನಾಭಾ ಮಹಾರಾಜರೇ ಉದಾಹರಣೆ) ಆದರೆ ಆತ್ಮಾಭಿಮಾನವುಳ್ಳ, ದೇಶಾಭಿಮಾನವುಳ್ಳ ನವಾಬರುಗಳೂ ಮಹಾರಾಜರುಗಳೂ ಬಹಳ ಕಡಿಮೆ. ದೊಡ್ಡ ಸಮುದ್ರದಲ್ಲಿ ಎಲ್ಲೋ ಒಂದು ಹನಿಯಂತೆ ಅಲ್ಲಲ್ಲಿ ಕಾಣುವರು. ಬ್ರಿಟಿಷ್ ಆಳರಸರು ಇಂತಹ ಆತ್ಮಾಭಿಮಾನವಿಲ್ಲದ ದೇಶದ್ರೋಹಿಗಳಾದ ನವಾಬರುಗಳನ್ನೂ ಮಹಾರಾಜರುಗಳನ್ನೂ ತಮ್ಮ ಕಡೆಗೆ ಎಳೆದುಕೊಂಡು ತಮ್ಮ ಕಾರ್ಯವನ್ನು ಸಾಧಿಸುವರು.

ಈ ರಾಜರುಗಳಿಗೂ, ಮಹಾರಾಜರುಗಳಿಗೂ ನವಾಬರುಗಳಿಗೂ ತಮ್ಮ ತಮ್ಮ ರಾಜ್ಯಗಳಲ್ಲಿಯೂ ಅಧಿಕಾರವಿರುವುದಿಲ್ಲ. ಸುಮ್ಮನೆ ಸೂತ್ರದ ಬೊಂಬೆಗಳಂತೆ ಹೆಸರಿಗೆ ಮಾತ್ರ ರಾಜರುಗಳು. ಬ್ರಿಟಿಷ್ ರೆಸಿಡೆಂಟರುಗಳೂ ಮತ್ತು ಪೊಲಿಟಿಕಲ್ ಏಜಂಟರುಗಳೂ ತಾವೇ ತಾವಾಗಿ ರಾಜರಾಗಿದ್ದರೆ ಹೇಗೋ ಹಾಗೆ ನಿಜವಾದ ರಾಜರನ್ನು ಮೂಲೆಗೆ ಕೂರಿಸಿ ರಾಜ್ಯಭಾರ ಮಾಡುವರು. ರೆಸಿಡೆಂಟರಿಗೆ ವಿರೋಧವಾಗಿ ಒಂದು ಹುಲ್ಲುಕಡ್ಡಿಯನ್ನು ಅಲ್ಲಾಡಿಸುವುದಕ್ಕೂ ಇವರಿಗೆ ಚೈತನ್ಯವಿರುವುದಿಲ್ಲ.

ಈ ಪರಿಸ್ಥಿತಿಯಲ್ಲಿ ಈ ರಾಜರುಗಳಿಗೆ ಉದಾತ್ತವಾದ ಭಾವನೆಯು ಎಲ್ಲಿಂದ ಬರಬೇಕು? ರಾಜ್ಯಭಾರವನ್ನು ಮಾಡುವುದಕ್ಕೆ ನಿಜವಾದ ಅಧಿಕಾರವಿರುವುದಿಲ್ಲ ಐಶ್ವರ್ಯವೇನೋ ಬೇಕಾದ ಹಾಗೆ ಇರುವುದು. ರೆಸಿಡೆಂಟರುಗಳಿಗೂ ಬೇಕಾದ ಹಾಗೆ ಕೊಟ್ಟು ತಾವು [illegible] ಮಾಡಿದರೆ ಕೇಳುವವರು ಯಾರು? ಈ ಮಧ್ಯೆ ದೇಶೀಯ ಸಂಸ್ಥಾನದ ಪ್ರಜೆಗಳಲ್ಲಿ ಯಾರಾದರೂ ಧೈರ್ಯವಾಗಿ ಮುಂದೆ ಬಂದು [illegible] ಅವರ ಮೇಲೆ ಬ್ರಹ್ಮಾಸ್ತ್ರಗಳು ಪ್ರಯೋಗಿಸಲ್ಪಡುವುವು. ಇದನ್ನು ಕಂಡೇ ಬ್ರಿಟಿಷ್ ಇಂಡಿಯಾದ ರಾಷ್ಟ್ರೀಯ ಮುಖಂಡರುಗಳು ಈ ರಾಜರುಗಳಿಂದ ಸ್ವರಾಜ್ಯದ ವಿಷಯಕ್ಕೆ ತಮಗೆ ಯಾವ ಸಹಾಯವೂ ಆಗುವುದಿಲ್ಲವೆಂದೂ ಇಂತಹವರುಗಳು ಸ್ವರಾಜ್ಯ ಶತ್ರುಗಳೆಂದೂ [illegible]

ವಿವಿಧ ವಿಷಯಗಳು

ಹುಲ್ಲಿನಿಂದ ಹತ್ತಿ

ಬ್ರಿಟಿಷ ಗಯಾನದಲ್ಲಿ (ದ. ಅಮೇರಿಕ) ಹತ್ತಿಯಂತಹ ಪದಾರ್ಥವನ್ನು ಕೊಡುವ ಒಂದು ಜಾತಿಯ ಹುಲ್ಲು ಬೆಳೆಯುವುದು. ಇದರಿಂದ ಹತ್ತಿಯಂತೆಯೇ ಬಟ್ಟೆಗಳನ್ನು ತಯಾರಿಸಬಹುದೆಂದು ಬ್ರಿಟಿಷ ಶೋಧಕರು ಸಿದ್ಧಮಾಡಿದ್ದಾರೆ. ಈ ಹುಲ್ಲು ಉಷ್ಣವಲಯದಲ್ಲಿ ಅಲ್ಲದೆ ಸಮಶೀತೋಷ್ಣ ವಲಯದಲ್ಲಿಯೂ [illegible]ವುದು. ಇದರ [illegible]ಗಳು ಇಂಡಿಯ[illegible] ಅಮೇರಿಕದ ಹತ್ತಿಯ [illegible] ಯವಿಲ್ಲದೆ ಸ್ವತಂ[illegible] ಹತ್ತಿಯನ್ನು [illegible]ಳ್ಳಬಹುದು.

ಸಂಪೂರ್ಣ ಸ್ವಾತಂತ್ರ್ಯ.

ಕಲ್ಕತ್ತಾ ಕಾಂಗ್ರೆಸ ಮಂಟಪದಲ್ಲಿ [illegible] ಸಾವಿರ ಮಂದಿ ಕೂಲಿಕಾರರು ಸೇರಿ ಸಭೆ ನಡೆಸಿ, ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂದು [illegible] ಮಾಡಿದರು. ಕೂಲಿಕಾರರ ಹಕ್ಕುಬಾಧ್ಯತೆಗಳು [illegible] ಮಾಡಲ್ಪಡಬೇಕೆಂದು ಸಾಧಿಸಿದರು. ಒಂದೆರಡು ಗಂಟೆಯ ಕಾಲ ಇವರ ಸಭೆಯು ನಡೆಯಿತು.

ಸ್ವರಾಜ್ಯ.

ಕೊಯಿಮತ್ತೂರಿನ ಜೋಯಿಸರಾದ ಶ್ರೀ [illegible]ಚಾರ್ಯರೆಂಬವರು ೧೯೩೧ನೆಯ ಇಸವಿಗೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುತ್ತದೆಂದು ಕಾಂಗ್ರೆಸ್ಸಿಗೆ ತಿಳಿಸಿದ್ದರು. ಇದು ಸರಿಯಲ್ಲ. ೧೯೩೧ರಲ್ಲಿ ಹಿಂದೀಯರೂ ಆಳರಸರ ಜಾತಿಯವರೂ ಸಮತ್ವದ ಹಕ್ಕುಗಳನ್ನು ಪಡೆಯುವರೆಂದೂ, ೧೯೪೭ನೆಯ ಇಸವಿಯಲ್ಲಿಯೇ ಹಿಂದೂಸ್ಥಾನವು ಸ್ವರಾಜ್ಯವನ್ನು ಪಡೆಯುವುದೆಂದೂ [illegible]ರುವರು.

ಶುದ್ಧಿ

ಕಲ್ಕತ್ತೆಯಲ್ಲಿ ಗಂಗಾತೀರದಲ್ಲಿ ಪಂಡಿತ ಮದನಮೋಹನ ಮಾಳವೀಯರವರು ಎಲ್ಲಾ ಜಾತಿಯವರನ್ನೊಳಗೊಂಡ ಸಭೆಯೊಂದಕ್ಕೆ ಶಾಸ್ತ್ರ ಮಂತ್ರಗಳನ್ನು ಉಪದೇಶಮಾಡಿ, ಸಭೆಗೆ ಬಂದಿದ್ದ ಅಸ್ಪೃಶ್ಯರನ್ನು ಪು[illegible]ನ್ನಾಗಿ ಮಾಡಿದರು. ಇವರು ಕಾಶಿಯಲ್ಲಿಯೂ ಹೀಗೆಯೇ ಅಸ್ಪೃಶ್ಯರನ್ನುದ್ಧಾರಮಾಡಿದರು.

Printed and published by P. R. Ramaiya. at Sri Rama Press, D Subbiah Road Mysore.

Regd. No. M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ [illegible]
ಚಂದಾ [illegible]

ಸಂಪುಟ ೧] ಗುರುವಾರ ೧೦ ಜನವರಿ ೧೯೩೯ [ಸಂಚಿಕೆ [illegible]

TAI NADU
10—1—1929

ಅನ್ಯಾಯಕ್ಕೆ ಪ್ರತಿಭಟಿಸಿ

ನಮ್ಮ ಸಂಸ್ಥಾನದಲ್ಲಿ ಪ್ರಜಾಸ್ವಾತಂತ್ರ್ಯವು ಅ[illegible] ... ಪಾರ್ಲಿಮೆಂಟಿಗೆ ಈಗ ಇ[illegible] ... ಇಂಗ್ಲೆಂ[illegible] ... 18 ನೇ ಶತಮಾನದ ಅಂತ್ಯ[illegible] ... [illegible]

ಹಿಂದೂಗಳ ಮೇಲಿನ ಮೊಖದ್ದಮೆಗಳು.

೧

ಸರ್ಕಾರದವರು ಹಿಂದುಗಳ ಮೇಲೆ ಹಾಕಿದ್ದ 9 ಮೊಖದ್ದಮೆಗಳನ್ನು ವಾಪ್ಸು ತೆಗೆದುಕೊಂಡಿರುವರ ಷ್ಟೆ. ಈ ಸಂಬಂಧವಾಗಿ ಅವರು ತೋರಿಸಿರುವ ಕಾರಣಗಳು ಅಷ್ಟು ತೃಪ್ತಿಕರವಾಗಿಲ್ಲ. ಹಿಂದುಗಳು ನಿರಪರಾಧಿಗಳು. ಅದಕ್ಕೋಸ್ಕರವಾಗಿ ನಾವು ಮೊಖದ್ದಮೆಗಳನ್ನು ವಾಪ್ಸು ತೆಗೆದುಕೊಂಡಿದ್ದೇವೆಯೆಂದು ಹೇಳಿದ್ದರೆ ಅದು ಸತ್ಯವಾಗುತ್ತಿತ್ತು, ಆದರೆ ಅವರು ಆ ಕಾರಣವನ್ನು ತೋರಿಸಲಿಲ್ಲ. ಬೆಂಗಳೂರಿನಲ್ಲಿ ಶಾಂತಿಸ್ಥಾಪನೆ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಈ ಮೊಖದ್ದಮೆಗಳನ್ನು ವಾಪ್ಸು ತೆಗೆದುಕೊಂಡಿದ್ದೇವೆ ಎಂದು ಹೇಳಿರುವರು. ಇದು ಅನುಮಾನಕ್ಕೆ ಅವಕಾಶ. ವಿಶ್ವೇಶ್ವರಯ್ಯ ಕಮಿಟಿಯವರು ಹಿಂದುಗಳು ನಿರಪರಾಧಿಗಳೆಂದು ತೀರ್ಮಾನ ಮಾಡಿದರು. ಅಬ್ಬಾಸ್ ಖಾನರ ಮನೆಯಿಂದಲೂ ಮತ್ತು ಸುತ್ತಮುತ್ತಲಿನಿಂದಲೂ ಗುಂಡು ಹೊಡೆದು, ಈಟಿ ಮೊದಲಾದವುಗಳಿಂದ ನಿರಾಯುಧರಾದ ಹಿಂದುಗಳನ್ನು ಹೊಡೆದ ಮಹಮ್ಮದೀಯರೇ ಅಪರಾಧಿಗಳೆಂದು ತೀರ್ಮಾನ ಮಾಡಿರುವರು. ಈ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಇನ್ನೂ ಅನೇಕ ಅಪರಾಧಿಗಳು ತಪ್ಪಿಸಿಕೊಂಡಿರುವರು. ಅವರಿಗೂ ಶಿಕ್ಷೆಯಾಗಬೇಕು. ಅಬ್ಬಾಸ್ ಖಾನರ ಮೇಲೆಯೂ ಪ್ರಬಲವಾದ ಅಪಾದನೆಗಳಿರುವವು. ಅವರಿಗೂ ವಿಚಾರಣೆಯಾಗಿ ಶಿಕ್ಷೆಯಾಗಬೇಕು. ಶಾಂತಿಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಇವರನ್ನೆಲ್ಲಾ ಬಿಟ್ಟು ಬಿಟ್ಟರೆ ಶಾಂತಿಗೆ ಬದಲಾಗಿ ದೇಶದಲ್ಲಿ ಅಶಾಂತಿಯು ಪ್ರಬಲವಾಗುವುದು. ದುಷ್ಟನಿಗ್ರಹವೇ ಶಾಂತಿಗೆ ಮೂಲಸಾಧನ. ದುಷ್ಟನಿಗ್ರಹ ಮಾಡದೆ ಶಾಂತಿಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಹೊರಟರೆ ಅವರ ಪ್ರಯತ್ನವೆಲ್ಲಾ ನಿಷ್ಫಲವಾಗುವುದು. ಮುಖ್ಯವಾಗಿ ಹಿಂದೂ ಮಹಮ್ಮದೀಯ ಪ್ರಶ್ನೆಯೇ ಅಲ್ಲ. ದುಷ್ಟರ ಮತ್ತು ಸರಕಾರದವರ ಪ್ರಶ್ನೆ. ಸರ್ಕಾರದವರು ನಿರ್ಭಯವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ, ನಿಷ್ಪಕ್ಷಪಾತವಾಗಿಯೂ ದುಷ್ಟರನ್ನು ದಂಡಿಸಬೇಕು.

ರಾ| ಸೋಮಶೇಖರರಾಯರ ಅಭಿಪ್ರಾಯ.

ವಿಶ್ವೇಶ್ವರಯ್ಯ ಕಮಿಟಿ ವರದಿಯು ಇನ್ನೂ ಸರಕಾರಕ್ಕೆ ಬುದ್ಧಿಯನ್ನು ಕಲಿಸಿಲ್ಲ. ಶಾಂತಿಪ್ರಯತ್ನವನ್ನು ಮಾಡುತ್ತಿದ್ದಾರಂತೆ! ಬಹುಶಃ ಇದೇ ಶಾಂತಿ ಪ್ರಯತ್ನದ ಪ್ರಾಮಾಣಿಕತೆಯ ಕುರುಹು. ಕೆಲವು ಅಧಿಕಾರಿಗಳು ತಮ್ಮ ಅಪರಾಧಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ಧೂಮ ಆಕಾಶಗಳನ್ನು ಒಂದು ಮಾಡುತ್ತಿರುವರು. ಇವರ ಪ್ರಯತ್ನಗಳು ಎಂದಿಗೂ ಸಾರ್ಥಕವಾಗುವುದಿಲ್ಲ.

ದು ಅನ್ಯಾಯವಾದ ಮೇಲೆ ಇನ್ನೊಂದು ಅನ್ಯಾಯ ನಡೆಯುತ್ತಾ ಹೋಗುತ್ತಿರುವವು. ಅನ್ಯಾಯವನ್ನು ಸಹಿಸುವುದಿಲ್ಲಾ ಎಂದು ನಾವು ಪ್ರತಿಭಟಿಸಿದರೇನೇ ಅನ್ಯಾಯಗಳು ಕಡಿಮೆಯಾಗುವವು. ಈಗ ಬೇಕಾಗಿರುವುದು ಪ್ರತಿಭಟನೆ. ಈ ಪ್ರತಿಭಟನೆಗಾಗಿ ನಮ್ಮ ಸಂಸ್ಥಾನದಲ್ಲಿ ಸಿದ್ಧತೆ ಇರುವುದೇನೋ ನೋಡೋಣ.

ಅಬ್ಬಾಸ್ ಖಾನರ ಮನೆಗೆ ಎಳೆಯಲ್ಪಟ್ಟ ನಾಲ್ಕು ಹುಡುಗರ ವಿಚಾರ.

ವಿಶ್ವೇಶ್ವರಯ್ಯ ಕಮಿಟಿಯ ವರದಿಯಲ್ಲಿ ಮೇ[illegible] ವಿಷಯವಾಗಿ ನಿಶ್ಚಿತವಾದ ಯಾವ ಅಭಿಪ್ರಾಯವೂ [illegible]ದಿರುವುದಿಲ್ಲ. ಆದರೂ ಜನಗಳಲ್ಲಿ ಈ ವಿಷಯವಾಗಿ ಅಪ[illegible]ಬಿಕೆಯು ಜಾಸ್ತಿಯಾಗಿದೆ ಎಂಬುದನ್ನು ಕಮಿಟಿಯವ[illegible] ಸ್ಪಷ್ಟಪಡಿಸಿರುವರು. ಈ ಅಪನಂಬಿಕೆಯು ಹೋಗ[illegible]ಕ್ಕಾಗಿ ಈ ವಿಷಯವನ್ನು ಕುರಿತು ಸ್ವತಂತ್ರವಾದ [illegible] ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಯಿಸಬೇ[illegible] [illegible]ಸಿದರು. ಇದು ಸಾಧುವಾದ ಸಲಹೆ. [illegible] ಅಪನಂಬಿಕೆಯು ಹೋಗದ ಹೊರತು ಸರ್ಕಾರದ[illegible] [illegible]ಶ್ವಾಸಮಾಡುವುದಿಲ್ಲ. ಸರ್ಕಾರದಲ್ಲಿ ವಿಶ್ವಾಸವು [illegible]ದಹೊರತು ದೇಶದಲ್ಲಿ ಶಾಂತಿಯಿಲ್ಲ. ಆದುದರಿಂದ [illegible] ಕಾರದವರು ಈ ವಿಷಯವಾಗಿ ಕೂಡಲೆ ತನಿಖೆ[illegible] ನಡೆಯಿಸಬೇಕೆಂದು ಕೋರುತ್ತೇವೆ.

ಸರ್ಕಾರದವರ ಮೌನ.

ಅಬ್ಬಾಸ್ ಖಾನರ ಮೇಲೆ ಪೋಲೀಸ್ ಇಲಾ[illegible] ವರಾಗಲಿ ಮ್ಯಾಜಿಸ್ಟ್ರೇಟರಾಗಲಿ ಕಾರ್ಯಭಾಗ[illegible] ನಡೆಯಿಸದ ವಿಷಯದಲ್ಲಿ ಕಮಿಟಿಯವರು ತಮ್ಮ [illegible] ಸಮಾಧಾನವನ್ನು ಸೂಚಿಸಿದ್ದಾರೆ. ಸರ್ಕಾರದವರು [illegible]ಗೇನಾದರೂ ಅಬ್ಬಾಸ್ ಖಾನರಮೇಲೆ ಕಾರ್ಯ[illegible]ವನ್ನು ನಡೆಯಿಸಕೂಡದೆಂದು ಸಲಹೆಯನ್ನು ಸರ್ಕಾರದ[illegible]ವರು ಕೊಟ್ಟರೆ? ಎಂಬ ವಿಷಯವನ್ನು ವಿಚಾ[illegible]ರಿಸುವಾತು ಯಾವುದೂ ಇಲ್ಲ ಎಂದು ಕಮಿ[illegible]ವರು ಹೇಳಿರುವರು. ಆದರೂ ಸರ್ಕಾರದವರು [illegible]ಸ್ ಇಲಾಖೆಯವರನ್ನೂ ಮ್ಯಾಜಿಸ್ಟ್ರೇಟರನ್ನೂ ಅಬ್ಬಾಸ್ ಖಾನರ ಮೇಲೆ ಏತಕ್ಕೆ ಕಾರ್ಯಭಾ[illegible] ನಡೆಸಲಿಲ್ಲ ಎಂದು ಇದುವರೆಗೂ ಕೇಳಿಲ್ಲ. ಇದ[illegible] ಮಾನಕ್ಕೆ ಕಾರಣ. ಸರ್ಕಾರದವರು ಮಾಡಿರು[illegible] ಇದೊಂದು ದೊಡ್ಡ ಕರ್ತವ್ಯಲೋಪ. ಇದ[illegible]ದ್ದೇಶ ಪೂರ್ವಕವಾಗಿ ಮಾಡಿದರೋ ಅಥವಾ [illegible] ವಿರಲಿಲ್ಲವೋ ಎಂಬುದನ್ನು ನಿರ್ವಿವಾದವಾಗಿ ಹೇ[illegible]ಕ್ಕಾಗುವುದಿಲ್ಲ. ಜುಲೈ 30 ನೇ ತಾರೀಖಿ[illegible] [illegible] ರಕ್ಷಣೆ ಮಾಡಬೇಕೆಂದು ಫೋನ್ ಮಾಡಿದ [illegible]ಯೂ ದಿವಾನರ ಆಫೀಸಿನ ಸೂಪರಿಂಟೆಂಡೆಂ[illegible]ದ ಪಲನಿಸಾಮಿಯವರು ಮಿಲಿಟರಿಯನ್ನು [illegible] ಖಾನರ ಮನೆಯ ಕಡೆಗೆ ಹೋಗಬೇಕೆಂದು [illegible] ಕತೆಯೂ ಮೂರನೆಯ ದಿವಸ ಗುಂಡು ಹೊ[illegible]ಜವೆಂದು ಊರಲ್ಲೆಲ್ಲರಿಗೂ ಗೊತ್ತಿದ್ದರೂ ಅಬ್ಬಾ[illegible]ಸರ ಮಾತಿನಂತೆ ಸರ್ಕಾರದವರು ಗುಂಡು [illegible] ಸುಳ್ಳೆಂದು ಪ್ರಕಟನೆಯನ್ನು ಹೊರಡಿಸಿದುದ[illegible]ಸ್ ಖಾನರು ಕೋರ್ಟಿನಲ್ಲಿ ದಿವಾನರನ್ನೂ [illegible] ನ್ನೂ ತಮ್ಮ ಜೊತೆಗೆ ಸೇರಿಸಿಕೊಂಡುದು[illegible] ಅನುಮಾನವನ್ನು ದೃಢಪಡಿಸುತ್ತವೆ. ಈ [illegible] ರ್ಕಾರದವರು ತಮ್ಮ ಮೇಲೆ ಬಂದಿರುವ [illegible]ನ್ನು ಯಾವ ರೀತಿ ಕಳೆದು[illegible]

ತಾಯಿನಾಡು.

10—1—1929.

ಬೆಂಗಳೂರು ಮಹಾ ಸಭೆ.

ಬೆಂಗಳೂರು ನಗರ 7 ನೇ ತಾ|| ಜನವರಿ ಮೈಸೂರು ಪಟ್ಟಣದಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ಹೊರಡುತ್ತಿದ್ದ ಮೈಸೂರು ಪೇಟ್ರಿಯಟ್ ಸಾಧ್ವಿ, ಸಂಪದಭ್ಯುದಯ ಎಂಬ ಮೂರು ಪತ್ರಿಕೆಗಳನ್ನು ಸರ್ಕಾರದವರು ನಿಲ್ಲಿಸಿದುದಕ್ಕಾಗಿ ಬೆಂಗಳೂರು ನಗರದ ಮಹಾಜನರ ಅಸಮಧಾನವನ್ನು ಸೂಚಿಸುವುದಕ್ಕಾಗಿ ಈ ದಿನ ಸಾಯಂಕಾಲ ಗಾಂಧಿ ಮೈದಾನದಲ್ಲಿ ಶ್ರೀ|| ಜಿ. ಎಲ್. ಬೈಯಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆಸಲ್ಪಟ್ಟಿತು. ಅಧ್ಯಕ್ಷರು ಸರ್ಕಾರದವರು ಈ ರೀತಿ ಏಕಾಏಕಿ ಪತ್ರಿಕೆಗಳನ್ನು ನಿಲ್ಲಿಸಿದುದು ಅನ್ಯಾಯವೆಂದೂ ಅದಕ್ಕಾಗಿ ಅವರ ಮೇಲೆ ಧರ್ಮಯುದ್ಧವನ್ನು ಮಾಡಬೇಕೆಂದೂ ಒಂದು ಭಾಷಣ ಮಾಡಿದರು. ದಂಡಿನ ಅಡ್ವೋಕೇಟರಾದ ಮಿ|| ಎಂ. ಪಸೀಪರವರು ಪತ್ರಿಕೆಗಳನ್ನು ನಿಲ್ಲಿಸಬೇಕೆಂದು ಸರ್ಕಾರದವರ ಹುಕುಮನ್ನು ಖಂಡಿಸಿ ಅವರು ತಮ್ಮ ಅನ್ಯಾಯವಾದ ಆ ಹುಕುಮನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಈ ಹುಕುಮನ್ನು ವಾಪಸು ತೆಗೆದುಕೊಳ್ಳುವಂತೆ ಆಳುವ ಮಹಾಸ್ವಾಮಿಯವರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ಒಂದು ಠರಾವನ್ನು ಸೂಚಿಸಿದರು. ಶ್ರೀ|| ಹೊಸಹಳ್ಳಿ, ಕೆ. ವೀರಣ್ಣಗೌಡರೂ ಅಡ್ವೋಕೇಟ್ ಮಿ|| ಎಚ್. ಶ್ರೀನಿವಾಸ ಮೂರ್ತಿಯವರೂ ಅನುಮೋದಿಸಿದರು. ಅಡ್ವೋಕೇಟ್, ಶ್ರೀ|| ಗುರುವಾರೆಡ್ಡಿಯವರು. ಶ್ರೀ|| ಶ್ರೀನಿವಾಸಮೂರ್ತಿಯವರು ಹೇಳಿದುದನ್ನೇ ಪುಷ್ಟೀಕರಿಸಿ ಅಭಿಪ್ರಾಯದಂತೆ ನಡೆದುಕೊಂಡು ಅವುಗಳನ್ನು ಸಮಾಧಾನ ಪಡಿಸದಿದ್ದರೆ ಸರ್ಕಾರಕ್ಕೆ ಕಡೆಗಾಲ ಬಂತೆಂಬುದು ನಾವು ಅವರೊಡನೆ ಹೇಳಬೇಕಾಗುತ್ತದೆ ಎಂದು ಭಾಷಣ ಮಾಡಿದರು.

ದಂಡಿನ ಮುನಿಸಿಪಲ್ ಕೌನ್ಸಿಲರ್ ಮಿ|| ಜರ್ನಿಯರು (ಇವರು ಆಂಗ್ಲೇಯರು) ವರು, ಸರ್ಕಾರವೆಂದರೆ ನ್ಯಾಯಕ್ಕೆ ಪಾತ್ರಸ್ಥಾನವಾಗಿರಬೇಕು. ಸರ್ಕಾರದ ನಡತೆಯು ಅನುಮಾನಕ್ಕೆ ಆಸ್ಪದವಿಲ್ಲದಂತಿರಬೇಕು. ದಂಡಿನ ಶ್ರೀ|| ರಾಜಗೋಪಾಲ ಮೊದಲಿಯಾರರು ಕಳೆದ ೩೦ ನೇ ತಾರೀಖಿನವರೆಗೆ ಮೈಸೂರಂತಹ ರಾಜ್ಯವೂ ಮೈಸೂರು ಸರ್ಕಾರದಂತಹ ಸರ್ಕಾರವೂ ಇರಲಿಲ್ಲ. ಜುಲೈ 30 ನೇ ತಾರೀಖಿನಿಂದೀಚೆಗೆ ಈ ಒಳ್ಳೆ ಹೆಸರುಗಳಿಗೆಲ್ಲ ಗ್ರಹಚಾರ ಬಂದಿತು. ಸರ್ಕಾರದವರ ನಡತೆಯು ಎಂದೆಂದಿಗೂ ನ್ಯಾಯವಾಗಿಲ್ಲ. ಮುಂದೆ ಕಂಟೋನ್ಮೆಂಟನ್ನು ಮೈಸೂರು ಸರ್ಕಾರಕ್ಕೆ ಸೇರಿಸಿಬಿಡುವರೆಂದು ಕೇಳಿ ನಮಗೆಲ್ಲಾ ಸಂತೋಷವಾಗಿತ್ತು. ಈಗಿನ ಸರ್ಕಾರದ ನಡತೆಯನ್ನು ನೋಡಿದರೆ ನಾವು ಇಂಡಿಯಾ ಸರ್ಕಾರದ ಅಧೀನದಲ್ಲಿರುವುದೇ ಸುಖವೆಂದು ಕಾಣುತ್ತದೆ ಎಂದು ಭಾಷಣ ಮಾಡಿದರು.

ಅಧ್ಯಕ್ಷರು ಠರಾವನ್ನು ಸಭಿಕರ ಓಟಿಗೆ ಇಡಲು ಎಲ್ಲರೂ ಏಕವಾಕ್ಯತೆಯಿಂದ ಅಂಗೀಕರಿಸಿದರು, ಅಧ್ಯಕ್ಷರಿಗೆ ವಂದನೆಗಳು ಸಮರ್ಪಿಸಲ್ಪಟ್ಟ ಮೇಲೆ ೭ ಗಂಟೆಗೆ ಸಭೆಯು [illegible] ... [illegible]

ವಿವಿಧ ವಿಷಯಗಳು

ಬೆಂಗಳೂರು ಟೈಂಸ್

ಬೆಂಗಳೂರು ಟೈಂಸ್ ಪತ್ರಿಕೆಯು ಬೆಂಗಳೂರು ಸುಲ್ತಾನ್ ಪೇಟೆ ಸ್ಕೂಲಿನ ಎದರುಗಡೆ ಇರುವ ಸೈಕಲ್ ಷಾಪಿನ ಮಹಡಿಯ ಮೇಲಿನ ಒಂದು ರೂಮಿನಿಂದ ಹೊರಡುತ್ತದೆಂದೂ ಅದೇ ಮಹಡಿಯಿಂದಲೇ ಜುಲೈ 30ನೇ ತಾ|| ರಾತ್ರಿ ಗುಂಡುಗಳು ಹೊಡೆಯಲ್ಪಟ್ಟವೆಂದೂ ಬೆಂಗಳೂರು ಟೈಂಸ್ ಪತ್ರಿಕೆಯು ಆಗಲೇ ಮಾತಿನ ಗುಂಡುಗಳನ್ನು ಹೊಡೆಯುತ್ತಿರುದವೆಂದೂ ಜನರು ಆಡಿಕೊಳ್ಳಲಾರಂಭಿಸಿರುತ್ತಾರೆ.

ರಾಜದ್ರೋಹ.

ಕಲ್ಕತ್ತಾದ ಫಾರ್ವರ್ಡ್ ಪತ್ರಿಕಾಕರ್ತರ ಮೇಲೆ ಆವರಿಗೆ ರಾಜದ್ರೋಹದ ಅಪರಾಧವು ಸಾಬೀತಾಗಿ 6 ತಿಂಗಳ ಸಾದಾ ಸಜಾ ವಿಧಿಸಲ್ಪಟ್ಟಿತು.

ಪೋಲೀಸ್ ಐ. ಜಿ.

ಮದರಾಸ್ ಪೋಲೀಸ್ ಕಮಿಷನರಾದ ಮಿ|| ಕಸಿಂಗ್‌ಹ್ಯಾಂ ರವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಿಸಲ್ಪಡುವರೆಂದೂ ಮ|| ಹಿರಿಯಣ್ಣಯ್ಯನವರು ರೆವಿನ್ಯೂ ಕಮಿಷನರಾಗಿ ನೇಮಿಸಲ್ಪಡುವರೆಂದೂ ಮಿ|| ಡಿಸ್‌ಜಾನವರು ಎಕ್ಸಿಕ್ಯುಟೀವ್ ಕೌನ್ಸಿಲರಾಗಿ ನೇಮಿಸಲ್ಪಡುವರೆಂದೂ ಮ|| ಎಂ. ಎನ್. ಕೃಷ್ಣರಾಯರವರು ರಜೆಯ ಮೇಲೆ ಹೋಗುವರೆಂದೂ ಬೆಂಗಳೂರಿನ ಪತ್ರಿಕೆಗಳೆಲ್ಲಾ ಬೊಬ್ಬೆಯಿಡುತ್ತಿರುವುವು.

ವಿಶ್ವೇಶ್ವರಯ್ಯ ಕಮಿಟಿ ವರದಿ.

ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಪೈಕಿ 38 ಪ್ರತಿಗಳು ಪ್ರಿಂಟಾದವೆಂದೂ ಎರಡು ಕಾಪಿಗಳು ಮಾಯವಾದವೆಂದೂ ಬೆಂಗಳೂರು ಟೈಂಸ್ ಪತ್ರಿಕೆಯು ತಿಳಿಸುತ್ತದೆ.

ಮಾನನಷ್ಟದ ಮೊಕದ್ದಮೆ.

ಮ|| ತಗಡೂರು ರಾಮಚಂದ್ರರಾಯರು ವೃತ್ತಾಂತ ಪತ್ರಿಕೆಯ ಮಾನನಷ್ಟದ ಮೊಕದ್ದಮೆಯಲ್ಲಿ ಜಸ್ಟಿಸ್ ಆಫ್ ದಿ ಪೀಸ್ ಕೋರ್ಟಿನವರು ಅಪರಾಧಿಯ ಮೇಲೆ ಛಾರ್ಜು ಮಾಡದೆ ಅನ್ಯಾಯ ಮಾಡಿರುತ್ತಾರೆಂದು ಮೈಸೂರು ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಮಾಡಿರುತ್ತಾರೆ. ಆ ವಿಷಯ ಚರ್ಚಿಸಲು ಈ ತಿಂಗಳು 28ನೇ ತಾರೀಖಿನ ದಿನ ಹೀರಂಗು ಇಟ್ಟಿರುತ್ತಾರೆ.

ಚುಂಬನ ನಿರ್ಬಂಧ.

ಅಮೇರಿಕೆಯಲ್ಲಿ 10,00,000 ಕ್ಕೆ ಮೇಲ್ಪಟ್ಟ ಜನರು ಇಂಫ್ಲೂಯಂಜಾ ರೋಗಪೀಡಿತರಾಗಿರುವರಲ್ಲದೆ ಅದರ ಸೋಂಕು ಇಂಗ್ಲೆಂಡಿಗೂ ಯೂರೋಪಿಗೂ ಹರಡುತ್ತಿರುವುದು. ವಿಯನ್ನಾದ ಆರೋಗ್ಯ ಶಾಖೆಯವರು ಜನರಾರೂ ಪರಸ್ಪರ ಮುತ್ತಿಡಕೂಡದೆಂದು ಕಟ್ಟಪ್ಪಣೆ ಮಾಡಿರುತ್ತಾರೆ!

ಕಾಂಗ್ರೆಸ್ ಪ್ರತಿನಿಧಿ... [illegible]

ವಂದೇ ಮಾತರಂ ಸೈಮನ್ನರೇ ಹಿಂತಿರುಗಿ ಎಂದು ಬರೆದು ಕರಪತ್ರಗಳನ್ನು ಮುದ್ರಿಸಿ ಕಾಂಗ್ರೆಸ್ಸಿನ ಕಾಲದಲ್ಲಿ ಹಂಚಿದುದಕ್ಕೋಸ್ಕರ ರಾಜದ್ರೋಹವನ್ನು ಸಂಭವಿಸುವಂತೆ ಉಂಟುಮಾಡಿದನೆಂಬ ಅಪರಾಧದ ಮೇಲೆ ಕಲ್ಕತ್ತದ ಗುಪ್ತ ಪೋಲೀಸಿನವರು ಅವನನ್ನು ಸೆರೆಹಿಡಿದು ಕರಪತ್ರಗಳೆಲ್ಲವನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

ಬೆಲ್ಜಿಯಮಿಗೆ ಸೇರಿದ ಟರ್ಕ್ವಾಂಟಿಗೆ ಉತ್ತರದಲ್ಲಿರುವ ಪ್ರದೇಶದಲ್ಲಿ ಜಲಪ್ರಳಯವಾಗಿದೆ. ಭೀಕರವಾದ ಗಾಳಿಯು ಬೀಸುತ್ತಿದ್ದುದರಿಂದ ಒಂದು ನದಿಯಲ್ಲಿ ಪ್ರವಾಹವು ಉಕ್ಕಿ 7000 ಎಕರೆ ಭೂಮಿಯ ಮೇಲೆ ಹರಿದು 10000 ಜನರಿಗೆ ಬಹಳ ನಷ್ಟ ಸಂಭವಿಸುತ್ತಿದೆ.

ಅಮೇರಿಕಾ ದೇಶದಲ್ಲಿ ಚುಟ್ಟ ತಯಾರುಮಾಡುವ ಯಂತ್ರಗಳು ಸದರಿ ಚುಟ್ಟಗಳನ್ನು ತಾವಾಗಿಯೇ ಮಾರುತ್ತವೆಯಂತೆ. ಕೊಂಡುಕೊಳ್ಳುವವರು ನಾಣ್ಯವನ್ನು ಅದರೊಳಕ್ಕೆ ಹಾಕಿದ ಕೂಡಲೆ ಒಂದು ಚುಟ್ಟವನ್ನು ಈಚೆಗೆ ಕಳುಹಿಸಿ, ನಿಮಗೆ ವಂದನೆ ಎಂದು ಹೇಳುವುವಂತೆ.

ರಿಚರ್ಡ್ ಲೀಂಸ್ ಎಂಬ 17 ವರ್ಷದ ಬಾಲಕನು ಸ್ವತಃ ವಿಮಾನವನ್ನು ನಡೆಸಿಕೊಂಡು ಸ್ಯಾನ್ ಫ್ರಾನ್ಸಿಸ್‌ಕೊದಿಂದ ಸುಮಾರು 3000 ಮೈಲಿಗಳ ದೂರದಲ್ಲಿರುವ ನ್ಯೂಯಾರ್ಕ್ ಪಟ್ಟಣಕ್ಕೆ ಕ್ಷೇಮವಾಗಿ ಹಾರಿ ತಲಪಿರುತ್ತಾನೆ. ಇದಕ್ಕಾಗಿ ಈತನಿಗೆ 3000 ರೂಪಾಯಿಗಳ ಬಹುಮಾನ ದೊರೆತಿದೆ.

ಬರ್ಮುಡಾ ದ್ವೀಪದಲ್ಲಿ ಪ್ರಾಣಿವೈಚಿತ್ರ್ಯಗಳಿರುವುವೆ. ಹಂದಿಯಂತೆ ಗುರುಗುಟ್ಟುವುದೊಂದು ಮೀನು, ಆಲಾಕಾರದಲ್ಲಿರುವ [illegible], ಚಿಕ್ಕಿಸುತ್ತಿರುವ ಮಿಯಾವ್ ಎನ್ನುವ ಮೀನು, ಗುಟುರು ಹಾಕುವ ದನದಜಾತಿಯ ಮೀನು ಇನ್ನೂ ನಾನಾ ವಿಧವಾದ ವಿಚಿತ್ರ ಧ್ವನಿಮಾಡುವ ಮೀನುಗಳು ಈ ಬರ್ಮುಡಾ ದ್ವೀಪದಲ್ಲಿ ಯಥೇಚ್ಛವಾಗಿರುವುವಂತೆ.

ಕಾಬೂಲಿನಲ್ಲಿ ಬಡ ನೌಕರರಾದ ತಮ್ಮ ನೌಕರರಿಗೆ ಆಫ್‌ಘಾನ್ ರಾಜರು ಎರಡು ತಿಂಗಳ ಸಂಬಳವನ್ನು ಬಹುಮಾನವಾಗಿ ಕೊಟ್ಟಿರುವರು. ನಾಂಗಹಾರ್ ಎಂಬ ಗ್ರಾಮದಲ್ಲಿ ದಂಗೆಯಿಂದ ಬಹಳ ನಷ್ಟಹೊಂದಿದ ಬಡಪ್ರಜೆಗಳಿಗೆ ತಕ್ಕ ಪರಿಹಾರದ್ರವ್ಯವನ್ನು ಕೊಟ್ಟಿರುವರು. ಕಾಬೂಲಿನಲ್ಲಿ ಶಾಂತಿಯು ಹುಟ್ಟಿಹೋಗಿರುವುದರಿಂದ ದಂಗೆಕೋರರ ಜೀವನವು ಚಕ್ಕೆ [illegible] [illegible]

Reserved for

M. S. SIDDAPPA & BROS.

1929 ನೆ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದ.. ಷೀಟ್ ಕ್ಯಾಲೆಂಡರ್ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರು [illegible] ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



ಏಕೆ ಗುಪ್ತ ವ್ಯಾಧಿಗಳಿಂದ ನರಳುವಿರಿ?

ತಕ್ಷಣ ಗುಣಪಡಿಸುವ **ಈ ರತನ್ ಮಿಶ್ರಿ ಹಲ್ವಾ** ವನ್ನು ಸೇವಿಸಿ

ಗುಣ:— ವೀರ್ಯವು ಮೂತ್ರದಲ್ಲಿ ಹೋಗುವಿಕೆ ಮತ್ತು ನೀರಾಗಿರುವಿಕೆ, ಆಗಾಗ್ಯೆ ಸ್ವಪ್ನಸ್ಖಲನವಾಗುವಿಕೆ, ಸ್ವೇಚ್ಛೆಯಿಂದಲೂ, ಅನೇಕ ದುರಭ್ಯಾಸಗಳಿಂದಲೂ, ನರಗಳು ದುರ್ಬಲವಾಗಿ ಶಕ್ತಿ ಇಲ್ಲದೆ, ಶೀಘ್ರಸ್ಖಲನೆಯಾಗುವಿಕೆ, ಪ್ರಮೇಹ ವ್ರಣ ಮತ್ತು ಮೇಹವ್ಯಾಧಿಯು ಶರೀರದಲ್ಲಿ ವ್ಯಾಪಿಸಿ ನೇತ್ರರೋಗ, ಚರ್ಮಗತವ್ಯಾಧಿ, ಕೈಕಾಲುನೋವು, ನಿಶ್ಶಕ್ತನಾಗುವಿಕೆ, ಮೇಹಪರಿ, ಶರೀರವು ನಶಿಸಿ ಕಾಂತಿ ಹೀನವಾಗುವಿಕೆ ಇವೇ ಮುಂತಾದ ವ್ಯಾಧಿಗಳನ್ನೆಲ್ಲಾ ಹೋಗಲಾಡಿಸಿ, ಧಾತುವೃದ್ಧಿಯನ್ನುಂಟುಮಾಡಿ ಐಹಿಕ ಸುಖವನ್ನೂ, ಶರೀರಪುಷ್ಟಿಯನ್ನೂ ಕಲ್ಪಿಸುವುದು.

ಹೆಂಗಸರು ಸೇವಿಸಿದಲ್ಲಿ ಗರ್ಭಕಾರಕ ಸಂಬಂಧವಾದ ವ್ಯಾಧಿಗಳೆಲ್ಲವೂ ಮಾಯವಾಗಿ ದೃಢಕಾಯರಾಗುವರು.

ಕ್ರಯ:—1 ಪೌಂಡ್ ಟಿನ್ 1 ಕ್ಕೆ 5—0—0. ಅರ್ಧ ಪೌಂಡ್ ಟಿನ್ 1 ಕ್ಕೆ 2—8—0.

ಮೈಸೂರು ಸಿಟಿ ಏಜೆಂಟರು.—ದಿ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆಂಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರತನ್ ಮಿಶ್ರಿ ಡಿಪೋ, ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಿಗಳು.



ಬಂದ ಬಳಿಕ ಚಿಕಿತ್ಸೆ ಮಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮೃತದಂತಿರುವ ಕಸ್ತೂರಿ ಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧—೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡಕನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಶೀತವಾತ ಜ್ವರ, ಚಳಿಜ್ವರ ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಲಬದ್ಧ ಪ್ಲೇಗು ಜ್ವರ ಇನ್‌ಫ್ಲೂಯಂಜ, ರಕ್ತಹೀನತೆ ದುರ್ಬಲ ಇವುಗಳನ್ನು, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲ ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂಧುಗಳು ಹಿಡಿತ ಮಲಬದ್ಧ ಹಸಿವಿಲ್ಲದಿರುವಿಕೆ, ಬಲಹೀನತೆ ಇವಲ್ಲದೆ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ [illegible]ವನ್ನು ಮಾಡಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 0—4—0 ಮೇರೆ [illegible] ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ [illegible], 8 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 25 ಕೆ [illegible]

ಭಿಷಗ್ರತ್ನ

ಬ್ರಾಂಚಾಫೀಸು	ಪಾಳ್ಯದ ವೆಂಕಟಾಚಲ ಪಂಡಿತರ
ಶ್ರೀ ಸೀತಾರಾಘವ ವೈದ್ಯಶಾಲಾ,	ಶ್ರೀ ಸೀತಾರಾಘವ ವೈದ್ಯಶಾಲಾ
ಚಿಕ್ಕಪೇಟೆ, ಬೆಂಗಳೂರು	ಹೆಡ್ಡಾಫೀಸು ಮೈಸೂರು



ಭಂಗಾರದ ಕೈಬಳೆಗಳೂ ಚೈನ್ ವಗೈರೆ ಆಭರಣಗಳೂ ಚೊಕ್ಕ [illegible] ಸಾಮಾನುಗಳೂ ನಮ್ಮಲ್ಲಿ [illegible] ಸಿಗುತ್ತವೆ.

ಮಜೂರಿ ಇತರ ಕಡೆಗ[illegible] ಸುಲಭ. ಕೆಲಸ ಇತರ ಕಡೆಗ[illegible] ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ಸ[illegible]

ಯಸ್ ನರಸಿಂಹ ಅಯ್ಯರ್	ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪ[illegible]
ಕೆ. ನಾರಾಯಣಪ್ಪ	ನಗರ್ತಪೇಟೆ, ಬೆಂಗಳೂ[illegible]

TAINADU

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore.

Regd No. M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ೫—೦—೦

ಸಂಪುಟ ೧] ಶುಕ್ರವಾರ ೧೧ ಜನವರಿ ೧೯೨೯ [ಸಂಚಿಕೆ

ಮೈಸೂರು ಮಹಾಜನರ ಸಭೆಯಲ್ಲೂ ಲಾಯರುಗಳ ಸಂಘದಲ್ಲೂ ಪತ್ರಿಕೆಗಳನ್ನು ನಿಲ್ಲಿಸಿದ್ದು ಶುದ್ಧ ಅನ್ಯಾಯವೆಂದು ಖಂಡನೆಯಾಯಿತು

TAI NADU
11—1—1929

ಮೈಸೂರಿನ ಪ್ರಚಂಡ ಸಭೆ. ನಿರ್ದಾಕ್ಷಿಣ್ಯವಾದ ಖಂಡನೆ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಮೈಸೂರು, 9-1-1929.

ಈ [illegible] ಮೈಸೂರು [illegible] ಪ್ರಚಂಡ [illegible] ಸಭೆ [illegible] ಅವಕಾಶವಾಗಲಿಲ್ಲ. [illegible] ಈ ಕಾ [illegible] 5 ಗಂಟೆಗೆ [illegible] ಸಭೆಯು ಅಲ್ಲಿಯೇ [illegible] ಜನಗಳು ಮಾತ್ರ ಬಹಳ [illegible] ಅಪಾಯವಿಲ್ಲದಂತೆ ನಡೆದುಕೊಂಡರು. [illegible] ಆತಂಕ [illegible] ಈ [illegible] ಪ್ರತಿನಿತ್ಯರಗ [illegible]

[illegible] ಜನಗಳು [illegible] ಪಂಗಡದವರೂ [illegible] ಲಾಯರುಗಳಂತೂ ಹೇರ [illegible] ಜನಗ [illegible] ವೈಸೂ [illegible] ಪತ್ರಿಕೆಯ [illegible] ಅಂತ್ಯಕ್ರಿ [illegible] ಭಾರಿ ಧ [illegible] ಅಂತ್ಯಕ್ರಿಯೆ [illegible] ಗತಿಸಿದ [illegible]

[illegible] ಪುರುಷೋ [illegible] ಕಾರ್ಯದರ್ಶಿಗಳಾದ ಮ|| ಅಗರಂ [illegible]

[illegible] ನಾಯರವರು.

ನಾನು [illegible] ಅವರ ನಾ [illegible] ಮೈಸೂರಿನಲ್ಲಿ ಹು ಟ್ಟಿದರು. ಬ್ರಿಟಿಷ್ ಇಂಡಿಯಾದಲ್ಲಿ ಅವರ ಜನ್ಮವಾಗಿದ್ದರೆ ಲೋಕಮಾನ್ಯತಿಲಕರು, ಮಹಾತ್ಮ ಗಾಂಧಿಯವರು ಇವರಿಗೆ ಸಮಾನರಾದ ವಿಭೂತಿಗಳಾಗುತ್ತಿದ್ದರು. ಇಂಥಹ ಅಮೂಲ್ಯವಾದ ರತ್ನವನ್ನಿಟ್ಟುಕೊಂಡು ನೀವು ರತ್ನವನ್ನು ಉಪಯೋಗಿಸಲು ತಿಳಿಯದ ಕೋಳಿಯಂತೆ ವರ್ತಿಸುತ್ತಿದ್ದೀರಿ. ವೆಂಕಟಕೃಷ್ಣಯ್ಯನವರ ಪತ್ರಿಕೆಯನ್ನು ನಿಲ್ಲಿಸಿದರೆ ಅವರಿಗೇನು ಕಷ್ಟ? ಆ ರ ಪತ್ರಿಕೆಯನ್ನು ನಿಲ್ಲಿಸಿದರೆ ನಿಮ್ಮ ಬಾಯಿಗೆ ಬೀಗವನ್ನು ಹಾಕಿದ ಹಾಗಾಯಿತು. ನಾನು ಇಂಡಿಯಾ ದೇಶವನ್ನೆಲ್ಲಾ ಎಷ್ಟೋ ಆವರ್ತಿ ಸುತ್ತಿದ್ದೇನೆ. ಎಲ್ಲಿ ನೋಡಿದರೂ ಮೈಸೂರನ್ನು ಹೊಗಳುತ್ತಿದ್ದರು. ಈಗ ಎಲ್ಲ ನೋಡಿದರೂ ಮೈಸೂರನ್ನು ಜೊಗಳುತ್ತಿರುವರು. ಏನಯ್ಯ ನೀವು ಹೀಗೆ? ವೆಂಕಟಕೃಷ್ಣಯ್ಯನವರೆಂದರೆ ನಿಮ್ಮ ದೇಶಕ್ಕೆಲ್ಲಾ ಪಿತಾಮಹರೆನ್ನುತ್ತೀರಿ? ಅಂಥವರ ಪತ್ರಿಕೆಯನ್ನು ನಿಮ್ಮ ಸರ್ಕಾರದವರು ನಿಲ್ಲಿಸಿರುತ್ತಾರೆಂದರೆ ಅವೇನು ನಾಚಿಕೆಗೇಡು ನಿಮ್ಮ ಸರ್ಕಾರವನ್ನು ಸರಿಯಾದ ದಾರಿಯಲ್ಲಿ ತರುವುದಕ್ಕೆ ಯೋಗ್ಯತೆಯಿಲ್ಲವೆ ಎಂದು ನನ್ನನ್ನು ಕೇಳುತ್ತಿದ್ದಾರೆ ಎಂದರು. ಅನಂತರ ಕೆಲವು ಮಹನೀಯರು ಕಳುಹಿಸಿದ್ದ ಪತ್ರಗಳು ಓದಲಾಯಿತು.

ರಾವ್ ಬಹದ್ದೂರ್ ಯಂ. ಸಿ. ರಂಗಯ್ಯಂಗಾರ್ರವರು.

ನನಗೆ ಪಬ್ಲಿಕ್ ಮೀಟಿಂಗಿನ ನೋಟೀಸು ತಲುಪಿತು. ನಿಶ್ಶಕ್ತಿಯಿಂದ ಮೀಟಿಂಗಿಗೆ ಬರಲಾಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ನನ್ನ ಪರವಾಗಿ ಕಾಂಗ್ರೆಸ್ ಕಮಿಟಿಯವರು ಮಹಾಜನಗಳಿಗೆ ನನ್ನ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ಈಗ ಒದಗಿರುವ ತೊಂದರೆಯು ನನಗೆ ಬಹಳ ಸಂಕಟವನ್ನುಂಟುಮಾಡುತ್ತಿದೆ. ಈ ತೊಂದರೆಗೆ ಅವರು ಎಂದಿಗೂ ಅರ್ಹರಲ್ಲ. ಅವರ ದೇಶಾಭಿಮಾನ, ಸ್ವಾರ್ಥತ್ಯಾಗ, ಮಹಾಜನ ಸೇವೆ ಇವುಗಳೆಲ್ಲವೂ ಎಲ್ಲರಿಗೂ ತಿಳಿದ ಸಂಗತಿಗಳೇ ಆಗಿವೆ. ಸರ್ಕಾರದವರು ಇಂತಹ ವೃದ್ಧರೊಡನೆ ಅನುಭವಸ್ಥರೊಡನೆ ಈ ರೀತಿಯಾದ ನಡವಳಿಕೆಯನ್ನು ನಡೆಸಬಾರದಾಗಿತ್ತು. ನನಗೆ ಒಂದು ನಂಬಿಕೆ ಇದೆ. ಅದನ್ನು ತಮ್ಮ ಮುಖಾಂತರವಾಗಿ ಮಹಾಜನಗಳಿಗೆ ತಿಳಿಸುತ್ತೇನೆ. ಪ್ರಜೆಗಳು ಬಹಳ ಮಂದಿ ನೇರಿಕೆಯಿಂದಲೂ ಸಮ್ಮತಿಯಿಂದಲೂ ಶ್ರೀಮನ್ಮಹಾರಾಜರವರಿಗೆ ಅರಿಕೆಯನ್ನು ಮಾಡಿಕೊಂಡರೆ ಮ|| ವೆಂಕಟಕೃಷ್ಣಯ್ಯನವರಿಗೆ ಮಾಡಿರುವ ಅನ್ಯಾಯವು ನಿವಾರಿಸಲ್ಪಡಬಹುದು.

ಮ|| ಎ. ಕೃಷ್ಣರಾಯರವರು.

ಮ|| ಎಂ. ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ಸರ್ಕಾರದವರ ವರ್ತನವನ್ನು ಖಂಡಿಸುವುದಕ್ಕಾಗಿ ನೀವು ಮಹಾಜನಗಳ ಸಭೆಯನ್ನು ಸೇರಿಸಿರುವುದು ಬಹಳ ಸಂತೋಷ. ಮ|| ವೆಂಕಟಕೃಷ್ಣಯ್ಯನವರಿಗೆ ಅವರ ಅಪರಾಧಗಳು ಏನು ಎಂಬುದನ್ನು ತಿಳಿಸದೆ ತಾವು ನಿರ್ದೋಷಿಗಳೆಂದು ಅವರಿಗೆ ತಮ್ಮ ಪಕ್ಷವನ್ನು ವಾದಿಸಿಕೊಳ್ಳಲು ಅವಕಾಶವನ್ನು ಕೊಡದೆ ಪತ್ರಿಕೆಗಳನ್ನು ಹೀಗೆ ನಿಲ್ಲಿಸಿರುವುದು ಸರಿಯಲ್ಲ. ಈಗಿನ ಪತ್ರಿಕಾ ಕಾನೂನಿನ ಪ್ರಕಾರವಾಗಿ ಪತ್ರಿಕೆಗಳನ್ನು ನಿಲ್ಲಿಸುವ ಮೊದಲು ಕ್ವಾಸಿಜ್ಯುಡಿಷಿಯಲ್ ಯನಾಕ್ವೈಯರಿ ಮಾಡುತ್ತೇವೆಂದು ಸರ್ಕಾರದವರು ವಾಗ್ದಾನ [illegible] ಡಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವರು [illegible] ಯಾಗಿ ನಡೆದುಕೊಳ್ಳಲಿಲ್ಲ. ಶಾಂತಿಸ್ಥಾಪನೆ [illegible] ಯತ್ನವನ್ನು ಮಾಡುತ್ತಿರುವೆವೆಂದು ಹೇಳಿ ಪತ್ರಿ [illegible] ಮೇಲೆ ಈ ರೀತಿ ದಬ್ಬಾಳಿಕೆಯನ್ನು ನಡೆಸುತ್ತಿ [illegible] ದು ಬಹಳ ವಿಷಾದಕರವು. ಸರ್ಕಾರದವರು ಈ [illegible] ಮಾಡಿದ್ದರಿಂದ ಶಾಂತಿಯು ಬೇರೂರುವುದಕ್ಕೆ [illegible] ಗಿ ಸರ್ಕಾರದಲ್ಲಿ ಅಪನಂಬಿಕೆಯು ಹೆಚ್ಚಾಗು [illegible] ಮ|| ಎಂ ವೆಂಕಟಕೃಷ್ಣಯ್ಯನವರು, 50 ವರ್ಷ [illegible] ಲೂ ಏಕರೀತಿಯಾಗಿ ನಿಸ್ವಾರ್ಥಬುದ್ಧಿಯಿಂದ [illegible] ಸೇವೆಯನ್ನು ಮಾಡುತ್ತಿರುವರು. ಈಗ ಅವರಿ [illegible] ಗಿರುವ ತೊಂದರೆಗಾಗಿ ನಾನು ಬಹಳ ವಿಷಾ [illegible] ತ್ತೇನೆ. ಅವರ ವಿಷಯದಲ್ಲಿ ನನ್ನ ಸಂಪೂರ್ಣ ಸ [illegible] ಭೂತಿಯು ಇರುವುದು.

ಮ|| ಕೆ. ಚಂದ್ರಶೇಖರಯ್ಯನವರು (ಅಡ್ವೋಕೇ [illegible]

ಈ ಮೀಟಿಂಗಿನಲ್ಲಿ ನನ್ನ ಸಂಪೂರ್ಣ ಸಹಾ [illegible] ತಿ ಇದೆ. ನಮ್ಮ ಪರಮಪೂಜ್ಯರೂ ದೇಶಾಭಿ [illegible] ಳೂ ಆದ ವೃದ್ಧಪಿತಾಮಹರಾದ ವೆಂಕಟಕೃಷ್ಣ [illegible] ವರ ನಾಲ್ಕು ಪತ್ರಿಕೆಗಳು ನಿಷ್ಕಾರಣವಾಗಿ ಸ [illegible] ದವರಿಂದ ನಿಲ್ಲಿಸಲ್ಪಟ್ಟಿರುವುದನ್ನು ಕೇಳಿ ನನಗೆ [illegible] ಶ್ಚರ್ಯವಾಯಿತು. ಈಗ ನಮ್ಮ ಸಂಸ್ಥಾನದಲ್ಲಿ [illegible] ಪತ್ರಿಕೆಗಳಿಗೆ ಇರುವ ಸ್ವಾತಂತ್ರ್ಯಕ್ಕಿಂತಲೂ [illegible] ಸ್ವಾತಂತ್ರ್ಯವು ಕೊಡಲ್ಪಡಬೇಕೆಂದು ಏಕ್ಸಿ [illegible] ಸಮಿತಿಯವರು ಶಿಫಾರ್ಸು ಮಾಡಿರುವಾಗ [illegible] ಸರ್ಕಾರದವರು ಈ ರೀತಿ ಪ್ರವರ್ತಿಸಿರುವುದು [illegible] ಆಶ್ಚರ್ಯವಾಗಿದೆ. ಪ್ರತಿನಿಧಿಸಭೆ ಮತ್ತು ನ [illegible] ನ್ಯಾಯಕ ಸಭೆಗಳಲ್ಲಿ ಈ ನೀಚವಾದ ಪ್ರೆಸ್ [illegible] ಸ್ನು ರದ್ದು ಮಾಡಬೇಕೆಂದು ವಿಶೇಷವಾಗಿ [illegible] ಬಿ ಹಾಗೆ ಮಾಡಲು ಒಪ್ಪಿದ್ದರೂ ಆ ಮಾತ [illegible] ಪೂರ್ಣವಾಗಿ ಮರೆತುಬಿಟ್ಟು ಈ ಪತ್ರಿಕೆಗಳ [illegible] ಗದಾಪ್ರಹಾರವನ್ನು ಹೂಡಿರುವರು. ಇದರಿ [illegible] ವೆಂಕಟಕೃಷ್ಣಯ್ಯನವರಿಗೆ ಸ್ವತಃ ಏನು ನಷ್ಟ [illegible] ಇದರಿಂದ ಮಹಾಜನರಿಗೆ ಬಹಳ ಅನರ್ಥ [illegible] ರುವುದು. ನಿಮ್ಮ ಮೀಟಿಂಗಿನಲ್ಲಿ ಮಾಡಲ್ಪ [illegible] ರಾವುಗಳಿಂದ ಸರ್ಕಾರದವರಿಗೆ ತಾವು ಮಾ [illegible] ಪ್ಪನ್ನು ತಿದ್ದಿಕೊಂಡು ನ್ಯಾಯವನ್ನು ಸ್ಥಾಪಿ [illegible] ದ್ಧಿಯು ಉಂಟಾಗಲೆಂದು ಕೋರುತ್ತೇವೆ. [illegible] ಲಸ್ಯದಿಂದ ನಾನು ಈ ಮೀಟಿಂಗಿಗೆ ಬರಲಾ [illegible] ವುದರಿಂದ ವಿಷಾದಿಸುತ್ತೇನೆ.

ಮ|| ಬಿ. ನರಸಿಂಗರಾಯರು.

ಕಳೆದ 50 ವರ್ಷಗಳಿಂದಲೂ ವೃದ್ಧಪಿತಾ [illegible] ದೇಶಸೇವೆಗಾಗಿ ನಡೆಸಿಕೊಂಡು ಬರುತ್ತಿದ್ದ [illegible] ಪತ್ರಿಕೆಗಳನ್ನೂ ಒಂದೇ ಏಟಿನಿಂದ ಸರ್ಕಾರ [illegible] ಲ್ಲಿಸಿಬಿಟ್ಟಿರುವುದು ತುಂಬಾ ಶೋಚನೀಯವಾ [illegible] ತ್ರಿಕೆಗಳಲ್ಲಿ ಯಾವುದಾದರೂ ಲೋಪದೋ [illegible] ಕಾನೂನಿನ ಪ್ರಕಾರವೇ ವಿಧಾಯಕವಾಗಿ [illegible] ಜ್ಯುಡಿಷಿಯಲ್ ವಿಚಾರಣೆಯನ್ನು ನಡೆಸಿ [illegible] ನಡೆಸಬಹುದಾಗಿತ್ತು. ವೆಂಕಟಕೃಷ್ಣಯ್ಯನ [illegible]

[ಮುಂದಿನ ಪುಟ ನೋಡಿ]

ತಾಯಿನಾಡು.

11—1—1929

(ಹಿಂದಿನ ಪುಟದಿಂದ ಮುಂದುವರೆದುದು.)

ಮಗುವಲ್ಲ. ಅವರ ಪತ್ರಿಕೆಗಳು ನೆನ್ನೆ ಮೊನ್ನೆ ಹುಟ್ಟಿದವುಗಳಲ್ಲ. ವೆಂಕಟಕೃಷ್ಣಯ್ಯನವರು ಮೈಸೂರಿನ ಎಲ್ಲಾ ವಿಧವಾದ ಚಳುವಳಿಗೂ ಜನಕರು ನಮ್ಮಲ್ಲಿ ಅನೇಕರು ಅವರ ಸಮ್ಮುಖದಲ್ಲಿ ರಾಜಕೀಯ ಜ್ಞಾನದ ಪಾಠವನ್ನು ಕಲಿತುಕೊಂಡಿರುತ್ತೇವೆ. ಅವರು ಮಾಡಿರುವ ಮಹಾಜನಸೇವೆಯು ಲೋಕವಿದಿತವಾಗಿದೆ. ಸರ್ಕಾರಕ್ಕೂ ಅನೇಕ ಸಂದರ್ಭಗಳಲ್ಲಿ ಅವರು ಸಹಾನುಭೂತಿಯನ್ನು ತೋರಿಸಿರುತ್ತಾರೆ. ಬೆಂಗಳೂರಿನ ಗಲಭೆಗಳು ನಡೆದ ತರುಣದಲ್ಲಿ ಸರ್ಕಾರದವರು ನಾನಾ ವಿಧವಾದ ಸಣ್ಣ ಸಣ್ಣ ಕುಮಾರ್ಗಗಳಿಗೆ ಕೈ ಹಚ್ಚಿರುವರು. ಇದರಿಂದ ಪ್ರಜೆಗಳಿಗೆ ಅವರ ಸದಭಿಪ್ರಾಯದಲ್ಲಿ ಸಂದೇಹ ಉಂಟಾಗಿರುವುದು ಅದರಂತೆಯೇ ಪತ್ರಿಕೆಗಳಲ್ಲಿ ಟೀಕೆ ಟಿಪ್ಪಣಿಗಳು ಬರುತ್ತಿದ್ದುದೂ ಸಹಜವಾಗಿದೆ. ಹೀಗಿರುವಲ್ಲಿ ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನು ಬರೀ ಕೆಟ್ಟ ದೃಷ್ಟಿಯಿಂದಲೇ ನೋಡಕೂಡದು. ವಿಶ್ವೇಶ್ವರಯ್ಯ ಸಮಿತಿಯವರು ಪತ್ರಿಕೆಗಳಿಗೆ ಇನ್ನೂ ಹೆಚ್ಚು ಸ್ವಾತಂತ್ರ್ಯವನ್ನು ಕೊಟ್ಟು ಅವುಗಳ ಅಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಕೊಡಲು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಸೂಚಿಸಿರುತ್ತಾರೆ. ದಿವಾನರು ಈ ಪ್ರೆಸ್ ಕಾನೂನನ್ನು ರದ್ದುಮಾಡುವ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಸಂಪೂರ್ಣ ಸಮ್ಮತಿಯು ಇರುವದೆಂದು ತಿಳಿಸಿರುತ್ತಾರೆ. ಈ ಕಾನೂನು ಅಕ್ಷರಶಃ ರದ್ದಾಗದಿದ್ದರೂ ಅದರ ಅವಧಿಯು ಪೂರೈಸಿರುತ್ತದೆ. ಆದ್ದರಿಂದ ಸರ್ಕಾರದವರು ತಮ್ಮ ನಡವಳಿಕೆಯನ್ನು ಪುನರ್ವಿಮರ್ಶೆ ಮಾಡಿ ಪುನಃ ತಾತಯ್ಯನವರಿಗೆ ಪತ್ರಿಕೆಯನ್ನು ಹೊರಡಿಸಲು ಅವಕಾಶವನ್ನು ಕೊಡುತ್ತಾರೆಂದು ನಂಬಿರುತ್ತೇನೆ.

ಖಂಡನೆಯ ಠರಾವುಗಳು.

(1) ಮೈಸೂರು ಪ್ರಜೆಗಳ ಮಹಾಸಭೆಯು ಮೈಸೂರು ಪೇಟ್ರಿಯೆಟ್ ಮೊದಲಾದ ವೃದ್ಧಪಿತಾಮಹರ ಪ್ರಜಾನುರಾಗವಾದ ಪತ್ರಿಕೆಗಳನ್ನು ನಿಷ್ಕಾರಣವಾಗಿ ಕಾರಣವನ್ನು ತೋರಿಸದೆ ವಿಚಾರಣೆಯನ್ನು ನಡೆಸದೆ ಅತ್ಯಂತ ದಬ್ಬಾಳಿಕೆಯಿಂದ ನಿಲ್ಲಿಸಿದ್ದಕ್ಕೋಸ್ಕರ ಸರ್ಕಾರದವರ ನಡತೆಯನ್ನು ನಿದಾಕ್ಷಿಣ್ಯವಾಗಿಯೂ ನಿರ್ವಿಶೇಷವಾಗಿಯೂ ಖಂಡಿಸುತ್ತದೆ.

(2) ಸರ್ಕಾರದವರ ಮುಂದಾಲೋಚನೆಯಿಲ್ಲದ ನಡವಳಿಕೆಯು ಜನಗಳಲ್ಲಿ ಅಪನಂಬಿಕೆಯನ್ನೂ ವಮನಸ್ಯವನ್ನೂ ಹೆಚ್ಚಿಸುವುದಲ್ಲದೆ ಪ್ರಜೆಗಳಿಗೆ ಅನ್ಯೋನ್ಯತೆಗೆ ಭಂಗವನ್ನು ತರುತ್ತದೆ.

[3] ಸರ್ಕಾರದವರು ತಮ್ಮ ಹಕ್ಕನ್ನು ವಾಪಸು ತೆಗೆದುಕೊಳ್ಳುವಂತೆ ಶ್ರೀಮನ್ ಮಹಾರಾಜರವರು ಅಪ್ಪಣೆ ಮಾಡಬೇಕೆಂಬುದಾಗಿ ಈ ಸಭೆಯು ಅತ್ಯಂತ ವಿನಯಪೂರ್ವಕವಾಗಿ ಮಹಾ ಪ್ರಭುಗಳನ್ನು ಪ್ರಾರ್ಥಿಸುತ್ತದೆ ಮತ್ತು ನಮ್ಮ ಸಂಸ್ಥಾನದಲ್ಲಿ ಈಗ ನೆಲಸಿರುವ ಅಶಾಂತಿಯೂ ಅಸಮಾಧಾನವೂ ಕಡಿಮೆಯಾಗಲು ಸಾಧಕವಾದ ಏರ್ಪಾಡುಗಳನ್ನು ಮಾಡಬೇಕೆಂದು ಅತ್ಯಂತ ನಮ್ರತೆಯಿಂದ ಬಿನ್ನೈಸುತ್ತದೆ.

ಸಿ ನರಸಿಂಹಯ್ಯನವರು.

ಶ್ರೀಮಾನ್ ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ನಡೆಸದಂತೆ ಕೊಟ್ಟಿರುವ ಹುಕುಮ್ಮು ಕೇವಲ ವಿಷಾದಕರವಾಗಿದೆ. ವಿಶ್ವೇಶ್ವರಯ್ಯ ಸಮಿತಿಯ ವರದಿಯು ಪ್ರಕಟವಾದಮೇಲೆ ಪತ್ರಿಕೆಗಳಿಗೂ ಪತ್ರಿಕಾಕರ್ತರಿಗೂ ಇನ್ನೂ ಹೆಚ್ಚಾದ ಸನ್ಮಾನವು ದೊರೆಯುವುದೆಂದು ನಿರೀಕ್ಷಣೆಯಿತ್ತು ಶ್ರೀ|| ವೆಂಕಟಕೃಷ್ಣಯ್ಯನವರು ಕಳೆದ 50 ವರ್ಷಗಳಿಂದಲೂ ಪತ್ರಿಕೆಗಳನ್ನು ನಡೆಸುತ್ತಿದ್ದಾರೆ. ಅವರ ಪತ್ರಿಕೆಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಸರ್ಕಾರದವರು ಅವರ ಗಮನಕ್ಕೆ ತಂದಿದ್ದರೆ ಅದಕ್ಕೆ ಅವರು ಸಮಾಧಾನ ಹೇಳುತ್ತಿದ್ದರು ಅವರು ಶ್ರೀಮನ್ ಮಹಾರಾಜರಿಗೆ ಈ ವಿಷಯದಲ್ಲಿ ಅರ್ಜಿ ಹಾಕಿಕೊಂಡಿರುವುದಾಗಿ ಕೇಳುತ್ತೇನೆ. ಪ್ರಭುವಂದರವರು ಯಾವರೀತಿ ಅನುಗ್ರಹಮಾಡುವರೆಂಬುದನ್ನು ಕುತೂಹಲದಿಂದ ನಿರೀಕ್ಷಿಸುತ್ತೇನೆ.

ಅನಂತರ ಸಭಿಕರ ಪರವಾಗಿ ಮ|| ಎ. ಆರ್. ಶ್ರೀಕಂಠ ಶರ್ಮರವರು ಖಂಡನೆಯ ಠರಾವನ್ನು ಸೂಚಿಸಿದರು. ಸೂಚಿಸುವಾಗ್ಗೆ ಅವರು ಹೇಳಿದ್ದೇನೆಂದರೆ ಪತ್ರಿಕೆಗಳಿರುವುದು ಸರ್ಕಾರದವರ ವರ್ತನವನ್ನು ಪ್ರಜೆಗಳಿಗೆ ತಿಳಿಸುವುದಕ್ಕೂ ಪ್ರಜೆಗಳ ವರ್ತನವನ್ನು ಸರ್ಕಾರಕ್ಕೆ ತಿಳಿಸುವುದಕ್ಕೂ. ನಾವು ಸರಿಯಾಗಿದ್ದರೆ ಸರ್ಕಾರವು ಚೆನ್ನಾಗಿರುವುದು. ನಾವು ಮೈಮರೆತರೆ ಸರ್ಕಾರವು ಮೈಮರೆಯುವುದು. ಸರ್ಕಾರವನ್ನು ಹತೋಟಿಗೆ ತರುವುದಕ್ಕೆ ಪತ್ರಿಕೆಗಳೇ ಮುಖ್ಯಸಾಧನ. ಸರ್ಕಾರದವರು ಪತ್ರಿಕೆಗಳನ್ನು ನಿಲ್ಲಿಸಿರುವುದು ಪ್ರಜೆಗಳ ಅಭಿಪ್ರಾಯಕ್ಕೆ ವಿಘಾತ. ಆದುದರಿಂದ ಸರ್ಕಾರದವರು ತಮ್ಮ ತಪ್ಪನ್ನು ತಿದ್ದಿಕೊಂಡು ಮ|| ವೆಂಕಟ ಕೃಷ್ಣಯ್ಯನವರಿಗೆ ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಅವಕಾಶವನ್ನು ಕೊಡಬೇಕು.

ಮ|| ಎ. ಸೀತಾರಾಮಯ್ಯನವರು ಅನುಮೋದಿಸಿದರು. ಪ್ರೆಸ್ ಆಕ್ಟ ನಮ್ಮ ಮೈಸೂರಿಗೆ ಅವಶ್ಯಕತೆ ಇರಲಿಲ್ಲ. ಆದರೂ ತಂದರು. ಬ್ರಿಟಿಷ್ ರಾಜರ ಸಂರಕ್ಷಣೆಗೆ ಎಂದರು. ನಾವು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ. ಉಪಯೋಗಿಸಿದರೂ ಕ್ವಾಸಿಜುಡಿಷಿಯಲ್ ವಿಚಾರಣೆ ಮಾಡಿ ಉಪಯೋಗಿಸುತ್ತೇವೆಯೆಂದರು. ಈಗ ಅದೆಲ್ಲಾ ಸರ್ಕಾರಕ್ಕೆ ಮರೆತುಹೋಗಿದೆ. ಪ್ರೆಸ್ ಆಕ್ಟನ್ನು ಕಿತ್ತು ಹಾಕುತ್ತೇವೆಂದು ಹೇಳಿ ವೆಂಕಟಕೃಷ್ಣಯ್ಯನವರ ಮೇಲೆ ಅದನ್ನು ಛಲಾಯಿಸುವುದೆಂದರೆ ಬಹಳ ಹಾಸ್ಯಾಸ್ಪದ.

ಮ|| ವೈದ್ಯನಾಥಯ್ಯರವರು ಪ್ರೆಸ್ ಆಕ್ಟನ್ನು ಕಿತ್ತುಹಾಕುವವರೆಗೂ ಅಸೆಂಬ್ಲಿಗೂ ನ್ಯಾಯ ವಿಧಾಯಕ ಸಭೆಗೂ ಬಹಿಷ್ಕಾರ ಹಾಕಬೇಕೆಂದರು.

ಮ|| ಎಸ್. ಕೃಷ್ಣಸ್ವಾಮಿರಾಯರು ತಾತಯ್ಯನವರಿಗೆ ಬಹಳ ಕಷ್ಟಬಂದಿದೆ ಅವರನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಆದರೂ ಅವರ ಮಾತ್ರ ಧೈರ್ಯಗೆಡದೆ ಕೆಲಸಮಾಡುತ್ತಿದ್ದಾರೆ. ಸರ್ಕಾರದವರು ಅಂಥಹ ಮುದುಕರ ಮೇಲೆ ಕೈ ಎತ್ತಿದ್ದು ಬಹಳ ಅನ್ಯಾಯವೆಂದರು.

ಸಿಂಪಿಗೆ ಜನರು ರಾಮರಾಯರು ಎಲ್ಲರೂ ಸೇರಿ ತಿರುಪತಿ ವೆಂಕಟಾಚಲ ಸ್ವಾಮಿಗೆ ಮೂರು ದಿವಸ ಪ್ರಾರ್ಥನೆ ಮಾಡಿಕೊಳ್ಳಬೇಕೆಂದರು.

ಮ|| ತಗಡೂರು ರಾಮಚಂದ್ರರಾಯರು ಬ್ರಿಟಿಷ್ ಅಧಿಕಾರಿಗಳು ಲಾಲಾ ಲಜಪತರಾಯರ ಪ್ರಾಣವನ್ನು ನೀಗಿಸಿದರು. ಮೈಸೂರು ದೇಶೀಯ ಅಧಿಕಾರಿಗಳು ತಾತಯ್ಯನವರ ಪ್ರಾಣವನ್ನು ನೀಗಿಸುವ ಹಾಗೆ ಕಾಣುತ್ತೆ. ತಾತಯ್ಯನವರಿಗೆ ಈಗ ಮನಸ್ಸಿನಮೇಲೆ ಬಹಳ ಪೆಟ್ಟುಬಿದ್ದಿದೆ. ಅದರಿಂದಲೇ ಅವರು ಕೊನೆಗೆ ಮೃತಪಟ್ಟರೆ ಆ ಕೊಲೆಗೆ ಸರ್ಕಾರದವರೇ ಜವಾಬ್ದಾರರಾಗುವರು ಎಂದರು.

ಇದಾದಮೇಲೆ ಅಧ್ಯಕ್ಷರು ಶ್ರೀಮನ್ ಮಹಾರಾಜರವರಿಗೆ ಜಯವಾಗಲೆಂದು ಹರಸಿ ಉಪಸಂಹಾರ ಭಾಷಣಮಾಡಿದಮೇಲೆ ಸಭೆಯು ಮುಕ್ತಾಯವಾಯಿತು.

ಮ|| ಡಿ. ನಾಗಪ್ಪನವರ ಮೇಲೆ ಮಾನನಷ್ಟದ ಕೇಸಿನ ವಿಚಾರಣೆ.

ಅಡ್ವೊಕೇಟ್ ಮ|| ಎಲ್. ಎಸ್. ರಾಜೂರವರು ತ್ರೈರ್ಡ್ ಲೀಗಲ್ ರಿಮೆಂಬ್ರೆನ್ಸರ್ ಮಿ|| ಡಿ. ನಾಗಪ್ಪನವರ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮಾನನಷ್ಟದ ಮೊಕದ್ದಮೆಯು, ೮ ನೇ ತಾ|| ಮಂಗಳವಾರ ವಿಚಾರಣೆಗೆ ಬಂದಿತು. ಸರ್ ವಿಶ್ವೇಶ್ವರಯ್ಯನವರು, ಸಾಕ್ಷಿಯಾಗಿ ಬರುವರೆಂದು ಕೋರ್ಟಿನ ತುಂಬಾ ಪ್ರೇಕ್ಷಕರು ಸೇರಿದ್ದರು. ಕೋರ್ಟಿನ ಹೊರಗೂ ಜನ ಸಂದಣಿಯು ತುಂಬಿತ್ತು. ಆದರೆ ವಿಚಾರಣಾ ಕಮಿಟಿಯ ಸೆಕ್ರೆಟರಿಯವರಾದ ಮಿ|| ಚಾರ್ಲ್ಸ್ ನರೊನ್ಹರ ವಿಚಾರಣೆಯು ನಡೆದನಂತರ, ತಮ್ಮ ವಿಚಾರಣೆಯು ಆಗಲೇಬೇಕೆಂದು ಕೋರ್ಟಿನವರು ಭಾವಿಸುವ ಪಕ್ಷದಲ್ಲಿ, ತಾವು ಕೋರ್ಟಿಗೆ ಸಾಕ್ಷಿಯಾಗಿ ಬರುತ್ತೇವೆಂದು ಒಂದು ಕಾಗದವನ್ನು ಬರೆದಿದ್ದರು. ವಿಚಾರಣಾ ಕಮಿಟಿಯ ಸೆಕ್ರೆಟರಿಯವರಾದ ಮಿ|| ಚಾರ್ಲ್ಸ್ ನರೊನ್ಹರು, ೧೨೪ ನೇ ಸೆಕ್ಷನ್ ಪ್ರಕಾರ ಕ್ಯಾಮರಾದಲ್ಲಿ ನಡೆದ ನಡವಳಿಕೆಗಳನ್ನು ಬಹಿರಂಗಪಡಿಸದಂತೆ ಸುರಕ್ಷಣೆಯನ್ನು ಕೋರಿದರು. ಗಲಭೆಗಳ ವಿಚಾರಣಾ ಕಮಿಟಿಯ ಮುಂದೆ ಮ|| ಎಂ. ಎಸ್. ಲಿಂಗೇಗೌಡರು ಸಾಕ್ಷಿಯನ್ನು ಕೊಟ್ಟಾಗ, ಕಮಿಟಿಯ ಸದಸ್ಯರಲ್ಲಿ ಒಬ್ಬರಾಗಿದ್ದ ಮಿ|| ನಾಗಪ್ಪನವರು ಮಿ|| ಎಲ್. ಎಸ್. ರಾಜೂರವರ ವಿಚಾರದಲ್ಲಿ ಅಪಮಾನಕರವಾದ ಮಾತುಗಳನ್ನು ಆಡಿದರೆಂದೂ ಮತ್ತು ಸಾಕ್ಷಿಗೆ ಅರ್ಥಸೂಚಕವಾದ ಪ್ರಶ್ನೆಗಳನ್ನು ಹಾಕಿ, ಫಿರ್ಯಾದಿಯ ವಿಚಾರದಲ್ಲಿ ಅಪಮಾನಕರವಾದ ಉತ್ತರಗಳನ್ನು ಹೊರಡಿಸಿದರೆಂದೂ ಆಪೋಪಿಸಲ್ಪಟ್ಟಿದೆ,

ಫಿರ್ಯಾದಿಯ ಕಡೆ ಅಡ್ವೊಕೇಟ್ ಮ|| ಡಿ. ರಾಮರಾಯರೂ ಮತ್ತು ಅಪರಾಧಿಯ ಕಡೆ ಮ|| ಸಿ. ಶೇಷಾಚಾರ್ಯರವರೂ ವಾದಿಸಿದರು ಮ|| ಡಿ. ನಾಗಪ್ಪನವರೂ ಕೋರ್ಟಿನಲ್ಲಿ ಹಾಜರಾಗಿದ್ದರು. ಫಿರ್ಯಾದಿಯ ಕಡೆ ಲಾಯರು ಗುಪ್ತ ಸಾಕ್ಷಿಯ ವಾಙ್ಮೂಲವನ್ನು ಕೋರ್ಟಿನವರು ತರಿಸುವುದಕ್ಕೆ ಅಧಿಕಾರವಿದೆಯೆಂದು ವಾದಿಸಿದರು. ಅಪರಾಧಿಗಳ ಕಡೆ ಲಾಯರು ರಾಜಕೀಯ ವಿದ್ಯಮಾನಗಳಿಗೆ ಸಂಬಂಧಪಟ್ಟ ನಡವಳಿಕೆಗಳನ್ನು ಕೋರ್ಟಿಗೆ ತರಿಸುವುದಕ್ಕೆ ಅಧಿಕಾರವಿಲ್ಲವೆಂದು ವಾದಿಸಿದರು ಈ ಚರ್ಚಾಂಶವಾದ ವಿಚಾರದಲ್ಲಿ ಕೋರ್ಟಿನವರು ೯ ನೇ ತಾ|| ಬುಧವಾರ ತೀರ್ಪನ್ನು ಕೊಡುತ್ತೇವೆಂದು ಅಪ್ಪಣೆ ಕೊಟ್ಟರು. ಅಲ್ಲಿಗೆ ಅವತ್ತಿನ ವಿಚಾರಣೆಯು ಪೂರೈಸಿತು. (ಲೋ)

TAINADU

Daily Edition.

The Leading Nationalist Daily of Mysore.

Printed and published by P. R. Ramaiya. at Sri RamaPress, D Subbiah Road Mysore.

Regd No. M 2322 ॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ೫—೦—೦ ; ಪರಸ್ಥಳಕ್ಕೆ ...

ಸಂಪುಟ ೧] ಶನಿವಾರ ೧೨ ಜನವರಿ ·೨೯ [ಸಂಚಿಕೆ ೯೩

ಕೊಲೆಪಾತಕನಿಗೂ ಕಳ್ಳನಿಗೂ ವಿಚಾರಣೆಯುಂಟು; ಪತ್ರಿಕಾಕರ್ತನಿ
ಇದೇ ಮೈಸೂರಿನ ಮಾದರಿ ಆಡಳಿತದ ಮರ್ಮ?

TAI NADU
12--1—1929

ಪತ್ರಿಕೆಗಳನ್ನೇಕೆನಿಲ್ಲಿಸಬೇಕು?

ನಮ್ಮ ಮೈಸೂರಿನ ಪತ್ರಿಕಾ ಕಾನೂನು ಅತಿ ಉಗ್ರವಾದುದು. ಈರೀತಿಯಾದ ಕಾನೂನು, ಇತರ ಯಾವ ನಾಗರಿಕ ದೇಶದಲ್ಲಿಯೂ ಇರುವದಿಲ್ಲ. ಪೂರ್ವಕಾಲದಲ್ಲಿ ಕೇವಲ ಸಣ್ಣ ಸಣ್ಣ ತಪ್ಪಿಗೋಸ್ಕರವಾಗಿಯೇ ಮನುಷ್ಯನ ಶಿರಚ್ಛೇದನವನ್ನು ಮಾಡುತ್ತಿದ್ದರಂತೆ. ಕೆಲವು ತಪ್ಪುಗಳಿಗಾಗಿ ಕೆಲವು ಅಂಗಗಳನ್ನು ಕೊಯ್ಯುತ್ತಿದ್ದರಂತೆ ಇದೆಲ್ಲಾ ಅನಾಗರಿಕ ಪದ್ಧತಿ ಎಂದು ನಾವು ಈಗ ಹೇಳುತ್ತೇವೆ. ಮೈಸೂರಿನ ವೃತ್ತಪತ್ರಿಕಾ ಕಾನೂನು ಮೇಲೆ ಹೇಳಿದ [illegible] ಅನಾಗರಿಕವಾದುದು. ಸಂಪಾದಕರ ತಪ್ಪಿಗೋಸ್ಕರವಾಗಿ ಪತ್ರಿಕೆಯನ್ನೇ ನಿಲ್ಲಿಸುವುದು ಬಹು ಅನ್ಯಾಯ. ಉದಾಹರಣೆಗಾಗಿ ಸ್ಟೇಟ್ಸ್‌ಮನ್ ಎಂತಹ ಜಾಯಿಂಟ್ ಸ್ಟಾಕ್ ಕಂಪನಿಯವರು ಸೇರಿ ನಡೆಸುತ್ತಿರುವ ಪತ್ರಿಕೆಯು ಮೈಸೂರಿನಲ್ಲಿ ಇರುವುದೆಂದು ಊಹಿಸೋಣ. ಆ ಪತ್ರಿಕೆಯ ಸಂಪಾದಕರು ಪ್ರಕಟಿಸಿದ ಕೆಲವು ಲೇಖನಗಳು ಸರಕಾರಕ್ಕೆ ಸಮ[illegible]ದುವೆಂದು ಆಲೋಚಿಸೋಣ. ಇದಕ್ಕಾಗಿ ಸರಕಾರದವರು ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯನ್ನೇ ನಿಲ್ಲಿಸಿದರೆ ಎಷ್ಟು ಅನರ್ಥ? ಬ್ರಿಟಿಷ್ ಇಂಡಿಯಾದಲ್ಲಿ ಕೂಡ ಇಷ್ಟು ಕಠಿಣವಾದ ಶಿಕ್ಷೆಯಿಲ್ಲ. ಮೈಸೂರು ಪೇಟ್ರಿಯೆಟ್, [illegible], ಸಂಪದಭ್ಯುದಯ, ಪತ್ರಿಕೆಗಳು ಇವತ್ತಿನವಲ್ಲಾ ನಿನ್ನೆಯವಲ್ಲ. ತಾತಯ್ಯನವರು 50-60 ವರ್ಷಗಳಿಂದಲೂ [illegible] ಪತ್ರಿಕೆಗಳನ್ನು ನಡೆಸುತ್ತಾ ಬಂದಿರುವರು. ಮೈಸೂರು ಪೇಟ್ರಿಯೆಟ್ ಮೊದಲಾದ ಪತ್ರಿಕೆಗಳು 2-[illegible] ವರ್ಷಗಳಿಂದ ನಡೆದುಕೊಂಡು ಬಂದಿರುವುವು. ಆ ಪತ್ರಿಕೆಗಳ ಮುಖಾಂತರವಾಗಿ ತಿಂಗಳು 1 ಕ್ಕೆ 3000—4000 ರೂಪಾಯಿ ಲೇವಾದೇವಿಯು ನಡೆಯುತ್ತಿರುವುದು. ಸರಕಾರಕ್ಕೆ ಕೋಪ ಬಂದಿತೆಂದು ಇಷ್ಟು ದೊಡ್ಡ ಕೆಲಸದ ಕಾರ್ಖಾನೆಯನ್ನೇ ನಿಲ್ಲಿಸಿಬಿಡುವುದು ಶುದ್ಧ ಅನ್ಯಾಯ. ಇದೊಂದು ರೀತಿಯಾದ ಘಾತುಕಕೃತ್ಯ. ಬೇಕಾದರೆ ಆ ಪತ್ರಿಕೆಗಳ ಈಗಿನ ಸಂಪಾದಕರನ್ನು ಶಿಕ್ಷಿಸಲಿ. ಬೇರೆ ಸಂಪಾದಕರನ್ನಿಟ್ಟುಕೊಂಡು ಪತ್ರಿಕೆಯನ್ನು ನಡೆಯಿಸುವದಕ್ಕೆ ಅವಕಾಶವನ್ನು ಕೊಡಲಿ. ಬ್ರಿಟಿಷ್ ಇಂಡಿಯಾದಲ್ಲಿ ಹಿಂದೂ, ಬಾಂಬೆ ಕ್ರಾನಿಕಲ್, ಅಮೃತ ಬಜಾರ್ ಪತ್ರಿಕಾ, ಟ್ರಿಬ್ಯೂನ್, ಮೊದಲಾದ ಪತ್ರಿಕೆಗಳು ಎಷ್ಟೋ ಆವರ್ತಿ ಸರಕಾರದ ಕೋಪಕ್ಕೆ ಗುರಿಯಾಗಿರುವವು. ಆ ಪತ್ರಿಕೆಗಳ ಅನೇಕ ಸಂಪಾದಕರು ಜೈಲಿಗೆ ಹೋಗಿರುವರು. ಆದರೂ ಪತ್ರಿಕೆಗಳನ್ನು ಮಾತ್ರ ನಿಲ್ಲಿಸಲಿಲ್ಲ. ಲೋಕಮಾನ್ಯತಿಲಕರು ಕೇಸರಿ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದುದಕ್ಕಾಗಿ ಸು[illegible]ಪಾದಕರ ನಾಶೆಯಿಂದ ಅವರಿಗೆ ಏಳು ವರ್ಷಗಳು ಶಿಕ್ಷೆಯಾದರೂ ಕೇಸರಿ ಪತ್ರಿಕೆಯು ಮಾತ್ರ ಅಖಂಡವಾಗಿ ನಡೆದುಕೊಂಡು ಬಂತು. ಅದೇಪ್ರಕಾರವಾಗಿ ಅಮೃತ ಬಜಾರ್ ಪತ್ರಿಕೆಯ ಎಡಿಟರುಗಳು ಒಬ್ಬರು ತಪ್ಪ ಒಬ್ಬರು ಜೈಲಿಗೆ ಹೋದರೂ ಪತ್ರಿಕೆಯು ಮಾತ್ರ ನಿಲ್ಲಲಿಲ್ಲ.

ಅನಾಗರಿಕ ಗದಾಪ್ರಹಾರ!

(ಶ್ರೀ|| ಎಚ್. ಎಸ್. ರಾಜಗೋಪಾಲ್ ರವರಿಂದ)

ನ್ಯಾಯವಿಧಾಯಕ ಸಭೆಯ ರಂಗಸ್ಥಳದಲ್ಲಿ ನಿಂತು ಪ್ರೆಸ್ ಕಾನೂನನ್ನು ರದ್ದುಪಡಿಸುತ್ತೇವೆಂದು ಹೇಳಿದ ಸರ್ಕಾರವು ತನ್ನ ಮಾತಿಗೆ ತಾನೇ ಪುರಸ್ಕಾರ ಕೊಡದಿದ್ದಮೇಲೆ ಇತರರಿಂದ ತಿರಸ್ಕಾರವನ್ನಲ್ಲದೆ ಬೇರೆ ಏನನ್ನೂ ನಿರೀಕ್ಷಿಸಲು ಅಧಿಕಾರವೇ ಇಲ್ಲ. ಈಗಿರುವ ಪ್ರೆಸ್ ಕಾನೂನು ಉಲ್ಲಂಘನೆಗೆ ಮಾತ್ರ ಯೋಗ್ಯವೇ ವಿನಾ ಮತ್ತಾವುದಕ್ಕೂ ಯೋಗ್ಯವಲ್ಲ. ಇದನ್ನು ಎಷ್ಟು ಹೇಳಿದರೂ ಕೊಂಚವೇ.

ಹೆಚ್ಚು ಕಡಿಮೆ ಅರ್ಧಶತಮಾನದಿಂದಲೂ ಬೇರೆ ಬೇರೆ ಹೆಸರುಗಳಿಂದ ಹೊರಬೀಳುತ್ತಿದ್ದ ಶ್ರೀಮಾನ್ ವೆಂಕಟ ಕೃಷ್ಣಯ್ಯನವರ ಪ್ರಜಾಸೇವೆಯ ಆತ್ಮಶಕ್ತಿಸ್ವರೂಪಗಳಾದ ಪತ್ರಿಕೆಗಳನ್ನು ಈಗಿನ ಸರ್ಕಾರದವರು ನಿಲ್ಲಿಸಿರುವರು ಹೆಜ್ಜೆಹೆಜ್ಜೆಗೂ ತಪ್ಪುಗಳನ್ನು ಮಾಡುತ್ತಿರುವ, ಶುದ್ಧ ಸುಳ್ಳನ್ನೇ ಪ್ರಸಿದ್ಧಪಡಿಸಲು ಇಂಗ್ಲೆಂಡಿನ ಪತ್ರಿಕೆಗಳ ವರೆಗೂ ಓಡಿಹೋದ ನಮ್ಮ ಸರಕಾರಕ್ಕೆ ತಾತಯ್ಯನವರಲ್ಲಿ ತಪ್ಪುಗಳು ಕಂಡುಬಂದಿದ್ದರೆ ಇದುವರೆಗೆ ಸುಮ್ಮನೆ ಮೌನದಿಂದ ಕುಳಿತಿರುತ್ತಿರಲಿಲ್ಲ. ಸಕಾರಣಗಳಿಂದ ಕೆಲಸಮಾಡುವ ಯಾವ ಸರ್ಕಾರವೂ ಈ ವಿಧವಾದ ಕುಮಾರ್ಗಕ್ಕೆ ಬೀಳುವುದಿಲ್ಲ. ಕಾರಣಗಳನ್ನು ಸ್ಪಷ್ಟಪಡಿಸದೆ ನ್ಯಾಯಮಾರ್ಗದಲ್ಲಿ ಪ್ರವೇಶಿಸದೆ ಇರುವುದು ಸರ್ಕಾರದ ದೌರ್ಬಲ್ಯವನ್ನೇ ಪ್ರಕಾಶಪಡಿಸುತ್ತವೆ

ತಳುಕಿನಿಂದ ಮೆರವಣಿಗೆ ಹೊರಡಿಸುತ್ತಾ, ಹುಡುಕಿ ಹುಡುಕಿ ಹಳೇ ಹವೇಲಿ [illegible]ಗಳಿಂದಲೇ ತಲೆಯನ್ನು ತಪ್ಪಿಸಿ ಪರಕೀಯ ಪತ್ರಿಕೆಗಳ ರುಚಿಯನ್ನೇ ಆಸ್ವಾದಿಸುವ ದೇಶೀಯ ಸಂಸ್ಥಾನದ ಸರ್ಕಾರಗಳ ಹೊಟ್ಟೆಗೆ ದೇಶಾಭಿಮಾನದಿಂದ ಹೇಳುವ ಮೃದುಮಧುರ ಮುದುಕ ಹಿತಚಿಂತನೆ ಹೇಗೆ ಹೊಕ್ಕೀತು? ನಮ್ಮ ಸರಕಾರಕ್ಕೆ ಹಿತಚಿಂತನೆಯೆಂದರೆ ಇನ್ನು ತಾತಯ್ಯನವರಿಗಿಂತ ಹೆಚ್ಚಾಗಿ ಮಾ

ಸಿಂಧ ದೇಶದ ಹೈದರಾಬಾದಿನಲ್ಲಿ ಹಿಂದೂ ಎಂಬ ಪತ್ರಿಕೆಯ ಸಂಪಾದಕರುಗಳು ಒಬ್ಬರ ತಪ್ಪ ಒಬ್ಬರು ಏಳು ಜನಗಳು ಜೈಲಿಗೆ ಹೋದರು ಆದರೂ ಆ ಪತ್ರಿಕೆಯು ನಡೆದುಕೊಂಡು ಬರುತ್ತಿದೆ. ಯಂಗ್ ಇಂಡಿಯಾ ಪತ್ರಿಕೆಯ ಸಂಪಾದಕರಾದ ಮಹಾತ್ಮಾ ಗಾಂಧಿಯವರು ಜೈಲಿಗೆ ಹೋದರೂ ಆ ಪತ್ರಿಕೆಯು ನಡೆದುಕೊಂಡು ಬಂದಿತು. ಸಂಪಾದಕರ ತಪ್ಪಿಗಾಗಿ ಪತ್ರಿಕೆಯನ್ನೇ ನಾಶ ಮಾಡುವುದು ಶುದ್ಧ ಅನ್ಯಾಯ. ಈ ಘಾತುಕದ ಕಾನೂನು ಮೈಸೂರಿನಲ್ಲಿ ಇರುವುದರಿಂದಲೇ ಯಾವ ಪತ್ರಿಕೆಯೂ ನಮ್ಮ ಮೈಸೂರಿನಲ್ಲಿ ಚೆನ್ನಾಗಿ ಅಭಿವೃದ್ಧಿಗೆ ಬರುತ್ತಲಿಲ್ಲ. ಈಗಿನ ಕಾನೂನು ವೃತ್ತಪತ್ರಿಕೆಗಳಿಗೆ ಹಾಲಾಹಲದಂತೆ ಪರಿಣಮಿಸಿರುವುದು.

ಈ ವಿಷಜ್ವಾಲೆಯಿಂದ ನಮ್ಮ ಜನಜೀವನವೆಲ್ಲವೂ ಮೃತಪ್ರಾಯವಾಗಿರುವುದು. ಆದುದರಿಂದ ಮಹಾಜನಗಳು ಈ ಕಾನೂನನ್ನು ಮೊದಲು ಕೀಳುವ ಪ್ರಯತ್ನವನ್ನು ಮಾಡಬೇಕು.

ಡಬಲ್ಲವರಾರು? ಗಿಣಿಗೆ ಹೇಳಿದಂತೆ ಹೇಳಿ [illegible] ದಕರಾಗಿರುವರು! ಈಚೀಚೆಗಂತೂ ಕುಂಬ[illegible] ಬಿಟ್ಟರು. ಎಷ್ಟೆಂತ ಹೇಳಾರು?

ಪತ್ರಿಕಾಚಾಲಕರಲ್ಲಿ ಶ್ರೀ ವೆಂಕಟಕೃಷ್ಣ[illegible]ನ್ನ ಸಂಸ್ಥಾನದವರೆಲ್ಲರೂ ಪಿತಾಮಹರೆಂದೇ [illegible] ತ್ತಾರೆ. ಈ ಮಾತನ್ನು ಒಪ್ಪದ ವಂಶಘಾತ[illegible] ನಮ್ಮ ಪತ್ರಿಕಾಚಾಲಕರಲ್ಲಿರುವರೆಂದು ನಾ[illegible] ವುದಿಲ್ಲ. ಇಂದು ನಮ್ಮ ಸಂಸ್ಥಾನದಲ್ಲಿರುವ ಪ[illegible] ದು ಪತ್ರಿಕೆಯೂ ತಾತಯ್ಯನವರ ವಂಶದ್ದೇ. [illegible] ರಿನಿಂದ ಬೆಳೆದಿರುವುದೇ. ಅವರ ಉದರದಿಂ[illegible] ಸಿರುವುದೇ. ಹೀಗಿರುವಲ್ಲಿ ಈವತ್ತು ಆ ವಂಶ[illegible] ಪಿತಾಮಹರನ್ನೇ ನ್ಯಾಯವ್ಯಭಿಚಾರರೆಂದರೆ, [illegible] ಹವಾಗಿಯೂ ಆ ವಂಶಕ್ಕೆ ವಂಶವೇ ಹೀನಸು[illegible] ಬೇಕುದೆಂದಾಗುವುದು. ಅವರು ತಪ್ಪಿತಸ್ಥರಾ[illegible] ರೂ ತಪ್ಪಿತಸ್ಥರೇ.

ಈರೀತಿಯಾದ ಶುದ್ಧ ಅನಾಗರಿಕಗ ದಾಪ್ರ[illegible] ನಾಗರಿಕ ದೇಶಗಳಲ್ಲೆಲ್ಲೂ ಔಷಧಿಗೂ ದೊರೆ[illegible] ದು ಇಂತಹುದಕ್ಕೆ ಮೈಸೂರು ದೇಶವು ಪಾ[illegible] ಗಿ ಪರಿಣಮಿಸುವುದೆಂದರೆ ದೇವರೇಗತಿ! ಪಾಶ್[illegible] ಶಗಳಲ್ಲೇ ನಾಚಿಕೆ ಇಂತಹ ಅನ್ಯಾಯವು ನ[illegible] ಮಹಾಜನರು ಅಲ್ಲಿನ ಸರಕಾರಕ್ಕೆ ಸಂಕಾರವನ್ನ[illegible] ಳಗು ಮಾಡುತ್ತಿದ್ದರು. ಬ್ರಿಟಿಷ್ ಇಂಡಿಯಾದಲ್ಲಿ[illegible] ರೂ ಇಂತಹ ಆಜ್ಞೆಯು ಕೊಡಲ್ಪಟ್ಟದ್ದರೆ ಅದ[illegible] ಣವೇ ತಿರಸ್ಕಾರದಿಂದ ಹರಿದುಹಾಕಿ ಆಜ್ಞೆ ಮಾಡಿ[illegible] ದಮೇಲೆ ಸಗಣೀನೀರನ್ನು ಸುರಿಯುತ್ತಿದ್ದರು [illegible] ಈ ಅನ್ಯಾಯವು ನಡೆದಿರುವುದು ಮೈಸೂರು [illegible] ಯ ರಂಗದಲ್ಲಿ. ವಿಶೇಷ ರಾಜಭಕ್ತಿ ವಿಶ್ವಾಸಗ[illegible] ಕೊಂಡು ನ್ಯಾಯದಿಂದ ಸೇವೆ ಮಾಡುತ್ತಿರು[illegible] ಯಕುಲ (ಸರ್ಕಾರ ಮತ್ತು ಪ್ರಜೆ) ಪಿತಾಮಹ[illegible] ದೌರ್ಜನ್ಯದಿಂದ ತಂಬಿ ಬಂದಿರುವ ಈ ಆಜ್ಞೆಗೆ[illegible] ಯನವರು ಕೊಟ್ಟಿರುವ ಮರ್ಯಾಧೆಯು, ಆಜ್ಞೆಗೆ[illegible] ಲವಾದ ಸರಕಾರಕ್ಕೂ ಅದರ ಅಧಿಕಾರಿಗಳಿಗೂ[illegible] ಮೈಸೂರು ದೇಶದ ಮೈಸೂರು ರಾಜಮನೆತನದ[illegible] ರಿ ಹೆಸರು ಎಲ್ಲಿ ಸಂಪೂರ್ಣವಾಗಿ ಕೆಟ್ಟು ಹೋ[illegible] ದೋ ಎಂಬ ಶಂಕೆಯಿಂದ ಇಂತಹ ಉಲ್ಲಂಘನ[illegible] ಪಿದ ಅನ್ಯಾಯದಾಜ್ಞೆಗೂ ಮರ್ಯಾದೆಯನ್ನು [illegible] ರುವ ತಾತಯ್ಯನವರ ಹೃದಯದ ನೈರ್ಮಲ್ಯವ[illegible] ಕಾರದವರು ಇನ್ನೂ ತಿಳಿಯದೆ ಇರುವುದು ಬಹ[illegible] ಚನಿಯವಾದುದು.

ಮುದುಕರಿಗೇ ತಾಳ್ಮೆ. ಅವರಿಗೆ ತಾಳ್ಮೆ ಹೋ[illegible] ದರೆ ವಿಪರೀತಕ್ಕೆ ಹಿಡಿದುಕೊಳ್ಳುವುದು. ಮುದು[illegible] ಳ್ಮೆಯನ್ನು ಕಳೆದು ಕೊಳ್ಳದಂತೆ ವರ್ತಿಸುವುದು [illegible] ರದ ಮುಖ್ಯ ಕೆಲಸ. ಮೈಸೂರು ಸಂಸ್ಥಾನದಲ್ಲಿ[illegible] ಪ್ರಭುತ್ವನಿರ್ಮಾಣಕರೂ ಮಹಾ ರಾಜನೀತಿ[illegible] ಆದ ರಂಗಾಚಾರ್ಲು ರವರ ಕಾಲದಿಂದಲೂ ಸಂ[illegible] ಸೇವೆಯನ್ನು ಮಾಡಿಮಾಡಿ ಅನುಭವವನ್ನು [illegible] ವ ನೀತಿಜ್ಞಾನನಿಧಿಯ ಮುದಿತನದ ಮೂರ್ತಿ[illegible] ಲೆ ಇಂದು ಸರ್ಕಾರದ ಹುಡುಗಾಟದ ಕೈ! ಸರ[illegible] ತೂ ರೀತಿನೀತಿಗಳಿಲ್ಲವೆಂದರೆ ಸಂಸ್ಥಾನದ ಪ್ರ[illegible]

(ಮುಂದಿನ ಪುಟವನ್ನು ನೋಡಿ)

ಸೂಚನೆ

ಸೋಮವಾರದ ದಿನ ಸಂಕ್ರಾಂತಿ ಹಬ್ಬದ ಪ್ರಯುಕ್ತ ನಮ್ಮ ಪತ್ರಿಕೆ ಹೊರಡುವುದಿಲ್ಲ.

ವ್ಯವಸ್ಥಾಪಕ.

ತಾಯಿನಾಡು.

12—1—1929

ವಿವಿಧ ವಿಷಯಗಳು

ಪೋಲೀಸ್ ಸಮ್ಮೇಳನ

ಇದೇ ತಿಂಗಳ 12 ನೇ ತಾ|| ನಲ್ಲಿ ಪೋಲೀಸ್ ಇಲಾಖೆಯ ಮೇಲಿನ ಹುದ್ದೇದಾರರ ಮತ್ತು ಇನ್‌ಸ್ಪೆಕ್ಟರ್ ಜನರಲ್‌ರ ಸಮ್ಮೇಳನವು ನಡೆಯುವುದು.

ಫ್ರಾನ್ಸಿಸನಲ್ಲೂ ಸತ್ಯಾಗ್ರಹ.

ಫ್ರಾನ್ಸ್ ಕಾಲೇಜಿನ ಒಂದು ತರಗತಿಯ ೮೩ ವಿದ್ಯಾರ್ಥಿಗಳು ತಮಗೆ ಸೈನಿಕ ಶಿಕ್ಷಣವನ್ನು ಕೊಡಬೇಕೆಂದು ಕೇಳಿದ್ದಕ್ಕೆ ಅಧಿಕಾರಿಗಳು ಆಗುವುದಿಲ್ಲವೆಂದು ಹುಕ್ಕುಂ ಮಾಡಿದರು. ಅದಕ್ಕಾಗಿ ವಿದ್ಯಾರ್ಥಿಗಳು ಈಗ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಸತ್ಯಾಗ್ರಹದ ಮಹಿಮೆಯು ಈಗ ಪಾಶ್ಚಾತ್ಯರಿಗೂ ತಿಳಿದುಬಂದಿದೆ.

ಸತ್ಯಾಗ್ರಹ ಸನ್ನಾಹ.

ಬೊಂಬಾಯಿಯ ಡಾಗ್ಲಸ್ ಮತ್ತು ಜೆಸ್ಸೀಸ, ತಾಲ್ಲೂಕುಗಳಲ್ಲಿ, ಭೂಕಂದಾಯವನ್ನು ಶೇಕಡ ೪೦ ರಂತೆ ಹೆಚ್ಚಿಸಿರುವುದರಿಂದ, ಅಲ್ಲಿಯ ರೈತರು ಬಹಳ ಕ್ರಾಂತಿಯಿಂದ ಕೂಡಿರುವರು ಎಲ್ಲೆಲ್ಲಿಯೂ ರೈತರ ಸಭೆಗಳು ಸೇರಿ, ಈ ಹೆಚ್ಚಿಸಲ್ಪಟ್ಟ ಕಂದಾಯವನ್ನು ಕೊಡಲೊಪ್ಪುವುದಿಲ್ಲವೆಂದ. ಠರಾವುಗಳು ಮಂಜೂರಾಗುತ್ತಲಿರುವುವು ಅಲ್ಲದೆ ಸರ್ಕಾರದವರು ತಮ್ಮ ಹಾಲ್ ಹವಾಲ್‌ಗಳನ್ನು ಅರಿತು, ಬೇಗನೆ ತಮ್ಮ ಕಷ್ಟಗಳನ್ನು ನಿವಾರಣೆ ಮಾಡ [illegible] ಯ ಪಥವನ್ನು ಅನುಸರಿಸಬೇಕೆಂದು, ಸರ್ಕಾರದವರನ್ನು ಎಚ್ಚರಿಸಿರುವರು.

ಶ್ರೀ ಡಿ. ವಿ. ಗುಂಡಪ್ಪನವರ ಅಭಿಪ್ರಾಯ

ತಾತಯ್ಯನವರು ವಿ ಜರ್ನಾರವರು ಹುಟ್ಟುವದಕ್ಕಿಂತ ಮೊದಲಿನಿಂದಲೂ ಪ್ರಜಾಸೇವೆ ಮಾಡುತ್ತಿರುವರು. ಮಹಾ ಪರಾಕ್ರಮಿಗಳಾದ ಶೇಷಾದ್ರಿ ಅಯ್ಯರ್‌ರವರ ಕೋಪತಾಪಗಳಿಗೆ ಬೆದರಲಿಲ್ಲ. ಅಪರಾಧಿಗಳಿಗೆ ಅಗ್ನಿಜ್ವಾಲೆಯಂತೆಯೂ ಕಪಟಿಗಳಿಗೆ ಉಕ್ಕಿನ ಕಂಭದಂತೆಯೂ ಇರುವರಿವರು. ವಿ. ಪಿ. ಮಾಧವರಾಯರು ಇವರ ಬಾಯಿಗೆ ಬೀಗಹಾಕಲಾರದೇ ಹೋದರು. ಶ್ರೀ ಮನ್ಮಹಾರಾಜರವರಿಂದ ಮರಣದಂಡನೆಗೆ ವಿಧಿಸಲ್ಪಟ್ಟಿದ್ದ ಪತ್ರಿಕಾ ಕಾನೂನಿನ ಭೂತವನ್ನು ಪುನಃ ಆವಾಹನೆಮಾಡಿ ಮುದುಕರ ಮೇಲೆ ಬಿಟ್ಟ ಸರ್ಕಾರದ ವರ್ತನವು ಲೋಕನಿಂದ್ಯವಾದುದು.

(ಹಿಂದಿನ ಪುಟದಿಂದ ಮುಂದುವರಿದುದು.)

ಇಲ್ಲವೆಂದು ಭಾವಿಸುವುದು ತಪ್ಪು. ಅನುಭವಸ್ಥರ ಮೃದುನುಡಿಗಳ ಮಧುರ ಸವಿಯ ಸುಖವನ್ನು ಅನುಭವಿಸಿರುವ ಯಾರಾದರೂ ಹೀಗೆ ಮಾಡುತ್ತಿದ್ದರೆ? ತಾತಯ್ಯನವರ ಮೃದು ಮುದುಕತನವನ್ನು ಕೆಣಕುವಾಗ ಮೈಸೂರು ದೇಶದ—ಅಲ್ಲ ಕರ್ನಾಟಕ ದೇಶದ—ಯುವಕರಲ್ಲಿ ಉರಿಸಿರುವ ನವಜ್ವಾಲೆಯನ್ನು ಕೆಣಕುತ್ತಿರುವ ರೆಂಬುದನ್ನು ಸರ್ಕಾರವು ಚೆನ್ನಾಗಿ ಅರಿಯಬೇಕು.

ಕಾವೇರಿನದಿಯ ಜಲಕ್ಕೆ ವಿವಾದ

ಕಾವೇರಿ ನದಿಯ ನೀರನ್ನು ಯಾವ ಯಾವ ರೀತಿಯಲ್ಲಿ ಹಂಚಿಕೊಂಡು ಉಪಯೋಗಿಸಿಕೊಳ್ಳಬೇಕೆಂದು ಕೆಲವು ಕಾಲಗಳಿಂದ ಮದ್ರಾಸು ಸರ್ಕಾರದವರಿಗೂ ಮೈಸೂರು ಸರ್ಕಾರದವರಿಗೂ ನಡೆಯುತ್ತಿದ್ದ ವಾದವಿವಾದಗಳನ್ನು ಮಧ್ಯಸ್ಥಿಕೆಯ ಮುಖಾಂತರ ತೀರ್ಮಾನ ಮಾಡಿಕೊಳ್ಳಬೇಕೆಂದು ನಿರ್ಧರಿಸಲಾಗಿದೆ.

ಮೈಸೂರು ಅರಮನೆಯ ಖಜಾನೆಯಲ್ಲಿ ದ್ರವ್ಯಾಪಹಾರದ ಮೊಖದ್ದಮೆ. ಛೀಫ್ ಕೋರ್ಟಿನವರ ತೀರ್ಮಾನ.

ಮೈಸೂರು ಅರಮನೆಯ ಖಜಾನೆಯ ಹಣವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡರೆಂಬದಾಗಿ ಸಿ. ಎಸ್. ಲಕ್ಷ್ಮೀನಾರಾಯಣಶೆಟ್ಟಿ, ಸುಬ್ಬಣ್ಣ, ರಾಮಯ್ಯ ಈ ಮೂವರುಗಳಮೇಲೆ ಮೊಕದ್ದಮೆ ಮಾಡಿ ಎಲ್ಲರಿಗೂ ಶಿಕ್ಷೆ ವಿಧಿಸಿತ್ತಷ್ಟೆ. ಲಕ್ಷ್ಮೀನಾರಾಯಣ ಶೆಟ್ಟಿಯು ವಕೀಲ ಟಿ. ರಂಗಾಚಾರಿ ಯವರಿಂದ ಛೀಫ್‌ಕೋರ್ಟಿನಲ್ಲಿ ಅಪ್ಪೀಲು ದಾಖಲು ಮಾಡಿಸಿದನು. ಛೀಫ್‌ಕೋರ್ಟಿನ ನ್ಯಾಯಾಧೀಶರುಗಳಾದ ಮ|| ಜಸ್ಟೀಸ್ ಶ್ರೀನಿವಾಸಯ್ಯರ್, ಮ|| ಜಸ್ಟೀಸ್ ರಾಮಚಂದ್ರ ರಾಯರುಗಳು ೪-೧-೨೯ನೇ ಶುಕ್ರವಾರ ಈ ಕೇಸಿನ ತೀರ್ಮಾನವನ್ನು ಹೇಳಿದರು.

"ಕೆಳಗಿನ ಕೋರ್ಟುಗಳ ತೀರ್ಮಾನವು ಸರಿಯಾಗಿದೆ. ಅಪೀಲು ಅರ್ಜಿಯಲ್ಲಿ ನಮೂದಿಸಿರುವ ಕಾರಣಗಳು ಸಮಂಜಸವಾಗಿಲ್ಲ ಸಾಕಾದಷ್ಟು ರುಜುವಾತುಗಳು ಬಂದನಂತರವೇ ಕೆಳಗಿನ ಕೋರ್ಟಿನವರು ತಮ್ಮ ತೀರ್ಮಾನವನ್ನು ಕೊಟ್ಟಿರುತ್ತಾರೆ. ಅದರಮೇಲೆ ಈಗ ಅದನ್ನು ಬದಲಾಯಿಸಲು ಯಾವ ಆಧಾರವೂ ಕಂಡುಬರುವುದಿಲ್ಲವಾದ ಕಾರಣ ಅಪ್ಪೀಲು ವಜಾಮಾಡಲ್ಪಟ್ಟಿದೆ"

ಈ ಕೇಸಿನ ಸಂಬಂಧವಾಗಿ ಹಾಕಿದ್ದ ಎರಡನೇ ಅರ್ಜಿಯೂ ಕೂಡ ವಜಾಮಾಡಲ್ಪಟ್ಟಿರುತ್ತೆ.

ರಾಜು—ನಾಗಪ್ಪನವರ ಮೊಖದ್ದಮೆ

10ನೇ ತಾ ನ|| ದಿವಸ ಸಿಟಿ ಮ್ಯಾಜಿಸ್ಟ್ರೇಟರು ಕಡೆಯ ಆರ್ಡರನ್ನು ಕೊಟ್ಟರು. ಎವಿಡೆನ್ಸ್ ಆಕ್ಟಿನ 123, 124, ನೇ ಸೆಕ್ಷನ್‌ಗಳು ಅನ್ವಯಿಸುವುದಿಲ್ಲ ವೆಂದು, ವಿಶ್ವೇಶ್ವರಯ್ಯ ಕಮಿಟಿಯ ಸಾಕ್ಷ್ಯದ ಡಾಕ್ಯುಮೆಂಟನ್ನು ಸಾಕ್ಷಿಗೆ ತರಬೇಕೆಂತಲೂ, ಅಸಂಬಂಧವಾಗಿ ಸಾಕ್ಷಿಯನ್ನು ಕೊಡಬೇಕೆಂತಲೂ ತೀರ್ಪು ಮಾಡಿದರು.

ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರ.

ಈ ತಿಂಗಳು 13ನೇ ತಾರೀಖಿನ 3ಗಂಟೆಗೆ ಸರಿಯಾ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಮೇಲ್ಕಂಡ ಸೊಸೈಟಿಯ ಅಡ್ಜರ್ನ್ಡ್ ಮೀಟಿಂಗ್ ನಡೆಯುವುದು ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ

ನಂಜನಗೂಡು ಶ್ರೀಕಂಠೇಶ್ವರ ದೇವಾಲಯ

ಹಳೇನಾಡು ಕರ್ನಾಟಕ ಬ್ರಾಹ್ಮಣ [illegible] ಮುಖಂಡರುಗಳಲ್ಲೊಬ್ಬರಾದ ಶ್ರೀ|| ವೆಂಕಟಲಿಂಗಯ್ಯನವರು ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಹೋಗಿ ಎಲ್ಲಾ ಬ್ರಾಹ್ಮಣರಂತೆ ಅಲ್ಲಿ ನಿಂತು ತಮ್ಮ ಪ್ರಾರ್ಥನೆಗಳನ್ನು ಸಲ್ಲಿಸಿ ತೀರ್ಥಪ್ರಸಾದಗಳನ್ನು ತೆಗೆದುಕೊಳ್ಳುತ್ತಾ ಬೇರೆ ಅದರಂತೆ ಇವರೂ ಸಹ ಸೇವೆ ನಡೆಸಿದರು.

ಈ ಜನಾಂಗದಲ್ಲಿ ಕೆಲವರು ಹಿಂದೆ ಶ್ರೀ ಜಗದ್ಗುರು ಸಂಸ್ಥಾನಕ್ಕೆ ಕೊಡತಕ್ಕ ದೀಪಾರಾಧನೆ ಕಾಣಿಕೆ ಶ್ರೀ ಚರಣ ಕಾಣಿಕೆ ಸಹ ಕೆಲವು ದಿವಸ ಕೊಡದೆ ಇದ್ದದ್ದಕ್ಕಾಗಿ ಶ್ರೀ. ಶ್ರೀ. ಸಂಸ್ಥಾನದಿಂದ ಸುಧ್ಯಾಮುಂಟಪ ದೇವಾಲಯ ಮುಂತಾದ್ದಕ್ಕೆ ಪ್ರವೇಶ ಮಾಡದಂತೆ ಅಪ್ಪಣೆ ದಯಪಾಲಿಸಿದ್ದು ಈಚೆಗೆ [illegible] ಯು ಸಕಲರಿಗೂ ಗೊತ್ತಿದೆ ಬ್ರಾಹ್ಮಣ [illegible] ಹಕ್ಕುಗಳೂ ಶಾಸ್ತ್ರಾಧಾರ ನ್ಯಾಯಪ್ರಕಾರ [illegible] ಇದ್ದೇ ಇರತ್ತದೆ ಹೀಗಿರುವಲ್ಲಿ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಾತ್ರ ಶುಕನಾಶಿ ಅಂಕಣದಲ್ಲಿ ಪ್ರವೇಶ ಮಾಡಲು ಅಡ್ಡಿಪಡಿಸುವುದು ಶುದ್ಧ ಅನ್ಯಾಯ. ದೇವಸ್ಥಾನವೆಂಬುದು ದೇವರ ಸೇವೆಯೆಂಬುದು, ದೇವರ ಕೈಂಕರ್ಯವೆಂಬುದು [illegible] ತ್ತವಿಲ್ಲದೆ ಮಾಡುವಂಥ ಅಕೃತ್ಯಗಳಿಗೆಲ್ಲಾ ಶ್ರೇಷ್ಠವಾದ ಪ್ರಾಯಶ್ಚಿತ್ತಸ್ಥಾನವಾಗಿರುತ್ತದೆ. ಹಳ್ಳಿಗಾಡಿನಲ್ಲಿ ಸೇರಿಕೊಂಡು ಬ್ರಾಹ್ಮಣಕರ್ಮಗಳನ್ನೂ ಪಿತೃಕಾರ್ಯ ಪದ್ಧತಿಗಳನ್ನು ಬಿಡದೆ ದೇವಬ್ರಾಹ್ಮಣರಲ್ಲಿಯೂ ಭಾಗವತ್ಕೃತ್ಯದಲ್ಲಿಯೂ ಸಹ ವಿಶೇಷ ಭಕ್ತಿಯುಳ್ಳ ಈ ಬ್ರಾಹ್ಮಣರು ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಶುಕನಾಶಿ [illegible] ಇಲ್ಲವೆಂದು [illegible] ತಪ್ಪು. ಯಾರೇ ಆಗಲಿ, ಭಗವಂತನಲ್ಲಿ ನಿಜವಾದ ಭಕ್ತಿ ಇಟ್ಟಿರುವವರು ಅವನ ಪ್ರೀತಿಗೆ ಪಾತ್ರರಾಗಿ ಉತ್ತಮವಾದ ಕೈವಲ್ಯವನ್ನು ಹೊಂದುವರು. ಈ ವಿಚಾರವೇ ಶ್ರುತಿ, ಸ್ಮೃತಿ, ಇತಿಹಾಸ ಪುರಾಣಗಳಲ್ಲಿ ತುಂಬಿರುವುದು ಸರ್ವಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇದೆ. ಭಗವಂತನ ನಿಯಮವೇ ಈ ರೀತಿ ಇರುವಾಗ ಅವನ ಕಿಂಕರರಾದ ದೇವಸ್ಥಾನದ ಉದ್ಯೋಗಸ್ಥರು ಭಗವದ್ಭಕ್ತರ ವಿಚಾರದಲ್ಲಿ ಯಾವ ವಿಧವಾದ ಅಪಚಾರವನ್ನೂ ನಡೆಸುವುದು ಶ್ರೇಯಸ್ಕರವಲ್ಲ. ಪರಸ್ಪರ ವಿರೋಧಗಳನ್ನು ತ್ಯಜಿಸಿ ಐಕಮತ್ಯವನ್ನು ವಹಿಸಬೇಕಾದ್ದು ಮುಖ್ಯಾಂಶವಾಗಿದೆ ಈ ಬ್ರಾಹ್ಮಣರನ್ನು ಮೈಸೂರು ಸಂಸ್ಥಾನದ ಎಲ್ಲಾ ದೇವಾಲಯಗಳ ಶುಕನಾಶಿ ಅಂಕಣಗಳೊಳಗೆ ಹೋಗಿ ದೇವತಾಸೇವೆಯನ್ನು ಮಾಡಿಕೊಂಡು ಬರುತ್ತಾ ಇರುವ ಮೇರೆ ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ಶುಕನಾಶಿ ಅಂಕಣದೊಳಗೆ ಹೋಗಲು ಅಡ್ಡಿಪಡಿಸುವುದನ್ನು ಸರ್ಕಾರದವರು ತಪ್ಪಿಸಬೇಕಾಗಿ ಪ್ರಾರ್ಥಿಸುತ್ತೇನೆ

ಲಕ್ಷ್ಮೀನರಸಿಂಹಾಚಾರ್,

[illegible]

[illegible]

Printed and published by P. R. Ramaiya, at Sri ...nmaPress, D Subbiah Road Mysore.

Regd No. M 2322 ‖ ವಂದೇ ಮಾತರಂ ‖ ಬಿಡಿಪ್ರತಿಕಾಸು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ { ... ಚಂದಾ { ಪರಸ್ಥಳಕ್ಕೆ ...

ಸಂಪುಟ ೧] ಮಂಗಳವಾರ ೧೫ ಜನವರಿ ೧೯೨೯ [ಸಂಚಿಕೆ ೯೪

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು.

ಎಲ್ಲಾ ಸೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುವು

ತಲೆ ಸೋವು — ಕೆಮ್ಮು
ವಾತ ಶೂಲೆ — ನೆಗಡಿ
ಬೆನ್ನು ಸೋವು — ಸುಟ್ಟ ಘಾಯ
ಕಟಿ ಶೂಲೆ — ಹುಣ್ಣುಗಳು
ಪಾರ್ಶ್ವ ವಾಯು — ಉಳುಕಿದ ಸೋವು



ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸಮೀಪದಲ್ಲಿರಿಸಿಕೊಂಡಿರಿ.

ಸಿದ್ಧ ವೈದ್ಯನೋಪಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ:—ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಷ ಜ್ವರ ಅಜೀರ್ಣವಾಯುಗಳನ್ನೂ ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ:—ಅತಿ ಮಧುರ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ಹವಾಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ಶೀತವಾಯು, ಪ್ಲೇಗು ಇನ್‌ಫ್ಲುಯನ್‌ಜ, ಕಾಲರಾ ಮುಂತಾದ್ದನ್ನು ಖಾತರಿ ಗುಣಪಡಿಸುತ್ತದೆ. ಪ್ರತಿಮನೆಗಳಲ್ಲೂ ಇರಬೇಕಾದದ್ದು ಅತ್ಯವಶ್ಯಕ. ಬೆಲೆ ಸೀಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ತೈಲ ಷರಬತ್ತು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ. . ಪಂಡಿತರು,

ಸದ್ವೈದ್ಯಶಾಲಾ ನಂಜನಗೂಡು

TO LET

ಪರೀಕ್ಷಿಸಿ ನೋಡಿರಿ! ತ್ವರೆ ಮಾಡಿರಿ!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ

ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನ ಲೇಹ್ಯ.

ಇದರ ಸೇವನೆಯಿಂದ ಧಾತುಸ್ರಾವ ಅಜೀರ್ಣ ಪಿತ್ತಿಕಾವಾತ, ಮೇಹವಾಯು, ಗರ್ಭವಾತ, ನಿದ್ರಾಭಂಗ ನರಗಳ ದೌರ್ಬಲ್ಯ, ಮೂತ್ರೋಪಾಧಿಗಳು, ಕ್ಷಯ, ಕುಬ್ಬಸ ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು. ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ಹೇಳದೆ ಕೆಲವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೊಗಳುವಿರಿ.

"ರತ್ನ ಕು ಜತನ ಕರೊ"

ಕ್ರಯ 12 ತೊಲ ಡಬ್ಬಿ 1 ಕ್ಕೆ ರೂ. 2—೮—
(ಭಸ್ಮ ಸಿಂಧೂರಗಳು ಸೇರಿರುವ) 4—0—

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ ಸನ್ನಿ ವಾತಜ್ವರ ಇನ್‌ಫ್ಲುಯನ್‌ಜಾ ನ್ಯುಮೋನಿಯಾ ವಿಷಮಜ್ವರ ಪ್ಲೇಗು ಮೂರರ ಜ್ವರ ಛಳಿಜ್ವರ ಮಕ್ಕಳ ಎಲ್ಲವು ಶೀತನೆಗಡಿ ಕೆಮ್ಮು ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹು ಕಾಲದಿಂದಲೂ ಅನೇಕರಿಂದ ಹೊಗಳಿಕೆಹೊಂದಿದ ... ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1 ಕ್ಕೆ 0—8—0
" 40 " " 0—4—0

ವಿ. ಪಿ. ಛಾರ್ಜು ಪ್ರತ್ಯೇಕ. ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕವಿಧ ತೈಲ ಲೇಹ್ಯ, ಮಾತ್ರೆ, ಚೂರ್ಣ ಭಸ್ಮ ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—

ಪಂಡಿತರು ಮುದ್ಗಲ್ ರಾಮಚಂದ್ರಾಚಾರ್ಯರು,

ಆಯುರ್ವೇದಾಲಯ,

Printed and published by P. R. Ramaiya. at Sri RamaPress, D Subbiah Road Mysore.

Regd No. M 2322

ವಂದೇ ಮಾತರಂ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

[illegible]

ಸಂಪುಟ ೧] ಬುಧವಾರ ೧೬ ಜನವರಿ ೧೯೨೯ [ಸಂಚಿಕೆ [illegible]

TAI NADU
16—1—1929

ಸರ್ಕಾರದ ತಿರಸ್ಕಾರ

ಪತ್ರಿಕೆಗಳು ಸರ್ಕಾರವನ್ನು ತಿರಸ್ಕಾರಮಾಡುತ್ತಿವೆ. ಜನಗಳಿಗೆ ಸರ್ಕಾರದಲ್ಲಿ ತಿರಸ್ಕಾರಭಾವವುಂಟಾಗುವ ಬರವಣಿಗೆಗಳು ಬರುತ್ತಿವೆ ಎಂದು ಕೆಲವು ಅಡಳಿತಗಾರರು ಆಕ್ಷೇಪಿಸುವುದು ವಾಡಿಕೆಯಾಗಿದೆ. ಈ ಸಂದರ್ಭದಲ್ಲಿ ಸರ್ಕಾರವೆಂದರೆ ಯಾವುದು? ತಿರಸ್ಕಾರವೆಂದರೆ ಯಾವುದೆಂಬುದನ್ನು ಸ್ಪಷ್ಟವಾಗಿ ವಿವರಿಸಬೇಕಾಗಿರುವುದು. ಸರ್ಕಾರವೆಂಬುದು ಒಂದು ಅಡಳಿತಸಂಸ್ಥೆ, ದುಷ್ಟನಿಗ್ರಹಕ್ಕಾಗಿಯೂ ಶಿಷ್ಟಸಂರಕ್ಷಣೆಗಾಗಿಯೂ ಈ ಸಂಸ್ಥೆಯು ಏರ್ಪಾಡಾಗಿರುವುದು. ಸರ್ವಸಾಮಾನ್ಯವಾಗಿ ಈ ಸಂಸ್ಥೆಗೆ ಪ್ರಜೆಗಳೆಲ್ಲರೂ ಗೌರವವನ್ನೇ ತೋರಿಸುವರು. ಕ್ಷತ್ರಿಯಶಕ್ತಿಯೆಲ್ಲಾ ಸರ್ಕಾರದಲ್ಲಿ ಅಡಕವಾಗಿರುವುದರಿಂದ ಅದಕ್ಕೆ ಪ್ರಭುತ್ವಶಕ್ತಿಯೂ ನಿಗ್ರಹಶಕ್ತಿಯೂ ಉಂಟು ಇದು ಎಲ್ಲರೂ ಒಪ್ಪುವ ಮಾತೇಸರಿ. ಇದೇ ಸರ್ಕಾರವು ತಪ್ಪನ್ನು ಮಾಡಿದರ ಅದು ತಪ್ಪುಮಾಡಿತೆಂದು ಹೇಳುವ ಅಧಿಕಾರವು ಪ್ರಜೆಗಳಿಗ ಉಂಟು. ಅವಿವೇಕವಾಗಿ ನಡೆದರೆ ಅವಿವೇಕವೆಂದು ಹೇಳುವುದಕ್ಕೂ ಸುಳ್ಳು ಹೇಳಿದರೆ ಸುಳ್ಳೆಂದುಹೇಳುವುದಕ್ಕೂ, ಸಾಮರ್ಥ್ಯವಿಲ್ಲದಿದ್ದರೆ ಸಾಮರ್ಥ್ಯವಿಲ್ಲವೆಂದು ಹೇಳುವುದಕ್ಕೂ ಪ್ರಜೆಗಳಿಗೆ ಅಧಿಕಾರವುಂಟು. ಮುಂದುವರಿದ ರಾಷ್ಟ್ರಗಳಲ್ಲಿ ಆ ಸರ್ಕಾರವನ್ನೇ ಬದಲಾಯಿಸಿ ಬೇರೊಂದು ಸರ್ಕಾರವನ್ನು ಏರ್ಪಡಿಸುವುದಕ್ಕೂ ಅಧಿಕಾರವುಂಟು. ನಮ್ಮ ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರನ್ನು ಹೊರತಾಗಿ ಸರ್ಕಾರದ ಲೋಪದೋಷಗಳನ್ನು ಖಂಡಿಸುವುದಕ್ಕೆ ಪ್ರಜೆಗಳಿಗೆ ಅಧಿಕಾರವಿರುವದು. ಪ್ರಜೆಗಳ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಪ್ರಕಟವಾಗುವುವು. ಕೆಲವು ಪತ್ರಿಕೆಗಳು ಸರ್ಕಾರವು ಮಾಡಿದ್ದು ಸರಿಯೆಂದು ವಾದಿಸುವುವು. ಕೆಲವು ಪತ್ರಿಕೆಗಳು ಸರ್ಕಾರವು ಮಾಡಿದ್ದು ತಪ್ಪೆಂದು ವಾದಿಸುವುವು.

ಸರ್ಕಾರವನ್ನು ಹೊಗಳುವ ಪತ್ರಿಕೆಗೆ ಎಷ್ಟು ಅಧಿಕಾರವಿರುವುದೋ ಸರ್ಕಾರವನ್ನು ಖಂಡಿಸುವ ಪತ್ರಿಕೆಗೂ ಅದೇ ಅಧಿಕಾರವಿರಬೇಕು. ಈ ಮಧ್ಯೆ ತಿರಸ್ಕಾರವೆಂದರೆ ಏನೆಂಬುದು ಅರ್ಥವಾಗವುದಿಲ್ಲ. ನಾವು ಒಬ್ಬ ಮನುಷ್ಯನನ್ನು ತಿರಸ್ಕಾರ ಮಾಡುವ ರೀತಿಯಲ್ಲಿ ಸರ್ಕಾರವನ್ನು ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಪ್ರಭು, ನಿಗ್ರಹ ಶಕ್ತಿಗಳು ಇರುವುದನ್ನು ಎಲ್ಲರೂ ಬಲ್ಲರು. ಶಕ್ತಿಯಿರುವ ಕಡೆ ತಿರಸ್ಕಾರಭಾವನೆಯಿರುವುದಿಲ್ಲ. ಆದರೆ ಸರ್ಕಾರವು ಅವಿವೇಕವಾಗಿ ನಡೆದರೆ ಪ್ರಜೆಗಳಿಗೆ ಸರ್ಕಾರದ ವಿಷಯದಲ್ಲಿ ಅಸಮಾಧಾನವಾಗುವದು. ಅನ್ಯಾಯ ಮಾಡಿದರೆ ಅಸಹನೆಯುಂಟಾಗುವುದು. ಸರ್ಕಾರವು ನ್ಯಾಯವಲ್ಲದ ಕೆಲಸಗಳನ್ನು ಮಾಡಿ ಪ್ರಜೆಗಳು ಅನ್ಯಾಯವೆಂದು ಹೇಳುವರಲ್ಲಾ ಎಂದು ಕೋಪಗೊಂಡರೆ ಪ್ರಯೋಜನವಿಲ್ಲ. ಪತ್ರಿಕೆಗಳು ಪ್ರಜಾಭಿಪ್ರಾಯವನ್ನು ಕನ್ನಡಿಯಂತೆ ಪ್ರತಿಬಿಂಬಿಸುವುವು. ಸರ್ಕಾರದಲ್ಲಿ ಜನಗಳಿಗೆ ಅಸಮಾಧಾನವುಂಟಾದರೆ ಅದು ಸರ್ಕಾರದವರ ಕೆಲಸಕಾರ್ಯಗಳಿಂದಲೇ ಹೊರತು ಪತ್ರಿಕೆಗಳ ಬರವಣಿಗೆಯಿಂದಲ್ಲ. ಜನಗಳ ಮನಸ್ಸಿನಲ್ಲಿರುವುದನ್ನು ಪತ್ರಿಕೆಗಳು ಬರೆಯುವುವು. ಪತ್ರಿಕೆಗಳು ಮಾಡುತ್ತಿರುವುದು ಸತ್ಯಪ್ರಚಾರ. ಸರಕಾರದವರು ಪತ್ರಿಕೆಗಳ ಮೂಲಕ ಪ್ರಜಾಭಿಪ್ರಾಯವು ಹೇಗಿರುವುದೆಂಬುದನ್ನು ತಿಳಿದು ಎಚ್ಚೆತ್ತು ಕೊಳ್ಳಬೇಕು. ಪತ್ರಿಕೆಗಳಿರುವುದು ಒಂದು ದೊಡ್ಡ ಕ್ಷೇಮ. ಅದರಲ್ಲೂ ಯಥಾರ್ಥವಾದಿಗಳಾದ ಪತ್ರಿಕೆಗಳಿರುವುದು ಇನ್ನೂ ಹೆಚ್ಚು ಕ್ಷೇಮ. ಸರ್ಕಾರದವರಿಗೆ ಪ್ರಜೆಗಳ ಮನಸ್ಸಿನಲ್ಲಿರುವುದು ದಿನದಿನಕ್ಕೂ ಗೊತ್ತಾಗುವುದು. ಅಸಮಾಧಾನವುಳ್ಳವರೆಲ್ಲರೂ ತಮ್ಮ ಅಸಮಾಧಾನಗಳನ್ನು ಪತ್ರಿಕಾ ಮುಖೇನ ಪ್ರಕಟಿಸುವರು. ಪ್ರಜಾಭಿಪ್ರಾಯದ ಪ್ರಕಟನೆಯಿಂದ ಜನಗಳ ಹೃದಯವು ಪರಿಶುದ್ಧವಾಗುವುದು. ಪ್ರಕಟನೆಗೆ ಅವಕಾಶ ಕೊಡದೆ ಹೋದರೆ ಉದ್ವೇಗಗಳು ಮನಸ್ಸಿನಲ್ಲಿಯೇ ನಿಂತು ಪಿತೂರಿ ಒಳಸಂಚು ಮತ್ತು ಮೊದಲಾದುವುಗಳಿಗೆ ಅವಕಾಶವಾಗುವುದು. ಪತ್ರಿಕಾ ಸ್ವಾತಂತ್ರವುಳ್ಳ ಯಾವ ರಾಜ್ಯದಲ್ಲಿಯೂ ಪಿತೂರಿ ಒಳಸಂಚುಗಳಿರುವುದಿಲ್ಲ. ಪತ್ರಿಕಾ ಸ್ವಾತಂತ್ರ್ಯವಿಲ್ಲದ ರಾಜ್ಯಗಳಲ್ಲಿಯೇ ಪಿತೂರಿಗಳು ಮನೆ ಮಾಡಿಕೊಳ್ಳುವುವು. ಆದ್ದರಿಂದ ಇಂಗ್ಲೀಷಿನಲ್ಲಿ ಹೇಳುವಂತೆ ಪತ್ರಿಕೆಗಳು ಸೇಫ್ಟಿವಾಲ್ವುಗಳಾಗಿ ಪರಿಣಮಿಸುವುವು. ನಮ್ಮ ಸಂಸ್ಥಾನದಲ್ಲಿ ಸರ್ಕಾರವನ್ನು ಬದಲಾಯಿಸುವುದಕ್ಕೆ ಪ್ರಜೆಗಳಿಗೆ ಅಧಿಕಾರವಿಲ್ಲ. ಸರಕಾರವನ್ನು ಬದಲಾಯಿಸುವುದೆಂದರೆ ಮಂತ್ರಿಮಂಡಲವನ್ನು ನೇಮಿಸುವುದು.

ಈಗ ನಮ್ಮ ಮೈಸೂರಿನಲ್ಲಿ ಪ್ರಜೆಗಳಿಗೆ ಅಧಿಕಾರಗಳು ಯಾವುವೂ ಇಲ್ಲ. ಈಗ ಪತ್ರಿಕೆಗಳು ಮಾಡುತ್ತಿರುವ ಪ್ರಯತ್ನಗಳೆಲ್ಲಾ ಸರ್ಕಾರವನ್ನು ತಿದ್ದುವುದಕ್ಕಾಗಿ ಅಥವಾ ಶ್ರೀಮತ್ ಮಹಾರಾಜರಿಗೆ ಪ್ರಾರ್ಥನೆ ಮಾಡಿ ಬೇರೆ ಮಂತ್ರಿಮಂಡಲವನ್ನು ನೇಮಿಸುವಂತೆ ಪ್ರಯತ್ನ ಮಾಡುವುದಕ್ಕಾಗಿ. ಈಗಲೂ ಈ ಮಂತ್ರಿಮಂಡಲವು ಕರ್ತವ್ಯ ಲೋಪವನ್ನು ಮಾಡಿದೆ ಎಂದು ಘಂಟಾಘೋಷವಾಗಿ ಬಹಿರಂಗವಾಗಿ ಸಭೆಗಳನ್ನು ಮಾಡಿ ಪತ್ರಿಕೆಗಳ ಮುಖೇನ ಪ್ರಚಾರ ಮಾಡುವುದಕ್ಕೆ ನಮಗೆ ಸಂಪೂರ್ಣ ಅಧಿಕಾರವಿರುವುದ.

ಬೆಂಗಳೂರು ಗಲಭೆಗಳ ಪ್ರಕರಣದಲ್ಲಿ ಈಗಿನ ಮಂತ್ರಿಮಂಡಲದವರು ಮಾಡಿರುವ ಕರ್ತವ್ಯ ಲೋಪ ದೋಷಗಳು ಅನೇಕವಿರುವುವು ಎಂಬುದನ್ನು ಹೇಳುವುದಕ್ಕೆ ನಮಗೆ ಅಧಿಕಾರವಿರುವುದ. ಆದರೆ ಇದರಲ್ಲಿ ತಿರಸ್ಕಾರಬುದ್ಧಿ ಯಾವುದೂ ಕಾಣಿಸುವುದಿಲ್ಲ. ಈಗಿನ ಮಂತ್ರಿಮಂಡಲದವರಿಗೆ ಅವರ ಸ್ಥಾನಮಾನಗಳಿಗನುಸಾರವಾಗಿ ಅವರಿಗೆ ಗೌರವವು ಇದ್ದೇ ಇರುವುದು. ಮಿ|| ಮಿರ್ಜಾಸಾಹೇಬರು ದಿವಾನರಾಗಿರುವ ವರೆಗೂ ಅವರು ದಿವಾನ್ ಪದವಿಗೆ ಸಲ್ಲಬೇಕಾದ ಮಾನಮರ್ಯಾದೆಗಳನ್ನು ಪತ್ರಿಕೆಗಳೆಲ್ಲವೂ ಸಲ್ಲಿಸುವುವು. ಇದರಲ್ಲಿ ವ್ಯಕ್ತಿಯ ಪ್ರಶ್ನೆಯೇ ಇಲ್ಲ. ಇರುವುದು ಆಡಳಿತದ ಪ್ರಶ್ನೆ. ಈಗಿನ ಮಂತ್ರಿಮಂಡಲದವರು ಮಾಡಿರುವ ತಪ್ಪು ಆಡಳಿತದಿಂದ ಅವರಲ್ಲಿ ಪ್ರಜೆಗಳಿಗೆ ಅಸಮಾಧಾನವಾಗಿದೆ. ಈಗಲೂ ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ತಮ್ಮ ಕರ್ತವ್ಯ ಲೋಪದೋಷಗಳನ್ನು ತಿದ್ದಿಕೊಂಡು ತಪ್ಪಿತಸ್ಥರೆಲ್ಲರನ್ನೂ ದಂಡಿಸಿ ನ್ಯಾಯಸಮರ್ಥನೆಯನ್ನು ಮಾಡಿದರೆ ಈಗ ಅವರನ್ನು ಖಂಡಿಸುತ್ತಿರುವವರೇ ನಾಳೆ ಶ್ಲಾಘಿಸಬಹುದು. ಪ್ರಜಾಭಿಪ್ರಾಯವನ್ನು ಅಪಗಣಿಸುವ ದುರ್ಬುದ್ಧಿಯು ದೂರಾಂತರವಾದೀತು.

ವಿದ್ಯುತ್ಪ್ರಭಾವ.

ಅಮೇರಿಕಾದಲ್ಲಿ ನೂತನ ಸ್ಟೇಟ್ ಒಂದು ತಯಾರಾಗಿದೆ ಅಲ್ಲಿನ ಕೆಲ್ಸಗಳೆಲ್ಲಾ ಸಂಪೂರ್ಣವಾಗಿ ಯಂತ್ರಗಳಿಂದಲೇ ನಡೆಯುತ್ತಿರುವುದರಿಂದ ಜನರ್‍ಯಾರೂ ಕೆಲಸ ಮಾಡುವುದೇ ಇಲ್ಲ. ಈ ವಿದ್ಯುಚ್ಛಕ್ತಿಯು 3, 00, 000 ಮನೆಗಳಿಗೆ ಅನುಕೂಲವನ್ನು ಕಲ್ಪಿಸಿಕೊಟ್ಟಿದೆ.

ವಿವಿಧ ವಿಷಯಗಳು

ವೃತ್ತ ಪತ್ರಿಕೆಗಳು

ಬಾಗಿಲ ಕೋಟೆಯ ಪತ್ರಕರ್ತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಮ|| ರಾ|| ಡಿ. ವಿ. ಗುಂಡಪ್ಪನವರು ಆ ಸಂದರ್ಭದಲ್ಲಿ ಮಾಡಿದ ಭಾಷಣವು [illegible] ರೂಪದಲ್ಲಿ ಪ್ರಕಟವಾಗಿ ಬಂದಿರುವುದು. ಪ್ರತಿ [illegible] ಕರ್ನಾಟಕ ಪತ್ರಕರ್ತನೂ ಈ ಗ್ರಂಥವನ್ನು [illegible]ರ್ಶವಾಗಿ ಇಟ್ಟು ಕೊಳ್ಳುವುದಕ್ಕೆ ಇದು ಅರ್ಹ[illegible]ದು. ಈ ಪುಸ್ತಕದ ವಿಚಾರವಾದ ಸಮಾಲೋಚನೆಯನ್ನು ಕ್ರಮವಾಗಿ ಮಾಡುವೆವು. ನಮ್ಮ ವಾಚಕರ ಪ್ರಯೋಜನಕ್ಕಾಗಿ ಅದರಲ್ಲಿನ ಕೆಲವು ಉಪಯುಕ್ತ ವಿಷಯಗಳನ್ನು ಪ್ರಕಟಿಸುವೆವು. ಈ ಪುಸ್ತಕಕ್ಕೆ ಬೆಲೆ ಮೊದಲಾದುವನ್ನು ಹಾಕಿಲ್ಲ, ಆ ವಿಷಯವನ್ನು ರಾ|| ಡಿ. ವಿ. ಗುಂಡಪ್ಪನವರಿಗೆ ಬರೆದು ತಿಳಿದುಕೊಳ್ಳಬೇಕು. ಒಳ್ಳೆ ಸಕಾಲದಲ್ಲಿ ಈ ಗ್ರಂಥವು ನಮ್ಮ [illegible] ದೊರೆಯುವಂತೆ ಮಾಡಿದ್ದಕ್ಕಾಗಿ ಮ|| ರಾ|| ಗುಂಡಪ್ಪನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಬಾಲಚಮೂಗಳ ಬೈಸಿಕಲ್ ಸಂಚಾರ

ರಾಜಧಾನಿಯ ಸ್ಕೌಟ್ ಮಾಸ್ಟರಾದ ಮ|| ರಾ|| ವೈ. ಕೃಪದಾಸರವರು ಐದು ರೋವರ್ ಸ್ಕೌಟುಗಳ ಜೊತೆ ಸಂಸ್ಥಾನಾದ್ಯಂತ 1500 ಮೈಲಿಯ ಸುತ್ತಳತೆಯಲ್ಲಿರುವ (ಪ್ರತಿ ಡಿಸ್ಟ್ರಿಕ್ಟಿನ ಮುಖ್ಯ ಮುಖ್ಯವಾದ [illegible] ಚೀನ, ಶಿಲ್ಪಿಕೆಲಸ ಕೈಗಾರಿಕೆ ಮತ್ತು ವಿಜ್ಞಾನ ಸಂಬಂಧವೂ ಆಗಿರುವುದು) ಸ್ಥಳಗಳನ್ನು ಬೈಸಿಕಲ್ ಮೇಲೆ 8 ವಾರಗಳೊಳಗಾಗಿ ಸಂಚರಿಸಿಕೊಂಡು ಬರಬೇಕೆಂದು ಹೊರಟಿರುತ್ತಾರೆ. ಇವರು ಮಾರ್ಗದಲ್ಲಿ ಸ್ಕೌಟು ಟ್ರೂಪುಗಳನ್ನೂ ಸೈಕಲ್ ಟೂರಿಸ್ಟ್ ಕ್ಲಬ್‌ಗಳನ್ನೂ ಸಂಧಿಸುವರು. ಇವರ ಹೊರಡುವಾಗ ಶ್ರೀಮದ್ಯುವರಾಜರವರು ಸ್ಕೌಟುಗಳೆಲ್ಲರಿಗೂ ತಮ್ಮ ಸಂದೇಶವನ್ನು ಕಳುಹಿಸುವರು. ಛೀಫ್ ಕಮೀಷನರ್‌ರವರಾದ ಮ|| ರಾ|| ಶಂಕರನಾರಾಯಣರಾಯರವರೂ ಸಹ ಸಂಸ್ಥಾನಾದ್ಯಂತ ಇರುವ ತಮ್ಮ ಸಹೋದರ ಸ್ಕೌಟುಗಳಿಗೆ ಒಂದು ಸಂದೇಶವನ್ನು ಕಳುಹಿಸುವರು. ಇವನ್ನು ಇವರು ಸಂಚಾರ ಮಾಡುವ ಸ್ಥಳಗಳಲ್ಲೆಲ್ಲಾ ತಿಳಿಸುವರು.

ಈ ಗುಂಪಿನವರು ಗ್ರಾಮನ, ಯಕ್ಷಿಣಿಯೇ ಮೊದಲಾದ ವಿದ್ಯೆಗಳಲ್ಲಿ ನಿಪುಣತ್ವವನ್ನು ಪಡೆದಿರುವರು. ಮಂತ್ರದ ಸಹಾಯದಿಂದ ಬಿಚಿ-ಗೋಷ್ಠವಾಗಿ ಪ್ರತಿ [illegible] ಕಡೆಯಲ್ಲೂ ಸಂಗೀತ ಮತ್ತು ಆಟಪಾಟಗಳ [illegible] ಏರ್ಪಡಿಸುವರು. ಉಳಿಕೆಯ ಮೊಬಲಗು [illegible] ಮೂವ್‌ಮೆಂಟಿಗೆ ಕೊಡಲ್ಪಡುವುದು.

ದೇಶೀಯ ಫಿಲಂಗಳ ಉತ್ತೇಜನ

ಡೆಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ [illegible] ಕಾಶಂರವರೇ ಮೊದಲಾದವರು ದೇಶೀಯ ಫಿಲಂ [illegible] ಪಾರಕ್ಕೆ ಉತ್ತೇಜನವನ್ನು ಕೊಡುವ ಠರಾವನ್ನು [illegible] ಸುವರು.

ಲಕ್ಷಾಂತರ ರೂಗಳ ಮೋಸ

ಇಂಪೀರಿಯಲ್ ಬ್ಯಾಂಕಿನ ಮೊಜಿಡೀಸುಪರಿಂಟೆಂಡೆಂಟರಾಗಿದ್ದ ಮಿ|| ರಂಜಿತ್ ಎಂಬುವರು [illegible] ರೂಗಳ ಮೋಸಕೃತ್ಯನಡೆಸಿದರೆಂದು ಪೋಲೀಸರು ಅವರನ್ನು ದಸ್ತಗಿರಿ ಮಾಡಿರುವರು.

ಶ್ರೀಯುತ ಡಿ. ವಿ. ಗುಂಡಪ್ಪನವರ ಅಭಿಪ್ರಾಯ.

ಯಾರು ಪತ್ರಿಕೆಗಳ ಆಕ್ಷೇಪಣೆಗಳನ್ನು ತಡೆಯಬಲ್ಲಷ್ಟು ಸಾಹಸಸಾಮರ್ಥ್ಯಗಳನ್ನು ಪಡೆದಿರುವರೋ ಅಂಥವರು ನಿಜವಾದ ಸರ್ಕಾರವನ್ನು ನಡೆಸ [illegible] ಯಾರು ಪತ್ರಿಕೆಗಳಿಗೆ ಅಂಜುವಷ್ಟು ದುರ್ಬಲರೂ ಪತ್ರಿಕೆಗಳ [illegible] ಕಳೆದುಕೊಳ್ಳುವಷ್ಟು ಅವಿಚಕ್ಷಣರೂ ಅಪ್ರಶಸ್ತರೂ ಆಗಿರುವರೋ ಅವರು ಸರ್ಕಾರವನ್ನು ನಡೆಸುವುದೇ ಬೇಡ.

ತಾಯಿನಾಡು.

16—1—1929

ವರ್ತಮಾನ ಸಂಗ್ರಹ

ಅಧಿಕಾರಿಯ ದಸ್ತಗಿರಿ.

ಬೊಂಬಾಯಿ ಜಕ್ಕರಾಜೀ ಕಮಿಟಿಯು ಶಿಕ್ಷಾರ್ಹನೆಂತ ಬಂದ ಹೊರಿದರಿಂದ ತಪ್ಪಿತದ ಮೇಲೆ ಮಿ|| ಅಜಮಲ್ ಹಮೀದ್ ಖಾನ್ ಎಂಬಧಿಕಾರಿಯನ್ನು ಪೋಲೀಸಿನವರು ದಸ್ತಗಿರಿ ಮಾಡಿರುವರು.

ಗುಜರಾತ್ ಕಾಲೇಜಿನ ಬಹಿಷ್ಕಾರ.

ಗುಜರಾತ್ ಕಾಲೇಜ್ ವಿದ್ಯಾರ್ಥಿಗಳ ಬಹಿಷ್ಕಾರವು ಒಂದೇ ಸಮನಾಗಿ ನಡೆಯುತ್ತಿದೆ. ಈ ತಿಂಗಳು 9ನೇ ದಿನ 11 ಘಂಟೆಗೆ ಯಾರೂ ಕಾಲೇಜಿಗೆ ಪ್ರವೇಶಿಸಲಿಲ್ಲ ಎಲ್ಲರೂ ಹೊರ ಎಂದು ಕೂಗಿಕೊಳ್ಳುತ್ತಿದ್ದರು.

ಮದುವೆಯಾದ ವಿದ್ಯಾರ್ಥಿಗಳ ಬಹಿಷ್ಕಾರ.

ಪೇಷಾವರ್‌ನ ವಿಕ್ಟೋರಿಯ ಹೈಸ್ಕೂಲ್ ಮ್ಯಾನೇಜಿಂಗ್ ಕಮಿಟಿಯವರು ವಿವಾಹವಾಗಿರುವ ವಿದ್ಯಾರ್ಥಿಗಳ ಮೇಲೆ ಬಹಿಷ್ಕಾರ ಹಾಕಿರುವರು. ವ್ಯಾಸಂಗ ಮಾಡುತ್ತಿರುವ ಯಾವ ವಿವಾಹವಾಗುವ ವಿದ್ಯಾರ್ಥಿಯೂ ಸ್ಕೂಲಿಗೆ ಸೇರಿಸಲ್ಪಡುವುದಿಲ್ಲವೆಂಬ ನಿರ್ಣಯವನ್ನೂ ಸಹ ಮಾಡಿರುವರು.

ಕ್ವೆಟಾದ ಅನಾಹುತ.

ಈ ಮಾಹೆ 8 ನೇ ತಾ|| ಮಧ್ಯಾಹ್ನ 1½ ಘಂಟೆಯಲ್ಲಿ ಬೆಂಕಿಯ ಅನಾಹುತ ನಡೆದು ಐವತ್ತು ಭಂಗಾರ ಕಟ್ಟಡಗಳು ಭಸ್ಮೀಭೂತವಾದುವು.

ಅಂಟು ಜಾಡ್ಯಗಳು.

ಮೈಸೂರು ಡಿ|| ನಲ್ಲಿ ಕಾಲರಾ ರೋಗವು ಪ್ರಾಪ್ತವಾಗುತ್ತಿರುವುದರಿಂದ ಪಬ್ಬವು ತಿಂಗಳಲ್ಲಿ 15 ನೇ ತಾ|| ಸಿಂದ ನಡೆಯುವ ಹೆ ಮಗಿರಿ ಜಾತ್ರೆಗೂ 23 ನೇ ತಾ|| ಸಿಂದ ಮುಡುಕುತೊರೆ ಜಾತ್ರೆಗೂ ಜನಗಳು ಸೇರುವುದನ್ನು ಸರ್ಕಾರದವರು ನಿರೋಧಿಸಿರುವರು.

ಶಿವಗಂಗಾ

ಬೆಂಗಳೂರು ಡಿ|| ನೆಲಮಂಗಲದ ತಾ|| ಶಿವಗಂಗೆಯಲ್ಲಿ ಈ ಮಾಹೇ 12 ನೇ ತಾ|| ಸಿಂದ 10 ದಿನಗಳು ನಡೆಯುವ ದನಗಳ ಪರಿಷೆಗೆ ಜನಜಾನುವಾರುಗಳು ಯಾರೂ ಅಲ್ಲಿ ಪ್ಲೇಗಿರುವ ಕಾರಣ ಸೇರಕೂಡದೆಂದ ಸರ್ಕಾರವು ತಿಳಿಸುತ್ತದೆ.

ಚುನಾವಣೆ

ತುಮಕೂರು ಡಿಸ್ಟ್ರಿಕ್ಟುಬೋರ್ಡಿಗೆ ಬಿಂಡಸಗೆರೆ ನಾ|| ರಂಗಣ್ಣಗೌಡರ ಸ್ಥಾನದಲ್ಲಿ ಕಾಲನಾಯ್ಕನಹಳ್ಳಿ, ಮ ನಾ|| ರೇವಣ್ಣಗೌಡರು ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

"ಸ್ಟಾರ್" ಪೇಪರ್ ಮೇಲಿನ ಮೊಕದ್ದಮೆ.

ಮಿ|| ಎಸ್. ವೈ. ಪಿಸ್ಸೆಯವರು ಮೈಸೂರು ಸ್ಟಾರ್" ಪತ್ರಿಕೆಯಮೇಲೆ ಮಾಡಿದ್ದ ಮೊಕದ್ದಮೆಯು ಎಂದಿನಂತೆ ಈ ಮಾಹೆ 21ಕ್ಕೆ ಅಡ್ಜರ್ನಾಯಿತು.

ಮಹಮ್ಮದೀಯರ ಮೇಲಿನ ಮೊಕದ್ದಮೆಗಳು

ಸರಕಾರದವರು ಮಹಮ್ಮದೀಯರ ಮೇಲಿನ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳುವರೆಂದೂ ಇದಕ್ಕೆ ಅನೇಕ ಹಿಂದೂಗಳ ಪ್ರಾರ್ಥನೆಯೇ ಕಾರಣವೆಂದೂ ಒಂದು ಸಮಾಚಾರವು ಹೊರಟಿರುವುದು. ಇದು ನಿಜವೋ ಸುಳ್ಳೋ ಎಂಬುದನ್ನು ನಾವು ನಿರ್ಧಾರವಾಗಿ ಹೇಳಲಾರೆವು. ಇದು ನಿಜವಾದರೆ ವ್ಯಸನ ಪಡತಕ್ಕ ವಿಷಯ. ಅಪರಾಧಿಗಳಿಗೆ ಶಿಕ್ಷೆಯಾಗದೆ ಹೋದರೆ ನ್ಯಾಯವ್ಯಭಿಚಾರವಾಗುವುದು ದೇಶದಲ್ಲಿ ಪುಂಡಾಟಿಕೆಯು ಹೆಚ್ಚುವುದು. ಅಪರಾಧಿಗಳ ಜಾತಿ ಮೊದಲಾದವನ್ನು ವಿಮರ್ಶೆ ಮಾಡಬೇಕಾಗಿಲ್ಲ. ಅಪರಾಧಿಗಳು ಹಿಂದುಗಳಾಗಲಿ ಮಹಮ್ಮದೀಯರಾಗಲಿ ಅವರಿಗೆ ಶಿಕ್ಷೆಯಾಗಲೇ ಬೇಕು. ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ವಾಪಸು ತೆಗೆದುಕೊಂಡಾಗಲೂ ಅದು ಸರಿಯಲ್ಲ, ಎಂದು ನಾವು ಹೇಳಿದ್ದೆವು ಸಂಪೂರ್ಣ ವಿಚಾರಣೆಯಾಗಿ ಕೋರ್ಟಿಗಳಿಂದು ನಿರ್ಧಾರವಾದರೆ ಶಿಕ್ಷೆಯಾಗಲೇ ಬೇಕು. ಅಪರಾಧವನ್ನು ಮಾಡಿದ ಮಹಮ್ಮದೀಯರಿಗೆ ಶಿಕ್ಷೆಯಾಗಬಾರದೆಂದು ನ್ಯಾಯಪಕ್ಷಪಾತಿಗಳಾದ ಮಹಮ್ಮದೀಯರು ಯಾರೂ ಹೇಳಿಲ್ಲ. ನಿರಾಯುಧರಾದ ಹಿಂದುಗಳನ್ನು ಲಾಠಿ, ಗುಂಡು, ಕಲ್ಲು ಮೊದಲಾದುವುಗಳಿಂದ ಹೊಡೆದದ್ದು ಸರಿಯೆಂದು ಯಾರೂ ಹೇಳಿಲ್ಲ ಆದರೂ ಸರಕಾರದವರು ಕಾನೂನನ್ನು ಚಲಾಯಿಸದೆ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳುವುದು ಸರಿಯಲ್ಲ. ಈಗ ಮೊಕದ್ದಮೆಗಳನ್ನು ವಾಪಸು ತೆಗೆದುಕೊಂಡರೆ ಅಪರಾಧಿಗಳ ತಲೆಯನ್ನು ಉಳಿಸುವುದಕ್ಕೆ ಮಾಡಿದ ಪ್ರಯತ್ನವಿದು ಎಂಬ ಅಪಖ್ಯಾತಿಯು ಸರಕಾರಕ್ಕೆ ಬರುವುದು. ಈ ಅಪಖ್ಯಾತಿಯು ಬರದಂತೆ ಸರಕಾರದವರು [illegible] ನೋಡಿಕೊಳ್ಳುವರೆಂದು ನಂಬಿರುತ್ತೇವೆ.

ತಿರುವಾಂಕೂರಿನ ಸಮ್ಮೇಳನ

ದಕ್ಷಿಣ ಭಾರತದ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನವು 14ನೇ ತಾ|| ಅನಂತ ಶಯನದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅಧ್ಯಕ್ಷರಿಗೆ ಅದ್ಭುತವಾದ ಸನ್ಮಾನವು ದೊರೆಯಿತು. ಮೈಸೂರಿನಿಂದ ಅನೇಕ ಮಹನೀಯರು ಈ ಸಮ್ಮೇಳನಕ್ಕೆ ದಯಮಾಡಿಸಿದ್ದರು. ಸಮ್ಮೇಳನ ಬಹಳ ಉತ್ಸಾಹದಿಂದ ನಡೆಯುತ್ತಿರುವುದು.

ಅಬ್ಬಾಸ್ ಖಾನರ ಮೇಲಿನ ಮೊಕದ್ದಮೆ

ಮ|| ಎಂ. ರಾಮಚಂದ್ರರಾವ್ ಸಿಂಧೆಯವರು ಮಿ|| ಅಬ್ಬಾಸ್‌ಖಾನರ ಮೇಲೆ ಮಾಡಿರುವ ಮಾನನಷ್ಟದ ಮೊಕದ್ದಮೆಯು (ಫಿರ್ಯಾದಿಯು ಊರಿನಲ್ಲಿಲ್ಲದ್ದರಿಂದ) ಈ ತಿಂಗಳು 22ನೇ ತಾ||ಗೆ ಅಡ್ಜರ್ನಾಯಿತು.

ಬೆಂಚ್ ಕೋರ್ಟು

ಸರ್ಕಾರದವರು ತುಮಕೂರು ಬೆಂಚ್‌ಕೋರ್ಟಿಗೆ ಮ|| ಆರ್ ವೆಂಕಟರಾಯರನ್ನು ಈ ಮಾಹೆ 11 ನೇ ತಾ|| ಸಿಂದಲೂ, ಮಿ|| ಮಹಮದ್ ಅಲಿಯವನ್ನು ಏಪ್ರಲ್ 1 ತಾ|| ಸಿಂದಲೂ ಮ|| ರಾ|| ಟಿ. ಆರ್. ಗುಪ್ತಯ್ಯನವರನ್ನು ಮೇ 1? ನೇ ತಾ| ಸಿಂದಲೂ ಎರಡನೆಯ ಮ್ಯಾಜಿಸ್ಟ್ರೇಟರಾಗಿ ನೇಮಿಸಿರುತ್ತಾರೆ.

[illegible]

[illegible] ಅಮೇರಿಕ ದೇಶದ [illegible] ಮಕ್ಕಳುಗಳನ್ನು [illegible] ದೇಶದಲ್ಲಿ [illegible] ಕೈಕಾಲು [illegible] ಅನೇಕ ಹಿಂದೂ [illegible]

TAI NADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D Subbiah Road Mysore.

Regd No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದ.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ॥

ಸಂಪುಟ ೧] ಗುರುವಾರ ೧೭ ಜನವರಿ ೧೯೨೯ [ಸಂಚಿಕೆ [illegible]

TAI NADU
17—1—1929

ಸರ್ಕಾರದ ಕರ್ತವ್ಯ

ಬೆಂಗಳೂರು ಗಲಭೆಯಾದಾಗಿನಿಂದ ಸರ್ಕಾರವು ನಡೆಸುತ್ತಿರುವ ಪ್ರತಿಯೊಂದು ದೊಡ್ಡ ಮತ್ತು ಸಣ್ಣ ನಡೆವಳಿಕೆಯನ್ನೂ ಪ್ರಜೆಗಳು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರುವರು. ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಕೆಲವು ಭಾಗವು ಪ್ರಕಟವಾದ ಮೇಲೆ ತಪ್ಪಿತಸ್ಥರನ್ನು ದಂಡಿಸುವುದಕ್ಕೋಸ್ಕರವಾಗಿ ಸರ್ಕಾರದವರು ಏನು ಕ್ರಮಗಳನ್ನು ನಡೆಸುವರೆಂದು ಪ್ರಜೆಗಳು ಕುತೂಹಲದಿಂದ ನಿರೀಕ್ಷಣೆ ಮಾಡುತ್ತಿರುವರು. ಕಮಿಟಿಯವರು ಡಿಸೆಂಬರ್ 15 ನೇ ತಾರೀಖಿನೊಳಗೆ ತಮ್ಮ ಕೆಲಸವನ್ನು ಮುಗಿಸಿ ಸರ್ಕಾರಕ್ಕೆ ವರದಿಯನ್ನು ಕಳುಹಿಸಿರುವರು 15 ದಿನಗಳು ಕಳೆದವು ಬೇಕಾದವರು ಬೇಕಾದ ಊಹೆಯನ್ನು ಮಾಡುವುದಕ್ಕೆ ಅವಕಾಶವಾಯಿತು. ಡಿಸೆಂಬರ್ ಆಖೈರಿನಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ವರದಿಯ ಮುಖ್ಯ ಭಾಗವು ಪ್ರಕಟವಾಯಿತು. ಈಗಲಾದರೂ ಸರ್ಕಾರದವರು ವರದಿಯನ್ನು ಪ್ರಕಟಿಸುವರೆಂದು ಆಶಿಸಲ್ಪಟ್ಟಿತು. ಈ ಆಶೆಯೂ ನಿರಾಶೆಯಾಯಿತು. ಕೆಲವು ಪತ್ರಿಕೆಗಳಲ್ಲಿ ಸಮಗ್ರ ವರದಿಯೂ ಮೊದಲನೆ ಅಧ್ಯಾಯದಿಂದ ಪ್ರಕಟವಾಗಲು ಪ್ರಾರಂಭವಾಗಿರುವುದು. ಆದರೆ ಸರ್ಕಾರದವರು ಮಾತ್ರ ವರದಿಯನ್ನು ಪ್ರಕಟಿಸಲಿಲ್ಲ. ಜನವರಿ 15 ನೇ ತಾರೀಖೂ ಆಯಿತು. ವರದಿಯಾಗಲೀ ಗೌರ್ನಮೆಂಟ್ ಆರ್ಡರುಗಳೇ ಆಗಲೀ ಇನ್ನೂ ಪ್ರಕಟವಾಗಲಿಲ್ಲ. ಈ ಮಧ್ಯೆ ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ದಬ್ಬಾಳಿಕೆಯು ಬೇರೆ. ಪ್ರಜೆಗಳನ್ನು ಸಮಾಧಾನಪಡಿಸಿ ಅವರ ಅನುಮಾನಗಳನ್ನು ಹೋಗಲಾಡಿಸಿ, ನ್ಯಾಯ ಸಂರಕ್ಷಣೆಯನ್ನು ಮಾಡಿ ಸತ್ಕೀರ್ತಿಗೆ ಪಾತ್ರರಾಗುವುದಕ್ಕೆ ಬದಲಾಗಿ ನಮ್ಮ ಸಂಸ್ಥಾನಕ್ಕೆ ಅಪಯಶಸ್ಸನ್ನು ತರುತ್ತಿರುವ ಈಗಿನ ಸರ್ಕಾರದವರ ವರ್ತನವನ್ನು ನೋಡಿ ನಾವು ಬಹಳ ಸಂತಾಪ ಪಡುವೆವು. ಪ್ರಜೆಗಳಿಗೆ ಸರ್ಕಾರದ ರೀತಿನೀತಿಗಳೇನು ಎಂಬ ಸಂಗತಿಯು ತಿಳಿಯದೆ ಅಸಮಾಧಾನವು ಪ್ರಬಲವಾಗುತ್ತಿರುವುದು. ಇದೇ ಕಾನೂನಿನಿಂದ ನಮ್ಮ ಸಂಸ್ಥಾನಕ್ಕೆ ಬಹಳ ಅನರ್ಥ ಉಂಟಾಗುವುದು. ಧೈರ್ಯದಿಂದಲೂ, ನಿಷ್ಪಕ್ಷಪಾತದಿಂದಲೂ, ಜಾಗ್ರತೆಯಿಂದಲೂ ಸರ್ಕಾರದವರು ತಮ್ಮ ತಪ್ಪುಗಳನ್ನು ತಿದ್ದಿಕೊಂಡು ದುಷ್ಟರಿಗೆ ತಕ್ಕ ದಂಡನೆಯನ್ನು ಮಾಡಿ ನಮ್ಮ ಸಂಸ್ಥಾನದ ಕೀರ್ತಿಯನ್ನು ಪುನಃ ಉಜ್ವಲಗೊಳಿಸುವರೆಂದು ನಂಬುತ್ತೇವೆ.

ಅಹಮದಾಬಾದಿನ ವಿದ್ಯಾರ್ಥಿಗಳ ಸತ್ಯಾಗ್ರಹ

ಅಹಮದಾಬಾದ್ ಕಾಲೇಜಿನ ವಿದ್ಯಾರ್ಥಿಗಳು ಆ ಊರಿಗೆ ಸೈಮನ್ ಕಮಿಷನ್ ಬಂದಾಗ್ಗೆ ಕಾಂಗ್ರೆಸ್ಸಿನ ಸಲಹೆಯಂತೆ ಕಾಲೇಜಿಗೆ ಬಹಿಷ್ಕಾರ ಹಾಕಿದರು. ಸುಮಾರು 700 ವಿದ್ಯಾರ್ಥಿಗಳು ಈ ಬಹಿಷ್ಕಾರದಲ್ಲಿ ಭಾಗ ತೆಗೆದುಕೊಂಡರು. ಕಾಲೇಜಿನ ಪ್ರಿನ್ಸಿಪಾಲರು ಒಬ್ಬೊಬ್ಬ ವಿದ್ಯಾರ್ಥಿಗೂ 3 ರೂಪಾಯಿಯಂತೆ ಜುಲ್ಮಾನೆ ಹಾಕಿದರು. ಜುಲ್ಮಾನೆಯನ್ನು ಕೊಟ್ಟಹೊರತು ಪರೀಕ್ಷೆಗೆ ಸೇರಿಸುವುದಿಲ್ಲವೆಂದು ಪ್ರಿನ್ಸಿಪಾಲರು ಹಟವನ್ನು ಹಿಡಿದಿರುವರು. ಸರ್ಕಾರದವರು ಈ ಪ್ರಿನ್ಸಿಪಾಲರಿಗೇ ಬೆಂಬಲ ಕೊಟ್ಟಿರುವರು. ವಿದ್ಯಾರ್ಥಿಗಳು ಜುಲ್ಮಾನೆಯನ್ನು ಕೊಡುವುದಿಲ್ಲವೆಂದು ಸತ್ಯಾಗ್ರಹವನ್ನು ಮಾಡಿರುವರು. ಮಹಾತ್ಮಾ ಗಾಂಧಿಯವರು, ಜವಹರಿಲಾಲ್ ನೆಹರೂರವರೂ, ಸೇನ್‌ಗುಪ್ತರವರೂ ಇವರೇ ಮೊದಲಾದ ರಾಷ್ಟ್ರೀಯ ಮುಖಂಡರು ವಿದ್ಯಾರ್ಥಿಗಳಿಗೆ ಧೈರ್ಯವನ್ನು ಹೇಳಿ ಸತ್ಯಾಗ್ರಹವನ್ನು ಮುಂದುವರಿಸಿ ಎಂದು ಹುರಿದುಂಬಿಸುತ್ತಿರುವರು. ಅಖಿಲಭಾರತದ ನೇತ್ರಗಳು ಅಹಮದಾಬಾದ್ ವಿದ್ಯಾರ್ಥಿಗಳ ಸತ್ಯಾಗ್ರಹದ ಕಡೆಗೆ ತಿರುಗಿರುವವು. ವಿದ್ಯಾರ್ಥಿಗಳ ಸತ್ಯಾಗ್ರಹವು ವಿಜಯವಾಗಲೆಂದು ನಾವು ಹಾರೈಸುತ್ತೇವೆ.

ವಿವಿಧ ವಿಷಯಗಳು

ಅಮೀರ್ ಪದವಿ

ಕಾಬೂಲನ್ನು ಸ್ವಾಧೀನಮಾಡಿಕೊಂಡ, ತಾನೇ ಅಮೀರನಾಗುವೆನೆಂದು ಹಿಂದಣ ಅಫಗಾನ ಕರ್ನಲನಾದ ಗುಲಾಮನಾಬಿ ಎಂಬಾತನು ಹೊಂಚು ಹಾಕುತ್ತಿರುವನೆಂದು ವರ್ತಮಾನವಿದೆ,

ವಿರುದ್ಧ ಸನ್ನಾಹ

ತುರ್ಕಿಯಲ್ಲಿ ಹೊಸ ಸುಧಾರಣೆಗಳನ್ನು ಉಂಟುಮಾಡಿರುವುದು, ಶಾಸ್ತ್ರವಿರುದ್ಧವೆಂದೂ ಬಹುಜನರು ಕೆಮಲ್ ಪಾಶರವರ ವಿರುದ್ಧವಾಗಿ ಸನ್ನಾಹ ಮಾಡುತ್ತಿರುವರು.

ಮಹಾತ್ಮಾ ಗಾಂಧಿಯವರು.

ಕಲ್ಕತ್ತೆಯಿಂದ ಅಹಮದಾಬಾದಿಗೆ ಹೋಗಿರತಕ್ಕ ಮಹಾತ್ಮ ಗಾಂಧಿಯವರು ಈ ಮಾಹೆ 20 ನೇ ತಾ॥ವರೆಗೂ ಅಲ್ಲೇ ಇರುವರು. ಈ ಸಂದರ್ಭದಲ್ಲಿ ಈ ಮಾಹೆ 11 ನೇ ತಾ॥ ನ ದಿನ ಆರಂಭವಾದ ನ್ಯಾಷನಲ್ ಯೂನಿವರ್ಸಿಟಿಯ ಏಳನೆ ಕಾನ್ವೋಕೇಷನ್ನಿನ ಅಧ್ಯಕ್ಷತೆಯನ್ನು ವಹಿಸಿದ್ದರು.

ವಿವಾಹದ ತೊಡಕು.

೧೫ ವರ್ಷ ವಯಸ್ಸಿನ ಹುಡುಗನು ತನ್ನ ೧೭ ವರ್ಷ ವಯಸ್ಸಿನ ಹೆಂಡತಿಯ ವಿಚಾರದಲ್ಲಿ ತಾನು ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿಸಲು ಮಹಾತ್ಮಜೀಯವರಿಗೆ ಒಂದು ಬಿನ್ನಹ ಬರೆದುಕೊಂಡನು. ಆ ಪತ್ರವನ್ನು ಪ್ರಕಟಿಸಿ, ಮಹಾತ್ಮರು....ಈ ವಿವಾಹವು ರದ್ದಾಗುವುದು ಉತ್ತಮವೆಂದೂ ಹೆತ್ತವರು ಒಪ್ಪದಿರುವಲ್ಲಿ ಈ ಗಂಡಹೆಂಡಿರು ತಾವಾಗಿಯೇ ತಾವು ತಮ್ಮ ವಿವಾಹವನ್ನು ರದ್ದು ಪಡಿಸಿಕೊಳ್ಳುವುದು ಉತ್ತಮವೆಂದೂ ಸೂಚಿಸಿರುವರು.

ತಿಳುವಳಿಕೆ.

ಅಫಗಾನಿಸ್ಥಾನದಲ್ಲಿ ಉಂಟಾಗಿರುವ ಗಲಭೆಗೆ ಬ್ರಿಟಿಷ ಸರಕಾರದವರೇ ಹಿಂದೀ ಸಂಕಾರರಾಗಲೀ ಕಾರಣವೆಂಬ ಸುಳ್ಳನ್ನ ಹರಡಿಸುವ ಪತ್ರಿಕೆಗಳು ಕೆಲವು ಇವೆಯೆಂದೂ, ಇವನ್ನು ಇನ್ನು ಸುಮ್ಮನೆ ಬಿಟ್ಟಲ್ಲಿ ಅನರ್ಥಗಳಿಗೆ ಕಾರಣವಾಗುವುದೆಂದೂ ವೈಸ್ರಾಯರವರು ತಿಳಿಸಿರುತ್ತಾರೆ.

ಸರ್. ಆಲ್‌ಬಿಯನ್ ಬ್ಯಾನರ್ಜಿಯವರು.

ನಮ್ಮ ಸಂಸ್ಥಾನದ ಮಾಜಿ ದಿವಾನರಾದ, ಈಗ ಕಾಶ್ಮೀರದ ಮುಖ್ಯ ಮಂತ್ರಿಗಳಾದ ಸರ್. ಆಲ್‌ಬಿಯನ್ ಬ್ಯಾನರ್ಜಿಯವರು ಕಾಶ್ಮೀರದ ಮಂತ್ರಿಪದಕ್ಕೆ ರಾಜಿನಾಮೆ ಕೊಟ್ಟು ಇಂಗ್ಲೆಂಡಿಗೆ ಹೋಗುವವರಾಗಿದ್ದಾರೆಂದೂ ಅಲ್ಲಿ ಪಾರ್ಲಿಮೆಂಟಿನ ಚುನಾವಣೆಗೆ ನಿಲ್ಲುವರೆಂದೂ ತಿಳಿಯಬರುತ್ತದೆ.

ಅಫಘಾನಿಸ್ಥಾನದ ಅಮೀರರು.

ಅಫಘಾನಿಸ್ಥಾನದ ಅಮೀರರು ತಮ್ಮ [illegible]ಣೆಯ ತಿದ್ದುಪಾಟುಗಳನ್ನೆಲ್ಲಾ ವಾಪಸು [illegible]ಡರೆಂದೂ ತಮ್ಮ ಸಿಂಹಾಸನವನ್ನು ತ್ಯಾಗ[illegible]ದೂ ಸಮಾಚಾರ.

ಗಾಯಪಟ್ಟವರ ಸಂಖ್ಯೆ

ಇಂಗ್ಲೆಂಡಿನಲ್ಲಿ ಕಳೆದ ವರ್ಷದಲ್ಲಿ ಮೋಟಾರುಗಳಿಂದ ಗಾಯಗೊಂಡವರ ಸಂಖ್ಯೆಯು [illegible]ವೆಂದೂ, ಅವರು ವೈದ್ಯಕೀಯ ಚಿಕಿತ್ಸೆಗಾ[illegible] 000 ಪವನುಗಳನ್ನು ಖರ್ಚುಮಾಡಿದರೆಂದೂ [illegible] ಬರುತ್ತದೆ.

ಇಂಗ್ಲೀಷ್ ಕಂಪನಿ.

ತುರ್ಕಿಯ ಮಾಜಿ ಸುಲ್ತಾನರ ರತ್ನಾಭರಣ[illegible] ಕ್ರಯಕ್ಕೆ ಕೊಂಡುಕೊಳ್ಳುವುದಕ್ಕೆ 5 ಮಿಲ್ಲಿಯನ್ನುಗಳ ಬಂಡವಾಳವುಳ್ಳ ಒಂದು ಇಂಗ್ಲಿಷ್ ಕಂಪನಿ ಉಂಟಾಗಿದೆ.

ರಾಷ್ಟ್ರ ಸಭೆಯ ಕಾರ್ಯಕಾರಿ ಮಂಡಲಿ.

ರಾಷ್ಟ್ರೀಯ ಮಹಾಸಭೆಯಲ್ಲಿ ತೀರ್ಮಾನ[illegible] ಮಹಾತ್ಮರ ಠರಾವುಗಳನ್ನು ಜಾರಿಗೆ ತರುವುದಕ್ಕೋಸ್ಕರ ರಾಷ್ಟ್ರೀಯ ಸಂಘದ ಕಾರ್ಯ[illegible] ಮಂಡಲಿಯವರು ಬೇರೆ ಬೇರೆ ಸಮಿತಿಗಳನ್ನು [illegible]ರುತ್ತಾರೆ. ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ ಕಾರ್ಯಕ್ರಮವನ್ನು ಮಹಾತ್ಮಾ ಗಾಂಧಿಯವರಿಗೂ ಮದ್ಯಪಾನ ನಿರೋಧ ಕಾರ್ಯಕ್ರಮವನ್ನು ಮಿ॥ ರಾಜಗೋಪಾಲಾಚಾರ್ಯರಿಗೂ ವಹಿಸಿರುತ್ತಾರೆ.

ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಲಕ್ಕೆ ಮೌ॥ ಅಬ್ದುಲ್ ಕಲಂ ಅಜದ್, ಮಿ॥ ಸುಭಾಷ ಚಂದ್ರಬೋಸ್, ಎ॥ ಶ್ರೀನಿವಾಸ ಅಯ್ಯಂಗಾರ್, ಬಾಬು ರಾಜೇಂದ್ರ ಪ್ರಸಾದ, ಮಿ॥ ಸಾಂಬಮೂರ್ತಿ, ಶ್ರೀಮತೀ ಸರೋಜಿನೀದೇವಿ, ಸರದಾರ ಶಾರ್ದೂಲಸಿಂಗ, ಪಂ॥ ಮಾಲವೀಯ ಮಿ॥ ಸೇನಗುಪ್ತ ಇವರುಗಳು ಸದಸ್ಯರಾಗಿಯೂ ಪಂ॥ ಜವಾಹಿರಿಲಾಲ ನೆಹರೂ ಡಾ॥ ಅನ್ಸಾರಿ ಇವರುಗಳು ಕಾರ್ಯದರ್ಶಿಗಳಾಗಿಯೂ [illegible] ಮಾಡಲ್ಪಟ್ಟಿರುತ್ತಾರೆ.

ಮಹಾತ್ಮಾ ಗಾಂಧಿಯವರನ್ನು ಹಿಂಬಾಲಿಸಿ

ಪಂಡಿತ್ ಮದನ ಮೋಹನ ಮಾಲವೀಜೀ ರವರು ಕಲ್ಕತ್ತಾದಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳಿದುದೇನೆಂದರೆ, ನಮ್ಮ ದೇಶದ ತರುಣರಿಗೆ ನನ್ನದೊಂದು ಸಂದೇಶವಿರುವುದು. ಮಹಾತ್ಮಾ ಗಾಂಧಿಯವರು ಪ್ರಪಂಚದಲ್ಲಿರುವ ಪುರುಷ ಶ್ರೇಷ್ಠರಲ್ಲೆಲ್ಲಾ ಅಗ್ರಗಣ್ಯರು. ಸ್ವರಾಜ್ಯವನ್ನು ದೊರಕಿಸುವದಕ್ಕಾಗಿ ಅವರು ಮಾಡುತ್ತಿರುವ ಪ್ರಯತ್ನಗಳಿಗೆಲ್ಲಾ ನೀವು ಸೇರಬೇಕು. ಪ್ರತಿ ಒಂದು ಹಳ್ಳಿಗೂ ಹೋಗಿ ಸ್ವರಾಜ್ಯ ಮಂತ್ರವನ್ನು ಉಪದೇಶಿಸಬೇಕು. ಜಾತಿ ಭೇದವನ್ನು ತೊಲಗಿಸಬೇಕು. ಜನರೆಲ್ಲರೂ ಗಟ್ಟಿಮುಟ್ಟಾಗುವ ತೆ ಸಾಧನೆಯನ್ನು ಮಾಡಿರೆಂದು ಹೇಳಬೇಕು ಪರದೇಶೀ ವಸ್ತ್ರವನ್ನು ತ್ಯಜಿಸಿರೆಂದೂ, ಖಾದಿಯನ್ನು ಧರಿಸಿರೆಂದೂ ಪ್ರಚಾರವನ್ನು ಮಾಡಬೇಕು.

ನಿರಂಕುಶ ಆಡಳಿತವು ನಿರ್ಮೂಲವಾಗಬೇಕು.
ಸರ್ ಎಂ. ವಿಶ್ವೇಶ್ವರಯ್ಯನವರ ಅಮೋಘವಾದ ಭಾಷಣ

ತಾಯಿನಾಡು.
17—1—1929

ದೇಶೀಯ ಸಂಸ್ಥಾನಗಳ ಪ್ರಜೆಗಳ ಸಮ್ಮೇಳನ.
(ತಂತೀಸಮಾಚಾರ)
(ನಮ್ಮ ಸ್ವಂತ ಬಾತ್ಮೀದಾರರಿಂದ)

ನೇಲ್ಕಂಡ ಸಮ್ಮೇಳನವು ಮೊನ್ನೆ ದಿನ ಮುಗಿಯಿತು. ಹಿಂದೂಸ್ಥಾನಕ್ಕೆ ಫೆಡರೇಷನ್ ಸ್ಕೀಮ್ ಎಂಬ ರೀತಿಯಾದ ಸ್ವರಾಜ್ಯ ದೊರೆಯಬೇಕೆಂದು ತೀರ್ಮಾನವಾಯಿತು. ಅದರಲ್ಲಿ ದೇಶೀಯ ಸಂಸ್ಥಾನಗಳೂ ಸಮಾನವಾದ ಸ್ವಾತಂತ್ರ್ಯವನ್ನು ಪಡೆಯಬೇಕು. ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವು ಏರ್ಪಡಿಸಲ್ಪಡಬೇಕು. ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಸ್ಪಷ್ಟವಾಗಿ ಗೊತ್ತುಮಾಡಬೇಕು, ಪತ್ರಿಕಾ ಸ್ವಾತಂತ್ರ್ಯ ವ್ಯಕ್ತಿ ಸ್ವಾತಂತ್ರ್ಯ, ಸ್ವತ್ತಿನ ಸ್ವಾತಂತ್ರ್ಯಗಳು ರಕ್ಷಿಸಲ್ಪಡಬೇಕು ಎಂಬ ನಿರ್ಧಾರಗಳೂ ಆದವು. ಇಂಗ್ಲೆಂಡಿಗೆ ಹೋಗಿ ದೇಶೀಯ ಸಂಸ್ಥಾನದ ಪ್ರಜೆಗಳ ಪರವಾಗಿ ಕೆಲಸಕಾರ್ಯ ನಡೆಸಿದ್ದಕ್ಕಾಗಿ ದಿವಾನ್ ಬಹದ್ದೂರ್ ರಾಮಚಂದ್ರರಾಯರಿಗೆ ವಂದನೆಗಳು ಅರ್ಪಿಸಲ್ಪಟ್ಟವು. ಈ ಸಮ್ಮೇಳನದ ಪರವಾಗಿ ಬೆಂಗಳೂರಿನಲ್ಲಿ ನಡೆಸಬೇಕಾದ ಕೆಲಸಕಾರ್ಯಗಳಿಗಾಗಿ ಮಿ|| ಮಾಣಿಕ್ಯವೇಲು ಮೊದಲಿಯಾರ್‌ರವರು ಎರಡು ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಟ್ಟಿರುವರು. ಮ|| ಅಚ್ಯುತ ಮೇನನ್‌ರವರು ಕಾರ್ಯದರ್ಶಿಗಳಾಗಿ ಒಂದು ಉಪಸಮಿತಿಯು ನೇಮಿಸಲ್ಪಟ್ಟಿತು. ಶ್ರೀ|| ಮಾಣಿಕ್ಯವೇಲು ಮೊದಲಿಯಾರ್‌ರವರು ಸ್ವಾಗತ ಮಂಡಲಿಗೆ ಧನ್ಯವಾದಗಳನ್ನರ್ಪಿಸಿದರು. ದೇಶದ ಸಂಪದಭಿವೃದ್ಧಿಗೆ ಸಾಧಕವಾದ ವೈದ್ಯ ಶಿಕ್ಷಣವನ್ನೂ ವಾಣಿಜ್ಯ ಶಿಕ್ಷಣವನ್ನೂ ಕೊಡತಕ್ಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂದು ಅವರು ತಿಳಿಸಿದರು, ಸ್ವಯಂಸೇವಕರ ಸಮೂಹಕ್ಕೆ ಮ|| ವಿ. [illegible] ಸಂಜೀವರಾಯರು ವಂದನೆಗಳನ್ನರ್ಪಿಸಿದರು.

ಸರ್. ಎಂ. ವಿಶ್ವೇಶ್ವರಯ್ಯನವರು ತಿರುವಾಂಕೂರಿನಲ್ಲಿ ನಡೆದ ದಕ್ಷಿಣ ಸಂಸ್ಥಾನಗಳ ದೇಶೀಯ ಪ್ರಜೆಗಳ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣವು ಲೋಕೋತ್ತರವಾಗಿರುವುದು. ಅವರ ಭಾಷಣವು ಬಹಳ ದೊಡ್ಡದಾಗಿರುವುದರಿಂದ ಅದರ ಮುಖ್ಯವಾದ ಭಾಗಗಳನ್ನು ಕ್ರಮಕ್ರಮವಾಗಿ ಕೊಡುವೆವು. ಅವರು ಹೇಳಿದ್ದೇನೆಂದರೆ,

ನಮ್ಮ ದೇಶದ ರಾಜಕೀಯ ಜೀವನದಲ್ಲಿ ಇದು ವಿಷಮಕಾಲವು. ಬ್ರಿಟಿಷ್ ಇಂಡಿಯದ ಪ್ರಜೆಗಳು ಡೋಮಿನಿಯನ್ ಸ್ಟೇಟಸ್ ಸ್ವರಾಜ್ಯವನ್ನು ಪಡೆಯುವುದಕ್ಕೆ ಹೋರಾಡುತ್ತಿರುವರು. ದೇಶೀಯ ಸಂಸ್ಥಾನದ ಪ್ರಜೆಗಳು [illegible] ಅವರದಷ್ಟೇ ಬಲವನ್ನು ಕೊಡಬೇಕೇ ಹೊರತು ಅವರ ಕಾರ್ಯಕ್ಕೆ ಅಡ್ಡಿ ಬರಬಾರದು. ಈ ಸಮಯದಲ್ಲೇ ಇಂಡಿಯಾದೇಶದ ಎಲ್ಲಾ ರಾಜಕೀಯ [illegible]ಗಳವರೂ ದೇಶೀಯ ಸಂಸ್ಥಾನದ ಪ್ರಜೆಗಳೂ ಸೇರಿ ಇಂಡಿಯಾ ದೇಶದಲ್ಲಿ ಸಂಪೂರ್ಣವಾದ ಜವಾಬ್ದಾರಿ ಸರ್ಕಾರ ಪದ್ಧತಿಯು ಸ್ಥಿರವಾಗಿ ನೆಲೆಗೊಳಿಸುವಂತೆ ಮಾಡಬೇಕು. ನಾವೆಲ್ಲರೂ ಇಲ್ಲಿ ಸೇರಿರುವುದು ದೇಶೀಯ ಸಂಸ್ಥಾನದ ಪ್ರಜೆಗಳ ಅಭಿಪ್ರಾಯವನ್ನು ಪ್ರತಿಧ್ವನಿಮಾಡುವುದಕ್ಕೆ ಆದರೂ ಒಂದು ಮುಖ್ಯವಾದ ವಿಷಯವನ್ನು ಮರೆಯಬಾರದು. ಇಂಡಿಯಾ ದೇಶದ ರಾಜಕೀಯ ಸುಧಾರಣೆಗಳ ವಿಷಯವು ಅಖಂಡವಾದುದು. ಅದು ಒಂದೇ. ಭಿನ್ನವಲ್ಲ. ಅದನ್ನು ಒಡೆದು ಬೇರೆ ಬೇರೆಯಾಗಿ ಮಾಡಬಾರದು. ಇಂಡಿಯಾ ದೇಶವೆಲ್ಲವೂ, ಹೇಗೆ ಒಂದೇ ರಾಷ್ಟ್ರವೋ ಈ ಸುಧಾರಣೆಗಳ ಪ್ರಶ್ನೆಯೂ ಒಂದೇ ಅಖಂಡವಾದುದು. ನಾನು ನನ್ನ ಭಾಷಣದಲ್ಲಿ ಈ ವಿಶಾಲ ದೃಷ್ಟಿಯನ್ನೇ ಇಟ್ಟುಕೊಂಡು ದೇಶೀಯ ಸಂಸ್ಥಾನದ ಪ್ರಜೆಗಳ ಆಶೋತ್ತರಗಳನ್ನು ವ್ಯಕ್ತಗೊಳಿಸುವೆನು.

ನಿಮಗೆಲ್ಲರಿಗೂ ತಿಳಿದಹಾಗೆ 1927 ನೇ ಡಿಸೆಂಬರಿನಲ್ಲಿ ಬೊಂಬಾಯಿ ಪಟ್ಟಣದಲ್ಲಿ ದೇಶೀಯ ಸಂಸ್ಥಾನಗಳ ಸಮ್ಮೇಳನವೊಂದು ನಡೆದು 1928 ನೇ ಇಸವಿಯ ಉತ್ತರಾರ್ಧದಲ್ಲಿ, ಇಂಗ್ಲೆಂಡಿಗೆ ಒಂದು ರಾಯಭಾರವು ಕಳುಹಿಸಲ್ಪಟ್ಟಿತು. ಬಟ್ಲರ್ ಕಮಿಟಿಯ ಮುಂದೆಯೂ ಇಂಡಿಯಾದ ಸೆಕ್ರೆಟರೀ ಆಫ್ ಸ್ಟೇಟರ ಮುಂದೆಯೂ ದೇಶೀಯ ಸಂಸ್ಥಾನದ ಪ್ರಜೆಗಳ ಅಭಿಪ್ರಾಯವನ್ನು ಇಡುವುದೇ ಈ ರಾಯಭಾರದ ಉದ್ದೇಶವಾಗಿತ್ತು. ಬಟ್ಲರ ಕಮಿಟಿಯು ಈ ರಾಯಭಾರದಿಂದ ಒಂದು ವಾಙ್ಮೂಲವನ್ನು ಮಾತ್ರ ಸ್ವೀಕರಿಸಿತೇ ಹೊರತು, ಅದರೊಡನೆ ಮೊಕ್ಕಲೆತು ವಿಷಯಗಳನ್ನು ಚರ್ಚಿಸಲಿಲ್ಲವೆಂದು ತಿಳಿಯಬಂದಿದೆ. ಈ ರಾಯಭಾರದವರು ಇನ್ನೂ ಏನು ಸಾಧ್ಯವಾಗಿತ್ತೋ ಅದನ್ನು ಮಾಡಿದರು. ದೇಶೀಯ ಸಂಸ್ಥಾನದ ಪ್ರಜೆಗಳ ಕುಂದುಕೊರತೆಗಳನ್ನೆಲ್ಲಾ ಬ್ರಿಟಿಷ್ ಪ್ರಜೆಗಳಿಗೆ ತಿಳಿಸಿದರು. ಮತ್ತು ಅವರ ಆಶೋತ್ತರಗಳು ಏನು ಎಂಬುದನ್ನೂ ವಿವರಿಸಿದರು. ಈ ರಾಯಭಾರವನ್ನು ವಹಿಸಿ ಅದರ ಕೆಲಸವನ್ನು ಸಾಂಗವಾಗಿಯೂ, ಸಮರ್ಪಕವಾಗಿಯೂ ನಡೆಸಿದ ದಿವಾನ್ ಬಹದ್ದೂರ್ ಎಂ. ರಾಮಚಂದ್ರರಾಯರಿಗೂ, ಅವರ ಸಹೋದ್ಯೋಗಿಗಳಿಗೂ ನಿಮ್ಮ ಮತ್ತು ನನ್ನ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ದೇಶೀಯ ಸಂಸ್ಥಾನದ ಪ್ರಭುಗಳ ರಾಯಭಾರವು ಇಂಗ್ಲೆಂಡಿನಲ್ಲಿ ಹೋಗಿ ಪ್ರಚಾರಮಾಡಿದ ಫಲವಾಗಿ ಕಳೆದ ತಿಂಗಳು 5 ನೇ ತಾರೀಖಿನಲ್ಲಿ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಇಂಡಿಯಾದ ಮಾಜಿ ಸೆಕ್ರೆಟರಿ ಆಫ್ ಸ್ಟೇಟರಾದ ಲಾರ್ಡ್ ಆಲಿವಿಯರ್‌ರವರ ಸೂಚನೆಯಂತೆ ದೇಶೀಯ ಸಂಸ್ಥಾನಗಳ ಸಮಸ್ಯೆಯ ವಿಷಯವಾಗಿ ಚರ್ಚೆಯು ನಡೆಯಿತು. ಆದಾಗ್ಯೂ ಬ್ರಿಟಿಷ್ ಸರಕಾರದವರು ಇಂಡಿಯಾ ದೇಶದ ಮುಂದಿನ ರಾಜ್ಯಪದ್ಧತಿಯೇನು, ಅದರಲ್ಲಿ ದೇಶೀಯ ಸಂಸ್ಥಾನಗಳ ಸ್ಥಾನವ್ಯಾವುದು ಎಂಬ ವಿಷಯವಾಗಿ ಯಾವ ನಿರ್ಧಾರವನ್ನೂ ಮಾಡಿದಂತೆ ಕಾಣಲಿಲ್ಲ. ಇದೇ ವಿಷಯವಾಗಿ ಈಚೀಚೆಗೆ ನಡೆದ ಕೆಲವು ಭಾಷಣಗಳನ್ನೂ ಕಾರ್ಯಕಲಾಪವನ್ನೂ ನೋಡಿದರೆ ಅಧಿಕಾರದಲ್ಲಿರುವವರು ಯಾರೂ ದೇಶೀಯ ಸಂಸ್ಥಾನದ ಪ್ರಜೆಗಳ ಅಭಿಪ್ರಾಯವನ್ನೇ ಆಲೋಚಿಸಿದಂತೆ ಕಾಣುವುದಿಲ್ಲ. ನಮ್ಮ ದೇಶದ ಮುಂದಿನ ರಾಜ್ಯಪದ್ಧತಿಯನ್ನು ನಿರ್ಣಯಿಸುವ ಕೆಲಸದಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳ ಸ್ಥಿತಿಯನ್ನೇ ಆಲೋಚಿಸಿರುವಂತೆ ತೋರುವುದಿಲ್ಲ.

ವರ್ತಮಾನ ಸಂಗ್ರಹ

[illegible]

[illegible] ರ ನ್ಯಾಯಸ್ಥಾನ [illegible] "ಪತ್ರಿಕೆಗಳನ್ನು [illegible] ವಾದುದರಿಂದ ಅತ್ಯಂತ ಕಠಿಣವಾದ [illegible] ತ್ರ ಅದನ್ನು ನಡಿಸತಕ್ಕದ್ದು" ಎಂದು [illegible] ಯು ಸೂಚಿಸಿ, ಸರಕಾರವು [illegible] ನ್ಯಾಯಸ್ಥಾನಕ್ಕೆ ಕೈಹಾಕಲಿ[illegible] ವಾಗ ಪುನಃ 'ಸಾಕ್ಷಿ' ಸಂಪದಕ [illegible] ಹೊಸ ಪೇಟ್ರಿಯಟ್' ಪತ್ರಿಕೆಗಳ [illegible] ಮೈಸೂರಿನ [illegible] ಯಾಗಿರುತ್ತದೆ.

[illegible]

[illegible]

[illegible]

ರಾಷ್ಟ್ರಗಳ ಪರಿಷತ್ತು.

1930 ನೇ ಇಸವಿಯಲ್ಲಿ ಏಷಿಯಾ ಖಂಡದ [illegible] ಸ್ವ ರಾಷ್ಟ್ರಗಳ ಪರಿಷತ್ತನ್ನು ಹಿಂದೂಸ್ಥಾನದಲ್ಲಿ [illegible] ಸಬೇಕೆಂದು ರಾಷ್ಟ್ರೀಯ ಮಹಾ ಸಭೆಯವರು [illegible] ರ್ಮಾನಿಸಿರುತ್ತಾರೆ

ಮತ್ತು ಬಹಳ ಚರ್ಚೆಯಾಗಿ ಸಂಸ್ಥಾನದ [illegible] ಹೈಸ್ಕೂಲುಗಳಲ್ಲೂ ಭಾಷಾ ಪಾಠಗಳು [illegible] ಲ್ಲಾ ಪಾಠಗಳೂ ಕನ್ನಡದಲ್ಲೇ [illegible] [illegible] ಸಲ್ಪಟ್ಟಿತು.

[illegible]

(ಮುಂದುವರಿಯುವುದು.)

TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D Subbiah RoadM ysore.

Regd No. M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಶುಕ್ರವಾರ ೧೮ ಜನವರಿ ೧೯೨೯ [ಸಂಚಿಕೆ ೧೬

TAI NADU

18—1—1929

ಭದ್ರಾವತಿ ಕಬ್ಬಿಣದ ಕಾರ್ಖಾನೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಆಡಳಿತದ ಸಂಬಂಧವನ್ನು ಸರ್. ಎಂ. ವಿಶ್ವೇಶ್ವರಯ್ಯನವರು ತೊರೆಯುವರೆಂದೂ, ಮ|| ಎನ್. ಮಾಧವರಾಯರು ಅವರ ಸ್ಥಾನವನ್ನು ವಹಿಸುವರೆಂದೂ ಒಂದು ಪತ್ರಿಯಲ್ಲಿ ಪ್ರಕಟವಾಗಿತ್ತು. ಈ ಸಮಾಚಾರದಲ್ಲಿ ನಾವು ಹೆಚ್ಚು ವಿಶ್ವಾಸವಿಡಲಿಲ್ಲ ಆದರ ಈ ಸಮಾಚಾರವು ದಿನದಿನಕ್ಕೂ ಬಲಿಯವಾಗುತ್ತಿರುವುದು. ಸರಕಾರದ ವರಾದರೂ ಅದನ್ನು ಪ್ರಕಟನೆಯ ಮೂಲಕ ಸುಳ್ಳೆಂದು ಖಂಡಿಸಿಲ್ಲ. ಇದರ ಮೇಲೆ ಸರ್ಕಾರದವರು ವಿಶ್ವೇಶ್ವರಯ್ಯ ಕಮಿಟಿ ವರದಿಗೆ ಈಗಾಗಲೇ ಕೊಟ್ಟಿರುವ ಪುರಸ್ಕಾರವನ್ನು ನೋಡಿದರೆ ಮೇಲಿನ ಸಮಾಚಾರವು ನಿರಾಧಾರವಾದುದಲ್ಲ ಎಂದು ಊಹಿಸಬೇಕಾಗಿರುವುದು. ಅದೂ ಅಲ್ಲದೆ ವಿಶ್ವೇಶ್ವರಯ್ಯನವರು ಆ ಕಾರ್ಖಾನೆಯಿಂದ ತಮ್ಮ ಸಂಬಂಧವನ್ನು ತೊಡೆಯುವುದಕ್ಕೆ ಇನ್ನೂ ಕೆಲವು ಕಾರಣಗಳಿರ ಬಹುದು. 1923ರಲ್ಲಿ ವಿಶ್ವೇಶ್ವರಯ್ಯನವರು ಕಾರ್ಖಾನೆಯ ಆಡಳಿತವನ್ನು ತಮ್ಮ ಕೈಯ್ಯಿನಲ್ಲಿ ತೆಗೆದುಕೊಂಡಾಗಿನಿಂದಲೂ ಅದರ ಮೇಲ್ಮೆಗಾಗಿ ಬಹಳ ಪ್ರಯತ್ನ ಮಾಡುತ್ತಿರುವರು. ನಷ್ಟವಾಗುತ್ತಿದ್ದ ಕಡೆ ನಷ್ಟವಿಲ್ಲದಂತೆ ಮಾಡಿದರು. ಇದಕ್ಕೆಲ್ಲಾ ಅವರೇ ಸ್ವಂತವಾಗಿ ನೇಮಿಸಿದ ಕೆಲಸಗಾರರ ಪರೀಕ್ಷಣೆಯೇ ಕಾರಣ. ಇಂತಹಾ ಕೈಗಾರಿಕೆಯ ಸಂಸ್ಥೆಗಳಲ್ಲಿ ಕೆಲಸಗಾರರ ಯೋಗ್ಯತೆಯ ಮೇರೆ ಕಣ್ಣಿಡಬೇಕೇ ಹೊರತು ಅವರ ಜಾತಿ ಅಥವಾ ಕೋಮಿನ ಕಡೆ ಕಣ್ಣು ಇಡಬಾರದು ಆದರೆ ನಮ್ಮ ಮೈಸೂರಿನಲ್ಲಿ ಜಾತಿದ್ವೇಷದ ವ್ಯಾಧಿಯು ಎಲ್ಲೆಲ್ಲಿಯೂ ಆವರಿಸಿರುವುದು. ಭದ್ರಾವತಿಯಲ್ಲಿಯೂ ಇದಕ್ಕೆ ಪ್ರವೇಶ ಉಂಟಾಗಬೇಕೆಂದು ಸರ್ಕಾರದವರು ಕೋರಿದರೆಂಬುದಾಗಿಯೂ ವಿಶ್ವೇಶ್ವರಯ್ಯನವರು ತಾವು ನಿಷ್ಪಕ್ಷಪಾತವಾಗಿಯೇ ಯೋಗ್ಯರಾದವರಿಗೆ ಕೆಲಸವನ್ನು ಕೊಡುತ್ತಿರುವವರಾಗಿಯೂ ಸುಮ್ಮನೆ ಜಾತಿಯ ವಾದವನ್ನು ತರುವುದರಿಂದ ಕಾರ್ಖಾನೆಯ ಕೆಲಸವು ಸುಲಲಿತವಾಗಿ ನಡೆಯುವದಕ್ಕೆ ಆತಂಕವು ಬರಬಹುದೆಂಬುದಾಗಿ ತಿಳಿಸಿದಹಾಗೂ ಸಮಾಚಾರವು ಹೊರಟಿದೆ. ಇದೇನಾದರೂ ವಿಶ್ವೇಶ್ವರಯ್ಯನವರ ಬಿಡುಗಡೆಗೆ ಕಾರಣವೂ ಗೊತ್ತಿಲ್ಲ. ಇದು ಹೇಗಾದರೂ ಇರಲಿ ವಿಶ್ವೇಶ್ವರಯ್ಯನವರು ಇನ್ನೂ ಕೆಲವುಕಾಲ ಕಾರ್ಖಾನೆಯ ಆಡಳಿತವನ್ನು ನಡೆಸಿ ಲಾಭದಾಯಕವಾಗುವಂತೆ ಮಾಡುವುದು ಯೋಗ್ಯವೆಂದು ನಾವು ಭಾವಿಸುತ್ತೇವೆ. ಸರ್ಕಾರದವರೂ ಕಾರ್ಖಾನೆಯ ಒಳ ಆಡಳಿತಕ್ಕೆ ಕೈಹಾಕದೆ ಅದರ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವಂತೆ ಅವಕಾಶವನ್ನು ಕೊಡಬೇಕೆಂಬುದು ನಮ್ಮ ಸೂಚನೆ.

ಸತ್ಯಾಗ್ರಹವೇ ಮದ್ದು

(ಮ|| ರಾ|| ಹೊಸಕೊಪ್ಪ ಕೃಷ್ಣರಾಯರಿಂದ)

ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ವಿಷಯವಾಗಿ ಹೊಸಕೊಪ್ಪ ಕೃಷ್ಣರಾಯರವರು ಸ್ವಾತಿ-ಯಿಂದ ಕೂಡಿರುವ ಒಂದು ಪತ್ರವನ್ನು ಬರೆದಿರುವರು. ಅವರು ಹೇಳುವುದೇನೆಂದರೆ;— ಸರ್ಕಾರದವರು ಬೆಂಗಳೂರಿನ ಗಲಭೆಗಳ ವಿಷಯದಲ್ಲಿ ತೋರಿಸಿದ ಅಸಾಮರ್ಥ್ಯವನ್ನೂ, ಕಾನೂನನ್ನೂ ಶಾಂತಿಯನ್ನೂ ಸಂರಕ್ಷಿಸುವದರಲ್ಲಿ ಪ್ರದರ್ಶಿಸಿದ ಅಚಾತುರ್ಯವನ್ನೂ ನೋಡಿ ಇನ್ನು ಮುಂದೆ ಸರ್ಕಾರದವರು ಎಚ್ಚೆತ್ತು ನಡೆಯುವರೆಂದು ತಿಳಿದಿದ್ದೆ. ತಪ್ಪುಗಳನ್ನು ಹೆಚ್ಚಿಸುವದಿಲ್ಲವೆಂದು ಎಣಿಸಿದ್ದೆ ಆದರೆ ನನ್ನ ನಿರೀಕ್ಷಣೆಯೇ ಒಂದಾಯಿತು ನಡೆದದ್ದೇ ಬೇರೆಯಾಯಿತು ನಮ್ಮ ಈಗಿನ ಸರ್ಕಾರದ ಪದ್ಧತಿಯಲ್ಲಿ ನ್ಯಾಯಕ್ಕೆ ಪುರಸ್ಕಾರವಿಲ್ಲ ಪ್ರಜಾಭಿಪ್ರಾಯಕ್ಕೆ ಮನ್ನಣೆ ಇಲ್ಲ ದಯಾದಾಕ್ಷಿಣ್ಯಕ್ಕೆ ಎಡೆಯಿಲ್ಲ ಇಂತಹ ಸರ್ಕಾರದ ಯಂತ್ರದ ಮುಂದೆ ವಾದಿಸಿ ಏನು ಪ್ರಯೋಜನ? ಪ್ರಜಾಭಿಪ್ರಾಯದ ಪ್ರಕಟಣೆಗೆ ಮುಖ್ಯವಾದ ಮೂರ ಸಾಧನೆಗಳಿರುವುವು. ಲೇಖನ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ ಮತ್ತು ಸಭಾಸ್ವಾತಂತ್ರ್ಯ. ಇವುಗಳಲ್ಲಿ ಅತ್ಯುತ್ತಮವಾದ ಲೇಖನಸ್ವಾತಂತ್ರ್ಯವನ್ನು ಕಳೆದು ಸರ್ಕಾರದವರು ತಮ್ಮ ನಿರಂಕುಶ ಪ್ರಭುತ್ವದ ಉತ್ಕಟಾವಸ್ಥೆಯನ್ನು ವ್ಯಕ್ತಗೊಳಿಸಿದರು. ಮ|| ರಾ|| ವೆಂಕಟಕೃಷ್ಣಯ್ಯನವರ ಪತ್ರಿಕೆಗಳು ಬಹು ಕಾಲದಿಂದಲೂ ನಡೆದುಕೊಂಡು ಬಂದವುಗಳು. ಅವರ ದೇಶಸೇವೆಯ ಕೀರ್ತಿಯು ದಶದಿಕ್ಕುಗಳನ್ನೂ ವ್ಯಾಪಿಸಿರುವುದು ಈ ವತ್ತಿನ ದಿವಸ ಎಕ್ಸಿಕ್ಯೂಟೀವ್ ಕೌನ್ಸಿಲ್ಲನ್ನು ಅಲಂಕರಿಸಿರುವ ಮಹನೀಯರುಗಳು ಹುಟ್ಟುವದಕ್ಕಿಂತ ಮುಂಚಿನಿಂದಲೂ ತಾತಯ್ಯನವರು ದೇಶದ ಸೇವೆಯನ್ನು ಎಡಬಿಡದೆ ಮಾಡುತ್ತ ಬಂದಿರುವರು ಪ್ರಜಾಮಿತ್ರನೂ ನಿಂತಿತು. ಪತ್ರಿಕಾ ಕಾನೂನೆಂಬ ಈ ಕತ್ತಿಯು ಇತರ ಪತ್ರಿಕೆಗಳ ಮೇಲೆಯೂ ಬೀಳಬಹುದು ಪ್ರಜೆಗಳು ಈಗಲೇ ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿದ ಹೊರತು ಈ ಕರಾಳ ರಾಕ್ಷಸನ ಹಾವಳಿಯು ಇನ್ನೂ ಉಲ್ಬಣವಾಗ ಬಹುದು. ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ದಬ್ಬಾಳಿಕೆಯು ಮುಂದೆ ಬೆಂಗಳೂರ ಗಲಭೆಗಳು ಬಹಳ ಅಲ್ಪ ಆ ಸಂಬಂಧವಾಗಿ ಸರ್ಕಾರದವರು ನಡೆಸಿರುವ ಅನ್ಯಾಯಕ್ಕಿಂತಲೂ ತಾತಯ್ಯನವರ ಮೇಲೆ ನಡೆಸಿರುವ ಅನ್ಯಾಯವು ಮಹತ್ತರವಾದುದು. ನ್ಯಾಯವನ್ನು ಸ್ಥಾಪಿಸುವದಕ್ಕೆ ಮುಂಚೆ ಭಾಷಣ ಸ್ವಾತಂತ್ರ್ಯ ಲೇಖನ ಸಭಾ ಸ್ವಾತಂತ್ರ್ಯದ ಅಧಿಕಾರಗಳನ್ನು ನಾವು ಸ್ಥಾಪಿಸಬೇಕು. ಭಾಷಣವು ಇತರರಿಗೆ ನೋವನ್ನು ಉಂಟುಮಾಡಿದರೂ ನಡೆಯುವದಕ್ಕೆ ಸ್ವಾತಂತ್ರ್ಯವಿರಬೇಕು ಲೇಖನ ಸ್ವಾತಂತ್ರ್ಯವೆಂದರೆ ಅತ್ಯಂತ ಕಠಿಣವಾದ ಟೀಕೆಗಳನ್ನ ಮಾಡುವದಕ್ಕೂ ಅಧಿಕಾರವಿರಬೇಕು ಲೇಖಕನನ್ನು ಶಿಕ್ಷಿಸಬೇಕು ಪತ್ರಿಕೆಯನ್ನೇ ನಿಲ್ಲಿಸಬಾರದು. ಸಭಾಸ್ವಾತಂತ್ರ್ಯವೂ ಹೀಗೆಯೇ. ದೇಶೀಯ ಸಂಸ್ಥಾನಗಳಲ್ಲಿ ನಾವು ಈ ಮೂರು ಸ್ವಾತಂತ್ರ್ಯಗಳನ್ನು ಗಳಿಸಿದರೆ ನಾವು ಸ್ವರಾಜ್ಯವನ್ನೆ ಗಳಿಸಿದ ಹಾಗಾಯಿತು. ಈಗಿನ ಮೈಸೂರು ಸರ್ಕಾರದವರು ಈರೀತಿಯಾದ ಸ್ವರಾಜ್ಯಕ್ಕೆ ದಾರಿಯನ್ನು ಹಾಕಿಕೊಡುತ್ತಿದಾರೆ. ಸರ್ಕಾರದ ದಬ್ಬಾಳಿಕೆಯಿಂದ ನಮ್ಮ ಸಂಸ್ಥಾನದ ಪ್ರಜೆಗಳಲ್ಲಿ ಅಸಮಾಧಾನ ಉಂಟಾಗಿ ಖಂಡನೆಯ ಸಭೆಗಳು ನಡೆಯುತ್ತಿರುವುದೆಂದು ಕೇಳಿ ನನಗೆ ಬಹಳ ಸಂತೋಷವಾಯಿತು

ರೂಸೋ ಎಂಬ ಫ್ರೆಂಚ್ ತತ್ವಜ್ಞನ ಕೆಲವು ಸ್ವಾತಂತ್ರ್ಯವಿಚಾರಗಳು

1 ಮನುಷ್ಯನು ಹುಟ್ಟಿದ್ದು ಯಜಮಾನನಾಗಿ ಆದರೆ ನೋಡಿದಲ್ಲೆಲ್ಲಾ ಅವನು ಕೈದಿಯು ಕಟ್ಟಿಸಿರುವನು.

2 ಎಷ್ಟೋ ಜನರು ತಾವು ಜಗತ್ತಿನ್ನ ಪ್ರಭೋರೆಗಳೆಂದು ತಿಳಿದಿರುತ್ತಾರೆ. ಆದರೆ ಜಗತ್ತಿನ್ನ ತಾವೆ ಹೆಚ್ಚಿನ ಚೇತನವಾಗಿರುವುದು ಅವರಿಗೆ ತಿಳಿ...

3 ಸ್ವಭಾವತಃ ಕೆಲವರು ದಾಸರಾಗಲಿಕ್ಕೆ ಹುಟ್ಟಿದವರೆಂದು ಯಾರಾದರೂ ಅಂದರೆ ಸ್ವಭಾವದ ... ವಾಗಿ ಅವರು ದಾಸರಾಗಿರುವರೆಂದು ನಾನು ... ತ್ತೇನೆ.

4 ಮೊಟ್ಟ ಮೊದಲಿನ ದಾಸರು ... ಮಾಡಲ್ಪಟ್ಟರು. ಅವರ ಪುಕ್ಕತನವು ಅವರ ... ಮಣ್ಣು ಮುಕ್ಕಿಸುವುದು.

5 ಹಕ್ಕೆಂಬುದು ಶಕ್ತಿಯ ಕೈಯೊಳಗಿನ ಶಸ್ತ್ರವು. ನ್ಯಾಯದೇವತೆಯ ಕೈಯೊಳಗಿನ ಕಂಕಣ.

6 ಮನುಷ್ಯರು ಕತ್ತಲೆಯ ಕಾರಾಗೃಹದಲ್ಲಿ ಸ್ವಸ್ಥವಾಗಿ ಇರಬಹುದ. ಆದರೆ ಈ ಸ್ವಸ್ಥತೆಯು ... ರಿಗೆ ಸಮಾಧಾನಕರವೇ ?

7 ಸ್ವಾತಂತ್ರ್ಯತೆಯನ್ನು ಬಿಟ್ಟುಕೊಡುವವರೆಂದರೆ ನಷ್ಯನೆಂಬ ಹೆಸರನ್ನೂ ಮನುಷ್ಯ ಜಾತಿಯ ಹಕ್ಕುಗಳನ್ನೂ ಅಧಿಕಾರಿಗಳನ್ನೂ ಬಿಟ್ಟಂತೆಯೇ ಸರಿ.

8 ಪ್ರಭುತ್ವವೆಂದರೇನು? ಹೆಚ್ಚಿನವನ ಕೂಡ ಕಡಿಮೆಯವನ ಕರಾರು ಪತ್ರವಲ್ಲ. ಒಂದು ಸಂಘವು ಸದಸ್ಯರೊಡನೆ ಮಾಡಿಕೊಳ್ಳುವ ನ್ಯಾಯವಾದ ಸಮಾನತೆಯ ಸಮಯ. Agr: ement

9. ಕಟ್ಟಳೆಗಳೆಂದರೆ ನಾವು ಬರೆದ ನಮ್ಮ ವಿಧಿಲಿಪಿಗಳು ಅಂದಮೇಲೆ ನಮ್ಮಷ್ಟಕ್ಕೆ ನಾವು ಸ್ವತಂತ್ರರು ಅಹುದು, ಕಟ್ಟಳೆಗಳಿಗೆ ಬದ್ಧರೂ ಅಹುದು.

10 ಉತ್ತಮವಾದ ರಾಜ್ಯಪದ್ಧತಿಯಾವುದು? ಹೊರಗಿನ ಉಪಾಯಗಳಿಲ್ಲದೆ ಯಾವುದರ ನಾಗರೀಕರು ಹೆಚ್ಚುತ್ತಲಿರುವರೋ ಅದು ಉತ್ತಮರಾಜ್ಯ, ಯಾವದರ ಜನಕಳಿಗೆ ರಾಷ್ಟ್ರಸಂತತಿಯೇ ಲುಪ್ತವಾಗುವುದೊ ಅದು ನಿಕೃಷ್ಟರಾಜ್ಯ —ಕನ್ನಡಿಗ.

ಹಕ್ಕು

ದೇವನಹಳ್ಳಿ ತಾ|| ಪೋಲೀಸ್ ದಫೆದಾರ್ ... ಣಯ್ಯನೆಂಬುವರಿಗೆ ಕ್ರಿ|| ಪ್ರೊ ಕೋಡಿನ 174 ಪ್ರಕರಣದಂತೆ ಮೊಬದ್ದಮೆಗಳ ತನಿಖೆ ನಡೆಯಿಸುವ ಹಕ್ಕನ್ನು ಸರ್ಕಾರದವರು ಕೊಟ್ಟಿರುವರು.

ನಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕಾಗಿ ಸತ್ಯಾಗ್ರಹವನ್ನು ಹೂಡುವ ವಿಷಯವನ್ನು ಈಗಲೇ ಆಲೋಚಿಸಬೇಕು. ದಬ್ಬಾಳಿಕೆಗೆ ತುತ್ತಾದ ಸಂಪಾದಕರುಗಳು ತಮ್ಮ ಹಕ್ಕನ್ನು ಸ್ಥಾಪನೆಮಾಡುವದಕ್ಕಾಗಿ ಸತ್ಯಾಗ್ರಹದ ಮೊದಲಾದ ಪರಿಣಾಮಕಾರಿಯಾದ ಕ್ರಮಗಳನ್ನು ಅನುಸರಿಸಬೇಕು. ಸರ್ಕಾರದ ಅನ್ಯಾಯವನ್ನು ಎಂದಿಗೂ ಸಹಿಸಬಾರದು. ದಬ್ಬಾಳಿಕೆಗೆ ಹೆದರಬಾರದು. ಸ್ವತಂತ್ರ ಮನುಷ್ಯರಾಗಿ ಬದುಕಲಾಗದಿದ್ದರೆ ನಮ್ಮ ಪ್ರಾಣವನ್ನಾದರೂ ಒಪ್ಪಿಸಬೇಕು.

ನಿರಂಕುಶ ಆಡಳಿತವು ನಿರ್ಮೂಲವಾಗಬೇಕು.

ಸರ್ ಎಂ. ವಿಶ್ವೇಶ್ವರಯ್ಯನವರ ಅಮೋಘವಾದ ಭಾಷಣ

ತಾಯಿನಾಡು.

18—1—1929

ಸರ್. ಎಂ. ವಿಶ್ವೇಶ್ವರಯ್ಯನವರ ಅಮೋಘವಾದ ಭಾಷಣ.

(ಮುಂದುವರಿದಿದ್ದು.)

1919 ರಲ್ಲಿ ಕೊಡಲ್ಪಟ್ಟ ಸುಧಾರಣೆಗಳಿಂದ ಬ್ರಿಟಿಷ್ ಇಂಡಿಯಾದ ಪ್ರಾಂತಗಳಿಗೆ ಡಯಾರ್ಕಿ ಅಥವಾ ದ್ವಿಮುಖ ರಾಜ್ಯ ಪದ್ಧತಿಯು ದೊರೆಯಿತು. ಅದೇ ಸಂದರ್ಭದಲ್ಲಿ ಗವರ್ನರ್ ಜನರಲ್‌ರವರ ಎಗ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಒಟ್ಟು 7 ಜನ ಸದಸ್ಯರಲ್ಲಿ ಮೂವರು ಭಾರತೀಯರಿರಬೇಕೆಂದು ನಿರ್ಧಾರವಾಯಿತು. ಪುನಃ 1927 ನೇ ನವೆಂಬರ್ 8 ನೇ ತಾರೀಖಿನಲ್ಲಿ ಬ್ರಿಟಿಷ್ ಸರ್ಕಾರದವರು ಸರ್, ಜಾನ್. ಸೈಮನ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನ್ನನ್ನು ನೇಮಿಸಿದರು. ಇಂಡಿಯಾ ದೇಶಕ್ಕೆ ಮುಂದೆ ಕೊಡಬಹುದಾದ ರಾಜಕೀಯ ಸುಧಾರಣೆಗಳನ್ನು ವಿಮರ್ಶಿಸುವುದೇ ಈ ಕಮೀಷನ್ನಿನ ಕೆಲಸ. ಇದೇ ಸೈಮನ್ ಕಮಿಷನ್.

1927 ನೇ ಡಿಸಂಬರ್ 16 ರಲ್ಲಿ ಇಂಡಿಯಾ ಸರ್ಕಾರದವರು ಬಟ್ಲರ್ ಕಮಿಟಿಯನ್ನು ನೇಮಿಸಿದರು. ಇಂಡಿಯಾ ಸರ್ಕಾರಕ್ಕೂ ದೇಶೀಯ ಸಂಸ್ಥಾನಗಳಿಗೂ ಇರುವ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳನ್ನು ಪರಿಶೀಲಿಸುವುದೇ ಈ ಕಮಿಟಿಯ ಉದ್ದೇಶ. ಸೈಮನ್ ಕಮಿಷನ್ನೂ ಬಟ್ಲರ್ ಕಮಿಟಿಯೂ ಈ ಎರಡೂ ತಮ್ಮ ವರದಿಗಳನ್ನು ಒಪ್ಪಿಸಿದ ಮೇಲೆ ಬ್ರಿಟಿಷ್ ಸರ್ಕಾರದವರು ಇಂಡಿಯಾ ದೇಶದ ಮುಂದಿನ ರಾಜ್ಯ ಪದ್ಧತಿಯಲ್ಲಿ ಸಂಸ್ಥಾನಗಳ ಸ್ಥಾನವು ಯಾವುದು ಎಂಬುದನ್ನು ನಿರ್ಧರಿಸುವರೆಂಬ ದಾಗಿ ನಿರೀಕ್ಷಣೆ ಇದೆ.

ಸೈಮನ್ ಕಮಿಷನ್ನಿಗೆ ಕೊಡಲ್ಪಟ್ಟಿರುವ ಸೂಚನೆಗಳು ಅಷ್ಟೇನೂ ಆಶಾಜನಕವಾಗಿಲ್ಲ. ಮಿ|| ಮಾಂಟಿಗೂರವರು 10 ವರ್ಷಗಳ ಹಿಂದೆ ಹೇಳಿದ ಕೆಲವು ಒಣಮಾತುಗಳೇ ಇದರಲ್ಲಿವೆ. ಎಲ್ಲರಿಗೂ ಗೊತ್ತಿದ್ದಂತೆ 1919 ರಲ್ಲಿ ಕೊಡಲ್ಪಟ್ಟ ಸುಧಾರಣೆಗಳನ್ನೇ ಜನಗಳು ಆದರಣೆ ಮಾಡಲಿಲ್ಲ. ಈ ಸೈಮನ್ ಕಮೀಷನ್ನು ಏರ್ಪಾಡಾದ ಮೇಲೆ ಅದರ ಮೆಂಬರುಗಳ ವಿಷಯವಾಗಿಯೂ ಅದು ಅನುಸರಿಸುತ್ತಿರುವ ಕಾರ್ಯಪದ್ಧತಿಯ ವಿಷಯವಾಗಿಯೂ ಜನಗಳು ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವರು

ಬಟ್ಲರ್ ಕಮಿಟಿಯವರು ಒಪ್ಪಂದಗಳೂ ಕೌಲುಗಳೂ ಸಂಸ್ಥಾನಗಳ ಆರ್ಥಿಕ ಸ್ಥಿತಿ ಇವುಗಳ ಕಡೆ ಗಮನ ಕೊಟ್ಟಿರುವ ಹಾಗೆ ಕಾಣುತ್ತದೆ. ಅವರು ಇದುವರಿಗೂ ದೇಶೀಯ ಸಂಸ್ಥಾನದ ಏಳು ಕೋಟಿ ಪ್ರಜೆಗಳ ಕುಂದುಕೊರತೆಗಳು ಮತ್ತು ಆವಶ್ಯಕತೆಗಳ ಕಡೆ ಗಮನಕೊಟ್ಟಿಲ್ಲ.

ಅವರ ಒಳ್ಳೆ ಆಡಳಿತದ ವಿಷಯವಾಗಿ ಮುಖ್ಯವಾಗಿ ಗಮನವನ್ನು ಕೊಡಬೇಕಾಗಿತ್ತು. ಅವರು ಆ ರೀತಿಯಾ ಮಾಡಿರುವುದಕ್ಕೆ ರುಜುವಾತು ಕಂಡುಬರುವುದಿಲ್ಲ.

ಸೈಮನ್ ಕಮೀಷನ್ನೇನು ಬಟ್ಲರ್ ಕಮಿಟಿ ಏನು ಇವೆರಡರ ನಡವಳಿಕೆಯಲ್ಲಿಯೂ ಎಲ್ಲರಿಗೂ ತಿಳಿದ ವ್ಯವಹಾರವಿಲ್ಲ. ಒಳಿಂಗಿತ ಇಲ್ಲ ದೊಡ್ಡತನವಿಲ್ಲ ಧಾರಾಳತೆ ಇಲ್ಲ, ಔದಾರ್ಯತೆ ಇಲ್ಲ.

ಇಂಡಿಯಾ ದೇಶದ ಭವಿಷ್ಯತ್ ರಾಜ್ಯಪದ್ಧತಿಯನ್ನು ನಿಷ್ಕರ್ಷಿಸುವುದಕ್ಕೆ ನಾಲ್ಕು ಪಂಗಡಗಳಿರುವುವು.

1 ಬ್ರಿಟಿಷ್ ಸರ್ಕಾರ ಮತ್ತು ಬ್ರಿಟಿಷ್ ಜನಗಳು,

(2) ಬ್ರಿಟಿಷ್ ಇಂಡಿಯಾದಲ್ಲಿ ವಾಸವಾಗಿರುವ ಭಾರತೀಯರು.

(3) ದೇಶೀಯ ಸಂಸ್ಥಾನಗಳನ್ನು ಆಳುವ ರಾಜರುಗಳು.

(4) ದೇಶೀಯ ಸಂಸ್ಥಾನದ ಪ್ರಜೆಗಳು.

ಬ್ರಿಟಿಷ್ ಸರ್ಕಾರದ ಮತ್ತು ಬ್ರಿಟಿಷ್ ಪ್ರಜೆಗಳ ಈ ಚೀಚಿನ ನಡವಳಿಕೆಯನ್ನು ನೋಡಿದರೆ ಈಗ ಜಾರಿಯಲ್ಲಿರುವ ಸರ್ಕಾರೀ ಪದ್ಧತಿಯನ್ನೇ ಆದೆಷ್ಟು ದಿವಸ ತಳ್ಳಬೇಕೆಂದಿರುವ ಹಾಗೆ ಕಾಣುತ್ತದೆ. ದೇಶೀಯ ಸಂಸ್ಥಾನದ ರಾಜರುಗಳು ಯಾವ ಆತಂಕವೂ ಇಲ್ಲದೆ ತಮ್ಮ ಪ್ರಜೆಗಳ ಮೇಲೆ ಇರುವ ಆಳಿಕೆಯನ್ನು ಮುಂಗಡಕ್ಕೂ ನಡೆಸಿಕೊಂಡು ಬರಬೇಕೆಂದು ಇಷ್ಟಪಡುತ್ತಿದ್ದಾರೆ. ಅಖಿಲಭಾರತದ ಕೇಂದ್ರನ್ಯಾಯವಿಧಾಯಕ ಸಭೆಗೆ ಜವಾಬ್ದಾರಿಯಾಗಿ ಇರುವ ಮುಂದೆ ಸ್ಥಾಪಿಸಬಹುದಾದ ಇಂಡಿಯಾ ಸರ್ಕಾರದ ಅಧೀನದಲ್ಲಿ ಈ ರಾಜರುಗಳು ಇಷ್ಟಪಡುವುದಿಲ್ಲ. ಬ್ರಿಟಿಷ್ ಇಂಡಿಯಾದ ಪ್ರಜೆಗಳು ಇನ್ನೂ ಹೆಚ್ಚು ಹೆಚ್ಚು ಸುಧಾರಣೆಬೇಕೆಂದು ಹೋರಾಡುತ್ತಿದ್ದಾರೆ. ಈಗ ಡೊಮಿನಿಯನ್ ಸ್ಟೇಟಸ್ಸು ಸರ್ಕಾರವು ಬೇಕೆಂದು ಕೇಳುತ್ತಿದ್ದಾರೆ. ದೇಶೀಯ ಸಂಸ್ಥಾನದ ಪ್ರಜೆಗಳಿಗೂ ಅವರವರ ಸಂಸ್ಥಾನಗಳಲ್ಲಿ ಒಂದು ರೀತಿಯಾದ ಜವಾಬ್ದಾರಿ ಸರ್ಕಾರವು ಬೇಕು ಮತ್ತು ಮುಂದೆ ಸ್ಥಾಪಿಸಲ್ಪಡುವ ಇಂಡಿಯಾ ಸರ್ಕಾರದಲ್ಲಿ ತಮ್ಮ ಸಂಸ್ಥಾನಗಳಲ್ಲಿ ಸಂಬಂಧಪಟ್ಟ ವಿಷಯಗಳಲ್ಲಿ ಅಭಿಪ್ರಾಯವನ್ನು ಕೊಡುವುದಕ್ಕೆ ಅವಕಾಶ ಬೇಕು.

1920 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ರಾಜಕೀಯ ಸುಧಾರಣೆಗಳು ಜಾರಿಗೆ ಬಂದ ಮೇಲೆ ಮಧ್ಯಇಂಡಿಯಾದ ಮತ್ತು ಉತ್ತರ ಇಂಡಿಯಾದ ಕೆಲವು ರಾಜರುಗಳು ಬ್ರಿಟಿಷ್ ಸರ್ಕಾರದ ಅನುಮತಿಯನ್ನು ಪಡೆದು ಛೇಂಬರ್ ಆಫ್ ಪ್ರಿನ್ಸೆಸ್ ಎಂಬ ಸಭೆಯನ್ನು ಸ್ಥಾಪಿಸಿದರು 1921 ನೇ ಇಸ್ವಿ ಫೆಬ್ರವರಿ 8 ನೇ ತಾರೀಖಿನ ದಿವಸ ಡ್ಯೂಕ್ ಆಫ್ ಕಾನಟರವರು ಈ ಛೇಂಬರಿನ ಆರಂಭೋತ್ಸವವನ್ನು ಮಾಡಿದರು. ನಮ್ಮ ಇಂಡಿಯಾದಲ್ಲಿ 662 ರಾಜರುಗಳಿರುವರು. ಇವರಲ್ಲಿ 200 ಜನ ಗಣ್ಯರಾದವರು ಇವರ ಪೈಕಿ 108 ಜನರು ಛೇಂಬರ್ ಆಫ್ ಪ್ರಿನ್ಸೆಸ್ ಸಭೆಗೆ ಮೆಂಬರುಗಳು ಉಳಿದ ರಾಜರುಗಳಿಗೆ ಈ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವುದಕ್ಕೆ ಅಧಿಕಾರವಿರುವುದು. ಈ ರಾಜರುಗಳ ಕೌಲು ಕರಾರು ಮತ್ತು ಒಪ್ಪಂದಗಳು ಇವುಗಳ [illegible] ಈ ಸಭೆಯು ಏರ್ಪಟ್ಟಿರುವುದು. ದಿಲ್ಲಿಯಲ್ಲಿ [illegible] ಲ್ಲೋ ವರ್ಷಕ್ಕೆ ಎರಡು ಮೂರು ಸಲ ಇದು [illegible] [illegible] ಸಂಬಂಧ ಪಟ್ಟ [illegible] ನಡೆಸುವುದಕ್ಕೆ ಈ ಸಭೆಗೆ ಅಧಿಕಾರವಿರುವುದು.

ಮಧ್ಯ ಇಂಡಿಯಾದ ಮತ್ತು ಉತ್ತರ ಇಂಡಿಯಾದ ಅನೇಕ ರಾಜರುಗಳು ಇಂಗ್ಲೆಂಡಿಗೆ ಹೋಗಿ ಬಟ್ಲರ್ ಕಮಿಟಿಯ ಮುಂದೆಯೂ [illegible] ಆಫ್ ಸ್ಟೇಟ್ ಮುಂದೆಯೂ ತಮ್ಮ ಪಕ್ಷವನ್ನು ವಾದಿಸುವುದಕ್ಕಾಗಿ ಹೋಗಿದ್ದರು. ಬಟ್ಲರ್ ಕಮಿಟಿಯಾಗಲೀ ಬ್ರಿಟಿಷ್ ಸರಕಾರವಾಗಲೀ ಈ ರಾಜರುಗಳಿಗೆ ಯಾವ ಭರವಸೆಯನ್ನೂ ಕೊಟ್ಟಹಾಗೆ ಕಾಣುವುದಿಲ್ಲ.

ಸರ್ ಲೆಸ್ಲಿ ಸ್ಕಾಟ್‌ರವರ ಸಿದ್ಧಾಂತಗಳ ವಿಚಾರವಾಗಿಯೇ ರಾಜರುಗಳಲ್ಲಿ ಸಮ್ಮತವಿಲ್ಲ. ಸರ್ ಲೆಸ್ಲಿ ಸ್ಕಾಟ್‌ರವರ ಸಿದ್ಧಾಂತಗಳಿಗೂ ಕಲ್ಕತ್ತಾದಯೂರೋಪಿಯನ್ ಅಸೋಸಿಯೇಷನ್ನವರು ಸೈಮನ್ ಕಮಿಷನ್ನಿಗೆ ಒಪ್ಪಿಸಿದ ಸಿದ್ಧಾಂತಗಳಿಗೂ ಬಹಳ ಹತ್ತಿರ ಹತ್ತಿರ ಸಂಬಂಧ ಇರುವುದು.

ಈಗ ಸಂಸ್ಥಾನಗಳ ಸಂಬಂಧಪಟ್ಟ ವಿಷಯಗಳೆಲ್ಲಾ ಇಂಡಿಯಾ ಸರ್ಕಾರದವರ ಆಡಳಿತಕ್ಕೆ ಒಳಪಟ್ಟಿದೆ ಈ ಪೋರ್ಟ್ ಪೋಲಿಯೋವು ವೈಸರಾಯರವರಲ್ಲಿ ಇದೆ ಇವರ ಸಹಾಯಕ್ಕಾಗಿ ಒಬ್ಬ ಪೊಲಿಟಿಕಲ್ ಸೆಕ್ರಿಟರಿಯೂ ಇದ್ದಾನೆ ಬ್ರಿಟಿಷ್ ಇಂಡಿಯಾದ ಪ್ರಜೆಗಳು ಕೇಳುವಂತೆ ಡೊಮಿನಿಯನ್ ಸ್ಟೇಟಸ್ ಸ್ವರಾಜ್ಯವು ಸ್ಥಾಪನೆಯಾದರೆ ಆಗ ಇಂಡಿಯಾ ಸರ್ಕಾರವು ಕೇಂದ್ರವರ್ತಿಯಾದ ಅಖಿಲ ನ್ಯಾಯವಿಧಾಯಕ ಸಭೆಗೆ ಜವಾಬ್ದಾರಿಯಾಗಬೇಕಾಗುವುದು ತಮ್ಮ ದೇಶೀಯರಿಂದಲೇ ಆಡಳಿತನಡೆಸಲ್ಪಡುವ ಮಂತ್ರಿಮಂಡಲಕ್ಕೆ ಅಧೀನರಾಗಿರುವುದಕ್ಕೆ ಈ ರಾಜರುಗಳಿಗೆ ಇಷ್ಟವಿಲ್ಲ, ಈ ರಾಜರುಗಳು ಅಪೇಕ್ಷಿಸುವುದೇನೆಂದರೆ ಸಂಸ್ಥಾನಗಳ ಮೇಲ್ವಿಚಾರಣೆಗಳನ್ನು ನೋಡಿಕೊಳ್ಳುವುದಕ್ಕೆ ಬ್ರಿಟಿಷ್ [illegible] ಯವರ ಪ್ರತಿನಿಧಿಯವರಾದ ವೈಸರಾಯರೂ ಬ್ರಿಟಿಷ್ ಮಂತ್ರಿಮಂಡಲವೂ ಇರಬೇಕಂತೆ ತಮ್ಮ ದೇಶೀಯರಿಂದ ಕೂಡಿದ ಮಂತ್ರಿಮಂಡಲವು ಇರಕೂಡದಂತೆ! ಬ್ರಿಟಿಷ್ ಇಂಡಿಯಾದ ರಾಜಕೀಯ ಸುಧಾರಣೆ ವಿಷಯವಾಗಿ ಅನೇಕ ರಾಜರುಗಳು [illegible] ನ್ನು ತೋರಿಸಿರುತ್ತಾರೆ. ಆದರೆ ಇದೇ ರಾಜರುಗಳು ತಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವ ಬಗ್ಗೆ ಯಾವ ಆಸಕ್ತಿಯನ್ನೂ ತೋರಿಸತಕ್ಕದ್ದಿಲ್ಲ.

(ಮುಂದುವರಿಯುವುದು.)



TAINADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D. Subbiah Road Mysore.

Regd No. M 2322 ॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದ.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಶನಿವಾರ ೧೯ ಜನವರಿ ೧೯೨೯ [ಸಂಚಿಕೆ [illegible]

"ರಾಜ್ಯಕ್ಕೋಸ್ಕರ ರಾಜನೇ ಹೊರತು ರಾಜನಿಗೋಸ್ಕರ ರಾಜ್ಯವಲ್ಲ" ಆಫ್‌ಘಾನಿಸ್ಥಾನದ ಅಮೀರರ ಆದರ್ಶವಾಕ್ಯ

TAI NADU

19—1—1929

ಅಮೀರರ ಸಿಂಹಾಸನತ್ಯಾಗ

ಆಫ್‌ಘಾನಿಸ್ಥಾನದ ಅಮೀರರಾದ ಅಮಾನುಲ್ಲಾರವರು ಈ ತಿಂಗಳ 13 ನೇ ತಾರೀಖಿನಲ್ಲಿ ಸಿಂಹಾಸನ ಪರಿತ್ಯಾಗವನ್ನು ಮಾಡಿ ತಮ್ಮ ಅಣ್ಣಂದಿರಾದ ಇನಾಯತುಲ್ಲಾರವರಿಗೆ ರಾಜ್ಯವನ್ನು ಒಪ್ಪಿಸಿದರು. ಇವರು ತಮ್ಮ ರಾಜ್ಯವನ್ನು ಯೂರೋಪಿನಂತೆ ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನಿಸಿದರು ಇವರು ರಾಜ್ಯಕ್ಕೆ ಬಂದುದು ಹತ್ತು ವರ್ಷವಾಯಿತು 1919 ನೇ ಇಸವಿಯಲ್ಲಿ ಇವರ ತಂದೆಗಳಾದ ಅಮೀರ್ ಹಬೀಬುಲ್ಲಾ ಖಾನ್‌ರವರು ಕೊಲೆ ಮಾಡಲ್ಪಟ್ಟರು. ಕೂಡಲೇ ಇವರ ಸಹೋದರರು ಅಮೀರರೆಂಬದಾಗಿ ಜಾಹೀರು ಮಾಡಿಕೊಂಡರು. ಆದರೆ ಆರು ದಿನಗಳನಂತರ ಹಬೀಬುಲ್ಲಾರವರ ಮೂರನೇ ಮಕ್ಕಳಾದ ಅಮಾನುಲ್ಲಾರವರು ರಾಜ್ಯಕ್ಕೆ ತಾವು ಬಾಧ್ಯಸ್ಥರೆಂದು ಪ್ರತಿಭಟಿಸಿ ಸಿಂಹಾಸನವನ್ನು ತೆಗೆದುಕೊಂಡರು. ಇವರಿಗೆ ಸೈನ್ಯಬೆಂಬಲವು ಇದ್ದುದರಿಂದಲೂ ಇವರ ಅಧೀನದಲ್ಲಿಯೇ ಖಜಾನೆ, ತೋಪುಖಾನೆಗಳೂ ಇದ್ದುದರಿಂದಲೂ ಇವರ ಚಿಕ್ಕಪ್ಪನಾದ ನಜರುಲ್ಲಾರವರು ನ್ಯಾಯವಾಗಿ ಸಿಂಹಾಸನಕ್ಕೆ ಬರಬೇಕಾದ ಇವರ ಅಣ್ಣಂದಿರಾದ ಇನಾಯತುಲ್ಲಾರವರೂ ಅಮಾನುಲ್ಲಾರವರಿಗೆ ಸಿಂಹಾಸನವನ್ನು ಬಿಟ್ಟುಕೊಟ್ಟು ಕಾಬೂಲಿಗೆ ಹೊರಟು ಹೋದರು. ಇವರು ಸಿಂಹಾಸನಕ್ಕೆ ಬಂದ ಒಡನೆಯೇ 1919ರಲ್ಲಿ ನೇ ಇಸವಿ ಮೇ ತಿಂಗಳಲ್ಲಿ ಇಂಡಿಯಾದಮೇಲೆ ದಂಡೆತ್ತಿ ಬಂದರು. ಬ್ರಿಟಿಷರಿಗೂ ಇವರಿಗೂ ಯುದ್ಧವಾಯಿತು. ಕಡೆಗೆ ಸಮಾಧಾನವಾಯಿತು 1921 ರಲ್ಲಿ ಆಫ್‌ಘಾನಿಸ್ಥಾನವು ಸ್ವತಂತ್ರ ರಾಷ್ಟ್ರವೆಂದು ಬ್ರಿಟಿಷರು ಒಪ್ಪಿಕೊಂಡರು. 1927 ನೇ ಡಿಸೆಂಬರಿನಲ್ಲಿ ಇವರು ರಾಣಿಯವರೊಡನೆ ಯೂರೋಪಿನ ಸಂಚಾರಕ್ಕೆ ಹೊರಟರು 1928 ನೇ ಜುಲೈನಲ್ಲಿ ತಮ್ಮ ದೇಶಕ್ಕೆ ವಾಪಸು ಬಂದರು ಇವರು ಇಂಡಿಯಾ ದೇಶಕ್ಕೂ ಬಂದಿದ್ದರು. ಇವರು ಹೋದ ಕಡೆಯಲ್ಲೆಲ್ಲಾ ಅಘಾತ ಪೂರ್ವವಾದ ಸನ್ಮಾನಗಳು ದೊರೆತವು. ಇವರು ಬಹಳ ಮುಂದುವರಿದ ರಾಜರೆಂದು ಪ್ರಖ್ಯಾತಿಯನ್ನು ಪಡೆದರು. ಇವರು ರಷ್ಯಾ ದೇಶಕ್ಕೂ ಹೋಗಿದ್ದರು ಯೂರೋಪಿನಲ್ಲಿರುವ ಮುಂದುವರೆದ ರಾಷ್ಟ್ರಗಳನ್ನೆಲ್ಲಾ ನೋಡಿ ತಮ್ಮ ದೇಶವನ್ನೂ ಅಭಿವೃದ್ಧಿಗೆ ತರಬೇಕೆಂದು ಅಕಾಂಕ್ಷೆಯಿಂದ ಹೊಸಹೊಸ ಸುಧಾರಣೆಗಳನ್ನು ತಮ್ಮ ದೇಶದಲ್ಲಿ ಜಾರಿಗೆ ತಂದರು. ಗಂಡಸರೆಲ್ಲರೂ ಯೂರೋಪಿಯನ್ ಉಡುಪನ್ನೇ ಹಾಕಬೇಕೆಂದೂ, ಸ್ತ್ರೀಯರೆಲ್ಲರೂ ಘರದೆಯನ್ನು ತ್ಯಜಿಸಬೇಕೆಂದೂ ಮಹಮ್ಮದೀಯರು ಗಡ್ಡವನ್ನು ಬೋಳಿಸಬೇಕೆಂದೂ ಇವೇ ಮೊದಲಾದ ಸುಧಾರಣೆಗಳನ್ನು ಆಚರಿಸಬೇಕೆಂದು ಒತ್ತಾಯ ಮಾಡಿದರು.

ಆಫ್‌ಘಾನಿಸ್ಥಾನದ ಪ್ರಜೆಗಳು ಇನ್ನೂ ಅಷ್ಟು ... ಇವರು ತಮ್ಮ ಧರ್ಮಕ್ಕೆ ಅಪಾಯ ಬಂದಿತೆಂದು ಅಮೀರರಿಗೆ ವಿರೋಧವಾಗಿ ತಿರುಗಲಾರಂಭಿಸಿದರು. ಇದೇ ಸಮಯವನ್ನು ಕಾದುಕೊಂಡಿದ್ದ ಮುಲ್ಲಾಗಳು ಅಮೀರರ ವಿರೋಧಿಗಳನ್ನು ಹುರಿದುಂಬಿಸಿದರು. ಇದೇ ಕಾಲದಲ್ಲಿಯೇ ಆಫ್‌ಘಾನಿಸ್ಥಾನದ ಸರಹದ್ದಿನಲ್ಲಿದ್ದ ಷಿನ್‌ವಾರಿ ಜನಗಳು ದಂಗೆ ಎದ್ದರು ಬಚ್ಚಾ ಸಕಾವೊ ಎಂಬುವನು ಅಮೀರರಿಗೆ ವಿರೋಧವಾಗಿ ದೊಂಬಿಗೆ ಆರಂಭಿಸಿದನು. ಈ ದೊಂಬಿಯು ಒಂದೆರಡು ತಿಂಗಳುಗಳಿಂದಲೂ ನಡೆಯುತ್ತಲೇ ಇದೆ ಕಡೆಗೆ ಏನೇನೋ ಒಳಸಂಚುಗಳು ಆಗಿ ಅಮಾನುಲ್ಲಾರವರು ತಮ್ಮ ಅಣ್ಣಂದಿರಾದ ಇನಾಯತುಲ್ಲಾರವರಿಗೆ ರಾಜ್ಯವನ್ನು ಒಪ್ಪಿಸಿದರು.

ರಾಜ್ಯವನ್ನು ಬಿಡುವುದಕ್ಕೆ ಕಾರಣವೇನೆಂದು ಕೇಳಲಾಗಿ " ಸುಮ್ಮನೆ ನಮ್ಮ ಜನಗಳಲ್ಲಿ ಜಗಳವೇತಕ್ಕೆ ? ರಕ್ತಪಾತವೇಕೆ? ನಾನು ಮಾಡಿರುವ ಸುಧಾರಣೆಗೆ ಜನಗಳ ಒಪ್ಪಿಕೆಯಿಲ್ಲದಿದ್ದರೆ ಬಿಡಲಿ ನಾನು ಮಾಡಿದ ಎಲ್ಲಾ ಕೆಲಸವನ್ನು ದೇಶಾಭಿಮಾನದಿಂದಲೇ ಮಾಡಿದನೇ ಹೊರತು ಬೇರೇ ಅಲ್ಲ ಈಗ ರಾಜ್ಯವನ್ನು ಪರಿತ್ಯಾಗ ಮಾಡುವುದೂ ದೇಶಾಭಿಮಾನದಿಂದಲೇ 'ಹೀಗೆಂದು ಹೇಳಿ ಅಮಾನುಲ್ಲಾರವರು ಕಾಂದಹಾರಿಗೆ ಅಂತರಿಕ್ಷ ವಿಮಾನದಲ್ಲಿ ಕುಳಿತು ಕೊಂಡು ಹೊರಟುಹೋದರು.

ಇಂಗ್ಲೆಂಡಿನ ಪತ್ರಿಕೆಗಳು ಅಮಾನುಲ್ಲಾರವರು ಸಿಂಹಾಸನ ಪರಿತ್ಯಾಗ ಮಾಡಿದ ವಿಷಯದಲ್ಲಿ ಸಂತೋಷವನ್ನು ಪ್ರಕಟಿಸುತ್ತಿವೆ. ಕಾರಣವನ್ನು ಹೇಳಬೇಕಾಗಿಲ್ಲ. ಅಮಾನುಲ್ಲಾರವರು ಬಹಳ ಸಮರ್ಥರು. ತಮ್ಮ ರಾಜ್ಯವನ್ನು ಅಭಿವೃದ್ಧಿಗೆ ತರುತ್ತಿದ್ದರು. ರಷ್ಯಾಕ್ಕೂ ಆಫ್‌ಘಾನಿಸ್ಥಾನಕ್ಕೂ ಸ್ನೇಹ ಬೆಳೆಯುತ್ತಿತ್ತಂತೆ! ಇದೊಂದು ಹೊಟ್ಟೇಕಿಚ್ಚು. ಈ ಕಾರಣಗಳಿಂದ ಅಮಾನುಲ್ಲಾರವರು ಸಿಂಹಾಸನ ಪರಿತ್ಯಾಗ ಮಾಡಿದ ವಿಷಯದಲ್ಲಿ ಬ್ರಿಟಿಷ್ ಪತ್ರಿಕೆಗಳಿಗೆ ಸಂತಸಾನಂದ. ಅಮಾನುಲ್ಲಾರವರ ಸಿಂಹಾಸನಪರಿತ್ಯಾಗದ ವಿಷಯದಲ್ಲಿ ಹಿಂದುಗಳಿಗೆ ಬಹಳ ವ್ಯಸನ. ಇಂಡಿಯಾದೇಶಕ್ಕೆ ಸ್ವರಾಜ್ಯವು ಬರಬೇಕೆಂದು ಇವರ ಅಭಿಲಾಷೆಯಾಗಿತ್ತು. ಮಹಾತ್ಮ ಗಾಂಧಿಯವರನ್ನು ಇವರ ಬಹಳ ಹೊಗಳುತ್ತಿದ್ದರು. ಹಿಂದೂ ಮಹಮ್ಮದೀಯ ಐಕಮತ್ಯದಲ್ಲಿ ಇವರಿಗೆ ಬಹಳ ಆಸಕ್ತಿ. ಇವರ ರಾಜ್ಯದಲ್ಲಿದ್ದ ಹಿಂದೂಗಳಿಗೆ ಯಾವ ಭಯವೂ ಇಲ್ಲ. ಇವರು ಗೋಹತ್ಯೆಯನ್ನು ತಪ್ಪಿಸಿದ್ದರು. ಸ್ವದೇಶಿಗೂ ಖಾದಿಗೂ ಬಹಳ ಪ್ರೋತ್ಸಾಹವನ್ನು ಕೊಟ್ಟಿದ್ದರೂ ಇವರು ಮಾಡಿದ ಒಂದು ಭಾಷಣದಲ್ಲ ರಾಜ್ಯಕ್ಕೋಸ್ಕರ ರಾಜನೇ ಹೊರತು ರಾಜನಿಗೋಸ್ಕರ ರಾಜ್ಯವಲ್ಲ" ಎಂಬ ಮಹಾವಾಕ್ಯವನ್ನು ಹೇಳಿದ್ದರು. ಅದರಂತೆ ಅವರು ನಡೆಯುತ್ತಲೂ ಇದ್ದರು. ಮುಖ್ಯವಾಗಿ ಇಂತಹ ಒಳ್ಳೆಯ ರಾಜರನ್ನು ಕಳೆದು ಕೊಂಡದ್ದು ಆಫ್‌ಘಾನಿಸ್ಥಾನದ ಪ್ರಜೆಗಳ ದರದೃಷ್ಟವೆಂದು ಹೇಳಬೇಕು.

ಛಾಪಾಕಾಗದ

ಸರ್ಕಾರದ ಛಾಪಾಗದಗಳು ಕೆಟ್ಟು ಹೋದವೆಂದಾಗಲಿ ಉಪಯೋಗಿಸಲಿಲ್ಲ. ವೆಂದಾಗಲಿ ಅರ್ಜಿಕೊಟ್ಟು ಅವುಗಳ ಬೆಲೆಯನ್ನು ವಾಪಸು ಕೊಡಿಸಬೇಕೆಂದು ಕೇಳುವವರಿಗೆ ಸದರಿ ಮೊಬಲಗು 100 ರೂಪಾಯಿಗೆ ಮೀರದಿದ್ದರೆ ಆಯಾ ತಾಲ್ಲೋಕು ಆಫೀಸರಿಂದಲೇ ವಾಪಸಾತಿ ಮಾಡಿಸಬಹುದೆಂದು ಸರ್ಕಾರದವರು ತಿಳಿಸಿದ್ದಾರೆ.

ಮೈಸೂರಿನಲ್ಲಿ ಪತ್ರಿಕೆಗಳ ಮೇಲೆ ದಬ್ಬಾಳಿಕೆ.

(ಸ್ವರಾಜ್ಯ ಪತ್ರಿಕೆಯಿಂದ)

ಮೈಸೂರು ರಾಜಧಾನಿಯಲ್ಲಿ ಈ ತಿಂಗಳು 9 ನೇ ತಾರೀಖಿನಲ್ಲಿ ನಡೆದ ಮಹಾಜನಗಳ ಸಭೆಯ ಅರ್ಥವನ್ನು ಎಂಬುದನ್ನು ಮೈಸೂರು ಸರ್ಕಾರದವರು ಸ್ವಲ್ಪ ಗಂಭೀರವಾಗಿ ಪರ್ಯಾಲೋಚಿಸಬೇಕು. ಸಭಿಕರೆಲ್ಲರೂ ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ್ದು ಬಹು ಅನ್ಯಾಯವೆಂದು ಖಂಡಿಸಿದ್ದಲ್ಲದೆ ಶ್ರೀಮನ್ ಮಹಾರಾಜರವರು ಆ ಪತ್ರಿಕೆಗಳ ಪರವಾನಗಿಯನ್ನು ವಾಪಸು ಕೊಡುವಂತೆ ಸರಕಾರಕ್ಕೆ ಹುಕುಂ ಕೊಡಬೇಕೆಂದು ಪ್ರಾರ್ಥಿಸಿದರು. ಮೈಸೂರಿನ ಕೀರ್ತಿಯು ಅಕಲಂಕಿತವಾಗಿರಬೇಕೆಂದೂ ಮೈಸೂರು ಜನಗಳಲ್ಲಿ ಅನ್ಯೋನ್ಯತೆಯು ರೂಢವಾಗಬಹುದೆಂದೂ ಆಶಿಸುವ ಪ್ರತಿಯೊಬ್ಬನೂ ಮೈಸೂರು ಮಹಾಜನಗಳ ಪ್ರಾರ್ಥನೆಯು ಈಡೇರಬೇಕೆಂದು ಕೋರುವನು. ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿರುವುದು ಸರ್ಕಾರದ ಮಹಾಪರಾಧ. ಕಾರಣವನ್ನು ಕೊಡದೆ ವಿಚಾರಣೆಯೂ ಇಲ್ಲದೆ ಪತ್ರಿಕೆಗಳನ್ನು ನಿಲ್ಲಿಸಿರುವುದು ಸರ್ಕಾರದವರ ಮನೋಗತವನ್ನು ವ್ಯಕ್ತಪಡಿಸುತ್ತದೆ. ಮೈಸೂರಿನ ಸಾರ್ವಜನಿಕ ಜೀವನದಲ್ಲಿ ತಾತಯ್ಯನವರ ದೊಡ್ಡಸ್ತಿಕೆಯೇನು ಎಂಬುದನ್ನು ಪರಿಗಣಿಸಿದರೆ ಸರ್ಕಾರದವರು ಎಷ್ಟು ನಿಂದೆಗೆ ಪಾತ್ರರಾದರೂ ಕಡಿಮೆಯೆಂದು ತೋರುತ್ತದೆ. ತಾತಯ್ಯನವರ ಹೆಸರನ್ನು ಮೈಸೂರಿನಲ್ಲಿ ಎಲ್ಲರೂ ಬಲ್ಲರು. ಸಂಸ್ಥಾನಕ್ಕೆ 60 ವರ್ಷಗಳ ಅವಿಚ್ಛಿನ್ನವಾದ ಸೇವೆಯನ್ನು ಮಾಡಿ ಪ್ರಜೆಗಳೆಲ್ಲರಿಗೂ ಬೇಕಾದವರಾಗಿ ವೃದ್ಧಪಿತಾಮಹರವೆಂಬ ಅಂಕಿತಕ್ಕೆ ಪಾತ್ರರಾಗಿರುವರು. ಸಂಸ್ಥಾನದಲ್ಲಿ ನಡೆಯುತ್ತಿರುವ ಪ್ರತಿಯೊಂದು ಮಹಾಜನಗಳ ಕಾರ್ಯದಲ್ಲಿಯೂ ಇವರ ಭಾಗವು ಇರುವುದು- ಮೈಸೂರಿನ ಮಹಾಜನ ಜೀವನಕ್ಕೆ ಇವರು ಜನಕ ಪ್ರಾಯರು. ಪತ್ರಿಕಾಕರ್ತರಾಗಿ ನಿಷ್ಪಕ್ಷಪಾತರಾಗಿಯೂ, ನಿರ್ಭಯರಾಗಿಯೂ, ನಿರ್ದಾಕ್ಷಿಣ್ಯರಾಗಿಯೂ, ಪ್ರಾಮಾಣಿಕರಾಗಿಯೂ, ಶಾಂತರಾಗಿಯೂ ಪ್ರಜಾ ಸೇವೆಯನ್ನು ಮಾಡಿರುವರು. ಇವರ ವಿರೋಧಿಗಳೂ ಕೂಡ ಅವರ ಮಹಿಮೆಯನ್ನು ಒಪ್ಪುವರು. ಇವರು ಎಲ್ಲರಿಗೂ ಬೇಕಾದವರು. ಇವರು ಸಂಸ್ಥಾನಕ್ಕೆ ಒಂದು ಆಸ್ತಿ. ಇಂಥಾವರಮೇಲೆ ಕೈಮಾಡಿದ ಸರ್ಕಾರದಲ್ಲಿ ಪ್ರಜೆಗಳ ವಿಶ್ವಾಸವು ನಾಶವಾಗುವುದರಲ್ಲಿ ಆಶ್ಚರ್ಯವಿಲ್ಲ. ಮೈಸೂರಿನ ವೃತ್ತ ಪತ್ರಿಕಾ ಕಾನೂನು ಕರಾಳ ರಾಕ್ಷಸನಂತೆ ಇಷ್ಟು ಹಾವಳಿ ಮಾಡಿದಮೇಲೆ ಅದನ್ನು ಸಂಹಾರ ಮಾಡಿದ ಹೊರತು ಗತ್ಯಂತರವಿಲ್ಲ. ಬೆಂಗಳೂರು ಗಲಭೆಗಳ ವಿಷಯದಲ್ಲಿ ಸರ್ಕಾರದವರು ಪ್ರದರ್ಶಿಸಿದ ಅಚಾತುರ್ಯಕ್ಕಿಂತಲೂ ತಾತಯ್ಯನವರಮೇಲೆ ಕೈ ಮಾಡಿರುವುದು ಹೆಚ್ಚು ಅನ್ಯಾಯ ಸರ್ಕಾರದವರಿಗೆ ನಾವು ಒಂದು ಬುದ್ಧಿಯ ಮಾತನ್ನು ಹೇಳುವೆವು. ಎಷ್ಟೋ ರಾಜಭಕ್ತಿಯುತರಾಗಿದ್ದರೂ ಆ ರಾಜಭಕ್ತಿಗೆ ಒಂದು ಹದ್ದು ಇರುವುದು. ಸರ್ಕಾರದವರು ತಮ್ಮ ಅವಿವೇಕದ ಮತ್ತೂ ಮುಂದಾಲೋಚನೆಯಿಲ್ಲದ ದುರ್ವರ್ತನದಿಂದ ಪ್ರಜೆಗಳ ರಾಜಭಕ್ತಿಗೆ ಅಪಾಯವಿಲ್ಲದಂತೆ ನೋಡಿಕೊಳಲಿ.

ತಾಯಿನಾಡು.

19—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಅಮೋಘವಾದ ಭಾಷಣ.

(ಮುಂದುವರಿದುದು)

ಬಟ್ಲರ್ ಕಮಿಟಿಯನ್ನು ನೇಮಿಸಿದ ಕಾಲದಲ್ಲಿ ವೈಸ ರಾಯರವರು ರಾಜರುಗಳಿಗೆ ಒಂದು ಉಪದೇಶವನ್ನು ಮಾಡಿದರು. ತಮ್ಮ ರಾಜ್ಯಗಳಲ್ಲಿ ಒಳ್ಳೆ ಶಿಸ್ತನ್ನೂ ವ್ಯವಸ್ಥೆಯನ್ನೂ ಏರ್ಪಡಿಸಿ ಸುಸಂಸ್ಕೃತರಾದ ಮಹಾಜನಗಳ ಸಮ್ಮತಿಯಂತೆ ರಾಜ್ಯಭಾರವನ್ನು ನಡೆಸಿದರೆ ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾವಿಗೂ ಇರಬೇಕಾದ ಸಂಬಂಧದ ನ್ಯಾಯವಾದ ಮತ್ತು ಸ್ಥಿರವಾದ ತೀರ್ಮಾನವನ್ನು ಪರ್ಯಾಲೋಚಿಸಲು ಅವಕಾಶವಾಗುವುದು. ಈ ಉಪದೇಶದಂತೆ ನಡೆಯದೇ ರಾಜರುಗಳು ತಮ್ಮ ಪ್ರಜೆಗಳ ವಿಷಯವಾಗಿ ನಡೆಯಿಸುತ್ತಿರುವ ನಿರಂಕುಶ ವರ್ತನಕ್ಕೆ ಎಷ್ಟೋ ವ್ಯಸನಪಟ್ಟರೂ, ರಾಜರುಗಳಲ್ಲಿ ಕೆಲವರು ಬಹಳ ಸುಸಂಸ್ಕೃತರು ಭಾರತೀಯರಿಗೆ ಕೀರ್ತಿಯನ್ನು ತಂತಕ್ಕವರು ಅವರ ವಿಷಯವಾಗಿ ನಾವೆಲ್ಲರೂ ಅಭಿಮಾನ ಪಡಬೇಕು ಎಂಬುದನ್ನು ಎಲ್ಲರೂ ಒಪ್ಪತಕ್ಕ ವಿಷಯವು. ತಿರುವಾಂಕೂರ್ ಮೊದಲಾದ ದಕ್ಷಿಣಭಾಂತದ ದೇಶೀಯ ಸಂಸ್ಥಾನಗಳಲ್ಲಿ ಜನಗಳು ವಿದ್ಯಾವಂತರಾಗಿರುವಂತೆ ಉತ್ತರಭಾರತ ಮತ್ತು ಮಧ್ಯಭಾರತದ ಸಂಸ್ಥಾನಗಳ ರಾಜರುಗಳೇ ಚೇಂಬರ್ ಆಫ್ ಪ್ರಿನ್ಸಸ್ಸ್ ಸಭೆಯಲ್ಲಿ ಮುಖ್ಯವಾದ ಭಾಗಗಳನ್ನು ತೆಗೆದುಕೊಳ್ಳುತ್ತಿರುವರು. ಬರೋಡ ಒಂದು ಹೊರತಾಗಿ ಇನ್ನು ಯಾವ ಸಂಸ್ಥಾನದಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ನಿರ್ಬಂಧವಾಗಿಯೂ ಉಚಿತವಾಗಿಯೂ ಕೊಡುವ ಏರ್ಪಾಡನ್ನು ಮಾಡಿಲ್ಲ

ಚೇಂಬರ್ ಆಫ್ ಪ್ರಿನ್ಸಸ್ಸ್ ಸಭೆಗೆ ಹೈದರಾಬಾದ್ ಮೈಸೂರ್ ಮೊದಲಾದ ದೊಡ್ಡ ದೊಡ್ಡ ಸಂಸ್ಥಾನದ ರಾಜರುಗಳು ಹೋಗುತ್ತಿಲ್ಲ. ಆದುದರಿಂದ ಚೇಂಬರ್ ಆಫ್ ಪ್ರಿನ್ಸಸ್ಸ್ ಸಭೆಯ ಅಭಿಪ್ರಾಯಗಳು ಎಲ್ಲಾ ರಾಜರುಗಳ ಅಭಿಪ್ರಾಯಗಳೂ ಅಲ್ಲ

ದೇಶೀಯ ಸಂಸ್ಥಾನಗಳ ಪ್ರಜೆಗಳ ಕುಂದು ಕೊರತೆಗಳು

ಬರೋಡ, ಹೈದರಾಬಾದ್, ಮೈಸೂರ್, ತಿರುವಾಂಕೂರ್, ರಾಜಪುಟಾಣ ಸಂಸ್ಥಾನಗಳು, ಕಾಥೆವಾಡ ಮತ್ತು ಇತರ ಸಂಸ್ಥಾನಗಳ ಪ್ರಜೆಗಳು ಈ ಕೆಲವು ವರುಷಗಳಿಂದಲೂ ಸಭೆಗಳನ್ನು ಮಾಡಿ ಜವಾಬ್ದಾರಿ ಸರ್ಕಾರವನ್ನು ಕೇಳುತ್ತಿದಾರೆ. ಈ ಕೇಳಿಕೆಯು ನ್ಯಾಯವಲ್ಲವೆಂತು ಹೇಳುವದಕ್ಕಾಗ ವೈದಿಲ್ಲ. ಸಂಸ್ಥಾನದ ಪ್ರಜೆಗಳು ಸಭೆಗಳನ್ನೂ ಸಮ್ಮೇಳನಗಳನ್ನೂ ಸಮಿತಿಗಳನ್ನೂ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವರು ಈಚೀಚೆಗೆ ಅಧಿಕಾರದಲ್ಲಿರುವವರು ಯಾರೂ ಈ ಪ್ರಜೆಗಳ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಪಡದೇಯಿರುವದರಿಂದ, ಈ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಸಾಕಾದಷ್ಟು ಫಂಡನ್ನು ಕೂಡಿಸಿ ಶಕ್ತಿವಂತರಾದ ಮುಖಂಡರ ಕೈಕೆಳಗೆ ಕೆಲಸ ಮಾಡಿ ತಮ್ಮ ಆವಶ್ಯಕತೆಗಳನ್ನು ಸಲ್ಲಿಸಿಕೊಳ್ಳಬೇಕು. ಕಂದಾಯವನ್ನು ಕೊಡುವ ಪ್ರಜೆಗಳಿಗೆ ಆ ಕಂದಾಯದ ಹಣವು ಹೇಗೆ ಉಪಯೋಗಿಸಲ್ಪಡಬೇಕು ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಅಧಿಕಾರವಿದೆ. ಅನೇಕ ಸಂಸ್ಥಾನಗಳಲ್ಲಿ ಪ್ರಜೆಗಳ ಆವಶ್ಯಕತೆಗಳಿಗೆ ಲಕ್ಷ್ಯವಿಲ್ಲ. ಕೂಡದೆಯೇ ಕಂದಾಯದ ಹಣವು ವೆಚ್ಚಮಾಡಲ್ಪಡುತ್ತಲಿದೆ. ಕೆಲವು ಸಂಸ್ಥಾನಗಳಲ್ಲಿ ಕಂದಾಯದ ಹಣವೆಲ್ಲವು ಅಪಿಡ್ಡಾಳವಾಗುತ್ತಲಿದೆ. ಈ ಪರಿಸ್ಥಿತಿಯಲ್ಲಿ ಸಂಸ್ಥಾನಗಳ ಆಡಳಿತವು ಚೆನ್ನಾಗಿರುವುದು ಅಶಾಧ್ಯ ಯಾವದೇ ದೊಡ್ಡ ಅಧಿಕಾರವನ್ನಾಗಲೀ ಅಥವಾ ಕೆಲಸವನ್ನಾಗಲೀ ಸಮರ್ಪಕವಾಗಿಯೂ ಜವಾಬ್ದಾರಿಯಿಂದಲೂ ನಿರ್ವಹಿಸಬೇಕಾದರೆ ಅದಕ್ಕೆ ಸಾಕಾದಷ್ಟು ತರಬೇತು ಬೇಕೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅಧಿಕಾರಿಗಳಿಗೆ ಜನಗಳನ್ನು ನೇಮಿಸುವ ಸ್ವಾತಂತ್ರ್ಯವು ಈಗ ಕೆಲವರಲ್ಲಿ ಮಾತ್ರ ಯಿದೆ. ದೇಶೀಯ ಸಂಸ್ಥಾನಗಳಲ್ಲಿ ಇಂಗ್ಲೆಂಡಿನ ಪದ್ಧತಿಯಿಲ್ಲ ಬ್ರಿಟಿಷ್ ಇಂಡಿಯಾದ ಪದ್ಧತಿಯೂ ಇಲ್ಲ. ದೇಶೀಯ ಸಂಸ್ಥಾನಗಳಲ್ಲಿ ಯಾವನಿಗಾದರೂ ದೊಡ್ಡ ಅಧಿಕಾರವನ್ನು ಕೊಟ್ಟರೆ ಅವನ ಸ್ವಂತಯೋಗ್ಯತೆ ಮೇಲೆ ಕೊಡಲ್ಪಡುವುದಿಲ್ಲ ಅವನ ತಂದೆಯ ಸೇವೆ ಅಥವಾ ಅವನ ಯೋಗ್ಯತೆ ಅದನ್ನು ನೋಡಿ ಅಧಿಕಾರವು ಕೊಡಲ್ಪಡುವುದು. ತಮ್ಮ ಸಂಸ್ಥಾನದಲ್ಲಿಯೇ ಹುಟ್ಟಿದವರನ್ನು ತಯಾರು ಮಾಡಿ ಅವರನ್ನೇ ದೊಡ್ಡ ಅಧಿಕಾರಗಳಿಗೆ ನೇಮಿಸಬೇಕೆಂಬ ನಿರ್ಬಂಧವು ಈ ಸಂಸ್ಥಾನಗಳಿಗಿರುವುದಿಲ್ಲ. ಇದರಿಂದ ಆಗುವ ದುಷ್ಪರಿಣಾಮವೇನಂದರೆ ಯಾವುದಾದರೂ ಒಂದು ದೊಡ್ಡ ಅಧಿಕಾರಸ್ಥಾನವು ಖಾಲಿಬಿದ್ದರೆ ಅದನ್ನು ನಿರ್ವಹಿಸಲು ಸಾಕಾದಷ್ಟು ಯೋಗ್ಯತೆಯುಳ್ಳವರು, ತರಬೇತಿರುವರು ಸಿಕ್ಕುವುದಿಲ್ಲ. ಈ ಸಂದರ್ಭಗಳಲ್ಲಿ ಹೊರಗಿನವರನ್ನು ಕರತಂದು ನೇಮಿಸಬೇಕು ಇಲ್ಲವೆ ರಾಜರ ದಿಲ್ ಖುಷಿ ಖಾನ್ ಖುಷಿ ಮಾಡುವವರನ್ನು ನೇಮಿಸಬೇಕು. ಹೊರಗಿನವರು ಬಂದರೆ ಅಧಿಕಾರವು ತಮ್ಮ ಕೈಯಲ್ಲಿಯೇ ಇರುವುದಕ್ಕೆ ಪ್ರಯತ್ನಪಡುತ್ತಾರೆ, ಈ ರೀತಿಯಾಗಿ ಅವರೂ ಇವರೂ ಅಧಿಕಾರಮಾಡಿಕೊಂಡು ಹೋಗುವುದರಲ್ಲಿ ಸಂಸ್ಥಾನದ ಪ್ರಜೆಗಳಾದ ಕಂದಾಯ ಕೊಡುವವರು ನಿಂತಲ್ಲಿಯೇ ನಿಂತಿರುತ್ತಾರೆ. ಅವರಿಗೆ ಪ್ರೋತ್ಸಾಹವೂ ಇಲ್ಲ. ಉತ್ತೇಜನವೂ ಇಲ್ಲ. ಈ ರಾಜರುಗಳು ತಮ್ಮ ಪ್ರಜೆಗಳನ್ನೇ ಅಭಿವೃದ್ಧಿಗೆ ತಂದು ಅವರನ್ನು ಮುಂದಕ್ಕೆ ತರುವ ಆಸಕ್ತಿಯನ್ನೇ ತೋರಿಸಿರುವುದಿಲ್ಲ. ಅಧಿಕಾರಿಗಳು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದರಲ್ಲಿ ತೋರಿಸುವ ಆಸಕ್ತಿಯನ್ನು ಪ್ರಜೆಗಳ ಅಭಿವೃದ್ಧಿಯ ಕಾರ್ಯದಲ್ಲಿ ತೋರಿಸುವುದಿಲ್ಲ, ಸಂಸ್ಥಾನಗಳಲ್ಲಿ ಅಲ್ಲಿನ ಪ್ರಜೆಗಳೇ ಮುಂದಕ್ಕೆ ಬರುವುದಕ್ಕೆ ಅವಕಾಶಗಳು ಕಲ್ಪಿಸಲ್ಪಡಬೇಕು.

ಬ್ರಿಟಿಷ್ ಇಂಡಿಯಾದ ಪ್ರಜೆಗಳು ಪ್ರಜಾಪ್ರಭುತ್ವರಾಜ್ಯಪದ್ಧತಿಯನ್ನು ಪಡೆದರೆ ಅಷ್ಟೇ ಸಾಮರ್ಥ್ಯ ಉಳ್ಳ ದೇಶೀಯ ಸಂಸ್ಥಾನದ ಪ್ರಜೆಗಳೂ ಸಾಂಕುಶ ಪ್ರಭುತ್ವ ಪದ್ಧತಿಯನ್ನು ಕೂಡಲೆ ಏತಕ್ಕೆ ಹೊಂದಬಾರದು? ಪ್ರಪಂಚದ ಯಾವ ಭಾಗದಲ್ಲಿಯೂ ಅಭಿವೃದ್ಧಿಯನ್ನು ಹೊಂದಿರುವ ರಾಜ್ಯಗಳಲ್ಲಿ ದೇಶೀಯ ಸಂಸ್ಥಾನಗಳಲ್ಲಿ ಇರುವ ಓಬೀರಾಯನ ಕಾಲದ ರಾಜ್ಯಪದ್ಧತಿಗಳಿಲ್ಲ.

ನಿರಂಕುಶ ರಾಜ್ಯ ಪದ್ಧತಿಯು ಈಗ ಪ್ರಪಂಚದಲ್ಲೆಲ್ಲಾ ಮಾಯವಾಗುತ್ತಿರುವುದು ಚೈನ, ಪರ್ಷಿಯ, ಆಫ್ಘಾನಿಸ್ಥಾನದಲ್ಲಿಯೂ ಸಹ ಪ್ರಜಾಪ್ರಭುತ್ವ ಪದ್ಧತಿಯು ಅಂಕುರಿಸಿರುವುದು. ರಾಜರುಗಳುಳ್ಳ ಯೂರೋಪಿನ ಅನೇಕ ದೇಶಗಳಲ್ಲಿ ಜವಾಬ್ದಾರಿ ಸರ್ಕಾರಿ ಪದ್ಧತಿಯು ಏರ್ಪಾಡಾಗಿರುವುದು. ಇಂಡಿಯಾದಲ್ಲಿ ಮಾತ್ರವೇ ಪ್ರಜಾಭಿವೃದ್ಧಿಗೆ ವಿಘಾತವಾದ ಈ ನಿರಂಕುಶ ರಾಜ್ಯಪದ್ಧತಿಯು ಯಾತಕ್ಕೆ ಇರಬೇಕು? ಈ ಭಾಗವನ್ನು ಎಲ್ಲರೂ ಚೆನ್ನಾಗಿ ಆಲೋಚಿಸಬೇಕು.

ಈಗ ಎಷ್ಟೇ ನಿಧಾನ ಮಾಡಿದರೂ ಪ್ರಜೆಗಳು ಜವಾಬ್ದಾರಿ ಸರ್ಕಾರವನ್ನು ಪಡೆಯುವುದಕ್ಕಾಗಿ ಹೋರಾಡುವರು. ಮತ್ತು ತೆಗೆದುಕೊಳ್ಳುವರು. ಈಗಿನ ರಾಜರುಗಳು ಈಗಿನ ಕಾಲಸ್ಥಿತಿಯನ್ನು ಚೆನ್ನಾಗಿ ಅರಿತು ತಮ್ಮ ಪ್ರಜೆಗಳ ಕೋರಿಕೆಗಳನ್ನು ತಾವಾಗಿಯೇ ಈಡೇರಿಸಿ ಸಾಂಕುಶಪ್ರಭುತ್ವವನ್ನು ಸ್ಥಾಪಿಸುವವರೋ ಅವರು ತಮ್ಮ ಸಿಂಹಾಸನವನ್ನು ಭದ್ರಪಡಿಸಿಕೊಳ್ಳುವರು. ರಾಜರುಗಳು ಪ್ರಜೆಗಳನ್ನು ತಾವಾಗಿಯೇ ಮುಂದಕ್ಕೆ ತಂದರೆ ಅವರಿಗೂ ಶ್ರೇಯಸ್ಸಲ್ಲದೆ ಅವರ ಸಂತತಿಯವರಿಗೂ ಶ್ರೇಯಸ್ಸಾಗುವುದು.

ಈಗಿನ ಕಾಲಸ್ಥಿತಿಯನ್ನು ನೋಡಿದರೆ ಗೊತ್ತಾಗುವುದೇನೆಂದರೆ ಇಂಡಿಯಾದೇಶದ ಚಕ್ರವರ್ತಿಯವರೂ ಬ್ರಿಟಿಷ್ ಜನರೂ ಭಾರತೀಯರ ಮೇಲೆ ತಮ್ಮ ಅಧಿಕಾರವನ್ನು ಕ್ರಮಕ್ರಮವಾಗಿ ಬಿಡುತ್ತಿದಾರೆ. ಈ ಸಂದರ್ಭದಲ್ಲಿ ದೇಶೀಯ ಸಂಸ್ಥಾನದ ರಾಜರುಗಳು ತಮ್ಮ ಕೈಲಾದಷ್ಟುಮಟ್ಟಿಗೆ ತಮ್ಮ ಪ್ರಜೆಗಳನ್ನು ಏತಕ್ಕೆ ಮುಂದಕ್ಕೆ ತರಬಾರದು? ಜವಾಬ್ದಾರಿ ಸರ್ಕಾರವಿಲ್ಲದೆ ಪ್ರಜೆಗಳನ್ನು ಮುಂದಕ್ಕೆ ತರುವುದು ಅಸಾಧ್ಯ.

ವಿವಿಧ ವಿಷಯಗಳು

—

ಶ್ರೀ ಕೃಷ್ಣರಾಜೇಂದ್ರ [illegible] ಕೆಲವು [illegible] ವಾಗಿ [illegible] ಮಾಡಿರುವುದರಿಂದ ಇದೇ ಮಾಹೆ [illegible] ನೇ ತಾರೀಖು ಭಾನುವಾರ ಮಧ್ಯಾಹ್ನ [illegible] ಗೆ ಸರಿಯಾಗಿ ಸೊಸೈಟಿಯಲ್ಲಿ ಒಂದು [illegible] ಜನರಲ್ ಮೀಟಿಂಗ ನಡೆಯುವುದು.

ಪರ್ದೇಶಿ

ಬಂಗಾಳದ ಬಿಸ್ನಾ ಜಿಲ್ಲೆಯಲ್ಲಿ ಒಂದು ದೊಡ್ಡ ಜಮೀನ ದಾರ್ ಕಛೇರಿ ಇದೆ. ಕಳೆದ ತಿಂಗಳು ಒಂದು ಸಾವಿರ ಮುಸಲ್ಮಾನರು ಹುಗಳಿಸಲ್ಲೇ ಆ ಕಛೇರಿಯನ್ನು ದರೋಡೆ ಮಾಡಿದರು. ಅದರ ಸಲುವಾಗಿ ಕಾಗದ ಪತ್ರಗಳು ನಾಶವಾದವು ಕಿಟಿಕಿ ಬಾಗಿಲುಗಳೆಲ್ಲಾ ಚೂರು ಚೂರಾದವು ಮ್ಯಾನೇಜರು ಕುತ್ತಿಗೆ ಹಿಡಿದು ಹೊರಕ್ಕೆ ತಳ್ಳಲ್ಪಟ್ಟರು.

ಇದೇನೂ ಶುಭಸೂಚಕವಲ್ಲ

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ವೆಂಕಟಕೃಷ್ಣಯ್ಯನವರಂತಹ ಸಾಧುವರ್ತನರ ಮೇಲೆ ನಿರ್ದಾಕ್ಷಿಣ್ಯವಾದ ಮಾತುಗಳನ್ನಾಡಿದರೆಂಬುದರಿಂದ ಸರಕಾರವು ಗದಾ ಪ್ರಹಾರ ಮಾಡಿದೆ ಇದೇನೂ ಶುಭಸೂಚಕವಲ್ಲ ರಾಷ್ಟ್ರಬಂಧು.

೧೫೦ ಪತ್ನಿಯರು

ಸ್ಕಾಟ್ಲೆಂಡ್ ಎಂಬ ರಾಜ್ಯದ [illegible] ದೊಡ್ಡ ಮನೆತನದ ೧೫೦ ಮಂದಿ ಸ್ತ್ರೀಯರನ್ನು ಮದುವೆಯಾಗಿ ಈಗ ಕಷ್ಟದಲ್ಲಿ ಸಿಕ್ಕಿಬಿದ್ದಿದ್ದಾನೆ. ಅವನು ಮದುವೆಯಾದ ಪ್ರಮಾಣವು ಹೇಗೆ—ಶ್ರೀಮಂತರ ಹೆಣ್ಣು ಮಕ್ಕಳನ್ನು ಮೋಹಿಸುವುದು. ಅವರಿಂದ [illegible] ಸುಲಿಯುವುದು; ವಿವಾಹವಾಗುವುದು. [illegible] ಳದಲ್ಲಿ ಅವರಿಗೆ ತಿಳಿಯದಂತೆ ವಿವಾಹ [illegible] ಸುವುದು. ಬೇರೆ ಮದುವೆಯಾಗುವುದು. ಈ ರೀತಿಯಲ್ಲಿ ಒಂದು ದಿನ ಬೇರೆಬೇರೆ ಸ್ಥಳಗಳಲ್ಲಿ ಇವನಿಗೆ ಆರು ಮದುವೆಗಳು ಆಗಿದ್ದುವಂತೆ. ಈಗ ಕಮ್ಯೂನಿಸ್ಟ್ ಪಕ್ಷಕ್ಕೆ ಅವಮಾನ ತಂದನೆಂದು ಅವನ ಮೇಲೆ ಆರೋಪಣೆಯಾಗಿ ಜಟ್ಟ ನಡೆಯುತ್ತದೆ.

Printed and published by P. R. Ramaiya.
at Sri Rama Press, D. Subbiah RoadM ysore.

Regd No. M 232

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ೫—೦—೦
ಚಂದಾ

ಸಂಪುಟ ೧] ಸೋಮವಾರ ೨೧ ಜನವರಿ ೧೯೨೯ [ಸಂಚಿಕೆ

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುವು

ತಲೆ ನೋವು
ವಾತ ಶೂಲೆ
ಬೆನ್ನು ನೋವು
ಕಟಿ ಶೂಲೆ
ಪಾರ್ಶ್ವ ವಾಯು



ಕೆಮ್ಮು
ನೆಗಡಿ
ಸುಟ್ಟ ಘಾಯ
ಹುಣ್ಣುಗಳು
ಉಳುಕಿದ ನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸಮೀಪದಲ್ಲಿರಿಸಿಕೊಂಡಿರಿ.
ಸಿದ್ಧ ವೈದ್ಯನೋಪಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ:—ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ ಅಜೀರ್ಣವಾಯುಗಳನ್ನೂ ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ: ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ಹವಾಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ ಕೆಮ್ಮು, ನೆಗಡಿ, ಜರ, ಹಲ್ಲುನೋವು ಶೀತವಾಯು, ಪ್ಲೇಗು ಇನ್‌ಫ್ಲುಯನ್‌ಜ, ಕಾಲರಾ ಮುಂತಾದ್ದನ್ನು ಖಾತರಿ ಗುಣಪಡಿಸುತ್ತದೆ. ಪ್ರತಿಮನೆಗಳಲ್ಲೂ ಇರಬೇಕಾದದ್ದು ಅತ್ಯವಶ್ಯಕ. ಬೆಲೆ ಸೀಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ತೈಲ ಪರಬತ್ತು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ. ವಿ. ಪಂಡಿತರು,
ಸದ್ವೈದ್ಯಶಾಲಾ ನಂಜನಗೂಡು

Our Bangalore Agent.

Mr. R. K. GANESH SAHUJI,
General Merchant,
Chickpet, Bangalore City.

ಪರೀಕ್ಷಿಸಿ ನೋಡಿರಿ! ತ್ವರೆ ಮಾಡಿರಿ

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನ ಲೇಹ್ಯ.

ಇದರ ಸೇವನೆಯಿಂದ ಧಾತುಸ್ರಾವ. ಅಜೀರ್ಣ, ಸೂನಿಕಾವಾತ, ಮೇಹವಾಯು, ಗರ್ಭವಾತ, ನಿದ್ರಾಭಂಗ ನರಗಳ ದೌರ್ಬಲ್ಯ, ಮೂತ್ರೋಪಾಧಿಗಳು, ಕ್ಷಯ, ಕೆಮ್ಮು ಬ್ಬಸ ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವದರಲ್ಲಿ ಈ ಲೇಹ್ಯದ ಅಸದೃಶವಾದುದು. ಎಂತಹ ಅಲ್ಪವೀರ್ಯರಿಗೂ ವಾತುಪುಷ್ಟಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯಲ್ಲ. ಸ್ವಲ್ಪ ದಿನವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೊಗಳುವಿರಿ.

"ರತ್ನ ಕು ಜತ್ನ ಕರೊ"

ಕ್ರಯ 12 ತೊಲ ಡಬ್ಬಿ 1 ಕ್ಕೆ ರೂ. 2—೧—
(ಭಸ್ಮ ಸಿಂಧೂರಗಳು ಸೇರಿರುವದು) 4—0—0

ಜ್ವರ ಕೇಸರೀ ಮಾತ್ರೆ

ಇದು ಮಲೇರಿಯಾ ಸನ್ನಿಪಾತಜ್ವರ ಇನ್‌ಫ್ಲುಯೆನ್‌ಜಾ ನ್ಯುಮೋನಿಯಾ ವಿಷಮಜ್ವರ ಪ್ಲೇಗು ಮೂರು ಜ್ವರ ಛಳಿಜ್ವರ ಮಕ್ಕಳ ಎಳವು ಶೀತ ನೆಗಡಿ ಕೆಮ್ಮು ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹು ಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು

ಬೆಲೆ 80 ಮಾತ್ರೆಗಳ ಸೀಸೆ 1 ಕ್ಕೆ 0—8—
" 40 " " 0—4—0

ವಿ. ಪಿ. ಛಾರ್ಜು ಪ್ರತ್ಯೇಕ. ವಾ. ... ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ ಲೇಹ್ಯ ಮಾತ್ರೆ ಚೂರ್ಣ ಭಸ್ಮ ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ —ವಿಳಾಸ
ಪಂಡಿತರು ಮುದ್ಗಲ್ ರಾಮಚಂದ್ರಾಚಾರ್ಯರು
ಆಯುರ್ವೇದ ...
... ಸ್ಟ್ರೀಟು

TAI NADU
21—1—1929

ಪ್ರಜಾಶಕ್ತಿ

——

ಸ್ವಾತಂತ್ರ್ಯವು ಒಲಿಯಬೇಕಾದರೆ ಪ್ರಜಾಶಕ್ತಿಯಿಂದ ಒಬ್ಬೊಬ್ಬ ಪ್ರಜೆಯೇ ಎಷ್ಟೇ ಪ್ರಯತ್ನ ಪಟ್ಟರೂ ಸ್ವಾತಂತ್ರ್ಯವಿರೋಧಿಗಳನ್ನು ಜಯಿಸುವುದು ಕಷ್ಟ; ಪ್ರಜಾಸ್ವಾತಂತ್ರ್ಯಕ್ಕೆ ವಿರೋಧವಾಗಿ ದಬ್ಬಾಳಿಕೆಯು ಆರಂಭವಾದರೆ ಒಬ್ಬೊಬ್ಬರೇ ತಲೆಕೊಡುವುದಕ್ಕಿಂತ ಒಂದು ಸಂಘವಿದ್ದರೆ ಹೆಚ್ಚು ಪರಿಣಾಮವಾಗುತ್ತದೆ. ಬ್ರಿಟಿಷ್ ಇಂಡಿಯಾದಲ್ಲಿ ಪ್ರಜಾಸ್ವಾತಂತ್ರ್ಯವನ್ನು ಸರ್ಕಾರದವರು ಮುರಿಯುವುದಕ್ಕಾರಂಭಿಸಿದಾಗ ಪ್ರಜೆಗಳು ಒಗ್ಗಟ್ಟಾಗಿ ಸಂಘವನ್ನೇರ್ಪಡಿಸಿದರು. ರಾಷ್ಟ್ರೀಯ ಮಹಾಸಭೆಯು ಇಂತಹ ಅನೇಕ ಸಂಘಗಳಿಗೆ ಪ್ರೋತ್ಸಾಹನವಾಯಿತು. ಬಂಗಾಳದಲ್ಲೂ, ಬೊಂಬಾಯಿನಲ್ಲೂ 1907—8 ರಲ್ಲಿ ಸ್ವದೇಶೀ ಚಳುವಳಿಯು ಉಪಕ್ರಮವಾದಾಗ ಈ ರೀತಿಯಾದ ಸಂಘಗಳು ಏರ್ಪಾಡಾಗಿ ಅನೇಕ ಯುವಕರು ಸರ್ಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಿ ಪ್ರಜಾಸ್ವಾತಂತ್ರ್ಯವನ್ನು ಪಡೆದು ಮೆರೆಸಿದರು. ಆ ಕಾಲದಲ್ಲಿ ವಂದೇಮಾತರಂ ಎಂದು ಕೂಗಿದರೆ ಜೈಲಿಗೆಳೆದುಕೊಂಡು ಹೋಗುತ್ತಿದ್ದರು. ದೇಶದಲ್ಲೆಲ್ಲಾ ಯುವಕರು ಯಾವಾಗ "ವಂದೇಮಾತರಂ" ಎಂದು ಘೋಷಿಸಿದರೋ ಆಗ ಸರ್ಕಾರವು ತಣ್ಣಗಾಯಿತು. ಇಂಡಿಯಾ ದೇಶವು ನಮ್ಮ ದೇಶ. ನಮಗೆ ಸ್ವರಾಜ್ಯ ಬೇಕೆಂದು ಹೇಳಿದರೆ ಮಹಾಪರಾಧವಾಗಿ ಪರಿಗಣಿಸಿಯಾಗುತ್ತಿತ್ತು. ಇದು ನಮ್ಮ ದೇಶ ನಮಗೆ ಸ್ವರಾಜ್ಯ ಬೇಕು ಎಂದು ದೇಶದಲ್ಲೆಲ್ಲಾ ಕೂಗನ್ನು ಎಬ್ಬಿಸಿದಾಗ ಸರ್ಕಾರದವರು ತಮ್ಮ ಶಸ್ತ್ರವನ್ನು ಕೆಳಗಿಟ್ಟಿತು. ಹೀಗೆಯೇ 1920—2 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸಮುದಾಯ ಶಕ್ತಿಯಿಂದ ರಾಷ್ಟ್ರೀಯ ಸಭೆಯ ಮುಖಾಂತರ ಅಸಹಕಾರ ಧ್ವನಿಯು ಮಾಡಲ್ಪಟ್ಟಾಗ ದಬ್ಬಾಳಿಕೆಯು ದುರ್ಬಲವಾಯಿತು. ಪುನಃ ಬ್ರಿಟಿಷ್ ಇಂಡಿಯಾದಲ್ಲಿ ಸಂಪೂರ್ಣ ಸ್ವತಂತ್ರವಾದಿಗಳು ಸಮುದಾಯತ್ವೇನ ತಮ್ಮ ಧ್ವಜವನ್ನೇರಿಸಿದಾಗ ಸರಕಾರವು ಸುಮ್ಮನಾಯಿತು. ಬ್ರಿಟಿಷ್ ಇಂಡಿಯಾದಲ್ಲಿ ಮಾತ್ರವೇ ಅಲ್ಲ. ಪ್ರಜಾಸ್ವಾತಂತ್ರ್ಯಕ್ಕಾಗಿ ಹೋಡೆದಾಡಿದ ಕಡೆಗಳಲ್ಲೆಲ್ಲಾ ಪ್ರಜಾಶಕ್ತಿ ಯು ಸಮುದಾಯ ಪ್ರತಿಭಟನೆಯಿಂದಲೇ ಸ್ಥಾಪಿಸಲ್ಪಟ್ಟಿರುವುದು ನಮ್ಮ ಮೈಸೂರಿನಲ್ಲಿ ಇಂದು ದಬ್ಬಾಳಿಕೆಯ ಯುಗವು ಆರಂಭಿಸಿರುವಂತೆ ಕಾಣುವುದು ದಬ್ಬಾಳಿಕೆ ಎಂಬ ಧೂರ್ತನು ಪ್ರಜಾಸ್ವಾತಂತ್ರ್ಯವನ್ನು ನಾಶಮಾಡಬೇಕೆಂದು ಹೊರಟಿರುವನು. ಕರಾಳ ರಾಕ್ಷಸನು ಪತ್ರಿಕಾಸ್ವಾತಂತ್ರ್ಯವನ್ನು ನುಂಗುತ್ತಿರುವನು. ಈ ಸಮಯದಲ್ಲಿ ಪ್ರತಿಭಾಶಾಲಿಗಳಾದ ಪ್ರಜಾಮುಖಂಡರು ಒಟ್ಟಿಗೆ ಸೇರಿ ಸಂಘಶಕ್ತಿಯನ್ನೇರ್ಪಡಿಸಿ ದಬ್ಬಾಳಿಕೆಯನ್ನು ದೂಡಿದ ಹೊರತು ಪ್ರಯೋಜನವಿಲ್ಲ. ಬರಿಯ ಖಂಡನೆ ಸಭೆಗಳಿಂದಲೂ, ವರ್ತಮಾನಪತ್ರದ ಲೇಖನಗಳಿಂದಲೂ ಪ್ರಯೊಜನವಿಲ್ಲ. ಸ್ವಾರ್ಥತ್ಯಾಗಕ್ಕೆ ಸಿದ್ಧರಾದವರು ಮುಂದೆ ಬಂದು ಪ್ರಾಮಾಣಿಕತೆಯಿಂದ ಎದೆಗೊಟ್ಟರೇನೆ ಪ್ರಜಾಶಕ್ತಿಯು ಬೆಳೆಯುವುದು ಇದ

ವಿವಿಧ ವಿಷಯಗಳು

——

ಗರ್ಭಾದಾನ ವಯೋನಿರ್ಣಯ

ಏಜ್ ಆಫ್ ಕನ್‌ಸೆಂಟ್ ಎನ್‌ಕ್ವೈರಿ ಕಮಿಟಿ ಮುಂದೆ ಅಲಹಾಬಾದ್ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಿಲರಾದ ಡಾಕ್ಟರ್ ಗಂಗಾನಾಥ ಝಾರವರು ಹಿಂದೂಶಾಸ್ತ್ರ ಅಭಿಪ್ರಾಯವನ್ನು ಕೊಟ್ಟು ಹೇಳದ್ದೇನೆಂದರೆ " ಕೆಲವರು ಸುಮ್ಮನೆ ಗಲಾಟೆ ಮಾಡುತ್ತಿದ್ದಾರೆ. ಜನಗಳ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳಲ್ಲಿ ಸರ್ಕಾರದವರು ಕೈಹಾಕುವುದು ಬಹಳ ತಪ್ಪು. ಒಡಂಬಡಿಸುವರ ಪೈಕಿ ನೂರರಲ್ಲಿ ಒಬ್ಬನಿಗಾದರೂ ಕಾನೂನು ಗೊತ್ತಿಲ್ಲ. ತನಗೆ ತಾನೆ ಗರ್ಭಾದಾನದ ವಯಸ್ಸನ್ನು ಹೆಚ್ಚಿಸುವ ವಾಡಿಕೆಯು ಜನಗಳಲ್ಲಿ ಜಾರಿಗೆ ಬರುತ್ತಲಿದೆ. ಈ ಮಧ್ಯೆ ಕಾನೂನು ಮಾಡುವುದಕ್ಕೆ ಹೋದರೆ, ಪ್ರಯೋಜನಕ್ಕಿಂತಲೂ ಹಾನಿಯೇ ಜಾಸ್ತಿಯಾಗುತ್ತದೆ. ಕೋರ್ಟಿನಲ್ಲಿ ಮೊಖದ್ದಮೆಗಳು ಜಾಸ್ತಿಯಾಗುತ್ತವೆ. ಈ ಭಾಗದಲ್ಲಿ ಕಾನೂನು ನಿಷ್ಪ್ರಯೋಜನವಾಗುವುದು ಮಾತ್ರವೇ ಅಲ್ಲ. ಜನಗಳಿಗೆ ತೊಂದರೆಯನ್ನುಂಟುಮಾಡುತ್ತದೆ. ಸಣ್ಣವಯಸ್ಸಿನಲ್ಲಿಯೇ ಗರ್ಭಾದಾನವಾಗುವುದರಿಂದ ಅಲ್ಪಾಯುಸ್ಸಿನಲ್ಲಿಯೇ ಸಾಯುತ್ತಾರೆಂಬದಾಗಿಯಾಗಲಿ ಮಕ್ಕಳ ಮರಣ ಸಂಖ್ಯೆಯು ಜಾಸ್ತಿಯಾಗುತ್ತದೆಂಬುದಾಗಲಿ ನಂಬತಕ್ಕ ವಿಷಯವಲ್ಲ. ಕಾನೂನು ಮಾಡುವುದಕ್ಕಿಂತ ಜನಗಳಲ್ಲಿ ಪ್ರಚಾರ ಮಾಡುವುದು ಲೇಸು" (ಡಾಕ್ಟರ್ ಝಾರವರು ಉಭಯ ವಿದ್ಯಾಪಂಡಿತರು. ಉತ್ತರ ದೇಶದಲ್ಲಿ ಸಂಸ್ಕೃತದಲ್ಲಿ ಬಹಳ ಪ್ರಖ್ಯಾತ ಪಂಡಿತರು. ಇವರು ಎಂ. ಎ. ಮಾಡಿರುವುದಲ್ಲದೆ ಮಹಾಮಹೋಪಾಧ್ಯಾಯರಾಗಿಯೂ ಇದ್ದಾರೆ. ಅವರ ಅಭಿಪ್ರಾಯಕ್ಕೆ ಬಹಳ ಬೆಲೆಯುಂಟು. ಸಂ)

ವಿಜ್ಞಾನಶಾಸ್ತ್ರದ ವೈಚಿತ್ರ್ಯ

ಕಲ್ಕತ್ತೆಯ ಬೋಸ್ ಇನ್‌ಸ್ಟಿಟ್ಯೂಟಿನಲ್ಲಿ ಜರುಗಿದ ಅಖಿಲ ಭಾರತ ವೈದ್ಯ ಪರಿಷತ್ತಿನ ಸಮಯದಲ್ಲಿ ಪ್ರಖ್ಯಾತ ಭಾರತೀಯ ವಿಜ್ಞಾನಶಾಸ್ತ್ರಜ್ಞರಾದ ಸರ್ ಜಗದೀಶ ಚಂದ್ರ ಬೋಸರವರು ತಮ್ಮ ಶೋಧನೆಗಳ ಮಹಿಮೆಯನ್ನು ವಿವರಿಸಿ ಸಭಿಕರನ್ನು ವಿಸ್ಮಯಗೊಳಿಸಿದರು ಪ್ರಥಮದಲ್ಲಿ ಅವರು ಪರಿಸ್ಟಲೊ ಎಂಬ ನವೀನ ಯಂತ್ರದ ಸಹಾಯದಿಂದ ತಾವು ಶೋಧಿಸಿ ಕೆಲವು ಮೂಲಿಕೆಗಳಲ್ಲಿರುವ ಅದ್ಭುತ ಶಕ್ತಿಯನ್ನು ಪ್ರತ್ಯಕ್ಷ ಪ್ರದರ್ಶಿಸಿದರು. ಆ ಬಳಿಕ ಬೋಸರವರು ಒಂದು ವನಸ್ಪತಿ ಔಷಧ ಸಹಾಯದಿಂದ ಸತ್ತು ಹೋದ ಗಿಡವನ್ನು ಸಜೀವಿಯನ್ನಾಗಿ ಮಾಡಿ ಪಾಶ್ಚಾತ್ಯರಿಗೂ ದೊರೆಯದ ಅಪೂರ್ವ ಸಂದರ್ಭವನ್ನು ಅಂದಿನ ಸಭಿಕರಿಗೆ ಒದಗಿಸಿದರು. ಅನಂತರ ಜಗದೀಶ ಚಂದ್ರರು ಸತ್ತು ನಾಡಿಚಲನೆಯು ನಿಂತುಹೋದ ಕಪ್ಪೆಯನ್ನು ಇನ್ನೊಂದು ಔಷಧ ಸಹಾಯದಿಂದ ಬದುಕಿಸಿದರು

ಸ್ವೀಕಾರ:

ಮೈಸೂರು ವ್ಯವಸಾಯ ಶೋಧಕ ಸಂಘದವರು ಕಳುಹಿಸಿರುವ ವಿಭವಸಂವತ್ಸರದ ಕಾರ್ತೀಕ ಮತ್ತು ಮಾರ್ಗಶಿರ ಮಾಸಗಳ ಸಂಚಿಕೆಗಳು ನಮ್ಮ ಹಸ್ತಗತವಾಗಿರುತ್ತವೆ. ಅವುಗಳಲ್ಲಿ ವ್ಯವಸಾಯ ಪರಿಶ್ರಮ, ದನಗಳ ಸುಧಾರಣೆ ಮೈಸೂರು ಕೃಷಿಯ ಪುರೋಭಿವೃದ್ಧಿ, ಪ್ರಾಣಮಯ ಪ್ರಪಂಚ, ನಮ್ಮ ದೇಶದ ಕಬ್ಬಿನ ವ್ಯವಸಾಯ ಮತ್ತು ಸಸ್ಯವರ್ಗದ ರೋಗಗಳೇ ಮೊದಲಾದ ಜಿರಾಯಿತಿಗೆ ಸಂಬಂಧಪಟ್ಟ ಅನೇಕ ಉಪಯುಕ್ತ ವಿಷಯಗಳು ಅಡಕವಾಗಿವೆ.

ಅಧಿಕಾರಿಗಳ ಬದಲಾವಣೆ

ಮೈಸೂರು ಸರ್ಕಾರವು ಕಳೆದ ಕೆಲವು ತಿಂಗಳಿಂದಲೂ, ಮೈಸೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಕೆಲಸಕ್ಕೆ ಯಾರಾದರೊಬ್ಬ ಯುರೋಪಿಯನ್ನರನ್ನು ತರುವ ವಿಷಯವಾಗಿ ಮದ್ರಾಸ್, ಬೊಂಬಾಯಿ ಸರ್ಕಾರಗಳೊಂದಿಗೆ ಪತ್ರವ್ಯವಹಾರಗಳನ್ನು ನಡೆಸುತ್ತಿತ್ತು. ಈಗ ಮದರಾಸ್ ಪೋಲೀಸ್ ಕಮೀಷನರ್ ಮಿ|| ಕನಿಂಗ್ ಹ್ಯಾಮ್‌ರವರು ಮಾಹೆಯಾನ 3000 ರೂಪಾಯಿಗಳ ಸಂಬಳ, ಸಂಪೂರ್ಣ ಸ್ವಾತಂತ್ರ್ಯಗಳೊಡನೆ ನೇಮಿಸಲ್ಪಟ್ಟಿರುವದಾಗಿ ವರ್ತಮಾನ ಬಂದಿದೆ. ಅವರ ಆಡಳಿತದಲ್ಲಿ ಈ ಇಲಾಖೆಯ ಸುಧಾರಣೆ ನಡೆಸುವುದು ಅವರ ಹುದ್ದೆಯು ಇನ್ನು ಮುಂದೆ ಕಮೀಷನರ್ ಆಫ್ ಪೋಲೀಸ್ ಎಂದು ಕರೆಯಲ್ಪಡುವುದು.

ಹಾಲಿ ಇರುವ ಇನ್ಸ್‌ಪೆಕ್ಟರ್ ಜನರಲ್‌ರವರು ಎಕ್ಸೈಜ್ ಕಮೀಷನರಾಗುವರು. ದಿವಾನ್ ಬಹದ್ದೂರ್ ಸಿ. ಎಸ್. ಕೃಷ್ಣರಾಯರವರು 4 ತಿಂಗಳು ರಜಾಪಡೆದು ಹೋಗುವರು. ಆಗ ರೆವೆನ್ಯೂ ಕಮೀಷನರಾದ ಮಿ|| ರಾ|| ಪಿ. ಜಿ. ಡಿಸೋಜಾರವರು ಮೂರನೆ ಕೌನ್ಸಿಲರ್ ವರಾಗುವರು. ಮಿ|| ಸೈಯದ್ ಟಾಜ್‌ಪೀರಾನ್‌ರವರು ರೆವೆನ್ಯೂ ಕಮೀಷನರಾಗುವರು ಎಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ತಿಳಿಸುತ್ತದೆ.

ಮತದ್ವೇಷಕರವಾದ ಬರವಣಿಗೆಗಳು

——

ಶಾಮರಾಯರಿಗೆ ಸರ್ಕಾರದ ಉತ್ತರ

ರಾವ್‌ಬಹದ್ದೂರ್ ಎಂ. ಎ. ಶ್ಯಾಮರಾಯರು ಮೈಸೂರು ಸ್ಟಾರ್,, ಪತ್ರಿಕೆಯಲ್ಲಿ ಬ್ರಾಹ್ಮಣರ ದೂಷಣೆ ಮಾಡಿ ಬರೆದ ಲೇಖನಗಳಿಗೋಸ್ಕರ ಸದರಿ ಪತ್ರಿಕಾಕರ್ತರ ಮೇಲೆ 153 ನೇ ಸೆಕ್ಷನ್ ಪ್ರಕಾರ ಮೊಕದ್ದಮೆಯನ್ನು ಸರ್ಕಾರದವರು ಹೂಡಬೇಕೆಂದು ಬೇಡಿದ್ದರಷ್ಟೆ. ಅದಕ್ಕೆ ಸರ್ಕಾರದವರು ಈ ರೀತಿ ಜವಾಬು ಬರೆದಿರುವರು.

ಜವಾಬು

ಬೆಂಗಳೂರು ೧೫-೧-೨೯

ಸ್ವಾಮಿ—

ಸೆಪ್ಟೆಂಬರು ೩೦ ನೇ ತಾರೀಖಿನ ದಿವಸ ಸೇರಿದ್ದ ತ್ರಿಮತಸ್ಥ ಬ್ರಾಹ್ಮಣರ ಸಭೆಯಲ್ಲಿ ಚುನಾಯಿಸಲ್ಪಟ್ಟ ಸಮಿತಿಯವರ ಪರವಾಗಿ ತಾವು ಮೈಸೂರು ಸ್ಟಾರ್, ಪತ್ರಿಕೆಯಲ್ಲಿ ಬಂದ ಕೆಲವು ತುಚ್ಛ ಲೇಖನಗಳನ್ನು ಸರ್ಕಾರದ ಗಮನಕ್ಕೆ ತಂದು ಸದರಿ ಪತ್ರಿಕಾ ಸಂಪಾದಕರನ್ನ ಇಂಡಿಯನ್ ಪೀನಲ್ ಕೋಡು ೧೫೩ ನೇ ಸೆಕ್ಷನ್ ಪ್ರಕಾರ ಶಿಕ್ಷಿಸಬೇಕೆಂದು ಪ್ರಾರ್ಥಿಸಿ ಬರೆದ ಕಾಗದವು ಸಾದರಾಯಿತು.

ಇನ್ನು ಮುಂದೆ ಇಂತಹ ಲೇಖನಗಳನ್ನು ಪ್ರಕಟಿಸಕೂಡದೆಂದು ಹುಷಾರು ಕೊಟ್ಟಿದೆಯೆಂದು ತಮಗೆ ತಿಳಿಸುವಂತೆ ಆಜ್ಞೆಯಾಗಿದೆ. ಈ ಹುಷಾರಿನಿಂದ ಬಹಳ ಮಟ್ಟಿಗೆ ಪರಿಣಾಮಕಾರಿಯಾಗಿದೆಯೆಂದು ಊಹಿಸಲಾಗಿದೆ. ಯಾಕೆಂದರೆ ಈಚಿಗೆ ಪತ್ರಿಕೆಯಲ್ಲಿ ದೂರಿದಂಥಾ ಲೇಖನಗಳಾವುವೂ ಬರುತ್ತಿಲ್ಲ.

ಮತ್ತು ಮುಂದೆ ಅಂಥ ಅಸಹ್ಯಕರವಾದ ಲೇಖನಗಳು ಸದರಿ ಪತ್ರಿಕೆಯಲ್ಲಿ ಬಂದರೆ ಸರ್ಕಾರದವರು ತಮ್ಮ ಪ್ರಾರ್ಥನೆಯನ್ನು ಪರ್ಯಾಲೋಚಿಸುವವರಾಗಿರುವರು.

(ರುಜು) ಎಚ್. ಮಾಧವರಾವ್

ಮೂರು ದಿನಗಳ ರಾಜ್ಯಭಾರ! ಹೊಸ ಅಮೀರರೂ ಸಿಂಹಾಸನವನ್ನು ಬಿಟ್ಟು ಓಡಿದರು!

ತಾಯಿನಾಡು.

21—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

(ಮುಂದುವರೆದದ್ದು)

ಬ್ರಿಟಿಷ್ ಇಂಡಿಯಾ ಪ್ರಜೆಗಳ ಆಶೋತ್ತರಗಳು ನೆಹರೂ ಕಮಿಟಿಯವರ ವರದಿಯಲ್ಲಿ ಸ್ಪಷ್ಟಪಡಿಸಲ್ಪಟ್ಟಿರುವುವು. ಇಂಡಿಯಾ ಸರ್ಕಾರವೇ ಮುಖ್ಯವಾದ ಅಧಿಕಾರವನ್ನು ಈಗ ಹೊಂದಿರುವುವೆಂದೂ ಮುಂದೆಯೂ ಡೊಮಿನಿಯನ್ ಸರ್ಕಾರವೇ ಆ ಅಧಿಕಾರವನ್ನು ಹೊಂದಬೇಕೆಂದೂ ಆ ವರದಿಯು ತಿಳಿಸುತ್ತದೆ. ಯೂರೋಪಿಯನ್ ಅಸೋಸಿಯೇಷನ್ನಿನವರು ಸೈಮನ್ ಕಮೀಷನ್ನಿಗೆ ಒಪ್ಪಿಸಿರುವ ಹೇಳಿಕೆಯಲ್ಲಿ ನಮೂದಾಗಿರುವ ಫೆಡರೇಷನ್ನಿನಂತೆ ಇದ್ದರೆ ತಾವು ಒಪ್ಪಿಕೆಯನ್ನು ಕೊಡುವುದಾಗಿ ಒಬ್ಬರಾಜರು ಅಪ್ಪಣೆಕೊಡಿಸಿರುವರು. ಅದಕ್ಕೆ ಉತ್ತರವಾಗಿ ನೆಹರೂಕಮಿಟಿಯವರ ತಾವು ಹೊರಡಿಸಿರುವ ಪುರವಣಿಯ ವರದಿಯಲ್ಲಿ ಹೇಳಿರುವುದೇನೆಂದರೆ:—ಫೆಡರೇಷನ್ನಿನ ಅಭಿಪ್ರಾಯವನ್ನು ಒಪ್ಪುವುದಾದರೆ ರಾಜರುಗಳು ನೆಹರೂಕಮಿಟಿಯವರು ಒಪ್ಪಿಸಿರುವ ವರದಿಯ ಕಡೆ ಗಮನವನ್ನು ಸ್ವಲ್ಪ ಕೊಡಲಿ. ಫೆಡರೇಶನ್ ಬಂದರೆ ಬಲಿಷ್ಟವಾದ ಮಧ್ಯವರ್ತಿ ಸರಕಾರವಿರಬೇಕು. ಫೆಡರೇಷನ್ನಿಗೂ ಸಂಸ್ಥಾನಗಳಿಗೂ ಸಂಬಂಧವು ಒಳ್ಳೇ ಸುದೃಢವಾಗಿರಬೇಕು. ಸಂಸ್ಥಾನಗಳಲ್ಲಿ ಸಾಂಘಿಕ ತತ್ವಗಳು ಪ್ರಚಾರಕ್ಕೆ ಬರಬೇಕು.

ದೇಶೀಯ ಸಂಸ್ಥಾನಗಳ ಪ್ರಜೆಗಳು ಈ ರೀತಿಯಾದ ಫೆಡರೇಷನ್ನಿಗೆ ಆಕ್ಷೇಪಣೆ ಮಾಡುವುದಿಲ್ಲ. ಕೇಂದ್ರ ಸರಕಾರದವರು ಮಾಡುವ ನಿಬಂಧನೆಗಳಿಗೆ ಇವರು ವಿಧೇಯರಾಗಿರುವಂತೆಯೇ ಇವರಿಗೂ ಕೇಂದ್ರ ಸರಕಾರದಲ್ಲಿ ಮಾಡುವ ನಿಬಂಧನೆಗಳ ಸಮಾಲೋಚನೆಯಲ್ಲಿ ಪ್ರಾತಿನಿಧ್ಯವು ಇರಬೇಕು. ಸಾರಾಂಶದಲ್ಲಿ ನೆಹರೂ ಕಮಿಟಿಯವರು ಉದ್ದೇಶಪಟ್ಟಿರುವುದೂ ನಾವು ಫೆಡರೇಷನ್ ಮುಖಾಂತರ ಉದ್ದೇಶಪಟ್ಟಿರುವುದೂ ಎರಡೂ ಒಂದೇ. ನೆಹರೂ ಕಮಿಟಿಯವರು ತಮಗೆ ವಿರೋಧವು ಹೆಚ್ಚಾಗಿ ಇಲ್ಲದಿರಲಿ ಎಂದು ಫೆಡರೇಷನ್ನಿನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಲಿಲ್ಲ. ಇಂಡಿಯಾದ ಫೆಡರೇಷನ್ನಿನ ಒಳಗೆ ಸಂಸ್ಥಾನಗಳು ಬರುವುದಕ್ಕೆ ನೆಹರೂ ಕಮಿಟಿಯವರು ಯಾವ ಅಡ್ಡಿಯನ್ನು ಹಾಕಿಲ್ಲ. ಬ್ರಿಟಿಷ್ ಸರಕಾರದವರು ಮಧ್ಯೆ ಪ್ರವೇಶಿಸದಿದ್ದರೆ ಇದು ಸುಲಭವಾಗಿ ಆಗಬಹುದು. ತನ್ನ ಉದ್ದೇಶಕ್ಕೆ ಎಲ್ಲಿ ಭಂಗಬರುವುದೋ ಎಂಬ ಹೆದರಿಕೆಯಿಂದ ಬ್ರಿಟಿಷ್ ಇಂಡಿಯಾದ ಮುಖಂಡರು ದೇಶೀಯ ಸಂಸ್ಥಾನದ ಪ್ರಜೆಗಳೊಡನೆ ಹೆಚ್ಚಾಗಿ ಸಂಬಂಧವನ್ನು ತೋರಿಸಿಲ್ಲ. ಈ ಮನೋಭಾವವನ್ನು ನಾವು ಚೆನ್ನಾಗಿ ತಿಳಿಯಬಹುದು. ಈ ಸಂಬಂಧವಾಗಿ ನಾವು ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಬೇಕು. ಬ್ರಿಟಿಷ್ ಇಂಡಿಯಾದ ಮಹಾಜನರು ಡೊಮಿನಿಯನ್ ಸ್ಟೇಟಸ್ ಸ್ವರಾಜವನ್ನು ದೊರೆಕಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನಗಳಲ್ಲಿ ನಾವು ಅವರುಗಳನ್ನು ಒಪ್ಪಬಾರದು.

ಸಂಸ್ಥಾನದ ಪ್ರಜೆಗಳಿಗೆ ಬೇಕಾದುದೇನು?

ಪ್ರಾತಿನಿಧ್ಯವಿಲ್ಲದೆ ಕಂದಾಯವಿಲ್ಲ—ಎಂಬ ತತ್ವವು ನಾಗರಿಕ ಪ್ರಪಂಚದ ಸರ್ಕಾರಗಳಲ್ಲೆಲ್ಲಾ ಒಪ್ಪಲ್ಪಟ್ಟಿರುವುದು. ಸಂಸ್ಥಾನಗಳ ಪ್ರಜೆಗಳು ಸರ್ಕಾರಕ್ಕೆ ಕಂದಾಯ ಕೊಡುವುದರಿಂದ, ಆ ಕಂದಾಯದ ವಿನಿಯೋಗ ಮತ್ತು ಆಡಳಿತದ ರೀತಿನೀತಿಗಳು ಇವುಗಳ ಸಮಾಲೋಚನೆಯಲ್ಲಿ ಪ್ರಾತಿನಿಧ್ಯವನ್ನು ಹೊಂದಬೇಕು. ಅನೇಕ ದೇಶೀಯ ಸಂಸ್ಥಾನಗಳ ಸರ್ಕಾರಗಳು ಓಬಿರಾಯನ ಕಾಲದ ರಾಜ್ಯಪದ್ಧತಿಗಳಾಗಿವೆ.' ನಮಗೆ ರಾಜರ ಗಳಿಕ ಬೇಕೆಂದೇ ಅಭಿಪ್ರಾಯವಿದ್ದರೆ ನವೀನ ರಾಜ್ಯಪದ್ಧತಿಯು ಜಾರಿಯಲ್ಲಿ ಬರಬೇಕು. ರಾಜರುಗಳ ಅಧಿಕಾರವು ಮರ್ಯಾದಿತವಾಗಿರಬೇಕು. ನಿಯಮಿತ ರಾಜಪದ್ಧತಿಯಾಗಬೇಕು.

ದೇಶೀಯಸಂಸ್ಥಾನದ ಪ್ರಜೆಗಳು ಅಪ್ರತ್ಯಕ್ಷವಾಗಿ ಇಂಡಿಯಾ ಸರ್ಕಾರಕ್ಕೂ ಕಂದಾಯಗಳನ್ನು ಕೊಡುತ್ತಲಿದ್ದಾರೆ. ಇಂಡಿಯಾ ಸರ್ಕಾರವು ದೇಶೀಯಸಂಸ್ಥಾನಗಳ ಪ್ರಜೆಗಳ ಹೊರಗಿನ ಸಂಬಂಧಗಳನ್ನೂ ಮತ್ತು ಅನೇಕವಾದ ಸಾಮಾಜಿಕ ಸಾಂಪತ್ತಿಕ ಒಳ ಆಡಳಿತದ ಪ್ರಶ್ನೆಗಳನ್ನೂ ನಿರ್ಧರಿಸುತ್ತದೆ. ಆದುದರಿಂದ ದೇಶೀಯ ಸಂಸ್ಥಾನದ ಪ್ರಜೆಗಳಿಗೆ ಮಧ್ಯ ಸರ್ಕಾರದ ಆಯವ್ಯಯ, ಆಡಳಿತ ಮತ್ತು ಕಾನೂನು ರಚನೆ ಇವುಗಳಲ್ಲಿ ಭಾಗವಿರಬೇಕಾದುದು ನ್ಯಾಯಸಮ್ಮತವು. ಈ ರೀತಿಯಾದ ಪದ್ಧತಿಯು ಸ್ಥಾಪನೆಯಾದರೇನೇ ಇಂಡಿಯಾದೇಶದ ಈಗಿನ ಸ್ಥಿತಿಗೆ ಫೆಡರಲ್ ಪದ್ಧತಿಯು ತೃಪ್ತಿಕರವಾಗುವುದು.

ಇಂಡಿಯಾದೇಶದ ಒಟ್ಟು ಜನಸಂಖ್ಯೆಯಲ್ಲಿ 100ರಲ್ಲಿ 8 ಜನಮಾತ್ರ ಅಕ್ಷರಸ್ಥರು. ಬ್ರಿಟಿಷ್ ಸರ್ಕಾರದವರೂ ದೇಶೀಯ ಸಂಸ್ಥಾನಗಳ ಸರ್ಕಾರದವರೂ ಜನಗಳ ವಿದ್ಯಾಭ್ಯಾಸದ ಕಡೆಗೆ ಗಮನವನ್ನು ಕೊಟ್ಟಿಲ್ಲ. ಈಗ ಕೊಡುತ್ತಿರುವ ವಿದ್ಯಾಭ್ಯಾಸವು ನಿಷ್ಫಲವಾಗುತ್ತಿರುವುದು. ಅದು ನಮ್ರತೆಯನ್ನು ಕಲಿಸುತ್ತದೆಯೋ ಹೊರತು ಜನಗಳನ್ನು ಸ್ವಾವಲಂಬಿಗಳಾದ ನಾಗರೀಕರನ್ನಾಗಿ ಮಾಡುವುದಿಲ್ಲ. ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕಾಗಲಿ ತರುಣರಿಗೆ ಅವರ ಕಸಬುಗಳನ್ನು ಕಲಿಸುವುದಕ್ಕಾಗಲೀ ಸಹಾಯಕಾರಿಯಾಗಿಲ್ಲ. ತಡಮಾಡದೆ ಈಗಿನ ವಿದ್ಯಾಭ್ಯಾಸದ ಜಾಗದಲ್ಲಿ ಇನ್ನೂ ಹೆಚ್ಚು ಫಲದಾಯಕವಾದ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕು.

ಚೆನ್ನಾಗಿ ಆಳಲ್ಪಡುವ ನವೀನ ರಾಜ್ಯದಲ್ಲಿ ಜನಗಳ ಒಟ್ಟು ಆದಾಯದಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಕೈಗಾರಿಕೆಯಿಂದಲೂ ವ್ಯಾಪಾರದಿಂದಲೂ ಬರುವುದು. ಇಂಡಿಯಾ ದೇಶದಲ್ಲಿ ಮುಕ್ಕಾಲುಪಾಲು ಜನಗಳು ಅತ್ಯಂತ ಕಡಿಮೆ ತರದ ಕಸುಬಾದ ವ್ಯವಸಾಯವನ್ನು ಓಬೀರಾಯನ ಕಾಲದ ಪದ್ಧತಿಗಳನ್ನೇ ಅನುಸರಿಸಿ ನಡೆಸಿಕೊಂಡು ಬರುತ್ತಾರೆ. ಅಧಿಕಾರದಲ್ಲಿರುವರು ಯಾರೂ ಇದನ್ನು ಉತ್ತಮಗೊಳಿಸುವ ಯೋಚನೆಯನ್ನೇ ಮಾಡಿದ್ದಹಾಗೆ ಕಾಣುವುದಿಲ್ಲ. ಅಧಿಕಾರದಲ್ಲಿರುವವರಿಗೆ ಯಾರಿಗೇ ಆಗಲಿ ಜನಗಳ ಕೈಗಾರಿಕೆಯನ್ನು ಹೆಚ್ಚಿಸುವುದರಲ್ಲೇ ಆಗಲಿ ಅವರ ಸಾಂಪತ್ತಿಕ ಅಭಿವೃದ್ಧಿಯನ್ನು ಮಾಡುವುದರಲ್ಲೇ ಆಗಲಿ [illegible]

ಮೂರು ದಿವಸದ ರಾಜ್ಯಭಾರ!

ಇನಾಯತುಲ್ಲಾರವರ ಆಳ್ವಿಕೆ [illegible] ಸಿಂಹಾಸನವನ್ನು ಬಿಟ್ಟು ಓಡ್ಹೋದರು. ಸಕ್ಕಾ ಎಂಬ ದೊಂಬಿಯ ಮುಖಂಡನಿಗೆ ರಾಜ್ಯವನ್ನು ಒಪ್ಪಿಸಿದರು. ಅಮಾನುಲ್ಲಾರವರು ತಮ್ಮ ಶಕ್ತಿಯನ್ನು ಸಂಗ್ರಹ ಮಾಡುತ್ತಿರುವರು. ಕಾಂದಹಾರಿನಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಿದರು. ಪುನಃ ಅಮಾನುಲ್ಲಾರವರೇ ಅಮೀರ ಪದವಿಗೆ ಬರುವ ಸಂಭವವಿದೆ.

ಸಂರಕ್ಷಣೆಯ ವಿಷಯದಲ್ಲಿ ದೇಶೀಯ ಸಂಸ್ಥಾನದ ಸರ್ಕಾರಗಳು ತಮ್ಮ ಜನಗಳಿಗೆ [illegible] ತಮ್ಮ ಮನೆಮಠಗಳನ್ನು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ [illegible] ಬ್ರಿಟಿಷ್ ಸರ್ಕಾರದಿಂದ ಸಂರಕ್ಷಣೆಯನ್ನು [illegible] ದರಲ್ಲಿ ತೃಪ್ತರಾಗುವರು. [illegible] ತಾನು ಹುಟ್ಟಿದ [illegible] ಕರ್ತವ್ಯಗಳಲ್ಲಿ [illegible] ಸರ್ಕಾರವಾಗಲೀ [illegible] ಸಂಸ್ಥಾನದ ಸರ್ಕಾರವಾಗಲೀ ಈ ಅತ್ಯಂತ [illegible] ಗಳನ್ನು ಮುಂದಕ್ಕೆ [illegible]

[illegible] ಸಂಸ್ಥೆಗಳಿಂದಲೇ [illegible] ಗಳಲ್ಲಿ [illegible] ದೇಶೀಯ ಸಂಸ್ಥಾನಗಳಲ್ಲಿ [illegible] ಅಧಿಕಾರ [illegible] ಸಂತೋಷದಿಂದಲೇ [illegible] ಸ್ವತಂತ್ರವಾಗಿ ಮುಂದಕ್ಕೆ [illegible] ಅವಕಾಶ [illegible] ಮತ್ತು [illegible] ಸಾಧಕವಾದ [illegible] ಹೊರತು ಜನಗಳ [illegible] ಸಾಧಕವಾದುದನ್ನು [illegible] ವುದಿಲ್ಲ.

ಸರ್. [illegible] ಮುಂದೆ [illegible] ದೇಶೀಯ ಸಂಸ್ಥಾನಗಳ [illegible] ಸಾಧಕವಾದ ಅನೇಕ [illegible] ನ. [illegible] ಸಂಸ್ಥಾನದ ಸರ್ಕಾರ [illegible] ವುದೇ ಇದಕ್ಕೆ ಮುಖ್ಯ ಕಾರಣ. ಕೆಲವು ಸಂಸ್ಥಾನಗಳಲ್ಲಿ ಸರ್ಕಾರದವರು ಮಹಮದೀಯರನ್ನೂ, [illegible]

Printed and published by P. R. Ramaiya. at Sri Rama Press, D Subbiah RoadM ysore.

Regd No. M. 2322 ॥ ವಂದೇಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ॥

ವಾರ್ಷಿಕ ಚಂದಾ { ೫—೦—೦ / ಪರಸ್ಥಳಕ್ಕೆ ೭—೦—೦

ಸಂಪುಟ ೧] ಮಗಳವಾರ ೨೨ ಜನವರಿ ೧೯೨೯ [ಸಂಚಿಕೆ ೯೧

TAI NADU

22—1—1929

ನಿರಂಕುಶ ರಾಜ್ಯಪದ್ಧತಿ ಮತ್ತು ಕೋಮುವಾರು ಭೇದ.

ನಮ್ಮ ಸಂಸ್ಥಾನದಲ್ಲಿ ಕೋಮುವಾರು ಭೇದವು ಹೆಚ್ಚಿ ಒಂದು ಕೋಮಿನವರು ಇನ್ನೊಂದು ಕೋಮಿನವರ ಮೇಲೆ ವಿಷಕಾರಿದಂತೆಲ್ಲಾ, ಪ್ರಜಾಸ್ವಾತಂತ್ರ್ಯಕ್ಕೆ ಪೆಟ್ಟುಬಿದ್ದು ಸಾಂಕುಶ ರಾಜ್ಯಪದ್ಧತಿಯು ನಿರ್ಮೂಲವಾಗಿ ನಿರಂಕುಶ ರಾಜ್ಯಪದ್ಧತಿಯು ತಾಂಡವವಾಡಲು ಅವಕಾಶವಾಗಿರುವುದು. ನಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ವೈಮನಸ್ಯವು ಉಲ್ಬಣವಾದಂತೆಲ್ಲಾ ಸರ್ಕಾರದವರು ಶಾಂತಿಸಂರಕ್ಷಣೆ ಎಂಬ ಹೆಸರಿನಿಂದ ಪ್ರಜಾಸ್ವಾತಂತ್ರ್ಯವನ್ನು ತುಳಿಯುತ್ತಿರುವರು. ಬೆಂಗಳೂರು ಗಲಭೆಯಾದಾಗಿನಿಂದಲೂ ವಾಗ್ಬಂಧನ, ಪತ್ರಿಕಾಬಂಧನ ಮತ್ತು ಸಭಾಬಂಧನಗಳು ಹೆಚ್ಚುತ್ತಿರುವವು. ಪತ್ರಿಕಾ ಕಾನೂನೆಂಬ ಕರಾಳ ರಾಕ್ಷಸನು ನಗ್ನನರ್ತನವನ್ನು ಮಾಡುತ್ತಿರುವನು. ಒಂದು ಪತ್ರಿಕೆಯು ನಿಲ್ಲಿಸಲ್ಪಟ್ಟರೆ ಇತರ ಕೋಮಿನ ಪತ್ರಿಕೆಯವರಿಗೆ ಸಂತೋಷ. ಇಂದು ಆ ಪತ್ರಿಕೆಗೆ ಬಂದುದು ನಾಳೆ ನಮ್ಮ ಪತ್ರಿಕೆಗೆ ಬರುವುದೆಂಬ ಮನೋಭಾವನೆಯೇ ಇಲ್ಲ. ತಾತಯ್ಯನವರ ಪತ್ರಿಕೆಗಳು ನಿಲ್ಲಿಸಲ್ಪಟ್ಟವೆಂದು ಕೆಲವು ಪತ್ರಿಕೆಗಳಿಗೆ ಹೆಚ್ಚು ಆನಂದವಾಗಿದೆ. ಇಂದು ತಾತಯ್ಯನವರ ಪತ್ರಿಕೆಗಳ ಮೇಲೆ ಬಿದ್ದ ಪ್ರಹಾರವು ನಾಳೆ ಈಗ ಸಂತೋಷಪಡುವ ಪತ್ರಿಕೆಗಳ ಮೇಲೂ ಬೀಳಬಹುದು. ಸರ್ಕಾರದ ಯಂತ್ರವೆಂಬುದು ಯಾರನ್ನೂ ನೋಡುವುದಿಲ್ಲ. ಯಾರ್‍ಯಾರು ಅದಕ್ಕೆ ಬೇಡವೋ ಅವರನ್ನೆಲ್ಲಾ ಛೇದಿಸುವುದು. ಆದುದರಿಂದ ಸರ್ಕಾರದವರು ನಿರಂಕುಶವಾಗಿ ಹೋದಾಗ ಅವರಿಗೆ ಏಟು ಬಿತ್ತು, ನಮಗೆ ಬೀಳಲಿಲ್ಲವೆಂದು ಸಂತೋಷಪಡುವುದು ಅವಿವೇಕ. ನಿರಂಕುಶತ್ವವು ಯಾರಿಗೂ ಬೇಡ, ನನ್ನ ಎರಡು ಕಣ್ಣು ಹೋದರೂ ಚಿಂತೆಯಿಲ್ಲ. ನನ್ನ ವೈರಿಯ ಒಂದು ಕಣ್ಣಾದರೂ ಹೋಗಲಿ, ಎಂದು ದುರ್ಭಾವನೆ ಇರುವವರೇ ನಿರಂಕುಶತ್ವದ ಸಹಾಯವನ್ನು ತೆಗೆದುಕೊಳ್ಳುವರು. ಮೈಸೂರಿನವರಾದ ನಾವು ನಮ್ಮ ನಮ್ಮಲ್ಲಿ ಜಗಳವಾಡಿಕೊಂಡು ಹೊರಗಿನವರಾದ ಯೂರೋಪಿಯನರಾಗಲಿ ಇತರರಾಗಲಿ ನಮ್ಮ ಮೇಲೆ ಇರಬೇಕೆಂದು ಕೋರುತ್ತಿರುವುದು ಶುದ್ಧ ಅನ್ಯಾಯ. ನಮ್ಮ ನಮ್ಮ ಜಗಳಗಳಿಂದ ನಮ್ಮ ಸರ್ಕಾರವು ನಿರಂಕುಶದ ಉತ್ಕಟಾವಸ್ಥೆಯನ್ನು ಮುಟ್ಟುವುದಲ್ಲದೆ ಹೊರಗಿನವರು ಬಂದು ನಮ್ಮ ಮೇಲೆ ಸವಾರಿ ಮಾಡಲವಕಾಶವಾಗುವುದು. 17-18-19 ನೇ ಶತಮಾನಗಳಲ್ಲಿ ನಮ್ಮ ಇಂಡಿಯಾ ದೇಶದ ರಾಜರುಗಳು ಯೂರೋಪಿಯನ್ನರ ಸಹಾಯ ತೆಗೆದುಕೊಂಡು ಒಬ್ಬರೊಡನೊಬ್ಬರು ಕ

ಸರ್ಕಾರವಿರುವುದು ಯಾರಿಗೋಸ್ಕರ?

(ಸರ್. ಜಾನ್. ಮಾರಿಯಟ್ ರವರಿಂದ.)

ಸರ್ ಜಾನ್ ಮಾರಿಯಟ್ ರವರು ಇಂಗ್ಲೆಂಡ್ ಪಾರ್ಲಿಮೆಂಟಿನ ಮೆಂಬರರು. ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಪ್ರಖ್ಯಾತರಾದ ಉಪಾಧ್ಯಾಯರು. ಇವರು ಸರ್ಕಾರವೆಂದರೆ ಹೇಗಿರಬೇಕು? ಎಂಬ ಒಂದು ಗ್ರಂಥವನ್ನು ಬರೆದಿರುವರು. ಅದರಲ್ಲಿ "ಸರ್ಕಾರವಿರುವುದು ಯಾರಿಗೋಸ್ಕರ' ಎಂಬ ವಿಷಯವನ್ನು ಚೆನ್ನಾಗಿ ವಿಮರ್ಶಿಸಿರುವರು. ಅದನ್ನು ನಮ್ಮ ವಾಚಕರ ಅವಗಾಹನೆಗಾಗಿ ಕೊಡುವೆವು.—ಸಂ.

ಇಷ್ಟು ದೊಡ್ಡ ಸರ್ಕಾರದ ಯಂತ್ರವಿರುವುದು ಯಾತಕ್ಕೆ? ಇದರ ಉದ್ದೇಶ್ಯವೇನು? ಹತ್ತಿಯ ಕಾರ್ಖಾನೆಯಲ್ಲಿರುವ ಅಗಾಧವಾದ ಯಂತ್ರವು ಹತ್ತಿಯ ಬಟ್ಟೆಗಳನ್ನು ಮಾಡುವದನ್ನೇ ಹೇಗೆ ಉದ್ದೇಶ್ಯವಾಗಿಟ್ಟುಕೊಂಡಿರುವುದೋ, ಹಾಗೆಯೇ ಈ ದೊಡ್ಡ ಸರ್ಕಾರದ ಯಂತ್ರಕ್ಕೂ ಒಂದು ಉದ್ದೇಶ್ಯವಿರುವುದು. ಪ್ರಜೆಗಳ ಪರಿಪಾಲನೆಯೇ ಮುಖ್ಯವಾದ ಉದ್ದೇಶ್ಯ. ಸರ್ಕಾರದ ಯಂತ್ರವನ್ನು ನಡಿಸುವವರು ಸರ್ಕಾರದ ಯಂತ್ರವನ್ನು ನಡೆಸುವುದೇ ತಮ್ಮ ಮುಖ್ಯ ಉದ್ದೇಶ್ಯವಾಗಿ ತಿಳಿಯದೆ ಪ್ರಜಾಪರಿಪಾಲನೆಗೆ ಗಮನವನ್ನು ಕೊಡಬೇಕು. ಪ್ರಜಾಪರಿಪಾಲನೆಗೆ ಸರ್ಕಾರವು ಒಂದು ಸಾಧನ. ಸರ್ಕಾರವು ಇರುವುದು ಪ್ರಜೆಗಳಿಗೋಸ್ಕರ; ಪ್ರಜೆಗಳಿರುವುದು ಸರ್ಕಾರಕ್ಕಲ್ಲ. ಪ್ರಜೆಗಳು ಮುಖ್ಯವೇ ಹೊರತು ಸರ್ಕಾರವು ಮುಖ್ಯವಲ್ಲ. ಪ್ರಜೆಗಳಿಗೆ ಬೇಕಾದ ಸರಕಾರವಿರಬೇಕು. ಪ್ರಜೆಗಳಿಗೆ ಬೇಡವಾದ ಸರಕಾರವು ಹೋಗಬೇಕು. ಯಾವ ರಾಜ್ಯದಲ್ಲಿ ಪ್ರಜೆಗಳಿಗಾಗಿಯೇ ಸರ್ಕಾರವಿರುತ್ತದೆಯೋ ಅಲ್ಲಿ ಪ್ರಜಾಭಿವೃದ್ಧಿಯು ಚೆನ್ನಾಗಿ ಆಗುವುದು.

ಪೂರ್ವಕಾಲದಲ್ಲಿ ಪ್ರಜೆಗಳು ಇರುವುದು ರಾಜರುಗಳಿಗೋಸ್ಕರ ಎಂಬ ಭಾವನೆ ಇತ್ತು. ರಾಜರುಗಳು ರಾಜಕುಮಾರರುಗಳೂ ದೊಡ್ಡ ದೊಡ್ಡ ಮನುಷ್ಯರುಗಳೂ ಸುಖವಾಗಿರಲಿ, ಎಂದು ಪ್ರಜಾಕೋಟಿಯೆಲ್ಲಾ ಹಗಲೂ ರಾತ್ರಿಯೂ ದುಡಿಯಬೇಕೆಂಬ ಭಾವನೆಯು ಇತ್ತು. ರಾಜನು ಸುಖವಾಗಿದ್ದರೆ ಪ್ರಜೆಗಳೆಲ್ಲರೂ ಸುಖಿಗಳೆಂದು ಭಾವಿಸಿದ್ದರು. ಪ್ರಜೆಗಳಿಗೆ ಬೇಕಾಗಲೀ ಬೇಡವಾಗಲಿ ಅವರಿಗೆ ಪ್ರಯೋಜನವಿರಲಿ ಇಲ್ಲದಿರಲಿ ಈ ರಾಜರುಗಳು ಒಬ್ಬರಿಗೊಬ್ಬರು ಜಗಳವಾಡಿದರೆ ಎರಡೂ ರಾಜ್ಯದ ಪ್ರಜೆಗಳು ಅಸಂಖ್ಯಾತರಾಗಿ ಮಡಿಯುತ್ತಿದ್ದರು. ಈಗಲೂ ಅನಾಗರಿಕ ದೇಶಗಳಲ್ಲಿ ಈ ಮೇಲಿನ ಭಾವನೆಗಳು ಇನ್ನೂ ಮನೆ ಮಾಡಿಕೊಂಡಿವೆ. ಆದರೆ ಮುಂದುವರಿದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಜನಾಂಗಗಳಲ್ಲಿ ಈ ಹಳೇ ಭಾವನೆಗಳು ಮಾಯವಾಗುತ್ತಿವೆ. ಮುಂದುವರಿದ ನಾಗರಿಕ ದೇಶಗಳಲ್ಲಿ ರಾಜರುಗಳೂ ಸರ್ಕಾರಗಳೂ ಪ್ರಜೆಗಳಿಗೋಸ್ಕರವಾಗಿಯೇ ಇರುವರೆಂಬ ಭಾವನೆಯು ದೃಢಪಟ್ಟಿದೆ. ಒಟ್ಟಿನ ಮೇಲೆ ಸರ್ಕಾರ ಯಂತ್ರದ ಮುಖ್ಯ ಉದ್ದೇಶವು ಸರ್ವತೋಮುಖವಾದ ಪ್ರಜಾಪರಿಪಾಲನೆ ಎಂಬುದು ಈಗ ಎಲ್ಲಾ ನಾಗರಿಕ ದೇಶಗಳಲ್ಲಿಯೂ ಒಪ್ಪಿಕೆಯಾದ ಸಿದ್ಧಾಂತವು.

It is among the first duties of Government to maintain law and order and protect the persons and properity of the people.

Sir J. A. R. Marriot.

ಆ ಸ್ಥಿತಿಯು ನಮ್ಮ ಜಗಳಗಳಿಂದ ನಮ್ಮ ಮೈಸೂರಿಗೆ ಬರದಂತೆ ನಾವು ನೋಡಿಕೊಳ್ಳಬೇಕು. ಬ್ರಿಟಿಷ್ ಸರ್ಕಾರದವರು ನಮ್ಮ ಮೈಸೂರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದಾರೆ. ನಮ್ಮ ಸರ್ಕಾರದವರು ತಮ್ಮ ಸಾಮರ್ಥ್ಯವನ್ನು ತೋರಿಸುವುದಕ್ಕಾಗಿ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲಾ ಹುಡುಕಿ ತೆಗೆಯುತ್ತಿದಾರೆ. ಈ ಸಂದರ್ಭದಲ್ಲಿ ಮೈಸೂರಿನ ಪ್ರಜೆಗಳು ಒಂದು ಕೋಮಿನವರು ಇನ್ನೊಂದು ಕೋಮಿನ ಮೇಲೆ ಯುದ್ಧವನ್ನು ಹೂಡುವದು ಸರಿಯಲ್ಲ. ಎಲ್ಲರಿಗೂ ನಮ್ಮ ಮೈಸೂರಿನ ಕೀರ್ತಿಯ ಕಣ್ಣು ಇರಬೇಕು. ನಮ್ಮ ಸರ್ಕಾರದವರಾದರೋ ಇಷ್ಟಕ್ಕೆಲ್ಲಾ ಮೂಲಕಾರಣವ್ಯಾವುದೆಂಬುವುದನ್ನು ಹುಡಕಬೇಕು.

ಬೆಂಗಳೂರಿನ ಗಲಭೆಗಳಿಗೆ ಕಾರಣಕರ್ತರಾಗಿ ದೊಣ್ಣೆ, ಲಾಠಿ, ಕಲ್ಲು, ಗುಂಡು ಮೊದಲಾದವುಗಳಿಂದ ನಿರಪರಾಧಿಗಳನ್ನು ಹೊಡೆಯುವಂತೆ ಪ್ರೇರೇಪಿಸಿದವರನ್ನೂ, ಉತ್ತೇಜನ ಕೊಟ್ಟವರನ್ನೂ, ಹೊಡೆದವರನ್ನೂ ಸಹ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಬೇಕು. ಸರ್ಕಾರದವರು ಈ ಕರ್ತವ್ಯವನ್ನು ಮಾಡಿದರೆ ಶಾಂತಿಸಮಾಧಾನಗಳು ಮೈಸೂರಿನಲ್ಲಿ ಪುನಃ ನೆಲೆಸುವವು.

ಖಾನರ ಮೇಲೆ ಮತ್ತೊಂದು ಮುಖದ್ದಮೆ.

ಈ ತಿಂಗಳು 17ನೇ ತಾರೀಖಿನ ದಿವಸ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ ಬಿ. ಕೆ. ಗರುಡಾಚಾರ್ಯರು ಅಬ್ಬಾಸ್ ಖಾನರ ಮೇಲೆ 10,500 ರೂಪಾಯಿಗಳಿಗಾಗಿ ಮಾನನಷ್ಟದ ದಾವ ಹಾಕಿರುತ್ತಾರೆ.

ದೇವರ ಮೇಲೆ ಯುದ್ಧ

ಮಾಸ್ಕೋ ನಗರದಲ್ಲಿ ದೇವರಿಲ್ಲವೆನ್ನುವ ನಾಸ್ತಿಕರದೊಂದು ಸಭೆ ಸೇರಿತು. ಕಳೆದ ಕ್ರಿಸ್ಮಸ್ ಹಬ್ಬದಲ್ಲಿಯೂ ಅನೇಕ ಧಾರ್ಮಿಕಕ್ರಿಯೆಗಳು ಆಗಿದ್ದುವು. ಅವುಗಳನ್ನು ನಿಲ್ಲಿಸುವುದಕ್ಕೆ ಸರಕಾರವು ಯಾವ ಪ್ರಯತ್ನಗಳನ್ನೂ ಮಾಡಲಿಲ್ಲ ಎಂದು ಈ ಸಭೆಯಲ್ಲಿ ಆರೋಪಣೆಗಳು ಆಗಿವೆ

ದೇವರಿಗೆ ಬಾಲಕನ ಬಲಿ.

ಕೊಯಮತ್ತೂರಿನಲ್ಲಿ ಕೊರವನ್ ಮತಕ್ಕೆ ಸೇರಿದ ಒಬ್ಬ ತಂದೆಯೂ ಮಗನೂ ಒಬ್ಬ ಕ್ಷೌರಿಕ ಹುಡುಗನನ್ನು ದೇವರಿಗೆ ಬಲಿಯಾಗಿ ಅರ್ಪಿಸಿದ ತಕ್ಸೀರಿಗಾಗಿ ಸೆಷನ್ ಜಡ್ಜರು, ಅವರನ್ನು ದ್ವೀಪಾಂತರ ವಾಸಕ್ಕೆ ಕಳುಹಿಸುವ ಶಿಕ್ಷೆಯನ್ನು ವಿಧಿಸಿರುವರು.

ತಾಯಿನಾಡು.

22—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

(ಮುಂದುವರಿದುದು.)

ಅಮೇರಿಕಾದ ಯುನೈಟೆಡ್ ಸ್ಟೇಟ್ಸ್ ಮೊದಲಾದ ದೇಶಗಳಲ್ಲಿ ಪ್ರಜೆಗಳು ಒಬ್ಬರೊನ್ನೊಬ್ಬರು ಮುಂದಕ್ಕೆ ತರಲು ಪ್ರಯತ್ನ ಮಾಡುತ್ತಾರೆ. ಅವರಲ್ಲಿ ಅತ್ಯಂತ ಬಡವನಾಗಿರುವವನೂ ಕೂಡ ಯುನೈಟೆಡ್ ಸ್ಟೇಟ್ ಸರ್ಕಾರದ ಅಧ್ಯಕ್ಷತೆಯನ್ನು ಪಡೆಯಲು ಅವಕಾಶವಿರುತ್ತದೆ.

ಯಾವ ದೇಶದ ಸಂಪತ್ತಾಗಲಿ ಆ ದೇಶದ ಜನರ ಕೆಲಸದಿಂದ ಉತ್ಪತ್ತಿಯಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಸರ್ಕಾರಗಳು ಜನಗಳನ್ನು ಉದ್ಯೋಗಕ್ಕೆ ತಯಾರು ಮಾಡುವುದಲ್ಲದೆ ಅವರಿಗೆ ಉದ್ಯೋಗವನ್ನು ಕೊಡುತ್ತವೆ. ದೇಶದಲ್ಲಿ ಸಂಪತ್ತು ಅಭಿವೃದ್ಧಿಯಾಗುತ್ತದೆ. ನಮ್ಮಲ್ಲಿಯಾದರೋ ಸಂಪತ್ತಿಗೆ ಸಾಧನವಿಲ್ಲದೆ ಬಿದ್ದಿರುತ್ತವೆ. ಜನಗಳ ಬುದ್ಧಿಶಕ್ತಿಯು ಉಪಯೋಗಿಸಲ್ಪಡದೆ ದೇಶಕ್ಕೆ ಬಹಳ ಹಾನಿಯಾಗುತ್ತದೆ. ಅನೇಕ ದೇಶೀಯ ಸಂಸ್ಥಾನಗಳ ಸರ್ಕಾರಗಳು ದೇಶಾಭಿಮಾನರಹಿತವಾದವುಗಳಾಗಿಯೂ ಪುರಾತನಕಾಲದ ಪದ್ಧತಿಗಳನ್ನೇ ಅನುಸರಿಸತಕ್ಕವುಗಳಾಗಿಯೂ ಇವೆ. ಒಟ್ಟಿನ ಮೇಲೆ ಬ್ರಿಟಿಷ್ ಇಂಡಿಯಾದಲ್ಲಿಯೂ ಆ ದೇಶೀಯ ಸಂಸ್ಥಾನಗಳಲ್ಲಿಯೂ ಇರುವ ಆಳುವ ಸರ್ಕಾರೀ ಪದ್ಧತಿಗಳು ಪ್ರಜೆಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸಹಕಾರಿಗಳಾಗಿಲ್ಲ. ಅವುಗಳಿಂದ ನಿಜವಾಗಿಯೂ ಪ್ರಜೆಗಳಿಗೆ ಉಪಯೋಗವಾಗಬೇಕಾದರೆ ಶೀಘ್ರದಲ್ಲಿಯೇ ಅವುಗಳಲ್ಲಿ ಬದಲಾವಣೆಯಾಗಬೇಕು.

ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಜವಾಬ್ದಾರಿಸರ್ಕಾರದಲ್ಲಿ ರಾಜನೂ ಪ್ರಜೆಗಳೂ ಯೂರೋಪಿನ ರಾಜನಿಯಂತ್ರಿತರಾಜ್ಯಗಳಲ್ಲಿರುವಂತೆ ದೇಶದ ಹಿತವನ್ನು ಒಟ್ಟಿಗೆ ನಡೆಸಬೇಕು. ಜವಾಬ್ದಾರೀ ಸರ್ಕಾರವೆಂದರೆ ನ್ಯಾಯವಿಧಾಯಕ ಸಭೆಯಿಂದಲೇ ಚುನಾಯಿಸಲ್ಪಟ್ಟ ಮಂತ್ರಿಮಂಡಲದಿಂದಲೇ ರಾಜ್ಯಾಡಳಿತವು ನಡೆಯಿಸಲ್ಪಡಬೇಕು. ಎಲ್ಲಿಯವರೆಗೆ ಈ ಮಂತ್ರಿಮಂಡಲವು ನ್ಯಾಯವಿಧಾಯಕ ಸಭೆಯ ಮೆಜಾರಿಟಿ ಓಟನ್ನು ಪಡೆದಿರುತ್ತದೆಯೋ ಅಲ್ಲಿಯವರೆಗೆ ಇದು ಅಧಿಕಾರದಲ್ಲಿರತಕ್ಕದ್ದು. ಯಾವಾಗ ಈ ಮಂತ್ರಿಮಂಡಲಕ್ಕೆ ಮೆಜಾರಿಟಿ ಮೆಂಬರ್ ಬೆಂಬಲವು ತಪ್ಪುತ್ತದೋ ಆಗ ಅದು ಅಧಿಕಾರದಿಂದ ಹೊರಗೆ ಬರತಕ್ಕದ್ದು. ಎರಡು ಪ್ರಜಾಪ್ರತಿನಿಧಿ ಸಭೆಗಳಿದ್ದರೆ ಯಾವ ಸಭೆಗೆ ಕಂದಾಯವನ್ನು ಹಾಕುವ ಮತ್ತು ಕಂದಾಯದ ಹಣವನ್ನು ವಿನಿಯೋಗಿಸುವ ಅಧಿಕಾರವಿರುವುದೋ ಅದೇ ಮಂತ್ರಿಮಂಡಲವನ್ನು ನೇಮಿಸತಕ್ಕದು. ಸಂಸ್ಥಾನದ ರಾಜರುಗಳು ಹೊರಗಿನ ಆಪತ್ತುಗಳನ್ನು ನೋಡತಕ್ಕದು. ಜವಾಬ್ದಾರೀ ಸರ್ಕಾರದ ಮುಖ್ಯವಾದ ಸ್ವರೂಪ ಈ ಕೆಳಗಿನ ರೀತಿ ಇರತಕ್ಕದ್ದು (1) ಪ್ರತಿಯೊಂದು ಸಂಸ್ಥಾನದಲ್ಲಿಯೂ ಪ್ರಜೆಗಳಿಂದಲೇ ಚುನಾಯಿಸಲ್ಪಟ್ಟ ಮೆಂಬರುಗಳಿರತಕ್ಕ ಕಡೇಪಕ್ಷ ಒಂದು ನ್ಯಾಯವಿಧಾಯಕಸಭೆ ಇರತಕ್ಕದ್ದು (2) ಒಂದೇ ನ್ಯಾಯವಿಧಾಯಕಸಭೆ ಇರುವ ಸಂಸ್ಥಾನದಲ್ಲಿ ಒಂದು ಅಡ್ವೈಜರಿ ಕೌನ್ಸಿಲ್ಲು ಇರತಕ್ಕದು. ಇದರಲ್ಲಿ 25 ಮೆಂಬರುಗಳಿರತಕ್ಕದು. ಸಮಯ ಬಂದಾಗ ನ್ಯಾಯವಿಧಾಯಕ ಸಭೆಯ ತೀರ್ಮಾನವು ದೇಶದ ಹಿತಕ್ಕೆ ಸಾಧಕವಲ್ಲವೆಂದು ತಿಳಿದಾಗ ರಾಜನು ಕೌನ್ಸಿಲ್ಲಿನ ಸಲಹೆಯನ್ನು ಕೇಳತಕ್ಕದು (3) ಮಂತ್ರಿಮಂಡಲವಾಗಲಿ ಅಥವಾ ಕಾರ್ಯಕಾರಿ ಮಂಡಲವಾಗಲೀ ನ್ಯಾಯವಿಧಾಯಕ ಸಭೆಯ ಮೆಂಬರುಗಳೊಳಗಿಂದಲೇ ಚುನಾಯಿಸಲ್ಪಡತಕ್ಕದ್ದು. ಪ್ರಧಾನ ಮಂತ್ರಿಯು ರಾಜನಿಗೆ ಒಪ್ಪಿಗೆಯಾಗಬೇಕು. (4) ರಾಜರ ಸಿವಿಲ್‌ಲಿಸ್ಟು ಬಾಬಿನ ಹಣವು ಗೊತ್ತುಮಾಡಲ್ಪಡತಕ್ಕದು ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಅಸಾಧಾರಣವಾದ ಖರ್ಚಾಗಬೇಕಾದರೆ ಅದಕ್ಕೆ ನ್ಯಾಯವಿಧಾಯಕಸಭೆಯ ಒಪ್ಪಿಗೆಯನ್ನು ಪಡೆಯತಕ್ಕದ್ದು (5) ನ್ಯಾಯಾಧಿಪತಿಗಳ ಮಂಡಲವು ಕಾರ್ಯಕಾರಿಮಂಡಲಕ್ಕೆ ಅಧೀನವಾಗಿರಕೂಡದು (6) ಜವಾಬ್ದಾರೀ ಸರ್ಕಾರವನ್ನು ಜಾಹೀರ್ ಮಾಡಿದಾಗಲೇ ಪ್ರಜೆಗಳಿಗೆ ಈ ಕೆಳಗಿನ ಸ್ವಾತಂತ್ರ್ಯಗಳನ್ನು ಕೊಡತಕ್ಕದು. ವ್ಯಕ್ತಿಯ ಮತ್ತು ಆಸ್ತಿಯಸಂರಕ್ಷಣೆ. ಸಭಾಸ್ವಾತಂತ್ರ್ಯ ಭಾಷಣ ಸ್ವಾತಂತ್ರ್ಯ ಮತ್ತು ಲೇಖನ ಸ್ವಾತಂತ್ರ್ಯ. ( ) ಸರ್ಕಾರವು ಅವಶ್ಯಕವಾಗಿ ಜನಾಂಗದಜನರಿಗಾಗಿ ಮಾಡಬೇಕಾದ ಕೆಲಸಕಾರ್ಯಗಳಲ್ಲಿ ವಿದ್ಯಾಭ್ಯಾಸ, ಕೈಗಾರಿಕೆ, ರಾಜ್ಯಸಂರಕ್ಷಣೆ, ಸ್ಥಳೀಯ ಸರ್ಕಾರ ಇವುಗಳು ಮುಖ್ಯವಾದವುಗಳು. ವರ್ಷಕ್ಕೊಂದಾವರ್ತಿ ಆಡಳಿತಗಳ ವರದಿಯು ಒಪ್ಪಿಸಲ್ಪಡಬೇಕು.

(ಮುಂದುವರಿಯುವುದು)

ಬೆಂಗಳೂರು ಗಲಭೆಗಳ ವಿಷಯವಾಗಿ ಸರಕಾರದ ಹುಕುಂ.

ಈ ತಿಂಗಳು 19ನೇ ತಾರೀಖಿನ ಹಿಂದೂ ಪತ್ರಿಕೆಯಲ್ಲಿ ವಿಶ್ವೇಶ್ವರಯ್ಯ ಕಮಿಟಿಯ ರಿಪೋರ್ಟನ್ನು ಸರಕಾರದವರು ಪರಿಶೀಲಿಸುತ್ತಿರುವರೆಂದೂ ಆ ವರದಿಯ ತೀರ್ಮಾನಗಳನ್ನು ಸರಕಾರವು ಒಪ್ಪುವುದಿಲ್ಲವೆಂದೂ, ಗಲಭೆಯು ಪತ್ರಿಕೆಗಳ ಚಳುವಳಿಯಿಂದಲೇ ಆಯಿತೆಂದೂ ಸರಕಾರದವರೂ ಅಧಿಕಾರಿಗಳೂ ಗಲಭೆಯ ದಿನ ರಾತ್ರಿ ಮಾಡಿದ ಬಂದೋಬಸ್ತು ಸರಿಯೆಂದೂ, ಪುಂಡರನ್ನು ದಸ್ತಗಿರಿಮಾಡುವುದಕ್ಕಿಂತ ಶಾಂತಿಸಂರಕ್ಷಣೆಯನ್ನು ಮಾಡುವುದೇ ಆ ದಿನದ ಪ್ರಥಮ ಕರ್ತವ್ಯವಾಗಿತ್ತೆಂದೂ ಮಾರನೆಯದಿವಸ ಆ ಬೀದಿಗೆ ಕಾವಲು ಹಾಕಿದ್ದರಿಂದ ಮನೆಗಳನ್ನು ಶೋಧಿಸ ಬೇಕಾದ ಅಗತ್ಯವಿರಲಿಲ್ಲವೆಂದೂ ಗುಂಡು ಹಾರಿಸಿದ ವಿಷಯವು ಚಂದ್ರರಾಜನ ಕೇಸು ಪತ್ತೆಯಾದ ಮೇಲೆ ದೃಢಪಟ್ಟಿದ್ದರಿಂದ ಸರಕಾರದವರು ಪ್ರಕಟನೆಯನ್ನು ಹೊರಡಿಸಿದಾಗ ಉದ್ದೇಶಪೂರ್ವಕವಾಗಿ ಯಾವ ಸಮಾಚಾರವನ್ನೂ ಬಚ್ಚಿಡಲಿಲ್ಲವೆಂದೂ ಅನಂತರ ಸರಕಾರವು ಕೈಗೊಂಡ ಪ್ರತಿಯೊಂದು ಕಾರ್ಯವನ್ನೂ ಚೆನ್ನಾಗಿ ಪರ್ಯಾಲೋಚಿಸಿಯೇ ಮಾಡಿರುವರೆಂದೂ ಘಟನೆಗಳಿಗೆಲ್ಲಾ ಒಬ್ಬ ಕೋಮುವಾರು ಬಣ್ಣವನ್ನೇ ಕೊಟ್ಟು ಕೆಡಿಸಿರುವರೆಂದೂ ಸರಕಾರದ ಅಧಿಕಾರಿಗಳನ್ನು ಬದಲಾಯಿಸುವುದಕ್ಕೆ ಏನೂ ಕಾರಣ ವಿಲ್ಲವೆಂದೂ ಈಗ ರಾಜಕೀಯ ಸುಧಾರಣೆಗಳು ಅನವಶ್ಯಕವೆಂದೂ ಅಭಿಪ್ರಾಯ ಬರುವಂತೆ ಒಂದು ಲೇಖನವು ಬಂದಿರುವುದು. ಮೈಸೂರು ಸರ್ಕಾರದವರಿಗೆ ಬ್ರಿಟಿಷ್ ಸರ್ಕಾರದವರ ಮತ್ತು ಶ್ರೀಮನ್ಮಹಾರಾಜರವರ ಪೂರ್ಣ ಬೆಂಬಲವಿರುವುದೆಂದೂ ತಿಳಿಸಲ್ಪಟ್ಟಿದೆ.

ಸ್ವರಾಜ್ಯಪತ್ರಿಕೆಯಲ್ಲಿ ಇದಕ್ಕೆ ವಿರುದ್ಧವಾದ ಅಭಿಪ್ರಾಯವೊಂದಿರುವುದು. ಈ ಕಮಿಟಿ ವರದಿಯ ವಿಷಯವಾಗಿ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲರುಗಳಲ್ಲೇ ಭಿನ್ನಾಭಿಪ್ರಾಯ ವಿರುವುದೆಂದೂ ಹಿಂದೂಗಳ ಅಪವಾದನೆಯನ್ನು ದೃಢಪಡಿಸುವ ಪ್ರಯತ್ನವು ನಡೆಯುತ್ತಿದೆಯೆಂದೂ ತಿಳಿದುಬಂದಿದೆ.

ವಿವಿಧ ವಿಷಯಗಳು

ಸನಾತನ ಧರ್ಮ

[illegible]

ಬ್ರಿಟಿಷ್ ಸಾಮ್ರಾಜ್ಯದ [illegible]

[illegible] ಪ್ರಾಂತಕ್ಕೆ 14 [illegible] ಟಿಷ್ ರಾಜ್ಯದ [illegible] 50 [illegible] ದೇಶವಾಸಿಗಳು [illegible] ದ ಆ ದೇಶಗಳ ಪ್ರಜೆಗಳಲ್ಲಿ [illegible] ಸಾಧ್ಯವೇ?

ಉಪನ್ಯಾಸಗಳು.

ರಾಜಧಾನಿಯ ಸಂಸ್ಕೃತ ಕಾಲೇಜಿನಲ್ಲಿ ಈ ತಿಂಗಳು 23ನೇ ತಾ ಬುಧವಾರ [illegible] (1) [illegible] (2) [illegible] ಉಪನ್ಯಾಸ [illegible]

ಗೋರಕ್ಷಣೆಯ ಪ್ರಯತ್ನ

[illegible]

[illegible]

[illegible]

[illegible]

[illegible]







TAI NADU.

Daily Edition.

The Leading Nationalist Daily of Mysore.

Printed and published by P. R. Ramaiya. at Sri Rama Press, D. Subbiah RoadM ysore.

Regd No. M 2322

॥ ವಂದೇ ಮಾತರಂ ।

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { [illegible] / ಪಟ್ಟಣಕ್ಕೆ [illegible]

ಸಂಪುಟ ೧] ಬುಧವಾರ ೨೩ ಜನವರಿ ೧೯೨೯ [ಸಂಚಿಕೆ ೬೩

ಮ|| ನಾಗಪ್ಪನವರ ಕ್ಷಮಾಪಣೆ.

ಆಡಬಾರದ ಮಾತುಗಳನ್ನು ಆಡಿದ್ದಕ್ಕಾಗಿ ವಿಷಾದಪಡುತ್ತೇನೆ.

TAI NADU

23—1—1929

ಸರ್ಕಾರಕ್ಕೆ ಸಲಹೆ

ವಿಶ್ವೇಶ್ವರಯ್ಯ ಕಮಿಟಿಯ ವರದಿಯನ್ನು ಸರ್ಕಾರದವರು ಪರಿಶೀಲಿಸಿದರೆಂಬದಾಗಿಯೂ ಎಗ್ಸಿಕ್ಯುಟಿವ್ ಮೆಂಬರುಗಳಲ್ಲಿಯೇ ಭಿನ್ನಾಭಿಪ್ರಾಯವುಂಟಾಗಿರುವುದಾಗಿಯೂ ಕೆಲವು ಪತ್ರಿಕೆಗಳು ಪಿಸುಗುಟ್ಟಲಾರಂಭಿಸಿವೆ. ಎಗ್ಸಿಕ್ಯುಟಿವ್ ಕೌನ್ಸಿಲ್ಲಿನಲ್ಲಿ ನಡೆದ ವಿದ್ಯಮಾನಗಳು ಆ ಪತ್ರಿಕೆಗಳಿಗೆ ಹೇಗೆ ಮುಟ್ಟಿದವೋ ನಮಗೆ ತಿಳಿಯದು. ಬೆಂಗಳೂರಿನ ಕೆಲವು ಪತ್ರಿಕೆಗಳಲ್ಲಿ ಈಚೀಚೆಗೆ ಬಿಸಿಬಿಸಿ ಸುದ್ದಿಗಳು ಕಾಣಿಸಿಕೊಳ್ಳುತ್ತಿವೆ. ಜನಗಳ ಮನಸ್ಸನ್ನು ಹಾಹಾಕಾರಗೊಳಿಸುವುದೇ ಬಿಸಿಬಿಸಿ ಸುದ್ದಿಗಳ ಪರಿಣಾಮ. ಅವುಗಳಲ್ಲಿ ಯಾವುದೂ ನಿಜವಲ್ಲ. ಇಂದು ಕೇಳಿದ್ದು ನಾಳೆ ಸುಳ್ಳಾಗುತ್ತದೆ. ಪತ್ರಿಕೆಗಳ ಜಾತ್ಮೀದಾರರು ಇಷ್ಟೆಲ್ಲಾ ಸಾಹಸಪ್ರಯೋಗಗಳನ್ನು ಮಾಡುತ್ತಿರುವುದಕ್ಕೆ ಸರ್ಕಾರದವರ ಆಲಸ್ಯವೇ ಕಾರಣ. ಈ ಆಲಸ್ಯವನ್ನೇ ದುರುಪಯೋಗ ಪಡಿಸಿ ಕೆಲವು ಪತ್ರಿಕಾಕರ್ತರುಗಳು ವಿಶ್ವೇಶ್ವರಯ್ಯ ಸಮಿತಿ ವರದಿಯ ಮೇಲೆ ಅಪಿಪ್ರಾಯವುಂಟಾಗುವಂತೆ ಮಾಡುತ್ತಿರುವರು. ವಿಶ್ವೇಶ್ವರಯ್ಯ ವರದಿಯನ್ನು ಸರ್ಕಾರದವರು ತಿರಸ್ಕರಿಸಿರುವರೆಂದೂ ಕಾರ್ಸ್ಟೈರ್ಸರ ಸಿದ್ಧಾಂತವನ್ನೇ ದೃಢಪಡಿಸಿ ವರೆಂದೂ ಬರೆಯುತ್ತಿದಾರೆ. ವರದಿಯನ್ನು ತಿರಸ್ಕರಿಸುವ ಹಾಗಿದ್ದರೆ ಸರ್ಕಾರದವರು ಅದನ್ನು ನೇಮಿಸುತ್ತಿರಲಿಲ್ಲ. ಅದಕ್ಕಾಗಿ 15 000 ರೂಪಾಯಿಗಳನ್ನು ಖರ್ಚುಮಾಡುತ್ತಿರಲಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರಿಗೂ ಅವರ ಸಹೋದ್ಯೋಗಿಗಳಿಗೂ ಅನವಶ್ಯಕವಾದ ತ್ರಾಸವನ್ನು ಕೊಡುತ್ತಿರಲಿಲ್ಲ. ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಪ್ರಯೋಜನವನ್ನು ಸರ್ಕಾರದವರು ಖಂಡಿತವಾಗಿಯೂ ಹೊಂದುವರು. ವಿಶ್ವೇಶ್ವರಯ್ಯ ಕಮಿಟಿಯವರು ತಮ್ಮ ಕೆಲಸವನ್ನು ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ನಿರ್ವಹಿಸಿರುವರು. ವಿಶ್ವೇಶ್ವರಯ್ಯನವರು ತಮ್ಮ ಕೀರ್ತಿಗೆ ಅನುಗುಣವಾಗಿ ಉದಾರವಾದ ಸಲಹೆಗಳನ್ನೇ ಸರ್ಕಾರಕ್ಕೆ ಕೊಟ್ಟಿರುವರು. ಅವರು ಹೇಳಿರುವಂತೆ ನಮ್ಮ ಸಂಸ್ಥಾನದ ಕೋಮುವಾರು ವ್ಯಾಧಿಯು ಈ ದುಷ್ಪರಿಣಾಮಗಳನ್ನು ಉಂಟುಮಾಡಿಲ್ಲ, ಹಿಂದೂ ಮಹಮ್ಮದೀಯ ವಿದ್ವೇಷವು ನಮ್ಮ ಮೈಸೂರಿನಲ್ಲಿಲ್ಲ.

ಅಜಾಗರೂಕತೆಯಿಂದ ನಡೆದ ಕೆಲವು ಘಟನೆಗಳನ್ನು ತಿದ್ದಿಕೊಳ್ಳುವುದು ಸರ್ಕಾರದವರ ಕರ್ತವ್ಯ. ತಾವೇ ಸರ್ವಜ್ಞರು, ತಾವೇ ನಿರ್ದೋಷಿಗಳು, ತಾವು ತಪ್ಪುಮಾಡುವ ಹಾಗೆಯೇ ಇಲ್ಲ. ಆದುದರಿಂದ ಈಗ ತಾವು ಮಾಡಬೇಕಾದುದೇನೂ ಇಲ್ಲ ಹಿಂದೆ ಮಾಡಿದ್ದೇ ಸರಿಯಾಗಿದೆ ಎಂದು ಸರ್ಕಾರದವರು ಹೇಳುವುದು ಯೋಗ್ಯವಲ್ಲ ವಿಶ್ವೇಶ್ವರಯ್ಯ ಕಮಿಟಿಯವರು ಸೂಚಿಸಿರುವ ತಿದ್ದುಪಾಟುಗಳನ್ನು ಮಾಡಿ ದುಸ್ತರವನ್ನು ಪುನಃ ತಲೆಯೆತ್ತದಂತೆ ಶಿಕ್ಷಿಸಿ, ಶಾಂತಿಸ್ಥಾಪನೆ ಮಾಡಿ ಪ್ರಜಾಭಿವೃದ್ಧಿಗೆ ಸಾಧ [illegible] ಈಗ

ವಿವಿಧ ವಿಷಯಗಳು

ಲಾಲಾಜಿಯವರ ಸ್ಮಾರಕ

ಹಿಂದೂ ಮಹಾಸಭೆಯವರು ದಿವಂಗತರಾದ ಲಾಲಾ ಲಜಪತ್ ರಾಯರು ಮತ್ತೊಂದು ಸ್ಮಾರಕವನ್ನು ನಿರ್ಮಿಸುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳ ಚಂದಾ ಸೇರಿಸಬೇಕೆಂದಿರುವರು.

ಬ್ಯಾಂಡಿನ ನಿಷೇಧ

ಸೂರತ್ತಿನಲ್ಲಿ ಮಸೀತಿಗಳ ಮುಂದೆ ಬ್ಯಾಂಡ್ ಬಾರಿಸಕೂಡದೆಂದೂ, ಡೋಲು ಮುಂತಾದ ಇತರ ವಾದ್ಯಗಳನ್ನು ಬಾರಿಸಬಹುದೆಂತಲೂ ಅಲ್ಲಿನ ಮ್ಯಾಜಿಸ್ಟ್ರೇಟರು ಹುಕುಂ ಮಾಡಿರುವರು. ಇದರ ಜೊತೆಗೆ ಮೊಹರಮ್ಮಿನ ಏಳನೇ ದಿನ ಮಸೀತಿ ಎದುರಿಗಿರುವ ಹನುಮಂತರಾಯನ ಗುಡಿಯಲ್ಲಿ ರಾತ್ರಿ ಹತ್ತು ಗಂಟೆಯವರಿಗೆ ವಾದ್ಯಗಳನ್ನೂ, ಮಂತ್ರೋಚ್ಚಾರಣೆಯನ್ನೂ ನಿಷೇಧಿಸಿರುವರು.

ನಂಬಿಕೆ ದ್ರೋಹಕ್ಕಾಗಿ ಸಜಾ.

ಬೊಂಬಾಯಿ ಇಂಪೀರಿಯಲ್ ಬ್ಯಾಂಕಿನ ಮಾಜಿ ಸೂಪರಿಂಟೆಂಡೆಂಟರಾದ ಮ|| ರಾ|| ಎಸ್ ಜಿ. ರಣಜಿತ್ ಎಂಬುವರಿಗೆ ಸುಮಾರು ಒಂದೂವರೆಲಕ್ಷ ರೂಪಾಯಿಗಳ ವರೆಗೆ ಸುಳ್ಳು ಲೆಖ್ಖಗಳನ್ನು ಕೊಟ್ಟಿರುವರೆಂದು ಆಪಾದನೆಯ ಮೇಲೆ ನಾಲ್ಕು ವರ್ಷಗಳ ಕಠಿಣ ಸಜವು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರಿಂದ ವಿಧಿಸಲ್ಪಟ್ಟಿತು.

ಸ್ಕೌಟ್ ಸಪ್ತಾಹ

ಜನವರಿ 22 ನೇ ತಾ|| ನಿಂದ ಫೆಬ್ರವರಿ 3 ನೇ ತಾರೀಖಿನವರೆಗೆ ಬೆಂಗಳೂರಿನಲ್ಲಿ ಒಂದು ಸ್ಕೌಟು ಸಪ್ತಾಹವು ನಡೆಯುತ್ತದೆ.

ಒಬ್ಬ ಶ್ರೀಮಂತಳ ಕೊಲೆ

ಹೌರದಲ್ಲಿ ಲೇವಾದೇವಿಯಿಂದಲೇ ಜೀವನ ಮಾಡುತ್ತಿದ್ದ ಒಬ್ಬ ಶ್ರೀಮಂತಳ ಅಂಗಾಂಗಳನ್ನೆಲ್ಲಾ ಕತ್ತರಿಸಿ ಒಂದು ಟ್ರಂಕಿನಲ್ಲಿಟ್ಟು ಮಗ್ಗಲಲ್ಲಿದ್ದ ಕೆರೆಯಲ್ಲಿ ಬಿಸಾಡಿದ್ದ 4 ಜನ ಗಂಡಸರೂ ಒಬ್ಬ ಹೆಂಗಸೂ ದಸ್ತಗಿರಿ ಮಾಡಲ್ಪಟ್ಟು ಅಪಾರವಾದ ಕಳುವಿನ ಪದಾರ್ಥಗಳು ದೊರಕಿವೆ.

ಶ್ರೀ ಭಗವನ್ನುಪೋಲಾಸಿನೀ ಸಭಾ, ಮೇಲುಕೋಟೆ.

ಶ್ರೀ ವೈರಮುಡಿ ಬ್ರಹ್ಮೋತ್ಸವದಲ್ಲಿ ಸ್ಥಳಾಂತರಗಳಿಂದ ಭಗವದ್ದರ್ಶನಾರ್ಥವಾಗಿ ದಯಮಾಡಿಸುವ ಜನಗಳಿಗೆ ಯಾದವಗಿರಿ (ಮೇಲುಕೋಟೆ) ದಿವ್ಯ ಕ್ಷೇತ್ರದಲ್ಲಿ ರಾತ್ರಿ ಕಾಲದ ಸಮಾರಾಧನೆ ನಡೆಸಲು ಆಸ್ತಿಕ ಮಹಸೀಯರೆಲ್ಲರೂ ಇದಕ್ಕೆ ಅವರ ಶಕ್ತ್ಯಾನುಸಾರ ಸ್ವಹಸ್ತ ಪರಹಸ್ತಗಳಿಂದ ಸಹಾಯಮಾಡುವುದಲ್ಲದೆ, ತದೀಯರಾಧನೆಯನ್ನು ಸಂಭ್ರಮದಿಂದ ನಡೆಸಲು ಪ್ರೋತ್ಸಾಹಿಸಿ ಈ ಆನಂದಕ್ಕೆ ಎಲ್ಲರೂ ಪಾತ್ರರಾಗಬೇಕೆಂದು ಸಭೆಯವರು ಪ್ರಾರ್ಥಿಸಿರುತ್ತಾರೆ.

ಬಂಧಿಸಿರುವ ಪತ್ರಿಕೆಗಳಿಗೆಲ್ಲಾ ಬಂಧನವನ್ನು ತೆಗೆದು ನ್ಯಾಯಮಾರ್ಗದಲ್ಲಿ ಆಡಳಿತವನ್ನು ನಡೆಸುವರೆಂದು ನಂಬುತ್ತೇವೆ.

ಮ|| ನಾಗಪ್ಪನವರ ಕ್ಷಮಾಪಣೆ

21-1-29ರಲ್ಲಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಧ್ಯಾಹ್ನ ೨ ಘಂಟೆ ಸಮಯದಲ್ಲಿ ಬಿ. ನಾಗಪ್ಪನವರು ಶ್ರೀ. ಎಲ್. ಎಸ್, ರಾಜೂರವರಿಗೂ ಅವರ ತೀರ್ಥರೂಪರಿಗೂ ಕ್ಷಮಾಪಣಾ ಪತ್ರವನ್ನು ಬರೆದುಕೊಟ್ಟು ಪರಸ್ಪರ ರಾಜೀಮಾಡಿಕೊಂಡರು. ಶಾಂತಿ ಸ್ಥಾಪನೆಯಲ್ಲಿ ಮ|| ಗಳಾದ ಶೇಷಾಚಾರ್ಯರೂ ಬಿ, ಕೆಂಪಣ್ಣನವರೂ ಡಿ ಕಾ[illegible] ರಾಯರೂ ಮತ್ತು ಸಿಟಿ ಮ್ಯಾಜಿಸ್ಟ್ರೇಟರೂ ಸಹಾಯಕರಾದರು. ಮ|| ನಾಗಪ್ಪನವರ ಕೀರ್ತಿಯು ಅವರ ಕ್ಷಮಾಪಣೆಯಿಂದ ಇನ್ನೂ ಹೆಚ್ಚಿರುತ್ತೆಂದು ಶ್ರೀ. ಎಲ್. ಎಸ್. ರಾಜೂರವರು ಹೇಳಿದರು.

ಮ|| ರಾ|| ನಾಗಪ್ಪನವರ ಕ್ಷಮಾಪಣೆ

ಈ ತಿಂಗಳು 21 ನೇ ತಾ|| ನಲ್ಲಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟು ಪ್ರೇಕ್ಷಕರಿಂದ ತುಂಬಿತ್ತು. ಸಾಕ್ಷಿ ಕೊಡುವುದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು ಬರುವರೆಂದು ಕಾದ ಕೊಂಡಿದ್ದರು. ಆದರೆ ಈ ರೊಳಗೆ ನಾಗಪ್ಪನವರ ಲಾಯರಾದ ಶೇಷಾಚಾರ್ಯರು ಎಲ್ಲರಿಗೂ ಆಶ್ಚರ್ಯವಾಗುವಂತೆ ನಾಗಪ್ಪನವರ ಕ್ಷಮಾಪಣೆಯನ್ನು ರಾಜೂರವರ ಕೈಯಲ್ಲಿ ಕೊಟ್ಟರು.

ಕ್ಷಮಾಪಣೆಯ ವಿವರವೇನೆಂದರೆ "ಮ|| ರಾಜೂರವರೇ, ನಿಮ್ಮಲ್ಲಿಯೂ ನಿಮ್ಮ ತಂದೆಗಳಲ್ಲಿಯೂ ನನಗೆ ಅತ್ಯಂತ ಗೌರವ. ವಾಸ್ತವ್ಯವಾಗಿ ನಿಮ್ಮ ತಂದೆಯವರು ಯಾವಾಗಲೂ ನನ್ನ ಹಿತೈಷಿಗಳಾಯೇ ಇದ್ದಾರೆ. ಅವರ ದಯೆಯನ್ನು ನಾನು ಮರೆಯಲಾರೆ. ನನ್ನ ಮೇಲೆ ನಿಮಗೆ ಕೋಪಬಂದಿರುವುದು ನನ್ನ ದುರದೃಷ್ಟ. ನಿಮ್ಮ ವಿಷಯವಾಗಿ ನಾನು ಆಡಬಾರದ ಮಾತುಗಳನ್ನು ಆಡಿದ್ದಕ್ಕಾಗಿ ಮನಃಪೂರ್ವಕವಾಗಿ ವಿಷಾದಪಡುತ್ತೇನೆ. ನಿಮ್ಮ ಹೆಸರನ್ನು ಕೆಡಿಸಬೇಕೆಂಬ ಇಚ್ಛೆಯು ನನಗೆ ಸ್ವಲ್ಪವೂ ಇರಲಿಲ್ಲವೆಂಬುದನ್ನು ನಿಮಗೆ ಭರವಸೆ ಮಾಡಿ ಹೇಳುತ್ತೇನೆ. ವಂದನೆ ಮತ್ತು ಕ್ಷಮೆ [illegible]

ಚುನಾವಣೆಗಳು.

ಮ|| ರಾ|| ಡಿ. ವಿ. ಹಾಲಪ್ಪನವರು ಬೀರೂರು ಮುನಿಸಿಪಲ್ ಕೌನ್ಸಿಲ್ಲಿಗೂ ಮಿ|| ಸೈಯದ್ ಅಹಮದ್ ಸಾಹೇಬರವರು ಚಿಂತಾಮಣಿ ಮುನ್ಸಿಪಲ್ ಕೌನ್ಸಿಲ್ಲಿಗೂ ಉಪಾಧ್ಯಕ್ಷರುಗಳಾಗಿ ಚುನಾಯಿಸಲ್ಪಟ್ಟಿರುವರು.

ಡಿಸ್ಟ್ರಿಕ್ಟ್ ಬೋರ್ಡ್.

ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಮ|| ಎಸ್. ವಿ. ಚಿಕ್ಕಸುಬ್ಬರಾಯಪ್ಪನವರ ಸ್ಥಾನದಲ್ಲಿ. ಮ|| ರಾ|| ಎಸ್. ವೆಂಕಟರಾಯರು ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

ಅರಸೀಕೆರೆ ಮುನಿಸಿಪಾಲಿಟಿ.

ಅರಸೀಕೆರೆ ಮುನಿಸಿಪಾಲಿಟಿಗೆ ಮ|| ರಾ|| ಗಳಾದ ಕೋಳ ನರಸಿಂಹ ಶೆಟ್ಟಿಯವರೂ, ಹೆಚ್. ಹೈದರ್ ಸಾಹೇಬರವರೂ ಚುನಾವಣೆಯಿಂದಲೂ ಮತ್ತು ಮ|| ರಾ|| ಕುಮುಟಿ ರಾಜಮಲ್ ರವರು ನಾಮಿನೇಷನ್ನಿಂದಲೂ ಮೆಂಬರುಗಳಾಗಿರುತ್ತಾರೆ.

ತಾ ಯಿ ನಾ ಡು.

23—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

(ಮುಂದುವರಿದುದು.)

ಇಂಡಿಯಾ ದೇಶದ ಮುಂದಿನ ಅಭಿವೃದ್ಧಿಯ ಜವಾಬ್ದಾರಿಯ ಭಾರ ಬ್ರಿಟಿಷ್ ಸಂಸ್ಥಾನದ ಮೇಲೆ ಬಿದ್ದಿದೆ. ಇಂಡಿಯಾದೇಶದ ಪ್ರಾಂತ್ಯಗಳಿಗೂ ಸಂಸ್ಥಾನಗಳಿಗೂ ಒಟ್ಟಿಗೆ ಜವಾಬ್ದಾರೀಸರ್ಕಾರವನ್ನು ಏರ್ಪಡಿಸುವ ಕೆಲಸವು ಅವರ ಕೈಯಲ್ಲಿದೆ ಬ್ರಿಟಿಷ್ ಜನಗಳಲ್ಲನೇಕರು ಇದನ್ನು ವಿರೋಧಿಸಬಹುದು. ವಿರೋಧಬರದಂತೆ ರಾಜಿಯನ್ನು ಮಾಡಿಕೊಳ್ಳಬಹುದು ನ್ಯಾಯವಾದನು. ಬ್ರಿಟಿಷ್ ಜನಗಳಿಗೆ ಇಂಡಿಯಾದೇಶದಲ್ಲಿ ಉದ್ಯೋಗವನ್ನು ಕೊಡುವುದಕ್ಕೂ, ಬ್ರಿಟಿಷ್ ಕೈಗಾರಿಕೆ ವ್ಯಾಪಾರ ಆದಿರ ಸಾಲಸೋಲಗಳ. ಇವುಗಳಿಗೆಲ್ಲಾ ಸಂರಕ್ಷಣೆಯನ್ನು ಕೊಡುವುದಕ್ಕೂ ನಾವು ಖಾತರಿಯನ್ನು ಕೊಡಬೇಕು ಆದರೆ ಖಾತರಿಯು ನಮ್ಮ ಡೊಮಿನಿಯನ್ ಸ್ವರಾಜ್ಯ ರಚನೆಗೆ ವಿರೋಧವಾಗಿಯಾಗಲಿ ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಭಂಗಬರ ವಂತೆಯಾಗಲಿ, ನಮ್ಮ ದೇಶಾಭ್ಯುದಯಕಾರ್ಯಗಳಿಗೆ ಅಡ್ಡಿಯಾಗುವಂತೆಯಾಗಲಿ ಇರಕೂಡದು. ಈ ಪ್ರಕಾರವಾಗಿ ಇಂಡಿಯಾದ ಡೊಮಿನಿಯನ್ ಸ್ವರಾಜ್ಯರಚನೆಯಲ್ಲಿಯೂ ಬ್ರಿಟಿಷ್‌ರಿಗೆ ಅವರಿಗೆ ಸಲ್ಲಬೇಕಾದ ನ್ಯಾಯವು ದೊರೆಯುವಂತೆ ಮಾಡಬಹುದು ಈ ಖಾತರಿಗಳಿಂದ ಇಂಡಿಯಾದೇಶಕ್ಕೆ ಅಲ್ಪ ಸ್ವಲ್ಪ ನಷ್ಟವಾದರೂ ಒಟ್ಟಿನಲ್ಲಿ ದೇಶಾಭ್ಯುದಯಕಾರ್ಯಗಳು ಸಲಲಿತವಾಗಿ ನಡೆಯುವುದಕ್ಕೆ ಅವಕಾಶ ದೊರೆಯುವುದರಿಂದ ಲಾಭವೇ ಆಗುವುದು. ಈಗಿಂತಲೂ ದೇಶಾಭ್ಯುದಯವು ಎರಡರಷ್ಟು ಮೂರರಷ್ಟು ಹೆಚ್ಚಾಗಿ ಆಗಬಹುದು. ಇಂಡಿಯಾದೇಶಕ್ಕೆ ಈಗಲೇ ಡೊಮಿನಿಯನ್ ಸ್ವರಾಜ್ಯವನ್ನು ಕೊಡುವುದರಿಂದ ಬ್ರಿಟಿಷ್‌ರಿಗೂ ಲಾಭವುಂಟು. ಇಂಡಿಯಾ ಮತ್ತು ಇಂಗ್ಲೆಂಡ್ ಎರಡು ದೇಶಗಳಿಗೂ ಸ್ಥಿರವಾದ ಸಹಕಾರವು ಬೇರೂರಬೇಕಾದರೆ ಎರಡೂ ದೇಶಗಳ ಅಭಿವೃದ್ಧಿಯು ಚೆನ್ನಾಗಿಬೇಕು ಈ ಸಹಕಾರವು ತಮ್ಮ ಹಿತಕ್ಕೆ ಸಾಧಕವಾಗುವುದೆಂದು ಎರಡು ದೇಶಗಳವರಿಗೂ ಮನದಟ್ಟಾಗಬೇಕು. ಈಗಿರುವಂತೆಯೇ ಬ್ರಿಟಿಷ್ ಸರ್ಕಾರಕ್ಕೂ ಇಂಡಿಯಾದೇಶಕ್ಕೂ ವೈಮನಸ್ಯವು ಹೆಚ್ಚಾಗುತ್ತಾ ಹೋದರೆ ಬ್ರಿಟಿಷ್‌ರು ಇಂಡಿಯಾದೇಶವನ್ನು ಮುಂದಕ್ಕೆ ಸೈನ್ಯದಿಂದಲೇ ಆಳಬೇಕಾಗುತ್ತದೆ. ಎರಡು ಜನಾಂಗಕ್ಕೂ ವಿದ್ವೇಷವು ಹೆಚ್ಚಾಗುವುದು. ಬ್ರಿಟಿಷ್ ಸರಕುಗಳು ಬಹಿಷ್ಕರಿಸಲ್ಪಡುವುವು. ಬಹಿಷ್ಕಾರವು ಪ್ರಬಲವಾಗುವುದು. ಬ್ರಿಟಿಷ್‌ರ ವ್ಯಾಪಾರ ಮತ್ತು ಉದ್ಯೋಗಗಳು ಬಹಳ ನಷ್ಟವನ್ನು ಹೊಂದುವುವು, ಬ್ರಿಟಿಷ್ ವ್ಯಾಪಾರಕ್ಕೆ ಭಾರತೀಯರ ಸ್ನೇಹವು ಅತ್ಯಂತ ಸಹಕಾರಿಯಾದುದು. ಶಾಂತಿಯೂ ಸಮೃದ್ಧಿಯೂ ಬೇರೂರಬೇಕಾದರೆ ಇಂಡಿಯಾ ದೇಶಕ್ಕೆ ಬ್ರಿಟಿಷ್‌ರು ರಾಜಕೀಯ ಸ್ವಾತಂತ್ರ್ಯವನ್ನು ಕೊಟ್ಟೇ ಕೊಡಬೇಕಾಗುವುದು, ಬ್ರಿಟಿಷ್‌ರಿಗೆ ಇದು ಒಳ್ಳೆಯ ಅವಕಾಶವಿದೆ. ಇದನ್ನು ಉಪಯೋಗಿಸಿಕೊಳ್ಳುವರೋ ಅಥವ ಕಳೆದುಕೊಳ್ಳುವರೋ? ಇದಕ್ಕೆ ಬ್ರಿಟಿಷ್‌ರೇ ಉತ್ತರವನ್ನು ಹೇಳಬೇಕು. ಬ್ರಿಟಿಷ್ ಸರ್ಕಾರದವರು ಡೊಮಿನಿಯನ್ ಸ್ವರಾಜ್ಯವನ್ನು ಕೊಟ್ಟು ಈ ದೇಶದ ವ್ಯಾಪಾರವನ್ನೂ ಕೈಗಾರಿಕೆಗಳನ್ನೂ ಹೆಚ್ಚಿಸಿದರೆ ಯೂರೋಪಿನ್ನರಿಗೂ ಭಾರತೀಯರಿಗೂ ಸ್ನೇಹವು ಬಲಿಯುವುದು ಬ್ರಿಟಿಷ್ ಬಂಡವಾಳಸ್ಥರಿಗೂ ಇಂಡಿಯಾದೇಶದಲ್ಲಿ ತಮ್ಮ ಬಂಡವಾಳವನ್ನು ಹಾಕಿ ಈ ದೇಶದ ಸಂಪತ್ತನ್ನು ಹೆಚ್ಚಿಸಿ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಅವಕಾಶವಾಗುವುದು ಬ್ರಿಟಿಷ್ ಜನಗಳಿಗೂ ಇಲ್ಲಿ ಉದ್ಯೋಗವು ದೊರೆಯುವುದು.

ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ದೇಶೀಯ ಸಂಸ್ಥಾನಗಳ ವಿಷಯವಾಗಿ ಚರ್ಚೆ ಯಾದಾಗ ಸೈಮನ್ ಕಮಿಷನ್ ಮತ್ತು ಬಟ್ಲರ್ ಕಮಿಟಿಯ ವರದಿಗಳು ಬಂದ ಹೊರತು ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾಕ್ಕೂ ಸಾಮ್ರಾಜ್ಯ ಸರಕಾರಕ್ಕೂ ಯಾವ ಸಂಬಂಧವಿರಬೇಕೆಂದು ನಿರ್ಧರಿಸುವುದಕ್ಕಾಗುವುದಿಲ್ಲ ಎಂದು ವೈಕೌಂಟ್‌ಪೀಲ್ ಸಾಹೇಬರವರು ಹೇಳಿದರು. ಇಂಡಿಯಾ ಸರಕಾರಕ್ಕೂ ದೇಶೀಯ ಸರಕಾರಗಳಿಗೂ ಯಾವ ಸಂಬಂಧವಿರಬೇಕೆಂಬುದನ್ನು ಈಗಲೇ ನಿರ್ಧರಿಸುವುದಕ್ಕಾಗುವುದಿಲ್ಲ ಎಂದೂ ತಿಳಿಸಿದರು. ಈಗಿನ ಕಾಲಸ್ಥಿತಿಗನುಗುಣವಾಗಿ ರಾಜಕೀಯ ಸುಧಾರಣೆಗಳನ್ನು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಜಾರಿಗೆ ತರಬೇಕೆಂದು ರಾಜರುಗಳಿಗೆ ತಿಳಿಸಿರುವುದಾಗಿಯೂ ಹೇಳಿದರು. ಆದುದರಿಂದ ಆ ಕಮಿಷನ್ ಮತ್ತು ಆ ಕಮಿಟಿಯ ವರದಿಯು ಬರುವವರೆಗೂ ಬ್ರಿಟಿಷ್ ರಾಜನೀತಿಜ್ಞರು ಏನೂ ಮಾಡುವುದಿಲ್ಲ ನಿಜವಾದ ಪರಿಸ್ಥಿತಿಯೇನು? ನಮ್ಮ ದೇಶಕ್ಕೆ ಬೇಕಾದುದುದೇನು ಎಂಬುದೆಲ್ಲಾ ಅವರಿಗೆ ಗೊತ್ತೇ ಇದೆ. ನಿಜವಾಗಿಯೂ ಅವರಿಗೆ ನಮ್ಮ ದೇಶದ ಹಿತದಲ್ಲಿ ದೃಷ್ಟಿ ಇದ್ದರೆ ಮುಖ್ಯವಾದ ಕೆಲವು ಹೆಗ್ಗುರುತುಗಳನ್ನು ಹಾಕಿ ಅವುಗಳನ್ನು ವಿಶಾಲಪಡಿಸಿ ವರದಿಯನ್ನು ಕೊಡುವಂತೆ ಕಮಿಷನ್‌ನನ್ನು ನೇಮಿಸುತ್ತಿದ್ದರು. 1917 ರಲ್ಲಿ ಡೊಮಿನಿಯನ್ ಸರ್ಕಾರದ ಆದರ್ಶವು ನಮ್ಮ ಮುಂದೆ ಇಡಲ್ಪಟ್ಟಿತು. ಆದರೆ ನಮ್ಮ ದೇಶೀಯರನ್ನು ಯಾರನ್ನೇ ಆಗಲಿ ಇತರ ಡೊಮಿನಿಯನ್‌ಗಳಿಗೆ ಕಳುಹಿಸಿ ಅಲ್ಲಿ ಅಲ್ಲಿನ ಸರ್ಕಾರಗಳು ಹೇಗೆ ನಡೆಯುತ್ತಿವೆ ಎಂಬುದನ್ನು ನೋಡಿ ತಿಳಿದುಕೊಂಡು ಬರುವುದಕ್ಕೆ ಕೂಡ ಏರ್ಪಾಡು ಮಾಡಲಿಲ್ಲ. ಸರ್ಕಾರದ ಪ್ರಕಟನೆಗಳಲ್ಲಿಯೂ ಹೇಳಿಕೆಗಳಲ್ಲಿಯೂ ಡೊಮಿನಿಯನ್ ಸರ್ಕಾರವೆಂಬ ಹೆಸರನ್ನೇ ಹೇಳುವುದಿಲ್ಲ. ಈ ರೀತಿಯಾಗಿ ಬ್ರಿಟಿಷ್ ಸರ್ಕಾರದವರು ಬೇಕು ಬೇಕೆಂದು ಉದ್ದೇಶ ಪೂರ್ವಕವಾಗಿ ಇಂಡಿಯಾ ದೇಶದ ರಾಜಕೀಯ ಅಭಿವೃದ್ಧಿಯನ್ನು ತಡೆಗಟ್ಟಿ ಭಾರತೀಯರ ಮನಸ್ಸನ್ನು ನೋಯಿಸಿದ್ದಾರೆ. ಸೈಮನ್ ಕಮಿಷನನ್ನು ನೇಮಿಸಿದ ಕಾಲದಲ್ಲಿ ಆಶೆಯನ್ನಾಗಲಿ ಪ್ರೋತ್ಸಾಹವನ್ನೇ ಆಗಲಿ ಕೊಡುವ ಒಂದು ಮಾತಾದರೂ ಇರಲಿಲ್ಲ ಕಳೆದ್ದು ಕಳೆದುಹೋಗಲಿ ಮುಂದಾದರೂ ವರದಿಗಳು ಬಂದ ಮೇಲೆ ಬ್ರಿಟಿಷ್ ಸರ್ಕಾರದವರು ಭಾರತೀಯರಲ್ಲಿ ಮುಖ್ಯರಾದವರನ್ನು ಸೇರಿಸಿ ಒಂದು ರೌಂಡ್‌ಟೇಬಲ್ ಕಾನ್ಫರೆನ್ಸನ್ನು ಮಾಡಿ ಶಾಶ್ವತವಾಗಿರುವ ಒಂದು ರಾಜಕೀಯ ರಚನೆಯನ್ನು ಏರ್ಪಡಿಸುವರೆಂದು ಆಶಿಸಲ್ಪಟ್ಟಿದೆ. ಯಾವ ರಚನೆಯನ್ನೇ ಮಾಡಲಿ ಈ ಕೆಳಗಿನ ಮುಖ್ಯವಾದ ಅಂಶಗಳು ಅದರಲ್ಲಿ ಅಡಕವಾಗಿರಬೇಕು.

(1) ಬ್ರಿಟಿಷ್ ಪ್ರಾಂತ್ಯಗಳನ್ನೂ ದೇಶೀಯ ಸಂಸ್ಥಾನಗಳನ್ನೂ ಸೇರಿಸಿ ಒಂದು ಫೆಡರಲ್ ರಚನೆ.

(2) ಸಂಸ್ಥಾನಗಳಲ್ಲಿ 5 ವರುಷಗಳೊಳಗಾಗಿ ಜವಾಬ್ದಾರಿ ಸರ್ಕಾರವನ್ನು ಏರ್ಪಡಿಸಬೇಕೆಂಬ ನಿಬಂಧನೆ

(3) ಬ್ರಿಟಿಷ್ [illegible] ಜವಾಬ್ದಾರಿ [illegible] (4) ದೇಶೀಯ [illegible] ಅಧಿಕಾರಿಗಳು [illegible]

[illegible]

ಭಾರತೀಯ [illegible] ಅಭಿವೃದ್ಧಿಗಾಗಿ ಕೆಲಸ ಮಾಡತಕ್ಕದ್ದು [illegible] ಅಭಿವೃದ್ಧಿಯು [illegible] ಜವಾಬ್ದಾರಿ ಸರ್ಕಾರವು [illegible] ಗುವುದು. ದೇಶದ [illegible] ಕಮಿಷನ್ನು [illegible]

ಪ್ರಜೆಗಳು ಮತ್ತು ಪ್ರಭುಗಳು.

ದೇಶೀಯ ಸಂಸ್ಥಾನಗಳಲ್ಲಿ [illegible] ಬ್ರಿಟಿಷ್ ಇಂಡಿಯಾದ [illegible] ಜವಾಬ್ದಾರಿ ಸರ್ಕಾರವನ್ನು [illegible] ದೇಶೀಯ ಸಂಸ್ಥಾನದ [illegible] ಬ್ರಿಟಿಷ್ ಸರ್ಕಾರಕ್ಕೆ [illegible] ಕೋರಿಕೆಗಳು [illegible]. ದೇಶೀಯ ಸಂಸ್ಥಾನಗಳ ಜವಾಬ್ದಾರಿ ಸರ್ಕಾರವು [illegible] ಬ್ರಿಟಿಷ್ [illegible] ಯಾಕ್ಕೆ ಜವಾಬ್ದಾರಿ ಸರ್ಕಾರವು [illegible] ವಾಗಿರಬಾರದೆಂಬುದನ್ನು [illegible] ಬ್ರಿಟಿಷ್ ಸರ್ಕಾರ [illegible] ತಿಳಿಸತಕ್ಕದ್ದು. ಅನೇಕ ದೇಶೀಯ ಸಂಸ್ಥಾನಗಳಲ್ಲಿ [illegible] ಪ್ರಜಾಸಂಘಗಳು ಏರ್ಪಟ್ಟಿವೆ. ಅವರ [illegible] ದೇಶೀಯ ಸಂಸ್ಥಾನಗಳ ಪ್ರಜೆಗಳ [illegible] ಚಾರವನ್ನೇ ಮಾಡುವುದಕ್ಕೆ [illegible] ಬೇಕಾಗಿರಬೇಕು. ಈ ಸಂಸ್ಥೆಯ [illegible] ಗದಲ್ಲಿಯೂ ದೇಶದ [illegible] ವನ್ನು ನಡೆಸಬೇಕು. [illegible] ಸಂಸ್ಥಾನಗಳ ಪ್ರಜೆಗಳ [illegible] ಕೈಗೊಳ್ಳಬೇಕು [illegible] ಕಾರ್ಯ [illegible] ದೇಶಕ್ಕೆ [illegible] ಸಂಸ್ಥಾನಗಳಿಗೆ ಜವಾಬ್ದಾರಿ ಸರ್ಕಾರವು [illegible] ಪೂರ್ತಿಯಾಗಲಿಲ್ಲ. ಆ ಜವಾಬ್ದಾರಿಯ [illegible] ರವಾಗಿ ನಿಲ್ಲುವುದಕ್ಕೆ [illegible] ನಾವು ಮಾಡಬೇಕು.

Printed and published by P. R. Ramaiya. at Sri Rama Press, D. Subbiah Road Mysore.

Regd No. M 2322 ॥ ವಂದೇ ಮಾತರಂ ॥ ಮೂರು ಪ್ರತಿ ಕಾಸಿಗೆ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ.
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಪಟ್ಟಣಕ್ಕೆ ೧೨-೦-೦

ಸಂಪುಟ ೧] ಗುರುವಾರ ೨೪ ಜನವರಿ ೧೯೨೯ [ಸಂಚಿಕೆ ೯೩

ಅಹಮದಾಬಾದಿನಲ್ಲಿ ವಿದ್ಯಾರ್ಥಿಗಳ ಮುಷ್ಕರದಿಂದ ಸ್ಕೂಲು ಕಾಲೇಜುಗಳು ಬರಿದಾಗಿರುವವು!

ಬರ್ಡೋಲಿ ಸತ್ಯಾಗ್ರಹದ ವೀರರಾದ ವಲ್ಲಭಭಾಯಿ ಪಟೇಲರವರು ವಿದ್ಯಾರ್ಥಿಗಳ ಸತ್ಯಾಗ್ರಹದ ಸೇನಾನಾಯಕರಾಗುವರು.

TAI NADU

24—1—1929

ಕೋಮುವಾರು ದುರಭಿಮಾನದ ಪರಿಹಾರ.

ನಾಳೆಯ ದಿನ ಸಾಯಂಕಾಲ ಮೈಸೂರು ಮಹಾರಾಜಾಕಾಲೇಜಿನ ಕರ್ನಾಟಕ ಸಂಘದಲ್ಲಿ ಮೇಲ್ಕಂಡ ವಿಷಯವಾಗಿ ವಾಗ್ವಾದಗಳು ನಡೆಯುವುವು. ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮ|| ಕೆ. ಶಂಕರನಾರಾಯಣರಾಯರು ಅಧ್ಯಕ್ಷತೆಯನ್ನು ವಹಿಸುವರು. ನಮ್ಮ ಸಂಸ್ಥಾನದ ತರುಣರು ಈ ತರಹದ ಲೋಕಹಿತಕ್ಕೆ ಸಾಧಕವಾದ ವಿಷಯಗಳನ್ನು ಚರ್ಚಿಸಿ ದೇಶದಲ್ಲಿ ಒಗ್ಗಟ್ಟು ನೆಲೆಸುವಂತೆ ಮಾಡುವುದು ಶುಭಸೂಚನೆ. ಇಂಡಿಯಾ ದೇಶದಲ್ಲೆಲ್ಲಾ ಯುವಕರು ನವಚೈತನ್ಯದಿಂದ ಭರಿತರಾಗಿ ನವಯುಗದ ಮಂಗಳದಿನಗಳ ಆಗಮನೋದಯವನ್ನು ಸೂಚಿಸುತ್ತಿರುವರು. ನಮ್ಮ ದೇಶದ ಕೆಲವು ಜನ್ಮಹಿರಿಯರು ಕೋಮುವಾರು ದುರಭಿಮಾನದ ಗೊಂದಲಕ್ಕೆ ಬಿದ್ದು ದೇಶದ ಏಳಿಗೆಗೆ ಕೊಡಲೀ ಕಾವುಗಳಾಗಿರುವರು. ನಮ್ಮ ತರುಣರ ಆದರ್ಶ ಅಭಿಪ್ರಾಯಗಳು ಹಿರಿಯರಲ್ಲಿ ಪರಸ್ಪರ ಸ್ನೇಹವನ್ನೂ ಅನ್ಯೋನ್ಯತೆಯನ್ನೂ ಬೆಳೆಸಲೆಂದು ಆಶಿಸುತ್ತೇವೆ. ಕೆಳಗಿನ ಮಸೂದೆಯನ್ನು ನಮ್ಮ ವಾಚಕರ ಅವಗಾಹನೆಗಾಗಿ ಬೇರೆ ಕಡೆ ಕೊಟ್ಟಿರುವೆವು.

ಮೈಸೂರಿನ ಪರಿಸ್ಥಿತಿ

ಒಬ್ಬ ಮದ್ರಾಸ್ ಮುಖಂಡರ ಅಭಿಪ್ರಾಯ,

ಮೈಸೂರಿನ ದಿವಾನ್ ಬಹದ್ದೂರ್ ಎಂ. ರಾಮಚಂದ್ರರಾಯರವರು ಈಗಿನ ಪರಿಸ್ಥಿತಿಯ ವಿಷಯವಾಗಿ ಮದ್ರಾಸಿನ ಸ್ವರಾಜ್ಯ ಪತ್ರಿಕೆಯ ಬಾತ್ಮೀದಾರರಿಗೆ ಈ ಕೆಳಗಿನ ಅಭಿಪ್ರಾಯಗಳನ್ನು ಕೊಟ್ಟರು. ವಿಶ್ವೇಶ್ವರಯ್ಯ ಕಮಿಟಿಯ ರಿಪೋರ್ಟನ್ನು ಸರ್ಕಾರದವರು ಪ್ರಕಟಿಸದಿರುವುದರಿಂದ ಜನಗಳಲ್ಲಿ ಅಸಮಾಧಾನವಾಗಿರುವುದು ವಾಸ್ತವ್ಯ. ಪ್ರಜೆಗಳ ಕೋರಿಕೆಯಂತೆಯೇ ನೇಮಿಸಿದ ಕಮಿಟಿಯ ವರದಿಯನ್ನು ಯಾವ ಸರ್ಕಾರವಾಗಲಿ ಪ್ರಕಟಿಸದಿರುವುದಕ್ಕಾಗುವುದಿಲ್ಲ. ತಮ್ಮ ಆರ್ಡರಿನ ಜೊತೆಯಲ್ಲಿಯೇ ಕಮಿಟಿಯ ವರದಿಯನ್ನೂ ಪ್ರಕಟಿಸಬಹುದು. ಬ್ರಿಟಿಷ್ ಇಂಡಿಯಾದಲ್ಲಿಯಾದರೂ ಸರ್ಕಾರದವರು ಈ ಕ್ರಮವನ್ನೇ ಅನುಸರಿಸುತ್ತಿದ್ದಾರೆ. ಇದರಿಂದ ಸ್ವಲ್ಪ ತಡವಾಗಬಹುದು.

ಪತ್ರಿಕೆಗಳನ್ನು ನಿಲ್ಲಿಸಿದುದು ಸರ್ಕಾರದವರು ಮಾಡಿರುವ ಕೆಲಸಗಳಲ್ಲಿ ಬಹಳ ಶೋಚನೀಯವಾದುದು. ದೇಶೀಯ ಸಂಸ್ಥಾನದ ಪ್ರಜೆಗಳು ಪ್ರಜಾಸ್ವಾತಂತ್ರ್ಯಕ್ಕಾಗಿ ಕಾತುರ ಪಡುತ್ತಿರುವರು. ಮುಂದುವರಿದ ಮೈಸೂರು ಸಂಸ್ಥಾನವೇ ಈ ರೀತಿಯಾಗಿ ನಡೆದರೆ ಇನ್ನೂ ಹಿಂದುಳಿದಿರುವ ಸಂಸ್ಥಾನಗಳ ಪಾಡೇನು? ಮೈಸೂರು ಸರ್ಕಾರದವರು ಪತ್ರಿಕೆಗಳನ್ನು ನಿಲ್ಲಿಸಿರುವ ಆರ್ಡರನ್ನು ವಾಪಸು ತೆಗೆದುಕೊಂಡು, ಕೋಲಾಹಲವು ಕಮ್ಮಿಯಾಗುವಂತೆ ಮಾಡುವರೆಂದು ನಂಬುತ್ತೇನೆ.

ಅಫ್ಘಾನಿಸ್ಥಾನದ ಪರಿಸ್ಥಿತಿ

ಅಫ್ಘಾನಿಸ್ಥಾನದಲ್ಲಿ ಪರಿಸ್ಥಿತಿಯು ದಿನದಿನಕ್ಕೂ ವ್ಯತ್ಯಾಸ ಹೊಂದುತ್ತಿರುವುದು. ಮಾಜಿ ಅಮೀರರಾದ ಅಮಾನುಲ್ಲಾ ರವರಿಗೆ ಕಾಂದಹಾರಿನಲ್ಲಿ ಬಹಳ ಬೆಂಬಲವು ದೊರೆತಿರುವುದು. ಇನ್ನೂ ಇತರರು ಅವರಿಗೆ ಸಹಾನುಭೂತಿಯನ್ನು ತೋರಿಸಿರುವರು. ಲಾಹೋರಿನ ಮಹಮ್ಮದೀಯರೆಲ್ಲರೂ ಒಂದು ಸಭೆಸೇರಿ ಅಮಾನುಲ್ಲಾ ರವರಿಗೆ ತಮ್ಮ ಸಹಾನುಭೂತಿಯನ್ನು ತೋರಿಸಿರುವರು. ಪರಿಸ್ಥಿತಿಯನ್ನು ನೋಡಿದರೆ ಅಮಾನುಲ್ಲಾ ರವರಿಗೆ ಅಫ್ಘಾನ್‌ಸ್ಥಾನ ರಾಜ್ಯವು ಪುನಃ ಲಭಿಸುವ ಹಾಗೆ ಕಾಣುತ್ತದೆ. ಈ ತಿಂಗಳು 9 ನೇ ತಾ|| ನಲ್ಲಿ ಅಮಾನುಲ್ಲಾ ರವರು ತಮ್ಮ ರಾಜ್ಯದ ಜನಗಳಿಗೆ ಈ ಕೆಳಗಿನ ಸಂದೇಶವನ್ನು ಕೊಟ್ಟರು.

" ಮಹಮ್ಮದೀಯ ಸಹೋದರರೇ? ನಾನು ಪ್ರಮಾಣ ಪೂರ್ವಕವಾಗಿ ಹೇಳುವುದೇನೆಂದರೆ ದೇವರು ಒಬ್ಬನೇ. ಮಹಮ್ಮದ್ ಪೈಗಂಬರನು ದೇವರ ಸೇವಕನು ಮತ್ತು ಪ್ರವಾದಿಯು, ನನ್ನ ಉದ್ದೇಶ್ಯವು ಅಫ್ಘಾನಿಸ್ಥಾನದ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದೇ ಆಗಿತ್ತು, ಅವರಲ್ಲಿ ತಿಳುವಳಿಕೆಯುಂಟಾಗಿ ಅವರ ಮೂಢಾಚಾರಗಳೂ, ಅಂಧಶ್ರದ್ಧೆಗಳೂ ಅಸಹನೆಗಳೂ ಕಲಹಪ್ರೀತಿಯೂ ತೊಲಗಿ ನಾಗರಿಕರಾಗಿ ಮುಂದುವರಿದ ಜನಾಂಗಗಳಲ್ಲಿ ತಮ್ಮ ಸ್ಥಾನವನ್ನು ಪಡೆಯಬೇಕೆಂಬುದೇ ನನ್ನ ಆಶೆಯಾಗಿತ್ತು. ತಿಳುವಳಿಕೆಯಿಲ್ಲದೆ ಸ್ವಾರ್ಥಿಗಳಾದ ಕೆಲವು ಜನರ ದುರ್ಬೋಧನೆಯಿಂದ ನೀವು ದಂಗೆ ಎದ್ದಿರುವಿರಿ. ಶೂರರಾದ ಅನೇಕ ಮಹಮ್ಮದೀಯ ಸಹೋದರರನ್ನು ಯಮನ ಬಾಯಿಗೆ ತುತ್ತು ಮಾಡಿದಿರಿ. ಪ್ರಜೆಗಳ ಇಷ್ಟದಂತೆ 50 ಜನ ಹುಡುಗಿಯರನ್ನು ಟರ್ಕಿಯಲ್ಲಿ ವೈದ್ಯವಿದ್ಯಾಭ್ಯಾಸವನ್ನು ಕಲಿತುಕೊಂಡು ಬರುವುದಕ್ಕಾಗಿ ಕಳುಹಿಸಿದ್ದೇನೆ. ಅವರ ಗಂಡಂದಿರನ್ನು ಅವರೊಡನೆಯೇ ಕಳುಹಿಸಿರುವೆನು. ಆದರೆ ನೀವು ಇದಕ್ಕೆ ವಿರೋಧವಾಗಿರುವಿರಿ. ನಿಮ್ಮ ದಂಗೆಯಿಂದ ಅಫ್ಘಾನಿಸ್ಥಾನಕ್ಕೆ ಎಷ್ಟು ನಷ್ಟವಾಗುವುದೆಂಬುದು ನಿಮಗೆ ಗೊತ್ತಿದೆಯೆ? ಎಲ್ಲಾ ಮಹಮ್ಮದೀಯರನ್ನೂ ನಮ್ಮ ಸಹೋದರರನ್ನಾಗಿ ಭಾವಿಸಬೇಕೆಂದು ನಮ್ಮ ಧರ್ಮದಲ್ಲಿ ಉಕ್ತವಾಗಿಲ್ಲವೆ? ಎಂದ ಮೇಲೆ ಅವರನ್ನು ಕೊಲ್ಲುವುದು ನ್ಯಾಯವೆಂದು ನೀವೇತಕ್ಕೆ ಭಾವಿಸುವಿರಿ ನನ್ನನ್ನು ಧರ್ಮದ್ರೋಹಿಯೆಂದು ಯಾರು ಕರೆದಿರುವರೋ ಅವರನ್ನು ದೇವರೇ ವಿಚಾರಿಸಿಕೊಳ್ಳಲಿ. ನಾನು ಪಕ್ಕಾ ಮಹಮ್ಮದೀಯನು. ಮಹಮ್ಮದೀಯ ಧರ್ಮದಿಂದ ನನ್ನನ್ನು ಬಲಾತ್ಕಾರವಾಗಿ ಯಾರೂ ದೂಡಲಾರರು. ನೀವು ಕಂಟೋನ್‌ಮೆಂಟನ್ನೂ ಶಸ್ತ್ರಖಾನೆಗಳನ್ನೂ ಲೂಟಿ ಮಾಡಿದಿರಿ. ಹೊರಗಿನ ರಾಜ್ಯದವರಾರಾದರೂ ದಂಡೆತ್ತಿ ಬಂದರೆ ನಿಮ್ಮ ಸಂರಕ್ಷಣೆಯನ್ನು ಮಾಡಿಕೊಳ್ಳುವುದಕೋಸ್ಕರ ನಾನೇ ನಿಮಗೆ ಅವುಗಳನ್ನು ಕೊಡುತ್ತಿದ್ದೆನು ಈಗಲೂ ನೀವು ಅವನ್ನು ಉಪಯೋಗಿಸಿ ಆದರೆ ದಂಗೆ ಮಾತ್ರ ಮಾಡಬೇಡಿ. ನೀವು ನಾಶವಾದರೆ ನನಗೆ ವ್ಯಸನವಾಗುತ್ತದೆ. ನಿಮ್ಮ ಮೇಲೆ ನನಗೆ ಬಹಳ ಪ್ರೇಮವಿದೆ. ನಿಮ್ಮನ್ನು ಹಾಳುಮಾಡಬೇಕೆಂದಿದ್ದರೆ ಹಾಳು ಮಾಡಬಹುದಾಗಿತ್ತು. ನನ್ನ ಹತ್ತಿರ ಏರೋಪ್ಲೇನುಗಳಿವೆ. ಅವುಗಳಿಂದ ನಿಮ್ಮ ಮೇಲೆ ಸಿಡಿ ಮದ್ದುಗಳನ್ನು [illegible] ಬಹುದಾಗಿತ್ತು. ಆದರೂ ಆ ರೀತಿ ನಾನು ಮಾಡ[illegible] ಈಗಲೂ ನೀವು ಎಚ್ಚೆತ್ತುಕೊಳ್ಳಿ. ನನ್ನ ಹತ್ತಿರ [illegible] ವಿರ ಕಂದಾರಿಯವರಿರುವರು ಏರೋಪ್ಲೇನುಗಳಿ[illegible] ನಾನು ಅವರಿಗೆ ಒಂದು ಮಾತು ಹೇಳಿದರೆ ಸಾಕ[illegible] ಹಳ್ಳಿಗಳೆಲ್ಲವೂ ನಾಶವಾಗುವುವು, ಜೋಕೆ ಜೋಕೆ."

ಕೋಮುವಾರು ದುರಭಿಮಾನದ ಪರಿಹಾರದ ಮ[illegible]

ಕೋಮುವಾರು ದುರಭಿಮಾನವು ಮೈಸೂರ[illegible] ನಜೀವನದ ಮೇಲೆ ದುಷ್ಪರಿಣಾಮವನ್ನು ಉಂಟು[illegible] ಡಿಯೂ ಮಾಡುತ್ತಲೂ ಇರುವುದರಿಂದಲೂ, [illegible] ವವಾದ ದೇಶಾಭಿವೃದ್ಧಿಗೂ ಜನಜೀವನದ ಸಾಮ[illegible] ಕ್ಕೂ ಅಪಾಯಕರವಾಗಿರುವುದರಿಂದಲೂ, ಮತ್ತು ಮೈಸೂರು ಸರಕಾರದ ರಾಜ್ಯಭಾರಕ್ಕೊಳಪಟ್ಟ ಎ[illegible] ಕೋಮುಗಳಲ್ಲಿಯೂ ಈ ದ್ವೇಷಾಸೂಯೆಗಳು [illegible] ವುದನ್ನು ತಪ್ಪಿಸುವಂತೆ ಸರಕಾರದ ಆಡಳಿತದ ರೀತಿ[illegible] ಗಳನ್ನು ಏರ್ಪಡಿಸಬೇಕಾಗಿರುವುದರಿಂದಲೂ ಇಲ್ಲಿ [illegible] ಸೇರಿರುವ ಮಹಾರಾಜರವರ ಕಾಲೇಜಿನ ಕರ್ನಾಟಕಸಂಘದ ಸದಸ್ಯರು ಈ ರೀತಿಯಾಗಿ ವಿಧಿಸತಕ್ಕದ್ದು.

೧ ಹೆಸರು ಮತ್ತು ಸ್ಥಾಪನೆ

ಈ ಮಸೂದೆಗೆ " ಕೋಮುವಾರು ದುರಭಿಮಾನ ಪರಿಹಾರದ ಮಸೂದೆ " ಎಂದು ಹೆಸರಿರತಕ್ಕದ್ದು, ಮೈಸೂರುದೇಶಕ್ಕೆಲ್ಲಾ ಇದು ಅನ್ವಯಿಸತಕ್ಕದು ಇದು ಶುಕ್ಲ ಸಂವತ್ಸರದ ಚೈತ್ರಶುದ್ಧ ಪಾಡ್ಯದಿಂದ ಬಳಕೆಗೆ ಬರತಕ್ಕದು.

೨ ಸಂಜ್ಞೆಗಳು

ಕ. " ಕೋಮು ' ಎಂದರೆ ವ್ಯವಹಾರಕ್ಕೂ [illegible] ಕ್ಕೂ ಸಂಬಂಧಿಸಿದ ವಿಷಯಗಳಲ್ಲಿ ಒಂದೇ ವಿಧವಾದ ಆಚಾರವನ್ನೂ ಸಂಪ್ರದಾಯವನ್ನೂ ಅನುಸರಿಸುತ್ತ ಒಂದು ಗೊತ್ತಾದ ಹೆಸರನ್ನಿಟ್ಟುಕೊಂಡು ಇತರರಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡಿರುವ ಜನರ ಸಂಘ ಅಥವಾ ಸಮುದಾಯ. ಖ. "ಕೋಮುವಾರು ದುರಭಿಮಾನ" ಎಂದರೆ ಎರಡು ಅಥವಾ ಅನೇಕ ಕೋಮುಗಳಲ್ಲಿ ಭಿನ್ನಾಭಿಪ್ರಾಯಗಳಿಂದ ಪರಸ್ಪರವಾಗಿ ಹುಟ್ಟುವ ಅಪ್ರೀತಿ, ತಿರಸ್ಕಾರ ಅಥವಾ ಶತ್ರುತ್ವ. ಕ. "ದೇಶಶಾಂತಿ" ಎಂದರೆ ದೇಶದಲ್ಲಿ ವಾಸಮಾಡುವ ಅನೇಕ ಕೋಮಿನವರೆಲ್ಲರೂ ಪರಸ್ಪರ ಮಮತೆಯಿಂದಲೂ ಸೌಹಾರ್ದದಿಂದಲೂ ಇರುವುದು. ಘ. "ಸ್ಥಾನಗಳನ್ನು 'ಮೀಸಲಾಗಿಡುವುದು" ಎಂದರೆ ಯಾವುದಾದರೂ ಕೋಮಿನವರಿಗಾಗಲಿ, ಅಥವಾ ಕಸಬಿನವರಿಗಾಗಲಿ ಕನಿಷ್ಠ [illegible] ಸಂಖ್ಯೆಯ ಸ್ಥಾನಗಳನ್ನು ಕಾಯಿದೆಯ ಮೂಲಕ [illegible] ತ್ತುಮಾಡುವುದು.

(ಸಶೇಷ)

"ನ್ಯೂ ಇಂಡಿಯಾ" ಪತ್ರಿಕೆ.

ಮುಂದಿನ ಫೆಬ್ರುವರಿ ತಿಂಗಳಿಂದ "ನ್ಯೂ [illegible] ಯಾ" ಪತ್ರಿಕೆಯು ವಾರಕ್ಕೊಂದು ಸಾರಿ ಹೊರಡು[illegible] ದ. ಡೊಮೀನಿಯನ್ ಸ್ಟೇಟಸನ್ನು ಪ್ರತಿಪಾದಿಸು[illegible] ಮತ್ತು ನೆಹರೂ ವರದಿಯನ್ನು ಸಹಕರಿಸಿ ಉತ್ತೇ[illegible] ದುವುದೇ ಇದರ ಮುಖ್ಯೋದ್ದೇಶ್ಯಗಳಾಗಿದೆ.

ತಾಯಿನಾಡು.

24—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

——

(ಮುಂದುವರೆದುದು.)

ಈಗ ನೇರವಾಗಿ ಬ್ರಿಟಿಷರ ಆಡಳಿತದಲ್ಲಿರುವ ಪ್ರಾಂತ್ಯಗಳು ಗೌರ್ನರ ಅಧೀನದಲ್ಲಿವೆ. ದೇಶೀಯ ಸಂಸ್ಥಾನಗಳು ವಂಶಪಾರಂಪರ್ಯವಾಗಿ ಬಂದ ರಾಜರುಗಳ ಅಧೀನದಲ್ಲಿವೆ. ಇವೆರಡೂ ಒಂದೇ ಆದರೂ ಇಂಡಿಯಾ ಸರಕಾರದ ಅಧೀನದಲ್ಲಿವೆ. ಡೊಮಿನಿಯನ್ ಸ್ಟೇಟಸ್ ಸ್ವರಾಜ್ಯವು ಬಂದ ಮೇಲೆ ಈಗ್ಗಿಂತಲೂ ಹೆಚ್ಚು ಬಲವಾದ ಕೇಂದ್ರ ಸರಕಾರವಿರಬೇಕು. ಪ್ರಾಂತ್ಯಗಳೂ ಮತ್ತು ದೇಶೀಯ ಸಂಸ್ಥಾನಗಳೂ ಈ ಮಧ್ಯ ಸರ್ಕಾರದ ಅಧೀನದಲ್ಲಿದ್ದರೂ ಸಂಪೂರ್ಣವಾದ ಒಳಸ್ವಾತಂತ್ರ್ಯವನ್ನು ಹೊಂದಬೇಕು. ಕೆನಡಾ, ಆಸ್ಟ್ರೇಲಿಯಾ, ಜರ್ಮನಿ, ಯುನೈಟೆಡ್ ಸ್ಟೇಟ್ಸ್ ಈ ಸರಕಾರಗಳ ಉದಾಹರಣೆಯನ್ನು ನೋಡಿದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಇಂಡಿಯಾ ದೇಶಕ್ಕೆ ಫೆಡರಲ್ ಸರ್ಕಾರವೇ ಯೋಗ್ಯವೆಂದು ತಿಳಿದುಬರುತ್ತದೆ. ಈ ಫೆಡರಲ್ ಸರ್ಕಾರದ ಅಧೀನದಲ್ಲಿಯೇ ಈಗಿನ ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳೂ ದೇಶೀಯ ಸಂಸ್ಥಾನಗಳೂ ಇರಬೇಕು. ಈಗಿನ ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳೂ ದೇಶೀಯ ಸಂಸ್ಥಾನಗಳೂ ಸ್ವಲ್ಪ ಹೆಚ್ಚು ಕಡಿಮೆ ಒಂದರ ಹಾಗೆ ಇನ್ನೊಂದು ಇರುವುದರಿಂದ ಇವುಗಳ ಪರವಾಗಿ ಕೆಲಸ ಮಾಡುವ ಮಧ್ಯ ಸರ್ಕಾರದ ಕರ್ತವ್ಯವೂ ಒಂದೇ ಆಗಿರುವುದು. ದೇಶೀಯ ಸಂಸ್ಥಾನಗಳು ಈಗಿನ ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳಿಗೂ ರಾಜಕೀಯವಾಗಿಯೂ ಇನ್ನೂ ಇತರ ಸಂಬಂಧವಾಗಿಯೂ ಕೆಲವು ವ್ಯತ್ಯಾಸಗಳಿರುವುದರಿಂದ ಅದನ್ನು ಗ್ರೇಟ್ ಬ್ರಿಟನ್ನಿನಲ್ಲಿ ರುವಂತೆ ಯೂನಿಟರಿ ಸರ್ಕಾರವನ್ನಾಗಿ ಮಾಡುವುದಕ್ಕಾಗುವುದಿಲ್ಲ. ಫೆಡರಲ್ ರಾಜ್ಯರಚನೆಯ ಮುಖ್ಯ ಸ್ವರೂಪಗಳು ಈ ಕೆಳಗೆ ಕಂಡಂತೆ ಇರಬೇಕು.

1. ಫೆಡರಲ್ ಸರ್ಕಾರಕ್ಕೆ ಒಬ್ಬ ಗವರ್ನರ್ ಜನರಲ್ ರಿರಬೇಕು. ಎರಡು ನ್ಯಾಯವಿಧಾಯಕ ಸಭೆಗಳಿರಬೇಕು. ನ್ಯಾಯವಿಧಾಯಕ ಸಭೆಗೆ ಜವಾಬ್ದಾರಿಯಾದ ಮಂತ್ರಿ ಮಂಡಲವಿರಬೇಕು. 2. ಮಧ್ಯ ಸರ್ಕಾರದ ಸಭಾಸಕೆಗಳು ಅನೇಕವಾಗಿ ಪ್ರಾಂತ್ಯಗಳಿಗೂ, ಸಂಸ್ಥಾನಗಳಿಗೂ ಸಂಬಂಧಪಟ್ಟವಾದ್ದರಿಂದ ಪ್ರಾಂತ್ಯಗಳಿಂದ ಸಂಸ್ಥಾನಗಳಿಂದಲೂ ಪ್ರತಿನಿಧಿಗಳು ಮಧ್ಯ ನ್ಯಾಯವಿಧಾಯಕ ಸಭೆಗೆ ಚುನಾಯಿಸಲ್ಪಡಬೇಕು. 3. ಪ್ರಾಂತ್ಯಗಳಿಗೂ ಸಂಸ್ಥಾನಗಳಿಗೂ ಸಮಾನವಾಗಿ ಸಂಬಂಧಪಟ್ಟ ವಿಷಯಗಳಲ್ಲಿ ಇಬ್ಬರೂ ಚರ್ಚೆಮಾಡಿ ಓಟನ್ನು ಕೊಡಬೇಕು. ಪ್ರಾಂತ್ಯಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಚರ್ಚಿಸಕೂ [illegible] ಓಟನ್ನು ಕೊಡಕೂಡದು. ಇದರಿಂದ ಏನೂ ಅನುಕೂಲವಾಗುವುದಿಲ್ಲ. ಯುನೈಟೆಡ್ ಸ್ಟೇಟ್ಸಿನ ನ್ಯಾಯವಿಧಾಯಕ ಸಭೆಯಲ್ಲಿ ಈ ರೀತಿಯಾದ ಏರ್ಪಾಡಿದೆ. ಆಸ್ಟ್ರೇಲಿಯಾದಲ್ಲಿಯೂ ಈ ಏರ್ಪಾಟಿದೆ. ಮಧ್ಯ ಸರ್ಕಾರದ ಮಂತ್ರಿಮಂಡಲದಲ್ಲಿ ಮಂತ್ರಿಗಳ ಸಂಖ್ಯೆಯು 12 ರಿಂದ 20 ರ ವರೆಗೂ ಇರಬಹುದು. ಇದಕ್ಕೆ ಪ್ರಧಾನ ಮಂತ್ರಿಗಳೇ ಮುಖ್ಯಸ್ಥರು. ಮಂತ್ರಿ ಮಂಡಲದವರು ಡೊಮಿನಿಯನ್ ಪಾರ್ಲಿಮೆಂಟಿಗೆ ಅಧೀನರಾಗಿರಬೇಕು. 4. ಛೇಂಬರ್ ಆಫ್ ಪ್ರಿನ್ಸೆಸ್‌ನಲ್ಲಿ ಪ್ರಾತಿನಿಧ್ಯವಿರುವ ರಾಜರುಗಳ ತಮ್ಮ ಪ್ರತಿನಿಧಿಗಳನ್ನು ಮಧ್ಯ ಸರ್ಕಾರಕ್ಕೆ ಕಳುಹಿಸಿಕೊಡಬಹುದು. ಸಣ್ಣ ಸಂಸ್ಥಾನಗಳ ವಿಷಯವಾಗಿ ಈಗಿರುವಂತೆಯೇ ಪ್ರಾಂತ್ಯದ ಗೌರ್ನರುಗಳು ವ್ಯವಹಾರವನ್ನು ನಡಿಸಬೇಕು. ಫೆಡರಲ್ ಪಾರ್ಲಿಮೆಂಟಿನಲ್ಲಿ ಈ ಸಣ್ಣ ಸಂಸ್ಥಾನಗಳಿಗೂ ಕೆಲವನ್ನು ಒಟ್ಟುಗೂಡಿಸಿ ಪ್ರಾತಿನಿಧ್ಯವನ್ನು ಕೊಡಬೇಕು. 6. ಛೇಂಬರ್ ಆಫ್ ಪ್ರಿನ್ಸೆಸ್ ಈಗಿನಂತೆಯೇ ಮುಂದೆಯೂ ಇರುವುದು. ರಾಜರುಗಳ ಹಿತವನ್ನು ಬಯಸುವುದು, ಅವರ ರಾಜ್ಯಸಂತತಿಯ ವಿಷಯ, ಅವರ ಸ್ವಂತ ಹಕ್ಕುಗಳು ಮತ್ತು ಅಧಿಕಾರಗಳು ಈ ವಿಷಯಗಳನ್ನು ಪ್ರಸ್ತಾಪಿಸುವುದು, ಇಂತಹ ಬಾಬಿನಲ್ಲೆಲ್ಲಾ ಛೇಂಬರ್ ಆಫ್ ಪ್ರಿನ್ಸೆಸ್ ಸಭೆಯ ಒಂದು ಕಮಿಟಿಯು ಗೌವರ್ನರ್ ಜನರಲ್‌ರವರ ಕೌನ್ಸಿಲ್ಲಿಗೂ ಆ ಕಮಿಟಿಗೂ ಮತಭೇದ ಉಂಟಾದಕಡೆ ಬ್ರಿಟಿಷ್ ಸರ್ಕಾರಕ್ಕೆ ಈ ವಿಷಯವು ತಿಳಿಸಲ್ಪಟ್ಟು ಇಂಡಿಯಾ ಸರ್ಕಾರದ ಪ್ರತಿನಿಧಿಗಳು ಮಹಾರಾಜರುಗಳ ಪ್ರತಿನಿಧಿಗಳ ಒಂದು ಕಮಿಟಿಯೂ ಕಲೆತು ನಿರ್ಣಯವನ್ನು ಮಾಡುವುದು. ಫೆಡರಲ್ ರಾಜ್ಯರಚನೆಯಲ್ಲಿ ಇದಕ್ಕಾಗಿ ಒಂದು ಅವಕಾಶವು ಇದ್ದೇ ಇರಬೇಕು. ಯಾವುದಾದರೂ ಸಂಸ್ಥಾನದವರು ಏನಾದರು ಕಾರಣದಿಂದ ಫೆಡರಲ್ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವನ್ನು ವಹಿಸದೇ ಹೋದರೆ ಅವರ ಪ್ರತಿನಿಧಿಗಳನ್ನು ಕಳುಹಿಸುವವರೆಗೂ ಆ ಜಾಗವು ಖಾಲಿ ಇರತಕ್ಕದ್ದು. ಮೊದಲುಮೊದಲು ಯಾವ ಯಾವ ಸಂಸ್ಥಾನಗಳಿಂದ ಎಷ್ಟು ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶವಿರುವುದೋ ಅಷ್ಟು ಅವಕಾಶಕೊಡಬೇಕು. ಒತ್ತಾಯ ಪಡಿಸುವ ಆವಶ್ಯಕವಿಲ್ಲ. ಮೊದಮೊದಲು ಬಲವಾದ ಷರತ್ತುಗಳನ್ನು ಹಾಕಬಾರದ. ಯಾವ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವಿಲ್ಲವೋ ಅವುಗಳಿಗೆ ಪ್ರಾತಿನಿಧ್ಯವಿಲ್ಲ ಎಂದು ಮೊದಲೇ ಒತ್ತಾಯಪಡಿಸಬಾರದು.

ಬಲವಾದ ಮಧ್ಯ ಸರ್ಕಾರವು ಮಧ್ಯನ್ಯಾಯವಿಧಾಯಕಸಭೆಗಳೂ ಏರ್ಪಾಡದ ಮೇಲೆ ಜಿಲ್ಲಾ ಸಂಸ್ಥಾನಕರ [illegible] ವು ನಿರ್ಲಕ್ಷಿಸಲ್ಪಡುತ್ತವೆ ಎಂದು ಭಯಪಡಬೇಕಾಗಿಲ್ಲ.

(ಸಶೇಷ)

ನಾಲ್ಕು ಕರುಗಳ ಹಸು

ಮಧ್ಯಪ್ರಾಂತ್ಯದ ಸಮರ ಹಾಟ್ ಎಂಬ ಊರಿನಲ್ಲಿ ಒಂದು ಹಸುವು ನಾಲ್ಕು ಕರುಗಳನ್ನು ಒಂದೇಬಾರಿ ಈದಿರುವುದಂತೆ.

ವಿವಿಧ ವಿಷಯಗಳು

——

[illegible]

[illegible]

ಮಾಯಣವೋ? ರಾಮಾಯಣವೋ?

[illegible]

[illegible] ಗಮನ ಕೊಡುತ್ತಾರೆ.

[illegible]

[illegible]

[illegible]

[illegible]

[illegible]

TAINADU.

Daily Edition.

The Leading Nationalist Daily of Mysore.

Printed and published by P. R Ramaiya, at Sri Rama Press, D. Subbiah RoadM ysore.

Regd No. M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪಾದಕ-
ಪಿ ಆರ್. ರಾಮಯ್ಯ

ವಾರ್ಷಿಕ ಚಂದಾ { [illegible] / ಪಡಸ್ಥಳಕ್ಕೆ [illegible]

ಸಂಪುಟ ೧] ಶುಕ್ರವಾರ ೨೫ ಜನವರಿ ೧೯೨೯ [ಸಂಚಿಕೆ [illegible]

ಜನವರಿ ೩೦ಂಕ್ಕೆ ಅಖಿಲ ಭಾರತ ವಿದ್ಯಾರ್ಥಿಗಳ "ಹರತಾಳ" ವಾಗಬೇಕೆಂದು ಪ್ರಾರ್ಥಿಸಿರುತ್ತಾರೆ. ಅಮಾನುಲ್ಲಾರವರಿಗೆ ಮುಖಂಡರ ಬೆಂಬಲ.

TAI NADU

25—1—1929

ವಿದ್ಯಾರ್ಥಿಗಳ ಮುಷ್ಕರ

ಅಹಮದಾಬಾದ್ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವು ದಿನದಿನಕ್ಕೆ ಉಲ್ಬಣವಾಗುತ್ತಿರುವುದು. ಕಾಲೇಜು ವಿದ್ಯಾರ್ಥಿಗಳಲ್ಲಿಯೇ ಇದುವರಿಗೂ ಅಡಕವಾಗಿದ್ದ ಮುಷ್ಕರವು ಈಗ ಸ್ಕೂಲು ವಿದ್ಯಾರ್ಥಿಗಳಿಗೂ ವ್ಯಾಪಿಸಿರುವುದು. ಒಟ್ಟಿನ ವೇಲೆ ಅಹಮದಾಬಾದಿನ ಕಾಲೇಜು ಮತ್ತು ಸ್ಕೂಲುಗಳ ವಿದ್ಯಾರ್ಥಿಗಳೆಲ್ಲಾ ಮುಷ್ಕರವನ್ನು ತಾಳಿರುವರು. ಶಾಲೆಗಳೆಲ್ಲಾ ಬರಿದಾಗಿರುವುವು. ಈ ಮುಷ್ಕರವು ಇಷ್ಟಕ್ಕೇ ನಿಲ್ಲದೆ ಅಖಿಲ ಭಾರತವನ್ನೂ ವ್ಯಾಪಿಸುವ ಚಿಹ್ನೆಗಳು ಕಂಡು ಬರುತ್ತಿರುವುವು. ಬೊಂಬಾಯಿ ಪ್ರಾಂತ್ಯದ ತರುಣ ಮುಖಂಡರಾದ ಮಿ|| ಕೆ. ಎಫ್. ನರಿಮನ್‌ರವರು ಆಗಲೇ ತಂತಿಯೊಂದನ್ನು ಕಳುಹಿಸಿ ಜನವರಿ ೩೦ನೇ ದಿವಸ ಅಖಿಲ ಭಾರತದ ಎಲ್ಲಾ ಕಾಲೇಜುಗಳ ಮತ್ತು ಸ್ಕೂಲುಗಳ ವಿದ್ಯಾರ್ಥಿಗಳೆಲ್ಲರೂ ಅಹಮದಾಬಾದ್ ಕಾಲೇಜಿನ ವಿದ್ಯಾರ್ಥಿಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕೋಸ್ಕರ ಮುಷ್ಕರವನ್ನು ಆಚರಿಸಬೇಕೆಂದು ಅಭಿಪ್ರಾಯವನ್ನು ಕೊಟ್ಟಿರುವರು. ಇನ್ನೂ ದಿನವು ನಿಷ್ಕರ್ಷೆಯಾಗಿಲ್ಲ. ಮಹಾತ್ಮ ಗಾಂಧಿಯವರೂ ಇನ್ನೂ ಇತರ ರಾಷ್ಟ್ರ ಮುಖಂಡರೂ ಈ ಸತ್ಯಾಗ್ರಹಕ್ಕೆ ತಮ್ಮ ಬೆಂಬಲವನ್ನು ಕೊಟ್ಟಿರುವರು. ಬಾರ್ಡೋಲಿ ಸತ್ಯಾಗ್ರಹದ ವೀರರಾದ ಸರ್ದಾರ್ ವಲ್ಲಭಭಾಯಿ ಪಟೇಲರವರು ಈ ವಿದ್ಯಾರ್ಥಿಗಳ ಸತ್ಯಾಗ್ರಹಕ್ಕೆ ಮುಂದಾಳಾಗಿ ನಿಂತು ನಡಿಸುವುದಾಗಿ ಭರವಸೆಯನ್ನು ಕೊಟ್ಟಿರುವರು. ಅಂತೂ ಈ ವಿದ್ಯಾರ್ಥಿಗಳ ಸತ್ಯಾಗ್ರಹವು ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಹೊಂದುವದರಲ್ಲಿ ಆವ ಸಂಶಯವೂ ಇಲ್ಲ.

ಪತ್ರಿಕೆಗಳಲ್ಲಿ ಈ ಸತ್ಯಾಗ್ರಹದ ವಿಷಯವು ಬಹಳ ಕಾಲದಿಂದಲೂ ಬರುತ್ತಿರುವುದು. ಇದು ಅಹಮದಾಬಾದ್ ಕಾಲೇಜಿನ ವಿದ್ಯಾರ್ಥಿಗಳಿಗೂ ಮತ್ತು ಆ ಕಾಲೇಜಿನ ಪ್ರಿನ್ಸಿಪಾಲರಿಗೂ ಮಾತ್ರ ಸಂಬಂಧಪಟ್ಟ ವಿಷಯವಲ್ಲ. ಇದು ಭಾರತೀಯರಿಗೂ ಭಾರತೀಯರನ್ನು ಪಾರತಂತ್ರ್ಯದಲ್ಲಿ ಅದುಮುತ್ತಿರುವ ಬ್ರಿಟಿಷ್ ಸರಕಾರಕ್ಕೂ ಸಂಬಂಧಪಟ್ಟವಿಷಯ. ಪ್ರಿನ್ಸಿಪಾಲರು ಆಂಗ್ಲೇಯರು. ಅವರ ಹಿಂದೆ ಅಖಂಡ ಬ್ರಿಟಿಷ್ ಸರಕಾರವೇ ಇದೆ. ವಿದ್ಯಾರ್ಥಿಗಳು ಭಾರತೀಯರು. ಅವರ ಹಿಂದೆ ಅಖಂಡ ಭಾರತವೇ ಇರಬೇಕು.

ಈ ಸಮರವು ಹೋದವರ್ಷದ ಫೆಬ್ರವರೀ ತಿಂಗಳಿನಲ್ಲಿ ಆರಂಭವಾಯಿತು. ಭಾರತಕ್ಕೆ ಬೇಡದ ಸೈಮನ್ ಕಮಿಷನ್ನಿನವರು ಬೊಂಬಾಯಿಗೆ ಕಾಲಿಟ್ಟ ದಿನ ರಾಷ್ಟ್ರ ಸಭೆಯ ಆಜ್ಞೆಗೆ ಅನುಸಾರವಾಗಿ ಇಡೀ ಭಾರತದಲ್ಲಿ ಹರತಾಲವು ನಡೆಯಿತಷ್ಟೆ. ಆ ಹರತಾಲದಲ್ಲಿ ವಿದ್ಯಾರ್ಥಿಗಳ ಭಾಗವೇ ದೊಡ್ಡದಾಗಿತ್ತು. ಮೈಸೂರು ಬೆಂಗಳೂರಿನಲ್ಲಿಯೂ ವಿದ್ಯಾರ್ಥಿಗಳೆಲ್ಲರೂ ಆ ದಿವಸ ಶಾಲೆಗಳಿಗೆ ಹೋಗಲಿಲ್ಲ. ಇದೇ ರೀತಿ ಅಹಮದಾಬಾದಿನ ಕಾಲೇಜಿನ ವಿದ್ಯಾರ್ಥಿಗಳೂ ತಮ್ಮ ಶಾಲೆಗೆ ಹೋಗಲಿಲ್ಲ. ಮೇಲೆಯೇ ಹೇಳಿದಂತೆ ಆ ಕಾಲೇಜಿನ ಪ್ರಿನ್ಸಿಪಾಲರು ಆಂಗ್ಲೇಯರು. ಇವರು ತಮ್ಮ ಜನಾಂಗಕ್ಕೂ ತಮ್ಮ ಸರಕಾರಕ್ಕೂ ಈ ವಿದ್ಯಾರ್ಥಿಗಳು ಅವಮಾನ ಮಾಡಿದರಲ್ಲಾ ಎಂಬ ಖೇದದಿಂದ ವಿದ್ಯಾರ್ಥಿಗಳಿಗೆ ಜುಲ್ಮಾನೆಯನ್ನು ಹಾಕಿದರು. ವಿದ್ಯಾರ್ಥಿಗಳು ಕೊಡಲಿಲ್ಲ. ಕೊಡುವುದಿಲ್ಲ ಎಂದರು. ತಾವು ಕೊಡುವುದಕ್ಕೂ ಕಾರಣವಿಲ್ಲ. ತಾವು ಕಾಲೇಜಿನ ಯಾವ ನಿಯಮವನ್ನೂ ಮುರಿಯಲಿಲ್ಲ ತಮ್ಮ ನಾಡಿನ ಆತ್ಮ ಮರ್ಯಾದೆಗಾಗಿ ರಾಷ್ಟ್ರಸಭೆಯ ಆಜ್ಞೆಯನ್ನು ಅನುಸರಿಸಿ ಹರತಾಳ ಮಾಡಿದೆವೆಂದು ವಾದಿಸಿದರು. ಪ್ರಿನ್ಸಿಪಾಲರಿಗೆ ಈ ಸಮಾಧಾನವು ತೃಪ್ತಿಯಾಗಲಿಲ್ಲ. ಪ್ರಿನ್ಸಿಪಾಲರಿಗೂ ವಿದ್ಯಾರ್ಥಿಗಳಿಗೂ ಅಸಮಾಧಾನವು ಹೆಚ್ಚುತ್ತಲೇ ಬಂತು. ಕೆಲವು ದಿನ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲೇ ಇಲ್ಲ. ಇಷ್ಟರಲ್ಲಿ ಬೊಂಬಾಯಿ ಗವರ್ನರರು ಅಹಮದಾಬಾದಿಗೆ ಭೇಟಿ ಕೊಟ್ಟರು. ಕಾಲೇಜಿಗೂ ಬಂದು ನೋಡುವುದಾಗಿ ಹೇಳಿಕಳುಹಿಸಿದ್ದರು. ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಮೇಲೆ ಪ್ರಿನ್ಸಿಪಾಲರು ಹಾಕಿದ್ದ ಜುಲ್ಮಾನೆಯನ್ನು ವಜಾ ಮಾಡುವವರೆಗೂ ಕಾಲೇಜಿಗೆ ಬರುವುದಿಲ್ಲವೆಂದು ಉತ್ತರವಿತ್ತರು. ಗವರ್ನರವರು ಕಾಲೇಜಿಗೆ ಬಂದಾಗ ವಿದ್ಯಾರ್ಥಿಗಳಿಲ್ಲದೆ ಬರೀ ಬೆಂಚುಗಳಿದ್ದರೆ, ತಮಗೆ ಅವಮಾನವಾಗುವುದಲ್ಲಾ ಎಂಬ ಹೆದರಿಕೆಯಿಂದ, ವಿದ್ಯಾರ್ಥಿಗಳ ಮಾತನ್ನು ನಡೆಸಿಕೊಡುವುದಾಗಿ ಪ್ರಿನ್ಸಿಪಾಲರು ಮಾತುಕೊಟ್ಟರು. ವಿದ್ಯಾರ್ಥಿಗಳೂ, ಗವರ್ನರರನ್ನು ಆದರಿಸುವುದಕ್ಕಾಗಿ ಕಾಲೇಜಿಗೆ ಹೋದರು.

ಈ ಅಧ್ಯಾಯವು ಇಲ್ಲಿಗೆ ಪೂರ್ತಿಯಾಯಿತೆಂದು ಭಾವಿಸಲ್ಪಟ್ಟಿತು. ಆದರೆ ಪ್ರಿನ್ಸಿಪಾಲರವರು ಗವರ್ನರವರು ಹೊರಟು ಹೋದಕೂಡಲೇ ತಮ್ಮ ಹಿಂದಿನ ಆಟವನ್ನು ತೆಗೆದರು ಸಂಕಟಕಾಲದಲ್ಲಿ ಕೊಟ್ಟವಾಗ್ದಾನವನ್ನು ಮುರಿದರು. ವಿದ್ಯಾರ್ಥಿಗಳ ಜುಲ್ಮಾನೆಯನ್ನು ಕೊಡಲೇಬೇಕೆಂದು ನಿರ್ಬಂಧಿಸಿದರು. ಪುನಃ ಮುಷ್ಕರಕ್ಕೆ ಆರಂಭವಾಯಿತು. ಪ್ರಜಾಮುಖಂಡರು ಪ್ರಿನ್ಸಿಪಾಲರ ವರ್ತನೆಯನ್ನು ಖಂಡಿಸಿದರು. ಪ್ರಿನ್ಸಿಪಾಲರ ವರ್ತನೆಗೆ ಬೆಂಬಲವಿತ್ತರು. ಸಮರವು ತೀಕ್ಷ್ಣ ರೂಪವನ್ನು ತಾಳಿತು. ರಾಜಿಯ ಪ್ರಯತ್ನಗಳು ನಡೆದವು. ಆದರೆ ಪ್ರಿನ್ಸಿಪಾಲರು ವೈಮನಸ್ಯ ಕುಯುಕ್ತಿಯನ್ನು ಮಾಡುವುದಕ್ಕೆ ಹೋಗಿ ಅವುಗಳೆಲ್ಲಾ ವಿಫಲವಾದವು. ಇಂದು ವಿದ್ಯಾರ್ಥಿಗಳ ಸತ್ಯಾಗ್ರಹವು ಅತ್ಯುಗ್ರ ರೂಪವನ್ನು ತಾಳಿದೆ.

ವಿದ್ಯಾರ್ಥಿಗಳಿಗೆ ವಿಜಯವೇ ಆಗುವುದರಲ್ಲಿ ಸಂಶಯವಿಲ್ಲ. ಯುವಕರೇ ಈಗಿನ ಜನಾಂಗಗಳ ನಸಿಗಳು. ಅವರ ಮೇಲೆಯೇ ಭಾರತದ ಆತ್ಮಮರ್ಯಾದೆಯು ನಿಂತಿರುವುದು. ಭಾರತದ ಇಂದಿನ ಹಿರಿಯರು ಪರಸ್ಪರ ದ್ವೇಷ ಅಭಿಮಾನದಲ್ಲಿಯೂ ವೈಮನಸ್ಯಗಳಲ್ಲಿಯೂ, ತೊಳಲಿ, ಬಳಲಿ. ಕಂಗೆಟ್ಟು, ಮತಿಭ್ರಾಂತರಾಗಿರುವರು. ಇವರ ಚೇತನ್ಯವೆಲ್ಲವು ಕುಗ್ಗಿರುವುದು. ಇಂತಹ ಸಂದರ್ಭದಲ್ಲಿ ನಮ್ಮ ದೇಶದ ತರುಣರು ಭಾರತಮಾತೆಯ ಆರ್ತನಾದವನ್ನು ಕೇಳಿ ಮುಂದೆ ಬಂದು ಸತ್ಯಸ್ಥಾಪನೆಗೆ ಸಂಕಲ್ಪ ಮಾಡಿ ಟೊಂಕಕಟ್ಟಿರುವುದು ಶುಭಸೂಚನೆಯು. ಭಾರತ ತರುಣವೀರರಿಗೆ ವಿಜಯವಾಗಲಿ!

ವೈದ್ಯ ಸಹಾಯ

ಮದರಾಸಿನ ಆಲ್ ಇಂಡಿಯಾ ಆಯುರ್ವೇದ ಶಾಲೆಯ ಪ್ರಖ್ಯಾತ ಆಯುರ್ವೇದರತ್ನ ಪಂಡಿತ ಕೃಷ್ಣಮಾಚಾರ್ಲುರವರು ಈ ದಿನ ಮತ್ತು ನಾಳೆ ಸೂರು ಅಲ್ಯಾನ್ಸ್‌ಡೌನ್ ಬಿಲ್ಡಿಂಗಿನಲ್ಲಿ ... ಲ್ ಮತ್ತು ಜನರಲ್ ಏಜನ್ಸಿಯಲ್ಲಿ ... ರಿಗೂ ವೈದ್ಯ ಸಲಹೆಯನ್ನು ಕೊಡುವರು. ರೋಗಿಗಳನ್ನು ಅಜನಾಯಿ ಪಿತನಾಡಿ ಚಿಕಿತ್ಸೆಯನ್ನು ... ವರು. ಮಹಾಜನರು ಇವರಿಂದ ಪ್ರಯೋಜನ ಪಡೆಯಬೇಕಾಗಿ ಕೋರಲ್ಪಟ್ಟಿದೆ.

ಶ್ರೀಮನ್ ಮಹಾರಾಜರವರ ಸಂಚಾರಕ್ರಮ

ಶ್ರೀಮನ್ ಮಹಾರಾಜರವರು ಈ ತಿಂಗಳು 25ನೇ ತಾ|| ರಾತ್ರಿ 9 ಘಂಟೆಗೆ ಮೈಸೂರಿಂದ ರೈಲಿನಲ್ಲಿ ಹೊರಟು ಮಾರನೆ ಬೆಳಿಗ್ಗೆ ಕಡೂರನ್ನು ತಲುಪಿ ಅಲ್ಲಿಂದ ಮೋಟಾರಿನಲ್ಲಿ ಚಿಕ್ಕಮಗಳೂರನ್ನು 8 ಘಂಟೆಗೆ ತಲುಪುವರು. ಪೌರಸಭೆಯ ಮಾನಪತ್ರವು ಅರ್ಪಿಸಲ್ಪಡುವುದು. ನಂತರ ಧರ್ಮಪ್ರಕಾಶ ಚಂದ್ರೇಗೌಡರು ಕಟ್ಟಿಸುತ್ತಿರುವ ಆಸ್ಪತ್ರೆಯ ಶಂಕುಸ್ಥಾಪನೆಯನ್ನು 10 ಘಂಟೆಗೂ ಸಾಯಂಕಾಲ ಸಿಲ್ವರ್ ಜ್ಯೂಬಲಿ ಕಟ್ಟಡದ ಶಂಕುಸ್ಥಾಪನೆಯನ್ನೂ ಮಾಡುವರು.

27ನೇ ತಾ|| ಚಿಕ್ಕಮಗಳೂರಿನಲ್ಲಿ ಮೊಕ್ಕಾಂ. 28ನೇ ತಾ|| ಚಿಕ್ಕಮಗಳೂರಿಂದ ಮೋಟಾರಿನಲ್ಲಿ ಪ್ರಾತಃಕಾಲ 8ಘಂಟೆಗೆ ಹೊರಟು 11 ಘಂಟೆಗೆ ಹಾಸನವನ್ನು ತಲುಪಿ ಸಾಯಂಕಾಲ 5 ಘಂಟೆಗೆ ಆಸ್ಪತ್ರೆಯ ಶಂಕುಸ್ಥಾಪನೆ ಮಾಡುವರು 29ನೇ ತಾ|| ಹಾಸನದಿಂದ ಮಧ್ಯಾಹ್ನ 1½ಘಂಟೆಗೆ ಮೋಟರಿನಲ್ಲಿ ಹೊರಟು 3-30ಕ್ಕೆ ಹೊಳೆನರಸೀಪುರವನ್ನು ತಲುಪುವರು. 4 ಘಂಟೆಗೆ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನಡಿಸಿ 5-30ಕ್ಕೆ ರೈಲಿನಲ್ಲಿ ಹೊರಟು 8 ಘಂಟೆಗೆ ಮೈಸೂರನ್ನು ತಲುಪುವರು.

ಪ್ರಾಣಿದಯೆ.

ಬೆಂಗಳೂರಿನ ಶ್ರೀ ಗೋರಕ್ಷಕ ಮಂಡಲಿಯವರು ರಾಷ್ಟ್ರದ ವಿದ್ಯಾರ್ಥಿಗಳಲ್ಲಿ "ದಯೆ" ಯು ಹುಟ್ಟಬೇಕೆಂಬ ಧ್ಯೇಯದಿಂದ ಮಿಡಲ್‌ಸ್ಕೂಲುಗಳಿಗೆಲ್ಲಾ "ಪ್ರಾಣಿದಯೆ" ಪತ್ರಿಕೆಯನ್ನು ಉಚಿತವಾಗಿ ಹಂಚುವ ಏರ್ಪಾಡು ಮಾಡಿರಲು ಕೆಲವು ಹೆಡ್ಮಾಸ್ಟರುಗಳು ಪ್ರತಿಯನ್ನು ತೆಗೆದುಕೊಂಡರೆ ಚಂದಾಹಣ ಕೊಡಬೇಕಾಗುತ್ತದೇನೋ ಎಂಬ ಭಯದಿಂದ ವಹಿಸದೆ ಇರುವರು ಇನ್ನುಮುಂದೆ ಹೀಗೆಮಾಡದೆ ಆದರದಿಂದ ಸ್ವೀಕರಿಸಿ ಅದರಲ್ಲಿರುವ ತತ್ವಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಸಂಪಾದಕರು ಕೋರಿರುತ್ತಾರೆ.

ಸರ್ಕಾರಿ ಸುದ್ದಿ

ಫೆಬ್ರವರಿ 1 ರಿಂದ ಡಾ|| ಉಸ್ಮಾನ್‌ರವರು ... ರಾಗಬೇಕೆಂದೂ, ಡಾ|| ಎಸ್. ಸುಬ್ಬರಾಯರು ಸೀನಿಯರ್ ಸರ್ಜನರಾಗಬೇಕೆಂದೂ, ಡಾ|| ಬಿ. ಕೆ. ನಾರಾಯಣರಾಯರು ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಬೇಕೆಂದೂ, ಡಾ|| ಪುಟ್ಟಣ್ಣನವರು ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರಾಗಬೇಕೆಂದೂ, ಮಿ|| ... ರು ಸೇನಿಟರಿ ಕಮಿಷನರ್‌ರಾಗಬೇಕೆಂದೂ ಸರಕಾರದವರು ಹುಕುಂ ಮಾಡಿರುವರು.

ತಾ ಯಿ ನಾ ಡು.

25—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ.

(ಮುಂದುವರೆದದ್ದು)

ಈ ನವೀನ ಕಾಲದಲ್ಲಿ ಜವಾಬ್ದಾರಿ ಸರ್ಕಾರವಿಲ್ಲದೆ ಯಾವ ದೇಶವೂ ಅಭಿವೃದ್ಧಿಗೆ ಬರುವುದಿಲ್ಲ ವೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಪ್ರಾಣ, ಮಾನ ಧನಗಳು ಸುರಕ್ಷಿತವಾಗಿರಬೇಕು. ಜನಗಳಿಗೆ ಸ್ವಂತ ಬುದ್ಧಿಯಿಂದ ಕೆಲಸ ಮಾಡಲು ಅವಕಾಶವಿರಬೇಕು. ವ್ಯಾಪಾರ ವೊಧ್ಯಲಾದುವುಗಳು ನಿರ್ಬಾಧಿತವಾಗಿ ನಡಿಯುವಹಾಗಿರಬೇಕು. ಲೇವಾದೇವಿಗಳಿಗೆ ಆತಂಕ ಬರಕೂಡದು. ಬ್ರಿಟಿಷ್ ಸರ್ಕಾರದವರೂ, ಬ್ರಿಟಿಷ್ ರಾಜನೀತಿಜ್ಞರೂ ದೇಶೀಯ ರಾಜರುಗಳಿಗೆ ತಮ್ಮ ಸಂಸ್ಥಾನಗಳಲ್ಲಿ ನವೀನ ರಾಜ್ಯಪದ್ಧತಿಗಳನ್ನು ಜಾರಿಗೆ ತರಬೇಕೆಂದುಪದೇಶಿಸಿರುವರು. ನಿಷ್ಕರ್ಷೆಯಾಗಿ ಜವಾಬ್ದಾರೀ ಸರ್ಕಾರವನ್ನೇ ಜಾರಿಗೆ ತರಬೇಕೆಂದು ಹೇಳಿಲ್ಲ. ಇದಕ್ಕೆ ಒಂದು ಕಾರಣವುಂಟು. ಬ್ರಿಟಿಷ್ ಇಂಡಿಯಾದಲ್ಲೆ ಯಾವ ರೀತಿಯಾದ ಸರ್ಕಾರವನ್ನು ಜಾರಿಗೆ ತರಬೇಕೆಂಬುದನ್ನು ಅವರೇ ನಿರ್ಧರಿಸಿಲ್ಲ.

ಕೆಲವು ರಾಜರುಗಳು ಹೊರತಾಗಿ ಸಾಮಾನ್ಯವಾಗಿ ಎಲ್ಲಾ ರಾಜರುಗಳೂ ತಮ್ಮ ಪ್ರಜೆಗಳಿಗೆ ತಾವು ಮಾಲೀಕರೆಂಬವಾಗಿ ಭಾವಿಸಿಕೊಂಡಿರುತ್ತಾರೆ. ಪ್ರಜೆಗಳೆಲ್ಲರೂ ಇವರ ಆಳುಗಳು ಎಂಬುದಕ್ಕಿಂತ ಹೆಚ್ಚಿನ ಭಾವನೆ ಅವರಲ್ಲಿಲ್ಲ. ಈ ರಾಜರುಗಳು ತಾವು ಪ್ರಜೆಗಳನ್ನು ರಾಜಕೀಯವಾಗಿ ಯಾಗಲಿ ಸಾಂಪತ್ತಿಕವಾಗಿಯಾಗಲಿ, ಸಾಮಾಜಿಕವಾಗಿಯಾಗಲಿ ಮೇಲಕ್ಕೆ ಎತ್ತಲು ಪ್ರಯತ್ನಪಟ್ಟಿಲ್ಲ. ಕೆಲವು ರಾಜರುಗಳಿಗೆ ತಮ್ಮ ಪ್ರಜೆಗಳು ಯಾರಾದರೂ ಮೇಲಕ್ಕೆ ಬಂದರೆ ಅವರಲ್ಲಿ ಅಸೂಯೆ, ಲಾರ್ಡ್ ಅಲಿವಿಯರ್‌ರವರು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಹೇಳಿದಂತೆ ಈ ಸಂಸ್ಥಾನಗಳಲ್ಲಿ ನಿರಂಕುಶತ್ವವೇ ತಾಂಡವವಾಡುತ್ತಿರುವದು. ಎಲ್ಲರೂ ರಾಜರ ಇಚ್ಛೆಯಂತೆಯೇ ನಡೆಯಬೇಕು. ರಾಜರ ಮಾತೇ ಕಾನೂನು. ಕಾನೂನಾಗಲಿ, ಆಜ್ಞೆಯಾಗಲಿ, ಕಂದಾಯ ಹಾಕುವುದಾಗಲಿ, ಕಂದಾಯವನ್ನು ವಿನಿಯೋಗಪಡಿಸುವುದಾಗಲಿ ನ್ಯಾಯಾಧೀಶರನ್ನು ನೇಮಿಸುವುದಾಗಲಿ ಎಲ್ಲವೂ ರಾಜರ ಇಚ್ಛೆಯಂತೆಯೇ ನಡೆಯಬೇಕು. ಎಲ್ಲಾ ಸಮಯದಲ್ಲಿಯೂ ಎಲ್ಲಾ ರಾಜರುಗಳೂ ಈ ಅಧಿಕಾರವನ್ನು ಸರಿಯಾಗಿ ಉಪಯೋಗಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಇದರಿಂದ ದೇಶೀಯ ಸಂಸ್ಥಾನದ ಪ್ರಜೆಗಳ ಅಭಿವೃದ್ಧಿಗೆ ಬಹಳ ಕುಂದಕವಾಗುವುದು,, ಇವೆಲಾ ಲಾರ್ಡ್ ಅಲಿವಿಯರವರು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಹೇಳಿದ ಮಾತುಗಳು.

ರಾಜರುಗಳು ತಮ್ಮ ಹಿಂದ ಕಡೆ ದೃಷ್ಟಿಯಿಟ್ಟು ಕಾಲಸ್ಥಿತಿಯನ್ನನುಸರಿಸಿ ಬದಲಾಯಿಸಿ ಕೊಳ್ಳಬೇಕು. ತಾವಾಗಿ ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು, ಫೆಡರಲ್ ರಾಜ್ಯಪದ್ಧತಿಗಳಿಗೆ ಜೆಂಬಲಕೊಡಬೇಕು. ಬ್ರಿಟಿಷ್ ಪ್ರಾಂತ್ಯಗಳಿಗೆ ದೊರೆಯುವಂತೆಯೇ ತಮ್ಮ ಸಂಸ್ಥಾನಗಳಿಗೂ ಫೆಡರಲ್ ರಾಜ್ಯಪದ್ಧತಿಯಲ್ಲಿ ಸಮಾನವಾದ ಪ್ರಾತಿನಿಧ್ಯವು ದೊರೆಯುವಂತೆ ಪ್ರಯತ್ನಿಸಬೇಕು.

ಇದು ವಿಶಾಲ ದೃಷ್ಟಿಯ ಕಾಲವು ರಾಜರುಗಳು ತಮ್ಮ ಸ್ವಂತ ಪ್ರಜೆಗಳ ಮತ್ತು ಬ್ರಿಟಿಷ್ ಇಂಡಿಯಾ ಪ್ರಜೆಗಳ ಆಶೋತ್ತರಗಳಲ್ಲಿ ಸಹಾನುಭೂತಿಯನ್ನು ತೋರಿಸಬೇಕು 1918 ನೇ ಇಸವಿಯವರೆಗೆ ರಾಜರುಗಳಿಗೆ ತಮ್ಮ ರಾಜ್ಯಗಳಲ್ಲಿಯೇ ಅಧಿಕಾರವು ಅಷ್ಟು ಇರಲಿಲ್ಲವೆಂಬುದನ್ನು ಜ್ಞಾಪಿಸಿಕೊಳ್ಳಬೇಕು. ದೇಶೀಯ ಸಂಸ್ಥಾನಗಳಲ್ಲಿ ಬ್ರಿಟಿಷ್‌ರ ಅಧಿಕಾರವು ಬಹಳವಾಗಿತ್ತು. ಸಂಸ್ಥಾನಗಳ ರಾಜಕೀಯ ಮತ್ತು ಆರ್ಥಿಕವಿಷಯಗಳಲ್ಲಿ ಬ್ರಿಟಿಷ್ ರೆಸಿಡೆಂಟರುಗಳ ಮಾತೇ ಮೇಲಾಗಿತ್ತು. ರಾಜರುಗಳು ಸ್ವತಂತ್ರವಾಗಿ ಒಬ್ಬರೊಡನೊಬ್ಬರು ಪತ್ರವ್ಯವಹಾರ ನಡೆಯಿಸುವುದಕ್ಕೂ ಆಗುತ್ತಿರಲಿಲ್ಲ. ಈಗೇನೋ ಸ್ವಲ್ಪ ಅವರಿಗೆ ಅಧಿಕಾರ ಬಂದಿರುವುದು. ಈ ಅಧಿಕಾರದಲ್ಲಿ ತಮ್ಮ ಪ್ರಜೆಗಳಿಗೂ ಭಾಗವಿರುವಂತೆ ಮಾಡಿ ಇಬ್ಬರೂ ಸೇರಿ ಸಂಸ್ಥಾನವನ್ನು ಅಭಿವೃದ್ಧಿ ಮಾಡಿಕೊಂಡು ಒಳ್ಳೆಯ ಕೀರ್ತಿಯನ್ನು ಪಡೆಯಬೇಕು.

ನಾನು ಮೇಲೆಯೇ ತಿಳಿಸಿದಂತೆ ಇಂಡಿಯಾದೇಶದ ಚಕ್ರವರ್ತಿಗಳು ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೂ ಜವಾಬ್ದಾರಿ ಅಧಿಕಾರವನ್ನು ಕೊಡುವುದಕ್ಕಾಗಿ ತಮ್ಮ ಸ್ವಂತ ಅಧಿಕಾರವನ್ನು ತ್ಯಾಗಮಾಡುತ್ತಿರುವರು. 1868 ರಲ್ಲಿ ಜಪಾನಿನಲ್ಲಿ ಬಲವಾದ ಮಧ್ಯಸರ್ಕಾರವು ಏರ್ಪಟ್ಟಾಗ ಪ್ರಭುವರ್ಗದವರು ತಮ್ಮ ಅಧಿಕಾರವನ್ನು ತ್ಯಾಗ ಮಾಡಿದರು. ಇದೇ ಪ್ರಕಾರವಾಗಿ ದೇಶೀಯ ಸಂಸ್ಥಾನದ ಅಭಿವೃದ್ಧಿಗಾಗಿ ತಮ್ಮ ಅಧಿಕಾರವನ್ನು ತ್ಯಾಗಮಾಡಿ ಪ್ರಜೆಗಳಿಗೆ ಕೊಡಬೇಕು.

ಸಕಾಲದಲ್ಲಿಯೇ ರಾಜರುಗಳು ಪ್ರಜೆಗಳಿಗೆ ಅಧಿಕಾರವನ್ನು ಕೊಟ್ಟರೆ ಪ್ರಜೆಗಳ ಕೃತಜ್ಞತೆಯನ್ನು ಸಂಪಾದಿಸಿ ತಮ್ಮ ಕೀರ್ತಿಯನ್ನು ಹೆಚ್ಚಿಸಿಕೊಳ್ಳುವರು, ಎಸೂರು ಆರುನೂರು ರಾಜರುಗಳು ಒಂದು ಕಡೆ. ಏಳು ಕೋಟಿ ಪ್ರಜೆಗಳು ಒಂದು ಕಡೆ. ಇದರಲ್ಲಿ ಯಾವುದು ಹೆಚ್ಚು?

(ಮುಂದುವರಿಯುವುದು)

ತ್ರರಾಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಮಾಡುವುದು ದೇಶಕ್ಕೆ ಕ್ಷೇಮಕರವೆಂದು ಹೇಳಬೇಕಾಗಿಯೇ ಇಲ್ಲ. ಭಾಷಣಗಳನ್ನು ಮಾಡುವುದರಿಂದಲೂ, ವೃತ್ತಪತ್ರಿಕೆಗಳಲ್ಲಿ ಬರೆಯುವುದರಿಂದಲೂ. ಪ್ರಚಾರಕಾರ್ಯವನ್ನು ಮಾಡುವ ಚಳವಳಿಕಾರರಿಂದಲೂ, ಸ್ವಾರ್ಥಸಾಧನೆಗಾಗಿ ಸರಕಾರಿ ಹುದ್ದೆಗಳನ್ನೂ ಗೌರವಸ್ಥಾನಗಳನ್ನೂ ಹುಡುಕತಕ್ಕವರಿಂದಲೂ ಈ ಕೋಮುವಾರು ದುರಭಿಮಾನವು ಹರಡುತ್ತಾ ಇದೆ. ಒಂದೇ ಒಂದು ಕೋಮಿನವರ ಅನುಕೂಲಕ್ಕಾಗಿಯೇ ಇರುವ ವಿದ್ಯಾರ್ಥಿನಿಲಯಗಳೂ, ವಿದ್ಯಾಸಂಸ್ಥೆಗಳೂ ಈ ದುರಭಿಮಾನವನ್ನು ಹೆಚ್ಚಿಸುವುದಲ್ಲದೆ ಜನಾಂಗದ ಹಿತಕ್ಕೆ ಸಾಧಕವಾದ ವಿಶಾಲದೃಷ್ಟಿಯ ಬೆಳವಣಿಗೆಗೆ ಅಡಚಣೆಯುಂಟುಮಾಡುವುವು. ದೇವಾಲಯಗಳ ಪ್ರವೇಶ. ಪ್ರಜಾಸಾಮಾನ್ಯಕ್ಕೆ ಸೇರಿದ ರಸ್ತೆ ಕೆರೆ ಭಾವಿ ಇವುಗಳ ಉಪಯೋಗದ ಸ್ಥಾನ —ಇವುಗಳಿಗೆ ಸಂಬಧಪಟ್ಟ ವಿಚಾರಗಳಲ್ಲಿ ಕೋಮುವಾರು ದುರಭಿಮಾನದಿಂದ ಹುಟ್ಟುವ ವಿವಾದಗಳು ಈ ದ್ವೇಷಾಗ್ನಿಯನ್ನು ಆರದಂತೆ ಮಾಡುತ್ತಿವೆ. ಈ ಭಿನ್ನಭಾವವು ತಪ್ಪಿ, ಅಖಿಲ ಜನಾಂಗದ ಹಿತವನ್ನು ಸಾಧಿಸಬೇಕೆಂಬ ಭಾವನೆಯು ಸಾರ್ವತ್ರಿಕವಾಗಿ ವ್ಯಾಪಿಸಿ ಜನಜೀವನವು ಶಾಂತಿಯಿಂದ ಜರುಗಬೇಕೆಂಬುದೇ ಈ ಮಸೂದೆಯ ಮುಖ್ಯೋದ್ದೇಶವಾಗಿದೆ.

[illegible]

Printed and published by P. R Ramaiya,
at Sri Rama Press, D. Subbiah RoadM ysore.

Regd No. M 1322 ॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಶನಿವಾರ ೨೬ ಜನವರಿ ೧೯೨೯ [ಸಂಚಿಕೆ [illegible]

TAI NADU

26—1—1929

ಇಂಡಿಯಾ ಸರಕಾರಕ್ಕೆ

ಎಚ್ಚರಿಕೆ!

ಡಾಕ್ಟರ್ ಅನ್ಸಾರಿ, ಮೌಲಾನಾ ಮಹಮ್ಮದಾಲಿ, ಲಾಲಾ ಶಂಕರ್ ಲಾಲ್, ಮೊದಲಾದ ಅಖಿಲಭಾರತ ಮಹಮ್ಮದೀಯ ಮತ್ತು ಹಿಂದೂ ಮುಖಂಡರು ಆಫ್ಘಾನಿಸ್ಥಾನದ ಪರಿಸ್ಥಿಯ ವಿಷಯವಾಗಿ ಇಂಡಿಯಾ ಸರ್ಕಾರಕ್ಕೆ ಒಂದು ಬಲವಾದ ಎಚ್ಚರಿಕೆಯನ್ನು ಕೊಟ್ಟಿರುವರು. ಅದರ ಅಭಿಪ್ರಾಯವೇನೆಂದರೆ "ನಾವು ಆಫ್ಘಾನಿಸ್ಥಾನದಲ್ಲಿ ದಿನದಿನಕ್ಕೂ ಬದಲಾಯಿಸುತ್ತಿರುವ ಪರಿಸ್ಥಿತಿಯನ್ನು ಬಹಳ ಕಾತುರರಾಗಿ ನೋಡುತ್ತಿರುವೆವು. ಸನ್ನಿವೇಶವು ವಿಷಮಿಸಿರುವಂತೆ ಕಾಣುವುದು ಆಫ್ಘಾನಿಸ್ಥಾನದಲ್ಲಿಯ ಗೊಂದಲಗಳು ಅಖಿಲ ಪ್ರಪಂಚಕ್ಕೆ ಉರಿಯನ್ನು ಹಾಕುವಂತಿವೆ ಹಿಂದಿನ ಯುದ್ಧಕ್ಕಿಂತಲೂ ಘೋರವಾದ ಯುದ್ಧವು ಸಮೀಪಿಸಿರುವಂತೆ ಕಾಣುತ್ತದೆ. ಈ ಯುದ್ಧವು ಸಂಭವಿಸಿದರೆ ಇಂಡಿಯಾ ದೇಶದ ಸರಹದ್ದಿನಲ್ಲಿಯೇ ನಡೆಯಬೇಕಾಗುವುದು. ಆದುದರಿಂದ ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರಕ್ಕೆ ಒಂದು ಬಲವಾದ ಎಚ್ಚರಿಕೆಯನ್ನು ಕೊಡುವುದು ನಮ್ಮ ಕರ್ತವ್ಯವೆಂದು ಭಾವಿಸಿರುವೆವು. ಆಫ್ಘಾನಿಸ್ಥಾನದ ಸ್ವಾತಂತ್ರ್ಯವನ್ನು ಹಾಳುಮಾಡುವ ಭೇದನೀತಿಯನ್ನಾಗಲೀ ದಂಡನೀತಿಯನ್ನಾಗಲೀ ಇಂಡಿಯಾ ಸರ್ಕಾರದವರು ಅನುಸರಿಸಕೂಡದು. ಆಫ್ಘಾನಿಸ್ಥಾನದ ಅಂತಃಕಲಹಗಳಿಗೆ ಇಂಡಿಯಾ ಸರ್ಕಾರದವರು ಸರ್ವಥಾ ಪ್ರವೇಶಿಸಕೂಡದು. ಮದರಾಸಿನಲ್ಲಿಯೂ ಕಲಕತ್ತಾದಲ್ಲಿಯೂ ನಡೆದ ರಾಷ್ಟ್ರೀಯ ಮಹಾಸಭೆಯಲ್ಲಿ ಭಾರತೀಯರು ತಮ್ಮ ಮನಸ್ಸಿನ ಅಭಿಪ್ರಾಯವನ್ನು ವಿಶದೀಕರಿಸಿರುವರು. ಇಂಡಿಯಾದೇಶಕ್ಕೆ ಪಶ್ಚಾದ ಯಾವ ರಾಜ್ಯದೊಡನೆಯೂ ಜಗಳವಾಗಲಿ· ದ್ವೇಷವಾಗಲೀ ಇಲ್ಲ. ಆಫ್ಘಾನಿಸ್ಥಾನಕ್ಕೂ ಇಂಡಿಯಕ್ಕೂ ಬಹಳ ಬಲವಾದ ಸ್ನೇಹವಿರುವುದು. ಯಾವ ದೇಶದ ಸ್ವಾತಂತ್ರ್ಯವನ್ನು ಹಾಳುಮಾಡುವುದಕ್ಕೂ ಇಂಡಿಯಾ ದೇಶವು ಸ್ವಲ್ಪವೂ ಸಹಾಯಮಾಡುವುದಿಲ್ಲ. ರಾಜಕೀಯ ಪರದಾಸ್ಯವೇ ನು ಒಂದು ಇಂಡಿಯಾ ದೇಶಕ್ಕೆ ಚೆನ್ನಾಗಿ ಗೊತ್ತಾಗಿರುವುದು. ಅದು ಅಸಹ್ಯವಾಗಿರುವುದು. ಆಂಗ್ಲೇಯರು ತಮ್ಮ ಸಾಮ್ರಾಜ್ಯವನ್ನು ಬೆಳೆಯಿಸಿಕೊಳ್ಳುವುದಕ್ಕಾಗಿ ಆಫ್‌ಘಾನಿಸ್ಥಾನದ ಒಳ ಆಡಳಿತದಲ್ಲಿ ಪ್ರವೇಶಿಸಿ ಯುದ್ಧವನ್ನು ಹೂಡಿದರೆ ಭಾರತೀಯರೊಬ್ಬರೂ ಸಹಾಯ ಮಾಡುವುದಿಲ್ಲ ಇಂಡಿಯಾ ಸರ್ಕಾರವು ಇಂಡಿಯಾ ದೇಶದ ಒಬ್ಬ ಮನುಷ್ಯನನ್ನಾಗಲೀ ಒಂದು ಕಾಸನ್ನಾಗಲೀ ಇದಕ್ಕೆ ಉಪಯೋಗಿಸಕೂಡದು."

ಭಾರತೀಯ ಮುಖಂಡರು ಇಂಡಿಯಾ ಸರ್ಕಾರಕ್ಕೆ ಕೊಟ್ಟಿರುವ ಎಚ್ಚರಿಕೆಯನ್ನು ಭಾರತೀಯರೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಎಚ್ಚರಿಕೆಯನ್ನು ದುರ್ಲಕ್ಷಿಸಿ ಇಂಡಿಯಾ ಸರ್ಕಾರದವರು ಮುಂದೆ ನುಗ್ಗಿದರೆ ಮುಂದಿನ ದುಷ್ಪರಿಣಾಮಗಳಿಗೆಲ್ಲಾ ಅವರೇ ಜವಾಬ್ದಾರರಾಗುವರು.

ವರ್ತಮಾನ ಸಂಗ್ರಹ

ಲಾಲಾಜಿಯವರ ಸ್ಮಾರಕ

ಲಾಲಾ ಲಜಪತರಾಯರ ಸ್ಮಾರಕ ಫಂಡಿಗಾಗಿ ಸೇರಿರತಕ್ಕ ದ್ರವ್ಯವು ಕೆಳಗೆ ಕಂಡಂತೆ ವಿನಿಯೋಗವಾಗುವುದು.

(1) ಲಾಹೋರಿನಲ್ಲಿರುವ ಸರ್ವೆಂಟ್ ಆಫ್ ಪೀಪಲ್ಸ್ ಸೊಸೈಟಿಯ ರಕ್ಷಣೆಗಾಗಿ 42,2000 ರೂ, ಗಳು

(2) ಲಾಲಾಜಿಯವರ ಹೆಸರಿನಿಂದ ಅರ್ಧ ಕಟ್ಟಲ್ಪಟ್ಟ ಸಭಾಮಂದಿರವನ್ನು ಮುಗಿಸುವುದಕ್ಕಾಗಿ 25000 ರೂ

(3) ಅಂತ್ಯಜೋದ್ಧಾರಕ್ಕೆ 20,000 ರೂ ಗಳನ್ನು ಖರ್ಚು ಮಾಡುವ ಕಾರ್ಯವು ಸರ್ವೆಂಟ್ ಆಫ್ ಪೀಪಲ್ಸ್‌ಸೊಸೈಟಿಯವರಿಗೆ ಸೇರಿರುತ್ತದೆ.

ಲೀಗಲ್ ನೋಟೀಸ್.

ಎನ್‌ಕ್ವೈರಿ ಕಮಿಟಿಯ ಮುಂದೆ ಮಾನನಷ್ಟಕರವಾದ ಸ್ಟೇಟ್‌ಮೆಂಟುಗಳನ್ನು ಮ|| ರಾ|| ಎಂ. ಎಸ್. ಲಿಂಗೇಗೌಡರು ಕೊಟ್ಟಿದ್ದಕ್ಕಾಗಿ ಕ್ಷಮಾಪಣೆಯನ್ನು ಕೇಳಿಕೊಳ್ಳುವುದಲ್ಲದೆ 10,500ರೂ.ಗಳ ನಷ್ಟವನ್ನೂ ಸಹ ಕಟ್ಟಿಕೊಡಬೇಕೆಂದು ಮ|| ರಾ|| ಎಲ್. ಎಸ್ ರಾಜುರವರು ಮ|| ರಾ|| ಲಿಂಗೇಗೌಡರಿಗೆ ನೋಟೀಸ್ ಕೊಟ್ಟಿರುವರು.

"ಸ್ಟಾರ್" ಮೇಲೆ ಮತ್ತೊಂದು ಮೊಖದ್ದಮೆ.

1928ನೇ ನವಂಬರ್ 3 ಮತ್ತು 28ನೇ ತಾ|| ಗಳ ಮೈಸೂರು ಸ್ಟಾರು ಪತ್ರಿಕೆಯಲ್ಲಿ ಬೆಂಗಳೂರು ಗಲಭೆಗಳ ಸಂದರ್ಭದಲ್ಲಿ ಡಿಸ್‌ಮಿಸ್ ಮಾಡಲ್ಪಟ್ಟ ಉಪಾಧ್ಯಾಯರುಗಳ ವಿಷಯವಾಗಿ ಪ್ರಕಟವಾಗಿದ್ದ (1) ಸರ್ಕಾರಿ ನೌಕರರ ಅರಾಜಕತ್ವವು (2) ಸರ್ಕಾರಿ ಉದ್ಯೋಗಿಗಳ ರಾಜಕೀಯ ಚಳವಳಿ ಎಂಬ ಲೇಖನಗಳಿಗೋಸ್ಕರ ಆರುಜನ ಉಪಾಧ್ಯಾಯರಲ್ಲೊಬ್ಬರಾದ ಮ|| ರಾಮಕೃಷ್ಣಯ್ಯನವರು ಸದರಿ ಪತ್ರಿಕಾಕರ್ತರಮೇಲೆ ಈ ತಿಂಗಳು 20ನೇ ತಾ|| ನ ದಿವಸ ಬೆಂಗಳೂರು ಫಸ್ಟ್‌ಕ್ಲಾಸ್ ಬೆಂಚ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾನನಷ್ಟದ ಮೊಕದ್ದಮೆಯನ್ನು ಹೂಡಿರುವರು. ಮ|| ರಾ|| ಗಳಾದ ಎಂ. ಪಿ ಸೋಮಶೇಖರರಾಯರೂ, ಸಿಟ್ಟೂರಿ ಶ್ರೀನಿವಾಸರಾಯರೂ, ಮತ್ತು ಮೊಕ್ಷಗುಂಡಂ ಕೃಷ್ಣಮೂರ್ತಿಯವರೂ ವಾದಿಯ ಪರ ವಕೀಲಿಯನ್ನು ವಹಿಸಿರುವರು.

"ಸ್ಟಾರ್" ಪತ್ರಿಕೆಯ ಮೊಖದ್ದಮೆ.

ಮ|| ಆರ್, ಗೋಪಾಲಸಾಮಯ್ಯರವರು ಮೈಸೂರು ಸ್ಟಾರ್ ಪತ್ರಿಕೆಯ ಮೇಲೆ ಮಾಡಿದ್ದ ಮೊಖದ್ದಮೆಯ ಮುಂದಿನ ಹೀರಂಗು ಈ ತಿಂಗಳು 28ನೇ ತಾ|| ಗೆ ಅಡ್ಜರ್ನು ಆಗಿದುತ್ತದೆ.

ಚೀಫ್ ಜಡ್ಜರ ಬಡ್ತಿ.

ಸರ್ಕಾರದವರು ಚೀಫ್ ಜಡ್ಜರವರಾದ ಮ|| ಸಿ. ಎಸ್. ದೊರೆಸ್ವಾಮಯರ್‌ರವರ ಸಂಬಳವು ಈ ಮಾಹೆಯ 1 ನೇ ತಾ|| ಲಾಗಾಯಿತು 2500 ರೂ ಗಳ ಬಡ್ತಿಯನ್ನೂ ಮತ್ತೊಂದು ವರ್ಷ ಎಕ್ಸ್‌ಟೆನ್‌ಷನ್ನನ್ನೂ ಸಹ ಕೊಟ್ಟಿರುವರು.

ಖಾಸರ ಮೇಲೆ ಮೊಖದ್ದಮೆ.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ ಮ|| ರಾ|| ಬಿ. ಕೆ. ಗರುಡಾಚಾರ್ಯರು, ಮಿ|| ಅಬ್ಬಾಸ್ ಖಾಸರ ಮೇಲೆ 10,500ರೂ. ನ ಮಾನನಷ್ಟದ ಮೊಖದ್ದಮೆಯನ್ನು ದಾಖಲ್ಮಾಡಿರುವರು.

ಕರ್ನಾಟಕದ ಪೊಲಿಟಿಕಲ್ ಕಾನ್‌ಫರೆನ್ಸ್.

ಕರ್ನಾಟಕ ಪ್ರಾಂತ್ಯದ ಪೊಲಿಟಿಕಲ್ ಸಮ್ಮೇಳನದ ಆರನೆಯಧಿವೇಶನವು ಬೆಳಗಾಮಿನಿಂದ 45 ಮೈಲಿ ದೂರದಲ್ಲಿರುವ ಸಾರಥಿತಿ ಎಂಬ ತಾಲ್ಲೂಕಿನಲ್ಲಿ 1929 ನೇ ಮೇ ತಿಂಗಳಲ್ಲಿ ನಡೆಯಬೇಕೆಂದು ಬೆಳಗಾಂ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಲ್ಲಿ ತೀರ್ಮಾನವಾಯಿತು.

ಬೆಂಚ್ ಕೋರ್ಟ್.

ಮೊಳಕಾಲ್ಮೂರು ಬೆಂಚ್ ಕೋರ್ಟಿಗೆ ಮ|| ಗಣದ ಜೋಡೀದಾರ್ ರಂಗಣ್ಣನವರೂ ಮಹಿಸಾಲು ರಾಮಪ್ಪನವರೂ ಮೂರನೆ ದರ್ಜೆಯ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು, ಮ|| ಕೆ. ಹನುಮಂತಯ್ಯನವರನ್ನು ಕಡೂರುಬೆಂಚುಕೋರ್ಟಿಗೆ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿ ನಿಯಮಿಸಿದಾರೆ.

ಮುನಿಸಿಪಲ್ ಕೌನ್ಸಿಲ್,

ಲೂಯಿ ಥಿಯೊಬಾಲ್ಡ್‌ರವರನ್ನು ಮೈಸೂರು ಸಿಟಿ ಮುನಿಸಿಪಲ್ ಕೌನ್‌ಸಿಲ್ಲಿನ ಕೌನ್‌ಸಿಲರಾಗಿ ನೇಮಿಸಿರುವರು.

ದೇವಾಲಯ ಸಹಾಯ

ಮಿ|| ರಾಮಸ್ವರದಾಸ್‌ರವರು ಹಿಂದುಳಿದ ಪಂಗಡದವರಿಗೆ ದೇವಸ್ಥಾನಗಳನ್ನು ಕಟ್ಟಿಸಿ ಕೊಡುವುದಕ್ಕಾಗಿ ಪಂಡಿತ್ ಮಾಲವಿಯರವರಲ್ಲಿ ಹತ್ತುಸಾವಿರ ರೂ. ಗಳನ್ನು ಕೊಟ್ಟಿರುವರು.

ಬ್ರಿಟಿಷ್‌ಸರ್ಕುಗಳ ಬಹಿಷ್ಕಾರ

ಶ್ರೀ|| ಸುಭಾಷ ಚಂದ್ರಭೋಸ್‌ರವರು ಬಂಗಾಳದಲ್ಲಿ ಬ್ರಿಟಿಷ್‌ಸರ್ಕುಗಳ ಬಹಿಷ್ಕಾರದ ಚಳವಳಿಯನ್ನು ಹೂಡಿರುವರು.

ಅರ್ಚಕರಿಗೆ ಶಿಕ್ಷಣ.

ನಮ್ಮ ಸಂಸ್ಥಾನದ ದೇವಸ್ಥಾನಗಳಲ್ಲೆಲ್ಲಾ ನಡೆಯುತ್ತಿರುವ ಆಗಮೋಕ್ತವಾದ ಅರ್ಚನೆಯನ್ನು ಕ್ರೋಢೀಕರಿಸಿ: ಸುಧಾರಣೆಗಳನ್ನು ಸೂಚಿಸಿ, ಮುಂದೆ ನೇಮಿಸಲ್ಪಡುವ ಆಗಮೀಕರಿಗೂ ಅರ್ಚಕರಿಗೂ ಸರಿಯಾದ ಶಿಕ್ಷಣವನ್ನು ಕೊಡುವುದಕ್ಕೋಸ್ಕರ ಸಂಸ್ಕೃತಪಾಠಶಾಲೆಯಲ್ಲಿ ಪಾಠಕ್ರಮವು ಏರ್ಪಡಿಸಲ್ಪಡಬೇಕೆಂದು ಸರ್ಕಾರದ ಹುಕುಮಾಗಿದೆ. ವಿದ್ಯಾರ್ಥಿಗಳಿಗೆ ತಿಂಗಳು 1 ಕ್ಕೆ 40-50 ರೂಪಾಯಿಗಳವರೆಗೆ ನಾಲ್ಕು ವರ್ಷವೂ ಕೊಡಲ್ಪಡುವುದು.

ತಾಯಿನಾಡು.

26—1—1929

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ.

(ಮುಕ್ತಾಯ)

ಇನ್ನೊಂದು ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಬ್ರಿಟಿಷ್ ಪ್ರಾಂತ್ಯಗಳಿಗೆ ಇಂದಿಲ್ಲ ನಾಳೆಯಾದರೂ ಜವಾಬ್ದಾರೀ ಸರ್ಕಾರವು ಬಂದೇಬರುವುದು. ಆಗ ದೇಶೀಯ ಸಂಸ್ಥಾನದ ಪ್ರಜೆಗಳನ್ನು ನಿರಂಕುಶ ರಾಜ್ಯ ಪದ್ಧತಿಯಿಂದ ತೃಪ್ತರಾಗಿ ಎಂದು ಹೇಳಲಾಗುವುದಿಲ್ಲ ಸಾಮಾನ್ಯವಾದ ವಿವೇಕದಿಂದ ನೋಡಿದರೂ ರಾಜರುಗಳು ಪ್ರಜೆಗಳಿಗೆ ಜವಾಬ್ದಾರೀ ಸರ್ಕಾರವನ್ನು ಕೊಡಲೇ ಬೇಕಾಗುವುದು.

ಸಂಸ್ಥಾನಗಳ ಪ್ರಜೆಗಳ ಕಣ್ಣುಗಳೂ, ಕಿವಿಗಳೂ ಇಂದು ತೆರವಿವೆ. ಅಖಿಲ ಇಂಡಿಯಾಕ್ಕೆಲ್ಲಾ ಫೆಡರಲ್ ರಾಜ್ಯ ರಚನೆಯಾಗಬೇಕೆಂದೂ, ದೇಶೀಯ ಸಂಸ್ಥಾನಗಳ ಒಳಗೆಲ್ಲಾ ಜವಾಬ್ದಾರೀ ಸರಕಾರೀ ಪದ್ಧತಿಯು ಸ್ಥಾಪಿಸಲ್ಪಡಬೇಕೆಂದೂ ಅವರು ಕೇಳುತ್ತಲಿದ್ದಾರೆ. ಇವೆಲ್ಲವುಗಳೆಲ್ಲಾ ತಪನೀಲಿನ ವಿಷಯಗಳು. ಬ್ರಿಟಿಷ್ ಅಧಿಕಾರಿಗಳೂ, ಸಂಸ್ಥಾನಗಳ ಪ್ರಭುಗಳೂ ತಮ್ಮ ಜವಾಬ್ದಾರಿಗಳ ವಿಷಯವಾಗಿ ವಿಶಾಲವಾದ ಭಾವನೆಯಿಂದ ತಮ್ಮ ಮತ್ತು ದೇಶೀಯ ಸಂಸ್ಥಾನಗಳ ಪ್ರಜೆಗಳ ಶಾಶ್ವತ ಹಿತದ ಕಡೆಗೆ ದೃಷ್ಟಿಯನ್ನು ಇಟ್ಟರೆ, ಮೇಲಿನ ಪ್ರಶ್ನೆಯನ್ನು ಬಹಳ ಸುಲಭವಾಗಿ ಬಿಡಿಸಬಹುದು.

ಈಗಿನ ಪರಿಸ್ಥಿತಿಯಲ್ಲಿ ಬ್ರಿಟಿಷ್ ಇಂಡಿಯಾದ ಸಹೋದರರುಗಳು. ನಮ್ಮೊಡನೆ ಪ್ರಕಟವಾಗಿಯೂ, ಕಾರ್ಯಕಾರಿಯಾಗಿಯೂ ಕಲೆಯ ಇತ್ತಿಲ್ಲವೆಂದು ನಾವು ಅವರನ್ನು ನಿಂದಿಸಬಾರದು. ನಮಗೋಸ್ಕರವಾಗಿ ಅವರು ಅಂಕುರಾರ್ಪಣವನ್ನು ಮಾಡುತ್ತಿದ್ದಾರೆ. ನಮ್ಮ ಸ್ವಂತ ಹಿತವನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿಯೇ ಈಗ ಅವರು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಬೇಕಾಗಿದೆ. ನ್ಯಾಯವಾದ ರೀತಿಯಲ್ಲಿ ರಚಿಸಲ್ಪಟ್ಟಿರುವ ನೆಹರೂ ವರದಿಗೆ ನಾವು ಯಾವ ವಿರೋಧವನ್ನೂ ಹಾಕಬೇಕಾಗಿಲ್ಲ. ಸಂಸ್ಥಾನಗಳ ರಾಜರುಗಳನ್ನೂ ಎದುರು ಹಾಕಿಕೊಳ್ಳಬೇಕಾಗುವ ಆವಶ್ಯಕತೆಯಿಲ್ಲ. ರಾಜರುಗಳು ತಮ್ಮ ಸ್ವಂತ ಹಿತವೆಂದು ಭಾವಿಸಿ, ಪ್ರಜೆಗಳ ಕೋರಿಕೆಗಳನ್ನು ವಿರೋಧಿಸಬಹುದು. ಆದರೆ ಎಲ್ಲಾ ಕಾಲಕ್ಕೂ ತಮ್ಮ ನಿರಂಕುಶ ರಾಜ್ಯ ಪದ್ಧತಿಯನ್ನೇ ಪ್ರಜೆಗಳ ಮೇಲೆ ಚಲಾಯಿಸುವುದು ಅಸಾಧ್ಯವೆಂಬುದನ್ನು ರಾಜರುಗಳು ಅರಿಯಬೇಕು. ಪ್ರಜೆಗಳ ಸಂತೋಷ ಮತ್ತು ಒಪ್ಪಿಗೆಗಳಿಂದಲೇ ರಾಜರುಗಳ ಆಡಳಿತವು ಶಾಶ್ವತವಾಗಿ ನಡೆಯಬೇಕಾಗುವುದು. ಪ್ರಜೆಗಳ ಕೋರಿಕೆಗಳಿಗೆ ವಿರೋಧವಾಗಿ ರಾಜರುಗಳು ಪ್ರತಿಭಟಿಸಿದರೆ, ಅವರಿಗೇ ಮುಂದಕ್ಕೆ ಕ್ಷೇಮವಿಲ್ಲ,

ಪ್ರಜೆಗಳಿಗೆ ಈಗ ಅಸಮಾಧಾನವು ಹೆಚ್ಚಾಗಿರುವುದು. ಇದರಲ್ಲಿ ಮುಚ್ಚು ಮರೆಯೇನೂ ಇಲ್ಲ. ಅಪನಂಬಿಕೆಯೂ ಉಂಟಾಗಿರುವುದು. ಅಪನಂಬಿಕೆಯೇಕೆಂದರೆ, ಬ್ರಿಟಿಷ್ ಸರಕಾರದವರು ರಾಜಕೀಯ ಸುಧಾರಣೆಗಳನ್ನು ಕೊಡದಿರುವುದಕ್ಕೆ ಏನಾದರೂ ಸಬೂಬುಗಳನ್ನು ಹೇಳುತ್ತಿದ್ದಾರೆ. ಅಸಮಾಧಾನವೇಕೆಂದರೆ, ರಾಜಕೀಯ ಅಭಿವೃದ್ಧಿಯು ತಡೆಯಾದಂತೆಲ್ಲಾ ದೇಶದ ಇತರ ಅಭಿವೃದ್ಧಿಗಳಿಗೆಲ್ಲಾ ತಡೆಯಾಗುವುದು. ಇಂಡಿಯಾ ದೇಶವು ಇತರ ಮುಂದುವರಿದ ದೇಶಗಳಂತೆ ಅಭಿವೃದ್ಧಿಯನ್ನು ಹೊಂದಲು ಅವಕಾಶವಾಗುವುದಿಲ್ಲ. ಇದರಿಂದ ದೇಶಕ್ಕೆ ಬಹಳ ನಷ್ಟವುಂಟಾಗುವುದು.

ಈಗ ಕೆಲವು ದಿವಸಗಳ ಹಿಂದೆ, ಪಯೋನಿಯರ್ ಪತ್ರಿಕೆಯು ನಿಸ್ವಾರ್ಥ ಬುದ್ಧಿಯಿಂದಲೂ, ಸ್ಪಷ್ಟಬುದ್ಧಿಯಿಂದಲೂ ಹೇಳಿದಂತೆ, ಇಂಡಿಯಾ ಸರಕಾರವೂ, ಬ್ರಿಟಿಷ್ ಸರಕಾರವೂ, ಇಂಡಿಯಾ ದೇಶದ ಆತ್ಮಾಭಿವೃದ್ಧಿಗೂ, ಆತ್ಮ ಬೆಳವಣಿಗೆಗೂ, ಆತ್ಮ ಪ್ರಕಾಶಕ್ಕೂ ಅವಕಾಶವನ್ನು ಕೊಟ್ಟಿಲ್ಲ.

ಈಗಿನ ಸ್ಥಿತಿಯಲ್ಲಿ ಸುಧಾರಣೆಗಳನ್ನು ತುಂಡುತುಂಡಾಗಿ ಕೊಡುವದಕ್ಕೆ ಅರ್ಥವೇ ಇಲ್ಲ. ಒಬ್ಬ ಮನುಷ್ಯನ ಶರೀರವನ್ನು ಒಂದೊಂದು ಸಲ ಒಂದೊಂದು ಅಂಗವಾಗಿ ಬೆಳೆಯಬೇಕೆಂದು ನಿರೀಕ್ಷಿಸುವುದು ಎಷ್ಟು ನ್ಯಾಯವೋ ಇದೂ ಅಷ್ಟೇ ಸರಿ. ಒಂದು ಜೀವವಸ್ತುವು ಅಖಂಡವಾಗಿ ಬೆಳೆಯುವದಕ್ಕೆ ಹೇಗೆ ಅವಕಾಶವಿರಬೇಕೋ ಇದಕ್ಕೂ ಹಾಗೆಯೇ ಇರಬೇಕು.

ಬ್ರಿಟಿಷರು ಇಂಡಿಯಾ ದೇಶವು ಸ್ವಸಂರಕ್ಷಣೆಯನ್ನು ಮಾಡಿಕೊಳ್ಳುವುದಕ್ಕೂ, ಸ್ವರಾಜ್ಯವನ್ನು ಅಭಿವೃದ್ಧಿ ಮಾಡಿಕೊಳ್ಳುವದಕ್ಕೂ, ಸ್ವಲ್ಪವೂ ಅವಕಾಶವನ್ನುಂಟುಮಾಡಿಲ್ಲ. ತಮ್ಮ ಪ್ರಭುತ್ವವು ಅತ್ಯುಚ್ಛಾವಸ್ಥೆಯಲ್ಲಿದ್ದಾಗ, ಬ್ರಿಟಿಷ್ ಸರಕಾರದವರು ಇಂಡಿಯ ದೇಶದ ಸಾಮಾನ್ಯ ಪ್ರಜೆಗಳ ವಿದ್ಯಾಭ್ಯಾಸವನ್ನೂ, ಕೈಗಾರಿಕೆಗಳನ್ನೂ ಹಾಳುಮಾಡಿದರು. ಈಗ ಅದಕ್ಕೆಲ್ಲಾ ಅವರು ಪಶ್ಚಾತ್ತಾಪವನ್ನು ಪಟ್ಟು ಪರಿಹಾರವನ್ನು ಮಾಡಬೇಕು. ಈಗಲೂ ಅವರು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ ವಿಷಯಗಳೆಲ್ಲಾ ತಟಸ್ಥವಾಗಿಯೇ ಇವೆ. ಬ್ರಿಟಿಷ್ ಅಧಿಕಾರಿಗೆ ಇಂಡಿಯಾ ದೇಶದಲ್ಲಿ ಆಸಕ್ತಿಯಿಲ್ಲ. ಆದರೂ ಅಭಿವೃದ್ಧಿಯ ಕೆಲಸ ಕಾರ್ಯಗಳಿಗೆಲ್ಲಾ ವಿಘಾತವನ್ನು ತರುತ್ತಾನೆ. ಇದರ ಪರಿಣಾಮವೇನೆಂದರೆ ನಿಂತಲ್ಲಿಯೇ ನಿಂತಿರುವುದು, ಜಡತನ ಮತ್ತು ಕೆಲವು ಕಡೆ ನಿರಾಶೆ.

ಫೆಡರಲ್ ರಾಜ್ಯರಚನೆಯನ್ನು ಸ್ಥಾಪಿಸಿ, ಸಮ್ಮಿಳಿಸಿ ಓಬೀರಾಯನ ಕಾಲದ ನಿರಂಕುಶ ರಾಜ್ಯ ಪದ್ಧತಿಯನ್ನು ನಿರ್ಮೂಲ ಮಾಡಿ, ದೇಶವು ಅಭಿವೃದ್ಧಿಯ ಮಾರ್ಗದಲ್ಲಿ ನಡೆಯುವ ಹಾಗೆ ಮಾಡುವುದು ಬ್ರಿಟಿಷ್ ಸರಕಾರದವರ ಕೈಯಲ್ಲಿದೆ.

ಬ್ರಿಟಿಷ್ ಪತ್ರಿಕೆಗಳೂ, ರಾಜರುಗಳೂ ಮತ್ತು ರಾಷ್ಟ್ರೀಯ ಸಭೆಯೂ, ಎಲ್ಲರೂ, ದೇಶೀಯ ಸಂಸ್ಥಾನಗಳು ಫೆಡರಲ್ ಇಂಡಿಯಾ ರಾಜ್ಯ ರಚನೆಯ ಭಾಗಿಗಳಾಗಬೇಕೆಂದು ಒಪ್ಪಿರುವರು. ಇಂಡಿಯಾ ದೇಶದ ಎಲ್ಲಾ ಭಾಗಗಳಿಗೂ, ಸುಧಾರಣೆಗಳ ಪ್ರಶ್ನೆಯು ಒಂದೇ ಎಂಬುದನ್ನು ಈಚೀಚೆಗೆ ಅರಿಯಲಾರಂಭಿಸಿರುವರು ಬ್ರಿಟಿಷ್ ಇಂಡಿಯಾವು ಬೇರೆ ದೇಶೀಯ ಸಂಸ್ಥಾನಗಳು ಬೇರೆ ಇವೆರಡನ್ನೂ ಬೇರೆಯಾಗಿ ಇಡಬೇಕೆಂಬ ಅಭಿಪ್ರಾಯವು ಸರಿಯಲ್ಲವೆಂದು ತಿಳುವಳಿಕೆಯು ಬರಲಾರಂಭವಾಗಿರುವುದು. ಇದರಿಂದ ಎರಡು ಸಂಗತಿಗಳು ತೋರಿಬಂದವೆಂದು ಜನಗಳ ಮನಸ್ಸಿಗೆ ಬರಲಾರಂಭವಾಗಿರುವುದು. ದೇಶೀಯ ಸಂಸ್ಥಾನಗಳನ್ನೂ, ಈಗ ಬ್ರಿಟಿಷ್ ಇಂಡಿಯಾವಾಗಿರುವ ಭಾಗವನ್ನೂ ಶಾಶ್ವತವಾಗಿ ಬೇರೆಯಾಗಿಡುವುದು ಸರಿಯಾದ ಆಲೋಚನೆಯಲ್ಲ. ಮತ್ತು ಅಪಾಯಕರವಾದುದು ಎಂಬ ಭಾವನೆಯು ಬಂದಿರುವುದು.

[illegible]

[illegible]

[illegible]

Printed and published by P. R Ramaiya. at Sri Rama Press, D Subbiah RoadMysore.

Regd No. M 2322 ॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ
ಚಂದಾ

ಸಂಪುಟ ೧] ಸೋಮವಾರ ೨೮ ಜನವರಿ ೧೯೨೯ [ಸಂಚಿಕೆ

ಸೈಮರ್ ಕಮಿಷನ್ನಿನವರು ಮಾರ್ಚಿ ಮೊದಲನೆ ವಾರದಲ್ಲಿ ರಾಜಧಾನಿಗೆ ಬರುವರೆಂದು ವದಂತಿ. ಅವರಿಗಿಲ್ಲೇನು ಕಾರ್ಯವೋ?

TAI NADU
28—1—1929

ಸರ್ಕಾರಕ್ಕೊಂದು ಮಾತು.

ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿ 24 ದಿನಗಳಾದವು. ಅವರು ಶ್ರೀಮನ್ಮಹಾರಾಜರವರಿಗೆ ಅರ್ಜಿಯನ್ನು ಬರೆದುಕೊಂಡರು. ಸಭೆಗಳಾದವು. ಭಾಷಣಗಳಾದವು. ಠರಾವುಗಳಾದವು. ಉಗ್ರವಾದ ಲೇಖನಗಳೂ ಬಂದವು. ಜಾಯಿಂಟ್ ಸಮಿತಿಯಿಂದಲೂ ಬರವಣಿಗೆಯಿಂದಲೂ ಅನ್ಯಾಯವನ್ನು ಎಷ್ಟು ಉದ್ಘಾಟಿಸಬಹುದೋ ಅಷ್ಟು ಆಯಿತು. ಸರ್ಕಾರದವರೇನೋ ಪ್ರಜಾಭಿಪ್ರಾಯಕ್ಕೆ ಬಗ್ಗುವ ಹಾಗೆ ಕಾಣುವುದಿಲ್ಲ. ಮೊಂಡುತನದಿಂದಲೆ ತಮ್ಮ ದರ್ಪವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡುತ್ತಿದ್ದಾರೆ. ಇತರ ಪತ್ರಿಕೆಗಳ ನೀತಿಯೂ ತಮ್ಮ ಸಿದ್ಧಾಂತವನ್ನು ಘೋಷಿಸುತ್ತಿರುವುದು. ಪ್ರಜೆಗಳೆಲ್ಲರೂ ನಿರಾಶರಾಗುತ್ತಿರುವರು. ಸರ್ಕಾರದವರು ಪ್ರಜೆಗಳ ಮನೋಗತವನ್ನು ಅರಿಯದೆ ಕೆಲವು ಸ್ವಾರ್ಥಿಗಳ ಮತ್ತು ದುಷ್ಟಬುದ್ಧಿಗಳ ಜತೆಗೆ ಬಿದ್ದು ಅನ್ಯಾಯವನ್ನು ನಡೆಸುತ್ತಿದ್ದಾರೆ. ಅನ್ಯಾಯದ ಸಹನೆಗೂ ಒಂದು ಮಿತಿಯುಂಟು. ಪತ್ರಿಕಾ ಸ್ವಾತಂತ್ರ್ಯವು ಜನಜೀವನಕ್ಕೆ ವಾಯುವಿನಂತೆ. ಪತ್ರಿಕೆಗಳಿರುವುದರಿಂದಲೇ ಪ್ರಜೆಗಳಲ್ಲಿ ಬಲಬರುತ್ತದೆ. ಪತ್ರಿಕೆಗಳೇ ಪ್ರಜೆಗಳ ಬಾಯಿ. ಪತ್ರಿಕೆಗಳನ್ನು ಬಂಧಿಸುವುದು ಪ್ರಜೆಗಳ ಬಾಯನ್ನು ಕಟ್ಟಿದ ಹಾಗೆ, ಶ್ವಾಸೋಚ್ಛ್ವಾಸಗಳನ್ನು ತಡೆದ ಹಾಗೆ. ಈಗಾಗಾಲೆ ಸರ್ಕಾರ ಕಾನೂನಿನ ಸತ್ಯಾಗ್ರಹದ ಪ್ರಯತ್ನವು ನಡೆಯುತ್ತಿರುವುದು. ಮೈಸೂರಿಗೆ ಇಂಥಾ ಪರಿಸ್ಥಿತಿಯು ಬರಕೂಡದೆಂಬುದೇ ನಮ್ಮ ಆಶೆ. ಅದಕ್ಕೆ ಅವಕಾಶಕೊಡದೆ ಸರ್ಕಾರದವರು ಈಗಲೇ ಎಚ್ಚತ್ತುಕೊಂಡು ಬಂಧಿಸಿರುವ ಪತ್ರಿಕೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು ಪ್ರಜಾಭಿಪ್ರಾಯಕ್ಕೆ ಬಗ್ಗಿ ನಡೆಯುವರೆಂದು ನಂಬುತ್ತೇವೆ.

ವಿದ್ಯಾಭ್ಯಾಸದ ಇಲಾಖೆ.

ವಿದ್ಯಾ ಇಲಾಖೆಯ ಪ್ರಾಥಮಿಕ ಪಾಠಶಾಲೆಯಲ್ಲಿ ತರಪೇತಾದ (ಟ್ರೈನ್ಡ್) ಉಪಾಧ್ಯಾಯರುಗಳನ್ನು ನೇಮಿಸುವ ವಿಷಯದಲ್ಲಿ ಸರ್ಕಾರದವರು ಕೆಳಗೆ ನಮೂದಿಸಿರುವ ಹುಕ್ಕುಂ ಮಾಡಿರುವರು.

(1) ಎಲ್ಲಾ ಪಂಗಡಗಳವರಿಗೂ ಎಂದು ಪ್ರಕಟಿಸಲ್ಪಡುವ "ಉಪಾಧ್ಯಾಯರ" ನೌಕರಿಗಳಿಗೆ ಕೋಮುವಾರು ಭೇದವಿಲ್ಲದೆ ತರಪೇತಾದವರಿಗೆ ಮಾತ್ರ ಅವಕಾಶ ದೊರೆಯುವದು.

(2) ಹಿಂದುಳಿದ ಪಂಗಡದವರಿಗೆ ಮಾತ್ರ ಅವಕಾಶ ಇರುವ ಸ್ಪೆಷಲ್ ಕೆಲಸಗಳಿಗೆ ಆಯಾ ಪಂಗಡಗಳಲ್ಲಿ ತರಪೇತಾಗಿರತಕ್ಕವರಿಗೆ ಅವಕಾಶ ಸಿಕ್ಕುವುದು. ಆದರೆ ಬ್ರಾಹ್ಮಣೇತರ ಅಭ್ಯರ್ಥಿಗಳು ಬರಬೇಕಾದ ಸ್ಪೆಷಲ್ ಪೋಸ್ಟಿಗೆ ಬ್ರಾಹ್ಮಣೇತರರು ತರಪೇತಾಗಿಲ್ಲದಿದ್ದರೂ ಟ್ರೈನಿಂಗ್ ಗಿರುವುದೆಂಬ ಆಕಾರಣದ ಮೇಲೆ ಬ್ರಾಹ್ಮಣ ಅಭ್ಯರ್ಥಿಗಳು ನೇಮಿಸಲ್ಪಡಕೂಡದು

ವಿದ್ಯಾರ್ಥಿಗಳ ಮುಷ್ಕರವು ನ್ಯಾಯವಾದದ್ದು

(ಲೇಖಕರು:—ಮಹಾತ್ಮಾ ಗಾಂಧಿಯವರು)

ಗುಜರಾತ್ ಕಾಲೇಜಿನ ಸುಮಾರು 700 ವಿದ್ಯಾರ್ಥಿಗಳ ಮುಷ್ಕರವು 20 ದಿನಗಳಿಂದಲೂ ನಡೆಯುತ್ತಲಿದೆ. ಈ ವಿಷಯವು ಅಹಮದಾಬಾದಿಗೆ ಮಾತ್ರ ಸಂಬಂಧಪಟ್ಟ ವಿಷಯವಲ್ಲ. ಕೂಲಿಯಾಳುಗಳ ಮುಷ್ಕರವು ಕೆಟ್ಟದ್ದು. ವಿದ್ಯಾರ್ಥಿಗಳ ಮುಷ್ಕರವು ಅದಕ್ಕಿಂತಲೂ ಕೆಟ್ಟದ್ದು. ಕಾರಣವು ನ್ಯಾಯವಾಗಲಿ, ಅನ್ಯಾಯವಾಗಲಿ ಮುಷ್ಕರವೇನೋ ಕೆಟ್ಟದ್ದು. ವಿದ್ಯಾರ್ಥಿಗಳಿಗೆ ಮುಷ್ಕರಗಳಿಂದ ಹೆಚ್ಚು ತೊಂದರೆಯಾಗುವುದು. ಕೂಲಿಯಾಳುಗಳು ಮುಷ್ಕರ ಮಾಡಿದರೆ ಸಾಂಪತ್ತಿಕವಾದ ಕಾರಣಗಳಿಗೋಸ್ಕರ. ವಿದ್ಯಾರ್ಥಿಗಳು ವಿದ್ಯಾಭಿಲಾಷಿಗಳು. ಗಿರಣಿಯೇ ಮೊದಲಾದುವುಗಳಲ್ಲಿ ಮಾಲೀಕರಿಗೆ ತಮ್ಮ ಸ್ವಾರ್ಥ ಇಂದಿರುವುದು. ಆದರೆ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಅಧಿಕಾರಿಗಳು ವಿದ್ಯಾರ್ಥಿಗಳ ಹಿತಕ್ಕೆ ವಿರೋಧಿಗಳಾಗಿರುವುದಿಲ್ಲ. ಅದೂ ಅಲ್ಲದೆ ವಿದ್ಯಾರ್ಥಿಗಳು ವಿಧೇಯತೆಯ ಮೂರ್ತಿ ಮತ್ ಸ್ವರೂಪಗಳೇ ಆಗಿರಬೇಕೆಂಬ ಭಾವನೆ ಇದೆ. ವಿದ್ಯಾರ್ಥಿಗಳ ಮುಷ್ಕರಗಳು ಬಹಳ ದೂರದವರೆಗೂ ಮುಟ್ಟುವ ದುಷ್ಪರಿಣಾಮಗಳನ್ನು ಒಳಗೊಂಡಿರುತ್ತವೆ. ಆದುದರಿಂದ ಅಸಾಧಾರಣವಾದ ಪ್ರಸಂಗಗಳಲ್ಲಿಯೇ ವಿದ್ಯಾರ್ಥಿಗಳ ಮುಷ್ಕರವು ನ್ಯಾಯವಾಗುತ್ತದೆ. ಒಳ್ಳೆ ವ್ಯವಸ್ಥೆಯಾದ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಿದ್ಯಾರ್ಥಿಗಳಲ್ಲಿ ಮುಷ್ಕರಗಳಿಗೆ ಬಹಳ ಸ್ವಲ್ಪ ಅವಕಾಶವಿದ್ದರೂ ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು, ಮುಷ್ಕರವನ್ನು ಹಿಡಿಯಬೇಕಾಗುತ್ತದೆ. ಉದಾಹರಣೆಗಾಗಿ ಯಾವ ದಿವಸವನ್ನು ಮಹಾಜನಗಳೂ, ತಂದೆತಾಯಿಗಳೂ, ವಿದ್ಯಾರ್ಥಿಗಳೂ ರಜಾ ದಿನವೆಂಬುದಾಗಿ ಭಾವಿಸುವರೋ ಆ ದಿವಸವನ್ನು ಪ್ರಿನ್ಸಿಪಾಲರು ರಜಾ ದಿನವಾಗಿ ಪರಿಗಣಿಸದಿದ್ದರೆ ಆ ಒಂದು ದಿವಸಕ್ಕೆ ವಿದ್ಯಾರ್ಥಿಗಳು ಮುಷ್ಕರ ಮಾಡುವುದು ನ್ಯಾಯ. ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚಾಗಿ ಆತ್ಮಜ್ಞಾನ ಉಂಟಾದಂತೆಲ್ಲಾ ತಮ್ಮ ಜವಾಬ್ದಾರಿಯ ಜ್ಞಾನವು ಆದಂತೆಲ್ಲಾ ಮುಷ್ಕರದ ಅವಕಾಶಗಳು ಇಂಡಿಯಾ ದೇಶದಲ್ಲಿ ಹೆಚ್ಚಾಗುವುವು. ಗುಜರಾತ್ ಕಾಲೇಜಿನ ವಿಷಯವಾಗಿ ವಿದ್ಯಾರ್ಥಿಗಳು ಹಿಡಿದ ಮುಷ್ಕರವು ನ್ಯಾಯವಾದುದೇ ಆದುದೆಂದು ನಾನು ಭಾವಿಸುತ್ತೇನೆ. ಯಾರೋ ಕೆಲವು ತಂಟೆಕೋರರ ದುಷ್ಪ್ರೇರಣೆಯಿಂದ ಈ ಮುಷ್ಕರವು ನಡೆಯಿತೆಂದು ಹೇಳುವುದು ಸುಳ್ಳು. ಈ ತಂಟೆಕೋರರು 700 ಹುಡುಗರನ್ನು 20 ದಿವಸಗಳವರೆಗೂ ಒಗ್ಗಟ್ಟಾಗಿ ನಿಲ್ಲಿಸುವುದು ಅಸಾಧ್ಯ. ವಾಸ್ತವ್ಯವಾಗಿ ಜವಾಬ್ದಾರರಾದ ನಾಗರಿಕರೇ ವಿದ್ಯಾರ್ಥಿಗಳಿಗೆ ಉಪದೇಶಕರಾಗಿಯೂ ಮಾರ್ಗದರ್ಶಕರಾಗಿಯೂ ಇರುತ್ತಾರೆ. ಪ್ರಿನ್ಸಿಪಾಲರು ತಮ್ಮ ಮಾತಿಗೆ ತಪ್ಪಿದರೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುವುದು ನ್ಯಾಯ. ಕೊಟ್ಟ ಮಾತಿಗೆ ತಪ್ಪುವ ಉಪಾಧ್ಯಾಯರಿಗೆ ನಿಷ್ಕಲಂಕವಾದ ವಿಧೇಯತೆಯನ್ನು ತೋರಿಸುವುದು ಅಸಾಧ್ಯ. ರಸ್ಕಾರದವರು ಆ ಪ್ರಿನ್ಸಿಪಾಲರನ್ನು ಕಿತ್ತು ಬೇರೆ ಪ್ರಿನ್ಸಿಪಾಲರನ್ನು ನೇಮಿಸುವುದೇ ಈಗಿನ ಸಂದ

ವಿವಿಧ ವಿಷಯಗಳು

ಆದರ್ಶ ಮುನಿಸಿಪಾಲಿಟಿ

(ಕರ್ನಲ್ ರಾಯರವರ ಅಭಿಪ್ರಾಯಗಳು.)

ಈಗ ಕೆಲವು ದಿವಸಗಳ ಹಿಂದೆ ಮಂಗಳೂರಿನಲ್ಲಿ ಲೆಫ್ಟಿನೆಂಟ್ ಕರ್ನಲ್ ದಿವಾನ್ ಗಣಪತ್‌ರಾಯ ಅವರು ಶ್ರೀ ಸಾಲ್ ದಾಸರವರ ಅಧ್ಯಕ್ಷತೆಯಲ್ಲಿ ಮುನಿಸಿಪಾಲಿಟಿಯ ಆದರ್ಶವೇನು ಎಂಬ ವಿಷಯದಲ್ಲಿ ಒಂದು ಉಪನ್ಯಾಸ ಕೊಟ್ಟರು. ವಿಯನ್ನಾ ಪಟ್ಟಣದ ಸ್ನಾಕ್ಷ್ಯವನ್ನು ತೆಗೆದುಕೊಂಡರು ಆ ಊರಿನ ರೇಟು ... ಗಳು ತಮ್ಮ ಆದಾಯದಲ್ಲಿ ಶೇಕಡ 75 ಭಾಗವನ್ನು ನಾಗರಿಕ ಕೆಲಸಗಳಿಗಾಗಿ ಕೊಡುವರು. ಇದರಲ್ಲಿ ... ವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದು ಅತ್ಯಂತ ಮುಖ್ಯವಾದ ಭಾಗವು ನಮ್ಮಲ್ಲಿ ಅಸ್ಪೃಶ್ಯ ಜಾತಿಯವರಿಗೆ ಒಂದು ಒಳ್ಳೆಯ ಜಾಗವನ್ನು ಕೊಟ್ಟರೆ ... ಗುಟ್ಟುವರು. ಘ್ರಾತಸಾಲಿಗಳ ಸಂಬಳವನ್ನು ... ದರೆ ದೂರುವರು. ಪಟ್ಟಣವನ್ನು ಶೃಂಗರಿಸುವುದು ಮುನಿಸಿಪಾಲಿಟಿಯವರ ಕರ್ತವ್ಯ. ಊರನ್ನು ಪ್ರವೇಶಿಸುತ್ತಲೆ ಹೊರಗಿನವರಿಗೆ ಮನಸ್ಸು ಸಂತೋಷವಾಗಬೇಕು. ದೊಡ್ಡ ದೊಡ್ಡ ರಸ್ತೆಗಳು ಸರಿಯಾಗಿರಬೇಕಲ್ಲದೆ ಸಣ್ಣ ಗಲ್ಲಿಗಳು ಸರಿಯಾಗಿರಬೇಕು. ಜಯಪುರ ... ಣದಲ್ಲಿ ವಿಶಾಲವಾದ ಬೀದಿಗಳಿರುವುವು. ಪೇಟೆ ... ಹಗಳು ಹೋಟೆಲುಗಳ ಹತ್ತಿರವೂ ವಿದ್ಯಾರ್ಥಿಗಳ ... ಸ್ಟೇಷನ್‌ಗಳ ಹತ್ತಿರವೂ ಇರಬಾರದು. ಸಾರ್ವಜನಿಕ ... ಕಕ್ಕಸ್ ಮನೆಗಳೂ ಮೂತ್ರವಿಸರ್ಜನಾಲಯಗಳು ಇರಬೇಕು. (ನಮ್ಮ ಮೈಸೂರಿನಲ್ಲಿ ... ದೊಡ್ಡ ಬೀದಿಗಳು ಚೆನ್ನಾಗಿದ್ದರೂ ... ದಿಗಳು ನರಕದಂತೆ ಕಂಡುಬರುವುವು. ... ಚೆನ್ನಾಗಿಲ್ಲ ಅನೇಕ ಕಡೆ ಇನ್ನೂ ಅಂಡರ್ ಗ್ರೌಂಡ್ ಡ್ರೈನೇಜಾಗಬೇಕಾಗಿರುವುದು. ಮುನಿಸಿಪಾಲಿಟಿ ಮೆಂಬರುಗಳೆಲ್ಲರೂ ಸೌಹಾರ್ದದಿಂದ ಕೆಲಸ ಮಾಡದ ಹೊರತು ರೇಟ್ ಪೇಯರುಗಳಿಗೆ ಏನೂ ಹಿತವಾಗುವುದಿಲ್ಲ

ಊಟದ ಮುಷ್ಕರ.

ಇಂಡಿಯಾ ಸರ್ಕಾರದವರು, ಮೀರತ್‌ನಲ್ಲಿ ಇಟ್ಟಿರುವ ಅಫ್‌ಘನ್ ರಾಜ ಮನೆತನದ ಐವರು ರಾಜಕುಮಾರರು 13 ನೇ ತಾ ರಿಂದ 38 ಘಂಟೆಗಳ ಕಾಲ ಒಂದು ತುತ್ತೂ ಸಹ ಆಹಾರ ತೆಗೆದುಕೊಳ್ಳದೆ ಮುಷ್ಕರ ಮಾಡಿದರು. ಅವರನ್ನು 25 ನೇ ತಾ. ನ ದಿವಸ ಸರ್ಕಾರದವರು ಸ್ಪೆಷಲ್ ಮೋಟರ್ ಲಾರಿಯಲ್ಲಿ ಜೈಲಿಗೆ ಕಳುಹಿಸಿದರು

20 ಲಕ್ಷ ರೂಪಾಯಿಗಳ ವಿವಾಹ.

ಬರೋಡಾ ಪ್ರಭು ರಾಜಕುಮಾರಿಗೂ ... ಮಹಾರಾಜರಿಗೂ ಕಳೆದ ಬುಧವಾರ ನಡೆದ ವಿವಾಹಕ್ಕಾಗಿ ಬಟ್ಟು 20 ಲಕ್ಷ ರೂ. ಗಳ ಖರ್ಚಾಯಿತು.

... ಭದಲ್ಲಿ ನ್ಯಾಯವಾದುದು ವಿದ್ಯಾರ್ಥಿಗಳು ... ಸ್ವಾತಂತ್ರ್ಯದ ಸಂಗ್ರಾಮಗಳಲ್ಲಿ ಭಾಗವನ್ನು ತೆಗೆದುಕೊಳ್ಳದಂತೆ ಅಡ್ಡಿಪಡಿಸುವುದು ಸಾಗದ ...

ತಾಯಿನಾಡು.

28—1—1929

ವರ್ತಮಾನ ಸಂಗ್ರಹ

ನಿದ್ರೆ ಬರುವದಕ್ಕೆ ಉಪಾಯ.

ಸರಿಯಾಗಿ ನಿದ್ರೆ ಬರದವರು ಕಪ್ಪು ಬಟ್ಟೆಯನ್ನು ಹೊದೆದು ಕಪ್ಪು ಬಟ್ಟೆಯ ಪರದೆಯನ್ನು ಕಟ್ಟಿಕೊಂಡು ಮಲಗಿದರೆ ಸುಖನಿದ್ರೆಯು ಪ್ರಾಪ್ತವಾಗುವುದೆಂದು ಇಟಲೀ ದೇಶದ ಶಾಸ್ತ್ರಜ್ಞರೊಬ್ಬರು ಪ್ರಕಟಿಸಿರುತ್ತಾರೆ.

ರಜಾ

ಅಸಿಸ್ಟೆಂಟ್ ಕಮಿಷನರಾಗಿದ್ದ ಮ|| ಆರ್. ತಮ್ಮಾಜಿರಾಯರವರಿಗೆ ಜನವರಿ 7 ನೇ ತಾ|| ನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೆನಡಾ ದೇಶದ ವೃದ್ಧ.

ಕನಡಾ ದೇಶದಲ್ಲಿ "ವಾರ್" ಎಂಬ 108 ವರ್ಷದ ಮುದುಕನಿದ್ದಾನೆ.

ಮೈಸೂರು ಬೆಂಚ್ ಕೋರ್ಟ್

ಮೈಸೂರು ಸಪ್ ಬಿನ ವರ್ಥಿಸಿ ಕೆಂಪಸಿ ಬ್ಯಾಂಕ್ ಏಜೆಂಟರಾದ ಮ|| ಕೆ. ಚಿನ್ನ ಕೃಷ್ಣಶೆಟ್ಟರವರನ್ನು ಮೈಸೂರು ಸಿಟಿ ಬೆಂಚ್ ಕೋರ್ಟಿನ ಎರಡನೆ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಿರುತ್ತಾರೆ.

ಬೆಂಚ್ ಕೋರ್ಟ್ ರದ್ದು

ಶ್ರೀರಂಗಪಟ್ಟಣದಲ್ಲಿದ್ದ ಬೆಂಚು ಕೋರ್ಟು ರದ್ದಾಗಿರುವುದರಿಂದ ಫೆಬ್ರವರಿ 1 ನೇ ತಾ|| ಲಾಗಾಯಿತು ಸದರಿ ಬೆಂಚ್ ಮ್ಯಾಜಿಸ್ಟ್ರೇಟರುಗಳಿಗೆ ಕೊಟ್ಟಿದ್ದ ಪವರನ್ನು ವಾಪಸು ತೆಗೆದುಕೊಂಡಿದೆ.

ಪ್ರಮೋಷನ್

ಮೈಸೂರು ಲ್ಯಾನ್ಸರ್ಸ್‌ನಲ್ಲಿ ಸ್ಕ್ವಾಡ್ರನ್ ಕ್ಯಾಪ್ಟನ್ ಮಾಸ್ಟರ್ ದಫೆದಾರ್ ಆದ ಮಾಧವರಾಯರಿಗೆ ಜಮೇದಾರಿಯಲ್ಲಿ 11 ನೇ ಗ್ರೇಡಿನ ಪ್ರಮೋಷನ್ ಕೊಟ್ಟಿದ್ದಾರೆ.

ಚುನಾವಣೆ

ಕೋಲಾರ ಟವುನ್ ಮುನಿಸಿಪಲ್ ಕೌನ್ಸಿಲ್ಲಿಗೆ ಮ|| ಗಳಾದ ಮುಚುಕುಂದಪ್ಪನವರೂ ಕೆ. ರಾಮಸ್ವಾಮಯ್ಯನವರೂ ಮತ್ತು ಸಪೂರ್ ವೆಂಕಟೇಶಯ್ಯನವರೂ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವರು.

ಇರಪು ಜಾತ್ರೆ

ಮಾರ್ಚಿ ತಿಂಗಳು 9 ಮತ್ತು 10 ನೇ ತಾ|| ಗಳಲ್ಲಿ ಬರುವ ಶಿವರಾತ್ರಿ ಹಬ್ಬದಲ್ಲಿ ಸೌತ್ ಕೂರ್ಗಿನ ಹತ್ತಿರ, ಇರುಪು ಜಾತ್ರೆ ನಡೆಯುತ್ತದೆ. ಆ ಊರಿನ ಬಳಿ ಪ್ಲೇಗ್ ಕಾಲರಾ ರೋಗಗಳು ಉತ್ಪನ್ನವಾಗಬಹುದಾದ ಹೆದರಿಕೆಯುಂಟಾಗಿರುವುದರಿಂದ ಸಾಂಕ್ರಾಮಿಕ ರೋಗಗಳಿರುವ ಕಡೆಗಳಿಂದ ಜನರ್‍ಯಾರೂ ಜಾತ್ರೆಗೆ ಬರಕೂಡದೆಂದೂ, ಇದಕ್ಕೆ ವಿರೋಧವಾಗಿ ನಡೆದಲ್ಲಿ ದಂಡಕ್ಕೆ ಗುರಿಪಡಿಸಲ್ಪಡುವರೆಂದೂ ಕೊಡಗಿನ ಚೀಫ್ ಕಮೀಷನರ ಸೆಕ್ರೆಟರಿಗಳು ಪ್ರಕಟಿಸಿರುತ್ತಾರೆ.

ಚರ್ಮದೃಷ್ಟಿ

ಫ್ರಾನ್ಸ್ ದೇಶದ ಒಬ್ಬ ಮಾನಸಿಕ ಶಾಸ್ತ್ರಜ್ಞನು ಚರ್ಮದ ಮೂಲಕವಾಗಿ ನೋಡಬಹುದೆಂದು ಒಂದು ಹೊಸ ಸಿದ್ಧಾಂತವನ್ನು ಸ್ಥಾಪಿಸಿರುತ್ತಾನೆ.

ಪಿರೇಜ್ ಕೋರ್ಟ್

ಸರ್ಕಾರದವರು ಬೌರಿಂಗ್ ಪೇಟೆ ತಾಲ್ಲೂಕಿನಲ್ಲಿರುವ (1) ದೊಡ್ಡವಲಗಮಾದಿ (2) ಐರಂಗನಹಳ್ಳಿ (3) ಚಿಕ್ಕವಲಗಮಾದಿ (4) ತಿಂಗಾರನಹಳ್ಳಿ (5) ಕಲ್ಲಹಳ್ಳಿ (6) ದೊಡ್ಡಚಿನ್ನಹಳ್ಳಿ (7) ಅಮ್ಮನಾರಸಿಪುರ ಈ ಗ್ರಾಮಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಪಿರೇಜ್ ಕೋರ್ಟನ್ನು ಫೆಬ್ರವರಿ ಮೊದಲನೆ ತಾರೀಖಿನಿಂದ ದೊಡ್ಡವಲಗಮಾದಿ ಗ್ರಾಮದಲ್ಲಿ ಸ್ಥಾಪಿಸಿರುವರು.

ಬಹಿಷ್ಕಾರ ನಾಸ್ತಿ.

ಕೃಷ್ಣರಾಜಪೇಟೆ ತ|| ಹೇಮಗಿರಿ, ಟಿ. ನರಸೀಪುರದ ತಾ|| ಮುಡುಕುತೊರೆ ಮತ್ತು ಮಾಗೂರು ಈ ಗ್ರಾಮಗಳ ಅಕ್ಕಪಕ್ಕ ಗ್ರಾಮಗಳಲ್ಲಿ ಕಾಲರಾ ಉಪದ್ರವವು ಇರೋಣದರಿಂದ ಮೇಲ್ಕಂಡ ಸ್ಥಳಗಳಲ್ಲಿ ನಡೆಯತಕ್ಕ ಜಾತ್ರೆಗಳನ್ನು ಮನ್ನಾ ಮಾಡಿದೆ ಎಂಬದಾಗಿ ಆರ್ಡರು ಕೊಟ್ಟಿರುವುದು ಸರಿಯಷ್ಟೆ. ಆದರೆ ಈಚೆಗೆ ತಲುಪಿರುವ ನೋಟಿಫಿಕೇಷನ್‌ನಲ್ಲಿ ಮೇಲ್ಕಂಡ ಸ್ಥಳಗಳಲ್ಲಿ ಜಾತ್ರೆ ನಡಿಸಬಹುದೆಂತಲೂ ಸಾಂಕ್ರಾಮಿಕ ಜಾಡ್ಯಗಳು ಇರತಕ್ಕ ಕಡೆಗಳಿಂದ ಬರತಕ್ಕ ಜನಗಳನ್ನು ಮಾತ್ರ ಸೇರಿಸಕೂಡದೆಂತಲೂ ಇರುವ ಅಂಶವನ್ನು ಸಕಲರಿಗೂ ತಿಳಿಯಪಡಿಸಿದೆ.

ವಿದ್ಯಾರ್ಥಿಗಳ ಮುಷ್ಕರದ ಕಮಿಟಿ

ನಮ್ಮ ಸರಕಾರದವರು ವಿದ್ಯಾರ್ಥಿಗಳ ಮುಷ್ಕರದ ಕಮಿಟಿಯೊಂದನ್ನು ಏರ್ಪಡಿಸಿ 6 ತಿಂಗಳುಗಳಾದವು. ಇದುವರಿಗೂ ಆ ಕಮಿಟಿಯು ಏನು ಕೆಲಸವನ್ನು ಮಾಡಿತೋ ಗೊತ್ತಿಲ್ಲ. ನಡೆದ ಕೆಲಸವೆಲ್ಲವೂ ಪರದೆಯ ಒಳಗೆಯೇ ನಡೆಯಿತು. ಸಾಕ್ಷಿಗಳ ಪೂರ್ತಿಯಾಗಿ ವರದಿಯು ಸಮಾಪ್ತವಾಗಿದ್ದರೆ ಅದನ್ನು ಪ್ರಕಟಿಸುವುದು ಉತ್ತಮ. ಈಗಲೇ ಅದನ್ನು ಪ್ರಕಟಿಸಿದರೆ ಅಪಮಾನಿತರಾದ ಕಾಲೇಜಿನ ಪ್ರಿನ್ಸಿಪಾಲರವರಿಗೆ ಬಹಳ ಉಪಯೋಗವಾಗಬಹುದು. ವಿಶ್ವೇಶ್ವರಯ್ಯ ಕಮಿಟಿಯ ವರದಿಯನ್ನು ಪ್ರಕಟಿಸುವುದಕ್ಕಂತೂ ಅತಂಕವಿರಬಹುದು. ವಿದ್ಯಾರ್ಥಿಗಳ ಮುಷ್ಕರದಿಂದ ಕಮಿಟಿಯು ಹಿಂದಿಗೇನು ಅಡ್ಡಿ

ವಿವಾಹ ಲೀಲೆಯಿಂದ ಸಿನಿಮಾ ಲೀಲೆ.

ಪುರುಷ ಸಂಸರ್ಗದ ಬಿಹಾಸೆಯಿಂದ ಸ್ವಲ್ಪದಿನಗಳ ಹಿಂದೆ ವಿವಾಹದ ತೊಡಕನ್ನು ಬಿಡಿಸಿಕೊಂಡ ಮಿಸೆಸ್ ತಾಜ್ ಬೇಗಂಳು ಅಮೇರಿಕಾದ ಒಂದು ಸಿನಿಮಾ ಕಂಪೆನಿಯಲ್ಲಿ ನಟಿಯ ಪಾತ್ರ ವಹಿಸಲು 2 ವರ್ಷ ಕಾಲಕ್ಕೆ 39 ಲಕ್ಷ ರೂಪಾಯಿಗಳಂತೆ ಒಪ್ಪಿಕೊಳ್ಳುವ ಆಲೋಚನೆಯಲ್ಲಿರುವಳು.

ಬಹಿಷ್ಕಾರ ಪ್ರಕಟಣೆಗಾಗಿ ಜುಲ್ಮಾನೆ.

ಕಲ್ಕತ್ತೆಯ ಇಬ್ಬರು ಟ್ಯಾಕ್ಸಿ ಡ್ರೈವರುಗಳು ತಮ್ಮ ಮೋಟಾರ್ ಕಾರುಗಳ ಮೇಲೆ "ಗೋ ಬ್ಯಾಕ್ ಸೈಮನ್" ಎಂಬ ಬಹಿಷ್ಕಾರ ಪ್ರಕಟಣೆಗಳನ್ನು ಹಚ್ಚಿದ್ದರೆಂಬ ಅಪರಾಧಕ್ಕಾಗಿ ತಲಾ 20 ರೂ. ಗಳ ಜುಲ್ಮಾನೆ ವಿಧಿಸಲ್ಪಟ್ಟರು.

ಸ್ವೀಕಾರ

ರಾಜಧಾನಿಯ ಲಕ್ಷ್ಮೀವಿಲಾಸ ಪ್ರೆಸ್ಸಿನಲ್ಲಿರುವ ಮೆಸರ್ಸ್ ಎಂ. ಎನ್. ಸುಬ್ಬಾ ಪಂಡಿತ್ ಅಂಡ್ ಸನ್ಸ್‌ರವರು ಕಳುಹಿಸಿರುವ ನಂಜನಗೂಡು ಸದ್ವೈದ್ಯಶಾಲೆಯ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುವೆವು.

[illegible]

[illegible]

[illegible]

[illegible]

[illegible]

[illegible]

[illegible]

[illegible]

ಯೂರೋಪ್ [illegible]

[illegible]

[illegible]

[illegible]

[illegible]

[illegible]

Printed and published by P. R. Ramaiya, at Sri Rama Press, D. Subbiah Road, Mysore.

Regd No. M 2322 ‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { [illegible]

ಸಂಪುಟ ೧] ಮಂಗಳವಾರ ೨೯ ಫೆಬ್ರುವರಿ ೧೯೨೯ [ಸಂಚಿಕೆ [illegible]

TAI NADU

29—1—1929

ತಮಗೆ ತಾವೇ ಶಹಭಾಸ್‌ಗಿರಿ ಕೊಟ್ಟುಕೊಳ್ಳುವುದು.

ನಂ. ೧

ವಿಶ್ವೇಶ್ವರಯ್ಯ ಕಮಿಟಿ ವರದಿಯ ಮೇಲೆ ಸರಕಾರದವರು ಮಾಡಿರುವ ಆರ್ಡರು ಪ್ರಕಟವಾಗಿರುವುದು. ಅದು ಬಹಳ ದೊಡ್ಡದಾಗಿರುವುದರಿಂದ ಅದನ್ನು ಪೂರ್ತಿಯಾಗಿ ಈಗಲೇ ಪ್ರಕಟಮಾಡಲು ಸಾಧ್ಯವಿಲ್ಲವಾಗಿದೆ. ಅದರ ಮುಖ್ಯ ಭಾಗಗಳನ್ನು ಕೊಡುವೆವು. ಈಗ ಕೆಲವು ದಿನಗಳ ಹಿಂದೆ ಈ ಆರ್ಡರಿನ ಭವಿಷ್ಯವನ್ನು ಪ್ರಕಟಿಸಿದ್ದೆವು. ಅದಕ್ಕೂ ಈಗ ಬಂದಿರುವ ಆರ್ಡರಿಗೂ ಬಹಳ ವ್ಯತ್ಯಾಸವಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಈ ಆರ್ಡರಿನ ಸ್ವರೂಪವು ಎಲ್ಲರಿಗೂ ಗೊತ್ತೇ ಇತ್ತು. ಸರ್ಕಾರದವರು ಈಚೀಚೆಗೆ ಅನುಸರಿಸುತ್ತಿರುವ ರೀತಿನೀತಿಗಳನ್ನು ನೋಡಿದರೆ, ಅವರ ಆರ್ಡರು ಹೀಗೆಯೇ ಇರುವುದೆಂದು ಯಾರು ಬೇಕಾದರೂ ಹೇಳಬಹುದಾಗಿತ್ತು.

ಈ ಆರ್ಡರಿನಿಂದ ಯಾರಿಗೂ ಹೊಸದಾಗಿ ನಿರಾಶೆಯಾಗುವಹಾಗಿಲ್ಲ. ಹೊಸದಾಗಿ ಅತೃಪ್ತಿಯಾಗುವಹಾಗಿಲ್ಲ. ನಿರಾಶೆಯೂ ಅತೃಪ್ತಿಯೂ ಮೊದಲಿನಿಂದಲೂ ಇದ್ದೇ ಇದೆ. ಈಗ ದೃಢಪಟ್ಟಿತು. ಸರಕಾರದವರು ತಮ್ಮ ಮೂಗಿನ ನೇರಕ್ಕೆ ಸರಿಯಾಗಿ ಆರ್ಡರು ಮಾಡಿಕೊಂಡಿರುವರು. ಹಿಂದೆ ಮಾಡಿದ ತಪ್ಪುಗಳಿಗಾಗಿ ವ್ಯಸನವನ್ನಾಗಲೀ, ಪಶ್ಚಾತ್ತಾಪವನ್ನಾಗಲೀ ತೋರಿಸಿರುವುದಿಲ್ಲ. ತಪ್ಪುಮಾಡಿದುದು ತಪ್ಪೇ ಅಲ್ಲವೆಂದು ಸಾಧಿಸುತ್ತಿರುವರು. ತಾವು ಮಾಡಿದುದು ಸರಿಯೆಂದೂ, ತಮ್ಮ ಭಾಗದಲ್ಲಿ ಯಾವ ಕರ್ತವ್ಯವೂ ಲೋಪವಾಗಿಲ್ಲವೆಂತಲೂ, ಏನೇನು ಮಾಡಬಹುದಾಗಿತ್ತೋ ಎಲ್ಲವನ್ನೂ ಮಾಡಿರುವುದಾಗಿಯೂ ಹೇಳಿರುವರು. ಈ ಆರ್ಡರನ್ನು ಓದಿದರೆ ಸರಕಾರದವರ ಹೃದಯವು ಪರಿವರ್ತನವಾಗಿರುವುದೆಂದಾಗಲೀ ಪರಿಶುದ್ಧವಾಗಿರುವುದೆಂದಾಗಲೀ ಹೇಳುವುದಕ್ಕಾಗುವದಿಲ್ಲ.

ಆರ್ಡರು ಪ್ರಕಟವಾಗಿದ್ದರೂ ಕಮಿಟಿ ವರದಿಯು ಪ್ರಕಟವಾಗಿಲ್ಲ. ಕಮಿಟಿಯ ವರದಿಯನ್ನು ನೋಡದೆ ಸರಕಾರದವರ ಆರ್ಡರು ನ್ಯಾಯವಾದುದೆಂದೂ, ನಿಷ್ಪಕ್ಷಪಾತವಾದುದೆಂದೂ ಹೇಳುವುದು ಸಾಧ್ಯವಿಲ್ಲ. ಮತ್ತು ಸಮಿತಿಯವರಲ್ಲಿ ಏಕಮತ್ಯವಿಲ್ಲವೆಂದೂ, ಅಭಿಪ್ರಾಯಗಳು ಭಿನ್ನವಾಗಿರುವುದೆಂದೂ ಹೇಳಿರುವರು. ಯಾವ ಕಮಿಟಿಯೇ ಆಗಲಿ, ಯಾವ ದೇಶದಲ್ಲಿಯೇ ಆಗಲೀ, ಯಾವ ವಿಷಯದ ಮೇಲೆಯೇ ಆಗಲಿ, ಸರ್ವಾನುಮತದಿಂದ ಅಭಿಪ್ರಾಯ ಕೊಟ್ಟಿರುವುದು ಅತಿ ವಿರಳ. ಮತ್ತು ಅಭಿಪ್ರಾಯ ಭಿನ್ನತೆಯು ಸಂಭವಿಸಿದಾಗ, ಮೆಜಾರಿಟಿಯವರ ಅಭಿಪ್ರಾಯದಂತೆಯೇ ಕೆಲಸ ಕಾರ್ಯಗಳು ನಡೆಯುವುವು. ವಿಶ್ವೇಶ್ವರಯ್ಯ ಕಮಿಟಿಯಲ್ಲಿ ಮಿ॥ ನಾಗಪ್ಪನವರೂ, ಮಿ॥ ಕಲಾಮಿಯವರೂ, ಮಿ॥ ರಾಲ್ಫ್ ಸೈರವರೂ ಕೆಲವೆಡೆಗಳಲ್ಲಿ ಭಿನ್ನಭಿನ್ನ ಅಭಿಪ್ರಾಯಗಳನ್ನು ಪ್ರಕಟಿಸಿರುವುದಾಗಿ ತಿಳಿಯಬರುತ್ತದೆ. ಮಿ॥ ನಾಗಪ್ಪನವರು ಸರ್ಕಾರೀ ನೌಕರರಾದುದರಿಂದ ಎಲ್ಲೆಲ್ಲಿ ಸರ್ಕಾರದ ಮೇಲೆ ಆಕ್ಷೇಪಣೆಗಳಿವೆಯೋ ಅಲ್ಲೆಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿಲ್ಲ. ಇದು ನ್ಯಾಯವಾದುದು. ಆದುದರಿಂದ ಅವರು ವಿರೋಧಾಭಿಪ್ರಾಯವನ್ನು ಪ್ರಕಟಿಸಿದರೆಂದು ಹೇಳುವುದಕ್ಕಾಗುವುದಿಲ್ಲ. ಮಿ॥ ರ್‍ಯಾಲ್ಫ್ ಸೈರವರು ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಪ್ರಕಟಿಸಿದ್ದರೂ, ಇತರ ವಿಷಯಗಳಲ್ಲಿ ಪ್ರಕಟಿಸಿಲ್ಲ. ಆದುದರಿಂದ ರಾಜಕೀಯ ಸುಧಾರಣೆಗಳ ವಿಷಯವೊಂದು ಹೊರತಾಗಿ ಇತರ ವಿಷಯಗಳಲ್ಲಿ ಇವರು ಕಮಿಟಿಯ ಸಲಹೆಗಳಿಗೆ ಸಹಮತರಾಗಿದ್ದರು. ಇನ್ನು ಇರುವವರು ಮಿ॥ ಕಲಾಮಿಯವರು. ಅವರು ಪ್ರತ್ಯೇಕವಾಗಿ ಒಂದು ಹೇಳಿಕೆಯನ್ನು ಕಳುಹಿಸಿರುವರಂತೆ. ಆ ಹೇಳಿಕೆಯೇನೋ ನಮಗೆ ಗೊತ್ತಿಲ್ಲ. ಆದರೆ, ನಾವು ಇಷ್ಟು ಮಾತ್ರ ಹೇಳಬಹುದು. ಅವರು ಮ॥ ಅಬ್ಬಾಸಖಾನರ ಮಿತ್ರರು, ಮಹಮ್ಮದೀಯರು. ಇವರ ಸ್ನೇಹಾಭಿಮಾನವೂ, ಮತಾಭಿಮಾನವೂ ಇವರ ಅಭಿಪ್ರಾಯಗಳ ಮೇಲೆ ಪರಿಣಾಮವನ್ನುಂಟುಮಾಡಿಲ್ಲ ಎಂದು ಹೇಳುವುದು ಅಸಾಧ್ಯ. ಒಟ್ಟು 7 ಮೆಂಬರುಗಳಲ್ಲಿ, 5 ಮೆಂಬರುಗಳು ಅತಿಮುಖ್ಯವಾದ ವಿಷಯಗಳಲ್ಲ ಸಹಮತವಾಗಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮಿ॥ ನಾಗಪ್ಪನವರು ಅಭಿಪ್ರಾಯವನ್ನು ಕೊಟ್ಟಿಲ್ಲ. ಮಿ॥ ಕಲಾಮಿಯವರು ಒಬ್ಬರು ವಿರೋಧವಾದ ಅಭಿಪ್ರಾಯವನ್ನು ಕೊಟ್ಟಿರುವರು. ಈ ಸಂದರ್ಭದಲ್ಲಿ ಸರಕಾರದವರು ಮೆಜಾರಟಿ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಬೇಕೆಂದು ನಿರೀಕ್ಷಿಸುವುದು ನ್ಯಾಯವಾದುದು. ಆದರೆ ಸರಕಾರದವರು ಆ ನಿರೀಕ್ಷಣೆಯನ್ನು ಸಫಲಗೊಳಿಸಿಲ್ಲ.

ಆರ್ಡರಿನಲ್ಲಿ ಕಮಿಟಿಯ ಮಾತುಗಳೆಂದು ಹೇಳಿ, ತಮಗೆ ಅನುಕೂಲವಾದ ಕೆಲವು ವಾಕ್ಯಗಳನ್ನು ಎತ್ತಿ ಬರೆದಿರುವರು. ಅಲ್ಲೊಂದು ಮಾತು ಇಲ್ಲೊಂದು ಮಾತನ್ನು ಎತ್ತಿ ಬರೆದರೆ, ಯಾರಿಗೂ ಕಮಿಟಿಯವರ ನಿಜವಾದ ಅಭಿಪ್ರಾಯವು ಗೊತ್ತಾಗುವುದಿಲ್ಲ. ಕಮಿಟಿಯ ವರದಿಯನ್ನೇ ಪೂರ್ತಿಯಾಗಿ ಪ್ರಕಟಿಸಿದ ಹೊರತೂ ಸಂಶಯವು ವಿಚ್ಛೇದವಾಗುವ ಹಾಗಿಲ್ಲ.

ಆದರೂ, ಕಮಿಟಿಯವರ ಕೆಲವು ಸ್ಪಷ್ಟವಾದ ಅಭಿಪ್ರಾಯಗಳನ್ನು ಸರಕಾರದವರು ಅಂಗೀಕರಿಸಲಿಲ್ಲ. ಅವರ ಶಿಫಾರಸುಗಳನ್ನು ಮನ್ನಿಸಿಲ್ಲ. ಸಮಿತಿಯವರು ಮಾಡಿರುವ ಮುಖ್ಯವಾದ ಆಕ್ಷೇಪಣೆಗಳಿಗೆ ಸಮರ್ಪಕವಾದ ಸಮಾಧಾನವನ್ನು ಹೇಳದೆ, ಸುಣ್ಣ ಬಳಿಯುವ ಪ್ರಯತ್ನವನ್ನು ಸರಕಾರದವರು ಮಾಡಿರುವರು.

ಸರಕಾರದ ಆರ್ಡರಿನಲ್ಲಿ ಮ॥ ಎಚ್. ಎಸ್. ಸ್ವಾಮಿರಾಯರ ಮೇಲೆಯೂ, ತಪ್ಪಿನ ಹೊರೆಗಳು ಹೊರಿಸಲ್ಪಟ್ಟಿವೆ. ವಿಗ್ರಹಪಲ್ಲಟನಕ್ಕೆ ಡೈರೆಕ್ಟರವರೇ ಜವಾಬ್ದಾರರೆಂದೂ, ಅವರು ಸ್ವಲ್ಪ ಮುಂದಾಲೋಚನೆ ಮಾಡಿ ಕಾರ್ಯನಡೆಸಿದ್ದರೆ. ಗಲಭೆಯನ್ನು ತಪ್ಪಿಸಬಹುದಾಗಿತ್ತೆಂದೂ. ಸರಕಾರದವರು "ದೇವಸ್ಥಾನ ಕಟ್ಟದಂತೆ ನೋಡಿಕೊಳ್ಳಿ" ಎಂದು ಡೈರೆಕ್ಟರರಿಗೆ ಹೇಳಿದರೇ ಹೊರತು ವಿಗ್ರಹಪಲ್ಲಟವನ್ನು ಮಾಡಿ ಎಂದು ಹೇಳಲಿಲ್ಲವೆಂದೂ ಬರೆದಿರುತ್ತಾರೆ. ಆದರೆ ಈ ಅಭಿಪ್ರಾಯವು ಸರಿಯೆಂದು ಹೇಳುವುದು ಅಸಾಧ್ಯ. ಗಣಪತಿಯ ಗಲಾಟೆಗೆಲ್ಲಾ ದಿವಾನರು ಡೈರೆಕ್ಟರಿಗೆ ಕಳುಹಿಸಿದ ಡಿ. ಓ. ವೇ ಕಾರಣ. ಆ ಡಿ. ಓ. ವು ಹೋಗದಿದ್ದರೆ ಏನೂ ಆಗುತ್ತಿರಲಿಲ್ಲ. ಆದುದರಿಂದ. ಈ ಗಲಾಟೆಗೆ ಆ ಡಿ. ಓ. ವಿನ ಜವಾಬ್ದಾರಿಯನ್ನು ತಪ್ಪಿಸುವುದು ನಿಷ್ಪಕ್ಷಪಾತವಲ್ಲ. ಹೆಚ್ಚು ನೈತಿಕ ಜವಾಬ್ದಾರಿಯು ದಿವಾನರ ಡಿ. ಓ. ದಲ್ಲಿರುವುದು.

ತಕ್ಕ ಎಚ್ಚರಿಕೆ ತೆಗೆದುಕೊಳ್ಳದೆ ಮುಖಂಡರನ್ನು ಬಿಡುಗಡೆ ಮಾಡಿದ ಜವಾಬ್ದಾರಿಯು ಸಿಟಿ ಮ್ಯಾಜಿಸ್ಟ್ರೇಟರದು ಎಂದು ತೋರಿಸಲ್ಪಟ್ಟಿದೆ. ಮತ್ತು ಸರ್ಕಾರಿ ಆರ್ಡರ್ ಆಗಿದೆಯೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರು ಬಾಯಿಮಾತಿನಲ್ಲಿ ಹೇಳಿದ ಆಧಾರದ ಮೇಲೆ ಬಂಧನದಲ್ಲಿದ್ದವರನ್ನು ಬಿಡುಗಡೆ ಮಾಡಿದುದು ತಪ್ಪೆಂದು ತಿಳಿಸಲ್ಪಟ್ಟಿದೆ. ಈ ವಿಷಯದಲ್ಲಿ ಎಲ್ಲಾ ತಪ್ಪನ್ನು ಸಿಟಿ ಮ್ಯಾಜಿಸ್ಟ್ರೇಟರ ಮೇಲೆ ಹಾಕಿರುವುದು ಸಮಂಜಸವಲ್ಲ. ಶಾಂತಿ ಸಂರಕ್ಷಣೆಯ ಕಾರ್ಯವು ಪೋಲೀಸಿನವರಿಗೆ ಸಂಬಂಧಪಟ್ಟದ್ದು. ಖಾಸಗೀ ಮನುಷ್ಯರು ತಪ್ಪು ಯಾರೇ ತರಲಿ ಮುಂಖಂಡರನ್ನು ಬಿಡುಗಡೆ ಮಾಡಬೇಕೆಂದು ಆರ್ಡರು ಹೊರಡಲಿಲ್ಲವೆಂಬುದನ್ನು ಸರಕಾರದವರು ಹೇಳಿಲ್ಲ.

ಇನ್ನು ಪೋಲೀಸಿನವರು ಮತ್ತು ಮ್ಯಾಜಿಸ್ಟ್ರೇಟರ ಕರ್ತವ್ಯ ಲೋಪ ದೋಷಗಳು ಈ ವಿಷಯವಾಗಿ ಕಮಿಟಿಯವರು ಹೇಳಿರುವ ಮಾತುಗಳೆಲ್ಲವು ಆಗಲೇ ಪ್ರಕಟವಾಗಿವೆ. ಇದಕ್ಕೆ ಸಮಾಧಾನವಾಗಿ, ಗವರ್ನಮೆಂಟಿನವರು ಕೆಲವು ಮಾತುಗಳನ್ನು ಹೇಳಿರುವರು. ಆ ಮಾತುಗಳೆಲ್ಲಾ ಐ. ಜಿ. ಪಿ. ಯವರು ಕಮಿಟಿಯ ಮುಂದೆ ಕೊಟ್ಟ ಕಪ್ಸಿಯದ ಸಾರಾಂಶವೇ ಹೊರತು ಅದರಲ್ಲಿ ಹೊಸ ವಿಷಯವೇನೂ ಇಲ್ಲ.

ಸರಕಾರದ ಪ್ರಕಟನೆಗಳ ವಿಷಯವಾಗಿ ಗಮನ ಕೊಡಲ್ಪಡಲಿಲ್ಲವೆಂದ ಪ್ರಕಟಿಸಿದ್ದರಿಂದ ಜನಗಳ ಗಾಬರಿ ಕಡಿಮೆಯಾಯಿತೆಂದೂ ತಮ್ಮ ಪ್ರಕಟನೆಯನ್ನು ಆ ತರ ನಿರಿಪಡಿಸಿಕೊಂಡರೆಂದೂ ಹೇಳುತ್ತಾರೆ. ಅಂತೂ ಪ್ರಕಟನೆಯು ಸುಳ್ಳೆಂದು ದೃಢಪಟ್ಟಿತು. ಶಾಂತಿಗೋಸ್ಕರವಾದರೂ ಸುಳ್ಳು ಹೇಳಬಹುದೆಂದು ಸರಕಾರದ ಸಿದ್ಧಾಂತವಾಗಿರುವ ಹಾಗೆ ಕಾಣುತ್ತದೆ. ಇದೊಂದು ಹೊಸ ರಾಜನೀತಿ.!

ಜುಲೈ 30 ನೇ ತಾ॥ ರಾತ್ರಿ ಸರಕಾರದ ಮಂತ್ರವು ಕುಸಿದು ಬಿದ್ದು ಹೋಗಿತ್ತೆಂಬ ಅಪವಾದನೆಗೆ, ಸರಕಾರದವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ವರು ಒಂದು ಗುಂಡನ್ನೂ ಹಾರಿಸದೆ. ಒಂದು ಪ್ರಾಣವನ್ನೂ ಹತಮಾಡದೆ, ಪಕೋಟಿಗೆ ತಂದುಕೊಂಡುದು ಹೆಚ್ಚಿನ ವಿಷಯವಂತೆ. ಶಹಬಾಸ್!

ಅಬ್ಬಾಸ್ ಖಾನರ ಮನೆಯೊಳಕ್ಕೆ ಹುಡುಗರನ್ನು ನುಗ್ಗಿದುದೇ ಮೊದಲಾದ ವಿಷಯವಾಗಿ, ಇನ್ನೂ ತನಿಖೆ ಮಾಡಬೇಕೆಂದು ಕಮಿಟಿಯವರು ಕೊಟ್ಟ ಸಲಹೆಯನ್ನು, ಅದು ಅನಾವಶ್ಯಕವಾದೆಂದು ಸರಕಾರದವರು ನಿರಾಕರಿಸಿರುವರು.

ಇನ್ನೂ ಕಮಿಟಿಯವರು ಕೊಟ್ಟಿರುವ ಅನೇಕ ಸಲಹೆಗಳಿಗೆ ಸರಕಾರದವರು ಪುರಸ್ಕಾರವನ್ನು ಕೊಟ್ಟಿಲ್ಲ.

ಡೈರೆಕ್ಟರವರು, ಸಿಟಿ ಮ್ಯಾಜಿಸ್ಟ್ರೇಟರ ಹೊರತಾಗಿ ಇನ್ನು ಯಾವ ಅಧಿಕಾರಿಗಳ ಮೇಲೆಯೂ ಆಕ್ಷೇಪಣೆಯಿಲ್ಲ. ತಾವು ಸ್ವತಂತ್ರವಾಗಿ ಯಾವ ಲೋಪದೋಷವನ್ನೂ ನಡೆಸಿಲ್ಲವೆಂಬುದು ಸರಕಾರದವರ ದೃಢಭಾವ.

ಒಟ್ಟಿನಮೇಲೆ, ಬೆಂಗಳೂರು ಗಲಭೆಗಳನ್ನು ಒಟ್ಟು ಜಾಣತನದಿಂದ ಪಕೋಟಿಗೆ ತಂದೆವೆಂಬ ಅಭಿಮಾನ ಸರಕಾರಕ್ಕೆ ಇರುವುದು. ಮೇಲೆ ಹೇಳಿದಂತೆ ಸರ ಅವರು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿರುವರು ತಮಗೆ ತಾವೇ ಶಹಬಾಸ್‌ಗಿರಿಯನ್ನು ಕೊಟ್ಟುಕೊಂಡಿರುವರು. ಪ್ರಜೆಗಳ ಅಭಿಪ್ರಾಯವು ಕ್ರಮಕ್ರಮವಾಗಿ ವ್ಯಕ್ತವಾಗುವುದು.

ಆರ್ಡರಿನಲ್ಲಿ ಇನ್ನೂ ಅನೇಕ ವಿಷಯಗಳಿವೆ. ಅವುಗಳನ್ನು ಕ್ರಮಕ್ರಮವಾಗಿ ವಿಮರ್ಶಿಸುವೆವು. ತಮಗೆ ತಾವೇ ಶಹಭಾಸ್ ಗಿರಿಯನ್ನು ಕೊಂಡಿರುವರು.

ತಾಯಿನಾಡು.

29—1—1929

ವರ್ತಮಾನ ಸಂಗ್ರಹ

ಬಲೂನಿನ ಅಪಘಾತ.

ಈ ತಿಂಗಳು 23 ನೇ ತಾ. ದಿನ ಫ್ರಾನ್ಸಿನಲ್ಲಿ 4000 ಅಡಿ ಎತ್ತರದಿಂದ ಬಿದ್ದ ಬಲೂನಿನ ಹೊಡೆತದಿಂದ ಮೂರು ಜನ ಹಿಂದೂ ಆಫೀಸರುಗಳೂ ಮತ್ತು 10 ಜನ ಸವಾರರೂ ಮೃತರಾದರು. 12 ಸವಾರರಿಗೆ ಏಟಾಗಿ ಅನೇಕ ಕುದುರೆಗಳು ಕೊಲ್ಲಲ್ಪಟ್ಟವು.

ಬಹುಮಾನ.

ರಾಜಧಾನಿಯ ಪಬ್ಲಿಕ್ ಪ್ರಾಸಿಕ್ಯೂಟರಾದ ಮ|| ಎಂ. ಶ್ರೀನಿವಾಸಯ್ಯಂಗಾರ್ಯರು ಅರಮನೆ ಧಘಾವಣೆ ಮೊಕದ್ದಮೆಯನ್ನು ಬಹ ಸಾಮರ್ಥ್ಯದಿಂದ ನಡೆಸಿದುದಕ್ಕಾಗಿ ಶ್ರೀಮನ್ಮಹಾರಾಜರವರಿಂದ ಒಂದು ವಜ್ರದ ಉಂಗುರವು ಅವರಿಗೆ ಬಹುಮಾನವಾಗಿ ಕೊಡಲ್ಪಟ್ಟಿರುವುದು.

ಸ್ತ್ರೀ ವೈಮಾನಿಕಳು.

ಲೇಡಿ ಬೈಲೆ ಎಂಬೊಬ್ಬ ಆಂಗ್ಲ ಸ್ತ್ರೀ ವೈಮಾನಿಕಳು ಒಂಟಿಯಾಗಿ 18 ಸಾವಿರ ಮೈಲಿಗಳನ್ನು ಸಂಚರಿಸಿ ಹಿಂತಿರುಗಿರುವಳು, ಸಹರಾ ಮರಳುಕಾಡನ್ನು ದಾಟಿ ಏಕಾಂಗಿಯಾಗಿ ಇಷ್ಟುದೂರ ಸಂಚರಿಸಿರುವ ವೈಮಾನಿಕರಲ್ಲಿ ಈಕೆಯೇ ಪ್ರಥಮ ಸ್ತ್ರೀ.

೨ ಲಕ್ಷ ರೂ ಗಳ ದರೋಡೆ.

ನ್ಯೂಯಾರ್ಕಿನ ಒಂದು ರತ್ನಪುಡಿ ಅಂಗಡಿಗೆ ಐವರು ಯುವಕರು ವ್ಯಾಪಾರಕ್ಕೆಂದು ಹೋಗಿ ಮನೆಯವರನ್ನೂ ಸೇವಕರನ್ನೂ ಓರ್ವ ಪೋಲೀಸಿನವನನ್ನೂ ಸಹ ರಿವಾಲ್ವರಿಂದ ಹೆದರಿಸಿ ಕಟ್ಟಿ ಹಾಕಿ ಬಾಯಿಗೆ ಬಟ್ಟೆ ತುರುಕಿ ಎರಡು ಲಕ್ಷ ಡಾಲರುಗಳನ್ನ ದರೋಡೆ ಮಾಡಿಕೊಂಡು ಹೋದರು. ಅರ್ಧ ಮಿಲಿಯನ್ ಬೆಲೆಬಾಳುವ ಮುಚ್ಚಿಟ್ಟಿದ್ದ ವಜ್ರವನ್ನು ನೋಡಿ ಮುಚ್ಚಿದರೂ ಮಾರುವುದು ಕಷ್ಟವೆಂದು ಹಾಗೆಯೇ ಬಿಟ್ಟು ಹೋಗಿರುವರು

ಬರ್ಮೂಡಾ ದ್ವೀಪದ ವೈಚಿತ್ರ್ಯ

ಈ ದ್ವೀಪದಲ್ಲಿ ಒಂದು ಜಗೆಯ ಮೀನುಗಳು ಹಂದಿಯಂತೆ ಗುರ ಗುಟ್ಟುತ್ತಿರವುವು. ಆಳಿಲಿನ ಆಕೃತಿಯಿರುವ ಮೀನುಗಳು ನಾಯಿಯಂತೆ ಬೊಗಳುತ್ತಿರುವುವು. ಚಿಕ್ಕಿನ ಕೂಗನ್ನೂ, ದನಗಳ ಗುಟುರು ಹಾಕುವಿಕೆಯನ್ನೂ ಅನುಕರಿಸುವ ಅನೇಕ ಅದ್ಭುತವಾದ ಮೀನು ಇರುತ್ತವೆ.

ನಮ್ಮ ನಾಡಿನ ಸಂಪತ್ತು

1926-27ನೇ ವರ್ಷದಲ್ಲಿ ಮೈಸೂರು ಚಿನ್ನದಗಣಿಗಳಿಂದ ಉತ್ಪತ್ತಿಯಾದ ಇಪ್ಪತ್ತೆರ ಹದಿನಾರು ಲಕ್ಷ ರೂ. ಗಳ ಚಿನ್ನಕ್ಕೆ, ಹನ್ನೆರಡು ಲಕ್ಷ ರೂ.ಗಳು ಮಾತ್ರ ನಮ್ಮ ಸರ್ಕಾರಕ್ಕೆ ರಾಜಾದಾಯವಾಗಿ ಬಂದಿರುತ್ತೆ.

ಸರ್ಕಾರಿ ಸುದ್ದಿ

ಸೀನಿಯರ್ ಅಸಿಸ್ಟೆಂಟ್ ಕಮೀಷನರ್‌ರಾದ ಮ|| ಎಂ. ಶೇಷಾದ್ರಿಯವರು ಅವರ ರಜಾ ಪೂರೈಸಿದನಂತರ ಹಾಸನದ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಮ|| ಎಸ್. ಎನ್. ಶ್ರೀನಿವಾಸರಾಯರು ತಮ್ಮ ಅಪಟ್ಟರೀ ಕೆಲಸಕ್ಕೆ ಹಿಂತಿರುಗುವರು.

ವರ್ಗಾವರ್ಗಿ

ದಾವಣಗೆರೆ ಮುನ್ಸೀಫರಾದ ಮ|| ಫಿರೋಜಾ ಪ್ರಸಿಗಾರ್‌ರವರು ಬೆಂಗಳೂರು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೆಲಸಕ್ಕೂ, ಕ್ಲೋಸ್‌ಪೇಟೆ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ|| ಎಂ. ಆರ್ ಸುಂದರರಾಯರು ದಾವಣಗೆರೆ ಮುನ್ಸೀಫರ ಕೆಲಸಕ್ಕೂ ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಮ|| ರಾ ಪಿ. ಎಚ್ ಕೃಷ್ಣರಾಯರು ರಜಾ ಮುಗಿದನಂತರ ಕ್ಲೋಸ್‌ಪೇಟೆ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೆಲಸಕ್ಕೂ ವರ್ಗಾಯಿಸಲ್ಪಟ್ಟಿರುವರು.

ರಜಾ

ಬೆಂಗಳೂರು ಸ್ಪೆಷಲ್ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರಾದ ಮ|| ಪಿ. ಸೂರ್ಯನಾರಾಯಣಶೆಟ್ಟರವರಿಗೆ ಅವರು ಉಪಯೋಗಿಸಿಕೊಳ್ಳುವ ತಾ|| ಯಿಂದ ಎರಡುತಿಂಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಕನ್ನಡ ಪರೀಕ್ಷೆ.

ತುಮಕೂರು ಡಿ. ಎಜ್ಯುಕೇಷನಲ್ ಆಫೀಸರಾದ ಮ|| ಸಿ. ಮಹಮದ್ ದಾವುದ್‌ರವರೂ, ಪ್ರೊಬೇಷನರಿ ಅ| ಕಮೀಷನರಾದ ಮ|| ಜಿ. ಎನ್. ನಾಗರಾಜರಾಯರೂ, ಹುಣಸೂರು ಮುನ್ಸೀಫ್ ಮ್ಯಾಜಿಸ್ಟ್ರೇಟರಾದ ಮ|| ಸಿ. ಅಬ್ದುಲ್‌ನಜೀರವರೂ ಆಫೀಸರುಗಳಿಗಾಗಿ 1928ನೇ ಡಿಸೆಂಬರ್ 22ನೇ ತಾ|| ನಲ್ಲಿ ನಡೆದ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಕಪಟ ಸನ್ಯಾಸಿ

ಕಳೆದ ತಿಂಗಳು ಓರ್ವ ಕಪಟ ಸನ್ಯಾಸಿಗಳು ಬೆಂಗಳೂರಲ್ಲಿ ತಾವೊಬ್ಬ ಕುಂದಗೋಳ ಕಡೆಯ ಗುರುಗಳೆಂದು ಹೇಳಿಕೊಳ್ಳುತ್ತಾ ಮಂತ್ರೋಪದೇಶ ಮೊದಲಾದ ನಾಟಕದ ನಟನೆಯನ್ನು ನಡೆಸುತ್ತಾ ಗುರುದಕ್ಷಿಣೆ ಕೊಡೆಂದು ಅಧಿಕಾರಿಗಳನ್ನು ಬಲಾತ್ಕಾರದಿಂದ ಅಸಹುಸುತ್ತಿದ್ದಾರೆಂದು ಪೋಲೀಸಿನವರೊಬ್ಬರು ತಿಳಿಸಿರುತ್ತಾರೆ.

ವೈರ್‌ಲೆಸ್ ಗಡಿಯಾರ,

ನ್ಯೂಯಾರ್ಕ್ ಪಟ್ಟಣದ ಒಂದು ಕೈಗಾರಿಕಾ ಪ್ರದರ್ಶನದಲ್ಲಿ ಒಂದು ಹೊಸ ಗಡಿಯಾರ ಇಡಲ್ಪಟ್ಟಿದೆ. ಇದು ಆರ್ಲಿಂಗ್ಟನ್ ಎಂಬ ವೈರ್‌ಲೆಸ್ ಸ್ಟೇಷನ್ನಿನ ಸಂಬಂಧವುಳ್ಳದ್ದು. ಮನುಷ್ಯ ಸ್ಪರ್ಶವಿಲ್ಲದೇನೆ ಮುಳ್ಳುಗಳು ತಿರುಗಿ ಸರಿಯಾದ ಕಾಲಕ್ಕೆ ಒಂದು ನಿಲ್ಲುತ್ತವೆ. ಕೀಲು ಕೊಡುವುದೇ ಅನಾವಶ್ಯಕ. ಇದರಿಂದ ಇತರ ಗಡಿಯಾರಗಳನ್ನೂ ಸರಿಮಾಡಿಕೊಳ್ಳುತ್ತಾರೆ.

[illegible]

Printed and published by P. R. Ramaiya, at Sri Rama Press, D. Subbiah Road Mysore.

Regd No. M 2322 ॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಬುಧವಾರ ೩೦ ಫೆಬ್ರವರಿ ೧೯೩೯ [ಸಂಚಿಕೆ [illegible]

TAI NADU
30-1-1929

ಪುನಃ ಜುಡಿಷಿಯಲ್ ವಿಚಾರಣೆ ಆಗಬೇಕು.

ವಿಶ್ವೇಶ್ವರಯ್ಯ ಕಮಿಟಿಯವರ ಅಭಿಪ್ರಾಯವೆಂದು ಸರಕಾರೀ ಆರ್ಡರಿನಲ್ಲಿ ಸಮೂಧಿಸಿರುವ ವಿಷಯಗಳೆಲ್ಲವನ್ನೂ, ಹಾಗೆಯೇ, ಹಿಂದು ಮುಂದಿನ ಸಂಬಂಧವನ್ನು ನೋಡದೆ ಸ್ವೀಕರಿಸುವುದು ಸಾಧ್ಯವಿಲ್ಲ. ವಿಶ್ವೇಶ್ವರಯ್ಯ ಕಮಿಟಿಯವರ ವರದಿಯು ಪ್ರಕಟವಾದ ಮೇಲೆ, ಅದರಲ್ಲಿಯೂ ಅನೇಕ ನ್ಯೂನತೆಗಳು ಕಂಡುಬರಬಹುದು. ಆದರೆ ಈಗ ಸದ್ಯದಲ್ಲಿ, ನಿಷ್ಪಕ್ಷಪಾತವಾಗಿ ಕಮಿಟಿಯವರು ಕೆಲವು ಶಿಫಾರಸುಗಳನ್ನು ಮಾಡಿರುವರು. ಅವುಗಳಲ್ಲಿ ಕೆಲವು ತುರ್ತಾಗಿ ಅನುಸರಿಸತಕ್ಕವು, ಕೆಲವು ಅನುಕೂಲವಾದಂತೆಲ್ಲಾ ಕ್ರಮವಾಗಿ ಅನುಸರಿಸತಕ್ಕವು. ತುರ್ತಾಗಿ ಅನುಸರಿಸಬೇಕೆಂದು ಹೇಳಿರುವ ವಿಷಯಗಳು ದುಷ್ಟನಿಗ್ರಹಕ್ಕೆ ಸಂಬಂಧಪಟ್ಟವು. ಕಾನೂನನ್ನು ಮುರಿದು ಶಾಂತಿಭಂಗವನ್ನು ಮಾಡಿದವರನೇಕರು ಇನ್ನೂ ತಪ್ಪಿಸಿಕೊಂಡಿರುತ್ತಾರೆ. ಅತ್ಯಂತ ಮುಖ್ಯರಾದವರು ಇನ್ನೂ ಸ್ವಚ್ಛಂದರಾಗಿದ್ದಾರೆ. ಹೀಗೆ ಆಗಿರುವದಕ್ಕೆ ಈಗ ಆಗಿರುವ ವಿಚಾರಣೆಯು ಸರಿಯಾಗಿ ಆಗಿಲ್ಲ. ಪತ್ತೆ ತರದುದುಗಳು ಸರಿಯಾಗಿ ನಡೆದಿಲ್ಲ. ಎಲ್ಲ ಸಾಕ್ಷಿಗಳ ಸಾಕ್ಷ್ಯವೂ ಆಗಿಲ್ಲ. ಒಟ್ಟಿನ ಮೇಲೆ ವಿಚಾರಣೆಯು ನಿಷ್ಪಕ್ಷಪಾತವಾಗಿಯೂ, ನಿರ್ದಾಕ್ಷಿಣ್ಯವಾಗಿಯೂ ನಡೆದಿಲ್ಲ. ಮ|| ಮಾಚಯ್ಯನವರ ವಿಚಾರಣೆಯಲ್ಲಿ ಬಹಳ ಜನಗಳಿಗೆ ನಿಷ್ಪಕ್ಷಪಾತವಾದ ಭಾವನೆಯು ಬಂದಿಲ್ಲ, ಎಂಬ ಇವೇ ಮೊದಲಾದ ವಿಷಯಗಳನ್ನು ಕಮಿಟಿಯವರು ಸ್ಪಷ್ಟವಾಗಿ ಹೇಳಿರುವರು. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಭಾಗದಲ್ಲಿ ಈ ಅಂಶವು ಸ್ಪಷ್ಟವಾಗಿತ್ತು. ಅದನ್ನು ನಾವೂ ನಮ್ಮ ಪತ್ರಿಕೆಯಲ್ಲಿ ಕೊಟ್ಟಿದ್ದೆವು. ಈಗ ಮುಖ್ಯವಾಗಿ ಆಗ ಬೇಕಾದುದು ಪುನರ್ವಿಚಾರಣೆ. ಈ ಭಾಗವನ್ನು ಕಮಿಟಿಯವರು ಬಹಳ ಒತ್ತಾಯವಾಗಿ ತಿಳಿಸಿರುತ್ತಾರೆ ಈ ಭಾಗವನ್ನು ಸರಕಾರದವರ ಆರ್ಡರಿನಲ್ಲಿಯೂ ಸಮೂದಿಸಿರುತ್ತಾರೆ.

(1) ಗಲಭೆಗಳ ಕಾಲದಲ್ಲಿ ಯಾರು ಯಾರು ಹಿಂಸೆಯನ್ನು ಮಾಡಿದರೋ, ಕಾನೂನಿಗೆ ವಿರೋಧವಾಗಿ ನಡೆದರೋ, ಮತ್ತು ಯಾರು ಯಾರ ಮೇಲೆ ರುಜುವಾತುಗಳು ಬರಬಹುದೋ ಅವರನ್ನೆಲ್ಲಾ ದಸ್ತಗಿರಿಮಾಡಿ ವಿಚಾರಣೆ ನಡೆಸಲು ಸರಕಾರದವರು ವಿಶೇಷ ಪ್ರಯತ್ನಗಳನ್ನು ನಡೆಸಬೇಕು.

(2) ಹುಡುಗರು ಒಳಕ್ಕೆ ಸೆಳೆಯಲ್ಪಟ್ಟರೆಂದೂ, ಅಬ್ಬಾಸ್ ಖಾನರ ಮನೆಯ ಮಹಡಿಯ ಮೇಲೆ ನಾಲ್ಕು ಹುಡುಗರು ಅಪನಂಬಿಕೆಗೆ ಅವಕಾಶವಾಗುವ ರೀತಿಯಲ್ಲಿ ಮಲಗಿದ್ದರೆಂದೂ, ಬಂದಿರುವ ಅಪವಾದನೆಗಳನ್ನು ಇನ್ನೂ ಚೆನ್ನಾಗಿ ಪರೀಕ್ಷಿಸಬೇಕು. ಅದಕ್ಕೋಸ್ಕರವಾಗಿಯೇ ವಿಶೇಷ ಡಿಟೆಕ್ಟಿವ್‌ಗಳನ್ನು (ಗೂಢಚಾರರನ್ನು) ಇಟ್ಟು ಹುಡುಕಿಸಬೇಕು. ಈ ವಿಷಯವಾಗಿ ನಿಜವಾದ ಸಮಾಚಾರವನ್ನು ಕೊಡುವವರಿಗೆ ಇನಾಮುಗಳನ್ನು ಕೊಡುವುದಾಗಿ ಜಾಹೀರ್ ಮಾಡಬೇಕು.

(3) ಬೆಂಗಳೂರು ಗಲಭೆಗಳ ಸಂಬಂಧವಾದ ಎಲ್ಲಾ ಮುಕದ್ದಮೆಗಳೂ ಜುರುಕಾಗಿ ನಡೆಯುವಂತೆ, ಜುಡಿಷಿಯಲ್ ಇಲಾಖೆಯ ಸೀನಿಯರ್ ಅಧಿಕಾರಿಗಳ ಆಧಿಪತ್ಯದಲ್ಲಿ ವಿಶೇಷ ಕೋರ್ಟುಗಳು ನೇಮಿಸಲ್ಪಡಬೇಕು.

ನಿಷ್ಪಕ್ಷಪಾತಿಗಳೆಲ್ಲರಿಗೂ ಈ ಸಲಹೆಗಳು ಯುಕ್ತಿಯುಕ್ತವಾದವುಗಳೆಂದೂ ಅತ್ಯಗತ್ಯವಾದವುಗಳೆಂದೂ ಕಂಡು ಬರುವುದರಲ್ಲಿ ಸಂಶಯವಿಲ್ಲ. ಕಮಿಟಿಯವರು ಪ್ರಜೆಗಳ ಮನೋಗತವನ್ನು ಚೆನ್ನಾಗಿ ಅರಿತು ಶಾಂತಿಸ್ಥಾಪನೆಯ ಉದ್ದೇಶದಿಂದ ಈ ಸಲಹೆಗಳನ್ನು ಕೊಟ್ಟಿರುವರು. ಸರಕಾರದಲ್ಲಿ ಪ್ರಜೆಗಳಿಗೆ ನಂಬಿಕೆಯು ಉಂಟಾಗುವುದಕ್ಕೆ ಇದು ಒಂದೇ ಸಾಧನವೆಂದು ಕಮಿಟಿಯವರು ಅರಿತಿರುವರು. ಸರಕಾರದವರು ಕೆಲವು ಅಪರಾಧಿಗಳ ತಲೆಯನ್ನು ಉಳಿಸಬೇಕೆಂದು ಪ್ರಯತ್ನವನ್ನು ಮಾಡುತ್ತಿರುವರೆಂಬ ಅಪವಾದವು ಹೋಗಬೇಕಾದರೆ ಇದು ಒಂದೇ ರಾಜಮಾರ್ಗವೆಂದು ಕಮಿಟಿಯವರು ಅರಿತಿರುವರು. ವಾಸ್ತವ್ಯವಾಗಿಯೂ ಈಗ ನಡೆದಿರುವ ವಿಚಾರಣೆಗಳಲ್ಲಿ ಪ್ರಜೆಗಳಿಗೆ ವಿಶ್ವಾಸವಿಲ್ಲ, ಮ|| ಮಾಚಯ್ಯನವರು ನಡೆಯಿಸಿದ ವಿಚಾರಣೆಗಳಲ್ಲಿ ಜನಗಳಿಗೆ ಸಂಶಯವು ಇದ್ದೇ ಇರುವುದು. ಪ್ರಧಾನ ಪಾತ್ರವನ್ನು ವಹಿಸಿದ ಮಿ|| ಅಬ್ಬಾಸ್ ಖಾನರು ಸಂಪೂರ್ಣ ನಿರ್ದೋಷಿಗಳೆಂದು ನಂಬುವುದು ಅಸಾಧ್ಯ. ಅವರ ಮೇಲೆ ಯಾವ ಅಪವಾದನೆಯನ್ನು ಯಾರೂ ಮಾಡಲಿಲ್ಲವೆಂದಾಗಲೀ ತಪ್ಪುಗಳನ್ನು ರುಜುವಾತು ಮಾಡುವುದಕ್ಕೆ ಯಾರೂ ಸಿದ್ಧವಾಗಿಲ್ಲವೆಂದಾಗಲೀ ನಂಬುವುದಕ್ಕೆ ಆಗುವುದಿಲ್ಲ, ಕಮಿಟಿಯವರೇ ತಿಳಿಸಿರುವಂತೆ ಅಬ್ಬಾಸ್ ಖಾನರು ಭಾರೀ ಮನುಷ್ಯರೆಂದೋ ಅವರು ದಿವಾನರಿಗೆ ಬಹಳ ಮಿತ್ರರೆಂದೋ ಏನು ಕಾರಣದಿಂದಲೋ ಪೋಲೀಸ್ ಅಧಿಕಾರಿಗಳಾಗಲೀ ಮ್ಯಾಜಿಸ್ಟ್ರೇಟರುಗಳಾಗಲೀ ಅವರ ಮೇಲೆ ಕಾರ್ಯಭಾಗವನ್ನು ನಡೆಸಲಿಲ್ಲ. ಏತಕ್ಕೆ ಕಾರ್ಯಭಾಗವನ್ನು ನಡೆಯಿಸಲಿಲ್ಲವೆಂಬುದಕ್ಕೆ ಕಾರಣವನ್ನು ತಿಳಿಸಿಲ್ಲ. ಸರಕಾರದವರಾಗಲೀ ಏತಕ್ಕೆ ಕಾರ್ಯಭಾಗವನ್ನು ನಡೆಯಿಸಲಿಲ್ಲ ಎಂದು ಕೇಳಲೂ ಇಲ್ಲ. ಈಗ ಆರ್ಡರಿನಲ್ಲಿ ಸರಕಾರದವರು ಹೇಳುವನೆಂದರೆ 'ನಾವು ಪೋಲೀಸ್ ಅಧಿಕಾರಿಗಳ ಮತ್ತು ಮೇಜಿಸ್ಟ್ರೇಟರ ಕೆಲಸಕಾರ್ಯಗಳಿಗೆ ಕೈ ಹಾಕಿಲ್ಲ. ತಮ್ಮ ತಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯವಿತ್ತು ಕಮಿಟಿಯವರು ಹೇಳುವಂತೆ ನಾವು ಅವರನ್ನು ವಿಚಾರಿಸಿದ್ದರೆ ಕಮಿಟಿಯವರು ಮಾಡಬೇಕಾಗಿದ್ದ ಕೆಲಸವನ್ನು ನಾವು ಮಾಡಿದರೆ ಅವರ ಕೆಲಸಕ್ಕೆ ಅತಂಕವು ಬರುತ್ತಿತ್ತು. ಏಕೆಂದರೆ ಗಲಭೆಯಾದ ಐದು ದಿವಸಗಳ ಒಳಗಾಗಿ ಕಮಿಟಿಯನ್ನು ನೇಮಿಸಬೇಕೆಂದೂ, ಆವರು ಆಫೀಸರುಗಳ ಕರ್ತವ್ಯ ಲೋಪದೋಷಗಳನ್ನು ವಿಚಾರಿಸಬೇಕೆಂದೂ ತೀರ್ಮಾನವಾಗಿತ್ತು." ಎಂದ ಮೇಲೆ ಆ ಅಧಿಕಾರಿಗಳು ಅಬ್ಬಾಸ್ ಖಾನರ ವಿಷಯದಲ್ಲಿ ಕರ್ತವ್ಯ ಲೋಪದೋಷಗಳನ್ನು ಏತಕ್ಕೆ ಮಾಡಲಿಲ್ಲವೆಂಬುದನ್ನು ಕಮಿಟಿಯವರು ವಿಚಾರಿಸಬೇಕೆಂದಾಯಿತು. ಕಮಿಟಿಯವರು ವಿಚಾರಿಸಿದರು. ಕೊಟ್ಟ ಸಮಾಧಾನವು ತೃಪ್ತಿಕರವಾಗಿಲ್ಲ. ಈ ವಿಷಯವನ್ನು ಕಮಿಟಿಯವರು ಸ್ಪಷ್ಟಪಡಿಸಿರುವರು.

ಅಂತೂ ಅಧಿಕಾರಿಗಳ ಕರ್ತವ್ಯಲೋಪದೋಷದಿಂದ ಅಬ್ಬಾಸ್ ಖಾನರ ಮೇಲೆ ಕಾರ್ಯಭಾಗವು ನಡೆಯಲಿಲ್ಲ ಜುಲೈ 30 ನೇ ರಾತ್ರಿ ಪೋಲೀಸಿನವರು ಮತ್ತು ಮ್ಯಾಜಿಸ್ಟ್ರೇಟರು ಯಾರನ್ನೂ ದಸ್ತಗಿರಿ ಮಾಡಲಿಲ್ಲ. ರುಜುವಾತನ್ನೂ ಶೇಖರಿಸಲಿಲ್ಲ. ಮ|| ಮಾಚಯ್ಯನವರು ಅಧಿಕಾರಿಗಳ ಮೇಲೆ ಮ್ಯಾ|| ರವರಾಗಿ ನೇಮಿಸಲ್ಪಟ್ಟ... ಗೂ ತನಿಖೆ ವಿಚಾರಣೆಗಳ ಕಾರ್ಯವು ನಡೆ... ತರ ಮ|| ಮಾಚಯ್ಯನವರು ನಡೆಯಿಸಿದರು. ... ಚಯ್ಯನವರು ಅಬ್ಬಾಸ್ ಖಾನರ ಮೇಲೆ ... ನ್ನೂ ಹಾಕಲಿಲ್ಲ. ಏತಕ್ಕೋ ಮ|| ಮಾಚಯ್ಯ... ಗೊತ್ತು. ಜನಗಳಿಗೆ ಅಪನಂಬಿಕೆ ಇರುವುದು... ಖಾನರ ಮತ್ತು ಮಾಚಯ್ಯನವರ ಸ್ನೇಹವೇ ... ವೆಂದು ಜನಗಳು ಹೇಳುವರು. ಕಮಿಟಿಯವರು ... ಸ್ಪಷ್ಟಪಡಿಸಿರುವರು. ಆದುದರಿಂದಲೇ ಪುನರ್ವಿಚಾರಣೆ ಯಾಗಬೇಕೆಂದು ಸೂಚಿಸಿರುವರು. ನಾವೂ ಅದನ್ನೇ ತನ್ನೇ ಹೇಳುವೆವು. ಸರಕಾರದವರು ಮಾತ್ರ ಈ ಸಲಹೆಯನ್ನು ಸ್ವೀಕರಿಸಿಲ್ಲ. ಇದನ್ನು ಸ್ವೀಕರಿಸದಿರುವುದಕ್ಕೆ ಕೊಟ್ಟಿರುವ ಕಾರಣವೂ ತೃಪ್ತಿಕರವಾಗಿಲ್ಲ. ಸರಕಾರದವರು ತಮ್ಮ ತೀರ್ಮಾನವನ್ನು ಪುನರ್ವಿಮರ್ಶೆ ಮಾಡುವುದು ಒಳ್ಳೇದು. ಪುನರ್ವಿಮರ್ಶೆ ಮಾಡುವದರಿಂದ ಸರಕಾರಕ್ಕೇನೂ ನಷ್ಟವಿಲ್ಲ. ನ್ಯಾಯ... ರ್ಥರೆಂಬ ಖ್ಯಾತಿಯು ಬರುವುದು.

ಪಶುಪಾಲನೆ

ಭಾವನಗರ ಸಂಸ್ಥಾನದಲ್ಲಿ ... ತ್ತು ಪಾಲಿಸ ಸರಬರಾಯಿಗೂ ಕುಂದಕವುಂಟಾ... ದನಕರುಗಳನ್ನು ಆ ದೇಶದ ಎಲ್ಲೆ ಕಟ್ಟಿನಿಂದ ಆಚೆಗೆ ... ಮಾಡಕೂಡದೆಂದು ಸರಕಾರದವರು ಕಟ್ಟಪ್ಪಣೆಯನ್ನು ಮಾಡಿರುತ್ತಾರೆ. ಹಾಗೆ ಮಾರಿ ಪಶುಗಳನ್ನು ರಫ್ತು ಮಾಡುವವರು 500 ರೂಪಾಯಿಗಳು ಜುಲ್ಮಾನೆ ತೆರಬೇಕೆಂದೂ ಅದರಲ್ಲಿ 25 ರೂಪಾಯಿಗಳನ್ನು ವರ್ತಮಾನ ತಿಳಿಸುವವರಿಗೆ ಕೊಡದೇಕೆಂದೂ ಅಲ್ಲಿಯ ಸರ್ಕಾರದವರು ಅಪ್ಪಣೆಕೊಟ್ಟಿರುತ್ತಾರೆ.

ಮತಗಳ ಪಾರ್ಲಿಮೆಂಟು ಸಭೆ.

ಕಲ್ಕತ್ತೆಯಲ್ಲಿ ಈ ತಿಂಗಳು ೨೭ನೇ ತಾ|| ಆ... ಮತಗಳ ಪಾರ್ಲಿಮೆಂಟ್ ಸಭೆಯು ಸರ್ ರವೀಂದ್ರನಾಥ ಟಾಗೂರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಆಗಮನ

ದಕ್ಷಿಣ ಆಫ್ರಿಕದಲ್ಲಿ ಏಜಂಟ್ ಜನರಲ್ ರಾಗಿದ್ದ ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿ ಮುಂದಿನ ತಿಂಗಳು ೧೬ನೇ ತಾ|| ದಿನ ಬೊಂಬಾಯಿ ನಗರಕ್ಕೆ ಜಹಜಿನಲ್ಲಿ ಬರುವರು.

ಬಡವರಿಗೆ ಮನೆಗಳು.

ಮದ್ರಾಸಿನ ಪೌರಸಭೆಯವರು ಬಡವರಿಗೆ ಮನೆಗಳನ್ನು ಕಟ್ಟಸಿಕೊಡುವುದಕ್ಕಾಗಿ ಅಲ್ಲಿಯ ಸರ್ಕಾರದವರನ್ನು ಐದುಲಕ್ಷ ರೂಪಾಯಿಗಳ ಗ್ರ್ಯಾಂಟ್ ... ರ್ ಮಾಡಬೇಕೆಂದು ಕೋರಿರುತ್ತಾರೆ.

ಬರೋಡದಲ್ಲಿ ವೈದ್ಯರ ಸಮ್ಮೇಳನ

ಗುಜರಾತ್, ಕಚ್. ಮತ್ತು ಕಾಥೇವಾಡೀ ... ಗಳ ವೈದ್ಯರ ೪ನೇ ಸಮ್ಮೇಳನವು ಬರೋಡದಲ್ಲಿ ... ನ ಮಾರ್ಚಿ ತಿಂಗಳಲ್ಲಿ ನಡೆಸಲ್ಪಡುವುದು ಆಗ ... ತಾ|| ನಿಂದ ೧೯ನೇ ತಾ|| ವರೆಗೆ ವೈದ್ಯಕ್ಕೆ ಸಂಬಂಧಿಸಿದ ಒಂದು ಪ್ರದರ್ಶನವು ನಡೆಸಲ್ಪಡುವುದು.

ತಾಯಿನಾಡು.

30—1—1929

ಅಫ್ಘಾನಿಸ್ಥಾನದ ಸಂಕ್ಷಿಪ್ತ ಇತಿಹಾಸ.

(ಲಂಡನ್ ಟೈಮ್ಸ್ ಪತ್ರಿಕೆಯಿಂದ)

18 ನೆ ಶತಮಾನದ ಮಧ್ಯಭಾಗದವರೆಗೂ ಆಫ್‌ಘಾನಿಸ್ಥಾನವು ಒಂದು ರಾಜ್ಯವಾಗಿರಲಿಲ್ಲ. ಅನೇಕ ಸಣ್ಣ ಸಣ್ಣ ಸಂಸ್ಥಾನಗಳು ಇದ್ದುವು. ಕಾಬೂಲ್ ಮತ್ತು ಘಜನಿ ಪ್ರಾಂತ್ಯಗಳು ಇಂಡಿಯಾದ ಮೊಗಲ್ ಚಕ್ರವರ್ತಿಗಳ ಆಧೀನದಲ್ಲಿದ್ದವು. ಹೀರತ್ ಮತ್ತು ಕಾಂದಹಾರ್ ಪ್ರಾಂತ್ಯಗಳು ಪರ್ಷಿಯಾಕ್ಕೆ ಸೇರಿದ್ದವು. ಆಕ್ಸಸ್ ಮತ್ತು ಹಿಂದೂಕುಷ್‌ನ ಮಧ್ಯಭಾಗದ ಪ್ರಾಂತ್ಯವು ಬೊಖಾರಾಕ್ಕೆ ಸೇರಿತ್ತು. 1708 ರಲ್ಲಿ ಕಾಂದಹಾರಿನ ಘಿಲ್ಜಿ ಜನರು ಪರ್ಷಿಯಾಕ್ಕೆ ವಿರೋಧವಾಗಿ ದಂಗೆ ನಡಸಿ ಜಯವನ್ನು ಹೊಂದಿದರು. ದುರಾಣಿ ಮನೆತನಕ್ಕೆ ಸೇರಿದ ಅಹಮದ್‌ಷಾ ಎಂಬುವನೇ ಆಫ್‌ಘಾನಿಸ್ಥಾನದ ಮೊದಲನೆ ರಾಜನು. 1747 ರಲ್ಲಿ ನಾದಿರ್‌ಷಹನು ಕೊಲೆಯಾದನಂತರ ಅಹಮದ್‌ಷಹನು ಸ್ವತಂತ್ರನೆಂದು ಜಾಹಿರ್ ಮಾಡಿಕೊಂಡನು. 1836 ರಲ್ಲಿ ದೋಸ್ತ್ ಮಹಮೂದನು ಕಾಬೂಲಿನಲ್ಲಿ ಅಮೀರ್ ಉಲ್ ಮನ್ ಮುಮೀನ್ ಎಂಬುದಾಗಿ ಪಟ್ಟಾಭಿಷೇಕ ಮಾಡಿಕೊಂಡನು. ಇವನ ಸಂತತಿಯವರೆಲ್ಲರೂ ಅಮೀರ್ ಎಂಬದಾಗಿ ಕರೆದುಕೊಂಡರು. 1926 ರಲ್ಲಿ ಅಮಾನುಲ್ಲಾರವರು ರಾಜರೆಂಬುದಾಗಿ ಕರೆದುಕೊಂಡರು. ಆಫ್‌ಘಾನಿಸ್ಥಾನದಲ್ಲಿ ಜನಗಳಿಗೆ ತಾವು ಒಂದೇ ಜನಾಂಗವೆಂಬ ಭಾವನೆ ಇನ್ನೂ ಬಂದಿಲ್ಲ. ಆಫ್‌ಘಾನಿಸ್ಥಾನದಲ್ಲಿ ಆಫ್‌ಘಾನರೆಂಬುದಾಗಿಯೂ ಪಠಾಣರೆಂಬುದಾಗಿಯೂ ಆಫ್‌ಘಾನರಲ್ಲದವರೆಂಬುದಾಗಿಯೂ ಮೂರು ಗುಂಪುಗಳಿವೆ ಆಫ್‌ಘಾನರ ಗುಂಪಿಗೆ ದುರಾಣಿಗಳು ಘಿಲ್ಜಾಗಳು ಇಬ್ಬರೂ ಸೇರಿರತ್ತಾರೆ. ಇವರ ಜನಸಂಖೆ ಸುಮಾರು 10 ಲಕ್ಷ ಇರಬಹುದು ಪಠಾಣರ ಜನ ಸಂಖೆ ಸುಮಾರು 7½ ಲಕ್ಷವಿರಬಹುದು. ಇವರೆಲ್ಲಾ ಸುನ್ನಿ ಮುಸಲ್ಮಾನರು ಅವರು ಮಾತನಾಡುವ ಭಾಷೆ ಫಸ್ಟ್‌ಎಂದು ಆಫ್‌ಘಾನರಲ್ಲದವರು 30 ಲಕ್ಷ ಇರಬಹುದು. ಇವರಲ್ಲಿ ಪರ್ಷಿಯಾದೇಶದವರೂ ಟರ್ಕಿ-ಟಾರ್ಟರುಗಳೂ ಮಂಗೋಲ್ ಗುಂಪಿಗೆ ಸೇರಿದವರೂ ಇರುವರು. ಅವರ ಭಾಷೆಗಳು ಬೇರೆಬೇರೆಯಾಗಿರುವುದು. ಇವರಲ್ಲಿ ಅನೇಕರು ಷಿಯಾ ಮುಸಲ್ಮಾನರು. ಈ ಪ್ರಭೇದಗಳಲ್ಲದೆ ಈ ದೇಶವು ಪೂರ್ವದಿಂದ ಪಶ್ಚಿಮಕ್ಕೆ ಪಾಮಿರ್‌ನಿಂದ ಪರ್ಷಿಯಾ ಸರಹದ್ದಿನವರೆಗೂ ಹಿಂದೂಕುಷ್ ಪರ್ವತದಿಂದ ಎರಡು ಭಾಗ ಮಾಡಲ್ಪಟ್ಟಿದೆ ಈ ದೊಡ್ಡ ಪರ್ವತಶ್ರೇಣಿ ಇರುವ ಕಣಿವೆದಾರಿಗಳು ಬಹಳ ಸ್ವಲ್ಪ. ಪ್ರಯಾಣಕ್ಕೆ ಅನುಕೂಲವಿಲ್ಲ. ಗಾಡಿಗಳು ಹೋಗುವ ಹಾಗಿಲ್ಲ. ಹಿಮಂತ ಕಾಲದಲ್ಲೆಲ್ಲಾ ಈ ಕಣಿವೆಗಳು, ಹಿಮದಿಂದ ಮುಚ್ಚಿರುತ್ತವೆ. ಉತ್ತರಕ್ಕೂ ದಕ್ಷಿಣಕ್ಕೂ ಈ ರೀತಿಯಾಗಿ ಜನಗಳು ಸೇರುವುದಕ್ಕೆ ಅವಕಾಶವಿಲ್ಲ. ಇಷ್ಟಾದರೂ ಆಫ್‌ಘಾನಿಸ್ಥಾನದಲ್ಲಿ ಜನಾಂಗದ ಐಕ್ಯತೆಯಾಗುತ್ತಲಿದೆ. ರಷ್ಯಾ ಮತ್ತು ಬ್ರಿಟಿಷರ ಕಾಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ದೇಶದ ಒಗ್ಗಟ್ಟು ದೃಢಪಡುತ್ತಲಿದೆ. 1880 ರಿಂದ 1901 ರವರೆಗೆ ಆಳಿದ ಅಮೀರ್ ಅಬ್ದುಲ್ ರಹಿಮಾನ್‌ರವರು ದೇಶದಲ್ಲಿ ಒಗ್ಗಟ್ಟು ತರುವುದಕ್ಕೋಸ್ಕರ ಬಹಳ ಪ್ರಯತ್ನ ಪಟ್ಟರು. ಇವರ ಆಳ್ವಿಕೆಯಲ್ಲಿ ಮುಕ್ಕಾಲು ಭಾಗವನ್ನೆಲ್ಲಾ ಇದಕ್ಕಾಗಿಯೇ ವಿ

ವರ್ತಮಾನ ಸಂಗ್ರಹ

ಮಹಮ್ಮದೀಯರ ಡೆಪ್ಯುಟೇಷನ್.

ಮೊನ್ನೆದಿನ ಬೆಳಿಗ್ಗೆ ಕೆಲವರು ಬೆಂಗಳೂರು ನಗರದ ಮುಸಲ್ಮಾನರ ಪ್ರಮುಖರು ಸಿಟಿ ಪೋಲೀಸ್ ಸೂಪರಿಂಟೆಂಡರಲ್ಲಿಗೆ ಡೆಪ್ಯುಟೇಷನ್ ಹೋಗಿದ್ದು 14 ಜನ ಮುಸಲ್ಮಾನರ ಮೇಲೆ ಗಲಭೆಗಳನ್ನು ನಡೆಸಿದರೆಂದು ಮಾಡಿರುವ ಮೊಕದ್ದಮೆಯನ್ನು ಕ್ಷಮಿಸಿ ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಂಡಂತೆ ಮಹಮ್ಮದೀಯರ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡರೆಂದೂ ಮತ್ತು ಸಿಟಿ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಪ್ರಾರ್ಥನೆಯನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಸತ್ತೇವೆಂದು ಅಪ್ಪಣೆ ಕೊಟ್ಟರೆಂದೂ, ಕೇಳುತ್ತೇವೆ

ಮದ್ಯಪಾನ.

ಅಮೇರಿಕಾದಲ್ಲಿ ಒಂದು ಜಿಲ್ಲೆಯಲ್ಲಿ ಮದ್ಯಪಾನ ಮಾಡಬಾರದೆಂದರೂ ಈ ದುರಭ್ಯಾಸವನ್ನು ಬಿಡದ 2000 ಸ್ತ್ರೀ ಪುರುಷರು ಈಗ ಅಪಾಯಿತರಾಗಿರುವರು.

ಗೋರಿಗಳ ಬದಲಾವಣೆ

ರಂಗೂನಿನ ಬೌದ್ಧದೇವಾಲಯದ ಬಳಿಯಲ್ಲಿರುವ ಬ್ರಿಟಿಷ್ ಸೋಲ್ಜರುಗಳ ಗೋರಿಗಳನ್ನು ಅಲ್ಲಿಂದ ಕಿತ್ತು ಇನ್ನೊಂದು ಸ್ಥಳದಲ್ಲಿ ಕಟ್ಟಿಸಬೇಕಾಗಿ ಜನಗಳ ಹೇಳಿಕೆಯಂತೆ ಸಂಕಾರವು ನಡಿಯಲು ಒಪ್ಪಿಕೊಂಡಿದೆ.

ವಿಶ್ವಕರ್ನಾಟಕದ ಮೊಕದ್ದಮೆ.

ಕುಣಿಗಲು ತಾಲ್ಲೋಕು ಅಮಲ್ದಾರರು ಮೇಲ್ಕಂಡ ಪತ್ರಿಕಾ ಸಂಪಾದಕರ ಮೇಲೆ ಮಾಡಿರುವ ಮೊಕದ್ದಮೆ ತುಮಕೂರಿನಲ್ಲಿ ಫೆಬ್ರವರಿ 11 ತಾ|| ಗೆ ಇಡಲ್ಪಟ್ಟಿದೆ

ಮೊದಲಿಯಾರ್ರ ಕಾನ್‌ಫರೆನ್ಸ್.

ಬೆಂಗಳೂರು ನಾರಾಯಣಸ್ವಾಮಿ ಮೊದಲಿಯಾರ್ರ ಹೈಸ್ಕೂಲಿನಲ್ಲಿ ಈ ತಿಂಗಳು 27 ನೇ ತಾ|| ಭಾನುವಾರ ಡಾಕ್ಟರ್ ಟಿ. ಎ. ಆರಮ್ಮಗಂ ಮೊದಲಿಯಾರ್ರ ಆಧ್ಯಕ್ಷತೆಯಲ್ಲಿ ಮೊದಲಿಯಾರ ಸಂಘ ಸ್ಥಾಪನೆಗಾಗಿ ಪ್ರಿಲಿಮಿನರಿ ಮೀಟಿಂಗ್ ನಡೆಯಿತು.

ಸರ್ಕಾರಿ ಉದ್ಯೋಗಸ್ಥರಿಗೆ ಗಾಂಧಿ ಟೋಪಿ

ಮುಂದೆ ಬರಲಿಕ್ಕಿರುವ ಬಿಹಾರ್ ಕೌನ್ಸಿಲಿನ ಅಧಿವೇಶನವು, ಫೆಬ್ರವರಿ 4ನೇ ತಾರೀಖಿನಲ್ಲಿ ಪ್ರಾರಂಭಿಸುವುದು. ಈ ಆಧಿವೇಶನದಲ್ಲಿ ಸರಕಾರಿ ಉದ್ಯೋಗಸ್ಥರೆಲ್ಲರೂ ಗಾಂಧಿ ಟೋಪಿಯನ್ನು ಧರಿಸಬೇಕೆಂದು ಶಿಫಾರಸ್ಸು ಮಾಡುವ ಸ್ವರಾಜ್ಯ ಪಂಗಡದರ ಸೂಚನೆಯು ಪರಿಗಣಿಸಲಾಗುವುದು.

ನಿಯೋಗಿಸಿದರು. ದೊಂಬಿ ಎದ್ದವರನ್ನೆಲ್ಲಾ ನಿರ್ದಯವಾಗಿ ಹತೋಟಿಗೆ ತರುತ್ತಿದ್ದರು. ಇವರನಂತರ ಇವರ ಹಿರಿಮಕ್ಕಳಾದ ಹಬಿಬುಲ್ಲಾರವರು ಸಿಂಹಾಸನಕ್ಕೆ ಬಂದರು. ಹಬೀಬುಲ್ಲಾರವರು ಅಬ್ದುಲ್ ರಹಿಮಾನರಿಗಿಂತ ಪ್ರಜಾನುರಾಗದಿಂದ ರಾಜ್ಯವಾಳಿದರು. ಆದರೂ ಹೊಂಗಿನವರನ್ನು ರಾಜ್ಯದ ಒಳಕ್ಕೆ ಸೇರಿಸುತ್ತಿರಲಿಲ್ಲ. ದೇಶದಲ್ಲಿ ಸಂಪತ್ತನ್ನು ಹೆಚ್ಚಿಸುವ ಅನೇಕ ಕೆಲಸಗಳನ್ನು ಮಾಡಿದರು. 1919ರಲ್ಲಿ ಇವರು ಜಲಾಲಾಬಾದಿನ ಹತ್ತಿರ ಕೊಲೆ ಮಾಡಲ್ಪಟ್ಟರು. ಅನಂತರ ಅಮಾನುಲ್ಲಾರವರು ರಾಜ್ಯಕ್ಕೆ ಬಂದರು. ಅಮಾನುಲ್ಲಾರವರ ವಿಷಯವು ಈಗ ಎಲ್ಲರಿಗೂ ಗೊತ್ತಿರುವುದು.

ತಾಯಿಗೆ [illegible]

[illegible]

ನಂ. ೨

ಪೋಲೀಸಿನವರು [illegible] ಹಿನ ಬೆಳಿಗ್ಗೆ ಯಾದರೂ [illegible] ಯಾವ ಪ್ರಯೋಜನವಾದರೂ [illegible]

[illegible]

ತುರ್ತಾಗಿ ಶಾಂತಿ [illegible] ದಕ್ಕೆ ಕಮಿಟಿಯವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. [illegible] ಮುಂದೆ ನಡೆಯುತ್ತಿರುವ ಮೊಕದ್ದಮೆಗಳೂ [illegible] ದೂ ಸರಕಾರದವರು. ಅಭಿಪ್ರಾಯ ಪಡುತ್ತಾರೆ [illegible] ಜುಲೈ 31 ನೇ ತಾ [illegible] ಜನಗಳ [illegible] ತಪ್ಪಿತಸ್ಥರೆಂದೂ [illegible] ಮೇಲೆ ತಪ್ಪು [illegible] ಕಮಿಟಿಗೆ [illegible] ವಿಶ್ವಾಸವಿಟ್ಟಿರುವರು.

[illegible]

ಮೈಸೂರು [illegible] ಯದಲ್ಲಿ ಕೋಲಾರ ಮತ್ತು ಶಿವಮೊಗ್ಗಾಗಳಲ್ಲಿ [illegible]

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road, Mysore.

Regl No. M 1322

ವಂದೇ ಮಾತರಂ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ.
ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೮]

ಗುರುವಾರ ೩೧ ಜನವರಿ

TAI NADU
31—1—1929

ಅನುಚಿತ ತಿರಸ್ಕಾರ

ಸರಕಾರದವರು ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಮೇಲೆ ಮಾಡಿರುವ ಆರ್ಡರಿನಲ್ಲಿ ಕೆಲವು ವ್ಯಂಗ್ಯವಾದ ಶಬ್ದಗಳನ್ನು ಉಪಯೋಗಿಸಿರುವರು. ಬಹುಶಃ ದೊಡ್ಡವರು ಹುಡುಗರನ್ನು ಪ್ರಶಂಸೆ ಮಾಡುವಾಗ, ಮೆಹರ್ಬಾನಿಯಿಂದ ಮಾತನಾಡುವಂತೆ ಸರಕಾರದವರು ಕಮಿಟಿಯ ತಾರೀಫನ್ನು ಮಾಡಿರುವರು. ಕಮಿಟಿಯವರು ಮಾಡಿರುವ ಕೆಲಸವೂ, ಅವರು ಕೊಟ್ಟಿರುವ ತೀರ್ಮಾನಗಳೂ ಪ್ರಶಂಸೆಗೆ ಅರ್ಹವಲ್ಲವೆಂದೂ, ಅವರು ಪಟ್ಟಿರುವ ಕಷ್ಟಕ್ಕೋಸ್ಕರವಾಗಿ ಮರುಕಪಡುವಂತೆಯೂ ಕೆಲವು ಕಣ್ಣೊರಸುವ ಮಾತುಗಳನ್ನಾಡಿರುವರು. ಸಂಧ್ಯದಲ್ಲಿ ಸೋತರೂ ಕೆಲವು ಸಾರಿ ಕಾನ್ಸೊಲೇಷನ್ ಪ್ರೈಸ್ ಎಂದರೆ ಕಣ್ಣೊರಸುವ ಇನಾಮನ್ನು ಕೊಡುವ ವಾಡಿಕೆಯುಂಟು. ಅದರಂತೆ ಸರಕಾರದವರ ಭಾವನೆಯಲ್ಲಿ ಕಮಿಟಿಯವರು ತಮ್ಮ ಕರ್ತವ್ಯವನ್ನು ಅಷ್ಟು ತೃಪ್ತಿಕರವಾಗಿ ನೆರವೇರಿಸಿಲ್ಲ. ಸೋತರು. ಆದರೂ ಅವರು ಕೈಕೊಂಡ ಕೆಲಸವು ಕಷ್ಟಸಾಧ್ಯವಾದುದರಿಂದ ಅವರು ಸೋಲುವುದು ಸ್ವಾಭಾವಿಕ ಎಂಬ ರೀತಿ ಅರ್ಥ ಬರುವಂತೆ ಅಭಿಪ್ರಾಯವನ್ನು ಪ್ರಕಟಿಸಿರುವರು.

ಸರಕಾರದವರು ಆರ್ಡರಿನಲ್ಲಿ ಉಪಯೋಗಿಸಿರುವ ಶಬ್ದಗಳನ್ನು ನೋಡಿದರೆ ಕಮಿಟಿಯವರು ಅಲ್ಪಜ್ಞರು, ಸಾಮರ್ಥ್ಯಹೀನರು, ಅವಿಚಕ್ಷಣರು. ವಿಮರ್ಶೆಯ ಜ್ಞಾನವಿಲ್ಲದವರು, ಎಂಬ ಭಾವನೆಯು ಬರುವುದು. ಸರಕಾರದವರಿಗೆ ಕಮಿಟಿಯ ತೀರ್ಮಾನಗಳಂತೆ ನಡೆಯಲು ಇಷ್ಟವಿಲ್ಲದಿದ್ದರೆ ಚಿಂತೆಯಿಲ್ಲ. ಆದರೆ ವ್ಯಂಗ್ಯವಾದ ಶಬ್ದಗಳನ್ನು ಉಪಯೋಗಿಸಿ. ಕಮಿಟಿಯ ಮೆಂಬರುಗಳನ್ನು ಲಾಘವ ಮಾಡುವುದು ಅನುಚಿತ. ಸರಕಾರದವರು ಬೇಕಾದರೆ ತಮ್ಮನ್ನು ಸರ್ವಜ್ಞರೆಂದೂ, ಸಮರ್ಥರೆಂದೂ ಬೃಹಸ್ಪತಿಗಳೆಂದೂ ಕರೆದುಕೊಳ್ಳಲಿ ಆದರೆ ಕಮಿಟಿಯವರಿಗೆ ಅವಹೇಳನವಾಗುವ ರೀತಿಯಲ್ಲಿ ಅಭಿಪ್ರಾಯಗಳನ್ನು ಕೊಡುವುದೂ, ಶಬ್ದಗಳನ್ನು ಉಪಯೋಗಿಸುವುದೂ ಸರಿಯಲ್ಲ.

ಈ ಕಮಿಟಿಯನ್ನು ನೇಮಿಸಿದ್ದರಿಂದಲೇ ಬಹಳ ಮಟ್ಟಿಗೆ ಜನಗಳಿಗೆ ಸಮಾಧಾನವಾದರೂ, ಸರಕಾರದವರು ನೇಮಿಸಕೂಡದೆಂದೂ ಶ್ರೀಮನ್ಮಹಾರಾಜರವರೇ ನೇಮಿಸಬೇಕೆಂದೂ ಅಭಿಪ್ರಾಯವು ಸ್ಪಷ್ಟಪಡಿಸಲ್ಪಟ್ಟಿತು. ಸರ್. ಎಂ ವಿಶ್ವೇಶ್ವರಯ್ಯನವರು ಶ್ರೀಮನ್ಮಹಾರಾಜರವರ ಮಾತಿನಂತೆ ಅಧ್ಯಕ್ಷತೆಯನ್ನು ಸ್ವೀಕರಿಸಲು ಒಪ್ಪಿರುವರೆಂದು ಕೇಳಿ ಬಹಳ ಜನಗಳಿಗೆ ಸಮಾಧಾನವೂ ಕೆಲವರಿಗೆ ಅಸಮಾಧಾನವೂ ಉಳಿದಿತ್ತು, ಕಮಿಟಿಯ ಇತರ ಮೆಂಬರುಗಳ ವಿಷಯವಾಗಿಯೂ ಸ್ವಲ್ಪ ಸ್ವಲ್ಪ ಅಸಮಾಧಾನವಿದ್ದರೂ ಕ್ರಮವಾಗಿ ಪರಿಹೋಯಿತು. ಕಮಿಟಿಯು ಕೆಲಸಕ್ಕೆ ಆರಂಭ ಮಾಡಿದ ಮೇಲೆ, ಕಮಿಟಿಯ ವಿಷಯವಾಗಿಯೂ ಅಧ್ಯಕ್ಷರ ವಿಷಯವಾಗಿಯೂ ಇದ್ದ ಅಸಮಾಧಾನಗಳೆಲ್ಲಾ ತೊಲಗಿದವು. ಅನೇಕ ಕೊಳಕೆಗಳೂ ಹುಳುಕುಗಳೂ ಹೊರಕ್ಕೆ ಬಂದವು. ಕಡೆಗೆ ಕಮಿಟಿಯವರು ತಮ್ಮ ಕೆಲಸವನ್ನು ಪೂರೈಸಿ ವರದಿಯನ್ನು ಪ್ರಕಟಿಸಿದ ಮೇಲೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಂದ ವರದಿಯ ಭಾಗವನ್ನು ನೋಡಿ ಅನೇಕರಿಗೆ ತೃಪ್ತಿಯಾಯಿತು. ಸರಕಾರದವರು ಕಮಿಟಿಯ ವರದಿಗೆ ತಕ್ಕ ಪುರಸ್ಕಾರವನ್ನು ಕೊಡುವರೋ ಇಲ್ಲವೋ ಎಂಬ ಶಂಕೆಯು ಇದ್ದೇ ಇತ್ತು. ಡಿಸ್‌ಮಿಸ್ ಆದ ಆರು ಜನ ಉಪಾಧ್ಯಾಯರುಗಳ ವಿಷಯವು ಅಸೆಂಬ್ಲಿಯಲ್ಲಿ ಚರ್ಚೆಯಾದಾಗ ದಿವಾನರು ತಾವು ಸರ್.ಎಂ ವಿಶ್ವೇಶ್ವರಯ್ಯನವರ ಅಭಿಪ್ರಾಯಕ್ಕೆ ಬದ್ಧರಲ್ಲವೆಂದು ಹೇಳಿದಾಗಲೇ ಸರಕಾರದ ಮನೋಭಾವನೆಯು ಸೂಚನೆಯಾಯಿತು. ಆನಂತರ ಈಚೀಚೆಗೆ ಅವರು ಅನುಸರಿಸಿದ ಕೆಲವು ರೀತಿನೀತಿಗಳನ್ನು ನೋಡಿ ಕಮಿಟಿಯ ವರದಿಗೆ ತಕ್ಕ ಪುರಸ್ಕಾರ ದೊರೆಯುವುದಿಲ್ಲವೆಂಬುದೂ ದೃಢಪಟ್ಟಿತು. ಡಿಸೆಂಬರ್ 12 ರಲ್ಲಿ ಕಮಿಟಿಯ ವರದಿಯನ್ನು ಸರಕಾರಕ್ಕೆ ಕಳುಹಿಸಿದಾಗ ಮಿ|| ಕಲಾಮಿಯವರು ಅದರ ಜೊತೆಯಲ್ಲಿ ಕಳುಹಿಸದೆ 35 ದಿನಗಳನಂತರ ಕಳುಹಿಸಿದುದನ್ನು ನೋಡಿ ಗಾಳಿಯು ಯಾವಕಡೆ ಬೀಸುತ್ತಿದೆಯೆಂಬುದು ಸ್ಪಷ್ಟವಾಯಿತು. ಸರಕಾರವು ವಿರೋಧಾಭಿಪ್ರಾಯಕ್ಕೆ ಮೆಜಾರಟಿಯ ಅಭಿಪ್ರಾಯಕ್ಕಿಂತಲೂ ಹೆಚ್ಚು ಬೆಲೆಕಟ್ಟಿರುವುದನ್ನು ನೋಡಿದರೆ ಮಿ|| ಕಲಾಮಿಯವರ ವಿರೋಧಾಭಿಪ್ರಾಯವು ಇತರರಿಂದ ಪ್ರೇರಿತವಾಗಿತ್ತೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ಮತ್ತು ಸ್ಟಾರ್ ಪತ್ರಿಕೆಯಲ್ಲೂ ಬೆಂಗಳೂರು ಟೈಮ್ಸ್ ಪತ್ರಿಕೆಯಲ್ಲೂ ಸರ್ ವಿಶ್ವೇಶ್ವರಯ್ಯನವರ ಮೇಲೆ ಆಕ್ಷೇಪಣೆ ಮಾಡಿ ಬರುತ್ತಿದ್ದ ಲೇಖನಗಳನ್ನು ನೋಡಿದ ಮೇಲೆ ಇದೆಲ್ಲಾ ಒಂದು ಪಿತೂರಿಯೆಂಬುದು ಸ್ಪಷ್ಟಪಟ್ಟಿತು ಆರ್ಡರು ಬಂದ ಮೇಲಂತು ಎಲ್ಲವೂ ಬಯಲಾಯಿತು.

ಸರಕಾರದವರು ತಮ್ಮ ಮೇಲೆ ಕಮಿಟಿಯವರು ಮಾಡಿರುವ ಆಕ್ಷೇಪಣೆಗಳಿಗೆಲ್ಲಾ ಸರಿಯಾದ ಸಮಾಧಾನವನ್ನು ಹೇಳಿ, ಪ್ರಜೆಗಳ ಮನಸ್ಸಿನಲ್ಲಿದ್ದ ಸಂದೇಹಗಳನ್ನು ಹೋಗಲಾಡಿಸುವದಕ್ಕೆ ಬದಲಾಗಿ, ಕಮಿಟಿಯನ್ನೇ, ಲಾಘವಮಾಡಿರುವುದು ಬಹಳ ಶೋಚನೀಯವು.

ವಾಸ್ತವ್ಯವಾಗಿಯೂ, ಸರ್. ಎಂ. ವಿಶ್ವೇಶ್ವರಯ್ಯನವರು ಈ ವೃದ್ಧಾಪ್ಯದಲ್ಲಿ, ಪ್ರಬಲವಾದ ಕಾರಣಗಳಿಲ್ಲದೆ, ಕಮಿಟಿಯ ಅಧ್ಯಕ್ಷತೆಯನ್ನು ವಹಿಸುತ್ತಿರಲಿಲ್ಲ. ಅವರಿಗೆ ಇತರ ಅನೇಕ ಕೆಲಸಗಳಿದ್ದರೂ, ಅವುಗಳನ್ನೆಲ್ಲಾ ಲಕ್ಷಿಸದೆ, ಈ ಕೆಲಸಕ್ಕೆ ಕೈಹಾಕಿದರು ನಮ್ಮ ಸಂಸ್ಥಾನಕ್ಕೆ ಬಂದಿದ್ದ ಅಪಯಶಸ್ಸನ್ನು ಹೋಗಲಾಡಿಸಿ, ಮೈಸೂರಿನ ಕೀರ್ತಿ ತಾರೆಯನ್ನು ಅಂತರಿಕ್ಷದಲ್ಲಿ ಪುನಃ ಜಾಜ್ವಲ್ಯಮಾನವಾಗಿ ಬೆಳಗುವಂತೆ ಮಾಡುವುದೇ ಅವರ ಉದ್ದೇಶವಾಗಿತ್ತು. ಸಂಸ್ಥಾನದ ಹೊರಗೂ ಒಳಗೂ ಪ್ರಜೆಗಳು, ಅವರ ಅಧ್ಯಕ್ಷರಾಗಬಾರದೆಂದು ಕೇಳಿ, ಖಂಡಿತವಾಗಿಯೂ, ನ್ಯಾಯವಾದ ತೀರ್ಮಾನವೇ ಹೊರಡುವುದೆಂದು ಭಾವಿಸಿದ್ದರು. ಅದರಂತೆಯೇ, ತಮ್ಮ ಕೀರ್ತಿಗೆ ಅನುಗುಣವಾಗಿ ಸರ್. ಎಂ. ವಿಶ್ವೇಶ್ವರಯ್ಯನವರು ಸ್ವಲ್ಪವೂ ಪಾಲುಮಾರದೆ, ಅಹರ್ನಿಶವೂ, ಸತ್ಯಶೋಧನೆಯನ್ನು ಮಾಡಿದರು. ಇವರಿಗೆ ಸರಕಾರದ ಮೇಲೆ ಯಾವವಿಧವಾದ ಅಸಮಾಧಾನಕ್ಕೂ ಕಾರಣವಿಲ್ಲ. ವಾಸ್ತವ್ಯವಾಗಿ ಇವರ ಸ್ಕೀಮುಗಳನ್ನೆಲ್ಲಾ ಜಾರಿಗೆ ತರುತ್ತಿರುವರೆಂದು ಅಭಿಮಾನವಿತ್ತು. ಆದುದರಿಂದ ಸರಕಾರದ ಹಿತಕ್ಕಾಗಿಯೇ, ಕಮಿಟಿಯ ಅಧ್ಯಕ್ಷತೆಯನ್ನು ವಹಿಸಿದರು. ಅದರಂತೆಯೇ ಕಾರ್ಯಕಲಾಪಗಳನ್ನೂ ನಡೆಸಿ, ವರದಿಯನ್ನು ಕೊಟ್ಟರು. ಕಮಿಟಿಯ ಇತರ ಖಾಸಗೀಮೆಂಬರುಗಳಾದ, ಮ|| ಮಾಣಿಕ್ಯವೇಲು ಮುದಲಿಯಾರರವರೂ, ಬಸಪ್ಪನವರೂ, ರಾಲ್ಫನೈರವರೂ ನಿಷ್ಪಕ್ಷಪಾತತೆಯಿಂದ ಕೆಲಸವನ್ನು ಮಾಡಿದರು. ಜಸ್ಟಿಸ್ ರಾಮರಾಯರು ನ್ಯಾಯದಲ್ಲಿಯೇ ಕಣ್ಣಿಟ್ಟಿದ್ದರು. ಇವರೆಲ್ಲರೂ, ಸರಕಾರದ ಹಿತದ ದೃಷ್ಟಿಯಿಂದಲೂ, ಪ್ರಜಾಕ್ಷೇಮದ ದೃಷ್ಟಿಯಿಂದಲೂ ಮೆಂಬರುಗಳು ಒಪ್ಪಿದ್ದಕ್ಕೆ ಸರಕಾರದವರು ಇವರಿಗೆ ಕೊಡುತ್ತಿರುವ ಉಡುಗೆರೆಯು ಬಹಳ ಹಾಸ್ಯಾಸ್ಪದವಾಗಿರುವುದು. ಇದರಿಂದ ಕಮಿಟಿಯವರಿಗೇನೂ ನಷ್ಟವಿಲ್ಲ. ಕಮಿಟಿಯವರ ಯೋಗ್ಯತೆಯನ್ನು ನಮ್ಮ ಸಂಸ್ಥಾನದ ಒಳಗೂ ಹೊರಗೂ ಪ್ರಜೆಗಳು ಬಲ್ಲರು. ಹೊರಗಿನ ಪತ್ರಿಕೆಗಳನ್ನು ನೋಡಿದರೆ, ಯಾರಿಗೆ ನಷ್ಟ ಎಂಬುದು ಸ್ಪಷ್ಟವಾಗುತ್ತದೆ, ತಮ್ಮ ಹಿತವು ತಮಗೆ ಗೊತ್ತಿಲ್ಲದ ಸರಕಾರವನ್ನು ಏನು ಮಾಡುವದಕ್ಕಾಗುತ್ತದೆ. ಕಮಿಟಿಯವರು ತಮ್ಮ ಹಿತಕ್ಕೆ ಹೇಳಿದ ಮಾತುಗಳನ್ನೆಲ್ಲಾ ಅವಹೇಳನಮಾಡಿ ತಮಗೆ ಉಪಕಾರಮಾಡಿದವರನ್ನೇ ಜರಿಯುವ ಸರಕಾರದ ಮನೋಭಾವನೆಯು ಶೋಚನೀಯವಾದುದು ಈಗಲೂ. ಸರಕಾರದವರು ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಅವಕಾಶವಿದೆ. ಕಮಿಟಿಯ ಶಿಫಾರಸುಗಳನ್ನೆಲ್ಲಾ ಮನ್ನಿಸಿ ಆ ಸಲಹೆಗಳನ್ನು ಜಾರಿಗೆ ತರುವುದು ಶ್ರೇಯಸ್ಕರವು.

ವಿವಿಧ ವಿಷಯಗಳು

ಸ್ತ್ರೀವಧೆ.

ಕಳೆದ ಭಾನುವಾರ ಮದರಾಸಿಗೆ ಹೋಗುವ ಮೇಲ್ ಗಾಡಿಯ ಇಂಟರ್ ಕಂಪಾರ್ಟ್‌ಮೆಂಟಿನಲ್ಲಿ ಪ್ರಯಾಣ ಮಾಡುತ್ತಿದ್ದ ಮೇಲುಕೋಟೆಯ ರಾ... ಎಂಬ ಯುವತಿಯು ಕೊಲೆಮಾಡಲ್ಪಟ್ಟಳೆಂದೂ, ಮಾನಿಯಮೇಲೆ ರಾಮಚಂದ್ರರಾವ್ ಎಂಬಾತನು ಅರೆಸ್ಟುಗಿರಿ ಮಾಡಲ್ಪಟ್ಟಿರುವನೆಂದೂ ತಿಳಿಯಬರುತ್ತದೆ.

ವೈಸ್‌ರಾಯರ ಭಯಪ್ರದರ್ಶನ.

ವೈಸ್‌ರಾಯರವರು ಕಳೆದ ಸೋಮವಾರ ಸೆಂಟ್ರಲ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಮಾಡಿದ ಭಾಷಣದಲ್ಲಿ ಸಿವಿಲ್ ಡಿಸ್‌ಒಬೀಡಿಯನ್ಸ್ ಚಳವಳಿಯನ್ನು ಕುರಿತು ಮಾತಾಡಿದರು.

ರಾಯಲ್ ಕಮಿಷನ್

ಇಂಡಿಯಾದೇಶದ ಕಾರಖಾನೆಗಳ ಮತ್ತು ಕೈಗಾರಿಕೆಗಳ ಕೆಲಸಗಾರರ ವಿಷಯಗಳನ್ನೆಲ್ಲಾ ವಿಮರ್ಶಿಸಿ ವರದಿಯನ್ನು ಕೊಡುವುದಕ್ಕಾಗಿ, ಹೌಸ್ ಆಫ್ ಕಾಮನ್ಸ್ ಸಭೆಯ ಮಾಜಿ ಅಧ್ಯಕ್ಷರಾದ ಮಿ|| ವ್ಹಿಟ್ಲೀ ರವರ ಅಧ್ಯಕ್ಷತೆಯಲ್ಲಿ ಒಂದು ರಾಯಲ್ ಕಮಿಷನ್ನು ನೇಮಿಸಲ್ಪಟ್ಟಿರುವುದು.

ಅಹಮದಾಬಾದ್ ವಿದ್ಯಾರ್ಥಿಗಳ ಸತ್ಯಾಗ್ರಹ

ಅಹಮದಾಬಾದ್ ಕಾಲೇಜಿನ ಪ್ರಿನ್ಸಿಪಾಲರಿಗೂ ವಿದ್ಯಾರ್ಥಿಗಳಿಗೂ ಸಮಾಧಾನವಾಯಿತೆಂದು ಪ್ರಚಾರವು ಹೊಂಟಿತ್ತು. ಅದು ಸುಳ್ಳೆಂದೂ, ಸತ್ಯಾಗ್ರಹವು ಮುಂದುವರೆಯುವುದೆಂದೂ ತಿಳಿದು ಬಂದಿದೆ.

ಮಾಜೀ ಕೈಸರ್‌ರವರ ವರ್ಧಂತಿ.

ಹಾಲೆಂಡಿನ ಡೂರ್ನ್ ಎಂಬಲ್ಲಿ ಮಾಜಿ ಕೈಸರ್‌ರವರ 70 ನೇ ವರ್ಷದ ವರ್ಧಂತಿಯು ಬಹಳ ವೈಭವದಿಂದ ನಡೆಯಿತು.

ಭೀಭತ್ಸವಾದ ಆರ್ಡರು.

ವಿಶ್ವೇಶ್ವರಯ್ಯ ಕಮಿಟಿಯ ವರದಿಯಮೇಲೆ ಸರಕಾರದವರು ಕೊಟ್ಟಿರುವ ಆರ್ಡರನ್ನು ಮದರಾಸಿನ ಸ್ವರಾಜ್ಯ ಪತ್ರಿಕೆಯು ಭೀಭತ್ಸವಾದ ಆರ್ಡರೆಂದು ಹೇಳುತ್ತದೆ.

ತಾಯಿನಾಡು.
31—1—1929

ವರ್ತಮಾನ ಸಂಗ್ರಹ

—

ಲಕ್ಷಾಂತರ ರೂ.ಗಳ ದಾನ

ಒಬ್ಬ ಆಂಗ್ಲ ದೊಡ್ಡಮನುಷ್ಯರ ಕೇವಲ ನಿರ್ಗತಿಕರಿಗೆ ಸಹಾಯ ಮಾಡಬೇಕೆಂದು ಲಂಗರ್ ಮುನಿಸಿಪಾಲಿಟಿಗೆ 12 ಲಕ್ಷ ರೂ ಗಳನ್ನೂ, ಸ್ಕಾಟ್‌ಲೆಂಡ್ ಮುನಿಸಿಪಾಲಿಟಿಗೆ 15 ಲಕ್ಷ ವನ್ನೂ ದಾನಮಾಡಿರುವರು.

ಮೋಟಾರಿನ ಅಪಾಯ ನಿವಾರಣೆ.

ಸ್ಪೇಯಿನ್ ದೇಶದಲ್ಲಿ ಮೋಟಾರಿನ ಅಪಾಯಗಳಿಂದ ಜನರಿಗೆ ತೊಂದರೆಯಾದರೆ ಡ್ರೈವರುಗಳಿಗೆ 15 ದಿವಸ ಕಠಿಣ ಸಜಾ ವಿಧಿಸುವ ಕಾನೂನು ಜಾರಿಯಲ್ಲಿರುವುದರಿಂದ ಪಾದಚಾರಿಗಳಿಗೆ ಬಹಳ ಅನುಕೂಲವಾಗಿರುತ್ತದೆ.

ಬ್ರಿಟಿಷ್ ಸಾಮಾನುಗಳ ಬಹಿಷ್ಕಾರ

ಇಂಡಿಯಾ ದೇಶಕ್ಕೆ ಬ್ರಿಟಿಷ್ ಪದಾರ್ಥಗಳಾವುವನ್ನೂ ವ್ಯಾಪಾರಸ್ಥರು ತರಿಸದೆ ಅವನ್ನು ಬಹಿಷ್ಕರಿಸಬೇಕೆಂದು, ರಾಜಕೀಯ ಚಳುವಳಿಗಾರರು ಪ್ರಯತ್ನಿಸುತ್ತಿರುವರು.

ಸೈಮನ್ ಕಮಿಷನ್ನಿನ ಖರ್ಚು.

ಮುಂದಿನ ವರ್ಷದ ಒಡ್ಡಟ್ಟಿನಲ್ಲಿ ಸೈಮನ್ ಕಮಿಷನ್ನಿನ ಖರ್ಚಿಗೋಸ್ಕರವಾಗಿ ಆರು ಲಕ್ಷ 30 ಸಾವಿರ ರೂ ಗಳು ಉಪಯೋಗಿಸಲ್ಪಡಬಹುದೆಂದು ಫೈನಾನ್ಷಿಯಲ್ ಕಮಿಟಿಯಲ್ಲಿ ತೀರ್ಮಾನವಾಗಿದೆ.

ಚೈನಾದಲ್ಲಿ ಘೋರ ಕ್ಷಾಮ.

ನಾರ್ತ್ ಚೈನಾದಲ್ಲಿ ಘೋರಕ್ಷಾಮವುಂಟಾಗಿ ಅಸಂಖ್ಯಾತ ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಶವಗಳನ್ನು ಹೂಳುವುದಕ್ಕೆ ತಕ್ಕಷ್ಟು ಸ್ಥಳವಿಲ್ಲದೆ ಊರಹೊರಗೆ ಬಿಸಾಡಲ್ಪಟ್ಟ ಹೆಣಗಳು ನಾಯಿ ನರಿಗಳ ಪಾಲಾಗುತ್ತಿವೆ. ಒಂದು ಹಳ್ಳಿಯಲ್ಲಿ ಕಳ್ಳರ ಗುಂಪೊಂದು ಹೇಸರಕತ್ತೆಯನ್ನೇ ಆಹಾರವಾಗಿ ಉಪಯೋಗಿಸಿಕೊಂಡರು.

ನಾಗಪುರ ಮುನಿಸಿಪಾಲಿಟಿ

ಇಲ್ಲಿಂದೆ ಮುಂದೆ ಕಾರ್ಯಕ್ರಮಗಳನ್ನು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲೇ ನಡೆಯಿಸಬೇಕೆಂದು ನಿರ್ಣಯವಾಯಿತು.

ಇಟಲಿಯ ನೌಕಾ ಕಾರ್ಯಕ್ರಮ.

ಇಟಲಿಯಲ್ಲಿ 10 ಸಾವಿರ ಯುದ್ಧದ ಹಡಗುಗಳನ್ನೂ ಐದು ಸಬ್‌ಮೇರಿನ್‌ಗಳನ್ನೂ ಇದಕ್ಕೆ ಸಂಬಂಧಪಟ್ಟ ಚಿಕ್ಕಪುಟ್ಟ ಹಡಗುಗಳನ್ನೂ, ಜೂನ್ ತಿಂಗಳ ಲಾಗಾಯತು ನಿರ್ಮಿಸಬೇಕೆಂದು ತೀರ್ಮಾನವಾಗಿದೆ.

ವಿಚಿತ್ರ ಕೊಲೆ

ರಾಯಚೂರು ಹತ್ತಿರ ಇರುವ ಹಳ್ಳಿಯಲ್ಲಿ ಒಂದು ಮನೆಯು ಬಹಳ ಕಾಲ ಮುಚ್ಚಲ್ಪಟ್ಟಿದ್ದರ ಅನುಮಾನದ ಮೇಲೆ ಪೋಲೀಸಿನವರು ಬಾಗಿಲು ತೆರೆದು ನೋಡಿದರು. ಆಗ ಮೇಲ್ಛಾವಣಿಯಿಂದ ನೇತಾಡುತ್ತಿದ್ದ ಸ್ತ್ರೀ ಶವವೂ ಅಡಿಗೆ ಮನೆಯಲ್ಲಿ 4 ವರ್ಷ ಮತ್ತು 10 ವರ್ಷಗಳೊಳಗಿದ್ದ ಎರಡು ಮಕ್ಕಳ ಶವಗಳೂ ರಕ್ತ ಮಿಶ್ರಿತವೂ, ಗೋಚರವಾದವು. ಇಷ್ಟಾದರೂ ಕೊಲೆ ನಡೆದ ಕಾರಣವು ಮಾತ್ರ ಪತ್ತೆಯಾಗಿಲ್ಲ.

ಟವನ್‌ಹಾಲ್ ಮೋಟಾರ್ ಸ್ಟ್ಯಾಂಡ್

—

ಸ್ವಾಮಿ— ಸ್ಟ್ಯಾಂಡಿನ ಒಳಗೆ ಬರತಕ್ಕ ಪ್ರಯಾಣಿಕರಿಗೆ ತಾವು ಪ್ರಯಾಣಮಾಡಬೇಕಾದ ಬಸ್ಸು ಯಾವುದು, ಎಷ್ಟು ಹೊತ್ತಿಗೆ ಹೊರಡುತ್ತದೆ, ಟಿಕೆಟ್ ದರವೇನು? ಬಸ್ಸು ಸಕಾಲದಲ್ಲಿ ತಲುಪುವುದೇ ಎಂಬ ವಿಷಯಗಳು ತಿಳಿಯದೆ ಸ್ಟಾಂಡಿನಲ್ಲಿ ಬಸ್ಸಿನವರು ಮಾಡುವ ಗಲಭೆಯಿಂದ ಅನೇಕರು ದಿಗ್ಭ್ರಾಂತರಾಗುವರು. ವರುಣದ ಅನಾಹುತವಾದಂದಿನಿಂದೀಚೆಗೆ ಬಸ್ಸಿನಲ್ಲಿ ಕೂಡುವುದು ಯಮಾಲಯದ ಪ್ರಥಮ ಸೋಪಾನವೆಂದೂ ಊರುತಲುಪಿದ ಮೇಲೆ ಪುನರ್ಜನ್ಮ ಎಂಬೀ ಭೀಕರ ಭಾವನೆಯು ಎಲ್ಲರ ಮನದಲ್ಲಿ ಬೇರೂರಿ ಹೋಗಿದೆ. ಪ್ರಯಾಣಿಕರು ಮಳೆ ಬಿಸಲುಗಳಲ್ಲಿ ನಿಲ್ಲಲು ಸರಿಯಾದ ಸ್ಥಳ ವಸತಿ ಇಲ್ಲದೆ ಅವಸ್ಥೆಪಡುವಹಾಗಾಗಿದೆ. ಪರಸ್ಥಳಗಳಿಂದ ಬರತಕ್ಕ ಹೆಂಗಸರು ಮಕ್ಕಳನ್ನು ಇಳಿಸಿಕೊಳ್ಳಲು ಸ್ಟ್ಯಾಂಡಿನ ಬಳಿ ಕಾದಿರಲು ಬಸ್ಸು ಬರತಕ್ಕ ಕಾಲವು ತಿಳಿಯದಿರುವುದೊಂದು ದೊಡ್ಡ ಪಿಂಚಿ. ಇವೇ ಮೊದಲಾದ ತೊಂದರೆಗಳಿರುವುದರಿಂದ ಅದರ ಉಪಯೋಗವು ಪ್ರಯಾಣೀಕರಿಗೆ ಸರಿಯಾಗಿ ಆಗುತ್ತಿಲ್ಲ ಆದುದರಿಂದ ಮುನಿಸಿಪಾಲಿಟಿಯವರು

(1) ಪ್ರತಿಯೊಂದು ಊರಿಗೆ ಹೊರಡತಕ್ಕ ಗಾಡಿಗಳು ನಿಯಮಿತವಾದ ಸ್ಥಳದಲ್ಲಿ ನಿಲ್ಲಬೇಕು.

(2) ಆಯಾ ಸ್ಥಳಗಳಲ್ಲಿ ಆಯಾ ಊರುಗಳಿಗೆ ಎಂಬ ದೊಡ್ಡ ಬೋರ್ಡುಗಳು ಇರಬೇಕು. ಅದರಲ್ಲಿ ಯಾವ ಯಾವ ಕಂಪೆನಿಯ ಗಾಡಿಗಳು ಎಷ್ಟು ಹೊತ್ತಿಗೆ, ಯಾವ ಯಾವ ಮಾರ್ಗವಾಗಿ ಹೊರಡುತ್ತವೆ ಮತ್ತು ಪುನಃ ಹಿಂತಿರುಗುತ್ತವೆ ಎಂಬುದನ್ನು ನಮೂದಿಸಬೇಕು (3) ಟಿಕೀಟಿನ ದರವು ನಿರಕಾಗಿರಬೇಕಲ್ಲದೆ ಒಂದೊಂದು ಕಂಪೆನಿಯ ಗಾಡಿಗೆ ಒಬ್ಬೊಬ್ಬರೇ ಟಿಕೀಟನ್ನು ಕೊಡಬೇಕೇ ಹೊರತು ಈಗ ಮಾಡುತ್ತಿರುವಂತೆ 3—4 ಜನರು ಸೇರಿ ದೊಂಬಿಗೆ ಅವಕಾಶ ಕೊಡ ಕೂಡದು. (4) ಪ್ರಯಾಣೀಕರು ತಮ್ಮ ಸರಕುಗಳನ್ನು ತೆಗೆದು ಇಟ್ಟುಕೊಳ್ಳಲನುಕೂಲವಿರುವಂತೆ ಒಂದು ನಿಲ್ದಾಣವು ಏರ್ಪಾಡಾಗಬೇಕು. ಇವುಗಳ ಪೈಕಿ ಕಡೆಯದೊಂದು ವಿನಾ ಉಳಿದವುಗಳೊಂದಕ್ಕೂ ಅಷ್ಟಾಗಿ ಖರ್ಚೇನೂ ಆಗುವದಿಲ್ಲ. ಮ್ಯುನಿಸಿಪಾಲಿಟಿಯವರು ಇಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಪ್ರಯಾಣಿಕ ವರ್ಗಕ್ಕೆ ಸಹಾಯ ಮಾಡುತ್ತಾರೆಂದು ನಂಬಿರುವ

ಪ್ರಯಾಣಿಕರ ಹಿತೈಷಿ.

—

ಹೈದರಾಬಾದ್ ನೈಜಾಮರು.

ಹೈದರಾಬಾದ್ ನೈಜಾಮರು 31 ನೇ ಗುರುವಾರ ಮದ್ರಾಸಿಗೆ ಬಂದು ಫೆಬ್ರವರಿ 9 ನೇ ತಾ|| ವರೆಗೂ ಇರುವರು

ಆನೆಯ ಘೋರಾವೇಶ.

ಆಲಪ್ಪೆಯಲ್ಲಿನ ಶ್ರೀಮಂತರೊಬ್ಬರು ಆನೆಯ ಮಾವಟಿಗನನ್ನು ಕೆಳಕ್ಕೆ ಕೆಡವಬೇಕೆಂದು ತುಂಬಾ ಪ್ರಯತ್ನ ಮಾಡಿತು. ತನ್ನ ಪ್ರಯತ್ನವು ನಿಷ್ಫಲವಾಯಿತೆಂದು ತಿಳಿದೊಡನೆಯೇ ಘೋರಾವೇಶವನ್ನು ತಾಳಿ ಒಂದು ದೊಡ್ಡಮರಕ್ಕೆ ಆ ಮಾವಟಿಗನನ್ನು ಚೆನ್ನಾಗಿ ತಾಟಿಸಿತು. ಕೂಡಲೇ ಕೆಳಗೆ ಬಿದ್ದು ಮೃತನಾದನು. ಅನಂತರ ಆನೆಯು ದಾರಿಯಲ್ಲಿದ್ದ ಅನೇಕ ತೆಂಗಿನ ಗಿಡಗಳನ್ನು ಬುಡ ಸಮೇತ ಉರುಳಿಸಿತು. ಇಷ್ಟಾದರೂ ಇತರ ಯಾವುದೊಂದು ಪ್ರಾಣನಷ್ಟವೂ ಆಗಲಿಲ್ಲ.

ರಾಯರುಗಳ ಕಾನ್‌ಫರೆನ್ಸು

—

(ಒಬ್ಬ [illegible] ಯಿಂದ)

ಈ ವರ್ಷ [illegible] ನಡೆಯುವ [illegible] ನ [illegible] ವರ್ಷದ [illegible] ಕಾರ್ಯ [illegible]

ರಾಯರುಗಳ ಕಣ್ಣು [illegible] ಗೊತ್ತು. ಕೆಲವರಿಗೆ [illegible] ಕಣ್ಣು [illegible] ತರ [illegible] ಕಣ್ಣು, [illegible] ಕಣ್ಣು, [illegible] ಕಣ್ಣು, ಎಲ್ಲೆಲ್ಲೂ ಕಣ್ಣು [illegible] ಟ್ಟುಕೊಂಡಿದ್ದರೂ ಎಲ್ಲೆಲ್ಲೂ [illegible] ಅವರ ಗುಡಿಯಲ್ಲೂ [illegible] ತ್ತಾರೆ ನೋಡೋಣ.

ರಾಯರುಗಳು ತಾವು [illegible] ಅಂದುಕೊಳ್ಳುತ್ತಾರೆ. ಭಗವಂತನೇ [illegible] ತನ್ನೇ ಅವರು [illegible] ರು? ಲಾ ಪೈಂಟು ಎಲ್ಲಿಗೂ [illegible] ಳಿಯದು ಎಂಬುದು [illegible] ಪೈಂಟು [illegible] ಮಾತಿನಲ್ಲಿ [illegible] ಕೋರ್ಟಿನಲ್ಲಿ ಇಂಗ್ಲೀಷು [illegible] ಮನೆ [illegible] ಇಂಗ್ಲೀಷು [illegible] ತಿಗರೇ?

ಅಲ್ಲಾಕಾ [illegible] ಅಲ್ಲಾ ಕಾಗೆ [illegible] ಇಂಗ್ಲೀಷು [illegible] ಫ್ರೆಂಚ್ [illegible] ಗಳ್ [illegible] ಮಗ್ಗದ [illegible] ದುಗಳು [illegible]

ರಾಯರುಗಳು [illegible] ಮಾತಿನ [illegible] ಹಾಗಾಯ್ತೇ? [illegible] ಯಾದರೆ [illegible] ನೋಡೋಣ, ಹಿಂದಿನ [illegible] ಬಂದದ್ದು ಆಗಿದೆ [illegible] ಗಕಾರವಾಯ್ತು [illegible]

[illegible]

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore.

Regd No. M 2322

ತಾಯಿನಾಡು.

ಪ್ರತಿ ದಿನವೂ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ

ಸಂಪುಟ ೧] ಶುಕ್ರವಾರ ೧ ಫೆಬ್ರವರಿ ೧೯೩೪ [ಸಂಚಿಕೆ

ಪಾಂಡುರೋಗ

ಇದು ಮಲೇರಿಯ ...

ಆಯುರ್ವೇದಾಶ್ರಯ

TAI NADU
1-2-1929

ಡೈರೆಕ್ಟರವರ ಜವಾಬ್ದಾರಿ

ಗವರ್ನಮೆಂಟ್ ಆರ್ಡರಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರ ಮೇಲೆ ತಪ್ಪು ಹೊರಿಸಲ್ಪಟ್ಟಿರುವುದು. ದಿವಾನರು ಡೈರೆಕ್ಟರವರಿಗೆ ಕಳುಹಿಸಿದ ಡಿ. ಓ. ವಿನಲ್ಲಿ. ದೊಡ್ಡ ದೇವಸ್ಥಾನವು ಕಟ್ಟದಂತೆ ನೋಡಿಕೊಳ್ಳಬೇಕೆಂದು ಮಾತ್ರ ಬರದ ಹಾಗೂ, ವಿಗ್ರಹ ಪಲ್ಲಟವನ್ನು ಮಾಡಬೇಕೆಂದು ಬರೆಯದೆ ಇದ್ದ ಹಾಗೂ, ಡೈರೆಕ್ಟರವರು ತಮ್ಮ ಸ್ವಂತ ಬುದ್ಧಿಯಿಂದಲೇ ವಿಗ್ರಹ ಪಲ್ಲಟವನ್ನು ಮಾಡಿದ ಹಾಗೂ, ಹುಡುಗರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವದಾಗಿ ದಿವಾನರಿಗೆ ಡೈರೆಕ್ಟರವರೇ ಪತ್ರ ಬರೆದ ಹಾಗೂ, ಆದರೆ ಗಲಾಟೆಗೆ ಅವಕಾಶವಾದಮೇಲೆ, ಡೈರೆಕ್ಟರವರು ಊರಲ್ಲಿಲ್ಲ [illegible] ಗಣಪತಿಯನ್ನು ಸರಕಾರದವರೇ ಜುಲೈ 29 ನೇ ತಾರೀಖಿನ ದಿನ ಪುನಃ ಸ್ಥಾಪನೆ ಮಾಡುವಂತೆ ಅಪ್ಪಣೆ ಕೊಟ್ಟ ಹಾಗೂ ತಿಳಿಸಲ್ಪಟ್ಟಿದೆ.

ಕಮಿಟಿಯವರು ಈ ವಿಷಯವನ್ನು ವಿಮರ್ಶಿಸಿರುವರು. ಈ ಭಾಗದಲ್ಲಿ ಇವರು ತೆಗೆದುಕೊಂಡ ಹೇಳಿಕೆಗಳು ಸಂಪೂರ್ಣವಾಗಿಲ್ಲ. ದಿವಾನರ ಡಿ. ಓ ಬಂದಮೇಲೆಯೇ ಡೈರೆಕ್ಟರವರು ಈ ಕಾರ್ಯಕ್ಕೆ ಪ್ರವೇಶಿಸಿದರು. ಬಂದಮೇಲೆ, ದಿವಾನರ ಜವಾಬ್ದಾರಿಯೂ ಈ ಪ್ರಸಂಗದಲ್ಲಿ ಇರುವುದು. ಕಮಿಟಿಯವರು ದಿವಾನರನ್ನು ಪರೀಕ್ಷಿಸಿದ್ದರೆ, ವಿಷಯವೆಲ್ಲಾ ಹೊರಬೀಳುತ್ತಿತ್ತು. ಈ ಡಿ. ಓ. ಕಳುಹಿಸಿದ್ದರಲ್ಲಿ ದಿವಾನರ ತಪ್ಪು ಇದೆ. [illegible]ನರು ಇವರಿಗೆ ದೇವಸ್ಥಾನವು ಕಟ್ಟಲ್ಪಡುತ್ತಿದೆ ಎಂಬ ಸಮಾಚಾರವನ್ನು ಹೇಳಿದರೋ ಅವರನ್ನು ಡೈರೆಕ್ಟರವರ ಹತ್ತಿರ ಕಳುಹಿಸಿದ್ದರೆ ಚೆನ್ನಾಗಿತ್ತು. ಅದು ಬದಲು ತಾವೇ ಡೈರೆಕ್ಟರವರಿಗೆ ಬರೆದರು. ದಿವಾನರಿಂದ ಡಿ. ಓ. ಬಂದಮೇಲೆ ಅದು [illegible] ಎಂದು ಡೈರೆಕ್ಟರವರು ಭಾರಿ ಕೆಲಸ ಮಾಡಿದರು.

ಇದು ಹೇಗೋ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿಗಳಿಂದ ಹೊರಗಿನವರಿಗೂ ತಿಳಿದು ಇದಕ್ಕೆಲ್ಲಾ ಅಬ್ಬಾಸ್ ಖಾನರೇ ಜವಾಬ್ದಾರರು ಎಂಬುದಾಗಿ ಭಾವನೆಯು ಬಲಪಟ್ಟಿತು. ಅಬ್ಬಾಸ್ ಖಾನರು ಕಮಿಟಿಯಲ್ಲಿ ತಾವು ಜವಾಬ್ದಾರರಲ್ಲ ಎಂದು ಹೇಳಿಕೆಯನ್ನು ಕೊಟ್ಟರು. ವಿದ್ಯಾಖಾತೆಯ ಡೈರೆಕ್ಟರವರು ಕೂಡ ತಾವೇ ಜವಾಬ್ದಾರರು ಇತರರು ಅಲ್ಲ ಎಂದು ಹೇಳಿಕೆಯನ್ನು ಕೊಟ್ಟರು. ಆದರೆ ಕಮಿಟಿಯವರು ತಿಳಿಸುವಂತೆ ಈ ಹೇಳಿಕೆಗಳೆಲ್ಲಾ ಸುಳ್ಳು, ನಿಜಾಂಶವು ಬೇರೆ ಎಂದು ಜನಗಳಿಗೆ ಗೊತ್ತಿತ್ತು. ಅಬ್ಬಾಸ್ ಖಾನರು ತಾವು ಇದಕ್ಕೆ ಜವಾಬ್ದಾರರಲ್ಲವೆಂಬುದನ್ನು ತೋರ್ಪಡಿಸುವದಕ್ಕೋಸ್ಕರ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಲ್ಲದೆ ಗಣಪತಿಯನ್ನು ಸ್ವಸ್ಥಾನದಲ್ಲಿಡಿಸಬೇಕೆಂದು ಕೆಲವು ಮುನ್ಸಿಪಲ್ ಕೌನ್ಸಿಲರು ಬರೆದ ಅರ್ಜಿಗೆ ತಮ್ಮ ರುಜುವನ್ನೂ ಹಾಕಿದರು. ಆದರೆ ಕಮಿಟಿಯವರೇ ತಿಳಿಸಿರುವಂತೆ ಅಬ್ಬಾಸ್ ಖಾನರೇ ಸ್ವಂತವಾಗಿ ಕೊಟ್ಟಿರುವ ಹೇಳಿಕೆಯಲ್ಲಿ ದಿವಾನರಿಗೂ ಸರಕಾರಕ್ಕೂ ಇತರ ಅಧಿಕಾರಿಗಳಿಗೂ ತಮ್ಮ ಮನೆಯ ಮುಂದೆ ಸ್ಕೂಲಿನಲ್ಲಿ ದೇವಸ್ಥಾನವನ್ನು ಕಟ್ಟಲು ಪ್ರಯತ್ನವು ನಡೆಯುತ್ತಿರುವುದೆಂದು ತಿಳಿಸಿದುದನ್ನು ಒಪ್ಪಿಕೊಂಡಿದ್ದಾರೆ. ಅಬ್ಬಾಸ್ ಖಾನರಲ್ಲದೆ ಇತರರೂ ಈ ವಿಷಯವನ್ನು ದಿವಾನರಿಗೆ ಹೇಳಿರಬಹುದು. ಹೇಗಾದರೂ ಆಗಲಿ ಅಬ್ಬಾಸ್ ಖಾನರೂ ದಿವಾನರ ಡಿ. ಓ. ಕ್ಕೆ ಒಬ್ಬ ಕಾರಣ ಕರ್ತರೆಂಬುದು ವ್ಯಕ್ತವಾಗುತ್ತದೆ. ಈ ಡಿ. ಓ. ವಿನ ವಿಷಯವು ಬಹಿರಂಗವಾದ ರಹಸ್ಯವಾಗಿದ್ದರೂ, ಬಹಳ ದಿವಸಗಳವರೆಗೆ ಅದು ಹೊರಗೆ ಬರಲಿಲ್ಲ. ಡೈರೆಕ್ಟರವರು ದಿವಾನರ ಡಿ. ಓ. ವನ್ನು ರಹಸ್ಯವಾಗಿಡುವುದಕ್ಕೋಸ್ಕರ ಗಣಪತಿಯನ್ನು ಸ್ವಸ್ಥಾನದಲ್ಲಿಡದೇ ಇರುವುದಕ್ಕೆ ತಾವೇ ಜವಾಬ್ದಾರರೆಂದು ಹೇಳಿಕೊಳ್ಳುತ್ತಾ ಬಂದರು. ಆದರೆ ವಿಶ್ವೇಶ್ವರಯ್ಯ ಕಮಿಟಿಯ ಅಂತರಂಗ ಸಭೆಯಲ್ಲಿ ಡಿ. ಓ. ವನ್ನು ಹೊರಗೆಡಹಿದರು. ದಿವಾನರು ಈ ಡಿ. ಓ. ವನ್ನು ಕಳುಹಿಸಿದ್ದರೂ ಸರಕಾರದವರು ಜುಲೈ 30 ನೇ ತಾರೀಖಿನ ದಿವಸ ಹೊರಡಿಸಿದ ಪ್ರಕಟನೆಯಲ್ಲಿ ಈ ಡಿ. ಓ. ಗೆ ಸಂಬಂಧವನ್ನೇ ತರದೆ ಡೈರೆಕ್ಟರವರು ಒಂದು ದಿವಸ ಹಾಗೆಯೇ ಅಕಸ್ಮಾತ್ತಾಗಿ ಆ ಸ್ಕೂಲಿಗೆ ಭೇಟಿ ಕೊಟ್ಟರು. ಆಗ ಗಣಪತಿಯನ್ನು ಸ್ವಸ್ಥಾನದಲ್ಲಿಡಿಸಕೂಡದೆಂದು ಅಪ್ಪಣೆ ಮಾಡಿದರು ಎಂಬುದಾಗಿದೆ. ಕಮಿಟಿಯವರು ಈ ಪ್ರಕಟನೆಯನ್ನು ಸುಳ್ಳು ಎಂಬುದಾಗಿ ಬರೆದಿರುವರು. ಈ ಸುಳ್ಳು ಪ್ರಕಟನೆಯನ್ನು ಹೊರಡಿಸಬಾರದಾಗಿತ್ತು ಎಂದು ಹೇಳುವರು. ಅದಕ್ಕೆ ಸರಕಾರದವರು ಉಡಾಫೆ ಮಾಡಿ ಅದೇನೂ ಅಷ್ಟು ಮುಖ್ಯವಾದ ವಿಷಯವಲ್ಲ ಎಂದು ಹೇಳಿರುವರು. ಸುಳ್ಳು ಸುಳ್ಳೇ. ಉಡಾಫೆ ಮಾಡಿ ಪ್ರಯೋಜನವಿಲ್ಲ.

ಗಣಪತಿಯನ್ನು ಸ್ವಸ್ಥಾನದಲ್ಲಿ ಇಡಕೂಡದೆಂಬ ಆರ್ಡರಂತೂ ಆಯಿತು. ಅನಂತರ ವಿದ್ಯಾರ್ಥಿಗಳು ಅಸಮಾಧಾನವನ್ನು ಪ್ರಕಟಿಸಿದ ಮೇಲೆ ಅದನ್ನು ಸ್ವಸ್ಥಾನದಲ್ಲಿಡಿಸಬೇಕಾಗಿತ್ತೊ ಇಲ್ಲವೊ? ಜುಲೈ 29 ರವರೆಗೆ ಏತಕ್ಕೆ ತಡವಾಯಿತು? ಇದಕ್ಕೆ ಡೈರೆಕ್ಟರವರೇ ಜವಾಬ್ದಾರರೆಂದೂ, ಅವರು ಸಂಚಾರದಲ್ಲಿದ್ದರೆಂದೂ, ಅವರು ಕೂಡಲೇ ವಾಪಸು ಬಂದು ಗಣಪತಿಯನ್ನು ಸ್ವಸ್ಥಾನದಲ್ಲಿಡಿಸಬೇಕಾಗಿತ್ತೆಂದೂ ಸರಕಾರದವರು ಸಮಾಧಾನ ಹೇಳುತ್ತಾರೆ. ಗಣಪತಿಯ ಸಂಬಂಧವಾಗಿ ಪತ್ರಿಕೆಗಳೂ, ಮಹಾಜನಗಳೂ, ಸರಕಾರಕ್ಕೂ ದಿವಾನರಿಗೂ ಎಷ್ಟೋ ಬರೆಯುತ್ತಿದ್ದರು. ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುತ್ತಿದ್ದುದು ಸರಕಾರಕ್ಕೆ ಗೊತ್ತು. ಅವರೂ ತನಗೆ ತಾನೇ ಶಾಂತನಾಗುವುದೆಂದು ಸುಮ್ಮನಿದ್ದರು, ಸರ್. ಪುಟ್ಟಣ್ಣಶೆಟ್ಟರೂ, ಇತರರೂ ದಿವಾನರಿಗೆ ಬರೆದರು. ವಾಸ್ತವ್ಯವಾಗಿ ನಡೆದದ್ದೇನೆಂದರೆ, ಅಧಿಕಾರಿಗಳಿಗೆ ಯಾರಿಗೂ ಈ ಗಲಾಟೆಯು ಇಷ್ಟು ಹೆಚ್ಚಿಕೊಳ್ಳುವುದೆಂಬ ಭಾವನೆ ಇರಲಿಲ್ಲ. ಅಷ್ಟಕ್ಕೇ ಅಡಗಿ ಹೋಗುವುದು. ನಾವು ಜನಗಳು ಹೇಳಿದಂತೆ ಕೇಳಿದರೆ ಸರಕಾರದ ದರ್ಪವೇನೂ ಉಳಿಯುವುದಿಲ್ಲ, ಎಂದು ಅಧಿಕಾರಿಗಳು ಭಾವಿಸಿದರು. ಚಳುವಳಿಯು ಯಾವಾಗ ಜೋರಾಯಿತೋ ಆಗ ಸರಕಾರದವರೂ ಅಧಿಕಾರಿಗಳೂ ಇಳಿದರು. ಇದೀಗ ವಾಸ್ತವ್ಯವಾದ ವಿಷಯ. ಡೈರೆಕ್ಟರವರು ಪ್ರಾಮಾಣಿಕವಾಗಿ ಈ ಚಳುವಳಿಯು ಇಷ್ಟು ಘೋರ ರೂಪವನ್ನು ತಾಳುವುದೆಂದು ನಾನು ತಿಳಿದಿರಲಿಲ್ಲ. ನನಗೆ ಮುಂದಾಲೋಚನೆ ಇಲ್ಲದೇ ಹೋದುದಕ್ಕಾಗಿ ನಾನು ಬಹಳ ವಿಷಾದಪಡುತ್ತೇನೆ ಎಂದು ಕಮಿಟಿಯಮುಂದೆ ಹೇಳಿದರು. ಈ ಬಗೆಯ ಅಭಿಪ್ರಾಯವು ಪ್ರತಿಯೊಬ್ಬ ಅಧಿಕಾರಿಗೂ ಇದೆ. ಸರಕಾರಕ್ಕೂ ಇದೆ. ಚಳುವಳಿಯು ಇಷ್ಟು ಉಲ್ಬಣಿಸುವುದೆಂದು ಅವರು ಅರಿತಿರಲಿಲ್ಲ ಆದರೆ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ಬದಲಾಗಿ ಸರಕಾರದವರು ಡೈರೆಕ್ಟರವರ [illegible] ತಪ್ಪನ್ನು ಹಾಕುವುದು ಶುದ್ಧ ಅನುಚಿತ. ಡೈರೆಕ್ಟ[illegible] ಅಪರಾಧವು ಎಷ್ಟಿದೆಯೋ, ಸರಕಾರದವರ[illegible] ಇದೆ. ಕಮಿಟಿಯವರು ಈ ಭಾಗದಲ್ಲಿ ಡೈರೆಕ್ಟ[illegible] ನ್ಯಾಯವನ್ನು ತೋರಿಸಿಲ್ಲ. ಸರಕಾರದ [illegible] ಪಕ್ಷಪಾತವನ್ನು ತೋರಿಸಿದ್ದಾರೆ.

ಮ|| ಪರಮಶಿವಯ್ಯರವರ ಸಾಕ್ಷಿ.

([illegible] ನೇ ಪುಟದಿಂದ ಮುಂದುವರಿದುದು.)

ಜುಲೈ 29 ನೇ ದಿವಸ ಸ್ಕೂಲಿನ ಹತ್ತಿರ [illegible]ಗುತ್ತಿರುವುದೆಂದೂ ನನ್ನ ಜವಾನರು ನನಗೆ ತಿಳಿಸಿ[illegible] ಕೂಡಲೇ ಗಣಪತಿ ವಿಗ್ರಹದ ಸ್ಥಾನಪಲ್ಲಟದಿಂದ [illegible]ರವಾದ ಪರಿಣಾಮಗಳುಂಟಾಗಬಹುದೆಂತ ನಾನು [illegible]ವಾನರಿಗೆ ಬರೆದೆನು. ಈ ವಿಷಯದಲ್ಲಿ ಮಾಮ[illegible] ಸುಸರಿಸಬೇಕೆಂತ ನಾನು ಅವರಿಗೆ ತಿಳಿಸಿದೆನು. ದಿ[illegible]ರಿಂದ ನನಗೆ ಜವಾಬೇನೂ ಬರಲಿಲ್ಲ ಸಾಯಂಕಾ[illegible] ಗ್ರಹವು ಸ್ವಸ್ಥಾನಕ್ಕೆ ಸೇರಿಸಲ್ಪಟ್ಟಿತೆಂದೂ ನಾನು [illegible]ರ್ತಮಾನ ಕೇಳಿದೆನು. ಇದರಿಂದ ದಿವಾನರು [illegible]ಗಿನಂತೆ ಈಗಲೂ ನನ್ನ ಬುದ್ಧಿವಾದದಂತೆ ನಡೆದ[illegible]ರೆಂದು ನಾನು ತಿಳಿದುಕೊಂಡಿದ್ದೆನು. ನಾನು ಮಿ|| [illegible]ಜುರವರನ್ನು 1925 ನೇ ಇಸವಿಯಿಂದಲೂ ಚೆನ್ನಾ[illegible] ಬಲ್ಲೆನು. ಫಿರ್ಯಾದಿಗಳಾಗಿರತಕ್ಕ ಮಿ|| ಡಿ. ಶ್ಯಾಮರಾಯರನ್ನು ನಾನು 1928 ನೇ ಸೆಪ್ಟೆಂಬರ್‌ವರೆಗೂ ನೋಡಿರಲಿಲ್ಲ. ಬಟ್ಲರ್ ಕಮಿಟಿಯವರು 1928 ನೇ ಮಾರ್ಚ್ ತಿಂಗಳಲ್ಲಿ ಬೆಂಗಳೂರಿಗೆ ಬಂದಿದ್ದರು. ನಾನು ಮಿ|| ಭೀಮರಾಯರ ಹೆಸರನ್ನು ವರ್ತಮಾನ ಪತ್ರಿಕೆಗಳ ಮೂಲಕ ಬಲ್ಲೆನು. ನಾನು ಸರ್ಕಾರವನ್ನಾಗಲೀ ದಿವಾನರನ್ನಾಗಲೀ ಪದಚ್ಯುತರನ್ನಾಗಿ ಮಾಡುವಂಥ ಯಾವ ಕೆಲಸವನ್ನೂ ಮಾಡಲಿಲ್ಲ. ಮಿ|| ರಾಜುರವರ ಆಫೀಸು ಎಲ್ಲಿ ಇರುವುದೆಂಬುದು ಈವತ್ತಿನವರೆಗೂ ನನಗೆ ತಿಳಿಯದು 30 ನೇ ತಾ|| ರಾತ್ರಿ ಅಬ್ಬಾಸ್ ಖಾನರ [illegible] ನಡೆಸಲ್ಪಟ್ಟ ಅತ್ಯಾಚಾರದ ವಿಷಯದಲ್ಲಿ ನನಗೆ ಖಚಿತವಾಗಿಯೂ ಏನೂ ಗೊತ್ತಿಲ್ಲ. ಅವರ ಮನೆಯು ಸುಲ್ತಾನ್‌ಪೇಟೆ ಎ. ವಿ. ಸ್ಕೂಲಿನ ಮುಂಭಾಗದಲ್ಲಿರುವುದೆಂದೂ ನನಗೆ ಗೊತ್ತಾದದ್ದೂ ಸಹ ಕಳೆದ ಸೆಪ್ಟೆಂಬರ್ ತಿಂಗಳಲ್ಲೇ ಮಿ|| ರಾಜೂರವರಿಗೆ ಮಹಡಿ ಇರತಕ್ಕ ಮನೆಯು ಇರುವುದೋ ಇಲ್ಲವೋ 'ಅದೇ ನನಗೆ ಗೊತ್ತಿಲ್ಲ ಮಿ|| ಗಳಾದ ರಾಜು, ರಾಮರಾವ್ ಗರುಡಾಚಾರ್ ಪ್ರಜಾಮಿತ್ರ ವೀರಕೇಸರಿ ಮತ್ತು ಇತರರು [illegible] ಪರಾಧಿಗಳ ಮತ್ತು ದಿವಾನರ ಮನೆಯಗಳನ್ನು [illegible]ಟಿ ಮಾಡಲು ಪ್ರಯತ್ನಪಟ್ಟರೆಂಬ ಗುಂಪಿಗೆ ನಾನು ಸೇರಿದವನಂತ ಹೇಳುವುದು ಶುದ್ಧ [illegible] ನಾನು ಶ್ರೀಮನ್ಮಹಾರಾಜರವರ ಅಪ್ಪಣೆಯಯನ್ನು [illegible] ದುರೂಂಡು ಭದ್ರಾವತಿ ಕನ್ನಂಬಾಡಿಕಟ್ಟೆಗಳ ವಿಷಯದಲ್ಲಿ ವರ್ತಮಾನಪತ್ರಿಕೆಗಳಲ್ಲಿ 'ಅದ್ಯೆಕ ಲೇಖನಗಳನ್ನು ಬರೆದದ್ದೇನೆ ನನಗೂ ಯಾವ ಸತ್ಯಾಗ್ರಹಿಗೂ ಏನೂ ಸಂಬಂಧವಿಲ್ಲ. ಶ್ರೀಮನ್ಮಹಾರಾಜರವರಿಗೆ ಸಮರ್ಪಿಸಲ್ಪಟ್ಟ ಬಿನ್ನವತ್ತಳೆಯ ವಿಚಾರ ನನಗೆ ಗೊತ್ತಿದ್ದು ಬಿನ್ನವತ್ತಳೆಗೆ ರುಜು ಮಾಡುವಂತೆ ನಾನು ಯಾರನ್ನೂ ಪುಸಲಾಯಿಸಲಿಲ್ಲ. ಅಗಶಿಥಿಗಳ ವಿಷಯದಲ್ಲಿ ನಾನು ಸುಳ್ಳು ಸುದ್ದಿಗಳನ್ನು ಹರಡಲಿಲ್ಲ. ನಾನು ಅವರನ್ನು ಸಮಾಧಾನಗೊಳಿಸಲು ಪ್ರಯತ್ನ ಪಡಲಿಲ್ಲ.

ತಾಯಿನಾಡು.
1—2—1929

ಸ್ವರಾಜ್ಯದ್ರೋಹಿಗಳು.

(ಲೇಖಕರು:—ಲಾಲಾ ಲಜಪತರಾಯರು)

ಶ್ರೀಮಂತರ ಪೈಕಿ ಬ್ಯಾಂಕರುಗಳೂ ದೊಡ್ಡ ಜಮೀನ್‌ದಾರ್ರುಗಳೂ ಬಂಗಾಳಿ ಜಮೀನ್‌ದಾರ್ರುಗಳೂ ಅಯೋಧ್ಯದ ತಾಲ್ಲೋಕುದಾರ್ರುಗಳೂ ಇವರೆಲ್ಲರೂ ಸಂಪೂರ್ಣವಾಗಿ ಬ್ರಿಟಿಷ್ ಅಧಿಕಾರಿಗಳ ಅಂಗಯ್ಯಲ್ಲಿಯೇ ಇರುವರು. ಬ್ರಿಟಿಷ್ ಅಧಿಕಾರಿಗಳ ಸಹಾಯದಿಂದಲೇ ಇವರು ಬದುಕಬೇಕಾಗಿರುವುದು. ಬ್ರಿಟಿಷ್ ಅಧಿಕಾರಿಗಳ ಕೋಪವಾಗಲೀ, ದ್ವೇಷವಾಗಲೀ ಇವರಿಗೆ ಮೃತ್ಯುವಾಗಿ ಪರಿಣಮಿಸುವುದು. ಬ್ರಿಟಿಷ್ ಕಲೆಕ್ಟರೂ ಮ್ಯಾಜಿಸ್ಟ್ರೇಟರೂ ಇವರುಗಳ ಮೇಲೆ ಪೂರ್ಣವಾದ ಆಧಿಪತ್ಯವನ್ನು ನಡೆಸುವರು. ಆದುದರಿಂದ ಸರ್ವಪ್ರಕಾರದಿಂದಲೂ ಈ ಬ್ರಿಟಿಷ್ ಅಧಿಕಾರಿಗಳನ್ನು ಸಂತೋಷಪಡಿಸುವುದೇ ಇವರುಗಳ ಉದ್ದೇಶವಾಗಿರುವುದು. ಇಂತಹವರಿಂದ ಸ್ವರಾಜ್ಯಚಳುವಳಿಗೆ ಗುಲಗಂಜಿಯಷ್ಟೂ ಪ್ರಯೋಜನವಾಗುವುದಿಲ್ಲ.

ಪ್ರಪಂಚದ ಇತಿಹಾಸವನ್ನು ಪರಿಶೀಲಿಸಿದರೆ ಯಾವ ದೇಶದಲ್ಲಿಯೇ ಆಗಲಿ ಐಶ್ವರ್ಯವಂತರೂ ಉಪಪನ್ನರೂ ರಾಜಕೀಯ ಚಳುವಳಿಗಳನ್ನೇ ಆಗಲೀ ರಾಜ್ಯಕ್ರಾಂತಿಗಳನ್ನೇ ಆಗಲೀ ನಡೆಯಿಸುವುದಿಲ್ಲ. ತಾವು ಇರುವ ಸ್ಥಿತಿಯನ್ನು ಬದಲಾಯಿಸುವುದಕ್ಕೆ ಇಷ್ಟವೇ ಇರುವುದಿಲ್ಲ ಆದರೆ ಆಗಾಗ್ಗೆ ಸಾವಿರಕ್ಕೆ ಒಬ್ಬೋ ಇಬ್ಬ ಇಂಥವರಲ್ಲಿ ಮಹಾಪುರುಷರು ಹುಟ್ಟಿ ಸರ್ವವನ್ನೂ ತ್ಯಾಗಮಾಡಿ ದೇಶಭಕ್ತನಾಗುವನು. ಇಂಥಹವರ ಹೆಸರೇ ಇತಿಹಾಸದಲ್ಲಿ ಚಿರಸ್ಮರಣೀಯವಾಗುವುದು. ಆದುದರಿಂದ ರಾಜಕೀಯ ಸ್ವಾತಂತ್ರ್ಯವು ದೊರೆಯಬೇಕಾದರೆ ಐಶ್ವರ್ಯವಂತರಿಂದ ಸಾಧ್ಯವಿಲ್ಲ. ಮಧ್ಯಮತರಗತಿಯವರಿಂದಲೇ ಸಾಧ್ಯವಾಗಬೇಕಾಗಿರುವುದು ನಾವು ಪರಕೀಯರಿಂದ ಆಳಲ್ಪಡುತ್ತಿರುವೆವಲ್ಲಾ ಎಂಬ ಅವಮಾನವೂ ವ್ಯಸನವೂ, ಇವರಿಗೆ ಹೆಚ್ಚು. ಸಾಮಾನ್ಯ ಪ್ರಜೆಗಳು ದೇಶದ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳಲಾರರು, ಅವರಿಗೆ ತಮ್ಮ ತಮ್ಮ ಜೀವನದ ಪಾಡೇ ಹೆಚ್ಚಾಗಿರುವುದು. ಈಪತ್ತಿನ ಪಥವು ನಡೆದರೆ ಸಾಕು ಎಂದು ಅವರಿಗೆ ಅನ್ನಿಸಿರುವುದು. ಸಾಲದ್ದಕ್ಕೆ ಅಜ್ಞಾನ ವಿದ್ಯಾವಿಹೀನತೆ ದಾರಿದ್ರ್ಯ ಇವುಗಳೇ ಅವರನ್ನು ಹಿಂಡಿ ಹೀರುವುವು ಖಾಯಿಲೆ ಕಸಾಲೆಗಳು ಬಂದರೆ ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದೇ ಇವರಿಗೆ ಬಂದು ಪರ್ವತದಂತೆ ಕಾಣುವುದು. ಇಂಥಹವರುಗಳಲ್ಲಿ ದೇಶಾಭಿಮಾನವೂ ಉತ್ಕಟಾವಸ್ಥೆಯಲ್ಲಿರುವುದಿಲ್ಲ. ಇವರನ್ನು ಬಹಳ ಸುಲಭವಾಗಿ ಸಂತೋಷಪಡಿಸಬಹುದು. ಇವರನ್ನು ಮಾತಿನಿಂದ ಬೆರಗು ಮಾಡಬಹುದು. ನಮ್ಮ ದೇಶದಲ್ಲಿ ಮಾತ್ರವೇ ಹೀಗಿರುವುದೆಂದಲ್ಲ, ಯೂರೋಪಿನಲ್ಲಿಯೂ ಅಮೇರಿಕಾದಲ್ಲಿಯೂ ಸಾಮಾನ್ಯ ಪ್ರಜೆಗಳು ಹೀಗೆಯೇ ಇರುವರು. ನಮ್ಮ ದೇಶಕ್ಕಿಂತಲೂ ಅಲ್ಲಿ ವಿದ್ಯಾಭ್ಯಾಸವು ಹೆಚ್ಚು. ರಾಜಕೀಯ ಚಳುವಳಿಯು ಅಧಿಕ. ಆದರೂ ಸಾಮಾನ್ಯ ಜನಗಳ ಪ್ರವೃತ್ತಿಯು ರಾಜಕೀಯ ವಿಷಯಗಳ ಕಡೆ ಹೆಚ್ಚಾಗಿರುವುದಿಲ್ಲ ಸರಕಾರವೆಂದರೆ ಏನೋ ಒಂದು ವಿಧವಾದ ಗೌರವ. ಏನೋ ಒಂದು ವಿಧವಾದ ಹೆದರಿಕೆ ಸರಕಾರದ ಬಗ್ಗೆ ನಮ್ರತೆ. ಸರಕಾರದವರನ್ನು ಕಂಡರೆ ಇವರಿಗೆ ಗೌರವ ಅಧಿಕಾರಿಗಳ ಮೆರವಣಿಗೆಗಳೂ ದರ್ಬಾರುಗಳೂ ಚಕ್ರವರ್ತಿ ರಾಜರುಗಳ ದರ್ಬಾರಿನ ವೈಭವಗಳೂ ಕವಾಯಿತುಗಳೂ ಸಾಮಾನ್ಯ ಪ್ರಜೆಗಳನ್ನು ಮರುಳುಮಾಡುವುವು. ಯೂರೋಪಿನಲ್ಲೇ ಹೀಗಿರುವಾಗ್ಗೆ ನಮ್ಮ ದೇಶದಲ್ಲಿ ಹೇಳುವುದೇನು? ಯಾವ ದೇಶದಲ್ಲೇ ಆಗಲಿ ವಿದ್ಯಾವಂತರಾದ ಮಧ್ಯಮತರಗತಿಯ ಜನಗಳೇ ರಾಜಕೀಯ ಸ್ವಾತಂತ್ರ್ಯಕ್ಕೆ ಹೋರಾಡುವರು. ಅವರಿಂದಲೇ ದೇಶಾಭಿವೃದ್ಧಿಯಾಗುವುದು. ಇಂಥಹವರ ಮನೋದಾರ್ಢ್ಯವೂ ಪ್ರಾಮಾಣಿಕತೆಯೂ ಕಷ್ಟಸಹಿಷ್ಣುತೆಯೂ ನಿಸ್ವಾರ್ಥತಾಗುಣವೂ ದೇಶದ ಸ್ವಾತಂತ್ರ್ಯಕ್ಕೆ ಸಾಧಕವಾದವುಗಳು. ಇಂಥವರುಗಳೇ ದೇಶದ ಸ್ವಾತಂತ್ರ್ಯದ ಧುರೀಣರುಗಳು. ಇಂಥಹವರೇ ಸ್ವಾತಂತ್ರ್ಯದೇವಿಯ ಭಕ್ತರು.

ಇಂತಹ ದೇಶಭಕ್ತರಿಂದ ಆರಂಭವಾದ ಸ್ವಾತಂತ್ರ್ಯಚಳುವಳಿಯು ಎಂದಿಗೂ ಅಸ್ತವಾಗುವುದಿಲ್ಲ. ಸ್ವಾತಂತ್ರ್ಯಯುದ್ಧವು ವಿಜಯದಲ್ಲಿ ಕೊನೆಗಾಣಬೇಕೇ ಹೊರತು ಅರ್ಧಾಂತರವಾಗುವುದಿಲ್ಲ. ಸ್ವಾತಂತ್ರ್ಯಯುದ್ಧವು ಪಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ಈ ರೀತಿಯಾಗಿ ನಡೆಯುವುದು ಹಿಂದೆ ಹೀಗೆಯೇ ನಡೆಯಿತು. ಮುಂದೆಯೂ ಹೀಗೆಯೇ ನಡೆಯುವುದು. ವಿಜಯವು ಈಗಲೇ ದೊರೆಯಬಹುದು. ಮಧ್ಯೆಮಧ್ಯೆ ತೊಡಕುಗಳು ಬರಬಹುದು. ಇದು ಸ್ವಾಭಾವಿಕವಾದದ್ದು. ಸಂಕಟಗಳು ಮೊದಲು ಇಂಥಹ ಚಳುವಳಿಗಳನ್ನು ದುರ್ಲಕ್ಷ್ಯ ಮಾಡುವರು, ತಿರಸ್ಕರಿಸುವರು. ಆದರೆ ಇದು ಅಭಿವೃದ್ಧಿಯಾದಹಾಗೆಲ್ಲಾ ಅದನ್ನು ದಬ್ಬಾಳಿಕೆಯಿಂದ ಅಮುಕಲು ಪ್ರಯತ್ನಿಸುವರು. ಆದರೆ ಸ್ವಾತಂತ್ರ್ಯವನ್ನು ದಬ್ಬಾಳಿಕೆಯಿಂದ ಅಮುಕಲು ಆಗುವುದಿಲ್ಲ. ಸ್ವಾತಂತ್ರ್ಯಯುದ್ಧದ ವೀರರ ರಕ್ತಪಾನಮಾಡಿದ ಸ್ವಾತಂತ್ರ್ಯವೃಕ್ಷವು ದಬ್ಬಾಳಿಕೆಯ ಬಲದಿಂದ ಕೆಳಗೆ ಬೀಳುವುದಿಲ್ಲ. ವೀರರ ರಕ್ತವೇ ಸ್ವಾತಂತ್ರ್ಯವೃಕ್ಷದ ಜಲಪಾನವು. ವ್ಯಕ್ತಿಗಳನ್ನು ಗಲ್ಲಿಗೆ ಏರಿಸಬಹುದು. ವ್ಯಕ್ತಿಗಳನ್ನು ಸೆರೆಮನೆಗೆ ಹಾಕಬಹುದು. ವ್ಯಕ್ತಿಗಳನ್ನು ಗುಂಡಿನಿಂದ ಹೊಡೆದು ಕೊಲ್ಲಬಹುದು. ವ್ಯಕ್ತಿಗಳು ಆರಾಧಿಸುತ್ತಿರುವ ಸ್ವಾತಂತ್ರ್ಯವನ್ನು ಅಡಗಿಸುವುದಕ್ಕಾಗಿ ಗಡೀಪಾರುಗಳೂ, ಬಂದೀಖಾನೆಗಳೂ, ಕಿರುಕುಳಗಳೂ, ಮುಟ್ಟುಗೋಲುಗಳೂ, ಗುಂಡುಗಳೂ, ಮದ್ದುಗಳೂ ಉಪಯೋಗಿಸಲ್ಪಡಬಹುದು. ಆದರೆ ಸ್ವಾತಂತ್ರ್ಯದ ಪ್ರವಾಹವನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಸಮುದಾಯಶಕ್ತಿಯಿಂದ ಸರಕಾರದವರು ನಡವಳಿಕೆಗಳನ್ನು ನಡೆಸಿದರೆ ಅವರೇ ಗೆಲ್ಲಲಿ. ಇಲ್ಲವಾದರೆ ದಬ್ಬಾಳಿಕೆಯ ಸರಕಾರಕ್ಕೆ ಸೋಲು ಆಗುವುದು. ನಮ್ಮ ದೇಶದ ಸ್ವಾತಂತ್ರ್ಯದ ಚಳುವಳಿಯು ಇದೇ ರೀತಿಯಾಗಿಯೇ ಮುಂದುವರೆಯುವುದು. ಪ್ರಜಾಪ್ರಭುತ್ವವೇ (ಸ್ವರಾಜ್ಯವೇ) ಇದರ ಕಡೆಯ ಗುರಿಯಾದ

ಉದಾರವಾದ ಸಹಾಯ.

ಧರ್ಮಪ್ರಕಾಶ ಡಿ. ಬನುಮಯ್ಯನವರು ಮುಂತಾಗಿದ್ದೂ ರಾಮಚಂದ್ರರಾಯರು ಮಹಾತ್ಮಾ ಗಾಂಧಿ ವಿಗ್ರಹದ ಪ್ರತಿಷ್ಠೆಗಾಗಿ ಬಂದು ನೂರು ರೂಪಾಯಿಗಳ ಉದಾರವಾದ ಸಹಾಯವನ್ನು ಮಾಡಿದರೆಂದು ಕೇಳುತ್ತೇವೆ.

[illegible]

[illegible]

[illegible]

Printed and published by P. R. Ramaiya, at Sri Rama Press, D. Subbiah Road Mysore

Regd No. M 2322 ॥ ವಂದೇ ಮಾತರಂ ॥ [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ [illegible]

ಸಂಪುಟ ೧] ಶನಿವಾರ ೨ ಫೆಬ್ರವರಿ ೧೯೨೭ [ಸಂಚಿಕೆ [illegible]

TAI NADU
2—2—1929

ಹೃದಯ ಪರಿವರ್ತನವಿಲ್ಲದೆ ಶಾಂತಿಯಿಲ್ಲ.

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರು ಮದರಾಸಿನ ಸ್ವರಾಜ್ಯ ಪತ್ರಿಕೆಗೆ ಕೊಟ್ಟಿರುವ ಒಂದು ಭೇಟಿಯುಲ್ಲಿ ವಿಶ್ವೇಶ್ವರಯ್ಯ ಕಮಿಟಿಯ ರಿಪೋರ್ಟಿನಮೇಲೂ, ಅದರಮೇಲೆ ಗವರ್ನಮೆಂಟಿನವರು ಮಾಡಿರುವ ಆರ್ಡರಿನ ಮೇಲೂ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. ಅವರು ಹೇಳುವದೇನೆಂದರೆ,

"ಕಮಿಟಿಯ ಮೆಂಬರುಗಳಲ್ಲಿ ಅನೇಕ ವಿಷಯಗಳಲ್ಲಿ ಸಹಮತವಿದೆ. ಆದರೆ ಕೆಲವು ಅತಿ ಮುಖ್ಯವಾದ ವಿಷಯಗಳಮೇಲೆ ಭಿನ್ನಾಭಿಪ್ರಾಯವಿದೆ. ಈಗಿನ ಸಂದರ್ಭದಲ್ಲಿ ಇದು ಅಪರಿಹಾರ್ಯ. ಕಳೆದ ಆಗಸ್ಟಿನಿಂದಲೂ ಜನಗಳ ಮನಸ್ಸು ಈ ವಿಷಯವಾಗಿ ಬಹಳ ಕ್ಷುಬ್ಧವಾಗಿದೆ. ಸಂಸ್ಥಾನದ ಹೊರಗೂ ಈ ವಿಷಯವಾಗಿ ಸಮಾಲೋಚನೆಯು ನಡೆಯುತ್ತಲಿದೆ. ಶ್ರೀಮನ್ಮಹಾರಾಜಾ ಸರ್ಕಾರದವರು ಎರಡೂ ವಿಧವಾದ ಅಭಿಪ್ರಾಯಗಳನ್ನೆಲ್ಲಾ ಆಲೋಚಿಸಿ ಕಡೆಗೆ ತೀರ್ಮಾನದ ಮಾತನ್ನು ಹೇಳಿಧಾರೆ. ಇನ್ನು ಈ ವಿಷಯದ ಪ್ರಸ್ತಾಪನೆಯು ಸಾಕು. ಹಿಂದೆ ನಡೆದಿದ್ದೆಲ್ಲವನ್ನೂ ಮರೆತು ಪರಸ್ಪರ ಕ್ಷಮೆಯನ್ನು ತೋರಿಸಿ ಎಲ್ಲರೂ ಶಾಂತಿಯಿಂದ ವರ್ತಿಸಬೇಕು. ಸಂಸ್ಥಾನದ ಮುಂದಿನ ಹಿತದ ದೃಷ್ಟಿಯಿಂದ ಪ್ರಜೆಗಳೆಲ್ಲರೂ ಶಾಂತಿಭಾವನವನ್ನು ವಹಿಸಬೇಕು."

ಸರ್ ಪುಟ್ಟಣ್ಣಶೆಟ್ಟರ ಹಿತೋಕ್ತಿಗಳು ಬಹಳ ಬೆಲೆಯುಳ್ಳವು. ಇವರು ನಮ್ಮ ಸಂಸ್ಥಾನದ ವಯೋವೃದ್ಧ ಮತ್ತು ಜ್ಞಾನವೃದ್ಧ ರಾಜನೀತಿಜ್ಞರಲ್ಲಿ ಅಗ್ರಗಣ್ಯರು. ಆದರೆ ಈಗಿನ ಪರಿಸ್ಥಿತಿಯಲ್ಲಿ ಇವರ ಮಾತುಗಳಿಗೆ ಅಷ್ಟು ಮನ್ನಣೆ ದೊರೆಯುವುದೋ ಇಲ್ಲವೋ ಹೇಳುವುದು ಅಸಾಧ್ಯ. ಏತಕ್ಕೆಂದರೆ ಇವರ ಶಾಂತಿ ಸಂದೇಶಕ್ಕೆ ಅನುಕೂಲವಾದ ಸನ್ನಿವೇಶವು ನಮ್ಮ ಸಂಸ್ಥಾನದಲ್ಲಿ ಈಗ ಇಲ್ಲ. ಪ್ರಜೆಗಳು ಎಷ್ಟೇ ಬಗ್ಗಿ, ತಗ್ಗಿ ನಡೆಯುತ್ತಿದ್ದರೂ ಸರಕಾರದವರು ತಮ್ಮ ದಬ್ಬಾಳಿಕೆಯ ಕತ್ತಿಯನ್ನು ಝಳಪಿಸುತ್ತಿರುವರು. ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಪ್ರಕಟವಾದ ಕೆಲವು ದಿವಸಗಳಲ್ಲಿಯೇ ತಾತಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದರು. ಇತರ ಪತ್ರಿಕೆಗಳಿಗೆ ಭಯ ಪ್ರದರ್ಶನವನ್ನು ಮಾಡಿದರು. ವಿಶ್ವೇಶ್ವರಯ್ಯ ಕಮಿಟಿಯ ಮೆಜಾರಿಟಿಯ ವರದಿಯನ್ನು ತಿರಸ್ಕರಿಸಿದರು. ತಮ್ಮ ತಪ್ಪುಗಳು ಅನೇಕವಿದ್ದರೂ, ತಪ್ಪಿಲ್ಲ ಎಂದು ಹೇಳಿಕೊಂಡರು. ತಮ್ಮ ಅಚಾತುರ್ಯದಿಂದ ಸರಕಾರದ ಯಂತ್ರವು ಬೆಂಗಳೂರಿನ ಗಲಾಟೆಯ ಸಮಯದಲ್ಲಿ ಕುಸಿದು ಮುರಿದಿದ್ದರೂ, ತಾವು ಬಹಳ ಶೌರ್ಯವನ್ನು ತೋರಿಸಿದೆವೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಇದ್ದದ್ದನ್ನು ಇದ್ದಹಾಗೆ ಒಪ್ಪಿಕೊಳ್ಳದೆ, ಪ್ರಾಮಾಣಿಕತೆಯಿಂದ ನಡೆದುಕೊಂಡ ಕೆಲವು ಅಧಿಕಾರಿಗಳಮೇಲೆ ತಪ್ಪಿನ ಹೊರೆಯನ್ನು ಹೊರಿಸಿದರು. [illegible]

ತಾರೀಫ್ ಮಾಡಿದರು. ಪುನಃ ಜುಡಿಷಿಯಲ್ ವಿಚಾರಣೆಯು ನಡೆಯಬೇಕೆಂಬ ಸಲಹೆಯನ್ನು ನಿರಾಕರಿಸಿದರು ಒಟ್ಟಿನಮೇಲೆ ಸರಕಾರದವರು ವಿಶ್ವೇಶ್ವರಯ್ಯ ಕಮಿಟಿಯ ವರದಿಯಮೇಲೆ ಕೊಟ್ಟಿರುವ ಆರ್ಡರಿನ ಹಿಂದಿರುವ ಮನೋಭಾವವನ್ನು ನೋಡಿದರೆ, ಸರಕಾರದವರ ಮನಸ್ಸು ಸ್ವಲ್ಪವೂ ಪಶ್ಚಾತ್ತಾಪಪಟ್ಟಂತಾಗಲೀ, ಪರಿಶುದ್ಧವಾದಂತಾಗಲೀ ತೋರಿಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಯಾರು ಕ್ಷಮಿಸಬೇಕು. ಯಾರು ಮರೆಯಬೇಕು? ಸರಕಾರದವರು ತಮ್ಮ ದರ್ಪದ ಮೇಲೆಯೇ ನಿಂತಿರುವರು. ತಮ್ಮ ಹಿಂದೆ ಬ್ರಿಟಿಷ್ ಮಿಷೀನು ಗನ್ನುಗಳ, ಮತ್ತು ಗುಂಡಿನ ಗಾಡಿಗಳ ಶಕ್ತಿಯಿದೆ ಎಂಬುದು ಸರಕಾರಕ್ಕೆ ಗೊತ್ತಿರುವುದು ತಮ್ಮ ದಬ್ಬಾಳಿಕೆಯನ್ನೆಲ್ಲಾ ಉಪಯೋಗಿಸಿ ವಿರೋಧವನ್ನೆಲ್ಲಾ ಅಡಗಿಸಿಬಿಡುವೆವೆಂಬ ಭಾವನೆಯು ಸರಕಾರಕ್ಕಿರುವುದು. ಈ ಪರಿಸ್ಥಿತಿಯಲ್ಲಿ ಪ್ರಜೆಗಳು ಏನು ಮಾಡುವರು? ನಾಮಾಸ್ಯಪ್ರಜೆಗಳಲ್ಲಿ ಹಿಂದೂ ಮುಸಲ್ಮಾನ್ ದ್ವೇಷವಿಲ್ಲ. ಈಗ ಇರುವುದೆಲ್ಲಾ ದುಷ್ಟನಿಗ್ರಹವಾಗಲಿಲ್ಲವಲ್ಲಾ ಎಂಬ ಮನೋವ್ಯಥೆ ಸರಕಾರದವರು ಸಾಧುಗಳಮೇಲೆ ತಮ್ಮ ದರ್ಪವನ್ನು ತೋರಿಸುವ ಬದಲು ದುಷ್ಟರನ್ನು ಹತೋಟಿಗೆ ತಂದು ನಿಗ್ರಹಿಸಿದರೆ ಶಾಂತಿ ಸ್ಥಾಪನೆಯಾಗುವುಗುವುದು. ವಿಶ್ವೇಶ್ವರಯ್ಯ ಕಮಿಟಿಯ ಮೆಜಾರಿಟಿಯವರು ಹೇಳಿರುವುದೂ ಇದೇ ಮಾತು. ಅದೇ ಶಾಂತಿ ಸ್ಥಾಪ[illegible]

ಮ|| ಬಸಪ್ಪನವರ ಪತ್ರದ ಔಚಿತ್ಯ

ವಿಶ್ವೇಶ್ವರಯ್ಯ ಕಮಿಟಿಯ ಮೆಂಬರುಗಳಲ್ಲೊಬ್ಬರಾದ ಮ|| H. G. ಬಸಪ್ಪನವರು 23—1—29 ರಲ್ಲಿ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಬರೆದ ಪತ್ರವು ಬೆಂಗಳೂರಿನ ಒಂದು ಪತ್ರಿಕೆಯಲ್ಲೂ, ರಾಜಧಾನಿಯ ಒಂದು ಪತ್ರಿಕೆಯಲ್ಲೂ ಪ್ರಕಟವಾಗಿದೆ. ಅದರಲ್ಲಿರುವ ವಿಷಯಗಳನ್ನೆಲ್ಲಾ ವಿಮರ್ಶಿಸುವ ಮೊದಲು ಆ ಪತ್ರದ ಔಚಿತ್ಯವನ್ನು ಪರೀಕ್ಷಿಸಬೇಕಾಗಿರುವುದು. ಪತ್ರವು ಬರೆದ ತಾರೀಖು 23—1—29 ಕಮಿಟಿಯು 22—1—29 ರಲ್ಲಿಯೇ ತನ್ನ ಕೆಲಸವನ್ನು ಪೂರಯಿಸಿ ಡಿಸಾಲ್ವ್ ಮಾಡಲ್ಪಟ್ಟಿತು. ಎಂದರೆ ಕಮಿಟಿಯ ಆಯುಸ್ಸು 22—1—29 ಕ್ಕೇ ಮುಗಿಯಿತು. 23—1—29 ರಲ್ಲಿ ಪತ್ರ ಬರೆದ ದಿವಸ ಕಮಿಟಿಯ ಅಸ್ತಿತ್ವವೇ ಇಲ್ಲ. ಆದುದರಿಂದ 23—1—29 ರಲ್ಲಿ ಮ|| ಬಸಪ್ಪನವರು ಕಮಿಟಿಯ ಮೆಂಬರೂ ಅಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರು ಕಮಿಟಿಯ ಆಧ್ಯಕ್ಷರೂ ಅಲ್ಲ. ಆದುದರಿಂದ ಮ|| ಬಸಪ್ಪನವರ ಪತ್ರಕ್ಕೆ ಯಾವ ಬೆಲೆಯೂ ಇಲ್ಲ.

ಮತ್ತು ಇವರು ಬರೆದಿರುವ ಪತ್ರದ ಆದಿಭಾಗದಲ್ಲಿಯೇ ತಾವು ಪತ್ರದಲ್ಲಿ ಬರೆದಿರುವ ಕೆಲವು ವಿಷಯವಾಗಿ 22—1—29 ರಲ್ಲಿ ನಡೆದ ಕಮಿಟಿಯ ಮೀಟಿಂಗಿನಲ್ಲಿ ತಾವು ಅಧ್ಯಕ್ಷರನ್ನು ಒಂದು ಅಪ್ಪಣೆಯನ್ನು ಬೇಡಿದುದಾಗಿಯೂ ಅದಕ್ಕೆ ಅಧ್ಯಕ್ಷರು ಅಪ್ಪಣೆಯನ್ನು ಕೊಡಲಿಲ್ಲವೆಂಬುದಾಗಿಯೂ ಬರೆಯುತ್ತಾರೆ ಸರಿ. ಇದರಲ್ಲಿ ತಪ್ಪೇನೂ ಇಲ್ಲ. ಅಧ್ಯಕ್ಷರಿಗೂ ಯಾರಿಗಾದರೂ ಒಬ್ಬ ಮೆಂಬರಿಗೂ ಸಭೆಯ ಕಾರ್ಯಕ್ರಮದಲ್ಲಿ ಭಿನ್ನಾಭಿಪ್ರಾಯವುಂಟಾದರೆ ಅಧ್ಯಕ್ಷರ ಮಾತಿನಂತೆಯೇ ನಡೆಯಬೇಕು. ಮೆಂಬರಿನ ಅಧಿಕಾರ ಮೆಂಬರಿಗೆ, ಅಧ್ಯಕ್ಷರ ಅಧಿಕಾರ ಅಧ್ಯಕ್ಷರಿಗೆ. ಅಧ್ಯಕ್ಷರು ಮಾಡಿದ ತೀರ್ಮಾನವು ಮೆಂಬರಿಗೆ ಸರಿಬೀಳದೆ ಹೋದರೆ ಅದಕ್ಕೆ [illegible] ನ್ಯಾಯವಾದ ರೀತಿಯಲ್ಲಿ ತಮ್ಮ ಭಿನ್ನಾಭಿಪ್ರಾಯವ[illegible] ಪ್ರಕಟಿಸಬಹುದು. ಅದು ಇಷ್ಟವಿಲ್ಲದೇ ಹೋದರೆ [illegible] ಕಾರ ಮಾಡಿ ಹೊರಗೆ ಬರಬಹುದು. ಇನ್ನೂ [illegible] ನ ವಿರೋಧವನ್ನು ತೋರಿಸಬೇಕಾದರೆ ಅಲ್ಲಿಯೇ ರಾ[illegible] ನಾಮೆಯನ್ನು ಕೊಡಬಹುದು. ಅದನ್ನೆಲ್ಲಾ ಬಿಟ್ಟು [illegible] ಮಿಟಿಯ ಮೀಟಿಂಗಿನಲ್ಲಿ ಭಾಗವನ್ನು ತೆಗೆದುಕೊಂ[illegible] ರುಜುವನ್ನು ಮಾಡಿ ಕಮಿಟಿಯು ಡಿಸಾಲ್ವ್ ಆದನಂ[illegible] ರಾತ್ರಿ ನಿದ್ರೆಮಾಡಿ ಬೆಳಗ್ಗೆ ಎದ್ದು ಏನೋ ಒಂದು ಸ್ಫೂರ್ತಿಯು ತೋಚಿತೆಂದು ಉದ್ದವಾಗಿ ಅಧ್ಯಕ್ಷ[illegible]ರಿಗೆ ಒಂದು ಕಾಗದವನ್ನು ಬರೆದರೆ ಆ ಪತ್ರಕ್ಕೆ ಬೆಲೆಯೇನು? ಇದೊಂದು ಆಶ್ಚರ್ಯ! ಎಲ್ಲಾ ಆದಮೇಲೆ ರುಜು ಮೊದಲಾದುವುಗಳೊಡನೆ ವರದಿಯು ಸರಕಾರಕ್ಕೆ ಹೋದ ಮೇಲೆ 23—1—29 ರಲ್ಲಿ ಮ|| ಬಸಪ್ಪನವರು ಅಧ್ಯಕ್ಷರಮೇಲೆ ಏನೋ ಅಸಮಾಧಾನಕ್ಕೋಸ್ಕರ ಆ ಅಸಮಾಧಾನವನ್ನು ಕಮಿಟಿಯಲ್ಲಿ ತೋರಿಸುವ ಸಾಹಸಮಾಡದೆ ಮನೆಯಲ್ಲಿ ಶಾಂತ ವಾತಾವರಣದಲ್ಲಿ ಬರೆದ ಪತ್ರದಲ್ಲಿ ತಾವು ಕಮಿಟಿಯವರದಿಗೆ ಒಪ್ಪಿಕೆಯನ್ನು ವಾಪಸು ತೆಗೆದುಕೊಂಡಿರುವುದಾಗಿಯೂ ಅದರಲ್ಲಿನ ಅಭಿಪ್ರಾಯಗಳನ್ನು ತಾವು ಒಪ್ಪುವುದಿಲ್ಲವಾಗಿಯೂ ಬರೆಯುವುದು ಯಾವ ಔಚಿತ್ಯವೊ ನಮಗೆ ತಿಳಿಯದು. ಇಂತಹ ಸುಶಿಕ್ಷಿತಮನಸ್ಕರಲ್ಲದ ವ್ಯರ್ಥಾಭಿಪ್ರಾಯವುಳ್ಳವರ ಪತ್ರಕ್ಕೆ ಏನು ಬೆಲೆಯನ್ನು ಕಟ್ಟಬೇಕು?

ಮ|| ಬಸಪ್ಪನವರ ಪತ್ರವು ಬಹಳ ಅಸಂಬದ್ಧವಾಗಿರುವುದು. ತಾವು ಅಧ್ಯಕ್ಷರಾಗಿದ್ದರೆ ಹೇಗೆ ನಡೆದುಕೊಳ್ಳುತ್ತಿದ್ದರೆಂಬುದಾಗಿ ಅಭಿಪ್ರಾಯವನ್ನು ಕೊಟ್ಟಿರುವರು. ಬಳ್ಳೇದು, ಇನ್ನೊಂದು ಇಂತಹ ಗಲಾಟೆಯು ನಡೆದು ಇಂತಹದಿನ್ನೊಂದು ಕಮಿಟಿಯನ್ನು ನೇಮಿಸಿದಾಗ ಮ|| ಬಸಪ್ಪನವರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಸೂಚಿಸುವೆವು.

ಇವರ ಪತ್ರಗಳು ಈಗ ಏತಕ್ಕೆ ಬರುತ್ತಿವೆ ಎಂ[illegible]ದು ಎಲ್ಲರಿಗೂ ಗೊತ್ತಿದೆ. ವಿಶ್ವೇಶ್ವರಯ್ಯ ಕಮಿಟಿ[illegible] ಬಹು ಮತದ ವರದಿಗೆ ಅದಷ್ಟು ಬೆಲೆಯನ್ನು ತಗ್ಗಿ[illegible]ಕೆಂಬುದೇ ಉದ್ದೇಶ. ಸರ್. ಎಂ. ವಿಶ್ವೇಶ್ವರಯ್ಯನವ[illegible] ಅನೇಕ ದೊಡ್ಡ ದೊಡ್ಡ ಕಮಿಟಿಗಳಲ್ಲಿ ಕೆಲಸಮಾಡಿ [illegible]ರ್ತಿಯನ್ನು ಪಡೆದಿರುವರು. ಇಂಡಿಯಾ ಸರಕಾರದವರು ನೇಮಿಸಿದ ಎಷ್ಟೋ ಕಮಿಟಿಗಳಲ್ಲಿ ದಕ್ಷತೆಯನ್ನು ತೋರಿಸಿರುವರು, ಇವರಿಗೆ ವಿರೋಧವಾಗಿ ಮ|| ಬಸಪ್ಪನವ[illegible]ರಾಗಲೀ ಅವರ ಮಿತ್ರರಾಗಲೀ ಹೇಳಿದರೆ ವಿಶ್ವೇಶ್ವರಯ್ಯನವರ ಘನತೆಗೆ ಕುಂದುಕ ಬರುವುದಿಲ್ಲ. ಈ ಪತ್ರ[illegible]ಗಳ ಉದ್ದೇಶವೇನೆಂಬುದು ಸ್ಪಷ್ಟಪಡುವುದು.

ಮೆ|| ಕಲಾಮಿಯವರು ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಪ್ರಕಟಿಸಿದರು. ಅದೊಂದು ರೀತಿ ಮತ್ತು [illegible] ಮಿ|| ನಾಗಪ್ಪನವರು. ಕೆಲವು ವಿಷಯಗಳ ಮೇಲೆ [illegible] ಟಸ್ಥ್ಯಭಾವವನ್ನು ವಹಿಸಿದರು. ಆದರೆ ಮ|| ಬಸಪ್ಪನವರದು ಮೂರನೆಯ ದಾರಿ, ಕಮಿಟಿಯ ಸಭೆಯ[illegible]ಪ್ಪಿ ರುಜುಮಾಡಿ ವರದಿಯು ಸರಕಾರಕ್ಕೆ ಹೋದ ಮೇಲೆ ಕಮಿಟಿಯೇ ಬರಖಾಸ್ತಾದ ಮೇಲೆ ನನ್ನ ರುಜು[illegible] ವಾಪಸ್ ತೆಗೆದುಕೊಳ್ಳುತ್ತೇನೆಂದು ಅಧ್ಯಕ್ಷರಿಗೆ [illegible] ಆ ಪತ್ರವನ್ನು ಯಾರಿಗೆ ಬರೆದರೋ ಅವರ ಅಪ್ಪಣೆಯನ್ನು ಪಡೆದೋ ಪಡೆಯದೆಯೋ ಬಹಿರಂಗ[illegible]ವುದು ಅತ್ಯಂತ ಅನುಚಿತವಾದ ಮಾರ್ಗ. ಇದನ್ನು [illegible] ಪರ್ಯಾಲೋಚಿಸಿದರೆ ಮ|| ಬಸಪ್ಪನವರು ಇಂತಹ [illegible]ಗಳ ಮೆಂಬರಾಗಲು ಎಷ್ಟು ಸಾಮರ್ಥ್ಯವನ್ನು [illegible] [illegible] ಸಾಗುವದು.

ತಾಯಿನಾಡು.
2—2—1929

ವರ್ತಮಾನ ಸಂಗ್ರಹ

ಮೋಟಾರ್ ಬಸ್ಸುಗಳ ಕಾನೂನು.

ಮೋಟಾರ್ ಬಸ್ಸುಗಳ ಮಾಲೀಕರು ತಮಗೆ ಕೊಟ್ಟಿರುವ ಮಾರ್ಗಗಳಲ್ಲಿ ಬಸ್ಸು ನಿಲ್ಲತಕ್ಕ ಸ್ಥಳಗಳಿಗೆ ಪ್ರಯಾಣೀಕರಿಂದ ವಸೂಲ್ಮಾಡತಕ್ಕ ಟಿಕೀಟೀನ ದರಗಳನ್ನು ಬಸ್ಸಿನ ಮೇಲೆ ಜನರೆಲ್ಲರಿಗೂ ತಿಳಿಯುವ ರೀತಿಯಲ್ಲಿ ಪ್ರಕಟಿಸಬೇಕೆಂದು ಕಾನೂನು ಮಾಡಿರವ ು!

ರೈಲ್ವೆ ಆದಾಯ.

1929 ನೇ ಜನವರಿ 12 ನೇ ತಾ|| ಗೆ ಆಖೈರಾದ ವಾರಕ್ಕೆ ಮೈಸೂರು ರೈಲ್ವೆಗಳ ಆದಾಯವು 66,000 ರೂ. ಗಳು. ಹೋದ ವರ್ಷ ಇದೇ ವಾರದಲ್ಲಿ 9148 ರೂ ಗಳು ಹೆಚ್ಚಿತು.

ರಜಾ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ಟಿನ ಒಂದನೇ ದರ್ಜೆ ಸೂಪರಿಂಟೆಂಡೆಂಟರಾದ ಮ|| ಎ. ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ 7 ನೇ ಫೆಬ್ರವರಿಯಿಂದ 3 ತಿಂಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ರಜಾ

ನರಸಿಂಹರಾಜಪುರದ ಒಂದನೇ ದರ್ಜೆ ಮುನ್‌ಸೀಫರಾದ ಮ|| ಬಿ. ಎಲ್ ಲಕ್ಷ್ಮೀನಾರಾಯಣ ಜೋಯಿಸರವರಿಗೆ ಅವರು ಉಪಯೋಗಿಸಿಕೊಳ್ಳುವ ತಾ|| ಲಾಗಾಯಿತು 20 ದಿನಗಳ ಫರ್ಲೋ ರಜಾ ಪೂರಾ ತಲಬಿನ ಮೇಲೆ ಮಂಜೂರಾಗಿದೆ. ಆ ಕಾಲದಲ್ಲಿ ಶಿವಮೊಗ್ಗ ಸೆಷನ್ ಕೋರ್ಟಿನ ಹಂಗಾಮಿ ಶಿರಸ್ತೇದಾರರಾದ ವಿ.|| ಎಂ. ಕೆ. ಶಿವಶಂಕರರಾಯರವರು 11 ನೇ ದರ್ಜೆಯ ಮುನಿಸೀಫರಾಗಿ ನಿಯಮಿಸಲ್ಪಟ್ಟಿರುವರು.

ದೇವಿ ಹಾಕುವ ಏರ್ಪಾಡು.

ಫೆಬ್ರವರಿ ಒಂದನೇ ತಾ|| ಲಾಗಾಯಿತು ಒಂದು ವರ್ಷಕಾಲ ಶೃಂಗೇರಿ ಮುನಿಸಿಪಾಲಿಟಿಯಿಂದ ಬಲಾತ್ಕಾರವಾಗಿ ದೇವಿ ಹಾಕತಕ್ಕ ಏರ್ಪಾಡು ಜಾರಿಯಲ್ಲಿ ಒರುವುದ.

ಹೊಸ ಸಬ್‌ರಿಜಿಸ್ಟ್ರಾರ್ ಆಫೀಸು.

ಟಿ. ನರಸೀಪುರದ ತಾ|| ಬನ್ನೂರು ಸೋಸಲೆ ಹೋಬಳಿಗಳಿಗೂ ಮಳವಳ್ಳಿ, ತಾ|| ಕಿರುಗಾವಲು ಹೋಬಳಿಗೂ ಮಧ್ಯರಾಷ್ಟ್ರವಾಗಿರುವ ಬನ್ನೂರಿನಲ್ಲಿ ಒಂದು ಸಬ್‌ರಿಜಸ್ಟ್ರಾರ್ ಆಫೀಸನ್ನು ಸ್ಥಾಪಿಸಬೇಕೆಂಬ ವಿಷಯದಲ್ಲಿ ಇನ್‌ಸ್ಪೆಕ್ಟರ್ ಜನರಲ್ಲರವರು ಮಾಡಿರುವ ಶಿಫಾರ್ಸನ್ನು ಸರ್ಕಾರದವರು ಮಂಜೂರು ಮಾಡಿರುವರು.

ಬಡ್ತಿ

ಮೈಸೂರು ಇನ್‌ಫೆಂಟ್ರಿಯಲ್ಲಿ ಜಮೇದಾರ್‌ರಾಗಿರುವ ಸಿ. ಸುಬ್ರಹ್ಮಣ್ಯಮ್ ಎಂಬುವರಿಗೆ ಸುಬೇದಾರಿ ಗ್ರೇಡಿನಲ್ಲಿ ಬಡ್ತಿ ಕೊಟ್ಟಿದ್ದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟಿನ ತೀರ್ಥಹಳ್ಳಿ ನಗರ ಮತ್ತು ಚೆನ್ನಗಿರಿ ತಾಲ್ಲೋಕುಗಳಲ್ಲಿ ಈ ಮಾಹೆ ಒಂದನೇ ತಾ|| ಲಾಗಾಯಿತು ಬಲಾತ್ಕಾರವಾಗ ದೇವಿ ಹಾಕುವ ಏರ್ಪಾಡಾಗಿದೆ.

ರಾಜೀನಾಮೆ

ಕಡೂರಿನ ಆನರರಿ ಮ್ಯಾಜಿಸ್ಟ್ರೇಟರಾದ ಮ|| ಸಿ. ಟಿ. ಮೊದಲಿಯಾರು ಕೊಟ್ಟಿರುವ ರಾಜೀನಾಮೆಯನ್ನು ಅಂಗೀಕರಿಸಿರುವುದರಿಂದ ಅವರಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆ.

ಏಜ್ ಕಮಿಟಿ

ಜನವರಿ 29 ಕ್ಕೆ ಮೇಲಿನ ಕಮಿಟಿಯು ಸಾಕ್ಷಿ ತೆಗೆದುಕೊಳ್ಳುವ ಭಾಗವು ಮುಗಿಯಿತು. ಏಪ್ರಿಲಿನ ಮಧ್ಯದಲ್ಲಿ ವರದಿಯನ್ನು ತಯಾರಿಸಲು ಸಮಿತಿಯು ಸೇರುವುದು.

ಭರತಪುರದ ಜ್ಯಾಂಕ.

ಭರತಪುರದ ಪ್ರಜಾಸಮ್ಮೇಳನದ ಕಾರ್ಯದರ್ಶಿಗಳು ಸಂಸ್ಥಾನದ ಸ್ಥಾಪಕರಾದ ಸುರಾಜುಮಲ್ ಎಂಬುವರ ಪುಣ್ಯತಿಥಿಯ ಸಂದರ್ಭದಲ್ಲಿ ರಾಜ ದ್ರೋಹಕರವಾದ ಭಾಷಣ ಮಾಡಿದರೆಂಬ ತಪ್ಪಿತಕ್ಕಾಗಿ ಖೈದು ಮಾಡಲ್ಪಟ್ಟಿದಾರೆ. ಇನ್ನೂ ಕೆಲವು ದಸ್ತಗಿರಿಗಳು ಆಗುವ ಸಂಭವವಿದೆ.

ಇಂಗ್ಲೀಷ್ ಭಾಷಾ ಬಹಿಷ್ಕಾರ.

ಮದ್ರಾಸಿನ ತಿಲಕ್ ಘಾಟಿನಲ್ಲಿ ನಡೆದ ಸಭೆಯೊಂದರಲ್ಲಿ ಶ್ರೀ ಶ್ರೀನಿವಾಸಯ್ಯಂಗಾರ್ಯರು ವಾದಿಯು ಪ್ರಚಾರಮಾಡಿ ಪರಕೀಯ ವಸ್ತ್ರಗಳನ್ನು ದೂರಮಾಡುವುದರ ಜೊತೆಗೆ ಇಂಗ್ಲೀಷ್ ಭಾಷೆಯನ್ನು ಪರಿತ್ಯಜಿಸಿ ಅದರ ಸ್ಥಾನಕ್ಕೆ ಹಿಂದಿಯನ್ನು ಜಾರಿಯಲ್ಲಿ ತರಬೇಕೆಂದು ಭಾಷಣ ಮಾಡಿದರು.

ಹಿಂದೀ ಪರೀಕ್ಷೆಗಳು.

ಮಾರ್ಚಿ 10 ನೇ ತಾ|| ನಿಂದ ಹಿಂದೀ ಪರೀಕ್ಷೆಗಳು ನಡೆಯುವುದರಿಂದ ಈ ಮಾಹೆ 10 ನೇ ತಾ|| ನೊಳಗಾಗಿ ವಿದ್ಯಾರ್ಥಿಗಳು ದರಖಾಸ್ತುಗಳನ್ನು ಮದ್ರಾಸಿಗೆ ಕಳುಹಿಸಬೇಕು. ಈಸಲದಿಂದ ಸ್ತ್ರೀಯರಿಂದಲೂ ಪರೀಕ್ಷಾ ಫೀಸನ್ನು ವಸೂಲ್ಮಾಡಬೇಕೆಂಬ ನಿರ್ಣಯವಾಗಿದೆ. ಕನಿಷ್ಟಪಕ್ಷ ಮೂರುಜನ ಪರೀಕ್ಷೆಗೆ ಕಳುಹಿಸತಕ್ಕ ವಿದ್ಯಾರ್ಥಿಗಳಿರುವ ಸ್ಥಳಗಳೆಲ್ಲಾ ಪರೀಕ್ಷಾಕ್ಷೇತ್ರವಾಗಿ ಮಾಡಲ್ಪಡುವುದು.

ಅಫ್‌ಘನ್ ಸುದ್ದಿ.

ಬೊಂಬಾಯಿನ ಕಮ್ಯೂನಿಕೆಯೊಂದು "ಕಾಂದಹಾರ್ ಪ್ರಜೆಗಳ ಕೋರಿಕೆಯಂತೆ (ಮಾಜಿದೊರೆ) ಅಮಾನುಲ್ಲಾ ಖಾನರು ರಾಜ್ಯಾಡಳಿತವನ್ನು ಪುನಃ ಕೈಗೊಂಡಿದ್ದಾರೆ. ರಾಷ್ಟ್ರದ ಎಲ್ಲಾ ಭಾಗಗಳಿಂದಲೂ ರಾಜಭಕ್ತಿ ಪ್ರದರ್ಶನಗಳು ತೋರಿಸಲ್ಪಡುತ್ತಲಿವೆ. ಎಂದು ತಿಳಿಸುತ್ತದೆ.

ಪ್ಯಾರಿಸ್ ರಾಯಭಾರಿತ್ವವನ್ನು ವಹಿಸಿಯೂ ಮಾಜಿ ಮಂತ್ರಿಪದವಿಯನ್ನು ವಹಿಸಿಯೂ ಇದ್ದ ನಾದಿರ್ ಖಾನನನ್ನು ಸಿಂಹಾಸನವನ್ನೇರಲು ಕರೆಯಲ್ಪಿಸಿಂದೂ ಅದಕ್ಕೆ ಅವರು ಉಪೇಕ್ಷಾಪಾರರಾಗಿರುವುದು. ಸಿಂಹಾಸನವಾದುದೆಂದೂ ಅಫ್‌ಘನ್ ರಾಯಭಾರವು ತಿಳಿಸುತ್ತದೆ.

ಇದನ್ನು ನೋಡಿ ಪ್ಯಾರಿಸ್‌ನಲ್ಲಿರುವ ನಾದಿರ್ ಖಾನನ್ನು ನನಗೆ ಸಿಂಹಾಸನಾರೋಹಣಮಾಡಬೇಕೆಂಬ ಕಾಂಕ್ಷೆಯಿಲ್ಲ ಆದರೆ ನನ್ನ ರಾಜ್ಯಕ್ಕೆ ತೊಂದರೆಯುಂಟಾದ ತತ್‌ಕ್ಷಣವೇ ಪ್ರತಿಯೊಬ್ಬ ದೇಶಾಭಿಮಾನಿಯಂತೆ ರಾಷ್ಟ್ರ ಸೇವೆಮಾಡಲು ಸಿದ್ಧನಾಗಿರುತ್ತೇನೆ ಎಂದು ಹೇಳಿರುವನು.

ಸೈನಿಕರ [illegible]

ಲಾಹೋರಿನ ಸೈನಿಕರ [illegible] ದಿತು. ಸರ್ಕಾರವು ಸೈನಿಕರು [illegible] ಕ್ಕದೆ.

[illegible]

[illegible] 20 ವರ್ಷ [illegible] ಹಳ್ಳಿಯಲ್ಲಿ ಹುಟ್ಟಿದನು. [illegible] 40 ವರ್ಷ [illegible] 2—3 ವರ್ಷಕಾಲ [illegible]

[illegible] ದಲ್ಲಿ [illegible] ಕ್ಕೆ ಸೇರಿದು ಕೆಲವು ಕಾಲಾನಂತರ [illegible] ಪುಂಡುತನಕ್ಕೆ ಆರಂಭಮಾಡಿದನು. ಸರಕಾರಿಯಧಿಕಾರಿಗಳೂ ಶ್ರೀಮಂತರುಗಳೂ ಇವನ [illegible] ಮಾಡಿಕೊಂಡ. [illegible] ಅಭಿಪ್ರಾಯದ [illegible] [illegible] ವನ್ನು ಇತರ ಜನರು [illegible] ಬೇಕೆಂದಿರುವನು. [illegible]

ಹಿಂದೀ ಪ್ರಚಾರ

ಶ್ರೀಯುತರುಗಳಾದ ಜಮುನಾಲಾಲ್ ಬಜಾಜ್ ರವರೂ, ಸಿ. ರಾಜಗೋಪಾಲಾಚಾರ್ಯರೂ, ರಾಜೇಂದ್ರಪ್ರಸಾದ್‌ರವರೂ ಹಿಂದೀ ಪ್ರಚಾರ ಕಾರ್ಯಕ್ಕಾಗಿ ಬೆಂಗಳೂರಿಗೆ ಈ ಮಾಹೆ 18-19ನೇ ತಾ|| ನಲ್ಲಿ [illegible] ಮಾಡಿಸುವರು. ರಾಜಧಾನಿಗೆ 20ನೇ ತಾ|| ಬರುವರು.

ಇರಾಕಿನ [illegible]

ಬ್ರಿಟಿಷರ ಕೆಲವು ಷರತ್ತುಗಳು ಒಪ್ಪತಕ್ಕದ್ದಲ್ಲವಾದ್ದರಿಂದ ಇರಾಕಿನ ಮಂತ್ರಿಗಳ ಸಮಿತಿಯು ರಾಜೀನಾಮೆಕೊಟ್ಟಿದೆ. ಸೈನ್ಯಾಧಿಕಾರವೆಲ್ಲಾ ತಮ್ಮ [illegible] ಬೇಕೆಂದು ಬ್ರಿಟಿಷರ ಧ್ಯೇಯ. ರಾಜಕೀಯ ಪಕ್ಷ [illegible] ಒಂದಾಗಿರುವುದರಿಂದ ಮತ್ತೊಂದು ಮಂತ್ರಿಮಂಡಲ ರಚನೆಯು ಅಸಾಧ್ಯವಾಗಿದೆ.

[illegible]

ಜರ್ಮನಿಯಿಂದ 8 ಕೋಟಿ ಫ್ರಾಂಕು [illegible] ಸಕ್ಕರೆಯು ಫ್ರಾನ್ಸಿನ ಎರಡು ದಿವಾಳಿಯಾದ [illegible] ಳಿಗೆ ಮೋಸದಿಂದ ತರಿಸಲ್ಪಟ್ಟಿತು. ಆ ಹಣಕ್ಕೆ ಸರಕಾರವು ದಂಡತೆರುವಹಾಗಿದೆ. ದಿವಾಳಿ ಕಂಪನಿಯ [illegible] ರುಗಳು ಖೈದುಮಾಡಲ್ಪಟ್ಟಿರುವರು.

ಸ್ವರಾಜ್ಯಕಾಂಕ್ಷೆ.

ಸ್ಕಾಟ್‌ಲೆಂಡಿನ ದೇಶಭಕ್ತರ ಭಾಷಣಗಳಿಂದ [illegible] ನ ಸ್ವರಾಜ್ಯಪಡೆಯಬೇಕೆಂಬ ಕಾಂಕ್ಷೆಯು [illegible] ಯೊಬ್ಬರಲ್ಲಿಯೂ ತಲೆದೋರುತ್ತಿದೆ.

[illegible] ದೊಡ್ಡ ಅಪರಾಧ

[illegible] ಕಮಿಟಿಯ ಶಿಫಾರಸುಗಳನ್ನು [illegible] ಕ್ಷರಿಸುವುದು, ಸರಕಾರದವರು ಇದುವರೆಗೂ ಮಾಡಿದ ಅಪರಾಧಗಳೆಲ್ಲಕ್ಕಿಂತಲೂ ದೊಡ್ಡದೆಂದು ಮದರಾಸ್ ಹಿಂದೂ ಪತ್ರಿಕೆಯು ತಿಳಿಸುತ್ತದೆ.

[illegible] ಕಮೀಷನ್

ಈ [illegible] ಆರಂಭವಾಗುವುದು.

Printed and published by P. R. Ramaiya, at Sri Rama Press, D. Subbiah Road Mysore.

Reg'd No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।

ವಾರ್ಷಿಕ

ಸಂಪುಟ ೧] ಸೋಮವಾರ ೪ ಫೆಬ್ರವರಿ ೧೯೨೯ [ಸಂಚಿಕೆ ೧೦

TAI NADU
4—2—1929

ಮಿ|| ಕಲಾಮಿಯವರ ಬಿನ್ನಮತದ ರಹಸ್ಯ

ಮಿ|| ಕಲಾಮಿಯವರ ಭಿನ್ನಮತದ ಟಿಪ್ಪಣಿಯು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು. ಅವರು ತಮ್ಮ ಟಿಪ್ಪಣಿಯನ್ನು ಡಿಸೆಂಬರ್ 20 ನೇ ತಾ|| ನೊಳಗೆ ಕಮಿಟಿಗೆ ಕಳುಹಿಸುವುದಾಗಿ ವಾಗ್ದಾನಮಾಡಿದ್ದರೂ ಅದನ್ನು ಜನವರಿ 15 ನೇ ತಾ|| ನವರೆಗೂ ಕಳುಹಿಸಲಿಲ್ಲ. ಕಮಿಟಿಯವರು ಡಿಸೆಂಬರ್ 14 ರಲ್ಲಿ ತಮ್ಮ ವರದಿಯನ್ನು ಪೂರ್ತಿಮಾಡಿ ಮಿ|| ಕಲಾಮಿಯವರನ್ನು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿದರು. ತಾವು ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಕಳುಹಿಸುವುದಾಗಿ ಹೇಳಿ ಕಮಿಟಿಯ ವರದಿಗೆ ರುಜು ಹಾಕಿದರು. ಕಮಿಟಿಯವರು ಡಿಸೆಂಬರ್ 17 ರಲ್ಲಿ ತಮ್ಮ ವರದಿಯನ್ನು ಸರಕಾರಕ್ಕೆ ಕಳುಹಿಸಿಕೊಟ್ಟರು, ಮಿ|| ಕಲಾಮಿಯವರು ಕಮಿಟಿಯಲ್ಲಿ ತಮಗೆ ಚರ್ಚೆಗೆ ಸಾಕಾದಷ್ಟು ಅವಕಾಶ ಕೊಡಲಿಲ್ಲವೆಂಬುದಾಗಿಯೂ ವರದಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಪರ್ಯಾಲೋಚನೆಯನ್ನು ಮಾಡಲು ಸೌಲಭ್ಯವನ್ನು ಕೊಡಲಿಲ್ಲವೆಂಬದಾಗಿಯೂ ಆಕ್ಷೇಪಣೆ ಮಾಡಿರುವರು ಕಮಿಟಿಯವರು ಇದಕ್ಕೆ ತಕ್ಕ ಸಮಾಧಾನವನ್ನು ಹೇಳಿರುವರು ಕಮಿಟಿಯ ವರದಿಯನ್ನು ಪರ್ಯಾಲೋಚನೆ ಮಾಡಲು ಮನೆಗೆ ತೆಗೆದುಕೊಂಡು ಹೋಗಕೂಡದೆಂದು ಕಮಿಟಿಯಲ್ಲೇ ತೀರ್ಮಾನವಾದುದಾಗಿಯೂ ತಿಳಿಸಲ್ಪಟ್ಟಿದೆ. ಇವರ ಟಿಪ್ಪಣಿಯನ್ನು ಪರ್ಯಾಲೋಚನೆ ಮಾಡುವುದಕ್ಕಾಗಿ ಜನವರಿ 22 ರಲ್ಲಿ ಕಮಿಟಿಯವರು ಸಭೆಸೇರಿದ್ದರು. ಅವತ್ತಿನ ದಿವಸ ಜಸ್ಟಿಸ್ ರಾಮರಾಯರು ಹಾಜರಿರಲಿಲ್ಲ. ಮಿ|| ಕಲಾಮಿಯವರು ತಮ್ಮ ಟಿಪ್ಪಣಿಯೇ ಚರ್ಚಿಸಲ್ಪಡಬೇಕಾಗಿದ್ದುದರಿಂದ ಆವತ್ತು ಸಭೆಗೆ ಬರಲಿಲ್ಲ. ಕಮಿಟಿಯ ಇತರ ಮೆಂಬರುಗಳು ಅದನ್ನು ಪರ್ಯಾಲೋಚಿಸಿ ಸರಕಾರಕ್ಕೆ ಕಳುಹಿಸಿದರು. ಮಿ|| ಕಲಾಮಿಯವರು ತಮ್ಮ ಟಿಪ್ಪಣಿಯಲ್ಲಿ ಕೊಟ್ಟಿರುವ ಅಭಿಪ್ರಾಯಗಳೂ ಸರ್ಕಾರದವರು ತಮ್ಮ ಆರ್ಡರಿನಲ್ಲಿ ಕೊಟ್ಟಿರುವ ಅಭಿಪ್ರಾಯಗಳೂ ಒಂದಕ್ಕೊಂದು ಬಹಳ ಹೊಂದಿಕೊಂಡಿವೆ. ಒಂದನ್ನು ಓದಿದರೆ ಇನ್ನೊಂದನ್ನು ಓದಬೇಕಾಗಿಲ್ಲ. ಮಿ|| ಕಲಾಮಿಯವರು ತಮ್ಮ ಟಿಪ್ಪಣಿಯನ್ನು ಜನವರಿ 15 ರಲ್ಲಿ ಕೊಟ್ಟರು. ಕಮಿಟಿಯವರು ಅದನ್ನು ಸರಕಾರಕ್ಕೆ ಜನವರಿ 22 ರಲ್ಲಿ ಕಳುಹಿಸಿದರು. ಸರ್ಕಾರಿ ಆರ್ಡರು ಜನವರಿ 26 ನೇ ತಾ|| ಸಂಧ್ಯಾಕಾಲ 6 ಘಂಟೆಗೆ ಪ್ರಿಂಟಾಗಿ ಹೊರಬಿತ್ತು ಅದಕ್ಕಿಂತಲೂ 3—4 ದಿನಗಳ ಹಿಂದೆಯೇ ಅದರ ಡ್ರಾಫ್ಟು ತಯಾರಾಗಿ ಸರಕಾರದಲ್ಲಿ ಪಾಸಾಗಿರಬೇಕು. ಎಂದರೆ ಸರ್ಕಾರದ ಆರ್ಡರು ಮುಂಚೆಯೋ ಮಿ|| ಕಲಾಮಿಯವರ ಟಿಪ್ಪಣಿಯು ಮುಂಚೆಯೋ ಹೇಳುವುದು ಕಷ್ಟ. ಸರ್ಕಾರಿ ಆರ್ಡರಿನಲ್ಲಿ ಈ ಭಿನ್ನಮತದ ಟಿಪ್ಪಣಿಗೆ ಹೆಚ್ಚು ಪ್ರಾಶಸ್ತ್ಯವು ಕೊಡಲ್ಪಟ್ಟಿದೆ. ಅವರ ಅಭಿಪ್ರಾಯಗಳಿಗೆ ಹೆಚ್ಚು ಮನ್ನಣೆಯು ದೊರೆತಿದೆ. ಒಂದು ರೀತಿಯಾಗಿ ಮಿ|| ಕಲಾಮಿಯವರ ಮನೋಭಾವನೆಯೇ ಸರಕಾರದ ಆರ್ಡರನ್ನು ಪ್ರಾಭಾವಿಸಿದಂತೆ ಕಾಣುತ್ತದೆ. ಎಷ್ಟೋ ಭಾಗಗಳಲ್ಲಿ ಆಲೋಚನೆಯ ಸರಣಿಯೂ ಒಂದೇ ಆಗಿರುವುದು. ಶಬ್ದಗಳೂ ಒಂದೇ ಆಗಿರುವವು.

ಮಿ|| ಕಲಾಮಿಯವರ ಟಿಪ್ಪಣಿಯನ್ನು ಕ್ರಮಕ್ರಮವಾಗಿ ವಿಮರ್ಶಿಸೋಣ. ವಿಚಾರಣೆ ಮಾಡಿರುವ 3—4 ವಿಷಯಗಳಲ್ಲಿ ಕಮಿಟಿಯು ವಿಚಾರಣಾಪಥಕ್ಕೆ ಹೊರಪಟ್ಟಿತೆಂದೂ ಅವುಗಳ ವಿಚಾರಣೆಯ ಕ್ರಮವನ್ನು ಕಮಿಟಿಯವರು ಮಾಡಿದ್ದು ಅತಿಕ್ರಮವೆಂದೂ ಮಿ|| ಕಲಾಮಿಯವರು ಅಭಿಪ್ರಾಯಪಡುತ್ತಾರೆ. ಅವುಗಳ್ಯಾವುವೆಂದರೆ (1) ಗುಂಡು ಹೊಡೆದವಿಷಯ (2) ಗಲಭೆಯ ಮುಖ್ಯಾಪರಾಧಿಗಳು ! ಮಿಲ್ಲರ್‌ಕಮಿಟಿ ರಿಪೋರ್ಟಿನ ಪುನರ್ವಿಮರ್ಶೆ (4) ರಾಜಕೀಯ ಸುಧಾರಣೆಗಳ ವಿಷಯ. ಇದಕ್ಕೆ ಮಿ|| ಕಲಾಮಿಯವರು ಕೊಟ್ಟಿರುವ ಕಾರಣಗಳು ವಿಚಿತ್ರವಾಗಿರುವುವು. ಮೊದಲಿನ ಎರಡೂ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ವಿಚಾರಕ್ಕೆ ಸಂಬಂಧಪಟ್ಟವೆಂದೂ ಅವುಗಳಲ್ಲಿ ಕಮಿಟಿಯವರು ತಲೆಹಾಕಬಾರದಾಗಿತ್ತೆಂದೂ ಮಿ|| ಕಲಾಮಿಯವರ ಅಭಿಪ್ರಾಯ. ರಾಜಕೀಯ ಸುಧಾರಣೆಗಳ ವಿಷಯವಾಗಿ ಸರ್ಕಾರದವರೇ ಒಂದು ಕಮಿಟಿಯನ್ನು ಏರ್ಪಾಡು ಮಾಡಿದ್ದರೆಂದೂ ಅದರ ಗೊಡವೆಗೆ ಇವರು ಹೋಗಬೇಕಾದ ಆವಶ್ಯಕತೆಯಿಲ್ಲವೆಂದೂ ಮಿ|| ಕಲಾಮಿಯವರು ತಿಳಿಸುತ್ತಾರೆ.

ಆ ವಿಷಯಗಳು ಕಮಿಟಿಯ ವಿಚಾರಣಾಪಥಕ್ಕೆ ಅತಿಕ್ರಮಿಸಿದವೆಂದು ಭಾವಿಸಿದ್ದರೆ ಮಿ|| ನಾಗಪ್ಪನವರು ಮಾಡಿದಂತೆ ಮಿ|| ಕಲಾಮಿಯವರೂ ಅವುಗಳ ಮೇಲೆ ತಮ್ಮ ಅಭಿಪ್ರಾಯವನ್ನು ಕೊಡದೆ ಇರಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅಭಿಪ್ರಾಯಗಳನ್ನು ಕೊಟ್ಟಿರುವರು. ತಾವು ಅಭಿಪ್ರಾಯಗಳನ್ನು ಕೊಟ್ಟು ಕಮಿಟಿಯ ಮೆಜಾರಿಟಿಯ ಮೆಂಬರುಗಳನ್ನು ಆಕ್ಷೇಪಿಸುವುದು ಉಚಿತವಲ್ಲ. ವಾಸ್ತವ್ಯವಾಗಿ ನೋಡುವಲ್ಲಿ ಅತಿಕ್ರಮಿಸಲ್ಪಟ್ಟ ವಿಷಯಗಳು ಎಂದು ಹೇಳಲ್ಪಡುವ ಸಂಗತಿಗಳ ಮೇಲೆ ಮಿ|| ಕಲಾಮಿಯವರ ಅಭಿಪ್ರಾಯಗಳು ಕಮಿಟಿಯ ಮೆಜಾರಿಟಿಯವರ ಅಭಿಪ್ರಾಯಕ್ಕಿಂತ ತೀರ ಭಿನ್ನವಾಗಿರುವವು. ಈ ಅಭಿಪ್ರಾಯಗಳು ಭಿನ್ನವಾಗಿರುವುದನ್ನೇ ನೋಡಿ ಮಿ|| ಕಲಾಮಿಯವರು ಒಂದು ತಿಂಗಳ ಆಲೋಚನೆ ಮಾಡಿ ಅವುಗಳು ಅತಿಕ್ರಮವಾದವುಗಳೆಂದು ಹೇಳಿದ ಹಾಗೆ ಕಾಣುತ್ತದೆ.

ಸರಕಾರದವರು ಈ ರೀತಿಯಾದ ಅಭಿಪ್ರಾಯವನ್ನು ಕೊಟ್ಟಿಲ್ಲ. ಆದರೆ ಮಿ|| ಕಲಾಮಿಯವರು, ಅತಿಕ್ರಮವಾದವುಗಳು ಎಂದು ಹೇಳಿದ ಅಭಿಪ್ರಾಯವನ್ನು ವಿರೋಧಿಸಿಲ್ಲ ಎಂದ ಮೇಲೆ ಒಂದು ರೀತಿಯಾದ ಮೌನ ಸಮ್ಮತಿಯನ್ನು ತೋರಿಸಿರುವಂತೆ ಕಾಣುತ್ತದೆ. ಮಿ|| ಕಲಾಮಿಯವರು ತಮ್ಮ ಭಿನ್ನಮತದ ಟಿಪ್ಪಣಿಯನ್ನೂ, ಮೆಜಾರಟಿಯ ವರದಿಯ ಜೊತೆಯಲ್ಲಿ ಕಳುಹಿಸದೆ, ಒಂದು ತಿಂಗಳ ಅನಂತರ ಕಳುಹಿಸಿರುವುದನ್ನು ನೋಡಿದರೆ ಅನುಮಾನಕ್ಕೆ ಅವಕಾಶವಾಗುತ್ತದೆ.

ಇವರ ಟಿಪ್ಪಣಿಯನ್ನು ವಿಮರ್ಶಿಸುವುದೆಂದರೆ ಸರಕಾರದ ಆರ್ಡರನ್ನು ವಿಮರ್ಶಿಸಿದ ಹಾಗೆಯೇ ಸರಿ. ಮಹಮ್ಮದೀಯರ ವಿಷಯ ಬಂದಾಗ ಮಿ|| ಕಲಾಮಿಯವರು ತಮ್ಮ ಮತದ ಸಹೋದರರನ್ನು ಪರಿಪೋಷಿಸಿದ್ದಾರೆ. ಜುಲೈ 30 ನೇ ತಾ|| ರಾತ್ರೆ ಹಿಂದೂಗಳೇ ಮೊದಲು ಕೆಣಕಿದರೆಂದೂ ಮಹಮ್ಮದೀಯರು ಪೂರ್ವಸಿದ್ಧತೆ ಮಾಡಿಕೊಂಡಿರಲಿಲ್ಲವೆಂದೂ [illegible] ಮಹಮ್ಮದೀಯರೂ ಹಿಂದೂಗಳೂ ಅನ್ಯೋನ್ಯವಾಗಿರುವರೆಂದೂ ಹೇಳಿರುವರು. ದಿವಾನರು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಿಗೆ ಬರೆದ ಡಿ. ಓ. ಧ[illegible]ವಾಗಿ ದಿವಾನರು ಮಹಮ್ಮದೀಯ ಜಾತಿಪಕ್ಷ[illegible] ಇನ್ನು ಯಾರೇ ಆಗಿದ್ದರೂ ಈ ರೀತಿಯಾಗಿಯೇ ಡಿ. ಓ. ವನ್ನು ಬರೆಯುತ್ತಿದ್ದರೆಂದೂ, ಇದು [illegible] ಮತದ ಅಭಿಮಾನದಿಂದ ದಿವಾನರು ಡಿ. ಓ. ವನ್ನು ಬರೆದರೆಂದೂ ಹೇಳುವುದು ಉಚಿತವಲ್ಲವೆಂದು [illegible] ಯವರು ಅಭಿಪ್ರಾಯಪಡುತ್ತಾರೆ. ಆದರೆ ಈ [illegible] ವೇ ಅಷ್ಟು ಪ್ರಾಧಾನ್ಯವಲ್ಲದಿದ್ದರೂ ಅವನ್ನು [illegible] ಲು ನಡೆಯುತ್ತಿದ್ದ ಪ್ರಯತ್ನಗಳು ನಿರ್ಧ್ವಾರವಾದವೆಂ[illegible]ಡು ನಮ್ಮ ಅಭಿಪ್ರಾಯ.

ಸರಕಾರದವರು ಹೊರಡಿಸಿದ ಪ್ರಕಟನೆಯಲ್ಲೀ, ಆಗಸ್ಟ್ 3 ರಲ್ಲೂ, 20 ರಲ್ಲೂ ದಿವಾನರ ಅಧ್ಯಕ್ಷತೆಯಲ್ಲಿ ನಡೆದ ಶಾಂತಿ ಸಭೆಗಳಲ್ಲಾಗಲೀ ಈ ಡಿ. ಓ. ವಿನ ವಿಷಯವೇ ಬರಲಿಲ್ಲ.

ಗುಂಡುಹೊಡೆದ ವಿಷಯವಾಗಿ, ಹೊಡೆದದ್ದು ತಪ್ಪಲ್ಲವೆಂದೂ, [illegible] ಮಿ|| ಕಲಾಮಿಯವರ ಅಭಿಪ್ರಾಯ. ಅಬ್ಬಾಸ್ ಖಾನರ ಮನೆ[illegible]ದ ಗುಂಡೇ ಬರಲಿಲ್ಲವೆಂಬುದಕ್ಕೆ ಮ|| ಟಿ. ಟಿ. ಶ[illegible] ಸರ್ವಾರ್ಥಭಟ್ಟ ಮೊದಲಾದವರ ಸಾಕ್ಷಿಯನ್ನು ಕೊಡುತ್ತಾರೆ. ಮಿಲಿಟೆರಿ ಪೋಲೀಸ್ ಮ್ಯಾಜಿಸ್ಟ್ರೇಟರ ಕಾರ್ಯದಕ್ಷತೆಯ ವಿಷಯವಾಗಿ ಇವರ ಅಭಿಪ್ರಾಯವು ಸರಕಾರದೊಂದಿಗೆ ಸಹಮತವಾಗಿರುವುದು. ರಾ[illegible] ಕಮಿಟಿಯ ಆರ್ಡರಿನ ವಿಷಯವಾಗಿ ರೌಂಡ್ ಟೇಬಲ್ ಕಾನ್ಫರೆನ್ಸು ಅವಶ್ಯವಿಲ್ಲವೆಂದೂ ಬ್ರಾಹ್ಮಣೇತರರಿಗೇ ಇನ್ನೂ ಹೆಚ್ಚು ಪ್ರೋತ್ಸಾಹವು ದೊರೆಯಬೇಕೆಂದೂ ಇವರನ್ನುತ್ತಾರೆ. ಪಿತೂರಿಯ ವಿಷಯವಾಗಿ ಸರಕಾರದವರು ಇನ್ನೂ ತನಿಖೆಗಳನ್ನು ನಡೆಸಿ ಪಿತೂರಿಗಾರರನ್ನೆಲ್ಲಾ ಹತೋಟಿಗೆ ತರಬೇಕೆಂದು ಸಲಹೆ ಕೊಡುತ್ತಾರೆ. ಕಮಿಟಿಯ ಮೆಜಾರಿಟಿಯವರು ವರ್ತಮಾನಪತ್ರಿಕೆಗಳಿಗೆ ಸ್ವಾತಂತ್ರ್ಯಬೇಕೆಂದು ಹೇಳಿದರೆ ಮಿ|| ಕಲಾಮಿಯವರು ಅವುಗಳನ್ನು ಇನ್ನೂ ಬಾಧಿಸಬೇಕೆಂದು ಹೇಳುತ್ತಾರೆ. ರಾಜಕೀಯ ಸುಧಾರಣೆಗಳಿಗೆ ಇವರು ತೀರಾ ವಿರೋಧಿಗಳು.

ಅಂತೂ ಒಟ್ಟಿನ ಮೇಲೆ, ಮಿ|| ಕಲಾಮಿಯವರು ತಮ್ಮ ಮಹಮ್ಮದೀಯರ ಮೇಲೆ ಆದಷ್ಟು ತಪ್ಪು ಬಾರದಂತೆ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇತರ ವಿಷಯಗಳಲ್ಲೆಲ್ಲಾ ಮೆಜಾರಿಟಿಯವರು ಪೂರ್ವ ಎಂದರೆ ಇವರು ಪಶ್ಚಿಮ ಎಂದಿದ್ದಾರೆ. ಇಷ್ಟೇ ಮಿ|| ಕಲಾಮಿಯವರ ಭಿನ್ನಮತದ ರಹಸ್ಯ.

ಸರ್. ಎಂ. ವಿಶ್ವೇಶ್ವರಯ್ಯನವರು

ಜನವರಿ 31 ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಬೆಂಗಳೂರಿನಿಂದ ಬೊಂಬಾಯಿಗೆ ಪ್ರಯಾಣಮಾಡಿದರೆಂದೂ, ಪ್ರಯಾಣದ ಉದ್ದೇಶವು ಸಕ್ಕರ್ ಅಣೆಕಟ್ಟಿನ ವಿಷಯವಾಗಿ ಇರಬಹುದೆಂದೂ ತಿಳಿದುಬಂದಿದೆ.

ಅಹಮದಾಬಾದ್ ವಿದ್ಯಾರ್ಥಿಗಳ ಸತ್ಯಾಗ್ರಹ

ಅಹಮದಾಬಾದಾ ವಿದ್ಯಾರ್ಥಿಗಳ ಸತ್ಯಾಗ್ರಹವು ಜಾರಿಯಾಗುತ್ತಲಿದೆ. ವಿದ್ಯಾಭ್ಯಾಸದ ಡೈರೆಕ್ಟರ[illegible] ಮಂತ್ರಿಗಳೂ ಅಹಮದಾಬಾದಿಗೆ ಬಂದ[illegible] ಮಿ|| ಗಾಂಧಿಯವರು ವಿದ್ಯಾರ್ಥಿಗಳಿಗೆ ಧೈರ್ಯವನ್ನು ಹೇಳಿ ಅವರನ್ನು ಹುರಿದುಂಬಿಸುತ್ತಲಿದ್ದಾರೆ. [illegible]ರು ವಿದ್ಯಾರ್ಥಿಗಳೂ ಜನವರಿ [illegible] ತಾ|| [illegible] ಸಭೆ ಸೇರಿ ಅಹಮದಾಬಾದ್ ವಿದ್ಯಾರ್ಥಿಗಳಿಗೆ [illegible] ಸಹಾನುಭೂತಿಯನ್ನು ತೋರಿಸಿದರು.

ತಾಯಿನಾಡು.
4—2—1929

ವರ್ತಮಾನ ಸಂಗ್ರಹ

ಗೋವಾದಲ್ಲಿ ಗಲಭೆ

ಗೋವಾದಲ್ಲಿ ಗೌ|| ಕಾಲೇಜಿನ ನಾಲ್ಕು ವಿದ್ಯಾರ್ಥಿಗಳು ಲಾಲಾ ಲಜಪತರಾಯರವರ ಸ್ಮಾರಕೋತ್ಸವದಲ್ಲಿ ಸೇರಿದುದಕ್ಕಾಗಿ ಬಹಿಷ್ಕಾರ ಮಾಡಲ್ಪಟ್ಟರು. ಅವರ ಪೈಕಿ ಇಬ್ಬರು ಬ್ರಿಟಿಷ್ ಇಂಡಿಯಾದಲ್ಲಿ ವ್ಯಾಸಂಗಕ್ಕೆ ಹೊರಟು ಹೋದರು. ಕಾಲೇಜ್ ಅಧಿಕಾರಿಗಳ ಮೇಲೆ ವಿಶೇಷ ಆಗ್ರಹವು ಹೊರಸಡುತ್ತಿದೆ.

ನೂತನ ಶ್ರೀರಾಮ ಮಂದಿರದ ಪ್ರವೇಶ ಮಹೋತ್ಸವ.

ಇದೇ ತಿಂಗಳು 21ನೇ ತಾ|| ಗುರುವಾರ ಪ್ರಾತಃಕಾಲ 10 ಘಂಟೆಯ ಮೇಲೆ 10¾ ಘಂಟೆಯೊಳಗೆ ಮೈಸೂರು ದೇವರಾಜಮೊಹಲ್ಲಾ ವಿವಾನ ಅಗ್ರಹಾರದ ಬಳಿ ಮಹಾಜನರ ಉದಾರವಾದ ಸಹಾಯದಿಂದ ಕಟ್ಟಿಸಿರುವ ಮಂದಿರ ಶ್ರೀರಾಮ. ಮಂದಿರದ ಸಮಾರಂಭವು ನಡೆಯುವುದೆಂದೂ ಮಹಾಜನಗಳು ದಯಮಾಡಿಸಬೇಕೆಂದೂ ಗಾನವಿಶಾರದ ಬಿಡಾರದ ಕೃಷ್ಣಪ್ಪನವರ ಆಹ್ವಾನವನ್ನು ಕಳುಹಿಸಿರುತ್ತಾರೆ.

ಮ್ಯಾಜಿಸ್ಟ್ರೇಟರ ಮೇಲಿನ ದಾಂಧಲೆ

ಕಳೆದತಿಂಗಳು 29ನೇ ತಾ|| ಅಹಮದಾಬಾದ್ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನ್ಯಾಯಾಧೀಶರು ಒಂದು ಕಳುವಿನ ಮೊಕದ್ದಮೆಯಲ್ಲಿ 4 ಜನ ಮುಸಲ್ಮಾನರಿಗೆ ಎಂಡರಡುವರ್ಷ ಕಠಿಣಶಿಕ್ಷೆಯನ್ನು ವಿಧಿಸಿದರು. ತೀರ್ಪನ್ನು ಕೊಟ್ಟ ತತ್‍ಕ್ಷಣವೇ ಒಬ್ಬ ಅಪರಾಧಿಯು ಮ್ಯಾಜಿಸ್ಟ್ರೇಟರ ಮೇಲೆ ರೋಷಾವೇಶದಿಂದ ಜೋಡನ್ನು ಎಸೆದನು. ಹೆಚ್ಚು ಪೋಲೀಸ್ ಸಿಬ್ಬಂದಿಯ ಬಲದಿಂದ ಅವನು ಹೊರಗೆ ಹೊರಡಿಸಲ್ಪಡಬೇಕಾಯಿತು.

ವೃತ್ತಪತ್ರಿಕೆಗಳ ಬಹಿಷ್ಕಾರ.

"ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯಿಂದ "ಕಾಂಗ್ರೆಸ್" ಎಂಬ ಲೇಖನವನ್ನು ಭಾಷಾಂತರಿಸಿ ಪ್ರಕಟಿಸಿದ್ದ ಗೋವಾ ಪಟ್ಟಣದ ವರ್ತಮಾನ ಪತ್ರಿಕೆಯನ್ನು ಪೋರ್ಚುಗೀಸ್ ಸರ್ಕಾರವು ದಬ್ಬಾಳಿಕೆಯಿಂದ ನಿಲ್ಲಿಸಿರುತ್ತದೆ. ಅದರಲ್ಲೂ ಇಂಡಿಯಾ ದೇಶದ ಸ್ವರಾಜ್ಯ ಚಳುವಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಪುಸ್ತಕಗಳಾಗಲೀ ವೃತ್ತಪತ್ರಿಕೆಗಳಾಗಲಿ ಪ್ರಕಟವಾಗಕೂಡದಂತೆ.

ಸೈಮನ್ ಬಹಿಷ್ಕಾರ ಸಭೆ.

ಜನವರಿ 29ನೇ ತಾ|| ನ ದಿನ ಸೈಮನ್ ಸಮಿತಿಯವರು ರಂಗೂನಿಗೆ ಬಂದರು. ಫೆಬ್ರವರಿ 9ನೇ ತಾ|| ನ ವರೆಗೆ ಸರ್ಕಾರದ ಅಪ್ಪಣೆಯಿಲ್ಲದೆ ಸಭೆಗಳನ್ನಾಗಲಿ, ಮೆರವಣಿಗೆಗಳನ್ನಾಗಲಿ ನಡಿಸಕೂಡದೆಂದು ಆರ್ಡರು ಮಾಡಿದ್ದರೂ, ಚಳುವಳಿಗಾರರು ಬೀದಿಗಳಲ್ಲಿ ಕಪ್ಪು ಬಾವುಟಗಳ ಮೆರವಣಿಗೆಯನ್ನೂ ಪ್ರಚಂಡ ಸಭೆಯನ್ನು ನಡಿಸಿ ಬಹಿಷ್ಕಾರ ಸೂಚಕ ಭಾಷಣಗಳನ್ನು ಮಾಡಿದರು.

ಮೆಡಿಕಲ್ ಆಫೀಸರರ ವರ್ಗಗಳು

ಸ್ಪೆಷಲ್ ಡ್ಯೂಟಿ ಮೇಲಿರುವ ಸರ್ಜನ್ ಮಿ|| ಡಿ. ಎಸ್. ಪುಟ್ಟಣ್ಣನವರನ್ನು ವಿಕ್ಟೋರಿಯಾ ಆಸ್ಪತ್ರೆಯ ಛಾರ್ಜಿಗೆ ವರ್ಗಮಾಡಿದೆ.

ಬಾಹ್ಮೋಲಿಯ ಮಹಿಳಾ [illegible]

[illegible] ನ ಕೈಕರು [illegible] ದ ದೂರಿತ [illegible] ಬಟಾಕರಿಯೆ [illegible] ರಂಕ ಠಾಣಾದಲ್ಲಿ [illegible] ಈ ಮಂತ್ರ ಸಿದ್ಧ [illegible]

[illegible]

ರಾಜಧಾನಿಯ ಸ್ಟುಡೆಂಟ್ಸ್ ಹಾಸ್ಟಿನವರು [illegible] ರುವ ಲಕ್ಷ್ಮೀ ಛಾಯಾಚಿತ್ರದಿಂದೊಡಗೂಡಿರುವ 1929ನೇ ಇಸವಿಯ ಅಂದವಾದ ಕ್ಯಾಲೆಂಡರನ್ನು [illegible] ತ್ತೇವೆ.

ಸಿಲೋನ್ ಮುಷ್ಕರ

ಸಿಲೋನಿನಲ್ಲಿ ಅಧಿಕಾರಿಗಳು ಕೂಲಿಯವರ ಅಭಿಪ್ರಾಯದಂತೆ ಸಂಬಳವನ್ನು ಹೆಚ್ಚಿಸದಿದ್ದ ಸಬಬು ಟ್ರಾಮ್‍ಗಾಡಿಯ ಕೆಲಸಗಾರರೆಲ್ಲರೂ ಮುಷ್ಕರ ಹಿಡಿದಿರುತ್ತಾರೆ.

ಮಿ|| ಜಿ. ಪಿ. ಕರ್ನೇಯವರು

ಫೆಬ್ರವರಿ ತಾ. 1ರಿಂದ ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‍ಮೆಂಟಿನ ಆಫೀಸ್ ಛಾರ್ಜನ್ನು ವಹಿಸಿತಕ್ಕದ್ದು.

ವಿಕ್ಟೋರಿಯಾ ಆಸ್ಪತ್ರೆ.

ವಿಕ್ಟೋರಿಯಾ ಆಸ್ಪತ್ರೆಯ ಛಾರ್ಜನ್ನು ವಹಿಸಿರುವ ಸರ್ಜನ್ ಮಿ|| ಎಸ್. ಸುಬ್ಬರಾಯರನ್ನು ಫೆಬ್ರವರಿ ತಾ. 1 ರಿಂದ ಸೀನಿಯರ್ ಸರ್ಜನ್‍ರಾಗಿಯೂ ಒಂದೇ ಬಾರಿ ಇನ್ಸ್‌ಪೆಕ್ಟರ್-ಜನರಲ್‍ರವರಾಗಿಯೂ ನೇಮಕ ಮಾಡಿದೆ.

ಕಣ್ಣಾಸ್ಪತ್ರೆ

ಬೆಂಗಳೂರು ಕಣ್ಣಾಸ್ಪತ್ರೆಯ ಛಾರ್ಜನ್ನು ವಹಿಸಿರುವ ಸರ್ಜನ್ ಮಿ|| ಬಿ. ಕೆ. ನಾರಾಯಣರಾಯರು ತಮ್ಮ ಕೆಲಸಗಳೊಂದಿಗೆ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್‍ರಾಗಿಯೂ ಹಂಗಾಮಿಯಾಗಿ ನೇಮಿಸಿದೆ.

ದಿವಾನರು.

ಡೆಲ್ಲಿಯಲ್ಲಿ ಸೇರಿಯುವ ನರೇಂದ್ರ ಮಂಡಲದ ಸಮಾವೇಶಕ್ಕೆ ದಿವಾನರು ಈ ತಾ|| 5 ರಲ್ಲಿ ಶ್ರೀ ಮನ್ಮಹಾರಾಜರವರ ಪ್ರತಿನಿಧಿಯಾಗಿ ದಯಮಾಡಿಸುವವರಾಗಿರುವರು.

ನೂತನ ಭಂಗಾರದ ಅಂಬಾರಿ,

ಶ್ರೀ ಮನ್ಮಹಾರಾಜರವರು ಆಶ್ವಯುಜ ಮಾಸದಲ್ಲಿ ನವರಾತ್ರಿಯುತ್ಸವದ ಕಡೆಯದಿವಸ ಆನೆಯ ಮೇಲಿನ ಭಂಗಾರದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿ ಹೊರಡುತ್ತಾರಷ್ಟೆ. ಈ ಭಂಗಾರದ ಅಂಬಾರಿಯು ಪುರಾತನವಾದುದರಿಂದ ಅದರಬದಲು 10 ಸಾವಿರ ತೊಲ ಭಂಗಾರದಲ್ಲಿ ಬಂದ ಅಂಬಾರಿಯನ್ನು ನೂತನ ರೀತಿಯಲ್ಲಿ ಮಾಡಲು ಶ್ರೀಮನ್ಮಹಾರಾಜರ ಅಪ್ಪಣೆಯಾಗಿ ಅದಕ್ಕೆ ಪ್ರಯತ್ನವು ನಡೆಯುತ್ತಿರುವುದಾಗಿ ಕೇಳುತ್ತೇವೆ.

ರಜಾ

[illegible] ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ರವರಿಗೆ ಒಂದು ತಿಂಗಳು [illegible] ರಜವನ್ನು ಇನ್ನೂ ಒಂದೂವರೆ ತಿಂಗಳು [illegible] ಮಾಡಿದೆ. ಮಿ|| ಕೆ. ಆರ್. ವೆಂಕಟರಾಯರು ಈ [illegible] ಡಿಸ್ಟ್ರಿಕ್ಟ್ ಛಾರ್ಜನ್ನು ವಹಿಸತಕ್ಕದ್ದು.

[illegible]

T A I N A D U.

Daily Edition.

The Leading Nationalist Daily of Mysore.

Printed and published by P. R. Ramaiya,
at Sri Rama Press, D Subbiah Road Mysore.

Regd No. M 2322 ‖ ವಂದೇಮಾತರಂ ‖ [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { [illegible] ಪೋಸ್ಟೇಜ್ [illegible]

ಸಂಪುಟ ೧] ಮಂಗಳವಾರ ೫ ಫೆಬ್ರವರಿ ೧೯೨೮ [ಸಂಚಿಕೆ ೧೦೩

TAI NADU
5—2—1929

ಧೈರ್ಯಗುಂದಬೇಡಿ

ಬೆಂಗಳೂರು ಗಲಭೆಗಳ ವಿಷಯದಲ್ಲಿ ಎಷ್ಟು ಬರೆಯು [illegible] ಬರೆಯಬೇಕಾದುದು ಇನ್ನೂ ಎಷ್ಟೊ [illegible]. ನಮ್ಮ ಸಂಸ್ಥಾನದ ಒಳಗೂ ಹೊರಗೂ ಇರುವ ನಿಷ್ಪಕ್ಷಪಾತವಾದ ಪತ್ರಿಕೆಗಳೆಲ್ಲಾ ಸರ್ಕಾರದ, ಪೋಲೀಸಿನವರ ಮತ್ತು ಮ್ಯಾಜಿಸ್ಟ್ರೇಟರುಗಳ ಕರ್ತವ್ಯ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವರು. ಆದರೆ ನಮ್ಮ ಮೈಸೂರಿನಲ್ಲಿರುವ ಕೌಮುವಾರು ಪತ್ರಿಕೆಗಳು ಮಾತ್ರ ನಿಜಾಂಶವನ್ನು ತಿಳಿದೊ, ತಿಳಿಯದೆಯೋ ಸರಕಾರದ ತಪ್ಪುಗಳನ್ನು [illegible] ವವು. ಈ ಪತ್ರಿಕೆಗಳು ಎಷ್ಟೇ ಪ್ರಚಾರ [illegible], ಪ್ರಜೆಗಳಿಗೆ ಸುಳ್ಳು ಸುಳ್ಳಾಗಿಯೇ [illegible] ಕಾಣುವುದು. ಈ ಮಧ್ಯೆ ಪಿತೂರಿಯ ಕಟ್ಟು ಕಥೆಯನ್ನು ಮುಂದೆ ತಂದು ಜನಗಳ ಮನಸ್ಸಿನಲ್ಲಿ ಬುದ್ಧಿ ಭೇದವ [illegible] ಪಿತೂರಿಯು [illegible] ದು. ನಮ್ಮ ಮೈಸೂರಿನಲ್ಲಿಯೂ [illegible] ಹೊರಗೆ ಹಾಕುವುದಕ್ಕೆ ಪಿತೂರಿಯು ನಡೆಯುತ್ತಲೇ ಇರುವುದು. ಮುಂದೆಯೂ ಪಿತೂರಿಯೂ ನಡೆಯೇ ನಡೆಯುವುದು. ಈ ಪಿತೂರಿಯ [illegible] [illegible] ಗುವವು.

ಈ ಪಿತೂರಿಯ [illegible]. ಬೆಂಗಳೂರ ಗಲಭೆಯ ವಿಷಯವಾಗಿ ನ್ಯಾಯಸ್ಥಾಪನೆಯಾಗಲಿಲ್ಲವೆಂದು ಪ್ರಜೆಗಳೆಲ್ಲರೂ ಮರುಕ ಪಡುತ್ತಿರುವರು. ಅನೇಕರಿಗೆ [illegible]. ಈ ಪರಿಸ್ಥಿತಿಯಲ್ಲಿ [illegible] ಅನೇಕರಿಗೆ [illegible] ದು. ನಮ್ಮ ವಿಜ್ಞಾಪನೆ ಏನೇ ದರೆ ಪ್ರಜೆಗಳು ಧೈರ್ಯಗೆಡಬಾರದು. ನ್ಯಾಯದಲ್ಲಿ ದೃಢ [illegible] ಅನ್ಯಾಯವು ಮೇಲೆ [illegible]. ಅದುವರೆಗೂ ಪ್ರಜೆಗಳು ಎಲ್ಲಾ ಶಾಂತ ಮತ್ತು ನ್ಯಾಯ ಸಮ್ಮತವಾದ ಕ್ರಮಗಳಿಂದ ನ್ಯಾಯಕ್ಕೋಸ್ಕರವಾಗಿ ಚಳುವಳಿಯನ್ನು ನಡೆಸಬೇಕು. ಈ ಸಮಯದಲ್ಲಿ ಧೈರ್ಯಗುಂದಿ ಸುಮ್ಮನೆ ಕುಳಿತರೆ ಏನೂ ಆಗುವುದಿಲ್ಲ. ಬಲಹೀನರಿಗೆ ಯಾವುದೂ ಕೈಗೂಡುವುದಿಲ್ಲ. "ನಾಯಮಾತ್ಮಾ ಬಲಹೀನೇನ ಲಭ್ಯಃ" ವಿಪತ್ತಿನಲ್ಲಿ ಧೈರ್ಯವನ್ನು ಅವಲಂಬಿಸುವುದೇ ಪುರುಷ ಲಕ್ಷಣ. ಬೆಂಗಳೂರು ಮಹಾಜನಗಳು [illegible] ತೋರಿರುವರು. ಸಭೆ [illegible] ದೆ ಪ್ರಜೆಗಳಿಗೆ ತಿಳಿಸಿ ನ್ಯಾಯಕ್ಕೋಸ್ಕರವಾಗಿ ಚಳುವಳಿಯನ್ನು ನಡೆಸಲು ಹೊರಟಿರುವುದು. ಇವರ ಉದಾಹರಣೆಯನ್ನು ಮೈಸೂರು ನಗರದವರೂ, ಮತ್ತೂ ಇತರರೂ ಅನುಸರಿಸುವರೆಂದು ನಂಬುತ್ತೇವೆ.

ಮುಖಂಡರನ್ನು ಬಿಡುಗಡೆ ಮಾಡಿದ ವಿಷಯವಾಗಿ ವಾಗ್ವಾದ

ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಮೇಲೆ ಸರಕಾರದವರು ಮಾಡಿರುವ ಆರ್ಡರಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಸದಾಶಿವರಾಯರ ಮೇಲೆ ಅವರು ಖಾಸಗೀ ದೊಡ್ಡ ಮನುಷ್ಯರೊಬ್ಬರು ಬಾಯಿ ಮಾತಿನಲ್ಲಿ ಹೇಳಿದ ಗವರ್ನಮೆಂಟ್ ಆರ್ಡರಿನ ಮೇಲೆ ಮುಖಂಡರನ್ನು ಪೋಲೀಸ್ ಮೊದಲಾದ ವಿಚಾರಣೆಗಳಿಲ್ಲದೆ ಬಿಟ್ಟದ್ದು ತಪ್ಪೆಂದು ಆಪಾದನೆಯು ಮಾಡಲ್ಪಟ್ಟಿದೆ. ಬಿಡುಗಡೆ ಮಾಡಲು ಆರ್ಡರು ಕೊಡಲಿಲ್ಲವೆಂದು ಸರಕಾರದವರು ಹೇಳಲಿಲ್ಲ. ಖಾಸಗೀ ದೊಡ್ಡ ಮನುಷ್ಯರ ಕೈಲಿ ಆರ್ಡರನ್ನು ಹೇಳಿ ಕಳುಹಿಸಿದರೆಂಬುದನ್ನು ಅಲ್ಲಗಳೆದಿರುತ್ತಾರೆ. ಮತ್ತು ಗವರ್ನಮೆಂಟ್ ಆರ್ಡರನ್ನು ಬಾಯಿ ಮಾತಿನಲ್ಲಿ ತಂದು ಹೇಳಿದ ಖಾಸಗೀ ಮನುಷ್ಯರು ಎಷ್ಟೇ ದೊಡ್ಡವರಾದಾಗ್ಯೂ ಆದರಂತೆ ನಡೆಯಕೂಡದಾಗಿತ್ತೆಂದು ಸರಕಾರದವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ಆ ಖಾಸಗೀ ದೊಡ್ಡ ಮನುಷ್ಯರ ಮೇಲೆಯೂ ಆಪಾದನೆಗಳಿವೆ. ಆ ದೊಡ್ಡ ಮನುಷ್ಯರು ಇನ್ನು ಯಾರೂ ಅಲ್ಲ. ಮ|| ಬಿ. ಕೆ. ಗರುಡಾಚಾರ್ಯರು. ಇವರು ತಮ್ಮ ಮೇಲೆ ಬಂದಿರುವ ಆಪಾದನೆಯನ್ನು ಕಳೆದುಕೊಳ್ಳುವುದಕೋಸ್ಕರ ನಡೆದ ಸಂಗತಿಯನ್ನೂ ಈ ವಿಷಯವಾಗಿ ತಾವೂ ಮಿ|| ಭಾಷ್ಯಂರವರೂ ಮ|| ಸಿದ್ಧರಾಮಪ್ಪನವರೂ ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಕೊಟ್ಟ ಹೇಳಿಕೆಯನ್ನು ತಿಳಿಸಿರುವರು.

ಸರಕಾರದವರು ಮುಖಂಡರನ್ನು ತಮ್ಮ ಸ್ವಂತ ಮುಚ್ಚಳಿಕೆಯ ಮೇಲೆ ಬಿಡಬೇಕೆಂದು ತೀರ್ಮಾನ ಮಾಡಿರುವರೆಂಬುದನ್ನು ದಿವಾನರ ಬಾಯಿಯಿಂದ ತಿಳಿದು ತಾವೂ ಇತರರೂ ಸಿಟಿ ಮ್ಯಾಜಿಸ್ಟ್ರೇಟರ ಆಫೀಸಿಗೆ ಹೋಗಿ ಅವರನ್ನು ಕರೆದುಕೊಂಡು ಸೆಂಟ್ರಲ್ ಜೈಲಿಗೆ ಹೋದರು. ಅಷ್ಟರಲ್ಲೇ ಮಿ|| ಭಾಷ್ಯಂ ಮೊದಲಾದವರು ಮುಖಂಡರನ್ನು ಪ್ರೇರೇಪಿಸಿ ಅವರ ಕೈಯಿಂದ ಮುಚ್ಚಳಿಕೆಯನ್ನು ಬರೆಯಿಸಿ ತಯಾರು ಮಾಡಿಟ್ಟುಕೊಂಡಿದ್ದ ಹಾಗೂ ಆದರೂ ಜೈಲ್ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟರು ಮುಖಂಡರನ್ನು ಬಿಡಲು ಹಾಜರಿದ್ದ ಹಾಗೂ ಮ|| ಗರುಡಾಚಾರ್ಯರು ಬಿಡುಗಡೆಗೆ ಗವರ್ನಮೆಂಟಿನವರೂ ಡಿ|| ಮ್ಯಾ|| ರವರೂ ಒಪ್ಪಿರುವರೆಂದು ಹೇಳಿದ ಮೇಲೆ ಅವರ ರುಜುವನ್ನು ಹಾಕಿಸಿಕೊಂಡು ಸಿಟಿ ಮ್ಯಾಜಿಸ್ಟ್ರೇಟರು ಮುಖಂಡರನ್ನು ಬಿಡುಗಡೆ ಮಾಡಿದಂತೆಯೂ ಇಷ್ಟರಲ್ಲೇ ಜೈಲ್ ಸೂಪರಿಂಟೆಂಡೆಂಟರವರಿಗೆ ಮುಖಂಡರನ್ನು ಬಿಡುಗಡೆ ಮಾಡಬಹುದೆಂದೂ ಚೀಫ್ ಸೆಕ್ರೆಟರಿಯವರಿಂದ ಫೋನ್ ಬಂದದಾಗಿಯೂ ಅನಂತರ ಬಿಡುಗಡೆಯಾದ ಮೇಲೆ ಗರುಡಾಚಾರ್ಯರು ದಿವಾನರಿಗೂ ಇತರರಿಗೂ ಈ ಸಮಾಚಾರವನ್ನು ತಿಳಿಸಿದ ಹಾಗೂ ಆಗ ಮ|| ಸಿ.ಎಸ್. ನರಸಿಂಗರಾಯರೂ ಗರುಡಾಚಾರ್ಯರ ಜೊತೆಯಲ್ಲಿದ್ದರೆಂದೂ ಆಗ ದಿವಾನರಾಗಲೀ ಕೌನ್ಸಿಲರುಗಳಾಗಲೀ ಚೀಫ್ ಸೆಕ್ರೆಟರಿಯವರಾಗಲೀ ಆಕ್ಷೇಪಣೆ ತೆಗೆದ ಕೊಳ್ಳಲಿಲ್ಲವೆಂದೂ ಅದಕ್ಕೆ ಬದಲಾಗಿ ದಿವಾನರು ತೃಪ್ತಿಯನ್ನು ಪ್ರದರ್ಶಿಸಿದರೆಂದೂ—ಮ|| ಗರುಡಾಚಾರ್ಯರು [illegible] ಯತ್ತಾರೆ ಸಿಟಿ ಮ್ಯಾಜಿಸ್ಟ್ರೇಟರೂ ಕೂಡ ಮುಖಂಡರನ್ನು ಬಿಟ್ಟ ಮೇಲೆ ದಿವಾನರನ್ನು ನೋಡಿದರೆಂದೂ ತಿಳಿಸುತ್ತಾರೆ.

ಈ ವಿಷಯವಾಗಿ ನಾವು ಹೆಚ್ಚು [illegible] ಇಲ್ಲ. [illegible] ಗಲಾಟೆಯು ನಡೆದ [illegible] ಸರಕಾರದವರೂ ಅನೇಕ ಕರ್ತವ್ಯ ಲೋಪದೋಷ[illegible]ನ್ನು ನಡೆಯಿಸಿದರು. ತಮ್ಮ ತಪ್ಪುಗಳನ್ನು [illegible] ದಾವಾಗ ಒಪ್ಪಿಕೊಳ್ಳದೆ ಇತರರ ಲೋಪದೋಷಗಳನ್ನೇ ಮಹತ್ತರವಾಗಿ ಪರಿಗಣಿಸುತ್ತಿರುವುದು ಅನುಚಿತವೆಂದು ಹೇಳದೇ ವಿಧಿಯಿಲ್ಲ.

ವಿವಿಧ ವಿಷಯಗಳು

ಇದರಿಂದೇನು ಹೊರಪಟ್ಟಿತು?

ಶ್ರೀಮನ್ಮಹಾರಾಜರವರ ಜನ್ಮ ಪತ್ರಿಕೆಗೆ [illegible] ಡಿಸ್‌ಮಿಸ್ ಆದ ಆರು ಉಪಾಧ್ಯಾಯರ [illegible] ಗಳು ಕ್ಷಮಾಪಣೆಯನ್ನು ಕೊಟ್ಟರೆಂದೂ, [illegible] ಣೆಯನ್ನು ಸ್ವೀಕರಿಸಿ, ಸರಕಾರದವರು ಅವರನ್ನು [illegible] ಕೆಲಸಕ್ಕೆ ಶೇರಿಸಿಕೊಂಡರೆಂದೂ ತಿಳಿದುಬಂದಿದೆ. ಇದರಿಂದ ಹೊರಡುವುದೇನು? ಸರಕಾರದವರು ನ್ಯಾಯವ[illegible]ರೆಂದಾಗಲೀ, ದಯೆಯನ್ನು ತೋರಿದರೆಂದಾಗಲೀ [illegible] ಬಡ ಉಪಾಧ್ಯಾಯರು ಪುನಸ್ಸಾರ, ತಮ್ಮ ಮನಸ್ಸಿನಲ್ಲಿ ಪಶ್ಚಾತ್ತಾಪಪಟ್ಟು ಬರೆದುಕೊಟ್ಟ ಕ್ಷಮಾಪಣೆಯ[illegible] ಬಲಾತ್ಕಾರದಿಂದ ಬರೆದು ಕೊಟ್ಟದ್ದು. ನ್ಯಾಯದೇವತೆ[illegible] ಮುಂದೆ ಈ ಕ್ಷಮಾಪಣೆಗೆ ಅರ್ಥವಿಲ್ಲ. ಸರಕಾರದವರು ತಮ್ಮ ದರ್ಪವನ್ನು ಉಳಿಸಿಕೊಳ್ಳುವದಕ್ಕಾಗಿ [illegible] ನ್ಯಾಯವನ್ನೇ ಸಮರ್ಥನೆ ಮಾಡಿದರೆಂಬುದು [illegible] ವಾಗುತ್ತದೆ.

ಆಫಘನ್ ಭವಿಷ್ಯ.

ಈಗ ಯಾವ್ಯಾವ ಅಡ್ಡಿಗಳು ಬಂದರೂ ಕೊನೆಗೆ [illegible] ಮಾನುಲ್ಲಾರವರೇ ರಾಜ್ಯಾಳ್ವಿಕೆಯನ್ನು ಹೊಂದಿ[illegible] ಚಾಯಿ ಸಾಕು ಮೊದಲಾದವರಿಗೆ ಕ್ಷಮೆ [illegible] ಸೋವಿಯಟ್ ಸರ್ಕಾರದಲ್ಲಿ ಹೆಚ್ಚು ವಿಶ್ವಾಸ ಸಂಪಾದನೆ ಮಾಡುವರು. ಸೌರಿಯಾ ರಾಣಿಯವರು ಪುನಃ ಲೋಕಪ್ರಿಯರಾಗುವರು. ಅಮಾನುಲ್ಲಾ ರವರ [illegible]ಜ್ಯಾರೋಹಣವು ವೈಟ್ ಹಾಲ್ ಸಿಂಪ್ಲ ಡೌನಿಂಗ್ ಸ್ಟ್ರೀಟುಗಳಲ್ಲಿ ಗೊಂದಲವನ್ನೆಬ್ಬಿಸುವುದು. ಇವೆಲ್ಲವೂ ಇನ್ನು ಮೂರು ತಿಂಗಳಲ್ಲಿ ನಡೆಯುವುದು. ಎಂದು ಬೊಂಬಾಯಿನ ಪ್ರಸಿದ್ಧ ಜೋತಿಷ್ಕರಾದ ಪ್ರೊ|| ವ್ಯಾಸರವರು ಸರಿಯಾದ ಆಧಾರದ ಮೇಲೆ ಹೇಳಿರುತ್ತಾರೆ.

ಲಂಚದ ಪ್ರಾಬಲ್ಯ

ಜಪಾನಿನ ಟೋಕಿಯೋ ಮುನ್ಸಿಪಾಲಿಟಿಯ 25 [illegible] ನ ಸಭಾಸದರು ಲಂಚ ತಿಂದು ಅಪರಾಧಿಗಳಾಗಿದ್ದಾರೆ. ಆದುದರಿಂದ ಸಭೆ ನಡೆಸಲು ಸಾಕಾದಷ್ಟು ಸಭಿಕರು ಉಳಿಯದದರಿಂದ ಹಿಂದಿನ ಸಭೆಯನ್ನೇ ರದ್ದುಮಾಡಿ ಹೊಸ ಚುನಾವಣೆಗೇರ್ಪಾಡಾಗಿದೆ.

ಮಾನನಷ್ಟದ ಮೊಕದ್ದಮೆ.

ವಿಶ್ವಕರ್ಣಾಟಕದ ಸಂಪಾದಕರಾದ ಶ್ರೀ ಟಿ. [illegible] ಶರ್ಮರವರು ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಐ. ಜಿ. ಪಿ. ಯವರಾದ ಮ|| ಎಸ್. ಹಿರಿಯಣ್ಣಯ್ಯನವರ ಮೇಲೆ ಮಾನನಷ್ಟದ ಮೊಕದ್ದಮೆಯನ್ನು ಹೂಡಿರುವರು.

ತಾಯಿ ನಾಡು.
5—2—1929

ವರ್ತಮಾನ ಸಂಗ್ರಹ

ವಿದ್ಯಾರ್ಥಿಗಳ ದಾಂಧಲೆ

ಈಗ ಕೆಲವುದಿನಗಳ ಹಿಂದೆ ಪೂನಾದ ಫೆರ್ಗ್ಯುಸನ್ ಕಾಲೇಜಿನ ಕೆಲವು ವಿದ್ಯಾರ್ಥಿಗಳು, ತಮ್ಮ ಪ್ರಿನ್ಸಿಪಾಲಗೆ ಆದರಾತಿಥ್ಯಗಳನ್ನು ನಡೆಸುತ್ತಿದ್ದರು. ಆ ಆದರಾತಿಥ್ಯಕ್ಕೆ ವಿರೋಧವಾದ ವಿದ್ಯಾರ್ಥಿಗಳು ಭಾಷಣ ಮೊದಲಾದುವುಗಳು ನಡೆಯದಂತೆ ಆತಂಕಪಡಿಸಿದ್ದಲ್ಲದೆ, ರಾತ್ರಿ ನಾಟಕ ಸಂಗೀತ ಮೊದಲಾದವುಗಳು ನಡೆಯುತ್ತಿದ್ದಾಗ, ಈ ವಿರೋಧಿಗಳು ಮುಖವಾಡಗಳನ್ನು ಹಾಕಿಕೊಂಡುಬಂದು ಬಹಳ ದಾಂಧಲೆಮಾಡಿದರೆಂದೂ, ಕಿಟಿಕಿ ಮೊದಲಾದವುಗಳನ್ನು ಒಡೆದರೆಂದೂ ಸಮಾಚಾರವು ಬಂದಿರುವುದು.

ಯುರೋಪಿನ ಪ್ರಯಾಣ.

ಮಹಾತ್ಮ ಗಾಂಧಿಯವರು ಯೂರೋಪಿಗೆ ಪ್ರಯಾಣಮಾಡುವುದಿಲ್ಲವೆಂದು ನಿಶ್ಚಯಮಾಡಿದ್ದಾರೆ. ಇಂಡಿಯಾ ದೇಶದಲ್ಲಿಯೇ ಬಹಳ ಕೆಲಸವಿರುವುದೆಂದೂ, ಆ ಕೆಲಸವನ್ನು ಪೂರ್ತಿಮಾಡದೆ ಹೋಗುವುದು ಸರಿಯಾಗಿಲ್ಲವೆಂದೂ. ತಾವು ಹೋದರೆ ಸ್ವತಂತ್ರ ಭಾರತದ ಪ್ರತಿನಿಧಿಗಳಾಗಿಯೇ ಹೋಗಬೇಕೆಂದಿರುವುದಾಗಿಯೂ ತಿಳಿಸಿರುವರು.

ಮಿ॥ ಟ್ರಾಟ್ಸ್ಕಿಯವರು.

ರಷ್ಯದ ಮಹಾಮುಖಂಡರಾದ ಲೆನಿನ್‌ರವರ ಮುಖ್ಯ ಹಿಂಬಾಲಕರಾದ ಟ್ರಾಟ್ಸ್ಕಿ ಎಂಬವರು ಈಗಿನ ರಷ್ಯದ ಸೋವಿಯಟ್ ಸರಕಾರಕ್ಕೆ ವಿರೋಧವಾಗಿ ಕಾರ್ಯಭಾರ ನಡೆಸುತ್ತಿರುವರೆಂದು ಅವರನ್ನು ರಷ್ಯಾದಿಂದ ಗಡೀಪಾರು ಮಾಡಿರುವರು. ಅವರಿಗೆ ಟರ್ಕಿಯಲ್ಲಿ ಆಶ್ರಯವು ದೊರೆತಿರುವುದಾಗಿ ತಿಳಿದುಬಂದಿದೆ.

ಅಹಮದಾಬಾದಿನ ಸತ್ಯಾಗ್ರಹ

ಜನವರಿ 30 ನೇ ತಾ॥ ನ ದಿವಸ ಸತ್ಯಾಗ್ರಹದ ವಿಮರ್ಶಿಸಲು ವಿದ್ಯಾ ಇಲಾಖೆಯ ಮಿನಿಸ್ಟರರು ಅಹಮದಾಬಾದಿಗೆ ಬಂದರು. ಅವರಿಗೆ ಗುಜರಾತ್ ಕಾಲೇಜಿನ ಪ್ರಿನ್ಸಿಪಾಲರಾದ ಶಿರಾಸರು ಸ್ವಾಗತ ಕೊಡುವಾಗ "ಶಿರಾಸ್ ಮಸ್ಟ್ ಗೋ" ಎಂದು ಹುಡುಗರ ಗುಂಪು ಗಟ್ಟಿಯಾಗಿ ಕೂಗಲಾರಂಭಿಸಿತು, 31 ನೇ ತಾ॥ ನ ವಿದ್ಯಾರ್ಥಿ ಸಮ್ಮೇಳನದಲ್ಲಿ ಈ ಕಾರ್ಯಾ ಸಕ್ತರೆಲ್ಲರೂ ಕಾರ್ಯಕ್ರಮದಂತೆ ಕೆಲಸಮಾಡತೊಡಗಬೇಕು. ಎಂದು ವಲ್ಲಭಭಾಯಿ ಪಟೇಲರು ಹೇಳಿದರು.

ಆಫ್ಘನ್ ಸುದ್ದಿ.

ಕಳೆದ ಡಿಸೆಂಬರ್‌ನಲ್ಲಿ ಅಲಹಾಬಾದಿನಿಂದ ತಪ್ಪಿಸಿ ಕೊಂಡುಹೋಗಿದ್ದ ಮಹಮದ್ ಉಮಾರ್‌ಖಾನ್ ಎಂಬುವನು ಈಗ ಷಿನ್‌ವಾರಿಗಳೊಡನೆ ಸೇರಿಕೊಂಡು ಇಂಗ್ಲೆಂಡಿಗೆ ಬರುವ ಸೂಚನೆಯನ್ನು ತೋರಿಸುತ್ತಿರುವನು ಮತ್ತು ಆತನು 'ದಕ್ಷಿಣಸಾಮ್ರಾಜ್ಯಕ್ಕೆಲ್ಲಾ ತಾನೇ' ಅಮೀರನೆಂದು ಹೇಳಿಕೊಂಡಿದ್ದಾನೆ. ಕಾಬೂಲಿನಲ್ಲಿ ದುರಾಣಿ ವಂಶದ ಅನೇಕ ರಾಜಮನೆತನದವರೂ ಸರ್ಕಾರೀ ಉದ್ಯೋಗಸ್ಥರೂ ದಸ್ತಗಿರಿ ಮಾಡಲ್ಪಟ್ಟು ರಕ್ಷಣೆ ಕಮ್ಮಿಯಾಗಿ ಅನರ್ಥಕಾರಿಸಮಾಧಾನಗಳು ಹೆಚ್ಚುತ್ತಿವೆ.

ಸಿನಿಮಾ ತಾರ್‌ ಬೇಗಂ

ಹಿಂದೆಯೇ ಪ್ರಕಟವಾಗಿರುವಂತೆ ಸುಮ್ ತಾಜಾ ಬೇಗಂಳು ಅಮೇರಿಕದ ಸಿನೀಮಾ ಕಂಪನಿಯ ಷರತ್ತುಗಳಿಗೆ ಒಪ್ಪಿಲ್ಲವೆಂದೂ, ಸೀಮೆಗೆಹೋಗಿ ಹಿಂದೀಗಾಯನವನ್ನು ಅಲ್ಲಿ ಪ್ರಚಾರ ಮಾಡಬೇಕೆಂದೇ ಅವಳ ಅಭಿಲಾಷೆ ಎಂದು ತಿಳಿಸಿರುವಳು.

ಸರ್ಕಾರದ ಆರೋಪಣೆ

ಸರ್ ಡೇಸಿಯಲ್ ಹ್ಯಾಮಿಲ್ಟನ್‌ರವರು ತಮ್ಮ ಒಂದು ಭಾಷಣದಲ್ಲಿ ಇಂಡಿಯಾ ದೇಶದ ದಾರಿದ್ರ್ಯಕ್ಕೆಲ್ಲಾ ಸರಕಾರದ ಅಸಡ್ಡೆಯ ಮೇಲೆ ಆರೋಪಣೆಯನ್ನು ಹೊರಿಸಿರುವರು.

ಶಿನ್‌ವಾರಿಗಳ ಸಾರಿಕೆ

ಕಾಬೂಲಿನ ಶಿನ್‌ವಾರಿಗಳು ರಾಜ ನಸ್ರುಲ್ಲಾಖಾನರವರ ವಜಾ ಯಿ ಸಾಕುವವನ್ನು ದರೋಡೆಗಾರನೆಂದು ಭಾವಿಸಿ ಅವನ ವಿರುದ್ಧವಾಗಿ ಧರ್ಮಯುದ್ಧವನ್ನು ಸಾರಿರುವರು,

ಅಮಾನುಲ್ಲಾ ರವರ ಸಿದ್ಧತೆ.

ಕಾಂದಹಾರಿನಲ್ಲಿ ಅಮಾನುಲ್ಲಾ ರವರು 40 ಸಾವಿರ ಜನರನ್ನೂ ಫ್ರೆಂಚ್ ಫಿರಂಗಿಗಳನ್ನೂ ಸೇರಿಸಿಕೊಂಡು ಯುದ್ಧಸನ್ನಾಹವನ್ನೂ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಪ್ರತಿದಿನವೂ ದರ್ಬಾರನ್ನೂ ನಡೆಸುತ್ತಿರುವರು.

ಗಯಾ ಡಿ|| ಬೋರ್ಡ್

ಬಿಹಾರ್ ಸರ್ಕಾರವು ಗಯಾ ಡಿಸ್ಟ್ರಿಕ್ಟ್ ಬೋರ್ಡಿನ ಅವಧಿಯನ್ನು ಹೆಚ್ಚಿಸಿರುತ್ತದೆ. ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಕೌನ್ಸಿಲ್ಲಿನ ಅವಧಿಯು ಹೆಚ್ಚಿಸಲ್ಪಡಬೇಕೆಂದು ಠರಾವು ಪಾಸಾಯಿತು.

ಕಟ್ಟಡದ ಪ್ರಶಂಸೆ

ಇಟಲಿಯ ಸಂಚಾರಿಗಳು ಮಧುರೆಯ ಮೀನಾಕ್ಷಿ ದೇವಸ್ಥಾನವೂ, ಆಗ್ರಾದಲ್ಲಿರುವ ತಾಜಮಹಲೂ, ಇವೆರಡೂ ಲೋಕದಲ್ಲಿ ಅತ್ಯಾಶ್ಚರ್ಯ ಕಟ್ಟಡಗಳೆಂದು ಅಭಿಪ್ರಾಯಪಟ್ಟಿರುತ್ತಾರೆ

ಆಡಿಟರ್ ಜನರಲ್.

ಇಂಡಿಯಾಸರ್ಕಾರದ ಫಿನಾನ್ಷಿಯಲ್ ಸೆಕ್ರೆಟರಿಯವರಾದ ಎ.|| ಬರಡನ್‌ರವರು ಆಡಿಟರ್ ಜನರಲ್‌ರವರಾಗಿ ನೇಮಿಸಲ್ಪಟ್ಟಿರುವರು.

ಮಹಾತ್ಮ ಗಾಂಧಿಯವರು.

ಮಹಾತ್ಮಾ ಗಾಂಧಿಯವರು ಸಿಂಧೂ ದೇಶದಲ್ಲಿ ಚಳಿಯು ಹೆಚ್ಚಾಗಿರುವುದರಿಂದ ಅಲ್ಲಿನ ತಮ್ಮ ಸಂಚಾರವನ್ನು ಒಂದು ವಾರ ಮುಂದಕ್ಕಿಟ್ಟುಕೊಂಡಿರುವರು.

ವ್ಯವಸಾಯ ಶಿಕ್ಷಣ

ಕೊಲ್ಲಾಪುರದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ವ್ಯವಸಾಯ ಪಾಠಶಾಲೆಗೋಸ್ಕರ 27000 ರೂ. ಗಳನ್ನು ಮಂಜೂರ್ ಮಾಡಿರುವರು.

ಉಪಾಧ್ಯಾಯಳ ಕೊಲೆ

ನ್ಯೂಯಾರ್ಕಿನ ಒಬ್ಬ ವಿದ್ಯಾರ್ಥಿಯು ತನ್ನ ಉಪಾಧ್ಯಾಯಳನ್ನೇ ಚುಂಬಿಸಲೆತ್ನಿಸಿ ಕಟ್ಟಕಡೆಗೆ ಒಂದು ದೊಡ್ಡ ಕಲ್ಲನ್ನು ತಲೆಯಮೇಲೆ ಹಾಕಿ ಕೊಂದನು.

ಕಾಬೂಲ್ ಸುದ್ದಿ

ಕಾಬೂಲನ್ನು ಅಲ್ಲಿದ್ದ ಪರಕೀಯರೆಲ್ಲರೂ ಬಿಡುತ್ತಿರುವರು.

ಮುಷ್ಕರ

ಕೊಲಂಬೋ ಟ್ರಾಂವೆಯವರ ಮುಷ್ಕರವು ಮುಕ್ತಾಯವಾಯಿತು.

ಚಿತ್ರಲಗಿನ ಪದ್ಧತಿ

ನಮ್ಮ ಸಂಸ್ಥಾನದ ಕೆಲವು ಪತ್ರಿಕೆಗಳು ಸರ್. ಎಂ. ವಿಶ್ವೇಶ್ವರಯ್ಯನವರ ಮೇಲೆ ನಾನಾಮುಖೇನ [illegible] ಬರೆಯುತ್ತಿರುವುದನ್ನು ನೋಡಿದರೆ, ಚಿತ್ರಲಗಿನ ಪದ್ಧತಿ ಎಂಬುದು ನೆನಪಿಗೆ ಬರುತ್ತದೆ. [illegible] ಮಹಮದರನ್ನು ಅವರ ದೇಶೀಯರು ಮಕ್ಕಾದಿಂದ ಓಡಿಸಿದರು. ಸಾಕ್ರಟೀಸನನ್ನು ಅವರ ದೇಶೀಯರು ವಿಷಹಾಕಿ ಕೊಂದರು. ಏಸುಕ್ರಿಸ್ತನನ್ನು ಅವರ ದೇಶೀಯರು ಶಿಲುಬೆಗೆ ಹಾಕಿದರು. ಮಹಾಪುರುಷರಿಗೆ ತಮ್ಮ ದೇಶೀಯರಲ್ಲಿಯೇ ಮನ್ನಣೆಯು ದೊರೆಯುವುದು ಇಲ್ಲ. ಇದಕ್ಕೆ ಕಾರಣವೇನೆಂದರೆ, ಮಹಾಪುರುಷರು ತಮ್ಮ ದೇಶೀಯರೊಂದು ಅವರ ತಪ್ಪನ್ನು ಮುಚ್ಚು ವುದಿಲ್ಲ. ಈಗ ಜನಗಳಿಗೆ ಬೇಕಾಗಿರುವುದು. [illegible] ಮಾಡದೆ ಕಂಡದ್ದನ್ನು ಹೇಳಿದರೆ [illegible] ಮೇಲೆ ಕಂಡದಂಥ ಕೋಪಬರುವುದು. ಸಹಜವಾಗಿ ವಿಶ್ವೇಶ್ವರಯ್ಯನವರನ್ನು ನಮ್ಮ ದೇಶೀಯರೇ [illegible] ಯುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಬೆಂಚ್‌ಕೋರ್ಟ್.

ಚಿಕ್ಕನಾಯಕನಹಳ್ಳಿ ಬೆಂಚ್‌ಕೋರ್ಟಿಗೆ ಮಿ॥ ಚಿಕ್ಕಮಠದ ಮಡಲಯ್ಯನವರನ್ನೂ ಮತ್ತು ಕಡೂರು ಬೆಂಚ್‌ಕೋರ್ಟಿಗೆ ಮಿ॥ ಜಮೀನ್‌ದಾರ್ ಟಿ. ಶೇಷಯ್ಯಂಗಾರ್ಯರನ್ನು ಮೂರನೆ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಿರುತ್ತಾರೆ.

ರಜಾ

ದೊಡ್ಡಬಳ್ಳಾಪುರದ ಮುನಸೀಫರಾದ ಮಿ॥ ಮಹಮದ್‌ಮುಸ್ತಾಫಾರವರಿಗೆ ಈ ಮಾಹೆ [illegible] ನಿಂದ ಒಂದು ತಿಂಗಳು ಫರ್ಲೋರಜವನ್ನು [illegible] ರ್ಮಾಡಿ, ಬೆಂಗಳೂರು ಅಡ್ವೋಕೇಟರಾದ ಮಿ॥ ರಾವ್ ಕೆ. ಎ. ಶಾಮರಾಯರನ್ನು ಮೇಲಿನ ಕೆಲಸಕ್ಕೆ [illegible] ಮಿಸಿರುತ್ತಾರೆ.

ಸಹಾನುಭೂತಿ ಸೂಚಕ ಸಭೆಗಳು.

ಜನವರಿ 30 ನೇ ತಾ॥ ನ ದಿವಸಲಕ್ನೌ, ಬೆನಾರಿಸ್ ಕಲ್ಕತ್ತಾ, ಸಾಗರಪುರ ಮತ್ತು ಪಾಟ್ನಾಗಳಲ್ಲಿ ಗುಜರಾತ್ ಕಾಲೇಜಿನ ಪ್ರಿನ್ಸಿಪಾಲರವರ ವರ್ತನೆಯನ್ನು ಖಂಡಿಸುವುದಕ್ಕಾಗಿ ವಿದ್ಯಾರ್ಥಿಗಳು ಪ್ರಚಂಡ ಸಭೆಗಳನ್ನು ನಡಿಸಿ ಹೊಸ ಪ್ರಿನ್ಸಿಪಾಲರು ಬರಬೇಕೆಂಬ ಠರಾವನ್ನು ಪಾಸ್ ಮಾಡಿದರು.'

ಹಡಗಿನ ಕ್ಯಾಪ್ಟನ್.

ಇಂಗ್ಲೆಂಡಿನಲ್ಲಿ ನೌಕಾಧ್ಯಕ್ಷರ ತರಪೇತನ್ನು ಹೊಂದಲು ಇಂಡಿಯಾದಿಂದ ಮೂರುಜನ ಭಾರತೀಯರು [illegible] ಸಾಲಿಯಾನ 250 ಪೌನುಗಳ ವೇತನವನ್ನು ಕೊಟ್ಟು ಪ್ರತಿವರ್ಷವೂ ಕಳುಹಿಸಬೇಕೆಂದು ನಿಶ್ಚಯವಾಗಿದೆ.

ದಸ್ತಗಿರಿ

ಓಟೋ ರೈಮಂಡ್‌ನೆಂಬುವನು 1924ರಲ್ಲಿ ಇಂಗ್ಲೆಂಡಿನಿಂದ ಹೊರಟು ಇಂಡಿಯಾದಲ್ಲಿ ಹಲವು ಸೈನ್ಯಗಳನ್ನು ನೋಡಿ ಬ್ರಿಟಿಷ್ ಸೈನಿಕರಲ್ಲಿ ದುರ್ಭಾವನೆಯನ್ನು [illegible] ರಡಿಸುತ್ತಿದ್ದನೆಂಬಕಾರಣದ ಮೇಲೆ, ಈಗ ಕಲ್ಕತ್ತೆಯಲ್ಲಿ ಬಂಧಿಸಲ್ಪಟ್ಟಿರುವನು.

ನೈಜಾಮರ ಆಗಮನ

ಹೈದರಾಬಾದ್ ನೈಜಾಮರು ಮದರಾಸಿಗೆ ಬಂದಿರುವರು. ಅವರಿಗೆ ಅಭೂತಪೂರ್ವವಾದ ಸತ್ಕಾರಗಳು ನಡೆಯುತ್ತಿರುವವು.

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, ... Sri Rama Press, D. Subbiah Road Mysore.

Regd. No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ | ಗೀತಾ |

ವಾರ್ಷಿಕ

ಸಂಪುಟ ೧] ಬುಧವಾರ ೭ ಫೆಬ್ರವರಿ ೧೯೩೪ [ಸಂಚಿಕೆ ೧೦೪

TAI NADU
6—2—1929

ಎತ್ತಿಗೆ ರೋಗಬಂದರೆ ಎಮ್ಮೆಗೆ ಬರೆ!

ನಮ್ಮ ಸಂಸ್ಥಾನದಲ್ಲಿ ಈಚೆಗೆ ಕೆಲವು ದಿವಸಗಳಿಂದ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಈ ಗಾದೆಯು ನಮಗೆ ನೆನಪಿಗೆ ಬರುತ್ತದೆ. ತಪ್ಪು ಮಾಡಿದವರು ಯಾರೋ ತಪ್ಪಿತಸ್ಥರೆಂದೆನಿಸಿಕೊಂಡು ಕಷ್ಟನಿಷ್ಠೂರಗಳಿಗೆ ಗುರಿಯಾದವರು ಯಾರೋ! ಬೆಂಗಳೂರು ಗಲಭೆಯು ಶುರುವಾದಾಗಿನಿಂದ ಕೆಲವು ಪತ್ರಿಕೆಗಳು ಸತ್ಯದಲ್ಲಿಯೇ ದೃಷ್ಟಿಯಿಟ್ಟು ನ್ಯಾಯವನ್ನು ಸ್ಥಾಪನೆ ಮಾಡುತ್ತಾ ಬಂದವು. ಸರಕಾರದವರು ಪತ್ರಿಕೆಗಳು ಉದ್ಘಾಟಿಸುತ್ತಿರುವ ತಮ್ಮ ಕರ್ತವ್ಯ ಲೋಪದೋಷಗಳನ್ನು ತಿದ್ದಿಕೊಳ್ಳದೆ ಅವುಗಳಮೇಲೆ ಅನ್ಯಾಯವಾಗಿ ಶಸ್ತ್ರಪ್ರಯೋಗವನ್ನು ಮಾಡುತ್ತಿರುವುದು ಬಹಳ ವಿಷಾದಕರವು. ಈ ತಿಂಗಳು 1 ನೇ ತಾ|| ನಲ್ಲಿ ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೀಟಿಂಗ್ ನಡೆಯಿತೆಂದೂ ಒಬ್ಬ ಮೆಂಬರರು ಶಾಂತಿಸ್ಥಾಪನೆಯಾಗಬೇಕಾದರೆ ಸರಕಾರವನ್ನು ಖಂಡಿಸುವ ಪತ್ರಿಕೆಗಳನ್ನು ನಿಲ್ಲಿಸಬೇಕೆಂದು ಸಲಹೆಯನ್ನು ಕೊಟ್ಟರೆಂದೂ, ಬೆಂಗಳೂರಿನ ಚಿತ್ರಗುಪ್ತ ಪತ್ರಿಕೆಯು ತಿಳಿಸುತ್ತದೆ. ಪತ್ರಿಕೆಗಳು ಪ್ರಜೆಗಳ ಕಣ್ಣುಗಳೋಪಾದಿಯಲ್ಲಿರುವುವು. ಕೆಟ್ಟ ಕೆಲಸ ಮಾಡತಕ್ಕವರು ಇತರರಿಗೆ ಕಣ್ಣಿದ್ದರೆ ನೋಡುತ್ತಾರೆಂದು ಅವರ ಕಣ್ಣುಗಳನ್ನು ಕೀಳುವುದು ಒಪ್ಪುವ ನ್ಯಾಯವೋ ಈ ಸಲಹೆಯೂ ಅಷ್ಟೇ ನ್ಯಾಯವು.

ಒಂದು ವೇಳೆ ನಮ್ಮ ಸಂಸ್ಥಾನದಲ್ಲಿರುವ ಪತ್ರಿಕೆಗಳನ್ನು ನಿಲ್ಲಿಸಿದರೆ ನಿಷ್ಪಕ್ಷಪಾತದಿಂದ ಕೂಡಿದ ಹೊರಗಿನ ಪತ್ರಿಕೆಗಳು ಸುಮ್ಮನಿರುವುವೇ? ಅವುಗಳನ್ನು ತಡೆಯುವುದಕ್ಕೆ ನಮ್ಮ ಸರಕಾರದವರ ಕೈಯ್ಯಿ ಆಗುವುದೇ? ಹೈದರಾಬಾದ್ ನೈಜಾಮರವರು ಮಾಡಿದಂತೆ ಆ ಪತ್ರಿಕೆಗಳನ್ನು ಸಂಸ್ಥಾನದ ಒಳಗೆ ಬರದಂತೆ ಕಟ್ಟುಮಾಡಬೇಕಾಗುವುದು. ಹೀಗೆ ಮಾಡಿದರೆ ಹೈದರಾಬಾದಿನ ಹೆಸರು ಹೇಗೆ ಹೊರಗೆ ಕೆಟ್ಟಿತೋ ನಮ್ಮ ಮೈಸೂರಿನ ಹೆಸರೂ ಹಾಗೆಯೇ ಕೆಡುವುದು. ಈಗಲೇ ಹೊರಗಿನವರು ನಮ್ಮ ಮೈಸೂರಿನ ಸ್ಥಿತಿಯನ್ನು ಅರಿತುಕೊಳ್ಳುತ್ತಿರುವರು. ಇನ್ನೂ ಹೆಚ್ಚು ಅರಿಯಲು ಆಸ್ಪದವನ್ನು ಕೊಡುವುದು ಶುದ್ಧ ಅವಿವೇಕ. ಸರಕಾರಕ್ಕೆ ಸಲಹೆಯನ್ನು ಕೊಡತಕ್ಕವರು ಯುಕ್ತಾಯುಕ್ತಗಳನ್ನು ವಿಮರ್ಶಿಸಬೇಕು. ಬೆಂಗಳೂರಿನ ಗಲಾಟೆಗೆ ಕಾರಣಕರ್ತರಾದವರನ್ನು ವಿಶ್ವೇಶ್ವರಯ್ಯ ಕಮಿಟಿಯವರು ಕಂಡುಹಿಡಿದಿರುವರು. ಆ ದುಷ್ಟರುಗಳನ್ನು ಶಿಕ್ಷಿಸಿದರೆ ಎಲ್ಲವೂ ಸರಿಹೋಗುವುದೇ ಹೊರತು ಸತ್ಯಪ್ರತಿಪಾದನೆ ಮಾಡುವ ಪತ್ರಿಕೆಗಳನ್ನು ನಿಲ್ಲಿಸುವುದರಿಂದ ಆಗುವುದಿಲ್ಲ. ಹಾಗಿಲ್ಲದೆ ಪತ್ರಿಕೆಗಳನ್ನು ನಿಲ್ಲಿಸುವುದಕ್ಕೆ ಹೋದರೆ ಎತ್ತಿನ ಜ್ವರಕ್ಕೆ ಎಮ್ಮೆಗೆ ಬರೆಹಾಕಿದಂತೆಯೇ ಆಗುತ್ತದೆ.

ವಿದ್ಯಾರ್ಥಿಗಳ ಸಭೆ.

ಗುಜರಾತ್ ಕಾಲೇಜಿನ ವಿದ್ಯಾರ್ಥಿಗಳಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ನಾಳೆ ದಿನ ಸಾಯಂಕಾಲ ಸುಬ್ರಾಯನ ಕೆರೆ ಮೈದಾನದಲ್ಲಿ ವಿದ್ಯಾರ್ಥಿಗಳ ಸಭೆ ನಡೆಯುವುದು. ವೃದ್ಧಪಿತಾಮಹರು ಅಗ್ರಾಸನವನ್ನು ವಹಿಸುವರು ಸಕಲರೂ ದಯಮಾಡಬೇಕಾಗಿ ಕೋರಲ್ಪಟ್ಟಿದೆ.

ಕರ್ಣಾಟಕ ಏಕೀಕರಣ ಮತ್ತು ಮೈಸೂರು

22—2—29 ಕ್ಕೆ ಶ್ರೀ ಕಡಪಾ ರಾಘವೇಂದ್ರರಾಯರು ದಿವಂಗತರಾಗಿ ಎರಡು ವರ್ಷಗಳಾಗುತ್ತದೆ. ಅವರ ಪುಣ್ಯದಿನವನ್ನು ಇಡೀ ಕರ್ಣಾಟಕದಲ್ಲಿ ಆಚರಿಸಬೇಕೆಂದು ಸಂಕಲ್ಪ ಮಾಡಿದ್ದಾರೆ. ಕರ್ನಾಟಕದವರಿಗಾಗಿ ಮತ್ತು ಕರ್ಣಾಟಕ ಏಕೀಕರಣಕ್ಕಾಗಿ ಹಗಲಿರುಳು ಹಂಬಲಿಸಿ ಹೆಣಗಾಡಿದ ಕನ್ನಡಿಗರೆಲ್ಲರಲ್ಲಿ ಕೀ. ಶೇ. ರಾಘವೇಂದ್ರರಾಯರು ಎಲ್ಲರಿಗೂ ಹೆಚ್ಚಿನವರು ಮತ್ತು ಹಿರಿಯರು. ಅವರ ಹೆಸರಿನಲ್ಲಿ ಕರ್ಣಾಟಕ ಏಕೀಕರಣ ದಿನವನ್ನು ಆಚರಿಸುವುದು ಅವರ ಆತ್ಮಕ್ಕೆ ಶಾಂತಿದಾಯಕವಾದುದು. ಈ ಸಂದರ್ಭದಲ್ಲಿ ಧಾರವಾಡದ ಕರ್ಮವೀರ ಪತ್ರಿಕಾಕರ್ತರು ಮೈಸೂರು ಜನಗಳಿಗೆ ಮಾಡಿಕೊಂಡಿರುವ ವಿಜ್ಞಾಪನೆಯನ್ನು ಇದರಡಿ ಪ್ರಕಾಶಿಸುತ್ತೇವೆ.

ಮೈಸೂರಿನವರು ತಮ್ಮ ಆಡಚಣೆಗಳಿರುವೆಂಬುದನ್ನು ನಾವು ಒಲ್ಲೆವು ಆದರೂ ಏಕೀಕರಣವೆಂದರೆ ಬ್ರಿಟಿಶ ಕರ್ನಾಟಕದ ಏಕೀಕರಣವಷ್ಟೇ ಎಂದು ತಿಳಿಯದೆ ಅದಕ್ಕೆ ಕಡಪಾ ರಾಘವೇಂದ್ರರಾಯರೂ ಸೆಟ್ಲೂರ್ ಗುಂಡಪ್ಪ, ಮುಂತಾದರು ಕೊಟ್ಟ ವಿಸ್ತೃತಾರ್ಥವನ್ನೇ ಕಲ್ಪಿಸುವದು ಅವಶ್ಯಕ ಕಡಪಾ ರಾಘವೇಂದ್ರರಾಯರು ಇತ್ತಕಡೆಗೆ ಎಷ್ಟು ಪರಿಚಿತರೋ ಅಷ್ಟೇ ಮೈಸೂರಿಗೂ ಪರಿಚಿತರು. ಕರ್ನಾಟಕವೆಂದಕೂಡಲೇ ಅವರ ಕಣ್ಣಮುಂದೆ ಇಡೀ ವಿಶಾಲಕರ್ನಾಟಕವು ನಿಲ್ಲುತ್ತಿತ್ತು. ಕರ್ನಾಟಕವು ಒಪ್ಪೇ ತುಂಡಾಗಿದ್ದರೂ ಕರ್ನಾಟಕವು ಯಾವ ಅಕ್ಕಿಕೆಯಲ್ಲಿದ್ದರೂ ಭಾಷೆಯ ಏಕೀಕರಣ, ಸಂಸ್ಕೃತಿಯ ಏಕೀಕರಣ ಇವುಗಳಿಗಾಗಿ ಅವರು ಹಂಬಲಿಸುತ್ತಿರುವರು. ಈಗ ಸಂಸ್ಥಾನೀ ಪ್ರಜೆಗಳಿಗೂ ಬ್ರಿಟಿಶ ಪ್ರಜೆಗಳಿಗೂ ರಾಜಕೀಯ ಸ್ಥಿತಿಯು ಸಹ ಒಂದೇ—ಜೋಡಿಗಾರ ರಾಜಪದ್ಧತಿ, ಪ್ರಜೆಗಳಿಗೆ ಉತ್ತರವಾದಿಯಾದ ಆಡಳಿತ —ಇರುವದು. ಆದುದರಿಂದ ಮೈಸೂರಿನವರು ಹಾಗೂ ಕರ್ನಾಟಕದಲ್ಲಿಯ ಎಲ್ಲ ಸಂಸ್ಥಾನದವರು ಈ ಏಕೀಕರಣ ದಿನವನ್ನು ಪಾಲಿಸಿ ಈ ಚಳವಳಿಯ ಮೂಲಕ ನಡೆದ ಜಾಗೃತಿ ಮತ್ತು ಪ್ರಗತಿಗಳಿಗೆ ಸಹಾಯ ಮಾಡಬೇಕೆಂದು ನಾವು ಅತ್ಯಾದರ ಪೂರ್ವಕವಾಗಿ ಹೇಳಿಕೊಳ್ಳುತ್ತೇವೆ.

ಮೈಸೂರು ಮಹಾಜನರು ಈ ವಿಜ್ಞಾಪನೆಯನ್ನು ಲಾಲಿಸುವರೆಂದು ನಂಬಿರುತ್ತೇವೆ.

ವ್ಯರ್ಥಾ ಸೂಚಿಸುವುದಿಲ್ಲ, ಆದರೆ ಆ ಸ್ಥಿತಿಗತಿಗಳ ಪೂರ್ಣ ಅಧ್ಯಯನಾನಂತರ ಅವುಗಳಿಗೆ ಅನುಗುಣವಾದ ಬದಲಾವಣೆಗಳನ್ನು ತಂದು ಹಾಕುವುದೇ ಸಾಧುವೆಂಬ ಅಂಶವನ್ನು ಮನಗಾಣಿಸಲು ಆಶಿಸುತ್ತಾರೆ ಮೈಸೂರಿನ ವಿಚಾರದಲ್ಲಿ ಮಾತ್ರ ಇಷ್ಟವಿಲ್ಲದ ಸರ್ಕಾರದ ಕೈಯಿಂದ ಸುಧಾರಣೆಗಳನ್ನು ಕಿತ್ತುಕೊಳ್ಳುವ ಪ್ರಸಂಗದ ಸುಳಿವೇ ಇಲ್ಲ.

ಇದರಿಂದ ಸರಕಾರದ ಮನೋಭಾವವು ಬಹಳ ಚೆನ್ನಾಗಿ ವ್ಯಕ್ತವಾಗುತ್ತದೆ.

ರಾಜಕೀಯ ಸುಧಾರಣೆಗಳು ಮತ್ತು ಮೈಸೂರು ಸರಕಾರ

ವಿಶ್ವೇಶ್ವರಯ್ಯ ಸಮಿತಿಯವರು ಪ್ರಜೆಗಳಿಗೆ ರಾಜಕೀಯ ಸುಧಾರಣೆಗಳನ್ನು ಕೊಡಬೇಕು ಎಂಬ [illegible] ಗೆ, ಮೈಸೂರು ಸರಕಾರದವರು ಕೊಟ್ಟಿರುವ [illegible] ಲ್ಲಿ ಯಾವ ಪುರಸ್ಕಾರವು ದೊರಕಿದೆ [illegible] ದೆಯೇ ತಿಳಿಸಿದ್ದವು ವಿಶ್ವಕರ್ಣಾಟಕದಲ್ಲಿ ಆ [illegible] ಸಂಪೂರ್ಣ ಅನುವಾದವು ಬಂದಿದೆ. ಅದರಲ್ಲಿ ರಾಜಕೀಯ ಸುಧಾರಣೆಗಳಿಗೆ ಸಂಬಂಧಪಟ್ಟ ಭಾಗಗಳನ್ನು ಮಾತ್ರ ಇಲ್ಲಿ ಕೊಡುವೆವು; ಅದೇನೆಂದರೆ,

ಕಡೆಗೆ ಸಮಿತಿಯವರು "ರಾಜಕೀಯ [illegible] ಷ್ಟಿಯನ್ನು ಪೂರೈಸುವುದೆಂತು" ಎಂಬ ವಿಚಾರವನ್ನು [illegible] ಚೆನ್ನಾಗಿ ಪರ್ಯಾಲೋಚಿಸಿದ್ದರೆ ಸಂಸ್ಥಾನದ [illegible] ಕಾರ ವ್ಯವಸ್ಥೆಯಲ್ಲಿ 'ಉತ್ತರವಾದಿತ್ವ' ದ ಮುಖ್ಯ [illegible] ದ ಲಕ್ಷಣಗಳನ್ನು ತಂದು ಹಾಕಬೇಕೆಂಬುದೇ [illegible] ವಾಗಿ ಈ ಸಂಬಂಧದಲ್ಲಿ ಸಮಿತಿಯವರು ಒತ್ತಿ ಹೇ [illegible] ವನಾತು ಶ್ರೀಮನ್ಮಹಾರಾಜರ ಸರಕಾರದವರಿಗೆ ಮೊರೆಯು ಅರಿವಿಲ್ಲದೆ ಇಲ್ಲ. ಈ ವಿಚಾರಗಳಲ್ಲಿ ಪೂರ್ವವಾದ ಅರಿಕೆಗಳಿಗೆಲ್ಲ ಸರಕಾರದವರು ಕಿವಿಗೊಟ್ಟಿಲ್ಲೇ ಇದ್ದಾರೆ; ಇನ್ನು ಮುಂದೆಯೂ ಸದಾ ಕಿವಿಗೊಡುತ್ತಾರೆಯಾದರೂ ಈ ಸಮಸ್ಯೆಯು ಬಹು [illegible] ಟ್ಟನದೆಂಬುದರ ವಿಚಾರವಾಗಿ ಕಣ್ಣುಮುಚ್ಚಲಾರರು. ಅಷ್ಟೇ ಅಲ್ಲ ಶಾಸನಸಭೆ ತವಾದ ಬದಲಾವಣೆಗೂ ಒಂದು ಮಿತಿಯಿದೆ ಯೆಂಬಂಶವನ್ನು ಅವರು ಮರೆಯ [illegible] ೧೯೨೩ ರಲ್ಲಿ ಸುಧಾರಣೆಗಳನ್ನು ಕೊಟ್ಟುದಾಯಿತಷ್ಟೆ. ಪ್ರಜಾಪ್ರತಿನಿಧಿಸಭೆ ನ್ಯಾಯವಿಧಾಯಕ ಸಭೆಗಳ ಸಭಾ ಕಾರ್ಯ ಸಂಪ್ರದಾಯಗಳಿಗನ್ವಯಿಸುವ ನಿಯಮಾವಳಿಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಕುರಿತು ಆಲೋಚಿಸಲು ಒಂದು ಸಮಿತಿಯು ಕೂತಿತ್ತು, ಸರಕಾರದವರು ಈ ವಿಚಾರದಲ್ಲಿ ಬಿನ್ನನೆ ಕೂತಿಲ್ಲವೆಂಬುದು ಇದರಿಂದಲೇ ಗೊತ್ತಾಗುತ್ತದೆ. ಒಂದುವೇಳೆ ಸರ್ಕಾರದ ಸ್ವರೂಪವನ್ನೇ ಬದಲಾಯಿಸಿದರೂ ದೊಂಬಿಯನ್ನು [illegible] ರ್ನಾಮ ಮಾಡಲಿಕ್ಕಾಗುವುದಿಲ್ಲ. ಇದು ಇತರದೇಶಗಳ ಅನುಭವದಿಂದ ಸಿದ್ಧವಾಗಿದೆ. ಸರ್ಕಾರದ ಸ್ವರೂಪವು ಬೇರೂ ಬಿಟ್ಟಿರುವ ಸಮಾಜ ರಚನಾ ಸ್ಥಿತಿಗತಿಗಳಿಗೆ ಅನುಗುಣವಾದುದಾಗಿರಬೇಕು. ಹೊರಗಡೆಯಿಂದ [illegible] ವದು ಮಾಡಿದ ದ್ವಿಪಕ್ಷ ಮಾರ್ಗ ಅಥವಾ [illegible] ವುದೆ ಆಗಲಿ ಸಿದ್ಧಮಾಡಿದ ವ್ಯವಸ್ಥೆಯಾಗಲಿ [illegible] ಪುರಾತನವೂ ಭಿನ್ನ ಭಿನ್ನವಾದ ನಾಗರಿಕತೆಗಳು, ಸಂಸ್ಕೃತಿಗಳು ಪ್ರಯೋಜನಾಪೇಕ್ಷೆಗಳು ಉಳ್ಳ ದೇಶದಲ್ಲಿ [illegible] ಪಿಸುವುದಕ್ಕೆ ಸಹಜವಾಗಿ ಬಹುಕಷ್ಟವಾದ ಕೆಲಸ. [illegible] ಸನ ಮತ್ತು ಸರಕಾರ ಸ್ವರೂಪ ಸಂಘವಾದ [illegible] ಳನ್ನು ಮಾತ್ರ ಅಧ್ಯಯನ ಮಾಡಿದ ಮಾತ್ರಕ್ಕೇ ರಾಜಕೀಯ ಅದ್ಭುತದರ್ಶನ ಪರಿಚಯವಾದಂತಾಗಲಿಲ್ಲ. ಆದರೆ ಆ ಶಾಸನ ಮತ್ತು ಸರಕಾರಕ್ಕೆ ಕಾರ್ಯಸಾಧನಾಶಕ್ತಿಯನ್ನು ನೀಡುವ ಸಾಮಾಜಿಕ ಕ್ರಿಯಾ ಕಲಾಪಗಳ ದೃಷ್ಟಿಯಿಂದಲೂ ಸಹ ಈ ವಿಚಾರಗಳ ಅಧ್ಯಯನವು ಅತ್ಯವಶ್ಯಕವಾಗಿದೆ. ಇಂದಿನ ಸಮಾಜ ರಚನೆಗೆ ಕಾರಣಗಳಾಗಿರುವ ಸ್ಥಿತಿಗತಿಗಳನ್ನು ದುರ್ಲಕ್ಷಿಸಿ [illegible] ಸಾಮಾಜ ಪರಿವರ್ತನ ಪ್ರಯತ್ನವು ಬೇಗನೆ ಸಫಲವಾಗುವ ಹಾಗೂ ಇಲ್ಲ; ಅದರಿಂದ ಅನಂತಸ್ಥಿತಿಯೇ [illegible] ವೂ ಆಗುವುದಿಲ್ಲವೆಂಬುದು. ಇಂದು ಸರ್ವಜನ [illegible] ವಾಗಿದೆ. ಆಶಿಸಿದ ಅಥವಾ ಆಶಿಸಲರ್ಹವಾದ ಬದಲಾವಣೆಗಳನ್ನು ಎದುರಿಸಬೇಕೆಂಬುದಾಗಿ ಸರ್ಕಾರದವರು [illegible]

ತಾಯಿನಾಡು.
6—2—1929

ವರ್ತಮಾನ ಸಂಗ್ರಹ

ಸೈಮನ್‌ಬಹಿಷ್ಕಾರ

ರಂಗೂನಿನಲ್ಲಿ ನಡೆದ ಸೈಮನ್‌ಬಹಿಷ್ಕಾರದ ಮೆರವಣಿಗೆಯಲ್ಲಿ 2000 ಜನರು ಸೇರಿದ್ದರೆಂದ ತಿಳಿಯಬಂದಿದೆ

ಮುಷ್ಕರದ ಸಿದ್ಧತೆ.

ಬಂಗಾಳದ ಶಣಬ ಮಿಲ್ಲುಗಳಲ್ಲಿರುವ ನಾಲ್ಕುವರೆ ಲಕ್ಷ ಕೂಲಿಕಾರರು, ಮುಷ್ಕರಹಿಡಿಯುವ ಸಂಭವವಿದೆ

ಲಂಬಾಣಿಗರ ಸಭೆ.

ಲಂಬಾಣಿಗರ ಮಹಾಸಭೆಯು ಈ ಮಾಹೆ 22 ನೇ ತಾರೀಖಿನ ದಿವಸ ಅಂತರಗಟ್ಟೆ ಜಾತ್ರೆಯಲ್ಲಿ ನಡೆಯುತ್ತದೆ.

ಸಿನಿಮಾ ಧನಲಕ್ಷ್ಮಿಯರು.

ಅಮೇರಿಕಾ, ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಪ್ರಸಿದ್ಧ ಸಿನಿಮಾ ನಟನಟಿಯರು ಧನಲಕ್ಷ್ಮಿಯನ್ನು ವಶಪಡಿಸಿಕೊಂಡು ಲಕ್ಷಾಧೀಶ್ವರರಾಗಿರುವರು.

ಇಂಡೋರ್ ಮಹಾರಾಜರ ಪುತ್ರೀಜನನ.

ಇಂಡೋರ್ ಮಹಾರಾಜರವರು ಸಾಸ್ತ್ರೋಕ್ತವಾಗಿ ವಿವಾಹವಾದ ಶರ್ಮಿಷ್ಠಾದೇವಿಯಲ್ಲಿ ಒಂದು ಪುತ್ರೀರತ್ನವನ್ನು ಪಡೆದಿರುವರು.

ಕಾಂಗ್ರೆಸ್ ಚಂದಾ.

ಮುಂದಿನ ವರ್ಷ ಲಾಹೋರಿನಲ್ಲಿ ನಡೆಯುವ ಕಾಂಗ್ರೆಸ್ ಸ್ವಾಗತ ಸಮಿತಿಯ ಫಂಡಿಗೆ ಸರ್ದಾರ್ ಸಾರ್ದೂಲ್‌ಸಿಂಗರವರು ಒಂದು ಸಾವಿರ ರೂಪಾಯಿಗಳ ಚಂದಾ ಕೊಟ್ಟಿರುವರು.

ವ್ಯವಸಾಯ ಸಲಹೆಗಳು.

ಬೊಂಬಾಯಿ ಪ್ರಾಂತಿಕ ವ್ಯವಸಾಯದ ಬೋರ್ಡಿನಲ್ಲಿ ವ್ಯವಸಾಯದ ವಿಷಯವಾಗಿ ಮ್ಯಾಜಿಕ್ ಲ್ಯಾಂಟರ್ನ್, ಗ್ರಾಮಾಫೋನ್, ಸಿನಿಮಟೋಗ್ರಾಫ್ ಮತ್ತು ಚಲನ ಚಿತ್ರಗಳ ಮುಖೇನ ಪ್ರಚಾರ ಮಾಡಬೇಕೆಂದು ತೀರ್ಮಾನಿಸಿದ ಸಲಹೆಯನ್ನು ಹಣ ಕಾಸ. ಒದಗಿದ ಹಾಗೆಲ್ಲಾ ಅಂಗೀಕರಿಸಬೇಕೆಂದು ಬೊಂಬಾಯಿನ ಸರ್ಕಾರವು ತೀರ್ಮಾನಿಸಿದೆ

ನಾಲ್ಕಾಣೆಯ ಮದುವೆ.

ವಿವಾಹವು ದಾಂಪತ್ಯ ಸುಖವಲ್ಲದೆ ಮತ್ತೆ ಬೇರೆಯಲ್ಲ. ಆದ ದರಿಂದ ಅನೂಚಾನವಾಗಿ ನಡೆದುಬರುತ್ತಿರುವ ಪದ್ಧತಿಯಂತೆ ದಂದುವೆಚ್ಚವನ್ನ ತ್ಯಜಿಸಿ, ಸುಯೋದ ಸುಮುಹೂರ್ತದಲ್ಲಿ ಸಾರ್ವಜನಿಕ ಸಭೆ ಸೇರಿ, ಅಲ್ಲಿನ ಅಧ್ಯಕ್ಷರು ದಂಪತಿಗಳ ಪರಿಚಯ ವನ್ನು ಸಭಿಕರಿಗೆ ವಿಶದೀಕರಿಸುವರು. ದಂಪತಿಗಳ ಚಿರಾಯುರಾರೋಗ್ಯವನ್ನು ಬಯಸುವ ಭಾಷಣಗಳಾದನಂತರ ವಿವಾಹಕಾರ್ಯವು ಮುಕ್ತಾಯವಾಗುವುದು. ಡಂಗೂರ ಹೊಡೆದವನಿಗೆ ಮಾತ್ರ ನಾಲ್ಕಾಣೆ ಕೊಡಬೇಕಾಗುವುದು. ಈ ತರನಾದ ವಿವಾಹ ಸುಧಾರಣೆಗಳು ಚೀನಾದಲ್ಲಿ ಆರಂಭವಾಗಿವೆ.

ಹಾವಿನ ಔಷಧಿಯ ದುರುಪಯೋಗ

ಯಾವನೋ ಒಬ್ಬ ಹಾವಾಡಿಗನು ತನ್ನ ಆಟದ ಕೊನೆಯಲ್ಲಿ ಹಾವಿನ ಕಡಿತಕ್ಕೆ ತನ್ನಲ್ಲಿ ಸಂಜೀವಿನಂಥಾ ಔಷಧವಿರುವುದೆಂದೂ ಯಾರು ಬೇಕಾದರೂ ಪರೀಕ್ಷಿಸಬಹುದೆಂದೂ ಹೇಳಿದನು. ಇದಕ್ಕಾಗಿ ಪರಿ ಯಾರೂ ಬಾರದ್ದರಿಂದ ತಾನೇ ಒಂದು ನಾಗರಹಾವಿನಿಂದ ಕಚ್ಚಿಸಿಕೊಂಡು ತನ್ನ ಔಷಧಿಯನ್ನೇ ಉಪಯೋಗಿಸಿ, ಪ್ರಯೋಜನವಾಗದೆ ಮೃತನಾದನು. ಈ ರೀತಿಯಾಗಿ ಪೂಣದೂರು ಪಟ್ಟಣ ಒಂದು ಹಳ್ಳಿಯಲ್ಲಿ ನಡೆಯಿತು.

ಸ್ತ್ರೀವೇಷಧಾರಿ.

ಬೊಂಬಾಯಿನಲ್ಲಿ ಸರ್ಕಾರಜನನೊಬ್ಬನು ಸ್ತ್ರೀವೇಷದಿಂದ ಕೆಲವು ವೇಶ್ಯೆಯರನ್ನು ಪೋಷಿಸಿಕೊಂಡು, ಅವರ ವರಮಾನದಿಂದ ಜೀವನ ಮಾಡುತ್ತಿರುವನೆಂಬ ಅಪರಾಧಕ್ಕಾಗಿ ಅವನ ಮೇಲೆ ಮೊಕದ್ದಮೆಯಾಯಿತು. ಆದೇ ವೇಷದಲ್ಲಿ ಕೋರ್ಟಿಗೂ ಬಂದಿದ್ದನು. ಅಪರಾಧಿಯು ಪ್ರಾಯಸ್ಥನೆಂಬ ವೈದ್ಯ ಪರೀಕ್ಷೆಯಾದನಂತರ ನಪುಂಸಕನೆಂಬ ವಾದವು ಅಪರಾಧಿಯು ಪರ ನಡೆದು ಕೊನೆಗೆ 7 ವರ್ಷಗಳ ಕಠಿಣ ಸಜಾ ಆಯಿತು.

ತಿಮಿಂಗಿಲವ ನಿ.

ಬರ್ಮಿಂಗ್‌ಹ್ಯಾಮಿನ ಜಿ. ಹೆಚ್. ಹೆನ್ ಎಂಬುವನು ಸಮುದ್ರದಲ್ಲಿ ಆಕಸ್ಮಾತ್ತಾಗಿ ತಿಮಿಂಗಿಲದ ಬಾಯಿಗೆ ತುತ್ತಾಗಿ ಸಜೀವನಾಗಿ ಬಂದು ನಾನು ಅದರ ಹೊಟ್ಟೆಯೊಳಗೆ ನನ್ನ ಉದರದಲ್ಲಿದ್ದ ಆಹಾರವೆಲ್ಲ ಮುಗಿಯುವ ತನಕ ಬದುಕುಬಹುದಾಗಿತ್ತು. ಗಾಳಿಯಿಲ್ಲದೆ ಸ್ಮೃತಿ ತಪ್ಪಲಿಲ್ಲ. ಉ ರಾದರೂ ಅದರ ಹೊಟ್ಟೆಯೊಳಗೆ ಯಾವ ತೊಂದರೆಯೂ ಇರಲಿಲ್ಲ. ವಿಪರೀತ ಸೆಕೆಯಾಗಿತ್ತು ಅತಿಯಾದ ಸೆಕೆ. ಹೆದರಿಕೆ ಕತ್ತಲೆ ಇವೇ ಸ್ಮೃತಿ ವಿಹೀನನಾಗಲು ಕಾರಣವಾಯಿತು. ಅದು ಹೊಟ್ಟೆಯು ದೊಡ್ಡ ಕೊಠಡಿಯು ಹಾಗೂ ಅದರ ಬಾಯೇ ಬಾಗಿಲು ಸಹಾ ಇದೆ. ಎ ದು ತಿಳಿಸಿರುವನು.

ಮೂಢನಂಬಿಕೆ.

ಬೊಂಬಾಯಿ ಪ್ರಾಂತ್ಯದ ಒಂದು ಗ್ರಾಮದಲ್ಲಿ ಕಳೆದ ಆಗಸ್ಟಿನಲ್ಲಿ ಕಾಲರಾ ಪ್ರಾಪ್ತವಾಗಿ ಅದರ ನಿವಾರಣೆಗಾಗಿ ಮಾಡಿದ ಪ್ರಯತ್ನಗಳೊಂದೂ ಸಫಲವಾಗದಿರಲು, ಕೆಲವುಹೆಂಗಸರು ನೆಲದಲ್ಲಿ ಒಂದು ಬೊಂಬೆಯನ್ನು ಹೂಳಿಟ್ಟು ಮಾಟಮಾಡಿರುತ್ತಾರೆಂದು ಫಕೀರನೊಬ್ಬನು ಹೇಳಿದನು. ಆ ಗ್ರಾಮಸ್ಥರು ನಾಲ್ವರು ಹೆಂಗಸರನ್ನು ಮಾಟಮಾಡಿರಬಹುದೆಂಬ ಊಹೆಯ ಮೇಲೆ ಚೆನ್ನಾಗಿ ಹೊಡೆದು ಕಾಲಿಗೆ ಹಗ್ಗ ಕಟ್ಟಿ ಮರಕ್ಕೆ ತೂಗಹಾಕಿದರು. ಪೋಲೀಸಿನವರು ಈ ತಪ್ಪು ಮಾಡಿದ ಮೂವರು ಭಿಲ್ಲರಿಗೆ ಏಳರಿಂದ ಹತ್ತು ವರ್ಷಗಳವರೆಗಿನ ಸಜಾ ವಿಧಿಸಿದರು.

ವಿಚಿತ್ರ ಗಡಿಯಾರ.

ಪೋಲೆಂಡಿನ ವಿಲ್‌ನಾ ಎಂಬಲ್ಲಿ ಅತಿ ವಿಚಿತ್ರವಾದ ಗಡಿಯಾರವಿದೆ. ಆ ಗಡಿಯಾರವು ಒಂದು ದೇವಾಲಯವನ್ನೆಲ್ಲಾ ಆಕ್ರಮಿಸಿಕೊಂಡಿದೆ ದೇವಸ್ಥಾನದ ಗೋಪುರದ ಮೇಲೆ ಗಡಿಯಾರದ ಡೈಲುಗಳಿವೆ. ಇದು ಅರ್ಧಘಂಟೆ, ಘಂಟೆಗಳನ್ನು ಹೊಡೆಯುತ್ತದೆ. ಪ್ರಾತಃಕಾಲದ ಪ್ರಾರ್ಥನೆಗೆ ದೇವಸ್ಥಾನದ ಹೊರದ್ವಾರವು ತೆರೆದ ಕೂಡಲೆ ಪ್ರಾರ್ಥನಾ ಗಂಟೆಯು ಈ ಗಡಿಯಾರದಿಂದಲೇ ಬಾರಿಸಲ್ಪಡುತ್ತದೆ.

[illegible]

ನಾಡಿದ್ದೂ 3 ವಾರಗಳವರೆಗೂ ಅವರು ವಾ [illegible]

[illegible]

ಮಾ|| ಎಂ. ಶ್ರೀನಿವಾಸಯ್ಯಂಗಾರ್ಯರ [illegible]

[illegible] ಟ್ಟಿ ಸಲ್ಲಿಸಿ, [illegible]

TAINADU.

Daily Edition.

The Leading Nationalist
Daily of Mysore.

Printed and published by P. R. Ramaiya,
at Sri Rama Press, D. Subbiah Road Mysore.

Regd No. M 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಗುರುವಾರ ೭ ಫೆಬ್ರುವರಿ ೧೯೨೯ [ಸಂಚಿಕೆ [illegible]

TAI NADU
7—2—1929

ವಿದ್ಯಾರ್ಥಿಗಳ ಸಹಾನುಭೂತಿ

ನಮ್ಮ ರಾಜಧಾನಿಯ ವಿದ್ಯಾರ್ಥಿಗಳು ಗುಜರಾತ್ ಕಾಲೇಜಿನ ವಿದ್ಯಾರ್ಥಿಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ ಸಭೆಯನ್ನು ಮಾಡುವುದು ಅತ್ಯಂತ ಪ್ರಶಂಸನೀಯವು. ವಿದ್ಯಾರ್ಥಿಗಳೇ ನಮ್ಮ ಮುಂದಿನ ಮುಖಂಡರು. ನಮ್ಮ ದೇಶದ ಅಭಿವೃದ್ಧಿಯು ಅವರಿಂದಲೇ ಆಗಬೇಕಾಗಿರುವುದು ಸಂಸಾರದಲ್ಲಿ ಮುಳುಗಿ ತೇಲುತ್ತಿರುವ ಹಿರಿಯರಿಂದ ಏನೂ ಸಾಧ್ಯವಿಲ್ಲ. ಹಿರಿಯರ ಹಿಂಜರಿದಾಗ ಕಿರಿಯವರು ಮುಂದೆ ಬಂದು ದೇಶೋದ್ಧಾರದ ಕಾರ್ಯವನ್ನು ಕೈಕೊಳ್ಳುವುದು ಪ್ರಥಮ ಕರ್ತವ್ಯ. ಈಗಿನ ವಿದ್ಯಾಭ್ಯಾಸದ ಕ್ರಮದಿಂದ ನಮ್ಮ ಯುವಕರ ಶರೀರ ಆತ್ಮ ಮತ್ತು ಮನಸ್ಸುಗಳು ಎಷ್ಟೇ ಹಿಂಡಲ್ಪಟ್ಟಿದ್ದರೂ ಅವರಲ್ಲಿ ಆತ್ಮಾಭಿಮಾನವೂ ದೇಶಾಭಿಮಾನವೂ ಅಚ್ಚಳಿಯದೆ ಉಳಿದಿರುವುದು ಸಂತೋಷಕರವು. ಇತರದೇಶಗಳ ಯುವಕರು ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗವನ್ನು ಮಾಡಿರುವುದನ್ನು ನಮ್ಮ ಯುವಕರುಬಲ್ಲರು. ಟರ್ಕಿ, ಪರ್ಶಿಯ, ಆಫ್‌ಘಾನಿಸ್ಥಾನ್, ಚೈನಾ, ಜಪಾನ್, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಯುವಕರು ಮಾಡಿರುವ ಸ್ವಾರ್ಥತ್ಯಾಗದ ಅದ್ಭುತಸಾಹಸಗಳು ನಮ್ಮ ಯುವಕರನ್ನು ಹುರಿದುಂಬಿಸಿರುವವು. ಈಗಿನ ವಿದ್ಯಾಭ್ಯಾಸ ಪದ್ಧತಿಯು ನಮ್ಮ ದೇಶಾಭಿಮಾನಕ್ಕೆ ಕುಂದಕವನ್ನು ತರುತ್ತಿರುವುದು. ನಮ್ಮ ಭಾಷೆ, ನಮ್ಮ ಸಂಸ್ಕೃತಿ ನಮ್ಮ ನಡೆನುಡಿಗಳಿಗೆಲ್ಲಾ ಈ ವಿದ್ಯಾಭ್ಯಾಸ ಪದ್ಧತಿಯು ತಿಲೋದಕವನ್ನು ಕೊಡಿಸುತ್ತಿರುವುದು ಇದುಸಾಲದೆ ನಮ್ಮ ಯುವಕರ ಆತ್ಮವನ್ನೂ ನಾಶಮಾಡಲು ಹೊರಟಿರುವುದು. ಸೈಮನ್ ಕಮಿಷನ್ನಿಗೆ ಗುಜರಾತ್ ಕಾಲೇಜಿನ ವಿದ್ಯಾರ್ಥಿಗಳು ಬಹಿಷ್ಕಾರಹಾಕಿದರೆ ಪ್ರಿನ್ಸಿಪಾಲರಿಗೆ ಏಕೆ ಕೋಪ, ? ಸೈಮನ್ ಕಮಿಷನ್ನನ್ನು ಧಿಕ್ಕರ ಮಾಡಿದ್ದಕ್ಕೇನೆ ಆ ಪ್ರಿನ್ಸಿಪಾಲರಿಗೆ ಕೋಪಬಂದರೆ ಭಾರತೀಯ ಜನಾಂಗವನ್ನೇ ಧಿಕ್ಕಾರಮಾಡಿದವರ ಮೇಲೆ ಭಾರತೀಯರಿಗೆ ಎಷ್ಟು ಕೋಪವಿರಬೇಕು? ಇಂಗ್ಲೀಷರಿಗೇ ದೇಶಾಭಿಮಾನ ಆತ್ಮಾಭಿಮಾನ ಮುಂತಾದ ಸದ್ಗುಣಗಳು ಇರುವುವು ಭಾರತೀಯರಿಗೆ ಮಾತ್ರ ಇಲ್ಲವೊ? ಈ ರೀತಿಯಾಗಿ ಭಾವಿಸುವುದು ಅಹಂಭ್ರಂಹತ್ಯವಲ್ಲವೊ? ಅದು ಯೇನಾದರೂ ಆಗಲಿ ಇಂದು ಭಾರತೀಯ ವಿದ್ಯಾರ್ಥಿಗಳು ಆಸೇತು ಹಿಮಾಚಲ ಪರ್ಯಂತವಾಗಿಯೂ ತಾವು ಇತರರಿಗೆ ಯಾವರೀತಿಯಲ್ಲೂ ಕಡಿಮೆಯಿಲ್ಲ ವೆಂಬುದನ್ನು ತೋರಿಸಿರುವರು. ಭಾರತವಿದ್ದರೆ ನಾವುಂಟು. ಭಾರತವಿಲ್ಲದೇ ನಾವಿಲ್ಲ ಎಂಬ ಮಹತ್ವವನ್ನು ಭಾರತೀಯ ವಿದ್ಯಾರ್ಥಿಗಳು ಚೆನ್ನಾಗಿ ಪ್ರದರ್ಶಿಸಿರುವರು. ಲೋಕಮಾನ್ಯ ತಿಲಕ ಮಹಾತ್ಮಾ ಗಾಂಧಿ, ಲಾಲಾ ಲಜಪತರಾಯ್ ಮೊದಲಾದ ಭಾರತ ಧುರಂಧರರು ಹಾಕಿಕೊಟ್ಟಿರುವ ಪಾಠವನ್ನು ನಮ್ಮ ವಿದ್ಯಾರ್ಥಿಗಳು ಕಲಿತು ಪಾರಂಗತರಾಗುತ್ತಿರುವರು. ನಮ್ಮ ದೇಶಕ್ಕೆ ಇದೊಂದು ಶುಭಚಿಹ್ನೆ. ಹಿರಿಯರು ತರುಣರ ಉತ್ಸಾಹಭಂಗವನ್ನು ಮಾಡದೆ ಅವರನ್ನು ವಿಜಯಮಾರ್ಗಕ್ಕೆ ಒಯ್ಯಲಿ ಎಂಬುದಾಗಿ ಕೋರುತ್ತೇವೆ.

ಜವಾಬ್ದಾರಿ ಸರ್ಕಾರದ ರಹಸ್ಯ

ರಾಜಕೀಯ ಸುಧಾರಣೆಗಳೆಂದರೆ ನಮ್ಮ ಸರಕಾರದವರಿಗೆ ಏಕೆ ಇಷ್ಟು ಅಸೂಯೆ? ಪ್ರಜೆಗಳು ಮುಂದೆ ಬಂದು ನಾವೂ ನಿಮ್ಮ ಭಾರವನ್ನು ಸ್ವಲ್ಪ ವಹಿಸುತ್ತೇವೆ ಎಂದು ಹೇಳಿದರೆ ಸರ್ಕಾರದವರು ಸಂತೋಷದಿಂದ ಸಮಾಧಾನವನ್ನು ವಹಿಸುವುದಕ್ಕೆ ಬದಲಾಗಿ ಇಲ್ಲದ ಸಲ್ಲದ ಸಬೂಬುಗಳನ್ನು ಹೇಳಿ ಪ್ರಜೆಗಳಿಗೆ ತೇಜೋವಧೆಯನ್ನು ಏತಕ್ಕೆ ಮಾಡಬೇಕು. ಪ್ರಜೆಗಳು ಮುಂದೆ ಬಂದರೆ ಸರ್ಕಾರಕ್ಕೆ ಏನು ಹಾನಿ? ಸರ್ಕಾರವೆಂದರೇನು? ಭಾರಿ ಭಾರಿ ವೇತನವನ್ನು ತಿನ್ನುವ ಶ್ರೀಮನ್ಮಹಾರಾಜರವರ ನೌಕರರೇ ಅಲ್ಲವೇ? ಇವರ ಕೈಯಲ್ಲಿ ಮಾತ್ರ ಆಡಳಿತವು ಇರಬೇಕು. ಪ್ರಜೆಗಳ ಕೈಗೆ ಹೋಗಕೂಡದು ಯೆಂಬುದು ಯಾವ ಛಲ? ಸರ್ಕಾರಕ್ಕೆ ಬೇಕಾಗಿರುವುದು ಪ್ರಜಾಕ್ಷೇಮ. ಪ್ರಜೆಗಳಿಗೆ ಬೇಕಾಗಿರುವುದೂ ಪ್ರಜಾಕ್ಷೇಮ. ಉದ್ದೇಶವು ಒಂದೇ ಆಗಿರುವುದು. ಸರಕಾರದ ನೌಕರರು ಇದೇ ದೇಶೀಯರು ಎಂದ ಮೇಲೆ ಅವರಿಗೂ ಇವರಿಗೂ ವ್ಯತ್ಯಾಸವೇನು? ವಿದ್ಯಾಭ್ಯಾಸ ಅನುಭವ, ಮೊದಲಾದುವುಗಳಲ್ಲಿ ಇರಬಹುದು. ಪ್ರಜೆಗಳಲ್ಲಿಯೂ ವಿದ್ಯಾವಂತರಿಗೂ ಅನುಭವಸ್ಥರಿಗೂ ಜವಾಬ್ದಾರಿಯನ್ನು ಕೊಡಿ ಭಾರಿ ಭಾರಿ ಸಂಬಳ ತೆಗೆದುಕೊಂಡ ಮಾತ್ರಕ್ಕೆ ಸರ್ಕಾರದ ನೌಕರರು ಅಂತರಿಕ್ಷದಿಂದ ಇಳಿದವರೆಂದು ಹೇಳುವುದಕ್ಕೆ ಆಗುವವಿಲ್ಲ. ವಾಸ್ತವ್ಯವಾಗಿ ನೋಡುವಲ್ಲಿ ಸರ್ಕಾರದ ಹೊರಗೆ ಇರುವವರಲ್ಲಿ ಎಷ್ಟೋ ಮಂದಿ ಸರ್ಕಾರದ ಒಳಗೆ ಧುರಂಧರರು ಯೆಂದೆನಿಸಿಕೊಂಡಿರುವವರಿಗಿಂತಲೂ ಹೆಚ್ಚು ನಿಪುಣರಾಗಿದ್ದಾರೆ. ಇಂಥಹವರೆಲ್ಲಾ ತಮ್ಮ ಬುದ್ಧಿ ವಿಕಾಸಕ್ಕೆ ಅವಕಾಶವಿಲ್ಲದೆ ಕೊಳೆಯುತ್ತಿರುವರು. ಜವಾಬ್ದಾರಿ ಸರ್ಕಾರಿ ಪದ್ಧತಿಯನ್ನು ಏರ್ಪಡಿಸುವುದರಿಂದ ಪ್ರಜೆಗಳಲ್ಲಿ ಸಮರ್ಥರಾದವರೆಲ್ಲರಿಗೂ ಸರ್ಕಾರದ ಆಡಳಿತದಲ್ಲಿ ಭಾಗವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವು ದೊರೆಯುವುದು. ಇದೇ ಜವಾಬ್ದಾರೀ ಸರ್ಕಾರದ ರಹಸ್ಯ.

ಸರಕಾರೀ ಆರ್ಡರಿನ ಖಂಡನೆ.

ಕಳೆದ ಸೋಮವಾರ ಸಾಯಂಕಾಲ ಬೆಂಗಳೂರು ಕಳಾಸಿಪಾಳ್ಯದ ಜಯಲಕ್ಷ್ಮಿ ಥಿಯೇಟರಲ್ಲಿ ಮ|| ಪಿ. ಸುಬ್ಬರಾಮಯ್ಯಶೆಟ್ಟರ ಅಧ್ಯಕ್ಷತೆಯಲ್ಲಿ ಮಹಾಜನಗಳ ಸಭೆಯು ನಡೆಯಿತು. ಸುಮಾರು 2000 ಜನರು ನೆರೆದಿದ್ದರು. ಮ|| ಗಳಾದ ಡಿ. ವಿ. ಗುಂಡಪ್ಪನವರು, ಎಂ. ಪಿ. ಸೋಮಶೇಖರರಾಯರು. ಬಿ. ಎಸ್. ಬೈಯಣ್ಣನವರು ಸೀತಾರಾಮಶಾಸ್ತ್ರಿಗಳೇ ಮೊದಲಾದವರು ಭಾಷಣಗಳನ್ನು ಮಾಡಿದರು. ಅತ್ಯಂತ ಮುಖ್ಯವಾದ ಠಾರವುಗಳು ಪಾಸು ಮಾಡಲ್ಪಟ್ಟವು. ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಪ್ರಜೆಗಳಿಗೆ ಒಪ್ಪಿಕೆಯಾಗಿದೆಯೆಂದೂ ಅದರ ಮೇಲೆ ಸರಕಾರದವರು ಮಾಡಿರುವ ಆರ್ಡರು ಅಸಮರ್ಪಕವಾದ ದೆಂದೂ, ಅಪರಾಧಿಗಳಿಗೆಲ್ಲಾ ವಿಚಾರಣೆಯಾಗಿ ಶಿಕ್ಷೆಯಾಗಬೇಕೆ ದೂ, ಕಮಿಟಿಯವರು ಸೂಚಿಸಿರುವಂತೆ ಪ್ರಜೆಗಳಿಗೆ ಜವಾಬ್ದಾರೀ ಸರಕಾರವು ಕೊಡಲ್ಪಡಬೇಕೆಂದೂ ಇವುಗಳನ್ನೆಲ್ಲಾ ಜನರಲ್ಲಿ ಪ್ರಚಾರ ಮಾಡುವುದಕ್ಕೆ ಪ್ರಜಾಸಂಘವೆಂಬ ಒಂದು ಸಂಸ್ಥೆಯು ಏರ್ಪಡಿಸಲ್ಪಡಬೇಕೆಂದೂ ತೀರ್ಮಾನವಾಯಿತು. ಮ|| ಎಂ. ಸೀತಾರಾಮ ಶಾಸ್ತ್ರಿಗಳು ಪ್ರಜಾಸಂಘದ ಪ್ರಚಾರಕರಾಗಿ ಇಡೀ ಸಂಸ್ಥಾನದಲ್ಲಿ ಕೆಲಸ ಮಾಡುವುದಾಗಿ ತಿಳಿಸಿದರು. (ಡೇಲೀ ಪೋಸ್ಟ್)

ದಿರಿಸ್‌ನ ಕಾನ್ಫರೆನ್ಸು

ಸರ್ಕಾರಿ ಸಂಬಳದ ಜನರು ಕಾನ್ಫರೆನ್ಸುಗಳ ಮಾಡುತ್ತಾರೆ. ಅವರಿಗೆ ಕಷ್ಟ ... ಎಲ್ಲಾದರೂ ಆಗಲಿ ಎಷ್ಟಾದರೂ ಖರ್ಚಾಗಲಿ ... ಇಲ್ಲ ಕಾನ್ಫರೆನ್ಸು ನಡೆಯಿಸಬಹುದು. ಬೇಕಾದಷ್ಟು ... ರ್ಯವಾಗಿ ಭಯಪಟ್ಟುಕೊಂಡು ಮಾತಾಡಬಹುದು ... ಕಾರ ಮಾಡಿಕೊಳ್ಳಬಹುದು. ಉಪ್ಪಿಟ್ಟು ಕಾಫಿ ತಿನ್ನ... ಹುದು. ಚಿರೋಟಿ ಕೀರು ಸಮಾರಾಧನೆ ಆಗಬಹುದು ... ಸಮಾರಾಧನೆ ಆದಕೂಡಲೆ ಗಟರ್ 'ಎಂತ ತೇಗು ... ಮೇಲೆ ರೈತನಿಗೂ (ಕಮ್ಮಾರನಿಗೂ) ಗಟರ್ ಎಂತ ... ಗು ಬರತ್ತೇನೊ ರೈತರು ಹೇಳಬೇಕು ಲೋಕದ... ವ ರೈತರಿಗೆ ತೇಗು ಬರುತ್ತೊ ಇಲ್ಲವೊ ಕಾಣೆ ... ಕದ ರೈತರಿಗೆ ತೇಗು ಬರತ್ತೆ (ನನಗೂ ಹಾಗಾಯ...

ಸರ್ಕಾರಿ ಜನರು ಆ ಕಾನ್ಫರೆನ್ಸು ಈ ಕಾನ್ಫರೆ... ಜೊತೆಗೆ ದಿರಿಸಿನ ಕಾನ್ಫರೆನ್ಸು ಮಾಡಬಾರದೆ? ಕೋಟು ಟೈ. ಕಾಲರ್. ಜರೀಪೇಟ ಬೂಟ್ಸು ಸರಾಯಿ ಕಾಲುಚೀ... ಲ ಅನೇಕರು ಹಾಕಿಕೊಂಡರೂ ನಮ್ಮ ಜನರಲ್ಲಿ ದಿರಿಸಿ... ನಲ್ಲಿ (ದುಸ್ತು) ರಿಫಾರ್ಮು ಆಗಿಲ್ಲ. ಹಳೇಕಂದಾಚಾರದಲ್ಲೇ ರೈತರು ಇದಾರೆ.

ಎಲ್ಲಿ ರೈತರು ಯಾವ ದುಸ್ತು ಹಾಕಿಕೊಳ್ಳಬೇಕ... ಹಚ್ಚಡದಂತೆ ಜೋಡಿ ದುಪ್ಪಟಿ, ಮಂಡಿಮೇಲಕ್ಕೆ ... ಲುಪರಕಲುಗುಡ್ಡೆ. ಜೊಟ್ಟಾಪಟ್ಟಾರುಮಾಲು—ಇ... ದ್ದರೆ ಪರಕಲ ಕೂದಲು ಇದೇಸಾಕೇ? ಕೋರ್ಟು ಕ... ರಿ ಆಫೀಸು ಬಾಗಿಲಿಗೆ ಬರುವ ನಾನಾದಿರಿಸಿನ ಜನ... ಆಗುವ ಮರ್ಯಾದೆ ನೊಡಿ. ಹ್ಯಾಟ್ ಬೂಟು ಟೈ ಕಾ... ರ್ ನವರ್ನ ಕಂಡರೆ ಡಳಾಯಿತಾ ಮಾತಾಡ್ತಾನಾ ... ರೀರುಮಾಲು ಕೋಟು ವಸ್ತ್ರದವರನ್ನ ಬನ್ನಿ ಅನ್ನೊ... ಲ್ವೆ? ಹರಕಲ ಬನೀನು, ಕೊಳಕುಪಂಚೆ, ಪರಕಲು ... ಟ್ಟನವನಿಗೆ ದಗಲು ಪಟ್ಟೆ ಆಗ ವೃದಿಲ್ವೆ? ದಿರಿಸಿಗೆ ... ಇರೊದು ಮರ್ಯಾದೆ? ನಮ್ಮ ದಿರಿಸು ನಮ್ಮ ಇರು... ಯನ್ನು ತೋರಿಸೋದಿಲ್ವೆ.

(ಹಕ್ಕಿ ಪ...

ಪೋಸ್ಟಲ್ ಕಾಂಗ್ರೆಸ್.

ಪ್ರಿನ್ಸ್ ಆಫ್ ವೇಲ್ಸರವರು ಲಂಡನ್ ಪಟ್ಟಣ... ಮೇ ತಿಂಗಳಲ್ಲಿ ನಡೆಯುವ ಪೋಸ್ಟಲ್ ಕಾಂಗ್ರೆಸ್ಸಿ... ಧಿವೇಶನವನ್ನು ಪ್ರಾರಂಭಿಸುವರು.

ಮುನಿಸಿಪಲ್ ಕೌನ್ಸಿಲ್.

ಮಿ|| ಸೈಯದ್ ಇಬ್ರಾಹಿಮ್‌ರವರನ್ನೂ ಕೋ... ಪೇಟೆ ಮುನಿಸಿಪಾಲಿಟಿಯಲ್ಲಿ ರಾಜೀನಾಮೆ ಕೊಟ್ಟ ... ಪೀರ್‌ಬೇಗ್‌ರವರ ಸ್ಥಾನಕ್ಕೆ ಚುನಾಯಿಸಿರುತ್ತಾ...

ರೈಲ್ವೆ ಆದಾಯ

ಮೈಸೂರು ರೈಲ್ವೆಗಳ ಆದಾಯವು 1929 ನೇ ... ವರಿ 19 ನೇ ತಾ|| ಅಖೈರಾದ ವಾರಕ್ಕೆ ಒಟ್ಟು 67... ರೂ. ಗಳು ಹೋದ ವರುಷ ಇದೇ ವಾರದಲ್ಲಿ ... ರೂ. ಹೆಚ್ಚಿತು

ನಂದಿ ಜಾತ್ರೆ

1929 ನೇ ಮಾರ್ಚಿ 9 ರಿಂದ 18 ರ ವರೆಗೆ ... ಳ್ಳಾಪುರದ ತಾ|| ನಂದಿಯಲ್ಲಿ ನಡೆಯುವ ಜಾ... ಅಂಟುಜಾಡ್ಯಗಳಿರುವ ಪ್ರದೇಶಗಳಿಂದ ಯಾರೂ ... ಗಕೂಡದೆಂದೂ ಇದಕ್ಕೆ ವಿರೋಧವಾಗಿ ನಡೆದವ... ಲ್ಲಿಂದ ವಾಪಸು ಕಳುಹಿಸಲ್ಪಡುವರೆಂದೂ ಸರ್ಕಾ... ರು ತಿಳಿಸಿರುತ್ತಾರೆ.

ತಾಯಿನಾಡು.

7—2—1929

ವರ್ತಮಾನ ಸಂಗ್ರಹ

ಶ್ರೀಮನ್ಮಹಾರಾಜರವರ ಮೃಗಯಾವಿಹಾರ

ಶ್ರೀಮನ್ಮಹಾರಾಜರವರ ಸ್ವಾರಿಯು ಮಿತಪರಿವಾರದೊಡನೆ ಅರ್ಸೀಕೆರೆ ಮಾರ್ಗವಾಗಿ ಭದ್ರಾವತಿಗೆ ಚಿತ್ತೈಸಿ ಅಲ್ಲಿಯ ಕಬ್ಬಿಣದ ಕಾರ್ಯಾಲಯವನ್ನು ಪರಾಮರ್ಶಿಸಿಕೊಂಡು ಶಿವಮೊಗ್ಗ ಡಿ|| ಕಾಡಿನಲ್ಲಿ ಮೃಗಯಾವಿಹಾರಕ್ಕೆ ಚಿತ್ತೈಸುವುದಾಗಿ ತಿಳಿಯಬರುತ್ತದೆ.

ಪತ್ರಿಕಾಕರ್ತರಿಗೆ ಶಿಕ್ಷೆ

ಸಂಯುಕ್ತ ಪ್ರಾಂತ್ಯಗಳಲ್ಲಿ ಪ್ರಚುರಗೊಂಡಿರುವ "ಮದೀನ" ಪತ್ರಿಕೆಯ ಸಂಪಾದಕರು ಅಫ್ಘಾನಿಸ್ಥಾನದ ದಂಗೆಕೋರರಿಗೆ ಬ್ರಿಟಿಷರು ಸಹಾಯವಾಗಿರುವರೆಂದು ಬರೆದಿದ್ದುದರಿಂದ ಅವರನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಸರ್ಕಾರದವರು ನಿರ್ಧರಿಸಿರುವರು.

ಸ್ತ್ರೀ ದ್ರೋಹ

ಬೊಂಬಾಯಿನ ಡಾಕ್ಟರನೊಬ್ಬನು ದಾದಿಯೋರ್ವಳಿಗೆ ವಿವಾಹವಾಗುವೆನೆಂದು ವಾಗ್ದಾನಮಾಡಿ ಲೇಡಿಯೊಬ್ಬಳನ್ನು ಮದುವೆಯಾದ್ದರಿಂದ ಆ ದಾದಿಯು ಡಾಕ್ಟರಿಂದ ಎಂಟುಸಾವಿರ ರೂ ಗಳ ಪರಿಹಾರವನ್ನು ನ್ಯಾಯಸ್ಥಾನದಲ್ಲಿ ಪಡೆದಳು.

ಹಿಂದುಸ್ಥಾನೀ ಸೇವಾದಳ.

ಮೇಲ್ಕಂಡ ದಳದ ಎಲ್ಲಾ ಶಾಖೆಯವರೂ ಪ್ರತಿ ವಾರದ ಕಡೆಯ ಭಾನುವಾರ ಬೆಳಿಗ್ಗೆ 8 ಘಂಟೆಗೆ ರಾಷ್ಟ್ರಧ್ವಜಕ್ಕೆ ವಂದಿಸುವ ಸಮಾರಂಭವನ್ನು ಕೈಕೊಳ್ಳಬೇಕೆಂದು ಶ್ರೀ ಜವಾಹಿರ್ ಲಾಲ್‌ರವರು ಸರ್ವರಿಗೂ ಕೃತಪಡಿಸಿರುವರು.

ಸಾಂಡರ್ಸ್ ಕೊಲೆಯ ಗುಟ್ಟು.

'ಸಾಂಡರ್ಸ್'ನನ್ನು ಕೊಂದಂಥಾ ಕೊಲೆಪಾತಕನೇ ತಾನೆಂದೂ, ತನ್ನನ್ನು ಹಿಡಿದವರಿಗೆ 25 ಸಾವಿರ ರೂ, 'ಗಳನ್ನು ಕೊಡುತ್ತೇನೆಂದೂ' ಕೈಯಲ್ಲಿ ಬರಸಿದ್ದ ದೊಡ್ಡ ಪೋಸ್ಟರು ಲಾಹೋರಿನ ಡಿಸ್ಟ್ರಿಕ್ಟ್ ಕೋರ್ಟಿನ ಗೋಡೆಯ ಮೇಲೆ ಹಚ್ಚಲ್ಪಟ್ಟಿತ್ತು.

ಬೆಂಕಿಯ ಅನಾಹುತ.

ಬ್ರಿಟನಿನ ಒಂದು ಸಿನಿಮಾ ಮಂದಿರಕ್ಕೆ ಬೆಂಕಿಯು ತಗಲಿದರೂ ನಡೆಯುತ್ತಿದ್ದ ಆಟವು ಮಾತ್ರ ನಿಲ್ಲಲಿಲ್ಲ. ಪ್ರೇಕ್ಷಕರೆಲ್ಲರೂ ಓಡಿದರು. ನಾನೂರು ಸಾವಿರ ಪೌನುಗಳ ವೆಚ್ಚದಿಂದ ಕಟ್ಟಿಸಿದ್ದ ಆ ಮಂದಿರವು ಕೆಳಕ್ಕೆ ಉರುಳಿಬಿತ್ತು.

ಜರ್ಮನರ ನಾವೆ.

ಜರ್ಮನಿಯವರು ಹತ್ತು ಸಾವಿರ ಟನ್ ಭಾರಕ್ಕಿಂತ ಹೆಚ್ಚಾದ ಯುದ್ಧದ ಹಡಗುಗಳನ್ನು ಕಟ್ಟಕೂಡದೆಂದು ಫ್ರಾನ್ಸಿನವರಿಗೂ ಮತ್ತು ಅವರಿಗೂ ಒಪ್ಪಂದವಾಗಿತ್ತು. ಈಗ ಅಷ್ಟೇ ಭಾರದೊಳಗೆ ಇರುವ 11 ಫಿರಂಗಿಗಳನ್ನೂ, ಸಬ್‌ಮೇರೀನ್‌ಗಳನ್ನೂ, ಟಾರ್ಪಡೊಗಳನ್ನೂ ತಯಾರಿಸಿ 75 ಮೈಲಿಗಳ ವೇಗದ ಹಡಗನ್ನು ಜರ್ಮನರು ಕಟ್ಟಿರುವರು. ಇದರಿಂದ ಫ್ರೆಂಚರಿಗೆ ಭಯ ಉಂಟಾಗಿದೆ.

ರಾಷ್ಟ್ರೀಯ ಧ್ವಜಾರೋಹಣ

ಕಳೆದ ತಿಂಗಳ 27 ನೇ ಭಾನುವಾರ ತುಮಕೂರು ಪುರನಿವಾಸಿಗಳೆಲ್ಲರೂ ಶ್ರೀಯುತ ರಂಗಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ರಾಷ್ಟ್ರಧ್ವಜಾರೋಹಣ ದಿನವನ್ನು ಗಾಂಧಿ ವೈದ್ಯಶಾಲೆಯಲ್ಲಿ ಬಹು ಸಂಭ್ರಮದಿಂದ ಆಚರಿಸಿದರು.

ರಜಾ.

ತುಮಕೂರು ಸ್ಪೆಷಲ್ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಬಿ. ಆರ್. ರಾಮಲಿಂಗಯ್ಯನವರಿಗೆ ಫೆಬ್ರವರಿ 1 ನೇ ತಾ|| ನ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾ|| ನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಲೈಸೆನ್ಸಿಂಗ್ ಬೋರ್ಡ್

ಕೋಲಾರದ ಗೋಲ್ಡ್‌ಫೀಲ್ಡ್ಸಿನ ಎಕ್ಸೈಜು ಲೈಸೆನ್ಸಿಂಗ್ ಬೋರ್ಡಿನ ಮೆಂಬರುಗಳ ಅವಧಿಯು ಮುಗಿದದ್ದರಿಂದ, ಪುನಃ ಅದೇ ನಾಮಿನೇಟೆಡ್ ಮೆಂಬರುಗಳಿಗೆ ಮತ್ತೆ ಮೂರುವರ್ಷಗಳ ಅವಧಿಯನ್ನು ಹೆಚ್ಚಿಸಿರುವರು.

ಆಂಗ್ಲೇಯರ ಪೂಜ್ಯಭಾವನೆ.

ಆಕಸ್ಮಾತ್ತಾಗಿ ದಿಲ್ಲಿಯಲ್ಲಿ ಮೃತನಾದ ಅಮೇರಿಕಾ ಪ್ರಯಾಣಿಕನ ಶವಸಂಸ್ಕಾರವು ಅತನು ಬರೆದಿಟ್ಟದ್ದ 'ವಿಲ್' ಪ್ರಕಾರ ಯಮುನಾ ನದೀ ತೀರದಲ್ಲಿ ನಡೆಯಿತು.

ಲಾಹೋರಿನ ಭೂಕಂಪ.

ಈ ವಾರದ ಒಂದನೇ ತಾರೀಖಿನ ರಾತ್ರಿ 1-45 ನಿಮಿಷದಲ್ಲಿ ಲಾಹೋರಿನಲ್ಲಿ ಭೂಕಂಪವಾಯಿತು. ಅನೇಕ ಭಾರಿ ಕಟ್ಟಡಗಳೆಲ್ಲಾ ನಡಗಿ, ಎಲ್ಲಿ ಬೀಳುತ್ತವೋ ಎನ್ನುವ ಪಟ್ಟಿನ ಗಾಬರಿಯುಂಟುಮಾಡಿತು.

ವರ್ಗ.

ರೈಲ್ವೆ ಮತ್ತು ಸಿ. ಐ. ಡಿ ಅ|| ಸೂಪರಿಂಟೆಂಡೆಂಟರಾದ ಮಿ || ಜೆ. ಜಫ್. ಅಂಡರ್‌ಸನ್‌ರವರು ಫ್ರೆಂಚ್ ರಾಕ್ಸ್ ಸರ್ಕಲಿನ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು.

ಅಂಗ್ಲ ವೃದ್ಧ.

ಇಂಗ್ಲೆಂಡಿನ ನಾಟಿಂಗ್‌ಹ್ಯಾಮಿನಲ್ಲಿ ಒಂದುನೂರನೇ ವರ್ಷದ ವೃದ್ಧನೊಬ್ಬನು ಆರೋಗ್ಯದೃಢಕಾಯನಾಗಿರುವನಲ್ಲದೆ ಈಗಲೂ ವಿವಾಹವಾಗಬೇಕೆಂಬ ಚಾಪಲ್ಯ ಹೊಂದಿರುವನಂತೆ.

ಅಮೂಲ್ಯ ವಜ್ರಗಳ ಕಳವು

ಲಂಡನ್ ನಗರದ ಅಂಚೆಯಕಚೇರಿಯಲ್ಲಿ ಸುಮಾರು 10,000 ಪೌನು ಬೆಲೆಬಾಳುವ ವಜ್ರದ ಕಟ್ಟುಗಳುಳ್ಳ ಒಂದು ಚೀಲವು ಕಳುವಾಗಿರುವುದ, ಪೋಲೀಸಿನವರು ಪತ್ತೆ ತಂದುದನ್ನು ನಡೆಯಿಸುತ್ತಿರುವರು.

ಮುನಿಸಿಪಾಲಿಟಿಯ ರದ್ದು

ಮೈಸೂರು ತಾ|| ನಲ್ಲಿ ರಾಮಸಮುದ್ರ ಮುನಿಸಿಪಾಲಿಟಿಯನ್ನು ತೆಗೆದುಹಾಕಬೇಕೆಂಬುದು [illegible] ಇದಕ್ಕೆ ವಿರೋಧಾಭಿಪ್ರಾಯವುಳ್ಳವರು, ಈ ಲಾಗಾಯಿತು ಎರಡು ತಿಂಗಳೊಳಗಾಗಿ ಸಕಾರಣಗಳನ್ನು ಲಿಖಿತ ಮೂಲಕ ಮೈಸೂರು ಡಿ|| ಡೆಪ್ಯುಟಿಕಮಿಷನರ್‌ರವರಲ್ಲಿ ಹಾಜರು ಪಡಿಸಬೇಕೆಂದು ಪ್ರಕಟವಾಗಿದೆ.

[illegible] ಜಾತ್ರೆ

ಸಿಡ್ಲಘಟ್ಟದ ತಾ|| [illegible] ಈ ಮಾಹೆ 18 ನೇ ತಾ|| ನಿಂದ 10 ದಿನಗಳು ನಡೆಯುವ ವೆಂಕಟರಮಣಸ್ವಾಮಿ ಜಾತ್ರೆಗೆ ಅಂಟುಜಾಡ್ಯಗಳಿರುವ ಪ್ರದೇಶಗಳಿಂದ ಯಾರೂ ಹೋಗಕೂಡದೆಂದೂ [illegible] ಸರ್ಕಾರದ ಪ್ರಕಟಣೆಯಾಗಿದೆ

ಆಡಿಟರ್

ಬೆಂಗಳೂರು ಸಿಟಿ [illegible] ರ್ಡ್ ಅಸಿಸ್ಟೆಂಟ್ ಕಂಟ್ರೋಲರರಾದ ಮಿ|| ಟಿ. ಸುಬ್ಬರಾಮಯ್ಯನವರಿಗೆ ಇಂಗ್ಲೀಷು, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳ ಲೆಕ್ಕಗಳನ್ನು [illegible] ಹುಂಗಾಮಿಯಾಗಿ ಆಡಿಟರ್ ಸರ್ಟಿಫಿಕೇಟು ಕೊಟ್ಟಿದೆ.

ಮಾರ್ಕಂಡೇಯಸ್ವಾಮಿ ಜಾತ್ರೆ

ಕೋಲಾರ ತಾ|| ವಕ್ಕಲೇರಿಯಲ್ಲಿ ಈ ತಿಂಗಳು 1 ರಿಂದ ಈ ಮಾಹೆ ಆಖೈರಿನವರಿಗೆ ನಡೆಯುವ ಮಾರ್ಕಂಡೇಯಸ್ವಾಮಿ ಜಾತ್ರೆಗೆ ಪ್ಲೇಗ್, ಕಾಲರಾ ಮುಂತಾದ ಅಂಟುಜಾಡ್ಯಗಳಿರುವ ಕಡೆಗಳಿಂದ ಯಾರೂ ಹೋಗಕೂಡದೆಂದೂ ಇದಕ್ಕೆ ವಿರೋಧವಾಗಿ [illegible] ವಾಪಸ್ಸು ಕಳುಹಿಸಲ್ಪಡುವರೆಂದೂ ಸರ್ಕಾರದ ಪ್ರಕಟಣೆಯಾಗಿದೆ.

ವರ್ಗಾವರ್ಗಗಳು.

ಹುಂಗಾಮಿ ಅ|| ಕಮೀಷನರವರಾಗಿದ್ದು ಅಮಲ್ದಾರೀ ಕೆಲಸಕ್ಕೆ ಹಿಂದಿರುಗಿದ್ದ ಮಿ|| ಎಸ್. ಎನ್. [illegible] ರು.

[illegible]

ಎರಡನೇ ದರ್ಜೆಯ ಮುನ್ಸಿಫ್‌ರಾದ [illegible] ಎ. ವೇಣುಗೋಪಾಲ ಮೊದಲಿಯಾರ್‌ರವರು ತುಮಕೂರು ಸ್ಪೆಷಲ್ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ[illegible] ಮಾಹೆ ಒಂದನೇ ತಾ|| ಲಾಗಾಯಿತು ವರ್ಗಾಯಿಸಲ್ಪಟ್ಟಿರುವರು.

ಪಬ್ಲಿಕ್ ಅಕೌಂಟ್ಸ್ [illegible]

1928-29ನೇ ಸಾಲಿನ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಮ|| ರಾ|| ಗಳಾದ ಡಿ. ಹೆಚ್. ಚಂದ್ರಶೇಖರಯ್ಯನವರೂ, ಹೆಚ್. ಬಿ. ಗುಂಡಪ್ಪನವರ [illegible] ಲ್ಲಯ್ಯನವರೂ ಲೆಜಿಸ್ಲೇಟೀವ್ ಕೌನ್ಸಿಲ್ [illegible] ಣೆಯಲ್ಲೂ ಸರ್ಕಾರದ ಫೈನಾನ್ಷಿಯಲ್ ಸೆಕ್ರೆಟರಿಯಾದ ಮ|| ಬಿ. ಶ್ರೀನಿವಾಸಯ್ಯಂಗಾರ್ಯರು ಮತ್ತು ವಿದ್ಯಾ ಇಲಾಖೆಯ ಡೈರೆಕ್ಟರಾದ ಮ|| ಎನ್. ಎಸ್. ಸುಬ್ಬರಾಯರೂ ನಾಮಿನೇಷನಲ್ಲೂ ಮೆಂಬರುಗಳಾದವರು. ಛೇರ್‌ಮನ್ನಾಗಿಯೂ, ಸರ್ಕಾರದ ಅರ್ಥಸ [illegible]

ವಿಚಿತ್ರ ವಿವಾಹ

ಇಂಗ್ಲೆಂಡಿನಲ್ಲಿ ಕಳೆದ ವಾರ ಒಂದು ವಿಚಿತ್ರ ವಿವಾಹ ನಡೆಯಿತು. ನಾಲ್ಕು [illegible] ವಧುವಿನ ವಯಸ್ಸು 65 ವರ್ಷ, ವರನ ವಯಸ್ಸು 64 ವರ್ಷ. (14 [illegible]

TAINADU.

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D. Subbiah Road Mysore.

Regd No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ

ಸಂಪುಟ] ಶನಿವಾರ ೯ ಫೆಬ್ರವರಿ ೧೯೩೫ [ಸಂಚಿಕ ೦೭

ವಿಶ್ವೇಶ್ವರಯ್ಯ ಕಮಿಟಿ ವರದಿಯನ್ನು ಅನುಮೋದಿಸಿ ಸರ್ಕಾರದ ಅಪ್ಪಣೆಯನ್ನು ಖಂಡಿಸಲು ನಾಳೆ ಟೌನ್ ಹಾಲಿನಲ್ಲಿ ಸಭೆ ನಡೆಯುವುದು

TAI NADU
9—2—1929

ಮುಂದಿನ ಕಾರ್ಯಕ್ರಮ

ಬೆಂಗಳೂರು ಮಹಾಜನಗಳು ಕಳೆದ ಸೋಮವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಜೆಗಳು ಮುಂದೆ ನಡೆಸಬೇಕಾದ ಕಾರ್ಯಕ್ರಮವನ್ನು ಗೊತ್ತುಮಾಡಿದರು. ಈಗ ಸರ್ಕಾರದವರು ನಡೆಸಿರುವ ಅಸಮಾಧಾನದ ಕೆಲಸಗಳಿಗೆಲ್ಲಾ ನಮ್ಮಲ್ಲಿ ಜವಾಬ್ದಾರೀ ಪದ್ಧತಿಯು ಇಲ್ಲದಿರುವುದೇ ಕಾರಣವೆಂಬುದು ಸ್ಪಷ್ಟವಾಗುವುದು. ಈಗಿನ ರಾಜ್ಯಪದ್ಧತಿಯಂತೆ ಸರ್ಕಾರದವರು ಪ್ರಜಾಭಿಪ್ರಾಯಕ್ಕೆ ಮನ್ನಣೆಯನ್ನು ಈಯುತ್ತಲಿಲ್ಲ. ಈಯಬೇಕಾದ ಬಂಧನವೂ ಇಲ್ಲ. ಈಗಿನ ನ್ಯಾಯವಿಧಾಯಕ ಸಭೆಯೂ ಪ್ರಜಾಪ್ರತಿನಿಧಿ ಸಭೆಯೂ ಬರೀ ತೋರಿಕೆಯ ಸಭೆಗಳು. ಅಲ್ಲಿ ನಡೆಯುವ ಕಾರ್ಯಕಲಾಪಗಳೆಲ್ಲಾ ಬರೀ ಅರಣ್ಯರೋದನ. ಮಂತ್ರಿವರ್ಗದವರು ಪ್ರಜೆಗಳಿಗೆ ಸ್ವಲ್ಪವೂ ಜವಾಬ್ದಾರರಾಗಿಲ್ಲ. ಈ ಪರಿಸ್ಥಿತಿಯಲ್ಲಿ ಜನಜೀವನಕ್ಕೆ ಸ್ವಲ್ಪವೂ ಪ್ರಯೋಜನವಿಲ್ಲದೆ ವೈಷಮ್ಯಗಳು ಜಾಸ್ತಿಯಾಗಿ ಕೋಮುವಾರು ವ್ಯಾಧಿಯು ಉಲ್ಬಣಿಸಿರುವುದು

ಜವಾಬ್ದಾರೀ ಸರಕಾರೀ ಪದ್ಧತಿಯು ಏರ್ಪಾಡಾದರೆ ಸರಕಾರದ ಕೆಲಸಕಾರ್ಯಗಳು ಪ್ರಜಾಭಿಪ್ರಾಯದಂತೆ ನಡೆಯಲು ಅವಕಾಶವಾಗುವುದಲ್ಲದೆ ನಮ್ಮಲ್ಲಿರುವ ಜಾತಿ ವೈಷಮ್ಯವು ತೊಲಗುವುದು. ಇತರ ಪ್ರಾಂತ್ಯಗಳಲ್ಲಿರುವಂತೆ ಪ್ರಜೆಗಳು ಅನ್ಯೋನ್ಯವಾಗಿ ದೇಶರಚನಾ ಕಾರ್ಯದಲ್ಲಿ ತೊಡಗುವರು ಮತ್ತು ಜವಾಬ್ದಾರೀ ಸರಕಾರೀ ಪದ್ಧತಿಯಿಂದ ಸರಕಾರಕ್ಕೂ ಪ್ರಜೆಗಳಿಗೂ ಅನ್ಯೋನ್ಯತೆಯು ಬೇರರುವುದು. ಇಂದು ಖಾಸಗೀ ಸಭಿಕನಾಗಿದ್ದವನು ನಾಳೆ ಮುಖ್ಯ ಮಂತ್ರಿಯಾಗಬಹುದು ಮಂತ್ರಿಗಳು ತಮ್ಮ ಅಧಿಕಾರದ ಸ್ಥಿತಿಗೆ ಪ್ರಜಾಭಿಪ್ರಾಯವೇ ಮುಖ್ಯವೆಂಬುದನ್ನು ಅರಿತು ದಬ್ಬಾಳಿಕೆಯ ಶಸ್ತ್ರವನ್ನು ಉಪಯೋಗಿಸುವುದಿಲ್ಲ.

ಈಗಿನ ಸರ್ಕಾರೀ ಪದ್ಧತಿಯಲ್ಲಿ ಮಂತ್ರಿವರ್ಗದವರು ಪ್ರಜಾವರ್ಗದಿಂದ ಬಂದವರಲ್ಲವಾದ್ದರಿಂದ ಪತ್ರಿಕೆಗಳ ಟೀಕೆಗಳಲ್ಲಿ ಬಹಳ ಅಸಹನೆಯನ್ನು ತೋರಿಸುತ್ತಾರೆ ಪತ್ರಿಕೆಗಳಿಂದ ಪ್ರಯೋಜನವನ್ನು ಹೊಂದುವ ಬದಲು ಅವುಗಳನ್ನು ಕೊನೆಗಾಣಿಸಲು ಪ್ರಯತ್ನಿಸುತ್ತಾರೆ. ಜವಾಬ್ದಾರೀ ಸರಕಾರೀ ಪದ್ಧತಿಯು ಒಂದರೆ ಪತ್ರಿಕೆಗಳಿಗೆ ಉಳಿಗಾಲ. ಹೆಚ್ಚೇನು ಪತ್ರಿಕಾ ಸ್ವಾತಂತ್ರ್ಯವಿಲ್ಲದೆ ಜವಾಬ್ದಾರೀ ಸರಕಾರವಿಲ್ಲ ಜವಾಬ್ದಾರೀ ಸರಕಾರವಿರುವ ದೇಶಗಳಲ್ಲೆಲ್ಲಾ ಪತ್ರಿಕಾ ಸ್ವಾತಂತ್ರ್ಯವುಂಟು.

ಜವಾಬ್ದಾರೀ ಸರಕಾರವನ್ನು ಸ್ಥಾಪಿಸುವುದಕ್ಕೋಸ್ಕರವಾಗಿ ಬೆಂಗಳೂರು ಮಹಾ ಜನಗಳು ಪ್ರಚಾರವನ್ನು ನಡೆಯಿಸಲು ಸಿದ್ಧರಾಗಿರುವುದು ಶುಭಸೂಚನೆ. ಈಗ ಪ್ರಜೆಗಳ ಮುಂದೆ ಇರುವುದು ಇದೇ ಕಾರ್ಯಕ್ರಮ. ಪ್ರಜಾ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಿದವರೆಲ್ಲರೂ ಈ ಕಾರ್ಯಕ್ರಮವನ್ನು ಹುರಿದುಂಬಿಸಿ ಪ್ರಚಾರಕ್ಕೆ ತರು

ಟಿ. ಪರಮಶಿವಯ್ಯರ ಸಾಕ್ಷ್ಯ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿರುವ ಮ॥ ಶಾಮರಾವ್ ಮತ್ತು ಮಿ॥ ಅಬ್ಬಾಸ್ ಖಾನ್ ರ ಮಾನನಷ್ಟದ ಮೊಖದ್ದಮೆಯ ಸಂಬಂಧವಾಗಿ ಮೈಸೂರು ಛೀಪ್ ಕೋರ್ಟಿನ ರಿಟೈರ್ಡ್ ಜಡ್ಜರಾದ ಮ॥ ಟಿ. ಪರಮಶಿವಯ್ಯರ್‌ರವರು ಸಾಕ್ಷಿ ಕೊಟ್ಟಾಗ ತಮಗೆ 1922 ನೇ ಸೆಪ್ಟಂಬರ್ ತಿಂಗಳಿಂದ 1928 ನೇ ಜುಲೈವರಿಗೆ ಅರಮನೆಯಿಂದ ಬರುತ್ತಿದ್ದ ಈ ಕೆಳಗಿನ ಪತ್ರಗಳನ್ನು ಮತ್ತು ಸಂಸ್ಥಾನದ ಅನೇಕ ಪ್ರಾಮುಖ್ಯ ವಿಷಯಗಳ ಮೇಲೆ ಶ್ರೀಮನ್ ಮಹಾರಾಜರವರಿಗೆ ತಾವು ಕಳುಹಿಸುತ್ತಿದ್ದ ಸಲಹೆಗಳನ್ನೂ ಕೋರ್ಟಿನಲ್ಲಿ ಹಾಜರ್ ಮಾಡಿದರು.

ಎಕ್ಸಿಬಿಟ್. ಪಿ. 2

ಮೈಸೂರು.

ತಾ॥ 12 ನೇ ಸೆಪ್ಟಂಬರ್ 1922

ಸ್ವಾಮಿ!

ರಾಜಕೀಯ ಸುಧಾರಣೆಗಳ ವಿಷಯದಲ್ಲಿ ದಿವಾನರು ಕೊಟ್ಟಿರುವ ಸಲಹೆಗಳ ನಕಲನ್ನು ಈ ಪತ್ರದ ಜೊತೆಯಲ್ಲಿ ಕಳುಹಿಸಿರುತ್ತೇನೆ. ಅದರ ಮೇಲೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ಶ್ರೀಮನ್ಮಹಾರಾಜರವರು ತುಂಬಾ ಸಂತೋಷಪಡುತ್ತಾರೆ.

ಇದನ್ನು ಚಿಹು ಗೋಪ್ಯವೆಂದು ಭಾವಿಸಿ. ಇನ್ನೊಂದು ವಾರ ಅಥವಾ 10 ದಿನಗಳೊಳಗಾಗಿ ನಿಮ್ಮ ಜವಾಬನ್ನು ನಿರೀಕ್ಷಿಸಬಹುದೋ? ನಾಳೆಯಿಂದ 4-5 ದಿನಗಳ ಸರ್ಕೀಟು ಹೊರಡುತ್ತೇವೆ. ಕಾಗದಗಳನ್ನು ನನ್ನ ಇಲ್ಲಿನ ಅಡ್ರೆಸ್ಸಿಗೆ ಬರೆಯಬಹುದು.

ತಮ್ಮ ಹಿತಚಿಂತಕ

(ರುಜು) ಮಿರ್ಜಾ ಎಂ. ಇಸ್ಮಾಯಿಲ್

ಎಕ್ಸಿಬಿಟ್ ಪಿ 3

ಅರಮನೆ

ಮೈಸೂರು

ತಾ॥ 23- ನೇ ಸೆಪ್ಟಂಬರ್ 1922

ಸ್ವಾಮಿ!

ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಶ್ರೀಮನ್ ಮಹಾರಾಜರವರ ದಿವ್ಯ ಚಿತ್ತಕ್ಕೆ ಅರ್ಪಿಸಿದ ಅಮೂಲ್ಯವಾದ ತಮ್ಮ ಪತ್ರಗಳಿಗೆ ಉತ್ತರ ಕೊಡಲು ಇಷ್ಟು ಸಾವಧಾನವಾದದ್ದಕ್ಕಾಗಿ ತಮ್ಮ ಕ್ಷಮೆಯನ್ನು ಬೇಡಬೇಕಾಗಿದೆ.

ಖಾವಂದರವರು ಬಹಳ ಪ್ರೀತಿಯಿಂದಲೂ ಪೂರ್ಣಗಮನದಿಂದಲೂ ತಮ್ಮ ಪತ್ರವನ್ನು ನೋಡಿ ತಮ್ಮ ಶ್ರೇಷ್ಠವಾದ ವಂದನೆಗಳನ್ನು ನಿಮಗೆ ತಿಳಿಸಬೇಕೆಂದು ನನಗೆ ತಿಳಿಸಿರುತ್ತಾರೆ.

ಈ ಮುಖ್ಯವಾದ ವಿಚಾರದಲ್ಲಿ ಯಾವರೀತಿಯಾದ ನ್ಯಾಯವುಂಟಾಗುತ್ತೆಂಬುದನ್ನು ನಾನು ಮುಂದೆ ನಿಮಗೆ ತಿಳಿಸುತ್ತೇನೆ.

ತಮ್ಮ ಹಿತಚಿಂತಕ

(ರುಜು) ಮಿರ್ಜಾ ಎಂ. ಇಸ್ಮಾಯಿಲ್

ಮ॥ ಟಿ. ಪರಮಶಿವಯ್ಯರ್‌ರವರಿಗೆ

ಬೆಂಗಳೂರು

ಮಹಾಜನರ ಸಭೆ

ನಾಳೆದಿನ ಸಾಯಂಕಾಲ 6 ಗಂಟೆಗೆ ಟೌನ್ ಹಾಲಿನಲ್ಲಿ ರಾಜಧಾನಿಯ ಪುರನಿವಾಸಿಗಳ ಮಹಾಸಭೆಯು ನಡೆಯುವುದು. ವಿಶ್ವೇಶ್ವರಯ್ಯ ಸಮಿತಿಯ ವರದಿಯನ್ನು ಅನುಮೋದಿಸಿ ಸರ್ಕಾರದವರು ಅದರ ಮೇಲೆ ಕೊಟ್ಟಿರುವ ಹುಕುಮ್ಮನ್ನು ಖಂಡಿಸಲಾಗುವುದು. ಬೆಂಗಳೂರು ಮುಖಂಡರಾದ ಶ್ರೀಯುತರಾದ ಡಿ. ವಿ. ಗುಂಡಪ್ಪನವರೂ, ಎಂ. ಪಿ ಸೋಮಶೇಖರರಾಯರೂ, ವೀರಕೇಸರಿ ಸೀತಾರಾಮಶಾಸ್ತ್ರಿಗಳೂ ಸಭೆಗೆ ದಯಮಾಡಿಸುವ ನಿರೀಕ್ಷಣೆಯಿದೆ. ಮಹಾಜನರೆಲ್ಲರೂ ದಯಮಾಡಿಸಬೇಕಾಗಿ ಕೋರಲ್ಪಟ್ಟಿದೆ.

ಗುಜರಾತ್ ಸತ್ಯಾಗ್ರಹದ ದಿಗ್ವಿಜಯ

ಬೊಂಬಾಯಿ ಸರಕಾರದವರು ಗುಜರಾತ್ ಕಾಲೇಜ್ ವಿದ್ಯಾರ್ಥಿಗಳ ಮೇಲೆ ಇಸಂ 1ಕ್ಕೆ ಹಾಕಿದ್ದ 3೦೦ ಜುಲ್ಮಾನೆಯನ್ನೂ ಮತ್ತೊಂದು ಪರೀಕ್ಷೆ ನಡಸಬೇಕೆಂದಿದ್ದುದನ್ನೂ ವಜಾ ಮಾಡಿರುವರು.

ಮುಖಂಡರ ದಸ್ತಗಿರಿ

ಸ್ವರಾಜ್ಯ ಚಳುವಳಿಯ ಮುಖಂಡರಾದ ಮ॥ ಬ... ಸು ಸಾಂಬಮೂರ್ತಿಯವರನ್ನು ಈ ಮಾಹೆ 7ನೇ ತಾ॥ ಪ್ರಾತಃಕಾಲ. ಸರ್ಕಾರದವರು ಬೆಜವಾಡ ಸ್ಟೇಷನ್ನಲ್ಲಿ ಯಾವಕಾರಣವನ್ನೂ ತಿಳಿಸದೆ ದಸ್ತಗಿರಿ ಮಾಡಿರುವರು.

ಎಕ್ಸಿಬಿಟ್. ಪಿ. 4

ಅರಮನೆ ಮೈಸೂರು

18 ನೇ ಸೆಪ್ಟಂಬರ್ 192[illegible]

ಸ್ವಾಮಿ!

ನಿಮ್ಮ ಕಾಗದಗಳಿಗೆ ಜವಾಬು ಕೊಡಲು ಸಾವಕಾಶವಾದ್ದಕ್ಕೆ ಕ್ಷಮೆಯನ್ನು ಕೇಳಬೇಕು. ಕೃಷ್ಣರಾಜಸಾಗರದ ವಿಷಯದಲ್ಲಿ ನೀವು ಒಂದು "ನೋಟ್" ಅಭಿಪ್ರಾಯವನ್ನು ಕಳುಹಿಸಬೇಕೆಂದು ಮಹಾಸ್ವಾಮಿಯವರು ಅಪೇಕ್ಷೆಪಟ್ಟಿರುವುದನ್ನು ನಾನು ತಮಗೆ ತಿಳಿಸಿ ಸಂತೋಷಿಸುತ್ತೇನೆ.

ತಮ್ಮ ಹಿತಚಿಂತಕ.

(ರುಜು) ಮಿರ್ಜಾ ಎಂ. ಇಸ್ಮಾಯಿಲ್

ಮ॥ ಪರಮಶಿವಯ್ಯರ್‌ರವರಿಗೆ

ಎಕ್ಸಿಬಿಟ್. ಪಿ. 5

ಡಿ. ಓ. ನಂ 0583.

ಅರಮನೆ ಮೈಸೂರು

18 ಫೆಬ್ರವರಿ 19[illegible]

ಸ್ವಾಮಿ!

ನೀವು ಹೊಗೆದಿಯ ವಿಷಯದಲ್ಲಿ ದಯವಿಟ್ಟು ಕಳುಹಿಸಿದ ಎರಡು "ನೋಟ್" ಅಭಿಪ್ರಾಯಗಳಿಗಾಗಿ ವಂದನೆಗಳು. ನೀವು ಅವುಗಳ ಮೇಲೆ ತುಂಬಾ ತೊಂದರೆಯನ್ನು ತೆಗೆದುಕೊಂಡಿದ್ದೀರಿ. ಅತ್ಯಂತ ಸಮ್ಮಾನದಿಂದ.

ತಮ್ಮ

(ರುಜು) ಮಿರ್ಜಾ ಎಂ. ಇಸ್ಮಾಯಿಲ್.

ಮ॥ ಪರಮಶಿವಯ್ಯರವರಿಗೆ

ಬೆಂಗಳೂರು

ತಾಯಿನಾಡು.

9—2—1929

ಮೈಸೂರು ವಿದ್ಯಾರ್ಥಿಗಳ ಪ್ರಚಂಡ ಸಭೆ

(ನಮ್ಮ ಸ್ವಂತ ಬಾತ್ಮೀದಾರರಿಂದ)

—

ರಂಗಧಾಮದ ಪಬ್ಲಿಕ್ ವ್ಯಾಯಾಮಶಾಲೆಯಲ್ಲಿ ಈ ತಿಂಗಳು 7ನೇ ತಾ|| ಸಾಯಂಕಾಲ, ಗುಜರಾತ್ ಕಾಲೇಜ್ ವಿದ್ಯಾರ್ಥಿಗಳಿಗೆ ಸಹಾನುಭೂತಿಯನ್ನು ತೋರಿಸಲೋಸುಗ, ಮೈಸೂರು ತರುಣವಿದ್ಯಾರ್ಥಿಗಳಸಭೆ ಸೇರಿತ್ತು. ವೃದ್ಧಪಿತಾಮಹರಾದ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಅಗ್ರಾಸನಾಧಿಪತಿಗಳಾಗಿದ್ದರು. ಅನೇಕ ವಿದ್ಯಾರ್ಥಿಗಳೂ, ದೊಡ್ಡವರೂ ಪೋಲೀಸಿನವರೂ ಸೇರಿದ್ದರು. ಮೊದಲು ಭಾರತಮಾತೆಯ ಪ್ರಾರ್ಥನೆಯಾದ ನಂತರ ಮ|| ಆರ್. ಎಸ್. ಸೂರ್ಯನಾರಾಯಣರಾಯರು ಕನ್ನಡದಲ್ಲಿಯೂ ಮ|| ಟಿ. ಎಲ್. ರಾಮಸ್ವಾಮಯ್ಯನವರು ಇಂಗ್ಲೀಷಿನಲ್ಲಿಯೂ, ಭಗವದ್ಗೀತೆಯ ಒಂದು ಭಾಗವನ್ನು ಹೃದಯ ಗಮವಾಗುವಂತೆ ಓದಿದರು.

ಮ|| ಕೆ. ಸರಹರಿ ಎಂಬುವರು ಕನ್ನಡದಲ್ಲಿ ಇಂದಿನ ಸಭೆಯ ಉದ್ದಿಶ್ಯ, ಗುಜರಾತ್ ಕಾಲೇಜು ಪ್ರಿನ್ಸಿಪಾಲರ ಕ್ರೂರವಾದ ವರ್ತನೆ, ಮೊದಲಾದುವನ್ನು ವಿವರಿಸಿ, ಇಂದು ಗುಜರಾತಿಗೆ ಬಂದ ಪರಿಸ್ಥಿತಿಯು ನಾಳೆ ಮೈಸೂರಿಗೂ ಬರಬಹುದು. ಇಟಲಿ, ಚೈನಾ ಮೊದಲಾದ ರಾಜ್ಯಗಳಲ್ಲಿ ತರುಣರು ಸಾಮ್ರಾಜ್ಯಕ್ರಾಂತಿಯಲ್ಲಿಯಾವ ರೀತಿ ಭಾಗಕೆಗೆದುಕೊಳ್ಳುವರೋ ಅದರಂತೆ ನಾವೂ ಕೂಡ ರಾಜಕೀಯ ಕಾರ್ಯಗಳಲ್ಲಿ ನುಗ್ಗಿ ಮಾತೃಭೂಮಿಯ ಸೇವೆಯನ್ನು ಕೈಕೊಳ್ಳಬೇಕು. ಈ ಕೆಲಸಗಳು ವಿದ್ಯಾರ್ಥಿದೆಶೆಯಲ್ಲಿರುವವರಿಂದಲ್ಲದೆ ಮತ್ತಾರಿಂದಲೂ ಚೆನ್ನಾಗಿ ನಡೆಯಲಾರವು.

ನಾವು ಗುಜರಾತ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ನಮ್ಮ ಸಹಾನುಭೂತಿಯನ್ನು ತೋರಿಸಿ, ಅವರ ಕೆಲಸ ಕಾರ್ಯಗಳಲ್ಲಿ ಸಂಪೂರ್ಣಾನುಗ್ರಹವನ್ನಿಟ್ಟಿರಬೇಕೆಂದು ಭಗವಂತನನ್ನು ಪ್ರಾರ್ಥಿಸಬೇಕು. ನಮ್ಮಲ್ಲಿಯೂ ಸಹ ತರುಣ ಅಧ್ಯಕ್ಷರಿಂದೊಡಗೂಡಿದ ಒಂದು ತರುಣ ಸಂಘವನ್ನೇರ್ಪಡಿಸಬೇಕು ಎಂಬ ಅರ್ಥಗರ್ಭವಾಗಿ ಯುಕ್ತಿಯುಕ್ತವಾದ ಭಾಷಣಮಾಡಿದರು.

ಮ|| ಲಕ್ಷ್ಮೀನಾರಾಯಣರಾಯರವರು ಮೇಲಿನ ಅಭಿಪ್ರಾಯಗಳನ್ನೆಲ್ಲಾ ಇಂಗ್ಲೀಷಿನಲ್ಲಿ ತಿಳಿಸಿದರು.

ಮ|| ಬಿ. ಎಸ್. ಭೀಮರಾಯರು ಮೇಲಿನ ಅಭಿಪ್ರಾಯಗಳನ್ನೇ ಪುಷ್ಟೀಕರಿಸಿ ಅರ್ಥಗರ್ಭಿತವಾಗಿ ಮಾತನಾಡಿದರು.

ಮ|| ರಾ|| ಗುಂಡಪ್ಪನವರು ಕನ್ನಡದಲ್ಲಿಯೂ ಮ|| ಕೃಷ್ಣಮೂರ್ತಿಯವರು ಇಂಗ್ಲೀಷಿನಲ್ಲೂ ಈ ಸಭೆಯು ಗುಜರಾತ್ ಕಾಲೇಜಿನ ಪ್ರಿನ್ಸಿಪಾಲರ ವರ್ತನೆಯನ್ನು ಖಂಡಿಸಿ ವಿದ್ಯಾರ್ಥಿಗಳಿಗೆ ನಮ್ಮ ಸಹಾನುಭೂತಿಯನ್ನು ತೋರಿಸುವುದಲ್ಲದೆ ಅವರ ಎಲ್ಲಾ ಕೆಲಸಕಾರ್ಯಗಳಲ್ಲೂ ಭಗವಂತನು ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತದೆ ಎಂಬ ಠರಾವನ್ನು ಓದಿದರು.

ಅನಂತರ ಅಧ್ಯಕ್ಷರು ಇತ್ತೀಚೆಗೆ ತರುಣ ಪ್ರಪಂಚದಲ್ಲಿ ದಿನದಿನಕ್ಕೂ ಉಂಟಾಗುತ್ತಿರುವ ನವಚೈತನ್ಯ, ಅವರು ರಾಜಕೀಯ ಪ್ರಸಂಗಗಳಲ್ಲಿ ತೊಡಗಬೇಕಾದ ಆವಶ್ಯಕತೆಯೇ ಮೊದಲಾದ ಮಹದ್ವಿಷಯಗಳು ಸೇರಿದ್ದ ಚಿಕ್ಕ ಪುಟ್ಟ ಮಕ್ಕಳಿಗೂ ಸಹ ತಿಳಿಯುವಂತೆ ಗತ್ತ

ವರ್ತಮಾನ ಸಂಗ್ರಹ

—

ಮಹಾತ್ಮಾ ಗಾಂಧಿಯವರು ಈ ಮಾಹೆ 3 ನೇ ತಾ|| ಮುಘ್ಯಾರು ಕರಾಚಿಗೆ ತಲುಪಿದರು. ಆ ಸಾಯಂಕಾಲ ಸ್ವಾಗತ ಸಭೆಗೆ ಸುಮಾರು 5 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ನಿರ್ಗತಿಕರಾದ ಮಕ್ಕಳಿಗೆ ಒಳ್ಳೆಹಾಲು ದೊರೆಯ ತಕ್ಕ ಏರ್ಪಾಡನ್ನು ಮಾಡಬೇಕೆಂದು ಮಹಾತ್ಮಾಜಿಯವರು ತಿಳಿಸಿದರು. ಲಾಲಾಜಿಯವರ ನಿಧಿಗೆ 30 ಸಾವಿರ ರೂ. ಗಳು ಸೇರಿತೆಂದು ಗೊತ್ತಾಗಿದೆ.

ವಾಹನಗಳ ಸಂಚಾರ ತಡೆ.

ಧರ್ಮಶಾಲ ಎಂಬ ಊರಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಯಾವಾಗಲೂ ಇಲ್ಲದಷ್ಟು ಮಂಜು ಈ ತಿಂಗಳು 4 ನೇ ತಾ|| ನ ದಿವಸ ಬಿದ್ದು ವಾಹನ ಸಂಚಾರ ನಿಲ್ಲಿಂತು ಹೋಗಿ ಅಂಚೆಯು ಕೂಲಿಯವರಿಂದ ಸಾಗುತ್ತಿದೆ. ಕೆಳಗಿನ ಧರ್ಮಶಾಲೆಯಲ್ಲಿ ಒಂದೂವರೆ ಅಂಚಿನಷ್ಟು ಆಳಕ್ಕೆ ಮಂಜು ಬಿದ್ದಿತು.

ಅಮಾನುಲ್ಲಾರವರಿಗೆ ಸಹಾಯ

ಅಮಾನುಲ್ಲಾರವರು ತಮ್ಮ ರಾಜ್ಯವನ್ನು ಪುನಃ ಸಂಪಾದಿಸಿಕೊಳ್ಳುವುದಕ್ಕಾಗಿ ಪರ್ಷಿಯನ್ ಸರಕಾರವು ಅವೀರ್ ಮುಸೈನಾರವರ ಕೈಕೆಳಗೆ ಒಂದು ಬಲವಾದ ಸೈನ್ಯವನ್ನು ಕಳುಹಿಸಿಕೊಡುವ ಏರ್ಪಾಡು ಮಾಡಿದೆ ಎಂದು ಪರ್ಷಿಯಾದ "ಆಲಾ ಕಲಿ" ಎಂಬ ಪ್ರಸಿದ್ಧ ಪತ್ರಿಕೆಯು ತಿಳಿಸುತ್ತದೆ.

ಅಮಾನುಲ್ಲಾರವರಿಗೆ ಸಹಾಯ

ರಾಜಾ ಮಹೇಂದ್ರಪ್ರತಾಪರವರು ಮಾಸ್ಕೋವಿಂದ ಹಿಂತಿರುಗುವಾಗ ಕಾಂದಹಾರಿನಲ್ಲಿರುವ ಅಮಾನುಲ್ಲಾರವರ ಸೈನ್ಯದ ಜೊತೆಗೆ ಸೇರಬೇಕೆಂದು ಶೌಕತ್ ಬೇಗ್ ಮತ್ತು ಮೀರ್ ರಹಮತುಲ್ಲಾರವರೊಡನೆ ಮಾಸ್ಕೋವಿಗೆ ಪ್ರಯಾಣಮಾಡಿದರು.

ದಸ್ತಗಿರಿ.

ಬೆಂಗಳೂರು ಮೇಲ್ ಟ್ರೈನಿನಲ್ಲಿ ನಡೆದ ರಾಜಮ್ಮಾಳ್ ಎಂಬಾಕೆಯ ಕೊಲೆಯ ಸಂಬಂಧವಾಗಿ ಪೋಲೀಸಿನವರು ರಂಗರಾವ್ ಎಂಬ ಒಬ್ಬ ಡ್ರೈವರನ್ನ ದಸ್ತಗಿರಿ ಮಾಡಿ ಮದ್ರಾಸಿಗೆ ಈ ತಿಂಗಳು 4ನೇ ತಾ|| ನ ದಿವಸ ಕರೆದೊಯ್ದಿದರು.

ಮಸೀತಿಯ ದುರ್ದಶೆ.

ಪೆಷಾವರಿನ ಭೂಕಂಪದಿಂದ ಅತ್ಯಂತ ಭಾರಿಯಾದ ಜುಮ್ಮಾಮಸೀದಿಯು ಕೆಳಕ್ಕೆ ಚೂರು ಚೂರಾಗಿ ಬಿದ್ದಿತು ಅನೇಕ ಮನೆ ಮಠಗಳೂ ಬಿದ್ದು ಹೋದವು.

ರೈಲ್ವೆ ಪ್ರಾರಂಭೋತ್ಸವ

ಎಂ. ಎಸ್. ಎಂ. ರೈಲ್ವೆಯ ಒಂದು ಭಾಗದ ನರಸಾಪುರ—ನಿಡದೇವಲ್ ರೈಲ್ವೆಯ ಪ್ರಾರಂಭೋತ್ಸವವು ಈ ತಿಂಗಳು 3 ನೇ ತಾ|| ಪ್ರಾತಃಕಾಲ ನಡೆಯಿತು.

ತಿರಸ್ಕಾರ

ಬಿಹಾರ್ ಕೌನ್ಸಿಲ್ಲು, ಖಾದಿ ಕೈಗಾರಿಕೆಗೆ ಸರ್ಕಾರದ ಪ್ರೋತ್ಸಾಹ ಕೊಡಬೇಕೆನ್ನುವ ಸೂಚನೆಯನ್ನು ತಿರಸ್ಕಾರ ಮಾಡಿತು.

ರೀತಿಯಲ್ಲಿ ಪೌರ್ವಾತ್ಯ ಪಾಶ್ಚಿಮಾತ್ಯ ಉದಾಹರಣೆಗಳಿಂದ ವಿವರಿಸಿ ತಿಳಿಸಿದ ಮೇಲೆ ಜಯಜಯಕಾರದೊಡನೆ ಸಭೆಯು ಮುಕ್ತಾಯ ವಾಯಿತು.

ಈ ಪೀಟಿಗನ್ನಲ್ಲಿ 3 ಜನ ಪೋಲೀಸಿನವರೂ ಕೆಲವರು ಕಾನ್‌ಸ್ಟೇಬಲ್‌ಗಳೂ ಸಹ ಹಾಜರಿದ್ದರು.

ಬೊಂಬಾಯಿ ಗಲಭೆ

—

ಬೊಂಬಾಯಿ ಪಟ್ಟಣದಲ್ಲಿ ಆ ಮಾಹೆ [illegible] ನೇ ದಿವಸ ಕ್ವಾರ್ಟರ್ ಮಾರ್ಕೆಟಿನಿಂದ [illegible] ಯಂದಿಗೆ [illegible] ಮೇಲೆ [illegible] ಬೊಂಬಾಯಿ [illegible]

ದೊಂಬಿಯ ಕಥೆ

ಆ ದಿವಸ [illegible] ಕಾಲ [illegible] ಪೋಲೀಸಿನವರ [illegible] ತಪ್ಪಿಸಿಕೊಡಬೇಕೆಂದು [illegible] ರವರ [illegible] ರವರಾಡಿಕೊಡುವುದಾಗಿಯೂ ಪೋಲೀಸರು [illegible] ಗಳನ್ನು [illegible] ಕೆಲವು [illegible] ಕೆಗೆದು [illegible] ರಾಣಾನ [illegible] ವಿದು ಕೊಂದನು. ದೊಂಬಿಗೆ ಇದೇ ಕಾರಣ [illegible] ಲ್ಲಾ ನಡೆಯುತ್ತಿದ್ದನ್ನು ನೋಡಿ [illegible] ಪಠಾಣರು ಊಟಮಾಡ ವರು [illegible] ಗಳನ್ನೆಲ್ಲಾ [illegible] ನ ಸಹಾಯವು [illegible]

ಪೋಲೀಸಿನ [illegible] ಗಾಯಹೊಂದಿದ ಅನೇಕ ಪೋಲೀಸರು [illegible] ಮೂವರು ಹಿಂದೂಗಳು [illegible] ಟ್ಟರು. 150 ಪಠಾಣರು [illegible] ಹೊಂದಿದರು. ಎಂಟು ಗಂಟೆ [illegible] ಜಿಸ್ಟ್ರೇಟರು ಬಂದು ಗಲಭೆಯನ್ನು [illegible] ಮುಖ್ಯವಾದ ಬೀದಿಗಳಲ್ಲಿ ಬ್ರಿಟಿಷ್ [illegible] ಕ|| ರವರ [illegible] ಪೋಲೀಸಿನವರು [illegible] ಗೆ [illegible] ಘೋಷಿಸ [illegible]

ಜಿ. ಐ. ಪಿ. ರೈಲ್ವೆ [illegible] ಗಳ [illegible] ತು. ಪೋಲೀಸಿನವರು ಬಂದ ಮೇಲೆ [illegible] ತು ಪೋಲೀಸ್ ಕಮಿಷನರವರು [illegible] ಗೂ [illegible]

ಒಟ್ಟು 13 ಪಠಾಣರೂ [illegible] ಹಿಂದೂ [illegible] ಲೀಸಾ ಆಫೀಸರೂ ಸತ್ತರು. [illegible] ಜನರಿರು [illegible] ಅಂದಿನ ಸಾಯಂಕಾಲ [illegible] ಡ್ ಇರಾದ ವಿ.|| [illegible] ಆಫೀಸರಿಗೆ [illegible] ಲೆ [illegible]

—

ಮಹಾತ್ಮಾ ಗಾಂಧಿಯವರು

ಕರಾಚಿಯಲ್ಲಿ ಲಾಲಾಜಿಯವರ ಸ್ಮಾರಕ [illegible] ಒಂದು ನಿಧಿಯನ್ನು ಕೊಟ್ಟಾಗ ಮಹಾತ್ಮಾ ಗಾಂಧಿ [illegible]

TAINADU

Daily Edition.

The Leading Nationalist Daily of Mysore.

Printed and published by P. R. Ramaiya, at Sri Rama Press, D Subbaih Road, Mysore.

Regd No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { [illegible] ಪಕ್ಷಕ್ಕೆ [illegible]

ಸಂಪುಟ ೧] ಸೋಮವಾರ ೧೧ ಫೆಬ್ರವರಿ [illegible] [ಸಂಚಿಕೆ [illegible]

TAI NADU

11—2—1929

ಬೋಲ್ಷೆವಿಸಮ್

ಡೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿ ಅಥವಾ ಪ್ರಧಾನ ನ್ಯಾಯವಿಧಾಯಕ ಸಭೆಯಲ್ಲಿ ಪಬ್ಲಿಕ್ ಸೇಫ್ಟಿ ಬಿಲ್ ಎಂಬ ಮಸೂದೆಯು ಚರ್ಚೆಯಾಗುತ್ತಲಿದೆ, ನಮ್ಮ ದೇಶದ ಮುಖಂಡರೆಲ್ಲರೂ ಅದನ್ನು ವಿರೋಧಿಸುತ್ತಿದ್ದಾರೆ. ಪಂಡಿತ ಮೋತೀಲಾಲ್ ನೇಹರೂರವರೂ ದಿವಾನ್ ಚಮನ್‌ಲಾಲರವರೂ ಕೇಳ್ಕರವರೂ ಮತ್ತು ಇತರರೂ ಈ ಮಸೂದೆಯನ್ನು ವಿರೋಧಿಸಿ ಲೋಕೋತ್ತರವಾದ ಭಾಷಣಗಳನ್ನು ಮಾಡುತ್ತಿದ್ದಾರೆ. ಸರಕಾರದ ಪಕ್ಷದವರೋ ಅದನ್ನು ಬಲಾತ್ಕಾರವಾಗಿ ಇಂಡಿಯಾ ದೇಶದಲ್ಲಿ ಜಾರಿ ಮಾಡಬೇಕೆಂದಿದ್ದಾರೆ. ಈಗ ನಾಲ್ಕು ತಿಂಗಳ ಕೆಳಗೆ ಈ ಮಸೂದೆಯನ್ನು ಇದೇ ನ್ಯಾಯವಿಧಾಯಕ ಸಭೆಯಲ್ಲಿ ತಂದಿದ್ದರು. ಆಗಲೂ ಇದನ್ನು ನಮ್ಮ ಮುಖಂಡರು ವಿರೋಧಿಸಿದರು. ಸರಕಾರದವರಿಗೆ ಅಪಜಯವಾಯಿತು. ಪುನಃ ಈ ಮಸೂದೆಯನ್ನು ತಂದಿರುವರು.

ಪಬ್ಲಿಕ್ ಸೇಫ್ಟಿಬಿಲ್ ಎಂದರೆ ಪ್ರಜಾಸಂರಕ್ಷಣೆಯ ಮಸೂದೆ. ಇಲ್ಲಿ ಪಬ್ಲಿಕ್ ಎಂದರೆ ಜನಸಮುದಾಯ ಅಥವಾ ಸಾರ್ವಜನಿಕರು. ಸರಕಾರದವರು ಈ ಮಸೂದೆಯನ್ನು ತರುವುದಕ್ಕೆ ಕಾರಣವೇನೆಂದರೆ 'ಇಂಡಿಯಾ ದೇಶದಲ್ಲಿ ಈಚೆಗೆ ಕೂಲಿಯಾಳುಗಳ ಮುಷ್ಕರಗಳು ಪ್ರಬಲವಾಗಿ ಗಿರಣಿಗಳ ಕೈಗಾರಿಕೆಯ ಅಭಿವೃದ್ಧಿಗೆ ಕುಂದಕವಾಗಿರುವುದು. ಇದಕ್ಕೆ ಬೋಲ್ಷೆವಿಸಮ್ಮಿನ ಪ್ರಚಾರವೇ ಮುಖ್ಯಕಾರಣ. ಬೋಲ್ಷೆವಿಸಂ ಎಂಬುದರಿಂದ ಸಮಾಜವು ಅನಾಯಕವಾಗಿ ಅರಾಜಕತೆಯು ವ್ಯಾಪಿಸುವುದು. ಆದುದರಿಂದ ಹೊರಗಿನ ದೇಶಗಳಿಂದ ಬೋಲ್ಷೆವಿಜಮ್ ಪ್ರಚಾರಕರೂ ಅವರದುಡ್ಡೂ ಬಾರದಂತೆ ಈ ಮಸೂದೆಯು ತರಲ್ಪಟ್ಟಿರುವುದು. ಇದರಿಂದ ಭಾರತೀಯರಿಗೇನೂ ತೊಂದರೆಯಿಲ್ಲ. ಭಾರತೀಯ ಬೋಲ್ಷೆವಿಕ್ಕುಗಳನ್ನೇನೂ ನಾವು ಮಾಡುವುದಿಲ್ಲ. ಹೊರಗಿನ ಬೋಲ್ಷೆವಿಕ್ಕುಗಳ ಮೇಲೆ ನಾವು ಏರ್ಪಡಿಸುವ ಸೆಷನ್ಸ್ ಕೋರ್ಟಿನಲ್ಲಿ ಅಪರಾಧವು ರುಜುವಾತಾದರೆ ಅವರನ್ನು ಗಡೀಪಾರು ಮಾಡಲಾಗುತ್ತದೆ. ಹೊರಗಿನಿಂದ ಬರುವ ಹಣವು ಸರಕಾರಕ್ಕೆ ಮುಟ್ಟುಗೋಲು ಹಾಕಿಗೊಳ್ಳಲ್ಪಡುತ್ತದೆ—ಇದೇ ಸರಕಾರದವರು ಹೇಳುವ ಮಾತುಗಳು.

ಈ ಮಸೂದೆಯನ್ನು ವಿರೋಧಿಸುತ್ತಿರುವ ನಮ್ಮ ಮುಖಂಡರು ಹೇಳುವುದೇನೆಂದರೆ —ಬೋಲ್ಷೆವಿಸಮ್ ಎಂಬುದೇನೂ ಅಷ್ಟು ಅಪಾಯಕರವಲ್ಲ. ರಷ್ಯಾದಲ್ಲಿ ಬೋಲ್ಷೆವಿಸಮ್ ಪೂರ್ತಿ ಪ್ರಚಾರದಲ್ಲಿದೆ. ಆದರೂ ರಷ್ಯಾವು ಕೆಟ್ಟಿಲ್ಲ. ಇಂದು ಇಂಡಿಯಾ ದೇಶದ ಸ್ಥಿತಿಯು ರಷ್ಯಾಕ್ಕಿಂತಲೂ ಹೀನಾಯವಾಗಿರುವುದು. ಬೋಲ್ಷೆವಿಸಮ್ ಬಂದರೂ ಅದು ನಮ್ಮ ದೇಶದಲ್ಲಿ ನಿಲ್ಲುವುದಿಲ್ಲ. ಒಂದುವೇಳೆ ಅದು ಬಂದರೂ ಈಗ್ಗಿಂತಲೂ ನಮ್ಮ ದೇಶವು ಕೆಡುವುದಿಲ್ಲ. ಆದದರಿಂದ ಬೋಲ್ಷೆವಿಸಮ್ಮಿಗೆ ನಾವು ಹೆದರಬೇಕಾಗಿಲ್ಲ.

ಇಂಗ್ಲೆಂಡಿನಲ್ಲಿ ಇಂತಹ ಕಾನೂನು ಯಾವುದೂ ಇಲ್ಲ. ಇಂಗ್ಲೆಂಡಿನಲ್ಲಿ ಬೋಲ್ಷೆವಿಕ್ಕುಗಳ ಒಂದು ಪಕ್ಷವೇ ಇದೆ. ಅವರಲ್ಲಿ ಕೆಲವರು ಪಾರ್ಲಿಮೆಂಟಿನ ಮೆಂಬರುಗಳಾಗಿಯೂ ಇದ್ದಾರೆ. ಅಂತಹದರಲ್ಲಿ ಇಂಡಿಯಾದಲ್ಲಿ ಮಾತ್ರವೇ ಈ ಕಾನೂನು ಏತಕ್ಕೆ?

ಇದರ ಮುಖ್ಯ ಉದ್ದೇಶವು ಹೊರಗಿರುವ ಬೋಲ್ಷೆವಿಸ್ಟುಗಳನ್ನು ತಡೆಯುವುದಲ್ಲ. ಇದರ ಉದ್ದೇಶವು ಇಂಡಿಯಾದೇಶದ ಜನಗಳಿಗೆ ಹೊರಗಿನ ಜನರು ಸಹಾಯ ಮಾಡದೇ ಇರಲಿ ಎಂದೇ. ಈಗ ಪ್ರಪಂಚದಲ್ಲೆಲ್ಲಾ ಬಂಡವಾಳಸ್ಥರ ಬೆಂಬಲದಿಂದಲೇ ಸಾಮ್ರಾಜ್ಯ ಸರಕಾರಗಳು ಅಭಿವೃದ್ಧಿಯಾಗುತ್ತಲಿವೆ. ಸಾಮ್ರಾಜ್ಯ ಸರಕಾರಕ್ಕೆ ಬೋಲ್ಷೆವಿಸಮ್ ತತ್ವಗಳು ವಿಷಪ್ರಾಯವಾದವುಗಳು. ಆದದರಿಂದ ಬ್ರಿಟಿಷ್ ಸರಕಾರದ ಆತ್ಮಸಂರಕ್ಷಣೆಗಾಗಿ ಈ ಮಸೂದೆಯು ತರಲ್ಪಟ್ಟಿದೆಯೇ ಹೊರತು ಇಂಡಿಯಾದೇಶದ ಪ್ರಜೆಗಳಿಗೋಸ್ಕರವಲ್ಲ ಎಂಬುದೇ ನಮ್ಮ ಮುಖಂಡರ ಕಾರಣಗಳು.

ಇಡೀ ದೇಶದಲ್ಲಿ ಈ ಮಸೂದೆಗೆ ವಿರೋಧವಾದ ಅಭಿಪ್ರಾಯವಿದೆ. ಬೋಲ್ಷೆವಿಸಮ್ ಎಂಬುದು ಅಷ್ಟು ಪೈಶಾಚಿಕವಲ್ಲ. ಜರ್ಮನ್ ಅರ್ಥಶಾಸ್ತ್ರಪ್ರವೀಣನಾದ ಕಾರಲ್ ಮಾರ್ಕ್ಸ್ ಎಂಬ ಮಹಾ ಪುರುಷನ ಸಿದ್ಧಾಂತಗಳನ್ನೆಲ್ಲಾ ಅನುಸರಿಸಿ ರಷ್ಯಾದ ಮಹಾವೀರನಾದ ಲೆನಿನ್ ಮಹಾಶಯನು ಬೋಲ್ಷೆವಿಸ್ಟ್ ಸರಕಾರವನ್ನು ರಷ್ಯಾದಲ್ಲಿ ಸ್ಥಾಪಿಸಿದನು. ಇದರಿಂದ ಬಂಡವಾಳಸ್ಥರ ಜೋಬು ಕರಗುವ ಸ್ಥಿತಿಗೆ ಬಂದರೂ ಬಡಪಾಯಿಗಳ ಮತ್ತು ಕೆಲಸಗಾರರ ಸ್ಥಿತಿಯು ಉತ್ತಮಗೊಂಡಿತು. ಈಗ ಪ್ರಪಂಚದಲ್ಲಿರುವ ಅಶಾಂತಿಗೆಲ್ಲಾ ಆರ್ಥಿಕ ವ್ಯವಸ್ಥೆಯೇ ಕಾರಣ. ಈಗಿನ ಪರಿಸ್ಥಿತಿಯಲ್ಲಿ ಐಶ್ವರ್ಯವಂತರು ದಿನದಿನಕ್ಕೂ ಹೆಚ್ಚು ಐಶ್ವರ್ಯವಂತರಾಗುತ್ತಿದ್ದಾರೆ. ಬಡವರು ದಿನದಿನಕ್ಕೂ ಬಡವರಾಗುತ್ತಿದ್ದಾರೆ. ಈ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿಯೇ ಬೋಲ್ಷೆವಿಸಮ್ ಹುಟ್ಟಿತು. ಇದು ಇಷ್ಟು ಭಯಾನಕವಲ್ಲ.

ರಷ್ಯಾ ದೇಶವನ್ನು ನೋಡಿಕೊಂಡು ಬಂದ ಭಾರತೀಯರು ರಷ್ಯಾದೇಶದ ಸ್ಥಿತಿಯು ಚೆನ್ನಾಗಿದೆಯೆಂದು ಹೇಳಿರುವರು. ಪಂಡಿತ ಜವಹರ್‌ಲಾಲ್ ನೇಹರೂರವರು ಅಲ್ಲಿನ ವಿದ್ಯಮಾನಗಳನ್ನೆಲ್ಲಾ ಖುದ್ದಾಗಿ ತಿಳಿದುಕೊಂಡು ಬಂದು ಒಂದು ಪುಸ್ತಕವನ್ನು ಬರೆದಿರುವರು.

ಈ ಮಸೂದೆಯವರ ರಹಸ್ಯವೇನೆಂದರೆ ಇಂಗ್ಲೆಂಡಿಗೂ ರಷ್ಯಕ್ಕೂ ಮೊದಲಿಂದಲೂ ಜಿದ್ದು. ರಷ್ಯಾದ ಪ್ರಾಬಲ್ಯವು ಇಂಡಿಯಾ ದೇಶದಲ್ಲಿ ತಮ್ಮ ಒಡೆಯತನಕ್ಕೆ ಎಲ್ಲಿ ಅಪಾಯ ಬರುವುದೋ ಎಂಬ ಒಂದು ಭೀತಿಯೇ ಇದಕ್ಕೆ ಕಾರಣ. ಬೋಲ್ಷೆವಿಸಮ್ ಎಂಬುದು ಒಂದು ಕುಂಟುಕಾರಣ. ಇದನ್ನು ಅರಿತೇ ನಮ್ಮ ಭಾರತ ಮುಖಂಡರು ಈ ಮಸೂದೆಯನ್ನು ವಿರೋಧಿಸಿದರು.

ಬೊಂಬಾಯಿಯ ಗಲಾಟೆ

ಬರೋಡಾದಲ್ಲಿ ಕಟ್ಟಲ್ಪಡುತ್ತಿರುವ ಹೊಸ ಸೇತುವೆಗೆ ಆಹುತಿ ಕೊಡುವದಕ್ಕಾಗಿ ಬೊಂಬಾಯಿನಿಂದ ಪಠಾಣರು ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಿರುವರೆಂಬ ಸುದ್ದಿಯು ಪ್ರಬಲಿಸಿ ಭಯಂಕರವಾದ ಹೊಡೆದಾಟಗಳು ನಡೆಯುತ್ತಲಿವೆ. ಮಿಲ್ಲಿನ ಕೂಲಿಯಾಳುಗಳೆಲ್ಲರೂ ಪಠಾಣರನ್ನು ಸಿಕ್ಕಿದ ಕಡೆ ಹೊಡೆಯಲಾರಂಭಿಸಿದ್ದಾರೆ. ಪಠಾಣರು ಹಿಂದೂಗಳನ್ನು ಸಿಕ್ಕಿದ ಕಡೆ ಹೊಡೆಯಲಾರಂಭಿಸಿದ್ದಾರೆ. ಅನೇಕರು ಕೊಲೆಯಾದರು. ಪೋಲೀಸ್ ಇನ್ಸ್‌ಪೆಕ್ಟರುಗಳೂ ಹತರಾದರು. ಗಾಯಬಿದ್ದವರಿಗೆ ಆಸ್ಪತ್ರೆಯಲ್ಲಿ ಜಾಗವಿಲ್ಲ. ಗಲಾಟೆಯು ಭಯಂಕರಭಯಂಕರರೂಪವನ್ನು ತಾಳುತ್ತಿದೆ. ಮಿಲಿಟರಿಯವರು ಜನಗಳ ಮೇಲೆ ಗುಂಡು ಹಾರಿಸಲು ಉಪಕ್ರಮ ಮಾಡಿದ್ದಾರೆ. ಈಗಲಾಟೆಯು ಹಿಂದೂಮಹಮದೀಯ ಗಲಭೆಯರೂಪವನ್ನು ತಾಳುವ ಸಂಭವವಿದೆ.

ವರ್ತಮಾನ ಸಂಗ್ರಹ

ಪತ್ರಿಕಾ ಕಾರರ ಸಭೆ.

ಕಳೆದ ಶುಕ್ರವಾರ ಬೆಂಗಳೂರು ನವಜೀವನ (?) ಕೆಯ ಆಫೀಸಿನಲ್ಲಿ ಈವಿನಿಂಗ್ ಮೇಲ್ ಪತ್ರಿಕೆ (?) ಸಂಪಾದಕರಾದ ಮ|| ನಾರಣಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ (?) ಪತ್ರಿಕಾಕರ್ತರ ಮತ್ತು ಪ್ರತಿನಿಧಿಗಳ ಸಭೆ (?) ನಡೆದು ವಿಶ್ವೇಶ್ವರಯ್ಯ ಕಮಿಟಿ ವರದಿ ಮತ್ತು ಇತ್ತೀಚಿನ (?) ಮೇಲಿನ ಸರ್ಕಾರಿ ಹುಕುಮ್ಮಿನ ಅಸಂಬದ್ಧ ವಿಷಯ (?) ಗಳು ಖಂಡಿಸಲ್ಪಟ್ಟವು. ಪತ್ರಿಕಾ ಸ್ವಾತಂತ್ರ್ಯ ವಿಷ (?) ಯವು ಪರಿಪೋಷಿಸಲ್ಪಟ್ಟಿತು.

ಮೂರನೆ ಸಚಿವರ ಸಂಚಾರ.

ಈ ಮಾಹೆ 10 ನೇ ತಾ|| ಪ್ರಾತಃಕಾಲ ಬೆಂಗಳೂರಿನಿಂದ (?) ಹೊರಟು 5.6 ದಿವಸಗಳವರೆಗೆ ಹಿರಿಯೂರು ಚಳ್ಳಕೆರೆ (?) ಮೊಳಕಾಲ್ಮುರು, ಚಿತ್ರದುರ್ಗ ಮೊದಲಾದ ಸ್ಥಳಗಳಲ್ಲಿ ಸಂಚರಿಸಿ, 16 ನೇ ತಾ|| ಮಧ್ಯಾಹ್ನ ಬೆಂಗಳೂರಿಗೆ ವಾಪಸು ತೆರಳುವರು.

ಚಕ್ರವರ್ತಿಗಳ ಆರೋಗ್ಯ

ಚಕ್ರವರ್ತಿಗಳು ಸಂಪೂರ್ಣವಾಗಿ ಗುಣಮುಖರಾಗಿರುತ್ತಾರೆ. ಕಳೆದ 5ನೇ ತಾರೀಖಿನಲ್ಲಿ 2 ದಸ್ತಾವೇಜುಗಳಿಗೆ ರುಜುಹಾಕಿದರು.

ದಂಪತಿಗಳ ಆತ್ಮಹತ್ಯೆ

ಕಲ್ಕತ್ತಾದಲ್ಲಿ ಕಳೆದ ತಿಂಗಳು 29ನೇ ತಾ|| ನಲ್ಲಿ 25 ವರ್ಷ ವಯಸ್ಸಿನ ಸತೀಶ ಚಂದ್ರ ಸಹ ಎಂಬವನು ಅವನ ಪತ್ನಿಯಾದ 18 ವರ್ಷ ವಯಸ್ಸಿನ ಮಂಜುಭಾಷಿಣೀ ಎಂಬವಳೂ ಆತ್ಮಹತ್ಯಮಾಡಿಕೊಂಡರು. ಗಂಡನು ಕೆಲಸ ಸಿಕ್ಕಲಿಲ್ಲವೆಂದು ಆತ್ಮಹತ್ಯಮಾಡಿಕೊಂಡನು. ಹೆಂಡತಿಯು ಗಂಡನೇ ಹೋದ ಮೇಲೆ ತಾನು ಇದ್ದು ಪ್ರಯೋಜನವೇನೆಂದೂ ಗಂಡನನ್ನು ಹಿಡಿಕೊಂಡು ತಾನೂ ಹೋಗುವುತಾಗಿಯೂ ಆತ್ಮಹತ್ಯಮಾಡಿಕೊಂಡಳು.

ವಿದ್ಯಾರ್ಥಿಯ ಆತ್ಮಹತ್ಯ

ಮಂಟಮೆರಿಯಲ್ಲಿ ಹಂಸರಾಜ್ ಎಂಬ ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸವು ಅಸಮರ್ಪಕವಾಗಿದ್ದದರಿಂದ ರೈಲಿನ ಕೆಳಗೆ ಶಿಕ್ಕಿ ಆತ್ಮಹತ್ಯಮಾಡಿಕೊಂಡನು.

ಪಾಟಿಯಲಾದಲ್ಲಿ ದಬ್ಬಾಳಿಕೆ

ಪಾಟಿಯಲಾದಲ್ಲಿ ಮಹಾರಾಜರವರು ಪ್ರಜಾಸ್ವಾತಂತ್ರ್ಯ ಪ್ರಿಯರಾದ ಪ್ರಜೆಗಳ ಮೇಲೆ ದಬ್ಬಾಳಿಕೆಗೆ ಆರಂಭಮಾಡಿದ್ದಾರೆ.

ಸೈಮನ್ ಕಮಿಷನ್ನಿಗೆ ಸ್ವಾಗತ.

ಮದರಾಸ್ ಕಾರ್ಪೋರೇಷನ್ನಿನಲ್ಲಿ ಸೈಮನ್ ಕಮಿಷನ್ನಿಗೆ ಸ್ವಾಗತ ಮಾಡಬೇಕೆಂದು ಬಹುಮತದಿಂದ ತೀರ್ಮಾನ ವಾಯಿತು. ಕಾಂಗ್ರೆಸ್ಸಿನ ಪಕ್ಷದವರು ಅದನ್ನು ವಿರೋಧಿಸಿದರು.

ಸ್ತ್ರೀಯರಿಗೆ ವೋಟಿನ ಅಧಿಕಾರ

ಬೀಹಾರ ನ್ಯಾಯವಿಧಾಯಕ ಸಭೆಯಲ್ಲಿ ಸ್ತ್ರೀಯರಿಗೆ ವೋಟಿನಅಧಿಕಾರವನ್ನು ಕೊಡಬೇಕೆಂದು ಬಹುಮತದಿಂದ ತೀರ್ಮಾನವಾಯಿತು.

144ನೇ ಸೆಕ್ಷನ್

ಪಿಷಾವರಿನಲ್ಲಿ 144ನೇ ಸೆಕ್ಷನ್ನನ್ನು ಅನುಸರಿಸಿ ಜನಗಳ ಮೇಲೆ ದಬ್ಬಾಳಿಕೆಗೆ ಆರಂಭವಾಗಿದೆ.

ತಾಯಿ ನಾಡು.

11—2—1929

ಈ ಪತ್ರಿಕೆಗಳಿಗೆ ಬೇರೆ ಕೆಲಸವಿಲ್ಲವೆ?

ಈ ಮೈಸೂರು ಪತ್ರಿಕೆಗಳಿಗೆ ರಾಜಕೀಯ ವಿಷಯಗಳನ್ನು ಬಿಟ್ಟು ಬೇರೆ ವಿಷಯಗಳನ್ನು ಬರೆಯುವುದಕ್ಕೆ ತೋಚುವುದಿಲ್ಲವೋ? ಗ್ರಾಮಸಂಘಟನೆ, ಸಮಾಜಸುಧಾರಣೆ, ಸಂಪತ್ತಿಕ ಅಭಿವೃದ್ಧಿ, ವೈದ್ಯ, ಆರೋಗ್ಯ— ಮೊದಲಾದ ವಿಷಯಗಳಿಲ್ಲವೇ? ಆ ವಿಷಯಗಳನ್ನು ಕುರಿತು ಏಕೆ ಬರೆಯಬಾರದ? ಯಾವಾಗಲೂ ಸರಕಾರವನ್ನು ಖಂಡಿಸುವುದೇ ಇವುಗಳ ಕೆಲಸವೇ' ಎಂಬ ಕೂಗುಗಳು ಅಧಿಕಾರಿಗಳ ಕೋಣೆಯಿಂದ ಕೇಳ ಬರುತ್ತವೆ. ಆದರೆ ಪ್ರಜೆಗಳಿಗೆ ಸರಕಾರದ ಕಾರ್ಯಕ್ರಮಗಳನ್ನು ತಿಳಿದುಕೊಳ್ಳಬೇಕೆಂದು ಕುತೂಹಲವು ದಿನ ದಿನ ಹೆಚ್ಚಾಗುತ್ತಿರುವುದು. ಸರಕಾರವೆಂದರೆ ಯಾರು ಪ್ರಜೆಗಳ ಕೆಲಸಗಾರರೇ ಅಲ್ಲವೇ' ಪ್ರಜೆಗಳು ಕೊಡುವ ಕಂದಾಯದ ದುಡ್ಡಿನಿಂದಲೇ ಅಲ್ಲವೇ ಸರಕಾರದ ಕೋಶವು ತುಂಬುತ್ತಿರುವುದು? ಪ್ರಜೆಗಳ ದುಡ್ಡಿನಿಂದಲೇ ಅಲ್ಲವೇ ಸರಕಾರಿ ಅಧಿಕಾರಿಗಳ ಸಂಬಳಗಳು ಕೊಡಲ್ಪಡುತ್ತಿರುವುದು? ಸರಕಾರದವರು ಮಾಡುತ್ತಿರುವ ಕೆಲಸವಾದರೂ ಯಾವುದು? ಪ್ರಜೆಗಳ ಕೆಲಸವೇ ಅಲ್ಲವೆ? ಈಗಿನ ರಾಜ್ಯಪದ್ಧತಿಯಲ್ಲಿ ಸರಕಾರದ ಆಡಳಿತದಲ್ಲಿ ಪ್ರಜೆಗಳ ಅಭಿಪ್ರಾಯಗಳಿಗೆ ಬೆಲೆ ಇಲ್ಲವೇ ಹೋದರೂ ಪ್ರಜೆಗಳು ಅಭಿಪ್ರಾಯವನ್ನು ಕೊಡಲೇಬೇಕು. ಪತ್ರಿಕೆಗಳು ಪ್ರಜೆಗಳ ಬಾಯಿ. ಪತ್ರಿಕೆಗಳು ಹೇಳುವ ಮಾತುಗಳೆಲ್ಲಾ ಪ್ರಜೆಗಳು ಹೇಳುವ ಮಾತುಗಳು ಸರಕಾರದ ಆಡಳಿತವೆಲ್ಲಾ ಪ್ರಜೆಗಳ ಆಡಳಿತ. ಪ್ರಜೆಗಳ ಆಡಳಿತದಲ್ಲಿ ಪ್ರಜೆಗಳು ಅಭಿಪ್ರಾಯ ಕೊಡುವುದು ಸರಿಯಲ್ಲ ಎಂಬುದು ಸರಿಯಲ್ಲ. ಪ್ರಜೆಗಳಲ್ಲಿ ದಿನ ದಿನಕ್ಕೂ ಜಾಗೃತಿಯು ಹೆಚ್ಚುತ್ತಿದೆ, ಸರಕಾರದವರು ಕೆಲಸಕಾರ್ಯಗಳನ್ನು ಹೇಗೆ ನಡೆಯಿಸುತ್ತಾರೆ ಎಂಬುದನ್ನು ಪ್ರಜೆಗಳು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರುವರು ಈ ಸಂದರ್ಭದಲ್ಲಿ ಪತ್ರಿಕೆಗಳು ರಾಜಕೀಯ ವಿಷಯಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದರೆ ಅದು ಪ್ರಶಂಸೆಗೆ ಅರ್ಹವೇ ಹೊರತು ಬೇರೆಯಿಲ್ಲ. ಸರಕಾರೀ ಅಧಿಕಾರಿಗಳು ಈ ತತ್ವವನ್ನು ತಿಳಿದುಕೊಳ್ಳುವರೆಂದು ನಂಬುತ್ತೇವೆ

ವೆಟರಿನರಿ ಇಲಾಖೆ,

ಮೇಜರ್ R. W. ಸಿಂಪಸನ್‌ರವರಿಗೆ ಈ ಮಾಹೆ 12 ನೇ ತಾ|| ಲಾಗಾಯಿತು 2 ತಿಂಗಳು 12 ದಿವಸಗಳ ಪ್ರಿವಿಲೇಜ್ ರಜವನ್ನು ಹಾಲಿಕೊಟ್ಟಿರುವ 5 ತಿಂಗಳು 18 ದಿನಗಳ ಫರ್ಲೋ ರಜದ ಜೊತೆಗೆ ಮಂಜೂರ್ಮಾಡಿರುವರು. ಅವರ ರಜದಕಾಲದಲ್ಲಿ ಆಸಿಸ್ಟೆಂಟ್ ಸೂಪರಿಂಡೆಂಟರವರಾದ ಮ|| ಕೆ. ಕೃಷ್ಣಯ್ಯಂಗಾರ್ಯರು ನಿಯಮಿಸಲ್ಪಟ್ಟಿರುವರು.

ದ್ವಿತೀಯ ಸಚಿವರ ಸಂಚಾರ.

ದ್ವಿತೀಯ ಸಚಿವರು ಈ ಮಾಹೆ 11 ನೇ ತಾ. ಸೋಮವಾರ ಬೆಳಿಗ್ಗೆ ಬೆಂಗಳೂರಿಂದ ಕಡೂರಿಗೆ ಪ್ರಯಾಣಮಾಡಿ ಚಿಕ್ಕಮಗಳೂರು ಮೂಡಿಗೆರೆ ಕೊಪ್ಪ ಗಿರೆ ಬಾಳೆ ಹೊನ್ನೂರು ತರೀಕೆರೆ ಹೊಸದುರ್ಗ ಹಿರಿಯೂರು ಬಾಬಾಬುಡನ್‌ಗಿರೀ ಮೊದಲಾದ ಸ್ಥಳಗಳಲ್ಲಿ 15 ದಿನಗಳವರೆಗೆ ಸಂಚರಿಸಿ 26 ನೇ ತಾ|| ಹಿರಿಯೂರಿಂದ ಬೆಂಗಳೂರಿಗೆ ವಾಪಸು ಬರುವರು.

ಮೈಸೂರು ಮುನಿಸಿಪಾಲಿಟಿಗಳು

(ಹಳ್ಳಿಯವ)

ನಮ್ಮ ದೇಶದಲ್ಲಿ ಈಗ ಐದಾರು ತಿಂಗಳುಗಳ ಹಿಂದೆ ದದ್ದರಲ್ಲಿ ಹುತ್ತಿಸ್ಪತ್ತು ಕಾನ್ಫರೆನ್ಸು (ಸಮ್ಮೇಳನಗಳು) ಗಳು ಆದಷ್ಟು ಅದ್ದೂರಿಯಿಂದ ನಡೆದವು ಮತ್ತು ಎಷ್ಟೋ ಸಮ್ಮೇಳನಗಳು ಬಿದ್ದು ಹೋದವು. ರಾಯರ ಕಾನ್ಫರೆನ್ಸು ಪಟೇಲರ ಕಾನ್ಫರೆನ್ಸು, ಶ್ಯಾನುಭೋಗರ ಕಾನ್ಫರೆನ್ಸು, ಮುನಿಸಿಪಾಲಿಟಿಗಳ ಕಾನ್ಫರೆನ್ಸು ಬಿದ್ದೇಹೋದವು. ಪುನಃ ನಡೆಯುತ್ತೊ? ಇಲ್ಲವೊ?.

ಬೆಂಗಳೂರು ಪಟ್ಟಣದಲ್ಲಿ ಮುನಿಸಿಪಾಲಿಟಿಗಳ ಸಮ್ಮೇಳನ ಹೋದ ಜನವರಿ ತಿಂಗಳಲ್ಲಿ ನಡೆಯಬೇಕಾಗಿತ್ತು, ಸೆಸೆಂಬರು ಬರಬೇಕಾಗಿತ್ತು. ಬೆಂಗಳೂರು ಮುನಿಸಿಪಾಲಿಟಿಗೆ ತುಂಬ ಹೆಮ್ಮೆ ಒಂದಿತ್ತು ಅಂತಕಾಣುತ್ತೆ ತಕ್ಷಣ ತಣ್ಣಗಾಯ್ತು. ಗ್ರಹಾಚಾರ ಬೆಂಗಳೂರು ಸಭೆ ಹರಕಕಟ್ಟಿ ಕೊಂಡಿರಬಹುದೆ? ಏನೊ! ಸರಕಾರದ ಅಮ್ಮ ಹೂ ಕೊಟ್ಟಾಗ ತಿಳಿದುಬರಬೇಕು. ಹೂವು ಬಲಗಡೆ ಸಿಕ್ಕುತ್ತೋ ಎಡಗಡೆ ಸಿಕ್ಕುತ್ತೊ ಕಾಣೆ ಬೆಂಗಳೂರು ಸಭೆಗೆ ತಗಲಿದ ಗ್ರಹಚಾರಕ್ಕೆ ಮುಂಚೆ ಸರಕಾರದ ಅಮ್ಮ ಹೆದರಿಕೊಂಡಿತ್ತು. ಅಮ್ಮನ ಮಕ್ಕಳಿಗೆ ಇನ್ನೂ ರೆಕ್ಕೆ ಪುಕ್ಕ ಕೂಡಬೇಕಿದಿತ್ತು. ಎಲ್ಲಾ ತಪ್ಪಿ ಹೋಯ್ತು,

ಮುನಿಸಿಪಾಲಿಟಿ ಕಾನೂನ ಏನಾಯ್ತೊ ಗೊತ್ತಿಲ್ಲ. ಏನಾದರೂ ಆಗಲಿ ಈಗ ಬೆಂಗಳೂರು ಮುನಿಸಿಪಾಲಿಟಿ ಮುಂದೇ ಹೋಗದ ಹಾಗೆ ನಿಂತಿದೆ. ಇದೇಸಮಯ ನೋಡಿ ಬಾಕಿ ಮೈಸೂರಿನ ಸಣ್ಣ ಪುಟ್ಟ ಚಿಳ್ಳೆ ಪಿಳ್ಳೆ ಮುನಿಸಿಪಾಲಿಟಿಗಳೆಲ್ಲಾ ಮುಂದೆ ಬರಬಹುದು. ಎಲ್ಲಾ ಮುನಿಸಿಪಾಲಿಟಿಗಳೂ ಒಟ್ಟಿಗೆ ಕೇಳಬೇಕು. ನಾವೆಲ್ಲ ಹಿಂದೆಬಿದ್ದೀವೆ ನಮಗೂ ಮುಂದಕ್ಕೆ ಬರಲ ಸ್ಕಾಲರಷಿಪ್ ಕೊಡಿ ಅಂತ ಸರಕಾರದ ಅಪ್ಪನನ್ನು ಕೇಳಬೇಕು. ಈಗ ಕೊಡೊ ಮುನಿಸಿಪಲ್ ಕಾನೂನು ಬೇಡ ನಮಗೆ ಅಪ್ಪಟ ಕಾನೂನು ಬೇಕು. ನೂರು ರೂಪಾಯಿ ಡಿಪಾಜಿಟ್ಟು ಕೊಟ್ಟರೆ ಮೆಂಬರಾಗಲು ಅರ್ಜಿ ಹಾಕಬಹುದು ಅನ್ನುತ್ತಾರೆ. ಬಡವರು ಜನರಿಗೆ ಒಳ್ಳೆಯವರಾಗಿದ್ದರೆ ಓಟು ಬರೋಕಿಲ್ವೆ? ಪುಣ್ಯವಂತರೇ ಮೆಂಬರಗಳಾದರೆ ಬಡವರಿಗೇನು ಗತಿ? ಮನೆ ಕಂದಾಯ ಕೊಡೋರು ಮಾತ್ರವೇ ಮುನಿಸಿಪಾಲಿಟಿಗಳಲ್ಲಿ ಪುಣ್ಯವಂತರು ಊರು ಜನರ ಯೋಗಕ್ಷೇಮ ನೋಡಬಲ್ಲವರು. ಮನೆ ಇಲ್ಲದವರಿಗೆ ಮಾತ್ರವೇ ಕಷ್ಟ ಸುಖ ಹೇಳಿಕೊಳ್ಳುವ ಹಕ್ಕು ಬಾಡಿಗೆ ಕೊಟ್ಟು ವಾಸಮಾಡುವವರಿಗೆ ಕಷ್ಟಸುಖ ಇಲ್ವೆ ಅವರ್‍ಯಾಕೆ ಮೆಂಬರಾಗಬಾರದು. ಅವರಿಗ್ಯಾಕೆ ಓಟು ಕೊಡಬಾರದು?

ಹೆಂಗಸರ ಮೆಂಬರಾಗಿ ಬಿಟ್ಟರೆ ನಮ್ಮದು ಮಾದರಿ ಮುನಿಸಿಪಾಲಿಟಿಗಳು ಆಗುವುದೇ? ಇಷ್ಟು ದಿನಗಳಿಂದ ಗಂಡಸರಿಂದಲೆ ಆಗದ ಉದ್ಧಾರ ಈಗ ಹೆಂಗಸರಿಂದ ಆಗಿಬಿಡುತ್ತೆಯೆ? ಹೆಂಗಸರು ಮೆಂಬರಾಗಿ ಬಿಟ್ಟರೆ ಮುನಿಸಿಪಾಲಟಿ ಏನುಮಾಡಬಲ್ಲರು' ಕಣ್ಣಿಗೆ ಅಂದ ನಿಜ ಆದರೆ ಮುನಿಸಿಪಾಲಿಟಿ ದುಡ್ಡು ಹೆಚ್ಚಿಸಿ ಕೊಡುತ್ತಾರೆಯೆ? ವೆಚ್ಚ ಕಮ್ಮಿಮಾಡಿಸಿ ಕೊಡುತ್ತಾರೆಯೆ? ಅವರು ಇವರುಗಳು ತಿನ್ನುವುದನ್ನು ಪತ್ತೆಮಾಡಬಲ್ಲರೆ? ನಿಲ್ಲಿಸಬಲ್ಲರೆ ಏನುಮಾಡಬಲ್ಲರು ಹೆಂಗಸರ! ಅವರು ಇವರು ತಿನ್ನುವುದು ಎಲ್ಲರಿಗೂ ಗೊತ್ತು. ಪತ್ತೆಮಾಡಲ, ಮಾಡಿದರೂ ತೋರಿಸಲು ಯಾರಿಗೆ ಧೈರ್ಯ.

ವಿವಿಧ ವಿಷಯಗಳು

[illegible]

[illegible]

ಜಾಗ

ಚಿತ್ರದುರ್ಗದ [illegible] ನ ಭಾಷೆಗಳಲ್ಲಿ [illegible] 15 ದಿನಗಳಿಗೆ ಹೆಚ್ಚಿಸಲ್ಪಟ್ಟಿದೆ.

[illegible]

ಶಿಕಾರಿಪುರ ಟೌನ್ ಮುನಿಸಿಪಾಲಿಟಿಯಲ್ಲಿ [illegible] ಮೆ ಕೊಟ್ಟ ಮ|| [illegible] ಮ|| ಗುಲಾಮಿ ಹಯಾತ್ ರವರನ್ನು ಮೆಂಬರ್ [illegible] [illegible]

[illegible]

ಅಸಿಸ್ಟೆಂಟ್ ಸರ್ಜನ್‌ರಾದ [illegible] ಲೋಬೋರವರನ್ನು ತುಮಕೂರು ಡಿಸ್ಟ್ರಿಕ್ಟ್ [illegible] ನಲ್ಲಿ ವರ್ಗಮಾಡಿ ಶ್ರೀಮತಿ [illegible] ರವರ ಸ್ಥಾನದಲ್ಲಿ ಮೆಂಬರಾಗಿ ನಿಯಮಿಸಿರುವರು

ಫೋಟೋಗ್ರಾಫರ [illegible]

ಕೋಲಾರದಲ್ಲಿ [illegible] ಧನಸ್ಥ [illegible] ಫೋಟೋಗ್ರಾಫರ [illegible] ಹೋಗಿದ್ದರ [illegible] ಜಾ ಘಾಯಗಳಾಗಿವೆ

ಮ|| ಅಲ್ಲಿ ಅಹಮದ್ ಜಾನ್‌ರವರು

ಕಾಬೂಲಿನ ಅಧಿಕಾರಕ್ಕೆ ಪುನಃ [illegible] ಬರುಕ್ಕ ವಿಷಯದಲ್ಲಿ ಅಲ್ಲಿ ಅಹಮದ್ ಜಾನ್‌ರವರು ತುಂಬಾ ಶ್ರದ್ಧೆ ವಹಿಸುವರೆಂದು ತಿಳಿದು ಬಂದಿದೆ

ಚಳಿ

ಯೂರೋಪಿನ ಛಳಿಯು ದಿನ ದಿನಕ್ಕೆ [illegible] ವಾಗುತ್ತಿದೆ

ಯಾವ ಯಾವಿಗೆ ಮುನಿಸಿಪಾಲಿಟಿ ದುಡ್ಡು ಹೆಚ್ಚಿಸಲು, ಖರ್ಚು ಕಮ್ಮಿ ಮಾಡಿಸಲು ಧೈರ್ಯವಿರುವುದೋ ಅವರ್‍ಯಾರಿಗೆ [illegible] ಪಾಲಿಟೀ [illegible] ನೋಡೋಣ

Printed and published by P. R. Ramaiya, at Sri Rama Press, ...

Regd No. M 2322

ತಾಯಿನಾಡು.

ಪ್ರತಿ ಸೋಮವಾರವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ

ಸಂಪುಟ ೧] ಮಂಗಳವಾರ ೧೨ ಫೆಬ್ರವರಿ ೧೯೨೭

ಮೈಸೂರು ಪುರಜನರ ಪ್ರಚಂಡ ಸಭೆ.

1 ವಿಶ್ವೇಶ್ವರಯ್ಯ ಕಮಿಟಿ ಮುಖ್ಯಾಂಶಗಳಿಗೆ ಪುರಸ್ಕಾರ 2 ಗೌರ್ನ್ಮೆಂಟ್ ಆರ್ಡರಿನ ಖಂಡನೆ 3 ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. 4 ಜವಾಬ್ದಾರೀ ಸರ್ಕಾರ...

ತಾಯಿನಾಡು.

12—2—1929

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಈ ತಿಂಗಳು 10 ನೇ ತಾ|| ಭಾನುವಾರ ಸಾಯಂಕಾಲ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ "ಶ್ರೀ ವಿಶ್ವೇಶ್ವರಯ್ಯನವರ ಕಮಿಟಿಯ ವರದಿ ಮತ್ತು ಅದರ ಮೇಲೆ ಸರ್ಕಾರದವರು ಮಾಡಿರುವ ಅಪ್ಪಣೆಗಳ ವಿಷಯದಲ್ಲಿ ಮಹಾಜನಾಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ, ಒಂದು ಸಾರ್ವಜನಿಕ ಸಭೆಯು ವೃದ್ಧ ಪಿತಾಮಹ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆ ಎಲ್ಲಿ ಡೆಯಿತು.

ಸಭೆಗೆ ಮ|| ರಾ|| ಗಳಾದ ಆರ್. ಜಿ ಹಾರ್ಡೀಕರ್ ರವರೂ, ಮಹಮ್ಮದ್ ಸೇಟರವರೂ, ಟಿ. ಎಸ್. ಅಲ್ಲೀಖಾನರೂ, ಹೆಚ್. ಸಿ. ದಾಸಪ್ಪನವರೂ. ರಿ| ಸಿಟಿ ಮ್ಯಾಜಿಸ್ಟ್ರೇಟರಾದ ನಾರಾಯಣರಾಯರೂ, ಎಂ. ಪಿ ಭೋಗಯ್ಯನವರೂ, ಧರ್ಮಪ್ರಕಾಶ ಪಿ ಒಮಾಮಯ್ಯನವರೂ, ಎ ಆರ್. ಶ್ರೀಕಂಠಶರ್ಮರವರೂ. ನಾರಾಯಣಸ್ವಾಮಯ್ಯರ್ ರವರೂ, ಪಿ. ಸೀತಾರಾಮಯ್ಯನವರೂ, ಟಿ. ಕೃಷ್ಣರಾಯರೂ, ವೈಸ್ ಪ್ರೆಸಿಡೆಂಟರಾದ ಯಂ. ರಾಮಸ್ವಾಮಯ್ಯನವರೂ ಇವರೇ ಮೊದಲಾದ ಖಾಸಗೀ ದೊಡ್ಡ ಮನುಷ್ಯರುಗಳೂ ವೇದಮೂರ್ತಿ ಬ್ರಹ್ಮಶ್ರೀ ಗಳಾದ ಮಹಾ ವಿದ್ವಾಂಸರುಗಳಾದಂಥ ರಾಮಶೇಷಶಾಸ್ತ್ರಿಗಳೂ, ಸದಾಶಿವಶಾಸ್ತ್ರಿಗಳೂ ಶ್ರೀನಿವಾಸತಾತಾಚಾರ್ಯ್ಯರೇ ಮೊದಲಾದ ವೈದಿಕ ದೊಡ್ಡ ಮನುಷ್ಯರುಗಳೂ, ಅನೇಕ ವಿದ್ಯಾರ್ಥಿಗಳೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸೂಪರಿಂಟೆಂಡೆಂಟರವರಾದ ಮ|| ರಾ ಸಿದ್ದರಾಜೇ ಅರಸಿನವರೂ 4-5 ಜನ ಇನ್ಸ್‌ಪೆಕ್ಟರುಗಳೂ ಸಿ. ಐ. ಡಿ. ಗಳೂ ಸಹ ದಯಮಾಡಿಸಿದ್ದರು. ಒಟ್ಟಿನಲ್ಲಿ ಆತ್ಮಗೌರವ ದೇಶಸೇವೆ ಪ್ರಜಾಸ್ವಾತಂತ್ರ್ಯ ಇವೇ ಮುಖ್ಯವಾದ ಧ್ಯೇಯಗಳುಳ್ಳ ಸಹಸ್ರಾರು ಪುರಜನರಿಂದ ಸಭಾಂಗಣವು ಕಿಕ್ಕಿರಿಯುತ್ತಿದ್ದಿತು.

ಕಾರ್ಯಾರಂಭ

ಮ|| ಆಗರಂ ರಂಗಯ್ಯನವರು ಇಂದಿನ ಕಾರ್ಯಕ್ರಮಗಳನ್ನು ಸೂಚಿಸಿದನಂತರ ಮ|| ತಗಡೂರು ರಾಮಚಂದ್ರರಾಯರು ಬೆಂಗಳೂರ ಪ್ರಜಾಸಂಘದ ಒಪ್ಪಿಗೆಯಾಗಿರುವ ಶ್ರೀ ಗಣಪತಿ ಸತ್ಯಾಗ್ರಹದ ಮತ್ತು ತದನಂತರದ ವಿಚಾರವಾಗಿ ಸಂಘದ ನಿರ್ಣಯಗಳನ್ನೂ ಸಭೆಗೆ ನಿವೇದಿಸಿದರು.

ತಾಯಿನಾಡು ಪತ್ರಿಕಾ ಸಂಪಾದಕರಾದ ಶ್ರೀಯುತ ಪಿ. ಆರ್ ರಾಮಯ್ಯನವರು:—1928 ನೇ ಇಸ್ವಿ ಜುಲೈ ತಿಂಗಳಲ್ಲಿ ಬೆಂಗಳೂರು ಗಣಪತಿ ಸತ್ಯಾಗ್ರಹ ಸಮಯದಲ್ಲಿ ನಡೆದ ಗಲಭೆಗಳ ಮುಖ್ಯಾಂಶವನ್ನು ಕುರಿತು ಶ್ರೀ ವಿಶ್ವೇಶ್ವರಯ್ಯನವರ ಸಮಿತಿಯು ಕೊಟ್ಟಿರುವ ತೀರ್ಮಾನಗಳೂ ಸೂಚನೆಗಳೂ ಪ್ರಜಾಸಮ್ಮತವಾಗಿವೆಯೆಂದೂ ಆ ಸಮಿತಿಯ ವರದಿಯ ಮೇಲೆ ಸರ್ಕಾರದವರು ಪ್ರಕಟಿಸಿರುವ ಹುಕುಂ ನಾಮೆಯು ತೃಪ್ತಿಕರವಾಗಿಲ್ಲವೆಂದೂ ಈ ಸಭೆಯು ಶ್ರೀಮನ್ ಮಹಾರಾಜರವರ ದಿವ್ಯ ಸನ್ನಿಧಾನದಲ್ಲಿ ಅತಿವಿನಯದಿಂದ ಬಿನ್ನವಿಸುತ್ತದೆ, ಎಂದ ಬೆಂಗಳೂರು ಮಹಾ ಜನಗಳ ಸಭೆಯಲ್ಲಿ ತೀರ್ಮಾನವಾಗಿರುವ ಮೊದಲನೆ ನಿರ್ಣಯವನ್ನು ವಿಶದಪಡಿಸಿದರು.

ಮ|| ರಾ| ಜಿ. ಆರ್. ಜೋಯಿಸ್ಯರವರು ಮೇಲಿನ ನಿರ್ಣಯವನ್ನು ಅನುಮೋದಿಸಿದರು.

ಮ|| ರಾ|| ನಾರಾಯಣಸ್ವಾಮಯ್ಯರ್ ರವರು:— ಮ|| ರಾ|| ರಾಮಯ್ಯನವರು ಹೇಳಿದ ಮೊದಲನೆಯ ನಿರ್ಣಯವು ಅಮಾನಿಬಸ್ಲೆಂದು ಕರೆಯಬಹುದು. ಕಮಿಟಿಯವರಾಯಲ್ಲಿ ಯಾವುದನ್ನು ಅನುಮೋದಿಸಬೇಕೋ ಅದನ್ನು ಅನುಮೋದಿಸಬೇಕು. ಹುಡುಗರು ಬಂದೆತಾಯೀಗಳೂ ಗುರುಗಳೂ ಹೇಳಿದಂತೆ ಕೇಳಿಕೊಂಡಿರುವುದನ್ನು ಬಿಟ್ಟು ಕ್ಷುಲ್ಲಕಗಳನ್ನು ಎಸೆದು ಗಲಭೆ ಮಾಡಿದ್ದು ತಪ್ಪು. ಪತ್ರಿಕಾ ವಿಚಾರದಲ್ಲೂ ಮತ್ತು ಹುಡುಗರ ವಿಷಯದಲ್ಲಿಯೂ ಸರ್ಕಾರದವರು ಮಾಡಿರುವುದು ಎಲ್ಲರಿಗೂ ಒಪ್ಪಿಗೆಯಾಗಿದೆ.

ಈ ಎರಡು ಹೊರತು ಮತ್ಯಾವುದನ್ನೂ ಸರ್ಕಾರದ ಮೇಲೆ ಟೀಕಿಸುವುದು ನ್ಯಾಯವಲ್ಲ. ಕಮಿಟಿಯವರು ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಶಿಫಾರ್ಸು ಮಾಡಿರುವುದು ನ್ಯಾಯವಲ್ಲ ನಾವು ಈಗ ಅದನ್ನು ಚರ್ಚಿಸಬೇಕಾದ ಅವಶ್ಯಕತೆಯೂ ಇಲ್ಲ. ಸರ್ಕಾರದವರು ಉಭಯಪಕ್ಷದಲ್ಲಿಯೂ ಯೋಚನೆ ಮಾಡಿಕೊಟ್ಟಿದ್ದಾರೆ

ಮ|| ರಾ| ಹೆಚ್. ಸಿ. ದಾಸಪ್ಪನವರು:— ಈ ಸಭೆಗೆ ಯಾರೋ ಕೆಲವರು ಮಾತ್ರ ಸೇರಿದರೆ ಮೈಸೂರು ಪುರಜನರ ಸಭೆಯಾದಂತೆ ಆಗುವುದಿಲ್ಲವೆಂದೂ, ಜನಬಾಹುಳ್ಯದಲ್ಲಿ ಈ ಸಭಾ ಪ್ರಚಾರವು ಸರಿಯಾಗಿ ಆಗಲಿಲ್ಲವೆಂದೂ, ತಾಯಿನಾಡು, ಮೈಸೂರಿಯನ್ ಎಂಬೆರಡು ಪತ್ರಿಕೆಗಳಲ್ಲಿ ಮಾತ್ರ ವಿಷಯ ಪ್ರಚಾರವಾಗಿರುವಹಾಗೆ ಈ ಪಟ್ಟಣದ ಇತರ ಪತ್ರಿಕೆಗಳಲ್ಲೂ ಪ್ರಚಾರವಾಗಿದ್ದಿದ್ದರೆ ಜನರೆಲ್ಲ ಸೇರಲನುಕೂಲವಾಗುತಿತ್ತೆಂದೂ ಈಗಿರುವಷ್ಟು ಜನರಲ್ಲೇ ಸಭಾ ಕಾರ್ಯಗಳನ್ನು ನಡೆಸುವುದು ಉಚಿತವಲ್ಲವೆಂದೂ ಹೇಳಿದರು. ಸರ್ಕಾರದವರು ವಿಶ್ವೇಶ್ವರಯ್ಯ ಸಮಿತಿಯನ್ನು ಕೆಲ ವಿಷಯಗಳಲ್ಲಿ ಮಾತ್ರ ಅಭಿಪ್ರಾಯವನ್ನು ಕೊಡಲೆಂಬ ಉದ್ದೇಶದಿಂದ ಸ್ಥಾಪಿಸಿದರು. ಆದರೆ ಇದೇ ಸಮಯದೊಳಕಿತೆಂದ ಸಮಿತಿಯವರು ಮಿಲ್ಲರ್ ಕಮಿಟಿಯನ್ನು ತೆಗೆಯಬೇಕೆಂಬ ಸಲಹೆಕೊಟ್ಟರು. ಹಳುವರ್ಷ ಕಾಲದಲ್ಲಿ ಶೇ|| 50 ರಾತೆ ಹಿಂದುಳಿದಿರುವವರಿಗೆ ಸರ್ಕಾರಿ ನೌಕರಿಯು ಸಿಕ್ಕಬೇಕು ಎಂದು ಆಗಿದ್ದ ನಿರ್ಣಯವು ಸಂಪೂರ್ಣವಾಗಿ ಈಡೇರಿಲ್ಲ. ಕಮಿಟಿಯವರು ಕೊಟ್ಟಿರುವ ಸಲಹೆಗೆ ಕೆಲವರು ಒಪ್ಪಿರುತ್ತಾರೆ. ಇನ್ನು ಕೆಲವರು ಒಪ್ಪಿಲ್ಲ. ಇವರನ್ನು ಸಮಿತಿಯ ಅಧ್ಯಕ್ಷರೂ ಮತ್ತು ಸಮಿತಿಯಲ್ಲಿರುವ ಮತ್ತೊಬ್ಬ ಬ್ರಾಹ್ಮಣ ಮೆಂಬರು ಇವರಿಬ್ಬರೇ ಬರೆದಿರುವರು. (ಇಷ್ಟರಲ್ಲೇ ಕೆಲವರು ನಿಮಗೆ ಗೊತ್ತೇ ಎಂದು ಪ್ರಶ್ನಿಸಲು ಸಭೆಯಲ್ಲಾ ದೊಡ್ಡ ಗಲಭೆಯಾಯಿತು.) ಈ ಮಧ್ಯೆ ವೀರಕೇಸರಿ ಸಂಪಾದಕರಾದ ಮ|| ಸೀತಾರಾಮಶಾಸ್ತ್ರಿಗಳು:— ಮ|| ದಾಸಪ್ಪನವರು ಎಷ್ಟು ಉದ್ದವಾಗಿ ಬೇಕಾದರೂ ಹೇಳಲಿ ನಾನು ಅದಕ್ಕೆ ತಕ್ಕಂತೆ ಉದ್ದವಾಗಿಯೇ ಉತ್ತರಕೊಡಲು ಸಿದ್ಧನಾಗಿದ್ದೇನೆ. ಎಂದರು. ಮ|| ದಾಸಪ್ಪನವರು:— ನಾವು ರಾಜಕೀಯ ವಿಷಯಗಳ ಕಡೆಗೆ ಹೋಗಬಾರದು. ಪ್ರತಿಯೊಂದು ಕಡೆಯೂ ಹೀಗೆ ನಡೆಯುವುದು ಸ್ವಭಾವ... ಬೊಂಬಾಯಿನಲ್ಲಿ ಅಷ್ಟೊಂದು ಭಾರಿ ಗಲಾಟೆಯಾ... ದ್ದರೂ ಏಳು ಜನರನ್ನು ಮಾತ್ರ ದಸ್ತಗಿರಿ ಮಾ... ತ್ತಾರೆ. ಅಸೆಂಬ್ಲಿಯಲ್ಲೂ ಕೂಡ ವರ್ತಮಾನಪತ್ರಿಕೆಗಳ ವಿಷಯವಾಗಿ ಖಂಡನೆಯಾಗಿದೆ ನಿರ್ಣಯ... ರುವುದಕ್ಕೇನೂ ಕಾರಣವಿಲ್ಲ. ಸರ್ಕಾರಿ ಆರ್ಡರಿನ... ಕ್ಕಾಲು ಭಾಗವೆಲ್ಲಾ ಸರ್ವ ಸಮ್ಮತವಾದದ್ದು.

ಮ|| ಪಾಲಹಳ್ಳಿ ಸೀತಾರಾಮಯ್ಯನವರು:— ...ಟ್ಟಣಗಳಲ್ಲಿ ವಾಸವಾಗಿರುವ ಪ್ರತಿಯೊಬ್ಬರೂ ಪ್ರ... ಮುಖರೇ (ಕೈಚಪ್ಪಾಳೆ.) ಪ್ರತಿಯೊಬ್ಬರೂ ಪತ್ರಿಕೆಗಳನ್ನು ಓದಿ ನ್ಯಾಯಾನ್ಯಾಯಗಳನ್ನು... ರ್ಧರಿಸಿಕೊಂಡಿರುವರು. ಜಾತಿ ದ್ವೇಷ, ಮತದ್ವೇಷ... ಇರಬಾರದು. ಪ್ರತಿಯೊಬ್ಬರೂ ರಾಜಕೀಯ ವಿಷಯ... ಲ್ಲಿ ಪ್ರವೇಶಿಸಬೇಕು. (ಕೈ ಚಪ್ಪಾಳೆಗಳ !!!)

ಮ|| ಎಂ. ಪಿ. ಭೋಗಯ್ಯನವರು:—ಜಾತಿದ್ವೇಷ... ಇರಬಾರದು. ಇದುವರವಿಗೂ ನಡೆದಿರುವುದನ್ನು ಮ... ಬಿಡೋಣ. ಕೆಲವು ಕಾಲದ ಮೇಲೆ ಎಲ್ಲವೂ ಸರಿ... ಗುತ್ತೆ ಎಂದು ಬೆಂಗಳೂರಿನ ಸರ್. ಕೆ. ...ಶೆಟ್ಟರವರು ವೃತ್ತಪತ್ರಿಕೆಗಳಲ್ಲಿ ತಿಳಿಸಿರುವ ಅಭಿಪ್ರಾಯ... ಗಳನ್ನೇ ಇವರೂ ತಿಳಿಸಿದರು.

ಮ|| ಪಿ. ಆರ್. ರಾಮಯ್ಯನವರು ಆಕ್ಷೇಪಣೆ... ಲ್ಲಾ ಸಮಾಧಾನವನ್ನು ಹೇಳಿದರು ಠರಾವಿನ... ಯದಲ್ಲಿ ಚರ್ಚೆಯು ನಡೆದು ಮಹಾಜನರ ಸಮ್ಮ... ಗದುಕೊಳ್ಳುವುದಕ್ಕೆ ಓಟಿಗೆ ಹಾಕುವ ಸಮಯ... ತ್ತಾಂತ ಪತ್ರಿಕೆಯ ಮ|| ಟಿ. ಕೃಷ್ಣರಾಯರು:— ...ದಲನೆ ನಿರ್ಣಯದಲ್ಲಿರತಕ್ಕ ಅಂಶಗಳು ಒಟ್ಟಾಗಿ... ನ್ನು ಪ್ರತ್ಯೇಕಿಸಿ ಬೇರೆ ಬೇರೆಯಾಗಿ ಮಹಾಜನ... ಪಡೆಯಬೇಕೆಂದು ಹೇಳಿದರು.

ಕೂಡಲೇ ಸಭೆಯು ಎಲ್ಲಾ ಭಾಗಗಳಿಂದಲೂ ...ರೋಧಾಭಿಪ್ರಾಯ ದೊರೆಯಿತು.

ಮ|| ದಾಸಪ್ಪನವರು:—ಈ ಸಭೆಯಲ್ಲಿ ಅನೇಕ... ರೀ ನೌಕರರೂ ವಿದ್ಯಾರ್ಥಿಗಳೂ ಇರುವರು ...ಗಳ್ಯಾರೂ ಓಟು ಕೊಡಕೂಡದೆಂದು ವಿರೋಧಿ...

ಮ|| ಸೀತಾರಾಮಶಾಸ್ತ್ರಿಗಳು:—ವಿದ್ಯಾರ್ಥಿ... ರಾಜಕೀಯ ವಿಷಯಗಳಲ್ಲಿ ಪ್ರವೇಶಿಸಬಹುದೆಂದು... ಹಾತ್ಮ ಗಾಂಧಿಯವರು ಅಪ್ಪಣೆ ಕೊಡಿಸಿರು... ತಿಳಿಸಿದನಂತರ (ವೋಟಿಗೆ)ಹಾಕಲಾಗಿ ಅಧ್ಯ... ಮಾತ್ರ ವಿರೋಧಿಸಿ ಬಾಕಿಯವರು ಒಪ್ಪಿಗೆ ಕೊ... ದ ಆ ಠರಾವು ಪಾಸಾಯಿತು.

ಮ|| ಪಿ. ಸೀತಾರಾಮಯ್ಯ:— ಇವರು ...ವಿಶ್ವೇಶ್ವರಯ್ಯ ಸಮಿತಿಯು ಸೂಚಿಸಿರುವಂತೆ ...ಗಲಭೆಗಳಲ್ಲಿ ಅಪರಾಧ ಮಾಡಿದ ಜನರನ್ನೂ ...ತಪ್ಪಿದ ಅಧಿಕಾರಸ್ಥರನ್ನೂ ತಕ್ಕ ಶಿಕ್ಷೆಗೆ ಗು... ದಕ್ಕೂ, ಉತ್ತರವಾದಿಸರಕಾರ ಕ್ರಮವನ್ನು ...ದಷ್ಟು ಶೀಘ್ರವಾಗಿ ನೆಲೆಗೊಳಿಸಲು ಆವಶ್ಯ... ...ರ್ಮಾಡುಗಳನ್ನು ಕೂಡಲೇ ಕೈಗೊಳ್ಳುವುದಕ್ಕೂ ...ರದರಿಗೆ ಅನುಜ್ಞೆಯಾಗಬೇಕೆಂದು ಈ ಸಭೆಯು ...ನ್ ಮಹಾರಾಜಾ ಸಾಹೇಬರವರನ್ನು ಅತಿ ...ದ ಪ್ರಾರ್ಥಿಸುತ್ತದೆ ಎಂಬ ಎರಡನೇ ನಿರ್ಣ...

(3 ನೇ ಪುಟವನ್ನು ನೋಡಿ.)

TAI NADU
12—2—1929

ಮೈಸೂರಿನಲ್ಲಿ ಸಿಂಹನಾದ

ಎಲ್ಲಾ ರಾಜ್ಯಗಳಲ್ಲಿಯೂ ಪ್ರಜಾಸ್ವಾತಂತ್ರ್ಯದ ಜ್ವಾಲೆಯು ಉಜ್ವಲಿಸುತ್ತಿರುವುದು. ಎಲ್ಲಾ ಸರ್ಕಾರಗಳೂ ಇದನ್ನು ಅಣಗಿಸಿಬಿಡಬೇಕೆಂದು ಭಗೀರಥ ಪ್ರಯತ್ನ ಪಡುತ್ತಿರುವುವು ಪ್ರಜಾ ಸಾಮಾನ್ಯವೆಲ್ಲವೂ ಅದನ್ನು ಹಬ್ಬಿಸಬೇಕೆಂದು ಹಾತೊರೆಯುತ್ತಿರುವುದು. ಪ್ರಜಾಮುಖಂಡರು ಪ್ರಜೆಗಳನ್ನು ಹುರಿದುಂಬಿಸಿ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಸಂಪಾದಿಸಿಕೊಡಲು ಮುಂದುವರೆದು ಸಿಂಹನಾದವನ್ನು ಮಾಡುತ್ತಿರುವರು. ಈ ಸಿಂಹನಾದವು ನಮ್ಮ ಮೈಸೂರಿನಲ್ಲಿಯೂ ಧ್ವನಿಯಾಗುತ್ತಿರುವುದು.

ನಮ್ಮ ಸರ್ಕಾರವು ಇದನ್ನು ಸಹಿಸದೆ ಈಗಾಗಲೇ ದಬ್ಬಾಳಿಕೆಗೆ ಆರಂಭಮಾಡಿಬಿಟ್ಟಿದೆ. ಈಗ ಸರ್ಕಾರದ ಈ ವಜ್ರಾಯುಧವು ಪತ್ರಿಕೆಗಳ ಮೇಲೆ ಪ್ರಯೋಗಿಸಲ್ಪಡುತ್ತಿದೆ. ಮುಂದೆ ಉಪನ್ಯಾಸಕರ ಮೇಲೆಯೂ ಸಭೆಗಳ ಮೇಲೆಯೂ ಈ ಬಾಣಪ್ರಯೋಗವು ಮಾಡಲ್ಪಟ್ಟರೆ ಅದರಲ್ಲಿ ಅತಿಶಯವೇನೂ ಇಲ್ಲ.

ಆದರೆ ಈಗ ಕಾಲಧರ್ಮವೇ ಬದಲಾಯಿಸಿ ಹೋಗಿದೆ. ಈಗಿನ ತರುಣ ಮುಂದಾಳುಗಳು ದುಡ್ಡಿಗೆ ಬಲಿಜೀಳುವಂತಿಲ್ಲ. ಅಧಿಕಾರಿಗಳ ಆಶೆಯಿಲ್ಲ ಸರ್ಕಾರದ ಮಾನ ಮನ್ನಣೆಗಳಿಗೆ ಬಾಯಿಬಿಡುವಂತಿಲ್ಲ. ಅವರೆಲ್ಲರೂ ಜ್ವಲಂತ ಸ್ವಾರ್ಥತ್ಯಾಗಕ್ಕೆ ಸಿದ್ಧರಾಗಿ—ಮುಂದೆ ಬಂದಿದ್ಧಾರೆ ಅವರು ನ್ಯಾಯ ಸತ್ಯಧರ್ಮಗಳಿಗೆ ಮಾತ್ರವೇ ತಲೆಬಾಗಿಸುವವರಾಗಿದ್ಧಾರೆ. ಎಲ್ಲಿ ನ್ಯಾಯವಿಲ್ಲವೋ ಎಲ್ಲಿ ಸತ್ಯಕ್ಕೆ ಚ್ಯುತಿಯುಂಟಾಗಿದೆಯೋ ಎಲ್ಲಿ ಧರ್ಮಕ್ಕೆ ಲೋಪಬಂದಿದ್ಧೆಯೋ ಅಲ್ಲಿ—ಮುಖಂಡರ ಸಿಂಹನಾದವು ದಶದಿಕ್ಕುಗಳನ್ನು ವ್ಯಾಪಿಸುವಂತೆ ಧ್ವನಿಯಾಗುತ್ತದೆ. ಈಗಿನ ಮುಂದಾಳುಗಳು ಜೈಲುಗಳಿಗೆ ಭಯಪಡುವುದಿಲ್ಲ ಗಡೀಪಾರುಗಳಿಗಾಗಲೀ ಮುಟ್ಟುಗೋಲುಗಳನ್ನಾಗಲೀ ಲೆಕ್ಕಿಸುವಂತಿಲ್ಲ. ಗುಂಡಿನ ಬಾಯಿಗಳಿಗಾಗಲೀ ಸಂಗೀನುಗಳ ಅಲುಗುಗಳಿಗಾಗಲೀ ಅವರ ಎದೆಯು ಹಿಂದೆಗೆಯುವುದಿಲ್ಲ. ಅವರನ್ನು ಸಮಾಧಾನಪಡಿಸಬೇಕಾದರೆ ಸತ್ಯಸ್ಥಾಪನೆಯಾಗಬೇಕು.

ಈಗಿನ ಅಧಿಕಾರಿಗಳ ಗಂಪಿನ ದಬ್ಬಾಳಿಕೆಯು ಆಡಳಿತವು ಹೆಚ್ಚುಕಾಲ ಸಹನೀಯವಾಗುವಂತಿಲ್ಲ ಜವಾಬ್ದಾರೀ ಸರ್ಕಾರವೊಂದೇ ಈಗ ಪ್ರಜೆಗಳಿಗೆ ಆದರಣೀಯವಾದುದು. ಅದನ್ನು ಸ್ಥಾಪಿಸಲು ಅಧಿಕಾರಿಗಳು ಬಗ್ಗಲೇಬೇಕು ಖಾಸ ದೊಡ್ಡಮನುಷ್ಯರು ಸಹ ತಗ್ಗಿರಬೇಕು ಆಗ ಮೈಸೂರು ಮಾದರೀ ರಾಜ್ಯವಾಗಿ ಇಲ್ಲಿ ಸುಖ ಶಾಂತಿಗಳು ನೆಲೆಗೊಳ್ಳುತ್ತವೆ

ಬ್ರಿಟಿಷ್ ಸೈನ್ಯದ ಆಫೀಸರ ತಬಬು.

ಪಾರ್ಲಿಮೆಂಟಿನಲ್ಲಿ ಆರ್ಥರ್ ಹಾಲ್‌ಬರ್ಗ ಎಂಬವರ ಪ್ರಶ್ನೆಗೆ ಉತ್ತರವಾಗಿ ಇಂಡಿಯದ ಬ್ರಿಟಿಷ್ ಸೈನ್ಯದ ಆ

ಮೈಸೂರಿನಲ್ಲಿ 10—2—29 ರಲ್ಲಿ ಟೌನ್‌ಹಾಲಿನಲ್ಲಿ ನಡೆದ ಮಹಾಜನರ ಸಭೆಯಲ್ಲಿ, ಬೀರಕೇಸರಿ

ಶ್ರೀ. ಸೀತಾರಾಮಶಾಸ್ತ್ರಿಗಳ ಉಪನ್ಯಾಸ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರಿನ ಗಲಭೆಗಳು ಆದಂದಿನಿಂದ ಈಚೀಚೆಗೆ ಏನೇನು ನಡೆಯುತ್ತಿದೆಯೋ ಅದೆಲ್ಲವೂ ನಿಮ್ಮಗಳ ಕಿವಿಗೆ ಬಿದ್ದು ಹೃದಯವನ್ನು ಕರಗಿಸಿ ನ್ಯಾಯದ ಕಡೆಗೆ ಮಲಿಸಿದೆ ಎಂಬುದನ್ನು ನಾನು ನಂಬುತ್ತೇನೆ ಆದ್ದರಿಂದ ಬೆಂಗಳೂರಿನ ಪ್ರಜಾಸಂಘದವರ ಈ ಪ್ರಸಿದ್ಧ ಪತ್ರಿಕೆಯನ್ನು ತಾವೆಲ್ಲರೂ ತಮ್ಮ ಕರುಣಾ ಪೂರ್ಣತೆಯಿಂದ ಅನುಮೋದಿಸಬೇಕೆಂದು ಪ್ರಾರ್ಥಿಸುತ್ತೇನೆ ಬೆಂಗಳೂರಿನ ಗಲಭೆಗಳಿಗೆಲ್ಲಾ ಪತ್ರಿಕೆಗಳವರು ಕಾರಣವೆಂದು ಸರಕಾರದವರು ದೂರು ಹೊರಿಸಿರುವರು. ಸರಕಾರದವರೇ ತಪ್ಪುಮಾಡಿದರೆಂದು ಜನರೆಲ್ಲರೂ ಬೊಬ್ಬೆ ಹಾಕಿದರು. ಆದ್ದರಿಂದ ಮಹಾಜನಾಭಿಪ್ರಾಯದಂತೆ ಶ್ರೀ ವಿಶ್ವೇಶ್ವರಯ್ಯ ಸಮಿತಿಯು ನೇಮಿಸಲ್ಪಟ್ಟಿತೆಂಬುದು ಸಕಲರಿಗೂ ತಿಳಿದ ಅಂಶವೇ ಆಗಿದೆ ಇದನ್ನೇ ಶಾಸನಸಭೆಯಲ್ಲಿಯೂ ಇತ್ತೀಚೆಗೆ ಸರಕಾರದವರು ಒಪ್ಪಿಕೊಂಡಿದ್ದಾರೆ. ಅಂಥಾ ಸಮಿತಿಯವರು ಮಾಡಿದ ತೀರ್ಮಾನಗಳನ್ನು ಸರ್ಕಾರದವರು. ಎಲ್ಲೆಲ್ಲಿ ಹೀನಾಯವಾಗಿದ್ದು ಸರಕಾರವು ಮೊದಲಿನಿಂದ ಕೊನೆಯವರೆಗೂ ತಪ್ಪು ಮಾಡಿದೆ. ಆಗ ಸರಕಾರವೇ ಮುಂದೆ ಬಿದ್ದಿತ್ತೆಂದು ಸಮಿತಿಯವರು ಸ್ಪಷ್ಟವಾಗಿ ಹೇಳಿಬಿಟ್ಟರು. ಆ ಮುಂದು ಬಿದ್ದ ಸರಕಾರವನ್ನು ಭದ್ರವಾಗಿ ಪುನಃ ನಿರ್ಮಾಣ ಮಾಡಲೇಬೇಕು. ಅದು ಪ್ರಜಾಶಕ್ತಿಯಿಂದ ಕಟ್ಟಲ್ಪಡಬೇಕು. ಅಂಥಾ ಜವಾಬ್ದಾರೀ ಸರಕಾರವನ್ನು ನಮ್ಮ ಮಹಾರಾಜರವರು ನಮಗೆ ಅನುಗ್ರಹಿಸುವರೆಂಬ ನಂಬಿಕೆಯು ನಮಗಿದೆ ಬೆಂಗಳೂರು ಗಲಭೆಗಳ ತೀರ್ಮಾನದಲ್ಲಾಗಲೀ ಜವಾಬ್ದಾರೀ ಸರಕಾರದಲ್ಲಾಗಲೀ ಇಂಡಿಯಾ ಸರಕಾರವು ಏನು ಹೇಳುತ್ತದೆಂದು ತಿರುಗಿನೋಡುವ ಅಗತ್ಯವಿಲ್ಲ. ಆ ಸರಕಾರಕ್ಕಿಂತಲೂ ನಮ್ಮ ಸರಕಾರವೇ ಉತ್ತಮವೆಂದು ನನ್ನ ಭಾವನೆ. ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಮೋತೀಲಾಲ್ ನೆಹರೂರವರು ಒಂದು ವರ್ಷ ಒಳಗಾಗಿ ಇಂಡಿಯಾ ಸರಕಾರವನ್ನೇ ತಲೆಕೆಳಗು ಮಾಡುತ್ತೇವೆಂದ ಹೇಳಿದ್ಧಾರೆ. ಆದ್ದರಿಂದ ಆ ಸರ್ಕಾರದ ಮಾತು ನಮಗೇಕೆ ನಮ್ಮ ಸರಕಾರವನ್ನು ನಾವು ಸರಿಪಡಿಸಿಕೊಳ್ಳಬೇಕು ನಾವು ಕೇಳುವುದು ಮತ್ತೇನೂ ಇಲ್ಲ. ನಮ್ಮ ಮಹಾರಾಜರವರ ರಾಜ್ಯಾಧಿಕಾರವನ್ನೇ ಕೆಲವರು ಅಧಿಕಾರಿಗಳ ಕೈಯಲ್ಲಿ ಕೊಟ್ಟಿದ್ಧಾರೆ. ಅದನ್ನು ನಮ್ಮ ಪ್ರಜಾಪ್ರತಿನಿಧಿಗಳ ಕೈಗೆ ಒಪ್ಪಿಸಬೇಕೆಂದ [illegible] ಕೇಳುತ್ತೇವೆ! ಪ್ರಜಾನುರಾಗಿಗಳಾದ ನಮ್ಮ ಮಹಾರಾಜರು ಈ ಪ್ರಾರ್ಥನೆಯನ್ನು ಸಲ್ಲಿಸಿಕೊಡುವರೆಂದು ನನ್ನ ಪೂರ್ಣವಾದ ನಂಬಿಕೆ ಇದೆ. ಇದನ್ನೇ ನಾವು ಸರ್ಕಾರವನ್ನು ಒಡಲಾಯಿಸ ಪ್ರದೇಶವೆನ್ನುವುದು; ಇದನ್ನೇ [illegible] ಸರ್ಕಾರವನ್ನು ತಲೆಕೆಳಗು ಮಾಡುವುದೆನ್ನುವುದು, ಅಭದ್ರವಾದ ಸರ್ಕಾರವನ್ನು ಭದ್ರಪಡಿಸುವುದೇ ತಲೆಗೆಳಗು ಮಾಡುವುದೆಂಬುದರ ಅರ್ಥ ಇಂಗ್ಲೆಂಡಿನಲ್ಲಿ ಒಂದೊಂದು ಚುನಾವಣೆಯಲ್ಲಿಯೂ ಸರ್ಕಾರವು ತಲೆಕೆಳಗಾಗುವುದು. ಅದೇರೀತಿಯಲ್ಲಿ ನಮ್ಮಲ್ಲಿಯೂ ಜವಾಬ್ದಾರೀ ಸರ್ಕಾರವು ಬಂದರೆ ಈಗಿರುವ ಸರ್ಕಾರವು ತಲೆಕೆಳಗಾಗಿ— ಈ ನಮ್ಮ ವಿರೋಧ ಪಕ್ಷದಲ್ಲಿ ಬಂದಿರುವ ಹೆಚ್ ಸಿ ದಾಸಪ್ಪನವರೇ ಮಂತ್ರಿಗಳಾಗಬಹುದು. ನಾವು ಅವರಿಗೆ ಒಪ್ಪುತ್ತೇವೆ. [illegible]

ಶ್ವೇಶ್ವರಯ್ಯ ಸಮಿತಿಯ ತೀರ್ಮಾನಗಳು [illegible]

ಬೇಕು ಜವಾಬ್ದಾರೀ ಸರ್ಕಾರ [illegible]

[illegible]

TAI NADU

Daily Edition.

The Leading Nationalist
Daily of Mysore.

Printed and published by P. R. Ramaiya.
at Sri Rama Press, D. Subbaih Road, Mysore.

Regd. No. M 2322 || ವಂದೇಮಾತರಂ ||

ತಾಯಿನಾಡು.

ಪ್ರತಿ ಸೋಮವಾರವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥

ಸಂಪುಟ ೧] ಬುಧವಾರ ೧೩ ಫೆಬ್ರವರಿ ೧೯೨೯ ಸಂಚಿಕೆ [illegible]

TAI NADU
13—2—1929

ಪತ್ರಿಕೆಗಳ ದೂಷಣೆ.

— —

ಬೆಂಗಳೂರು ಗಲಭೆಗಳಿಗೆಲ್ಲಾ ನಿಜವಾದ ಕಾರಣಗಳು ಯಾವುದಾದರೂ ಇರಲಿ ಸರ್ಕಾರದವರೇನೋ ಪತ್ರಿಕೆಗಳೇ ಕಾರಣವೆಂಬುದಾಗಿ ದೂಷಣೆಯನ್ನು ಜಗತ್ತಿಗೆ ಸಾರಿರುವರು. ವಿಶ್ವೇಶ್ವರಯ್ಯ ಸಮಿತಿಯ ಮುಂದೆಯೂ ಹ್ರಸ್ವದೃಷ್ಟಿಯುಳ್ಳ ಅನೇಕ ಸಾಕ್ಷಿಗಳು ಪತ್ರಿಕೆಗಳ ಮೇಲೆ ತಪ್ಪನ್ನು ಹೊರಿಸಿದರು. ವಿಶ್ವೇಶ್ವರಯ್ಯ ಕಮಿಟಿಯವರು ನಾಲ್ಕು ತಿಂಗಳ ಸಂಪೂರ್ಣ ವಿಚಾರಣೆಯನ್ನು ನಡೆಸಿ ತಪ್ಪಿತಸ್ಥರು ಯಾರು ಎಂಬುದನ್ನು ನಿರ್ಧರಿಸಿರುವರು. ಆ ತಪ್ಪಿತಸ್ಥರಲ್ಲಿ ಪತ್ರಿಕೆಗಳನ್ನು ಹೇಳಿಲ್ಲ. ತಪ್ಪು ಮಾಡಿದವರಿಗೆಲ್ಲಾ ಶಿಕ್ಷೆಗಳನ್ನು ಮಾಡಬೇಕೆಂದು ಹೇಳಿದ ಕಡೆಗಳಲ್ಲೆಲ್ಲಾ ಪತ್ರಿಕೆಗಳ ತಂಟೆಗೆ ಬಂದಿಲ್ಲ. ಒಟ್ಟು ವರದಿಯನ್ನು ನಿಷ್ಪಕ್ಷಪಾತದಲ್ಲಿ ಓದಿದರೆ ಪತ್ರಿಕೆಗಳ ವಿಷಯದಲ್ಲಿ ಕಮಿಟಿಯವರು ಬಹಳ ಸಹಾನುಭೂತಿಯನ್ನು ತೋರಿಸಿರುವರು. ಸರ್ಕಾರದವರು ಮಧ್ಯೆ ಹಂಗಾಮಿಯಾಗಿ ಪತ್ರಿಕೆಗಳನ್ನು ನಿಲ್ಲಿಸಿದ ವಿಷಯದಲ್ಲಿ ಅದು ಸರಿಯೆಂದು ನಿರ್ಧಾರವಾಗಿ ಹೇಳಿಲ್ಲ. ಅಸಾಧಾರಣವಾದ ಕಾರಣಗಳಿದ್ದ ಹೊರತು ಪತ್ರಿಕೆಗಳನ್ನು ನಿಲ್ಲಿಸುವುದು ಸರಿಯಲ್ಲವೆಂದು ಹೇಳಿದ್ದಾರೆ. ಕೆಲವು ಸ್ಥಳೀಯ ಪತ್ರಿಕೆಗಳನ್ನು ನಿಲ್ಲಿಸಿದರ ಉದ್ದೇಶವು ಸಫಲವಾಗಲಿಲ್ಲವೆಂದೂ ಹೊರಗಿನ ಪತ್ರಿಕೆಗಳು ಆ ವಿಷಯವನ್ನು ಎತ್ತಿ ಬರೆದವೆಂದೂ ಸರಕಾರದ ಉದ್ದೇಶವು ಸಫಲವಾಗಲಿಲ್ಲವೆಂದೂ ಬರೆದಿರುವರು. ಇದರಿಂದ ಸರ್ಕಾರದವರು ಮಾಡಿದ ಕೆಲಸವು ದೂರಾಲೋಚನೆ ಇಲ್ಲದ್ದು ಎಂಬುದು ಸ್ಪಷ್ಟವಾಯಿತೇ ಹೊರತು ಪತ್ರಿಕೆಗಳನ್ನು ನಿಲ್ಲಿಸಿದ್ದು ಸರಿ ಎಂದು ಹೇಳಿದ ಹಾಗೆ ಆಗಲಿಲ್ಲ.

ಮತ್ತೊಂದು ಕಡೆ ವರದಿಯಲ್ಲಿ ಪತ್ರಿಕೆಗಳು ಮಾಡಿದ ಟೀಕೆಗಳನ್ನು ವಿಮರ್ಶಿಸಿ ಕಮಿಟಿಯವರು ಹೇಳುವುದೇನೆಂದರೆ ಸರ್ಕಾರದ ಯಂತ್ರದ ಕೀಲು ಮುರಿದು ಬಿದ್ದುಹೋದ್ದರಿಂದ ಪೋಲೀಸ್ ಇಲಾಖೆಯವರೂ ಮ್ಯಾಜಿಸ್ಟ್ರೇಟರುಗಳೂ ತಮ್ಮ ಕರ್ತವ್ಯವನ್ನು ಪಾಲಿಸದೇ ಇದ್ದುದರಿಂದ ಮುಖ್ಯ ತಪ್ಪಿತಸ್ಥರ ದಸ್ತಗಿರಿ ಮಾಡಲ್ಪಡದೆ ಸ್ವಚ್ಛಂದವಾಗಿದ್ದುದರಿಂದ ಬೆಂಗಳೂರಿನಲ್ಲಿ ಒಟ್ಟು ನಿವಾಸಿಗಳ ಪೈಕಿ ಶೇಕಡ 88 ಜನಗಳು ಹಿಂದೂಗಳಾದ್ದರಿಂದಲೂ ಇವೇ ಮೊದಲಾದ ಕಾರಣಗಳಿಂದ ಹಿಂದೂ ಪತ್ರಿಕೆಗಳ ಟೀಕೆಗಳು ಉಗ್ರವಾಗಿ ಬರುವುದು ಸ್ವಾಭಾವಿಕ. ಆ ಟೀಕೆಗಳೆಲ್ಲಾ ಅನ್ಯಾಯವೆಂದು ಹೇಳುವುದಕ್ಕಾಗುವುದಿಲ್ಲ ಎಂದು ಕಮಿಟಿಯವರು ಹೇಳಿರುವರು. ಆ ಕಾಲದಲ್ಲಿದ್ದ ಕೋಲಾಹಲವನ್ನು ನೋಡಿದ್ದರೆ ಸರ್ಕಾರದವರೇ ಸುಳ್ಳು ಪ್ರಕಟಣೆಯನ್ನು ಹೊರಡಿಸಿದ್ದಾಗ ಪತ್ರಿಕೆಗಳು ಸ್ವಲ್ಪ ಉಗ್ರವಾಗಿರುವುದು ಸ್ವಾಭಾವಿಕ.

ಕೆಲವು ಕಡೆ ಕಮಿಟಿಯವರು ದೇಶೀಯ ಭಾಷೆಯ ಪತ್ರಿಕೆಗಳ ವಿಷಯವಾಗಿ ಅನ್ಯಾಯವಾದ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ, ಇವು ಕೋಮುವಾರ ಜಾಡ್ಯವನ್ನು ಹರಡಿದವೆಂದು ಇವರು ಹೇಳಿರುವುದು ಶುದ್ಧ ಅನುಚಿತ. ವರ್ತಮಾನ ಪತ್ರಿಕೆಗಳನ್ನೆಲ್ಲಾ ಚೆನ್ನಾಗಿ ನೋಡಿ ವಿವರದಿಂದ ಇವರು ಅಭಿಪ್ರಾಯವನ್ನು ಕೊಟ್ಟ ಹಾಗೆ ಕಾಣುವುದಿಲ್ಲ. ಬೆಂಗಳೂರಿನಲ್ಲಿ ನೆರೆದಿದ್ದ ಪತ್ರಿಕಾಕರ್ತರ ಸಭೆಯಲ್ಲಿ ಕಮಿಟಿಯವರ ಈ ಅನ್ಯಾಯವಾದ ಅಭಿಪ್ರಾಯವು ಖಂಡಿಸಲ್ಪಟ್ಟಿತು.

ಪಾರ್ಲಿಮೆಂಟಿನ ಶಾಸನದಲ್ಲಿ ನೋಡುವಲ್ಲಿ ಕಮಿಟಿಯವರು ಪತ್ರಿಕೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬುದನ್ನೂ ಒಪ್ಪಿಕೊಂಡಿರುವರು. ನಮ್ಮ ಪತ್ರಿಕೆಗಳಿಗೆ ಬ್ರಿಟಿಷ್ ಇಂಡಿಯಾದ ಪತ್ರಿಕೆಗಳಿಗಿರುವ ಸ್ವಾತಂತ್ರ್ಯವಾದರೂ ಇರಬೇಕೆಂದು ಹೇಳಿರುವರು. ಇದು ಅವರ ನಿರ್ಧಾರವಾದ ಅಭಿಪ್ರಾಯ ಎಂದ ಮೇಲೆ ಈಗ ಇರುವ ಪ್ರೆಸ್ ಆಕ್ಟ್ ಹೋಗಬೇಕೆಂಬುದೇ ಅವರ ಅಭಿಮತ. ಆದರೂ ಪತ್ರಿಕೆಗಳ ಮೇಲೆ ಒಂದು ಹತೋಟಿ ಇರಬೇಕೆಂದು ಖಾಸಗಿ ಮನುಷ್ಯರಿಂದಲೇ ಕೂಡಿದ ಒಂದು ಪ್ರೆಸ್‌ಬೋರ್ಡ್ ಇರಬೇಕೆಂದು ಸಲಹೆಯನ್ನು ಕೊಟ್ಟಿರುವರು. ಈ ಸಲಹೆಯು ಅವ್ಯವಹಾರ್ಯವಾದದ್ದು. ಯಾವ ದೇಶದಲ್ಲಿಯೂ ಯಾವ ರಾಜ್ಯದಲ್ಲಿ ಈ ರೀತಿಯಾದ ಬೋರ್ಡು ಇರುವುದಿಲ್ಲ. ನಮ್ಮ ಮೈಸೂರಿನಲ್ಲಿ ಮಾತ್ರ ಈ ಬೋರ್ಡು ಏತಕ್ಕೆ? ಪತ್ರಿಕೆಗಳಿಗೆ ಇಂಡಿಯನ್ ಪೀನಲ್ ಕೋಡಿನ ಹತೋಟಿ ಒಂದೇ ಸಾಕು. ಬೆಂಗಳೂರಿನಲ್ಲಿ ನಡೆದ ಪತ್ರಿಕಾ ಕರ್ತರ ಸಭೆಯಲ್ಲಿ ಈ ಬೋರ್ಡಿನ ಸಲಹೆಯು ನಿರಾಕರಿಸಲ್ಪಟ್ಟಿತು: ಇದು ಸರಿ.

ಇನ್ನು ಪತ್ರಿಕೆಗಳು ಕಳೆದ ಬೆಂಗಳೂರು ಗಲಾಟೆಗಳಲ್ಲಿ ಸತ್ಯವನ್ನು ಬಯಲಿಗೆ ತಂದು ಅನ್ಯಾಯವನ್ನು ಉದ್ಘಾಟಿಸಿ ಲೋಕದ ಮನ್ನಣೆಗೆ ಪಾತ್ರರಾಗಿವೆ. ಇಂಥಹ ಪತ್ರಿಕೆಗಳನ್ನು ನಿಂದಿಸುವುದು ಲೋಕನಿಂದೆಯನ್ನು ಮಾಡಿದಂತೆಯೇ ಸರಿ. ಕಮಿಟಿಯವರು ವರದಿಯಲ್ಲಿ ಪತ್ರಿಕೆಗಳ ವಿಷಯವಾಗಿ ಪರಸ್ಪರ ಅಸಂಬದ್ಧವಾದ ಅಭಿಪ್ರಾಯವನ್ನು ಕೊಟ್ಟ ಹಾಗೆ ತೋರುತ್ತದೆ, ಪತ್ರಿಕೆಗಳಿಗಾಗಿಯೇ ಬೇರೆ ಒಂದು ಅಧ್ಯಾಯವನ್ನು ವಿನಿಯೋಗಿಸಿ ಅದರಲ್ಲಿ ತಮ್ಮ ಅಭಿಪ್ರಾಯವನ್ನು ವಿಶದೀಕರಿಸಿದ್ದರೆ ಚೆನ್ನಾಗಿತ್ತು. ಇಗಲೂ ಕಮಿಟಿಯ ಮೆಂಬರುಗಳ ಪೈಕಿ ಕೆಲವರು ಪತ್ರಿಕೆಗಳ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಕೊಡುವುದು ಮೇಲು.

— —

(ಮೊದಲನೆ ಪುಟದಿಂದ ಮುಂದೆ ವರೆದದ್ದು)

ಈ ವಿಚಾರವು ನಮ್ಮ ಇನ್ನು ಮೇಲಿನ ಯೋಗಕ್ಷೇಮಗಳಿಗೆ ವಿಶೇಷ ಸಂಬಂಧಪಟ್ಟದ್ದಾದ ಕಾರಣ ಅದರ ವಿವರಗಳನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಈಗ ನಮ್ಮ ರಾಜ್ಯವ್ಯವಸ್ಥೆಯಲ್ಲಿ ಸರಕಾರಕ್ಕೆ ತನ್ನ ಲೋಪದೋಷಗಳ ವಿಷಯದಲ್ಲಿ ಪ್ರಜೆಗಳಿಗೆ ಜವಾಬು ಹೇಳಬೇಕಾದೀತೆಂಬ ನಿರ್ಬಂಧವು ಎಷ್ಟು ಮಾತ್ರವೂ ಇಲ್ಲ. ಪ್ರಜೆಗಳ ಅಭಿಪ್ರಾಯಕ್ಕೆ ತಕ್ಕಂತೆ ಕೆಲಸ ನಡೆಸುವಹಾಗೆ ಸರಕಾರವನ್ನು ಒತ್ತಾಯಪಡಿಸುವುದಕ್ಕೂ ಕ್ರಮತಪ್ಪಿದ ಅಥವಾ ಅಸಮರ್ಥರಾದ ಅಧಿಕಾರಿಗಳನ್ನು ಪದವಿಯಿಂದ ಬಿಡಿಸುವುದಕ್ಕೂ ಈಗ ಪ್ರಜಾಪ್ರತಿನಿಧಿಗಳಿಗೆ ಶಕ್ತಿಯಿಲ್ಲ. ನಮ್ಮ ಪ್ರತಿನಿಧಿ ಸಭೆ ಶಾಸನಸಭೆಗಳು ಕೇವಲ ಅರ್ಜಿದಾರರ ಕೂಟಗಳಾಗಿವೆ.

ಯಾವ ಯಾವ ದೇಶಗಳಲ್ಲಿ ಚಾಕರಿಗಳು, ಬಡ್ತಿಗಳು ಮೊದಲಾದ ಸಹಾಯಗಳನ್ನು ಹಂಚುವ ನಿಗ್ರಹಾನುಗ್ರಹ ಶಕ್ತಿಗಳೆಲ್ಲವೂ ಜವಾಬ್ದಾರಿಗೆ ಒಳಪಡದ ರಾಜ್ಯಾಧಿಕಾರಿಗಳ ಕೈಯಲ್ಲೇ ನಿಂತಿರುವುದೋ ಮತ್ತು ಎಲ್ಲಿ ಇಂಥಾ ವಿಶೇಷ ಸಹಾಯಗಳ ಮೇಲೆ ಜನರ ದೃಷ್ಟಿಯು ಹೆಚ್ಚಾಗಿ ನಿಂತಿರುವುದೋ ಅಲ್ಲಿ ಕೈಕೆಳಗಿನ ಹುದ್ದೇದಾರರನ್ನೂ ಪ್ರಜಾಪ್ರಮುಖರನ್ನೂ ಸಹ ವಶವರ್ತಿಗಳನ್ನಾಗಿ ಮಾಡಿಕೊಳ್ಳಲು ರಾಜ್ಯಾಧಿಕಾರಿಗಳಿಗೆ ಸಾಧ್ಯವಾಗುವುದು ಆಶ್ಚರ್ಯವೇನೂ ಅಲ್ಲ. ನಮ್ಮ ಪ್ರಜಾಸಂಸ್ಥೆಯಲ್ಲಿರುವ ಪ್ರಜಾಪಕ್ಷದ ಸದಸ್ಯರಗಳ ಮುಖ್ಯಸ್ಥರು ಮಂತ್ರಿಪದವಿಗೆ ಬರಲು ಅವಕಾಶವುಂಟಾಗಿ ಅವರ ಅಧಿಕಾರವು [illegible] ಸಂಸ್ಥೆಗಳ ಇಷ್ಟಕ್ಕೆ ಒಳಪಟ್ಟಿರುವ

ವಿವಿಧ ವಿಷಯಗಳು.

ನಾಗಪುರ ಕಾನ್‌ಫರೆನ್ಸ್.

ಆಲ್ ಇಂಡಿಯಾ ಕಾನ್‌ಫರೆನ್ಸಿನ [illegible] ಸಂಬಂಧಪಟ್ಟ ಅಧಿಕಾರಿ ವರ್ಗದವರ ಸಭೆ [illegible] ತಿಂಗಳು 23, 24 ನೇ ತಾ|| ಗಳಲ್ಲಿ ನಾಗಪುರದಲ್ಲಿ ನಡೆಯುವುದು. ರಂಗೂನಿನ ಸೀನಿಯರ್ ಅಕೌಂಟೆಂಟ್ ಮಿ|| ಮುಖರ್ಜಿಯವರು ಅಗ್ರಾಸನವನ್ನು ವಹಿಸುವರು.

ತೆಪ್ಪೋತ್ಸವ.

ಬೆಂಗಳೂರು ಪಟ್ಟಣದ ಅನೇಕ ದೇವಸ್ಥಾನಗಳಲ್ಲಿರುವ ದೇವರುಗಳ ತೆಪ್ಪೋತ್ಸವವು ಈ ಮಾಹೆ 10 ನೇ ತಾ|| ನಿಂದ ಪ್ರತಿದಿನವೂ ಸಾಯಂಕಾಲ 7 ಗಂಟೆಗೆ ಸಂಪಿಗೆ ಕೆರೆಯಲ್ಲಿ ನಡೆಯುತ್ತಿದೆ.

ಶೃಂಗೇರಿ ಜಗದ್ಗುರುಗಳು.

ಶ್ರೀ ಶ್ರೀಗಳವರ ದೇಹಾಲಸ್ಯವು ಸುಧಾರಿಸಿ ಆರೋಗ್ಯದ ಸ್ಥಿತಿಗೆ ಬರುತ್ತಿರುವ ಸಂಗತಿಯು ಶ್ರೀಮನ್ಮಹಾರಾಜರವರಿಗೆ ರಿಪೋರ್ಟು ಮಾಡಲ್ಪಟ್ಟಿದೆ.

ಪಬ್ಲಿಕ್ ಮೀಟಿಂಗ್.

ಈ ಮಾಹೆ 16 ನೇ ತಾ|| ಚನ್ನಪಟ್ಟಣದ ಇಂಡಸ್ಟ್ರಿಯಲ್ ಸ್ಕೂಲಿಗೆ ಬಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವುದಕ್ಕಾಗಿ ಗೌರ್ನಮೆಂಟ್ ಹೈಸ್ಕೂಲಿನಲ್ಲಿ ನಡೆಯುವ ಪಬ್ಲಿಕ್ ಮೀಟಿಂಗಿಗೆ ರಾ|| ಸಿ. ರಂಗನಾಥ ರಾವ್ ಸಾಹೇಬ್ ಬಿ. ಎ. ಬಿ. ಎಲ್. ರವರು ಅಗ್ರಾಸನವನ್ನು ವಹಿಸುವರು.

ಲಾಯರ್ಸ್ ಕಾನ್‌ಫರೆನ್ಸ್.

ಮೈಸೂರು ಲಾಯರುಗಳ ಕಾನ್‌ಫರೆನ್ಸು ಕೋಲಾರದಲ್ಲಿ 1929 ನೇ ಏಪ್ರಿಲ್ ಮಾಹೆ 7-8 ನೇ ತಾ|| ಗಳಲ್ಲಿ ನಡೆಯುವುದು.

ವಿಚಕ್ಷಣ ಮಂತ್ರಿತ್ವ.

ಶೇಕಡ 90 ರಷ್ಟು ಹಿಂದೂ ಜನಾಂಗವಿರುವ ನೈಜಾಮರ ಸಂಸ್ಥಾನದಲ್ಲಿ ಶೇಕಡ 95 ರಷ್ಟು ಮುಸಲ್ಮಾನ್ ಅಧಿಕಾರಿಗಳಿದ್ದರೂ ಜಾತಿ ದ್ವೇಷದ ಸೊಲ್ಲಿನ ಗುರುತೇ ಇರುವುದಿಲ್ಲ. ಇದಕ್ಕೆ ಮಂತ್ರಿತ್ವದ ವಿಚಕ್ಷಣೆಯೇ ಕಾರಣವಲ್ಲವೇ ?

ಮರಣ

ಡೆಲ್ಲಿಯಲ್ಲಿ ಮಹಾತ್ಮಾ ಗಾಂಧಿಯವರ ಮೊಮ್ಮಕ್ಕಳಾದ ರಸಿಕ್‌ಲಾಲ್ ಹರಿಲಾಲ್ ಗಾಂಧಿಯವರು ವಿಷಮ ಶೀತ ಜ್ವರದಿಂದ ಈ ಮಾಹೆ 8 ನೇ ತಾ|| ಮೃತರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರು ನ್ಯಾಷನಲ್ ಯೂನಿವರ್ಸಿಟಿಯಲ್ಲಿ ಸಹಾಯ ಅಧ್ಯಾಪಕರಾಗಿದ್ದರು.

ಬ್ರಾಹ್ಮಣ ಕಾನ್ಫರೆನ್ಸ್.

ಸರ್. ಎಂ. ವಿಶ್ವೇಶ್ವರಯ್ಯನವರು ಬ್ರಾಹ್ಮಣ ಕಾನ್ಫರೆನ್ಸಿನ ಅಧ್ಯಕ್ಷಸ್ಥಾನದಿಂದ ಮದ್ರಾಸಿನ [illegible] ಪತ್ರಿಕೆಯು ಹೇಳುವುದೆಂದು ಬೆಂಗಳೂರು ಡೈಲಿ ಪೋಸ್ಟ್ ಪತ್ರಿಕೆಯು ತಿಳಿಸುತ್ತದೆ.

ಹಾಗಾದರೆ ಆಗ ಸರಕಾರದ ಕಾರ್ಯರೀತಿಗಳನ್ನು [illegible] ವಿಚಾರಣೆಗೆ ಗುರಿಪಡಿಸಿ ತಿದ್ದಲು ಪ್ರಜೆಗಳಿಗೆ ಶಕ್ತಿ ಬರುವುದು. ಆ ಜವಾಬು ಅಸಮರ್ಪಕವಾಗಿದ್ದರೆ ಅವರು ದಂಡನೆಗೆ ಗುರಿಯಾಗಬೇಕಾದೀತು ಎಂಬ ಭಯದಿಂದಲೂ ಜಾಗರೂಕತೆಯಿಂದಲೂ ವಿಹಿತರೀತಿಯಿಂದಲೂ [illegible] ನಡೆದುಕೊಳ್ಳುವರು.

ಪ್ರಜಾಸಂಘದ ಪ್ರಸಿದ್ಧ ಪತ್ರಿಕೆ.

ಜವಾಬ್ದಾರಿ ಸರ್ಕಾರವೇಬೇಕು ನಿರಂಕುಶತ್ವವು ಹೋಗಬೇಕು.

ತಾಯಿನಾಡು.

13—2—1929

1928 ನೆಯ ಇಸವಿ ಜುಲೈ 30 ನೆಯ ತಾರೀಖು ಸಾಯಂಕಾಲ ಬೆಂಗಳೂರ ಪಟ್ಟಣದ ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನ್ಯಾಷನಲ್ ಹಿಂದೂ ಹೈಸ್ಕೂಲ್ ಕಟ್ಟಡದ ಮುಂದುಗಡೆ ನಡೆದ ಶ್ರೀ ಗಣಪತಿ ಸತ್ಯಾಗ್ರಹದ ಪೂರ್ವಾಪರ ಸಂಗತಿಗಳನ್ನು ವಿಚಾರಿಸಿ ಗಲಭೆಗಳ ನ್ಯಾಯಾನ್ಯಾಯಗಳನ್ನು ಪರಿಶೋಧಿಸಿ ಮುಂದೆ ನಡೆಯಬೇಕಾದ ಕಾರ್ಯಕ್ರಮಗಳನ್ನು ಕುರಿತು ತಕ್ಕ ಸೂಚನೆಯನ್ನು ಕೊಡುವುದಕ್ಕೋಸ್ಕರ ಮೈಸೂರು ಸರಕಾರದವರು ಮಹಾಜನಗಳ ಕೋರಿಕೆಯ ಮೇರೆಗೆ ಒಂದು ವಿಚಾರಣಾಸಮಿತಿ(ಕಮಿಟಿ)ಯನ್ನು ಶ್ರೀಮಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯೊಂದಿಗೆ ನಿಯಮಿಸಿದ್ದರಷ್ಟೆ. ಆ ಸಮಿತಿಯವರು ಸುಮಾರು ನಾಲ್ಕು ತಿಂಗಳುಗಳ ಕಾಲ ಶ್ರಮಪಟ್ಟು ಅನೇಕ ಮಂದಿ ಸಾಕ್ಷಿಗಳನ್ನು ವಿಚಾರಿಸಿ ದೊರಕಿದ ಸಂಗತಿಗಳನ್ನು ವಿಮರ್ಶೆಮಾಡಿ ತಮ್ಮ ತೀರ್ಮಾನಗಳನ್ನೂ ಸೂಚನೆಗಳನ್ನೂ ಒಂದು ವರದಿಯ ರೂಪದಲ್ಲಿ 1928 ನೆಯ ಡಿಸೆಂಬರ್ 15 ರಲ್ಲಿ ಸರ್ಕಾರದವರಿಗೆ ಕಳುಹಿಸುತ್ತಾರೆ. ಈ ವರದಿಯಲ್ಲಿ ಕಾಣಬರುವ ವಿಷಯಗಳನ್ನು ಸರ್ಕಾರದವರು 1929 ನೆಯ ಜನವರಿ ೨೧ನೇಯ ತಾ|| ನ ಹುಕುಂನಲ್ಲಿ ಪುನರ್ವಿಮರ್ಶೆಮಾಡಿ, ತಮ್ಮ ಕಡೆಯ ಸಿದ್ಧಾಂತಗಳನ್ನು ಪ್ರಸಿದ್ಧಗೊಳಿಸಿದ್ದಾರೆ. ಸರಕಾರದ ಈ ಪುನರ್ವಿಮರ್ಶೆಯೂ ಸಿದ್ಧಾಂತಗಳೂ ಶ್ರೀಮನ್ಮಹಾರಾಜರವರ ಸಮಸ್ತಪ್ರಜೆಗಳಾದ ನಮಗೆ ಸಮರ್ಪಕವಾಗಿಲ್ಲವೆಂದು ಅತಿ ವಿಷಾದದಿಂದ ಹೇಳಬೇಕಾಗಿದೆ.

ಬೆಂಗಳೂರಿನ ಗಲಭೆಯ ಪೂರ್ವೋತ್ತರ ಸಂದರ್ಭಗಳು ನಮ್ಮ ಸಂಸ್ಥಾನದ ಚರಿತ್ರೆಯಲ್ಲಿ ಒಂದು ಬಹು ಮುಖ್ಯವಾದ ಸಂಗತಿಯೆಂದು ನಮಗೆ ತೋರುತ್ತಿದೆ. ಮೇಲ್ನೋಟಕ್ಕೆ ಅದು ಒಂದು ಸಣ್ಣ ಸ್ಥಳೀಯ ಪ್ರಸಂಗವಾಗಿ ಕಾಣಬಹುದು. ಆದರೆ ವಾಸ್ತವವಾಗಿ ಅದು ಸಂಸ್ಥಾನದ ಎಲ್ಲಾ ಪ್ರಜೆಗಳೂ ಎಚ್ಚರಿಕೆ ಕೊಡತಕ್ಕ ಸಂದರ್ಭವಾಗಿದೆ. ಅದರಿಂದ ಮುಖ್ಯವಾಗಿ ನಮ್ಮ ಈಗಿನ ಸರಕಾರದ ಕ್ರಮದಲ್ಲಿ ವಿಚಕ್ಷಣೆ ಸಾಲದೆಂಬುದೂ ರಾಜ್ಯಾಧಿಕಾರಿಗಳಿಗೆ ಪ್ರಜಾಭಿಪ್ರಾಯದ ಹೆದರಿಕೆ ತಕ್ಕಷ್ಟು ಇಲ್ಲವೆಂಬುದೂ ಸ್ಥಿರಪಟ್ಟಿದೆ. ಈ ಅಂಶವನ್ನು ಶ್ರೀ|| ವಿಶ್ವೇಶ್ವರಯ್ಯನವರ ಸಮಿತಿಯು ಸ್ಪಷ್ಟವಾಗಿ ಒಪ್ಪಿಕೊಂಡ ಸಮ್ಮತಿಯ ಕ್ರಮವನ್ನು [illegible] ಅತ್ಯಾವಶ್ಯಕವೆಂದು ತೀರ್ಮಾನಿಸಿದೆ. ಇದಲ್ಲದೆ ನಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಯಾರಾದರೊಬ್ಬರ ಪ್ರಬಲಿಸಿ ತಮ್ಮ ಇಷ್ಟವನ್ನು ಸಾಧಿಸಿಕೊಳ್ಳುವ ಸಂದರ್ಭದಲ್ಲಿ ಕಷ್ಟನಾದರೂ ನಡೆದರೆ ಅದನ್ನು ಮುಚ್ಚಿಡುವುದಕ್ಕೆ ಕೋಮುವಾರು ಗಲ್ಲಿಗಳನ್ನೆಬ್ಬಿಸಿ ಜನರಲ್ಲಿ ವೈಷಮ್ಯಗಳನ್ನು ಹರಡುವುದು. ಈಗ ಎಷ್ಟು ಸುಲಭವಾಗಿದೆ ಎಂಬುದು ಬೆಂಗಳೂರು ಗಲಭೆಗಳ ಚರಿತ್ರೆಯಿಂದ ಗೊತ್ತಾಗುತ್ತದೆ. ಜನರಲ್ಲಿ ತಮ್ಮ ತಮ್ಮ ಕುಲಜಾತಿಗಳ ಅಭಿಮಾನವು ಸರ್ವಸಾಮಾನ್ಯವಾದ ಧರ್ಮಕ್ಕೆ ನ್ಯಾಯಕ್ಕೂ ದೇಶಾಭಿಮಾನಕ್ಕೂ ಒಳಪಟ್ಟಿರಬೇಕೇ ಹೊರತು ಮೇಲ್ಪಟ್ಟಿರಬಾರದು. ಈ ನೀತಿಯನ್ನು ಬೆಂಗಳೂರಿನ ಗಲಭೆಗಳು ಚೆನ್ನಾಗಿ ದೃಷ್ಟಾಂತಕ್ಕೆ ತಂದು ಕೊಟ್ಟಿವೆ. ಈ ಎರಡು ಅಂಶಗಳೂ ನಮ್ಮ ದೇಶಾಭಿವೃದ್ಧಿಗೆ ನಮ್ಮ ಸಕಲ ಒಂದು ಸಂಸ್ಥಾನದ ಶ್ರೇಯಸ್ಸಿಗೆ ಅವಶ್ಯಕವಾದ ಕಾರಣ ನಾವು ಈ ಸಂದರ್ಭದಲ್ಲಿ ಈ ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಬೇಕೆಂದು ನಿಶ್ಚಯಿಸಿದ್ದೇವೆ.

ವಿಚಾರಣಾ ಸಮಿತಿಯವರ ವರದಿಯ ಅಭಿಪ್ರಾಯಗಳು

೧. ಶ್ರೀ ವಿಶ್ವೇಶ್ವರಯ್ಯನವರ ಸಮಿತಿಯ ವರದಿಯಲ್ಲಿ ಎಲ್ಲಾ ಅಂಶಗಳನ್ನೂ ನಾವು ಸಂಪೂರ್ಣವಾಗಿ ಅನುಮೋದಿಸುವೆವೆಂದು ಹೇಳಲಾರೆವು. ಉದಾಹರಣೆಗಾಗಿ, ವಿದ್ಯಾರ್ಥಿಗಳ ವಿಷಯದಲ್ಲಿಯೂ ವೃತ್ತಪತ್ರಿಕೆಗಳ ವಿಷಯದಲ್ಲಿಯೂ ಸಮಿತಿಯು ಮಾಡಿರುವ ಆಕ್ಷೇಪಣೆಗಳನ್ನು ನಾವು ಒಪ್ಪಲಾಗುವುದಿಲ್ಲ. ವಿದ್ಯಾರ್ಥಿಗಳಿಗೆ ತಮ್ಮ ಉದ್ದೇಶ ಆಪೇಕ್ಷೆಗಳನ್ನು ಪ್ರಕಟಿಸುವರಿಗೆ ತಿಳಿಸಿಕೊಳ್ಳುವ ಸ್ವಾತಂತ್ರ್ಯವುಂಟೆಂದೂ, ಅಧಿಕಾರಿಗಳಾದವರು ಅವರಿಗೆ ವಿಹಿತ ರೀತಿಯಲ್ಲಿ ಸಕಾರಣವಾಗಿ ಉತ್ತರ ಹೇಳಿದರೆ ಅವರು ಬಹುಶಃ ಸಮಾಧಾನಪಟ್ಟಾರೆಂದೂ ನಾವು ಭಾವಿಸಿರುವೆವು; ಅಲ್ಲದೆ ಬೆಂಗಳೂರಿನ ವಿದ್ಯಾರ್ಥಿಗಳು ಯಾವ ಉತ್ಪಾತಕಾರಕವಾದ ಮಹಾಪರಾಧವನ್ನೂ ಮಾಡಲಿಲ್ಲವೆಂದೂ ನಾವು ನಂಬಿದ್ದೇವೆ.

ನಮ್ಮ ವೃತ್ತಾಂತ ಪತ್ರಿಕೆಗಳು ಉಚಿತಮಾರ್ಗದಿಂದ ತಪ್ಪಿದರೆ ಅವುಗಳಿಗೆ ಕಾನೂನು ಪ್ರಕಾರ ಶಿಕ್ಷೆಯಾಗಬಹುದಾಗಿತ್ತು. ಅವು ಅಂಥ ತಪ್ಪನ್ನೇನೂ ಮಾಡಲಿಲ್ಲವೆಂದೂ, ಅವುಗಳಿಂದ ದೇಶಕ್ಕೆ ಒಂದು ಅಪೂರ್ವವಾದ ಮಹೋಪಕಾರವೇ ನಡೆದಿದೆಯೆಂದೂ ನಾವು ತಿಳಿದುಕೊಂಡಿದ್ದೇವೆ. ನಮ್ಮ ಪತ್ರಿಕೆಗಳು ಆ ವಿಷಮಕಾಲದಲ್ಲಿ ಸತ್ಯವನ್ನೂ ಧರ್ಮವನ್ನೂ ಕಾಪಾಡುವುದರಲ್ಲಿ ತೋರಿಸಿದ ಶ್ರದ್ಧೆ ನಿರ್ಭಯ ಉತ್ಸಾಹಗಳಿಗಾಗಿ ಅವುಗಳಿಗೆ ನಾಡಿನವರ ಕೃತಜ್ಞತೆಯು ಸಲ್ಲತಕ್ಕದ್ದಾಗಿದೆ. ಸರಕಾರದವರು ವಿದ್ಯಾರ್ಥಿಗಳನ್ನು ಬಹಳ ದಯೆಯಿಂದ ಮಿಲಿಟರಿ ಸಮಾರಂಭವನ್ನು ಕರೆಯಿಸಿದ ವಿಷಯದಲ್ಲಿ ಸಮಿತಿಯು ಕೊಟ್ಟಿರುವ ಒಪ್ಪಿಗೆಯೂ ನಮಗೆ ಸಮ್ಮತವಾಗಿಲ್ಲ ಸಮಾರಂಭ ಬೇಕಾದ ಅವಶ್ಯಕತೆಯೇನೂ ಇರಲಿಲ್ಲ. ಅದು ಒಂದಿದ್ದುದರಿಂದ ಅನೇಕ ಮಂದಿ ನಿರಪರಾಧಿಗಳು ನಿಷ್ಕಾರಣವಾಗಿ ತೊಂದರೆ ಪಡಬೇಕಾಯಿತು.

ಸರಕಾರದ ಉದ್ಯೋಗಗಳ ಹಂಚಿಕೆಗೆ ಸಂಬಂಧಪಟ್ಟ ಮಿಲ್ಲರ ಕಮಿಟಿಯ ಶಿಫಾರಸುಗಳನ್ನು [illegible] ಕೋಮುವಾರು ಮತ್ತಿಗಳ ವಿಚಾರವನ್ನು [illegible] ಶ್ರೀ. ವಿಶ್ವೇಶ್ವರಯ್ಯನವರ ಸಮಿತಿಯವರ ಸೂಚನೆಗಳ ಮೇಲೆ ನಾವು ಇಲ್ಲಿ ಯಾವ ಅಭಿಪ್ರಾಯವನ್ನೂ ಹೇಳುವುದಿಲ್ಲ. ಈ ವಿಚಾರಗಳನ್ನು [illegible] ನಿಧಿಸಭೆ ಮತ್ತು ಶಾಸನ ಸಭೆಗಳು ಮಹಾಜನರ ಅಭಿಪ್ರಾಯಕ್ಕನುಸಾರವಾಗಿ ತೀರ್ಮಾನ ಮಾಡತಕ್ಕದ್ದೇ ಉಚಿತವಾಗಿದೆ.

೪. ಆದರೆ ಇವು ಪ್ರಕೃತ ವಿಚಾರದ ಉಪಾಂಗಗಳು ವಿಷಯದಲ್ಲಿ ಶ್ರೀ|| ವಿಶ್ವೇಶ್ವರಯ್ಯನವರ ಸಮಿತಿಯವರು ಕೊಟ್ಟಿರುವ ಅಭಿಪ್ರಾಯಗಳು [illegible]

[illegible]

ciation) ಮೊದಲಾದ ಸಂಸ್ಥೆಗಳ ಮೂಲಕವೂ ವೃತ್ತಪತ್ರಿಕೆಗಳ ಮೂಲಕವೂ ಪ್ರಚಾರಮಾಡಲು ನಮ್ಮ ನಾಡಿನಲ್ಲಿ ಬಹು ಮಂದಿ ಅನೇಕ ವರ್ಷಗಳಿಂದ [illegible] ಪಟ್ಟಿದ್ದಾರೆ.

(2 ನೇ ಪುಟ ನೋಡಿ)

TAINADU.

Daily Edition.

The Leading Nationalist Daily of Mysore.

Printed and published by P. R Ramaiya. at Sri Rama Press, 1) Subbaih Road, Mysore.

Regd No. M 2322

ತಾಯಿನಾಡು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ [illegible]

ಸಂಪುಟ ೧] ಗುರುವಾರ ೧೪ ಫೆಬ್ರವರಿ ೧೯೩೯

TAI NADU
14 -2—1929

ಬೊಂಬಾಯಿ ಗಲಭೆಗಳು.

ಕೇವಲ ಅಲ್ಪದಲ್ಲಿ ಆರಂಭವಾದ ಬೊಂಬಾಯಿ ಗಲಭೆಗಳು ಬಹಳ ಉಗ್ರರೂಪವನ್ನು ತಾಳುತ್ತಿವೆ. ಪ್ರಾಣಮಾನ ಧನಗಳಿಗೆ ಚ್ಯುತಿಯು ಉಂಟಾಗಿದೆ ಪೋಲೀಸಿನವರೂ ಮಿಲಿಟರಿಯವರೂ, ಬಹಳ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದರೂ, ಹೊಡೆದಾಟಗಳು ನಡೆಯುತ್ತಲೇ ಇವೆ

ಆದರೆ ಸರಕಾರದವರೂ, ಪ್ರಜಾ ಮುಖಂಡರೂ ಸೇರಿ ಗಲಾಟೆಯನ್ನು ಅಡಗಿಸಲು ಸಹಕರಿಸುತ್ತಿದ್ದಾರೆ. ಪ್ರಜೆಗಳು ಶಾಂತಿ ಸಂಘಗಳನ್ನು ಏರ್ಪಡಿಸಿ ಅಪಾಯಕ್ಕೆ ಗುರಿಯಾದವರ ಪ್ರಾಣ ಸಂರಕ್ಷಣೆಯನ್ನು ಮಾಡುತ್ತಿರೆ. ಪತ್ರಿಕೆಗಳೂ ಶಾಂತ ಸಂದೇಶವನ್ನು ಬೀರುತ್ತಿವೆ

ಬೆಂಗಳೂರ ಗಲಭೆಗಳಿಗೂ ಬೊಂಬಾಯಿ ಗಲಭೆಗಳಿಗೂ, ಮಹದಂತರ ಇರುವುದು. ಬೊಂಬಾಯಿನಲ್ಲಿ ತಪ್ಪಿತಸ್ಥರನ್ನು, ಮ್ಯಾಜಿಸ್ಟ್ರೇಟರೂ, ಪೋಲೀಸಿನವರೂ, ಕೂಡಲೆ ದಸ್ತಗಿರಿಮಾಡಿ ಬಂದೋಬಸ್ತು ಮಾಡಿದರು. ಬೆಂಗಳೂರಿನಲ್ಲಿ ಈ ಕೆಲಸವು ನಡೆಯಲಿಲ್ಲ. ತಪ್ಪಿತಸ್ಥರೇ ಸರಕಾರದ ಒಳಿ ಹೋಗಿ ಗುಂಡು ಹೊಡಿಯಲಿಲ್ಲವೆಂಬ ಸುಳ್ಳು ಪ್ರಕಟನೆಯನ್ನು ಹೊರಡಿಸಿದರು. ಬೊಂಬಾಯಿನಲ್ಲಿ ಯಾವ ಪತ್ರಿಕೆಯನ್ನೂ ನಿಷ್ಟಸಲಿಲ್ಲ. ಪತ್ರಿಕೆಗಳು ನಿಜವಾದ ಸಮಾಚಾರವನ್ನು ನಿರ್ದಾಕ್ಷಿಣ್ಯವಾಗಿ ಪ್ರಕಟಿಸುತ್ತಿರುವವು. ಬೆಂಗಳೂರಿನಲ್ಲಿ ನಿರ್ದಾಕ್ಷಿಣ್ಯವಾದ ಪತ್ರಿಕೆಗಳು ನಿಲ್ಲಿಸಲ್ಪಟ್ಟವು. ಸತ್ಯಪ್ರಕಟಕ್ಕೆ ಅವಕಾಶವು ಕೊಡಲ್ಪಡಲಿಲ್ಲ. ಬೊಂಬಾಯಿನಲ್ಲಿ ಪ್ರಜಾಮುಖಂಡರು ಮುಂದೆ ಬಂದರೆ ಅವರ ಸಹಾಯವು ತೆಗೆದುಕೊಳ್ಳಲ್ಪಡುತ್ತಲಿದೆ. ಬೆಂಗಳೂರಿನಲ್ಲಿ ಅನೇಕ ಪ್ರಜಾ ಮುಖಂಡರು ಪಿತೂರೀಕೋರರೆಂದು ದೂಷಣೆ ಮಾಡಲ್ಪಟ್ಟರು, ಈಗಲೂ ಗಲಾಟೆಯು ಮುಗಿದಮೇಲೂ ಅನೇಕ ಪ್ರಜಾ ಮುಖಂಡರಿಗೂ ಸರಕಾರಕ್ಕೂ ವೈಮನಸ್ಯವು ಉಳಿದೇ ಇರುವುದು: ಬೊಂಬಾಯಿನಲ್ಲಿ ಪ್ರಜಾ ಮುಖಂಡರೂ ಸರಕಾರದವರೂ ಕಲೆತು ಪುಂಡರನ್ನು ಅಡಗಿಸುತ್ತಿರುವರು.

ಮುಖ್ಯವಾಗಿ ಬೊಂಬಾಯಿನಲ್ಲಿ ತಪ್ಪಿತಸ್ಥರಿಗೂ ಆಶ್ರಯವಿಲ್ಲವೆಂಬ ಭಾವನೆಯು ಪ್ರಜೆಗಳಲ್ಲಿ ಬೇರೂರುವುದು. ಬೆಂಗಳೂರಿನಲ್ಲಿ ಭಾರಿಭಾರೀ ಆಸಾಮಿಗಳು ತಪ್ಪುಮಾಡಿದರೂ ಮಹದಾಶ್ರಯದಿಂದ ವಿಚಾರಣೆಗೂ ಶಿಕ್ಷೆಗೂ ಗುರಿಯಾಗಲಿಲ್ಲವೆಂಬ ಕಳಂಕವು ಉಳಿದೇ ಇರುವುದು.

ಇದೇ ಬೊಂಬಾಯಿಗೂ ಬೆಂಗಳೂರಿಗೂ ಇರುವ ವ್ಯತ್ಯಾಸ. ಬೊಂಬಾಯಿ ಗಲಭೆಗಳು ಅಷ್ಟು ಪರ್ವತಾಕಾರವಾಗಿದ್ದರೂ ತಪ್ಪಿತಸ್ಥರೆಲ್ಲರೂ ಶಿಕ್ಷೆಗೆ ಗುರಿಮಾಡಲ್ಪಡುವರೆಂಬ ಭರವಸೆಯೊಂದಿರುವುದು.

ಸರ್ಕಾರೀ ಸುದ್ದಿಗಳು.

ಬೆಂಗಳೂರು ಡಿ|| ಆಫೀಸಿನ ಹೆಡ್‌ಕ್ಲಾರ್ಕ್ ಆಗಿದ್ದ ಮ|| ಎಂ ಗುಂಡಪ್ಪ ಬಿ. ಎ. ರವರನ್ನು ಹಂಗಾಮಿಯಾಗಿ ಅಸಿಸ್ಟೆಂಟ್ ಛಾರ್ಜಿಗೆ ನಿಯಮಿಸಿರುತ್ತಾರೆ.

ಪತ್ರಿಕಾ ಕರ್ತರ ಸಭೆ

ಶುಕ್ರವಾರ ಸಾಯಂಕಾಲ ಬೆಂಗಳೂರು ಬಳೇಪೇಟೆ 'ನವಜೀವನ' ಕಾರ್ಯಾಲಯದಲ್ಲಿ ವೃತ್ತಪತ್ರಿಕಾಕರ್ತರ ಮತ್ತು ಪತ್ರಿಕಾ ಮುದ್ರಣಗಾರರ ಸಭೆಯು ಸೇರಿತ್ತು 'ಈವ್ನಿಂಗ್ ಮೆಯಿಲ್' ಪತ್ರಿಕಾ ಸಂಪಾದಕರು ಸಭಾಧ್ಯಕ್ಷರಾಗಿದ್ದರು. ಅಲ್ಲಿ ವಿಶ್ವೇಶ್ವರಯ್ಯ ಸಮಿತಿಯವರು ವೃತ್ತಪತ್ರಿಕಾಕರ್ತರ ವಿಚಾರವಾಗಿ ಮಾಡಿರುವ ಟೀಕೆ ಟಿಪ್ಪಣಿಗಳನ್ನು ಕುರಿತು ವಿಶೇಷ ಚರ್ಚೆಯಾಯಿತು. ಕೆಳಗೆ ಕೊಟ್ಟಿರುವ ನಾಲ್ಕು ಗೊತ್ತುವಳಿಗಳು ಸರ್ವಾನುಮತದಿಂದ ಅಂಗೀಕೃತವಾದವು.

೧. ಬೆಂಗಳೂರು ಗಲಾಟೆಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ವೃತ್ತಪತ್ರಿಕೆಗಳ ನಡತೆಯನ್ನು ಕುರಿತು ವಿಶ್ವೇಶ್ವರಯ್ಯ ಸಮಿತಿಯವರು ಮಾಡಿರುವ ಅನ್ಯಾಯವೂ ಅನುಚಿತವೂ ಆದ ಸಿದ್ಧಾಂತಗಳನ್ನೂ ಅವುಗಳ ಮೇಲೆ ಸರಕಾರದವರು ಹೊರಡಿಸಿರುವ ನಿರ್ಣಯವನ್ನೂ ಈ ಸಭೆಯು ಘಂಟಾಘೋಷವಾಗಿ ಖಂಡಿಸುತ್ತದೆ ಅಲ್ಲದೆ ಆ ದಕ್ಕೆ ಪ್ರತಿಯಾಗಿ ವೃತ್ತಪತ್ರಿಕೆಗಳು ಆ ಕಷ್ಟಕಾಲದಲ್ಲಿ ದೇಶಹಿತವನ್ನು ಬಯಸಿ ತಮ್ಮ ಕರ್ತವ್ಯವನ್ನು ನೆರವೇರಿಸಿದುವೆಂದು ಈ ಸಭೆಯು ಖಂಡಿತವಾಗಿ ಅಭಿಪ್ರಾಯಪಡುತ್ತದೆ

೨. ದೇಶಭಾಷಾ ಪತ್ರಿಕೆಗಳು ಒಳನಾಡಿನಲ್ಲಿ ಕೋಮುವಾರು ದ್ವೇಷಾಸೂಯೆಗಳನ್ನು ಎಬ್ಬಿಸಿ ರೇಗಿಸಿದವು ಎಂಬ ದಾಗಿ ಏಕಪಕ್ಷೀಕ ಪ್ರಯೋಗ ಮಾಡಿ ಸಮಿತಿಯು ನಿಂದಿಸಿರುವುದನ್ನು ಈ ಸಭೆಯು ನಿರಾಕರಿಸುತ್ತದೆ.

೩. ವೃತ್ತಾಂತಪತ್ರಿಕೆಗಳ ಮೇಲ್ವಿಚಾರಣೆಗಾಗಿ ಒಂದು ಸಲಹಾಸಮಿತಿ ಇರಬೇಕು. ಸರ್ಕಾರದ ಧನಸಹಾಯದಿಂದ ಪತ್ರಿಕೆಗಳನ್ನು ಹೊರಡಿಸಬೇಕು, ಮುಂತಾದ ಸಮಿತಿಯ ಸಲಹೆಗಳಿಗೆ ಈ ಸಭೆಯು ತನ್ನ ಪೂರ್ಣ ಅಸಮ್ಮತಿಯನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಈ ಬಗೆಯ ಸಲಹೆ ಯೇನಾದರೂ ಲಕ್ಷ್ಯಕೊಟ್ಟಲ್ಲಿ ಸಂಸ್ಥಾನದಲ್ಲಿ ಹಿತವೂ ಸ್ವಾತಂತ್ರ್ಯವೂ ಆದ ವೃತ್ತಪತ್ರಿಕಾ ಜೀವನದ ಬೆಳವಣಿಗೆಗೇ ಸಂಚಕಾರ ಬಂದಂದತಾಗುವುದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

೪. ಹೇಗಾದರೂ ಆಗಲಿ, ಬ್ರಿಟಿಷ್ ಹಿಂದೂಸ್ಥಾನದಲ್ಲಿ ವೃತ್ತಪತ್ರಿಕೆಗಳಿಗೆಷ್ಟು ಸ್ವಾತಂತ್ರ್ಯವುಂಟೋ ಅಷ್ಟು ಸ್ವಾತಂತ್ರ್ಯವು ಮೈಸೂರಿನ ಪತ್ರಿಕೆಗಳಿಗೂ ಇರಬೇಕು ಎಂಬ ಸಮಿತಿಯ ವರದಿಯ ಕಡೆಯ ನಿರ್ಧಾರವನ್ನು ಈ ಸಭೆಯು ಮನಃಪೂರ್ವಕವಾಗಿ ಅಂಗೀಕಾರ ಮಾಡುತ್ತದೆ. ಅಲ್ಲದೆ ಈ ನಿರ್ಧಾರಕ್ಕೆ ಸರ್ಕಾರದವರು ಆದಷ್ಟು ಬೇಗ ಗೌರವ ಕೊಟ್ಟು ಅದನ್ನು ಕಾರ್ಯಕ್ರಮದಲ್ಲಿ ತರುವರೆಂದು ಈ ಸಭೆಯು ಹಾರೈಸುತ್ತದೆ—ವಿ. ಕ.

ರಜಾ

ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ರವರಾದ ಮ|| ಪಿ. ಹೆಚ್ ಕೃಷ್ಣರಾಯರವರಿಗೆ ಕೊಟ್ಟಿದ್ದ ಒಂದು ತಿಂಗಳು 18 ದಿನಗಳ ರಜವನ್ನು ಮಾರ್ಚಿ ಏಳನೇ ತಾ|| ನವರಿಗೂ ಹೆಚ್ಚಿಸಿರುತ್ತಾರೆ,

ಬೆಂಚ್ ಕೋರ್ಟು.

ಮಾಗಡಿಹಳ್ಳಿಯ ಮ|| ಕೆ. ಎಂ. ರಾಮಯ್ಯನವರನ್ನು ಬೌರಿಂಗ್‌ಪೇಟೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಿರುತ್ತಾರೆ.

ಮೈಸೂರು ರೇಟ್‌ಪೇಯರುಗಳ ಸಂಘ

ಈಗ ಕೆಲವು ದಿವಸಗಳ ಹಿಂದೆ ಮೈಸೂರು ರೇಟ್ ಪೇಯರುಗಳ ಸಂಘವು ಸ್ಥಾಪಿತವಾಯಿತು. ಅದು ರಿಜಿಸ್ಟರ್ ಆಗಿ ಕೂಡ ಬಂದಿದೆ. ಇನ್ನು ರಾಜಧಾನಿಯ ರೇಟ್ ಪೇಯರುಗಳೆಲ್ಲರೂ ಈ ಸಂಘ ಸೇರಿ ಸಭೆಗಳನ್ನು ನಡೆಸಿ ತಮ್ಮ ಕೋರಿಕೆಗಳನ್ನು [illegible] ಬೇಕು. ಈ ಕಾಲದಲ್ಲಿ ಒಬ್ಬರೇ ಸಾರ್ವಜನಿಕ [illegible] ಗಳನ್ನು ಮಾಡುವದಕ್ಕಿಂತಲೂ ಸಂಘಗಳ [illegible] ನಡೆಯಿಸುವುದು ಉತ್ತಮ. ಪಾಶ್ಚಿಮಾತ್ಯ ದೇಶ [illegible] ರೇಟ್ ಪೇಯರುಗಳ ಸಂಘಗಳು ಬಹಳ ಪ್ರಾಧಾನ್ಯವನ್ನು ಪಡೆದಿರುತ್ತವೆ. ಸ್ಥಳೀಯ ಆಡಳಿತಗಳೆಲ್ಲಾ ಅವುಗಳ ಸಲಹೆಯಿಂದಲೇ ನಡೆಯುತ್ತವೆ. ರಾಜಕಾರಣ [illegible] ಗಳನ್ನೂ ಆಡಳಿತಗಾರರನ್ನೂ ತಯಾರು ಮಾಡುವುದು ಇಂತಹ ಸಂಘಗಳೇ.

ನಮ್ಮ ಮೈಸೂರಿನಲ್ಲಿಯೂ ಜನಗಳು ರಾಜಕಾರಣದಲ್ಲಿಯೂ ಆಡಳಿತದಲ್ಲಿಯೂ ತರಪೇತಾಗಬೇಕಾದರೆ ಸಂಘಗಳ ಮುಖಾಂತರವೇ ಆಗಬೇಕು.

ಕೆಲವು ದಿವಸಗಳ ಹಿಂದೆ ಮೈಸೂರು ಸಿಟಿ ಮುನಿಸಿಪಾಲಿಟಿಯಲ್ಲಿ ರೇಟ್ ಪೇಯರುಗಳ ಸಂಘದ [illegible] ವಾಗಿ ಚರ್ಚೆಯು ಬಂದಿತ್ತೆಂದೂ ಕೆಲವರು ಅಸಮಾಧಾನಕರವಾದ ಮಾತುಗಳನ್ನು ಆಡಿದರೆಂದೂ [illegible] ಬಂದಿದೆ. ಯಾವ ಅಸಮಾಧಾನಕ್ಕೂ ಕಾರಣವಿಲ್ಲ. ರೇಟ್‌ಪೇಯರ್ ಸಂಘವು ರೇಟ್ ಪೇಯರುಗಳಿಗೂ ಮುನಿಸಿಪಾಲಿಟಿಗಳಿಗೂ ಸಹಾಯವಾಗಿರುವುದಕ್ಕೆ ಹೊರತು ಇನ್ನೇನೂ ಇಲ್ಲ. ರೇಟ್‌ಪೇಯರ ಸಂಘದಿಂದ [illegible] ಪೂರ್ಣ ಸಹಕಾರವನ್ನು ರೇಟ್ ಪೇಯರುಗಳೂ, ಮುನಿಸಿಪಲ್ ಕೌನ್ಸಿಲರೂ ಹೊಂದುವರೆಂದು ನಂಬುತ್ತೇವೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ವರ್ಕಿಂಗ್ ಕಮಿಟಿಯ ಮುಂದಿನ ಮೀಟಿಂಗು ಈ ಮಾಹೆ 17 ನೇ ತಾ|| ಡೆಲ್ಲಿಯಲ್ಲಿ ನಡೆಯುವುದು. ಇದಕ್ಕೆ ಮಹಾತ್ಮಾ ಗಾಂಧಿಯವರೂ ದಯಮಾಡಿಸುವರೆಂಬ ನಿರೀಕ್ಷಣೆ ಇದೆ.

ಪ್ರಶಂಸೆ

ಪಿರಿಯಾಪಟ್ಟಣ ಸಬ್ ತಾ|| ನ ಡೆ[illegible] ಅಮಲ್ದಾರರವರು ತಮ್ಮ ಕೆಲಸಕಾರ್ಯಗಳನ್ನು ಬಹು ದಕ್ಷತೆಯಿಂದಲೂ ತೃಪ್ತಿಕರವಾಗಿಯೂ ಇರುವ ರೀತಿಯಲ್ಲಿ [illegible] ಕೊಂಡಿರುವುದಕ್ಕಾಗಿ ಸರಕಾರದವರು ಅವರಿಗೆ ಎರಡನೇ ದರ್ಜೆಯ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ದಯಪಾಲಿಸಿರುತ್ತಾರೆ.

ಮೋಟಾರ್ ಬಸ್ಸಿನ ಅನಾಹುತ

ರಾಜಧಾನಿಯ ಮೈಸೂರು ಬ್ಯಾಂಕ್ [illegible] ನೆಯದಿನ ಬೆಳಿಗ್ಗೆ 6 ಘಂಟೆಯ ಸಮಯದಲ್ಲಿ [illegible] ಬೈಸಿಕಲ್ಲು ಮತ್ತು ಬಂದ ಮೋಟಾರ್ ಬಸ್ಸು [illegible] ಕ್ಕೊಂದು ಢಿಕ್ಕಿ ಹೊಡೆಯಿತು. ಬೈಸಿಕಲ್ ಸವಾರನಿಗೆ [illegible] ಬಾ ಪೆಟ್ಟು ಬಿದ್ದುದರಿಂದ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವನು. ಈ ಅನಾಹುತಕ್ಕೆ ಕಾರಣ[illegible] ಸೆಂಥು ಮಾಡರನ್ ಮೋಟಾರ್ ಸರ್ವೀಸ್ 2[illegible] ನಂಬರ್ ಬಸ್ಸು ಡ್ರೈವರಿನ ವಿಚಾರಣೆಯು ಪೋಲೀಸಿನ ಮುಂದೆ ನಡೆಸಲ್ಪಡುವುದಾಗಿ ತಿಳಿಯಬರುತ್ತೆ.

ಪ್ರಜಾಸಂಘದ ಪ್ರಸಿದ್ಧ ಪತ್ರಿಕೆ

ಜವಾಬ್ದಾರಿ ಸರ್ಕಾರವೇ ಬೇಕು ನಿರಂಕುಶತ್ವವು ಹೋಗಬೇಕು.

ತಾಯಿನಾಡು.

14—2—1929

(ಮುಂದುವರಿದುದು)

ಈ ತೆರದ ರಾಜ್ಯವ್ಯವಸ್ಥೆಯನ್ನು ಜವಾಬ್ದಾರೀ ಸರಕಾರ ಅಥವಾ ಉತ್ತರವಾದಿ ಸರಕಾರ (Responsible Government) ಎಂದು ಕರೆಯುವುದು ರೂಢಿಯಾಗಿದೆ. ಈ ವ್ಯವಸ್ಥೆಯು ಬಹುಕಾಲದಿಂದ ಇಂಗ್ಲೆಂಡ್ ದೇಶದಲ್ಲಿ ಸ್ಥಾಪಿಸಲ್ಪಟ್ಟಿರುವುದಲ್ಲದೆ ಬ್ರಿಟಿಷ್ ಹಿಂದೂಸ್ಥಾನದಲ್ಲಿಯೂ ಅದೇ ವ್ಯವಸ್ಥೆಯನ್ನೇ ನೆಲೆಗೊಳಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯೂ ಸರ್ಕಾರವೂ ಈಗ್ಗೆ ೧೨ ವರ್ಷಗಳ ಹಿಂದೆಯೇ ತೀರ್ಮಾನಿಸಿ ಕೆಲವು ಭಾಗವನ್ನು ಜಾರಿಯಲ್ಲಿಯೂ ತಂದಿದೆ. ೧೯೨೯ ನೆಯ ಜನವರಿ ೨೮ ನೇಯ ತಾ|| ನ ದಿವಸ ಡೆಹಲಿಯಲ್ಲಿ ನಡೆದ ಅಖಿಲ ಭಾರತೀಯ ಶಾಸನ ಸಭೆಯಲ್ಲಿ ವೈಸರಾಯ್ ಲಾರ್ಡ್ ಇರ್ವಿನ್ ಮಹಾಶಯರು ಅದೇ ತೀರ್ಮಾನವನ್ನೇ ಪುನಃ ಸ್ಥಿರಪಡಿಸಿದರು, ಇಂಗ್ಲೆಂಡ್ ದೇಶವು ಇಂಡಿಯಾ ದೇಶಕ್ಕೆ ಉತ್ತರವಾದಿ ಸರಕಾರವನ್ನು ಕೊಡುವ ವಿಷಯದಲ್ಲಿ ಸಂದೇಹವಿಲ್ಲ ಎಂದು ಕಂಠೋಕ್ತವಾಗಿ ಸಾರಿದ್ದಾರೆ. ಹೀಗೆ ಮೈಸೂರು ನೆರೆಹೊರೆಯವರು ಉತ್ತಮವಾದ ರಾಜ್ಯವ್ಯವಸ್ಥೆಯನ್ನು ಪಡೆಯುತ್ತಿರುವಾಗ ನಾವು ಈಗಿನ ಅಸಮರ್ಪಕ ಸ್ಥಿತಿಯಲ್ಲೇ ನಿಂತಿರಬೇಕಾದ ಕಾರಣವೇನೂ ಇಲ್ಲ. ಮೈಸೂರಿನ ಪ್ರಜೆಗಳು ಬ್ರಿಟಿಷ್ ಹಿಂದೂಸ್ಥಾನದ ಪ್ರಜೆಗಳಿಗಿಂತಲೂ ಯಾವ ವಿಧವಾದ ಅರ್ಹತೆಯಲ್ಲಿಯೂ ಹಿಂದಿಲ್ಲ. ಇದೇ ಜನವರಿ ೧೪-೧೫ ರಲ್ಲಿ ತಿರುವಾಂಕೂರಿನಲ್ಲಿ ಶ್ರೀ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ದಕ್ಷಿಣ ಭಾರತೀಯ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತೂ ಸಹ ಉತ್ತರವಾದಿ ಸರಕಾರವೇ ಸಂಸ್ಥಾನಗಳಲ್ಲಿಯೂ ನೆಲೆಗೊಳ್ಳಬೇಕೆಂದು ನಿರ್ಣಯಮಾಡಿದೆ, ೧೯೨೮ ನೇ ಮಾರ್ಚಿ ೧೭ ರಲ್ಲಿ ಪ್ರಜಾಪ್ರತಿನಿಧಿಸಭೆ ಶಾಸನ ಸಭೆ ಉಭಯ ಸಮ್ಮೇಳನದಲ್ಲಿ ಹೊಸ ಸುಧಾರಣೆಗಳ ಉಪಕ್ರಮಕ್ಕೆ ಅನುಜ್ಞೆ ಕೊಡುವಾಗ ನಮ್ಮ ಶ್ರೀಮನ್ಮಹಾರಾಜರವರು ಇದೇ ಉತ್ಕರ್ಷಭಾವವನ್ನು ಪರಿಪೋಷಿಸಿ ಪ್ರಜಾಪ್ರಾಬಲ್ಯವು ಹೆಚ್ಚು ಹೆಚ್ಚುತ್ತಾ ಹೋಗಬೇಕೆಂದು ಅಪ್ಪಣೆಕೊಡಿಸಿರುತ್ತಾರೆ.

ಉತ್ತರವಾದಿ ಪದ್ಧತಿಗೆ ಸೇರಿದ ವಿವರಗಳು ಅನೇಕವಾಗಿವೆ. ಸರ್ಕಾರದ ಪ್ರತಿಯೊಂದು ಆಡಳಿತವೂ ಶಾಸನಕ್ಕೆ (ಅಥವಾ ಕಾನೂನಿಗೆ) ಬದ್ಧವಾಗಿರಬೇಕು. ಪ್ರತಿಯೊಂದು ಶಾಸನವೂ ಪ್ರಜಾಪ್ರತಿನಿಧಿ ಸಂಸ್ಥೆಗಳಿಂದ ಅಂಗೀಕೃತವಾದದ್ದಾಗಿರಬೇಕು. ರಾಜ್ಯಾಧಿಕಾರವು ನಾನಾ ಶಾಖೆಗಳಲ್ಲಿ, ನಾನಾ ವರ್ಗದ ಅಧಿಕಾರಿಗಳಲ್ಲಿ ಶಾಸನ ವಿಧಿಪ್ರಕಾರ ಹಂಚಿಕೊಳ್ಳಬೇಕು. ಆಯಾ ವರ ಅಧಿಕಾರವನ್ನು ಅವರವರೇ ಇತರರ ಹಂಗು ತಡೆಗಳಿಲ್ಲದೆ ಚಲಾಯಿಸಬೇಕು. ಕೋರ್ಟುಗಳ ಕಾರ್ಯಕ್ರಮಗಳಿಗೆ ಎಕ್ಸಿಕ್ಯೂಟಿವ್ (ಕಾರ್ಯಕಾರ) ಮಂಡಲದ ವ್ಯಾಪನೆ ಇರಬಾರದು. ಇವೇ ಮೊದಲಾದವು ಜವಾಬ್ದಾರೀ ರಾಜ್ಯಪದ್ಧತಿಯ ಅಂಶಗಳು. ಇವುಗಳಿಗೆಲ್ಲಾ ಮೂಲವಾಗಿಯ [illegible]

ಅಧಿಕಾರಗಳು ಕೆಲವು ಉಂಟು. ಅವು ಯಾವುವೆಂದರೆ —

೧. ವೃತ್ತಪತ್ರಿಕೆಗಳನ್ನು ಸ್ವತಂತ್ರವಾಗಿ [illegible] ಸಭೆ ಉಪನ್ಯಾಸಗಳನ್ನು ನಡೆಸುವ ಸ್ವಾತಂತ್ರ್ಯ ೩. ಪ್ರಭುಗಳಿಗೂ ಇತರ ಅಧಿಕಾರ ಪದವಿಯಲ್ಲಿರುವವರಿಗೂ ಅರ್ಜಿ ಬರೆದುಕೊಳ್ಳುವ ಸ್ವಾತಂತ್ರ್ಯ ೪. ಲೋಕನೀತಿಗೂ ಶಾಂತಿಗೂ ಭಂಗಬರದಂತೆ ಇಷ್ಟದೇವತಾ ಪೂಜೆಮಾಡುವ ಸ್ವಾತಂತ್ರ್ಯ ೫. ಕ್ರಮವಾದ ಕೋರ್ಟುಗಳ ಶಾಸನಾನುಸಾರವಾದ ಕಾರ್ಯಕ್ರಮಗಳ ಹೊರತು ಇತರ ವಿಧಗಳಲ್ಲಿ ದಂಡನೆಗೆ ಒಳಪಡದಿರುವ ಸ್ವಾತಂತ್ರ್ಯ. ಈ ಸ್ವಾತಂತ್ರ್ಯಗಳೆಲ್ಲವೂ ಪ್ರಜಾಪ್ರಾಬಲ್ಯಕ್ಕೆ ಬೇಕಾದ ಸೌಕರ್ಯಗಳು. ಅವಿಲ್ಲದೆ ಉತ್ತರವಾದಿ ಸರಕಾರವಿಲ್ಲ. ಇವೇ ಮೊದಲಾದ ವಿವರವನ್ನು ಮೇಲೆ ಸೂಚಿಸಿರುವ ದಕ್ಷಿಣ ಭಾರತೀಯ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಪ್ರಸಿದ್ಧ ಪತ್ರಿಕೆಯಲ್ಲಿ ಸಂಕ್ಷೇಪವಾಗಿ ಕಾಣಬಹುದು, ಅಂಥಾ ರಾಜ್ಯವ್ಯವಸ್ಥೆಯನ್ನು ಮೈಸೂರು ಸಂಸ್ಥಾನದಲ್ಲಿ ನೆಲೆಗೊಳಿಸಬೇಕೆಂಬುದು ನಮ್ಮಗಳ ಆಶಯ. ಅದಕ್ಕೆ ಬೇಕಾಗುವ ಬದಲಾವಣೆಗಳೆಲ್ಲವೂ ಒಂದೇ ಸಲ ಸರ್ವಸಂಪೂರ್ಣವಾಗಿ ನಡೆಯಬೇಕೆಂದು ನಮ್ಮ ತಾತ್ಪರ್ಯವೇನೂ ಅಲ್ಲ. ಆದರೆ ಸರಕಾರದವರು ಜವಾಬುದಾರಿ ಪದ್ಧತಿಯ ವಿಷಯದಲ್ಲಿ ತಮ್ಮ ಸಮ್ಮತಿಯನ್ನು ಕೂಡಲೇ ಪ್ರಸಿದ್ಧಪಡಿಸಿ ಅದಕ್ಕೆ ಬೇಕಾದ ಏರ್ಪಾಟುಗಳನ್ನು ಪ್ರಾರಂಭಿಸಿ ಒಂದು ನಿಷ್ಕರ್ಷೆಯಾದ ಕಾಲದೊಳಗಾಗಿ ಆ ಪದ್ಧತಿಯನ್ನು ನೆಲೆಗೊಳಿಸುವಂತೆ ವಾಗ್ದಾನ ಮಾಡಬೇಕು.

೭. ಸಾರ್ವಜನಿಕದಲ್ಲಿ ಐಕ್ಯಭಾವವನ್ನು ಉಂಟುಮಾಡಿ ಜನರ ಮನಸ್ಸು ವಿಶಾಲವಾದ ದೇಶಹಿತಕಾರ್ಯಗಳ ಕಡೆ ತಿರುಗುವಂತೆ ಮಾಡುವುದು ಸ್ವತಃ ಶ್ರೇಯಸ್ಕರ ಮಾತ್ರವಲ್ಲದೆ ಜವಾಬುದಾರಿ ಸರಕಾರದ ಸ್ಥಾಪನೆಗೂ ಅವಶ್ಯಕವಾದ ಕೆಲಸ. ಈ ಭಾಗದಲ್ಲಿ ಮುಖ್ಯವಾಗಿ ಎರಡು ಏರ್ಪಾಡುಗಳು ಆಗಬೇಕಾಗಿವೆ.

(೧) ಜಾತಿವಾರು ಕಕ್ಷಿಗಳೂ ಮತವಾರು ಕಕ್ಷಿಗಳೂ ಇಲ್ಲದೆ ಹೋಗಿ ರಾಜ್ಯ ವಿಚಾರಗಳನ್ನೆಲ್ಲಾ ಸಾರ್ವಜನಿಕದ ದೃಷ್ಟಿಯಿಂದಲೇ ನೋಡುವ ಪದ್ಧತಿಯು ಎಲ್ಲರಲ್ಲಿಯೂ ಬೆಳೆಯಬೇಕು. ರಾಜಕೀಯದಲ್ಲಿ ಕಕ್ಷಿಗಳಿರಕೂಡದೆಂದು ಹೇಳಲಾಗುವುದಿಲ್ಲ. ಆದರೆ ಆ ಕಕ್ಷಿಗಳು ಕೇವಲ ಮತಾಭಿಮಾನ ಜಾತ್ಯಾಭಿಮಾನಗಳನ್ನು ಅನುಸರಿಸದೆ ಎಲ್ಲಾ ಮತ ಎಲ್ಲಾ ಜಾತಿಗಳ ಜನರಿಗೂ ಸಾಮಾನ್ಯವಾಗಿ ಅನ್ವಯಿಸತಕ್ಕ [illegible] ರಾಜಕೀಯ ತತ್ವಗಳನ್ನು ಮಾತ್ರವೇ ಅವಲಂಬಿಸಿರಬೇಕು. ಇಂಗ್ಲೆಂಡು ಮುಂತಾದ ದೇಶಗಳಲ್ಲಿರತಕ್ಕವ ಇಂಥಾ ಕಕ್ಷಿಗಳು ನಮ್ಮಲ್ಲಿಯೂ [illegible].

(೨) ನಮ್ಮ ದೇಶದ ಕೃಷಿ, ಕೈಗಾರಿಕೆ, ಮುಂತಾದವುಗಳನ್ನು ಅಭಿವೃದ್ಧಿಗೊಳಿಸುವ ಪ್ರಯತ್ನಗಳನ್ನು [illegible] ಚಾಗಿ ನಡೆಸಬೇಕು.

ನಮ್ಮ ಸರ್ಕಾರದವರು ನಡೆಸುತ್ತಿರುವ ಕಾರ್ಯಕಲಾಪಗಳು ಸಾಲವು. ಅವುಗಳ ರೀತಿಯೂ ತೃಪ್ತಿಕರವಾಗಿಲ್ಲ. ಮಹಾಜನರ ಪ್ರಯತ್ನವೂ ಈ ಬಾಬಿನಲ್ಲಿ ತಕ್ಕಷ್ಟು ನಡೆಯುತ್ತಿಲ್ಲ. ನಮ್ಮ ದೇಶದಲ್ಲಿರುವ ಜಂ [illegible]

ಪದವಿಪ್ರದಿಗೆ [illegible]

೮. ಈ [illegible] ಪ್ರಜಾಬಲವನ್ನು [illegible] ಗಳಾಗಿರಬೇಕೆಂದು ನಾವು ಕೋರುತ್ತೇವೆ

ಸತ್ಕಾರ ಸಭೆ

ಮೈಸೂರು ಆಂಧ್ರ ರಾಜ [illegible] ಡಲಿಯವರು ಮದ್ರಾಸ ನ್ಯಾಯವಿಧಾಯಕ ಸ[illegible] ಕೃಷ್ಣರಾವ್ ಬಹದ್ದೂರ ಸಿ. ವಿ. ಎಸ್. ನರಸಿಂಹರಾಜ ರವರಿಗೆ ಕಳೆದ [illegible] ರಂಗದಿಂದಲೂ [illegible] ದವನ್ನು [illegible]

ಮ|| ರಾಜರವರು ತಮ್ಮ ಪ್ರತ್ಯುತ್ತರ ಭಾಷಣ [illegible] "ಈ ಜನಾಂಗದ ವಿದ್ಯಾಭ್ಯಾಸದ [illegible] ಷ್ಟು ಚೆನ್ನಾಗಿ ಆಗಿ [illegible] ಉದ್ದೇಶವು ನೆರವೇರಲು ತಕ್ಕ ಪ್ರಯತ್ನ ಮಾಡ [illegible] ರಲ್ಲಿ ಪ್ರತಿಯೊಬ್ಬರೂ ಚೆನ್ನಾಗಿ ಕಲಿ [illegible] ಎಂಬುದಾಗಿ ಅಪ್ಪಣೆ ಕೊಡಿಸಿದರು. ನಂತರ [illegible] ರು ಮೇಲಿನ ಸಲಹೆಯನ್ನು ಪ್ರಶಂಸಿಸಿ ಮಾತನಾಡಿದ ಮೇಲೆ ಸಭೆಯು ಬರಖಾಸ್ತಾಯಿತು. ಅನೇಕ ಅಧಿಕಾರ ವರ್ಗದವರೂ [illegible] ವಿದ್ಯಾರ್ಥಿಗಳೂ ಸಭೆಯಲ್ಲಿ ನೆರೆದಿದ್ದರು.

ಇಂಡಿಯಾ ಸರಕಾರದ ಕೌನ್ಸಿಲಿನ ಮೆಂಬರಾದ ಸರ್ ಮಹಮದ್ [illegible] ರವರು ದೆಹಲಿಯಲ್ಲಿ [illegible] ದಿಂದ 3—4 ದಿನಗಳ ಕೆಳಗೆ ಮೃತರಾದರು.

[illegible]

ಹೆಗ್ಗಡದೇವನಕೋಟೆ [illegible] ಕೋರ್ಟಿಗೆ [illegible] ಶ್ರೀನಿವಾಸ [illegible] ಮೂರನೆ ದರ್ಜೆಯ [illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ [illegible] ಪಾಕೆಟ್ [illegible] ಸಿದ್ಧವಾಗಿರುವುದು ಶೀಟ್ ಕ್ಯಾಲೆಂಡರ್ [illegible] ಶ್ರೀ [illegible] ದರ್ಶನ [illegible] ಪಿಕ್ಚರ್ ಕ್ಯಾಲೆಂಡರ್ [illegible] ಸಿದ್ಧವಾಗಿವೆ. [illegible] ಪರಸ್ಥಳದವರು 5 ಆಣೆ ರವಾನಿಸಿದಲ್ಲಿ [illegible] 3 [illegible] ಕ್ಯಾಲೆಂಡರ್ [illegible] ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. [illegible] ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲಿನಲ್ಲಿರುವುದೇನು?



[illegible]

[illegible]

[illegible] ರೋಗಗಳನ್ನು [illegible]

[illegible]

[illegible]

[illegible] ರೋಗ [illegible]

[illegible]

[illegible] ಅತಿಶಯಗೊಳಿಸಿ

[illegible] ವಜ್ರಕಾಯ

[illegible] 1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

[illegible]— ರತನ್ ಮಿಶ್ರಿ ಡಿಪೋ, ([illegible])

[illegible] ಗುಡಿ [illegible], ಬೆಂಗಳೂರು [illegible]

([illegible] ಪತ್ರಿಕೆಯ [illegible])

"[illegible]"

ಪಾಳ್ಯದ ವೆಂಕಟಾಚಲ ಪಂಡಿತರ

[illegible]

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು [illegible] [illegible] [illegible] ರೋಗ [illegible]

[illegible] ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ [illegible] ಕಸ್ತೂರಿ ಮಾತ್ರೆ [illegible] ಹೆಸರನ್ನೂ ನೋಡಿಕೊಂಡು [illegible]

[illegible];—([illegible] ಸಿದ್ದೌಷಧ) [illegible] ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸ [illegible] ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

[illegible];—(ಪ್ಲೇಗಿಗೆ) [illegible] ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

[illegible];—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

[illegible] ಆಫೀಸು) ಹೆಡ್ ಆಫೀಸು .



ಭಂಗಾರದ ಕೈಬಳೆಗಳೂ ಜೈಸುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

[illegible] ಇತರ ಕಡೆಗಳಿಗಿಂತ [illegible] ಇತರ ಕಡೆಗಳಿಗಿಂತ [illegible]

[illegible] ಹೊಸ [illegible] ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿ

[illegible] ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ

[illegible] ನಗರ್ತಪೇಟೆ, ಬೆಂಗಳೂರು [illegible]

TAINADU.

Daily Edition.

The Leading Nationalist Daily of Mysore.

Printed and published by P. R. Ramaiya.

Regd No. M 2322 || ವಂದೇ ಮಾತರಂ ||

ತಾಯಿನಾಡು.

ಪ್ರತಿ ಸೋಮವಾರವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ [illegible]
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ [illegible] ||

ಸಂಪುಟ ೧] ಶುಕ್ರವಾರ ೧೫ ಫೆಬ್ರವರಿ ೧೯೨೯ [ಸಂಚಿಕೆ [illegible]

TAI NADU
15—2—1929

ಪ್ರಜಾಭಿಪ್ರಾಯವೆಂದರೆ ಯಾವುದು?

ಬೆಂಗಳೂರು ಮೈಸೂರುಗಳಲ್ಲಿ ಆದ ವಿದ್ಯಾರ್ಥಿ ಸಭೆಗಳನ್ನು ಲಾಘವ ಮಾಡಿ ಅವುಗಳಲ್ಲಿ ಮಾಡಿದ ತೀರ್ಮಾನಗಳು ಪ್ರಜಾಭಿಪ್ರಾಯವಲ್ಲವೆಂದು ಕೆಲವು ಪತ್ರಿಕೆಗಳು ಬರೆಯಲಾರಂಭಿಸಿವೆ. ಈ ರೀತಿಯಾದ ವಾದವು ಹೊಸದಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಸ್ವರಾಜ್ಯ ಬೇಕು ಎಂದು ರಾಷ್ಟ್ರ ಮುಖಂಡರು ಕೇಳಲಾರಂಭಿಸಿದಾಗ, ಬ್ರಿಟಿಷ್ ಮತ್ತು ಆಂಗ್ಲೋ ಇಂಡಿಯನ್ ಪತ್ರಿಕೆಗಳು ಈ ಸ್ವರಾಜ್ಯದ ಕೂಗು ಪ್ರಜಾ ಸಮುದಾಯದ್ದಲ್ಲ. ಏಲ್ಲೋ ಕೆಲವು ಅಲ್ಪ ಸಂಖ್ಯಾಕರಾದ ವಿದ್ಯಾವಂತರದು ಎಂದು ಹೇಳಲಾರಂಭಿಸಿದವು. ಸರ್. ಮೈಕೇಲ್ ಓಡ್ವಯರ್ ಎಂಬ ಪಂಜಾಬ್ ಗೌರ್ನರು ನಮ್ಮ ಭಾರತೀಯ ಮುಖಂಡರನ್ನೂ ರಾಷ್ಟ್ರೀಯ ಸಭೆಯನ್ನೂ ಅಲ್ಲಗಳೆಯುವುದರಲ್ಲಿ ಅಗ್ರೇಸರನು. ಅವನು ರಾಷ್ಟ್ರೀಯ ಮುಖಂಡರನ್ನು "Microscopic Minority" ಎಂದರೆ, ಅಗಾಧವಾದ ಸಮುದ್ರದಲ್ಲಿ ಬಿಂದು ಬಿಂದುವಿನಂತೆ ಎಂದು ಹೇಳುತ್ತಿದ್ದನು. ಇಂದೂ, ಸೈಮನ್ ಕಮಿಷನ್ನನ್ನು, ಕಾಂಗ್ರೆಸ್ ಸಭೆಯೂ, ರಾಜಕೀಯ ಮುಖಂಡರೂ ಬಹಿಷ್ಕರಿಸಿದ್ದರೂ, ಅನೇಕರು ಅವರನ್ನು ಸ್ವಾಗತ ಮಾಡುತ್ತಿರುವರೆಂದು ಕಮಿಷನರುಗಳು ಹೇಳಿಕೊಳ್ಳುತ್ತಿರುವರು. ಆದರೆ ಕಮಿಷನರವರ ಮನಸ್ಸಿಗೇ ಗೊತ್ತು. ತಮಗೆ ಸಂಪೂರ್ಣವಾದ ಬಹಿಷ್ಕಾರವು ಆಗುತ್ತಿದೆಯೆಂಬುದನ್ನು ಅವರು ಬಲ್ಲರು. ರಾಜಕೀಯ ಪ್ರಪಂಚದಲ್ಲಿ ಒಂದು ಪಂಗಡದವರು ತಮಗೆ ವಿರೋಧವಾದ ಪಂಗಡದವರನ್ನು ಆಕ್ಷೇಪಣೆ ಮಾಡುವಾಗ, ತಾವೇ ಪ್ರಜಾ ಪ್ರತಿನಿಧಿಗಳೆಂದೂ ತಮ್ಮ ಅಭಿಪ್ರಾಯವೇ ಪ್ರಜಾಭಿಪ್ರಾಯವೆಂದೂ ಹೇಳುವ ರೂಢಿಯಿರುವುದು.

ಆದರೆ ಮೈಸೂರು ಬೆಂಗಳೂರುಗಳಲ್ಲಿ ಪ್ರಜಾಭಿಪ್ರಾಯವು ಯಾವುದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕೆ ಕೋಮುವಾರು ಬಣ್ಣವನ್ನು ಕೊಟ್ಟು ಪ್ರಸ್ತಪ್ರಸ್ತಿಯಿಂದ ನಿಜವಾದ ಸಂಗತಿಯನ್ನು ಮರೆಮಾಚುವುದು ಉಚಿತವಲ್ಲ. ಈ ಎರಡು ಊರುಗಳಲ್ಲೂ ಮೀಟಿಂಗಾಗುವುದೆಂದು ಚೆನ್ನಾಗಿ ಪ್ರಚಾರವಾಗಿ, ಸಭೆಗಳು ಬಹಿರಂಗವಾಗಿ ನಡೆದವು. ಬೆಂಗಳೂರಿನಲ್ಲಿ ಠರಾವುಗಳಿಗೆ ವಿರೋಧಾಭಿಪ್ರಾಯವೇ ಬರಲಿಲ್ಲ. ಮೈಸೂರಿನಲ್ಲಿ ಮ|| ಗಳಾದ ನಾರಾಯಣಸ್ವಾಮಿ ಅಯ್ಯರವರೂ ದಾಸಪ್ಪನವರೂ ವಿರೋಧಾಭಿಪ್ರಾಯವನ್ನು ಚೆನ್ನಾಗಿ ವಿಶದೀಕರಿಸಿದರು. ವಿರೋಧಾಭಿಪ್ರಾಯವು ಸರಿಯಲ್ಲವೆಂದು ಸಭೆಯು ತಿರಸ್ಕರಿಸಿತು. ಸಭೆಯನ್ನೇ ಅಲ್ಲಗಳೆಯುವುದು ಸಭ್ಯನಿಗಾದವನಿಗೂ ಉಚಿತವಲ್ಲ. ಪ್ರಜಾಪ್ರಭುತ್ವಕ್ಕೆ ಪ್ರಜಾಭಿಪ್ರಾಯವೇ ಮುಖ್ಯ ಆಧಾರ. ಪ್ರಜಾಭಿಪ್ರಾಯವು ರೂಢಿಸುವುದಕ್ಕೆ ಸಭೆಗಳೇ ಮೂಲಾಧಾರ. ತಮಗೆ ಬಹುಮತವು ಬೆಂಬಲವಿಲ್ಲವೆಂದು, ಸಭೆಯನ್ನು ತಿರಸ್ಕರಿಸುವುದು ಪ್ರಜಾಪ್ರಭುತ್ವದ ಧರ್ಮವಲ್ಲ. ಇಂದು ಪರಾಜಿತವಾದರೆ ನಾಳೆ ಗೆಲ್ಲಬಹುದು. ಈ ರೀತಿಯಾಗಿ ಅನೇಕಸಾರಿ ನಡೆದಿರುವುದು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಂದು ಮೆಜಾರಟಿಯಲ್ಲಿದ್ದವರು ನಾಳೆ ಮೈನಾರಟಿಯಲ್ಲಿರುವರು ಆದರೆ ತಮಗೆ ಮೆಜಾರಟಿಯು ದೊರೆಯಲಿಲ್ಲ ಎಂದು ಅಲ್ಪಭಾವವನ್ನು ತೋರಿಸುವುದಿಲ್ಲ. ನಮ್ಮ ಮೈಸೂರಲ್ಲಿಯೂ ನಾವು ಪ್ರಜಾಭಿಪ್ರಾಯದಂತೆ ರಾಜ್ಯಾಡಳಿತವು ನಡೆಯಬೇಕೆಂದು ಪ್ರಯತ್ನಪಡುತ್ತಿರುವೆವು. ಹಾಗಿರುವಾಗ್ಗೆ ಸಭೆಗಳನ್ನೂ ಮೆಜಾರಟಿಗಳನ್ನೂ ತಿರಸ್ಕರಿಸುವುದು ಸರಿಯಲ್ಲ.

ತಮ್ಮ ಅಭಿಪ್ರಾಯವೇ ಗೆಲ್ಲಬೇಕೆಂದು ಈ ವಿರೋಧಿಗಳಿಗಿದ್ದರೆ ಅವರೂ ಸಭೆಗಳನ್ನು ಬಹಿರಂಗವಾಗಿ ನಡೆಸಲಿ ಎಲ್ಲ ಪಕ್ಷಗಳನ್ನೂ ಸರಿಯಾಗಿ ಚರ್ಚಿಸುವದಕ್ಕೆ ಅವಕಾಶವನ್ನು ಕೊಡಲಿ ಬಹುಮತವು ಹೇಗೆ ಒರುವುದೋ ಅದರಂತೆ ನಡೆಯಲಿ.

ಈ ಬಹುಮತದ ಪ್ರಶ್ನೆಯೊಂದಿಗೆ ಇನ್ನೊಂದು ವಿಷಯವನ್ನು ನಾವು ಆಲೋಚಿಸಬೇಕು. ಸತ್ಯಕ್ಕೂ ನ್ಯಾಯಕ್ಕೂ ಎಲ್ಲೆಲ್ಲಿಯೂ ಯಾವಾಗ್ಲೂ ಪ್ರೋತ್ಸಾಹವುಂಟು ಬೆಂಗಳೂರ ಮೈಸೂರು ಸಭೆಗಳಲ್ಲಿ ಆದ ತೀರ್ಮಾನಗಳು ಸತ್ಯ ಮತ್ತು ನ್ಯಾಯ ಸಮ್ಮತವಾದವುಗಳು. ಅದು ಕೋಮುವಾರು ಪ್ರಶ್ನೆಯೇ ಅಲ್ಲ. ಬೆಂಗಳೂರು ಗಲಾಟೆಯಲ್ಲಿ ತಪ್ಪು ಮಾಡಿದವರಿಗೆಲ್ಲಾ ಶಿಕ್ಷೆಯಾಗಬೇಕೆಂದೂ ಜವಾಬ್ದಾರೀ ಸರಕಾರವು ಬೇಕೆಂದೂ ಕೇಳಲ್ಪಟ್ಟಿವೆಯೇ ವಿನಹ ಇನ್ನೇನೂ ಇಲ್ಲ.

ನಮ್ಮ ಸಂಸ್ಥಾನದಲ್ಲಿ ಇವತ್ತು ಯಾವ ಮೂಲೆಯಿಂದ ಯಾವ ಮೂಲೆಗೆ ಹೋದರೂ ಇದೇ ಕೂಗು ಕೇಳಿಬರುತ್ತಿದೆ. ಇದು ಅಲ್ಲ ಎಂದು ಹೇಳುವವರು ಹೋಗಿ ಪರೀಕ್ಷೆ ಮಾಡಿಕೊಂಡು ಬರಲಿ ತಮಗೆ ಸತ್ಯವೂ, ನ್ಯಾಯವೂ ಬೇಡವಾದರೆ ಜಗತ್ತಿಗೇ ಬೇಡವೆನ್ನುವುದು ಇವರ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಇದರಿಂದ ಯಾರೂ ಭ್ರಾಂತರಾಗುವ ಹಾಗಿಲ್ಲ. ತಮ್ಮ ಅಭಿಪ್ರಾಯಕ್ಕೆ ಬಹುಮತದ ಬೆಂಬಲವು ದೊರೆಯಲಿಲ್ಲವೆಂದು ವಿದ್ಯಾರ್ಥಿಗಳ ಮೇಲೆ ಬೀಳುವುದು ತೀರ ಅನುಚಿತ. ಈಗ ಪ್ರಪಂಚದಲ್ಲಿ ವಿದ್ಯಾರ್ಥಿಗಳು ಜಾಗೃತರಾಗಿ ತಮ್ಮ ದೇಶಕಾರ್ಯಗಳಲ್ಲಿ ತೊಡಗಿರುವರು. ನಮ್ಮ ಮೈಸೂರಿನ ವಿದ್ಯಾರ್ಥಿಗಳೂ ಅದರಂತೆಯೇ ಇಲ್ಲಿನ ನಡವಳಿಕೆಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿರುವರು. ಸಭೆಗಳಿಗೆ ಬಂದು ಅಲ್ಲಿನ ಭಾಷಣಗಳನ್ನು ಕೇಳಿ ತಮಗೆ ನ್ಯಾಯವೆಂದು ತೋರಿದ ಕಡೆ ಅಭಿಪ್ರಾಯವನ್ನು ಕೊಟ್ಟರೆ ಅವರ ಮೇಲೆ ರೇಗುವುದೇಕೆ? ಅವರಿಗೇನು ಬುದ್ಧಿಯಿಲ್ಲವೇ? ವಿವೇಚನಾಶಕ್ತಿಯಿಲ್ಲವೆ? ಬೆಂಗಳೂರು ಗಲಭೆಗಳಲ್ಲಿ ವಿದ್ಯಾರ್ಥಿಗಳ ಭಾಗವಿಲ್ಲವೆ? ಮ|| ದಾಸಪ್ಪನವರೂ ಮ|| ಅಯ್ಯರವರೂ, ವಿದ್ಯಾರ್ಥಿಗಳನ್ನು ನಿಂದಿಸಬಹುದು. ವಿದ್ಯಾರ್ಥಿಗಳು ಮಾತ್ರ ತಮಗೆ ನ್ಯಾಯವಾದ ಕಡೆ ಓಟು ಕೊಡಬಾರದು ಇದು ಯಾವ ನ್ಯಾಯವೋ ಗೊತ್ತಿಲ್ಲ. ವಿದ್ಯಾರ್ಥಿಗಳಿಗೂ ದೇಶಕಾರ್ಯಗಳಲ್ಲಿ ಭಾಗ ತೆಗೆದು ಕೊಳ್ಳುವುದಕ್ಕೆ ಅವಕಾಶವಿರುವುದು ವಿದ್ಯಾರ್ಥಿಗಳು ಹಿಂಜರಿಯಬೇಕಾಗಿಲ್ಲ.

ಬಾಬು ಭಗವಾನ್ ದಾಸ್.

ಕಾಶಿಯ ಪ್ರಸಿದ್ಧ ಆಂಗ್ಲ ಮತ್ತು ಸಂಸ್ಕೃತ ವಿದ್ವಾಂಸರಾದ ಬಾಬು ಭಗವಾನ್ ದಾಸರವರ ಷಷ್ಟಿಪೂರ್ತಿಶಾಂತಿಯನ್ನು ಅವರ ಮಕ್ಕಳಾದ ಶ್ರೀಪ್ರಕಾಶರವರು ಬಹು ವೈಭವದಿಂದ ನಡೆಸಿದರು. ದೊಡ್ಡದೊಡ್ಡ ಮನುಷ್ಯರುಗಳೆಲ್ಲಾ ಅಭಿನಂದನಗಳನ್ನು ಕಳುಹಿಸಿದ್ದರು.

ವಿವಿಧ ವಿಷಯಗಳು

ಸ್ಪೇನಿನಲ್ಲಿ ನಿರಂಕುಶತ್ವ.

ಸ್ಪೇನಿನಲ್ಲಿ ರಾಜಕೀಯ ಚಳುವಳಿಯು ಬಲಿಷ್ಟವಾಗುತ್ತಿರುವುದು. ಯಾರು ಯಾರು ಈಗಿನ ಮಂತ್ರಿಮಂಡಲಕ್ಕೆ ವಿರೋಧವಾಗಿ ಪ್ರಚಾರವನ್ನು ನಡೆಸುವರೋ ಅವರುಗಳ ಲೋಪದೋಷಗಳನ್ನು ತೋರಿಸುವರೋ ಅವರನ್ನು ದಸ್ತಗಿರಿ ಮಾಡಬೇಕೆಂದು ಕಟ್ಟಾಗಿರುವುದು. ರಾಜಕೀಯ ಸಂಘಗಳೆಲ್ಲಾ ಮುಚ್ಚಲ್ಪಡಬೇಕೆಂದೂ ಯಾರು ಯಾರು ಈಗಿನ ಸರ್ವಾಧಿಕಾರಿಗಳಿಗೆ ವಿರೋಧವಾದ ಅಭಿಪ್ರಾಯವನ್ನು ತೋರಿಸುವರೋ ಅವರ ಸರ್ಕಾರೀ ನೌಕರರನ್ನೆಲ್ಲಾ ಕೆಲಸದಿಂದ ತೆಗೆಯಬೇಕೆಂದೂ ಕಟ್ಟಾಗಿರುವುದು.

ನ್ಯಾಯವಿಧಾಯಕ ಸಭೆಗಳ ಅವಧಿಯನ್ನು ಹೆಚ್ಚಿಸುವುದ.

ಬ್ರಿಟಿಷ್ ಇಂಡಿಯಾದಲ್ಲಿ ಈಗಿನ ನ್ಯಾಯವಿಧಾಯಕ ಸಭೆಗಳ ಅವಧಿಯನ್ನು ಹೆಚ್ಚಿಸಬೇಕೆಂದು ಸರ್ಕಾರದವರು ಪ್ರಯತ್ನಪಡುತ್ತಿರುವರು. ಪಂಡಿತ ಮೋತಿಲಾಲ್ ನೆಹರೂರವರು ಇದನ್ನು ವಿರೋಧಿಸಿರುವರು.

ನೈಜಾಮರ ಉದಾರ ಸಹಾಯ.

ಹೈದರಾಬಾದ್ ನೈಜಾಮರು ಮದರಾಸಿನಲ್ಲಿ ಇದ್ದಷ್ಟು ದಿವಸವೂ ಅವರಿಗೆ ರಾಜಭೋಗಗಳು ನಡೆದವು. ಹೈದರಾಬಾದಿಗೆ ಹಿಂತಿರುಗುವಾಗ್ಗೆ ಮದರಾಸ್ ಗವರ್ನರ ಕೈಯಲ್ಲಿ 25000 ರೂಪಾಯಿಗಳನ್ನು ಕೊಟ್ಟು ಜಾತಿ, ಮತ, ಕೋಮು ಮೊದಲಾದವುಗಳ ಭೇದವಿಲ್ಲದೆ ಬಡವರಿಗೆಲ್ಲಾ ಅದನ್ನು ದಾನಮಾಡಬೇಕೆಂದು ತಿಳಿಸಿದರು.

ಹೊಟ್ಟೆಗಿಲ್ಲದ ಪ್ರಜಾಕೋಟಿ

ಪಂಡಿತ ಜವಾಹಿರಲಾಲ್ ನೆಹರೂರವರು ಕೊಟ್ಟ ಒಂದು ಭಾಷಣದಲ್ಲಿ ಹೇಳಿದುದೇನೆಂದರೆ, ಈಗ ಸ್ವರಾಜ್ಯವು ಬೇಕಾಗಿರುವುದು ಐಶ್ವರ್ಯದಲ್ಲಿ ಮುಳುಗಿರುವವರಿಗಲ್ಲಾ ಒಂದು ಹೊತ್ತೂ ಸಹ ಊಟವಿಲ್ಲದ ಬಡವರಿಗೆ.

ಬಾಂಬಿನ ಅತ್ಯಾಚಾರ

ಮೆಕ್ಸಿಕೋದ ಪ್ರೆಸಿಡೆಂಟರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ್ಯೆ ಒಂದು ಬಾಂಬು ಸಿಡಿದು ಎರಡು ಗಾಡಿಗಳು ತಲೆಕೆಳಗಾದವು. ಇಂಜಿನ್ ನಡೆಸುವವನು ಸತ್ತನು.

ಕರ್ಣಾಟಕ ಏಕೀಕರಣ.

ಕರ್ಣಾಟಕವು ಒಂದು ಸ್ವತಂತ್ರ ಪ್ರಾಂತ್ಯವಾಗಿ ರಚಿಸಲ್ಪಡಬೇಕೆಂದು ಡಾ|| ಯು. ರಾಮರಾಯರು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಒಂದು ಠರಾವನ್ನು ತರುವರು.

ಜನ್ಮದಿವಸ

ಬೆಂಗಳೂರಿನ ಮ|| ರಾ|| ಬಿ. ಸೂರ್ಯನಾರಾಯಣರಾಯರ 73 ನೇ ವರ್ಷ ವರ್ಧಂತಿಯು ಈ ತಿಂಗಳು 16ನೇ ತಾರೀಖು ಶನಿವಾರ ಹುಸ್ಸಮಾರನಹಳ್ಳಿಯಲ್ಲಿರುವ ಸೂರ್ಯಾಲಯ ಎಂಬ ಅವರ ಗೃಹದಲ್ಲಿ ನಡೆಯುತ್ತದೆ.

ಪಿತೂರಿಗೋಸ್ಕರ ಶಿಕ್ಷೆ.

ಟರ್ಕಿಯಲ್ಲಿ 36 ಜನಗಳ ಬಂದು ಪಿತೂರಿ ಸಂಬಂಧಪತ್ತೆಯಾಗಿ ವಿಚಾರಣೆ ನಡೆದು ೬ ಜನಗಳಿಗೆ ಮರಣದಂಡನೆಯೂ 16 ಜನಗಳಿಗೆ ಬಂದೀ ವಾಸವೂ ಆಯಿತು.

ತಾಯಿನಾಡು.

15—2—1929

ಗುಟ್ಟಿನ ಕಾಗದಗಳು

ಮಿ|| ವಿ. ಜರ್ಾ ಸಾಹೇಬರವರಿಂದ ಮ|| ಟಿ. ಪರಮ ಶಿವಯ್ಯರ್‌ರವರಿಗೆ ಕಳುಹಿಸಲ್ಪಟ್ಟ ಮುಂದಿನ ಕಾಗದಗಳು.

ಎಕ್ಸಿಬಿಟ್. ಪಿ. 6

ಕಾರ್ಲ್‌ಟನ್ ಹೌಸ್.

ತಾ|| 30 ನೇ ಜನವರಿ 1927

ಸ್ವಾಮಿ,

ಮಂಗಳೂರಿಗೆ ರೈಲ್ವೆ ಹಾಕಿಸುವ ವಿಚಾರದಲ್ಲಿ ತಮ್ಮ ಅಭಿಪ್ರಾಯಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ. ಭಟ್ಕಲ್ಲಿನ ಬಂದರ್ ಆಗುವ ವಿಚಾರದಲ್ಲಿ ಮೈಸೂರು ಸರ್ಕಾರದ ಮುಂದಾಳಿಗೆ ಈ ರೈಲ್ವೆ ಮಾರ್ಗವು ಎಷ್ಟುಮಟ್ಟಿಗೆ ಅನುಕೂಲವಾಗಬಹುದೆಂಬುದೇ ನನ್ನ ಮನಸ್ಸಿನಲ್ಲಿರುವ ಮುಖ್ಯ ಯೋಚನೆ. ಅದು ಈಗಾಗಲೀ ಮುಂದಾಗಲೀ ಬಾರದಿರಬಹುದು. ಆದರೆ ಕಾಲಕ್ರಮದಲ್ಲಿ ಬರಬಹುದು. ಈ ರೈಲ್ವೆ ಮಾರ್ಗವನ್ನು ಹಾಕಿಸುವುದರಿಂದ ಭಟ್ಕಲ್ ಯೋಚನೆಗೆ ಅಡಚಣೆಯಾಗುವುದಿಲ್ಲವೇ ಎಂಬುದನ್ನು ಮಂಗಳೂರು ಸಂಬಂಧವಾಗಿ ನಿರ್ಧರಿಸುವಾಗ ಕೇವಲ ಎಚ್ಚರಿಕೆಯಿಂದ ಆಲೋಚಿಸಬೇಕಾಗಿದೆ

ಇತಿ ನಿಮ್ಮ ವಿಶ್ವಾಸಿ,

(ರುಜು) ಮಿರ್ಜಾ ಎಂ. ಇಸ್ಮಾಯಿಲ್.

ಎಕ್ಸಿಬಿಟ್. ಪಿ. 7.

ಕಾರ್ಲ್‌ಟನ್ ಹೌಸ್,

ಬೆಂಗಳೂರು

19ನೇ ತಾ|| ಮಾರ್ಚಿ 1927

ಪ್ರಿಯ ಪರಮಶಿವಯ್ಯರ್‌ರವರ ಸ|| ಕ್ಕೆ.

ತಾವು ದಯೆಮಾಡಿ ಬರೆದ ಕಾಗದಕ್ಕಾಗಿ ನನ್ನ ಅತ್ಯಂತ ಕೃತಜ್ಞತಾ ಪೂರ್ವಕವಾದ ವಂದನೆಗಳು ಸಂಸ್ಥಾನದವಿಚಾರವಾಗಿ ತಮಗೆ ಎಷ್ಟೊಂದು ವಿಚಾರಗಳು ತಿಳಿದಿವೆಯೆಂಬುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಹಾಸನದ ಜನರು, ಹಾಸನ—ಮಂಗಳೂರು ರೈಲ್ವೆಯನ್ನು ಹಾಕಿಸಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ನಾನು ಅವರಿಗೆ ನಿರ್ಧರವಾದ ಯಾವ ಉತ್ತರವನ್ನೂ ಕೊಟ್ಟಿಲ್ಲ ಈ ರಸ್ತೆ ವಿಚಾರದಲ್ಲಿ ಮಿ|| ಡಿ. ಡಬ್ಲ್ಯು ವರ್ಥ್ ಬೆಳ್ಳೀ ಅಭಿಪ್ರಾಯ ಕೊಡುವುದಿಲ್ಲ. ಆದದರಿಂದ ಫಾಯಿದೇ ಇಲ್ಲವೆಂದು ಅವರು ಯೋಚಿಸುತ್ತಾರೆ. ವಿಶೇಷ ಗೌರವಭಾವದಿಂದ ಕೂಡಿರುವ ನಿಮ್ಮ ವಿಶ್ವಾಸಿ

(ರುಜು) ಮಿರ್ಜಾ ಎಂ ಇಸ್ಮಾಯಿಲ್

ಎಕ್ಸಿಬಿಟ್ ಪಿ 8.

ಪಬ್ಲಿಕ್ ಆಫೀಸ್

ಬೆಂಗಳೂರು

12 ಸೆಪ್ಟಂಬರ್ 1927

ಪ್ರಿಯ ಪರಮಶಿವಯ್ಯರ್‌ರವರ ಸ||ಕ್ಕೆ.

"ಡ್ಯೂಟಿಗಳು" ಎಂಬ ವಿಚಾರದಲ್ಲಿ ತಾವು ಪುನಃ ಕಳುಹಿಸಿಕೊಟ್ಟ ಟಿಪ್ಪಣಿಯು ಈಗ ತಾನೆ ತಲುಪಿತು. ಅನೇಕ ವಂದನೆಗಳು. ಈ ವಿಚಾರದಲ್ಲಿ ತಾವು ಅಷ್ಟು ಆಳವಾಗಿ ಪ್ರವೇಶಿಸಿದ್ದರೆಂಬುದೂ ಎಷ್ಟು ಕಾಲ ಮತ್ತು ಯೋಚನೆಯನ್ನು ವೆಚ್ಚಮಾಡಿದರೆಂಬುದೂ ಆಶ್ಚರ್ಯವನ್ನುಂಟುಮಾಡುತ್ತದೆ. ಈಚೆಗೆ ಪ್ರಕಟಿತವಾದ ಪ್ರಸಿದ್ಧ ಪತ್ರಿಕೆಯು ನಿಮಗೆ ಹೆಚ್ಚು ವ್ಯಥೆಯನ್ನುಂಟುಮಾಡಲಿಲ್ಲವೆಂದು ನಂಬುತ್ತೇನೆ. ನಿಮಗೂ ಇಂಜಿನಿಯರುಗಳಿಗೂ ನಡೆಯುತ್ತಿರುವ ಈ ವ್ಯಾಜ್ಯವು ಸರ್ಕಾರವನ್ನು ಬಹಳ ವಿಷಮಾವಸ್ಥೆಗೆ ತಂದಿದೆ. ಹೈಲೆವೆಲ್ ಕಾಲುವೆಯ ವಿಚಾರದಲ್ಲಿ ನಾವು ನಿರ್ಧರಿಸುವುದನ್ನು ತಿದ್ದುಪಾಡು ಮಾಡುವುದಕ್ಕೆ ಅಶಕ್ತನಾಗಿದ್ದೇನೆಂಬುದು ತಿಳಿಸುವಾಗ ನೀವು ನನ್ನಲ್ಲಿ ಸಹನಭಾವನೆಯನ್ನು ತಾಳುವಿರೆಂದು ನಂಬುತ್ತೇನೆ ಈ ವಿಷಯದಲ್ಲಿ ನಾವು ಎಲ್ಲಾ ಅಂಶಗಳನ್ನೂ ಆಲೋಚಿಸಿದೆವು. ಕೌನ್ಸಿಲ್ ನವರು ಏಕವಾಕ್ಯತೆಯಿಂದ ಈ ಅಭಿಪ್ರಾಯವನ್ನು ಪಟ್ಟರು. ಶ್ರೀ. ಕೆ. ಆರ್. ಎಸ್ ರವರೂ ಕೂಡ ಇದನ್ನು ಸಂಪೂರ್ಣವಾಗಿ ಅನುಮೋದಿಸುತ್ತಾರೆಂದು ನಂಬಿದ್ದೇನೆ. ಸಂದರ್ಭವು ಹೀಗಿರುವಾಗ ಈ ವ್ಯಾಜ್ಯವನ್ನು ಮುಂದುವರಿಸುವುದರಿಂದ ಪ್ರಯೋಜನವುಂಟೇ. ಈ ವಿಚಾರವನ್ನು ಶ್ರೀ|| ಬಾಲಸುಂದರಂಅಯ್ಯರ್‌ರವರಿಗೆ ವಹಿಸಿದ್ದೇನೆ ಅವರು ಇದರಲ್ಲಿ ಅನುಮಾನಪಡುವುದಿಲ್ಲ.ನಿಮ್ಮ ಅಭಿಪ್ರಾಯದಲ್ಲಿಸಂಸ್ಥಾನವು ದೊಡ್ಡ ನಷ್ಟಕ್ಕೊಳಗಾಗುತ್ತಿದೆಯೆಂಬ ವಿಚಾರದಲ್ಲಿ ನಮ್ಮನ್ನು ಎಚ್ಚರಿಸಿ ನಿಮ್ಮ ಕರ್ತವ್ಯವನ್ನು ಮಾಡಿದ್ದೀರಿ. ಉಳಿದುದಕ್ಕೆ ದೇವರನ್ನು ನಂಬಿರೋಣ. ನಿಮ್ಮಲ್ಲಿ ವಿಶೇಷ ಗೌರವವನ್ನಿಟ್ಟಿರುವ ನಿನ್ನ ವಿಶ್ವಾಸಿ

(ರುಜು) ಮಿರ್ಜಾ ಎಂ. ಇಸ್ಮಾಯಿಲ್

ಎಕ್ಸಿಬಿಟ್. ಪಿ. 9.

ಬೆಂಗಳೂರು

26 ನೇ ತಾ|| ಏಪ್ರಿಲ್ 1928

ಪ್ರಿಯ ಪರಮಶಿವಯ್ಯರ್‌ರವರ ಸಮುಕ್ಷಮಕ್ಕೆ

ಬೆಂಗಳೂರಿಗೆ ಹೊಸದಾಗಿ ನೀರು ಸಂಬರಾಯಿ ಮಾಡುವ ವಿಚಾರದಲ್ಲಿ ತಾವು ಕೆಲವು ಸಲಹೆಗಳನ್ನು ಸೂಚಿಸಿ ಬರೆದಿರುವ ಕಾಗದಕ್ಕಾಗಿ ಅನೇಕ ವಂದನೆಗಳು.

ಈ ಸಲಹೆಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದೆಂಬ ಉದ್ದೇಶದಿಂದ ಅವುಗಳನ್ನು ಪರ್ಯಾಲೋಚಿಸುತ್ತಿದ್ದೇನೆ.

ಇತಿ ನಿಮ್ಮ ವಿಶ್ವಾಸಿ,

(ರುಜು) ಮಿರ್ಜಾ ಎಂ. ಇಸ್ಮಾಯಿಲ್

ಎಕ್ಸಿಬಿಟ್. ಪಿ. 10.

ಲೇಕ್ ವ್ಯೂ ಮೈಸೂರು,

23 ನೇ ತಾ|| ಜುಲೈ 1927

ಕಾವೇರಿ ವಿಚಾರದಲ್ಲಿ ತಾವು ಬರೆದ ಎರಡು ಕಾಗದಗಳಿಗಾಗಿ ತಮ್ಮನ್ನು ಬಹಳವಾಗಿ ವಂದಿಸುವುದಕ್ಕೆ ಈ ಕಾಗದವನ್ನು ಬರೆದಿದ್ದೇನೆ. ನಾವೂ ನಿಮ್ಮ ಅಭಿಪ್ರಾಯವನ್ನೇ ಪಟ್ಟೆವು. ಆದರೆ ಮದರಾಸಿನ ಸ್ನೇಹಿತರು ನಾವು ಹೇಳುವುದು ಸಕಾರಣವಾದದ್ದಲ್ಲವೆಂದು ಭಾವಿಸಿದರು. ಮತ್ತು ಈಗಲೂ ಹಾಗೆಯೇ ಭಾವಿಸುತ್ತಿರುವರೆಂದು ಕಾಣುತ್ತದೆ. ಅದರಿಂದಲೇ ಅವರು ಪಂಚಾಯಿತಿ ನಡೆಯಬೇಕೆಂದರು. ನಾವು ಅದಕ್ಕೆ ಒಪ್ಪಿಕೊಳ್ಳಬೇಕಾಯಿತು. ಆದರೆ ಈಚೆಗೆ ಅವರಿಂದ ಯಾವ ವಿಚಾರವೂ ತಿಳಿಯ ಬಂದಿಲ್ಲ.

ನಮಗೆ ಬಲವಾದ ಕೇಸ್ ಇದೆಯೆಂದು ತಾವು ಯೋಚಿಸುವುದನ್ನು ತಿಳಿದು ಸಂತೋಷಿಸುತ್ತೇನೆ

ನೀವು ಆರೋಗ್ಯವಾಗಿರುವಿರೆಂದು ನಂಬಿದ್ದೇನೆ.

ಇತಿ ನಿಮ್ಮ ವಿಶ್ವಾಸಿ,

(ರುಜು) ಮಿರ್ಜಾ ಎಂ ಇಸ್ಮಾಯಿಲ್

(ಚಿ. ಗು.)

ರೇಟ್‌ಪೇಯರುಗಳ ಸಂಘ [illegible]

ಮೈಸೂರು [illegible]

19.9 ನೇ ಜನವರಿ 26 ನೇ ತಾ. [illegible] ಕೌನ್ಸಿಲ್ ಮೀಟಿಂಗಿನಲ್ಲಿ ರೇಟ್ ಪೇಯರುಗಳ ಸಂಘದ ಸೆಕ್ರೆಟರಿಗಳು ಕಳೆದ ಡಿಸೆಂಬರ್ [illegible] [illegible] ಪತ್ರವು ಪರ್ಯಾಲೋಚನೆಗೆ ಬಂದಿತ್ತು.

(1) ಹೊಸದಾಗಿ ಹಾಕಲ್ಪಡುವ [illegible] ಪರ್ಯಾಲೋಚನೆಗಾಗಿ [illegible] ಸಂಘದಿಂದ [illegible] ನ್ನು ತೆಗೆದುಕೊಳ್ಳಬೇಕು.

(2) ಈ ಸಂಘದ ಆಫೀಸನ್ನಿಟ್ಟುಕೊಳ್ಳಲು [illegible] ಹಾಲ್‌ನಲ್ಲಿ [illegible] ಗಳ ಉಪಯೋಗ [illegible] ಕೊಡಬೇಕು.

ಕೌನ್ಸಿಲ್ ತೀರ್ಮಾನ:—

ಅವಕಾಶವಿದ್ದಾಗ ಕೊಡಬಹುದು.

(3) ಪ್ರೆಸಿಡೆಂಟರವರು ಪ್ರತಿ ಮೀಟಿಂಗಿನ ಕಾರ್ಯಕ್ರಮಗಳ ಪ್ರತಿಯೊಂದನ್ನು ಈ ಸಂಘದ ಕಾರ್ಯಕಾರಿ ಮಂಡಲಿಯವರ ಪರಿಗಣನೆಗಾಗಿ ಸಂಘದ ಸೆಕ್ರೆಟರಿಗಳಿಗೆ ಮುನಿಸಿಪಲ್ ಮೀಟಿಂಗಿನ ಪೂರ್ವ [illegible] ವಿಯಾಗಿಯೇ ಕಳುಹಿಸಿಕೊಡಬೇಕು.

ಕೌನ್ಸಿಲ್ ತೀರ್ಮಾನ—ಸಂಘಕ್ಕೆ ಕಾಪಿಗಳನ್ನು [illegible] ಹಿಸಲಾಗುವುದಿಲ್ಲ. ಆದರೆ ಕಾರ್ಯಕ್ರಮವು [illegible] ವರ್ತಮಾನ ಪತ್ರಿಕೆಗಳಲ್ಲಿ ಪ್ರಚುರಿಸಲ್ಪಡುವ [illegible]

(4) ಸಣ್ಣ ಸಣ್ಣ ಮನೆಗಳಿಗೆ [illegible] ಮನೆ ಕಂದಾಯವನ್ನು ಕಡಿಮೆ ಮಾಡ [illegible] ಮುನಿಸಿಪಲ್ ಕೌನ್ಸಿಲ್‌ನವರು ಸಂಘದ [illegible] ಅಡಚಣೆಗೆ ತರಬಹುದು ಅಂದ [illegible] ಕೊಳ್ಳುವುದಕ್ಕಾಗಿ ಸಣ್ಣ ಸಣ್ಣ ಮನೆಗಳು ಬಹಳ [illegible] ಮೆ ದಂಡ ಕಂದಾಯವನ್ನು ಕಟ್ಟುತ್ತಿದ್ದರೂ [illegible] ಇಡಿಸಿಕೊಳ್ಳುವುದಕ್ಕಾಗಿ ಒಂಬತ್ತು ರೂಪಾಯಿನ [illegible] ದಾಯವನ್ನು ಕೊಡಲು ನಿರ್ಬಂಧ ಪಡಿಸಲ್ಪಟ್ಟಿದ್ದವ ಅಂತಹ ಮನೆಗಳ ವಿಷಯದಲ್ಲಿ ತಕ್ಕ ರಿಯಾಯಿತಿಯನ್ನು ತೋರಿಸಬಹುದು ಎಂಬದಾಗಿ ಸಂಘದವರು [illegible] ಹೇಳಿಕೊಟ್ಟಿದ್ದರು.

ಕೌನ್ಸಿಲ್ ತೀರ್ಮಾನ—ಕೌನ್ಸಿಲ್ [illegible] ಕ್ಕೆ ಈ ಏರ್ಪಾಡನ್ನು ಒಪ್ಪುವುದಿಲ್ಲ.

(5) ಮುನಿಸಿಪಾಲಿಟಿಯು [illegible] ಖರ್ಚುಗಳನ್ನು ಕಡಿಮೆ ಮಾಡುವದಕ್ಕೆ [illegible] ತಿಯನ್ನು ಏರ್ಪಡಿಸಬೇಕೆಂದೂ, [illegible] ಸದಸ್ಯರನ್ನು ಅದಕ್ಕೆ ಸಲಹೆ ಕೊಡಲು ನೇಮಿಸಬೇಕೆಂದೂ ಸಂಘದವರು ಕೋರಿದ್ದರು ಅದಕ್ಕೆ [illegible] ಸಿಲ್ಲಿನವರು ಒಪ್ಪುವುದಿಲ್ಲವೆಂಬ ಜವಾಬು ಕೊಟ್ಟರು.

ಸ್ಕೌಟ್ ಸಮಿತಿ.

ಸೈವ ನಾ ಸಮಿತಿಯವರು ರಂಗೂನಿನಿಂದ ಈ ಮಾಹೆ 8 ನೇ ತಾ|| ಮಾಂಡಲೆಗೆ ಹೊರಟರು. ಅಲ್ಲಿ [illegible] [illegible] ರಿತವಾಗಿ ನಡೆಯುತ್ತಲಿವೆ. ಸೈವ ನಾ ಸಮಿತಿಯವರ ಆಗಮನದ ದಿವಸ [illegible] ಯನ್ನು ನಡೆಯಿಸುವ ಏರ್ಪಾಡಾಗಿದೆ. ಸಮಿತಿಯವರು 5 ನೇ ತಾ|| ರಂಗೂನನ್ನು ತಲುಪಿ ಆ ದಿನವೇ ಮಾಂಡಲೆಗೆ ಪ್ರಯಾಣಮಾಡುವರು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಪಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ವಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ಪಾಕೆಟ್ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನ ಪಿಂಟಾಗಿ ವಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ -- ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ವದಲ್ಲಿರುವುದೇನು ?



ರ ಕ್ತವೃದ್ಧಿ ಮಾಡಿ ರತಿರೋಗಗಳನ್ನು ನೀಗಿಸಿ
ತ ನುವಿಗೆ ತಾರುಣ್ಯಾವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನ ರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಮಿ ದುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸ ಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಿ ಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹ ರುಷದಿಂದ ಪುಷ್ಟಿಯನ್ನುಂಟುಮಾಡಿಸಿ ಶರೀರದ
ಲ ಕ್ಷಣವನ್ನೂ ಲಾವಣ್ಯವನ್ನೂ ಅತಿಶಯಗೊಳಿಸಿ
ವ ರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು:— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

" ಭಿಷಗ್ರತ್ನ "

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ಆಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರ ನ ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸರಸ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

[illegible] ಹೆಡ್ ಆಫೀಸು



ಬಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಯಸ್. ನರಸಿಂಹ ಅಯ್ಯರ್ ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ
ಕೆ. ನಾರಾಯಣಪ್ಪ ನಗರ್ತಪೇಟೆ, ಬೆಂಗಳೂರು ಸಿಟಿ.

The Jupiter General Insurance Co.

Applications are invited from respectable and influential gentlemen from every Taluk and District Centres for Life Insurance Business. Liberal terms.

A rare opportunity for spare time earnings.

We undertake also Fire & Motor Cars Etc., Insurance.

Apply for Agency terms
To the Chief Agents for Mysore and Coorg.

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R. Ramaiya.

Regd No. M 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ [illegible]

ಸಂಪುಟ ೧] ಶನಿವಾರ ೧೯ ಫೆಬ್ರವರಿ ೧೯೨೭ [ಸಂಚಿಕೆ [illegible]

TAI NADU
16—2—1929

ಮಹಮದೀಯರ ಮೇಲಿನ ಮೊಖದ್ದಮೆಗಳು.

೧

14 ಮಹಮ್ಮದೀಯ ಅಪರಾಧಿಗಳ ಮೇಲಿದ್ದ ಮುಕದ್ದಮೆಯನ್ನು 14-2-29 ರಲ್ಲಿ ಸರ್ಕಾರದವರು ವಾಪಸು ತೆಗೆದುಕೊಂಡರೆಂದು ಬೆಂಗಳೂರ್ ಟೈಂಸ್ ಪತ್ರಿಕೆಯು ತಿಳಿಸುತ್ತದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಆ ಅಪರಾಧಿಗಳನ್ನು ಅಭಿನಂದಿಸುತ್ತೇವೆ. ಸರಕಾರದವರನ್ನು ಮಾತ್ರ ಅಭಿನಂದಿಸಲಾರೆವು.

ಮಹಮ್ಮದೀಯರ ಮೇಲಿನ ಮುಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಮಹಮ್ಮದೀಯರು ಸರ್ಕಾರವನ್ನು ಪ್ರಾರ್ಥಿಸುತ್ತಿದ್ದ ವಿಷಯವು ನಮಗೆ ಗೊತ್ತು. ಕೆಲವರು ಹಿಂದೂಗಳೂ ಇವರನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದ ವಿಷಯವೂ ನಮಗೆ ಗೊತ್ತು. ಕೆಲವು ಪತ್ರಿಕೆಗಳು ಈ ವಿಷಯದಲ್ಲಿ ಬಹಳ ಚಳವಳಿಯನ್ನು ಕೂಡ ಮಾಡುತ್ತಿದ್ದವು.

ಈಗ ನಾವು ಆಲೋಚಿಸಬೇಕಾದದ್ದು ಅಪರಾಧಿಗಳನ್ನು ಈ ರೀತಿಯಾಗಿ ಬಿಡುಗಡೆ ಮಾಡಿದುದು ಸರಿಯೋ ಎಂಬ ವಿಷಯ. ಅಪರಾಧಿಗಳು ಯಾರೇ ಆಗಲಿ, ಅವರು ಹಿಂದೂಗಳಾಗಲಿ ಮಹಮ್ಮದೀಯರಾಗಲಿ ಒಂದಾವರ್ತಿ ಅವರ ಮೇಲೆ ಮೊಕದ್ದಮೆಯು ಆರಂಭವಾಯಿತೆಂದರೆ ಕಡೆಯವರೆಗೂ ವಿಚಾರಣೆಯು ಪೂರ್ತಿಯಾಗುವವರೆಗೂ ನ್ಯಾಯಾಧಿಪತಿಗಳು ತೀರ್ಪು ಕೊಡುವವರೆಗೂ ನಡೆಯಬೇಕು. ನ್ಯಾಯಾಧಿಪತಿಗಳು ದೋಷಿಯೆಂದು ತೀರ್ಪುಕೊಟ್ಟರೆ ಶಿಕ್ಷೆಯಾಗಬೇಕು. ನಿರ್ದೋಷಿಯೆಂದು ತೀರ್ಪುಕೊಟ್ಟರೆ ಬಿಡುಗಡೆಯಾಗಬೇಕು.

ಹಿಂದೂಗಳ ಮೇಲಿದ್ದ ಮೊಕದ್ದಮೆಯು ವಾಪಸು ತೆಗೆದುಕೊಂಡಾಗಲೂ ಅದು ತಪ್ಪೆಂದು ನಾವು ವಾದಿಸಿದೆವು. ಹಿಂದೂ ಅಪರಾಧಿಗಳು ನಿರ್ದೋಷಿಗಳೆಂದು ನಮಗೆ ಮನವರಿಕೆಯಾಗಿದ್ದರೂ ಕೂಡ ಕೋರ್ಟಿನಲ್ಲಿ ಸಂಪೂರ್ಣ ವಿಚಾರಣೆಯು ನಡೆದು ಅವರು ನಿರ್ದೋಷಿಗಳೆಂದು ತೀರ್ಮಾನವಾಗಿದ್ದರೆ ನಮಗೆ ಬಹಳ ಸಂತೋಷವಾಗುತ್ತಿತ್ತು. ಹಿಂದೂ ಅಪರಾಧಿಗಳು ಕೂಡ ಹಾಗೆಯೇ ಹೇಳಿದರು. ನಮಗೆ ಯಾರ ದಯೆಯೂ ಬೇಡ ಎಂದು ಅವರು ಹೇಳಿದರು.

ಮಹಮ್ಮದೀಯ ಅಪರಾಧಿಗಳ ವಿಷಯದಲ್ಲಿ ಪರಿಸ್ಥಿತಿಯು ಬೇರೆ. ನಿರಾಯುಧರಾದ ಹಿಂದೂಗಳನ್ನು ಹೊಡೆದರೆಂದು ಲೋಕವೆಲ್ಲವೂ ಹೇಳುತ್ತಿದೆ. ವಿಶ್ವೇಶ್ವರಯ್ಯ ಕಮಿಟಿಯವರ ಕೂಡ ಹಾಗೆಯೇ ಅಭಿಪ್ರಾಯಪಟ್ಟಿದ್ದಾರೆ ಎಂದ ಮೇಲೆ ಅವರು ಅಪರಾಧಿಗಳೆಂಬ ಸಂಶಯವು ಉಳಿದೇ ಇದೆ. ಹಿಂದೂ ಅಪರಾಧಿಗಳನ್ನು ಬಿಡುಗಡೆ ಮಾಡಿರಿಯೆಂದು ಯಾರೂ ಕೇಳಲಿಲ್ಲ. ಆದರೆ ಹಿಂದೂಗಳನ್ನು ಬಿಡುಗಡೆಮಾಡಿದ ಮೇಲೆ ಮಹಮ್ಮದೀಯರನ್ನು ಬಿಡುಗಡೆಮಾಡಬೇಕು ಎಂದು ದೊಡ್ಡ ಚಳವಳಿಯು ನಡೆದೇ ನಡೆಯಿತು.

ಈ ಸಂದರ್ಭದಲ್ಲಿ ಮಹಮ್ಮದೀಯ ಅಪರಾಧಿಗಳಿಗೆ ಬಿಡುಗಡೆ ಮಾಡಿದ ವಿಷಯದಲ್ಲಿ ನಮಗೆ ವ್ಯಸನವಿಲ್ಲ.

ವರ್ತಮಾನ ಸಂಗ್ರಹ

ಸರ್. ಎಂ. ವಿಶ್ವೇಶ್ವರಯ್ಯನವರ ಮೇಲೆ ದಾವ

ಮ|| ನೀಲಗಿರಿ ಸಂಜೀವಯ್ಯನವರು ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಮದರಾಸಿನ ಆಂಗ್ಲೇಯ ಲಾಯರೊಬ್ಬರಿಂದ ನೋಟೀಸನ್ನು ಕೊಡಿಸಿದ್ದಾರೆ. ಕಮಿಟಿಯು ಕೆಲಸ ನಡೆಸುತ್ತಿದ್ದಾಗ, ಒಂದು ಸಂದರ್ಭದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಸಂಜೀವಯ್ಯನವರನ್ನು ಸುಳ್ಳುಗಾರರೆಂದು ಹೇಳಿದಹಾಗೆ ತಮಗೆ ತಿಳಿದುಬಂದುದಾಗಿಯೂ ಅದು ನಿಜವಾಗಿದ್ದರೆ ಕ್ಷಮಾಪಣೆಯನ್ನು ಬೇಡಬೇಕೆಂದೂ ಇಲ್ಲವಾದರೆ ಉತ್ತರವನ್ನು ಬರೆಯಬೇಕೆಂದೂ ಇವೆರಡೂ ಇಲ್ಲದೇಹೋದರೆ ತಾವು ಮಾನನಷ್ಟಕ್ಕೆ ದಾವ ಮಾಡತಕ್ಕದಾಗಿಯೂ ಸಂಜೀವಯ್ಯನವರು ತಿಳಿಸಿರುವರು.

ಪ್ರಜಾಮಿತ್ರ

ಪ್ರಜಾಮಿತ್ರ ಪತ್ರಿಕೆಯನ್ನು ಮ|| ಜಿ. ಆರ್. ಎಸ್. ರಾಯರು ಮದರಾಸಿನಿಂದ ಹೊರಡಿಸುತ್ತಿರುವರೆಂದೂ, ಬೆಂಗಳೂರಿನಲ್ಲಿ ಈ ಪತ್ರಿಕೆಯು ಪ್ರಚಾರದಲ್ಲಿರುವುದೆಂದೂ ತಿಳಿದು ಬಂದಿದೆ. ಮದರಾಸ್ ಇಂಡಸ್ಟ್ರೀಸ್ ಇಲಾಖೆಯವರು ಈ ಪತ್ರಿಕೆಯು ಹೊರಡುವದಕ್ಕೆ ಲೋನ್ ಮೊದಲಾದವುಗಳನ್ನು ಕೊಟ್ಟು ಸಹಾಯನೂ ಮಿರುವರೆಂದೂ ಕೇಳುತ್ತೇವೆ. ಈ ಪತ್ರಿಕೆಯು ಮೈಸೂರು ಸಂಸ್ಥಾನದ ಒಳಕ್ಕೆ ಬರದಂತೆ ಕಟ್ಟುಮಾಡಬೇಕೆಂದು ಬೆಂಗಳೂರು ಟೈಮ್ಸ್ ಪತ್ರಿಕೆಯು ಸರಕಾರಕ್ಕೆ ಸೂಚನೆಯನ್ನು ಕೊಟ್ಟಿದೆ.

ಸಂತೋಷವಿರಲಿಲ್ಲ. ಮುಖ್ಯವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿಲ್ಲವಲ್ಲಾ ಎಂಬ ಕೊರತೆಯು ಉಳಿದೇ ಉಳಿಯುವುದು.

ವಿಶ್ವೇಶ್ವರಯ್ಯ ಕಮಿಟಿಯವರು ಪುನಃ ಜುಡಿಷಿಯಲ್ ವಿಚಾರಣೆ ನಡೆನಬೇಕೆಂದು ಸಲಹೆಯನ್ನು ಕೊಟ್ಟರು. ಬೆಂಗಳೂರು ಮೈಸೂರುಗಳಲ್ಲಿ ನಡೆದ ಸಭೆಗಳಲ್ಲಿ ಈ ಸಲಹೆಗೆ ಬೆಂಬಲವು ದೊರೆಯಿತು. ಸರಕಾರದವರು ತಾವು ಕೊಟ್ಟ ಆರ್ಡರಿನಲ್ಲಿ ಈ ಪುನರ್ವಿಚಾರಣೆಯು ಅನಾವಶ್ಯಕವೆಂದು ಹೇಳಿದ್ದಲ್ಲದೆ ಮಹಮ್ಮದೀಯರ ಮೇಲಿನ ಮೊಕದ್ದಮೆಗಳನ್ನು ವಾಪಸು ತೆಗೆದುಕೊಂಡರು. ಸರಕಾರದವರ ನೀತಿಯು ಸ್ವಚ್ಛವಾದುದೂ ಅಲ್ಲ. ನಿರ್ಮಲವಾದುದೂ ಅಲ್ಲ. ಸತ್ಯಕ್ಕೂ ನ್ಯಾಯಕ್ಕೂ ಚ್ಯುತಿ ಬರುವ ನೀತಿಯು ಇದು. ಕೆಲವು ಪತ್ರಿಕೆಗಳೂ ದೊಡ್ಡವರು ಸಹ ಈ ಸರಕಾರದ ನೀತಿಯನ್ನು ಶ್ಲಾಘಿಸಬಹುದು. ಆದರೆ ಸರಳಹೃದಯರಾದ ಪ್ರಜೆಗಳು ಸರಕಾರದ ಈ ರೀತಿನೀತಿಗಳನ್ನು ಒಪ್ಪುವುದಿಲ್ಲ.

ಅಸಮಾಧಾನದ ಉರಿಯು ಒಳಗೆ ದಹಿಸುತ್ತಲಿದೆ. ವಿರೋಧಾಭಿಪ್ರಾಯವನ್ನು ಪ್ರಕಟಿಸುವವರ ಮೇಲೆ ಸರಕಾರದವರು ತಮ್ಮ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಬಹುದು. ಆದರೆ ಈ ರೀತಿಯಾಗಿ ಬಹಳ ದಿವಸ ನಡೆಯುವುದಿಲ್ಲ. ಆಡಳಿತ ದೋಷಗಳು ಇಂದೇ ಕಾಣಿಸಿಕೊಳ್ಳದೇ ಹೋದರೂ ಒಂದಲ್ಲೊಂದು ಸೇರಿ ಯಾರಿಗೂ ತಿಳಿಯದಂತೆ ವ್ಯಾಧಿಯು ಉಲ್ಬಣಿಸುವುದು. ಆಡಳಿತ ಸೂತ್ರವನ್ನು ಹಿಡಿದಿರುವವರು ಬಹಳ ದೂರದರ್ಶಿಗಳಾಗಿರಬೇಕು. ಆ ದೂರದರ್ಶಿತ್ವವು ಈಗಿನ ಆಡಳಿತದಲ್ಲಿ

ಸಂಸ್ಕೃತ ಮಹಾಪಾಠಶಾಲಾ.

ಈ ದಿನ ಸಾಯಂಕಾಲ 6½ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯ ವಾರ್ಷಿಕ ವಿದ್ಯಾರ್ಥಿ ಪಾರಿತೋಷಿಕ ಸಭೆಯು ಮಹಾಪಾಠಶಾಲಾ ಕಟ್ಟಡದಲ್ಲಿ ನಡೆಯುತ್ತದೆ.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ ಸರ್ವತಂತ್ರ ಪರಿವ್ರಾಜಕಾಚಾರ್ಯೇತ್ಯಾದ್ಯನೇಕಬಿರುದಾಂಕಿತರಾದ ಶ್ರೀ ಶ್ರೀಮದಭಿನವ ರಙ್ಗನಾಥ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರು ಸಭೆಯನ್ನಲಂಕರಿಸಿ ಪಾರಿತೋಷಿಕಗಳನ್ನನುಗ್ರಹಿಸುವರು. ಎಕ್ಸೈಜ್ ಕಮಿಷನರಾಗಿದ್ದು ವಿಶ್ರಾಂತಿಸುಖದಲ್ಲಿರುವ ಮ|| ರಾ|| ಬೇಟೆ ರಾಮಸ್ವಾಮಯ್ಯ, ಬಿ. ಎ. ಬಿ. ಎಲ್. ರವರು ಸಮಯದಲ್ಲಿ ಒಂದು ಭಾಷಣವನ್ನು ಮಾಡುವರು.

ಫುಟ್‌ಬಾಲ್ ಟೋರ್ನಮೆಂಟು

ರಾಜಧಾನಿಯ ರೈಸ್ ಮರ್ಚಂಟ್ ಎ.|| ಶೇಕ್ ಖಾನಂದರು ಏರ್ಪಡಿಸಿದ್ದ ಟೋರ್ನಮೆಂಟಿನಲ್ಲಿ ಕಳೆದ ಸೋಮವಾರ ಮೈಸೂರು ಛಾಲೆಂಜ್ ಯೂನಿಯನ್‌ಗೂ ಮತ್ತು ಬೆಂಗಳೂರಿನ ಸುಪ್ರಸಿದ್ಧ ಒಂಭತ್ತು ಜನ ಗಾರಂನ್ನೊಳಗೊಂಡ ಮಸ್ಲೀಂ ಟೀಮಿಗೂ ಭಾರಿ ಪಂದ್ಯವು ನಡೆದು ಛಾಲೆಂಜ್ ಯೂನಿಯನ್ನಿನವರು ಜಯಶೀಲರಾದರು. ಮಿ|| ಪೀರ್ ಖಾನ್‌ರವರು ಈ ಟೋರ್ನಮೆಂಟಿನಲ್ಲಿ ಕಪ್ಪನ್ನಿಟ್ಟಿದ್ದಕ್ಕಾಗಿ ಅಕ್ಕಿ ಮಂಡಿ ಗುಲಾಮ್ಮಪ್ಪನವರು ಅವರಿಗೆ ಚಿನ್ನದ ಸರಪಣಿ ಸಮೇತವಾಗಿ ಮೆಡಲನ್ನು ಕೊಡಿಸಿದರು. 4—5 ಸಾವಿರ ಪ್ರೇಕ್ಷಕರು ನೆರೆದಿದ್ದರು. ಟೋರ್ನಮೆಂಟ್ ಕಮಿಟಿ ಮೆಂಬರುಗಳಿಗೂ ಆಟಗಾರರಿಗೂ ಫಲಾಹಾರಾದಿಗಳೂ ಫೋಟೋ ಸಹ ಏರ್ಪಟ್ಟಿತ್ತು. ಒಟ್ಟಿನಲ್ಲಿ ಇಷ್ಟರವರೆಗೆ ಹೀಗೆ ಯಾವಾಗಲೂ ನಡೆದಿರಲಿಲ್ಲವೆಂದು ಹೇಳಬಹುದು.

ನಿರುದ್ಯೋಗಿಗಳ ಕೂಟ

ಈ ತಿಂಗಳು 24ನೇ ತಾ|| ಲಂಡನ್ನಿನಲ್ಲಿ ಇಂಗ್ಲೆಂಡಿನ ಉತ್ತರಭಾಗದಲ್ಲಿರುವ ನಿರುದ್ಯೋಗಿಗಳೆಲ್ಲರೂ ಸೇರಿ ತಮ್ಮ ಪರಿಸ್ಥಿತಿಯನ್ನು ಪ್ರದರ್ಶಿಸುವರು.

ವಿಲೇಜ್ ಕೋರ್ಟ್.

ಬಾಗೇಪಲ್ಲಿ ತಾ|| ನಲ್ಲಿರುವ (1) ನಲ್ಲಪ್ಪರೆಡ್ಡಿಪಾಳ್ಯ (2)ನುಸಾಪುರ (3)ಪಟೇಪಲ್ಲಿ (4)ಗುಜ್ಜೂರು (5) ಜಾರಲು ಮೊಲಾದ ಗ್ರಾಮಗಳಿಗೆ 1929 ನೇ ಮಾರ್ಚ್ ಒಂದನೇ ತಾ|| ನಿಂದ ನಲ್ಲಪ್ಪರೆಡ್ಡಿಪಾಳ್ಯದಲ್ಲಿ ಒಂದು ವಿಲೇಜ್‌ಕೋರ್ಟು ಸ್ಥಾಪಿಸಲ್ಪಡುವುದು

ಮೆಡಿಕಲ್ ಕಾಲೇಜು

ಬೆಂಗಳೂರಿನಲ್ಲಿರುವ ಮೆಡಿಕಲ್ ಕಾಲೇಜು, ಮುಂದಿನ ಜುಲೈನಿಂದ ಮೈಸೂರಿಗೆ ಬರುವುದೆಂದೂ ಈ ದಿನ ರಾಜ್ಯಸರಕಾರವು ಇಂಗ್ಲೆಂಡಿಗೆ ಹೋಗಿ ಹೊಸ ಪ್ರಿನ್ಸಿಪಾಲರನ್ನು ಸಂಪಾದಿಸಿಕೊಂಡುಬರುವ ದು ಪ್ರಿನ್ಸಿಪಾಲರವರೆಂದೂ, ಅದುವರೆಗೂ, ಮ|| ಬಿ. ಕೆ. ನಾರಾಯಣರಾಯರು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಾಗಿರುವರೆಂದೂ, ತಿಳಿಯಬಂದಿದೆ.

ರಥೋತ್ಸವ

ಅಕ್ಕೀಹೆಬ್ಬಾಳು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ರಥೋತ್ಸವವು ಇದೇ ತಿಂಗಳು 19ನೇ ತಾ|| ನಿಂದ ಆರಂಭವಾಗಿ 28ನೇ ತಾ|| ನವರಿಗೂ ನಡೆಯುತ್ತದೆ. ರಥವು 23-2-29ನೇ ಪೂರ್ಣಿಮಾ ಶನಿವಾರ

ತಾಯಿನಾಡು.
16—2—1929

ವಿವಿಧ ವಿಷಯಗಳು

ಸಿನಿಮಾ ದುಷ್ಪರಿಣಾಮ.

ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿಯು ಆ ಊರಿನಲ್ಲೆಲ್ಲಾ ಅತಿ ಚಾತುರ್ಯದಿಂದ ಕಳ್ಳತನವನ್ನು ಮಾಡುತ್ತಿದ್ದನು. ಕಡೆಗೆ ದಸ್ತಗಿರಿಯಾಗಿ ಕೋರ್ಟಿನಲ್ಲಿ ವಿಚಾರಣೆ ಆದಾಗ ಕಣ್ಣೀರು ಸುರಿಸಿ ನಾನು ಸಿನಿಮಾದಿಂದ ಕೆಟ್ಟೆ. ಅಲ್ಲಿನ ಕಳ್ಳತನಗಳನ್ನು ನೋಡಿ ನನಗೂ ಕಳವು ಮಾಡಬೇಕೆಂದು ಬುದ್ಧಿಯುಂಟಾಯಿತು ಎಂದು ಹೇಳಿದನು.

ಶ್ರೀ ಬಲುಸ ಸಾಂಬ ಮೂರ್ತಿಗಳು

ಆಂಧ್ರದೇಶದ ಪ್ರಸಿದ್ಧ ಮುಖಂಡರಾದ ಶ್ರೀ ಬಲುಸು ಸಾಂಬ ಮೂರ್ತಿಗಳನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಆಂಧ್ರದೇಶದಲ್ಲೆಲ್ಲಾ ಪ್ರಚಂಡ ಸಭೆಗಳು ನಡೆದವು. ಸರ್ಕಾರದ ದಬ್ಬಾಳಿಕೆಯು ಖಂಡಿಸಲ್ಪಡುತ್ತಲಿದೆ.

ಟೊಳ್ಳು ಪ್ರಶಸ್ತಿ.

ಕಲ್ಕತ್ತಾದಲ್ಲಿ ಡುಬಾಸೆ ಎಂಬುವನು ಸುಳ್ಳು ಸುಳ್ಳಾಗಿ ಎಂ. ಡಿ. ಪ್ರಶಸ್ತಿಯನ್ನು ಹೊಂದಿರುವೆನೆಂದು ಹೇಳಿಕೊಂಡು ತಿರುಗಾಡುತ್ತಿದ್ದನು. ಅವನಿಗೆ ಕೋರ್ಟಿನಲ್ಲಿ ವಿಚಾರಣೆ ನಡೆದು ೩೦೦ ರೂ. ಜುಲ್ಮಾನೆ ಆಯಿತು.

ಸೈಮನ್ ಬಹಿಷ್ಕಾರ

ಮಾಂಡಲೇಯಲ್ಲಿ ಸೈಮನ್ ಕಮಿಷನಿಗೆ ಬಹಿಷ್ಕಾರವು ಚೆನ್ನಾಗಿ ಆಯಿತು.

ಪ್ರಿನ್ಸ್ ಆಫ್ ವೇಲ್ಸರವರು.

ಪ್ರಿನ್ಸ್ ಆಫ್ ವೇಲ್ಸರವರು ತಮ್ಮ ಯೌವ್ವನದ ಆಟಪಾಟಗಳನ್ನು ಕಡಿಮೆ ಮಾಡಿ ರಾಜ್ಯಭಾರದ ಕಡೆಗೆ ಮನವನ್ನು ಕೊಡುತ್ತಿರುವರೆಂದು ಪತ್ರಿಕೆಗಳು ತಿಳಿಸುತ್ತವೆ.

ಸ್ಕೂಲ್ ಡೆ

ಹಾಸನದ ಹೈಸ್ಕೂಲಿನ ವಾರ್ಷಿಕೋತ್ಸವವು ಕಳೆದ ವಾರ ಮ|| ಎಂ ಟಿ. ನಾರಾಯಣಯ್ಯಂಗಾರ್ ಎಂ. ಎ. ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಫುಟ್ ಬಾಲ್ ಮ್ಯಾಚ್

ಕಳೆದ ಶನಿವಾರ ಮೈಸೂರು ಛಾಲೆಂಜ್ ಯೂನಿಯನ್ ಮತ್ತು ಮುಸ್ಲಿಂ ಟೀಮುಗಳಿಗೆ ಕಾಲೇಜ್ ಮೈದಾನದಲ್ಲಿ ಮ್ಯಾಚು ಬಹು ಸ್ವಾರಸ್ಯವಾಗಿ ನಡೆದು ಛಾಲೆಂಜ್ ಯೂನಿಯನ್ ನವರು ಜಯಶೀಲರಾದರು. ಸುಮಾರು ಸಾವಿರಕ್ಕೆ ಮೇಲ್ಪಟ್ಟ ಪ್ರೇಕ್ಷಕರು ಸೇರಿದ್ದರು

ಸಿ. ಐ. ಡಿ ಗಳ ಕಾಟ

ಇಂಡಿಯಾ ದೇಶದಲ್ಲಿ ಸಿ. ಐ. ಡಿ. ಗಳ ಕಾಟವು ಬಹಳ ಬಲವೆಂದು ಆಟೋ ರೇವೆಂಡ್ ಎಂಬ ಇಂಗ್ಲೀಷನು ಫಾರ್ವರ್ಡ್ ಪತ್ರಿಕಾ ಪ್ರತಿನಿಧಿಗೆ ಕೊಟ್ಟ ಭೇಟಿಯಲ್ಲಿ ಹೇಳಿದನು.

ಗಾಂಧಿಯವರಿಗೆ ಸನ್ಮಾನ

ಮ|| ಗಾಂಧಿಯವರಿಗೆ ಸಿಂಧು ಪ್ರಾಂತ್ಯದಲ್ಲಿ ಅದ್ಭುತವಾದ ಸತ್ಕಾರವು ನಡೆಯುತ್ತಿರುವುದು. ಲಾಲಾಜಿಯವರ ಸ್ಮಾರಕ ನಿಧಿಗೆ ಹಣವು ಕೂಡಿಸಲ್ಪಡು

ಸಿಡುಬಿನ ರೋಗ.

ಇಂಗ್ಲೆಂಡಿನಲ್ಲಿ ಕಳೆದ ವಾರ ಸಿಡುಬು ರೋಗಿಗಳ ಸಂಖ್ಯೆ 139[illegible].

ಕಬ್ಬಿಣದ ಮೇಲೆ ಸುಂಕ

ಕಬ್ಬಿಣದ ಮೇಲೆ ಹಾಕಿರುವ ಆಮದಿನ ಸುಂಕವನ್ನು ತೆಗೆದು ಹಾಕಬೇಕೆಂದು ವ್ಯಾಪಾರಸ್ಥರು [illegible] ಕೇಳಿಕೊಂಡಿರುವರು.

ಹಾಸನದಲ್ಲಿ ಸ್ತ್ರೀಯರ ಸಭೆ

ಈ ತಿಂಗಳು 6ನೇ ತಾರೀಖಿನಲ್ಲಿ ಹಾಸನದ ವಾಣೀವಿಲಾಸ ಗರ್ಲ್ಸ್ ಸ್ಕೂಲಿನಲ್ಲಿ ಮಿಸೆಸ್ ವಾಜೀದ್ ರವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಸಭೆಯು ನಡೆಯಿತು. ಬೆಂಗಳೂರಿನ ಮೈಸೂರು ಸ್ತ್ರೀಯರ ಸಮ್ಮೇಳನದ ಶಾಖೆಯೊಂದು ಹಾಸನದಲ್ಲಿ ಸ್ಥಾಪನೆಯಾಗಬೇಕೆಂಬುದೇ ಇದರ ಉದ್ದೇಶ.

ರಾಜರುಗಳ ಸಭೆ

ಡೆಲ್ಲಿಯಲ್ಲಿ ಚೇಂಬರ್ ಆಫ್ ಪ್ರಿನ್ಸೆಸ್ ಅಥವಾ ರಾಜರುಗಳ ಸಭೆಯು ನಡೆಯುತ್ತಿರುವುದು. ಮೈಸೂರು ರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಇದುವರಿಗೂ ಈ ಸಭೆಗೆ ಪ್ರೇಕ್ಷಕರಿಗೂ ಪತ್ರಿಕಾಕರ್ತರುಗಳಿಗೂ ಪ್ರವೇಶವಿರಲಿಲ್ಲ. ಇನ್ನುಮೇಲೆ ಅವರಿಗೆ ಪ್ರವೇಶವುಂಟೆಂದು ತೀರ್ಮಾನವಾಯಿತು. ಇದರಿಂದ ರಾಜರುಗಳ ಸಭೆಯ ವಿಷಯವಾಗಿ ಇದ್ದ ಅನುಮಾನವು ಕ್ರಮ ಕ್ರಮವಾಗಿ ಹೋಗುವುದಕ್ಕೆ ಅವಕಾಶವಾಯಿತು. ಬಟ್ಲರ್ ಕಮಿಟಿಯ ವರದಿಯೂ ಈ ಸಭೆಯಲ್ಲಿ ಚರ್ಚೆಯಾಗುವುದು. ಎಂದ ಮೇಲೆ ಬಟ್ಲರ್ ಕಮಿಟಿಯ ವರದಿಯು ಪ್ರಕಟವಾಯಿತು.

ವೈದ್ಯ ಇಲಾಖೆ.

ದರ್ಬಾರ್ ಸರ್ಜನ್ ರವರೂ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರೂ ಆದ ಡಾಕ್ಟರ್ ರಾಜನ್ ರವರಿಗೆ ಈ ತಿಂಗಳು 15 ನೇ ತಾ|| ಯಿಂದ ಅವರು ಉಪಯೋಗಿಸಿಕೊಳ್ಳುವ ತಾ| [illegible] ಆರು ತಿಂಗಳು ರಜಾ ಮಂಜೂರಾಗಿದೆ

ಮೆಡಿಕಲ್ ಸೂಪರಿಂಟೆಂಡೆಂಟರವರಾದ ಮ|| ಎಸ್. ನಾರಾಯಣ ಪ್ರಸಾದರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರ ಕೆಲಸವನ್ನು ನೋಡಿಕೊಳ್ಳುವರು.

ತೀರ್ಥಹಳ್ಳಿ ಲೋಕಲ್ ಫಂಡ್ ಡಿಸ್ಪೆನ್ಸರಿ ಅಸಿಸ್ಟೆಂಟ್ ಸರ್ಜನ್ ರವರಾದ ಮ|| ಬಿ. [illegible] ರವರು ಮೆಡಿಕಲ್ ಸ್ಟೋರ್ಸ್ ಸೂಪರಿಂಟೆಂಡೆಂಟರ ಕೆಲಸಕ್ಕೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಹಂಗಾಮಿಯಾಗಿ ಅಸಿಸ್ಟೆಂಟ್ ಸರ್ಜನರ ಕೆಲಸ ನೋಡುತ್ತಿರುವ ಮ|| ಎಂ. ಎಸ್. ಶ್ರೀನಿವಾಸರಾವ್ ರ. ತೀರ್ಥಹಳ್ಳಿ ಲೋಕಲ್ ಫಂಡ್ ಡಿಸ್ಪೆನ್ಸರಿಗೂ ವರ್ಗಾಯಿಸಲ್ಪಟ್ಟಿರುವರು.

ವಿದ್ಯಾಭ್ಯಾಸಕ್ಕಾಗಿ ಉದಾರವಾದ ದಾನ.

ರಾಜಧಾನಿಯ ಕಾಂಟ್ರಾಕ್ಟರ [illegible] ವಿದ್ಯಾ ವರ್ಧಕ ಫಂಡಿಗೆ ಮೈಸೂರಿನ [illegible] ತಮ್ಮ [illegible] ಸಂಪೂರ್ಣ [illegible] ಹತ್ತು ಸಾವಿರ ರೂ. ಗಳಿಗೆ [illegible]ನ್ನು ದಾನ ಪತ್ರ [illegible] ಕೊಟ್ಟಿರ[illegible] ಬಹಳ ಸಂತೋಷಿಸುತ್ತೇವೆ. ಇದು ಇತರ ಜನಾಂಗದ ಅಭಿವೃದ್ಧಿಗೆ ಮಾದ[illegible]

[illegible]

ಡಾಕ್ಟರ್ ಎಸ್. ಸುಬ್ರಹ್ಮಣ್ಯ[illegible] [illegible] [illegible] ಗಾಡಿ[illegible]

[illegible]

ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಮ|| ಬಿ. [illegible] ಅದೇ ಆಸ್ಪತ್ರೆಯ [illegible] ನೋಡಿಕೊಳ್ಳುವರು

[illegible]

[illegible] ಸಭೆಯು ಸೇರಿ 9 ಸಬ್ ಕಮಿಟಿಗಳನ್ನು [illegible] ಕಾಂಗ್ರೆಸ್ ಸಮಿತಿಗಳ [illegible] ಕಾಂಗ್ರೆಸ್ ಕೆಲಸಗಳನ್ನು ತ್ವರಿತವಾಗಿ ಕೈಕೊಂಡು ಪ್ರತಿ ತಿಂಗಳ [illegible] ಸಿರುತ್ತದೆ.

ಸರ್ಕಾರೀ ಸುದ್ದಿ

[illegible] ಬ್ಬರಾಯರಿಗೆ ಶಿವಮೊಗ್ಗೆಯಿಂದ ಮೈಸೂರು [illegible] ವರ್ಗವಾಗಿದೆ

ವರ್ಗಾವರ್ಗಿ.

ಎಕ್ಸಿಕ್ಯೂಟೀವ್ ಇಂಜನಿಯರ್ ಮಿ|| [illegible] ಡಿದೆ. ಅ| ಇನ್ ಜಿನಿಯರಾದ [illegible] ಗಾರನ್ನು ಎಕ್ಸಿಕ್ಯೂಟೀವ್ [illegible]

[illegible]

[illegible] 11 [illegible]

ನೋಟೀಸ್

[illegible]

Printed and published by P. R. Ramaiya, at Sri Rama Press, D Subbaih Road, Mysore

Regd No. M 2322

|| ವಂದೇಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ

ವಾರ್ಷಿಕ { ಸ್ಥಳಕ್ಕೆ [illegible] / ಪರಸ್ಥಳಕ್ಕೆ [illegible]

ಸಂಪುಟ ೧] ಸೋಮವಾರ ೧೮ ಫೆಬ್ರವರಿ ೧೯೨೮ [ಸಂಚಿಕೆ ೧೧೪

TAI NADU

18—2—1929

ರಾಜರುಗಳ ವಿರೋಧ

ಈ ತಿಂಗಳು 13 ನೇ ತಾರೀಖಿನಲ್ಲಿ ಡೆಲ್ಲಿಯಲ್ಲಿ ರಾಜರುಗಳ ಸಭೆಯು ನಡೆಯಿತು. ವೈಸ್‌ರಾಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪಾಟಿಯಾಲ ಮಹಾರಾಜರವರು ಕಲ್ಕತ್ತಾದಲ್ಲಿ ರಾಷ್ಟ್ರೀಯ ಮಹಾಸಭೆಯವರು ಮಾಡಿದ ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನದ ವಿಷಯವಾಗಿ ಒಂದು ಠರಾವನ್ನು ತಂದರು. ಆ ಠರಾವಿನ ಮುಖ್ಯಾಭಿಪ್ರಾಯವೇನೆಂದರೆ—"ಈ ರಾಜರುಗಳ ಸಭೆಯು ಬ್ರಿಟಿಷ್ ಇಂಡಿಯಾದ ನಡವಳಿಕೆಗಳ ವಿಷಯದಲ್ಲಿ ಕೈಹಾಕುವುದಿಲ್ಲ. ಬ್ರಿಟಿಷ್ ಇಂಡಿಯಾವು ರಾಜಕೀಯ ಅಭಿವೃದ್ಧಿಯನ್ನು ಹೊಂದುವ ವಿಷಯದಲ್ಲಿ ಈ ಸಭೆಗೆ ಸಹಾನುಭೂತಿ ಇದೆ. ಆದರೆ ಬ್ರಿಟಿಷ್ ಇಂಡಿಯಾದ ಕೆಲವು ರಾಜಕೀಯ ಮುಖಂಡರು ಸಂಪೂರ್ಣ ಸ್ವಾತಂತ್ರ್ಯದ ಪ್ರಚಾರವನ್ನು ಮಾಡುತ್ತಿದ್ದಾರೆ. ಈ ಪ್ರಚಾರಕ್ಕೆ ರಾಜರುಗಳು ಬೆಂಬಲವನ್ನು ಕೊಡುವುದಕ್ಕಾಗುವುದಿಲ್ಲ. ರಾಜರುಗಳಿಗೂ ಬ್ರಿಟಿಷ್ ಚಕ್ರವರ್ತಿಗಳಿಗೂ ಅನೇಕ ಕೌಲುಗಳೂ ಒಪ್ಪಂದಗಳೂ ಇರುವುವು. ಈ ಒಪ್ಪಂದಗಳನ್ನು ರಾಜರುಗಳು ಬಿಡುವುದಕ್ಕಾಗುವುದಿಲ್ಲ. ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾಕ್ಕೂ ನಡೆದ ಏರ್ಪಾಡಿನಂತೆ ಮಾದ ರಾಜಕೀಯ ಸಂಬಂಧವು ಸ್ಪಷ್ಟವಾಗಿ ನಿಶ್ಚಯಿಸಲ್ಪಡಬೇಕಾದರೆ ಬ್ರಿಟಿಷ್ ಸಾಮ್ರಾಜ್ಯದ ಅಂತಸ್ತನ್ನು ಬ್ರಿಟಿಷ್ ಇಂಡಿಯಾದ ರಾಜಕೀಯ ಮುಖಂಡರುಗಳು ಒಪ್ಪಬೇಕು. ನಾವು ಬ್ರಿಟಿಷ್ ಸಂಬಂಧವನ್ನೇ ತೊಡೆದುಬಿಡುವೆವೆಂದು ಬ್ರಿಟಿಷ್ ಇಂಡಿಯಾದ ರಾಜಕೀಯ ಮುಖಂಡರುಗಳು ಹೇಳತೊಡಗಿದರೆ ಅವರೊಡನೆ ರಾಜರುಗಳು ಯಾವ ವ್ಯವಹಾರವನ್ನು ನಡೆಸುವುದಕ್ಕೂ ಆಗುವುದಿಲ್ಲ."

ಇದೇ ಪಾಟಿಯಾಲ ಮಹಾರಾಜರು ತಂದ ಠರಾವಿನ ಮೇಲೆ ಆಡಿದ ಸಂದರ್ಭದಲ್ಲಿ ಪಾಟಿಯಾಲ ಮಹಾರಾಜರು ಹೇಳಿದ್ದೇನೆಂದರೆ,-ನಮಗೂ ಬ್ರಿಟಿಷ್ ಇಂಡಿಯಾಕ್ಕೂ ಅನ್ಯೋನ್ಯ ಸಂಬಂಧವಿರುವುದು. ನಮ್ಮ ಅಭಿವೃದ್ಧಿಯೂ ಅವರ ಅಭಿವೃದ್ಧಿಯೂ ಒಂದಕ್ಕೊಂದು ಸೇರಿಕೊಂಡಿರುವುದು. ಆದುದರಿಂದ ನಮಗೂ ಅವರಿಗೂ ಒಟ್ಟಿಗೆ ಕೆಲಸ ಮಾಡುವುದಕ್ಕೆ ತೊಂದರೆಯಿ. ಒಂದರೆ ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕಾಗುವುದು. ನಾವು ಬ್ರಿಟಿಷ್ ಚಕ್ರವರ್ತಿಗಳೊಡನೆ ಮಾಡಿಕೊಂಡಿರುವ ಒಪ್ಪಂದಗಳನುಸಾರವಾಗಿ ನಡೆಯಬೇಕು ಬರ್ಮ ದೇಶವನ್ನು ಬಿಟ್ಟರೆ ಇಂಡಿಯಾ ದೇಶದಲ್ಲಿ ಅರ್ಧ ಭಾಗ ದೇಶೀಯ ಸಂಸ್ಥಾನಗಳದು. ಏಳುಕೋಟಿ ಜನಗಳು ದೇಶೀಯ ಸಂಸ್ಥಾನಗಳಲ್ಲಿದ್ದಾರೆ. ಆದುದರಿಂದ ಇಂಡಿಯಾದ ಭವಿಷ್ಯವನ್ನು ನಿಶ್ಚಯಿಸುವುದರಲ್ಲಿ ದೇಶೀಯ ಸಂಸ್ಥಾನಗಳ ಭಾಗವು ದೊಡ್ಡದಾಗಿರುವುದು. ಬ್ರಿಟಿಷ್ ಸಂಬಂಧವನ್ನಿಟ್ಟುಕೊಳ್ಳುವುದು ಇಂಡಿಯಾ ದೇಶಕ್ಕೆ ಒಳ್ಳೆಯದು. ಬ್ರಿಟಿಷ್ ಸಾಮ್ರಾಜ್ಯದೊಳಗೆ ಇಂಡಿಯಾ ದೇಶವು ಫೆಡರೇಷನ್ ರಾಜ್ಯ ಪದ್ಧತಿಯನ್ನು ಅನುಸರಿಸಿದರೆ ಇಂಡಿಯಾ ದೇಶವು ಹೆಚ್ಚು, ಅಭಿವೃದ್ಧಿಸ್ಥಿತಿಯನ್ನು ಹೊಂದುವುದು. ಸಂಪೂರ್ಣ ಸ್ವಾತಂತ್ರ್ಯದ ಮಾತನ್ನೆತ್ತಿದರೆ ಮುಖಂಡರೊಡನೆ ಸಹಕಾರಮಾಡುವುದು ಕಷ್ಟ. ಆದರೆ ಬ್ರಿಟಿಷ್ ಇಂಡಿಯಾ ಮುಖಂಡರಿಗೂ ನಮಗೂ ಯಾವ ದ್ವೇಷವೂ ಇಲ್ಲ. ಬ್ರಿಟಿಷ್ ಇಂಡಿಯಾಕ್ಕೆ ರಾಜಕೀಯ ಸ್ವಾತಂತ್ರ್ಯವು ಬೇಕೆಂಬುದನ್ನು ನಾವು ಒಪ್ಪುತ್ತೇವೆ. ಬ್ರಿಟಿಷ್ ಇಂಡಿಯಾವು ತಾನೆ ತನಗೆ ಬೇಕಾದ ರೀತಿಯಲ್ಲಿ ಅಭಿವೃದ್ಧಿಯನ್ನು ಹೊಂದಬಹುದು ಆದರೆ ಬ್ರಿಟಿಷ್ ಇಂಡಿಯಾವೂ ದೇಶೀಯ ಸಂಸ್ಥಾನಗಳೂ ಕಲೆತು ಅನೇಕ ಭಾಗಗಳಲ್ಲಿ ಕೆಲಸಮಾಡಬೇಕಾಗುವುದು. ಅಂತಹ ಸಂದರ್ಭಗಳಲ್ಲಿ ಬ್ರಿಟಿಷ್ ಇಂಡಿಯಾದ ಅಭಿಪ್ರಾಯಕ್ಕೆ ಎಷ್ಟು ಮನ್ನಣೆ ಇರಬೇಕೋ ನಮ್ಮ ಅಭಿಪ್ರಾಯಗಳಿಗೂ ಅಷ್ಟೇ ಮನ್ನಣೆಯು ಇರಬೇಕು. ಹೇಗಾದರೂ ಆಗಲಿ ನಾವೆಲ್ಲರೂ ಐಕ್ಯತೆಯಿಂದ ಫೆಡರೇಷನ್ ರಾಜ್ಯ ಪದ್ಧತಿಯನ್ನು ಏರ್ಪಡಿಸಿ ನಮ್ಮ ನಮ್ಮ ಒಳ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕು.

ಕಾಶ್ಮೀರದ ಮಹಾರಾಜರು ಮೇಲಿನ ಠರಾವನ್ನು ಅನುಮೋದಿಸಿ ಹೇಳಿದ್ದೇನೆಂದರೆ—ನಮಗೂ ಬ್ರಿಟಿಷ್ ಚಕ್ರವರ್ತಿಗಳಿಗೂ ಅನ್ಯೋನ್ಯ ಸ್ನೇಹವಿರುವುದು. ಅವರ ಸ್ನೇಹಿತರೇ ನಮ್ಮ ಸ್ನೇಹಿತರು. ಅವರ ವಿರೋಧಿಗಳೇ ನಮ್ಮ ವಿರೋಧಿಗಳು. ಇಂಡಿಯಾದೇಶವು ತನ್ನಷ್ಟಕ್ಕೆ ತಾನೇ ಸ್ವತಂತ್ರವಾಗಿರುವುದಕ್ಕಿಂತ ಫೆಡರೇಷನ್ ರಾಜ್ಯಪದ್ಧತಿಯನ್ನು ಅನುಸರಿಸುವುದು ಉತ್ತಮ ಒಳಸ್ವಾತಂತ್ರ್ಯವನ್ನು ಅನುಭವಿಸುವ ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾದೊಂದಿಗೆ ಕಲೆತು ಕೆಲಸಮಾಡಲು ಅವಕಾಶವಾಗುತ್ತದೆ.

ಬಿಕಾನಿಯರಿನ ಮಹಾರಾಜರವರು ಮೇಲಿನ ಠರಾವನ್ನು ಸ್ಪಷ್ಟೀಕರಿಸಿ ಹೇಳಿದ್ದೇನೆಂದರೆ — ನಾವೂ ಭಾರತೀಯರು ನಮಗೂ ಇಂಡಿಯಾದೇಶವು ಮುಂದಕ್ಕೆ ಬರಬೇಕೆಂಬ ಆಶೆ ಇದೆ. ಬ್ರಿಟಿಷ್ ಇಂಡಿಯಾದೇಶವು ರಾಜಕೀಯಾಭಿವೃದ್ಧಿಯ ಉನ್ನತಶಿಖರವನ್ನು ಹೊಂದಿದರೆ ನಮಗೆ ಸಂತೋಷವಿಲ್ಲವೇ ? ಬ್ರಿಟಿಷ್ ಸಾಮ್ರಾಜ್ಯದ ಒಳಗೆ ಸರ್ವಸ್ವಾತಂತ್ರ್ಯವನ್ನು ಬ್ರಿಟಿಷ್ ಭಾರತೀಯರು ಹೊಂದಲಿ ನಾವು ಅದಕ್ಕೆ ಸಂಪೂರ್ಣ ಸಹಾನುಭೂತಿಯನ್ನು ಕೊಡುತ್ತೇವೆ ಆದರೆ ನಾವಾಗಲೀ ನಮ್ಮ ಸಂಸ್ಥಾನಗಳಾಗಲಿ ಬ್ರಿಟಿಷ್ ಸಾಮ್ರಾಜ್ಯದ ಹೊರಗಿನ ಸಂಪೂರ್ಣ ಸ್ವಾತಂತ್ರ್ಯದ ಚಳವಳಿಗೆ ಬೆಂಬಲವನ್ನು ಕೊಡುವುದಿಲ್ಲ. ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನವು ಎಷ್ಟು ವಿಲಕ್ಷಣವಾದುದೋ ಅಷ್ಟೇ ಅಸಾಧ್ಯವಾದುದು.

ಕಪೂರ್ತಲಾ ಮಹಾರಾಜರವರ ಹೇಳಿದ್ದೇನೆಂದರೆ- ಇಂಗ್ಲೆಂಡನ್ನು ಅಗಲಿ ಇಂಡಿಯಾವು ಇರಬಾರದು. ಇಂಡಿಯಾದೇಶವು ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೂ ಅದನ್ನು ರಕ್ಷಣೆಮಾಡಿಕೊಳ್ಳುವುದಕ್ಕೂ ಬ್ರಿಟಿಷರ ಸಹಾಯವು ಬೇಕು.

ಆಳ್ವಾರ್ ಮಹಾರಾಜರವರು ಹೇಳಿದ್ದೇನೆಂದರೆ:— ನಮ್ಮ ದೇಶೀಯ ಸಂಸ್ಥಾನಗಳಿಗೆ ಎಷ್ಟು ರಾಜಕೀಯ ಸ್ವಾತಂತ್ರ್ಯವಿದೆಯೋ ಅಷ್ಟನ್ನೇ ಬ್ರಿಟಿಷ್ ಇಂಡಿಯಾದವರು ಪಡೆಯಲೆಂದು ನಾನು ಕೋರುತ್ತೇನೆ. ಗ್ರಾಮದಲ್ಲಿರುವ ದೊಡ್ಡದೊಡ್ಡ ಮನುಷ್ಯರೆಲ್ಲಾ ಸಂಪೂರ್ಣ ಸ್ವಾತಂತ್ರ್ಯವನ್ನು ವಿರೋಧಿಸಿದ್ದಾರೆ. ರಾಜ್ಯಗಳೇ ಇರುವ ನಾವುಗಳು ಆ ತೀರ್ಮಾನವನ್ನು ಅನುಮೋದಿಸಬೇಕು.

ಮಂಡಿ ರಾಜರು ಹೇಳಿದ್ದೇನೆಂದರೆ, ಸಂಪೂರ್ಣ ಸ್ವಾತಂತ್ರ್ಯವನ್ನು ಕೋರುವವರೆಲ್ಲಾ ಮನುಷ್ಯಜಾತಿಗೇ ಶತ್ರುಗಳು ಅಂತವರ ಜೊತೆಯನ್ನು ನಾವು ಖಂಡಿತವಾಗಿಯೂ ಸೇರಬಾರದು.

ದೇಶೀಯ ಸಂಸ್ಥಾನದ ಮಹಾರಾಜರು [illegible] ಸಂದರ್ಭ, ಬ್ರಿಟಿಷ್ ಸಾಮ್ರಾಜ್ಯದ [illegible] ಅನೇಕ [illegible] ಸಹವಾಸವೇ ಸಮರ್ಪಕ.

[illegible] ಮಹಾರಾಜರು ಹೇಳಿದ್ದೇನೆಂದರೆ [illegible] ಟಿಷ್ ಸಾಮ್ರಾಜ್ಯವೇ ನಮಗೆ ರಕ್ಷೆ [illegible] ಇಂದು ಜೀವಿಸಿರುವುದು. ಅದನ್ನೇ ನಮಗೆ [illegible] ರಾತ.

ವೈಸ್‌ರಾಯರು ಪಾಟಿಯಾಲಾ ಮಹಾರಾಜರ ಉತ್ತರ ಹೇಳುವಿರಾ ಎಂದು ಕೇಳಿದರು. ಅಕ್ಷೇಪಣೆಯಿಲ್ಲದ ಮೇಲೆ ಉತ್ತರ ಎಲ್ಲಿಂದಬಂತು. ಅದನ್ನೇನೂ ಹೇಳಬೇಕಾದ್ದಿಲ್ಲವೆಂದರು.

ವೈಸ್‌ರಾಯರು ಠರಾವು ಬಹಳ ಮ[illegible] ಈ ಅಭಿಪ್ರಾಯವನ್ನು ನೀವು ಮಾತ್ರವೇ ಅಲ್ಲದೆ ಇಂಡಿಯಾ ದೇಶದ ಎಲ್ಲಾ ರಾಜರುಗಳೂ ಒಪ್ಪುವರೆಂದು ನಾನು ನಂಬಿದ್ದೇನೆ. ಈ ಠರಾವು ಸರ್ವಾನುಮತದಿಂದ ಪಾಸಾಯಿತು.

ಈ ರಾಜರುಗಳ ಸಭೆಯ ಕಾರ್ಯ ಕಲಾಪಗಳ ವಿಷಯವಾಗಿ ನಾವು ಹೇಳಬೇಕಾದ್ದು ಇಷ್ಟೆ ಈ ಸಭೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವು ಬೇಕು ಎಂದು ಹೇಳ[illegible] ರಾಜರಿಗೂ [illegible] ಈ ರಾಜರ ಶಕ್ತಿಯಲ್ಲಿ ಬ್ರಿಟಿಷ ಶಕ್ತಿಯೇ ಹೊರತು ಬೇರೆ ಅಲ್ಲ. ಬ್ರಿಟಿಷ್ ಇಂಡಿಯಾದ ಪ್ರಜೆಗಳ ರಾಜಕೀಯ ಕೋರಿಕೆಗಳಲ್ಲಿ ಇವರಿಗೆ ಸಹಾನುಭೂತಿ. ತಮ್ಮ ಪ್ರಜೆಗಳೇ ರಾಜಕೀಯ ಕೋರಿಕೆಗಳನ್ನು ಪ್ರದರ್ಶಿಸಿದರೆ ಅವರನ್ನು ದಬ್ಬಾಳಿಕೆಯಿಂದ ಅದುಮುತ್ತಾರೆ. ತಮಗೊಂದು ನೀತಿ, ಇತರರಿಗೊಂದು ನೀತಿ ಇದು ರಾಜರುಗಳಿಗೆ ಚನ್ನಾಗಿಲ್ಲ. ಹೇಗಾದರೂ ಆಗಲಿ ನೆಹರೂ ಸಮಿತಿಯವರುಗೆ ಒಂದು ರೀತಿಯಾದ ಬೆಂಬಲವನ್ನು ಕೊಟ್ಟಂತಾಯಿತ, ಸಂಪೂರ್ಣ ಸ್ವಾತಂತ್ರ್ಯದ ವಿಷಯವಾಗಿ ಇವರ ಅಭಿಪ್ರಾಯವು ಅಷ್ಟಾಗಿ ಬೇಕಾಗಿರಲಿಲ್ಲ. ಇದರಿಂದ ಬ್ರಿಟಿಷ್ ಇಂಡಿಯಾಕ್ಕೆ ಬಹಳ ಕುಂದಕ ಬ್ರಿಟಿಷ್ ಇಂಡಿಯಾದಲ್ಲಿ ಪ್ರಬಲಿಸುತ್ತಿರುವ ಸಂಪೂರ್ಣ ಸ್ವಾತಂತ್ರ್ಯದ ಚಳುವಳಿಯನ್ನು ಮುರಿಯಲು ಸರ್ಕಾರದವರು ದಬ್ಬಾಳಿಕೆಯನ್ನು ಆರಂಭಿಸಿರುವರು. ಆ ದೇಶದ ಶ್ರೀ|| ಬಲುಸು ಸಾಂಬು ಮೂರ್ತಿಗಳನ್ನು ದಸ್ತಗಿರಿ ಮಾಡಿದುದೇ ಮೊದಲನೆಯ ಅಧ್ಯಾಯ. ಸಂಪೂರ್ಣ ಸ್ವಾತಂತ್ರ್ಯಕ್ಕೆ ತಾವು ವಿರೋಧಿಗಳೆಂದು ಹೇಳಿ ರಾಜರುಗಳು ತಿಳಿದೋ ತಿಳಿಯದೆಯೋ ಬ್ರಿಟಿಷ್ ಇಂಡಿಯಾದ ದಬ್ಬಾಳಿಕೆಗೆ ಪುಷ್ಟಿಯನ್ನು ಕೊಟ್ಟಂತಾಯಿತು. ಇದು ವಿಷಾದಕರವು.

ಪರ್ವತಾರೋಹಣ.

ಡ್ಯೂಕ್ ಆಫ್ ಸ್ಪೊಲಟೋ ಎಂಬಾತನು ಹಿಮಾಲಯ ಪರ್ವತಾರೋಹಣ ಮಾಡಬೇಕೆಂದು "ರೇಡಿಯಮ್" ಎಂಬ ಧಾತುವನ್ನು ಸ್ವಲ್ಪ ತೆಗೆದುಕೊಂಡು ಇಟಲಿಯ ನೇಪಲ್ಸ್ ನಗರದಿಂದ ಇಂಡಿಯಾಕ್ಕೆ ಹೊರಟಿರುವನು.

ಕಣಿಯ ಪತ್ರಿಕೆ.

ಮಾಮೂಲಿನಂತೆ ಪ್ರತಿ ಮಾಹೆ 20ನೇ ತಾ|| ನದಿ ಸತ್ಯಾಗ್ರಹ ಪ್ರೆಸ್ಸಿನಲ್ಲಿ ಪ್ರಕಟವಾಗುತ್ತಿದ್ದ ಕಣಿಯ ಪತ್ರಿಕೆಯು ಈ ಸಾರಿ ಮುಡುಕುತೊರೆ ಜಾತ್ರೆಯ ಪ್ರಯುಕ್ತ 24ನೇ-ತಾ|| ಭಾನುವಾರ ಹೊರಡುವುದೆಂದು ಶ್ರೀಮಾನ್ ವ|| ಆಗಡೂರು ರಾಮಚಂದ್ರಶಾಸ್ತ್ರಿಯವರು ತಿಳಿಸುತ್ತಾರೆ.

ತಾ ಯಿ ನಾ ಡು.
18—2—1929

ಸರ್ಕಾರಿಹುಕುಂಖಂಡನೆ

(ತಂತೀ ಸಮಾಚಾರ)

ನಮ್ಮ ಸ್ವಂತ ಬಾತ್ಮೀದಾರರಿಂದ

ಕೊಪ್ಪ, ಕಡೂರು—ತಾ|| 16:—ಕಳೆದ ಗುರುವಾರದ ದಿನ ಕೊಪ್ಪದ ತಾಲ್ಲೂಕು ಆಲಂದೂರಿನಲ್ಲಿ ಮೈಸೂರು ಮಲನಾಡು ಜಮೀನುದಾರರ ಸಂಘದ ಒಂದು ಆಪಸಂಡ ಮೀಟಿಂಗು ನಡೆಯಿತು. ಬೆಂಗಳೂರು ಗಲಭೆಗಳ ವಿಷಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಸಮಿತಿಯವರು ಕೊಟ್ಟಿರುವ ವರದಿಯು ಒಪ್ಪಲ್ಪಟ್ಟು ಸರ್ಕಾರದವರು ಅದರ ಮೇಲೆ ಮಾಡಿರುವ ಅಪ್ಪಣೆಯು ಅತೃಪ್ತಿಕರವಾದ್ದೆಂದು ಖಂಡಿಸಲ್ಪಟ್ಟಿತು. ಬೆಂಗಳೂರಿನ ಬಡಜನರ ಮೇಲೆ ಬಾಮಂದ ಮನ ಪೂರ್ಣ ವಿಶ್ವಾಸವಿಟ್ಟು ಗಾಯ ಕೊಂದಿದವರಿಗೆಲ್ಲಾ ಜೀವನಕ್ಕೆ ಏರ್ಪಡಿಸಿ ಕೊಡಬೇಕೆಂದೂ, ಇನ್ನು ಮುಂದೆ ಇಂತಹ ಅನಾಹುತಗಳು ನಡೆಯದಂತೆ ಜವಾಬ್ದಾರಿ ಸರ್ಕಾರಿ ಪದ್ಧತಿಯನ್ನು ಜಾರಿಗೆ ತರ ವಂತೆ ಮಾಡಬೇಕೆಂದೂ ಪ್ರಾರ್ಥಿಸಲ್ಪಟ್ಟಿತು. ಮತ್ತು ಈ ಗಲಭೆಗಳಲ್ಲಿ ಮುಖ್ಯ ಸೂತ್ರಧಾರರಾದವರೆಲ್ಲರನ್ನೂ ನ್ಯಾಯದ ಪ್ರಕಾರ ಸರಿಯಾಗಿ ಶಿಕ್ಷಿಸಬೇಕೆಂದೂ ಠರಾವಾಯಿತು. ಅಧ್ಯಕ್ಷರಾಗಿದ್ದ ಶ್ರೀ|| ಹೊಸಕೊಪ್ಪ ಕೃಷ್ಣರಾಯರವರು, ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಲು ಪ್ರಜಾಪ್ರತಿನಿಧಿ ಸಭೆಯ ಒಂದು ವಿಶೇಷ ಅಧಿವೇಶನವನ್ನು ಕೂಡಿಸಬೇಕೆಂದು ಸೂಚಿಸಿದರು.

ಸರಕಾರಕ್ಕೆ ಅವಮಾನ.

ಡಿ. ಶಾಮರಾವ್—ಅಬ್ಬಾಸ್‌ಖಾನ್ ಮೊಕದ್ದಮೆಯಲ್ಲಿ ಮು|| ಸಿ. ಸೊರೋಹ್ನಾ ರವರನ್ನು ಫಿರ್ಯಾದಿಯ ಕಡೆಯ ಲಾಯರ ದ ಮ|| ಸಿ. ಶೇಷಾಚಾರ್ಯರವರು ಪರೀಕ್ಷೆ ಮಾಡುತ್ತಿದ್ದಾಗ್ಯೆ ಕಮಿಟಿಯಲ್ಲಿ ಇನ್ ಕ್ಯಾಮರಾದಲ್ಲಿ ನಡೆದ ಸಾಕ್ಷ್ಯವನ್ನು ಬಹಿರಂಗವಾಗದಂತೆ ಸರಕಾರದವರ. ಮಾಡಿದ ಆರ್ಡರು ಅಪರಾಧಿಯನ್ನು ಉಳಿಸುವುದಕ್ಕಾಗಿಯೇ ಎಂದು ಹೇಳಿದರು.

ಪ್ರತಿಪಕ್ಷದ ಲಾಯರಾದ ಮು|| ಖಲೀಲ್‌ರವರ. ಹೀಗೆ ಅನ್ನುವುದು ಸರ್ಕಾರಕ್ಕೆ ಬಹಳ ಅವಮಾನವೆಂದರು.

ಮ|| ಶೇಷಾಚಾರ್ಯರು:—ಫಿರ್ಯಾದಿಯ ಕಡೆಯ ಲಾಯರಾದ ನನಗೆ ರುಜುವಾತಿನ ಮೇಲೆ ಟೀಕೆಯನ್ನು ಮಾಡುವದಕ್ಕೆ ಅಧಿಕಾರವಿರುವುದು. ಸರಕಾರದವರು ಬೇಕಾದರೆ ನನ್ನನ್ನು ಪ್ರಾಸಿಕ್ಯೂಟ್ ಮಾಡಲಿ ಎಂದರು.

ನ್ಯಾಯ ವಿಧಾಯಕ ಸಭೆ.

ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರತನಕ್ಕೆ ರಾಜೀನಾಮೆಯನ್ನು ಕೊಟ್ಟಿರುವ ಮ|| ರಾ|| ಗಳಾದ ಬಿ. ನಾಗಪ್ಪನವರ ಮತ್ತು ಕೆ. ಶಂಕರನಾರಾಯಣರಾಯರವರ ಸ್ಥಾನಗಳಲ್ಲಿ ಸರ್ಕಾರದ ಲಾ ಸೆಕ್ರೆಟರಿಗಳಾದ ಮು|| ಪಿ. ಮಹದೇವಯ್ಯನವರನ್ನೂ ಮತ್ತು ಗೌ|| ಅಡ್ವೋಕೇಟ್‌ರಾದ ಮ ಎ. ಆರ್. ನಾಗೇಶ್ವರಯ್ಯರವರನ್ನೂ ಮೆಂಬರುಗಳಾಗಿ ನಾಮಿನೇಟ್ ಮಾಡಿರುತ್ತಾರೆ.

ವರ್ತಮಾನ ಸಂಗ್ರಹ

ಸೈಮನ್ ಬಹಿಷ್ಕಾರ

ಮದರಾಸಿಗೆ ಸೈಮನ್ ಕಮಿಷನ್‌ರವರು ಈ ತಿಂಗಳ 18ನೇ ತಾರೀಖಿಗೆ ಬರುತ್ತಾರೆ ಉಗ್ರವಾದ ಬಹಿಷ್ಕಾರವಾಗಬೇಕೆಂದು ಮುಖಂಡರು ಹಸ್ತ ಪತ್ರಿಕೆಗಳನ್ನು ಹೊರಡಿಸಿರುತ್ತಾರೆ.

ಯೂನಿವರ್ಸಿಟಿ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರದ ಪ್ರೊಫೆಸರಾದ ಮ|| ಕೆ. ಎಸ್. ಕೆ. ಅಯ್ಯಂಗಾರರು ಮತ್ತು ಮಹಾರಾಜಾಕಾಲೇಜಿನ ಅರ್ಥಶಾಸ್ತ್ರದ ಪ್ರೊಫೆಸರಾದ ಮು|| ಕೆ. ಬಿ. ಮಾಧವನ್‌ರವರೂ ಯೂನಿವರ್ಸಿಟಿಗೆ ಪುನಃ ಫೆಲೋಗಳಾಗಿ ನಿಯಮಿಸಲ್ಪಟ್ಟಿರುರು.

ಅಮಲ್ದಾರ್ರುಗಳ ವರ್ಗಾವರ್ಗಿ

ಮ|| ಪಿ. ಕೃಷ್ಣರಾಯರು ಚಾಮರಾಜನಗರಕ್ಕೆ, ಮು|| ಬಿ. ಸುಬ್ಬರಾಯರು ಚಾಮರಾಜನಗರದಿಂದ ಹೊಳೆನರಸೀಪುರಕ್ಕೂ ಮಿ|| ಸೈಯದ್ ಅಬ್ದುಲ್ ಅಲೀರವರು ಹೊಳೆನರಸೀಪುರದಿಂದ ಮಂಜರಾಬಾದಿಗೂ ವರ್ಗಾಯಿಸಲ್ಪಟ್ಟಿರುವರು.

ಸರ್ಕಾರೀ ವೇತನ.

ಪೂನಾ ಪಟ್ಟಣದಲ್ಲಿನ ತೆಲೆಗಾಂವ್ ದಬಡೆ "ಪೈಸಾ ಫಂಡ್" ಗಾಜಿನ ಕಾರ್ಖಾನೆಯಲ್ಲಿ ಗಾಜು ತಯಾರಾಗುವುದನ್ನು ಕಲಿತು ಬರಲು ಅಪೇಕ್ಷಿಸುವ ಮೈಸೂರು ಗ್ರಾಜುಯೇಟುಗಳಿಗೆ ಮಾಹೆಯಾನ 25 ರೂ ಸರ್ಕಾರಿ ವೇತನವು ಮೂರು ವರ್ಷಗಳ ಕಾಲ ಕೊಡಲ್ಪಡುತ್ತದೆ. ಇಷ್ಟವಿರುವವರು ಕೈಗಾರಿಕೆ ಇಲಾಖೆಯ ಡೈರೆಕ್ಟರವರಿಗೆ ಅರ್ಜಿ ಹಾಕಿಕೊಳ್ಳಬೇಕು.

ಪಾರ್ಲಿಮೆಂಟಿನಲ್ಲಿ ಚರ್ಚೆ.

ಬೊಂಬಾಯಿಗಲಭೆಗಳ ವಿಷಯವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಯಾಯಿತು. ಅರ್ಲ್ ವಿಂಟರ್‌ಟನ್‌ರವರು ಸಮಾಧಾನವನ್ನು ಹೇಳಿದರು. ಅವರು ಹೇಳಿದ್ದರಲ್ಲಿ ಬೊಂಬಾಯಿ ಗಲಭೆಗಳಿಗೆ ಎರಡು ಕಾರಣಗಳನ್ನು ಹೇಳಿದರು. ಡಿಸೆಂಬರ್ 7ರಲ್ಲಿ ಬೊಂಬಾಯಿನ ಕೆಲವು ಎಣ್ಣೆ ಕಂಪನಿಗಳಲ್ಲಿ ಕೆಲಸಮಾಡುತ್ತಿದ್ದ ಕೆಲವು ಹಿಂದೂ ಕೂಲಿಕಾರರು ಮುಷ್ಕರ ಹಿಡಿದರೆಂದೂ ಅವರ ಜಾಗದಲ್ಲಿ ಕಂಪನಿಯವರು ಪಠಾಣರನ್ನು ನೇಮಿಸಿದರೆಂದೂ ಇದರಿಂದ ಹಿಂದೂ ಕೂಲಿಕಾರರಿಗೂ ಪಠಾಣರಿಗೂ ವೈಮನಸ್ಯವುಂಟಾಗಿ ಕೊಲೆಗಳು ನಡೆದುವೆಂದೂ ಹೇಳಿದರು. ಎರಡನೆಯದಾಗಿ ಫೆಬ್ರವರಿ 2ನೇ ತಾರೀಖಿನಲ್ಲಿ ಪಠಾಣರು ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಾರೆಂಬ ಸುಳ್ಳು ಸುದ್ದಿಯು ಹರಡಿ ಹಿಂದುಗಳಿಗೂ ಪಠಾಣರಿಗೂ ಜಗಳಕ್ಕೆ ಆರಂಭವಾಯಿತೆಂದ ತಿಳಿಸಿದರು.

ಜಸ್ಟಿಸ್ ಪತ್ರಿಕೆಯ ಸಾಹಸ

ಮದರಾಸಿನ ಜಸ್ಟಿಸ್ ಪತ್ರಿಕೆಯು ಮೈಸೂರಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಭೇದವನ್ನು ಹುಟ್ಟಿಸುವ ಪ್ರಯತ್ನವನ್ನು ಮಾಡುತ್ತಿದೆ. ಸರ್ ಎಂ. ವಿಶ್ವೇಶ್ವರಯ್ಯನವರನ್ನು ದೊಡ್ಡ ಪಿತೂರಿಕೋರರೆಂಬುದಾಗಿ ಕರೆಯುತ್ತಿದೆ. ಅವರು ಮಾಡಿರುವ [illegible] ಬಯಲಿಗೆ ತರ [illegible]

[illegible]

[illegible] ಒರೆದಿರುತ್ತಾರೆ.

ವಿದ್ಯಾರ್ಥಿಗಳ ಸಹಾನುಭೂತಿ

[illegible] ವಿದ್ಯಾರ್ಥಿಗಳು [illegible] ಶಾಲೆಗಳನ್ನು ಬಿಟ್ಟು ಹೊರಗೆ ಬಂದರು. ಅವರು ಕೋರ್ಟಿಗೆ ಸೇರಿಸಲಿಲ್ಲ. ಊರಲ್ಲೆಲ್ಲಾ [illegible]

ಬೊಂಬಾಯಿಯ [illegible]

ಬೊಂಬಾಯಿ [illegible] ಫೆಬ್ರವರಿ 13ನೇ ತಾರೀಖಿನ [illegible] ಬಾಯಿ [illegible] ಗಲಾಟೆ [illegible] ಬಂದರು.

ನೋಟೀಸ್

[illegible]

(Sd) [illegible]

Printed and published by P. R. Ramaiya, at Sri Rama Press, D Subbaih Road, Mysore.

Regd No. M 2322 ‖ ವಂದೇ ಮಾತರಂ ‖

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಮಂಗಳವಾರ ೧೯ ಫೆಬ್ರವರಿ ೧೯೨೯ [ಸಂಚಿಕ ೧೫೩

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು:

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುವು

ತಲೆನೋವು — ಕೆಮ್ಮು
ವಾತಶೂಲೆ — ನೆಗಡಿ
ಬೆನ್ನು ನೋವು — ಸುಟ್ಟ ಘಾಯ
ಕಟಿಶೂಲೆ — ಹುಣ್ಣುಗಳು
ಪಾರ್ಶ್ವವಾಯು — ಉಳುಕಿದ ನೋವು



ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸಮೀಪದಲ್ಲಿರಿಸಿಕೊಂಡಿರಿ.
ಸಿದ್ಧ ವೈದ್ಯನೋಕಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ: —ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ ಅಜೀರ್ಣವಾಯುಗಳನ್ನೂ ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿ ಮಾತ್ರೆ: ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ಋತುಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ಶೀತವಾಯು, ಪ್ಲೇಗು, ಇನ್‌ಫ್ಲುಯನ್ಜ, ಕಾಲರಾ ಮುಂತಾದ್ದನ್ನು ಖಾತರಿ ಗುಣಪಡಿಸುತ್ತದೆ. ಪ್ರತಿಮನೆಗಳಲ್ಲಿ ಇರಬೇಕಾದದ್ದು ಅತ್ಯವಶ್ಯಕ ಬೆಲೆ ಸೀಸೆ 1 ಕ್ಕೆ 4 ಆಣೆ

ಸಕಲ ರೋಗಗಳಿಗೆ ಅನುಕೂಲವಾದ ತೈಲ ಷರಬತ್ತು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾನ್ ಭಿಷಗ್ರತ್ನ ಬಿ. ವಿ. ಪಂಡಿತರು,
ಸದ್ವೈದ್ಯಶಾಲಾ ನಂಜನಗೂಡು

All-India Ayurvedic Pharmacy, Madras.

ಸಿದ್ಧಕಲ್ಪಚಂದ್ರೋದಯ —(ರಿಜಿಸ್ಟರ್ಡ್) (The Best Nervine Tonic & Blood Purifier & Increaser) ಉತ್ತಮವಾದ ರಕ್ತಶೋಧಕ, ರಕ್ತವರ್ಧಕ, ನರಗಳಿಗೆ ಬಲವನ್ನುಂಟುಮಾಡುವ ಸಿದ್ಧೌಷಧಿ. ದೇಹಕ್ಕೆ ಸಹಜವಾದ ಶಕ್ತಿಯನ್ನೂ ಉತ್ಸಾಹವನ್ನೂ ಉಂಟುಮಾಡಿ ರಕ್ತವನ್ನು ಶುದ್ಧಿಮಾಡಿ ಕ್ಷಿಪ್ರದಲ್ಲಿಯೇ ವೀರ್ಯವೃದ್ಧಿಯನ್ನುಂಟುಮಾಡತಕ್ಕ ಅದ್ಭುತಸಾಮರ್ಥ್ಯದ ಶಾಸ್ತ್ರೀಯವಾದ ಮಹೌಷಧ ಸಿದ್ಧೌಷಧವನ್ನು ಸೇವಿಸಿದರೆ, ಆಶ್ಚರ್ಯವಾಗುವಂತೆ ರಕ್ತಶುದ್ಧಿ ವೀರ್ಯವೃದ್ಧಿ ಉಂಟಾಗುತ್ತದೆ.

ಈ ಔಷಧಸೇವನೆಯಿಂದ ಬಹಳಕಾಲದಿಂದ ಅನುಸರಿಸಿರುವ ಸಣ್ಣಜ್ವರ, ಮಲೇರಿಯಾಜ್ವರ. ಕ್ಷಯಸಂಬಂಧವಾದ ಜ್ವರ, ಅಜೀರ್ಣರೋಗಗಳು, ಸಣ್ಣ ಬೆನ್ನು ಮುಂತಾದುವುಗಳಲ್ಲಿ ಉಂಟಾಗುವ ಥಳುಕು ನೋವು. ಇತ್ಯಾದಿಗಳು ವಿಧವಿಧವಾದ ಮೂರ್ಛೆರೋಗ, ಪಾಂಡು, ಕಾಮಾಲೆ, ಅತಿಸಾರ ಮೇಹರೋಗ ಇವೇ ಮುಂತಾದ ದೀರ್ಘಕಾಲದ ರೋಗಗಳು ಸಂಪೂರ್ಣವಾಗಿ ಗುಣವಾಗುತ್ತವೆ. ಈ ಔಷಧವು ಹೆಚ್ಚು ಬೆಲೆಬಾಳುವ ಚಿನ್ನ ಬೆಳ್ಳಿ, ಲೋಹ ಮತ್ತು ಹವಳ ಇವೇ ಮುಂತಾದವುಗಳಿಂದ ತಯಾರಿಸಿರುತ್ತದೆ.

ಬೆಲೆ:—೮೦ ಮಾತ್ರೆ ಡಬ್ಬಿ ೧ಕ್ಕೆ ೧೦ ರೂ. ೪೦ ಮಾತ್ರೆ ಡಬ್ಬಿ ೧ಕ್ಕೆ ೫ ರೂ. ೨೦ ಮಾತ್ರೆ ಡಬ್ಬಿ ೧ಕ್ಕೆ ೨-೮-೦

ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು — ಚಿಕ್ಕಪೇಟೆ ಬೆಂಗಳೂರು ಸಿಟಿ

ಪರೀಕ್ಷಿಸಿ ನೋಡಿರಿ!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನ ಲೇಹ.

ಇದರ ಸೇವನೆಯಿಂದ ಧಾತುಸ್ರಾವ ಅಜೀರ್ಣ, ಪಿತ್ತ ... ವಾತ, ಮೇಹವಾಯು, ಗರ್ಭವಾತ, ಸಿದ್ಧ ... ನರಗಳ ದೌರ್ಬಲ್ಯ, ... ಬಸಿ ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳು ... ದುದು. ಎಂತಹ ಅಲ್ಪವೀರ್ಯರಿಗೂ ಧಾತುವೃದ್ಧಿ ... ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು ... ವೈದ್ಯಸ್ವಭಾವದ ... ವು ಕಾಲ ಉಪಯೋಗಿಸಿ ನೋಡಿದರೆ ನೀವೇ ಹೇಳುವಿರಿ.

"ರತ್ನ ಕುಂಜರ ..."

ಕ್ರಯ 12 ತೊಲ ಡಬ್ಬಿ 1 ಕ್ಕೆ ರೂ. 2—0—
(ಭಸ್ಮ ಸಿಂಧೂರಗಳು ಸೇರಿರುವದು) 4—0—

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ ಸನ್ನಿಪಾತಜ್ವರ ಇನ್‌ಫ್ಲುಯೆಂಜಾ ನ್ಯುಮೋನಿಯಾ ವಿಷಮಜ್ವರ ಪ್ಲೇಗು ಮೂರರ ಜ್ವರ ಛಳಿಜ್ವರ ಮಕ್ಕಳ ... ಅಜೀರ್ಣ ಮುಂತಾದವುಗಳನ್ನು ... ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1 ಕ್ಕೆ 0—8—
" 40 " " 0—4—

... ವೈದ್ಯರಿಗೆ ... ವಿಧ ತೈಲ ಲೇಹ್ಯ ಮಾತ್ರೆ ಚೂರ್ಣ ಭಸ್ಮ ಆಸವಗಳೂ ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—
ಪಂಡಿತರು ಮುದ್ಗಲ್ ರಾಮಚಂದ್ರಾಚಾರ್ಯರು,
...
ಹಳೇ ಅಗ್ರಹಾರ ಮೈಸೂರು.

ಜಮನಲಾಲ ಬಜಾಜರೂ ರಾಜಗೋಪಾಲಾಚಾರ್ಯರೂ ನಾಳೆ ರಾಜಧಾನಿಗೆ ಬರುತ್ತಾರೆ. ಸಾಯಂಕಾಲ ಟೌನ್‌ಹಾಲಿನಲ್ಲಿ ಸಭೆ ನಡೆಯುತ್ತದೆ

TAI NADU

19—2—1929

ಸೇಟ್ ಜಮುನಾಲಾಲ್ ಬಜಾಜ್‌ರವರು.

ಸೇಟ್ ಜಮುನಾಲಾಲ್ ಬಜಾಜ್‌ರವರೂ ಶ್ರೀಯುತ ಸಿ. ರಾಜಗೋಪಾಲಾಚಾರ್ಯರವರೂ ಈ ತಿಂಗಳು 20 ನೇ ತಾ|| ನ ದಿವಸ ರಾಷ್ಟ್ರೀಯ ಮಹಾ ಸಭೆಯ ಸಂದೇಶವನ್ನು ಬೀರುವುದಕ್ಕೆ ರಾಜಧಾನಿಗೆ ದಯಮಾಡಿಸುವರು. ಶ್ರೀಯುತ ಆಚಾರ್ಯರವರು ನಮಗೆಲ್ಲರಿಗೂ ಚಿರಪರಿಚಿತರು. ಶ್ರೀಯುತ ಬಜಾಜ್‌ರವರು ಪತ್ರಿಕೆಗಳು ಓದುವವರಿಗೆಲ್ಲಾ ಪರಿಚಿತರಾಗಿದ್ದರೂ ಮೈಸೂರಿನ ಸಾಮಾನ್ಯ ಜನರಿಗೆ ಅವರ ಹೆಸರು ಅಷ್ಟು ಚೆನ್ನಾಗಿ ಗೊತ್ತಾಗಿಲ್ಲ. ಮಹಾತ್ಮಾ ಗಾಂಧಿಯವರ ಶಿಷ್ಯಕೋಟಿಯಲ್ಲಿ ಬಜಾಜರು ಒಬ್ಬ ಅಗ್ರಗಣ್ಯರು. ಇವರು ಅಗರ್ಭ ಶ್ರೀಮಂತರು. ಇಂದೂ ಇವರಿಗೆ ಇಪ್ಪತ್ತು ಲಕ್ಷ ರೂ. ಗಳಿಗೆ ಹೆಚ್ಚಿನ ಆಸ್ತಿ ಇರುವುದು. ಇವರ ಧಾರಾಳತೆಯೂ ದೇಶಾಭಿಮಾನವೂ ಸ್ವಾರ್ಥತ್ಯಾಗವೂ ಅನುಕರಣೀಯವಾದವುಗಳು. ಮಹಾತ್ಮಾ ಗಾಂಧಿಯವರು 1920 ರಲ್ಲಿ ಅಸಹಕಾರ ಸಂಗ್ರಾಮವನ್ನು ಪ್ರಾರಂಭಿಸಿದಂದಿನಿಂದಲೂ ಇವರು ಎಡೆಬಿಡದೆ ರಾಜಕೀಯ ರಣಾಂಗಣದಲ್ಲಿ ದೇಶಸೇವೆಯನ್ನು ಮಾಡುತ್ತಿರುವರು. 1923 ರಲ್ಲಿ ನಾಗಪುರದಲ್ಲಿ ನಡೆದ ರಾಷ್ಟ್ರೀಯ ಧ್ವಜದ ಸತ್ಯಾಗ್ರಹಕ್ಕೆ ಇವರೇ ಆಧಾರ ಪ್ರಾಯರಾಗಿದ್ದರು. ರಾಷ್ಟ್ರೀಯ ಧ್ವಜದ ಸತ್ಯಾಗ್ರಹವು ವಿಜಯವನ್ನು ಹೊಂದುವದಕ್ಕೆ ಇವರ ಬೆಂಬಲವೇ ಕಾರಣ. [illegible] ಸ್ವರಾಜ್ಯಕ್ಕಾಗಿ [illegible] ಒಂದು ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ಅದರ ಮುಖಾಂತರ [illegible] ಮಹಾತ್ಮಾ ಗಾಂಧಿಯವರ [illegible] ಇವರ ಬತ್ತಳಿಕೆಯು ದೊಡ್ಡದಾಗಿರುವುದು, ಈಗ ಇವರು ರಾಜಧಾನಿಗೆ ಬರುವುದು ಖಾದಿ ಮತ್ತು ಹಿಂದೀ ಪ್ರಚಾರಕ್ಕೆ. ಸ್ವರಾಜ್ಯ ಸಾಧನೆಗೆ, ಇವೆರಡೂ ಎಷ್ಟು ಅವಶ್ಯಕವೆಂಬುದನ್ನು ನಾವು ಈಗ ಹೊಸದಾಗಿ ಹೇಳಬೇಕಾಗಿಲ್ಲ. ಮೇಲೆ ಹೇಳಿದ ಮಹನೀಯರಿಬ್ಬರಿಗೆ ರಾಜಧಾನಿಯಲ್ಲಿ ಉತ್ಸಾಹಪೂರ್ಣ ಸ್ವಾಗತ [illegible].

ಇವರಿಬ್ಬರಿಗೆ ರಾಜಧಾನಿಯ ಪುರವಾಸಿಗಳ ಪರವಾಗಿ ಹೃದಯ ಪೂರ್ವಕವಾದ ಸ್ವಾಗತವನ್ನು ಬಯಸುವೆವು.

ಮೈಸೂರು ಸಂಸ್ಥಾನದ ಕಾಂಗ್ರೆಸ್.

ಈ ತಿಂಗಳು 10 ನೇ ತಾರೀಖಿನಲ್ಲಿ ಗದಗಿನಲ್ಲಿ ನಡೆದ ಕರ್ನಾಟಕ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ವಿಶ್ವೇಶ್ವರಯ್ಯ ಕಮಿಟಿಯ ಮುಖ್ಯ ಶಿಫಾರಸುಗಳನ್ನು ಪೋಷಿಸಿಯೂ, ಅದರ ಮೇಲಿನ ಸರಕಾರೀ ಆರ್ಡರನ್ನು ಖಂಡಿಸಿಯೂ ಮ|| ಎಂ. ವೆಂಕಟಕೃಷ್ಣಯ್ಯನವರು ಪತ್ರಿಕೆಗಳನ್ನು ನಿಲ್ಲಿಸಿದ ವಿಷಯವಾಗಿ ಅಸಮಾಧಾನವನ್ನು ಸೂಚಿಸಿಯೂ ಠರಾವುಗಳು ಪಾಸಾದವು.

ರಾಜಧಾನಿಯ ಸಂಸ್ಕೃತ ಕಾಲೇಜು ಪಾರಿತೋಷಕ ಸಭೆ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಈ ತಿಂಗಳು 16 ನೇ ತಾ|| ಶನಿವಾರ ಸಾಯಂಕಾಲ ಶ್ರೀಮನ್ ಮಹಾರಾಜರವರ ಸಂಸ್ಕೃತ ಕಾಲೇಜಿನ (ವಾರ್ಷಿಕ) ಪಾರಿತೋಷಕ ಸಭೆಯು, ಶ್ರೀ ಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ ಶ್ರೀ ಶ್ರೀ ಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಸಭಾ ಮಂದಿರವು ಮನೋಹರವಾಗಿ ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು.

ಈ ಸಭೆಗೆ ಅನೇಕ ಲೌಕಿಕ ದೊಡ್ಡ ಮನುಷ್ಯರುಗಳೂ, ಕಾಲೇಜಿನ ವಿದ್ವನ್ಮಂಡಲಿಯ ವೈದಿಕ ದೊಡ್ಡ ಮನುಷ್ಯರುಗಳೂ, ವಿದ್ಯಾರ್ಥಿಗಳೂ ಸಹ ಅಸಂಖ್ಯಾತವಾಗಿ ದಯಮಾಡಿಸಿದ್ದರು.

ಮೊದಲು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಸ್ವಾಗತ ಪದ್ಯಗಳಾದನಂತರ ಕಾಲೇಜಿನ ಅಧ್ಯಕ್ಷರವರು 1927-28 ನೇ ಸಾಲಿನ ಕಾರ್ಯಕಲಾಪಗಳ ವರದಿಯನ್ನು ಓದಿದರು.

ಈ ಹಿಂದಿನ ಸಂವತ್ಸರದ ವಾರ್ಷಿಕ ಪರೀಕ್ಷೆಯಲ್ಲಿ ಪರೀಕ್ಷಿತರಾದ ವಿದ್ಯಾರ್ಥಿಗಳಲ್ಲಿ 122 ಮಂದಿ ಉತ್ತೀರ್ಣರಾದರು. ಅವರಲ್ಲಿ 71 ಮಂದಿ ವಿದ್ಯಾರ್ಥಿಗಳಿಗೆ ಶ್ರೀ ಶ್ರೀಗಳವರು ಪಾರಿತೋಷಕಗಳನ್ನು ಅನುಗ್ರಹಿಸಿದರು.

ಇದಾದ ನಂತರ ಮ|| ಬೆಳವಾಡಿ ರಾಮಸ್ವಾಮಯ್ಯನವರು ಸಂಸ್ಕೃತ ಭಾಷೆಯ ಪ್ರಾಚೀನ ಮತ್ತು ಪ್ರಸಕ್ತ ಪರಿಸ್ಥಿತಿಯನ್ನು ಕುರಿತು ಮಹಾಪಾಠಶಾಲೆಯ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಇರಬೇಕಾದ ಭಾವನೆ ಮೊದಲಾದ ಹಲವು ಉಪಯುಕ್ತ ವಿಷಯಗಳಿಂದ ಕೂಡಿದ ಯುಕ್ತಿಯುಕ್ತವಾದ ಭಾಷಣವನ್ನು ಓದಿದರು.

ಅನಂತರ ಪಾಠಶಾಲೆಯ ವಿದ್ಯಾರ್ಥಿಗಳು ಭಾಸ ಕವಿಯಿಂದ ವಿರಚಿತವಾದ ಮಹಾಭಾರತದ 'ದೂತಘಟೋತ್ಕಚ' ವೆಂಬ ಭಾಗವನ್ನು ಸಂಸ್ಕೃತ ಭಾಷೆಯಲ್ಲಿ ಸಕಾಲವಾದ ಗಾನದಿಂದಲೂ, ಸಮಯೋಚಿತವಾದ ಅಭಿನಯದಿಂದಲೂ ಸಭಿಕರೆಲ್ಲರೂ ಆಶ್ಚರ್ಯ ಚಕಿತರಾಗುವ ರೀತಿಯಲ್ಲಿ ಅಭಿನಯಿಸಿದರು. ಇದಾದ ಮೇಲೆ ಅಧ್ಯಕ್ಷರೋಪಸಂಹಾರದೊಡನೆ ಸಭೆಯು ಬರಖಾಸ್ತಾಯಿತು. ಮ|| ರಾಮಸ್ವಾಮಯ್ಯನವರ ಭಾಷಣವೂ ಮಹಾಪಾಠಶಾಲೆಯ ವರದಿಯೂ ಬೇರೆ ಕೊಡಲ್ಪಡುವವು.

ಸಬ್ ರಿಜಿಸ್ಟ್ರಾರ್ರ ಆಫೀಸುಗಳು.

ಹಾಲಿ ಮಂಡ್ಯದಲ್ಲಿರುವ ಸಬ್ ರಿಜಿಸ್ಟ್ರಾರ್ರವರ ಆಫೀಸು 1929 ನೇ ಮಾರ್ಚಿ ಒಂದನೇ ತಾರೀಖಿನಿಂದ ಲಾಗಾಯಿತು ಎರಡು ಭಾಗವಾಗಿ ಮಾಡಲ್ಪಡುತ್ತದೆ. ಮೊದಲನೆಯ ಭಾಗವಾದ ಮಂಡ್ಯದ ಆಫೀಸಿಗೆ ಬಸರಾಳು, ದುದ್ದ ಹೋಬಳಿಗಳೂ ಎರಡನೇ ಭಾಗವಾದ ಮದ್ದೂರು ಆಫೀಸಿಗೆ ಕೊಪ್ಪ ಮತ್ತು ಆತಗೂರು ಹೋಬಳಿಗಳೂ ಸೇರಿಸಲ್ಪಡುವವು.

ಮದರಾಸಿನ ದಬ್ಬಾಳಿಕೆ

ಸೈಮನ್ ಕಮಿಟಿಯವರು ಮದರಾಸಿಗೆ ಬರುವುದಕ್ಕೆ ಪೂರ್ವಭಾವಿಯಾಗಿ ಶಾಂತಿಭಂಗವಾಗುವುದೆಂಬ ನೆಪದಿಂದ ಸುಪ್ರಸಿದ್ಧ ಮುಖಂಡರಗಳಾದ ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು, ಕೆ. ವಿ. ಆರ್. ಸ್ವಾಮಿ, ಜಿ. ವಿ. ಕೃಷ್ಣಯ್ಯಶಾಸ್ತ್ರಿ, ಕಳಾವೆಂಕಟರಾವ್ ಇವರುಗಳನ್ನು ಅಧಿಕಾರಿಗಳು ದಸ್ತಗಿರಿ ಮಾಡಿ, ಡಾ|| ಪಟ್ಟಾಭಿ ಸೀತಾರಾಮಯ್ಯನವರೇ ಮುಂತಾದವರಿಗೆ ವಾರಂಟುಗಳನ್ನು ಕೊಟ್ಟಿರುತ್ತಾರೆ. ಇದರಿಂದ ಜನರಿಗೆ ಆವೇಶವು ಇನ್ನಷ್ಟು ಹೆಚ್ಚಿ ಸೈಮನ್ ಬಹಿಷ್ಕಾರವು ಮತ್ತಷ್ಟು ಹುರುಪಿನಿಂದ ಆಗುವುದಾಗಿದೆ.

ಹಿಂದೀ ಪ್ರೇಮೀ ಮಂಡಲಿ ಮೈಸೂರು.

ಇದೇ ಸನ್ 1929 ಫೆಬ್ರವರಿ 20 ನೆಯ ತಾರೀಖು ಬುಧವಾರ

ಸಾಯಂಕಾಲ 6 ಘಂಟೆಗೆ ಸರಿಯಾಗಿ

ಹಿಂದೀ ಪರೀಕ್ಷಾ

ಪ್ರಮಾಣ ಪತ್ರ ವಿನಿಯೋಗ ಸಭೆಯು

ಮೈಸೂರು ಟೌನ್‌ಹಾಲಿನಲ್ಲಿ ನಡೆಯುತ್ತದೆ

ಶ್ರೀಯುತ ಸೇಟ್ ಜಮನಾಲಾಲ್ ಬಜಾಜ್‌ರವರು ಅಧ್ಯಕ್ಷಸ್ಥಾನವನ್ನಲಂಕರಿಸಿ ಪ್ರಮಾಣಪತ್ರಗಳನ್ನು ವಿನಿಯೋಗ ಮಾಡುವರು.

ಸೂಚನೆ:—ಸಭೆಗೆ ಬರಲು ಇಚ್ಛೆಯುಳ್ಳವರು ಮೇಲ್ಕಂಡ ಮಂಡಲಿಯಲ್ಲಿ ಮುಫತ್ತಾಗಿ ದೊರೆಯುವ ಟಿಕೇಟುಗಳನ್ನು ತೆಗೆದುಕೊಂಡು ಬರಬೇಕು.

ಎಂ. ವಿ. ಜಂಬುನಾಥನ್

ಜನ್ನಾಪ್ ಸಾಬ್

ಕಾರ್ಯದರ್ಶಿಗಳು

ಕಾರ್ಯಕ್ರಮ

1 ಮಂಗಳಾಚರಣೆ
2 ಸ್ವಾಗತ ಭಾಷಣ
3 ಪ್ರಮಾಣಪತ್ರ ವಿನಿಯೋಗ
4 ಶ್ರೀಯುತ ಸಿ. ರಾಜಗೋಪಾಲಾಚಾರ್ ಮತ್ತು W. P ಇಂಗ್ಲೀಷ್ ರವರ ಇವರುಗಳ ಉಪನ್ಯಾಸ
5 ಅಧ್ಯಕ್ಷರ ಭಾಷಣ
6 "ವೀರ ಅಭಿಮನ್ಯು" ನಾಟಕದ ಕೆಲವು ದೃಶ್ಯಗಳ ಅಭಿನಯ
7 ವಂದನಾ ಸಮರ್ಪಣೆ
8 ಮಂಗಳಂ

ಮಹಾತ್ಮಾ ಗಾಂಧಿಯವರು.

ಮಹಾತ್ಮಾ ಗಾಂಧಿಯವರು ಈ ತಿಂಗಳು ಕಡೆಯವಾರದಲ್ಲಿ ಆಂಧ್ರ ದೇಶದ ಸಂಚಾರವನ್ನು ಆರಂಭಿಸುವರು. [illegible] ಕೊಂಡ ವೆಂಕಟಪ್ಪಯ್ಯನವರಿಗೆ [illegible] ತ್ತಾರೆ.

ಐರ್ಲೆಂಡಿನ ಲಾಯರುಗಳು.

ಐರ್ಲೆಂಡಿನಲ್ಲಿ ವಕೀಲಿಯನ್ನು ಮಾಡತಕ್ಕ ಲಾಯರುಗಳಿಗೆ ಐರಿಷ್ ಭಾಷೆಯ ಜ್ಞಾನವು ಅವಶ್ಯಕವೆಂಬುದನ್ನು ಸೂಚಿಸಿಯೂ ಆ ದೇಶದ ಪಾರ್ಲಿಮೆಂಟಾದ ಡೇಲ್ ಐರಾನ್ನಲ್ಲಿ ತಳ್ಳಲ್ಪಡುವುದು.

ತಾಯಿನಾಡು.

19—2—1929

ಮ|| ಪಿ. ಸೀತಾರಾಮಯ್ಯನವರ ಭಾಷಣ.

ತಾ|| 1?-2-29 ನೇ ಭಾನುವಾರ ರಾಜಧಾನಿಯ ಟೌನ್ ಹಾಲಿನಲ್ಲಿ ನಡೆದ ಪೌರಸಭೆಯಲ್ಲಿ ಮ|| ಪಿ. ಸೀತಾರಾಮಯ್ಯನವರು ಮಾಡಿದ ಭಾಷಣ :—

ಮ|| ದಾಸಪ್ಪನವರೂ ಅನೇಕ ಜವಾಬ್ದಾರೀ ಸಭೆ ಮೊದಲಾದುವನ್ನು ನಡಿಸುವ ಭಾರವನ್ನು ವಹಿಸಿದವರಾಗಿರುತ್ತಾರೆ. ಹೀಗಿದ್ದಾಗ್ಯೂ ಅವರು ಈ ದಿನ ಮೀಟಿಂಗಿನ ಪ್ರಸಿದ್ಧಪತ್ರಿಕೆಯ ವಿಚಾರದಲ್ಲಿ ಮಾಡಿದ ಭಾಷಣವನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ. ಇಂಥಾ ಸಂದರ್ಭಗಳಲ್ಲಿ ಕೆಲವು ಜನರು ಮುಂದಾಳಾಗಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಪ್ರಸಿದ್ಧ ಪತ್ರಿಕೆಗಳನ್ನು ಹೊಂದಿಸುವುದ ಸಾಧ್ಯವೇ ಹೊರತು ಎಲ್ಲರ [illegible] ವಗೈರೆಗಳನ್ನು ಹಾಕಿಸದಲ್ಲದೆ ಯಾವ ಸಭೆಯನ್ನೂ ಉಪಕ್ರಮಿಸುವ ಏರ್ಪಾಡು ಮಾಡುವುದು ಕೇವಲ ಅಸಾಧ್ಯ. ಇದೂ ಅಲ್ಲದೆ ಈಗಿನ ನವಯುಗದ [illegible]ಯಲ್ಲಿ ಇಂಥವರು ಪುರಪ್ರಮುಖರು ಇಂಥವರು ಅಲ್ಲ ಎಂದು ಹೇಳುವುದು ಅಸಾಧ್ಯ. ಸರ್ವರೂ ಪುರಪ್ರಮುಖರೇ ಆಗಿರುವ ಈ ಕಾಲದಲ್ಲಿ ಇಂಥಾ ಭಾಷಣಗಳ ಅನುಚಿತ. ಇದರ ಮೇಲೆ ಹೇಗಾದಾಗ್ಯೂ ಆ ಪತ್ರಿಕೆಗೆ ರುಜು ಹಾಕಿದ್ದವರೆಲ್ಲರೂ ಪುರಪ್ರಮುಖರೇ [illegible]ದಾಗಿ ಮ|| ದಾಸಪ್ಪನವರು ಕೊಟ್ಟ ಬಹುಮಾನಪತ್ರಿಕೆಗೆ ನಾನು ತುಂಬಾ ಕೃತಜ್ಞತೆಯನ್ನು ಸೂಚಿಸುತ್ತೇನೆ.

"ಈ ಠರಾವು ನಾನು ಕಾರ್ಯಾಲಯಕ್ಕೆ ಪ್ರವೇಶ ಮಾಡುವುದಕ್ಕೆ ಮುಂಚೆಯೇ ಸಭೆಯ ಮುಂದೆ ತಂದಿಟ್ಟು ಅನುಮೋದಿಸಲ್ಪಟ್ಟಿತು. ಆದರೆ ಮ|| ದಾಸಪ್ಪನವರು ಹೇಳಿದ ಆಕ್ಷೇಪಣೆಯ ವಿಚಾರದಲ್ಲಿ [illegible] ಕಮಿಟಿಯ ವರದಿಯ ಸಿಪಾರಸ್ಸಿ ಮೇಲಿನ ಸರ್ಕಾರಿ ಆರ್ಡರಿನಲ್ಲಿ ಎಷ್ಟರ ಮಟ್ಟಿಗೆ [illegible]. ಏನು ಕಾರಣ ಇವನ್ನು ಈ ಠರಾವಿನಲ್ಲಿ ಕಂಡಿಸಬೇಕೆಂಬ ದಕ್ಕೆ ಸಾಕಾದಷ್ಟು ಕಾರಣವನ್ನು ತಿಳಿಸಲಿಲ್ಲವೆಂದ ಹೇಳಿದ ಆಕ್ಷೇಪಣೆ—ನಾನು, ಸದರಿ ಠರಾವು ಸಭೆಯ ಮುಂದೆ ಇಡಲ್ಪಡುವಾಗ್ಯೆ ಹೇಳಿದ ಕಾರಣಗಳನ್ನು ತಿಳಿಯುವಂತೆ ಆ[illegible] ನನ್ನ ದೌರ್ಭಾಗ್ಯ. ಆದರೆ ಪ್ರಾಯಶಃ ಈ ಮಂದಿಯ ವಿಚಾರದಲ್ಲಿ ಮಾತನಾಡ ವಾಗ್ಗೆ ಮ|| ರಾಮಯ್ಯನವರು ಎಲ್ಲರಿಗೂ ಪತ್ರಿಕೆಗಳ ಮುಖೇನವೂ ಅಂದಿನಿಂದಲೂ ಆಗಿಂದಾಗ್ಗೆ ಪ್ರಸಿದ್ಧವಾಗಿತ್ತು. ಸಮಿತಿಯ ಸಾಕ್ಷಿಗಳ ಹೇಳಿಕೆಯಿಂದಲೂ ಅನೇಕ ವಿಷಯಗಳು ವ್ಯಕ್ತವಾಗಿ ಗೊತ್ತಿರುವ ಕಾರಣ ಪುನಃ ಪುನಃ ಮಹಾಜನಗಳಿಗೆ ತಿಳಿಸಿ ಕಾಲವಿಳಂಬ ಮಾಡಬಾರದೆಂಬುದಾಗಿ ತಿಳಿಸಿದರು.

ಮ|| ದಾಸಪ್ಪನವರ ಎರಡನೇ ಆಕ್ಷೇಪಣೆ. ಸದರಿ ಸಮಿತಿಯಲ್ಲಿ ಬ್ರಾಹ್ಮಣ ಮೆಂಬರುಗಳು ತಮ್ಮ ಗುಪ್ತ ಆಲೋಚನೆಯನ್ನು ಬಿಡದೆ ಮಿಲ್ಲರ್ ಕಮಿಟಿ ರಿಪೋರ್ಟಿನ ಮೇಲಿನ ಸರ್ಕಾರಿ ಅಪ್ಪಣೆಯನ್ನ ಕೆಡಿಸಿ ಹಾಕಬೇಕೆಂಬ ಶಿಫಾರ್ಸನ್ನು ಮಾಡಿರುತ್ತಾರೆ. ಇಂಥಾ ಠರಾವನ್ನು ಶೇಕಡಾ 98 ಜನಗಳಾದ ಬ್ರಾಹ್ಮಣೇತರ ವರ್ಗದವರ ಏಳಿಗೆಗೆ ಇದು ತುಂಬಾ ಕೊರತೆಯನ್ನು ಉಂಟುಮಾಡುತ್ತೆಂತಲೂ ಆದಕಾರಣ ಈ ಠರಾವನ್ನು ಅನುಮೋದಿಸಬಾರದೆಂದೂ ಹೇಳಿದರು.

ಆಕ್ಷೇಪಣೆಗೆ [illegible] ಬ್ರಾಹ್ಮಣ ಸಾಮಾನ್ಯದ ಹಕ್ಕು [illegible] ಮತ್ತು ಪ್ರಜಾ ಸಾಮಾನ್ಯದ ಸ್ವಾತಂತ್ರ್ಯ [illegible]ಗಳು ಪ್ರಸ್ತುತಪದ್ಧತಿಯ ಸಂದರ್ಭಗಳಲ್ಲಿ ಹೊರತು — ಸಂಬಂಧವಾದ ಅಥವಾ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದ ಭಾವನೆಯ ವಿಚಾರವಾಗಿ [illegible] ಮಾಡುವುದು ಕೇವಲ ಅಸಂಭವವೆಂತಲೂ ಅಲ್ಲದೆ ಸರ್ಕಾರೀ ಉದ್ಯೋಗಗಳು ಬ್ರಾಹ್ಮಣೇತರರಿಗೆ ಒದಗಿದ ಮಾತ್ರದಿಂದಲೇ ಬ್ರಾಹ್ಮಣೇತರರ ಏಳಿಗೆಯು ನಿರ್ಧಾರವಾಯಿತೆಂಬ ಅಭಿಪ್ರಾಯ ತಪ್ಪೆಂತಲೂ ಅಲ್ಲದೆ ಒಂದುವೇಳೆ ಒಂದು ಕೋಮಿನ ಒಬ್ಬ ಮನುಷ್ಯನಿಗೆ ಒಂದು ದೊಡ್ಡ ಅಧಿಕಾರ ದೊರಕಿದರೆ ಕುದುರೆ ಬಾಲ ದೊಡ್ಡದಾಗಿದ್ದಲ್ಲಿ ತನಗೆ ತಾನು ಬೀಸಿಕೊಳ್ಳ[illegible] ಸ್ವಂತಕ್ಕೆ ಅನುಕೂಲವಾಗುತ್ತದೆಯೇ [illegible] ಕೋಮಿನವರಿಗೆಲ್ಲಾ ಅದರಿಂದ ಸೌಕರ್ಯ ದೊರೆಯುವುದಿಲ್ಲವೆಂತಲೂ ಅಲ್ಲದೆ ನಮ್ಮ ಸಂಸ್ಥಾನದಲ್ಲಿ ನಾವು ಭಾವಿಯಲ್ಲಿ ಬಿದ್ದಿರುವ ಕಪ್ಪೆಗಳಂತೆ ನಮ್ಮ ಒಳಗಿನ ವಿಷಯಗಳನ್ನು ಮಾತ್ರ ನೋಡುತ್ತಿದ್ದೇವೆಯೇ ಹೊರತು ನಮ್ಮ ಸಂಸ್ಥಾನದ ಕೈಗಾರಿಕೆಗಳು ವ್ಯವಸಾಯ ವ್ಯಾಪಾರದ ವಿಚಾರಗಳ ಏಳಿಗೆಗಳಿಗೆ ಹೋಡದಾಡದೆ ಸರ್ಕಾರಿ ಉದ್ಯೋಗಕ್ಕೆ ಹೊಡೆದಾಡೋಣದರಿಂದ ಪ್ರಜೆಗಳ ನೆಮ್ಮದಿಗೆ ಸೌಕರ್ಯವಾಗವುದಿಲ್ಲ.

ಆದರೆ ಈ ಸಂದರ್ಭದಲ್ಲಿ ಮಿಲ್ಲರ್ ಕಮಿಟಿ ರಿಪೋರ್ಟಿನ ಆರ್ಡರ್ ವಿಷಯದಲ್ಲಿ ಹೆಚ್ಚು ಪ್ರಶಂಸೆ ಮಾಡಲು ಇಷ್ಟವಿಲ್ಲವೆಂತಲೂ ಹ್ಯಾಗೆ ಆದರೂ ಈ ಆರ್ಡರಿನಿಂದ ಬ್ರಾಹ್ಮಣೇತರರಿಗೆ ಸೌಕರ್ಯ ವಾಗುತ್ತಿರುವ ಭಾಗ [illegible]ಶಃ ಈ ಆರ್ಡರಿಗೆ ಸರ್ಕಾರದವರು ಅವಕಾಶಮಾಡಿ ಜಾರಿಯಲ್ಲಿ ಇರತಕ್ಕ ವಿಚಾರದಲ್ಲಿ ನಾನು ಅಭಿಪ್ರಾಯ ಪಡುತ್ತೇನೆ. ಅಲ್ಲದೆ ಬ್ರಾಹ್ಮಣ ವಿದ್ಯಾವಂತರು ಸರಕಾರಿ ಉದ್ಯೋಗಕ್ಕಾಗಿ ಕಾತರುಪಡುವದಿಲ್ಲವೆಂತಲೂ ಈ ಸಂದರ್ಭದಲ್ಲಿ ಬ್ರಾಹ್ಮಣೇತರ ಭ್ರಾತೃಗಳಿಗೆ ಸಂತೋಷವಾಗಿಯೂ ಸರ್ಕಾರದವರು ಉತ್ತೇಜನ ಕೊಡಬಹುದು.

ಸರಕಾರದವರೂ ಕಂಡ ತಪ್ಪಿತಸ್ಥರನ್ನು ಶಿಕ್ಷಿಸಬಾರದ ತಕ್ಕ ವಿಚಾರದಲ್ಲಿ ಮುಖ್ಯ ಅಭಿಪ್ರಾಯಗಳನ್ನು ಒಪ್ಪಿರುತ್ತಾರೆ ಆದರೆ ಸಾಕ್ಷಿಗಳು ಒದಗದರೆ ಜೇರೆ [illegible] ನಡಿಬಹುದೇ ಹೊರತ ಜೇರೆ ತನಿಖೆ ಅನವಶ್ಯಕವೆಂದು ಹೆಳುವುದು ಅಷ್ಟೊಂದು ಸರಿಯಾಗಿಲ್ಲ ಆದಕಾರಣವೂ ಮತ್ತು ಸರ್ಕಾರೀ ಉದ್ಯೋಗಸ್ಥರ ಪೈಕಿ ತಮ್ಮ ಕರ್ತವ್ಯಗಳನ್ನು ಮಾಡದೇ ಇರತಕ್ಕ ವಿಚಾರದಲ್ಲಿಯೂ ಸಹ ಶ್ರೀಮನ್ ಮಹಾರಾಜರಲ್ಲಿ ಪ್ರಾರ್ಥನೆ ಮಾಡತಕ್ಕದ್ದು ಬಹಳ ಉಚಿತ

ಅದೇ ರೀತಿಯಲ್ಲಿ ಎರಡನೇ ಭಾಗದಲ್ಲಿಯೂ ಸಹ ಸರ್ಕಾರದವರೂ ಕೂಡ ಜವಾಬ್ದಾರೀ ಸರಕಾರದ ವಿಚಾರದಲ್ಲಿ ಆಗಿಂದಾಗ್ಗೆ ಗವನಿಸತಕ್ಕವುದಾಗಿ ಒಪ್ಪಿರುತ್ತಾರೆ. ಆದರೆ ಸಮಿತಿಯವರು ಶಿಫಾರ್ಸಿನಂತೆ ಮಾಡತಕ್ಕ ವಿಚಾರದಲ್ಲಿಯೂ ಸಹ ಪ್ರಾರ್ಥನೆ ಮಾಡತಕ್ಕದ್ದು ಅನುಕೂಲವಾದ ವಿಚಾರ"ಎಂದ ಆಕ್ಷೇಪಿಸಿದ ಆಕ್ಷೇಪಣೆಗಳಿಗೆ ಉಚಿತವಾಗಿ ಸಮಾಧಾನವನ್ನು ಹೇಳಿದರು.

ಕಾಶಿಯಲ್ಲಿ ರಾಷ್ಟ್ರೀಯ ಬಾವುಟ

ಕಾಶಿಯಲ್ಲಿ ಮುನಿಸಿಪಲ್ ಆಫೀಸಿನ ಮೇಲೆ ರಾಷ್ಟ್ರೀಯ ಬಾವುಟವನ್ನು ಹಾರಾಡಿಸಬೇಕೆಂದು ತೀರ್ಮಾನವಾಗಿರುವುದು.

ವರ್ತಮಾನ ಸಂಗ್ರಹ

ಶ್ರೀ ಶೃಂಗೇರಿ ಜಗದ್ಗುರುಗಳು

ಶ್ರೀ ಶೃಂಗೇರಿ ಜಗದ್ಗುರುಗಳು [illegible] ಹೊಂದಿರುವುದಾಗಿ [illegible] 5000 [illegible]

[illegible]

[illegible]

[illegible]

[illegible] ಈ ಶನಿವಾರ [illegible] ಗಂಟೆಗೆ ಲಂಡನ್ನಿನಲ್ಲಿ [illegible] ಮುಂದಿನ [illegible] ಬೆಳಗ್ಗೆ 10-30 ಗಂಟೆಗೆ [illegible]

ದಡ್ಡ ದೇವರಲ್ಲ

ಬೊಂಬಾಯಿನ ಚೀಫ್ ಜಸ್ಟಿಸ್ ಆದ ಸರ್. ಅಂಬರ್‌ನರ್ಮಾರವರು ಲಾ ಕಾಲೇಜಿನ ಸಂತೋಷ[illegible] ಸಂ[illegible] ಒಕೀಲರಿಗೆ ಮಾಡಿದ ಉಪದೇಶವನ್ನು [illegible] ದೇವರನ್ನಾಗಿ ಮಾಡಿಕೊಳ್ಳಬೇಡಿ ಎಂದು ಹೇಳಿದರು.

ರೈತರ ಸಮ್ಮೇಳನ

ಮುಂದಿನ ತಿಂಗಳು 8 9 10 11ನೇ ತಾರೀಖಿನಲ್ಲಿ ರೊಹ್ಟಕ ಎಂಬಲ್ಲಿ ಪಂಜಾಬ್ ರೈತರ ಸಮ್ಮೇಳನ ನಡೆಯುವುದು.

Printed and published by P. R. Ramaiya,
at Sri Rama Press, D. Subbaih Road, Mysore.

Regd. No. M. 2322 ! ವಂದೇ ಮಾತರಂ !

ತಾಯಿನಾಡು.

ಪ್ರತಿದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ [illegible]

ಸಂಪುಟ ೧] ಬುಧವಾರ ೨೦ ಫೆಬ್ರವರಿ ೧೯೨೯ [ಸಂಚಿಕೆ ೧೧೩

ತಾಯಿನಾಡು.

20-2-1929

ದೇಶಭಾಷೆ

ರಾಷ್ಟ್ರ ಭಾಷೆಯಾದ ಹಿಂದೀ ಪ್ರಚಾರವನ್ನು ಮಾಡುವುದಕ್ಕಾಗಿ ರಾಷ್ಟ್ರ ಮುಂಖಂಡರು ಪ್ರಯತ್ನಿಸುತ್ತಿದ್ದಾರೆ. ನಮ್ಮ ರಾಜಧಾನಿಯಲ್ಲಿ ರಾಷ್ಟ್ರ ಭಾಷೆಯ ಪ್ರಚಾರವು ಆರೇಳು ವರ್ಷಗಳಿಂದಲೂ ಸಂತತವಾಗಿ ನಡೆಯುತ್ತಿದೆ. ನಮ್ಮ ವಿದ್ಯಾರ್ಥಿಗಳು ಶಾಲೆಗಳಲ್ಲಿ ಅನೇಕರು ಹಿಂದೀಭಾಷೆಯನ್ನು ಬಹಳ ಉತ್ಸಾಹದಿಂದ ಕಲಿಯುತ್ತಿದ್ದಾರೆ. ನಮ್ಮ ವರ್ತಕರು ಹಿಂದೀಭಾಷೆಯನ್ನು ಕಲಿಯದೇ ಹೋದರೂ ಅವರಿಗೆ ಸ್ಪಷ್ಟವಾದ ಹಿಂದೂಸ್ಥಾನಿಯನ್ನು ಅವರು ಅರಿತೇ ಇರುತ್ತಾರೆ. ಹಿಂದೂಸ್ಥಾನಿಯನ್ನು ಕಲಿಯದೆ ಹೋದರೂ ನಾನಾ ... ನಮ್ಮ ಮೈಸೂರಿನಲ್ಲಿ ಅರ್ಥಮಾಡಿಕೊಳ್ಳುವ ಶಕ್ತಿಯುಳ್ಳವರು ... ಕನ್ನಡಿಗರಿಗಂತೂ ಹಿಂದಿಯು ಬಹಳ ಸುಲಭ. ಅವರಿಗೆ ಸಂಸ್ಕೃತವು ಒಂದಲ್ಲಾ ಒಂದು ರೀತಿಯಲ್ಲಿ ಬಂದಿರುವುದರಿಂದ ಸಂಸ್ಕೃತವೇ ಪ್ರಾಧಾನ್ಯವಾದ ಹಿಂದಿಯನ್ನು ಅವರು ಸುಲಭವಾಗಿ ಕಲಿಯಬಹುದು. ಪ್ರಾಶಸ್ತ್ಯವಾಗಿ ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಅನೇಕ ವಿದ್ಯಾರ್ಥಿಗಳೂ ವಿದ್ವಾಂಸರೂ ಹಿಂದಿಯನ್ನು ಬಹಳ ಸುಲಭವಾಗಿ ಕಲಿಯುತ್ತಿರುವರು. ಒಟ್ಟಿನ ಮೇಲೆ ನೋಡಿದರೆ ಮೈಸೂರಿನಲ್ಲಿ ಹಿಂದೀ ಭಾಷಾಪ್ರಚಾರವು ಬಹಳ ಸರಾಗವಾಗಿ ನಡೆಯುವುದು. ಈಗ ಬಹಳ ಮಟ್ಟಿಗೆ ಪ್ರಚಾರವಾಗಿರುವುದು. ಇಷ್ಟೇ ಸಾಲದು. ಇನ್ನೂ ಆಗಬೇಕು. ನಮ್ಮ ಸ್ಕೂಲುಗಳಲ್ಲಿಯೂ ಹಿಂದಿಯು ಕಡ್ಡಾಯವಾಗಿ ಆಗಬೇಕು. ... ಯಾವ ... ಕಲಿತರೆ ಹಿಂದೀ ಪ್ರಚಾರಕ್ಕೆ ಮಾರ್ಗವು ದೊರಕಿದಂತಾಗುವುದು. ಈ ವಿಷಯಕ್ಕೆ ನಮ್ಮ ವಿದ್ಯಾಧಿಕಾರಿಗಳ ಮತ್ತು ವಿಶ್ವವಿದ್ಯಾನಿಲಯದವರ ಗಮನವು ಕೊಡಲ್ಪಡುವುದೆಂದು ನಂಬುತ್ತೇವೆ.

ಮೈಸೂರು ಬ್ಯಾಂಕು.

ಮೈಸೂರು ಬ್ಯಾಂಕಿನ ಷೇರುಹೋಲ್ಡರುಗಳ 16 ನೇ ವಾರ್ಷಿಕ ಸಭೆಯು ಈ ತಿಂಗಳು 9 ನೇ ತಾರೀಖು ಮಧ್ಯಾಹ್ನ ನಾಲ್ಕು ಘಂಟೆಗೆ ಬೆಂಗಳೂರಿನಲ್ಲಿರುವ ಹೆಡ್ಡಾಫೀಸಿನಲ್ಲಿ ನಡೆಯಿತು. ಅನೇಕ ಷೇರುಹೋಲ್ಡರುಗಳು ಹಾಜರಿದ್ದರು. ಚೇರ್ಮನ್ನರಾದ ಸರ್. ಪುಟ್ಟಣ್ಣ ಶೆಟ್ಟಿಯವರು ಊರಲ್ಲಿಲ್ಲದ್ದರಿಂದ ಮ|| ರಾ|| ಕೆ. ಆರ್ ಶ್ರೀನಿವಾಸಯ್ಯಂಗಾರ್ಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಹಿಂದಿನ ವರ್ಷದ ಬ್ಯಾಲೆನ್ಸ್‌ಷೀಟು ಮುಂದೆ ಇಡಲ್ಪಟ್ಟಿತು. ಹೋದವರ್ಷ ಒಟ್ಟು ಸಫೆ 5 ಲಕ್ಷ 3 ಸಾವಿರದ 390 ರೂಪಾಯಿಗಳು. ಶೇಕಡ 12 ರಂತೆ ಡಿವಿಡೆಂಡ್ ಕೊಡಬೇಕೆಂದು ನಿಶ್ಚಯವಾಯಿತು ಮತ್ತು ಶೇಕಡ 2 ರಂತೆ ಬೋನಸ್ ಕೊಡಬೇಕೆಂದು ತೀರ್ಮಾನವಾಯಿತು. ಬ್ಯಾಂಕಿನ ಕೆಲಸಗಾರರಿಗೆ 1 ತಿಂಗಳು ಸಂಬಳದ ಬೋನಸ್ ಕೊಡಬೇಕೆಂದು ನಿಶ್ಚಯವಾಯಿತು. ಮ|| ರಾ|| ಶ್ರೀಗಳಾದ ಜಿ. ಕೆ. ಗರುಡಾಚಾರ್ಯರು ಮತ್ತು ಟಿ. ನಂಜಪ್ಪನವರು ಡೈರೆಕ್ಟರುಗಳಾಗಿ ಚುನಾಯಿಸಲ್ಪಟ್ಟರು

ವಿದ್ಯಾರ್ಥಿಗಳೂ ಮತ್ತು ರಾಜಕಾರಣವೂ.

(ಮ|| ರಾ|| ಟಿ. ಪ್ರಕಾಶಂರವರಿಂದ)

ಅನೇಕ ದೊಡ್ಡ ಮನುಷ್ಯರು ವಿದ್ಯಾರ್ಥಿಗಳಿಗೆ ರಾಜಕೀಯ ವಿಷಯಗಳಲ್ಲಿ ಭಾಗವನ್ನು ತೆಗೆದುಕೊಳ್ಳಕೂಡದೆಂದು ಉಪದೇಶ ಮಾಡುತ್ತಿದ್ದಾರೆ. ನಾವು ಇಂದು ಒಂದು ದೊಡ್ಡ ರಾಷ್ಟ್ರೀಯ ಸಂಗ್ರಾಮದಲ್ಲಿ ತೊಡಗಿರುತ್ತೇವೆ. ವಿದ್ಯಾರ್ಥಿಗಳು ರಾಜಕೀಯವನ್ನು ಬಿಟ್ಟರೆ ಅವರು ಯಾವ ಕೆಲಸಕ್ಕೂ ಯೋಗ್ಯರಾಗುವುದಿಲ್ಲ. ಹಾಗೆ ಹೇಳಿದ ಮಾತ್ರಕ್ಕೆ ನಾನು ವಿದ್ಯಾರ್ಥಿಗಳನ್ನು ಸ್ಕೂಲ್ ಕಾಲೇಜುಗಳನ್ನು ಬಿಟ್ಟು ನಮ್ಮೊಡನೆ ನೀವು ಯಾವಾಗಲೂ ಸೇರಬೇಕೆಂಬ ಅಭಿಪ್ರಾಯವಲ್ಲ. ಜನಗಳನ್ನು ನಿರೀಕ್ಷ್ಯ ಮಾಡುವುದು ರಾಜಕೀಯವಲ್ಲ. ರಾಜಕೀಯದಲ್ಲಿ ಸೇರುವವರಿಗೆ ನಮ್ಮ ದೇಶದ ಜ್ಞಾನವಲ್ಲದೆ ಹೊರಗಿನ ದೇಶದ ಜ್ಞಾನವೂ ಬೇಕು. ನಾವು 30 ನಾಲ್ವತ್ತು ವರ್ಷಗಳ ಹಿಂದೆ ಓದುತ್ತಿದ್ದ ವಿಷಯಗಳನ್ನೇ ವಿದ್ಯಾರ್ಥಿಗಳು ಈಗ ಓದುತ್ತಿರುತ್ತಾರೆ. ಯಾವ ವಿದ್ಯಾರ್ಥಿಯೇ ಆಗಲಿ ನಮ್ಮ ದೇಶದ ಪ್ರಸಕ್ತ ಸಂಪತ್ತಿನ ಮತ್ತು ರಾಜಕೀಯ ವಿಷಯಗಳನ್ನು ಅರಿಯದೇ ಇದ್ದರೆ ಅವನು ಯಾವ ಕೆಲಸಕ್ಕೂ ಪ್ರಯೋಜನವಾಗುವುದಿಲ್ಲ. ಈವತ್ತಿನ ದಿವಸ ಎಲ್ಲೆಲ್ಲಿ ನೋಡಿದರೂ ಉತ್ಸಾಹವು ಕುಗ್ಗಿರುವುದಕ್ಕೆ ಕಾರಣವೇನು ನಮ್ಮ ದೇಶದಲ್ಲಿ ನೆಲಸಿರುವ ನಿರುದ್ಯೋಗವೇ ಇದಕ್ಕೆ ಕಾರಣ. ನಮ್ಮ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ನಮ್ಮ ದೇಶದ ಈಗಿನ ರಾಜಕೀಯ ಸ್ಥಿತಿಯನ್ನೂ ಸಾಂಪತ್ತಿಕ ಸ್ಥಿತಿಯನ್ನೂ ತಿಳಿಸಿದ್ದರೆ ರಾಷ್ಟ್ರೀಯ ಮುಖಂಡರು ನಮಗೆ ವಿಜ್ಞಾಪನೆಯನ್ನು ಕಳುಹಿಸಬೇಕಾಗಿರಲಿಲ್ಲ. ನಮ್ಮ ದೇಶದ ಕಂದಾಯವೆಷ್ಟು. ಅದರಲ್ಲಿ ಎಷ್ಟು ಭಾಗವು ನಮ್ಮ ದೇಶಕ್ಕೆ ಉಪಯೋಗವಾಗುತ್ತದೆ. ಎಷ್ಟು ದುರ್ವ್ಯಯವಾಗುತ್ತದೆ. ನೀವು ಕೊಡುವ ಫೀ ಎಷ್ಟು? ನಿಮಗೆ ದೊರೆಯುತ್ತಿರುವ ವಿದ್ಯಾಭ್ಯಾಸವೆಂತಹದು. ಇವೆಲ್ಲಾ ನಿಮಗೆ ಬೋಧಿಸಲ್ಪಡುತ್ತಿದ್ದರೆ ನಾನು ನಿಮಗೆ ಬೋಧಿಸುವ ಅವಶ್ಯಕತೆ ಇರಲಿಲ್ಲ. ಒಬ್ಬ ರೈತರು ವರ್ಷಂಪ್ರತಿ ೩೦ ಕೋಟಿ ಕಂದಾಯವನ್ನು ಕೊಡುತ್ತಾರೆ. ಅವರ ಉಪಯೋಗಕ್ಕಾಗಿ ಕಳೆದ ಮೂವತ್ತು ವರ್ಷಗಳಿಂದಲೂ ಆರೂವರೆ ಕೋಟಿ ರೂಪಾಯನ್ನು ಕೂಡ ಖರ್ಚು ಮಾಡಿಲ್ಲ. ನಿಮಗೆ ಈಗ ಕೊಡಲ್ಪಡುತ್ತಿರುವ ವಿದ್ಯಾಭ್ಯಾಸವು ನಿಮಗೂ ಪ್ರಯೋಜನವಿಲ್ಲ. ನಿಮ್ಮ ದೇಶಕ್ಕೂ ಪ್ರಯೋಜನವಿಲ್ಲ. ನಿಮ್ಮ ಮಿತ್ರರನೇಕರು ಜೈಲಿಗೆ ಹೋಗಿಬಂದು ಪುನಃ ಕಾಲೇಜುಗಳನ್ನು ಸೇರಿದರು. ಅವರಿಗೆ ಬೇರೆ ದಾರಿಯೇ ಗೊತ್ತಿಲ್ಲ. ಇದು ಈಗಿನ ಸ್ಕೂಲಿನ ವಿದ್ಯಾಭ್ಯಾಸದ ದುಷ್ಪರಿಣಾಮ. ಈ ವಿದ್ಯಾಭ್ಯಾಸವು ನಿಮ್ಮನ್ನು ಕ್ಲಾರ್ಕು ಮೊದಲಾದುವುಗಳನ್ನು ಮಾಡುವುದಕ್ಕೆ ಹೊರತು ಮತ್ತೆ ಬೇರೆ ಅಲ್ಲ.

ಬೇರೊಂದು ಕಡೆ ವಿದ್ಯಾರ್ಥಿಗಳಿಗೆ ಸರ್ಕಾರದೊಡನೆ ಸಹಕರಿಸಿ ಸೈಮನ್ ಕಮಿಷನ್ನಿಗೆ ಸ್ವಾಗತವನ್ನು ಕೊಡಿ ಎಂಬ ಉಪದೇಶವನ್ನು ಮಾಡುತ್ತಿದ್ದಾರೆ. ಸೈಮನ್ ಕಮಿಷನ್ನಿಗೆ ಸ್ವಾಗತಕೊಡುವುದಕ್ಕೆ ಎಷ್ಟು ಅಧಿಕಾರವುಂಟೋ ಅದನ್ನು ಬಹಿಷ್ಕರಿಸುವುದಕ್ಕೂ ನಿಮಗೆ ಅಷ್ಟೇ ಅಧಿಕಾರವುಂಟು. ನೀವು ಗುಲಾಮರಾಗಬೇಡಿ. ನಿಮ್ಮ ಮನಸ್ಸನ್ನು ನಿಮ್ಮ ಹತೋಟಿಯಲ್ಲಿಟ್ಟುಕೊಳ್ಳಿ. ಇದು

ವರ್ತಮಾನ ಸಂಗ್ರಹ

ಕೊಮ್ಮೇರಹಳ್ಳಿ ಕೆರೆ ನೀರು.

ಮಂಡ್ಯದ ತಾಲ್ಲೂಕು ಕೊಮ್ಮೇರಹಳ್ಳಿ ಕೆರೆಯ ನೀರು ಮುಟ್ಟಿ ಕುಡಿಯುವ ವಿಚಾರದಲ್ಲಿ ಒಕ್ಕಲಿಗ ಗೌಡರಿಗೂ ಆದಿಕರ್ಣಾಟಕರಿಗೂ ಇದ್ದ ವ್ಯಾಜ್ಯ 17-2-29 ನೇ ಭಾನುವಾರ ಮ|| ಗಳಾದ ಶಂಕರನಾರಾಯಣರಾಯರು ಕೆ ಎಚ್ ... ರು ಗಳ ಪಂಚಾಯಿತಿ ತೀರ್ಮಾನದಂತೆ ರಾಜಿ ಆಯಿತು. ವ್ಯಾಜ್ಯ ಸಮಾಧಾನ ಮಾಡಲು ಸಹಾಯ ಮಾಡಿದ ಮ|| ದರಣೇಂದ್ರಯ್ಯ ಪಟೇಲ್ ಕೆಂಪೇಗೌಡ ಇವರುಗಳಿಗೆ ಎಲ್ಲರ ವಂದನೆಗಳು. ಮೊದಲು ತಗಾದೆಯು ... ಮಹಂದ್ರರಾಯರ ಕೆಲಸದಲ್ಲಿ ಪ್ರಾರಂಭವಾಗಿ ಸುಲಭವಾಗಿ ವ್ಯಾಜ್ಯವು ಸಮಾಪ್ತಿಯಾಗಲು ಮ|| ರಾ|| ಗೋಪಾಲಸ್ವಾಮೈಯವರ ಉತ್ಸಾಹವೇ ಕಾರಣ.

ಒಬ್ಬ ಪ್ರಿನ್ಸಿಪಾಲರ ಅವಿವೇಕ

ಮದರಾಸ್ ಪ್ರೆಸಿಡೆನ್ಸಿಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಫೈಸನ್ ಎಂಬುವರು ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಸೈಮನ್ ಕಮಿಷನ್ನಿನವರು ಮದರಾಸಿಗೆ ಬಂದ ದಿನ ಕಾಲೇಜಿಗೆ ಬರಬೇಕೆಂದು ಒತ್ತಾಯಪಡಿಸುವರು. ವಿದ್ಯಾರ್ಥಿಗಳು ಸೈಮನ್ ಕಮಿಷನ್ನಿನ ಬಹಿಷ್ಕಾರ ಚಳುವಳಿಯಲ್ಲಿ ಭಾಗವನ್ನು ತೆಗೆದುಕೊಳ್ಳಬೇಕೆಂದು ಪ್ರತಿಜ್ಞೆಮಾಡಿರುವರು.

ಮಹಾತ್ಮಾ ಗಾಂಧಿಯವರು.

ಮಹಾತ್ಮಾ ಗಾಂಧಿಯವರು ಬರ್ಮಾ ದೇಶದಲ್ಲಿ ಸಂಚಾರಮಾಡುವವರಾಗಿದ್ದಾರೆ. ಬರ್ಮಾ ಸಂಚಾರವು ಮುಗಿದನಂತರ ಏಪ್ರಿಲ್ ತಿಂಗಳಿನಲ್ಲಿ ಆಂಧ್ರದೇಶದಲ್ಲಿ ಸಂಚಾರಮಾಡುವರು.

ಬೊಂಬಾಯಿ ದೊಂಬಿ

ಬೊಂಬಾಯಿನ ದೊಂಬಿಯು ಶಾಂತವಾಗುತ್ತಿದೆ. ದೊಂಬಿಯಲ್ಲಿ ಅಪಾಯಹೊಂದಿದವರಿಗೂ ನಷ್ಟಪಟ್ಟವರಿಗೂ ಸಹಾಯವು ಕೊಡಲ್ಪಡುತ್ತಿರುವುದು.

ಮ|| ಜಿನ್ನಾರವರ ಅಭಿಪ್ರಾಯ

ಬೊಂಬಾಯಿನ ಪ್ರಸಿದ್ಧ ಮಹಮ್ಮದೀಯ ಮುಖಂಡರಾದ ಮಹಮ್ಮದಾಲೀ ಜಿನ್ನಾರವರು ಸೈಮನ್ ಭಾಷಣವನ್ನು ಪರಿಶೀಲಿಸಿ ಹೇಳಿದ್ದೇನೆಂದರೆ, "ಇಂಗ್ಲೆಂಡಿನ ಪಾರ್ಲಿಮೆಂಟಿನವರು ಇಂಡಿಯಾದ ಸಂಪೂರ್ಣ ಸಮ್ಮತಿಯಿಲ್ಲದೆ ಯಾವ ರಾಜ್ಯಪದ್ಧತಿಯನ್ನೂ ಏರ್ಪಡಿಸಕೂಡದೆಂಬುದನ್ನು ನಾನು ಒಪ್ಪುತ್ತೇನೆ.

ವಿದ್ಯಾರ್ಥಿಗಳ ಸತ್ಯಾಗ್ರಹ

ಕೈರಾ(ಗುಜರಾತಿನಲ್ಲಿ)ದ ಹೈಸ್ಕೂಲಿನ ವಿದ್ಯಾರ್ಥಿಗಳು ಒಂದು ವಾರದಿಂದಲೂ ಸ್ಕೂಲಿಗೆ ಹೋಗದೆ ಮುಷ್ಕರ ಹಿಡಿದಿದ್ದಾರೆ. ಕಾರಣವೇನೆಂದರೆ ಈ ವಿದ್ಯಾರ್ಥಿಗಳು ಗುಜರಾತ್ ಕಾಲೇಜಿನೊಂದಿಗೆ ಸೇರಿ ಸಹಾನುಭೂತಿಯನ್ನು ತೋರಿಸಿದರು. ಈ ಸಂದರ್ಭದಲ್ಲಿ ಕೆಲವರು ಗೈರುಹಾಜರಾಗಿದ್ದರು. ಅವರ ಸ್ಕಾಲರ್‌ಷಿಪ್ಪುಗಳನ್ನೆಲ್ಲಾ ಹೆಡ್ ಮಾಸ್ಟರು ಕಿತ್ತುಹಾಕಿದರು.

ರಾಷ್ಟ್ರದ ಕೆಲಸ:- ನಿಮ್ಮ ಧರ್ಮಕ್ಕೋಸ್ಕರವಾಗಿ ಹೇಗೆ ಹೋರಾಡಬೇಕೋ ಹಾಗೆ ನಿಮ್ಮ ಸ್ವಾತಂತ್ರ್ಯಕ್ಕೂ ಹೋರಾಡಬೇಕು.

ತಾಯಿನಾಡು.

20 – 2 – 1929

ಒಟ್ಲರ್ ಕಮಿಟಿ

ರಾಜರುಗಳ ಸಭೆಯಲ್ಲಿ ಮೇಲಿನ ಕಮಿಟಿಯ ವರದಿಯ ವಿಷಯವಾಗಿ ಬಹಳ ಚರ್ಚೆಯು ನಡೆಯಿತು. ಮಾಲೇರ್ ಕೋಟ್ಲ ನವಾಬರವರ ಒಂದು ಠರಾವನ್ನು ಸೂಚಿಸಿದರು. ಅದರ ಅಭಿಪ್ರಾಯವೇನೆಂದರೆ ಒಟ್ಲರ ಕಮಿಟಿಯ ವರದಿಯು ಎಲ್ಲಾ ದೇಶೀಯ ರಾಜರುಗಳಿಗೂ ಕಳುಹಿಸಲ್ಪಡಬೇಕು. ಆ ರಾಜರುಗಳ ಅಭಿಪ್ರಾಯವನ್ನು ತೆಗೆದುಕೊಂಡು, ಅದು ರಾಜರುಗಳ ಸಭೆಯಲ್ಲಿ ಪೂರ್ತಿಯಾಗಿ ಚರ್ಚೆಯಾದ ಮೇಲೆ, ಇಂಡಿಯಾ ಸರ್ಕಾರದವರ ಅದರ ಮೇಲೆ ಕಾರ್ಯಕ್ರಮವನ್ನು ನಡೆಸಬೇಕು. ರಾಜರುಗಳು ದೊಡ್ಡವರಾಗಲೀ, ಸಣ್ಣವರಾಗಲೀ, ಪ್ರೈವೇಟ್ ಯವರು. ಅವರಿಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕು.

ಇತರ ರಾಜರುಗಳೆಲ್ಲ ಇದಕ್ಕೆ ಬೆಂಬಲ ಕೊಟ್ಟ ಮೇಲೆ ಪ್ರೈವೇಟ್ ಯವರು ಅದಕ್ಕೆ ಒಪ್ಪಿಕೊಂಡರು.

ಲಾಲಾಜಿಯವರ ಮರಣ.

ಲಾಹೋರಿನಲ್ಲಿ ಅಕ್ಟೋಬರ್ 30 ರಲ್ಲಿ ಪೋಲೀಸಿನವರು ಲಾಲಾಲಜಪತರಾಯರನ್ನು ಹೊಡೆದ ವಿಷಯವನ್ನು ತನಿಖೆಮಾಡಬೇಕೆಂದು ಡೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಬಹುಮತದಿಂದ ತೀರ್ಮಾನವಾಯಿತು.

ಭಾರತೀಯ ಮಜೂರಿಗಾರರು.

ಕಾಂಗೊದಲ್ಲಿ ತವರ ಮತ್ತು ಸೀಸದ ಗಣಿಗಳಲ್ಲಿ ಕೆಲಸಮಾಡುವದಕ್ಕೆ ಭಾರತೀಯ ಮಜೂರಿಗಾರರನ್ನು ನೇಮಿಸಬೇಕೆಂದು ಬೆಲ್ಜಿಯಂ ಸರಕಾರದವರ ನಿಶ್ಚಯಿಸಿರುವರು.

ರಾಜರುಗಳ ಘೋಷಣೆ.

ಡೆಲ್ಲಿಯಲ್ಲಿ ನಡೆದ ರಾಜರುಗಳ ಸಭೆಯಲ್ಲಿ ಪ್ರೈವೇಟ್ ರವರ ಎದುರಿಗೆ, ಎಲ್ಲ ರಾಜರುಗಳ ಪರವಾಗಿ, ಜಗತ್ತಿಗೆಲ್ಲರಿಗೂ ತಿಳಿಯುವಂತೆ, ಪಾಟಿಯಾಲಾ ಮಹಾರಾಜರು ಹೇಳಿದ್ದೇನೆಂದರೆ ನಮ್ಮ ನಮ್ಮ ಸಂಸ್ಥಾನಗಳ ಒಳಗೆ ನಾವು ಹಳೇ ಸಂಪ್ರದಾಯದ ಪದ್ಧತಿಗಳನ್ನು ಬಿಟ್ಟು ನಮ್ಮ ಜವಾಬ್ದಾರಿಗಳನ್ನು ಸುಧಾರಣೆ ಮಾಡಿ ನವೀನ ರೂಪವನ್ನು ಕೊಡುತ್ತಿದ್ದೇವೆ.

ಬ್ರಿಟಿಷ್ ಬಿರುದುಗಳು ಬೇಡ.

ಕೆನಡಾದಲ್ಲಿ K. C. S. I. ಮೊದಲಾದ ಬ್ರಿಟಿಷ್ ಬಿರುದುಗಳ ಬೇಡವೆಂಬ ಚಳುವಳಿಯು ಶುರುವಾಗಿರುವುದು.

ಡೆಲ್ಲಿ ಮುನಿಸಿಪಾಲಿಟಿಯ ಉದಾರ್ಯ.

ಡೆಲ್ಲಿಯ ಮುನಿಸಿಪಾಲಿಟಿಯವರು ಧರ್ಮಕಾರ್ಯಗಳಿಗಾಗಿ 55 ಸಾವಿರ ರೂ. ಗಳನ್ನು ನಿಯಮಿಸಿರುವರು. ಛತ್ರಿಗಳಿಗೆ, 11000, ಬಡವರ ದವಾಖಾನೆಯ ಗೆ 2500) ಬಡವರಿಗೆ ಅನ್ನದಾನ, 18000

ಅನಾಥಾಲಯಗಳಿಗೆ ಬೆಂಬಲ.

ಕಲ್ಕತ್ತದಲ್ಲಿ ನಡೆದ ಒಂದು ಪ್ರಚಂಡ ಸಭೆಯಲ್ಲಿ ಮಹಾಜನ ಅವರ ಅನಾಥಾಲಯಗಳಿಗೆ ಸಹಾಯವನ್ನು ಸೂಚಿಸುವ ಠರಾವು ಮಾಡಲ್ಪಟ್ಟಿತ್ತು.

Office of the President
City Municipal Council, Mysore
Dated 13 February 1929.

MunicipaL Notice.

The following business will be transacted at the 5th ordinary meeting of the City Municipal Council, Mysore, to be held in the Municipal Office, on Saturday the 23rd February 1929 at 8 A. M

Subjects.

Confirmation of the proceedings of the following bodies for January Last:- The Municipal Council; Managing Committee; Works Committee; Health Committee; Schools Committee; Town Hall Committee; Vriddhasrama Committee

Recording the Vital and other statistics; rain-fall statistics; Statement of House-building-licenses and health memo for December and January last

Recording Government Orders re:- Reviewing the Administration Report of the Municipality for 27-28; Sanctioning the enhancement of the contingent grant of Ayurvedic Despensary; Sanctioning the resolution of the Municipal Council to treat the services of Gulam Hussain as Supervisor; approving the revised set of rules for combating the epidemics; Sanctioning the scale of pay of Bill Collectors of water Revenue section; Sanctioning the employment of a sub-assistant surgeon for cholera duty; sanctioning the scale of pay of the Conservancy peons; sanctioning one advance increment to T. Ramaswmy, accountant

Consierdation of the following :--Letter from the Chief Secretary to Government, stating that the proposal of the Council re the grant to the Foot-ball Association cannot be sanctioned; letter from Chief Secretary stating that the Government are not in favour of increasing the number of representatives of the Municipal Council to the Trust Board; letter from the Secretary, Electrical Department, stating that Government are not in favour of reduction of rates on overhead lights; note from the Vice-President on the additional requirements of schools; note from the Vice-President re Census of boys and girls of compulsory ages in the City; question of re-appropriating Rs. 7,000 for erecting and laying out public fountains and sub-mains; Works Committee's resolution sanctioning Rs. 5-4/-- for carting old slabs from Vani Vilas Water Duct: office Note re Municipal Quota to be paid towards the cost of Medical inspection of schools; Vriddhasrama Committee's resolution recommending that the Ex. Warden of the Vriddhasramma be given rent of. 5 - per mensem from 16-1-28 to 25-9-28 ; and the Managing Committee's resolution recommending reduction in duty on damaged copra.

T. G RAMA IYER.
President.

ಹಿಂದಿಯ ನಿರ್ಬಂಧ.

ತಿರುವಾಂಕೂರಿನ ಸ್ಕೂಲುಗಳಲ್ಲಿ ಹಿಂದಿಯನ್ನು ನಿರ್ಬಂಧವಾಗಿ ಕಲಿಸಲು ಏರ್ಪಾಡನ್ನು ಮಾಡಬೇಕೆಂದು ಶ್ರೀಯುತರಾದ ಜಮನಾಲಾಲ್ ಬಜಾಜ್ ರಾಜಗೋಪಾಲಾಚಾರ್ಯರವರೂ ಸಲಹೆಯನ್ನು ಕೊಟ್ಟಿರುವರು.

ಮುಂಬಯಿ ಬಿಡಗಡೆ

ಸೈಮನ್ ಸವಿತಿಯವರ ಆಗಮನಕ್ಕೆ ಪೂರ್ವಭಾವಿಯಾಗಿ ಮುಂಬಯಿನಲ್ಲಿ ನಲ್ವತ್ತು ಜನ ಅವರು ದೇಶದ ಮುಖಂಡರನ್ನು ದಸ್ತಗಿರಿಮಾಡಿದ್ದರಿಂದ ಹಿಂದೆಯೇ ತಿಳಿಸಿದ್ದೆವಷ್ಟೆ. ದಸ್ತಗಿರಿಮಾಡಿದ ಮೂರು ಗಂಟೆಗಳ ಕಾಲದೊಳಗೆ ಅವರೆಲ್ಲರನ್ನು ಬಿಡುಗಡೆ ಮಾಡಿದರು. [illegible] ದನ. ಅಂತಹ ಈ ಸೇನಾ ಸಮಿತಿ [illegible] [illegible] ಕೈ ಪರ ಬಹಿಷ್ಕಾರವನ್ನು ಪರಿಪೂರ್ಣವಾಗಿ ನಡೆಸಿದರು ವುವು.

ಹಿಮಾಲಯದ ಆರೋಹಣ.

[illegible] ಕೇಳಿದರು.

[illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ವಿಕರಿಗೆ ಸಿದ್ಧವಾಗಿರುವುದು. ಷೀಟ್ ಕ್ಯಾಲೆಂಡರ್ ಪಾಕೆಟ್ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ಅಚ್ಚಾಗಿ ವಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ಅಂಚೆ ಚೀಟಿ ಕಳುಹಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳ ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ವದಲ್ಲಿರುವುದೇನು?



ರಕ್ತ ವೃದ್ಧಿ ಮಾಡಿ ರತಿರೋಗಗಳನ್ನು ನೀಗಿಸಿ
ತನ್ನಂಗಿ ತಾಗ್ಗಿ... ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಮುದುಕರಿಗೆ ಬಲಗಳನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯವೃಷ್ಟಿಯಿಂದ ನರರನ್ನು ವಜ್ರಕಾಯರನ್ನಾಗಿ ಮಾಡುವುದು.

ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. ?—8—0.

ವ್ಯವಸ್ಥಾಪಕರು:— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.)

"ಭಿಷಗ್ರತ್ನ"

ಪಂಡಿತ ಸೀತಾರಾಮ ಶಾಸ್ತ್ರಿಗಳ

ಕಸ್ತೂರಿ ಮಾತ್ರೆಗಳು.



[illegible] ತಾಂಬೂಲದೊಡನೆ ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, [illegible] ಅನೇಕ ರೋಗಗಳನ್ನು ಗುಣಪಡಿಸುತ್ತದೆ. [illegible] ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

[illegible] ನಮ್ಮ ವಿಳಾಸವನ್ನು [illegible] ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1

ಲಕ್ಷ್ಮೀವಿಲಾಸರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಸಂಪೂರ್ಣವಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಜಿಲೆ 1 ಕ್ಕೆ ರೂ 1.

ಶ್ರೀ ಸಿದ್ಧ ಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತೀಕ್ಷ್ಣವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಬ್ರಾಂಚ್ ಆಫೀಸು	ಹೆಡ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ	ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಭಂಗಾರದ ಕೈಬಳೆಗಳೂ ಚೈನುಗಳೂ ವಜ್ರದ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ನೋಡಿರಿ

[illegible]	ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
[illegible]	ನಗರ್ತಪೇಟೆ, ಬೆಂಗಳೂರು ಸಿಟಿ.

THE JUPITER GENERAL INSURANCE Co., Ltd.

Applications are invited from respectable and influential gentlemen from every Taluk and District Centres or Life Insurance Business. - Liberal terms.

A rare opportunity for spare time earnings.

We undertake also Fire & Motor cars Etc., Insurance.

Apply for Agency terms
To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R Ramaiya,
at Sri Rama Press, D. Subbiah Road, ...

Regd No. M 2322

ತಾಯಿನಾಡು.

ಪ್ರತಿದಿನವೂ ಪ್ರೈ[illegible] ಪ್ರಕಟವಾಗುವುದು.

ಸಂಪಾದಕ:
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಗುರುವಾರ ೨೧ ಫೆಬ್ರವರಿ ೧೯೨೪ [ಸಂಚಿಕೆ [illegible]

TAI NADU

22—2—1929

ರಾಜರುಗಳ ಶಿಕ್ಷಣ

ಡೆಲ್ಲಿಯಲ್ಲಿ ನಡೆದ ರಾಜರುಗಳ ಸಭೆಯಲ್ಲಿ ರಾಜಕುಮಾರರುಗಳ ಶಿಕ್ಷಣಕ್ಕೆ ತಕ್ಕ ಏರ್ಪಾಡನ್ನು ಮಾಡುವುದಕ್ಕಾಗಿ ಒಂದು ಕಮಿಟಿಯು ನೇಮಿಸಲ್ಪಡಬೇಕೆಂದು ಒಂದು ಸಲಹೆಯು ತರಲ್ಪಟ್ಟಿತು. ಆ ಸಲಹೆಯನ್ನು ತಂದಾಗ ಬಿಕಾನೀರ್ ಮಹಾರಾಜರು ಹೇಳಿದ್ದೇನೆಂದರೆ, "1916ರಲ್ಲಿ ನಡೆದ ರಾಜರುಗಳ ಸಭೆಯಲ್ಲಿ ಈ ವಿಷಯವು ಮೊದಲು ಪ್ರಸ್ತಾಪಕ್ಕೆ ಬಂತು. ಆಗಿನಿಂದಲೂ ಅನೇಕ ಬದಲಾವಣೆಗಳು ಆಗುತ್ತಿವೆ. ಅನೇಕ ದೇಶೀಯ ಸಂಸ್ಥಾನಗಳಲ್ಲಿ [illegible] ರಾಜಪ್ರಭುಗಳು ಏರ್ಪಡಿಸಲ್ಪಟ್ಟಿರುವವು. ಸಾಮಾನ್ಯ ವಿದ್ಯಾಭ್ಯಾಸಕ್ಕಿಂತಲೂ ಆಡಳಿತದ ಶಿಕ್ಷಣವು ಅವಶ್ಯಕವು. ಯಾವುದಾದರೂ ರಾಜ್ಯದಲ್ಲಿ [illegible] ರಾಜನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಹೋದರೆ, ಅದಕ್ಕೆ ಆ ರಾಜರುಗಳಿಗೆ ಚಿಕ್ಕಂದಿನಲ್ಲಿ ಆಡಳಿತ ಶಿಕ್ಷಣವು ಇಲ್ಲದೇ ಇರುವುದೇ ಮುಖ್ಯ ಕಾರಣ. ಆದುದರಿಂದಲೇ ಆಡಳಿತ ಶಿಕ್ಷಣಕ್ಕೆ ನಾನು ಬಹಳ ಪ್ರಾಧಾನ್ಯವನ್ನು ಕೊಡುತ್ತೇನೆ. 1927ರಲ್ಲಿ ವೈಸ್ರಾಯರವರು ಡೆಲ್ಲಿಯಲ್ಲಿ ನಡೆಸಿದ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿಯೂ ನವಾನಗರದ ಜಾಮ್ ಸಾಹೇಬರವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಭಾಗದಲ್ಲಿ ಮೂರು ಮುಖ್ಯವಾದ ವಿಷಯಗಳನ್ನು ಆಲೋಚಿಸಬೇಕಾಗುವುದು. (1) ಕಡೇ ಪಕ್ಷ ಎಷ್ಟು ಶಿಕ್ಷಣವನ್ನು ಕೊಡಬೇಕೆಂಬುದು, (2) ಆಡಳಿತ ಶಿಕ್ಷಣದ ಪದ್ಧತಿಗಳು (3) ರಾಜಕುಮಾರರುಗಳು ತಮ್ಮ ಆಲೋಚನೆಯಲ್ಲಿಯೂ, ನಡತೆಯಲ್ಲಿಯೂ [illegible] ಮಾಡುವುದು. ಈಗ ಒಂದು ವರ್ಷ [illegible] ಸಂಸ್ಥಾನಗಳಿಗೆ [illegible] ಸಂಸ್ಥಾನಗಳಿಗೆ ಸಂಬಂಧಿಸಿದ ದೊಡ್ಡದೊಡ್ಡ ಸಂಸ್ಥಾನಗಳಿಗೆ [illegible] ದೊಡ್ಡದೊಡ್ಡ ಸಂಸ್ಥಾನಗಳು [illegible]. ಆದುದರಿಂದ ದೊಡ್ಡ [illegible] ರಾಜರುಗಳು ತಮ್ಮ ಸಂಸ್ಥಾನದ [illegible] ಆಚಾರವಿಚಾರಗಳನ್ನು [illegible] ತಿಳಿದುಕೊಳ್ಳುವುದು ಉತ್ತಮ."

[illegible] ಈ [illegible] ಅನುಮೋದಿಸಿದರು.

ಈ ವಿಷಯವಾಗಿ ವೈಸ್ರಾಯರವರು ಹೇಳಿದ್ದೇನೆಂದರೆ, "ಈ ಶಿಕ್ಷಣದ ವಿಷಯವು ಅತಿಮುಖ್ಯವಾದುದು. ಇದರ ಪರಿಣಾಮವು ಬಹಳ ದೂರದವರೆಗೂ [illegible]. [illegible] ಈ ಭಾಗದಲ್ಲಿ [illegible] ಮಾಡಬೇಕು. ರಾಜರುಗಳ ಶಿಕ್ಷಣವು ಅತ್ಯಂತ ಮುಖ್ಯವಾದದ್ದು. ಇದರ ಮೇಲೆಯೇ ರಾಜರುಗಳ ಪುರೋಭಿವೃದ್ಧಿಯೇ ಅಲ್ಲದೆ, ಅದಕ್ಕಿಂತಲೂ ಹೆಚ್ಚಾಗಿ ದೇಶೀಯ ಸಂಸ್ಥಾನಗಳ ಪ್ರಜೆಗಳ ಪುರೋಭಿವೃದ್ಧಿಯು ಅವಲಂಬಿಸಿರುವುದು. ನನ್ನ ಅಭಿಪ್ರಾಯದಲ್ಲಿ ರಾಜಕುಮಾರರುಗಳು 21ನೇ ವಯಸ್ಸನ್ನು ಮುಟ್ಟಿದಾಗ ಅವರಿಗೆ ಆಡಳಿತ ಶಿಕ್ಷಣವನ್ನು ಕೊಡಬೇಕು. ನಿಮ್ಮಲ್ಲಿ ಕೆಲವರು ಈ ವಯಸ್ಸು ಬಹಳ ಹೆಚ್ಚು ಎನ್ನಬಹುದು. ಇನ್ನು ಕೆಲವರು ಬಹಳ ಕಡಿಮೆ ಎನ್ನಬಹುದು ಇಂಗ್ಲೆಂಡಿನ ರಾಜಕುಮಾರರಿಗೆ ಅವರ 21ನೇ ವಯಸ್ಸಿನಲ್ಲಿ ಆಡಳಿತ ಶಿಕ್ಷಣವು ಕೊಡಲ್ಪಡುತ್ತದೆ. ಇಂಗ್ಲೆಂಡಿನ ರಾಜರಿಗಿಂತಲೂ, ದೇಶೀಯ ರಾಜರುಗಳಿಗೆ ಹೆಚ್ಚು ಜವಾಬ್ದಾರಿಯೂ, ತಮ್ಮ ಪ್ರಜೆಗಳ ಮೇಲೆ ಹೆಚ್ಚು ಅಧಿಕಾರವೂ ಇರುತ್ತದೆ."

ಈ ಠರಾವಿಗೆ ರಾಜರುಗಳ ಸಭೆಯಲ್ಲಿ ಒಪ್ಪಿಗೆಯು ದೊರೆಯಿತು.

ಸಂಸ್ಕೃತ ಮಹಾ ಪಾಠಶಾಲೆಯ ವರದಿ.

1927—28

ಮುಖ್ಯಾಂಶಗಳು :—

ಮಹಾಪಾಠಶಾಲೆಯು ನಡೆದುದು 194 ದಿನಗಳು.

ವಿದ್ಯಾರ್ಥಿಗಳ ಹಾಜರಿಯು ಸಾಮಾನ್ಯವಾಗಿ ಸಮರ್ಪಕವಾಗಿಯೇ ಇದ್ದಿತು ಆದರೆ ಪ್ರಸಕ್ತ ಸಂವತ್ಸರದಲ್ಲಿ ಪ್ರತಿ ವಿದ್ಯಾರ್ಥಿಯೂ ಪಾಠಶಾಲೆಯು ನಡೆಯುವ ದಿವಸಗಳಲ್ಲಿ ಕಡೆಯ ಪಕ್ಷ ಶೇಕಡ 75 ದಿನಗಳು ಹಾಜರಿರಲೇಬೇಕೆಂದು ನಿರ್ಬಂಧವನ್ನೇರ್ಪಡಿಸಿದ್ದರಿಂದ ಹಾಜರಿಯು ಮೊದಲಿಗಿಂತಲೂ ಬಹು ಸಮರ್ಪಕವಾಗಿ ಕಾಣುತ್ತಿರುವುದು.

ವರ್ಗಗಳು ಮತ್ತು ವಿದ್ಯಾರ್ಥಿಗಳು.

ಮಹಾ ಪಾಠಶಾಲಾ ವರ್ಗಗಳನ್ನು ಪ್ರೌಢಶಾಖೆ, ಕೌಮಾರ—ಬಾಲಶಿಕ್ಷಾ ಶಾಖೆ, ವೇದಶಾಖೆ, ಆಗಮ ಶಾಖೆ ಎಂದು ನಾಲ್ಕು ಶಾಖೆಗಳಾಗಿ ವಿಂಗಡಿಸಿದೆ. ಎಲ್ಲ ಶಾಖೆಗಳಿಂದಲೂ ಒಟ್ಟು 63 ತರಗತಿಗಳಿವೆ

ಉಪಾಧ್ಯಾಯರುಗಳು.

(ಮಹಾ ಪಾಠಶಾಲೆಯಲ್ಲಿ ಮಹೋಪಾಧ್ಯಾಯರು 13 ಮಂದಿ, ಉಪಮಹೋಪಾಧ್ಯಾಯರು 3 ಮಂದಿ, ಸಹಾಯೋಪಾಧ್ಯಾಯರು 15 ಮಂದಿ ಹೀಗೆ ಒಟ್ಟು 31 ಸಂಖ್ಯಾಕರಾದ ಉಪಾಧ್ಯಾಯರುಗಳು ನೇಮಿಸಲ್ಪಟ್ಟಿದ್ದರು, ಆದಾಗ್ಯೂ ಕೆಳಗಣ ತರಗತಿಗಳಲ್ಲಿ ಇವರ ಸಹಾಯದಿಂದಲೇ ಪಾಠಪ್ರವಚನಗಳನ್ನು ನಡೆಯಿಸುವುದು ಕ್ಲಿಷ್ಟತರವಾಗಿ ಕಂಡುಬಂದುದರ ಮೇಲೆ, ಕಾರ್ಯನಿರ್ವಾಹಕ ಸಮಿತಿಯವರು ಒಂದು ಅಥವಾ ಹೆಚ್ಚು ವೇದಶಾಸ್ತ್ರಗಳಲ್ಲಿ ಪೂರ್ಣ ವಿದ್ಯತ್ಪರೀಕ್ಷೆಯನ್ನು ಕೊಟ್ಟು ಶಾಸ್ತ್ರಾಂತರ ವ್ಯಾಸಂಗದಲ್ಲಿ ಉದ್ಯುಕ್ತರಾಗಿರುವ ಪ್ರೌಢವಿದ್ಯಾರ್ಥಿಗಳನ್ನು ಅಂತಹ ಪಾಠಪ್ರವಚನಕ್ಕಾಗಿ ಅವರ ವಿದ್ಯಾರ್ಜನೆಗೆ ವಿರೋಧವಿಲ್ಲದಂತೆ 20 ರೂ ಪಾಯಿ ಮಾಸವೇತನದಮೇಲೆ ವಿದ್ಯಾರ್ಥಿಪಾಠಕರನ್ನಾಗಿ ನೇಮಿಸಿಕೊಳ್ಳುವ ಏರ್ಪಾಡನ್ನು ಮಾಡಿದರು.

ವಿದ್ಯಾರ್ಥಿ ವೇತನ—ವಿದ್ಯಾರ್ಥಿವೇತನಕ್ಕಾಗಿ ಮಾಸ ಒಂದಕ್ಕೆ ಸರ್ಕಾರದಿಂದ 756 ರೂ. ಗಳು ಸಲ್ಲುವುವು

ಪ್ರಕೃತದಲ್ಲಿ ನಾನಾ ವಿಧವಾಗಿಯೂ, ಬೇರೆಬೇರೆ ಸ್ಥಳಗಳಿಂದಲೂ ಸಲ್ಲುತ್ತಿರುವ ವಿದ್ಯಾರ್ಥಿವೇತನ ದ್ರವ್ಯವನ್ನು ಒಟ್ಟು ಗೂಡಿಸಿದರೆ ಮಾಸ ಒಂದಕ್ಕೆ 811 ರೂ. ಆಗುತ್ತದೆ.

ವಿದ್ಯಾರ್ಥಿ ಭೋಜನ.

ಮಹಾ ಪಾಠಶಾಲಾ ವಿದ್ಯಾರ್ಥಿಗಳ ಪೈಕಿ ಪದ್ಧತಿಯಂತೆ ಶ್ರೀಮನ್ಮಹಾರಾಜರವರ ಛತ್ರದಲ್ಲಿ ಸ್ಮಾರ್ತರೂ ಮಾಧ್ವರೂ ಸೇರಿ 40 ಮಂದಿ ವಿದ್ಯಾರ್ಥಿಗಳಿಗೂ ಶ್ರೀಶ್ವೇತವರಾಹಸ್ವಾಮಿಯವರ ದೇವಸ್ಥಾನದಲ್ಲಿ 14 ಮಂದಿ ಶ್ರೀವೈಷ್ಣವ ವಿದ್ಯಾರ್ಥಿಗಳಿಗೂ ಭೋಜನಕ್ಕೆ ಅನುಕೂಲಪಡಿಸಿತ್ತು. ಪ್ರಸಕ್ತ ಸಂವತ್ಸರದಲ್ಲಿ ಎರಡು ತಿಂಗಳಿನಿಂದ ಶ್ರೀಮನ್ಮಹಾರಾಜರವರ ಛತ್ರದಲ್ಲಿ ಮತ್ತೂ 5 ಮಂದಿ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಭೋಜನ ಸೌಕರ್ಯವು ಆಗಿರುವುದೆಂದು ತಿಳಿಸಲು ಬಹಳ ಸಂತೋಷಕರವಾಗಿದೆ. ಮತ್ತು ಶ್ರೀ ಶ್ರೀಗಳವರ ಶ್ರೀಮಠದಲ್ಲಿ ಈ ಪಾಠಶಾಲೆಯ ಸುಮಾರು ೯ ಮಂದಿ ಶ್ರೀವೈಷ್ಣವ ವಿದ್ಯಾರ್ಥಿಗಳಿಗೂ ಮೈಸೂರು ಅನಾಥಾಲಯದಲ್ಲಿ ಕೆಲವರಿಗೂ ಭೋಜನ ಸೌಕರ್ಯ ಕಲ್ಪನೆಯಾಗಿದೆ. ಇದರ ಮೇಲೆ ಕೆಲವು ಆಸ್ತಿಕ ಮಹಾಜನರು ತಮ್ಮ ಗೃಹಗಳಲ್ಲಿ ಅನೇಕ ವಿದ್ಯಾರ್ಥಿಗಳಿಗೆ ವಾರಾನ್ನಗಳನ್ನು ಕೊಟ್ಟು ಕಾಪಾಡುತ್ತಲಿರುವರು.

ವಿದ್ಯಾರ್ಥಿಗಳ ವಾಸಸ್ಥಳ.

ಈ ಮಹಾ ಪಾಠಶಾಲೆಯ ಹಿಂಭಾಗದಲ್ಲಿ ಕಟ್ಟಿರುವ ಕೊಠಡಿಗಳಲ್ಲಿ ಗತ ಸಂವತ್ಸರದಲ್ಲಿ ಒಟ್ಟು 140 ಮಂದಿ ವಿದ್ಯಾರ್ಥಿಗಳಿದ್ದರು. ಈಗ 160 ಮಂದಿ ಇರುವರು. ಇವರುಗಳ ಸ್ನಾನಾಹ್ನಿಕಾದಿಗಳಿಗೂ ವ್ಯಾಸಂಗಕ್ಕೂ ವಿಶೇಷ ಸೌಕರ್ಯಗಳು ಕಲ್ಪಿಸಲ್ಪಟ್ಟಿವೆ. ಈಚೆಗೆ ನೋಡಿದುದರಲ್ಲಿ 200 ಮಂದಿ ವಿದ್ಯಾರ್ಥಿಗಳಿಗಾದರೂ ಸ್ಥಳ ಸೌಕರ್ಯ ಮಾಡುವುದತ್ಯಾವಶ್ಯಕವಾಗಿ ಕಾಣುವುದು.

ಪುಸ್ತಕಭಾಂಡಾಗಾರ, ವಾಚಕಶಾಲೆ ಮತ್ತು ತ್ರೈಮಾಸಿಕ ಪತ್ರಿಕೆ.

ವರ್ಷಾರಂಭದಲ್ಲಿ ಮಹಾ ಪಾಠಶಾಲೆಯು ಪುಸ್ತಕ ಭಾಂಡಾಗಾರದಲ್ಲಿ 2,764 ಗ್ರಂಥಗಳು ಇದ್ದವು. ಪ್ರಸಕ್ತ ಸಂವತ್ಸರದಲ್ಲಿ 2,840 ಗ್ರಂಥಗಳಿವೆ. ಪುಸ್ತಕಗಳಿಗಾಗಿ ಈ ವರ್ಷ 275 ರೂ. ಗಳು ಖರ್ಚಾಗಿರುತ್ತದೆ. ಈ ಮಹಾ ಪಾಠಶಾಲೆಯ ವಿಚಾರಕ್ಕೆ ಸಂತತವೂ ತಮ್ಮ ಕೃಪಾಕಟಾಕ್ಷವನ್ನಿತ್ತು, ಅದರ ಪುರೋಭಿವೃದ್ಧಿಯಲ್ಲಿ ಹರ್ಷಚಿತ್ತರಾದ ಶ್ರೀಮನ್ಮಹಾರಾಜರವರ ಅನುಗ್ರಹದಿಂದ ಅರಮನೆಯ ಸರಸ್ವತೀ ಭಂಡಾರಕ್ಕೆ ಸೇರಿದ 1,671 ಮಾತೃಕೆಗಳನ್ನೂ, 2,084 ಮುದ್ರಿತವಾದ ಗಂಥಗಳನ್ನೂ, ಈ ವಿದ್ಯಾಶಾಲೆಯ ಪುಸ್ತಕ ಭಾಂಡಾಗಾರಕ್ಕೆ ಸಕಲ ಸಾಮಗ್ರಿಗಳೊಡನೆ ಗತ ಸಂವತ್ಸರದಲ್ಲಿ ಸೇರಿಸಲ್ಪಟ್ಟವು.

ವಿದ್ಯಾರ್ಥಿಗಳಿಗೆ ಪ್ರಪಂಚ ಜ್ಞಾನವು ಅಭಿವೃದ್ಧಿಯಾಗುವಂತೆ ಹೊಸದಾಗಿ ಕೆಲವು ಪತ್ರಿಕೆಗಳನ್ನು ತರಿಸಲಾಗಿದೆ. ವಿದ್ಯಾರ್ಥಿಗಳು ಇವುಗಳನ್ನು ಕ್ರಮವಾಗಿ ಓದುತ್ತಿರುವುದು ಸಂತೋಷಪ್ರದವಾಗಿದೆ.

ನಮ್ಮ ಮಹಾ ಪಠಶಾಲಾ ನಾಮಾಂಕಿತವಾದ ಗೀರ್ವಾಣ ಭಾಷಾತ್ಮಕ ತ್ರೈಮಾಸಿಕ ಪತ್ರಿಕೆಯನ್ನು ಈಗ ನಾಲ್ಕು ಸಂವತ್ಸರಗಳಿಂದ ಪ್ರಚುರ ಪಡಿಸುತ್ತಲಿದೆ.

ಇದಕ್ಕೆ ಸುಮಾರು 500 ಮಂದಿ ವರ್ಗಣಿದಾರರು ವರಿಸಿರುತ್ತಾರೆ.

ಉಪನ್ಯಾಸಗಳು

ಗತಸಂವತ್ಸರದಲ್ಲಿ ನಡೆದ ಉಪನ್ಯಾಸಗಳು 9. ಪ್ರಸ್ತುತ ಸಂವತ್ಸರದಲ್ಲಿ 18 ನಡೆದಿವೆ.

ಮಹಾ ಪಠಶಾಲೆಯಲ್ಲಿ ವ್ಯಾಸಂಗಮಾಡುತ್ತಲಿರುವ ವಿದ್ಯಾರ್ಥಿಗಳು ಒಳ್ಳೆಯ ಶೀಲವಂತರೂ ಉದ್ದಾಮಪಂಡಿತರೂ ಆಗುವುದಕ್ಕಾಗಿ, ಮಹಾ ಪಠಶಾಲೆಯ ವಿದ್ವಾಂಸರನ್ನೂ ಪ್ರೌಢವಿದ್ಯಾರ್ಥಿಗಳನ್ನೂ ಒಳಗೊಂಡ ಒಂದು ವಿದ್ವತ್ಸಭೆಯು ಈಗ ಒಂದು ತಿಂಗಳಲ್ಲಿ ಪ್ರಾರಂಭವಾಗಿರುತ್ತದೆ.

ತಾಯಿನಾಡು.

21—2—1929

ಉಪಾಧ್ಯಾಯರುಗಳ ಸಂಘ

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಈ ಮಾಹೆ 16 ನೇ ತಾ|| ಶನಿವಾರ ಮಧ್ಯಾಹ್ನ 4 ಗಂಟೆಗೆ ಮಾಮೂಲಿನಂತೆ ಮೇಲ್ಕಂಡ ಸಂಘದ ಮೀಟಿಂಗು ಸದ್ವಿದ್ಯಾಪಾಠಶಾಲೆಯಲ್ಲಿ ನಡೆಯಿತು. ಮೈಸೂರು ಸಿಟಿಯ ಮತ್ತು ತಾಲ್ಲೋಕಿನ ಉಪಾಧ್ಯಾಯರುಗಳೂ, ಕೆಲವು ಉಪಾಧ್ಯಾಯಿನಿಯರೂ ಬಾಲಕರುಗಳೂ ಈ ಸಭೆಗೆ ಬಂದಿದ್ದರು. ಅಧ್ಯಕ್ಷತೆಯನ್ನು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರಾದ ಮ|| ರಾ|| ಕೆ. ಕೃಷ್ಣರಾಯರು ವಹಿಸಿದ್ದರು. ಸಿಟಿ ರೇಂಜಿನ ಅ|| ಇನ್ಸ್‌ಪೆಕ್ಟರಾದ ಮ|| ಎಲ್. ಕೋನೇರಿರಾಯರವರೂ ಮತ್ತು ಮಧ್ಯದ ರೇಂಜಿನ್ ಅ|| ಇನ್ಸ್‌ಪೆಕ್ಟರಾದ ಮ|| ಯ ಓ. ಶ್ರೀನಿವಾಸ ಮೂರ್ತಿಯವರೂ ಸಭೆಯನ್ನು ಅಲಂಕರಿಸಿದ್ದರು

ಕಾರ್ಯಕ್ರಮಗಳು.

ಪಡವಾರಳ್ಳಿ ಸ್ಕೂ|| ಮಾ|| ಆದ ಮ || ಜಿಳಗಿ ರಂಗಯ್ಯಂಗಾರ್ಯರವರು ದೇವರ ಪ್ರಾರ್ಥನೆಯನ್ನೂ ಉಪಾಧ್ಯಾಯರ ಕರ್ತವ್ಯ. ವಿದ್ಯೆಯು ಚಿಕ್ಕ ಮಕ್ಕಳಲ್ಲಿ ನೆಲೆಯಾಗಿರಬೇಕಾದರೆ ಗುರುವು ಅನುಸರಿಸಬೇಕಾದ ರೀತಿ ಇವೇ ಮೊದಲಾದವು ಗರ್ಭೀಕೃತವಾಗಿರುವಂಥಾ ಪಂದ್ಯಗಳನ್ನ ಸುಶ್ರಾವ್ಯವಾಗಿ ಸಭಿಕರ ಹೃದಯಂಗಮವಾಗುವಂತೆ ಗಾನಮಾಡಿದರು. ಸಂಘದ ಸಹಾಯಕ ಕಾರ್ಯದರ್ಶಿಗಳಾದ ಮ|| ನಂಜುಂಡಶಾಸ್ತ್ರಿಗಳು ಕಳೆದ ಮೀಟಿಂಗಿನ ಕಾರ್ಯಕ್ರಮಗಳನ್ನೂ ಲೆಖ್ಖಪತ್ರಗಳನ್ನೂ ವಿವರವಾಗಿ ತಿಳಿಸಿದನಂತರ ದೇವರಾಜ ಪ್ರೈಮರಿ ಸ್ಕೂಲಿನ ಅ|| ಮಾ|| ರಾದ ಮ|| ಬಸಪ್ಪನವರು ಪ್ರಕೃತಿಪಾಠದ ಮಾದರಿ ಪಾಠವನ್ನು ಬಾಲಕರಿಗೆ ಬೋಧಿಸಿದರು. ಮ|| ರಾ|| ಸಿ. ಎಸ್. ನಂಜುಂಡಾರಾಧ್ಯರು "ಉಪಾಧ್ಯಾಯರ ಕಾರ್ಯನಿರ್ವಾಹ' ಎಂಬ ವಿಷಯವಾಗಿ ಅರ್ಥಗರ್ಭಿತವಾದ ಉಪನ್ಯಾಸವನ್ನು ಓದಿದರು. ಅದರಲ್ಲಿ ಈ ಸಂಘದ ಆವಶ್ಯಕತೆ, ಉಪಾಧ್ಯಾಯರಿಗಿರಬೇಕಾದ ವಿದ್ಯಾಸಕ್ತಿ, ವಿದ್ಯಾರ್ಥಿಗಳು ಸ್ವಸಾಮರ್ಥ್ಯದಿಂದಲೇ ಜೀವನ ಮಾಡಿಕೊಳ್ಳಲು ನೈಪುಣ್ಯವನ್ನ ಕಲ್ಪಿಸಿಕೊಡತಕ್ಕ ವ್ಯವಸಾಯ, ವಾಣಿಜ್ಯ, ಗ್ರಾಮಾಂತರಗಳಲ್ಲಿ ಉಪಾಧ್ಯಾಯರು ರೈತಾಪಿ ಜನರಲ್ಲಿ ವಿಕೀಭವಿಸಿ ಅವರ ವಿದ್ಯಾನೈಪುಣ್ಯಾದಿ ಕಲೆಗಳಿಗೆ ಸಹಕರಿಸಬೇಕಾದ ರೀತಿಯ. ಮಾರ್ಗ, ಉಪಾಧ್ಯಾಯರು ತಮ್ಮ ಮೇಲೆ ಬಿದ್ದಿರುವ ಮುಂದಿನ ಜನಾಂಗದ ಏಳಿಗೆಗಾಗಿ (ವಿದ್ಯಾಭ್ಯಾಸದ ವಿಷಯದಲ್ಲಿ) ಕಂಡುಹಿಡಿಯಬೇಕಾದ ನೂತನ ಶೋಧನೆಗಳು ಎಲ್ಲಾ ವಿಷಯದಲ್ಲಿಗ ರುವು ಮೇಲ್ಪಜ್ಞೆಯ ಗಿರಬೇಕಾದ ಕ್ರಮ, ಇವೇ ಮೊದಲಾದ ಜನಾಂಗದ ವಿದ್ಯೆಯು ನೈತಿಕ ಶಕ್ತಿಯನ್ನ ಹೆಚ್ಚಿಸಲು ಪ್ರಯುಕ್ತವಾದ ಹಲವು ವಿಷಯಗಳ ಅಡಕವಾಗಿದ್ದವು ಅಷ್ಟುಮಾತ್ರ ಮೇಲಿನ ಭಾಷಣವನ್ನು ಬಹಳವಾಗಿ ಶ್ಲಾಘಿಸಿ ತಮ್ಮ ಮೆಚ್ಚಿಗೆಯನ್ನು [illegible] "ದಾಯಿನಿ" ಮಾಸ ಪತ್ರಿಕೆಯಲ್ಲಿ ಪ್ರಚುರಪಡಿಸುವುದಕ್ಕಾಗಿ ಉಪನ್ಯಾಸಕರನ್ನ ಪ್ರೋತ್ಸಾಹಿಸಿದರು. ಚಾಮರಾಜ ಪ್ರೈ|| ಸ್ಕೂ|| ಹೆ|| ಮಾ|| ಮ|| ಎಸ್. ಕಾಮಣ್ಣನವರ ಭಾಷಣ:— ಈ ಸಂಘವು ಸ್ಥಾಪಿತವಾಗಿ 12 ವರುಷಗಳಾಗಿದ್ದರೂ ಕಾರಣಾಂತರಗಳಿಂದ ನಿಂತು ಹೋಗಿದ್ದದ್ದು ಮಾಜಿ ಸಿಟಿ ರೇಂಜ್ ಅ|| ಇನ್|| ರವರಾದ ಮ|| ರಾ|| ಸಿ. ಆರ್. ಮಾಧವರಾಯರವರ ಕಾಲದಲ್ಲಿ ಪುನರುಜ್ಜೀವನವಾಗಿ ಹಾಲಿ [illegible] ಕ್ರಮವಾಗಿ ಪುರೋಭಿವೃದ್ಧಿ ಸ್ಥಿಯ ಪ್ರಯತ್ನದಲ್ಲಿರುವುದು ತುಂಬಾ ಸಂತೋಷಪ್ರದವು

ಸಹಾಯಕ ಕಾರ್ಯದರ್ಶಿಗಳಾದ ಮ|| ನಂಜುಂಡಶಾಸ್ತ್ರಿಗಳವರು ಈ ಸಂಘಕ್ಕೆ ಒಂದು ಪುಸ್ತಕಭಂಡಾರವು ಏರ್ಪಾಟಾಗಬೇಕೆಂದು ಸೂಚಿಸಿದ ಸಲಹೆಗೆ ನನ್ನ ಪೂರ್ಣ ಸಮ್ಮತಿ ಇವೆ. ಭಂಡಾರವು ಉಪಾಧ್ಯಾಯರುಗಳ ಲೋಕಾನುಭವಕ್ಕೆ ಅತ್ಯವಶ್ಯಕ ಸಂಘದ ಪ್ರಸಕ್ತಕಾರ್ಯವೆಲ್ಲವೂ ಬರೀ ಉಪನ್ಯಾಸಗಳಲ್ಲಿ ಮುಕ್ತಾಯವಾಗುತ್ತಿದೆ. ಆರಂಭಶೂರಾಃ ಎಂಬ ನಾಣ್ಣುಡಿಯಂತಾಗಿದೆ ಧಾರವಾಡ ಮುಂತಾದ ಕಡೆಗಳಲ್ಲಿರುವ ಹಾಗೆ ಉಪಾಧ್ಯಾಯರ ಗಳ ಏಕೀಕರಣವೂ ಸಂಘಶಕ್ತಿಯೂ ಉಂಟಾಗುವುದಕ್ಕೆ ಸಾಧಕವಾದ ಅಭಿವೃದ್ಧಿಯ ಮೊಳಕೆಯು ಬೇರೂರಬೇಕು. ಗ್ರಾಮಾಂತರಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಒದಗಿರತಕ್ಕ ಪುರಸ್ಕಾರವೂ ಸಹ ದೊರೆಯುತ್ತಿಲ್ಲ. (ಸಭೆಯ ಎಲ್ಲಾ ಕಡೆಯಲ್ಲೂ ಕೈಚಪ್ಪಾಳೆಗಳು.)

ಬೆಂಗಳೂರು ಮೈಸೂರು ನಗರಗಳಲ್ಲಿರುವವರಿಗೆ ವಾಸಕ್ಕಾಗಿ ಸಣ್ಣ ಪುಟ್ಟ ಮನೆಗಳನ್ನಾಗಲಿ ಅಥವಾ ಯುಕ್ತೋಚಿತವಾದ ಅಲೋಯನ್ಸ್‌ನ್ನಾಗಲೀ ಕೊಡಿಸಬೇಕು ಉಪಾಧ್ಯಾಯರ ಸಂಬಳವು ಅನವರತ ಯೋಗ್ಯತಾನುಸಾರ 20 ರೂ ನಿಂದ 50 ರೂಗಳ ವರೆಗೆ ಹೆಚ್ಚಿಸಲ್ಪಡಬೇಕು. ಎಂದು ತಿಳಿಸಿದರು. (ಕೈಚಪ್ಪಾಳೆಗಳು.)

ಮ|| ಎಲ್. ಕೋನೇರಿರಾಯರು:— ಈವತ್ತಿನ ಸಭೆಗೆ ಡಿ|| ಎ|| ಆ|| ರಾದ ಮ|| ಕೃಷ್ಣರಾಯರವರು ದಯಮಾಡಿ ಅಧ್ಯಕ್ಷತೆಯನ್ನು ವಹಿಸಿ ಸಂಘದಲ್ಲಿ ಏರ್ಪಾಡಾಗಬೇಕಾಗಿರುವ ಪುಸ್ತಕ ಭಂಡಾರಕ್ಕೆ ಐವತ್ತು ರೂ ಗಳನ್ನ ಸ್ವಂತವಾಗಿ ಸಹಾಯ ಮಾಡುವುದಾಗಿ ತಿಳಿಸಿರುವರೆಂದು ಹೇಳಿದರು.

ಅಧ್ಯಕ್ಷರ :— ಪುಸ್ತಕಭಂಡಾರದ ವಿಷಯದಲ್ಲಿಯೂ ಉಪಾಧ್ಯಾಯರಿಗೆ ಸರ್ಕಾರದಿಂದ ದೊರೆಯಬಹುದಾದ ಸೌಕರ್ಯಗಳನ್ನ ಕಲ್ಪಿಸಿಕೊಡತಕ್ಕ ವಿಷಯದಲ್ಲಿಯೂ ಸಹಾಯ ಮಾಡುತ್ತೇನೆಂದು ತಿಳಿಸಿದರು. ನಂತರ ಮ|| ನಂಜುಂಡಶಾಸ್ತ್ರಿಗಳವರು ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಜಯಧ್ವನಿಯೊಡನೆ ಸಭೆಯು ಪರಿಸಮಾಪ್ತಿ ಹೊಂದಿತು.

ಪ್ರಕಟಣೆಯ ಖರ್ಚು.

ಅಮೇರಿಕದ ಒಂದು ಸಿಗರೇಟು ಕಂಪನಿಯವರು 28 ನೇ ಇಸವಿಯಲ್ಲಿ ಪ್ರಕಟನೆಗಾಗಿ 33½ ಲಕ್ಷ ರೂಗಳನ್ನ ಖರ್ಚುಮಾಡಿರುವರೆಂದು ತಿಳಿದುಬಂದಿದೆ. ಇದರ ಪೈಕಿ 18 ಲಕ್ಷವು ವೃತ್ತಪತ್ರಿಕೆಗಳಿಗೆ ವಿನಿಯೋಗವಾಗುವುದು. ಜನರಲ್ ಮೋಟಾರ್ ಕಂಪನಿಯು ಆ ಸಾಲಿನಲ್ಲಿ 46½ ಲಕ್ಷ ರೂ ಯನ್ನು ಪ್ರಕಟನೆಗೆ ಖರ್ಚು ಮಾಡಿದೆ. ಈ ಉದಾಹರಣೆಗಳಿಂದ ಪ್ರಕಟನೆಗಳು ಅವರನ್ನು ಹೇಗೆ ಶ್ರೀಮಂತ ಪದವಿಗೇರಿಸುತ್ತವೆ ಎಂಬುದು ತಿಳಿಯುತ್ತದೆ.

ವರ್ತಮಾನ ಸಂಗ್ರಹ

ವಿಲೇಜ್ ಪಂಚಾಯಿತಿ.

ನೆಲಮಂಗಲದ ತಾ|| ಅಲೂರು ವಿಲೇಜ್ ಪಂಚಾಯತಿಗೆ ಪಟೇಲ್ ಮ|| ಈರಪ್ಪನವರನ್ನು ಛೇರ್‌ಮನ್ ಆಗಿ ನಾಮಿನೇಟ್ ಮಾಡಿರುವರು.

ರಜಾ

ಅಸಿಸ್ಟೆಂಟ್ ಇಂಜಿನಿಯರಾದ ಮ|| ಕೆ. ಬಿ. ಜೋಶಿಯವರಿಗೆ ಈ ಮಾಹೆ 17 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜವು [illegible]ದೆ.

ವಿದ್ಯಾಭ್ಯಾಸದ [illegible] ಎಸ್. ಎಸ್. ಸುಬ್ಬರಾಯರವರಿಗೆ [illegible] 1 [illegible] ಲೇಜ್ ರಜಾ ಕೊಟ್ಟಿದೆ.

ಆ ಕಾಲದಲ್ಲಿ ಡೆ| ಡೈ| ರವರಾದ ಮ|| ಸುಲ್ತಾನ್ ಮೊಹಿಯುದೀನ್‌ರವರು ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನೂ ನೋಡಿಕೊಳ್ಳುವರು.

ಇನ್ಸ್‌ಪೆಕ್ಟರುಗಳು.

ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರುಗಳು ತಮ್ಮ ಎಲ್ಲೆಗಳಲ್ಲಿರುವ ರಿಜಿಸ್ಟ್ರೇಷನ್ ಆಫೀಸ ಗಳಿಗೆ ಎಕ್ಸ್ ಅಫಿಷಿಯೋ ಇನ್‌ಸ್ಪೆಕ್ಟರುಗಳಾಗಿರಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಇಂಜಿನಿಯರಿಂಗ್ ಇಲಾಖೆ.

ಹುಣಸೂರಿನ ಅ| ಇಂಜಿನಿಯರಾದ [illegible] ಎಸ್. ಲಕ್ಷ್ಮಣರಾಯರಿಗೆ 2 ತಿಂಗಳ [illegible] ರಜಾ ಮಂಜೂರಾಗಿದೆ ಆ ಕಾಲದಲ್ಲಿ ಮೈಸೂರು [illegible] ಡಿವಿಷನ್ (ನಂ 2)ನಲ್ಲಿ ಹಾಲಿ ಕೆಲಸ ನೋಡುತ್ತಿರುವ [illegible] ಇಂಜಿನಿಯರಾದ ಮ. ಎಸ್ [illegible] ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನು ನೋಡಿಕೊಳ್ಳುವರು.

ಇರ್ವಿನ್ ಕೆನಾಲ್ (ನಂ.)ಡಿವಿಷನ್ [illegible] ಯರಾದ ಮ|| ವೆಂಕಟರಾಮಯ್ಯನವರು [illegible] ಸಾಗರದ ಸೆಂಟ್ರಲ್ ಆಫೀಸಿಗೆ ಛೀಫ್ ಇಂಜಿನಿಯರವರಾಗಿ ಅಸಿಸ್ಟೆಂಟಾಗಿ [illegible] ಗಾರ್ರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುವರು.

ಗೇಜಿಂಗ್ ಮತ್ತು ಅಪ್ಪರ್ ಕೆನಾಲುಗಳ [illegible] ಆ| ಇಂಜಿನಿಯರಾದ ಮ| ಕೆ. [illegible] ಗಳು ಯಡತೊರೆ ಸಬ್ ಡಿವಿಷನ್ನಿಗೆ ವರ್ಗಾಯಿಸಲ್ಪಟ್ಟಿರುವರು.

ಚಾನಲ್ ಡಿವಿಷನ್ (ನಂ. 4)

ಅ| ಇಂಜನಿಯರಾದ ಮ| ಎಂ. ಕೆ. ನರಸಿಂಹಯ್ಯಂಗಾರ್ರಿಗೆ ಈ ಮಾಹೆ 18ರಿಂದ 20 ದಿವಸಗಳ ರಜಾ ಮಂಜೂರಾಗಿದೆ

ಅಸ್ಪೃಶ್ಯತಾ ನಿಷೇಧಕ ಪರಿಷತ್ತು.

ಮದರಾಸಿನಲ್ಲಿ ನಡೆದ ಮೇಲ್ಕಂಡ ಪರಿಷತ್ತಿನ ಅಧ್ಯಕ್ಷತೆಯನ್ನು ಮ|| ಆರ್. ಕೃಷ್ಣರಾವ್ ಭೋಂಸ್ಲೆಯವರು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ "ಅಸ್ಪೃಶ್ಯರಿಗೆ ಈಗಿರುವ ತೊಂದರೆಗಳೆಲ್ಲಾ ಸೈಮನ್ ಜಾಯಿಂಟ್ ಕಮಿಟಿಗೆ ಬಂಗಾಳ ಪತಿತ ಜನರ ಪ್ರತಿನಿಧಿಗಳಿಂದ ನಿವೇದಿಸಲ್ಪಟ್ಟಿತು. ಶ್ರೀ ರಾಮಾನುಜಾಚಾರ್ಯರು ಅಸ್ಪೃಶ್ಯರ ಉದ್ಧಾರಕ್ಕಾಗಿ ಮಾಡಿದ ಪ್ರಯತ್ನಗಳನ್ನು ತೊ

Printed and published by P. R. Ramaiya.

Regd No. M 2322 || ವಂದೇಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ: ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೯—೦—೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಶುಕ್ರವಾರ ೨೨ ಫೆಬ್ರವರಿ ೧೯೨೯ [ಸಂಚಿಕೆ ೧೧೮

ಕರ್ನಾಟಕ ಏಕೀಕರಣೋತ್ಸವ.

ಈ ದಿನ ಸಾಯಂಕಾಲ ಟೌನ್ ಹಾಲಿನಲ್ಲಿ ಪುರಜನರ ಸಭೆ ನಡೆಯುವುದು.

ಸೂಚನೆ

ಕರ್ನಾಟಕದ ಏಕೀಕರಣೋತ್ಸವದ ನಿಮಿತ್ತ ಈ ದಿನ ನಮ್ಮ ಆಫೀಸಿಗೆ ರಜ ಕೊಟ್ಟಿರುವದರಿಂದ ನಾಳೆ ದಿನದ ಪತ್ರಿಕೆಯು ಹೊರಡುವುದಿಲ್ಲ.

ವ್ಯವಸ್ಥಾಪಕ.

TAI NADU

21—2—1929

ಕರ್ನಾಟಕ ಏಕೀಕರಣ

ಕರ್ನಾಟಕದ ಇತಿಹಾಸದಲ್ಲಿ ಈ ದಿನವು ಅತ್ಯಂತ ಸ್ಮರಣೀಯವಾದದ್ದು. ತನ್ನ ನಾನಾ ಭಾಗಗಳಲ್ಲಿ ಚದುರಿಹೋಗಿರುವ ಕರ್ನಾಟಕವನ್ನು ಒಟ್ಟುಗೂಡಿಸಿ ಏಕಪ್ರಾಂತ್ಯವನ್ನಾಗಿ ಮಾಡಬೇಕೆಂದು ಇಪ್ಪತ್ತು ವರ್ಷಗಳ ಹಿಂದೆ ಆಗ ಬದುಕಿದ್ದ ಶ್ರೀ ರಾಘವೇಂದ್ರ ರಾಯರು ಪ್ರಾರಂಭಿಸಿದರು. ಈ ದಿನದಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಕರ್ನಾಟಕದ ಕರ್ನಾಟಕ ಮಾತೆಯ ಪೂರ್ವ ವೈಭವವನ್ನು ಸ್ಮರಣೆಗೆ ತಂದುಕೊಂಡು ಪುನಃ ಆ ವೈಭವವು ಹೇಗೆ ಸ್ಥಾಪಿಸಲ್ಪಡಬೇಕು ಎಂಬುದನ್ನು ಕುರಿತು ಆಲೋಚಿಸುವುದಲ್ಲದೆ ಅದಕ್ಕಾಗಿ ಕರ್ತವ್ಯವನ್ನೂ ಮಾಡಬೇಕು. ಕರ್ನಾಟಕ ಮುಖಂಡರುಗಳು ಈ ದಿನ [illegible] ಕರ್ನಾಟಕದಲ್ಲಿ ಒಂದು ಹಬ್ಬವನ್ನಾಗಿ [illegible] ಬೇಕೆಂದು ಸಂದೇಶವನ್ನು [illegible]ದರು. ಅದರಂತೆ ನಮ್ಮ ಮೈಸೂರು ರಾಜಧಾನಿಯಲ್ಲಿಯೂ ಆಚರಿಸಲ್ಪಡುತ್ತಿರುವುದು ಬಹಳ ಸಂತೋಷದ ಸಂಗತಿ. ಕರ್ನಾಟಕ ಏಕೀಕರಣವೆಂದರೆ ಚದುರಿಹೋಗಿರುವ ಕರ್ನಾಟಕವನ್ನು ಒಟ್ಟುಗೂಡಿಸುವುದು. ಎಲ್ಲಾ ಭಾಗದಲ್ಲಿಯೂ ಇರತಕ್ಕ ಕರ್ನಾಟಕವು ಒಂದೇ ಕನ್ನಡಿಗರೆಂತೆ ಇರುವುದು. ರಾಜಕೀಯವಾಗಿ ಕರ್ನಾಟಕದ ಭಾಗಗಳು ಇಲ್ಲೊಂದು ತುಂಡು ಅಲ್ಲೊಂದು ತುಂಡು ಈ ರೀತಿಯಾಗಿ ಬೇರೆ ಬೇರೆ ಪ್ರಾಂತ್ಯಗಳಿಗೆ ಸೇರಿಸಲ್ಪಟ್ಟಿರುವುವು. ಕೆಲವು ಭಾಗ ಬೊಂಬಾಯಿ ಅಧಿಪತ್ಯಕ್ಕೆ ಕೆಲವು ಭಾಗ ಮದರಾಸು ಅಧಿಪತ್ಯಕ್ಕೆ ಕೆಲವು ದೇಶೀಯ ಸಂಸ್ಥಾನಗಳಿಗೂ ಸೇರಿರುವುದು. ದೇಶೀಯ ಸಂಸ್ಥಾನಗಳಿಗೆ ಕರ್ನಾಟಕದ ಬಹಳ ದೊಡ್ಡ ತುಂಡುಗಳು ಸೇರಿರುವುವು. ಹೈದರಾಬಾದ್ ಮೈಸೂರು ಮುಂತಾದ ಕೊಲ್ಲಾಪುರ ಮೊದಲಾದ ಸಂಸ್ಥಾನಗಳಲ್ಲಿ ಕರ್ನಾಟಕದ ಭಾಗವು ಅಧಿಕವಾಗಿರುವುದು, ಮೈಸೂರಂತೂ ಶತಕ್ಕೆ ಶತ ಕರ್ನಾಟಕವೇ.

ಈ ಚದುರಿಹೋದ ಕರ್ನಾಟಕದ ಬ್ರಿಟಿಷ್ ಭಾಗವನ್ನೆಲ್ಲಾ ಒಟ್ಟುಗೂಡಿಸಿ ಒಂದು ಬೇರೆ ಪ್ರಾಂತ್ಯವನ್ನಾಗಿ ಮಾಡಬೇಕೆಂದು ಬೊಂಬಾಯಿ ನ್ಯಾಯಸಭೆಯಲ್ಲಿ [illegible] ನಲ್ಲಿಯೂ ಕೌನ್ಸಿಲ್ ಆಫ್ ಸ್ಟೇಟ್ ನಲ್ಲಿಯೂ ಕರ್ನಾಟಕದ ಠರಾವುಗಳು ಬಂದವು. ಸರ್ಕಾರದವರು ಅದಕ್ಕೆ ಸಹಾನುಭೂತಿಯನ್ನು ತೋರಿಸಿರುವುದಿಲ್ಲ. ಕರ್ನಾಟಕ ಏಕೀಕರಣವಾದಿಗಳು ಈ ತರಹಗೆ ಬೇಕಾದ ವಿಷಯಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ [illegible]

ಮಹಾಜನರ ಸಭೆ

ಈ ದಿನ ಸಾಯಂಕಾಲ 6 ಗಂಟೆಗೆ ಟೌನ್ ಹಾಲಿನಲ್ಲಿ ಕರ್ನಾಟಕ ಏಕೀಕರಣೋತ್ಸವದ ನಿಮಿತ್ತ ಸಭೆ ನಡೆಯುವುದು. ಶೇಟ್ ಜಮ್ನಾಲಾಲ ಬಜಾಜರೂ ಶ್ರೀಯುತ ಸಿ. ರಾಜಗೋಪಾಲಾಚಾರ್ಯರೂ ಮತ್ತು ಇತರ ಮಹನೀಯರುಗಳೂ ಭಾಷಣ ಮಾಡುವರು. ಮಹಾಜನರು ದಯಮಾಡಿ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

[illegible] ಕೂಡ ಕರ್ನಾಟಕ ಮುಖಂಡರು ಮಾಡುವ ಪ್ರಯತ್ನಗಳು ಶ್ಲಾಘಿಸಲ್ಪಟ್ಟಿವೆ.

ಈ ರಾಜಕೀಯ ಏಕೀಕರಣದಲ್ಲಿ ದೇಶೀಯ ಸಂಸ್ಥಾನಗಳ ಪ್ರಜೆಗಳಾದ ನಾವು ಈಗಲೇ ಭಾಗಿಯಾಗುವುದು ಅಸಾಧ್ಯವಾದರೂ ಕರ್ನಾಟಕ ಸಂಸ್ಕೃತಿಯ ಏಕೀಕರಣದಲ್ಲಿ ನಾವು ಭಾಗವನ್ನು ತೆಗೆದುಕೊಳ್ಳುವುದು ಅವಶ್ಯಕ. ಕನ್ನಡ ಭಾಷೆ ಕನ್ನಡ ಸಾಹಿತ್ಯ ಕನ್ನಡ ಲಲಿತಕಲೆ — ಇವೇ ಮೊದಲಾದ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಭಾಗವನ್ನು ತೆಗೆದುಕೊಳ್ಳಬೇಕು.

ಕರ್ನಾಟಕದ ಸಾಹಿತ್ಯ ಪರಿಷತ್ತಿನವರು ಮಾಡುತ್ತಿರುವ ಶ್ಲಾಘನೀಯವಾದ ಕೆಲಸವು ಇನ್ನೂ ಉತ್ಸಾಹವಾಗಿ ನಡೆಯುವುದಕ್ಕೆ ಪ್ರಯತ್ನಗಳು ನಡೆಯಬೇಕು. ಬೆಂಗಳೂರಿನ ಮತ್ತು ಮೈಸೂರಿನ ಕಾಲೇಜುಗಳಲ್ಲಿರುವಂತೆ ಪ್ರತಿಯೊಂದು ವಿದ್ಯಾಶಾಲೆಯಲ್ಲಿಯೂ ಕರ್ನಾಟಕ ಸಂಘಗಳು ಸ್ಥಾಪಿಸಲ್ಪಟ್ಟು ಕರ್ನಾಟಕ ಸಂಸ್ಕೃತಿಯ ಬೆಳೆಯುವಂತೆ ಪ್ರಯತ್ನಗಳು ನಡೆಯಬೇಕು.

ಇಲ್ಲಿಕ್ಕಿಂತಲೂ ಹೆಚ್ಚಾಗಿ ನಮ್ಮ ಮೈಸೂರು ವಿಶ್ವವಿದ್ಯಾನಿಲಯವು ಕರ್ನಾಟಕ ಸಂಸ್ಕೃತಿಯ ಏಕೀಕರಣೋದ್ದೇಶಕ್ಕೆ ಬಹಳ ಉತ್ತೇಜನವನ್ನು ಮಾಡಬಹುದು. ಈ ವಿಷಯಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನವನ್ನು ಸೆಳೆಯಲು ಬಯಸುವೆವೆಂದು ಸೂಚಿಸುತ್ತೇವೆ.

ನಮ್ಮ ಸಹೋದ್ಯೋಗಿಯಾದ 'ರಾಷ್ಟ್ರಬಂಧು' ವು ಕರ್ನಾಟಕ ಏಕೀಕರಣದ ವಿಷಯದಲ್ಲಿ ಹೇಳಿರುವ ಮಾತುಗಳನ್ನು ನಮ್ಮ ವಾಚಕರ ಅವಗಾಹನೆಗಾಗಿ ಇಲ್ಲಿ ಕೊಡುವೆವು.

"ಈಗ ಬೇಕಾದುದು ಕನ್ನಡಿಗರಿಗೆ ಆತ್ಮಾಭಿಮಾನದ ಸ್ಮರಣೆ. ತಾವೆಲ್ಲರೂ ಎಲ್ಲೆಲ್ಲಿ ಚದರಿಹೋಗಿದ್ದರೂ ಒಂದೇ ರಕ್ತದ ಒಂದೇ ಭಾಷೆ. ಕನ್ನಡಿಗರೆಂಬ ಕೆಚ್ಚು ವೃದ್ಧಿಯಲ್ಲಿ ಅಭಿಮಾನ [illegible] ಕನ್ನಡಿಗರಾಗಿ ಬಾಳುವುದರಲ್ಲಿ ಹೆಮ್ಮೆ. ಕನ್ನಡಿಗರಾಗಿ ಸಾಯುವುದರಲ್ಲಿ ಉತ್ಸಾಹ. ಇಂತಹ ನಿಶ್ಚಲವಾದ ಮನೋವೃತ್ತಿಯಿಂದಲೇ ಕರ್ನಾಟಕದ ಎಲ್ಲಾ ಉದ್ದೇಶಗಳೂ ಕೈಗೂಡುವುವೆಂದು ನಮಗೆ ನಂಬಿಕೆಯಾಗಿದೆ. ನಮ್ಮ ಪ್ರಾಂತದ ಉದ್ದಗಲ ಇಂತಿಷ್ಟು. ಅದರ ಜನಸಂಖ್ಯೆ ಇಂತಿಷ್ಟು. ಅದು ಆರ್ಥಿಕ ಸ್ವಾತಂತ್ರ್ಯವು ಈ ಬಗೆಯದಾಗಿದೆ, ಎಂಬ ಗಣೀತಶಾಸ್ತ್ರದ ಸಿದ್ಧಾಂತಗಳೆಲ್ಲಾ ಗೌಣವಾಗಿವೆಯೆಂದು ನಮಗೆ ತೋರುತ್ತದೆ. ಪ್ರತಿಯೊಬ್ಬ ಕನ್ನಡಿಗನೂ ವೀರ ಕನ್ನಡಿಗನಾಗಲಿ. ಅವನ ನಾಡಿಗಳಲ್ಲಿ ಹರಿವ ಪ್ರತಿಯೊಂದು ರಕ್ತದ ಅಣುವೂ ಕನ್ನಡದ ಅಭಿಮಾನಶಕ್ತಿಯಿಂದ ವೇಗಗೊಂಡಲಿ. ಆಗಲೇ ಕನ್ನಡನಾಡು ಸ್ವತಂತ್ರವಾಗುವದು. ಈ ರೀತಿಯಲ್ಲಿ ಆತ್ಮಶೋಧನೆಮಾಡಿ ಕನ್ನಡಿಗರು ಕೆಲಸಕ್ಕೆ ಕೈಹಾಕಿದರೆ ಅವರ ಕೈಗಟ್ಟುವ ಶಕ್ತಿ ಯಾವ ದೈವಕ್ಕೂ ಇಲ್ಲವೆಂಬ ಅರಿವು ಅವರಲ್ಲಿರಲಿ!"

ವಿವಿಧ ವಿಷಯಗಳು

ರೈಲ್ವೆ ಆದಾಯ

1929 ನೇ ಫೆಬ್ರವರಿ 2 ನೇ ತಾರೀಖಿಗೆ ಕೊನೆಯಾದ ವಾರಕ್ಕೆ ಮೈಸೂರು ರೈಲ್ವೆಗಳ ಒಟ್ಟು ಆದಾಯ 69,000 ರೂಗಳು. ಹೋದ ವರುಷ ಇದೇ ವಾರಕ್ಕೆ ಇದಕ್ಕಿಂತಲೂ 5835 ರೂಗಳು ಹೆಚ್ಚಿತ್ತು.

ಗಾಂಧಿಯವರ ಆತ್ಮಕಥೆ:—

ಮಹಾತ್ಮಾ ಗಾಂಧಿಯವರ ಆತ್ಮಕಥೆಯ ಮೊದಲನೆ ಭಾಗವನ್ನು ಅಮೇರಿಕಾದ ಮೆಕ್ಮಿಲನ್ ಕಂಪೆನಿಯವರು ಒಂದು ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿರುತ್ತಾರೆ. ಮಹಾತ್ಮರವರು ಈ ಹಣವನ್ನು ಖಾದಿ ಪ್ರಚಾರಕ್ಕೆ ಉಪಯೋಗಿಸುವರೆಂದು ತಿಳಿದು ಬಂದಿದೆ.

ದಿವಾನರಿಗೆ ಒಂದು ಪಾರ್ಟಿ

ನಮ್ಮ ಸಂಸ್ಥಾನದ ದಿವಾನರಾದ ಮಿರ್ಜಾ ಸಾಹೇಬರು ಈಗ ಡೆಲ್ಹಿಯಲ್ಲಿರುವರಷ್ಟೆ. ಅವರಿಗೆ ಅವರ [illegible] ಒಂದು ಸತ್ಕಾರ ಕೂಟವನ್ನು [illegible]ಡಿಸಿದ್ದರೆಂದೂ [illegible] ಅಸೋಸಿಯೇಟೆಡ್ ಪ್ರೆಸ್ ವರದಿಯು ತಿಳಿಸುತ್ತದೆ. [illegible] ಬಹದೂರ್ ಹಾಜಿ [illegible] ಇಂಡಿಯಾ ಸರ್ಕಾರ [illegible] ಕೆಲವು ಮೆಂಬರುಗಳೂ [illegible] ಕೆಲವು [illegible] ಸರ್ ಮುಹಮ್ಮದ್ ಹಬೀಬುಲ್ಲಾರವರು ಸರ್ [illegible] ಮಿತ್ರರವರು ಸರ್ ಬಿ. ಎಲ್. [illegible] ಸರ್ ಚಮನಲಾಲ್ ಮೆಹತಾರವರು ಸರ್ [illegible] ಠಾಕೂರ್ ದಾಸರು [illegible] ಪಂಡಿತ ಮದನಮೋಹನ ಮಾಳವೀಯರವರು ಸರ್ [illegible] ರಾಜಾ [illegible] ಹಕೀಮ ಅಜಮಲ್ ಖಾನರವರು.

Office of the President,
City Municipal Council, Mysor[e]
Dated 21st February 1929

NOTICE

The Public are hereby informed that until further notice, the water supply to the City will be regulated between 12 P. M. and 3 P. M. a[nd] betw[e]en 9 P. M. and 4 A. M.

T. G. RAMA IYE[R]
President

ತಾಯಿನಾಡು.

22—2—1929

ಗೀರ್ವಾಣ ಭಾಷಾ ಸಾಹಿತ್ಯನಿಧಿ.

(೧)

ವ॥ ಬಿ. ರಾಮಸ್ವಾಮಯ್ಯ ಬಿ. ಎ. ಬಿ. ಎಲ್.
ರಿಟೈರ್ಡ್ ಎಕ್ಸೈಸ್ ಕಮಿಷನರವರಿಂದ

ಭಾಗ್ಯವಶದಿಂದ ನಮ್ಮದಾಗಿರುವ ಗೀರ್ವಾಣ ಭಾಷಾ ಸಾಹಿತ್ಯನಿಧಿಯನ್ನು ನಾವು ಗೌರವದಿಂದಲೂ ವಿಶ್ವಾಸದಿಂದಲೂ ಕಾಪಾಡಿಕೊಂಡು ಬರಬೇಕಾದುದು ಆವಶ್ಯಕ. ನಮ್ಮ ದೇಶದ ಜನಜೀವನವು ಶ್ರೇಯಸ್ಸಿನ ದಾರಿಯನ್ನು ಹಿಡಿಯಲು ಗೀರ್ವಾಣಭಾಷೆಯು ಹಿಂದಿನಂತಲೂ ಒಂದೇ ಸಮನಾಗಿ ಸಹಕಾರಿಯಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ನಾಗರಿಕತೆಯು ಅಭಿವೃದ್ಧಿಯಾಗುತ್ತಾ ಸಾಹಿತ್ಯದಲ್ಲಿಯೂ ನೂತನ ವಿಷಯಗಳು [illegible] ಉತ್ತಿರುವುದೇನೋ ನಿಜ; ಪ್ರೇಯಃ ಪದಾರ್ಥ ಪ್ರಧಾನವಾದ ನಾಗರಿಕತೆಯು ಅಲ್ಲಿ ಅಭಿವೃದ್ಧಿಯಾಗುತ್ತಿದೆ. ಶ್ರೇಯಃ ಪದಾರ್ಥ ಪ್ರಧಾನವಾದ ನಾಗರಿಕತೆಯು ನಮ್ಮ ಆರ್ಯಸಾಹಿತ್ಯದ ಆಧಾರದ ಮೇಲೆ ಭಾರತಭೂಮಿಯಲ್ಲಿಯೇ ಸಿದ್ಧವಾಗಬೇಕು. ಅದರಿಂದಲೇ ಜಗತ್ತಿಗೆ ಕಲ್ಯಾಣವಾಗಬೇಕು. ಈ ದೃಷ್ಟಿಯಿಂದಲೂ ಗೀರ್ವಾಣಭಾಷಾ ಸಾಹಿತ್ಯವನ್ನು ಲೇಶವೂ [illegible] ಕಾಪಾಡಿಕೊಂಡು ಬರುವುದು ಆ[illegible] ಈ ರೀತಿ ಮಾಡಬೇಕಾದುದು ನಮ್ಮ ಕರ್ತವ್ಯ.

[illegible] ಬಂದಿರುವ ಶ್ರುತಿಸ್ಮೃತಿ ಪುರಾಣೇತಿಹಾಸಗಳನ್ನೂ, ಶಾಸ್ತ್ರಗಳನ್ನೂ ಸನಾತನಧರ್ಮಗಳನ್ನೂ, ಮತಾಚಾರಗಳನ್ನೂ ಅತಿಭಕ್ತಿಯಿಂದಲೂ ಮಮತೆಯಿಂದಲೂ ಸರ್ವಸಾಹಸಮಾಡಿ ಮಲಿನವಾಗದಂತೆ ನೋಡಿಕೊಳ್ಳುವುದು. ಅವುಗಳು ಬೋಧಿಸುವ ಅಮೂಲ್ಯವಾದ ವಿಷಯಗಳನ್ನು ಆಚರಣೆಗೆ ತಂದು ಜನಾಂಗದಲ್ಲಿ ಹೆಚ್ಚಾಗಿ ಹರಡುವುದು; ಇವು ಉತ್ತಮವಾದವು ಅಲ್ಲವೆ. ಈ ಬಗೆ ವಿಷಯವನ್ನು ಕೊಂಚ ವಿಸ್ತರಿಸುವುದು ನನ್ನ ಆಶಯವಾಗಿದೆ.

ಮನುಷ್ಯ ಕೋಟಿಯ ಮುಖ್ಯೋದ್ದೇಶವು ಸುಖಸಂಪಾದನೆ ಮತ್ತು ದುಃಖನಿವಾರಣೆ. ಹೀಗಿರುವಲ್ಲಿ ನಿಜವಾದ ಸುಖವಾವುದು? ದುಃಖವಾವುದು? ಎಂಬುದನ್ನು ತಿಳಿಯಪಡಿಸುವುದರಲ್ಲಿಯೂ ತತ್ಸಂಬಂಧವಾದ ಪಾರಮಾರ್ಥಿಕ ತತ್ವವಿಚಾರಗಳನ್ನೂ ತಿಳಿಯಪಡಿಸುವುದರಲ್ಲಿಯೂ ಅದ್ವಿತೀಯವಾಗಿ [illegible] ಶಾಸ್ತ್ರಗ್ರಂಥಗಳಿಗಿಂತ ಉತ್ತಮವಾದದ್ದು ಮತ್ತಾವುದೂ ಇಲ್ಲ. ಉಪನಿಷತ್ತುಗಳಿಂದ ಉಂಟಾಗುವ ಜ್ಞಾನವನ್ನೂ ಮಹದಾನಂದವನ್ನೂ ಕುರಿತು ಅತ್ಯಮತೀಯರಾದ ಪಾಶ್ಚಾತ್ಯ ಜ್ಞಾನಿಗಳೂ ಮುಕ್ತಕಂಠದಿಂದ ಹೊಗಳಿ ಪ್ರಶಂಸಿಸುತ್ತಾರೆ. ವೇದ[illegible] ಮನುಷ್ಯನಿಗೆ ದೊರಕುವ ಅನ್ಯಾದೃಶವಾದ ಸಾಧನ ಎಂದು ಸ್ಪಷ್ಟವಾಗಿ ಮ್ಯಾಕ್ಸ್ ಮ್ಯೂಲ್ಲರ್ ಪಂಡಿತರು ನುಡಿದಿದ್ದಾರೆ. ಅಲ್ಲದೆ ಮನುಷ್ಯತ್ವಕ್ಕೆ ಫಲಕಾರಿಯಾದ ಮತ್ತು ಅತ್ಯುನ್ನತಸ್ಥಿತಿದಾಯಕವಾದ ಪದ್ಯಗಳಲ್ಲಿ ಉಪನಿಷತ್ತುಗಳಿಗೆ ಸಮಾನವಾದುದು ಈ ಜಗತ್ತಿನಲ್ಲಿಯೇ ಇರುವುದಿಲ್ಲ. ಅಂತಿಮ ದೆಶೆಯಲ್ಲಿಯೂ ಅವೇ ನನಗೆ ಶಾಂತಿಪ್ರದವಾಗುತ್ತವೆ ಎಂದು ನಾನು ದೃಢವಾಗಿ ತಿಳಿದಿದ್ದೇನೆ ಎಂದು ಶೋಪನ್‌ಹಾರ್ ಎಂಬ ಜ್ಞಾನಿಯು ಹೇಳಿರುತ್ತಾನೆ.

ಈರೀತಿ ವಿಶದವಾಗಿಯೂ ಅತ್ಯುತ್ತಮವಾಗಿಯೂ ಶೇಖರಿಸಲ್ಪಟ್ಟು ಬಂದಿರುವ ಜ್ಞಾನಸಾಧಕವಾದ ಶಾಸ್ತ್ರಗಳನ್ನು ಮೇಲುಪಂಕ್ತಿಯಲ್ಲಿಟ್ಟುಕೊಂಡು [illegible] ಯುವುದ ನಮ್ಮ ಕರ್ತವ್ಯ. ದೃಶ್ಯವಾದ [illegible] [illegible] ಗೆ ಕಾರಣಭೂತವಾದ [illegible] ಹಾಗೇ ನಮ್ಮ ಆತ್ಮವಿದ್ಯಾವಿಷಯಗಳು [illegible] ದಲೂ ಜ್ಞಾನಿಗಳಿಂದಲೂ [illegible] ಪಾದಿಸಲ್ಪಟ್ಟಿರುತ್ತವೆ. ಇವು ಅತ್ಯಂತಪರಿಶುದ್ಧವಾದವುಗಳೆಂದೂ [illegible] ವುಗಳೆಂದೂ ಸಂಪೂರ್ಣವಾಗಿ ನಂಬಬೇಕು. ಅ[illegible] ಶ್ರದ್ಧಧಾನಸ್ಯ ಸಂಶಯಾತ್ಮಾ ವಿನಶ್ಯತಿ ಎಂಬ ಭಗವದುಕ್ತಿಯಂತೆ ನಾವು ಪ್ರಾಚೀನರ ಉಪದೇಶವನ್ನು ಸ[illegible] ಬಗೆಯಿಡದೆ ತಾತ್ಕಾಲಿಕವಾದ [illegible] ವಾಗುವ ಹಂಬಲೇ ಇಲ್ಲ. ಶ್ರದ್ಧಾಹೀನರ [illegible] ಶಾಸ್ತ್ರವಚನಗಳೆಂದರೆ ಪೂರ್ವಿಕರು ತಮ್ಮ ಅನುಭವವೆಂಬ [illegible] ರಗಲ್ಲಿನ ಮೇಲೆ ಒರೆಯಿಟ್ಟು ನೋಡಿದ ತತ್ವಾಂಶವೆಂದೇ ಅರ್ಥ. ಆದದರಿಂದ ನಾವು ಅವುಗಳಲ್ಲಿ ಪ್ರಾಮಾಣ್ಯಭಾವನೆಯಿಂದ ವರ್ತಿಸಬೇಕಾದುದು ಅವಶ್ಯ. ನಮ್ಮೊಡನಿರುವ ಅನ್ಯಮತೀಯರೂ ತಮ್ಮ ತಮ್ಮ ಮತಸಿದ್ಧಾಂತ ವಿಷಯದಲ್ಲಿ ಪೂರ್ಣಪ್ರಾಮಾಣ್ಯ ಭಾವನೆಯಿಂದಲೆ ವರ್ತಿಸುತ್ತಾರೆ. ಇಲ್ಲವಾದ್ದರೆ ಮತಸಿದ್ಧಾಂತವು ಮರಳರಾಶಿಯ ಮೇಲೆ ಕಟ್ಟಿದ ಕಟ್ಟಡದಂತಾಗುತ್ತದೆ. ಮತಸಿದ್ಧಾಂತ ಪ್ರವರ್ತಕರು ಪವಿತ್ರಚೇತಸರು; ಭಗವಂತನ ಪೂರ್ಣಾನುಗ್ರಹಕ್ಕೆ ಪಾತ್ರರಾದವರು. ಧರ್ಮಮಾರ್ಗವನ್ನು ನೆಲೆಗೊಳಿಸುವದರಲ್ಲಿ ಒದ್ದಾಡಿದಂಥ [illegible]ರು. ಅವರ ಸಿದ್ಧಾಂತಗಳು ಭಿನ್ನಭಿನ್ನ ಮಾರ್ಗಗಳಾದರೂ ಭಗವತ್ಸಾಕ್ಷಾತ್ಕಾರಕ್ಕಾಗಿ ಏರ್ಪಡಿಸಿದ ಭಿನ್ನಭಿನ್ನ ಮಾರ್ಗಗಳಾಗಿರುತ್ತವೆ. ಆದುದರಿಂದ ಎಲ್ಲಾ ಮತಾನುಯಾಯಿಗಳೂ ತಮ್ಮ ತಮ್ಮ ಮತತತ್ವಗಳು ಪರಮಪವಿತ್ರವಾದುವೆಂದೇ ಭಾವಿಸಬೇಕು.

ನಮ್ಮ ಪೂರ್ವಜನರು ನಮಗಾಗಿ ಶೇಖರಿಸಿಟ್ಟಿರುವ ಸಾಂಸ್ಕೃತಿಕ ಸಂಪತ್ತು ಅಮೋಘವಾದದು. ಅನೇಕವೇದವೇತ್ತರೂ, ಶಾಸ್ತ್ರಕೋವಿದರೂ ಪಂಡಿತ ಪ್ರಕಾಂಡ ಕವಿಪುಂಗವರೂ ನಮ್ಮ ದೇಶದಲ್ಲಿ ಪ್ರಖ್ಯಾತರಾಗಿ ಬಾಳಿದುದು ಅದರ ಸಹಾಯದಿಂದಲೇ. ವೈದಿಕವಿದ್ಯೆಯು ಅನಾದಿಯಾದದು. ಭಾರತ ವರ್ಷವು ಪ್ರಾಚೀನದಿಂದ [illegible] ರಿಸ್ಫುಟವಾಗಿ ಜಗತ್ಪ್ರಪಂಚವೆನಿಸಿ ಪರಿಣಮಿಸಿದುದು ಅದರಿಂದಲೇ, ಕೇವಲ ಧರ್ಮಮೂಲವಾಗಿ ವೇದಾಭ್ಯಾಸ ತಪೋಜ್ಞಾನಂ ಶೌಚಮಿಂದ್ರಿಯ ನಿಗ್ರಹಃ । ಧರ್ಮಕ್ರಿಯಾತ್ಮ ಚಿಂತಾಚ ಸಾತ್ವಿಕಂ ಗುಣಲಕ್ಷಣಂ ಎಂಬ ವಚನವನ್ನು ಅಕ್ಷರಶಃ ಪ್ರತಿಪಾದಿಸುತ್ತಿದ್ದ ಅನೇಕಾನೇಕ ಮಹನೀಯರು ನಮಗೆ ದೊರೆತಂತಾದುದರಿಂದ ಅದಕ್ಕೆ ಅಷ್ಟು ಪೂಜ್ಯತೆ.

ಭಾರತವರ್ಷದ ಸಾರಸ್ವತಸಂಪತ್ತನ್ನು ಬ್ರಾಹ್ಮಣಶ್ರೇಷ್ಠರು ಬಹುಕಾಲದಿಂದಲೂ ಬಹುಶ್ರಮಪಟ್ಟು ಕಾಪಾಡಿಕೊಂಡು ಬಂದಿದ್ದಾರೆ. ರಾಜ್ಯವಿಪ್ಲವಗಳಿಂದಲೂ ದಂಡು ದಾಳಿಗಳ ಹಾವಳಿಯಿಂದಲೂ ದೇಶವೇ ಅಲ್ಲೋಲಕಲ್ಲೋಲವಾಗುತ್ತಿದ್ದ ವಿಷಮಕಾಲದಲ್ಲಿ ಆ ಗ್ರಂಥಗಳನ್ನೂ ಅಮೂಲ್ಯವಾದ ವಿದ್ಯೆಗಳನ್ನು ಕಾಪಿಟ್ಟುಕೊಟ್ಟವರ ಪರಮೋಪಕಾರವು ಚಿರಸ್ಮರಣೀಯವಾಗಿದೆ. [illegible] ದೀಪಿಗಳಾಗಿದ್ದ ಅವರ ವಿದ್ಯಾಪ್ರೇಮವು ಎ[illegible] ಪಟ್ಟಿನಡೊಂದನ್ನು ಪೂರ್ತಿಯಾಗಿ ಅರಿತುಕೊಳ್ಳ [illegible] ಸಾಧ್ಯವಿಲ್ಲ.

ಗ್ರಂಥಗಳ [illegible] ಶ್ರೀ [illegible] [illegible] [illegible]

[illegible] ಅಂದಿನ [illegible] ಅವರ [illegible] ಸುಖಾಪೇಕ್ಷೆಯಿದ್ದಲ್ಲ [illegible] ಈಡೆರುವದಕ್ಕೆ [illegible] [illegible]

[illegible] ವುಂಟಾಗುತ್ತದೆ. ಶಾಸ್ತ್ರಮಾರ್ಗವು ಧಿಕ್ಕರಿಸಲ್ಪಟ್ಟು, ಅದು ತಪಸ್ವಿಗಳೂ ಜ್ಞಾನಿಗಳೂ ನಮಗಾಗಿ ಹಾಕಿಕೊಟ್ಟಿರುವ ಮೇಲ್ಪಂಗ್ತಿ. ಅದರಂತೆ ನಡೆದು ಸನಾತನ ಧರ್ಮವನ್ನು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ.

ಅಲ್ಪ ವರಮಾನವನ್ನು ಅಧಿಕಮಾಡತಕ್ಕದ್ದು.

ನಮ್ಮ ವಿದ್ವಾಂಸರ ಅಲ್ಪವೆನಿಸಿದ ವರಮಾನವನ್ನು ಕಂಡು ಕೆಲವರು ಮಹನೀಯರು ಪಶ್ಚಾತ್ತಾಪಪಟ್ಟು ಅದರ [illegible] ಹೆಚ್ಚಿಸಬೇಕೆಂದು ಸೂಚಿಸಿರುತ್ತಾರೆ. ಇದು ನಿಜವಾದ ಅಂಶ. ನಮ್ಮ ಪಂಡಿತರ ವೈದುಷ್ಯಕ್ಕೆ ಬಹುದೂರ ಅಂತರವಿರುವ ಪಾಶ್ಚಾತ್ಯ ವಿದ್ಯಾಪರಿಣತರಿಗೆ ನೂರು, ಸಾವಿರ, ರೂಪಾಯಿಗಳ [illegible] (ಮುಂದೆ)

Printed and published by P. R. Ramaiya.
at Sri Rama Press, D. Subbaih Road, Msorye.

Regd No. M 2322

॥ ವಂದೇ ಮಾತರಂ ॥

ಬಿಡಿ ಪ್ರತಿ ೧ ಕ್ಕೆ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ... ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦ / ಪರಸ್ಥಳಕ್ಕೆ ೧೦—೦—೦

ಸಂಪುಟ ೧] ಸೋಮವಾರ ೨೫ ಫೆಬ್ರುವರಿ ೧೯೨೯ [ಸಂಚಿಕೆ ೧೧೯

TAI NADU
25—2—1929

ಕರ್ಣಾಟಕ ಏಕೀಕರಣ ಸಭೆ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಪ್ರಾಂತ ಸಭೆಯು ರಾಜಧಾನಿಯ ಟೌನ್ ಹಾಲಿನಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಶ್ರೀನಿವಾಸ್ ಎಂ, ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ದೇಶಾಭಿಮಾನಿಗಳು ಮಾಡಿದ ಭಾಷಣಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೆ.

ಮ|| ರಾ|| ರಂಗನಾಥರಾಮಚಂದ್ರ ನಾಯಿಕ್ ರವರು:—ಅಖಿಲ ಕರ್ಣಾಟಕ ಪ್ರಪಂಚದ ಪ್ರಾಚೀನ ಶಿಲ್ಪಿ, ವಾಣಿಜ್ಯ, ಕಲೆ, ರಾಜಕೀಯ ಪ್ರಗತಿ ಮೊದಲಾದ ಕರ್ಣಾಟಕದ ಗತವೈಭವಗಳನ್ನೂ ವಿಶ್ವವಿದ್ಯಾಲಯಗಳಲ್ಲಿ ಕನ್ನಡಭಾಷೆಗೆ ದೊರೆಯಲತ್ಯವಶ್ಯಕವಾದ ಸಲಹೆಗಳನ್ನೂ, ಅವೆಲ್ಲವನ್ನೂ ಈಡೇರಿಸುವುದರಲ್ಲಿ ನನ್ನ ಸಹಾನುಭೂತಿಯನ್ನೂ ಸಾಂವಕಾಶವಾಗಿ ತಿಳಿಸಿದರು.

ಮ|| ರಾ|| ಸಿ. ಆರ್. ರಾಮಯ್ಯನವರು:—ಪರಕೀಯ ಭಾಷೆಯ ಪ್ರಚಾರದಿಂದ, ನಮ್ಮ ಸಂಸ್ಕೃತಿಗೆ ಉಂಟಾಗುತ್ತಿರುವ ನ್ಯೂನತೆಗಳು, ಕನ್ನಡ ತಮಿಳು, ಮೊದಲಾದ ಆಯಾ ಭಾಷೆಗಳಿಗನುಸಾರವಾಗಿ ಪ್ರಾಂತ್ಯಗಳನ್ನು ವಿಂಗಡಿಸುವಿಕೆ, ರಾಜಕೀಯ ಸ್ವಾತಂತ್ರ್ಯವನ್ನು ಅಪೇಕ್ಷಿಸುವ ನಮ್ಮಲ್ಲಿಂತಕ್ಕ ಸಮಭಾವವು [illegible] ಭಾರತದಲ್ಲಿರುವ ಕನ್ನಡದ ಮರುವು ಉಕ್ಕಿಸುವಾಗ ನಮ್ಮ ಪ್ರಯೋಜನ ಮುಂತಾದವನ್ನು ಅನೇಕ [illegible]ಗಳಿಂದ ವ್ಯಕ್ತಗೊಳಿಸಿದರು.

ಮ|| [illegible] ಸಿ. ವೆಂಕಟಕೃಷ್ಣಯ್ಯನವರು:—ನಮ್ಮ ಪ್ರಜೋತ್ಪತ್ತಿಗೆ [illegible] ಅಂತರಂತರ [illegible] ಕೆಳಗಿನವರೆಗೂ [illegible] (ರಾಜ್ಯಭಾರ ದೃಷ್ಟಿಯಲ್ಲಿ) ಪಕ್ಷಪಾತತೆ ಇವು ತೊಲಗಿ ಸರ್ವ ಜನ ಸಮ್ಮತವಾದ ನಿಸ್ವಾರ್ಥಬುದ್ಧಿಯುತ್ಪನ್ನವಾಗಬೇಕು. ಶಾಲೆಗಳಲ್ಲಿ ಬಾಲಕರನ್ನು ನಿಸ್ಪೃಹರನ್ನಾಗಿಯೂ [illegible] ಸ್ವಾತಂತ್ರ್ಯ [illegible] ಕಗಳು [illegible]. ಆ ಸ್ಥಾನದಲ್ಲಿ ಜನಸಾಮಾನ್ಯದ ಹಕ್ಕುಬಾಧ್ಯತೆ, ರಾಜನೀತಿಜ್ಞತೆ ಮೊದಲಾದವನ್ನು ಬೋಧಿಸಲನುವಾಗುವ ಪುಸ್ತಕಗಳನ್ನಿಡಬೇಕು. ಕರ್ನಾಟಕ ಭಾಷೆಯ ಉಜ್ಜೀವನ ಏಕೀಕರಣದ ಉತ್ಕಟೇಚ್ಛೆ ಮೊದಲಾದ ವಿಷಯಗಳನ್ನು ಹಲವು ರಾಜಕೀಯ ಸಾಮಾಜಿಕ ಉದಾಹರಣೆಗಳಿಂದ ತಿಳಿಸಿದರು.

ಮ|| ರಾ|| ಹರಿಹರ ಶರ್ಮರವರು:—ಜನಜಾಗೃತಿಯುಂಟಾಗಬೇಕಾದರೆ ಸರ್ವಸಮ್ಮತವಾದ ಒಂದು ಭಾಷೆಯು ಅತ್ಯಾವಶ್ಯಕ ಎಂದು ಹಿಂದಿಯಲ್ಲಿ ಬಲು ಸ್ವಾರಸ್ಯವಾದ ಭಾಷಣ ಮಾಡಿ ದಕ್ಷಿಣ ಹಿಂದೂಸ್ಥಾನದಲ್ಲಿ ನಾವು ನಡೆಸುತ್ತಿರುವ ಹಿಂದೀ ಭಾಷಾ ಪ್ರಚಾರ ಕಾರ್ಯಕ್ಕೆ ತಾವೆಲ್ಲರೂ ಉತ್ತೇಜನವನ್ನು ಕೊಡಬೇಕೆಂಬುದಾಗಿ ಪ್ರಾರ್ಥಿಸಿದರು

ಶ್ರೀಯುತ. ರಾಜಗೋಪಾಲಾಚಾರ್ಯರವರ:—ಕನ್ನಡವು ಬಲಾತ್ಕಾರವಾಗಿ ಕಲಿಸಲ್ಪಡುವುದರ ಜೊತೆಗೆ ಕಾಲೇಜು ಕ್ಲಾಸುಗಳಲ್ಲಿ ನಮ್ಮ ನಡೆಯಲ್ಲಿರುವ ಇತರ ಭಾಷೆಗಳ ಪರಿಚಯವೂ ಆಗಬೇಕು. ಪರಕೀಯವಾದ ಇಂಗ್ಲಿಷ್‌ಭಾಷಾ ಪ್ರಚಾರದಿಂದ ನಮ್ಮ ನಮ್ಮ ಮಾತೃ ಭಾಷೆಗಳು ಮಾಲಿನ್ಯವನ್ನು ಹೊಂದಿದ್ದವು ಅಷ್ಟೇ ಕೆ ಅತ್ಯಂತ ತುಚ್ಛವಾಗಿ ಕಾಣಲ್ಪಡುತ್ತಿವೆ. ಆದರೆ ಆ ಭಾಷೆಯನ್ನು ದೂರಬೇಕೆಂಬ ತಾತ್ಪರ್ಯವಲ್ಲ. ಯಾವ ಯಾವ ಭಾಷೆಗಳ ಅಭ್ಯಾಸವಮಾಡಿದರೂ ಕಾಲ ದೇಶ ವರ್ತಮಾನಗಳನ್ನನುಸರಿಸಿ ನಡೆಯಬೇಕು. ನಮ್ಮ ಹಿಂದೂ ದೇಶದಲ್ಲಿ ಹಲವು ಭಾಷೆಗಳನ್ನಾಡತಕ್ಕವರಿದ್ದರೂ ಹಿಂದಿಯು ಪ್ರತಿಯೊಂದು ಭಾಷೆಯಲ್ಲಿಯೂ ಹೆಚ್ಚಿನ ಪ್ರಾಶಸ್ತ್ಯವನ್ನು (ತಕ್ಕಮಟ್ಟಿನ ಅಲ್ಪ ಬದಲಾವಣೆಯಿಂದ) ಪಡೆದಿರುತ್ತದೆ. ಎಲ್ಲರೂ ನಮ್ಮ ದೇಶದ ಹಲವು ಕಡೆಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವ ಅತ್ಯಂತತ್ವರಿತವಾಗಿಯೂ ಸುಲಭ ಸಾಧ್ಯವಾಗಿಯೂ (ಕಲಿಯಲು) ಇರುವ ಹಿಂದೀಭಾಷಾ ಪರಿಚಯ ಹೊಂದಲೇಬೇಕು.

ಖಾದಿ:—ಖಾದಿಯ ಅವಶ್ಯಕತೆ, ಕರ್ಣಾಟಕದ ಉತ್ತರ ಭಾಗದಲ್ಲಿ ಹೆಚ್ಚಾಗಿ ತಯಾರಾಗುವ ಖಾದಿಯನ್ನೇ ಅಖಿಲ ಕರ್ಣಾಟಕವೂ ಉಪಯೋಗಿಸುವುದರಲ್ಲಿ ಆಗತಕ್ಕ ಪ್ರಯೋಜನ ಮೊದಲಾದ ವಿಷಯಗಳನ್ನು ಅನೇಕ ಉದಾಹರಣೆಗಳೊಡನೆ ಭಾಷಣಮಾಡಿದರು. ಈ ಕೆಳಗಿನ ಠರಾವು ಸರ್ವಾನುಮತದಿಂದ ಪಾಸಾಯಿತು:

ಕರ್ಣಾಟಕದ ಜನತೆಯ ಏಳ್ಗೆಗಾಗಿ ಪ್ರತ್ಯೇಕ ಕರ್ಣಾಟಕವನ್ನು ಭಾಷಾವಾರು ಪ್ರಾಂತರಚನೆಯ ತತ್ವವನ್ನನುಸರಿಸಿ ಒಂದು ಸ್ವತಂತ್ರವಾದ ಪ್ರಾಂತವನ್ನು ಏರ್ಪಡಿಸುವದು ಅತ್ಯಾವಶ್ಯಕವಾದದ್ದೆಂದು ಮನಗಾಣಿಕೆಯಾಗಿರುವದರಿಂದ ಬೆಳಗಾಂವಿ ಧಾರವಾಡ ವಿಜಾಪುರ ಕಾರವಾರ ಬಳ್ಳಾರಿ ಮಂಗಳೂರ ನೀಲಗಿರಿ ಕೊಡಗು ಮತ್ತು ಇನ್ನುಳಿದ ಹಲವು ಕನ್ನಡ ಪ್ರದೇಶಗಳನ್ನು ಕೂಡಿ ೧೯೧೯ನೇ ಗವರ್ನಮೆಂಟ ಆಫ್ ಇಂಡಿಯಾ ಆಕ್ಟಿನ ೫೨ ಅ. ಕಲಮಿನ ಮೇರೆಗೆ ಒಂದು ಪ್ರತ್ಯೇಕ ಪ್ರಾಂತವನ್ನಾಗಿ ಮಾಡುವದು ಸಲುವಾಗಿ ಯೋಗ್ಯವಾದ ಮಾರ್ಗವನ್ನು ತೀವ್ರದಲ್ಲಿಯೇ ಕೈಕೊಳ್ಳಬೇಕೆಂದು ಗವರ್ನರ ಜನರಲ್-ಇನ್-ಕೌನ್ಸಿಲ್ ಮತ್ತು ಮುಂಬಯಿ ಮದ್ರಾಸ ಇಲಾಖೆಗಳ ಗವರ್ನರ-ಇನ್-ಕೌನ್ಸಿಲರಿಗೂ ಈ ಸಭೆಯು ಒತ್ತಾಯದಿಂದ ಬೇಡಿಕೊಳ್ಳುತ್ತದೆ.

ಮ|| ಸಿ. ಸುಬ್ರಹ್ಮಣ್ಯಯ್ಯನವರು ಮೇಲಿನ ಉಪನ್ಯಾಸಕರ ಅಭಿಪ್ರಾಯಗಳನ್ನೇ ಒತ್ತಿಹೇಳಿದರು.

ಅನಂತರ ಮ|| ಅಗರಂ ರಂಗಯ್ಯನವರು ಸಭಿಕರಿಗೂ ಧನ್ಯವಾದಗಳನ್ನರ್ಪಿಸಿದ ಮೇಲೆ ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಡೆ|| ಕ| ವರ್ಗಾವರ್ಗಿ

ಮ| ಹೆಬ್ಲೀಕರ್‌ರವರು ಬೆಂಗಳೂರಿಂದ ತುಮಕೂರಿಗೂ ಮಿ| ತಾಜ್ ಪೀರಾನ್ ಸಹೇಬರವರು ಬೆಂಗಳೂರಿಗೂ ಡಿ| ಸಿ| ಗಳಾಗಿ ವರ್ಗಾಯಿಸಲ್ಪಟ್ಟಿರವರು.

ಭದ್ರಾವತಿ.

ಈ ಸಾರಿ ಭದ್ರಾವತಿ ಕಾರಖಾನೆಯಿಂದ 3 ಲಕ್ಷ ರೂಪಾಯಿಗಳ ಉಳಿತಾಯವಾಗಿರುವುದೆಂದು ತಿಳಿದು ಬಂದಿದೆ

ನೈಜಾಮರು.

ಹೈದರಾಬಾದ್ ನೈಜಾಮರು ಮುಂದಿನ ತಿಂಗಳು ರಾಜಧಾನಿಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುವರೆಂದು ತಿಳಿದು ಬಂದಿದೆ.

ಮದರಾಸಿನ ಕಾರ್‌ಪೊರೇಷನ್

ಈ ತಿಂಗಳು 19 ನೇ ತಾ. ಸಾಯಂಕಾಲ ಮದರಾಸ್ ಕಾರ್‌ಪೊರೇಷನ್ನಿನ ಒಂದು ವಿಚಿತ್ರವಾದ ಮೀಟಿಂಗು ನಡೆಯಿತು. ಇದರ ಅಧ್ಯಕ್ಷರಾದ ಮ|| ಎ. ರಾಮಸ್ವಾಮಿ ಮೊದಲಿಯರ್‌ರವರು ಒಂದು ಅಕ್ರಮವಾದ ಕೆಲಸವನ್ನು ನಡೆಸಿದುದೇ ಎಲ್ಲಾ ಗಲಾಟೆಗೂ ಕಾರಣ. ಇವರು ಜಸ್ಟಿಸ್‌ಪಾರ್ಟಿಯ [illegible] ಹೋದ ವರ್ಷ ಸೈಮನ್ ಕಮಿಷನನ್ನು ಧಿಕ್ಕರಿಸಿ ಜಸ್ಟಿಸ್ ಪಕ್ಷದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದರು. ಈಗ ಏನಾಯಿತೋ ಏನೋ ಇವರ ಪಂಗಡದವರ [illegible] ಕಮಿಷನ್ನನ್ನು ಆದರಿಸಬೇಕೆಂದು ನಿಶ್ಚಯಿಸಿದರು. ಮದರಾಸ್ ಕಾರ್‌ಪೊರೇಷನ್ನಿನಲ್ಲಿ ಸೈಮನ್ ಕಮಿಷನ್ನಿಗೆ ಮದರಾಸಿಗೆ ಬಂದಾಗ್ಗೆ ಸ್ವಾಗತವನ್ನು ಕೊಡಬೇಕೆಂದು ಒಂದು ಠರಾವು ತರಲ್ಪಟ್ಟಿತು. ಕಾಂಗ್ರೆಸ್ ಪಂಗಡದವರು ಇದನ್ನು ವಿರೋಧಿಸಿದರು. ಜಸ್ಟಿಸ್ ಪಂಗಡದವರೂ, ಯೂರೋಪಿಯನ್ ಮೆಂಬರುಗಳೂ, ಇದಕ್ಕೆ ಅನುಕೂಲವಾಗಿ ಓಟನ್ನು ಕೊಟ್ಟರು. ಬಹುಮತವು ಇವರಿಗೇ ದೊರೆಯಿತು. ಆದ ಮೇಲೆ ಮದರಾಸ್ ಕಾರ್‌ಪೊರೇಷನ್ನಿನ ಪರವಾಗಿ ಸೈಮನ್ ಕಮಿಷನ್ನವರಿಗೆ ಸ್ವಾಗತವನ್ನು ಬಯಸಬೇಕೆಂದು ತೀರ್ಮಾನವಾಯಿತು. ಈ ತಿಂಗಳು 18 ನೇ ತಾ. ಸೈಮನ್ ಕಮಿಷನ್‌ರವರು ಮದರಾಸಿಗೆ ಬಂದ ದಿವಸ ಕಾರ್‌ಪೊರೇಷನ್ ಪ್ರೆಸಿಡೆಂಟರೂ, ಜಸ್ಟಿಸ್ ಪಾರ್ಟಿಯ ಮೆಂಬರುಗಳೂ, ಯೂರೋಪಿಯನ್ ಮೆಂಬರುಗಳೂ, ಸಮುದ್ರತೀರದಲ್ಲಿಯೇ ಸೈಮನ್ ಮೊದಲಾದವರಿಗೆ ಕಾರ್‌ಪೊರೇಷನ್ ಪರವಾಗಿ ಸ್ವಾಗತವನ್ನು ಬಯಸಿದರು. ವಿರೋಧ ಪಂಗಡದವರಾದ ಕಾರ್‌ಪೊರೇಷನ್ ಮೆಂಬರುಗಳಿಗೆ ಈ ಸಮಾರಂಭಕ್ಕೆ ಆಹ್ವಾನ ಪತ್ರಿಕೆಯನ್ನೇ ಕಳುಹಿಸಲಿಲ್ಲ. ಮ|| ಬುರಾ ಸತ್ಯನಾರಾಯಣ ಎಂಬವರು ಒಂದು ಆಹ್ವಾನಪತ್ರಿಕೆಯನ್ನು ಕಳುಹಿಸಿಕೊಡಬೇಕೆಂದು ಪ್ರೆಸಿಡೆಂಟರಿಗೆ ಬರೆದು ಕಳುಹಿಸಿದರು. ಆದಕ್ಕೆ ಉತ್ತರವೇ ಬರಲಿಲ್ಲ. ಅಧ್ಯಕ್ಷರ ಈ ರೀತಿಯಾದ ವರ್ತನವು ಕಾಂಗ್ರೆಸ್ ಕೌನ್ಸಿಲರುಗಳಿಗೆ ಬಹಳ ಅವಮಾನವಾಗಿ ಕಂಡಿತು. ಆದುದರಿಂದ ಮಾರನೆಯ ಸಾಯಂಕಾಲ ನಡೆದ ಕಾರ್‌ಪೊರೇಷನ್ ಮೀಟಿಂಗಿನಲ್ಲಿ ಅಧ್ಯಕ್ಷರ ಮೇಲೆ ಜೋವಧೆಯಾಗುವಂತೆ ತಮ್ಮ ಮನಸಾರ ಅವರನ್ನು ಖಂಡಿಸಿದರು. ಬಹಳ ರೋಷಾವೇಶದ ಭಾಷಣಗಳಾದವು. ಅಧ್ಯಕ್ಷರು ಮೀಟಿಂಗನ್ನು ಅರ್ಧಾಂತರದಲ್ಲಿಯೇ ಭಂಗಪಡಿಸಿ ಮಾಡಿದರು.

ವ್ಯಭಿಚಾರ

ಬ್ಯಾರಿಸ್ಟರೂ ಮುನಿಸಿಪಲ್ ಮ್ಯಾಜಿಸ್ಟ್ರೇಟರೂ ಆದ ಮಿ|| ನರೇಂದ್ರನಾಥಗುಪ್ತ ಎಂಬುವರು ತಮ್ಮ ಪತ್ನಿಯವರಾದ ಮಿಸೆಸ್ ರಮೋಲಾಲ್‌ಗುಪ್ತ ಎಂಬುವರ ಮೇಲೆ ವಿವಾಹ ವಿಮೋಚನೆಗಾಗಿ ದಾವಾ ಹಾಕಿರುವರು. ಕಾರಣವೇನೆಂದರೆ ಮಿಸೆಸ್ ರೋಮೋಲಾರವರು ಡೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರೂ ಜಮೀನ್‌ದಾರರೂ ಆದ ಮಿ|| ತುಲಸೀ ಚರಣ ಗೋಸ್ವಾಮಿ ಎಂಬುವರೊಡನೆ ವ್ಯಭಿಚಾರ ಮಾಡಿದರೆಂಬ ಅಪಾದನೆ. ಮಿಸೆಸ್ ರೋಮೋಲಾರವರು ಗತಿಸಿದ [illegible] ಡ್ ಸಿರಿಹಾರವರ ಮಗಳು. ದಾವಾವು ಒಂದು ಲಕ್ಷ ರೂಪಾಯಿಗಳದು.

ತಾಯಿನಾಡು.

25—2—1929

ಹಿಂದೀ ಸಮ್ಮೇಳನ

ಪದವೀದಾನ ಸಮಾರಂಭೋತ್ಸವ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಈ ತಿಂಗಳು 20 ನೇ ತಾ|| ಬುಧವಾರ ಸಾಯಂಕಾಲ ರಾಜಧಾನಿಯ ಟವನ್ ಹಾಲಿನಲ್ಲಿ ಹಿಂದೀ ಸಮ್ಮೇಳನವು ಸೇರಿತ್ತು. ಸಭಾಂಗಣವು ಅನೇಕ ದೊಡ್ಡ ಮನುಷ್ಯರುಗಳಿಂದಲೂ ವಿದ್ಯಾರ್ಥಿಗಳಿಂದಲೂ ವ ಹಿಳೆಯರಿಂದಲೂ ತುಂಬಲ್ಪಟ್ಟಿತ್ತು. ಶ್ರೀಯುತ ಜಮುನಾಲಾಲ್ ಬಜಾಜ್‌ರವರು ಅಗ್ರಾಸನವನ್ನು ವಹಿಸಿದ್ದರು. ಚಿಕ್ಕ ಬಾಲಿಕೆಯರಿಂದ ದೇವರ ಪ್ರಾರ್ಥನೆಯಾದ ಮೇಲೆ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅಧ್ಯಕ್ಷರವರು ಸರ್ಟಿಫಿಕೇಟುಗಳನ್ನು ದಯಪಾಲಿಸಿದರು.

ಅನಂತರ ಶ್ರೀಯುತ ಸಿ ರಾಜಗೋಪಾಲಾಚಾರ್ಯರವರು ಇಡೀ ಹಿಂದೂ ದೇಶಕ್ಕೆಲ್ಲಾ ಹಿಂದೀಭಾಷೆಯೇ ರಾಷ್ಟ್ರಭಾಷೆಯಾಗಿರಬೇಕೆಂಬ ವಿಷಯದಲ್ಲಿ ಮಾಡಿದ ಭಾಷಣದ ಸಾರಾಂಶವೇನೆಂದರೆ—

"ಪ್ರತಿಯೊಂದು ದೇಶದಲ್ಲಿಯೂ ಅಂದರೆ ಜರ್ಮನಿಯಲ್ಲಿ ಜರ್ಮನ್ ಭಾಷೆಯೂ ಇಂಗ್ಲೆಂಡ್‌ನಲ್ಲಿ ಇಂಗ್ಲೀಷು ಭಾಷೆಯೂ ಫ್ರಾನ್ಸ್‌ನಲ್ಲಿ ಫ್ರೆಂಚೂ ಇದೇ ರೀತಿಯಾಗಿ ಆಯಾಯಾ ದೇಶಗಳಲ್ಲಿ ಆಯಾಯ ಭಾಷೆಗಳಿಗೆ ಹೆಚ್ಚು ಪುರಸ್ಕಾರವು ದೊರೆಯುತ್ತಿದೆ. ಆದರೆ ನಮ್ಮ ಸಣ್ಣ ರಾಜ್ಯವಾದ ಹಿಂದೂ ದೇಶದಲ್ಲಿ ಮಾತ್ರ ನಿಯಮಿತವಾದ ಒಂದು ಭಾಷೆಯಿರುವುದಕ್ಕೆ ಬದಲಾಗಿ ಹಲವು ಭಾಷೆಗಳು ಪ್ರಚಾರದಲ್ಲಿವೆ. ಅವುಗಳ ಪೈಕಿ ಇಂಗ್ಲೀಷು ಹೊಟ್ಟೆಪಾಡಿಗಾಗಿ ಕಲಿಯಬೇಕಾದ ರಾಜಕೀಯ ಭಾಷೆಯಾಗಿದೆ. ಕನ್ನಡ, ತೆಲುಗು, ತಮಿಳು ಮೊದಲಾದ ಹಲವು ಭಾಷೆಗಳು ಆಯಾಯ ದೇಶಗಳಲ್ಲಿ ಪ್ರಚಾರದಲ್ಲಿದ್ದರೂ ಒಂದು ದೇಶದಿಂದ ಮತ್ತೊಂದು ದೇಶದೊಡನೆ ನೈತಿಕ ಸಾಮಾಜಿಕ ರಾಜಕೀಯ ವಿಷಯಗಳಲ್ಲಿ ಸ್ನೇಹಭಾವವನ್ನು ವೃದ್ಧಿಗೊಳಿಸಲು ಅವಕಾಶವಿಲ್ಲದಂತಿದೆ. ಇಂಡಿಯಾ ದೇಶದ ಮೂರನೆ ಎರಡು ಭಾಗ ಜನರು ಹಿಂದೂಸ್ತಾನಿಯನ್ನೇ ಬಳಕೆಯಲ್ಲಿಟ್ಟುಕೊಂಡಿದ್ದಾರೆ. ಈ ಹಿಂದೂಸ್ಥಾನಿಗೂ ಹಿಂದಿಗೂ ಬಹಳ ಅತ್ಯಲ್ಪವಾದ ಪ್ರಭೇದಗಳಿವೆ. ಕಲಿಯುವುದಕ್ಕೂ ಬಹಳ ಸುಲಭವಾಗಿದೆ ನಾವು ಬರೀ ಇಂಗ್ಲಿಷ್ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ನಮ್ಮ ಜನ ಜೀವನದ ಸುಖ ಶಾಂತಿಗೆ ಸಾಧಕವಾದ ವಿದ್ಯೆಯನ್ನೇ ಮರೆಯುತ್ತಿದ್ದೇವೆ. ನಮ್ಮ ಇಂಡಿಯಾ ದೇಶಕ್ಕೆಲ್ಲಾ ಸಾರ್ವತ್ರಿಕ ಭಾಷೆಯಾಗಿರುವ ಹಿಂದಿಯನ್ನು ಎಲ್ಲರೂ ಒಂದೇ ದೃಢದಿಂದ ಅಭ್ಯಾಸಿಸಬೇಕು ಇದಕ್ಕೆ ಎಲ್ಲಾ ಸ್ಕೂಲುಗಳಲ್ಲಿಯೂ ಒತ್ತಾಯವಾದ ಶಿಕ್ಷಣವು ದೊರೆಯುವಂತೆ ಮಹಾ ಜನರೂ ವಿದ್ಯಾಭಿಮಾನಿಗಳೂ ಪ್ರಯತ್ನಿಸಬೇಕು"

ಮ|| ಇಗ್ನೇಷಿಯಸ್‌ರವರು ಮಾಡಿದ್ದ ಭಾಷಣದ ಸಾರಾಂಶ:—ಎಲ್ಲಕ್ಕಿಂತಲೂ ಮೊಟ್ಟ ಮೊದಲು ಮಾತೃಭೂಮಿಯಾದ ನಿಮ್ಮ ಕನ್ನಡ ಅನಂತರ ದೇಶಭಾಷೆಯಾದ ಹಿಂದಿ ಕಡೆಯಲ್ಲಿ ರಾಜಕೀಯಕ್ಕೆ ಸಂಬಂಧಪಟ್ಟ ಇಂಗ್ಲೀಷ್ ಈ ಮೂರು ಭಾಷೆಗಳನ್ನು ಕಲಿಯಬೇಕು ಪಾಶ್ಚಾತ್ಯದೇಶಗಳಲ್ಲಿ ಪ್ರತಿಯೊಬ್ಬರೂ 3—4 ಭಾಷೆಗಳನ್ನು ಕಲಿಯುತ್ತಿರುವಾಗ ಅವರಿಗಿಂತಲೂ ಬುದ್ಧಿಶಕ್ತಿಯಲ್ಲಿ ಮಿಗಿಲಾಗಿರುವ ನಾವು ಆರು ಭಾಷೆಗಳನ್ನು ಕಲಿಯಬೇಕು.

ಅಧ್ಯಕ್ಷರು ಹಿಂದೀ ಭಾಷೆಯಲ್ಲಿ ಮೇಲ್ಕಂಡ ಮಹನೀಯರಿಬ್ಬರ ಭಾಷಣಗಳನ್ನೇ ಪುಷ್ಟೀಕರಿಸಿ ಮಾತಾಡಿದರು. ಮಿ|| ವಾಡಿಯಾರವರು ಅಧ್ಯಕ್ಷರಿಗೆ ಹಾರ ತುರಾಯಿಗಳನ್ನೂ ಅಭಿನಂದನಗಳನ್ನೂ ಅರ್ಪಿಸಿದರು.

ಶ್ರೀಮತಿ ಕನಕಲಕ್ಷ್ಮಮ್ಮನವರು ಅಧ್ಯಕ್ಷರಿಗೆ ಸ್ವಾಗತವನ್ನು ಬಯಸಿದರು.

ಇದೆಲ್ಲಾ ಆದನಂತರ ಹಿಂದೀ ಪ್ರೇಮಿಮಂಡಳಿಯವರು ವೀರ ಅಭಿಮನ್ಯು ನಾಟಕದ ಕೆಲವು ದೃಶ್ಯಗಳನ್ನು ಅತ್ಯಂತ ಮನೋಹರವಾಗಿ ಅಭಿನಯಿಸಿದರು ಸಭೆಯು ಹತ್ತು ಘಂಟೆಗೆ ಮುಕ್ತಾಯವಾಯಿತು.

ವಿವಿಧ ವಿಷಯಗಳು

ಮುನ್‌ಸೀಫ್ ಕೋರ್ಟಿನ ಎಲ್ಲೆ.

ಹುಣಸೂರು ಮುನ್‌ಸೀಫ್ ಕೋರ್ಟಿಗೆ ಹೆಗ್ಗಡದೇವನಕೋಟೆ, ಯಡತೊರೆ, ಹುಣಸೂರು ಮತ್ತು ಪಿರಿಯಾಪಟ್ಟಣ (ಸ| ತಾ) ಈ ತಾಲ್ಲೋಕುಗಳು ಸೇರಿಸಲ್ಪಟ್ಟಿವೆ.

ಆಡಿಟರ ಸರ್ಟಿಫಿಕೇಟು.

ಬೊಂಬಾಯಿ ಗಿರಗಾಂನಲ್ಲಿರುವ ಆಡಿಟರಾದ ಮ|| ತ್ರಿಯಂಬಕ್ ಭಾಸ್ಕರ್ ಬಾರ್‌ರವರು ಇಂಗ್ಲೀಷ್, ಕನ್ನಡ, ಮರಾಟಿ, ಮತ್ತು ಗುಜರಾತಿ ಭಾಷೆಗಳ ಲೆಕ್ಕಗಳನ್ನು ಆಡಿಟ್ ಮಾಡಲು ಸರ್ಕಾರದವರು ಹಂಗಾಮಿಯಾಗಿ ಆಡಿಟ್ ಸರ್ಟಿಫಿಕೇಟನ್ನು ಕೊಟ್ಟಿರುವರು.

ರಜಾ

ಯೂನಿವರ್ಸಿಟಿಯ ರಿಜಿಸ್ಟ್ರಾರ್‌ರವರಾದ ಮ|| ಬಿ. ಎಂ. ಶ್ರೀಕಂಠಯ್ಯನವರಿಗೆ ಕೊಟ್ಟಿದ್ದ ರಜವು, ಮಾರ್ಚಿ 8ನೇ ತಾ|| ನವರೆಗೆ ಪೂರಾ ತಲಬಿನ ಫರ್ಲೋ ರಜವಾಗಿ ಹೆಚ್ಚಿಸಲ್ಪಟ್ಟಿದೆ. ಆ ಕಾಲದಲ್ಲಿ ಹಾಲಿ ಇರುವ ಬದಲಿ ಏರ್ಪಾಡೇ ಜಾರಿಯಲ್ಲಿರುವುದು

ಪೋಲೀಸ್ ಇಲಾಖೆ.

(1) ರಜದ ಮೇಲಿರುವ ಮ|| ಪಿ. ಎಸ್ ಕೃಷ್ಣಸ್ವಾಮಿನಾಯಿಡುರವರು ಬೆಂಗಳೂರು ಪೋಲೀಸ್ ಟ್ರೈನಿಂಗ್ ಸ್ಕೂಲಿಗೂ, (2) ಟ್ರೈನಿಂಗ್ ಸ್ಕೂಲಿನಲ್ಲಿರುವ ಮ|| ಎನ್. ರಾಜಾರಾಯರು ಬೆಂಗಳೂರಿನ ರೈಲ್ವೆ ಮತ್ತು ಸಿ. ಐ. ಡಿ. ಇಲಾಖೆಗೂ, (3) ಬೆಂಗಳೂರಿನ ರೈಲ್ವೆ ಮತ್ತು ಸಿ. ಐ. ಡಿ. ಯಲ್ಲಿರುವ ಮ|| ಎಂ. ಕೆ ನರಸಿಂಹಯ್ಯಂಗಾರ್ಯರು ದಾವಣಗೆರೆ ಸಬ್ ಡಿವಿಷನ್ನಿಗೂ (4) ದಾವಣಗೆರೆ ಸಬ್ ಡಿವಿಷನ್ನಿನಲ್ಲಿರುವ ಮ|| ಎಂ. ಎ ವೆಂಕಟಾಚಾರ್ಯರು, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಿಗೂ (5) ಗಂಧದಮರದ ಕೆಲಸದಲ್ಲಿರುವ ಮ|| ಇ. ಲಕ್ಷ್ಮಣರಾಯರವರು ಚನ್ನಪಟ್ಟಣದ ಸಬ್ ಡಿವಿಷನ್ನಿಗೂ (6) ಚನ್ನಪಟ್ಟಣದ ಸಬ್ ಡಿವಿಷನ್‌ನಲ್ಲಿರುವ ಮ|| ಎಸ್. ಕೇಶವರಾಯರವರು, ಕೋಲಾರದ ಗೋಲ್ಡುಫೀಲ್ಡ್ಸಿನ ಡಿಟೆಕ್ಟಿವ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿದ್ದು ಪೋಲೀಸ್ ಇನ್‌ಸ್ಪೆಕ್ಟರ್ ಕೆಲಸಕ್ಕೆ ಹಿಂತಿರುಗಿ ಕಳುಹಿಸಲ್ಪಟ್ಟಿರುವವರಾದ ಮ|| ಹೆಚ್. ಎ. ಕೃಷ್ಣರಾಯರವರ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿರುವರು.

ವಿಚಾರಣೆಯ ಪ್ರಕರಣ

ಬೆಂಗಳೂರು ಸಿಟಿ ಮತ್ತು ತಾಲ್ಲೋಕು ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಟಿ. ಎ. ಎ. [illegible] ರವರು ಸಿ. ಐ. ಡಿ. ಇಲಾಖೆಯ ಕಾಗದಗಳನ್ನು ವಹಿಸಲು ಇಂಗ್ಲೆಂಡಿಗೆ ಹೊರಡುವುದಾಗಿ ತಿಳಿದುಬಂತು.

ಸಂಸ್ಕಾರದ ಶಿಕ್ಷಣ

ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಯಥಾರ್ಥವಾಗಿ ಸಾಕ್ಷಿ ನುಡಿದ 99ನೇ ನಂಬರಿನ ಬೆಂಗಳೂರು ಸಿಟಿ ಪೋಲೀಸ್ ಕಾನ್‌ಸ್ಟೇಬಲ್ ನರಸಿಂಹಯ್ಯನೆಂಬಾತನು ಕೆಲಸದಿಂದ ನಿವೃತ್ತಿಸಲ್ಪಟ್ಟಿರುವುದಾಗಿ ತಿಳಿದುಬಂದಿದೆ. ಹಾಗಾದರೆ ಕಮಿಟಿಯ ಮುಂದೆ ಯಥಾರ್ಥವಾಗಿ ಸಾಕ್ಷಿ ಹೇಳಿದವರಿಗೆಲ್ಲಾ [illegible] ವಾಗ್ದಾನ ಮಾಡಿದ್ದು ಇದೇ ರಕ್ಷಣೆಯಲ್ಲವೆ?

ಮಳೆಯ ಅನಾಹುತ.

ಆಸ್ಟ್ರೇಲಿಯಾದಲ್ಲಿ ಕಳೆದ ನಲವತ್ತು ವರ್ಷಗಳ ಪೈಕಿ ಯಾವಾಗಲೂ ಆಗದಿರುವಷ್ಟು ಭಾರಿ ಮಳೆಗಳಾಗಿ ಹೊಳೆಗಳಿಗೆಲ್ಲಾ 25 ಅಡಿ ನೀರು ಬಂದಿರುತ್ತದೆ. ಸಾವಿರಾರು ಜನರು ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವರು.

[illegible]

ವಿಮಾನವನ್ನು ಕಂಡುಹಿಡಿದ [illegible] ಹೆಣ್ಣುಮಗಳು [illegible] ಮಹಡಿಯ ಕಿಟಕಿಯಿಂದ ಜಾರಿ [illegible] ಮೃತಳಾದಳು.

ಛಳಿಯ ಕಷ್ಟ

ಕಾನ್‌ಸ್ಟಾಂಟಿನೋಪಲ್‌ನಲ್ಲಿ ಛಳಿಯ [illegible] ತೊಂದರೆಗಳನ್ನು [illegible] [illegible] ಉಪದ್ರವವನ್ನುಂಟು ಮಾಡುತ್ತಿವೆ. [illegible]

ವ್ಯಾಪಾರದ ಯೋಚನೆ.

ಲಂಡನ್ನಿನ ವ್ಯಾಪಾರಸ್ಥರು [illegible] ಹೋಗಿದ್ದ ವ್ಯಾಪಾರ ಸಂಬಂಧವನ್ನು [illegible] ವುದಕ್ಕಾಗಿ ಮಾರ್ಚಿ 8ನೇ ತಾ|| [illegible] ಒಂದು [illegible] ಮಿಟಿಯನ್ನು ರಷ್ಯಾಕ್ಕೆ ಕಳುಹಿಸುತ್ತಾರೆ.

ಲಾರ್ಡ್ ಬರ್ಕನ್‌ಹೆಡ್.

ಲಾರ್ಡ್‌ಬರ್ಕನ್ ಹೆಡ್‌ರವರು ಲಂಡನ್ ಅಂಡ್ ಕೌಂಟೀಸ್ ಟ್ರಸ್ಟ್ ಲಿಮಿಟೆಡ್ ಕಂಪನಿಯ [illegible] ಮನ್ನರಾಗಿರಲು ವರ್ಷ 1ಕ್ಕೆ ಹದಿನೈದು ಸಾವಿರ ಪೌಂಡುಗಳಿಗೆ ಒಪ್ಪಿರುವುದಾಗಿ ತಿಳಿದುಬಂದಿದೆ.

ಹಿಂದೀ ಪ್ರೋತ್ಸಾಹ

ತಿರುವಾಂಕೂರಿನಲ್ಲಿ ಹಿಂದೀ ಭಾಷೆಯನ್ನು ಬಲಾತ್ಕಾರವಾಗಿ ಕಲಿಸುವ ಯೋಚನೆಯು ನಡೆಯುತ್ತಿದೆ

ಅದ್ಭುತ ಸಾಹಸ.

ಕೊಲಂಬೋದಲ್ಲಿರುವ ದಕ್ಷಿಣ [illegible] ರು ಮರದ ತೆಪ್ಪಗಳ (4 [illegible] ಮರದ ತುಂಡುಗಳಿಂದ ತಯಾರಾದ) ಸಹಾಯದಿಂದ ಸಮುದ್ರ ತೀರವನ್ನು ಬಿಟ್ಟು ಹನ್ನೊಂದು ದಿನಗಳಲ್ಲಿ 200 ಮೈಲಿಗಳ ದೂರ ಪ್ರಯಾಣ ಮಾಡಿ ಸುರಕ್ಷಿತರಾಗಿ ಹಿಂತಿರುಗಿರುವರು

ಭಯಾವಹ

ಇಂಗ್ಲೆಂಡಿನಲ್ಲಿರುವ ನೈಸರ್ಗಿಕ [illegible] ಮಾರಾಟದ ಏಜೆನ್ಸಿಯಲ್ಲಿ ಕಾಲುಕೋಟಿಗಿಂತಲೂ ಹೆಚ್ಚಾಗಿ ಭಯಾವಹವು ನಡೆದಿರುವುದಾಗಿ [illegible].

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ವಿಕರಿಗೆ ಸಿದ್ಧವಾಗಿರುವುದ ಶೀಟ್ ಕ್ಯಾಲೆಂಡರ್ ಪಾಕೆ [illegible] ಪತ್ರ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನ **ಲ್ಲಿ ಪಿಂಟಾಗಿ** ವಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದ [illegible] 5 [illegible] ನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. **ವಿಳಾಸ**—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ ಮಿಶ್ರಿ ಹಲ್ಲುಪುಡಿಯಲ್ಲಿರುವುದೇನು ?



ರಕ್ತಸ್ರವಿಸುವ ವಸಡಿನ ರೋಗಗಳನ್ನು ನೀಗಿಸಿ

[illegible] ಸ್ಥಳಸೆಯಾಗುವ ದುರ್ಬಲ್ಯವನ್ನು ನೀಗಿಸಿ

[illegible] ದಂತರೋಗಗಳನ್ನು ಪರಿಹರಿಸಿ

[illegible] ದುರ್ವಾಸನೆ [illegible] ವ್ರಣಾದಿಗಳನ್ನು ಗುಣಪಡಿಸಿ

ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು [illegible]

[illegible] ರೀತಿಯಿಂದ ರೋಗ ಪರಿಹರಿಸಿ

[illegible] ಹಸಿವನ್ನುಂಟುಮಾಡಿ [illegible]

[illegible] ಅತಿಶಯಗೊಳಿಸಿ

[illegible] ಪುಷ್ಟಿಯಿಂದ [illegible]

[illegible] ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

[illegible]:— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

[illegible] ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ



" [illegible] "

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾ [illegible]

ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ [illegible] ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾ [illegible] ಗಾಳಿಗಳ [illegible] ದಿಂದ ಯಾವ ರೋಗವೂ ಬಾರದಂತೆ ದೇಹವನ್ನು [illegible].

[illegible] ರೋಗಗ [illegible] ಸೀಸೆ 1 ಕ್ಕೆ 4 ಆಣೆ.

[illegible] ಕಸ್ತೂರಿ ಮಾತ್ರೆ [illegible]

ಸ್ತ್ರೀ [illegible] ;—([illegible]) [illegible] ಉಂಟಾಗದೆ ಕೊಟ್ಟ [illegible] ಸೀಸೆ 1 ಕ್ಕೆ ರೂ 1

[illegible] — ([illegible]) [illegible] ರೋಗಗಳನ್ನು [illegible] ಸಾಧಾರಣ ಜ್ವರಗಳಿಗೂ [illegible] ಸೀಸೆ ಬೆಲೆ 1 ಕ್ಕೆ ರೂ 1.


[illegible] ;— [illegible] ಗಳಿಗೂ [illegible] ಸೀಸೆ 1 ಕ್ಕೆ [illegible] ಆಣೆ.

[illegible] ದೊರೆಯುತ್ತದೆ.

ಹೆಡ್ ಆಫೀಸು

[illegible] ಆಫೀಸು

[illegible]



ಭಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ [illegible] ಕೆಲಸ ಇತರ ಕಡೆಗಳಿಗಿಂತ [illegible].

[illegible] ಗಳನ್ನು ನಮ್ಮಲ್ಲಿ ಒಂದು ನೋಡಿ [illegible]

[illegible] ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,

[illegible] ಬೆಂಗಳೂರು ಸಿಟಿ

THEJUPITER GENERAL INSURANCE Co., Lt

Applications are invited from respectable and influential gentlemen from every Taluk and District Centre for Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance.

Apply for Agency terms
To the Chief Agents for Mysore and Coorg

N. Y. PISSAY & Co.
STOCK & SHARE BROKERS,
Chikpet, Bangalore City.

Printed and published by P. R. Rmaiya

Regd No. M 2322 || ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ

ಸಂಪುಟ ೧] ಮಂಗಳವಾರ ೨೭ ಫಬ್ರವರಿ ೧೯೨೮ [ಸಂಚಿಕೆ ೧೬೦

Office of the President,
City Municipal Council, Mysore
Dated 21st February 1929

NOTICE

The Public are hereby informed that until further notice, the water supply to the City will be regulated between 12 P. M. and 3 P. M. and between 9 P. M. and 4 A. M.

T. G. RAMA IYER
President

ತಾಯಿನಾಡು.

26—2—1929

ಮಹಾತ್ಮಾ ಗಾಂಧಿಯವರಿಗೆ ಸತ್ಕಾರ

ಈ ತಿಂಗಳು 19 ನೇ ತಾರೀಖಿನಲ್ಲಿ ಡೆಲ್ಲಿಯಲ್ಲಿ ಪ್ರಧಾನ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ವಿ.|| ವಿ. ಜೆ. ಪಟೇಲರು ಮಹಾತ್ಮಾ ಗಾಂಧಿಯವರಿಗೆ ಕೊಟ್ಟ ಸತ್ಕಾರಕೂಟವು ಬಹಳ ಪ್ರಾಧಾನ್ಯವಾದುದು. ವೈಸ್‌ರಾಯರೂ, ಕಮಾಂಡರ್ ಇನ್ ಚೀಫರವರೂ; ಅನೇಕ ಮಹಾರಾಜರುಗಳೂ, ಸರ್ಕಾರೀ ಮುಖಂಡರೂ ಎಲ್ಲಾ ರಾಜಕೀಯ ಪಂಗಡಗಳ ಮುಖಂಡರೂ ಈ ಪಾರ್ಟಿಯಲ್ಲಿ ಭಾಗವನ್ನು ತೆಗೆದುಕೊಂಡಿದ್ದರು. ನಾಲ್ಕು ಟೇಬಲುಗಳ ಸುತ್ತಲೂ ಅತಿಥಿಗಳು ತಮ್ಮ ಆಸನವನ್ನು ಸ್ವೀಕರಿಸಿದ್ದರು. ವೈಸ್‌ರಾಯರೂ ಗಾಂಧೀಜೀಯವರೂ ಕಾಶ್ಮೀರ ಮಹಾರಾಜರವರೂ ಮತ್ತು ವಿ.|| ಎಂ. ಜಿನ್ನಾರವರೂ ಒಂದು ಟೇಬಲ್ ಸುತ್ತಲೂ, ಕಮಾಂಡರ್ ಇನ್ ಚೀಫರವರೂ ಮಿ|| ಪಟೇಲರವರ, ಮತ್ತು ಮಿಯಾಂ ಷಫೀ ಸಾಹೇಬರವರು ಎರಡನೆಯ ಟೇಬಲ್ಲಿನಲ್ಲಿ ಯೂ ಪಂಡಿತ ಮಾಳವೀಯರು ಭೋಪಾಲ್ ನವಾಬರು ಆನರಬಲ್ ಮಿ|| ಜೇಮ್ಸ್ ಕ್ರೆರಾರವರು ಮಿ|| ಕಸಂಗ್ ಹ್ಯಾಮರರು ಮೂರನೆಯ ಟೇಬಲಿನಲ್ಲಿಯೂ ಪಂಡಿತ ಮೋತಿಲಾಲ್ ನೆಹರೂರವರು, ಜೈಸಲ್ಮೀರ್ ಮಹಾರಾಜರವರು ಡಾ|| ಎಂ. ಎ. ಅನ್‌ಸಾರಿಗಳು ಸರ್. ಡಾರ್ಸಿ ಲಿಂಡ್‌ಸೇಯವರು ನಾಲ್ಕನೆಯ ಟೇಬಲಿನಲ್ಲಿಯೂ ಕುಳಿತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಪಂಡಿತ ಮೋತೀಲಾಲ್ ನೆಹರೂರವರು ಮಹಾತ್ಮ ಗಾಂಧಿಯವರು ಕುಳಿತಿದ್ದ ಟೇಬಲಿಗೆ ಬಂದರು. ಅತಿಥಿಗಳಲ್ಲಿ ಪರಸ್ಪರ ಮಾತುಗಳು ನಡೆದವು. ಗಾಂಧಿಯವರಿಗೂ ವೈಸ್‌ರಾಯರಿಗೂ ರಾಜಕೀಯ ವಿಷಯವಾಗಿ ಸಲ್ಲಾಪಗಳು ನಡೆದಿರಬೇಕೆಂದು ಊಹೆ ಮಾಡಲ್ಪಟ್ಟಿದೆ, ಸುಮಾರು ಒಂದು ಗಂಟೆಯ ಕಾಲ ಈ ಔತನವು ನಡೆಯಿತು. ಅನಂತರ ವೈಸ್‌ರಾಯರಿಗೆ ತುರ್ತ್ ಬೇರೇ ಕೆಲಸವಿದ್ದದ್ದರಿಂದ ಅವರು ಹೊರಟು ಹೋಗಬೇಕಾಯಿತು.

ಮುಡಕುತೊರೆ ವೃತ್ತಾಂತ.

ಈ ತಿಂಗಳು 23 ನೇ ತಾ|| ಶನಿವಾರ ಮುಡಕುತೊರೆಯ ಜಾತ್ರೆಯಲ್ಲಿ ಅಕಸ್ಮಾತ್ ಸಂಭವಿಸಿದ ಬೆಂಕಿಯ ಅನಾಹುತದಿಂದ ಅನೇಕರಿಗೆ ಘಾಯಗಳಾಗಿವೆ. ಅನೇಕ ಸಾವಿರ ರೂಗಳ ಜವಳಿಯೆಲ್ಲಾ ಭಸ್ಮೀಭೂತವಾಗಿವೆ ಎಂದು ತಿಳಿಯಬಂದಿದೆ. ಇದರ ವಿವರವು ಮುಂದಿನ ಸಂಚಿಕೆಯಲ್ಲಿ ಕೊಡಲ್ಪಡುವುದು.

ವಿವಿಧ ವಿಷಯಗಳು

ಶ್ರೀ|| ಸಂಜೀವಯ್ಯನವರಿಗೆ ಸರ್ ವಿಶ್ವೇಶ್ವರಯ್ಯನವರ ಪ್ರತ್ಯುತ್ತರ

ಶ್ರೀ|| ನೀಲಗಿರಿ ಜಿ. ಸಂಜೀವಯ್ಯನವರ ಪರ ಪ್ಲೀಡರು ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಕೊಟ್ಟಿದ್ದ ನೋಟೀಸಿಗೆ ಸರ್. ಎಂ. ವಿಶ್ವೇಶ್ವರಯ್ಯನವರು ಈ ಕೆಳಗೆ ಕಂಡಂತೆ ಉತ್ತರವನ್ನು ಶ್ರೀ|| ಸಂಜೀವಯ್ಯನವರ ಪ್ಲೀಡರುಗಳಿಗೆ ಕಳುಹಿಸಿರುವರು:—

ನೀವು ೧೯೨೯ನೆ ಫೆಬ್ರವರಿ ೮ನೇ ತಾರೀಖಿನ ದಿನ ಬೆಂಗಳೂರು ವಿಳಾಸಕ್ಕೆ ನನಗೆ ಬರೆದಿದ್ದ ಕಾಗದವು ನಿನ್ನೆ ದಿನ ಬೊಂಬಾಯಿನಲ್ಲಿ ನನ್ನ ಕೈ ಸೇರಿತು.

ನಿಮ್ಮ ಕಾಗದದಲ್ಲಿ ನಮೂದಾಗಿರುವ, ನಿಮ್ಮ ಕಕ್ಷಿ ಶ್ರೀ|| ನೀಲಗಿರಿ ಸಂಜೀವಯ್ಯನವರ ವಿಚಾರದಲ್ಲಿ ನಾನು ಅವಮಾನಕರವಾದ ಮಾತು ಆಡಿದೆನೆಂಬುದು ನನಗೆ ತಿಳಿದಿರುವ ಮಟ್ಟಿಗೆ ತೀರಾ ಸುಳ್ಳಾದುದು ನಿಮ್ಮ ಕಕ್ಷಿಗೂ ನನಗೂ ಯಾವ ವೈಯಕ್ತಿಕ ಸಂಬಂಧವೂ ಇಲ್ಲ. ಹೀಗಿರುವಲ್ಲಿ ನಾನು ಅವರನ್ನು ದೂಷಿಸಬೇಕಾದ ಕಾರಣವೇ ಇಲ್ಲ. "ಸುಳ್ಳುಗಾರ" ಎಂಬ ಶಬ್ದವನ್ನು ನಾನು ಉಪಯೋಗಿಸುವ ಯೋಚನೆಯನ್ನೂ ಮಾಡಿದವನಲ್ಲ; ನಿಮ್ಮ ಕಕ್ಷಿಯ ವಿಚಾರದಲ್ಲಿ ಯಾವ ದೊಡ್ಡ ಮನುಷ್ಯನೂ ಆ ರೀತಿ ಹೇಳುವುದಿಲ್ಲ.

ನಿಮ್ಮ ಕಕ್ಷಿಯ ವಿಚಾರದಲ್ಲಿ ಅಪಮಾನಕರವಾದ ಅಥವ ಬೇರೆ ಆರೋಪಣೆಯಾದ ಮಾತನ್ನು ನಾನೆಂದಿಗೂ ಯಾವ ಸಂದರ್ಭದಲ್ಲೂ ಉಪಯೋಗಿಸಿದೆನೆಂದು ನನಗೆ ಜ್ಞಾಪಕವಿಲ್ಲ. ವಿನಾದರೂ ನಡೆದಿದ್ದರೆ, ಸಮಿತಿಯ ಮುಂದೆ ನಿಮ್ಮ ಕಕ್ಷಿಯು ಕೊಟ್ಟ ಹೇಳಿಕೆಯು ಚಾರ್ಯಯುಕ್ತವೂ ಸರ್ ಸಾಮಾನ್ಯವಾದುದೂ ಆಗಿತ್ತೆಂದು ನನಗೆ ಜ್ಞಾಪಕವಿದೆ.

ನನಗೆ ಜ್ಞಾಪಕವಿರುವ ಮಟ್ಟಿಗೆ, ನಾನು ನಿಮ್ಮ ಕಕ್ಷಿಯ ವಿಚಾರವಾಗಿ ಆಡಿದ ಮಾತುಗಳನ್ನಾಗಲಿ ನೀವು ಕಾಗದದಲ್ಲಿ ನಮೂದಿಸಿರುವ ಆ ವಿಷಯಗಳನ್ನಾಗಲೀ ಸಮಿತಿಯ ಯಾವ ಸದಸ್ಯರೂ ನನ್ನ ಗಮನಕ್ಕೆ ತರಲಿಲ್ಲ.

ನಿಮ್ಮ ಕಕ್ಷಿಗೆ ಈ ವಿಷಯವನ್ನು ತಿಳಿಸಿದವರ ಹೆಸರು, ತಿಳಿಸಿದ ಕಾಲ, ಸಂದರ್ಭ, ನಾನು ಏನ ಹೇಳಿದೆನೆಂಬ ವಿಚಾರ ಇವೇ ಮೊದಲಾದ ವಿವರಗಳನ್ನು ತಿಳಿಸುವುದಾದರೆ ನಾನು ಬೆಂಗಳೂರಿಗೆ ಬಂದು ವಿಚಾರಿಸುತ್ತೇನೆ.

(ಚಿ. ಗು-) (ರುಜು) ಎಂ. ವಿಶ್ವೇಶ್ವರಯ್ಯ.

ಪ್ರೆಸ್ ನೋಟ್.

40ರೂ. ಗಳ ಸಂಬಳದೊಳಗಿರುವ ಎಲ್ಲಾ ಸರ್ಕಾರೀ ಆಫೀಸರುಗಳೂ (ಸಪೀರಿಯರ್ ಅಥವಾ ಇನ್ ಫೀರಿಯರ್ ಸರ್ವೀಸಿಗೆ ಸೇರಿದ್ದರೂ) ಹೆಡ್ ಕ್ವಾರ್ಟರಿನಿಂದ 5 ಮೈಲಿಗಿಂತಲೂ ಹೆಚ್ಚಾದ, ರೈಲುಸಂಚಾರ ಸಂಬಂಧವಿಲ್ಲದಿರುವ ಸ್ಥಳಗಳಿಗೆ ಪ್ರಯಾಣ ಮಾಡಬೇಕಾದ್ದಲ್ಲಿ ಕ್ರಮವಾಗಿ ನಡೆಯುತ್ತಿರುವ ಬಸ್ಸುಗಳಲ್ಲಿ ಸಂಚರಿಸಬಹುದು. ಅಂಥಾ ಪ್ರಯಾಣಗಳಿಗೆ ಬಸ್ಸಿನ ಛಾರ್ಜು ಮತ್ತು ದಿನವಹಿ ಪ್ರಯಾಣದ ಭತ್ಯವೂ ಸಹ ಕೊಡಲ್ಪಡುವುದು. ಈ ರೀತಿ 1930ನೇ ಮಾರ್ಚಿ ಒಂದನೇ ತಾ|| ನವರೆಗೆ ಪರೀಕ್ಷಿಸಲ್ಪಟ್ಟನಂತರ ಬಸ್ಸುಗಳಲ್ಲಿ ಸಂಚರಿಸಬಹುದಾದ ಇತರ ಆಫೀಸರುಗಳ ವಿಷಯವು ಪರ್ಯಾಲೋಚಿಸಲ್ಪಡುವುದು.

ನೋಟ್ ಮೊಕದ್ದಮೆ.

ನಂಜನಗೂಡು ಪೋಲೀಸರ ಸಬ್ ಇನ್ಸ್‌ಪೆಕ್ಟರ್ ಎ. ಜೆ ಲಿಂಗಯ್ಯನವರ ಮೇಲೆ ಮ|| ಅಡ್ವೊಕೇಟ್ ಜನರಲ್ ಮಾಡಿದ್ದ ಮೊಕದ್ದಮೆಯಲ್ಲಿ 18-2-29 ರಲ್ಲೂ ತೀರ್ಮಾನವಾಯಿತು: ನಂಜನಗೂಡು ಸ್ಪೆಷಲ್ ಮ್ಯಾಜಿಸ್ಟ್ರೇಟರವರು ಅಪರಾಧಿ ಎ. ಜೆ ಲಿಂಗಯ್ಯನವರಿಗೆ ಮೂರು ತಿಂಗಳು ಸಾದಾ ಸಜಾ 300 ರೂಪಾಯಿ ಜುಲ್ಮಾನೆಯನ್ನೂ, ಜುಲ್ಮಾನೆ ಕೊಡದಿದ್ದಲ್ಲಿ ಜಾಸ್ತಿ ಮೂರು ತಿಂಗಳ ಕಠಿಣ ಸಜವನ್ನೂ ವಸೂಲಾದ ಜುಲ್ಮಾನೆ ಹಣದಲ್ಲಿ ಫಿರ್ಯಾದಿಗೆ 550 ರೂ ಕೊಡಬೇಕೆಂತಲೂ ಹಾಜರಾದ ನೋಟು ಮೈಸೂರು ಬ್ಯಾಂಕಿಗೆ ಕಳುಹಿಸಬೇಕೆಂದೂ ತೀರ್ಮಾನಿಸಿರುತ್ತಾರೆಂದು ತಿಳಿಯಬರುತ್ತದೆ.

ಸನ್ಮಾನ

ಗುರುವಾರ ಬೆಂಗಳೂರು ಬಸವನಗುಡಿಯಲ್ಲಿ ಮ|| ಶ್ರೀ ಜೀವತ ಕೃಷ್ಣಯ್ಯಶೆಟ್ಟರವರು ತಮ್ಮ ಕುಮಾರಿಯ ವಿವಾಹಕಾಲದಲ್ಲಿ ಸುಪ್ರಸಿದ್ಧರಾದ ವೇ|| ಜ್ಯೋತಿಷ ರತ್ನಂ ಸೀತಾರಾಮಜೋಯಿಸರವರು ಭವಿಷ್ಯ ಸಂಗತಿಗಳ ಅನುಮಾನ ಫಲಗಳನ್ನು ತಿಳಿಸಿದುದರ ಅನುಭವಕ್ಕಾಗಿ ಸಂತೋಷದಿಂದ ವೇ|| ಜೋಯಿಸರವರಿಗೆ ಬೆಂಗಳೂರು ಅಡ್ವೋಕೇಟ್ ಮ|| ಕುಸುಮಾ ಸುಬ್ರಾಯಶೆಟ್ಟರವರ ಅಧ್ಯಕ್ಷತೆಯಲ್ಲಿ ಒಂದು ಸುವರ್ಣ ಪದಕವನ್ನು ಬಹುಮಾನದಿಂದ ಕೊಟ್ಟರೆಂದು ತಿಳಿಸಲು ಬಹಳ ಸಂತೋಷಿಸುತ್ತೇವೆ.

ಶ್ರೀ ಶತಚಂಡೀ ಯಾಗ.

ದೇಶಕ್ಷೇಮ ಕಾರಣವೂ ಲೋಕೋಪದ್ರವಶಾಂತಿಯೂ ಆದ ಮೇಲ್ಕಂಡ ಯಾಗವನ್ನು ವೇ|| ಮೂಗೂರು ನಾರಾಯಣಶಾಸ್ತ್ರಿಗಳವರು ಇದೇ ಫಾಲ್ಗುಣ ಶುಕ್ಲ ದಶಮಿ (20-3-29) ಆರಂಭವಾಗಿ ಐದು ದಿನಗಳು ಟಿ. ನರಸೀಪುರದ ಶ್ರೀ ಮೂಲಸ್ಥಾನೇಶ್ವರ ಸ್ವಾಮಿ ಸಾನ್ನಿಧ್ಯದಲ್ಲಿ ನಡೆಸುವರೆಂದೂ; ಈ ಸತ್ಕಾರ್ಯಕ್ಕೆ ಆಸ್ತಿಕ ಮಹಾಶಯರೆಲ್ಲರೂ ಯಥಾಶಕ್ತಿ ಸಹಾಯ ಮಾಡಿ ಶ್ರೇಯಃಪಾತ್ರರಾಗಬೇಕೆಂದೂ ವೇ|| ಶಾಸ್ತ್ರಿಗಳವರು ಪ್ರಾರ್ಥಿಸಿರುತ್ತಾರೆ.

ವೈದ್ಯ ಇಲಾಖೆ

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ಲೇಡಿ ಮೆಡಿಕಲ್ ಆಫೀಸರಾದ ಮಿಸ್. ಬಿ. ಪೆರಿಟನ್‌ರವರು ವಾಣೀವಿಲಾಸ ಆಸ್ಪತ್ರೆಗೂ, ಅಲ್ಲಿರುವ ಶ್ರೀಮತಿ ಮಧುರಾಬಾಯಿ ರವರು ಕೃಷ್ಣರಾಜೇಂದ್ರ ಆಸ್ಪತ್ರೆಗೂ ವರ್ಗಾಯಿಸಲ್ಪಟ್ಟಿರುವರು.

TAI NADU

26—2—1929

ವರ್ತಮಾನ ಸಂಗ್ರಹ.

ಚಾಮರಾಜನಗರದ ವೃತ್ತಾಂತ

(ನಮ್ಮ ಬಾತ್ಮೀದಾರರಿಂದ)

ಬೆಂಗಳೂರು ಗಲಭೆಗಳು

19—2—29

ಬೆಂಗಳೂರು ಗಲಭೆಗಳ ವಿಷಯವಾಗಿ ಸರಕಾರದವರು ಮಾಡಿರುವ ಆರ್ಡರು ಇಲ್ಲಿನ ಪ್ರಜಾಮುಖಂಡರಿಗೂ ಪ್ರಜಾಸಮುದಾಯಕ್ಕೂ ಒಪ್ಪಿಗೆಯಾಗಿಲ್ಲ. ವಿಶ್ವೇಶ್ವರಯ್ಯ ಕಮಿಟಿಯ ವರದಿಯ ಮುಖ್ಯಾಂಶಗಳನ್ನು ಸರಕಾರದವರು ತಿರಸ್ಕರಿಸುವುದು ಇಲ್ಲಿನ ಮುಖಂಡರಿಗೆ ಅಸಮಾಧಾನವನ್ನುಂಟುಮಾಡಿದೆ. ಈ ಅಸಮಾಧಾನವನ್ನು ಸೂಚಿಸುವುದಕ್ಕಾಗಿ ಪ್ರಜೆಗಳ ಸಭೆಯೊಂದು ನಡೆಯುವ ಸಂಭವವಿದೆ.

ಪತ್ರಿಕೆಗಳನ್ನು ನಿಲ್ಲಿಸಿದ್ದು.

ಮ|| ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದ ವಿಷಯದಲ್ಲಿ ಪ್ರಜೆಗಳು ಬಹಳ ವ್ಯಸನಪಡುತ್ತಿದ್ದಾರೆ. ಇಂತಹ ವಯೋವೃದ್ಧರ ಮೇಲೂ ಜ್ಞಾನವೃದ್ಧರ ಮೇಲೆಯೂ ಸರಕಾರದವರು ಈ ರೀತಿಯಾದ ದಬ್ಬಾಳಿಕೆಯನ್ನು ಮಾಡುವುದು ತೀರ ಅನುಚಿತವೆಂದು ಇಲ್ಲಿನ ಅಭಿಪ್ರಾಯ.

ಬ್ರಾಹ್ಮಣ—ಬ್ರಾಹ್ಮಣೇತರ

ಕೆಲವು ಪತ್ರಿಕೆಗಳೂ ಅಸೆಂಬ್ಲಿಯ ಮೆಂಬರುಗಳೂ ತಮ್ಮ ಹಿಂದಿನ ಪಂಗಡದವರ ಮುಖಂಡರೆಂದು ಮುಂದರಿದವರ ಮೇಲೆ ಅನ್ಯಾಯವಾದ ದೋಷಾರೋಪಣೆಗಳನ್ನು ಮಾಡುತ್ತಿರುವುದೂ ದೇಶದ ಏಳಿಗೆಗೆ ವಿಘಾತಕವಾದ ಜಾತಿ ದ್ವೇಷಗಳನ್ನು ಹರಡುತ್ತಿರುವುದೂ ಇಲ್ಲಿನ ಪ್ರಜೆಗಳಿಗೆ ಒಪ್ಪಿಗೆಯಿಲ್ಲ. ಅವರವರು ಅವರವರ ಕಸಬನ್ನು ಮಾಡಿಕೊಂಡು ಅನ್ಯೋನ್ಯದಿಂದ ತಮ್ಮ ಧರ್ಮವನ್ನೂ ತಮ್ಮ ಸದಾಚಾರಗಳನ್ನೂ ದೇಶದ ಏಳಿಗೆಯನ್ನೂ ಮಾಡಿದರೆ ಸಾಕೆಂದು ಮುಖಂಡರುಗಳು ಹೇಳುತ್ತಿದ್ದಾರೆ.

ಮುನಿಸಿಪಾಲಿಟಿ.

ಕಳೆದ ನವಂಬರ್ ಅಂತ್ಯದಲ್ಲಿ ಚುನಾವಣೆಯು ಬಹಳ ಶಾಂತವಾಗಿ ನಡೆಯಿತು. ಈ ಮುನಿಸಿಪಾಲಿಟಿಯ ಮೀಟಿಂಗುಗಳಲ್ಲಿ ಸಭಿಕರ ಬಹಳ ಅನ್ಯೋನ್ಯತೆಯನ್ನು ತೋರಿಸುತ್ತಿರುವರು. ಈಚೆಗೆ ಮುನಿಸಿಪಾಲಿಟಿಯವರು ಮಾಡಿದ ತೀರ್ಮಾನವು ಇಲ್ಲಿನ ದೇವಾಂಗ ಪಂಗಡದವರಿಗೆ ಬಹಳ ತೊಂದರೆಯನ್ನುಂಟುಮಾಡಿದೆ. ಹೊರಗಿನಿಂದ ಈ ಮುನಿಸಿಪಾಲಿಟಿಗೆ ಬಹಳ ಜವಳಿಯು ಬರುತ್ತದೆ. ಅನೇಕರು ತಕ್ಕಾವ್ವಯನ್ನು ತಪ್ಪಿಸಿಕೊಂಡು ಒಳಗೆ ಜವಳಿಯನ್ನು ತರುತ್ತಿರುವರೆಂದೂ ಇದು ಸ್ಥಳದ್ದು, ಇದು ಪರಸ್ಥಳದ್ದು ಎಂದು ಗೊತ್ತು ಮಾಡುವುದಕ್ಕೋಸ್ಕರ ಸಾರ್ವಜನಿಕರಿಗೆ ತಯಾರಾಗುವ ಎಲ್ಲಾ ಜವಳಿಯ ಮೇಲೂ ಮುನಿಸಿಪಾಲಿಟಿಯ ಮೊಹರಿರಬೇಕೆಂದೂ ಸ್ಥಳದಲ್ಲಿನ ಜವಳಿಗೆ ಪ್ರತ್ಯೇಕವಾಗಿ ಮೊಹರು ಹಾಕಬೇಕೆಂದೂ ಮುನಿಸಿಪಾಲಿಟಿಯಲ್ಲಿ ಈಚೆಗೆ ಕೆಲವು ದಿವಸಗಳ ಹಿಂದೆ ತೀರ್ಮಾನವಾಯಿತು. ಇದರಿಂದ ಸ್ಥಳದ ದೇವಾಂಗದವರಿಗೆ ಬಹಳ ತೊಂದರೆಯಾಗಿದೆ. ಮುನಿಸಿಪಾಲಿಟಿಯು ಹೀಗೆ ಹೇಳಿದ್ದಾಗ್ಯೂ ಅವರು ಯಾವ ಜವಳಿಯನ್ನೂ ಬೀರಿ ಮಾಡುವುದಕ್ಕಿಲ್ಲ. ಈ ರೀತಿಯಾದ ಪದ್ಧತಿಯು ಯಾವ ಮುನಿಸಿಪಾಲಿಟಿಯಲ್ಲಿಯೂ ಇಲ್ಲ. ಹೊರಗಿನಿಂದ ಬರುವ ಜವಳಿಯನ್ನು ಸರಿಯಾಗಿ ಶೋಧಿಸಿದರೆ ಸಾಕಾಗಿತ್ತು.

ನೀರಿನ ಸಂಪರ್ಕ.

ಈ ಪ್ರಾಂತ್ಯ ಮಳೆಯಿಲ್ಲದೆ ನೀರಿಗೆ ಬಹಳ ತೊಂದರೆಯಾಗಿರುತ್ತದೆ. ದೊಡ್ಡ ಕೆರೆಯಲ್ಲಿ ನೀರೇ ಇಲ್ಲ. ಕುಡಿಯುವ ನೀರಿನ ಕೆರೆಯಲ್ಲಿ ಇನ್ನೊಂದು ತಿಂಗಳಿಗೆ ಮಾತ್ರ ಆಗುವಷ್ಟು ನೀರಿರುವುದು.

ಅಮಲ್ದಾರರು.

ಇಲ್ಲಿನ ಅಮಲ್ದಾರರಾಗಿದ್ದ ಮ|| ಜಿ. ಸುಬ್ಬರಾಯರವರು ಹೊಳೇನರಸೀಪುರಕ್ಕೆ ವರ್ಗಾಯಿಸಲ್ಪಟ್ಟಿರುವರು. ಇವರು ಬಹಳ ಒಳ್ಳೆಯವರಾಗಿದ್ದರು. ನಿದಾನಸ್ಥರು. ಯಾರಿಗೂ ಕೆಡಕನ್ನು ಮಾಡುತ್ತಿರಲಿಲ್ಲ. ಇವರ ಜಾಗಕ್ಕೆ ಗುಂಡಲುಪೇಟೆಯಲ್ಲಿ ಅಮಲ್ದಾರರಾಗಿದ್ದ ಮ|| ಪಿ. ಕೃಷ್ಣರಾಯರು ಬಂದಿರುವರು. ಇವರ ವಿಷಯ ಇನ್ನೂ ಜನಗಳಿಗೆ ಗೊತ್ತಿಲ್ಲ.

ರೈಲ್ವೆ ಆದಾಯ.

1929ನೇ ಫೆಬ್ರವರಿ 9 ನೇ ತಾ|| ಗೆ ಆಖೈರಾದ ವಾರಕ್ಕೆ ಮೈಸೂರು ರೈಲ್ವೆಗಳ ಒಟ್ಟು ಆದಾಯ 69900 ರೂ. ಗಳು. ಕಳೆದ ವರ್ಷ ಇದೇ ವಾರದಲ್ಲಿ ಆದ ಉತ್ಪತ್ತಿಗಿಂತಲೂ 3.699 ರೂ. ಗಳು ಹೆಚ್ಚಿತ್ತು.

ವರ್ಗ.

ಹಂಗಾಮಿಯಾಗಿ ಲೇಡಿ ಅಸಿಸ್ಟೆಂಟ್ ಸರ್ಜನ್ನಾಗಿದ್ದ ಮಿಸ್. ಹನುಮತ್ ಕಾರ್‌ರವರು ಫೆಬ್ರವರಿ 4 ನೇ ತಾ|| ನಿಂದ ಮೈಸೂರು ವಾಣೀವಿಲಾಸ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು.

ನ್ಯಾಯವಿಧಾಯಕ ಸಭೆ.

ನ್ಯಾಯವಿಧಾಯಕ ಸಭೆಯಲ್ಲಿ ರಿಟೈರಾದ ಮೆ|| ಉಸ್ಮಾನ್‌ರವರ ಸ್ಥಾನಕ್ಕೆ ಆಫಿಸಿಯೇಟಿಂಗ್ ಸೀನಿಯರ್ ಸರ್ಜನ್ ಮಿ|| ಎಸ್. ಸುಬ್ಬರಾಯರವರು ಸರ್ಕಾರಿ ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ಬೆಂಚ್ ಕೋರ್ಟು.

ಮೂಡಿಗೆರೆ ಬೆಂಚ್ ಕೋರ್ಟಿಗೆ ಶ್ರೀ|| ಮ|| ರಾಮಕೃಷ್ಣಯ್ಯನವರೂ ಮತ್ತು ಚಿನ್ನಗದ ಪಟೇಲ್ ಮ|| ದ್ಯಾವಪ್ಪಗೌಡರೂ 3 ನೇ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಾಗಿ ನಿಯಮಿಸಲ್ಪಟ್ಟಿರುವರು.

ಅರಸೀಕೆರೆ.

ಅರಸೀಕೆರೆ ಬೆಂಚ್ ಕೋರ್ಟಿಗೆ ಮ|| ಗಳಾದ ಅಬ್ದುಲ್ ರಜಾಕ್‌ರವರೂ ಹೆಚ್. ಬಸಪ್ಪನವರೂ ಮತ್ತು ಮೈಲಾರದ ನಾಗಪ್ಪನವರೂ 3 ನೇ ದರ್ಜೆಯ ಮ್ಯಾಜಿಸ್ಟ್ರೇಟರುಗಳಾಗಿ ನಿಯಮಿಸಲ್ಪಟ್ಟಿರುವರು.

ಸುಂಕ.

1929 ನೇ ಜುಲೈ ಮೊದಲನೇ ತಾ|| ಲಾಗಾಯಿತು (80 ತೊಲಗಳ ಸೇರು ಒಂದಕ್ಕೆ) ಗಾಂಜಾದ ಮೇಲೆ ಹಾಲಿ ಇದ್ದ ಸುಂಕವನ್ನು 22—8—0 ಇಂದ 25 ರೂ. ಗೆ ಹೆಚ್ಚಿಸಬೇಕೆಂದು ಸರ್ಕಾರದವರು ಆರ್ಡರು ಮಾಡಿರುತ್ತಾರೆ.

ಇನ್ಫ್ಲೂಯಂಜಾ.

ಪ್ಯಾರಿಸ್ ನಗರದಲ್ಲಿ ಈ ತಿಂಗಳು 15 ನೇ ತಾ. ವರೆಗೆ ಮೇಲ್ಕಂಡ ರೋಗದಿಂದ 2634 ಜನರು ಸತ್ತಿರುವರು.

[illegible]

[illegible] ರಾವ ಮುಂದಿರುವ ಪ್ರವೇಶೋತ್ಸವವು ಈ [illegible] ನೇ ತಾ|| ಗುರುವಾರ ಬಹಳ ವೈಭವದಿಂದ ನೆರವೇರಿತು. ಮಧ್ಯಾಹ್ನ ಪೂಜೆಪುನಸ್ಕಾರವು ನಡೆದ [illegible] ಧ್ಯಾಕಾಲ 6ರಿಂದ 9 ವರೆಗೆ ಸುಶ್ರಾವ್ಯವಾದ [illegible] ಮೃದಂಗಮೇಳದ ಸಂಗೀತವು ನಡೆದು [illegible] ದ ಪಾಲ್‌ಗಾಟ್ ರಾಮಯ್ಯ ಭಾಗವತರ [illegible] ಮ|| ಚೌಡಯ್ಯನವರ ಪಿಟೀಲು ಮ|| [illegible] ಮೃದಂಗವೂ ಪ್ರಶಂಸನೀಯವಾಯಿತು. ಈ ಮಂದಿರವನ್ನು ಕಟ್ಟುವುದಕ್ಕಾಗಿ ಬಿಡಾರದ ಕೃಷ್ಣಪ್ಪನವರು 10 ವರ್ಷಗಳಿಂದಲೂ ಬಹಳ ಪ್ರಯಾಸಪಟ್ಟರು. ಸುಮಾರು 30 ಸಾವಿರ ರೂಪಾಯಿಗಳ ವೆಚ್ಚಾಗಿರುವುದು.

ರಿಯಾಯಿತಿ.

ಬೆಂಗಳೂರು ಮುನಿಸಿಪಾಲಿಟಿಯ ಸರಹದ್ದುಗಳಲ್ಲಿರೂ ಬೈಸಿಕಲ್ ಗಾಡಿ, ಮೋಟಾರು ಮೊದಲಾದ ಒಂದೊಂದು ವಾಹನವನ್ನು ಕಂದಾಯ ಕೊಡದೆ ಇಟ್ಟುಕೊಳ್ಳಬಹುದೆಂದು ಸರ್ಕಾರದವರು ಒಪ್ಪಿರುವರು.

ರೈಲ್ವೆ ಅಡ್ವೈಸರಿ ಕಮಿಟಿ

ಈ ಕಮಿಟಿಗೆ ಮ|| ಗಳಾದ ಪಿ. ರಾಘವೇಂದ್ರರಾಯರೂ, ಎಂ. ಎನ್. ನಂಜುಂಡಯ್ಯನವರೂ, ಹೆಚ್. ಜಿ. ಬಸವಪ್ಪನವರೂ, ಕ್ಯಾಪ್ಟನ್ ರೈಟ್‌ರವರೂ, ಆರ್. ಸುಂದರಂ ಅಯ್ಯಂಗಾರ್‌ರವರೂ, ಎಲ್. ಎಸ್. ರಾಜುರವರೂ ಮಹಮದ್ ಸೇಟರವರೂ ಮತ್ತು [illegible] ಪಾಲಾಚಾರ್ಯರವರೂ ಎರಡು ವರ್ಷಗಳ ವರೆಗೆ ಮೆಂಬರುಗಳಾಗಿ ಸರ್ಕಾರದವರು ನಿಯಮಿಸಿರುತ್ತಾರೆ.

ಹಿಂದೀ ಪ್ರಚಾರಕ್ಕೆ ಸಹಾಯ.

ತಮಿಳುನಾಡಿನಲ್ಲಿ ಹಿಂದೀ ಪ್ರಚಾರ [illegible] ಕುಂಭಕೋಣದ ಶ್ರೀ ಶಂಕರಾಚಾರ್ಯ ಸ್ವಾಮಿಗಳು ಸೇಟ್ ಜಮುನಾಲಾಲ್ ಬಜಾಜ್‌ರ ಮೂಲಕ ಒಂದು ನೂರ ರೂಪಾಯಿಗಳನ್ನು ಬಹುಮಾನ [illegible] ಟ್ಟಿರುತ್ತಾರೆ.

ಪ್ರೆಸ್ ಕಮ್ಯೂನಿಕ್.

ಬೆಂಗಳೂರಿನಲ್ಲಿ ಮಕ್ಕಳ ಕಳುವು ನಡೆಯುತ್ತಿರುವುದೆಂದು ಜನಗಳಲ್ಲಿ ಒಂದು [illegible] ಉಂಟಾಗಿರುವಷ್ಟೆ. ಆ ವಿಷಯವಾಗಿ ಸರ್ಕಾರದವರು ಪೋಲೀಸ್ ವಿಚಾರಣೆ ನಡೆಸಿದರು. ವಿಷಯವು ನಿರಾಧಾರವಾದದ್ದೆಂದೂ ಆ ವಿಧವಾಗಿ ಯಾವುದೂ ನಡೆಯುತ್ತಿಲ್ಲವೆಂದೂ ತಿಳಿಸಿರುತ್ತಾರೆ.

ಫಾರೆಸ್ಟ್ ಆಫೀಸರುಗಳು.

ಕೋಲಾರದ ಡಿಸ್ಟ್ರಿಕ್ಟ್ ಆಫೀಸರರೂ, ಅಸಿಸ್ಟೆಂಟ್ ಕನ್ಸರ್‌ವೇಟರೂ ಆದ ಮಿ|| ಸಿ. ಹೆಚ್. ಈಗಲ್‌ಟನ್ ರ ತಿಮ್ಮೊಗ್ಗಾದಿಂದ ಆಸ್ವಾಮಿಗೆ ಡೆಪ್ಯೂಟ್ ಆಗಿದ್ದ ಮ|| ಹೆಚ್. ಎ. ರಂಗಸ್ವಾಮಯ್ಯಂಗಾರರ ಸ್ಥಾನಕ್ಕೂ ಮಿ|| ಎಲ್. ಎಫ್. ವ್ಯಾಸ್‌ಕರ್ ನಾರಾಯಣ ಮಿ|| ಈಗಲ್‌ಟನ್‌ರವರ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿರುವರು.

ಆರೋಗ್ಯ ಇಲಾಖೆ

ಸರ್ಕಾರದವರು ಡಾ|| ಸ್ವಾ|| ಶಿವರಾಮನ್‌ರ ಮುದ್ದೆ [illegible]

Printed and published by P. R. Rmaaiya.

Regd No. M 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ [illegible]

ಸಂಪುಟ ೧] ಬುಧವಾರ ೨೭ ಫೆಬ್ರವರಿ ೧೯೨೯ [ಸಂಚಿಕೆ [illegible]

ತಾಯಿನಾಡು.

27—2—1929

SIMON SEVEN'S VISIT TO MYSORE.

We learn that the members of the Simon Commission and the Central Committee will be in Mysore on the 4th proximo. We do not know what is their object of visit to Mysore. We are told that they do not come here on any public business and that their stay is a private one. The Police of the city are at great pains to ascertain if there would be any boycott demonstration such as Hartal, meetings etc. on that day. So far, we learn of no announcement in that direction. But it is very likely that there would be a demonstration. What form it would take it is too early to say. However much attempts may be made to persuade the people of Mysore that the visit of the Commissioners and the Committee members is not a political one and that they come here only on a holiday, the conviction has gone deep into the minds of the citizens that the members of the Commission and the Committee do not come here as private gentlemen, but as members of the Commission and the Committee. Any entertainment that is to be given to them, by whom-so-ever it may be is given to them because they are members of the Commission and the Committee and not because they are X, Y or Z. Can anybody maintain that the Simon Seven and the Centrol Committee cease to be members of those bodies as soon as they step into the territory of Mysore? Is it not a fact that it is by virtue of their being members of those bodies that special care is taken to give them accomodation and fete them? Is it not out of the money of the tax-payer that the guests unwanted by the tax-payer are

Why ed not the Mysore tax-payer also demonstrate that the Commission and the Committee are unwanted in Mysore and that they have no part or lot in any reception or entertainments arranged to them The interests of Mysore are bound up with those of India. Mysoreans also should rise or fall, sink or sail with Indians. Indians, excepting a few Communal bodies and flunkeys have boycotted the Commission and have held demonstrations all-through When the same Commission enters our borders shall we remain passive and inert? Shall not we, for what we are worth, demonstrate our disapprobation of the Simon Commission's arrival in Mysore? To be true to ourselves, we should be consistant.

On the occasion of the Simon Seven's first entry into India in Febraury 1928, we observed a Hartal in Mysore and held a public meeting in the Town Hall. Our creed is non violence. We do not oompel anybody to join the demonstrations. Ours is a voluntary and peaceful movement. But all the same, our spirit shall assert itself. We shall stand for India's honour and self-respect. Our duty, the duty of both the young and the old is clear. We should obey the call of the Congress, which is the Parliament of India. The congress calls upon every Indian to boycott the Commission. Are Mysoreans Indians or not?

ನೋಟೀಸ್

ಗಂಧದ ಎಣ್ಣೆಯ ಕಾರ್ಖಾನೆ.

ಮೈಸೂರು.

ಮೈಸೂರಿನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಯ ಉಪಯೋಗಕ್ಕೆ ಒಂದು ಸಲ ಉಪಯೋಗಿಸಿರುವ ಚಕ್ಕೆ ಮತ್ತು ಹಿಟ್ಟು ತುಂಬುವ ಪಸ್ಲಾ ಚೀಲಗಳು ಸಾಲಿಯಾನಾ ಸುಮಾರು 10.000 ಚೀಲಗಳು ಬೇಕಾಗಬಹುದು. 1929 ನೇ ಮಾರ್ಚಿ ಯಿಂದ 1930 ನೇ ಫೆಬ್ರವರಿ ಆಖೈರುವರಿಗೆ ಬೇಕಾಗುವ ಚೀಲಗಳನ್ನು ಸರಬರಾಜು ಮಾಡಲು ಇಷ್ಟ ಪಟ್ಟ ದರಖಾಸ್ತುದಾರರು 5-3-29 ನೇ ಮಂಗಳವಾರ ಮಧ್ಯಾಹ್ನ ಮೂರುವರೆ ಘಂಟೆಗೆ ಕಾರ್ಖಾನೆಯ ಆಫೀಸಿನ ಬಳಿ ಹಾಜರಾಗಿ ದರಖಾಸ್ತು ಮಾಡುವ ಮೊದಲು ನಂದು ನೂರು ರೂಪಾಯಿಗಳನ್ನು ಠೇವಣಿಮಾಡಬೇಕು. ಹರಾಜು ಪ್ರಾರಂಭಿಸುವ ಮುಂಚೆ ಸರಬರಾಜುಮಾಡತಕ್ಕವರು ಯಾವ ಷರತ್ತುಗಳಿಗೆ ಒಳಪಡಬೇಕೋ ಅವುಗಳನ್ನು ತಿಳಿಸುತ್ತೆ--ಹರಾಜು ಡೈರೆಕ್ಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮಂಜೂರಾಗಲ್ಪಟ್ಟ—ದರಖಾಸ್ತುದಾರರು ಮಾರನೆಯ ದಿವಸ ಸಾಯಂಕಾಲ ಐದು ಘಂಟೆ ಒಳಗೆ ಅವಶ್ಯಕವಾಗಿ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿ ಕ್ರಮವಾದ ಛಾಪಾಕಾಗದದ ಮೇಲೆ ಅಗ್ರಿಮೆಂಟನ್ನು ಬರೆದು ಕೊಡಬೇಕು.—

R. Ramanuja Iyengar.
ಅ|| ಡೈರೆಕ್ಟರ್
ಮೈಸೂರು.

(25-2-29)

ವಿವಿಧ ವಿಷಯಗಳು

ಖಾದಿಯ ಮಾರಾಟ.

ಕರ್ಣಾಟಕ ಪ್ರಾಂತ್ಯದೊಳಗೆ ಕಳೆದ ಡಿಸೆಂಬರ್ ಮಾಹೆಯಲ್ಲಿ 16258 ರೂ ಗಳ ಖಾದಿಯ ಮಾರಾಟವಾಯಿತು

ಗಂಗಾಮತ ಮಹಾಸಭೆ.

ಈ ಮಾಹೆ 28 ನೇ ತಾ|| ಗುರುವಾರ ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನದ ಗಂಗಾಮತಸ್ಥರ ಮಹಾಸಭೆ ನಡೆಯುವುದು.

ಅಖಿಲ ಪ್ರಪಂಚದ ರಾಷ್ಟ್ರ ಸಭೆ.

1929 ನೇ ಜುಲೈ 28 ನೇ ತಾ|| ಪ್ಯಾರಿಸ್ ನಗರದಲ್ಲಿ ನಡೆಯುವ ಅಖಿಲ ಪ್ರಪಂಚದ ರಾಷ್ಟ್ರ ಸಭೆಯ ಸಮಾರಂಭದಲ್ಲಿ ಯುವಕ ಕಾಂಗ್ರೆಸ್ಸೂ ನಡೆಯುವುದು. ಆ ಸಭೆಗೆ ಅಖಿಲ ಭಾರತ ರಾಷ್ಟ್ರ ಸಭೆಯಿಂದ ಒಬ್ಬ ಪ್ರತಿನಿಧಿಗಳು ಚುನಾಯಿಸಲ್ಪಡುವರು. ಆಗ ಕಲ್ಕತ್ತಾ ರಾಷ್ಟ್ರೀಯ ಸಭೆಯ ಸ್ವತಂತ್ರವಾದಿಗಳ ಜಾಹಿರಾತನ್ನು ಸಹಕರಿಸುವ ಠರಾವೂ ಚರ್ಚಿಸಲ್ಪಡುವುದು.

ಸರ್ಕಾರದ ಜಫ್ತಿ.

ಕ್ಯಾಥೋಲಿಕ್ ಪಾದ್ರಿಗಳೇ ಸರಕಾರದ ವಿರುದ್ಧ ಚಳುವಳಿಗೆ ಸಹಾಯ ಮಾಡುವರೆಂದೂ ಮೆಕ್ಸಿಕೋ ಸರಕಾರವು ಅಲ್ಲಿರತಕ್ಕ ಕ್ಯಾಥಲಿಕರ ಆಸ್ತಿಗಳನ್ನೆಲ್ಲಾ ಜಫ್ತಿ ಮಾಡಿಕೊಂಡಿದೆ.

ಮುಡುಕತೊರೆ.

ಟಿ. ನರಸೀಪುರದ ತಾಲ್ಲೋಕು ಮುಡುಕತೊರೆಯಲ್ಲಿ 19-2-29ನೇ ಮಂಗಳವಾರದ ದಿವಸ ಶ್ರೀಯುತ ತಲಕಾಡು ನಾಗಪ್ಪನವರ ಅಧ್ಯಕ್ಷತೆಯಲ್ಲಿ ಹಳೇನಾಡು ಕರ್ಣಾಟಕ ಬ್ರಾಹ್ಮಣರ ಸಮ್ಮೇಳನವು ನಡೆಯಿತು. ಸುಮಾರು 300, 400 ಜನಗಳು ಸೇರಿದ್ದರು. ಅನೇಕರು ಭಾಷಣಗಳನ್ನು ಮಾಡಿದರು, ನಂಜನಗೂಡು ಶ್ರೀಕಂಠೇಶ್ವರದೇವಸ್ಥಾನದ ವಿಷಯ ದಲ್ಲಿ ಬಹಳ ಹೊತ್ತು ಚರ್ಚೆ ನಡೆಯಿತು. ನಂತರ ಈ ಕೆಳಗಿನ ಠರಾವುಗಳು ಸರ್ವಾನು ಮತದಿಂದ ಪಾಸಾಯಿತು.

(1) ಮೈಸೂರು ಸಂಸ್ಥಾನದ ಎಲ್ಲಾ ದೇವಸ್ಥಾನಗಳ ಶುಕನಾಶಿನಿ ಅಂಕಣಗಳೊಳಗೆ ಹಳೇನಾಡು ಕರ್ಣಾಟಕ ಬ್ರಾಹ್ಮಣರು ಪ್ರವೇಶಮಾಡಿ ಪೂಜೆಮಾಡಿಸಿಕೊಂಡು ಬರುತ್ತಿರುವುದನ್ನು ನಂಜನಗೂಡು ಶ್ರೀ ಶ್ರೀಕಂಠೇಶ್ವರದೇವಾಲಯದ ನೌಕರರುಗಳು ತಿಳಿದಿದ್ದೂ ಶ್ರೀ ಶ್ರೀಕಂಠೇಶ್ವರದೇವಸ್ಥಾನದಲ್ಲಿ ಮಾತ್ರ ಅವರುಗಳಿಗೆ ಕಿರುಕುಳಗಳನುಂಟು ಮಾಡುತ್ತಿರುವುದು ಶುದ್ಧ ತಪ್ಪೆಂದೂ ಅನ್ಯಾಯವೆಂದೂ ಈ ಸಭೆಯು ಘಂಟಾಘೋಷವಾಗಿ ಖಂಡಿಸುತ್ತದೆ.

(2) ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದ ಶುಕನಾಶಿನಿ ಅಂಕಣದೊಳಗೆ ಹಳೇನಾಡು ಕರ್ಣಾಟಕ ಬ್ರಾಹ್ಮಣರು ಪ್ರವೇಶಮಾಡುವಾಗ ಅಲ್ಲಿನ ನೌಕರರುಗಳು ಮಾಡುತ್ತಿರುವ ಕಿರುಕುಳವನ್ನು ತಪ್ಪಿಸಿಕೊಡಬೇಕೆಂಬದಾಗಿ ನಮ್ಮ ಸರ್ಕಾರವನ್ನು ಈ ಸಭೆಯು ಪ್ರಾರ್ಥಿಸಿಕೊಳ್ಳುತ್ತದೆ.

(3) ಮೇಲ್ಕಂಡ ಠರಾವುಗಳನ್ನು ನಮ್ಮ ಸರ್ಕಾರದ ಚೀಫ್ ಸೆಕ್ರೆಟರಿಯವರಿಗೂ ಮುಜರಾಯ್ ಕಮಿಷನರವರಿಗೂ ಎಲ್ಲಾ ಪತ್ರಿಕೆಗಳಿಗೂ ರವಾನಿಸಬೇಕೆಂದು ಈ ಸಭೆಯು ಅಪೇಕ್ಷಿಸುತ್ತದೆ. ಹಾಜರಿದ್ದವ

TAI NADU
27—2—1929

ವರ್ತಮಾನ ಸಂಗ್ರಹ.

ರಾಜರುಗಳ ನಿರಾಶೆ.

ಬಟ್ಲರ್ ಕಮಿಟಿಯು ವರದಿಯ ಮೇಲೆ ಇಂಡಿಯಾ ಸರಕಾರದವರು ತೀರ್ಮಾನಗಳನ್ನು ಮಾಡುವ ಮುಂಚೆ ರಾಜರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವದಾಗಿ ವೈಸ್ ರಾಯರವರು ರಾಜರುಗಳ ಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದರಷ್ಟೆ. ಈಗ ಆ ಭರವಸೆಯಂತೆ ನಡೆದುಕೊಳ್ಳಲು ಆಗುವುದಿಲ್ಲವೆಂದು, ರಾಜರುಗಳಿಗೆ ಸಮಾಚಾರವು ಕಳುಹಿಸಲ್ಪಟ್ಟಿರುವುದು. ಅದೂ ಅಲ್ಲದೆ ರಾಜರುಗಳು, ಸರ್ ಲೆಸ್ಲಿ ಸ್ಕಾಟ್ ಎಂಬ ಲಾಯರ ಮುಖಾಂತರ ತಮಗೂ ಚಕ್ರವರ್ತಿಗಳಿಗೂ ನೇರವಾದ ಸಂಬಂಧವು ಇರಬೇಕೆಂದೂ ಇಂಡಿಯಾ ಸರಕಾರದವರಿಗೆ ತಾವು ಅಧೀನವಾಗಿ ಇರುವುದಿಲ್ಲವೆಂದು ಹೇಳಿದ ಅಭಿಪ್ರಾಯವು ಬಟ್ಲರ್ ಕಮಿಟಿಗೆ ಒಪ್ಪಿಕೆಯಿಲ್ಲವೆಂದೂ ರಾಜರುಗಳು ಇಂಡಿಯಾ ಸರ್ಕಾರದ ಅಧೀನದಲ್ಲಿಯೇ ಇರಬೇಕೆಂದೂ ತೀರ್ಮಾನವಾಗುವುದಾಗಿಯೂ ತಿಳಿಯಬರುತ್ತದೆ. ಈ ವಿಷಯವಾಗಿ ಪುನಃ ಚರ್ಚೆ ನಡೆಸುವುದಕ್ಕೆ ಕೆಲವು ರಾಜರುಗಳು ಇಂಗ್ಲೆಂಡಿಗೆ ಹೋಗುವುದಾಗಿ ತಿಳಿಯಬರುತ್ತದೆ.

ಸಂಗೀತ ಕಛೇರಿ.

ಗಾನವಿಶಾರದ ಬಿಡಾರದ ಕೃಷ್ಣಪ್ಪನವರು ಮೂಡಲ್ ಶ್ರೀರಾಮ ಮಂದಿರದಲ್ಲಿ ಕಳೆದ ಭಾನುವಾರ (24-2-29) ಸಾಯಂಕಾಲ ಭಾರೀ ಸಂಗೀತ ಕಛೇರಿಯು ನಡೆಯಿತು ಗೊತ್ತಾಗಿದ್ದ ಕೆಲವರಿಗೆ ಮಾತ್ರ ಆಹ್ವಾನವು ಕಳುಹಿಸಲ್ಪಟ್ಟಿತ್ತು ಆದಾಗ್ಯೂ ಸಂಗೀತ ಭವನವು ಕಿಕ್ಕಿರಿಯುವಂತೆ ತುಂಬಿತ್ತು. ರಾಜಧಾನಿಯ ದೊಡ್ಡ ಮನುಷ್ಯರನೇಕರು ದಯಮಾಡಿಸಿದ್ದರು. ಸರದಾರ್ ಗೋಪಾಲರಾಜೇ ಅರಸಿನವರೂ, ಮ|| ಸುಬ್ರಹ್ಮಣ್ಯರಾಜೇ ಅರಸಿನವರೂ, ಕೆ. ಶಂಕರನಾರಾಯಣರವರೂ, ಮ|| ಟಿ. ಜಿ. ರಾಮಯ್ಯನವರೂ, ಮ|| ಎಂ. ವೆಂಕಟಕೃಷ್ಣಯ್ಯನವರೂ ಅಂಬ್ಲೆ ಅಣ್ಣಯ್ಯಪಂಡಿತರೂ ಎ. ಕೃಷ್ಣರಾಯರೂ, ಸಿ. ನರಸಿಂಹಯ್ಯನವರೂ ಇನ್ನೂ ಇತರರೂ ಹಾಜರಿದ್ದರು. ತಿರುಮಕೂಡಲು ಸುಂದರಮ್ಮನವರೂ ಆಕೆಯ ಕುಮಾರಿಯರೂ ಬಿಡಾರದ ಕೃಷ್ಣಪ್ಪನವರೂ ಬಹಳ ಸುಶ್ರಾವ್ಯವಾಗಿ ಗಾನವನ್ನು ಮಾಡಿದರು. ಮ|| ಚೌಡಯ್ಯನವರ ಪಿಟೀಲಂತೂ ಹೃದಯಂಗಮವಾಗಿತ್ತು. ಸಂಧ್ಯಾಕಾಲ 6 ರಿಂದ 8-30 ವರೆಗೆ ಕಛೇರಿಯು ನಡೆಯಿತು. ಸಭಿಕರೆಲ್ಲರೂ ಬಹಳ ಸಂತೋಷಪಟ್ಟರು.

ಲಾಲಾಜಿ ನಿಧಿ.

ಮಹಾತ್ಮಾ ಗಾಂಧಿಯವರು ಲಾಲಾಜಿ ನಿಧಿಗೆ ಸಿಂಧೂ ದೇಶದಲ್ಲಿ ಒಟ್ಟು 76,662—9—11 ಪೈಗಳನ್ನು ಸೇರಿಸಿರುವರು.

ಹಿಮದ ಅವಾಂತರ.

ಭಾಹಿತಾನಗರದ ಕೆಲ ಭಾಗಗಳಲ್ಲಿ ಬಿದ್ದ ಹಿಮದಿಂದ ೯0,000 ರೂಪಾಯಿಗಳ ಪೈರಿನ ನಷ್ಟವಾಗಿದೆಯೆಂದೂ ಸರ್ಕಾರದವರು ಕಂದಾಯದ ಕಾಲದಲ್ಲಿ ವಿಷಯ ವಿಮರ್ಶೆ ಮಾಡುವರೆಂದೂ ತಿಳಿಯಬರುತ್ತೆ.

ರಥೋತ್ಸವ

ಶ್ರೀರಂಗಪಟ್ಟಣದ ತಾ|| ಕ್ಯಾತನಹಳ್ಳಿಯ ಶ್ರೀ ಕೋದಂಡ ರಾಮ ಸ್ವಾಮಿ ರಥೋತ್ಸವವು ಈ ತಿಂಗಳು 18 ನೇ ತಾ|| ಸೋಮವಾರದ ದಿವಸ ಮಾಮೂಲಿನಂತೆ ಶ್ರೀ ರಾಮ ಚಕ್ರರಾದ ಮ|| ರಾ|| ರಾಮಕೃಷ್ಣಯ್ಯಂಗಾರ್ಯರವರ ಮೇಲ್ವಿಚಾರಣೆಯಲ್ಲಿ ವಿಚಕ್ಷಣವಾಗಿ ನಡೆಯಿತು. ಮಧ್ಯಾಹ್ನ ಕ್ಕಿಂತಲೂ ಸಾಯಂಕಾಲದ ತೇರಿಗೆ ಬಹಳ ಜನ ಸೇರಿದ್ದರು, ಈ ಉತ್ಸವ ಕಾರ್ಯಕ್ಕೂ ಮತ್ತು ಶಿಥಿಲವಾದ ಪುರಾತನ ದೇವಾಲಯಗಳ ಪುನರುಜ್ಜೀವನಕ್ಕೂ, ಇನ್ನೂ ಅನೇಕ ಆಸ್ತಿಕ ಮಹನೀಯರುಗಳೆಲ್ಲರೂ ಸೇರಿ ಸಹಕರಿಸುವುದ ಕ್ಕವ , ಪ್ರತಿ ವರ್ಷವೂ ರಥೋತ್ಸವದ ಜೊತೆಗೆ ದನಗಳ ಪರಿಷೆಯನ್ನು ನಡೆಯಿಸುವುದು ಒಳ್ಳೆಯದು ಎಂಬುದಾಗಿಬಬ್ಬ ಜಾತ್ಮೀದಾರರು ಬರೆದಿರುತ್ತಾರೆ.

ಮೋಟಾರ್ ಬಸ್ಸುಗಳ ಮೆರವಣಿಗೆ.

ಮದರಾಸ್ ಪೋಲೀಸಿನವರು ಮೋಟಾರ್ ಬಸ್ಸ್ ಡ್ರೈವರ್‌ಗಳ ಮೇಲೆ ಸಣ್ಣ ಪುಟ್ಟ ತಪ್ಪುಗಳಿಗೆಲ್ಲಾ ತಮ್ಮ ದರ್ಪವನ್ನು ತೋರಿಸುತ್ತಾರೆಂದು ಮುಷ್ಕರ ಹಿಡಿದಿದ್ದ ಬಸ್ಸಿನವರು ಈ ತಿಂಗಳು 18 ನೇ ತಾ||ನ ದಿವಸ ಮೋಟಾರ್ ಬಸ್ಸಿನ ಮುಂಭಾಗದಲ್ಲಿ ಕಪ್ಪು ಪತಾಕೆಗಳನ್ನೂ "ಪೋಲೀಸರ ಅಸಹನೀಯ ಅತ್ಯಾಚಾರದಿಂದ ನಮಗೆ ನ್ಯಾಯವು ಸಿಕ್ಕಬೇಕು" ಎಂದು ಬರೆಸಿದ್ದ ಧ್ವಜಗಳನ್ನೂ ಹಿಡಿದುಕೊಂಡು ಮೆರವಣಿಗೆ ಮಾಡಿದರು

ಮದರಾಸ್ ಲಾ ಕಾಲೇಜ್ ಗಲಭೆ

ಸೈಮನ್ ಬಹಿಷ್ಕಾರ ಸಂದರ್ಭದಲ್ಲಿ ಕೆಲಸ ಮಾಡಿದ ಐದು ಜನ ಮುಖಂಡ ವಿದ್ಯಾರ್ಥಿಗಳನ್ನು ಪ್ರಿನ್ಸಿಪಾಲರು ಕಾಲೇಜಿಗೆ ಸೇರಿಸಲಿಲ್ಲವಾದ ಪ್ರಯುಕ್ತ ಈ ಮಾಹೆ 22 ನೇ ತಾ|| ನ ದಿವಸ 200 ವಿದ್ಯಾರ್ಥಿಗಳು ತರಗತಿಗೆ ಹೋಗಲಿಲ್ಲ ವಿದ್ಯಾರ್ಥಿಗಳೆಲ್ಲರೂ ಸೋಮವಾರದೊಳಗಾಗಿ ಕಾಲೇಜಿಗೆ ಬಾರದಿದ್ದರೆ ಈ ವರ್ಷವೆಲ್ಲಾ ಬರಬೇಕಾದ್ದಿಲ್ಲವೆಂದು ಪ್ರಿನ್ಸಿಪಾಲರವರು ನೋಟಿಸನ್ನು ಕೊಟ್ಟಿರುವರು.

ಅಲಭ್ಯವಾದ ಮರಣ.

ಮಹಾತ್ಮಾ ಗಾಂಧಿಯವರು ತಮ್ಮ ಮೊಮ್ಮಗನಾದ ರಸಿಕಲಾಲ್ ಗಾಂಧಿಯ ಮರಣದ ವಿಷಯದಲ್ಲಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ಹೇಳಿರುವುದೇನೆಂದರೆ? ರಸಿಕನು ತನ್ನ ಕರ್ತವ್ಯ ಕ್ಷೇತ್ರದಲ್ಲಿಯೇ ಮಡಿದನು. ಅವನು ಮಡಿದದ್ದಕ್ಕಾಗಿ ನಾನು ವಿಷಾದಿಸುವುದಿಲ್ಲ. ಅವನ ಮರಣವು ಅಳುವದಕ್ಕೆ ಯೋಗ್ಯವಾದುದಲ್ಲ. ಅವನದು ಅಲಭ್ಯವಾದ ಮರಣ

ಮದರಾಸ್ ಕಾರ್ಪೊರೇಷನ್

ಈಗ ಕೆಲವು ದಿವಸಗಳ ಹಿಂದೆ ಮದರಾಸಿನ ಕಾರ್ಪೊರೇಷನ್ ಅಧ್ಯಕ್ಷರಾದ ಮ|| ಎ. ರಾಮಸ್ವಾಮಿ ಮೊದಲಿಯಾರರ ಮೇಲೆ ಆಕ್ಷೇಪಕರವಾದ ಅಪಾದನೆಗಳಾಗಿ ಸಭೆಯಲ್ಲಿ ಬಹಳ ಗಲಾಟೆಯಾಯಿತಷ್ಟೆ. ಅದಕ್ಕೆ ಉತ್ತರವಾಗಿ ಮಹಾಜನಗಳ ಸಭೆಯೊಂದರಲ್ಲಿ ಮ|| ಮೊದಲಿಯಾರರವರು ಸಮಾಧಾನವನ್ನು ಕೊಟ್ಟರು. ಆ ಸಮಾಧಾನವು ತೃಪ್ತಿಕರವಾಗಿರುವುದಿಲ್ಲ.

ವೃದ್ಧೆ.

ಅಮೇರಿಕಾದ ಮೆಕ್ಸಿಕೋ ಪ್ರಾಂತ್ಯದಲ್ಲಿ ಡೋನಾ ಹಿಡಮೆಡೆ ಓಡ್ಡಾರೋಜ್ ಎಂಬ 145 ವರುಷದ ವೃದ್ಧೆ ಇರುವಳು.

ರಥೋತ್ಸವ

ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ತಾಲ್ಲೂಕು ಕಲರಾಯಲೆ ಬೆಟ್ಟದಲ್ಲಿರುವ ಶ್ರೀ ವೆಂಕಟರಮಣಸ್ವಾಮಿಯವರ ರಥೋತ್ಸವವು ಈ ತಿಂಗಳು 18 ನೇ ತಾರೀಖಿನಿಂದಲೂ ಭಕ್ತಾದಿಗಳಿಂದ ಅತಿವೈಭವವಾಗಿ ನಡೆಯುತ್ತಿದೆ. ಈ ಉತ್ಸವವು 28 ನೇ ತಾ|| ಗೆ ಅಖೈರಾಗುವುದು. ಇದರ ಜೊತೆಯಲ್ಲಿ ನಡೆಯುವ ದನಗಳ ಪರೀಕ್ಷೆಯಲ್ಲಿ ಉತ್ತಮವಾದ ರಾಸುಗಳಿಗೆ [illegible] ದೊರೆಯುವ ಏರ್ಪಾಡಾಗಿದೆ

ವಾರ್ಷಿಕೋತ್ಸವ

ರಾಜಧಾನಿಯ ಬಿ. ಎ. ಕೆ. ಸಂಘದ ಏಳನೇ ವಾರ್ಷಿಕೋತ್ಸವವು ಈ ತಿಂಗಳು 24 ನೇ ತಾ|| [illegible] ವಾರ ಚಾಮುಂಡಿ ಬೆಟ್ಟದ ಪಾದದ ಬಳಿ [illegible] [illegible] ನೆರವೇರಿತು. [illegible] ಎ ಬಿ. ಎಲ್. ರವರು ಅಗ್ರಾಸನವನ್ನು ವಹಿಸಿದ್ದರು.

ಅ ಕಂಟ್ರೋಲರ್

ಆ ಕಂಟ್ರೋಲರಾದ [illegible] ವರು ಬೇರೆ ಕೆಲಸ ನೋಡುತ್ತಿರುವುದರಿಂದ ಆ ಸ್ಥಾನದಲ್ಲಿ, ಕಂಟ್ರೋಲರ್ ಆಫೀಸಿನಲ್ಲಿ [illegible] ಸೂಪರಿಂಟೆಂಡೆಂಟರಾದ [illegible] ಅಸಿಸ್ಟೆಂಟ್ ಕಂಟ್ರೋಲರಾಗಿ ನಿಯಮಿಸಲ್ಪಟ್ಟಿರುವರು.

ಮಂತ್ರಿಗಳ ರಾಜೀನಾಮೆ.

ಬಂಗಾಳದಲ್ಲಿ ಮಂತ್ರಿಗಳ ಮೇಲೆ ಅವಿಶ್ವಾಸ [illegible] ವು ನ್ಯಾಯವಿಧಾಯಕ ಸಭೆಯಲ್ಲಿ [illegible] ವಾದ್ದರಿಂದ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕಾಯಿತು. ಗವರ್ನರವರೇ ಆ ಮಂತ್ರಿಗಳ ಕೆಲಸವನ್ನು ಮಾಡುತ್ತಿರುವರು.

ಶಾರೀರ ಶಿಕ್ಷಣ ನಿರ್ಬಂಧ

ಏಪ್ರಿಲ್ 4 ನೇ ತಾ|| [illegible] ಸೆನೆಟ್ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಶಾರೀರಕ ಶಿಕ್ಷಣವನ್ನು ನಿರ್ಬಂಧವಾಗಿ ಕೊಡಿಸುವ ತೀರ್ಮಾನ [illegible]

ಕುದ್ಮುಲ್ ರಂಗರಾಯರ ಪುಣ್ಯದಿನ

[illegible] ತಮ್ಮ [illegible] ಗಿ ಜೀವಿತ ಕಾಲವನ್ನೆಲ್ಲಾ ವಿನಿಯೋಗಿಸಿದ [illegible] ಕುದ್ಮುಲ್ ರಂಗರಾಯರ ಪುಣ್ಯದಿನವನ್ನು ಅತಿ ವಿಜೃಂಭಣೆಯಿಂದ ಜರುಗಿಸಿ ಅವರ ಹೆಸರಿನಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿರುವುದಾಗಿ ತಿಳಿಯಬರುತ್ತೆ.

ಆಡಿಟರ್

ರೈಲ್ವೆ ಆಡಿಟ್ ಆಫೀಸಿನ [illegible] ಸೂಪರಿಂಟೆಂಡೆಂಟಾದ ಮ|| ಆರ್. [illegible] ಗಾಮಿಯಾಗಿ ಮೈಸೂರು ರೈಲ್ವೆಗಳ ಅಸಿಸ್ಟೆಂಟ್ ಆಡಿಟರ ಕೆಲಸ ನೋಡುವರು.

ರಜಾ ದಿನ

ಈ ತಿಂಗಳು 25ನೇ ತಾ|| ಸೋಮವಾರ ಹಾಸನದ ಟವನ್ ಮುನಿಸಿಪಲ್ ಕೌನ್ಸಿಲ್ಲಿನ ಜನರಲ್ ಎಲೆಕ್ಷನ್ ನಡೆಯುವುದರಿಂದ, ಆ ಟವನಿನ ಎಲ್ಲಾ ಕೋರ್ಟು ಕಛೇರಿಗಳಿಗೂ ರಜಾ ಕೊಡಲಾಗಿದೆ

ಅಕೌಂಟೆಂಟ್ ಜನರಲ್.

ಮೈಸೂರು ಕಾಲೇಜಿನಲ್ಲಿ ಎಕನಾಮಿಕ್ ಅಸಿಸ್ಟೆಂಟ್ ಪ್ರೊಫೆಸರರಾಗಿದ್ದು [illegible] ಸರ್ವಿಸ್ಸಿನಲ್ಲಿರುವ ಮ|| ಸಿ. ಸುಂದರರಾಮರಾಯರವರು ಕಲ್ಕತ್ತಾದಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲರಾಗಿ ನೇಮಿಸಲ್ಪಟ್ಟಿರುವರು.

ತಾಯಿನಾಡು.

28—2—1929

ಮಕ್ಕಳ ಕಳುವು.

ಬೊಂಬಾಯಿಯಲ್ಲಿ ಆದ ಗಲಭೆಯು, ಪಠಾಣರು ಹೆಂಗಸರನ್ನು ಮಕ್ಕಳನ್ನು ಹಿಡಿದುಕೊಂಡು ಹೋಗುತ್ತಾರೆಂಬ ಭೀತಿಯಿಂದ ಹರಡುತ್ತಿದೆ. ನಾಗಪುರದಲ್ಲಿ ಕೂಡ ಇದೇ ರೀತಿಯಾದ ಭೀತಿಯು ವ್ಯಾಪಿಸುತ್ತಿರುವುದು ಈಗಾಗಲೇ ಬೆಂಗಳೂರಿನಲ್ಲಿ ಏನೂ ಅನರ್ಥವುಂಟಾಗುತ್ತಿರುವುದು. ಸರಕಾರದವರೂ ಪ್ರಜಾಮುಖಂಡರೂ ಈ ಭಾಗದಲ್ಲಿ ಬಹಳ ಜಾಗರೂಕತೆಯಿಂದ ವರ್ತಿಸಬೇಕು. ಜನಗಳ ಮನಸ್ಸಿನಲ್ಲಿ ಧೈರ್ಯವನ್ನು ನೆಲೆಗೊಳಿಸುವುದಕ್ಕೆ ಮಾಡಬೇಕಾದ ಉಪಾಯಗಳನ್ನೆಲ್ಲಾ ಮಾಡಬೇಕು. ಬೇಕುಬೇಕೆಂದೇ ಕೆಲವರು ತಂಟೆಯ ಸುಳ್ಳು ಸಮಾಚಾರಗಳನ್ನು ಹರಡುತ್ತಾರೆಂದು ಅಧಿಕಾರಿಗಳು ಉದಾಸೀನವನ್ನು ಮಾಡಬಾರದು. ಮಕ್ಕಳಿರುವವರಿಗೆ ಭೀತಿಯು ಸಹಜವಾದುದು. ಬೇಕಾದರೆ ಕೆಲವು ದಿವಸ ಸಣ್ಣ ಸ್ಕೂಲುಗಳಿಗೆ ರಜಾ ಕೊಡಬಹುದು. ಪೋಲೀಸು ಉಸ್ತುವಾರಿಯನ್ನು ಹೆಚ್ಚಿಸಿ ಯಾರು ಈ ವಿಚಾರದಲ್ಲಿ ಸಮಾಚಾರವನ್ನು ತರುತ್ತಾರೋ ಅವರಿಗೆಲ್ಲಾ ಉತ್ತೇಜನ ಕೊಟ್ಟು ಅವರು ಹೇಳುವ ಮಾತುಗಳನ್ನು ಪರೀಕ್ಷಿಸಬೇಕು. ನಿಜಾಂಶವಿಲ್ಲವೆಂಬುದನ್ನು ಆ ಸಮಾಚಾರ ಹೇಳುವವರಿಗೇ ತೋರಿಸಿಕೊಡಬೇಕು. ಈ ಸಂದರ್ಭದಲ್ಲಿ ಸರಕಾರದವರಾಗಲೀ ಪೋಲೀಸಿನವರಾಗಲೀ ಪ್ರಜೆಗಳ ಜೊತೆ ತಾವು ಬೇರೆ ಎಂಬ ಭಾವನೆಯನ್ನು ತೋರಿಸಬಾರದು. ಗಣಪತಿಯ ಗಲಾಟೆಯಲ್ಲಾದಂತೆ ಸರಕಾರದವರು ಪತ್ರಿಕೆಗಳನ್ನು ದೂಷಿಸಬಾರದು. ಪತ್ರಿಕೆಗಳಿಗೆ ಆದಷ್ಟು ಉತ್ತೇಜನವನ್ನು ಕೊಡಬೇಕು. ಈ ವಿಷಯದಲ್ಲಿ ಪತ್ರಿಕೆಗಳೂ ಮಹಾಜನಗಳೂ ಜನಗಳಲ್ಲಿ ಭೀತಿಯನ್ನು ಕಡಿಮೆ ಮಾಡಲು ಆದಷ್ಟು ಪ್ರಯತ್ನವನ್ನು ಮಾಡುವುದು ಅತ್ಯಗತ್ಯವಾದ ಕರ್ತವ್ಯ.

ಉಡುಕುಂಟೂರ ಜಾತ್ರೆಯಲ್ಲಿ ಆದ ಬೆಂಕಿ ಅನಾಹುತ.

ನಮ್ಮ ಮೊನ್ನೆ ದಿನದ ಪತ್ರಿಕೆಯಲ್ಲಿ ಮೇಲ್ಕಂಡ ವಿಷಯವಾಗಿ ಸ್ವಲ್ಪಮಟ್ಟಿಗೆ ತಿಳಿಸಿರುತ್ತೇವೆ. ಈಚೆ ತಿಳಿದುಬಂದ ಸಮಾಚಾರದಲ್ಲಿ, ಅನೇಕ ಬಳೆ ದಿನಸಿ ಅಂಗಡಿಗಳೂ, ಎರಡು ಮಿಠಾಯಿ ಅಂಗಡಿಗಳೂ, ಮೂರು ಹೋಟೆಲುಗಳೂ ನಾಶವಾಗಿ ಸುಮಾರು ಎರಡುಲಕ್ಷ ರೂಪಾಯಿಗಳಷ್ಟು ಬಟ್ಟೆ ನಷ್ಟವಾಗಿದೆಯೆಂದೂ ಗೊತ್ತಾಗಿದೆ. ತಕ್ಕಮಟ್ಟಿಗೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಪೋಲೀಸ್ ಸಿಬ್ಬಂದಿಯು 22ನೇ ತಾ|| ಶುಕ್ರವಾರ ವಾಪಸು ಹೊರಟು ಹೋದ ಸಮಯದಲ್ಲಿ ಯಾರೋ ಪುಂಡಪೋಕರಿಗಳು ದ್ವೇಷಾಸೂಯೆಯಿಂದ (ಜಾತ್ರೆಯಲ್ಲಿದ್ದ) ಧನಗೂರ್ ಬಳೆ ಅಂಗಡಿಗೆ ಮೊದಲು ಬೆಂಕಿ ತಗಲಿಸಿ ಬಿಟ್ಟರೆಂದೂ, ಅನಂತರ ಆ ಜ್ವಾಲೆಯು ಎಲ್ಲಾ ಕಡೆಯಲ್ಲಿಯೂ ಪ್ರಸರಿಸಿ ಈ ಅನಾಹುತಕ್ಕೆ ಕಾರಣವಾಯಿತೆಂದೂ ತಿಳಿಯಬರುತ್ತೆ.

ಇಂಡಿಯಾ ಸರಕಾರದ ಬಜೆಟ್.

ಈ ಮಾಹೆ 28 ರಲ್ಲಿ ಇಂಡಿಯಾ ಸರಕಾರದ ಬಜೆಟ್ಟು ಪ್ರಕಟವಾಗುವುದು.

ರಾಜಧಾನಿಯ ಎಲೆಕ್ಟ್ರಿಕ್ ದೀಪಗಳು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿಯವರು ಎಲೆಕ್ಟ್ರಿಕ್ ದೀಪಗಳಿಗಾಗಿ ವರ್ಷ ವರ್ಷಕ್ಕೂ ಖರ್ಚನ್ನು ಹೆಚ್ಚಿಸುತ್ತಿರುವರು. ನಮ್ಮ ಮೈಸೂರು ರಾಜಧಾನಿ. ಇದು ಎಲ್ಲಾ ನಗರಗಳಿಗಿಂತಲೂ ಶೃಂಗಾರವಾಗಿರಬೇಕೆಂಬುದನ್ನು ಒಪ್ಪುತ್ತೇವೆ. ಆದರೆ ಈ ಖರ್ಚನ್ನೆಲ್ಲಾ ರಾಜಧಾನಿಯ ರೇಟ್‌ಪೇಯರುಗಳ ಮೇಲೆ ಹಾಕುವುದು ನ್ಯಾಯವಲ್ಲ. ಯಾತ್ರಾ ಸ್ಥಳವಲ್ಲ. ಅಥವಾ ಭಾರಿ ಕೈಗಾರಿಕೆಗಳು ಇರುವ ಸ್ಥಳವಲ್ಲ. ಇದು ರಾಜಧಾನಿಯಾಗಿರುವುದರಿಂದಲೇ ಇದಕ್ಕೆ ಪ್ರಾಶಸ್ತ್ಯ. ಇಲ್ಲಿನ ರೇಟ್‌ಪೇಯರುಗಳಿಗೆ ವರಮಾನವು ಕಡಿಮೆ. ಇಂತಹದರಲ್ಲಿ ದಿನದಿನಕ್ಕೂ ಇವರ ಮೇಲೆ ಭಾರ ಹೇರುವುದು ಉಚಿತವಲ್ಲ. ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಹಣವೆಲ್ಲಾ ಸಾಮಾನ್ಯ ರೇಟ್‌ಪೇಯರುಗಳ ಉಪಯೋಗಕ್ಕಾಗಿ ಖರ್ಚಾಗುತ್ತಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಈ ಎಲೆಕ್ಟ್ರಿಕ್ ದೀಪಗಳೇ ಉದಾಹರಣೆ. ಇದರ ಓವರ್ ಹೆಡ್ ಛಾರ್ಜು ಹೆಚ್ಚಿಸಲ್ಪಟ್ಟಿದೆ. ಈಗಾಗಲೇ ಸಾಲೀಯಾನ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯವರು 31000 ರೂಪಾಯಿಗಳನ್ನು ಎಲೆಕ್ಟ್ರಿಕ್ ದೀಪಗಳಿಗಾಗಿ ಕೊಡುತ್ತಿದ್ದಾರೆ. ಮುಂದಿನ ವರ್ಷದಿಂದ 40000 ರೂಪಾಯಿಗಳನ್ನು ಕೊಡಬೇಕಾಗುವುದು. ಈ ಸಂದರ್ಭದಲ್ಲಿ ಮ್ಯುನಿಸಿಪಾಲಿಟಿಯವರು ಸರಕಾರದವರ ಸಹಾಯವನ್ನು ಕೋರುವುದು ನ್ಯಾಯ, ಆದರಂತೆ ಮ್ಯುನಿಸಿಪಾಲಿಟಿಯವರು ಕೇಳಿದರು. ಆದರೆ ಸರಕಾರದವರು ದರವನ್ನು ಕಡಿಮೆ ಮಾಡಲಾಗುವುದಿಲ್ಲವೆಂದು ಉತ್ತರ ಬರೆದಿರುವರು. ಈ ಉತ್ತರವು ಸರಿಯಲ್ಲ. ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಈ ವಿಷಯವು ಪ್ರಸ್ತಾಪನೆಗೆ ಬಂದಾಗ ಇದೇ ಅಭಿಪ್ರಾಯವು ಸೂಚಿಸಲ್ಪಟ್ಟಿತು. ರೇಟ್ ಪೇಯರ್ಸ್ ಅಸೋಸಿಯೇಷನ್ನಿನವರು ಈ ವಿಷಯವನ್ನು ತೆಗೆದುಕೊಂಡು ಪ್ರಜಾಭಿಪ್ರಾಯವನ್ನು ಕೇಂದ್ರೀಕರಿಸುವರೆಂದು ನಂಬುತ್ತೇವೆ. ಇದು ಅತ್ಯಂತ ಮುಖ್ಯವಾದ ಮತ್ತು ಅಗತ್ಯವಾದ ವಿಷಯ.

ವಿವಿಧ ವಿಷಯಗಳು

ಜಗಜ್ಯೋತಿ.

ನ್ಯೂಸೌತ್‌ವೇಲ್ಸಿನಲ್ಲಿ 3 ಸಾವಿರದಿಂದ 5 ಸಾವಿರ ಪೌನಿನ ವರೆಗೆ ಬೆಲೆಬಾಳುವ ಒಂದು ಸ್ಫಟಿಕರತ್ನವು ದೊರಕಿರುತ್ತದೆ ಆ ರತ್ನದ ಮಧ್ಯದಲ್ಲಿ ಸುಂದರಿಯೊಬ್ಬಳ ರೂಪು ಚೆನ್ನಾಗಿ ಕಾಣುತ್ತಿರುವುದು. ಇದಕ್ಕೆ ಜಗತ್ತಿನ ಜ್ಯೋತಿ ಎಂದು ಅಲ್ಲಿನವರೆಲ್ಲರೂ ಕರೆಯುತ್ತಿರುವರು.

ಭಾರೀ ಕಂಟ್ರಾಕ್ಟು.

ಅಮೇರಿಕಾದ ವ್ಯಾಪಾರಿಯೊಬ್ಬನು ಬ್ರಿಟಿಷರು ತಯಾರಿಸುವ ಒಂದು ಲಕ್ಷ ಬೇಬೀ ಮೋಟಾರುಗಳನ್ನು (ಕ್ರಯ 100 ಪೌನು) ಪ್ರತಿವರ್ಷವೂ ಕೊಂಡುಕೊಳ್ಳುವಂತೆ ಕಂಟ್ರಾಕ್ಟು ಮಾಡಿಕೊಂಡಿರುವನು.

ಮುಟ್ಟುಗೋಲು.

ಈ ತಿಂಗಳು 24ನೇ ತಾ|| ಭಾನುವಾರ ಮಾಮೂಲಿನಂತೆ ಹನ್ನೊಂದನೇ ಸತ್ಯಾಗ್ರಹ ಪ್ರೆಸ್ಸಿನಲ್ಲಿ ಕಣಿಯರ ಪತ್ರಿಕೆಯು ಮುದ್ರಿಸಲ್ಪಟ್ಟಿತು. ಪೋಲೀಸಿನವರು ಪ್ರೆಸ್ಸನ್ನೂ ಪತ್ರಿಕೆಗಳನ್ನೂ ಮುಟ್ಟುಗೋಲು ಹಾಕಿಕೊಂಡರು.

ಸ್ಮಾರಕ ನಿಧಿ.

ಲಾಲಾಜಿಯವರ ಸ್ಮಾರಕ ನಿಧಿಗೆ ಕರಾಚಿಯಲ್ಲಿ 20 ಸಾವಿರ ರೂಪಾಯಿಗಳು ಸೇರಿರುತ್ತವೆ.

ಸೂಜಿಯ ಅದ್ಭುತಶಕ್ತಿ.

ಆಫ್ರಿಕಾದೇಶದಲ್ಲಿ ಮೃಗಗಳನ್ನು ಗುಂಡಿನಿಂದ ಕೊಲ್ಲುವುದಕ್ಕೆ ಪ್ರತಿಯಾಗಿ ಒಂದು ತರನಾದ ಸೂಜಿಯಿಂದ ಚುಚ್ಚಿದ ಕೂಡಲೇ ಮೃಗವು ಪ್ರಜ್ಞೆ ತಪ್ಪುವಂತೆ ಮಾಡಿ ಸೆರೆ ಹಿಡಿಯುವರು.

ವಿಗ್ರಹಚ್ಛೇದ.

ಬೆಂಗಳೂರು ಡಿಸ್ಟ್ರಿಕ್ಟ್ ನೊಣವಿನಕೆರೆಯ ಬಳಿ ಇರುವ ದೇವಸ್ಥಾನದಲ್ಲಿದ್ದ ವಿಗ್ರಹಗಳನ್ನು ಯಾರೋ [illegible] ಒಡೆದು ಹಾಕಿ ಆ ಬಳಿ ತಿರುಗಾಡುವ ಹೆಂಗಸರನ್ನೂ ಸ್ತ್ರೀಯರನ್ನು ಗೇಲಿಮಾಡುತ್ತಿರುವ ವಿಷಯವಾಗಿ ಸತ್ಯಾಂಶವನ್ನು ತಿಳಿಯಪಡಿಸಬೇಕೆಂದು ಸರ್ಕಾರದವರಿಗೆ ವಿಶ್ವಕರ್ಣಾಟಕದ ಸಂಪಾದಕರು ಬರೆದಿದ್ದುದಕ್ಕೆ ಪಬ್ಲಿಸಿಟಿ ಆಫೀಸರವರು ಉತ್ತರ ಕೊಟ್ಟಿರುವ ಎರಡು ಪತ್ರಗಳ ಪೈಕಿ ಒಂದರಲ್ಲಿ "ನಿಮಗೆ ಬಂದ ಸುದ್ದಿ ಸುಳ್ಳು" ಇನ್ನೊಂದರಲ್ಲಿ "ನಾಗರಕಲ್ಲೊಂದು ಒಡೆದಿದೆ. ದಾಡಿನ ಪಡಗನೊಬ್ಬನ ಮೇಲೆ ಗುಮಾನಿ ಇದೆ" ಎಂದೂ ತಿಳಿಸಿರುವರು.

ಮಿಲಿಯನ್ ಪೌನ್ ದಾನ.

ಗ್ರಾಮಫೋನ್ ಮೊದಲಾದವನ್ನು ನಿರ್ಮಿಸಿದ ಎಡಿಸನ್ನರ ಸ್ಮಾರಕಪ್ರದರ್ಶನಾಲಯವನ್ನು ಸ್ಥಾಪಿಸುವುದಕ್ಕಾಗಿ ಫೋರ್ಡ್ ಕಂಪೆನಿಯ ಫೋರ್ಡ್‌ರವರು ಒಂದು ಮಿಲಿಯನ್ ಪವನುಗಳನ್ನು ದಾನಮಾಡಿರುವರು.

ಖೋಟಾ ನಾಣ್ಯಗಳು.

ಅಹಮದಾಬಾದಿನ ಅಕ್ಕಸಾಲಿಗ ಸಹೋದರರಿಬ್ಬರು ಖೋಟಾನಾಣ್ಯಗಳನ್ನು ತಯಾರಿಸುತ್ತಿರುವರೆಂದು ದಸ್ತಗಿರಿಮಾಡಿರುವರು. ಶೋಧನೆಮಾಡಲಾಗಿ ಅವರ ಮನೆಯೊಳಗಿನ ಮಳಿಗೆಯಲ್ಲಿ ನಾಣ್ಯಗಳನ್ನು ತಯಾರಿಸುವ ಕಾರಖಾನೆಯೂ, ಮತ್ತು ಇಂಡಿಯಾ ಇತರ ಭಾಗಗಳಲ್ಲಿ ಇದರ ಶಾಖೆಗಳೂ ಇರುವುದೆಂದು ಗೊತ್ತಾಯಿತು. ಆದದ್ದರಿಂದ ಅಪರಾಧಿಗಳಿಗೆ 4, 6 ವರ್ಷಗಳ ಕಠಿಣ ಸಜಾ ಮತ್ತು ತಲಾ 2000 ರೂ ಜುಲ್ಮಾನೆ ಸಹ ವಿಧಿಸಲ್ಪಟ್ಟಿತು.

ಜಪಾನ್ ಸಿನಿಮಾ ಮಂದಿರಗಳು

ಜಪಾನ್ ದೇಶದಲ್ಲಿ ಒಟ್ಟು 1120 ಸಿನೀಮಾ ಮಂದಿರಗಳಿವೆ. ಪ್ರತಿಯೊಂದರಲ್ಲೂ 500 ಜನ ಹಿಡಿಸುವಷ್ಟು ಸ್ಥಳ ಮಾತ್ರ ಇದೆ. ಮಂದಿರಗಳಲ್ಲಿ ಜನರು ಕುಳಿತುಕೊಳ್ಳಬಹುದಾದ ಅಂದಾಜಿನ ಮೇಲೆ ಸರ್ಕಾರವು ಮಂದಿರಗಳಿಗೆ ತೆರಿಗೆಯನ್ನು ಹಾಕುವುದು. ಇದಕ್ಕೋಸ್ಕರ ಒಬ್ಬನು ಕುಳಿತುಕೊಳ್ಳಬೇಕಾದ ಸ್ಥಳದಲ್ಲಿ ಇಬ್ಬರು [illegible] ಸೇರಿಕೊಂಡು ತೆರಿಗೆ ಹೆಚ್ಚಾಗುವುದನ್ನು ಉಳಿಸುತ್ತಿರುವರು.

ಅತ್ಯುನ್ನತ ಕಟ್ಟಡ.

ಚಿಕಾಗೋ ಪಟ್ಟಣದಲ್ಲಿ 75 ಸಾವಿರ ಅಂತಸ್ತುಗಳುಳ್ಳ ಒಂದು ಭಾರೀ ಕಟ್ಟಡವು ಕಟ್ಟಲು ಆರಂಭವಾಗಿರುವುದು. ಆ ಕಟ್ಟಡದಲ್ಲಿ 440 ಹೋಟೆಲುಗಳೂ 1024 ಮೋಟಾರು ಗ್ಯಾರೇಜುಗಳೂ, ಒಂದು ದೊಡ್ಡ ಆಸ್ಪತ್ರೆಯೂ; ಒಂದು ಈಜಾಡಲು ಕೂಡಿಸುವಂಥ ಸರೋವರವೂ ಮತ್ತು ಒಂದು ವ್ಯಾಯಾಮ ಮಂದಿರವೂ ಸಹ ಇರುವುವಂತೆ.

TAI NADU
28—2—1929

ಗೀರ್ವಾಣಭಾಷಾ ಸಾಹಿತ್ಯನಿಧಿ.

ರಿಟೈರ್ಡ್ ಎಕ್ಸೈಸ್ ಕಮಿಷನರ್
ಮ|| ಬೆಳವಾಡಿ ರಾಮಸ್ವಾಮಯ್ಯನವರ ಭಾಷಣ

———

(ಸಂ 2)

ಸಂಸ್ಕೃತ ವಿದ್ಯಾಭಿಮಾನಿಗಳೊಬ್ಬರು ಪಾಶ್ಚಾತ್ಯವಿದ್ವಾಂಸರು ಎಂದರೆ ಇಂಗ್ಲೀಷು ಕಾಲೇಜುಗಳ ಪ್ರೊಫೆಸರುಗಳೋಪಾದಿಯಲ್ಲಿ ನಮ್ಮ ಸಂಸ್ಕೃತ ಪಂಡಿತರೂ ದೊಡ್ಡ ಬಂಗಲೆಗಳಲ್ಲಿ ವಾಸಮಾಡುತ್ತಾ ಮೋಟಾರು ಬಂಡಿಗಳಲ್ಲಿ ತಿರುಗುವಂತೆ ಆಗಬೇಕೆಂದು ಸೂಚಿಸಿದರು. ಇದು ಅವರ ವಿಶ್ವಾಸವನ್ನು ತೋರಿಸುವುದೇನೋ ನಿಜ. ಆದರೆ ಈಗಿನ ಕಾಲಸ್ಥಿತಿಯಲ್ಲಿ ಇದು ಅಸಾಧ್ಯವಾಗಿರುವುದು ಒಂದು ಭಾಗ; ಇದು ನಿಜವಾಗಿಯೂ ಅಪೇಕ್ಷಣೀಯವೆ ಎಂಬುದನ್ನ ಆಲೋಚಿಸಬೇಕು. ಪರಿಶೀಲಿಸಿ ನೋಡಿದರೆ ಈ ರೀತಿಯಾದ ಅನುಕೂಲ್ಯಗಳು ನಮ್ಮ ವೈದಿಕ ವಿದ್ವಾಂಸರುಗಳಿಗೆ ಅನವಶ್ಯವಾಗಿರುವುದಲ್ಲದೆ. ಹಾನಿಕರವಾಗಿಯೂ ಕಂಡು ಬರಬಹುದು. ಜೀವನಕ್ಕೂ ಸಂಸಾರ ನಿರ್ವಾಹಕ್ಕೂ ಕಷ್ಟವಿಲ್ಲದಿರುವಂತೆ ಮಾನವನ್ನು ಕಲ್ಪಿಸಿಕೊಡುವುದೇನೋ ಅವಶ್ಯಕ. ಈಗ ಈ ಮಹನೀಯರಿಗೆ ಏರ್ಪಡಿಸಿರುವ ವರಮಾನಗಳನ್ನ ದ್ವಿಗುಣ ಮಾಡಿದರೂ ಅಧಿಕವಾಗುವುದಿಲ್ಲ, ಧಾರಾಳವಾಗಿ ಹೆಚ್ಚಿಸಬೇಕು ಆದರೆ ಪಾಶ್ಚಾತ್ಯ ವಿದ್ವಾಂಸರ ಸುಖಸಂಪತ್ತುಗಳ ಆವಶ್ಯಕತೆಯು ಇವರಿಗಿರುವುದಿಲ್ಲ. ಅವನ್ನು ಆಶಿಸುವುದು ಸಹಜವಾಗಿಯೂ ಕಂಡು ಬರುವುದಿಲ್ಲ. ಭೋಗಲಾಲಸತೆಗೂ ಸಾತ್ವಿಕ ಜೀವನಕ್ಕೂ ಬಹು ದೂರ "ಭೋಗೈಶ್ವರ್ಯಪ್ರಸಕ್ತಾನಾಂತಯಾಪಹೃತ ಚೇತಸಾಂ ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌನವಿಧೀಯತೆ||"

ಭೋಗಸಾಮಗ್ರಿಗಳ ನಡುವೆ ಇದ್ದು ಸಾತ್ವಿಕತೆಯ ನೆಲೆಯೆನಿಸಿರುವುದು ಜನಕಾದಿ ದಿವ್ಯ ವಿಭೂತಿಗಳಿಗೆ ಸಾಧ್ಯವೇ ಹೊರತು ಸಾಮಾನ್ಯರಿಗೆ ಸಾಧ್ಯವಲ್ಲ. ಸುಖಸಂಪತ್ತುಗಳು ಹೆಚ್ಚಿದ ಹಾಗೆಲ್ಲಾ ಭಕ್ತಿ ಜ್ಞಾನ ವೈರಾಗ್ಯಗಳು ಕುಂದುವದರಲ್ಲಿ ಸಂಶಯವುಂಟೆ? ಲಕ್ಷ್ಮಿಯೂ ಸರಸ್ವತಿಯೂ ವಿರೋಧಿಗಳೆಂದ ಕೇಳಲ್ಪಟ್ಟಿಲ್ಲವೆ? ವಿದ್ಯಾದಾನವು ಕೊಡುವ ತೃಪ್ತಿಯನ್ನು ಮತ್ತಾವುದೂ ಕೊಡಲಾರದು. ವೈರಾಗ್ಯಕ್ಕಿಂತಲೂ ದೊಡ್ಡದಿಲ್ಲ ಜ್ಞಾನಕ್ಕಿಂತಲೂ ಶ್ರೇಷ್ಠವಾದುದಿಲ್ಲ. ಎಂದು ತಿಳಿದಿರುವ ನಮ್ಮ ಪಂಡಿತ ಮಹಾಶಯರು ಆ ಸುಖಗಳನ್ನು ಬಯಸುವವರೂ ಅಲ್ಲ. ಬಯಸುವುದೂ ನ್ಯಾಯವಲ್ಲ.

ವೈರಾಗ್ಯವಿಚಾರವನ್ನು ಪ್ರಸ್ತಾಪಿಸುವಾಗ ಮತ್ತೊಂದು ವಿಷಯವನ್ನು ಸೂಚಿಸಲಪೇಕ್ಷಿಸುತ್ತೇನೆ. ಸದ್ಗತಿಯನ್ನು ಬಯಸುವ ಪುರುಷನಿಗೆ ಧರ್ಮಶಾಸ್ತ್ರದಲ್ಲಿ ನಿರ್ಣಯಿಸಿರುವ ಬ್ರಹ್ಮಚರ್ಯ, ಗಾರ್ಹಸ್ಥ್ಯ ವಾನಪ್ರಸ್ಥ ಸನ್ಯಾಸವೆಂಬ ನಾಲ್ಕು ಆಶ್ರಮಗಳ ವಿಧಾನದಂತೆ ಶ್ರೇಷ್ಠವಾದುದು ಮತ್ತಾವುದ್ಯಾಂತದಲ್ಲಿಯೂ ಕಂಡುಬರುವುದು ಇಲ್ಲ.

ಈಗಣಕಾಲದಲ್ಲಿ ಬ್ರಹ್ಮಚರ್ಯೆಯೆಂದರೆ ಯಾವುದೊ ಒಂದು ರೀತಿಯಲ್ಲಿ ವಿದ್ಯೆಕಲಿಯುವುದನ್ನು ಪ್ರಚಾರದಲ್ಲಿಟ್ಟುಕೊಂಡು ಉಳಿದ ಮೂರು ಆಶ್ರಮಗಳನ್ನೂ ಸೇರಿಸಿ ಗೃಹಸ್ಥಾಶ್ರಮ ಎಂದರೆ ವಿಷಯ ಸುಖಾನುಭವದಲ್ಲಿಯೇ ಪೂರ್ತಿಗೊಳಿಸುವುದೇ ವಾಡಿಕೆಯಾಗಿದೆ ಶುದ್ಧವಾದ ಕರ್ಮವೆನಿಸಿದ ವಾನಪ್ರಸ್ಥವು ಮರೆಯಾಗಿ ಹೋಗಿದೆ. ಸ್ವಾಧ್ಯಾಯೆ ನಿತ್ಯಯುಕ್ತಾಸ್ಯಾತ್ ದಾಂತೋಮೈತ್ರಸ್ಸಮಾಹಿತಃ ದಾತಾನಿತ್ಯಮನಾದಾತಾ ಸರ್ವಭೂತಾನುಕಂಪಕಃ ಎಂಬ ಮನುವಚನದಂತೆ ವಾನಪ್ರಸ್ಥಧರ್ಮವನ್ನು ಈಗಣಸ್ಥಿತಿಗೆ ತಕ್ಕಮಟ್ಟಿಗಾದರೂ ನಡೆಸುವುದಾದರೆ ಮನಸ್ಸು ಎಷ್ಟುಮಟ್ಟಿಗೆ ಸಂಸ್ಕೃತಿಯನ್ನು ಪಡೆದು ಪರಿಪಕ್ವವಾದೀತು? ಸನ್ಯಾಸಾಶ್ರಮವು ಸಂಪೂರ್ಣವಾಗಿ ಅದೃಶ್ಯವಾಗದಿದ್ದರೂ ಕ್ರಮೇಣ ಅದೃಶ್ಯವಾಗುತ್ತಿದೆ. ಸನ್ಯಾಸದ ಮಹತ್ವವು ಅತ್ಯಧಿಕವಾದುದು ದ್ವೇರೂಪೇವಾಸುದೇವಸ್ಯ ಚರಂಚಾಚರಮೇವಚ ಚರಂ ಸನ್ಯಾಸಿನಾಂರೂಪಮಚರಂಪ್ರತಿಮಾದಿಕಂ ಸಾಕ್ಷಾನ್ನಾರಾಯಣೋಯತಿಃ ಯತೀಶ್ವರರು ಯಲ್ಲಿ ವರ್ತಿಸುತ್ತಾರೆಯೂ ಆ ಭೂಮಿ ಪರಿಶುದ್ಧವಾದುದು ಅವರು ಶುದ್ಧರು; ಪರಿಶುದ್ಧತೆಯನ್ನು ಹರಡುತ್ತಾರೆ ಪ್ರಾಪಂಚಿಕವ್ಯವಹಾರದಲ್ಲಿ ಅತ್ಯಲ್ಪವನ್ನೂ ತ್ಯಜಿಸುವುದೂ ಶ್ರೇಷ್ಠವೆ ದು ಭಾವಿಸುತ್ತಿರುವಲ್ಲಿ ಸರ್ವವನ್ನ ತ್ಯಾಗಮಾಡಿದವರ ಮಹತ್ವ ಎಷ್ಟಿರಬಹುದೆಂಬುದನ್ನು ಆಲೋಚಿಸಬೇಕು ವಾನಪ್ರಸ್ಥ ಸನ್ಯಾಸಾಶ್ರಮಗಳ ಹೆಚ್ಚಿಸುವಿಕೆಯಿಂದ ಫಲಕಾರಿಯಾಗುವುದರಲ್ಲಿ ಸಂಶಯವಿಲ್ಲ. ಅವುಗಳನ್ನು ಅನುಸರಿಸುವವರಪ್ರಭಾವದಿಂದುಂಟಾಗುವ ಫಲವು ಅತ್ಯುತ್ತಮವಾದುದು. ಆತ್ಮವಿದ್ಯಾ, ಜ್ಞಾನವೈರಾಗ್ಯ ಮುಮುಕ್ಷುಮಾರ್ಗಗಳಿಗೆ ಪ್ರಾಶಸ್ತ್ಯವು ಅಧಿಕವಾಗಿ ತನ್ಮೂಲಕ ಅನಾದಿಸಿದ್ಧವಾದ ಧರ್ಮವು ಸಾಮಾನ್ಯ ಜನರಲ್ಲಿಯೂ ಪ್ರಚಾರಕ್ಕೆ ಬರಲು ನಿಸ್ಸಂದೇಹವಾಗಿ ಸಹಕಾರಿಯಾಗುತ್ತದೆ.

ಇಲ್ಲಿಗೆ ಈ ವಿಷಯವನ್ನು ನಿಲ್ಲಿಸಿ ಮಹಾಪಾಠಶಾಲೆಗೆ ಸಂಬಂಧಪಟ್ಟ ಮುಖ್ಯವಾದ ಮತ್ತೊಂದು ವಿಷಯವನ್ನು ಕುರಿತು ಆಲೋಚಿಸಬಹುದಾಗಿದೆ. ಅದಾವುದೆಂದರೆ ಪ್ರತಿವರ್ಷವೂ ಪಾಠಶಾಲೆಯ ಪ್ರೌಢವಿದ್ಯಾಶಾಖೆಗಳಿಂದ ಉತ್ತೀರ್ಣರಾಗುತ್ತಿರುವ ಪಂಡಿತರ ಸ್ಥಿತಿಗತಿಗಳೇನೆಂದು ಯೋಚಿಸಬೇಕು. ಪೂರ್ವದಲ್ಲಿ ಈತರ ಆಲೋಚನೆಗೆ ಅವಕಾಶವೆ ಇರಲಿಲ್ಲ. ವಿದ್ಯಾಪರಿಣತರಾದರೆ ಇದಕ್ಕಿಂತ ಬೇಕಾದುದೇನೆಂಬ ಭಾವನೆಯಿದ್ದಿತು. ಜೀವನವಿಷಯದಲ್ಲಿ ಸಹಜವಾಗಿಯೂ ಅಲ್ಪಸಂತೋಷಿಗಳಾಗಿದ್ದರು. ಅವರ ಪಾಂಡಿತ್ಯ, ಸದಾಚಾರ ಸದ್ಧರ್ಮನಿರತೆ ವೈದಿಕವೃತ್ತಿಗಳಿಂದ ಸಾಮಾನ್ಯ ಲೌಕಿಕ ಜನರ ಗೌರವವನ್ನು ಪಡೆಯುತ್ತಿದ್ದರು ಅವರ ಪ್ರೇಮಪೂರ್ವಕವಾದ ಸಹಾಯದಿಂದ ತಮ್ಮ ಜೀವನವನ್ನೂ ನಡಿಸಿಕೊಳ್ಳುತ್ತಿದ್ದರು. ವಿದ್ವಾಂಸರು ಭೂಮಿಯನ್ನಾಳುವ ದೊರೆಗಳಿಗೆ ಸಮರೆಂದು ಭಾವಿಸಲ್ಪಡುತ್ತಿದ್ದರು. ಸ್ವದೇಶೆಪೂಜ್ಯತೆ ರಾಜಾ ವಿದ್ವಾನ್ ಸರ್ವತ್ರಪೂಜ್ಯತೆ ಎಂಬ ಭಾವನೆಯು ಪ್ರಚಾರದಲ್ಲಿದ್ದಿತು. ನ ಕವಿತಾ ಯದ್ಯಸ್ತಿ ರಾಜ್ಯೇನಕಿಂ ಎಂಬ ಭಾವನೆಯು ಪಂಡಿತರಲ್ಲಿಯೂ ಇದ್ದಿತು. ಈಗಲೂ ಹಾಗೆಯೆ ಇದೆ. ಆದರೆ ಸರ್ವರಿಗೂ ಜೀವನೋಪಾಯವು ಕಷ್ಟವಾದದರಿಂದಲೂ, ಕಾಲಾನುಸಾರವಾದ ಇತರ ವ್ಯತ್ಯಾಸಗಳಿಂದಲೂ ವೈದಿಕ ವೃತ್ತಿಯುಳ್ಳರುವ ಪಂಡಿತರಿಗೆ ಲೌಕಿಕ ಜನರ ಅವಲಂಬನೆಯು ತೀರ ಕಮ್ಮಿಯಾಗಿ ಇಲ್ಲದಂತೆಯೆ ಆಗಿದೆ. ಈ ವಿಚಾರದಲ್ಲಿ ಲೌಕಿಕ ಜನರ ಭಾರವು ಹೆಚ್ಚಾಗಿದೆ. ಉತ್ತಮವಾದ ವಿದ್ಯೆಯನ್ನು ಸಂಪಾದಿಸಿ ವೈದಿಕಮಾರ್ಗ ಪ್ರವರ್ತಕರಾದವರನ್ನು ಪೂಜ್ಯರೆಂದು ತಿಳಿದು ಸರ್ವದಾ ಸನ್ಮಾನಿಸುತ್ತಾ, ಅವರ ಜೀವನೋಪಾಯವು ನಿರಾಯಾಸವಾಗಿ ನಡೆಯುವಂತೆಮಾಡಿ, ಅವರ

ವರ್ತಮಾನ ಸಂಗ್ರಹ.

—

ಕಾಫಿಯ ಅದ್ಭುತ ಮಹಿಮೆ..

[illegible] ಅಂಗಡಿಗೆ ಬಂದಿದ್ದ ಗಿರಾಕಿಯು ಸುಂದರವಾದ ಮೋಟಾರನ್ನು ಕೊಂಡುಕೊಳ್ಳಬೇಕೆನ್ನಿಸಿದನು ಆದರೆ ಅವನಲ್ಲಿ ದ್ರವ್ಯಾಭಾವವಾಗಿತ್ತು. [illegible] ಮಹಿಮೆ.!!

[illegible]

[illegible] ಚಾರಣೆಯಲ್ಲಿ [illegible]

ಪರಕೀಯ ವಸ್ತ್ರ ಬಹಿಷ್ಕಾರ.

ಪರಕೀಯ ವಸ್ತ್ರ ಬಹಿಷ್ಕಾರ ಕಮಿಟಿಗೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಲಿಯು [illegible] ಕೊಟ್ಟಿದೆ.

ಮದರಾಸಿನಲ್ಲಿ ಬಹಿಷ್ಕಾರ.

ಮದರಾಸಿಗೆ [illegible] ರೋಪ್ಯದ ಅಂಗಡಿಗಳ [illegible] ಕಾಲೇಜುಗಳ [illegible] ಯಿಂದಲೇ [illegible] ಬಹಿಷ್ಕಾರ ಸಭೆ [illegible] ಸ್ವತಂತ್ರ [illegible]

[illegible]

ಅಮೇರಿಕಾದ [illegible] ವರ್ಷಕ್ಕಿಂತಲೂ [illegible] ರಿಗೆ ಶಿಕ್ಷೆಯಾಗಬೇಕೆಂದು [illegible] ತ್ತದೆ.

[illegible]

ಜಿ. ಐ. ಪಿ. ರೈಲ್ವೆಯ [illegible] ರು ಅಲಕ್ಷ್ಯದಿಂದ ಬೊಂಬಾಯಿನಲ್ಲಿ ಮೋಟಾರನ್ನು [illegible] ಡಿಸಿದುದರ ಪರಿಣಾಮವಾಗಿ ಒಬ್ಬ ಪಾರ್ಸಿಯು ಮೃತನಾದನು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಜುಲ್ಮಾನೆ ವಿಧಿಸಿದ 1000 ರೂಗಳ ಪೈಕಿ, ಅರ್ಧವನ್ನು ಮೃತನ ಸಂಬಂಧಿಕರಿಗೆ ಕೊಡಿಸಿದರು.

ಕರ್ನಾಟಕ ಪ್ರಾಂತಿಕ ಕಮಿಟಿ.

ಮೈಸೂರಿನ ವೃದ್ಧಪಿತಾಮಹರಾದ ಶ್ರೀ. ವೆಂಕಟಕೃಷ್ಣಯ್ಯನವರ ಮೂರು ವೃತ್ತಪತ್ರಗಳನ್ನು ಬಂದು ಮಾಡಿದ್ದರಲ್ಲಿ ತೋರಿಬರುವ ಮೈಸೂರ ಸರಕಾರದ ಕೃತಿಯನ್ನು ಈ ಕಾರ್ಯಕಾರೀಮಂಡಲವು ತೀವ್ರವಾಗಿ ನಿಷೇಧಿಸುವದಲ್ಲದೆ ಪೂಜ್ಯರಾದ ಸುಂತ ಈ ದೇಶಾಭಿಮಾನಿಗಳ [illegible] ಗ್ಗೆ ಮೈಸೂರ ಸರಕಾರವು ತಿರುಗಿ ವಿಚಾರಮಾಡುವದೆಂದು ಈ ಮಂಡಲವು ಆಶಿಸುತ್ತದೆ.

ವಿದ್ಯಾಜ್ಞಾನಶಕ್ತಿಗಳೆಲ್ಲಾ ಜನಾಂಗದ ಹಿತಕ್ಕಾಗಿ ಉಪಯುಕ್ತವಾಗುವಂತೆ ಮಾಡುವುದು ನಮ್ಮ ಸಾಮಾನ್ಯಜನರ ಮುಖ್ಯಕರ್ತವ್ಯವಾಗಿದೆ. (ಸ್ವೀ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಪಾರ್ಕೋಕ್ಸಿನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಪ್ಯಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಷೀಟ್ ಕ್ಯಾಲೆಂಡರ್ ಪಾಕ್ಷೇ ... ಪತ್ರ ಶೀ ವೆಂಕಟಾಚಲಪ್ಪನಿಗೆ ದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು, ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ... ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಒಂದ ನೋಡಿರಿ. ಪರಸ್ಥಳದವರು 5 ಆಣೆ ಸ್ಟಾಂಪು ಕಳುಹಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ... ಪಾರ್ಸಲ್ ದ್ವಾರಾ ಕಳುಹಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲುದಲ್ಲಿರುವುದೇನು?



ರ ಕ್ತವೃದ್ಧಿ ಮಾಡಿ ರಕ್ತರೋಗಗಳನ್ನು ನೀಗಿಸಿ
ತ ನ್ನಿಗೆ ತಾಂಬೂಲವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನ ರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಮಿ ದುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂ ಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಿ ಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹ ರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲ ಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವ ರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

ಚೌಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.)

THE JUPITER GENERAL INSURANCE Co., Ltd


Applications are invited from respectable and influential gentlemen from every Taluk and District Centres or Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance.

Apply for Agency terms
To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.



ಭಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ

ಮ ಜೂ ರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ನೋಡಿರಿ

ಟಿ. ಎಸ್. ಸುಬ್ಬಯ್ಯರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ



"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸರಸ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ವಿಷಮ ವಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತೆ

ಬ್ರಾಂಚ್ ಆಫೀಸು } ಹೆಡ್ ಆಫೀಸು

Printed and published by P. R Rmaaiya

॥ ವಂದೇ ಮಾತರಂ ॥

Re gd NoM 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ.
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೬—೦—೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಶುಕ್ರವಾರ ೧ ಮಾರ್ಚಿ ೧೯೨೯ [ಸಂಚಿಕೆ ೧೬೬

ತಾಯಿನಾಡು.

1 – 3 – 1929

ಬೇಡದ ಅತಿಥಿಗಳು.

ಸೈಮನ್ ಕಮಿಷನ್ ಮತ್ತು ಸೆಂಟ್ರಲ್ ಕಮಿಟಿಯವರು ಮಾರ್ಚಿ 4 ನೇ ತಾರೀಖಿಗೆ ರಾಜಧಾನಿಗೆ ದಯಮಾಡಿಸುವರು. ಇವರು ಮೈಸೂರಿನ ಪ್ರಜೆಗಳಿಗೆ ಬೇಡದ ಅತಿಥಿಗಳು. ಇವರಿಗೆ ಸ್ವಾಗತ ಸತ್ಕಾರಗಳನ್ನು ಮಾಡುವವರು ಯಾರೇ ಆಗಲಿ ಪ್ರಜೆಗಳ ಇಷ್ಟದಂತೆ ಆ ಸತ್ಕಾರವನ್ನು ನಡೆಸುವುದಿಲ್ಲ. ಇವರಿಗೆ ಆಗುವ ಸ್ವಾಗತ ಸತ್ಕಾರಾದಿ ವಿಚಾರಗಳೆಲ್ಲಾ ಪ್ರಜೆಗಳ ಕೈಯಿಂದಾಯಿತೆಂದಲೇ ಆಗುತ್ತಿದ್ದರೂ ಪ್ರಜೆಗಳಿಗೆ ಬೇಡವಾಗಿದ್ದರೂ ಆ ವಿಚಾರವನ್ನು ನಿಲ್ಲಿಸುವುದಕ್ಕೆ ಪ್ರಜೆಗಳಿಗೆ ಆಗುತ್ತಿಲ್ಲ. ಈಗಿನ ರಾಜ್ಯಪದ್ಧತಿಯೇ ಈ ಅವ್ಯವಸ್ಥೆಗೆ ಕಾರಣ.

ಈ ಸಂದರ್ಭದಲ್ಲಿ ಪ್ರಜೆಗಳೇನು ಮಾಡಬೇಕು? ಇಂಡಿಯಾ ದೇಶದ ಇತರ ಭಾಗಗಳಲ್ಲಿ ಯಾವ ರೀತಿಯಾಗಿ ಈ ಕಮಿಷನಿನವರಿಗೆ ಬಹಿಷ್ಕಾರವಾಯಿತೋ ಮೈಸೂರಿನಲ್ಲಿಯೂ ಹಾಗೆಯೇ ಆಗಬೇಕು. ಮೈಸೂರಿನವರಾದ ನಾವು ಭಾರತೀಯರಲ್ಲವೇ? ಇವರಿಗೇನು ದೇಶಾಭಿಮಾನವಿಲ್ಲವೇ? ಬ್ರಿಟಿಷ್ ಸರ್ಕಾರದವರು ಭಾರತವನ್ನು ಧಿಕ್ಕರಿಸಿಯೇ ಈ ಕಮಿಷನ್ನನ್ನು ನೇಮಿಸಿದರು. ಆ ಧಿಕ್ಕಾರವು ಮೈಸೂರಿಗೂ ಅದ ಹಾಗಾಯಿತು. ಈ ಧಿಕ್ಕಾರಕ್ಕೆ ಬಹಿಷ್ಕಾರವೇ ಶಾಸ್ತಿ.

ಈ ಕಮಿಷನರುಗಳು ಮೈಸೂರಿಗೆ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದೂ ವಿಹಾರಾರ್ಥವಾಗಿ ಬರುವರೆಂದೂ ಅವರನ್ನು ಬಹಿಷ್ಕಾರ ಮಾಡುವುದು ಉಚಿತವಲ್ಲವೆಂದೂ ಕೆಲವರು ಹೇಳುತ್ತಿರುವರು. ಇವರು ಹೀಗೆ ಬೇಕೆಂದು ಹೇಳುತ್ತಿರುವರೋ ಅಥವಾ ಸಂಗತಿಗಳನ್ನು ತಿಳಿಯದೆ ಹೇಳುತ್ತಿರುವರೋ ಹೇಳುವುದು ಅಸಾಧ್ಯ. ಸಂಗತಿಯನ್ನು ತಿಳಿದಿದ್ದರೆ ಅವರುಗಳು ಈ ರೀತಿಯಾಗಿ ಹೇಳುತ್ತಿರಲಿಲ್ಲ. ಈ ಕಮಿಷನ್ನಿನವರು ಮೈಸೂರಿಗೆ ಬರುತ್ತಿರುವುದು ಕಮಿಷನ್ನಿನ ಮೆಂಬರುಗಳಾಗಿಯೇ ಹೊರತು ಟೂರಿಸ್ಟ್, ಪಿಕ್, ಹ್ಯಾಗಿಂಗಳಾಗಿ ಅಲ್ಲ. ಟೂರಿಸ್ಟ್, ಪಿಕ್, ಹ್ಯಾಗಳಾಗಿ ಇವರು ಇಲ್ಲಿಗೆ ಬಂದಿದ್ದರೆ ಇವರನ್ನು ಯಾರೂ ತಡೆಯುವವರೇ ಇರುತ್ತಿರಲಿಲ್ಲ. ಇವರು ಸೈಮನ್ ಕಮಿಷನ್ನಿನ ಮೆಂಬರುಗಳಾಗಿ ಬರುವುದರಿಂದ ಸತ್ಕಾರ [illegible] ಇವರಿಗೆ ಸತ್ಕಾರ ಮಾಡುವುದು ತಪ್ಪು. ಇದೇ ಕಾರಣಕ್ಕಾಗಿಯೇ ನಾವೂ ಇವರಿಗೆ ಬಹಿಷ್ಕಾರ ಹಾಕಬೇಕು. ಸಾಕ್ಷಿಗಳನ್ನು ತೆಗೆದುಕೊಳ್ಳಲಿ, ಬಿಡಲಿ; ನಾವು ಬಹಿಷ್ಕಾರವನ್ನು ಹಾಕಲೇಬೇಕು. ಬ್ರಿಟಿಷ್ ಇಂಡಿಯಾದಲ್ಲಿಯೂ ಎಲ್ಲಾ ಸಾಕ್ಷ್ಯವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಆದರೂ ಪ್ರಜಾಸಮೂಹವೆಲ್ಲಾ ಬಹಿಷ್ಕಾರದಲ್ಲಿ ಭಾಗಿಯಾಯಿತು. ಅದರಂತೆಯೇ ನಾವೂ ಬ್ರಿಟಿಷ್ ಇಂಡಿಯಾ ಪ್ರಜೆಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕೋಸ್ಕರ ಬಹಿಷ್ಕಾರವನ್ನು ಹಾಕಬೇಕು. ಬ್ರಿಟಿಷ್ ಇಂಡಿಯಾದ ಪ್ರಜೆಗಳ ಸ್ನೇಹಿತರೇ ನಮ್ಮ ಸ್ನೇಹಿತರು, ಅವರ ವಿರೋಧಿಗಳೇ ನಮ್ಮ ವಿರೋಧಿಗಳು. ಅವರೂ ನಾವೂ ಇಬ್ಬರೂ ಒಂದೇ ದೇಶದವರು. ಅವರ ಏಳಿಗೆಯೇ ನಮ್ಮ ಏಳಿಗೆ ಅವರ ಬೀಳೇ ನಮ್ಮ ಬೀಳು. ರಾಷ್ಟ್ರೀಯ ಮಹಾಸಭೆಯು ಭಾರತೀಯರೆಲ್ಲರಿಗೂ ಒಂದೇ ಸಭೆ

ವರ್ತಮಾನ ಸಂಗ್ರಹ.

ದಸ್ತಗಿರಿ.

ಸ್ವಾಮಿ ಷಣ್ಮುಖಾನಂದರವರನ್ನು ವೆಲ್ಲೂರಿನಲ್ಲಿ ಕಳೆದ ಮಾಹೆ 23ರಲ್ಲಿ 144ನೇ ಸೆಕ್ಷನ್ ಮೀರಿದ್ದಕ್ಕಾಗಿ ದಸ್ತಗಿರಿ ಮಾಡಿರುವರು.

ಲಂಡನ್ನಿನ ನ್ಯಾಯಾಸ್ಥಾನಗಳು.

ಲಂಡನ್‌ನಲ್ಲಿ ಒಂದು ವಾರಕ್ಕೆ 331 ಇನ್‌ಫ್ಲೂಯಂಜಾ ಮರಣಗಳಾಗಿವೆ. ಒಂಬತ್ತು ಜನ ನ್ಯಾಯಾಧೀಶರುಗಳು ಒಟ್ಟಿಗೆ ರೋಗ ಪೀಡಿತರಾಗಿರುವುದರಿಂದ ನ್ಯಾಯಾಸ್ಥಾನಗಳೆಲ್ಲಾ ಮುಚ್ಚಲ್ಪಟ್ಟಿವೆ.

ರಾಜಭಕ್ತರ ಬಹುಮಾನ

1921 ರಲ್ಲಿ ಇಂಗ್ಲೆಂಡ್ ಸರ್ಕಾರವು ಐರ್ಲೆಂಡಿನಲ್ಲಿ ಸಿಂತ ಸಂದರ್ಭದಲ್ಲಿ ತಮ್ಮ ಸೈನ್ಯಕ್ಕೆ ಸಹಾಯ ಮಾಡಿದ ಐರಿಷ್ ಜನರಿಗೆ ಬಹುಮಾನ ಕೊಡಬೇಕೆಂದು ಇಂಗ್ಲೆಂಡ್ ಮಂತ್ರಿಗಳು ಒಪ್ಪಿರುವರು.

ಕಲ್ಲಿನ ವೈಚಿತ್ರ್ಯ.

ಫ್ಲಾರಿಡಾದಲ್ಲಿರುವ ಒಂದು ಜಗೆಯು ಕಲ್ಲಿನೊಳಭಾಗದಲ್ಲಿ ಸ್ಪಂಜಿನಲ್ಲಿರುವಂಥಾ ರಂಧ್ರಗಳಿವೆ. ಮನೆಕಟ್ಟುವುದಕ್ಕೆ ಈ ಕಲ್ಲುಗಳನ್ನೇ ಉಪಯೋಗಿಸಿದರೆ ಮಾತಾಳಿಗಳ ಉಪದ್ರವವು ಕಡಿಮೆ ಯಾಗುವುದು ಮಾತ್ರವಲ್ಲದೆ, ಒಂದು ಕಡೆಯ ಗಲಭೆಯು ಮತ್ತೊಂದು ಕಡೆಗೆ ಕೇಳಿಸದೆ ಬ್ದಗಳೆಲ್ಲಾ ಗೋಡೆಗಳಲ್ಲೆ ಐಕ್ಯವಾಗುವುದು.

ಮನುಷ್ಯನ ದೇಹದಾರ್ಢ್ಯತೆ

ಎಪ್ಪತ್ತು ವರ್ಷಕಾಲದಲ್ಲಿ ಇಪ್ಪತ್ತು ಸಾವಿರ ಮೈಲಿಗಳ ಸಂಚಾರವನ್ನ ವಿಲಿಯಂರಾಬಿನ್‌ಸನ್ ಎಂಬುವನು ಐದು ಸಾವಿರ ಮತಗಳ ಉಪದೇಶಮಾಡುವುದಕ್ಕಾಗಿ ಕಾಲುನಡಿಗೆಯಿಂದಲೇ ನಡೆದಿರುವನು.

ಕೃತಕ ಸಮುದ್ರ.

ಬರ್ಲಿನ್‌ನಲ್ಲಿ ಜನರು ವಿಹಾರಕ್ಕೆ ಸಮುದ್ರದ ವರೆಗೆ ಹೋಗುವ ಬದಲು, ತಮ್ಮ ನಗರದೊಳಗೆ ಗಾಜಿನಲ್ಲಿ ಒಂದು ಗುಂಡಿಯನ್ನು ಕಟ್ಟಿ ಅಲ್ಲಿ ಕೃತಕ ಸಮುದ್ರವನ್ನೂ, ಕೃತ್ರಿಮಸೂರ್ಯರಶ್ಮಿಯನ್ನೂ ಏರ್ಪಡಿಸಿದ್ದಾರೆ.

ರಾಷ್ಟ್ರೀಯ ಪ್ರಜಾಪಕ್ಷದ ಪತ್ರಿಕೆ.

ಈ ತಿಂಗಳು 6 ನೇ ತಾರೀಖಿನಿಂದ ಬೆಂಗಳೂರಿನಲ್ಲಿ ಮಿ|| ಎನ್. ಆರ್. ಎಸ್. ರಾಘವನ್‌ರವರು ಪ್ರತಿ ಬುಧವಾರ "ರಾಷ್ಟ್ರೀಯ ಪ್ರಜಾಪಕ್ಷ ಪತ್ರಿಕೆ" ಎಂಬ ಆಂಗ್ಲ ವಾರಪತ್ರಿಕೆಯನ್ನು ಹೊರಡಿಸುವುದಾಗಿ ತಿಳಿದು ನಾವು ತುಂಬಾ ಸಂತೋಷಿಸುತ್ತೇವೆ.

ಶವನ್ನಿತ್ತಿರುವುದು, ಸೈಮನ್ ಕಮಿಷನ್ನಿಗೆ ಬಹಿಷ್ಕಾರ ಹಾಕಿ ಎಂಬುದೇ ಆ ಸಂದೇಶ. ಅದನ್ನು ಭಾರತೀಯರಲ್ಲಿಯೇ ಐಕ್ಯರಾದ ಮೈಸೂರಿನವರಾದ ನಾವೂ ಪಾಲಿಸಬೇಕು. ಒಂದು ವಿಷಯವು ನೆನಪಿನಲ್ಲಿರಲಿ. ನಾವು ಯಾರನ್ನೂ ಬಲಾತ್ಕರಿಸುವುದಿಲ್ಲ. ಯಾರಿಗೂ ಹಿಂಸೆಯನ್ನು ಮಾಡುವುದಿಲ್ಲ. ಶಾಂತರೀತಿಯಿಂದ ಬಹಿಷ್ಕಾರವನ್ನು ನಡೆಯಿಸವೆವು.

ಹಿಂದೆ 1928 ನೇ ಫೆಬ್ರವರಿಯಲ್ಲಿ ಸೈಮನ್ ಕಮಿಷನ್ ನವರು ಇಂಡಿಯಾಕ್ಕೆ ಕಾಲಿಟ್ಟ ದಿವಸ ಮೈಸೂರಿನಲ್ಲಿ ಆಬಾಲವೃದ್ಧರೂ ಬಹಿಷ್ಕಾರವನ್ನು ಆಚರಿಸಿದರು. ಈಗಲೂ ಅದೇ ರೀತಿಯಾಗಿ ನಡೆಯಬೇಕೆಂದು ನಮ್ಮ ಕೋರಿಕೆ.

ನಿಜಾಮರ ಆಗಮನ.

ಹೈದರಾಬಾದ್ ನೈಜಾಮರು ಈ ಮಾಹೆ 19 ನೇ ತಾ|| ನಮ್ಮ ದೇಶದ ಸಂಚಾರಕ್ಕಾಗಿ ಹೈದರಾಬಾದಿನಿಂದ ಹೊರಡುವರು. ಅದಕ್ಕೆ ತಕ್ಕ ಸಲಕರಣೆಗಳು ನಮ್ಮ ಸರ್ಕಾರದಿಂದ ಆಗುತ್ತಿವೆ.

ಬಾಲ್ಯವಿವಾಹ ನಿಷೇಧ

ಬರೋಡಾ ಸರ್ಕಾರವು ಕಾನೂನಿಗೆ ವಿರೋಧವಾಗಿ ಬಾಲ್ಯವಿವಹಮಾಡಿದ 7557 ಜನರನ್ನು ಶಿಕ್ಷೆಗೆ ಗುರಿಮಾಡಿ 81,000 ರೂ.ಗಳ ಜುಲ್ಮಾನೆಯನ್ನು ವಸೂಲ್ಮಾಡಿರುತ್ತದೆ.

ಮಂತ್ರಿಗಳ ರಾಜೀನಾಮೆ.

ಬಂಗಾಳದ ಇಬ್ಬರು ಮಂತ್ರಿಗಳು ತಮ್ಮ ಮೇಲೆ ಅಪನಂಬಿಕೆ ಠರಾವುಗಳು ಅಂಗೀಕೃತವಾದ್ದರಿಂದ ಕೊಟ್ಟ ರಾಜೀನಾಮೆಯನ್ನು ಗೌರ್ನರ್‌ರವರು ಅಂಗೀಕರಿಸಿ, ಆ ಕೆಲಸಗಳನ್ನೂ ತಾವೇ ಮಾಡುತ್ತಿರುವರು.

ಜನರಲ್ ನಾದಿರ್‌ಖಾನರು

ಹಾಲಿ ಬೊಂಬಾಯಿನಲ್ಲಿರುವ ನಾದಿರ್‌ಖಾನರು ಆಫ್‌ಘನ್ ಸಿಂಹಾಸನವು ನನಗೆ ಬೇಡ. ಪ್ರಕೃತ ಅಲ್ಲಿನ ಸ್ಥಿತಿಯು ಅಲ್ಲಿಗೆ ಮಾತ್ರವಲ್ಲದೆ ಜಗತ್ತಿನ ಶಾಂತಿಗೇ ಅಪಾಯವೆಂದೂ, ಅದಕಾರಣವೇ ನಾನು ಖಾಯಿಲೆಯಾಗಿದ್ದರೂ ನನ್ನ ದೇಶಸೇವೆ ಮಾಡಲು ಬಂದಿದ್ದೇನೆ ಎಂದೂ ಒಬ್ಬ ಪತ್ರಿಕಾ ಪ್ರತಿನಿಧಿಗೆ ತಿಳಿಸಿರುವರು.

ಮಿ|| ಉಸ್ಮಾನ್‌ರವರು.

ರಿಟೈರ್ಡ್ ಸೀನಿಯರ್ ಸರ್ಜನ್‌ರಾದ ಮಿ|| ಮಹಮದ್ ಉಸ್ಮಾನ್‌ರವರು, ಮೈಸೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರೂ ಮತ್ತು ಹಾಲಿ 6 ತಿಂಗಳ ರಜದ ಮೇಲಿರುವ ಡಾ|| ಜೆ. ರಾಬಿನ್‌ಸನ್‌ರವರ ಸ್ಥಾನದಲ್ಲಿ ದರ್ಬಾರ್ ಸರ್ಜನ್ನರೂ ಆಗುವರೆಂಬ ಭಾರಿ ವದಂತಿ ಇದೆ.

ಸೈಮನರ ಆಗಮನ.

ರಾಜಧಾನಿಗೆ ಸೈಮನ್ ಕಮೀಷನ್ನಿನವರು ಮಾರ್ಚಿ 4 ನೇ ತಾ|| ಸೋಮವಾರ ಒಂದು ಮೂರು ದಿನಗಳು ಮಹಾರಾಜರ ಅತಿಥಿಗಳಾಗಿದ್ದು, 7 ನೇ ತಾ|| ಹಿಂತಿರುಗುವರು.

TAI NADU

1—3—1929

ಗೀರ್ವಾಣಭಾಷಾ ಸಾಹಿತ್ಯನಿಧಿ.

ರಿಟೈರ್ಡ್ ಎಕ್ಸೈಸ್ ಕಮೀಷನರ್
ಶ್ರೀ ಪಿ. ರಾಮಸ್ವಾಮಯ್ಯನವರ ಭಾಷಣ

(ನಂ 3)

ಕೆಲವು ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ಪಾಶ್ಚಾತ್ಯ ವಿದ್ವಾಂಸರೂ ಸಂಸ್ಕೃತ ವಿದ್ಯಾಪಾರಂಗತರೂ, ಉನ್ನತ ರಾಜ್ಯಾಧಿಕಾರವನ್ನು ಅಲಂಕರಿಸಿದವರೂ ಆದ [illegible] ಹೇಳಿದ ಅಭಿಪ್ರಾಯವನ್ನು ಈಗ [illegible] ಸಂತೋಷವಾಗುತ್ತದೆ. ಅವರು ಇಂಗ್ಲಿ[illegible] ದ ಸಾರಾಂಶವೇನೆಂದರೆ,—ಸಂಸ್ಕೃತ ವಿದ್ಯೆಯ ಮೇಲೆ ಮೇಲೆ ಸ್ಥೂಲವಾಗಿ ಪರಿಚಯ [illegible] ನವೀನಕಾಲದ ವಿದ್ಯಾರ್ಥಿಗಳಿಗಲ್ಲ. ನಮ್ಮ ಪಂಡಿತ ಮಂಡಲಿಯು ಎಂದಿನಂತೆ ಶಾಶ್ವತವಾಗಿರುವುದಕ್ಕೆ ಅವರ ವಿದ್ಯೆಯ ಘನತೆಯೇ ಮುಖ್ಯವಾದ ಕಾರಣ; ನನ್ನಂತೆ ಈ ಮಹಾ ಪಂಡಿತರ ಸಹವಾಸದಲ್ಲಿ ಕಲೆತು ಇವರ ಘನತೆಯನ್ನರಿತವರಿಗೆ ಇವರ ಅದ್ಭುತವೂ ಅಗಾಧವೂ ಆದ ವಿದ್ಯೆಯು ಪಾಶ್ಚಾತ್ಯ ವಿದ್ವಾಂಸರಿಗೆ ಎಂದಿಗೂ ದೊರೆಯಲಾರದೆನ್ನುವುದು ಚನ್ನಾಗಿ ಗೊತ್ತಾಗುತ್ತದೆ ಆದ ದರಿಂದ ಇಂತಹ ಸಂಸ್ಕೃತ ವಿದ್ಯಾಪ್ರಾಶಸ್ತ್ಯವನ್ನು ಪರಿಪಾಲಿಸಿಕೊಂಡು ಬರುವುದು ನಮ್ಮೆಲ್ಲರ ಕರ್ತವ್ಯವಾಗಿದೆ'

ನಮ್ಮ ಸಂಸ್ಕೃತ ವಿದ್ಯೆಯ ಮುಂದಿನ ಪ್ರಾಶಸ್ತ್ಯದಲ್ಲಿ ನನಗೆ ತುಂಬ ಭರವಸೆಯುಂಟು. ಎಂದರೆ ಈಗಿನ ಪಾಶ್ಚಾತ್ಯ ರೀತಿಯ ಸಂಸ್ಕೃತ ವಿದ್ಯೆಯಲ್ಲಲ್ಲ. ಪುರಾತನ ಮಾರ್ಗದ ಸಂಸ್ಕೃತ ವಿದ್ಯೆಯಲ್ಲಿ. ಇದಕ್ಕೆ ಕಾರಣವೇನೆಂದರೆ ವಿಸ್ಮಯ ಉಂಟುಮಾಡುವ ರೀತಿಯಲ್ಲಿ ಸಂಸ್ಕೃತ ವಿದ್ಯೆಯು ಶಾಶ್ವತವಾಗಿ ನೆಲೆಗೊಂಡು ಬಂದಿದೆ. ಇಪ್ಪತ್ತು ಶತಮಾನಗಳ ಹಿಂದೆ ಹೇಗೆ ಪಂಡಿತ ಮಹನೀಯರಿದ್ದರೊ ಹಾಗೆಯೆ ಈಗಲೂ ಇದ್ದಾರೆ. ಅವರಿಗೆ ಶಕ್ತಿಸಾಮರ್ಥ್ಯಗಳು ಕಮ್ಮಿಯಾಗಿಲ್ಲ. ಪ್ರೋತ್ಸಾಹವು ಕಮ್ಮಿ. ಎಂದರೆ ದ್ರವ್ಯ ಪ್ರೋತ್ಸಾಹವಲ್ಲ ಅದು ಅನವಶ್ಯಕವಾದುದೇನೊ ನಿಜ; ಆದರೆ ಅವರಿಗೆ ಬೇಕಾದ ಗೌರವ ಮರ್ಯಾದಾರೂಪವಾದ ಪ್ರೋತ್ಸಾಹವೊಂದು ನಾನು ಆಲೋಚಿಸುತ್ತೇನೆ. ವೈದಿಕ ಶ್ರೇಷ್ಠರಾದ ಪಂಡಿತರೊಬ್ಬರನ್ನು ಕಂಡಾಗ, ಅವರಿಗೆ, ತಿಂಗಳೊಂದಕ್ಕೆ ನಾಲ್ಕು ರೂಪಾಯಿಗಳ ವರಮಾನವಿರಲಿ, ನಾಲ್ಕು ಸಾವಿರ ರೂಪಾಯಿಗಳ ವರಮಾನವಿರಲಿ ಸಾಷ್ಟಾಂಗ ನಮಸ್ಕಾರಮಾಡಿ ಗೌರವಿಸಿರಿ. ಈ ಪ್ರವರ್ತನೆಯಿಂದಲೆ ನಮ್ಮ ಪೂರ್ವೀಕರು ಸಂಸ್ಕೃತ ವಿದ್ಯೆಯನ್ನು ಸಾವಿರಾರು ವರ್ಷಗಳಿಂದಲೂ ಉಳಿಸಿಕೊಂಡು ಬಂದರು. ಈ ಪಂಡಿತರು ಹಿಂದಿನಿಂದ ಬಂದ ಸಂಪ್ರದಾಯವನ್ನು ಮರೆತು ಯಂದು ಧನಾರ್ಜನೆಯ ಮಾರ್ಗದಲ್ಲಿ ಹೊರಡುತ್ತಾರೆಯೊ ಆ ದಿನವೆ ದುರ್ದಿನವೆಂದು ನಾನು ಭಾವಿಸುತ್ತೇನೆ. 'ನಾನು ಬ್ರಾಹ್ಮಣರಲ್ಲಿ ಬ್ರಾಹ್ಮಣನು' ಪಂಡಿತೋತ್ತಮರಲ್ಲಿ ಅಚ್ಚ ಮೆಚ್ಚಾದ ಭಕ್ತಿಯುಳ್ಳವನಾಗಿರುತ್ತೇನೆ. ಈ ರೀತಿ ಬಹು ಸಾಧುಮಾರ್ಗದಲ್ಲಿ ವರ್ತಿಸಿದ ಮಹನೀಯರು ಗತಿಸಿದ ಪ್ರಖ್ಯಾತರಾದ ಅಶುತೋಷಮುಖರ್ಜಿಯವರು. ಈ ಸಮಯದಲ್ಲಿ ಅವರ ನೆನಪು ಶ್ರೇಷ್ಠವಾದುದು. ಅವರ ವಚನಗಳು ಅತಿ ಹಿತಕರವಾದುವು. ಲೌಕಿಕರೂ ವೈದಿಕರೂ ಏಕವಾಗಿ ಆಚರಣೆಗೆ ತರತಕ್ಕವು.

[illegible] ದೇಶವನ್ನು ಪಾಶ್ಚಾತ್ಯ ದೇಶದಂತೆ ಅಭಿವೃದ್ಧಿಗೆ ತರಬೇಕೆಂದ ಎಲ್ಲ ಕಡೆಗಳಲ್ಲಿ ಎಲ್ಲರೂ [illegible] ಧಾರೆ. ಅದು ದೇಶಕ್ಕೂ ಜನಾಂಗಕ್ಕೂ ವಿಹಿತವಾದುದೆ ಸರಿ. ಆದರೆ ಆ ರೀತಿಯು ಪರಿಶುದ್ಧವಾದ ಸಂಸ್ಕೃತ ಮಹಾಪಾಠಶಾಲೆಯ ಪಂಡಿತರೂ ವೈದಿಕ ಮಾರ್ಗ[illegible] ಅನ್ವಯಿಸುವುದು ಒಪ್ಪಲಾಗುವುದಿಲ್ಲ. ಅನಾದಿಯಾಗಿ [illegible] ಪಂಡಿತರೂ ವೈದಿಕಶಿರೋಮಣಿಗಳೂ ಪೂಜಾರ್ಹರಾಗಿರುವುದು ಅವಶ್ಯಕ. [illegible] ಜನಾಂಗಕ್ಕೂ ದೇಶಕ್ಕೂ [illegible] ಹಾಗೆಯೆ ಭಕ್ತಿ ಜ್ಞಾನ ವೈರಾಗ್ಯ[illegible] ವೈದಿಕ [illegible] ಐಹಿಕ ಸಂಪತ್ತಿಗೆ [illegible] ಆನಂದ ಶಾಂತಿ [illegible] ಕಾರಣವಾದ [illegible] ಕಾ[illegible]ತ್ತಾರೆ. '[illegible] ಕ್ಷತ್ರಿಯ [illegible] ಬ್ರಹ್ಮ ತೇಜೋ[illegible]' ಈ ಉನ್ನತವಾದ [illegible] ಬ್ರಾಹ್ಮಣೋತ್ತಮರ ಹಿತಚಿಂತನೆಯನ್ನು ನಾವು [illegible] ಬಿಡಲಾಗದು. ಇವರ ಸುಸ್ಥಿತಿಯನ್ನು ಬದಲಾಯಿಸಲೂ ಆಗದು.

ಇಷ್ಟೇ ಅಲ್ಲದೆ ಸನಾತನ ಧರ್ಮವನ್ನು ಸದಾಚಾರ [illegible] ದೇಶದ ಬಾಲಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಪ್ರಚಾರಗೊಳಿಸುವುದಕ್ಕಾಗಿ ಈ ಮಹಾ ಪಾಠಶಾಲೆಯು ಒಂದು ವಿಧದಲ್ಲಿ ಸಹಕರಿಸಬಹುದೆಂದು ತೋರುತ್ತದೆ. ಇಂಗ್ಲೀಷ್ ಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಆಸ್ತಿಕ ಬುದ್ಧಿಯೂ ಸದಾಚಾರ ಭಾವವೂ [illegible] ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪಾಠಶಾಲೆಯ ವಿದ್ವಾಂಸರ ಮತ್ತು ಅಧ್ಯಾಪಕರ ಸತ್ಸಹವಾಸವಾಗುವಂತೆ ಮಾಡುವುದಾದರೆ ಬಹು ಪ್ರಯೋಜನವಾಗುವುದು. ಈ ಉದ್ದೇಶದಿಂದ ಮತ ವಿಷಯಕವಾದ ಧರ್ಮಗಳನ್ನೂ ಸ್ವಧರ್ಮವನ್ನೂ ಕುರಿತು ಆಗಾಗ ಉಪನ್ಯಾಸಗಳನ್ನೂ ಏರ್ಪಡಿಸಬಹುದು. ಇಂತಹ ವಿದ್ಯಾರ್ಥಿಗಳಿಗಾಗಿ ಬೆಳಿಗ್ಗೆಯೂ ಸಂಜೆಯೂ ವೈದಿಕ ವಿದ್ಯಾಬೋಧಕ ತರಗತಿಗಳನ್ನಿಟ್ಟು ಸಂಧ್ಯಾವಂದನೆ, ಪುರುಷಸೂಕ್ತ ರುದ್ರ [illegible] ಪೂಜಾಕ್ರಮಗಳು ಉಪನಿಷತ್ತುಗಳು ಇವುಗಳನ್ನು ಸ್ವಪಠಿತ ಅರ್ಥದೊಡನೆ [illegible] ತುಂಬಾ ಪ್ರಯೋಜನವಾಗುವುದು. ಅಲ್ಲದೆ ಇಂಗ್ಲೀಷ್ ಸ್ಕೂಲು ಕಾಲೇಜು ವಿದ್ಯಾರ್ಥಿಗಳಿಗೂ ಈ ಪಾಠಶಾಲೆ ವಿದ್ಯಾರ್ಥಿಗಳಿಗೂ ಪರಸ್ಪರ ಅನ್ಯೋನ್ಯಪ್ರೀತಿಯೂ ಅನುರಾಗವೂ ಉಂಟಾಗುವಂತೆ ಮಾಡಿದರೆ ಬಹು ಗುಣವುಂಟೆಂದು ತೋರುತ್ತದೆ, ಆ[illegible] ಮತಾಚಾರದಲ್ಲಿ ವಿಶ್ವಾಸವುಳ್ಳವರಾದರೂ ಇಂಗ್ಲೀಷ್ ಸ್ಕೂಲು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಅನುಕೂಲ್ಯವಿಲ್ಲದೆ ನಿತ್ಯಕರ್ಮಾನುಷ್ಠಾನಗಳನ್ನು ಬಿಡಲೇಬೇಕಾದ ಸಂಭವವೊದಗಿರುತ್ತದೆ. ಇವನ್ನೆಲ್ಲಾ ಮನೆಯಲ್ಲಿ ಮಾಡಲಾಗದೆ ಎಂದರೆ ಅನೇಕವಾಗಿ ಮನೆಯಲ್ಲಿರುವ ಹಿರಿಯರ ಆಚರಣೆಯು ಆಚಾರ [illegible]ವಾಗಿರುತ್ತದೆ. ಇದನ್ನು ತಿಳಿದವರಾರು? ಆದುದರಿಂದ ಹಿಂದೆ ಹೇಳಿದಂತೆ ಈ ಬಾಲಕರಿಗೆ ಅವಕಾಶವು ದೊರೆತರೆ ಇವರ ಸದಾಚಾರ ಸಂಪನ್ನರಾಗುತ್ತಾರೆಂದು ತೋರುತ್ತದೆ (ಅಪೂರ್ಣ)

ಕರ್ನಾಟಕ ಪ್ರಾಂತಿಕ ಕಮಿಟಿ

ಬೆಂಗಳೂರು [illegible] ವಿಚಾರಣೆಗಾಗಿ ಮೈಸೂರ ಸರ್ಕಾರದವರು [illegible] ವಿಶ್ವೇಶ್ವರಯ್ಯಾ ಕಮಿಟಿಯ ವರದಿಯನ್ನು ಅದರ ಮೇಲೆ ಮೈಸೂರ ಸರ್ಕಾರದವರು ತೆಗೆದ ಪ್ರಕಟನೆಯನ್ನೂ [illegible] ಸರ್ಕಾರದವರು ತೆಗೆದ ಸರಿ ಪ್ರಕಟನೆಯ [illegible] ವಿಶ್ವೇಶ್ವರಯ್ಯಾ ಕಮಿಟಿಯವರು ತಮ್ಮ ವರದಿಯಲ್ಲಿ ಪ್ರಕಟಿಸಿದ ಸಂಗತಿಗಳಿಗೆ ಮೈಸೂರು ಸರಕಾರದವರು [illegible] ವೆಂದ ಈ ಸಭೆಯು ಅಭಿಪ್ರಾಯ ಪಡುತ್ತದೆ.

ಗಾಮನ ವಿಜಯ

ಕಳೆದ ತಿಂಗಳು 24 ನೇ ತಾ|| ಪಾಟಿಯಾಲಾದಲ್ಲಿ ಪೈಲ್ವಾನ್ ಗಾಮನು ಪಾಶ್ಚಾತ್ಯ ಜಟ್ಟಿಯಾದ [illegible] ರೊಡನೆ ಅನೇಕ ರಾಜಾಧಿರಾಜರುಗಳ [illegible]ದಲ್ಲಿ ಮಲ್ಲಯುದ್ಧ ಮಾಡಿ ಜಯಶೀಲನಾಗಿ, ಪಾಟಿಯಾಲಾ ಮಹಾರಾಜರಿಂದ ಭಾರಿ ಪಾರಿತೋಷಕವನ್ನು ಪಡೆದು ತನ್ನ ಜಗದೇಕಮಲ್ಲ ಎಂಬ ಬಿರುದನ್ನು ಭಾರತದ ಯಶಸ್ಸನ್ನೂ ಉಳಿಸಿದುದು ತುಂಬಾ ಸಂತೋಷಪ್ರದವು

ಚೀನಾ ಯುದ್ಧ

ಷಾಂಟುಂಗ್ ಬಳಿ ಕದನಗಳಾರಂಭವಾಗಿವೆ. [illegible] ಎಂಬೂರಿನಲ್ಲಿರುವ ಜಪಾನನ್ನು ಹೊರಡಿಸುವ ಉದ್ದೇಶದಿಂದ [illegible] ಗೆ 26 ಸಾವಿರ ಸೈನ್ಯದೊಡನೆ [illegible] ದ್ಧ ರಾಷ್ಟ್ರೀಯಸರ್ಕಾರದ ಮೇಲೆ ತಿರುಗಿಬಿದ್ದು ಪರಾಭವ ಪಡೆದನು. ಇಷ್ಟಾದರೂ ಜಪಾನು ತಟಸ್ಥವಾಗಿದೆ.

ನೋಟೀಸ್

ಗಂಧದ ಎಣ್ಣೆಯ ಕಾರ್ಖಾನೆ.
ಮೈಸೂರು.

ಮೈಸೂರಿನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಯ ಉಪಯೋಗಕ್ಕೆ [illegible] ದು. 1929 ನೇ ಮಾರ್ಚಿ [illegible] ಮಾಡಲು ಇಷ್ಟ [illegible] ಕೇಳಬೇಕು. [illegible] ಡಿಪಾಜಿಟ್ಟು ಮೊಬಲಗನ್ನು ಹ-ಜರ್ರ್ಯಾ[illegible] ಕ್ರಮವಾದ ಛಾಪಾಕಾಗದದ ಮೇಲೆ ಅಗ್ರಿಮೆಂಟನ್ನು ಬರೆದು ಕೊಡಬೇಕು.—

R. Ramanuja Iyengar.
ಆಫೀಸರ್
ಮೈಸೂರು.

(23-2-29)

Regd. No M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦ / ಪರಸ್ಥಳಕ್ಕೆ ೧೦-೮-೦

ಸಂಪುಟ ೧] ಶನಿವಾರ ೨ ಮಾರ್ಚಿ ೧೯೨೯ [ಸಂಚಿಕೆ ೧೭೪

ತಾಯಿನಾಡು.

2—3—1929

ಮಿ|| ಮಾರ್ಥರ್ಕರವರ ಉಪದೇಶ.

ತೃತೀಯ ಸಚಿವರಾದ ಮಿ|| ಮಾರ್ಥರ್ಕರವರು ಬೆಂಗಳೂರು ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಒಂದು ಉಪದೇಶವನ್ನು ಮಾಡಿದರು. ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಅಧ್ಯಯನ ಮಾಡಬೇಕೆಂದೂ, ಆದರೆ, ಅದರಲ್ಲಿ ಭಾಗವನ್ನು ತೆಗೆದುಕೊಳ್ಳಕೂಡದೆಂಬುದೂ ಇವರ ಉಪದೇಶದ ಅಭಿಪ್ರಾಯ.

ಮಿ|| ಮ್ಯಾರ್ಥರ್ಕರವರ ಉಪದೇಶವು ಹೊಸದೇನೂ ಅಲ್ಲ. ಬ್ರಿಟಿಷ್ ಇಂಡಿಯಾದ ಗವರ್ನರುಗಳೂ, ಮಂದ ಪಕ್ಷದ ಕೆಲವು ಮುಂಖಂಡರೂ ಹೇಳಿದ ಮಾತುಗಳನ್ನೇ ಮಿ|| ಮ್ಯಾರ್ಥರ್ಕರವರೂ ಹೇಳಿರುವರು.

ಬ್ರಿಟಿಷ್ ಇಂಡಿಯದ ಗವರ್ನರುಗಳು ಈ ಉಪದೇಶವನ್ನು ಕೊಡುವದಕ್ಕೆ ಒಂದು ಕಾರಣ. ವಿದ್ಯಾರ್ಥಿಗಳ ಮೇಲಿನ ಮಮತೆಗಿಂತಲೂ, ವಿದ್ಯಾರ್ಥಿಗಳು ರಾಜಕೀಯ ಚಳವಳಿಗಳಲ್ಲಿ ಸೇರಿದರೆ ತಮಗೆ ತೊಂದರೆಯುಂಟಾಗುವುದಲ್ಲಾ ಎಂಬ ಹೆದರಿಕೆಯೇ ಕಾರಣ ಅಲ್ಲದೆ ಮಂದಪಕ್ಷದ ಮುಖಂಡರುಗಳು ಈ ಮಾತು ಹೇಳುವದಕ್ಕೂ ಒಂದು ಕಾರಣವುಂಟು. ಅವರಿಗೆ ಪ್ರಜಾಸುರಾಗಿಲ್ಲ. ಅವರಿಗೆ ರಾಜಕೀಯ ಕೆಲಸವೆಂಬುದು ಒಂದು ಆಟ. ಒಂದು ವಿಹಾರ. ರಾಜಕೀಯ ಧ್ಯೇಯಕ್ಕೋಸ್ಕರವಾಗಿ ತಮ್ಮ ತನುಮನಧನಗಳನ್ನು ವಿನಿಯೋಗಿಸುವುದು ಇವರ ಜೀವನದಲ್ಲೇ ಇಲ್ಲ. ಇಂತಹವರು ವಿದ್ಯಾರ್ಥಿಗಳನ್ನು ರಾಜಕಾರಣದಲ್ಲಿ ಸೇರಬೇಡಿ ಎಂದು ಹೇಳುವದರಲ್ಲಿ ಆತಿಶಯವೇನೂ ಇಲ್ಲ.

ಆದರೆ ದೇಶ ಸೇವೆಗಾಗಿಯೂ, ಸ್ವರಾಜ್ಯಕ್ಕಾಗಿಯೂ, ತಮ್ಮ ತನುಮನಧನಗಳನ್ನೇ ಧಾರೆಯೆರೆದಿರುವ ಮಹಾತ್ಮಾ ಗಾಂಧಿಯವರೂ, ಜವಾಹಿರಲಾಲ ನೆಹರೂರವರೂ, ಪ್ರಕಾಶಂರವರೂ ಇತರ ರಾಷ್ಟ್ರೀಯ ಮುಖಂಡರೂ ವಿದ್ಯಾರ್ಥಿಗಳಿಗೆ ಮಾಡುವ ಉಪದೇಶವು ಸತ್ಯಧರ್ಮಗಳಿಂದ ಕೂಡಿದ್ದಲ್ಲದೆ ಪ್ರಾಮಾಣಿಕವಾದದು. ಆಬಾಲಗೋಪಾಲರೂ, ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ತನುಮನಧನಗಳನ್ನು ಅರ್ಪಿಸಬೇಕೆಂಬುದು ಎಲ್ಲಾ ದೇಶದಲ್ಲಿಯೂ ಇರುವ ಪದ್ಧತಿ. ದೇಶಸ್ವಾತಂತ್ರ್ಯಕ್ಕೆ ವಿರೋಧವೆಂಬ ಪಕ್ಷವು ಇತರ ದೇಶಗಳಲ್ಲಿರುವುದಿಲ್ಲ. ಆದರೆ ಹತಭಾಗ್ಯವಾದ ನಮ್ಮ ದೇಶದಲ್ಲಿ ಸ್ವರಾಜ್ಯಬೇಡ ಎಂಬುವವರೂ ಹಲವರಿರುವರು. ಇವರು ಎನಾದಾಗಲೂ ಪರಕೀಯರ ದಾಸಾನುದಾಸರಾಗಿಯೇ ಇರಬೇಕೆನ್ನುವವರು. ಇವರನ್ನು ನಾವು ಒಂದು ರಾಜಕೀಯ ಪಕ್ಷವೆಂದು ಕರೆಯುವುದಿಲ್ಲ. ಅವರು ಮನುಷ್ಯರೆಂಬ ಗಣನೆಗೇ ಅರ್ಹರಲ್ಲ.

ಪ್ರಪಂಚದ ಯಾದ ದೇಶದಲ್ಲಿ ನೋಡಿದರೂ ವಿದ್ಯಾರ್ಥಿಗಳು ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವರು. ಯೂರೋಪಿನಲ್ಲಿ ಕಳೆದ ಘೋರ ಯುದ್ಧದಲ್ಲಿ ಇಂಗ್ಲೆಂಡಿನ ವಿದ್ಯಾರ್ಥಿಗಳು ತಮ್ಮ ಸ್ಕೂಲು ಕಾಲೇಜುಗಳಿಗೆ ಶರಣು ಹೊಡೆದು ಶಿಪಾಯಿಗಳಾಗಿ ರಣಭೂಮಿಗೆ ಹೊರಟರು. ಜರ್ಮನಿಯಲ್ಲಿಯೂ, ಫ್ರಾನ್ಸಿನಲ್ಲಿಯೂ, ವಿದ್ಯಾರ್ಥಿಗಳು ಹೀಗೆಯೇ ಮಾಡಿದರು.

ಪೂರ್ವದೇಶಗಳಾದ ಜಪಾನ್ ಚೈನಾ ಈಜಿಪ್ಟ್ ಟರ್ಕಿಗಳಲ್ಲಿಯೂ ವಿದ್ಯಾರ್ಥಿಗಳು ಹೀಗೆಯೇ ವೀರತನವನ್ನು ತೋರಿಸಿದರು. ನಮ್ಮ ಇಂಡಿಯಾ ದೇಶದಲ್ಲಿ ಮಾತ್ರ ಇದು ಒಂದು ದೊಡ್ಡ ತಪ್ಪಂತೆ.

ಆದರೆ ಈ ಉಪದೇಶವು ಫಲಿಸುವಂತಿಲ್ಲ. ವಿದ್ಯಾರ್ಥಿಗಳು ಅರಿತವರು. ಅವರಿಗೂ ಪ್ರಪಂಚಜ್ಞಾನವಿರುವುದು. ಅವರ ನಾಳಗಳಲ್ಲಿಯೂ ರಕ್ತವು ಕುದಿಯುತ್ತಿರುವುದು. ದೇಶಮಾತೆಯ ಕೂಗು ಕಿವಿಗೆ ಬಿದ್ದ ಒಡನೆಯೇ ಅವರು ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗುವರು.

ಚರ್ಚಾಸ್ಪದವಾದ ಜಾತಿ ಮತ್ತು ಕೋಮಿನ ರಾಜಕಾರಣದಲ್ಲಿ ನಮ್ಮ ವಿದ್ಯಾರ್ಥಿಗಳು ಬೀಳುವುದಿಲ್ಲ. ರಾಷ್ಟ್ರೀಯ ವಿಷಯಗಳಲ್ಲೇ ಅವರು ಪ್ರವೇಶಿಸುವರು. ಭಾರತವನ್ನು ಧಿಕ್ಕಾರ ಮಾಡಿ ಬಂದಿರುವ ಸೈಮನ್ ಕಮಿಷನ್ನನ್ನು ಬಹಿಷ್ಕರಿಸಲು ನಮ್ಮ ವಿದ್ಯಾರ್ಥಿಗಳು ಸಿದ್ಧರಾಗಿರುವರು. ಇದು ರಾಷ್ಟ್ರೀಯ ಪ್ರಶ್ನೆ. ಹಿರಿಯರಾದವರು ಅಸಂಬದ್ಧವಾದ ಉಪದೇಶಗಳನ್ನು ಮಾಡುವದನ್ನು ಬಿಟ್ಟರೆ ಕಿರಿಯರು ತಮ್ಮ ತಮ್ಮ ಕರ್ತವ್ಯವನ್ನು ತಾವು ಸರಿಯಾಗಿ ನೆರವೇರಿಸುವರು. ಇದರಲ್ಲಿ ಯಾವ ಸಂಶಯವೂ ಇಲ್ಲ.

ವರ್ತಮಾನ ಸಂಗ್ರಹ.

ಬ್ರಾಹ್ಮಣ ಧರ್ಮ ಸಹಾಯ ಸಭೆ.

ರಾಜಧಾನಿಯಲ್ಲಿರುವ ಮೇಲ್ಕಂಡ ಸಭೆಯು ಇದೇ ವಿಭವಸಂವತ್ಸರದ ಫಾಲ್ಗುನಮಾಸದಲ್ಲಿ ಅನಾಥ ಬ್ರಾಹ್ಮಣ ಬಾಲಕರಿಗೆ ಶಾಖಾಗೋತ್ರಾದಿಗಳನ್ನು ಕ್ರಮವಾಗಿ ತಿಳಿಸಿ ದೃಢಪಡಿಸುವ ಪಕ್ಷದಲ್ಲಿ ಉಚಿತವಾಗಿ ಬ್ರಹ್ಮೋಪದೇಶವನ್ನು ಮಾಡಿಸುವುದು. ಅಪೇಕ್ಷಕರು ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ಸಭೆಯ ಕಾರ್ಯಾಲಯಕ್ಕೆ ಬಂದು ವಿಶೇಷ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಈ ಪುಣ್ಯಕ್ಕಾಗಿ ಮಹಾಜನರು ದಯಪಾಲಿಸುವ ಪಾತ್ರೆ ವಸ್ತ್ರ ಧನ ಧಾನ್ಯಾದಿಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ ಉಚಿತರೀತಿಯಲ್ಲಿ ವಿನಿಯೋಗಿಸಲಾಗುವುದೆಂದು ಅಲ್ಲಿನ ಗೌ|| ಕಾರ್ಯದರ್ಶಿಯವರು ಪ್ರಕಟಿಸಿರುವರು.

ಚುನಾವಣೆಗಳು.

ಕೋಲಾರ ಟವನ್ ಮುನಿಸಿಪಲ್ ಕೌನ್ಸಿಲ್ಲಿಗೆ ಮಿ|| ಕಲ್ಯಾಣಸಿಂಗ್‌ರವರನ್ನು ವೈಸ್‌ಪ್ರೆಸಿಡೆಂಟರಾಗಿಯೂ (ಚುನಾವಣೆಯಲ್ಲಿ)ಚನ್ನರಾಯಪಟ್ಟಣದ ಮುನಿಸಿಪಲ್ ಕೌನ್ಸಿಲ್ಲಿನಲ್ಲಿ ಖಾಲಿಯಾದ ಮ|| ಎ. ಎನ್. ಲಕ್ಷ್ಮೀನಾರಾಯಣರಾವ್ ಎ. ಕೆ. ವೆಂಕಟರಮಣ ಶೆಟ್ರು ಇವರ ಸ್ಥಾನಕ್ಕೆ ಮ|| ಗಳಾದ ಎ. ಕೆ. ರಾಮಶೆಟ್ಟರೂ ಮತ್ತು ಗಿರೀಗೌಡರನ್ನೂ ಮೆಂಬರುಗಳಾಗಿಯೂ ನಿಯಮಿಸಿರುವರು.

ಆಡುಗಳ ಜುಲ್ಮಾನೆ

ಮಳುಬಾಗಲು ಮುನಿಸಿಪಾಲಿಟಿಯಲ್ಲಿ ದೊಡ್ಡಿಗೆ ತಂಕ್ಕ ಆಡುಗಳ ಮೇಲೆ ಹಾಕುತ್ತಿದ್ದ ಜುಲ್ಮಾನೆಯು ಒಂದಾಣೆಯಿಂದ (ತಲೆ ಒಂದಕ್ಕೆ) ಎರಡಾಣೆಗೆ ಏರಿಸಲ್ಪಟ್ಟಿದೆ.

ರಾಜೀನಾಮೆ

ಕೊಪ್ಪದ ಬೆಂಚ್ ಮ್ಯಾಜಿಸ್ಟ್ರೇಟರಾದ ಮ|| ವೆಂಕಟರಮಣಯ್ಯನವರ ರಾಜೀನಾಮೆಯನ್ನು ಕೊಟ್ಟದ್ದರಿಂದ ಅವರಿಗಿದ್ದ ಮೂರನೆ ದರ್ಜೆಯ ಅಧಿಕಾರವನ್ನು ವಾಪಸು ತೆಗೆದುಕೊಂಡಿದೆ.

ರಜಾ.

ಗೌರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರಾದ ಮ|| ರಾ|| ಸಿ. ಕೆ ವೆಂಕಟರಾಮಯ್ಯನವರಿಗೆ ಡಿಸೆಂಬರ್ ?? ನೇ ತಾ|| ನಿಂದ ಕೊಟ್ಟದ್ದ ಎರಡು ತಿಂಗಳ ರಜದ ಜೊತೆಗೆ ಮತ್ತೊಂದು ತಿಂಗಳು ಹೆಚ್ಚಿಸಿರುತ್ತೆ, ಈಗಿರುವ ಬದಲಿ ಏರ್ಪಾಡೇ ಜಾರಿಯಲ್ಲಿರುತ್ತೆ.

ಎಕನಾಮಿಕ್ ಕಾನ್‌ಫರೆನ್ಸಿನ ಮೀಟಿಂಗ್.

1929 ನೇ ಮಾರ್ಚಿ 15 ನೇ ತಾ|| ಶುಕ್ರವಾರ ಅಪರಾಹ್ನ 12 ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ ಎಕನಾಮಿಕ್ ಕಾನ್‌ಫರೆನ್ಸಿನ ಮೀಟಿಂಗು ನಡೆಯುವುದು.

ಗೌರ್ನಮೆಂಟ್ ಪ್ರೆಸ್.

ಗೌರ್ನಮೆಂಟ್ ಪ್ರೆಸ್ಸಿನ ಚೀಫ್ ಫೋರ್‌ಮೆನ್‌ರಾದ ಮ|| ಬಿ. ಕೃಷ್ಣಸ್ವಾಮಿ ಚೆಟ್ಟಿಯವರನ್ನು ಜನವರಿ ಒಂದನೇ ತಾ|| ನಿಂದ ಸಬ್|| ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಿರುವರು.

ರಾಜೀನಾಮೆ.

ಬಾಗೆಪಲ್ಲಿ ಬೆಂಚ್‌ಮ್ಯಾಜಿಸ್ಟ್ರೇಟರಾದ ಮ|| ಜಿ. ರಾಮಚಂದ್ರರಾಯರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವುದರಿಂದ ಅವರ ಮೂರನೆ ದರ್ಜೆಯ ಅಧಿಕಾರವನ್ನು ವಾಪಸು ತೆಗೆದುಕೊಂಡಿದೆ.

ಸ್ಪೆಷಲ್ ಮ್ಯಾಜಿಸ್ಟ್ರೇಟ್

ಬೆಂಚ್‌ಕೋರ್ಟಿಗೆ ಮ|| ಶ್ಯಾನುಭೋಗ್ ಬಿ. ಕೆ. ಕಾಡಪ್ಪನವರು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು

ಬೆಂಚ್‌ಕೋರ್ಟು ರದ್ದು

ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾ|| ರಾಜನಶಿರಿಯೂರು ಗ್ರಾಮದ ಬೆಂಚ್‌ಕೋರ್ಟು ರದ್ದಾಗಿರುತ್ತದೆ

ಬಾಚಾ ಇಸಾಕುವಿನ ಆಡಳಿತ.

ಕಾಬೂಲನ್ನು ಯಾರೂ ಬಿಡಕೂಡದೆಂದೂ ಹಾಗೆ ಬಿಡತಕ್ಕವರಿಗೆ ಕಠಿಣ ಶಿಕ್ಷೆ ಮಾತ್ರ ಆಗುವುದಲ್ಲದೆ ಅವರ ಆಸ್ತಿ ಪಾಸ್ತಿಗಳು ಸರ್ಕಾರಕ್ಕೆ ಮುಟ್ಟುಗೋಲಾಗುವುದೆಂದೂ ಬಾಚಾ ಇಸಾಕೋವು ಡಂಗುರದ ಮೂಲಕ ಪ್ರಕಟ ಮಾಡಿರುತ್ತಾನೆ.

ತಗಡೂರು ರಾಮಚಂದ್ರರಾಯರ ಮೇಲೆ ಪೋಲೀಸಿನವರ ಅತ್ಯಾಚಾರ

ನಡುಹಗಲಿನಲ್ಲಿ ರಾಜಬೀದಿಯಲ್ಲಿ ಕೈಮಿಸುಕಿ ಹಿಂಸಿಸಿದ್ದು

ಸೂಚನೆ.

೪—೩—೧೯೨೯ ನೇ ಸೋಮವಾರ ಹರತಾಳದ ಪ್ರಯುಕ್ತ ತಾಯಿನಾಡು ಹೊರಡುವುದಿಲ್ಲ.

ವ್ಯವಸ್ಥಾಪಕ.

TAI NADU
2—3—1929

ಗೀರ್ವಾಣಭಾಷಾ ಸಾಹಿತ್ಯನಿಧಿ

(ಪರಿಸಮಾಪ್ತಿ)

ರಿಟೈರ್ಡ್ ಎಕ್ಸೈಸ್ ಕಮಿಷನರ್
ಮ|| ಬೆಳವಾಡಿ ರಾಮಸ್ವಾಮಯ್ಯನವರ ಭಾಷಣ

ವೈದಿಕ ಮಹಾಮಂಡಲಿಯು, ಅಧ್ಯಾಪಕರ, ಅಧ್ಯೇತೃಗಳ, ಜ್ಞಾನಶಿಷ್ಟಾಚಾರಗಳ ಬಲವು ಯುವಕರಲ್ಲಿ ಫಲಕಾರಿಯಾಗದೆ ಇರಲಾರದು. ಸಾಧ್ಯವಾದರೆ ಅಂತಹ ಬಾಲಕರನ್ನು ಪಾಠಶಾಲೆಗೆ ಸೇರಿದ ಭೋಜನಶಾಲೆಗೆ ಸೇರಿಸುವ ಏರ್ಪಾಡನ್ನು ಮಾಡಿದರೆ ಸರ್ವೋತ್ಕೃಷ್ಟವಾಗಿ ಕಾಣುತ್ತದೆ. ಇಲ್ಲಿ ಬಳಕೆಯಲ್ಲಿರುವ ಸ್ನಾನಾಹ್ನಿಕಗಳು ವಿದ್ಯಾರ್ಥಿಗಳಲ್ಲಿ ಈಶ್ವರಭಕ್ತಿಯನ್ನು ನೆಲೆಗೊಳಿಸಿ ಅವರನ್ನು ಸದಾಚಾರ ಸಂಪನ್ನರಾಗಿಯೂ ಸತ್ಸಂಪ್ರದಾಯ ಪ್ರವರ್ತಕರನ್ನಾಗಿಯೂ ಮಾಡುತ್ತವೆ ಈ ವಿಷಯವನ್ನು ಪರ್ಯಾಲೋಚಿಸಬಹುದು. ಮುಖ್ಯ ಇಂಗ್ಲೀಷ್ ಸ್ಕೂಲು ಕಾಲೇಜಿನ ಭೋಜನಶಾಲೆಗಳಲ್ಲಾಗುವ ಅಧಿಕವ್ಯಯ ಅನಾಚಾರಗಳಿಗೆ ಬದಲಾಗಿ ಮಿತವ್ಯಯ ಸದಾಚಾರ ಆಸ್ತಿಕತೆಗಳು ನೆಲೆಗೊಳ್ಳಲು ಅನುಕೂಲಪಡಿಸಿದಂತಾಗುತ್ತದೆ. ಈ ರೀತಿ ಪರಿಣಮಿಸುವುದು ಸರ್ಕಾರದ ಆಶಯವೆಂಬುವುದಕ್ಕೆ ಸಂಶಯವಿಲ್ಲ.

ಮಹಾಶಯರೇ:—ಈ ಸಮಯದಲ್ಲಿ ನಾನು ಇನ್ನು ಯಾವುದನ್ನೂ ಹೆಚ್ಚಾಗಿ ಹೇಳಬೇಕೆಂದಿಲ್ಲ. ಮುಖ್ಯ ಪ್ರಾಚೀನ ಸಂಸ್ಕೃತ ವಿದ್ಯೆಯ ಪಠವಾಗಿಯೂ ಅದನ್ನು ಕಾಪಾಡುತ್ತಿರುವ ವಿಪ್ರ ವಿದ್ವನ್ಮಂಡಲಿಯ ಪರವಾಗಿಯೂ ನನಗೆ ತೋರಿದ ಕೆಲವು ವಿಷಯಗಳನ್ನು ಸಂಕ್ಷೇಪವಾಗಿ ಸೂಚಿಸಿರುತ್ತೇನೆ. ಈ ವಿದ್ವನ್ಮಂಡಲಿಯು ಪೂರ್ವದಿಂದಲೂ ಬಂದಂತೆ ಉತ್ತೇಜನವನ್ನು ಪಡೆದು. ಲೌಕಿಕವರ್ಗದ ಗೌರವಾದರಣೆಯಿಂದ ಮುಂದೆ ಸದಾಕಾಲದಲ್ಲಿಯೂ ಶ್ರೇಷ್ಠರಾಗಿಯೂ, ಪೂಜ್ಯರಾಗಿಯೂ ಉತ್ತಮ ವಿದ್ಯೆಯನ್ನೂ ಸ್ವಧರ್ಮವನ್ನೂ ಕಾಪಾಡಿಕೊಳ್ಳುವುದರ ಮೂಲಕ ಪ್ರಜಾಸಾಮಾನ್ಯಕ್ಕೆ ಶ್ರೇಯಸ್ಸನ್ನೂ ಸುಖವನ್ನೂ ಒದಗಿಸುವುದರಲ್ಲಿ ನಿರತರಾಗಿ ಸುಖಜೀವಿಗಳಾಗಿರಲಿ ಎನ್ನುವುದೇ ನಮ್ಮ ಪರಮಾಶಯವೆಂದು ಸೂಚಿಸಿರುತ್ತೇನೆ. ಇವರು ದೇಶದ ಐಹಿಕ ಸಂಪತ್ತಿಗೆ ದೃಶ್ಯವಾಗುವಂತೆ ಕಾರಣಭೂತರಲ್ಲವೆಂತ ತೋರಿದರೂ ಅದಕ್ಕಿಂತ ಅತ್ಯಂತ ಅಧಿಕವಾದ ಆಮುಷ್ಮಿಕ ಸೌಖ್ಯ ಸಾಧಕವಾದ ವಿದ್ಯಾಶಾಂತಿ ಜ್ಞಾನಮಾರ್ಗದರ್ಶಿಗಳಾಗಿರುತಾರೆ.

ಇದಕ್ಕಿಂತಲೂ ನಮಗೆ ಯಾವುದು ದೊಡ್ಡದು? ಸಧನಂ ನಚರಾಜ್ಯಸಂಪದಂ ನಹಿ ವಿದ್ಯಾಮಿದಮೇಕಮರ್ಥಯೆ | ಮಯಿ ದೇಹಿಮ | ನಾಗಪಿಸ್ರಭೋ ಕರ ಣಾ ಭಂಗಿತರಂಗಿತಂ ದೃಶಂ ಎಂಬ ದಾಗಿಯೂ

ನಮೋಕ್ಷಸ್ಯಾಕಾಂಕ್ಷಾ ನಚವಿಭವವಾಂಛಾಪಿಚ ನಮೆ ನವಿಜ್ಞಾನಾಪೇಕ್ಷಾ ಶಶಿಮುಖಿಸುಖೇಚ್ಛಾಪಿ ನಪುನಃ ||
ಅತಸ್ತ್ವಾಂಸಂಯಾಚೆಜನನಿಜನನಂಯಾತುಮಮವೈ |
ಮೃಡಾಣಿ ರುದ್ರಾಣಿ ಶಿವಶಿವ ಭವಾನೀತಿ ಜಪತಃ ||
ಎಂಬುದಾಗಿಯೂ ಆ ಕಾಂಕ್ಷಿಸಿದ ಮಹಾನುಭಾವರೂ ತಪಸ್ವಿಗಳೂ ಜಗದುದ್ಧಾರಕರೂ ಆದಂತಹವರ ವಂಶೀಯರೂ ಭಕ್ತಮಂಡಲಿಯವರಲ್ಲವೆ ನಾವುಗಳು? ಅಲ್ಲದೆ ಸಮಸ್ತರಿಗೂ ಅನನ್ಯಾಶ್ಚಿಂತಯಂತೊ ಮಾಂ ಯೇಜನಾಃಪರ್ಯುಪಾಸತೆ | ತೇಷಾಂನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ| ಎಂದೂ

ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂಶರಣಂವ್ರಜ|
ಅಹಂತ್ವಾಂಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ||

ಎಂಬುದಾಗಿಯೂ ಪ್ರಧಾನವಾಗಿರುವ ಭಗವದನುಗ್ರಹದಲ್ಲಿ ದೃಢಭಕ್ತಿಯುಳ್ಳವರಿಗೆ ಯಾವ ಕಾಲದಲ್ಲಿಯಾದರೂ ಯಾವಶಂಕೆಯಾದರೂ ಇರುವುದುಂಟೆ?

ಕೋಆಪರೇಟಿವ್ ಪ್ರೆಸ್,

ತಾ|| 3 ನೇ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶಾರದಾವಿಲಾಸ ಹೈಸ್ಕೂಲ್ ಹಾಲ್ ನಲ್ಲಿ ಮ|| ಎ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಪ್ರೆಸ್ಸನ್ನು ಸ್ಥಾಪಿಸಲು ಮೀಟಿಂಗು ನಡೆಯುತ್ತದೆ. ಮಹಾಜನರು ದಯಮಾಡ ಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ನೋಟೀಸ್

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ;—ಖಿಲ್ಲೆ ಮತ್ತು ಕೃಷ್ಣರಾಜಮೊಹಲ್ಲಾಗಳ ಕೆಲವು ಪ್ರದೇಶಗಳಿಗೆ ನೀರಿನ ತೊಂದರೆ ಇರುವುದರಿಂದ ಅದನ್ನು ನಿವಾರಿಸಲು ಈ ಕೆಳಗೆ ಕಂಡ ಸ್ಥಳಗಳಿಗೆ ಅದರ ಪಕ್ಕದಲ್ಲಿ ಕಾಣಿಸಿರುವ ಕಾಲಗಳಲ್ಲಿ ನೀರನ್ನು ತೃಪ್ತಿಕರವಾಗಿ ಸರಬರಾಯಿ ಮಾಡಲು ಏರ್ಪಡಿಸಿದೆ. ಈ ಕೆಳಗೆ ಕಾಣಿಸಿರುವ ಕಾಲಗಳಲ್ಲದೆ ಬಾಕಿ ಕಾಲಗಳಲ್ಲಿ ನೀರು ಈಗ ಹಾಲಿ ಹೇಗೆ ಸರಬರಾಯಿ ಆಗುತ್ತಿದೆಯೋ ಅದರಂತೆ ಇರತಕ್ಕದ್ದು ತಿಳಿಯುವುದು.

ಪ್ರದೇಶ	ಕಾಲ
ಸುಣ್ಣದ ಕೇರಿ;—ಚಾಮರಾಜ ರಸ್ತೆ ಒಗರ ಭಾಗ ಹೊಸಕೇರಿ ಮತ್ತು ನೀನಿರುಕಟ್ಟೆ ಈ ಪ್ರದೇಶಗಳಿಗೆ	ಪ್ರಾತಃಕಾಲ 7½ ಘಂಟೆ ಲಾಗಾಯಿತು 8½ ವರಗೆ
ಬಕ್ಷಿ ಬಸಪ್ಪಾಜಿಯವರ ತೋಟ, ಓಲ್ಡ್ ಜೂಡಾ ಯಾರ್ಡು ಮತ್ತು ಚಾಮುಂಡಿ ಬಡಾವಣೆ ಈ ಪ್ರದೇಶಗಳಿಗೆ	ಪ್ರಾತಃಕಾಲ 8½ ಘಂಟೆ ಲಾಗಾಯಿತು ಮಧ್ಯಾಹ್ನ 12 ಘಂಟೆವರಿಗೆ.

T. G. RAMA IYER,
ಪ್ರೆಸಿಡೆಂಟ್.

ಘೋರ ಅತ್ಯಾಚಾರ

ಶ್ರೀ ತಗಡೂರು ರಾಮಚಂದ್ರರಾಯರು [illegible] ದಿನ ಪೋಲೀಸಿನವರಿಂದ ತಮ್ಮ ಮೇಲೆ ನಡೆಸಲ್ಪಟ್ಟ ಕರ್ಣಕಠೋರವಾದ ಅತ್ಯಾಚಾರದ ವಿಷಯವಾಗಿ ಕೆಳಕಂಡಂತೆ ತಿಳಿಸಿರುತ್ತಾರೆ.

"ನಿನ್ನೆ ಮೊದಿನ ಪ್ರಾತಃಕಾಲ ಒಂಭತ್ತು ಗಂಟೆಯ ಸಮಯದಲ್ಲಿ ರಾಜಧಾನಿಯ ರಾಜಬೀದಿಯಲ್ಲಿ ನಡು ಹಗಲಿನಲ್ಲಿ ನನ್ನನ್ನು ಇಬ್ಬರು ಪೋಲೀಸಿನವರು ಹಿಡಿದುಕೊಂಡು ಕೈಮಿಸುಕಿ ಹಿಂಸೆ ಪಡಿಸಿದರು. ಅವರೊಳ್ಳೊಬ್ಬನನ್ನು ನಾನು ಪೋಲೀಸ್ ಸ್ಟೇಷನ್ನಿಗೆ ಉಪಾಯಾಂತರದಿಂದ ಕರೆದುಕೊಂಡು ಹೋಗಿ ಅವರ ದುರ್ನಡತೆಯ ವಿಷಯದಲ್ಲಿ ಫಿರ್ಯಾದು ಕೊಡಲು ಅಷ್ಟು [illegible] ದ ಕೆಲವು ಜನ ಇನ್ಸ್‌ಪೆಕ್ಟರುಗಳೂ [illegible] ಗಳೂ ನನ್ನನ್ನು [illegible] ಬೈದು ಧಿಕ್ಕರಿಸಿದರು. ಅವರ [illegible] ಇನ್ಸ್‌ಪೆಕ್ಟರು ನನ್ನ ಮೇಲೆ ಬಿದ್ದು ಜೇಬಿಗೆ ಕೈಹಾಕಿ [illegible] ಕಾಗದಗಳನ್ನೆಲ್ಲಾ ತೆಗೆದುಕೊಂಡರು. ನನ್ನ ಮೇಲೆ [illegible] ತ್ಯಾಚಾರ ನಡೆಸಿದವರಿಗೆ ಎಚ್ಚರಿಕೆ ಕೊಡುವುದಕ್ಕೆ [illegible] ಲಾಗಿ ಅವರನ್ನು ಪ್ರೋತ್ಸಾಹಿಸಿದರು. [illegible] ಗೆ ಕೆನ್ನೆಗೆ ಹೊಡೆದು ಹಲ್ಲನ್ನು ಮುರಿಯುತ್ತಿದ್ದೆ [illegible] ಲ. ಮುರಿದು ಕೂರಿಸ ತ್ತಿದ್ದೆ" ಎಂಬುದಾಗಿ [illegible] ದರು. ನಂತರ ನಡೆದ ಸಂಗತಿಗಳ ವಿಷಯವಾಗಿ [illegible] ವಾಜಿಸ್ತುಲವನ್ನು ಕೊಟ್ಟು ನಾನು ವಾಪಸು [illegible] ಕಣೆಯ ಪತ್ರಿಕೆಯು [illegible] ನ್ನೂ ನನ್ನ ಗಮನಕ್ಕೆ ತಾರದೆ [illegible] ಕೊಂಡು ಹೋದರು.

ಈ ಪ್ರಕಾರವಾಗಿ ದುಷ್ಟ ನಡತೆಯು [illegible] ಪೋಲೀಸಿನವರಲ್ಲಿ [illegible] ನಾನು [illegible] ರಲಿಲ್ಲ. ಅನ್ಯಾಯವನ್ನು ಮಾಡುವುದಕ್ಕೆ [illegible] ಕ್ರಮವಿದೆ. [illegible] ಈ ರೀತಿ [illegible] ಧವಾದ ಲಜ್ಜೆಯೂ ಇಲ್ಲದೆ [illegible] ಪರಾಧಿಗಳಾದ ಸತ್ಪ್ರಜೆಗಳನ್ನು [illegible] ದ ಇವರುಗಳ ಪ್ರಜಾರಕ್ಷಣೆಯನ್ನು [illegible] ಮಾಡುತ್ತಾರೆಂಬುದು ಗೊತ್ತಾಗುತ್ತದೆ ಈ ಸ್ಥಿತಿಯಲ್ಲಿ ನಮ್ಮಗಳ ಪ್ರಾಣ ಮಾನಗಳ ರಕ್ಷಣೆಗೆ [illegible] ಶ್ವರನಲ್ಲದೆ ಮತ್ತಾವ ಗತಿ ಇಲ್ಲವೆಂಬುದನ್ನು ನಾವೆಲ್ಲರೂ ದೃಢವಾಗಿ ಅರಿತುಕೊಳ್ಳಬೇಕೆಂಬುದು ಮಾತ್ರ ಇದರಿಂದ ಗೊತ್ತಾಗುತ್ತದೆ ಆ ಶಕ್ತಿಯನ್ನು ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಬೆಂಚ್ ಕೋರ್ಟು ರದ್ದು

ಶ್ರೀರಂಗಪಟ್ಟಣದ ಬೆಂಚ್‌ಕೋರ್ಟನ್ನು ವಜಾಮಾಡಿ ಮೊಖದ್ದಮೆಗಳನ್ನು ಫ್ರೆಂಚ್‌ರಾಕ್ಸ್ ಸ್ಪೆಷಲ್ ಮಾಜಿಸ್ಟ್ರೇಟರ ಕೋರ್ಟಿಗೆ ವರ್ಗಾಯಿಸಿರುವರು.

ಮಳವಳ್ಳಿ ಹೈಸ್ಕೂಲು

ಮಳವಳ್ಳಿಯಲ್ಲಿ ಹೈಸ್ಕೂಲನ್ನು ಕಟ್ಟಲು 4000 ರೂಗಳನ್ನೂ ಸ್ಕೂಲಾರಂಭವಾದ ನಂತರ [illegible] ಮಾಮೂಲು ಪ್ರಕಾರ ಗ್ರಾಂಟು ಕೊಡುವಂತೆಯೂ ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಒಪ್ಪಿರುತ್ತದೆ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಿಂದ ... ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲುದಲ್ಲಿರುವುದೇನು?



ರಕ್ತ ಸ್ರಾವವನ್ನು ಮಾಡಿ ರತಿರೋಗಗಳನ್ನು ನೀಗಿಸಿ
ತಂಪುಗೆ ತಾಗ ನ್ನು ಪಿತ್ತ ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಸ್ತ್ರೀಯರಿಗೆ ... ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂಭೋಗ ಶಕ್ತಿ ... ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
... ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
... ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ... ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡು ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು:— ರತನ್ ಮಿಶ್ರಿ ಡಿಪೊ, (... ಆಂಜನೇಯ ಜ್ಯೋತಿಷಾಲಯ,)

(... ಪತ್ರಿಕೆಯ ಹೆಸರನ್ನು ತಿಳಿಸಿ.) ವಟಾಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd


Applications are invited from respectable and influential gentlemen from every Taluk and District Centres or Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance.

Apply for Agency terms
To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.



ಭಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ... ಕೆಲಸ ಇತರ ಕಡೆಗಳಿಗಿಂತ ನಾಣ್ಯ.

... ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

... ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
... ನಗರ್ತಪೇಟೆ, ಬೆಂಗಳೂರು ಸಿಟಿ

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಅಜೀರ್ಣ, ಸೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನು ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ವಾಂತಿ ವ್ರ ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸರಸ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತೆ

ಬ್ರಾಂಚ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

ಹೆಡ್ ಆಫೀಸು
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

Printed and published by P. R Rmaaiya.
Sri Rama Press, D. Subbaih Road, Mysore.

Regd.No.M 2322

ತಾಯಿನಾಡು.

ಪ್ರತಿ ದಿನವೂ ವೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ

ಸಂಪುಟ ೧] ಮಂಗಳವಾರ ೫ ಮಾರ್ಚಿ ೧೯೨೯ [ಸಂಚಿಕೆ ೧

ತಾಯಿನಾಡು.

5-3-1929

(District Magistrate Court's Seal)

NOTICE

(Under section 39 of the Mysore Police Regulation)

Messrs

Tagadur Ramachandra Rao
P. R. Ramiah
Agaram Rangiah

I have received credible information from the City police, that you have been attempting to arrange hostile demonstrations on the occasion of the visit to Mysore of certain Members of the Statutory Commission and the Indian Central Committee and that you have been printing matter calculated to excite people on the subject. I therefore in exercise of the powers vested in me by section 39 of the Mysore Police Regulation, prohibit you from uttering cries in the streets, delivering harangues, using guestures, preparing, exhibiting or disseminating pictures, symbols, placards printed or written matter or any other object or thing on the subject of the said members' visit within the limits of the Mysore District as in my opinion it is likely to provoke resentment on the part of the public and may thus lead to the commission of offences and disturbance of the public peace and to resistance to or contempt of the law and lawful authority.

2. The order will be in force from today till the 15th March 1929.

(Sd) K. V. Anantharaman
1-3-1929
District Magistrate
Mysore District.

No. 862 of 28-29 Mysore
Dated 2nd March 1929

Proceedings of the City Magistrate, Mysore.

Read,

Report No. H C 60 28 29 dated 2-3-29 from the Asst. Superintendent of Police, Mysore, Mysore.

ORDER.

In view of the circumstancest set forth in the Asst Superientendent's rebort read above and in pursuance of the powers vested in me under section 45 of the Police Regulation I hereby direct that from the 2nd to the 10th instant both dabs inclusive, no assemblies and processions, playing of music, beating of drums, tom tom etc. in or near a street should be permitted within the limits of Mysore City unless they are duly licenced by the undersigned. A copy of the proceedings shall be affixed at conspecuious places within the City.

(Sd) City Magistrate, Mysore.



ಮೈಸೂರಿನ ವೀರಸತ್ಯಾಗ್ರಹೀ ತಗಡೂರು ರಾಮಚಂದ್ರರಾಯರು

ತಗಡೂರು ರಾಮಚಂದ್ರರಾಯರ ದಸ್ತಗಿರಿ.

ಸೈಮನ್ ಹರತಾಳದ ಪರಿಣಾಮ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆಯ ಪ್ರತಿಭಟನೆ ನಿನ್ನೆ ದಿನ ಪ್ರಾತಃಕಾಲ ಹತ್ತು ಗಂಟೆಯಲ್ಲಿ ಶ್ರೀ|| ತಗಡೂರು ರಾಮಚಂದ್ರರಾಯರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಹುಕುಮನ್ನು ಪ್ರತಿಭಟಿಸಿ ಕಾಂಗ್ರೆಸ್ ಆಫೀಸಿನ ಬಳಿ ದಸ್ತಗಿರಿಯಾದರು. ಸಿಟಿಮ್ಯಾಜಿಸ್ಟ್ರೇಟರ ಮುಂದೆ ಮುಕದ್ದಮೆ ನಡೆದು ಜಾಮೀನು ಕೊಡಲು ಒಪ್ಪದೆ ಇದುದ್ದರಿಂದ ರಾಯರು ಬಂದೀಖಾನೆಗೆ ಒಯ್ಯಲ್ಪಟ್ಟರು ೧೧ನೇ ತಾರೀಖಿಗೆ ಮುಕದ್ದಮೆ ಇಡಲ್ಪಟ್ಟಿದೆ ಊರಿನಲ್ಲೆಲ್ಲಾ ಬಹಳ ಕೋಲಾಹಲವಾಗಿದೆ ಸೈಮನ್ ಹರತಾಳದ ಬಗ್ಗೆ ಮೀಟಿಂಗ್ ಮೊದಲಾದುವುಗಳನ್ನು ಸಿಟಿಮ್ಯಾಜಿಸ್ಟ್ರೇಟರು ಬಂಧಿಸಿದ್ದರು. ಕೆಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದವು ಅನೇಕ ವಿದ್ಯಾರ್ಥಿಗಳು ಶಾಲೆಗೆ ಹೋಗಲಿಲ್ಲ ಪೋಲೀಸ್ ಬಂದೂಬಸ್ತು ವಿಪರೀತವಾಗಿತ್ತು.

ಮದರಾಸ್ ಪೋಲೀಸ್ ಪ್ರಕಟನೆ

ಜನವರಿ 28ನೇ ತಾ|| ಬೆಂಗಳೂರು ಮದರಾಸ್ ಮೆಯಿಲ್ ಗಾಡಿಯಲ್ಲಿ ಒಬ್ಬ ಬ್ರಾಹ್ಮಣಿತಿಯ ಕೊಲೆ ನಡೆಸಿ ತಲೆತಪ್ಪಿಸಿಕೊಂಡಿರುವ ಘಾತುಕನನ್ನು ಪತ್ತೆಮಾಡುವ ಪ್ರಯತ್ನಗಳ್ಯಾವುವೂ ಫಲಿಸದಿರುವ ಕಾರಣ ಈ ಕೊಲೆಯನ್ನು ಪತ್ತೆ ಹಚ್ಚುವುದು ಮಾಡಿ ತಿಳಿಸುವವರಿಗೆ 500 ರೂ. ಬಹುಮಾನ ಕೊಡುವುದಾಗಿ ಮದರಾಸ್ ಪೋಲೀಸ್ ಪ್ರಕಟಣೆಯಾಗಿದೆ.

TAI NADU

5—3—1929

MR. MATHAN'S ADVICE.

In his address at the Intermediate College, Bangalore, Rajasabhabhushana Mr. K. Mathan, the Third Member of the Council spoke to the students at large all over the country. Mr. Mathan is an experienced civilian and artful administrator. But wether he is equally competent as an educationist is a matter of doubt. His three years regime as the Inspector-General of Education and later on as the Director of Public Instruction is dull and uneventful. Later on towards the end of the tennure of his office, as the Director of Public Instruction, he went on an arduous tour to Europe at the expense of the Mysore tax-payer ostensibly for the purpose of gaining more of educational experience. But his speech at the Intermediate College shows no signs of his increased experience If anything, it shows that he has ceased to think for himself and begun to repeat the words of some noted people in British India. It also shows that in matters educational, he is getting reactionary and going against the laws of nature and science There is also a certain amount of inconsistency in his speech. Taken as a whole, the speech is mutually contradictory.

What is it that Mr. Mathan says? In the early part of his speech, he advises students to study politics with increasing interest, but, in the latter part, he advises them to shun the present day controversial politics. In this connection, he slings mud against the present day politicians by saying that they 'draw students to politics. We can understand Sivaswamy Iyer speaking in the above strain, To him as to other moderately minded lawyers, politics is only an intellectual game involving no seriousness and self-sacrifice. Any seriousness in politics is on obsession to them.' But on the other hand take the advice of such noble self-less and self sacrificing patriots like Mahatma Gandhi, Javaharlal Nehru, Subhas Chandra Bose, Srinivasa Iyengar, Prakasam and others. They have advised the students to join the national struggle for freedom and sacrifice their all for the country. They mean what they say.

This is not peculiar to India alone. Every Country which values its freedom has called upon its younger generation to join the national struggle for freedom. At the time of the Great European War every Country in Europe did it England did it, France did it and Germany did it. Nearer home, Japan did it, China did it and Egypt did it. Now Afghanistan is doing it. Why not India also do it? Surely a movement to secure India's National Freedom cannot be called controversial Unhappily, in this unfortunate country, there are people who do not want Swaraj, who do not want independence, but who would like to be always under the tutelage of England. To such people we cannot say anything. We have to leave them severely alone. As long as India remains a slave nation, so long, every Indian man, woman and child should join the national struggle. Their can be no question of controversial politics here. We know the students in India, even in Mysore, do not join any petty communal movements. It is only when the question is of an outstandingly national importance that the students join the movement. The more the students are advised by certain people not to take part in politics, the greater will be the fascination for them to take part in it. It is enongh if Government and Government Officers do not make use of students for political purposes.

—

500 ರೂ. ಗಳ ಬಹುಮಾನ

ಕೋಲಾರ ಡಿಸ್ಟ್ರಿಕ್ಟಿನ ಅನೇಕ ತಾಲ್ಲೂಕುಗಳಲ್ಲಿ ದೇವಸ್ಥಾನಗಳೊಳಗೆ ಅಕೃತ್ಯಗಳು ನಡೆದ ಮೊಕದ್ದಮೆಗಳಲ್ಲಿ ತಕ್ಕ ರುಜುವಾತನ್ನು ಅಲ್ಲಿನ ಪೋಲೀಸರವರಿಗೆ ಒದಗಿಸಿಕೊಡುವವರಿಗೆ 500 ರೂ. ಗಳ ಬಹುಮಾನ ಕೊಡುವುದಾಗಿ ಡಿ| ಕ| ಮ್ಯಾ|| ಎ ವಿ ರಾಮನಾಥನ್‌ರವರು ಪ್ರಕಟಿಸಿದ್ದಾರೆ.

ಮುಷ್ಕರದ ಪರಿಸಮಾಪ್ತಿ

ಬೊಂಬಾಯಿ ಎಣ್ಣೆ ಡಿಪೋಗಳ ಮುಷ್ಕರವು ಪರಿಸಮಾಪ್ತಿಯಾಗಿ ಅನೇಕರು ತಮ್ಮ ಕೆಲಸಗಳ ಮೇಲೆ ಹೋಗುತ್ತಿರುವರು

ಭಾರಿ ಸೈಕ್ಲೋನ್.

ಆರುನೂರು ನಿವಾಸಿಗಳಿದ್ದ ನ್ಯೂಯಾರ್ಕಿನ ಒಂದು ಭಾಗದಲ್ಲಿ ಉಂಟಾದ ಭಾರಿ ಸೈಕ್ಲೋನಿಗೆ ಸಿಕ್ಕಿದ 20 ಜನರು ಆಹುತಿಯಾಗಿ ನೂರಾರು ಜನರು ಘಾಸಿಪಟ್ಟಿರುವರು.

ಸರ್ವತ್ರ ವರ್ತಮಾನ ಸಂಗ್ರಹ.

ರಾಜಧಾನಿಯ ಮಕ್ಕಳ ಪ್ರದರ್ಶನ

[illegible]

[illegible]

[illegible]

[illegible]

ಇಂಡಿಯಾದ ಖಿಲಾಫತ್ ಕಮಿಟಿಯವರ [illegible]

[illegible]

ಇದ್ದಲ್ಲದೆ ಅವನ ಸಹಾಯಕರಾದ ವಸ್ತ್ರಾದವರ ಸ್ವಕಿ 5-6 ಜನರು ವಿಮಾನವ ಚಲೀನಕಾಂದಹಾರಿಗೆ ಬಂದಿರುತ್ತಾರೆ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಇನಿಯ ಶಿದ್ದಪ್ಪಾಸ್ ಪೇಟೆಂಟ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ... ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನ ... ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ಸ್ಟಾಂಪು ಕಳುಹಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳ ... ಬುಕ್ ಪೋಸ್ಟ್ ಪಾರ್ಸಲ್ ದ್ವಾರಾ ಕಳುಹಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲುಪುಡಿಯಲ್ಲಿರುವುದೇನು?



ರಕ್ತವೃದ್ಧಿ ಮಾಡಿ ರಕ್ತರೋಗಗಳನ್ನು ನೀಗಿಸಿ

ತರುಣರಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ

ಸರ್ಪಗಳನ್ನು ಜಿಗಿ ಮಾಡಿ ಅಂಟುರೋಗಗಳನ್ನು ಪರಿಹರಿಸಿ

ಮುದುಕರಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ

ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ

ರೋಗಿಗಳಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ

ಹಸುವಿನಂತ ಹಸಿವನ್ನುಂಟುಮಾಡಿಸಿ ಶರೀರದ

ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ

ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡು ಟಿನ್ 1 ಕ್ಕೆ ರೂ. 2—8—0

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.) ಮಹೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centres for Life Insurance Business. Liberal terms


A rare opportunity for spare time earnings.

We undertake also Fire & Motor cars Etc., Insurance.

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.



ಬಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಯುಸ್ ನರಸಿಂಹ ಅಯ್ಯರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ

" ಭಿಷಗ್ರತ್ನ "

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ... ಯಾಗಲಿ ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ... ರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ... ಅಜೀರ್ಣ, ಸೀತವಾತಜ್ವರ, ಚಳಿಜ್ವರ ಮೊದಲಾದ ಇನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನು ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರ ರಸ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ... ವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವದಾಗಲಿ ಉಂಟಾಗದೆ ಕೊಟ್ಟ ಮೇಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸ ರಸ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ... ತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ... ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸ ತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ.

ಬ್ರಾಂಚ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

ಹೆಡ್ ಆಫೀಸು
ಶ್ರೀ ಸೀತಾರಾಘವ ವೈದ್ಯಶಾಲಾ ...

Printed and published by P. R. Rmaaiya.
Sri Rama Press, D. Subbaih Road, Mysore.

Regd. No M 2322 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ ೬ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦ / ಪರಸ್ಥಳಕ್ಕೆ ೬—೦—೦

ಸಂಪುಟ ೧] ಬುಧವಾರ ೬ ಮಾರ್ಚಿ ೧೯೨೯ [ಸಂಚಿಕೆ ೧೬೬

ಪರದೇಶೀ ವಸ್ತ್ರಗಳ ದಹನಪ್ರದರ್ಶನವನ್ನು ಮಾಡಿದ್ದಕ್ಕಾಗಿ ಮಹಾತ್ಮಾ ಗಾಂಧಿಯವರು ಕಲ್ಕತ್ತಾದಲ್ಲಿ ನೆನ್ನೆ ದಸ್ತಗಿರಿಯಾದರು.

ತಾಯಿನಾಡು.

6—3—1929

ಮ|| ತಗಡೂರು ರಾಮಚಂದ್ರರಾಯರ ದಸ್ತಗಿರಿ.

ಮ|| ತಗಡೂರು ರಾಮಚಂದ್ರರಾಯರನ್ನು ದಸ್ತಗಿರಿ ಮಾಡಿದ ವಿಷಯದಲ್ಲಿ ನಮಗೆ ಸಂತೋಷವೇ ಹೊರತು ವ್ಯಸನವಿಲ್ಲ. ಈ ಸಂದರ್ಭದಲ್ಲಿ ಮ|| ರಾಮಚಂದ್ರರಾಯರು ಅಭಿನಂದನಕ್ಕೆ ಅರ್ಹರೇ ಹೊರತು ವ್ಯಸನಪ್ರದರ್ಶನಕ್ಕಲ್ಲಾ. ಮ|| ರಾಯರು ಕಾರಾಗೃಹವನ್ನು ಬಹಳ ಆನಂದದಿಂದ ಸೇರಿದರು. ಅವರಿಗೆ ಇದೊ ದುರ್ಬಿಗ್ನಿಟಿಯು ತಿಳಿದೂ ತಿಳಿದೂ ಅವರು ಡಿ|| ಮ್ಯಾಜಿಸ್ಟ್ರೇಟರ ಆರ್ಡರನ್ನು ಉಲ್ಲಂಘಿಸಿದರು. ಈ ಉಲ್ಲಂಘನೆಯು ತಮ್ಮ ಅತ್ಯಂತ ಪವಿತ್ರ ಕರ್ತವ್ಯ ಎಂಬುದಾಗಿ ಭಾವಿಸಿ ಡಿ|| ಮ್ಯಾ|| ರವರಿಗೆ ತಿಳುಹಿಸಿ ಬಹಳ ಗಂಭೀರವಾಗಿ ಪೋಲೀಸಿನವರಿಗೆ ಸ್ವಲ್ಪವೂ ಶ್ರಮಕೊಡದೆ ಅವರ ಅಧೀನರಾದರು. ಈಗಲೂ ಅವರು ಸರ್ಕಾರದಿಂದ ಅವತ್ತಾದರೂ ದಯೆಯನ್ನು ಅಪೇಕ್ಷಿಸುವುದಿಲ್ಲ. ಅವರ ಕಾನೂನಿನಂತೆ ಎಷ್ಟು ಹೆಚ್ಚಿನ ಶಿಕ್ಷೆಯನ್ನು ಕೊಡಬಹುದೊ ಅಷ್ಟನ್ನೂ ಅನುಭವಿಸುವುದಕ್ಕೆ ಸಿದ್ಧರಾಗಿರುವರು ಮ|| ರಾಯರವರು ತಮ್ಮ ಜೀವನವನ್ನು ಸತ್ಯಾಗ್ರಹ ಧರ್ಮಕ್ಕೆ ಅರ್ಪಿಸಿ ಸಾರ್ಥಕಪಡಿಸಿಕೊಂಡರು.

ಈಗ ವಿಷಾದ ಪಡಬೇಕಾಗಿರುವುದು ಮುಖ್ಯವಾಗಿ ಎರಡು ವಿಷಯಗಳಿಗೋಸ್ಕರ ಮೊದಲನೆಯದು ಮ|| ತಗಡೂರು ರಾಮಚಂದ್ರರಾಯರಂತಹ ವೀರ ಸತ್ಯಾಗ್ರಹಿಗಳು ನಮ್ಮಲ್ಲಿ ಅನೇಕರಿಲ್ಲ, ಅವರು ಏಕೈಕವೀರರಾಗಿದ್ದರು ಜಗದೀಶ್ವರನ ಅನುಗ್ರಹದಿಂದ ಇಂಥವರ ನಮ್ಮ ಸಂಸ್ಥಾನದಲ್ಲಿ ಹೆಚ್ಚಬೇಕೆಂದು ನಮ್ಮ ಪ್ರಾರ್ಥನೆ.

ಎರಡನೆಯದಾಗಿ ನಾವು ವಿಷಾದಪಡುವುದು ನಮ್ಮ ಅಧಿಕಾರಿಗಳಿಗೋಸ್ಕರವಾಗಿ ಮ|| ರಾಮಚಂದ್ರರಾಯರನ್ನು ದಸ್ತಗಿರಿ ಮಾಡಿ ಸೈಮರ್ ಕಮಿಷನ್ನಿನ ಬಹಿಷ್ಕಾರವನ್ನು ಕಡಿಮೆಮಾಡುವುದಕ್ಕೆ ಬದಲಾಗಿ ಅದನ್ನು ಹೆಚ್ಚಿಸಿದರು. ಮ|| ರಾಮಚಂದ್ರರಾಯರನ್ನು ದಸ್ತಗಿರಿ ಮಾಡಿದ್ದರಿಂದ ಸೈಮನ್ ಕಮಿಷನಿನ ವಿಚಾರವೇ ತಿಳಿಯದವರಿಗೆ ಅವರು ನಮ್ಮ ರಾಜಧಾನಿಗೆ ಬಂದರೂ ಅವರು ಇರುವಿಕೆಯು ಪ್ರಜೆಗಳಿಗೆ ಬೇಕಾದಂತೂ, ಪ್ರಜೆಗಳು ಅಭಿಪ್ರಾಯವನ್ನು ಪ್ರಕಟಿಸಕೂಡದೆಂದು ಡಿ|| ಮತ್ತು ಸಿಟಿ ಮ್ಯಾಜಿಸ್ಟ್ರೇಟರುಗಳು ಕಟ್ಟುಮಾಡಿದುದೂ, ಈ ಕಟ್ಟು ಅನಪೇಕ್ಷಿತವಾದುದು ಮತ್ತು ಅನ್ಯಾಯವಾದುದು ಎಂದು ಮ|| ರಾಮಚಂದ್ರರಾಯರವರು ಅದನ್ನು ಉಲ್ಲಂಘನೆಮಾಡಿದುದೂ ಇದರ ಪರಿಣಾಮವಾಗಿ ದಸ್ತಗಿರಿಯಾದುದೂ ಏಕೀನ ಸೈಮನ್ ಕಮಿಷನ್ನಿನ ಆಗಮನದ ಸಮಯಕ್ಕೆ ಮೈಸೂರಿನಲ್ಲಿ ದಸ್ತಗಿರಿಯ ಆಮೋಗಳ ಸಂಗತಿಯು ನಡೆದುದೂ ಇವೆಲ್ಲವೂ ಆಬಾಲಗೋಪಾಲರಿಗೂ ತಿಳಿಯುವಂತಾಯಿತು. ಅಧಿಕಾರಿಗಳ ಉದ್ದೇಶವು ನೆರವೇರದಂತಾಗಲಿಲ್ಲ. ಅತಿಥಿಗಳಾದ ಸರ್ ಜಾನ್ ಸೈಮನ್ ರೇ ಮೊದಲಾದವರಿಗೆ ಈ ದಸ್ತಗಿರಿಯು ತಿಳಿದೇ ತಿಳಿಯುವುದು. ಅವರೂ ನಮ್ಮ ಅಧಿಕಾರಿಗಳನ್ನು ಈ ದಸ್ತಗಿರಿಗಾಗಿ ಅಭಿನಂದಿಸುವಹಾಗಿಲ್ಲ

ಸೈಮನ್ ಕಮಿಷನರವರು ಮೈಸೂರಿಗೆ ಬರುವುದು ವಿಶ್ರಾಂತಿಗಾಗಿಯೂ ವಿಹಾರಕ್ಕಾಗಿಯೂ ಎಂದು ಹೇಳಲ್ಪಡುತ್ತಲಿದೆ. ಹಾಗಿದ್ದ ಪಕ್ಷದಲ್ಲಿ ಅಧಿಕಾರಿಗಳು ಅವರ ಆಗಮನದ ವಿಷಯದಲ್ಲಿ ಅಷ್ಟು ಕೌತುಕವನ್ನು ಏತಕ್ಕೆ ತೋರಿಸಬೇಕು?. ದಸ್ತೆ ಮೊದಲಾದವುಗಳಿಗೆ ಕೆಲವು ರಾಜ್ಯ ಎಂಜಿನಿ ಕಟ್ಟಡಗಳಿಗೆ ಸುಣ್ಣ ಬಳಿದದಕ್ಕೆ ನಾವು ಆಕ್ಷೇಪಿಸುವುದಿಲ್ಲ. ಇಷ್ಟು ಪೋಲೀಸು ಒಂದೊಬಸ್ತು ಏಕೆ? ಇಷ್ಟು ಸಿ. ಐ. ಡಿ. ಗಳ ಅವಾಂತರವೇಕೆ? ಡಿ|| ಮ್ಯಾ|| ರವರೂ, ಸಿಟಿ ಮಾಜಿಸ್ಟ್ರೇಟರವರೂ ವಾಗ್ಬಂಧನ ಸಭಾಬಂಧನ ಪ್ರದರ್ಶನ ಬಂಧನದ ಆರ್ಡರುಗಳನ್ನು ಏಕೆ ಕೊಡಬೇಕು? ಒಂದು ವೇಳೆ ಕೆಲವರು ಸೈಮನ್ ಕಮಿಷನ್ನಿನ ಬಹಿಷ್ಕಾರ ಪ್ರದರ್ಶನವನ್ನು ಮಾಡಿದ್ದರೆ ಏನುಕುಂದಕವಾಗುತಿತ್ತು? ಇಂಡಿಯಾದಲ್ಲಿ ಎಲ್ಲಾ ಕಡೆಯಲ್ಲೂ ಅದುದ ಇಲ್ಲೂ ಆಗುತಿತ್ತು. ಯಾವ ಬ್ರಿಟಿಷ್ ಇಂಡಿಯಾದಲ್ಲಿ ಇವರು ಗೌರವಾದ ಕೆಲಸಕ್ಕೋಸ್ಕರವಾಗಿ ಬಹಿರಂಗವಾಗಿ ರಾಜೋಪಚಾರಗಳೊಡನೆ ಸತ್ಕಾರವನ್ನು ಹೊಂದುತ್ತಿದ್ದರೋ ಅಲ್ಲಿಯೇ ಇವರೊಂದು ಕಡೆ ಉಗ್ರವಾದ ಬಹಿಷ್ಕಾರ ಪ್ರದರ್ಶನಗಳು ನಡೆಯುತ್ತಿದ್ದವು: “ಸೈಮನ್ ಹಿಂತಿರುಗು” ಎಂಬ ಕೂಗುಗಳು ನಭೋಮಂಡಲವನ್ನು ಮುಟ್ಟುತ್ತಿದ್ದವು. ಈ ಚಳವಳಿಯನ್ನು ಬ್ರಿಟಿಷ್ ಅಧಿಕಾರಿಗಳು ಅಡ್ಡಿ ಪಡಿಸಲಿಲ್ಲ, ನಮ್ಮ ಮೈಸೂರಿನಲ್ಲೇ ಇದಕ್ಕೆ ಅಡ್ಡ ಅಧಿಕಾರಿಗಳು ಸತ್ಕಾರಪ್ರದರ್ಶನ ಮಾಡಲಿ, ಪ್ರಜೆಗಳು ಬಹಿಷ್ಕಾರ ಪ್ರದರ್ಶನ ಮಾಡಲಿ. ಇದರಲ್ಲೇನು ಕೆಡಕು? ವಾಸ್ತವವಾದ ವಿಷಯವು ಪ್ರಕಟಿಸುವುದಕ್ಕೆ ಅನುಕೂಲವಾಗುತ್ತಿತ್ತು. ಪ್ರಜಾಭಿಪ್ರಾಯದಪ್ರಕಟನೆಗೆ ಅಡ್ಡಿ ಬಂದು ಮೈಸೂರಿನ ಪ್ರಜೆಗಳು ತಾವು ಬ್ರಿಟಿಷ್ ಇಂಡಿಯಾದ ಪ್ರಜೆಗಳಷ್ಟು ಸ್ವಾತಂತ್ರ್ಯವನ್ನೂ ಹೊಂದಿಲ್ಲ. ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ಒಂದು ಪದರದ ಗುಲಾಮಗಿರಿಯಿದ್ದರೆ ಮೈಸೂರಿನವರಿಗೆ ಎರಡು ಪದರದ ಗುಲಾಮಗಿರಿಯಿದೆ ಎಂಬುದ ವ್ಯಕ್ತವಾಯಿತು.

ನಿಜವಾಗಿಯೂ, ಡಿ|| ಮ್ಯಾ|| ರ ಮತ್ತು ಸಿಟಿ ಮ್ಯಾ|| ರ ಆರ್ಡರುಗಳಿಗೆ ಮೈಸೂರಿಗೆ ಯಾವ ಅವಶ್ಯಕವೂ ಇರಲಿಲ್ಲ. ಬಹಿಷ್ಕಾರ ಸಭೆಯೂ ಪ್ರದರ್ಶನವೂ ನಡೆದಿದ್ದರೆ ಯಾವ ಶಾಂತಿಭಂಗವೂ ಆಗುತ್ತಿರಲಿಲ್ಲ. ಕಾನೂನಿನ ತಿರಸ್ಕಾರವೂ ಆಗುತ್ತಿರಲಿಲ್ಲ. ಆದರೆ ಈ ಪ್ರಜಾಭಿಪ್ರಾಯದ ಪ್ರದರ್ಶನವನ್ನು ತಡೆದದ್ದರಿಂದ ನಿಜವಾದ ಶಾಂತಿಭಂಗವಾಯಿತು ಶಾಂತವಾಗಿದ್ದ ಪ್ರಜಾಸಮುದಾಯದ ಮನಸ್ಸು ಕ್ಷೋಭಿತವಾಯಿತು ಮತ್ತು ಕಾನೂನಿನ ಭಂಗವು ಮ|| ರಾಮಚಂದ್ರರಾಯರಿಂದ ಆಚರಿಸಲ್ಪಟ್ಟಿತು.

ಈಗಲೂ ಅಧಿಕಾರಿಗಳು ತಮ್ಮ ಆರ್ಡರುಗಳನ್ನು ಪುನರ್ವಿಮರ್ಶೆ ಮಾಡಿ, ಬಂಧನಗಳನ್ನು ತೆಗೆದು, ಮ|| ರಾಮಚಂದ್ರರಾಯರನ್ನು ಖುಲಾಸೆ ಮಾಡಿ, ಪ್ರಜಾಭಿಪ್ರಾಯದ ಪ್ರಕಟನೆಗೆ ಅವಕಾಶವನ್ನುಂಟುಮಾಡುವುದು ಮೇಲು. ಈ ಹಿತೋಕ್ತಿಯು ಅಧಿಕಾರಿಗಳಲ್ಲಿ ಫಲಿಸುವುದೇ?

ವರ್ತಮಾನ ಸಂಗ್ರಹ

ಮೈಸೂರು ಸ್ಟಾರ್

ಮೈಸೂರು ಸ್ಟಾರ್ ದಿನ ಪತ್ರಿಕೆಯು ಈ ತಿಂ 4ನೇ ತಾ|| ನಿಂದ ನಿಲ್ಲಿಸಲ್ಪಟ್ಟಿದೆ.

ಚೆನ್ನಪಟ್ಟಣದ ರೇಂಜರ ಖೂನಿ.

ಕಳೆದ ಸೆಪ್ಟೆಂಬರ್ 19 ರಲ್ಲಿ ನಡೆದ ಚನ್ನಪಟ್ಟಣದ ರೇಂಜರ ಖೂನಿಯ ಮೊಖದ್ದಮೆಯನ್ನು ಕೋಲಾರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸಿ ಪೋಲೀಸಿನವರ ಆಪಾದನೆಗಳು ಬುಡವಿಲ್ಲದವೆಂದೂ ವ್ಯವಹಾರಾಳಕ್ಕಿಯಿಂದ ಪೊ|| ಅ|| ಸೂ ರವರು ಮೋಸಹೋಗಿರುವರೆಂದೂ ಹೇಳಿ ಅಪರಾಧಿಗಳನ್ನು ಬಿಡುಗಡೆಮಾಡಿರುವರು.

ಕರ್ನಾಟಕ ಖಾದಿ.

ಕರ್ನಾಟಕ ಪ್ರಾಂತ್ಯದಲ್ಲಿ 1929 ನೇ ಜನವರಿ ಮಾಹೆಗೆ 5044 ರೂ: ಗಳ ಖಾದಿಯು ಉತ್ಪನ್ನವಾಗಿ ಚಿಲ್ಲರೆ ಮತ್ತು ಒಟ್ಟುಗಟ್ಲೆ 19159 ರೂ. ಗಳು ವ್ಯಾಪಾರವಾಗಿರುವುದರಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಕಡಿಮೆ ನಮ್ಮ ಮೈಸೂರು ಪ್ರಾಂತ್ಯದಲ್ಲೇ ವ್ಯಾಪಾರ ನಡೆದಿರುವುದು ತುಂಬಾ ಸಂತೋಷಪ್ರದವಾಗಿದೆ.

ಆ|| ಕಮೀಷನರುಗಳ ವರ್ಗಾವರ್ಗಿ

ಬೆಂಗಳೂರು ಡೆ|| ಕ|| ರವರ ಜನರಲ್ ಅಸಿಸ್ಟೆಂಟರಾದ ಮಿ|| ಎ ಜಿ. ಆನಿ ಮರವರು ಮೈಸೂರು ಸ್ಟೇಟ್ ಟ್ರೂಪುಗಳ ಕಮಾಂಡೆಂಟರವರಿಗೆ ಪರ್‌ಸನಲ್ ಅಸಿಸ್ಟೆಂಟರಾಗಿಯೂ (ರಜಾ ಮುಗಿದನಂತರ)

ಚಿತ್ರದುರ್ಗದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ದ್ವಾರಕಾನಾಥ್ ರವರು ಬೆಂಗಳೂರು ಡಿ|| ಜೆ|| ರವರ ಪರ್‌ಸನಲ್ ಅಸಿಸ್ಟೆಂಟರಾಗಿಯೂ (ರಜಾ ಮುಗಿದನಂತರ)

ಮಿ|| ಪಿ. ಹೆಚ್; ಕೃಷ್ಣರಾಯರವರ ತಮ್ಮ ರಜಾ ಮುಗಿದ ಮೇಲೆ ಚಿತ್ರದುರ್ಗದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೆಲಸಕ್ಕೂ ವರ್ಗಾಯಿಸಲ್ಪಟ್ಟಿರುವರು.

TAI NADU
6—3—1929

ತಗಡೂರು ರಾಮಚಂದ್ರರಾಯರ ಉತ್ತರ.

ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಸನ್ನಿಧಿಯಲ್ಲಿ.

ಸ್ವಾಮಿ—

ತಾವು 1—3—29 ನೇ ತಾರೀಖಿನ ದಿವಸ ಮೈಸೂರು ಪೋಲೀಸ್ ರೆಗ್ಯುಲೇಷನ್ 39 ನೇ ಸೆಕ್ಷನ್ ಪ್ರಕಾರ ನನಗೆ ಕಳುಹಿಸಿದ ನೋಟೀಸು 2 ನೇ ತಾರೀಖಿನ ದಿವಸ ತಲುಪಿ ಅಭಿಪ್ರಾಯವಾಯ್ತು.

ತಾವು ಕಳುಹಿಸಿದ ಆರ್ಡರ್ ರಾಜಮಾರ್ಗವಾಗಿರುತ್ತದೆ. ಅದನ್ನು ನೋಡಿದೊಡನೆಯೇ ನನಗೆ ಬಹಳ ಸಂತೋಷವಾಯಿತ. ತಮ್ಮ ಆರ್ಡರು ಬರುವುದಕ್ಕೆ ಹಿಂದೆ ಸಿಟಿ ಪೋಲೀಸಿನವರೂ ನನ್ನ ಮೇಲೆ ಹಾಕಿರತಕ್ಕ ಪೋಲೀಸಿನವರೂ ಸೇರಿಕೊಂಡು ಕೆಲವು ಗುಪ್ತ ಪೋಲೀಸ್ ನವರನ್ನೂ ಅಥವಾ ದುಷ್ಟ ಜನರನ್ನೂ ಕಟ್ಟಿಕೊಂಡು ನನ್ನ ಹಿಂದೆ ಬರುತ್ತಿದ್ದರ. ಒಂದನೇ ತಾರೀಖಿನ ದಿನ ಭಗಿನೀ ಸಮಾಜದ ಚೌಕದಲ್ಲಿಯೂ 2 ನೇ ತಾರೀಖಿನ ದಿನ ಸುಬ್ರಾಯನಕೆರೆಯ ಮೇಲ್ಭಾಗದಲ್ಲಿಯೂ ಆ ಜನರು ನನ್ನ ಮೇಲೆ ಬಿದ್ದು ನನಗೆ ಹಿಂಸೆಪಡಿಸಿದರ. ಆ ಸಂಬಂಧವಾಗಿ ಪತ್ರಿಕೆಗಳಿಗೆ ತಂತಿ ಕಳುಹಿಸಲು ಸರ್ಕಾರದವರು ನನ್ನ ತಂತಿಯನ್ನು ಕಳುಹಿಸಕೂಡದೆಂದು ಅಪ್ಪಣೆಯಾಗಿದೆ ತೆಗೆದುಕೊಳ್ಳುವುದಿಲ್ಲವೆಂದರು. ರಾಜಬೀದಿಯಲ್ಲಿ ಸಹಗಳಿನಲ್ಲಿ ಪೋಲೀಸಿನವರೇ ಹೀಗೆ ಮಾಡಿಸುವುದು, ಅದೇ ಪೋಲೀಸಿನವರು ನನ್ನ ನಡತೆಯಿಂದ ಶಾಂತಿಭಂಗವುಂಟಾಗುವುದೆಂದ ತಮಗೆ ರಿಪೋರ್ಟು ಮಾಡುವುದು ಯಾವ ನ್ಯಾಯಮಾರ್ಗವೋ ನನಗೆ ಗೊತ್ತಿಲ್ಲ, ಪರಿಸ್ಥಿತಿಯು ಹೀಗಿರುವಲ್ಲಿ ಫಿರ್ಯಾದು ಹೇಳುವುದಕ್ಕೆ ಸ್ಟೇಷನ್ನಿಗೆ ಹೋದಾಗ ದೇವರಾಜ ಮಾರ್ಕೆಟ್ ಇನ್ಸ್‌ಪೆಕ್ಟರವರು "ಎ ಫೇಕೂಫ್ ನೀನು ದಾರಿಯಲ್ಲಿ ನನಗೆ ಸಿಕ್ಕಿದ್ದರೆ ಕೆನ್ನೆಗೆ ಹೊಡೆದು ಹಲ್ಲು ಮುರಿಯುತ್ತಿದ್ದೆ ಒದ್ದು ಕಾಲು ಮುರಿಯುತ್ತಿದ್ದೆ" ಎಂಬುದಾಗಿ ಗರ್ಜಿಸಿ ನನ್ನ ಮೇಲೆ ಬಿದ್ದು ನನ್ನ ಜೇಬಿಗೆ ಬಲಾತ್ಕಾರವಾಗಿ ಕೈಹಾಕಿ ಕಾಗದ ಪತ್ರಗಳನ್ನು ಕಿತ್ತುಕೊಂಡು ಅದನ್ನೆಲ್ಲಾ ಪರಿಶೋಧಿಸಿ ಅಲ್ಲಿದ್ದ ಒಂದು ಚೂರು ಕಾಗದವನ್ನು ಇಟ್ಟುಕೊಂಡು ಉಳಿದ ಎಲ್ಲಾ ಕಾಗದಗಳನ್ನು ವಾಪಸು ಕೊಟ್ಟರು. ಸ್ವಾಮಿ, ನಾನು ಶಾಂತಿ ಭಂಗ ಮಾಡುವನೋ ಅಥವಾ ಪೋಲೀಸಿನವರು ಶಾಂತಿ ಭಂಗ ಮಾಡುವರೋ ತಾವೇ ಆಲೋಚಿಸಿರಿ

ನಾನು ಮಾಡುವ ಕೆಲಸಗಳಿಂದ ಖಂಡಿತವಾಗಿಯೂ ಶಾಂತಿಭಂಗವುಂಟಾಗುವುದಿಲ್ಲ. ಪೋಲೀಸಿನವರಿಂದಲೇ ಶಾಂತಿಭಂಗವುಂಟಾಗುವುದೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ. ಭರತಖಂಡಕ್ಕೆ ಸಂಪೂರ್ಣ ಸ್ವರಾಜ್ಯಬೇಕೆಂದು ಹಲವು ಭಾರತೀಯರು ಪ್ರಾಣವನ್ನು ಅರ್ಪಿಸಿರುತ್ತಾರೆ. ಅದರಲ್ಲೂ ಯಾರಿಗೂ ಬೇಕಿಲ್ಲದ ಈ ಸೈಮನ್ ಕಮಿಷನ್ನಿಗೂ ಅನೇಕರು ಆಹುತಿಯಾಗಿದ್ದಾರೆ. ದೇಶವೇ ಈ ಕಮೀಷನ್ ಅಗತ್ಯವಿಲ್ಲವೆಂದ ಸಾರುತ್ತಿದೆ. ಹೀಗಿರುವಲ್ಲಿ ತಮ್ಮ ರಾಜ ಮಾರ್ಗದ ಅಪ್ಪಣೆಯು ನನ್ನ ಮನಸ್ಸಿಗೆ ಬಹಳ ನಿಬಂಧನವನ್ನುಂಟುಮಾಡಿದೆ. ನಿನ್ನೆಯಿಂದಲೂ ಸುಮ್ಮನಿದ್ದು ಬಿಡೋಣವೆಂದು ಯೋಚಿಸಿದೆ, ಮನಸ್ಸನ್ನು ನಿರ್ಬಂಧಿಸಿದೆ ಆದರೂ ನನ್ನ ಅಂತರಾತ್ಮನ ಪ್ರೇರಣೆಯು ಜೋರಾಯಿತು. ದಯವಿಟ್ಟು ತಾವು ಅನ್ಯಥಾ ಯೋಚಿಸಬಾರದು ನನ್ನ ಆತ್ಮನ ಆಜ್ಞೆಯಂತೆ ಸೈಮನ್ ಕಮಿಷನ್ನಿನವರು ರಾಜಧಾನಿಗೆ ಬರುವ ದಿವಸ ಒಂದು ಬೋರ್ಡಿನ ಮುಖೇನ ಕಮೀಷನ್ನು ಇಂಡಿಯಾಕ್ಕೆ ಅನಾವಶ್ಯಕವೆಂಬುದನ್ನು ವ್ಯಕ್ತಪಡಿಸುತ್ತೇನೆ, ಈ ಕಾರ್ಯವು ತಮ್ಮ ಮನಸ್ಸಿಗೆ ಅಸಮಾಧಾನವಾಗಬಹುದು. ಆದರೂ ನನ್ನ ಅಂತರಾತ್ಮನ ಪ್ರೇರಣೆಯನ್ನು ನಿಲ್ಲಿಸುವುದು ಸಾಧ್ಯವಿಲ್ಲ. ಸಿಟಿ ಪೋಲೀಸಿನವರು ಹೊಡೆಯಬಹುದು, ಹೊಡಿಸಬಹುದು, ಕೊಲ್ಲಬಹುದು. ದೈವಾಜ್ಞೆ ಇದ್ದಂತೆ ಆಗಲಿ. ಎಲ್ಲರನ್ನೂ ಜಗದೀಶ್ವರನು ಕಾಪಾಡಲಿ.

ಕರ್ಣಾಟಕ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ನಾಟಕ ಮಂದಿರದಲ್ಲಿ ಈ ತಿಂಗಳು 4 ನೇ ತಾ|| ಸೋಮವಾರ ಸಾಯಂಕಾಲ ಮೈಸೂರು ಮಹಾರಾಣಾ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವವು ಶ್ರೀ|| ಕೆ. ಶಂಕರನಾರಾಯಣರಾವ್ ಎಂ. ಎ, ಬಿ. ಎಲ್ ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಕಾಲೇಜ್ ಹೈ ಸ್ಕೂಲುಗಳ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಮತ್ತು ಇತರ ಕರ್ಣಾಟಕ ಭಾಷಾಭಿಮಾನಿಗಳೆಲ್ಲರೂ ಸೇರಿ ಸಭಾಂಗಣವು ಕಿಕ್ಕಿರಿಯುತ್ತಿತ್ತು. ದೇವತಾ ಪ್ರಾರ್ಥನೆ ಕಾರ್ಯದರ್ಶಿಯವರ ವರದಿ ಬಹುಮಾನ ವಿನಿಯೋಗ ಶ್ರೀಮಾನ್ ಕರಿಬಸವಶಾಸ್ತ್ರಿಗಳ ಮತ್ತು ದಿವಂಗತರಾದ ಬಿ. ಕೃಷ್ಣಪ್ಪನವರ ಭಾವಚಿತ್ರಗಳ ಅನಾವರಣವೂ ಮತ್ತು ಶ್ರೀಮಾನ್ ಕರಿಬಸವ ಶಾಸ್ತ್ರಿಗಳಿಗೆ ಬಿನ್ನವತ್ತಳೆಯ ಸಮರ್ಪಣೆಯೂ ನಡೆದುವು. ಮ|| ಗಳಾದ ಟಿ. ಎಸ್. ವೆಂಕಣ್ಣಯ್ಯನವರೂ ಮತ್ತು ಕೆ. ಶಂಕರನಾರಾಯಣರಾಯರವರೂ ಕರ್ಣಾಟಕ ಭಾಷೆಯ ಮೇಲೆ ಅಮೋಘವಾದ ಭಾಷಣಗಳನ್ನು ಮಾಡಿದರು. ಅನಂತರ ಮ|| ಬಿ. ಎಂ. ಶ್ರೀಕಂಠಯ್ಯನವರಿಂದ ವಿರಚಿತವಾದ "ಅಶ್ವತ್ಥಾಮನ್" ಎಂಬ ನಾಟಕವನ್ನು ಹಳೆಗನ್ನಡದಲ್ಲಿ ಕಾಲೇಜ್ ವಿದ್ಯಾರ್ಥಿಗಳು ಬಹಳ ಹೃದಯಂಗಮವಾಗಿ ಅಭಿನಯಿಸಿದ ಮೇಲೆ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಕಾಲೇಜಿನವರು ಕರ್ಣಾಟಕ ಭಾಷೆಯಲ್ಲಿ ಇಷ್ಟರ ಮಟ್ಟಿಗೆ ಪ್ರೋತ್ಸಾಹವನ್ನೀಯುತ್ತಿರುವುದು ತುಂಬಾ ಸಂತೋಷಪ್ರದವಾಗಿದೆ

ಬೆಂಗಳೂರಿನ ಸೈಮನ್ ಸರಕಾರ

4 ನೇ ತಾ|| ಪ್ರಾತಃಕಾಲ ಸೈಮನ್ ಕಮೀಷನ್ನಿನ ಕೆಲವು ಮೆಂಬರುಗಳು ಸ್ಪೆಷಲ್ ಟ್ರೈನಿನಲ್ಲಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿಗೆ [illegible] ಹೋದರೆಂದೂ 10 ಘಂಟೆ [illegible] ಮೈಸೂರಿಗೆ ಪ್ರಯಾಣಮಾಡಿದರೆಂದೂ ಸ್ಟೇಷನ್ ಹತ್ತಿರ [illegible] ರಾ|| ಗಳಾದ ಹೆಚ್. ವಿ. ಸುಬ್ರಹ್ಮಣ್ಯಂ ಜಿ. ಧರ್ಮರಾವ್ ವಿ. ಎಸ್ ಸಂಜೀವರಾವ್ ವಿ. ಎಸ್. ನಾರಾಯಣರಾವ್ ರಂಗರಾವ್ ಇವರೇ ಮೊದಲಾದ ವರ. ಜನರಿಗೆ ನೋಟೀಸ್ ಕೊಟ್ಟಿರುತ್ತೆ ಎಂದೂ ತಿಳಿದು ಬರುತ್ತದೆ.

ಬೆಂಗಳೂರು ಮೊಕದ್ದಮೆಗಳು

ಮೈಸೂರ ಸ್ಟಾರ್ ಪತ್ರಿಕಾಕರ್ತರಮೇಲೆ [illegible] ಆರ್. ಗೋಪಾಲಸ್ವಾಮಯ್ಯರವರು ಮಾಡಿರುವ ಮೊಕದ್ದಮೆ.—ಫಿರ್ಯಾದಿಯ ಕ್ರಾಸ್ ಎಕ್ಸಾಮಿನೇಷನ್ ಸ್ವಲ್ಪ ಮಟ್ಟಿಗೆ ನಡೆದು ಈ ಮಾಹೆ 13 ನೇ ತಾ|| ಗೆ ಅಡ್ಜರ್ನ್ ಮಾಡಲ್ಪಟ್ಟಿದೆ.

2. ಎಂ. ಪಿ. ಸೋಮಶೇಖರರಾವ್:—[illegible] ಸಂಜೀವಯ್ಯ ವಿಚಾರಣಾ ಕಮಿಟಿಯ [illegible] ವಿ.|| ಸರೋಜಿನಾರವರ ಸಾಕ್ಷಿಯು ತೆಗೆದುಕೊಳ್ಳಲ್ಪಟ್ಟು ಮುಂದಿನ ವಿಚಾರಣೆಯು ಈ ಮಾಹೆ 15ಕ್ಕೆ ಅಡ್ಜರ್ನ್ [illegible]

3. ಮ|| ರಾ|| ರಾಮಕೃಷ್ಣಯ್ಯನವರ—ಸ್ಟಾರ್ ಪತ್ರಿಕಾ ಕರ್ತರ ಮೊಕದ್ದಮೆಯು 22 ನೇ ತಾ|| ಗೆ ಇಡಲಾಗಿದೆ.

4. ಬಿ. ಕೆ. ಗರುಡಾಚಾರ್ಯರೂ—ಮಿ|| ಅಬ್ಬಾಸ್ ಖಾನರ ಮೊಕದ್ದಮೆಯು 1929 ನೇ ಜುಲೈ 1 [illegible] ತಾ|| ಇಡಲ್ಪಟ್ಟಿದೆ.

ನೋಟೀಸ್

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ;—ಜಿಲ್ಲೆ ಮತ್ತು ಕೃಷ್ಣರಾಜಪುರ ಹಳ್ಳಿಗಳ ಕೆಲವು ಪ್ರದೇಶಗಳಿಗೆ ನೀರಿನ ತೊಂದರೆ ಇರುವುದರಿಂದ ಅದನ್ನು ನಿವಾರಿಸಲು ಈ ಕೆಳಗೆ ಕಂಡ ಸ್ಥಳಗಳಿಗೆ ಅದರ ಪಕ್ಕದಲ್ಲಿ ಕಾಣಿಸಿರುವ ಕಾಲಗಳಲ್ಲಿ ನೀರನ್ನು [illegible] ವಾಗಿ ಸರಬರಾಯಿ ಮಾಡಲು ನಿರ್ಣಯಿಸಿದೆ. ಈ ಕೆಳಗೆ ಕಾಣಿಸಿರುವ ಕಾಲಗಳಲ್ಲದೆ ಬಾಕಿ ಕಾಲಗಳಲ್ಲಿ ನೀರು ಈಗ ಹಾಲಿ ಹೇಗೆ ಸರಬರಾಯಿ ಆಗುತ್ತಿದೆಯೋ ಅದರಂತೆ ಇರುತ್ತೆ ತಿಳಿಯುವುದು

ಸುಣ್ಣದ ಕೇರಿ—ಚಾಮರಾಜ ರಸ್ತೆ ಒಂದು ಭಾಗ ಹೊಸಕೇರಿ ಮತ್ತು ನೀಲಗಿರುಕಟ್ಟೆ ಈ ಪ್ರದೇಶಗಳಿಗೆ	[illegible]
ಬಕ್ಷಿ ಬಸಪ್ಪಾಜಿಯವರ ತೋಟ. ಓಲ್ಡ್ ಉಡ್ ಯಾರ್ಡ್ ಮತ್ತು ಚಾಮುಂಡಿ ಬಡಾವಣೆ ಈ ಪ್ರದೇಶಗಳಿಗೆ	[illegible] 12 ಘಂಟೆವರೆಗೆ.

T. G. RAMA IYER,
ಪ್ರೆಸಿಡೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1939 ನೇ ಇಸವಿಗಾಗಿ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ವಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ಪಾಕೆಟ್ [illegible] ಸಚಿತ್ರ ಶ್ರೀ [illegible] ಗೆ ಸದರ್ಶನ ಪ್ರದಾನ ಮಾಡುವ [illegible] ಪಿಕ್ಚರ್ ಕ್ಯಾಲೆಂಡರುಗಳು. ಅನೇಕ ಬಣ್ಣಗಳಿಂದ [illegible] ವಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳು ಪೋಸ್ಟ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ-- ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಬ್ಬದಲ್ಲಿರುವುದೇನು?



ರಕ್ತವೃದ್ಧಿಮಾಡಿ ರತಿರೋಗಗಳನ್ನು ನೀಗಿಸಿ
ತನುವಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಮಿ [illegible] ವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಕ್ತ [illegible] ಸುಲಭ ರೀತಿಯಿಂದ ರೋಗ ಪರಿಹರಿಸಿ
ಹರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ
ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡು ಟಿನ್ 1 ಕ್ಕೆ ರೂ. 2—8—0)

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೊ, (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.)

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centres or Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance.

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.



ಭಂಗಾರದ ಕೈಬಳೆಗಳೂ ಜೈನುಗಳೂ ನಗ್ಗಿ [illegible] ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

[illegible] ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

[illegible] ಸಿ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ

" ಭಿಷಗ್ರತ್ನ "

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದ [illegible] ಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ [illegible] ರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗ [illegible] ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, [illegible] ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗ[illegible]ಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನು [illegible] ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿ[illegible] ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) [illegible] ವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ[illegible] ಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ [illegible]

ಲಕ್ಷ್ಮೀವಿಲಾಸರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ [illegible] ತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಪೂ[illegible] ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ವಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀ ಸಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ[illegible]

ಬ್ರಾಂಚ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

ಹೆಡ್ ಆಫೀಸು
ಶ್ರೀ ಸೀತಾರಾಘವ ವೈದ್ಯಶಾಲಾ [illegible]

Printed and published by P. R Rmaaiya.
Sri Rama Press, D Subbaih Road, Mysore.

Regd. No M 2322

॥ ವಂದೇ ಮಾತರಂ ॥

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸುಖ ದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪಾದಕ:
...ಆರ್ ರಾಮಯ್ಯ

ಸಂಪುಟ ೧]

ಗುರುವಾರ ೭ ಮಾರ್ಚಿ ೧೯೩೯

[ಸಂಚಿಕೆ ೧...

ತಾಯಿನಾಡು.

7-3—1929

PRINCES DISILLUSIONED.

Since the time the Butler Committee was announced the princes moved heaven and earth to see that they cut themselves away from the Government of India and keep direct touch with the Crown. They spent lakhs of rupees on lawyers and deputations. The reason why they did not want to have anything to do with the Government of India was that in course of time as democracy and responsible Government progressed in British India, the Government of India would be responsible to the tax-payer of British India. This arrangement the princes did not like. They would rather be subservient to Tom, Dick or Harry but not share the Indian commonwealth with their brother Indians. But now unfortunately, the fond hopes of the princes appear to have been dashed to pieces. The Butler Committee seem to have recommended that the princess should be in touch with Government of India and not with the crown. Thus the princes are disillusioned. We hope hereafter at least the princes would realise that their lot is inter woven with that of the people of India.

ಜೈಲಿಗೆ ಹೋಗುವವರು ಹೆಚ್ಚಬೇಕು.

ಈಗ ಮೈಸೂರಿನಲ್ಲಿ ಎಲ್ಲೆಲ್ಲಿ ನೋಡಿದರೂ ಮು॥ ರಾಮಚಂದ್ರರಾಯರನ್ನು ಕೊಂಡಾಡುತ್ತಿದ್ದಾರೆ. ಜೈಲಿಗೆ ಹೋಗುವವರು ಹೆಚ್ಚಾದ ಹೊರತು ಪ್ರಜೆಗಳಿಗೆ ಸುಖಶಾಂತಿಗಳಿಲ್ಲ ಎಂದು ಹೇಳುವುದಕ್ಕೆ ಉಪಕ್ರಮವಾ[illegible] ಕಳ್ಳ ದರೋಡೆಗಳಿಗಾಗಿ ಜೇಲಿಗೆ ಹೋಗುವುದು ಅವಮಾನ. ಅದೊಂದು ಶಿಕ್ಷೆ ಆದರೆ ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸುವುದಕ್ಕಾಗಿ ಜೇಲಿಗೆ ಹೋಗುವುದು ಮರ್ಯಾದೆ ಈ ರೀತಿಯಾದ ಜೈಲು [illegible] ಅರ್ಥವಾದುದು... ತಿಲಕ್ ಗಾಂಧಿ ಲಜಪತ ರಾಯ್ ಮೊದಲಾದವರು ಈ ರೀತಿ ಸಾಮದ ಜೇಲನ್ನು [illegible]. ಬ್ರಿಟಿಷ್ ಇಂಡಿಯಾದಲ್ಲಿ ಈ ರೀತಿಯಾ[illegible] ಲಕ್ಷಗಟ್ಟಲೆ ಇದ್ದಾರೆ. ನಮ್ಮ ಮೈಸೂರಿನಲ್ಲಿಯೂ ಪ್ರಜೆಗಳ ಹಕ್ಕು ಬಾಧ್ಯತೆಗಳಿಗಾಗಿ ಯಾರು ಯಾರಿಗೆ [illegible] ಜೈಲಿಗೆ ಹೋಗಬೇಕು. ಪ್ರಜೆಗಳು [illegible] ಸಹಾಯಬೇಕು. ಮೈಸೂರಿನಲ್ಲಿಯೂ ಒಂದು ಸಂಘವು ಏರ್ಪಟ್ಟು ಈ ಕೆಲಸವನ್ನು ಕೈಕೊಳ್ಳಬೇಕೆಂದು ನಮ್ಮ ಸಲಹೆ.

ಮೈಸೂರಿನಲ್ಲಿಯೂ ಅದೇ ಹಾಡು.

ಬಹಳ ಕಾಲದಿಂದಲೂ ಮೈಸೂರು ಇತರ ದೇಶೀಯ ಸಂಸ್ಥಾನಗಳ ಜೊತೆಗೆ ಸೇರಿರಲಿಲ್ಲ. ಇದು ಎಲ್ಲಾ ಸಂಸ್ಥಾನಗಳಿಗೂ ಉತ್ತಮವೆಂದೂ ಪ್ರಜೆಗಳಿಗೆ ಸರಾಸರಿ ಬಹಳ ಅನ್ಯೋನ್ಯತೆಯು ಇತ್ತೆಂದೂ ಭಾವಿಸಲ್ಪಟ್ಟಿತ್ತು. ಜುಲೈ 30 ನೇ ತಾರೀಖಿನಿಂದ ಈಚೆಗೆ ನಡೆಯುತ್ತಿರುವ ನಡವಳಿಕೆಗಳು, ನಮಗೂ ಇತರ ಸಂಸ್ಥಾನಗಳಿಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದನ್ನು ಧೃಢಪಡಿಸುತ್ತವೆ.

ಇತರ ದೇಶೀಯ ಸಂಸ್ಥಾನಗಳಲ್ಲಿ ಯಾವರೀತಿಯಾಗಿ ಮಧ್ಯಯುಗದ ರಾಜ್ಯಪದ್ಧತಿಯೂ ಪ್ರಜಾಸ್ವಾತಂತ್ರ್ಯ ದಬ್ಬಾಳಿಕೆಯೂ ಜವಾಬ್ದಾರಿಯಿಲ್ಲದಿರುವಿಕೆಯೂ ಹಾಗೆಯೇ ಇಲ್ಲಿಯೂ ಇರುವವು. ಇದು ಅತ್ಯಂತ ವಿಷಾದಕರವಾದ ಸಂಗತಿ.

ಒಂದು ದಬ್ಬಾಳಿಕೆಯಾದ ಮೇಲೆ ಇನ್ನೊಂದು ದಬ್ಬಾಳಿಕೆಯು ತಲೆಯೆತ್ತುತ್ತಿರುವುದು. ಬೆಂಗಳೂರು ಗಲಭೆಗಳ ಪ್ರಕರಣವು ಮುಗಿಯಿತೆಂದರೆ ಮು॥ ಎಂ ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ನಿಲ್ಲಿಸಿದರು. ಅನಂತರ ಇವರ 4 ಪತ್ರಿಕೆಗಳಿಗೆ ಪರವಾನಗಿಯನ್ನು ವಾಪಸು ತೆಗೆದುಕೊಂಡರು. ಈಗ ಸೈಮನ್ ಕಮಿಷನ ಆಗಮನದ ಸಂದರ್ಭದಲ್ಲಿ ನಿಷೇಧಾಜ್ಞೆಯ ಉಲ್ಲಂಘನ ದಸ್ತಗಿರಿಗಳಿಗೆ ಆರಂಭವಾಗಿದೆ. ಈ ದಬ್ಬಾಳಿಕೆಯು ಹೆಚ್ಚುವುದೇ ಹೊರತು ಕಡಿಮೆಯಾಗುವ ಚಿಹ್ನೆಯೇ ಇಲ್ಲ. ಇದು ವ್ಯಕ್ತಿಗಳ ದೋಷಕ್ಕಿಂತಲೂ ಹೆಚ್ಚಾಗಿ ಈಗಿನ ರಾಜ್ಯಪದ್ಧತಿಯ ದೋಷ. ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೂ ನಮಗೂ ಯಾವ ವ್ಯತ್ಯಾಸವೂ ಇಲ್ಲ. ಅಲ್ಲೂ ಪ್ರಜೆಗಳು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದಾರೆ. ಇಲ್ಲೂ ನಾವು ನಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬೇಕು. ಸರಕಾರವು ಪ್ರಜೆಗಳಿಗೆ ಜವಾಬ್ದಾರಿಯಾಗಿರುವಂತೆ ಜವಾಬ್ದಾರೀ ಸರಕಾರವನ್ನು ಏರ್ಪಡಿಸಬೇಕು, ನಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸುವುದು. ಸಂಘದಲ್ಲಿ ಯಾವನಾದರೂ ಪ್ರಜೆಯು ತನ್ನ ಹಕ್ಕು ಬಾಧ್ಯತೆಗಾಗಿ ತಲೆಯೆತ್ತಿದರೆ ಸರಕಾರದ ಅಧಿಕಾರವು ಅವನನ್ನು ಅದುಮುವುದು. ಬ್ರಿಟಿಷ್ ಇಂಡಿಯಾದಲ್ಲಿ ಎಷ್ಟು ದಬ್ಬಾಳಿಕೆಯು ನಡೆಯುವುದೋ ಇಲ್ಲೂ ಅಷ್ಟೇ ನಡೆಯುವುದು. ಪ್ರಜೆಗಳು ಅವುಗಳನ್ನೆಲ್ಲಾ ಸಹಿಸಿ ಮುಂದುವರಿದ ಹೊರತೂ ಸ್ವಾತಂತ್ರ್ಯದೇವಿಯು ಒಲಿಯುವುದಿಲ್ಲ.

ಮು॥ ಹೆಚ್. ವಿ. ಸುಬ್ರಹ್ಮಣ್ಯರವರ ಬಿಡುಗಡೆ.

4 ನೇ ತಾ॥ ಬೆಳಿಗ್ಗೆ 5 ಗಂಟೆಗೆ ಪೋಲೀಸಿನವರು ಮು॥ ಹೆಚ್. ವಿ. ಸುಬ್ರಹ್ಮಣ್ಯರವರ ಮನೆಗೆ ಹೋಗಿ ಅವರು ಡಿ॥ ಮ್ಯಾ॥ ರ ಆಜ್ಞೆಯನ್ನು ಉಲ್ಲಂಘನೆ ಮಾಡುವುದಕ್ಕೆ ಸಿದ್ಧರಾಗಿರುವುದನ್ನು ಕಂಡು ಅವರನ್ನು ದಸ್ತಗಿರಿ ಮಾಡಿ ಮೋಟಾರಿನಲ್ಲಿ ಕೂರಿಸಿಕೊಂಡು ದೊಡ್ಡಬಳ್ಳಾಪುರದ ರೋಡಿನಲ್ಲಿ ರಾಜನಕುಂಟೆಯ ವರೆಗೂ ಹೋಗಿದ್ದರು. ಪುನಃ ಹೈ ಗ್ರೌಂಡ್ ಪೋಲೀಸ್ ಸ್ಟೇಷನ್ನಿನಲ್ಲಿ ಸ್ವಲ್ಪ ಹೊತ್ತಿಟ್ಟಿದ್ದು ಮಧ್ಯಾಹ್ನ 11—30 ಗಂಟೆಯ ಹೊತ್ತಿಗೆ ಮನೆಗೆ ಮೋಟಾರಿನಲ್ಲಿ ಕರೆದುಕೊಂಡು ಬಂದ ಬಿಟ್ಟರು.

ಮಹಾತ್ಮಾ ಗಾಂಧಿಯವರ ದಸ್ತಗಿರಿ.

ಕಲ್ಕತ್ತಾದಲ್ಲಿ ಪೋಲೀಸ್ ಕಮಿಷನರು ಸಾರ್ವಜನಿಕ ಬೀದಿಗಳಲ್ಲಿ ಹುಲ್ಲು ಮೊದಲಾದುವುಗಳನ್ನು ಸುಡಕೂಡದೆಂದು ಕಾಂಗ್ರೆಸ್ ಸೆಕ್ರೆಟರಿಯವರಿಗೆ ಕಾಗದ ಬರೆದರು. ಕಾಂಗ್ರೆಸ್ಸಿನವರು ಶ್ರದ್ಧಾನಂದ ಪಾರ್ಕಿನಲ್ಲಿ ಪರದೇಶೀ ವಸ್ತ್ರಗಳನ್ನು ದಹನಮಾಡಬೇಕೆಂದು ನಿಶ್ಚಯಿಸಿದ್ದರು, ಪೋಲೀಸ್ ಕಮೀಷನರವರ ಹುಕುಮನ್ನು ಉಲ್ಲಂಘಿಸಿ ಮಹಾತ್ಮ ಗಾಂಧಿಯವರೂ ಕಿರಣ್ ಶಂಕರರಾಯರೂ ಶ್ರದ್ಧಾನಂದ ಪಾರ್ಕಿನಲ್ಲಿ ಪರದೇಶೀ ವಸ್ತ್ರಗಳಿಗೆ ಬೆಂಕಿ ಹಚ್ಚಿದರು. ಕೂಡಲೇ ಪೋಲೀಸಿನವರು ನುಗ್ಗಿ ಬೆಂಕಿಯನ್ನು ನೀರಿನಿಂದ ಆರಿಸಿ ಜನಗಳನ್ನು ಚದರಿಸಿದರು. ಪ್ರಜೆಗಳಲ್ಲಿ ಅನೇಕರಿಗೂ ಪೋಲೀಸಿನವರಲ್ಲಿ ಅನೇಕರಿಗೂ ಗಾಯವಾಯಿತು.

ಪೋಲೀಸ್ ಕಮೀಷನರವರ ಆಜ್ಞೆಯನ್ನು ಉಲ್ಲಂಘನೆ ಮಾಡುವಂತೆ ಪ್ರೇರೇಪಿಸಲ್ಪಟ್ಟದ್ದಕ್ಕಾಗಿ ಮಹಾತ್ಮಾ ಗಾಂಧಿಯವರು ದಸ್ತಗಿರಿ ಮಾಡಲ್ಪಟ್ಟರು. ಕೋರ್ಟಿನಲ್ಲಿ ಮುಕದ್ದಮೆಯು ಹಾಕಲ್ಪಟ್ಟಿತ್ತ, ಈ ತಿಂಗಳ 26 ನೇ ತಾರೀಖಿಗೆ ಮುಕದ್ದಮೆಯು ನಡೆಯುವುದು. ಗಾಂಧಿಜೀಯವರು ಸ್ವಂತ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಮಹಾತ್ಮರು ರಂಗೂನಿಗೆ ಪ್ರಯಾಣಮಾಡಿದರು. ಮಾರ್ಚಿ 26 ರಕ್ಕೆ ಕಲ್ಕತ್ತಾಕ್ಕೆ ವಾಪಸು ಬರುವರು; ಶ್ರದ್ಧಾನಂದ ಪಾರ್ಕು ಸಾರ್ವಜನಿಕ ಬೀದಿಯಲ್ಲವೆಂದು ವಾದಿಸಲ್ಪಟ್ಟಿರುವದು.

ಶ್ರೀ॥ ತಗಡೂರು ರಾಮಚಂದ್ರರಾಯರು.

ನಿನ್ನೇ ದಿನ ಮು॥ ರಾಯರನ್ನು ನೋಡಿಕೊಂಡು ಬರಲು ಮು॥ ಆಗರಂ ರಂಗಯ್ಯನವರು ಮೈಸೂರು ಜೈಲಿಗೆ ಹೋಗಿದ್ದರು. ರಾಯರು ಬಹಳ ಹಸನ್ಮುಖಿಗಳಾಗಿದ್ದರು. ಯಾವ ವಿಧವಾದ ಆತಂಕವೂ ಕಂಡುಬರಲಿಲ್ಲ. ಅಲ್ಲಿ ಅವರಿಗೆ ಬೇಳೆ ಕಾಳುಗಳನ್ನು ಆರಿಸುವ ಕೆಲಸವು ಕೊಡಲ್ಪಟ್ಟಿದೆ. ಆಹಾರವು ಮಾತ್ರ ತೃಪ್ತಿಕರವಾಗಿಲ್ಲ. ಕಾನೂನಿನಲ್ಲಿ ವಿಧಾಯಕವಾಗಿರುವ ಪ್ರಕಾರ ರಾಗಿಹಿಟ್ಟು ಮತ್ತು ಹುಳಿಸೊಪ್ಪು ಮಾತ್ರ ಕೊಡಲ್ಪಡುತ್ತಿದೆ, ಸಾಮಾನ್ಯರಾದ ಖೈದಿಗಳಿಗೆ ಕೊಡುವ ಈ ಆಹಾರವು ರಾಯರಿಗೆ ಸರಿಬೀಳಲಾರದು; ಬ್ರಿಟಿಷ್ ಇಂಡಿಯಾದಲ್ಲಿ ಕೂಡ ರಾಜಕೀಯ ಖೈದಿಗಳಿಗೆ ಅವರ ಸಹಜವಾದ ಆಹಾರವು ಕೊಡಲ್ಪಡುತ್ತದೆ. ರಾಯರು ಖೂನಿ ಮಾಡಿಯಾಗಲಿ ದರೋಡೆ ಮಾಡಿಯಾಗಲಿ ಜೈಲಿಗೆ ಹೋಗಿಲ್ಲ. ದೇಶಸ್ವಾತಂತ್ರ್ಯಕ್ಕಾಗಿ ಹೋಗಿರುವರು. ಆದ್ದರಿಂದ ನಮ್ಮ ಸರ್ಕಾರದವರು ಈ ವಿಷಯಕ್ಕೆ ಕೂಡಲೇ ಗಮನಕೊಟ್ಟು ಅವರಿಗೆ ಉಚಿತವಾದ ಏರ್ಪಾಡುಗಳು ಮಾಡಲ್ಪಡುವಂತೆ ಮಾಡುವರೆಂದು ಕೋರುತ್ತೇವೆ. ಇದರಿಂದ ನಮ್ಮ ಸರ್ಕಾರಕ್ಕೆ ಬಡತನ ಬರುವುದಿಲ್ಲ. ಮು॥ ರಾಮಚಂದ್ರರಾಯರು ಶ್ರೀಮನ್ಮಹಾರಾಜರ ಅತಿಥಿಗಳಾಗಿ ಸೆರೆಮನೆಯನ್ನು ಪ್ರವೇಶಮಾಡಿರುವರು. ಅದಕ್ಕೆ ಅನುಗುಣವಾದ ಮರ್ಯಾದೆಯು ಇವರಿಗೆ ಸಲ್ಲುವುದು ಆವಶ್ಯಕ.

ಸಿವಿಕ್ ಮತ್ತು ಸೋಷಲ್ ರಿವ್ಯೂ

ತಾಕಯ್ಯನವರು ಕೆಲವು ಅನಿರೀಕ್ಷಿತವಾದ ಕಾರಣಗಳಿಂದ ಈ 6 ನೇ ತಾರೀಖಿನಿಂದ ಸಿವಿಕ್ ಮತ್ತು ಸೋಷಲ್ ರಿವ್ಯೂ ಪತ್ರಿಕೆಯನ್ನು ನಿಲ್ಲಿಸಿರುವರು. ಇನ್ನು ಕೆಲವು ಕಾಲ ಅವರು ಯಾವ ಪತ್ರಿಕೆಗಳನ್ನೂ ಹೊರಡಿಸುವುದಿಲ್ಲವೆಂದು ಕಾಣುತ್ತದೆ.

TAI NADU

7—3—1929

ರಾಜಧಾನಿಯ ಹಂಗಾಮದ ಪರಿಣಾಮ

(ನಮ್ಮ ಪ್ರತಿನಿಧಿಗಳಿಂದ)

ಸೈಮನ್ ಕಮೀಷನ್ನಿನ ಆಗಮನದ ಸಂದರ್ಭದಲ್ಲಿ ಬಹಿಷ್ಕಾರ ಪ್ರದರ್ಶನವನ್ನು ಮಾಡಬೇಕೆಂದು ಪ್ರಯತ್ನ ನಡೆಯುತ್ತಿತ್ತು. ಇದನ್ನು ತಪ್ಪಿಸುವುದಕ್ಕಾಗಿ ಡಿ|| ಮ್ಯಾ|| ರವರು ಮ|| ತಗಡೂರು ರಾಮಚಂದ್ರರಾಯರು ಪಿ. ಆರ್. ರಾಮಯ್ಯನವರು ಆಗರಂ ರಂಗಯ್ಯನವರ ಮೇಲೆ ಮೈಸೂರ್ ಪೋಲೀಸ್ ರೆಗ್ಯುಲೇಷನ್ನಿನ 39ನೇ ಕಲಮನನುಸರಿಸಿ ಈ ತಿಂಗಳು 1ನೇ ತಾ|| ನಿಂದ 15ನೇ ತಾರೀಖಿನ ವರಿಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸೈಮನ್ ಸಂಬಂಧವಾಗಿ ವಾಗ್ಬಂಧನ, ಸಭಾಬಂಧನ ಲೇಖನ ಬಂಧನ ಪ್ರದರ್ಶನ ಬಂಧನದ ನೋಟೀಸನ್ನು ಕೊಟ್ಟರು. ಇದೇ ಮೂರನೆಯ ತಾರೀಖಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟರ ಮೈಸೂರು ಸಿಟಿಯಲ್ಲಿ 10ನೇ ತಾ|| ನವರಿಗೆ ಯಾರೂ ಸಭೆ ಮೆರವಣಿಗೆ ಭಾಷಣ ಮೊದಲಾದುವುಗಳನ್ನು ನಡೆಯಿಸಕೂಡದೆಂದೂ ಇಸ್ತಿಹಾರು ಕೊಟ್ಟಿದ್ದರು. ಬೀದಿ ಬೀದಿಯಲ್ಲಿಯೂ ಗಲ್ಲಿಗಲ್ಲಿಗಳಲ್ಲಿಯೂ ಪೋಲೀಸಿನವರೂ ಸಿ. ಐ. ಡಿ. ಗಳೂ ಮಯವಾಗಿದ್ದರು. ಅದೂ ಅಲ್ಲದೆ ಟೆಲಿಗ್ರಾಫ್ ಆಫೀಸಿನಲ್ಲಿ ಬಹಿಷ್ಕಾರದ ಸಂಬಂಧವಾಗಿಯಾಗಲೀ ಮೈಸೂರು ಸರಕಾರಕ್ಕೆ ವಿರೋಧವಾದ ಅಭಿಪ್ರಾಯದ ಯಾವ ತಂತಿಯಾಗಲೀ ಕಳುಹಿಸಲ್ಪಡಕೂಡದೆಂದು ಕಟ್ಟಾಗಿರುವುದು. ಸೈಮನ್ ಕಮಿಷನರನು ಎಷ್ಟು ಹೊತ್ತಿಗೆ ಬರುವರು ಯಾವ ದಾರಿಯಲ್ಲಿ ಬರುವರು ಎಂಬುದು ಪ್ರಜೆಗಳಿಗೆ ಗೊತ್ತಿಲ್ಲ.

ನಾಲ್ಕನೇ ತಾರೀಖಿನ ದಿನ ಮ|| ತಗಡೂರು ರಾಮಚಂದ್ರರಾಯರು ಬಹಿಷ್ಕಾರದ ಪ್ರದರ್ಶನದ ಬೋರ್ಡನ್ನು ಬಹಿರಂಗವಾಗಿ ತೆಗೆದಿಟ್ಟುಕೊಂಡು 10 ಘಂಟೆಯ ಹೊತ್ತಿನಲ್ಲಿ ಕಾಂಗ್ರೆಸ್ ಆಫೀಸಿನಿಂದ ಹೊರಟರು. ಸ್ವಲ್ಪದೂರ ಹೋಗುವುದರೊಳಗೆ ಒಂದು ಪೋಲೀಸಿನವರ ದಳವು ಬಂದು ಆ ಬೋರ್ಡನ್ನು ಕಿತ್ತುಕೊಂಡಿತು. ಮ|| ರಾಯರನ್ನು ದಸ್ತಗಿರಿ ಮಾಡಿತು. ಕೂಡಲೇ ಪಕ್ಕದಲ್ಲಿದ್ದ ಮಹಾಜನಗಳು ಮ| ರಾಯರಿಗೆ ವಿಜಯಮಾಲೆಯನ್ನು ಹಾಕಿ ಜಯಜಯ ಕಾರಮಾಡಿದರು. ಮ|| ರಾಯರು ಆನಂದದಿಂದ ಪೋಲೀಸಿನವರಿಗೆ ಅಧೀನರಾದರು. ಚಾಮರಾಜ ಪೋಲೀಸ್ ಸ್ಟೇಷನ್ನಿಗೆ ಒಯ್ಯಲ್ಪಟ್ಟರು. ಮಧ್ಯಾಹ್ನ 12 ಗಂಟೆಗೆ ಸಿಟಿ ಮ್ಯಾ| ಕೋರ್ಟಿನಲ್ಲಿ ಅವರ ಮೇಲೆ ಛಾರ್ಜ್‌ಷೀಟು ಹಾಕಲ್ಪಟ್ಟಿತು. ರಾಮಚಂದ್ರರಾಯರು ತಾವು ಡಿ. ಮ್ಯಾ. ರ ಆಜ್ಞೆಯನ್ನು ಉಲ್ಲಂಘಿಸಿದುದ ಉಂಟೆಂದು ಹೇಳಿದರು. ಈ ತಿಂಗಳು 11ಕ್ಕೆ ಕೇಸು ಮುಂದ ಹಾಕಲ್ಪಟ್ಟಿರುವುದು ಜಾಮೀನು ಕೊಡಲಿಲ್ಲ. ಆದುದರಿಂದ ಮೈಸೂರ ಜೈಲಿನಲ್ಲಿ ಇಡಲ್ಪಟ್ಟಿರುವರು.

ವರ್ತಮಾನ ಸಂಗ್ರಹ.

ರಜಾ

ಬೆಂಗಳೂರಿಂದ ತುಮಕೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಡೆಪ್ಯುಟೀ ಕಮೀಷನರಾದ ಮ|| ಜೆ. ಬಿ. ಹೆಬ್ಲೀಕಾರರವರಿಗೆ ಮೂರ ತಿಂಗಳು ರಜಾ ಮಂಜೂರಾಗಿರುವುದರಿಂದ ಮ|| ಬಾಳಾಜಿ ಅರಸಿನವರೇ ಹಂಗಾಮಿಯಾಗಿ ತುಮಕೂರ ಡಿ|| ಕ| ರಾಗಿರುವರೆಂದೂ ಕೃಷ್ಣವೇಣ ಅವರೇ ಅಲ್ಲಿಗೆ ಖಾಯಂಮಾಡಬಹುದೆಂದೂ ಈ, ಮೇ, ಪತ್ರಿಕೆಯು ತಿಳಿಸುತ್ತದೆ.

ಸರ್ಕಾರಿ ಸುದ್ದಿ

ಜನರಲ್ ಅಂಡ್ ರೆವಿನ್ಯೂ ಸೆಕ್ರೆಟರಿಯೇಟಿನ 1ನೇ ದರ್ಜೆಯ ಸೂಪರಿಂಟೆಂಡೆಂಟ್‌ರಾದ ಮ| ಎ. ಸುಬ್ರಹ್ಮಣ್ಯ ಶಾಸ್ತ್ರಿಗಳವರಿಗೆ ಫೆಬ್ರವರಿ19ರಿಂದಾಗಾಯಿತು ಪ್ರಿವಿಲೇಜ್ ರಜಾ ಕೊಟ್ಟಿರುವುದರಿಂದ 2ನೇ ದರ್ಜೆಯ ಮ|| ಎಂ. ಎಸ್. ಕೃಷ್ಣಮಾಚಾರ್ಯರವರು 1ನೇದರ್ಜೆಯಸೂ|| ರಾಗಿಯೂ, ಸೀನಿಯರ್ ಕ್ಲಾರ್ಕರಾದ ಮ||ಎಸ್.ನರಸಿಂಹಮೂರ್ತಿಯವರು ಮ|| ಕೃಷ್ಣಮಾಚಾರ್ಯರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮ|| ಹೆಚ್. ವಿ. ಸುಬ್ರಹ್ಮಣ್ಯಂ ರವರ ದಸ್ತಗಿರಿ

ಬೆಂಗಳೂರು ಸಿಟಿ ಪ್ಲಾಟ್ ಫಾರಮ್ಮಿನಲ್ಲಿ ಸೈಮನ್ ಕಮಿಷನ್ನಿನವರು ಇಳಿಯುತ್ತಲೇ ದಿವಾನರವರು ಅವರೊಡನೆ ಸ್ವಲ್ಪ ಭಾಷಣವನ್ನು ನಡೆಸಿ ಮ|| ಗಳಾದ ಅಬ್ಬಾಸ್ ಖಾನರನ್ನೂ ನೀಲಗಿರಿ ಸಂಜೀವಯ್ಯನವರನ್ನೂ ಪರಿಚಯಮಾಡಿಕೊಟ್ಟರು. ಈ ಇಬ್ಬರು ದೊಡ್ಡ ಮನುಷ್ಯರೂ ಬೇಡದ ಅತಿಥಿಗಳಿಗೆ ಹಾರ ತುರಾಯಿಗಳನ್ನು ಅರ್ಪಿಸಿದರು. ಬೆಂಗಳೂರು ಸಿಟಿ ಸ್ಟೇಷನ್ನಿಗೆ ಒಂದು ಫರ್ಲಾಂಗ್ ದೂರದಲ್ಲಿಯೇ ಜನಸಂದಣಿಯು ತಡೆಯಲ್ಪಟ್ಟಿತು. ಪ್ರೆಸ್ ಪ್ರತಿನಿಧಿಗಳಿಗೆ ಕೂಡ ಪ್ಲಾಟ್‌ಫಾರಮ್ಮಿಗೆ ಪ್ರವೇಶವಿರಲಿಲ್ಲ.

ಮ|| ಗಳಾದ ಹೆಚ್. ವಿ. ಸುಬ್ರಹ್ಮಣ್ಯಂ, ಜಿ. ಭೀಮರಾವ್; ರಾಮಲಾಲ್ ತಿವಾರಿ, ವೀರಕೇಸರಿ ಸೀತಾರಾಮಶಾಸ್ತ್ರಿ, ವಿದ್ಯಾಭೂಷಣ ವಿ. ಎಸ್. ಸಂಜೀವರಾವ್, ವಿ. ಎಸ್. ನಾರಾಯಣರಾವ್ ಇವರುಗಳ ಮೇಲೆ ಡಿ|| ಮ್ಯಾ|| ರ ಆರ್ಡರುಗಳಿವೆ.

ಮ|| ಹೆಚ್. ವಿ. ಸುಬ್ರಹ್ಮಣ್ಯಂರವರು ಆಜ್ಞೋಲ್ಲಂಘನೆಯನ್ನು ಮಾಡಿದ್ದರಿಂದ ದಸ್ತಗಿರಿ ಮಾಡಲ್ಪಟ್ಟು ಎಲ್ಲಿಗೋ ಒಯ್ಯಲ್ಪಟ್ಟರು ಬೆಂಗಳೂರಿನಲ್ಲೆಲ್ಲಾ ಕೋಲಾಹಲವಾಗಿದೆ.

ಮ|| ತಗಡೂರು ರಾಮಚಂದ್ರರಾಯರ ಸುದ್ದಿ.

ಮ|| ರಾಯರು ಜೈಲಿನಲ್ಲಿ ಪ್ರಸನ್ನ ಚಿತ್ತರಾಗಿರುತ್ತಾರೆ. ಸರಿಯಾದ ಆಹಾರ ಕೊಡಲ್ಪಡುತ್ತಿಲ್ಲವೆಂದೂ ಹಿಟ್ಟು ಕೊಡುತ್ತಿರುವರೆಂದೂ ತಿಳಿದು ಬಂದಿದೆ.

ವೀರಕೇಸರೀ

ಸರಕಾರದವರು ವೀರಕೇಸರಿಯನ್ನು ಹೊರಡಿಸಕೂಡದೆಂದು ಆರ್ಡರು ಮಾಡಿರುವುದಾಗಿ ಕಂಡು ಬಂದಿದೆ.

ಪ್ರತಿಯೊಂದು ಸ್ಕೂಲಿನಲ್ಲಿಯೂ ಸ್ಟ್ರೈಕು ಮೊದಲಾದವುಗಳು ಆಗದಂತೆ ಪೋಲೀಸಿನವರೂ ರಿಜರ್ವ್ ಪೋಲೀಸಿನವರೂ ಕಾದುಕೊಂಡು ನಿಂತಿದ್ದರು.

ಮಿ|| ಮಿರ್ಜಾರವರಿಗೆ ಬಹುಮಾನ

ಮಿ|| ಮಿರ್ಜಾರವರ ದಿವಾನಗಿರಿಯ ಅವಧಿಯು ಮುಂದಿನ ಏಪ್ರೈಲಿನ ಅಂತ್ಯಕ್ಕೆ ಅಂತ್ಯವಾಗುವುದೆಂದು ದದಂತಿ. ಅನೇಕರು ಅವರಿಗೆ ಬಹುಮಾನ್ಯ... ದೊರಕಬೇಕೆಂದು ಕೋರುತ್ತಿದ್ದಾರೆ. ಈ ವಿಷಯದಲ್ಲಿ ನಾವು ವಿಶೇಷವಾಗಿ ಹೇಳಬೇಕಾಗಿಲ್ಲ. ಈ ಮೂರು ವರುಷಗಳಲ್ಲಿ ನಡೆದ ಕಾರ್ಯಗಳನ್ನು "[illegible]" ನೋಡಿದರೆ ಅವರು ಬಹುಮಾನಕ್ಕೆ ಅರ್ಹ [illegible] ಬುದು ವ್ಯಕ್ತವಾಗುವುದು

ನಮ್ಮ ಅಭಿಪ್ರಾಯದಲ್ಲಿ ದಿವಾನರು ಯಾರೇ ಆಗಲಿ ನಮ್ಮ ರಾಜ್ಯಪದ್ಧತಿಯು [illegible] ಪ್ರಜೆಗಳಿಗೆ ಸುಖವಿಲ್ಲ. ಜವಾಬ್ದಾರೀ ಸರಕಾರವನ್ನು [illegible] ಮಂತ್ರಿಗಳನ್ನು ಪ್ರಜೆಗಳೇ [illegible] ಕ್ಕೂ ಕಿತ್ತುಹಾಕುವುದಕ್ಕೂ ಅಧಿಕಾರವೇ[illegible]. ಈಗ ಮೈಸೂರಿನಲ್ಲಿ ಜವಾಬ್ದಾರೀ ಸರಕಾರದ ಪದ್ಧತಿಯು ಇದ್ದಿದ್ದರೆ ಮಿ|| ಮಿರ್ಜಾರವರೇ ಮಂತ್ರಿತ್ವವನ್ನು ಬೇರೇ ರೀತಿಯಾಗಿ ನಡೆಸುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ

ಆದುದರಿಂದ ಪ್ರಜೆಗಳು ವ್ಯಕ್ತಿಗಳ ಕಡೆಗೆ [illegible] ನ್ನು ಕೊಡುವ ಬದಲು ರಾಜ್ಯಪದ್ಧತಿಯನ್ನು ತಿದ್ದುವದಕ್ಕೆ ಪ್ರಯತ್ನಿಸಬೇಕು.

ತಾತಯ್ಯನವರಿಗೆ ಗಡೀಪಾರೇ

ತಾತಯ್ಯನವರಿಗೆ ಗಡೀಪಾರಾಗಿದ್ದರೆಂದು [illegible] ಲ್ಲೆಲ್ಲಾ ವದಂತಿ ಸಂಸ್ಥಾನದ [illegible] ಇದೇ ಕೂಗು. ನಾವು ಅವರನ್ನು [illegible] ನನಗೆ ಯಾವ ಆರ್ಡರೂ ಬಂದಿಲ್ಲವೆ [illegible]. ಈ ಸ[illegible] ಚಾರವು ಮಾತ್ರ ಬಂದಿದೆ [illegible] ಷನ್ನಿನವರು ಮೈಸೂರಿಂದ ಹೊರಗೆ [illegible] ಈ ಆರ್ಡರು ಅನ್ವಯಿಸಲ್ [illegible] ವಾದ ವದಂತಿ. ನೋಡಬೇಕು!! ಒಂದ [illegible] ಯಾದ ಆರ್ಡರು ಬಂದರೂ [illegible] ಒಳ್ಳೇದಕ್ಕೇ ಆಗುತ್ತದೆ !!

ಶ್ರೀ ಸೀತಾರಾಮನ ವೈದ್ಯಶಾಲೆಯ [illegible] ಆರ್ಯಭಟ್ಟ ಸಿದ್ಧಾಂತ [illegible] ವಾದ ಶ್ರೀ [illegible] ಸಂವತ್ಸರದ

ಪಂಚಾಂಗಗಳು

[illegible]

ಪಂಚಾಂಗ 1ರ ಬೆಲೆ [illegible]

ಒಟ್ಟಿಗೆ ಕೊಂಡರೆ 1 [illegible]

ಜಾತಕ [illegible]

ದೃಗ್ಗಣಿತ ಪಂಚಾಂಗ [illegible]

ಆಗ್ನೇ ಪಟ್ಟ [illegible]

ತ್ತವೆ. ಪೋಸ್ಟೇಜು ಬೇರೆ. [illegible] —

(1) ಶ್ರೀ ಸೀತಾರಾಮನ ವೈದ್ಯಶಾಲೆ, [illegible]

(2) ಶ್ರೀ ಸೀತಾರಾಮನ ವೈದ್ಯಶಾಲೆ [illegible]

[illegible]

Regd. No M 2322

॥ ವಂದೇ ಮಾತರಂ ॥

ಬಿಡಿ ಪತ್ರಿಕೆ ೩ ಕಾಸು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫—೦—೦
{ ಪರಸ್ಥಳಕ್ಕೆ [illegible]

ಸಂಪುಟ ೧] ಶುಕ್ರವಾರ ೮ ಮಾರ್ಚಿ ೧೯೨೯ [ಸಂಚಿಕೆ ೧೬೮

ತಾಯಿನಾಡು.

8—3—1929

ವಿವಿಧ ವಿಷಯಗಳು

—

ಅಗ್ನಿ ಜ್ವಾಲೆ.

ಹವಾಯಿ ದ್ವೀಪದಲ್ಲಿ ೨ ಮೈಲಿಯುದ್ದ ೩ ಮೈಲಿ ಅಗಲವಿರುವ ಬಾಯಿಂದ 300 ಅಡಿ ಎತ್ತರಕ್ಕೆ ಅಗ್ನಿ ಜ್ವಾಲೆಯು ಹೊರಟು ಕರಗಿದ ಕಲ್ಲು ಮಣ್ಣುಗಳು ಎಸೆಯಲ್ಪಡುತ್ತಿವೆ.

ನಾರ್ವೆ—ಸ್ವೀಡನ್ನಿನ ವಿವಾಹ ಸಂಬಂಧ

ಈ ತಿಂಗಳು ಓಸ್ಲೊ ಎಂಬಲ್ಲಿ ನಾರ್ವೆಯ ರಾಜರಿಗೂ ಮತ್ತು ಸ್ವೀಡನ್ನಿನ ರಾಜಕುಮಾರಿಯರಿಗೂ ನಡೆಯುವ ವಿವಾಹಕ್ಕೆ ಡ್ಯೂಕ್ ಆಫ್ ಯಾರ್ಕರವರು ಚಕ್ರವರ್ತಿಗಳ ಪರ ಹೋಗುವರು.

ಬಡ್ತಿ

ಮೈಸೂರು 3 ನೇ ಬೆಟಾಲಿಯನ್‌ನಲ್ಲಿ ಹವಾಲ್‌ದಾರರಾದ ಮಿ|| ಅಬ್ದುಲ್ ಖಾಲಕ್‌ರವರನ್ನು ಎರಡನೇ ದರ್ಜೆಯ ಜಮೇದಾರಿ ಕೆಲಸಕ್ಕೆ ಬಡ್ತಿಮಾಡಿದೆ.

ಮೈಸೂರ್ ಟ್ರಸ್ಟ್ ಬೋರ್ಡ್

ಆರನೇ ತಾ|| ಪ್ರಾತಃಕಾಲ ನಡೆದ ಮುನಿಸಿಪಲ್ ಮೀಟಿಂಗಿನಲ್ಲಿ ಟ್ರಸ್ಟ್ ಬೋರ್ಡಿಗೆ ಇಬ್ಬರು ಮೆಂಬರುಗಳನ್ನು ಚುನಾಯಿಸಲಾಯಿತು. ಮ|| ರಾ|| ಗಳಾದ ಮಹಮದ್ ಸೇಟರವರೂ ಕೆ ಧನಕೋಟಿ ಶೆಟ್ಟರವರೂ ಚುನಾಯಿಸಲ್ಪಟ್ಟರು.

ಆಕಸ್ಮಿಕ ಮರಣ.

ಬಿಹಾರ್ ಒರಿಸ್ಸಾ ಪ್ರಾಂತ್ಯಗಳ ಪೋಸ್ಟ್‌ಮಾಸ್ಟರ್ ಜನರಲ್‌ರವರು ಕಳೆದ 28 ನೇ ತಾ|| ಆಕಸ್ಮಾತ್ ಉಂಟಾದ ಹೃದಯ ದೌರ್ಬಲ್ಯದಿಂದ ಮೃತರಾದರು.

ದನಗಳ ಪ್ರದರ್ಶನ

ಹಾಸನ ಡಿಸ್ಟ್ರಿಕ್ಟ್ ಅರಕಲಗೂಡಿನಲ್ಲಿ ಈ ಮಾಹೆ 8 ನೇ ತಾರೀಖಿನಿಂದ ನಡೆಯುವ ಅಮೃತ ನಾರಾಯಣ ಸ್ವಾಮಿ ರಥೋತ್ಸವ ಕಾಲದಲ್ಲಿ ಅಲ್ಲಿನ ಮುನಿಸಿಪಾಲಿಟಿಯವರು ಜಾನುವಾರುಗಳಿಗೆ ಯಾವ ಸುಂಕವೂ ಇಲ್ಲದೆ ಸಮೃದ್ಧಿಯಾಗಿ ಹುಲ್ಲು ನೀರು ದೊರೆಯತಕ್ಕಂಥಾ ದನಗಳ ಪ್ರದರ್ಶನವನ್ನು ಡೆಪ್ಯುಟಿ ಕಮೀಷನರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುವರು.

ಹರಿಕಥೆ

ರಾಜಧಾನಿಯ ಟವನ್‌ಹಾಲಿನಲ್ಲಿ ಈ ತಿಂಗಳು 15 ನೇ ತಾರೀಖು ಶುಕ್ರವಾರ ಸಾಯಂಕಾಲ ಆಸ್ಥಾನ ವಿದ್ವಾನ್ ಶ್ರೀಯುತ ಪರ್ವತಯ್ಯ ಭಾಗವತರವರು ಸತೀ ಸುಲೋಚನ ಅಥವಾ ಇಂದ್ರಜಿತುವಧೆ ಎಂಬ ಹರಿಕಥೆಯನ್ನು ಬಹಳ ಮನೋಹರವಾಗಿ ಮಾಡುವರು, ಟಿಕೇಟುದರ ರೂ 2 1 ಆಣೆ 8 ಮತ್ತು 4 ಈ ಕಥೆಯ ಉತ್ಪತ್ತಿಯು ತಿರುಮಕೂಡ್ಲು ನರಸೀಪುರದ ಮೂಲ ಸ್ಥಾನೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಇದೇ ತಿಂಗಳು 20 ನೇ ತಾರೀಖಿನಿಂದ ಮೂಗೂರು ವೇ|| ಬ್ರಂ|| ನಾರಾಯಣ ಶಾಸ್ತ್ರಿಗಳವರು ನಡೆಸುವ ಶ್ರೀ ಮಹಾ ಶತಚಂಡಿ ಯಾಗಕ್ಕೆ ಕೊಡಲ್ಪಡುವುದರಿಂದ ಆಸ್ತಿಕಮಹನೀಯರೆಲ್ಲರೂ ಉದಾರವಾಗಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ಮೈಸೂರ್ ಮುನಿಸಿಪಲ್ ಕೌನ್ಸಿಲ್

ಗೋರೀಬಿದನೂರು ಮೈಸೂರ್ ಮುನಿಸಿಪಲ್ ಕೌನ್ಸಿಲ್ಲಿಗೆ ಆ ಊರಿನ ಪಬ್ಲಿಕ್‌ವರ್ಕ್ಸ್ ಇಲಾಖೆಯ ಸೀನಿಯರ್ ಆಫೀಸರವರು ಎಕ್ಸ್ ಆಫಿಸಿಯೋ ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ನಾಗಪುರದ ರಾಜಕೀಯ ಸಮ್ಮೇಳನ.

ಈ ಮಾಹೆ 9 ಮತ್ತು 10 ನೇ ತಾ|| ನಾಗಪುರದಲ್ಲಿ ನಡೆಯುವ ರಾಜಕೀಯ ಸಮ್ಮೇಳದ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದ ಪಂಡಿತ ಜವಾಹಿರ್‌ಲಾಲ್ ನೆಹರೂರವರು ಪಂಜಾಬಿಗೆ ಬೇರೆ ಕೆಲಸದ ಮೇಲೆ ಹೋಗುವವರಾಗಿರುವುದರಿಂದ ಮ|| ಕೆ. ಎಫ್ ನಾರಿಮನ್‌ರವರು ಅಧ್ಯಕ್ಷತೆಗೆ ಒಪ್ಪಿರುವರು.

ಐದಾರು ಲಕ್ಷ ರೂ ಗಳ ನಷ್ಟ

ಕಳೆದ ಸೋಮವಾರ ಕಲ್ಕತ್ತಾದಲ್ಲಿಲ್ಲಾ ಸುಪ್ರಸಿದ್ಧವಾದ ಒಂದು ಹತ್ತಿಯ ಕಾರ್ಖಾನೆಗೆ ಬೆಂಕಿ ತಗುಲಿ ಐದಾರು ಲಕ್ಷ ರೂ ಗಳು ನಷ್ಟವಾಯಿತು.

ಅಫೀಮ್ ಸೇವನೆಯ ನಿಷೇಧ.

ಚೈನಾದಲ್ಲಿ ಅಫೀಮು ಸೇವನೆ ಮಾಡತಕ್ಕವರೆಲ್ಲರೂ ತಮ್ಮ ಹೆಸರನ್ನು ರಿಜಿಸ್ಟ್ರುಮಾಡಿಸಿ ಕ್ರಮ ಕ್ರಮವಾಗಿ ಅದರ ಸೇವನೆಯನ್ನೇ ಬಿಡಬೇಕೆಂದೂ ರಿಜಿಸ್ಟರ್ ಮಾಡಿಸದಿರತಕ್ಕವರಿಗೆ ಸಜಾ ವಿಧಿಸಲ್ಪಡುವುದೆಂದೂ ಅನಾದಿಯಾಗಿ ಜನರೆಲ್ಲರನ್ನೂ ಗುಲಾಮರನ್ನಾಗಿ ಮಾಡಿರುವ ಇದರ ಸೇವನಾ ನಿಷೇಧದ ವಿಷಯದಲ್ಲ ಅತ್ಯಂತ ಕ್ರೂರವಾದ ಕಾನೂನು ವೈಗೆರೆಗಳು ಸರಕಾರದಿಂದ ಮಾಡಲ್ಪಟ್ಟಿವೆ.

ಚಳಿಯ ಅಪಾಂತರ.

ನೂರ ಐವತ್ತು ವರ್ಷಗಳಲ್ಲಿ ಯಾವಾಗಲೂ ಇಲ್ಲದಷ್ಟು ಚಳಿಯು ಪೋಲೇಂಡಿನಲ್ಲಿ ವುಂಟಾಗಿರ ವುದರಿಂದ ಗಣಿಗಳಲ್ಲಿ ಒಂದೂವರೆ ಲಕ್ಷಕ್ಕಿಂತಲೂ ಜಾಸ್ತಿ ಸ್ಟರ್ಲಿಂಗ್ ನಷ್ಟವಾಗುತ್ತಿದೆ.

ಬರ್ಗನ್‌ನಲ್ಲಿ ಮಂಜಿನ ಗೆಡ್ಡೆಗಳ ದೆಸೆಯಿಂದ ಹಡಗಿನ ಸಂಚಾರ ನಿಂತು ಹೋಗಿದೆ. ಬ್ರಿಟನ್ನಿನಲ್ಲಿ ಮಂಜಿನ ಗೆಡ್ಡೆಗಳಿಗೆ ಸಿಕ್ಕಿ ಒಂದಕ್ಕೊಂದು ಡಿಕ್ಕಿ ಹೊಡೆದಿವೆ. ಡಾನ್ಯೂಬ್ ನದಿಯಲ್ಲಿ 9 ಅಡಿ ದಪ್ಪ ಹಿಮ ಬಿದ್ದಿರುವುದರಿಂದ ಎತ್ತಿನ ಗಾಡಿಗಳು ನದಿಗಳನ್ನು ದಾಟುತ್ತಿವೆ. ಬುಡಾಪೆಸ್ಟಿನಲ್ಲಿ ಹಿಮವು 45 ಡಿಗ್ರಿ ಇದೆ. ಸಂಯುಕ್ತಸಂಸ್ಥಾನದಲ್ಲಿ ಬಿದ್ದ ಹಿಮದಿಂದ ಬಹಳ ಪೈರಿನ ನಷ್ಟವಾಗುತ್ತಿದೆ.

ಪತ್ರಿಕಾ ಕರ್ತ ದಸ್ತಗಿರಿ.

ಕಲ್ಕತ್ತೆಯ "ಆನಂದ ಬಜಾರ್" ಪತ್ರಿಕೆಯಲ್ಲಿ ಬಂಗಳಾದ ಸ್ವಾತಂತ್ರ್ಯ ಸಂಗ್ರಾಮ ವಿಷಯದ ಲೇಖನವು ಪ್ರಕಟವಾದುದರಿಂದ ದಸ್ತಗಿರಿ ಮಾಡಿದ್ದ ಸದರೀ ಪತ್ರಿಕಾ ಕರ್ತರನ್ನು 250 ರೂ. ಗಳ ಜಾಮೀನಿನ ಮೇಲೆ ಬಿಟ್ಟಿರುವರು.

ಜೂಜಾಟದ ದಸ್ತಗಿರಿ.

ಕಲ್ಕತ್ತೆಯ ಎರಡು ರಾಯಲ್ ಎಕ್ಸ್‌ಚೇಂಜ್ ಆಫೀಸುಗಳಲ್ಲಿ ಜೂಜಾಡುತ್ತಿದ್ದ 200 ಮಾರವಾರಿಗಳನ್ನು ದಸ್ತಗಿರಿ ಮಾಡಿರುವರು.

ಅಮಾನುಲ್ಲಾ ರವರ ಹಸ್ತಪತ್ರ

ಅಮಾನುಲ್ಲಾ ರವರು ಕಾಬೂಲ್ ಮೇಲೆ ವಿಮಾನಗಳಲ್ಲಿ ಹಸ್ತಪತ್ರಿಕೆಗಳನ್ನು ಹಂಚಲ್ಲಿಲ್ಲವೆಂದು ಗೊತ್ತಾಗಿದೆ.

ಮಹಾತ್ಮಾ ಗಾಂಧಿಯವರ ಭಾಷಣ

ಕಲ್ಕತ್ತಾದಲ್ಲಿ ಮಹಾತ್ಮಾ ಗಾಂಧಿಯವರು ಪರದೇಶಿ ವಸ್ತ್ರಗಳನ್ನು ದಹನ ಮಾಡುವ ಕಾಲದಲ್ಲಿ ಕೊಟ್ಟ ಭಾಷಣವೇನೆಂದರೆ "ನೀವು ಸ್ವಂತಕ್ಕೊಸ್ಕರವಾಗಿಯಾದರೂ ಸತ್ಯವಂತರಾಗಿರಬೇಕು. ನೀವು ಮೋಸಹೋಗಬೇಡಿ ದೇಶವನ್ನೂ ಮೋಸ ಪಡಿಸಬೇಡಿ. ನಿಮ್ಮ ದೇಶದ ಮರ್ಯಾದೆಯನ್ನೂ ಸ್ವಾರ್ಥತೆಯನ್ನೂ ಉಳಿಸಿಕೊಳ್ಳುವುದಕ್ಕಾಗಿ ನೀವು ಎಷ್ಟೇ ಕಷ್ಟಪಟ್ಟರೂ ಅದು ಕಡಿಮೆಯೇ ನನಗೆ ಸ್ವತಂತ್ರ ದಾಹವು ಹತ್ತಿದೆ ನನ್ನ ಪ್ರಾಣವಿರುವಾಗಲೇ ಸ್ವರಾಜ್ಯವು ಬರಬೇಕೆಂಬುದು ನನ್ನ ಇಚ್ಛೆ. ಅದಕ್ಕೊಸ್ಕರವಾಗಿ ಎಷ್ಟು ಕಷ್ಟಪಡಬೇಕಾದರೂ ಸಿದ್ಧನಾಗಿರುವೆನು.

ಬಟ್ಲರ್ ಕಮಿಟಿಯ ಖರ್ಚು

ಬಟ್ಲರ್ ಕಮಿಟಿಯ ಒಟ್ಟು ಖರ್ಚು 16000 ಸ್ಟರ್ಲಿಂಗ್ ಎಂದು ಗೊತ್ತಾಗಿದೆ.

ಮಹಾತ್ಮಾ ಗಾಂಧಿಯವರು

ಮಹಾತ್ಮಾ ಗಾಂಧಿಯವರು ಕಳೆದ ಮಾಹೆ 28 ನೇ ತಾ|| ಪ್ರಾತಃಕಾಲ ಅಹಮದಾಬಾದ್ ವಿಕ್ಟೋರಿಯಾ ಉದ್ಯಾನವನದಲ್ಲಿ ಲೋಕಮಾನ್ಯ ತಿಲಕರ ಅನಾವರಣ ಮಹೋತ್ಸವವನ್ನು ನೆರವೇರಿಸಿ ಮುನಿಸಿಪಲ್ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜಾರೋಹಣ ಮಾಡಿಸಿರು ಆ ದಿನ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳವರ ಉಪನ್ಯಾಸವೂ ಆಯಿತು. ಗಾಂಧಿಯವರು 5 ನೇ ತಾ|| ಅಹಮದಾಬಾದಿನಿಂದ ರಂಗೂನಿಗೆ ಪ್ರಯಾಣ ಬೆಳೆಸಿದರು.

—

ರಜಾ

ಮೈಸೂರು ರೈಲ್ವೆ ಆಡಿಟರಾದ ಮಿ|| ಎಂ. ಎ. ಸಿಂಗರಾಚಾರ್ ಬಿ. ಎ. ರವರಿಗೆ ಫೆಬ್ರುವರಿ 20 ನೇ ತಾರಿನಿಂದ 17 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಆ ಕಾಲದಲ್ಲಿ ಅಸಿಸ್ಟೆಂಟು ಆಡಿಟರಾದ ಮಿ|| ಎಂ ಶಾಮಣ್ಣನವರೇ ಆಡಿಟರ ಕೆಲಸವನ್ನೂ ನೋಡಿಕೊಳ್ಳುವರು.

ಪ್ರಜಾಪ್ರತಿನಿಧಿ ಸಭೆ.

ಮುಂದಿನ ಜೂನ್ ತಿಂಗಳು 10 ನೇ ತಾ|| ಸುಮಾರಿಗೆ ನಡೆಸಲ್ಪಡುವ ಪ್ರಜಾಪ್ರತಿನಿಧಿಸಭೆಯ ಆಯವ್ಯಯದ ಅಧಿವೇಶನಕ್ಕೆ ಸದಸ್ಯರು ನಿರ್ಧಾರಗಳನ್ನೂ ಅರಿಕೆಗಳನ್ನೂ ಮತ್ತು ಪ್ರಶ್ನೆಗಳನ್ನೂ ಏಪ್ರಿಲ್ ತಿಂಗಳು 8 ನೇ ತಾ|| ಒಳಗಾಗಿ ಡೆಪ್ಯುಟಿಕಮೀಷನರಿಗೆ ಕಳುಹಿಸಬೇಕೆಂದೂ ಈ ವಿಷಯಗಳನ್ನು ಚುನಾಯಿಸುವ ಬಗ್ಗೆ ಡಿಸ್ಟ್ರಿಕ್ಟ್ ಪ್ರತಿನಿಧಿಗಳ ಮೀಟಿಂಗನ್ನು ಡೆಪ್ಯುಟಿ ಕಮೀಷನರುಗಳು ಏಪ್ರಿಲ್ ತಿಂಗಳು 19 ನೇ ತಾ|| ಒಳಗಾಗಿ ನಡೆಸಿ ಚುನಾಯಿಸಲ್ಪಟ್ಟ ವಿಷಯಗಳನ್ನು ಏಪ್ರಿಲ್ 27 ನೇ ತಾ|| ಒಳಗಾಗಿ ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿಯವರಿಗೆ ತಲುಪುವಂತೆ ರವಾನಿಸತಕ್ಕದ್ದೆಂತಲೂ ಸರ್ಕಾರದವರು ಪ್ರಕಟಿಸಿರುತ್ತಾರೆ.

ಮೆಕ್ಸಿಕೊದಲ್ಲಿ ರಾಜ್ಯಕ್ರಾಂತಿ

ಮೆಕ್ಸಿಕೊದಲ್ಲಿ ರಕ್ತಪಾತವಿಲ್ಲದೆ ರಾಜ್ಯಕ್ರಾಂತಿಯಾಗಿದೆ.

ಲಾರ್ಡ್‌ಬರ್ನ್ ಹ್ಯಾಂರವರಿಗೆ ವಿರಾಮ

ಸೈಮನ್ ಕಮಿಷನ್ನಿನ್ನ ಒಬ್ಬಮೆಂಬರಾದ ಲಾರ್ಡ್ ಬರ್ನ್ ಹ್ಯಾಂರವರು ಅಸ್ವಸ್ಥರಾಗಿರುವುದರಿಂದ ಅವರು ಇಂಗ್ಲೆಂಡಿಗೆ ವಾಪ್ಸು ತೆರಳಿ ವಿಶ್ರಾಂತಿಯನ್ನು ತೆಗೆದುಕೊಳ್ಳುವರು.

TAI NADU

8—3—1929

DESECRATION OF TEMPLES

It is a step in the right direction that Mr. A. V. Ramanathan, Deputy Commissioner Kolar District, has taken in announcing a reward of Rupees Five Hundred to those who help in tracing the culprits who desecrated the temples in the Kolar District. This we are sure, would go a long way in allaying public discontent that the authorities did nothing to trace the culprits. How we wish a similar announcement is made in the never forgettable and forgivable case of the drogging of four boys, into Mr. Abbas Khan's house on the evening of the fateful July 30th 1928.

WAGING WAR AGAINST PUBLIC OPINION.

A message of the Free Press of India states that the latest act of ths Government of Mysore is to withdraw permission to edit, print and publish newspapers, of about fifty people who had not yet started the papers. The message also says that the permission would be withdrawn even for suspended papers, if those papers do not see the light of the day within a month. All this it appears has been done without informing the parties concerned Now is the order said to have been placed on the press table. Nothing is impossible to-day in Mysore. A friend of ours humorously asked us to suggest to the Government that they might issue license as they do in the case of guns, with a condition that the licenses should be renewed every year. We do not know if under the present state of panic in the brain of the Government such a sugggstion should not be welcomed. Public opinion, we repeat gets strong inspite of such manacles and fetters. But we only pity the Government, because it is resorting to actions which do not enhance its reputation.

ಅಧಿಕಾರ

ಹಾಸನದ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ ರಾದ ಮ|| ಎಂ ಶೇಷಾದ್ರಿಯವರಿಗೆ ಮೈಸೂರು ಲ್ಯಾನೆಸಿ ರೆಗ್ಯುಲೇಷನ್ನಿನ ಪ್ರಕಾರ ಕಾರ್ಯಗಳನ್ನು ನಡಿಸುವ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕೊಟ್ಟಿದೆ.

ವರ್ತಮಾನ ಸಂಗ್ರಹ.

ಸೈಮನ್ ಸ್ವಾಗತ

ದಿವಾನರ ಪ್ರೈವೇಟ್ ಸೆಕ್ರೆಟರಿಗಳ ಕಾಗದ

ದಿವಾನರ ಪ್ರೈವೇಟ್ ಸೆಕ್ರೆಟರಿಗಳು ಬೆಂಗಳೂರು ಮೈಸೂರು ಡಿ|| ಡೆ|| ಕ|| ರುಗಳಿಗೆ ಈ ರೀತಿಯಾದ ಕಾಗದವನ್ನು ಬರೆದರೆಂದು ತಿಳಿದುಬಂದಿತ್ತದೆ.

ಬೆಂಗಳೂರಿಂದ ಮೈಸೂರಿಗೆ ಹೋಗುವ ದಾರಿಯಲ್ಲಿ ಮುಖ್ಯ ಮುಖ್ಯವಾದ ಸ್ಥಳಗಳಲ್ಲಿ ಸಣ್ಣಸಣ್ಣ ಚಪ್ಪರಗಳೂ ತೋರಣಗಳೂ ಆದರೆ ಸಾಕು. ಆಯಾಯಾ ಸ್ಥಳದ ಮುಖಂಡರು ಸೈಮನ್ ಕಮಿಷನವರಿಗೆ ಹಾರಾತುರಾಯಿಗಳನ್ನು ಅರ್ಪಿಸಿದರೆ ಸಾಕು.

ಎಲೆಕ್ಟ್ರಿಕಲ್ ಇಲಾಖೆ

ಈ ಇಲಾಖೆಯ ಛೀಫ್ ಇಂಜಿನಿಯರಾದ ಮಿ|| ಎಸ್ ಜಿ ಫೋರ್ಬ್ಸ್‌ರವರು ಸ್ಪೆಷಲ್ ಡ್ಯೂಟಿಯಲ್ಲಿರುವುದರಿಂದ ಜನರೇಟಿಂಗ್ ಸ್ಟೇಷನ್‌ಗಳ ಜನರಲ್ ಸೂಪರಿಂಟೆಂಡೆಂಟರಾದ ಮಿ|| ಸಿ. ಎಸ್. ಕರಿಯಪ್ಪನವರು ಛೀಫ್ ಎಲೆಕ್ಟ್ರಿಕಲ್ ಇಂಜನಿಯರ್‌ರವರ ಕೆಲಸವನ್ನು ನೋಡುವರು.

ರೈಲ್ವೆ ಆದಾಯ

1929 ನೇ ಫೆಬ್ರವರಿ 16 ನೇ ತಾರೀಖಿಗೆ ಆಖೈರಾದ ವಾರಕ್ಕೆ ಮೈಸೂರು ರೈಲ್ವೆಗಳಲ್ಲಿ 75600 ರೂಗಳು ಉತ್ಪತ್ತಿಯಾಗಿರುತ್ತದೆ. ಹೋದ ವರುಷ ಇದೇ ವಾರದಲ್ಲಿ ಆದ ಉತ್ಪತ್ತಿಗಿಂತಲೂ ಈಸಾರಿ 11556 ರೂ. ಗಳು ಹೆಚ್ಚಿರುತ್ತೆ.

ಪಶು ವೈದ್ಯ ಇಲಾಖೆ

ರಜದ ಮೇಲಿರುವ ಮೇಜರ್ ಸಿಂಸನ್‌ರವರ ಸ್ಥಾನದಲ್ಲಿ ಮ|| ಕೆ. ಕೃಷ್ಣಯ್ಯಂಗಾರ್‌ರವರು ಸೂಪರಿಂಟೆಂಡೆಂಟರ ಕೆಲ್ಸವನ್ನು ನೋಡುತ್ತಿರುವುದರಿಂದ ಮೊದಲನೇ ದರ್ಜೆಯ ಇನಸ್ಪೆಕ್ಟರಾದ ಮ|| ಆರ್ ಎಂ ಪತಂಕರ್‌ರವರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ರಜಾ

ಅಸಿಸ್ಟೆಂಟ್ ಸರ್ಜನ್‌ರಾದ ಮ|| ಎಸ್ ಕೃಷ್ಣಮೂರ್ತಿಯವರಿಗೆ ಕೊಟ್ಟಿದ್ದ ಆರು ತಿಂಗಳ ಫರ್ಲೋ ರಜಾವನ್ನು ಮತ್ತೊಂದು ತಿಂಗಳಿಗೆ ಹೆಚ್ಚಿಸಿರುತ್ತೆ.

ಸಿವಿಲ್ ದಾವೆ

ಮುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ಬೈಲಾ ಮಾಡದೆ ಸುಂಕ ವಸೂಲ್ಮಾಡಿರುವುದು ಅನ್ಯಾಯವೆಂದು ಶಿಕಾರಿಪುರದ ಮುನಿಸಿಪಲ್ ಕೌನ್ಸಿಲ್ ಮೇಲೆ ಮೋಟಾರ್ ಸರ್ವಿಸ್‌ನವರು ಸಿವಿಲ್ ದಾವಾ ಮಾಡಿರುವರು.

ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡ್

ಶ್ರೀರಂಗ ಪಟ್ಟಣದ ಬೋರ್ಡಿಗೆ ಚುನಾವಣೆಯಲ್ಲಿ ಮ|| ಗಳಾದ ಎಚ್. ಸಿದ್ದಲಿಂಗಯ್ಯದೇವರೂ ಪಂಚೇಗೌಡರೂ ನಾಮಿನೇಷನ್ನಿನಲ್ಲಿ ಮ|| ಗಳಾದ ಸಿ ಕೃಷ್ಣಮೂರ್ತಿರಾಯರೂ ಎಂ ಸುಬ್ಬಯ್ಯನವರೂ ನಂಜನಗೂಡಿನ ಬೋರ್ಡಿಗೆ ಚುನಾವಣೆಯಲ್ಲಿ ಮ|| ಗಳಾದ ಬಿ. ನಂಜುಂಡಾರಾಧ್ಯರೂ ಜಿ. ವಿ. ನಂಜಪ್ಪ ಶೆಟ್ಟರೂ ನಾಮಿನೇಷನ್‌ನಲ್ಲಿ ಮ || ಗಳಾದ ವೈಸ್ ಪ್ರೆಸಿಡೆಂಟ್ ಇ. ಕೃಷ್ಣಪ್ಪನವರೂ ಜಿ. ಎ ಸಾಹಿಬ್‌ಜಾನ್‌ರವರೂ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು.

ವಿಲೇಜ್ ಕೋರ್ಟ್

1929 ಏಪ್ರಿಲ್ ಒಂದನೇ ತಾ|| ಲಾಗಾಯತು ಗೌರಿಬಿದನೂರು ತಾಲೋಕಿನ (1) ಹೊಸಗಾನಹಳ್ಳಿ (-) ಹುನಸೇಕಪ್ಪೆ (3) ವರಾಡನಹಳ್ಳಿ (4) ಮುಂಡನಹಳ್ಳಿ (5) ಹಳೇ ಉಪ್ಪಾರಹಳ್ಳಿ ಈ ಗ್ರಾಮಗಳಿಗೆ ಅನ್ವಯಿಸುವಂತೆ ಹೊಸಗಾನಹಳ್ಳಿಯಲ್ಲಿ ಒಂದು ವಿಲೇಜು ಕೋರ್ಟು ಸ್ಥಾಪಿಸಲ್ಪಡುವುದು.

ಸನ್ಮಾನ ಪತ್ರ

[illegible]

ಪ್ರಯಾಣಿಕರ ಮೇಲೆ ಜುಲುಂ

ಕಳೆದ ತಿಂಗಳು 23 ನೇ ತಾ|| ನ ದಿನ ಮೈಸೂರಿನಿಂದ ಕೊಳ್ಳೆಗಾಲಕ್ಕೆ ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದ ಕೊಳ್ಳೆಗಾಲದ ಕಂಟ್ರಾಕ್ಟರಾ ಮ|| ರಾ|| ವಿ. ಆರ್ ಚಕ್ರವರ್ತಿಯವರು ನಂಜನಗೂಡಿನಲ್ಲಿ ಇಳಿದು ತಾಲ್ಲೋಕು ಲಾಯರ ಆಫೀಸಿಗೆ ಹೋಗುತ್ತಿರುವಾಗ್ಗೆ ಕೆಲವು ದುರಾತ್ಮರು ಇವರನ್ನು ಮೋಸದಿಂದ ಒಂದು ಮನೆಗೆ ಕರೆದುಕೊಂಡು ಹೋಗಿ ಪ್ರಾಣಭೀತಿಯನ್ನುಂಟು ಮಾಡಿ ಅವರಲ್ಲಿದ್ದ ಚಿನ್ನದ ಉಂಗುರ ಮತ್ತು ಗಡಿಯಾರ ಇವುಗಳನ್ನು ಕಸುಕೊಂಡು ಕಳುಹಿಸಿದರೆಂದೂ ಈ ವಿಷಯವನ್ನು ಮೇಲ್ಕಂಡ ಮ|| ಚಕ್ರವರ್ತಿಯವರು ಪೋಲೀಸಿಗೆ ತಿಳಿಸಿದಾಗ್ಯೂ ಇದ ವರೆಗೆ ಯಾವ ಕಾರ್ಯಭಾಗವೂ ನಡೆಸಲ್ಪಡದೆ ಇದ್ದುದರಿಂದ ಈ ವಿಚಾರದಲ್ಲಿ ಮೊಕದ್ದಮೆಯು ಡಿ. ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾಖಲಾಗಿದೆಯೆಂದೂ ಕೇಳುತ್ತೇವೆ

Printed and published by P. R. Rmaaiya,

Regd No M 2322 ‖ ವಂದೇ ಮಾತರಂ ‖ ೭ಬಿ ಪತ್ರಿಕೆ ...

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಸೋಮವಾರ ೧೧ ಮಾರ್ಚಿ ೧೯೨೯ [ಸಂಚಿಕೆ ೧೨೯

ಈ ದಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತಗಡೂರು ರಾಮಚಂದ್ರ ರಾಯರ ಮೇಲಿನ ಮೊಖದ್ದಮೆ ನಡೆಯುವುದು.

ತಾಯಿನಾಡು.

11—3—1929

ಲಂಚ ರುಷುವತ್ತುಗಳು

———

ಯಾವ ದೇಶದಲ್ಲಿ ನೋಡಿದರೂ ಯಾವ ಸರ್ಕಾರದಲ್ಲಿ ನೋಡಿದರೂ ಲಂಚಾರುಷುವತ್ತುಗಳ ಹಾವಳಿ ಇದ್ದೇ ಇರುವುದು ಈ ಲಂಚವು ಅನೇಕ ಹೆಸರುಗಳನ್ನು ತಾಳುವುದು ಅನೇಕ ರೂಪಗಳನ್ನು ತಾಳುವುದು ಕೆಲವು ಸಾರಿ ಕಮಿಷನ್ ಎಂಬುದಾಗಿಯೂ, ಕೆಲವುಸಾರಿ ಸಂಭಾವನೆಯೆಂಬುದಾಗಿಯೂ ಕರೆಯಲ್ಪಡುವುದು ಇವುಗಳ ಹಾವಳಿಯಿಂದ ತಪ್ಪಿಸಿಕೊಂಡವನೇ ಇಲ್ಲ.

ಯಾವನಾದರೂ ಈ ಹಾವಳಿಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಅವನ ಕೆಲಸವು ಕೈಗೂಡುವ ಹಾಗೇನೇ ಇಲ್ಲ. ಎಷ್ಟೋ ಸರ್ಕಾರಗಳು ಈ ಲಂಚವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದವು ಆದರೆ ಅವುಗಳ ಪ್ರಯತ್ನಗಳು ಸಫಲವಾಗಲಿಲ್ಲ. ನಮ್ಮ ಸಂಸ್ಥಾನದಲ್ಲಿಯೂ ಇದನ್ನು ತಪ್ಪಿಸಬೇಕೆಂದು ಎಷ್ಟೋ ಆವೃತ್ತಿ ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರುಗಳು ಠರಾವನ್ನು ತಂದರು. ಆದರೆ ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ

ಲಂಚ ಕೊಟ್ಟವನಿಗೂ ಲಂಚ ತೆಗೆದುಕೊಂಡವನಿಗೂ ಇಬ್ಬರಿಗೂ ಶಿಕ್ಷೆಯಾಗಬೇಕೆಂದು ಈಗ ಇದೆ. ಲಂಚ ಕೇಳಿದ್ದಕ್ಕೆ ಸಾಕ್ಷಿಯು ಬೇಕು. ಇಲ್ಲದೆ ಹೋದರೆ ಕೇಸು ತೆಗೆದುಕೊಳ್ಳಲ್ಪಡುವುದಿಲ್ಲ ಆದರೆ ಇದಕ್ಕೆ ಸಾಕ್ಷಿಯು ದೊರೆಯುವುದು ಕಷ್ಟ. ಹೇಗೂ ಈ ಹಾವಳಿಯು ತಪ್ಪುವಹಾಗಿಲ್ಲ. ಇದಕ್ಕೆ ಪ್ರಜೆಗಳು ಕೂಡ ಧೈರ್ಯವಾಗಿ ಪ್ರಯತ್ನ ಪಡಬೇಕು. ಗಣ್ಯರಾದವರು ಲಂಚವನ್ನು ಕೊಡದೆ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ಆದರೆ ನೋಡುವಲ್ಲಿ ದೊಡ್ಡ ದೊಡ್ಡವರೇ ಲಂಚಗಳನ್ನು ಕೊಟ್ಟು ಕೆಲಸಮಾಡಿಸಿಕೊಳ್ಳುತ್ತಾರೆ. ಇದು ತಪ್ಪಿ ಲಂಚಾರುಷುವತ್ತುಗಳು ನಿಲ್ಲಬೇಕೆಂದರೆ ಪ್ರಜೆಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದುಕೊಂಡು ಲಂಚಕೊಡುವುದನ್ನು ಬಿಟ್ಟುಬಿಡಬೇಕು. ಈ ವಿಷಯವಾಗಿ ಮತ್ತೊಂದು ಸಂಗತಿಯನ್ನು ಗಮನಿಸಬೇಕಾಗುವುದು. ಕೆಲವು ದೊಡ್ಡ ಅಧಿಕಾರಿಗಳು ಹೊರತಾಗಿ ಸರ್ಕಾರದಲ್ಲಿ ನೌಕರರಿಗೆ ಸಂಬಳವು ತೀರಾ ಕಡಮೆ. ಪೂರ್ವದಿಂದಲೂ ಅವರು ತಮ್ಮ ಜೀವಿಕೆಯನ್ನು ನಡೆಸಿಕೊಳ್ಳುವುದಕ್ಕಾಗಿ ಅನೇಕ ಮಾಮೂಲುಗಳನ್ನಿಟ್ಟುಕೊಂಡಿರುವರು. ಆ ಮಾಮೂಲನ್ನು ಅವರು ಪ್ರಾಮಾಣಿಕವಾಗಿ ಲಂಚವೆಂದು ಭಾವಿಸಿಲ್ಲ. ಈ ಮಾಮೂಲು ಮಾಮೂಲಾಗೇ ನಡೆಯುತ್ತಾ ಬಂದಿರುವುದು. ಈ ಮಾಮೂಲನ್ನು ತಪ್ಪಿಸಬೇಕಾದರೆ ಸರ್ಕಾರದವರು ನೌಕರರ ಸಂಬಳವನ್ನು ಹೆಚ್ಚಿಸಬೇಕು. ಈಗ ಕೆಲವು ದಿವಸಗಳ ಹಿಂದೆ ಪಂಜಾಬ್ ನ್ಯಾಯವಿಧಾಯಕ ಸಭೆಯಲ್ಲಿ ಲಂಚಗಳ ಹಾವಳಿಯಿಂದ ರೈತರುಗಳು ಕಷ್ಟಪಡುತ್ತಿರುವ ವಿಷಯವು ಚರ್ಚಿಸಲ್ಪಡುತ್ತಿರುವುದು. ಆದರೆ ತೀರ್ಮಾನವೇನೂ ಆಗಲಿಲ್ಲ.

ವರ್ತಮಾನ ಸಂಗ್ರಹ.

———

ಬೆಂಗಳೂರಿನಲ್ಲಿ ದಸ್ತಗಿರಿಗಳು

ಕಳೆದ ಗುರುವಾರ ರಾತ್ರಿ, ಒಂಭತ್ತು ಘಂಟೆಗೆ ಬೆಂಗಳೂರು ವೀರಕೇಸರಿ ಸೀತಾರಾಮ ಶಾಸ್ತ್ರಿಗಳೂ ನವಜೀವನ ಪತ್ರಿಕೆಯ ಸಂಪಾದಕರಾದ ಅಶ್ವತ್ಥನಾರಾಯಣರಾಯರೂ ರಾಜದ್ರೋಹದ ಆರೋಪಣೆಯ ಮೇರೆ ದಸ್ತಗಿರಿ ಮಾಡಲ್ಪಟ್ಟಿರುವರು.

ಖಾದಿಯ ಉಡುಪು.

ಅಸ್ಸಾಂ ಸರ್ಕಾರದಲ್ಲಿ ನೌಕರಿಮಾನೇಜರುಗಳಿಗೆ ಬೇಕಾಗುವ ಉಡುಪಿಗೆಲ್ಲಾ ಖಾದಿಯನ್ನೇ ಉಪಯೋಗಿಸಬೇಕೆಂದು ಅಲ್ಲಿನ ಲೆಜಿಸ್ಲೇಟೀವ್ ಕೌನ್ಸಿಲ್ಲಿನಲ್ಲಿ ತೀರ್ಮಾನವಾಗಿರುತ್ತೆ

ಪೌರಸಭೆಯ ಸ್ವಾಗತ

ರಂಗೂನಿನ ಮೌಲ್ಮಿಯನ್ ಪೌರಸಭೆಯವರು ಮಹಾತ್ಮಾ ಗಾಂಧಿಯವರಿಗೆ ಒಂದು ಮಾನ ಪತ್ರವನ್ನು ಅರ್ಪಿಸುವರು

ಹಿಂದೂ ಮಹಾಸಭೆ.

ಹಿಂದೂ ಮಹಾಸಭೆಯ 12 ನೆಯ ಅಧಿವೇಶನವು ಈ ಮಾಹೆ 29 30 31 ನೇ ತಾ|| ಗಳಲ್ಲಿ ನಡೆಯುವುದು

ಹಿಂದೂ ಮಹಾಸಭೆ.

ಮಾಡರನ್ ರಿವ್ಯೂ ಸಂಪಾದಕರಾದ ಮಿ. ರಾಮಾನಂದ ಚಟರ್ಜಿಯವರು ಸೂರತ್ತಿನಲ್ಲಿ ನಡೆಯುವ ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಪತ್ರಿಕಾ ಕರ್ತನ ದಸ್ತಗಿರಿ

ಟಾಕಟ್ ಎಂಬ ಡೆಲ್ಲಿ ಪತ್ರಿಕೆಯಲ್ಲಿ ಭೂಪಾಳ ರಾಜರ ವಿಷಯವಾಗಿ ಪ್ರಕಟವಾದ ಒಂದು ಲೇಖನಕ್ಕೋಸ್ಕರ ಪ್ರಿನ್ಸಸ್ ಪ್ರೊಟೆಕ್ಷನ್ ಆಕ್ಟ್ ಸಂತೆ ಆ ಪತ್ರಿಕಾಕರ್ತರಿಗೆ ದಸ್ತಗಿರಿಯಾಗಿದೆ.

ಲೀಲೆ

ಶ್ರೀಯುತ ಪೂಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಲೀಲೆ ಎಂಬ ಪುಸ್ತಕವನ್ನು ಪದ್ಯರೂಪದಲ್ಲಿ ಬಹಳ ಮನೋಹರವಾಗಿ ಬರೆದು ಕಳುಹಿಸಿರುವುದನ್ನು ಆದರದಿಂದ ಸ್ವೀಕರಿಸಿದ್ದೇವೆ

ಪ್ರಥಮ ಚಿಕಿತ್ಸೆ.

ಅಖಿಲ ಭಾರತ ಪ್ರಥಮ ಚಿಕಿತ್ಸಾ ಸಂಘವೂ ಮತ್ತು ಮೈಸೂರು ಸಂಸ್ಥಾನದ ಐದನೆಯ ಸ್ಕೌಟ್‌ರಾಲಿಯೂ ಸಹ ತುಮಕೂರಿನಲ್ಲಿ 1929 ನೇ ಏಪ್ರಿಲ್ 15 ನೇ ತಾ|| ನಿಂದ 19 ರವರೆಗೆ ನಡೆಯುವುವು. ಇಂಡಿಯಾ ಸಿಲೋನ್ ಮೊದಲಾದ ಎಲ್ಲಾ ಭಾಗಗಳಿಂದಲೂ ಸ್ಕೌಟುಗಳು ಸೇರುವರು.

ಯುವಕರ ದಸ್ತಗಿರಿ.

ಡಬ್ಲಿನ್‌ನಲ್ಲಿ ನಾಗರೀಕ ಹಕ್ಕನ್ನು ಕೇಳುವವರನ್ನು ಖೂನಿ ಮಾಡುವ ಸಂಗಡಕ್ಕೆ ಸೇರಿದರೆಂಬ ಅನುಮಾನದಮೇಲೆ 40 ಮಂದಿ ಯುವಕರು ಈ ಮಾಹೆ 6 ರಲ್ಲಿ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

ವಿಲಕ್ಷಣ ದಸ್ತಗಿರಿ.

ಈಗ ಕೆಲದಿನಗಳ ಹಿಂದೆ ಶ್ರೀಯುತ ಸಾಂಬಮೂರ್ತಿಯವರನ್ನು ದಸ್ತಗಿರಿ ಮಾಡಿದ ವಿಷಯವಾಗಿ ರಾಜ್ಯದ ಚಾತ್ಮೀದಾರರು ದಸ್ತಗಿರಿ ಮಾಡಿದ ಸ್ಥಳ ನಿಲ್ದಾಣವು ಟವನ್ ಪೋಲೀಸ್‌ಗೆ ಸೇರಿರುವುದಿಲ್ಲ. ದಸ್ತಗಿರಿ ಮಾಡಿದ ಟೌನ್ ಪೋ|| ಇನ್‌ಸ್ಪೆಕ್ಟರ್‌ರವರು ವಾರಂಟಿಲ್ಲದೆ ಮಧ್ಯರಾತ್ರಿಯಲ್ಲಿ ತಮ್ಮ ಕಾರ್ಯ ನಡೆಸಿದುದನ್ನು ನೋಡಿದರೆ ಕಾನೂನನ್ನು ಅತಿಕ್ರಮಿಸಿದರು ಪೋಲೀಸಿನವರೋ ಅಥವಾ ಶ್ರೀ|| ಸಾಂಬಮೂರ್ತಿಯವರೋ ಎಂಬುದು ಸ್ಪಷ್ಟವಾಗುವುದು ಎಂದು ಬರೆದಿರುವರು

ಆಯುರ್ವೇದ ಪರೀಕ್ಷೆ

ಅಖಿಲಭಾರತ ಆಯುರ್ವೇದೀಯ ವಿದ್ಯಾಪೀಠದ ಪರೀಕ್ಷೆಯು ಬೆಜವಾಡದಲ್ಲಿ ಈ ತಿಂಗಳು 12 ನೇ ತಾ ನಡೆಯುವುದು.

ಉಪಾಧ್ಯಾಯ ಪ್ರಾಂತಿಕ ಪರಿಷತ್ತು.

ತಿರುವಾಂಕೂರಿನ ಪ್ರಾಥಮಿಕ ಉಪಾಧ್ಯಾಯರ ಏಳನೇ ಪರಿಷತ್ತು ತಿರುವಾಂಕೂರಿನಲ್ಲಿ ಮೇ ತಿಂಗಳಲ್ಲಿ ನಡೆಯುವುದು.

ಮಿ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು

ಲೇಬರ್ ಕಮಿಷನ್ನಿಗೆ ಶ್ರೀ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರು ಒಬ್ಬ ಸದಸ್ಯರಾಗಿ ಆರಿಸಲ್ಪಡುವುದಾಗಿ ತಿಳಿಯಬರುತ್ತದೆ.

ಪರದೇಶೀ ವಸ್ತ್ರಗಳ ದಹನ

ಈ ಮಾಹೆ 3 ನೇ ತಾ. ಮಚಲೀಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಗಳೂ (ಬೆಳಿಗ್ಗೆ ಮೆರವಣಿಗೆ, ಸಾಯಂಕಾಲ ಮುಂದಾಳುಗಳ ಉಜ್ವಲ ಭಾಷಣಗಳೂ ಪರದೇಶೀ ವಸ್ತ್ರಗಳ ದಹನವೂ) ಬಹಳ ಸಂಭ್ರಮದಿಂದ ಜರುಗಿದುವು.

ರಾಜಕೀಯ ಚಳವಳಿ

ಕೈರೋಪಟ್ಟಣದಲ್ಲಿ ವಿದ್ಯಾರ್ಥಿಗಳು ರಾಜಕೀಯ ವಿಷಯಗಳಲ್ಲಿ ಪ್ರವರ್ತಿಸಕೂಡದೆಂದೂ ಇದಕ್ಕೆ ವಿರುದ್ಧವಾಗಿ ನಡೆಯುವವರು ಆರು ತಿಂಗಳು ಶಿಕ್ಷೆ ಅಥವಾ 20 ರಿಂದ 50 ಪೌಂಡುಗಳೊಳಗಿನ ಜುಲ್ಮಾನೆಗೆ ಗುರಿಯಾಗುವರೆಂದೂ ಪ್ರಕಟವಾಗಿದೆ.

ಈಜಾಟ.

13 ವಯಸ್ಸಿನ ಇಂಗ್ಲೀಷು ಹುಡುಗಿಯೊಬ್ಬಳು 150 ಗಜ ದೂರವನ್ನು 1 ನಿಮಿಷ 45 ಸೆಕೆಂಡುಗಳಲ್ಲಿ ಈಜಿ ಪ್ರಸಿದ್ಧಿ ಹೊಂದಿರುವಳು.

ಸರ್ಕಾರಿ ಸುದ್ದಿ

ಮುನ್ಸಿಫ್ ಮಿ|| ಬಿ. ಜಿ. ರಾಮಕೃಷ್ಣಯ್ಯಂಗಾರಿಗೆ ಒಂದು ತಿಂಗಳು ಹದಿನೈದು ದಿನಗಳ ರಜಾ ಕೊಟ್ಟಿರುವುದರಿಂದ ಚೀಫ್ ಕೋರ್ಟು ಬೆಂಚ್‌ಕ್ಲಾರ್ಕ್ ಮಿ|| ಡಿ ಶ್ರೀನಿವಾಸಾಚಾರ್ರನ್ನು ಮಧುಗಿರಿ ಮುನ್ಸಿಫರಾಗಿ ಬದಲಿ ನೇಮಿಸಲಾಗಿದೆ.

ಬೆಂಗಳೂರು ಸಿಟಿ ಪ್ರೈಮರಿ ಸ್ಕೂಲುಗಳ ವೈದ್ಯ ಪರೀಕ್ಷಕರಾದ ಮಿ|| ಎಚ್ ವಿ. ರಾಮಸ್ವಾಮಿಯವರಿಗೆ ಮಾರ್ಚಿ ತಾ. 11 ರಿಂದ ಒಂದು ತಿಂಗಳ ಪೂರಾ ತಲಬಿನ ಪ್ರಿವಿಲೆಜ್ ರಜಾ ಕೊಟ್ಟಿದೆ.

TAI NADU

11—3—1929

ವಕೀಲರಿಗೊಂದು ಮಾತು.

ವಕೀಲರುಗಳೆ! ಎತ್ತೆತ್ತಲೂ ಕರ್ನಾಟಕದ ವಕೀಲರ ಣದ ಮಾತ. ನೀವೇನು ಮಾಡುವಿರಿ? ಒಂದು ಗೂಡಿ ವಿರಾ ಅಥವಾ ತುಂಡು ತುಂಡಾಗಿರುವುದನ್ನೆ ಒ ಪ್ಪನೋದಿರುವಿರಾ?

ಇಂದಲ್ಲದಿದ್ದರೆ ನಾಳೆಯಾದರೂ ತುಂಡು ತುಂಡಾಗಿ ರುವ ಕರ್ನಾಟಕದ ಪ್ರಾಂತಗಳು ಒಂದುಗೂಡಬೇಕು. ನಿರೆಯಬೇಡಿ ಸದ್ಯ ಸರಕಾರವು ಹೇಗಾದರೂ ಇರಲಿ ಮುಂದಿನ ಸರಕಾರವು ಜವಾಬ್ದಾರಿ ಸರಕಾರವಾಗುವು ದು. ನಮ್ಮ ಸಹೋದರ ಆಂಗ್ಲ ಕರ್ನಾಟಕರು (ಕೊಡ ಗರು ಕೂಡಿ) ಜವಾಬ್ದಾರಿ ಸರಕಾರ ಪಡೆಯುವರು. ಮೈಸೂರು ಕರ್ನಾಟಕರು ಕೀಳ್ತರಗತಿಗೆ ಕೆಂದ ವರೆ ಮ ಭಾವಿಸಲು ಅವಕಾಶ ಕೊಡಬಾರದು.

ಆಂಗ್ಲ ಮೈಸೂರು ಕರ್ನಾಟಕ ಕಿ ಬಂದ ಮಾ ಯವಾಗಿಸಿ ನಿಜಕರ್ನಾಟಕವಾಗಬೇಕು. ಮೈಸೂರು ಅಖಿಲ ವಿದ್ಯಾನಿಲಯವು ಕರ್ನಾಟಕ ವಿದ್ಯಾಲಯ ಮೈ ಸೂರು ಮುಖ್ಯ ಕೋರ್ಟು ಅಖಿಲ ಕರ್ನಾಟಕದ ಹೈ ಕೋರ್ಟು ಆಗಬೇಕು. ಮೈಸೂರ ದರ್ಬಾರ ಎಂಬುದು ಅ ಖಿಲ ಕರ್ನಾಟಕ ದರ್ಬಾರ್ ಎಂದಾಗಬೇಕು.

ಈಗಲಾದರೂ ನಮ್ಮ ಸಹೋದರ ಕರ್ನಾಟಕರು ನಮ್ಮನ್ನು ನಮ್ಮ ಸರಕಾರವನ್ನು ಅಲ್ಲಗಳೆಯುತ್ತಿರುವರ. ಅವರ ಕ್ಷಮಾಪಣೆ ಪಡೆದು ನಮ್ಮ ಪೂರ್ವಸ್ಥಿತಿಯಲ್ಲಿ ದೋಷವಿದ್ದುದನ್ನು ತೋರಗೊಡುವೆವೆನ್ನೋಣ. ಆರೀ ಂದ ದೋಷವು ಹೊರಬಿದ್ದರೆ ನಾಚುವದೇಕೆ?

ಮೈಸೂರು ಕೋರ್ಟುಗಳು ಅಖಿಲ ಇಡಿಕರ್ನಾಟ ಕರಿಗೆ ಸಮರ್ಪಕವಾಗುವಂತೆ ಮಾಡಬೇಕು. ಕೋರ್ಟಿ ನಮು ಅದರಲ್ಲೂ ನ್ಯಾಯಾಧಿಕಾರಿಗಳು ಯಾರ ಯೋ ಗಕ್ಷೇಮ ನೋಡಬೇಕು? ಬಿಜನಾಡ ಮುನಸೀಫರ ತೀ ರ್ಪಿಗೆ ಮೈಸೂರ ಮುನಸೀಫರು ಮರ್ಯಾದೆ ಕೊಡದಿ ದ್ದರೆ ಬೆಳಗಾವಿ ವರ್ತಕನು ಮೈಸೂರು ವರ್ತಕನ ಮೇ ಲೆ ನಂಬಿಕೆ ಹೇಗೆ ಇಡುವನು. ಅದರಂತೆಯೇ ಬೆಂಗಳೂ ರು ವರ್ತಕನು ಬಳ್ಳಾರಿ ವರ್ತಕನೊಂದಿಗೆ ಲೇವಾದೇವಿ ವ್ಯಾಪಾರ ನಡೆಸಲು ಹೇಗಾದೀತು? ವರ್ತಕ ವರ್ತಕ ರಿಗೆ ಅಸಮಾಧಾನ ಅಪನಂಬಿಕೆ ಬಂದರೆ ಇಡಿಕರ್ನಾಟ ಕ ವರ್ತಕರಿಗೆ ಸಹೋದರ ಪ್ರೇಮ ಹೇಗೆಬಂದೀತು?

ವಕೀಲರೆ! ಕಕ್ಷಿಗಾರರು ದುಡ್ಡುಕೊಡುವರು ನೀ ವು ವಾದಿಸುವಿರಿ. ಪಂಚೇಶದ ಕೋರ್ಟಿನ ತೀರ್ಪು ಇದ ಕ್ಕೆ ನಾವು ಮರ್ಯಾದೆ ನೀಡಬಾರದು. ನಮ್ಮನ್ನು ಬದ್ಧ ಗೊಳಿಸುವುದಿಲ್ಲ ನಮ್ಮ ಕಕ್ಷಿಗಾರರನ್ನು (ವರ್ತಕರನ್ನು) ಅವರ ಲೇವಾದೇವಿ (ಸಾಲಗಳಿಂದ) ಬರೇ ಮಾತಿನಿಂದ ಬರೇ ಹೆಮ್ಮೆಯಿಂದ ಋಣಮುಕ್ತರನ್ನಾಗಿ ಮಾಡಿಸಿದರೆ ದೇಶಂಮುಂದೆ ಸ್ವಾಧೆ ತಪ್ಪಿಸುವಿರಾ? ಹೀಗೆ ಕ ರ್ನಾಟಕ ವರ್ತಕರು ಭಿನ್ನರಾದರೆ ವಕೀಕರಣವೆಂತಾ ಗುವುದು?

ಕರ್ನಾಟಕ ದೇವಿಗೆ ವಕೀಲರ ಹೂ ಒಂದಿರಲಿ.

ಜೈ! ಕರ್ನಾಟಕದೇವಿಗೆ ಜೈ!

ವಿವಿಧ ವಿಷಯಗಳು

ಗೋವಾದ ವಿಚಿತ್ರಆಡಳಿತ

ಇಂಡಿಯಾದೇಶದ ಪ್ರಸಿದ್ಧ ಸಾರ್ವಜನಿಕವಾದ ಸೈ ವ ನ್‌ಬಹದ್ದೂರ ಅಹಮದಾಬಾದ್ ಕಾಲೇಜ್‌ಮುಖ್ಯ ರ ಮಹಾತ್ಮಾಗಾಂಧಿಯವರ ಪತ್ರಿಕೆಯು ಪರಿವರ್ತಿಸಿ ವಿಷಯಗಳು ಗೋವಾದಲ್ಲಿರುವ ಪತ್ರಿಕೆಗಳಲ್ಲಿ ಬಂದೂ ಡದೆಂದು ಅಲ್ಲಿನ ಸರಕಾರವು ರಾಷ್ಟ್ರೀಯ ಪತ್ರಿಕೆಗಳಿಗೆ ಚಿತ್ರಹಿಂಸೆ ಕೊಡುತ್ತಿದೆ- ತ್ರಿಕೆಗಳಲ್ಲ ಬರುವ ಲೇಖ ನಗಳ ವಿಮರ್ಶೆಗೆ ಒಬ್ಬ ಆಫೀಸರು ನಿಯಮಿಸಲ್ಪಟ್ಟಿ ರುವರು. ಸರಕಾರದ ಕನೀತಕ್ಕೆ ತಾಳಹಾಕುವ ಪತ್ರಿ ಕೆಗಳು ಸರ್ವಸ್ವಾತಂತ್ರ್ಯವನ್ನು ಹೊಂದಿ ರಾಷ್ಟ್ರೀಯ ಪತ್ರಿಕೆಗಳನ್ನು ದೂಷಿಸುತ್ತಾ ಇವೆ.

ವಂದನಾರ್ಪಣ ನಿಧಿ.

ಶ್ರೀವ ದಿಂಡಿಯಾ ಚಕ್ರವರ್ತಿಗಳಿಗೆ ಆರೋಗ್ಯಭಾಗ್ಯ ವುಂಟಾಗುವುದಕ್ಕೋಸ್ಕರ ಇಂಡಿಯಾದ ಬಡ ಬಗ್ಗ ರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಪ ಯೋನಿರ್ ಪತ್ರಿಕೆಯು ಮೇಲ್ಕಂಡ ನಿಧಿಯನ್ನು ಏರ್ಪ ಡಿಸಿರುತ್ತದೆ. ಇದಕ್ಕೆ ಪ್ರಥಮ ತರಗತಿ ಚಂದಾ 100 ರೂ. ಹವಾದ ನಿಧಿಯು ಲಾರ್ಡ್ ಇರ್ವಿನ್ ರವರ ವಶಕ್ಕೆ ಕೊಡಲ್ಪಡುವುದು.

ಪೋಸ್ಟ್ ಕಾರ್ಡುಗಳ ಬೆಲೆ

ಡೆಲ್ಲಿಯ ಕೌನ್ಸಿಲ್ ಆಫ್‌ಸ್ಟೇಟ್ ಸಭೆಯಲ್ಲಿ ಪೋ ಸ್ಟ್‌ಕಾರ್ಡುಗಳ ಬೆಲೆಯನ್ನು ಅರ್ಧಾಣೆಯಿಂದ ಕಾಲಾ ಣೆಗೆ ತಗ್ಗಿಸ ಬೇಕೆಂದು ಠರಾವು ತರಲ್ಪಟ್ಟಿತು. ಆದರೆ ಅದು ಸ್ವೀಕೃತವಾಗಲಿಲ್ಲ.

ಪ್ರಶಸ್ತಿ

ಮದ್ರಾಸಿನ ಹೈಕೋರ್ಟ್ ವಕೀಲರೂ ಮ|| ಆರ್. ಗೋಪಾಲಸ್ವಾಮಯ್ಯರವರ ತಮ್ಮಂದಿರೂ ಆದ ಮ|| ಆರ್ ಕೃಷ್ಣಯ್ಯರ್‌ರವರಿಗೆ ಬ್ರಿಟಿಷ್ ಸರ್ಕಾರ ವುರಾವ ಸಾಹೇಬ್ ಎಂಬ ಬಿರುದನ್ನು ಕೊಟ್ಟಿದೆ

ಬೆಂಚ್ ಕೋರ್ಟ್.

ರಾಜಧಾನಿಯಲ್ಲಿ ಬೆಂಚ್ ಕೋರ್ಟಿಗೆ ಮಿ|| ಪಿ. ಎ ಸ್. ರಾಮಸ್ವಾಮಯ್ಯಂಗಾರ್ಯರವರು ಈ ಮಾಹೆ 8 ನೇ ತಾ|| ನಿಂದಲೂ ಡು|| ಎಸ್. ನಂಜರಾಜ ಅರಸಿನವರು 26 ನೇ ತಾ|| ನಿಂದಲೂ ಮಿ|| ಇ. ರಾಮಸ್ವಾಮಯ್ಯರ್ ರವರು ಏಪ್ರೆಲ್ 13 ನೇ ತಾ|| ನಿಂದಲೂ ಧರ್ಮ ಪ್ರ ಕಾಶ ಡಿ. ಬಸುವಯ್ಯನವರು ಮೇ 31 ನೇ ತಾ|| ನಿಂದಲೂ ಎರಡನೆಯ ದರ್ಜೆಯ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರವರು.

ಸೆಂಟ್ರಲ್ ಕಮಿಟಿ.

ಹಿಂದೂಸ್ಥಾನದ ಸೆಂಟ್ರಲ್ ಕಮಿಟಿಯ ಮೆಂಬರುಗ ಳು ಈ ತಿಂಗಳು 8 ನೇ ತಾ|| ರಾಜಧಾನಿಗೆ ಬಂದರು.

ಭೀಕರ ಕ್ಷಾಮ.

ಚೈನಾದ ಒಂದು ಜಿಲ್ಲೆಯಲ್ಲಿ 30 ಸಾವಿರ ಜನರು ನಿರ್ಗತಿಕರಾಗಿರುವರು. ನೂರಾರು ಕುಟುಂಬಗಳು ಕ್ಷು ದ್ಬಾಧೆಯನ್ನು ಸಹಿಸಲಾರದೆ ಆತ್ಮಹತ್ಯ ಮಾಡಿಕೊಂಡಿ ರುವರು. ಆಹಾರಕ್ಕಾಗಿ ಇದ್ದ ಪ್ರಾಣಿಗಳೆಲ್ಲಾ ನಿರ್ನಾ ಮವಾದುವು. ಗ್ರಾಮಾಂತರದಲ್ಲಿ ಒಣಹುಲ್ಲಿನಿಂದ ತ ಯಾರಾದ ಒಂದು ತರಹ ದ್ರವ ರೂಪವಾದ ಆಹಾರವು ಅಲ್ಲಿನ ನಿವಾಸಿಗಳಿಗೆ ಪ್ರಾಣಾಧಾರವಾಗಿರುತ್ತದೆ.

ಮಿ|| ಸೋ|| ಪಿ. ಸುಬ್ರಹ್ಮಣ್ಯಂರವರ ಹೇಳಿಕೆ

"ಈ ತಿಂಗಳು 8 ನೇ ತಾ|| [illegible] ಬೆಳಿಗ್ಗೆ ಸಮಯದಲ್ಲಿ ಇಬ್ಬರು ಪೋಲೀಸಿನವರು ನನ್ನ ಮನೆಗೆ ಬಂದು ಮಲಗಿದ್ದ ನನ್ನನ್ನು ಎಬ್ಬಿಸಿ ಚಿಂತಾಮಣಿ ರ ಮೆರವಣಿಗೆಯ ವಿಷಯದಲ್ಲಿ ಏನಾದರೂ ಬಂದೋಬಸ್ತು ಗಳನ್ನು ಮಾಡಿದ್ದೀರಾ ಎಂದು ಕೇಳಿದ್ದಕ್ಕೆ ಏನೂ ಬಂದ ಬಸ್ತು ಮಾಡಿಲ್ಲ ಎಂಬ ಉತ್ತರ ಪಡೆದು, ಅನಂತರ ನನ್ನ ನ್ನು ಪುನಃ ಈ ವಿಷಯದಲ್ಲಿ ಸ್ವಾಲೋಚಿಸಬೇಕೆಂದ ತಿಳಿಸಿದ್ದಕ್ಕೆ ನನ್ನ ಮೊದಲಿನ ಕಾರ್ಯಕ್ರಮಗಳನ್ನೇ ಸ ನ್ನನ್ನು ಬಹಿಷ್ಕರಿಸಿ [illegible] ನಡೆಸುವೆನೆಂದು ಉತ್ತರ ಹೇಳಿದೆನು. ಅವರ ಅಭಿಪ್ರಾ ಯದಂತೆ ನನ್ನ ಪ್ರಾತಃಕಾಲದ ಆಹ್ನಿಕ ಮೊದಲಾದುವ ನ್ನು ಮುಗಿಸಿಕೊಂಡು ಅವರ ಜೊತೆಯಲ್ಲೇ ನಮ್ಮ ಮ ನೆಯ ಸ್ವಲ್ಪ ದೂರದಲ್ಲಿದ್ದ ಮೋಟಾರ್ ಬಳಿ ಹೋಗಿ ಇಬ್ಬರು ಪೋ|| ಆಫೀಸರುಗಳನ್ನು ಕಂಡು ಸ್ವಲ್ಪಕಾಲ ಮಾತನಾಡಿದೆನು. ಅನಂತರ ನನ್ನನ್ನು ದಸ್ತಗಿರಿ ಮಾಡಿ ರುವುದಾಗಿ ಹೇಳಿ ಮೋಟಾರಿನಲ್ಲಿ ಕೂರಿಸಿಕೊಂಡು ಯಲಹಂಕಕ್ಕೆ ಕರೆದುಕೊಂಡು ಹೋದರು. ಅಲ್ಲಿ ನನ ಗೆ ಉಪಾಹಾರಾದಿಗಳಾದ ಮೇಲೆ [illegible] ಕರೆದೊಯ್ದರು. ಅಲ್ಲಿ ನನ್ನನ್ನು [illegible] ದಸ್ತಗಿರಿ ಮಾಡಿರುವರೆಂದೂ 151 ನೇ [illegible] ಸೆಕ್ಷನ್ ಎಂದೂ ವಾರಂಟು ಅನಾವಶ್ಯಕವೆಂದೂ ತಿಳಿಸಿ ದರು. ರಾಜಾನುಕುಂಟೆಯಿಂದ ವಾಪಸು ಬೆಂಗಳೂರಿನ ಪೈಗ್ರೌಂಡ್ ಪೋಲೀಸ್ ಸ್ಟೇಷನ್ ಬಳಿ ಕರೆತಂ ದು ಸಿಂಹ ಮೇಲೆ ಪೋ|| ಆಫೀಸರುಗಳು (ಸ್ವಲ್ಪ ಕಾ ಲಾನಂತರ)ನನ್ನನು ಬಿಡುಗಡೆ ಮಾಡುಲ್ಪಡುವೆನೆಂದು ಹೇಳಿ ಪುನಃ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ ಬಳಿ 11—20 ನಿಮಿಷದ ಹೊತ್ತಿಗೆ ಬಿಡುಗಡೆಮಾಡಿದರು."

ಸೈಮನ್ ಕಮೀಷನ್

ಮೇಲ್ಕಂಡ ಕಮೀಷನ್ನಿನವರು ಮೈಸೂರಿಂದ ನೀಲ ಗಿರಿಗೆ ಹೋಗಿ ಅಲ್ಲಿಂದ 12 ನೇ ತಾ|| ನಾಗಪುರಕ್ಕೆ ಪ್ರಯಾಣಮಾಡುವರು.

ಈಜಾಟ

13 ವಯಸ್ಸಿನ ಆಂಗ್ಲ ಹುಡುಗಿಯೊಬ್ಬಳು 1 ಗಜ ದೂರವನ್ನು 1 ನಿಮಿಷ 45 ಸೆಕೆಂಡುಗಳಲ್ಲಿ ಈಜಿ ಪ್ರಸಿದ್ಧಿ ಹೊಂದಿರುವಳು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಸಾರ್ಕೋನಿಯುಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು ಶೀಟ್ ಕ್ಯಾಲೆಂಡರ್ ಪಾಕೆಟ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ಒಂಟಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲುದಲ್ಲಿರುವುದೇನು ?



ರ ಕ್ತವೃದ್ಧಿಮಾಡಿ ರತಿರೋಗಗಳನ್ನು ನೀಗಿಸಿ
ತ ನುವಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನ ರಗಳನ್ನು ಬಿಗಿಮಾಡಿ ಅಂಟುರೋಗಗಳನ್ನು ಪರಿಹರಿಸಿ
ಮಿ ದುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸ ಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಿ ಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹ ರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲ ಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವ ರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯವೃಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೊ., (ಆಂಜನೇಯ ಜ್ಯೋತಿಷಾಲಯ,)
ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.)

THE JUPITER GENERAL INSURANCE Co., Ltd


Applications are invited from respectable and influential gentlemen from every Taluk and District Centres or Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance.
Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.



ಬಂಗಾರದ ಕೈಬಳೆಗಳೂ ಜೈಸುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಕಡಿಮೆ. ಕೆಲಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಪ್ರೊಪ್ರೈಟರ್ ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ

" ಭಿಷಗ್ರತ್ನ "

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳ.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸರಸ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಬ್ರಾಂಚ್ ಆಫೀಸು ಚಿಕ್ಕಪೇಟೆ ಬೆಂಗಳೂರು ಸಿಟಿ } ಹೆಡ್ ಆಫೀಸು ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು

Printed and published by P. R Rmaaiya.
... Press, D Subbaih Road, Mysore.

Regd No M. 2322

|| ವಂದೇ ಮಾತರಂ ||

ಬಿಡಿ ಪತ್ರಿಕೆ ೩ ಕ್ಕೆ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { ಸ್ಥಳಕ್ಕೆ ...
ಚಂದಾ { ಪರಸ್ಥಳಕ್ಕೆ ...

ಸಂಪುಟ ೧] ಮಂಗಳವಾರ ೧೨ ಮಾರ್ಚಿ ೧೯೨೯ [ಸಂಚಿಕೆ ...

TAI NADU
12—3—1929

ದಬ್ಬಾಳಿಕೆಯ ಯುಗ

ಬ್ರಿಟಿಷ್ ಇಂಡಿಯಾದಲ್ಲಿ ಪುನಃ ದಬ್ಬಾಳಿಕೆಯ ಯುಗವು ಆರಂಭವಾಯಿತು. ನಮ್ಮ ಮೈಸೂರಿನ ಅಧಿಕಾರಿಗಳೂ ದಬ್ಬಾಳಿಕೆಯನ್ನು ಆರಂಭಿಸಿರುವರು. ಪ್ರಜೆಗಳು ತಮ್ಮ ಅಸಂತೃಪ್ತಿಯನ್ನೂ ಅಸಮಾಧಾನವನ್ನೂ ಪ್ರಕಟಿಸುವುದು ಸಹಜ. ಸಹಿಸಲು ಅಸಾಧ್ಯವಾದಷ್ಟು ಸಂಕಟವುಂಟಾದರೆ ಪ್ರಜೆಗಳು ಅನ್ಯಾಯಗಳನ್ನು ತಡೆಯಲಾರದೆ ತಮ್ಮ ಸಂಕಟವನ್ನು ಪ್ರದರ್ಶಿಸುವರು. ಉದ್ವೇಗದಿಂದ ಭಾಷಣಗಳೂ ಲೇಖನಗಳೂ ಬರುವುವು. ಸರಕಾರದವರು ಪ್ರಜೆಗಳ ಸಂಕಟವನ್ನರಿತು ಅನ್ಯಾಯಗಳನ್ನು ಶಮನ ಮಾಡುವುದು ನ್ಯಾಯವಾದ ಮಾರ್ಗ. ಸರ್ಕಾರದವರಿಗೆ ಬೇಕಾದಷ್ಟು ಅಧಿಕಾರವಿರುವುದು. ನಿಜ. ಕಾನೂನುಗಳು ಅವರ ಕೈಯಲ್ಲಿರುವುವು. ಕಾನೂನನ್ನು ಚಲಾಯಿಸುವ ಅಧಿಕಾರವು ಅವರ ಕೈಯಲ್ಲಿರುವುದು. ಆದರೆ ಕಾನೂನಿನ ಉಪಯೋಗವು ಸರಿಯಾಗಿ ಆಗಬೇಕು. ಕಳ್ಳರನ್ನೂ ಘಾತಕರನ್ನೂ ಪುಂಡರನ್ನೂ ಪಟಿಂಗರನ್ನೂ ನಿಗ್ರಹಿಸುವುದಕ್ಕಾಗಿಯೇ ಕಾನೂನು ಇರುವುದು. ಆದರೆ ದೇಶಭಕ್ತಿಯಿಂದಲೂ ಪ್ರಾಮಾಣಿಕತನದಿಂದಲೂ ಸದ್ಬುದ್ಧಿಯಿಂದಲೂ ಪ್ರಜೆಗಳ ಸೇವೆಯನ್ನು ಮಾಡಿ ಸರ್ಕಾರದವರು ತಿದ್ದಿಕೊಳ್ಳಲಿ ಎಂದು ಪ್ರಜಾಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿಯೂ ನಿರ್ಭಯವಾಗಿಯೂ ಪ್ರತಿಪಾದಿಸುವ ಪತ್ರಿಕಾಕರ್ತರನ್ನೂ ನಿಗ್ರಹಿಸುವುದು ವಿವೇಕವಲ್ಲ. ಇಂತಹ ದೇಶ ಸೇವಕರನ್ನು ಸ್ನೇಹಿತರಂತೆ ಭಾವಿಸಿ ಅವರ ಅಭಿಪ್ರಾಯಗಳಿಗೆ ಮನ್ನಣೆಯನ್ನು ಕೊಟ್ಟು ಸಾಧ್ಯವಾದಷ್ಟು ಅವುಗಳನ್ನು ಆಚರಣೆಗೆ ತರುವುದು ದೇಶಭಕ್ತಿಯಿಂದ ಕೂಡಿದ ಸರಕಾರದ ಕರ್ತವ್ಯ. ಬ್ರಿಟಿಷ್ ಇಂಡಿಯಾದ ಸರಕಾರಕ್ಕೆ ದೇಶಭಕ್ತಿ ಇಲ್ಲ. ಅದು ಪರಕೀಯ ಸರ್ಕಾರ ಅದರ ಧ್ಯೇಯವೇ ಬೇರೆ. ಆ ಸರ್ಕಾರವು ಪ್ರಜಾಭಿಪ್ರಾಯವನ್ನು ಅದುಮಿ ಪ್ರಜಾಸೇವಕರನ್ನು ದಬ್ಬಾಳಿಕೆಯಿಂದ ನಿಗ್ರಹಿಸಿದರೆ ಅದರಂತೆಯೇ ನಮ್ಮ ಮೈಸೂರು ಸರ್ಕಾರವೂ ಅನುಸರಿಸುವುದು ಸಮರ್ಥನೀಯವಲ್ಲ. ಮೈಸೂರು ಸರ್ಕಾರವು ದೇಶೀಯ ಸರ್ಕಾರ. ಮೈಸೂರಿನ ಸತ್ಪ್ರಜೆಗಳು ದೇಶೀಯರು. ಇಬ್ಬರ ಗುರಿಯೂ ಒಂದೇ. ಸರ್ಕಾರದಧಿಕಾರಿಗಳು ದೇವಾಂಶಸಂಭೂತರಲ್ಲ. ಅವರಿಗೂ ಸ್ವಾರ್ಥ ದಂಭ ಅಹಂಕಾರ ಮೊದಲಾದ ದುರ್ಗುಣಗಳಿರುವುವು. ಈ ದುರ್ಗುಣಗಳ ಪ್ರೇರಿತರಾಗಿ ಅನೇಕ ತಪ್ಪುಕೆಲಸಗಳನ್ನೂ ಮಾಡಬಹುದು. ಅಂತಹ ಸನ್ನಿವೇಶಗಳಲ್ಲಿ ಪ್ರಜಾಸೇವಕರು ಸರ್ಕಾರದ ತಪ್ಪನ್ನು ತೋರಿಸಿದರೆ ಅದನ್ನು ತಿದ್ದಿಕೊಳ್ಳಬೇಕು. ಅದನ್ನು ಬಿಟ್ಟು ಪ್ರಜಾಸೇವಕರನ್ನು ತಮ್ಮ ಶತ್ರುಗಳೆಂದು ಭಾವಿಸಿ ಅವರನ್ನು ರಾಜದ್ರೋಹಿಗಳೆಂದೂ ದಂಗೆಕೋರರೆಂದೂ ಕರೆದು ಅವರ ಮೇಲೆ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲಾ ಪ್ರಯೋಗಿಸುವುದು ಧರ್ಮವಲ್ಲ. ಇದರಿಂದ ಶಾಂತಿಯುಂಟಾಗುವುದಿಲ್ಲ. ಉರಿಯುತ್ತಿರುವ ಜ್ವಾಲೆಗೆ ತುಪ್ಪವನ್ನು ಸುರಿದಂತೆ ಪ್ರಜಾಭಿಪ್ರಾಯವು ಪ್ರಜ್ವಲಿಸುವುದು. ದಬ್ಬಾಳಿಕೆಯು ಬ್ರಿಟಿಷ್ ಇಂಡಿಯಾದಲ್ಲಿ ಫಲಿಸಲಿಲ್ಲ. ಯಾವ ಕಾಲದಲ್ಲಿಯೂ ಫಲಿಸಲಿಲ್ಲ ಈಗ ಮೈಸೂರಿನಲ್ಲೂ ಫಲಿಸುವುದಿಲ್ಲ.

ಮ|| ಗಳಾದ ವೀರಕೇಸರಿ ಸೀತಾರಾಮಶಾಸ್ತ್ರಿಗಳನ್ನೂ ಸಿ. ಅಶ್ವತ್ಥನಾರಾಯಣರಾಯರನ್ನೂ ರಾಜದ್ರೋಹಕ್ಕಾಗಿ ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಮಾಡಿರುವರು. ಆ ವಿಚಾರಣೆಯ ಗೊಡವೆಗೆ ನಾವು ಈಗ ಹೋಗುವುದಿಲ್ಲ. ಮ|| ಶಾಸ್ತ್ರಿಗಳು ಬರೆದ ಮತ್ತು ಅಶ್ವತ್ಥರಾಯರವರು ಪ್ರಕಟಿಸಿದ ಲೇಖನವು ರಾಜದ್ರೋಹಕರವೋ ಅಲ್ಲವೋ ಎಂಬುದರ ತೀರ್ಮಾನವನ್ನು ನ್ಯಾಯಸ್ಥಾನಕ್ಕೆ ಬಿಡುವೆವು ಆದರೆ ಮೇಲಿನ ದೊಡ್ಡ ಮನುಷ್ಯರೊಬ್ಬರೂ ಅತ್ಯಂತ ಪ್ರಾಮಾಣಿಕರಾದ ರಾಜಭಕ್ತರೂ ಪ್ರಜಾಸೇವಕರೂ ಎಂಬುದನ್ನು ನಾವು ಹೇಳುವೆವು. ಪ್ರಜೆಗಳು ಇದನ್ನು ಒಪ್ಪುವರು. ಇವರು ಅಧಿಕಾರಗಳ ಭಕ್ತರಲ್ಲ ಸೀಸದ ದೇವರುಗಳ ಉಪಾಸಕರುಗಳಲ್ಲ ನಮ್ಮ ಮೈಸೂರು ಇತಿಹಾಸದಲ್ಲಿ ಈ ಇಬ್ಬರು ಮಹನೀಯರ ಸ್ಥಾನವು ಸುವರ್ಣಾಕ್ಷರಗಳಿಂದ ಬರೆಯಲ್ಪಡುವುದು ಪ್ರಜೆಗಳ ಹಕ್ಕು ಬಾಧ್ಯತೆಗಳಿಗೋಸ್ಕರವಾಗಿಯೂ ಅಧಿಕಾರಿಗಳಿಗೆ ಅಪ್ರಿಯವಾದದ್ದೂ ತಮ್ಮ ತನುಮನಧನಗಳನ್ನೂ ಸ್ವಾರ್ಥತ್ಯಾಗಮಾಡುವರೋ ಅವರೇ ಧನ್ಯರು. ಅಂತಹವರ ಸಂಖ್ಯೆಯು ಹೆಚ್ಚಾಗಲೆಂದು ನಾವು ಕೋರುವೆವು.

ತಗಡೂರು ರಾಮಚಂದ್ರರಾಯರ ಮೊಕದ್ದಮೆ

ನಮ್ಮ ನಿನ್ನೆಯ ಸಂಚಿಕೆಯಲ್ಲಿ ತಿಳಿಸಿದ್ದ ಪ್ರಕಾರ ತಗಡೂರು ರಾಮಚಂದ್ರರಾಯರ ಮೇಲಿನ ಮೊಕದ್ದಮೆಯು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಿನ್ನೆ ಮಧ್ಯಾಹ್ನ 12 ಘಂಟೆಗೆ ತೆಗೆದುಕೊಳ್ಳಲ್ಪಟ್ಟಿತು. ಕೋರ್ಟಿನ ಒಳ ಮತ್ತು ಹೊರಭಾಗಗಳಲ್ಲಿ ಕಿಕ್ಕಿರಿಯುವಷ್ಟು ಪ್ರೇಕ್ಷಕರು ಸೇರಿದ್ದರು. ರಾಮಚಂದ್ರರಾಯರವರು ಬರೆದು ತಂದಿದ್ದ ಸ್ಟೇಟ್‌ಮೆಂಟು ಓದಲ್ಪಟ್ಟು ರಿಕಾರ್ಡಾದಮೇಲೆ ಪ್ರಾಸಿಕ್ಯೂಷನ್ ತರಫ್ ಡಿವಿಷನಲ್ ಇನ್ಸ್‌ಪೆಕ್ಟರಾದ ಮ|| ಬಿ. ಎಸ್. ನಂಜುಂಡಯ್ಯ ಎಂ. ಎ. ಬಿ ಎಲ್ ರವರ ಸಾಕ್ಷಿಯು ತೆಗೆದುಕೊಳ್ಳಲ್ಪಟ್ಟಿತು ಮ್ಯಾಜಿಸ್ಟ್ರೇಟರು ಅಪರಾಧಿಗಳಾದ ರಾಯರನ್ನು ಹೇಳಬೇಕಾದ್ದೇನಾದರೂ ಇದ್ದಲ್ಲಿ ಹೇಳಬಹುದೆಂದು ಕೇಳಿದಾಗ ನನ್ನಿಂದ ಯಾವ ಶಾಂತಿ ಭಂಗವೂ ಉಂಟಾಗುತ್ತಿರಲಿಲ್ಲವೆಂದು ಧೃಢವಾಗಿ ಹೇಳುತ್ತೇನೆ. ಇಷ್ಟೆಲ್ಲಾ ಪೋಲೀಸಿನವರು ಕೊಟ್ಟಿರುವ ಸುಳ್ಳು ರಿಪೋರ್ಟಿನ ಫಲವೇ ಹೊರತು ಮತ್ತೇನೂ ಬೇರೆ ಇಲ್ಲ. ದೇವರ ಒಬ್ಬನೆದುರಿಗೆ ಹೇಳಬೇಕಾದ್ದದೆಯೇ ಹೊರತು ಇನ್ನೇನೂ ಇಲ್ಲ ತಮ್ಮ ಚಿತ್ತವಿದ್ದಂತೆ ಮಾಡಬಹುದು" ಎಂದು ಮಾತ್ರ ತಿಳಿಸಿದರು. ಎಲ್ಲವನ್ನೂ ಸಾವಧಾನವಾಗಿ ಮ್ಯಾಜಿಸ್ಟ್ರೇಟರು ಪರ್ಯಾಲೋಚಿಸಿ ಕಡೆಯಲ್ಲಿ 10 ರೂಪಾಯಿ ಜುಲ್ಮಾನೆ ಅಥವಾ ಒಂದು ವಾರ ಸಜಾ ಆ ಜುಲ್ಮಾನೆಯನ್ನು ಈಗಲೇ ಪಾವತಿ ಮಾಡಿದಲ್ಲಿ ಸಜಾ ಅನುಭವಿಸಬೇಕಾಗಿಲ್ಲ. ಎಂಬ ತೀರ್ಪನ್ನಿತ್ತರು ಶ್ರೀ|| ರಾಯರು ಮಹಾಸ್ವಾಮಿ ಜುಲ್ಮಾನೆ ಕೊಡಲು ನನ್ನ ಅಂತರಾತ್ಮನು ಸ್ವಲ್ಪವೂ ಒಪ್ಪುವುದಿಲ್ಲ. ನನ್ನಲ್ಲಿ ಎಳಷ್ಟಾದರೂ ತಪ್ಪಿಲ್ಲದಿರುವಾಗ ಹೇಗೆ ಕೊಡಲಿ ಎಂದರು. ಕಟ್ಟಕಡೆಗೆ ಒಬ್ಬ ಪ್ರೇಕ್ಷಕರು ಆ ಜುಲ್ಮಾನೆಯನ್ನು ಕೋರ್ಟಿಗೆ ಪಾವತಿಮಾಡಿದನಂತರ ಮ್ಯಾಜಿಸ್ಟ್ರೇಟರು ರಾಯರನ್ನು ಬಿಡುಗಡೆ ಮಾಡಿದರು. ಅನಂತರ ರಾಯರವರು ಜಯಘೋಷವನ್ನು ಮಾಡುತ್ತಿದ್ದ ದೇಶಾಭಿಮಾನಿಗಳೊಡನೆ ಕಾಂಗ್ರೆಸ್ ಆಫೀಸು ತಲುಪಿದರು.

ವರ್ತಮಾನ ಸಂಗ್ರಹ.

ಪರೀಕ್ಷೆ

ಇಂಡಿಯನ್ ಫಾರೆಸ್ಟ್ ಸರ್ವಿಸ್‌ಗೆ ತರಬೇತಾಗಬೇಕಾಗಿರುವ ಉಮೇದುವಾರರ ಪರೀಕ್ಷೆಯು ಜುಲೈ 15 ನೇ ತಾ|| ನಿಂದ ಡೆಲ್ಲಿಯಲ್ಲಿ ಆರಂಭವಾಗುವುದು.

ಸರ್ಕಾರೀ ಸುದ್ದಿ

ಮೈಸೂರು ಡಿ|| ಪೋ|| ಸೂ|| ರಾದ ಮ|| ಸಿ. ಎಮ್. ಹೆಚ್. ರಣಜೋದ್ ಸಿಂಗ್‌ರವರೂ ಡಿ|| ಸೂ|| ರವರ ಪರಸನಲ್ ಅಸಿಸ್ಟೆಂಟ್‌ರಾದ ಮ|| ಆರ್. ಪಿ. ಮಲ್ಲಪ್ಪನವರೂ ಈ ಡಿಸ್ಟ್ರಿಕ್ಟಿನಲ್ಲಿ ಓಡಾಡುವ ಬಾಡಿಗೆ ಮೋಟಾರುಗಳ ಮೇಲೆ ಅಡೀಷನಲ್ ಇನ್ಸ್‌ಪೆಕ್ಟರುಗಳಾಗಿ ನಿಯಮಿಸಲ್ಪಟ್ಟಿರುವರು,

ಒಂದು ಸಲಹೆ.

ರೈಲುಗಾಡಿಗಳಲ್ಲಿ ಸಾಕಾದಷ್ಟು ಸ್ಥಳ ದೊರೆಯದಿರುವ ಪ್ರಯಾಣಿಕರ ಸಂಖ್ಯೆಗನುಗುಣವಾಗಿ ತಲಾ 5 ಪೌಂಡುಗಳ ಪ್ರಕಾರ ಜುಲ್ಮಾನೆಯನ್ನು ರೈಲ್ವೆ ಕಂಪನಿಗಳು ಕೊಡಬೇಕೆಂಬ ಸಲಹೆಯನ್ನು ರಾಯಲ್ ಕಮಿಷನ್ನಿನ ಮುಂದೆ ಆಂಗ್ಲೇಯ ದೊಡ್ಡಮನುಷ್ಯರೊಬ್ಬರು ತಿಳಿಸಿದರು.

ನೇಪಾಳದಲ್ಲಿ ಖಾದಿ ಪ್ರಚಾರ

ನೇಪಾಳ ಸರಕಾರವು ಸಂಸ್ಥಾನದಲ್ಲೆಲ್ಲಾ ಖಾದೀ ಪ್ರಚಾರವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸಬರಮತಿ ಆಶ್ರಮದಲ್ಲಿ ನೇಯುವ ಮತ್ತು ನೂಲುವ ತರಬೇತನ್ನು ಪಡೆದಿರುವ ಮಿ|| ತುಲಸಿಮೇಹರ್‌ರವರ ಕೈಕೆಳಗೆ ಆರು ಆರು ಜನ ಶಿಕ್ಷಕರನ್ನು ಏರ್ಪಡಿಸಿರುವರು. ಖಟ್ಮಂಡುವಿನಲ್ಲಿ 500 ಚರಕಗಳಿಂದ ಕೆಲಸ ನಡೆಯುತ್ತಿದೆ ಹಲವು ವಿಧವಾದ ಹತ್ತಿಯ ಬೀಜಗಳನ್ನು ಹಂಚಿರುವುದಲ್ಲದೆ ಅನೇಕ ಚರಕದ ಸ್ಕೂಲುಗಳನ್ನೂ ಏರ್ಪಡಿಸಿರುವರು.

ಕೋಲಾರದ ಡಿ|| ಇನ್ಸ್‌ಪೆಕ್ಟರಾದ ಮಿ|| ಕೆ. ನಾರಾಯಣರಾಯರಿಗೆ ಇಪ್ಪತ್ತನಾಲ್ಕು ದಿನಗಳ ಪೂರಾ ಸಂಬಳದ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಅಹಮದ್ ಹುಸೇನರವರು ಅವರ ಕೆಲಸಗಳ ಛಾರ್ಜನ್ನೂ ವಹಿಸತಕ್ಕದ್ದು.

ಅ|| ಇಂಜನಿಯರುಗಳಾದ ಮಿ|| ಕೆ. ಸುಬ್ಬರಾಯರನ್ನು ಶಿವಮೊಗ್ಗೆಯಿಂದ ಹುಣಸೂರಿಗೂ, ಮಿ|| ಎಂ. ಎನ್. ಲಕ್ಷ್ಮಣರಾಯರನ್ನು ಹುಣಸೂರಿನಿಂದ ಕೃಷ್ಣರಾಜಪೇಟೆಗೂ, ಮಿ|| ಕೆ. ಗರುಡಾಚಾರ್ಯರನ್ನು ಕೃಷ್ಣರಾಜಪೇಟೆಯಿಂದ ಟಿ. ನರಸೀಪುರದ ಸೇತುವೆ ಕಾಮಗಾರಿ ಡಿವಿಜನ್‌ಗೂ ವರ್ಗಾವರ್ಗಿ ಮಾಡಿದೆ.

ಸಬ್-ರೆಜಿಸ್ಟ್ರಾರುಗಳಾದ ಮಿ|| ಬಿ. ಲಕ್ಷ್ಮಣರಾಯರನ್ನು ಹೊಳೆನರಸೀಪುರದಿಂದ ಚಿಕ್ಕಮಗಳೂರಿಗೂ, ಮಿ|| ಎಂ. ನರಸಿಂಹಯ್ಯನವರನ್ನು ಚಿಕ್ಕಮಗಳೂರಿನಿಂದ ಹೊಳೆನರಸೀಪುರಕ್ಕೂ, ಮಿ|| ಬಿ. ಬಾಲಕೃಷ್ಣರಾಯರನ್ನು ಶಿಡ್ಲಘಟ್ಟದಿಂದ ಚಿತ್ರದುರ್ಗಕ್ಕೂ ಮಿ|| ಡಿ. ಸಿದ್ದಯ್ಯನವರು ತರೀಕೆರೆಗೂ ವರ್ಗಾವರ್ಗಿ ಮಾಡಿದೆ. ಮಿ|| ಎ. ರಾಘವೇಂದ್ರರಾಯರು ಮಾರ್ಚಿ ತಾ. 13 ರಿಂದ ರಿಟೈರಾಗುತ್ತಾರೆ.

ನಿನ್ನೆ ದಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತಗಡೂರು ರಾಮಚಂದ್ರ ರಾಯರನ್ನು ಬಿಡುಗಡೆ ಮಾಡಿದರು.

ತಾಯಿನಾಡು.
1—3—1929

ಬೆಂಗಳೂರು ದಸ್ತಗಿರಿ.

ಈ ಮಾಹೆ 7 ನೇ ತಾ|| ಗುರುವಾರ ರಾತ್ರೆ 8-30 ಘಂಟೆಯ ಸಮಯದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆಯ ಮೇಲೆ ಬೆಂಗಳೂರು ಬಳೇಪೇಟೆಯಲ್ಲಿರುವ ನವಜೀವನ ಆಫೀಸಿನಲ್ಲಿ ಮ|| ರಾ|| ಗಳಾದ ವೀರಕೇಸರೀ ಸಂ|| ರಾದ ಸೀತಾರಾಮಶಾಸ್ತ್ರಿಗಳನ್ನೂ ಮತ್ತು ನವಜೀವನ ಸಂಪಾದಕರಾದ ಅಶ್ವತ್ಥನಾರಾಯಣರಾಯರನ್ನೂ ಪೊಲೀಸಿನವರು ಇಂಡಿಯನ್ ಪೀನಲ್ ಕೋಡಿನ 124 ನೇ ಎ ಕಲಮನ್ನು ಉಪಯೋಗಿಸಿ ದಸ್ತಗಿರಿ ಮಾಡಿದರು. ನವಜೀವನ ಪತ್ರಿಕೆಯ ಆಫೀಸು ಡಿಸ್ಟ್ರಿಕ್ಟ್ ಮತ್ತು ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರವರಿಂದ ಸುಮಾರು ಎರಡು ಘಂಟೆಗಳ ಕಾಲದವರೆಗೆ ಶೋಧಿಸಲ್ಪಟ್ಟಿತು. ಆ ರಾತ್ರಿಯಲ್ಲಿ ಮ|| ಅಶ್ವತ್ಥನಾರಾಯಣರಾಯರನ್ನು ಯಲಹಂಕಾ ಗೇಟ್ ಪೋಲೀಸ್ ಸ್ಟೇಷನ್ನಿನಲ್ಲಿಟ್ಟಿದ್ದು ಮಾರನೆಯ ಪ್ರಾತಃಕಾಲ ಪುನಃ ಬಳೇಪೇಟೆಗೆ (ಆಫೀಸ್ ಶೋಧನೆಗಾಗಿ) ಕರೆತಂದರು. ಮ|| ಸೀತಾರಾಮ ಶಾಸ್ತ್ರಿಗಳನ್ನು ಕಂಗೇರಿ ಪೋಲೀಸ್ ಸ್ಟೇಷನ್ನಿನಲ್ಲಿಟ್ಟು ಅವರ ಮನೆಯನ್ನೂ ಶೋಧನೆ ಮಾಡಿದರು. ದಸ್ತಗಿರಿಯಾದ ಸಂದರ್ಭದಲ್ಲಿ ಕಿಕ್ಕಿರಿಯುವಂತೆ ಸೇರಿದ್ದ ಜನಸಂದಣಿಯಿಂದ ಜೈ ಜೈ ಕಾರವುಂಟಾಯಿತು. ನವಜೀವನ ಆಫೀಸು ಮೊಹರ್ ಮಾಡಲ್ಪಟ್ಟು ಪೋಲೀಸ್ ಪಹರೆ ಇಡಲ್ಪಟ್ಟಿದೆ ಮ|| ಸೀತಾರಾಮ ಶಾಸ್ತ್ರಿಗಳು ನವಜೀವನ ಪತ್ರಿಕೆಯಲ್ಲಿ ಈಗಿನ ರಾಜ್ಯಾಡಳಿತ ವಿಷಯವಾಗಿ ಮಿ|| ಮಿರ್ಜಾರವರ ದಿವಾನ್‌ಗಿರಿಯು ಕೊನೆಗಾಣಬೇಕು ಪ್ರೆಸ್ ಕಾನೂನು ಮುರಿದು ಸತ್ಯಾಗ್ರಹ ನಡೆಸಲು 50 ಜನರು ಸಿದ್ಧರಾಗಿರುತ್ತಾರೆ ಎಂದು ಬರೆಯುತ್ತಿದ್ದುದೇ ದಸ್ತಗಿರಿಗೆ ಕಾರಣವಾಗಿದೆ. ವೀರಕೇಸರಿ ಆಫೀಸೂ ಶೋಧಿಸಲ್ಪಟ್ಟಿತು.

ಮ|| ಶಾಸ್ತ್ರಿಗಳು ಹಸನ್ಮುಖರಾಗಿ "ಮೈಸೂರ್ ಸರಕಾರವು ಕಟ್ಟಕಡೆಗೆ ತನ್ನ ಗೂಢವಾದ ಮಾರ್ಗಗಳನ್ನು ಬಿಟ್ಟು ಬಯಲಿಗೆ ಬಂದುದಕ್ಕಾಗಿ ನಾನು ತಂಬಾ ಸಂತೋಷಪಡುತ್ತೇನೆ. ನನ್ನ ದಸ್ತಗಿರಿ ಮತ್ತು ವಿಚಾರಣೆಯು ಗುಪ್ತವಾಗಿ ನಡೆಸುತ್ತಿರುವ ಈಗಿನ ನಿರಂಕುಶಾಡಳಿತವನ್ನು ಹೋಗಲಾಡಿಸುವುದು. ಮೈಸೂರಿನವರೆಲ್ಲರಿಗೂ ಇದು ಒಂದು ಸಕಾಲವಾಗಿದೆ ದೇಶಾಭಿಮಾನಿಗಳೆಲ್ಲರೂ ಇದಕ್ಕೆ ತಕ್ಕ ಉತ್ತರವನ್ನು ಕೊಡಬೇಕು." ಎಂದು ತಿಳಿಸಿದವರು.

ಅಪಾದಿತರನ್ನು 8 ನೇ ತಾ ಮಧ್ಯಾಹ್ನ 1 ಘಂಟೆಗೆ ಡಿ|| ಮ್ಯಾ|| ರ ಕೋರ್ಟಿಗೆ ಕರೆದುಕೊಂಡು ಹೋಗಿ ವಿಚಾರಣೆಗೆ ಆರಂಭಿಸಿದರು. ಮ|| ರಾ|| ಗಳಾದ ಸಿ. ಎನ್. ನರಸಿಂಹಯ್ಯಂಗಾರ್ಯರೂ ಎಂ. ಕೃಷ್ಣಮೂರ್ತಿಯವರೂ ಎಂ. ಪಿ. ಸೋಮಶೇಖರ ರಾಯರವರೂ ತಮ್ಮಗಳ ಜಾಮೀನಿನ ಮೇಲೆ ಅಪಾದಿತರನ್ನು ಬಿಡುಗಡೆ ಮಾಡಬೇಕೆಂದು ಕೇಳಿದ ಅರ್ಜಿಯನ್ನು ಕೋರ್ಟಿನವರು ತಿರಸ್ಕರಿಸಿದರು. ಜಾಮೀನಿನಮೇಲೆ ಬಿಡುಗಡೆ ಮಾಡದಿರಲು ಕಾರಣವೇನೆಂದು ಮ್ಯಾಜಿಸ್ಟ್ರೇಟರು ಕೇಳಲು ಒಂದನೆ ಅಪಾದಿತರು ರಾಜದ್ರೋಹಕರವಾದ ಲೇಖನವನ್ನು ಬರೆದಿರುವರೆಂದೂ ಎರಡನೆಯವರು ಆ ಲೇಖನಗಳನ್ನು ಪ್ರಕಟಿಸಿರುವರೆಂದೂ ಈ ಅಪರಾಧಗಳಿಗೆ 497 ಸೆಕ್ಷನ್ ಪ್ರಕಾರ ದ್ವೀಪಾಂತರಶಿಕ್ಷೆಯಾಗಬೇಕಾಗಿದೆ. ಆ ಕಾರಣದಿಂದ ಜಾಮೀನಿನಮೇಲೆ ಬಿಡುಗಡೆ ಮಾಡಲು ಅವಕಾಶವಿಲ್ಲ ಎಂದು ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಅರಿಕೆ ಮಾಡಿದರು.

ಮ|| ಸಿ. ಎನ್. ನರಸಿಂಹ ಅಯ್ಯಂಗಾರ್‍ರವರು ನಾಗಪುರದ ಕೋರ್ಟಿನವರು 1927ರಲ್ಲಿ ಕೊಟ್ಟಿರುವ ಒಂದು ಮೊಕದ್ದಮೆಯ ತೀರ್ಪನ್ನು ತೋರಿಸಿ ಅದೇರೀತಿ ಜಾಮೀನಿನ ಮೇಲೆ ಬಿಡಬೇಕೆಂದು ಅರಿಕೆ ಮಾಡಿಕೊಂಡರು. ಮ್ಯಾಜಿಸ್ಟ್ರೇಟರು ಮೇಲ್ಕಂಡ ವಿಷಯವನ್ನೆಲ್ಲಾ ಪರ್ಯಾಲೋಚಿಸಿ ಈ ತರಹದ ಕೇಸು ನಡೆದಿರುವುದಲ್ಲಿ ಇದೇ ಮೊದಲನೆಯದಾದ್ದರಿಂದ ಜಾಮೀನಿನ ಮೇಲೆ ಬಿಡಲಾಗ ವುದಿಲ್ಲವೆಂದೂ 11 ನೇ ತಾ|| ಸೋಮವಾರ ವಿಚಾರಣೆ ನಡೆಸುತ್ತೇವೆಂದೂ ಅಪಾದಿತರನ್ನು ಪೋಲೀಸಿನವರು ಕರೆದುಕೊಂಡು ಹೋಗಬೇಕೆಂದೂ ಹುಕ್ಕುಂ ಮಾಡಿದರು.

ತಗಡೂರು ರಾಮಚಂದ್ರರಾಯರ ದಸ್ತಗಿರಿ:—

ತಾ|| 6-3-1929 ನೇ ದಿವಸ ಸಾಯಂಕಾಲ 5 ಘಂಟೆಗೆ ಸರಿಯಾಗಿ ಅಂಕನಾಥೇಶ್ವರ ಮೈದಾನದಲ್ಲಿ ಮಾ|| ರಾ|| ವೆಂಕಟರಾಮಯ್ಯನವರ ಕೋರಿಕೆಯಂತೆ ಮ|| ರಾ|| ಜಹಗೀರ್‌ದಾರ್ ಜಿ. ಅಶ್ವತ್ಥನಾರಾಣಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆದು ಕೆಳಗೆಕಂಡ ರೆಸಲ್ಯೂಷನ್‌ಗಳು ಠರಾವಾದವು ಶ್ರೀ ರಾಮಚಂದ್ರರಾಯರವನ್ನು ದಸ್ತಗಿರಿಮಾಡಿದ ವಿಚಾರದಲ್ಲಿ ಪಶ್ಚಾತ್ತಾಪ ಇಡಿ ಇಂಡಿಯಾದೇಶದಲ್ಲಿ ಸೈಮನ್ ಸಮಿತಿಯರಿಗೆ ಬಹಿಷ್ಕಾರವು ಉಂಟಾಗಿರುವಾಗ ಇದಕ್ಕಾಗಿ ಸರ್ಕಾರದವರು ರಾಯರನ್ನು ಬಂಧನದಲ್ಲಿಟ್ಟಿರುವುದು ಬಹಳ ಶೋಚನೀಯ ಘನಸರ್ಕಾರದವರು ಜಾಗ್ರತೆಯಾಗಿ ರಾಯರವರನ್ನು ಬಂಧನದಿಂದ ವಿಮುಕ್ತರನ್ನಾಗಿಮಾಡಿ ತಗಡೂರು ಪುರ ನಿವಾಸಿಗಳಿಗೆ ಸಂತೋಷವನ್ನುಂಟುಮಾಡಲೆಂದು ಹಾರೈಸಿದೆ. ರಾಯರವರಿಗೆ ದೇವರು ಆಯುರಾರೋಗ್ಯವನ್ನೂ ಮನಸ್ಥೈರ್ಯವನ್ನೂ ದೇಶಸೇವೆಯಲ್ಲಿ ಹೆಚ್ಚು ಆಸಕ್ತಿಯನ್ನೂ ಉಂಟುಮಾಡಲಿ

ತಗಡೂರು. ಅಶ್ವತ್ಥನಾರಾಯಣಪ್ಪ

ಪ್ರಿನ್ಸಿಪಾಲ್ ಪಿರಾಸ್‌ರವರು.

ಗುಜರಾತ್ ಕಾಲೇಜಿನ ಪ್ರಿನ್ಸಿಪಾಲರವರು ಕಾಲೇಜು ಕಲಸಕ್ಕೆಂದು ಎಲ್ಲಾ ವಿದ್ಯಾರ್ಥಿಗಳಿಂದಲೂ ತಲಾ ಎರಡೆರಡು ರೂಪಾಯಿನಂತೆ ವಸೂಲ್ಮಾಡಿದ್ದ ಫಂಡನ್ನು ತಮ್ಮ ಮನೆಯ ಶೃಂಗಾರಕ್ಕೆ ಉಪಯೋಗಿಸಿಕೊಂಡಿದ್ದು ತಪ್ಪೆಂದು ಒಬ್ಬ ವಿದ್ಯಾರ್ಥಿಯು ದಿವಾಣಿ ಕೋರ್ಟಿನಲ್ಲಿ ದಾವಾಮಾಡಿದನು. ಪ್ರಿನ್ಸಿಪಾಲರು ತಮ್ಮ ಮೇಲೆ ಡಿಕ್ರಿಯಾಗುವುದೆಂದು ತಿಳಿದು ಆ ವಿದ್ಯಾರ್ಥಿಗೆ ಕೋರ್ಟು ಖರ್ಚನ್ನೂ ಉಳಿದ ವಿದ್ಯಾರ್ಥಿಗಳಿಗೆ ಅವರವರ ಮೊಬಲಗನ್ನೂ ವಾಪಸು ಮಾಡುವುದಾಗಿ ತಿಳಿಸಿರುವರು.

ಕರ್ನಾಟಕ ಏಕೀಕರಣ

ಈಗ ಕೆಲವು ದಿವಸಗಳ ಹಿಂದೆ ಡೆಲ್ಲಿಯ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ [illegible] ರಾಯರು ಕರ್ನಾಟಕ [illegible] ತಂದರು. ಈ ಠರಾವಿನ ಅಭಿಪ್ರಾಯ [illegible] ಪ್ರಧಾನ [illegible] ಜಾತಿ [illegible] ಸಭೆಗಳಿಂದ [illegible] ಆರ್ಥಿಕ ವಿಚಾರಗಳಲ್ಲಿ [illegible] ದರ್ಶಿಗಳನ್ನೂ [illegible] ಯಾ ಸರಕಾರದವರು [illegible] ಯವರು ಕರ್ನಾಟಕ ಏಕೀಕರಣಕ್ಕೆ [illegible] ಯಗಳನ್ನೂ [illegible] 31 ನೇ ತಾ|| [illegible] ಸಬೇಕೆಂಬುದೇ ಈ ಠರಾವಿನ [illegible] ಯವರು ಈ ಠರಾವನ್ನು [illegible] ಕ್ತಿಯುಕ್ತವಾದ ಒಂದು ಭಾಷಣವನ್ನು ಮಾಡಿದರು. ಈ ಏಕೀಕರಣದಿಂದ ಕರ್ನಾಟಕದ [illegible] ಹೇಗೆ ಆಗುವುದೆಂಬುದನ್ನು [illegible] ಗಿ ಕರ್ನಾಟಕವನ್ನು ಒಟ್ಟುಗೂಡಿಸಿ ಒಂದು [illegible] ಪ್ರಾಂತ್ಯವನ್ನಾಗಿ [illegible] ಯಿಗಳು [illegible] ದೂ ತಿಳಿಸಿದರು. [illegible] ಕರ್ನಾಟಕವು ಸ್ವತಂತ್ರವಾದ ಒಂದು [illegible] ಬೇಕೆಂದು ಅಭಿಪ್ರಾಯವನ್ನು ಪ್ರಕಟಿಸಿದರು. [illegible] ತಾನೆ ಕಳೆದ ತಿಂಗಳು [illegible] ರ್ನಾಟಕ ಏಕೀಕರಣದ ಸಭೆಗಳು ನಡೆದವು. ಆದರೂ ಪ್ರಜಾಭಿಪ್ರಾಯಕ್ಕೆ ಇಂಡಿಯಾ ಸರಕಾರದ [illegible] ಯೇ ಇಲ್ಲ. ಇಂಡಿಯಾಸರಕಾರದವರು [illegible] ಇಂತಹ ಉಪಯುಕ್ತವಾದ [illegible] ದೊರೆಯದೆ [illegible] ದೃಷ್ಟ.

ಶ್ರೀ ಸೀತಾರಾಘವ ವೈದ್ಯಶಾಲೆಯ [illegible] ಆರ್ಯಭಟ್ಟಸಿದ್ಧಾಂತ [illegible] ವಾದ ಶ್ರೀ [illegible]

ಪಂಚಾಂಗಗಳು

[illegible]

ಪಂಚಾಂಗ 1ರ ಬೆಲೆ 2 ಅಣೆ [illegible]

ಒಟ್ಟಿಗೆ ಕೊಂಡರೆ 1 ಪ್ರತಿ [illegible]

ಜಾತಕ [illegible] 1 [illegible] ದೃಗ್ಗಣಿತ ಪಂಚಾಂಗದೊಡನೆ ಸೇರಿದ ಪ್ರತಿ 1ಕ್ಕೆ 3 ಅಣೆ. ಒಟ್ಟು ವ್ಯಾಪಾರಿಗಳಿಗೆ ಕಮೀಷನ್ ಕೊಡಲಾಗುತ್ತದೆ. ಪೋಸ್ಟೇಜು ಬೇರೆ. ದೊರೆವಸ್ಥಳಗಳು:—

(1) ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

[illegible]

(2) ಶ್ರೀ ಸೀತಾರಾಘವ ವೈದ್ಯಶಾಲೆ [illegible]

Printed and published by P. R. Ramaiya, at Sri Rama Press, D. Subbiah Road, Mysore.

Regd. No M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ ಆರ್. ರಾಮಯ್ಯ

ಸಂಪುಟ ೧] ಬುಧವಾರ ೧೩ ಮಾರ್ಚಿ ೧೯೨೯ [ಸಂಚಿಕೆ [illegible]

ತಾಯಿನಾಡು.

13—3—1929

ರಾಜದ್ರೋಹವೆಂದರೇನು!

ರಾಜದ್ರೋಹವೆಂದರೆ ಯಾವುದು? ಸರಕಾರದ ಅಧಿಕಾರಿಗಳ ತಪ್ಪನ್ನು ತೋರಿಸಿ ಅವರು ತಿದ್ದಿಕೊಳ್ಳಬೇಕೆಂದು ಹೇಳುವುದು ರಾಜದ್ರೋಹವೇ? ಯಾವ ಅಧಿಕಾರಿಗಳ ಆಡಳಿತದಿಂದ ದೇಶದಲ್ಲಿ ಅಶಾಂತಿಯುಂಟಾಯಿತೋ ಅವರನ್ನು ಬದಲಾಯಿಸಿ ಬೇರೊಬ್ಬರನ್ನು ನೇಮಿಸಬೇಕೆಂದು ವಾದಿಸುವುದು ರಾಜದ್ರೋಹವೇ? ಭಾಷಣ ಸ್ವಾತಂತ್ರ್ಯ ಲೇಖನ ಸ್ವಾತಂತ್ರ್ಯ ಸಭಾ ಸ್ವಾತಂತ್ರ್ಯಗಳನ್ನು ಬೇಕೆಂದು ಹೇಳುವುದು ರಾಜದ್ರೋಹವೇ ಕೆಟ್ಟಕಾನೂನುಗಳೆಲ್ಲಾ ಹೋಗಬೇಕೆಂದು ಪ್ರಯತ್ನಿಸುವುದು ರಾಜದ್ರೋಹವೇ ಕರಾಳ ರಾಕ್ಷಸನಂತಿರುವ ಪ್ರೆಸ್ ಕಾನೂನು ಕಾನೂನಿನ ಕಡತದಿಂದ ತೆಗೆದು ಹಾಕಲ್ಪಡಬೇಕೆಂದು ಪ್ರಚಾರ ಮಾಡುವುದು ರಾಜದ್ರೋಹವೇ ಕೆಟ್ಟಕಾನೂನುಗಳನ್ನು ಕಿತ್ತುಹಾಕಬೇಕೆಂದು ಚಳುವಳಿ ಮಾಡುವುದು ರಾಜದ್ರೋಹವೇ ಕೆಟ್ಟಕಾನೂನನ್ನು ಕಿತ್ತುಹಾಕಬೇಕೆಂದು ನ್ಯಾಯವಿಧಾಯಕ ಸಭೆಯಲ್ಲಿ ಠರಾವು ಪಾಸಾಗಿದ್ದರೂ ಶ್ರೀಮನ್ಮಹಾರಾಜರವರೇ ಆ ಕೆಟ್ಟಕಾನೂನನ್ನು ತೆಗೆದುಹಾಕಬೇಕೆಂದು ಆಜ್ಞೆಯನ್ನು ಕೊಟ್ಟಿದ್ದರೂ ಅದರಂತೆ ಆ ಕಾನೂನನ್ನು ಕಿತ್ತುಹಾಕದೇ ಇದ್ದವರನ್ನು ಖಂಡಿಸುವುದು ರಾಜದ್ರೋಹವೇ ಎಲ್ಲಾ ವಿಧವಾದ ಪ್ರಚಾರಗಳನ್ನು ಮಾಡಿದರೂ ಅಧಿಕಾರಿಗಳು ಮನಸ್ಸಿಗೆ ತಂದುಕೊಳ್ಳದೆ ಆ ಕೆಟ್ಟಕಾನೂನನ್ನೇ ಉಪಯೋಗಿಸುತ್ತಿರುವುದನ್ನು ಕಂಡು ಸತ್ಯಪ್ರೇರಣೆಯಿಂದ ಆ ಕಾನೂನನ್ನು ಮುರಿದು ಅದರಿಂದ ಬರುವ ಕಷ್ಟ ನಷ್ಟಗಳನ್ನು ಅನುಭವಿಸಿ ತಮ್ಮ ಆತ್ಮವನ್ನು ಪ್ರಕಾಶ ಮಾಡುವವರು ರಾಜದ್ರೋಹಿಗಳೇ? ಪ್ರಜೆಗಳಿಗೆ ಕಂಟಕರಾಗಿರುವ ಕರಾಳ ಕಾನೂನುಗಳನ್ನು ಮಹಾತ್ಮಾ ಗಾಂಧಿಯವರು ಲೋಕಮಾನ್ಯ ತಿಲಕರು ಪಂಡಿತ ಮಾಳವೀಯರೇ ಮೊದಲಾದವರು ಮುರಿದಿಲ್ಲವೇ ಇವರ ರಾಜದ್ರೋಹಿಗಳೇ ಇಂತಹ ಮಹನೀಯರನ್ನೆಲ್ಲಾ ನಮ್ಮ ಸರಕಾರದವರು ಸತ್ಕರಿಸಲಿಲ್ಲವೇ ಹಾಗಾದರೆ ನಮ್ಮ ಮೈಸೂರಿನಲ್ಲಿಯೇ ಹುಟ್ಟಿಬೆಳೆದು ಮೈಸೂರಿನ ಅಭಿವೃದ್ಧಿಗಾಗಿಯೇ ಕೆಟ್ಟ ಕಾನೂನುಗಳು ಹೋಗಬೇಕೆಂದು ಪ್ರಯತ್ನಪಡುತಿರುವ ದೇಶಭಕ್ತರನ್ನು ರಾಜದ್ರೋಹಿಗಳೆಂದು ಕರೆಯುವುದು ತಪ್ಪಲ್ಲವೇ ಆತ್ಮಗೊಂದು ಕಾನೂನು ನೂಸಗೊಂದು ಕಾನೂನೇ ದೇಶದ ಹಿತವನ್ನು ಕೋರಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗಿರುವ ಸತ್ಯಾಗ್ರಹಿಗಳನ್ನು ರಾಜದ್ರೋಹಿಗಳೆಂದು ಕರೆಯುವುದು ಯುಕ್ತವಲ್ಲ.

ನಮ್ಮ ಸಂಸ್ಥಾನದಲ್ಲಿ ರಾಜದ್ರೋಹಿಗಳು ಯಾರೂ ಇಲ್ಲ. ಶ್ರೀಮನ್ಮಹಾರಾಜರವರಿಗೆ ವಿರೋಧವಾಗಿ ಕೆಲಸ ಮಾಡತಕ್ಕವರು ಒಬ್ಬರೂ ಇಲ್ಲ. ಸರಕಾರವನ್ನು ಮುರಿದು ಅನಾಯಕತ್ವವನ್ನು ಉಂಟುಮಾಡಬೇಕೆಂದು ಒಬ್ಬರೂ ಪ್ರಯತ್ನಿಸುತ್ತಿಲ್ಲ.

ಹೌದು ಕೆಲವು ಅಧಿಕಾರಿಗಳ ಆಡಳಿತವು ಅನೇಕರಿಗೆ ಅತೃಪ್ತಿಯನ್ನುಂಟುಮಾಡಿದೆ. ಆ ಅಧಿಕಾರಿಗಳನ್ನು ಬದಲಾಯಿಸಿದ ಹೊರತು ದೇಶಕ್ಕೆ ಕ್ಷೇಮವಿಲ್ಲ ಎಂದು ಅನೇಕರು ಹೇಳುತ್ತಿರುವರು. ಅದು ರಾಜದ್ರೋಹವಲ್ಲ. ಮತ್ತು ಈಗಿನ ರಾಜ್ಯಪದ್ಧತಿಯನ್ನ ಬದಲಾಯಿಸಿ ಜವಾಬ್ದಾರಿ ಸರಕಾರ ಪದ್ಧತಿಯನ್ನು ಏರ್ಪಡಿಸಬೇಕೆಂದು ಕೆಲವರು ಪ್ರಯತ್ನ ಪಡುತ್ತಿರುವರ. ಇದೂ ರಾಜದ್ರೋಹವಲ್ಲ.

ಪುನಃ ಕೆಲವರು ಪ್ರೆಸ್‌ಕಾನೂನಂತಹ ಕರಾಳಶಾಸನಗಳನ್ನು ಉಲ್ಲಂಘಿಸಲು ಹೊರಟಿರುವರು. ಇದೂ ರಾಜದ್ರೋಹವಲ್ಲ. ಈ ಸತ್ಯಾಗ್ರಹಿಗಳು ಶ್ರೀಮನ್ಮಹಾರಾಜರಲ್ಲಿ ಭಕ್ತಿಯಿನ್ನಟ್ಟವರು. ಸರಕಾರದಲ್ಲಿ ಗೌರವವನ್ನಿಟ್ಟಿರುವರು ಯಾವ ಅಧಿಕಾರಿಯನ್ನೂ ದ್ವೇಷಿಸುವುದಿಲ್ಲ ಕೆಟ್ಟಕಾನೂನುಗಳನ್ನು ಮುರಿದು ಆಡಳಿತವನ್ನು ಸರಿಪಡಿಸುತ್ತಿರುವರು. ಕೆಟ್ಟಕಾನೂನುಗಳನ್ನು ಮುರಿಯುವದರಿಂದ ಉಂಟಾಗಬಹುದಾದ ಶಿಕ್ಷೆಗಳನ್ನು ಅನುಭವಿಸಲು ಸಿದ್ಧರಾಗಿರುವರು. ತಾವು ಕಷ್ಟಪಟ್ಟು ಲೋಕೋಪಕಾರವನ್ನು ಮಾಡಲು ಹೊರಟ ಸತ್ಯಾಗ್ರಹ ವೀರರಾಗಿರುವರು. ಇವರು ಎಂದಿಗೂ ರಾಜದ್ರೋಹಿಗಳಲ್ಲ.

ಸರಕಾರದವರು ಈ ತತ್ವವನ್ನು ಅರಿತು ಸತ್ಯಗ್ರಹಿಗಳ ಉದ್ದೇಶವನ್ನು ಸಫಲಗೊಳಿಸಿ ಕೆಟ್ಟಕಾನೂನುಗಳನ್ನು ತೊಡೆದುಹಾಕಿ ಅವಿಚಕ್ಷಣರಾದ ಅಧಿಕಾರಿಗಳನ್ನು ಬದಲಾಯಿಸಬೇಕು ಇಲ್ಲದೇ ಹೋದರೆ ಕಾನುಕಾಲದಲ್ಲಿ ಯಾರು ನಿಜವಾದ ದೇಶಭಕ್ತರನ್ನು ಈಗ ರಾಜದ್ರೋಹಿಗಳೆಂದು ಕರೆಯುವರೇ ಅವರೇ ಮುಂದೆ ಇತಿಹಾಸದಲ್ಲಿ ಬಹಳ ಕಪ್ಪಾದ ಅಕ್ಷರಗಳಿಂದ ರಾಜದ್ರೋಹಿಗಳೆಂದೂ ಪ್ರಜಾಕಂಟಕರೆಂದೂ ಬರೆಯಿಸಿಕೊಳ್ಳುವರು.

ಕ್ರಿಶ್ಚಿಯನ್ ಮಿಷನರಿಗಳಿಗೆ ವಾಗ್ಬಂಧನ.

ಹುಬ್ಬಳ್ಳಿಯ ಒಂದನೆ ಮ್ಯಾಜಿಸ್ಟ್ರೇಟರು ಅಲ್ಲಿಯ ಬೇಸಲ್ ಮಿಷನ್ನಿನ ಇಬ್ಬರು ಪಾದ್ರಿಗಳು ಹುಬ್ಬಳ್ಳಿಯಲ್ಲಿಯೂ ಮತ್ತು ಸಿದ್ಧಾರೂಢಸ್ವಾಮಿಗಳ ಜಾತ್ರೆಯಲ್ಲಿಯೂ ಮತಸಂಬಂಧವಾಗಿ ಮಾತನಾಡಕೂಡದೆಂದು ಅವರ ಮೇಲೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೇ ಸೆಕ್ಷನ್ ಅನುಸರಿಸಿ ನೋಟೀಸನ್ನು ಜಾರಿ ಮಾಡಿರುತ್ತಾರೆ. ಅದರಂತೆಯೇ ಹುಬ್ಬಳ್ಳಿಯ ತರುಣ ಸಂಘದ ಅಧ್ಯಕ್ಷರಾದ ಡಾ॥ ಹರ್ಡೀಕರ್‌ರ ಮೇಲೂ ಮತ್ತು ಕಾಂಗ್ರೆಸ್ ಮತ್ತು ಕಮಿಟಿಯ ಪ್ರೆಸಿಡೆಂಟರು ವೈಸ್ ಪ್ರೆಸಿಡೆಂಟರು ಇನ್ನಿಬ್ಬರು ಸದಸ್ಯರ ಮೇಲೂ ಮೇಲ್ಕಂಡ ನೋಟೀಸನ್ನು ಜಾರಿಮಾಡಿರುತ್ತಾರೆ ಲೋ

ಬೇಕಾದರೆ ಲಂಗೋಟಿಯನ್ನು ಕಿತ್ತುಕೊಳ್ಳಲಿ.

ಕಲ್ಕತ್ತಾದಲ್ಲಿ ಮ॥ ಗಾಂಧಿಯವರನ್ನು ದಸ್ತಗಿರಿ ಮಾಡಿ 50 ರೂಪಾಯಿಗಳ ಜಾಮೀನಿನ ಮೇಲೆ ಬಿಟ್ಟ ವಿಷಯದಲ್ಲಿ ಅಮೃತಬಜಾರ್‌ಪತ್ರಿಕೆಯುಬಹಳ ಕುಚೋದ್ಯವಾಗಿ ಬರೆದಿರುವುದೇನೆಂದರೆ ಮ॥ ಗಾಂಧಿಯವರು 50 ರೂಪಾಯಿಗಳನ್ನು ಕೊಡದೆಹೋದರೆ ಕೋರ್ಟಿನವರು ಏನುಮಾಡಬೇಕು? ಅವರ ಲಂಗೋಟಿಯನ್ನು ಕಿತ್ತುಕೊಳ್ಳಬೇಕಲ್ಲದೆ ಬೇರೆಯಿಲ್ಲ.

ವರ್ತಮಾನ ಸಗ್ರಹ.

ಕಾಂಗ್ರೆಸ್ ಅಧ್ಯಕ್ಷರ ಮಾನ ನಷ್ಟದ ಮೊಖದ್ದಮೆ

ಮ॥ ಸಿ. ಎಸ್. ರಂಗಯ್ಯರು ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಮೋತೀಲಾಲ್ ನೆಹರೂರವರ ಮೇಲೆ ಮದರಾಸಿನ ಹೈಕೋರ್ಟಿನಲ್ಲಿ ಮಾಡಿದ್ದ ಮಾನನಷ್ಟದ ಮೊಕದ್ದಮೆಯನ್ನು ಮೊನ್ನೆ ಗುರುವಾರ ಜಸ್ಟಿಸ್ ಕುಮಾರಶಾಸ್ತ್ರಿಗಳು ದಾಖಲ್ ಮಾಡಿಕೊಂಡು ಈ ವಿಚಾರಣೆಯನ್ನು ನಡೆಸುವ ಅಧಿಕಾರವು ಮದರಾಸಿನ ಹೈಕೋರ್ಟಿಗೆ ಇರುವುದೇ ? ಎಂಬ ವಿಚಾರವು ನಿರ್ಧರಿಸಲ್ಪಡಬೇಕಾಗಿರುವುದೆಂದು ತಿಳಿಸಿದರು.

ಇದು ಏಕೆ ಈ ಪಕ್ಷಪಾತ?

ಬೆಂಗಳೂರು ಗಲಭೆಗಳಾದದಿಂದೀಚೆಗೆ ನಮ್ಮ ಸರಕಾರದವರು ಒಂದು ಪತ್ರಿಕೆಯ ಕಣ್ಣಿಗೆ ಬೆಣ್ಣೆ ಇನ್ನೊಂದು ಪತ್ರಿಕೆಯ ಕಣ್ಣಿಗೆ ಸುಣ್ಣ ಎಂಬ ನೀತಿಯನ್ನನುಸರಿಸಿರುವರು. ಪತ್ರಿಕೆಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಒಂದು ಪಂಗಡದ ಪತ್ರಿಕೆಗಳು ಬೆಂಗಳೂರು ಗಲಭೆಯಲ್ಲಿ ಅಪರಾಧಿಗಳನ್ನು ಶಿಕ್ಷಿಸಬೇಕೆಂದೂ ಸರಕಾರದ ಅಧಿಕಾರಿಗಳ ಅಜಾಗರೂಕತೆಯಿಂದಲೂ ಅವಿಚಕ್ಷಣೆಯಿಂದಲೂ ತಪ್ಪುಗಳು ನಡೆದುಹೋದವೆಂದು ವಾದಿಸಿದವು. ಇನ್ನೊಂದು ಪಂಗಡದ ಪತ್ರಿಕೆಗಳು ಇದೆಲ್ಲಾ ಬ್ರಾಹ್ಮಣರ ಪಿತೂರಿಯೇ ಹೊರತು ಏನೂ ಇಲ್ಲವೆಂದು ವಾದಿಸಿದವು. ಈ ಮಧ್ಯೆ ಸರಕಾರವನ್ನು ಆಕ್ಷೇಪಣೆಮಾಡಿ ಬರೆದ ಪತ್ರಿಕೆಗಳಿಗೆಲ್ಲಾ ಸರಕಾದವರು ಆದಷ್ಟು ಹಿಂಸೆಯನ್ನು ಕೊಟ್ಟರು. ಕೆಲವು ಪತ್ರಿಕೆಗಳಿಗೆ ಕೊಟ್ಟಿದ್ದ ಜಾಹೀರಾತುಗಳನ್ನು ಕಿತ್ತುಕೊಂಡರು. ಕೆಲವು ಪತ್ರಿಕೆಗಳಿಗೆ ಕಳುಹಿಸುತ್ತಿದ್ದ ಗೆಜೆಟ್ಟು ಆಡಳಿತ ವರದಿಗಳೂ ಪಬ್ಲಿಸಿಟಿ ಜರ್ನಲ್ ಮೊದಲಾದವುಗಳನ್ನು ನಿಲ್ಲಿಸಿದರು. ಇನ್ನೂ ಕೆಲವಕ್ಕೆ ಪತ್ರಿಕೆಗಳನ್ನು ನಿಲ್ಲಿಸಲಾಗುತ್ತದೆ ಎಂಬ ಎಚ್ಚರಿಕೆಗಳನ್ನು ಕೊಟ್ಟರು. ಕೆಲವನ್ನು ನಿಲ್ಲಿಸಿಯೂ ನಿಲ್ಲಿಸಿದರು. ಇಷ್ಟಲ್ಲದೆ ಸರಕಾರವನ್ನು ಶ್ಲಾಘಿಸುವವರಿಗೆಲ್ಲಾ ಬಲುಬೇಗನೆ ಪತ್ರಿಕೆಗಳನ್ನು ಹೊರಡಿಸಲು ಅಪ್ಪಣೆಯನ್ನು ಕೊಟ್ಟರು ಅವರುಗಳಿಗೆಲ್ಲಾ ಅಡ್ವರ್ಟೈಜ್‌ಮೆಂಟು ಮೊದಲಾದುವುಗಳನ್ನು ಕೊಟ್ಟಿರುವರು.

ಇದು ನ್ಯಾಯವೇ ? ಸರಕಾರದವರು ಈ ರೀತಿಯಾಗಿ ನಡೆಸಿದರೆ ಪ್ರಜೆಗಳು ಒಪ್ಪುವರೇ? ಅಡ್ವರ್ಟೈಜ್‌ಮೆಂಟ್ ಮೊದಲಾದವುಗಳು ಪ್ರಜೆಗಳ ಆದಾಯದ ಹಣದಿಂದ ಕೊಡಲ್ಪಡುವುದಿಲ್ಲವೆ? ಪತ್ರಿಕೆಗಳು ಪ್ರಜೆಗಳ ಬೆಂಬಲದಿಂದ ನಡೆಯಬೇಕಲ್ಲದೆ ಸರಕಾರದವರ ಪೋಷಣೆಯಿಂದಲ್ಲ. ಆದರೂ ಸರಕಾರದವರು ಪಕ್ಷಪಾತವನ್ನು ತೋರಿಸಬಾರದು. ಪತ್ರಿಕೆಗಳು ಬರೆಯುವುದರಲ್ಲಿಯು ಸತ್ಯಗ್ರಹಣವನ್ನು ಮಾಡಿ ಎಲ್ಲವನ್ನೂ ಸಮಾನವಾಗಿ ಕಾಣಬೇಕು.

ಕೆಲವು ಪತ್ರಿಕೆಗಳನ್ನು ಸ್ಕೂಲುಗಳಿಗೆ ತರಿಸಕೂಡದೆಂದು ಕಟ್ಟುಮಾಡಿರುವರು. ಈ ರೀತಿಯಾದ ಕಟ್ಟು ಇತರ ಪತ್ರಿಕೆಗಳಿಗೆ ಏಕೋ ಇಲ್ಲ. ಈ ಪಕ್ಷಪಾತವೇಕೆ? ಕಟ್ಟು ಇದ್ದರೆ ಎಲ್ಲ ಪತ್ರಿಕೆಗಳಿಗೂ ಇರಬೇಕು. ಇಲ್ಲದಿದ್ದರೆ ಒಂದಕ್ಕೂ ಬೇಡ ಈ ಭಾಗವನ್ನು ಸರಕಾರದವರು ಆಲೋಚಿಸಿ ಪಕ್ಷಪಾತವನ್ನು ಬಿಡಬೇಕೆಂದು ಕೋರುತ್ತೇನೆ.

ಗೋವಿಂದಯ್ಯ

TAI NADU

13—3—1929

ತಗಡೂರು ರಾಮಚಂದ್ರರಾಯರ ಹೇಳಿಕೆ.

ಓ ನ್ಯಾಯಾಧೀಶರೇ—

ಮೊನ್ನೆ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯು ಕಲ್ಕತ್ತಾದಲ್ಲಿ ಸೇರಿದಿದ್ದಾಗ ಈ ಸೈಮನ್ ಕಮಿಷನ್ನಿಗೆ ಬಹಿಷ್ಕಾರವನ್ನು ಹಾಕಬೇಕೆಂಬ ನಿರ್ಣಯವು ಸಂಪೂರ್ಣ ಸಹಾನುಭೂತಿಯಿಂದ ಪಾಸಾಯಿತು. ಅದರಂತೆ ಭರತಖಂಡದಲ್ಲೆಲ್ಲಾ ಈ ಕಮಿಷನ್ನಿಗೆ ಬಹಿಷ್ಕಾರವೂ ಹರತಾಳವೂ ಬಹಳ ಯಶಸ್ವಿಯಾಗಿ ನಡೆದಿರುವುದನ್ನು ತಾವು ವೃತ್ತಪತ್ರಿಕೆಗಳ ಮುಖೇನ ತಿಳಿದುಕೊಂಡೇ ಇದ್ದೀರೆಂದು ನಾನು ಊಹಿಸುತ್ತೇನೆ. ಹೀಗೆ ಇಡೀ ಭರತಖಂಡದ ಸಹಾನುಭೂತಿಯು ಇರುವ ಈ ಕಾರ್ಯಕ್ಕೆ ನಮ್ಮ ಮೈಸೂರಿನಲ್ಲಿ ಹೀಗೇಕೆ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಕಾನೂನಿನ ಪ್ರಕಾರ ನಾನು ತಪ್ಪಿತಸ್ಥನಾಗಿದ್ದರೂ ಆ ಕಾನೂನನ್ನು ಈಗ ಛಲಾಯಿಸಿದ್ದೇ ಶುದ್ಧ ತಪ್ಪೆಂದು ನಾನು ಅಭಿಪ್ರಾಯಪಡುತ್ತೇನೆ. ಬೆಂಗಳೂರಿನಲ್ಲಿ ಆರ್ಡರನ್ನೇ ವಾಪಸು ತೆಗೆದುಕೊಂಡ ಸಂಗತಿಯು ತಮಗೆ ವೇದ್ಯವಾಗಿರಬಹುದು. ಇದ್ದ ಸಂಗತಿಯನ್ನು ಸನ್ನಿಧಿಯಲ್ಲಿ ಅರಿಕೆ ಮಾಡಿರುತ್ತೇನೆ ಸ್ವಾಮಿ.

ಪ್ರಜಾಭಿಪ್ರಾಯಕ್ಕೆ ಬಂಧನಗಳು.

ನಮ್ಮ ಸಂಸ್ಥಾನದಲ್ಲಿ ಎಷ್ಟೋ ಜನರು ವರ್ತಮಾನ ಪತ್ರಿಕೆಗಳನ್ನು ಹೊರಡಿಸಬೇಕೆಂದು ಸರ್ಕಾರದಿಂದ ಅಪ್ಪಣೆಯನ್ನು ಪಡೆದು ಇನ್ನೂ ಆ ಪತ್ರಿಕೆಗಳನ್ನು ಹೊರಡಿಸಲಿಲ್ಲ. ಕಾರಣಗಳು ಅನೇಕವಾಗಿರಬಹುದು. ಮುಂದೆ ಅವರು ಪತ್ರಿಕೆಗಳನ್ನು ಹೊರಡಿಸಬಹುದು. ಮೈಸೂರು ಸರಕಾರದವರು ಈಚೆಗೆ ಮಾಡಿದ ಒಂದು ವಿಚಿತ್ರವಾದ ಆರ್ಡರಿನಲ್ಲಿ ಈ ರೀತಿಯಾದ ಅಪ್ಪಣೆಯನ್ನು ಪಡೆದು ಹೊರಡಿಸದೆ ಇದ್ದವರ ಅಪ್ಪಣೆಗಳನೆಲ್ಲಾ ವಾಪಸು ತೆಗೆದುಕೊಂಡಿರುವರೆಂದೂ, ಕೆಲವು ಕಾಲ ಹೊರಡಿಸಿ ಅವುಗಳನ್ನು ನಿಲ್ಲಿಸಿರುವವರು ಒಂದು ತಿಂಗಳಿನ ಒಳಗಾಗಿ ಹೊರಡಿಸದೆ ಹೋದ ಅವರ ಅಪ್ಪಣೆಗಳನ್ನೂ ವಾಪಸು ತೆಗೆದುಕೊಳ್ಳುವರೆಂದೂ ಸಮಾಚಾರವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು. ಈ ಆರ್ಡರು ಪ್ರೆಸ್ ಟೇಬಲ್ಲಿನ ಮೇಲೆ ಇಡಲ್ಪಟ್ಟಿಲ್ಲವೆಂದೂ ಈ ಆರ್ಡರು ಯಾರಿಗೆ ಅನ್ವಯಿಸುತ್ತದೆಯೋ ಅವರಿಗೂ ಕಳುಹಿಸಲ್ಪಟ್ಟಿಲ್ಲವೆಂದೂ ತಿಳಿದು ಬಂದಿದೆ. ಸರಕಾರದವರ ಈ ರೀತಿಯಾದ ವರ್ತನೆಗೆ ಕಾರಣವೇನೋ ಗೊತ್ತಿಲ್ಲ. ಯಾರು ಯಾವ ಸಮಯದಲ್ಲಿ ಪತ್ರಿಕೆಯನ್ನು ಹೊರಡಿಸಿ ಏನು ಬರೆಯುವರೋ ಎಂಬ ಭೀತಿಯೇ ಇದಕ್ಕೆ ಕಾರಣವಾಗಿರುವಂತೆ ಕಾಣುತ್ತದೆ. ಈ ರೀತಿಯಾದ ಆರ್ಡರುಗಳಿಂದ ಸರಕಾರದವರು ಪ್ರಜಾಭಿಪ್ರಾಯವನ್ನು ಬಂಧಿಸುವೆವೆಂದು ತಿಳಿದಿದ್ದರೆ ಅದು ಬರೀ ಭ್ರಾಂತಿ. ಇದರಿಂದ ಪ್ರಜಾಭಿಪ್ರಾಯಕ್ಕೆ ಇನ್ನೂ ಕ್ಷೋಭೆಯಾಗಿ ಅಸಮಾಧಾನವು ಜಾಸ್ತಿಯಾಗುವುದು. ಸರಕಾರದ ಈಗಿನ ಮನಸ್ಥಿತಿಯು ಅವರ ಕೀರ್ತಿಗೆ ಭಂಗವನ್ನು ತರುವುದೇ ಹೊರತು ಮತ್ತೇನೂ ಇಲ್ಲ.

ದೇಶದ್ರೋಹಿಗಳಿಗೆ ಬಹಿಷ್ಕಾರ.

ಪಂಡಿತ ಮದನಮೋಹನ ಮಾಲವೀಯರವರು ಲಾಹೋರಿನಲ್ಲಿ ವಿದ್ಯಾರ್ಥಿಗಳಿಗೆ ಮಾಡಿದ ಒಂದು ಉಪದೇಶದಲ್ಲಿ ಸಿ. ಐ. ಡಿ. ಗಳ ದೇಶದ್ರೋಹವನ್ನು ಕುರಿತು ಹೇಳಿದ್ದೇನೆಂದರೆ—"ದೇಶದ್ರೋಹಿಗಳು ಯಾರು ಎಂಬುದನ್ನು ನಾವು ತಿಳಿಯಬೇಕು. ಅನೇಕ ಭಾರತೀಯರು ಪೋಲೀಸು ಇಲಾಖೆಯಲ್ಲಿಯೂ ಸಿ. ಐ. ಡಿ. ಇಲಾಖೆಯಲ್ಲಿಯೂ ಇದ್ದಾರೆ. ಇವರು ನೌಕರಿಯಲ್ಲಿರುವ ವರೆಗೆ ತಮ್ಮ ಕರ್ತವ್ಯವನ್ನು ಮಾಡಲೇಬೇಕು. ಇವರು ತಮ್ಮ ಕರ್ತವ್ಯವನ್ನು ಸರಿಯಾಗಿಯೂ ನಂಬಿಕೆಯಾಗಿಯೂ ಆತ್ಮಸಾಕ್ಷಿಗನುಗುಣವಾಗಿಯೂ ಮಾಡಿದರೆ ಅವರನ್ನು ದೇಶದ್ರೋಹಿಗಳೆಂದು ಕರೆಯಬಾರದು. ಆದರೆ ಸುಳ್ಳುಸುಳ್ಳಾದ ಹೊಟ್ಟೇಕಿಚ್ಚಿನಿಂದ ಕೂಡಿದ ದುರುದ್ದೇಶಗಳಿಂದ ಕೂಡಿದ ರಿಪೋರ್ಟುಗಳನ್ನು ಮಾಡಿದರೆ ಅವರು ದೇಶದ್ರೋಹಿಗಳೇ ಸರಿ. ಮತ್ತು ಸರ್ಕಾರದ ಹೊರಗೂ ಅನೇಕರು ಸರ್ಕಾರದವರ ದಿಲ್‌ಕುಷಿ ಖಾತ್ರಿಕುಷಿ ಮಾಡುವುದಕ್ಕೋಸ್ಕರ ಸುಳ್ಳುಸುಳ್ಳಾಗಿ ಜನಗಳ ಮೇಲೆ ಚಾಡಿಗಳನ್ನು ಹೇಳುವುದುಂಟು. ಇಂತಹವರು ತಮ್ಮ ಸ್ವಾರ್ಥಕ್ಕಾಗಿ ದೇಶದ್ರೋಹವನ್ನೂ ಮಾಡುವರು. ಇವರಿಗೆ ಸಮಾಜದಲ್ಲಿ ಯಾವ ಮನ್ನಣೆಯೂ ದೊರೆಯಕೂಡದು. ಬಹಿಷ್ಕಾರವೇ ಇವರಿಗೆ ಮದ್ದು."

ನಮ್ಮ ಮೈಸೂರಿನಲ್ಲಿಯೂ ಅನೇಕ ಸ್ವಾರ್ಥಿಗಳು ಅಧಿಕಾರಿಗಳ ವಿಶ್ವಾಸವನ್ನು ಬಯಸುವುದಕ್ಕೋಸ್ಕರ ಇತರರ ಮೇಲೆ ಸುಳ್ಳುಸುಳ್ಳಾದ ಚಾಡಿಗಳನ್ನೂ ಹೇಳುವರು. ಸತ್ಯಕ್ಕೂ ಧರ್ಮಕ್ಕೂ ದ್ರೋಹಮಾಡಿ ತಾವು ಮುಂದೆ ಬರುವರು. ಪಂಡಿತ ಮದನಮೋಹನ ಮಾಲವೀಯವರ ಉಪದೇಶದಂತೆ ಇಂತಹವರನ್ನೂ ಬಹಿಷ್ಕರಿಸಬೇಕು

ಗಂಗಾಪುರದಲ್ಲಿ ರೈಲ್ವೇ ಅನಾಹುತ.

ಮೊನ್ನೆ 8ನೇ ತಾ|| ಶುಕ್ರವಾರ ಕಲ್ಕತ್ತೆಯ ಬಳಿ ಗಂಗಾಪುರದಲ್ಲಿ ರೈಲ್ವೆ ಲೈನಿನಲ್ಲಿ ಕೆಲಸಮಾಡುತ್ತಿದ್ದ 5 ಜನ ಕೂಲಿಗಳು ರೈಲಿಗೆ ಸಿಕ್ಕಿ ಇಬ್ಬರು ತಕ್ಷಣವೇ ಮೃತಪಟ್ಟರು. ಉಳಿದ ಮೂರು ಜನರಿಗೆ ಪೂರಾ ಪೆಟ್ಟುಗಳು ಬಿದ್ದವು.

ಪತ್ರವ್ಯವಹಾರ

(ಜಾಸ್ತೀದಾರರ ಅಭಿಪ್ರಾಯಕ್ಕೆ ನಾವು ಬಾಧ್ಯರಲ್ಲ.)

ಸೈಮನ್ ಕಮಿಷನ್ನಿನ ಆದರಾತಿಥ್ಯದ ಖರ್ಚು.

ಸ್ವಾಮಿ,

ಸೈಮನ್ ಕಮಿಷನ್ನೂ ಸೆಂಟ್ರಲ್ ಕಮಿಟಿಯವರೂ ನಮ್ಮ ಸಂಸ್ಥಾನಕ್ಕೆ ಬಂದ ಸಂದರ್ಭದಲ್ಲಿ ನಮ್ಮ ಸರಕಾರಕ್ಕೆ ಎಷ್ಟು ಖರ್ಚು ಆಯಿತು ಎಂದು [illegible] ಪ್ರಜೆಗಳು ಕುತೂಹಲರಾಗಿದ್ದಾರೆ. 35 ಸಾವಿರ ರೂಪಾಯಿಗಳ ಖರ್ಚು ಆಯಿತೆಂದು ನಾನು ಕೇಳುತ್ತೇನೆ. ಇದು ನಿಜವೇ? ತಾವು ಈ ವಿಷಯವನ್ನು ಸರಕಾರದವರಿಂದ ತಿಳಿದು ಪ್ರಜೆಗಳಿಗೆ ತಿಳಿಸುವಿರಾ?

—ಒಬ್ಬ ಪ್ರಜೆ

ಛೀಫ್ ಸೆಕ್ರೆಟರಿಯವರು ಈ ಸಮಾಚಾರವನ್ನು ತಿಳಿಸಿದರೆ ನಾವು ಅದನ್ನು ಸಂತೋಷದಿಂದ ಪ್ರಕಟಿಸುವೆವು

ಸಂ-

ಪತ್ರಿಕೆಗಳಿಗೆ ಉಳಿಗಾಲವಿಲ್ಲ.

ಸ್ವಾಮಿ,

ಸರಕಾರದಿಂದ ಸ್ವತಂತ್ರವಾದ ಪತ್ರಿಕೆಗಳು ಒಂದೊಂದಾಗಿ ಸಾಯುತ್ತಿವೆ. ಬೆಂಗಳೂರು ಗಲಭೆಗಳು ಪತ್ರಿಕೆಗಳಿಗೆ ಬಹಳ ಆದಾಯವೆಂದು ಜನಗಳು ಆಡಿಕೊಳ್ಳುತ್ತಿದ್ದರು. ಆದರೆ ವಾಸ್ತವ್ಯವಾಗಿಯೂ ಬೆಂಗಳೂರು ಗಲಭೆಗಳಿಂದ ಪತ್ರಿಕೆಗಳು [illegible] ಸಾಯಲುಪಕ್ರಮಿಸಿವೆ. ಪತ್ರಿಕೆಗಳು [illegible] ಚಾರವನ್ನು ಪ್ರಕಟಿಸಿ ಪ್ರಜಾಭಿಪ್ರಾಯವನ್ನು [illegible] ಗೊಳಿಸಿದ್ದು ಅಧಿಕಾರಿಗಳಿಗೆ [illegible] ವಾದ ಅಪರಾಧಿಗಳನ್ನು [illegible] ವಾಗಿ ಸ್ವೇಚ್ಛೆಯಿಂದ [illegible] ಮಾಡಿ ಲೋಕಸೇವೆಯನ್ನು [illegible] ಪತ್ರಿಕೆಗಳನ್ನು ಅಧಿಕಾರಿಗಳು ತುಳಿಯಲಾರಂಭಿಸಿದರು. [illegible] ಮೈಸೂರು ಪೇಟ್ರಿಯಟ್, [illegible] ವೀರಕೇಸರೀ ಪತ್ರಿಕೆಗಳು ಕೊಲೆಯಾದವು. [illegible] ಜೆಗೆ ಮ|| ಅಶ್ವತ್ಥನಾರಾಯಣರಾಯರನ್ನು [illegible] ಮಾಡಿದಮೇಲೆ [illegible] ಪತ್ರಿಕೆ [illegible] ದಿತು. [illegible] ಪತ್ರಿಕೆಗಳನ್ನು [illegible] ಸದೆ ಇದ್ದವರ [illegible] ಸರಕಾರದವರು [illegible] ಕಿತ್ತುಕೊಂಡರು. ಈಗ [illegible] ಪತ್ರಿಕೆಗಳು ಉಳಿದಿವೆ. ನಿಜವಾದ ಅಭಿಪ್ರಾಯವು [illegible] ಸರಕಾರಕ್ಕೂ ತಿಳಿಯುವುದಕ್ಕೆ ಅವಕಾಶ [illegible] ಪಕ್ಷಪಾತರಹಿತ ಪ್ರಜಾ [illegible] ಸರಕಾರದ [illegible] ದಬ್ಬಾಳಿಕೆಯ ನೀತಿಯನ್ನು ತಪ್ಪಿಸಬೇಕು. ಈ [illegible] ಯಾದ ದಬ್ಬಾಳಿಕೆಯ ನೀತಿಯಿಂದ ನಮ್ಮ ಸಂಸ್ಥಾನಕ್ಕೆ ಬಹಳ ಕೆಟ್ಟ ಹೆಸರು ಬರುವುದು.

[illegible]

ಯೂರೋಪಿನಲ್ಲಿ ಶೈತ್ಯಾಧಿಕ್ಯ.

ಬಾಲ್ಟಿಕ್ ಸಮುದ್ರದ ನೀರು ಶೈತ್ಯಾಧಿಕ್ಯದಿಂದ ಹೆಪ್ಪುಕಟ್ಟಿಕೊಂಡು ಸಾವಿರಾರು ಹಡಗುಗಳ ಸಂಚಾರವು ನಿಂತುಹೋಗಿರುತ್ತೆ. ಈ ಕಾರಣದಿಂದ ಬಾಲ್ಟಿಕ್ ಪ್ರಾಂತ್ಯಗಳಲ್ಲಿ ಆಮದು ರಫ್ತುಗಳು ನಿಂತುಹೋಗಿ ಅಪಾರವಾದ ನಷ್ಟವು ಸಂಭವಿಸಿರುತ್ತೆ.

Printed and published by P. R. Ramaiya, at Sri Rama Press, D. Subbiah Road, Mysore.

Regd. No M. 2322 ‖ ವಂದೇ ಮಾತರಂ ‖ ಬಿಡಿ ಪತ್ರಿಕೆ ೧ ಕಾಸು

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ‖ ಗೀತಾ ‖

ವಾರ್ಷಿಕ ಚಂದಾ { ಸ್ಥಳಕ್ಕೆ ... / ಪರಸ್ಥಳಕ್ಕೆ ...

ಸಂಪುಟ ೧] ಗುರುವಾರ ೧೪ ಮಾರ್ಚಿ ೧೯೨೯ [ಸಂಚಿಕೆ ೧೩೨

ತಾಯಿನಾಡು.

14—3—1929

PUBLIC OPINION AND THE GOVERNMENT.

It is unfortunate that in recent months the Mysore Government is in conflict with public opinion. Though the Bangalore Disturbances have now become a dead past, their aftermath seem to be still more terrible. The Vishweswharaya Committee was appointed to appease the public opinion. But the labours of the above committee were made ov[illegible]ile by the Geutrnment order there on. The thoughtful section of the public entered their protest against the above order and diverted the attention of the people from petty personal and communal politics to the ideal of responsible government under such circumstances, it is expected that the authorities would congratulate themselves and make the way smooth for constitutional agitation. But it is a pity that the present Government lack in statesmenship. The era of repression which they have inaugurated is disastrous both to the people and the State. There was indeed no reason why government should have passed that strong order of withdrawing permission to start papers, for about fifty people It is with great difficulty that permissions are obtain d to start papers in Mysore. But to take away the permission without assigning any reasons is indeed provocative. In this respect the Government is at fault. Surely, all those who are affected by the order cannot endure their position. It is legitimate for those who are affected to agitate, Without entering into the judicial merits of Mr. Sitarama Sastri's article, we have no hesitation in saying that he is one of the aggrieved people. The permission of his paper was withdrawn without assigning any reasons. Unwilling to bear this injustice he might have written the article under question. But, the Government were unwise in launching a prosecution against him. Such prosecutions will add fuel to the fire. Even now, it is not too late for the Government to withdraw the prosecutions against Messers Sastri and Rao. Let the Government realise that it is they that are the provocators in the present affair.

Whatever may be the nature of political movements in British India, we in Mysore, are not seditious. The people here are loyal to the throne. They are loyal to the Government. It is a fact that there are people who criticise the official acts of certain individual officers. They may even desire their exit. But such opinions ought not to be construed as seditions. We hope proper sense will dawn on the authorities and the policy of repression will be closed.

ಪರದೇಶೀ ವಸ್ತ್ರಗಳನ್ನು ಸುಡಬೇಕು.

ಮಹಾತ್ಮ ಗಾಂಧಿಯವರು ಬ್ರಿಟಿಷ್ ಇಂಡಿಯಾದಲ್ಲಿ ಪರದೇಶೀ ವಸ್ತ್ರಗಳ ಬಹಿಷ್ಕಾರದ ಚಳುವಳಿಯನ್ನು ಆರಂಭಿಸಿ ಕಲ್ಕತ್ತದ ಶ್ರದ್ಧಾನಂದ ಪಾರ್ಕಿನಲ್ಲಿ ಅವಗಳನ್ನು ಸುಡುವ ಏರ್ಪಾಡನ್ನು ಮಾಡಿದರು 1920-21 ರಲ್ಲಿ ನಮ್ಮ ದೇಶದ ಪ್ರತಿಯೊಂದು ಊರಿನಲ್ಲಿಯೂ ಪರದೇಶೀ ವಸ್ತ್ರಗಳು ರಾಶಿರಾಶಿಯಾಗಿ ಸುಡಲ್ಪಟ್ಟವು. ಈಗ ಮಾತ್ರ ಪೋಲೀಸಿನವರು ಅವನ್ನು ಏಕೆ ತಡೆದರೋ ತಿಳಿಯದು. ಯಾವುದೊ ಹಳೆಯ ರೆಗ್ಯುಲೇಷನ್ನನ್ನು ತೆಗೆದು ಪಬ್ಲಿಕ್ ರಸ್ತೆಯಲ್ಲಿ ಕಸಕಡ್ಡಿಗಳನ್ನು ಸುಡಕೂಡದೆಂಬ ನಿಯಮವನ್ನು ತೆಗೆದು ಅದರ ಪ್ರಕಾರ ಪಾರ್ಕಿನಲ್ಲಿ ಪರದೇಶೀ ವಸ್ತ್ರಗಳನ್ನು ಸುಡಕೂಡದೆಂದು ಕಟ್ಟುಮಾಡಿದರು.

ಮಹಾತ್ಮ ಗಾಂಧಿಯವರು ಪೋಲೀಸಿನ ರೆಗ್ಯುಲೇಷನ್ನನ್ನು ಮನ್ನಿಸಿ ಪಾರ್ಕ್ ಪಬ್ಲಿಕ್ ರಸ್ತೆಯಲ್ಲ. ಅಲ್ಲಿ ಪರದೇಶೀ ವಸ್ತ್ರಗಳನ್ನು ಸುಡುವುದು ತಪ್ಪಲ್ಲ ಎಂದು ಬಟ್ಟೆಗಳನ್ನು ಸುಟ್ಟರು. ಪೋಲೀಸಿನವರು ಕೂಡಲೇ ರೆಗ್ಯುಲೇಷನ್ ಅನುಸರಿಸಿ ಲಾಠಿಗಳೊಡನೆ ಬಂದು ಜನಗಳನ್ನು ಚದುರಿಸಿ ಬೆಂಕಿಗೆ ನೀರನ್ನು ಹಾಕಿ ಆರಿಸಿದರು ಶ್ರೀಯುತರಾದ ಸುಭಾಷ್‌ಚಂದ್ರಬೋಸ್ ಮೊದಲಾದವರಿಗೆಲ್ಲಾ ಏಟುಗಳು ಬಿದ್ದವು. ಪೋಲೀಸಿನವರ ಈ ದುರ್ನಡತೆಯನ್ನು ಮಹಾತ್ಮಾ ಗಾಂಧಿಯವರೇ ಮೊದಲಾದ ಮುಖಂಡರು ಖಂಡಿಸಿದರು. ಗಾಂಧಿಜೀಯವರನ್ನು ದಸ್ತಗಿರಿ ಮಾಡಿ ಕೋರ್ಟಿನಲ್ಲಿ ಮುಖದ್ದಮೆ ಮಾಡಿದರು. ಅವರನ್ನು 50 ರೂಪಾಯಿನ ಜಾಮೀನಿನ ಮೇಲೆ ಬಿಟ್ಟಿರು ರ. ಮುಖದ್ದಮೆಯು ಈ ತಿಂಗಳು 26 ಕ್ಕೆ ಹಾಕಲ್ಪಟ್ಟಿರುವದು.

ಆ ಮುಖದ್ದಮೆಯು ಹೇಗಾದರೂ ಇರಲಿ ಪರದೇಶೀ ವಸ್ತ್ರಗಳ ಬಹಿಷ್ಕಾರ ಚಳುವಳಿಯನ್ನು ತಡೆಯಲು ಹೂಡಿದ ಪ್ರಯತ್ನವಿದು. ಈಗ ಕೆಲದಿವಸಗಳ ಹಿಂದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಂಡಿಯಾದ ಸೆಕ್ರೆಟರೀ ಆಫ್ ಸ್ಟೇಟರಾದ ಅರ್ಲ್ ವಿಂಟರ‍್‌ಟನ್‌ರವರು ಪರದೇಶೀ ವಸ್ತ್ರಗಳ ಬಹಿಷ್ಕಾರ ಚಳುವಳಿಯನ್ನು ಮುರಿಯಲು ಇಂಡಿಯಾ ಸರಕಾರದವರು ಹವಣಿಕೆಗಳನ್ನು ಮಾಡುತ್ತಿರುವದಾಗಿ ತಿಳಿಸಿದರು. ಅದರಂತೆಯೇ ಇಂಡಿಯಾ ಸರಕಾರದವರು ಹವಣಿಕೆಯನ್ನು ಮಾಡುತ್ತಿರುವರು. ಕಲ್ಕತ್ತದ ಪೋಲೀಸಿನವರ ವರ್ತನೆಯೇ ಇದಕ್ಕೆ ಸಾಕ್ಷಿ.

ಇಂಡಿಯಾದಲ್ಲಿ ಪರದೇಶೀ ವಸ್ತ್ರಗಳ ಬಹಿಷ್ಕಾರವಾಯಿತೆಂದರೆ ಇಂಗ್ಲೆಂಡಿನ ಬಟ್ಟೆಯ ಗಿರಣಿ ಮಾಲೀಕರ ಹೊಟ್ಟೆಗೆ ಕಲ್ಲು ಬೀಳುತ್ತದೆ. ಇಂಗ್ಲೆಂಡಿನ ಕೂಲಿಗಾರರಿಗೆಲ್ಲಾ ಹೊಟ್ಟೆಗೆ ತಾಳವಾಗುತ್ತದೆ. ಇಂಗ್ಲೆಂಡಿನ ಸರಕಾರದವರು ಇಂಡಿಯಾವನ್ನು ಆಳುತ್ತಿರುವುದು ಇಂಗ್ಲೆಂಡಿನ ಜೋಬನ್ನು ಬೆಳೆಸಿಕೊಳ್ಳುವದಕ್ಕೆ ಹೊರತು [illegible]ರೆ ಅಲ್ಲ ಅದಕ್ಕೋಸ್ಕರಲೇ ಪರದೇಶೀ ವಸ್ತ್ರಗಳ ಬಹಿಷ್ಕಾರವೆಂದರೆ ಇಂಗ್ಲೆಂಡಿನ ಹೊಟ್ಟೆಗೆ ಬೆಂಕಿ ಬಿದ್ದ ಹಾಗೆ.

ಮಹಾತ್ಮ ಗಾಂಧಿಯವರು ಮುಂದೆ ಏನು ನಿರ್ಧಾರ ಮಾಡುವರೋ ಗೊತ್ತಿಲ್ಲ. ಹೇಗಾದರೂ ಆಗಲಿ ಪರದೇಶೀ ವಸ್ತ್ರಗಳ ಬಹಿಷ್ಕಾರದ ಚಳುವಳಿಯನ್ನು ಭಾರತೀಯರು ಬಲು ಜೋರಾಗಿ ನಡೆಯಿಸಬೇಕು. ಶ್ರೀ ಸುಭಾಷ್‌ಚಂದ್ರಬೋಸರೇ ಮೊದಲಾದವರು ಈ ಚಳುವಳಿಯನ್ನು ನಡೆಯಿಸಲು ಮುಂದೆ ಹೊರಟಿರುವರು. ಬಹಿರಂಗವಾದ ಸ್ಥಳಗಳಲ್ಲಿ ಆಗದಿದ್ದರೆ ಖಾಸಗೀ ಸ್ಥಳಗಳಲ್ಲಿ ಮಾಡಬಹುದು. ನಾಗಪುರದಲ್ಲಿ ಪ್ರತಿ ದಿನದಲ್ಲಿಯೂ ಪರದೇಶೀ ವಸ್ತ್ರಗಳು ಸುಡಲ್ಪಡುತ್ತಿರುವವೆಂದು ಸುದ್ದಿ ಬಂದಿದೆ, ಸರಕಾರದವರ ದಬ್ಬಾಳಿಕೆಗೆ ಇದೇ ತಕ್ಕ ಉತ್ತರ, ನಮ್ಮ ಮೈಸೂರಿನಲ್ಲಿಯೂ ಪರದೇಶೀ ವಸ್ತ್ರಗಳ ಬಹಿಷ್ಕಾರವು ನಡೆಯಬೇಕು. ನಮ್ಮ ದೇಶೀಯ ಬಟ್ಟೆಗಳ ಕೈಗಾರಿಕೆಯು ಅಭಿವೃದ್ಧಿಯಾಗಬೇಕಾದರೆ ಪರದೇಶೀ ವಸ್ತ್ರಗಳ ಬಹಿಷ್ಕಾರವು ಆಗಲೇಬೇಕು.

ಬ್ರಾಹ್ಮಣೇತರರ ಸಮ್ಮೇಳನ.

ಮುಂದಿನ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಅಖಿಲ ಮೈಸೂರು ಪ್ರಾಂತಿಕ ಬ್ರಾಹ್ಮಣೇತರ ಸಮ್ಮೇಳನವನ್ನು ನಡೆಸಲು ಪ್ರಯತ್ನವು ನಡೆಯುತ್ತಿರುವುದೆಂದು ತಿಳಿಯಬರುತ್ತದೆ. ಇದು ಬಹಳ ಸಂತೋಷದ ಸಂಗತಿ. ಇದಕ್ಕೆ ಬ್ರಾಹ್ಮಣೇತರರಲ್ಲದೆ ಇತರರೆಲ್ಲರೂ ಸಹಾಯ ಮಾಡಬೇಕು. ನಮ್ಮ ದೇಶದ ಎಲ್ಲಾ ಕೋಮಿನವರೂ ಮುಂದಕ್ಕೆ ಬಾರದ ಹೊರತೂ ದೇಶವು ಅಭಿವೃದ್ಧಿಯಾಗದಂತಾಗುವುದಿಲ್ಲ. ಆದರೆ ಈ ಸಮ್ಮೇಳನದಲ್ಲಿ ಯಾವ ಪಂಗಡದವರಿಗೂ ಮನಸ್ಸಿಗೆ ನೋವಾಗದಂತೆ ಕಾರ್ಯಕಲಾಪಗಳು ನಡೆಸಲ್ಪಡುವವೆಂದು ನಂಬುತ್ತೇವೆ.

ಮ್ಯುನಿಸಿಪಲ್ ಕೌನ್ಸಿಲರ ಕರ್ತವ್ಯ.

ಮಹಾತ್ಮ ಗಾಂಧಿಯವರು ರಂಗೂನ್ ಮ್ಯುನಿಸಿಪಾಲಿಟಿಯ ಅಡ್ರೆಸ್ಸಿಗೆ ಕೊಟ್ಟ ಉತ್ತರದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಒಂದು ಘನೋಪದೇಶವನ್ನು ಮಾಡಿದರು. ಅವರು ಹೇಳಿದುದೇನೆಂದರೆ— "ಮ್ಯುನಿಸಿಪಲ್ ಕೌನ್ಸಿಲರು ಸ್ವಾರ್ಥದೃಷ್ಟಿಯಿಂದ ಸಭಿಕರಾಗಲೇ ಕೂಡದು ಪೌರಸಭಿಕರಿಗೆ ಸಾಮಾಜಿಕ ಸೇವೆಗಳನ್ನು ಮಾಡಲು ಯಥೇಚ್ಛವಾಗಿ ಅವಕಾಶಗಳಿವೆ, ನಗರದ ವಿಶಿಷ್ಟ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿಸುವುದು ಶುದ್ಧವಾದ ಹಾಲಿನ ಸರಬರಾಯಿ ಇಷ್ಟು ಮಾತ್ರ ಮಾಡದಿದ್ದರೆ ಯಾವ ನಗರದಲ್ಲೇ ಆಗಲಿ ಮುನಿಸಿಪಾಲಿಟಿ ಇದ್ದರೂ ನಿರರ್ಥಕ.

ಈ ಅಮೋಘವಾದ ಉಪದೇಶವನ್ನು ಎಲ್ಲಾ ಮುನಿಸಿಪಾಲಿಟಿಯ ಕೌನ್ಸಿಲರುಗಳೂ ಅನುಸರಿಸುವರೆಂದು ನಂಬುತ್ತೇವೆ.

ರೈಲ್ವೆ ಆದಾಯ

1919 ನೇ ಫೆಬ್ರವರಿ ಮಾಹೆ 23 ನೇ ತಾರೀಗೆ ಆಖೈರಾದ ವಾರದಲ್ಲಿ ಮೈಸೂರ ರೈಲ್ವೆಗಳ ಒಟ್ಟು ಉತ್ಪತ್ತಿಯು 71, 30 ರೂಗಳು. ಕಳೆದ ವರುಷ ಇದೇ ವಾರದಲ್ಲಿ ಆದ ಉತ್ಪತ್ತಿಗಿಂತಲೂ 5980 ರೂಗಳು ಹೆಚ್ಚಾಗಿರುತ್ತೆ.

TAI NADU

14—3—1929

ಪತ್ರವ್ಯವಹಾರ

ರಾಜಧಾನಿಯ ಮುಖಂಡರು.

ಸ್ವಾಮಿ

ನಮ್ಮ ರಾಜಧಾನಿಯಲ್ಲಿ ಗಣ್ಯರಾದ ವಕೀಲರೂ ವರ್ತಕರೂ ಜಮೀನ್‌ದಾರರುಗಳೂ ಅನೇಕರಿರುವರು. ಇವರು ಅನುಕೂಲಸ್ಥರಾಗಿಯೂ ಇರುವರು. ಆದರೆ ಇವರಲ್ಲಿ ಅನೇಕರಿಗೆ ವಿಶಾಲವಾದ ಜೀವನದ ಧ್ಯೇಯವೇ ಇಲ್ಲ. ತಾವು ಉಂಟೋ ಮುರುಲೋಕವುಂಟೋ ಎಂಬುದು ಇವರ ಭಾವನೆ. ಆದಷ್ಟು ಇವರಿಗೆ ಉಪಕಾರವಾದ ತಮ್ಮ ಒಡವೆಗಳನ್ನೂ ಐಶ್ವರ್ಯವನ್ನೂ ಸದುಪಯೋಗಪಡಿಸಿಕೊಳ್ಳಬೇಕು ಎಂಬ ಯೋಚನೆಯೇ ಇವರಿಗಿರುವುದಿಲ್ಲ. ಇತರ ದೇಶಗಳಲ್ಲಿ; ಇಂತಹ ಅನುಕೂಲಸ್ಥರು ಪ್ರಜಾಮುಖಂಡರಾಗಿ ನಿಂತುಕೊಂಡು ದೇಶಸೇವೆಯನ್ನು ಮಾಡುವರು. ನಮ್ಮ ಮೈಸೂರಿನಲ್ಲಿ ಈ ಪ್ರಜಾಸೇವೆಯ ಗಂಧವೇ ಅನೇಕ ಅನುಕೂಲಸ್ಥರಿಗಿರುವುದಿಲ್ಲ ಹಾಯಿವವರವಿಗೂ ದುಷ್ಟಿನ ಸಂಪಾದನೆಯಲ್ಲಿ ನಿರತರಾಗಿರುವರು. ನಮ್ಮ ಹಿಂದೂ ಧರ್ಮದ ಪ್ರಕಾರ ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನಮಾನದಲ್ಲಿ ಸಂಪಾದನೆಯಲ್ಲಿ ಒಂದು ಭಾಗವನ್ನು ಪರಾರ್ಥಕ್ಕಾಗಿ ಉಪಯೋಗಿಸಬೇಕೆಂದಿರುವುದು ಸಮಾಜದ ಏಳಿಗೆಗಾಗಿ ಈ ನಿಯಮಕ್ಕೆ ವಿರೋಧವಾಗಿ ನಡೆವಳಿಕೆಯು ಈಗ ನಡೆಯುತ್ತಿರುವುದು. ಅದುದರಿಂದಲೇ ದೇಶಗಳಲ್ಲೆಲ್ಲಾ ಅಶಾಂತಿಯೂ ಕೋಲಾಹಲವೂ ಉಂಟಾಗಿರುವುದು.

ಬೆಂಗಳೂರಿನಲ್ಲಿ ಅನೇಕ ಉದ್ಯಮಗಳೂ ವ್ಯಾಪಾರಿಗಳೂ ಪ್ರಜಾಸೇವೆಯಲ್ಲಿ ತೊಡಗಿರುವರು ನಮ್ಮ ರಾಜಧಾನಿಗೆ ಈ ಅದೃಷ್ಟವು ಇನ್ನೂ ಬಂದಿಲ್ಲ. ಅದು ಯಾವಾಗ ಒದುವುದೋ ನೋಡಬೇಕು.

ರಾಜಧಾನಿಯ ನಿವಾಸಿ

—....

ಮೋಟಾರು ಬಸ್ಸುಗಳು.

ಸ್ವಾಮಿ—

ಮೋಟಾರ್ ಬಸ್ಸುಗಳಿಂದ ಪ್ರಯಾಣಕ್ಕೆ ಎಷ್ಟು ಸೌಕರ್ಯವಿದೆಯೂ ಅಷ್ಟು ಅಪಾಯವಿದೆ. ಇಷ್ಟೆಲ್ಲಾ ಮೋಟಾರ್ ರೆಗ್ಯೂಲೇಷನ್ನುಗಳಿದ್ದರೂ ಆ ಬಸ್ಸುಗಳಲ್ಲಿ ಕುರಿಗಳನ್ನು ತುಂಬುವಂತೆ ಪ್ರಯಾಣಿಕರನ್ನು ತುಂಬುವುದು ಬೇರೆ ತಪ್ಪಿಲ್ಲ. 22 ಜನಗಳನ್ನು ಕೂರಿಸುವ ಕಡೆ 35 ಜನರುನ್ನು ಕೂರಿಸುತ್ತಾರೆ. ಈ ಅಕ್ರಮಗಳನ್ನು ಕಂಡು ಹಿಡಿದು ತಪ್ಪಿಸಬೇಕಾದ ಪೋಲೀಸಿನವರೇ ತಾವು ಬಿಟ್ಟಿ ಪ್ರಯಾಣ ಮಾಡುವುದಕೋಸ್ಕರ ಅವುಗಳನ್ನು ತಪ್ಪಿಸುವುದೇ ಇಲ್ಲ. ಈ ರೀತಿಯಾತ ಅನಾಹುತಗಳು ಆಗುವುದಕ್ಕೆ ಅವಕಾಶವಾಗುವುದು. ಹೋದ ವರ್ಷ ವರುಣದಲ್ಲಿ ಆದ ಮೋಟಾರು ಬಸ್ಸಿನ ಅನಾಹುತವು ಈಗಲೂ ರೋಮಾಂಚವನ್ನುಂಟುಮಾಡುವುದು. ಅಧಿಕಾರಿಗಳು ಮೋಟಾರ್ ಬಸ್ಸುಗಳ ಅವ್ಯವಸ್ಥೆಯನ್ನು ತಪ್ಪಿಸಿದ ಹೊರತು ಜನಗಳಿಗೆ ಉಳಿಗಾಲವಿಲ್ಲ

ಒರ್ವ ಪ್ರಯಾಣಿಕ

ವರ್ತಮಾನ ಸಂಗ್ರಹ.

ಅನಾವಶ್ಯಕವಾದ ಹಿಂಬಾಲಕರು

ಬೆಂಗಳೂರು ಗಲಭೆಗಳ ಸಂದರ್ಭದಲ್ಲಿ ಕೆಲವು ದಿವಸಗಳೂ ಸೈವರ್ ಕಮೀಷನ್ನಿನವರು ರಾಜಧಾನಿಗೆ ಬಂದ ಸಮಯದಲ್ಲಿ ಕೆಲವು ದಿವಸಗಳೂ ಮ|| ತಗಡೂರು ರಾಮಚಂದ್ರರಾಯರು ಬಳಿಗಳು ರಂಗಯ್ಯನವರು ಪತ್ರಿಕೆಯು ಸಂಪಾದಕರು ಹಿಂದೆಯೂ ಬೇಡಿ ಸ್ಸಿನ ಪೋಲೀಸರವರು ಇಬ್ಬಿಬ್ಬರು ಸುತ್ತಾಡುತ್ತಾರೆ ಇದು ಅನಾವಶ್ಯಕವೇ ಲೆ ಹೇಳಿದ ದೊಡ್ಡ ಮನುಷ್ಯರು ಯಾವ ಚಳುವಳಿಯನ್ನೂ ಗುಪ್ತವಾಗಿ ನಡೆಸ ವುದಿಲ್ಲ ಇವರು ಆಡುವ ಮಾತುಗಳೂ ನಡೆಸ ವ ಚಳುವಳಿಗಳೂ ಬಹಿರಂಗವಾಗಿಯೇ ಇರುವುವು. ಆಜ್ಞೆಯನ್ನು ಉಲ್ಲಂಘನೆ ಮಾಡಿದರೂ ಅಧಿಕಾರಿಗಳಿಗೆ ತಿಳಿಸಿಯೇ ಉಲ್ಲಂಘನೆ ಮಾಡುತ್ತಾರೆ ಹೀಗಿದ್ದರೂ ಇವರ ಹಿಂದೆ ಪೋಲೀಸಿನವರನ್ನು ಹಾಕಿರುವುದು ವ್ಯರ್ಥ. ಇದುಂದ ಸಂಕಾರಕ್ಕೆ ನಷ್ಟವಿ ಹೊರತು ಮೇಲಿನ ದೊಡ್ಡ ಮನುಷ್ಯರಿಗೇನೂ ನಷ್ಟವಿಲ್ಲ. ಕಳ್ಳರನ್ನೂ ದರೋಡೆಕಾರರನ್ನೂ ಪತ್ತೆಮಾಡುವ ಕೆಲಸದಲ್ಲಿ ನಿರತರಾಗುವುದಕ್ಕೆ ಬದಲಾಗಿ ಬಹಿರಂಗವಾಗಿ ಪ್ರಜಾಸೇವೆ ಮಾಡ ತ್ತಿರುವವರ ಹಿಂದೆ ಓಡ್ಯಾಡಿ ಏನು ಪ್ರಯೋಜನ?

ವರ್ಧಂತ್ಯುತ್ಸವಗಳು.

ನಾಳೆ ಸಾಯಂಕಾಲ 6 ಘಂಟೆಗೆ ಧರ್ಮಪ್ರಕಾಶ ಡಿ ಬನುಮಯ್ಯನವರ ಸ್ಕೂಲ್ ಹಾಲ್ನಲ್ಲಿ ಶ್ರೀರಾಮಕೃಷ್ಣ ಪರಮ ಹಂಸರ ಮತ್ತು ಶ್ರೀ ಸ್ವಾಮಿ ವಿವೇಕಾನಂದರ ವರ್ಧಂತ್ಯುತ್ಸವಗಳು ನಡೆಯುವುವು. ಶ್ರೀ|| ಟಿ. ಎಸ್. ವೆಂಕಣ್ಣಯ್ಯನವರು ಸ್ವಾಮಿ ವಿವೇಕಾನಂದರ ಸಂದೇಶವನ್ನೂ ಶ್ರೀ|| ಕೆ ಶಂಕರನಾರಾಯಣರಾಯರವರು ಶ್ರೀ ರಾಮಕೃಷ್ಣ ಪರಮಹಂಸರ ವಿಷಯದಲ್ಲೂ ಉಪನ್ಯಾಸಮಾಡುವರು ರಾಜಕವಿಭೂಷಣ ಮ|| ಹೆಚ್. ಲಿಂಗರಾಜೇಅರಸಿನವರು ಅಧ್ಯಕ್ಷತೆ ವಹಿಸುವರು.

ಮ || ಸಿ. ಅಶ್ವತ್ಥನಾರಾಯಣರಾಯರ ಸಂದೇಶ

ವೀರಕೇಸರಿ ಸಂ|| ರಾದ ಶ್ರೀಯುತ ಸೀತಾರಾಮ ಶಾಸ್ತ್ರಿಗಳ ಮತ್ತು ನನ್ನ ದಸ್ತಗಿರಿಯು. ನಮ್ಮ ನಿರೀಕ್ಷಣೆಯಂತೆ ಆಗಿರುವುದರಿಂದ ಮಹಾಜನರು ಆ ವಿಷಯದಲ್ಲಿ ಕ್ಷೋಭೆಪಡಬೇಕಾದ್ದೇನೂ ಇಲ್ಲ. ಗಾಢನಿದ್ರೆಯಲ್ಲಿರುವ ಪ್ರಜೆಗಳನ್ನು ಎಚ್ಚರಗೊಳಿಸುವದರಲ್ಲಿ ಅನೇಕ ಅವಕಾಶಗಳನ್ನು ಕಲ್ಪಿಸಿಕೊಡುತ್ತಿರುವ ಸರ್ಕಾರವನ್ನು ಪ್ರಜೆಗಳು ಅಭಿನಂದಿಸಬೇಕು. ಇತರ ಕಡೆಗಳಲ್ಲಿರುವಂತೆ ನೀವು ನಡೆದು ಮನುಷ್ಯರೆಂಬ ಹೆಸರನ್ನು ಅನ್ವರ್ಥ ಮಾಡಿಕೊಳ್ಳಬೇಕು. ಜವಾಬ್ದಾರೀ ಸರ್ಕಾರವೇ "ನಮ್ಮ ಶ್ರೇಷ್ಠವಾದ ಗುರಿ. ಈ ಗುರಿಯು ಫಲಿಸಿದ ಹೊರತು ನಮ್ಮ ಕೋರಿಕೆಯು ನೆರವೇರುವುದಿಲ್ಲ. ಬೆಂಗಳೂರು ಸಜೀವವಾಗಿದ್ದಲ್ಲಿ ನಾನು ಹಿಂತಿರುಗ ವೆನು. ಇಲ್ಲವಾದರೆ ನಾನು ಇಲ್ಲೇ ಇರಲು ಅಪೇಕ್ಷಿಸುತ್ತೇನೆ" ಎಂದು ತಿಳಿಸಿರುವರು.

ಉರಿಗಾಂ

1929 ನೇ ಫೆಬ್ರವರಿ ತಿಂಗಳಲ್ಲಿ ಕೋಲಾರದ ಚಿನ್ನದಗಣಿಗಳಲ್ಲಿ 1696573 ರೂಗಳ ಬೆಲೆಬಾಳುವ 2930693 ಔನ್ಸುಗಳಷ್ಟು ಚಿನ್ನವು ಉತ್ಪತ್ತಿಯಾಗಿದೆ. ಜನವರಿಯಲ್ಲಿ 3084196 ಔನ್ಸಿನ ಚಿನ್ನದ ಉತ್ಪತ್ತಿ. ಅದು ಕಿಮ್ಮತ್ತು 1771705 ರೂಗಳು.

ಜಾಮೀನು ಮೇಲೆ ಬಿಡುಗಡೆ ಮಾಡಲಿಲ್ಲ

ಬೆಂಗಳೂರು ಪತ್ರಿಕಾ ಕರ್ತರ ದಸ್ತಗಿರಿಯನ್ನು ಅಪರಾಧಿಗಳು ತಮ್ಮನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೇಳಿದುದ್ದು ಚೀಫ್ ಕೋರ್ಟಿನಲ್ಲಿ ತಿರಸ್ಕರಿಸಲ್ಪಟ್ಟಿತು. ಅಪರಾಧಿಗಳನ್ನು ಸೆಂಟ್ರಲ್ ಜೈಲಿಗೆ ಕಳುಹಿಸಿ 16 ನೇ ತಾ|| ವಿಚಾರಕ್ಕೆ ವಿಚಾರಣೆ ಇಡಲಾಗಿದೆ.

ಮೀಟಿಂಗ್

ಮಹಾತ್ಮಾಜಿಯವರನ್ನು ದಸ್ತಗಿರಿ ಮಾಡಿದ ವಿಷಯವಾಗಿ ಹುಬ್ಬಳಿಯಲ್ಲಿ ಪ್ರಚಂಡ ಸಭೆಯೊಂದು ನಡೆದು ಡಾ|| ಹಾರ್ಡೀಕರ್‌ರವರು ಪಾದೀ ಪ್ರಚಾರದ ವಿಷಯವಾಗಿ ಉಜ್ವಲ ಭಾಷಣಮಾಡಿದರು.

ವಾರ್ಷಿಕೋತ್ಸವ

ಮೈಸೂರು ಇಂಜನಿಯರ್ಸ್ ಅಸೋಸಿಯೇಷನ್ನಿನ 21 ನೇ ವಾರ್ಷಿಕೋತ್ಸವವು ಈ ಮಾಹೆ 15 ನೇ ತಾ ಶುಕ್ರವಾರ ಮಧ್ಯಾಹ್ನ ಇರ್ವಿನ್ ನಾಲಾ ಟನಲ್ ಕೆಲಸಗಳು ನಡೆಯುತ್ತಿರುವ ಹುಲಿಕೆರೆಯಲ್ಲಿ ಅತ್ಯಂತ ಸಂಭ್ರಮದಿಂದ ಜರುಗುವುದು. ಶ್ರೀಮದ್ಯುವರಾಜರವರು ಅಧ್ಯಕ್ಷತೆಯನ್ನು ವಹಿಸುವರು.

ರಾಜಭಕ್ತಿ

ಬೆಂಗಳೂರು ದೇಶೀಯ ವಿದ್ಯಾಶಾಲೆಯ ಮ|| ಸಿದ್ದಶಿವಯ್ಯನವರು ಮೈಸೂರು ದೊರೆಗಳ ವಿಷಯವಾಗಿ "ಮೈಸೂರ ಮಾಣಿಕ್ಯ ಅಥವ ರಾಜಭಕ್ತಿ" ಎಂಬ ಪುಸ್ತಕವನ್ನು [illegible] ಕಳುಹಿಸಿರುವ [illegible] ದಿಂದ ಸ್ವೀಕರಿಸಿರುತ್ತೇವೆ.

ವಿದ್ಯಾಶಾಲೆ

ಮೈಸೂರು ಸರ್ಕಾರ್ಲಿಸ [illegible] ಕೆ. ಶ್ರೀನರಸಿಂಹಯ್ಯನವರಿಗೆ [illegible] ಸಿಂದ 6 ದಿನಗಳ [illegible] ಕೊಟ್ಟಿರುವುದರಿಂದ [illegible] ಸರಾದ ಮ|| ಕೆ. ಕೃಷ್ಣರಾಯರವರು [illegible] ಕ್ಸ್ಪ್ರಿಟೇಲಿಜ್ [illegible] ಕೋಸೇರಿರುವರು ತಮ್ಮ ಕೆಲಸದ ಜೊತೆಗೆ [illegible] ಕೃಷ್ಣರಾಯರ ಕೆಲಸಕ್ಕೂ [illegible]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಪಾರ್ಕ್ಯೊನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ನೂಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ಪಾಕೆಟ್ ಕ್ಯಾಲೆಂಡರ್ ಮತ್ತು ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ಲವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶಿ ಹಲ್ಲುದಲ್ಲಿರುವುದೇನು?



ರ ಕ್ತವೃದ್ಧಿ ಮಾಡಿ ರತಿರೋಗಗಳನ್ನು ನೀಗಿಸಿ
ತ ನುವಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನ ರಗಳನ್ನು ಬಿಗಿಮಾಡಿ ಅಂಟು ರೋಗಗಳನ್ನು ಪರಿಹರಿಸಿ
ಮಿ ದುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸ ಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರ ಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹ ರುಷದಿಂದ ಹಸಿವನ್ನುಂಟುಮಾಡಿ ಶರೀರದ
ಲ ಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವ ರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು— ರತನ್ ಮಿಶಿ ಡಿಪೊ, (ಆಂಜನೇಯ ಜ್ಯೋತಿಷಾಲಯ,)

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ.

"ಭಿಷಗ್ರತ್ನ"

ಪಳ್ಳದ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ಬೆಳಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳು ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ಸ್ತ್ರೀ ರಕ್ಷಾ ಪರಾಗ:—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರಪ್ರಕೋಪಗಳಿಂದಾಗಲಿ, ಹೊಟ್ಟೆಯ ಬ್ಲರಸವದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸ ರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀ ಸಿದ್ಧಾ ಸತೈಲ:—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗಡ್ಡೆಗೂ ಹಚ್ಚುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತೆ

ಬ್ರಾಂಚ್ ಆಫೀಸು | ಹೆಡ್ ಆಫೀಸು



ಭಂಗಾರದ ಕೈಬಳೆಗಳೂ ಚೈನುಗಳೂ ನಗ್ಗರಿ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳನ್ನು ನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಅಂಗಡಿಗಳಿಗಿಂತ ಸುಲಭ. ಕೆಲಸ ಇತರ ಅಂಗಡಿಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಯಸ್ ನರಸಿಂಹ ಅಯ್ಯರ್ | ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ಕೆ. ನಾರಾಯಣಪ್ಪ | ನಗರ್ತಪೇಟೆ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centres or Life Insurance Business. Liberal terms.

A rare opportunity for spare time earnings.

We undertake also Fire & Motor cars Etc., Insurance.

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R. Ramaiya.

Regd. No. M 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ. ಆರ್. ರಾಮಯ್ಯ.

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ರೂ. [illegible]
{ ಪರಸ್ಥಳಕ್ಕೆ [illegible]

ಸಂಪುಟ ೧] ಶುಕ್ರವಾರ ೧೫ ಮಾರ್ಚಿ ೧೯೨೯ [ಸಂಚಿಕೆ ೧೩೩

ತಾಯಿನಾಡು.

15—3—1929

ಪೋಲೀಸ್ ಪಾಂಡಿತ್ಯ

ಲೇಖಕರ — ಶ್ರೀ|| ಗುಂಡೋಪಂತ್

ಪೋಲೀಸ್ ಎಂಬ ಶಬ್ದವು ಸರ್ವಸಾಮಾನ್ಯವಾಗಿ ಯಮಧರ್ಮರಾಯನ ಅಪರಾವತಾರವೆಂಬ ಅರ್ಥವನ್ನು ಕೊಡುತ್ತದೆ. ಚೆನ್ನಾಗಿ ಪರಿಶೀಲಿಸಿದರೆ ಯಮನು ಮಾತ್ರ, ನಿರ್ದಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಸಕಾರಣವಾಗಿಯೂ ಶಿಕ್ಷಿಸುವನೇ ಹೊರತು ನಿರಪರಾಧಿಗಳನ್ನೂ ಸುಳ್ಳುಸುಳ್ಳಾಗಿ ತಿಳಿದುಬರುತ್ತ ಹೇಳಿಕೆಗಳಿಗನುಸಾರವಾಗಿ ಶಿಕ್ಷಿಸಿ ಮಾನವ ಮತ್ತು ದಾನವ ಧರ್ಮಕ್ಕೆ ವಿರುದ್ಧವಾದ ಅತಿ ಹೇಯವಾಗ ದಲ್ಲಿ ವರ್ತಿಸಿ ತನ್ನ ಹೆಸರಿಗೆ ಕಳಂಕವನ್ನುಂಟುಮಾಡಿಕೊಳ್ಳತಕ್ಕವನಲ್ಲ. ಅವನಿಂದ ಶಿಕ್ಷೆ ಪಡೆಯತಕ್ಕವರ್ಯಾರೂ ವೈಷಮ್ಯ ಕಾರಣದಿಂದ ಅವನನ್ನು ದೂಷಿಸುವುದಿಲ್ಲ. ಅದು ಕಾರಣವೇ ಆತನು ಯಮಧರ್ಮರಾಯನೆಂಬ (ಯಮ ಎಂದರೆ ಘೋರ ಸ್ವರೂಪಿ ಎಂದೂ ಧರ್ಮ ಎಂದರೆ ಪ್ರತಿಯೊಬ್ಬರ ಪುಣ್ಯಗಳನ್ನು ಗಣನೆಮಾಡಿ ದುಷ್ಟಶಿಕ್ಷಣೆ ಮಾಡುವನೆಂದೂ ಅರ್ಥ.) ಹೆಸರನ್ನು ಪಡೆದಿರುವನು. ಪೋಲೀಸ್ ಎಂಬ ಶಬ್ದಕ್ಕೆ ಮಾತ್ರ ಆ ಅರ್ಥವು ಸಮಂಜಸವಾಗುವುದಿಲ್ಲ. ಯಾಕೆಂದರೆ ಪೋಲೀಸ್ ನೌಕರಿಯ ಉಡುಪನ್ನು ಧರಿಸಿದ ಎಂಥಾ ಸಾತ್ವಿಕ ಪ್ರಾಣಿಗಾದರೂ ಉಡುಪಿಗೆ ತಕ್ಕಂತೆ ಸಮಯೋಚಿತವಾದ ಸುಕೃತವಲ್ಲದ ಕೆಲಸ್ಮಾಡಿಸಿ ಅಧಿಕಾರಿಗಳ ಮನ್ನಣೆಗೆ ಪಾತ್ರನಾಗಿ ಇಲಾಖಾ ಗೌರವವನ್ನು ಕಾಪಾಡುವೆನೆಂಬ ಭಾವನೆಯುಂಟಾಗತಕ್ಕದ್ದು ಸ್ವಭಾವಜನ್ಯವಾಗಿದೆ. ಇದನ್ನು ವ್ಯಕ್ತಿಗಳ ತಪ್ಪೆಂದು ಹೇಳಲಾಗದಿದ್ದರೂ ಅನೂಚಾನವಾಗಿ ನಡೆದುಬಂದ ಪದ್ಧತಿ.

ಪೋಲೀಸ್ ಎಂಬ ಶಬ್ದಾರ್ಥವೇ ಹೀಗಿರುವಾಗ ಬಾಪೋರ್ ಪೋಲೀಸ್, ಬೊಂಬಾಯಿ ಪೋಲೀಸ್ ಮೈಸೂರು ಪೋಲೀಸ್ ಎಂದು ವಿಭಾಗಿಸಿ ಪ್ರತಿಯೊಂದರ ಗುಣದೋಷಗಳನ್ನೂ ಎಣಿಕೆ ಮಾಡುತ್ತಾ ಹೋದರೆ ಎಲ್ಲಿ ಪ್ರಜಾಭಿಪ್ರಾಯಕ್ಕೆ ಹೆಚ್ಚು ಬೆಂಬಲವು ದೊರೆಯುತ್ತಿರುವುದೋ ಅಂಥ ಕಡೆ ಈ ಇಲಾಖೆಯು ಜ್ಞಾಪ್ರಾಪ್ರಜಾಭಿಪ್ರಾಯಕ್ಕೆ ಬೆಂಬಲ ದೊರೆಯದೆಡೆಗಳಲ್ಲಿ ಉತ್ಕರಿಸ ಪರುಷನನ್ನು ತೋರ್ಪಡಿಸಿ ವಿಜಯ ಪಡೆದೆವೆಂಬ ಸ್ವಪ್ನಸುಖವನ್ನು ಹೊಂದುವುದೂ ಮಾತ್ರ ಗೊತ್ತಾಗುವುದು.

ಈ ವಿಷಯದಲ್ಲಿ ನಮ್ಮ ಮೈಸೂರು ಪೋಲೀಸಿನ ಕೆಲವು ಕಲ್ಯಾಣಗುಣಗಳನ್ನು ಮಾತ್ರ ಇಲ್ಲಿ ಪರಿಶೀಲಿಸುವೆವು.

1. ನಮ್ಮ ಪೋಲೀಸ್ ಜವಾನರ ನೌಕರಿಗೆ ತಮ್ಮ ಸಹಿಕೂಡ ಹಾಕಲು ಬಾರದಿರುವ ಅನಕ್ಷರಸ್ಥರೂ ಇಗ ರ ಜೊತೆಯಲ್ಲೇ ಪ್ರಜೆಗಳ ವಿಷಯದಲ್ಲಿ ಪ್ರಾಪಂಚಿಕ ವ್ಯವಹಾರಕ್ಕನುಗುಣವಾಗಿ ವರ್ತಿಸುವ ಯೋಗ್ಯತೆಯನ್ನು ಹೊಂದಿರತಕ್ಕವರೂ ಸಹ ಶೇಕಡ 90 ರಷ್ಟು ಸೇರಿರುವರು.

ಇದರಿಂದ ಇಲಾಖೆಯಲ್ಲಿ ಸಮರ್ಪಕವಾದ ಕೆಲಸವೂ ಜನರಿಗೆ ಶಾಂತತೆಯೂ ಹೇಗೆ ತಾನೇ ಲಭ್ಯವಾಗುವವು? ಹೆಚ್ಚು ಕಮ್ಮಿ ಇವರ ಪಾಂಡಿತ್ಯವು ಲಾಂದ್ರಗಳಿಲ್ಲದ ಎಡಗಡೆಗೆ ಒದಲು ಬಲಗಡೆ ಹೋಡೆಯುವ ಗಾಡಿಗಳ ವಿಷಯದಲ್ಲಿಯೂ ದೇವರುಗಳ ಮತ್ತು ಶ್ರೀಮನ್ಮಹಾರಾಜರವರ ಉತ್ಸವ ಮೆರವಣಿಗೆಗಳ ಕಾಲದಲ್ಲಿ ಬಹಳ ಪ್ರಯಾಸದಿಂದ ಬರುವ ಜನಸಮೂಹವನ್ನು ಬಾಳೆಪಟ್ಟೆ ಪೆಟ್ಟಿನಿಂದ ಒತ್ತಟ್ಟಿಗೆ ನೂಕಿ ಅಧಿಕಾರಿಗಳ ಆಜ್ಞಾಪರಿಪಾಲನೆ ಮಾಡುವ ನಟನೆಯ ಸಂಭ್ರಮದಲ್ಲಿ ಜನರನ್ನು ವಾಚಾಮಗೋಚರವಾಗಿ ಬೈದ ಅವರಿಂದ ಗಟ್ಟಿಯಾಗಿಯೂ ಶಾಪಗ್ರಸ್ತರಾಗುವುದರಲ್ಲಿಯೂ ರೈಲ್ವೆ ಸಿಲ್ದಾಣಗಳಲ್ಲಿ (ಗಲಾಟೆ ಕಾಲದಲ್ಲಿ) ಮನಸೋಇಚ್ಛೆ ಟಿಕೆಟ್ ಕಮಿಷನ್ ಪಡೆಯುವುದರಲ್ಲೂ ಮತ್ತು ಚಿಲ್ಲರೆ ಬಾಬುಗಳಲ್ಲಿಯೂ ಚೆನ್ನಾಗಿ ಸ್ಪಷ್ಟವಾಗುವುದು. ಇಷ್ಟಾದರೂ ಇವರ ಸೌಖ್ಯವೆನೆಂದು ನೋಡಿದರೆ ಸಲ್ಲುವ ತಲಬು ಮೊದಲನೇ ದರ್ಜೆಗೆ 17 ರೂ. ಉಳಿದವರಿಗೆ ಅದರಲ್ಲಿ ಕಡಿಮೆ. ಅದರಲ್ಲೂ ಇನ್‌ಷ್ಯೂರೆನ್ಸ್ ಕ್ಷೌರ ಮೊದಲಾದ ಖರ್ಚುಬಾಬುಗಳು ಬೇರೆ ಉಳಿಕೆಯಲ್ಲಿ ಅವನ ಸಂಸಾರವು ನಡೆಯಬೇಕು. ಹೆಚ್ಚು ಕಡಿಮೆ 12 ಘಂಟೆಯೋ 16 ಘಂಟೆಯೋ ಅಂಗಸಾಧನೆ (ಡ್ರಿಲ್) ಮಾಡುವುದಕ್ಕೂ ಶಕ್ತಿಯುಂಟಾಗುವ ಹಾಗೆ ಶರೀರವನ್ನು ಪುಷ್ಟಿಮಾಡಿಕೊಳ್ಳಬೇಕು. ಹೊಟ್ಟೆಗೆ ಕಾಲವೆ 3 ಕಾಸೋ 6 ಕಾಸೋ ಮೆಣ್ಸಿನ ಸಾರನ್ನು ಸಂಪಾದಿಸಿಕೊಂಡಿದ್ದು ಸಹ ಪಾಠಗಳಿಂದ ಹೊರಬಿದ್ದರೆ ರೂಪಾಯಿಗಟ್ಟಲೆ ಜುಲ್ಮಾನೆಗಳಾಗಲೀ ಅಥವಾ ಸಸ್ಪೆಂಡ್ ಮೊದಲಾದ ಪ್ರಾಶಸ್ತ್ಯಗಳಾಗಲೀ ತಪ್ಪಿದ್ದೇ ಅಲ್ಲ. ಅಲ್ಲಲ್ಲಿ ರಾತ್ರಿ ವೇಳೆ ಈ ನೌಕರರ ಪೈಕಿ ಒಬ್ಬರೊಬ್ಬರು ಕಷ್ಟಸುಖಗಳನ್ನು ಹೇಳಿಕೊಳ್ಳುವುದನ್ನು ಕೇಳಿದರೆ ಎಂತಹವನಿಗಾದರೂ ಮರುಕವುಂಟಾಗುವುದು. ಆದರೂ ಅವರ ವರ್ತನೆಯಿಂದ ಆ ಭಾವನೆಯು ಉತ್ಪತ್ತಿ ಕ್ಷಣವೇ ನಶಿಸಿಹೋಗುವುದು.

ಇನ್ನು ಆಫೀಸುಗಳ ಪ್ರಸ್ತಾಪ. ಇವರು ತಮ್ಮ ದರ್ಜೆಗನುಸಾರವಾಗಿ ಜವಾನರುಗಳ ಮುಖೇನ ನಾಗರೀಕರಲ್ಲಿ ಹಿಂದುಳಿದಿರತಕ್ಕವರನ್ನು ಬೆದರಿಸಿಕೊಂಡು ಸಂದರ್ಭಾನುಸಾರ ಸಂಭಾವನೆಯಾಗಿ (ದಕ್ಷಿಣೆ)ಹಾಗೂ ಕಂದಾಯಗಳ ಮೇಲೋ ಜೈಲಿಗಳ ಮೇಲೂ ಕಾಲು ಪಾಕೆಟ್ಟಿರಾಯಿತು. ಜವಾನರುಗಳ ಹಾಗೆ ಇವರು ಮೆರೆಯುತ್ತಿನಿಸೆಯುವ ಹಾದಿಗಳಲ್ಲಿ ಬಿಸಿಲಿನಲ್ಲಿ ಒಣಗುವ ಹಾಗಿಲ್ಲ. ಇವರಿಗೆ ಕಳ್ಳರನ್ನು ಪತ್ತೆಮಾಡುವ ಮಾರ್ಗಗಳು ಗೊತ್ತಾಗದಿದ್ದರೂ ಶಾಂತವಾಗಿ ಶಿಕ್ಷಿಸುವ ನಿರಪರಾಧಿಗಳನ್ನು ಹಿಡಿಯುವುದರಲ್ಲಿ ನಿಪುಣತ್ವವುಂಟಾಗಿರುವರು. ರಾಜು ವರ್ಗದಲ್ಲಿ ಎದುರಿಸತಕ್ಕ ಖ್ಯಾತಿಯು ಇವರಿಗಿಲ್ಲ.

ಈ ಇಲಾಖೆಯಲ್ಲಿ ಹುಟ್ಟತಕ್ಕ ಅರ್ಜಿಗಳನ್ನೇ ಚೆನ್ನಾಗಿ ಗಮನಿಸದೆ ತಮ್ಮ ಮನಸ್ಸಿನ ಮಹಾಜನಗಳಲ್ಲಿ ಪ್ರಸರಿಸಿ ಅಶಾಂತಿಯನ್ನು ಬೀರಿ ಕಡೆಯಲ್ಲಿ ಬಿನ್ನವಿಸಸ್ವರಾಗ ಮದಬ್ಬಾಳಿಕೆಯ ಸ್ವಭಾವವು ಮಾತ್ರ ಚೆನ್ನಾಗಿ ಬೇರೂರಿ ಹೋಗಿದೆ.

ಕಡೆಯಲ್ಲಿ ಸಿ. ಐ. ಡಿ. ಗಳ ಪ್ರಸ್ತಾಪವನ್ನೂ ಸಹ ಕೊಂಚಮಟ್ಟಿಗೆ ಮಾಡಿ ಮುಗಿಸೋಣ. ಸಿ. ಐ. ಡಿ. ಗಳೆಂದರೆ ಗುಪ್ತವಾದ ಸಂಗತಿಗಳನ್ನು ತಮ್ಮ ಬುದ್ಧಿ ಕುಶಲತೆಯಿಂದ ಪ್ರಕಾಶಕ್ಕೆ ತಂದು ದುಷ್ಟಶಿಕ್ಷಣ ಶಿಷ್ಟರಕ್ಷಣ ಕಾರ್ಯದಲ್ಲಿ ಬದ್ಧಕಂಕಣರಾದ ಚಾಣಾಕ್ಷರೆಂದರ್ಥ. ಈ ಕಾರ್ಯಕ್ಕೆ ಪಾಶ್ಚಾತ್ಯ ಮತ್ತು ಇತರ ನಾಗರಿಕ ದೇಶಗಳಲ್ಲಿ ವಿದ್ಯಾಪರಿಶ್ರಿತರನ್ನೇ ನೇಮಿಸಿ ತನ್ಮೂಲಕ ಹೆಚ್ಚಿನ ಪ್ರಯೋಜನವನ್ನು ಹೊಂದುವರು. ಆದರೆ ನಮ್ಮ ದೇಶದಲ್ಲಿರುವ(ಈಶೇಖರದ ಮೊದಲು ವಿವಸಿರುವ)ಪೋಲೀಸ್ ಜವಾನರುಗಳೇ ಈ ಕೆಲಸಕ್ಕೂ ಅವರ ಪುರಸತ್ತಾದ ಕಾಲದಲ್ಲಿ ನಿಯಮಿಸಲ್ಪಡುವರು. ಇಂತಹವರಿಂದ ಉದ್ದೇಶಿಸಿರುವ ಕಾರ್ಯಸಾಧನೆಯಾಗುವುದೇ? ಸರ್ಕಾರದಲ್ಲಿ ಒಂದು ವರ್ಷ ಕೆಲಸ ಮಾಡಿ ಪಡೆಯುವ ತಲಬು ಯಾವುದಾದರೂ ಒಂದು ಕೇಸಿನಲ್ಲಿ (ಅಪರಾಧಿಯ ಪರ)ದೊರೆಯುವ ಸಂದರ್ಭ ಬಿದ್ದಾಗ ನೌಕರನು ಯಾವ ರೀತಿ ವರ್ತಿಸಬೇಕಾಗುತ್ತೆಂಬುದನ್ನೂ ಈ ವಿಷಯವಾಗಿ ಸರಕಾರದ ಪರಿಸ್ಥಿತಿಯ ಪರಿಣಾಮವನ್ನೂ ವಾಚಕರೇ ಊಹಿಸುವುದುತ್ತಮ.

ಪೋಲೀಸಿನವರ ಅತ್ಯಾಚಾರ

ಈಗ ಕೆಲವು ದಿವಸಗಳ ಹಿಂದೆ ಮ|| ತಗಡೂರು ರಾಮಚಂದ್ರರಾಯರನ್ನು ಪೋಲೀಸಿನವರು ಹಿಂಸಿಸಿ ಅವರನ್ನು ಬೈದ ವಿಷಯವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಇದೇ ವಿಷಯವನ್ನು ಮ|| ರಾಯರು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಹೇಳಿಕೆಯಲ್ಲಿಯೂ ತಿಳಿಸಿರುವರು. ಮ|| ರಾಮಚಂದ್ರರಾಯರು ಪ್ರಾಮಾಣಿಕರಾದ ಸ್ವಾರ್ಥತ್ಯಾಗಿಗಳಾದ ದೇಶಸೇವಕರು. ಇಂತಹವರನ್ನು ಪೋಲೀಸಿನವರು ಈ ರೀತಿಯಾಗಿ ಹಿಂಸೆ ಮಾಡಿದ್ದು ಬಹಳ ವಿಷಾದಕರ. ಇದನ್ನೇ ಮ|| ಟಿ. ರಂಗರಾವ್ (ಒಬ್ಬ ವಕೀಲರು)ಸ್ವರಾಜ್ಯ ಪತ್ರಿಕೆಗೆ ಬರೆದಿರುವರು. ಇದುವರೆಗೂ ಪೋಲೀಸಿನವರು ಯಾರೂ ಇದನ್ನು ಸುಳ್ಳೆಂದು ಅಲ್ಲಗಳೆದಿಲ್ಲ. ನಾಗರೀಕರ ರಕ್ಷಣೆಯನ್ನು ಮಾಡುವ ಬದಲು ಹಿಂಸಿಸುವುದು ಪೋಲೀಸಿನವರ ಕೆಲಸವಾಗಿದೆ. ಇನ್ಸಪೆಕ್ಟರುಗಳೇ ನಾಗರೀಕರನ್ನು ಬೈಯುವುದು. ದರಿಂದಕ್ಕಿಂತಲೂ ಅಗೌರವವಾದ ಕೆಲಸವು ಬೇರೊಂದಿಲ್ಲ. ಪೋಲೀಸ್ ಇಲಾಖೆಗೆ ಮಾನ ಬರಬೇಕಾದರೆ ಈ ರೀತಿಯಾಗಿ ಹದ್ದು ಮೀರುವವರಿಗೆ ತಕ್ಕ ಬಂದೋಬಸ್ತು ಆಗಬೇಕು. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ಡೆಪ್ಯುಟೀ ಕಮೀಷನರ್‌ರವರೂ ಈ ವಿಷಯಕ್ಕೆ ತಕ್ಕ ಗಮನವನ್ನು ಕೊಟ್ಟು ನಾಗರೀಕರ ಅಸಮಾಧಾನವನ್ನು ನಿವರ್ತಿ ಮಾಡುವರೆಂದು ನಂಬುತ್ತೇವೆ.

ಹರಿಕಥೆಯ ರಿಯಾಯಿತಿ.

ಈ ದಿನ ಸಾಯಂಕಾಲ ರಾಜಧಾನಿಯ ಟವನ್ ಹಾಲಿನಲ್ಲಿ ಶ್ರೀಬಾಬಾನ್ ಮತ್ತ್ಯಭಾಗವತರಿಂದ ಶ್ರೀ ಶತಚಂಡಿಕಾ ಯಾಗದ ಸಹಾಯಾರ್ಥವಾಗಿ ನಡೆಸಲ್ಪಡುವ ಹರಿಕಥೆಗೆ ಮೊದಲನೆ ಮೂರು ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಶೇ 25 ರಂತೆ ರಿಯಾಯಿತಿ ದೊರೆಯುವುದು.

ವೈಸರಾಯರು

ವೈಸರಾಯರಾದ ಲಾರ್ಡ್ ಇರ್ವಿನ್‌ರವರು ತಮ್ಮ ಪರಿವಾರಸಮೇತ ಗ್ವಾಲಿಯರ್‌ನಿಂದ ಹೊಸಡೆಲ್ಲಿಗೆ ಈ ಮಾಹೆ 8 ನೇ ತಾ ದಯಮಾಡಿಸಿದರು. ರಂಗೂನಿನಲ್ಲಿ ಭೇಟಿಯು ಇವರಿಗೆ ಬಹಳ ತೃಪ್ತಿಕರವಾಗಿ ನಡೆಯಿತು.

ಮೈಸೂರುಸ್ಟೇಟ್ ಕಾಂಗ್ರೆಸ್.

ಈ ತಿಂಗಳು 16 ನೇ ತಾ ಮಧ್ಯಾಹ್ನ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ಎಂ. ಪಿ. ಸೋಮಶೇಖರರಾಯರ ಆಫೀಸಿನಲ್ಲಿ ಬೆಂಗಳೂರಿನಲ್ಲಿ ನಡೆಯುವ ಮುಂದಿನ ಕಾಂಗ್ರೆಸ್ಸಿನ ವಿಷಯಗಳನ್ನು ಪರ್ಯಾಲೋಚಿಸುವುದಕ್ಕೆ ಸ್ಟ್ಯಾಂಡಿಂಗ್ ಕಮಿಟಿಯ ಮೀಟಿಂಗ್ ನಡೆಯುವುದು.

TAI NADU
15—3—1929

ವರ್ತಮಾನ ಸಂಗ್ರಹ.

ರಜಾ.

ಹಂಗಾಮಿ ಅಸಿಸ್ಟೆಂಟ್ ಸರ್ಜನ್‌ರಾದ ಮಿ. ಬಿ. ಎಲ್. ಡಿ. ಕಾಸ್ಟರ್‌ವರಿಗೆ ಜನವರಿ 15 ರಿಂದ ಆರು ತಿಂಗಳ ಕಂಬೈಂಡ್ ರಜಾ ಮಂಜೂರಾಗಿದೆ. ಇದರ ಪೈಕಿ 29 ದಿನಗಳು ಪ್ರಿವಿಲೇಜ್ ರಜವಾಗಿಯೂ ಒಂದು ತಿಂಗಳು 27 ದಿವಸಗಳು ಅರ್ಧ ಸಂಬಳದ ಫರ್ಲೋ ಆಗಿಯೂ ಉಳಿದದ್ದು ಸಂಬಳವಿಲ್ಲದೆಯೂ ಭಾವಿಸಲ್ಪಟ್ಟಿರುತ್ತೆ.

ವರ್ಗಾವರ್ಗಿ.

ತುಮಕೂರು ತಾ|| ಅಮಲ್ದಾರರಾದ ಮಿ|| ಎ. ಕೃಷ್ಣಸ್ವಾಮಿರಾಯರವರು ರಿಟೈರಾಗುವುದರಿಂದ ಹೊಳೇನರಸೀಪುರದ ತಾ|| ನ ರಿಕಾರ್ಡ್ ಆಫ್ ರೈಟ್ಸ್ ಕೆಲಸ ಮಾಡುತ್ತಿರುವ ಆಕ್ಟಿಂಗ್. ಡೆಪ್ಯುಟಿ ಅಮಲ್ದಾರರಾದ ಮಿ|| ಬಿ. ಸುಬ್ರಹ್ಮಣ್ಯಯ್ಯನವರು ತುಮಕೂರು ತಾ|| ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ರಜಾ

ಕ್ಲೋಸ್‌ಪೇಟೆ ಸಬ್ ಡಿವಿಷನ್ ಇನ್‌ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರಾದ ಮಿ|| ಜೆ. ಅಪ್ಪಾಜಿಗೌಡರಿಗೆ ಫೆಬ್ರವರಿ 17 ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಮಧುಗಿರಿ ತಾಲ್ಲೋಕು ಅಮಲ್ದಾರರಾದ ಮಿ|| ಎಂ. ಶಂಕರಪ್ಪನವರು ಕ್ಲೋಸ್‌ಪೇಟೆ ಸಬ್ ಡಿವಿಷನ್ನಿನ ಛಾರ್ಜಿಗೆ ಅಸಿಸ್ಟೆಂಟ್ ಕಮೀಷನರಾಗಿ ನೇಮಿಸಲ್ಪಟ್ಟಿರುವರು.

ರೈಲ್ವೆ ಅನಾಹುತ.

ಈ ತಿಂಗಳು 10 ನೇ ತಾ|| ಮಧ್ಯಾಹ್ನ ರಂಗೂನಿಂದ ಮಾಂಡಲೆಗೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ವೆ ಗಾಡಿಗೆ ಬೆಂಕಿ (ಪೆಟ್ರೋಲಿನಿಂದ) ಹತ್ತಿಕೊಂಡಿತು. ಆಗ ಗಾಡಿಯಿಂದ ಧುಮುಕಿದ ನಲವತ್ತು ಜನರಿಗೆ ಘಾಯಗಳಾಗಿವೆ.

ಸ್ವರಾಜ್ಯ ಡೆ

ಈ ತಿಂಗಳು 10 ನೇ ತಾ|| ಡೆಲ್ಲಿಯಲ್ಲಿ ರಾಷ್ಟ್ರೀಯ ಮಹಾಸಭೆಯಿಂದ ಸ್ವರಾಜ್ಯದಿನದ ಉತ್ಸವವು ಬಹಳ ಸಂಭ್ರಮದಿಂದ ನಡೆಯಿತು. ಪಂಡಿತ ಮೋತೀಲಾಲ ನೆಹರೂರವರು ಮುಂದಾಳಾಗಿದ್ದರು. ನೆಹರೂ ರಿಪೋರ್ಟನ್ನು ಸಹ ಸ್ವೀಕರಿಸುವುದೇ ಇದರ ಮುಖ್ಯೋದ್ದೇಶ.

ರಾಷ್ಟ್ರೀಯ ಧ್ವಜಾರೋಹಣ.

ಹೈದರಾಬಾದ್ ಪೌರಸಭೆಯ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜಾರೋಹಣ ಮಾಡಿಸಬೇಕೆಂದು ಅಲ್ಲಿನ ಮುನಿಸಿಪಾಲಿಟಿಯಲ್ಲಿ ತೀರ್ಮಾನವಾಗಿರುತ್ತೆ.

ಸ್ಪೆಷಲ್ ಟ್ರೈನ್.

ಈಸ್ಟ್ ಇಂಡಿಯನ್ ರೈಲ್ವೆ ಕಂಪನಿಯು ಏಪ್ರೆಲ್ ಒಂದನೇ ತಾ ಲಾಗಾಯಿತು ಹೌರಾದಿಂದ ಲಾಹೋರಿಗೆ ಮೊದಲನೇ ತರಗತಿಯ ಪ್ರಯಾಣಿಕರಿಗೆ ಮಾತ್ರ ಒಂದು ಸ್ಪೆಷಲ್ ಎಕ್ಸ್‌ಪ್ರೆಸ್ ಟ್ರೈನನ್ನು ಬಿಡಬೇಕೆಂಬ ಏರ್ಪಾಡು ಮಾಡುತ್ತಿರುವರು.

ಮರಣ

ಜನರಲ್ ಸಾರ್ವಿನ್‌ರವರು ಈ ತಿಂಗಳ 5 ನೇ ತಾ ಸಾಯಂಕಾಲ ಒಬ್ಬ ಸ್ಪೆನಿಷ್ ಫಿನಟಿಯಿಂದ ಕೊಲ್ಲಲ್ಪಟ್ಟರೆಂಬ ವದಂತಿ ಕೇಳಬಂದಿತು.

ಚಲನಚಿತ್ರಗಳ ತಯಾರಿಕೆ.

ಬೊಂಬಾಯಿನ (ಸಿನಿಮಾ) ಫಿಲಂ ಕಂಪನಿಯು ಬೆಂಗಳೂರಿನಲ್ಲಿ ಚಲನಚಿತ್ರಗಳ ತಯಾರಿಕೆಯ ಕಂಪನಿಯನ್ನು ಸ್ಥಾಪಿಸಲು ಬೇಕಾದ ಸಲಕರಣೆಗಳನ್ನೆಲ್ಲಾ ಮಾಡುತ್ತಿದೆ. ಈ ವಿದ್ಯೆಯನ್ನು ಬೋಧಿಸಲು ಒಂದು ಪಾಠಶಾಲೆಯು ಏರ್ಪಾಡಾಗಿ ಪ್ರೌಢವಿದ್ಯಾಭ್ಯಾಸಂಗ ಪಡೆದಿರತಕ್ಕ ಭಾರತೀಯ ಯುವಕರಿಗೆ ವಿದ್ಯಾರ್ಜನೆಯ ಅವಕಾಶ ದೊರೆಯುವುದು.

ಬೊಂಬಾಯಿನ ಇಂಡಿಯನ್ ನ್ಯಾಷನಲ್ ಇಂಡಸ್ಟ್ರೀಸ್ ಕಂಪನಿಯವರೂ ಮದನ್ ಥಿಯೇಟರಿನಲ್ಲಿದ್ದ ಮಿ|| ಜೇಮ್ಸ್‌ರವರೂ ಇವರೇ ಮೊದಲಾದ ಈ ವಿದ್ಯೆಯಲ್ಲಿ ಹೆಚ್ಚು ಪಾಂಡಿತ್ಯ ಪಡೆದಿರುವ ಅನೇಕ ದೊಡ್ಡದೊಡ್ಡ ಮಹನೀಯರುಗಳೆಲ್ಲರೂ ಈ ಕಂಪನಿಗೆ ಸೇರಿರುವುದರಿಂದ ಇದರ ಕೆಲಸ ಕಾರ್ಯಗಳು ವಿಜಯವನ್ನೇ ಪಡೆಯುವುದೆಂದು ಗೊತ್ತಾಗುತ್ತದೆ.

ವಿದ್ಯಾರ್ಥಿಯ ದಸ್ತಗಿರಿ

ಬಾರಿಸಲ್‌ನ ಪೋಲೀಸ್ ಇನ್‌ಸ್ಪೆಕ್ಟರನ್ನು ಈ ಮಾಹೆ 10 ನೇ ತಾ|| ಸಾಯಂಕಾಲ ಒಬ್ಬ ವಿದ್ಯಾರ್ಥಿಯು ಹೊಡೆದುಕೊಂದನು. ಅಪರಾಧಿಯು ದಸ್ತಗಿರಿಯಾಗಿರುತ್ತಾನೆ.

ಖಾದಿಪ್ರದರ್ಶನ

ಸೇಟ್ ಜಮನಾಲಾಲ್ ಬಜಾಜ್‌ರವರು ನಾಗಪುರದಲ್ಲಿ 9 ನೇ ತಾ ಖಾದಿಪ್ರದರ್ಶನವನ್ನು ತೆರೆದರು. ಯುವಕಸಂಘದವರು "ಸೈಮನರೇ ಹಿಂದಿರುಗಿ" ಎಂಬ ಕರಿಬಾವುಟಗಳ ಮೆರವಣಿಗೆಯನ್ನು ಮಾಡಿದರು. ಪ್ರತಿದಿನವೂ ಪರದೇಶೀ ವಸ್ತ್ರಗಳ ದಹನನಾಗುತ್ತಲಿದೆ.

ಜವಾಹಿರ್ ಲಾಲ್ ನೆಹರೂರವರು

ಪಂಡಿತ ಜವಾಹಿರ್‌ಲಾಲ್ ನೆಹರೂರವರು ಅಲಹಾಬಾದಿಗೆ ಸ್ವರಾಜ್ಯ ಮೆರವಣಿಗೆಯನ್ನು ನಡಿಸಲು ಹೋಗಿರುವರು.

ಹಿಂದೀ ನಿಘಂಟು

ಯುನೈಟೆಡ್ ಪ್ರಾಂತ್ಯದ ಗವರ್ನರ್‌ರವರು "ಹಿಂದೀಶಾಸ್‌ಗರ್" ಎಂಬ ನಿಘಂಟನ್ನು ಚೆನ್ನಾಗಿ ಸಂಶೋಧಿಸಿ (ಪ್ರಕಟಿಸಲು) ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆಕೊಟ್ಟಿರುವರು.

ಮುನಿಸಿಪಲ್ ಕೌನ್ಸಿಲ್

ಗುಬ್ಬಿ ಮುನಿಸಿಪಲ್ ಕೌನ್ಸಿಲ್ಲಿನ ರೆವರೆಂಡ್ ಮಿ|| ಜೆ. ಎಸ್. ವೆಸ್ಲೆಯವರ ಸ್ಥಾನದಲ್ಲಿ ಮಿ|| ಜಾನ್ ವಿಲಿಯಮ್ಸ್ ಎಂಬುವರು ಮೆಂಬರಾಗಿ ನಿಯಮಿಸಲ್ಪಟ್ಟಿರುವರ.

ಬೆಂಚ್‌ಕೋರ್ಟು

ಹೊಸಕೋಟೆ ಬೆಂಚ್ ಕೋರ್ಟಿಗೆ 1929 ನೇ ಏಪ್ರೆಲ್ ಒಂದನೇ ತಾ ಲಾಗಾಯಿತು ಮ|| ರಾ|| ಗಳಾದ (1) ಎ. ಬಿ. ಇನಾಂದಾರ್ (2) ಮರಿವೀರಭದ್ರಸೆಟ್ಟಿ (3) ಶ್ರೀಕಂಠಪ್ಪನವರು (4) ರಾಮಯ್ಯಶೆಟ್ಟಿ (5) ಗುಂಡೋಪಂತ್‌ರವರೂ (6) ಮುನಿವೆಂಕಟಪ್ಪನವರೂ (7) ಸೂರ್ಯನಾರಾಯಣಪ್ಪನವರೂ ಮೂರನೆ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು.

[illegible]

[illegible] ಪಟ್ಟಿಸಲ್ಪಟ್ಟಿರುತ್ತೆ.

ವಿದ್ವತ್ ಸಭಾ

ಕುಂಭಕೋಣದ ವಿದ್ವತ್ ಸಭೆಯು 13 ನೆಯ ವಾರ್ಷಿಕೋತ್ಸವವು ಮುಂದಿನ ವಾರದಲ್ಲಿ ಪ್ರಾರಂಭವಾಗಿ ಎಂಟುದಿನಗಳವರೆಗೆ ನಡೆಯುವುದು. ಈ ವಾರ್ಷಿಕೋತ್ಸವವೂ ಪಾಠಶಾಲೆಯೂ 25000 ರೂಗಳ ಧ್ರುವನಿಧಿಯ ಬಡ್ಡಿಯಿಂದ ನಡೆಸಲ್ಪಡುತ್ತಿವೆ.

ಕುಂಭಕೋಣದ ಸಭೆ

ಕುಂಭಕೋಣದ ಟವನ್ ಹಾಲಿನಲ್ಲಿ ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಿದ ವಿಷಯವಾಗಿ ನಡೆದ ಮೀಟಿಂಗಿನಲ್ಲಿ ಪೋಲೀಸಿನವರ ವರ್ತನೆಯನ್ನು ಖಂಡಿಸತಕ್ಕ ಠರಾವೊಂದು ಪಾಸಾಯಿತು. ಪರದೇಶೀ ವಸ್ತ್ರಗಳನ್ನು ಬಹಿಷ್ಕರಿಸಿ ಖಾದಿಯನ್ನೇ ಉಪಯೋಗಿಸಬೇಕೆಂದೂ ತೀರ್ಮಾನವಾಯಿತು.

ಸ್ವಾಗತ

[illegible] 11 ನೇ ತಾ ರಂಗೂನನ್ನು ತಲುಪಿ (ಕಲ್ಕತ್ತೆಯಿಂದ) [illegible] ಜನೆ ಪತ್ರಿಕೆಯನ್ನು ಸ್ವೀಕರಿಸಿದರು. [illegible] ವಸಗಳು ಅಲ್ಲೇ ಇರುವರು.

[illegible]

[illegible] ಸಾಯಂಕಾಲ [illegible] ಸುಂದರವಾಗಿ [illegible] ಪ್ರಾರಂಭೋತ್ಸವವನ್ನು [illegible]

ಬಹಿಷ್ಕಾರ

ಹೊಸಪೇಟೆಯಲ್ಲಿ [illegible] ಯಾಳುಗಳು ಕೆಲವು ತಿಂಗಳಿಂದ [illegible] ಯಾಗಿ ನಿಲ್ಲುತ್ತಿಲ್ಲವೆಂಬ ಕಾರಣದ ಮೇಲೆ ಮುಷ್ಕರ ಹಿಡಿದಿರುವರು.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಪಾರ್ಕೋನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪಾಸ್ ಪಾಡಲ್ ಪಾಕೆಟ್ ಡೈರಿಗಳು 4 ನಮೂನೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು ಷೀಟ್ ಕ್ಯಾಲೆಂಡರ್ ಪಾಕೆಟ್ [illegible] ಪತ್ನ್ಯ ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನ [illegible] ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ಸ್ಟಾಂಪು ಕಳುಹಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು [illegible] ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಬ್ಬದಲ್ಲಿರುವುದೇನು ?



ರಕ್ತವೃದ್ಧಿ ಮಾಡಿ ರತಿರೋಗಗಳನ್ನು ನೀಗಿಸಿ
ತರುಣರಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನರಗಳನ್ನು ಬಿಗಿಮಾಡಿ ಅಂಟ ರೋಗಗಳನ್ನು ಪರಿಹರಿಸಿ
ವಿಡುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.)

ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ.



"ಭಿಷಗ್ರತ್ನ"

ವೈದ್ಯ ವೆಂಕಟಾಚಲ ಪಂಡಿತರ

[illegible]

ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ಬೆಳಗಿನ ಹೊತ್ತಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆ ಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಸೀತಾರಾಮಯಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.

ವೈಶ್ವಾನರಾಸವ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ [illegible] ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

[illegible] ರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸತೈಲ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಬ್ರಾಂಚ್ ಆಫೀಸು ಚಿಕ್ಕಪೇಟೆ ಬೆಂಗಳೂರು ಸಿಟಿ } ಹೆಡ್ ಆಫೀಸು ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.



ಭಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನು ಗಳನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಯಸ್ ಸಂಪಿಂಪ ಅಸ್ಸುರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ,
ನಗರ್ತಪೇಟೆ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centre or Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R. Ramaiya,
at Sri Rama Press, D Subbiah Road, Mysore.

Regd. No M. 322

ವಂದೇ ಮಾತರಂ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:— [illegible] ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ||

ವಾರ್ಷಿಕ ಚಂದಾ { [illegible]

ಸಂಪುಟ ೧] ಶನಿವಾರ ೧೬ ಮಾರ್ಚಿ ೧೯೨೯ [ಸಂಚಿಕೆ ೧೩೪

ತಾಯಿನಾಡು.

10-3 1929

ಗಾಂಧಿಜೀಯವರ ರಾಜಕೀಯ ಭಾವಗಳು

(ಬರೆದು ಬಂದುದು.)

1. ಈಗ ನಮ್ಮ ದೇಶವು ಕಟುಕನ ಕತ್ತಿಯ ಕೆಳಭಾಗದಲ್ಲಿರುವ ಹಸುವಿನಂತೆ ಇರುವುದು. ಈ ದೀನ ದೇಶರೂಪವಾದ ಗೋಮಾತೆಯನ್ನು ಸಂರಕ್ಷಿಸುವುದು ನಿಮ್ಮ ಮತ್ತು ಎಲ್ಲಾ ಪರಮ ಧರ್ಮವಾಗಿರುವುದು. ಗೋಹತ್ಯವನ್ನು ಹೋಗಲಾಡಿಸಿ ಅದನ್ನು ಪಾಲನೆಮಾಡಿದರೆ ನಮಗೆ ಉಂಟಾಗುವ ಪ್ರಯೋಜನವು ಅಷ್ಟಿಷ್ಟೆಂದು ವರ್ಣಿಸಲು ಆಗಲಾರದ.

2. ಅಸಹಾಯಯೋಗವು (Non co-operation) ದೂಷಿತಾಸ್ತ್ರವೆನ್ನುವ ಮಾತ್ರವೂ ಆಗಲಾರದು. ಬೇಕಾದಹಾಗೆಲ್ಲ ಅದನ್ನು ಉಪಯೋಗಿಸಬಹುದು. ಅದರ ಪ್ರಯೋಗದಿಂದ ಯಾವ ಉಪದ್ರವವೂ ಸಂಭವಿಸಲಾರದು. ಅದು ಕಲ್ಲೋಲವನ್ನು ಅಡಗಿಸಲು ಮುಖ್ಯಸಾಧನವು.

3. ಅಸಹಕಾರಕ್ಕೆ ಎಂಥಹ ಸರ್ವವ್ಯಾಪಕವಾದ ಅರ್ಥವನ್ನು ಕಲ್ಪಿಸಿದರೂ ನಾನು ಅದರಲ್ಲಿ ಉಪದ್ರವ ಶಕ್ತಿಯೂ ತಾವ ಸಂಪತಿಯೂ ಇರಲು ಅಪೇಕ್ಷಿಸೆನು. ಸುವ್ಯವಸ್ಥಿತವಾದ ಅಸಹಕಾರದಲ್ಲಿ ನಿಯಮಪಾಲನೆಯೂ ಶಾಂತಿಯೂ ಹೊರತು ಘೋರಾಂಧಕಾರವು ವ್ಯಾಪ್ತವಾಗಿರದು.

4. ನನ್ನ ಕಲ್ಪನೆಯಲ್ಲಿ ಅಸಹಾಯಯೋಗವು ಶಸ್ತ್ರವಿಹೀನರಾದ ಪ್ರಜೆಗಳಿಗೆ ಕಾರ್ಯಸಾಧನವಲ್ಲವು. ಇದು ಸಬಲರಿಗೂ ದುರ್ಬಲರಿಗೂ ಅವರು ಇವರು ಎಂಬ ಭೇದವಿಲ್ಲದೆ ಸಕಲ ಸ್ತ್ರೀ ಪುರುಷ ಮಾನವ ವರ್ಗಕ್ಕೆ ಉಪಯೋಗ ಪಡುವ ದಿವ್ಯ ಶಸ್ತ್ರವು. ಅಸಹಕಾರವನ್ನು ನ್ಯಾಯಯುಕ್ತವಾದ ಧರ್ಮವೆಂದು ಹೇಳಬೇಕಾಗಿದೆ.

5. ಅಸಹಕಾರವು ಒಂದು ಪವಿತ್ರವಾದ ಸಹಜ ಯಜ್ಞ ಸಾಮಾನ್ಯವಾದ ತಪಸ್ಸು. ಇದರಲ್ಲಿ ಸ್ವಲ್ಪವೂ ಭೋಗವಿಲ್ಲವು.

6 ಅವಿವೇಕವು ಕ್ರೋಧಸಂಕೇತವಾದುದು. ಕ್ರೋಧಾವಸ್ಥೆಯಲ್ಲಿರುವ ಪ್ರಜೆಯು ದಯನೀಯವಾಗಿರುವುದು. ಕೋಪಿಗೆ ಪ್ರಪಂಚವೆಲ್ಲವೂ ಅಂಧಕಾರಬಂಧುರವು. ನಮಗೆ ಸಜಪಸು ದುಃಖವೂ ಪರಾಭವವೂ ಹೋಗಲು ಕೋಪವು ಅಣುಮಾತ್ರವೂ ಸಹಾಯ ಮಾಡಲಾರದು. ಕೋಪಾವೇಶವುಳ್ಳ ಮನುಷ್ಯನು ಮೊದಲು ದುಃಖಾತಿರೇಕಕ್ಕೆ ದ್ವಿಗುಣವಾಗಿ ಅನುಭವಿಸುವನು.

ಭಾರಿಮಳೆ

ತಿಪ್ಪಟ್ಟಿಯಲ್ಲಿ ಈ ವಾರ 10 ನೇ ತಾ ಮಧ್ಯಾಹ್ನ ಅಕಸ್ಮಾತ್ತಾಗಿ ಇಪ್ಪತ್ತು ನಿಮಿಷಗಳವರೆಗೆ ಭಾರಿಮಳೆಯಾಗಿ ಬೀದಿಗಳಲ್ಲೆಲ್ಲ ಪ್ರವಾಹದಂತೆ ನೀರು ನಿಂತಿದ್ದುದರಿಂದ ಸುಮಾರು ಒಂದು ಘಟಿಕಾಲ ಜನ ಜಾನುವಾರುಗಳ ಮತ್ತು ವಾಹನಗಳ ಸಂಚಾರವೇ ನಿಂತು ಹೋಗಿತ್ತು.

ಬೆಂಗಳೂರು ಸುದ್ದಿ

(ನಮ್ಮ ವಿಶೇಷ ಬಾತ್ಮೀದಾರರಿಂದ)

ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಶಾಸ್ತ್ರಿ—ರಾಯರ ಮೊಕದ್ದಮೆಯ ಮಾತೇ ಮತು. ಪಾರ್ಶ್ವಭಾಗ ಸಭಾ ಬಂಧನದ ಆರ್ಡರು ಜಾರಿಯಲ್ಲಿ ಇಲ್ಲದಿದ್ದರೆ ಪ್ರಚಂಡ ಸಭೆಗಳು ನಡೆಯುತ್ತಿದ್ದುವು. ಸಭೆಯು ನಡೆಯಲಿ ನಡೆಯದಿರಲಿ ಈ ದಬ್ಬಾಳಿಕೆಯನ್ನು ಯಾರೂ ಒಪ್ಪುವ ಹಾಗಿಲ್ಲ. ತಿಳಿದವರು ಹೇಳುವುದನ್ನು ನೋಡಿದರೆ ಪರಿಸ್ಥಿತಿಯು ಇನ್ನೂ ಭಯಾನಕವಾಗುವಂತೆ ಕಾಣುತ್ತದೆ. ರಾಜದ್ರೋಹಕ್ಕಾಗಿ ಇನ್ನೂ ಅನೇಕರ ದಸ್ತಗಿರಿಯಾ ಮೊಕದ್ದಮೆಯಾಗುವ ಸನ್ನಿವೇಶವಿದೆಯೆಂದೂ ಸರಕಾರದ ಕಾನೂನುಕಾರ್ಯದರ್ಶಿಗಳು ಪತ್ರಿಕಾಕರ್ತರ ಮತ್ತು ಪತ್ರಿಕೆಗೆ ಬರೆದವರ ಲೇಖನಗಳನ್ನು ಬಹು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರುವರೆಂದೂ ಮ|| ತಗಡೂರು ರಾಮಚಂದ್ರರಾಯರ ಮೇಲೆ ಶೀಘ್ರದಲ್ಲಿಯೇ ಮೊಕದ್ದಮೆಯು ದಾಖಲಾಗುವುದೆಂದೂ ಇವೇ ಮೊದಲಾದ ಸುದ್ದಿಗಳು ಬೆಂಗಳೂರಿನಲ್ಲಿ ಎಲ್ಲರ ಬಾಯಲ್ಲಿಯೂ ಇವೆ.

ಮ|| ಗಳಾದ ಸೀತಾರಾಮ ಶಾಸ್ತ್ರಿಗಳೂ ಅಶ್ವತ್ಥನಾರಾಯಣರಾಯರೂ ಜೇಲಿನಲ್ಲಿ ಸಂತೋಷಚಿತ್ತರಾಗಿರುವರೆಂದು ಸಮಾಚಾರ.

ಕಂಟೋನ್ಮೆಂಟಿನ ಮೆಸರ್ಸ್ ಪೀಟರ್ ಸನ್ ಎಂಡ್ ಕಂಪೆನಿಯ ಮೇನೇಜಿಂಗ್ ಪ್ರೊಪ್ರೈಟರಾದ ಚೆನ್ನೇಗೌಡ ಎಂಬುವರು ಮ|| ನೀಲಗಿರಿ ಸಂಜೀವಯ್ಯನವರ ಮೇಲೆ ಮೋಸ ಮಾಡಿದರೆಂಬ ಆಪಾದನೆಗಾಗಿ ದಂಡಿಸ ಮುನಿಸೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದಾವಾ ಹಾಕಿರುವರು. ಇವರು ಕಂಪೆನಿಯವರಿಗೆ ಕೊಡಬೇಕಾದ ಸಾಲಕ್ಕಾಗಿ ಮೈಸೂರು ಬ್ಯಾಂಕಿನ ಮೇಲೆ 4-2-29 ನೇ ತಾ|| ನಲ್ಲಿ 407 ರೂ ಗಳಿಗೂ 16-2-29 ರಲ್ಲಿ 4500 ರೂ ಗಳಿಗೂ ಚಕ್ಕು ಕೊಟ್ಟರೆಂದೂ ಅವುಗಳು ಬ್ಯಾಂಕಿನಲ್ಲಿ ಸ್ವೀಕರಿಸಲ್ಪಡಲಿಲ್ಲವೆಂದೂ ಮ|| ಸಂಜೀವಯ್ಯನವರ ಅಕೌಂಟಿನಲ್ಲಿ ದುಡ್ಡಿಲ್ಲವಿದ್ದುದೇ ಕಾರಣವೆಂದೂ ದುಡ್ಡಿಲ್ಲದೆ ಈ ರೀತಿಯಾಗಿ ಚಕ್ಕನ್ನು ಕೊಟ್ಟದ್ದು ಮೋಸಕೃತ್ಯವಾಗಿ ಪರಿಗಣಿಸಬಹುದೆಂದು ದಾವಾ ಹಾಕಲ್ಪಟ್ಟಿದೆ. ಮೊಕದ್ದಮೆಯು ಏಪ್ರಿಲ್ 8 ಕ್ಕೆ ಹಾಕಲ್ಪಟ್ಟಿದೆ.

ಚಾಮರಾಜ ನಗರವೃತ್ತಾಂತ

(ಒಬ್ಬ ಬಾತ್ಮೀದಾರರಿಂದ)

ಮುನಿಸಿಪಾಲಿಟಿ

ಊರಿನ ಆರೋಗ್ಯಸ್ಥಿತಿ ಅಷ್ಟೇನೂ ತೃಪ್ತಿಕರವಾಗಿಲ್ಲ. ಕೊಂಗೇರಿ ದೇವಾಂಗದ ಬೀದಿ ಮುಂತಾದ ಕೆಲವು ಕಡೆ ಗಲೀಜು ನೋಡಿದರೆ ಮುನಿಸಿಪಲ್ ಮೆಂಬರುಗಳ ಕೆಲಸಕಾರ್ಯಗಳ ದಕ್ಷತೆ ಗೊತ್ತಾಗುತ್ತೆ. ಓಟ್ಸುಗಳಿಗೆ ಮಾತ್ರ ಅವರ ಮತ್ತು ಅನುಯಾಯಿಗಳ ಬೇಡಿಕೆಯು. ಯಾರಿಗೂ ಬೇಡ 8 ದಿವಸಕ್ಕೊಂದು ಸಾರಿಯಾದರೂ ಮುನಿಸಿಪಲ್ ಮೆಂಬರುಗಳು ಅಧಿಕಾರಿಗಳು. ಅವರವರ ಮೊಹಲ್ಲಗಳನ್ನು ಪರೀಕ್ಷಿಸಿ ಎಲ್ಲೆಲ್ಲಿಗೆ ಲಾಂದ್ರಕಂಬಗಳು ಬೇಕು ಕಕ್ಕಸಗಳು ಬೇಕು ಬಚ್ಚಲುಗಳ ಯೋಗಕ್ಷೇಮವೇನು ಎಂಬುದನ್ನು ತಿಳಿಯಬೇಡವೆ?

ವರ್ತಮಾನ ಸಂಗ್ರಹ.

ನೀರಿನ ಹಾಹಾಕಾರ!

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ ಜನಗಳು ನೀರಿಗಾಗಿ ಹಾಹಾಕಾರ ಪಡುತ್ತಿರುವ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಜಲೋತ್ಪತ್ತಿಯೇ ಇಲ್ಲದಿರುವ ಕಡೆಗಳಲ್ಲಿ ನೀರಿಗಾಗಿ ಹಾಹಾಕಾರ ಪಡುವುದು ಸ್ವಭಾವ ಜನ್ಯವಾದರೂ ಕೇವಲ ಸಮೀಪದಲ್ಲಿ ಪ್ರವಹಿಸುತ್ತಿರುವ ಕಾವೇರಿ ಜಲಾಶಯದಿಂದ ಈ ರಾಜಧಾನಿಯ ಕೆಲವು ಪ್ರಜೆಗಳು ಪ್ರಯೋಜನ ಹೊಂದುತ್ತಿರುವಾಗ ಇದೇ ನಗರದ ವೃತ್ತಿ ಕೆಲವು ಭಾಗಗಳ ಪ್ರಜಾ ಸಮುದಾಯವು ದಾಹನಿವಾರಣೆಯಿಂದ ಕಷ್ಟಪಡುತ್ತಿರುವ ಸ್ಥಿತಿಯಲ್ಲಿರುವುದೆಂದರೆ ಈ ನಗರಕ್ಕೆ ಬೇರೆ ಕಳಂಕವುಂಟಾಗಬೇಕೇ? ದ್ರವ್ಯಾಪೇಕ್ಷಿಸಲಿಲ್ಲ. ಅಶನಾಪೇಕ್ಷಿಸಲಿಲ್ಲ, ಪ್ರಾಣರಕ್ಷಣೆಗೆ ವೈಷ್ಣವಮಾತೆಯಾದ ಕಾವೇರಿಯು ಆದರಪೂರ್ವಕವಾಗಿ ಅನುಗ್ರಹಿಸಿರುವ ನೀರನ್ನು ಮಾತ್ರ ಅಪೇಕ್ಷಿಸುತ್ತೇವೆ. ಅದನ್ನು ಪುಕ್ಕಟ್ಟೆ ಬೇಡುವಂತಿಲ್ಲ ಯಥೇಚ್ಛವಾಗಿ ಕಂದಾಯಗಳನ್ನು ಕೊಡುತ್ತಿರುತ್ತೇವೆ. ನಮಗೆ ಇನ್ನಾವ ಸಹಾಯವನ್ನು ಪೌರಸಭೆಯವರು ಮಾಡದಿದ್ದರೂ ಜನರನ್ನು ಉತ್ಕ್ರಮಣಾವಸ್ಥೆಯಿಂದ ಪಾರು ಮಾಡತಕ್ಕ ಜಲವಸತಿಯನ್ನೂ ಆರೋಗ್ಯವಸತಿಯನ್ನು ಸ್ವಲ್ಪವೂ ತಡಮಾಡದೆ ಕಲ್ಪಿಸಿಕೊಡುವುದರಲ್ಲಿ ಪೌರಸಭೆಯವರು ಸಹಕರಿಸುವುದಾಗಿ ನಂಬಲಾಗಿದೆ.

(ಜಿ. ಆರ್. ಸ್ವಾಮಿ.)

ಆಂಧ್ರ ಬಿ. ಇ. ಡಿ ಪರೀಕ್ಷೆಗಳು

ಆಂಧ್ರ ಯೂನಿವರ್ಸಿಟಿಯವರು ಹಾಲಿ ಏಪ್ರಿಲ್ ತಿಂಗಳಲ್ಲಿ ನಡೆಸುವ ಬಿ. ಇ. ಡಿ. ಪರೀಕ್ಷೆಯನ್ನು 1929 1930 1931 ನೇ ಸಾಲಗಳ ಸೆಪ್ಟಂಬರ್ ತಿಂಗಳಲ್ಲೂ ಸಹ ಮತ್ತೊಂದ ಸಾರಿ ನಡೆಸುವರು.

ಮುಷ್ಕರ

ಹೌರಾಹತ್ತಿ ನಜರ್ನೆಯ 2000 ಜನ ಕೂಲಿಯಾಳುಗಳು ತಮ್ಮ ಕೂಲಿ ಮತ್ತು ಲಸದ ಕಾಲಗಳ ವಿಷಯವಾಗಿ ಮುಷ್ಕರ ಹಿಡಿದಿರುವರು.

MYSORE CITY MUNICIPALITY

NOTICE

Dated 14th March 1929

It is hereby notified that, under para I of the Rules framed under Section 48 (v) of the Mysore Municipal Regulation, Motor Buses and lorries plying for hire in the City are prohibited from using the undermentioned roads up to the points indicated against them—

Pindarageri road — From Chamaraj road to Vanivilas road.

Nazarbad High road — From dispensary building to Mr. Faparam's Motor garage

T. G. RAMA IYER
President.
City Municipal Council,
Mysore.

TAI NADU

16-3-1929

ಆತ್ಮವಿಶ್ವಾಸವೆಂದರೇನು

[ಕೊಪ್ಪದ ಶ್ರೀ ರಾಮಸ್ವಾಮಯ್ಯಂಗಾರ್ಯರಿಂದ ಬರೆಯಲ್ಪಟ್ಟಿದೆ]

ಈ ಪ್ರಪಂಚದಲ್ಲಿ ಸರ್ವೇಶ್ವರನಿಂದ ಅನುಗ್ರಹಿಸಲ್ಪಟ್ಟ ಸಕಲ ಸಂಪತ್ತುಗಳಲ್ಲೆಲ್ಲಾ ಆತ್ಮವಿಶ್ವಾಸವೇ ಅಕ್ಷಯಕರವಾದ ನಿಧಿಯು. ಐಹಿಕಾಮುಷ್ಮಿಕ ಸೌಖ್ಯವನ್ನು ಸಂಪಾದಿಸುವ ಮಹತ್ತರ ಪದಾರ್ಥವೇ ಇದು. ಆತ್ಮವಿಶ್ವಾಸಸಂಭೂಷಿತನಾದ ವ್ಯಕ್ತಿಯು ಪ್ರಾರಂಭದಲ್ಲಿ ಅಗರ್ಭದರಿದ್ರನಾಗಿದ್ದರೂ ಕೂಡ ಕ್ಷಣಮಾತ್ರದಲ್ಲಿ ಸಕಲ ಸಾಮ್ರಾಜ್ಯಾಧಿಪತಿಯಾಗುವನೆನ್ನುವುದರಲ್ಲಿ ಎಷ್ಟು ಮಾತ್ರವೂ ಸಂದೇಹವಿಲ್ಲವು. ಅಚಂಚಲಗಳಾದ ಅತ್ಯುನ್ನತ ಶಿಖರಗಳನ್ನು [illegible] ಅಲ್ಲಾಡಿಸಬಲ್ಲ ಶಕ್ತಿಯು [illegible] ಸಹಿತವಾದ ಪದದಲ್ಲಿಯೇ ಪ್ರಕಾಶವಾಗಿರುವುದು. ಪ್ರಪಂಚದ ಎಲ್ಲಾ ಅನ್ಯೋನ್ಯ ಶಕ್ತಿಗಳೂ ಇದರಿಂದಲೇ ಹುಟ್ಟುತ್ತಿರುವುವು. ಎಂತಹ ಮಹತ್ಕಾರ್ಯವನ್ನಾದರೂ ನಾವು ನಮ್ಮ ಆತ್ಮದಲ್ಲಿ ವಿಶ್ವಾಸವುಳ್ಳವರಾದರೆ ನಿಸ್ಸಂಶಯವಾಗಿ ಅದನ್ನು ಸಾಧಿಸುವ ಸಮರ್ಥರಾಗುವೆವು. ಕಷ್ಟತರವಾದ ಒಂದು ಕೆಲಸವನ್ನು ನೋಡಿ ಮನುಷ್ಯನು ಅದನ್ನು ಸುಲಭವಾಗಿ ಸಾಧಿಸಬಹುದೆಂದು ಮನದಲ್ಲಿ ಭಾವಿಸಿದರೆ ಅವನ ಕರ್ತವ್ಯಮಾರ್ಗವು ನಿಜವಾಗಿ ಸುಖಸಂಪನ್ನವೇ ಆಗುವುದು. ಫಲವು ಸಹಜವಾಗಿಯೇ ಕರಗತವಾಗುವುದು. ಆತ್ಮವಿಶ್ವಾಸ ಪ್ರೇರಿತನು ಕರ್ಮಯೋಗಿಯಾಗುವನು. ಕರ್ಮಯೋಗಿಗೆ ಪ್ರತಿಬಂಧಕ ಶಕ್ತಿಯು ಬರುವುದು ಅಸಂಭವವು. ಆತ್ಮವಿಶ್ವಾಸ ಪರಿಮಾಣವನ್ನನುಸರಿಸಿ ಫಲಪ್ರಾಪ್ತಿಯಾಗುವುದರಲ್ಲಿ ಸಂದೇಹವಿಲ್ಲ. ಹೆಚ್ಚು ಹೆಚ್ಚಾದ ಆತ್ಮವಿಶ್ವಾಸವಿರುವ ವ್ಯಕ್ತಿಯು ಅತ್ಯಪೂರ್ವ ಕೆಲಸಗಳನ್ನು ಸಾಧಿಸುವುದರಲ್ಲಿ ಹಿಂದರಿಯನು. ಆತ್ಮವಿಶ್ವಾಸ ಶೂನ್ಯನಾದ ದುರ್ಬಲನು ಕಾರ್ಯಭೀರುವೂ ಅಶಕ್ತನೂ ಆಗಿ ನಿಜಾತ್ಮ ವಿಕಾಸ ಹಂತಕನಾಗಿ ಅಲ್ಪಕಾರ್ಯಗಳನ್ನಾದರೂ ಮಾಡದ ಭ್ರಷ್ಟನಾಗುವನೆನ್ನುವುದರಲ್ಲಿ ಎಷ್ಟು ಮಾತ್ರವೂ ಸಂಶಯವಿಲ್ಲವು.

ಆತ್ಮವಿಕಾಸವುಳ್ಳ ವ್ಯಕ್ತಿಗೆ ಕರ್ಮಮಾರ್ಗದಲ್ಲಿರುವ ತೀಕ್ಷ್ಣ ಕಂಟಕಗಳೆಲ್ಲಾ ವಿಕಸಿತ ಸುಮನಸ್ಸಿನಿಂದ ಪ್ರೀತಿಗಳಾಗುವುವು, ಉರಿಯುವ ಬಿಸಲು ಆ ನಿಗಿ ರಾತ್ರಿಯು ಬೆಳದಿಂಗಳಾಗಿರುವುದು ವಿಷವು ಕೂಡ ಅಮೃತವಾಗಿಯೇ ಪರಿಣಮಿಸುವುದು. ಆತ್ಮವಿಶ್ವಾಸದಿಂದ ಕಾರ್ಯಸಾಧನೋನ್ಮುಖನಾದ ವ್ಯಕ್ತಿಯು ಪ್ರಸಂಗ ಬರುತ್ತಿದ್ದರೆ ಅಂಜುಬುರುಕರಿಗೆ ಕೂಡ ಉತ್ಸಾಹವುಂಟಾಗುವುದು. ಮನುಷ್ಯರಾದ ನಾವು ಯಾವಾಗಲೂ ನೂತನ ಉತ್ಸಾಹವನ್ನೂ ನವೀನೋದ್ರೇಕವನ್ನೂ ಈ ಆತ್ಮವಿಶ್ವಾಸದಿಂದ ಅರ್ಜಿಸುತ್ತಾ ಈ ಪ್ರಪಂಚದ ವಿಶಾಲ ಕರ್ಮರಂಗದಲ್ಲಿ ಹಿಂತಿರುಗಿ ನೋಡದೆ ಮುಂದೆ ಹೆಜ್ಜೆಯಿಡುತ್ತಿರಬೇಕು.

ಆತ್ಮವಿಶ್ವಾಸವುಳ್ಳವರ ಸಾಂಗತ್ಯದಿಂದಲೂ ಅವರೊಡನೆ ಇಷ್ಟಗೋಷ್ಠಿ ಮಾಡುವುದರಿಂದಲೂ ಕರ್ಮಯೋಗ ಸಾಧಕನ ಹೃದಯ [illegible] ತ್ರಸ್ತ ಕ್ರಮವಾಗಿ ನಾಶವಾಗುವುದು. [illegible] ಗೆ ಈ ವಿಶಾಲಪ್ರಪಂಚದಲ್ಲಿ ಹುಟ್ಟಿ ಅದ್ಭುತ ಮಹತ್ಕಾರ್ಯಗಳನ್ನು ಮಾಡಿ ತಮ್ಮ [illegible] ಚಿರಸ್ಥಾಯಿಯಾಗಿಟ್ಟು ಹೋದ [illegible] ಮಹಾಪುರುಷರೆಲ್ಲರೂ ಕೇವಲ ಈ ಆತ್ಮವಿಶ್ವಾಸವನ್ನೇ ಜೀವನ ಸರ್ವಸ್ವವನ್ನಾಗಿ ಭಾವಿಸಿದ್ದರು. ಆತ್ಮವಿಶ್ವಾಸ ರಹಿತನಾದ ವ್ಯಕ್ತಿಯು [illegible] ದೇಶದಲ್ಲಿಯೂ ಸಾರ್ಥಕ ಜನ್ಮನಾಗಲಿಲ್ಲವು. ಆಧುನಿಕ ಮತ್ತು ಪ್ರಾಚೀನ ಪ್ರಪಂಚದಲ್ಲಿ ಯಾವ ಉತ್ತಮ [illegible] ನವನೂ ಕೂಡ ಈ ಆತ್ಮವಿಕಾಸದ ಬಲದಿಂದಲೇ [illegible] ಸಲ್ಪಡುತ್ತಿರುವರೆಂದ ತಿಳಿಯಿರಿ.

ಬ್ರಹ್ಮನ ಎರಡು ಭ್ರಮೆಗಳು

ಬ್ರಹ್ಮನು ಎರಡು ಭ್ರಮೆಗಳನ್ನು ಮಾಡಿದನು. ಯಾವುವೆಂದರೆ (ಕಾಂತಾಭ್ರಮೆ ಕನಕಭ್ರಮೆ) ಕಾಂತಾಭ್ರಮೆಗಿಂತಲೂ ಕನಕಭ್ರಮೆಯು ಅತಿ ಸ್ತೋತ್ರಾರ್ಹವಾದುದು. ಹ್ಯಾಗೆಂದರೆ ಕಾಂತಾಭ್ರಮೆಯು ವಯಸ್ಸು ಕಳೆದನಂತರ ತನ್ನಷ್ಟಕ್ಕೆ ತಾನೇ ಮಾಯವಾಗುವುದು ಕನಕಭ್ರಮೆಯ ವಿಚಾರ ಹಾಗಲ್ಲ. ಶರೀರವು ಕೃಶವಾಗಿ ನಶಿಸಿ ಪ್ರಾಣಬಿಡುವ ಪರಿಯಂತರವೂ ಮರೆಯುವ ಹಾಗಿಲ್ಲ. ಅನ್ನ ಬಿಡಬಹುದು, ನಿದ್ರೆ ಬಿಡಬಹುದು, ಪ್ರಾಣವನ್ನಾದರೂ ಬಿಡಬಹುದು, ಆದರೆ ಆ ಕನಕವನ್ನು ಮರೆಯುವುದಕ್ಕಾಗುವುದಿಲ್ಲ. ಕನಕಾ ಕನಕಾ, ಓ ಕನಕಾ, ಎಂದು ಸ್ವಪ್ನದಲ್ಲಿಯೂ ಹಳವಳಿಸುತ್ತಿವ ಕನಕವೆಂಬ ಅಂಕಿತನಾಮದಿಂದ ಪ್ರಕಾಶಿಸುತ್ತಿರುವ ರೂಪಾಯಿಗಳು ಯೋಗ್ಯರನ್ನು ಅಯೋಗ್ಯರನ್ನಾಗಿ ಮಾಡುವ ಓ ರೂಪಾಯಿಗಳೇ ನಿನ್ನ ಸ್ವರೂಪವನ್ನು ಹೇಳಲು ಸಾಧ್ಯವಿಲ್ಲ. ನ್ಯಾಯವಾದ್ದನ್ನೆಲ್ಲಾ ಅನ್ಯಾಯ ಮಾರ್ಗಕ್ಕೆ ಸೆಳೆಯುತ್ತಿಯೇ ಅಮೋಘವಾದ ದುಷ್ಕೃತ್ಯಗಳನ್ನು ಮಾಡಿದ್ದರೂ ಮುಚ್ಚುತ್ತೀಯೆ. ಮನಸಾಕ್ಷಿಯೆಲ್ಲಾ ಹತವಾದರೂ ನಿನ್ನ ಸ್ಮರಣೆಯಿಂದ ಘಳಿಗೆಘಳಿಗೆಗೆ ಉಕ್ಕಿಬರುವದುಃಖವನ್ನು ಮರೆಸುತ್ತೀಯೆ. ನ್ಯಾಯವಾಗಿ ಕೆಲಸಮಾಡುವ ಮಹಾತ್ಮರಾದ ಅಧಿಕಾರಿಗಳ ಮನಸ್ಸನ್ನು ಆಕರ್ಷಿಸುತ್ತೀಯೆ. ಎಲೈ ಕನಕಮುನಿಯೇ ಒಲವಾದ [illegible] ತಿಂದು ಮುಗ್ಗರಿಸಿಬಿದ್ದ ತಕ್ಷಣ ನಿನ್ನ ದರ್ಶನದಿಂದ ನೋವೆಲ್ಲಾ ಮಾಯವಾಗುವುವು. ಎಲೈ ಕನಕಭಾಗ್ಯವೇ ನಿನ್ನ ಮಾತ್ರದಿಂದ ಸಂತ್ಯವಂತನಾದ ಮನುಷ್ಯನು ಅಸತ್ಯವನ್ನಾಚರಿಸಿ ದೊಡ್ಡ ಪದವಿಗೆ ಕಾರಣನಾಗವನು ಎಲೈ ಕನಕರಾಜನೇ ನಿನ್ನ ಶಕ್ತಿಯು ಇಷ್ಟೆಂದು ಹೇಳಲಾಗವುದಿಲ್ಲ ಮಹತ್ತರವಾದ ಕೆಲಸವನ್ನು ಮಾಡಬೇಕೆಂದು ಮಹಸತ್ತು ಮಾಡುವ ಮನುಷ್ಯನ ಮನಸ್ಸನ್ನು ಎಳೆದು ಅಶಕ್ತಿಯನ್ನುಂಟುಮಾಡಿ ಅಧಿಕಾರವನ್ನಾದರೂ ಅನಧಿಕಾರತ್ವವನ್ನು ಹೊಂದಿಸಬಲ್ಲೆ ಇಷ್ಟಾದರೂ ನಿನ್ನನ್ನು ನಿಗ್ರಹಿಸಿ ಧೈರ್ಯವಾಗಿ ನಿಂತು ಮನಸ್ಸಿನ ಮರ್ಕಟವನ್ನು [illegible] ನೋಣವೆಂದರೆ ನಿನ್ನ ಸತ್ವರೂಪವಾದ ಥಣ್ ಎಂಬ ಧ್ವನಿಯನ್ನು ಕೇಳಿದ ಕೂಡಲೆ ಚಂಚಲವಾದ ಮರ್ಕಟವನ್ನು ಚಂಗನೆ ಹಾರಿಸುತ್ತಿರುವೆ. ಎಲೈ ಕನಕರತ್ನವೇ ಸಾಕು ಸಾಕು ನಿನ್ನ ಮಹಿಮೆಯು ಹೇಳುವದರೆ ಹೇಳವು ಬ್ರಾಯಿಸಿಡುವುದು ಎಂದಿಗಾದರೆ ಸಮಾನವಾದ ನಿನ್ನ ಸ್ವರೂಪವನ್ನು ತಿಳಿದು ನಿನ್ನನ್ನು ನಿಗ್ರಹಿಸಿದೂರ ಮಾಡದ ಮಹಾತ್ಮರಾದ ಕನಕಪುರುಷರ ನಿನ್ನ ಸೇವೆಗೆ ಅರ್ಹರಾಗಿರುವರ. ಆಹಾ ಎಂಥಾ ಕನಕಭ್ರಮೆ ! ಸ್ಥಿತಿಕರ್ತನಾದ ಮಹಾವಿಷ್ಣುವಿನ ಅಮೋಘವಾದ ಸ್ವಭಾವ ಧೈರ್ಯವೂ ಕೂಡ ಚಪಲಚಿತ್ತ [illegible]

ಪತ್ರವ್ಯವಹಾರ

[illegible]

ರಾಜಧಾನಿಯ ಕೆಲ್ಲಿ ಮೊಹಲ್ಲಾದ ನಿವಾಸಿಗಳು ಬಹಳ ದುರದೃಷ್ಟರು ಇವರ ಕೊಡುಗಳ್ಳಿ ಇವರ ಮುನಿಸಿಪಲ್ ತೆರಿಗೆಯನ್ನು ಕೊಡುತ್ತಿದ್ದರು. ಮುನಿಸಿಪಲ್ ಕಾನೂನಿಗೆ ಒಳಪಟ್ಟಿರುವರು. ಆದರೆ ಇವರ [illegible] ದಿನವರೂ ತಕ್ಕ ಗಮನವನ್ನು ಕೊಟ್ಟಿಲ್ಲ. ಸೊಳ್ಳೆಗಳ ಕಾಟ ಬಹಳವಾಗಿರುವುದು. ಇದಕ್ಕೆ ಹತ್ತಿರದಲ್ಲಿರುವ ಕೋಟೆಯೇ ಕಾರಣ ಆ ಕೋಟೆಯಲ್ಲಿ ನೀರಿನ ಗುಂಡಿಗಳೂ ರೊಚ್ಚುಗಳೂ ಬಹಳವಾಗಿರುವುವು. ಇವೇ ಸೊಳ್ಳೆಗಳಿಗೆಲ್ಲಾ [illegible] ಮುನಿಸಿಪಲ್ ಕೌನ್ಸಿಲ್ಲಿನವರು ಬೇಕಾದರೆ ಈ [illegible] ಪರೀಕ್ಷಿಸಬಹುದು ಮೈಸೂರು ಸಿಟಿ [illegible] ಗಾಗಿ 60—70 ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡಿ ಇನ್ನು ಸ್ವಲ್ಪ ಖರ್ಚು ಮಾಡಿದರೆ [illegible] ಗಳನ್ನೆಲ್ಲಾ ಅಕ್ವೈರ್ ಮಾಡಿ [illegible] ರೋಗವು ನೆಲಸದಂತೆ ಮಾಡಬಹುದು. [illegible] ತ ಆವಶ್ಯಕವಾಗಿ ಆಗಬೇಕಾದ ಕೆಲಸ [illegible] ನೇಕ ರೋಗಗಳಿಗೆ ಕಾರಣವೆಂಬುದನ್ನು ಮುನಿಸಿಪಲ್ ಕೌನ್ಸಿಲ್ಲಿನವರು ಬಲ್ಲರು ಆದುದರಿಂದ ಈ ವಿಷಯಕ್ಕೆ ಗಮನ ಕೊಡುವರೆಂದು ನಂಬುತ್ತೇನೆ

ಒಬ್ಬ ರೇಟ್ ಪೇಯರ್

ಸ್ತ್ರೀಕೂಲಿಯಾಳುಗಳು

ನ್ಯೂಡೆಲ್ಲಿಯಲ್ಲಿರುವ ಕೌನ್ಸಿಲ್ಲಿನ ಗೌವರ್ನರ್ ಜನರಲ್ ರವರು [illegible]

ಕನಕಲಕ್ಷ್ಮಿಯನು ಸ್ಥಿರವಾಗಿ ಒಂದುಕಡೆ ನಿಲ್ಲಿಸಲಿಲ್ಲ ಈ ಕಲಿಯುಗದಲ್ಲಿ ಅದರಲ್ಲಿಯೂ 1929ನೇ ಇಸವಿಯಲ್ಲಿ ಯಾರುತಾನೆ ನಿಗ್ರಹವ ಮಾಡಬಲ್ಲರು ಓ ಕನಕಭ್ರಮೆ ಕರ್ತನಾದ ಬ್ರಹ್ಮನೇ ನೀನೇ ಉದ್ಧಾರಕರ್ತನಾದ ಈಶ್ವರನಿಗೆ ಯಥಾವಿಧಿಯಾಗಿ ತಿಳಿಸುವವನಾಗಬೇಕೆಂದು ಪ್ರಾರ್ಥನೆ

ಪ್ರಮೋದಪೂರ್ಣ ನಿಮ್ಮವ

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,

ಸಾರ್ವಜನಿಯಂ ವ್ಯಾಪಾರಿಗಳು, ಮೈಸೂರು.

1929 ನೇ ಇಸವಿಯ ಶಿದ್ದಪ್ಪ ಅಂಡ್ ಪಾಕೆಟ್ ಕ್ಯಾಲೆಂಡರುಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು ಶೀಟ್ ಕ್ಯಾಲೆಂಡರ್ ಪಾಕೆಟ್ ... ಶ್ರೀ ಮಹಾವಿಷ್ಣುವಿಗೆ ಸುದರ್ಶನ ಪ್ರದಾನ ಮಾಡುವ ಸರ್ವೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ರವಿವರ್ಮಾ ಪ್ರೆಸ್ಸಿನಲ್ಲಿ ... ಬಿಕರಿಗೆ ಸಿದ್ಧವಾಗಿವೆ. ನಮ್ಮ ಷಾಪಿಗೆ ಬಂದು ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತನ್ ಮಿಶ್ರಿ ಹಲ್ಲುಪುಡಿಯಲ್ಲಿರುವುದೇನು ?



ರಕ್ತವೃದ್ಧಿಮಾಡಿ ರತಿರೋಗಗಳನ್ನು ನೀಗಿಸಿ
ತರುಣರಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
ನರಗಳನ್ನು ಬಿಗಿಮಾಡಿ ಅಂಟು ರೋಗಗಳನ್ನು ಪರಿಹರಿಸಿ
ಮೂಡುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ
ಸಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯವೃದ್ಧಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು— ರತನ್ ಮಿಶ್ರಿ ಡಿಪೊ, (ಆಂಜನೇಯ ಜ್ಯೋತಿಷಾಲಯ,)

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ

" ಭಿಷಗ್ರತ್ನ "

ಪಳ್ಳದ ವೆಂಕಟಾಚಲ ಪಂಡಿತರ

ಶೋಕಾಪಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ ಬಾಗಲ್, ಹಾಗೋ ಯಾವಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ್ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಶೋಕಾಪಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಗೆಲೆದುಕೊಳ್ಳಿರಿ.


ವೈಶ್ವಾನರ ರಸ:—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟಿದ್ದರೂ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸ ರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ನಿಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀನಿವಾಸ ತೈಲ:—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಬ್ರ್ಯಾಂಚ್ ಆಫೀಸು	ಹೆಡ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ	ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು



ಭಂಗಾರದ ಕೈಬಳೆಗಳೂ ಚೈನುಗಳು ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳನಮ್ಮಲ್ಲಿ ಖಾತರಿಯಾಗಿ ಸಿಗುತ್ತವೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಣ್ಯ.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ

ಯಸ್. ನರಸಿಂಹ ಅಯ್ಯರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centres for Life Insurance Business. Liberal terms

A rare opportunity for spare time earnings.

We undertake also Fire & Motor cars Etc., Insurance

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R. Ramaiya, at Sri Rama Press, D Subbiah Road, Mysore.

Regd. No. M. 322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-

ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ

ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] . ಸೋಮವಾರ ೧೮ ಮಾರ್ಚಿ ೧೯೨೯ [ಸಂಚಿಕೆ [illegible]

TAI NADU

18-3-1929

ರಾಜದ್ರೋಹದ ಕಲ್ಪನೆ.

ರಾಜದ್ರೋಹವೆಂದರೆ ಯಾವುದು ಎಂಬ ವಿಷಯ ವಾಗಿ ಈಗ ಕೆಲವು ದಿವಸಗಳ ಹಿಂದೆ ಬರೆದಿದ್ದಾಯಿತು ಆದರಲ್ಲಿ ಶ್ರೀಮನ್ಮಹಾರಾಜರವರಿಗೆ ವಿರೋಧವಾಗಿ ನಡ ವಳಿಕೆಗಳನ್ನು ಮಾಡದ ಯಾವ ವಿಧವಾದ ಚಳುವಳಿಯೂ ರಾಜದ್ರೋಹವಲ್ಲವೆಂದೂ ತಿಳಿಸಿದ್ದಾಯಿತು. ಅದರ ಇದ ರಲ್ಲಿ ಇನ್ನೊಂದು ಚಮತ್ಕಾರವುಂಟು. ರಾಜದ್ರೋಹದ ಕಲ್ಪನೆಯು ದಿನ ದಿನಕ್ಕೂ ಬದಲಾಯಿಸುತ್ತ ಹೋಗುವು ದು ಇಂದು ರಾಜದ್ರೋಹವಾಗಿ ಪರಿಗಣಿಸಲ್ಪಡುವುದು ನಾಳೆ ರಾಜದ್ರೋಹವಾಗಿ ಪರಿಗಣಿಸಲ್ಪಡದೆ ಇರಬಹು ದು. ಈಗ ಬಹು ವರ್ಷಗಳ ಹಿಂದೆ ಯಾವುದು ರಾಜ ದ್ರೋಹವೆಂಬುದಾಗಿ ಪರಿಗಣಿಸಲ್ಪಡುತ್ತಿತ್ತೋ ಇಂದು ಅದು ರಾಜದ್ರೋಹವಲ್ಲ ಪ್ರಪಂಚದ ಯಾವ ದೇಶದ ಇತಿಹಾಸವನ್ನು ನೋಡಿದರೂ ಇದು ವ್ಯಕ್ತವಾಗುತ್ತದೆ. ಇಂಗ್ಲೆಂಡಿನ ಇತಿಹಾಸದಲ್ಲಿಯೂ ಇದು ಸ್ಪಷ್ಟವಾಗು [illegible] ಬಹಳ ದೂರಹೋಗಬೇಕಾಗಿಲ್ಲ ಬ್ರಿಟಿ [illegible] ನಡೆಯುತ್ತಿರುವ [illegible] ನೋಡಿದರೆ ಇದು ಸ್ಪಷ್ಟವಾಗುತ್ತದೆ.

19 [illegible] ರಲ್ಲಿ ಬ್ರಿಟಿಷ್ [illegible] ಬಹಿ ರಂಗವಾಗಿ ಸ್ವದೇಶೀ [illegible] ಅದು ರಾಜದ್ರೋಹ [illegible] ಸಲ್ಪಡುತ್ತಿತ್ತು ಭಾರತೀ [illegible] ಸ್ವರಾಜ್ಯವು ಭಾರತೀಯರ ಜನ್ಮ [illegible] ಹೇಳಿದರೆ ಅದು ರಾಜದ್ರೋಹವೆಂಬು [illegible] ಲೋಕಮಾನ್ಯ ತಿಲಕರು ಪ್ರ [illegible] ಸ್ವರಾಜ್ಯದ [illegible] ಸ್ವದೇಶೀ [illegible] ರಾಜ ದ್ರೋಹ [illegible] ಹಿಂದೆ ರಾಜದ್ರೋ ಹದ [illegible] 19 [illegible] ರಲ್ಲಿ [illegible] ನಮ್ಮ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯಬೇ ಕು [illegible] ರಾಜದ್ರೋಹಿ [illegible] ಜೈಲಿ ಗೆ ಕಳುಹಿಸಲ್ಪಟ್ಟರು. ಮದರಾಸು ಮತ್ತು ಕಲ್ಕತ್ತ ಕಾಂಗ್ರೆಸ್ಸುಗಳಲ್ಲ ಇಡೀ ಭಯೇ ಸಂಪೂರ್ಣ ಸ್ವಾತಂತ್ರ್ಯವು ಬೇಕೆಂದು ಘೋಷಣಮಾಡಿತು. ಹಾಗೆಯು [illegible] ರಾಜದ್ರೋಹದ [illegible] ಅಧಿಕಾರದಲ್ಲಿರುವವ ರು ಯಾವಾಗಲೂ ಹಿಂದಲೇ [illegible] ನಮ್ಮ [illegible] ಈಗ ಅದೇ ಸ್ಥಿತಿಯು [illegible] ಸರಕಾರದವರಿಗೆ ದೇವತೆಗಳಿಗೆ ಕೊಡುವ ಗೌರವು ಪೂರ್ವದಲ್ಲಿ ಕೊಡಲ್ಪಡುತ್ತಿತ್ತು. ಸರಕಾರದವರು ತಪ್ಪುಮಾಡಿದರೂ ಅನ್ಯಾಯ ನಡಿಸಿ ದರೂ ಪ್ರಜೆಗಳು ಕುರಿಗಳಂತೆ ಅನುಭವಿಸುತ್ತಿದ್ದರು. ಈ ಗ ಆ ಕಾಲವು ಹೋಯಿತು ಸರಕಾರವೆಂದರೇನು ಪ್ರಜೆ ಗಳಂದರೇನು ಎಂಬ ತಿಳವಳಿಕೆಯು ಪ್ರಜೆಗಳಲ್ಲಿ ಮೂಡಿರುವುದು. ಸರಕಾರವನ್ನು ನಿರ್ಭಯವಾಗಿ ಖಂಡಿ ಸಲು ಮೊದಲು ಮಾಡಿರುವರು. ಇನ್ನೂ ಹಿಂದೆಯೇ ಉ ಳಿದಿರುವ ಶಂಕಾಂಕ್ಕೆ ಪ್ರಜೆಗಳು ಮುಂದುವರೆದಿಧಾ ರೆಂಬ ಸಂಗತಿಯು ಮಂದಟ್ಟಾಗಿಲ್ಲ. ಪ್ರಜೆಗಳು Hewers of wood and drawers of water ಕಟ್ಟಿಗೆ [illegible]

"LOOTING THE TAX-PAYER"

Sir,

In the "Swarajya" of the 14th instant there is a leading article under the above heading. The heading itself is arresting. If an article should appear in any of the local papers with such a heading, let alone the substance of the article, the bureaucracy in Mysore would get infuriated and charge the Editor for sedition under section 124 A. But in British India the above article of Swarajya would pass for an innocent one. This clearly shows that the people in Mysore enjoy far less political freedom than the foreign-governed British Indians This is a fact in spite of the much boasted Swaraj in Mysore. Thus it clearly shows that what passes for a legitimate and reasonable criticism in British India will be punished as sedition in Mysore. If the Mysore administrators also should walk in the foot-steps of the British Indian administrators, they will find many things which they interpret as sedition will be deemed innocent.

A Tax-payer.

ಇಂಗ್ಲೆಂಡಿನಲ್ಲಿ ಪರದೇಶೀಯರ ಬಹಿಷ್ಕಾರ

ನಮ್ಮ [illegible] ಪರದೇಶೀ [illegible] ಬಹಿಷ್ಕರಿಸಿದರೆ [illegible] ದೊಡ್ಡ ಅಪರಾಧವಾಗಿ ಬ್ರಿಟಿಷ್ ಸರಕಾರದವರಿಂದ ಪರಿಗಣಿಸಲ್ಪಡುವುದು. ಆದರೆ ಅವರ ದೇಶದಲ್ಲಿಯೇ ಪರದೇಶೀಯರನ್ನು ಬಹಿ ಷ್ಕರಿಸುವ [illegible] ನಡೆಯುತ್ತಿರುವುದು. [illegible] ಒಂದು ಎಲೆಕ್ಟ್ರಿಕ್ ಕಂಪೆನಿಯು ಸ್ಥಾಪಿತ ವಾಯಿತು. ಅದರಲ್ಲಿ ಇಂಗ್ಲೆಂಡಿನವರು ಷೇರುದಾರ ರಾಗಿರಬೇಕೇ ಹೊರತು ಇತರ ದೇಶೀಯರು ಆಗಕೂಡ ದೆಂದು ಒಂದು ನಿಬಂಧನೆಯು ಮಾಡಲ್ಪಟ್ಟಿತು. ಇದೇ ನು ಪರದೇಶೀಯ ಬಹಿಷ್ಕಾರವಲ್ಲವೇ ?

ಯ [illegible] ಇರಬೇಕೆಂಬುದೇ ಎಲ್ಲಾ ಸರಕಾರಗಳ ಅಭಿಪ್ರಾಯ ಆದರಂತೆಯೇ ಮೈಸೂರಿನಲ್ಲಿಯೂ ನಡೆಯುತ್ತಿರುವು ದು. ಖಂಡಿತವಾಗಿಯೂ ಮೈಸೂರಿನಲ್ಲಿ ಯಾವ ರಾಜ ದ್ರೋಹವೂ ಇಲ್ಲ ಪ್ರಜಾ ದ್ರೋಹವೂ ಸ್ವಾತಂತ್ರ್ಯ ದ್ರೋಹವೂ ಇದ್ದರೂ ಇರಬಹುದು. ಸರಕಾರದವರು ಪ್ರಜಾ ಸೇವಕರನ್ನು ರಾಜದ್ರೋಹಿಗಳೆಂದು ತಿಳಿಯದೆ ತಮ್ಮ ಸಹಾಯಕರೆಂಬುದಾಗಿ ಭಾವಿಸಿದರೆ ಎಲ್ಲವೂ ಸರಿ ಹೋಗುವುದು.

ಆದರೆ ಈ ಭಾವನೆಯು ಒಂದೇಸಲ ಬರುವುದಿಲ್ಲ ಪ್ರ ಜಾ ಸೇವಕರಿಗೆ ಮೊದಲು ಮೊದಲು ಬಹಳ ಕಷ್ಟವಾ ಗುವುದು ಈಗ ಆ ಕಷ್ಟವು ಮೈಸೂರಿನ ಪ್ರಜಾ ಸೇವೆ ಕರಿಗೆ ಪ್ರಾಪ್ತವಾಗಿರುವುದು ಅದನ್ನು ಸಂತೋಷದಿಂದ ಅನುಭವಿಸುವ ಸಾಮರ್ಥ್ಯವನ್ನು ಜಗದೀಶ್ವರನು ಅನು ಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ವಿವಿಧ ವರ್ತಮಾನ.

ರಾಜಭಕ್ತಿ.

ಈ ತಿಂಗಳು 13 ನೇ ತಾ ಬುಧವಾರ ರಾತ್ರಿ ರತ್ನಾ ವಳಿ ಥಿಯೇಟರಿನಲ್ಲಿ ಗುಬ್ಬಿಕಂಪನಿಯವರು ತಮ್ಮ [illegible] ಮೋಘವಾದ "ರಾಜಭಕ್ತಿ" ಎಂಬನಾಟಕವನ್ನು ಅಭಿ ಯಿಸಿದರು. ಇವರು ಆಡುವ ಎಲ್ಲಾ ನಾಟಕಗಳಿಗಿಂತ ಲೂ ಹೆಚ್ಚು ಪ್ರಾಶಸ್ತ್ಯವನ್ನು ಹೊಂದಿರುವ "ಕಬೀರ ದಾಸ್" ನಾಟಕವನ್ನು ಇದು ಎಲ್ಲಾ ಭಾಗಗಳಲ್ಲಿಯೂ ಮೀರಿಸಿರುತ್ತದೆಂದರೆ ಅತಿಶಯೋಕ್ತಿಯಾಗಲಾರದು. [illegible] ದರಲ್ಲಿ ವಿಕ್ರಾಂತ, ಕಂದನ, ಮೃಣಾಲಿನಿ, ಮತ್ತು [illegible] ರೋಜಿನಿದೇವಿ ಮೊದಲಾದವರು ರಾಜಕುಮಾರನಾದ ಚಂದ್ರಶೇಖರನನ್ನು ಶತ್ರುಗಳಿಂದ ಬಿಡುಗಡೆ ಮಾಡಿಸುವು ದರಲ್ಲಿ ತೋರಿಸಿದ ಪರಾಕ್ರಮ ಸಾಹಸಗಳೂ, [illegible] ನಾದ ವಸಂತನು ಶತ್ರುಗಳೊಡನೆ ಕಾದಾಡಿದ ಕ್ಷಾತ್ರ ಧರ್ಮವೂ ಕಂದನನ ಸ್ವಾಮಿ ಭಕ್ತಿಯೂ ರಾಜಪುತ್ರನ ಸಂರಕ್ಷಣೆಯಲ್ಲಿ ದೇವಾಂಗನೆ ಮೃ ಣಾಲಿನಿಯರಿಗಿದ್ದ ಪುತ್ರವಾತ್ಸಲ್ಯವೂ ಶತ್ರುಗಳ ಪಕ್ಷ ಸೇರಿದ್ದ ದುರ್ಜಯನ ದುರ್ನಡತೆಗಳಿಗಾಗಿ ಪತಿಯನ್ನು ಸಹ ತ್ಯಾಗ ಮಾಡಿದ ಸರೋಜಿನೀ ದೇವಿಯು ಅತ್ಯುನ್ನತ ದ ರಾಜಭಕ್ತಿಯೂ ಶ್ಲಾಘನೀಯವಾಗಿವೆ. ಮೊದಲಿಂದ ಲೂ ಕೇಡನ್ನೇ ಹಾರೈಸುತ್ತಿದ್ದ ಮದಾಲಸೆ, ಕೋದಂಡ ದುರ್ಜಯ ಮೊದಲಾದವರ ಸಾಹಸಗಳೆಲ್ಲಾ ವಿಫಲವಾಗಿ ಕಡೆಯಲ್ಲಿ ಸತ್ಯಕ್ಕೇ ಜಯ ದೊರೆತ ರೀತಿಯು ಬಹಳ ವಿಸ್ಮಯವನ್ನುಂಟು ಮಾಡುತ್ತದೆ. ಒಟ್ಟಿನಲ್ಲಿ ಇದರ ಸಾ ಲಂಕಾರಭರಿತವಾದ ಈ ನಾಟಕವು ಅತ್ಯಾವಶ್ಯಕವಾದ ನೀತಿಯನ್ನು ಹೃದಯಂಗಮವಾಗಿ ಬೋಧಿಸುತ್ತದೆ

ವಿ ಪಿ. ಮಾಧವರಾಯರು.

ನಮ್ಮ ಮೈಸೂರು ಸಂಸ್ಥಾನದ ಮಾಜಿ ದಿವಾನರಾದ ಮ|| ರಾ|| ವಿ. ಪಿ. ಮಾಧವರಾಯರವ ರು ತಿರುವಾಂಕೂರಿನ ಶ್ರೀಮೂಲಂ ಪ್ರಜಾಪ್ರತಿನಿಧಿ ಸಭೆ [illegible]. ಆ ಸಭೆಯ ರಜತೋತ್ಸವವು ಈಗ್ಗೆ ಕೆಲವು ದಿವಸಗಳ ಹಿಂದೆ ನಡೆಯಿತು. ಶ್ರೀ ರಾಯರು ಆ ಉತ್ಸವಕ್ಕೆ ದಯಮಾಡಿಸಿ ಅಧ್ಯಕ್ಷತೆಯನ್ನು ವಹಿ ಸಿದ್ದರು. ಆ ಸಂದರ್ಭದಲ್ಲಿ ಅವರು ಮಾಡಿದ ಭಾಷಣವು ಯುಕ್ತಿಯುಕ್ತವಾಗಿತ್ತು. ಪ್ರಜಾ ಸ್ವಾತಂತ್ರ್ಯವು ಅಭಿವೃದ್ಧಿಯಾಗಬೇಕಾಗಿದ್ದರೆ ಪ್ರತಿಯೊಬ್ಬನೂ ತನ್ನ ಜಾತಿ ಮತ್ತು ಕೋಮಿಗಿಂತಲೂ ದೇಶವೇ ದೊಡ್ಡ ದೆಂಬ ಅಭಿಮಾನವನ್ನು ಹೊಂದಿರಬೇಕೆಂದು ಹೇಳಿದ ರು. ಮ|| ಮಾಧವರಾಯರು ಮೈಸೂರಿಗೆ ದಿವಾನ ರಾಗಿದ್ದ ಕಾಲದಲ್ಲಿ ನಮ್ಮಲ್ಲಿ ಬ್ರಾಹ್ಮಣ ಬ್ರಾಹ್ಮಣೇ ತರಂ ಚಳುವಳಿಯು ಇರಲಿಲ್ಲ. ಈಚೆಗೆ ಉದ್ಭವವಾ ಯಿತು. ಅದನ್ನು ಶಮನ ಮಾಡುವುದಕ್ಕೆ ಮ|| ವಿ. ಪಿ ಮಾಧವರಾಯರ ಉಪದೇಶವು ಹಿತಕರವಾಗಿದೆ ಪ್ರಜಾಸೇವಕರು ಮ|| ರಾಯರ ಉಪದೇಶವನ್ನು ಆ ಚರಣೆಗೆ ತರುವರೆಂದು ನಂಬುತ್ತೇವೆ.

ಖಾದೀಪ್ರಚಾರ

ಸಿಂದ್ ಹೈದರಾಬಾದ್ ಪ್ರಾಂತ್ಯದಲ್ಲಿ ಖಂಗಾಲಾ [illegible] ಖಾದಿಯ ಪ್ರಚಾರವು ಚೆನ್ನಾಗಿ ನಡೆಯುತ್ತಲಿದೆ [illegible] ರಾಚಿಯ ಮುನಿಸಿಪಾಲಿಟಿಯ ಚೀಫ್ ಆಫೀಸರವರು ಎಷ್ಟು ಒಗೆದರೂ ಖಾದಿಯ ಬಣ್ಣವು ಗಟ್ಟಿಯಾ ರತ್ತೆಂದು ಸರ್ಟಿಫೀಕೇಟ್ ಕೊಟ್ಟಿರುವರು.

ತಾಯಿನಾಡು.

18—3—1929

ಪತ್ರವ್ಯವಹಾರ

(ವಾರ್ತಾದಾರರ ಅಭಿಪ್ರಾಯಕ್ಕೆ ನಾವು ಬದ್ಧರಲ್ಲ-ಸಂ)

ಬೆಂಗಳೂರು ಟೈಮ್ಸಿನ ಸಲಹೆ.

ಸ್ವಾಮಿ,—

ಬೆಂಗಳೂರು ಟೈಮ್ಸ್ ಅಥವಾ ಬೆಂಗಳೂರು ಕಾಲ ಪುರುಷನೆಂದು ಪ್ರಖ್ಯಾತವಾಗಿರುವ ಪತ್ರಿಕೆಯು ಹುಟ್ಟಿದಾಗಿನಿಂದಲೂ ಸರಕಾರಕ್ಕೆ ಅನೇಕ ಸಲಹೆಗಳನ್ನು ಕೊಡುತ್ತಲಿದೆ. ಆ ಸಲಹೆಗಳೆಲ್ಲವೂ ಅದರ ಮನೋಭಾವವನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ. ತಾನು ಒಂದೇ ಬದುಕಬೇಕೆಂದೂ ತನ್ನ ಅಭಿಪ್ರಾಯಕ್ಕೆ ವಿರೋಧವಾಗಿ ಪ್ರಕಟನೆ ಮಾಡುವ ಪತ್ರಿಕೆಗಳು ಸಾಯಬೇಕೆಂದೂ ಇದರ ಆಕಾಂಕ್ಷೆ. ಮ|| ಎಂ. ವೆಂಕಟಕೃಷ್ಣಯ್ಯನವರಿಗೆ ಗಡೀಪಾರು ಮೊದಲಾದ ಶಿಕ್ಷೆಗಳಾಗಬೇಕೆಂದೂ, ಈವನಿಂಗ್ ಮೇಲ್ ಪತ್ರಿಕೆಯು ನಿಲ್ಲಿಸಲ್ಪಡಬೇಕೆಂದೂ, ಪ್ರಜಾಮಿತ್ರ ಸ್ವರಾಜ್ಯ ಪತ್ರಿಕೆಗಳು ನಮ್ಮ ಸಂಸ್ಥಾನದ ಸಂಹದ್ದುಗಳಿಗೆ ಬರದಂತೆ ಕಟ್ಟುಮಾಡಲ್ಪಡಬೇಕೆಂದೂ ಸಲಹೆಯನ್ನು ಕೊಡುತ್ತದೆ. ಈ ಸಲಹೆಗಳಂತೆ ಸರ್ಕಾರದವರು ನಡೆದರೆ ಅದರ ಪರಿಣಾಮಗಳೇನಾಗುವುವೆಂಬುದನ್ನು ವಿವರಿಸಬೇಕಾಗಿಲ್ಲ. ಈ ಕಾಲ ಪುರುಷನ ವೃತ್ತಿ ಅವನ ಇತರ ವಿಚಿತ್ರ ಸಲಹೆಯಂತೆ ನಡೆಯುತ್ತಿರುವುದರಿಂದಲೇ ನಮ್ಮ ಸಂಸ್ಥಾನದ ಕೀರ್ತಿಯು ದಿನದಿನಕ್ಕೂ ಕ್ಷೀಣವಾಗುತ್ತಿರುವುದು. ಈ ವಿಷಯವಾದ ಸಲಹೆಗಳನ್ನು ಕೊಡುವುದಕ್ಕಿಂತ ಬೆಂಗಳೂರು ಕಾಲಪುರುಷನು ಮೈಸೂರು ಸ್ಟಾರ್ ದಿನಚರಿ ಪತ್ರಿಕೆಯಂತೆ ತನ್ನ ಬದುಕಿನ ಉದ್ದೇಶವು ಸಫಲವಾಯಿತೆಂದು ಅಂತರ್ಧಾನವಾಗುವುದು ಮೇಲು.

ಒಬ್ಬ ವಾಚಕ.

ಇದೇನು ಈ ವಿಪರೀತ?

ಸ್ವಾಮಿ

ಇನ್ನು ಮುಂದೆ ಬೆಂಗಳೂರಿನಲ್ಲಿ ಸ್ವತಂತ್ರವಾಗಿ ಬಹಿರಂಗ ಸಭೆಗಳು ನಡೆಯವಹಾಗಿಲ್ಲ ಸಿಟಿ ಮ್ಯಾಜಿಸ್ಟ್ರೇಟರ ಲೈಸೆನ್ಸನ್ನು ಪಡೆದೇ ಬಹಿರಂಗ ಸಭೆಯನ್ನು ನಡೆಸಬೇಕು. ಸರಕಾರಕ್ಕೆ ವಿರೋಧವಾದ ಅಭಿಪ್ರಾಯಗಳನ್ನು ಪ್ರಕಟಿಸಲು ಸಭೆ ನಡೆಸುವುದಕ್ಕೆ ಅವಕಾಶವೇ ಇಲ್ಲ. ಮೇಜಿಸ್ಟ್ರೇಟರನ್ನು ಕೇಳಿದರೆ ಅವರು ಲೈಸೆನ್ಸನ್ನು ಕೊಡುವಹಾಗೆಯೇ ಇಲ್ಲ. ಈ ರೀತಿಯಾದ ಬಂಧನವು ಬೆಂಗಳೂರಿನಂತಹ ಪ್ರಧಾನ ನಗರಕ್ಕೆ ಶೋಭಿಸುವ ಹಾಗಿಲ್ಲ. ಹೈದರಾಬಾದು ಮೊದಲಾದ ಮೊಗಲಾಯಿ ಸಂಪ್ರದಾಯದ ರಾಜ್ಯಗಳಲ್ಲಿ ಈ ರೀತಿಯಾಗಿ ಲೈಸೆನ್ಸ್ ತೆಗೆದು ಕೊಳ್ಳಬೇಕಂದು ನಾನು ಕೇಳಿದ್ದೆ ಈ ದುರವಸ್ಥೆಯು ನಮ್ಮ ಬೆಂಗಳೂರಿಗೂ ಬಂದಿದ್ದಕ್ಕಾಗಿ ನಾನು ಬಹಳ ವಿಷಾದಪಡುತ್ತೇನೆ. ಇಂತಹ ಅನಾಗರೀಕ ಆರ್ಡರನ್ನು ವಾಪಸು ತೆಗೆದುಕೊಳ್ಳುವಂತೆ ಸರಕಾರದವರು ಏರ್ಪಡಿಸಬೇಕೆಂದು ಕೋರುತ್ತೇನೆ.

ಬೆಂಗಳೂರು ನಿವಾಸಿ

ಸೈಮನ್ ಬಂಧನ.

ಸ್ವಾಮಿ!

ನೀಲಗಿರಿ ಮುನಿಸಿಪಾಲಟಿಯ ಅಡ್ರೆಸ್ಸಿಗೆ ಉತ್ತರವಾಗಿ ಸರ್ ಜಾನ್ ಸೈಮನ್‌ರವರು ತನ್ನ ರಕ್ಷಣೆಗಾಗಿ ಇಷ್ಟು ಪೋಲೀಸ್ ಬಂದೋಬಸ್ತು ಏಕೆ ಎಂದು ಕೇಳಿದರಂತೆ. ಬ್ರಿಟಿಷ್ ಇಂಡಿಯಾದಲ್ಲಿ ಪೋಲೀಸ್ ಬಂದೋಬಸ್ತು ಮಾತ್ರ ಇತ್ತು. ಆದರೆ ನಮ್ಮ ಮೈಸೂರಿನಲ್ಲಿ ಪೋಲೀಸ್ ಬಂದೋಬಸ್ತು ಮಾತ್ರವೇ ಅಲ್ಲದೆ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸಿಟಿ ಮ್ಯಾಜಿಸ್ಟ್ರೇಟರುಗಳು ನಾಗರಿಕರನ್ನೆಲ್ಲಾ ಬಂಧನದಲ್ಲಿಟ್ಟಿದ್ದರು. ಮೈಸೂರಿನಲ್ಲಿ ಸಭಾಬಂಧನ, ವಾಗ್ಬಂಧನ, ಮತ್ತು ಮೆರವಣಿಗೆಗಳ ಬಂಧನ ಇವುಗಳು ಹದಿನೈದು ದಿವಸದವರಿಗೆ ಜಾರಿಯಲ್ಲಿದ್ದುವು. ಬೆಂಗಳೂರಿನಲ್ಲಿ ಸೈಮನ್‌ರ ರು ಬಂದಿದ್ದಕ್ಕೆ ಗುರುತಾಗಿ ಇನ್ನು ಮುಂದೆ ಯಾವಾಗಲೂ ಸಿಟಿ ಮ್ಯಾಜಿಸ್ಟ್ರೇಟರ ಅಪ್ಪಣೆ ಇಲ್ಲದೆ ಮೀಟಿಂಗುಗಳಾಗಲಿ ಲಕ್ಚರುಗಳಾಗಲಿ ಮೆರವಣಿಗೆಗಳಾಗಲಿ ನಡೆಯುವ ಹಾಗಿಲ್ಲ. ಇದು ಒಳ್ಳೆ ಜ್ಞಾಪಕ ಸೈಮನ್‌ರವರು ಬೆಂಗಳೂರಿಗೆ ಬಂದು ಹೋದುದಕ್ಕಾಗಿ ಶಾಶ್ವತವಾದ ಇದೊಂದು ಗುರ್ತು ನಿಂತಿತು ಇದಕ್ಕಿಂತ ಬೇರೆ ಸ್ಮಾರಕವು ಅವರಿಗೆ ಬೇಕಾಗಿಲ್ಲ. ಈ ಸ್ಮಾರಕವು ಸೈಮನ್‌ರಿಗೆ ಗೊತ್ತಿದೆಯೋ ಇಲ್ಲವೊ ಅವರಿಗೆ ಯಾರಾದರೂ ತಿಳಿಸಿದರೆ ಬಹಳ ಸಂತೋಷಪಡುವರು. ಹಾರ್ಡಿಂಜ್ ಸರ್ಕಲ್ ಕರ್ಜನ್ ಪಾರ್ಕ್ ಎನ್ನುವಹಾಗೆ ಸೈಮನ್‌ರವರ ಹೆಸರಿನಲ್ಲಿ ಇದನ್ನು ಸೈಮನ್ ಬಂಧನ ಎಂದು ಕರೆಯಬಹುದು.

ಒಬ್ಬ ಪ್ರಜೆ

ಮಿ|| ಕ್ರಂಪ್‌ರವರ ಮರಣ.

ಸ್ವಾಮಿ,—

ಬೆಂಗಳೂರು ಗಲಭೆಗಳ ಸಮಯದಲ್ಲಿ ಮೈಸೂರಿನ ಬ್ರಿಟಿಷ್ ರೆಸಿಡೆಂಟರಾಗಿದ್ದ ಮಿ|| ಕ್ರಂಪ್‌ರವರು ಶೀಮೆಯಲ್ಲಿ ಕಾಲವಾದರೆಂದು ತಿಳಿದು ನಾನು ಬಹಳ ವಿಷಾದಪಡುತ್ತೇನೆ. ಇವರು ಬೆಂಗಳೂರು ಗಲಭೆಗಳ ಪೂರ್ವೋತ್ತರಗಳನ್ನೆಲ್ಲಾ ಚೆನ್ನಾಗಿ ತಿಳಿದಿದ್ದರು. ಸರ್ಕಾರದ ಕೆಲವು ಅಧಿಕಾರಿಗಳು ಮಾಡಿದ ಅಚಾತುರ್ಯಗಳನ್ನೆಲ್ಲಾ ಇವರು ಕಣ್ಣಾರ ನೋಡಿದ್ದರು. ಇವರೇ ಮುಂದೆ ರೆಸಿಡೆಂಟರಾಗಿ ಬರುವರೆಂಬ ಉಮೇದು ಇತ್ತು. ಇಂತಹವರು ಮೃತಿಪಟ್ಟದ್ದಕ್ಕಾಗಿ ಅನೇಕರು ವಿಷಾದಪಡುತ್ತಾರೆ ಇವರ ಆತ್ಮಕ್ಕೆ ಶಾಂತಿ ಯುಂಟಾಗಲಿ.

ಅವರನ್ನು ನೋಡಿದವ.

ಪತಿಯಜೀವನ ಚರಿತ್ರೆ.

ಮಾಸ್ಕೋಪಟ್ಟಣದ ಒಬ್ಬ ಆಂಗ್ಲ ವಿಧವೆಯು ತನ್ನ ಪತಿಯ ಜೀವನ ಚರಿತ್ರೆಯನ್ನು ನಾಲ್ಕು ವಾಲ್ಯೂಂಗಳಷ್ಟು ಬರೆದಿರುವಳು.

ಜನರಲ್ ನಾದಿರಖಾನ್.

ಜನರಲ್ ನಾದಿರ್‌ಖಾನರನ್ನು ಫ್ರೋಸ್ಟ್ ಪ್ರಾಂತ್ಯದ ರಾಜಧಾನಿಯಲ್ಲಿಗೆ ಅಲ್ಲಿನ ಜನರು ಆದಂಸ್ವಾಗತದಿಂದ ಬರಮಾಡಿಕೊಂಡರು.

ಒಂದುಸಾವಿರ ರೂ ಜುಲ್ಮಾನೆ.

ಕಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಯ ಸಂದರ್ಭದಲ್ಲಿ ವಿರೋಧವಾದ ಪ್ರಕಟಣೆಯನ್ನು ಅಚ್ಚು ಮಾಡಿದ ತಪ್ಪಿತಕ್ಕಾಗಿ ಪ್ರೆಸಿಡೆನ್ಸಿ ಮಾಜಿಸ್ಟ್ರೇಟರು ಶ್ರೀ|| ಜನರಂಜನ್‌ನೆಗೆಯವರಿಗೆ ಒಂದು ಸಾವಿರ ರೂಗಳ ಜುಲ್ಮಾನೆಯನ್ನು ವಿಧಿಸಿದರು.

ವರ್ತಮಾನ ಸಂಗ್ರಹ.

ಬೆಜವಾಡದಲ್ಲಿ ಸೈಮನ್ ಬಹಿಷ್ಕಾರ

ಈ ಮಾಹೆ 13 ನೇ ತಾ ಬೆಜವಾಡದ ಡಿಸ್ಟ್ರಿಕ್ಟ್ ಕಾಂಗ್ರೆಸ್ ಆಫೀಸಿನಿಂದ ಅಖಿಲಭಾರತ ರಾಷ್ಟ್ರೀಯ ಸಭಾಪತಿಗಳಾದ ಶ್ರೀ|| ಎ. ಗೋವಿಂದಾಚಾರ್ಯರೂ ಲಕ್ಷ್ಮಯ್ಯಚಾದ್ರಿಯವರೇ ಮೊದಲಾದವರು ಕಪ್ಪುಬಾವುಟಗಳ ದೊಡ್ಡ ಸಭೆಯ ಮೆರವಣಿಗೆಯನ್ನು ರಾಜಬೀದಿಗಳಲ್ಲೆಲ್ಲಾ ನಡೆಸಿಕೊಂಡು ರೈಲ್ವೆಸ್ಟೇಷನ್ನಿಗೆ ಬಂದಾಗ್ಗೆ ಪೋಲೀಸಿನವರು ತಡೆದರು ಅನಂತರ ಕೃಷ್ಣಾನದಿಯ ಮೇಲಿರುವ ಲೆವಲ್ ಕ್ರಾಸಿಂಗ್‌ಗೇಟ್ ಒಳಗೆ ಹೋಗಿ ಸೈಮನ್ ಕಮಿಷನ್ನಿನ ಸ್ಪೆಷಲ್ ರೈಲುಬರುವ ಹೊತ್ತಿಗೆ ಸರಿಯಾಗಿ "ಸೈಮನ್ ಗೋ ಬ್ಯಾಕ್ ಹೇವ್ ಟು ಕಮಿಟಿ" ಎಂದು ಗಟ್ಟಿಯಾಗಿ ಕೂಗಿಕೊಂಡರು.

ಪೋಲೀಸ್ ಸಹಾಯ.

ನಾಗಪುರಕ್ಕೆ ಸೈಮನ್‌ಕಮಿಷನ್ ಹೋದ ಸಂದರ್ಭದಲ್ಲಿ ಸುತ್ತುಮುತ್ತಿನ ಪ್ರದೇಶಗಳಿಂದ ಏನಿಲ್ಲ ಜನ ಪೋಲೀಸಿನವರ ಸಹಾಯವನ್ನು ಸರ್ಕಾರವು ಪಡೆದಿತ್ತು. ಬಹಿಷ್ಕಾರ ಚಳುವಳಿಗಾರರೂ ಬಹಿಷ್ಕಾರ ಮೆರವಣಿಗೆಯನ್ನು ಏರ್ಪಡಿಸಿದ್ದರು.

ಚಾಮರಾಜನಗರ.

ಬ್ರಾಹ್ಮಣ ಬ್ರಾಹ್ಮಣೇತರವ್ಯ

ಈ ರೋಗವು ಈ ಊರಿನಲ್ಲಿ ಕೇವಲ ಅಂಕುರಿತವಾಗಿದೆ ಇದು ಶೋಚನೀಯವಾದದ್ದು ಪರಸ್ಥಳದ ಸಂಗೀತ ಅಥವ ಹರಿಕಥೆ ಕಾರರು ಇಲ್ಲಿಗೆ ಬಂದಾಗ್ಯೂ ಇಲ್ಲಿನ ಒಬ್ಬೊಬ್ಬ ಸ್ಥಳೀಯ ಮುಖಂಡರು ಅವರಿಗೆ ಪ್ರೋತ್ಸಾಹ ಕೊಡುವ ವಿಷಯದಲ್ಲಿ ಭಿನ್ನಭೇದಗಳು ತೋರಿಸುವುದು ಕೂಡ ವಾಡಿಕೆಯಾಗಿದೆ ಮುಂದುವರೆದ ಸಂಗಡವರು [illegible]

[illegible] ಗೇಕೆ ಈ ಅನ್ಯಕ್ಕೆ.

[illegible]

[illegible]

ಶ್ರೀ ಸೀತಾರಾಮ ವೈದ್ಯಶಾಲೆಯ [illegible] ವಾದ ಶ್ರೀ ಶುಕ್ಲಸಂವತ್ಸರದ

ಪಂಚಾಂಗಗಳು

ವಿಕರಿಗೆ ಸಿದ್ಧವಾಗಿವೆ.

ಪಂಚಾಂಗ 1ರ ಬೆಲೆ 2 ಆಣೆ ಮಾತ್ರವೆ. 5 ಪ್ರತಿಯನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಜಾತಕ ಭಾವಕ್ಕನುಕೂಲವಾಗುವಂತೆ 12 ತಿಂಗಳ ದೃಗ್ಗಣಿತ ಪಂಚಾಂಗವೊಡನೆ ಸೇರಿದ ಪ್ರತಿ 1ಕ್ಕೆ 3 ಆಣೆ. ಒಟ್ಟು ವ್ಯಾಪಾರಿಗಳಿಗೆ ಕಮಿಷನ್ ಕೊಡಲಾಗುತ್ತದೆ. ಪೋಸ್ಟೇಜು ಬೇರೆ. [illegible]

(1)ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

(2) ಶ್ರೀ ಸೀತಾರಾಘವ ವೈದ್ಯಶಾಲಾ [illegible]

ಬೆಂಗಳೂರು ಸಿಟಿ

Printed and published by P. R. Ramaiya, at [illegible] Press, D. Subbiah Road, Mysore.

Regd. No. M. 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಚಂದಾ

ಸಂಪುಟ ೧] ಮಂಗಳವಾರ ೧೯ ಮಾರ್ಚಿ ೧೯೨೯ [ಸಂಚಿಕೆ

ತಾಯಿನಾಡು.

19—3—1929

ದೇಶೀಯ ಸಂಸ್ಥಾನದ ಪ್ರಜೆಗಳ

ಹಕ್ಕು ಬಾಧ್ಯತೆಗಳು.

ರ — ಬ

ವಾರ್ಧಾದಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ಶ್ರೀ|| ಮಣಿಲಾಲ ಕೋಠಾರಿಯವರು ದೇಶೀಯ ಸಂಸ್ಥಾನಗಳ ಪ್ರಜೆಗಳಿಗೆ ಒಂದು ಉಪದೇಶವನ್ನು ಮಾಡಿದರು. ಅದು ಬಹಳ ಯುಕ್ತಿಯುಕ್ತವಾಗಿರುವದು. ಅವರು ಹೇಳುವುದೇನೆಂದರೆ "ಪ್ರಪಂಚದಲ್ಲೆಲ್ಲಾ ಆವರಿ[illegible] ದೇಶೀಯ ಸಂಸ್ಥಾನಗಳ [illegible]. ಈಗ ಜಾರಿಯ[illegible] ರಾಜ್ಯಪದ್ಧತಿ[illegible] ಪ್ರಜೆಗಳಿಗೆ ಜವಾಬ್ದಾರಿಯಾ[illegible] ಸರಕಾರ ಪದ್ಧತಿಯನ್ನು ಸ್ಥಾಪಿ[illegible]. ಈಗ ದೇಶೀಯ ಸಂಸ್ಥಾನಗಳಲ್ಲಿ [illegible] ರಾಜ್ಯಭಾರವಿರುವುದು. [illegible] ಪ್ರಜೆಗಳ [illegible]. [illegible] ಬೆವರು ಸುರಿದು ದುಡಿದು ಸಂಪಾದಿಸಿದ ಹಣದಿಂದ ಕೊಡಲ್ಪಡುವ ಕಂದಾಯವು ರಾಜರುಗಳಿಂದ ತಮ್ಮ ಸ್ವಾರ್ಥಕ್ಕೆ ದರ್ವ್ಯಯ ಮಾಡಲ್ಪಡುವುದು. ಈ ದುಸ್ಥಿತಿಯನ್ನು ಹೇಗಾದರೂ ಮಾಡಿ ಬೇಗ ತಪ್ಪಿಸಬೇಕು ರಾಜರುಗಳು ತಮ್ಮ ಸಂಸ್ಥಾನಗಳ ಮಾಲೀಕರಲ್ಲವೆಂದೂ ತಾವು ಅವುಗಳ ಟ್ರಸ್ಟೀಗಳೆಂದೂ ರನ್ನೂ ಮನಗಾಣಿಸಬೇಕು ಪ್ರಜೆಗಳನ್ನೂ ತಮ್ಮ ಜೊತೆಯಲ್ಲಿ ಕರೆದು ಕೊಂಡು ಪ್ರಜೆಗಳಿಗೋಸ್ಕರವಾಗಿಯೇ ರಾಜ್ಯ [illegible] ಪೊಲಿಟಿಕಲ್ ಇಲಾಖೆಯವರು ಸಂಸ್ಥಾನಗಳ ಒಳ ಆಡಳಿತದಲ್ಲಿ ಕೈಹಾಕಲು ಅವಕಾಶವಾಗುವುದಿಲ್ಲ. ಅದನ್ನ ಬಿಟ್ಟು ತಮ್ಮ ಕೌಲುಗಳನ್ನೂ ಸನದುಗಳನ್ನೂ ಎಷ್ಟೇ ಅರ್ಥಗಳು ಮಾಡಿದರೂ ಪ್ರಯೋಜನವಿಲ್ಲ.

ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಭಿಪ್ರಾಯವು ಬಲಿಯುತ್ತಿರುವುದು. ವಾಕ್‌ಸ್ವಾತಂತ್ರ್ಯ, ಪ್ರಜಾಸ್ವಾತಂತ್ರ್ಯ ಸಭಾಸ್ವಾತಂತ್ರ್ಯಗಳನ್ನು ಪ್ರಜೆಗಳು ಕೇಳುತ್ತಿರುವರು. ಜವಾಬ್ದಾರೀ ಸರಕಾರವು ಪ್ರತಿನಿಧಿ ಸರಕಾರವು ಸ್ಥಾಪಿಸಲ್ಪಡಬೇಕೆಂದು ಕೇಳುತ್ತಿರುವರು. ಬಟ್ಲರ ಕಮಿಟಿಯಿಂದ ರಾಜರುಗಳಿಗೆ ಯಾವ ಪ್ರಯೋಜನವೂ [illegible] ಪ್ರಜೆಗಳಿಗಂತೂ [illegible]. ಹೀಗಾದುದರಿಂದ ಎಲ್ಲಾ ದೇಶೀಯ ಸಂಸ್ಥಾನಗಳ ಪ್ರಜೆಗಳು ಪ್ರಜಾಸಂಘಗಳನ್ನು ಏರ್ಪಡಿಸಿಕೊಂಡು ಅವುಗಳ ಮೂಲಕ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಬೇಕು"

ಮದುವೆಯ ತಡೆ.

ಅಹಮದಾಬಾದಿನಲ್ಲಿ ಪುರುಷೋತ್ತಮ ನಾರಾಯಣಜಿಂದ ಎಂಬ ಜೈನನು 15 ವರ್ಷದ ಒಂದು ಹುಡುಗಿಯನ್ನು ಮದುವೆಯಾಗುವದಕ್ಕಿದ್ದನು ಅಷ್ಟರಲ್ಲಿ ಜೈನರು ಒಂದು ಬಹಿರಂಗ ಸಭೆನಡೆದು ಈ ಮದುವೆಯನ್ನು ಖಂಡಿಸಿದರು. ಈ ಮದುವೆಯನ್ನು ನಿಲ್ಲಿಸಬೇಕೆಂದು ಠರಾವು ಆಯಿತು. ಅದರಂತೆ ಡಿ|| ಮಳ್ಳ ಕೋರ್ಟಿನಲ್ಲಿ ಮದುವೆಯನ್ನೂ ನಡೆಯಿಸಕೂಡದೆಂದು ಇಂಜಂಕ್ಷನ್ ಆಯಿತು

ವರ್ತಮಾನ ಸಂಗ್ರಹ.

ಜಾರ್ಜ್ ಬರ್ನಾರ್ಡ್ ಷಾಂವರು.

ಜಾರ್ಜ್‌ಬರ್ನಾರ್ಡ್‌ಷಾರವರು ಪ್ರಸಿದ್ಧ ಆಂಗ್ಲೇಯ ಗ್ರಂಥಕರ್ತರು. ಇವರಿಗೆ ಐಂಗ್ಲೆಂಡಿನ ನ್ಯಾಷನಲ್ ಯೂನಿವರ್ಸಿಟಿಯಲ್ಲಿ ಗೌರವವಾದ ಒಂದು ಬಿರುದನ್ನು ಕೊಡಬೇಕೆಂದ ಒಂದು ಠರಾವು ತರಲ್ಪಟ್ಟಿತು. 25 ಜನಗಳು ವಿರೋಧವಾಗಿಯೂ 8 ಜನಗಳು ಅನುಕೂಲವಾಗಿಯೂ ಓಟು ಕೊಟ್ಟರು. ಷಾರವರು ಇದನ್ನು ಕೇಳಿ ಆಶ್ಚರ್ಯಪಟ್ಟರು.

ಮಿ|| ಟ್ರಾಟಸ್ಕಿಯವರು

ಮಿ|| ಟ್ರಾಟಸ್ಕಿಯವರು ರಷ್ಯಾದ ಪ್ರಸಿದ್ಧ ಮುಖಂಡರಾದ ಲೆನಿನ್‌ರವರ ಶಿಷ್ಯರು. ಇವರು ರಷ್ಯಾದಲ್ಲಿ ಬೋಲ್‌ಷೆವಿಸಂ ಪ್ರಚಾರಕ್ಕೆ ಬಹು ಸಹಾಯ ಮಾಡಿದರು. ಆದರೆ ಲೆನಿನ್‌ರವರ ಮರಣವಾದನಂತರ ಲೆನಿನ್ನರ ಇನ್ನೊಬ್ಬ ಶಿಷ್ಯನಾದ ಸ್ಟಾಲಿನ್ ಎಂಬುವರಿಗೂ ಟ್ರಾಟಸ್ಕಿಯವರಿಗೂ ಮನಸ್ತಾಪವುಂಟಾಯಿತು. ಟ್ರಾಟಸ್ಕಿಯವರು ರಷ್ಯಾದ ಈಗಿನ ಸರಕಾರದ ಕೆಲವು ಕಾರಕಲಾಪಗಳನ್ನು ಒಪ್ಪಲಿಲ್ಲ. ಸ್ಟಾಲಿನ್‌ರವರು ಟ್ರಾಟಸ್ಕಿಯವರ ಮೇಲೆ ರಷ್ಯಾದ ಸೋವಿಯಟ್ ಸರಕಾರಕ್ಕೆ ವಿರೋಧವಾಗಿ ಕೆಲಸಮಾಡುತ್ತಿರುವರೆಂಬ ಅಪವಾದನೆಯನ್ನು ಮಾಡಿದರು. ಟ್ರಾಟಸ್ಕಿಯವರಿಗೆ ದೇಶಭ್ರಷ್ಟರಾಗಬೇಕೆಂಬ ಶಿಕ್ಷೆಯು ವಿಧಿಸಲ್ಪಟ್ಟಿತು. ಅವರು ಯೂರೋಪಿನ ಯಾವ ದೇಶದಲ್ಲಿ ನೆಲೆಸುವರೋ ಅದು ಇನ್ನೂ ನಿಶ್ಚಯವಾಗಿಲ್ಲ. ಒಂದು ರಾಜಧಾನಿಯಿಂದ ಇನ್ನೊಂದು ರಾಜಧಾನಿಗೆ ಹೋಗುತ್ತಿರುವರು. ಕಾನ್‌ಸ್ಟಂಟಿನೋಪಲಿನಲ್ಲಿ ಇರಬೇಕೆಂದಿದ್ದರು. ಅಲ್ಲೂ ಅವಕಾಶವಾಗಲಿಲ್ಲ. ಈಗ ಸ್ವಿಟ್ಜರ್ಲೆಂಡಿಗೆ ಪ್ರಯಾಣಮಾಡಿರುವರು.

ಶ್ರೀ ರಾಮಕೃಷ್ಣಾಶ್ರಮ.

ರಾಜಧಾನಿಯ ರಾಮಕೃಷ್ಣಾಶ್ರಮದರು ಕಳೆದ ಶುಕ್ರವಾರ ಸಾಯಂಕಾಲ ಬಸುಮುದ್ದ್ಯನವರ ಸ್ಕೂಲ್ ಹಾಲಿನಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಮತ್ತು ವಿವೇಕಾನಂದರ ಜಯಂತ್ಯುತ್ಸವಗಳನ್ನು ಅತಿ ವೈಭವದಿಂದ ನಡೆಸಿದರು. ಸಭೆಯು ಕಿಕ್ಕಿರಿಯುವಂತೆ ತುಂಬಿತ್ತು. ಹೃದ ಸುಂಗನುವಾದ ಕನ್ನಡದಲ್ಲಿ ಶ್ರೀ|| ಟಿ. ಎಸ್. ವೆಂಕಣ್ಣಯ್ಯನವರೂ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ಶ್ರೀ ಶಂಕರನಾರಾಯಣರಾಯರವರೂ ರಾಜಕವಿಭೂಷಣ ರಿಟೈರ್ಡ್ ಮುಜರಾಯಿ ಭಕ್ಷಿ ಲಿಂಗರಾಜ ಅರ್ಸರವರೂ ಮೇಲಿನ ಮಹಾತ್ಮರಿಬ್ಬರ ಜೀವನಚರಿತೆಯ ವಿಷಯವಾಗಿ ಭಾಷಣಗಳನ್ನು ಮಾಡಿದರು. ಮ|| ಶಂಕರನಾರಾಯಣರಾವರು ಪ್ರಖ್ಯಾತರಾದ ಉಪನ್ಯಾಸಕರು. ಇವರ ಕನ್ನಡ ಉಪನ್ಯಾಸವು ಇತರರು ಇಂಗ್ಲೀಷಿನಲ್ಲಿ ಮಾಡಿದ ಉಪನ್ಯಾಸದಂತೆಯೇ ಸ್ಫೂರ್ತಿದಾಯಕವಾಗಿತ್ತು. ಕನ್ನಡದಲ್ಲಿ ಇವರ ಭಾಷಣವನ್ನು ಮೊದಲನೆಸಾರಿ ಕೇಳಿದವರನೇಕರು ಬಹಳ ಆಶ್ಚರ್ಯಪಟ್ಟರು ಮಂಗಳಾರ್ತಿಯೇ ಮೊದಲಾದುವುಗಳ ನಂತರ ಸಭೆಯು ಬರಖಾಸ್ತಾಯಿತು. ಶ್ರೀ ರಾಮಕೃಷ್ಣಾಶ್ರಮದವರು ಶ್ರೀ ಪರಮಹಂಸರ ಮತ್ತು ವಿವೇಕಾನಂದರ ಅವ್ಯಕ್ತೋಪದೇಶವು ರಾಜಧಾನಿಯ ಪ್ರಜೆಗಳಲ್ಲಿ ಹರಡುವಂತೆ ಏರ್ಪಾಡು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ.

ಮದ್ಯಪಾನ

ಪ್ರತಿಬಂಧಕ ಪತ್ರಿಕೆ ನಂ. ೧

ದೇವಭೂಮಿಯಾದ ಹಿಂದೂಸ್ಥಾನವು ಕುಡಕರ ದೇಶವಾಗುತ್ತಿದೆ.

ಮದ್ಯಪಾನದಿಂದ ಸರಕಾರಕ್ಕೆ ಆದ ಉತ್ಪನ್ನವು

ವರ್ಷ		ರೂಪಾಯಿಗಳು
1915—16 ರಲ್ಲಿ	....	13 ಕೋಟಿ
1916—17 ರಲ್ಲಿ	....	14 ಕೋಟಿ
1918—18 ರಲ್ಲಿ ..	....	15 ಕೋಟಿ
1918—19 ರಲ್ಲಿ....	....	17 ಕೋಟಿ
1919—20 ರಲ್ಲಿ ...	....	19 ಕೋಟಿ
1920—21ರಲ್ಲಿ	....	20 ಕೋಟಿ
1921—22ರಲ್ಲಿ	....	17 ಕೋಟಿ
1922—23ರಲ್ಲಿ	....	19 ಕೋಟಿ
1923—24ರಲ್ಲಿ ...	....	19 ಕೋಟಿ
1924—25ರಲ್ಲಿ	....	19 ಕೋಟಿ

ಟಿಪ್ಪಣಿ—1921—22ರಲ್ಲಿ ಚಳವಳಿಯ ಮೂಲಕ ಉತ್ಪನ್ನವು ಕಡಿಮೆ ಆದದ್ದನ್ನು ಲಕ್ಷಕ್ಕೆ ತರಬೇಕು.

ಮೇಲೆ ತೋರಿಸಿದ ಅಂಕಿಗಳು ಸರಕಾರದ ಕರೆಯ ಉತ್ಪನ್ನಗಳಲ್ಲಾದ ಹೆಚ್ಚಳವನ್ನು ತೋರಿಸುತ್ತವೆ. ಅಬಕಾರೀ ಖಾತೆಯು ಉತ್ಪನ್ನವು ಅನೇಕ ಬಾಬುಗಳಿಂದ ಬರುತ್ತಿದ್ದರೂ ಮೇಲೆ ಕೊಟ್ಟ ಅಂಕಿಗಳು ಕರೆಯ ಅಂಗಡಿಗಳ ಹರಾಜಿನಿಂದ ಬರುವ ಹಣ ಮತ್ತು ಉಳಿದ ಚಿಲ್ಲರೆ ವಿಷಯಗಳಿಂದ ಬರುವ ಹಣವನ್ನಷ್ಟೇ ತೋರಿಸುತ್ತವೆ. ಕೇವಲ ಲಾಭದ ಮೇಲೆ ದೃಷ್ಟಿಯುಳ್ಳ ಅಂತಃಕರಣರಹಿತವಾದ ಯಾವದೇ ಸರಕಾರವು ಬಹು ಹೊತ್ತಿನಲ್ಲಿಯೇ ದೇಶವನ್ನು ಈ ರೀತಿಯಿಂದ ಹಾಳುಮಾಡಿಬಿಡಬಹುದು ಸುಸ್ಥಿತಿಯಲ್ಲಿ ಶಿವಾಗಿ ಒಟ್ಟುಗೊಡಿದ ಹಿಂದೂಸ್ಥಾನವು ಇದನ್ನು ನಿಲ್ಲಿಸಿ ಮದ್ಯ ಮತ್ತು ಪರದೇಶಿ ಸರಕಾರದ ದಾಸ್ಯಗಳಿಂದ ಮುಕ್ತವಾಗಬಹುದು.

ಗದಗ — ಕಂಭ್ರಾವಿ ಮದ್ವರಾಯರು

೧೯—೩—೨೯ — ಕಾರ್ಯದರ್ಶಿ

ಕ. ಪ್ರಾ. ಕಾ. ಕಮಿಟಿ.

TAI NADU

19—3—1929

ಪರದೇಶೀ ಬಟ್ಟೆಗಳ ಬಹಿಷ್ಕಾರ

ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲವು ಡಿಲ್ಲಿಯಲ್ಲಿ ತಾ ೧೯—೨—೨೯ ನೆಯದಿನ ಸೇರಿತ್ತು. ಆಗ ಕೆಳಗೆ ಕೊಟ್ಟಮೇರೆಗೆ ಯೋಜನೆಯು ಪರದೇಶೀ ಬಟ್ಟೆಗಳ ಬಹಿಷ್ಕಾರದ ಬಗ್ಗೆ ಪಾಸಾಯಿತು. ೧ ರಾಷ್ಟ್ರೀಯ ಸಭೆಯ ಶಾಖೆಯವರು ಸ್ವಯಂಸೇವಕರ ಸಹಾಯದಿಂದ ಪರದೇಶೀ ಬಟ್ಟೆಗಳನ್ನು ಕೂಡಿಸಬೇಕು. ಮತ್ತು ಎಲ್ಲರಿಗೂ ಖಾದಿಯನ್ನು ಪೂರೈಸಬೇಕು. ೨. ಖಾದಿಯ ಮೇಲೆ ಚರಖಾ ಸಂಘದ ಮುದ್ರೆಯು ಇರಬೇಕು ಮತ್ತು ಬೆಲೆಯನ್ನು ಸ್ಪಷ್ಟವಾಗಿ ಬರೆದಿರಬೇಕು. ೩. ಸ್ವಯಂಸ್ಫೂರ್ತಿಯಿಂದ ಉಪದೇಶಕರಾಗಲು ಸಿದ್ಧರಿದ್ದವರನ್ನು ಸ್ವಯಂಸೇವಕರೆಂದು ತಕ್ಕೊಳ್ಳಬೇಕು, ಇವರು ನಿಜವಾದ ಖಾದಿಯಾವುದು ಇದನ್ನು ಅರಿಯಬಲ್ಲವರಾಗಿರಬೇಕು. ೪. ಕೂಡುಹಾಕಿದ ಪರದೇಶೀ ಬಟ್ಟೆಗಳನ್ನು ಸಾರ್ವಜನಿಕರೀತಿಯಿಂದ ಸುಟ್ಟುಬಿಡಬೇಕು. ೫. ವರ್ತಕರಿಗೆ ಪರದೇಶಿ ಬಟ್ಟೆಗಳ ಆರ್ಡರುಗಳನ್ನು ಇನ್ನುಮುಂದೆ ಕೊಡಬಾರದೆಂದೂ ಕೊಟ್ಟ ಆರ್ಡರುಗಳನ್ನು ಹಿಂದಕ್ಕೆ ತಕ್ಕೊಳ್ಳಬೇಕೆಂದೂ ಹೇಳಿ ಅವರ ಮನ ಒಲಿಸಬೇಕ. ೬. ಸಾಧ್ಯವಿದ್ದಲ್ಲಿ ಪರದೇಶೀ ಬಟ್ಟೆಗಳ ಅಂಗಡಿಗಳ ಮುಂದೆ "ಪಿಕೆಟಿಂಗ್" ಕಾರ್ಯವನ್ನು ಕೈಗೊಳ್ಳಬೇಕು. ೭ ಶಾಖೆಯವರು ಮಾಡಿದ ಕೆಲಸದ ವರದಿಯನ್ನು ಮುಖ್ಯಕಚೇರಿಗೆ ಮತ್ತು ವೃತ್ತಪತ್ರಗಳಿಗೆ ವಾರಕ್ಕೊಮ್ಮೆ ತಿಳಿಸಬೇಕು. ೮. ಎಲ್ಲ ಸಾರ್ವಜನಿಕ ಸಂಸ್ಥೆಗಳ ಸಹಾಯವು ಈ ಬಹಿಷ್ಕಾರ ಕಾರ್ಯಕ್ಕೆ ಸಿಗುವಂತೆ ಮಾಡಬೇಕು. ೯. ಅ. ಭಾ. ಚ. ಸ. ದವರು ಮಧ್ಯವರ್ತಿಕಚೇರಿಗೆ ಶುದ್ಧ ಖಾದಿಹುಟ್ಟುವ ಸ್ಥಳಗಳ ಮಾಹಿತಿಯನ್ನೂ ಕೊಡಬೇಕ. ಮತ್ತು ಖಾದಿ ಮಾರಾಟವಿದ್ದಲ್ಲಿ ಹೊಸಖಾದಿ ಅಂಗಡಿಗಳನ್ನು ತೆರೆಯಬೇಕು, ೧೦. "ಪರದೇಶೀ ಬಟ್ಟೆಗಳ ಬಹಿಷ್ಕಾರ ಮಂಡಲ" ವೆಂಬ ಹೆಸರಿನ ಕೂಟ ಒಂದನ್ನು ಸ್ಥಾಪಿಸಬೇಕ.. ಇವರು ಸರಿಯಾದ ಲೆಖ್ಖವನ್ನು ಮೂರು ತಿಂಗಳಿಗೊಮ್ಮೆ ಪ್ರಸಿದ್ಧಪಡಿಸಬೇಕು ೧೧. ಇವರು ಬಹಿಷ್ಕಾರದ ಬಗ್ಗೆ ಪತ್ರಿಕೆಗಳನ್ನು ಪ್ರಕಟಿಸಿ ನಾಡಿನಲ್ಲಿ ಹಂಚಬೇಕು. ೧೨. ಕಾಯಿದೆ ಮಂಡಲ ಆಲ್ಲಿ ಖಾದಿಗೆ ಅನುಕೂಲವಾದ ಠರಾವುಗಳನ್ನು ತರಬೇಕ.. ಈ ಕೂಟದಲ್ಲಿ ಮ|| ಗಾಂಧಿ ಮೊದಲಾದ ಗೃಹಸ್ಥರಿರಬೇಕು ಮಾರ್ಚಿ ೧೭ ನೇ ತಾರೀಖಿಗೆ ಮತ್ತು ಮುಂದೆ ಏಪ್ರೈಲ್ ತಿಂಗಳ ಮೊದಲನೇ ರವಿವಾರ ಪರದೇಶೀ ಬಟ್ಟೆ ಬಹಿಷ್ಕಾರದ ಕಾರ್ಯಮಾಡಿ ಮನಿಮನೆಗೆ ಹೋಗಿ ಖಾದಿ ಮಾರಬೇಕು.

ಸಕ್ರೆಟರಿ

ಕ. ಪ್ರಾ. ಕಾ. ಕಮಿಟಿ.

ಸ್ಪೇನಿನ ವಿದ್ಯಾರ್ಥಿಗಳು

ಸ್ಪೇನಿನ ವಿದ್ಯಾರ್ಥಿಗಳು ತಮ್ಮ ಸರಕಾರಕ್ಕೆ ವಿರೋಧವಾಗಿ ಚಳವಳಿಯನ್ನು ಮಾಡಿರುವರು. ನಾವು ಈಗಿನ ನಿರಂಕುಶರಾಜ್ಯ ಪದ್ಧತಿಯನ್ನು ಸಹಿಸುವದಿಲ್ಲ ಎಂದು ಘೋಷಣ ಮಾಡಿರುವರು. ಮ್ಯಾಡ್ರಿಡ್ ವಿಶ್ವವಿದ್ಯಾಲಯವು ಮುಚ್ಚಲ್ಪಡುತ್ತಿರುವುದು.

ವಿವಿಧ ವರ್ತಮಾನ.

ಸಂಸ್ಕೃತವನ್ನು ಬಿಡಬೇಡಿ.

ಕಲ್ಕತ್ತಾದ ಸಂಸ್ಕೃತ ಕಾಲೇಜಿನ ಪದವೀ ದಾನ ಸಂಭ್ರಮದಲ್ಲಿ ಬಂಗಾಳದ ಗವರ್ನರರು ಮಾಡಿದ ಭಾಷಣದಲ್ಲಿ ಪಂಡಿತರುಗಳು ಸಂಸ್ಕೃತವನ್ನೂ ಸಾಕಿಯನ್ನೂ ಬಹಳ ಪ್ರಯಾಸದಿಂದ ರಕ್ಷಣೆ ಮಾಡಿಕೊಂಡು ಬಂದಿರುವರೆಂದೂ, ಭಾರತೀಯರು ತಮ್ಮ ನಾಗರೀಕತೆಯನ್ನು ಉಳಿಸಿಕೊಳ್ಳಬೇಕಾದರೆ ಸಂಸ್ಕೃತವನ್ನು ಬಿಡಕೂಡದೆಂದೂ ಉಪದೇಶಿಸಿದರು. ಪ್ರತಿಯೊಬ್ಬ ಹಿಂದುವೂ ಸಂಸ್ಕೃತವನ್ನು ನಿರ್ಬಂಧವಾಗಿ ಕಲಿಯುವಂತೆ ಏರ್ಪಾಡುಮಾಡಬೇಕು.

ಜಪಾನಿನ ಪಾರ್ಲಿಮೆಂಟ್.

ಜಪಾನಿನ ಪಾರ್ಲಿಮೆಂಟಿಗೆ ಡಯಟ್ ಎಂಬದಾಗಿ ಹೆಸರು. ಅದರ ಈಗಿನ ಅಧ್ಯಕ್ಷರು ಈ ಕೆಲವು ದಿವಸಗಳ ಹಿಂದೆ ರಾಜೀನಾಮೆ ಕೊಟ್ಟರು. 1809 ರಿಂದಲೂ ಈ ಸಭೆಗೆ ಮೆಂಬರಾಗಿದ್ದರು ಈಗಿನ ಮಂತ್ರಿಮಂಡಲದವರು ತಮ್ಮ ಬಲವನ್ನು ದೃಢಪಡಿಸಿಕೊಳ್ಳುವುದಕ್ಕೋಸ್ಕರ ಕೆಲವು ಮಸೂದೆಗಳನ್ನು ತಂದರು ಅದಕ್ಕೆ ವಿರೋಧವು ಪ್ರಬಲವಾಯಿತು. ಸಭೆಯ ಕಾರ್ಯಕಲಾಪಗಳು ಸಲಲಿತವಾಗಿ ನಡೆಯುವುದಸಾಧ್ಯವಾಯಿತು. ಆದುದರಿಂದ ಅಧ್ಯಕ್ಷರ ರಾಜೀನಾಮೆಯನ್ನು ಕೊಟ್ಟರು ಎಲ್ಲೆಲ್ಲಿಯ ಈ ಪ್ರಜಾಭಿಪ್ರಾಯವೂ ಬಹಳ ಮುಂದುವರಿಯುತ್ತದೆ.

ಪಂಡಿತ ಮೋತೀಲಾಲ್ ನೆಹರೂರವರ ವರಮಾನ.

ಪಂಡಿತ ಮೋತೀಲಾಲ್ ನೆಹರೂರವರಿಗೆ 56000 ರೂ ವರಮಾನವಿರುವುದೆಂದು ಗೊತ್ತಾಗುತ್ತದೆ. ಕಾಂಗ್ರೆಸ್ಸಿನಲ್ಲಿ ಪ್ರತಿಯೊಬ್ಬ ಸದಸ್ಯನೂ ತನ್ನ ವರಮಾನದಲ್ಲಿ 100 ಕ್ಕೆ ೭ ರಂತೆ ಕಾಂಗ್ರೆಸ್ಸಿಗೆ ಚಂದಾ ಕೊಡಬೇಕೆಂದು ತೀರ್ಮಾನಗಿರವುದು ಅದರಂತೆ ಪಂಡಿತ ನೆಹರೂರವರು 1120 ರೂಪಾಯಿಗಳು ಕೊಟ್ಟಿರುವರು. ಇದರಂತೆ ಲೆಕ್ಕಾಚಾರ ಮಾಡಿದರೆ 56000 ರೂಪಾಯಿಗಳ್ಳ ಮಾಸಿಕ ವರಮಾನವು ನೆಹರೂರವರಿಗೆ ಇರುವುದೆಂದು ಸ್ಪಷ್ಟವಾಗುವುದು.

ಧೂಮಪಾನ.

ಮಹಾತ್ಮಾ ಗಾಂಧಿಯವರು ಬರ್ಮಾದಲ್ಲಿ ಸ್ತ್ರೀಯರು ಧೂಮಪಾನ ಮಾಡುವುದನ್ನು ನೋಡಿ ಬಹಳ ವ್ಯಸನಪಟ್ಟು ಒಂದು ಭಾಷಣವನ್ನು ಕೊಟ್ಟರು.. ಸ್ತ್ರೀಯರು ಧೂಮಪಾನಮಾಡುವುದು ಬಹಳಕೆಟ್ಟದೆಂದೂ ಅದರಿಂದ ಅವರ ಸೌಂದರ್ಯಕ್ಕೆ ಬಹಳ ಹಾನಿಯೆಂದೂ ಹೇಳಿದರು. ಸ್ತ್ರೀಯರು ಮಾತ್ರವಲ್ಲದೆ ಗಂಡಸರೂ ಧೂಮಪಾನ ಮಾಡುವುದು ಕೆಟ್ಟದು, ಸಣ್ಣ ವಯಸ್ಸಿನ ಬಾಲಕರು ಕೂಡ ಧೂಮಪಾನಮಾಡುತ್ತಿರುವರು ಧೂಮಪಾನದಿಂದ ಶರೀರಕ್ಕೆ ಕೆಡಕಾಗುವುದಲ್ಲದೆ ಬುದ್ಧಿಯು ಮಲಿನವಾಗುವುದು ಧೂಮಪಾನವನ್ನು ತಪ್ಪಿಸಬೇಕಾದರೆ ಸಮಾಜದ ಮುಖಂಡರು ಧೂಮಪಾನ ಮಾಡುವುದನ್ನು ಬಿಡಬೇಕು ನಮ್ಮ ದೊಡ್ಡ ದೊಡ್ಡ ಅಧಿಕಾರಿಗಳು ಉದ್ದವಾದ ಚುಟ್ಟಾಗಳನ್ನು ಬಹಿರಂಗವಾಗಿ ಸೇದುತ್ತಿರುವರು. ಇದನ್ನ ತಪ್ಪಿಸಬೇಕು- ಒಳ್ಳೆಯ ಉದಾಹರಣೆಯಿಂದಲೇ ಧೂಮ ಪಾನವು ಕಡಿಮೆಯಾಗುವುದು.

ಜನರಲ್ ಡೈಯರವರು.

ಅಮೃತಸಾರದ ಜಲಿಯನ್‌ವಾಲಾಬಾಗ್ ಕೊಲೆಗೆ ಕಾರಣಕರ್ತರಾದ ಜನರಲ್ ಡೈಯರನ್ನು ಕುರಿತ ಒಂದು ಪುಸ್ತಕವು ಪ್ರಕಟವಾಗುತ್ತಿದೆ.

ಒಂದು ದೊಡ್ಡ ಬೆಂಕಿಯ ಅನಾಹುತ

ಈ ತಿಂಗಳು 14 ನೇ ತಾರೀಖಿನಲ್ಲಿ ಲಂಡನ್ನಿನ ಒಂದು ಕಾಗದದ ಕಾರ್ಖಾನೆಗೆ ಬೆಂಕಿ ಬಿತ್ತು. 4000 ಟನ್ ಕಾಗದ ಸುಟ್ಟು ಹೋಯಿತು. 9 ಮೈಲಿ ದೂರದಿಂದಲೂ ಕಾಣುತ್ತಿತ್ತು. 40000 ಜನಗಳು ನೋಡುತ್ತಿದ್ದರು.

ಒಂದು ವಿಚಿತ್ರವಾದ [illegible]

ಲಾಹೋರ ನ್ಯಾಷನಲ್ ಬ್ಯಾಂಕಿನವರು ಅದೇ ಊರಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ [illegible] ಪತ್ರಿಕೆಯ ಸಂಪಾದಕರಾದ [illegible] ಮೇಲೆ ಒಂದು ವಿಚಿತ್ರವಾದ ಮೊಕದ್ದಮೆಯನ್ನು ಹಾಕಿರುವರು. ಸದರಿ ಸಂಪಾದಕರ ಮೇಲೆ [illegible] ರಲ್ಲಿ ಈ ಬ್ಯಾಂಕಿನವರು ಒಂದು ಡಿಕ್ರಿಯನ್ನು ಪಡೆದರು [illegible] ಬ್ಯಾಂಕಿಗೆ ಕೆಟ್ಟ ಹೆಸರನ್ನು ತರುವುದಕ್ಕಾಗಿಯೇ ಈ ಸಂಪಾದಕರು ಪತ್ರಿಕೆಯನ್ನು ಹೊರಡಿಸಿದರೆಂದೂ ಆ ಪತ್ರಿಕೆಯಲ್ಲಿ ಬ್ಯಾಂಕಿಗೆ ವಿರೋಧವಾಗಿ ಲೇಖನಗಳು ಬರೆಯಲ್ಪಟ್ಟವೆಂದೂ ಅಲ್ಲದೆ ಪೋಸ್ಟರುಗಳು ಬೇರೆ ಹೊರಡಿಸಲ್ಪಟ್ಟವೆಂದೂ ಅನೇಕ ವೇಳೆ ಬ್ಯಾಂಕಿನ ಷೇರ್ ಹೋಲ್ಡರನ್ನು ಲಂಚಾ ಕೇಳಿದರೆಂದೂ ಇವೇ ಮೊದಲಾದ ಅಪಾದನೆಗಳು ಮಾಡಲ್ಪಟ್ಟಿರುವವು!

ಡಾ|| ಸೀಲ್‌ರವರು

ನಮ್ಮ ವಿಶ್ವವಿದ್ಯಾಲಯದ ವೈಸ್ ಛಾನ್ಸಿಲರಾದ ಡಾ|| ಬ್ರಜೇಂದ್ರನಾಥ ಸೀಲ್‌ರವರು ತಮ್ಮ ಕೆಲಸದ ಮೇಲೆ ಪುನಃ ವಾಪಸ್ ಬರುವರೆಂದು ಕೇಳಿ ನಾವು ಸಂತೋಷಪಡುತ್ತೇವೆ. ಕೆಲವು ಪತ್ರಿಕೆಗಳು ಡಾ|| ಸೀಲರವರಿಗೆ ವಿರೋಧವಾಗಿ ಬರೆಯುತ್ತಲಿವೆ. ಇದು ಅವರ ಮನಸ್ಸಿನ ಸಂಕೋಚವನ್ನು ತೋರಿಸುತ್ತಿದೆ. ಮಿ|| ಚಾಮಡಿಯವರ ವಿಷಯವಾಗಿ ನಾವು ಏನೇನೂ ಹೇಳುವುದಿಲ್ಲ. ತಮಗಿಂತಲೂ ಡಾ|| ಸೀಲರವರು ಹೆಚ್ಚು ಸಮರ್ಥರೆಂಬುದನ್ನು ಮಿ|| ಚಾಮಡಿಯವರೇ ಒಪ್ಪಿರುವರೆಂಬುದರಲ್ಲಿ ಸಂಶಯವಿಲ್ಲ.

Printed and published by P. R. Ramaiya,
at Sri Rama Press, D Subbiah Road, Mysore.

Regd. No. M 2322

ವಂದೇ ಮಾತರಂ!

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ: ಪಿ. ಆರ್. ರಾಮಯ್ಯ

[illegible] ॥ ಗೀತಾ ॥

ಸಂಪುಟ ೧] ಶನಿವಾರ ೨೩ ಮಾರ್ಚಿ ೧೯೨೯ [ಸಂಚಿಕೆ ೧[illegible]

ತಾಯಿನಾಡು.

23—3—1929

ಸೀತಾರಾಮಾಚಾರರ ದಸ್ತಗಿರಿ.

—

[illegible] ಸೀತಾರಾಮಾಚಾರ್, ಬಿ. ಎ. ಎಲ್. ಸಿ. ಯಿ ಯವರು 21-3-29 ನೇ ಗುರುವಾರ ಸಾಯಂಕಾಲ ದಸ್ತಗಿರಿ ಮಾಡಲ್ಪಟ್ಟ ವಿಷಯವು ಎಲ್ಲೆಲ್ಲೂ ಖೇದ [illegible] ಆಶ್ಚರ್ಯವನ್ನೂ ಉಂಟುಮಾಡಿದೆ. ಆ ಪ್ರಾ[illegible] ಪಿ. ಪೊ [illegible] ಸಿಟಿ ಪೋ. ಸ್ಟೇ [illegible] ಆಚಾರ್ಯರ ಮನೆ [illegible], ಅವರ ಆಫೀಸುಗಳ [illegible] ಆಚಾರರು [illegible] ಕೆಲವು ಕಾಗದಗಳನ್ನೆಲ್ಲಾ ದಸ್ತಗಿರಿ ಮಾಡಿದರು. ಪೋಲೀಸ ಆಫೀಸರುಗಳು [illegible] ಸಿದ್ಧಲಿಂಗಪುರದ ಹತ್ತಿರದಲ್ಲಿರುವ ಮಿಲ್ಲಿಗೂ [illegible] ಕರೆದುಕೊಂಡು ಹೋಗಿ, ಅಲ್ಲೂ ಕೆಲವು [illegible] ಪತ್ರಗಳನ್ನು ದಸ್ತಗಿರಿಮಾಡಿದರು. ಮನೆಗೆ [illegible] ದಸ್ತಗಿರಿ ಮಾಡಲ್ಪಟ್ಟರು. [illegible], ಮನೆಯಲ್ಲಿ [illegible] ಆಚಾರ್ಯರ [illegible] ಕೃಷ್ಣರಾ[illegible] ಸುಬ್ಬರಾಮರು [illegible] ಆಚಾರರನ್ನು [illegible] ಮೇಲೆ ಬಿಡಬೇಕೆಂದು [illegible] ಪೋಲೀಸಿನವ[illegible] ಮೇಲೆ ಬಿಡು[illegible] ಸಿಟಿ ಮ್ಯಾಜಿಸ್ಟ್ರೇಟರಿಗೆ F. I. R. [illegible] ತಿಳಿದುಬರುತ್ತದೆ. [illegible] ಈ ಸಂದರ್ಭದಲ್ಲಿ ಐ.ಜಿ.ಪಿ. ಯವರು ರಾಜಧಾನಿಗೆ ಬಂದಿದ್ದರು.

ಈ ಅರೆಸ್ಟಿಗೆ ಕಾರಣವೇನು ಎಂಬುದರ ವಿಷಯವಾ[illegible] ಸಂಗತಿಯು ಗೊತ್ತಿಲ್ಲ. ಗಂಧದ ಎಣ್ಣೆಯ ವ್ಯಾಪಾರ ಸಂಬಂಧವಾಗಿ ಖಿಲಲ್ ಆಗಿರುವ [illegible] ದಸ್ತಗಿರಿ [illegible] ಮೈಸೂರಿನ ಗಂಧ[illegible] ಮ|| [illegible] ದಸ್ತಗಿರಿ ಮಾಡಿರುವರೆಂದು ಊಹಿಸಲ್ಪಟ್ಟಿದೆ.

ಇದೇ ಸಂಬಂಧವಾಗಿ ಚೀಫ್ ಸೆಕ್ರೆಟರಿಯವರಾದ ಮ|| ಎಸ್ ಮಾಧವರಾಯರ ಇಂಗ್ಲೆಂಡಿಗೆ ಪ್ರಯಾಣ ಮಾಡಿರುವರೆಂಬುದು ಒಂದು ಸಮಾಚಾರ.

ಮ|| ಸೀತಾರಾಮಾಚಾರ್ಯರ ಹತ್ತಿರ ಕೆಲಸಮಾಡುತ್ತಿದ್ದವರ ಮನೆಯಲ್ಲೂ ಪೋಲೀಸಿನವರು ಕೆಲವು ಕಾಗದಗಳನ್ನು ದಸ್ತಗಿರಿ ಮಾಡಿದರು.

ಮ|| ಸೀತಾರಾಮಾಚಾರ್ಯರು ಬಹಳ ಸಮರ್ಥರು. ಬುದ್ಧಿವಂತರು ದೇಶಾಟನೆ ಮಾಡಿ ಬಹಳ ಅನುಭವ

ವಿವಿಧ ವರ್ತಮಾನ.

—

ಶಿವಾಜಿ ಜಯಂತಿ

ಇದೇ ತಿಂಗಳು ತಾ|| 28—3—1929 ಕ್ಕೆ ಸರಿಯಾದ ಫಾಲ್ಗುಣ ಬಹುಳ 3 ಗುರುವಾರ ಮೈಸೂರು ಮಂಡಿಪೇಟೆ ಮಹಾರಾಷ್ಟ್ರ ಶ್ರೀರಾಮ ಸೇವಾಸಂಘದವರು ಭಾರತಮಾತೆಯ ಪುತ್ರನೂ ಗೋಬ್ರಾಹ್ಮಣರಕ್ಷಕನೂ ಹಿಂದೂಧರ್ಮೋದ್ಧಾರಕನೂ ಶ್ರೀಭವಾನಿಯ ಭಕ್ತನೂ ಕ್ಷತ್ರಿಯ ಮರಾಠಾಕುಲತಿಲಕನು ಭಾರತವೀರ ಮಕುಟಮಣಿಯೂ ಆದ ಛತ್ರಪತಿ ಶಿವಾಜಿ ಮಹಾಜರವರ 300 ನೇ ವರ್ಷದ ಜನ್ಮ ಜಯಂತಿ ಸಮಾರಂಭವನ್ನು ಸಂಘದ ಶ್ರೀರಾಮ ಮಂದಿರದಲ್ಲಿ ನಡಿಸ್ಸುತ್ತಾರಾದ್ದರಿಂದ ಬಕ್ತಾದಿಗಳೆಲ್ಲರೂ ಬಂದು ಈ ಕಾರ್ಯದಲ್ಲಿ ಭಾಗಿಗಳಾಗಿ ಪ್ರಸಾದವನ್ನು ಸ್ವೀಕರಿಸಬೇಕೆಂದು ಸಂಘದವರ ಕೋರಿಕೆ.

ಡೆಲ್ಲಿಯ ಅಸೆಂಬ್ಲಿ ಯಲ್ಲಿ ಮುಷ್ಟಿಯುದ್ಧ

ಡೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಮ|| ಸಿ. ಎಸ್ ರಂಗಅಯ್ಯರವರಿಗೂ ಮ|| ಸತ್ಯೇಂದ್ರ ಮಿತ್ರರಿಗೂ ಮುಷ್ಟಿಯುದ್ಧವಾಯಿತು. ಮ|| ರಂಗಯ್ಯರವರು ಕಾಂಗ್ರೆಸ್ ಪಂಗಡದವರೊಡನೆ ಓಟು ಮಾಡಲಿಲ್ಲ ಏಕೆ ಓಟು ಮಾಡಲಿಲ್ಲವೆಂದು ರಂಗಅಯ್ಯರನ್ನು ಮಿತ್ರರು ಕೇಳಿದರು. ಅಯ್ಯರು ಸ್ವರಾಜ್ಯವಾದಿಗಳನ್ನು ಬೈದರು. ಮಿತ್ರರು ಅಯ್ಯರಿಗೆ ಎರಡು ಏಟು ಅಯ್ಯರು ಮಿತ್ರರಿಗೆ ಬದಲಾಗಿ ಕೊಟ್ಟರು. ಅಷ್ಟರಲ್ಲೇ ಇತರರು ಬಂದು ಇವರಿಬ್ಬರನ್ನು ಬಿಡಿಸಿದರು.

ಏಟಿಗೆ ಏಟು.

ಡೆಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಂಗಡದವರು ಮಾತನಾಡುತ್ತಿದ್ದಾಗ ಸರಕಾರದ ಕೆಲವು ಮೆಂಬರುಗಳು "ಸಾಕು! ಸಾಕು"ಎಂದು ಮೇಜಗಳನ್ನು ಹೊಡೆಯುತ್ತಿದ್ದರು. ಈ ವಿಷಯವು ಅಧ್ಯಕ್ಷರ ಗಮನಕ್ಕೆ ತಿಳಿಲ್ಪಟ್ಟಿತು. ಆದರಿಂದ ಫಲವಾದ ಹಾಗೆ ಕಾಣಲಿಲ್ಲ ಕಡೆಗೆ ಸರಕಾರೀ ಕಡೆಯವರು ಮಾತನಾಡಲು ಆರಂಭಿಸಿದಾಗ ಕಾಂಗ್ರೆಸ್ ಕಡೆಯವರೂ ಮೇಜುಗಳನ್ನು ಕುಟ್ಟಿದರು. ಏಟಿಗೆ ಏಟಾಯಿತು.

ಮೇಲುಕೋಟೆ ವೈರಮುಡಿ

ಕಳೆದ ಗುರುವಾರ ರಾತ್ರಿ ಮೇಲುಕೋಟೆ ಚಲುವರಾಯಸ್ವಾಮಿಯವರ ವೈರಮುಡಿ ಉತ್ಸವವು ಅತಿ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು.

ವನ್ನು ಹೊಂದಿರುವರು. ಇವರು ಸರಕಾರದಲ್ಲಿ 700 ರೂ. ಸಂಬಳ ಬರುತ್ತಿದ್ದುದನ್ನು ಬಿಟ್ಟು ಶ್ರೀ ಕೃಷ್ಣರಾಜೇಂದ್ರ ಮಿಲ್ಲು ಸ್ಥಾಪನೆಯಾದಾಗ ಅದಕ್ಕೆ ಸೇರಿದರು. ಮೈಸೂರಿನ ಗಂಧದ ಎಣ್ಣೆಯು ಲೋಕದಲ್ಲೆಲ್ಲಾ ವಿಖ್ಯಾತವಾಗುವಂತೆ ಪ್ರಚಾರಮಾಡಿದವರು ಇವರು.

ಇಂತಹವರಿಗೆ ದಸ್ತಗಿರಿಯಾಗುವ ದುಸ್ಥಿತಿಯು ಒಂದುದಕ್ಕಾಗಿ ಅನೇಕರು ಬಹಳ ವ್ಯಸನಪಡುತ್ತಾರೆ. ಅವರು ಅಪರಾಧಿಗಳೋ ನಿರಪರಾಧಿಗಳೋ ಎಂಬ ವಿಷಯವು ಕೋರ್ಟಿನಲ್ಲಿ ತೀರ್ಮಾನವಾಗಬೇಕು.

ಶತಮಾನೋತ್ಸವ.

ಶ್ರೀ ಪ್ರಸನ್ನ ಕೃಷ್ಣಸ್ವಾಮಿಯವರ ಶತಮಾನೋತ್ಸವವು ಈ ಮಾಹೆ 20 ನೇ ತಾ ಬುಧವಾರ ಅಲ್ಲಿನ [illegible]ಕರ ಮಾನೇರುಗಳಿಂದ ನಡೆಸಲ್ಪಟ್ಟಿತು.

ಆ ಶ್ವಿನ

ಟಿ. ನರಸೀಪುರದಲ್ಲಿ ಕಳೆದ ಬುಧವಾರದಿಂದ ನಡೆಯುತ್ತಿರುವ ಶ್ರೀ ಮ.ಹಾ ಶತಚಂಡೀಯಾಗಕ್ಕೆ ಅಸ್ಪೃಶ್ಯ ಮಹನೀಯರುಗಳೆಲ್ಲರೂ ದಯಮಾಡಿಸಬೇಕೆಂದು [illegible] ನಾರಾಯಣ ಶಾಸ್ತ್ರಿಗಳವರು ಈ ಮೂಲಕ ಅಪೇಕ್ಷಿಸಿರುತ್ತಾರೆ.

ದಸ್ತಗಿರಿ.

ಟಿ. ನರಸೀಪುರದಲ್ಲಿರುವ ಸರ್ಕಸ್ ಕಂಪೆನಿಯವರ ಮೇಲೆ ಕೆಲವುಮಂದಿ ವೈಸೂರಿನವರು [illegible]ವಾದಿ ದಾಂಧಲೆಮಾಡಿದರೆಂಬ ಕಾರಣಕ್ಕಾಗಿ ಹತ್ತೊಂಭತ್ತು ಜನರು ದಸ್ತಗಿರಿಯಾಗಿರುವರು.

ಔದಾರ್ಯ.

ಬೆಂಗಳೂರು ಮಹಿಳಾ ಸಮಾಜದಲ್ಲಿ ಈ ಮಾಹೆ 9 ನೇ ತಾ ಮಹಿಳೆಯರ ಸಭೆಸೇರಿತ್ತು. ಆಗ ರಾಜಧರ್ಮ ಪ್ರವೀಣ ದಿವಾನ್‌ಬಹದ್ದೂರ್ ವಿ|| ಕೆ. ಚಂದ್ರಶೇಖರಯ್ಯರ್‌ರವರು ತಮ್ಮ ಪತ್ನಿಯವರ ಹೆಸರಿನಲ್ಲಿ 25000 ರೂಗಳನ್ನು ಸವ ಜದ ಸ್ಕೂಲಿನ ಪುರೋಭಿವೃದ್ಧಿಗಾಗಿ ಬ್ಯಾಂಕಿನಲ್ಲಿಟ್ಟಿರುವುದಾಗಿ ತಿಳಿಸಿ ತಮ್ಮ ಔದಾರ್ಯವನ್ನ ವ್ಯಕ್ತಗೊಳಿಸಿದರು.

ಮೋಟಾರು ಬಸ್ಸುಗಳ ಢಿಕ್ಕಿ.

ಕಳೆದ ಭಾನುವಾರ ಪ್ರಾತಃಕಾಲ ಅರಮನೆಯಿಂದ ಅಪ್ಪೇರುಗಳನ್ನು ಕಂದುಕೊಂಡು ಹೋಗುತ್ತಿದ್ದ ಊಟಿ ಸರ್ವೀಸಿನ ಬಸ್ಸಿಗೂ ಅರಮನೆ ಸಾಮಾನ್ ಭರ್ತಿಯಾಗಿದ್ದ ಅರಮನೆ ಬಸ್ಸಿಗೂ ದೊಡ್ಡ ಸೇತುವೆಯ ಬಳಿ ಢಿಕ್ಕಿಹೊಡೆದು ಮೊದಲನೇದು ಒಂದುಕಡೆಗೆ ಮಗಚಿಕೊಂಡು. ಒಳಗಿದ್ದವರೆಲ್ಲರಿಗೂ ಸುಮಾರಾಗಿ ಜಖಮ್ ಆಯಿತು. ಒಬ್ಬಳುಮಾತ್ರ ರಾಜಧಾನಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳು. ಬಾಕಿಯವರೆಲ್ಲರೂ ನಂಜನಗೂಡು ಆಸ್ಪತ್ರೆಯಲ್ಲಿ ಔಷೋಧೋಪಚಾರಗಳನ್ನು ಪಡೆದು ನೀಲಗಿರಿಗೆ ಪ್ರಯಾಣಬೆಳಸಿದರು.

TAI NADU

23—3—1929

ಪತ್ರವ್ಯವಹಾರ

ದರ್ಬಾರ್ ಸರ್ಜನ್ರವರು

ಸ್ವಾಮಿ,—

ಈಗ ಕೆಲವು ದಿವಸಗಳ ಹಿಂದೆ ತಮ್ಮ ಪತ್ರಿಕೆಯಲ್ಲಿ ಸೀನಿಯರ್ ಸರ್ಜನ್ರಾದ ಡಾ॥ ಉಸ್ಮಾನರವರ್ ದರ್ಬಾರ್ ಸರ್ಜನ್ರಾಗುವರೆಂಬುದಾಗಿಯೂ ರಾಜಧಾನಿಯ ಮುನಿಸಿಪಲ್ ಪ್ರೆಸಿಡೆಂಟರಾಗಿಯೂ ನೇಮಿಸಲ್ಪಡುವರೆಂದೂ ತಿಳಿಸಿದ್ದಿರಿ. ಈ ವಿಷಯವು ಏನಾಯಿತೋ ತಿಳಿಯದು ಈ ವಿಷಯವನ್ನು ಸರಕಾರದವರಿಂದ ತಿಳಿದು ಪ್ರಕಟಣೆ ಮಾಡುವಿರೆಂದು ನಂಬುತ್ತೇನೆ ದರ್ಬಾರ್ ಸರ್ಜನ್ರ ವಿಷಯವು ನನಗೆ ಬೇಕಿಲ್ಲ. ಆದರೆ ಮುನಿಸಿಪಾಲಿಟಿ ಪ್ರೆಸಿಡೆಂಟರಾದ ಮ॥ ಟಿ. ಜಿ. ರಾಮಯ್ಯರವರು ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ ಅವರನ್ನ ಬದಲಾಯಿಸುವ. ಕಾರಣವೇನೂ ಇಲ್ಲ. ಒಂದು ವೇಳೆ ಯಾವುದಾದರೂ ಡಿಸ್ಟ್ರಿಕ್ಟಿಗೆ ಡೆಪ್ಯುಟೀ ಕಮೀಷನರಾಗಿ ನೇಮಿಸುವ ಪಕ್ಷದಲ್ಲಿ ರಾಜಧಾನಿಯ ಮುನಿಸಿಪಾಲಿಟಿಗೆ ಕೌನ್ಸಿಲರುಗಳೇ ತಮ್ಮೊಳಗೆ ಒಬ್ಬರನ್ನ ಅಧ್ಯಕ್ಷರನ್ನಾಗಿ ಚುನಾಯಿಸುವ ಅಧಿಕಾರವನ್ನು ಕೊಡಬೇಕು.

ಒಬ್ಬ ರೇಟ್‌ಪೇಯರ್

ಬ್ರಾಹ್ಮಣೇತರ ಚಳವಳಿ

ಸ್ವಾಮಿ,

ಬ್ರಾಹ್ಮಣೇತರ ಚಳವಳಿಯನ್ನು ಆರಂಭಿಸಿದ ಡಾ॥ ನಾಯರ್ ಸರ್. ಪಿ. ತ್ಯಾಗರಾಯಶೆಟ್ಟಿ ಮೊದಲಾದ ಮುಖಂಡರು, ಈ ಚಳವಳಿಯಿಂದ ಬ್ರಾಹ್ಮಣೇತರರನ್ನು ಎಲ್ಲಾ ಬಾಬಿನಲ್ಲಿಯೂ ಮುಂದಕ್ಕೆ ತರಬೇಕೆಂದು ಅಭಿಪ್ರಾಯಪಟ್ಟಿದ್ದರೇ ಹೊರತು, ಈ ಚಳವಳಿಯನ್ನು ಬ್ರಾಹ್ಮಣರಿಗೆ ವಿರೋಧವಾದ ಚಳವಳಿಯನ್ನಾಗಿ ಮಾಡಬೇಕೆಂದು ಎಣಿಸಿರಲಿಲ್ಲ. ಆದರೆ ಈ ಚಳವಳಿಯು ಮುಖ್ಯಭಾಗವು ಬ್ರಾಹ್ಮಣ ವಿರೋಧವಾಗಿ ಪರಿಣಮಿಸಿರುವುದು. ಕೆಲವು ಬ್ರಾಹ್ಮಣೇತರ ಮುಖಂಡರು ತಮ್ಮ ಕೆಲಸದಲ್ಲಿ ತಾವು ಮುಂದಕ್ಕೆಬರುವ ಆಶೆಯಿಂದ ಬ್ರಾಹ್ಮಣರು ಬ್ರಾಹ್ಮಣೇತರರ ವಿರೋಧಿಗಳು ಎಂಬ ಟೋಪಿಯನ್ನು ಹಾಕುತ್ತಿರುವರು. ವಾಸ್ತವ್ಯವಾಗಿ ಯಾವ ಬ್ರಾಹ್ಮಣನೂ ಬ್ರಾಹ್ಮಣೇತರರ ಅಭ್ಯುದಯಕ್ಕೆ ವಿರೋಧಿಯಲ್ಲ. ಮಿಲ್ಲರ ಕಮಿಟಿಯ ಆರ್ಡರಿಗಾಗಿ ಸ್ವಲ್ಪಮಟ್ಟಿಗೆ ವಿರೋಧವಾಗಿರಬಹುದು ಆದರೆ ಅದು ಬ್ರಾಹ್ಮಣೇತರರಿಗೆ ವಿರೋಧವಾಗಿ ಯಿಲ್ಲ. ಅನೇಕ ಬ್ರಾಹ್ಮಣೇತರರೂ ಮಿಲ್ಲರ ಕಮಿಟಿಯ ಆರ್ಡರಿಗೂ ಜಾತಿವಾರು ಪ್ರಾತಿನಿಧ್ಯಕ್ಕೂ ವಿರೋಧವಾಗಿದ್ದಾರೆ. ಇದು ತತ್ವದ ಮಾತು ದ್ವೇಷದ ಮಾತಲ್ಲ ಬ್ರಾಹ್ಮಣರು ಬ್ರಾಹ್ಮಣೇತರರಿಗೆ ವಿರೋಧಿಗಳು ಎಂದು ಹೇಳಿಕೊಂಡು ತಿರುಗುವುದು ಸರಿಯಲ್ಲ ಇನ್ನು ಮುಂದಾದರೂ ಬ್ರಾಹ್ಮಣರೂ ಬ್ರಾಹ್ಮಣೇತರರೂ ಇಬ್ಬರೂ ಕಲೆತು ಅನ್ಯೋನ್ಯತೆಯಿಂದ ದೇಶಕಾರ್ಯವನ್ನು ಮಾಡಬೇಕು.

ಒಬ್ಬ ಬ್ರಾಹ್ಮಣೇತರ

ಮೈಸೂರು ಲಾಯರುಗಳ ಸಮ್ಮೇಳನ.

ಮೈಸೂರು ಲಾಯರುಗಳ ಸಮ್ಮೇಳನವು ಮುಂದಿನ ತಿಂಗಳು 7—8ನೇ ತಾರೀಖುಗಳಲ್ಲಿ ಕೋಲಾರದಲ್ಲಿ ನಡೆಯುವುದು ರಾಜಧಾನಿಯ ಪ್ರಸಿದ್ಧ ಅಡ್ವೋಕೇಟರಾದ ಮ॥ ಸಿ. ನರಸಿಂಹಯ್ಯನವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರ. ಈ ಸಮ್ಮೇಳನವು ಹೋದ ಸಾರಿ 1927 ನೇ ಜನವರಿಯಲ್ಲಿ ಹಾಸನದಲ್ಲಿ ಬಹಳ ವೈಭವದಿಂದ ನಡೆಯಿತು. 1928 ನೇ ಇಸವಿಯಲ್ಲಿ ನಡೆಯದೇ ಇದ್ದದ್ದು ಅನೇಕರಿಗೆ ಮನಸ್ಸಿಗೆ ಬಹಳ ವ್ಯಾಕುಲವಾಯಿತು ಈಗ ಪುನಃ 1929 ರಲ್ಲಿ ನಡೆಯುವುದು ಸಂತೋಷಪ್ರದ. ಪ್ರಪಂಚದ ಯಾವ ಭಾಗದಲ್ಲಿ ನೋಡಿದರೂ ಲಾಯರುಗಳು ದೇಶದ ಸಾರ್ವಜನಿಕ ಜೀವನದಲ್ಲಿ ಅಗ್ರಗಣ್ಯರಾಗಿರುವರು. ಬ್ರಿಟಿಷ್ ಇಂಡಿಯಾದಲ್ಲಿ ಮುಖಂಡರಾದ ಪಂಡಿತ ನೆಹರೂರವರ. ಗಾಂಧಿಯವರು ಮಾಳವೀಯವರು ಶ್ರೀನಿವಾಸಯ್ಯಂಗಾರ್ಯರವರು ಇವರೇ ಮೊದಲಾದವರೆಲ್ಲಾ ಲಾಯರುಗಳು ನಮ್ಮ ಸಂಸ್ಥಾನದಲ್ಲಿಯೂ ಕೆಲವು ಲಾಯರುಗಳು ಸಾರ್ವಜನಿಕ ಜೀವನದಲ್ಲಿ ಭಾಗವನ್ನು ತೆಗೆದುಕೊಂಡಿರುವರು ಆದರೆ ಇಷ್ಟೇ ಸಾಲದು ಇನ್ನೂ ಹೆಚ್ಚು ಮಂದಿ ಸಾರ್ವಜನಿಕ ಜೀವನದಲ್ಲಿ ಭಾಗವನ್ನು ತೆಗೆದುಕೊಂಡು ಪ್ರಜಾಹಿತವನ್ನು ಮಾಡಬೇಕೆಂದು ಕೋರುತ್ತೇವೆ.

ಬ್ರಾಹ್ಮಣ ಅಧಿಕಾರಿಗಳು.

ಸ್ವಾಮಿ —

ಬ್ರಾಹ್ಮಣ ಪಿತೂರಿ ಬ್ರಾಹ್ಮಣ ರಾಜದ್ರೋಹ ಮೊದಲಾದ ಆಪಾದನೆಗಳು ಬ್ರಾಹ್ಮಣರ ಮೇಲೆ ಮಾಡಲ್ಪಟ್ಟು ಬ್ರಾಹ್ಮಣ ಪತ್ರಿಕೆಗಳಲ್ಲಾ ಕಿರುಕುಳಗಳು ಕೊಡಲ್ಪಟ್ಟು ಅವುಗಳನ್ನು ನಿಲ್ಲಿಸುತ್ತಿದ್ದಾಗ್ಯೂ ಇವೆಲ್ಲಾ ಅನ್ಯಾಯ ವೆಂದು ತಿಳಿದಿದ್ದರೂ ಬ್ರಾಹ್ಮಣ ಅಧಿಕಾರಿಗಳು ಸಂಬಳದ ಆಶೆಗಾಗಿ ತಮ್ಮ ನ್ಯಾಯಬುದ್ಧಿಯನ್ನೂ ಸ್ವಾತಂತ್ರ್ಯಬುದ್ಧಿಯನ್ನೂ ತೋರಿಸದೇ ಇರುವುದು ಬಹಳ ವ್ಯಸನಕರವಾದುದು. ಬ್ರಾಹ್ಮಣ ಅಧಿಕಾರಿಗಳು ಅನ್ಯಾಯವನ್ನು ಸಹಿಸುವುದಿಲ್ಲವೆಂಬುದಾಗಿ ಧೈರ್ಯಮಾಡಿದ ಹೊರತು ಪ್ರಜಾಕ್ಷೇಮವಾಗುವ ಹಾಗಿಲ್ಲ ಬ್ರಾಹ್ಮಣೇತರ ಅಧಿಕಾರಿಗಳು ಬಹಳ ಮುಂದುವರೆದು ನುಗ್ಗುತ್ತಿದ್ದಾರೆ. ಬ್ರಾಹ್ಮಣ ಅಧಿಕಾರಿಗಳು ಸುಮ್ಮನಿದ್ದರೆ. ಬ್ರಾಹ್ಮಣ ಅಧಿಕಾರಿಗಳು ಅನ್ಯಾಯವನ್ನು ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಅನ್ಯಾಯವು ನಡೆದಾಗ ಪ್ರಭುಗಳಿಗೆ ರಾಜಭಕ್ತಿಯಿಂದ ತಿಳಿಸುವುದು ಇವರ ಕರ್ತವ್ಯವು ಈಗ ನಮ್ಮ ಸಂಸ್ಥಾನದಲ್ಲಿ ಎಲ್ಲೆಲ್ಲಿ ನೋಡಿದರೂ ಬ್ರಾಹ್ಮಣ ನಿಂದೆಯೂ ಬ್ರಾಹ್ಮಣ ದಬ್ಬಾಳಿಕೆಯೂ ನಡೆಯುತ್ತಲಿದೆ ಇದು ಬ್ರಾಹ್ಮಣ ಅಧಿಕಾರಿಗಳಿಗೆ ಗೊತ್ತಿಲ್ಲದೆ ಇಲ್ಲ. ಇವರುಗಳೇ ಅನೇಕಾವರ್ತಿ ಬ್ರಾಹ್ಮಣರ ಮೇಲೆ ಅನ್ಯಾಯವಾಗಿ ದಬ್ಬಾಳಿಕೆಯನ್ನು ನಡೆಯಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ದಬ್ಬಾಳಿಕೆಯನ್ನು ನಡೆಯಿಸದೆ ಪ್ರಭುಗಳವರಿಗೆ ತಮ್ಮ ಅಧಿಕಾರವನ್ನು ವಾಪಸು ಕೊಟ್ಟು ನಿರ್ಮತರಾಗಬೇಕು: ಹಾಗೆ ನಿಂತಹೋತೂ ಬ್ರಾಹ್ಮಣ ಅಧಿಕಾರಿಗಳಿಗೆ ಇಹವೂ ಇಲ್ಲ ಪರವೂ ಇಲ್ಲ.

ಒಬ್ಬ ಬ್ರಾಹ್ಮಣ

ಚೈನಾ ಕ್ಷಾಮ.

ಚೈನಾದ ಕೆಲವು ಪ್ರಾಂತ್ಯಗಳಲ್ಲಿ ಒಟ್ಟು ಮಿಲಿಯನ್ ಜನರು ಕ್ಷಾಮ ಪೀಡಿತರಾಗಿರುವರು.

ವರ್ತಮಾನ ಸಂಗ್ರಹ.

ಯಜ್ಞೇಶ್ವರನ ಪ್ರಕಾಶ.

ಇಂಗ್ಲೆಂಡಿನ ಒಂದು ಕಾಗದ ಕಾರ್ಖಾನೆಗೆ ಬೆಂಕಿ [illegible] ಗಳಿ ನಾಲ್ಕುಸಾವಿರ ಟನ್ ಕಾಗದವು ಭಸ್ಮ [illegible] ಬಂಧಕತು ಮೈಲಿದೂರದವರೆಗೆ ಜ್ವಲಿಸುತ್ತಿದ್ದ ಈ ದೃಶ್ಯವನ್ನು ನೋಡಲು ಸಲವತ್ತು ಸಾವಿರ ಜನರು ಸೇರಿದ್ದರು.

ಭಾರಿ ದಾನ.

ಶ್ರೀಯುತ ಜಿ. ಸಿ. [illegible] ಕಲ್ಕತ್ತೆಯ [illegible] ಉಪಾಯಗಳನ್ನು ದಾನವಾಡಿರ ವರು.

ನೈಜಾಮರವರು.

ಹೈದರಾಬಾದ್ ನೈಜಾಮರವರು ಈ ವರ್ಷದ 30ನೇ ತಾ ಬೆಂಗಳೂರಿಗೆ ಬಂದು ನಾಲ್ಕು ದಿವಸಗಳಿದ್ದು ಅನಂತರ ಏಪ್ರಿಲ್ 3 ನೇ ತಾ ರಾಜಧಾನಿಗೆ [illegible] ರರು.

ಶ್ರೀ ಕೃಷ್ಣ ಸೂಕ್ತಾಸಾರ.

ರಾಜಧಾನಿಯ [illegible] ಶ್ರೀ ಕೃಷ್ಣ [illegible] [illegible] ಸಂಸ್ಕೃತದ [illegible] ಶ್ರೀ ಕೃಷ್ಣ [illegible] ಅದರ ಉತ್ತಮ [illegible] ಈ ಪುಸ್ತಕಕ್ಕೆ [illegible] ಬೇಕೆಂದು ಪ್ರಾರ್ಥಿಸುತ್ತೇವೆ.

ಅಪರ್ಣಾವೇದ ಗ್ರಂಥ.

ರಾಜಧಾನಿಯ [illegible] ಉಪಾಸಕ [illegible] ಚಾರ್ಯರವರು [illegible] ಜ್ಯೋತಿಷ್ಯ ಮೊದಲಾದುವುಗಳ ವಿಚಾರಗಳನ್ನು [illegible] ಕೊಟ್ಟಿರುವ ಅಪರ್ಣಾವೇದವೆಂಬ ಗ್ರಂಥವು [illegible] ದ [illegible] ಕರಗತವಾಗಿದೆ.

Printed and published by P. R. Ramiaya
Sri Rama Press, D Subbiah Road, Mysore

Regd. No. M. 2322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ಪುಸ್ತಕ ೧] ಸೋಮವಾರ ೨೫ ಮಾರ್ಚಿ ೧೯೨೯ [ಸಂಚಿಕೆ

ಸೂಚನೆ

ಕೆಲವು ಅನಿವಾರ್ಯ ಕಾರಣಗಳ ನಿಮಿತ್ತದಿಂದ ತಾಯಿನಾಡು ವಿಶೇಷ ಪತ್ರಿಕೆಯು ಈ ವಾರದಲ್ಲಿ ಗುರುವಾರ ವಿತ್ತು ಶನಿವಾರ ಪ್ರಕಟವಾಗುತ್ತದೆ. ವ್ಯ. ಮ್ಯಾನೇಜರ್

ತಾಯಿನಾಡು.

25—3—1929

ಕರ್ನಾಟಕ ಏಕೀಕರಣ

—

ಮೈ. ಶ್ರೀ ರಾಘವೇಂದ್ರರಾಯರು ಕರ್ನಾಟಕ ಏಕೀಕರಣದ ಪ್ರತ್ಯಕ್ಷ ಮೂರ್ತಿಗಳಾಗಿದ್ದರು. ಕರ್ನಾಟಕವು ತುಂಡುತುಂಡಾಗಿರುವುದೇ ಇದರ ಅವನತಿಗೆ ಮೂಲಕಾರಣವೆಂಬ ಮಾತು ಅವರಿಗೆ ಮನದಟ್ಟಾಗಿರುವುದರಿಂದ ತಡಮಾಡದೆ ಕೂಡಲೇ ಆ ವಿಷಯವಾಗಿ ಪ್ರತ್ಯಕ್ಷ ಕಾರ್ಯವನ್ನು ಆರಂಭಿಸಿದರು. ೧೯೧೭ನೇ ಇಸ್ವಿಯಲ್ಲಿ ಕರ್ನಾಟಕ ಸಭೆಯ ಕಾರ್ಯದರ್ಶಿಗಳಾಗಿ ಅವರು ವಿಘಟನಾತ್ಮಕ ಮತ್ತು ಸಂಘಟನಾತ್ಮಕ ಹೀಗೆ ಎರಡು ಬಗೆಯ ಉಪಾಯಗಳನ್ನು ಕೈಕೊಂಡರು. ಕರ್ನಾಟಕದಲ್ಲೆಲ್ಲ ತಿರುಗಾಡಿ ಲೋಕಮತವನ್ನು ಜಾಗ್ರತಗೊಳಿಸಿದರು. ಮಿ|| ಮಾಂಟೆಗ್ಯೂ ಸಾಹೇಬರು ಈ ದೇಶಕ್ಕೆ ಬಂದಾಗ ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಮಾಡಬೇಕೆಂಬ ವಿಚಾರವನ್ನು ಅವರ ಮುಂದಿಟ್ಟರು. ರಾಷ್ಟ್ರೀಯ ಸಭೆಯಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ್ಯವನ್ನು ದೊರಕಿಸಿಕೊಡುವುದರ ಮುಖ್ಯ ಶ್ರೇಯಸ್ಸು ಮೈ. ರಾಘವೇಂದ್ರರಾಯರಿಗೆ ಸಲ್ಲತಕ್ಕದ್ದು. ಬೆಳಗಾಂವಿಯ ರಾಷ್ಟ್ರೀಯ ಸಭೆಯ ಕಾಲದಲ್ಲಿ ಕರ್ನಾಟಕ ಏಕೀಕರಣವನ್ನು ಸಾಧಿಸುವುದಕ್ಕೆಂದು ಕರ್ನಾಟಕ ಏಕೀಕರಣ ಸಭೆ ಎಂಬ ಸಂಸ್ಥೆಯನ್ನು ಸ್ಥಾಪಿಸಿದವರೂ ಅವರೇ. ಹೀಗೆ ಅವರು ಹಲವಾರು ಪತ್ರೋಪಾಯಗಳಲ್ಲಿ ತಮ್ಮ ಕರ್ತೃತ್ವಶಕ್ತಿಯಿಂದ ಕರ್ನಾಟಕ ಏಕೀಕರಣದ ವಿಚಾರಕ್ಕೆ ಮೂರ್ತಸ್ವರೂಪ ಕೊಟ್ಟರು. ಇದಲ್ಲದೆ ಅನೇಕ ರೀತಿ ವಿಧಗಳಲ್ಲಿ ವಿತ್ತಿಯ [illegible] ನಿಜವಾದ ಕರ್ನಾಟಕಭಕ್ತನು ನಿಜವಾದ ರಾಷ್ಟ್ರಭಕ್ತನಿರುತ್ತಾನೆಂಬುದನ್ನು ಅವರು ಸ್ವಂತ ಆಚರಣೆಯಿಂದ ಸಿದ್ಧಮಾಡಿ ತೋರಿಸಿದರು.

ಕರ್ನಾಟಕ ಪತ್ರ ಭಕ್ತಭೂಷಣರವರ ಬಗ್ಗೆ ಜನಪ್ರಿಯ ಅಭಿಮಾನ ತ್ಯಾಗಬುದ್ಧಿ ಕಾರ್ಯನಿಷ್ಠೆ ಮುಂತಾದ ಅಲೌಕಿಕ ಗುಣಗಳು ಅವರಲ್ಲಿದ್ದವು. ಅವರಗಳ ಸಹವಾಸದಿಂದ ಕನ್ನಡಿಗರಲ್ಲಿ ಅದೇ ಸದ್ಗುಣಗಳ ಪ್ರೇರಣೆಯಾಗಲೆಂದು ಪರಮಾತ್ಮನಿಗೆ ನಮ್ಮ ಪ್ರಾರ್ಥನೆ.

ಭಾಷಾನುಗುಣ ಪ್ರಾಂತರಚನೆ—ಹಿಂದೂಸ್ಥಾನವು ೩೦ ಕೋಟಿ ಜನಸಂಖ್ಯೆ ೧೮೦೦ ಮೈಲು ಉದ್ದ ೧೫೦೦ ಮೈಲು ಅಗಲ ಇರುವ ಒಂದು ವಿಶಾಲ ರಾಷ್ಟ್ರವು. ಆದುದರಿಂದ ಆಡಳಿತಕ್ಕಾಗಿ ಇದನ್ನು ಯಾವಾಗಲೂ ಬೇರೆ ಬೇರೆ ಪ್ರಾಂತಗಳನ್ನಾಗಿ ವಿಭಾಗಿಸುವುದು ಅವಶ್ಯ. ಈಗಲಾದರೂ ಹಿಂದೂಸ್ಥಾನವು ಮುಂಬಯಿ ಮದ್ರಾಸು ಬಂಗಾಳ ಸಂಯುಕ್ತ ಪ್ರಾಂತ ಅಸ್ಸಾಂ ಮಧ್ಯಪ್ರಾಂತ ಮುಂತಾದ ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿದೆ. ಬ್ರಿಟಿಷ ಸರಕಾರದವರೇ ಈ ಭಾಗಗಳನ್ನು ಮಾಡಿದವರು. ಈ ಭಾಗಗಳನ್ನು ಮಾಡುವಾಗ ಯಾವುದೊಂದು ವಿಶಿಷ್ಟ ತತ್ವವನ್ನು ಅನುಸರಿಸಲಿಲ್ಲ. ಹಿಂದುಸ್ಥಾನದ ಬೇರೆಬೇರೆ ಭಾಗಗಳನ್ನು ಅವರು ಗೆಲ್ಲುತ್ತ ಹೋದಂತೆ ಅವುಗಳನ್ನು ಬೇರೆ ಬೇರೆ ಪ್ರಾಂತ್ಯಗಳ ನ್ನಾಗಿ ಮಾಡುತ್ತಾ ಬಂದಿದ್ದಾರೆ. ಸದ್ಯದ ಪ್ರಾಂತ್ಯರಚನೆಯು ಅವ್ಯವಸ್ಥಿತವೂ ಅಸಂಬದ್ಧವೂ ಇರುವುದೆಂದು ಬಹುಶಃ ಎಲ್ಲರೂ ಒಪ್ಪುವರು. ಸರಕಾರದವರೂ ಸಹ ಒಪ್ಪುವರು. ಪ್ರಾಂತ್ಯರಚನೆಯು (೧) ಸ್ವಾಭಾವಿಕವಾಗಿರಬೇಕು. (೨) ಆಯಾ ಪ್ರಾಂತದ ಕಾರ್ಯಭಾರವನ್ನು ಅಲ್ಲಿಯ ಜನರೇ ಬೇರೆ ಜನರ ಮಧ್ಯಸ್ಥಿಕೆಯಿಲ್ಲದೆ ನಡೆಸಲಿಕ್ಕೆ ಅನುಕೂಲವಾದಂತಿರಬೇಕು. (೩) ಆಯಾ ಪ್ರಾಂತ್ಯದ ಜನರಲ್ಲಿ ಪ್ರೀತಿಯು ಹೆಚ್ಚಿ ಅವರ ಪ್ರಗತಿಯಾಗುವಂತಿರಬೇಕು. (೪) ಒಂದೇ ಬಗೆಯ ಶಿಕ್ಷಣ ಒಂದೇ ಬಗೆಯಾದ ಸಂಘಟನೆ ಒಂದೇ ಬಗೆಯ ಶಿಸ್ತು ಒಂದೇ ಬಗೆಯ ವಿಚಾರ ಇವು ಪ್ರಸರಿಸಲಿಕ್ಕೆ ಅನುಕೂಲವಿರಬೇಕು. ಇವೆಲ್ಲ ಸಾಧಿಸಬೇಕಾದರೆ ಭಾಷಾನುಗುಣ ಪ್ರಾಂತರಚನೆ ಎಂಬುದೊಂದೇ ಉಪಾಯವು.

ಈ ಬಗೆಯ ರಚನೆಯಿಂದ ಪ್ರಾಂತ್ಯಗಳಿಗೆ ಲಾಭವಾದರೂ ಪ್ರಾಂತೀಯ ಭಾವವು ಬೆಳೆದು ಅದು ರಾಷ್ಟ್ರ ವಿಘಾತವಾಗುವುದೆಂದು ಕೆಲವರ ಆಕ್ಷೇಪ. ಆದರೆ ಈ ದೋಷವು ಹುಟ್ಟದಂತೆ ಏಕರಾಷ್ಟ್ರೀಯತ್ವದ ಭಾವನೆಯನ್ನು ಹರಡುವುದು. ಪ್ರಾಂತಗಳಿಗೆ ಸಾಮಾನ್ಯವಾದ ವಿಷಯಗಳಲ್ಲಿ ಅಂತರ್ಪ್ರಾಂತಿಯ ಐಕ್ಯವನ್ನು ಹೆಚ್ಚಿಸುವುದು ಇಡೀ ಹಿಂದೂಸ್ಥಾನದ ಹಿತಾಹಿತ ರಕ್ಷಣೆಗಾಗಿ ಒಂದು ಬಲವಾದ ಮಧ್ಯವರ್ತಿ ಶಾಸನ ಸಭೆಯನ್ನು ಏರ್ಪಡಿಸುವುದು ಈ ಮುಂತಾದ ಉಪಾಯಗಳನ್ನು ಯೋಜಿಸುವುದು ಶಕ್ಯವೂ ಮತ್ತು ಆವಶ್ಯಕವೂ.

ಭಾಷಾನುಗುಣ ಪ್ರಾಂತರಚನೆ ಮಾಡಿದರೆ ಪ್ರತಿ ಪ್ರಾಂತದಲ್ಲಿರುವ ಅನ್ಯಭಾಷೆ ಅಥವಾ ಉಪಭಾಷೆ ಮಾತಾಡುವ ಅಲ್ಪಸಂಖ್ಯಾಕರ ಗತಿಯೇನು ಎಂಬುದೊಂದು ಪ್ರಶ್ನೆ. ಹೊಸ ಪ್ರಾಂತರಚನೆಯಾದ ಕೂಡಲೆ ಅವರು ತಮ್ಮ ತಮ್ಮ ಭಾಷೆಯನ್ನು ಮರೆಯಬೇಕೆಂದಿಲ್ಲ. ಅಲ್ಪಸಂಖ್ಯಾಕರ ರಕ್ಷಣೆ ಮಾಡುವುದು ಬಹು ಸಂಖ್ಯಾಕರ ಜವಾಬದಾರಿ ಇರಬೇಕು. ತಮ್ಮ ಭಾಷೆಯನ್ನು ಕಲಿಯುವುದಕ್ಕೆ ಅವರಿಗೆ ಅವಕಾಶವು ದೊರೆಯಬೇಕು. ದೊರೆಯುವಂತೆ ಕೊಡಲ್ಪಡಬೇಕು. ಆದರೆ ಪ್ರಾಂತದ ಸಾಮಾನ್ಯ [illegible] ಕಾರಭಾರವೂ ಸ್ವಾಭಾವಿಕವಾಗಿಯೇ [illegible] ಭಾಷೆಯಲ್ಲಿ ನಡೆಯುವದರಿಂದ ಅದನ್ನು ಅವರು ಕಲಿತು ಪ್ರಾಂತೀಯ ಜೀವನದಲ್ಲಿ ಭಾಗಿಗಳಾಗುವದು ಆವಶ್ಯವು.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್;

ಮೈಸೂರು.

—

ನೋಟೀಸು

1929 ನೇ ಡಿಸೆಂಬರ್ 31 ನೇ ತಾ|| ಗೆ ಮುಗಿಯುವ ವರ್ಷಕ್ಕೆ ಮೈಸೂರು ರೈಲ್ವೇ ಸ್ಟೇಷನ್ನಿಂದ ಮೇಲ್ಕಂಡ ಮಿಲ್ಲಿಗೂ ಮಿಲ್ಲಿನಿಂದ ಸ್ಟೇಷನ್ನಿಗೂ ಸಾಮಾನುಗಳನ್ನು ಸಾಗಿಸಲು ಬೇಕಾಗುವ ಬಂಡಿಗಳನ್ನು ಸಪ್ಲೈ ಮಾಡುವವರಿಂದ ಸೀಲಾದ ಟೆಂಡರುಗಳು ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜಿಂಗ್ ಏಜೆಂಟರವರಿಂದ ಇದೇ ಮಾರ್ಚಿ 28 ನೇ ಗುರುವಾರ ಮಧ್ಯಾಹ್ನ ಹನ್ನೆರಡು ಗಂಟೆ ವರೆಗೆ ತೆಗೆದುಕೊಳ್ಳಲ್ಪಡುವುವೆಂದು ಈ ಮೂಲಕ ತಿಳಿಯಪಡಿಸಿರುತ್ತೆ.

ಬಾಕಿ ವಿಷಯಗಳನ್ನು ಖುದ್ದಾಗಿ ತಿಳಿಯಬಹುದು

ಎಂ. ಎಲ್. ವರ್ಧಮಾನಯ್ಯ ಮತ್ತು ಕಂಪೆನಿ

ಮ್ಯಾನೇಜಿಂಗ್ ಏಜೆಂಟರುಗಳು.

ನಿಲ್ಲಿಸಲ್ಪಟ್ಟ ನಿರಪರಾಧ ಪತ್ರಿಕೆಗಳು.

—

ಮೈಸೂರು ವರ್ತಮಾನಪತ್ರಿಕೆಗಳ ಎರಡನೇ ಸೆಕ್ಷನ್ನಿನ ಪ್ರಕಾರ 32 ಪತ್ರಿಕೆಗಳನ್ನು ಮುದ್ರಿಸಿ ಪ್ರಕಟಿಸಲು ಕೊಟ್ಟಿದ್ದ ಅಪ್ಪಣೆಯನ್ನು ಮೈಸೂರು ಸರ್ಕಾರವು ಅಪ್ಪಣೆ ಕಾನೂನಿನ ಮೂರನೆ ಸೆಕ್ಷನ್ ಪ್ರಕಾರ ಯಾವ ಕಾರಣವೂ ಇಲ್ಲದೆ ವಾಪಸು ತೆಗೆದುಕೊಂಡಿರುತ್ತಾರೆ. ಹೀಗೆ ಆ ಪತ್ರಿಕೆಗಳಲ್ಲಿ ಕೆಲವು ಇನ್ನೂ ಹೊರಡಿಸಲ್ಪಡದೆ ಇರುವುದು ಕೆಲವು ಮಧ್ಯೆ ನಿಂತುಹೋಗಿರುವುದು ಕಾರಣವೆಂದು ತಿಳಿಸಿರುತ್ತಾರೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ಈ ವಿಷಯವನ್ನು ಅಪ್ಪಣೆಪಡೆದಿದ್ದ ಪತ್ರಿಕೆಯವರಿಗೆ ತಿಳಿಸಬೇಕೆಂದು ಹುಕುಂ ಮಾಡಿರುತ್ತಾರೆ. ಆ ಪತ್ರಿಕೆಗಳು ಯಾವುವೆಂದರೆ:—

ವಿಕಟ ಪ್ರತಾಪ ಬೆಂಗಳೂರು. ಕನ್ನಡ, ಮೈಸೂರು ವೃತ್ತಾಂತ ಪತ್ರಿಕೆ; ಭಕ್ತಿವಿಜಯ; ಮೈಸೂರು; ಆರ್ಯಭಾಲ ಸಮಾಜ ಮ್ಯಾಗ್ಸಿನ್; ಮೈಸೂರು. ಜನಹಿತೈಷಿ; ಮೈಸೂರು ಇಂಡಿಯನ್ ಸ್ಟೋರೀ ಟೆಲರ್ ಕನ್ನಡ; ನಂದಿನಿ, ನಂಜನಗೂಡು; ಮಹಾರಾಜ ಕಾಲೇಜು [illegible] ರನ್ ಮತ್ತು ಕಾಲೇಜ್ ಮ್ಯಾಗಜಿನ್ ಮೈಸೂರು; ಪ್ರೋಗ್ರೆಸ್ ಅಂಡ್ ಬುಕ್ ವರ್ಲ್ಡ್, ಮೈಸೂರು, [illegible] ವಾರ್ತೆ. ಮೈಸೂರು ಲೋಕಪ್ರಕಾಶ, ಮೈಸೂರು; ಮೈಸೂರು ರಿವ್ಯೂ ಮೈಸೂರು, [illegible] ಮೈಸೂರು, ಪರಿವಾರ ಪತ್ರಿಕೆ ಮೈಸೂರು. [illegible] ಮೈಸೂರು ಮೈಸೂರಿಯನ್ ಮೈಸೂರು. ಭಾರತಪ್ರಭಾ ಬೆಂಗಳೂರು, ಹೊಸಹಾದಿ ಬೆಂಗಳೂರು. ಸ್ಟಾರ್ ಸಮಾಚಾರ; ನಿಸಿ ಪ್ರಲಾಪ ಬೆಂಗಳೂರು; ಸುದೇಶ ಬೆಂಗಳೂರು; ಸನಿಸುದಿ ಬೆಂಗಳೂರು. ದೀನವಾಣಿ ಬೆಂಗಳೂರು; [illegible] ದಚಂದ್ರಿಕೆ ಬೆಂಗಳೂರು, ಭವರೋಗವೈದ್ಯ ಬೆಂಗಳೂರು; ಬ್ರಹ್ಮ ವಿದ್ಯಾ ಬೆಂಗಳೂರು. ಶ್ರೀಮತಿ ನಂಜನಗೂಡು; ಅಲ್-ಯತೀಂ ಕುಣಿಗಲ. ಹಿದಾಯತ್ ಚೆನ್ನಪಟ್ಟಣ; [illegible] ರತ ಸಂದೇಶ ತುಮಕೂರು. ಈ ಪತ್ರಿಕೆಗಳು [illegible] ಗುತಿದ್ದು ನಿಂತುಹೋದವು ಅಥವಾ ಇದೇ ಇನ್ನೂ [illegible]

ನೈಜಾಮರವರ ಸಂಚಾರ ಕ್ರಮ.

ಹೈದರಾಬಾದಿನ ನೈಜಾಮರವರು 1929 ನೇ ಮಾರ್ಚಿ 30 ನೇ ತಾ|| ಶನಿವಾರ ಬೆಳಿಗ್ಗೆ 6 ಘಂಟೆಗೆ ಬೆಂಗಳೂರನ್ನು ತಲುಪಿ ಏಪ್ರೈಲ್ 2 ನೇ ತಾ|| ಮಂಗಳವಾರದವರೆಗೂ ಅಲ್ಲೇ ಇರುವರು. ಮೂರನೆ ತಾ|| ಬುಧವಾರ ರಾತ್ರಿ 10—35 ಕ್ಕೆ ಹೊರಟು 4 ನೇ ತಾ|| ಗುರುವಾರ ಬೆಳಿಗ್ಗೆ 7—30 ಕ್ಕೆ ರಾಜಧಾನಿಗೆ ದಯಮಾಡುವರು. ಮೈಸೂರಿಂದ ಏಪ್ರೈಲ್ 5 ನೇ ತಾ|| [illegible] ರ ರಾತ್ರಿ 10—30 ಕ್ಕೆ ಹೊರಟು 6 ನೇ ತಾ|| 6—35 ಕ್ಕೆ ಬೆಂಗಳೂರನ್ನು ತಲುಪಿ 7ನೇ ತಾ|| [illegible] ವಾರ ಬೆಳಿಗ್ಗೆ 10 ಘಂಟೆಗೆ ಹೈದರಾಬಾದಿಗೆ [illegible] ಹೊರಡುವರು

ಹೆಂಡದ ತೆಂಗೆ.

1929ನೇ ಜುಲೈ ೧ನೇ ತಾ|| ಬೆಂಗಳೂರು ತಾಲ್ಲೋಕಿನಲ್ಲಿ ಗ್ಯಾಲನ್ ಒಂದಕ್ಕೆ [illegible] ಯಂತೆ ಹೆಂಡದ ಮೇಲೆ ತೆಂಗೆಯನ್ನು ಹಾಕಿ [illegible] ಒಂದಕ್ಕೆ 0-4-0 ಯಂತೆ ಮಾರಬೇಕಾದ [illegible] ನ್ನು ವಿಧಿಸಿರುವರು.

TAI NADU

25—3—19 9

ಪತ್ರವ್ಯವಹಾರ

(ಬಾತ್ಮೀದಾರರ ಅಭಿಪ್ರಾಯಕ್ಕೆ ನಾವು ಬದ್ಧರಲ್ಲ-ಸಂ.)

ರಾಮಾಯಣದಿಂದ ಬೇಸತ್ತವರು.

ಸ್ವಾಮಿ —

ಈ ತಿಂಗಳಿನ 19ನೇ ತಾರೀಖಿನ ಲೋಕಹಿತೈಷಿ ಎಂಬ ಬೆಂಗಳೂರು ಪತ್ರಿಕೆಯಲ್ಲಿ Tired of Ramayan ಎಂದರೆ ರಾಮಾಯಣದಿಂದ ಬೇಸತ್ತವು ಎಂಬ ಹೆಸರಿನ ಶಿರೋನಾಮೆಯಲ್ಲಿ ಒಂದು ಲೇಖನವು ಬರೆಯಲ್ಪಟ್ಟಿದೆ. ಅದರ ಅಭಿಪ್ರಾಯವೇನೆಂದರೆ—ರಾಮಾಯಣದ ಸತ್ಯಗಳನ್ನು ಮಕ್ಕಳಿಗೆ ಕಲಿಸುವುದಕ್ಕಾಗಿ ಹಣವು ವೆಚ್ಚಮಾಡುತ್ತಿರುವುದಕ್ಕೆ ವಿರೋಧನಾಗಿ ಮ|| ಡಿ. ಎಸ್. ಮಲ್ಲಪ್ಪನವರು ತಂದ ಠರಾವಿಗೆ ನಾವು ನಮ್ಮ ಸಂಪೂರ್ಣ ಸಹಾನುಭೂತಿಯನ್ನು ಪ್ರದರ್ಶಿಸುತ್ತೇವೆ. ದಕ್ಷಿಣ ಇಂಡಿಯಾದಲ್ಲಿ ನೀತಿಯು ದಿನದಿನಕ್ಕೆ ಬದಲಾಯಿಸುತ್ತಿರುವುದು. ಕುಟಿಲರಾದ ಆರ್ಯರಿಂದ ರಚಿತವಾದ ರಾಮನ ಪುರಾಣವು ನಿರ್ಮಲವಾದ ದ್ರಾವಿಡ ಗುಣಾತಿಶಯಗಳಿಗೆ ಕಲಂಕಪ್ರದವಾದುದು. ಈ ರೀತಿಯಾದ ವಿಷಮಯವಾದ ಉಪದೇಶಗಳನ್ನು ಬಾಲಕರಿಗೆ ಬೋಧಿಸುವುದು ಸರಿಯಲ್ಲ. ದೊಡ್ಡ ದ್ರಾವಿಡ ಜನಾಂಗದಿಂದ ಕೊಡಲ್ಪಡುವ ಕಂದಾಯದ ಹಣದಿಂದ ಪೋಷಿಸಲ್ಪಡುತ್ತಿರುವ ಸಾರ್ವಜನಿಕ ಸಂಸ್ಥೆಗಳಲ್ಲಿ ರಾಮಾಯಣವು ಬೋಧಿಸಲ್ಪಡದಂತೆ ಕಟ್ಟುಮಾಡಲ್ಪಡಬೇಕು.

"We can thoroughly sympathise with Mr. D. S Mallappa's objection to money being spent to teach children the truth of the Ramayana. Ethics in South India are changing from day to day and our wise men have found out that the wily Aryan epic about Rama is a vicious thrust at purely Dravidian virtues The young ought not to be bred on poison of this kind and it is high time Government tabooed the story of Rama from public institutions maintained at the cost of the great Dravidian races.

ಈ ರೀತಿಯಾದ ಬರವಣಿಗೆಯು ಅವಿವೇಕದಿಂದ ಕೂಡಿದ್ದದ್ದೇ ಎಂಬದನ್ನು ವಾಚಕರು ಊಹಿಸಬೇಕು. ಆದಿಕವಿಗಳಾದ ವಾಲ್ಮೀಕರು ಆರ್ಯಶ್ಲಾಘನೆಗೂ, ದ್ರಾವಿಡನಿಂದೆಗೂ ಬರೆದ ಗ್ರಂಥವೇ ದ ರಾಮಾಯಣವನ್ನು ನಿಂದಿಸುವುದು ಅಲ್ಪತನ. ಲೋಕಹಿತೈಷಿಯ ಸಲಹೆಯಂತೆ ನಡೆಯಬೇಕಾದರೆ ಇನ್ನು ಮೇಲೆ ಹಿಂದುಗಳು ರಾಮ, ಕೃಷ್ಣ ಎಂಬುದಾಗಿ ಹೆಸರುಗಳನ್ನು ಇಟ್ಟುಕೊಳ್ಳುವ ಬದಲು ರಾವಣ ಕುಂಭಕರ್ಣ ಮಾರೀಚ ಕಂಸ ರಾಧ ಎಂಬುದಾಗಿ ಇಟ್ಟುಕೊಳ್ಳಬೇಕು. ರಾಕ್ಷಸರಂತೆ ಕ್ರೂರಕೃತ್ಯಗಳನ್ನು ಮಾಡಬೇಕು. ಹಿಂಸೆಯೇ ಪರಮಧರ್ಮವೆಂಬದಾಗಿ ತಿಳಿಯಬೇಕು. ಶ್ರೀ ರಾಮ ದೇವಾಲಯಗಳಲ್ಲವೂ ನಾಶವಾಗಬೇಕು. ಹಿರಣ್ಯಕಶಿಪುವಿನ ಕಾಲದಲ್ಲಿ ಆದಂತೆ ರಾಮನ ಹೆಸರನ್ನು ಹೇಳಿದವರಿಗೆಲ್ಲಾ ಶಿಕ್ಷೆಯಾಗಬೇಕು; ಲೋಕಹಿತೈಷಿಯ ಸಂಪಾದಕರು ಕೃಷ್ಣರಾವ್ ಎಂಬ ಹೆಸರನ್ನು ಬಿಟ್ಟು ಕಂಸರಾವ್ ಎಂಬ ಹೆಸರನ್ನಿಟ್ಟುಕೊಳ್ಳಬೇಕು. ಕಾಲಸ್ಥಿತಿಯು ಹೇಗೆ ಹೇಗೆ ತಿರುಗುವದೋ ಗೊತ್ತಿಲ್ಲ. ರಾವಣ ಮೊದಲಾದವರು ಬ್ರಹ್ಮ ದೇವರ ಸಂತತಿಯವರಿಂದದನ್ನೂ ಅವರು ಜನ್ಮತಃ ಬ್ರಾಹ್ಮಣರಾಗಿದ್ದರೂ, ಆಚರಣೆಯಿಂದ ರಾಕ್ಷಸರಾದರೆಂಬುದನ್ನು ಲೋಕಹಿತೈಷಿಯ ಸಂಪಾದಕರು ಮರೆತಿರುವಂತೆ ಕಾಣುತ್ತದೆ. ಹೇಗಾದರೂ ಆಗಲಿ. ಈ ಕಲಿಕಾಲದಲ್ಲಿ ವೇದಗಳೂ ವೇದಾಂಗಗಳೂ ಶಾಸ್ತ್ರಗಳೂ ಇತಿಹಾಸಗಳೂ ಪುರಾಣಗಳೂ ನಾಶವಾಗಬಹುದು. ಪ್ರಳಯವಾಗಬಹುದು. ದೈವಪಥಿಯು ನಡೆಯಲೇಬೇಕು.

ಆಸ್ತಿಕ.

ಸರಕಾರದ ಪ್ರತಿಕಕ್ಷಿಗಳು,

ಸ್ವಾಮಿ

ಸರಕಾರದ ರೀತಿನೀತಿಗಳನ್ನು ನಿರ್ದಾಕ್ಷಿಣ್ಯವಾಗಿಯೂ ನಿಷ್ಪಕ್ಷಪಾತವಾಗಿಯೂ ವಿಮರ್ಶೆಮಾಡುವ ಪತ್ರಿಕೆಗಳಿಗೂ ಮುಖಂಡರಿಗೂ ಪ್ರಜಾಸೇವಕರಿಗೂ ಸರಕಾರದ ಅಧಿಕಾರಿಗಳು ಅನೇಕವಿಧವಾದ ಕಿರುಕುಳವನ್ನು ಕೊಡುತ್ತಿದ್ದಾರೆ ಇದರಿಂದ ಈ ರೀತಿಯಾಗಿ ವಿಮರ್ಶೆ ಮಾಡುವುದರಲ್ಲಿ ಅನೇಕರು ಹಿಂಜರಿಯುವುದು ಸ್ವಭಾವಿಕ. ಎಲ್ಲರೂ ಹಿಂಜರಿಯುವರೆಂದು ಹೇಳುವುದಕ್ಕಾಗುವುದಿಲ್ಲ. ಹಿಂಜರಿವುದೂ ಇಲ್ಲ. ಸತ್ಯವು ಪ್ರಕಾಶವಾಗುವುದೇ ಹೊರತು ಅದನ್ನು ಮುಚ್ಚಲು ಯಾರಿಂದಲೂ ಸಾಧ್ಯವಿಲ್ಲ. ಸರಕಾರದವರೂ ಅಧಿಕಾರಿಗಳೂ ನಿಷ್ಪಕ್ಷಪಾತವಾದ ವಿಮರ್ಶಕರ ಗುಣಗ್ರಹಣವನ್ನು ಮಾಡಿ ಲೋಪದೋಷಗಳನ್ನು ತಿದ್ದಿಕೊಳ್ಳುವುದು ಉತ್ತಮ. ಪಬ್ಲಿಕೆಯಿಂದ ಸರ್ಕಾರದವರೂ ಅಧಿಕಾರಿಗಳೂ ತಮ್ಮ ಇಷ್ಟಾರ್ಥಗಳನ್ನು ಗೆಲ್ಲುವುದು ಅಸಾಧ್ಯ ಸಹನೆಯಿಂದಲೇ ಗೆಲ್ಲುವುದು ಸಾಧ್ಯ.

ತಾಯಿನಾಡು ಪತ್ರಿಕೆ

ಸ್ವಾಮಿ

ರಾಜಧಾನಿಗೆ ಇರ ವುದು ತಮ್ಮದೊಂದೇ ದೈನಿಕ ಪತ್ರಿಕೆ ಸಣ್ಣದಾಗಿದ್ದರೂ ಎಲ್ಲಾ ವಿಷಯಗಳನ್ನೂ ಸಂಕ್ಷೇಪವಾಗಿ ಕೊಡುತ್ತಿದ್ದೀರಿ ಆದರೆ ಆಕೃತಿಯನ್ನು ಇನ್ನೂ ದೊಡ್ಡದಾಗಿ ಮಾಡಬೇಕೆಂಬುದೇ ನನ್ನ ಸಲಹೆ ಬೇಕಾದರೆ ಚಂದಾವನ್ನು ಹೆಚ್ಚಿಸಿ ನನ್ನ ಸಲಹೆಯಂತೆ ತಾವು ನಡೆಯಿಸಿಕೊಡಬೇಕೆಂಬುದೇ ನನ್ನ ಪ್ರಾರ್ಥನೆ

ಒಬ್ಬ ಚಂದಾದಾರ

[ಈ ಚಂದಾದಾರರು ಕೊಟ್ಟಿರುವ ಸಲಹೆಯನ್ನೇ ಇನ್ನೂ ಅನೇಕ ಚಂದಾದಾರರು ಕೊಟ್ಟಿರುವರು. ಆದರೆ ಈಗ ಇರುವ ಆಕೃತಿಯಲ್ಲೇ ಕೊಂಡಿಸುತ್ತಿದ್ದರೂ ಆದಕ್ಕೆ ಪ್ರತಿ ತಿಂಗಳೂ ತಗಲುವ ಖರ್ಚನ್ನ ಕೊಡುವುದು ಅಸಾಧ್ಯವಾಗಿದೆ ಒಂದೊಂದು ಸಾರಿ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕೆಂಬ ನಿರಾಶೆಯು ಉಂಟಾಗುವುದು. ಆದರೆ ಉತ್ತರ ಕ್ಷಣದಲ್ಲಿಯೇ ಧೈರ್ಯದಿಂದ ಮುಂದುವರಿಯಬೇಕೆಂಬ ಆಲೋಚನೆಯು ಬರುವುದು. ಪತ್ರಿಕೆಗಳಿರುವುದು ಪ್ರಜಾಸೇವೆಗಾಗಿ: ಪ್ರಜೆಗಳು ಧಾರಾಳವಾಗಿ ಸಹಾಯ ಮಾಡಿದ ಹೊರತೂ ಪತ್ರಿಕೆಗಳು ನಡೆಯುವುದು ಕಷ್ಟ ಅನೇಕರು ನಮಗೆ ಚಂದಾದಾರರಾಗಿ ಪ್ರೋತ್ಸಾಹ ಕೊಟ್ಟಿದ್ದಾರೆ. ಆದರೆ ಇನ್ನೂ ಹೆಚ್ಚು ಮಂದಿ ನಮಗೆ ಚಂದಾದಾರರಾಗಿ ಪ್ರೋತ್ಸಾಹಿಸಬೇಕು. ಇಲ್ಲದೇ ಹೋದರೆ ತಾಯಿನಾಡು ಪತ್ರಿಕೆಯು ಪೋಷಣೆಯಿಲ್ಲದೆ ಕೃಶವಾಗಿ ಕ್ಷಯದಿಂದ ಮೃತಿಯನ್ನು ಹೊಂದಬೇಕಾಗುವುದು. ಸಂಪಾದಕ.)

ವಿವಿಧ ವರ್ತಮಾನ.

ಮಹಾರಥೋತ್ಸವ

ಟಿ. ನರಸೀಪುರದ ತಾಲ್ಲೋಕ ತಿರು... ಶ್ರೀ ಅಗಸ್ತ್ಯೇಶ್ವರ ಮಹಾಸ್ವಾಮಿಯ [illegible] 23 ನೇ ತಾ ಶನಿವಾರ ನಡೆಯಿತು. [illegible] ಉತ್ಸವಾದಿಗಳು 25 ನೇ [illegible]

ಶ್ರೀ ರಾಮನವಮ್ಯುತ್ಸವ

[illegible] ಶ್ರೀ [illegible] 17 [illegible]

[illegible]

ಪರಿವಾರ [illegible]

[illegible]

ಶ್ರೀ ಸೀತಾರಾಮಾನಂದ [illegible]

ಪಂಚಾಂಗಗಳು

[illegible]

ಪಂಚಾಂಗ 1 ರ ಬೆಲೆ 2 ಆಣೆ [illegible]

[illegible] 1 [illegible]

[illegible]

Printed and published by P. R. Ramiaya
Sri Rama Press, D Subbiah Road, Mysore

Regd. No M. 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ [illegible]

ವಾರ್ಷಿಕ (ಸ್ಥಳಕ್ಕೆ ರೂ. [illegible]

ಸಂಪುಟ ೧] ಗುರುವಾರ ೨೮ ಮಾರ್ಚಿ ೧೯೨೯ [ಸಂಚಿಕೆ ೧೪೦

TAI NADU

28—3—1929

ವರ್ತಮಾನ ಸಂಗ್ರಹ.

ಬಿರುದು.

ಶ್ರೀಮನ್ ಮಹಾರಾಜರವರು ರಾಜಕುಮಾರ ಸಿ. ದೇವರಾಜೇ ಅರಸಿನವರಿಗೆ ಆನರರಿ ಕ್ಯಾಪ್ಟನ್ ಎಂಬ ಹುದ್ದೆಯ ಬಿರುದನ್ನು ಕೊಟ್ಟಿರುವರು.

ಚೀಫ್ ಕೋರ್ಟು.

ಹಂಗಾಮಿ ಚೀಫ್ ಕೋರ್ಟು ಜಡ್ಜರಾದ ಮಿ|| ಎಂ. ರಾಮಚಂದ್ರರಾವ್ ಬಿ. ಎ. ಬಿ. ಎಲ್‌ರವರ ಕೆಲಸದ ಅವಧಿಯು 1929 ನೇ ಜೂನ್‌ವರೆಗೂ ಹೆಚ್ಚಿಸಲ್ಪಟ್ಟಿರುತ್ತೆ.

ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡ್

ಚಾಮರಾಜನಗರದ ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡಿಗೆ ಮುನಿಸಿಪಲ್ ಕೌನ್ಸಿಲ್ಲಿನಿಂದ ಮ|| ರಾ|| ಗಳಾದ ಸಂಗನಬಸಪ್ಪನವರೂ ಟಿ. ಎಸ್ ವೆಂಕಟನಾಗಪ್ಪ ಶೆಟ್ಟರವರೂ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರು.

ರೈಲ್ವೆ ಆದಾಯ.

ಮೈಸೂರು ರೈಲ್ವೆ ಆದಾಯವು ಮಾರ್ಚಿ 2 ನೇ ತಾರೀಗೆ ಆಖೈರಾದ ವಾರದಲ್ಲಿ 60,900 ರೂ. ಗಳು (ಹೋದ ವರ್ಷ ಇದೇ ವಾರದಲ್ಲಿ 260 ರೂ ಹೆಚ್ಚಿತ್ತು) ಮತ್ತು 9 ನೇ ತಾರೀಗೆ ಆಖೈರಾದ ವಾರದಲ್ಲಿ 74,000 ರೂಗಳೂ (ಹೋದ ವರ್ಷ ಇದೇ ವಾರದಲ್ಲಿ 3729 ರೂಗಳು ಹೆಚ್ಚಿತ್ತು) ಆಗಿವೆ.

ರಜಾ

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ಯರಿಗೆ ಏಪ್ರೆಲ್ 7 ರಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಮಂಜೂರಾಗಿದೆ. ಆ ಕಾಲದಲ್ಲಿ ಮಿ|| ಜೆ. ಬಿ. ಹೆದ್ಲೀಕರ್‌ರವರಿಂದ ರಿಲೀವ್ ಮಾಡಲ್ಪಡುವ ಮಿ|| ಎಂ. ಎನ್. ಬಸವರಾಜೇಅರಸಿನವರು ಶಿವಮೊಗ್ಗ ಡೆಪ್ಯುಟಿ ಕಮೀಷನರಾಗಿ ನಿಯಮಿಸಲ್ಪಟ್ಟಿರುವರು.

ಮಹಾರಾಜಾ ಕಾಲೇಜ್

ಮಹಾರಾಜಾ ಕಾಲೇಜಿನ ಇಂಗ್ಲೀಷ್ ಅಧ್ಯಾಪಕರಾದ ಮಿ|| ಎ. ಬಿ ವೆಂಕಟರಾವ್‌ರವರಿಗೆ 5 ತಿಂಗಳ ಕಂಬೈಂಡ್ ರಜವನ್ನು ಈಸಿಗೆ ರಜದ ಜೊತೆಗೆ ಮಂಜೂರಾಗಿದೆ. ಒಂದು ತಿಂಗಳು ಅರ್ಧ ಸಂಬಳದ ಪ್ರಿವಿಲೇಜ್ ಎರಡು ತಿಂಗಳು ಪೂರಾ ಸಂಬಳದ ಫರ್ಲೊ ಉಳಿದ ಎರಡು ತಿಂಗಳೂ ಅರ್ಧ ಸಂಬಳದ ಫರ್ಲೋ ಆಗಿ ಭಾವಿಸಲ್ಪಟ್ಟಿರುತ್ತೆ.

ಸರ್ಕಾರೀ ಸುದ್ದಿ.

ಸರ್ಕಾರದ ಜನರಲ್ ಸೆಕ್ರೆಟರಿಗಳಾದ ಮಿ|| ಆರ್. ರಂಗರಾಯರವರು ಬೇರೆ ಕೆಲಸದ ಮೇಲಿರುವ ಚೀಫ್ ಸೆಕ್ರೆಟರಿಗಳಾದ ಮಿ|| ಎನ್ ಮಾಧವರಾಯರವರ ಸ್ಥಾನಕ್ಕೂ ಮತ್ತು ಸೀನಿಯರ್ ಅಸಿಸ್ಟೆಂಟ್ ಕಮೀಷನರಾಗಿ ಹಾಲಿ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೆಲಸ ಮಾಡುತ್ತಿರುವ ಮಿ|| ಜಿ. ನಾರಾಯಣ ಸ್ವಾಮಯ್ಯಂಗಾರ್ರವರು ಸರ್ಕಾರದ ಜನರಲ್ ಸೆಕ್ರೆಟರಿಗಳ ಸ್ಥಾನಕ್ಕೂ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುವರು.

ವರ್ಗಾ ವರ್ಗಿ.

ರೆವಿನ್ಯೂ ಕಮಿಷನರ್‌ರವರ ಅಸಿಸ್ಟೆಂಟರಾದ ಮಿ|| ಎಚ್. ಚಾಮರಾಜೇ ಅರಸಿನವರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿಯೂ ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳಾದ ಮಿ|| ಮಹಮದ್ ಇಸ್ಮಾಯಿಲ್ ಷರೀಫ್‌ರವರು ರೆವಿನ್ಯೂ ಕಮೀಷನರ್‌ರವರ ಅಸಿಸ್ಟೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳಾದ ಮಿ|| ಡಿ ಸಿ ಸುಬ್ಬರಾಯಪ್ಪನವರು ತಮ್ಮ ಕೆಲಸದ ಜೊತೆಗೆ ರಿಕ್ರೂಟ್‌ಮೆಂಟ್ ಬೋರ್ಡಿನ ಸೆಕ್ರೆಟರಿಗಳ ಕೆಲಸವನ್ನೂ ಮಾಡುವರು.

ಮ|| ಸಾಂಬಮೂರ್ತಿಯವರು

ಮ|| ಸಾಂಬಮೂರ್ತಿಯವರನ್ನು ಇದ್ದಕ್ಕಿದ್ದ ಹಾಗೆ ರಾಜಮಂದ್ರಿಯಿಂದ ಬೆಳ್ಳಾರಿ ಜೈಲಿಗೆ ಕಳುಹಿಸಿರುತ್ತಾರೆ. ಅವರು ಬಹಳ ಹಸನ್ನು ಖರಾಗಿ ಆರೋಗ್ಯವಾಗಿರುತ್ತಾರೆ. ಅವರು ಗೋಪ್ಯವಾಗಿ ರವಾನಿಸಲ್ಪಟ್ಟದ್ದರಿಂದ ಕೆಲವರು ಮಾತ್ರ ಅವರ ದರ್ಶನ ತೆಗೆದುಕೊಂಡರು ಎಂದು ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು ತಿಳಿಸುತ್ತಾರೆ.

ವಿಶ್ವ ವಿದ್ಯಾಲಯ.

ಸರ್ಕಾರದ ಲಾ ಸೆಕ್ರೆಟರಿಗಳಾದ ಮಿ|| ಪಿ. ಮಹದೇವಯ್ಯನವರನ್ನು ವಿಶ್ವ ವಿದ್ಯಾಲಯದಲ್ಲಿ ಮೆಂಬರತನಕ್ಕೆ ರಾಜೀನಾಮೆ ಕೊಟ್ಟ ಡಾಕ್ಟರ್ ಬಿ. ಮಹಮದ್ ಉಸ್ಮಾನ್‌ರವರ ಸ್ಥಳದಲ್ಲಿ ಫೆಲೋ ಆಗಿ ತೆಗೆದುಕೊಂಡಿರುವರು.

ಶ್ರೀ ಸೀತಾರಾಮ ಸೇವಾಸಮಾಜ.

ರಾಜಧಾನಿಯ ಶ್ರೀರಾಮಪೇಟೆ ಅನಂತಪ್ಪನವರ ಅಗ್ರಹಾರದಲ್ಲಿರುವ ಶ್ರೀ ಸಿತಾರಾಮ ಮಂದಿರದಲ್ಲಿ ಚೈತ್ರ ಶುದ್ಧ ನವಮಿ ಬುಧವಾರ (17—4—29) ರ ಲಾಗಾಯಿತು ರಾಮೋತ್ಸವವು ನಡೆಯುವುದರಿಂದ ಆಸ್ತಿಕ ಮಹನೀಯರೆಲ್ಲರೂ ಈ ಸತ್ಕಾರ್ಯಕ್ಕೆ ಯಥಾಶಕ್ತಿ ಸಹಾಯಮಾಡಿ ಶ್ರೀರಾಮ ಸೇವೆಯನ್ನು ಭಾಗವಮಾಡಿಸಬೇಕಾಗಿ ಮೇಲ್ಕಂಡ ಸಮಾಜದ ಭಕ್ತ ಮಂಡಲಿಯವರು ಪ್ರಾರ್ಥಿಸಿರುತ್ತಾರೆ.

ನೋಟೀಸ್

ಹಿಂದೂ ಬ್ಯಾಂಕ್ ಲಿಮಿಟೆಡ್ ಮೈಸೂರು.

ತಾ|| 24-3-1929 ರಲ್ಲಿ ಸೇರಿದ್ದ ಈ ಬ್ಯಾಂಕಿನ ಷೇರ್‌ಹೋಲ್ಡರುಗಳ ಎಕ್ಸ್ಟ್ರಾರ್ಡಿನರಿ(Extraordinary) ಜನರಲ್ ಮೀಟಿಂಗಿನಲ್ಲಿ ಸಕಾಲದಲ್ಲಿ ಕೋರಂ ಸೇರದಿಲ್ಲವಾಗಿ ಯಾವ ಕೆಲಸಕಾರ್ಯಗಳೂ ನಡೆಸಲ್ಪಡಲಿಲ್ಲ.

ಸದರಿ ಮೀಟಿಂಗು ತಾ|| 7-4-1929 ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ ಸರಿಯಾಗಿ ಮೊದಲು ನೋಟೀಸಿನಲ್ಲಿ ಕಾಣಿಸಿದ್ದ ಉದ್ದಿಶ್ಯಗಳಿಗಾಗಿಯೇ ಮೈಸೂರು ಶ್ರೀರಾಮಪೇಟೆ ಶಾರದಾ ವಿಳಾಸ ವಾಚನಶಾಲೆಯಲ್ಲಿ (ಎ. ಎಸ್. ಸಿನಿಮಾ ಸಮೀಪ) ಪುನಃ ನಡೆಸುವಂತೆ ಏರ್ಪಾಡು ಮಾಡಿರತ್ತೆ.

ಷೇರು ಹೋಲ್ಡರುಗಳು ಆ ದಿವಸ ಸಕಾಲಕ್ಕೆ ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರಿದೆ.

(By order)

ಮೈಸೂರು. H. Venkatakrishnappa

ತಾ|| 24-3-1929. Managing Agent

OFFICE OF THE PRESIDENT
CITY MUNICIPAL COUNCIL MYSORE
DATED 26th MARCH 1929.

MUNICIPAL NOTICE.

The following business will be transacted at the meeting of the City Municipal Council Mysore, to be held in the Municipal Office on Saturday the 30th March 1929 at 8 A. M.

Confirmation of the proceedings of the following bodies:—the Municipal Council, Managing Committee, Works Committee, Health Committee, School Committee and Vriddhasrama Committee for the months of February and March 1929.

Recording Vital and other statistics. Rain fall statistics, statement of house-building licenses and Health Memo for the months of January and February 1929.

Recording Government Orders sanctioning the extension of the services of the special inoculating officer by another 3 months, sanctioning the engagement of one more rubbish cart for the Nazarbad Mohalla, sanctioning the grant of cycle advances to Municipal employees out of Municipal funds, sanctioning the entertainment of 4 watchmen on Rs. 15 each per month to keep watch at Ockads to detect and report articles and visitors suspected of infection and also two peons on Rs 10 each per month temporarily for a period of one month, sanctioning an estimate amounting to Rs. 18, 440 for repairing and surface dressing with Colfix the Railway Station and Sayyaji Rao Roads from market skquare to Railway Station Circle, sanctioning the proposal of village panchayet to make an annual contribution of Rs. 20 to meet the recurring and maintenance charges of water supply to the Moregally village from village panchayet funds, sanctioning the grant of a local allowance of 10 per cent of pay to the staff and establishment employed at the Belagola pumping station.

Consideration of the following:—

Letter from the Financial Secretary to Government requesting to intimate the views of the Municipal Council about the commutations of Rs. 5 As. 4 out of the pension of Rs 23 As. 4 of Mr. M. Subba Rao, first grade clerk, the Mysore City Municipality, the grant of Rs 50 towrads the opening of a Library of the Mysore City Primary School teachers association, the appointment of a qualified lady Health Visitor for the city, entertainment of a peon on Rs 10 per month temporarily to look after the buildings of Appayuchetty Karkhana exempting smithies from payment of License fee, Managing Committee's recommendation re remitting the interest due by Mr B S Venkoji Rao, refund of Rs 10 to Venkataramaniah and refund of Rs 2 to Mr T S Narasimhaiah

T G RAMA IYER,
President

ತಾಯಿನಾಡು.

೨೮—3—1929

ಕರ್ನಾಟಕದ ಏಕೀಕರಣ

(ಮುಂದುವರಿದುದು.)

ಕರ್ನಾಟಕ ಏಕೀಕರಣವೆಂದರೇನು?—ಕನ್ನಡವು ಮಾತೃಭಾಷೆಯಿದ್ದ ಜನರು ಸ್ಥಾಯಿಯಾಗಿರುವ ಹಿಂದು [illegible] ಭಾಗಕ್ಕೆ ಕರ್ನಾಟಕವೆನ್ನುವರು. ಈ ಭಾಗ [illegible] ಸ್ಥಾಯಿಯಾಗಿ ಇರುವವರೆಲ್ಲರೂ ಕರ್ನಾಟಕಸ್ಥರು. ಕರ್ನಾಟಕವೆಲ್ಲಾ ಸ್ವಾಭಾವಿಕವಾಗಿ ಒಂದೇ ಆಡಳಿತದ [illegible] ಒಳಪಟ್ಟಿರಬೇಕಾಗಿತ್ತು. ಆದರೆ ಅದು ಕಾಲವಶಾತ್ [illegible] ಒಳಗಾಗಿದೆ. ಸಂಸ್ಥಾನಿಕರಿಗೆ [illegible] ಕರ್ನಾಟಕವು ಬ್ರಿಟಿಷರ [illegible] ಕರ್ನಾಟಕದ ಎಲ್ಲ ಭಾಗಗಳನ್ನು ಒಟ್ಟುಗೂಡಿಸಿ ಒಂದು ಪ್ರತ್ಯೇಕ ಪ್ರಾಂತ್ಯಮಾಡುವದೇ ಕ. ಏಕೀಕರಣದ [illegible].

ಏಕೀಕರಣದ ವಿಸ್ತೃತ ಅರ್ಥವು—ಹಾಗಾದರೆ ಸಂಸ್ಥಾನೀ ಕರ್ನಾಟಕದ ಮತ್ತು ಹಿಂದೂಸ್ಥಾನದ ಬೇರೆ ಬೇರೆ [illegible]ಗಳಲ್ಲಿ ಹರಡಿಕೊಂಡಿರುವ ಕರ್ನಾಟಕಸ್ಥರ ಗತಿಯೇನು? [illegible]. ಯಾವ ಸ್ಥಳದಲ್ಲಿ [illegible] ಭಾಷೆ ಸಂಸ್ಕೃತಿ ಎಂಬ ಸೂತ್ರಗಳಿಂದ [illegible]. ಸಧ್ಯಕ್ಕೆ ಕರ್ನಾಟಕದಲ್ಲಿಯ ಸಂಸ್ಥಾನಗಳನ್ನು ರಾಜಕೀಯ ದೃಷ್ಟಿಯಿಂದ ಏಕೀಕರಿಸಲಿಕ್ಕೆ [illegible] ಭಾಷೆ ಮತ್ತು ಸಂಸ್ಕೃತಿ ವಿಷಯಗಳಲ್ಲಿ [illegible] ಕರ್ನಾಟಕದ ಕೂಡ ಅವುಗಳನ್ನು ಏಕೀಕರಿಸುವುದು ಏಕೀಕರಣ ಚಳವಳಿಯ ಅಂಗವು. ಅದೇ ರೀತಿ ಬೇರೆ ಪ್ರಾಂತ್ಯಗಳಲ್ಲಿದ್ದ ಕನ್ನಡಿಗರು ಮತ್ತು ಕರ್ನಾಟಕಸ್ಥರು ತಮ್ಮ ಭಾಷೆ ಸಂಸ್ಕೃತಿಗಳನ್ನು ಉಳಿಸಿಕೊಂಡು ಆಯಾ ಪ್ರಾಂತ್ಯಗಳ ದ್ವಾರ ಭಾರತಮಾತೆಯ ಸೇವೆಯನ್ನು ಮಾಡುವಂತೆ ಯತ್ನಿಸುವುದಾದರೂ ಕ. ಏಕೀಕರಣದ ಚಳವಳಿಯ ಇನ್ನೊಂದು ಅಂಗವಾಗಿದೆ. ಹೀಗೆ ಕರ್ನಾಟಕ ಏ. ಚಳವಳಿಯು (೧)ಬ್ರಿಟಿಶ ಕರ್ನಾಟಕವನ್ನು ಒಟ್ಟುಗೂಡಿಸಿ ಒಂದು ಪ್ರತ್ಯೇಕ ಪ್ರಾಂತವನ್ನಾಗಿ ಮಾಡುವ(೨)ಇಡೀ ಕರ್ನಾಟಕವೆಲ್ಲಾ ಅದು ಬ್ರಿಟಿಶ ಇರಲಿ ಸಂಸ್ಥಾನೀ ಇರಲಿ—ಕನ್ನ ಭಾಷೆ ಮತ್ತು ಸಂಸ್ಕೃತಿಗಳನ್ನು ಪೋಷಿಸಿ ಕರ್ನಾಟಕಸ್ಥರೆಲ್ಲರೂ ಒಂದೇ [illegible] ಭಾವನೆಯನ್ನು [illegible]ವರಲ್ಲಿ ನೆಲೆಗೊಳಿಸುವ(೩) ಕರ್ನಾಟಕದ ಹೊರಗಿನ ಕನ್ನಡಿಗರು ಮತ್ತು ಕರ್ನಾಟಕಸ್ಥರು ತಮ್ಮ ಭಾಷೆ ಸಂಸ್ಕೃತಿಗಳನ್ನು ಸ್ಥಿರವಿಟ್ಟು ಆಯಾ ಸ್ಥಳಗಳಲ್ಲಿ ಭಾರತಮಾತೆಯ ಸೇವೆ ಮಾಡುವಂತೆ ಯತ್ನಿಸುವ, ಮೂರು ಮುಖ್ಯೋದ್ದೇಶಗಳಿಂದ ಪ್ರೇರಿತವಾಗಿದೆ,

ಈ ಕಲ್ಪನೆಯು ಹುಟ್ಟು—ಹೀಗೆ ಏಕೀಕರಣ ಮಾಡಬೇಕು ಎಂಬ ಕಲ್ಪನೆಯು ಹುಟ್ಟಲಿಕ್ಕೆ ಕಾರಣವೇನು? ಬ್ರಿಟಿಶ ಕರ್ನಾಟಕವು ಸದ್ಯಕ್ಕೆ ಮುಂಬಯಿ ಮತ್ತು ಮದ್ರಾಸ ಇಲಾಖೆಗಳಲ್ಲಿಯೂ ಕೊಡಗು ಪ್ರಾಂತದಲ್ಲಿಯೂ ಹರಿದು ಹಂಚಲ್ಪಟ್ಟಿದೆ. ಇದರ ಒಟ್ಟು ಪರಿಣಾಮವೇನೆಂದರೆ ಕರ್ನಾಟಕದ ಎಲ್ಲ ಬಗೆಯ ಪ್ರಗತಿಯು ಕುಂಠಿತವಾಗಿದೆ. ಹಾಗೂ ಹಿಂದೂಸ್ಥಾನದ ಉದ್ಧಾರ ಕಾರ್ಯದಲ್ಲಿಯೂ ಪ್ರಗತಿಯ ಕಾರ್ಯದಲ್ಲಿಯೂ ಕರ್ನಾಟಕವೂ ಕರ್ನಾಟಕಸ್ಥರೂ ಬಲವುಳ್ಳ ಭಾಗವನ್ನು ಕೈಗೊಳ್ಳಲಾರದೆ ಕುಳಿತಿದ್ದಾರೆ

ಮುಂಬಯಿ ಇಲಾಖೆಯಲ್ಲಿ ಕರ್ನಾಟಕದ ಭಾಗವು ಒಂದು ಬಾಲದಂತೆ ತೀರ ದಕ್ಷಿಣಕ್ಕೆ ಮೂಲೆಯಲ್ಲಿದೆ. ಆ ಇಲಾಖೆಯಲ್ಲಿ ಕರ್ನಾಟಕಸ್ಥರ ಪ್ರಮಾಣವು ೧೦೦ ರಲ್ಲಿ ೧೬ ಮಾತ್ರ. ಬಹು ದಿನದಿಂದ ಪೇಶ್ವೆಯವರ ಆಳಿಕೆಯ ಮೂಲಕ ಮರಾಠೀ ಭಾಷೆಯು ಪ್ರಚಾರಪಡೆದು ಕುಳಿತು ಕನ್ನಡವು ತುಚ್ಛವಾಗುತ್ತಲೇ ಬಂದಿತು. ಬ್ರಿಟಿಷರ ಆಳಿಕೆಯಲ್ಲಿ ಸಹ ಮರಾಠೀ ಅಧಿಕಾರಿಗಳೇ ಮೊದಲು ನೇಮಿಸಲ್ಪಟ್ಟದ್ದರಿಂದ [illegible] ವರ್ಷಗಳವರೆಗೆ ಇಲ್ಲಿ ಸರ್ಕಾರೀ ಕನ್ನಡ ಶಾಲೆಗಳಿಂದೆ ಮರಾಠೀ ಶಾಲೆಗಳೇ ಇದ್ದವು, ಆ ಮೇಲೆ ಇಂಗ್ಲೀಷವು ರಾಜ ಭಾಷೆಯಾದ್ದರಿಂದ ಇದಕ್ಕೆ ಮಹತ್ವವು ಬಂದಿತು; ಇದಲ್ಲದೆ ಮುಂಬಯಿ ಸರಕಾರದ ಕೇಂದ್ರಗಳಾದ ಪುಣೆ ಮುಂಬಯಿಗಳು ಕರ್ನಾಟಕದಿಂದ ೩೦೦—೪೦೦ ಮೈಲು ದೂರವಿದ್ದು ಅಲ್ಲಿ ಮರಾಠಿ ಮತ್ತು ಇಂಗ್ಲೀಷು ಇವಕ್ಕೆ ಪ್ರಾಶಸ್ತ್ಯವಿರುವುದೆಂದಲೂ ಅಲ್ಲಿಯ ಮುಖ್ಯ ಕೋರ್ಟು ಮುಖ್ಯ ಪೇಟೆ ವಿಶ್ವವಿದ್ಯಾಲಯ ಇವುಗಳಲ್ಲಿ ಆ ಎರಡು ಭಾಷೆಗಳಿಗೆಯೆ ಮಹತ್ವವಿರುವದರಿಂದಲೂ ಕನ್ನಡಕ್ಕೆ ಮನ್ನಣೆ ಇರಲೇ ಇಲ್ಲ. ಈ ಮರಾಠಿಗರು ತಮ್ಮ ಭಾಷೆಯ ಕಡೆ ಲಕ್ಷ್ಯಮಾಡಿ ಮೊದಲು ಮರಾಠಿ ಆ ಮೇಲೆ ಇಂಗ್ಲೀಷ ಕಲಿಯುವ ಪ್ರಸಂಗವು ಎಲ್ಲ ಬುದ್ಧಿವಂತರ ಕನ್ನಡಿಗರ ಮೇಲೂ ಬಂದಿತು. ಹೀಗಾಗಿ ಕನ್ನಡವು ಹಿಂದುಳಿಯಿತು. ಕರ್ನಾಟಕ ಶಿಕ್ಷಣವು ಹಿಂದುಳಿಯಿತು. ಮುಂಬಯಿ ವಿಶ್ವವಿದ್ಯಾಲಯವು ೧೮೫೭ ರಲ್ಲಿ ಪ್ರಸ್ಥಾಪಿತವಾಗಿದ್ದರೂ ಉತ್ತರ ಕರ್ನಾಟಕದಲ್ಲಿ ಒಂದು ಕಾಲೇಜು ಸ್ಥಾಪನೆಯಾಗಬೇಕಾಗಿ ಅದು ೧೯೧೭ ರವರೆಗೆ ಆಗಲಿಲ್ಲ! ಅರ್ಥಾತ್ ಶಿಕ್ಷಣದಲ್ಲಿ ಹಿಂದುಳಿದುದರಿಂದ ಎಲ್ಲ ಚಳುವಳಿಗಳಲ್ಲಿಯೂ ಉತ್ತರ ಕರ್ನಾಟಕವು ಹಿಂದುಳಿಯಿತು. ಭಾಷೆಯ ಪ್ರಗತಿಯು ಸಾಧನವೂ ಭಾಷಾಭಿವೃದ್ಧಿಯೂ ಪ್ರಗತಿಯು ಹುರುಪು. ಈ ಮಾತು ಕಂಡು ಹಿಡಿದು ೪೦ ವರ್ಷದ ಹಿಂದಿನ ಮುಂಬಯಿ ಕರ್ನಾಟಕ ಮುಖಂಡರು ಕನ್ನಡ ಶಾಲೆಗಳನ್ನೂ ಕ. ವಿ. ವ. ಸಂಘ ಕ. ಟ್ರೇ. ಕಾಲೇಜು ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿದರು. ಕರ್ನಾಟಕದ ಇತಿಹಾಸ. ಕರ್ನಾಟಕದ ವೀರಚರಿತ್ರೆ ಇವುಗಳನ್ನು ಅಭ್ಯಾಸಮಾಡಿ ಇಲ್ಲಿಯ ಸ್ವಾಭಿಮಾನವನ್ನು ಜಾಗೃತಗೊಳಿಸದೆ ಸಾರ್ವಜನಿಕ ಚಳುವಳಿಗಳು ಮುಂದಾಗಲಾರವು ಎಂಬುದನ್ನು ಇಲ್ಲಿಯ ಮುಖಂಡರು ಕಂಡುಕೊಂಡರು. ೧೯೦೪—೫ ರಲ್ಲಿ ವಂಗಭಂಗ ಚಳವಳಿಗೆ ಪ್ರಾರಂಭವಾಯಿತು. ಒಂದೇ ಭಾಷೆಯನ್ನು ಮಾತಾಡುವ ಬಂಗಾಳ ಪ್ರಾಂತವನ್ನು ವಿಭಾಗಿಸಬೇಕೆಂದು ಸರಕಾರದವರು ನಿಶ್ಚಯಿಸಿದ ಕೂಡಲೇ ಬಡದೆಬ್ಬಿಸಿದ ಹುಲಿಯಂತೆ ಬಂಗಾಲ ಪ್ರಾಂತವೂ ಅದರ ಕೂಡೆ ಹಿಂದೂಸ್ಥಾನವೂ ಜಾಗ್ರುತವಾದವು. ವಂಗಭಂಗದ ಉದಾಹರಣೆಯ ಮೂಲಕ ಒಂದೇ ನುಡಿಯುವರನ್ನು ಒಡೆದರೆ ಯಾವ ಹಾನಿಗಳುಂಟಾಗುವವೆಂಬ ಪ್ರತೀತಿಯು ಕನ್ನಡಿಗರಿಗೆ ಆಯಿತು. ಆದುದರಿಂದ ಎಲ್ಲಾ ಕರ್ನಾಟಕವನ್ನು ಏಕೀಕರಿಸಿ ಒಂದೆ ಪ್ರತ್ಯೇಕ ಪ್ರಾಂತವನ್ನು ನಿರ್ಮಿಸದೆ ಹೋದರೆ ಕರ್ನಾಟಕ ಪ್ರಗತಿಪರ ಆಗದು ಕರ್ನಾಟಕವು ಹಿಂದೂಸ್ಥಾನದ ತಕ್ಕ ಸೇವೆಯನ್ನು ಮಾಡಲು ಸಮರ್ಥವೂ ಆಗದ ಎಂಬುದು ಸಿದ್ಧವಾಯಿತು.

ಮದ್ರಾಸ ಕರ್ನಾಟಕದ ಹಣೆಯುಬರಹವು ಇದಕ್ಕೂ ಹೀನವಿರುವುದು. ಆ ಇಲಾಖೆಯಲ್ಲಿ ಕರ್ನಾಟಕಸ್ಥರ ಪ್ರಮಾಣವು ೧೦೦ ರಲ್ಲಿ ೬ ಮಾತ್ರ. ಬಳ್ಳಾರಿ ಮಂಗಳೂರು ನೀಲಗಿರಿ ಮುಂತಾದ ಜಿಲ್ಲೆಗಳು ಮದರಾಸಿನ ೩೦೦ ೪೦೦ ಮೈಲುಗಳ ಮೇಲಿದ್ದು ಅವು ಇಲಾ[illegible] ಇಲ್ಲಿ. [illegible] ಕನ್ನಡಕ್ಕೆ ಯಾವ ಮಹತ್ವದ ಸ್ಥಾನವು ಇಲ್ಲ. ಆದುದರಿಂದ ಅಲ್ಲಿಯ ಕನ್ನಡಿಗರು [illegible] ಕರ್ನಾಟಕದವರಂತೆ [illegible] ಇವೇ ಅನುಭವವು ಇದೇ ಪ್ರತೀತಿಯು ಬಂದಿರುವುದು.

ಕೊಡಗು ಇದು ಸದ್ಯಕ್ಕೆ ಚಿಕ್ಕ ಪ್ರಾಂತವಾಗಿದೆ [illegible] ಅಲ್ಲಿ ಕೆಲಸ ಅಥವಾ [illegible] ಕಾದ ಹೊರಭಾಗಗಳ ವಶದಲ್ಲಿ ಇ[illegible] ತೀರ ಚಿಕ್ಕದಿರುವುದರಿಂದಲೂ ಬೇರೆ ಕನ್ನಡ ಭಾಗಗಳ ಕೂಡ ಹೆಚ್ಚಿಗೆ ಸಂಬಂಧಬರುವಂತೆ ಮೇಲು ಮುಂತಾದವುಗಳ ಅನುಕೂಲತೆಗಳಿಲ್ಲದ ರಿಂದಲೂ ಕೇವಲ ೧೨—೧೪ ಲಕ್ಷ ವಾರ್ಷಿಕ ಉತ್ಪನ್ನದಿಂದ ಅದು ಹೆಚ್ಚು [illegible]ನ್ನು ಹೊಂದಲಾರದು. ಇದಲ್ಲದೆ [illegible] [illegible]

ಸಂಸ್ಥಾನೀ ಕರ್ನಾಟಕದಲ್ಲಿ [illegible] [illegible] ಕನ್ನಡವು [illegible] [illegible] ಎಲ್ಲ ಕನ್ನಡಿಗರಿಗೂ ಒಪ್ಪಿಗೆ

ಕಲ್ಪನೆಯ ಬೆಳವಣಿಗೆ.—ಈ ಕಲ್ಪನೆಯು [illegible] ಹುಟ್ಟಿದ ಮೇಲೆ ಉತ್ತರೋತ್ತರ [illegible] ಆಗುತ್ತ ನಡೆಯಿತು. [illegible] ಮೂಲಕ ಉತ್ತರ ಕರ್ನಾಟಕದಲ್ಲಿ [illegible] ಕಲ್ಪನೆಯು ಹುಟ್ಟಿ [illegible] [illegible] ಕನ್ನಡ ಹೊಸಹೊಸ ಪುಸ್ತಕಗಳು [illegible] ಕರ್ನಾಟಕಕ್ಕೆ ಒಂದು ಪ್ರತ್ಯೇಕ [illegible] ಚಳವಳಿಯನ್ನು ಪರಿಣಮಿಸಿದವು. ಅನುಷಂಗಿಕವಾಗಿ ಸಂಸ್ಥಾನೀ ಕರ್ನಾಟಕದಲ್ಲಿಯೂ ಪ್ರಾಂತದ ಹೊರಗಿನ ಕರ್ನಾಟಕಸ್ಥರಲ್ಲಿಯೂ ಆಗತಕ್ಕ ಕಾರ್ಯಗಳ ದಿಕ್ಕು ತೋರಿತು. ಇದೇ ಬಗೆಯ ಯತ್ನಗಳು ಬೇರೆ ಪ್ರಾಂತಗಳಲ್ಲಿಯೂ ನಡೆದಿದ್ದವು. ೧೯೦೬ ರಲ್ಲಿಯೇ [illegible]ರು(ಓರಿಸಾ)ಈ ಪ್ರಯತ್ನವನ್ನಾರಂಭಿಸಿ[illegible]

(ಸಶೇಷ)

ಎಂ. ಎಸ್. ಶಿದ್ದಪ್ಪ ಬ್ರದರ್ಸ್,

[illegible]ರ್ಕೊನಿಯಂ ವ್ಯಾಪಾರಿಗಳು, ಮೈಸೂರು.

[illegible] ಶಿದ್ದಪ್ಪಾಸ್ [illegible] ನವ [illegible] ತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು ಶೀಟ್ ಕ್ಯಾಲೆಂಡರ್ [illegible] ಶ್ರೀ ಮಹಾವಿಷ್ಣುವಿಗೆ ಸದರ್ಶನ ಪ್ರದಾನ ಮಾಡುವ [illegible] ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ [illegible] ಸಿದ್ಧವಾಗಿವೆ. ನಮ್ಮ ಸಾಪಿಗೆ [illegible] ನೋಡಿರಿ. [illegible] ಆಣೆ [illegible] ಮೇಲ್ಕಂಡ 3 [illegible] ಕ್ಯಾಲೆಂಡರುಗಳು [illegible] ಪಾರ್ಸಲ್ ದ್ವಾರಾ [illegible]. ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತ್ನ ಮಿಶ್ರಿ ಹಲ್ಲುದಲ್ಲಿರುವುದೇನು ?



ರ [illegible] ರೋಗಗಳನ್ನು ನೀಗಿಸಿ
[illegible] ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ
[illegible] ಬಗೆಮಾಡಿಕೊಂಟ ರೋಗಗಳನ್ನು ಪರಿಹರಿಸಿ
[illegible] ಮೂತ್ರದ್ವಾರ ವ್ರಣಾದಿಗಳನ್ನು [illegible]
ಸಂ[illegible] ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ
ರಕ್ತ ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ
ಹರುಷದಿಂದ ಹಸಿವನ್ನುಂಟುಮಾಡಿಸಿ ಶರೀರದ
ಲಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ
ವರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯವೃಷ್ಟಿಯಿಂದ ನರರನ್ನು ವಜ್ರಕಾಯ

ರನ್ನಾಗಿ ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ ಟಿನ್ 1 ಕ್ಕೆ ರೂ. 2—8—0

ವ್ಯವಸ್ಥಾಪಕರು— ರತ್ನ ಮಿಶ್ರಿ ಡಿಪೋ, (ಆಂಜನೇಯ ಜ್ಯೋತಿಷಾಲಯ,)

([illegible] ಪತ್ರಿಕೆಯ ಹೆಸರನ್ನು [illegible]) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ.

"[illegible]"

ಪಾಂಡುರಂಗ ವೆಂಕಟಾಚಲ ಪಂಡಿತರ

ರೋಗಕಾಮಯಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆ [illegible], ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾ[illegible], ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

[illegible] ಎಲ್ಲಾ ವಯಸ್ಸಿನವರಿಗೂ, ಶೀತ [illegible] ಜಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗ[illegible]ತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

[illegible] ದೊರೆಯುತ್ತವೆ. ನಮ್ಮ ವಿಳಾಸವನ್ನೂ, [illegible] ಕಸ್ತೂರಿ ಮಾತ್ರೆ [illegible] ಹೆಸರನ್ನೂ ನೋಡಿಕೊಂಡು [illegible]


ವ್ಯಕ್ತಿ [illegible]:—(ಕಾಲರಾ [illegible] ಗೆ ಸಿದ್ಧೌಷಧ) ಮೂತ್ರ [illegible] ಹೊಟ್ಟೆಯು [illegible]ವುದಾಗಲಿ ಉಂಟಾಗದೆ ಕೊಟ್ಟ ಮೊದ[illegible] ರೋಗವನ್ನು [illegible]ಕ್ಕೆ [illegible]. ಸೀಸೆ 1 ಕ್ಕೆ ರೂ 1

ಲಕ್ಷ್ಮೀವಿಲಾಸ ರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರ[illegible] ಪ್ಲೇಗ್ ರೋಗಿಗಳಿಗೆ ರೋಗವನ್ನು [illegible] ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

[illegible]:—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗಡ್ಡೆ[illegible] ಹಚ್ಚುವ ಔಷಧ. ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ[illegible]

[illegible] ಆಫೀಸು, [illegible] ಬೆಂಗಳೂರು ಸಿಟಿ. } ಹೆಡ್ ಆಫೀಸು ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.



ಬಂಗಾರದ ಕೈಬಳೆಗಳೂ [illegible] ವಗೈರೆ ಆಭರಣಗಳೂ [illegible] ಸಾಮಾನು ಗಳೂ ನಮ್ಮಲ್ಲಿ [illegible] ಸಿಗುತ್ತೆ.

ಮಜೂರಿ ಇತರ ಕಡೆಗಳಿಗಿಂತ [illegible] ಸುಲಭ. ಕೆಲಸ ಇತರ ಕಡೆಗಳಿಗಿಂತ [illegible].

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಒಂದು ಸಲ ನೋಡಿ.

ಯಸ್ ನರಸಿಂಹ ಅಯ್ಯರ್
ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ,
ನಗರ್ತಪೇಟೆ, ಬೆಂಗಳೂರು ಸಿಟಿ.

THE JUPITER GENERAL INSURANCE Co., Ltd

Applications are invited from respectable and influential gentlemen from every Taluk and District Centres for Life Insurance Business. Liberal terms.

A rare opportunity for spare time earnings.

We undertake also Fire & Motor cars Etc., Insurance

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R Ramiaya
Sri Rama Press, D Subbiah Road, Mysore

Regd. No M. 2322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { ಸ್ಥಳಕ್ಕೆ ರೂ. [illegible]
ಚಂದಾ { [illegible]

ಸಂಪುಟ ೧] ಸೋಮವಾರ ೧ ಏಪ್ರೆಲ್ ೧೯೨೯ [ಸಂಚಿಕೆ [illegible]

[illegible]

1—4—1929

ದಬ್ಬಾಳಿಕೆಯನ್ನು ದೂರಮಾಡಿರಿ

ಸರ್ಕಾರದವರು ವೀರಕೇಸರಿ ಮತ್ತು ನವಜೀವನದ ಸಂಪಾದಕರುಗಳ ಮೇಲೆ ರಾಜದ್ರೋಹದ ಮುಖದ್ದಮೆಯನ್ನು ಹಾಕಿದಾಗಿನಿಂದಲೂ ಮಹಾಜನರು ತಂಬಾ [illegible] ಇನ್ನೂ ಇತರರ ಮೇಲೆ ರಾಜ[illegible] [illegible] [illegible] ಸರಕಾರದವರ ರೀತಿನೀತಿಗಳ ವಿಷಯದಲ್ಲಿ ಪ್ರಜೆಗಳಿಗೆ ಭೀತಿಯುಂಟಾಗಿರುವುದು. ಸಾಮಾನ್ಯಜನಗಳ ಮಾತಿನಲ್ಲಿ ಆಡಬೇಕೆಂದರೆ ಸರ್ಕಾರದ ಈಗಿನ ನೀತಿಯು ಅಟ್ಟದಿಂದ ಬಿದ್ದವರನ್ನು ದೊಣ್ಣೆಯಿಂದ ಹೊಡೆದುತಿರುವುದು. ಬೆಂಗಳೂರು ಗಲಭೆಗಳ ಉರಿಯು ಶಾಂತವಾಗುವುದಕ್ಕೆ ಮುಂಚೆಯೇ ಸರಕಾರದವರು ದಬ್ಬಾಳಿಕೆಯ ದಳ್ಳುರಿಯನ್ನು ಎಬ್ಬಿಸಿರುವುದು ದೇಶಕ್ಕೆಲ್ಲಾ [illegible] ಬೆಂಗಳೂರು ಗಲಭೆಗಳ ಪ್ರಕರಣದಲ್ಲಿ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಪ್ರಜೆಗಳಿಗೆ ತಮ್ಮ [illegible] [illegible] [illegible] [illegible] ಇಂತಹ [illegible] [illegible] [illegible] ಬೆಂಗಳೂರು ಗಲಭೆಗಳ [illegible] [illegible] [illegible] [illegible] ರಾಜ[illegible] [illegible] ಅಷ್ಟು ಸುಲಭ[illegible] ತಮ್ಮ ಅಧಿಕಾರದ ಬಲದಿಂದ ಕೆಲವು ಪ್ರಜಾಪ್ರಮುಖರನ್ನು ರಾಜದ್ರೋಹಿಗಳೆಂದು ಹಿಡಿದು ಶಿಕ್ಷೆಗೆ ಗುರಿಪಡಿಸಬಹುದು. ಆದರೆ ಪರಿಣಾಮದಲ್ಲಿ ಅದರಿಂದ ಸರ್ಕಾರಕ್ಕೆ ಕೆಡುಕು ಉಂಟಾಗುವುದು. ನಮ್ಮ ದೇಶದಲ್ಲೇ ಇಗಲಿ ಪ್ರಜಾಸ್ವಾತಂತ್ರ್ಯ ಚಳವಳಿಯನ್ನು ದಬ್ಬಾಳಿಕೆಯಿಂದ ಅಡಗಿಸುವುದಕ್ಕೆ ಆಗಿರುವುದಿಲ್ಲ. ಪ್ರಜಾಸ್ವಾತಂತ್ರ್ಯದ ಚಳವಳಿಗೆ ಒಂದೇ ಒಂದು ಕೊನೆ ಇರುವುದು ಅಧಿಕಾರದಲ್ಲಿರುವವರು ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು ಅವರನ್ನು ಮೇಲಕ್ಕೆತ್ತುವುದೇ ಪ್ರಜಾಸ್ವಾತಂತ್ರ್ಯದ ಚಳುವಳಿಯ ಅಂತ್ಯ. ಈ ವಿಷಯವು ನಮ್ಮ ಸರ್ಕಾರದ ಮಂತ್ರಿಮಂಡಲದವರಿಗೆ ತಿಳಿಯದೇ ಇಲ್ಲ. ಆದರೂ ಕೆಲವು ಕಾಲಗಳಲ್ಲಿ ಅಧಿಕಾರಿಗಳಿಗೆ ಸದಸದ್ವಿವೇಕಬುದ್ಧಿಯು ಮಾಯವಾಗುವುದುಂಟು. ಇಂತಹ ಸಂದರ್ಭದಲ್ಲಿ ಸುಸ್ಥಾನದ ಹಿತೈಷಿಗಳಾದ ಪತ್ರಿಕಾಕರ್ತರುಗಳು ಸರಕಾರವನ್ನು ಎಚ್ಚರಿಸುವುದು ಪರಮಕರ್ತವ್ಯ. ಆ ಕರ್ತವ್ಯವನ್ನು ನಾವು ಮಾಡಿರುತ್ತೇವೆ. ಸರಕಾರದವರು ಸದಸದ್ವಿವೇಕ ಬುದ್ಧಿಯನ್ನು ತಂದುಕೊಂಡು ದಬ್ಬಾಳಿಕೆಯ ನೀತಿಯನ್ನು ದೂರಮಾಡಿ ಪ್ರಜಾಸುಖಾಭಿಗಳಾಗಬೇಕೆಂದು ನಂಬುತ್ತೇವೆ.

ಹಾಸನದ ಮುನಿಸಿಪಾಲಿಟಿ.

ಹಾಸನದಟವನ್ ಮುನಿಸಿಪಲ್ ಕೌನ್‌ಸಿಲ್ಲಿಗೆ ಚುನಾವಣೆಯಲ್ಲಿ ಮ|| ರಾ||ಗಳಾದ (1) ಎಸ್. ಪಿ. ಬಿಣ್ಣಪ್ಪನವರೂ (2) ಬಿ. ಕಪ್ಪಣ್ಣ ಗೌಡರೂ (3) ಕಣ್ಣಪ್ಪನವರೂ (4) ಹೆಚ್. ಬಿ. ಗುಂಡಪ್ಪಗೌಡರೂ (5) ಎ. ನಾರಣಯ್ಯಂಗಾರ್ಯರೂ. (6) ಹೆಚ್. ಪಿ. ಪಾರ್ಶ್ವನಾಥಯ್ಯನವರೂ (7) ಕೆ. ಮಹದೇವಪ್ಪನವರೂ (8) ಶ್ಯಾ ಸೂರ್ಯನಾರಣಪ್ಪನವರೂ (9) ಹೆಚ್. ವಿ. ರಂಗಸ್ವಾಮಿಯವರೂ (10) ಸಿದ್ಧಾಂತಿಶಾಮಶಾಸ್ತ್ರಿಗಳೂ (11) ಟಿ. ಸೂರ್ಯನಾರಾಯಣರಾಯರೂ ನಾಮಿನೇಷನ್‌ನಲ್ಲಿ ಮ||ರಾ|| ಗಳಾದ 1. ರಾವ್‌ಬಹದ್ದೂರ್ ಎನ್. ಎಸ್. ನಂಜುಂಡಯ್ಯನವರೂ 2. V. ಸೂರ್ಯನಾರಾಯಣಶೆಟ್ಟರೂ 3. ಅಬ್ದುಲ್ ರಹಿಂ ಷರೀಫ್‌ರೂ 4. ಮಹಮದ್ ಗೌಸ್‌ರವರೂ 5. ರಂಗಯ್ಯಶೆಟ್ಟರೂ 6. ಹೆಚ್. ಬಿ. ಸಿದ್ದಪ್ಪನವರೂ 7. ತೋಪಯ್ಯನವರೂ 8. ರೆವರೆಂಡ್ ಆರ್. ಚಾಲನರ್‌ರವರೂ ಮತ್ತು ಹಾಸನ ಡಿವಿಷನ್ ಎಕ್ಸಿಕ್ಯುಟೀವ್ ಇಂಜಿನೀಯರ್‌ರವರೂ. ಡಿಸ್ಟ್ರಿಕ್ ಮೆಡಿಕಲ್ ಆಫೀಸರ್‌ರವರೂ, ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರ್‌ರವರೂ (ಎಕ್ಸ್ ಆಫಿಷಿಯೋ ಆಗಿ) 1929 ನೇ ಏಪ್ರೆಲ್ ಒಂದನೇ ತಾ|| ಲಾಗಾಯಿತು ಮೂರು ವರ್ಷಗಳ ಕಾಲ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು.

ಮುನಿಸಿಪಲ್ ಕೌನ್ಸಿಲ್

ಹಾಸನದ ಡಿಸ್ಟ್ರಿಕ್ಟ್ ಹೊಳೆನರಸೀಪುರದ ಮುನಿಸಿಪಲ್ ಕೌನ್‌ಸಿಲ್ಲಿಗೆ (1929 ನೇ ಏಪ್ರೆಲ್ ಒಂದನೇ ತಾ|| ಲಾಗಾಯಿತು) ಚುನಾವಣೆಯಲ್ಲಿ ಮ|| ರಾ|| ಗಳಾದ 1. ಬಿ. ವೆಂಕಟಸ್ವಾಮಯ್ಯರೂ 2. ಹೆಚ್. ಸದಾಶಿವಶಾಸ್ತ್ರಿಗಳೂ 3. ಕೆ. ಆರ್. ಸುಬ್ಬಣ್ಣಾಚಾರ್ಯರೂ 4. ಕೆ. ನಾರಣಪ್ಪನವರೂ 5. ಎಸ್. ನಾಗಪ್ಪಯ್ಯನವರೂ 6. ಅಬ್ದುಲ್ ರಹಿಮಾನ ನರಸಿಂಹಯ್ಯನವರೂ 7. ಕಾಳಪ್ಪಯ್ಯಶೆಟ್ಟರವರೂ 8. ಎಂ. ರಾಮಣ್ಣನವರೂ ನಾಮಿನೇಷನ್‌ನಲ್ಲಿ ಮ|| ರಾ|| ಗಳಾದ 1. ಅಣ್ಣೀಗೌಡರವರೂ 2. [illegible] ಗೌಡರವರೂ 3. ಹೆಚ್. ಎಸ್. ರುದ್ರಪ್ಪನವರೂ 4. ಕಾಳಪ್ಪನವರೂ 5. ವ್ಯಾಕ್ಸಿನೇಷನ್ ಮತ್ತು ತಾಲೂಕು ಅಮಲ್‌ದಾರ್ ಸಬ್ ಅಸಿಸ್ಟೆಂಟ್ ಸರ್ಜನ್‌ರವರೂ ಸಬ್ ಡಿವಿಷನ್ ಆಫೀಸರ್‌ರವರೂ (ಎಕ್ಸ್ ಅಫಿಷಿಯೋ ಆಗಿ) ಮೂರು ವರ್ಷಗಳ ಕಾಲನಿಯಮಿಸಲ್ಪಟ್ಟಿರುವರು.

ಹಿಂದೀ ಪ್ರೇಮಮಂಡಲಿ.

ಈದಿನ ಸಾಯಂಕಾಲ ೫ರ ಘಂಟೆಗೆ [illegible] ವರ ಸ್ಕೂಲ್‌ಹಾಲಿನಲ್ಲಿ ಆಗಸ್ಟ್ ಮೊದಲನೆವಾರ [illegible] ಜಧಾನಿಯಲ್ಲಿ ನಡೆಯಬೇಕಾಗಿರುವ ತೃತೀಯ [illegible] ಕರ್ನಾಟಕ ಹಿಂದೀಪ್ರಚಾರ ಸಮ್ಮೇಳನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುವ ಸಲುವಾಗಿ ಮೀಟಿಂಗ್ ನಡೆವುದರಿಂದ ಮೆಂಬರುಗಳೆಲ್ಲರೂ ದಯಮಾಡಿಸಬೇಕೆಂದು ಮೇಲ್ಕಂಡ ಮಂಡಲಿಯ ಗೌ|| ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

ಮೋಸದ ಮದುವೆ.

ರಾಜಧಾನಿಯ ಈದ್ಗಾ ಬಡಾವಣೆಯಲ್ಲಿ ಹೊಸದಾಗಿ ಮಿಲ್ಲನ್ನು ಕಟ್ಟುತ್ತಿರುವ ಬೊಂಬಾಯಿನ [illegible] ರಾದ ಸೇಟ್ ಬನಾರಸೀಲಾಲ್ ಮುಲ್‌ಜಿನಾಂಡ್ಯವರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಲ್‌ರಾಮ್ ಹಜಾರಿ, ರಾಣಿಬಾಯಿ, [illegible] ವಯ್ಯ. ಎಂಬೀ ಮೂರುಮಂದಿಯ ಮೇಲೆ ಫಿರ್ಯಾದು ಮಾಡಿದಾರೆ. ಮೊದಲನೇ ಅಪರಾಧಿಯು ಬಬ್ಬಹ[illegible] ಯನ್ನು ತನ್ನ ಕುಮಾರ್ತಿ ಎಂದು ನಂಬಿಸಿ ಫಿರ್ಯಾದಿಯಿಂದ 2-3 ನೇ ಅಪರಾಧಿಗಳ ಮಧ್ಯಸ್ಥಿಕೆಯಲ್ಲಿ ಕೆಲವು ಮೊಬಲಗನ್ನು ತೆಗದುಕೊಂಡು ಚಾಮರಾಜ ರಸ್ತೆಯ ಸುಬ್ರಾಯನ ಕೆರೆ ಬಳಿ ಇರುವ ದತ್ತಾತ್ರೇಯದೇವಸ್ಥಾನದಲ್ಲಿ ಫಿರ್ಯಾದಿಗೆ ಕೊಟ್ಟು 23-5-28 ರಲ್ಲಿ ವಿವಾಹ ಮಾಡಿದನೆಂದೂ, ಈಚೆಗೆ ಆ ಹುಡುಗಿಯು ಅಪರಾಧಿಯ ಮಗಳಲ್ಲವೆನ್ನುವುದೂ ಜಾತಿಯಲ್ಲಿ ಕಡಮೆಯಾದವಳೆನ್ನುವುದೂ ಹೊರಪಟ್ಟಿತೆಂದೂ ಮಿಲ್ಲಿಪಾಂಡ್ಯರವರು ಫಿರ್ಯಾದಿನಲ್ಲಿ ಹೇಳಿದಾರೆ. ಈ ಮೊಕದ್ದಮೆಯು ಏಪ್ರಿಲ್ ತಾ. 12 ಕ್ಕೆ ವಿಚಾರಣೆಇಡಲಾಗಿದೆ

ಮರಣ.

ಕಳೆದ ಸೋಮವಾರ ಮೂಗೂರಿಂದ ಟಿ. ನರಸೀಪುರಕ್ಕೆ ಹೋಗುತ್ತಿದ್ದ ಗರಳಪುರಿ ಮೋಟಾರ್ ಸರ್ವಿಸ್ ಬಸ್ಸಿನಿಂದ ಒಬ್ಬ ಮೂಗೂರು ಚಂಕಾಲಯದ ಕಾರ್ಯದರ್ಶಿಯವರಾದ ವೈದ್ಯಪ್ಪನೆಂಬೊಬ್ಬ ಯುವಕನು ಬಸ್ಸು ಓಡುತ್ತಿದ್ದ ಸಮಯದಲ್ಲಿ ಕೆಳಕ್ಕೆಬಿದ್ದು ಮೃತನಾದನು

ಚಂದಾದಾರರಲ್ಲಿ ವಿಜ್ಞಾಪನೆ.

ಈಗ ಸುಮಾರು ಒಂದು ವಾರಗಿಂದ ನಮ್ಮ ಪತ್ರಿಕೆಯು ಪ್ರತಿನಿತ್ಯವೂ ಕ್ರಮವಾಗಿ ಹೊರಡದೆ ಇದ್ದುದಕ್ಕಾಗಿ ನಮ್ಮ ವಾಚಕರ ಕ್ಷಮೆಯನ್ನು ಬೇಡುತ್ತೇವೆ ಕೆಲವು ಅನಿವಾರ್ಯಗಳಿಂದ ಕ್ರಮವು ತಪ್ಪಿತು. ಇನ್ನು ಮುಂದೆ ಕ್ರಮವಾಗಿ ಪತ್ರಿಕೆಯು ಬರುವುದೆಂದು ಭರವಸೆಯು ನಮಗೆಯಿದೆ. ನಮ್ಮ ಚಂದಾದಾರರಲ್ಲಿ ಶೇಕಡ 75 ರಷ್ಟು ಜನರು ನಮಗೆ ಚಂದಾವನ್ನು ಸಲೀಸಾಗಿ ಸಲ್ಲಿಸಿರುವುದಿಲ್ಲ. ಇದರಿಂದ ಬಹಳ ತೊಂದರೆಯಾಗಿರುವುದು. ಪತ್ರಿಕೆಯು ಸಲೀಸಾಗಿ ನಡೆಯಬೇಕಾದರೆ ಚಂದಾದಾರರು ತಮ್ಮ ಚಂದಾವನ್ನು ಕ್ರಮವಾಗಿ ಕೊಡಬೇಕು. ಈ ವಿಷಯಕ್ಕೆ ನಮ್ಮ ಪತ್ರಿಕೆಯ ಪೋಷಕರಾದ ಚಂದಾದಾರರ ಗಮನವು ಕೊಡಲ್ಪಡುವುದೆಂದು ನಂಬುತ್ತೇವೆ.

ವ್ಯವಸ್ಥಾಪಕ.

TAI NADU

1—4—1929

ವರ್ತಮಾನ ಸಂಗ್ರಹ.

ದಾವಣಗೆರೆಯಲ್ಲಿ ದೊಂಬಿ.

ದಾವಣಗೆರೆ ಕಾಮನ ಹಬ್ಬದ ಮೆರವಣಿಗೆ ಸಮಯದಲ್ಲಿ ದೊಂಬಿ ನಡೆಯಿತೆಂದ ಬೆಂಗಳೂರಿಗೆ ಸಮಾಚಾರವು ಮುಟ್ಟಿರುವುದು.

ವಾರ್ಷಿಕೋತ್ಸವ.

ಏಪ್ರೆಲ್ ಮಾಹೆ 6 ನೇ ತಾ ಶನಿವಾರ ಕಡೂರು ರೇಂಜ್ ಉಪಧ್ಯಾಯರ ವಾರ್ಷಿಕೋತ್ಸವ ಮತ್ತು ಸಮ್ಮೇಳನವು ಮಿ|| ಕೆ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಭೋಜನ ವಸತಿ.

ರಾಜಧಾನಿಯ ಕಿಲ್ಲೆಮೊಹಲ್ಲಾ ಗುರುಕಾರ್ ದೇವಣ್ಣನವರ ಬೀದಿ ಮ|| ಬಿ ಸಿ. ಸೋಮಶೇಖರಪ್ಪನವರು ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ವಾಸಕ್ಕೂ ಮತ್ತು ಭೋಜನಕ್ಕೂ ವಸತಿಯನ್ನು ಮಾಡಿರತ್ತಾರೆ.

ಇದು ನಿಜವೇ ?

ಬೆಂಗಳೂರಿನ ಪ್ರಸಿದ್ಧ ಅಡ್ವೋಕೇಟರಾದ ಮ|| ರಾ|| ಎಸ್. ವೆಂಕಟಪತಯ್ಯನವರ ಮೇಲೆ ಸಂಸ್ಕಾರದವರು ರಾಜದ್ರೋಹದ ಮೊಕದ್ದಮೆಯನ್ನು ಹಾಕುವ ವರ್ತಮಾನವಿದೆಯೆಂದು ಸ್ವರಾಜ್ಯ ಪತ್ರಿಕೆಯು ತಿಳಿಸುತ್ತದೆ. ಈಚೆಗೆ ಬಂದ ಸಮಾಚಾರದಲ್ಲಿ ಇದು ಸುಳ್ಳೆಂದು ತಿಳಿಯಬರುತ್ತದೆ.

ಅಪಿಗಲ್ಲಿನ ಅಧೋಗತಿ.

ಶ್ರೀರಂಗಪಟ್ಟಣದ ತಾ|| ಅರಕೆರೆ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ದಿವಾನರವರು ನಡಿಸಿ ಬಂದಮೇಲೆ ಅವರ ಹೆಸರು ಕೆತ್ತಿಸಿ ನೆಡಿಸಿದ್ದ ಅಸ್ತಿಭಾರದ ಚಪ್ಪಡಿಯು ದೂರ ದೂರವಾಗಿ ಒಂದು ಕೊಚ್ಚೆಗುಂಡಿಯಲ್ಲಿ ಬಿಸಾಡಲ್ಪಟ್ಟಿತ್ತು. ಪೋಲೀಸಿನವರು ಮೂವರಮೇಲೆ ಮೊಕದ್ದಮೆಯನ್ನು ಫ್ರೆಂಚ್‌ರಾಕ್ಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದರು. ದರ್ಯಾಫ್ತು ನಡೆದು ಅಪರಾಧದ ರುಜುವಾತಿಲ್ಲವೆಂದು ಮೊಕದ್ದಮೆ ವಜಾ ಆಯಿತು.

ಜೈನ ನಿಧಿ

ಅಹಮದಾಬಾದಿನಲ್ಲಿ ಜೈನ ಸಂಗಡದವರು ಏರ್ಪಡಿಸಿರುವ ಭಾರೀ ನಿಧಿಗೆ ಅಲ್ಲಿನ ನಾಲ್ವರು ಮುಖಂಡರು 150000 ರೂಪಾಯಿಗಳನ್ನು ಪಾವತಿ ಮಾಡಿರುವರು.

ಮುನಿಸಿಪಲ್ ಕೌನ್‌ಸಿಲ್.

ಶ್ರೀರಂಗಪಟ್ಟಣದ ಮುನಿಸಿಪಲ್ ಕೌನ್‌ಸಿಲ್ ಮೆಂಬರಾದ ಮಿ|| ಜಿ. ಜನಾರ್ದನಂ ನಾಯ್ಡುರವರ ಸ್ಥಾನದಲ್ಲಿ ಮಿ|| ಮರಿಯಪ್ಪನವರು ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಮೈಸೂರು ರೇಷ್ಮೆ ಸಮ್ಮೇಳನ

1929 ನೇ ಏಪ್ರೆಲ್ ತಿಂಗಳು 3 ನೇ ವಾರದಲ್ಲಿ ಮೈಸೂರು ಸಂಸ್ಥಾನದ ರೇಷ್ಮೆ ವ್ಯವಸಾಯಗಾರರ ದ್ವಿತೀಯ ಸಮ್ಮೇಳನವು ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿಯಲ್ಲಿ ನಡೆಯುವುದು

ರಾಜ ದ್ರೋಹದ ಮೊಕದ್ದಮೆ

ಮ|| ರಾ|| ಗಳಾದ ಸೀತಾರಾಮ ಶಾಸ್ತ್ರಿಗಳೂ ಮತ್ತು ಅಶ್ವತ್ಥನಾರಾಯಣರಾಯರೂ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ತಮ್ಮ ಮೊಕದ್ದಮೆಯನ್ನು ಜೇಲೇ ಕೋರ್ಟಿಗೆ ವರ್ಗಾಯಿಸಬೇಕೆಂದು ಚೀಫ್ ಕೋರ್ಟಿಗೆ ಅಪೀಲು ಹಾಕಿಕೊಂಡಿದ್ದರು. ಈ ಅಪೀಲು ಏಪ್ರೆಲ್ 6 ನೇ ತಾ|| ನ ದಿವಸ ಕೇಳಲ್ಪಡುವುದು.

ಶಾಸ್ತ್ರೀ—ಖಾನರ ಮೊಕದ್ದಮೆ.

ಮ||ರಾ|| ಸೀತಾರಾಮ ಶಾಸ್ತ್ರಿಗಳಿಂದ ಅಬ್ಬಾಸ್ ಖಾನರ ಮೇಲೆ ಮಾನನಷ್ಟಕ್ಕಾಗಿ ಹಾಕಲ್ಪಟ್ಟಿದ್ದ ಮೊಕದ್ದಮೆಯು ಫಿರ್ಯಾದಿಯು ಕೋರ್ಟಿಗೆ ಹಾಜರಾಗಲಿಲ್ಲವೆಂಬ ನೆಪದಿಂದ ವಜಾಮಾಡಲ್ಪಟ್ಟಿತು. ಫಿರ್ಯಾದಿಯು ಕೋರ್ಟಿಗೆ ಹಾಜರಾಗುವ ಬಗೆಯಾದರೂ ಹೇಗೆ ಅವರನ್ನು ಬಂಧನದಲ್ಲಿಟ್ಟು ಅವರು ಕೋರ್ಟಿಗೆ ಹಾಜರಾಗಲಿಲ್ಲವೆಂದು ಮೊಕದ್ದಮೆಯನ್ನು ವಜಾಮಾಡಿರುವುದು ವಿಷಾದಕರವಾದದು.

ಅಧಿಕಾರ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾದ ಮಿ|| ಎಂ ಚನ್ನರಾಜೇಅರಸಿನವರಿಗೆ, 2?? , 407, (ರಾಜದ್ರೋಹ) 125 ಮತ್ತು 357 ನೇ ಸೆಕ್ಷನ್‌ಗಳ ಪ್ರಕಾರ ಮೊಕದ್ದಮೆಗಳನ್ನು ವಿಚಾರಣೆ ಮಾಡುವುದಕ್ಕೂ, ಸ್ವಹಸ್ತ ಇಂಗ್ಲೀಷಿನಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಬರೆದುಕೊಳ್ಳುವುದಕ್ಕೂ ಅಧಿಕಾರ ಕೊಟ್ಟಿದೆ.

ಗಂಧದ ಎಣ್ಣೆಯ ಕಾರ್ಖಾನೆ.

ಮೈಸೂರಿನ ಗಂಧದ ಎಣ್ಣೆಯ ವ್ಯಾಪಾರದ ಸಂಬಂಧವಾಗಿ ದಸ್ತಗಿರಿಮಾಡಲ್ಪಟ್ಟ ಮ|| ಬಿ. ಸೀತಾರಾಮಾಚಾರ್ಯರನ್ನು ಇನ್ನೂ ಒಂದು ವಾರ ಜೈಲಿನಲ್ಲಿ ಇಡಬಹುದೆಂದು ಪೋಲೀಸಿನವರ ಸ್ಪೆಷಲ್ ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಪಡೆದಿರುವರು. ಅವರ ಮೇಲೆ ಇನ್ನೂ ಚಾರ್ಜುಷೀಟ್ ತಯಾರಾಗಿಲ್ಲ, ಚೀಫ್ ಸೆಕ್ರೆಟರಿಗಳಾದ ಮ|| ಎನ್. ಮಾಧವರಾಯರವರು ಗಂಧದ ಎಣ್ಣೆಯ ಏಜನ್ಸಿಯ ಲೆಖ್ಖವನ್ನು ತನಿಖೆಮಾಡುವುದಕ್ಕೂ ಏಜನ್ಸಿಯನ್ನು ಸ್ಥಾಪಿಸುವುದಕ್ಕೂ ಇಂಗ್ಲೆಂಡಿಗೆ ಪ್ರಯಾಣಬೆಳೆಸಿರುವರು ಇವರು ವಾಪಸ್ಸು ಬರಲು 4 ತಿಂಗಳುಗಳಾಗುವುದು. ಮೈಸೂರು ಗಂಧದ ಎಣ್ಣೆಯ ಡೈರೆಕ್ಟರಾದ ಮ|| ರಾ|| ವೈ. ನರಸಿಂಗರಾಯರು [illegible] ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವರೆಂದು ಸಮಾಚಾರ.

ಕೆಲ್ಸ ಬದಲಾವಣೆ.

ಮೈಸೂರು ರೆಕಾರ್ಡ್ ಆಫ್ ರೈಟ್ಸ್ ಕೆಲಸ ನಿರ್ವಹಿಸುತ್ತಿರುವ ಡೆಪ್ಯುಟಿ ಅಮಲ್ದಾರರಾದ ಮಿ|| ಡಿ. ಶ್ರೀನಿವಾಸಯ್ಯಂಗಾರ್‌ರವರು ನಾಗಮಂಗಲದ ತಾ|| [illegible] ಲ್ದಾರರಾಗಿ ಮಿ|| ಎಂ. [illegible] ರಜೆಯ ಮೇಲೆ [illegible] ರ್ಜ್ ಆಗುವವರೆಗೆ ಬದಲಿ ವರ್ಗಾಯಿಸಲ್ಪಟ್ಟಿರುವರು. ಮಿ|| ಆರ್. ರಂಗರಾಯರವರು ಚೀಫ್ ಸೆಕ್ರೆಟರಿಯವರ ಆಫೀಸ್ ಛಾರ್ಜನ್ನು ಮಿ|| ಎನ್ ಮಾಧವರಾಯರಿಂದಲೂ ಮಿ|| ಬಿ. ನಾರಾಯಣಸ್ವಾಮಿ ಅಯ್ಯಂಗಾರ್‌ರವರು ಜನರಲ್ ಸೆಕ್ರೆಟರಿಗಳ ಆಫೀಸ್ ಛಾರ್ಜನ್ನು ಮಿ|| ಆರ್, [illegible] ತಾ. ಮಧ್ಯಾಹ್ನ ವಹಿಸಿಕೊಂಡರು.

[illegible]

ಪದ್ಧತಿಯ [illegible] ನ ಪತ್ರಿಕೆಯ [illegible] ಪತ್ರಿಕೆಯು [illegible] ಕೊಂಡು ಹೋಗುತ್ತಿದ್ದರು.

ಮಹಾತ್ಮಾ ಗಾಂಧಿಯವರಿಗೆ [illegible]

ಕಲ್ಕತ್ತಾದ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ|| ರಾಕ್ಸ್‌ಬರ್ಗ್ [illegible] ಪಾರ್ಕಿನಲ್ಲಿ ಪರದೇಶೀ ವಸ್ತ್ರಗಳನ್ನು [illegible] ಮಹಾತ್ಮಾ ಗಾಂಧಿಯವರಿಗೆ [illegible] ನ್ನು ಹಾಕಿದ್ದರು. [illegible] ಕೊಡುವುದಿಲ್ಲವೆಂದು [illegible] ಸ್ ಕಮಿಟಿಯವರು [illegible] ಮಹಾತ್ಮಾ ಗಾಂಧಿಯವರಿಗೆ [illegible] ರದ ಮಹಾಜನರು [illegible] ಪಡಬೇಕು.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಸಾಕ್ರೋಕ್ಷನಿಯಂ ವ್ಯಾಪಾರಿಗಳು, ಮೈಸೂರು.

1... ... ಇಸವಿಯ ಶಿದ್ದಪ್ಪಾಸ್ ಮಾಸಲ್ ಪಾಕೆಟ್ ಡೈರಿಗಳು 4 ನಮೂನೆತಯಾರಾಗಿ ಬಿಕರಿಗೆ ಸಿದ್ಧವಾಗಿರುವುದು. ಶೀಟ್ ಕ್ಯಾಲೆಂಡರ್ ... ಮತ್ತು ಶ್ರೀ ಮಹಾಮಪಹ್ನ ... ಪ್ರದಾನ ಮಾಡುವ ರಾಜೇಶ್ವರನ ಪಿಕ್ಚರ್ ಕ್ಯಾಲೆಂಡರುಗಳು ಅನೇಕ ಬಣ್ಣಗಳಿಂದ ... ಬಿಕರಿಗೆ ಸಿದ್ಧವಾಗಿವೆ. ನಮ್ಮ ... ನೋಡಿರಿ. ಪರಸ್ಥಳದವರು 5 ಆಣೆ ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳು ... ಷಲ್ ಪಾರ್ಸಲ್ ದ್ವಾರಾ ರವಾನಿಸಲಾಗುತ್ತೆ. ವಿಳಾಸ — ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

ರತ್ನ ಪುಡಿ/ಹಲ್ಲುದಲ್ಲಿರುವುದೇನು ?



ರ ಕ್ತವೃದ್ಧಿಮಾಡಿ ರತಿರೋಗಗಳನ್ನು ನೀಗಿಸಿ

ತ ನುವಿಗೆ ತಾರುಣ್ಯವಿತ್ತು ತಕ್ಷಣ ಸ್ಖಲನೆಯಾಗುವ ದೌರ್ಬಲ್ಯವನ್ನು ನೀಗಿಸಿ

ನ ರಗಳನ್ನು ಬಿಗಿಮಾಡಿಅಂಟುರೋಗಗಳನ್ನು ಪರಿಹರಿಸಿ

... ದುಳಿಗೆ ಬಲವನ್ನಿತ್ತು ಮೂತ್ರದ್ವಾರ ವ್ರಣಾದಿಗಳನ್ನು ಗುಣಪಡಿಸಿ

ಸ ಂಭೋಗ ಶಕ್ತಿಯನ್ನಿತ್ತು ಸ್ವಪ್ನಾವಸ್ಥೆಯನ್ನು ಹೋಗಲಾಡಿಸಿ

... ಜನರಿಗೆ ಸುಲಭ ರೀತಿಯಿಂದ ರೋಗ ಪರಿಹರಿಸಿ

... ರುಚಿಯಿಂದ ಹಸಿವನ್ನುಂಟುಮಾಡಿಸಿ ಶರೀರದ

... ಕ್ಷಣವನ್ನೂ ಲಾಘವವನ್ನೂ ಅತಿಶಯಗೊಳಿಸಿ

ವ ರ್ಣವನ್ನೂ ವರ್ಚಸ್ಸನ್ನೂ ಹೆಚ್ಚಿಸಿ ವೀರ್ಯಪುಷ್ಟಿಯಿಂದ ನರರನ್ನು ವಜ್ರಕಾಯ

... ಮಾಡುವುದು. ಕ್ರಯ:—1 ಪೌಂಡು ಟಿನ್ 1 ಕ್ಕೆ ರೂ 5. ಅರ್ಧ ಪೌಂಡ್ ಟಿನ್ 1 ಕ್ಕೆ ರೂ. 2—8—0.

ವ್ಯವಸ್ಥಾಪಕರು — ರತ್ನ ಪುಡಿ ಡಿಪೊ, ಆಂಜನೇಯ ಜ್ಯೋತಿಷಾಲಯ,)

(ಆರ್ಡರು ಕೊಡುವಾಗ ಪತ್ರಿಕೆಯ ಹೆಸರನ್ನು ತಿಳಿಸಿ.) ಚಾಮುಂಡೇಶ್ವರಿ ಗುಡಿ ಬೀದಿ, ಬೆಂಗಳೂರು ಸಿಟಿ.

"ಭಿಷಗ್ರತ್ನ"

ಪಾಳ್ಯದ ವೆಂಕಟಾಚಲ ಪಂಡಿತರ

ಲೋಕಾಪಮೃತ್ಯುಹರ

ಕಸ್ತೂರಿ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ... ಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾ..., ..., ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತವೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ ನೆಗಡಿ, ಕೆಮ್ಮು ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. 300 ಮಾತ್ರೆಗಳಿರುವ ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಪಮೃತ್ಯುಹರ ಕಸ್ತೂರಿ ಮಾತ್ರೆ ಎಂಬ ಹೆಸರನ್ನೂ ನೋಡಿಕೊಂಡು ಕೊಳ್ಳಬೇಕು.


... ;—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರ ..., ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದ ... ದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

... ;—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಬುಗೆಯಾಗಿ ... ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿ ... ವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀ ... ;—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗಡ್ಡೆ ... ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಬ್ರಾಂಚ್ ಆಫೀಸು } ಹೆಡ್ ಆಫೀಸು
... ಪೇಟೆ ಬೆಂಗಳೂರು ಸಿಟಿ. } ಶ್ರೀ ಸೀತಾರಾಘವ ವೈದ್ಯಶಾಲಾ ... ಸೂರು,



ಭಂಗಾರದ ಕೈಬಳೆಗಳು ಮೈಸೂರು ವಗೈರೆ ಆಭರಣಗಳೂ ಚೊಕ್ಕ ... ಸಾಮಾನುಗಳೂ ನಮ್ಮಲ್ಲಿ ... ಸಿಗುತ್ತೆ.

ಮಜೂರಿ ಇತರ ... ಕೆಲಸ ... ನಮ್ಮ...

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿರಿ.

ಮುನ್ ನರಸಿಂಹ ಅಯ್ಯರ್ | ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪೆನಿ
ಕೆ. ನಾರಾಯಣಪ್ಪ | ನಗರ್ತಪೇಟೆ, ಬೆಂಗಳೂರು

THE JUPITER GENERAL INSURANCE Co., Ltd.

Applications are invited from respectable and influential gentlemen from every Taluk and District Centre for Life Insurance Business. Liberal terms.

A rare opportunity for spare time earnings.

We undertake also Fire & Motor cars Etc., Insurance

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R Ramiaya
Sri RPress, ama D S, Mubbiah Roadysore

Regd. No M. 2322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ,

ಸಂಪುಟ ೧] ಮಂಗಳವಾರ ೩ ಏಪ್ರೆಲ್ ೧೯೨೮ [ಸಂಚಿಕೆ ೧೪೨

TAI NADU

..—4—1929

ಚಂದಾದಾರರಲ್ಲಿ ವಿಜ್ಞಾಪನೆ.

ಈಗ ಸುಮಾರು ಒಂದು ವಾರದಿಂದ ನಮ್ಮ ಪತ್ರಿಕೆಯು ಪ್ರತಿನಿತ್ಯವೂ ಕ್ರಮವಾಗಿ ಹೊರಡದೆ ಇದ್ದುದಕ್ಕಾಗಿ ನಮ್ಮ ವಾಚಕರ ಕ್ಷಮೆಯನ್ನು ಬೇಡುತ್ತೇವೆ. ಕೆಲವು ಅನಿವಾರ್ಯಗಳಿಂದ ಕ್ರಮವು ತಪ್ಪಿತು. ಇನ್ನು ಮುಂದೆ ಕ್ರಮವಾಗಿ ಪತ್ರಿಕೆಯು ಬರುವುದೆಂದು ಭರವಸೆಯು ನಮಗೆಯಿದೆ. ನಮ್ಮ ಚಂದಾದಾರರಲ್ಲಿ ಶೇಕಡ 75 ರಷ್ಟು ಜನ ನಮಗೆ ಚಂದಾವನ್ನು ಸಲ್ಲಿಸಬೇಕಾಗಿರು[illegible] ಇದರಿಂದ ಬಹಳ ತೊಂದರೆಯಾಗಿರು[illegible] ನಡೆಯಬೇಕಾದರೆ [illegible] ಚಂದಾವನ್ನು ಕ್ರಮವಾಗಿ ಕೊ[illegible] ಈ [illegible] ನಮ್ಮ ಪತ್ರಿಕೆಯ ಪೋಷಕರಾದ [illegible] ಕೊಡುವರೆಂದು [illegible]ತ್ತೇವೆ.

ವ್ಯವಸ್ಥಾಪಕ.

ಚನ್ನಪಟ್ಟಣದ ದೊಂಬಿ.

[illegible] ಪಟ್ಟಣದಲ್ಲಿ ಕಳೆದ ತಿಂಗಳು 25 ನೇ ತಾ॥ [illegible] ನಡೆದ ದೊಂ[illegible] ಅನೇಕ ಸಮಾಚಾರಗಳು [illegible] ಈ ವಿಷಯವಾಗಿ ಜನಗಳಿಗೆ ಖರಾರು ವಾಕ್ಯಾದ ಸಮಾಚಾರಗಳನ್ನು ತಿಳಿಸುವುದಕ್ಕೆ ಒಂದು ಪ್ರಕಟನೆಯನ್ನು ಕೂಡಲೇ ಹೊರಡಿಸಬೇಕು. ಈ ವಿಷಯದಲ್ಲಿ ತಾತ್ಸಾರ ಮಾಡುವುದು ಸರಿಯಲ್ಲ. ಚನ್ನಪಟ್ಟಣದಲ್ಲಿ ಆಗಾಗ್ಯೆ ಕೊಲೆಗಳೂ, ದಾರಾಪಾರಿಗಳೂ, ದೊಂಬಿಗಳೂ ನಡೆಯುತ್ತಲೇ ಇವೆ. ಪೋಲೀಸು ಕಂಪೆನಿಯು ಏನೂ ಸಾಲದು. ಕಳೆದ ಸೋಮವಾರ ನಡೆದ ಗಲಭೆಯಲ್ಲಿಯೂ ಪೋಲೀಸಿನವರ ಬಲಹೀನತೆಯೇ ಗಲಾಟೆಯು ಪ್ರಬಲಿಸುವುದಕ್ಕೆ ಕಾರಣವಾಯಿತೆಂದು ತಿಳಿಯಬರುತ್ತದೆ.

[illegible] ಆರಂಭವಾದ ರೀತಿಯು ಈ ಕೆಳಗೆ [illegible] ಚನ್ನಪಟ್ಟಣಕ್ಕೆ [illegible] ಭೈರವಪಟ್ಟಣ [illegible] ಹಳ್ಳಿ [illegible] ಇರುವುದು. [illegible] ತಿಂಗಳು [illegible] ಹಂಪಲುಗಳನ್ನು [illegible] ಮಾರುತ್ತಿದ್ದಳು. [illegible] ಆಕೆಯ ಹತ್ತಿರ ಎಳನೀರನ್ನೂ [illegible] ವ್ಯಾಪಾರ ಮಾಡಿದರು. ಕಲ್ಲು[illegible] ವಿಷಯವಾಗಿ ಬಹಳ ಚೌಕಾಶಿ ನಡೆಯಿತು. [illegible] ಬರೀದಿ ಒಂದೇ ಕಾಸು. ಮಹಮದೀಯ[illegible] ಒಂದು ಕಾಸನ್ನು ಕೊಡಲು ಹಿಂಜರಿದಿದ್ದರಿಂದ ಆ ಹೆಂಗಸಿಗೂ ಈ ಮಹಮದೀಯರಿಗೂ ಜೋರು [illegible] ನಡೆದವು. ಆ ಹಳ್ಳಿಯ [illegible] ಕಡೆ ಸೇರಿಕೊಂಡರು. ಆ ಊ[illegible]ರಿಗೂ ಮಹಮದೀಯರಿಗೂ ಹೊಡೆದಾಟವಾಯಿ[illegible] ಮಹಮದೀಯರಿಗೆ ಪೆಟ್ಟು ಬಿತ್ತು. ಈ ಸಮಾಚಾರವು ಕಾಡುಕಿಚ್ಚಿನಂತೆ ಚನ್ನಪಟ್ಟಣಕ್ಕೆ ಮುಟ್ಟಿತು. [illegible] ಮಹಮದೀಯರ ಪ್ರಾಬಲ್ಯ ಜಾಸ್ತಿ. [illegible] ಪಟ್ಟಣಕ್ಕೆ ಬಂದವರನ್ನೆಲ್ಲಾ [illegible] ತಾ॥ ನಲ್ಲಿ ಭೈರವ ಪಟ್ಟಣದ ಇಬ್ಬರು ಬಂದು ಜವಳಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಮಹಮದೀಯರು ಈ ಜವಳೀ ಅಂಗಡಿಗೆ ನುಗ್ಗಿ ಆ ಇಬ್ಬರನ್ನು ಹೊಡೆಯಲಾರಂಭಿಸಿದರು. ಪೋಲೀಸಿನವರು ಬಂದರು. ಅವರ ಕೈಲೂ ಈ ಜಗಳವನ್ನು ಬಿಡಿಸುವುದಕ್ಕೆ ಆಗಲಿಲ್ಲ. ಕಡೆಗೆ ಆ ಅಂಗಡಿಯವನೇ ಉಪಾಯವಾಗಿ ಜಗಳವನ್ನು ನಿಲ್ಲಿಸಿದನು. ಪುನಃ ಮಧ್ಯಾಹ್ನ ಒಕ್ಕಲಿಗರು ಕೆಲವು ಮಹಮದೀಯರನ್ನು ಹೊಡೆದರೆಂಬ ಸುದ್ದಿಯು ಹರಡಿ ಭೈರವ ಪಟ್ಟಣದ ಕಡೆಗೆ ಮಹಮದೀಯರ ಗುಂಪೊಂದು ಲಾಠಿ ಮೊದಲಾದವುಗಳನ್ನು ತೆಗೆದುಕೊಂಡು ಹೊರಟಿತು. ಭೈರವ ಪಟ್ಟಣದಿಂದಲೂ ಒಕ್ಕಲಿಗರು ಮಹಮದೀಯರನ್ನು ಹೊಡೆಯಲು ಗುಂಪಾಗಿ ಹೊರಟರು. ಈ ಎರಡು ಗುಂಪಿಗೂ ಯುದ್ಧವಾಗುವುದಕ್ಕೆ ಮೊದಲೇ ಪೋಲೀಸ್ ಸೈನ್ಯವು ಎರಡು ಗುಂಪನ್ನೂ ಚದರಿಸಿ ಕಳುಹಿಸಿತು. ರಾತ್ರಿವೇಳೆಗೂ ಅಲ್ಲೊಂದು ಇಲ್ಲೊಂದು ಹೊಡೆದಾಟಗಳು ನಡೆಯುತ್ತಿದ್ದವು. ರಿಸರ್ವ್ ಪೋಲೀಸಿನವರು ಬಂದು ಚನ್ನಪಟ್ಟಣದಲ್ಲಿಯೂ ಭೈರವ ಪಟ್ಟಣದಲ್ಲಿಯೂ ಕ್ಯಾಂಪು ಮಾಡಿರುವರು. ಆದರೂ ಗಲಾಟೆಯು ಇನ್ನೂ ಪೂರ್ತಿಯಾಗಿ ಶಮನವಾಗಿಲ್ಲ. ಪೋಲೀಸ್ ಸಹಾಯವು ಇನ್ನೂ ಹೆಚ್ಚಾಗಿ ಬೇಕಾಗಿರುವುದು.

ವಿವಿಧ ವರ್ತಮಾನ.

ಛತ್ರ

ರಾಜಧಾನಿಯ ಚಾಮರಾಜ ರೋಡ್ ಮಸೀತಿಯ ಪಶ್ಚಿಮದಲ್ಲಿರುವ ತೋಟದ ನಿವೇಶನವನ್ನು ಮಾಫಿಯಾಗಿ ಕೊಡಿಸಿದಲ್ಲಿ ಆ ಜಾಗದಲ್ಲಿ ಪರಸ್ಥಳದವರಿಗೆ ವಸತಿಯನ್ನು ಕಲ್ಪಿಸುವುದಕ್ಕಾಗಿ ಧರ್ಮದ ಛತ್ರವನ್ನು ಕಟ್ಟಿಸುವುದಾಗಿಯೂ ಕಾಮಗಾರಿಯನ್ನೆಲ್ಲಾ ಟ್ರಸ್ಟ್ ಬೋರ್ಡಿನವರೇ ಮುತುವರ್ಜಿಯಿಂದ ಮಾಡಿಸಬೇಕೆಂದೂ ಲೋಕಸೇವಾನಿರತರಾದ ಮ॥ ಅಂಬಳೆ ಅಣ್ಣಯ್ಯ ಪಂಡಿತರವರು ಟ್ರಸ್ಟ್ ಬೋರ್ಡಿಗೆ ಅರ್ಜಿ ಹಾಕಿದ್ದರು. ಇದರಂತೆ ಈ ಧರ್ಮಕಾರ್ಯಕ್ಕೆ ಸರ್ಕಾರಿ ಮುಜರಾಯಿ ಖಾತೆಯಿಂದ 22000 ಸಾವಿರ ರೂ. ದೊರೆಯುವುದಲ್ಲದೆ ಮಿ॥ ಪಂಡಿತರವರು 8000 ರೂ. ಉಚಿತವಾಗಿ ಕೊಡಲೊಪ್ಪಿದರು. ಆದಕಾರಣ 5000 ರೂ. ಖರ್ಚು ತಗಲಿರುವ ಆ ತೋಟದ ನಿವೇಶನವನ್ನು ಮುಫತ್ತಾಗಿ ಕೊಡಬಹುದೆಂದೂ ಕಟ್ಟಡದ ಕಾಮಗಾರಿಯನ್ನು ಟ್ರಸ್ಟ್ ಬೋರ್ಡಿನವರೇ ವಹಿಸತಕ್ಕದೆಂದೂ ಕಳೆದ ಶನಿವಾರದ ಮೀಟಿಂಗಿನಲ್ಲಿ ಇತ್ಯರ್ಥವಾಯಿತು.

ಶ್ರೀ ನರಸಿಂಹ ಭಾರತೀ ಸ್ವಾಮಿಗಳವರ ಜಯಂತಿ.

ಶ್ರೀ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರ ೭೨ ನೆಯ ವರ್ಷದ ಜಯಂತ್ಯುತ್ಸವವು ಇದೇ ವಿಭವನಾಮ ಸಂವತ್ಸರದ ಫಾಲ್ಗುಣ ಬಹುಳ ಏಕಾದಶೀ ಅಂದರೆ ಸನ್ 1929ನೇ ಇಸವಿ ಏಪ್ರಿಲ್ 5 ನೇ ತಾ॥ ಶುಕ್ರವಾರ ಶ್ರೀ ಅಭಿನವ ಶಂಕರಾಲಯದಲ್ಲಿ ನಡೆಯುವುದು. ಸಾಯಂಕಾಲ 6-30 ಕ್ಕೆ ಶ್ರೀ ಅಭಿನವ ಶಂಕರಾಲಯದಲ್ಲಿ ಮಹಾಮಹೋಪಾಧ್ಯಾಯ ವಿದ್ಯಾನಿಧಿ ವೇದಮೂರ್ತಿ ಬ್ರಹ್ಮಶ್ರೀ ವಿರೂಪಾಕ್ಷ ಶಾಸ್ತ್ರಿಗಳವರು ಶ್ರೀ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರ ದಿವ್ಯಚರಿತ್ರೆಯಲ್ಲಿ ಕೆಲವು ಮುಖ್ಯಾಂಶಗಳನ್ನು ಕುರಿತು ಉಪನ್ಯಾಸ ಮಾಡುವರು.

ಹೈದರಾಬಾದ್ ನೈಜಾಮರು.

ಹೈದರಾಬಾದಿನ ನೈಜಾಮರಾದ ಹಿಸ್ ಎಕ್ಸಾಲ್ಟೆಡ್ ಹೈನೆಸ್ ಆಸಫ್ ಜಾ, ಮುಜಫರ್ ಉಲ್ ಮುಲ್ಕ್, ನೈಜಾಮುಲ್ ಮುಲ್ಕ್ ನಿಜಾಮುದ್ದೌಲಾ, ನವಾಬ್ ಮೀರ್ ಸರ್ ಉಸ್ಮಾನ್ ಆಲೀಖಾನ್ ಬಹದ್ದೂರ್ ಫತ್ತೆಜಂಗ್ ಜಿ. ಸಿ. ಎಸ್. ಐ., ಜಿ. ಬಿ. ಇ. ಯವರು ಈ ವಾರ ನಮ್ಮ ಸಂಸ್ಥಾನದ ಅತಿಥಿಗಳಾಗಿ ಬಂದಿರುವರು.

ಹೈದರಾಬಾದ್ ಸಂಸ್ಥಾನವು ಭರತಖಂಡದ ದೇಶೀಯ ಸಂಸ್ಥಾನಗಳಲ್ಲಿ ವಿಸ್ತಾರ ಮತ್ತು ಜನಸಂಖ್ಯೆಯಲ್ಲಿ ಮೊದಲನೆಯದಾಗಿ, ೮೩ ಸಹಸ್ರ ಚದರಮೈಲಿ ವಿಸ್ತೀರ್ಣವೂ, ೧೨ ಮಿಲಿಯ ಜನಸಂಖ್ಯೆಯೂ ಉಳ್ಳದ್ದಾಗಿದೆ. ಮರಾಠವಾಡಿ, ಕರ್ನಾಟಕ, ತೆಲಿಂಗಾನ ಎಂಬದಾಗಿ ದೇಶವು ಮೂರು ಮುಖ್ಯ ವಿಭಾಗಗಳಾಗಿರುವುದು. ಮೂರನೇ ಒಂದು ಭಾಗವಾದ ಕರ್ನಾಟಕದಲ್ಲಿ ಕನ್ನಡವೇ ಮಾತೃಭಾಷೆ. ಉಳಿದ ಕಡೆಗಳಲ್ಲಿ ಮರಾಟಿ ತೆಲುಗು ಭಾಷೆಗಳು ಪ್ರಚಾರದಲ್ಲಿರುವುವು. ಇವಲ್ಲದೆ ವನಪರ್ತಿ ಗುಗುಂಟ, ಗದ್ವಾಲ್, ಜಟ್ಪಲಾಗಿರಿ ಮುಂತಾದ ಕೆಲವು ಸಣ್ಣ ಹಿಂದೂ ಸಂಸ್ಥಾನಗಳೂ ನೈಜಾಮರ ಅಧೀನಕ್ಕೊಳಪಟ್ಟಿವೆ. ಹೈದರಾಬಾದಿನ ನಿವಾಸಿಗಳಲ್ಲಿ ಹಿಂದುಗಳು ಶೇಕಡ ೮೦ ರಷ್ಟಿರುವರು. ಮಹಮ್ಮದೀಯರು ಶೇಕಡ ೧೦ ರಷ್ಟು. ಇಲ್ಲಿನ ಆಡಳಿತವೂ ಮಹಮದೀಯರ ಒಂದು ಪಂಗಡವಾದ ಮೊಗಲಾಯರ ಕೈಯಲ್ಲಿರುವುದರಿಂದ ಇಲ್ಲಿನ ಆಡಳಿತಕ್ಕೆ ಮೊಗಲಾಯಿ ಪ್ರಭುತ್ವವೆಂದು ಹೆಸರು ಬಂದಿರುವುದು. ೧೭೪೮ ರಲ್ಲಿ ನೈಜಾಮುಲ್ ಮುಲ್ಕನ ಅವಸಾನವಾಗುವದರೊಳಗೆ ಮೊಗಲ್ ಸಾಮ್ರಾಜ್ಯವು ಹಾಳಾಗಿ ಹೈದರಾಬಾದು ಸ್ವತಂತ್ರ ಸಂಸ್ಥಾನವಾಯಿತು. ಅಲ್ಲಿಂದೀಚೆಗೆ ಒಂಭತ್ತು ತಲೆಗಳು ಕಳೆದುಹೋಗಿವೆ. ಈಗಿನ ನೈಜಾಮರು ಹತ್ತನೆಯವರು. ಇವರು ೧೯೧೧ ನೇ ಇಸ್ವಿಯಲ್ಲಿ ಸಿಂಹಾಸನಾರೋಹಣಮಾಡಿದಂದಿನಿಂದ ಸಂಸ್ಥಾನದ ಅಭಿವೃದ್ಧಿಗಾಗಿ ಹಗಲಿರುಳೂ ಪರಿಶ್ರಮಿಸುತ್ತಿರುವರು. ರಾಜ್ಯಾಡಳಿತವನ್ನು ತಾವೇ ಖುದ್ದಾಗಿ ನೋಡಿಕೊಳ್ಳುವುದಲ್ಲದೆ ತಮ್ಮ ಹಿಂದೂ ಪ್ರಜೆಗಳ ಕಷ್ಟಸುಖಗಳ ಕಡೆಗೆ ಬಹುವಾಗಿ ಗಮನಕೊಡುವರು. ಉಸ್ಮಾನಿಯಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಸಂಸ್ಥಾನದಲ್ಲಿ ವಿದ್ಯಾಪ್ರಸಾರ ಮಾಡಿದುದೇ ಇವರ ಪ್ರಜಾಭಿವೃದ್ಧಿ ಕಾರ್ಯಗಳಲ್ಲಿ ಮುಖ್ಯವಾದುದು. ಹೈದರಾಬಾದಿಗೆ ನೀರು ಸರಬರಾಯಿ ಮಾಡುವ ಹಿಮಯತ್ ಸಾಗರವೆಂಬ ಭಾರಿಕೆರೆಯನ್ನು ಇವರು ಕಟ್ಟಿಸಿದರು. ಇವರು ಒಳ್ಳೇ ಭಾಷಾ ಪಂಡಿತರು. ಸಂಸ್ಥಾನಕ್ಕೆ ಸ್ವಂತ ನಾಣ್ಯವೂ, ಸ್ವಂತ ಪೋಸ್ಟಾಫೀಸು ರೈಲ್ವೆ ಮುಂತಾದ ಅನುಕೂಲಗಳೂ ಇರುತ್ತವೆ. ಇಂಪೀರಿಯಲ್ ಸರ್ವಿಸ್ ಸೈನ್ಯವಲ್ಲದೆ ಸಂಸ್ಥಾನದ ಉಪಯೋಗಾರ್ಥವಾಗಿ ೧೭ ಸಾವಿರ ಸೈನ್ಯವಿರುತ್ತದೆ. ಹೈದರಾಬಾದಿನ ಆಡಳಿತವು ಮೊಗಲ್ ಚಕ್ರಾಧಿಪತ್ಯ ಕಾಲದಿಂದ ಪ್ರಚಾರದಲ್ಲಿದ್ದು ನೂತನ ನಾಗರೀಕತೆಗನುಸಾರವಾಗಿ ಬದಲಾವಣೆಹೊಂದುತ್ತಾ ಈಗಲೂ ಜೀವಂತವಾಗಿ ಪ್ರಜಾಹಿತಸಾಧಕವಾಗಿ ನಡೆಯುತ್ತಿರುವುದು.

ಪ್ರಜಾಯಿನಾಡು.

2—4—1929

ವರ್ತಮಾನ ಸಂಗ್ರಹ.

ವರ್ಗಾವರ್ಗಿ.

ಕೆಳಗೆ ನಮೂದಿಸಿರುವ ಸಬಾರ್ಡಿನೇಟ್ ಜಡ್ಜಿಗಳ ಮತ್ತು ಮುನ್‌ಸೀಫ್‌ರ ಗಳ ವರ್ಗಾವರ್ಗಿಯು ಬೇಸಿಗೆಯ ರಜಾ ಮುಗಿದು ಸಬಾರ್ಡಿನೇಟ್ ಸಿವಿಲ್ ಕೋರ್ಟುಗಳು ಪ್ರಾರಂಭವಾಗುತ್ತಲೇ ಜಾರಿಗೆ ಬರುವುವು.

ಮೈಸೂರು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಎನ್. ಕೆ. ಶ್ರೀನಿವಾಸರಾಯರು ಮೈಸೂರು ಸಬಾರ್ಡಿನೇಟ್ ಜಡ್ಜರಾಗಿಯೂ ಸ|| ಜಡ್ಜರಾದ ಮಿ|| ಹೆಚ್ ಎಮ್. ಕೃಷ್ಣಸ್ವಾಮಿಯವರು ಮೈಸೂರು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬೆಂಗಳೂರು ಫಸ್ಟ್ ಮುನ್‌ಸೀಫ್‌ರಾದ ಮ|| ಜಿ. ಪಿ. ನಾಗಭೂಷಣರಾಯರು ಚಿತ್ರದುರ್ಗದ ಮುನ್‌ಸೀಫರಾಗಿಯೂ ಚಿತ್ರದುರ್ಗದ ಮುನ್‌ಸೀಫ್‌ರಾದ ಮಿ|| ವಿ. ಕಂದಸ್ವಾಮಿ ಪಿಳ್ಳೆಯವರು ಮಂಡ್ಯದ ಮುನ್‌ಸೀಫ್‌ರಾಗಿಯೂ ಮಂಡ್ಯದಲ್ಲಿರುವ ಮಿ|| ಯು. ಡಿ. ನಾರಾಯಣಮೂರ್ತಿಯವರು ನಂಜನಗೂಡಿಗೂ ನಂಜನಗೂಡಿನಲ್ಲಿರುವ ಮಿ|| ಎಂ. ಎನ್. ಸುಬ್ಬಣ್ಣನವರು ತುಮಕೂರು ಫಸ್ಟ್ ಮ್ಯಾಜಿಸ್ಟ್ರೇಟರಾಗಿಯೂ ತುಮಕೂರು ಫಸ್ಟ್ ಮ್ಯಾಜಿಸ್ಟ್ರೇಟರಾದ ಮಿ|| ಜಿ. ಅಬ್ದುಲ್‌ರಹೀಂರವರು ತುಮಕೂರು ಸೆಕೆಂಡ್ ಮುನ್‌ಸೀಫ್‌ರಾಗಿಯೂ ಅಲ್ಲಿನ ಸೆಕೆಂಡ್ ಮುನ್ಸೀಫರಾಗಿದ್ದ ಮಿ|| ಡಿ. ರಾಘವೇಂದ್ರರಾಯರು ಕೋಲಾರ್‌ಪೇಟೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಕೋಲಾರ್‌ಪೇಟೆಯ ಮಿ|| ಜಿ. ಸುಂದರರಾಯರು ಬೆಂಗಳೂರು ಫಸ್ಟ್ ಮ್ಯಾಜಿಸ್ಟ್ರೇಟರಾಗಿಯೂ ಅಲ್ಲಿನ ಮಿ|| ಹೆಚ್. ನಂಜುಂಡಯ್ಯನವರು ಬೆಂಗಳೂರು ಫಸ್ಟ್ ಮುನ್‌ಸೀಫರಾಗಿಯೂ ನರಸಿಂಹರಾಜಪುರದ ಮುನ್‌ಸೀಫ್ ಮಿ|| ಲಕ್ಷ್ಮೀನಾರಾಯಣ ಜೋಯಿಸರವರು ಚಿಕ್ಕಮಗಳೂರು ಮುನ್‌ಸೀಫ್‌ರಾಗಿಯೂ ಚಿಕ್ಕಮಗಳೂರಿನ ಮಿ|| ಎನ್. ಶಾಮಯ್ಯಂಗಾರ್ಯರವರು ಮಧುಗಿರಿ ಮುನ್‌ಸೀಫರಾಗಿಯೂ ಮಧುಗಿರಿಯ ಮಿ|| ವಿ. ಪಿ. ರಾಮಕೃಷ್ಣಯ್ಯಂಗಾರ್ಯರು ದೊಡ್ಡಬಳ್ಳಾಪುರದ ಮುನ್‌ಸೀಫರಾಗಿಯೂ ದೊಡ್ಡಬಳ್ಳಾಪುರದ ಮಿ|| ಟಿ. ಮಹಮದ್ ಮುಸ್ತಾಫರವರು ಕೋಲಾರದ ಸೆಕೆಂಡ್ ಮ್ಯಾಜಿಸ್ಟ್ರೇಟರಾಗಿಯೂ ಕೋಲಾರದ ಮಿ|| ಎಸ್. ಕನಕರತ್ನರಾಜ್‌ರವರು ನರಸಿಂಹರಾಜಪುರದ ಮುನ್‌ಸೀಫ್‌ರ ಕೆಲಸಕ್ಕೂ ವರ್ಗಾಯಿಸಲ್ಪಟ್ಟಿರುವರು.

ಸಂಚಾರದ ರದ್ದು.

ಮೊದಲು ತಿಳಿಸಿದ್ದ ಪ್ರಕಾರ ತೃತೀಯ ಸಚಿವರು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಈ ತಿಂಗಳು ಸಂಚಾರ ಮಾಡುವುದಿಲ್ಲವೆಂದು ಸರ್ಕಾರದ ಪ್ರಕಟಣೆಯಾಗಿದೆ.

ತಿದ್ದುಪಡಿ.

ಮ|| ರಾ|| ಬಿ. ಸೀತಾರಾಮಾಚಾರ್ಯರ ದಸ್ತಗಿರಿ ವಿಷಯವಾಗಿ ಕಳೆದ 23ನೇ ತಾ|| ನ ನಮ್ಮ ಪತ್ರಿಕೆಯ ಅಗ್ರ ಲೇಖನದಲ್ಲಿ ಮ|| ಅಡ್ವೋಕೇಟ್ ಕೆ. ರಾಮಸ್ವಾಮಯ್ಯನವರೂ ಸಹ ಜಾಮೀನು ಕೊಡುವುದಕ್ಕೆ ಹೋಗಿದ್ದರೆಂದು ಪ್ರಕಟಿಸಲ್ಪಟ್ಟಿರುವ ವಿಷಯವು ವಾಸ್ತವವೆಂದು ಅವರು ತಿಳಿಯಪಡಿಸುತ್ತಾರೆ.

12 ಲಕ್ಷ ರೂ. ಗಳ ನಷ್ಟ.

ಈ ತಿಂಗಳು 24 ನೇ ತಾ|| ಮಧ್ಯಾಹ್ನ ಬೊಂಬಾಯಿನ ಒಂದು ಬಂದರಿನಲ್ಲಿ ಲಕ್ಷ ರೂ ಗಳಿಗೆ ಮೇಲ್ಪಟ್ಟು ನಷ್ಟವಾಗಿರುತ್ತದೆ.

ರಾಜರ ಮರಣ

ಭರತಪುರದ ಮಹಾರಾಜರವರು ಮಾರ್ಚಿ 27ನೇ ತಾ|| ಪ್ರಾತಃಕಾಲ 4 ಘಂಟೆ ಸಮಯದಲ್ಲಿ ವಿಧಿವಶರಾದರು.

ಕಾಂಗ್ರೆಸ್ ಫಂಡ್

ನಾಗಪುರದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮಿ|| ಹೆಚ್. ವಿ. ಅಭ್ಯಂಕರ್‌ರವರು ಕಲ್ಕತ್ತಾ ಕಾಂಗ್ರೆಸ್ಸಿನ ಠರಾವಿನಂತೆ ತಮ್ಮ ಆದಾಯದ ೧ ಭಾಗವಾದ ಆರು ನೂರ ರೂಪಾಯಿಗಳನ್ನು ಕಾಂಗ್ರೆಸ್ ನಿಧಿಗಾಗಿ ದಾನ ಮಾಡಿರುವರು.

ಡಿಸ್ಟ್ರಿಕ್ಟ್ ಬೋರ್ಡ್.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುತನಕ್ಕೆ ರಾಜೀನಾಮೆಕೊಟ್ಟ ಮಿ|| ಎಸ್. ಎಲ್. ಸಿಲ್ವಂ ಸ್ಥಾನದಲ್ಲಿ ಮಿ|| ಟಿ. ಧರ್ಮರಾಜ ಶೆಟ್ಟರವರು ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ಸರ್ಕಾರೀ ಸುದ್ದಿ.

ಹೊಳೆನರಸೀಪುರದ ಮ್ಯಾಜಿಸ್ಟ್ರೇಟ್ ಕೋರ್ಟಿನ ಮುನ್‌ಸೀಫ್‌ರ ಕೆಲಸ ನೋಡುತ್ತಿರುವ ಮಿ|| ಟಿ. ಎನ್. ಮಲ್ಲಪ್ಪನವರಿಗೆ ಏಪ್ರೀಲ್ ಒಂದನೇ ತಾ. ನಿಂದ ಬೇಸಿಗೆ ರಜಾ ಕೊಟ್ಟಿರುವುದರಿಂದ ಆ ಕಾಲದಲ್ಲಿ ಅಡ್ವೋಕೇಟರಾದ ಮಿ|| ವಿ. ವೇಣುಗೋಪಾಲ ಮೊದಲಿಯಾರ್ರವರು ಎರಡನೆ ದರ್ಜೆಯಲ್ಲಿ ಮೇಲಿನ ಕೆಲಸಮಾಡುವರು.

ಮೂಡಿಗೆರೆ ತಾ. ಅಮಲ್‌ದಾರ್ ಮಿ|| ಎಚ್ ಪುಟ್ಟರಂಗಸ್ವಾಮಿಯವರಿಗೆ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುವುದರಿಂದ, ರೆವಿನ್ಯೂ ಸೆಕ್ರೆಟರಿಯೆಟ್ಟಿನ ಸೀನಿಯರ್ ಕ್ಲಾರ್ಕ್ ಆದ ಮಿ|| ಜಿ. ರಾಮಚಂದ್ರರಾಯರವರು ಮೇಲಿನ ಕೆಲಸಮಾಡುವರು.

ರೇಟ್ ಪೇಯರುಗಳ ಸಂಘ

1929 ನೇ ಏಪ್ರೆಲ್ ಮಾಹೆ 3 ನೇ ತಾ ಬುಧವಾರ ಸಾಯಂಕಾಲ 6 ಘಂಟೆಗೆ ರಾಜಧಾನಿಯ ಟವನ್‌ಹಾಲಿನಲ್ಲಿ ಮೇಲ್ಕಂಡ ಸಂಘದ ಕಾರ್ಯನಿರ್ವಾಹಕ ಮಂಡಲಿಯ ಮೀಟಿಂಗು ನಡೆಯುವುದರಿಂದ ಎಕ್ಸಿಕ್ಯೂಟೀವ್ ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ರಾಮಚಂದ್ರನ್.

ಪಿ. ಸೀತಾರಾಮಯ್ಯ.

ಆ|| ಸೆಕ್ರೆಟರಿಗಳು.

ಆಡಿಟರ್ ಸರ್ಟಿಫಿಕೇಟ್.

ಹಾಸನದ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸಿನಲ್ಲಿ ಕೆಲಸಮಾಡುತ್ತಿರುವ ಕಂಟ್ರೋಲರ್ ಆಫೀಸಿನ ಅಕೌಂಟೆಂಟರಾದ ಮಿ|| ಪಿ. ನರಸಿಂಹಾಚಾರ್ ಬಿ. ಎ. ರವರಿಗೆ ಇಂಗ್ಲೀಷ್ ಮತ್ತು ಕನ್ನಡದ ಲೆಖ್ಖಗಳನ್ನು ಆಡಿಟ್ ಮಾಡಲು ಸರ್ಕಾರದವರು ಹಂಗಾಮಿಯಾಗಿ ಆಡಿಟರ ಸರ್ಟಿಫಿಕೇಟ್ ಕೊಟ್ಟಿರುವರು.

ಶ್ರೀರಾಮ ಸಪ್ತಾಹ.

ರಾಜಧಾನಿಯ ಗಳಿವಿನ ಅಂಗಡಿ ಬೀದಿಯಲ್ಲಿರುವ ಚಿಂದಂಬರಯ್ಯನವರ ಛತ್ರದಲ್ಲಿ ನಾರಾಯಣ ಸಮರ್ಥಬ್ರಹ್ಮಚಾರಿ ಎಂಬ ಯತಿಗಳು ಏಪ್ರೆಲ್ 1 ನೇ ತಾ|| ಸೋಮವಾರದಿಂದ ಸಪ್ತಾಹ ನಡೆಸುವುದಾಗಿ ತಿಳಿಯ ಬರುತ್ತೆ.

ಪತ್ರವ್ಯವಹಾರ

[illegible]

[illegible]

[illegible] ಗುಂಡು ಹಾರಿಸುವ ಪದ್ಧತಿಯೇ ನಿಲ್ಲಿಸಲ್ಪಟ್ಟಿತು. [illegible] ನ್ನೆ ಗುರುವಾರದಿಂದ ಮಧ್ಯಾಹ್ನ 12 ಘಂಟೆಗೆ [illegible] ಡು ಮಾತ್ರ ಆಗುತ್ತಿರುವುದು ಅನೇಕರಿಗೆ ಸಂತೋಷಪ್ರದವಾಗಿದೆ. ಆದರೆ ಕ್ಷಿಪ್ರದಲ್ಲಿಯೇ ಒಡೆಯ ಹೈದರಾಬಾದ್ ನೈಜಾಮರವರ ಆಗಮನ ಸಂದರ್ಭಕ್ಕೆ [illegible] ಗುಂಡುಗಳು ಹಾರಿಸಲ್ಪಡುವುವೆಂದೂ ಆನಂತರ [illegible] ಥಾಪ್ರಕಾರ ನಿಲ್ಲಿಸಲ್ಪಡುವುದೆಂದೂ ಅಲ್ಲಲ್ಲಿ ವದಂತಿ[illegible] ಹೊಂದುತ್ತಿವೆ. ಆದರೆ ಈಗ ಆಗಮಿಸುವ [illegible] ನೈಜಾಮರವರು ಪ್ರಜಾಹಿತೈಷಿಗಳು [illegible] ಗೆ [illegible] ರ ಆಗಮನದ [illegible] ರುವ ತೋಪುಗಳು ಎಂದಿನಂತೆ [illegible] ಯುವ [illegible] ನಂಬಿರುತ್ತೆ:

ಪ್ರಜಾ [illegible]

ಉಪನ್ಯಾಸ.

ಮೈಸೂರು ವಿಶ್ವವಿದ್ಯಾಲಯದ [illegible] ಕೃಷ್ಣಯ್ಯಂಗಾರ್ಯರವರು "ಚಂದ [illegible] ಧನೆ"ಯು ವಿಷಯವಾಗಿ ಚಿತ್ರದುರ್ಗದ [illegible] ನಲ್ಲಿ ಏಪ್ರೆಲ್ 4 [illegible] ಉಪನ್ಯಾಸ ನಡೆಸುವರು.

ಶ್ರೀ ಸೀತಾರಾಮ [illegible]

ಆರ್ಯಭಟ್ಟಸಿದ್ಧಾಂತ, ವಾಕ್ಯ ಮತ್ತು ದೃಗ್ [illegible]

ವಾದ ಶ್ರೀ ಶುಕ್ಲಸಂವತ್ಸರದ

ಪಂಚಾಂಗಗಳು

ಬಿಕರಿಗೆ ಸಿದ್ಧವಾಗಿವೆ

ಪಂಚಾಂಗ 1ರ ಬೆಲೆ 2 ಆಣೆ ಮಾತ್ರವೆ. 5 [illegible]

ಒಟ್ಟಿಗೆ [illegible]

[illegible]

Printed and published by P. R. Ramiaya

Regd. No. M. 2322 [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವದು.

ಸಂಪಾದಕ-
ಪಿ ಆರ್. ರಾಮಯ್ಯ

[illegible]
ತತೋ ಯುದ್ಧಾಯ ಯುಜ್ಯಸ್ವ [illegible]

[illegible]

ಸಂಪುಟ ೧] ಬುಧವಾರ ೩ ಏಪ್ರೆಲ್ ೧೯೨೭ [ಸಂಚಿಕೆ [illegible]

TAI NADU

3—4—1929

ಜನ ಮತ್ತು ಧನ.

ನಮ್ಮ ಸಂಸ್ಥಾನದಲ್ಲಿ ಪ್ರಜಾಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಬಹಳ ಜನರು ಪ್ರಯತ್ನಿಸುತ್ತಿರುವರು. ಕೆಲವರು ಈ ಪವಿತ್ರ ಧ್ಯೇಯಕ್ಕಾಗಿ ತಮ್ಮ ತನು ಮನ ಧನಗಳನ್ನೆಲ್ಲಾ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಿರುವರು; ಅಧಿಕಾರಿಗಳು ಕೊಡುವ ಕಿರುಕುಳ [illegible] ಮಾಡುವ ದಬ್ಬಾಳಿಕೆಯನ್ನೂ [illegible] ಸಹಿಸಲು ಸಿದ್ಧರಾಗಿರುವರು. ಇವೆಲ್ಲಾ [illegible] ಸರಿ. ಆದರೆ ಇಷ್ಟರಿಂದಲೇ [illegible] ಕೈಗೂಡುವುದಿಲ್ಲ, ಪ್ರಜಾಸ್ವಾತಂತ್ರ್ಯಕ್ಕೆ ವಿರೋಧವಾಗಿ ಸಂಚು ಮಾಡುವ [illegible] ಶಕ್ತಿಗಳಿರುವುವು, ಒಳ್ಳೆ ವ್ಯವಸ್ಥೆಯಿಂದ [illegible] ಸಂಸ್ಥೆಗಳಿರುವುವು. ಇವುಗಳೆಲ್ಲವನ್ನೂ [illegible] ಪ್ರತಿಭಟಿಸುವುದು [illegible] ಪ್ರಜಾಸ್ವಾತಂತ್ರ್ಯ ವಿರೋಧಿಗಳು [illegible] ಅಧಿಕಾರದಿಂದ [illegible] ಅನಾಯಾಸವಾಗಿ [illegible] ಅವ್ಯವಸ್ಥಿತವಾದ [illegible] ಪ್ರಜಾಸ್ವಾತಂತ್ರ್ಯ ಸಂಗ್ರಾಮವು ಫಲದಾಯಕವಾಗುವುದಿಲ್ಲ. [illegible] ಧೈರ್ಯವನ್ನೂ ಸಾಹಸವನ್ನೂ [illegible]. ಈ ಕೊಂಡಾಟದಿಂದ ಪ್ರಜಾಸ್ವಾತಂತ್ರ್ಯವು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ನಾವು ವ್ಯವಸ್ಥಿತವಾದ ಪ್ರಜಾಸ್ವಾತಂತ್ರ್ಯ [illegible] [illegible] ಜನ ಧನ [illegible] ಪ್ರಜಾಸ್ವಾತಂತ್ರ್ಯ [illegible] [illegible] ಧನಸಹಾಯ [illegible] ಪ್ರಜೆಗಳಲ್ಲಿ [illegible] ನಮ್ಮ [illegible] ಸಂಸ್ಥೆಯೊಂದನ್ನು [illegible] ಮಾಡಿ ಪ್ರಯೋಜನ [illegible] ಒಗ್ಗಟ್ಟಾಗಬೇಕು, ವ್ಯವಸ್ಥೆಯಿಂದ [illegible]. ಅದಿಲ್ಲದೆ ಬರೀಮಾತಿನಿಂದೇನೂ ಸಾಧ್ಯವಾಗುವುದಿಲ್ಲ.

ವಿವಿಧ ವರ್ತಮಾನ.

ದ್ವಿತೀಯ ಸಚಿವರ ಸಂಚಾರ.

ದ್ವಿತೀಯ ಸಚಿವರು ೩ ಈದಿನ ಪ್ರಾತಃಕಾಲ 7-30 ಕ್ಕೆ ಬೆಂಗಳೂರಿಂದ ಮೋಟಾರಿನಲ್ಲಿ ಹೊರಟು 10 ಘಂಟೆಗೆ ಕೋಲಾರವನ್ನು ತಲುಪಿ ನಾಳೆಯೆಲ್ಲಾ ಅಲ್ಲೇ ಇದ್ದು ಐದನೆ ತಾ ಗೋಲ್ಡ್‌ಫೀಲ್ಡ್ಸ್‌ಗೆ ಪ್ರಯಾಣಮಾಡಿ ಅಲ್ಲಿಂದ 7 ನೇ ತಾ ಭಾನುವಾರ ಬೆಂಗಳೂರಿಗೆ ಮೋಟಾರಿನಲ್ಲಿ ಹಿಂತಿರುಗುವರು. ಸಂಚಾರ ಮಾರ್ಗದಲ್ಲಿರುವ ಟ್ರಾವಿಲರ್ಸ್ ಬಂಗ್ಲೋಗಳು ಇವರ ಉಪಯೋಗಕ್ಕಾಗಿ ರಿಜರ್ವ್ ಮಾಡಲ್ಪಡುವುವು.

ರೈಲ್ವೆ ಆದಾಯ.

1929 ನೇ ಮಾರ್ಚಿ 16 ನೇ ತಾರೀಗೆ ಅಖೈರಾದ ವಾರದಲ್ಲಿ ನಮ್ಮ ಸಂಸ್ಥಾನದ ರೈಲುಗಳ ಒಟ್ಟು ಉತ್ಪತ್ತಿಯು 76,800 ರೂಗಳು ಹೋದವರುಷ ಇದೇ ವಾರದಲ್ಲಿ 4476 ರೂಗಳು ಹೆಚ್ಚಿತ್ತು.

ಮೆಡಿಕಲ್ ಆಫೀಸರುಗಳ ವರ್ಗಾವರ್ಗಿ.

ಹಾಸನದ ಡಿ| ಮೆ| ಆ| ರಾದ ಮ|| ಎಂ. ಕಾಸಿಮ್‌ರವರು ಕೋಲಾರಕ್ಕೂ ಕೋಲಾರದ ಮಿ|| ಸಿ. ನಾರಾಯಣರಾಯರವರು (ಕಡೂರು ಡಿ 1 ಸ) ಚಿಕ್ಕಮಗಳೂರಿಗೂ ಚಿಕ್ಕಮಗಳೂರಿನ ಮಿ|| ಸಿ. ರಾಜಗೋಪಾಲ ನಾಯುಡುರವರು ಹಾಸನಕ್ಕೂ ಚಿತ್ರದುರ್ಗದ ಮಿ|| ಎನ್. ಎಸ್. ನಂಜುಂಡಯ್ಯನವರು ಬೆಂಗಳೂರಿನ ಮೆಡಿಕಲ್ ಸ್ಟೋರ್ಸ್ ಸೂಪರಿಂಟೆಂಡೆಂಟರ ಕೆಲಸಕ್ಕೂ ಮತ್ತು ಬೆಂಗಳೂರು ಮೆಡಿಕಲ್ ಸ್ಟೋರ್ಸ್ ಸೂಪರಿಂಟೆಂಡೆಂಟರಾದ ಮಿ|| ಪಿ. ಶಾಮರಾಯರವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ ಕೆಲಸಕ್ಕೂ ವರ್ಗಾಯಿಸಲ್ಪಟ್ಟಿರುವರು.

ವೈಸ್‌ಪ್ರೆಸಿಡೆಂಟರ ಚುನಾವಣೆ.

ಮ|| ರಾ|| ಕೆ. ಪಿ. ಹನುಮಂತಯ್ಯ ಶೆಟ್ಟರವರು ತುಮಕೂರು ಮುನಿಸಿಪಲ್ ಕೌನ್ಸಿಲ್ಲಿನ ವೈಸ್‌ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುವರು.

ಬೆಂಚ್‌ಕೋರ್ಟುಗಳ ರದ್ದು.

ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿರುವ ಬೆಂಚ್‌ಕೋರ್ಟುಗಳು 1927 ನೇ ಜೂನ್ ಒಂದನೇ ತಾ| ಲಾಗಾಯಿತು ರದ್ದುಪಡಿಸಲ್ಪಡುತ್ತವೆ, (1) ಚಿಕ್ಕನಾಯಕನಹಳ್ಳಿ. (2) ಬೇಲೂರು. (3) ಹೊಸನಗರ. (4) ಹೊನ್ನಾಳಿ. (5) ಹೊಸದುರ್ಗ. (6) ಚಳ್ಳಕೆರೆ. (7) ಹೆಗ್ಗಡದೇವನಕೋಟೆ (8) ಚಾಮರಾಜನಗರ (9) ಬಾಗೇಪಲ್ಲಿ (10) ಗೋರಿಬಿದನೂರು (11) ಚಿಂತಾಮಣಿ (12) ಶ್ರೀನಿವಾಸಪುರ.

ಮುನಿಸಿಪಲ್ ಕೌನ್ಸಿಲ್.

ಚನ್ನಪಟ್ಟಣದ ಮುನಿಸಿಪಲ್ ಕೌನ್ಸಿಲ್ಲಿಗೆ ಮ|| ಸಿ. ಎಂ. ವೆಂಕಟರಮಣಯ್ಯನವರು ಮ|| ಮಾಕಂ ರಾಮ ಸಂಜೀವಶೆಟ್ಟರ ಸ್ಥಾನದಲ್ಲಿ ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ರಜಾ.

ತುಮಕೂರು ಎರಡನೇ ದರ್ಜೆಯ ಮುನ್‌ಸೀಫರಾದ ಮ|| ಬಿ. ಆರ್. ರಾಮಲಿಂಗಯ್ಯನವರಿಗೆ ಕೊಟ್ಟಿದ್ದ ರಜವನ್ನು ಇನ್ನು ಹದಿನೈದು ದಿನಗಳಿಗೆ ಹೆಚ್ಚಿಸಿ [illegible]

ವರ್ತಮಾನ ಸಂಗ್ರಹ.

ಗುಬ್ಬಿ ನಾಟಕ ಕಂಪೆನಿ

ಮೇಲಿನ ಕಂಪನಿಯವರು ಕಳೆದ ಒಂದು ತಿಂಗಳಿಂದಲೂ ರಾಜಧಾನಿಯಲ್ಲಿ ತಮ್ಮ ನಾಟಕಗಳನ್ನು ಆಡುತ್ತಿರುವರು ಇವರ ನಾಟಕಗಳೆಲ್ಲಾ ರಾಜಧಾನಿಯನ್ನು ಎಲ್ಲರೂ ಶ್ಲಾಘಿಸುತ್ತಿರುವರು. ಇವರ ಪ್ರತಿಯೊಂದು ನಾಟಕಕ್ಕೂ ಪ್ರೇಕ್ಷಕರು ಕಿಕ್ಕಿರಿಯುತ್ತಿರುವರು. ಮಹಾತ್ಮಾ ಕಬೀರ್‌ದಾಸ್, ಸದಾರಮೆ, ಪ್ರಭಾವತಿ ವಿಜಯ, ಗುಲೇಬಕಾವಲಿ, ಪ್ರಮೀಳಾ, ಸಂಪೂರ್ಣ ಕೃಷ್ಣಲೀಲಾ ರತ್ನಾವಳಿ ಮೊದಲಾದ ನಾಟಕಗಳು ಅವಲೋಕನೀಯವಾಗಿರುತ್ತವೆ. ಇವರು ಮದ್ರಾಸ್ ಕರ್ನಾಟಕ ಮೊದಲಾದ ಪ್ರಾಂತ್ಯಗಳಲ್ಲೆಲ್ಲಾ ನಾಟಕಾಭಿನಯದಿಂದ ಪ್ರಸಿದ್ಧಿಯನ್ನು ಪಡೆದಿರುವರು. ಇವರ ಸಂಪಾದನೆಗನುಗುಣವಾಗಿ ದಾನಧರ್ಮಗಳನ್ನು ಹೇರಳವಾಗಿ ನಡೆಸುತ್ತಿರುವುದು ಸಂತೋಷಕರವಾದುದು. ಈ ಕಂಪನಿಯ ಅಭಿವೃದ್ಧಿಗೆಲ್ಲಾ ಅದರ ಪ್ರೊಪ್ರೈಟರುಗಳಾದ ವಿನೋದ ರತ್ನಾಕರ ಜಿ. ಹೆಚ್. ವೀರಣ್ಣನವರೂ ಮ್ಯಾನೇಜರಾದ ಮ|| ಎಸ್. ನಾಗೇಶರಾಯರೂ ಕಾರಣಕರ್ತರು. ಇವರ ಕಂಪನಿಯು ಇತೋಪ್ಯತಿಶಯವಾದ ಅಭಿವೃದ್ಧಿಯನ್ನು ಹೊಂದಿ ಕರ್ನಾಟಕಕ್ಕೆಲ್ಲಾ ಆದರ್ಶಪ್ರಾಯವಾಗಲೆಂದು ಹಾರೈಸುತ್ತೇವೆ.

ಅಮಾನುಲ್ಲಾರವರಿಗೆ ಬೆಂಬಲ.

ಅಮಾನುಲ್ಲಾರವರಿಗೆ ಆಫ್‌ಘಾನಿಸ್ಥಾನದಲ್ಲಿ ಬೆಂಬಲವು ಜಾಸ್ತಿಯಾಗುತ್ತಿದೆ

ಪೋಷಕ ಬೋಧಕರ ಸಮ್ಮೇಳನ.

ಮಾರ್ಚಿ 23 ನೇ ತಾ|| ಶನಿವಾರ ಆಲೂರು ಸಬ್‌ತಾ|| ನ ಮೇಲ್ಕಂಡ ಸಮ್ಮೇಳನವು ಮಡಬಲು ಗ್ರಾಮದ ಸ್ಕೂಲಿನಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು. ಹಾಸನದ ರೇಂಜಿನ ಅ|| ಇ|| ರಾದ ಮ|| ಎಲ್. ಕೇಶವಗಿರಿರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಮ|| ಗಳಾದ ಎ. ಲಿಂಗಣ್ಣಯ್ಯನವರೂ ಎಸ್. ವೆಂಕಟಸುಬ್ಬಯ್ಯನವರೂ ತಾ| ನ ಇನ್‌ಸ್ಪೆಕ್ಟರವರೂ ಸಹ ವಿದ್ಯಾಪ್ರಚಾರದ ವಿಷಯದಲ್ಲಿ ಯುಕ್ತಿಯುಕ್ತವಾದ ಭಾಷಣಗಳನ್ನು ಮಾಡಿದನಂತರ ಸಭೆಯು ಬರಖಾಸ್ತಾಯಿತು.

ಯೋಗಿನಿಯವರು

ಆಂಧ್ರದೇಶದಿಂದ ಒಬ್ಬ ಯೋಗಿನೀ ಅಮ್ಮನವರು ಹೊಸದಾಗಿ ರಾಜಧಾನಿಗೆ ದಯಮಾಡಿಸಿರುತ್ತಾರೆ. ಇವರು ಕೆಲವು ವರ್ಷಗಳಿಂದಲೂ ಬೆಂಗಳೂರಿನಲ್ಲೇ ವಾಸವಾಗಿದ್ದು ಅನೇಕರಿಗೆ ಪ್ರಶ್ನೆ ಹೇಳುವ ಮೂಲಕವಾಗಿ ಯಾವತ್ತು ಅನೇಕ ವಿಧವಾದ ಮಹಾವ್ಯಾಧಿಗಳನ್ನು ಪರಿಹರಿಸುವದು ಮೂಲಕವಾಗಿಯೂ ಅನುಗ್ರಹವನ್ನು ಮಾಡಿರುವದರಿಂದ ಸಂತುಷ್ಟರಾಗಿ ಬೆಂಗಳೂರು ನಗರವಾಸಿಗಳಲ್ಲನೇಕರು ಸ್ವಲ್ಪ ದಿನಗಳ ಹಿಂದೆ ಇವರಿಗೆ ಹೂವಿನ ಪಲ್ಲಕ್ಕಿಯ ಉತ್ಸವವನ್ನೂ ಸಹ ಮಾಡಿಸಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿರುತ್ತಾರೆ. ಇವರು ಕೆಲವು ದಿನಗಳು ಮಾತ್ರ ಇಲ್ಲಿರುತ್ತಾರೆಂದು ಕೇಳುತ್ತೇವೆ. ನಮ್ಮ ರಾಜಧಾನಿ ನಿವಾಸಿಗಳು ಈ ಸಮಯವನ್ನು ಕಳೆದುಕೊಳ್ಳಲಾರರೆಂದು ದೃಢವಾಗಿ ನಂಬಿಧೇವೆ. ಇವರು ಮರಿಮಲ್ಲಪ್ಪನವರ ಹೈಸ್ಕೂಲ್ ಬಳಿಯಲ್ಲಿರುವ ಸಾಹುಕಾರ್ ಚಿಕ್ಕಣ್ಣನವರ ಬಂಗಲೆಯಲ್ಲಿ ಇಳಿದಿರುತ್ತಾರೆ.—ಎಂಬುದಾಗಿ ವಿಶ್ವಾತಿ ದಾರರು ತಿಳಿಸುತ್ತಾರೆ.

ತಾಯಿನಾಡು

3-4-1929

ಮುನಿಸಿಪಲ್ ಮೀಟಿಂಗ್

(ನಮ್ಮ ಬಾತ್ಮೀದಾರರಿಂದ.)

ಕಳೆದ ಶನಿವಾರ ಪ್ರಾತಃಕಾಲ ನಡೆದ ರಾಜಧಾನಿಯ ಮುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಕೆಳಗೆ ಕಂಡಿರುವ ವಿಷಯಗಳು ತೀರ್ಮಾನವಾಗಿರುತ್ತವೆ.

1. ಮುನಿಸಿಪಲ್ ನೌಕರರುಗಳಿಗೆ ಈ ವರ್ಷ ಐದು ಸಾವಿರ ರೂ. ಗಳೊಳಗೆ ಸೈಕಲ್ ಅಡ್ವಾನ್ಸುಗಳನ್ನು ಕೊಡಬಹುದು. 2 ಮೈಸೂರು ಸಿಟಿ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಂಘದಿಂದ ಪ್ರಾರಂಭಿಸಲ್ಪಡುವ ವಾಚನಾಲಯಕ್ಕೆ ಐವತ್ತು ರೂಗಳ ಗ್ರಾಂಟನ್ನು ಕೊಡಬಹುದು. 3. ಅಪ್ಪಾವು ಶೆಟ್ಟರ ಕಾರ್ಖಾನೆಯ ಕಟ್ಟಡಗಳನ್ನು ನೋಡಿಕೊಳ್ಳುವುದಕ್ಕಾಗಿ 16-1-29 ರಿಂದ [illegible] ಮಾಹೆಯಾನ 10 ರೂ ಸಂಬಳದ ಒಬ್ಬ ಜವಾನನನ್ನು ಹಂಗಾಮಿಯಾಗಿ ಏರ್ಪಡಿಸಬಹುದು. 4. ಲೈಸನ್ಸ್ ಪಡೆದು ಕಬ್ಬಿಣ (ಬಡಗಿ, ಕೆಲಸ ಮಾಡತಕ್ಕವರ ಪೈಕಿ ಬಡವರಾದವರಿಗೆ ಲೈಸನ್ಸ್ ಫೀಸನ್ನು ವಾಪಸು ಮಾಡುವ ಅಧಿಕಾರವು ಮ್ಯಾನೇಜಿಂಗ್ ಕಮಿಟಿಗೆ ಕೊಡಲ್ಪಟ್ಟಿದೆ. 5. ಡಿಕ್ರಿ ಮೊಬಲಗನ್ನೆಲ್ಲಾ ಪೂರ್ತಿಯಾಗಿ ಸಂದಾಯ ಮಾಡಿರುವ ಮ|| ಟಿ. ಎಸ್. ವೆಂಕೋಬರಾಯರಿಂದ ಬಡ್ಡಿ ಮೊಬಲಗನ್ನು ಬಿಟ್ಟುಬಿಡತಕ್ಕದ್ದು. 6. ದೇವರಾಜ ಮಾರ್ಕೆಟ್ 243 ನೇ ನಂಬರಿನ ಮಳಿಗೆಯನ್ನು ತೆಗೆದುಕೊಂಡಿದ್ದ ವೆಂಕಟರಮಣಯ್ಯನವರ ಷಾಪ್ ಇಡಲು ಇರುವುದರಿಂದ ಅವರು ಪಾವತಿಮಾಡಿರುವ ಹತ್ತು ರೂಪಾಯಿಗಳನ್ನು ಹಿಂದಕ್ಕೆ ಸಲ್ಲಿಸಬಹುದು. 7. ಸಂತೇಪೇಟೆ ರೋಡನ್ನು ಅಗಲಮಾಡುವುದಕ್ಕಾಗಿ ಮ|| ಟಿ. ಎಸ್. ನರಸಿಂಹಯ್ಯನವರು ಕಟ್ಟಿದ್ದ [illegible] ರೂಪಾಯಿಗಳನ್ನು ರೀಫಂಡ್ ಮಾಡಬಹುದು. 8. ಹೈದರಾಬಾದಿನ ನೈಜಾಮರವರ ಆಗಮನಕ್ಕಾಗಿ ಖರ್ಚಾಗುಲಿರುವ 2500 ರೂಗಳ ಪೈಕಿ ಒಂದು ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಡಬೇಕೆಂದು ಕೌನ್ಸಿಲ್‌ನಿಂದ ಒಂದು ರೆಸಲ್ಯೂಷನ್ ಮಾಡಿ ಕಳುಹಿಸುವುದು. 9. ಮೈಸೂರು ಸಿಟಿ ಮುನಿಸಿಪಾಲಿಟಿ ಮೊದಲನೆ ದರ್ಜೆಯ ಗುಮಾಸ್ತರಾದ ಮ|| ಎಂ. ಸುಬ್ಬರಾಯರ ಪೆನ್ಷನ್ 23—4—0 ರೂಗಳ ಪೈಕಿ 5—4—0 ಯು [illegible] ವಿಷಯವನ್ನು ಕೌನ್ಸಿಲರವರ ಫೈನಾನ್ಷಿಯಲ್ ಸೆಕ್ರೆಟರಿ ಯವರಿಗೆ ತಿಳಿಸಬಹುದು. 10. ಇವುಗಳಲ್ಲದೆ ಸರ್ಕಾರದಿಂದ ಬಂದಿದ್ದ ಕೆಲವು ಆರ್ಡರುಗಳು ರಿಕಾರ್ಡ್ ಮಾಡಲ್ಪಟ್ಟವು. ಇತ್ಯರ್ಥವಾಗದೆ ನಿಂತು ಹೋದ ವಿಷಯ:— ಮಿಸೆಸ್ ಎಲ್. ಥಿಯೋಬಾಲ್ಡ್ ರವರು ತಂದಿದ್ದ ಲೇಡಿ ಹೆಲ್ತ್ ವಿಸಿಟರ್‌ರನ್ನು ನೇಮಿಸತಕ್ಕ ವಿಷಯ. ಮೈಸೂರು ಸಿಟಿಗೆಲ್ಲಾ ಹೆಲ್ತ್ ವಿಸಿಟರೊಬ್ಬರೇ ಇರುವುದರಿಂದ ಕೆಲಸಗಳು ಅಷ್ಟು ಸಮರ್ಪಕವಾಗಿ ನಡೆಯಲವಕಾಶವಿರುವುದಿಲ್ಲ. ಗ [illegible] ಟ್ರೈನ್ಡ್ ನರ್ಸುಗಳು ತಾವು ಕೆಲಸಮಾಡುವ ಮೊಹಲ್ಲಾಗಳಲ್ಲಿ ಆಗಾಗ್ಗೆ ಸಂಚರಿಸಿ ಸ್ತ್ರೀಯರು ಗರ್ಭಿಣಿಯಾಗಿರುವಾಗಲೂ ಮತ್ತು [illegible] ಮೇಲೂ ವರ್ತಿಸಬೇಕಾದ ನಡವಳಿಕೆಗಳನ್ನು ಬೋಧನೆಮಾಡಬೇಕು, ಈ ಕೆಲಸಕಾರ್ಯಗಳನ್ನು ಮಾಡತಕ್ಕ ಪರವಾನೆ ಮುನಿಸಿಪಾಲಿಟಿಗೆ [illegible] ಅಧಿಕಾರವಿರಬೇಕು. ಲೇಡಿ ಹೆಲ್ತ್ ವಿಸಿಟರವರಿಗೆ ಸರಸುಗಳ ಮೇಲ್ವಿಚಾರಣೆ ಮತ್ತು ಮುನಿಸಿಪಾಲಿಟಿಯಲ್ಲಿರಬೇಕಾದ ಸಂಬಂಧ ಮೊದಲಾದುವುಗಳನ್ನೆಲ್ಲಾ ನಿರ್ಧರಪಡಿಸಿದ ಹೊರತು ಈ ವಿಷಯವು ಇತ್ಯರ್ಥವಾಗಲಾರದೆಂದು ಮ|| ಪಿ [illegible] ಹೇಳಿದರು.

ಸಂತೇಪೇಟೆಯಲ್ಲಿರುವ ಕಡಲೆ ಹುರಿಯತಕ್ಕ ಅಂಗಡಿಗಳನ್ನೂ ಮತ್ತು ಅನಾರೋಗ್ಯಕರವಾಗಿರುವ ಹೋಟಲುಗಳನ್ನೂ ಆ ಸರಹದ್ದಿನಿಂದ ಹೊರಡಿಸಿ, ಅನಾರೋಗ್ಯಕ್ಕೆ ಕಾರಣ ಕರ್ತರಾದ ಹೋಟಲ್ ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಧರ್ಮಪ್ರಕಾಶ ಡಿ. ಬನುಮಯ್ಯನವರು ತಂದ ಸಲಹೆಗೆ, ಅಧ್ಯಕ್ಷರ, ಮೆಂಬರುಗಳ್ಯಾರೂ ಅಡ್ಡಿ ಬರದೆ ಇದ್ದರೆ ಅಕ್ರಮಗಳನ್ನೆಲ್ಲಾ ಸರಿಗಡಿಸಬಹುದೆಂದು ಉತ್ತರ ಕೊಟ್ಟರು.

ಜವಾಬ್ದಾರೀ ಸರ್ಕಾರದ ವಿರೋಧಿಗಳು.

ಸ್ವಾಮಿ,

ಪ್ರಜಾಮುಖಂಡರಲ್ಲೇ ಕೆಲವರು ಪ್ರಜಾಸ್ವಾತಂತ್ರ್ಯಕ್ಕೆ ವಿರೋಧವಾಗಿ ಕತ್ತಿಯನ್ನು ಕಟ್ಟುತ್ತಿರುವರು. ಇವರಿಗೆ ಪ್ರಜೆಗಳ ಕ್ಷೇಮಕ್ಕಿಂತಲೂ ತಮ್ಮ ಸ್ವಾರ್ಥವೇ ಹೆಚ್ಚು. ಬ್ರಾಹ್ಮಣ ಬ್ರಾಹ್ಮಣೇತರರ ವೈಮನಸ್ಯವನ್ನು ಹೆಚ್ಚಿಸಿ ತಮ್ಮ ಸ್ವಾರ್ಥವನ್ನು ಬಲಪಡಿಸಿಕೊಳ್ಳುವರು. ಒಂದು ಕಡೆ ಪ್ರಜಾದ್ರೋಹಿಗಳಾಗಿ ಇನ್ನೊಂದು ಕಡೆ ಸರ್ಕಾರದ ಅಧಿಕಾರಿಗಳ ಬಾಲವನ್ನು ಹಿಡಿಯುತ್ತಿರುವರು. ಪ್ರಜಾಸ್ವಾತಂತ್ರ್ಯವು ಮುಂದುವರಿದ, ಜವಾಬ್ದಾರೀ ಸರ್ಕಾರವು ಬಂದರೆ ತಮ್ಮ ಸ್ವಾರ್ಥಕ್ಕೆ ಎಲ್ಲಿ ಕಲ್ಲು ಬೀಳುವುದೋ ಎಂಬ ಭೀತಿಯು ಇವರಿಗೆ ಹೆಚ್ಚಾಗಿರುವುದು. ಸರಕಾರದ ಅಧಿಕಾರಿಗಳು ಪ್ರಜಾಸ್ವಾತಂತ್ರ್ಯಕ್ಕೆ ವಿರೋಧವಾಗುವುದು ಒಂದು ರೀತಿ ಆದರೆ ಪ್ರಜೆಗಳವರಾಗಿಯೇ ಇದ್ದುಕೊಂಡು ಪ್ರಜೆಗಳಿಂದಲೇ ತನ್ನ ಬೊಜ್ಜನ್ನು ಬೆಳೆಸಿಕೊಳ್ಳುವ ಕೆಲವು ಪ್ರಜಾಮುಖಂಡರು ಕುರಿಗಳ ಮಂದೆಯಲ್ಲಿರುವ ತೋಳಗಳಂತೆ ವರ್ತಿಸುವುದು ಶುದ್ಧ ಘಾತುಕತನ. ಇಂತಹ ಘಾತುಕತನಕ್ಕೆ ತಕ್ಕ ಪ್ರಾಯಶ್ಚಿತ್ತವು ಆಗಿಂದಾಗಲೇ ಬೇಕು. ಇಂತಹ ಗೋಮುಖವ್ಯಾಘ್ರಗಳ ವೇಷವನ್ನು ಕಿತ್ತುಹಾಕಿ ಅವರ ನಿಜರೂಪವನ್ನು ಬಯಲಿಗೆ ತರಬೇಕು. ಎಷ್ಟೇ ಶ್ರಮವಾದರೂ ಈ ಕೆಲಸವನ್ನು ಯಾರಾದರೂ ಮಾಡಲೇಬೇಕು. ಅದಕ್ಕೆ ಸಿದ್ಧರಾಗಿರುವವರು ಯಾರು ?

ವಿಚಾರಕ.

ಷಷ್ಠ್ಯಬ್ದ ಪೂರ್ತಿ ಶಾಂತಿ.

ರಾಜಧಾನಿಯ ಪ್ರಸಿದ್ಧ ಬ್ಯಾಂಕರರೂ, ಸಾಹುಕಾರರೂ ಆದ ಮ|| ರಾ|| ಹೊಸಕೋಟೆ ಸುಬ್ರಾಯರವರು ಡಿ. ಸುಬ್ಬಯ್ಯರೋ ಸಲ್ಲಿರುವ ತಮ್ಮ ಸ್ವಂತಗೃಹದಲ್ಲಿ ತಮ್ಮ ಷಷ್ಠ್ಯಬ್ದ ಪೂರ್ತಿ ಶಾಂತಿಯನ್ನು ಕಳೆದ ಭಾನುವಾರ ಅತ್ಯಂತ ವೈಭವದಿಂದ ನೆರವೇರಿಸಿದರು. ಅನೇಕ ದಾನ ಧರ್ಮಗಳನ್ನೂ ಬ್ರಾಹ್ಮಣ ಸಂತರ್ಪಣೆಯನ್ನೂ ನಡಿಸಿದರು

ಧರ್ಮೋಪನಯನ.

ಬೊಂಬಾಯಿನ D. P. W. ಕಂಟ್ರಾಕ್ಟರಾದ ಮ|| ಕೆ. ಕೃಷ್ಣರಾಯರು ರಾಜಧಾನಿಯ ಕೃಷ್ಣಮೂರ್ತಿ ಪುರದಲ್ಲಿ ಹತ್ತು ಜನ ಅನಾಥರಿಗೆ ಧರ್ಮೋಪನಯನಗಳನ್ನು ಮಾಡಿಸಿದರು. ಹೋದ ವರ್ಷವೂ ಸಹ ಇದೇ ರೀತಿ ನಡಿಸಿದ್ದರು.

[illegible]

ಮಹಾತ್ಮಾ ಗಾಂಧಿಯವರಿಗೆ ಪಾರ್ಕಿನಲ್ಲಿ [illegible] ಹಚ್ಚಿದ್ದಕ್ಕಾಗಿ 1 ರೂ. ಜುಲ್ಮಾನೆ ಯಾದುದಷ್ಟೆ. ಅದನ್ನು ಯಾರೋ ಕೊಟ್ಟರು. ಹಾಗೆ ಕೊಟ್ಟವರು ತಮ್ಮ ಸ್ನೇಹಿತರಲ್ಲವೆಂದೂ ಜುಲ್ಮಾನೆ ಕೊಡುವುದಕ್ಕೆ ತಮ್ಮದಾಗಿ ಒಂದು ಕಾಸೂ ತಮ್ಮ ಹತ್ತಿರ ಇಲ್ಲವೆಂದೂ ಗಾಂಧೀಜೀಯವರು ಹೇಳಿದ್ದಾರೆ.

ಮ್ಯಾಜಿಸ್ಟ್ರೇಟರಿಗೆ ಜೋಡಿನೇಟು.

[illegible] ಶಿಕ್ಷೆಯನ್ನು ಕೊಟ್ಟರು. ಕಳ್ಳನು [illegible] ಮೇಲೆ ಜೋಡನ್ನು ಎಸೆದನು ಕಾಡಿಗೆ [illegible] ಟ್ಟರು. ಈ ಕಳ್ಳನು ಅಲ್ಲೂ ಒಬ್ಬ ಪೋಲೀಸಿನವನನ್ನು ಹೊಡೆದನು

ಒಬ್ಬ ಮಹಾಂತನ ಪಶುಪ್ರವೃತ್ತಿ

ಮಿಡ್ನಾಪುರದ ದೇವಸ್ಥಾನದ ಒಬ್ಬ ಮಹಾಂತನು 12 ವರ್ಷದ ಒಬ್ಬ ಭಿಕಾರಿ ಹುಡುಗಿಯೊಡನೆ ಬಲಾತ್ಕಾರದಿಂದ ಅತ್ಯಾಚಾರ ನಡಿಸಿ ಅವಳನ್ನು ಸಾಯುವ ಹಾಗೆ ಮಾಡಿದ್ದಕ್ಕೆ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ 1 ವರ್ಷ ಕಠಿಣ ಸಜಾ ವಿಧಿಸಿದರು. [illegible] ಳಿಗೆ ಆಮರಣಾಂತರ ಸಜಾ ಆದರೂ ಯಾರಿಗೂ ಮರುಕವಾಗುವುದಿಲ್ಲ.

ಸರಕಾರೀ ಸಮಾಚಾರ.

ದಿವಾನರ ಪ್ರೈವೇಟ್ ಸೆಕ್ರೆಟರಿಗಳಾದ ಮ|| ಎಂ. ಎಸ್. ರಾಮಚಂದ್ರರಾವ್ ಬಿ. ಎ. ಬಿ. ಎಲ್. ರವರಿಗೆ ಏಪ್ರಿಲ್ ಒಂದರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಚೀಫ್ ಕೋರ್ಟಿನ ರಿಜಿಸ್ಟ್ರಾರಾದ ಮ|| ಟಿ. ಸಿಂಗಾರವೇಲು ಮೊದಲಿಯಾರ್ರವರು ದಿವಾನರಿಗೆ ಪ್ರೈವೇಟ್ ಸೆಕ್ರೆಟರಿಗಳಾಗಿಯೂ [illegible]

[illegible]

ಸ್ನು ವಹಿಸುವಂತೆ ಒಂದು [illegible] ರುವುದು.

ಶ್ರೀ [illegible]

ವಾದ ಶ್ರೀ [illegible]

ಪಂಚಾಂಗಗಳು

[illegible]

ಒಟ್ಟಿಗೆ ಕೊಂಡರೆ 1 ಪ್ರತಿ [illegible]

[illegible]

ತ್ತವೆ. ಪೋಸ್ಟೇಜು ಬೇರೆ. [illegible]

Printed and published by P. R Ramiaya at Sri Rama Press, D Subbiah Road, Mysore.

ವಂದೇ ಮಾತರಂ |

Regd. No. M. 2322

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಗುರುವಾರ ೪ ಏಪ್ರೆಲ್ ೧೯೨೯ [ಸಂಚಿಕೆ [illegible]

ರಾಷ್ಟ್ರೀಯಸಭೆಯ ಅಪ್ಪಣೆಯಂತೆ ಏಪ್ರೆಲ್ ೧೩ನೇ ತಾ॥ ದಿವಸ ಪರದೇಶೀ ಬಟ್ಟೆಗಳನ್ನು ದಹನಮಾಡಿರಿ.

TAI NADU

4—4—1929

[illegible] ಚಳುವಳಿ.

ನಮ್ಮ ಸಂಸ್ಥಾನದಲ್ಲಿ ಈಚೀಚೆಗೆ ಪ್ರಜಾಸ್ವಾತಂತ್ರ್ಯದ ಉದಯವಾಗುತ್ತಿದೆ. ಅನೇಕರಿಗೆ ರಾಜಕೀಯ ಸ್ವಾತಂತ್ರ್ಯವು ಸಂಕಕ್ಕಿಂತಲೂ ಹೆಚ್ಚು ದುಸ್ಸಹವಾಗಿ ಕಾಣುತ್ತದೆ. ಇಂಥಹ ಸಮಯದಲ್ಲೇ ಮುಂದಾ [illegible] ಸಂಘಶಕ್ತಿಯನ್ನು [illegible] ಜನಗಳ [illegible] ದೊಡ್ಡ [illegible] ವಹಿಸಿ [illegible] ತಪ್ಪು [illegible]. [illegible] ವರ [illegible] ಸ್ವಾತಂತ್ರ್ಯ [illegible] ಬ್ರಿಟಿಷ್ [illegible] ವರ್ಷಗಳಿಂದಲೂ ಕಾಂಗ್ರೆಸ್ [illegible] ಸಂಘಗಳ [illegible] ಆ ಸಂಘ [illegible] ಶಾಲಿಗಳಾದ ದೇಶಭಕ್ತರು [illegible] ಅರ್ಪಣೆ ಮಾಡುತ್ತಾರೆ. [illegible] ಹೆಚ್ಚಿಸುವುದಕ್ಕಾಗಿ ಸಹಸ್ರಾರುಮಂದಿ ದೇಶಭಕ್ತರು ಆ ಸಭೆಗೆ ತಾಯಿಗಿಂತಲೂ ಹೆಚ್ಚಿನ ಗೌರವವನ್ನು ಕೊಡುತ್ತಿರುವರು. ಬ್ರಿಟಿಷ್ ಇಂಡಿಯಾದಲ್ಲಿ ನಡೆಯುವ ಇತರ ರಾಜಕೀಯ ಚಳುವಳಿಗೆಲ್ಲಾ ಕಾಂಗ್ರೆಸ್ ಮಾತೃಸ್ಥಾನವಾಗಿರುವುದು. ಅಂಥಹ ಸಂಸ್ಥೆಯು ಪ್ರತಿಯೊಂದು ದೇಶದಲ್ಲಿಯೂ ಇರಬೇಕು. ನಮ್ಮ ಮೈಸೂರಿನಲ್ಲಿ ಇಂಥಹ ಸಂಸ್ಥೆಯೊಂದನ್ನು ಬಲಪಡಿಸುವುದಕ್ಕೆ ಇದೇ ಸಕಾಲ. ಪ್ರತಿಯೊಬ್ಬ [illegible] ಇಂಥಹ ಸಂಸ್ಥೆಗೆ [illegible] ಅದರ [illegible] ನಡೆಸಬೇಕು. ಕಾಲಕ್ಕೆ ಅನುಗುಣವಾಗಿ [illegible] ಹೋದವರ್ಷ [illegible] ಕಾಂಗ್ರೆಸ್ ಸಭೆಯನ್ನು [illegible] ಆರಂಭಿಸಿದರು. [illegible] ಸಭೆಯನ್ನು [illegible] ಅದಕ್ಕೆ [illegible] ಪ್ರಜಾಸ್ವಾತಂತ್ರ್ಯದ [illegible] ಮಾಡಬೇಕು. [illegible] ಯಥಾಶಕ್ತಿ ದ್ರವ್ಯ ಸಹಾಯ [illegible] ಯಾವ [illegible] ಸಂಘಕ್ಕೆ [illegible] ಪ್ರತಿ [illegible] ಕಾಂಗ್ರೆಸ್ ಶಾಖೆಯೊಂದನ್ನು [illegible] ಕಾರ್ಯ ಕಲಾಪಗಳನ್ನು ದಿನಪ್ರತಿಯು [illegible] ಉಪಯುಕ್ತವಾದ ಸಲಹೆಯನ್ನು ಕೊಡಬೇಕು. ಈಗ ಎಲ್ಲಿ ನೋಡಿದರೂ ಮುಖಂಡರಿಲ್ಲ ಮುಖಂಡರಿಲ್ಲ ಎಂಬ ಧ್ವನಿಯು ಕೇಳಬರುತ್ತದೆ ಮುಖಂಡರು ಯಾರು, ಅವರೇನೂ ಆಕಾಶದಿಂದ ಮುಖಂಡರೆಂಬ ಮುದ್ರೆಯೊಂದನ್ನು ಒತ್ತಿಕೊಂಡು ಬರುವುದಿಲ್ಲ ನಮ್ಮಲ್ಲಿ ಯಾರಾದರೂ ಗಣ್ಯನಾದವನೊಬ್ಬನನ್ನು ನಾವೇ ಮುಖಂಡರೆಂದು ಗೊತ್ತುಮಾಡಿಕೊಳ್ಳಬೇಕು. ಸಕಲಗುಣಸಂಪನ್ನರಾದವರ ದೊರೆಯದೆ ಇರಬಹುದು ಆದರೆ ಇದ್ದುದರಲ್ಲಿ ಉತ್ತಮರಾದವರನ್ನು ನಾವು ಆರಿಸಬೇಕು. ಅವರು ಅಯೋಗ್ಯರೆಂದು ಕಂಡುಬಂದರೆ ಅವರನ್ನು ಕಿತ್ತೊಗೆಯಬೇಕು. ಇದೇ ಪ್ರಜಾಪ್ರಭುತ್ವದ ಪದ್ಧತಿ, ಪಾಶ್ಚಿಮಾತ್ಯದೇಶಗಳಲ್ಲಿಯೂ ಮೊದಮೊದಲು ಅಂತಃಕಲಹಗಳು ಇದ್ದವು ಈಗಲೂ ಇರುವುವು ಆದರೂ ಅಲ್ಲಿ ಪ್ರಜಾಸ್ವಾತಂತ್ರ್ಯದ ಗುರಿಯು ಅಳಿಯದೆ ಇರುವುದರಿಂದ ಪ್ರಜಾಪ್ರಭುತ್ವವು ಪ್ರವರ್ಧಮಾನಸ್ಥಿತಿಯಲ್ಲಿಯೇ ಇದೆ. ನಾವು ನಮ್ಮ ಗುರಿಯನ್ನು ಬಿಡದೆ ನಿರಂತರವಾಗಿ ಪ್ರಜಾಸ್ವಾತಂತ್ರ್ಯದ ಚಳುವಳಿಯನ್ನು ನಡೆಸಿದರೆ ಅವರಾರೆಯೇ ನಾವೂ ಆಗಬಹುದು. ಇತರರು ಬರಲಿಲ್ಲವಲ್ಲ ಎಂದು ನಾವು ನಿಲ್ಲಬೇಕಾಗಿಲ್ಲ ಯಾರು ಯಾರಿಗೆ ಪ್ರಜಾಸ್ವಾತಂತ್ರ್ಯದ ಪವಿತ್ರಪ್ರೇರಣೆ ಇದೆಯೋ ಅವರೆಲ್ಲರೂ ಮುಂದಕ್ಕೆ ಬರಲಿ, ಮಾರ್ಗದರ್ಶಿಕರಾಗಲಿ ಅವರು ಆರಂಭಿಸಿದ ಕೆಲಸವನ್ನು ಇತರರು ಮುಂದುವರಿಸುವರು. ಇದರಲ್ಲಿ ಯಾವ ಸಂಶಯವೂ ಇಲ್ಲ.

ನೈಜಾಮರಿಗೆ ಸ್ವಾಗತ.

ಹೈದರಾಬಾದ್ ನೈಜಾಮರವರು ಕಳೆದ ತಿಂಗಳು 31 ನೇ ತಾರೀಖು [illegible] ಬೆಂಗಳೂರಿಗೆ ದಯಮಾಡಿಸಿದರು. [illegible] ಕೆಲವು ಸದ್ಗೃಹಸ್ಥರು ನೈಜಾಮರನ್ನು [illegible] ಸ್ವಾಗತವನ್ನು ಬಯಸಿದರು. [illegible] ನೈಜಾಮರನ್ನು [illegible] ಕರೆದುಕೊಂಡು ಹೋದರು. [illegible] ಅರ್ಧಗಂಟೆಗಳ ಕಾಲ ಇದ್ದು ಪುನಃ ತಮ್ಮ [illegible] ಸೇರಿಕೊಂಡರು.

ಈ [illegible] 8॥ ಘಂಟೆಗೆ ನೈಜಾಮರವರು ರಾಜಧಾನಿಗೆ ದಯಮಾಡಿಸುವರು, ಶ್ರೀಮನ್ಮಹಾರಾಜರವರೂ ಯುವರಾಜರವರೂ ಮುಖ್ಯ ಆಫೀಸರುಗಳೂ ಸಂಸ್ಥಾನದ ಸರದಾರರೂ ಸದ್ಗೃಹಸ್ಥರೂ ಅವರನ್ನು ರೈಲ್ವೆನಿಲ್ದಾಣದಲ್ಲಿ ಎದುರುಗೊಂಡು ಸ್ವಾಗತವನ್ನು ಬಯಸುವರು. ನೈಜಾಮರು ಶ್ರೀಮನ್ಮಹಾರಾಜರವರ ಅಂಗರಕ್ಷಕರೊಡನೆ ಗೌರ್ನಮೆಂಟ್ ಹೌಸಿಗೆ ದಯಮಾಡಿಸುವರು. ದಾರಿಯಲ್ಲಿ ಕರ್ಜನ್‌ಪಾರ್ಕಿನಲ್ಲಿ ಮುನಿಸಿಪಲ್ ಮಂಟಪದಲ್ಲಿ ಕೌನ್ಸಿಲ್ ಮೆಂಬರುಗಳೂ ಮತ್ತು ಇತರರೂ ಸ್ವಾಗತವನ್ನು ಬಯಸುವರು. ನೈಜಾಮರು ಗೌರ್ನಮೆಂಟ್ ಹೌಸಿಗೆ ತಲಪಿದೊಡನೆ 21 ಕುಶಾಲು ತೋಪುಗಳು ಹಾರಿಸಲ್ಪಡುವುವು.

ಸ್ತ್ರೀವಿದ್ಯಾಭ್ಯಾಸ.

(ಘೀಷ್ಮರವರಿಂದ)

ನಮ್ಮ ಸಂಸ್ಥಾನದಲ್ಲಿ ಸಹಸ್ರಾರು ಬಾಲಕಿಯರು ಪರೀಕ್ಷೆಯರೂ ದಿನಂಪ್ರತಿ ಸ್ಕೂಲುಗಳಿಗೂ [illegible]ಗಳಿಗೂ ಕೆಲವರು ಗಾಡಿಯಲ್ಲಿಯೂ ಕೆಲವರು [illegible] ನಡೆಯಲ್ಲಿಯೂ ಹೋಗುತ್ತಿರುವರು. ಇವರನ್ನು [illegible]ಡಿದರೆ ಇವರಿಗೆ ಕೊಡಲ್ಪಡುತ್ತಿರುವ ವಿದ್ಯೆಯು [illegible]ಗೂ ದೇಶಕ್ಕೂ ಉಪಯೋಗಕರವೇ ಯೆಂಬ ಪ್ರಶ್ನೆಯು ತಲೆದೋರುವದು ಅಥವಾ ಅವರಿಗೆ ಕೊಡಲ್ಪಡುತ್ತಿರುವ ವಿದ್ಯೆಯಿಂದ ಅವರಿಗೂ ನಮ್ಮ ದೇಶಕ್ಕೂ ಏನಾದರೂ ನಷ್ಟ ಉಂಟಾಗಿರುವುದೇ ಯೆಂಬ ಸಂದೇಹವು ಉದ್ಭವಿಸುವುದು ನಮ್ಮ ಸರ್ಕಾರದವರೇನೋ ಸ್ತ್ರೀವಿದ್ಯಾಭ್ಯಾಸಕ್ಕೆಂದು ಹೇರಳವಾಗಿ ಧನವನ್ನು ವ್ಯಯ ಮಾಡುತ್ತಿರುವರು. ಅನೇಕ ಸ್ತ್ರೀಯರು ಸಣ್ಣ ಪರೀಕ್ಷೆಗಳಿಂದ ಮೊದಲುಮಾಡಿ ದೊಡ್ಡ ಪರೀಕ್ಷೆಗಳ ವರೆಗೂ ಕೊಟ್ಟಿರುವರು. ಅನೇಕರು ಉಪಾಧ್ಯಾಯರಾಗಿರುವರು. ಇನ್ಸ್‌ಪೆಕ್ಟ್ರೆಸ್ಸುಗಳಾಗಿಯೂ ಇರುವರು. ಭಾರಿ ಭಾರಿ ಸಂಬಳಗಳನ್ನು ತೆಗೆದುಕೊಳ್ಳುತ್ತಿರುವರು ಆದರೆ ಇಂತಹವರ ಸಂಖ್ಯೆಯೂ ಕಡಿಮೆ. ಬಾಲಕಿಯರು ಮತ್ತು ಸ್ತ್ರೀಯರು ಅಕ್ಷರಸ್ಥೆಯರಾಗಿರುವರೇ ಹೊರತು ಬೇರೇ ಪ್ರಯೋಜನವನ್ನು ಹೊಂದಿಲ್ಲ ಆದರೆ ಈ ಸಂದರ್ಭದಲ್ಲಿ ಒಂದು ದೊಡ್ಡ ಸಂಗತಿಯನ್ನು ಆಲೋಚಿಸಬೇಕು. ಈಗಿನ ಪದ್ಧತಿಯಲ್ಲಿ ಬಾಲಕರಿಗೂ ಬಾಲಕಿಯರಿಗೂ ವಿದ್ಯಾರ್ಥಿಗಳಿಗ ವಿದ್ಯಾರ್ಥಿನಿಯರಿಗೂ ಒಂದೇ ವಿಧವಾದ ಶಿಕ್ಷಣಪದ್ಧತಿಯು ಜಾರಿಯಲ್ಲಿರುವುದು. ಸ್ತ್ರೀಯರ ಸ್ವಭಾವ ಅವರ ಜೀವನ ಧರ್ಮ ಅವರ ಕರ್ತವ್ಯ ಇವುಗಳಿಗೆ ಅನುಗುಣವಾದ ವಿದ್ಯೆಯು ಕೊಡಲ್ಪಡುತ್ತಿಲ್ಲ ಇದರಿಂದ ಸ್ತ್ರೀಧರ್ಮವು ಪೋಷಿಸಲ್ಪಡುವುದಕ್ಕೆ ಬದಲಾಗಿ ಅದಕ್ಕೆ ಕುಂದಕವು ತರಲ್ಪಡುತ್ತಲಿರುವುದು.

ಈಗಿನ ಶಿಕ್ಷಣದ ಪದ್ಧತಿಯು ನಮ್ಮ ನಾಗರಿಕತೆಯನ್ನು ನಿರ್ನಾಮಮಾಡಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಸ್ಥಾಪಿಸಬೇಕೆಂದಿರುವುದು ವಿದ್ಯಾರ್ಥಿಗಳು ಯಾವರೀತಿಯಲ್ಲಿ ಪಾಶ್ಚಿಮಾತ್ಯ ಸಭ್ಯತೆಗೆ ಬಲಿ ಬೀಳುವರೋ ವಿದ್ಯಾರ್ಥಿನಿಯರೂ ಹಾಗೆಯೇ ಬಲಿ ಬೀಳುವರು ಆರ್ಯಧರ್ಮವು ಇದುವರೆಗೆ ನಮ್ಮ ಸ್ತ್ರೀಯರಿಂದ ಕಾಪಾಡಲ್ಪಡುತ್ತಿತ್ತು. ಈ ಶಿಕ್ಷಣವು ಪ್ರಚಾರವಾದಮೇಲೆ ಸ್ತ್ರೀಯರೂ ಪಾಶ್ಚಿಮಾತ್ಯ ನಾಗರಿಕತೆಯ ಪ್ರಚಾರಿಕೆಯರಾಗಿ ಪರಿಣಮಿಸಿ ನಮ್ಮ ಆರ್ಯಧರ್ಮಕ್ಕೆ ಕ್ಷೀಣದೆಶೆಯು ಬರಲು ಉಪಕ್ರಮವಾಗಿರುವುದು. ಈ ದುಷ್ಪರಿಣಾಮವನ್ನು ತಪ್ಪಿಸಬೇಕಾದರೆ ಸ್ತ್ರೀಯರಿಗೆ ಕೊಡಲ್ಪಡುತ್ತಿರುವ ಶಿಕ್ಷಣ ಪದ್ಧತಿಯನ್ನು ಕೂಡಲೇ ಬದಲಾಯಿಸಬೇಕು. ಇಲ್ಲವಾದರೆ ನಮ್ಮ ಬಾಲಕಿಯರನ್ನೂ ವಿದ್ಯಾರ್ಥಿನಿಯರನ್ನೂ ಆ ಸ್ಕೂಲು ಕಾಲೇಜುಗಳಿಗೆ ಕಳುಹಿಸಬಾರದು ಈ ವಿಷಯವು ತಾತ್ಸಾರ ಮಾಡತಕ್ಕದ್ದಲ್ಲ. ಉದಾಸೀನ ಮಾಡಿದರೆ ಇನ್ನೂ ಹೆಚ್ಚು ಅನರ್ಥಗಳುಂಟಾಗಬಹುದು. ಈಗಲೇ ಎಷ್ಟೋ ಅನರ್ಥಗಳುಂಟಾಗಿವೆ. ಸ್ತ್ರೀಯರು ದುಷ್ಟೆಯರಾದರೆ ವರ್ಣ ಸಂಕರವಾಗುವುದೆಂದು ಗೀತಾವಚನವಿರುವುದು.

ತಾಯಿನಾಡು.

4-4-1929

ಶ್ರೀಯುತ ಸುಭಾಷಚಂದ್ರಬೋಸರ ರ ಭಾಷಣ.

———

ಬಂಗಾಳದ ಪ್ರಾಂತಿಕ ಸಮ್ಮೇಳನದ ಅಧ್ಯಕ್ಷರಾದ ಶ್ರೀಯುತ ಸುಭಾಷ ಚಂದ್ರಬೋಸರವರು ಮಾಡಿದ ಭಾಷಣವು ಬಂಗಾಳದ ಯುವಕರನ್ನು ಹುರಿದುಂಬಿಸುವಂತಹುದಾಗಿರುವುದು. ಅಧ್ಯಕ್ಷರು ವೇದಕಾಲದಿಂದಲೂ ಬಂಗಾಳೀಯರ ಅಭಿವೃದ್ಧಿಯನ್ನು ಕುರಿತು ವಿಮರ್ಶಿಸಿ ಹೇಳಿದುದೇನೆಂದರೆ— "ಬಂಗಾಳೀಯರು [illegible] ನಿಲ್ಲುವವರಲ್ಲ. ಮುಂದೆ ಮುಂದಕ್ಕೆ ಹೋಗಬೇಕೆಂಬುದೇ ಅವರ ಅಪೇಕ್ಷೆ. ಹೊಸದಾಗಿ ಕೆಲಸಗಳನ್ನು ಸ್ಥಾಪಿಸುವ ಸಾಹಸವು ಅವರಲ್ಲಿರುವುದು. ಬಂಗಾಳೀಯರು ಇತರರಿಂದ ಕಲಿಯಬಹುದದುದೆಲ್ಲಾ ಆದಷ್ಟು ಶೀಘ್ರವಾಗಿ ಕಲಿತು ಅದರಿಂದ ತಮಗಾಗಬಹುದಾದ ಉಪಯೋಗಗಳನ್ನು ಪಡೆದರು. ಬಂಗಾಳವು [illegible] ಸ್ವಾತಂತ್ರ್ಯ [illegible] ಇಷ್ಟೆಲ್ಲಾ ಇದ್ದರೂ ಬಂಗಾಳವು ತನ್ನ [illegible] ಉಳಿಸಿಕೊಂಡಿರುವುದು." ಶ್ರೀಯುತ [illegible] ಹೇಳಿದುದೇನೆಂದರೆ—ಬಂಗಾಳದ [illegible] ಪ್ರಪಂಚದಲ್ಲಿ ಕ್ರಾಂತಿಯು [illegible] ಇರುವುದು. ಈ ಕ್ರಾಂತಿಯು ಧರ್ಮದಲ್ಲಿಯೂ ಸಾಹಿತ್ಯದಲ್ಲಿಯೂ ಕಂಡುಬರುವುದು. ಬಂಗಾಳದಲ್ಲಿ ವೈಷ್ಣವ ಮತವೂ ಬ್ರಹ್ಮೋ ಮತವೂ ಅಭಿವೃದ್ಧಿಯನ್ನು ಹೊಂದಿದುವು. ಇವೆರಡೂ ವರ್ಣಾಶ್ರಮ ಪದ್ಧತಿಯನ್ನು ಕಿತ್ತುಹಾಕಬೇಕೆಂದು ಪ್ರಯತ್ನಿಸಿದುವು. ಈ ಪ್ರಾಂತ್ಯದಲ್ಲಿ ಪಾಶ್ಚಿಮಾತ್ಯ ನಾಗರೀಕತೆಯು ಕ್ರಿಸ್ತ ಮತ ಹರಡಲಿಕ್ಕೆ ಅವಕಾಶವನ್ನು ಕೊಟ್ಟಿತು. ರಾಜಾರಾಮ ಮೋಹನರಾಯರಿಂದ ಸ್ಥಾಪಿತವಾದ ಬ್ರಹ್ಮೋ ಮತವು ಕ್ರಿಸ್ತಮತದ ಪ್ರಾಬಲ್ಯವನ್ನು ತಡೆಯಿತು. ಸೋಷಿಯಲಿಸಂ ಎಂಬುದ ಬಂಗಾಳಕ್ಕೆ ಹೊಸದಲ್ಲ, ಅದನ್ನು ಕಾರಲ್ ಮಾರ್ಕ್ಸ್‌ನಿಂದಲೇ ಕಲಿಯಬೇಕಾಗಿಲ್ಲ. ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರು ಯಾವುದೋ ಒಂದು ಧರ್ಮದ ಕಡೆಗೆ ಗಮನ ಕೊಡದೆ ವಿಶ್ವಧರ್ಮವನ್ನೇ ಬೋಧಿಸಿದರು. ಸ್ವಾಮಿ ವಿವೇಕಾನಂದರಿಂದ ಬೋಧಿಸಿದ ಪ್ರಜಾಪ್ರಭುತ್ವದ ಧರ್ಮಗಳು ದೇಶಬಂಧು ದಾಸರವರ ಬರವಣಿಗೆಗಳಲ್ಲಿಯೂ ಭಾಷಣಗಳಲ್ಲಿಯೂ ಕಂಡುಬರುವುವು.

ಶ್ರೀಯುತ ಬೋಸರವರು ರಾಷ್ಟ್ರ ನಿರ್ಮಾಣ ಕಾರ್ಯವನ್ನು ಮಾಡಬೇಕಾದರೆ ಅವಶ್ಯವಾಗಿರುವ ಕೆಲವು ಸಾಧನೆಗಳನ್ನು ತಿಳಿಸಿದರು. ಅವರು ತಿಳಿಸಿದುದೇನೆಂದರೆ—ರಾಷ್ಟ್ರನಿರ್ಮಾಣಕ್ಕೆ ಸತ್ವವಂತರಾದ ಮನುಷ್ಯರು ಬೇಕು. ಮತ್ತು ವ್ಯವಸ್ಥಿತವಾದ ಸಂಸ್ಥೆಯು ಬೇಕು. ಸ್ವಾಮಿ ವಿವೇಕಾನಂದರು ಸತ್ವವಂತರಾದ ಮನುಷ್ಯರನ್ನು ಸೃಷ್ಟಿಸಲು ಪ್ರಯತ್ನಿಸಿದರು. ದೇಶಬಂಧು ದಾಸರವರು ರಾಜಕೀಯ ಸಂಸ್ಥೆಯನ್ನು ನಿರ್ಮಾಣ ಮಾಡಿದರು. ನಾವು ಈಗ ರಾಜಕೀಯ ಸಮರದ ಮೂರನೇ ಪಾಡದಲ್ಲಿರುವೆವು. ಮೊದಲನೇ ಪಾದವು ಸ್ವದೇಶೀ ಚಳವಳಿ. ಎರಡನೇದು ಕ್ರಾಂತಿಕಾರರದು. ಮೂರನೇದು ಅಸಹಕಾರ ಮತ್ತು ಸೋಷಿಯಲಿಸಂ. ಅನೇಕರು ಸ್ವರಾಜ್ಯ ಕಾರ್ಯಕ್ಷೇತ್ರದಲ್ಲಿ [illegible] ದು ವ್ಯರ್ಥವೆಂದು ಹೇಳುವರು. ಇಂಥವರೆಲ್ಲಾ ನಿರಾಶಾವಾದಿಗಳು. ಕಳೆದ 25 ವರ್ಷಗಳಿಂದಲೂ ನಡೆದ ಸ್ವರಾಜ್ಯ ಸಂಗ್ರಾಮದಿಂದ ಭಾರತೀಯರಿಗೆ ಆತ್ಮಾಭಿಮಾನವೂ, ಆತ್ಮವಿಶ್ವಾಸವೂ ಉಂಟಾಗಿವೆ.

ಅಂತ್ಯದಲ್ಲಿ ಅಧ್ಯಕ್ಷರು ಮುಂದಿನ ಹತ್ತು ತಿಂಗಳ ಕಾರ್ಯಕ್ರಮವನ್ನು ತಿಳುಹಿಸಿ ಅದರ ಸಾಧನೆಗಾಗಿ ಐದು ಲಕ್ಷ ಕಾಂಗ್ರೆಸ್ ಮೆಂಬರುಗಳನ್ನು ಸೇರಿಸಬೇಕೆಂದೂ ಎರಡು ಲಕ್ಷ ರೂಪಾಯಿಗಳನ್ನು ಸೇರಿಸಬೇಕೆಂದೂ ಸೂಚಿಸಿದರು.

———

ಮಹಾತ್ಮಾ ಗಾಂಧಿಯವರ ನಡವಳಿಕೆ.

ಮೊಖದ್ದಮೆಯ ವಿಷಯ.

———

ಕಳೆದ ತಿಂಗಳು 29 ನೇ ತಾ|| ನಲ್ಲಿ ಮದ್ರಾಸ್ ಗೋಖಲೆ ಹಾಲಿನಲ್ಲಿ ನಡೆದ ಮಹಾಜನಗಳ ಒಂದು ಸಭೆಯಲ್ಲಿ ಅಧ್ಯಕ್ಷರಾದ ಟಿ. ಪ್ರಕಾಶಂರವರು ಮಹಾತ್ಮ ಗಾಂಧಿಯವರ ಮೇಲೆ ಸಂದೇಶೀ ಬಟ್ಟೆಗಳನ್ನು ಸುಟ್ಟದ್ದಕ್ಕಾಗಿ ನಡೆದ ಮೊಖದ್ದಮೆಯನ್ನು ವಿಮರ್ಶಿಸಿ ಹೇಳಿದ್ದೇನೆಂದರೆ "ಮಹಾತ್ಮಾ ಗಾಂಧಿಯವರು ಕೆಲವು ಸಂದರ್ಭಗಳಲ್ಲಿ ತಪ್ಪನ್ನು ಮಾಡುವರು. ಆ ತಪ್ಪುಗಳು ಅವರ ಸ್ವಂತವಲ್ಲ ಅವರು ಯಾರ ಜೊತೆಯಲ್ಲಿರುವರೋ ಅವರ ತಪ್ಪು. ಮೇಲಿನ ಮೊಖದ್ದಮೆಯ ವಿಷಯವಾಗಿ ಜನಗಳು ವಿಧವಿಧವಾಗಿ ಅಭಿಪ್ರಾಯಗಳನ್ನು ಪಡುವರು. ಮೈಸೂರು ಸಂಸ್ಥಾನದ ದೂರದ ಕಾಡುಗಳಲ್ಲಿ ಕೂಡ ಗಾಂಧಿಯವರು ಜಾಮೀನು ಕೊಟ್ಟ ವಿಷಯದಲ್ಲಿ ವಿರೋಧವಾದ ಅಭಿಪ್ರಾಯವನ್ನು ಸೂಚಿಸಿರುವರು. ಬರ್ಮಾದಿಂದ ವಾಪಸ ಬರುವವರೆಗೂ ಸಂದೇಶೀ ಬಟ್ಟೆಗಳನ್ನು ಬಹಿರಂಗವಾಗಿ ಸುಡದಂತೆ ಏರ್ಪಾಡು ಮಾಡಿದೇ ಒದು ಗಾಂಧಿಯವರು ವಾಗ್ದಾನ ಕೊಟ್ಟದ್ದು ಜನಗಳಿಗೆ ಒಪ್ಪಿಕೆಯಿಲ್ಲ. ಮೊಖದ್ದಮೆಯಲ್ಲಿ ಮಿ|| ಸೇನಗುಪ್ತರವರ ಕಡೆಯಿಂದ ತಮ್ಮ ಪಕ್ಷವನ್ನು ವಾದಿಸಿದ್ದು ಜನಗಳ ಅತೃಪ್ತಿಗೆ ಕಾರಣವಾಗಿದೆ. ಗಾಂಧಿಯವರ ವಿಷಯದಲ್ಲಿ ವಾದಿಸತಕ್ಕದ್ದೇನಿದೆ 1922 ರಲ್ಲಿ ಅಹಮದಾಬಾದಿನಲ್ಲಿ ಅವರಮೇಲೆ ನಡೆದ ಮೊಖದ್ದಮೆಯಲ್ಲಿ ಅವರೇ ಸ್ವಂತವಾಗಿ ವಾದಿಸಲಿಲ್ಲವೆ ಆ ವಿಚಾರಣೆಯನ್ನು ಜನಗಳ [illegible] ವಿಚಾರಣೆಗೆ ಹೋಲಿಸಲಿಲ್ಲವೆ? ಇಷ್ಟೆಲ್ಲಾ ಆದಮೇಲೆ ಈಪತ್ತಿನ ದಿವಸ ಗಾಂಧಿಯವರು ತಮ್ಮ ಪಕ್ಷವನ್ನ ಲಾಯರುಗಳಿಂದ ವಾದಿಸುವುದೆಂದರೆ ಸಾಮಾನ್ಯ ಜನರಿಗೆ ಅತೃಪ್ತಿಯಲ್ಲದೆ ಮತ್ತೇನು ಅಸಹಕಾರ ಚಳುವಳಿಯಲ್ಲಿ ಸಾವಿರಾರು ಜನರು ಯಾವ ರಕ್ಷಣೆಯನ್ನೂ ಕೊಡದೆ ಬಂದೀಖಾನೆಗೆ ಹೋಗಲಿಲ್ಲವೆ? ವಸ್ತುಸ್ಥಿತಿಯು ಹೀಗಿರುವಲ್ಲಿ ಮಹಾತ್ಮಾ ಗಾಂಧಿಯವರು ಮೊನ್ನೆ ನಡೆದ ಮೊಖದ್ದಮೆಯಲ್ಲಿ ನಡಿಸಿದ ನಡವಳಿಕೆಯು ಜನರಿಗೆ ಅಸಮಾಧಾನವನ್ನುಂಟುಮಾಡಿದೆ. ಇಷ್ಟಕ್ಕೆಲ್ಲಾ ನಾವೇ ಕಾರಣರು. ಮಹಾತ್ಮಾ ಗಾಂಧಿಯವರು ಎಷ್ಟೇ ಪ್ರಯತ್ನ ಪಟ್ಟಿದ್ದರೂ ಅವರು ಹೇಳುವಂತೆ ನಾವು ಕೇಳುತ್ತಿಲ್ಲ. ನಮ್ಮ ಅವಿವೇಕದಿಂದ ಮೇಲಿದ್ದ ಅವರನ್ನು ನಾವು ಕೆಳಗೆ ಇಳಿಸುತ್ತಿದ್ದೇವೆ'

ಪತ್ರವ್ಯವಹಾರ

[illegible]

———

ರಾಜದ್ರೋಹದ ಮೊಖದ್ದಮೆಗಳ ಸುರಿಮಳೆ.

———

ಸ್ವಾಮಿ,—

ಇಂಡಿಯಾ ದೇಶದಲ್ಲಿ ಈಗ [illegible] ರಾಜದ್ರೋಹದ ಮೊಖದ್ದಮೆಗಳು ಸುರಿಮಳೆಯಂತೆ ಹೊರಡುತ್ತಿರುವುವು. ಅದರಲ್ಲಿಯೂ ಪತ್ರಿಕಾಕರ್ತರುಗಳೇ ರಾಜದ್ರೋಹದ ಅಪಾದನೆಗೆ ಗುರಿಯಾಗುತ್ತಿರುವರು. ಲೋಕಮಾನ್ಯ ತಿಲಕರ [illegible] ಪತ್ರಿಕಾ [illegible] ಸಂಪಾದಕರು [illegible] ಹಕ್ಕಾಗಿ [illegible] ಹೀಗಾದರೆ [illegible] ಯುತ್ತಿದೆ. ಈಗ [illegible] ಈ [illegible] ಪವು ಹೀಗೆ [illegible] ನ್ನು [illegible] ರಾಗಿ [illegible] ತ್ರವನ್ನು [illegible] ಕ್ಕೆಗೂಡಿಸಲು [illegible] ಕೋರಿಕೆಯನ್ನು [illegible] ಜನತೆಯು [illegible] ನ ನಮಾಗುವ [illegible] ವನ್ನು [illegible] ಸುತ್ತೇನೆ.

[illegible]

———

ಶ್ರೀ ಸೀತಾರಾಘವ ವೈದ್ಯಶಾಲೆಯ [illegible]

[illegible]

[illegible]

ಪಂಚಾಂಗಗಳು

[illegible]

[illegible]

[illegible]

[illegible]

ದೃಗ್ಗಣಿತ ಪಂಚಾಂಗದೊಡನೆ [illegible] ಕ್ಕೆ ಆಣೆ. ಒಟ್ಟು ವ್ಯಾಪಾರಿಗಳಿಗೆ ಕಮೀಷನ್ ಕೊಡಲಾಗುತ್ತದೆ. ಪೋಸ್ಟೇಜು ಬೇರೆ. ದೊರೆವಸ್ಥಳಗಳು:—

(1) ಶ್ರೀ ಸೀತಾರಾಘವ ವೈದ್ಯಶಾಲೆ, ಮೈಸೂರು.

(2) ಶ್ರೀ ಸೀತಾರಾಘವ ವೈದ್ಯಶಾಲಾ ಬ್ರಾಂಚಾಫೀಸು, 245, ಚಿಕ್ಕಪೇಟೆ ಬೆಂಗಳೂರು ಸಿಟಿ.

Printed and published by P. R Ramiaya at Sri Rama Press, D Subbiah Road, Mysore.

Regd. No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ:
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ ॥

ಸಂಪುಟ ೧] ಶುಕ್ರವಾರ ೫ ಏಪ್ರೆಲ್ ೧೯೨೯

ಪರದೇಶೀ ಬಟ್ಟೆಗಳನ್ನು ದಹನಮಾಡಿರಿ.

ಬಟ್ಟೆಗಳನ್ನು ಕಾಂಗ್ರೆಸ್ ಆಫೀಸಿಗೆ ತಲಪಿಸಿರಿ.

TAI NADU

5—4—1929

ನೈಜಾಮರ ಆಗಮನ.

(ನಮ್ಮ ಪ್ರತಿನಿಧಿಗಳಿಂದ)

ನೆನ್ನೆಯದಿನ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ [illegible] ರಾಜಧಾನಿಗೆ ದಯಮಾಡಿಸಿರುವ ಹೈದರಾಬಾದ್ ನೈಜಾಮರ ಆಗಮನಕ್ಕಾಗಿ ಮೈಸೂರ ಪಟ್ಟಣದ ಮುಖ್ಯ ರಾಜಬೀದಿಗಳು (ರೈಲ್ವೆಸ್ಟೇಷನ್ನಿನಿಂದ ಸಯ್ಯಾಜಿರಾವ್ ರೋಡು, ಆಲ್ಬರ್ಟ್‌ವಿಕ್ಟರ್ ರೋಡು, ಮುನಿಸಿಪಲ್ ಮಂಟಪ, ಹಾರ್ಡಿಂಜ್ ಸರ್ಕಲ್ ರೆಸಿಡೆನ್ಸಿಯವರಿಗೆ) ಸುಣ್ಣ ಬಣ್ಣಗಳಿಂದ ಅಲಂಕರಿಸಲ್ಪಟ್ಟಿದ್ದವು. ರಸ್ತೆಯ ಎರಡು ಪಕ್ಕಗಳಲ್ಲಿಯೂ ಬೇಕಾದಷ್ಟು ಪ್ರೇಕ್ಷಕರು ನೆರೆದಿದ್ದರು. 8 ಗಂಟೆಯ ಮೇಲೆ ಜನಸಂಚಾರವನ್ನು ಮೇಲ್ಕಂಡ ಬೀದಿಗಳಲ್ಲಿ ನಿಲ್ಲಿಸಬೇಕೆಂಬ ಪ್ರಕಟಣೆಯಾಗಿದ್ದರೂ ಪೋಲೀಸ್ ದಳವು ಏಳುಘಂಟೆಯಿಂದಲೇ ತಮ್ಮ ಕಾರ್ಯದಲ್ಲಿ ತೊಡಗಿತ್ತು. ದಾರಿಯುದ್ದಕ್ಕೂ ಅಲ್ಲಲ್ಲಿ ಅರಮನೆಯ ಸಿಪಾಯಿ ಓಲೇಕಾರರೇ ಮೊದಲಾದ ಪದಾತಿ ಸೈನ್ಯವು ಮಂಗಳವಾದ್ಯಗಳೊಡನೆ ಸ್ವಾಗತವನ್ನು [illegible]. ರೈಲ್ವೆ ಸ್ಟೇಷನ್ನಿನಲ್ಲೂ [illegible] ಅನೇಕ ರಾಜ [illegible] ಅಧಿಕಾರಿ [illegible] ಸಹ ಸ್ವಾಗತವನ್ನು [illegible] ಬಂದರು.

ಹೈದರಾಬಾದ್ ನೈಜಾಮರು ತಮ್ಮ [illegible] ಡನೆ ನೆನ್ನೆ ಪ್ರಾತಃಕಾಲ ಎಂಟುವರೆ ಗಂಟೆಗೆ ಸ್ಪೆಷಲ್ ಟ್ರೈನಿನಲ್ಲಿ ರಾಜಧಾನಿಗೆ ದಯಮಾಡಿಸಿದರು. ಇವರ ಸ್ಪೆಷಲ್ ಟ್ರೈನಿನಲ್ಲಿ 32 ಸೆಲೂನುಗಳಿದ್ದವು ಶ್ರೀಮನ್ಮಹಾರಾಜರವರು [illegible] ಆಫೀಸರುಗಳೂ ಪ್ರಧಾನ ನಾಗರಿಕರೂ ನೈಜಾಮರನ್ನು ಎದುರುಗೊಂಡು ಸ್ವಾಗತವನ್ನು ಬಯಸಿದರು. ಪ್ರಮುಖರಾದ ನಾಗರಿಕರ ಪರಿಚಯವು ನೈಜಾಮರಿಗೆ ಮಾಡ[illegible] ರೈಲ್ವೆ [illegible] ನೈಜಾಮರೂ ಶ್ರೀಮನ್ಮಹಾರಾಜರವರು [illegible] ಹೈದರಾಬಾದ್ ಮಂತ್ರಿಗಳಾದ ಸರ್ ಕ್ರಿಷನ್ ಪ್ರಸಾದರವರೂ ನಾಲ್ಕು ಕುದುರೆಗಳಿಂದ ಕೂಡಿದ ಮೊದಲನೆಯ ಗಾಡಿಯಲ್ಲಿ [illegible] ಸೈನಿಕರು ಮರ್ಯಾದೆಮಾಡಿದರು. ವಾದ್ಯಗಳು ಮೊಳಗಿದವು ಮೆರವಣಿಗೆಯು ಸ್ಟೇಷನ್‌ರೋಡು ಸಯ್ಯಾಜಿರಾವ್ ರಸ್ತೆ, ಕರ್ಜನ್‌ಪಾರ್ಕಿನ ರಸ್ತೆ, ಎಲೆಕ್ಟ್ರಿಕ್ ಹೌಸ್ ರಸ್ತೆ ಗವರ್ನಮೆಂಟ್ ಹೌಸ್ ರಸ್ತೆಗಳ ಮುಖಾಂತರ ಗವರ್ನಮೆಂಟ್ ಹೌಸಿಗೆ ತೆರಳಿತು. ಹಿಂದೆ ಮೂರು ಕುದುರೆಗಾಡಿಗಳಲ್ಲಿ ಮುಖ್ಯಮುಖ್ಯರಾದ ನೈಜಾಮರ ಪರಿವಾರದವರಿದ್ದರು. ಅಲಂಕರಿಸಲ್ಪಟ್ಟ ಬೀದಿಗಳ ಉದ್ದಕ್ಕೂ [illegible] ಕಿಕ್ಕಿರಿದು ತುಂಬಿದ್ದರು. ನೈಜಾಮರು ಎದ್ದು ಕಂಡೊಡನೆಯೇ ಜಯಜಯಕಾರವನ್ನು ಮಾಡಿ[illegible] ಕರ್ಜನ್‌ಪಾರ್ಕಿನ ಹತ್ತಿರ ಮುನಿಸಿಪಲ್ ಮಂಟಪದಲ್ಲಿ ಮುನಿಸಿಪಲ್ ಕೌನ್ಸಿಲರುಗಳೂ ಪಂಡಿತರೂ ಮೌಲ್ವಿಗಳೂ ನೈಜಾಮರಿಗೆ ಸ್ವಾಗತವನ್ನು ಬಯಸಿ ಹಾರತುರಾಯಿಗಳನ್ನು ಅರ್ಪಿಸಿದರು. ಗೌರ್ನಮೆಂಟ್ ಹೌಸನ್ನು ಮುಟ್ಟಿದಕೂಡಲೆ ಕುಶಾಲತೋಪುಗಳು ಆದವು.

ಶ್ರೀಮನ್ಮಹಾರಾಜರವರು ನೈಜಾಮರಿಗೆ ಒಂದು ಗಾರ್ಡನ್ ಪಾರ್ಟಿಯನ್ನು ಕೊಡುವರು ನೈಜಾಮರು 7ನೇ ತಾರೀಖಿನ ವರಿಗೂ ರಾಜಧಾನಿಯಲ್ಲಿರುವರು.

ಬಾಲ ವಿಧವೆಯರ ದುರ್ಗತಿ.

(ಬರೆದು ಬಂದುದ್ದು)

ಬಾಲವಿಧವೆಯರ ಸಂಖ್ಯೆಯು ನಮ್ಮ ದೇಶದಲ್ಲಿ ದಿನ ದಿನಕ್ಕೂ ಹೆಚ್ಚುತ್ತಾ ಇದೆ. ಬ್ರಾಹ್ಮಣರಲ್ಲಂತೂ ಇವರ ಸಂಖ್ಯೆಯು ಬಹಳ ಜಾಸ್ತಿ. ಬಾಲ ವಿಧವೆಯರ ದುರ್ಗತಿಯು ವರ್ಣನಾತೀತವಾಗಿರುವುದು. ತಮ್ಮ ತಂದೆ ತಾಯಿಗಳು ಅಥವಾ ಪೋಷಕರ ತಪ್ಪಿಗಾಗಿ ಸಮಾಜದ ಉದಾಸೀನಕ್ಕಾಗಿ ಈ ಬಾಲವಿಧವೆಯರು ಆಜನ್ಮಾಂತವೂ ಈ ಭೂಮಿಯಲ್ಲಿಯೇ ನರಕಕ್ಕಿಂತಲೂ ಹೆಚ್ಚಾದ ಕಷ್ಟವನ್ನು ಅನುಭವಿಸಬೇಕಾಗುವುದು. ಅವರ ಸುತ್ತಮುತ್ತಲಿನ ಜನರು ಭೋಗವಿಲಾಸದಲ್ಲಿ ಮುಳುಗಿ ತೇಲುತ್ತಿರುವಾಗ ಈ ಬಾಲ ವಿಧವೆಯರು ಮಾತ್ರ ಎಲ್ಲಕ್ಕೂ ತಿಲತರ್ಪಣವನ್ನು ಕೊಡಬೇಕು. ಆಹಾರಾದಿಗಳ ಮಿತಾಹಾರದಿಂದಲೂ ಅರಿಷಡ್ವರ್ಗಗಳ ಪ್ರಾಬಲ್ಯದಿಂದಲೂ ಈ ಬಾಲವಿಧವೆಯರು ಅಂತರಂಗವಾಗಿ ಅನೇಕ ಪಾಪಗಳನ್ನು ಮಾಡಿ ಭ್ರೂಣಹತ್ಯ ಶಿಶುಹತ್ಯ ಮೊದಲಾದ ಪಾತಕಗಳನ್ನು ಮಾಡುವರು. ತಂದೆ ತಾಯಿಗಳೂ ಪೋಷಕರೂ ಇದನ್ನು ಕಂಡರೂ ಕಾಣದವರಂತೆ ವರ್ತಿಸುತ್ತಿರುವರು. ಸಮಾಜವು ಉದಾಸೀನತೆಯಿಂದ ಇರುವುದು ಶಾಸ್ತ್ರ ನೇತ್ರರಾದ ಪಂಡಿತರುಗಳು ಶಾಸ್ತ್ರ ಸಂಗತಿಯನ್ನು ಪ್ರಚುರಿಸುತ್ತಿರುವರೇ ಹೊರತು ಈಗಿನ ಲೋಕಸ್ಥಿತಿಯ ಕಡೆಗೆ ಗಮನ ಕೊಡುವುದಿಲ್ಲ. ಕೆಲವು ಮಹಾಶಯರು ವಿಧವಾ ವಿವಾಹ ಪ್ರೌಢಾವಿವಾಹ ಮೊದಲಾದ ಅಭಿಪ್ರಾಯಗಳನ್ನು ಹರಡುತ್ತಿರುವರು. ಕೆಲವರು ಮುಂದಾಳಾಗಿ ಬಂದು ತಾವೇ ಅವುಗಳನ್ನು ನಡೆಯಿಸುತ್ತಿರುವರು. ಆದರೂ ಸಮಾಜವು ಮಾತ್ರ ಕಣ್ಣು ತೆರೆದಿಲ್ಲ. ಕೆಲವು ಪಂಡಿತರುಗಳನ್ನು ವಿನಹ ಇತರರನ್ನು ಒಬ್ಬೊಬ್ಬರನ್ನೇ ಕೇಳಿದರೆ ಬಾಲ ವಿಧವೆಯರ ಕಷ್ಟವನ್ನು ಯಾವುದಾದರೂ ರೀತಿಯಲ್ಲಿ ಪರಿಹಾರ ಮಾಡಬೇಕೆಂದು ಹೇಳುತ್ತಾರೆ. ಆದರೆ ತಾವೇ ಈ ಭಾಗದಲ್ಲಿ ಮುಂದುವರಿಯಲು ಅಪೇಕ್ಷಿಸುವುದಿಲ್ಲ. ಈ ಭಾಗದಲ್ಲಿ ಕಾನೂನು ಮಾಡಬೇಕೆಂದು ಹೊರಟರೆ ಸಮಾಜದ ವಿಷಯಗಳಲ್ಲ ಸರಕಾರದವರು ಕೈಹಾಕಕೂಡದೆಂದು ಕೆಲವರು ಬೊಬ್ಬೆ ಇಡುವರು. ಸರಕಾರದವರು ಕೈಹಾಕಕೂಡದು ಸಮಾಜವು ತಟಸ್ಥವಾಗಿರಬೇಕು. ಈ ಸಂದರ್ಭದಲ್ಲಿ ಬಾಲ ವಿಧವೆಯರ ಗತಿಯು ದಿನದಿನಕ್ಕೂ ದುರ್ಗತಿಯಾಗಿರುವುದು. ಇದಕ್ಕೆ ಸ್ತ್ರೀಯರೇ ಮುಂದೆ ಬಂದು ಚಳುವಳಿಯನ್ನು ನಡೆಯಿಸಬೇಕು.

ವಿವಿಧ ವರ್ತಮಾನ.

ಮ|| ಸೀತಾರಾಮಾಚಾರ್ಯರ ಮೇಲೆ ಮೊಖದ್ದಮೆ.

ಚಾರ್ಜು ಷೀಟು ಹಾಕಲ್ಪಟ್ಟಿತು.

ನೆನ್ನೆ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಗಂಧದ ಎಣ್ಣೆಯ ವ್ಯಾಪಾರದ ನಡವಳಿಕೆಗಳ ವಿಷಯವಾಗಿ ಇಂಡಿಯನ್ ಪೀನಲ್ ಕೋಡಿನ 409 ನೇ ಕಲಮನ್ನು ಅನುಸರಿಸಿ ಮ|| ಸೀತಾರಾಮಾಚಾರ್ಯರ ಮೇಲೆ 1926 ನೇ ಜನವರಿ 1 ನೇ ತಾ|| ನಿಂದ 1926 ನೇ ಜೂನ್ 30 ನೇ ತಾ|| ನ ಒಳಗೆ ಪೌಂ. 1138.13.5 ಪೌ, 1500 ಪೌಂ. 2000—0—0 ಪೌಂ. 5600-0-0 ಪೌಂಡ್‌ಗಳನ್ನು ಮೋಸಪಡಿಸದರಿಂದು ಪ್ರಿಲಿಮಿನರಿ ಚಾರ್ಜ್ ಷೀಟು ಹಾಕಲ್ಪಟ್ಟಿತು. 1928 ನೇ ಸೆಪ್ಟೆಂಬರ್ ನಿಂದ ಡಿಸೆಂಬರ್ 1928 ರ ಒಳಗೆ ಒಟ್ಟು 65 ಸಾವಿರ ಪೌಂಡುಗಳ ಮೋಸ ನಡೆದಿದೆ ಎಂದು ತಿಳಿಯಬರುತ್ತದೆ ಪೋಲೀಸಿನವರು 15 ದಿವಸಗಳ ಅಡ್ಜರ್ನ್‌ಮೆಂಟನ್ನು ಕೇಳಿದರು ಅಪರಾಧಿಯ ಕಡೆಯ ವಕೀಲರಾದ ಮ|| ಎಂ. ಕೃಷ್ಣಮೂರ್ತಿಗಳು ಈ ಕೋರ್ಟಿಗೆ ಈ ಮೊಖದ್ದಮೆಯನ್ನು ನಡೆಸಲು ಅಧಿಕಾರವಿಲ್ಲವೆಂದು ವಾದಿಸಿದು ಕೋರ್ಟು ಹಾಲು ತುಬಿತ್ತು, ಮೊಕದ್ದಮೆಯು 18ನೇ ತಾ|| ಗೆ ಅಡ್ಜರ್ನಾಯಿತು.

ಚುನಾವಣೆ.

ಹರಿಹರದ ಟವನ್ ಮುನಿಸಿಪಾಲಿಟಿಯಲ್ಲಿ ರಾಜೀನಾಮೆ ಕೊಟ್ಟಿರುವ ಮ|| ಆರ್. ಟಿ. ಗೋವಿಂದರಾಯರ ಸ್ಥಾನದಲ್ಲಿ ಮಿ|| ಮುಹಮದ್ ಹಯಾತ್ ಸಾಹೇಬರವರು ಉಪಾಧ್ಯಕ್ಷರಾಗಿ ಚುನಾಯಿಸನಲ್ಪಟ್ಟಿರುವರು.

ತಾಯಿನಾಡು.

5-4—1929

ಈಗಿನ ವಿದ್ಯಾರ್ಥಿಗಳು —೮

(ಭೀಷ್ಮರವರಿಂದ)

ಈಗಿನ ವಿದ್ಯಾರ್ಥಿಗಳ ವಿಷಯವಾಗಿ ಬಹಳ ವ್ಯಸನಪಡಬೇಕಾಗಿರುವುದು ಅವರಿಗೆ ಸ್ವಂತಿಕೆಯ ವಿದ್ಯೆಯಿಂದ ಅವರ ಬುದ್ಧಿಯಾಗಲೀ ವಿವೇಕವಾಗಲೀ ಹೆಚ್ಚುವ ಹಾಗಿಲ್ಲ; ಅವರಿಗೆ ಕಲಿಸಲ್ಪಡುವ ವಿಷಯಗಳು ಇಹಕ್ಕೂ ಸಾಧಕವಿಲ್ಲ ಪರಕ್ಕೂ ಸಾಧಕವಿಲ್ಲ ಅವರು ಕಲಿತ ವಿದ್ಯೆಯು ಪರೀಕ್ಷೆಯಾದ ಮೇಲೆ ಉಳಿಯುವ ಹಾಗಿಲ್ಲ ಅವರ ಉಪಾಧ್ಯಾಯರುಗಳಲ್ಲಿ ಅವರಿಗೆ ಗೌರವವಿರುವುದಿಲ್ಲ. ಉಪಾಧ್ಯಾಯರುಗಳಿಗೆ ವಿದ್ಯಾರ್ಥಿಗಳ ಮೇಲೆ ಮಮತೆಯಿರುವುದಿಲ್ಲ. ನಡೆನುಡಿಗಳ ವಿಷಯದಲ್ಲಂತೂ ವಿದ್ಯಾರ್ಥಿಗಳು ಉಪಾಧ್ಯಾಯರನ್ನೇ ಅನುಸರಿಸುವರು ಉಪಾಧ್ಯಾಯರುಗಳು ಸ್ವದೇಶದ ಆಚಾರ ವಿಚಾರಗಳನ್ನು ತೊರೆದು ಪರದೇಶಿಯರನ್ನೇ ಅನುಕರಣ ಮಾಡುವರು. ನೀತಿಯ ವಿಷಯದಲ್ಲಂತೂ ದುರ್ನೀತಿಗಳೇ ವಿದ್ಯಾರ್ಥಿಗಳ ಕಣ್ಣಿಗೆ ಬೀಳುವುವು. ಇವರ ಶರೀರವೂ ಆಂಗಸಾಧನೆ ಮೊದಲಾದುವುಗಳಿಲ್ಲದೆ ಬೆಳವಣಿಗೆಗೆ [illegible] ಹೊಂದುವುದು ಅನೇಕ ವಿದ್ಯಾರ್ಥಿಗಳು ಸಮಯಾಸಮಯ ಪರಿಜ್ಞಾನವಿಲ್ಲದೆ ಆಹಾರ ವಿಹಾರಗಳಲ್ಲಿ ತೊಡಗುವರು ಕಾಫೀಕ್ಲಬ್ಬುಗಳು ಸಿನಿಮಾ ದಿರಗಳು, ನಾಟಕಶಾಲೆಗಳು ಇವುಗಳಲ್ಲಿ ವಿದ್ಯಾರ್ಥಿಗಳು ತುಂಬಿರುವರು ಬೀಡಿ, ಚುಟ್ಟಾ, ಸಿಗರೇಟುಗಳ ದುರಭ್ಯಾಸವಂತೂ ಇವರಲ್ಲಿ ಮಯವಾಗಿರುವುದು. ತಂದೆ ತಾಯಿಗಳು ಹೊಟ್ಟೆ ಬಟ್ಟೆಗಳನ್ನು ಕಟ್ಟಿ ಸಾಲವೋ ಸೋಲವೋ ಮಾಡಿ ಕಷ್ಟದಿಂದ ಕಳುಹಿಸಿದ ದುಡ್ಡನ್ನು ನೀರಿನಂತೆ ಚೆಲ್ಲುವರು ಇದ. ಸಾಲದೆ ನಮ್ಮ ದೇಶದ ನಾಗರಿಕತೆಯು ಗುರುತಾದ ಉಡಿಗೆತೊಡಿಗೆಗಳನ್ನು ಬಿಟ್ಟು ಕ್ರಾಪ್ ಮೊದಲಾದುವುಗಳಿಂದ ಭೂಷಿತರಾಗಿರುವರು. ಮುಖವನ್ನು ನೋಡಿದರೆ ಇವನು ಯಾವ ವರ್ಣಕ್ಕೆ ಸೇರಿದವನೆಂಬುದು ಪತ್ತೆಯಾಗುವಹಾಗಿಲ್ಲ. ಇಂಥಹ ವಿದ್ಯೆಯನ್ನು ಸಂಪಾದಿಸಿಯೂ ಇವರಿಗೆ ನೌಕರಿ ಸಿಕ್ಕುವುದು ದುಸ್ತರ ಇದೆಲ್ಲಾ ವಿದ್ಯಾರ್ಥಿಗಳ ತಪ್ಪಲ್ಲ. ಅವರಿಗೆ ಕೊಡಲ್ಪಡುತ್ತಿರುವ ಶಿಕ್ಷಣ ಪದ್ಧತಿಯ ತಪ್ಪು. ಈ ಶಿಕ್ಷಣ ಪದ್ಧತಿಯನ್ನು ಮಾರ್ಪಡಿಸಿ ಒಳ್ಳೆ ಸಚ್ಚರಿತ್ರರಾದ ಉಪಾಧ್ಯಾಯರನ್ನು ನೇಮಿಸಿದ ಹೊರತು ವಿದ್ಯಾರ್ಥಿಗಳು ಸುದಾರಿಗೆ ಬರುವಹಾಗಿಲ್ಲ. ಸ್ವಾಭಿಮಾನ ಸ್ವದೇಶಾಭಿಮಾನ ಸ್ವಭಾಷಾಭಿಮಾನ ಸ್ವಧರ್ಮಾಭಿಮಾನ ಇವುಗಳು ವಿದ್ಯಾರ್ಥಿಗಳಲ್ಲಿ ಮೂಡಿದ ಹೊರತೂ ಇವರಿಗೆ ಬೇರೇ ಗತಿಯಿಲ್ಲ. ಇದು ಆಗಬೇಕಾದರೆ ನಮ್ಮ ನಾಗರೀಕತೆಗೂ ನಮ್ಮ ಆಚಾರ ವಿಚಾರಗಳಿಗೂ ನಮ್ಮ ಧರ್ಮಕ್ಕೂ ಘಾತುಕವಾದ ಈ ಪರಕೀಯ ಶಿಕ್ಷಣವೂ ನಿರ್ಮೂಲೋತ್ಪಾಟನ ಮಾಡಲ್ಪಡಬೇಕು. ಅದರ ಜಾಗದಲ್ಲಿ ರಾಷ್ಟ್ರೀಯ ಶಿಕ್ಷಣವು ಸ್ಥಾಪಿಸಲ್ಪಡಬೇಕು

ಒಂದು ಶಬ್ದದ ಬೆಲೆ—25 ಷಿಲಿಂಗ್

ಅಮೇರಿಕಾದ ಪ್ರೆಸಿಡೆಂಟರವರು ತಮ್ಮ ಕೆಲಸವನ್ನು ತ್ಯಜಿಸಿ ಶಬ್ದ ಒಂದಕ್ಕೆ 25 ಷಿಲಿಂಗುಗಳ ಪ್ರಕಾರ ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವ ಕಾರ್ಯವನ್ನು ಕೈಗೊಂಡಿರುವರು.

ವರ್ತಮಾನ ಸಂಗ್ರಹ.

ರಜಾ

ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಡೈರೆಕ್ಟರಾದ ಮಿ|| ವೈ. ನರಸಿಂಗರಾಯರವರಿಗೆ ಮಾರ್ಚಿ 27 ರಿಂದ ನಾಲ್ಕು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುವುದರಿಂದ ಕೈಗಾರಿಕೆಯ ಇಲಾಖೆ ಡೈರೆಕ್ಟರಾದ ಮಿ|| ಸಿ. ರಂಗನಾಥರಾವ್ ಸಾಹೇಬರವರ. ತಮ್ಮ ಕೆಲಸದ ಜೊತೆಗೆ ಮೇಲಿನ ಕೆಲಸವನ್ನೂ ಮಾಡುವರು. ಹಾರ್ಟಿಕಲ್ಚರಲ್ ಡೈರೆಕ್ಟರಾದ ಮಿ|| ಜಿ. ಹೆಚ್, ಕೃಂಬೀಗಲ್ ರವರಿಗೆ ಈ ತಿಂಗಳು 3 ರಿಂದ ಏಳುದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿವಮೊಗ್ಗಾ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕಮೀಷನರ್ ಮಿ|| ಸಿ. ರಾಮಚಂದ್ರರಾಯರಿಗೆ ಮಾರ್ಚಿ 27 ರಿಂದ ಹದಿನೈದು ದಿನದ ರಜಾ ಕೊಟ್ಟಿರುವುದರಿಂದ ಸ್ಪೆಷಲ್ ಸೆಕೆಂಡ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಮೇಲಿನ ಕೆಲಸವನ್ನು ಮಾಡುವರು.

ಪೋಲೀಸ್ ಇಲಾಖೆ.

ಕೆಳಗೆ ಕಂಡ ಪೋಲೀಸ್ ಆಫೀಸರುಗಳು ತಮ್ಮ ಈಗಿನ ಅಧಿಕಾರಗಳಲ್ಲಿ ಖಾಯಂ ಮಾಡಲ್ಪಟ್ಟಿರುವರು. ಹಾಸನದ (ಆಕ್ಟಿಂಗ್) ಡಿ| ಎಸ್| ಪಿ. ಯವರಾದ ಮಿ ಎಂ, ಮೇಲಾರ್‌ರವರೂ ಅ| ಸೂ| ರಾದ ಮಿ|| ಎಂ. ಕೆ. ನರಸಿಂಹಯ್ಯಂಗಾರ್ರವರೂ 16—9—28 ರಿಂದಲೂ ಮತ್ತು (ಬದಲಿ) ಅ| ಸೂ| ರಾದ ಮಿ|| ಜೆ. ಎಫ್. ಆಂಡರ್‌ಸನ್‌ರವರೂ (ಆಕ್ಟಿಂಗ್) ಅ| ಸೂ| ಎಂ. ಸಿದ್ದರಾಜೇರಸಿನವರೂ ಅ| ಸೂ| ಗಳಾದ ಮಿ|| ಎಂ. ಎ. ವೆಂಕಟಾಚಾರ್ರವರೂ ಮಿ|| ರಾ|| ಎಸ್. ರಾಜಾರಾಮರೂ ಸಹ 1—7—28 ರಿಂದಲೂ ಖಾಯಂ ಮಾಡಲ್ಪಟ್ಟಿರುವರು.

ಅ| ಪೋ| ಸೂ| ರವರ ವರ್ಗಾವರ್ಗಿ.

ಚನ್ನಪಟ್ಟಣದ ಆಕ್ಟಿಂಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಎಸ್. ಕೇಶವರಾಯರು ಕೋಲಾರ ಗೋಲ್ಡ ಫೀಲ್ಡ್ಸಿನ ಡಿಟೆಕ್ಟಿವ್ ಇಲಾಖೆಗೂ ಅಲ್ಲಿ ರಜದಲ್ಲಿರುವ ಮಿ|| ಎಂ ಎ, ವೆಂಕಟಾಚಾರ್ರವರ ಸ್ಥಾನದಲ್ಲಿ ರಕ್ಷಕ್ಕ ಆಕ್ಟಿಂಗ್ ಅ| ಸೂ| ರಾದ ಮಿ|| ಹೆಚ್. ಪಿ. ಕೃಷ್ಣರಾಯರವರು ಚನ್ನಪಟ್ಟಣಕ್ಕೂ ವರ್ಗಾಯಿಸಲ್ಪಟ್ಟಿರುವರು.

ಮಸೂದೆ.

ಕಾನ್‌ಸ್ಟಾಂಟಿನೋಪಲಿನ ಅಸೆಂಬ್ಲಿಯಲ್ಲಿ 18 ವರುಷದ ಸ್ತ್ರೀಯರೂ ಸಹ ಮೆಂಬರುತನಕ್ಕೆ ಉಮೇದುವಾರರಾಗಿ ತರಲ್ಪಡುವರು.

ಗುಬ್ಬಿ ನಾಟಕ ಕಂಪೆನಿ

ಈ ಕಂಪನಿಯವರು ನಿನ್ನೆ ರಾಜಭಕ್ತಿ ಎಂಬ ನಾಟಕವನ್ನಾಡಿದರು ಶನಿವಾರ ಕಾಳಿದಾಸ ಎಂಬ ನಾಟಕವನ್ನೂ ಭಾನುವಾರ ಸದಾರಮೆ ಎಂಬ ನಾಟಕವನ್ನೂ ಆಡಿ ಅನಂತರ ಪ್ರಯಾಣವನ್ನು ಬೆಳೆಯಿಸುವರು. ಸದಾರಮೆ ಎಂಬ ಮ್ಯಾಟನೀ ನಾಟಕವೇ ಈ ಸಾರಿಯ ಕಡೆಯ ನಾಟಕ

ರಾಜದ್ರೋಹದ ಮೊಖದ್ದಮೆ.

ಏಪ್ರಿಲ್ 5 ನೇ ತಾ|| ದಿವಸ ಚೀಫ್ ಕೋರ್ಟಿನಲ್ಲಿ ಟ್ರಾನ್ಸ್‌ಫರ್ ಅರ್ಜಿ ಬಗ್ಗೆ ತೀರ್ಮಾನವು ಹೇಳಲ್ಪಡುವುದು.

ಪತ್ರವ್ಯವಹಾರ

ನಿಜವಾದ ಸನ್ಯಾಸಿಗಳು

ನಮ್ಮ ಹಿಂದೂ ಜನಾಂಗಕ್ಕೆ ಗೋಬ್ರಾಹ್ಮಣರಲ್ಲಿಯೂ ಮತ್ತು ಧೈವಿಕ ವಿಷಯಗಳಲ್ಲಿಯೂ ಭಕ್ತಿಯೂ ಪೂಜ್ಯಭಾವವೂ ಇರುವುದು ಅನಾದಿಯ ಪದ್ಧತಿಯಾಗಿದೆ. ಅದರೊಳಗಾಗಿ ದೇವತಾರಾಧನೆಗೆ ಸಂಬಂಧಪಟ್ಟ [illegible] ಭಾವವಿರುವುದು. [illegible] ಧರ್ಮಗಳಲ್ಲಿ ಸೈಜವಾದ ದೈವಾಂಶವು ಇರುವುದೆಂಬ ದೃಢನಂಬಿಕೆಯೇ ಕಾರಣವಾಗಿದೆ. ನಮ್ಮ ರಾಜಧಾನಿಗೆ ಆಗಿಂದಾಗ್ಯೆ ಅನೇಕರು ಯತಿವೇಷದಿಂದ ಬಂದು [illegible] ಮಾಡಿ ಹೋಗುತ್ತಿರುವರು. [illegible] ಭಾವಗಳನ್ನು [illegible] ಮಾಡುತ್ತಿರುವ [illegible] ಈ ಹಿಂದೂ ಧರ್ಮವನ್ನು [illegible] ವುದಕ್ಕಂತೂ [illegible] ದೈವಾಂಶವು [illegible] ವೆಂದಾಗಲೀ ಅಂಥಾ [illegible] ದಿಂದ [illegible] ವಾಗಿಯೂ [illegible] ಶ್ರದ್ಧೆಯನ್ನೂ [illegible] ಭಗವದ್ಭಾವನೆಯನ್ನು [illegible] ರೀತಿ [illegible] ರಿಂದ [illegible] ಜನರಿಗೆ [illegible] ರಣ ನಿಜವಾಗಿಯೂ [illegible] ಳಲ್ಲೇ ಅಮಾನುಷ ಕಾರ್ಯಗಳನ್ನು ನಡೆಸಿ ಜನರು ತಾವಾಗಿಯೇ ಹುಡುಕಿಕೊಂಡು ಹೋಗಿ [illegible] ರ್ಯವನ್ನು ಪ್ರಚಾರಕ್ಕೆ ತರುವ ರೀತಿ ಮಾಡುವುದು ಬಹಳ ಉಪಯುಕ್ತವಾಗಿ ತೋರುತ್ತದೆ

[illegible]

Printed and published by P. R. Ramiaya at Sri Rama Pres D Subbiah Road, Mysore.

Regd. No M. 2322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ಸಂಪುಟ ೧] ಶನಿವಾರ ೬ ಏಪ್ರೆಲ್ ೧೯೨೯ [ಸಂಚಿಕೆ [illegible]

TAI NADU

[illegible]

ಸೆನೆಟ್ ಮೀಟಿಂಗು.

(ನಮ್ಮ ಪ್ರತಿನಿಧಿಗಳಿಂದ)

ವಿಶ್ವವಿದ್ಯಾಲಯದ ಸೆನೆಟ್ ಮೀಟಿಂಗು 4 ನೇ ತಾರೀಖು ಪ್ರಾತಃಕಾಲ 9 ಘಂಟೆಗೆ ಯೂನಿವರ್‌ಸಿಟಿ ಯೂನಿಯನ್ ಹಾಲಿನಲ್ಲಿ ಆರಂಭವಾಯಿತು. ಆಕ್ಟಿಂಗ್ ವೈಸ್ ಛಾನ್ಸಲರಾದ ಮಿ॥ ಕೆ. ಚಾಂಡಿಯವರು ಅಗ್ರಾಸನವನ್ನು ವಹಿಸಿದ್ದರು. ಅನೇಕ ಸೆನೆಟರುಗಳು ಹಾಜರಿದ್ದರು. ಡಾ॥ ಸೀಲರವರು ಮಾಡುತ್ತಿದ್ದಂತೆ ಮ॥ [illegible] ಪ್ರಾರಂಭ ಭಾಷಣವನ್ನು ಮಾಡಿದರು.

ಈ ಅಧಿವೇಶನವು ಯೂನಿವರ್‌ಸಿಟಿಯ ಆಯವ್ಯಯವನ್ನು ವಿಮರ್ಶೆಮಾಡುವುದಕ್ಕೆ ಸೇರಿದಿರುವುದು. ಎಂಟು ರಿಸಲ್ಯೂಷನುಗಳೂ ಅರವತ್ತೊಂದು ಪ್ರಾಪೋಸಿಷನ್‌ಗಳೂ ಕಾರ್ಯಕ್ರಮದಲ್ಲಿರುವವು ಅವಧಿಯು ಪೂರೈಸಿದ ಶ್ರೀ॥ ಬಿ. ಕೆ. ನಾರಾಯಣರಾಯರ ಜಾಗದಲ್ಲಿ ಸೆನೇಟಿನಿಂದ ಯೂನಿವರ್‌ಸಿಟಿ ಕೌನ್ಸಿಲಿಗೆ ಒಬ್ಬ ಮೆಂಬರನ [illegible] ನಡೆಯಿತು ಮ॥ ರಾ॥ ಗಳಾದ ಸಿ. ಸಂಪತ್ತಯ್ಯಂಗಾರ್ಯರೂ ಯಂ. ರಾಮಚಂದ್ರರಾಯರ [illegible] ಕೆ. ಟಿ. ರುಕ್ಮಿಣಮ್ಮನವರೂ [illegible] ಸಂಪತ್ತಯ್ಯಂಗಾರ್ಯರಿಗೆ [illegible] ರಾಯರಿಗೆ 10 ಓಟುಗಳೂ ಶ್ರೀಮತಿ ಕೆ. ಟಿ. ರುಕ್ಮಿಣಮ್ಮನವರಿಗೆ 106 [illegible] ಸಂಪತ್ತಯ್ಯಂಗಾರರು [illegible]

[illegible] ಯೂನಿವರ್‌ಸಿಟಿ ಸೆನೇಟಿನ ಪ್ರಾಧಾನ್ಯತೆ ಸರ್ಕಾರದವರಿಗೆ ಜೋಹುಕುಂ ಆಗಿ ಇರುವುದಕ್ಕಲ್ಲವೆಂದೂ ಪ್ರಜಾಪಕ್ಷದ ಸೆನೇಟರುಗಳು ವಾದಿಸಿದರು. ಮೆಡಿಕಲ್ ಕಾಲೇಜಿಗೆ ಖಾಯಂ ಆಗಿ ಪ್ರಿನ್ಸಿಪಾಲರನ್ನು ನೇಮಿಸಿದ ಬಗ್ಗೆಯೂ ಯೂರೋಪಿಯನ್ ಪ್ರೊಫೆಸರುಗಳಿಗೆ ಖಾಸಗೀ ಅಲೋಯನ್ಸುಗಳನ್ನು ಕೊಟ್ಟ ವಿಷಯದಲ್ಲಿಯೂ, ನಡೆದ ಕಾಗದ ಪತ್ರಗಳನ್ನು ಸೆನೇಟಿನ ಮುಂದೆ ಇಡುವುದಕ್ಕಾಗಲಿ [illegible] ಕಳುಹಿಸಿದ ತೀರ್ಮಾನವು ಸೆನೇಟಿಗೆ ಬಹಳ ವ್ಯಥೆಯನ್ನುಂಟುಮಾಡಿತೆಂಬ ವಿಷಯಕ್ಕೆ ಜೋರುಜೋರಾದ ಭಾಷಣಗಳು ನಡೆದವು. ಮೆಡಿಕಲ್ ಕಾಲೇಜನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗಾಯಿಸುವ ಬಗ್ಗೆ ಕಟ್ಟಡಕ್ಕಾಗಿ ಏನೂ ಖರ್ಚಾಗುವುದಿಲ್ಲವೆಂದು ಕೊಟ್ಟ ವಾಗ್ದಾನವು ಈಗ ಹಾರಿಹೋಗಿ ಕಟ್ಟಡಕ್ಕೋಸ್ಕರವೇ ಎರಡು ಲಕ್ಷಕ್ಕಿಂತಲೂ ಹೆಚ್ಚಾಗಿ ಖರ್ಚಾಗುತ್ತಿರುವುದೆಂದು ತಿಳಿಸಲ್ಪಟ್ಟಿತು. ಮತ್ತು ಯೂನಿವರ್ಸಿಟಿಯ ದೊಡ್ಡ ದೊಡ್ಡ ಹುದ್ದೆಗಳನ್ನು ನೇಮಿಸುವ ವಿಷಯದಲ್ಲಿ ಸರಕಾರದವರು ತಮಗೆ ತೋಚಿದಂತೆ ಮಾಡುತ್ತಿರುವರೆಂದೂ ಖಂಡನೆ ಮಾಡಲ್ಪಟ್ಟಿತು.

ವಿವಿಧ ವರ್ತಮಾನ.

ಸ್ಕೌಟ್ ಶಿಕ್ಷಣ.

ನೇ 6 ನೇ ತಾರೀಖಿನಿಂದ 19 ರವರೆಗೆ ಬ್ಯಾಡ್ರಹಳ್ಳಿ ಸ್ಟೇಷನ್ ಬಳಿ ಇರುವ ಸ್ಕೌಟ್ ಕ್ಯಾಂಪಿನಲ್ಲಿ ಅಪೇಕ್ಷೆಪಡುವ ಉಪಾಧ್ಯಾಯರುಗಳಿಗೆ ಸ್ಕೌಟ್ ಶಿಕ್ಷಣವು ಕೊಡಲ್ಪಡುವುದು. ಹೆಚ್ಚಿನ ವಿವರವು ಸ್ಕೌಟ್ ಕಮೀಷನರ್‌ರವರಿಂದ ತಿಳಿಯಬಹುದಾಗಿದೆ.

ರೇಟ್ ಪೇಯರುಗಳ ಸಂಘ.

ಈ ತಿಂಗಳು 3 ನೇ ತಾ ಸಾಯಂಕಾಲ ಟವನ್ ಹಾಲಿನಲ್ಲಿ ರೇಟ್ ಪೇಯರುಗಳ ಸಂಘದ ಕಾರ್ಯಕಾರಿ ಮಂಡಲವು ನೆರೆದಿತ್ತು. ಲೋಕಹಿತೈಷಿ ಹೆಚ್. ನಂಜುಂಡರಾಜೇಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಪ್ರತಿ ತಿಂಗಳಿನ 3 ನೇ ಶನಿವಾರ ಸಂಘದ ಕಾರ್ಯಕಾರಿ ಮಂಡಲದ ಮೀಟಿಂಗ್ ನಡೆಯಬೇಕೆಂದು ತೀರ್ಮಾನವಾಯಿತು. ರೇಟ್ ಪೇಯರ್ ಸಂಘದ ಆಫೀಸು ಮತ್ತು ಕಾರಕೂನರ ವ್ಯವಸ್ಥೆಯನ್ನು ಮಾಡಲ್ಪಟ್ಟಿತು. ಮುನಿಸಿಪಲ್ ಕೌನ್ಸಿಲ್ಲಿಗೆ ರೇಟ್ ಪೇಯರ್ ಸಂಘ ಸಹಾಯಕಾರಿಯೇ [illegible] ಮುನಿಸಿಪಲ್ ಕೌನ್ಸಿಲ್ ಸಭೆಯು ರೇಟ್ ಪೇಯರ್ ಸಂಘದ ಕೆಲಸಕಾರ್ಯಗಳಿಗೆ ಉತ್ತೇಜನ ಮಾಡಬೇಕೆಂಬ ಠರಾವು ಮಾಡಲ್ಪಟ್ಟಿತು.

ಮುನಿಸಿಪಲ್ ಕೌನ್ಸಿಲ್ಲಿನವರು ರೇಟ್ ಪೇಯರ್ ಸಂಘದ ಉಪಯೋಗಕ್ಕಾಗಿ ಟವನ್ ಹಾಲಿನಲ್ಲಿ ಒಂದು ರೂಮನ್ನು ಕೊಟ್ಟಿದ್ದಕ್ಕೋಸ್ಕರ ಕೃತಜ್ಞತೆಯು ಪ್ರದರ್ಶಿಸಲ್ಪಟ್ಟಿತು. ಸಂಘದ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೋಸ್ಕರ ಮೆಂಬರುಗಳನ್ನೂ ಫಂಡನ್ನೂ ಶೇಖರಿಸಬೇಕೆಂದು ಪ್ರತಿಜ್ಞೆ ಮಾಡಲ್ಪಟ್ಟಿತು. ಅಧ್ಯಕ್ಷರಿಗೆ ಧನ್ಯವಾದಗಳು ಅರ್ಪಿಸಲ್ಪಟ್ಟನಂತರ ಸಭೆಯು ಬರಖಾಸ್ತಾಯಿತು.

ಮಿ॥ ಜೆ. ಸಿ. ರೋಲೋರವರು 1929—30 ನೇ ಇಸವಿಯ ಆಯವ್ಯಯದ ಅಂದಾಜು ಪಟ್ಟಿಯನ್ನು ಸಭೆಯ ಮುಂದಿಟ್ಟರು. ಮ॥ ಎನ್. ಎಸ್. ಸುಬ್ಬರಾಯರವರು ಈ ಠರಾವನ್ನು ಅನುಮೋದಿಸಿದರು ಬರುವ ವರ್ಷಕ್ಕೆ ಒಟ್ಟು ಹದಿನೇಳು ಲಕ್ಷದ ಐವತ್ತೊಂದು ಸಾವಿರದ ಎಂಟುನೂರ ಇಪ್ಪತ್ತೈದು ರೂಗಳು ಖರ್ಚಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ. ಇವುಗಳ ಪೈಕಿ ಎರಡು ಲಕ್ಷದ ಹದಿಮೂರುಸಾವಿರದ ಎಂಟನೂರಿಪ್ಪತ್ತೈದು ರೂಪಾಯಿಗಳು ವಿಶ್ವವಿದ್ಯಾಲಯದಲ್ಲಿ ಹುಟ್ಟುವಳಿ ಇದನ್ನು ಕಳೆದರೆ ಸರ್ಕಾರದಿಂದ 15 ಲಕ್ಷದ 38 ಸಾವಿರ ರೂಗಳು ಗ್ರ್ಯಾಂಟು ದೊರೆಯಬೇಕಾಗಿರುವುದು.

ಬಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆಯು ನಡೆದಾಗ ಕನ್ನಡ ಭಾಷೆಗೂ ಕನ್ನಡ ಸಂಸ್ಕೃತಿಗೂ ಹೆಚ್ಚು ಪ್ರೋತ್ಸಾಹವನ್ನೀಯಬೇಕೆಂದು ಪ್ರಾರ್ಥಿಸಲ್ಪಟ್ಟಿತು. ಪರೀಕ್ಷೆಗೂ ಪಾಠಕ್ರಮಗಳಿಗೂ ಸಂಬಂಧಪಟ್ಟ ಅನೇಕ ಠರಾವುಗಳು ಚರ್ಚೆಯಾದವು. ಸೆನೆಟ್ ಸಭೆಯು 4 ನೇ ತಾ ಪ್ರಾತಃಕಾಲ 4½ ಯವರೆಗೂ ಮಧ್ಯಾಹ್ನ 4ರಿಂದ 6 ರವರೆಗೂ ಪುನಃ 5 ನೇ ತಾ ಪ್ರಾತಃಕಾಲ 8 ರಿಂದ 12 ರವರೆಗೂ ಆಯಿತು. ಪುನಃ ಆರನೇ ತಾ ಕೂಡುವುದಾಗಿರುವುದು. ಕಾರ್ಯಕ್ರಮದ ಪಟ್ಟಿಯಲ್ಲಿರುವ ಎಲ್ಲಾ ವಿಷಯಗಳೂ ಚರ್ಚೆಯಾಗುವ ಸಂಭವವಿಲ್ಲ. ಜೂನ್‌ನಲ್ಲಿ ಪುನಃ ಸೆನೇಟ್ ಸಭೆಯು ಸೇರುವ ಸಂಭವವುಂಟು.

[illegible] ಕಂಬಾಯ.

ಮೊಳಕಾಲ್ಮೂರು ತಾ॥ [illegible] ಕೆರೆ (1)ಚಿಕ್ಕನಾಯಕನ ಹಳ್ಳಿ (2) ಗೌರಸಮುದ್ರ (3) [illegible] ಸಿದ್ದಾಪುರ (4) ದೇವಸಮುದ್ರ ಈ ಕೆರೆಗಳ [illegible] ಗಳಿಗೆ 1929—29 ನೇ ಸಾಲಿನಲ್ಲಿ [illegible] ದಲ್ಲಿ [illegible] ದಾಖಲಾಗಿರುತ್ತೆ.

ಸರಕಾರದ ತಿಳುವಳಿಕೆ.

ಪ್ರಜೆಗಳ ದನಕರುಗಳು ಆರೋಗ್ಯವಾಗಿರುವ [illegible] ವಾಗಿ ಸರ್ಕಾರದವರು (ಜಾನುವಾರುಗಳಿಗೆ) ಇನಾಕ್ಯುಲೇಷನ್ ಮಾಡಿ ಔಷಧಿ ಕೊಡಿಸುತ್ತಿರುವುದು ಸರಿಯಷ್ಟೆ. ಆ ರೀತಿ ಚುಚ್ಚುಮದ್ದು ಹಾಕಿದಂಥಾ ಪಶುಗಳು ರೋಗಗಳಿಗೆ ತುತ್ತಾಗಿ ಮೃತವಾಗುತ್ತವೆಂದು ಯಾರೋ ವ್ಯರ್ಥರು ಅಲ್ಲಲ್ಲಿ ಸುಳ್ಳುಸುದ್ದಿಯನ್ನು ಹುಟ್ಟಿಸುತ್ತಿ [illegible] ಇಂಥಾ ನಿರಾಧಾರವಾದ ಸುದ್ದಿಗಳನ್ನು ನಂಬಬಾರದೆಂದು ಸರ್ಕಾರದವರು ರೈತರುಗಳಿಗೆಲ್ಲಾ ತಿಳುವಳಿಕೆ ಗೊಟ್ಟಿರುತ್ತಾರೆ.

ವಿಲೇಜು ಕೋರ್ಟ್.

ಗೋರೀಬಿದನೂರು ತಾ॥ ನ ವತದ ಹೊಸಹಳ್ಳಿ (2)ಚಂದರಾಯನಹಳ್ಳಿ (3) ಸುಬ್ಬನಹಳ್ಳಿ (4) ಗೊಲ್ಲಕೋಟೆ, (5)ನಕ್ಕಲಹಳ್ಳಿ (6) ಮುಸಿವಲಕೆರೆ (7)ವಾಗಿನ ಹಳ್ಳಿ ಈ ಗ್ರಾಮಗಳಿಗೆಲ್ಲಾ ಒಟ್ಟು 1 ವಿಲ್ಲೇಜು ಕೋರ್ಟು 1929 ನೇ ಮೇ ಒಂದನೇ ತಾ॥ ಲಾಗಾಯಿತು ವತದ ಹೊಸಹಳ್ಳಿಯಲ್ಲಿ ಸ್ಥಾಪಿಸಲ್ಪಡುವುದು.

ತಾಯಿನಾಡು.
6—4—1929

ವಿದ್ಯಾರ್ಥಿಗಳ ಮುಷ್ಕರ

ವಿದ್ಯಾರ್ಥಿಗಳ ಮುಷ್ಕರಗಳ ವಿಷಯವನ್ನು ಪರ್ಯಾಲೋಚನೆ ಮಾಡಿ ಅವುಗಳನ್ನು ನಿಲ್ಲಿಸಲು ಸಾಧಕವಾದ ಸಲಹೆಗಳನ್ನು ಕೊಡುವುದಕ್ಕಾಗಿ ಮೈಸೂರು ಸರಕಾರದವರು ಮ|| ರಾ|| ಕೆ ಆರ್. ಶ್ರೀನಿವಾಸ ಐಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಕಮಿಟಿಯು ಹೊರಡಿಸಿರುವ ವರದಿಯು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿರುವುದು. ಕಮಿಟಿಯವರು ವಿಷಯವನ್ನು ಅನುಕೂಲಾಗ್ರವಾಗಿ ಪರಿಶೀಲಿಸಿ ಅನೇಕ ಸಾಕ್ಷ್ಯಗಳನ್ನು ತೆಗೆದುಕೊಂಡು ಬಹಳ ವಿಚಾರಮಾಡಿ ವರದಿಯನ್ನು ಬರೆದಿರುವರು. ಈ ವರದಿಯು ನಮ್ಮ ಸಂಸ್ಥಾನದ ಉಪಯೋಗಕ್ಕಾಗಿ ಬರೆಯಲ್ಪಟ್ಟಿದ್ದರೂ ಇಡೀ ಇಂಡಿಯಾ ದೇಶದವರು ಇದರ ಉಪಯೋಗವನ್ನು ಪಡೆಯಬಹುದು. ಮುಖ್ಯವಾಗಿ ಈಗಿನ ಶಿಕ್ಷಣ ಪದ್ಧತಿಯ ದುರ್ಬಲ [illegible] ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಪರಸ್ಪರ [illegible] ಸಂಸ್ಪರ್ಶವಿಲ್ಲದೆಯಿರೋಣ ವಿದ್ಯಾರ್ಥಿಗಳಿಗೆ ಅವರ [illegible] ಸಂಯಾದ ಹತೋಟಿಯಿಲ್ಲದೆ ಇರೋಣ ಉಪಾಧ್ಯಾಯರುಗಳನ್ನು ಆಗಾಗ್ಗೆ ವರ್ಗಾಯಿಸುವುದರಿಂದ ಅವರಿಗೆ ವಿದ್ಯಾರ್ಥಿಗಳ ಮೇಲೆ ಮಮತೆಯಿಲ್ಲದಿರೋಣ ಹೆಡ್‌ಮಾಸ್ಟರಗಳಿಗೆ ಅವರಿಗೆ ತೋಚಿದಾಗ ಪರಿಸ್ಥಿತಿಯನ್ನು ಅನುಸರಿಸಿ ರಜಾ ಕೊಡಲು ಸ್ವಾತಂತ್ರ್ಯವಿಲ್ಲದಿರೋಣ ಸ್ಕೂಲು ಕಾಲೇಜುಗಳ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಯಾವ ಭಾಗವೂ ಇಲ್ಲದಿರೋಣ ಸ್ಕೂಲು ಕಾಲೇಜುಗಳೊಳಗೆ ಪ್ರಸಕ್ತ ರಾಜಕೀಯ ವಿಷಯುಗಳ ಮೇಲೆ ಚರ್ಚೆಯನ್ನು ನಡೆಯಿಸಲು ವಿದ್ಯಾರ್ಥಿಗಳಿಗೆ ಅವಕಾಶವಿಲ್ಲದಿರೋಣ ದೊಡ್ಡ ದೊಡ್ಡ ಪ್ರಸಂಗಗಳು ಬಂದಾಗ್ಯೆ ವಿದ್ಯಾರ್ಥಿಗಳ ಅಹವಾಲುಗಳನ್ನು ಕಾಲೇಜಿನ ಉಪಾಧ್ಯಾಯರುಗಳು ನಿರ್ಲಕ್ಷಿಸೋಣ ಇವೇ ಮೊದಲಾದ ಸಂಗತಿಗಳು ಮುಷ್ಕರಗಳಿಗೆ ಕಾರಣವೆಂದು ಕಮಿಟಿಯವರು ಅಭಿಪ್ರಾಯಪಟ್ಟಿರುತ್ತಾರೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ದೇಶದಲ್ಲಿ ಈಗ ಬಹಳ ಜೋರಿನಿಂದ ಪ್ರವಹಿಸುತ್ತಿರುವ ಆತ್ಮಾಭಿಮಾನ ಮತ್ತು ದೇಶಾಭಿಮಾನದ ಪ್ರವಾಹಗಳು ವಿದ್ಯಾರ್ಥಿಗಳನ್ನು ಸೆಳೆಯುತ್ತಲಿವೆ. ಸ್ಕೂಲು ಕಾಲೇಜುಗಳು ಈ ನವಚೈತನ್ಯ ಪ್ರವಾಹಕ್ಕೆ ವಿರೋಧವಾಗಿ ಕಟ್ಟೆಯನ್ನು ಕಟ್ಟುತ್ತಿವೆ. ಈಗಿನ ಸ್ಕೂಲು ಕಾಲೇಜುಗಳು ಮನುಷ್ಯ ಸ್ವಭಾವಕ್ಕೆ ವಿರೋಧವಾಗಿ ವಿದ್ಯಾರ್ಥಿಗಳ ಆತ್ಮಾಭಿಮಾನವನ್ನೂ ದೇಶಾಭಿಮಾನವನ್ನೂ ತಡೆಗಟ್ಟಲು ಹೊರಟಿರುವುವು. ಹೊರಗಿನ ಪ್ರಪಂಚದಲ್ಲಿ ನಮ್ಮ ರಾಷ್ಟ್ರೀಯ ಮುಖಂಡರು ಹೇಳುವ ಮಾತುಗಳಿಗೂ ನಡೆಸುವ ನಡವಳಿಕೆಗಳಿಗೂ ಪ್ರತಿಕೂಲವಾಗಿ ಈಗಿನ ಶಿಕ್ಷಣ ಪದ್ಧತಿಯು ದೇಶದ ಆತ್ಮಾಭಿಮಾನಕ್ಕೆ ವಿರೋಧವಾಗಿ ನಡೆಯಲು ಪ್ರೇರೇಪಿಸುತ್ತಿದೆ. ಆದುದರಿಂದಲೇ ಈಗಿನ ವಿದ್ಯಾಶಾಲೆಗೂ ವಿದ್ಯಾರ್ಥಿಗಳಿಗೂ ತಿಕ್ಕಾಟವು ಬಂದಿರುವುದು. ಲೋಕಮಾನ್ಯ ತಿಲಕರ ಪುಣ್ಯದಿನವನ್ನು ಆಚರಿಸುತ್ತೇವೆಂದು ವಿದ್ಯಾರ್ಥಿಗಳು ಹೊರಟರೆ ವಿದ್ಯಾಶಾಲೆಗಳು ಈ ದೇಶಾಭಿಮಾನವನ್ನು ಪ್ರತಿಭಟಿಸುವುವು. ಇಂಡಿಯಾ ದೇಶವೆಲ್ಲಾ ಪ್ರಿನ್ಸ್ ಆಫ್ ವೇಲ್ಸರವರಿಗೆ ಬಹಿಷ್ಕಾರ ಹಾಕಿದರೆ ಮೈಸೂರು ವಿದ್ಯಾರ್ಥಿಗಳು ಮಾತ್ರ ಅವರಿಗೆ ಸತ್ಕಾರಮಾಡಬೇಕೆಂದು ಹೇಳುವುದು ಯಾವ ನ್ಯಾಯ? ಇಂಡಿಯಾ ದೇಶದಲ್ಲೆಲ್ಲಾ ಸೈಮನ್ ಕಮೀಷನ್ನಿನ ಆಗಮನದ ದಿವಸ ಬಹಿಷ್ಕಾರ ಚಳವಳಿಯು ನಡೆದಾಗ ಮೈಸೂರು ವಿದ್ಯಾರ್ಥಿಗಳು ಮಾತ್ರ ಸ್ಕೂಲು ಕಾಲೇಜುಗಳಿಗೆ ಹೋಗಬೇಕೆಂದು ಒತ್ತಾಯಪಡಿಸಿದರೆ ಮುಷ್ಕರವಲ್ಲದೆ ಮತ್ತೇನು ನಡೆದೀತು? ಹೀಗೆಯೇ ಮುಷ್ಕರಗಳ ಚರಿತ್ರೆಯನ್ನು ನೋಡಿದರೆ ಪ್ರತಿ ಒಂದು ಸಂದರ್ಭದಲ್ಲಿಯೂ ವಿದ್ಯಾಶಾಲೆಯ ಅಧಿಕಾರಿಗಳು ವಿದ್ಯಾರ್ಥಿಗಳ ದೇಶಾಭಿಮಾನವನ್ನು ಅಡ್ಡಕಟ್ಟಿರುವರು. ಯಾವಾಗ ವಿದ್ಯಾಶಾಲೆಗಳು ಇಡೀ ಜನಾಂಗದ ಆತ್ಮಾಭಿಮಾನವನ್ನು ರಕ್ಷಣ ಮಾಡಲು ಸಿದ್ಧವಾಗುವುವೊ ಅಂದೇ ಮುಷ್ಕರಗಳು ತಪ್ಪುವುವು. ವಿದ್ಯಾರ್ಥಿಗಳು ಪೂರ್ವ ಎಂದರೆ ವಿದ್ಯಾಶಾಲೆಗಳು ಪಶ್ಚಿಮ ಎಂದು ತಿರುಗಿಕೊಂಡರೆ ವಿದ್ಯಾರ್ಥಿಗಳ ಮುಷ್ಕರಗಳು ಇನ್ನೂ ಹೆಚ್ಚುವುವು. ಶಿಕ್ಷಣದಿಂದ ವಿದ್ಯಾರ್ಥಿಗಳ ಪವಿತ್ರ ಪ್ರೇರಣೆಗಳನ್ನು ದಬ್ಬುವುದು ಅಸಾಧ್ಯ. ಕಮಿಟಿಯವರು ಕೊಟ್ಟಿರತಕ್ಕ ಎಲ್ಲಾ ಸಲಹೆಗಳೂ ಮನ್ನಣೆಗೆ ಅರ್ಹವಾಗದೇ ಹೋದರೂ ಕೆಲವು ಮಾತ್ರ ಉಪಯುಕ್ತವಾದವುಗಳಾಗಿರುವುವು.

ವರ್ತಮಾನ ಸಂಗ್ರಹ.

ರೆವಿನ್ಯೂ ಸೆಕ್ರೆಟೇರಿಯೆಟ್

ಸೆಕ್ರೆಟೇರಿಯೆಟ್ಟಿನ ಹಂಗಾಮಿ ಸೂಪರಿಂಟೆಂಡೆಂಟರಾದ ಮಿ|| ಕೆ. ಪಾಂಡುರಂಗರಾಯರು ರಿಟೈರಾದ ಮಿ|| ಎಂ. ಅನಂತರಾಮಯ್ಯಂಗಾರ್ಯರ ಸ್ಥಾನದಲ್ಲಿ ಮಾರ್ಚಿ ಒಂದರ ಲಾಗಾಯಿತು ಎರಡನೆ ದರ್ಜೆಯ ಸೂಪರಿಂಟೆಂಡೆಂಟರಾಗಿ ಖಾಯಂ ಮಾಡಲ್ಪಟ್ಟಿರುವರು.

ತುರುವೇಕೆರೆ ಸಬ್ ತಾ|| ನ ಆಕ್ಟಿಂಗ್ ಡೆ|| ಅಮಲ್ದಾರಾದ ಮಿ|| ಸೈಯದ್ ಗೌಸ್ ಮೊಹಿದೀನ್‌ರವರಿಗೆ ಉಪಯೋಗಿಸಿಕೊಳ್ಳುವ ತಾ|| ಲಾಗಾಯಿತು ಎರಡು ತಿಂಗಳ ಫರ್ಲೋ ರಜಾ ಮಂಜೂರಾಗಿದೆ ಆ ಕಾಲದಲ್ಲಿ ಚಿತ್ರದುರ್ಗದ ತಾ|| ಶಿರಸ್ತೇದಾರ್ ಮಿ|| ಎಂ. ನಾರಾಯಣರಾಯರವರು ಡೆ|| ಅಮಲ್ದಾರರ ಕೆಲಸ ಮಾಡುವರು.

ದೇವಾದಾಯದ ವಿಚಾರಣೆ;

ಸರ್ಕಾರದವರು ಅಮಲ್ದಾರ್ ಮಿ|| ಎಂ. ಆರ್ ಆಸಂದಾಳ್ವಾರ್‌ರವರನ್ನು ತೀರ್ಥಹಳ್ಳಿ ಮತ್ತು ಶಿವಮೊಗ್ಗಾ ತಾ|| ಗಳಲ್ಲಿ ಅನ್ಯಾಕ್ರಾಂತವಾಗಿರುವ ದೇವಾದಾಯ ಇನಾಮತಿಗಳನ್ನು ವಿಚಾರಣೆ ಮಾಡುವುದಕ್ಕಾಗಿ ಮೂರು ತಿಂಗಳ ಕಾಲ ನಿಯಮಿಸಿರುವರು.

ಸೂಪರಿಂಟೆಂಡಿಂಗ್ ಇಂಜನಿಯರ್

ರಜದಲ್ಲಿರುವ ಸೂಪರಿಂಟೆಂಡಿಂಗ್ ಇಂಜನಿಯರಾದ ಮಿ|| ಎಂ. ಜಿ. ರಂಗಯ್ಯನವರು ಕಾವೇರಿ ನೀರಿನ ಪಂಚಾಯಿತಿ ಸಂಬಂಧವಾಗಿ ಸ್ಪೆಷಲ್ ಡ್ಯೂಟಿಗೋಸ್ಕರ ಕೃಷ್ಣರಾಜ ಸಾಗರಕ್ಕೆ ವರ್ಗಾಯಿಸಲ್ಪಟ್ಟಿರುವರು.

ಭಾರೀ ಹುಲಿ.

ಶಿವಮೊಗ್ಗಾ ಫಾರೆಸ್ಟು ಆಫೀಸರು ಅಲ್ಲಿನ ಕಾಡಿನಲ್ಲಿ ತುಂಬಾ ಹಾವಳಿ ಮಾಡುತ್ತಿದ್ದ ಒಂದು ಭಾರೀ ಹುಲಿಯನ್ನು ಹಿಡಿದು ಮೈಸೂರು ಖಾಸಬಂಗಲಿಗೆ ಕಳುಹಿಸಿರುವರು.

ನೀರಿನ ತೆರಿಗೆ

[illegible] ಬಹಳ ಪರದಾಟವಾಗಿರುವುದರಿಂದಲೂ [illegible] ಮುನಿಸಿಪಾಲಿಟಿಯವರು ಅದಕ್ಕೆ [illegible] ಕೊಡಲಿಲ್ಲವೆಂಬ [illegible] ನಿಸಿಪಾಲಿಟಿಗೆ ನೀರಿನ ತೆರಿಗೆಯನ್ನು [illegible] ಇದರ ನಿಜಾಂಶವನ್ನು ಮುನಿಸಿಪಲ್ ಅಧಿಕಾರಿಗಳು [illegible]

ಮ|| ಬಿ. ಸೀತಾರಾಮಾಚಾರ್ಯರ [illegible]

[illegible] ವೆಂಟ್ ಮಾಡಲ್ಪಟ್ಟಿದೆ [illegible]

[illegible]

[illegible]


ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಕಾರ್ಖಾನೆಯ ವ್ಯಾಪಾರಿಗಳು, ಮೈಸೂರು.

[illegible] ಇವರು ಶಿದ್ದಪ್ಪಾಸ್ ವಾಡಕ್ [illegible] 4 ನಮೂನೆ ತಯಾರಾಗಿ [illegible] ಶೀಟ್ ಪಕ್ಕಾ [illegible] ಶ್ರೀ [illegible] ಸುದರ್ಶನ [illegible] ಸರ್ವೋತ್ತಮ ಪಿಕ್ಚರ್ ಕ್ಯಾಲೆಂಡರು [illegible] ಅನೇಕ ಬಣ್ಣಗಳಿಂದ [illegible] ನೋಡಿರಿ. [illegible] ಕನ್ನಡಕ್ಕೆ 3 ನಮೂನೆ ಕ್ಯಾಲೆಂಡರುಗಳನ್ನು [illegible] ವಿಳಾಸ— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.



Reserved for
SALAMISRI DEPOT
Bangalore city.



"[illegible]"

[illegible]

ಕಸ್ತೂರಿ ಮಾತ್ರೆಗಳು,

[illegible] ಯಾವ ರೋಗವೂ [illegible]

[illegible] ಅನೇಕ ರೋಗಗಳನ್ನು [illegible] ಸೀಸೆ 1 ಕ್ಕೆ [illegible]

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. [illegible] ವಿಳಾಸವನ್ನು, [illegible] ಕಸ್ತೂರಿ ಮಾತ್ರೆ [illegible]


ವೈಶ್ವಾನರ ರಸ:—(ಕಾಲರಾ ವಾಂತಿಭೇದಿಗೆ ಸಿದ್ಧೌಷಧ) ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1 ಕ್ಕೆ ರೂ 1.

ಲಕ್ಷ್ಮೀವಿಲಾಸ ರಸ:—(ಪ್ಲೇಗಿಗೆ) ಹತ್ತಾರು ವರುಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗ್ ರೋಗಿಗಳಿಗೆ ರೋಗವನ್ನು ಸಂಪೂರ್ಣವಾಗಿ [illegible] ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

ಶ್ರೀ ಸಿದ್ಧಾಸವೈಲ:—ಪ್ಲೇಗ್ ರೋಗಿಯ ಪ್ರತಿ ಸಂದುಗಳಿಗೂ ಗೆಡ್ಡೆ [illegible] ತಿಕ್ಕುವ ಔಷಧ. ಸೀಸೆ 1 ಕ್ಕೆ 0-8-0 [illegible]

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಬ್ರಾಂಚ್ ಆಫೀಸು	ಹೆಡ್ ಆಫೀಸು
[illegible] ಬೆಂಗಳೂರು ಸಿಟಿ	[illegible] ವೈದ್ಯಶಾಲಾ, ಮೈಸೂರು.



ಭಂಗಾರದ ಕೈಬಳೆಗಳೂ ಚೈನುಗಳೂ ವಗೈರೆ ಆಭರಣಗಳೂ ಚೊಕ್ಕ ಬೆಳ್ಳಿಯ ಸಾಮಾನುಗಳೂ ನಮ್ಮಲ್ಲಿ ಖಾತರಿಯಾಗಿ ಸಿಗುತ್ತೆ.

ಮಜೂರಿ ಇತರ ಕಡೆಗಳಿಗಿಂತ ಸುಲಭ. ಕೆಲಸ ಇತರ ಕಡೆಗಳಿಗಿಂತ ನಾಜೂಕು.

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ನೋಡಿ

ಯುಸ್ ನಂಸಿಂಹ ಅಯ್ಯರ್ ಕೆ. ನಾರಾಯಣಪ್ಪ	ಶ್ರೀ ಲಕ್ಷ್ಮೀವೆಂಕಟೇಶ್ವರ ಕಂಪನಿ ನಗರ್ತಪೇಟೆ, ಬೆಂಗಳೂರು ಸಿಟಿ

THE JUPITER GENERAL INSURANCE Co., Ltd.

Applications are invited from respectable and influential gentlemen from every Taluk and District Centres For Life Insurance Business. Liberal terms.

A rare opportunity for spare time earnings.

We undertake also Fire & Motor cars Etc., Insurance

Apply for Agency terms

To the Chief Agents for Mysore and Coorg

N. Y. PISSAY & Co.,
STOCK & SHARE BROKERS,
Chikpet, Bangalore City.

Printed and published by P. R Ramiaya
Sri Rama Pres D Subbiah Road, Mysore.

Regd. No. M 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ: ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ॥ ಗೀತಾ

ವಾರ್ಷಿಕ [illegible]

ಸಂಪುಟ ೧] ಸೋಮವಾರ ೮ ಏಪ್ರೆಲ್ ೧೯೨೯ [ಸಂಚಿಕೆ [illegible]

[illegible]ನೆಟ್ ಮಾತಿಂಗು.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

[illegible] ಸೆನೆಟ್ [illegible] ಕಾಲವೂ [illegible] ನಡೆಯಿತು. [illegible] ಚರ್ಚೆಗಳು ನಡೆದವು. [illegible] ಉಪ [illegible] ಎಸ್. [illegible] ವಾಧನರಾ [illegible] ಜೆ. ಸಿ. [illegible] ಇದಕ್ಕೆ ಬೆಂಬಲವನ್ನು ಕೊಟ್ಟರು. [illegible]

[illegible]

[illegible] ಅಧ್ಯಾಪಕ ಕೆಲಸಕ್ಕೆ [illegible] ಜಾತಿ [illegible] ಮ|| ಎಸ್. ವೆಂಕಟೇಶಯ್ಯನವರ. ಈ ಠರಾ[illegible] ಆದರೆ ಯಾವ ಕೆಲಸವನ್ನೇ ಮಾಡಲಿ ಒಂದು ನಿ[illegible]ಯಿರಬೇಕು. ಯೂನಿವರ್ಸಿಟಿಯಲ್ಲಿ ಅಧ್ಯಾಪ[illegible] ಯೋಗ್ಯತೆ [illegible]ಬೇಕು. ಹಾಗೆ ಹಿಂದುಳಿದ ಪಂಗಡದವರಿಗೆ [illegible] ಕೊಡಲಿ. ಮತ್ತು ಸರಿ[illegible] ಕೆಲ[illegible] ಸಾ[illegible] [illegible] ಸರ[illegible] ತಿಳಿದು ಬರುತ್ತದೆ. ಹೀಗೆ ಕಳುಹಿಸಿ[illegible] ಸರಕಾರದವರು [illegible]

[illegible]

ಈಗ ಮೂರು ನಾಲ್ಕು ತಿಂಗಳುಗಳ ಹಿಂದೆ ನೇಮಿಸಲ್ಪಟ್ಟ ಕೆಲವು ಅಧ್ಯಾಪಕರ ವಿಷಯವಾಗಿ ಚರ್ಚೆಯು ನಡೆಯಿತು. ಯೂನಿವರ್ಸಿಟಿ ರಜಿಸ್ಟ್ರಾರಾದ ಮ|| ಬಿ ಎಂ ಶ್ರೀಕಂಠಯ್ಯನವರು ಈ ಮೇಲಿನ ಅಧ್ಯಾಪಕರನ್ನು ಸರಕಾರದ ಸೂಚನೆಯಂತೆ ನೇಮಿಸಲಾಯಿತೆಂದೂ ಅವರುಗಳೇ ಇತರರಿಗಿಂತಲೂ ಸಮರ್ಥರೆಂದು ಹೇಳುವುದು ಸಾಧ್ಯವಲ್ಲದೆ ಹೋದರೂ ಅವರಿಗೆ ಆ ಕೆಲಸಗಳಿಗೆ ಸಾಕಾದಷ್ಟು ಯೋಗ್ಯತೆಯು ಇತ್ತೆಂದು ಹೇಳಬಹುದು [illegible]

ವೈಸ್ ಚಾನ್ಸಿಲರಾದ ಮಿ|| ಚಾಂಡಿಯವರು [illegible] ರಿಜಿಸ್ಟ್ರಾರರ ಅಭಿಪ್ರಾಯಗಳನ್ನು ಅನುಮೋದಿಸುವುದಿಲ್ಲವೆಂದೂ, ಮೇಲೆ [illegible] ಹೊಸ ಅಧ್ಯಾಪಕರು ಸಾಮರ್ಥ್ಯದಲ್ಲಿ [illegible] ಶ್ರೇಷ್ಠ[illegible]ರೆಂದೂ ತಿಳಿಸಿದರು,

ಮ|| ಎಸ್ ವೆಂಕಟೇಶಯ್ಯನವರು ಯೂನಿವರ್ಸಿಟಿಯಲ್ಲಿ ಎಲ್ಲಾ ಜಾತಿಯವರಿಗೂ [illegible] ಪ್ರಾತಿನಿಧ್ಯವು ದೊರೆಯ[illegible] ನ್ಯಾಯವಾದ ತತ್ವವಲ್ಲವೆಂದು ತಿಳಿಸಿದರು;

ಡಾ|| ಕೃಷ್ಣಸ್ವಾಮಿ ಅಯ್ಯಂಗಾರ್ಯವರು ಯೂನಿವರ್ಸಿಟಿಯ ಅಧ್ಯಾಪಕರನ್ನು ನೇಮಿಸುವ ವಿಷಯದಲ್ಲಿ ಸೆಂಟ್ರಲ್ [illegible] ಕೈ ಹಾಕುವುದು ತಪ್ಪೆಂದು ತಿಳಿಸಿದರು.

ಮ|| [illegible] ನಾರಣಪ್ಪ[illegible] ಠರಾವನ್ನು [illegible] ಸಾ[illegible]ಮರ್ಥ್ಯವನ್ನೇ ಒಂದು ದೊಡ್ಡ ಮಹಾ [illegible] ವಾಗಿ [illegible] ಪಂಗಡಗಳವರ ಹಕ್ಕುಗಳು [illegible] ಲಕ್ಷಿಸಲ್ಪಡುತ್ತಲಿವೆ. ಸರ್ವಸ[illegible] ಮಾಡಲ್ಪಡುತ್ತವೆ, ಆದರೆ ಅಸ[illegible] ಸಮಯದಲ್ಲಿ ಅವುಗಳೆಲ್ಲಾ ಮರೆಯಲ್ಪಡುತ್ತವೆ

ಮಿ|| ಚಾಂಡಿಯವರ :— ಡಾಕ್ಟರ [illegible] ನಾರಾಯಣರಾಯರೂ ಎ. ಸುಬ್ಬರಾಯರೂ ಈಗ ಈ ಸಭೆಯಲ್ಲಿದ್ದಿದ್ದರೆ ಹೊಸದಾಗಿ ನೇಮಿಸಲ್ಪಟ್ಟ ಅಧ್ಯಾಪಕರ ವಿಷಯದಲ್ಲಿ ಅನುಮಾನಗಳನ್ನು ಪರಿಹಾರ ಮಾಡುತ್ತಿದ್ದರು. ಅವರುಗಳ ಒಪ್ಪಿಕೆಯನ್ನು ಪಡದೇ ಹೊಸ ಅಧ್ಯಾಪಕರು ನೇಮಿಸಲ್ಪಟ್ಟರು [illegible]

ಮ|| [illegible]:— ಸರ್ಕಾರದವರು ಯೂನಿವರ್ಸಿಟಿಗೆ ಕಳುಹಿಸಿರುವ ಸೂಚನೆಗಳು ನ್ಯಾಯವಾದವುಗಳು. ಸರಕಾರವು [illegible] ಯಾಗಿ ಕೆಲಸಮಾಡುತ್ತಿದೆ. ಈ ಸೆನೆಟ್ ಸಭೆಯು [illegible] ಪ್ರತಿನಿಧಿಯಲ್ಲ. [illegible] ದುರ್ಬಲರಾಗಿ[illegible] ಅವರು [illegible] ಹೇಳುವುದಕ್ಕಾಗುವುದಲ್ಲ.

ಮ|| ಪಿ. ಸಂಪತ್ತಯ್ಯಂಗಾರ್ಯರು— ಅಧ್ಯಾಪಕರನ್ನು ನೇಮಿಸುವ ಒಗ್ಗೆ ಜಾತಿವಾರು ಪ್ರಾತಿನಿಧ್ಯದ ಮಾತ ಬರಬಾರದು.

ಮಿ|| ಎ ಆರ್ ವಾಡಿಯಾರವರು ಮ|| ವೆಂಕಟನಾರಣಪ್ಪನವರ [illegible] ಠರಾವನ್ನು ತಂದುದಕ್ಕಾಗಿ ನಾನು [illegible] ವ್ಯಸನಪಡುತ್ತೇನೆ. ಸರ್ಕಾರದವರು ಕಳುಹಿಸಿರುವ ಸೂಚನೆಯಲ್ಲೂ ಸಾಮರ್ಥ್ಯವನ್ನೇ ಪ್ರಾಧಾನ್ಯವಾಗಿಟ್ಟುಕೊಂಡಿರುತ್ತಾರೆ.

ವೈಸ್‌ಚಾನ್ಸಲರ್ ಚಾಂಡಿಯವರು:— ಈಗ ಎರಡು ಮೂರು ತಿಂಗಳುಗಳಿಂದ [illegible] 2-3 ಜಾತ್ಯಾತ್ಮ[illegible]ತರನ್ನು ನೇಮಿಸಿದ್ದರಿಂದ [illegible] ಸ್ವಲ್ಪ ಆಲೋಚನೆ ಮಾಡಿದ್ದರೆ [illegible] ತಂದವರು ಅದನ್ನ ತರುತ್ತಲೇ [illegible] ಗೆ ಅವಶ್ಯಕತೆಯೇ ಇಲ್ಲ. ಮೇಲೆ [illegible] ವರೂ, ಆಯಾಯಾ [illegible] ಒಪ್ಪಿಕೆಯಿಂದಲೇ ನೇಮಿಸಲ್ಪಟ್ಟಿದ್ದಾರೆ.

ಮ|| [illegible] ಸುಬ್ಬರಾಯ[illegible] ವನ್ನು ಬಿಟ್ಟು ಮುಂದಿನ ವಿಷಯ[illegible] ಬೇಕೆಂದು [illegible] ತಂದರು. ಇದಕ್ಕೆ [illegible] ಒಪ್ಪಿಕೆಯನ್ನು ಕೊಟ್ಟರು. ಸಭೆಯು [illegible] ವಿಷಯವನ್ನು ಚರ್ಚೆಗೆ ತೆಗೆದುಕೊಂಡಿತು.

(ಮೂರನೇ ಪುಟವನ್ನು ನೋಡಿ)

ಮೈಸೂರು ವಿಶ್ವವಿದ್ಯಾಲಯ

(ಲೇಖಕ.—[illegible])

ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆಯಾಗಿ 13 ವರ್ಷಗಳಮೇಲೆ ಆಯಿತು. ಈ ಹದಿ[illegible] ಗಳಲ್ಲಿ ಅದರಿಂದ ನಮ್ಮ ಸಂಸ್ಥಾನಕ್ಕೆ [illegible] ರೀಕ್ಷಿಸಿದ್ದೆವೋ ಅಷ್ಟು ಪ್ರಯೋಜನವಾಗಲಿಲ್ಲ [illegible] ರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದೇ ತಪ್ಪು [illegible] ಈಗಲೂ ಅದನ್ನು ಮುಚ್ಚಬಹುದೆಂದೂ [illegible] ಹೀಗೆ ಹೇಳುವವರ ಪೈಕಿ ನಾನು ಒಬ್ಬನಲ್ಲ. [illegible] ಸಿಗ ವರ್ಷ ದೊಡ್ಡಗೆ [illegible] ಸ್ಥಾಪಿಸುವುದು ಕಷ್ಟ. ವರ್ಷಕ್ಕೆ [illegible] 13 ಲಕ್ಷ ರೂಪಾಯಿಗಳು ವಿಶ್ವವಿದ್ಯಾಲಯಕ್ಕೆ [illegible]ಗುವವು. ಇವುಗಳ ಪೈಕಿ ಸರಕಾರದವರು [illegible] 10 ಲಕ್ಷ ರೂಪಾಯಿಗಳನ್ನು ಕೊಡುವ[illegible] ನಮ್ಮ ದೇಶದ ಒಟ್ಟು ವುಟ್ಟುವಳಿಯಲ್ಲಿ ಇದು 30 [illegible] ಒಂದು ಭಾಗವಾಯಿತು. ಇದುದರಿಂದ ಸಾಮಾನ್ಯ [illegible]ಜೆಗೆ ಈ ವಿಶ್ವವಿದ್ಯಾಲಯದಿಂದ ಈಗ ದೊರೆಯುವು[illegible]ಕ್ಕಿಂತಲೂ ಹೆಚ್ಚಿನ ಪ್ರತಿಫಲವು ದೊರೆಯಬೇಕು. [illegible] ನಮ್ಮ ವಿಶ್ವವಿದ್ಯಾಲಯವು ಬ್ರಿಟಿಷ್ ಇಂಡಿಯಾದ [illegible]ತ್ವವಿದ್ಯಾಲಯಗಳನ್ನು ಅನುಕರಣ ಮಾಡುತ್ತಿದೆಯೆ[illegible] ಹೊರತು ಸ್ವಾತಂತ್ರ್ಯಬುದ್ಧಿಯನ್ನು ತೋರಿಸಿಲ್ಲ. 13 [illegible]ಗಳಾದರೂ ಎಲ್ಲಾ ವಿಷಯಗಳಲ್ಲಿಯೂ [illegible] ತ್ಯಾಸನ್ನು ತೆರೆದಿಲ್ಲ. ರಿಸರ್ಚ್ ಕೆಲಸಕ್ಕೆ ಸಾಕಾದಷ್ಟು [illegible]ತ್ತೇಜನವನ್ನು ಕೊಟ್ಟಿಲ್ಲ. ಮೈಸೂರಿಗೆ ಮುಖ್ಯ[illegible] ಯಾದ ಕನ್ನಡದ ವಿಷಯದಲ್ಲಿ ಎಷ್ಟು ಮುತುವರ್ಜಿಯನ್ನು ವಹಿಸಬೇಕೋ ಅಷ್ಟನ್ನು ವಹಿಸಿಲ್ಲ. ಇದೀಗ ಕರ್ನಾಟಕ ಪ್ರಾಂತ್ಯದವರು ಮೈಸೂರು ವಿಶ್ವವಿದ್ಯಾಲಯವನ್ನು ಅಖಿಲಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು ಹಂಬಲಿಸುತ್ತಿದ್ದಾರೆ. ಈಗ ಎಲ್ಲೆಲ್ಲೂ ಕರ್ನಾಟಕ ಸಂಸ್ಕೃತಿಯ ಪುನರುದ್ಧಾರದ ಪ್ರಯತ್ನವು ನಡೆಯುತ್ತಿದೆ ಮೈಸೂರು ವಿಶ್ವವಿದ್ಯಾಲಯದವರು ಈ ವಿಷಯಕ್ಕೆ ಗಮನವನ್ನು ಕೊಡಬೇಕು.

ತಾಯಿನಾಡು.

8—4—1929

ಸೆನೆಟ್ ಮೀಟಿಂಗು.

(ಹಿಂದಿನ ಪುಟದಿಂದ ಮುಂದುವರಿದುದು.)

ವಿದ್ಯಾರ್ಥಿಗಳ ಪ್ರವೇಶ.

ಮ|| ಮಿರ್ಲೆ ಲಕ್ಷ್ಮೀನಾರಾಣಪ್ಪನವರು ಈ ಕೆಳಗಿನ ಠರಾವನ್ನು ತಂದರು 7-2-1929 ರಲ್ಲಿ ಸರಕಾರದವರು ಯೂನಿವರ್ಸಿಟಿಗೆ ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಮಾಡಿರತಕ್ಕ ಆರ್ಡರು ಕಾನೂನಿಗೆ ವಿರೋಧವಾದುದು. ಮತ್ತು ಯೂನಿವರ್ಸಿಟಿಯ ಅಧಿಕಾರ ಸ್ವಾತಂತ್ರ್ಯವನ್ನೂ ಅನ್ಯೋನ್ಯತೆಯನ್ನೂ ಸಾಮರ್ಥ್ಯವನ್ನೂ ಹಾನಿಮಾಡುತ್ತದೆ. ಆದ್ದರಿಂದ ಆ ಆರ್ಡರನ್ನು ಕೂಡಲೇ ರದ್ದು ಮಾಡಬೇಕು.

ಡಾ|| ಮೈಲವಾಗನಂನವರು ಇದನ್ನು ಅನುಮೋದಿಸಿದರು.

ಮ|| ಲಕ್ಷ್ಮೀನಾರಣಪ್ಪನವರು ಹೇಳಿದ್ದೇನೆಂದರೆ, ಯೂನಿವರ್ಸಿಟಿ [illegible] ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡುವ ವಿಷಯದಲ್ಲಿ ಯಾವ ಕಾಲೇಜಿನ ಕೌನ್ಸಿಲ್ಲುಗಳಿಗೆ ಅಧಿಕಾರವಿರುವುದು. ಈಗ ಸರಕಾರದವರು ಮಾಡಿರತಕ್ಕ ಆರ್ಡರಿನಂತೆ ಖಾಸಗೀ ಜನಗಳನ್ನು ಕೆಲವರನ್ನೂ ಸೇರಿಸಿ ಪ್ರವೇಶ ಕಮಿಟಿಗಳೆಂದು ಹೊಸದಾಗಿ ಕಮಿಟಿಗಳನ್ನು ನೇಮಿಸಿದ್ದಾರೆ ಸರಕಾರದ ಈ ವ್ಯವಹಾರವು ಎಲ್ಲಾ ಭಾಗದಿಂದಲೂ ಆಕ್ಷೇಪಕರವಾದುದು. ಇದುವರೆಗೂ ಯಾವ ಕೌನ್ಸಿಲಿನ ವಿದ್ಯಾರ್ಥಿಗಳಿಗೇ ಆಗಲಿ ಅವರಿಗೆ ಅರ್ಹತೆಯಿದ್ದರೆ ಪ್ರವೇಶವು ದೊರೆಯಲಿಲ್ಲವೆಂಬ ಅಪವಾದನೆ ಇಲ್ಲ. ಹಾಗೆ ಏನಾದರೂ ಅಪವಾದನೆಯಿದ್ದರೆ ಆ ಕಾಲೇಜು ಕೌನ್ಸಿಲ್ಲುಗಳನ್ನು ಕೇಳಬಹುದಾಗಿತ್ತು. ಯೂನಿವರ್ಸಿಟೀ ಕೌನ್ಸಿಲ್ಲಿಗೂ ಸೆನೇಟಿಗೂ ತಿಳಿಸಬಹುದಾಗಿತ್ತು, ಮತ್ತು ಆ ಕಮಿಟಿಯನ್ನು ನೇಮಿಸುವ ಬಗ್ಗೆ ಯೂನಿವರ್ಸಿಟಿ ಕೌನ್ಸಿಲ್ಲಿನ ಮತ್ತು ಸೆನೇಟಿನ ಸಲಹೆಯನ್ನು ಕೇಳಬೇಕಾಗಿತ್ತು, ಯಾವುದೂ ಇಲ್ಲದೆ ಯಾರ ಹೇಳಿಕೆಯ ಮೇಲೋ ಸೆನೇಟನ್ನೂ, ಕೌನ್ಸಿಲ್ಲನ್ನೂ ನಿರ್ಲಕ್ಷಿಸಿ ಆ ಕಮಿಟಿಗಳನ್ನು ನೇಮಿಸಿರುವುದು ಯೂನಿವರ್ಸಿಟಿಗೆ ಕುದ್ಧ ಅಪಮಾನಕರ ಯೂನಿವರ್ಸಿಟಿಗೆ ವಿದ್ಯಾರ್ಥಿಗಳನ್ನು ಬರೀ ಯೋಗ್ಯತೆಯ ಪರೀಕ್ಷೆಯನ್ನು ಮಾಡದೆ ಅವರ ಜಾತಿ ಅಥವಾ ಕೋಮು ವಿವರ್ತನೆವುದು ಬಹಳ ಅನ್ಯಾಯಕರ ಕಾನೂನಿನ ದೃಷ್ಟಿಯಿಂದಲೂ ಸರಕಾರದವರು ನಿಬಂಧನೆಗಳನ್ನು ಮೀರಿ ಈ ಆರ್ಡರನ್ನು ಹೊರಡಿಸಿರುತ್ತಾರೆ.

ಈ ಸಂದರ್ಭದಲ್ಲಿ ಇಂಜನಿಯರಿಂಗ್ ಕಾಲೇಜಿಗೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಟ್ಟ ವಿಷಯದಲ್ಲಿ ಚೆಚೆ ಯಾಷ್ಕತು ಆ ಕಾಲೇಜಿನ ಪ್ರಿನ್ಸಿಪಾಲರವರು ತಮ್ಮ ಕಾಲೇಜಿಗೆ ಅರ್ಹನಾದ ಯಾವ ಮೈಸೂರು ಬ್ರಾಹ್ಮಣೇತರ ವಿದ್ಯಾರ್ಥಿಗೆ ಪ್ರವೇಶವು ದೊರೆಯದೆ ಹಿಂತಿರುಗಲಿಲ್ಲವೆಂದು ತಿಳಿಸಿದರು. ಮಿ|| ಚಾಂಡಿಯವರು ಈಗಿನ ಪ್ರಿನ್ಸಿಪಾಲರ ಕಾಲದಲ್ಲಿ ಆಗದಿದ್ದರೆ ಹಿಂದೆ ಆಗಿರಬಹುದೆಂದೂ ಆ ವಿಷಯವಾಗಿ ಖಾತರು ಸಾಕ್ಷ್ಯಾಧಾರವು ಬಂದ ಹೊರತೂ ಏನನ್ನೂ ಹೇಳುವುದೂ ಸಾಧ್ಯವಿಲ್ಲವೆಂದೂ ತಿಳಿಸಿದರು.

ಮ|| ಲಕ್ಷ್ಮೀನಾರಾಯಣಪ್ಪನವರು ಪ್ರಿನ್ಸಿಪಾಲರ ಮಾತಿನ ಮೇಲೆ ವಿಶ್ವಾಸವಿಡಬೇಕೆಂದೂ ಆದರೆ ನೀತಿಯ ಚರ್ಚೆಯನ್ನು ನಡೆಯಿಸಬೇಕೆಂದೂ ಹೇಳಿದರು.

ಡಾ|| ಕೃಷ್ಣಸ್ವಾಮಿಯಯಂಗಾರ್ಯರು—ಈ ಕಮಿಟಿಯನ್ನು ನೇಮಿಸುವ ಮೊದಲು ಸರಕಾರದವರು ಯೂನಿವರ್ಸಿಟಿಯ ಕೌನ್ಸಿಲ್ಲಿನ ಅಭಿಪ್ರಾಯವನ್ನು ತೆಗೆದುಕೊಂಡರೇ?

ಮಿ|| ಚಾಂಡಿಯವರು—ಕೌನ್ಸಿಲ್ಲಿನ ಅಭಿಪ್ರಾಯವನ್ನು ತೆಗೆದುಕೊಳ್ಳಲಿಲ್ಲ. ವೈಸ್‌ಛಾನ್ಸಲರ ಅಭಿಪ್ರಾಯವನ್ನು ತೆಗೆದುಕೊಂಡರು

ಡಾ|| ಕೃಷ್ಣಸ್ವಾಮಿ ಐಯ್ಯಂಗಾರ್ಯರು—ಸರಕಾರದವರು ಆರ್ಡರನ್ನು ಮಾಡುವ ಮೊದಲು ಕೌನ್ಸಿಲಿನ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತ್ತು.

ಮಿ|| ಕಲಾಮಿಯವರು—ಸರಕಾರದವರು ಹಿಂದುಳಿದ ಪಂಗಡದವರ ಅಭ್ಯುದಯಕ್ಕೋಸ್ಕರವಾಗಿ ಆ ಆರ್ಡರನ್ನು ಮಾಡಿದರು. ಅಸೆಂಬ್ಲಿಯಲ್ಲೂ ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲೂ ಮೆಂಬರುಗಳು ಸರಕಾರವನ್ನು ಪ್ರಾರ್ಥಿಸಿಕೊಂಡರು ಕಾನೂನಿಗೆ ಅನುಸಾರವಾಗಿದೆಯೋ ಇಲ್ಲವೊ ಆರ್ಡರಿನ ಉದ್ದೇಶವೇನೊ ಒಳ್ಳೆಯದು ಅದರ ಫಲವೂ ಒಳ್ಳೆಯದೇ ಆಗುತ್ತದೆ

ಮ|| ಬಿ. ಕೆ ರಾಮಕೃಷ್ಣಯ್ಯನವರು—ಆರ್ಡರನ್ನು ಹೊರಡಿಸುವುದಕ್ಕೆ ಮುಂಚೆ ಸರಕಾರದವರ ಕೌನ್ಸಿಲ್ಲಿನ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತ್ತು

ಮ|| ಎಚ್. ರಾಮರಾಯರು—ಸರಕಾರದವರು ಈ ಆರ್ಡರನ್ನು ಮಾಡಿರುವುದು ಯಾರಿಗೂ ತೊಂದರೆಯಾಗುವುದಿಲ್ಲ. ಯಾರಿಗಾದರೂ ಸಂಶಯಗಳಿದ್ದರೆ ಆ ಸಂಶಯಗಳು ಪರಿಹಾರವಾಗುವವು. ಕಾಲೇಜಿಗೆ ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಅಪನಂಬಿಕೆಯು ತಪ್ಪುವುದು

ಮಿ|| ಚಾಂಡಿಯವರು—ಈ ಆರ್ಡರಿನಿಂದ ಸರಕಾರದವರು ವಿಶ್ವವಿದ್ಯಾಲಯವನ್ನು ಖಂಡಿಸಿದರೆಂಬುದಾಗಲಿ ಅವಹೇಳನ ಮಾಡಿದರೆಂಬುದಾಗಲಿ ತಿಳಿಯಕೂಡದು.

ಮಿ|| ಲಕ್ಷ್ಮೀನಾರಾಯಣಪ್ಪನವರು ಠರಾವನ್ನು ವಾಪಸು ತೆಗೆದುಕೊಂಡರು.

ಮ|| ಬಿ. ವೆಂಕಟನಾರಣಪ್ಪನವರು—ಸಭಿಕರ ಪರವಾಗಿ ವೈಸ್‌ಛಾನ್ಸಲರ್ರಿಗೆ ಆ ಭಾರವನ್ನು ವಹಿಸಿದನಂತರ ಸಭೆಯು ಬರಖಾಸ್ತಾಯಿತು.

ಶ್ರೀ ಸೀತಾರಾಘವ ವೈದ್ಯಶಾಲೆಯ ಸಿದ್ಧಾಂತ, ಆರ್ಯಭಟ್ಟಸಿದ್ಧಾಂತ ವಾಕ್ಯ ಮತ್ತು ದೃಗ್ಗಣಿತಸಹಿತವಾದ ಶ್ರೀ ಶುಕ್ಲಸಂವತ್ಸರದ

ಪಂಚಾಂಗಗಳು

ಬಿಕರಿಗೆ ಸಿದ್ಧವಾಗಿವೆ.

ಪಂಚಾಂಗ 1ರ ಬೆಲೆ 2 ಆಣೆ ಮಾತ್ರವೆ. 5 ಪ್ರತಿಯನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಜಾತಕ ಭಾವಕ್ಕನುಕೂಲವಾಗುವಂತೆ 12 ತಿಂಗಳ ದೃಗ್ಗಣಿತ ಪಂಚಾಂಗದೊಡನೆ ಸೇರಿದ ಪ್ರತಿ 1ಕ್ಕೆ 3 ಆಣೆ. ಒಟ್ಟು ವ್ಯಾಪಾರಿಗಳಿಗೆ ಕಮಿಷನ್ ಕೊಡಲಾಗುತ್ತದೆ. ಪೋಸ್ಟೇಜು ಬೇರೆ. ದೊರೆವಸ್ಥಳಗಳು:—

(1) ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

(2) ಶ್ರೀ ಸೀತಾರಾಘವ ವೈದ್ಯಶಾಲಾ ಬ್ರಾಂಚಾಫೀಸು, 245, ಚಿಕ್ಕಪೇಟೆ, ಬೆಂಗಳೂರು ಸಿಟಿ.

[illegible]

ಈ ತಿಂಗಳು 5 ನೇ ತಾರೀಖಿನಲ್ಲಿ ಚೀಫ್ ಕೋರ್ಟಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಶಾಸ್ತ್ರಿ ಮತ್ತು ರಾಯರ ರಾಜದ್ರೋಹದ ಮೊಕದ್ದಮೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸುವುದಕ್ಕೆ ಸಾಕಾದಷ್ಟು ಕಾರಣಗಳಿಲ್ಲವೆಂದು ತೀರ್ಮಾನವಾಯಿತು.

ನೈಜಾಮರವರು.

ನೈಜಾಮರು ಮತ್ತು ಅವರ ಪರಿವಾರ ಇವರುಗಳ ಸತ್ಕಾರಾರ್ಥವಾಗಿ ಅರಮನೆಯಲ್ಲಿ ದೀಪೋತ್ಸವ ಪಂಗಿ ತಕಥೇರಿ ಮೊದಲಾದುವುಗಳು ನಡೆದುವು.

ಈ ತಿಂಗಳು 7 ನೇ ತಾರೀಖಿನ ರಾತ್ರಿ ನೈಜಾಮರವರು ಬೆಂಗಳೂರಿಗೆ ಪ್ರಯಾಣಮಾಡಿದರೆಂದೂ ಬೆಂಗಳೂರಿನಲ್ಲಿ ಮೂರು ದಿವಸಗಳಿರುವರೆಂದೂ ವರ್ತಮಾನ

Printed and published by P. R Ramiaya
Sri Rama Pres D. Subbiah Road, Mysore.

Regd. No. M. 2322

ವಂದೇ ಮಾತರಂ॥

ಚಂದಾ ಕ್ರಮ [illegible]

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-

ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ।

ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ ಗೀತಾ॥

ವಾರ್ಷಿಕ { ಸ್ಥಳಕ್ಕೆ [illegible]

ಚಂದಾ { ಸರ್ಸ್ಥಳಕ್ಕೆ [illegible]

ಸಂಪುಟ ೧]. ಮಂಗಳವಾರ ೯ ಏಪ್ರೆಲ್ ೧೯೨೯ [ಸಂಚಿಕೆ ೧೪೭

ಸೂಚನೆ.

ಯುಗಾದಿ ಹಬ್ಬದ ಪ್ರಯುಕ್ತ ನಾಳೆ ದಿನ ಪತ್ರಿಕೆ [illegible]

ಮ್ಯಾನೇಜರ್.

TAI NADU
9—4—1929

ರಾಷ್ಟ್ರೀಯ ಸಪ್ತಾಹ

ರಾಷ್ಟ್ರೀಯ ಸಪ್ತಾಹವು ಏಪ್ರೈಲ್ 6 ರಿಂದ ಪ್ರಾರಂಭವಾಗಿ 13 ನೇ ತಾರೀಖಿನವರೆಗೂ ನಡಿಯುವುದು. ಈ [illegible] ಇಂಡಿಯಾ ದೇಶದ ಇತಿಹಾಸದಲ್ಲಿ ಚಿರಸ್ಮರಣೀಯವಾದದ್ದು. 1919 ನೇ ಇಸವಿಯಲ್ಲಿ ಏಪ್ರೈಲ್ 13 ನೇ ತಾರೀಖಿನ ದಿವಸ ಜನರಲ್ ಡಯ್ಯರನು ಅವ್ಯ [illegible] ಜಲಿಯನ್ ವಾಲಾ ಕೊಲೆಯನ್ನು ನಡೆಸಿದನು [illegible] ಮಹಮ್ಮದೀಯರ ರಕ್ತವು ಮಿಶ್ರಿತವಾಗಿ ನದಿಗಳಂತೆ ಹರಿಯಿತು ಆ ದಿವಸವನ್ನು ನಾವು [illegible] ಆತ್ಮತ್ಯಾಗ [illegible] ದೇಶಕ್ಕೆ ಸಾರ್ಥಕವಾದ [illegible] ಕಾರ್ಯವನ್ನು ಮಾಡಬೇಕು. ಮಹಾತ್ಮಾ ಗಾಂಧಿಯವರು ರಾಷ್ಟ್ರೀಯ ಸಪ್ತಾಹ [illegible] 13 ನೇ ತಾರೀಖಿನ ದಿವಸ ಇಂಡಿಯಾದೇಶದ ಪ್ರತಿಯೊಂದು ಊರಿನಲ್ಲಿಯೂ ಸಭೆಗಳನ್ನು ಮಾಡಿ ವಿದೇಶೀವಸ್ತ್ರವನ್ನು ದಹನಮಾಡಬೇಕೆಂದು ಹೇ [illegible] ಆ ದಿವಸ ವಿದೇಶೀ ವಸ್ತ್ರಗಳನ್ನು [illegible]

ವಿದ್ಯಾರ್ಥಿಗಳು ಮತ್ತು ರಾಜಕೀಯ.

[illegible] ರಾಜಕೀಯ ವಿಷಯಗಳಲ್ಲಿ ಅಭ್ಯಾಸ [illegible] ಸ್ವತಂತ್ರವಾಗಿ ಭಾಗ [illegible] ಸ್ವಾಮಿ [illegible] ರಾಮಾನಂದ ಚಾಟ್ಟರ್ಜಿ [illegible] ವಿದ್ಯಾರ್ಥಿಗಳಿಗೆ [illegible]

ಖಾದೀ ಪ್ರಚಾರ.

ಬದನಾಳಿನಲ್ಲಿರುವ ಸರ್ಕಾರದ ಖಾದೀ ಕ್ಷೇತ್ರದಲ್ಲಿ ಕಳೆದ ಆರು ತಿಂಗಳಿನ 10835 ರೂ. ಗಳ ಖಾದಿಯು [illegible] ಸರ್ಕಾರದವರು [illegible] 9 ರೂ. ಗಳ ಖಾದಿಯನ್ನು ಕೊಂಡು ಮುಂದಿನ ಸಾಲಿಗೆ 11700 ರೂ. ಗಳನ್ನು ಮಂಜೂರು ಮಾಡಿರುವರು. ಇದಲ್ಲದೆ ಬಂಡವಾಳಕ್ಕಾಗಿ 11,000 ರೂ. ಗಳೂ ಸ್ಯಾಂಕ್ಷನ್ ಆಗಿರುತ್ತದೆ.

ರಾಮಾವತಾರ ಶರ್ಮರವರು.

ಹಿಂದೂ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಪಂಡಿತ ರಾಮಾವತಾರ ಶರ್ಮರವರು ಕಳೆದ ವಾರ ದೈ [illegible] ಇಂಡಿಯಾ ದೇಶದಲ್ಲಿಯೂ ಸಂಸ್ಕೃತದಲ್ಲಿಯ ಉದ್ದಾಮ ಪಂಡಿತರು. ಇವರು ಷಡ್ದರ್ಶನಗಳ ಜೊತೆಗೆ ಇನ್ನೊಂದು ಹೊಸ ದರ್ಶನವನ್ನೇ ಬರೆದಿರುವರು. ಇವರ ಮರಣದಿಂದ ನಮ್ಮ ಇಂಡಿಯಾ ದೇಶದ ಸಂಸ್ಕೃತ ವಿದ್ಯಕ್ಕೆ ಒಂದು ದೊಡ್ಡ ನಷ್ಟ [illegible]

ಬ್ರಾಹ್ಮಣ ಧರ್ಮ ಸಹಾಯ ಸಭೆ.

ಶ್ರೀ ಶುಕ್ಲ ಸಂವತ್ಸರದ ಯುಗಾದಿ ಹಬ್ಬದ ಪ್ರಯುಕ್ತ ನಾಳೆ ದಿನ ಸಾಯಂಕಾಲ 5 ಗಂಟೆಗೆ ರಾಜಧಾನಿಯ ಶ್ರೀ ಅಭಿನವ ಶಂಕರಾಲಯದಲ್ಲಿ ವೇ|| ಬ್ರ|| ಗಣಪತಿ ಶಾಸ್ತ್ರಿಗಳವರಿಂದ ಪಂಚಾಂಗ ಶ್ರವಣವನ್ನು ಮಾಡಿಸಲ್ಪಡುತ್ತೆ ಮಹಾಜನಗಳು ದಯಮಾಡಿಸಬೇಕಾಗಿ ವಿನಂತಿ

ಲಾಡ್ ಅರ್ವಿನ್‌ರವರು

ವೈಸ್‌ರಾಯರಾದ ಲಾರ್ಡ್ ಅರ್ವಿನ್‌ರವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದ ಕಾಲದಲ್ಲಿ ಇಂಡಿಯಾ ಆಫೀಸಿನಲ್ಲಿ ಇಂಡಿಯಾ ದೇಶದ ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕೆ ಹೋಗುವರೆ ಹೊರತು ಇತರ ವಿಷಯಗಳಿಗೋಸ್ಕರವಲ್ಲವೆಂದು ತಿಳಿಯ ಬರುತ್ತದೆ.

ಶುದ್ಧಿ.

ಕಳೆದ ತಿಂಗಳು ಬೊಂಬಾಯಿ ಕರ್ನಾಟಕ ಆರ್ಯಸಮಾಜದಲ್ಲಿ ಪ್ರಾಟೆಸ್ಟೆಂಟ್ ಕ್ರಿಸ್ತ ಸ್ತ್ರೀಯು ಶುದ್ಧಿಯಾಗಿ ಎಸ್. ಬಿ. ವೈದ್ಯನೆಂಬ ಯುವಕನನ್ನು ವಿವಾಹವಾದಳು. ಲಾಹೋರಿನಲ್ಲಿ ಒಬ್ಬ ಇಂಗ್ಲೀಷ್ ಸ್ತ್ರೀಯು ಹಿಂದೂ ಧರ್ಮಕ್ಕೆ ಒಂದಿರುವಳು. ಇದೇ ರೀತಿಯಾಗಿ ಅಮರಾವತಿಯ ಅನೇಕರು ಶುದ್ಧಿಗೊಳಿಸಲ್ಪಟ್ಟಿರುವರು.

ಮಿಡಲ್ ಸ್ಕೂಲ್ ಪರೀಕ್ಷೆ

ಈ ಸಲದ ಮಿಡಲ್ ಸ್ಕೂಲ್ ಪರೀಕ್ಷೆಗೆ ಕೊಟ್ಟಿದ್ದ ಸಂಸ್ಕೃತ (ಅಪ್ಷನಲ್) ಪ್ರಶ್ನೆಪತ್ರಿಕೆಗೆ ಉತ್ತರ [illegible] ಕಾಲವು ಸುಕರಾಂ [illegible] ದಾಗಿತ್ತು. ಯಾವ ದೊಡ್ಡ ಪರೀಕ್ಷೆಗೂ ಕೇಳದಿರುವಂತೆ ಆರೇ ಪದ್ಯಗಳಿಗೆ ಅರ್ಥವನ್ನು ಕೇಳಿದ್ದರು. ಅದು ಕಾರಣ ಇಲಾಖೆಯವರು ಈ ವಿಚಾರದಲ್ಲಿ ಹುಡುಗರಿಗೆ ತಕ್ಕ ರಿಯಾಯಿತಿಯನ್ನು ತೋರಿಸುವ ಏರ್ಪಾಡು ಮಾಡಬೇಕೆಂದು ಒಬ್ಬ ಜಾತ್ತೀದಾರರು ಬರೆದಿರುತ್ತಾರೆ.

ಶಿಕ್ಷೆ.

ಬೊಂಬಾಯಿನ ಒಬ್ಬ ಹೆಂಗಸು ಆಗತಾನೇ ಹುಟ್ಟಿದ ತನ್ನ ಮಗುವಿನ ಕೊಲೆನಡಿಸಿದ್ದಕ್ಕಾಗಿ ಅಲ್ಲಿನ ಹೈಕೋರ್ಟ್ ಜಡ್ಜ್‌ರವರು ಆಕೆಗೆ ದ್ವೀಪಾಂತರ ಶಿಕ್ಷೆಯನ್ನು ವಿಧಿಸಿದರು. ಯಾರಾದರೂ ದೋಷಾರೋಪಣ ಮಾಡುವರೆಂಬ ನಾಚಿಕೆಯಿಂದ ಮಗುವನು ಕತ್ತುಹಿಸುಕಿ ಕೊಲೆಮಾಡಿದಳು. ಹುಚ್ಚಿನಿಂದ ಈ ಕೆಲಸ ನಡೆದಿರುವುದಾಗಿ ಆಕೆಯ ತಂದೆಯ ಸಾಕ್ಷಿ ಇತ್ತನು. ನ್ಯಾಯಾಧೀಶರು ತಾವು ಕೊಟ್ಟಿರುವ ಶಿಕ್ಷೆಯಲ್ಲಿ ತಕ್ಕಮಟ್ಟಿಗೆ ಕಡಿಮೆ ಮಾಡುವುದಕ್ಕಾಗಿ ಸರ್ಕಾರಕ್ಕೆ ಶಿಫಾರ್ಸ್ ಮಾಡಿರುವರು.

ರೈಲ್ವೆ ಆದಾಯ.

ಮೈಸೂರು ರೈಲ್ವೆಯ ಉತ್ಪತ್ತಿಯು 1929ನೇ ಮಾರ್ಚಿ 23 ನೇ ತಾ. ಗೆ ಮುಗಿದ ವಾರಕ್ಕೆ ಒಟ್ಟು 77,800 ರೂ. ಗಳು. ಕಳೆದವರುಷ ಇದೇ ವಾರದಲ್ಲಿ 8 150 ರೂ. ಜಾಸ್ತಿಯಾಗಿ ಹುಟ್ಟುವಳಿಯಾಗಿತ್ತು.

ಮತ್ತು ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಎಲ್ಲರಿಗೂ ಗಂಧ ಪುಷ್ಪತಾಂಬೂಲಗಳೂ ಶ್ರೀಮನ್ ಮಹಾರಾಜರ ಶ್ರೇಯಃಪ್ರಾರ್ಥನೆಯೂ ರಾಷ್ಟ್ರಗೀತೆಯೂ ಆದನಂತರ ಜಯ ಜಯ ಘೋಷದೊಡನೆ ಸಭೆಯು ಬರಖಾಸ್ತಾಯಿತು.

ಕುಂಚಿಟಿಗರ ವಿದ್ಯಾರ್ಥಿನಿಲಯ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಅಲಮ್ಮನವರ ಛತ್ರದಲ್ಲಿ ದೊಡ್ಡಯ್ಯ ಕಂಚಿಟಗರ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವವು ವಿದ್ಯಾಭ್ಯಾಸದ ಡೈರೆಕ್ಟರಾದ ಮ|| ರಾ|| ಎಸ್. ಎಸ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭಾಂಗಣವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು ಹಲವು ಪ್ರಮುಖರು ಸಭೆಯನ್ನು ಅಲಂಕರಿಸಿದ್ದರು. ಕಾರ್ಯಕ್ರಮದಂತೆ ಧರ್ಮಪ್ರಕಾಶ ಡಿ. ಬನುಮಯ್ಯನವರ ಮಕ್ಕಳೂ ಇಲ್ಲಿನ ಕಾರ್ಯದರ್ಶಿಗಳೂ ಆದ ಮ|| ವಿಶ್ವಂಭರಯ್ಯನವರು ವಿದ್ಯಾರ್ಥಿನಿಲಯದ 1927—28ನೇ ಸಾಲಿನ ವಾರ್ಷಿಕ ವರದಿಯನ್ನು ಓದಿದರು. ಅದರಲ್ಲಿ ವಿದ್ಯಾರ್ಥಿನಿಲಯದ ಮೇಲ್ವಿಚಾರಣೆಗಾಗಿ ಏರ್ಪಟ್ಟಿರುವ (ಏಳು ಜನರ) ಕಮಿಟಿಯೂ (ಮೂವರ) ಬೋರ್ಡ್ ಅಫ್ ವಿಸಿಟರ್ಸ್ ಎಂಬ ಸಂಸ್ಥೆಯೂ ಅತ್ಯಂತ ಸಮರ್ಪಕವಾಗಿ ಕೆಲಸವನ್ನು ನಡಿಸಿವೆ ಇಲ್ಲಿನ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿ ವಾಚನಾಲಯವೂ ಚರ್ಚಾಸಭೆಯೂ ವರ್ತಮಾನ ಪತ್ರಿಕೆಯೂ ಪರಸ್ಪರ ಸಹಾಯ ಸಂಘವೂ ಏರ್ಪಾಡಾಗಿರುವುದರ ಜೊತೆಗೆ ನೈತಿಕ ಧಾರ್ಮಿಕ ವಿಷಯಗಳ (ಸೂರ್ಯನಮಸ್ಕಾರ) ತಿಳುವಳಿಕೆಗೂ ಮತ್ತು ಶರೀರವೃದ್ಧಕಾಯವಾಗಿರಲು ಬೇಕಾದ ಸಾಧನಾಶ್ರಮಗಳೂ ಬೋಧಿಸುವ ಪದ್ಧತಿಯೂ ಜಾರಿಯಲ್ಲಿವೆ ಈ ನಿಲಯದ ಅಭಿವೃದ್ಧಿಗಾಗಿ ಧರ್ಮ ಪ್ರಕಾಶ ಡಿ. ಬನುಮಯ್ಯನವರು ಮೈಸೂರು ಬ್ಯಾಂಕಿನಲ್ಲಿರುವ ತಮ್ಮ [illegible] ಸಾವಿರ ರೂ ಗಳ ಷೇರುಗಳನ್ನು ಕೊಟ್ಟಿರುವರು. ವಿದ್ಯಾರ್ಥಿಗಳು ವಿದ್ಯಾರ್ಥಿವೇತನದ ಅರ್ಧಭಾಗವನ್ನು ಈ ನಿಲಯದ ಡೆವಲಪ್‌ಮೆಂಟ್ ಫಂಡಿಗೆ ಕೊಡುವರು. ಶ್ರೀಮತಿ ಅಲಮ್ಮನವರೂ ಮತ್ತು ಮ|| ಜಿ. ಕೆ. ನರಸಿಂಹಯ್ಯನವರೂ ಸುಮಾರು 40 ಸಾವಿರ ರೂ. ಬೆಲೆ ಬಾಳುವ ಆಸ್ತಿಯನ್ನು ನಿಲಯದ ಅಭಿವೃದ್ಧಿಗಾಗಿ ದಾನ ಮಾಡಿರುವರು. ಕಾಲಕ್ರಮದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಆಸರೆ ದೊರೆಯುವ ಏರ್ಪಾಡು ಮಾಡಲಾಗುವುದು. ಈ ನಿಲಯದ ವಿದ್ಯಾಭಿವೃದ್ಧಿಗಾಗಿ ಮ|| ಬಿ. ಶೇಷಗಿರಿರಾಯರವರು ಮಾಡುತ್ತಿರುವ ಪ್ರಯತ್ನಗಳು ಇವೇ ಮೊದಲಾದ ಮುಖ್ಯ ವಿಷಯಗಳು ಅಡಕವಾಗಿದ್ದವು ಇದಾದ ಮೇಲೆ ಮ|| ರಾ|| ಎಂ. ವಿ. ಮಾದಪ್ಪನವರ ಇಬ್ಬರು ಶಿಷ್ಯರ ಸುಶ್ರಾವ್ಯವಾದ ಸಂಗೀತ ಕಛೇರಿಯು ಸಭಿಕರೆಲ್ಲರಿಗೂ ಕರ್ಣಾನಂದವುಂಟು ಮಾಡಿತು.

ಅಧ್ಯಕ್ಷರು ಕನ್ನಡದಲ್ಲಿ ಮಾತನಾಡಲು ತವಗಿರುವ ತೊಂದರೆಯನ್ನು ವ್ಯಕ್ತಗೊಳಿಸಿ ಕುಂಚಿಟಿಗ ಮಹಾಜನರದಯಾಳುತ್ವವನ್ನೂ ವಿದ್ಯಾರ್ಥಿನಿಲಯದ ಪ್ರಕೃತ ಪುರೋಭಿವೃದ್ಧಿಯನ್ನೂ ಮುಂದಿನ ಆಶಯವನ್ನೂ ತಿಳಿದು ತಮಗುಂಟಾದ ಸಂತೋಷವನ್ನು ತಿಳಿಸಿ ಗಾನ ಮಾಡಿದ ವಿದ್ಯಾರ್ಥಿಗಳಿಗೆ ಚಿನ್ನದ ಮೆಡಲನ್ನು ದಯಪಾಲಿಸಿದರು. ಸಂಸ್ಥಾನ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿ ಪೂರಾ ಕೆಲಸ ಮಾಡುವ ಉಪಾಧ್ಯಾಯರುಗಳು ಸಿಕ್ಕುವುದರಿಂದ ಸಂಗೀತ ಕಲೆಯನ್ನು ಅಭಿವೃದ್ಧಿಮಾಡಲಕಾಶವಿಲ್ಲವೆಂದೂ ಮುಂದಿನ ಸಾರಿಯಿಂದ ಇತರ ಪಾಠಗಳನ್ನು ಬೋಧಿಸುವುದರ ಜೊತೆಗೆ ಸಂಗೀತವನ್ನೂ ಕಲಿಸತಕ್ಕ ಉಪಾಧ್ಯಾಯರುಗಳನ್ನು ನೇಮಿಸಿ ಈ ಕಲೆಯನ್ನು ಅಭಿವೃದ್ಧಿಗೊಳಿಸುವ ಏರ್ಪಾಡು [illegible] ಆಗುವುದೆಂದೂ ತಿಳಿಸಿದರು.

ಸಾಹುಕಾರ್ ಬನುಮಯ್ಯನವರು ಅಧ್ಯಕ್ಷರಿಗೂ

[illegible] ಮಾಸ ಸಂಗ್ರಹ.

ಜಾತ್ರೆ

[illegible] ತಾ|| ಲಕ್ಕೂರು ಹೋಬಳಿ ಚಿಕ್ಕ[illegible] [illegible] ಈ ಮಾಹೆ 20ರಿಂದ 27ರ ವರಿಗೆ ನಡೆಯುವ ಜಾತ್ರೆಗೆ ಪ್ಲೇಗ್ ಕಾಲರಾ ಮೊದಲಾದ ಖಾಯಿಲೆ ಇ[illegible] [illegible] ಪ್ರದೇಶಗಳಿಂದ ಜನರ್‍ಯಾರೂ ಬರಕೂಡದೆಂದೂ ಇದಕ್ಕೆ ವ್ಯತಿರಿಕ್ತವಾಗಿ ಹೋದವರು ಹಿಂತಿರುಗಬೇಕೆ[illegible] [illegible]ತ್ತೆಂದೂ ಸರಕಾರದ ಪ್ರಕಟನೆಯಾಗಿದೆ.

ಪಬ್ಲಿಕ್ ಅಕೌಂಟ್ಸ್ ಕಮಿಟಿ

ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕೌನ್ಸಿಲ್ಲಿನ ತೃತೀಯ ಸಚಿವರು ಛೇರ್‌ಮನ್‌ರಾಗಿ ನಿಯಮಿಸಲ್ಪಟ್ಟಿರುವರು.

ಮುನಿಸಿಪಲ್ ಕೌನ್ಸಿಲ್.

ಹಾಸನ ಡಿ|| ಬಾಣಾವಾರದ ಮುನಿಸಿಪಲ್ ಕೌನ್ಸಿಲ್ಲಿಗೆ ವಿ|| ಬಾಚಾಮೊಹಿದೀನ್‌ರವರು ವ|| ಪರೂಪಾ[illegible] [illegible]ನವರ ಸ್ಥಾನದಲ್ಲಿ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಮೈಸೂರು ಸ್ಟೇಟ್ ಕಾಂಗ್ರೆಸ್

ಈ ತಿಂಗಳ 3 ನೇ ತಾರೀಖು ಪ್ರಾತಃಕಾಲ ಬೆಂಗಳೂರಿನಲ್ಲಿ ಅಡ್ವೊಕೇಟರಾದ ಮ|| ಎಂ. ಪಿ. ಸೋಮಶೇಖರರಾಯ ರವರ ಆಫೀಸಿನಲ್ಲಿ ದೇಶಸೇವಕರ ಸಭೆಯೊಂದು ನಡೆಯಿತು. ಮೈಸೂರು ಸಂಸ್ಥಾನದ ಕಾಂಗ್ರೆಸ್ ಸಭೆಯನ್ನು ಮೇ 3ರಿಂದ 5ನೇ ತಾರೀಖಿನ ವರೆಗೂ ನಡೆಸಬೇಕೆಂದು ತೀರ್ಮಾನವಾಯಿತು. ಸ್ವಾಗತ ಕಮಿಟಿಯು ನೇಮಿಸಲ್ಪಟ್ಟಿತು. ಮ|| ಜಿ. ಎಲ್. ಜೈಯಣ್ಣನವರು ಕನ್ವೀನರಾಗಿ ನೇಮಿಸಲ್ಪಟ್ಟರು.

ಬೆಂಗಳೂರಿನಲ್ಲಿ ಕೂಲಿ ಆಳುಗಳ ಮುಷ್ಕರ.

ಬೆಂಗಳೂರಿನ ಮಿನರ್ವ ಮಿಲ್ಲಿನಲ್ಲಿ ಒಬ್ಬ ಕೆಲಸಗಾರನನ್ನು ಅನ್ಯಾಯವಾಗಿ ವಜಾ ಮಾಡಿದರೆಂದು ಆ ಮಿಲ್ಲಿನ ಕೂಲಿಆಳುಗಳೆಲ್ಲರೂ ಈ ತಿಂಗಳು 4 ನೇ ತಾರೀಖಿನಿಂದ ಮುಷ್ಕರ ಹಿಡಿದಿರುವರು. 5 ನೇ ತಾರೀಖು ಮಧ್ಯಾಹ್ನ 12 ಗಂಟೆ ಹೊತ್ತಿಗೆ ಮುಷ್ಕರಹಿಡಿದ ಮಿನರ್ವ ಮಿಲ್ಲಿನ ಸುಮಾರು 500 ಜನ ಕೂಲಿಆಳುಗಳು ಮಹಾರಾಜಾಮಿಲ್ಲಿನ ಹೊರಗಡೆ ಬಂದು ನಿಂತುಕೊಂಡರು. ಅಷ್ಟು ಹೊತ್ತಿಗೆ ಮಹಾರಾಜಾಮಿಲ್ಲಿನ ಕೂಲಿಆಳುಗಳು ವಿರಾಮ ಕಾಲಕ್ಕಾಗಿ ಹೊರಗೆ ಬರುವವರಾಗಿದ್ದರು. ಪೋಲೀಸಿನವರು ಇವರನ್ನು ಚೆದರಿಸಲು ಎತ್ನಿಸಿದರು ಪೋಲೀಸಿನವರಿಗೂ ಕೂಲಿಆಳುಗಳಿಗೂ ಹೊಡೆದಾಟವಾಯಿತು. ಕೆಲವರಿಗೆ ಗಾಯಗಳಾದವು. ಪೋಲೀಸಿನವರು ಮಿಲ್ಲನ್ನು ಕಾಯುತ್ತಲಿದ್ದಾರೆ. ಈ ತಿಂಗಳು 5 ನೇ ತಾರೀಖು ಸಾಯಂಕಾಲ 9 ಗಂಟೆಗೆ ಬಿನ್ನಿ ಮಿಲ್ಲಿನ ಎದುರಿನ ಮೈದಾನದಲ್ಲಿ ಮೇಲ್ಕಂಡ ಎರಡು ಮಿಲ್ಲುಗಳ ಮತ್ತು ಬಿನ್ನಿ ಮಿಲ್ಲಿನ ಸುಮಾರು 2-3 ಸಾವಿರ ಕೆಲಸಗಾರರು ಒಂದು ಸಭೆ ಮಾಡಿದರು. ಭಾನುವಾರದ ದಿವಸ ಮಿಲ್ಲಿನಲ್ಲಿ ರಜಾ ಕೊಡುವಂತೆ ತೀರ್ಮಾನವಾಯಿತು. ಒಂದು ಪಂಚಾಯಿತಿ ನೇಮಿಸಲ್ಪಟ್ಟಿತು. ಆ ಪಂಚಾಯಿತಿಯು ಮಾತಿನಂತೆ ಕೂಲಿಆಳುಗಳೆಲ್ಲಾ ನಡೆಯಬೇಕೆಂದು ತೀರ್ಮಾನವಾಯಿತು.

ವಿ. ಜೆ. ಪಟೇಲರವರ ಸ್ವಾತಂತ್ರ್ಯ ಪ್ರದರ್ಶನ.

ಡೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ರಾಜದ್ರೋಹಕ್ಕಾಗಿ ಇಂಡಿಯಾದಲ್ಲೆಲ್ಲಾ 31 ಜನಗಳನ್ನು ದಸ್ತಗಿರಿಮಾಡಿರುವ ವಿಷಯದಲ್ಲಿ ಸರ್ಕಾರದವರು ಅವಲಂಬಿಸಿರುವ ನೀತಿಯನ್ನು ಚರ್ಚೆ ಮಾಡಬೇಕೆಂದು ಪಂಡಿತ್ ಮೋತಿಲಾಲ್ ನೆಹರೂರವರು ಒಂದು ಅಡ್ಜರ್ನ್‌ಮೆಂಟ್ ಮೋಷನ್ನಿನ ಸೂಚನೆಯನ್ನು ಕೊಟ್ಟರು. ಸರ್ಕಾರದವರು ಈ ಚರ್ಚೆಯನ್ನು ಈಗ ಮಾಡಕೂಡದೆಂದೂ ಅದನ್ನು ಮಾಡುವುದರಿಂದ ಕೋರ್ಟಿನಲ್ಲಿ ನಡೆಯುವ ವಿಚಾರಣೆಗಳಿಗೆ ಬಾಧಕ ಉಂಟಾಗುವುದೆಂದೂ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಚರ್ಚಿಸಕೂಡದೆಂದೂ ತಿಳಿಸಿದರು. ಅಧ್ಯಕ್ಷರಾದ ವಿ. ಜೆ. ಪಟೇಲರವರು ಮೇಲಿನ ಮೋಷನ್ನನ್ನು ಚರ್ಚಿಸುವುದರಿಂದ ಕೋರ್ಟಿನ ವಿಚಾರಣೆಗೆ ಯಾವ ಬಾಧಕವೂ ಇಲ್ಲವೆಂದೂ ಆ ಮೋಷನ್ನನ್ನು ಚರ್ಚಿಸಬಹುದೆಂದೂ ಅನುಜ್ಞೆಯನ್ನು ಕೊಟ್ಟರು ಆದರೆ ವೈಸರಾಯರವರು ತಮ್ಮ ವಿಶೇಷಾಧಿಕಾರವನ್ನು ಪ್ರಯೋಗಿಸಿ ಆ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಚರ್ಚಿಸಕೂಡದೆಂದು ನಿರೋಧಮಾಡಿದರು. ಈ ವಿಷಯವು ಅಷ್ಟಕ್ಕೇ ನಿಂತಿತು. ಸರ್ಕಾರದವರು ಪಬ್ಲಿಕ್ ಸೇಫ್ಟಿ ಬಿಲ್ ಎಂಬ ಮಸೂದೆಯನ್ನು ತಂದರು. ಅಧ್ಯಕ್ಷರಾದ ಶ್ರೀ ಪಟೇಲರವರು ಈ ಮಸೂದೆಯನ್ನು ಚರ್ಚಿಸಕೂಡದೆಂದೂ ಅದನ್ನು ಚರ್ಚಿಸುವುದರಿಂದ ಮೀರತ್‌ನಲ್ಲಿ ನಡೆಯುವ ಮೊಕದ್ದಮೆಗಳಿಗೆ ಬಾಧೆಯು ತಟ್ಟುವುದೆಂದೂ ಅಪ್ಪಣೆ ಕೊಟ್ಟರು.

ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

ಕಳೆದ ತಿಂಗಳು 31 ನೇ ತಾ|| ನಲ್ಲಿ ಧಾರ್ವಾಡದಲ್ಲಿ ಶ್ರೀಯುತರಾದ ಶ್ರೀನಿವಾಸರಾವ್ ಕೌಜಲ್ಗಿ ರವರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಪ್ರಾಂತಿಕ ಕಮಿಟಿಯ ಮೀಟಿಂಗ್ ನಡೆಯಿತು. ಸುಮಾರು 4 ಜನ ಮೆಂಬರುಗಳು ಹಾಜರಿದ್ದರು. ಬ್ರಿಟಿಷ್ ಸರ್ಕಾರದವರು ಅವಲಂಬಿಸಿರುವ ದಬ್ಬಾಳಿಕೆಯ ಮೇಲೆ ಚಳುವಳಿಯನ್ನು ನಡೆಯಿಸುವುದಕ್ಕಾಗಿ ಹರಪಿನಿಂದ ಕೆಲಸಮಾಡಬೇಕೆಂದು ತೀರ್ಮಾನವಾಯಿತು. ಕಾಂಗ್ರೆಸ್ ಸಭಿಕರ ತಮ್ಮ ವರಮಾನದಲ್ಲಿ ಶೇಕಡಾ 1 ಭಾಗವನ್ನು ಕಾಂಗ್ರೆಸ್ ಕಾರ್ಯಕ್ಕಾಗಿ ಕೊಡಬೇಕೆಂದು ತೀರ್ಮಾನವಾಯಿತು.

ಇಂಜನಿಯರ್

ಸರ್ಕಾರದವರು 1928 ನೇ ಡಿಸೆಂಬರ್ 1 ರಿಂದ 1 ವರ್ಷಕಾಲ ಮಿ|| ಎ. ಬೆಲ್ ಫಾನ್ ಟೀಯಿನ್‌ರವರನ್ನು ವ್ಯಾಪಾರ ಮತ್ತು ಕೈಗಾರಿಕೆಯ ಇಲಾಖೆಯಲ್ಲಿ ಭಾಪ ತೋಡಿಸುವ ಇಂಜನಿಯರಾಗಿ ನೇಮಿಸಿರುವರು.

ನೋಟೀಸ್

ಹಿಂದೂ ಬ್ಯಾಂಕ್ ಲಿಮಿಟೆಡ್ ಮೈಸೂರು.

ತಾ|| 7-4-1929ರಲ್ಲಿ ಸೇರಿದ್ದ ಈ ಬ್ಯಾಂಕಿನ ಷೇರ್ ಹೋಲ್ಡರುಗಳ ಅಡ್ಜರ್ನ್ಡ್ ಎಕ್ಸ್ಟ್ರಾ ಆರ್ಡಿನರಿ (Extra-ordinary) ಜನರಲ್ ಮೀಟಿಂಗಿನಲ್ಲಿ ಸಕಾಲದಲ್ಲಿ ಕೋರಂ ಸೇರಲಿಲ್ಲವಾಗಿ ಯಾವ ಕೆಲಸಕಾರ್ಯಗಳೂ ನಡೆಯಲಿಲ್ಲ.

ಸದರಿ ಮೀಟಿಂಗು ತಾ|| 20-4-1929 ನೇ ಶನಿವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಮೊದಲು ನೋಟೀಸಿನಲ್ಲಿ ಕಾಣಿಸಿದ್ದ ಉದ್ದೇಶ್ಯಗಳಿಗಾಗಿಯೇ ಮೈಸೂರು ಶ್ರೀರಾಮಪೇಟೆ ಶಾರದಾ ವಿಲಾಸ ಪಾಠಶಾಲೆಯಲ್ಲಿ (ಐ. ಎಸ್. ಸಿನಿಮಾ ಸಮೀಪ) ಪುನಃ ನಡೆಯುವಂತೆ ಎರಡನೆ ದಫಾ ಅಡ್ಜರನ್ ಮಾಡಿರುತ್ತೆ.

ಷೇರು ಹೋಲ್ಡರುಗಳು ಆ ದಿವಸ ಸಕಾಲಕ್ಕೆ ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರಿದೆ.

(By order)

ಮೈಸೂರು H. Venkatakrishnappa

ತಾ|| 7-4-1929 Managing Agent







Printed and published by P. R. Ramiaya at Sri Rama Pres D Subbiah Road, Mysore.

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ- ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ರೂ. ೫-೦-೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೨] ಗುರುವಾರ ೧೧ ಏಪ್ರೈಲ್ ೧೯೨೯ [ಸಂಚಿಕೆ ೧೪೮

TAI NADU
11—4—1929

ವೈಸ್ ಛಾನ್ಸಲರವರು.

(ಬರೆದು ಬಂದುದು)

ಯೂನಿವರ್ಸಿಟಿ ಸೆನೇಟ್ ಸಭೆಯಲ್ಲಿ; ಇಂಜನೀಯರಿಂಗ್ ಕಾಲೇಜಿಗೆ ಯಾವಯಾವ ಕೋಮಿನ ಎಷ್ಟು ವಿದ್ಯಾರ್ಥಿಗಳು ಸೇರಿಸಲ್ಪಟ್ಟರು ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶವು ದೊರೆಯಲಿಲ್ಲ ಎಂಬುದಾಗಿ ಮ|| ಮಿರಳಿ ಲಕ್ಷ್ಮೀನಾರಣಪ್ಪನವರು ಪ್ರಶ್ನೆಯನ್ನು ಹಾಕಿದ್ದರು ಅದಕ್ಕೆ ವೈಸ್ ಛಾನ್ಸಲರವರು ಸರಿಯಾದ ಸಮಾಚಾರವು ಒಂದಿಲ್ಲ ಎಂದು ಉತ್ತರವನ್ನು ಕೊಟ್ಟರು. ಮ|| ಲಕ್ಷ್ಮೀನಾರಾಣಪ್ಪನವರು ನಾನು ಫೆಬ್ರವರಿಯ ಆದಿಭಾಗದಲ್ಲೇ ಈ ಪ್ರಶ್ನೆಯನ್ನು ಕಳುಹಿಸಿದೆ. ಆದರೆ ಇನ್ನೂ ಸಮಾಚಾರವು ಬಂದಿಲ್ಲವೆಂದು ನೀವು ಹೇಳುವಿರಿ. ಇಂಜನೀಯರಿಂಗ್ ಕಾಲೇಜು ಪ್ರಿನ್ಸಿಪಾಲರವರು ನಮಗೆ ಬೇಕಾದ ಉತ್ತರವನ್ನು ಕೊಟ್ಟಿರುವರು. ಅವೇ ನನಗೆ ಸಾಕು ಎಂದು ಹೇಳಿದರು ವೈಸ್ ಛಾನ್ಸಲರವರು. ನೀವು ಪ್ರಶ್ನೆಯನ್ನು ಹಾಕಿರುವುದು ನನಗೆ, ನಾನು ಹೇಳುವ ಉತ್ತರವನ್ನೇ ತೆಗೆದುಕೊಳ್ಳಬೇಕು ಎಂದರು ಅದಕ್ಕೆ ಮ|| ಲಕ್ಷ್ಮೀನಾರಣಪ್ಪನವರು ನನಗೆ ಇಂಜನೀಯರಿಂಗ್ ಕಾಲೇಜಿನ ಪ್ರಿನ್ಸಿಪಾಲರವರ ಮಾತಿನಲ್ಲಿ ವಿಶ್ವಾಸವಿದೆ. ನಿಮಗೆ ಇಲ್ಲದೆ ಇರಬಹುದು ಎಂದರು. ವೈಸ್ ಛಾನ್ಸಲರು ಇಲ್ಲ ಇಲ್ಲ ನೀವು ಹಾಗೆ ಹೇಳುವುದು ಸರಿಯಲ್ಲ ಎಂದರು ಅದಕ್ಕೆ ಇಂಜನೀಯರಿಂಗ್ ಕಾಲೇಜಿನ ಪ್ರಿನ್ಸಿಪಾಲರವರು ನನ್ನ ಕಾಲದಲ್ಲಿ ಸರಿಯಾದ ಯೋಗ್ಯತೆಯುಳ್ಳ ಮೈಸೂರಿನ ಯಾವ ಬ್ರಾಹ್ಮಣೇತರ ವಿದ್ಯಾರ್ಥಿಗೂ ಪ್ರವೇಶವು ದೊರೆಯದೇ ಹಿಂದಕ್ಕೆ ಹೋಗಿಲ್ಲ ಎಂದರು. ಅದಕ್ಕೆ ವೈಸ್ ಛಾನ್ಸಲರವರು ನಿಮ್ಮ ಕಾಲದಲ್ಲಿ ಹಾಗಿರಬಹುದು ಅದು ಹಿಂದಕ್ಕೂ ಹಾಗೆಯೇ ಇತ್ತೆಂದು ಹೇಗೆ ಹೇಳುವುದು.

ಹೀಗೆ ಅನುಮಾನ ಪಡುತ್ತಾ ಹೋದರೆ ಈ ಅನುಮಾನವು ಎಲ್ಲಿ ಪರಿಸಮಾಪ್ತವಾಗಬೇಕು?

ಸುಕೆಸ್ಸಿಂದು ವಿಷಯ ಫ್ರೀಷಿಪ್ ಮಾತುಗಳು ಬಂತು. ಸ್ಕಾಲರ್‌ಷಿಪ್ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಫ್ರೀಷಿಪ್ ಕೊಡಲ್ಪಡುತ್ತ ಕೂಡದೆಂದೂ ಅವರ ಯೋಗ್ಯತೆಯನ್ನು ನೋಡಿ ಕೊಡಬೇಕೆಂದೂ ಒಂದು ಠರಾವು ಬಂದಿತು.

ಫ್ರೀಷಿಪ್ಪುಗಳು.

ಮ|| ಟಿ. ಗೋಪಾಲಸ್ವಾಮಿ ಅಯ್ಯಂಗಾರ್ಯರವರು ಈ ಕೆಳಗಿನ ಅಭಿಪ್ರಾಯದ್ದೊಂದು ಠರಾವನ್ನು ತಂದರು. "ಈಗ ಯೂನಿವರ್ಸಿಟಿಯಲ್ಲಿ ಸ್ಕಾಲರ್ಷಿಪ್ಪು ಬರುವ ಪ್ರತಿಯೊಬ್ಬನಿಗೂ ಫ್ರೀಷಿಪ್ಪು ಇದೆ ಇಂತಹ ಸ್ಕಾಲರ್ಷಿಪ್ಪು ಹೋಲ್ಡರಗಳಿಗೂ ಇತರ ವಿದ್ಯಾರ್ಥಿಗಳಂತೆಯೇ ಅವರ ಯೋಗ್ಯತೆಗಳನ್ನು ನೋಡಿಯೇ ಫ್ರೀಷಿಪ್ಪುಗಳನ್ನು ಕೊಡಬೇಕು."

ಮ|| ಎಸ್. ಜಿ. ಶಾಸ್ತ್ರಿಗಳು ಇದನ್ನು ಅನುಮೋದಿಸಿದರು.

ಮಿ|| ಕಲಾಮಿಯವರು ಬ್ಯಾಕ್‌ವರ್ಡ್ ಸ್ಕಾಲರ್ಷಿಪ್ ಹೋಲ್ಡರುಗಳನ್ನು ಈ ನಿಬಂಧನೆಯಿಂದ ತಪ್ಪಿಸಬೇಕು.

ವರ್ತಮಾನ ಸಂಗ್ರಹ.

ಸೈನ್ಯ ಪರೀಕ್ಷೆ.

ಡೆಲ್ಲಿಯಲ್ಲಿ ಕಾಲುಬಲ ಮತ್ತು ವಿಮಾನ ಸೈನ್ಯದ ಪ್ರವೇಶ ಪರೀಕ್ಷೆಯು 1929ನೇ ಜೂನ್ 25 ನೇ ತಾ|| ಲಾಗಾಯಿತು ಹತ್ತು ದಿನಗಳು ನಡೆಯುವುದು.

ಲೈಸೆನ್‌ಸಿಂಗ್ ಬೋರ್ಡ್.

ದೊಡ್ಡಬಳ್ಳಾಪುರದ ಲೈಸೆನ್‌ಸಿಂಗ್ ಬೋರ್ಡಿನ ಚುನಾವಣೆಯಲ್ಲಿ ಮ||ಗಳಾದ ಎಸ್. ವೈ, ಶಂಕರಯ್ಯನವರೂ ನಾಮಿನೇಷನ್‌ನಲ್ಲಿ ಮ|| ರಾ|| ಗಳಾದ ಡಿ. ಗೋಪಣ್ಣನವರೂ, ಡಿ. ಈಸೂಫ್‌ಖಾನ್‌ರವರೂ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು.

ವೈದ್ಯ ಇಲಾಖೆಯಲ್ಲಿ ಬಡ್ತಿ.

ಮ|| ಎಸ್. ಸುಬ್ಬರಾಯರವರು (ಬದಲಿ) ಸೀನಿಯರ್ ಸರ್ಜನ್‌ರಾಗಿ ನೇಮಿಸಲ್ಪಟ್ಟಿರುವುದರಿಂದ ಮ|| ರಾ|| ಗಳಾದ ಬಿ. ಕೆ. ನಾರಾಯಣರಾಯರವರು ಎರಡನೇ ದರ್ಜೆಯಿಂದ ಮೊದಲನೇ ದರ್ಜೆಗೂ, ಡಿ. ಎಸ್. ಪುಟ್ಟಣ್ಣನವರು ಮೂರನೇ ದರ್ಜೆಯಿಂದ ಎರಡನೇ ದರ್ಜೆಗೂ, ಸಂಜಪ್ಪನವರು ನಾಲ್ಕನೇ ಗ್ರೇಡಿನಿಂದ ಮೂರನೆ ಗ್ರೇಡಿಗೂ ಟಿ. ಬಾಲಕೃಷ್ಣ ಮೊದಲಿಯಾರ್ರವರು ಐದನೆ ದರ್ಜೆಯಿಂದ ನಾಲ್ಕನೆ ಗ್ರೇಡಿಗೂ ಬಿ. ಕೃಷ್ಣಮೂರ್ತಿಯವರು ಆರನೆ ದರ್ಜೆಯಿಂದ ಐದನೆ ಗ್ರೇಡಿಗೂ ಮೊದಲನೆ ದರ್ಜೆಯ ಅಸಿಸ್ಟೆಂಟ್ ಸರ್ಜನ್‌ರಾದ ದೀನದಯಾಳ್‌ಸಿಂಗ್‌ರವರು ಆರನೆ ದರ್ಜೆಗೂ ಪಂಗಾಮಿಯಾಗಿ ಬಡ್ತಿ ಮಾಡಲ್ಪಟ್ಟಿರುವರು.

ಮಿ|| ಚಾಂಡಿಯವರು:—ಹಾಗೆ ಮಾಡಿದರೆ ಠರಾವು ತಂದಿರುವವರ ಉದ್ದೇಶವೇ ಸಫಲವಾಗುವುದಿಲ್ಲ.

ಈ ಠರಾವು ಬಹುಮತದಿಂದ ಪಾಸಾಯಿತು,

ನಿಷ್ಪಕ್ಷಪಾತವಾಗಿ ನೋಡಿದರೆ ಈ ಠರಾವು ನ್ಯಾಯವಾದುದೆಂದು ಗೊತ್ತಾಗುತ್ತದೆ. ಆದರೆ ಯಾರೋ ಒಬ್ಬ ಮೆಂಬರು ಈ ಠರಾವನ್ನು ತಂದವರು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ತೊಂದರೆಯನ್ನು ಮಾಡುವುದಕ್ಕೋಸ್ಕರ ಈ ಠರಾವನ್ನು ತಂದರು ಎಂದರು.. ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್‌ಷಿಫ್‌ಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಹೋಗುತ್ತದೆ ಎಂದು ಹೇಳಿದರು ಬ್ಯಾಕ್‌ವರ್ಡ್ ಕ್ಲಾಸ್ ಸ್ಕಾಲರ್‌ಷಿಪ್‌ಗಳನ್ನು ತೆಗೆದುಕೊಳ್ಳುವವರನ್ನು ಈ ನಿಬಂಧನೆಯಿಂದ ಪ್ರತ್ಯೇಕಿಸಬೇಕೆಂದು ಒಬ್ಬರು ಸೂಚಿಸಿದರು. ಅದಕ್ಕೆ ವೈಸ್‌ಛಾನ್ಸಲವರು ಇಂಗ್ಲಿಷಿನಲ್ಲಿ That will defeat their object ಅದರಿಂದ ಅವರ ಉದ್ದೇಶವು ಫಲವಾಗುವುದಿಲ್ಲ ಎಂದು ಹೇಳಿದರು ಎಂದರೆ ವೈಸ್ ಛಾನ್ಸೆಲರವರ ಅಭಿಪ್ರಾಯದಲ್ಲೂ ಈ ಠರಾವನ್ನು ತಂದವರ ಉದ್ದೇಶವು ಹಿಂದುಳಿದ ಪಂಗಡದವರ ವಿದ್ಯಾರ್ಥಿಗಳಿಗೆ ಸಲ್ಲುತ್ತಿರುವ ಫ್ರೀಷಿಪ್‌ಗಳನ್ನು ತಪ್ಪಿಸುವುದಕ್ಕಾಗಿ ಎಂದೋ? ವೈಸ್ ಛಾನ್ಸೆಲರವರು ಆರೀತಿಯಾದ ಸಂದಿಗ್ಧವಾದ ವಾಕ್ಯಗಳನ್ನು ಹೇಳದಿದ್ದರೆ ಚೆನ್ನಾಗಿತ್ತು. ಡಾ|| ಸೀಲ್‌ರವರಿಗೂ ಮಿ|| ಕೆ. ಚಾಂಡಿಯವರಿಗೂ ಆನೆಗೂ ಆಡಿಗೂ ಇರುವ ವ್ಯತ್ಯಾಸವಿರುವುದು ಮಿ|| ಚಾಂಡಿಯವರು ಡಾ|| ಸೀಲ್‌ರವರ ಸಾಮರ್ಥ್ಯವನ್ನಾಗಲಿ ನಿಷ್ಪಕ್ಷಪಾತವನ್ನಾಗಲಿ ಉದಾತ್ತಭಾವನೆಯನ್ನಾಗಲಿ ಹೊಂದಿರುವುದಿಲ್ಲ.

ಕಳಲೆ ರಥೋತ್ಸವ.

ಮಾರ್ಚಿ 28 ನೇ ತಾ|| ಗುರುವಾರ ನಂಜನಗೂಡು ತಾ ಕಳಲೆಯಲ್ಲಿರುವ ಶ್ರೀ ಲಕ್ಷ್ಮೀಕಾಂತ ಸ್ವಾಮಿಯವರ ರಥೋತ್ಸವವು ಮಹಾಮಾತೋ ಶ್ರೀಯವರ ಸನ್ನಿಧಾನದಿಂದಲೂ ಮ|| ಸರದಾರ್ ಕಾಂತರಾಜೇರಸಿನವರ ಕುಮಾರ್ತಿಯವರ ಸನ್ನಿಧಾನದಿಂದಲೂ ಮಾಮೂಲಿನಂತೆ ತಾ. ಅಮಲ್ದಾರರ ಮೇಲ್ವಿಚಾರಣೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು. ಮ|| ಲಕ್ಷ್ಮೀಕಾಂತರಾಜೇರಸಿನವರೂ ಮ|| ಕೆ. ಬಸವರಾಜೇರಸಿನವರೂ ದೇವತಾ ಸೇವೆಗಾಗಿ ದಯಮಾಡಿಸಿದ್ದರು.

ಪಂಡಿತ ಮಾಳವೀಯರವರು—

ಪಂಡಿತ ಮದನ ಮೋಹನ ಮಾಳವೀಯರವರು ಮುಂದಿನ ತಿಂಗಳು 4 ನೇ ತಾ|| ನಲ್ಲಿ ಕಲ್ಲಿಕೋಟೆಯಲ್ಲಿ ನಡೆಯುವ ಕೇರಳ ಪ್ರಾಂತ್ಯದ ಹಿಂದೂ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬರುವರು. ಆ ಸಂದರ್ಭದಲ್ಲಿ ಅವರು ನಮ್ಮ ಮೈಸೂರು ಸಂಸ್ಥಾನಕ್ಕೂ ಬರುವರು

ಶ್ರೀರಾಮ ಪ್ರಸೀದ

ಮೈಸೂರು ಚಾಮುಂಡಿ ಎಕ್ಸ್‌ಟೆನ್‌ಷನ್ ಶ್ರೀಶಂಕರನಾರಾಯಣಸ್ವಾಮಿ ದೇವಸ್ಥಾನದ ಶ್ರೀರಾಮ ಮಂದಿರದ ಭಕ್ತರುಗಳು ಮಹನೀಯರಲ್ಲಿ ಪ್ರಾರ್ಥಿಸಿಕೊಳ್ಳುವದೇನಂದರೆ.—

ಮೇಲ್ಕಂಡ ಶ್ರೀ ರಾಮ ಮಂದಿರದಲ್ಲಿ ಮಾಮೂಲಿನಂತೆ ತಾ. 17-4-29 ರ ಲಾಗಾಯ್ತು ಶ್ರೀ ರಾಮ ನವರಾತ್ರೆ ಮಹೋತ್ಸವವು ನಡೆಯಬೇಕಾಗಿರುವದರಿಂದ ತಾವುಗಳೆಲ್ಲರೂ ಇದಕ್ಕಾಗಿ ಯಥಾಶಕ್ತಿ ಅಕ್ಕಿ, ಬೇಳೆ ಮುಂತಾದ ಪದಾರ್ಥಗಳನ್ನೂ ಮತ್ತು ದ್ರವ್ಯವನ್ನು ಸಹಾಯಮಾಡಿ ಸಾಹಯ ದ್ರವ್ಯಗಳನ್ನು ಭಜನೆಗೆ ಬಂದಾಗಲಾಗಲೀ ಅಥವಾ ದೇವಸ್ಥಾನಕ್ಕೆ ಆಗಲಿ ತಲಪಿಸಿ ಈ ಮಹತ್ಕಾರ್ಯವನ್ನು ಆಗಮಾಡಿಸಿ ಶ್ರೀ ರಾಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ

ತಮ್ಮ ವಿಧೆಯರು.
ಶ್ರೀ ರಾಮ ಭಕ್ತರು.

ತಾಯಿನಾಡು.

11—4—1929

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವ್ಯವಸ್ಥೆ.

(ಬರೆದು ಬಂದುದು)

ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಅವ್ಯವಸ್ಥೆಯು ಕಾಲಿಕ್ಕುತ್ತಿರುವುದು. ಇದುವರೆಗೂ ಈ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಕೋಮುವಾರು ವ್ಯಾಧಿಗೆ ಪ್ರವೇಶವಿರಲಿಲ್ಲ. ಡಾ|| ಸೀಲ್‌ರವರು ರಜಾ ತಗೆದುಕೊಂಡು ಹೋದಾಗಿನಿಂದಲೂ ಈ ಮಹಾಮಾರಿಯು ಯೂನಿವರ್ಸಿಟಿಯ ಪವಿತ್ರದ್ವಾರವನ್ನೂ ಪ್ರವೇಶಿಸಿತು. ಯೂನಿವರ್ಸಿಟಿಯ ಶಿಕ್ಷಕರನ್ನೂ ಅಧ್ಯಾಪಕರನ್ನೂ ನೇಮಿಸುವುದರಲ್ಲಿ ಸಾಮರ್ಥ್ಯವೇ ಮುಖ್ಯವಾದ ಯೋಗ್ಯತೆಯೆಂಬುದಾಗಿ ಪರಿಗಣಿಸಲ್ಪಡುತ್ತಿತ್ತು. ಯಾವ ಜಾತಿಯವನೇ ಆಗಲಿ ಯಾವ ಕೋಮಿನವನೇ ಆಗಲಿ ಯಾವನಿಗೆ ಹೆಚ್ಚು ಸಾಮರ್ಥ್ಯವಿದೆಯೋ ಅವನೇ ಶಿಕ್ಷಕ ಕೆಲಸಕ್ಕೂ ಅಧ್ಯಾಪಕರ ಕೆಲಸಕ್ಕೂ ನೇಮಿಸಲ್ಪಡುತ್ತಿದ್ದನು. ಯೂನಿವರ್ಸಿಟಿಯ ಶಿಕ್ಷಕ ಮತ್ತು ಅಧ್ಯಾಪಕರ ಕೆಲಸಗಳಲ್ಲಿ ಜಾತಿವಾರು ಪ್ರಾತಿನಿಧ್ಯವನ್ನು ದೊರಕಿಸಲು ಪ್ರಯತ್ನವು ನಡೆಯುತ್ತಿರಲಿಲ್ಲ. ಆದರೆ ಈಚೆಗೆ ಸರ್ಕಾರದವರು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವ ಕೆಲವು ಸಲಹೆಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಕರನ್ನೂ ಅಧ್ಯಾಪಕರನ್ನೂ ನೇಮಿಸುವ ವಿಷಯದಲ್ಲಿ ಜಾತಿವಾರು ಪ್ರಾತಿನಿಧ್ಯವು ದೊರೆಯುವಂತೆ ಪ್ರಯತ್ನಿಸಬೇಕೆಂದು ತಿಳಿಸುತ್ತಾರೆ. ಒಂದು ಸಾರಿ ಈ ಕೋಮುವಾರು ವ್ಯಾಧಿಯು ಪ್ರವೇಶಿಸಿತೆಂದರೆ ಯೂನಿವರ್ಸಿಟಿಯಲ್ಲಿ ಕಿತ್ತಾಟಕ್ಕೆ ಮೊದಲಾಗಿ ಅವ್ಯವಸ್ಥೆಯು ಮಯವಾಗುವುದು. ಹಿಂದುಳಿದ ಪಂಗಡದವರಿಗೆ ಉತ್ತೇಜನವು ದೊರೆಯಕೂಡದೆಂದು ನಾವು ಹೇಳುವುದಿಲ್ಲ. ಸರ್ವಪ್ರಕಾರವಾಗಿಯೂ ಅವರಿಗೆ ಉತ್ತೇಜನವು ದೊರೆಯಬೇಕು. ಆದರೆ ಅತ್ಯುನ್ನತವಾದ ಶಿಕ್ಷಣವನ್ನು ಕೊಡುವ ವಿಶ್ವವಿದ್ಯಾಲಯದಲ್ಲಿ ಅತ್ಯುನ್ನತವಾದ ವಿದ್ಯೆಯುಳ್ಳವನು ಬೇಕೇ ಹೊರತು ವಿದ್ಯೆಯಲ್ಲಿ ಕಡಿಮೆಯಾದವನು ಇರಬಾರದು. ಇತರ ಕೆಲಸಗಳಿಗಾದರೆ ಕಡೆಯಪಕ್ಷದ ಯೋಗ್ಯತೆಯು ಇಷ್ಟೆಂದು ನಿರ್ಧರಿಸಿ ಜನಗಳನ್ನು ನೇಮಿಸಬಹುದು. ಆದರೆ ವಿಶ್ವವಿದ್ಯಾಲಯದ ಶಿಕ್ಷಕರನ್ನು ನೇಮಿಸುವಾಗ್ಗೆ ಎಷ್ಟು ಹೆಚ್ಚಿನ ಯೋಗ್ಯತೆಯವರು ದೊರಕಿದರೆ ಅಷ್ಟು ಹೆಚ್ಚಿನ ಯೋಗ್ಯತೆಯವರನ್ನು ತೆಗೆದುಕೊಳ್ಳಬೇಕು. ಯೂನಿವರ್ಸಿಟಿಯ ಶಿಕ್ಷಕರನ್ನು ನೇಮಿಸುವುದರಲ್ಲಿ ಯಾವ ಪಕ್ಷಪಾತವೂ ಇರಬಾರದು. ಒಂದು ಸಾರಿ ಈ ಜಾತಿವಾರು ಪ್ರಾತಿನಿಧ್ಯದ ತತ್ವವನ್ನು ಅವಲಂಬಿಸಿದರೆ ಅದನ್ನು ಕೊನೆಮುಟ್ಟಿಸುವುದು ಸಾಧ್ಯವೇ? ನಮ್ಮ ಸಂಸ್ಥಾನದಲ್ಲಿರುವ ಎಲ್ಲಾ ಜಾತಿಯವರಿಗೂ ಕೋಮಿನವರಿಗೂ ಯೂನಿವರ್ಸಿಟಿಯ ಶಿಕ್ಷಕರ ಹುದ್ದೆಗಳಲ್ಲಿ ಪ್ರಾತಿನಿಧ್ಯವನ್ನು ಕೊಡುವದು ಸಾಧ್ಯವೇ? ಈ ಭಾಗವನ್ನೆಲ್ಲಾ ಸರ್ಕಾರದವರು ಆಲೋಚಿಸಿರುವ ಹಾಗೆ ಕಾಣುವದಿಲ್ಲ.

ಪ್ರತಿನಿಧಿ ಸಭೆಯಲ್ಲೂ ನ್ಯಾಯವಿಧಾಯಕ ಸಭೆಯಲ್ಲೂ ಕೋಮುವಾರು ಪ್ರಾತಿನಿಧ್ಯದ ತತ್ವವು ಪ್ರತಿಪಾದಿಸಲ್ಪಟ್ಟಿರುವುದು. ಆದರೆ ಸರ್ಕಾರದವರು ಎಲ್ಲಾ ಭಾಗದಲ್ಲಿಯೂ ಪ್ರತಿನಿಧಿ ಸಭೆಯ ಅಭಿಪ್ರಾಯದಂತೆ ನಡೆಯುವರೇ? ಒಂದು ವೇಳೆ ಹಾಗೆ ನಡೆಯುವುದೇ ಧರ್ಮವಾದರೆ ಅದರ ಯುಕ್ತಾಯುಕ್ತವನ್ನು ವಿಚಾರಮಾಡಬಾರದೆ? ಸರ್ಕಾರದಿಂದ ಯೂನಿವರ್ಸಿಟಿಗೆ ಗ್ರಾಂಟ್ ಕೊಟ್ಟಮಾತ್ರಕ್ಕೆ ಅದರ ಸ್ವಾತಂತ್ರ್ಯವನ್ನು ಹಾಳುಮಾಡಬೇಕೆ? ಸರ್ಕಾರದವರು ಹೇಳುವಂತೆಯೆ ಯೂನಿವರ್ಸಿಟಿಯು ನಡೆಯಬೇಕೆಂಬ ಅಭಿಪ್ರಾಯವಿದ್ದರೆ ಸೆನೆಟ್ ಸಿಂಡಿಕೇಟ್ ಮೊದಲಾದವುಗಳನ್ನೆಲ್ಲಾ ವಜಾ ಮಾಡಿ ಯೂನಿವರ್ಸಿಟಿಯನ್ನು ಸರಕಾರದ ಒಂದು ಇಲಾಖೆಯನ್ನಾಗಿ ಮಾಡಿಕೊಂಡು ಕೆಲಸವನ್ನು ನಡೆಯಿಸಲಿ. ಹೊರಗಿನವರಿಗೆ ನೋಡುವುದಕ್ಕೆ ಸೆನೆಟ್ ಮೊದಲಾದುವುಗಳು ಇವೇ ಎಂಬುದಾಗಿ ಕಾಣಬೇಕು. ಆದರೆ ಅವಕ್ಕೆ ಮಾತ್ರ ಸ್ವಾತಂತ್ರ್ಯವಿಲ್ಲ. ಈ ರೀತಿಯಾದ ಪರಿಸ್ಥಿತಿಯು ಚೆನ್ನಾಗಿಲ್ಲ.

ಇದೊಂದೇ ವಿಷಯವಲ್ಲ. ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವ ವಿಷಯದಲ್ಲಿಯೂ ಸರ್ಕಾರದವರು ಕೈ ಹಾಕಿರುವರು. ಆಯಾಯಾ ಕಾಲೇಜಿನ ಕೌನ್ಸಿಲ್‌ಗಳಿಗೆ ಯಾರನ್ನು ಸೇರಿಸಬೇಕು ಯಾರನ್ನು ಸೇರಿಸಬಾರದು ಎಂಬ ಸ್ವಾತಂತ್ರ್ಯವನ್ನು ಕೊಡುವ ಬದಲು ಅಡ್ಮಿಷನ್ ಕಮಿಟಿಗಳೆಂದು ಒಂದೊಂದು ಕಾಲೇಜುಗಳಿಗೂ ಒಂದೊಂದು ಕಮಿಟಿಗಳನ್ನು ನೇಮಿಸಿರುತ್ತಾರೆ. ಆ ಕಮಿಟಿಗಳಲ್ಲಿ ಹಿಂದಿನವರ ಪ್ರತಿನಿಧಿ ಸಭೆಯಲ್ಲಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಸರಿಯಾದ ಪ್ರವೇಶಗಳು ದೊರೆಯುವುದಿಲ್ಲವೆಂದು ಅಸಮಾಧಾನವು ಪ್ರಕಟಿಸಲ್ಪಟ್ಟಿತಂತೆ. ಯಾವ ಕಾಲೇಜಿನಲ್ಲಿ ಆ ಅಸಮಾಧಾನಕ್ಕೆ ಆಧಾರವಿದೆಯೋ ಇಲ್ಲವೇ ಎಂಬುದನ್ನು ವಿಮರ್ಶೆಮಾಡುವುದಕ್ಕೆ ಬದಲಾಗಿ ಕೋಣ ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಎಂಬ ಸಮಾಚಾರದಂತೆ ಸರ್ಕಾರದವರು ಅಡ್ಮಿಷನ್ ಕಮಿಟಿಗಳನ್ನು ನೇಮಿಸಿದರು. ಇದರಿಂದ ಏನು ಸ್ಪಷ್ಟವಾಗುತ್ತೆಂದರೆ ಈಗಿನ ಸರ್ಕಾರದ ಮಂತ್ರಿಮಂಡಲದವರಿಗೆ ಸೆನಿಟ್‌ನಲ್ಲಿ ವಿಶ್ವಾಸವಿಲ್ಲ. ಯೂನಿವರ್ಸಿಟಿ ಕೌನ್ಸಿಲ್‌ನಲ್ಲಿ ವಿಶ್ವಾಸವಿಲ್ಲ. ಹೀಗೆ ಅವಿಶ್ವಾಸದಿಂದ ಕೆಲಸಕಾರ್ಯಗಳನ್ನು ನಡೆಸುವುದಕ್ಕಿಂತ ಯೂನಿವರ್ಸಿಟಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮೇಲೆ ಹೇಳಿದಂತೆ ಸರ್ಕಾರದ ಒಂದು ಇಲಾಖೆಯನ್ನಾಗಿ ಮಾಡಲಿ ಇಷ್ಟೆ ಅಲ್ಲ ಇನ್ನೂ ಎಷ್ಟೋ ಬಾಬುಗಳಲ್ಲಿ ಸರ್ಕಾರದವರು ಯೂನಿವರ್ಸಿಟಿಯ ಸ್ವಾತಂತ್ರ್ಯವನ್ನು ಕುಂದಕಪಡಿಸುತ್ತಿರುವರು. ನಿಷ್ಪಕ್ಷಪಾತಿಗಳಾದ ಪ್ರಜೆಗಳು ಸರ್ಕಾರದವರು ಯೂನಿವರ್ಸಿಟಿಯ ಸ್ವಾತಂತ್ರ್ಯದಲ್ಲಿ ಕೈಹಾಕದಂತೆ ನೋಡಿಕೊಳ್ಳಬೇಕು.

ರಜಾ.

ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರ್‌ರವರ ಆಫೀಸು ಅಸಿಸ್ಟೆಂಟ್‌ರಾದ ಶ್ರೀಮತಿ ಶ್ರೀರಂಗಮ್ಮನವರಿಗೆ ಏಪ್ರಿಲ್ 13 ರಿಂದ 2 ತಿಂಗಳ ಪೂರಾ ಸಂಬಳದ ಪ್ರಿವಿಲೇಜ್ ರಜಾ ಮಂಜೂರಾಗಿದೆ.

ಸಿಟಿಇಂಪ್ರೂವ್‌ಮೆಂಟ್ ಟ್ರಸ್ಟ್.

ಮೈಸೂರು ಸಿಟಿಇಂಪ್ರೂವ್‌ಮೆಂಟ್ ಟ್ರಸ್ಟಿಗೆ ಸರ್ ಟಾಡ್‌ಹಂಟರ್ ರವರೂ ರಾಜಮಂತ್ರ ಪ್ರವೀಣ ದಿವಾನ್ ಬಹದ್ದೂರ್ ಪಿ. ರಾಘವೇಂದ್ರರಾವ್ ರವರೂ ಲೆಫ್ಟಿನೆಂಟ್ ಕರ್ನಲ್ ಹೆಚ್. ಸಂಜುಂಡರಾಜೇ ಅರಸಿನವರೂ ಮುನಿಸಿಪಲ್ ಕೌನ್ಸಿಲ್ ಚುನಾವಣೆಯಲ್ಲಿ ಮಿ|| ಮಹಮದ್ ಸೇಟ್‌ರವರೂ ಮತ್ತು ಮಿ|| ಕೆ. ಧನಕೋಟಿಶೆಟ್ಟಿರವರೂ ಸಹ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು.

[illegible]

ಕೋಲಾರದ ಕೃಷ್ಣರಾಜೇಂದ್ರ [illegible] ಡೆ|| ಕಮೀಷನರ್ ಮಿ|| ಎ. ವಿ. ರಾಮನಾಥನ್‌ರವರು ಈ ಮಾತೆ 6 ನೇ ತಾ|| ಮಧ್ಯಾಹ್ನ [illegible] ನವನ್ನು ನಡೆಸಿದರು.

[illegible]

ಬೆಂಗಳೂರು [illegible] ಯೇಷನ್‌ನವರು ಈ ತಿಂಗಳು 9 ನೇ ತಾ|| [illegible] ಥಿಯೇಟರಿನಲ್ಲಿ [illegible] ಕರ್ಣಾಟಕ ಕಲಾಭಿಮಾನಿಗಳಿ[illegible] ಆದ ಶ್ರೀಯುತ ಎ. ವಿ. [illegible] ಜರಿಸಿದರು.

[illegible]

ಒಬ್ಬಾದಲ್ಲಿ [illegible] ಕಿಯು ಅನಾಹುತಕ್ಕೆ [illegible] ವಾದುವು.

[illegible]

ಬೆಂಗಳೂರು [illegible] ದೊಂಬಿಗಾಗಿ 6 ನೇ ತಾ|| [illegible] ಮತ್ತು ಜನರನ್ನು [illegible] ತರದೂದು ನಡೆಸುತ್ತಿರುವರು.

ಪರದೇಶೀ ವಸ್ತ್ರದಹನ.


(13—4—29)

ಮಹಾಜನರಲ್ಲಿ ವಿಜ್ಞಾಪನೆ:—

ಪರದೇಶೀ ಬಟ್ಟೆಗಳು ನಮ್ಮ ದೇಶಕ್ಕೆ ಬರದಂತೆ ಅವುಗಳಿಗೆ ಸಂಪೂರ್ಣವಾಗಿ ಬಹಿಷ್ಕಾರ ಹಾಕುವುದಕ್ಕೂ ಮತ್ತು ಸ್ವದೇಶೀ ಬಟ್ಟೆಗಳಿಗೆ ಪ್ರೋತ್ಸಾಹ ಕೊಡುವುದಕ್ಕೂ ದೇಶದಲ್ಲಿರುವ ಪರದೇಶೀ ವಸ್ತ್ರಗಳನ್ನೆಲ್ಲಾ ಅಗ್ನಿಗೆ ಆಹುತಿಮಾಡಬೇಕೆಂದು ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯವರು ಆಜ್ಞೆಮಾಡಿತ್ತಾರೆ. ಅದರಂತೆ ರಾಷ್ಟ್ರೀಯ ವಾರದ ಕಡೆಯ ದಿವಸವಾದ 13-4-29 ನೇ ಶನಿವಾರ ಸಾಯಂಕಾಲ ಆರು ಗಂಟೆಗೆ ಮೈಸೂರು ಸುಬ್ರಾಯನ ಕೆರೆಯಲ್ಲಿ ಪರದೇಶೀ ವಸ್ತ್ರಗಳ ದಹನವು ನಡೆಯುವುದು. ಅದಕ್ಕಾಗಿ ತಮ್ಮಲ್ಲಿರುವ ವಿದೇಶೀ ಬಟ್ಟೆಗಳನ್ನು ಕಾಂಗ್ರೆಸ್ ಆಫೀಸಿಗೆ ತಲುಪಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ







Printed and published by P. R. Ramiaya at Sri Krishna Press D. Subbiah Road, Mysore.

Regd. No M. 2322

ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ರೂ. ೫-೦-೦ / ಪರಸ್ಥಳಕ್ಕೆ ೧೦-೦-೦

ಸಂಪುಟ ೧] ಶುಕ್ರವಾರ ೧೨ ಏಪ್ರೆಲ್ ೧೯೨೯ [ಸಂಚಿಕೆ ೧೪

TAI NADU
12—4—1929

ಯುಗಾದಿ.

ಯುಗಾದಿಯ ಸಂದರ್ಭದಲ್ಲಿ ನಮ್ಮ ವಾಚಕರಿಗೆಲ್ಲರಿಗೂ ದೇವರು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ದಯಪಾಲಿಸಲೆಂದು ಹಾರೈಸುತ್ತೇವೆ. ನಮ್ಮ ಪತ್ರಿಕೆಯು ಆರಂಭವಾಗಿ ಸುಮಾರು ಒಂದೂವರೆ ವರ್ಷಗಳಾದವು. ಈಗ 6 ತಿಂಗಳುಗಳಿಂದಲೂ ದಿನಚರಿ ಪತ್ರಿಕೆಯಾಗಿ ನಡೆಯುತ್ತಲಿದೆ. ಅನೇಕ ಮಿತ್ರರೂ, ಹಿತೈಷಿಗಳೂ ನಮಗೆ ಬಹಳ ಪ್ರೋತ್ಸಾಹವನ್ನು ಮಾಡಿದರು. ಅವರುಗಳ ಒತ್ತಾಸೆಯಿಂದಲೇ ತಾಯಿನಾಡು ಇದುವರೆಗೂ ದಿನಚರಿ ಪತ್ರಿಕೆಯಾಗಿ ನಡೆಯಲು ಅವಕಾಶವಾಗಿರುತ್ತದೆ. ದಿನಚರಿ ಪತ್ರಿಕೆಯು ಆತ್ಮಾವಲಂಬಿನಿಯಾಗಿಲ್ಲ ತಿಂಗಳು ಒಂದಕ್ಕೆ 500 ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚಾಗುವುದು ಆದರೆ ವರಮಾನವು ಮಾತ್ರ ಅದರಲ್ಲಿ ಮೂರನೆಯ ಒಂದು ಭಾಗ ಕೂಡ ಇಲ್ಲ ತಿಂಗಳು ಒಂದಕ್ಕೆ 200 ರೂ. ಗಳಿಗಿಂತಲೂ ಹೆಚ್ಚಾಗಿ ನಷ್ಟವಾಗುತ್ತಲಿದೆ. ಈ ನಷ್ಟಕ್ಕೆ ಅನೇಕ ಚಂದಾದಾರರು ತಮ್ಮ ಚಂದಾ ಹಣವನ್ನು ಕೊಡದೆ ಇರುವುದೂ ಅನುಕೂಲಸ್ಥರು ಚಂದಾದಾರಾಗಲು ಸಾಧ್ಯವಿದ್ದರೂ ಆಗದೇ ಇರುವುದೂ ಕಾರಣಗಳಾಗಿರುತ್ತವೆ. ಅದಲ್ಲದೆ ಸರಕಾರದವರ ದಬ್ಬಾಳಿಕೆಯಿಂದ ದೇಶೀಯ ಪತ್ರಿಕೆಗಳ ವಿಷಯದಲ್ಲಿ ಜನಗಳಿಗೆ ವಿಶ್ವಾಸವೇ ತಪ್ಪಿಹೋಗಿದೆ. ಪತ್ರಿಕೆಗಳು ಯಾವಾಗ ನಿಲ್ಲಿಸಲ್ಪಡುತ್ತವೆಯೋ ಎಂಬ ಸಂದೇಹದಿಂದ ಚಂದಾದಾರರಾಗುವುದೇ ಇಲ್ಲ. ಇದು ಜನಗಳ ತಪ್ಪೆಂದು ಹೇಳುವುದಕ್ಕಾಗುವುದಿಲ್ಲ. ಯಾರೇ ಆಗಲಿ ತಮ್ಮ ಹಣವನ್ನು ವೃಥಾ ಕಳೆಯಲು ಇಷ್ಟಪಡುವುದಿಲ್ಲ. ಆದರೂ ಈ ಸಂದರ್ಭದಲ್ಲಿ ನಮ್ಮದೊಂದು ವಿಜ್ಞಾಪನೆ. ಪತ್ರಿಕೆಗಳು ಪ್ರಜೆಗಳ ಬೆಂಬಲದಿಂದಲೇ ನಡೆಯಬೇಕು. ಪ್ರಜೆಗಳು ಪೋಷಣೆಮಾಡದೇ ಹೋದರೆ ಪತ್ರಿಕೆಗಳು ನಡೆಯಲಾರವು ಆದುದರಿಂದ ಒಂದು ವರ್ಷ ಅಥವಾ ಆರು ತಿಂಗಳಿಗೆ ಹಣವನ್ನು ಕೊಟ್ಟರೆ ಬಹಳ ನಷ್ಟವಾಗುವುದಿಲ್ಲ. ಅನೇಕರು ಯಾವ ಪ್ರತಿಫಲವೂ ಇಲ್ಲದೆ ಉಪಕಾರಗಳನ್ನು ಮಾಡುತ್ತಾರೆ ಅದರಂತೆ ಪತ್ರಿಕೆಗಳಿಗೂ ಉಪಕಾರ ನಿರೀಕ್ಷಣೆ ಇಲ್ಲದೆ ಚಂದಾದಾರರಾಗಬೇಕೆಂದು ಪ್ರಾರ್ಥಿಸುತ್ತೇವೆ. ತಾಯಿನಾಡು ಪತ್ರಿಕೆಯು ದಿನಚರಿ ಪತ್ರಿಕೆಯಾಗಿ ನಡೆಯಬೇಕಾದರೆ ಪ್ರಜೆಗಳ ಬೆಂಬಲವು ಬೇಕು. ತಾಯಿನಾಡು ಪತ್ರಿಕೆಯನ್ನು ತಮ್ಮ ಶಿಶುವೆಂಬುದಾಗಿ ಭಾವಿಸಿ ಪೋಷಿಸಬೇಕೆಂದು ಕೋರುತ್ತೇವೆ. ಭಗವಂತನು ಎಲ್ಲರಿಗೂ ಮಂಗಳವನ್ನು ಕೊಡಲಿ!!!

——

ಬಾಂಬಿನ ಅತ್ಯಾಚಾರ.

—— ೮

ಡೆಲ್ಲಿಯ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಈ ತಿಂಗಳು 8 ನೇ ತಾರೀಖಿನ ದಿವಸ ಮಧ್ಯಾಹ್ನ ಸುಮಾರು 12-30 ಘಂಟೆ ಹೊತ್ತಿನಲ್ಲಿ ಸಭೆಯು ನಡೆಯುತ್ತಿದ್ದಾಗ್ಯೆ ಪ್ರೇಕ್ಷಕರ ಗ್ಯಾಲರಿಯಿಂದ ಎರಡು ಬಾಂಬುಗಳು ಸರ್ಕಾರೀ ಮೆಂಬರುಗಳು ಕೂಡಿರುವ ಕಡೆ ಬಿದ್ದವು ಸರ್ ಜಾರ್ಜ್‌ಶೂಸ್ಟರ್ ಎಂಬುವರಿಗೂ ಸರ್ ಬೊಮಂಜಿ ದಲಾಲ್ ಎಂಬುವರಿಗೂ ಗಾಯಗಳಾದವು. ಸರ್ಕಾರೀ ಬೆಂಚುಗಳೆಲ್ಲಾ ಪುಡಿಪುಡಿಯಾದವು ಕೂಡಲೆ ಪ್ರೇಕ್ಷಕ ಗ್ಯಾಲರೀಯಿಂದ "ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ ನೋಟೀಸ್" ಎಂಬ ಹೆಸರಿನ ಕೆಂಪು ಹಸ್ತಪತ್ರಿಕೆಗಳು ಅಸೆಂಬ್ಲಿಯಲ್ಲೆಲ್ಲಾ ಎರಚಲ್ಪಟ್ಟವು. ಅದಕ್ಕೆ ಬಲ್‌ರಾಜ್ ಎಂಬುವನ ರುಜು ಇದೆ. ಮೆಂಬರುಗಳು ಚೆಲ್ಲಾಪಿಲ್ಲಿಯಾದರು ಪೋಲೀಸಿನವರು ಕೌನ್ಸಿಲ್ ಮನೆಯ ಬಾಗಿಲುಗಳನ್ನೆಲ್ಲಾ ಹಾಕಿದರು ಪ್ರೇಕ್ಷಕರು ಹೊರಗೆ ಹೋಗದಂತೆ ತಡೆದರು ಹಾಲಿನಲ್ಲೆಲ್ಲಾ ಹೊಗೆಯು ತುಂಬಿತ್ತು. ಸರ್ ಜಾನ್ ಸೈಮನ್‌ರವರು ಬಾಂಬು ಬಿದ್ದಾಗ ಪ್ರೇಕ್ಷಕರು ಗ್ಯಾಲರಿಯಲ್ಲಿ ಕುಳಿತಿದ್ದರು. ಇಬ್ಬರು ದಸ್ತಗಿರಿ ಮಾಡಲ್ಪಟ್ಟರು ಅವರ ಹೆಸರುಗಳು ಬಟುಕೇಶ್ವರ ದತ್ತ ಬಂಗಾಳದವನು ಕಾನ್ಪೂರದಲ್ಲಿ ಎಂ.ಎ. ಇನ್ನೊಬ್ಬನ ಹೆಸರು ಭಗತ್‌ಸಿಂಗ್ ಇವನು ಪಂಜಾಬಿ ಇವರಿಬ್ಬರೂ ತಮ್ಮ ತಪ್ಪನ್ನು ಒಪ್ಪಿಕೊಂಡಿರುವರು. ಅಸೆಂಬ್ಲಿಯು ಗುರುವಾರ 11 ನೇ ತಾರೀಖಿಗೆ ಅಡ್ಜರ್ನ್ ಮಾಡಲ್ಪಟ್ಟಿತು

ಇದರ ವಿಷಯವಾಗಿ ಇನ್ನೂ ಹೆಚ್ಚಾಗಿ ತಿಳಿದು ಬಂದಿರುವ ಸಂಗತಿಗಳೇನೆಂದರೆ ಅಸೆಂಬ್ಲಿಯಲ್ಲಿ ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ ಎಂಬ ಮಸೂದೆಯು ಸರ್ಕಾರಕ್ಕೆ ಅನುಕೂಲವಾಗಿ ಪಾಸಾಯಿತು. ಕಾಂಗ್ರೆಸ್ಸಿನವರೂ, ರಾಷ್ಟ್ರೀಯ ಸಂಘದವರೂ ಸೋತರೆಂದ ಸರ್ಕಾರದ ಕಡೆ ಮೆಂಬರುಗಳು ಚಪ್ಪಾಳೆಯನ್ನು ತಟ್ಟಿದರು. ಅಧ್ಯಕ್ಷರಾದ ಪಟೇಲರು ಪಬ್ಲಿಕ್ ಸೇಫ್ಟಿ ಬಿಲ್ ಎಂಬ ಮಸೂದೆಯ ಚರ್ಚೆಯ ಕ್ರಮದ ವಿಷಯವಾಗಿ ತಮ್ಮ ನಿರ್ಣಯವನ್ನು ಕೊಡಲು ಎದ್ದರು. ತಕ್ಷಣವೇ ಪ್ರೇಕ್ಷಕರ ಗ್ಯಾಲರಿಯಿಂದ ಒಂದು ಬಾಂಬು ಬಂದ ಸರ್ ಜಾರ್ಜ್ ಶೂಸ್ಟರ್‌ರವರ ಆಸನದ ಹತ್ತಿರ ಬಿತ್ತು. ಮೆಂಬರುಗಳೆಲ್ಲರೂ ಗಾಬರಿಗೊಂಡು ಚದರಿ ಹೋದರು. ಕೌನ್ಸಿಲ್ ಮನೆಯು ಖಾಲಿಯಾಗಿದ್ದಾಗ ಎರಡನೇ ಬಾಂಬು ಎಸೆಯಲ್ಪಟ್ಟಿತು. ಯಿಬ್ಬರು ಅಪರಾಧಿಗಳೂ ಬಾಂಬನ್ನು ಎಸೆದ ಮೇಲೆ ಆಕಾಶಕ್ಕೆ ಎರಡು ಪಿಸ್ತೂಲುಗಳನ್ನು ಹಾರಿಸಿದರು. ಪಿಸ್ತೂಲುಗಳನ್ನು ತಮ್ಮ ಕುರ್ಚಿಯಮೇಲೆ ಒಗೆದು ಇಗೋ ಅಪರಾಧಿ, ನಾನು ಬಾಂಬನ್ನು ಎಸೆದವನು ನಾನು ನನ್ನ ಪಿಸ್ತೂಲನ್ನು ನೋಡಿ ಎಂದು ಒಬ್ಬನು ಕೂಗಿಕೊಂಡನು. ಯಾವ ತಂಟೆ ತಕರಾರೂ ಇಲ್ಲದೆ ಪೋಲೀಸಿನವರಿಗೆ ಅಧೀನರಾದರು. ಇವರು ಪೋಲೀಸಿನವರು ಒರುವುದಕ್ಕೆ ಮುಂಚೆಯೇ ಟಿಕೆಟ್‌ಯಿಲ್ಲದೆ ಪ್ರೇಕ್ಷಕರ ಗ್ಯಾಲರಿಯನ್ನು ಪ್ರವೇಶಿಸಿದರು ಬಾಂಬುಗಳು ಪಟಾಸುಗಳಂತೆಯಿರುವವೇ ಹೊರತು, ದೊಡ್ಡ ಸಿಡಿಮದ್ದಿನಂತೆ ಇಲ್ಲ. ಬಾಂಬು ಬೀಳುತ್ತಲೇ ಸ್ತ್ರೀಯರ ಗ್ಯಾಲರಿಯಲ್ಲಿ ಕುಳಿತಿದ್ದ ಹೆಂಗಸರು ಕಿರಿಚಿಕೊಂಡರು. ಅಪರಾಧಿಗಳಲ್ಲೊಬ್ಬನು ಹಸ್ತ ಪತ್ರಿಕೆಗಳನ್ನು ಕಳಗೆ ಯೆಸೆಯುತ್ತಾ ರಕ್ತಸಾಮ್ರಾಜ್ಯಕ್ರಾಂತಿಯು ಚಿರಾಯುವಾಗಲೀ ಯೆಂದು ಕೂಗಿಕೊಳ್ಳುತ್ತಿದ್ದನು. ಈ ಅಪರಾಧಿಗಳು 3 ನೇ ಸಾರಿ ಪಿಸ್ತೂಲನ್ನು ಹಾರಿಸಬೇಕೆಂದು ಪ್ರಯತ್ನಿಸಿದರು ಆದರೆ ಅದು ಹಾರಲಿಲ್ಲ ಪೋಲೀಸ್ ಅಧಿಕಾರಿಗಳು ಇಬ್ಬರು ಅಪರಾಧಿಗಳನ್ನು ಪರೀಕ್ಷಿಸಿದರು. ಅವರು ಕೋರ್ಟಿನ ಮುಂದೆಯೇ ವಾಂಗ್ಮೂಲಗಳನ್ನು ಹೇಳುವುದಾಗಿ ತಿಳಿಸಿದರು. ಅಪರಾಧಿಗಳಿಬ್ಬರೂ ಧೈರ್ಯದಿಂದಲೂ ಶಾಂತಿಯಿಂದಲೂ ಇದ್ದಾರೆ. ಭಗತ್ ಸಿಂಗನು ಈಗ ದೇಶದಿಂದ ಬಹಿಷ್ಕೃತನಾಗಿರುವ ಪ್ರಖ್ಯಾತನಾದ ಅಜಿತ್ ಸಿಂಗನ ಅಣ್ಣನ ಮಗ ಲಾಹೋರಿನಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ಸಾಂಡರ್ಸ್‌ನನ್ನು ಕೊಲೆ ಮಾಡಿದವನು ಇವನೇ ಯೆಂಬುದಾಗಿ ಊಹಿಸಲ್ಪಟ್ಟಿದೆ.

ಜೂಜುಕೋರರ ದಸ್ತಗಿರಿ

ಯುಗಾದೀ ಹಬ್ಬದ ದಿವಸ ರಾಜಧಾನಿಯ ಅನೇಕ ಭಾಗಗಳಲ್ಲಿ ಜೂಜಾಡುತ್ತಿದ್ದ ನೂರಾರು ಜನಗಳನ್ನು ಪೋಲೀಸಿನವರು ದಿಸ್ತಗಿರಿಮಾಡಿ ಅವರಮೇಲೆ ಮೊಕದ್ದಮೆಯನ್ನು ಹೂಡಿರುವರೆಂದು ತಿಳಿದುಬರುತ್ತದೆ.

ದೇಶಭಕ್ತರ ಆಗಮನ.

ಕರ್ಣಾಟಕ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಶ್ರೀನಿವಾಸರಾವ್ ಕೌಜಲಗಿಯವರು ಕೊಡಗಿನಲ್ಲಿ ಈ ತಿಂಗಳು ೨೧ ನೇ ತಾರೀಖಿನಲ್ಲಿ ನಡೆಯುವ ಜಮೀನ್ದಾರರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವವರು ಅಲ್ಲಿಗೆ ಹೋಗುವಾಗ ಅವರು ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಒಂದೊಂದು ದಿನವಿದ್ದು ರಾಷ್ಟ್ರೀಯ ಮಹಾ ಸಭೆಯ ಸಂದೇಶದ ವಿಷಯವಾಗಿ ಭಾಷಣಗಳನ್ನು ಮಾಡುವರು.

ಸ್ವೀಕಾರ.

ಶ್ರೀ ಸೀತಾರಾಘವ ವೈದ್ಯಶಾಲೆಯವರೂ ಸದ್ವೈದ್ಯಶಾಲೆಯವರೂ, ದಯವಿಟ್ಟು ಕಳುಹಿಸಿರುವ ಶ್ರೀ ಶುಕ್ಲ ಸಂವತ್ಸರದ ಪಂಚಾಂಗಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ

ಶ್ರೀಮನ್ಮಹಾರಾಜರವರು.

ಶ್ರೀಮನ್ಮಹಾರಾಜರವರು ಈದಿನ ರಾಜಧಾನಿಯಿಂದ ಮೋಟಾರಿನಲ್ಲಿ ನೀಲಗಿರಿಗೆ ಪ್ರಯಾಣ ಮಾಡುವರೆಂದು ತಿಳಿದು ಬಂದಿದೆ.

ಸೂರ್ಯನಮಸ್ಕಾರ.

ಮೈಸೂರು ವಿದ್ಯಾ ಇಲಾಖೆಯವರು ವಿದ್ಯಾರ್ಥಿಗಳಿಗೆಲ್ಲಾ ಸೂರ್ಯನಮಸ್ಕಾರದ ಅಭ್ಯಾಸವನ್ನು ಮಾಡಿಸಬೇಕೆಂದು ಯೋಚಿಸಿರುವರು.

ಶ್ರೀಯುವರಾಜರವರು

ಶಿವ ಯುವರಾಜರವರು ಕಳೆದ ವಾರ ನೀಲಗಿರಿಯಿಂದ ನೆಟ್ಟಗೆ ಬೊಂಬಾಯಿಗೆ ಪ್ರಯಾಣಮಾಡಿದರೆಂದು ತಿಳಿದು ಬಂದಿದೆ.

ತಾಯಿನಾಡು.

12—4—1929

ರಾಜಪಾಲನ ಕೊಲೆ.

ರಂಗೀಲಾ ರಸೂಲ್ ಎಂಬ ಗ್ರಂಥದ ಕರ್ತನೂ ಪ್ರಸಿದ್ಧ ಆರ್ಯಸಮಾಜ ಕೆಲಸಗಾರನೂ ಆದ ಮಹಾಶ್ಯ ರಾಜಪಾಲ್ ಎಂಬುವನನ್ನು ಲಾಹೋರಿನಲ್ಲಿ ಅವನ ಅಂಗಡಿಯಲ್ಲಿ ಒಬ್ಬ ಮಹಮದೀಯ ಯುವಕನು ಏಪ್ರಿಲ್ 6 ನೇ ತಾರೀಖು ಮಧ್ಯಾಹ್ನ ಕೊಲೆಮಾಡಿದನು. ಮಧ್ಯಾಹ್ನ 2-30 ಗಂಟೆ ಹೊತ್ತಿನಲ್ಲಿ ರಾಜಪಾಲನು ತನ್ನ ಅಂಗಡಿಯಲ್ಲಿ ಕುಳಿತಿದ್ದನು. ಒಬ್ಬ ಉದ್ದನಾದ ಸುಂದರನಾದ ಮಹಮದೀಯ ಯುವಕನು ಅಂಗಡಿಯನ್ನು ಶಾಂತವಾಗಿ ಪ್ರವೇಶಿಸಿ ಬಂದು ಅಂಗಯದ ಅಲಗು ಇರುವ ಒಂದು ಚಾಕುವಿನಿಂದ ರಾಜಪಾಲನ ಎದೆಯನ್ನು ತಿವಿದನು. ರಾಜಪಾಲನು ಆತ್ಮಸಂರಕ್ಷಣೆಗಾಗಿ ಸ್ವಲ್ಪ ಹೆಣಗಾಡಿದನು, ಕೈಮೇಲೆ ಸ್ವಲ್ಪ ಏಟುಬಿತ್ತು. ಅಲಗು ಅವನ ಹೃದಯವನ್ನು ಮುಟ್ಟಿರಬಹುದು ಕೂಡಲೇ ಅವನು ಮರಣ ಹೊಂದಿದನು ಕೊಲೆಪಾತಕನು ಕೊಲೆಯನ್ನು ನಡೆಸಿ ಅಂಗಡಿಯಿಂದ ಹೊರಗೆ ನುಗ್ಗಿದನು ಹೊರಗೆ ಬರುವಾಗ್ಗೆ ಅವಸರದಲ್ಲಿ ಕೆಲವು ಪುಸ್ತಕಗಳನ್ನು ಬೀದಿಗೆ ಒದ್ದನು. ರಾಜಪಾಲನ ಅಂಗಡಿಯ ಉಪ್ಪರಿಗೆಮೇಲೆ ವಾಸಮಾಡುತ್ತಿದ್ದ ದಿವಾನ್ ವಜೀರ್‌ಚಂದ್ ಒಬೋಪ್ರ ಎಂಬುವನು ಓಡಿಹೋಗುತ್ತಿದ್ದ ಈ ಮಹಮದೀಯ ಯುವಕನ ಹಿಂದೆ ಓಡಿದನು ಕೊಲೆಯಾಗಿದೆಯೆಂದು ಗೊತ್ತಾಯಿತು. ಕೊಲೆಪಾತಕನು ಅಲ್ಲಿಂದ ಟಿಂಬರ್ ಯಾರ್ಡಿಗೆ ಓಡಿದನು. ಅಲ್ಲಿಂದ ಹೊರಗೆ ಓಡಲು ಅವಕಾಶವಾಗಲಿಲ್ಲ ಅವನು ಹಿಡಿಯಲ್ಪಟ್ಟನು. ಪೋಲೀಸಿನವರು ಬರುವುದಕ್ಕೆ ಮೊದಲೇ ಈ ಕೊಲೆಪಾತಕನು "ಓ ಮಹಮದೀಯ ಸಹೋದರರೇ ನನ್ನ ರಸೂಲಿನ ಪರವಾಗಿ ನಾನು ದ್ವೇಷವನ್ನು ಸಾಧಿಸಿಕೊಂಡೆ" ಎಂಬದಾಗಿ ಹೇಳಿಕೊಂಡು ಕುಣಿದಾಡಿದನು. ಈ ಅಪರಾಧಿಯು ಲಾಹೋರಿನವನೆಂದೂ; ಸೌದೆ ಒಡೆಯುವವನೆಂದೂ ತಿಳಿದುಬರುತ್ತದೆ ರಾಜಪಾಲನ ಹೆಣವನ್ನು ಮೆರವಣಿಗೆ ಒಡನೆ ತೆಗೆದುಕೊಂಡು ಹೋಗಬೇಕೆಂದು ಹಿಂದುಗಳು ಪ್ರಯತ್ನಿಸಿದರು. ಆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು 144 ನೇ ಕಲಮನ್ನು ಅನುಸರಿಸಿ ಮೆರವಣಿಗೆಯನ್ನು ಆತಂಕಪಡಿಸಿದರು. ಹಿಂದೂಗಳಿಗೂ ಪೋಲೀಸಿನವರಿಗೂ ಕದನಗಳಾದವು. ಬಹಳ ಜನಗಳಿಗೆ ಗಾಯಗಳಾಯಿತು ರಾಜಪಾಲನ ಹೆಣವನ್ನು ತೆಗೆದುಕೊಂಡು ಹೋಗಬೇಕೆಂದು ಕಟ್ಟಿದ್ದ ಚಟ್ಟವನ್ನು ಪೋಲೀಸಿನವರು ಲಾಠಿಗಳಿಂದ ಮುರಿದುಹಾಕಿದರು. ಹಿಂದೂಗಳು ರಸ್ತೆಯಲ್ಲೇ ಕುಳಿತರು ಹಿಂದೂಗಳೆಲ್ಲಾ ಬಹಳ ಅಸಮಾಧಾನಪಟ್ಟರು ಕಡೆಗೆ 8 ನೇ ತಾರೀಖಿನ ದಿವಸ ಸರ್ಕಾರದವರಿಗೂ ಆರ್ಯಸಮಾಜದವರಿಗೂ ಸಮಾಧಾನವಾಗಿ ಹೆಣವು ಮೆರವಣಿಗೆಯೊಡನೆ ಸ್ಮಶಾನಕ್ಕೆ ಒಯ್ಯಲ್ಪಟ್ಟಿತು. ಸುಮಾರು 25 ಸಾವಿರ ಜನರು ಮೆರವಣಿಗೆಯಲ್ಲಿ ಭಾಗವನ್ನು ತೆಗೆದುಕೊಂಡರು ಮಹಮದೀಯ ಮುಖಂಡರೆಲ್ಲರೂ ಆ ಕೊಲೆಪಾತಕನ ವರ್ತನವನ್ನು ಖಂಡಿಸಿರುವರು ಕೊಲೆಪಾತಕನು ಪೋಲೀಸಿನವರ ಅಧೀನದಲ್ಲಿರುವನು.

ರಕ್ತ ರಾಜ್ಯ ಕ್ರಾಂತಿಯ ಹಸ್ತಪತ್ರಿಕೆ.

ಬಾಂಬು ಬಿದ್ದ ದಿವಸ ಅಸೆಂಬ್ಲಿಯಲ್ಲಿ ಹರಡಲ್ಪಟ್ಟ ರಕ್ತ ರಾಜ್ಯಕ್ರಾಂತಿಯ ಹಸ್ತಪತ್ರಿಕೆಯಲ್ಲಿ ಬರೆಯಲ್ಪಟ್ಟದ್ದು ವಿಷಯವೇನೆಂದರೆ "ಕಿವುಡರಿಗೆ ಕೇಳಿಸುವಂತೆ ಮಾಡಬೇಕಾದರೆ ದೊಡ್ಡ ಧ್ವನಿಯು ಬೇಕು. ಅಮರ್ತ್ಯನಾದ ಈ ಮಾತುಗಳನ್ನು ಫ್ರಾನ್ಸ್ ರಾಜ್ಯಕ್ರಾಂತಿ ಕಾರಕನಾದ ವೈಲ್ಯಾಂಟ್ ಎಂಬುವನು ಇಂಥಹ ಸಂದರ್ಭದಲ್ಲಿಯೆ ಹೇಳಿದನು ಅವನನ್ನೇ ನಾವು ಪ್ರಮಾಣವಾಗಿಟ್ಟುಕೊಂಡು ನಮ್ಮ ಕೃತ್ಯವನ್ನು ನ್ಯಾಯವೆಂದು ಹೇಳುವೆವು. ಹಿಂದಿನ ಹತ್ತು ವರ್ಷಗಳಿಂದಲೂ ಈ ಹೊಸ ಸುಧಾರಣೆಗಳು ಬಂದ ಮೇಲೆ ನಮ್ಮ ದೇಶಕ್ಕೆ ಅನೇಕ ಅಪಮಾನಗಳುಂಟಾಗಿರುವುವು ಈ ಲೆಜಿಸ್ಲೇಟೀವ್ ಅಸೆಂಬ್ಲಿ ಸಭೆಯ ಮುಖಾಂತರ ನಮ್ಮ ಜನಾಂಗವು ಬಹಳವಾಗಿ ತಿರಸ್ಕರಿಸಲ್ಪಟ್ಟಿರುವುದು. ಕೆಲವು ಜನರು ಸೈಮನ್ ಕಮೀಷನ್ನಿನ ಮುಖಾಂತರ ಸುಧಾರಣೆ ಎಂಜಲು ರೊಟ್ಟಿಗಳ ಚೂರು ಸಿಕ್ಕುವುದೆಂದು ಕುತೂಹಲಪಡುತ್ತಿದ್ದಾರೆ ಈ ಮೂಳೆಗಳ ಚೂರುಗಳಿಗೋಸ್ಕರ ನಾಯಿಗಳಂತೆ ಕಾದಾಡಲಾರಂಭಿಸಿದ್ದಾರೆ ಜನಗಳು ಹೀಗಿರುವಾಗ್ಯೆ ಸರ್ಕಾರದವರು ತಮ್ಮ ದಬ್ಬಾಳಿಕೆಯ ಶಸ್ತ್ರಗಳನ್ನು ಜಳಪಿಸಿ ಪ್ರಯೋಗಿಸುತ್ತಿದ್ದಾರೆ. ಪಬ್ಲಿಕ್ ಸೇಫ್ಟಿ ಬಿಲ್ ಮಸೂದೆ ಟ್ರೇಡ್ ಡಿಸ್ಪ್ಯೂಟ್ ಮಸೂದೆ ಎಂಬ ದಬ್ಬಾಳಿಕೆಯ ಮಸೂದೆಗಳನ್ನು ಜಾರಿಗೆ ತರುವವರಾಗಿದ್ದಾರೆ. ಅಸೆಂಬ್ಲಿಯ ಮುಂದಿನ ಅಧಿವೇಶನದಲ್ಲಿ ವರ್ತಮಾನ ಪತ್ರಿಕೆಗಳ ರಾಜದ್ರೋಹದ ಮಸೂದೆಯೊಂದನ್ನು ತರುವವರಾಗಿದ್ದಾರೆ. ಬಹಿರಂಗವಾಗಿ ಕೆಲಸಮಾಡುತ್ತಲಿದ್ದ ಕೂಲಿಗಾರರ ಮುಖಂಡರನ್ನು ವಿಚಾರ ವಿಮರ್ಶೆಗಳಿಲ್ಲದೆ ದಸ್ತಗಿರಿ ಮಾಡುವುದು ಗಾಳಿಯು ಯಾವ ಕಡೆ ಬೀಸುತ್ತದೆ ಎಂಬುದನ್ನು ತೋರಿಸುತ್ತದೆ ಇಂತಹ ಉದ್ವೇಗಕರವಾದ ಪರಿಸ್ಥಿತಿಯಲ್ಲಿ ಹಿಂದೂಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಸಂಘವು ಚೆನ್ನಾಗಿ ವಿಮರ್ಶೆಮಾಡಿ ತನ್ನ ಪೂರ್ತಿಯಾದ ಜವಾಬ್ದಾರಿಯನ್ನರಿತು ನಮಗೆ ಈಗ ಕೆಲಸವನ್ನು ಮಾಡಲು ಆಜ್ಞಾಪಿಸಿರುತ್ತಾರೆ. ನಮ್ಮ ಜನಾಂಗಕ್ಕೆ ಆಗುತ್ತಿರುವ ಅವಮಾನಗಳನ್ನು ನಿಲ್ಲಿಸಬೇಕೆಂಬುದೇ ನಮ್ಮ ಕೃತ್ಯದ ಉದ್ದೇಶ ಪರದೇಶೀ ನೌಕರ್ ಷಾಹೀ ಸೂರೆಗಾರರು ಅವರಿಗೆ ತೋಚಿದಂತೆ ಮಾಡಲಿ ಅವರ ನಿಜವಾದ ಸ್ವಭಾವವು ಮುಚ್ಚುಮರೆಯಿಲ್ಲದೆ ಜನಗಳ ಮುಂದೆ ನಿಲ್ಲಲಿ ಪ್ರಜೆಗಳ ಪ್ರತಿನಿಧಿಗಳು ತಮ್ಮ ತಮ್ಮ ಓಟರುಗಳ ಹತ್ತಿರ ಹೋಗಿ ಮುಂದೆಬರುವ ರಾಜ್ಯಕ್ರಾಂತಿಯ ವಿಷಯವನ್ನು ಸಮಸ್ತ ಜನರಿಗೂ ಬೋಧಿಸುವಂತೆ ಮಾಡಲಿ. ಪಬ್ಲಿಕ್ ಸೇಫ್ಟೀ ಬಿಲ ಮಸೂದೆಗೂ ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ ಮಸೂದೆಗೂ ಲಜಪತ್‌ರಾಯರ ಕೊಲೆಗೂ ನಾವು ವಿರೋಧವನ್ನು ಪ್ರದರ್ಶಿಸಿದೆವೆಂದು ಸರ್ಕಾರವು ತಿಳಿಯಲಿ ನಿಸ್ಸಹಾಯರಾದ ಭಾರತೀಯರ ಪ್ರಜಾಕೋಟಿಯು ಪರವಾಗಿ ಸರಕಾರದವರಿಗೆ ಒಂದು ಇತಿಹಾಸದ ತತ್ವವನ್ನು ತಿಳಿಸುತ್ತೇವೆ. ವ್ಯಕ್ತಿಗಳನ್ನು ಕೊಲ್ಲಿಸಬಹುದು ಆದರೆ ಅಭಿಪ್ರಾಯಗಳನ್ನು ಕೊಲ್ಲುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ಚಕ್ರಾಧಿಪತ್ಯಗಳು ಮಣ್ಣುಪಾಲಾದರೂ ಅಭಿಪ್ರಾಯಗಳು ಮಾತ್ರ ಉಳಿದಿರುವುವು. ಬೋರ್ಬನರೂ ಜಾರುಗಳೂ ನಿರ್ನಾಮರಾದರು ರಾಜ್ಯಕ್ರಾಂತಿಗಳು ಮಾತ್ರ ಅಟ್ಟಹಾಸದಿಂದ ಮುಂದುವರಿಯುತ್ತಲಿವೆ. ನಮಗೆ ಮನುಷ್ಯನ ಜೀವವು ಪವಿತ್ರವೆಂದು ಗೊತ್ತುಂಟು. ನಾವು ವೈಭವದಿಂದ ಕೂಡಿದ ಭವಿಷ್ಯದ ಕನಸನ್ನು ನೋಡುತ್ತಿದ್ದೇವೆ

ವರ್ತಮಾನ ಸಂಗ್ರಹ.

ಕಾಲರಾ

ಬೆನಾರಿಸ್‌ನಲ್ಲಿ ಕಾಲರಾ ಉಪದ್ರವವು [illegible]ರುತ್ತದೆ.

ಆಲಿಕಲ್ಲು ಮಳೆ

ವೀರತಿನಲ್ಲಿ ಈ ತಿಂಗಳು 5 ನೇ ತಾ॥ ರಾತ್ರಿ ಬಿದ್ದ ಭಾರಿ ಆಲಿಕಲ್ಲು ಮಳೆಯಿಂ [illegible]

6 ಲಕ್ಷ ರೂಗಳ ದೇವಸ್ಥಾನ

ಬೊಂಬಾಯಿಯಲ್ಲಿ [illegible] ಅಂಥ, ಶ್ರೀಮಂತರೊಬ್ಬರು [illegible] ನಲ್ಲಿ ಶ್ರೀ [illegible] ಕಟ್ಟಲು ಎರಡು ಲಕ್ಷವನ್ನೂ ದೇವಸ್ಥಾನವನ್ನು ನಡಿಸಲ ಟ್ರಸ್ಟ್ ಫಂಡಿಗಾಗಿ [illegible] ದಾನಮಾಡಿರುವರು. [illegible] 11 ನೇ ತಾ [illegible]

ಶ್ರೀರಾಮ ಸೇವಾಸಂಘ.

ರಾಜಧಾನಿಯ ದೇವೀರಮ್ಮಣ್ಣಿಯವರ ಅಗ್ರಹಾರದ ಶ್ರೀ ಗಣಪತಿ ದೇವಸ್ಥಾನದಲ್ಲಿ [illegible] ಶ್ರೀರಾಮಸೇವಾಸಂಘದಿಂದ ಶ್ರೀರಾಮ [illegible] ಮಹೋತ್ಸವವು (1-4-[illegible]) [illegible] ಆಸ್ತಿಕ [illegible] ತನುಮನಧನ ಸಹಾಯಮಾಡಿ ಶ್ರೀರಾಮಸೇವೆಯನ್ನು ನಡಿಸಿ [illegible] ಗಿಗಳಾಗಬೇಕೆಂದು ಸದರಿ ಸಂಘದವರು ಪ್ರಾರ್ಥಿಸುತ್ತಾರೆ.

ಯಾರಿಗೂ ಬೇಡ ಈ ಅವಸ್ಥೆ.

ಜರ್ಮನಿಯ ಕೈಸರನ ತಂಗಿ ವಿಕ್ಟೋರಿಯು [illegible] 68 ವರ್ಷದ ಮುದುಕಿ 28 ವರ್ಷದವನೊಬ್ಬನನ್ನು ಎರಡು ವರ್ಷಗಳ ಹಿಂದೆ [illegible] ಹಣವೆಲ್ಲಾ ವೆಚ್ಚವಾಯಿತು. ಈಗ ಇವಳು ದಿವಾಳಿಯಾಗಿರುವಳು. ಕೋರ್ಟಿನಲ್ಲಿ [illegible] ವಾಗಿದೆ.

ಮನುಷ್ಯನು ಸಂಪೂರ್ಣವಾದ ಶಾಂತಿಯನ್ನೂ [illegible] ಯಾದ ಸ್ವಾತಂತ್ರ್ಯವನ್ನು [illegible] ದೆಂಬ ಆಶೆಯು ನಮಗೆ [illegible] ಗಿ ಮನುಷ್ಯರ ರಕ್ತವನ್ನು ಈಗ ಚೆಲ್ಲಬೇಕಾಗಿದೆ. ಆದರೆ [illegible] ಅವಶ್ಯಕ. ಮನುಷ್ಯರು ಮನುಷ್ಯರನ್ನು [illegible] ರಾಜ್ಯಕ್ರಾಂತಿ [illegible] ನಡೆ ಅನೇಕ ವ್ಯಕ್ತಿಗಳ [illegible] ಬೇಕು [illegible]

ರಾಜು

Printed and published by P. R. Ramiaya at [illegible] Rama Press [illegible] Subbiah Road, Mysore.

Regd. No. M. 2322

|| ವಂದೇ ಮಾತರಂ ||

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ. ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { [illegible]
ಚಂದಾ { [illegible]

ಸಂಪುಟ ೧] ಶನಿವಾರ ೧೩ ಏಪ್ರೆಲ್ ೧೯೨೯ [ಸಂಚಿಕೆ ೧೩೦

ಆಡುವ ಸಭೆಯೊಂದರಲ್ಲಿ ವಿದೇಶೀ ವಸ್ತ್ರದಹನ.

ತಾಯಿನಾಡು.

13—4—1929

BAN ON BONFIRE.

We have published in another column the Municipal President's Notice baning the bonfire of foreign cloth in the Subbarayanakere maidan. We cannot congratulate the president on the ingenuity he has displayed in calling to aid section 48 (w) of the Mysore City Municipal Regulation to prevent a National Demonstration. However far one can stretch his imagination it is hard to conside: that the bonfire is a nuisance and it indeed requires the vision of a Don Quixote to say that there would be danger to life and property if a bonfire should be lighted in a pit of dreary waste full of thorns and pebbles with not even a trace of vegetation. To call it a park is by itself the height of a comic joke. We pity the Municipal President on his becoming a helpless victim in the hands of invisible exploiters. We know that the president has not acted as a free agent in the matter. In the face of such a dependent position how can we say that there is Swaraj in Mysore.? We have not even its shadow. Under such circumstances it is up to the champions of the people's liberties in Mysore to assert their rights by all constitutional means.

—

ಜಾಂಬಿನ ಅತ್ಯಾಚಾರ ಖಂಡನೆ.

ಡೆಲ್ಲಿಯ ಲೆಜಸ್ಲೆಟಿವ ಅಸೆಂಬ್ಲಿಯಲ್ಲಿ ಅಧ್ಯಕ್ಷರಾದ ಪಟೇಲರವರು ಅಸೆಂಬ್ಲಿಯಲ್ಲಿ ಖಂಡನೆಯ ಒಂದು ಠರಾವನ್ನು ತರುವರು. ಪಂಡಿತ ಮೋತೀಲಾಲ್ ನೇಹರೂ ರವರು, ಈ ಅತ್ಯಾಚಾರವನ್ನು ಖಂಡಿಸಿರುವುದಲ್ಲದೆ, ಸರ್ಕಾರದವರು ದಬ್ಬಾಳಿಕೆಯ ನೀತಿಯನ್ನು ಉಪಯೋಗಿಸಿ ಅಪರಾಧಿಗಳಾದ ವರನ್ನು ಹಿಂಸಿಸಕೂಡದೆಂದು ಸಲಹೆಯನ್ನು ಕೊಟ್ಟಿದ್ದಾರೆ

ಮಹಾತ್ಮಾ ಗಾಂಧಿಯವರು.

ಮಹಾತ್ಮಾ ಗಾಂಧಿಯವರು ಹೈದರಾಬಾದಿನಲ್ಲಿ ಸಂಚಾರ ನಡೆಸಿದರು ಅಲ್ಲಿ ಅವರಿಗೆ ಅಭೂತಪೂರ್ವವಾದ ಮರ್ಯಾದೆಯು ನಡೆಯಿತು ಖಾದಿನಿಧಿಗೆ ಬೇಕಾದಷ್ಟು ದ್ರವ್ಯವೂ ಸೇರಿತು.

ಬೆಂಗಳೂರು ಕೂಲಿಯಾಳುಗಳು.

ಬೆಂಗಳೂರು ಕೂಲಿಯಾಳುಗಳ ಸಭೆಯು ನಡೆದು 25 ಮೆಂಬರುಗಳುಳ್ಳ ಒಂದು ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಯು ಕೂಲಿಗಾರರಿಗೂ ಮಾಲೀಕರಿಗೂ ಇರುವ ತಂಟೆತಕರಾರುಗಳನ್ನು ಫೈಸಲು ಮಾಡಬೇಕೆಂದು ತೀರ್ಮಾನವಾಯಿತು.

OFFICE OF THE PRESIDENT,
CITY MUNICIPAL COUNCIL MYSORE
Dated 11th April 1929.

To
(Sixteen Persons.)

Whereas credible information has been received that you are making arrangements for a bonfire in the Subbarayanakere (Amble Anniah Pandit's Park) which is a Municipal Park and such bonfire would be a nuisance to the neighbourhood and to persons using the park and also likely to be dangerous to the life and property of persons using the Park you are hereby directed under section 48 (w) of the Mysore Municipal Regulation to desist from carrying out your intention to use the park as a place of bonfire.

T. G. RAMA IYER,
President.

—

ಮೈಸೂರು ಮ್ಯುನಿಸಿಪಲ್ ಕೌನ್ಸಿಲ್,
ಅಧ್ಯಕ್ಷರವರ ಆಫೀಸಿನಿಂದ
11—4—1929.

ಮ್ಯುನಿಸಿಪಲ್ ಪಾರ್ಕಾದ ಸುಬ್ಬರಾಯನ ಕೆರೆ ಪಾರ್ಕಿನಲ್ಲಿ (ಅಂಬ್ಳೆಅಣ್ಣಯ್ಯ ಪಂಡಿತರ ಪಾರ್ಕಿನಲ್ಲಿ) ನೀವು ಒಂದು ದಹನವನ್ನು ಮಾಡುವುದಕ್ಕಾಗಿ ಏರ್ಪಾಡುಗಳನ್ನು ಮಾಡುತ್ತಿರುವುದಾಗಿ ನಂಬತಕ್ಕ ಸಮಾಚಾರವು ತಿಳಿದುಬಂದಿರುವುದರಿಂದಲೂ ಇಂಥ ದಹನವು ಅಕ್ಕಪಕ್ಕದಲ್ಲಿರತಕ್ಕಂಥವರಿಗೂ ಮತ್ತು ಪಾರ್ಕನ್ನು ಉಪಯೋಗಿಸುವವರಿಗೂ ಅಸಹ್ಯಕರವಾಗಿರುವುದರಿಂದಲೂ ಮತ್ತು ಪಾರ್ಕನ್ನು ಉಪಯೋಗಿಸುವವರ ಪ್ರಾಣಕ್ಕೂ ಅವರ ಆಸ್ತಿಪಾಸ್ತಿಗಳಿಗೂ ಅಪಾಯಕರವಾಗುವ ಸಂಭವವಿರುವುದರಿಂದಲೂ ಸದರಿ ಪಾರ್ಕನ್ನು ದಹನದ ಸ್ಥಳವಾಗಿ ಉಪಯೋಗಿಸಬೇಕೆಂದಿರುವ ನಿಮ್ಮ ಉದ್ದೇಶವನ್ನು ನಿಲ್ಲಿಸಬೇಕೆಂದು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಿನ 48 (w) ಸೆಕ್ಷನ್ ಪ್ರಕಾರ ಈ ಮೂಲಕ ಸೂಚಿಸಿರುತ್ತೇನೆ.

ಟಿ ಜಿ ರಾಮ ಅಯ್ಯರ್,
ಅಧ್ಯಕ್ಷ.

ಮಾತಾಡುವ ಸಿನಿಮಾಗಳು.

ಅಮೇರಿಕಾದಲ್ಲಿ ಮಾತಾಡುವ ಸಿನಿಮಾಗಳು ಪ್ರಚಾರದಲ್ಲಿ ಬರುತ್ತಿವೆ.

ರಾಷ್ಟ್ರೀಯ ಬಾವುಟ.

ಬೆಂಗಳೂರಿನ ಪ್ರಸಿದ್ಧ ಅಡ್ವೋಕೇಟರಾದ ಮ॥ ರಾ॥ ಎಸ್. ಎಸ್. ಶೆಟ್ಲೂರ್‌ರವರ ಮನೆಯಮೇಲೆ ರಾಷ್ಟ್ರೀಯ ಬಾವುಟವನ್ನು ಹಾರಿಸಿರುವರು.

ರಾಜ್ಯಕ್ರಾಂತಿ

ಮೆಕ್ಸಿಕೋವಿನಲ್ಲಿ ಭಯಂಕರವಾದ ರಾಜ್ಯಕ್ರಾಂತಿಯು ನಡೆಯುತ್ತಿರುವುದು ರಕ್ತದ ಕಾಲುವೆಗಳು ಹರಿಯುತ್ತಿರುವುವು.

ವರ್ತಮಾನ ಸಂಗ್ರಹ

ಡಿನ್ನರ್ ಪಾರ್ಟಿ

ಈ ತಿಂಗಳು 8 ನೇ ತಾ॥ ನ ರಾತ್ರಿ, ನೈಜಾಮರವರು ಬೆಂಗಳೂರಿನಲ್ಲಿ ಡಿನ್ನರ್ ಪಾರ್ಟಿಯನ್ನೇರ್ಪಡಿಸಿದ್ದರು. ಈ ಪಾರ್ಟಿಗಳಿಗೆ ಮಿ॥ ಗಳಾದ ವ್ಯಾಘನ್ ಚಾಂಡಿ ಮೊದಲಾದವರೂ ನಮ್ಮ ದಿವಾನ್ ಸಾಹೇಬರವರೇ ಮೊದಲಾಗಿ ಅನೇಕ ಜನ ದೊಡ್ಡ ಮನುಷ್ಯರೂ ಮಹಿಳೆಯರೂ ದಯಮಾಡಿಸಿದ್ದರು ಈ ಸಮಯದಲ್ಲಿ ನಮ್ಮ ದಿವಾನ ಸಾಹೇಬರು ಒಂದು ಭಾಷಣವನ್ನು ಮಾಡಿ ನೈಜಾಮರವರು ಪುನಃ ಮೈಸೂರಿಗೆ ದಯಮಾಡಿಸಿ ನೋಡಬೇಕಾದ ಸ್ಥಳಗಳನ್ನೆಲ್ಲಾ ನೋಡುವರೆಂದು ತಿಳಿಸಿದರು ನೈಜಾಮರವರು ನಮ್ಮ ಶ್ರೀಮನ್ಮಹಾರಾಜರವರನ್ನು ಅವರ ಸತ್ಕಾರಗಳಿಗಾಗಿ ವಂದಿಸಿದರು ಈ ಸಂದರ್ಭದಲ್ಲಿ ವಿಚಿತ್ರ ಸ್ವಾಗತ (Wonderful welcome) ಎಂಬ ಪದಪ್ರಯೋಗವನ್ನು ಮದರಾಸ್ ಮೈಲ್ ಪತ್ರಿಕಾ ಕರ್ತರು ಮಾಡಿರುವರು. ಅದರ ಅರ್ಥವಾದರೂ ಏನೋ ಗೊತ್ತಾಗಿರುವುದಿಲ್ಲ

ಈ ತಿಂಗಳು 8 ತಾ॥ ನಲ್ಲಿ ಬೆಂಗಳೂರು ಮೇಯೋ ಹಾಲಿನಲ್ಲಿ ಮಿ॥ ಸಿ. ಎಸ್. ಬಾಲಸುಂದರಂ ಅಯ್ಯರವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನಡೆದು ಮೃಗ ಪ್ರಾಣಿಗಳಿಗೆ ಉಂಟಾಗುತ್ತಿರುವ ಕಷ್ಟಗಳನ್ನು ಕಡಿಮೆ ಮಾಡತಕ್ಕ ವಿಚಾರವು ಪರ್ಯಾಲೋಚಿಸಲ್ಪಟ್ಟು ಸೂಕ್ತವಾದ ಠರಾವುಗಳು ಮಾಡಲ್ಪಟ್ಟವು ಸಭೆಗೆ ಅನೇಕ ಜನ ಯೂರೋಪಿಯನ್‌ರೂ ಬಂದಿದ್ದು ಸಭೆಯವರ ಕಾರ್ಯಕ್ರಮದಲ್ಲಿ ವಿಶೇಷ ಉತ್ಸಾಹವನ್ನು ಪ್ರದರ್ಶಿಸಿದರು.

ಬೆಂಗಳೂರಿನ ಮಿನರ್ವಾ ಮಿಲ್ಲಿನ ಕೆಲಸಗಾರರ ಪೈಕಿ ಸುಮಾರು 500 ಜನಗಳು ಕೆಲಸಕ್ಕೆ ಹೋಗಿರುವರು ಉಳಿದವರೆಲ್ಲರೂ ಭಾನುವಾರವನ್ನು ರಜಾ ದಿನವೆಂತ ಭಾವಿಸುವಂತೆ ಏರ್ಪಾಡು ನಡೆದಲ್ಲದೆ ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಮಾಡುತ್ತಲೇ ಇರುವರು ಈ ಸಂಬಂಧವಾಗಿ ಟಿಕ್ಸ್ ಟೈಲ್ ಲೇಬರ್ ಯೂನಿಯನ್ನಿನವರು ಒಂದು ಸಭೆಯನ್ನೇರ್ಪಡಿಸಿ ಭಾನುವಾರ ರಜಾ ದಿನವಂತೆ ಭಾವಿಸ ತಕ್ಕ ಬಗ್ಗೆ ಕೂಲಿ ಯಜಮಾನರ ಜೊತೆಯಲ್ಲಿ ಚರ್ಚೆ ನಡಿಸಬೇಕೆಂತ ತೀರ್ಮಾನಿಸಲ್ಪಟ್ಟಿತು. ಈ ಸಭೆಗೆ ಅನೇಕ ಜನ ಕೂಲಿಕಾರರೂ ಮಿ॥ ಗಳಾದ ರಾಮಚಂದ್ರರಾವ್ ಸಿಂಧ್ಯ ಮತ್ತು ಕೆ. ಹೆಚ್ ರಾಮಯ್ಯನವರು ಇವರುಗಳು ಬಂದಿದ್ದರು

ಈಗ್ಗೆ ಸುಮಾರು 3—4 ದಿನಗಳ ಹಿಂದೆ ಬೆಂಗಳೂರು ಟೈಮ್ಸ್ ಪತ್ರಿಕೆಯ ಆಫೀಸಿಗೆ ಗಾಯ ಹೊರಿದ ರಕ್ತಸುರಿಯುತ್ತಿದ್ದ ಒಬ್ಬ ಕೂಲಿಕಾರನನ್ನು ಅವನ ಸ್ನೇಹಿತರುಗಳು ಕರೆತಂದರೆಂತಲೂ ಅವನು ಮುಷ್ಕರ ಹಿಡಿದಿದ್ದ ಕೂಲಿಕಾರರ ಜೊತೆಯಲ್ಲಿ ಸೇರಿದ್ದನೆಂಬುದಾಗಿ ಪೋಲೀಸಿನವರು ಅವನನ್ನು ಹೊಡೆದದ್ದರಿಂದ ಗಾಯವಾಯಿತೆಂತಲೂ ಪ್ರಕಟವಾಗಿದೆ.

ಸಂರಕ್ಷಣೆ ಫಂಡು.

ಮೀರತಿನಲ್ಲಿ ರಾಜದ್ರೋಹಕ್ಕಾಗಿ ವಿಚಾರಣೆ ಮಾಡಲ್ಪಡುತ್ತಿರುವ ಅಪರಾಧಿಗಳ ಪಕ್ಷವನ್ನು ವಾದಿಸಿ ಅವರಿಗೆ ಸಂರಕ್ಷಣೆ ಕೊಡುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಸೇರಿಸಬೇಕಾಗಿ ಪಂಡಿತ್ ಮೋತೀಲಾಲ್ ನೆಹರೂರವರೂ, ಮಾಲವೀಯರವರೂ ಮೊದಲಾದವರು ಒಂದು ಅಪೀಲನ್ನು ಹೊರಡಿಸಿರುತ್ತಾರೆ.

Regd. No M. 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ-
ಪಿ ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ { [illegible]

ಸಂಪುಟ ೧] ಸೋಮವಾರ ೧೫ ಏಪ್ರೆಲ್ ೧೯೨೯ [ಸಂಚಿಕೆ [illegible]

TAI NADU
15—4—1929

ಸ್ಪಷ್ಟಭಾಷಣ

ಕೋಲಾರದ ಲಾಯರುಗಳ ಸಮ್ಮೇಳನ ಒಂದರಲ್ಲಿ ಅಧ್ಯಕ್ಷರಾದ ಮ|| ರಾ|| ಸಿ. ನರಸಿಂಹಯ್ಯನವರೂ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮ|| ರಾ|| ಗೋಪಾಲರಾಯರವರೂ ನಮ್ಮ ಸಂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಬಹಳ ಸ್ಪಷ್ಟವಾಗಿ ಭಾಷಣಗಳನ್ನು ಮಾಡಿದರು. ಲಾಯರುಗಳ ಸಮ್ಮೇಳನದಲ್ಲಿ ಇಷ್ಟು ಸ್ಪಷ್ಟೋಕ್ತಿಯು ಬಂದುದು ಇದೇ ಮೊದಲನೆಯ ಸಾರಿ. ಮ|| ರಾ|| ನರಸಿಂಹಯ್ಯನವರು ರಾಜಕೀಯ ಚಳುವಳಿಯ ಸ್ವರೂಪವನ್ನು ಕೂಲಂಕುಷವಾಗಿ ವಿಮರ್ಶಿಸಿ ದಂಗೆ ಏಳುವುದಕ್ಕೆ ಕೂಡ ಪ್ರಜೆಗಳಿಗೆ ಹಕ್ಕಿದೆ ಎಂಬುದನ್ನು ಸ್ಥಾಪಿಸಿರುವರು. ಅವರು ಕೊಡುವ ಅಭಿಪ್ರಾಯವೇನೆಂದರೆ "ಕಾನೂನಿಗೆ ಅನುಸಾರವಾದ [illegible] ಕಾನೂನಿಗೆ ಪ್ರತಿಕೂಲವಾದ ಚಳುವಳಿಯನ್ನು ಎಂಬುದನ್ನು ರಾಜಕೀಯ ಭೇದ ಮಾಡುವುದಕ್ಕಾಗಿ [illegible] ಈ ವಿಷಯವಾಗಿ ಅನೇಕ ಹೊಸ ಹೊಸ ಸಿದ್ಧಾಂತಗಳು ತಲೆ ಎತ್ತುತ್ತಿವೆ. ಸರ್ಕಾರವು ತನ್ನ ಕಾನೂನನ್ನು ಪ್ರಜೆಗಳ ಮೇಲೆ ಚಲಾಯಿಸುವುದಕ್ಕೆ ಬಲ್ಮೆಯನ್ನು ಪಯೋಗಿಸಬಹುದೆಂದು ಒಪ್ಪಿಕೆಯಾದ ಸಿದ್ಧಾಂತ. ಯಾವ ಪ್ರಜೆಯೇ ಆಗಲಿ ಸರ್ಕಾರದ ಮೇಲಾಗಲಿ ಇತರ ಪ್ರಜೆಗಳ ಮೇಲಾಗಲೀ ಬಲ್ಮೆಯನ್ನು ಪಯೋಗಿಸಕೂಡದು, ಆದರೆ ಕಾನೂನಿಗೆ ವಿರೋಧವಿಲ್ಲದೆ ಪ್ರತಿಯೊಂದು ಮಾರ್ಗವನ್ನೂ ಉಪಯೋಗಿಸಿ ಪ್ರಜೆಯು ಸರಕಾರಕ್ಕೆ ವಿರೋಧವಾಗಿ ಚಳುವಳಿಯನ್ನು ನಡೆಯಿಸಿ ಅದರಲ್ಲಿ ಅನೇಕ ಬದಲಾವಣೆಗಳನ್ನು ತರಬಹುದು. ಪ್ರಜೆಯ ಈ ಹಕ್ಕನ್ನು ಯಾರೂ ಪ್ರತಿಭಟಿಸುವ ಹಾಗಿಲ್ಲ. ಇಂಗ್ಲೆಂಡಿನ ಅನೇಕ ಕಾನೂನಿನ ಪಂಡಿತರು ಕೆಲವು ಸಂದರ್ಭಗಳಲ್ಲಿ ಪ್ರಜೆಗಳು ದಂಗೆ ಏಳಬಹುದೆಂದು ಸ್ಥಾಪಿಸಿರುವರು, ಈ ದಂಗೆಯು ಬಹಿಷ್ಕಾರದ ರೂಪವನ್ನು ತಾಳಬಹುದು. ಅಥವಾ ಬಂ[illegible]. ಮಹಾತ್ಮಾ ಗಾಂಧಿಯವರ ಸ[illegible] ಪ್ರಕಾರ ಸರ್ಕಾರದ ಪದ್ಧತಿಯನ್ನೇ [illegible] ಅಧಿಕಾರವಿದೆ. ಆದರೆ ಹಿಂಸೆಯನ್ನು [illegible] ಎಂದು ಪ್ರತಿಪಾದಿಸುತ್ತದೆ.

ಮ|| ರಾ|| ನರಸಿಂಹಯ್ಯನವರು [illegible] 124 [illegible]. ಈ [illegible] ಪ್ರತಿಭಟಿಸುತ್ತದೆ ಪ್ರಜೆಯ [illegible] ಅಹಿಂಸಾತ್ಮಕವಾದ ಚಳುವಳಿ [illegible] ಸಂರಕ್ಷಿಸ[illegible] ಸರಕಾರವನ್ನು ಸಂರಕ್ಷಿಸುತ್ತದೆ ಸರಕಾರಕ್ಕೆ ವಿ[ರೋಧ]ವಾಗಿ ಚಳುವಳಿಯನ್ನು ನಡೆಯಿಸುವವರ ಮೇಲೆ [illegible] ಈ [illegible] ಆದುದರಿಂದ ಈ ಕಲಮನ್ನು ಕಾನೂನಿನ ಕಡತದಿಂದ ಈಗಲೇ ತೆಗೆದುಹಾಕಬೇಕು

ದೇಶೀಯ ಸಂಸ್ಥಾನಗಳಲ್ಲಿ ರಾಜರುಗಳು ಮಂತ್ರಿಗಳನ್ನು ಆಡಳಿತಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು ಆಡಳಿತವನ್ನು ಖಂಡಿಸುವುದಕ್ಕೆ ಪ್ರಜೆಗಳಿಗೆ ಸಂಪೂರ್ಣ ಅಧಿಕಾರವಿರಬೇಕು ರಾಜರಿಗೆ ಬಿರುದುಗಳು [illegible] ಬೇಕಾದರೆ ಮಂತ್ರಿಗಳನ್ನೇ ಆಡಳಿತಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು

ಮ|| ರಾ|| ಗೋಪಾಲರಾಯರ ಭಾಷಣದಲ್ಲಿಯೂ ಇದೇ ರೀತಿಯಾಗಿ ಸ್ಪಷ್ಟವಾದ ಅನೇಕ ಉಕ್ತಿಗಳಿವೆ. ಇವುಗಳಿಗಾಗಿ ನಾವು ಅವರೀರ್ವರನ್ನೂ ಅಭಿನಂದಿಸುತ್ತೇವೆ.

ಸಬರಮತಿ ಆಶ್ರಮ

ಮಹಾತ್ಮಾ ಗಾಂಧಿಯವರ ಸಬರಮತಿಯ ಆಶ್ರಮದ ನಿವಾಸಿಗಳ ಅವ್ಯವಸ್ಥೆಯನ್ನು ಕುರಿತು ಕಳೆದ ವಾರದ ನವಜೀವನ ಪತ್ರಿಕೆಯಲ್ಲಿ ಪಶ್ಚಾತ್ತಾಪವನ್ನು ಪ್ರದರ್ಶಿಸಿರುವರು ಅವರ ಅಣ್ಣಂದಿರ ಮಕ್ಕಳಾದ ಜಗನ್ ಲಾಲ್ ಗಾಂಧಿಯೆಂಬುವರು ಆಶ್ರಮದ ನಿಬಂಧನೆಗಳಿಗೆ ವಿರೋಧವಾಗಿ 10000 ಸಾವಿರ ರೂಪಾಯಿಗಳನ್ನು ಕೂಡಿಟ್ಟಿದ್ದರು ತಪ್ಪೆಂದು ತಿಳಿದ ಮೇಲೆ ಜಗನ್ ಲಾಲ್‌ರವರು ಆ 10 ಸಾವಿರ ರೂಪಾಯಿಗಳನ್ನು ಆಶ್ರಮಕ್ಕೆ ಕೊಟ್ಟು ಬೇರೇ ಹೊರಟು ಹೋದರು. ಮಹಾತ್ಮಾ ಗಾಂಧಿಯವರ ಪತ್ನಿಯವರಾದ ಕಸ್ತೂರಿ ಬಾಯಿಯವರು ಆಶ್ರಮದ ನಿಬಂಧನೆಗೆ ವಿರೋಧವಾಗಿ 200 ರೂಪಾಯಿಗಳನ್ನು ಕೊಡಿಟ್ಟಿದ್ದರು ಕಳ್ಳರು ಬಂದು ಅದನ್ನು ತೆಗೆದುಕೊಂಡು ಹೊರಟು ಹೋದರು ಕಸ್ತೂರಿ ಬಾಯಿಯವರಿಗೆ ಬಹಳ ಪಶ್ಚಾತ್ತಾಪವಾಯಿತು ಆಶ್ರಮಕ್ಕೆ ಬಂದ ಯಾರೋ ಪ್ರೇಕ್ಷಕರು ಕಸ್ತೂರಿ ಬಾಯಿಯವರಿಗೆ 4 ರೂಪಾಯಿಗಳನ್ನು ಕೊಟ್ಟರು. ಆಶ್ರಮದ ನಿಯಮದಂತೆ ಅವನ್ನು ಆಶ್ರಮಕ್ಕೆ ಕೊಡಬೇಕಾಗಿತ್ತು, ಆದರೆ ಹಾಗೆ ಮಾಡದೆ ಕಸ್ತೂರಿಬಾಯಿಯವರು ತಮ್ಮ ಸ್ವಂತಕ್ಕೆ ಇಟ್ಟುಕೊಂಡರು ಜೋಶಿ ಎಂಬುವರು ಕಸ್ತೂರಿಬಾಯಿಯವರ ಹತ್ತಿರ ಹೋಗಿ ಆ ರೂಪಾಯಿಗಳನ್ನು ಆಶ್ರಮಕ್ಕೆ ಕೊಡಬೇಕು ನೀವ ಸ್ವಂತಕ್ಕೆ ಉಪಯೋಗಿಸಕೂಡದು ಎಂದು ಹೇಳಿದರು. ಕಸ್ತೂರಿಬಾಯಿಯವರಿಗೆ ನಾಚಿಕೆಬಂದು ಆ ರೂಪಾಯಿಗಳನ್ನು ಆಶ್ರಮಕ್ಕೆ ಕೊಟ್ಟುಬಿಟ್ಟರು

ಆಶ್ರಮದಲ್ಲಿ ಒಬ್ಬ ವಿಧವೆಯಿದ್ದಳು [illegible] ಸಚ್ಚರಿತಳೆಂದು ತಿಳಿದುಕೊಂಡಿದ್ದರು. [illegible] ಆಶ್ರಮದಲ್ಲಿ ಬೆಳೆದ ಒಬ್ಬ [illegible] ಅವಳನ್ನು ಎಲ್ಲರೂ ಪವಿತ್ರಳೆಂದ ತಿಳಿದುಕೊಂಡಿದ್ದರು. ಆದರೂ ಈ ವಿಧವೆಯೂ [illegible] ಆಶ್ರಮದ [illegible] ನಡೆಯಿಸಿದರು. ಇದು [illegible] ಆಶ್ರಮದಿಂದ [illegible]

ಮಹಾತ್ಮಾ ಗಾಂಧಿಯವರು ಆಶ್ರಮದಲ್ಲಿ ನಡೆದ ಈ ಅಕ್ರಮಗಳಿಗೆ ವ್ಯಸನಪಟ್ಟು ಇಷ್ಟು ನಿರುತ್ಸಾಹವಾಗಿದ್ದರೂ ಆಶ್ರಮವನ್ನು ನಡೆಸುವುದನ್ನು ನಾನು ಬಿಡುವುದಿಲ್ಲ ಅದರ ನ್ಯೂನತೆಗಳನ್ನೆಲ್ಲಾ ಮಹಾಜನಗಳಿಗೆ ತಿಳಿಸಿ ಅದನ್ನು ಸುಧಾರಿಸುವುದೇ ನಮ್ಮ ಕರ್ತವ್ಯ ಎಂಬುದಾಗಿ ಬರೆದಿರುವರು

ಮರಣ.

ಬೆಂಗಳೂರಿನ ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನ ಒಬ್ಬ ವಿದ್ಯಾರ್ಥಿಗೆ ವಿದ್ಯುಚ್ಛಕ್ತಿಯು ತಗಲಿ ಕೂಡಲೆ ಮೃತಪಟ್ಟನು. ಈತನು ಸೆಂಟ್ರಲ್ ಕಾಲೇಜಿನ ಪ್ರೊಫೆಸರರಾದ ಮಿ|| ವೆಂಕಟರಾವ್ ವಿಲಾಂಗ್‌ರವರ ಅನುಬಂಧಿಯಾಗಿದ್ದನೆಂದು ತಿಳಿದುಬಂದಿರುತ್ತೆ.

ಒಳದೇಶ ವರ್ತಮಾನ

ವರ್ಗ

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರಾದ ಮಿ|| ನವನೀತ ನಾಯ್ಡುರವರು ಕೋಲಾರ್‌ಗೋಲ್ಡ್‌ಫೀಲ್ಡ್ಸಿಗೂ ಕೋಲಾರ್‌ಗೋಲ್ಡ್‌ಫೀಲ್ಡ್ಸ್ ಸಬ್ ಡಿವಿಜನ್ ಛಾರ್ಜಿನಲ್ಲಿರತಕ್ಕ ಮಿ|| ಶಂಕರಪ್ಪನವರು ಫ್ರೆಂಚ್‌ರಾಕ್ಸಿಗೂ ವರ್ಗ ಮಾಡಲ್ಪಟ್ಟಿರುತ್ತಾರೆ.

ಮುನಿಸಿಪಾಲಿಟಿ.

ಮಿ|| ಹನುಮಂತ ಶೆಟ್ಟರವರು ತುಮಕೂರು ಮುನಿಸಿಪಾಲಟಿಗೂ ಮಿ|| ಸಿ.ಎಂ. ವೆಂಕಟರಮಣಯ್ಯ ಶೆಟ್ಟರವರು ಚೆನ್ನಪಟ್ಟಣದ ಮುನಿಸಿಪಾಲಟಿಗೂ ಕ್ರಮವಾಗಿ ವೈಸ್‌ಪ್ರೆಸಿಡೆಂಟ್ ಮತ್ತು ಮುನಿಸಿಪಲ್ ಕೌನ್ಸಿಲರುಗಳು ಚುನಾಯಿಸಲ್ಪಟ್ಟಿರುತ್ತಾರೆ

ಟ್ರಸ್ಟ್‌ಬೋರ್ಡ್.

ರಾಜಧಾನಿಯ ಮುನಿಸಿಪಲ್ ಟ್ರಸ್ಟ್‌ಬೋರ್ಡಿಗೆ ಸಂಬಂಧಪಟ್ಟಂತೆ ಮೈಸೂರು ಪಟ್ಟಣವನ್ನು ಅಭಿವೃದ್ಧಿಗೆ ತರುವಂಥ ಬೋರ್ಡಿಗೆ ಸರ್ ಚಾರಲ್ಸ್ ಟಾಡ್‌ಹಂಟರವರೂ, ರಾಜಮಂತ್ರ ಪ್ರವೀಣ ದಿವಾನ್‌ಬಹದ್ದೂರ್ ಪಿ. ರಾಘವೇಂದ್ರರಾಯರವರೂ ಲೋಕಹಿತೈಷಿ ನಂಜುಂಡರಾಜೇಅರಸಿನವರೂ ಮಿ|| ಗಳಾದ ಮಹಮ್ಮದ್ ಸೇಟ್ ಮತ್ತು ಧನಕೋಟಿ ಶೆಟ್ಟಿರವರೂ ಮೆಂಬರುಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ಅಮಲ್ದಾರ್.

ಕೊಪ್ಪ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾದ ಮಿ|| ಎಂ. ವೈನ್ ಎಂಬುವರು ಚನ್ನಪಟ್ಟಣ ತಾಲ್ಲೂಕಿನ [illegible] ಚನ್ನಪಟ್ಟಣಕ್ಕೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಚನ್ನಪಟ್ಟದಲ್ಲಿ ನಡೆದ ಹಿಂದೂಮುಸಲ್ಮಾನರ ಜಗಳದಲ್ಲಿ ಸುಮಾರು ಇಪ್ಪತ್ತು ಜನಗಳಿಗೆ ಗಾಯಗಳಾಗಿರುವುದಾಗಿಯೂ ಮಾಪಿನ ತೋಪುಗಳಿಗೆ ವಿಶೇಷ ನಷ್ಟ [illegible] ತೆಂಬದಾಗಿಯೂ ಬೈರಾಪಟ್ಟಣದಲ್ಲಿಯೂ ಚೆನ್ನಪಟ್ಟಣದಲ್ಲಿಯೂ ಮನಸ್ತಾಪಗಳು ಇನ್ನೂ ಕಡಿಮೆಯಾಗಿಲ್ಲವೆಂತಲೂ ಎರಡೆರಡು ಮನೆಗಳಿಗೆ ಒಬೊಬ್ಬ ಪೋಲೀಸಿನವನನ್ನು ಕಾವಲಿಟ್ಟಿರುವರೆಂದೂ ಹಿಂದೂಗಳ್ಯಾರೂ ಮುಸಲ್ಮಾನರಿಗೆ ಹಾಲು ಮೊಸರು ತರ್ಕಾರಿ [illegible] ಪದಾರ್ಥವನ್ನೂ ಮಾರದಂತೆ ಕಟ್ಟುಮಾಡಿಕೊಂಡಿರುವರೆಂದೂ ಇದನ್ನು ನೋಡಿ ಮುಸಲ್ಮಾನರಲ್ಲಿ ವಿವೇಕ ಶಾಲಿಗಳಾದವರು ಬೈರಾಪಟ್ಟಣದ ಕಬ್ಬುಮಾರುವ ಹೆಂಗಸಿಗೆ ಬಂದು ಕಾಸನ್ನು ಕೊಡಲಾರದೆ ಅವಳನ್ನೇ ಬೈದವನಿಗೆ ಸಹಾಯಮಾಡಿದ ಇತರ ಜನಗಳ ನಡತೆಯನ್ನು ಖಂಡಿಸುತ್ತಿರುವರಾಗಿಯೂ ವರ್ತಮಾನ ಬಂದಿರುತ್ತದೆ.

ಖಂಡನೆ.

ಮೊನ್ನೆ ದಿನ ಸುಬ್ರಾಯನ ಕೆರೆಯಲ್ಲಿ ಮಹಾಜನರ ಸಭೆ ನಡೆದು ಪರದೇಶೀ ವಸ್ತ್ರಗಳನ್ನು ದಹನಮಾಡಬಂತೆ ಅಧಿಕಾರಿಗಳು ಕೊಟ್ಟಿದ್ದ ಅಪ್ಪಣೆಗಳು ಖಂಡಿಸಲ್ಪಟ್ಟವು ಕಾಂಗ್ರೆಸ್ ಅಧ್ಯಕ್ಷರ [illegible] ಪರದೇಶೀ ವಸ್ತ್ರದಹನವು ನಡೆಯಿತು.

ತಾಯಿನಾಡು.

15—4—1929

ವರ್ತಮಾನ ಸಂಗ್ರಹ.

ಇಂಗ್ಲೆಂಡಿನಲ್ಲಿ ಚುನಾವಣೆಗಳು.

ಇಂಗ್ಲೆಂಡಿನಲ್ಲಿ ಹೊಸದಾಗಿ ಪಾರ್ಲಿಮೆಂಟಿನ ಚುನಾವಣೆಯು ಇನ್ನು ಸ್ವಲ್ಪ ದಿನಗಳಲ್ಲೇ ನಡೆಯಬೇಕಾಗಿರುವುದು. ಒಟ್ಟು 16040 ಉಮೇದುವಾರರು ನಿಂತಿರುವರು ಇವರುಗಳ ಪೈಕಿ 580 ಜನ ಕಾಂಸರ್‌ವೆಟಿವ್ ಪಂಗಡದವರು 565 ಲೇಬರ್ ಪಂಗಡದವರೂ 495 ಲಿಬರಲ್ ಪಂಗಡದವರೂ 65 ಸ್ತ್ರೀಯರೂ ಉಮೇದುವಾರರಾಗಿ ನಿಂತಿರುತ್ತಾರೆ ಚುನಾವಣೆಯು ಮೇ ತಿಂಗಳಿನಲ್ಲಿ ನಡೆಯುವುದು.

ಏರ್ ಮೇಲ್ ಸರ್ವೀಸ್.

ಕಳೆದ ತಿಂಗಳು 27 ನೇ ತಾರೀಖಿನಲ್ಲಿ ಇಂಗ್ಲೆಂಡಿನಲ್ಲಿ ಪ್ರೋತ್ಸಾಹದ ಕಾಗದವು ಏರ್ ಮೇಲ್ ಸರ್ವೀಸಿನಿಂದ ಡಿಲ್ಲಿಗೆ ಈ ತಿಂಗಳು 7 ನೇ ತಾರೀಖಿಗೆ ತಲುಪಿತು. ಒಂದು ವಾರದಲ್ಲಿ ಈ ಸರ್ವೀಸಿನ ಮುಖಾಂತರ ಕಾಗದಗಳು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ತಲುಪುವುವು ಈ ಸರ್ವೀಸು ಯೇರೋಪ್ಲೇನಿನ ಮುಖಾಂತರ ನಡೆಯುವುದು.

ಪರ ದೇಶೀ ಬಟ್ಟೆಗಳ ಮೇಲೆ ಸುಂಕ.

ಟರ್ಕಿಯಲ್ಲಿ ಪರದೇಶಿ ಬಟ್ಟೆಗಳ ಮೇಲೆ ಶೇಕಡ 25 ರಷ್ಟು ಸುಂಕವು ಹೇರಲ್ಪಟ್ಟಿದೆ ಟರ್ಕಿಯ ವಿದ್ಯಾರ್ಥಿಗಳು ಪರದೇಶಿ ವಸ್ತ್ರಗಳನ್ನು ಧರಿಸಕೂಡದೆಂದು ಪ್ರತಿಜ್ಞೆ ಮಾಡಿದಾರೆ.

ಬ್ರಿಟಿಷ್ ಮಿಲ್ಲುಗಳ ದುರವಸ್ಥೆ.

ಇಂಡಿಯಾ ದೇಶದಲ್ಲಿ ಆಗುತ್ತಿರುವ ಪರದೇಶಿ ವಸ್ತ್ರಗಳ ಬಹಿಷ್ಕಾರದಿಂದ ಇಂಗ್ಲೆಂಡಿನಲ್ಲಿ 48 ಮಿಲ್ಲುಗಳು ಮುಚ್ಚಲ್ಪಟ್ಟುವು.

ಇಂಗ್ಲೆಂಡಿನಲ್ಲೂ ತಿರಸ್ಕಾರ.

ಸೈಮನ್ ಕಮಿಷನ್‌ರವರು ಇಂಗ್ಲೆಂಡಿಗೆ ಹಿಂತಿರುಗಿ ಹೋದಾಗ ಅಲ್ಲೂ ಸಾಮ್ರಾಜ್ಯ ವಿರೋಧಿಗಳು ಸೈಮನ್ ಕಮಿಷನ್ನಿಗೆ ವಿರೋಧವಾಗಿ ಬಹಿಷ್ಕಾರ ಪ್ರದರ್ಶನವನ್ನು ಮಾಡುವರು.

ಸ್ತ್ರೀ ವಿದ್ಯಾಭ್ಯಾಸ.

ರೈಟ್ ಆನರ್‌ಬಲ್ ವಿ. ಯಸ್. ಶ್ರೀನಿವಾಸ ಶಾಸ್ತ್ರಿಗಳು ಮದರಾಸಿನಲ್ಲಿ ಕೊಟ್ಟ ಒಂದು ಭಾಷಣದಲ್ಲಿ ಬಾಲಕರಿಗೂ ಬಾಲಕಿಯರಿಗೂ ಒಂದೇ ಸ್ಕೂಲಿನಲ್ಲಿ ಒಂದೇ ವಿಧವಾದ ಶಿಕ್ಷಣವು ಕೊಡಲ್ಪಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಜಾಡಮಾಲಿಗಳ ಮುಷ್ಕರ

ನಾಗಪುರದಲ್ಲಿ ನೋಟಿಸನ್ನು ಕೊಡದೆ 750 ಜಾಡಮಾಲಿಗಳು ಮುಷ್ಕರ ಹಿಡಿದರು ಅವರಮೇಲೆ ಮುಖದ್ದಮೆಗಳು ಮಾಡಲ್ಪಡುವವೆಂದು ತಿಳಿದುಬರುತ್ತದೆ.

ನಿಲ್ಲಿಸಲ್ಪಟ್ಟ ಪತ್ರಿಕೆ.

ಕರ್ನಾಟಕ ಚಂದ್ರಿಕೆ ಕರ್ನಾಟಕ ಮತ್ತು ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್ ಗ್ರಾಮಜೀವನ ವೈಶ್ಯಶ್ರೀ ಸೀವಾರ್ಣ ವಾಚನ ಚಂದ್ರಿಕೆ ಮೈಸೂರ್ ಸ್ಟಾರ್ (ದಿನಚರಿ)—ಮೇಲಿನ ಪತ್ರಿಕೆಗಳು ನ್ಯೂಸ್‌ಪೇಪರ್ ರಿಗ್ಯುಲೇಷನ್ನಿನಂತೆ ನಿಲ್ಲಿಸಲ್ಪಟ್ಟಿವೆ.

ಡೀನ್ ಇಂಗರವರು.

ಐರ್‌ಲೆಂಡಿನ ಪ್ರಸಿದ್ಧ ಮುಖಂಡರಾದ ಡೀನ್ ಇಂಗರವರು ಇಂಡಿಯಾ ದೇಶಕ್ಕೆ ಬರುವದಾಗಿ ಸಮಾಚಾರವಿರುವುದು.

ವರ್ಗಾವರ್ಗಿ,

ಮಿಸ್ಟರ್ ರಾ॥ ನವನೀತಂ ನಾಯಡು: ಬಿ. ಎ. ಬಿ. ಎಲ್ ರವರು ಫ್ರೆಂಚರಾಕ್ಸ ಸಬ್‌ಡಿವಿಷನ್ನಿನಿಂದ ಕ್ಲೋಸ್‌ಪೇಟೆ ಸಬ್‌ಡಿವಿಷನ್ನಿಗೂ, ಮ॥ ಎಂ. ಶಂಕರಪ್ಪ ಬಿ. ಎ ರವರು ಕ್ಲೋಸ್‌ಪೇಟೆಯಿಂದ ಫ್ರೆಂಚರಾಕ್ಸಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ

ಈ ತಿಂಗಳು ಮೂರನೆಯ ತಾರೀಖು ಸಾಯಂಕಾಲ ಸರ್. ಹಾಜೀ ಇಸ್ಮೇಯಿಲ್ ಸೇಟರ ಅಧ್ಯಕ್ಷತೆಯಲ್ಲಿ ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ ಸಭೆಯ ಮೀಟಿಂಗು ನಡೆಯಿತು ಸಂಘದ ಕಟ್ಟಡಕ್ಕೆ ಒಟ್ಟು 40 ಸಾವಿರ ರೂಪಾಯಿಗಳ ಖರ್ಚು ಆಗುವುದೆಂದೂ ಅದರಲ್ಲಿ 15000 ವನ್ನು ಅಧ್ಯಕ್ಷರು ಕೊಡುವುದಾಗಿಯೂ ವಾಗ್ದಾನ ಮಾಡಿದರು.

ಹಾಡುವ ನಾಯಿ.

ಸ್ವಾಂವರ್ಪ್ ಎಂಬಲ್ಲಿ ಒಂದು ಜರ್ಮನ್ ನಾಯಿಯು "ಮಮ್ಮಾ" ಎನ್ನಲು ಕಲಿತಿದೆಯಲ್ಲದೆ, "ಗಾಡ್ ಸೇವ್ ದಿ ಕಿಂಗ್" ಎಂಬ ರಾಜಗೀತವನ್ನು ಹಾಡುತ್ತದೆ.

ಖಾದಿಗೆ ಪ್ರೋತ್ಸಾಹ.

ಕಾಥೆವಾಡಾದ ಮಹಾರಾಜರು ಖಾದಿಫಂಡಿಗೆ 500 ರೂಪಾಯಿಗಳನ್ನು ಕೊಟ್ಟಿರುವರು.

ಜರ್ಮನಿ.

ಜರ್ಮನೀದೇಶದ ಸೈನದ ಅಧಿಕಾರಿಗಳಾಗಿದ್ದು ಈಚೆಗೆ ಆ ದೇಶವು ರಿಪಬ್ಲಿಕ್ಕಾದ ನಂತರ ಅಲ್ಲಿಗೆ ಪ್ರೆಸಿಡೆಂಟರಾದ ವ್ಯಾನ್‌ಹಿಂಡನ್‌ಬರ್ಗರವರು ಒಂದ ವಾರದಿಂದಲೂ ಖಾಯಿಲೆಯಾಗಿರುವರೆಂದೂ ಅವರಿಗೆ ಪ್ರಾಣಭಯ ವೇನೂ ಇಲ್ಲವೆಂತಲೂ ಪ್ರಕಟವಾಗಿದೆ.

ಪಟೇಲರಿಗೆ ಅಭಿನಂದನೆ.

ಪ್ರಧಾನ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬರಬೇಕಿದ್ದ ಪಬ್ಲಿಕ್ ಸೇಫ್ಟಿಬಿಲ್ ಎಂಬ ಮಸೂದೆಯು ಪ್ರಜಾಸೌಖ್ಯಕ್ಕೆ ವಿರೋಧವಾದದೆಂದು ಧೈರ್ಯವಾಗಿ ಹೇಳಿದ ಪ್ರೆಸಿಡೆಂಟ್ ಮಿ॥ ವಿ ಜೆ. ಪಟೇಲರವರಿಗೆ ಲಂಡನ್‌ಪಟ್ಟಣದಲ್ಲಿರುವ ಹಿಂದೂಸ್ಥಾನದ ನ್ಯಾಷನಲ್ ಕಾಂಗ್ರೆಸ್‌ಬ್ರಾಂಚಿನವರು ತಮ್ಮ ಅಭಿನಂದನೆಗಳನ್ನು ಕಳುಹಿಸಿರುವರು.

ಉದಾರಿಗಳು.

ಚಿದಂಬರ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ 30 ಲಕ್ಷ ರೂಪಾಯಿಗಳನ್ನು ದಾನಮಾಡಿದ ಅಣ್ಣಾಮಲೆ ಚಟ್ಟಿಯಾರ್ ಎಂಬುವರಿಗೆ ರಾಜ ಎಂಬ ಬಿರುದು ಕೊಡಲ್ಪಟ್ಟನಂತರ ಅವರು ತಾವು ಹುಟ್ಟಿದ ಊರಿಗೆ ಹೋಗಲಾಗಿ, ಬಹು ವಿಜೃಂಭಣೆಯಿಂದ ಕೂಡಿದ ಮರ್ಯಾದೆಗಳು ನಡೆಸಲ್ಪಟ್ಟವು ಅದರ ತಸ್ವೀರು ವರ್ತಮಾನಪತ್ರಿಕೆಗಳಲ್ಲಿ ಮುದ್ರಿತವಾಗಿರುವುದು.

ಮೈಸೂರಿನ ಆರೋಗ್ಯ.

ಲೀಗ್ ಆಫ್ ನೇಷನ್ಸ್ ಸಂಬಂಧವಾಗಿ 1929 ನೇ ಫೆಬ್ರವರಿ ತಿಂಗಳಲ್ಲಿ ಏರ್ಪಾಡಾಗಿದ್ದ ಒಂದು ವೈದ್ಯ ಮಂಡಳಿಯವರು ತಮ್ಮ ರಿಪೋರ್ಟನ್ನು ಈಗ ಪ್ರಕಟಿಸಿರುತ್ತಾರೆ ಅದರಲ್ಲಿ ಮೈಸೂರಿನಲ್ಲಿ ಜನಗಳು ಆರೋಗ್ಯವಾಗಿಯೂ ಉಚಿತರೀತಿಯಲ್ಲಿಯೂ ನೋಡಿಕೊಳ್ಳುತ್ತಿರುವರೆಂದು ಬರೆಯಲ್ಪಟ್ಟಿದೆ.

(ಪತ್ರಿಕೆಯವರು [illegible])

ಪತ್ರವ್ಯವಹಾರ

144 ನೇ ಕಲಮಿನ ದುರುಪಯೋಗ

ಸ್ವಾಮಿ,

ಕೋಲಾರ ಗೋಲ್ಡ್ [illegible] ವರು. ಆರ್ಸಸ್ [illegible] ವರಮೇಲೆ 144 ನೇ ಕಲಮನ್ನು [illegible] ಬೌರಿಂಗ್‌ಪೇಟೆಗೆ ಹೋಗಕೂಡದೆಂದು [illegible] ಡಿದ್ದು ನಮ್ಮ ಸಂಸ್ಥಾನಕ್ಕೆ ಅವಮಾನಕರ. [illegible] ಕೂಲಿಯಾಳುಗಳಲ್ಲಿ ಶಾಂತಿಯನ್ನು [illegible] ಹೊರತು ಗದ್ದಲವನ್ನು ಹಬ್ಬಿಸುವವರಲ್ಲ. [illegible] ಗಳ ಎಲಕ್ಷನ್ ಮೀಟಿಂಗು ನಡೆಸು [illegible] ಮೀಟಿಂಗಿಗೆ ಕರ್ತರವರು ಹೋಗದೆ [illegible] ರಲಿಲ್ಲ. ಇಷ್ಟನ್ನು ತಿಳಿಯದೆ [illegible] ರೂ ಡೆಪುಟಿ ಕಮಿಷನರವರೂ ಕರ್ತರವರ [illegible] ಸಿದ್ದು ಶುದ್ಧ ಅವಿವೇಕ ಕರ್ತರವರೂ [illegible] ಗಿ ವರ್ತಮಾನ ಪತ್ರಿಕೆಗಳಲ್ಲಿ [illegible] ಒಂದು ಲೇಖನವನ್ನು ಬರೆದಿರುವರು. ಈ [illegible] ದ ಸರ್ಕಾರದವರು ತಾವು [illegible] ದೂ, ಕೂಲಿಯಾಳುಗಳ [illegible] ಸಿಕೊಂಡ ಹಾಗಾಯಿತೆಂದೂ ತಿಳಿದಿರುವರು. [illegible] ಳೆ ಗಲಭೆಯಾಗುವುದೆಂಬ ಭೀತಿ [illegible] ಟರೂ [illegible] ಗಲಭೆ [illegible] ಬಿಕಾರರನ್ನು ಚದುರಿಸಬಹುದಾಗಿತ್ತು. [illegible] ಇಂತಹ ಮಾರ್ಗವನ್ನು [illegible] ಅಧಿಕಾರಿಗಳು [illegible] ರ್ಗಗಾಮಿಗಳಾದುದು ಅತ್ಯಂತ [illegible].

ಕೂಲಿ[illegible]

ಮೈಸೂರಿನ ಶ್ಲಾಘನೆ.

ಸೈಮನ್ ಕಮೀಷನ್‌ದವರ ಚೀಫ್ ಸೆಕ್ರೆಟೆರಿಯವರು ಆಸೋಸಿಯೇಟೆಡ್ ಪ್ರೆಸ್ಸಿನವರಿಗೆ ಸೈಮನ್‌ರವರಿಗೆ ಮೈಸೂರಿನ ವಿಷಯದಲ್ಲಿ ಉಂಟಾಗಿರತಕ್ಕ ಅಭಿಪ್ರಾಯಗಳನ್ನು ತಿಳಿಸಿರುವರು. ಮೈಸೂರಿನಲ್ಲಿ ಭಿಕ್ಷುಕರೇ ಇಲ್ಲವೆಂಬುದೂ ವಿದ್ಯುಚ್ಛಕ್ತಿಯ ದೀಪಗಳಿಂದ ಮೈಸೂರು ಪಟ್ಟಣವೂ ಅರಮನೆಯೂ ಬಲು ಸೊಬಗಿನಿಂದ ಕಾಣುತ್ತದೆಂದೂ, ಕೃಷ್ಣರಾಜಸಾಗರ ಕೆರೆಯು ವಿಶೇಷ ಶಕ್ತಿಸಾಮರ್ಥ್ಯಗಳಿಂದ ಕೂಡಿದ ಇಂಜನಿಯರಿಂಗ್ ಕೆಲಸವೆಂದೂ ಶ್ರೀಯುವರಾಜರವರು ಕೊಟ್ಟ ಗಾರ್ಡನ್‌ಪಾರ್ಟಿಯೇ ಮೊದಲಾದವುಗಳಲ್ಲಿ ಅಧಿಕಾರಿಗಳು ವಿಶೇಷ ಮುತುವರ್ಜಿಯಿಂದ ಕೆಲಸ ಮಾಡಿದರೆಂಬುದೂ ಮುಖ್ಯವಾದ ಅಭಿಪ್ರಾಯಗಳೆಂತ ಹೇಳಲ್ಪಟ್ಟಿದೆ.

Printed and published by P. R. Ramiaya at Sri Rama Press D. Subbiah Road, Mysore.

Regd No M. 2322

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು.

ಸಂಪಾದಕ: ಪಿ ಆರ್. ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ [illegible] { ಪರಸ್ಥಳಕ್ಕೆ [illegible]

ಸಂಪುಟ [illegible]] ಮಂಗಳವಾರ, [illegible] ಏಪ್ರೆಲ್ [illegible] [ಸಂಚಿಕೆ [illegible]

ತಾಯಿನಾಡು.

ಕೈಯ್ಯಿನ ಕಾಸು ಮೇಲುಕೋಟೆ ನಾಮ!

[illegible]

ಉಪಾಧ್ಯಾಯರುಗಳು

ಸರ್ಕಾರದ ಇತರ ಎಲ್ಲಾ ನೌಕರರಿಗಿಂತಲೂ ಉಪಾಧ್ಯಾಯ ವೃತ್ತಿಯನ್ನವಲಂಬಿಸಿರತಕ್ಕವರು ಕೇವಲ ಬಡವರು ಆದಾಗ್ಯೂ ಇವರ ವೃತ್ತಿಯೇ ಪ್ರಪಂಚದಲ್ಲಿ ಅತ್ಯಂತ ಘನತರವಾದುದೆನಿಸಿಕೊಂಡಿದೆ. ಉಪಾಧ್ಯಾಯರು ಶಾಂತಚಿತ್ತರಾಗಿದ್ದುಕೊಂಡು ಕೆಲಸ ಮಾಡಿದಲ್ಲದೆ ವಿದ್ಯಾಭ್ಯಾಸದ ಪ್ರಯೋಜನವು ವಿದ್ಯಾರ್ಥಿಗಳಿಗೆ ಉಂಟಾಗುವುದಿಲ್ಲ. ಉಪಾಧ್ಯಾಯರಾದವರು ಹಾಗೆ ಶಾಂತಚಿತ್ತದಿಂದ ಕೆಲಸಮಾಡಲು ತಮ್ಮ ವೃತ್ತಿಯಲ್ಲಿರತಕ್ಕ ಕುಂದುಕೊರತೆಗಳನ್ನೆಲ್ಲಾ ಅವರ ಪರಿಹರಿಸಿಕೊಳ್ಳಬೇಕು. ಈ ಕೆಲಸವು ಒಬ್ಬೊಬ್ಬರಿಂದ ಮಾಡಲ್ಪಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲಾ ಡಿಸ್ಟ್ರಿಕ್ಟ್‌ಗಳ ಉಪಾಧ್ಯಾಯರುಗಳೂ ರಜಾಕಾಲದಲ್ಲಿ ಒಟ್ಟುಗೂಡಿ ಪರಸ್ಪರ ಪರಿಚಿತರಾಗುವುದರಿಂದ ಇರತಕ್ಕ ಕಷ್ಟಗಳನು ಎಲ್ಲರಿಗೂ ತಿಳಿಯಪಡಿಸಿ ಪರಿಹಾರದ ಬಗ್ಗೆ ಉತ್ತಮವಾದ ಮಾರ್ಗವ್ಯಾವುದೆಂಬುದನ್ನು ಕುರಿತು ಚರ್ಚಿಸಿ ವರ್ಷಕ್ಕೊಂದು ಸಲವಾದರೂ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿ ಸಮ್ಮೇಳನಗಳನ್ನು ಮಾಡಿಕೊಂಡ ವಿದ್ಯಾಭ್ಯಾಸವು ಸರಿಯಾಗಿ ನಡಿಯುವದಕ್ಕೆ ವಿದ್ಯಾರ್ಥಿಗಳಿಗೆ ತಮ್ಮ ಮೆಹನತ್ತಿನ ಪ್ರಯೋಜನಗಳು ಸಮಗ್ರವಾಗಿ ಆಗುವುದಕ್ಕೂ ತಾವು ಮಾಡತಕ್ಕ ಕೆಲಸಕ್ಕೆ ಅನುರೂಪವಾದ ಫಲವೂ ಗೌರವವೂ ದೊರಕುವಂತೆ ಏರ್ಪಡಿಸಿಕೊಳ್ಳುವುದಕ್ಕೂ ತಮಗೆ ಉಂಟಾಗತಕ್ಕ [illegible] ಪರಿಹಾರಮಾಡಿಕೊಳ್ಳುವುದಕ್ಕೂ ಆವಶ್ಯಕವಾದ ಸಲಹೆಗಳನ್ನೂ ಠರಾವುಗಳನ್ನೂ ಮಾಡಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಿಗೆ ಕಳುಹಿಸಿದರೆ ಇನ್ಸ್‌ಪೆಕ್ಟರುಗಳೂ ಡೈರೆಕ್ಟರವರೂ [illegible] ಈ ರೀತಿಯಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಉಪಾಧ್ಯಾಯರುಗಳೂ [illegible] ನಾವು ನಂಬಿದ್ದೇವೆ.

ಈ ಪ್ರಕಾರದಲ್ಲಿ ಈ ಒಂದು ಕಾರ್ಯಕ್ಕೆ ಎಲ್ಲಾ ರೀತಿಯಿಂದಲೂ ಎಲ್ಲಾ ಅಧಿಕಾರಿಗಳಿಂದಲೂ ಮುರುಗತ್ತಿ ಬರುತ್ತಿರುವುದರ ರಹಸ್ಯವಾದರೂ ಏನು? ನಮ್ಮ ಮೈಸೂರಿನ ಅಧಿಕಾರಿಗಳಿಗೆಸೋ ವಾಸ್ತವವಾಗಿ ನಾವು ಬಟ್ಟೆ ಸುಟ್ಟರೆಷ್ಟೋ [illegible] ಅವರೆ ಸುಡುವುದಕ್ಕೆ ಅವಕಾಶಕೊಟ್ಟರೆ ಮೇಲಿರುವ ದಣಿಗಳಿಗೆ ಏನೇನು ಅಸಮಾಧಾನವಾಗುತ್ತದೋ ಎಂಬ ಶಂಕೆಯಿಂದ ಹೀಗೆ ಮಾಡುತ್ತಾರೆ. ವಾಸ್ತವವಾಗಿ ಬಟ್ಟೆ ಸುಡುವುದರಿಂದ ಯಾವ ಶಾಂತಿ ಭಂಗವಾಗಲಿ ಪ್ರಾಣಹಾನಿಯಾಗಲಿ ಏನೂ ಆಗುವುದಿಲ್ಲ. ಮೊನ್ನೆ ಕಾಂಗ್ರೆಸ್ ಅಧ್ಯಕ್ಷರ ಕಾಂಪೌಂಡಿನಲ್ಲಿ ಬಟ್ಟೆಗಳನ್ನು ಸುಟ್ಟದ್ದರಿಂದ ಯಾರಿಗೂ ಏನೂ ಅಪಾಯವಾಗಲಿಲ್ಲ. ಬ್ರಿಟಿಷ್ ಅಳರಸರಿಗೆ ತಮ್ಮ ದೇಶದ ಹುಲ್ಲು ಕಡ್ಡಿಯ ಮೇಲೂ ಮಮತೆ ಇರವುದು ಸಹಜವೇ ಸರಿ, ಆದ್ದರಿಂದ ಅವರು ತಮ್ಮ ಯಾವ ಪದಾರ್ಥವನ್ನೂ ನಾಶಕೂಡದೆಂದು ಅಪ್ಪಣೆ ಮಾಡುವರು. ಭಾರತೀಯರಾದರೋ ತಮ್ಮ ಪಾರತಂತ್ರ್ಯವನ್ನು ನೀಗಿಸಲು ಈ ಪರದೇಶೀ ವಸ್ತ್ರಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿ ಇದ್ದ ಒದ್ದ ವಿದೇಶಿ ಬಟ್ಟೆಗಳನ್ನೆಲ್ಲಾ ದಹಿಸಿ ಶುದ್ಧವಾದ ಖಾದಿ ಬಟ್ಟೆಯನ್ನೇ ಧರಿಸ ಮೇಲಿಂದ ಮೇಲೆ ತಮಗೆ ಬರುತ್ತಿರುವ ಇಂತಹ ಧಿಕ್ಕಾರಗಳಿಗೆ ತಕ್ಕ ಉತ್ತರವನ್ನು ಕೊಡಬೇಕೆಂದು ಸೂಚಿಸುವೆವು.

(ಈ ಕೆಳಗೆಕಂಡ ನೋಟೀಸು ಶನಿವಾರ ಸಾಯಂಕಾಲ ನಾಲ್ಕು ಗಂಟೆ ಸಮಯದಲ್ಲಿ ಕೊಡಲ್ಪಟ್ಟಿತು.)

IN THE COURT OF THE CITY MAGISTRATE, MYSORE.

C. Mis No. 58 of 28-29.

Government Vs ....

Whereas it has been made to appear to me that you and a number of other persons are about to meet this day and burn cloth in the Subbarayanakere, Chamarajapet, Mysore City, a place of public resort and a crowded locality and

Whereas there is risk of the burning pieces of cloth flying about and causing fire in the neighbourhood and causing annoyance to the people lawfully using the strets in the neighberhood and

Whereas it has become urgently necessary to prevent the same and the circumstances of the case do not admit of the serving of notices in due time upon you and others who may do the said act.

I do hereby prohibit the said burning and order you and the public generally who intend burning cloth this day not to burn any cloth or other combustible substances this day.

1 in the said Subbarayanakere or

2 in any street or throughfare within the local limits of the jurisdiction of this court or

3 in any other public place within two furlongs from any building (used as human dwelling or for the custody of property) road or pathway in any park or other place to which the public have access within the Municipal limits of Mysore.

Given under my hand and seal of this court this the 13th day of April 1929.

City Magistrate
Mysore.

TAI NADU

16—4—1929

ಪರದೇಶೀ ವಸ್ತ್ರ [illegible]

ಪೈ ಸರೀನ ಪ್ರಸಂಗ ಸಭೆ

ಮೊನ್ನೆ ದಿವಸ ಸಾಯಂಕಾಲ ರಾಜಧಾನಿಯ ಸು[illegible] ಕೆರೆ ಅಂಗಳದಲ್ಲಿ ಒಂದು ಸಭೆ ಸೇರಿತ್ತು ಈ ಸಭೆಗೆ ಹತ್ತಾರು ಸಾವಿರ ಜನಗಳು ಸೇರಿದ್ದರು. 3 ಜನ ಪೋಲಿಸ್ ಇನ್ಸ್‌ಪೆಕ್ಟರುಗಳೂ ಕೆಲವು ಜನ ಕಾನಸ್ಟೇಬಲ್‌ಗಳೂ ಸಿ. ಐ. ಡಿ. ಗಳೂ ಸಹಾ ಹಾಜರಿದ್ದ[illegible] ಸಭೆಗೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮ|| ಎ. ಸೀತಾರಾಮಯ್ಯನವರು ಅಧ್ಯಕ್ಷರಾ[illegible] ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. [illegible] ಮುನಿಸಿಪಲ್ ಪ್ರೆಸಿಡೆಂಟರು ಸುಬ್ರಾಯನ [illegible] ದಹನದ ಕೆಲಸವನ್ನು ನಡೆಯಿಸಕೂಡದೆಂತ ಕಳುಹಿಸಿದ್ದ ನೋಟೀಸನ್ನು ಓದಿ ತಿಳಿಸಿದರಲ್ಲದೆ ತಾವು ಪ್ರೆಸಿಡೆಂಟರಿಗೆ ಮಾರ್ಕೆಟ್ಟಿನಲ್ಲಿ ಕಚಡಾಗಳನ್ನ [illegible] ಪತ್ರಿಕ್ಕ [illegible] ಉಂಟು ಮಾಡುವ [illegible] ಕಳುಹಿಸಿಕೊಡಿ ಅಥವಾ ಕಳುಹಿಸಿ ಕೊಡುವುದಕ್ಕಾಗದಿದ್ದರೆ ಮಾರ್ಕೆಟ್ಟಿನಲ್ಲಾದರೂ ಅವಕಾಶ ಕೊಟ್ಟರೆ ಅಲ್ಲಿಯೇ ಎದರೂ ಪರದೇಶೀ ವಸ್ತ್ರಗಳನ್ನು ಸುಟ್ಟುಬಿಡುವುದಾಗಿಯೂ ತಿಳಿಸಿ ಬರೆದಿದ್ದ ಕಾಗದದ ವಿಚಾರವನ್ನೂ ಇದಕ್ಕೆ ಉತ್ತರ ರೂಪವಾಗಿ ಪ್ರೆಸಿಡೆಂಟರು ಮ|| ಸೀತಾರಾಮಯ್ಯನವರು [illegible] ಬರೆದ [illegible] ಕೇಟರಾದಾಗ್ಯೂ ಮುನಿಸಿಪಲ್ ಕಾನೂನಿಗೆ ವಿರೋಧವಾಗಿ ನಡೆದಿದ್ದೇ ಆದರೆ ಪ್ರಾಸಿಕ್ಯೂಷನ್ ಮಾಡುವುದಾಗಿ ಹೆದರಿಸಿ ಬರೆದಿದ್ದ ಕಾಗದವನ್ನು ಓದಿ ಅನಂತರ ಸಿಟಿ ಮ್ಯಾಜಿಸ್ಟ್ರೇಟರು ಸಾಯಂಕಾಲ 4|| ಘಂಟೆ ಸಮಯದಲ್ಲಿ 144 ನೇ ಸೆಕ್ಷನ್ ಪ್ರಕಾರ ಹುಕ್ಕುಂ ಕೊಟ್ಟು ಮೈಸೂರು ಸಿಟಿ ತಾಲ್ಲೂಕು ಮೊದಲಾದ ಸ್ಥಳದಲ್ಲಿಯೂ ಅಂದರೆ ನದರಿ ಕೋರ್ಟಿನ ಅಧಿಕಾರಕ್ಕೆ ಸಂಬಂಧಪಟ್ಟ ಯಾವ ಸ್ಥಳದಲ್ಲೂ ದಹನದ ಏರ್ಪಾಡನ್ನು ನಡಿಯಿಸ ಕೂಡದೆಂತ ತಿಳಿಸಿದ್ದುದನ್ನೂ ಓದಿ ಹೇಳಿ ವ್ಯಕ್ತಪಡಿಸಿದರು. ಅನಂತರ ಸೇರಿದ್ದ ಸಭೆಯ ಉದ್ದೇಶವು ಮೇಲ್ಕಂಡ ಹುಕ್ಕುಂಗಳನ್ನು ತಿರಸ್ಕರಿಸಿ ಕೆಲಸಮಾಡಬೇಕೆಂಬುವದಲ್ಲವೆಂತಲೂ ಪ್ರೆಸಿಡೆಂಟರು ಹೆದರಿಸಿದ್ದರಿಂದ ಹಾಗೇ [illegible] ನೋ ಹೇಳುವುದಿಲ್ಲವೆಂತಲೂ ಆದರೆ ನಮ್ಮ ಮುನಿಸಿಪಾಲಿಟಿಯವರು ಯಾವ ರೀತಿ ಅನ್ಯಾಯ ಪ್ರವರ್ತನೆಯನ್ನು ನಡೆಸುತ್ತಿರುವರೆಂಬುದನ್ನು ತೋರಿಸಕ್ಕದ್ದೇ ಮುಖ್ಯ ಉದ್ದೇಶವೆಂದೂ ಸುಬ್ರಾಯನ ಕೆರೆಯಲ್ಲಿ ಪರದೇಶೀ ವಸ್ತ್ರಗಳನ್ನು ಸುಡ ವುದಿಲ್ಲವೆಂತಲೂ ವಗೈರೆ ತಿಳಿಸಿದರು. ಅನಂತರ ಮ|| ಪಿ ಆರ್ ರಾಮಯ್ಯನವರು ಮ|| ಸೀತಾರಾಮಯ್ಯನವರ ಅಭಿಪ್ರಾಯವನ್ನೇ ಪುಷ್ಟೀಕರಿಸಿ ಮಾತಾಡಿದರು. ಮತ್ತು ಮುನಿಸಿಪಲ್ ಪ್ರೆಸಿಡೆಂಟರ ಮತ್ತು ಸಿಟಿ ಮ್ಯಾಜಿಸ್ಟ್ರೇಟರ ಹುಕ್ಕುಂಗಳು ಅನ್ಯಾಯವೂ ಅಸಂಬಂಧವೂ ಆದವುಗಳೆಂಬ ಠರಾವೊಂದನ್ನು ಸಭಿಕರು ತೀರ್ಪಿಗಾಗಿ ತಂದರು. ಈ ಠರಾವು ಸರ್ವಾನುಮತದಿಂದ ಪಾಸಾಯಿತು. ಕೊನೆಯಲ್ಲಿ ಪರದೇಶೀ ವಸ್ತ್ರದ ದಹನದ ಕೆಲಸವು ಮ|| ಸೀತಾರಾಮಯ್ಯನವರ ಮನೆ [illegible] ಕಾಂಪೌಂಡಿನಲ್ಲಿ ನಡಿಯುವುದೆಂದು [illegible] ಸುಡುವುದಕ್ಕಾಗಿ ಪರದೇಶೀ ವಸ್ತ್ರಗಳನ್ನು ಕೊಡಬೇಕೆಂದು ಕೊಡಬಹುದೆಂದೂ ತಿಳಿಸಲ್ಪಟ್ಟಿತು. [illegible] ಸಭೆಯಲ್ಲಿದ್ದ [illegible] ಕೋಟುಗಳನ್ನೂ ಜುಬ್ಬಾಗಳನ್ನೂ ಟೋಪಿಗಳನ್ನೂ [illegible] ವಸ್ತ್ರಗಳನ್ನೂ [illegible] ಸಿದರು. ಎಲ್ಲರೂ ಮ|| ಸೀತಾರಾಮಯ್ಯನವರ ಮನೆಗೆ ಹೋದರು [illegible] ಪರದೇಶೀ ವಸ್ತ್ರ [illegible] ಸುಮಾರು ಒಂದು ಅಡಿ ಎತ್ತರದ [illegible] ಗಂಟೆಗಳ ಕಾಲ ಉರಿಯುತ್ತಿತ್ತು. ಕೊನೆಯಲ್ಲಿ ಮಹಾತ್ಮಾ ಗಾಂಧಿ ಕೀ ಜೈ ಎಂಬ ಜಯ ಘೋಷದೊಡನೆ ಸಾಯಂಕಾಲ 7 ಗಂಟೆ ಹೊತ್ತಿಗೆ ಸಭೆ ಮುಕ್ತಾಯವಾಯಿತು.

[illegible] ವರ್ಷಾದ ಫಲ

———

ಯುದ್ಧಗಳು ಮತ್ತು ಉಪದ್ರವಗಳು

ಶ್ರೀ ಶುಕ್ಲನಾಮಸಂವತ್ಸರವು 10-4-29 ಕ್ಕೆ ಆರಂಭವಾಯಿತು. ಈ ಸಂವತ್ಸರದಲ್ಲಿ ಫಲಗಳು ಪರಸ್ಪರ ವಿರೋಧವಾದವುಗಳಾಗಿವೆ ಬುಧನು ಅರಸನಾಗಿರುವದರಿಂದ ಗಾಳಿಯಿಂದ ಕೂಡಿದ ಮಳೆಯೂ, ರಾಜರಲ್ಲಿ ಕೋಪವೂ, ಉತ್ತಮ ಬೆಳೆಯೂ, ಉಂಟಾಗುವವು. ಗುರುವು ಚೈತ್ರ ಶುಕ್ಲ ಪ್ರತಿಪದ ಮೊದಲು ವೈಶಾಖ ಶುಕ್ಲ ಪಂಚಮಿಯವರೆಗೆ ಮೇಷರಾಶಿಯಲ್ಲಿರುವದರಿಂದ ರಾಜರಲ್ಲಿ ಪರಸ್ಪರ ಕಲಹವೂ, ಪ್ರಜಾನಷ್ಟವೂ ಸಹ ಉಂಟಾಗುವವು. ಸಂಕಟ ವರ್ಷಾರಂಭದವರೆಗೆ ಪ್ರಸನ್ನ ರಾಶಿಯಲ್ಲಿರುವದರಿಂದ ರಾಜರುಗಳಲ್ಲಿ ಪ್ರಬಲವಾದ ಯುದ್ಧೋಪದ್ರವಗಳು ಉಂಟಾಗುವವು. ಶನಿಯು ಈ ವರ್ಷವೆಲ್ಲ ಧನುರ್ರಾಶಿಯಲ್ಲಿರುವದರಿಂದ ರಾಜರುಗಳಿಗೆ ಶತ್ರುಭೀತಿಯೂ, ಜನಗಳಿಂದ ಭಯವೂ, ಕಳ್ಳಕಾಕರ ಭಯವೂ ಅಗ್ನಿಭಯವೂ ಉಂಟಾಗುವವು. ಚೈತ್ರ, ಕೃಷ್ಣ ಅಮಾವಾಸ್ಯೆಯಲ್ಲಿ ಆಗುವ ಸೂರ್ಯಗ್ರಹಣದಿಂದ ಬ್ರಾಹ್ಮಣರು, ಸಜ್ಜನರು, ಪಶುಗಳಿಗೆ ಹಾನಿಯುಂಟಾಗುತ್ತೆ. ರಾಷ್ಟ್ರಕ್ಷೋಭವುಂಟಾಗುವುದು. ಅವಂತಿ ಮೊದಲು ಲಂಕಾಪುರದವರಿಗೂ ಇರುವ ಪ್ರದೇಶಗಳಲ್ಲಿ ಜನಗಳಿಗೆ, ಹಸಿವಿನ ಭಯವೂ, ಶಸ್ತ್ರಭಯವೂ ಉಂಟಾಗುವವು. ಮತ್ತು ಚೋರಾಗ್ನಿ ತಸ್ಕರಭಯವೂ, ರಾಜರಲ್ಲಿ ಭಯವೂ ಸಸ್ಯನಾಶ ಉಂಟಾಗುತ್ತವೆ.

ಒಟ್ಟಿನ ಮೇಲೆ ಈ ಸಂವತ್ಸರದಲ್ಲಿ ಯುದ್ಧಗಳೂ, ಉಪದ್ರವಗಳೂ, ಜಾಸ್ತಿಯಾಗಿ ಪ್ರಜಾಸೌಖ್ಯಕ್ಕೆ ಭಂಗವುಂಟಾಗುತ್ತೆ ಎಂದು ದೈವಜ್ಞರು ನಿಶ್ಚಯಿಸಿರುತ್ತಾರೆ.

[illegible] ಸಮ್ಮೇಳನ.

———

ಕೋಲಾರದಲ್ಲಿ ಕಳೆದ ವಾರ ನಮ್ಮ ಸಂಸ್ಥಾನದ [illegible] ರಾಯರುಗಳ ಸಮ್ಮೇಳನವು ಬಹಳ ಯಶಸ್ವಿಯಾಗಿ ನಡೆಯಿತು. ಸಂಸ್ಥಾನದ ಎಲ್ಲಾಭಾಗಗಳಿಂದಲೂ ಸುಮಾರು 200—300 ಜನ [illegible] ರಾಯರುಗಳು ಹಾಜರಿದ್ದರು. ಸಭೆಯ ಕಾರ್ಯವು ಬಹಳ ಉತ್ಸಾಹದಿಂದ ನಡೆಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಮ|| ಗೋಪಾಲರಾಯರ ಭಾಷಣವೂ ಸಮ್ಮೇಳನಾಧ್ಯಕ್ಷರಾದ ಮ|| ಸಿ. ನರಸಿಂಹಯ್ಯನವರ ಭಾಷಣವೂ ಬಹಳ ಪ್ರಭಾವಶಾಲಿಗಳಾಗಿದ್ದವು. [illegible] ರಾಯರುಗಳಿಗೆ ಸಂಬಂಧಪಟ್ಟ ವಿಷಯಗಳು ಮಾತ್ರವೇ ಅಲ್ಲದೆ, ಪ್ರಜೆಗಳ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟ ವಿಷಯಗಳೂ ವಿಮರ್ಶೆಗೆ ಬಂದವು. ಬೆಂಗಳೂರು ಗಲಭೆಗಳ ಸಂದರ್ಭದಲ್ಲಿ ಸರಕಾರದವರು ತೋರಿಸಿದ ಪರಾಜ್ಮುಖತೆಯೂ ತದನಂತರ ವರ್ತಮಾನಪತ್ರಿಕೆಗಳ ಮೇಲೆಯೂ ಪ್ರಜಾಮುಖಂಡರ ಮೇಲೆಯೂ, ತೋರಿಸಿದ ದಬ್ಬಾಳಿಕೆಯ ರೀತಿಯೂ [illegible]

[illegible]

[illegible] ರನ್ನೇ ತೀರಿಸಿಬಿಡಬೇಕೆಂತಲೂ ಕೆಲವು ಮುಖಂಡರು ಆಡಿಕೊಳ್ಳುತ್ತಿದ್ದುದನ್ನೂ ಈ ಗಲಭೆಗಳೆಲ್ಲಕ್ಕೂ ಇವರೇ ಕಾರಣಕರ್ತರೆಂದು ಗೌರ್ನ್‌ಮೆಂಟಿಗೆ ರಿಪೋರ್ಟು ಮಾಡಿರುವರೆಂಬುದನ್ನು ತಿಳಿದು ಸ್ಟಾರ್ ಪತ್ರಿಕೆಗೆ ಒಂದು ಬಹು ದೀರ್ಘವಾದ ಲೇಖನವನ್ನು ಬರೆದಿರುವರು. ಇದು ಲೇಖನವನ್ನು [illegible] [illegible] ಇರುವುದಲ್ಲದೆ ಮ|| [illegible] ಯಗಳೂ ಅವರ ದೇಶಭಕ್ತಿಯೂ [illegible] ಪ್ಪ ಸಮೀಚೀನವಾದವುಗಳೆಂಬುದು ಸ್ಪಷ್ಟಪಡಿಸುತ್ತದೆ ನಿಷ್ಪಕ್ಷಪಾತವಾಗಿ ಇವರು [illegible] ತತ್ಸಂಬಂಧವನ್ನೂ ಇವರನ್ನೂ [illegible] ಗೌರ್ನ್‌ಮೆಂಟಿನವರು ನ್ಯಾಯಶಾಸನದಲ್ಲಿ [illegible] ಡಿಯುವುದು ಒಳ್ಳೆಯದು [illegible] ನ್ಯಾಯವಿಧಾಯಕ ಸಭೆಯ ಮತ್ತು [illegible] ಸಭೆ ಬೆಂಗಳೂರು ಡಿಸ್ಟ್ರಿಕ್ಟ್ [illegible] ಸಭೆಗಳ ಚುನಾಯಿಸಲ್ಪಟ್ಟ [illegible] ವ ತರು ಇಂಥವರನ್ನು ನಿಂದೆಗೆ ಗುರಿಪಡಿಸತಕ್ಕದು ಅಧಿಕಾರ ವರ್ಗದವರಿಗೆ ಸರ್ವಥಾ ಯೋಗ್ಯವಲ್ಲ.

ಸರ್ಕಾರದವರ ಪ್ರಥಮ ಕರ್ತವ್ಯ.

ಸರ್ಕಾರದ [illegible]

[illegible] ಅಂದರೆ ಸರ್ಕಾರದವರ [illegible] ಪ್ರಜೆಗಳಿಗೆ [illegible] ಗಳಲ್ಲೂ ಪ್ರಜೆಗಳಿಗೆ ಅನ್ನವಸ್ತ್ರ [illegible] ಗೆ ಭಂಗ [illegible]

[illegible] ನಡೆಯಿತು. ಅದನ್ನು [illegible]

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು

... 14 ಕ್ಯಾರ್ರು ಭಂಗಾರದ ನಿಬ್ಬು ಹಾಕಿದ ... ಪೆಟ್ಟಿ 1 ಕ್ಕೆ 3 ರೂ. 8 ಆ. ... 3 ರೂ. 8 ಆ ಮತ್ತು 3 ರೂ. 12 ಆ. ... 1 ಕ್ಕೆ 5 ರೂ. 8 ಆ. ... 1 ಕ್ಕೆ 7 ರೂ. 4 ಆ. ... 1 ಕ್ಕೆ 4 ರೂ. 8 ಆ. ... 1 ಕ್ಕೆ 12 ರೂ. ... 1 ಕ್ಕೆ 8 ರೂ. 8 ಆ. ... 1 ಕ್ಕೆ 20 ರೂ ... 1 ಕ್ಕೆ 15 ರೂ. ಮತ್ತು 12 ರೂ. 4 ಆ. ... 1 ಕ್ಕೆ 17 ರೂ. ಪ್ರತಿಯೊಂದು ಪೆನ್ನಿನ ಸಂಗಡಲೂ ಇಂಕ್ ಫಿಲ್ಲರ್ 1, ... ಇಡಲು ಬೇಕಾದ ಭದ್ರವಾದ ರಟ್ಟಿನ ಪೆಟ್ಟಿ 1 ಸಹಾ ಮುಫತ್ತಾಗಿ ರವಾನಿಸಲಾಗುತ್ತೆ.



೧೦೦೦ ರೂಪಾಯಿಗಳ ಬುಮಾನ

ಸಾಲಂವಿಸ್ರಿ ಮಿರಬ್ಬ

ನೀವು ಬಲಹೀನರಾಗಿರುವಿರೋ ?

... ಅನೇಕ ದೊಡ್ಡ ದೊಡ್ಡ ಡಾಕ್ಟರುಗಳು ಮತ್ತು ಹಕೀಮರುಗಳು ಸಹ ...

ಕ್ರಯ ಡಬ್ಬ ೧ ಕ್ಕೆ ... ಟಪಾಲು ಖರ್ಚು ೧ ರಿಂದ ೩ ಡಬ್ಬಗಳವರಿಗೆ ...

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರುಗಳು ಬೇಕು. ... ರೂಲ್ಸ್ ಬರೆದು ತರಿಸಿಕೊಳ್ಳಬಹುದು.

ಡಿ ಮನ್ನಾಲಾಲ್,

ಡೈಸೀ ನೇಟೀವ್ ಡಾಕ್ಟರ್, ಸಾಲಾಮಿಸ್ರಿ ಮರಬ್ಬ ಫಾರ್ಮೆಸಿ, (ಸಿಟಿ ಮಾರ್ಕೆಟ್ ಸಮೀಪ,) ಬೆಂಗಳೂರು



ವೈದ್ಯ ವೆಂಕಟಾಚಲ ಪಂಡಿತರ

ಲೋಕಾಮಯಹರ

ಕಸ್ತೂರಿ ಮಾತ್ರೆಗಳು,

... 300 ಮಾತ್ರೆ ... ಸೀಸೆ 1 ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ...

... ಸೀಸೆ 1 ಕ್ಕೆ ರೂ 1.

... ಪ್ಲೇಗ್ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ... ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿ ... ಅದ್ಭುತವಾಗಿರುತ್ತದೆ. ಸೀಸೆ ಬೆಲೆ 1 ಕ್ಕೆ ರೂ 1.

... ಸೀಸೆ 1 ಕ್ಕೆ 0-8-0 ಆಣೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತ

ಹೆಡ್ ಆಫೀಸು

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

THE JUPITER GENERAL INSURANCE Co.,

Applications are invited from respectable and in-
ential gentlemen from every Taluk and District Cen-
For Life Insurance Business. Liberal terms.

A rare opportunity for spare time earnings

We undertake also Fire & Motor cars Etc., Insur-


Apply for Agency terms

To the Chief Agents for Mysore and Coorg

N. Y. PISSAY & Co.

STOCK & SHARE BROKERS

Chikpet, Bangalore C.



ಭಂಗಾರದ ಕೈಬಳೆಗಳೂ ... ವಗೈರೆ ಆಭರಣಗಳೂ ... ಸಾಮಾನುಗಳೂ ನಮ್ಮಲ್ಲಿ ... ಸಿಗುತ್ತೆ

ಹೊಸ ಹೊಸ ನಮೂನೆಯ ಆಭರಣಗಳನ್ನು ನಮ್ಮಲ್ಲಿ ಬಂದು ...

ಯಸ್ ನರಸಿಂಹ ಅಯ್ಯರ್

ಕೆ. ನಾರಾಯಣಪ್ಪ

ಶ್ರೀ ಲಕ್ಷ್ಮೀವೆಂಕಟೇಶ್ವರ ...

ನಗರ್ತಪೇಟೆ, ಬೆಂಗಳೂರು

Printed and published by P. R. Ramiaya at
Sri Rama Press D Subbiah Road, Mysore.